ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೧೨

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೧೪೫
ವಿಚಾರ ಸಾಹಿತ್ಯಮಾಲೆ - ೫೮

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು
## ಮತ್ತು
# ಭಾಷಣಗಳು

ಸಂಪುಟ ೧೨

# ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

(ಸಂಪುಟ ೧೨)

ಡಾ. ಬಿ.ಆರ್. ಅಂಬೇಡ್ಕರ್
ಭಾರತ ಸಂವಿಧಾನದ ಪ್ರಧಾನ ಶಿಲ್ಪಿ


## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

## ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 12** — Kannada translation of the Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056 ; Third Edition: 2015; Pp. xxxiv + 716; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೂರನೇ ಮುದ್ರಣ : ೨೦೧೫
ಪುಟಗಳು : xxxiv + ೭೧೬
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫

ದಿನಾಂಕ : ೦೫.೦೬.೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

**(ಸಿದ್ದರಾಮಯ್ಯ)**

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಹೆಚ್.ಆಂಜನೇಯ)**

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೬೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

ದಿನಾಂಕ: ೦೪.೬.೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

## ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಕೆ. ಎ. ದಯಾನಂದ

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ-ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ-ಭಾಷಣಗಳ ಮೂಲಕ, ವೈಚಾರಿಕ ಚರ್ಚೆ-ಸಂವಾದಗಳ ಮೂಲಕ ಸಾಮಾಜಿಕ-ರಾಜಕೀಯ ಜಾಗೃತಿಯನ್ನೇ ಮೂಡಿಸಿದರು. 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡುಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್-III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ. ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ ಜೀವಿತ-

ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫ್ಫರ್‌ಪುರದಲ್ಲಿನ 'ಬಿ. ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು ತಮ್ಮ ಅನುಯಾಯಿಗಳಿಗೆ "ಶಿಕ್ಷಣ ! ಸಂಘಟನೆ !! ಹೋರಾಟ !!! (Educate ! Organize !! Agitate !!!) ಎಂಬ ತತ್ವಗಳನ್ನು ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಹದಿನಾಲ್ಕು ಸಂಪುಟಗಳಲ್ಲಿ ಹೊರತಂದಿತು. ಅನಂತರದಲ್ಲಿ ಹದಿನೈದನೆಯ ಇನ್ನೊಂದು ಸಂಪುಟವನ್ನೂ ಹೊರತರಲಾಗಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ. ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡು ಬಿಟ್ಟುದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದುಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯ ನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರನ್ನಾಗಿ ನಾಮಕರಣ ಮಾಡಲಾಯಿತು. (ಆದೇಶ ಸಂಖ್ಯೆ ಕ ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪–೩–೨೦೦೮.)

೧. ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

೨. ಶ್ರೀ ದೇವನೂರ ಮಹದೇವ, ಖ್ಯಾತಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡುಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು. ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯-೮-೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕತ ಆವೃತ್ತಿಯನ್ನು ೬.೧೨.೨೦೧೦ ರಂದು ಬಿಡುಗಡೆ ಮಾಡಲಾಯಿತು. ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ.ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಕೆಲಮಂದಿ ಪರಿಷ್ಕರಣಕಾರರ ಅತಿವ್ಯಸ್ತತೆಯಿಂದಾಗಿ, ಪರಿಷ್ಕರಣ ಕಾರ್ಯದಲ್ಲಿಯೂ ವಿಳಂಬವಾಯಿತು. ನಮ್ಮ ಒತ್ತಾಯ-ಒತ್ತಡಗಳನ್ನು ಮನ್ನಿಸಿ ಅವರು ನಮಗೆ ನೆರವು ನೀಡಿದ್ದಾರೆ. ಈ ವಿದ್ವಾಂಸರು ಸಾಧ್ಯವಿದ್ದಷ್ಟು ಮಟ್ಟಿಗೆ ಈ ಸಂಪುಟಗಳನ್ನು ಪರಿಷ್ಕರಿಸಿದ್ದಾರೆ. ಈಗಾಗಲೇ ೫, ೬, ೭, ೮ ಮತ್ತು ೯ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಗಿದೆ. ಇವುಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ:

೧. ಶ್ರೀಮತಿ ಬಿ.ಎನ್. ಶಾಂತಾ (ಸಂ. ೫)

೨. ಶ್ರೀ ವಿ. ಕೃಷ್ಣ (ಸಂ. ೬)

೩. ಶ್ರೀ ಕೆ.ಎಲ್. ಚಂದ್ರಶೇಖರ (ಸಂ. ೭)

೪. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೮)

೫. ಶ್ರೀ ಜೆ.ಎನ್. ಶಾಮರಾವ್ (ಸಂ. ೯)

ಈಗ ೧೦ ರಿಂದ ೧೪ ರವರೆಗಿನ ಸಂಪುಟಗಳ ಪರಿಷ್ಕೃತ ಆವೃತ್ತಿಗಳನ್ನು ಹಾಗೂ ಹೊಸದಾಗಿ ಅನುವಾದಿಸಿ ಪ್ರಕಟಿಸಲಾಗುತ್ತಿರುವ ೧೯ ಮತ್ತು ೨೦ನೆಯ ಸಂಪುಟಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಕಾರ್ಯಗಳಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ.

೧. ಶ್ರೀ ಎಸ್.ಆರ್. ಗೌತಮ್ (ಸಂ. ೧೦; ಭಾಗಗಳು ೧-೩ ಮತ್ತು ಸಂ. ೧೪, ಭಾಗ ೨)

೨. ಶ್ರೀ ಜೆ.ಎನ್. ಶಾಮರಾವ್ (ಸಂ. ೧೧; ಭಾಗಗಳು ೧-೨)

೩. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೧೨; ಭಾಗಗಳು ೧-೨)

೪. ಶ್ರೀ ಕೃಷ್ಣ ಮೂರ್ತಿ ಸಿರ್ಸಿ (ಸಂ. ೧೩; ಭಾಗಗಳು ೧-೨; ಸಂ. ೧೪ ಭಾಗ ೧(ಅ) ಮತ್ತು (ಆ))

೫. ಶ್ರೀಮತಿ ಅಕ್ಷತಾ ದೇಶಪಾಂಡೆ ಮತ್ತು ಶ್ರೀಮತಿ ಸುಮಾ ದ್ವಾರಕನಾಥ (ಸಂ. ೧೯)

೬. ಶ್ರೀಮತಿ ಶ್ಯಾಮಲಾ ಮಾಧವ್ ಮತ್ತು ಶ್ರೀ ವಿರೂಪಾಕ್ಷ ಕುಲಕರ್ಣಿ (ಸಂ. ೨೦)

ಇವರೆಲ್ಲರ ಸಹಾಯ–ಸಹಕಾರಗಳಿಗಾಗಿ ನಾವು ಕೃತಜ್ಞರಾಗಿದ್ದೇವೆ. ಅವರ ಗಮನವನ್ನು ತಪ್ಪಿಸಿ ಬಿಟ್ಟು ಹೋಗಿದ್ದ ಭಾಗಗಳನ್ನು ಸೇರಿಸಲಾಗಿದೆ; ಸಾರಣಿಗಳ ಮಾಹಿತಿಯನ್ನು ಸರಿಪಡಿಸಲಾಗಿದೆ; ಉಲ್ಲೇಖಗಳನ್ನು, ಅಂಕಿತನಾಮಗಳನ್ನು ಪರಿಷ್ಕರಿಸಲಾಗಿದೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳೂ ಅವಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ–ಸಹಕಾರ–ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೆ ನಮ್ಮ ಕೃತಜ್ಞತೆಗಳು.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ವಿದ್ವಾಂಸರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಶ್ರೀ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆರ್ಡ್ಸ್‌ನ ಶ್ರೀ ಬಿ.ಎಲ್.ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

# ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**

ಅಧ್ಯಕ್ಷ

ಸಂಪಾದನ ಸಮಿತಿ

# ಸಂಪಾದಕೀಯ

ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು, ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ॥ ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ದೇಶದ ಇಂಥ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ ಇಡೀ ಮಾನವ ಕುಲದ ಹಕ್ಕುಗಳು, ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು. ಅವರು ತಮ್ಮ ಇಡೀ ಜೀವನವನ್ನು ಈ ಗುರಿಸಾಧನೆಗಾಗಿ ಮುಡಿಪಾಗಿಟ್ಟರು.

ಡಾ॥ ಅಂಬೇಡ್ಕರ್ ಜಾತ್ಯತೀತ ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರಮೂರ್ತಿಗಳಾಗಿದ್ದು ದೀನದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಡಾ॥ ಅಂಬೇಡ್ಕರ್ ಅವರು ಕೇವಲ ರಾಜಕೀಯ ಮುಖಂಡರಾಗಿರದೇ, ಆಧುನಿಕ ಭಾರತದ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವೇತ್ತರೂ, ಪ್ರೌಢ ಲೇಖಕರೂ, ಕಾನೂನು ಪಂಡಿತರೂ ಹಾಗೂ ಸಂವಿಧಾನತಜ್ಞರೂ ಆಗಿದ್ದರಲ್ಲದೆ ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿ ಪದ್ಧತಿ, ಅಸ್ಪೃಶ್ಯತೆ, ಬಡತನ ಮುಂತಾದ ಸಾಮಾಜಿಕ ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ ಇವುಗಳ ನಿವಾರಣೆಯ ವಿಧಾನಗಳನ್ನು ನಿರೂಪಿಸಿದರು. ಅದೃಷ್ಟವಶಾತ್ ಅವರು ತಮ್ಮ ಅಮೂಲ್ಯವಾದ ವಿಚಾರಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು, ಇವುಗಳಲ್ಲಿ ಜಾತಿ ನಿರ್ಮೂಲನೆ; ಶೂದ್ರರು ಯಾರು; ಅಸ್ಪೃಶ್ಯರು ಯಾರು– ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು?; ರೂಪಾಯಿಯ ಸಮಸ್ಯೆ; ಪಾಕಿಸ್ತಾನ ಅಥವಾ ಭಾರತದ ವಿಭಜನೆ – ಪ್ರಮುಖವಾಗಿವೆ. 'ಬುದ್ಧ ಮತ್ತು ಅವನ ಧಮ್ಮ' ಅವರ ಮರಣೋತ್ತರ ಪ್ರಕಟಣೆ. ಇವುಗಳೂ ಅಲ್ಲದೇ ಅವರ ಅಪ್ರಕಟಿತ ಬರಹಗಳು ಅಸಂಖ್ಯಾತ. ಅವರ ಮರಣಾನಂತರ ಇವು ಆಸ್ತಿ ವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಅವುಗಳ ಅಧ್ಯಯನ ಸಾಧ್ಯವಿರಲಿಲ್ಲ. ಆದರೆ ಮಹಾರಾಷ್ಟ್ರ ಸರ್ಕಾರದ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ. ಅಂಬೇಡ್ಕರ್ ಅವರ ಕುಟುಂಬದ ಸದಸ್ಯರ ಸಹಕಾರ, ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆಯೂ ಸಾಧ್ಯವಾಗಿದೆ.

ಡಾ. ಅಂಬೇಡ್ಕರ್ ಅವರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿಯೆ ಬರೆದಿದ್ದಾರೆ. ಅವರ ಬರವಣಿಗೆಯ ಕೆಲ ಭಾಗಗಳು, ಅದರಲ್ಲಿಯೂ ಅವರು ತಾವೇ ಆರಂಭಿಸಿ ನಡೆಸಿಕೊಂಡು ಬಂದ ಪಾಕ್ಷಿಕಗಳಾದ ಸಮತಾ, ಜನತಾ ಮತ್ತು ಬಹಿಷ್ಕೃತ ಭಾರತ ಇವುಗಳಲ್ಲಿ ಮರಾಠಿಯಲ್ಲಿಯೂ ಅಗ್ರ ಲೇಖನಗಳಾಗಿ ಬಂದಿವೆ. ಅವರು ಮಾಡಿದ ಅನೇಕ ಸಾರ್ವಜನಿಕ ಭಾಷಣಗಳೂ ಮರಾಠಿ ಭಾಷೆಯಲ್ಲಿಯೇ ಇವೆ.

ಡಾ. ಅಂಬೇಡ್ಕರ್ ಅವರು ತಮ್ಮ ಕೆಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ತಾವು ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಿದ್ಧಪಡಿಸಿ ೧೯೧೮ ರಿಂದಲೇ ಪ್ರಕಟಿಸಿದರು. ನಂತರ ೧೯೨೩ ರಿಂದ ೧೯೫೬ರ ವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಅವೂ ಅಲ್ಲದೆ ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡುಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು, ಅವರ ರಾಜಕೀಯ ಮತ್ತು ಸಂವಿಧಾನದ ವಿಚಾರಗಳು ಮಹತ್ವದವುಗಳಾಗಿವೆ ಮತ್ತು ಅವರು ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರ ಶಾಸನಸಭೆಗಳಲ್ಲಿ, ನಂತರ ಸಂವಿಧಾನ ಸಭೆಯ ಸದಸ್ಯರಾಗಿ, ಕರಡು ಸಮಿತಿಯ ಅಧ್ಯಕ್ಷರಾಗಿ ಸಿದ್ಧಪಡಿಸಿ, ಮಂಡಿಸಿದ ಕರಡು ಸಂವಿಧಾನ ಮತ್ತು ಅದರ ಮೇಲೆ ನಡೆದ ಚರ್ಚೆಗೆ ಅವರು ನೀಡಿದ ಉತ್ತರ, ಸಮಾಧಾನ, ವಿವರಣೆಗಳು ಮತ್ತು ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅವರು ವ್ಯಕ್ತಪಡಿಸಿದ ವಿಚಾರಗಳು, ಮಂಡಿಸಿದ ಮಸೂದೆಗಳು, ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ದಿ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸ್ತಾಪ ಬಂದಾಗಲೆಲ್ಲಾ ಅವರು ಅಂದು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಿಗಣಿಸಲಾಗಿದೆ. ಆದ್ದರಿಂದ ಡಾ. ಅಂಬೇಡ್ಕರ್ ಅವರ ವಿಚಾರಗಳು ಅಂದಿಗೂ ಅಲ್ಲದೆ ಇಂದಿಗೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ.

ಆದರೆ ಇತ್ತೀಚೆಗೆ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ ಮತ್ತು ಅವು ಮುಂದೆ ದೊರೆಯುವ ಸಾಧ್ಯತೆಯೂ ಇಲ್ಲವಾಗುತ್ತಿತ್ತು. ಅವುಗಳೆಲ್ಲವು ಸಂಪೂರ್ಣವಾಗಿ ಅಳಿದುಹೋಗುವ ಅಪಾಯವಿತ್ತು. ಅದನ್ನರಿತ ಮಹಾರಾಷ್ಟ್ರ ಸರ್ಕಾರದವರು ಡಾ. ಅಂಬೇಡ್ಕರ್ ಅವರ ಇಂಗ್ಲಿಷಿನಲ್ಲಿರುವ ಎಲ್ಲಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಆವಶ್ಯಕ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು, ಈ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ಆ ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ. ಅಂಬೇಡ್ಕರ್ ಅವರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿದ "ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ವಿಷಯಗಳ ಪ್ರಕಟನಾ ಸಮಿತಿ, ಮಹಾರಾಷ್ಟ್ರ ಸರ್ಕಾರ" ಎಂಬ ಸಮಿತಿಯನ್ನು ರಚಿಸಿದರು. ಅದು ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೬ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಶರದ್ ಪವಾರ್ ಅವತ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಅದರ ವಿಶೇಷ ಅಧಿಕಾರಿ ಶ್ರೀ ವಸಂತ ಮೂನ್ ಅವರ ಪರಿಶ್ರಮ ಮುಖ್ಯಕಾರಣ. ಈ ಸಮಿತಿಯು ಡಾ. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳನ್ನೂ ಸಂಗ್ರಹಿಸಿ ಒಟ್ಟು ಹದಿನಾಲ್ಕು ಬೃಹತ್ ಸಂಪುಟಗಳಲ್ಲಿ "ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡು ಇದುವರೆಗೆ ಒಟ್ಟು ಹದಿಮೂರು ಸಂಪುಟಗಳನ್ನು ಪ್ರಕಟಿಸಿದೆ. ಇನ್ನೂ ಒಂದು ಸಂಪುಟ ಬರಬೇಕಾಗಿದೆ. ಇದುವರೆಗೆ ಪ್ರಕಟಿತವಾದ ಹದಿಮೂರು ಸಂಪುಟಗಳಲ್ಲಿ ಬಹಳಷ್ಟು ಅವರ ಪ್ರಕಟಿತ ಮತ್ತು ಅಪ್ರಕಟಿತ ಬರೆಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ ಜಾತಿ ನಿರ್ಮೂಲನೆ; ಭಾಷಾವಾರು ಪ್ರಾಂತ್ಯಗಳು; ರಾನಡೆ, ಗಾಂಧಿ, ಜಿನ್ನಾ; ರಾಜ್ಯಗಳು ಮತ್ತು ಅಲ್ಪಸಂಖ್ಯಾತರು; ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ ಮುಂತಾದ ಪರಿಚಿತ

ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ (೧೯೮೨)ದಲ್ಲಿ ಮುಂಬಯಿ ಶಾಸಕಾಂಗದಲ್ಲಿ ಮತ್ತು ದುಂಡುಮೇಜಿನ ಪರಿಷತ್ತುಗಳಲ್ಲಿ ಅವರು ಮಾಡಿದ ಭಾಷಣಗಳೂ ಅಲ್ಲದೆ ಸೈಮನ್ ಆಯೋಗಕ್ಕೆ ಅವರು ನೀಡಿದ ಹೇಳಿಕೆಗಳೂ ಮನವಿಗಳೂ ಸೇರಿವೆ. ಮೂರನೆಯ ಸಂಪುಟ (೧೯೮೭)ದಲ್ಲಿ ಅವರ ಅಪ್ರಕಟಿತ ಕೃತಿಗಳಾದ ಹಿಂದೂಧರ್ಮ ದರ್ಶನ; ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ; ಭಾರತ ಮತ್ತು ಸಮತಾವಾದದ ಪೂರ್ವಭಾವಿ ಆವಶ್ಯಕತೆಗಳು; ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್, ಮುಂತಾದವು ಸೇರಿವೆ. ೧೯೮೭ರಲ್ಲಿಯೇ ಅಪ್ರಕಟವಾದ ನಾಲ್ಕನೆಯ ಸಂಪುಟ ಮಹಾರಾಷ್ಟ್ರದಲ್ಲಿ ವಿವಾದದ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಅವರ ಇನ್ನೊಂದು ಅಪ್ರಕಟಿತ ಬರಹ ಮಾಲೆ 'ಹಿಂದೂ ಧರ್ಮದ ಸಂದಿಗ್ಧಗಳು' ಪ್ರಕಟವಾಗಿದ್ದೇ ಆಂದೋಲನಕ್ಕೆ ಪ್ರಚೋದನೆಯಾಯಿತು. ಇದರಿಂದಾಗಿ ಮಹಾರಾಷ್ಟ್ರ ಸರ್ಕಾರ ಈ ಸಂಪುಟದ ಮಾರಾಟವನ್ನು ಕೆಲಕಾಲ ತಡೆಹಿಡಿಯಬೇಕಾಯಿತು. ನಂತರ ಆದ ಒಪ್ಪಂದದಿಂದ ಪುನಃ ಅದರ ಮಾರಾಟ ಮುಂದುವರಿಯಿತು. ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟವು ಸಂಪೂರ್ಣವಾಗಿ ಅಪ್ರಕಟಿತ ಬರಹಗಳಿಂದ ಕೂಡಿದ್ದು, ಇದರಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಶ್ಲೇಷಣೆಯ ಲೇಖನಗಳಿವೆ. ಅದೇ ವರ್ಷ ಪ್ರಕಟವಾದ ಆರನೆಯ ಸಂಪುಟದಲ್ಲಿ ಸೇರಿರುವ ಎಲ್ಲಾ ಲೇಖನಗಳೂ ಅರ್ಥಶಾಸ್ತ್ರ ಸಂಬಂಧವಾಗಿದ್ದು 'ರೂಪಾಯಿಯ ಸಮಸ್ಯೆ'ಯೂ ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾಗಿರುವ ಏಳನೆಯ ಸಂಪುಟದಲ್ಲಿ ಶೂದ್ರರು ಯಾರು? ಮತ್ತು ಅಸ್ಪೃಶ್ಯರು ಯಾರು? ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್‌ಮುದ್ರಿಸಲಾಗಿದೆ. ಇದೇ ವರ್ಷ ಪ್ರಕಟಿಸಲಾಗಿರುವ ಎಂಟನೆಯ ಸಂಪುಟದಲ್ಲಿ ಡಾ. ಅಂಬೇಡ್ಕರ್ ಅವರ ಅತ್ಯಂತ ವಿವಾದಾತ್ಮಕ, ಆದರೆ ಅಷ್ಟೇ ವಿದ್ವತ್‌ಪೂರ್ಣ ಹಾಗೂ ವಾಸ್ತವಿಕತೆಯಿಂದ ಪ್ರೇರಿತವಾದ ಅವರ ಗ್ರಂಥ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ'ಯ ಪುನರ್ ಮುದ್ರಣವಾಗಿದೆ. ಇದು ಅವರ ಮೇರುಕೃತಿ. ಮುಂಬರುವ ಸಂಪುಟಗಳಲ್ಲಿ ಗವರ್ನರ್-ಜನರಲ್ ಪರಿಷತ್ತು, ಸಂವಿಧಾನ ಸಭೆ ಮತ್ತು ಸಂಸತ್ತಿನಲ್ಲಿ ಡಾ. ಅಂಬೇಡ್ಕರ್ ಅವರು ಭಾಗವಹಿಸಿರುವುದು (೧೯೪೨ ರಿಂದ ೧೯೫೬), ಕಾಂಗ್ರೆಸ್ ಮತ್ತು ಮಿಸ್ಟರ್ ಗಾಂಧಿ ಅಸ್ಪೃಶ್ಯರಿಗೆ ಮಾಡಿದುದು ಏನು?; ಹಾಗೂ ಮಿಸ್ಟರ್ ಗಾಂಧಿ ಹಾಗೂ ಅಸ್ಪೃಶ್ಯರ ವಿಮೋಚನೆ (೯ನೆಯ ಸಂಪುಟ, ೧೯೯೧), ಮುಂಬಯಿಯ ಪೀಪಲ್ಸ್ ಎಜ್ಯುಕೇಶನ್ ಸೊಸೈಟಿ ನೀಡಿರುವ ಇನ್ನೂ ಕೆಲವು ಅಪ್ರಕಟಿತ ಬರೆಹಗಳು ಮತ್ತು ಇತರ ಸಮ್ಮಿಶ್ರ ಬರೆಹಗಳು ಪ್ರಕಟವಾಗಿವೆ. ಹತ್ತನೆಯ ಸಂಪುಟದಲ್ಲಿ (೧೯೯೧) ಅವರು ಗವರ್ನರ್ ಜನರಲ್‌ರವರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾಗಿನ ದಾಖಲೆಗಳಿವೆ. ೧೯೯೨ರಲ್ಲಿ ಪ್ರಕಟವಾಗಿರುವ ೧೧ನೆಯ ಸಂಪುಟವು "ಬುದ್ಧ ಮತ್ತು ಅವನ ಧಮ್ಮ" ಗ್ರಂಥದ ಪುನರ್ ಮುದ್ರಣ. ೧೯೯೩ರಲ್ಲಿ ಪ್ರಕಟವಾಗಿರುವ ೧೨ನೆಯ ಸಂಪುಟದಲ್ಲಿ ಅವರ ಅಪ್ರಕಟಿತ ಕೃತಿಗಳಾದ 'ಪ್ರಾಚೀನ ಭಾರತದ ವಾಣಿಜ್ಯ'; 'ಅಸ್ಪೃಶ್ಯರು ಮತ್ತು ಬ್ರಿಟಿಷ್ ಸಾಮ್ರಾಜ್ಯ'; 'ಇಂಗ್ಲಿಷ್ ಸಂವಿಧಾನದ ಮೇಲೆ ಉಪನ್ಯಾಸಗಳು'; 'ಕಾಯ್ದೆ ಮತ್ತು ಕಾನೂನುಗಳ ಮೇಲೆ ಟಿಪ್ಪಣಿಗಳು'; 'ವೀಸಾಕ್ಕಾಗಿ ಕಾದಿದ್ದು' ಮತ್ತು ಇತರ ಸಮ್ಮಿಶ್ರ ಲೇಖನಗಳು ಸೇರಿವೆ. ೧೯೯೪ರಲ್ಲಿ ಪ್ರಕಟವಾಗಿರುವ ಹದಿಮೂರನೆಯ ಸಂಪುಟವು ಬಹಳ ಮಹತ್ವದ್ದಾಗಿದ್ದು ಅತ್ಯಂತ ಉಪಯುಕ್ತವೂ ಆಗಿದೆ. ಇದರಲ್ಲಿ ಡಾ. ಅಂಬೇಡ್ಕರ್‌ರವರು ಭಾರತ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಭಾರತ ಸಂವಿಧಾನ ಸಭೆಯಲ್ಲಿ ನಿರ್ವಹಿಸಿದ ಜವಾಬ್ದಾರಿಯ ಸಂಪೂರ್ಣ ಪರಿಚಯವನ್ನು ದಾಖಲೆಗಳೊಂದಿಗೆ ಮಾಡಲಾಗಿದೆ. ಇದರಲ್ಲಿ ಸಂವಿಧಾನದ ಸಿದ್ಧಾಂತಗಳು ಮತ್ತು ನಿಯಮಗಳು ಹಾಗೂ ಅವುಗಳಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಮುಂಗಂಡು ಅವುಗಳಿಗೆ ಡಾ. ಅಂಬೇಡ್ಕರ್‌ರವರು

ನೀಡಿದ ವಿವರಣೆಗಳೂ ಸೇರಿವೆ. ಇಂಥ ಸ್ತುತ್ಯ ಉಪಕ್ರಮಕ್ಕಾಗಿ ಮಹಾರಾಷ್ಟ್ರ ಸರ್ಕಾರ ಅಭಿನಂದನಾರ್ಹ. ಅಲ್ಲದೆ ಪ್ರತಿ ಸಂಪುಟ ಸರಾಸರಿ ೫೦೦ ಪುಟಗಳಿಗಿಂತ ಹೆಚ್ಚಿದ್ದಾಗ್ಯೂ ಪ್ರತಿಯೊಂದರ ಬೆಲೆ ಕೇವಲ ನಲವತ್ತು ರೂಪಾಯಿಗಳಿರುವುದು (ಮೊದಲನೆಯ ಸಂಪುಟದ ಬೆಲೆ ಕೇವಲ ಹತ್ತು ರೂಪಾಯಿ) ಅತ್ಯಂತ ಸ್ವಾಗತಾರ್ಹ ಸಂಗತಿಯಾಗಿದೆ. ಡಾ. ಅಂಬೇಡ್ಕರ್ ಅವರ ಈ ಅಮೂಲ್ಯ ಮತ್ತು ಸಮಗ್ರ ವೈಚಾರಿಕ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ಮತ್ತು ವೈಚಾರಿಕ ಸಾಹಿತ್ಯಕ್ಕೆ ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ನೀಡುವ ಮೂಲಕ ಮಹಾರಾಷ್ಟ್ರ ಸರ್ಕಾರವು ಮಹತ್ತರವಾದ ಸೇವೆ ಸಲ್ಲಿಸಿದೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಸಮಗ್ರ ಸಾಹಿತ್ಯ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವುದರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಹೊಂದಬಹುದಾಗಿದೆ. ಆದ್ದರಿಂದ ಈ ಭಾಷೆಯಲ್ಲಿ ಪರಿಶ್ರಮವಿಲ್ಲದ ಇತರ ಭಾಷಿಕರಿಗೆ ಡಾ. ಅಂಬೇಡ್ಕರ್‌ರವರ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ. ಇದು ಒಂದು ದೊಡ್ಡ ಕೊರತೆ. ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಎಲ್ಲಾ ಬರಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ಎಲ್ಲಾ ಭಾಷೆಗಳಲ್ಲಿ ತುರ್ತಾಗಿ ಆಗಬೇಕಾಗಿದೆ.

ಈ ಆವಶ್ಯಕತೆಯನ್ನು ಮೊಟ್ಟಮೊದಲು ಮನಗಂಡ ಕರ್ನಾಟಕ ರಾಜ್ಯ ಸರ್ಕಾರ ೧೯೮೮ರ ಜೂನ್ ತಿಂಗಳಲ್ಲಿ ಡಾ. ಅಂಬೇಡ್ಕರ್ ಅವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಲು ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಆದೇಶ ಹೊರಡಿಸಿತು.

| | | |
|---|---|---|
| ೧) ಡಾ.ಎ.ಎಂ. ರಾಜಶೇಖರಯ್ಯ | – | ಸಂಪಾದಕರು |
| ೨) ಡಾ. ಸಿದ್ದಲಿಂಗಯ್ಯ | – | ಸದಸ್ಯರು |
| ೩) ಶ್ರೀ ದೇವನೂರ ಮಹಾದೇವ | – | ಸದಸ್ಯರು |
| ೪) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | – | ಸದಸ್ಯ–ಕಾರ್ಯದರ್ಶಿ |

ಸಮಿತಿಯ ಪ್ರಥಮ ಸಭೆ ೩೦–೮–೧೯೮೮ ರಂದು ಬೆಂಗಳೂರಿನಲ್ಲಿ ಸೇರಿ ಡಾ. ಅಂಬೇಡ್ಕರ್ ಅವರ ಪ್ರಕಟಿತ, ಸುಪರಿಚಿತವಾದ ಹದಿನಾಲ್ಕು ಬಿಡಿ ಕೃತಿಗಳನ್ನು ಮಾತ್ರ ಭಾಷಾಂತರ ಮಾಡದೆ, ಮತ್ತು ಅವುಗಳಲ್ಲಿ ಕೆಲವು ಲಭ್ಯವಿಲ್ಲದಿರುವ ಕಾರಣದಿಂದಲೂ, ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟಿತವಾಗುತ್ತಿರುವ ಎಲ್ಲಾ ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಮಹಾರಾಷ್ಟ್ರ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಯಿತು. ಮಹಾರಾಷ್ಟ್ರ ಸರ್ಕಾರದವರು ದಿನಾಂಕ ೨–೫–೧೯೮೯ರ ಪತ್ರದಲ್ಲಿ ತಮ್ಮ ಅನುಮತಿ ನೀಡಿ, ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಆನಂತರವೇ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯು ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ ಅವರ ಸಮ್ಮತಿ, ಸಹಕಾರ ಕೋರಿತು. ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲ ಕೃತಿಯ ಸುಮಾರು ಒಂದು ನೂರು ಪುಟಗಳನ್ನು ವಹಿಸಲಾಯಿತು. ಡಾ. ಅಂಬೇಡ್ಕರ್ ಅವರ ಬರಹಗಳು ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾದುವುಗಳಾಗಿರುವುದರಿಂದ ಅವುಗಳ ಭಾಷಾಂತರ ಸುಲಭ ಸಾಧ್ಯವಲ್ಲ. ಭಾಷಾಂತರ ಮಾಡುವ ಮೊದಲು ಅದರ ಆಳವಾದ ಅಧ್ಯಯನ ಮತ್ತು ಮನನ ಆವಶ್ಯಕ. ಆದ್ದರಿಂದ ಭಾಷಾಂತರಕಾರರಿಗೆ

ಹೆಚ್ಚು ಅವಧಿ ಬೇಕಾಯಿತು. ಕೆಲವರು ಭಾಷಾಂತರ ಮಾಡಿ ಕಳುಹಿಸಿದ ನಂತರ ಭಾಷೆ ಶೈಲಿ, ಪಾರಿಭಾಷಿಕ ಪದಗಳು ಮುಂತಾದವುಗಳ ಪರಿಶೀಲನೆ ಅಗತ್ಯವೆನಿಸಿತು. ಈ ಕಾರ್ಯದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ಸಂಪಾದಕ ಸಮಿತಿ ತೀರ್ಮಾನಿಸಿ ಕೆಳಕಂಡ ಮಹನೀಯರನ್ನು ಆಹ್ವಾನಿಸಲಾಯಿತು.

೧) ಡಾ.ಆರ್.ಸಿ.ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೨) ಡಾ.ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು ೩) ಶ್ರೀ ವೈ.ಎಂ.ಸಿ. ಶರ್ಮ ಅಂದಿನ ಅಧ್ಯಕ್ಷರು, ಕರ್ನಾಟಕ ರಾಜಭಾಷಾ ಆಯೋಗ, ಬೆಂಗಳೂರು, ನಂತರ ದಿ.ಶ್ರೀ ಕಂಠೀರಾವ್ ಇವರು ಅನುವಾದಿತ ಭಾಗಗಳ ಪರಿಶೀಲನೆ ಮಾಡಲು ಒಪ್ಪಿಕೊಂಡರು. ಅನುವಾದ ಮಾಡಿದ ಭಾಗಗಳಲ್ಲಿ ಪದ ಬಳಕೆ, ಭಾಷೆ, ಶೈಲಿ ಮುಂತಾದವುಗಳಲ್ಲಿ ಸಾಧ್ಯವಾದಷ್ಟು ಏಕರೂಪತೆ ತರುವ ಕಾರ್ಯ ಭಾಷಾಂತರ ಮಾಡುವುದಕ್ಕಿಂತಲೂ ಹೆಚ್ಚು ಕಠಿಣ ಮತ್ತು ಪ್ರಯಾಸಕರ. ರಾಜ್ಯದ ವಿವಿಧ ಭಾಗಗಳ ಅನುವಾದಕರು ತಮ್ಮತಮ್ಮ ಪ್ರಾದೇಶಿಕ ಭಾಷೆ, ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕ ವೈವಿಧ್ಯವನ್ನು ಉಳಿಸಿಕೊಂಡು ಬರಲಾಗಿದೆ. ಈ ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ಸುಧಾರಿಸುವ ಪ್ರಯತ್ನ ಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿರಲಿಲ್ಲ. ಇವರು ಮೊದಲು ಮೈಸೂರು ಆಡಳಿತ ತರಬೇತಿ ಸಂಸ್ಥೆಯಲ್ಲಿ ನಂತರ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಮೂರು ದಿನಗಳ ಭಾಷಾಂತರ ಕಮ್ಮಟದಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಈ ತಜ್ಞರಿಗೆ ಸಂಪಾದಕ ಸಮಿತಿ ಅತ್ಯಂತ ಋಣಿಯಾಗಿದೆ.

ಈಗ ಪ್ರಕಟವಾಗುತ್ತಿರುವ ಈ ಸಂಪುಟವು ಡಾ॥ ಅಂಬೇಡ್ಕರರ ರಾಜಕೀಯ ಜೀವನ ಮತ್ತು ಮುಖಂಡತ್ವದಲ್ಲಿ ಅತ್ಯಂತ ಮಹತ್ವದ ಅವಧಿಗೆ ಸಂಬಂಧಪಟ್ಟ ದಾಖಲೆಗಳನ್ನೊಳಗೊಂಡಿವೆ. ಏಕೆಂದರೆ ಅವರು ಪ್ರಥಮ ಬಾರಿಗೆ ಭಾರತದ ಗವರ್ನರ್ ಜನರಲ್‌ರವರ ಕಾರ್ಯಕಾರಿ ಪರಿಷತ್ತಿನಲ್ಲಿ ಕಾರ್ಮಿಕ ಸದಸ್ಯ(ಸಚಿವ)ರಾಗಿ ೧೯೪೨ರಲ್ಲಿ ನೇಮಕಗೊಂಡರು. ೧೯೪೩ರಿಂದ ೧೯೪೬ರ ಅವಧಿಯಲ್ಲಿ ಅವರು ಈ ಮಹತ್ವದ ಸ್ಥಾನವನ್ನು ಅಲಂಕರಿಸಿದ್ದು ಈ ಅವಧಿಯಲ್ಲಿ ಅದರಲ್ಲಿಯೂ ಎರಡನೆಯ ಮಹಾಯುದ್ಧದ ಸಂಕಟ ಕಾಲದಲ್ಲಿ ಕಾರ್ಮಿಕ ಖಾತೆಯ ಸಚಿವರಾಗಿ ಕಾರ್ಮಿಕ ಸಮಸ್ಯೆಗಳತ್ತ ರಚನಾತ್ಮಕ ರೀತಿಯಲ್ಲಿ ಗಮನಹರಿಸಿದರು. ಸಾಮಾನ್ಯವಾಗಿ ಯುದ್ಧಕಾಲದಲ್ಲಿ ಕಾರ್ಮಿಕರು ವಿಶೇಷವಾಗಿ ಶೋಷಣೆಗೆ ಒಳಗಾಗುತ್ತಾರೆ ಮತ್ತು ಅವರ ತೀವ್ರ ಸಮಸ್ಯೆಗಳತ್ತ ಯಾರೂ ಗಮನ ಹರಿಸುವುದಿಲ್ಲ. ಆದರೆ ಡಾ॥ ಅಂಬೇಡ್ಕರರು ತಮ್ಮ ಅಧಿಕಾರಾವಧಿಯಲ್ಲಿ ಭಾರತೀಯ ಕಾರ್ಮಿಕರ ಅನೇಕ ಸಮಸ್ಯೆಗಳನ್ನು ಬಗೆಹರಿಸಿದರಲ್ಲದೆ ಅವರ ಸ್ಥಿತಿಗತಿಗಳಲ್ಲಿ ಗಮನಾರ್ಹವಾದ ಸುಧಾರಣೆಗಳನ್ನು ತಂದರು. ಇದರ ಕೀರ್ತಿ ಡಾ॥ ಅಂಬೇಡ್ಕರರಿಗೆ ಸಲ್ಲುವುದು.

ಅವರ ಬರೆಹಗಳು ಮತ್ತು ಭಾಷಣಗಳ ಮಾಲಿಕೆಯ ಹತ್ತನೆಯ ಸಂಪುಟದಲ್ಲಿ ಡಾ॥ ಅಂಬೇಡ್ಕರರು ಕೇಂದ್ರ ಶಾಸನಸಭೆಯ ೧೯೪೨ರಿಂದ ೧೯೪೬ರ ಅವಧಿಯಲ್ಲಿ ವಿವಿಧ ವಿಷಯಗಳ ಮೇಲೆ ಮಾಡಿದ ಭಾಷಣಗಳು ಅದರಲ್ಲಿಯೂ ಪ್ರಮುಖವಾಗಿ ಭಾರತದ ಕಾರ್ಮಿಕರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿವೆ. ಈ ಭಾಷಣಗಳು ವಿದ್ವತ್‌ಪೂರ್ಣವೂ ಬೋಧಪ್ರದವೂ ಮತ್ತು ಸಂವೇದನಾಶೀಲವೂ ಆಗಿರುವುದಲ್ಲದೇ ಈ ದಿನಗಳಲ್ಲಿ ಕಾಣಸಿಗದಂತಹ ಸಾಹಿತ್ಯದ ವೈಖರಿಯನ್ನು ಪ್ರತಿಬಿಂಬಿಸುತ್ತವೆ. ಅವು ಅತ್ಯಂತ ಸ್ವೋಪಜ್ಞವಾಗಿವೆ. ಎಲ್ಲಕ್ಕಿಂತಲೂ ಮಿಗಿಲಾಗಿ ಅವುಗಳಲ್ಲಿ ಡಾ॥ ಅಂಬೇಡ್ಕರರು ಕಾರ್ಮಿಕ ಸಮಸ್ಯೆಗಳ ಬಗ್ಗೆ ಅಗಾಧ ಅರಿವನ್ನು ಹೊಂದಿದ್ದರೆಂಬ ಅಂಶ ಗೊತ್ತಾಗುತ್ತದೆ. ಅವರೇ ಮುಂಬಯಿ ಪರೇಲ್‌ನಲ್ಲಿ ಕೂಲಿಕಾರರ ಚಾಲಿನಲ್ಲಿ ವಾಸವಾಗಿದ್ದ ದಿನಗಳಲ್ಲಿ ಪ್ರತಿನಿತ್ಯವೂ ನೋಡುತ್ತಿದ್ದ ಕೂಲಿಕಾರರ ಕಠಿಣ ಜೀವನದ ಅರಿವು ಅವರಲ್ಲುಂಟಾಗಿತ್ತು. ಈ ಕಟು ಅನುಭವದ ಹಿನ್ನೆಲೆಯಲ್ಲಿ

ಅವರು ಅಧಿಕಾರದ ಅವಕಾಶ ಸಿಕ್ಕಾಗ ಸ್ವತಃ ತಾವೆ ಕಾರ್ಮಿಕ ಇಲಾಖೆಯನ್ನು ಆಯ್ದುಕೊಂಡು ಕಾರ್ಮಿಕರ ಕಲ್ಯಾಣ ಸಾಧಿಸುವ ಪಣ ತೊಟ್ಟರು.

ಅವರ ಅಧಿಕಾರದಲ್ಲಿ ದ್ವಿತೀಯ ಮಹಾಯುದ್ಧದ ಕಾಲ ದೇಶಕ್ಕೆ ಕಠಿಣ ಕಾಲವಾಗಿತ್ತಾದರೂ ಯುದ್ಧದ ಆವಶ್ಯಕತೆಗಳ ಒತ್ತಡಗಳಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಗಣನೀಯ ಪರಿವರ್ತನೆಯುಂಟಾಯಿತು. ಔದ್ಯೋಗಿಕ ವಿಸ್ತರಣೆಯ ಅವಕಾಶಗಳೊದಗಿ ಬಂದವು. ಇದರಿಂದ ಉದ್ಯಮಿಗಳು ಮತ್ತು ಉದ್ಯೋಗಪತಿಗಳಿಗೆ ಅಭಿವೃದ್ಧಿಯ ವಿಪುಲ ಅವಕಾಶ ದೊರೆತವಾದರೂ ಕಾರ್ಮಿಕರಿಗೆ ಅದರ ಲಾಭ ದೊರೆಯಲಿಲ್ಲ. ಇದನ್ನರಿತಿದ್ದ ಡಾ॥ ಅಂಬೇಡ್ಕರರು ಕಾರ್ಮಿಕ ಕಲ್ಯಾಣ ಕುರಿತ ಅನೇಕ ಮಸೂದೆಗಳನ್ನು ಮಂಡಿಸಿ ಅವುಗಳನ್ನು ಸಮರ್ಥ ರೀತಿಯಲ್ಲಿ ನಡೆಸಿ ಕಾನೂನುಗಳನ್ನು ಮಾಡಿದರು.

ಕಾರ್ಮಿಕರ ಬಗ್ಗೆ ಅವರು ತಳೆದಿದ್ದ ನಿಲುವು ಮತ್ತು ಸಿದ್ಧಾಂತಗಳನ್ನು ಅವರು ೧೫ನೆಯ ಸೆಪ್ಟೆಂಬರ್ ೧೯೪೩ರಲ್ಲಿ ಕಾರ್ಮಿಕ ಸಮ್ಮೇಳನದ ಬಹಿರಂಗ ಅಧಿವೇಶನದ ಮೊದಲನೆಯ ಕಾರ್ಮಿಕ ಸಮ್ಮೇಳನದ ಬಹಿರಂಗ ಅಧಿವೇಶನದ ಮೊದಲನೆಯ ಗೋಷ್ಠಿಯಲ್ಲಿ ಮಾಡಿದ ಭಾಷಣದಿಂದ ತಿಳಿದುಕೊಳ್ಳಬಹುದು. ಅವರ ಮಾತಿನಲ್ಲಿಯೇ ಹೇಳುವುದಾದರೆ ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ, ಉದ್ಯೋಗಿಗಳು ಮತ್ತು (ಕೆಲಸ ಕೊಡುವ) ಧಣಿಗಳು ಪರಸ್ಪರ ಜವಾಬ್ದಾರಿ, ಗೌರವ ಮತ್ತು ಪ್ರತಿಯೊಬ್ಬರೂ ಕೊಡುಕೊಳ್ಳುವ ಭಾವನೆಯಿಂದ ಕೆಲಸ ಮಾಡಲು ಸಿದ್ಧವಾಗಬೇಕು. ಈ ರೀತಿಯ ಪರಸ್ಪರ ಗೌರವ ಮತ್ತು ಜವಾಬ್ದಾರಿ ಬೆಳೆಯದೇ ಹೋದರೆ ಔದ್ಯೋಗಿಕ ಕಾರ್ಮಿಕರ ಕಲ್ಯಾಣದ ಸಮಸ್ಯೆ ನಿವಾರಣೆಯಾಗುವುದು ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ ಸ್ವತಂತ್ರ ಭಾರತದ ಪುರೋಗಾಮಿ ಕಾರ್ಮಿಕ ಧೋರಣೆಗಳಿಗೆ ಬಹುಮಟ್ಟಿಗೆ ಡಾ॥ ಅಂಬೇಡ್ಕರರು ನಲವತ್ತರ ದಶಕದಲ್ಲಿ ಅನುಷ್ಠಾನಕ್ಕೆ ತಂದಂತಹ ಅನೇಕ ಕಾನೂನು ವಿಧಿಗಳೇ ಕಾರಣ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಅವರು ಔದ್ಯಮಿಕ ಬೆಳವಣಿಗೆಗೆ ಬಹುಮುಖ್ಯವಾದ ಕಾರ್ಮಿಕರ ತಾಂತ್ರಿಕ ತರಬೇತಿ ಮತ್ತು ನೈಪುಣ್ಯಗಳ ವೃದ್ಧಿಯತ್ತ ಹೆಚ್ಚು ಒತ್ತು ನೀಡಿದರು. ಇವುಗಳ ಬೆಳವಣಿಗೆ ಸುಲಭ ಸಾಧ್ಯವಲ್ಲ ಮತ್ತು ಅದರಲ್ಲಿ ವಿಳಂಬವೂ ಸಹಜ. ಶಾಂತಿಯುತ ಬದಲಾವಣೆಯಲ್ಲಿ ಯಾವಾಗಲೂ ವಿಳಂಬವಾಗುತ್ತದೆ. ಸಾಮಾಜಿಕ ಪ್ರಜ್ಞೆ ಹೊಂದಿರದ ಭಾರತದಂತಹ ಪುರಾತನ ದೇಶದಲ್ಲಿ ಪ್ರಗತಿ ಮಂದಗತಿಯಲ್ಲಿಯೇ ಸಾಗುವುದು. ಆದ್ದರಿಂದ ಡಾ॥ ಅಂಬೇಡ್ಕರರು ನಮ್ಮ ಜನತೆಯ ದೃಷ್ಟಿಕೋನದಲ್ಲಿ ಬದಲಾವಣೆಯಾಗಬೇಕೆಂದು ಪ್ರತಿಪಾದಿಸಿದರು. ಇದೂ ಅಲ್ಲದೆ ಸ್ವಾತಂತ್ರ್ಯ ಅರ್ಥಪೂರ್ಣವಾಗಬೇಕಾದರೆ ಒಳ್ಳೆಯ ಸರ್ಕಾರ, ಒಳ್ಳೆಯ ಸಮಾಜ ಅವಶ್ಯ ಎಂದೂ ಅವರು ಹೇಳಿದರು.

ಭಾರತದಲ್ಲಿ ಕಾರ್ಮಿಕರು ಬಹುವಾಗಿ ಶೋಷಿತರಾಗಿದ್ದಾರೆ. ಕಾರ್ಮಿಕ ವರ್ಗವನ್ನು ಸಾಮಾಜಿಕ ಭದ್ರತೆಯ ರಕ್ಷಣೆಯಡಿಯಲ್ಲಿ ತರುವುದೇ ಡಾ॥ ಅಂಬೇಡ್ಕರರ ಮೂಲ ಗುರಿಯಾಗಿತ್ತು. ಕಾರ್ಮಿಕರ ಪರಿಹಾರ ಕಾಯ್ದೆ ಹೆರಿಗೆ ಸೌಕರ್ಯ ಕಾಯ್ದೆ ಮುಂತಾದವು ಅವರು ಕೈಗೊಂಡ ಶಾಶ್ವತ ಮಹತ್ವದ ಕ್ರಮಗಳಾಗಿದ್ದವು.

ಡಾ॥ ಅಂಬೇಡ್ಕರ್‌ರವರು ಕಾರ್ಮಿಕ ಸಚಿವರಾಗಿದ್ದಾಗ ಕಲ್ಲಿದ್ದಲು ಗಣಿಗಳಲ್ಲಿನ ಪರಿಸ್ಥಿತಿಗಳನ್ನು ಖುದ್ದಾಗಿ ಪರಿಶೀಲಿಸಲು ಮುಂದಾದರು. ಅವರು ಕಲ್ಲಿದ್ದಲು ಮತ್ತು ಅಭ್ರಕ ಗಣಿಗಳಲ್ಲಿ ಸುಮಾರು ೪೦೦ ಅಡಿಗಳಷ್ಟು ಆಳದವರೆಗೆ ಸ್ವತಃ ಇಳಿದು ಪರಿಸ್ಥಿತಿಯನ್ನು ಪರಿಶೀಲಿಸಿದರು. ಕಾರ್ಮಿಕರ ಬಗ್ಗೆ ಅವರು ಹೊಂದಿದ್ದ ಈ ಕಾಳಜಿ, ಅದರಲ್ಲಿಯೂ ಕಲ್ಲಿದ್ದಲು ಗಣಿಗಳ ಕೆಲಸಗಾರರ ಬಗ್ಗೆ ಅವರಿಗಿದ್ದ ಕಾಳಜಿಯ ಪ್ರತಿಫಲವೇ ಕಲ್ಲಿದ್ದಲು ಗಣಿಗಳ ಕೆಲಸಗಾರರ ಕಲ್ಯಾಣ ಅಧ್ಯಾದೇಶ, ೧೯೪೪. ಆದ್ದರಿಂದ ಅವರು ಕಾರ್ಮಿಕ ಕಲ್ಯಾಣ ಸಮಸ್ಯೆ ವಿವಿಧ ಮುಖಗಳ ಬಗ್ಗೆ ಮಾಡಿದ ಅನೇಕ ಭಾಷಣಗಳು ಬಹಳ ಬೋಧಪ್ರದವಾಗಿದೆ.

ಕಾರ್ಮಿಕರ ಸಮಸ್ಯೆಗಳೂ ಅಲ್ಲದೆ ಆರ್ಥಿಕ ಪ್ರಗತಿಯ ಇನ್ನೊಂದು ಮುಖವೆನಿಸಿದ ಇತರ ಅಭಿವೃದ್ಧಿಪರ ಯೋಜನೆಗಳಿಗೂ ಅವರ ಕೊಡುಗೆ ಅಪಾರ. ಅವರು ಕಾರ್ಮಿಕ ಸದಸ್ಯರಾಗಿದ್ದಾಗಲೇ ಕೈಗೊಂಡ ದಾಮೋದರ ಕಣಿವೆ ವಿವಿಧೋದ್ದೇಶ ಅಭಿವೃದ್ಧಿಯ ಬೆಳವಣಿಗೆ, ಒರಿಸ್ಸಾದ ನದಿಗಳ ಬಗ್ಗೆ ವಿವಿಧೋದ್ದೇಶ ಯೋಜನೆಗಳು, ಅಂತರ್ದೇಶೀಯ ಜಲಸಂಚಾರ ಯೋಜನೆ ಮುಂತಾದವು ಉಲ್ಲೇಖನಾರ್ಹ. ಈ ಸಂಪುಟದಲ್ಲಿ ಈ ವಿಷಯಗಳ ಕುರಿತು ಅವರು ಮಾಡಿದ ಭಾಷಣಗಳೂ, ವಿಧಾನಸಭೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳೂ ಬಹಳ ಮಹತ್ವದವುಗಳಾಗಿವೆ. ಇವುಗಳಿಂದ ದೇಶದ ಆರ್ಥಿಕ ಪ್ರಗತಿಯ ಸಮಸ್ಯೆಗಳ ಬಗ್ಗೆ ಅವರಿಗೆ ಎಷ್ಟು ಅರಿವಿದ್ದಿತೆಂಬುದು ಗೊತ್ತಾಗುತ್ತದೆ. ನದಿಗಳ ಪ್ರವಾಹ ನಿಯಂತ್ರಣ, ಜಲಸಂಚಾರ, ನೀರಾವರಿ, ವ್ಯವಸಾಯ ಮತ್ತು ಮಣ್ಣಿನ ರಕ್ಷಣೆ ಹಾಗೂ ವಿದ್ಯುಚ್ಛಕ್ತಿ ಉತ್ಪಾದನೆ ಮುಂತಾದವುಗಳ ಬಗ್ಗೆ ಅವರ ವಿಚಾರಗಳು ಎಷ್ಟು ಆಧುನಿಕ ಮತ್ತು ವೈಜ್ಞಾನಿಕವಾಗಿದ್ದವೆಂಬುದು ಗಮನಾರ್ಹವಾಗಿದೆ.

ಅವರು ಸಚಿವರಾಗಿದ್ದಾಗ ಸರ್ಕಾರದ ಕಾರ್ಯವಿಧಾನವನ್ನು ಸುಧಾರಿಸಲು ಕೂಡ ಗಮನ ನೀಡಿದರು. ಅವರು ಕಾಗದ ನಿಯಂತ್ರಣ ಆಜ್ಞೆಯನ್ನು ಕುರಿತು ವಿಧಾನ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಸರ್ಕಾರದಲ್ಲಿ ಬಳಸಲಾಗುತ್ತಿದ್ದ ಯುದ್ಧಕಾಲದಲ್ಲಿ ೧೪೯ ವ್ಯವಹಾರ ನಮೂನೆ (Forms) ಗಳನ್ನು ಅಮಾನತಿನಲ್ಲಿಟ್ಟು ೧೯೦ ನಮೂನೆಗಳನ್ನು ರದ್ದುಪಡಿಸಿರುವುದಾಗಿ ತಿಳಿಸಿದರು. ಅದೇ ರೀತಿ ಕೆಲವು ವ್ಯವಹಾರವನ್ನು ಕಡಿಮೆ ಮಾಡಬಹುದೆಂಬ ಅಂಶವನ್ನು ಭಾರತ ಸರ್ಕಾರದ ಗಮನಕ್ಕೆ ತಂದರು.

ಒಟ್ಟಿನಲ್ಲಿ ಡಾ॥ ಬಾಬಾಸಾಹೇಬ್ ಅಂಬೇಡ್ಕರ್‌ರವರ ಬರೆಹಗಳು ಮತ್ತು ಭಾಷಣಗಳ ಮಾಲಿಕೆಯ ಹತ್ತನೆಯ ಸಂಪುಟದಲ್ಲಿ ಪ್ರಕಟಿತವಾಗಿರುವ ಈ ಬರೆಹಗಳು ಮತ್ತು ಭಾಷಣಗಳು ಇಂದಿಗೂ ಸಹ ಪ್ರಸ್ತುತವಾಗಿರುವ ಅಮೂಲ್ಯ ವಿಚಾರಗಳನ್ನೊಳಗೊಂಡಿವೆ. ಇವು ಸಾಮಾನ್ಯ ಓದುಗರಿಗೂ, ಆಡಳಿತಗಾರರಿಗೂ, ಸಂಶೋಧಕರಿಗೂ, ಕಾರ್ಮಿಕ ವಕೀಲರಿಗೂ ಕಾರ್ಮಿಕ ಮುಖಂಡರಿಗೂ, ಅರ್ಥಶಾಸ್ತ್ರಜ್ಞರಿಗೂ ಮತ್ತು ಇತಿಹಾಸದ ವಿದ್ಯಾರ್ಥಿಗಳಿಗೂ ಅತ್ಯುಪಯುಕ್ತವೂ ಬೋಧಪ್ರದವೂ ಮತ್ತು ಜ್ಞಾನಪ್ರದವೂ ಆಗಿವೆ.

ಕೊನೆಯಲ್ಲಿ ಒಂದು ಮಾತು. ಮೊದಲಿನಿಂದಲೂ ನಿಮ್ನವರ್ಗಗಳ ಹಿತಾಸಕ್ತಿಗಳು ಮತ್ತು ಅಭಿವೃದ್ಧಿಯನ್ನು ಚಿಂತಿಸುತ್ತಿದ್ದ ಮತ್ತು ಅಸ್ಪೃಶ್ಯತೆಯನ್ನು ಆಮೂಲಾಗ್ರವಾಗಿ ನಿರ್ಮೂಲ ಮಾಡಲು ಪಣತೊಟ್ಟಿದ್ದ ಡಾ॥ ಅಂಬೇಡ್ಕರರು ೪೦ರ ದಶಕದ ಆರಂಭದಲ್ಲಿ ಎಂದರೆ ೧೯೪೨ರಲ್ಲಿ ಅದರಲ್ಲಿಯೂ ಬ್ರಿಟಿಷರ ಅಧಿಕಾರಾವಧಿ ಪರ್ಯಾವಸಾನವಾಗುತ್ತಿರುವುದು ಸ್ಪಷ್ಟ ಗೋಚರವಾಗುತ್ತಿರುವ ಕಾಲದಲ್ಲಿ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟಿಷರಿಗೆ ದೇಶ ಬಿಟ್ಟು ತೊಲಗಿ ಎಂದು ಕರೆ ನೀಡಿದ ಸಂದರ್ಭದಲ್ಲಿ ವೈಸ್‌ರಾಯ್‌ರವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾಗಿ ಏಕೆ ಸೇರಿದರು ಎಂಬ ಜಿಜ್ಞಾಸೆ ಓದುಗರ ಮನಸ್ಸಿನಲ್ಲಿ ಸುಳಿಯುವುದು ಸಹಜ. ಇದಕ್ಕೆ ಉತ್ತರ ಬಹುಶಃ ಡಾ॥ ಅಂಬೇಡ್ಕರರ ವಿಚಾರದಲ್ಲಿಯೂ ಅಡಗಿದೆ ಎಂದೆನಿಸುತ್ತದೆ. ಅವರ ಅಭಿಪ್ರಾಯದಲ್ಲಿ ಸರ್ಕಾರದ ಹೊರಗುಳಿದು ಹೋರಾಡುವುದಕ್ಕಿಂತಲೂ ಒಳಗಿನಿಂದ ಹೋರಾಡುವುದು ಹೆಚ್ಚು ಉಪಯುಕ್ತ ಮತ್ತು ಪ್ರಭಾವಿ ಹೋರಾಟವಾಗಬಲ್ಲದು. ಆದುದರಿಂದಲೇ ಅವರು ಸಮಾಜದ ಅತ್ಯಂತ ಶೋಷಣೆಗೊಳಗಾದ ಕಾರ್ಮಿಕವರ್ಗದ ಹಿತವನ್ನು ಗಮನದಲ್ಲಿಟ್ಟುಕೊಂಡು ಮಂತ್ರಿಮಂಡಲದಲ್ಲಿ ಕಾರ್ಮಿಕ ಇಲಾಖೆಯನ್ನೇ ಸ್ವಸಂತೋಷದಿಂದ ಆಯ್ದುಕೊಂಡರು.

ಈ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ ಡಾ॥ ಅಂಬೇಡ್ಕರರ ಪ್ರಕಾರ ದೇಶದ ಕಾರ್ಮಿಕರಲ್ಲಿ ಸುಮಾರು ಶೇಕಡ ೯೦ರಷ್ಟು ಕಾರ್ಮಿಕರು ನಿಮ್ನ ವರ್ಗಕ್ಕೆ ಸೇರಿದವರು. ಈ ಕಾರಣದಿಂದ ಅವರು ಸರ್ಕಾರ ಸೇರುವ ಈ ನಿರ್ಧಾರಕ್ಕೆ ಬಂದಿದ್ದರೆನ್ನಬಹುದು.

ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಅಲ್ಲಿಯವರೆಗೂ ಜಾತಿಪ್ರಜ್ಞೆಗೇ ಪ್ರಾಧಾನ್ಯತೆ ಇತ್ತಿದ್ದ ಡಾ॥ ಅಂಬೇಡ್ಕರರು ಕಾರ್ಮಿಕ ಸಮಸ್ಯೆಗಳಿಗೆ ಮಹತ್ವ ನೀಡಿದ್ದು ಅವರಲ್ಲುಂಟಾದ ವರ್ಗಪ್ರಜ್ಞೆಯ ಸಂಕೇತವಾಗಿದೆಯೆ? ಅವರಲ್ಲಿಯ ಈ ವರ್ಗಪ್ರಜ್ಞೆಯ ದ್ಯೋತಕವಾಗಿಯೇ ಅವರು 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ'ಯನ್ನು ಸ್ಥಾಪಿಸಿದರೆನ್ನಬಹುದೇ? ಹೀಗೆ ಅವರು ತಮ್ಮ ಕಾರ್ಯಕ್ಷೇತ್ರದಡಿಯಲ್ಲಿ ತಮ್ಮ ವರ್ಗ ಪ್ರಜ್ಞೆಯು ಜಾತಿಪ್ರಜ್ಞೆಗೆ ವಿಶಾಲ ತಳಹದಿಯೊದಗಿಸಿತೆಂದು ಹೇಳಬಹುದೆ? ಈ ಕುರಿತ ಹೆಚ್ಚಿನ ಚಿಂತನೆ ಅವಶ್ಯ.

ಈ ಸಂಪುಟ ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಎರಡು ಭಾಗಗಳಲ್ಲಿ ಪ್ರಕಟಿಸಲಾಗಿದೆ. ಒಂದನೆಯ ಭಾಗದಲ್ಲಿ ಡಾ॥ ಅಂಬೇಡ್ಕರರು ಕೇಂದ್ರ ವಿಧಾನ ಸಭೆಯಲ್ಲಿ ಕಾರ್ಮಿಕ ಕಲ್ಯಾಣ ಮತ್ತು ತತ್ಸಂಬಂಧ ಮಸೂದೆಗಳನ್ನು ಮಂಡಿಸಿದ ಸಂದರ್ಭದಲ್ಲಿ ಭಾಗವಹಿಸಿ ಮಾಡಿದ ಭಾಷಣಗಳನ್ನು ಪ್ರಕಟಿಸಲಾಗಿದೆ. ಎರಡನೆಯ ಭಾಗದಲ್ಲಿ ಕೇಂದ್ರ ವಿಧಾನಸಭೆಯಲ್ಲಿ ಕಾರ್ಮಿಕ ಸದಸ್ಯರಾಗಿದ್ದ ಅವರು ಸದಸ್ಯರು ತಮ್ಮ ಇಲಾಖೆಯ ಬಗ್ಗೆ ಕೇಳಿದ ಅನೇಕ ಪ್ರಶ್ನೆಗಳಿಗೆ ನೀಡಿದ ಉತ್ತರಗಳ ಪ್ರಶ್ನೋತ್ತರಗಳು ಸೇರಿವೆ. ಓದುಗರು ಈ ಸೂಚನೆಯನ್ನು ಗಮನಿಸಬೇಕಾಗಿ ವಿನಂತಿ.

ಈಗ ಪ್ರಕಟವಾಗುತ್ತಿರುವ ಸಂಪುಟವು ಭಾರತದ ಸಂವಿಧಾನದ ಸಂಪೂರ್ಣ ಪರಿಚಯ ಮಾಡಿಕೊಡುತ್ತದೆ. ಸಂವಿಧಾನ ರಚನಾ ಸಭೆಯಲ್ಲಿನ ನಡಾವಳಿಗಳ ಮುಖಾಂತರ ಸಂವಿಧಾನದ ವಿವರವಾದ ಚರ್ಚೆ, ಅಭಿಪ್ರಾಯಗಳು ಮತ್ತು ಭಿನ್ನಾಭಿಪ್ರಾಯದಿಂದ ಸಂವಿಧಾನದ ಸಂಪೂರ್ಣ ಚಿತ್ರಣ ಈ ಸಂಪುಟದಲ್ಲಿ ದೊರೆಯುತ್ತದೆ. ಸಂವಿಧಾನದ ಸಂಪೂರ್ಣ ಪರಿಚಯ ನೀಡುವ ಈ ಸಂಪುಟವು ಭಾರತೀಯ ಸಂವಿಧಾನದ ಚರಿತ್ರೆಯ ಮತ್ತು ಸಂವಿಧಾನದ ವಿದ್ಯಾರ್ಥಿಗಳಿಗೆ ಬಹು ಮಹತ್ವದ ಗ್ರಂಥ ಎಂದೇ ಹೇಳಬಹುದಾಗಿದೆ.

ಸುಮಾರು ೧೨೫೦ ಪುಟಗಳ ಈ ಬೃಹತ್ ಸಂಪುಟವನ್ನು ಎರಡು ಭಾಗಗಳಲ್ಲಿ ಪ್ರಕಟಿಸಲಾಗಿದೆ. ಭಾಷಾಂತರ ಕಾರ್ಯದಲ್ಲಿ ಆಸಕ್ತಿ ವಹಿಸಿ ನೆರವಾದ ಎಲ್ಲಾ ಭಾಷಾಂತರಕಾರರಿಗೆ ಸಂಪಾದಕ ಸಮಿತಿ ಸದಾ ಋಣಿಯಾಗಿದೆ. ಅದೇ ರೀತಿ ಈ ಕಾರ್ಯದಲ್ಲಿ ನೆರವಾದ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಅವರ ಸಿಬ್ಬಂದಿ ವರ್ಗದವರೆಲ್ಲರಿಗೂ ನಾವು ಆಭಾರಿಯಾಗಿದ್ದೇವೆ.

**ಡಾ॥ ಎ.ಎಂ. ರಾಜಶೇಖರಯ್ಯ**
ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


ಸಂದೇಶಗಳು v

ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ x

ಎರಡನೇ ಮುದ್ರಣಕ್ಕೆ ಮುನ್ನುಡಿ xiv

ಮೂರನೇ ಮುದ್ರಣಕ್ಕೆ ಮುನ್ನುಡಿ xv

ಸಂಪಾದಕೀಯ xvi

**ವಿಭಾಗ – ೧**

೧. ಧ್ಯೇಯಗಳನ್ನು ಮತ್ತು ಉದ್ದೇಶಗಳನ್ನು ಕುರಿತ ನಿರ್ಣಯ ೧

೨. ಮೂಲಭೂತ ಹಕ್ಕುಗಳನ್ನು ಕುರಿತು ಮಧ್ಯಂತರ ವರದಿ ೧೦

೩. ಕೇಂದ್ರ ಸಂವಿಧಾನ ಸಮಿತಿಯ ವರದಿ ೧೮

**ವಿಭಾಗ – ೨**

೪. ಕರಡು ಸಂವಿಧಾನವನ್ನು ಪರಿಶೀಲಿಸಲು ಸಮಿತಿಯ ರಚನೆ ೨೫

೫. ಸಂವಿಧಾನ ಸಭೆಯ ಕಲಾಪಗಳ ಸಮಿತಿಯ ವರದಿ ೨೫

೬. ಪೂರ್ವ ಪಂಜಾಬಿಗೆ ಹೆಚ್ಚಿನ ಪ್ರಾತಿನಿಧ್ಯ ೩೩

೭. ೩೮–A ಯಿಂದ ೩೮–V ವರೆಗೆ ನೂತನ ನಿಯಮಗಳ ಸೇರ್ಪಡೆ ೩೩

**ಭಾಗ – ೩**

೮. ಸಂವಿಧಾನದ ಕರಡಿನ ಮೊದಲನೆಯ ವಾಚನ ೪೩

**ಅನುಬಂಧ**

೯. ಗೆಜೆಟ್ ಆಫ್ ಇಂಡಿಯಾದಲ್ಲಿ ಪ್ರಕಟವಾಗಿರುವಂತೆ ಕರಡು ಸಂವಿಧಾನ ೮೯

ಭಾಗ I ಒಕ್ಕೂಟ ಮತ್ತು ಅದರ ಪ್ರದೇಶದ ಗಡಿಗಳು ಮತ್ತು ವ್ಯಾಪ್ತಿ ೧೦೨

ಭಾಗ II ಪೌರತ್ವ ೧೦೪

ಭಾಗ III ಮೂಲಭೂತ ಹಕ್ಕುಗಳು ೧೦೫

ಭಾಗ IV ರಾಜ್ಯ ನೀತಿಯ ನಿರ್ದೇಶನ ತತ್ವಗಳು : ೧೧೪

ಭಾಗ V ಒಕ್ಕೂಟ ೧೧೪

ಭಾಗ VI ಮೊದಲನೆಯ ಅನುಸೂಚಿಯಲ್ಲಿಯ ಭಾಗ Iರ ರಾಜ್ಯಗಳು ೧೫೮
ಭಾಗ VII ಮೊದಲನೆಯ ಅನುಸೂಚಿ ಭಾಗ IIರಲ್ಲಿಯ ರಾಜ್ಯಗಳು ೧೯೬
ಭಾಗ VIII ಮೊದಲನೆಯ ಅನುಬಂಧ ಭಾಗ IVರಲ್ಲಿಯ ಪ್ರದೇಶಗಳು ಮತ್ತು
ಈ ಅನುಬಂಧದಲ್ಲಿ ನಮೂದಿಸಿರುವ ಪ್ರದೇಶಗಳು ೧೯೭
ಭಾಗ IX ಒಕ್ಕೂಟ ಹಾಗೂ ರಾಜ್ಯಗಳ ನಡುವಿನ ಬಾಂಧವ್ಯಗಳು ೧೯೮
ಭಾಗ X ಹಣಕಾಸು–ಆಸ್ತಿ–ದಾವೆ–ಒಪ್ಪಂದಗಳು ೨೧೨
ಭಾಗ XI ತುರ್ತು ಪರಿಸ್ಥಿತಿಯ ಅಂಶಗಳು ೨೨೪
ಭಾಗ XII ಒಕ್ಕೂಟ ಮತ್ತು ರಾಜ್ಯಗಳಡಿಯಲ್ಲಿಯ ಸೇವೆಗಳು ೨೨೭
ಭಾಗ XIII ಚುನಾವಣೆಗಳು ೨೩೧
ಭಾಗ XIV ಅಲ್ಪಸಂಖ್ಯಾತರಿಗೆಂದೇ ವಿಶೇಷ ಅಂಶಗಳು ೨೩೨
ಭಾಗ XV ಸಂಕೀರ್ಣ (ಇತರೆ) ೨೩೬
ಭಾಗ XVI ಸಂವಿಧಾನಕ್ಕೆ ತಿದ್ದುಪಡಿಗಳು ೨೪೦
ಭಾಗ XVII ತಾತ್ಕಾಲಿಕ ಮತ್ತು ಪರಿವರ್ತನಾ ಕಾಲದ ಅಂಶಗಳು ೨೪೧
ಭಾಗ XVIII ಆರಂಭ ಮತ್ತು ನಿರಸನ ೨೪೬

**ವಿಭಾಗ – ೪**

**ಭಾರತ ಸಂವಿಧಾನ ಕಲಮುವಾರು ಚರ್ಚೆ**

ವಿಧಿ–೧ ೩೦೧
ವಿಧಿ–೨ ೩೧೨
ವಿಧಿ–೩ ೩೧೪
ವಿಧಿ–೪ ೩೨೩
ವಿಧಿ–೨೮ ೩೨೬
ವಿಧಿ–೩೦ ೩೨೯
ವಿಧಿ ೩೦–ಎ ೩೩೩
ವಿಧಿ–೩೧ ೩೩೪
ವಿಧಿ ೩೧–ಎ ೩೩೬
ವಿಧಿ–೩೨ ೩೩೭
ವಿಧಿ–೩೪ ೩೩೭
ವಿಧಿ–೩೫ ೩೩೯
ವಿಧಿ–೩೬ ೩೪೦
ವಿಧಿ–೩೫ ೩೪೧
ವಿಧಿ–೩೭ ೩೪೩

| | |
|---|---|
| ವಿಧಿ–೩೮ | ೩೪೬ |
| ವಿಧಿ–೩೮–ಎ | ೩೪೯ |
| ವಿಧಿ–೩೯ | ೩೫೦ |
| ವಿಧಿ–೩೯–ಎ | ೩೫೨ |
| ವಿಧಿ–೩೯–ಎ | ೩೫೨ |
| ವಿಧಿ–೪೦ | ೩೫೫ |
| ವಿಧಿ–೭ | ೩೫೭ |
| ವಿಧಿ–೮ | ೩೫೯ |
| ವಿಧಿ–೮–ಎ | ೩೬೩ |
| ವಿಧಿ–೯ | ೩೬೫ |
| ವಿಧಿ–೧೦ | ೩೭೧ |
| ವಿಧಿ–೧೧ | ೩೭೨ |
| ವಿಧಿ–೧೧ ಎ ಮತ್ತು ಬಿ | ೩೭೩ |
| ವಿಧಿ–೧೦ | ೩೭೩ |
| ವಿಧಿ–೧೨ | ೩೮೦ |
| ವಿಧಿ–೧೩ | ೩೮೨ |
| ವಿಧಿ–೧೪ | ೩೯೫ |
| ವಿಧಿ–೧೬ | ೩೯೮ |
| ವಿಧಿ–೧೭ | ೪೦೦ |
| ವಿಧಿ–೧೮ | ೪೦೨ |
| ವಿಧಿ–೧೯ | ೪೦೨ |
| ವಿಧಿ–೧೪ (ಮುಂದುವರಿದದ್ದು) | ೪೦೪ |
| ವಿಧಿ–೧೫ (ಮುಂದುವರಿದದ್ದು) | ೪೦೫ |
| ವಿಧಿ–೨೦ | ೪೦೬ |
| ಹೊಸ ವಿಧಿ–೨೦ ಎ | ೪೦೭ |
| ವಿಧಿ–೨೨ | ೪೦೭ |
| ವಿಧಿ–೨೨ ಎ (ಹೊಸ ವಿಧಿ) | ೪೧೩ |
| ವಿಧಿ–೨೩ (ಮುಂದುವರಿದದ್ದು) | ೪೧೫ |
| ವಿಧಿ–೨೪ | ೪೨೦ |
| ವಿಧಿ–೨೫ | ೪೨೦ |
| ವಿಧಿ–೨೬ | ೪೨೯ |
| ವಿಧಿ–೨೭ | ೪೩೦ |
| ವಿಧಿ–೨೭ ಎ | ೪೩೩ |

| | |
|---|---|
| ವಿಧಿ–೪೧ | ೪೩೫ |
| ವಿಧಿ–೪೨ | ೪೩೭ |
| ವಿಧಿ–೪೩ | ೪೩೮ |
| ವಿಧಿ–೧೫ | ೪೪೨ |
| ವಿಧಿ–೪೪ | ೪೪೪ |
| ವಿಧಿ–೪೪ (ಮುಂದುವರಿದಿದೆ) | ೪೪೬ |
| ವಿದಿ–೪೫ | ೪೫೦ |
| ವಿಧಿ–೪೬ | ೪೫೧ |
| ವಿಧಿ–೪೭ | ೪೫೨ |
| ವಿಧಿ–೪೭–ಎ | ೪೫೮ |
| ವಿಧಿ–೪೮ | ೪೫೯ |
| ವಿಧಿ–೪೯ | ೪೬೩ |
| ವಿಧಿ–೫೧ | ೪೭೪ |
| ವಿಧಿ–೫೨ | ೪೭೪ |
| ವಿಧಿ–೫೩ | ೪೭೫ |
| ವಿಧಿ–೫೪ | ೪೭೬ |
| ವಿಧಿ–೫೫ | ೪೮೦ |
| ವಿಧಿ–೫೬ | ೪೮೨ |
| ವಿಧಿ–೫೭ | ೪೮೫ |
| ವಿಧಿ–೫೯ | ೪೮೬ |
| ವಿಧಿ–೬೦ | ೪೮೭ |
| ವಿಧಿ–೬೧ | ೪೯೩ |
| ವಿಧಿ–೬೨ | ೪೯೯ |
| ವಿಧಿ–೬೬ | ೫೦೭ |
| ವಿಧಿ–೬೭ | ೫೦೮ |
| ವಿಧಿ–೧೪೭ (ಎ) | ೫೧೯ |
| ವಿಧಿ–೧೪೮ | ೫೧೯ |
| ವಿಧಿ–೧೪೯ | ೫೨೧ |
| ವಿಧಿ–೬೩ | ೫೨೩ |
| ವಿಧಿ–೬೪ | ೫೨೩ |
| ವಿಧಿ–೬೫ | ೫೨೪ |
| ವಿಧಿ–೧೪೯ (ಮುಂದುವರಿದಿದೆ) | ೫೩೧ |

**ವಿಭಾಗ – ೫**

**ಖಂಡವಾರು ಚರ್ಚೆ**


| | |
|---|---|
| ವಿಧಿ–೬೭ಎ | ೫೩೭ |
| ಹೊಸ ವಿಧಿ–೬೭ ಎ | ೫೩೭ |
| ವಿಧಿ–೬೮ | ೫೩೯ |
| ವಿಧಿ–೬೮ಎ | ೫೪೧ |
| ವಿಧಿ–೬೯ | ೫೪೩ |
| ವಿಧಿ–೭೧ | ೫೪೭ |
| ವಿಧಿ–೭೨ | ೫೪೮ |
| ವಿಧಿ–೭೩ | ೫೪೯ |
| ವಿಧಿ–೭೫ಎ | ೫೫೦ |
| ವಿಧಿ–೭೬ | ೫೫೧ |
| ವಿಧಿ–೭೭ | ೫೫೧ |
| ಹೊಸ ವಿಧಿ–೭೯ ಎ | ೫೫೨ |
| ವಿಧಿ–೮೦ | ೫೫೨ |
| ವಿಧಿ–೮೧ | ೫೫೪ |
| ವಿಧಿ–೮೨ | ೫೫೭ |
| ವಿಧಿ–೮೩ | ೫೫೮ |
| ವಿಧಿ–೮೫ | ೫೫೯ |
| ವಿಧಿ–೮೬ | ೫೬೦ |
| ವಿಧಿ–೮೭ | ೫೬೦ |
| ವಿಧಿ–೮೮ | ೫೬೧ |
| ವಿಧಿ–೯೧ | ೫೬೨ |
| ವಿಧಿ–೬೭ (ಅ) | ೫೬೩ |
| ಅನುಚ್ಛೇದ–೧೦೧ | ೫೬೪ |
| ವಿಧಿ–೧೦೨ | ೫೬೬ |
| ವಿಧಿ–೧೦೨(ಅ) | ೫೭೧ |
| ವಿದಿ–೧೦೩ | ೫೭೨ |
| ವಿಧಿ–೧೦೩(ಅ) | ೫೭೭ |
| ವಿಧಿ–೧೦೪ | ೫೭೮ |
| ವಿಧಿ–೧೦೬ | ೫೭೮ |
| ವಿಧಿ–೧೦೭ | ೫೭೯ |

| | |
|---|---|
| ವಿಧಿ–೧೦೮ | ೫೮೦ |
| ವಿಧಿ–೧೧೭ | ೫೮೨ |
| ವಿಧಿ–೧೧೯ | ೫೮೨ |
| ವಿಧಿ–೧೨೧ | ೫೮೩ |
| ವಿಧಿ–೧೨೨ | ೫೮೩ |
| ವಿಧಿ–೧೨೪ | ೫೮೭ |
| ವಿಧಿ–೧೨೫ | ೫೯೦ |
| ವಿಧಿ–೧೨೭ | ೫೯೨ |
| ವಿಧಿ–೧೩೦ | ೫೯೨ |
| ವಿಧಿ–೧೩೧ | ೫೯೨ |
| ವಿಧಿ–೧೩೨ | ೫೯೭ |
| ವಿಧಿ–೧೩೪ | ೫೯೮ |
| ವಿಧಿ–೧೩೫ | ೫೯೯ |
| ವಿಧಿ–೧೩೫ | ೬೦೦ |
| ವಿಧಿ–೧೩೭ | ೬೦೧ |
| ವಿಧಿ–೧೪೩ | ೬೦೨ |
| ವಿಧಿ–೧೪೪ | ೬೦೫ |
| ವಿಧಿ–೧೪೫ | ೬೦೯ |
| ವಿಧಿ–೧೪೬ | ೬೧೦ |
| ವಿಧಿ–೧೪೭ | ೬೧೦ |
| ವಿಧಿ–೧೫೧ | ೬೧೩ |
| ವಿಧಿ–೧೫೨ | ೬೧೫ |
| ವಿಧಿ–೧೫೩ | ೬೧೬ |
| ವಿಧಿ–೧೫೩(ಅ) | ೬೧೭ |
| ವಿಧಿ–೧೬೦ | ೬೧೭ |
| ಹೊಸ ವಿಧಿ–೧೬೩(ಅ) | ೬೧೭ |
| ವಿಧಿ–೧೬೫ | ೬೧೮ |
| ವಿಧಿ–೧೬೬ | ೬೧೮ |
| ವಿಧಿ–೧೬೭ | ೬೧೯ |
| ವಿಧಿ–೧೬೯ | ೬೨೧ |
| ವಿಧಿ–೧೭೦ | ೬೨೫ |
| ವಿಧಿ–೧೦೯ | ೬೨೫ |
| ವಿಧಿ–೧೧೦ | ೬೨೬ |

| | |
|---|---|
| ವಿಧಿ–೧೧೧ | ೬೩೦ |
| ವಿಧಿ–೧೧೨ | ೬೩೩ |
| ಹೊಸ ವಿಧಿ–೧೧೨(ಎ) | ೬೩೩ |
| ವಿಧಿ–೧೧೩ | ೬೩೫ |
| ವಿಧಿ–೧೧೪ | ೬೩೫ |
| ವಿಧಿ–೧೨೧ | ೬೩೬ |
| ವಿಧಿ–೧೯೧ | ೬೩೭ |
| ವಿಧಿ–೧೯೨ | ೬೩೮ |
| ವಿಧಿ–೧೯೩ | ೬೩೯ |
| ವಿಧಿ–೧೯೩(ಎ) | ೬೪೧ |
| ವಿಧಿ–೧೯೫ | ೬೪೩ |
| ವಿಧಿ–೧೯೬ | ೬೪೪ |
| ವಿಧಿ–೧೯೬(ಎ) | ೬೪೪ |
| ವಿಧಿ–೧೯೭ | ೬೪೫ |
| ವಿಧಿ–೧೯೮ | ೬೪೫ |
| ವಿಧಿ–೨೦೦ | ೬೪೫ |
| ವಿಧಿ–೨೦೨ | ೬೪೮ |
| ವಿಧಿ–೨೦೩ | ೬೪೯ |
| ವಿಧಿ–೨೦೪ | ೬೪೯ |
| ವಿಧಿ–೨೦೫ | ೬೫೫ |
| ವಿಧಿ–೨೦೬ | ೬೫೭ |
| ವಿಧಿ–೯೦ (ಮುಂದುವರಿದುದು) | ೬೫೭ |
| ವಿಧಿ–೯೨ | ೬೬೪ |
| ವಿಧಿ–೯೩ | ೬೬೫ |
| ವಿಧಿ–೯೪ | ೬೬೫ |
| ವಿಧಿ–೯೫ | ೬೬೮ |
| ವಿಧಿ–೯೬ | ೬೭೨ |
| ವಿಧಿ–೯೭ | ೬೭೫ |
| ವಿಧಿ–೯೮ | ೬೭೬ |
| ನೂತನ ವಿಧಿ–೯೮(ಎ) | ೬೭೭ |
| ವಿಧಿ–೧೭೩ | ೬೭೮ |
| ವಿಧಿ–೧೭೪ | ೬೭೮ |
| ವಿಧಿ–೧೭೭ | ೬೭೯ |

| | |
|---|---|
| ವಿಧಿ–೧೭೮ | ೬೮೦ |
| ವಿಧಿ–೧೭೯ | ೬೮೦ |
| ವಿಧಿ–೧೮೦ | ೩೮೧ |
| ವಿಧಿ–೧೮೧ | ೬೮೨ |
| ವಿಧಿ–೧೮೨ | ೬೮೩ |
| ವಿಧಿ–೧೮೩ | ೬೮೩ |
| ಹೊಸ ವಿಧಿ–೧೮೩(ಎ) | ೬೮೪ |
| ವಿಧಿ–೨೧೭ | ೬೮೪ |
| ವಿಧಿ–೨೨೪ | ೬೮೫ |
| ವಿಧಿ–೨೨೬ | ೬೮೬ |
| ವಿಧಿ–೨೨೯ | ೬೮೭ |
| ವಿಧಿ–೨೩೦ | ೬೮೮ |
| ವಿಧಿ–೨೩೧ | ೬೮೮ |
| ವಿಧಿ–೨೩೨ | ೬೮೯ |
| ವಿಧಿ–೨೩೪ | ೬೯೦ |
| ವಿಧಿ–೨೩೮ | ೬೯೦ |
| ವಿಧಿ–೨೩೯ | ೬೯೧ |
| ವಿಧಿ–೨೪೦ | ೬೯೧ |
| ವಿಧಿ–೧೧೨ಬಿ | ೬೯೨ |
| ವಿಧಿ–೧೧೧ಎ | ೬೯೨ |
| | |
| ವಿಷಯಸೂಚಿ | ೭೦೧ |

# ಭಾರತ ಸಂವಿಧಾನದ ಪ್ರಧಾನ ಶಿಲ್ಪಿ
# ಕಲಮುವಾರು ಚರ್ಚೆ
# ಖಂಡವಾರು ಚರ್ಚೆ

# ವಿಭಾಗ – ೧
# (೯ ಡಿಸೆಂಬರ್ ೧೯೪೭ ರಿಂದ ೩೧ ಜುಲೈ ೧೯೪೭ರವರೆಗೆ)

## ೧. ಧ್ಯೇಯಗಳನ್ನು ಮತ್ತು ಉದ್ದೇಶಗಳನ್ನು ಕುರಿತ ನಿರ್ಣಯ

(೧೯೪೫ರಲ್ಲಿ ದ್ವಿತೀಯ ಮಹಾಯುದ್ಧವು ಕೊನೆಗೊಂಡ ನಂತರ ಭಾರತದ ಸ್ವಾತಂತ್ರ್ಯದ ಪ್ರಶ್ನೆಯು ಆದ್ಯತೆಯನ್ನು ಪಡೆಯಿತು. ಅಧಿಕಾರವನ್ನು ಸರಾಗವಾಗಿ ಹಸ್ತಾಂತರಿಸಲು ವಿಧಿ ವಿಧಾನಗಳನ್ನು ಸೂಚಿಸುವ ಸಲುವಾಗಿ, ಬ್ರಿಟಿಷ್ ಸರಕಾರವು ತ್ರಿ–ಸದಸ್ಯ ಆಯೋಗವನ್ನು ಭಾರತಕ್ಕೆ ಕಳುಹಿಸಿತು. ಈ ನಿಯೋಗಕ್ಕೆ ಕ್ಯಾಬಿನೆಟ್ ಮಿಷನ್ ಎಂದು ಹೆಸರು. ೧೯೪೬ ಮಾರ್ಚ್ ೧೬ರಂದು ಅದು ತನ್ನ ಸಲಹೆಗಳನ್ನು ಮಂಡಿಸಿತು. ಭಾರತದ ಆಡಳಿತ ನಿರ್ವಹಣೆಗಾಗಿ ಒಂದು ಸಂವಿಧಾನವನ್ನು ರಚಿಸಲು ರಾಜ್ಯಾಂಗ ಸಭೆಯನ್ನು ನೇಮಿಸಬೇಕೆಂದು ಆಯೋಗವು ಶಿಫಾರಸು ಮಾಡಿತು.

ಆ ಪ್ರಕಾರ ರಾಜ್ಯಾಂಗ ರಚನಾ ಸಭೆಗೆ ಚುನಾವಣೆಗಳು ನಡೆದವು. ಪ್ರಾಂತೀಯ ವಿಧಾನಸಭೆಗಳು ಸದಸ್ಯರನ್ನು ಆರಿಸಿದವು. ಕಾಂಗ್ರೆಸ್ಸಿನ ವಿರೋಧದಿಂದಾಗಿ ಮುಂಬಯಿಯಿಂದ ಆಯ್ಕೆ ಆಗದೆ ಹೋದ ಡಾ॥ ಅಂಬೇಡ್ಕರ್ ಬಂಗಾಳ ವಿಧಾನಸಭೆಯಿಂದ ಜೋಗೇಂದ್ರನಾಥ ಮಂಡಲ್ ಮತ್ತು ಇತರ ಪರಿಶಿಷ್ಟ ಜಾತಿಯ ಸದಸ್ಯರ ಬೆಂಬಲದಿಂದ ಆಯ್ಕೆಗೊಂಡು ರಾಜ್ಯಾಂಗ ಸಭೆಯನ್ನು ಪ್ರವೇಶಿಸಿದರು.

ರಾಜ್ಯಾಂಗ ಸಭೆಯು ಸ್ವತಂತ್ರ ಭಾರತದ ಸಂವಿಧಾನವನ್ನು ರಚಿಸುವ ಕೆಲಸವನ್ನು ೧೯೪೬ ಡಿಸೆಂಬರ್ ೯ರಂದು ಪ್ರಾರಂಭಿಸಿತು. ಒಟ್ಟಿನಲ್ಲಿ ೨೯೬ ಜನ ಸದಸ್ಯರು ಉದ್ಘಾಟನಾ ಅಧಿವೇಶನದಲ್ಲಿ ಪಾಲುಗೊಳ್ಳಲು ಅರ್ಹತೆ ಪಡೆದರು. ಆದರೆ ಅವರಲ್ಲಿ ೨೦೭ ಜನ ಮಾತ್ರ ಹಾಜರಾದರು, ಗೈರುಹಾಜರಾದವರಲ್ಲಿ ಮುಖ್ಯರಾದವರು ಮುಸ್ಲಿಂ ಲೀಗ್ ಸದಸ್ಯರು, ಅವರು ರಾಜ್ಯಾಂಗ ರಚನಾ ಸಭೆಯನ್ನು ಬಹಿಷ್ಕರಿಸಿದರು.)

ಭಾರತದ ರಾಜ್ಯಾಂಗ ರಚನಾ ಸಭೆಯ ಮೊದಲನೆಯ ಸಭೆಯು ನವದೆಹಲಿಯ ಸಂವಿಧಾನ ಭವನದಲ್ಲಿ ೧೯೪೬ ಡಿಸೆಂಬರ್ ೯ರಂದು ಪೂರ್ವಾಹ್ನ ೧೧ ಘಂಟೆಗೆ ಪ್ರಾರಂಭವಾಯಿತು. ಆಚಾರ್ಯ ಜೆ.ಬಿ. ಕೃಪಲಾನಿ ಅವರು ತಾತ್ಕಾಲಿಕವಾಗಿ ಅಧ್ಯಕ್ಷಪೀಠವನ್ನು ಅಲಂಕರಿಸಬೇಕೆಂದು ಡಾ. ಸಚ್ಚಿದಾನಂದ ಸಿನ್ಹಾ ಅವರನ್ನು ಕೋರಿದರು. ಅಧ್ಯಕ್ಷರು ಒಂದು ಉದ್ಘಾಟನಾ ಭಾಷಣವನ್ನು ಓದಿದರು. ಅನಂತರ ಶ್ರೀ ಫ್ರಾಂಕ್ ಆಂಥೋಣಿ ಅವರನ್ನು ಉಪಾಧ್ಯಕ್ಷರನ್ನಾಗಿ ನಾಮಕರಣ ಮಾಡಲಾಯಿತು.

ಆಮೇಲೆ ಸದಸ್ಯರು ದೃಢೀಕರಣ ಪರಿಚಯ ಪತ್ರಗಳನ್ನು ಒಪ್ಪಿಸಿ ರಿಜಿಸ್ಟರಿನಲ್ಲಿ ಸಹಿ ಮಾಡಿದರು. ಡಾ॥ ಬಿ.ಆರ್. ಅಂಬೇಡ್ಕರ್ ಅವರು ಬಂಗಾಳದ ಒಬ್ಬ ಸದಸ್ಯರಾಗಿ ಸಹಿ ಮಾಡಿದರು.

ರಾಜ್ಯಾಂಗ ರಚನಾ ಸಭೆಯ ಅಧ್ಯಕ್ಷರ ಚುನಾವಣೆಗೆ ಸಂಬಂಧಿಸಿದ ನಿಯಮಗಳನ್ನು ಸಭೆಯು ೧೯೪೬ ಡಿಸೆಂಬರ್ ೧೦ರಂದು ಅಂಗೀಕರಿಸಿತು. ತದನಂತರ ಸಭೆಯು ೧೯೪೬ ಡಿಸೆಂಬರ್ ೧೧ ರಂದು ಸಭೆಯ ಖಾಯಂ ಅಧ್ಯಕ್ಷರಾಗಿ ಡಾ॥ ರಾಜೇಂದ್ರ ಪ್ರಸಾದ್ ಅವರನ್ನು ಆಯ್ಕೆ ಮಾಡಿತು.

೧೯೪೬ ಡಿಸೆಂಬರ್ ೧೩ರಂದು ಸನ್ಮಾನ್ಯ ಪಂಡಿತ ಜವಹರಲಾಲ್ ನೆಹರೂ ಅವರು ಧ್ಯೇಯೋದ್ದೇಶಗಳನ್ನು ಕುರಿತ ನಿರ್ಣಯವನ್ನು ಕೆಳಕಂಡಂತೆ ಹೀಗೆ ಮಂಡಿಸಿದರು:–

*"(೧) ಈ ರಾಜ್ಯಾಂಗ ರಚನಾ ಸಭೆಯು, ಭಾರತವನ್ನು ಒಂದು ಸ್ವತಂತ್ರ, ಸಾರ್ವಭೌಮ, ಗಣರಾಜ್ಯವೆಂದು ಘೋಷಿಸಬೇಕೆಂದೂ ಮುಂದೆ ಆಡಳಿತಕ್ಕಾಗಿ ಒಂದು ಸಂವಿಧಾನವನ್ನು ರಚಿಸಬೇಕೆಂದೂ ನಿರ್ಣಯಿಸುತ್ತದೆ.

(೨) ಈಗ ಬ್ರಿಟಿಷ್ ಇಂಡಿಯಾವನ್ನು ಒಳಗೊಂಡ ಪ್ರದೇಶಗಳು, ಭಾರತೀಯ ಸಂಸ್ಥಾನಗಳು ಎನಿಸುವ ಪ್ರದೇಶಗಳು, ಬ್ರಿಟಿಷ್ ಇಂಡಿಯಾದ ಹೊರಗಿನ ಭಾಗಗಳು, ಸ್ವತಂತ್ರ ಸಾರ್ವಭೌಮ ಭಾರತಕ್ಕೆ ಸೇರಿಕೊಳ್ಳಲು ಅಪೇಕ್ಷೆಪಡುವ ಇತರ ರಾಜ್ಯಗಳು ಮತ್ತು ಪ್ರದೇಶಗಳು ಕೂಡಿ ಒಕ್ಕೂಟವಾಗುತ್ತವೆ; ಮತ್ತು

(೩) ಇಲ್ಲಿ ಹೇಳಿದ ಪ್ರದೇಶಗಳು ಪ್ರಸ್ತುತ ಹೊಂದಿರುವ ಗಡಿಗಳಿಂದ ಅಥವಾ ರಾಜ್ಯಾಂಗ ಸಭೆಯು, ತದನಂತರ ಸಂವಿಧಾನದ ನಿಯಮವು ನಿಗದಿಪಡಿಸುವ ಗಡಿಗಳ ಪ್ರಕಾರ, ಸ್ವಯಮಾಡಳಿತ ಘಟಕಗಳ ಸ್ಥಾನವನ್ನು ಪಡೆಯುತ್ತವೆ. ಅವಕ್ಕೆ ಶೇಷಾಧಿಕಾರಗಳಿದ್ದು ಸರಕಾರ ಮತ್ತು ಆಡಳಿತದ ಎಲ್ಲ ಅಧಿಕಾರಗಳನ್ನು ಕರ್ತವ್ಯಗಳನ್ನು ನಿರ್ವಹಿಸುತ್ತವೆ. ಕೇಂದ್ರ ಆಡಳಿತದಲ್ಲಿ ಅಂತರ್ಗತವಾದ ಅಥವಾ ಅದರ ಫಲವಾಗಿ ಬರುವ ಅಧಿಕಾರಗಳು ಇವುಗಳಿಗೆ ಸೇರುವುದಿಲ್ಲ.

(೪) ಸಾರ್ವಭೌಮ ಸ್ವತಂತ್ರ ಭಾರತದ, ಅದರ ಅಂಗಗಳ ಮತ್ತು ಸರಕಾರದ ವಿಭಾಗಗಳ ಸಮಸ್ತ ಅಧಿಕಾರ ಮತ್ತು ಶಕ್ತಿಗಳು ಜನರಿಂದ ಬರುತ್ತದೆ.

(೫) ಭಾರತದ ಸಮಸ್ತ ಜನರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಸ್ಥಾನಮಾನ, ಅವಕಾಶ, ನ್ಯಾಯ ಸಮಾನತೆಗಳನ್ನು; ಚಿಂತನೆ, ಅಭಿವ್ಯಕ್ತಿ, ನಂಬಿಕೆ, ಧರ್ಮ, ಪೂಜೆ, ವೃತ್ತಿ, ಸಂಘ ಮತ್ತು ವರ್ತನೆ ಸ್ವಾತಂತ್ರ್ಯವನ್ನು – ಕಾನೂನು ಮತ್ತು ಸಾರ್ವಜನಿಕ ನೈತಿಕತೆಗೆ ಒಳಪಟ್ಟು–ಭರವಸೆ ಕೊಡುತ್ತದೆ ಮತ್ತು ಒದಗಿಸಲಾಗುತ್ತದೆ.

(೬) ಅಲ್ಪಸಂಖ್ಯಾತರಿಗೆ, ಹಿಂದುಳಿದ ಹಾಗೂ ಬುಡಕಟ್ಟು ಪ್ರದೇಶಗಳಿಗೆ, ದಲಿತ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಸಾಕಷ್ಟು ರಕ್ಷಣೆಗಳನ್ನು ಒದಗಿಸಲಾಗುತ್ತದೆ.

(೭) ದೇಶದ ಸಮಗ್ರತೆಯನ್ನು ಕಾಪಾಡಿಕೊಂಡು, ನೆಲ, ಜಲ ಹಾಗೂ ವಾಯು ಕ್ಷೇತ್ರಗಳಲ್ಲಿನ ಪರಮೋನ್ನತ ಹಕ್ಕುಗಳನ್ನು ನ್ಯಾಯ ಹಾಗೂ ನಾಗರಿಕ ದೇಶಗಳ ಕಾನೂನುಗಳ ಪ್ರಕಾರ ಕಾಪಾಡಿಕೊಳ್ಳಲಾಗುತ್ತದೆ, ಮತ್ತು

(೮) ಈ ಪ್ರಾಚೀನ ದೇಶವು ಜಗತ್ತಿನಲ್ಲಿ ನ್ಯಾಯಯುತವೂ, ಗೌರವಾನ್ವಿತವೂ ಆದ ತನ್ನ ಸ್ಥಾನವನ್ನು ಪಡೆಯುತ್ತದೆ; ಮತ್ತು ವಿಶ್ವಶಾಂತಿಗಾಗಿ ಹಾಗೂ ಮಾನವ ಜನಾಂಗದ ಕಲ್ಯಾಣಕ್ಕಾಗಿ ತನ್ನ ಸಂಪೂರ್ಣ ಇಚ್ಛಾಪೂರ್ವಕವಾದ ಕೊಡುಗೆಯನ್ನು ನೀಡುತ್ತದೆ".

(ಇದಾದ ನಂತರ ಪಂಡಿತ ನೆಹರೂ, ಪುರುಷೋತ್ತಮ ದಾಸ್ ಟಂಡನ್ ಹಾಗೂ ಅಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್ ಭಾಷಣ ಮಾಡಿದರು. ಅನಂತರ ಅಧಿವೇಶನವನ್ನು ೧೯೪೬ ಡಿಸೆಂಬರ್ ೧೬ರ ವರೆಗೆ ಮುಂದೂಡಲಾಯಿತು–ಸಂ.)

---

* = Constituent Assembly Debates (ಮುಂದಕ್ಕೆ ಸಿ ಎ ಡಿ ಎಂದು ಹೆಸರಿಸಲಾಗಿದೆ), ಸಂಪುಟ–೧, ಡಿಸೆಂಬರ್ ೧೩, ೧೯೪೬, ಪುಟ ೫೯

(೧೯೪೬ ಡಿಸೆಂಬರ್ ೧೬ ರಂದು ಡಾ. ಎಂ.ಆರ್. ಜಯಕರ್ ಅವರು ಮೇಲ್ಕಂಡ ನಿರ್ಣಯಕ್ಕೆ ತಮ್ಮ ತಿದ್ದುಪಡಿಯನ್ನು ಮಂಡಿಸಿದರು – ಸಂ.)

* **ರೈಟ್ ಆನರಬಲ್ ಡಾ. ಎಂ. ಆರ್. ಜಯಕರ್** (ಮುಂಬಯಿ : ಸಾಮಾನ್ಯ): ಒಳ್ಳೆಯದು, ನಾನು ತಿದ್ದುಪಡಿಯನ್ನು ಓದುತ್ತೇನೆ. ನಿಮ್ಮ ಸಮಯವನ್ನು ಕೆಲವು ನಿಮಿಷಗಳಷ್ಟಾದರೂ ಉಳಿಸಲು ಬಯಸುತ್ತೇನೆ. ತಿದ್ದುಪಡಿ ಹೀಗಿದೆ:

"ಈ ಸಭೆಯು ದೃಢ ಮತ್ತು ಗಂಭೀರವಾದ ಈ ನಿರ್ಣಯವನ್ನು ಕೈಗೊಳ್ಳುತ್ತದೆ. ಈ ಸಭೆಯು ಮುಂದೆ ಭಾರತದ ಆಡಳಿತ ನಿರ್ವಹಣೆಗಾಗಿ ಸಿದ್ಧಪಡಿಸುವ ಸಂವಿಧಾನವು ಒಂದು ಸ್ವತಂತ್ರವೂ ಪ್ರಜಾಸತ್ತಾತ್ಮಕವೂ ಆದ ಸಾರ್ವಭೌಮ ದೇಶಕ್ಕಾಗಿ ರಚಿತವಾಗುತ್ತದೆ. ಆದರೆ ಅಂಥದೊಂದು ಸಂವಿಧಾನವನ್ನು ರೂಪಿಸುವಲ್ಲಿ ಮುಸ್ಲಿಂ ಲೀಗಿನ ಹಾಗೂ ಭಾರತೀಯ ಸಂಸ್ಥಾನಗಳ ಸಹಕಾರವನ್ನು ಪಡೆಯಬೇಕಾಗಿರುವುದರಿಂದ ಈ ಸಭೆಯು ಈ ಪ್ರಶ್ನೆಯ ಪರಿಶೀಲನೆಯನ್ನು ಮುಂದಿನ ಒಂದು ದಿನಾಂಕಕ್ಕೆ ಮುಂದೂಡುತ್ತದೆ. ಆ ಎರಡೂ ಅಂಗಗಳ ಪ್ರತಿನಿಧಿಗಳು, ಆಪೇಕ್ಷೆಪಟ್ಟಲ್ಲಿ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಅದರಿಂದ ಅವಕಾಶವಾಗುತ್ತದೆ".

ವಸ್ತುತಃ, ನನ್ನ ತಿದ್ದುಪಡಿಯ ಅರ್ಥ, ಈ ನಿರ್ಣಯದ ಮುಂದಿನ ಪರಿಶೀಲನೆಯನ್ನು ಮುಂದಿನ ಹಂತಕ್ಕೆ ಮುಂದೂಡಬಹುದು–ಕೇಂದ್ರದ ಸಂವಿಧಾನ ರಚನೆಯ ಹಂತದಲ್ಲಿ ಕೈಗೆತ್ತಿಕೊಳ್ಳಬಹುದು. ಆಗ ಭಾರತೀಯ ಸಂಸ್ಥಾನಗಳೂ, ಮುಸ್ಲಿಂ ಲೀಗೂ ಹಾಜರಿರುತ್ತವೆಯೆಂದು ನಿರೀಕ್ಷಿಸಬಹುದಾಗಿದೆ.

(ಡಾ. ಎಂ.ಆರ್. ಜಯಕರ್ ಅವರು ನಿರ್ಣಯದ ಕಾಲಬದ್ಧತೆಯನ್ನು ಆಕ್ಷೇಪಿಸಿದರು. ನಿರ್ಣಯದ ಅಂಗೀಕಾರವನ್ನು ಮುಂದೂಡಬೇಕೆಂದು ಕೋರುವ ತಿದ್ದುಪಡಿಯನ್ನು ಮಂಡಿಸಿದರು. ಸಂವಿಧಾನದ ಮೂಲತತ್ವಗಳನ್ನು ರಚಿಸುವಾಗ ಮುಸ್ಲಿಂ ಲೀಗೂ ಅದರಲ್ಲಿ ಪಾಲುಗೊಳ್ಳಬೇಕೆಂಬುದು ಅವರ ಅಪೇಕ್ಷೆಯಾಗಿತ್ತು. ಈ ನಿರ್ಣಯವು ಸದನದಲ್ಲಿ ಒಂದು ಬಿಗುವು ವಾತಾವರಣವನ್ನು ಸೃಷ್ಟಿಸಿತು. ಈ ಪರಿಸ್ಥಿತಿಯಲ್ಲಿಯೇ ೧೯೪೬ ಡಿಸೆಂಬರ್ ೧೭ರಂದು ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಅನಿರೀಕ್ಷಿತವಾಗಿ ಡಾ. ಅಂಬೇಡ್ಕರ್ ಅವರನ್ನು ತಮ್ಮ ಅಭಿಪ್ರಾಯವನ್ನು ಹೇಳಬೇಕೆಂದು ಆಹ್ವಾನಿಸಿದರು. ಡಾ. ಅಂಬೇಡ್ಕರ್ ಭಾಷಣವನ್ನು ಪ್ರಾರಂಭಿಸಿದಾಗ ಸಭೆ ಗಮನವಿಟ್ಟು ಆಲಿಸಿತು.

ಧನಂಜಯ ಕೀರ್ ಬರೆಯುತ್ತಾರೆ, "ಡಾ. ಅಂಬೇಡ್ಕರ್ ಅವರು ತಿದ್ದುಪಡಿಯನ್ನು ಮಂಡಿಸಿದವರ ವಿರುದ್ಧವಾಗಿ ಮಾತನಾಡುವ ಅಪಾಯಕಾರಿ ಪಾತ್ರವನ್ನು ನಿರ್ವಹಿಸುವುದರಿಂದ, ದೇಶದ ಅತ್ಯಂತ ಸಮರ್ಥ ನಾಯಕರಾದ ಕಾಂಗ್ರೆಸ್ ಮುಖಂಡರ ಇಚ್ಛೆಗೆ ವಿರುದ್ಧವಾಗಿ ನಿಲ್ಲುವುದರಿಂದ ತನ್ನ ಅಂತ್ಯವನ್ನು ತಾನೇ ತಂದುಕೊಂಡಂತಾಗುತ್ತದೆ ಎಂದು ಪ್ರತಿಯೊಬ್ಬರೂ ಭಾವಿಸಿದರು. ತಮ್ಮ ಬದ್ಧವೈರಿಯ ಮಾತುಗಳನ್ನು ತಡೆದು ಅವರನ್ನು ತುಳಿಯಲು ಕಾಂಗ್ರೆಸ್ ಸದಸ್ಯರು ಕೈಗಳನ್ನೆತ್ತಿ ಸಿದ್ಧವಾಗಿದ್ದರು". ಈ ಐತಿಹಾಸಿಕ ಭಾಷಣವು ಡಾ. ಅಂಬೇಡ್ಕರ್ ಅವರ ರಾಜಕೀಯ ಜೀವನದ ಗತಿಯನ್ನು ಬದಲಾಯಿಸಿತು. ಭಾಷಣಕ್ಕೆ ಸುದೀರ್ಘವಾದ ನಿರರ್ಗಳವಾದ ಪ್ರಶಂಸೆ ದೊರಕಿತು. ಈ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ ಶ್ರೀ ಎನ್.ವಿ. ಗಾಡ್ಗೀಲ್ ಹೇಳಿದರು.

---

* ಸಿ.ಎ.ಡಿ. ಸಂಪುಟ. ೧, ಡಿಸೆಂಬರ್ ೧೬, ೧೯೪೬, ಪುಟ ೭೩

'ಅವರ ಭಾಷಣ ಅಷ್ಟುಮಟ್ಟಿಗೆ ಪ್ರೌಢ ರಾಜನೀತಿಜ್ಞನ ಮಾತಿನಂತಿತ್ತು, ಅದರಲ್ಲಿ ಸ್ವಲ್ಪವೂ ಕಹಿಯಿರಲಿಲ್ಲ, ಅಷ್ಟುಮಟ್ಟಿಗೆ ಪ್ರಾಮಾಣಿಕವಾಗಿ ಸವಾಲು ಹಾಕಿತ್ತು. ಇಡೀ ಸದನವು ಪೂರ್ಣ ನಿಶ್ಯಬ್ದದಿಂದ ಅದನ್ನು ಆಲಿಸಿತು. ಭಾಷಣವನ್ನು ಚಪ್ಪಾಳೆಯ ಸುರಿಮಳೆಯಿಂದ ಸ್ವಾಗತಿಸಲಾಯಿತು, ಲಾಬಿಯಲ್ಲೂ ಅವರಿಗೆ ಅಭಿನಂದನೆಯ ಮಹಾಪೂರವೇ ಹರಿಯಿತು.' ಭಾಷಣವು ತನ್ನ ಪರಿಣಾಮವನ್ನು ಸಾಧಿಸಿತು. ಸಂವಿಧಾನ ಸಭೆಯು ಉದ್ದೇಶ ನಿರ್ಣಯದ ಪರಿಶೀಲನೆಯನ್ನು ಮುಂದಿನ ಅಧಿವೇಶನಕ್ಕೆ ಮುಂದೂಡಿತು. ಡಾ. ಅಂಬೇಡ್ಕರ್ ಅವರು ಮಾಡಿದ ಭಾಷಣವನ್ನು ಇಲ್ಲಿ ಕೊಟ್ಟಿದೆ – ಸಂ.)

* **ಅಧ್ಯಕ್ಷರು** – ಡಾ. ಅಂಬೇಡ್ಕರ್

**ಡಾ. ಬಿ.ಆರ್. ಅಂಬೇಡ್ಕರ್** (ಬಂಗಾಳ : ಸಾಮಾನ್ಯ) : ಅಧ್ಯಕ್ಷರೆ, ನಿರ್ಣಯವನ್ನು ಕುರಿತು ಮಾತನಾಡಲು ನನ್ನನ್ನು ಕರೆದುದಕ್ಕಾಗಿ ನಿಜವಾಗಿಯೂ ನಾನು ತುಂಬಾ ಕೃತಜ್ಞನಾಗಿದ್ದೇನೆ. ತಮ್ಮ ಆಹ್ವಾನವು ಅನಿರೀಕ್ಷಿತವಾಗಿ ಬಂದಿದೆ ಎಂಬುದನ್ನು ನಾನು ಒಪ್ಪಿಕೊಳ್ಳಬೇಕು. ನನಗಿಂತ ಮೊದಲು ಮಾತನಾಡಲು ೨೦–೨೨ ಜನರಿರುವುದರಿಂದ ನನ್ನ ಸರದಿ ಬಂದದ್ದೇ ಆದರೆ, ನಾಳೆ ಬರಬಹುದು ಎಂದು ಭಾವಿಸಿದ್ದೆ. ಅದೇ ನನಗೂ ಅನುಕೂಲವಾಗುತ್ತಿತ್ತು. ಏಕೆಂದರೆ, ಇಂದು ನಾನು ಯಾವ ಸಿದ್ಧತೆಯೂ ಇಲ್ಲದೆ ಬಂದಿದ್ದೇನೆ. ಇಂಥದೊಂದು ಪರಿಸ್ಥಿತಿಯಲ್ಲಿ ಪೂರ್ಣ ಪ್ರಮಾಣದ ಹೇಳಿಕೆ ನೀಡಲು ನಾನು ಬಯಸುತ್ತೇನಾದ್ದರಿಂದ ಸಿದ್ಧತೆ ಮಾಡಿಕೊಳ್ಳಬೇಕೆಂಬ ಉದ್ದೇಶವಿತ್ತು. ಅಲ್ಲದೆ ತಾವು ನನಗೆ ೧೦ ನಿಮಿಷ ಕಾಲಾವಕಾಶವನ್ನು ನಿಗದಿಪಡಿಸಿದ್ದೀರಿ. ಇಷ್ಟು ಸೀಮಿತಗಳ ನಡುವೆ ಈಗ ನಮ್ಮ ಮುಂದಿರುವ ನಿರ್ಣಯದ ಬಗೆಗೆ ಎಷ್ಟು ಮಟ್ಟಿಗೆ ನಾನು ನ್ಯಾಯವಾದ ಗಮನ ಕೊಡಬಲ್ಲೆ ಎಂದು ನನಗೆ ಗೊತ್ತಿಲ್ಲ. ಆದರೂ ಈ ವಿಷಯವಾಗಿ ನನ್ನ ಆಲೋಚನೆ ಏನಿದೆಯೆಂಬುದನ್ನು ಕೆಲವೇ ಮಾತುಗಳಲ್ಲಿ ಅಡಕಗೊಳಿಸಲು ಪ್ರಯತ್ನಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ನಡೆದಿರುವ ಚರ್ಚೆಯ ಬೆಳಕಿನಲ್ಲಿ ನಿರ್ಣಯವು ಸ್ಪಷ್ಟವಾಗಿ ಎರಡು ಭಾಗವಾಗುತ್ತದೆ. ಒಂದು ಭಾಗವು ವಿವಾದಾಸ್ಪದವಾದುದು, ಇನ್ನೊಂದರಲ್ಲಿ ವಿವಾದವಿಲ್ಲ. ವಿವಾದರಹಿತ ಭಾಗವು ನಿರ್ಣಯದ (೫) ರಿಂದ (೭)ರವರೆಗಿನ ಪ್ಯಾರಾಗಳನ್ನು ಒಳಗೊಂಡಿದೆ. ಈ ಪ್ಯಾರಾಗಳು ಈ ದೇಶದ ಮುಂದಿನ ಸಂವಿಧಾನದ ಉದ್ದೇಶಗಳನ್ನು ನಿರೂಪಿಸುತ್ತವೆ. ಆದರೆ ಸಮಾಜವಾದಿಯೆಂದು ಪ್ರಸಿದ್ಧರಾದ ಪಂಡಿತ್ ಜವಹರಲಾಲ್ ನೆಹರೂ ಅವರಿಂದ ಬಂದಿರುವ ಈ ನಿರ್ಣಯವು, ವಿವಾದಾಸ್ಪದವಲ್ಲವಾದರೂ ತುಂಬಾ ನಿರಾಶಾದಾಯಕವಾಗಿದೆ ಎಂದು ಹೇಳಬೇಕು. ನಿರ್ಣಯದ ಆ ಭಾಗದಲ್ಲಿ ಅವರು ಮಾಡಿರುವುದಕ್ಕಿಂತಲೂ ತುಂಬಾ ಹೆಚ್ಚಿನದನ್ನು ನಾನು ನಿರೀಕ್ಷಿಸಿದ್ದೆ. ಇತಿಹಾಸದ ವಿದ್ಯಾರ್ಥಿಯಾಗಿ ನಿರ್ಣಯದ ಈ ಭಾಗವು ಅದರಲ್ಲಿ ಸೇರಿಕೊಳ್ಳಲೇ ಬಾರದಾಗಿರುತ್ತೆಂದು ನಾನು ಭಾವಿಸಿದ್ದೆ. ನಿರ್ಣಯದ ಆ ಭಾಗವನ್ನು ಓದಿದಾಗ ಫ್ರೆಂಚ್ ಸಂವಿಧಾನ ಸಭೆಯು ಸಾರಿದ ಮಾನವ ಹಕ್ಕುಗಳ ಘೋಷಣೆಯು ನೆನಪಿಗೆ ಬರುತ್ತದೆ. ೪೫೦ ವರ್ಷಗಳು ಕಳೆದ ಮೇಲೆ ಮಾನವ ಹಕ್ಕುಗಳ ಘೋಷಣೆಯೂ ಅದರಲ್ಲಿ ಅಂತರ್ಗತವಾಗಿರುವ ತತ್ವಗಳೂ ನಮ್ಮ ಮಾನಸಿಕ ನೆಲೆಯ ಭಾಗವಾಗಿವೆ ಎಂದು ನಾನು ಸೂಚಿಸುವುದು ವಿಹಿತವೆಂದು ಭಾವಿಸುತ್ತೇನೆ. ಜಗತ್ತಿನ ಪ್ರತಿಯೊಂದು ನಾಗರಿಕ ಭಾಗದಲ್ಲೂ ಆಧುನಿಕ ಮಾನವನ ಮನೋನೆಲೆಯ ಅವಿಭಾಜ್ಯ ಅಂಗವಾಗಿ ಅವು ಪರಿಣಮಿಸಿವೆ. ಅಷ್ಟು ಮಾತ್ರವಲ್ಲ,

---

* ಸಿ.ಎ.ಡಿ. ಸಂಪುಟ ೧, ಡಿಸೆಂಬರ್ ೧೭, ೧೯೪೬, ಪುಟ ೯೯–೧೦೩.

ಇಷ್ಟೊಂದು ಸಂಪ್ರದಾಯಬದ್ಧವಾದ ಆಲೋಚನೆಯಲ್ಲೂ ಸಾಮಾಜಿಕ ರಚನೆಯಲ್ಲೂ ಅಷ್ಟೊಂದು ಪ್ರಾಚೀನವಾದ ನಮ್ಮದೇ ದೇಶದಲ್ಲಿಯೂ ಅದರ ಮೌಲ್ಯವನ್ನು ಯಾರೂ ನಿರಾಕರಿಸಲಾರರು. ಅದನ್ನೇ ಈಗ ಈ ನಿರ್ಣಯವು ಮಾಡುತ್ತಿರುವಂತೆ ಪುನರುಚ್ಚರಿಸುವುದು ಶುದ್ಧ ಶಬ್ದಾಡಂಬರ ಅಷ್ಟೆ. ಈ ತತ್ವಗಳು ನಮ್ಮ ದೃಷ್ಟಿಯ ಮೌನ ನಿಷ್ಕಳಂಕ ಪ್ರತಿಜ್ಞೆಯಾಗಿವೆ. ಆದ್ದರಿಂದ ಅವುಗಳನ್ನು ನಮ್ಮ ಪಂಥದ ಭಾಗವೆಂದು ಮತ್ತೆ ಸಾರಿ ಹೇಳಬೇಕಾದುದು ಅನಾವಶ್ಯಕ. ನಿರ್ಣಯದಲ್ಲಿ ಬೇರೆ ಕೆಲವು ಕೊರತೆಗಳೂ ಇವೆ. ನಿರ್ಣಯದ ಈ ಭಾಗವು ಕೆಲವು ಹಕ್ಕುಗಳನ್ನು ನಿರೂಪಿಸುತ್ತದೆಯಾದರೂ, ಪರಿಹಾರಗಳ ವಿಚಾರವಾಗಿ ಏನನ್ನೂ ಹೇಳುವುದಿಲ್ಲ. ನಮಗೆಲ್ಲ ಚೆನ್ನಾಗಿ ತಿಳಿದಿದೆ. ಜನರು ತಮ್ಮ ಹಕ್ಕುಗಳ ಮೇಲೆ ಯಾರಾದರೂ ದಾಳಿ ಮಾಡಿದಾಗ ಅದನ್ನು ಸರಿಪಡಿಸಿಕೊಳ್ಳಲು ಅವರಿಗೆ ಪರಿಹಾರ ಮಾರ್ಗಗಳು ಇಲ್ಲಿ ಸಂಪೂರ್ಣವಾಗಿ ಇಲ್ಲವಾಗಿವೆ. ಯಾವನೇ ವ್ಯಕ್ತಿಯ ಪ್ರಾಣ, ಸ್ವಾತಂತ್ರ್ಯ ಮತ್ತು ಆಸ್ತಿ ಇವನ್ನು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳದೆ ಯಾರೂ ಕಿತ್ತುಕೊಳ್ಳುವಂತಿಲ್ಲ ಎಂಬ ಸಾಮಾನ್ಯ ಸೂತ್ರಕ್ಕೂ ಈ ನಿರ್ಣಯದಲ್ಲಿ ಎಡೆ ದೊರೆತಿಲ್ಲ. ಈ ಮೂಲ ಹಕ್ಕುಗಳನ್ನು ಕಾನೂನಿಗೂ ನೈತಿಕತೆಗೂ ಅಧೀನವನ್ನಾಗಿ ಮಾಡಲಾಗಿದೆ. ಕಾನೂನು ಯಾವುದು, ನೈತಿಕತೆ ಯಾವುದು ಎಂಬುದನ್ನು ಅಂದಂದಿನ ಆಡಳಿತಾಂಗವು ನಿರ್ಧರಿಸುತ್ತದೆ. ಒಂದು ಆಡಳಿತವು ಒಂದು ದೃಷ್ಟಿಯನ್ನು ತಳೆದರೆ ಇನ್ನೊಂದು ಆಡಳಿತವು ಬೇರೊಂದೇ ದೃಷ್ಟಿಯನ್ನು ಹೊಂದಿರಬಹುದು. ಪ್ರಸ್ತುತ ವಿಚಾರವನ್ನು ಇಂದಿನ ಆಡಳಿತಾಂಗಕ್ಕೆ ಒಪ್ಪಿಸಿದರೆ ಮೂಲ ಹಕ್ಕುಗಳ ಸ್ಥಿತಿ ಏನಾಗುತ್ತದೋ ನಮಗೆ ತಿಳಿಯದು. ಮಾನ್ಯರೇ, ಇಲ್ಲಿ ಆರ್ಥಿಕ ಸಾಮಾಜಿಕ ಮತ್ತು ರಾಜಕೀಯ ನ್ಯಾಯವನ್ನು ಹೇಳುವ ಕೆಲವು ಅವಕಾಶಗಳಿವೆ. ಈ ನಿರ್ಣಯದ ಹಿಂದೆ ಸತ್ಯ ಮತ್ತು ಪ್ರಾಮಾಣಿಕತೆ ಇದ್ದ ಪಕ್ಷದಲ್ಲಿ ನಿರ್ಣಯವನ್ನು ಮಂಡಿಸಿರುವವರಿಂದ ಬಂದಿರುವುದರಿಂದ ಅವು ಇರುವ ಬಗೆಗೆ ನನಗೆ ಸಂದೇಹವಿಲ್ಲ, ಸರಕಾರವು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯವನ್ನು ಒಂದು ಸತ್ಯವನ್ನಾಗಿ ಮಾಡುವುದೆಂದು ನಿರೀಕ್ಷಿಸಬಹುದಾಗಿತ್ತು. ಆ ದೃಷ್ಟಿಯಿಂದ ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವು ದೊರಕುವಂತೆ ಮಾಡುವ ಸಲುವಾಗಿ ಕೈಗಾರಿಕೆಗಳ ಮತ್ತು ನೆಲದ ರಾಷ್ಟ್ರೀಕರಣವಾಗಬೇಕೆಂದು ನಿರ್ಣಯವು ಸ್ಪಷ್ಟವಾಗಿ ಹೇಳಬೇಕೆಂದು ನಿರೀಕ್ಷಿಸಬಹುದಾಗಿತ್ತು. ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನ್ಯಾಯವನ್ನು ಕೊಡಬೇಕೆಂದು ಕೊಡಲು ಬಯಸುವ ಯಾವುದೇ ಮುಂದಿನ ಸರಕಾರವು ಸಮಾಜವಾದೀ ಅರ್ಥವ್ಯವಸ್ಥೆಯಿಲ್ಲದೆ ಅದನ್ನು ಮಾಡುವುದು ಹೇಗೆ ಸಾಧ್ಯ ಎಂಬುದು ನನಗೆ ತಿಳಿಯುವುದಿಲ್ಲ. ಆದ್ದರಿಂದ ವೈಯಕ್ತಿಕವಾಗಿ ಈ ನಿರ್ಣಯಗಳನ್ನು ಮಂಡಿಸುವುದರಲ್ಲಿ ನನಗೆ ಯಾವುದೇ ಆಕ್ಷೇಪಣೆಯು ಇಲ್ಲವಾದರೂ, ನನ್ನ ಮನಸ್ಸಿಗೆ ಅದು ಬಹು ನಿರಾಶಾದಾಯಕವಾಗಿ ತೋರುತ್ತದೆ. ಆದರೆ ಈಗ ಈ ವಿಷಯವನ್ನು ಇಲ್ಲಿಗೆ ಬಿಡುತ್ತೇನೆ.

ಈಗ ನಿರ್ಣಯದ ಮೊದಲ ಭಾಗಕ್ಕೆ ಬರುತ್ತೇನೆ. ಮೊದಲ ನಾಲ್ಕು ಪ್ಯಾರಾಗಳು ಇಲ್ಲಿ ಅಡಕವಾಗುತ್ತವೆ. ಸದನದಲ್ಲಿ ನಡೆದ ಚರ್ಚೆಯಿಂದಾಗಿ ಇದು ಭಿನ್ನಾಭಿಪ್ರಾಯದ ವಸ್ತುವಾಗಿ ಪರಿಣಮಿಸಿದೆ ಎಂದು ಈಗಾಗಲೇ ನಾನು ಹೇಳಿದ್ದೇನೆ. ಭಿನ್ನಾಭಿಪ್ರಾಯವು 'ರಿಪಬ್ಲಿಕ್' ಎಂಬ ಪದದ ಸುತ್ತ ಬೆಳೆದಿರುವಂತೆ ತೋರುತ್ತದೆ. ೪ನೆಯ ಪ್ಯಾರಾದಲ್ಲಿ 'ಸಾರ್ವಭೌಮತ್ವವು ಜನರಿಂದ ದೊರಕುತ್ತದೆ' ಎಂಬ ವಾಕ್ಯದೊಂದಿಗೆ ಅದು ಸಂಬಂಧಿಸಿದೆ. ನಿನ್ನೆ ನನ್ನ ಮಿತ್ರರು ಡಾ. ಜಯಕರ್ ಅವರು ಹೇಳಿದಂತೆ ಮುಸ್ಲಿಂ ಲೀಗಿನ ಅನುಪಸ್ಥಿತಿಯಲ್ಲಿ ಈ ಸಭೆಯು ಈ ನಿರ್ಣಯವನ್ನು ಅಂಗೀಕರಿಸುವ ವಿಚಾರದಲ್ಲಿ ಮುಂದುವರಿಯುವುದು ಸೂಕ್ತವಾಗುವುದಿಲ್ಲ. ಸ್ವಾಮಿ, ಈ ಮಹಾನ್ ದೇಶದ ಮುಂದಿನ ವಿಕಾಸದ ವಿಷಯದಲ್ಲಿಯೂ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವಿನ್ಯಾಸಗಳು ಅಂತಿಮವಾಗಿ ಯಾವ ರೂಪ ತಳೆಯಬಹುದು ಎಂಬ ವಿಷಯವಾಗಿ ನನಗೆ

ಕಿಂಚಿತ್ತೂ ಸಂದೇಹವಿಲ್ಲ. ನನಗೆ ಅರಿವಿದೆ, ಇಂದು ನಾವು ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬೇರೆಬೇರೆಯಾಗಿ ಒಡೆದಿದ್ದೇವೆ. ಸಮನಾದ ಎರಡು ಪಕ್ಷಗಳಾಗಿದ್ದೇವೆ, ನಾನು ಅಂಥದೊಂದು ಪಾಳೆಯದ ಸದಸ್ಯನಾಗಿರಬಹುದು ಎಂದು ಒಪ್ಪಿಕೊಳ್ಳುವಷ್ಟು ದೂರ ಹೋಗುತ್ತೇನೆ. ಆದರೆ ಮಾನ್ಯರೆ, ಇಷ್ಟೆಲ್ಲಾ ಇದ್ದರೂ, ಕಾಲಾವಕಾಶ ಮತ್ತು ಸನ್ನಿವೇಶ ದೊರೆತ ಪಕ್ಷದಲ್ಲಿ ಈ ದೇಶವು ಒಂದು ಅಖಂಡ ದೇಶವಾಗುವುದು ಜಗತ್ತಿನಲ್ಲಿ ಯಾವ ಶಕ್ತಿಯೂ ತಪ್ಪಿಸಲಾರದು ಎಂಬುದು ನನಗೆ ಮನವರಿಕೆಯಾಗಿದೆ (ಚಪ್ಪಾಳೆ). ಎಷ್ಟೆಲ್ಲಾ ಜಾತಿ ಮತಗಳಿದ್ದರೂ ಯಾವುದೇ ಒಂದು ರೂಪದಲ್ಲಿ ನಾವು ಒಂದೇ ಜನರಾಗಿರುತ್ತೇವೆ ಎಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ (ಹರ್ಷೋದ್ಗಾರ). ಭಾರತದ ವಿಭಜನೆಗಾಗಿ ಮುಸ್ಲಿಂ ಲೀಗ್ ಚಳುವಳಿ ನಡೆಸುತ್ತಿದೆ. ಆದರೆ ಮುಂದೆ ಒಂದು ದಿನ ಮುಸ್ಲಿಮರಿಗೇ ವಿವೇಕ ಮೂಡಿ ಏಕೀಕೃತ ಭಾರತವೇ ತಮಗೂ ಒಳ್ಳೆಯದು ಎಂದು ಆಲೋಚಿಸತೊಡಗುತ್ತಾರೆ (ಜೋರಾದ ಚಪ್ಪಾಳೆ ಮತ್ತು ಹರ್ಷೋದ್ಗಾರ).

ಅಂತಿಮವಾದ ಗುರಿಯ ಬಗೆಗೆ ನಾವು ಯಾರೂ ಹೆದರಬೇಕಾಗಿಲ್ಲ. ಯಾರೂ ಯಾವ ಸಂದೇಹವನ್ನೂ ಇಟ್ಟುಕೊಳ್ಳಬೇಕಾಗಿಲ್ಲ. ನಮ್ಮ ಕಷ್ಟ ಇರುವುದು ಭವಿಷ್ಯತ್ತಿನ ವಿಷಯದಲ್ಲಲ್ಲ. ಈಗ ಇಲ್ಲಿರುವ ಭಿನ್ನಸ್ವಭಾವದ ಜನಸಾಮಾನ್ಯರೆಲ್ಲರನ್ನೂ ಒಟ್ಟಾಗಿ ಒಂದು ನಿರ್ಣಯ ತೆಗೆದುಕೊಳ್ಳುವಂತೆ ಮಾಡಿ ಐಕ್ಯಸಾಧನೆಯ ಕಡೆಗೆ ನಡೆಯುವಂತೆ ಮಾಡುವುದು ಹೇಗೆ ಎನ್ನುವುದೇ ನಮ್ಮೆದುರಿಗಿರುವ ಕಷ್ಟ. ಅದು ಅಂತಿಮ ಸ್ಥಿತಿಯನ್ನು ಕುರಿತುದುದಲ್ಲ, ಪ್ರಾರಂಭ ಸ್ಥಿತಿಯನ್ನು ಕುರಿತದ್ದು. ಆದ್ದರಿಂದ ಅಧ್ಯಕ್ಷರೆ, ನಾವೆಲ್ಲರೂ ಇಷ್ಟಪಟ್ಟು ಮಿತ್ರರಾಗಿರುವ ಸಲುವಾಗಿ, ಈ ದೇಶದ ಪ್ರತಿಯೊಂದು ಪಕ್ಷವೂ ಪ್ರತಿಯೊಂದು ವರ್ಗವೂ ಒಂದೇ ದಾರಿಯಲ್ಲಿ ಮುನ್ನಡೆಯುವಂತೆ ಮಾಡುವುದು ಬಹುಮತಪಕ್ಷದ ಅತ್ಯಂತ ಶ್ರೇಷ್ಠ ರಾಜನೀತಿ ಎಂದು ನಾನು ಭಾವಿಸುತ್ತೇನೆ. ಇದಕ್ಕಾಗಿ ಅವರು ಒಟ್ಟಾಗಿ ನಡೆಯಲು ಅಪೇಕ್ಷೆಯಿರದ ಕೆಲವರ ಪೂರ್ವಾಗ್ರಹಗಳನ್ನು ಕಟ್ಟಿಕೊಳ್ಳಬಹುದು. ಈ ಕಾರಣಕ್ಕಾಗಿಯೇ ನಾನು ಈ ಮನವಿ ಮಾಡಿಕೊಳ್ಳುತ್ತಿದ್ದೇನೆ, ನಾವೀಗ ಘೋಷಣೆಗಳನ್ನು ಕೈಬಿಡೋಣ, ಜನರಿಗೆ ದಿಗಿಲುಂಟು ಮಾಡುವಂತಹ ಮಾತುಗಳನ್ನು ತೊರೆಯೋಣ. ನಮ್ಮ ವಿರೋಧಿಗಳ ಪೂರ್ವಾಗ್ರಹಗಳಿಗೂ ಅವಕಾಶವಿದ್ದುಕೊಳ್ಳಲಿ, ಅವರನ್ನೂ ಒಳಕ್ಕೆ ಕರೆತರೋಣ, ಆ ರಾಜಮಾರ್ಗದಲ್ಲಿ ಅವರು ನಮ್ಮೊಡನೆ ಸೇರಿ ನಡೆಯಲಿ. ಆಗಲೇ ಹೇಳಿದಂತೆ ಎಲ್ಲರೂ ಸೇರಿ ದೂರ ನಡೆದರೆ ಐಕ್ಯತೆ ಸಿದ್ಧಿಸುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಈಗ ಇಲ್ಲಿ ನಾನು ಡಾ. ಜಯಕರ್ ಅವರ ತಿದ್ದುಪಡಿಯನ್ನು ಬೆಂಬಲಿಸಿದರೆ ಅದಕ್ಕೆ ಕಾರಣವಿದೆ. ನಮ್ಮದು ತಪ್ಪೋ ಸರಿಯೋ, ನಮ್ಮ ನಿಲುವು, ನಮ್ಮ ಕಾನೂನು ಬದ್ಧ ಹಕ್ಕುಗಳಿಗೆ ಹೊಂದುವಂತಿದೆಯೋ ಇಲ್ಲವೋ, ಅದು ಮೇ ೧೬ರ ಅಥವಾ ಡಿಸೆಂಬರ್ ೬ರ ಹೇಳಿಕೆಗೆ ಹೊಂದುತ್ತದೆಯೋ – ಅದೆಲ್ಲವನ್ನೂ ಬಿಟ್ಟುಬಿಡಿ. ಇದು ಶಾಸನಬದ್ಧ ಹಕ್ಕು ಎಂದು ಪರಿಗಣಿಸಬೇಕಾದಷ್ಟು ದೊಡ್ಡ ವಿಚಾರವಲ್ಲ. ಅದೊಂದು ನ್ಯಾಯಿಕ ಪ್ರಶ್ನೆಯೇ ಅಲ್ಲ, ನ್ಯಾಯಿಕ ಪರಿಗಣನೆಗಳೆಲ್ಲವನ್ನೂ ಒತ್ತಟ್ಟಿಗೆ ಸರಿಸಿ ನಾವು ಪ್ರಯತ್ನ ಮಾಡಬೇಕು, ಬರಲು ಸಿದ್ಧವಾಗಿಲ್ಲದವರೂ ಬರುವಂತೆ ಮಾಡಬೇಕು. ಅವರು ಬರಲು ಸಾಧ್ಯವಾಗುವಂತೆ ಮಾಡೋಣ. ಇದೇ ನನ್ನ ಮನವಿ.

ಇಲ್ಲಿ ನಡೆದ ಚರ್ಚೆಗಳಲ್ಲಿ ಎರಡು ಪ್ರಶ್ನೆಗಳನ್ನು ಎತ್ತಲಾಯಿತು. ಅವು ನನ್ನ ಮನಸ್ಸಿಗೆ ನಾಟಿದುದರಿಂದ ಒಂದು ತುಂಡು ಕಾಗದದ ಮೇಲೆ ಬರೆದುಕೊಂಡೆ. ಒಂದು, ನೆನ್ನೆ ಈ ಸಭೆಯಲ್ಲಿ ಮಾತನಾಡಿದ ನನ್ನ ಮಿತ್ರರು, ಬಿಹಾರದ ಮುಖ್ಯಮಂತ್ರಿ ಎತ್ತಿದ್ದು. ಲೀಗು ಸಂವಿಧಾನ ಸಭೆಗೆ ಬರದಂತೆ ಈ ನಿರ್ಣಯವು ಹೇಗೆ ತಡೆಯಾದೀತು? ಎಂಬುದು ಮೊದಲನೆಯ ಪ್ರಶ್ನೆ. ಇಂದು ನನ್ನ ಮಿತ್ರ ಡಾ. ಶ್ಯಾಮಪ್ರಸಾದ

ಮುಖರ್ಜಿ ಇನ್ನೊಂದು ಪ್ರಶ್ನೆಯನ್ನು ಕೇಳಿದರು. ಈ ನಿರ್ಣಯವು ಕ್ಯಾಬಿನೆಟ್ ಆಯೋಗದ ಸಲಹೆಗೆ ಅಸಂಗತವಾಗುತ್ತದೆಯೇ? ಇವೆರಡೂ ತುಂಬ ಮುಖ್ಯವಾದ ಪ್ರಶ್ನೆಗಳೆಂದು ನನಗೆ ತೋರುತ್ತದೆ. ಇವುಗಳಿಗೆ ಉತ್ತರ ಬೇಕು, ಅತ್ಯಂತ ಸ್ಪಷ್ಟವಾದ ಉತ್ತರ ಕೊಡಬೇಕು. ಈ ನಿರ್ಣಯವು ಫಲವನ್ನು ಸಾಧಿಸುವ ಉದ್ದೇಶವನ್ನು ಹೊಂದಿದೆಯೇ ಇಲ್ಲವೆ, ಅದು ಕೇವಲ ತಣ್ಣನೆಯ ಲೆಕ್ಕಚಾರವೋ ಇಲ್ಲವೆ, ಕೇವಲ ಆಕಸ್ಮಿಕವೋ, ಒಟ್ಟಿನಲ್ಲಿ ಮುಸ್ಲಿಂ ಲೀಗನ್ನು ಹೊರಗಿಡುವ ಫಲವನ್ನು ಮಾತ್ರ ಕೊಟ್ಟೇ ಕೊಡುತ್ತದೆ ಎಂದು ನಾನು ಹೇಳುತ್ತೇನೆ. ಈ ಸಂಬಂಧವಾಗಿ ನಿರ್ಣಯದ ಮೂರನೆಯ ಪ್ಯಾರಾ ಕಡೆಗೆ ತಮ್ಮ ಗಮನ ಸೆಳೆಯುತ್ತೇನೆ. ಅದು ಬಹಳ ಮುಖ್ಯವಾದದ್ದು, ಮಹತ್ವಪೂರ್ಣವಾದದ್ದು, ಮೂರನೆಯ ಪ್ಯಾರಾ ಭಾರತದ ಭವಿಷ್ಯತ್ತಿನ ಸಂವಿಧಾನವನ್ನು ದೃಷ್ಟಿಯಲ್ಲಿಟ್ಟುಕೊಂಡಿದೆ. ನಿರ್ಣಯವನ್ನು ಮಂಡಿಸಿದವರ ಉದ್ದೇಶ ಏನಿದೆಯೋ ನನಗೆ ತಿಳಿಯದು. ಆದರೆ ಈ ನಿರ್ಣಯವನ್ನು ಅಂಗೀಕರಿಸಿದ ಮೇಲೆ, ಅದು ನಿರ್ಣಯದ ೩ನೆಯ ಪ್ಯಾರಾಕ್ಕೆ ಅನುಗುಣವಾಗಿ ಒಂದು ಸಂವಿಧಾನವನ್ನು ರಚಿಸಬೇಕೆಂದು ಈ ರಾಜ್ಯಾಂಗ ಸಭೆಗೆ ನಿರ್ದೇಶಕ ಅಂಶವಾಗಿ ವರ್ತಿಸುತ್ತದೆ ಎಂದು ನಾನು ಭಾವಿಸುತ್ತೇನೆ. ೩ನೆಯ ಪ್ಯಾರಾ ಏನು ಹೇಳುತ್ತದೆ? ೩ನೆಯ ಪ್ಯಾರಾವು ಈ ದೇಶದಲ್ಲಿ ಎರಡು ಸ್ತರದ ಸರಕಾರಗಳಿರುತ್ತವೆ ಎಂದು ಹೇಳುತ್ತದೆ. ಒಂದು ಬುಡದಲ್ಲಿ ಸ್ವಯಮಾಡಳಿತವಿರುವ ಪ್ರಾಂತ್ಯಗಳು ಅಥವಾ ರಾಜ್ಯಗಳು ಅಥವಾ ಏಕೀಕೃತ ಭಾರತಕ್ಕೆ ಸೇರಿಕೊಳ್ಳಬಯಸುವ ಇತರ ಪ್ರದೇಶಗಳು. ಈ ಸ್ವಯಮಾಡಳಿತ ಘಟಕಗಳಿಗೆ ಪೂರ್ಣ ಅಧಿಕಾರವಿರುತ್ತದೆ, ಶೇಷಾಧಿಕಾರಗಳು ಇರುತ್ತವೆ. ಮೇಲುತುದಿಯಲ್ಲಿ ಪ್ರಾಂತೀಯ ಘಟಕಗಳ ಮೇಲೆ, ಒಂದು ಕೇಂದ್ರ ಸರಕಾರವಿರುತ್ತದೆ. ಕಾನೂನುಗಳನ್ನು ಮಾಡಲು, ಅವುಗಳನ್ನು ಕಾರ್ಯಗತಗೊಳಿಸಲು ಮತ್ತು ಆಡಳಿತ ನಡೆಸಲು ಅದಕ್ಕೆ ಅಧಿಕಾರವಿರುತ್ತದೆ. ನಿರ್ಣಯದ ಈ ಭಾಗವನ್ನು ಓದುವಾಗ ಗುಂಪುಗೂಡಿಸುವ ವಿಚಾರದ ಉಲ್ಲೇಖ ಎಲ್ಲಿಯೂ ನನಗೆ ಕಾಣಿಸಲಿಲ್ಲ. ಒಂದು ಕಡೆ ಕೇಂದ್ರ, ಇನ್ನೊಂದು ಕಡೆ ಪ್ರಾಂತ್ಯಗಳು. ನಡುವೆ ಮಧ್ಯವರ್ತಿಯಾಗಿ ಒಂದು ರಚನೆಯಿರುವುದರ ಉಲ್ಲೇಖ ಅಲ್ಲಿಲ್ಲ. ಕ್ಯಾಬಿನೆಟ್ ಆಯೋಗದ ಹೇಳಿಕೆಯ ಬೆಳಕಿನಲ್ಲೋ, ಕಾಂಗ್ರೆಸ್ ತನ್ನ ವಾರ್ಧಾ ಅಧಿವೇಶನದಲ್ಲಿ ಅಂಗೀಕರಿಸಿದ ನಿರ್ಣಯದ ಬೆಳಕಿನಲ್ಲೋ ಇದನ್ನು ಓದಿದರೆ, ಪ್ರಾಂತ್ಯಗಳನ್ನು ಒಟ್ಟುಗೂಡಿಸುವ ವಿಚಾರದ ಉಲ್ಲೇಖ ಎಲ್ಲಿಯೂ ಇಲ್ಲದುದು ನನಗೆ ಆಶ್ಚರ್ಯವನ್ನುಂಟುಮಾಡಿದೆ. ವೈಯಕ್ತಿಕವಾಗಿ ನನಗೆ ಗುಂಪುಗೂಡಿಸುವಿಕೆಯ ವಿಚಾರವೇ ಇಷ್ಟವಾಗುವುದಿಲ್ಲ. (ಕೇಳಿ! ಕೇಳಿ) ನಾನು ಬಲವಾದ ಒಂದು ಕೇಂದ್ರ ಸರಕಾರವನ್ನು ಅಪೇಕ್ಷಿಸುತ್ತೇನೆ (ಕೇಳಿ! ಕೇಳಿ), ೧೯೩೫ರ ಭಾರತ ಸರಕಾರ ಶಾಸನದನ್ವಯ ನಾವು ರೂಪಿಸಿದ್ದುದಕ್ಕಿಂತಲೂ ಬಹಳ ಬಲಯುತವಾದ ಕೇಂದ್ರವನ್ನು ಇಷ್ಟಪಡುತ್ತೇನೆ. ಆದರೆ ಸ್ವಾಮಿ, ಈ ಅಭಿಪ್ರಾಯಗಳು, ಈ ಅಪೇಕ್ಷೆಗಳು ಯಾವ ಪ್ರಯೋಜನಕ್ಕೂ ಬರುವುದಿಲ್ಲ. ನಾವು ಬಹಳ ದೂರ ನಡೆದುಬಂದಿದ್ದೇವೆ. ಕಾಂಗ್ರೆಸ್ ಪಕ್ಷವು ತನಗೆ ಮಾತ್ರವೇ ತಿಳಿದಿರುವ ಕಾರಣಗಳಿಗಾಗಿ, ಈ ದೇಶದಲ್ಲಿ ೧೫೦ ವರ್ಷಗಳ ಸುದೀರ್ಘ ಆಡಳಿತದ ಫಲವಾಗಿ ಕಟ್ಟಿದ್ದ ಬಲವಾದ ಕೇಂದ್ರವನ್ನು ಒಡೆದುಹಾಕಲು ಒಪ್ಪಿಗೆ ನೀಡಿತು. ಆ ಪದವನ್ನು ನಾನು ಬಳಸಬಹುದಾದರೆ, ಶಕ್ತಿಶಾಲಿಯಾದ ಅಂಥ ಕೇಂದ್ರ ನನ್ನ ಅಪಾರ ಮೆಚ್ಚಿಗೆಯ, ಗೌರವದ, ರಕ್ಷಣೆಯ ವಿಚಾರವಾಗಿತ್ತು. ಆದರೆ, ಆ ಸ್ಥಿತಿಯನ್ನು ಬೇಡವೆಂದು ಕೈಬಿಟ್ಟಮೇಲೆ, ನಮಗೆ ಶಕ್ತಿಶಾಲಿಯಾದ ಕೇಂದ್ರವೊಂದು ಬೇಡ ಎಂದು ಹೇಳಿದ ಮೇಲೆ, ಒಂದು ಮಧ್ಯವರ್ತಿ ಸರಕಾರ, ಕೇಂದ್ರಕ್ಕೂ ಪ್ರಾಂತ್ಯಗಳಿಗೂ ನಡುವೆ ಇರುವ ಒಂದು ಉಪ–ಒಕ್ಕೂಟ ಇರಬಹುದು, ಇರತಕ್ಕದ್ದು ಎಂದು ಒಪ್ಪಿಕೊಂಡೂ, ಈಗ ಈ ೩ನೆಯ ಪ್ಯಾರಾದಲ್ಲಿ ಗುಂಪುಗೂಡಿಸುವಿಕೆಯ ಬಗೆಗೆ ಯಾವುದೇ ಉಲ್ಲೇಖ ಏಕೆ ಬಂದಿಲ್ಲ? ಎಂಬುದನ್ನು ನಾನು ತಿಳಿದುಕೊಳ್ಳಬಯಸುತ್ತೇನೆ. ಕಾಂಗ್ರೆಸ್

ಪಕ್ಷ, ಮುಸ್ಲಿಂ ಲೀಗ್ ಮತ್ತು ಘನ ಚಕ್ರವರ್ತಿಯವರ ಸರಕಾರ ಇವರು ವರ್ಗೀಕರಣಕ್ಕೆ ಸಂಬಂಧಪಟ್ಟ ಉಪ ನಿಯಮದ ವ್ಯಾಖ್ಯಾನದಲ್ಲಿ ಸಹಮತ ಇಲ್ಲ ಎಂದು ನಾನು ಬಲ್ಲೆ. ಆದರೆ ಸದಾ ನಾನು ಹೀಗೆ ಯೋಚಿಸುತ್ತಿದ್ದೆ– ನನ್ನದು ತಪ್ಪೆಂದು ತೋರಿಸಿಕೊಟ್ಟರೆ ತಿದ್ದಿಕೊಳ್ಳುತ್ತೇನೆ – ಬೇರೆ ಬೇರೆ ಗುಂಪುಗಳಲ್ಲಿರುವ ಪ್ರಾಂತಗಳು ಇಂದು ಯೂನಿಯನ್ ಅನ್ನು, ಒಂದು ಉಪ–ಒಕ್ಕೂಟವನ್ನು ರಚಿಸಿಕೊಳ್ಳಲು ಒಪ್ಪಿದರೆ ಆ ಸಲಹೆಗೆ ಕಾಂಗ್ರೆಸ್ ಪಕ್ಷದ ಆಕ್ಷೇಪಣೆ ಏನೂ ಇರುವುದಿಲ್ಲ ಎಂದು ಭಾವಿಸಿದ್ದೆ. ಕಾಂಗ್ರೆಸ್ ಪಕ್ಷದ ಮನಸ್ಥಿತಿಯನ್ನು ನಾನು ಸರಿಯಾಗಿ ಓದಿದ್ದೇನೆ ಎಂದು ನನಗೆ ನಂಬಿಕೆಯಿದೆ. ನನ್ನ ಪ್ರಶ್ನೆ ಇದು. ಈ ನಿರ್ಣಯದ ಪ್ರವರ್ತಕರು ಪ್ರಾಂತಗಳ ಒಕ್ಕೂಟವೊಂದರ ವಿಚಾರಕ್ಕೆ, ಅವರೂ ಅವರ ಪಕ್ಷವೂ ಒಪ್ಪಿದಂತೆ ಪ್ರಾಂತಗಳನ್ನು ವರ್ಗೀಕರಿಸುವ ವಿಚಾರಕ್ಕೆ ಏಕೆ ನಿರ್ಣಯದಲ್ಲಿ ಯಾವ ಉಲ್ಲೇಖನವನ್ನೂ ಮಾಡಲಿಲ್ಲ? ಒಕ್ಕೂಟದ ವಿಚಾರವು ಈ ನಿರ್ಣಯದಿಂದ ಸಂಪೂರ್ಣವಾಗಿ ಅಳಿಸಿಹೋಗಿರುವುದೇಕೆ? ನನಗೆ ಉತ್ತರ ದೊರಕುತ್ತಿಲ್ಲ, ಯಾವುದೂ ಇಲ್ಲ. ಆದ್ದರಿಂದ ಬಿಹಾರದ ಮುಖ್ಯಮಂತ್ರಿಯವರೂ, ಡಾ ಶ್ಯಾಮಪ್ರಸಾದ ಮುಖರ್ಜಿಯವರೂ ಈ ಸಭೆಯಲ್ಲಿ ಎತ್ತಿರುವ (೧) ಈ ನಿರ್ಣಯವು ಮೇ ೧೬ರ ಹೇಳಿಕೆಗೆ ಸಂಗತವಾಗಿದೆಯೇ?, (೨) ಮುಸ್ಲಿಂ ಲೀಗು ಈ ರಾಜ್ಯಾಂಗ ಸಭೆಗೆ ಪ್ರವೇಶಿಸುವುದನ್ನು ಈ ನಿರ್ಣಯವು ಹೇಗೆ ತಡೆಯುತ್ತದೆ?–ಈ ಎರಡು ಪ್ರಶ್ನೆಗಳಿಗೆ ಉತ್ತರ ಹೀಗಿದೆ. ನಿರ್ಣಯದ ೩ನೆಯ ಪ್ಯಾರಾದ ಪ್ರಯೋಜನವನ್ನು ಮುಸ್ಲಿಂ ಲೀಗು ಪೂರ್ತಿಯಾಗಿ ಪಡೆದುಕೊಳ್ಳುತ್ತದೆ, ತನ್ನ ಮುಂದುವರಿದ ಗೈರುಹಾಜರಿಯನ್ನು ಅದರಿಂದ ಸಮರ್ಥಿಸಿಕೊಳ್ಳುತ್ತದೆ. ನೆನ್ನೆ ಸಭೆಯಲ್ಲಿ ನನ್ನ ಮಿತ್ರ ಡಾ. ಜಯಕರ್ ಅವರು ಈ ವಿಚಾರದ ಕುರಿತು ತೀರ್ಮಾನವನ್ನು ಮುಂದಕ್ಕೆ ಹಾಕಬೇಕೆಂದು ಹೇಳುತ್ತಾ ತಮ್ಮ ಮಾತನ್ನು ನ್ಯಾಯಿಕವಾದ ರೀತಿಯಲ್ಲಿ ಮುಂದಿಟ್ಟರು. ಅವರ ವಾದದ ಆಧಾರ ನಿಮಗೆ ತೀರ್ಮಾನ ಕೈಗೊಳ್ಳುವ ಹಕ್ಕಿದೆಯೆ ಎನ್ನುವುದು. ರಾಜ್ಯಾಂಗ ಸಭೆಯ ಕಾರ್ಯ ನಿರ್ವಹಣೆಯನ್ನು ಕುರಿತು ಕ್ಯಾಬಿನೆಟ್ ಆಯೋಗದ ಹೇಳಿಕೆಯ ಕೆಲವು ಭಾಗಗಳನ್ನು ಅವರು ಓದಿದರು. ರಾಜ್ಯಾಂಗ ಸಭೆಯು ಪ್ರಸ್ತುತ ನಿರ್ಣಯದ ಮೇಲೆ ನಿರ್ಧಾರ ಕೈಗೊಳ್ಳಲು ಹೊರಟ ವಿಧಾನವು ಆಯೋಗದ ವರದಿಯಲ್ಲಿ ನಿರೂಪಿಸಿದ ವಿಧಾನದೊಂದಿಗೆ ಸಂಗತವಾಗುವುದಿಲ್ಲ ಎನ್ನುವುದು. ಮಾನ್ಯರೇ, ಇದನ್ನೇ ಬೇರೊಂದು ರೀತಿಯಾಗಿ ನಾನು ಹೇಳಬಯಸುತ್ತೇನೆ. ಅದು ಹೀಗಿದೆ: ಈ ನಿರ್ಣಯವನ್ನು ಈಗಿಂದೀಗಲೇ ಅಂಗೀಕರಿಸುವ ಹಕ್ಕು ನಿಮಗಿದೆಯೋ ಇಲ್ಲವೋ ಪರಿಶೀಲಿಸಬೇಕೆಂದು ನಾನು ಹೇಳುತ್ತಿಲ್ಲ. ನಿಮಗೆ ಆ ಹಕ್ಕು ಇರಲೂ ಬಹುದು. ನಾನು ಕೇಳುವುದು, ಅದು ಯುಕ್ತವೇ? ಹಾಗೆ ಮಾಡುವುದು ಬುದ್ಧಿವಂತಿಕೆಯೆ? ಅಧಿಕಾರ ಬೇರೆ, ವಿವೇಕ ಬೇರೆಯೇ ಆದದ್ದು. ಸದನವು ಈ ಪ್ರಶ್ನೆಯನ್ನು ಈ ದೃಷ್ಟಿಯಿಂದ ಪರಿಶೀಲಿಸಬೇಕು. ಈ ಹಂತದಲ್ಲಿ ನಿರ್ಣಯದ ಮೇಲೆ ನಿರ್ಧಾರ ಕೈಗೊಳ್ಳುವುದು ವಿವೇಕದ ವರ್ತನೆಯೆ, ಅದು ಒಬ್ಬ ರಾಜನೀತಿಜ್ಞನಿಗೆ ವಿಹಿತವಾದದ್ದೆ? ಉಚಿತವಾದದ್ದೆ? ನನ್ನ ಉತ್ತರ, ಅದು ವಿವೇಕವಲ್ಲ, ವಿಹಿತವಲ್ಲ ಎನ್ನುವುದು. ಕಾಂಗ್ರೆಸ್ಸಿಗೂ ಮುಸ್ಲಿಂ ಲೀಗಿಗೂ ಇರುವ ವೈಮನಸ್ಯಕ್ಕೆ ಒಂದು ಪರಿಹಾರ ಕಂಡುಹಿಡಿಯಲು ಇನ್ನೊಂದು ಸಾರಿ ಪ್ರಯತ್ನ ಮಾಡಬೇಕೆಂದು ಸೂಚಿಸುತ್ತೇನೆ. ಈ ವಿಷಯ ಎಷ್ಟು ಮಹತ್ವದ್ದಾಗಿದೆ, ಎಷ್ಟು ಮುಖ್ಯವಾಗಿದೆ ಎಂದರೆ ಒಂದೋ ಇನ್ನೊಂದೋ ಪಕ್ಷದ ಘನತೆಯ ಆಧಾರದ ಮೇಲೆ ಅದನ್ನು ನಿರ್ಧರಿಸುವುದು ಸಾಧ್ಯವಿಲ್ಲ. ರಾಷ್ಟ್ರಗಳ ಭವಿಷ್ಯವನ್ನು ನಿರ್ಧರಿಸುವಾಗ ಜನರ ಘನತೆ, ನಾಯಕರ ಪ್ರತಿಷ್ಠೆ, ಪಕ್ಷಗಳ ಗೌರವಗಳು ಯಾವ ಲೆಕ್ಕಕ್ಕೂ ಬರಬಾರದು. ದೇಶದ ಗೌರವವೇ ಅತ್ಯಂತ ಮಹತ್ವದ್ದಾಗಿರಬೇಕು. ಈ ಸಭೆಯು ಒಂದು ಅಖಂಡ ಸಂಸ್ಥೆಯಾಗಿ ಕೆಲಸ ಮಾಡಬೇಕು. ನಿರ್ಧಾರವನ್ನು ಕೈಗೊಳ್ಳುವುದಕ್ಕೆ ಮೊದಲು ಮುಸ್ಲಿಂ ಲೀಗಿನ ಪ್ರತಿಕ್ರಿಯೆಯನ್ನು ಅದು ತೆಗೆದುಕೊಳ್ಳಬೇಕು

ಎಂಬ ದೃಷ್ಟಿಯಿಂದ ಮಾತ್ರವಲ್ಲದೆ ದುಡುಕಿನಿಂದ ವರ್ತಿಸಿದರೆ ಭವಿಷ್ಯವು ಏನಾಗಬಹುದು ಎಂದು ಪರಿಶೀಲಿಸುವುದೂ ಅಗತ್ಯ ಎಂಬ ಭಾವನೆಯಿಂದ ನಾನು ಡಾ. ಜಯಕರ್ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಈ ಸದನವನ್ನು ತನ್ನ ವಶದಲ್ಲಿರಿಸಿಕೊಂಡಿರುವ ಕಾಂಗ್ರೆಸ್ ಪಕ್ಷದ ಯೋಜನೆಗಳು ಏನಿವೆ ಎಂಬುದು ನನಗೆ ತಿಳಿಯದು. ಅವರು ಏನನ್ನು ಆಲೋಚಿಸುತ್ತಿದ್ದಾರೆ, ಅವರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವ ದಿವ್ಯಶಕ್ತಿ ನನಗಿಲ್ಲ. ಅವರ ಹೂಟ, ಹುನ್ನಾರುಗಳಾವುವು, ವ್ಯೂಹ ಎಂಥದು ನನಗೆ ಗೊತ್ತಿಲ್ಲ. ಆದರೆ ಈಗ ಉದ್ಭವವಾಗಿರುವ ಪ್ರಶ್ನೆಯನ್ನು ಕುರಿತು ಹೊರಗಿನವನಾಗಿ ಸ್ವಲ್ಪ ಆಲೋಚಿಸಿದರೆ, ಭವಿಷ್ಯವನ್ನು ನಿರ್ಣಯಿಸುವಂತಹ ಮೂರು ದಾರಿಗಳು ಮಾತ್ರ ಇವೆ ಎಂದು ನನಗೆ ತೋರುತ್ತಿದೆ. ಒಂದು ಪಕ್ಷವು ಇನ್ನೊಂದು ಪಕ್ಷದ ಇಚ್ಛೆಗಳಿಗೆ ಶರಣಾಗಬೇಕು – ಇದು ಒಂದು ದಾರಿ. ಮಾತುಕತೆಗಳ ಮೂಲಕ ಶಾಂತಿ ಸ್ಥಾಪನೆ ಎರಡನೆಯ ದಾರಿ, ಇನ್ನು ಬಹಿರಂಗ ಯುದ್ಧ ಮೂರನೆಯ ದಾರಿ. ಸ್ವಾಮಿ, ಈ ರಾಜ್ಯಾಂಗ ಸಭೆಯ ಕೆಲವು ಸದಸ್ಯರು ಯುದ್ಧ ಮಾಡಲು ಸಿದ್ಧವಾಗಿರುವುದಾಗಿ ಹೇಳುವುದು ಕಿವಿಗೆ ಬಿದ್ದಿದೆ. ಈ ದೇಶದ ರಾಜಕೀಯ ಸಮಸ್ಯೆಗಳನ್ನು ಯುದ್ಧಮಾರ್ಗದ ಮೂಲಕ ಪರಿಹರಿಸಿಕೊಳ್ಳಲು ಯೋಚಿಸುವುದೇ ನನಗೆ ದಿಗ್ಭ್ರಮೆಯನ್ನು ಉಂಟುಮಾಡುತ್ತಿದೆ. ಈ ದೇಶದ ಎಷ್ಟು ಜನರು ಈ ವಿಚಾರವನ್ನು ಬೆಂಬಲಿಸುತ್ತಾರೋ ನಾನು ಕಾಣೆ. ಅನೇಕರು ಬೆಂಬಲಿಸಬಹುದು. ಅದಕ್ಕೆ ನನಗೆ ತೋರುವ ಕಾರಣ, ಅವರಲ್ಲಿ ಅನೇಕರು ಅಥವಾ ಹೆಚ್ಚಿನವರು ತಾವು ಯೋಚಿಸುತ್ತಿರುವ ಯುದ್ಧ ಬ್ರಿಟಿಷರ ವಿರುದ್ಧವಾಗಿ ಎಂದು ನಂಬಿಕೊಂಡಿರುವುದು. ಸರಿ, ಜನರ ಮನಸ್ಸಿನಲ್ಲಿ ರೂಪುಗೊಂಡಿರುವ ಯುದ್ಧವನ್ನು ಸ್ಥಳೀಯಗೊಳಿಸಿ, ಸೀಮಿತಗೊಳಿಸಿ, ಬ್ರಿಟಿಷರ ಮೇಲಣ ಯುದ್ಧಕ್ಕಿಂತ ಹೆಚ್ಚಿನದಲ್ಲವೆನಿಸುವುದಾದ ಪಕ್ಷದಲ್ಲಿ, ಅಂಥದೊಂದು ವ್ಯೂಹದ ಬಗೆಗೆ ನನ್ನ ಆಕ್ಷೇಪಣೆ ಏನೂ ಇರಲಾರದು. ಆದರೆ ಅದು ಕೇವಲ ಬ್ರಿಟಿಷರೊಂದಿಗಿನ ಯುದ್ಧವಾಗುತ್ತದೆಯೆ? ಒಂದು ವಿಚಾರದಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ಈ ಸದನದ ಮುಂದೆ ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ಹೇಳಬಯಸುತ್ತೇನೆ. ಈ ದೇಶದಲ್ಲಿ ಯುದ್ಧವೆನ್ನುವುದು ನಡೆದರೆ, ಅದು ನಾವಿಂದು ಎದುರಿಸುತ್ತಿರುವ ವಿಷಯದೊಂದಿಗೆ ಯಾವುದಾದರೂ ರೀತಿಯಲ್ಲಿ ಸಂಬಂಧಪಟ್ಟಿದ್ದರೆ, ಅದು ಬ್ರಿಟಿಷರಿಗೆದುರಾಗಿ ನಡೆಸುವ ಯುದ್ಧವಾಗಿರುವುದಿಲ್ಲ, ಅದು ಮುಸ್ಲಿಮರ ಮೇಲೆ ಮಾಡುವ ಯುದ್ಧವಾಗಿರುತ್ತದೆ. ಅಥವಾ ಇನ್ನೂ ಕೇಡಿನದೆಂದರೆ ಬ್ರಿಟಿಷರು ಮತ್ತು ಮುಸ್ಲಿಮರು ಬೆರೆತ ವೈರಿಗೆದುರಾಗಿ ನಡೆಸಿದ ಯುದ್ಧವಾಗುತ್ತದೆ. ನನಗೆ ಭೀತಿಯಿರುವ ಈ ಬಗೆಯದಲ್ಲದೆ ಬೇರೆ ಯಾವ ರೀತಿಯ ಯುದ್ಧವನ್ನು ಕಲ್ಪಿಸಿಕೊಳ್ಳಲಾಗಿದೆಯೋ ಅದು ನನಗೆ ಕಂಡುಬರುತ್ತಿಲ್ಲ. ಅಮೆರಿಕದೊಂದಿಗೆ ಹೊಂದಾಣಿಕೆಯನ್ನು ಕುರಿತು ಬರ್ಕ್ ಮಾಡಿದ ಅಮೋಘ ಭಾಷಣದ ಒಂದು ಸಣ್ಣ ಭಾಗವನ್ನು ಸದನದ ಮುಂದೆ ಓದಲು ಬಯಸುತ್ತೇನೆ. ಅದು ಈ ಸದನದ ಮನೋಧರ್ಮದ ಮೇಲೆ ಸ್ವಲ್ಪ ಪರಿಣಾಮವನ್ನು ಉಂಟುಮಾಡಬಹುದು. ಬ್ರಿಟಿಷರು ಅಮೆರಿಕ ಸಂಯುಕ್ತ ಸಂಸ್ಥಾನದ ದಂಗೆಕೋರ ಕಾಲೋನಿಗಳನ್ನು ಜಯಿಸಲು ಪ್ರಯತ್ನಿಸುತ್ತಿದ್ದರು. ಅವರ ಇಚ್ಛೆಗೆ ವಿರುದ್ಧವಾಗಿ ಅವರನ್ನು ತಮ್ಮ ಅಧೀನಗೊಳಿಸಿಕೊಳ್ಳಲು ಯತ್ನಿಸುತ್ತಿದ್ದರು. ಕಾಲೋನಿಗಳನ್ನು ಗೆಲ್ಲುವ ಈ ವಿಚಾರವನ್ನು ಪ್ರತಿಭಟಿಸಿ ಬರ್ಕ್ ಹೇಳಿದ ಮಾತು ಇದು–

"ಮೊದಲನೆಯದಾಗಿ ಮಾನ್ಯರೆ, ತಮ್ಮ ಅನುಮತಿಯಿಂದ ಹೇಳಬಯಸುತ್ತೇನೆ: ಬಲವೊಂದನ್ನೇ ಪ್ರಯೋಗಿಸುವುದು ಕೇವಲ ತಾತ್ಕಾಲಿಕ ಕ್ರಮ. ಅದು ಒಂದು ಕ್ಷಣ ಅಡಗಿರಬಹುದು; ಆದರೆ ಮತ್ತೆ ಅಡಗಿಸುವ ಅಗತ್ಯ ಬರದಂತೆ ಮಾಡಲಾರದು. ಯಾವಾಗಲೂ ಯುದ್ಧ ಮಾಡಿ ಗೆಲ್ಲುತ್ತಲೇ ಇರಬೇಕಾದ ಒಂದು ದೇಶವನ್ನು ಆಳಲು ಸಾಧ್ಯವಿಲ್ಲ."

"ನನ್ನ ಮುಂದಿನ ಆಕ್ಷೇಪ ಅದರ ಅನಿಶ್ಚಿತತೆ, ಭೀತಿಯು ಎಲ್ಲಾ ಸಮಯದಲ್ಲೂ ಬಲ ಪ್ರಯೋಗದ ಪರಿಣಾಮವಾಗಿರುವುದಿಲ್ಲ. ಶಸ್ತ್ರಸನ್ನದ್ಧತೆ ವಿಜಯವಲ್ಲ. ವಿಜಯ ಗಳಿಸದೆ ಹೋದರೆ ಸಂಪನ್ಮೂಲ ಉಳಿಯುವುದಿಲ್ಲ. ಏಕೆಂದರೆ ಹೊಂದಾಣಿಕೆಯು ವಿಫಲಗೊಂಡಂತೆ ಬಲಪ್ರಯೋಗವು ಉಳಿದುಕೊಳ್ಳುತ್ತದೆ; ಆದರೆ ಬಲವು ಕುಸಿಯತೊಡಗಿದಾಗ ಹೊಂದಾಣಿಕೆಯ ಆಸೆಯೇ ಬಿಟ್ಟುಹೋಗುತ್ತದೆ. ಕೆಲವೊಮ್ಮೆ ಬಲವನ್ನೂ ಅಧಿಕಾರವನ್ನೂ ದಯೆಯಿಂದ ಕೊಂಡುಕೊಳ್ಳಬಹುದು; ಆದರೆ ಅವುಗಳನ್ನು ಬಡಕಲಾದ, ಸೋತ ಹಿಂಸೆಯು ಎಂದಿಗೂ ಭಿಕ್ಷೆಯಾಗಿ ಕೇಳಲು ಸಾಧ್ಯವಿಲ್ಲ......."

"ಬಲವನ್ನು ಕುರಿತ ಇನ್ನೊಂದು ಆಕ್ಷೇಪ ಹೀಗಿದೆ. ಅದನ್ನು ಉಳಿಸಿಕೊಳ್ಳಲು ಪ್ರಯತ್ನಪಡುತ್ತಲೇ ನೀವು ಅದರ ಉದ್ದೇಶವನ್ನು ಭಂಗಗೊಳಿಸಿರುತ್ತೀರಿ. ನೀವು ಯಾವುದಕ್ಕಾಗಿ ಹೋರಾಡಿದಿರೋ, ನೀವು ಪಡೆದುಕೊಂಡದ್ದು ಅದಲ್ಲ; ಬೆಲೆಗುಂದಿದ, ಕುಸಿದ, ಹಾಳಾದ, ಸ್ಪರ್ಧೆಯಲ್ಲಿ ಸವಕಲಾದ ವಸ್ತು."

ಇವು ಅಲಕ್ಷಿಸಲು ಸಾಧ್ಯವಿಲ್ಲದ ತೂಕವಾದ ಮಾತುಗಳು. ಹಿಂದು–ಮುಸ್ಲಿಂ ಸಮಸ್ಯೆಯನ್ನು ಬಲಪ್ರಯೋಗದಿಂದ ಪರಿಹರಿಸುವ ಯೋಜನೆಯನ್ನು ಮನಸ್ಸಿನಲ್ಲಿ ಯಾರಾದರೂ ಇಟ್ಟುಕೊಂಡಿದ್ದರೆ, ಅಂದರೆ ಯುದ್ಧದಿಂದ ಅದನ್ನು ಪರಿಹರಿಸಬಹುದೆಂದು ಭಾವಿಸಿದ್ದರೆ, ಅವರ ಸಮ್ಮತಿಯಿಲ್ಲದೆ ಸಿದ್ಧಪಡಿಸಿದ ಸಂವಿಧಾನಕ್ಕೆ ಅವರು ಅಧೀನರಾಗಬೇಕೆಂದು ಬಯಸುವುದಾದರೆ ಈ ದೇಶವು ನಿರಂತರವಾಗಿ ಅವರನ್ನು ಗೆಲ್ಲುವ ಹೋರಾಟದಲ್ಲೇ ಮುಳುಗಿರಬೇಕಾಗುತ್ತದೆ. ವಿಜಯವು ಒಂದೇ ಒಂದು ಸಾರಿಗೆ ಸಾಧಿತವಾಗುವುದಿಲ್ಲ. ಇದಕ್ಕಿಂತ ಹೆಚ್ಚು ಸಮಯವನ್ನು ನಾನು ತೆಗೆದುಕೊಳ್ಳಲಿಚ್ಛಿಸುವುದಿಲ್ಲ. ಮತ್ತೆ ಬರ್ಕನನ್ನು ಉಲ್ಲೇಖಿಸಿ ನನ್ನ ಮಾತು ಮುಗಿಸುತ್ತೇನೆ. ಅವನು ಎಲ್ಲೋ ಒಂದು ಕಡೆ, ಅಧಿಕಾರವನ್ನು ಕೊಡುವುದು ಸುಲಭ, ಜ್ಞಾನವನ್ನು ಕೊಡುವುದು ಕಷ್ಟ ಎಂದು ಹೇಳಿದ್ದಾನೆ. ಈ ಸಭೆಯು ಸರ್ವೋನ್ನತ ಅಧಿಕಾರಿಗಳನ್ನು ತಾನೇ ಕಸಿದುಕೊಂಡಿದ್ದರೆ ಅವುಗಳನ್ನು ವಿವೇಕದಿಂದ ಚಲಾಯಿಸಲು ಸಿದ್ಧವಾಗುತ್ತದೆ ಎಂಬುದನ್ನು ನಮ್ಮ ನಡವಳಿಕೆಯಿಂದ ಸಮರ್ಥಿಸಿ ತೋರಿಸೋಣ. ದೇಶದ ಎಲ್ಲ ವರ್ಗಗಳನ್ನು ನಮ್ಮೊಂದಿಗೆ ಕರೆದೊಯ್ಯಲು ಅದೊಂದೇ ಮಾರ್ಗ. ಐಕ್ಯತೆಯ ಸಾಧನೆಗೆ ಅದಕ್ಕಿಂತ ಬೇರೆ ದಾರಿಯಿಲ್ಲ. ಈ ವಿಷಯದಲ್ಲಿ ಸಂದೇಹವೇ ಬೇಡ.

* * * * *

# ೨. ಮೂಲಭೂತ ಹಕ್ಕುಗಳನ್ನು ಕುರಿತು ಮಧ್ಯಂತರ ವರದಿ

* **ಗೌರವಾನ್ವಿತ ಪಂಡಿತ ಹೃದಯನಾಥ ಕುಂಜ್ರು :** ........ ಸರಕಾರವು ಅಸಾಧಾರಣವಾದ ಕಷ್ಟಕರ ಸಮಸ್ಯೆಯನ್ನು ಎದುರಿಸುತ್ತಿದೆ. ೮(e) ಉಪವಿಭಾಗವು ಅಲ್ಲಿರುವ ಪರಿಸ್ಥಿತಿಯನ್ನು ಕುರಿತು ವಿಚಿತ್ರವಾದ ಅವಗಣನೆಯನ್ನು ತೋರಿಸುತ್ತಿದೆ. ಸ್ವಾಮಿ, ಆದ್ದರಿಂದ ಈ ಹಕ್ಕನ್ನು ಸ್ಪಷ್ಟವಾಗಿ ನಿರೂಪಿಸಬೇಕಾಗಿರುವ ಕೆಲವು ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ಮಾತ್ರ ನೀಡಬಹುದು.

**ಡಾ. ಬಿ.ಆರ್. ಅಂಬೇಡ್ಕರ್** (ಬಂಗಾಳ – ಸಾಮಾನ್ಯ) : ಅಧ್ಯಕ್ಷರ ಮಾತಿಗೆ ತಡೆಯನ್ನುಂಟುಮಾಡುವುದು ನನ್ನ ಅಪೇಕ್ಷೆಯಿಲ್ಲ. ಆದರೆ ೮(e)+ ಯನ್ನು ಕುರಿತು ವ್ಯವಹರಿಸುವಾಗ ಇಡೀ ಉಪವಿಭಾಗವನ್ನು ಕುರಿತು ಒಂದು ತಪ್ಪು ಕಲ್ಪನೆಯನ್ನು ಕೊಡುತ್ತಿದ್ದಾರೆ.

* ಸಿ.ಎ.ಡಿ. ಸಂಪುಟ ೩, ಏಪ್ರಿಲ್ ೨೯, ೧೯೪೭, ಪುಟ ೪೦೨

\+ ೮(e) ಉಪವಿಭಾಗವು ಹೀಗಿದೆ: "ಅಲ್ಪಸಂಖ್ಯಾತ ವರ್ಗಗಳ ಮತ್ತು ಬುಡಕಟ್ಟುಗಳ ರಕ್ಷಣೆಯೂ ಸೇರಿದಂತೆ ಸಾರ್ವಜನಿಕ ಹಿತಾಸಕ್ತಿಗೆ ಅಗತ್ಯವಾದ ಕಾನೂನುಗಳನ್ನು ಜಾರಿಗೆ ತರಲು ಶಾಸನ ಅವಕಾಶ ಮಾಡಿಕೊಡತಕ್ಕದ್ದು".

**ಡಾ. ಪಟ್ಟಾಭಿ ಸೀತಾರಾಮಯ್ಯ** (ಮದರಾಸು–ಸಾಮಾನ್ಯ): ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಲು ನಿದರ್ಶನಗಳನ್ನು ಕೊಡುವುದಕ್ಕೆ ಬದಲಾಗಿ ಅವರು ಅದರ ಗುಣಗಳನ್ನು ಕುರಿತು ಚರ್ಚಿಸಲು ಹೋಗುತ್ತಿದ್ದಾರೆ.

**ಮಾನ್ಯ ಪಂಡಿತ ಹೃದಯನಾಥ ಕುಂಜ್ರು** : ಮಾನ್ಯರೇ, ಒಬ್ಬ ಸಾಂಸದಿಕರಾಗಿ ನಾನು ಏನು ಮಾಡುತ್ತಿದ್ದೇನೆ ಎಂಬುದನ್ನು ನೀವು ಅರ್ಥ ಮಾಡಿಕೊಳ್ಳುತ್ತಿದ್ದೀರಿ. ಡಾ. ಅಂಬೇಡ್ಕರ್ ಅವರು ಎತ್ತಿದ ಆಕ್ಷೇಪಕ್ಕೆ ಸಂಬಂಧಿಸಿದಂತೆ, ಇಡೀ ವಿಭಾಗವನ್ನು ಅದಕ್ಕಿರುವ ಅವಕಾಶದೊಂದಿಗೆ ಓದುತ್ತೇನೆ, ದಯವಿಟ್ಟು ಸಹಿಸಿಕೊಳ್ಳಬೇಕು.

**ಅಧ್ಯಕ್ಷರು** : ಮಾನ್ಯ ಸದಸ್ಯರು ತಾವು ಹೇಳಲಿಕ್ಕಿರುವ ವಿಷಯಕ್ಕೆ ಮಿತಿಗೊಳಿಸಿಕೊಳ್ಳಬೇಕೆಂದೂ, ಸಲಹೆಯ ಗುಣಾವಗುಣಗಳ ಬಗೆಗೆ ಈಗ ಕೈಹಾಕಬೇಕಾಗಿಲ್ಲವೆಂದೂ ಸೂಚಿಸುತ್ತೇನೆ.

* * * * *

## ವಿಭಾಗ ೧೧ : ಸ್ವಾತಂತ್ರ್ಯದ ಹಕ್ಕುಗಳು

* **ಶ್ರೀ ಸರ್ದಾರ್ ವಲ್ಲಭಭಾಯಿ ಪಟೇಲ್** : ೧೧ನೆಯ ವಿಭಾಗವು ಜೀತವನ್ನು ಕುರಿತಾಗಿದೆ.

"(ಅ) ಮನುಷ್ಯರ ಮಾರಾಟ, ಮತ್ತು

(ಆ) ಭಿಕ್ಷಾವೃತ್ತಿಯೂ ಸೇರಿದಂತೆ ಯಾವುದೇ ಬಗೆಯ ಬಲಾತ್ಕಾರದ ದುಡಿಮೆ; ತಪ್ಪುಮಾಡಿ ಶಿಕ್ಷಾರೂಪವಾಗಿ ಅನೈಚ್ಛಿಕವಾಗಿ ಸೇವೆ ಸಲ್ಲಿಸುವುದರ ಹೊರತು ಬೇರೆ ಬಗೆಯ ದಾಸ್ಯ – ಇವುಗಳನ್ನು ಈ ಮೂಲಕ ನಿಷೇಧಿಸಲಾಗಿದೆ. ಈ ನಿಷೇಧಾಜ್ಞೆಯನ್ನು ಉಲ್ಲಂಘಿಸುವುದು ಅಪರಾಧವಾಗುತ್ತದೆ."

ವಿವರಣೆ : **ಸರಕಾರವು ಜನಾಂಗ, ಧರ್ಮ, ಜಾತಿ ಹಾಗೂ ವರ್ಗದ ವಿವಕ್ಷೆಯಿಲ್ಲದೆ ಸಾರ್ವಜನಿಕ ಉದ್ದೇಶಗಳಿಗಾಗಿ ಕಡ್ಡಾಯ ಸೇವೆಯನ್ನು ವಿಧಿಸಲು ಈ ಉಪನಿಯಮದ ಯಾವ ಅಂಶವೂ ತಡೆಯಾಗುವುದಿಲ್ಲ.**

* * * * *

\+ **ಡಾ. ಬಿ.ಆರ್. ಅಂಬೇಡ್ಕರ್** (ಬಂಗಾಳ ಸಾಮಾನ್ಯ) : ನಾನು ಹೇಳಬೇಕಾಗಿರುವ ವಿಷಯ ಇದು (a) ಮತ್ತು (b) ಉಪನಿಯಮಗಳನ್ನು ಅವು ಅಡಕವಾಗಿರುವಂತೆ ಮತ್ತೆ ರಚಿಸುವುದರಲ್ಲಿ ನನಗೆ ಏನೂ ಆಕ್ಷೇಪವಿಲ್ಲವಾದರೂ, ವಿವರಣೆಯನ್ನು ಕೈಬಿಡುವುದು ಸಲಹಾ ಸಮಿತಿಯ ಸದಸ್ಯರಲ್ಲಿ ಹೆಚ್ಚಿನವರ ಅಪೇಕ್ಷೆಗೆ ಅನುಗುಣವಾಗಿರುತ್ತದೆಯೆ, ಬಲಾತ್ಕಾರದ ದುಡಿಮೆಯನ್ನು ಜಾರಿಗೆ ತರಲು ಸರಕಾರಕ್ಕೆ ಯಾವುದೇ ರೀತಿಯಲ್ಲೂ ಅಧಿಕಾರವಿರಬಾರದು ಎಂಬ ಅವರ ಅಪೇಕ್ಷೆಗೆ ಹೊಂದಿಕೆಯಾಗುತ್ತದೆಯೆ ಎಂಬ ವಿಷಯದಲ್ಲಿ ನನಗೆ ಸ್ವಲ್ಪ ಸಂದೇಹವಿದೆ. ಉಪನಿಯಮವನ್ನು ಪುನರ್‌ರಚಿಸಿ ವಿವರಣೆಯನ್ನು ಕೈಬಿಟ್ಟರೆ ಕಡ್ಡಾಯ ಮಿಲಿಟರಿ ಸೇವೆಯನ್ನು ಹೇರಲು ಸರಕಾರಕ್ಕೆ ಹಕ್ಕೂ ಬಂದಂತಾಗುತ್ತದೆ ಎಂದು ಶ್ರೀ ಮುನ್ಶಿಯವರು ಸೂಚಿಸುತ್ತಾರೆ. ಉದ್ದೇಶಿತ ಬದಲಾವಣೆಯ ಪರಿಣಾಮಗಳನ್ನು ಕುರಿತು ಆಲೋಚಿಸಲು ನನಗೆ ಸಾಕಷ್ಟು ವ್ಯವಧಾನವಾಗಿಲ್ಲ. ಆದರೆ ವಿವರಣೆಯನ್ನು ಕೈಬಿಟ್ಟು ಉಪನಿಯಮವನ್ನು ನಿರೂಪಿಸಿರುವ ಕ್ರಮದಲ್ಲಿ

---

* ಸಿ.ಎ.ಡಿ. ಸಂಪುಟ ೩, ೧ ಮೇ ೧೯೪೭, ಪು: ೪೭೮

\+ ಅದೇ, ಸಂಪುಟ ೩., ಮೇ ೧, ೧೯೪೭, ಪುಟ ೪೮೦

ಉಳಿಸಿಕೊಳ್ಳುವುದು ವಿರೋಧವಾದ ಮತ್ತು ಅಪಾಯಕಾರಿಯಾದ ಪರಿಣಾಮಗಳನ್ನು ಉಂಟುಮಾಡಬಹುದು. ಏಕೆಂದರೆ ಬೇಗಾರ್ ಸರಕಾರವು ವಿಧಿಸುವಂತಹುದು. ನನಗೆ ತಿಳಿದಮಟ್ಟಿಗೆ ಮುಂಬಯಿಯಲ್ಲಿ ಕೆಲವು ಸಾರ್ವಜನಿಕ ಉದ್ದೇಶಗಳಿಗಾಗಿ ಬೇಗಾರ್ ಅನ್ನು ಸರಕಾರವು ವಿಧಿಸುತ್ತದೆ. ಸರಕಾರವು ಬೇಗಾರ್ ಇಟ್ಟುಕೊಳ್ಳುವುದನ್ನು ನಿಷೇಧಿಸಿದ್ದೇ ಆದರೆ ಕಡ್ಡಾಯ ಮಿಲಿಟರಿ ಸೇವೆಯೂ ಬೇಗಾರ್ ಎಂದು ಯಾರು ಬೇಕಾದರೂ ಹೇಳುವುದು ಸಾಧ್ಯ. ಆದ್ದರಿಂದ ಈ ಹಂತದಲ್ಲಿ ವಿವರಣೆಯನ್ನು ಕೈಬಿಡುವುದು ಅಪೇಕ್ಷಣೀಯ ಎಂದು ನನಗನ್ನಿಸುವುದಿಲ್ಲ. ಈ ವಿಚಾರದಲ್ಲಿ ಕೈಗೊಳ್ಳಬೇಕಾದ ಖಚಿತ ಕ್ರಮವನ್ನು ಸೂಚಿಸುವ ಸ್ಥಿತಿಯಲ್ಲಿ ನಾನಿಲ್ಲ. ಆದರೆ ಕಡ್ಡಾಯ ಮಿಲಿಟರಿ ಸೇವೆ ಮತ್ತು ಪೌರಸೇವೆಗಳ ಬಗೆಗೆ ಸರಕಾರಕ್ಕೆ ಇರುವ ಹಕ್ಕಿನ ಮೇಲೆ ವಿವರಣೆಯನ್ನು ಕೈಬಿಡುವುದು ಆಗಬಹುದಾದ ಪರಿಣಾಮಗಳ ಕಡೆಗೆ ಸದನದ ಗಮನವನ್ನು ಸೆಳೆದರೆ ನನ್ನ ಕರ್ತವ್ಯವನ್ನು ನಿರ್ವಹಿಸಿದಂತಾಗುತ್ತದೆ. ಈ ಹಂತದಲ್ಲಿ ನಾವು ವಿವರಣೆಯನ್ನು ಕೈಬಿಡಬಾರದು ಎಂಬುದು ನನ್ನ ಸಲಹೆ. ಅದನ್ನು ಹಾಗೆಯೇ ಬಿಟ್ಟು, ಪ್ರಾಂತೀಯ ಸಂವಿಧಾನವನ್ನೂ, ಒಕ್ಕೂಟ ಸಂವಿಧಾನವನ್ನೂ ಅಂತಿಮ ರೂಪದಲ್ಲಿ ಬರೆಯುವಾಗ ಇಡೀ ವಿಚಾರವನ್ನು ಮತ್ತೆ ಪರಿಶೀಲಿಸಬಹುದು.

+ **ಡಾ. ಬಿ.ಆರ್. ಅಂಬೇಡ್ಕರ್ :** ನಾನೊಂದು ಸಲಹೆ ಕೊಡಬಹುದೇ? ನಾವೀಗ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರ ವಾದವನ್ನು ಕೇಳಿದ್ದೇವೆ. ಅಮೇರಿಕದ ಸುಪ್ರೀಂ ಕೋರ್ಟಿನ ತೀರ್ಪುಗಳನ್ನು ಅಧ್ಯಯನ ಮಾಡಿ ನೋಡಿದ್ದರಲ್ಲಿ, ವಿವರಣೆ ಇಲ್ಲದೆ ಹೋದರೂ ಕಡ್ಡಾಯ ಮಿಲಿಟರಿ ಸೇವೆ ಜಾರಿಗೆ ತರುವ ಅಧಿಕಾರ ಸರಕಾರಕ್ಕಿದೆ ಎಂಬುದು ವ್ಯಕ್ತವಾಗುವುದಾಗಿ ಅವರು ನುಡಿದರು. ಅದೃಷ್ಟವಶಾತ್ ಸರ್ ಅಲ್ಲಾಡಿಯವರ ಮನಸ್ಸಿನಲ್ಲಿರುವ ಅವೇ ಮೊಕದ್ದಮೆಗಳನ್ನು ನಾನು ಅಧ್ಯಯನ ಮಾಡಿದ್ದೇನೆ. ಸುಪ್ರೀಂ ಕೋರ್ಟು ಕೊಟ್ಟಿರುವ ತೀರ್ಪುಗಳ ಹಿಂದಿರುವ ವಿಚಾರವನ್ನು ನೋಡಿದ ಪಕ್ಷದಲ್ಲಿ, ಒಂದು ರಾಜಕೀಯ ವ್ಯವಸ್ಥೆಯಲ್ಲಿ ಸ್ವತಂತ್ರನಾಗಿರುವ ಪೌರನಿಗೆ, ಸರಕಾರಕ್ಕೆ ಬೆಂಬಲ ನೀಡುವ ಕರ್ತವ್ಯವೊಂದಿರುತ್ತದೆ. ಆದ್ದರಿಂದ ಕಡ್ಡಾಯ ಮಿಲಿಟರಿ ಸೇವೆಯನ್ನು ವಿಧಿಸುವ ಶಾಸನವು, ಪ್ರಜೆಯು ಸರಕಾರಕ್ಕೆ ಸಲ್ಲಿಸಬೇಕಾದ ಕರ್ತವ್ಯವನ್ನು ನಿರ್ವಹಿಸಲು ನೀಡುವ ಕರೆಯಾಗಿರುತ್ತದೆ ಅಷ್ಟೆ, ಅದಕ್ಕಿಂತ ಹೆಚ್ಚೇನಲ್ಲ. ದೇಶದ ರಕ್ಷಣೆಗೂ ಕಡ್ಡಾಯ ಮಿಲಿಟರಿ ಸೇವೆಯ ಅಗತ್ಯದಂತಹ ಮುಖ್ಯವಾದ ವಿಚಾರವೊಂದಕ್ಕೆ ಇದು ಅನಿಶ್ಚಿತವಾದ ತಳಹದಿಯಾಗಿದೆ ಎಂದು ಸೂಚಿಸಬಯಸುತ್ತೇನೆ.

ಭಾರತದ ಸರ್ವೋನ್ನತ ನ್ಯಾಯಾಲಯವು ಕೈಗೊಳ್ಳಬಹುದಾದ ಅಥವಾ ಕೈಗೊಳ್ಳದಿರಬಹುದಾದ ಆ ಬಗೆಯ ವಿಚಾರದಿಂದ ನಾವು ತೃಪ್ತರಾಗಬಾರದು ಎಂಬುದು ನನ್ನ ಭಾವನೆ. ಆದ್ದರಿಂದ ಪೌರತ್ವವನ್ನು ಕುರಿತ ಇನ್ನೊಂದು ವಿಷಯವನ್ನು ಕೂಲಂಕಷವಾಗಿ ಪರೀಕ್ಷೆ ಮಾಡಲು ಒಂದು ಸಣ್ಣ ಸಮಿತಿಯನ್ನು ತಾವು ರಚಿಸಿದ ಹಾಗೆ, ಈ ಉಪನಿಯಮದಲ್ಲಿಯೂ ಈ 'ವಿವರಣೆ' ಭಾಗವನ್ನು ಉಳಿಸಬೇಕೆ ಬೇಡವೆ ಎಂಬುದನ್ನು ವಿವರವಾಗಿ ಪರೀಕ್ಷಿಸಿ ಈ ಸದನಕ್ಕೆ ವರದಿ ಮಾಡಲು ಒಂದು ಸಮಿತಿಯನ್ನು ರಚಿಸಬಹುದು, ಆ ವರದಿಯ ಆಧಾರದ ಮೇಲೆ ಸದನವು ನಿರ್ಣಯವನ್ನು ಕೈಗೊಳ್ಳಬಹುದು.

**ಅಧ್ಯಕ್ಷರು :** ಡಾ. ಅಂಬೇಡ್ಕರ್ ಅವರು ನೀಡಿರುವ ಸೂಚನೆಯು ಸದನಕ್ಕೆ ಒಪ್ಪಿಗೆಯಾಗುವ ಪಕ್ಷದಲ್ಲಿ ಇನ್ನು ಈ ವಿಷಯದ ಚರ್ಚೆ ಅಗತ್ಯವಾಗುವುದಿಲ್ಲ ಎಂದು ಭಾವಿಸುತ್ತೇನೆ.

---

+ ಸಿ.ಎ.ಡಿ. ಸಂಪುಟ ೩, ಮೇ ೧, ೧೯೪೭, ಪು: ೪೮೩–೮೪

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೀರಾರ್ : ಸಾಮಾನ್ಯ) : ಕಡ್ಡಾಯ ಸೈನ್ಯ ಸೇವೆಯ ಪ್ರಶ್ನೆಯನ್ನು ಇಲ್ಲಿ ಬಳಸಬಹುದು.

**ಅಧ್ಯಕ್ಷರು :** ಬಲಾತ್ಕಾರವಾಗಿ ಸೈನ್ಯಕ್ಕೆ ಸೇರಿಸಿಕೊಳ್ಳಬೇಕೆ ಬೇಡವೆ ಎಂಬ ವಿಷಯವನ್ನು ಇಲ್ಲಿ ನಾವು ನಿರ್ಧರಿಸುತ್ತಿಲ್ಲ. ಮೂಲ ಹಕ್ಕುಗಳ ಪ್ರಕಾರ ಬಲಾತ್ಕಾರ ಸೈನ್ಯ ಸೇವೆ ನಿಷಿದ್ಧವಾಗಿದೆಯೆ ಎನ್ನುವುದು ಪ್ರಶ್ನೆ. ಆ ಇನ್ನೊಂದು ವಿಚಾರವನ್ನು ವಹಿಸಿರುವ ಸಮಿತಿಗೇ ಇದರ ಪರಿಶೀಲನೆಯನ್ನು ವಹಿಸುವುದು ಅತ್ಯುತ್ತಮ ಎಂದು ನನಗನ್ನಿಸುತ್ತದೆ.

**ಒಬ್ಬ ಸದಸ್ಯರು :** ಇಡೀ ೧೧ನೆಯ ನಿಯಮವನ್ನೆ?

**ಅಧ್ಯಕ್ಷರು :** ಹೌದು, ಇಡೀ ೧೧ನೆಯ ನಿಯಮವನ್ನು.

ನಿಯಮವನ್ನು ಪರಿಶೀಲನೆಗೆ ಒಪ್ಪಿಸಲಾಯಿತು.

* * * * *

## ಉಪವಾಕ್ಯ ೧೭

* **ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್ :** ಮಾನ್ಯರೆ, ೧೭ನೆಯ ಒಳಪ್ರಕರಣವನ್ನು ಮಂಡಿಸುತ್ತೇನೆ: "ಬಲಾತ್ಕಾರದಿಂದಾಗಲೀ, ಅನಗತ್ಯ ಪ್ರಭಾವದಿಂದಾಗಲೀ ಒಂದು ಧರ್ಮದಿಂದ ಇನ್ನೊಂದಕ್ಕೆ ಪರಿವರ್ತಿಸುವುದನ್ನು ಕಾನೂನು ಮಾನ್ಯಮಾಡುವುದಿಲ್ಲ."

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೆ, ಈ ತಿದ್ದುಪಡಿಯನ್ನು ಸೂಚಿಸಬಯಸುತ್ತೇನೆ: ೧೭ನೆಯ ಒಳಪ್ರಕರಣಕ್ಕೆ ಪ್ರತಿಯಾಗಿ ಈ ಕೆಳಗಿನಂತೆ ಇಟ್ಟುಕೊಳ್ಳಬಹುದು:

"ವಂಚನೆ, ಬಲಾತ್ಕಾರ ಅಥವಾ ಅನಗತ್ಯ ಪ್ರಭಾವಗಳಿಂದ ಅಥವಾ ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಪ್ರಾಪ್ತ ವಯಸ್ಕನನ್ನು ಒಂದು ಧರ್ಮದಿಂದ ಇನ್ನೊಂದಕ್ಕೆ ಪರಿವರ್ತಿಸುವುದನ್ನು ಶಾಸನವು ಮಾನ್ಯಮಾಡತಕ್ಕದ್ದಲ್ಲ."

\+ **ಡಾ. ಬಿ.ಆರ್. ಅಂಬೇಡ್ಕರ್ :** ಅಧ್ಯಕ್ಷರೆ, ಅಪ್ರಾಪ್ತ ವಯಸ್ಕ ಮಕ್ಕಳ ಮತಾಂತರವನ್ನು ಕುರಿತು ಶ್ರೀ ಕೆ.ಎಂ. ಮುನ್ಷಿಯವರು ಸೂಚಿಸಿರುವ ತಿದ್ದುಪಡಿಯನ್ನು ನಾನು ಒಪ್ಪುವುದಿಲ್ಲ ಎಂದು ತಿಳಿಸಲು ವಿಷಾದಿಸುತ್ತೇನೆ. ಒಳಪ್ರಕರಣವು ಅದಿರುವಂತೆಯೇ, ಅಪ್ರಾಪ್ತ ವಯಸ್ಕರ ಮತಾಂತರವನ್ನು ಕುರಿತ ಈ ಪ್ರಶ್ನೆಯನ್ನು ಮೂಲಹಕ್ಕುಗಳ ಸಮಿತಿಯಾಗಲಿ, ಅಪ್ರಾಪ್ತ ವಯಸ್ಕರ ಉಪಸಮಿತಿಯಾಗಲಿ, ಅಥವಾ ಸಲಹಾ ಸಮಿತಿಯಾಗಲಿ ಪರಿಶೀಲಿಸಲಿಲ್ಲ ಎಂಬ ಭಾವನೆಯನ್ನು ಸದನಕ್ಕೆ ಉಂಟುಮಾಡಬಹುದು. ಈ ವಿಚಾರವಾಗಿ ಸಾಕಷ್ಟು ಪರಿಶೀಲನೆಯಾಗಿದೆ ಎಂದು ಈ ಸದನಕ್ಕೆ ಭರವಸೆ ನೀಡಬಯಸುತ್ತೇನೆ. ಒಟ್ಟು ಪ್ರಶ್ನೆಯ ಎಲ್ಲಾ ಮುಖಗಳನ್ನು ವಿವರವಾಗಿ ಪರೀಕ್ಷಿಸಿ, ಎದುರಾದ ಕಷ್ಟಗಳನ್ನು ಗಮನಿಸಿದ ಮೇಲೆ ಸಲಹಾ ಸಮಿತಿಯು, ಈಗಿರುವಂತೆ ಒಳಪ್ರಕರಣವನ್ನು ಇರಿಸಿಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದಿತು.

---

* ಸಿ.ಎ.ಡಿ. ಸಂಪುಟ ೩, ಮೇ ೧, ೧೯೪೭, ಪುಟ ೪೮೮.

\+ ಅದೇ, ಸಂಪುಟ ೩, ಮೇ ೧, ೧೯೪೭, ಪುಟ ೫೦೧-೨

ಸ್ವಾಮಿ, ಪ್ರಶ್ನೆಯು ನನ್ನ ಮನಸ್ಸಿನಲ್ಲಿ ಎಷ್ಟು ನಿಚ್ಚಳವಾಗಿದೆಯೆಂದರೆ, ಶ್ರೀ ಮುನ್ಷಿಯವರು ತಮ್ಮ ತಿದ್ದುಪಡಿಯನ್ನು ಕೈಬಿಡಬೇಕೆಂದು ಕೋರುವುದಲ್ಲದೆ ಬೇರೆ ದಾರಿ ನನಗೆ ಕಾಣಿಸುತ್ತಿಲ್ಲ.

ಮಕ್ಕಳಿಗೆ ಸಂಬಂಧಪಟ್ಟಂತೆ ಮೂರು ಸಂದರ್ಭಗಳನ್ನು ಎದುರು ನೋಡಬಹುದು. ಮೊದಲನೆಯದಾಗಿ ತಂದೆ, ತಾಯಿ ಮತ್ತು ಪಾಲಕರು ಇರುವ ಮಕ್ಕಳ ವಿಚಾರವಿದೆ; ಎರಡನೆಯದಾಗಿ ಕಾನೂನಿನ ಅರ್ಥದಲ್ಲಿ ತಂದೆ ತಾಯಿ ಅಥವಾ ಪೋಷಕರು ಇಲ್ಲದ ಅನಾಥ ಮಕ್ಕಳ ವಿಚಾರವಿದೆ. ೧೮ ವರ್ಷಕ್ಕಿಂತ ಕಡಿಮೆಯಾದ ಮಕ್ಕಳ ಮತಾಂತರವನ್ನು ನಿಷೇಧಿಸುವ ಒಳಪ್ರಕರಣವನ್ನು ಇರಿಸಿಕೊಂಡಿರಿ ಎಂದಿಟ್ಟುಕೊಳ್ಳೋಣ. ಆಗ ತಬ್ಬಲಿಗಳಾದ ಮಕ್ಕಳ ಸ್ಥಿತಿ ಏನಾಗುತ್ತದೆ? ಅವರಿಗೆ ಯಾವುದೇ ಧರ್ಮ ಬೇಡವೇನು? ಅವರನ್ನು ಕುರಿತು ದಯಾಪೂರ್ಣವಾದ ಆಸಕ್ತಿ ತಳೆದಿರುವ ಯಾರಾದರೂ ಅವರಿಗೆ ಧಾರ್ಮಿಕ ಶಿಕ್ಷಣವನ್ನು ಕೊಡಬಾರದೇನು? ಶ್ರೀ ಮುನ್ಷಿಯವರು ಸೂಚಿಸಿದ ಪದಗಳಲ್ಲಿ ಒಳಪ್ರಕರಣವನ್ನು ಇಟ್ಟುಕೊಂಡರೆ, ಅಂದರೆ, ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವನ್ನು ಮತಾಂತರಗೊಳಿಸಕೂಡದು ಎನ್ನುವುದಾದರೆ, ತಬ್ಬಲಿಗಳಾದ, ಕಾನೂನು ಸಮ್ಮತ ಪೋಷಕರಿಲ್ಲದ ಮಕ್ಕಳು ಯಾವುದೇ ಬಗೆಯ ಧಾರ್ಮಿಕ ಶಿಕ್ಷಣವನ್ನು ಪಡೆಯದೆಯೇ ಹೋಗುತ್ತಾರೆ. ಈ ಫಲಿತಾಂಶವನ್ನು ಸದನವು ಅಪೇಕ್ಷಿಸುವುದಿಲ್ಲ ಎಂದು ನನಗೆ ಭರವಸೆಯಿದೆ. ಆದ್ದರಿಂದ ಶ್ರೀ ಮುನ್ಷಿಯವರು ಸೂಚಿಸಿರುವ ತಿದ್ದುಪಡಿಯ ಪ್ರವರ್ತನೆಗೆ ನಾನು ಹೇಳಿದ ಈ ವರ್ಗದ ಪ್ರಜೆಗಳನ್ನು ಹೊರತುಪಡಿಸಬೇಕಾಗುತ್ತದೆ.

ಈಗ ಇನ್ನೊಂದು ವರ್ಗದ ವಿಷಯಕ್ಕೆ ಬರುತ್ತೇನೆ. ತಂದೆ, ತಾಯಿ ಮತ್ತು ಪಾಲಕರು ಇರುವ ಮಕ್ಕಳು ಎರಡು ವರ್ಗವಾಗಬಹುದು. ಸ್ಪಷ್ಟತೆಗೋಸ್ಕರವಾಗಿ ಅವರನ್ನು ಬೇರೆಬೇರೆಯಾಗಿ ಪರಿಶೀಲಿಸುವುದು ಅಪೇಕ್ಷಣೀಯ. ಮೊದಲನೆಯದು, ತಿಳಿವಳಿಕೆಯಿಂದ ಹಾಗೂ ತಂದೆ-ತಾಯಿ ಮತ್ತು ಪಾಲಕರ ಸಮ್ಮತಿಯಿಂದ ಮಕ್ಕಳನ್ನು ಪರಿವರ್ತಿಸುವುದು. ಇನ್ನೊಂದು, ಮತಾಂತರಗೊಂಡ ತಂದೆ ತಾಯಂದಿರ ಮಕ್ಕಳ ವಿಷಯ.

ಮತ ಪರಿವರ್ತನೆಯು ನ್ಯಾಯಕ ಪೋಷಕರ ಅರಿವಿಗೆ ಬಾರದಂತೆ, ಅವರ ಸಮ್ಮತಿಯಿಲ್ಲದೆ ನಡೆಯುವಾಗ ಅಂತಹ ಸಂದರ್ಭಗಳಲ್ಲಿ ಅಪ್ರಾಪ್ತ ವಯಸ್ಕ ಮಕ್ಕಳ ಮತಾಂತರದ ಮೇಲೆ ನಿಷೇಧ ಹಾಕಲೇಬೇಕು ಎಂದು ನನಗೆ ತೋರುತ್ತದೆ. ಅದು ನ್ಯಾಯವಾದ ಪಾಲಕತ್ವದಲ್ಲಿದ್ದು, ಪೋಷಕತ್ವ ಕಾನೂನಿನನ್ವಯ ಆ ಮಗುವಿನ ಧಾರ್ಮಿಕ ನಂಬಿಕೆಯನ್ನು ನಿಯಂತ್ರಿಸುವ ಹಕ್ಕನ್ನು ಪಡೆದಿರುವ ವ್ಯಕ್ತಿ, ಆ ಮಗುವನ್ನು ಬೇರೊಂದು ಧರ್ಮಕ್ಕೆ ಪರಿವರ್ತಿಸುವ ವಿಚಾರವನ್ನು ತಿಳಿಸದೆ, ತಿಳಿದುಕೊಳ್ಳುವ ಅವನ ಹಕ್ಕನ್ನು ವಂಚಿಸುವುದು ಯಾವ ಧರ್ಮ ಪ್ರಚಾರಕನಿಗೂ ಸಲ್ಲದು. ಇದು ಸರಳವಾದ ವಿಚಾರ, ಇದರ ಬಗೆಗೆ ಯಾವುದೇ ಆಕ್ಷೇಪಣೆಯಿರುವುದಿಲ್ಲ.

ಆದರೆ ಇನ್ನೊಂದು ವರ್ಗದ ವಿಚಾರಕ್ಕೆ ಬಂದಾಗ, ಅಂದರೆ, ತಂದೆ ತಾಯಿಯರು ಮತಾಂತರಗೊಂಡಿದ್ದ ಮಕ್ಕಳ ವಿಚಾರ ಬಂದಾಗ, ನಾವು ಕಗ್ಗಲ್ಲು ಬಂಡೆಗೆದುರಾಗುತ್ತೇವೆ. ತಂದೆ ತಾಯಿಯರು ೧೮ ವರ್ಷ ದಾಟಿದ್ದು ಪ್ರಾಪ್ತ ವಯಸ್ಕರಾಗಿರುವುದರಿಂದ ಮತಾಂತರಗೊಳಿಸಬಹುದು. ಮಕ್ಕಳು ೧೮ ವರ್ಷಕ್ಕಿಂತ ಚಿಕ್ಕವರು ಅಪ್ರಾಪ್ತ ವಯಸ್ಕರಾದ್ದರಿಂದ, ತಂದೆತಾಯಿಯರ ಜೊತೆಗೆ ಅವರನ್ನು ಮತಾಂತರಗೊಳಿಸಲು ಸಾಧ್ಯವಿಲ್ಲ ಎಂದು ನೀವು ಹೇಳುವುದಾದರೆ, ನಾವು ಎದುರಿಸಬೇಕಾದ ಪ್ರಶ್ನೆ; ಹಾಗಾದರೆ ಆ ಮಕ್ಕಳ ಬಗೆಗೆ ನಾವು ಯಾವ ವ್ಯವಸ್ಥೆ ಮಾಡಲಿದ್ದೇವೆ ಎನ್ನುವುದು. ಒಬ್ಬ ತಂದೆ ಕ್ರೈಸ್ತ ಮತಾಂತರಿಯಾಗಿದ್ದಾನೆನ್ನೋಣ. ಅವನ ಮಗುವು ಸತ್ತುಹೋಗುತ್ತದೆ ಎಂದಿಟ್ಟುಕೊಳ್ಳೋಣ. ಕ್ರೈಸ್ತ ಧರ್ಮಾನುಯಾಯಿಯಾಗಿ ಬೆಳೆದುಬಂದ ಆ ತಂದೆಯು ಮೃತ ಶಿಶುವಿಗೆ ಕ್ರೈಸ್ತ ರೀತಿಯ ಅಂತ್ಯಸಂಸ್ಕಾರ ಮಾಡುತ್ತಾನೆ. ಅವನ ಈ ಕೆಲಸ ಕಾನೂನು ಬಾಹಿರವಾಗುತ್ತದೆಯೆ? ಇನ್ನೊಂದು ನಿದರ್ಶನವನ್ನು ತೆಗೆದುಕೊಳ್ಳಿ. ಮತಾಂತರಗೊಂಡ ತಂದೆಗೆ ಒಬ್ಬ

ಮಗಳಿದ್ದಾಳೆ. ಅವನು ಮಗಳಿಗೆ ಕ್ರೈಸ್ತ ವಿಧಾನದಲ್ಲಿ ಮದುವೆ ಮಾಡುತ್ತಾನೆ. ಆ ಮದುವೆಯ ಪರಿಣಾಮವೇನು? ಆ ಮದುವೆ ಕಾನೂನು ಸಮ್ಮತವೋ, ಅಲ್ಲವೋ?

ಮಕ್ಕಳನ್ನು ಮತಾಂತರಗೊಳಿಸಲು ನೀವು ಬಯಸುವುದಿಲ್ಲವಾದರೆ, ಮಕ್ಕಳನ್ನು ಮತಾಂತರಗೊಳಿಸಕೂಡದೆಂದು ನೀವು ಬಯಸುವಿರಾದರೆ ಪಾಲಕತ್ವಕ್ಕೆ ಸಂಬಂಧಪಟ್ಟ ಹಾಗೆ ಬೇರೆ ಯಾವುದಾದರೂ ಬಗೆಯ ಕಾನೂನು ಮಾಡಬೇಕಾಗುತ್ತದೆ. ತಮ್ಮ ಮಕ್ಕಳ ಧಾರ್ಮಿಕ ಜೀವನವನ್ನು ರೂಪಿಸಿ, ಅವರ ಮೇಲೆ ತಮ್ಮ ಹಕ್ಕುಗಳು ಪ್ರಭಾವ ಬೀರದಂತೆ ಮಾಡಲು ತಕ್ಕಂತಹ ಕಾನೂನು ಅಗತ್ಯವಾಗುತ್ತದೆ. ಮಾನ್ಯರೆ, ನಾನು ಒಂದು ಪ್ರಶ್ನೆಯನ್ನು ಕೇಳಬೇಕು. ಐದು ವರ್ಷದ ಬಾಲಕನನ್ನು ಅವನ ತಂದೆ ತಾಯಿ ಕ್ರೈಸ್ತಧರ್ಮವನ್ನು ಅಥವಾ ಮೊದಲು ತಮ್ಮದಾಗಿರದ ಬೇರೊಂದು ಧರ್ಮವನ್ನು ಅವಲಂಬಿಸಿದರು ಎಂಬ ಕಾರಣದಿಂದ ಪ್ರತ್ಯೇಕಗೊಳಿಸಬೇಕು, ಅಗಲಿಸಬೇಕು, ಎನ್ನುವುದನ್ನು ಸದನವು ಒಪ್ಪಿಕೊಳ್ಳುತ್ತದೆಯೇ? ನಾನು ಈ ಕಷ್ಟಗಳನ್ನು ಉಲ್ಲೇಖಿಸುತ್ತಿರುವುದಕ್ಕೆ ಕಾರಣ, ಮೂಲಹಕ್ಕುಗಳ ಸಮಿತಿಯು ಆ ಕಷ್ಟಗಳನ್ನು ಎದುರಿಸಬೇಕಾಯಿತು ಎನ್ನುವುದು. ಹಾಗೆಯೇ ಅಲ್ಪಸಂಖ್ಯಾತರ ಸಮಿತಿಯೂ, ಸಲಹಾ ಸಮಿತಿಯೂ ಈ ಸಲಹೆಯನ್ನು ತಿರಸ್ಕರಿಸಿದುವು. ೧೮ ವರ್ಷಕ್ಕಿಂತ ಕೆಳಗಿನ ವ್ಯಕ್ತಿಯನ್ನು ಮತಾಂತರಿಸುವಂತಿಲ್ಲ, ಅದು ಅನೇಕ ಅಸ್ತವ್ಯಸ್ತತೆಗಳಿಗೆ, ದುಷ್ಪರಿಣಾಮಗಳಿಗೆ ದಾರಿ ಮಾಡುತ್ತದೆ ಎಂಬ ವಿಚಾರವನ್ನು ಅರ್ಥಮಾಡಿಕೊಂಡುದರಿಂದಲೇ ಇಡೀ ವಿಚಾರವನ್ನೇ ಕೈಬಿಟ್ಟುಬಿಡುವುದು ಮೇಲು ಎಂದು ನಾವು ಭಾವಿಸಿದ್ದು (ಕೇಳಿ! ಕೇಳಿ!). ನನ್ನ ದೃಷ್ಟಿಯಲ್ಲಿ, ಮೂಲಹಕ್ಕುಗಳ ೧೭ನೆಯ ಉಪನಿಯಮದಲ್ಲಿ ಅಂತಹ ಯಾವ ಉಲ್ಲೇಖವನ್ನೂ ಮಾಡಿಲ್ಲದುದು, ಮುಂದೆ ಕಾರ್ಯಗತಗೊಳ್ಳುವಾಗ ಈ ವಿಚಾರವನ್ನು ಕ್ರಮಬದ್ಧಗೊಳಿಸಲು ಅಗತ್ಯವಾದ ಯಾವುದೇ ಕಾನೂನನ್ನು ಮಾಡಲು ವಿಧಾನ ಮಂಡಲಕ್ಕೆ ತಡೆಯಾಗುವುದಿಲ್ಲ. ಆದ್ದರಿಂದ ನನ್ನ ವಿನಂತಿ ಹೀಗಿದೆ: ಈ ಉಪನಿಯಮವನ್ನು ಪುನರ್ ಪರಿಶೀಲನೆಗಾಗಿ ಮತ್ತೆ ಒಂದು ಸಮಿತಿಗೆ ಕಳುಹಿಸುವುದರಿಂದ ಉತ್ತಮ ಫಲಿತಾಂಶವೇನೂ ದೊರಕಲಾರದು. ಈ ವಿಷಯದಲ್ಲಿ ಬೇರೆ ರೀತಿಯಾಗಿ ಆಲೋಚಿಸುವ ಜನರು ಇನ್ನಷ್ಟು ಪರೀಕ್ಷಿಸುವುದರ ಬಗೆಗೆ ನನಗೆ ಆಕ್ಷೇಪಣೆಯೇನೂ ಇಲ್ಲ. ಮೇಲೆ ಹೇಳಿದ ಮೂರೂ ಸಮಿತಿಗಳು ಈ ವಿಷಯದಲ್ಲಿ ಅತಿ ಹೆಚ್ಚಿನ ಗಮನ ಕೊಟ್ಟಿವೆ ಎನ್ನುವುದನ್ನು ಇಲ್ಲಿ ಹೇಳಬಯಸುತ್ತೇನೆ. ಆದ್ದರಿಂದ ಪರಿಸ್ಥಿತಿಯ ಎಲ್ಲ ಮುಖಗಳನ್ನು ಗಮನಕ್ಕೆ ತಂದುಕೊಂಡು ನೋಡಿದರೆ, ಈ ಉಪನಿಯಮವನ್ನು ಇಡಿಯಾಗಿ ಕೈಬಿಟ್ಟುಬಿಡುವುದೇ ಅತ್ಯುತ್ತಮವಾದ ಮಾರ್ಗ ಎಂಬ ನಿರ್ಣಯಕ್ಕೆ ಬಂದಿದ್ದೇನೆ. ನ್ಯಾಯಯುತವಾದ ಶಾಸನಬದ್ಧ ಪೋಷಕರನ್ನು, ಮಕ್ಕಳನ್ನು, ತಂದೆತಾಯಿಯರ ಗಮನಕ್ಕೆ ತರದೆ ಮತಾಂತರಗೊಳಿಸಕೂಡದು ಎಂಬ ಅವಕಾಶವನ್ನು ಸೇರಿಸುವುದಕ್ಕೆ ನನ್ನ ಆಕ್ಷೇಪಣೆಯೇನಿಲ್ಲ. ಈ ವಿಚಾರವಾಗಿ ಇಷ್ಟು ಸಾಕೆಂದು ತೋರುತ್ತದೆ.

* * * * *

(ಈ ವಿಭಾಗವನ್ನು ಮತ್ತೆ ಸಲಹಾ ಸಮಿತಿಯ ಪರಿಶೀಲನೆಗಾಗಿ ಮರಳಿಸಲಾಯಿತು – ಸಂ.)

## ಪ್ರಕರಣ – ೧೮ : ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು

* **ಸನ್ಮಾನ್ಯ ಸರ್ದಾರ್ ವಲ್ಲಭಬಾಯಿ ಪಟೇಲ್ :** ನಾನು ಈಗ ೧೮ನೆಯ ಪ್ರಕರಣವನ್ನು ಮಂಡಿಸುತ್ತೇನೆ.

"(೧) ಪ್ರತಿಯೊಂದು ಘಟಕದಲ್ಲಿಯೂ ಇರುವ ಅಲ್ಪಸಂಖ್ಯಾತರನ್ನು ಅವರ ಭಾಷೆಗಳು, ಲಿಪಿ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ರಕ್ಷಿಸಲಾಗುತ್ತದೆ. ಈ ದೃಷ್ಟಿಯಿಂದ ಅನ್ಯಾಯವಾಗಿ ಅಥವಾ ಪೂರ್ವಾಗ್ರಹಪೀಡಿತವಾಗಿ ವರ್ತಿಸುವ ಯಾವುದೇ ಕಾನೂನುಗಳನ್ನು ಅಥವಾ ನಿಬಂಧನೆಗಳನ್ನು ವಿಧಿಸುವಂತಿಲ್ಲ.

(೨) ಸರಕಾರದ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶ ನೀಡುವಾಗ ಧರ್ಮ, ಪಂಗಡ ಅಥವಾ ಭಾಷೆಯನ್ನು ಆಧರಿಸಿ ಯಾವ ಅಲ್ಪಸಂಖ್ಯಾತರಿಗೂ ವಿರುದ್ಧವಾಗಿ ಪಕ್ಷಪಾತ ಮಾಡಕೂಡದು. ಹಾಗೆಯೇ ಯಾವುದೇ ಬಗೆಯ ಧಾರ್ಮಿಕ ಬೋಧನೆ ಅವರಿಗೆ ಕಡ್ಡಾಯವಾಗಿರುವುದಿಲ್ಲ.

(೩) ಧರ್ಮ, ಪಂಗಡ ಅಥವಾ ಭಾಷೆಯನ್ನು ಆಧರಿಸಿದ ಎಲ್ಲಾ ಅಲ್ಪಸಂಖ್ಯಾತರು ಯಾವುದೇ ಘಟಕದಲ್ಲಿ ತಮ್ಮ ಆಯ್ಕೆಯ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ನಿರ್ವಹಿಸಲು ಸ್ವತಂತ್ರರಾಗಿರುತ್ತಾರೆ.

(೩ಬ) ಶಾಲೆಗಳಿಗೆ ಸರಕಾರವು ಧನ ಸಹಾಯ ಮಾಡುವಾಗ ಧರ್ಮ, ಪಂಗಡ, ಅಥವಾ ಭಾಷೆಯನ್ನು ಆಧರಿಸಿದ ಅಲ್ಪಸಂಖ್ಯಾತರ ನಿರ್ವಹಣೆಯಲ್ಲಿರುವ ಶಾಲೆಗಳ ವಿರುದ್ಧವಾಗಿ ಸರಕಾರವು ಪಕ್ಷಪಾತ ಮಾಡಕೂಡದು.

ಈ ಪ್ರಕರಣವನ್ನು ಸದನದ ಒಪ್ಪಿಗೆಗಾಗಿ ಮಂಡಿಸುತ್ತೇನೆ.

**ಶ್ರೀ ಮೋಹನ್‌ಲಾಲ್ ಸಕ್ಸೇನ** (ಯು.ಪಿ. : ಸಾಮಾನ್ಯ): ಮಾನ್ಯರೇ! ತಮ್ಮ ಅನುಮತಿಯಿಂದ, ಈ ಪ್ರಕರಣವನ್ನು ಮರುಪರಿಶೀಲನೆಗಾಗಿ ಸಲಹಾ ಸಮಿತಿಗೆ ಮರಳಿಸಬೇಕೆಂದು ಸೂಚಿಸಬಯಸುತ್ತೇನೆ. ಮರುಪರಿಶೀಲನೆಯು ಅಗತ್ಯವಾಗಿರುವ ಕೆಲವು ಅಂಶಗಳು ಇದರಲ್ಲಿವೆ. ಒಟ್ಟಿನ ಮೇಲೆ ಇಡೀ ಪ್ರಕರಣವನ್ನೇ ಸಲಹಾಸಮಿತಿಗೆ ಮರುಪರಿಶೀಲನೆಗಾಗಿ ಒಪ್ಪಿಸುವುದು ಬಹಳ ಉತ್ತಮ ಎಂದು ನನಗನಿಸುತ್ತದೆ.

**ಅಧ್ಯಕ್ಷರು :** ಶ್ರೀ ಮೋಹನ್‌ಲಾಲ್ ಸಕ್ಸೇನ ಅವರು ಈ ಪ್ರಕರಣವನ್ನು ಕೂಡ ಸಲಹಾ ಸಮಿತಿಗೆ ಮರುಪರಿಶೀಲನೆಗಾಗಿ ಮರಳಿಸಬೇಕೆಂದು ಸೂಚಿಸಿದ್ದಾರೆ.

* **ಶ್ರೀ ಕೆ.ಎಂ. ಮುನ್ಷಿ :** ೧೮ನೆಯ ಪ್ರಕರಣದ(೨)ನೆಯ ಒಳಪ್ರಕರಣವನ್ನು ಸಲಹಾ ಸಮಿತಿಗೆ ಮರಳಿ ಉಲ್ಲೇಖಿಸಬೇಕೆಂದು ನಾನು ಸೂಚಿಸುತ್ತೇನೆ. ಇಲ್ಲಿ ನಡೆದ ಚರ್ಚೆಯ ಬೆಳಕಿನಲ್ಲಿ ಈ ಒಳಪ್ರಕರಣವನ್ನು ಮರುಪರಿಶೀಲಿಸಬೇಕೆನ್ನುವುದು ಅನೇಕ ಸದಸ್ಯರ ಸಾಮಾನ್ಯ ಅಭಿಪ್ರಾಯವಾಗಿತ್ತು.

+ **ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೇ, ಶ್ರೀ ಮುನ್ಷಿ ಮತ್ತು ಶ್ರೀ ತ್ಯಾಗಿ ಇವರು ಸೂಚಿಸಿರುವ ಈ ತಿದ್ದುಪಡಿಗಳಿಂದ ತುಂಬಾ ಆಶ್ಚರ್ಯವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳಬೇಕು. ಈ ೧೮ನೆಯ ಪ್ರಕರಣವನ್ನು ಸಮಿತಿಗೆ ಹಿಂದಕ್ಕೆ ಏಕೆ ಕಳುಹಿಸಬೇಕು ಎನ್ನಲು ಯಾವ ಕಾರಣವನ್ನು ಕೊಟ್ಟಿಲ್ಲ. ಈ ಸಲಹೆಯನ್ನು ಬೆಂಬಲಿಸುವ ಒಂದೇ ಒಂದು ಕಾರಣ – ಊಹಿಸುವುದಾದರೆ – ಅಲ್ಪಸಂಖ್ಯಾತರ ಹಕ್ಕುಗಳು ಸಾಪೇಕ್ಷವಾಗಿರಬೇಕು ಎನ್ನುವುದು. ಅಂದರೆ, ನಾವು ಹಿಂದೂಸ್ಥಾನದಲ್ಲಿ ಅಲ್ಪಸಂಖ್ಯಾತರಿಗೆ

---

* ಸಿ.ಎ.ಡಿ. ಸಂಪುಟ ೩, ಮೇ ೧, ೧೯೪೭, ಪುಟ ೫೦೩

* ಅದೇ, ಸಂಪುಟ–೩, ಮೇ ೧, ೧೯೪೭, ಪುಟ ೫೦೪

\+ ಅದೇ, ಸಂಪುಟ–೩, ಮೇ ೧, ೧೯೪೭, ಪುಟ ೫೦೭–೮

ನೀಡಲಿರುವ ಹಕ್ಕುಗಳನ್ನು ನಿರ್ಧರಿಸುವುದಕ್ಕೆ ಮುಂಚೆ, ಪಾಕಿಸ್ತಾನ ಅಸೆಂಬ್ಲಿಯು ಅಲ್ಪಸಂಖ್ಯಾತರಿಗೆ ಯಾವ ಹಕ್ಕುಗಳನ್ನು ಕೊಡುತ್ತದೆ ಎಂದು ಕಾದು ನೋಡಬೇಕು ಎನ್ನುವುದು. ಮಾನ್ಯರೆ, ಎಲ್ಲಾ ಗೌರವದಿಂದ, ಅಂಥದೊಂದು ವಿಚಾರವನ್ನು ನಾನು ಖಂಡಿಸುತ್ತೇನೆ. ಅಲ್ಪಸಂಖ್ಯಾತರ ಹಕ್ಕುಗಳು ಸಂಪೂರ್ಣ ನಿರಪೇಕ್ಷ ಹಕ್ಕುಗಳಾಗಿರಬೇಕು. ಇನ್ನೊಂದು ಪಕ್ಷವು ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಅಲ್ಪಸಂಖ್ಯಾತರಿಗೆ ಏನು ಮಾಡುತ್ತದೆ ಎನ್ನುವ ಯಾವುದೇ ಪರಿಗಣನೆಗೆ ಅದು ಅಧೀನವಾಗಿರಬಾರದು. ನಮಗೆ ಆಸಕ್ತಿ ಇರುವ, ಇನ್ನೊಂದು ಸರಕಾರದ ಅಧಿಕಾರವ್ಯಾಪ್ತಿಯಲ್ಲಿರುವ ಕೆಲವು ಅಲ್ಪಸಂಖ್ಯಾತರಿಗೆ, ನಮ್ಮ ಭೂಪ್ರದೇಶದಲ್ಲಿ ಅಲ್ಪಸಂಖ್ಯಾತರಿಗೆ ನಾವು ನೀಡಿರುವ ಅವೇ ಹಕ್ಕುಗಳು ದೊರಕಿಲ್ಲ ಎನ್ನುವುದಾದರೆ, ಸರಕಾರವು ರಾಯಭಾರ ಮಟ್ಟದಲ್ಲಿ ಆ ವಿಚಾರವನ್ನು ಕೈಗೆತ್ತಿಕೊಂಡು ದೋಷಗಳನ್ನು ಪರಿಹರಿಸುವಂತೆ ನೋಡಿಕೊಳ್ಳಬೇಕು. ಆದರೆ ಇತರರು ಏನೇ ಮಾಡಲಿ, ನಮ್ಮ ತೀರ್ಮಾನದಂತೆ ಯಾವುದು ನ್ಯಾಯವೋ ಅದನ್ನು ನಾವು ಮಾಡಬೇಕು. ೧೮ನೆಯ ಪ್ರಕರಣದಲ್ಲಿ ಸೂಚಿಸಿರುವ ಹಕ್ಕುಗಳಾದರೋ ಪ್ರತಿಯೊಬ್ಬ ಅಲ್ಪಸಂಖ್ಯಾತನು, ಬೇರೆ ಯಾವುದೇ ಪರಿಗಣನೆ ಇಲ್ಲದೆ ಕೇಳಬಹುದಾದ ಹಕ್ಕುಗಳು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ನಾವು ನೀಡಿರುವ ಮೊದಲನೆಯ ಹಕ್ಕು ಅವರು ತಮ್ಮ ಭಾಷೆ, ತಮ್ಮ ಲಿಪಿ ಮತ್ತು ತಮ್ಮ ಸಂಸ್ಕೃತಿಯನ್ನು ಬಳಸಲು ಇರುವ ಹಕ್ಕು. ಸರಕಾರಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ನೀಡುವ ವಿಷಯದಲ್ಲಿ 'ಧರ್ಮ, ಭಾಷೆ ಇತ್ಯಾದಿ ಆಧಾರದ ಮೇಲೆ ಪಕ್ಷಪಾತ ಮಾಡಕೂಡದು' ಎಂದು ನಾವು ಹೇಳಿದ್ದೇವೆ. ಯಾವ ಅಲ್ಪಸಂಖ್ಯಾತರಿಗೂ ತಮಗೆ ಅಪೇಕ್ಷೆ ಇರುವ ಯಾವುದೇ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸಲು ಅವಕಾಶವಿಲ್ಲದೇ ಹೋಗಬಾರದು, ಎಂದು ಹೇಳಿದ್ದೇವೆ. ಸರಕಾರವು ಅಲ್ಪಸಂಖ್ಯಾತರು ನಿರ್ವಹಿಸುತ್ತಿರುವ ಶಾಲೆಗಳಿಗೆ ಅಥವಾ ಇತರ ಶಿಕ್ಷಣ ಸಂಸ್ಥೆಗಳಿಗೆ ಧನ ಸಹಾಯ ನೀಡಲು ನಿರ್ಧರಿಸಿದಾಗ ಧರ್ಮ, ಕೋಮು, ಅಥವಾ ಭಾಷೆಯ ಆಧಾರದ ಮೇಲೆ ಸಹಾಯಧನ ನೀಡಿಕೆಯಲ್ಲಿ ಪಕ್ಷಪಾತ ಮಾಡಬಾರದು ಎಂದೂ ಹೇಳಲಾಗಿದೆ. ಮಾನ್ಯರೇ, ೧೮ನೆಯ ಪ್ರಕರಣದಲ್ಲಿ ಸೂಚಿತವಾದ ಈ ಹಕ್ಕುಗಳಿಗೆ ಯಾವುದಾದರೂ ಆಕ್ಷೇಪಣೆ ಇರುವುದು ಹೇಗೆ ತಾನೇ ಸಾಧ್ಯ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಏನೇ ಇರಲಿ, ಈ ಪ್ರಕರಣವನ್ನು ಸಲಹಾ ಸಮಿತಿಗೆ ಮರಳಿಸಬೇಕೆಂಬ ಗೊತ್ತುವಳಿಗೆ ಬೆಂಬಲ ನೀಡಿರುವವರು, ಇವು ಒಬ್ಬ ಅಲ್ಪಸಂಖ್ಯಾತನಿಗೆ ಇರಬಹುದಾದುದಕ್ಕಿಂತ ಹೆಚ್ಚಿನ ಹಕ್ಕುಗಳಾಗಿವೆ ಎಂದಾಗಲೀ ಅಥವಾ ಅಲ್ಪಸಂಖ್ಯಾತನು ಈ ಹಕ್ಕುಗಳನ್ನು ಹೊಂದಿರಬಾರದು ಎಂದಾಗಲೀ ಯಾವುದೇ ವಾದವನ್ನು ಮುಂದಿಟ್ಟಿಲ್ಲ. ಆದ್ದರಿಂದ ಮೂರು ಸಮಿತಿಗಳು ಈ ಅವಕಾಶಗಳನ್ನು ರೂಪಿಸಲು ಪಟ್ಟಿರುವ ಕಷ್ಟದ ದುಡಿಮೆಯನ್ನು ಗಮನಿಸಿದರೆ ಕೆಲವರು ಇದನ್ನು ಸಮಿತಿಗೆ ಮರಳಿಸಬೇಕೆಂದು ಬಯಸುತ್ತಾರೆ ಎಂಬ ಒಂದೇ ಕಾರಣದಿಂದ ದುಡುಕಿ ಒತ್ತಟ್ಟಿಗಿಡುವುದು ನನಗೆ ಬಹಳ ವಿಷಾದಕರವಾಗಿ ತೋರುತ್ತದೆ. ನನ್ನ ಮಿತ್ರ ಶ್ರೀ ಮುನ್ಷಿಯವರಿಗೆ (೨)ನೆಯ ಒಳಪ್ರಕರಣವನ್ನು ಕುರಿತ, ಅದಿರುವಂತೆ, ಏನು ಆಕ್ಷೇಪಣೆ ಇದೆಯೋ ನನಗೆ ಗೊತ್ತಿಲ್ಲ. ಆದರೆ ಅಗತ್ಯವಾಗಿದ್ದರೆ ಈ ಒಳಪ್ರಕರಣವನ್ನು ಮಾತ್ರ ಸಮಿತಿಗೆ ಮರಳಿ ಒಪ್ಪಿಸಬಹುದು– ನಾನು ಖಂಡಿತವಾಗಿಯೂ ಆಕ್ಷೇಪಿಸುವುದಿಲ್ಲ. ಅದನ್ನು ಮರಳಿಸುವುದಾದರೂ ಏಕೆಂದರೆ, ನಾವು ಈ ವಿಚಾರವನ್ನು ಸರಕಾರಿ ಶಿಕ್ಷಣ ಸಂಸ್ಥೆಗಳಿಗೆ ಮಿತಿಗೊಳಿಸಿದ್ದೇವೆಯೇ ಹೊರತು ಸರಕಾರದ ಧನಸಹಾಯ ಪಡೆದ ಸಂಸ್ಥೆಗಳನ್ನು ಕುರಿತು ಏನೂ ಹೇಳಿಲ್ಲ. ಈ ಅಂಶವನ್ನು ಇನ್ನಷ್ಟು ಸ್ಪಷ್ಟಪಡಿಸಬೇಕಾದರೆ ಸಮಿತಿಗೆ ಅದನ್ನು ಮರಳಿ ಒಪ್ಪಿಸಬೇಕು. ಆದರೆ (೨)ನೆಯ ಒಳಪ್ರಕರಣವನ್ನು ಮರಳಿಸುವುದರ ಪರವಾಗಿ ಇದೊಂದು ಕಾರಣವಿದೆ ಎಂಬ ಮಾತ್ರದಿಂದ ಅದೇ ತರ್ಕವನ್ನು ಇಡೀ ಪ್ರಕರಣಕ್ಕೆ ವಿಸ್ತರಿಸುವುದು ಸರಿಯಲ್ಲ. ಆದ್ದರಿಂದ ಎರಡನೆಯ ಒಳಪ್ರಕರಣವನ್ನು

ಹೊರತುಪಡಿಸಿ ಪ್ರಕರಣವನ್ನು ಅಂಗೀಕರಿಸಬೇಕೆಂದೂ, ಅಗತ್ಯವೆನಿಸಿದರೆ (೨)ನೆಯ ಒಳಪ್ರಕರಣವನ್ನು ಸಮಿತಿಗೆ ಮರುಪರಿಶೀಲನೆಗಾಗಿ ಒಪ್ಪಿಸಬೇಕೆಂದೂ ಹೇಳಬಯಸುತ್ತೇನೆ.

* * * * *

* **ಅಧ್ಯಕ್ಷರು :** ಈಗ ಐದು ಜನರ ಸಮಿತಿಗೆ ಒಪ್ಪಿಸಿದ್ದ ಎರಡು ಪ್ರಕರಣಗಳಿವೆ. ಅವುಗಳನ್ನು ಒಂದೊಂದಾಗಿ ನಾವೀಗ ತೆಗೆದುಕೊಳ್ಳಬಹುದು. ಹೊಸ ೩ನೆಯ ಪ್ರಕರಣವನ್ನು ಈಗ ಮಂಡಿಸಬಹುದು.

## ೩. ಕೇಂದ್ರ ಸಂವಿಧಾನ ಸಮಿತಿಯ ವರದಿ

**ಶ್ರೀ ಕೆ.ಎಂ. ಮುನ್ಷಿ :** ಮೂಲ ಪ್ರಕರಣದ ಸ್ಥಾನದಲ್ಲಿ ಈ ಕೆಳಗಿನ ಪ್ರಕರಣವನ್ನು ಇಡಬೇಕೆಂದು ಸೂಚಿಸುತ್ತೇನೆ:

"ಯೂನಿಯನ್ನಿನಲ್ಲಿ ಮತ್ತು ಅದರ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿ ಇರುವ ಪ್ರತಿಯೊಬ್ಬ ವ್ಯಕ್ತಿಯೂ, ಅವನು ಹುಟ್ಟಿದಾಗ ತಂದೆ ತಾಯಿಗಳಲ್ಲಿ ಯಾರೇ ಆಗಲಿ ಯೂನಿಯನ್ನಿನ ಪ್ರಜೆಯಾಗಿರುತ್ತಾ ಯೂನಿಯನ್ನಿನಲ್ಲಿ ರಾಷ್ಟ್ರೀಯತೆಯ ಹಕ್ಕನ್ನು ಪಡೆದಿದ್ದರೆ ಅಂತಹ ಪ್ರತಿಯೊಬ್ಬ ವ್ಯಕ್ತಿಯೂ ಯೂನಿಯನ್ನಿನ ಪೌರನಾಗಿರುತ್ತಾನೆ.

ಯೂನಿಯನ್ನಿನ ಪೌರತ್ವವನ್ನು ಸಂಪಾದಿಸುವ ಅಥವಾ ಸಮಾಪ್ತಿಗೊಳಿಸುವ ವಿಚಾರವನ್ನು ಕುರಿತ ಹೆಚ್ಚಿನ ಅವಕಾಶವನ್ನು ಯೂನಿಯನ್ನು ಕಾನೂನು ಮೂಲಕ ನಿರ್ಧರಿಸುತ್ತದೆ."

ಅಡ್‌ಹಾಕ್ ಸಮಿತಿಯ ವರದಿಯಲ್ಲಿ ಇದಕ್ಕೆ ಕಾರಣಗಳನ್ನು ಪೂರ್ತಿಯಾಗಿ ನೀಡಲಾಗಿದೆ. ಅದಕ್ಕೆ ಹೆಚ್ಚಾಗಿ ಸೇರಿಸುವುದು ಏನೂ ಇಲ್ಲ.

**ಶ್ರೀ ಕೆ. ಸಂತಾನಂ :** ಮಾನ್ಯರೇ, ಈ ಪ್ರಕರಣದ ಮೊದಲನೆಯ ಪ್ಯಾರಾದ ಕೊನೆಗೆ ಈ ಕೆಳಗಿನಂತೆ ಕೂಡಿಸಬೇಕೆಂದು ಸೂಚಿಸುತ್ತೇನೆ:

'ಯೂನಿಯನ್ ಪ್ರಾರಂಭವಾಗುವುದಕ್ಕಿಂತ ಮೊದಲು ಭಾರತದಲ್ಲಿ ಹುಟ್ಟಿದ ಅಥವಾ ಪೌರತ್ವ ಪಡೆದ ಮತ್ತು ಅದರ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ಪ್ರತಿಯೊಬ್ಬ ವ್ಯಕ್ತಿಯೂ ಯೂನಿಯನ್ನಿಗೆ ಪ್ರಜೆಯಾಗಿರುತ್ತಾನೆ."

* * * * *

**ಡಾ. ಬಿ.ಆರ್. ಅಂಬೇಡ್ಕರ್** (ಮುಂಬಯಿ ಸಾಮಾನ್ಯ) : ಮಾನ್ಯ ಅಧ್ಯಕ್ಷರೇ, ಶ್ರೀ ಸಂತಾನಂ ಪ್ರಸ್ತಾಪಿಸಿರುವ ವಿಷಯವು ಬಹು ಮಹತ್ವದ್ದು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ನಾವು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಸಮಿತಿಯು ರಚಿಸಿರುವ ಪ್ರಕರಣದ ಮೊದಲನೆಯ ವಾಕ್ಯವನ್ನು ಓದಿದರೆ ಸಾಕು, ಇಲ್ಲಿ ಉಂಟಾಗಿರುವ ಕಷ್ಟವೇನು ಎನ್ನುವುದು ಸುಲಭವಾಗಿ ತಿಳಿಯುತ್ತದೆ. 'ಯೂನಿಯನ್ನಿನಲ್ಲಿ ಜನಿಸಿದ ಪ್ರತಿಯೊಬ್ಬ ವ್ಯಕ್ತಿಯೂ' ಎಂದು ಕರಡು ಹೇಳುತ್ತದೆ. ಇದು ಭವಿಷ್ಯತ್ತನ್ನು ಉಲ್ಲೇಖಿಸುತ್ತದೆ. ಯೂನಿಯನ್ ರಚಿತವಾದ ಮೇಲೆ ಅಲ್ಲಿ ಜನಿಸುವವರನ್ನು ಅದು ಉಲ್ಲೇಖಿಸುತ್ತದೆ ಎನ್ನುವುದು ಸ್ಪಷ್ಟವಾಗಿದೆ. ಈಗ ಪ್ರಶ್ನೆ ಇದು: ಭಾರತದಲ್ಲಿ ಹುಟ್ಟಿದ, ಆದರೆ ಯೂನಿಯನ್ ಅಸ್ತಿತ್ವಕ್ಕೆ ಬರುವುದಕ್ಕಿಂತ ಮುಂಚೆ ಹುಟ್ಟಿದ

---

* ಸಿ.ಎ.ಡಿ. ಸಂಪುಟ ೩, ಏಪ್ರಿಲ್ ೧, ೧೯೪೭, ಪುಟ ೫೨೬

ಜನರ ಸ್ಥಾನ ಏನಾಗುತ್ತದೆ? ನನ್ನ ತೀರ್ಮಾನದಂತೆ ಅಂತಹ ಸಂದರ್ಭವನ್ನು ಒಳಗೊಳ್ಳಬೇಕಾದರೆ, ನಾವು ಇನ್ನೊಂದು ಉಪವಾಕ್ಯವನ್ನು ಸೇರಿಸಬೇಕು. ಒಂದು ತಿದ್ದುಪಡಿಯನ್ನೇನೂ ನಾನು ಸೂಚಿಸುತ್ತಿಲ್ಲ, ಒಂದು ವಿಚಾರವನ್ನು ಮುಂದಿಡುತ್ತಿದ್ದೇನೆ ಅಷ್ಟೆ. ಹೊಸ ಉಪವಾಕ್ಯವು ಹೆಚ್ಚು ಕಡಿಮೆ ಹೀಗಿರಬೇಕಾಗುತ್ತದೆ:

"ಸಾಮಾನ್ಯ ಉಪವಾಕ್ಯಗಳ ಶಾಸನದಲ್ಲಿ ವಿವರಿಸಿದಂತೆ ಭಾರತದಲ್ಲಿ ಜನಿಸಿದ ಎಲ್ಲಾ ವ್ಯಕ್ತಿಗಳು ಮತ್ತು ಯೂನಿಯನ್ನಿನಲ್ಲಿ ವಾಸ ಮಾಡುತ್ತಿರುವವರು ಮತ್ತು ಯೂನಿಯನ್ನಿನ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವವರು ಎಲ್ಲರೂ ಯೂನಿಯನ್ನಿನ ಪ್ರಜೆಗಳಾಗಿರುತ್ತಾರೆ."

ಸುಮಾರಾಗಿ ಈ ರೀತಿ ಇರಬೇಕಾದ ಒಂದು ಉಪವಾಕ್ಯವು ಅತ್ಯಗತ್ಯವಾಗಿದೆ. ಯೂನಿಯನ್ ಅಸ್ತಿತ್ವಕ್ಕೆ ಬಂದಾಗ ಭಾರತದಲ್ಲಿ ಜನಿಸಿದವರು, ಯೂನಿಯನ್ನಿನ ಪ್ರಜೆಗಳಾಗಿರುವವರು, ಎಲ್ಲರನ್ನೂ ಅದು ಒಳಗೊಳ್ಳುತ್ತದೆ. ಈ ಉಪವಾಕ್ಯವಿಲ್ಲದೆ ಹೋದರೆ ಅಪಾರ ಸಂಖ್ಯೆಯ ಜನರು ರಾಷ್ಟ್ರೀಯತೆಯನ್ನು ಕಳೆದುಕೊಳ್ಳುತ್ತಾರೆ. ಅವರಿಗೆ ರಾಷ್ಟ್ರೀಯತೆಯೇ ಇರುವುದಿಲ್ಲ. ಆದ್ದರಿಂದ ನಾನು ಇಡೀ ಪ್ರಕರಣವನ್ನು ಹೆಚ್ಚಿನ ಪರಿಶೀಲನೆಗಾಗಿ ಕಳುಹಿಸಬೇಕೆಂದು ಸೂಚಿಸುತ್ತೇನೆ.

**ಅಧ್ಯಕ್ಷರು** : ಇಡೀ ಪ್ರಕರಣವನ್ನು ಹೆಚ್ಚಿನ ಪರಿಶೀಲನೆಗಾಗಿ ಹಿಡಿದಿಡಬೇಕೆಂಬ ಒಂದು ಸೂಚನೆ ಬಂದಿದೆ.

**ಶ್ರೀ ಆರ್.ಕೆ. ಸಿಧ್ವಾ :** ಇದು ವಕೀಲರಿಗೆ ಮಾತ್ರ ವಸ್ತುವಲ್ಲ. ಈ ಪ್ರಶ್ನೆಯು ಪ್ರತಿಯೊಬ್ಬ ಸಾಮಾನ್ಯ ಮನುಷ್ಯನ ಮೇಲೆಯೂ ಪ್ರಭಾವವನ್ನು ಹೊಂದಿದೆ.

**ಅಧ್ಯಕ್ಷರು :** ಸಲಹಾ ಸಮಿತಿಯು ಅದನ್ನು ಪರಿಶೀಲಿಸಲು ಸ್ವತಂತ್ರವಾಗಿರುತ್ತದೆ. ಅಗತ್ಯವೆನಿಸಿದರೆ ಮುಂದಿನ ಸಭೆಗೆ ಯಾವುದೇ ಸೂಚನೆಗಳನ್ನು ಕಳುಹಿಸಬಹುದು.

* * * * *

## ಉಪವಾಕ್ಯ – ೨೪

**ಸರ್.ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನಾನು ೨೪ನೆಯ ಒಳಪ್ರಕರಣವನ್ನು ಮಂಡಿಸುತ್ತೇನೆ.

"೨೪. ಈ ಸಂವಿಧಾನದ ಪ್ರಕಾರವಾಗಿ ನಡೆಸಿದ ಒಕ್ಕೂಟದ ಅಥವಾ ಪ್ರಾಂತೀಯವಾದ ಎಲ್ಲಾ ಚುನಾವಣೆಗಳ ಮೇಲುಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣಗಳು, ಅಂತಹ ಚುನಾವಣೆಗಳ ಸಂಬಂಧವಾಗಿ ಹುಟ್ಟಿದ ಸಂದೇಹಗಳು ಮತ್ತು ವ್ಯಾಜ್ಯಗಳಲ್ಲಿ ತೀರ್ಪುಕೊಡಲು ಚುನಾವಣಾ ಟ್ರಿಬ್ಯೂನಲ್‌ಗಳ ನೇಮಕಾತಿಯೂ ಕೂಡಿ, ಒಂದು ಆಯೋಗಕ್ಕೆ ವಹಿಸಲ್ಪಡುತ್ತದೆ. ಅದು ಅಧ್ಯಕ್ಷರು ನೇಮಿಸುವ ಆಯೋಗವಾಗಿರುತ್ತದೆ."

ಸ್ವಾಮಿ, ಈ ಒಳಪ್ರಕರಣದ ಉದ್ದೇಶವು ಈ ದೇಶದಲ್ಲಿ ಒಕ್ಕೂಟದ ಅಥವಾ ಪ್ರಾಂತೀಯವಾದ ಚುನಾವಣೆಗಳು ನಿಷ್ಪಕ್ಷಪಾತ ರೀತಿಯಲ್ಲಿ ನಡೆಯುವಂತೆ ಖಚಿತಪಡಿಸಿಕೊಳ್ಳುವುದು. ಅಧ್ಯಕ್ಷರು ನೇಮಿಸುವ ಆಯೋಗವನ್ನು ರೂಪಿಸುವ ವಿಚಾರವಿದೆ. ಅದರ ಆಶ್ರಯದಲ್ಲಿ ಚುನಾವಣಾ ಚಟುವಟಿಕೆಗಳಿಗೆ ಸಂಬಂಧಿಸಿದ ಈ ಹಲವು ಅಂಶಗಳನ್ನೂ ಚುನಾವಣೋತ್ತರ ಚಟುವಟಿಕೆಗಳನ್ನೂ ನಿಯಂತ್ರಿಸಲಾಗುತ್ತದೆ ಮತ್ತು ಕ್ರಮಬದ್ಧಗೊಳಿಸಲಾಗುತ್ತದೆ.

* * * * *

**ಡಾ॥ ಬಿ.ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ) : ಮಾನ್ಯ ಉಪಾಧ್ಯಕ್ಷರೇ, ಈ ಒಳಪ್ರಕರಣದ ಮೂಲ ಏನೆಂಬುದನ್ನು ನಾನು ಸದನಕ್ಕೆ ತಿಳಿಸುವುದು ಅಪೇಕ್ಷಣೀಯ ಎಂದು ನನ್ನ ಭಾವನೆಯಾಗಿದೆ.

ಯೂನಿಯನ್ನಿಗೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಈ ಒಳವ್ಯಾಕರಣವು ಕಾಣಿಸಿಕೊಂಡಿದ್ದರೂ, ಮೂಲಹಕ್ಕುಗಳ ಸಮಿತಿಯು ಅದನ್ನು ಸಾಮಾನ್ಯವಾದ ವಿಷಯದಂತೆಯೇ ವ್ಯವಹರಿಸಿತು. ಅಂದು ಯಾರು ಆಡಳಿತಾಂಗದಲ್ಲಿದ್ದಾರೆಯೋ ಅವರ ಕೈಗೆ ಚುನಾವಣೆಗಳನ್ನು ಬಿಟ್ಟ ಪಕ್ಷದಲ್ಲಿ, ಅಲ್ಪಸಂಖ್ಯಾತರನ್ನು ಕುರಿತು ಅಥವಾ ಚುನಾವಣೆಗಳನ್ನು ಕುರಿತು ಯಾವುದೇ ಆಶ್ವಾಸನೆ ಕೊಡಲು ಸಾಧ್ಯವಿಲ್ಲ ಎಂದು ಮೂಲಹಕ್ಕುಗಳ ಸಮಿತಿಯು ತೀರ್ಮಾನಕ್ಕೆ ಬಂದಿತು. ಕಾರ್ಯಾಂಗದ ಆಶ್ರಯದಲ್ಲಿ ಚುನಾವಣೆಗಳು ನಡೆದರೆ, ಆಡಳಿತ ಪಕ್ಷದ ಪರವಾದ ಅಥವಾ ಅಂದಿನ ಸರಕಾರದ ಪರವಾದ ಒಬ್ಬ ನಿರ್ದಿಷ್ಟ ಅಭ್ಯರ್ಥಿಗೆ ಬೆಂಬಲವನ್ನು ಪಡೆಯುವ ಉದ್ದೇಶದಿಂದ ಅಧಿಕಾರಿಗಳನ್ನು ಒಂದು ಪ್ರದೇಶದಿಂದ ಇನ್ನೊಂದಕ್ಕೆ ವರ್ಗಾವಣೆ ಮಾಡುವ ಅಧಿಕಾರವು ಆಡಳಿತಾಂಗಕ್ಕೆ ಇದ್ದರೆ,– ಇದ್ದೇ ಇರುತ್ತದೆ, ಪರಿಣಾಮವಾಗಿ ನಾವೆಲ್ಲರೂ ಬಯಸುವ ಮುಕ್ತ ಚುನಾವಣೆಯನ್ನು ಖಂಡಿತವಾಗಿಯೂ ಅದು ಕಲುಷಿತಗೊಳಿಸುತ್ತದೆ ಎಂಬುದಾಗಿ ಅನೇಕರು ಭಾವಿಸಿದರು. ಆದ್ದರಿಂದ ಮೂಲಹಕ್ಕುಗಳ ಸಮಿತಿಯ ಸದಸ್ಯರು, ನ್ಯಾಯವಾದ ಚುನಾವಣೆಗಳನ್ನು ನಡೆಸಬೇಕಾದ ಪಕ್ಷದಲ್ಲಿ ಚುನಾವಣೆಯ ಪರಿಶುದ್ಧತೆಯನ್ನು ಕಾಪಾಡುವ ಅತ್ಯಂತ ಶ್ರೇಷ್ಠವಾದ ದಾರಿ, ಆ ವಿಚಾರವನ್ನು ಆಡಳಿತಾಂಗದ ಕೈಗಳಿಂದ ತೆಗೆದುಕೊಂಡು ಒಂದು ಸ್ವತಂತ್ರ ಪ್ರಾಧಿಕಾರಕ್ಕೆ ನೀಡುವುದು ಎಂದು ಸರ್ವಾನುಮತದಿಂದ ನಿರ್ಣಯಿಸಿದರು. ೨೮ನೆಯ ಒಳಪ್ರಕರಣವು ಮೂಲಹಕ್ಕುಗಳ ಸಮಿತಿಯಲ್ಲಿ ಪರಿಶೀಲಿಸಿದ ಯೋಜನೆಯ ವಿವರಗಳನ್ನು ನಿರ್ದಿಷ್ಟವಾಗಿ ಹೇಳದೇ ಹೋದರೂ, ಮೂಲಹಕ್ಕುಗಳ ಸಮಿತಿಯ ಸದಸ್ಯರ ಮನಸ್ಸುಗಳಲ್ಲಿದ್ದ ಯೋಜನೆಯು, ಭಾರತಾದ್ಯಂತ ಚುನಾವಣೆಗಳನ್ನು ನಿರ್ವಹಿಸಲು ರಾಷ್ಟ್ರಪತಿಗಳು ನೇಮಿಸುವ ಒಂದು ಕೇಂದ್ರ ಆಯೋಗವಿರಬೇಕು ಎಂಬುದಾಗಿತ್ತು ಎಂದು ನಾನು ಈ ಸದನಕ್ಕೆ ತಿಳಿಸಬಯಸುತ್ತೇನೆ. ಆ ಯೋಜನೆಯು ಕಲ್ಪಿಸಿದಂತೆ ರಾಷ್ಟ್ರಪತಿಗಳ ಚುನಾವಣೆಗಳ ಮೇಲುಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣಗಳು ಈ ಕೇಂದ್ರ ಆಯೋಗಕ್ಕೆ ಇರಬೇಕಾಗಿದ್ದರೂ ಅಂತಹ ಒಂದೇ ಒಂದು ಆಯೋಗವು ದೆಹಲಿಯಲ್ಲೋ, ಕೇಂದ್ರ ಸರಕಾರವು ಕಾರ್ಯನಿರತವಾಗಿರುವ ಯಾವುದೇ ಸ್ಥಳದಲ್ಲೋ ಮಾತ್ರವೇ ಇರತಕ್ಕದು ಎಂಬುದಾಗಿ ಯೋಚಿಸಲಿಲ್ಲ. ಯೋಜನೆ ಹೇಗಿದ್ದಿತೆಂದರೆ ಒಕ್ಕೂಟದ ಸಂಸತ್ ಚುನಾವಣೆಗಳನ್ನು ನಿರ್ವಹಿಸಲು ಒಂದು ಕೇಂದ್ರ ಆಯೋಗವಿರುವುದು, ಆದರೆ ಅದಕ್ಕೆ ಅಧೀನವಾಗಿ ಪ್ರತಿಯೊಂದು ಪ್ರಾಂತದಲ್ಲೂ ಒಂದೊಂದು ಆಯೋಗವಿರುವುದು ಅಥವಾ ಒಂದು ಪ್ರಾಂತವು ಒಂದು ಆಯೋಗವನ್ನಿಡಲು ತುಂಬಾ ಚಿಕ್ಕದಾಗಿದ್ದರೆ ಅಂತಹ ಎರಡೋ–ಮೂರೋ ಪ್ರಾಂತಗಳನ್ನು ಕೂಡಿಸಿ ಅಲ್ಲಿಯ ಚುನಾವಣೆಗಳನ್ನು ಒಂದು ಸ್ಥಳೀಯ ಆಯೋಗವು ನಿರ್ವಹಿಸುವಂತೆ ನೋಡಿಕೊಳ್ಳುವುದು ಎಂದಾಗಿತ್ತು. ಇಲ್ಲಿ ಪ್ರಾರಂಭದಿಂದಲೇ ಇದನ್ನು ವಿಕೇಂದ್ರೀಕರಿಸಬೇಕು ಎಂಬ ವಿಚಾರವಿದ್ದುದನ್ನು ಗಮನಿಸಬೇಕು. ಫೆಡರಲ್ ಚುನಾವಣೆಗಾಗಿ ಒಂದು ಕೇಂದ್ರ ಆಯೋಗವು ವಿವಿಧ ಪ್ರಾಂತಗಳಲ್ಲಿ ನಡೆಸುವ ಚುನಾವಣೆಗಳಿಗಾಗಿ ಹಲವು ಆಯೋಗಗಳು ಇರಬೇಕಾಗಿತ್ತು. ನನ್ನ ಮನವಿ ಹೀಗಿದೆ: ಆ ಯೋಜನೆಯು ಜಾರಿಗೆ ಬಂದರೆ, ತಿದ್ದುಪಡಿಯನ್ನು ಸೂಚಿಸುವುದರಲ್ಲಿ ನನ್ನ ಮಿತ್ರರು ಶ್ರೀ ಪಾಟಸ್ಕರ್ ಅವರ ಮನಸ್ಸಿನಲ್ಲಿ ಏನಿದೆಯೋ ಅದು ನೆರವೇರುತ್ತದೆ. ಏಕೆಂದರೆ ಅವರಿಂದ ನಾನು ಅರ್ಥಮಾಡಿಕೊಂಡಂತೆ ಒಂದು ಪ್ರಾಂತದ ಚುನಾವಣೆಗಳನ್ನು ನಿರ್ವಹಿಸಲು ಒಂದು ಸ್ಥಳೀಯ ಪ್ರಾಧಿಕಾರ ಅಥವಾ ಒಂದು ಸ್ಥಳೀಯ ಆಯೋಗ ಇರಬೇಕು ಎಂದು ಅವರು ಬಯಸುತ್ತಾರೆ. ೨೮ನೆಯ ಒಳಪ್ರಕರಣದಲ್ಲಿ ಆ ಯೋಜನೆಯನ್ನು

ಸೂಚಿಸಿರದಿದ್ದರೂ ನಮ್ಮ ಉದ್ದೇಶ ಅದೇ ಆಗಿತ್ತು. ನಮ್ಮ ಮನಸ್ಸಿನಲ್ಲಿ ಇದ್ದದ್ದು ಅದೇ ವಿಷಯ ಎಂಬುದರಲ್ಲಿ ಸಂದೇಹವಿಲ್ಲ. ಏನೇ ಇರಲಿ ತಮ್ಮ ತಿದ್ದುಪಡಿಯನ್ನು ಒಪ್ಪಿಕೊಳ್ಳಲೇಬೇಕು ಎಂದು ನನ್ನ ಮಿತ್ರ ಶ್ರೀ ಪಾಟಸ್ಕರ್ ಒತ್ತಾಯ ಪಡಿಸುವುದಾದರೆ ಅವರನ್ನು ನಾನು ಒಂದು ಪ್ರಶ್ನೆ ಕೇಳಬಯಸುತ್ತೇನೆ. ಅವರು ಸೂಚಿಸಿರುವ ತಿದ್ದುಪಡಿಯನ್ನು ಓದಿದಾಗ ಒಂದು ಪ್ರಶ್ನೆಯು ಉಳಿಯುತ್ತದೆ. ಅವರು "ಎಲ್ಲಾ ಚುನಾವಣೆಗಳು" ಎಂಬ ಪದಗಳನ್ನು ತೆಗೆದುಹಾಕಿ ಅವುಗಳ ಬದಲಿಗೆ "ಎಲ್ಲಾ ಫೆಡರಲ್ ಚುನಾವಣೆಗಳು" ಎಂಬ ಪದಗಳನ್ನಿರಿಸಬೇಕೆಂದು ಅಭಿಪ್ರಾಯ ಪಡುತ್ತಾರೆ. ಅವರು ಒಂದು ವಿಚಾರದ ಮೇಲೆ ನನಗೆ ಸಮಾಧಾನವನ್ನು ಕೊಡುವುದಾದರೆ, ಅವರ ಈ ತಿದ್ದುಪಡಿಯನ್ನು ಕುರಿತು ನನಗೆ ಆಕ್ಷೇಪಣೆ ಏನಿಲ್ಲ. ಚುನಾವಣೆಗಳನ್ನು ಆಡಳಿತಾಂಗಕ್ಕೆ ಹೊರತಾದ ಒಂದು ಸ್ವತಂತ್ರ ಸಂಸ್ಥೆಯ ಕೈಗಳಿಗೆ ಒಪ್ಪಿಸಬೇಕೆಂಬ ತತ್ವವನ್ನು ಅವರು ಒಪ್ಪುತ್ತಾರೆಯೇ? ಇಲ್ಲವೇ? ಅವರದನ್ನು ಒಪ್ಪುವುದಾದರೆ ೨೪ನೆಯ ಒಳಪ್ರಕರಣದಲ್ಲಿ ಇರುವ ವಾಕ್ಯಕ್ಕೆ ಸಮನಾದ ಒಳಪ್ರಕರಣವನ್ನು ಸಂವಿಧಾನದ ಪ್ರಾಂತೀಯ ಭಾಗದಲ್ಲೂ ಅಳವಡಿಸುವುದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ. ನನಗೆ ಕೇಂದ್ರೀಕರಣದ ಬಯಕೆ ಇಲ್ಲ. ನಮ್ಮ ಮನಸ್ಸಿನಲ್ಲಿದ್ದದ್ದೆಲ್ಲಾ ಚುನಾವಣೆಗಳನ್ನು ಅಂದಂದಿನ ಸರಕಾರಗಳ ಕೈಗಳಿಂದ ತೆಗೆದಿಡಬೇಕು ಎನ್ನುವುದಷ್ಟೆ.

(ಮೂಲಹಕ್ಕುಗಳು, ಅಲ್ಪಸಂಖ್ಯಾತರು ಮುಂತಾದ ವಿಷಯಗಳನ್ನು ಕುರಿತು ಒಂದು ಸಲಹಾ ಸಮಿತಿಯನ್ನು ನೇಮಿಸಬೇಕೆಂದು ಕ್ಯಾಬಿನೆಟ್ ಆಯೋಗವು ಶಿಫಾರಸು ಮಾಡಿತ್ತು. ಅದರ ಪ್ರಕಾರ ಅಸೆಂಬ್ಲಿಯು ೧೯೪೭ ಜನವರಿ ೨೪ರಂದು ಒಂದು ನಿರ್ಣಯ ಕೈಗೊಂಡು, ಸರ್ದಾರ್ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಲಹಾ ಸಮಿತಿಯನ್ನು ರಚಿಸಿತು. ಈ ಸಮಿತಿಯಲ್ಲಿದ್ದ ಐವತ್ತು ಜನ ಸದಸ್ಯರಲ್ಲಿ ಡಾ॥ ಅಂಬೇಡ್ಕರ್ ಅವರೂ ಒಬ್ಬರು. ಕೆಲಸವನ್ನು ಸುಲಭಗೊಳಿಸಲು ಸಲಹಾ ಸಮಿತಿಯು ಈ ಕೆಳಗಿನ ನಾಲ್ಕು ಉಪಸಮಿತಿಗಳನ್ನು ನೇಮಿಸಿತು. ಅವು

೧. ಮೂಲಹಕ್ಕುಗಳ ಉಪಸಮಿತಿ
೨. ಅಲ್ಪಸಂಖ್ಯಾತರ ಉಪಸಮಿತಿ
೩. ಈಶಾನ್ಯ ಗಡಿಯ ಆದಿವಾಸಿ ಪ್ರದೇಶಗಳ ಉಪಸಮಿತಿ
೪. ಪ್ರತ್ಯೇಕವಾದ ಮತ್ತು ಭಾಗಶಃ ಪ್ರತ್ಯೇಕವಾದ ಪ್ರದೇಶಗಳ
(ಅಸ್ಸಾಮಿನಲ್ಲಿ ಇರುವ ಪ್ರದೇಶಗಳಲ್ಲದ) ಉಪಸಮಿತಿ

ಡಾ॥ ಅಂಬೇಡ್ಕರ್‌ರವರು ಮೊದಲ ಎರಡು ಉಪಸಮಿತಿಗಳ ಸದಸ್ಯರಾಗಿದ್ದು ಅವುಗಳ ಚರ್ಚೆಗಳಲ್ಲಿ ಗಾಢವಾದ ಆಸಕ್ತಿ ತೋರಿಸಿದರು. ಮೂಲಹಕ್ಕುಗಳ ಉಪಸಮಿತಿಗೆ ಅವರು ಒಂದು ಟಿಪ್ಪಣಿಯನ್ನು ಸಲ್ಲಿಸಿ, ಅದರಲ್ಲಿ, ತಮ್ಮ ಮನಸ್ಸಿನಲ್ಲಿದ್ದ ವಿಚಾರಗಳಿಗೆ ಗಟ್ಟಿಯಾದ ರೂಪವನ್ನು ಕೊಟ್ಟಿದ್ದರು. ಈ ಟಿಪ್ಪಣಿಯಲ್ಲಿ ಅನಂತರ "ರಾಜ್ಯಗಳು ಮತ್ತು ಅಲ್ಪಸಂಖ್ಯಾತರು, ಅವರ ಹಕ್ಕುಗಳು ಯಾವುವು, ಸ್ವತಂತ್ರ ಭಾರತದ ಸಂವಿಧಾನದಲ್ಲಿ ಅವುಗಳನ್ನು ಪಡೆಯುವುದು ಹೇಗೆ" ಎಂಬ ಹೆಸರಿನಿಂದ ಪ್ರಕಟಿಸಲಾಯಿತು.

ಸಂವಿಧಾನ ಸಭೆಯು ಇನ್ನೂ ಮೂರು ಸಮಿತಿಗಳನ್ನು ನೇಮಿಸಿತು. ಅವು :

೧. ಕೇಂದ್ರ ಅಧಿಕಾರ ಸಮಿತಿ
೨. ಕೇಂದ್ರ ಸಂವಿಧಾನ ಸಮಿತಿ
೩. ತಾತ್ಕಾಲಿಕ ಸಂವಿಧಾನ ಸಮಿತಿ

ಪ್ರಧಾನ ಮಂತ್ರಿ ಪಂಡಿತ್ ಜವಾಹರ್‌ಲಾಲ್ ನೆಹರೂ ಮೊದಲಿನ ಎರಡು ಸಮಿತಿಗಳ ಅಧ್ಯಕ್ಷರಾಗಿದ್ದರು.

ಮೂರನೆಯದಾದರೋ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಅಧ್ಯಕ್ಷತೆಯಲ್ಲಿತ್ತು. ೧೯೪೭ ಏಪ್ರಿಲ್ ೩೦ರಂದು ಕೈಗೊಂಡ ಒಂದು ನಿರ್ಣಯದ ಪ್ರಕಾರ ಈ ಸಮಿತಿಗಳನ್ನು ರಚಿಸಲಾಯಿತು.

ಡಾ॥ ಅಂಬೇಡ್ಕರ್ ಅವರು ಕೇಂದ್ರ ಸಂವಿಧಾನ ಸಮಿತಿಯ ಸದಸ್ಯರಾಗಿದ್ದರು. ಸಮಿತಿಯ ವರದಿಯನ್ನು ಅದರ ಅಧ್ಯಕ್ಷರಾದ ಪಂಡಿತ್ ನೆಹರೂ ೧೯೪೭ ಜುಲೈ ೪ ರಂದು ರಾಷ್ಟ್ರಪತಿಗಳಿಗೆ ಸಲ್ಲಿಸಿದರು. ಅಸೆಂಬ್ಲಿಯ ವಿವಿಧ ಉಪಸಮಿತಿಗಳಲ್ಲಿ ಡಾ॥ ಅಂಬೇಡ್ಕರ್‌ರವರು ಮಾಡಿದ ಕೆಲಸವು ತುಂಬಾ ಉಪಯುಕ್ತವಾಗಿದೆ ಎಂದು ಪರಿಗಣಿಸಲಾಯಿತು. ಡಾ॥ ಅಂಬೇಡ್ಕರ್ ಅವರ ಸೇವೆಯಿಲ್ಲದೆ ಶಾಸನ ರಚನೆ ಮತ್ತು ಸ್ವಾತಂತ್ರ್ಯದ ಕ್ರೋಡೀಕರಣ ಸುಲಭವಾಗುವುದಿಲ್ಲ ಎಂದು ಕಾಂಗ್ರೆಸ್ ಯಜಮಾನರಿಗೆ ಸಂದೇಹವಿಲ್ಲದಂತೆ ಮನವರಿಕೆಯಾಯಿತು. ಬಂಗಾಳದ ವಿಭಜನೆಯ ಪರಿಣಾಮವಾಗಿ, ಡಾ॥ ಅಂಬೇಡ್ಕರ್ ಅವರು ಸಂವಿಧಾನ ಸಭೆಯ ಸದಸ್ಯರಾಗಿ ಉಳಿಯಲಿಲ್ಲ. ಆ ಸಭೆಗೆ ಅವರ ಪ್ರವೇಶವನ್ನು ವಿರೋಧಿಸಿ ಶಕ್ತಿಮೀರಿ ಪ್ರಯತ್ನಿಸಿದ್ದ ಕಾಂಗ್ರೆಸ್ ಪಕ್ಷವೇ ಈಗ ಮುಂದೆ ಬಂದು ಅವರ ಉಮೇದುವಾರಿಕೆಯನ್ನು ಪ್ರಾಯೋಜಿಸಿತು.

೧೯೪೭ ಜೂನ್ ೩೦ರಂದು ರಾಜ್ಯಾಂಗ ರಚನಾ ಸಭೆಯ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರು ಒಂದು ಪತ್ರ ಬರೆದು ಆಗ ಮುಂಬಯಿಯ ಪ್ರಧಾನ ಮಂತ್ರಿಯಾಗಿದ್ದ ಶ್ರೀ ಜಿ.ಬಿ. ಖೇರ್ ಅವರನ್ನು ಒಡನೆಯೇ ಡಾ॥ ಅಂಬೇಡ್ಕರ್ ಅವರನ್ನು ಚುನಾಯಿಸುವಂತೆ ಪ್ರಾರ್ಥಿಸಿಕೊಂಡರು. ಅವರು ಬರೆದರು: "ಮಿಕ್ಕ ಯಾವುದೇ ಪರಿಗಣನೆಯನ್ನು ಒತ್ತಟ್ಟಿಗಿಟ್ಟು ಹೇಳುವುದಾದರೆ, ಸಂವಿಧಾನ ಸಭೆಯಲ್ಲೂ ಅವರನ್ನು ಸದಸ್ಯರನ್ನಾಗಿ ನೇಮಿಸಿದ ಇತರ ಸಮಿತಿಗಳಲ್ಲೂ ಡಾ॥ ಅಂಬೇಡ್ಕರ್ ಅವರು ಮಾಡಿರುವ ಕೆಲಸ ಹೇಗಿದೆಯೆಂದರೆ, ಅವರ ಸೇವೆಯಿಂದ ನಾವು ವಂಚಿತರಾಗಲೇ ಕೂಡದಾಗಿದೆ. ನಿಮಗೆ ತಿಳಿದಿರುವಂತೆ ಅವರು ಬಂಗಾಳದಿಂದ ಚುನಾಯಿತರಾಗಿದ್ದರು. ಆ ಪ್ರಾಂತದ ವಿಭಜನೆಯಾದುದರಿಂದಾಗಿ ಅವರೀಗ ಸಂವಿಧಾನ ಸಭೆಯ ಸದಸ್ಯರಾಗಿ ಉಳಿದಿಲ್ಲ. ಜುಲೈ ೧೪ರಂದು ಪ್ರಾರಂಭವಾಗಲಿರುವ ಸಂವಿಧಾನ ಸಭೆಯ ಮುಂದಿನ ಅಧಿವೇಶನದಲ್ಲಿ ಅವರು ಭಾಗವಹಿಸಲೇಬೇಕೆಂದು ನನ್ನ ಕಾಳಜಿಯಾಗಿದೆ. ಆದ್ದರಿಂದ ಅವರನ್ನು ಒಡನೆಯೇ ಚುನಾಯಿಸುವುದು ಅತ್ಯಗತ್ಯವಾಗಿದೆ".

ಅದೇ ಪ್ರಕಾರ, ಡಾ॥ ಅಂಬೇಡ್ಕರ್ ಅವರು ೧೯೪೭ ಜುಲೈ ೩೦ರಲ್ಲಿ ಮುಂಬಯಿಯಿಂದ ಸಂವಿಧಾನ ಸಭೆಯ ಸದಸ್ಯರಾಗಿ ಮರು ಚುನಾಯಿತರಾದರು. ಅದಾದ ಸ್ವಲ್ಪದರಲ್ಲೇ ೧೯೪೭ ಆಗಸ್ಟ್ ೧೫ರಂದು ಪ್ರಧಾನ ಮಂತ್ರಿ ನೆಹರೂ, ತಾವು ರಚಿಸಿದ ಸಚಿವ ಸಂಪುಟಕ್ಕೆ ಸೇರಬೇಕೆಂದು ಅವರನ್ನು ಆಹ್ವಾನಿಸಿದರು. ಆಹ್ವಾನವನ್ನು ಅಂಗೀಕರಿಸಿ ಡಾ॥ ಅಂಬೇಡ್ಕರ್ ಭಾರತದ ಮೊದಲನೆಯ ಕಾನೂನು ಸಚಿವರಾದರು. ಆಗಸ್ಟ್ ೨೯ರಂದು ಅಸೆಂಬ್ಲಿಯು ಅವರನ್ನು ಕರಡು ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆರಿಸಿತು. ಸಂವಿಧಾನದ ಕರಡನ್ನು ತಯಾರಿಸುವ ಕೆಲಸವನ್ನು ಈ ಸಮಿತಿಗೆ ಒಪ್ಪಿಸಲಾಯಿತು. ಕಾಂಗ್ರೆಸ್ಸಿನ ಕಟು ವಿರೋಧಿಯಾಗಿದ್ದ ಡಾ॥ ಅಂಬೇಡ್ಕರ್ ಈಗ ಸಂವಿಧಾನ ಸಂಬಂಧವಾದ ವಿಚಾರಗಳಲ್ಲಿ ಅದರ ಗೆಳೆಯ, ತತ್ವದರ್ಶಿ ಮತ್ತು ಮಾರ್ಗದರ್ಶಿ ಆದರು. – ಸಂ.)

# ವಿಭಾಗ : ೨
# ಆಗಸ್ಟ್ ೧೫, ೧೯೪೭ ರಿಂದ ಫೆಬ್ರವರಿ ೨೫, ೧೯೪೮

## ೪. ಕರಡು ಸಂವಿಧಾನವನ್ನು ಪರಿಶೀಲಿಸಲು ಸಮಿತಿಯ ರಚನೆ

* **ಶ್ರೀ ಸತ್ಯನಾರಾಯಣ ಸಿನ್ಹಾ :** ಮಾನ್ಯರೇ, ಈ ಕೆಳಗಿನಂತೆ ಮಂಡಿಸಬಯಸುತ್ತೇನೆ – "ಈ ಸಭೆಯು ಈ ಕೆಳಗಿನವರನ್ನು ಒಳಗೊಂಡ ಒಂದು ಸಮಿತಿಯನ್ನು ನೇಮಿಸಬೇಕೆಂದು ನಿರ್ಣಯಿಸುತ್ತದೆ –

೧. ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್

೨. ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್

೩. ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್

೪. ಶ್ರೀ ಕೆ.ಎಂ. ಮುನ್ಷಿ

೫. ಸೈಯದ್ ಮಹಮದ್ ಸಾದುಲ್ಲಾ

೬. ಸರ್ ಬಿ.ಎಲ್. ಮಿಟ್ಟರ್

೭. ಶ್ರೀ ಡಿ.ಪಿ. ಖೈತಾನ್

ಈ ಸಮಿತಿಯು ಅಸೆಂಬ್ಲಿಯ ನಿರ್ಣಯದ ಪ್ರಕಾರ ಅಸೆಂಬ್ಲಿಯ ಕಚೇರಿಯಲ್ಲಿ ಸಿದ್ಧವಾದ ಭಾರತ ಸಂವಿಧಾನದ ಕರಡನ್ನು ಪರಿಶೀಲಿಸಿ ಸೂಕ್ತ ತಿದ್ದುಪಡಿಗಳನ್ನು ಸೂಚಿಸುತ್ತದೆ".

(ಗೊತ್ತುವಳಿಯನ್ನು ಅಂಗೀಕರಿಸಲಾಯಿತು – ಸಂ.)

## ೫. ಸಂವಿಧಾನ ಸಭೆಯ ಕಲಾಪಗಳ ಸಮಿತಿಯ ವರದಿ

\+ **ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** (ಮುಂಬಯಿ : ಸಾಮಾನ್ಯ): ಮಾನ್ಯ ಅಧ್ಯಕ್ಷರೇ, ಭಾರತ ಸ್ವಾತಂತ್ರ್ಯ ಶಾಸನ ೧೯೪೭ರ ಪ್ರಕಾರ ೧೯೪೭ ಆಗಸ್ಟ್ ೨೦ರಂದು ಅಸೆಂಬ್ಲಿಯ ನಿರ್ಧಾರಗಳ ಅನ್ವಯ ನೇಮಿತವಾದ ಸಮಿತಿಯು ಒಪ್ಪಿಸಿದ ಸಂವಿಧಾನ ಸಭೆಯ ಕಲಾಪಗಳ ವರದಿಯನ್ನು ಈ ಸಭೆಯು ಪರಿಶೀಲನೆಗೆ ಎತ್ತಿಕೊಳ್ಳಬೇಕು ಎಂದು ಸೂಚಿಸಬಯಸುತ್ತೇನೆ.

ಮಾನ್ಯರೇ, ಸಮಿತಿಯ ವರದಿಯನ್ನು ಸದನದ ಸದಸ್ಯರಿಗೆ ಆಗಲೇ ಹಂಚಲಾಗಿದೆ. ಈ ಹಂತದಲ್ಲಿ ವರದಿಯು ಸದಸ್ಯರ ಕೈಗಳಲ್ಲಿ ಕೊನೆಯ ಪಕ್ಷ ಕಳೆದ ಎರಡು ದಿನಗಳಿಂದ ಇರುವಾಗ, ಸಮಿತಿ ಮಾಡಿರುವ ಕೆಲಸವನ್ನು ಕುರಿತು ವಿಸ್ತಾರವಾಗಿ ಹೇಳುತ್ತಾ ಹೋಗುವುದು ಸೂಕ್ತ ಎಂದು ನನಗೆ ಅನ್ನಿಸುವುದಿಲ್ಲ. ಮೊದಲಲ್ಲೇ ಸಮಿತಿಯ ಶಿಫಾರಸುಗಳ ಕಡೆಗೆ ಗಮನವನ್ನು ಸೆಳೆದರೆ ಸಾಕೆಂದು ನಾನು ಭಾವಿಸುತ್ತೇನೆ.

---

* ಸಂವಿಧಾನ ಸಭೆಯ ಚರ್ಚೆಗಳು (ಸಿ.ಎ.ಡಿ.) ಅಧಿಕೃತ ವರದಿ, ಸಂ. ೫, ತಾ: ೨೯ ಆಗಸ್ಟ್ ೧೯೪೭, ಪುಟ ೨೯೩–೯೪

\+ ಅದೇ ಪುಟ ೩೧೦–೧೨

**ಒಟ್ಟಿನಲ್ಲಿ ಸಮಿತಿಯು ಐದು ಶಿಫಾರಸುಗಳನ್ನು ಮಾಡಿದೆ. ಅವುಗಳಲ್ಲಿ ಮೊದಲನೆಯದು ಹೀಗಿದೆ:**

(೧) ಸಂವಿಧಾನ ಸಭೆಯು ಶಾಸನಸಭೆಯಂತೆ ಕೆಲಸ ಮಾಡಲು ಅರ್ಹವಾಗಿರುತ್ತದೆ, ಮತ್ತು ಅದು ಹಾಗೆಯೇ ವರ್ತಿಸಬೇಕಾಗುತ್ತದೆ; (೨) ಶಾಸನ ಸಭೆಯಂತೆ ಕೆಲಸ ಮಾಡುವಾಗ ವಿಧಾನಸಭೆಯ ನಿಯಮಗಳನ್ನು ಸಾಧ್ಯವಾದ ಮಟ್ಟಿಗೆ ಸೂಕ್ತ ತಿದ್ದುಪಡಿಗಳೊಂದಿಗೆ ಅದು ಅಳವಡಿಸಿಕೊಳ್ಳಬೇಕು; (೩) ಅಗತ್ಯವಾದ ತಿದ್ದುಪಡಿಗಳನ್ನು ಸಂವಿಧಾನ ಸಭೆಯ ಅಧ್ಯಕ್ಷರ ಆದೇಶದಂತೆಯೇ ಮಾಡತಕ್ಕದ್ದು; (೪) ಒಂದು ಸಂವಿಧಾನ ರಚನಾ ಸಂಸ್ಥೆಯಾಗಿ ಸಂವಿಧಾನ ಸಭೆಯ ಕೆಲಸವನ್ನೂ ಒಂದು ಸಾಮಾನ್ಯ ಶಾಸನಸಭೆಯಾಗಿ ಕೆಲಸವನ್ನೂ ಪ್ರತ್ಯೇಕಗೊಳಿಸಬೇಕು ಮತ್ತು ಬೇರೆ ಬೇರೆ ದಿನಗಳಂದು ಬೇರೆ ಬೇರೆ ಅಧಿವೇಶನಗಳಲ್ಲಿ ಅವುಗಳನ್ನು ನಡೆಸಬೇಕು; (೫) ಮುಂದೂಡಿಕೆಯ ಅಧಿಕಾರವು ಅಧ್ಯಕ್ಷರಲ್ಲಿರುತ್ತದೆಯೇ ಹೊರತು ಭಾರತ ಸರ್ಕಾರ ಶಾಸನದ ಅಳವಡಿಕೆಯಲ್ಲಿ ಕಂಡುಬಂದಂತೆ ಗವರ್ನರ್ ಜನರಲ್ ಅವರಲ್ಲಿ ಇರುವುದಿಲ್ಲ. ಈ ಶಿಫಾರಸುಗಳನ್ನು ಮಾಡಿದ ಮೇಲೆ ಅವುಗಳನ್ನು ಜಾರಿಗೆ ತರಲು ಏನಾದರೂ ಕಷ್ಟಗಳಿವೆಯೇ ಎಂದು ಸಮಿತಿಯು ಪರಿಶೀಲಿಸಿತು. ಆಗ ವ್ಯಕ್ತವಾದ ಮೂರು ಸಮಸ್ಯೆಗಳನ್ನು ಅವರು ಪರಿಹರಿಸಬೇಕಾಯಿತು.

ಮೊದಲನೆಯದು, ಒಬ್ಬನೇ ವ್ಯಕ್ತಿಯು ಸಂವಿಧಾನ ಸಭೆ ಮತ್ತು ಶಾಸನಸಭೆ ಈ ಎರಡರಲ್ಲೂ ಅಧ್ಯಕ್ಷತೆ ವಹಿಸಬಹುದೇ ಎನ್ನುವುದು. ಈ ಕಷ್ಟವು ಉದ್ಭವಿಸಲು ಕಾರಣ ಹೀಗಿದೆ: ಭಾರತ ಸರಕಾರ ಶಾಸನದ ಇಪ್ಪತ್ತೆರಡನೆಯ ಪ್ರಕರಣವು ಸ್ಪೀಕರರ ಪದವಿಗೆ ಸಂಬಂಧಿಸಿದೆ. ಭಾರತ ಸರಕಾರ ಶಾಸನವನ್ನು ಅಂಗೀಕರಿಸುವಾಗ ಈ ಪ್ರಕರಣವನ್ನು ಕೈಬಿಡಲಾಗಿದೆ. ಇದರ ಫಲವಾಗಿ ಸಂವಿಧಾನ ರಚನಾ ಸಂಸ್ಥೆ ಹಾಗೂ ಶಾಸನಸಭೆ ಎರಡಕ್ಕೂ ಒಬ್ಬನೇ ವ್ಯಕ್ತಿ ಅಧ್ಯಕ್ಷತೆ ನಿರ್ವಹಿಸುತ್ತಾರೆ. ಸಾಮಾನ್ಯವಾಗಿ ಹೇಳುವುದಾದರೆ ಇದರಲ್ಲಿ ಕಷ್ಟವೇನಿಲ್ಲ. ಆದರೆ ಅಧ್ಯಕ್ಷರು ಒಂದು ರಾಜ್ಯದ ಸಚಿವರಾಗಿರುವ ಸಂದರ್ಭದಲ್ಲಿ ಕಷ್ಟವು ಕಾಣಿಸಿಕೊಳ್ಳಬಹುದು. ನಿದರ್ಶನಕ್ಕೆ ಒಂದು ರಾಜ್ಯದ ಮಂತ್ರಿಯಾಗಿರುವ ಅಧ್ಯಕ್ಷರು, ಕಾನೂನು ನಿರ್ಮಾಣ ಅಂಗವಾಗಿ ಕೆಲಸ ಮಾಡುತ್ತಿರುವಾಗ ಸಂವಿಧಾನ ಸಭೆಯ ಅಧ್ಯಕ್ಷತೆಯನ್ನೂ ವಹಿಸುವುದು ಅನುಚಿತವಾಗಿರುತ್ತದೆ. ಸಮಿತಿಯು ಈ ಎರಡರಲ್ಲಿ ಒಂದು ದಾರಿಯನ್ನು ಹಿಡಿಯಬಹುದೆಂದು ಭಾವಿಸಿತು: ಅಧ್ಯಕ್ಷರು ಒಬ್ಬ ಮಂತ್ರಿಯಾಗಿರಬಾರದು, ಅಥವಾ, ಅವರು ಮಂತ್ರಿಯಾಗಿ ಮುಂದುವರಿದರೆ ಅಸೆಂಬ್ಲಿಯು ಇನ್ನೊಬ್ಬ ಅಧಿಕಾರಿಯನ್ನು ಚುನಾಯಿಸಿ ಅವರನ್ನು ಸ್ಪೀಕರ್ ಅಥವಾ ಉಪಾಧ್ಯಕ್ಷ ಎಂಬುದಾಗಿ ಕರೆಯಬಹುದು, ಸಂವಿಧಾನ ಸಭೆಯು ಕಾನೂನುಗಳನ್ನು ರಚಿಸುವ ಉದ್ದೇಶದಿಂದ ಅಧಿವೇಶನದಲ್ಲಿರುವಾಗ ಅದರ ಅಧ್ಯಕ್ಷತೆ ವಹಿಸುವುದು ಅವರ ಕೆಲಸ.

ಸಮಿತಿಯು ಎದುರಿಸಬೇಕಾಗಿ ಬಂದ ಎರಡನೆ ಕಷ್ಟವು ರಾಜ್ಯಗಳ ಪ್ರತಿನಿಧಿಗಳನ್ನು ಕುರಿತಾದದ್ದು, ಸಂವಿಧಾನ ಸಭೆಯು ಕಾನೂನು ಮಾಡುವ ಉದ್ದೇಶದಿಂದ ಸಭೆ ಸೇರಿದಾಗ, ಭಾರತ ಸರಕಾರ ಶಾಸನದ ಏಳನೆಯ ಷೆಡ್ಯೂಲಿನಲ್ಲಿ ಇರುವ ಒಂದನೆಯ ಪಟ್ಟಿಯನ್ನು ಸಂಪೂರ್ಣವಾಗಿ ಒಳಗೊಳ್ಳುತ್ತದೆ ಎನ್ನುವುದು ಈ ಸದನಕ್ಕೆ ನೆನಪಿರಬಹುದು. ರಾಜ್ಯಗಳು ಈಗ ಸದ್ಯದಲ್ಲಿ ಸೇರ್ಪಡೆಯ ದಸ್ತಾವೇಜು (Instrument of Accession) ಎಂದು ಕರೆಯುವುದರ ಆಧಾರದ ಮೇಲೆ ಸೇರಿವೆ. ಇವು ಒಂದನೆಯ ಪಟ್ಟಿಯಲ್ಲಿ ಸೇರಿರುವ ವಿಷಯಗಳಿಗೆ ತಾಳೆಯಾಗುವುದಿಲ್ಲ. ವಾಸ್ತವವಾಗಿ ಸೇರ್ಪಡೆಯ ಆದೇಶದಲ್ಲಿ ಸೇರಿರುವ ವಿಷಯಗಳು ಒಂದನೆಯ ಪಟ್ಟಿಯಲ್ಲಿ ಸೇರಿರುವ ವಿಷಯಗಳಷ್ಟಿಲ್ಲ. ಆದ್ದರಿಂದ ಪ್ರಶ್ನೆ ಹೀಗಿದೆ. ಸಂವಿಧಾನ ಸಭೆಯ ಸದಸ್ಯರಾಗಿರುವ ಒಂದು ಜನ ಸಮೂಹವು ಸೇರ್ಪಡೆಯ ಆದೇಶಕ್ಕೆ ಬದ್ಧರಾಗಿರುವುದರಿಂದ ಮತ್ತು ವಿಷಯಗಳ ಕಡಿಮೆ ಸಂಖ್ಯೆಯ ಹೊಣೆಯನ್ನು ಹೊತ್ತಿರುವುದರಿಂದ ಸೇರ್ಪಡೆ ಆದೇಶ ಪಟ್ಟಿಯಲ್ಲಿ

ಸೇರಿಲ್ಲದ ಇತರ ವಿಷಯಗಳನ್ನು ಕುರಿತು ಗೊತ್ತುವಳಿಗಳು ಮತ್ತು ಚರ್ಚೆಯಲ್ಲಿ ಭಾಗವಹಿಸಲು ಅವಕಾಶವಿರಬೇಕು. ಈ ಸಮಸ್ಯೆಯನ್ನು ಪರಿಹರಿಸಲು ಎರಡು ದಾರಿಗಳಿದ್ದು, ಒಂದು ದಾರಿ 'ಒಳಗೆ ಮತ್ತು ಹೊರಗೆ' ಎಂದು ಕರೆಯುವ ವಿಧಾನವನ್ನು ಅನುಸರಿಸುವುದು. ಅವರು ಅಸೆಂಬ್ಲಿಯಲ್ಲಿ ಕುಳಿತು ಸೇರ್ಪಡೆ ಆದೇಶಕ್ಕೂ ಒಂದನೆಯ ಪಟ್ಟಿಗೂ ಸಮಾನವಾಗಿರುವ ವಿಷಯದಲ್ಲಿ ಚರ್ಚೆ ನಡೆದಿರುವಾಗ ತಮ್ಮ ಮತ ನೀಡುವುದು ಮತ್ತು ಸದನದಲ್ಲಿ ಚರ್ಚಿಸುತ್ತಿರುವ ವಿಷಯವು ಸೇರ್ಪಡೆ ಆದೇಶದ ಭಾಗವಾಗಿರದಾದಾಗ ಅವರು ಭಾಗವಹಿಸುವಂತಿಲ್ಲ. ಎರಡನೆಯ ಮಾರ್ಗವು ತಾತ್ವಿಕವಾಗಿ ಹೆಚ್ಚು ತರ್ಕಬದ್ಧವಾಗಿದ್ದರೂ ವಾಸ್ತವಿಕ ದೃಷ್ಟಿಯಿಂದ ನಾವಿರುವ ಸ್ಥಿತಿಯಲ್ಲಿ ಅಂತಹ ವ್ಯತ್ಯಾಸ ಮಾಡಬಾರದು ಎಂದು ಸಮಿತಿಯು ನಿರ್ಧರಿಸಿತು. ಆದ್ದರಿಂದ ಒಂದನೆಯ ಪಟ್ಟಿಯಲ್ಲಿ ಮತ್ತು ಸೇರ್ಪಡೆ ಆದೇಶದಲ್ಲಿ ವಿಷಯಗಳು ಏನೇ ಇರಲಿ, ಭಾರತೀಯ ರಾಜ್ಯಗಳ ಪ್ರತಿನಿಧಿಗಳು ಎರಡೂ ಪಟ್ಟಿಗಳ ನಡುವೆ ವ್ಯತ್ಯಾಸದ ವಿವಕ್ಷೆಯಿಲ್ಲದೆ ಎಲ್ಲಾ ವಿಷಯಗಳ ಮೇಲೆಯೂ ಬರುವ ಎಲ್ಲಾ ಗೊತ್ತುವಳಿಗಳಲ್ಲಿ ಭಾಗವಹಿಸಬೇಕು ಎಂದು ಶಿಫಾರಸು ಮಾಡಿತು.

ಸಮಿತಿಯು ಎದುರಿಸಿದ ಮೂರನೆಯ ಪ್ರಶ್ನೆ ಹೀಗಿತ್ತು: ಮಂತ್ರಿಗಳ ಸ್ಥಾನವನ್ನು ಕುರಿತು ಹೇಗೆ ವರ್ತಿಸಬೇಕು ಎನ್ನುವುದೇ ಅದು. ಸದನಕ್ಕೆ ತಿಳಿದಿರುವಂತೆ ಈಗ ಸದ್ಯದಲ್ಲಿ ಸಂವಿಧಾನ ಸಭೆಯ ಸದಸ್ಯರಾಗಿಲ್ಲದ ಕೆಲವು ಮಂತ್ರಿಗಳಿದ್ದಾರೆ. ಆ ವರ್ಗಕ್ಕೆ ಬರಬಹುದಾದ ಅವರು ಐದು ಜನರಿದ್ದಾರೆ. ಈಗ ಪ್ರಶ್ನೆ ಸಂವಿಧಾನ ಸಭೆಯ ಸದಸ್ಯರಾಗಿರುವ ಮಂತ್ರಿಗಳು ಸಂವಿಧಾನ ಸಭೆಯ ಹಾಗೂ ಶಾಸನಸಭೆಯ ಕಲಾಪಗಳಲ್ಲಿ ಭಾಗವಹಿಸಬಹುದೇ? ಶಾಸನಸಭೆಯ ಕೆಲಸದಲ್ಲಿ ಅವರು ಪಾಲುಗೊಳ್ಳುವುದಕ್ಕೆ ಸಂಬಂಧಿಸಿದಂತೆ, ಭಾರತ ಸರಕಾರ ಶಾಸನದ ೨ನೆಯ ಪ್ರಕರಣದ (೨)ನೆಯ ಒಳಪ್ರಕರಣವನ್ನು ಉಳಿಸಿಕೊಂಡು ಅವರ ಸ್ಥಾನವನ್ನು ರಕ್ಷಿಸಲಾಗಿದೆ. ೧೦ನೆಯ ಪ್ರಕರಣದ (೨) ಒಳಪ್ರಕರಣದ ಅವಕಾಶಗಳಂತೆ ಒಬ್ಬ ವ್ಯಕ್ತಿಯು ಶಾಸನಸಭೆಯ ಸದಸ್ಯನಾಗಿರದೇ ಹೋದರೂ ಶಾಸನಸಭೆಯ ಕೆಲಸದಲ್ಲಿ ಭಾಗವಹಿಸಬಹುದು ಮತ್ತು ಒಬ್ಬ ಮಂತ್ರಿಯಾಗಿರಬಹುದು. ಅದರ ಪ್ರಕಾರ ಸಂವಿಧಾನ ಸಭೆಯ ಸದಸ್ಯರಲ್ಲದ ಮಂತ್ರಿಗಳು ಆ ಸಭೆಯಲ್ಲಿ ಅದು ಒಂದು ಶಾಸನಸಭೆಯಂತೆ ಕೆಲಸ ಮಾಡುತ್ತಿರುವಾಗ ರಾಜ್ಯದ ಸಚಿವತ್ವವನ್ನು ಕಳೆದುಕೊಳ್ಳದೆ ಕುಳಿತುಕೊಳ್ಳಲು ಅರ್ಹರಾಗಿರುತ್ತಾರೆ.

ಇನ್ನು ಉಳಿಯುವ ಪ್ರಶ್ನೆ ಎಂದರೆ ಸಂವಿಧಾನ ಸಭೆಗೂ ಅವರಿಗೂ ಇರುವ ಸಂಬಂಧ ಏನಾಗುತ್ತದೆ ಎನ್ನುವುದು. ಸದ್ಯದಲ್ಲಿ ಅವರು ಸಂವಿಧಾನ ಸಭೆಯ ಸದಸ್ಯರಲ್ಲವಾದ್ದರಿಂದ, ಸಭೆಯು ಸಂವಿಧಾನ ರಚನೆಗೆ ಸಂಬಂಧಪಟ್ಟಂತೆ ಕೆಲಸ ಮಾಡುತ್ತಿರುವಾಗ ಭಾಗವಹಿಸಲು ಅವರಿಗೆ ಅರ್ಹತೆ ಇಲ್ಲ. ಸಂವಿಧಾನ ರಚನೆಯ ವಿಷಯದಲ್ಲಿ ಅವರ ಮಾರ್ಗದರ್ಶನವೂ ಅಗತ್ಯವಾಗಿದೆ ಎಂಬ ನಿರ್ಧಾರಕ್ಕೆ ಬಂದುದರಿಂದ ಹತ್ತನೆಯ ಪ್ರಕರಣದ ಎರಡನೆಯ ಒಳಪ್ರಕರಣವು ಅವರಿಗೆ ಶಾಸನ ಸಭೆಯ ಕೆಲಸದಲ್ಲೂ ಸಂವಿಧಾನ ಸಭೆಯ ಕೆಲಸದ ವಿಷಯದಲ್ಲೂ ಭಾಗವಹಿಸಲು ಅನುಮತಿಸುವುದರಿಂದ ಒಂದು ಅವಕಾಶವನ್ನು ಕಲ್ಪಿಸಿ, ಸಂವಿಧಾನ ಸಭೆಯ ಸದಸ್ಯರಲ್ಲದ ಸರಕಾರಿ ಸದಸ್ಯರು ಕೂಡ ರಾಜ್ಯಾಂಗ ರಚನೆಯ ಕೆಲಸದಲ್ಲಿ ಭಾಗವಹಿಸುವಂತೆ ಮಾಡಬೇಕು ಎಂದು ಸಮಿತಿಯು ನಿರ್ಧರಿಸಿತು.

ಮಾನ್ಯರೆ, ಸಮಿತಿಯು ಶಿಫಾರಸು ಮಾಡಿಲ್ಲದ ಇನ್ನೆರಡು ವಿಚಾರಗಳಿವೆ. ಅವುಗಳನ್ನು ನಾನು ಉಲ್ಲೇಖಿಸುವುದು ಅಗತ್ಯ. ಮೊದಲನೆಯ ವಿಚಾರ ದ್ವಿಸದಸ್ಯತ್ವದ ಪ್ರಶ್ನೆ. ಸದನಕ್ಕೆ ತಿಳಿದಿರುವಂತೆ, ಪ್ರಾಂತೀಯ ಶಾಸನ ಸಭೆಯ ಸದಸ್ಯರೂ ಆಗಿರುವ ಸಂವಿಧಾನ ಸಭೆಯ ಕೆಲವು ಸದಸ್ಯರಿದ್ದರೆ, ಸಂವಿಧಾನ ಸಭೆಯು

ಒಂದು ಶಾಸನಸಭೆ ಅಲ್ಲವಾದ್ದರಿಂದ ಇದುವರೆಗೆ ಯಾವ ಅಸ್ತವ್ಯಸ್ತತೆ ಕಂಡು ಬಂದಿಲ್ಲ. ಆದರೆ ಸಂವಿಧಾನ ಸಭೆಯು ಒಂದು ಶಾಸಕಾಂಗವಾಗಿ ಕೆಲಸ ಮಾಡಲು ತೊಡಗಿದಾಗ ದ್ವಿಸದಸ್ಯತ್ವ ಕಾರಣವಾದ ಈ ಸಂಘರ್ಷವು ಮೇಲೇಳುವುದು ಖಂಡಿತ. ಭಾರತ ಸರಕಾರ ಶಾಸನದ ೬೮(೨) ಪ್ರಕರಣದಲ್ಲಿ ಕೊಟ್ಟಿರುವ ಅವಕಾಶದ ಕಡೆಗೆ ಗಮನ ಸೆಳೆಯಬಯಸುತ್ತೇನೆ. ಅದು ಈ ವಿಷಯವನ್ನೇ ಕುರಿತಾಗಿದೆ. ೬೮(೨) ಪ್ರಕರಣವು ಒಬ್ಬ ಸದಸ್ಯರಿಗೆ ಕೇಂದ್ರ ಮತ್ತು ಪ್ರಾಂತ, ಎರಡೂ ಶಾಸನಸಭೆಗಳ ದ್ವಿಸದಸ್ಯತ್ವವನ್ನು ಹೊಂದಿರಲು ಅನುಮತಿ ಕೊಡಲಿಲ್ಲ. ಆದರೆ ಅಳವಡಿಸಿಕೊಳ್ಳುವಾಗ ಈ ಅವಕಾಶವನ್ನು ಕೈಬಿಡಲಾಗಿದೆ. ಪರಿಣಾಮವಾಗಿ, ಸಂವಿಧಾನ ಸಭೆಯ ಸದಸ್ಯರು ಶಾಸನ ಸಭೆಯ ಸದಸ್ಯರಾಗಿ ವರ್ತಿಸುತ್ತಿರುವಾಗ ಇನ್ನೊಂದು ಶಾಸಕಾಂಗದ ಸದಸ್ಯರಾಗಿರಲು ಅನುಮತಿ ಇದೆ. ಅದರ ಅಸ್ತವ್ಯಸ್ತತೆಯು ಶುದ್ಧವಾಗಿ ಮತ್ತು ಕಡ್ಡಾಯವಾಗಿ ಸಂವಿಧಾನದ ದೃಷ್ಟಿಯಿಂದ ಉಳಿದೇ ಉಳಿಯುತ್ತದೆ. ೬೮(೨) ಪ್ರಕರಣದ ಲೋಪದಲ್ಲಿದ್ದ ತತ್ವವನ್ನು ಒಪ್ಪಿಕೊಂಡು ದ್ವಿಸದಸ್ಯತ್ವವನ್ನು ಅನುಮತಿಸುತ್ತಾರೆಯೇ, ಇಲ್ಲವೇ, ೬೮(೨) ಪ್ರಕರಣವನ್ನು ಕೈಬಿಟ್ಟಿದ್ದರೂ ದ್ವಿಸದಸ್ಯತ್ವವನ್ನು ನಿವಾರಿಸಲು ಸೂಕ್ತ ಕ್ರಮವನ್ನು ಕೈಗೊಳ್ಳುತ್ತಾರೆಯೇ ಎನ್ನುವುದನ್ನು ಸಂವಿಧಾನ ಸಭೆಯು ನಿರ್ಧರಿಸಬೇಕು.

ಸಮಿತಿಯು ಯಾವ ಶಿಫಾರಸನ್ನೂ ಮಾಡಿಲ್ಲದ ಎರಡನೆಯ ಪ್ರಶ್ನೆ ಅಸೆಂಬ್ಲಿಯ ಆಡಳಿತಾತ್ಮಕ ವ್ಯವಸ್ಥೆಗೆ ಸಂಬಂಧಿಸಿದೆ. ಅಸೆಂಬ್ಲಿಯ ಆಡಳಿತ ವ್ಯವಹಾರವು ಒಂದು ಏಕೀಕೃತ ವ್ಯವಸ್ಥೆಯಾದರೂ ಅದು ಸಂವಿಧಾನ ಸಭೆಯ ಅಧ್ಯಕ್ಷರ ಹತೋಟಿಯಲ್ಲಿದೆ. ಎಲ್ಲಿಯವರೆಗೆ ಈ ಸಂವಿಧಾನ ಸಭೆಗೆ ರಾಜ್ಯಾಂಗ ರಚನೆ ಎಂಬ ಏಕೈಕ ಕರ್ತವ್ಯವಿದ್ದಿತೋ ಅಲ್ಲಿಯವರೆಗೆ ಏನೂ ಕಷ್ಟವಿರಲಿಲ್ಲ. ಆದರೆ ಸಂವಿಧಾನ ಸಭೆಯು ಒಮ್ಮೆ ರಾಜ್ಯಾಂಗ ರಚನೆ ಮತ್ತು ಇನ್ನೊಮ್ಮೆ ಕಾನೂನು ನಿರ್ಮಾಣಗಳನ್ನು ಕೈಗೊಂಡಾಗ ಸ್ಪೀಕರ್ ಅಥವಾ ಡೆಪ್ಯೂಟಿ ಸ್ಪೀಕರ್ ಅದರ ಮುಖ್ಯಸ್ಥರಾದಾಗ, ಅಂದರೆ ಎರಡೆರಡು ಬಗೆಯ ಕರ್ತವ್ಯಗಳನ್ನು ನಿರ್ವಹಿಸಲು ತೊಡಗಿದಾಗ, ಸಿಬ್ಬಂದಿಯ ಹೊಂದಾಣಿಕೆಯ ಪ್ರಶ್ನೆ ಉದ್ಭವವಾಗಬಹುದು. ಆದರೆ ಈ ವಿಚಾರದಲ್ಲಿ ವ್ಯವಹರಿಸಲು ತಮಗೆ ಅರ್ಹತೆ ಇಲ್ಲ ಎಂದು ಸದಸ್ಯರು ಭಾವಿಸಿದ್ದರಿಂದ ಅದನ್ನು ಉಲ್ಲೇಖಿಸಲಿಲ್ಲ ಅಷ್ಟೆ.

ಮಾನ್ಯರೆ, ನಾನು ಸದನದ ಸಮಯವನ್ನು ಈಗ ಉಪಯೋಗಿಸಿಕೊಂಡಿರುವುದಕ್ಕಿಂತ ಹೆಚ್ಚಾಗಿ ತೆಗೆದುಕೊಳ್ಳುವುದು ಅಗತ್ಯ ಎಂದು ನನಗನ್ನಿಸುವುದಿಲ್ಲ. ನಾನೀಗ ಹೇಳಿರುವುದು ಸಮಿತಿಯು ಏನು ಮಾಡಿದೆ ಎನ್ನುವುದನ್ನು ಸದಸ್ಯರಿಗೆ ಸಾಕಷ್ಟು ನೆನಪು ಮಾಡಿಕೊಟ್ಟು ಅವರು ತಮಗೆ ಅತ್ಯುತ್ತಮ ಎನಿಸುವ ವಿಧಾನದಿಂದ ವರದಿಯನ್ನು ಕುರಿತು ಮುಂದುವರಿಯುತ್ತಾರೆ ಎಂದು ನಾನು ಭಾವಿಸುತ್ತೇನೆ.

* * * * *

**ಅಧ್ಯಕ್ಷರು :** ಈ ವಿಚಾರದಲ್ಲಿ ನಾವು ಸಾಕಷ್ಟು ಚರ್ಚಿಸಿದ್ದೇವೆ ಎಂದುಕೊಂಡಿದ್ದೇನೆ. ಈಗ ಅವುಗಳಿಗೆ ಉತ್ತರ ಕೊಡಬೇಕೆಂದು ಡಾ॥ ಅಂಬೇಡ್ಕರ್‌ರವರನ್ನು ಕೇಳುತ್ತೇನೆ.

**ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೇ, ಸಮಿತಿಯು ಮಾಡಿರುವ ವರದಿಗೆ ಮಿಶ್ರಪ್ರತಿಕ್ರಿಯೆ ಬಂದಿದೆ. ಸದನದ ಕೆಲವು ಸದಸ್ಯರು ಅದನ್ನು ಒಂದು ಗೊಂದಲದ ದಾಖಲೆ ಎಂದು ವರ್ಣಿಸಿದ್ದಾರೆ. ವರದಿಯನ್ನು ಹಾಗೆ ವರ್ಣಿಸಿರುವವರಿಗೆ ನಾನು ಯಾವ ಉತ್ತರವನ್ನೂ ಕೊಡಬಯಸುವುದಿಲ್ಲ. ಏಕೆಂದರೆ ಅವರು ಮುಂದಿಟ್ಟಿರುವ ವಾದಗಳು ಪರಿಶೀಲನೆಗೆ ಅರ್ಹವಾಗಿಲ್ಲ ಎಂಬುದು ವೈಯಕ್ತಿಕವಾಗಿ ನನ್ನ ಅಭಿಪ್ರಾಯ. ನಾನೀಗ ಮಾಡುವುದೆಲ್ಲ ನನ್ನ ಮಿತ್ರರಾದ ಡಾ॥ ದೇಶ್‌ಮುಖ್ ಮತ್ತು ಶ್ರೀ ಬಿಶ್ವನಾಥ್ ದಾಸ್ ಎತ್ತಿದ ಕೆಲವು ತಾಂತ್ರಿಕ ಅಂಶಗಳು. ಡಾ॥ ದೇಶ್‌ಮುಖ್ ಅವರು ಸಮಿತಿಯು ಮಾಡಿದ ಎರಡು ಶಿಫಾರಸುಗಳನ್ನು ಉಲ್ಲೇಖಿಸುತ್ತಾರೆ. ಅವುಗಳಲ್ಲೊಂದು ರಾಜ್ಯಗಳನ್ನು ಪ್ರತಿನಿಧಿಸುವ ಸದಸ್ಯರಿಗೆ ಸಮಿತಿಯ ಎಲ್ಲಾ ಕಲಾಪಗಳಲ್ಲೂ ಭಾಗವಹಿಸಲು

ಅನುಮತಿಯನ್ನು ಶಿಫಾರಸು ಮಾಡಿರುವುದು. ಎರಡನೆಯದು, ಆರಾಜ್ಯಗಳ ಮಂತ್ರಿಗಳು ಅಸೆಂಬ್ಲಿಯ ಕಲಾಪಗಳಲ್ಲಿಯೂ ಪಾಲುಗೊಳ್ಳುವುದು ಅಪೇಕ್ಷಣೀಯವಲ್ಲ ಎಂದು ಹೇಳಿರುವುದು. ಸಮಿತಿಯ ಕಲಾಪಗಳು ತರ್ಕಬದ್ಧವಾಗಿವೆ ಅಥವಾ ಅನುಕೂಲಕರವಾಗಿದೆ ಎಂದ ಸಮಿತಿಯು ಇದು ಸಂವಿಧಾನಾತ್ಮಕವಾಗಿಯೇ ಎಂಬುದನ್ನು ಕುರಿತು ಏನನ್ನೂ ಹೇಳಲಿಲ್ಲ ಎಂದು ಡಾ॥ ದೇಶಮುಖ್ ಹೇಳಿದರು. ಡಾ॥ ದೇಶಮುಖ್‌ರವರು ಒಬ್ಬ ವಕೀಲರಾದುದರಿಂದ ನನಗೆ ಈ ಪ್ರಶ್ನೆಯು ಆಶ್ಚರ್ಯವನ್ನುಂಟು ಮಾಡುತ್ತಿದೆ. ವಾಸ್ತವವಾಗಿ ನಮಗೆ ಇನ್ನೂ ಯಾವುದೇ ಸಂವಿಧಾನ ಇಲ್ಲ ಎನ್ನುವುದನ್ನು ಅವರು ನೆನಪಿಟ್ಟುಕೊಳ್ಳಬೇಕಾಗಿತ್ತು. ಸಂವಿಧಾನ ಸಭೆಯು ಒಂದು ಸಂವಿಧಾನವನ್ನು ರಚಿಸುತ್ತಿದ್ದರೆ ಆ ಸಭೆಯು ಮಾಡುವುದೆಲ್ಲವೂ ಸಂವಿಧಾನ ಬದ್ಧವೇ ಆಗಿರುತ್ತಿತ್ತು (ಕೇಳಿ ಕೇಳಿ). ರಾಜ್ಯದ ಪ್ರತಿನಿಧಿಗಳು ರಾಜ್ಯಾಂಗ ರಚನಾ ಸಭೆಯಲ್ಲಿ ಭಾಗವಹಿಸಕೂಡದು ಎಂದು ಹೇಳಿದರೆ, ಒಂದು ವೇಳೆ ಸಂವಿಧಾನ ಸಭೆಯು ಅವರು ಭಾಗವಹಿಸಬೇಕು ಎಂದು ಹೇಳಿದರೆ ಅದು ಸಂವಿಧಾನಾತ್ಮಕವೇ ಆಗಿರುತ್ತದೆ. ಆದ್ದರಿಂದ ಆ ಬಗೆಯ ಅಭಿಪ್ರಾಯವು ತಪ್ಪಾಗುತ್ತದೆ ಎಂದು ನಾನು ಭಾವಿಸಿದೆ. ನನ್ನ ಮಿತ್ರ ಶ್ರೀ ಬಿಶ್ವನಾಥ್ ದಾಸ್ ಎತ್ತಿರುವ ಅಂಶ ಕುರಿತಂತೆ ನನಗೆ ಸಾಕಷ್ಟು ಆಶ್ಚರ್ಯವೂ ಆಗಿದೆ. ಅವರು ಹೇಳಿದ್ದನ್ನು ಸರಿಯಾಗಿ ನೆನಪು ಮಾಡಿಕೊಳ್ಳುವುದಾದರೆ ಅವು ಎರಡು ಅಂಶಗಳನ್ನು ಕುರಿತಾಗಿದ್ದವು. ಸಮಿತಿಯು ರಾಜ್ಯಾಂಗ ಸಭೆಯನ್ನು ಎರಡು ಭಾಗಗಳನ್ನಾಗಿ ಒಡೆಯುತ್ತದೆ ಎಂದು ಅವರು ಹೇಳಿದರು. ಅದು ಅವಿಭಾಜ್ಯವಾದ ಸಂಸ್ಥೆಯಾದ್ದರಿಂದ ಅದು ಒಂದು ಅಖಂಡವಾಗಿ ಕೆಲಸ ಮಾಡುತ್ತಿತ್ತು. ಒಳ್ಳೆಯದು, ಸಂವಿಧಾನವು ವರ್ತಿಸುವ ರೀತಿಯು ಸಮಗ್ರವಾಗಿ ಸಾಮಾನ್ಯ ಕಾನೂನು ಮಾಡುವ ಕೆಲಸಕ್ಕಿಂತ ಬೇರೆಯಾದದ್ದು ಎನ್ನುವುದನ್ನು ಅವರು ಒಪ್ಪುತ್ತಿದ್ದರು. ಪ್ರತ್ಯೇಕತೆಯು ಹೀಗಿರುತ್ತದೆ. ಸಂವಿಧಾನ ಸಭೆಯು ಸಂವಿಧಾನ ಸಭೆಯಿಂದ ಬದ್ಧವಾಗಿಲ್ಲ. ಆದರೆ ಶಾಸನ ಸಭೆಯು ಸಂವಿಧಾನಕ್ಕೆ ಬದ್ಧವಾಗಿರುತ್ತದೆ. ಸಂವಿಧಾನ ಸಭೆಯು ಒಂದು ಶಾಸನ ಸಭೆಯಾಗಿ ಕೆಲಸ ಮಾಡುತ್ತದೆ. ಆದ್ದರಿಂದ ಭಾರತ ಸ್ವಾತಂತ್ರ್ಯ ಶಾಸನವು ಅಳವಡಿಸಿಕೊಂಡ ರೀತಿಯಲ್ಲಿ ಅದಕ್ಕೆ ಬದ್ಧವಾಗಿರುತ್ತದೆ. ಯಾರು ಬೇಕಾದರೂ ಒಂದು ನಿಲುವಳಿ ಸೂಚನೆ ತರಬಹುದು. ಒಂದು ಗೊತ್ತುವಳಿಯ ಅಧಿಕಾರಕ್ಕೆ ಮೀರಿದ್ದೇ ಅಲ್ಲವೆ, ಎಂದು ಹೇಳುವ ಸ್ಥಿತಿಯಲ್ಲಿ ಅವರು ಇರುತ್ತಾರೆ. ಆದರೆ ಸಂವಿಧಾನ ಸಭೆಯು ರಾಜ್ಯಾಂಗವನ್ನು ರಚಿಸುವ ಸಂಸ್ಥೆಯಾಗಿ ಕೆಲಸ ಮಾಡುತ್ತಿರುವಾಗ ಆ ಪ್ರಶ್ನೆಯು ಖಂಡಿತವಾಗಿಯೂ ಹುಟ್ಟುವುದಿಲ್ಲ. ಈ ಎರಡು ಕೆಲಸಗಳೂ ಬೇರೆ ಬೇರೆ, ಎರಡರ ಉದ್ದೇಶಗಳೂ ಬೇರೆ ಬೇರೆ ಎಂದು ತಿಳಿದುಕೊಳ್ಳಲು ಅದಷ್ಟು ಸಾಕು ಎಂದು ನಾನು ಭಾವಿಸಿದೆ. ಗೊಂದಲವನ್ನು ತಪ್ಪಿಸಬೇಕಾದರೆ, ಅದನ್ನು ಮಾಡುವ ವಾಸ್ತವಿಕವಾದ ದಾರಿ ಸಂವಿಧಾನ ಸಭೆಯು ಶಾಸನ ಸಭೆಗಿಂತ ಪ್ರತ್ಯೇಕವಾದ ಅಧಿವೇಶನದಲ್ಲಿ ಕೂಡುವುದು. ಹೊಂದಾಣಿಕೆಗಳ ವಿರುದ್ಧವಾಗಿಯೂ ಸ್ವಲ್ಪ ಆಕ್ಷೇಪಣೆಯನ್ನು ಅವರು ಮುಂದಿಟ್ಟರು. ನಾನು ಮನಸ್ಸು ಬಿಚ್ಚಿ ಇಷ್ಟು ಹೇಳಬೇಕು, ೧೯೩೫ರ ಗೌರ್ನಮೆಂಟ್ ಆಫ್ ಇಂಡಿಯಾ ಶಾಸನದ ಹೊಂದಾಣಿಕೆಗಳಿಗೆ ಇಲ್ಲಿರುವ ಯಾರೂ ಹೊಣೆಗಾರರಲ್ಲ.

ಭಾರತ ಸ್ವಾತಂತ್ರ್ಯ ಶಾಸನದ ೮ನೇ ಪ್ರಕರಣದ (೧)ನೇ ಒಳಪ್ರಕರಣವನ್ನು ಅವರು ನೋಡಿದರೆ, ೧೯೩೫ರ ಭಾರತ ಸರಕಾರ ಶಾಸನವನ್ನು ನೂತನ ಪರಿಸ್ಥಿತಿಗೆ ತಕ್ಕಂತೆ ಹೊಂದಿಸಿಕೊಳ್ಳುವ ಅಧಿಕಾರವನ್ನು ಸಂವಿಧಾನ ಸಭೆಯು ಒಂದು ಶಾಸನ ಸಭೆಯಾಗಿ, ಸಂಪೂರ್ಣವಾಗಿ ಗವರ್ನರ್ ಜನರಲ್ ಅವರಿಗೆ ಬಿಟ್ಟಿದೆ ಎನ್ನುವುದು ಅರ್ಥವಾಗುತ್ತದೆ. ಯಾವ ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕು ಎಂಬುದನ್ನು ನಿರ್ಧರಿಸಲು ಗವರ್ನರ್ ಜನರಲ್ಲರು ಯಾವುದಾದರೂ ಮೂಲದಿಂದ ಸಲಹೆಯನ್ನು ಪಡೆಯುವ ಸಾಧ್ಯತೆ

ಇದೆ. ಆದ್ದರಿಂದ ಈ ಸಮಯದಲ್ಲಿ ಅದಕ್ಕೆ ಯಾರೂ ಹೊಣೆಗಾರರಲ್ಲ. ಭಾರತ ಸರಕಾರ ಶಾಸನದಲ್ಲಿ ನಿರೂಪಿಸಿರುವ ಹೊಂದಾಣಿಕೆಗಳು ಸಂವಿಧಾನ ಸಭೆಗೆ ತೃಪ್ತಿ ನೀಡಿರದಿದ್ದರೆ ಅದೇ ೮ನೇ ಪ್ರಕರಣದ (೧)ನೇ ಒಳಪ್ರಕರಣವು ಹೊಂದಾಣಿಕೆಗಳನ್ನು ಬದಲಾಯಿಸಿ ತನಗೆ ಅಪೇಕ್ಷೆಯಾಗುವ ಬೇರೆ ಯಾವುದನ್ನಾದರೂ ಸೇರಿಸಬಹುದು. ಅದು ಅದರ ಅಧಿಕಾರದಲ್ಲೇ ಇದೆ. ಆದ್ದರಿಂದ ಸಮಿತಿಯನ್ನು ಟೀಕಿಸಿದವರು ಎತ್ತಿದ ವಿಷಯಗಳಲ್ಲಿ ಯಾವ ಸತ್ವವೂ ಇಲ್ಲ ಎಂದು ತಿಳಿಸಬಯಸುತ್ತೇನೆ.

ನನ್ನ ಮಿತ್ರರಾದ ಶ್ರೀ ಕೃಷ್ಣಮಾಚಾರಿಯವರು ಉಲ್ಲೇಖಿಸಿದ ಇನ್ನೊಂದು ವಿಷಯ ಇದು. ಚರ್ಚೆ ಮತ್ತು ಆಡಳಿತ ಎರಡೂ ಮಾರ್ಗಗಳಲ್ಲಿ ಅಧ್ಯಕ್ಷರೇ ಏಕೈಕ ಪ್ರಮಾಣ ಎಂಬುದನ್ನು ಹೇಳುವ ವರದಿಯ ಎರಡನೆಯ ಭಾಗವನ್ನು ಶ್ರೀ ಮುನ್ಷಿಯವರ ನಿರ್ಣಯವು ಪರಿಗಣಿಸಿಲ್ಲ ಎಂದು ಅವರು ಹೇಳಿದರು. ಮುನ್ಷಿಯವರು ರಚಿಸಿ ಒಪ್ಪಿಸಿದ ನಿರ್ಣಯವು, ಸಮಿತಿಯ ಎಲ್ಲಾ ಸಲಹೆಗಳನ್ನೂ ಒಪ್ಪಿರುವಾಗ ಈ ನಿರ್ದಿಷ್ಟ ಅವಕಾಶವನ್ನು ಏಕೆ ಒಳಗೊಳ್ಳಲಿಲ್ಲ ಎಂದು ಅವರು ಪ್ರಶ್ನಿಸಿದರು. ಶ್ರೀ ಕೃಷ್ಣಮಾಚಾರಿ ಅವರು ವರದಿಯನ್ನು ಜಾಗರೂಕತೆಯಿಂದ ಓದಬೇಕು ಎಂದು ನಾನು ಬಯಸುತ್ತೇನೆ. ವರದಿಯ ನಿರ್ದಿಷ್ಟ ಭಾಗವು ಸಮಿತಿಯ ಸಮೀಕ್ಷೆಯಾಗಿದೆಯೇ ಹೊರತು ಒಂದು ಶಿಫಾರಸಾಗಿಲ್ಲ, ಆದ್ದರಿಂದ ಶ್ರಿ ಮುನ್ಷಿಯವರು ಅದನ್ನು ಉಲ್ಲೇಖಿಸದೆ ಹೋದುದು ನ್ಯಾಯವಾಗಿಯೇ ಇದೆ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ :** ಮಾನ್ಯರೇ, ನಾನು ಡಾ॥ ಅಂಬೇಡ್ಕರ್ ಅವರನ್ನು ಕೆಲವು ಮಾಹಿತಿಗಳಿಗಾಗಿ ಕೇಳಬೇಕೆಂದು ಇಚ್ಛಿಸುತ್ತೇನೆ.... ಮೊದಲನೆಯದಾಗಿ ಅವರಿಂದ ನಾನು.....

**ಒಬ್ಬ ಸದಸ್ಯರು :** ಇದು ಭಾಷಣವೋ ಪ್ರಶ್ನೆಯೋ?

**ಅಧ್ಯಕ್ಷರು :** ಪಂಡಿತ್ ಮೈತ್ರ ಅವರಿಗೆ ನೆನಪು ಕೊಡಬಯಸುತ್ತೇನೆ. ಅವರು ಇಲ್ಲಿ ಒಂದು ಭಾಷಣ ಮಾಡಬಾರದು. ಅವರೊಂದು ಪ್ರಶ್ನೆ ಕೇಳಿದ್ದಾರೆ. ಡಾ॥ ಅಂಬೇಡ್ಕರ್‌ರವರು ಇಷ್ಟಪಟ್ಟರೆ ಅದಕ್ಕೆ ಉತ್ತರ ಕೊಡುತ್ತಾರೆ.

**ಮಾನ್ಯ ಸದಸ್ಯರು :** ಪ್ರಶ್ನೆಯೂ ಸರಿಯಾದ ಕ್ರಮದಲ್ಲಿಲ್ಲವಲ್ಲ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ :** ಅದಕ್ಕೇಕೆ ಅನುಮತಿಯಿಲ್ಲ?

**ಮಾನ್ಯ ಸದಸ್ಯರು :** ಚರ್ಚೆಗೆ ಉತ್ತರಗಳನ್ನು ಕೊಡುವಾಗ ಮಾನ್ಯ ಸದಸ್ಯರಿಗೆ ಅರ್ಥವಾಗದೇ ಹೋದರೆ ವಿಷಯಗಳನ್ನು ಸ್ಪಷ್ಟಪಡಿಸಿಕೊಳ್ಳುವುದಕ್ಕಾಗಿ ಹೆಚ್ಚಿನ ಪ್ರಶ್ನೆಗಳನ್ನು ಕೇಳುವ ಹಕ್ಕು ಅವರಿಗಿದೆ.

**ಅಧ್ಯಕ್ಷರು :** ನೀವು ಪ್ರಶ್ನೆ ಕೇಳಿದ್ದೀರಿ. ಡಾ॥ ಅಂಬೇಡ್ಕರ್ ಅವರು ಉತ್ತರ ಕೊಡುತ್ತಾರೆ.

**ಡಾ॥ ಬಿ.ಆರ್. ಅಂಬೇಡ್ಕರ್ :** ಸಂಕ್ಷೇಪವಾಗಿ ಹೇಳುತ್ತೇನೆ. ಮೊದಲನೆಯ ಪ್ರಶ್ನೆ ಭಾರತ ಸರಕಾರ ಶಾಸನದ ಅಳವಡಿಕೆಯಲ್ಲಿ ಯಾವುದೇ ಬದಲಾವಣೆಯನ್ನು ಕಲ್ಪಿಸುವುದು. ನನ್ನ ಉತ್ತರ ಹೀಗಿದೆ. ಯಾವ ಹೊಂದಾಣಿಕೆಗಳನ್ನು ಸದನವು ಅಪೇಕ್ಷಿಸುತ್ತದೆ ಎಂದು ನಿರ್ಧರಿಸುವುದು ಸದನಕ್ಕೇ ಬಿಟ್ಟಿದ್ದು. ಆದರೆ ಆ ಹೊಂದಾಣಿಕೆಗಳನ್ನು ಬದಲಾಯಿಸುವ ಅಧಿಕಾರ ನಮಗಿದೆ. ಗವರ್ನಮೆಂಟ್ ಆಫ್ ಇಂಡಿಯಾ ಶಾಸನವು ತನ್ನ ಹೊಂದಾಣಿಕೆಗಳೊಂದಿಗೆ ನಮ್ಮ ಮೇಲೆ ಬಂಧನ ಹೇರಿಲ್ಲ, ಬದಲಾವಣೆಯು ನಮ್ಮ ಉದ್ದೇಶಕ್ಕೆ ಹೊರತಾಗಿಲ್ಲ ಎಂಬ ಅರ್ಥದಲ್ಲಿ ವಿಷಯವನ್ನು ಮರುಪರಿಶೀಲಿಸಿ ಸದನವು ಕೆಲವು ಹೊಂದಾಣಿಕೆಗಳನ್ನು ಬದಲಾಯಿಸಬೇಕೆಂದು ಬಯಸಿದರೆ ಅದು ಆ ಅವಕಾಶವನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿದೆ.

ನನ್ನ ಮಿತ್ರರಾದ ಶ್ರೀ ಮೈತ್ರ ಹಾಕಿದ ಎರಡನೇ ಪ್ರಶ್ನೆ, ಆಡಳಿತದ ಏಕತೆಯು ಹಾನಿಗೊಳ್ಳುವ

ಸಾಧ್ಯತೆ ಇದೆಯೆ? ಅಧ್ಯಕ್ಷರು ಸಂವಿಧಾನ ಸಭೆಯ ಅಧ್ಯಕ್ಷರಾಗಿರುವುದು ಮತ್ತು ಅವರೇ ಶಾಸಕಾಂಗದ ಅಧ್ಯಕ್ಷತೆ ವಹಿಸುವ ಸ್ಪೀಕರ್ ಆಗಿರುವುದು – ಹೀಗೆ ಎರಡು ಕಚೇರಿಗಳಿದ್ದಾಗ ಘರ್ಷಣೆಯಾಗುವ ಸಾಧ್ಯತೆ ಇದ್ದೇ ಇದೆ. ಸಮಿತಿ ಹೇಳಿರುವುದು – ಘರ್ಷಣೆಯ ತಾತ್ವಿಕ ಸಾಧ್ಯತೆ ಇದೆ ಎಂಬುದಾಗಿ. ಆದರೆ ಘರ್ಷಣೆಯು ಅತ್ಯಗತ್ಯವಾಗಿ ಆಗಿಯೇ ತೀರುತ್ತದೆ ಎಂದು ನಾನು ಭಾವಿಸಬೇಕಾಗಿಲ್ಲ. ಆಚರಣೆಯಲ್ಲಿ ಅಧ್ಯಕ್ಷರೂ ಮತ್ತು ಅಸೆಂಬ್ಲಿಯ ಸ್ಪೀಕರರೂ ಒಂದುಗೂಡಿ ಕೆಲಸ ಮಾಡುವುದು ಸಾಧ್ಯ. ಸಂವಿಧಾನ ಸಭೆಯ ಹಾಗೂ ಶಾಸಕಾಂಗ ಸಭೆಯ ಸಮಯವನ್ನು ಸಮರ್ಪಕವಾಗಿ ಹೊಂದಿಸಿಕೊಳ್ಳಬಹುದು. ಎರಡು ಹುದ್ದೆಗಳಿದ್ದರೂ ಅಗತ್ಯವಾಗಿ ಘರ್ಷಣೆಯಾಗಿಯೇ ತೀರುತ್ತದೆ ಎಂದು ನಾವು ಹೆದರಬೇಕಾಗಿಲ್ಲ.

ಇನ್ನು ಮೂರನೆಯ ಪ್ರಶ್ನೆಯನ್ನು ಕುರಿತು. ಸಂವಿಧಾನ ಸಭೆಯನ್ನು ಒಂದು ಶಾಸಕಾಂಗವನ್ನಾಗಿ ಪರಿವರ್ತಿಸಲು ನಾವು ಮಾಡುತ್ತಿರುವ ಕೆಲಸ ತಾತ್ಕಾಲಿಕವಾದದ್ದು, ಸಂದೇಹವಿಲ್ಲ. ಸಂವಿಧಾನ ರಚನೆಯ ಕಾರ್ಯವು ಎಲ್ಲಿಯವರೆಗೆ ಮುಗಿಯುವುದಿಲ್ಲವೋ ಅಲ್ಲಿಯವರೆಗೆ ಅದು ಇರುತ್ತದೆ. ಅದು ಮುಗಿದಾಗ ಯಾವುದಾದರೂ ಒಂದು ವ್ಯವಸ್ಥೆ ಮಾಯವಾಗಿ ನಾವು ಶಾಸನ ಸಭೆಯಾಗಿ ಮಾತ್ರ ಮುಂದುವರಿಯುತ್ತೇವೆ.

**ಶ್ರೀ ನಜೀರುದ್ದೀನ್ ಅಹಮದ್** : ಇನ್ನೊಂದು ಪ್ರಶ್ನೆ ಸದನವು ಪುನರ್ ಹೊಂದಾಣಿಕೆ ಮಾಡಿಕೊಳ್ಳಬಹುದು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಗವರ್ನರ್ ಜನರಲ್ ಅವರು ಅದನ್ನು ಮಾಡಬಹುದೇ?

**ಡಾ॥ ಬಿ.ಆರ್. ಅಂಬೇಡ್ಕರ್** : ಅದು ಕಾನೂನಿನ ಪ್ರಶ್ನೆ. ಗವರ್ನರ್ ಜನರಲ್ಲರ ಹೊಂದಾಣಿಕೆ ಬದಲಾಯಿಸಲು ಈ ಸದನಕ್ಕೆ ಅಧಿಕಾರವಿದೆ.

**ಶ್ರೀ ನಜೀರುದ್ದೀನ್ ಅಹಮದ್** : ನಾನು ಅದನ್ನು ನಿರಾಕರಿಸುತ್ತಿಲ್ಲ. ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ, ಗವರ್ನರ್ ಜನರಲ್ಲರು ಮುಂದಿನ ಹೊಂದಾಣಿಕೆಯನ್ನು ಮಾಡಬಹುದೇ? ಎನ್ನುವುದು ಪ್ರಶ್ನೆ.

**ಡಾ॥ ಬಿ.ಆರ್. ಅಂಬೇಡ್ಕರ್** : ಇಲ್ಲ, ಸಾಧ್ಯವಿಲ್ಲ. ಅವರು ತಮ್ಮ ಸಚಿವರ ಸಲಹೆಯ ಮೇರೆಗೆ ಕೆಲಸ ಮಾಡಬೇಕಾಗುತ್ತದೆ.

**ಶ್ರೀ ನಜೀರುದ್ದೀನ್ ಅಹಮದ್** : ತಮ್ಮ ಮಂತ್ರಿಗಳ ಸಲಹೆಯಂತೆ ಅವರು ಹಾಗೆ ಮಾಡಬಹುದೆ?

**ಒಬ್ಬ ಸದಸ್ಯರು** : ಇದೇನು ನ್ಯಾಯಾಲಯವೆ? ಅಡ್ಡ ವಿಚಾರಣೆಯೆ?

**ಡಾ॥ ಬಿ.ಆರ್. ಅಂಬೇಡ್ಕರ್** : ನನಗೆ ಖಚಿತವಾಗಿಲ್ಲ. ಸುಮ್ಮನೆ ಒಂದು ಉತ್ತರ ಕೊಡಲು ನಾನು ಬಯಸುವುದಿಲ್ಲ.

**ಅಧ್ಯಕ್ಷರು :** ಗೊತ್ತುವಳಿಯನ್ನು ಆಗಲೇ ಸೂಚಿಸಿದಂತೆ ಒಂದೊಂದೆ ಒಳಪ್ರಕರಣವಾಗಿ ಮಂಡಿಸಬೇಕೆಂದು ತೋರುತ್ತದೆ.

(ಒಂದೊಂದಾಗಿ ಒಳಪ್ರಕರಣಗಳು ಅಂಗೀಕೃತವಾದವು. ಆಮೇಲೆ ಈ ಕೆಳಗಿನಂತೆ ನಿರ್ಣಯವನ್ನು ಅಂಗೀಕರಿಸಲಾಯಿತು – ಸಂ.)

**ಅಧ್ಯಕ್ಷರು :** ಪ್ರಶ್ನೆ ಹೀಗಿದೆ:

ಇಡಿಯಾಗಿ ನಿರ್ಣಯವನ್ನು ಹೀಗೆ ಅಂಗೀಕರಿಸಬಹುದು:

"ಭಾರತ ಸ್ವಾತಂತ್ರ್ಯಶಾಸನದ ಪ್ರಕಾರ ಸಂವಿಧಾನ ಸಭೆಯ ಕಾರ್ಯವನ್ನು ಕುರಿತ ವರದಿಗೆ ಸಂಬಂಧಿಸಿದಂತೆ ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಮಂಡಿಸಿರುವ ಗೊತ್ತುವಳಿಯನ್ನು ಉಲ್ಲೇಖಿಸಿ ಹೀಗೆ ನಿರ್ಣಯಿಸಲಾಗಿದೆ–

೧) ಸಂವಿಧಾನ ಸಭೆಯ ಕರ್ತವ್ಯಗಳು ಹೀಗಿರುತ್ತವೆ –

ಅ) ೧೯೪೬ ಡಿಸೆಂಬರ್ ೯ರಂದು ಪ್ರಾರಂಭವಾದ ಸಂವಿಧಾನ ರಚನೆಯ ಕಾರ್ಯವನ್ನು ಮುಂದುವರಿಸಿ ಮುಗಿಸುವುದು ಮತ್ತು

ಆ) ನೂತನ ಸಂವಿಧಾನದ ಪ್ರಕಾರ ಶಾಸನಸಭೆಯು ಅಸ್ತಿತ್ವಕ್ಕೆ ಬರುವವರೆಗೆ ಅದು ಡೊಮಿನಿಯನ್ನಿನ ಶಾಸನಸಭೆಯಾಗಿ ಕಾರ್ಯ ನಿರ್ವಹಿಸುವುದು.

೨) ರಾಜ್ಯಾಂಗ ರಚನಾ ಸಂಸ್ಥೆಯಾಗಿ ಅಸೆಂಬ್ಲಿಯ ಕಾರ್ಯವನ್ನು ಡೊಮಿನಿಯನ್ ಶಾಸನಸಭೆಯಾಗಿ ನೆರವೇರಿಸುವ ಸಾಮಾನ್ಯ ಕಲಾಪದಿಂದ ಸ್ಪಷ್ಟವಾಗಿ ಪ್ರತ್ಯೇಕಗೊಳಿಸಬೇಕು. ಈ ಎರಡೂ ಬಗೆಯ ವ್ಯವಹಾರಗಳಿಗೆ ಬೇರೆ ಬೇರೆ ದಿನಗಳನ್ನಾಗಲೀ, ಒಂದೇ ದಿನದಲ್ಲಿ ಬೇರೆ ಬೇರೆ ಅಧಿವೇಶನಗಳನ್ನಾಗಲೀ ನಿಗದಿಗೊಳಿಸತಕ್ಕದ್ದು.

೩) ಅಸೆಂಬ್ಲಿಯಲ್ಲಿ ಭಾರತೀಯ ರಾಜ್ಯಗಳ ಪ್ರತಿನಿಧಿಗಳ ಸ್ಥಾನವನ್ನು ಕುರಿತ ಆರನೆಯ ಪ್ಯಾರಾದಲ್ಲಿ ಇರುವ ಶಿಫಾರಸುಗಳನ್ನು ಒಪ್ಪಿಕೊಳ್ಳತಕ್ಕದ್ದು.

೪) ಡೊಮಿನಿಯನ್ ಶಾಸನಸಭೆಯಾಗಿ ಕೆಲಸ ಮಾಡುವಾಗ ಅಸೆಂಬ್ಲಿಯ ಕಲಾಪಗಳ ಅಧ್ಯಕ್ಷತೆ ವಹಿಸಲು ಸ್ಪೀಕರ್ ಎಂದು ಕರೆಯುವ ಒಬ್ಬ ಅಧಿಕಾರಿಯ ಚುನಾವಣೆಗೆ ಸಂವಿಧಾನ ಸಭೆಯ ನಿಯಮಾವಳಿಯಲ್ಲಿ ಸೂಕ್ತ ಅವಕಾಶವನ್ನು ಮಾಡತಕ್ಕದ್ದು.

೫) ಡೊಮಿನಿಯನ್ ಶಾಸನಸಭೆಯಾಗಿ ಕಾರ್ಯ ನಿರ್ವಹಿಸಲು ಅಸೆಂಬ್ಲಿಯನ್ನು ಕರೆಯುವ ಮತ್ತು ಅದನ್ನು ಮುಂದೂಡುವ ಅಧಿಕಾರವು ಅಧ್ಯಕ್ಷರಿಗಿರುತ್ತದೆ.

೬) ಸಂವಿಧಾನ ಸಭೆಯ ಸದಸ್ಯರಲ್ಲದ ಡೊಮಿನಿಯನ್ ಸರಕಾರದ ಸಚಿವರಿಗೆ, ಸಭೆಗೆ ಹಾಜರಾಗಲು ಮತ್ತು ಸಂವಿಧಾನ ರಚನೆಯ ಕಾರ್ಯದಲ್ಲಿ ಭಾಗವಹಿಸಲು ಹಕ್ಕಿರುತ್ತದೆ; ಆದರೆ ಅವರು ಸಂವಿಧಾನ ಸಭೆಯ ಸದಸ್ಯರಾಗುವವರೆಗೂ ಮತ ನೀಡುವ ಹಕ್ಕನ್ನು ಪಡೆದಿರುವುದಿಲ್ಲ.

೭) ಅಗತ್ಯವಾದ ಬದಲಾವಣೆಗಳನ್ನು ಅಳವಡಿಕೆಗಳನ್ನು ಮತ್ತು ಸೇರುವೆಗಳನ್ನು ಮಾಡತಕ್ಕದ್ದು–

ಅ. ಭಾರತೀಯ ವಿಧಾನಸಭೆಯ ನಿಯಮಗಳಿಗೆ ಮತ್ತು ಸ್ಥಿರ ಆದೇಶಗಳಿಗೆ ೧೯೪೭ರ ಭಾರತ ಸ್ವಾತಂತ್ರ್ಯ ಶಾಸನದ ಅನ್ವಯ ಭಾರತ ಸರಕಾರ ಶಾಸನದಲ್ಲಿ ಅಳವಡಿಸಿಕೊಂಡ ಸೂಕ್ತ ಅವಕಾಶಗಳಿಗೆ ಹೊಂದುವಂತೆ ಸಂವಿಧಾನ ಸಭೆಯ ಅಧ್ಯಕ್ಷರು ಮಾಡಬಹುದು.

ಆ. ವರದಿಯ ೯ನೆಯ ಪ್ಯಾರಾದ ಅವಕಾಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಮತ್ತು ಅಗತ್ಯವಾದ ಕಡೆಗಳಲ್ಲಿ ಭಾರತ ಸರಕಾರ ಶಾಸನದ ಸೂಕ್ತ ಪ್ರಕರಣವನ್ನು ನೂತನ ನಿಯಮಕ್ಕೆ ಸಂಗತವಾಗುವಂತೆ ಮಾಡುವ ಸಲುವಾಗಿ ನಿಯಮಗಳಿಗೂ ಸ್ಥಿರ ಆದೇಶಗಳಿಗೂ ಬದಲಾವಣೆ, ಅಳವಡಿಕೆ ಮೊದಲಾದವನ್ನು ಸಂವಿಧಾನ ಸಭೆಯಾಗಲೀ ಅಥವಾ ಅಧ್ಯಕ್ಷರಾಗಲೀ ಮಾಡಬಹುದು."

* * * * *

# ೬. ಪೂರ್ವ ಪಂಜಾಬಿಗೆ ಹೆಚ್ಚಿನ ಪ್ರಾತಿನಿಧ್ಯ

* **ಅಧ್ಯಕ್ಷರು :** ದೀರ್ಘ ಚರ್ಚೆಯನ್ನು ನಿವಾರಿಸುವ ಸಲುವಾಗಿ ಈ ನಿರ್ದಿಷ್ಟ ನಿರ್ಣಯಕ್ಕೆ ಸಂಬಂಧಿಸಿದಂತೆ ಅನುಸರಿಸಲಾಗಿರುವ ಕ್ರಮವನ್ನು ಕುರಿತು ನಾನು ಒಂದು ಹೇಳಿಕೆಯನ್ನು ನೀಡಬಹುದೇ? ಈ ವಿಷಯವು ಚಾಲನ ಸಮಿತಿಯ ಮುಂದೆ ಬಂದಿತು. ಮತ್ತು ಈ ಸಂಖ್ಯೆಗಳ ಪರಿಶೀಲನೆಯನ್ನು ಒಂದು ಸಣ್ಣ ಸಮಿತಿಗೆ ಒಪ್ಪಿಸುವುದು ಅಗತ್ಯ ಎಂಬುದಾಗಿ ಚಾಲನ ಸಮಿತಿಯು ಭಾವಿಸಿತು.

ಈ ಸಮಿತಿಯಲ್ಲಿ

ಡಾ॥ ಬಿ.ಆರ್. ಅಂಬೇಡ್ಕರ್,

ದಿವಾನ್ ಚಮನ್ ಲಾಲ್

ಗಿಯಾನಿ ಗುರುಮುಖ್ ಸಿಂಗ್ ಮುಸಾಫಿರ್

ಶ್ರೀ ರಫಿ ಅಹಮದ್ ಕಿದ್ವಾಯ್, ಮತ್ತು

ಶ್ರೀ ಅನಂತಶಯನಂ ಅಯ್ಯಂಗಾರ್

ಇವರಿದ್ದರು. ಸಮಿತಿಯು ಈ ಎಲ್ಲಾ ಅಂಕಿಸಂಖ್ಯೆಗಳನ್ನೂ, ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋದ ಜನರಿಗೆ ಸಂಬಂಧಿಸಿದ ಉಪಲಬ್ಧ ಮಾಹಿತಿಯನ್ನೂ ಪರಿಶೀಲಿಸಿ, ಕೆಲವು ಶಿಫಾರಸುಗಳನ್ನು ಮಾಡಿತು. ಅವುಗಳ ಆಧಾರದ ಮೇಲೆ ಪ್ರಸ್ತುತ ನಿರ್ಣಯವು ಸದನದ ಮುಂದೆ ಬಂದಿದೆ. ಈ ವಿಷಯವನ್ನು ಚಾಲನ ಸಮಿತಿಯ ಶಿಫಾರಸಿನಂತೆ ನಾನು ನೇಮಿಸಿದ ಒಂದು ಉಪಸಮಿತಿಯು ಪರಿಶೀಲಿಸಿದೆ. ಇದನ್ನು ಅಂಗೀಕರಿಸುವುದು ಅಥವಾ ಬಿಡುವುದು ಸದನಕ್ಕೆ ಸೇರಿದೆ. ಈ ನಿಲುವನ್ನು ವಿವರಿಸುವುದು ಉತ್ತಮ ಎಂದು ನಾನು ಭಾವಿಸಿದ್ದೇನೆ. ಉಪಸಮಿತಿಯ ವರದಿಯನ್ನು ಸದಸ್ಯರಿಗೆ ಹಂಚಲಾಗಿಲ್ಲ, ನಿರ್ಣಯವನ್ನು ಮಾತ್ರ ಹಂಚಲಾಗಿದೆ. ಆ ವರದಿಯೂ ಸದಸ್ಯರ ಮುಂದೆ ಇದ್ದಿದ್ದರೆ ಬಹುಶಃ ಚರ್ಚೆಯ ಬಹುಭಾಗವನ್ನು ನಿವಾರಿಸಬಹುದಾಗಿದ್ದಿತು. ಆದರೆ ಹಾಗೆ ಮಾಡಲಾಗಿಲ್ಲ, ಕ್ಷಮಿಸಬೇಕು.

* * * * *

# ೭. ೩೮–A ಯಿಂದ ೩೮–V ವರೆಗೆ ನೂತನ ನಿಯಮಗಳ ಸೇರ್ಪಡೆ

* **ಶ್ರೀಮತಿ ಜಿ. ದುರ್ಗಾಬಾಯಿ** (ಮದರಾಸು : ಸಾಮಾನ್ಯ) : ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನಲ್ಲಿರುವ ಈ ಗೊತ್ತುವಳಿಯನ್ನು ಮಂಡಿಸಬಯಸುತ್ತೇನೆ –

ಸಂವಿಧಾನ ಸಭೆಯ ನಿಯಮಗಳಿಗೆ (Constituent Assembly Rules) ಈ ಕೆಳಗಿನ ತಿದ್ದುಪಡಿಗಳನ್ನು ಪರಿಶೀಲಿಸಬಹುದು–

೩೮ನೆಯ ನಿಯಮದ ಮೇಲೆ ಈ ಕೆಳಗಿನಂತೆ ಸೇರಿಸಬೇಕು.

ಸೂಚಿತ ನಿಯಮಗಳು VI-A ಎಂಬ ಪ್ರಕರಣವಾಗುತ್ತವೆ. ಭಾರತೀಯ ಸಂವಿಧಾನದಲ್ಲಿ

---

* ಸಿ.ಎ.ಡಿ. ಅಧಿಕೃತ ವರದಿ ಸಂ–೬, ಜನವರಿ ೨೭, ೧೯೪೮, ಪುಟ ೯
* ಸಿ.ಎ.ಡಿ. ಅಧಿಕೃತ ವರದಿ ಸಂ. ೬, ಜನವರಿ ೨೭, ೧೯೪೮, ಪುಟ ೧೮

ಅವಕಾಶಗಳನ್ನು ಕಲ್ಪಿಸಲು ಕ್ರಮವನ್ನು ಅದು ನಿಗದಿಗೊಳಿಸುತ್ತದೆ. ಈ ನಿಯಮಗಳು ೩೮–A ಯಿಂದ ೩೮–B ವರೆಗೆ ಇಪ್ಪತ್ತೆರಡು ಪ್ರಕರಣಗಳಾಗಿ ಹರಡಿದ್ದು ಎರಡು ವರ್ಗಗಳಾಗಿ ವಿಭಾಗಿತವಾಗಿವೆ.

(ಈ ಗೊತ್ತುವಳಿಯ ಮೇಲೆ ಚರ್ಚೆ ನಡೆಯಿತು. ಅನಂತರ ಡಾ. ಅಂಬೇಡ್ಕರ್ ಅವರು ವಿಮರ್ಶೆಗೆ ಉತ್ತರ ಕೊಡಲು ಎದ್ದುನಿಂತರು – ಸಂ.)

* * * * *

+ **ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** (ಮುಂಬಯಿ : ಸಾಮಾನ್ಯ) : ಮಾನ್ಯ ಅಧ್ಯಕ್ಷರೇ, ಈ ಸಂವಿಧಾನ ಸಭೆಯು ಕೆಲವು ನಿಯಮಗಳನ್ನು ಅಳವಡಿಸಿಕೊಳ್ಳುವಂತೆ ಶ್ರೀಮತಿ ದುರ್ಗಾಬಾಯಿ ಅವರು ಮಂಡಿಸಿದ ಗೊತ್ತುವಳಿಯ ವಿರುದ್ಧವಾಗಿ ಶ್ರೀ ಸಂತಾನಂ ಅವರು ಮಾಡಿರುವ ಟೀಕೆಗಳಲ್ಲಿ ಕೆಲವಕ್ಕೆ ನಾನು ವಿವರಣೆ ಕೊಡಬಯಸುತ್ತೇನೆ. ಅವರ ಸಲಹೆಗೆ ವಿರುದ್ಧವಾಗಿ ಶ್ರೀ ಸಂತಾನಂ ಅವರ ಮುಖ್ಯವಾದ ಟೀಕೆ, ಈಗಿರುವ ೨೪ನೆಯ ನಿಯಮವೇ ನಮ್ಮ ದೃಷ್ಟಿಯಲ್ಲಿರುವ ಉದ್ದೇಶಕ್ಕೆ ಸಾಕಷ್ಟಾಗಿರುವುದರಿಂದ ಹೊಸ ನಿಯಮಗಳ ಅವಶ್ಯಕತೆ ಇಲ್ಲ ಎನ್ನುವುದು. ಗೊತ್ತುವಳಿಯನ್ನು ವಿರೋಧಿಸಲು ಮೇಲೆದ್ದಾಗ ಶ್ರೀ ಸಂತಾನಂ ಅವರು ಪ್ರಶ್ನೆಗೆ ಸಾಕಷ್ಟು ಗಮನ ಕೊಟ್ಟಿಲ್ಲ ಎಂದು ನಾನು ಭಾವಿಸುತ್ತೇನೆ. ೨೪ನೆಯ ನಿಯಮವು ಒಂದು ಗೊತ್ತುವಳಿಯನ್ನು ಕುರಿತು ಹೇಳುತ್ತಾ ಈ ಸದನದಲ್ಲಿ ಒಂದು ಗೊತ್ತುವಳಿಯ ಮೂಲಕ ಏನು ಬೇಕಾದರೂ ಮಾಡಬಹುದು ಎಂದು ಹೇಳುತ್ತದೆ. ಅದು ನಿಜ. ಈ ಸ್ಥೂಲ ರೂಪದ ನಿಯಮವು ಸಾಕಾಗುವುದಿಲ್ಲ, ಇನ್ನೂ ವಿವರವಾದ ನಿಯಮಗಳು ಅವಶ್ಯಕ ಎಂಬುದನ್ನು ಶ್ರೀ ಸಂತಾನಂ ಅರ್ಥಮಾಡಿಕೊಂಡಿಲ್ಲ. ಏಕೆಂದರೆ ಗೊತ್ತುವಳಿಗಳು ಎರಡು ಬಗೆಯಾಗುತ್ತವೆ. ಮುಂದಿನ ಒಂದು ಹಂತ ಎಂಬುದಿಲ್ಲದೆ ಗೊತ್ತುವಳಿ ಇರಬಹುದು. ಆ ನಿರ್ದಿಷ್ಟ ಗೊತ್ತುವಳಿಯ ಮೇಲೆ ಸದನವು ನಿರ್ಣಯವನ್ನು ಕೈಗೊಳ್ಳುವುದರೊಂದಿಗೆ ಅದು ಮುಗಿದು ಹೋಗುತ್ತದೆ. ಆದರೆ ಮುಂದಿನ ಹಂತಗಳಿರುವ ಒಂದು ವರ್ಗದ ಗೊತ್ತುವಳಿಗಳೂ ಉಂಟು. ಈ ಬಗೆಯ ಗೊತ್ತುವಳಿಗೆ ಒಂದು ನಿದರ್ಶನವೆಂದರೆ ಒಂದು ಮಸೂದೆಯನ್ನು ಮಂಡಿಸುವ ಗೊತ್ತುವಳಿ, ಸದನವು ಆ ಗೊತ್ತುವಳಿಯ ಪರವಾಗಿ ನಿರ್ಣಯಿಸಿದರೆ ಮಸೂದೆಯನ್ನು ಮಂಡಿಸಿದ ಗೊತ್ತುವಳಿಯು ಅಷ್ಟಕ್ಕೆ ಮುಗಿದುಹೋಗುವುದಿಲ್ಲ. ಅದು ಹಾಯ್ದು ಹೋಗಬೇಕಾದ ಮುಂದಿನ ಹಂತಗಳಿವೆ. ಆದ್ದರಿಂದ ಈ ಬಗೆಯ ಗೊತ್ತುವಳಿಯ ಮುಂದಿನ ಹಂತಗಳನ್ನು ನಿರ್ದಿಷ್ಟ ನಿಯಮವು ನಿಯಂತ್ರಿಸಬೇಕಾದುದು ಅತ್ಯಗತ್ಯ. ನನ್ನ ಮಿತ್ರ ಶ್ರೀ ಸಂತಾನಂ ಅವರು ಸಂವಿಧಾನ ಸಭೆಯ (ಶಾಸಕಾಂಗ) ನಿಯಮಗಳನ್ನು ನೋಡಿದ್ದರೆ, ಶ್ರೀಮತಿ ದುರ್ಗಾಬಾಯಿ ಅವರು ಮಂಡಿಸಿರುವ ನೂತನ ನಿಯಮಗಳ ಅವಕಾಶವು ಸಂವಿಧಾನ ಸಭೆಯ ನಿಯಮಗಳು ಮತ್ತು ಸ್ಥಿರ ಆದೇಶಗಳನ್ನು ಒಳಗೊಂಡಿರುವ ಅವಕಾಶಗಳ ಮಾದರಿಯಲ್ಲೇ ಇವೆ ಎಂದು ಅವರಿಗೆ ಅರ್ಥವಾಗುತ್ತಿತ್ತು. ನಿದರ್ಶನಕ್ಕೆ ಸಂವಿಧಾನ ಸಭೆಯ ಇಪ್ಪತ್ನಾಲ್ಕನೆಯ ನಿಯಮಕ್ಕೆ ಸಂವಾದಿಯಾಗಿ ಅದನ್ನೇ ಹೋಲುವ ಮೂವತ್ತನೆಯ ಸ್ಥಿರ ಆದೇಶವಿದೆ. ಅದರ ಪದಗಳು ಇಪ್ಪತ್ನಾಲ್ಕನೆಯ ನಿಯಮದ ಪದಗಳೇ ಆಗಿವೆ. ಹಾಗಿದ್ದರೂ ಇನ್ನೊಂದು ಸ್ಥಿರ ಆದೇಶವಿದ್ದರೆ ಅದು ೩೭ನೆಯದು. ಅದು ಮಸೂದೆಗಳಿಗೆ ಅವಕಾಶ ಕೊಡುತ್ತದೆ. ಅವುಗಳಿಗೆ ಸಂಬಂಧಿಸಿದಂತೆ ಸದನದಲ್ಲಿ ಮಂಡಿಸಬಹುದಾದ ಮುಂದಿನ ಗೊತ್ತುವಳಿಗಳು ಯಾವುವು

---

\+ ಅದೇ ಸಂಪುಟ, ಪುಟಗಳು ೨೫–೨೮

ಎಂಬುದನ್ನು ಅದು ಸೂಚಿಸುತ್ತದೆ. ಆದ್ದರಿಂದ ನೂತನ ನಿಯಮವನ್ನು ಅಳವಡಿಸಲು ಮಾಡಿರುವ ಸಲಹೆಯು ಸಂವಿಧಾನ ಸಭೆಯು ತನ್ನ ಶಾಸಕಾಂಗ ನಿಲುವಿನಿಂದ ಅಳವಡಿಸಿಕೊಂಡ ಕ್ರಮಕ್ಕೆ ಅನುಗುಣವಾಗಿದೆ. ಸಂವಿಧಾನ ಸಭೆಯು ಶಾಸನ ರೂಪಿಸಲು ಸಂಬಂಧಿಸಿದಂತೆ ಕಲಾಪಗಳನ್ನು ನಡೆಸಲು ಇಪ್ಪತ್ನಾಲ್ಕನೆಯ ನಿಯಮವನ್ನು ಆಧರಿಸಿದ ಪಕ್ಷದಲ್ಲಿ ಶುದ್ಧಾಂಗವಾದ ಗೊಂದಲ ಉಂಟಾಗಿ ಬಿಡುತ್ತದೆ ಎನ್ನುವುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ೨೪ನೆಯ ನಿಯಮ ಮಾತ್ರ ಇದ್ದಿದ್ದರೆ ಒಬ್ಬ ವ್ಯಕ್ತಿಯು ಮಂಡಿಸಬಹುದಾದ ಗೊತ್ತುವಳಿಗಳ ಸಂಖ್ಯೆಗಾಗಲೀ ಅಥವಾ ಅವುಗಳ ಸ್ವರೂಪಕ್ಕಾಗಲೀ ಯಾವ ಮಿತಿಯೂ ಇರುವುದಿಲ್ಲ. ಶಾಸನ ಸಭಾ ನಿಯಮಗಳಲ್ಲಿ ಒಂದು ಮಸೂದೆಯನ್ನು ಮಂಡಿಸಿದ ಮೇಲೆ ಕೇವಲ ಮೂರು ಗೊತ್ತುವಳಿಗಳ ಮಂಡನೆಗೆ ಅನುಮತಿ ಇದೆ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಿರುತ್ತಾರೆ. ಒಂದು ಪರಿಚಲನೆಗಾಗಿ, ಇನ್ನೊಂದು ಮಸೂದೆಯನ್ನು ಒಂದು ಸೆಲೆಕ್ಟ್ ಕಮಿಟಿಗೆ ಒಪ್ಪಿಸುವ ಸಲುವಾಗಿ, ಮೂರನೆಯದು ಮಸೂದೆಯನ್ನು ಅಂಗೀಕರಿಸುವ ಸಲುವಾಗಿ. ೨೪ನೆಯ ನಿಯಮವಲ್ಲದೆ ನಮ್ಮ ಕಲಾಪಗಳನ್ನು ನಿಯಂತ್ರಿಸುವ ಬೇರೆ ಯಾವ ನಿಯಮವೂ ಇರದಿದ್ದರೆ ಯಾವ ಸದಸ್ಯರು ಬೇಕಾದರೂ ತನ್ನ ಮನಸ್ಸಿಗೆ ಬಂದಂತೆ ಯಾವ ಬಗೆಯ ಗೊತ್ತುವಳಿಯನ್ನು ಬೇಕಾದರೂ ಮಂಡಿಸಲು ಅವಕಾಶವಾಗುತ್ತಿದ್ದಿತು. ವಾಸ್ತವವಾಗಿ ಕೆಲವು ಸಂದರ್ಭಗಳಲ್ಲಿ ಈ ಮೂರರಲ್ಲಿ ಯಾವುದೇ ಒಂದು ಬಗೆಯ ಗೊತ್ತುವಳಿಯನ್ನು ಮಂಡಿಸಲು ಸ್ವಾತಂತ್ರ್ಯ ಕೊಡದಿರುವುದು ಅಗತ್ಯವಾಗುತ್ತದೆ. ನಮ್ಮ ನೂತನ ಸಂವಿಧಾನವನ್ನು ಒಳಗೊಂಡ ಮಸೂದೆಯನ್ನು ಅಂಗೀಕರಿಸುವ ಉದ್ದೇಶದ ಕಲಾಪದಲ್ಲಿ ಒಬ್ಬ ಸದಸ್ಯರು ಮಂಡಿಸಬಹುದಾದ ಗೊತ್ತುವಳಿಗಳ ಪಟ್ಟಿಯನ್ನು ಮಿತಿಗೊಳಿಸಿದ್ದೇನೆ. ನೂತನ ನಿಯಮಗಳಲ್ಲಿ ಸಂವಿಧಾನದ ಪರಿಚಲನೆಗಾಗಿ ಗೊತ್ತುವಳಿಗೆ ನಾವು ಅನುಮತಿ ಕೊಟ್ಟಿಲ್ಲ. ಏಕೆಂದರೆ ಅದರಿಂದ ಅನಗತ್ಯವಾಗಿ ವಿಳಂಬವಾಗುತ್ತದೆ ಎಂದು ನಾವು ಭಾವಿಸುತ್ತೇವೆ. ಒಟ್ಟಿನಲ್ಲಿ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಮುಖ್ಯ ಸಂಗತಿ ಏನೆಂದರೆ, ಈ ನಿಯಮಗಳನ್ನು ಅಂಗೀಕರಿಸದ ಪಕ್ಷದಲ್ಲಿ ಮಸೂದೆಯ ಮುಂದಿನ ಹಂತಗಳನ್ನು ನಿಯಂತ್ರಿಸುವುದು ಅಸಾಧ್ಯವಾಗುತ್ತಿತ್ತು. ಆದ್ದರಿಂದ ಶ್ರೀ ಸಂತಾನಂ ಅವರು ಎತ್ತಿರುವ ವಿಚಾರದಲ್ಲಿ ಹುರುಳಿಲ್ಲ ಎಂದು ನಾನು ಭಾವಿಸುತ್ತೇನೆ.

ಶ್ರೀ ಸಂತಾನಂ ಎತ್ತಿರುವ ಇನ್ನೊಂದು ಟೀಕೆ, ಸಂವಿಧಾನ ಸಭೆಯು ಅಂಗೀಕರಿಸಿದ ಒಂದು ಮಸೂದೆಯ ಅಂಗೀಕಾರಕ್ಕೆ ಗವರ್ನರ್ ಜನರಲ್ ಅವರ ಸಮ್ಮತಿ ಅಗತ್ಯವೆಂದು ಹೇಳುವ ಒಂದು ನಿಯಮವನ್ನು ಕುರಿತದ್ದು. ಈ ಸದನದ ಸದಸ್ಯರಿಗೆ ನೆನಪಿರುವಂತೆ ಒಂದು ಸಮಿತಿಯು ಸಂವಿಧಾನ ಸಭೆಯ ಕಾರ್ಯಗಳನ್ನು ಎರಡು ಭಾಗವಾಗಿ ಮಾಡುವ ವರದಿಯನ್ನು ಸಲ್ಲಿಸಿತು. ಅದರ ಪ್ರಕಾರ ಅಸೆಂಬ್ಲಿಯು ೧) ರಾಜ್ಯಾಂಗ ರಚನೆಗೆ ಸಂಬಂಧಿಸಿದ ಕಾನೂನುಗಳನ್ನು ಮಾಡುವ ಸಂವಿಧಾನ ಸಭೆ, ಮತ್ತು ೨) ಸಾಮಾನ್ಯ ಕಾನೂನುಗಳನ್ನು ಮಾಡುವ ಡೊಮಿನಿಯನ್ ಶಾಸನಸಭೆ, ಹೀಗೆ ಸಂವಿಧಾನ ಸಭೆಯ ಕೆಲಸವನ್ನು ಅದು ಎರಡು ಭಾಗವಾಗಿ ಒಡೆಯಿತು. ಒಂದು ಭಾಗವು ಭವಿಷ್ಯತ್ತಿನ ಸಂವಿಧಾನದ ನಿರ್ಮಾಣಕ್ಕೆ ಸಂಬಂಧ ಪಟ್ಟಿದ್ದರೆ, ಇನ್ನೊಂದು ೧೯೩೫ರ ಭಾರತ ಸರಕಾರ ಶಾಸನ, ಹಾಗೂ ೧೯೪೭ರ ಭಾರತೀಯ ಸ್ವಾತಂತ್ರ್ಯ ಶಾಸನಗಳಲ್ಲಿ ಉಕ್ತವಾದಂತೆ, ಪ್ರಸ್ತುತ ಸಂವಿಧಾನಕ್ಕೆ ತಿದ್ದುಪಡಿ ಮಾಡುವುದನ್ನು ಕುರಿತಿತ್ತು. ಭವಿಷ್ಯತ್ತಿನ ಸಂವಿಧಾನದ ರಚನೆ ಮತ್ತು ಅಂಗೀಕಾರಗಳ ಅಧಿಕಾರವನ್ನು ಕುರಿತಂತೆ ಗವರ್ನರ್ ಜನರಲ್ ಅವರಿಗೆ ಯಾವ ಸ್ಥಾನವೂ ಇಲ್ಲ ಅದಕ್ಕೆ ಅವರ ಸಮ್ಮತಿ ಅಗತ್ಯವಲ್ಲ ಸಂವಿಧಾನ ಸಭೆಯೇ ಸರ್ವೋನ್ನತ. ಗವರ್ನರ್ ಜನರಲ್ಲರ ಸಮ್ಮತಿ ಅಗತ್ಯವಲ್ಲದ್ದು ಮಾತ್ರವಲ್ಲ, ಈಗ ರಚಿಸಿರುವ ಹೊಸ ನಿಯಮಗಳಂತೆ ಅದಕ್ಕೆ ಅಧ್ಯಕ್ಷರ ಸಮ್ಮತಿಯೂ ಬೇಕಾಗಿಲ್ಲ. ಅಧ್ಯಕ್ಷರಿಗೆ ಕೊಟ್ಟಿರುವ ಒಂದೇ ಒಂದು

ಅಧಿಕಾರ, ಈ ಅಸೆಂಬ್ಲಿಯು, ಸಂವಿಧಾನವನ್ನು ಅಂಗೀಕರಿಸಿದ ಮೇಲೆ, ಅದು ಸಂವಿಧಾನದ ಅಂತಿಮ ಶಾಸನವೆಂದು ಸಾಂಕೇತಿಕವಾಗಿ ಅದಕ್ಕೆ ಸಹಿ ಮಾಡುವುದು ಮಾತ್ರ. ಅದು ಪದದ ಸಾಮಾನ್ಯಾರ್ಥದಲ್ಲಿ ಸಮ್ಮತಿ ಅಲ್ಲ. ಪ್ರಸ್ತುತ ಸಂವಿಧಾನದ ತಿದ್ದುಪಡಿಗೆ ಸಂಬಂಧಿಸಿದಂತೆ, ಗವರ್ನರ್ ಜನರಲ್ಲರ ಅನುಮೋದನೆಯನ್ನು ಉಳಿಸಿಕೊಳ್ಳಲಾಗಿದೆ. ಇಂಥದೊಂದು ಅವಕಾಶವನ್ನು ಉಳಿಸಿಕೊಂಡದ್ದಕ್ಕಾಗಿ ಘಾಸಿಗೊಂಡಿರುವ ಕೆಲವು ಸದಸ್ಯರಿದ್ದಾರೆ ಎಂದು ನಾನು ಬಲ್ಲೆ. ಆದರೆ ಒಂದು ವಿಷಯವನ್ನು ನಾನು ಸದನಕ್ಕೆ ಹೇಳಬೇಕು. ಈ ವಿಚಾರವನ್ನು ದೇಶದಲ್ಲಿ ಉಪಲಬ್ಧವಿದ್ದ ಅತ್ಯುತ್ತಮ ನ್ಯಾಯವಾದಿಗಳು ಪರಿಶೀಲಿಸಿದ್ದಾರೆ. ಗವರ್ನರ್ ಜನರಲ್ಲರ ಅನುಮೋದನೆಯನ್ನು ಉಳಿಸಿಕೊಳ್ಳುವುದು ಅಪೇಕ್ಷಣೀಯ ಮಾತ್ರವಲ್ಲ, ಅಗತ್ಯ ಕೂಡ ಎಂಬ ನಿರ್ಣಯಕ್ಕೆ ಅವರೆಲ್ಲರೂ ಬಂದಿದ್ದಾರೆ. ಇದಕ್ಕೆ ಕಾರಣಗಳನ್ನು ವಿವರಿಸುತ್ತೇನೆ. ಮೊದಲನೆಯದಾಗಿ, ಪ್ರತಿಯೊಬ್ಬರೂ ತಿಳಿದಿರುವಂತೆ ಸಂವಿಧಾನವನ್ನು ಹೊಂದಿಸಿಕೊಳ್ಳುವ ಅಧಿಕಾರ ಗವರ್ನರ್ ಜನರಲ್ಲರಿಗಿದೆ. ಹೊಂದಾಣಿಕೆ ಎನ್ನುವುದು ಸಂವಿಧಾನಕ್ಕೆ ತಿದ್ದುಪಡಿ ಮಾಡುವುದಕ್ಕೆ ಇನ್ನೊಂದು ಹೆಸರು ಅಷ್ಟೆ. ಸಂವಿಧಾನವನ್ನು ಹೊಂದಿಸಿಕೊಳ್ಳುವುದಕ್ಕೂ, ಸಂವಿಧಾನವನ್ನು ತಿದ್ದುಪಡಿ ಮಾಡುವುದಕ್ಕೂ ತುಂಬಾ ವ್ಯತ್ಯಾಸವೇನಿಲ್ಲ. ಅವೆರಡೂ ಒಂದೇ ಆಗಿವೆ. ಇಲ್ಲಿ ಏಳುವ ಪ್ರಶ್ನೆ ಇದು. ಗವರ್ನರ್ ಜನರಲ್ ಅವರಿಗೆ ಸಂವಿಧಾನವನ್ನು ಹೊಂದಾಣಿಕೆಗೊಳಿಸುವ ರೂಪದಲ್ಲಿ ತಿದ್ದುಪಡಿ ಮಾಡುವ ಅಧಿಕಾರ ಇರಬೇಕೆ ಎನ್ನುವುದು ಸಂವಿಧಾನದ ತಿದ್ದುಪಡಿ ಎಂಬ ಅದೇ ಉದ್ದೇಶವನ್ನುಳ್ಳ ಒಂದು ಮಸೂದೆಗೆ ಸಂಬಂಧಿಸಿದಂತೆ ಅಧಿಕಾರವಿದ್ದರೆ ಅದರಿಂದ ಯಾವ ಹಾನಿಯಾದೀತು?

**ಶ್ರೀ ಕೆ. ಸಂತಾನಂ :** ಹಾಗಾದರೆ ಮಸೂದೆ ಏಕೆ ಬೇಕೆನ್ನುವಿರಿ, ತಿಳಿದುಕೊಳ್ಳಬಹುದೆ?

**ಡಾ॥ ಬಿ.ಆರ್. ಅಂಬೇಡ್ಕರ್ :** ಉತ್ತರ ಸರಳವಾಗಿದೆ, ಹೆಚ್ಚೆಂದರೆ ಹೊಂದಾಣಿಕೆಯ ಅಧಿಕಾರವು ಮಾರ್ಚ್ ೩೧ನೆಯ ತಾರೀಖಿಗೆ ಮುಗಿದು ಹೋಗುತ್ತದೆ. ಹೀಗಿರುವಾಗ, ಸಂವಿಧಾನಕ್ಕೆ ತಿದ್ದುಪಡಿ ತರುವ ಅಗತ್ಯ ಬಂದರೆ ಆಗ ಏನಾಗಬೇಕು? ಹೊಂದಾಣಿಕೆಯ ಅಧಿಕಾರವು ಏಪ್ರಿಲ್ ಒಂದರಂದು ಇರುವುದಿಲ್ಲ. ಆದ್ದರಿಂದ ನಮ್ಮ ಮುಂದಿನ ಸಂವಿಧಾನವು ಏಪ್ರಿಲ್ ಒಂದರಂದು ಕಾರ್ಯೋನ್ಮುಖವಾದರೆ, ಆಗ ಸಮಸ್ಯೆ ಏಳುವುದೇ ಇಲ್ಲ. ಪ್ರಸ್ತುತ ಸಂವಿಧಾನವು ವ್ಯಾಪಿಸಿಕೊಂಡಿರುವ ಭೂಪ್ರದೇಶವನ್ನು ನೂತನ ಸಂವಿಧಾನವು ಸಂಪೂರ್ಣವಾಗಿ ಹೊಂದಿರುತ್ತದೆ. ಹಾಗಾಗುವುದಿಲ್ಲ ಎಂಬ ಭರವಸೆಯೂ ನಮಗಿಲ್ಲ. ೧೯೪೮ ಏಪ್ರಿಲ್ ೧ನೇ ತಾರೀಖಿಗೂ ನೂತನ ಸಂವಿಧಾನ ಪ್ರಾರಂಭಕ್ಕೂ ನಡುವೆ ಸ್ವಲ್ಪ ಕಾಲದ ತೆರವು ಬೀಳಬಹುದು. ಮಾರ್ಚ್ ೩೧ಕ್ಕೂ ಸಂವಿಧಾನದ ಪ್ರಾರಂಭಕ್ಕೂ ನಡುವೆ ಒಂದೋ ಎರಡೋ ತಿಂಗಳು ಅಂತರವಿರಬಹುದು. ಅಷ್ಟೇ ಅಲ್ಲ, ಈ ಸದನವು ರಚಿಸಿ ಅಂಗೀಕರಿಸಿದ ಇಡೀ ಸಂವಿಧಾನವು ಒಟ್ಟಿಗೆ ಕಾರ್ಯಪ್ರವೃತ್ತವಾಗದೆ ಇರಬಹುದು; ಅದು ಭಾಗ ಭಾಗವಾಗಿ ಜಾರಿಗೆ ಕೊಡಬಹುದು. ಗೌಣವಿಷಯಗಳು ಎಂದು ಕರೆಯುವ ಅಂಶಗಳನ್ನು ಜಾರಿಗೊಳಿಸುವ ಉದ್ದೇಶದಿಂದ ಮತಕ್ಷೇತ್ರಗಳನ್ನು ವಿವರಿಸಲು ತಾತ್ಕಾಲಿಕ ಅವಕಾಶಗಳು, ಪೂರಕ ಅವಕಾಶಗಳು ಇರಬಹುದು. ಯಾವುದಾದರೂ ಸಮಯದಲ್ಲಿ ಇವೆಲ್ಲವೂ ಅಗತ್ಯವಾಗುವುದರಲ್ಲಿ ಸಂದೇಹವಿಲ್ಲ. ಪರಿಣಾಮವಾಗಿ ಮಾರ್ಚ್ ೩೧ರಂದು ಕೊನೆಗೊಳ್ಳುವ ಸಂವಿಧಾನದ ಹೊಂದಾಣಿಕೆಯ ಪ್ರಕ್ರಿಯೆಯನ್ನು ಮುಂದುವರಿಸಲೇಬೇಕು, ಅದು ಈ ಸದನವು ಒಂದು ಮಸೂದೆಯನ್ನು ಅಂಗೀಕರಿಸುವ ಎಲ್ಲರಿಗೂ ತಿಳಿದ ಪ್ರಕ್ರಿಯೆಯಿಂದಲೇ ಮುಂದುವರಿಯಬೇಕು.

ಈ ಬೆಳಕಿನಲ್ಲಿ ಒಂದು ಮಸೂದೆಯ ಮೂಲಕ ಚಾಲ್ತಿಯಲ್ಲಿರುವ ಸಂವಿಧಾನವನ್ನು ಬದಲಾಯಿಸುವ ಅವಕಾಶವು ಅಗತ್ಯವೆಂಬುದು ಸ್ಪಷ್ಟವಾಗುತ್ತದೆ. ಈ ಅಂಶವನ್ನು ಅರಿತವರು, ಹೊಂದಾಣಿಕೆಯ ಉದ್ದೇಶವೂ

ಸಂವಿಧಾನಕ್ಕೆ ತಿದ್ದುಪಡಿ ತರುವ ಮಸೂದೆಯ ಉದ್ದೇಶವೂ ಒಂದೇ ಎಂಬುದನ್ನು ಅರ್ಥಮಾಡಿಕೊಂಡವರು ಮಸೂದೆಗೆ ಗವರ್ನರ್ ಜನರಲ್ ಅವರ ಅನುಮೋದನೆಯನ್ನು ಪಡೆಯುವ ಅವಕಾಶದ ಸಿಂಧುತ್ವವನ್ನು ಪ್ರಶ್ನಿಸುವುದಿಲ್ಲ. ಎರಡರ ಉದ್ದೇಶವೂ ಒಂದೇ ಆಗಿದ್ದು ಹೊಂದಾಣಿಕೆಗೆ ಗವರ್ನರ್ ಜನರಲ್ಲರ ಒಪ್ಪಿಗೆ ಅಗತ್ಯವಾಗಿದ್ದರೆ, ತಿದ್ದುಪಡಿಯ ಮಸೂದೆಗೆ ಏಕೆ ಅದು ಅಗತ್ಯವಲ್ಲ ಎಂಬ ಪ್ರಶ್ನೆ ಏಳುತ್ತದೆ. ಖಚಿತವಾಗಿ ಹೇಳುವುದಾದರೆ ತಾರ್ಕಿಕ ಅಸಾಂಗತ್ಯ ಅಲ್ಲಿ ಯಾವುದೂ ಇಲ್ಲ. ಸಮಿತಿಯು ಬಹುಮಟ್ಟಿಗೆ ಸ್ವಾತಂತ್ರ್ಯ ಶಾಸನದ ೬ನೆಯ ಪ್ರಕರಣದ (೩)ನೆಯ ಒಳಪ್ರಕರಣದಲ್ಲಿ ಇರುವ ಅವಕಾಶದಿಂದ ಬಹುಮಟ್ಟಿಗೆ ಡೊಮಿನಿಯನ್ ಶಾಸನಸಭೆಯು ಅಂಗೀಕರಿಸಿದ ಎಲ್ಲಾ ಕಾನೂನುಗಳು ಗವರ್ನರ್ ಜನರಲ್ಲರ ಅನುಮೋದನೆಯನ್ನು ಪಡೆದೇ ತೀರುತ್ತವೆ. ಆ ಒಳಪ್ರಕರಣವು ಯಾವ ಅರ್ಥವನ್ನು ಕೊಡುತ್ತದೆಯೋ ಅದು ಇಂದು ಅನಿಶ್ಚಿತವಾಗಿದೆ. ಗವರ್ನರ್ ಜನರಲ್ಲರಿಗೆ ಅನುಮೋದಿಸುವ ಅಧಿಕಾರವಿದೆ. ಈಗ ಪ್ರಶ್ನೆ ಇರುವುದು ಸ್ವಾತಂತ್ರ್ಯ ಶಾಸನದ ಪ್ರಕಾರ ತನ್ನ ಅನುಮೋದನೆಯನ್ನು ಕೊಡುವ ಅಧಿಕಾರ ಅವರಿಗಿರುವುದರಿಂದ ಅಸೆಂಬ್ಲಿಯು ಪ್ರಸ್ತುತ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಒಂದು ಮಸೂದೆಯನ್ನು ಗವರ್ನರ್ ಜನರಲ್ ಅವರಿಗೆ ಒಪ್ಪಿಸಬೇಕೆ ಬೇಡವೇ ಎನ್ನುವುದು. ಇಲ್ಲಿ ಯಾವುದೇ ಸ್ಪಷ್ಟ ಅಭಿಪ್ರಾಯವನ್ನು ಕೊಡಲು ನಾವು ಸಮರ್ಥರಾಗಿರಲಿಲ್ಲ. ಆರನೆಯ ಪ್ರಕರಣದ ಮೂರನೆಯ ಒಳಪ್ರಕರಣದಲ್ಲಿ ತಿದ್ದುಪಡಿ ಮಸೂದೆಯನ್ನು ಗವರ್ನರ್ ಜನರಲ್ಲರ ಅನುಮೋದನೆಗಾಗಿ ಒಪ್ಪಿಸಲು ಬದ್ಧತೆ ಏನಿಲ್ಲ ಎಂಬ ಕಾರಣದಿಂದ, ಕಳುಹಿಸದೆ ಹೋದ ಪಕ್ಷದಲ್ಲಿ ಒಂದು ನ್ಯಾಯಾಲಯವು ಅದಕ್ಕೆ ವ್ಯತಿರಿಕ್ತವಾಗಿ, ಈ ಅಸೆಂಬ್ಲಿಯು ಅಂಗೀಕರಿಸಿ, ಗವರ್ನರ್ ಜನರಲ್ಲರಿಗೆ ಅನುಮೋದನೆಗಾಗಿ ಒಪ್ಪಿಸದಿರುವುದು ಅಧಿಕಾರಕ್ಕೆ ಮೀರಿದ ಕೆಲಸವಾಗಿದೆ ಎಂಬುದಾಗಿ ತೀರ್ಪು ಕೊಡಬಹುದು. ಈ ಅಸೆಂಬ್ಲಿಯು ಅಂಗೀಕರಿಸಿದ ಶಾಸನವು ಆ ಬಗೆಯ ತಡೆಗೆ ಸಿಕ್ಕಿಕೊಳ್ಳುವುದನ್ನು ನಾವು ಇಚ್ಛಿಸಲಿಲ್ಲ. ಆದ್ದರಿಂದ ಅಪಾರವಾದ ಎಚ್ಚರಿಕೆಯಿಂದಲೂ, ಅದರಲ್ಲಿ ತರ್ಕರಹಿತವಾದುದು ಏನು ಇಲ್ಲವೆಂಬ ಭಾವನೆಯಿಂದಲೂ ನಾವು ನೂತನ ನಿಯಮವನ್ನು ಅಳವಡಿಸಿದ್ದೇವೆ. ಸಂವಿಧಾನ ರಚನಾ ಸಮಿತಿಯು ಮಾಡಿರುವ ಕೆಲಸ ಅತ್ಯಂತ ವಿಹಿತವಾಗಿದೆ, ಕ್ರಮಬದ್ಧವಾಗಿದೆ. ಶ್ರೀ ಸಂತಾನಂ ಮತ್ತು ಅವರನ್ನು ಅನುಸರಿಸಿದ ಮಿತ್ರರು ಎತ್ತಿರುವ ವಿಷಯಗಳಲ್ಲಿ ನಿಜವಾಗಿ ಏನೂ ಹುರುಳಿಲ್ಲ.

* * * * *

* **ಅಧ್ಯಕ್ಷರು :** ಗೊತ್ತುವಳಿಯನ್ನು ಮತಕ್ಕೆ ಹಾಕುವುದಕ್ಕಿಂತ ಮುಂಚೆ ಮಂಡಿಸಿದವರನ್ನು ಕೇಳಬಯಸುತ್ತೇನೆ, ಉತ್ತರ ರೂಪವಾಗಿ ಅವರು ಏನಾದರೂ ಹೇಳುವುದಿದೆಯೇ?

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ :** ಅದಕ್ಕೆ ಮುಂಚೆ ಒಂದು ಮಾತು ಹೇಳಲು ಅನುಮತಿ ಬೇಡುತ್ತೇನೆ. ಈ ಗೊತ್ತುವಳಿಯನ್ನು ಅಂಗೀಕರಿಸದೆ ಇದ್ದಲ್ಲಿ ಯಾವ ಪರಿಣಾಮಗಳುಂಟಾಗುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಬಯಸುತ್ತೇನೆ. ಏಕೆಂದರೆ ಭಾರತ ಸರಕಾರ ಶಾಸನದ ಮೂವತ್ತೆರಡನೆಯ ಪ್ರಕರಣದಂತೆ ಒಂದು ಮಸೂದೆಯನ್ನು ಒಪ್ಪಿಸಿದಾಗ, ಅದಕ್ಕೆ ಅನುಮೋದನೆಯನ್ನು ಕೊಡುವ, ಅಥವಾ ತಡೆಹಿಡಿಯುವ ಹಕ್ಕು ಗವರ್ನರ್ ಜನರಲ್ಲರಿಗಿದೆ. ಪ್ರಸ್ತುತ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಒಂದು ಮಸೂದೆಗೆ ಸಂಬಂಧಿಸಿದಂತೆ ಗವರ್ನರ್ ಜನರಲ್ ಅವರಿಗೆ ಅನುಮೋದನೆ ನೀಡುವ ಅಥವಾ ತಡೆಹಿಡಿಯುವ ಅಧಿಕಾರವಿದೆಯೆಂದು ನಾವು ಭಾವಿಸುತ್ತಿದ್ದೇವೆಯೇ?

---

* ಸಿ.ಎ.ಡಿ. ಅಧಿಕೃತ ವರದಿ ಸಂ.೬, ಜನವರಿ ೨೭, ೧೯೪೮, ಪುಟ ೨೯

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಅವರು ಸಾಂವಿಧಾನಿಕ ಗವರ್ನರ್‌ರ ಸಲಹೆಯ ಮೇಲೆ ವರ್ತಿಸುತ್ತಾರೆ.

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ :** ವಿವರಣೆ ಅಗತ್ಯವಾಗಿರುವ ಇನ್ನೊಂದು ವಿಷಯ ಇದು. ಡೊಮಿನಿಯನ್ ಶಾಸನ ಸಭೆಯು ಒಂದು ಮಸೂದೆಯನ್ನು ಅಂಗೀಕರಿಸಿದಾಗ ಅದಕ್ಕೆ ಗವರ್ನರ್ ಜನರಲ್ಲರ ಅನುಮೋದನೆಯು ಅಗತ್ಯವಾಗುತ್ತದೆ. ಆದರೆ ಪ್ರಸ್ತುತ ಸಂವಿಧಾನದ ತಿದ್ದುಪಡಿಯ ವಿಷಯಕ್ಕೂ ಇದು ಅನ್ವಯವಾಗುತ್ತದೆಯೇ? ಏಕೆಂದರೆ ಇಲ್ಲಿ ನಾವು ಡೊಮಿನಿಯನ್ ಶಾಸನಸಭೆಯಾಗಿ ಕುಳಿತಿಲ್ಲ. ಭಾರತದ ಸಂವಿಧಾನ ಸಭೆಯಾಗಿ ಕುಳಿತಿದ್ದೇವೆ. ಅದು ಸರ್ವೋನ್ನತವಾದ ಸಂಸ್ಥೆ ಆದ್ದರಿಂದಲೇ ಅಧ್ಯಕ್ಷರಾಗಿ ನಿಮಗೆ ಅಧಿಕಾರ ಇದೆ ಎಂದು ನಾನು ಹೇಳುತ್ತೇನೆ. ಇಲ್ಲಿ ನಾವು ಸ್ಪೀಕರ್ ಎಂದು ಕರೆಯುವುದೂ ಇಲ್ಲ. ನೂತನ ಸಂವಿಧಾನವನ್ನು ಗವರ್ನರ್ ಜನರಲ್ ಅವರಿಗೆ ಅನುಮೋದನೆಗಾಗಿ ಹೇಗೆ ಒಪ್ಪಿಸುವುದಿಲ್ಲವೋ ಹಾಗೆಯೇ ಪ್ರಸ್ತುತ ಸಂವಿಧಾನದ ತಿದ್ದುಪಡಿಯನ್ನು ಅವರಿಗೆ ಕಳುಹಿಸಬೇಕಾಗಿಲ್ಲ ಎಂಬುದನ್ನು ಡಾ॥ ಅಂಬೇಡ್ಕರ್‌ರವರು ಅರ್ಥಮಾಡಿಕೊಂಡಿದ್ದಾರೆಯೇ?

**ಅಧ್ಯಕ್ಷರು :** ಈ ವಿಷಯವನ್ನು ಕುರಿತು ಡಾ॥ ಅಂಬೇಡ್ಕರ್‌ರವರು ತಮ್ಮದೇ ಆದ ರೀತಿಯಲ್ಲಿ ಉತ್ತರ ನೀಡಿದ್ದಾರೆ. ಸದಸ್ಯರಿಗೆ ಅದು ತೃಪ್ತಿಕರವಾಗಿತ್ತೋ ಇಲ್ಲವೋ ಎನ್ನುವುದು ಬೇರೆಯ ಪ್ರಶ್ನೆ. ಈಗ ಗೊತ್ತುವಳಿಯನ್ನು ಮಂಡಿಸಿದವರು ಉತ್ತರ ರೂಪವಾಗಿ ಏನಾದರೂ ಹೇಳಲಿಕ್ಕಿದೆಯೇ ಎಂದು ಕೇಳುತ್ತಿದ್ದೇನೆ.

**ಶ್ರೀಮತಿ ಜಿ. ದುರ್ಗಾಬಾಯಿ :** ಅಧ್ಯಕ್ಷರೇ, ನಾನು ಉತ್ತರವಾಗಿ ಹೇಳುವುದಕ್ಕೆ ಹೆಚ್ಚೇನೂ ಉಳಿದಿದೆ ಎಂದು ನನಗನ್ನಿಸುವುದಿಲ್ಲ. ಏಕೆಂದರೆ ಡಾ॥ ಅಂಬೇಡ್ಕರ್‌ರವರು ಇಡೀ ಪರಿಸ್ಥಿತಿಯನ್ನು ವಿವರಿಸಿ ನನ್ನ ಮಾನ್ಯ ಮಿತ್ರರು ಎತ್ತಿದ ವಿಷಯಗಳಿಗೆ ಉತ್ತರ ನೀಡುವ ಕೆಲಸವನ್ನು ತಾವೇ ಕೃಪೆ ಇಟ್ಟು ಮಾಡಿದ್ದಾರೆ. ಅವರು ಸಾಕಷ್ಟು ವಿವರಿಸಿ ಇಡೀ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಕೆಲವು ಸದಸ್ಯರು ಗವರ್ನರ್ ಜನರಲ್ ಅವರ ಅನುಮೋದನೆಯನ್ನು ಕುರಿತು ಉಳಿಸಿಕೊಂಡಿರುವ ಅವಕಾಶದ ಬಗೆಗೆ ಹೇಳಿರುವುದೆಲ್ಲವನ್ನೂ ಗಮನಿಸಿದ್ದೇನೆ. ಡಾ॥ ಅಂಬೇಡ್ಕರ್‌ರವರು ಅದನ್ನೂ ಪರಿಶೀಲಿಸಿದ್ದಾರೆ. ನಾನು ಈ ವಿಷಯವಾಗಿ ಹೆಚ್ಚಿಗೆ ಹೇಳುವುದು ಏನೂ ಇಲ್ಲ. ಮಾನ್ಯ ಸದಸ್ಯರಿಗೆ ಒಂದು ನೆನಪು ಕೊಡಬಯಸುತ್ತೇನೆ, ನಾವು ಇಂದು ೧೯೩೫ರ ಶಾಸನಕ್ಕೆ ಒಳಪಟ್ಟಿದ್ದೇವೆ. ಅದರಲ್ಲಿ ಆ ಅವಕಾಶವು ಇನ್ನೂ ಉಳಿದಿದೆ.....

(ಶ್ರೀಮತಿ ದುರ್ಗಾಬಾಯಿಯವರ ಗೊತ್ತುವಳಿಯನ್ನು ಅಂಗೀಕರಿಸಲಾಯಿತು – ಸಂ)

**ಅಧ್ಯಕ್ಷರು :** ಈಗ ಮಿ. ನಜೀರುದ್ದೀನ್ ಅಹಮದ್ ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

**ಶ್ರೀ ನಜೀರುದ್ದೀನ್ ಅಹಮದ್ :** ಮಾನ್ಯರೇ, ನಾನು ಹೀಗೆ ಮಂಡಿಸಬಯಸುತ್ತೇನೆ–

ಉದ್ದೇಶಿತ (೩೮ಬಿ) ನಿಯಮದಲ್ಲಿ "ಒಂದು ಮಸೂದೆಯನ್ನು ಮಂಡಿಸಿ" ಎಂಬ ಪದಗಳ ಬದಲಿಗೆ 'ಅಂತಹ ಮಸೂದೆಯೊಂದನ್ನು ಮಂಡಿಸಿ' ಎಂಬ ಪದಗಳನ್ನು ಇರಿಸಬಹುದು.

ಒಳಪ್ರಕರಣದ ಮೊದಲ ಭಾಗದಲ್ಲಿ ಮಸೂದೆಗೆ ವಿಶೇಷಣವಿರುವುದರಿಂದ ಈ ತಿದ್ದುಪಡಿಯು ಅಗತ್ಯವಾಗಿದೆ. 'ಅಂತಹ' ಎಂಬ ಪದವನ್ನು ಸೇರಿಸುವುದು ಅದನ್ನು ಸ್ಪಷ್ಟಪಡಿಸುತ್ತದೆ.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಈ ವಿಷಯವಾಗಿ ನಾನು ಉತ್ತರ ನೀಡಬಯಸುತ್ತೇನೆ. ಮಾನ್ಯ ಸೂಚಕರು ಅಧ್ಯಾಯದ ಶೀರ್ಷಿಕೆಯನ್ನು ಗಮನಿಸಿದ್ದರೆ, ಅದು 'ಭಾರತ ಸಂವಿಧಾನಕ್ಕೆ ಅವಕಾಶವನ್ನು ಕಲ್ಪಿಸುವ ಕಾನೂನು' ಎಂದಿರುವುದು ತಿಳಿಯುತ್ತದೆ. ಈ ನಿಯಮಗಳು ಬೇರೆ ಯಾವುದೇ ಮಸೂದೆಗೆ ಸಂಬಂಧಪಡದೇ ಸಂವಿಧಾನಕ್ಕೆ ತಿದ್ದುಪಡಿತರುವ ಮಸೂದೆಗೆ ಮಾತ್ರ ಸಂಬಂಧಿಸುತ್ತದೆ. ಆದ್ದರಿಂದ

"ಅಂತಹ" ಎಂಬ ಪದವು ಸಂಪೂರ್ಣವಾಗಿ ಅನಗತ್ಯವಾಗಿದೆ.

**ಶ್ರೀ ನಜೀರುದ್ದೀನ್ ಅಹಮದ್ :** ಈ ವಿವರಣೆ ಬಂದುದರಿಂದ ನಾನು ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತೇನೆ. (ಅಸೆಂಬ್ಲಿಯ ಅನುಮೋದನೆಯಂತೆ ತಿದ್ದುಪಡಿಯುನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು.)

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಸಮಯವನ್ನು ಉಳಿಸುವ ದೃಷ್ಟಿಯಿಂದ ಒಂದು ಸೂಚನೆ ಮಾಡಬಯಸುತ್ತೇನೆ. ಇವೆಲ್ಲವೂ ರಚನೆಯನ್ನು ಕುರಿತ ತಿದ್ದುಪಡಿಗಳು, ಇವುಗಳನ್ನು ಅಧಿಕೃತ ಕರಡುಗಾರರು ಪರಿಶೀಲಿಸಿ ಅಗತ್ಯವೆಂದು ತಾವು ಭಾವಿಸಿದ ಸ್ಥಳಗಳಲ್ಲಿ ಅಳವಡಿಸಬೇಕು ಎಂಬುದಾಗಿ ಒಂದು ನಿರ್ಣಯವನ್ನು ಅಂಗೀಕರಿಸುವುದು ಉತ್ತಮ. ನಾವು ಒಂದೊಂದೇ ತಿದ್ದುಪಡಿಯನ್ನು ಪರಿಶೀಲನೆಗೆ ಎತ್ತಿಕೊಳ್ಳುವುದಾದರೆ ಅದಕ್ಕೆ ಇಡೀ ದಿನಕ್ಕಿಂತಲೂ ಹೆಚ್ಚು ಸಮಯ ಬೇಕು. ಒಂದೇ ಆಲೋಚನೆಯನ್ನು ವ್ಯಕ್ತಪಡಿಸಲು ಬೇರೆ ಬೇರೆ ಜನರು ಬೇರೆ ಬೇರೆ ಭಾಷೆಗಳನ್ನು ಉಪಯೋಗಿಸುತ್ತಾರೆ. ಆದ್ದರಿಂದ ತಮ್ಮ ಸಮಯವನ್ನು ಈ ವಿಚಾರವಾಗಿ ವೆಚ್ಚ ಮಾಡಲು ಬಯಸುವ ಸಾಮಾನ್ಯ ಜನರಿಗಿಂತಲೂ ಅದರಲ್ಲಿ ವಿಶೇಷವಾಗಿ ಅರ್ಹತೆ ಪಡೆದಿರುವ ಕರಡುಗಾರರಿಗೆ ಬಿಟ್ಟುಬಿಡುವುದು ಉತ್ತಮ.

(೩೮–ಬಿ ನಿಯಮವನ್ನು ಅಂಗೀಕರಿಸಲಾಯಿತು – ಸಂ.)

(ಕರಡು ರಚನಾ ಸಮಿತಿಯು ಮೊದಲ ಬಾರಿಗೆ ೧೯೪೭ ಆಗಸ್ಟ್ ೩೦ರಂದು ಸಭೆ ಸೇರಿತು. ಡಾ॥ ಅಂಬೇಡ್ಕರ್ ಅವರನ್ನು ತನ್ನ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಚುನಾಯಿಸಿತು. ಆಮೇಲೆ ಸಮಿತಿಯು ೧೯೪೭ ಅಕ್ಟೋಬರ್ ೨೭ರಿಂದ ಪ್ರತಿದಿನವೂ ಸೇರಿ, ಸಂವಿಧಾನ ಸಲಹಾಕಾರರ ಕಚೇರಿಯು ಸಿದ್ಧಪಡಿಸಿದ್ದ ಕರಡಿನ ಅನುಚ್ಛೇದಗಳನ್ನು ಒಂದೊಂದಾಗಿ ಚರ್ಚಿಸಿ, ಪರಿಷ್ಕರಿಸಿತು. ೧೯೪೮ ಫೆಬ್ರವರಿ ೧೩ವರೆಗೆ ಒಟ್ಟು ೪೪ ದಿನಗಳು ಸಮಿತಿಯು ಸಭೆ ಸೇರಿತ್ತು. ಡಾ॥ ಅಂಬೇಡ್ಕರ್ ಅವರೇ ಈ ಎಲ್ಲಾ ಸಭೆಗಳ ಕಲಾಪಗಳನ್ನು ನಿರ್ವಹಿಸಿದರು. ಕರಡು ರಚನಾ ಸಮಿತಿಯು ಕೊನೆಗೆ ಅಂಗೀಕರಿಸಿದ ರೂಪದಲ್ಲಿ ಸಂವಿಧಾನದ ಹೊಸ ಕರಡನ್ನು ಅಸೆಂಬ್ಲಿಯ ಅಧ್ಯಕ್ಷರಿಗೆ ೧೯೪೮ ಫೆಬ್ರವರಿ ೨೧ರಂದು ಒಪ್ಪಿಸಲಾಯಿತು. ಸಮಿತಿಯು ತನ್ನ ಕೆಲಸವನ್ನು ಮುಂದುವರಿಸಿ, ಆಗಾಗ ಬಂದ ತಿದ್ದುಪಡಿ ಸೂಚನೆಗಳನ್ನು ಕುರಿತು ವ್ಯವಹರಿಸಿತು. ಕರಡು ಸಂವಿಧಾನವು ಎಂಟು ತಿಂಗಳ ಕಾಲ ಸಾರ್ವಜನಿಕರ ಮುಂದಿತ್ತು. ಆಮೇಲೆ ೧೯೪೮ ನವೆಂಬರ್ ೪ ರಂದು ಸಂವಿಧಾನ ಸಭೆಯೆದುರಿಗೆ ಚರ್ಚೆಗಾಗಿ ಬಂದಿತು. – ಸಂ.)

# ವಿಭಾಗ : ೩

# ೧೯೪೮ ನವೆಂಬರ್ ೪ ರಿಂದ ೧೯೪೮ ನವೆಂಬರ್ ೯ ರವರೆಗೆ

# ೮. ಸಂವಿಧಾನದ ಕರಡಿನ ಮೊದಲನೆಯ ವಾಚನ

೧೯೪೮ ನವೆಂಬರ್ ೪, ಗುರುವಾರದಂದು ಭಾರತದ ಸಂವಿಧಾನ ಸಭೆಯು ನವದೆಹಲಿಯ ಸಂವಿಧಾನ ಭವನದಲ್ಲಿ ಸಭೆ ಸೇರಿತು.

ಪರಿಚಯ ಪತ್ರಗಳ ನೀಡಿಕೆ, ದಾಖಲೆ ಪುಸ್ತಕದಲ್ಲಿ ಸಹಿ ಮಾಡುವಿಕೆ ಮತ್ತು ಪ್ರಮಾಣ ವಚನ ಸ್ವೀಕಾರ ಈ ಔಪಚಾರಿಕತೆಗಳು ಮುಗಿದ ಮೇಲೆ, ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರು, ಅಗಲಿದ ರಾಷ್ಟ್ರಪಿತನಿಗೆ ಗೌರವವನ್ನೂ ಶ್ರದ್ಧಾಂಜಲಿಯನ್ನೂ ಅರ್ಪಿಸಲು ತಮ್ಮ ತಮ್ಮ ಸ್ಥಳಗಳಲ್ಲಿ ಎದ್ದು ನಿಲ್ಲಬೇಕೆಂದು ಸದಸ್ಯರಿಗೆ ಸೂಚಿಸಿದರು. ಅವರು ಮಹಾತ್ಮ ಗಾಂಧಿಯವರನ್ನು "ಸತ್ತು ಹೋಗಿದ್ದ ನಮ್ಮ ದೇಹದ ನರನಾಡಿಗಳಿಗೆ ಚೈತನ್ಯವನ್ನು ಊದಿದವರು; ವಿಷಣ್ಣತೆ ಮತ್ತು ಹತಾಶೆಗಳ ಕಗ್ಗತ್ತಲಿನಿಂದ ನಮ್ಮನ್ನು ಆಸೆ ಮತ್ತು ಸಾಧನೆಗಳ ಬೆಳಕಿಗೆ ಎತ್ತಿ ಉದ್ಧರಿಸಿದವರು; ಮತ್ತು ನಮ್ಮನ್ನು ದಾಸ್ಯದಿಂದ ಸ್ವಾತಂತ್ರ್ಯದತ್ತ ಮುನ್ನಡೆಸಿದವರು" ಎಂದು ವರ್ಣಿಸಿದರು. ಸದಸ್ಯರು ಮೇಲೆದ್ದು ಮೌನವಾಗಿ ನಿಂತರು.

ಇದಾದ ನಂತರ ಕೈದ್–ಎ–ಅಜಮ್ ಮಹಮದ್ ಆಲಿ ಜಿನ್ನಾ, ಶ್ರೀ ಡಿ.ಪಿ. ಖೈತಾನ್ ಮತ್ತು ಶ್ರೀ ಡಿ.ಎಸ್. ಗುರುಂಗ್ ಇವರ ಸಾವನ್ನು ಕುರಿತು ಸ್ಥಳದಲ್ಲಿ ಎದ್ದು ನಿಂತು ಮೌನವನ್ನು ಆಚರಿಸಿ ಶೋಕಿಸಲಾಯಿತು.

ಮೊದಲಿಗೆ ಅಸೆಂಬ್ಲಿಯು ಮದರಾಸಿನ ಶ್ರೀಮತಿ ಜಿ. ದುರ್ಗಾಬಾಯಿ ಅವರು ಮಂಡಿಸಿದ ಗೊತ್ತುವಳಿಯನ್ನು ಚರ್ಚಿಸಿತು. ಅದು ಸಂವಿಧಾನ ಸಭೆಯ ೫–ಎ ಮತ್ತು ೫–ಬಿ ನಿಯಮಗಳಿಗೆ ತಿದ್ದುಪಡಿಯಾಗಿತ್ತು. ಸದನವು ಇದನ್ನು ಅಂಗೀಕರಿಸಿತು.

ಆಮೇಲೆ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರು ಎದ್ದು ಸದನವನ್ನುದ್ದೇಶಿಸಿ ಮಾತನಾಡಿದರು – ಅಂದಿನ ಕಾರ್ಯಕ್ರಮವೇನು ಅನ್ನುವುದನ್ನು ಅವರು ವಿವರಿಸಿದರು. ಇದನ್ನು ಅನುಸರಿಸಿ ಚರ್ಚೆ ನಡೆಯಿತು.

ಮಧ್ಯಾಹ್ನದ ಅಧಿವೇಶನದಲ್ಲಿ ಅಧ್ಯಕ್ಷರು ಡಾ॥ ಅಂಬೇಡ್ಕರ್ ಅವರನ್ನು ತಮ್ಮ ಗೊತ್ತುವಳಿಯನ್ನು ಮಂಡಿಸುವಂತೆ ಹೇಳಿದರು. ಅದೇ ಪ್ರಕಾರ ಡಾ॥ ಅಂಬೇಡ್ಕರ್‌ರವರು ಅಸೆಂಬ್ಲಿಯ ಪರಿಶೀಲನೆಗಾಗಿ ಕರಡು ಸಂವಿಧಾನವನ್ನು ಮಂಡಿಸಿದರು.

ಸಂವಿಧಾನ ಸಭೆಗೆ ೧೯೪೮ರ ನವೆಂಬರ್ ೪ರಂದು ಕರಡು ಸಂವಿಧಾನವನ್ನು ಒಪ್ಪಿಸಿದ ಮೇಲೆ ಒಂದು ಸಂಕ್ಷೇಪವೂ ಸಾಮಾನ್ಯವೂ ಆದ ಚರ್ಚೆ ನಡೆಯಿತು. ಇದನ್ನು ಸಂವಿಧಾನದ ಮೊದಲ ವಾಚನ ಎಂದು ಕರೆಯಲಾಗುತ್ತದೆ. ದ್ವಿತೀಯ ವಾಚನವು ೧೯೪೮ ನವೆಂಬರ್ ೧೫ರಂದು ಪ್ರಾರಂಭವಾಯಿತು. ಅದರಲ್ಲಿ ಸಂವಿಧಾನದ ಒಂದೊಂದು ಒಳಪ್ರಕರಣವನ್ನು ಕುರಿತು ವಿವರವಾದ ಚರ್ಚೆ ನಡೆಯಿತು. ಚರ್ಚೆ ಮುಗಿದಿದ್ದು ೧೯೪೯ ಅಕ್ಟೋಬರ್ ೧೭ರಂದು.

ಮತ್ತೊಮ್ಮೆ ೧೯೪೯ ನವೆಂಬರ್ ೧೪ರಂದು ಸಂವಿಧಾನ ಸಭೆಯು ತೃತೀಯ ವಾಚನಕ್ಕಾಗಿ ಮತ್ತೆ ಸೇರಿತು. ಈ ಕೆಲಸವನ್ನು ೧೯೪೯ ನವೆಂಬರ್ ೨೬ರಂದು ಮುಗಿಸಲಾಯಿತು.

ಕರಡು ಸಂವಿಧಾನವನ್ನು ಈ ಭಾಗದಲ್ಲಿ ಒಂದು ಅನುಬಂಧವಾಗಿ ಸೇರಿಸಿದೆ. ಅದು ಓದುಗರಿಗೆ

ಒಳಪ್ರಕರಣಗಳನ್ನೂ ಅದನ್ನು ಕುರಿತ ಚರ್ಚೆಗಳನ್ನೂ ಮೂಲ ಲೇಖನಗಳಿಗೆ ಸರಿಹೊಂದಿಸಿ ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

–ಸಂಪಾದಕ

## ಕರಡು ಸಂವಿಧಾನ – ಚರ್ಚೆ
## ಗೊತ್ತುವಳಿ ಮತ್ತು ಕರಡು ಸಂವಿಧಾನ

**ಅಧ್ಯಕ್ಷರು :** ಈಗ ನಾವು ಚರ್ಚೆಯಲ್ಲಿ ತೊಡಗಬಹುದು ಎಂದು ನಾನು ಭಾವಿಸುತ್ತೇನೆ. ಸನ್ಮಾನ್ಯ ಡಾ॥ ಅಂಬೇಡ್ಕರ್ ಅವರನ್ನು ಕೇಳಿಕೊಳ್ಳುತ್ತೇನೆ.

* **ಡಾ॥ ಅಂಬೇಡ್ಕರ್** (ಮುಂಬಯಿ : ಸಾಮಾನ್ಯ) : ಮಾನ್ಯ ಅಧ್ಯಕ್ಷರೇ, ಕರಡು ರಚನಾ ಸಮಿತಿಯು ತೀರ್ಮಾನಿಸಿದಂತೆ ಕರಡು ಸಂವಿಧಾನವನ್ನು ಮಂಡಿಸುತ್ತಿದ್ದೇನೆ. ಅದನ್ನು ಪರಿಶೀಲಿಸಬೇಕೆಂದು ಸೂಚಿಸುತ್ತೇನೆ.

೧೯೪೭ ಆಗಸ್ಟ್ ೧೯ರಂದು ಸಂವಿಧಾನ ಸಭೆಯು ಕೈಗೊಂಡ ಒಂದು ನಿರ್ಣಯದಂತೆ ಕರಡು ರಚನಾ ಸಮಿತಿಯನ್ನು ನೇಮಿಸಲಾಗಿತ್ತು.

ಸಂವಿಧಾನ ಸಭೆಯು ತಾನೇ ನೇಮಿಸಿದ ಕೇಂದ್ರ ಅಧಿಕಾರಿಗಳ ಸಮಿತಿ, ಕೇಂದ್ರ ಸಂವಿಧಾನ ಸಮಿತಿ, ಪ್ರಾಂತೀಯ ಸಂವಿಧಾನ ಸಮಿತಿ ಮತ್ತು ಮೂಲಹಕ್ಕುಗಳು, ಅಲ್ಪಸಂಖ್ಯಾತರು, ಬುಡಕಟ್ಟು ಪ್ರದೇಶಗಳು ಮೊದಲಾದವನ್ನು ಕುರಿತ ಸಲಹಾ ಸಮಿತಿ – ಇವೇ ಮೊದಲಾದ ಹಲವು ಸಮಿತಿಗಳ ವರದಿಗಳ ಆಧಾರದ ಮೇಲೆ ಒಂದು ಸಂವಿಧಾನವನ್ನು ಸಿದ್ಧಪಡಿಸುವ ಕರ್ತವ್ಯವನ್ನು ಕರಡು ರಚನಾ ಸಮಿತಿಗೆ ವಹಿಸಲಾಯಿತು. ಕೆಲವು ವಿಚಾರಗಳಲ್ಲಿ ೧೯೩೫ರ ಗವರ್ನಮೆಂಟ್ ಆಫ್ ಇಂಡಿಯಾ ಶಾಸನದಲ್ಲಿರುವ ಅವಕಾಶಗಳನ್ನು ಅನುಸರಿಸಬೇಕು ಎಂಬುದಾಗಿ ಸಂವಿಧಾನ ಸಭೆಯು ನಿರ್ದೇಶಿಸಿತು. ಕರಡು ರಚನಾ ಸಮಿತಿಯು ಎಲ್ಲೆಲ್ಲಿ ಸ್ವಲ್ಪ ವ್ಯತ್ಯಾಸಗಳನ್ನು ಮಾಡಿದೆ, ಎಲ್ಲಿ ಬದಲಿ ಮಾರ್ಗಗಳನ್ನು ಸೂಚಿಸಿದೆ ಎಂದು ನಾನು ಹೇಳಿರುವ ಫೆಬ್ರವರಿ ೨೧ರ ಪತ್ರದಲ್ಲಿ ಹೇಳಿರುವ ಅಂಶಗಳ ಹೊರತು ಮಿಕ್ಕಂತೆ, ಕರಡು ರಚನಾ ಸಮಿತಿಯು ತನಗೆ ನೀಡಿದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದೆ.

ಕರಡು ರಚನಾ ಸಮಿತಿಯು ಸಿದ್ಧಪಡಿಸಿರುವ ಈ ಕರಡು ಸಂವಿಧಾನವು ಒಂದು ಅಗಾಧವಾದ ದಾಖಲೆ, ಅದರಲ್ಲಿ ೩೧೫ ಪ್ರಕರಣಗಳು, ೮ ಪರಿಶಿಷ್ಟಗಳು ಇವೆ. ಬೇರೆ ಯಾವುದೇ ದೇಶದ ಸಂವಿಧಾನವೂ ಗಾತ್ರದಲ್ಲಿ ಇಷ್ಟು ದೊಡ್ಡದಾಗಿಲ್ಲ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಇದನ್ನು ಓದದಿರುವವರಿಗೆ ಇದರ ಮುಖ್ಯವಾದ ಮತ್ತು ವಿಶೇಷವಾದ ಲಕ್ಷಣಗಳನ್ನು ಅರಿಯುವುದು ಕಷ್ಟವಾಗುತ್ತದೆ.

ಈ ಕರಡು ಸಂವಿಧಾನವು ೮ ತಿಂಗಳ ಕಾಲ ಸಾರ್ವಜನಿಕರ ಮುಂದಿತ್ತು. ಈ ಸುದೀರ್ಘ ಅವಧಿಯಲ್ಲಿ ಮಿತ್ರರು, ವಿಮರ್ಶಕರು ಮತ್ತು ವಿರೋಧಿಗಳು ಇದರ ಅವಕಾಶಗಳನ್ನು ಕುರಿತು ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಲು ಅಗತ್ಯಕ್ಕಿಂತಲೂ ಹೆಚ್ಚು ಸಮಯ ತೆಗೆದುಕೊಂಡಿದ್ದಾರೆ. ಆ ಪ್ರತಿಕ್ರಿಯೆಗಳಲ್ಲಿ ಕೆಲವು ತಪ್ಪು ತಿಳುವಳಿಕೆಯ ಮೇಲೆ ಮತ್ತು ಪ್ರಕರಣಗಳನ್ನು ಸಾಕಷ್ಟು ಮಟ್ಟಿಗೆ ಅರ್ಥಮಾಡಿಕೊಂಡಿಲ್ಲದುದರ

---

* ಸಂವಿಧಾನ ಸಭೆ ಚರ್ಚೆಗಳು, ಇಲ್ಲಿಂದೀಚೆಗೆ ಇದನ್ನು ಸಿ.ಎ.ಡಿ. ಎಂದೂ ಕರೆಯಲಾಗಿದೆ. ಅಧಿಕೃತ ವರದಿಗಳು, ಸಂಪುಟ ೭, ನವೆಂಬರ್ ೪, ೧೯೪೮ ಪುಟ. ೩೧–೪೪

ಮೇಲೆ ಆಧಾರಗೊಂಡಿವೆ ಎಂದು ನಾನು ಧೈರ್ಯವಾಗಿ ಹೇಳಬಹುದು. ಆದರೆ ವಿಮರ್ಶೆಗಳು ಬಂದಿವೆ. ಆದ್ದರಿಂದ ಅವಕ್ಕೆ ಉತ್ತರ ಕೊಡಲೇಬೇಕಾಗುತ್ತದೆ.

ಈ ಎರಡು ಕಾರಣಗಳಿಂದಾಗಿ ಪರಿಶೀಲನೆಗಾಗಿ ಒಂದು ಗೊತ್ತುವಳಿಯನ್ನು ಮಂಡಿಸಿ ನಾನು ಸಂವಿಧಾನದ ವಿಶೇಷ ಲಕ್ಷಣಗಳ ಕಡೆಗೆ ತಮ್ಮೆಲ್ಲರ ಗಮನ ಸೆಳೆಯುವುದು, ಮತ್ತು ಅದರ ವಿರುದ್ಧವಾಗಿ ಹೂಡಿರುವ ವಿಮರ್ಶೆಯನ್ನು ಎದುರಿಸಿ ಉತ್ತರಿಸುವುದು ಅಗತ್ಯವಾಗಿರುತ್ತದೆ.

ಅದಕ್ಕೆ ಮುಂಚೆ ಸಂವಿಧಾನ ಸಮಿತಿಯು ನೇಮಿಸಿದ ಮೂರು ಸಮಿತಿಗಳ ವರದಿಗಳನ್ನು ಸದನದ ಮುಂದೆ ಇರಿಸಲು ಬಯಸುತ್ತೇನೆ. ೧) ಪ್ರಾಂತಗಳಿಗೆ ಸೇರಿದ ಮುಖ್ಯ ಆಯುಕ್ತರ (ಚೀಫ್ ಕಮೀಷನರ್) ಸಮಿತಿಯ ವರದಿ, ೨) ಕೇಂದ್ರ ಮತ್ತು ರಾಜ್ಯಗಳ ನಡುವೆ ಇರಬೇಕಾದ ಆರ್ಥಿಕ ಸಂಬಂಧಗಳನ್ನು ಕುರಿತ ತಜ್ಞರ ಸಮಿತಿಯ ವರದಿ ಮತ್ತು ೩) ಬುಡಕಟ್ಟು ಪ್ರದೇಶಗಳನ್ನು ಕುರಿತ ಸಲಹಾ ಸಮಿತಿಯ ವರದಿ – ಇವುಗಳ ಪ್ರತಿಗಳನ್ನು ಅಸೆಂಬ್ಲಿಯ ಸದಸ್ಯರಿಗೆ ಕೊಡಲಾಗಿದ್ದರೂ ಅಸೆಂಬ್ಲಿಯು ಪರಿಶೀಲಿಸಲು ಸಾಧ್ಯವಾಗದಷ್ಟು ತಡವಾಗಿ ಅವು ಬಂದವು. ಕರಡು ರಚನಾ ಸಮಿತಿಯು ಈ ವರದಿಗಳನ್ನು ಅವುಗಳಲ್ಲಿ ಮಾಡಿರುವ ಶಿಫಾರಸುಗಳನ್ನು ಪರಿಗಣಿಸಿದ್ದರೂ ಔಪಚಾರಿಕವಾಗಿ ಅವುಗಳ ಪ್ರತಿಗಳನ್ನು ಸದನದ ಸದಸ್ಯರ ಮುಂದಿಡುವುದು ಉಚಿತವಾಗುತ್ತದೆ. ಈಗ ಮುಖ್ಯವಾದ ಪ್ರಶ್ನೆಗೆ ಬರೋಣ, ಒಂದು ಸಂವಿಧಾನದ ಪ್ರತಿಯನ್ನು ಸಂವಿಧಾನ ನ್ಯಾಯಶಾಸ್ತ್ರದ ವಿದ್ಯಾರ್ಥಿಯ ಕೈಯಲ್ಲಿರಿಸಿದರೆ ಅವನು ಎರಡು ಪ್ರಶ್ನೆಗಳನ್ನು ಖಂಡಿತವಾಗಿ ಕೇಳುತ್ತಾನೆ. ಮೊದಲನೆಯದಾಗಿ ಯಾವ ಬಗೆಯ ಸರಕಾರವನ್ನು ಸಂವಿಧಾನದಲ್ಲಿ ರೂಪಿಸಲಾಗಿದೆ; ಮತ್ತು ಎರಡನೆಯದಾಗಿ ಸಂವಿಧಾನದ ಸ್ವರೂಪವೇನು? ಏಕೆಂದರೆ ಈ ಎರಡೂ ಪ್ರಶ್ನೆಗಳು ಪ್ರತಿಯೊಂದು ಸಂವಿಧಾನವೂ ವ್ಯವಹರಿಸಲೇಬೇಕಾದ ಎರಡು ಮಹತ್ವದ ಅಂಶಗಳು. ನಾನೀಗ ಎರಡು ಪ್ರಶ್ನೆಗಳಲ್ಲಿ ಮೊದಲನೆಯದರಿಂದ ಪ್ರಾರಂಭಿಸುತ್ತೇನೆ.

ಇಲ್ಲಿ ಮಂಡಿಸಿದ ಕರಡು ಸಂವಿಧಾನದಲ್ಲಿ ಭಾರತ ಒಕ್ಕೂಟದ ಮುಖ್ಯಸ್ಥರಾಗಿ ಒಬ್ಬ ಅಧಿಕಾರಿಯಿರುತ್ತಾರೆ. ಇವರನ್ನು ಒಕ್ಕೂಟದ ಅಧ್ಯಕ್ಷರೆಂದು ಕರೆಯಲಾಗುತ್ತದೆ. ಈ ಪದನಾಮವು ನಮಗೆ ಅಮೆರಿಕದ ಅಧ್ಯಕ್ಷರ ನೆನಪು ತರುತ್ತದೆ. ಆದರೆ ಹೆಸರಿನ ಹೋಲಿಕೆಯೊಂದನ್ನು ಬಿಟ್ಟರೆ ಅಮೆರಿಕದಲ್ಲಿರುವ ಸರಕಾರದ ಸ್ವರೂಪಕ್ಕೂ ಕರಡು ಸಂವಿಧಾನವು ರೂಪಿಸಿರುವ ಸರಕಾರದ ಸ್ವರೂಪಕ್ಕೂ ಸಮಾನವಾದುದು ಏನೂ ಇಲ್ಲ. ಅಮೆರಿಕ ಸರಕಾರದ ಸ್ವರೂಪವನ್ನು ಅಧ್ಯಕ್ಷೀಯ ಪದ್ಧತಿಯ ಸರಕಾರ ಎಂದು ಕರೆಯಲಾಗುತ್ತದೆ. ನಮ್ಮ ಕರಡು ಸಂವಿಧಾನವು ಸಲಹೆ ಕೊಡುವುದಾದರೋ ಸಾಂಸದಿಕ (ಪಾರ್ಲಿಮೆಂಟರಿ) ಪದ್ಧತಿಯ ಸರಕಾರ. ಎರಡೂ ಮೂಲಭೂತವಾಗಿ ಬೇರೆ ಬೇರೆ.

ಅಮೆರಿಕದ ಅಧ್ಯಕ್ಷೀಯ ಪದ್ಧತಿಯಲ್ಲಿ ಅಧ್ಯಕ್ಷರು ಕಾರ್ಯಾಂಗದ ಮುಖ್ಯಸ್ಥ. ಆಡಳಿತವು ಅವರ ಕೈಯಲ್ಲಿದೆ. ಪ್ರಸ್ತುತ ಕರಡು ಸಂವಿಧಾನದಲ್ಲಿ ಅಧ್ಯಕ್ಷರು ಇಂಗ್ಲಿಷ್ ಸಂವಿಧಾನದಲ್ಲಿ ರಾಜನಿಗೆ ಯಾವ ಸ್ಥಾನವಿದೆಯೋ ಅದನ್ನು ಪಡೆದಿರುತ್ತಾರೆ. ಅವರು ದೇಶದ ಮುಖ್ಯಸ್ಥರೇ ಹೊರತು ಕಾರ್ಯಾಂಗದ ಮುಖ್ಯಸ್ಥರಲ್ಲ. ಅವರು ರಾಷ್ಟ್ರವನ್ನು ಪ್ರತಿನಿಧಿಸುತ್ತಾರೆ. ಆದರೆ ರಾಷ್ಟ್ರವನ್ನು ಆಳುವುದಿಲ್ಲ. ಅವರು ರಾಷ್ಟ್ರದ ಸಂಕೇತವಾಗಿರುತ್ತಾರೆ. ಆಡಳಿತದಲ್ಲಿ ಅವರ ಸ್ಥಾನ ಹೇಗೆಂದರೆ, ದೇಶದ ನಿರ್ಣಯಗಳನ್ನು ವ್ಯಕ್ತಪಡಿಸುವ ಒಂದು ಔಪಚಾರಿಕ ಉಪಕರಣ, ಒಂದು ಮೊಹರು. ಅಮೆರಿಕದ ಸಂವಿಧಾನದಂತೆ ಅಧ್ಯಕ್ಷನ ಕೈಕೆಳಗೆ ಬೇರೆ ಬೇರೆ ಇಲಾಖೆಗಳ ಹೊಣೆಯನ್ನು ಹೊತ್ತ ಕಾರ್ಯದರ್ಶಿಗಳಿರುತ್ತಾರೆ. ಅದೇ ರೀತಿ ಭಾರತ ಯೂನಿಯನ್ನಿನ ಅಧ್ಯಕ್ಷರು ತಮ್ಮ ಕೈಕೆಳಗೆ ಬೇರೆ ಬೇರೆ ಆಡಳಿತ ವಿಭಾಗಗಳ ಹೊಣೆಯನ್ನು ಹೊತ್ತ ಸಚಿವರನ್ನು ಹೊಂದಿರುತ್ತಾರೆ. ಇಲ್ಲೂ

ಅಷ್ಟೆ. ಇಬ್ಬರ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಅಮೆರಿಕದ ಅಧ್ಯಕ್ಷರು ತನ್ನ ಯಾವೊಬ್ಬ ಕಾರ್ಯದರ್ಶಿಯ ಯಾವುದೇ ಸಲಹೆಯನ್ನು ಒಪ್ಪಿಕೊಳ್ಳಲು ಬದ್ಧರಲ್ಲ. ಆದರೆ ಭಾರತ ಯೂನಿಯನ್ನಿನ ಅಧ್ಯಕ್ಷರು ತಮ್ಮ ಸಚಿವರ ಸಲಹೆಗೆ ಸಾಮಾನ್ಯವಾಗಿ ಬದ್ಧರಾಗಿರುತ್ತಾರೆ. ಅವರು ಸಲಹೆಗೆ ವಿರುದ್ಧವಾಗಿ ರಾಷ್ಟ್ರಪತಿಗಳು ಏನನ್ನೂ ಮಾಡಲಾರರು. ಅಮೆರಿಕದ ಅಧ್ಯಕ್ಷರು ಯಾವ ಕಾರ್ಯದರ್ಶಿಯನ್ನು ಬೇಕಾದರೂ, ಯಾವಾಗ ಬೇಕಾದರೂ ವಜಾ ಮಾಡಬಹುದು. ಆದರೆ ಭಾರತ ಯೂನಿಯನ್ನಿನ ಅಧ್ಯಕ್ಷರಿಗೆ ತಮ್ಮ ಸಚಿವರು ಪಾರ್ಲಿಮೆಂಟಿನಲ್ಲಿ ಬಹುಮತವನ್ನು ಪಡೆದಿರುವವರೆಗೆ ಹಾಗೆ ಮಾಡಲು ಅಧಿಕಾರವಿಲ್ಲ.

ಅಮೆರಿಕದ ಅಧ್ಯಕ್ಷೀಯ ಪದ್ಧತಿಯು ಕಾರ್ಯಾಂಗ ಮತ್ತು ಶಾಸಕಾಂಗಗಳ ಪ್ರತ್ಯೇಕತೆಯ ಮೇಲೆ ಆಧಾರಗೊಂಡಿದೆ. ಆದ್ದರಿಂದ ಅಧ್ಯಕ್ಷರೂ ಅವನ ಕಾರ್ಯದರ್ಶಿಗಳೂ ಕಾಂಗ್ರೆಸ್ಸಿನ ಸದಸ್ಯರಾಗಿರಲು ಸಾಧ್ಯವಿಲ್ಲ. ಕರಡು ಸಂವಿಧಾನವು ಈ ಸಿದ್ಧಾಂತವನ್ನು ಪುರಸ್ಕರಿಸುವುದಿಲ್ಲ. ಭಾರತ ಯೂನಿಯನ್ನಿನ ಸಚಿವರು ಪಾರ್ಲಿಮೆಂಟಿನ ಸದಸ್ಯರಾಗಿರುತ್ತಾರೆ. ಸಂಸತ್ತಿನ (ಪಾರ್ಲಿಮೆಂಟಿನ) ಸದಸ್ಯರು ಮಾತ್ರವೇ ಸಚಿವರಾಗಬಹುದು. ಸಂಸತ್ತಿನ ಇತರ ಸದಸ್ಯರಿಗಿರುವ ಎಲ್ಲಾ ಹಕ್ಕುಗಳೂ ಸಚಿವರಿಗೂ ಇವೆ, ಅಂದರೆ ಅವರು ಸಂಸತ್ತಿನಲ್ಲಿ ಕುಳಿತುಕೊಳ್ಳಬಹುದು, ಚರ್ಚೆಗಳಲ್ಲಿ ಭಾಗವಹಿಸಬಹುದು ಮತ್ತು ಕಲಾಪಗಳಲ್ಲಿ ಮತ ನೀಡಬಹುದು. ಎರಡು ಪದ್ಧತಿಯ ಸರಕಾರಗಳೂ ಪ್ರಜಾಪ್ರಭುತ್ವವೇ ಆಗಿವೆ. ಮತ್ತು ಎರಡರ ನಡುವೆ ಆಯ್ಕೆ ಸುಲಭವಲ್ಲ. ಒಂದು ಪ್ರಜಾಪ್ರಭುತ್ವಾತ್ಮಕ ಕಾರ್ಯಾಂಗವು ಎರಡು ಷರತ್ತುಗಳನ್ನು ಪೂರೈಸಲೇಬೇಕು. ೧) ಅದು ಒಂದು ಸ್ಥಿರವಾದ ಕಾರ್ಯಾಂಗವಾಗಿರಬೇಕು ಮತ್ತು ೨) ಅದು ಜವಾಬ್ದಾರಿಯುತವಾದ ಕಾರ್ಯಾಂಗವಾಗಿರಬೇಕು. ದುರದೃಷ್ಟವಶಾತ್ ಎರಡನ್ನೂ ಸಮಾನ ಮಟ್ಟದಲ್ಲಿ ಭರವಸೆ ಕೊಡಬಲ್ಲ ಒಂದು ಪದ್ಧತಿಯನ್ನು ರೂಪಿಸುವುದು ಇದುವರೆಗೂ ಸಾಧ್ಯವಾಗಿಲ್ಲ. ಹೆಚ್ಚು ಸ್ಥಿರತೆಯನ್ನೂ ಆದರೆ ಕಡಿಮೆ ಹೊಣೆಗಾರಿಕೆಯನ್ನು ಉಳ್ಳ ಪದ್ಧತಿಯನ್ನು ನೀವು ಪಡೆಯಬಹುದು, ಇಲ್ಲವೇ ಹೆಚ್ಚು ಹೊಣೆಗಾರಿಕೆಯೂ ಆದರೆ ಕಡಿಮೆ ಸ್ಥಿರತೆಯೂ ಇರುವ ಪದ್ಧತಿಯನ್ನು ಇಟ್ಟುಕೊಳ್ಳಬಹುದು. ಅಮೆರಿಕನ್ ಮತ್ತು ಸ್ವಿಸ್ ಪದ್ಧತಿಗಳು ಹೆಚ್ಚು ಸ್ಥಿರತೆ, ಆದರೆ ಕಡಿಮೆ ಹೊಣೆಗಾರಿಕೆಗಳನ್ನು ಕೊಡುತ್ತವೆ. ಬ್ರಿಟಿಷ್ ಪದ್ಧತಿಯಾದರೋ ಇದಕ್ಕೆ ವ್ಯತಿರಿಕ್ತವಾಗಿ ಹೆಚ್ಚು ಹೊಣೆಗಾರಿಕೆ ಉಳ್ಳದಾಗಿದೆ. ಆದರೆ ಅಲ್ಲಿ ಕಡಮೆ ಸ್ಥಿರತೆ ಇದೆ. ಇದಕ್ಕೆ ಕಾರಣ ಸ್ಪಷ್ಟವಾಗಿದೆ. ಅಮೆರಿಕದಲ್ಲಿ ಪಾರ್ಲಿಮೆಂಟರಿ ಅಲ್ಲದ ಕಾರ್ಯಾಂಗ ಅಂದರೆ, ತನ್ನ ಅಸ್ತಿತ್ವಕ್ಕೆ ಅದು ಕಾಂಗ್ರೆಸ್ಸಿನಲ್ಲಿ ಬಹುಮತವಿರುವುದನ್ನು ಅವಲಂಬಿಸುವುದಿಲ್ಲ. ಬ್ರಿಟಿಷ್ ಪದ್ಧತಿಯು ಪಾರ್ಲಿಮೆಂಟರಿ ಕಾರ್ಯಾಂಗವಾಗಿದ್ದು ಅದು ಪಾರ್ಲಿಮೆಂಟಿನ ಬಹುಮತವನ್ನು ಅವಲಂಬಿಸಿದೆ ಎಂದರ್ಥ. ಸಂಸದೀಯವಲ್ಲದ ಕಾರ್ಯಾಂಗವಾದ್ದರಿಂದ ಅಮೆರಿಕದ ಕಾಂಗ್ರೆಸ್, ಅದನ್ನು ವಜಾ ಮಾಡಲು ಸಾಧ್ಯವಿಲ್ಲ. ಪಾರ್ಲಿಮೆಂಟರಿ ಸರಕಾರವು ಪಾರ್ಲಿಮೆಂಟ್ ಸದಸ್ಯರ ಬಹುಮತದ ವಿಶ್ವಾಸವನ್ನು ಕಳೆದುಕೊಂಡ ಕ್ಷಣವೇ ರಾಜೀನಾಮೆ ಕೊಡಬೇಕು. ಹೊಣೆಗಾರಿಕೆ ದೃಷ್ಟಿಯಿಂದ ಇದನ್ನು ನೋಡುವುದಾದರೆ ಪಾರ್ಲಿಮೆಂಟರಿ ಅಲ್ಲದ ಕಾರ್ಯಾಂಗವು ಸ್ವತಂತ್ರವಾದ್ದರಿಂದ ಶಾಸಕಾಂಗಕ್ಕೆ ಕಡಿಮೆ ಹೊಣೆಗಾರವಾಗಿರುತ್ತದೆ; ಪಾರ್ಲಿಮೆಂಟರಿ ಕಾರ್ಯಾಂಗವಾದರೋ ಸಂಸತ್ತಿನ ಬಹುಮತವನ್ನು ಹೆಚ್ಚಾಗಿ ಅವಲಂಬಿಸುವುದರಿಂದ ಹೆಚ್ಚು ಹೊಣೆಗಾರವೂ ಆಗುತ್ತದೆ. ಸಾಂಸದಿಕ ಮತ್ತು ಅ–ಸಾಂಸದಿಕ ಪದ್ಧತಿಗಳು ಹೀಗೆ ಹೊಣೆಗಾರಿಕೆಯಲ್ಲಿ ವ್ಯತ್ಯಾಸ ಹೊಂದಿರುವುದರ ಜೊತೆಗೆ ತಮ್ಮ ಹೊಣೆಗಾರಿಕೆಯ ಮೌಲ್ಯಮಾಪನ ಮಾಡುವ ಸಮಯ ಮತ್ತು ಸಂಸ್ಥೆಗಳಲ್ಲೂ ವ್ಯತ್ಯಾಸ ಹೊಂದುತ್ತದೆ. ಅಮೆರಿಕದಲ್ಲಿನಂತಹ ಅ–ಸಾಂಸದಿಕ ವ್ಯವಸ್ಥೆಯಲ್ಲಿ ಕಾರ್ಯಾಂಗದ ಹೊಣೆಗಾರಿಕೆಯನ್ನು ಸೂಕ್ತ ಕಾಲಾವಧಿಯಲ್ಲಿ ತೂಗಿ ನೋಡಲಾಗುತ್ತದೆ. ಅದು ಎರಡು ವರ್ಷಕೊಮ್ಮೆ ನಡೆಯುತ್ತದೆ. ಅದನ್ನು ಮತದಾರ ವರ್ಗವು

ನಿರ್ವಹಿಸುತ್ತದೆ. ಸಾಂಸದಿಕ ವ್ಯವಸ್ಥೆಯಿರುವ ಇಂಗ್ಲೆಂಡಿನಲ್ಲಾದರೆ ಕಾರ್ಯಾಂಗದ ಹೊಣೆಗಾರಿಕೆಯ ಮೌಲ್ಯಮಾಪನವು ಪ್ರತಿದಿನವೂ ನಡೆಯುತ್ತದೆ ಮತ್ತು ನಿರ್ದಿಷ್ಟ ಕಾಲಾವಧಿಯಲ್ಲೂ ನಡೆಯುತ್ತದೆ. ಪಾರ್ಲಿಮೆಂಟಿನ ಸದಸ್ಯರು ಪ್ರಶ್ನೆಗಳು, ನಿರ್ಣಯಗಳು, ಅವಿಶ್ವಾಸ ಗೊತ್ತುವಳಿಗಳು, ಮುಂದೂಡಿಕೆಯ ಗೊತ್ತುವಳಿಗಳು ಮತ್ತು ಭಾಷಣಗಳ ಮೇಲಿನ ಚರ್ಚೆಗಳು ಇವುಗಳಿಂದ ಪ್ರತಿದಿನವೂ ಕಾರ್ಯಾಂಗದ ಮೌಲ್ಯಮಾಪನ ನಡೆಸುತ್ತಾರೆ. ಹಾಗೆಯೇ ಪ್ರತಿ ಐದು ವರ್ಷಕ್ಕೆ ಒಮ್ಮೆ ಅಥವಾ ಮುಂಚೆ ನಡೆಯುವ ಚುನಾವಣೆಯ ಸಮಯದಲ್ಲಿ ಮತದಾರ ವರ್ಗವು ನಿರ್ದಿಷ್ಟ ಕಾಲಾವಧಿಯ ಮೌಲ್ಯಮಾಪನ ನಡೆಸುತ್ತದೆ. ಅಮೆರಿಕದ ಪದ್ಧತಿಯಲ್ಲಿ ಇಲ್ಲದ ಹೊಣೆಗಾರಿಕೆಯ ದೈನಂದಿನ ಮೌಲ್ಯಮಾಪನವು ನಿರ್ದಿಷ್ಟ ಅವಧಿಯ ಮೌಲ್ಯಮಾಪನಕ್ಕಿಂತ ಹೆಚ್ಚು ಪರಿಣಾಮಕಾರಿ ಮತ್ತು ಭಾರತದಂತಹ ಒಂದು ದೇಶದಲ್ಲಿ ಹೆಚ್ಚು ಅಗತ್ಯ ಎಂದು ಭಾವಿಸಲಾಗಿದೆ. ಪಾರ್ಲಿಮೆಂಟರಿ ಪದ್ಧತಿಯ ಕಾರ್ಯಾಂಗವನ್ನು ಶಿಫಾರಸ್ಸು ಮಾಡುವಾಗ ಕರಡು ಸಂವಿಧಾನವು ಅಧಿಕ ಸ್ಥಿರತೆಗಿಂತಲೂ ಅಧಿಕ ಹೊಣೆಗಾರಿಕೆಯನ್ನೂ ಆಯ್ಕೆ ಮಾಡಿಕೊಂಡಿದೆ.

ಇದುವರೆಗೆ ನಾನು ಕರಡು ಸಂವಿಧಾನದಂತೆ ರೂಪಿತವಾಗಿರುವ ಸರಕಾರದ ಸ್ವರೂಪವನ್ನು ವಿವರಿಸಿದ್ದೇನೆ. ಈಗ ನಾನು ಸಂವಿಧಾನದ ಸ್ವರೂಪ ಎಂಬ ಇನ್ನೊಂದು ಪ್ರಶ್ನೆಗೆ ಬರುತ್ತೇನೆ.

ಇತಿಹಾಸದಲ್ಲಿ ಸಂವಿಧಾನದ ಎರಡು ಮುಖ್ಯ ರೂಪಗಳು ಪ್ರಸಿದ್ಧವಾಗಿವೆ – ಒಂದನ್ನು ಏಕೀಕೃತ (Unitary) ಎಂದು ಕರೆಯುತ್ತಾರೆ. ಮತ್ತು ಇನ್ನೊಂದು ಸಂಯುಕ್ತ (Federal) ಎನಿಸುತ್ತದೆ. ಒಂದು ಏಕೀಕೃತ ಸಂವಿಧಾನದ ಎರಡು ಮೂಲ ಲಕ್ಷಣಗಳು ಹೀಗಿವೆ: ೧) ಕೇಂದ್ರ ರಾಜ್ಯಾಡಳಿತದ ಪರಮೋನ್ನತಿ ಮತ್ತು ೨) ಅಧೀನ ರಾಜ್ಯಾಡಳಿತಗಳ ಗೈರು ಹಾಜರಿ. ಇದಕ್ಕೆ ವ್ಯತಿರಿಕ್ತವಾಗಿ ಒಂದು ಸಂಯುಕ್ತ ಸಂವಿಧಾನದ ಲಕ್ಷಣಗಳು ಹೀಗಿವೆ: ೧) ಕೇಂದ್ರ ರಾಜ್ಯಾಡಳಿತ ಮತ್ತು ಅಧೀನ ರಾಜ್ಯಾಡಳಿತಗಳು ಜೊತೆ ಜೊತೆಯಾಗಿ ಇರುವುದು, ಮತ್ತು ೨) ಒಂದೊಂದೂ ತನಗೆ ವಹಿಸಿದ ಕ್ಷೇತ್ರದಲ್ಲಿ ಪರಮಾಧಿಕಾರ ಹೊಂದಿರುವುದು. ಬೇರೆ ಮಾತುಗಳಲ್ಲಿ ಫೆಡರೇಷನ್ ಅಥವಾ ಸಂಯುಕ್ತ ಎಂದರೆ ಒಂದು ದ್ವಿ–ರಾಜ್ಯಾಡಳಿತದ ಸ್ಥಾಪನೆ. ಹೀಗೆ ದ್ವಿ–ರಾಜ್ಯ ವ್ಯವಸ್ಥೆಯೊಂದನ್ನು ಸ್ಥಾಪಿಸುವುದರಿಂದ ಕರಡು ಸಂವಿಧಾನವು ಒಂದು ಸಂಯುಕ್ತ ಸಂವಿಧಾನವಾಗಿದೆ. ಈ ದ್ವಿ–ಆಡಳಿತದಲ್ಲಿ, ಉದ್ದೇಶಿತ ಸಂವಿಧಾನದಂತೆ ಕೇಂದ್ರದಲ್ಲಿ ಒಂದು ಯೂನಿಯನ್ ಇದ್ದು ಅದರ ಹೊರವಲಯದಲ್ಲಿ ವಿವಿಧ ರಾಜ್ಯಗಳಿರುತ್ತವೆ. ಈ ಕೇಂದ್ರ ಮತ್ತು ರಾಜ್ಯಗಳೆರಡೂ ಸಂವಿಧಾನವು ವಹಿಸಿರುವ ಕ್ಷೇತ್ರದಲ್ಲಿ ಸರ್ವೋನ್ನತ ಅಧಿಕಾರವನ್ನು ಹೊಂದಿರುತ್ತದೆ. ಈ ದ್ವಿ–ಆಡಳಿತ ಪದ್ಧತಿಯು ಅಮೆರಿಕದ ಸಂವಿಧಾನವನ್ನು ಹೋಲುತ್ತದೆ. ಅಲ್ಲೂ ಎರಡು ಬಗೆಯ ಆಡಳಿತಗಳಿದ್ದು ಒಂದು ಫೆಡರಲ್ ಸರಕಾರವೆನಿಸುತ್ತದೆ, ಇನ್ನೊಂದು ರಾಜ್ಯ ಸರಕಾರವೆನಿಸುತ್ತದೆ. ಇವು ಕ್ರಮವಾಗಿ ಕರಡು ಸಂವಿಧಾನವು ರೂಪಿಸಿರುವ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳ ವ್ಯವಸ್ಥೆಯನ್ನು ಹೋಲುತ್ತವೆ. ಅಮೆರಿಕದ ಸಂವಿಧಾನದಂತೆ ಫೆಡರಲ್ ಸರಕಾರವು ಕೇವಲ ರಾಜ್ಯಗಳ ಸಮೂಹವಲ್ಲ, ಅಥವಾ ರಾಜ್ಯಗಳು ಫೆಡರಲ್ ಸರಕಾರದ ಆಡಳಿತಾತ್ಮಕ ಘಟಕಗಳೋ ಏಜೆನ್ಸಿಗಳೋ ಅಲ್ಲ. ಹಾಗೆಯೇ ಕರಡಿನಲ್ಲಿ ಸಲಹೆ ಮಾಡಿರುವ ಭಾರತ ಸಂವಿಧಾನವು ರಾಜ್ಯಗಳ ಒಂದು ಸಮೂಹ ಮಾತ್ರವಲ್ಲ, ರಾಜ್ಯಗಳು ಕೇಂದ್ರ ಸರಕಾರದ ಆಡಳಿತಾತ್ಮಕ ಘಟಕಗಳಲ್ಲ. ಆದರೆ ಭಾರತ ಮತ್ತು ಅಮೆರಿಕ ಸಂವಿಧಾನಗಳ ನಡುವೆ ಹೋಲಿಕೆ ಇಷ್ಟಕ್ಕೆ ಮುಗಿಯುತ್ತದೆ. ಅವುಗಳ ನಡುವೆ ಇರುವ ವ್ಯತ್ಯಾಸಗಳು ಹೋಲಿಕೆಗಳಿಗಿಂತ ಹೆಚ್ಚು ಮೂಲಭೂತವಾಗಿವೆ, ಕಣ್ಣು ಕುಕ್ಕುವಂತಿವೆ.

ಅಮೆರಿಕದ ಒಕ್ಕೂಟ ಮತ್ತು ಭಾರತ ಒಕ್ಕೂಟಗಳ ನಡುವೆ ಇರುವ ವ್ಯತ್ಯಾಸಗಳು ಮುಖ್ಯವಾಗಿ

ಎರಡು. ಅಮೆರಿಕದಲ್ಲಿ ದ್ವಿ–ರಾಜ್ಯಾಡಳಿತದ ಜೊತೆಗೆ ದ್ವಿ–ಪೌರತ್ವವೂ ಇದೆ. ಅಲ್ಲಿ ಅಮೆರಿಕದ ಪೌರತ್ವದ ಜೊತೆಗೆ ರಾಜ್ಯದ ಪೌರತ್ವವೂ ಇರುತ್ತದೆ. ಸಂಯುಕ್ತ ಸಂಸ್ಥಾನಗಳ ಸಂವಿಧಾನಕ್ಕೆ ಹದಿನಾಲ್ಕನೆಯ ತಿದ್ದುಪಡಿ ಮಾಡಿ ಈ ದ್ವಿ–ಪೌರತ್ವದ ಕಠೋರತೆಗಳನ್ನು ಬಹುಮಟ್ಟಿಗೆ ಶಮನಗೊಳಿಸಲಾಗಿದೆ ಎಂಬುದೇನೋ ನಿಜ. ಅದು ಸಂಯುಕ್ತ ಸಂಸ್ಥಾನಗಳ ಪ್ರಜೆಯ ಹಕ್ಕು, ಸೌಲಭ್ಯಗಳನ್ನು ವಿನಾಯಿತಿಗಳನ್ನು ರಾಜ್ಯವು ಕಸಿದುಕೊಳ್ಳಲು ಬಿಡುವುದಿಲ್ಲ. ಅದೇ ಸಮಯಕ್ಕೆ, ಮಿ. ವಿಲಿಯಂ ಆ್ಯಂಡರ್ಸನ್ ಅವರು ತೋರಿಸಿಕೊಟ್ಟಿರುವಂತೆ, ವೋಟು ನೀಡುವ ಹಕ್ಕು, ಸಾರ್ವಜನಿಕ ಹುದ್ದೆಯನ್ನು ಪಡೆಯುವ ಹಕ್ಕು, ಇವೂ ಸೇರಿದಂತೆ ಕೆಲವು ರಾಜಕೀಯ ವಿಚಾರಗಳಲ್ಲಿ ರಾಜ್ಯಗಳು ತಮ್ಮ ಪ್ರಜೆಗಳ ಪರವಾಗಿ ತಾರತಮ್ಯ ತೋರಿಸಬಹುದು, ತೋರಿಸುತ್ತವೆ. ಅನೇಕ ಸಂದರ್ಭಗಳಲ್ಲಿ, ಈ ಪಕ್ಷಪಾತವು ಇನ್ನೂ ಬಹಳ ಮುಂದೆ ಹೋಗುತ್ತದೆ. ಹಾಗಾಗಿ ಒಂದು ರಾಜ್ಯದ ಅಥವಾ ಸ್ಥಳೀಯ ಸರಕಾರದ ಸೇವಾ ವಿಭಾಗಗಳಲ್ಲಿ ನೌಕರಿ ಪಡೆಯಬೇಕಾದ ಪಕ್ಷದಲ್ಲಿ ಅನೇಕ ಕಡೆಗಳಲ್ಲಿ ವ್ಯಕ್ತಿಯು ಸ್ಥಳೀಯ ನಿವಾಸಿ ಅಥವಾ ಪ್ರಜೆಯಾಗಿರಬೇಕಾಗುತ್ತದೆ. ಅದೇ ರೀತಿ, ವಕೀಲಿ, ವೈದ್ಯಕ ಮೊದಲಾದ ಸಾರ್ವಜನಿಕ ವೃತ್ತಿಗಳನ್ನು ನಡೆಸಲು ವ್ಯಕ್ತಿಗಳಿಗೆ ಪರವಾನಗಿ ಕೊಡುವ ವಿಚಾರದಲ್ಲಿಯೂ ರಾಜ್ಯದಲ್ಲಿ ನಿವಾಸ ಅಥವಾ ಪೌರತ್ವ ಪದೇ ಪದೇ ಅಗತ್ಯವಾಗಿರುತ್ತದೆ; ಮದ್ಯಗಳ ಮಾರಾಟ, ಶೇರುಗಳು ಮತ್ತು ಬಾಂಡುಗಳ ಮಾರಾಟ ಮೊದಲಾದ ವ್ಯವಹಾರ ಉದ್ಯಮಗಳಲ್ಲಿ ಸಾರ್ವಜನಿಕ ನಿಯಂತ್ರಣ ಅತ್ಯಗತ್ಯವಾಗಿರುವಲ್ಲಿ ಕೂಡ ಅದೇ ಅಗತ್ಯಗಳನ್ನು ಎತ್ತಿ ಹಿಡಿಯಲಾಗಿದೆ.

ಪ್ರತಿಯೊಂದು ರಾಜ್ಯಕ್ಕೂ ಅದರದೇ ಅಂಕೆಯಲ್ಲಿ ಕೆಲವು ನಿರ್ದಿಷ್ಟ ಹಕ್ಕುಗಳಿದ್ದು ಅದನ್ನು ತನ್ನ ಪ್ರಜೆಗಳಿಗೆ ವಿಶೇಷ ಅನುಕೂಲವಾಗುವಂತೆ ಕಾರ್ಯಗತಗೊಳಿಸುತ್ತದೆ. ಹಾಗಾಗಿ ಬೇಟೆ (wildgame) ಮತ್ತು ಮೀನು ಹಿಡಿಯುವಿಕೆ ಒಂದು ಅರ್ಥದಲ್ಲಿ ರಾಜ್ಯಕ್ಕೆ ಸೇರಿದ್ದು. ಬೇಟೆ ಮತ್ತು ಮೀನು ಹಿಡಿಯುವಿಕೆಗಳಿಗೆ ಪರವಾನಗಿ ಶುಲ್ಕ ವಿಧಿಸುವಾಗ ತನ್ನ ಪ್ರಜೆಗಳಿಗೆ ವಿಧಿಸುವುದಕ್ಕಿಂತ ಹೆಚ್ಚಿನ ಮೊತ್ತವನ್ನು ರಾಜ್ಯವು ಬೇರೆಯವರಿಗೆ ವಿಧಿಸುವುದು ರೂಢಿಯಲ್ಲಿದೆ. ರಾಜ್ಯಗಳು ಸರಕಾರೀ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ರಾಜ್ಯ ನಿವಾಸಿಗಳಲ್ಲದವರಿಗೆ ಉನ್ನತ ಶಿಕ್ಷಣಕ್ಕೆ ಶುಲ್ಕ ವಿಧಿಸುತ್ತದೆ. ತೀರಾ ತುರ್ತು ಪರಿಸ್ಥಿತಿಯ ಹೊರತು, ಸಾಮಾನ್ಯ ಸಮಯದಲ್ಲಿ ತಮ್ಮಲ್ಲಿರುವ ಆಸ್ಪತ್ರೆಗಳಲ್ಲಿ ಮತ್ತು ಅನಾಥಾಲಯಗಳಲ್ಲಿ ರಾಜ್ಯದ ನಿವಾಸಿಗಳಿಗೆ ಮಾತ್ರ ಪ್ರವೇಶ ನೀಡುತ್ತವೆ.

ಸಂಕ್ಷೇಪವಾಗಿ ಹೇಳಬೇಕೆಂದರೆ, ಒಂದು ರಾಜ್ಯವು ತನ್ನ ಪ್ರಜೆಗಳಿಗೆ ಅಥವಾ ನಿವಾಸಿಗಳಿಗೆ ಮಾತ್ರವೇ ನೀಡಿ, ಇತರರಿಗೆ ಕಾನೂನು ಪ್ರಕಾರವಾಗಿಯೇ ನಿರಾಕರಿಸುವ ಅನೇಕ ಹಕ್ಕುಗಳಿವೆ; ಅಥವಾ ನಿವಾಸಿಗಳಿಗಿಂತ ಹೆಚ್ಚು ಕಠಿಣವಾದ ನಿಯಮಗಳ ಪ್ರಕಾರ ನಿವಾಸಿಯೇತರರಿಗೆ ನೀಡುವ ಕೆಲವಿವೆ. ಪ್ರಜೆಗೆ ತನ್ನ ರಾಜ್ಯದಲ್ಲಿ ಕೊಡಲಾದ ಈ ಅನುಕೂಲಗಳು ರಾಜ್ಯ ಪೌರತ್ವದ ವಿಶೇಷ ಹಕ್ಕುಗಳಾಗುತ್ತವೆ. ಒಟ್ಟಾಗಿ ನೋಡಿದಾಗ ರಾಜ್ಯಗಳ ಪ್ರಜೆಗಳಿಗೂ ಅಲ್ಲದವರಿಗೂ ನಡುವೆ ಹಕ್ಕುಗಳಲ್ಲಿ ಗಣನೀಯವಾದ ವ್ಯತ್ಯಾಸಗಳಾಗಿರುತ್ತವೆ. ತಾತ್ಕಾಲಿಕ ನಿವಾಸಿಯಾದ ಮತ್ತು ಸಂಚಾರಿಯಾದ ಪ್ರಯಾಣಿಕನಿಗೆ ಎಲ್ಲ ಕಡೆಯೂ ಕೆಲವು ವಿಶೇಷ ತೊಂದರೆಗಳಿದ್ದೇ ಇರುತ್ತವೆ.

ಪ್ರಸ್ತಾವಿತ ಭಾರತೀಯ ಸಂವಿಧಾನವು ಏಕಪೌರತ್ವದಿಂದ ಕೂಡಿದ ದ್ವಿ–ರಾಜ್ಯಾಡಳಿತವಾಗಿದೆ. ಇಡೀ ಭಾರತಕ್ಕಿರುವುದು ಒಂದೇ ಪೌರತ್ವ, ಅದು ಭಾರತೀಯ ಪೌರತ್ವ. ಬೇರೆ ರಾಜ್ಯ ಪೌರತ್ವವೆನ್ನುವುದು ಇಲ್ಲಿಲ್ಲ. ಯಾವ ರಾಜ್ಯದಲ್ಲಿ ವಾಸ ಮಾಡುತ್ತಿದ್ದರೂ ಪ್ರತಿಯೊಬ್ಬ ಭಾರತೀಯನಿಗೂ ಸಮಾನವಾದ ಪೌರತ್ವ ಹಕ್ಕುಗಳಿದ್ದೇ ಇವೆ.

ಪ್ರಸ್ತಾವಿತ ಭಾರತೀಯ ಸಂವಿಧಾನದ ದ್ವಿ–ರಾಜ್ಯಾಡಳಿತವು ಅಮೆರಿಕದ ದ್ವಿ–ರಾಜ್ಯಾಡಳಿತ ವ್ಯವಸ್ಥೆಯಿಂದ ಇನ್ನೂ ಒಂದು ರೀತಿಯಲ್ಲಿ ಭಿನ್ನವಾಗಿದೆ. ಅಮೆರಿಕದಲ್ಲಿ ಫೆಡರಲ್ ಮತ್ತು ರಾಜ್ಯ ಸರಕಾರಗಳ ಸಂವಿಧಾನಗಳು ಸಡಿಲವಾಗಿ ಸಂಬಂಧಿಸಿವೆ. ಈ ಸಂಬಂಧವನ್ನು ಕುರಿತು ಬ್ರೈಸ್ ಹೀಗೆ ಹೇಳಿದ್ದಾರೆ: "ಕೇಂದ್ರ ಅಥವಾ ರಾಷ್ಟ್ರೀಯ ಸರಕಾರವನ್ನು, ರಾಜ್ಯ ಸರಕಾರಗಳನ್ನು ಒಂದು ದೊಡ್ಡ ಸೌಧ ಹಾಗೂ ಅದೇ ಮಟ್ಟದ ನೆಲದ ಮೇಲೆ ಕಟ್ಟಿರುವ, ಆದರೆ ಒಂದರಿಂದೊಂದು ಬೇರೆಯಾದ ಹಲವು ಸಣ್ಣ ಕಟ್ಟಡಗಳ ಕೂಟಕ್ಕೆ ಹೋಲಿಸಬಹುದು", ಅವು ಭಿನ್ನವಾಗಿವೆ ಸರಿ, ಆದರೆ ಅಮೆರಿಕದ ಫೆಡರಲ್ ಸರಕಾರದಿಂದ ರಾಜ್ಯ ಸರಕಾರಗಳು ಎಷ್ಟು ಮಟ್ಟಿಗೆ ಭಿನ್ನವಾಗಿವೆ? ಈ ಭಿನ್ನತೆಯ ಒಂದು ಚಿತ್ರವನ್ನು ಕೆಳಗಿನ ಅಂಶದಿಂದ ತಿಳಿದುಕೊಳ್ಳಬಹುದು:

೧. ಗಣರಾಜ್ಯ ಸ್ವರೂಪದ ಸರಕಾರವನ್ನು ಉಳಿಸಿಕೊಳ್ಳಬೇಕೆಂಬುದಕ್ಕೆ ಒಳಪಟ್ಟು, ಅಮೆರಿಕದ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಸಂವಿಧಾನವನ್ನು ರಚಿಸಿಕೊಳ್ಳಲು ಸ್ವತಂತ್ರವಾಗಿದೆ.
೨. ಒಂದು ರಾಜ್ಯದ ಪ್ರಜೆಗಳು ಎಂದೆಂದಿಗೂ, ರಾಷ್ಟ್ರೀಯ ಸರಕಾರದ ಸಂಬಂಧವಿಲ್ಲದೆ ಸ್ವತಂತ್ರವಾಗಿ, ತಮ್ಮ ಸಂವಿಧಾನವನ್ನು ಬದಲಾಯಿಸುವ ಅಧಿಕಾರವನ್ನು ತಮ್ಮ ಕೈಗಳಲ್ಲಿಟ್ಟುಕೊಂಡಿದ್ದಾರೆ.

ಮತ್ತೆ ಬ್ರೈಸ್ ಅವರ ಮಾತುಗಳಲ್ಲಿ:

"(ಅಮೆರಿಕದಲ್ಲಿ) ಒಂದು ರಾಜ್ಯವು ತನ್ನ ಸಂವಿಧಾನದ ಬಲದಿಂದ ಒಂದು ಕಾಮನ್‌ವೆಲ್ತ್ ಆಗಿ ಉಳಿದಿದೆ. ರಾಜ್ಯದ ಎಲ್ಲಾ ಅಂಗಗಳು, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಆ ಸಂವಿಧಾನದ ಸೃಷ್ಟಿಯಾಗಿರುತ್ತವೆ, ಅದಕ್ಕೆ ಅಧೀನವಾಗಿರುತ್ತವೆ".

ಭಾರತ ಸಂವಿಧಾನದ ವಿಷಯದಲ್ಲಿ ಇದು ಅನ್ವಯಿಸುವುದಿಲ್ಲ. ಯಾವ ರಾಜ್ಯಕ್ಕೂ (ಕೊನೆಯ ಪಕ್ಷ ಒಂದನೆಯ ಭಾಗದಲ್ಲಿರುವವರು) ತನ್ನದೇ ಪ್ರತ್ಯೇಕ ಸಂವಿಧಾನವನ್ನು ರಚಿಸಿಕೊಳ್ಳುವ ಹಕ್ಕಿಲ್ಲ. ಕೇಂದ್ರ ಮತ್ತು ರಾಜ್ಯಗಳಿಗೆ ಸೇರಿದ ಸಂವಿಧಾನವು ಒಂದೇ ಒಂದು ಚೌಕಟ್ಟು; ಅದರೊಳಗಿನಿಂದ ಎರಡರಲ್ಲಿ ಯಾವುದೂ ಹೊರಬರುವಂತಿಲ್ಲ. ಆ ಚೌಕಟ್ಟಿನೊಳಗೇ ಅವು ಕೆಲಸ ಮಾಡತಕ್ಕದ್ದು.

ಇದುವರೆಗೆ ನಾನು ಅಮೆರಿಕದ ಒಕ್ಕೂಟಕ್ಕೂ ಪ್ರಸ್ತಾವಿತ ಭಾರತೀಯ ಒಕ್ಕೂಟಕ್ಕೂ ನಡುವೆ ಇರುವ ವ್ಯತ್ಯಾಸಗಳ ಕಡೆಗೆ ಗಮನವನ್ನು ಸೆಳೆದಿದ್ದೇನೆ. ಆದರೆ ಸೂಚಿತ ಭಾರತ ಒಕ್ಕೂಟದ ಕೆಲವು ವಿಶೇಷ ಲಕ್ಷಣಗಳಿವೆ. ಅವು ಅದನ್ನು ಅಮೆರಿಕದ ಒಕ್ಕೂಟದಿಂದ ಮಾತ್ರವಲ್ಲದೆ, ಇತರ ಎಲ್ಲಾ ಫೆಡರಲ್ ವ್ಯವಸ್ಥೆಗಳೂ ಒಕ್ಕೂಟ ತತ್ವದ ಅತಿ ಪೆಡಸಾದ ಎರಕದೊಳಗೆ ಇರಿಸಲ್ಪಟ್ಟಿವೆ. ಎಂಥದೇ ಸನ್ನಿವೇಶದಲ್ಲೂ ಅದು ತನ್ನ ಆಕಾರವನ್ನಾಗಲೀ, ಸ್ವರೂಪವನ್ನಾಗಲೀ ಬದಲಾಯಿಸಿಕೊಳ್ಳುವಂತಿಲ್ಲ. ಅದು ಎಂದೂ ಏಕೀಕೃತ (Unitary)ವಾಗಲಾರದು, ಇದಕ್ಕೆ ವ್ಯತಿರಿಕ್ತವಾಗಿ ನಮ್ಮ ಕರಡು ಸಂವಿಧಾನವು ಕಾಲ ಮತ್ತು ಸನ್ನಿವೇಶಗಳ ಅಗತ್ಯಗಳಿಗೆ ತಕ್ಕಂತೆ ಏಕೀಕೃತವೂ ಆಗಬಹುದು, ಒಕ್ಕೂಟ (Federal)ವೂ ಆಗಬಹುದು. ಸಾಮಾನ್ಯ ಪರಿಸ್ಥಿತಿಗಳಲ್ಲಿ ಅದು ಒಕ್ಕೂಟವಾಗಿ ವರ್ತಿಸುತ್ತದೆ, ಆದರೆ ಯುದ್ಧಕಾಲದಲ್ಲಿ ಅದು ಏಕೀಕೃತ ವ್ಯವಸ್ಥೆಯೇ ಎಂಬಂತೆ ಕಾರ್ಯನಿರ್ವಾಹ ಮಾಡಲು ಅನುಕೂಲವಾಗುವಂತೆ ವಿನ್ಯಾಸಗೊಳಿಸಲ್ಪಟ್ಟಿದೆ. ರಾಷ್ಟ್ರಪತಿಯವರು ೨೭೫ನೇ ಪ್ರಕರಣದ ಅವಕಾಶಗಳ ಪ್ರಕಾರ ತಮಗಿರುವ ಅಧಿಕಾರವನ್ನು ಪ್ರಯೋಗಿಸಿ ಘೋಷಣೆ ನೀಡಿದರೆಂದರೆ, ಇಡೀ ಚಿತ್ರವೇ ಬದಲಾಗಿ, ರಾಜ್ಯವು ಒಂದು ಏಕೀಕೃತ ರಾಜ್ಯವಾಗುತ್ತದೆ. ಹಾಗೆ

ಘೋಷಣೆಯಾಗಿರುವ ಸಮಯದಲ್ಲಿ ಅಪೇಕ್ಷೆಪಟ್ಟರೆ ಕೇಂದ್ರವು (೧) ಯಾವುದೇ ವಿಷಯದ ಮೇಲೆ, ಅದು ರಾಜ್ಯ ಪಟ್ಟಿಗೆ ಸೇರಿರುವುದಾದರೂ ಸಹ, ಕಾನೂನು ವಿಧಿಸಲು ಅಧಿಕಾರವನ್ನು ಪಡೆಯಬಹುದು. (೨) ರಾಜ್ಯಗಳು ತಮ್ಮ ವಶದಲ್ಲಿರುವ ವಿಷಯಗಳಲ್ಲಿ ಕಾರ್ಯಾಧಿಕಾರವನ್ನು ಹೇಗೆ ಚಲಾಯಿಸಬೇಕೆಂಬುದರ ಬಗೆಗೆ ರಾಜ್ಯಗಳಿಗೆ ನಿರ್ದೇಶನ ನೀಡುವ ಅಧಿಕಾರವನ್ನು ಪಡೆಯಬಹುದು. (೩) ಯಾವುದೇ ಉದ್ದೇಶಕ್ಕಾಗಿ ಯಾವನೇ ಅಧಿಕಾರಿಗೆ ಅಧಿಕಾರ ಕೊಡುವ ಅಧಿಕಾರವನ್ನು ಪಡೆಯಬಹುದು. (೪) ಸಂವಿಧಾನದ ಹಣಕಾಸು ಸಂಬಂಧವಾದ ಅವಕಾಶಗಳನ್ನು ರದ್ದುಪಡಿಸಲು ಅಧಿಕಾರ ಪಡೆಯಬಹುದು. ಹೀಗೆ ತನ್ನನ್ನು ಏಕೀಕೃತ ಆಡಳಿತವಾಗಿ ಪರಿವರ್ತಿಸಿಕೊಳ್ಳಬಲ್ಲ ಅಧಿಕಾರವು ಬೇರೆ ಯಾವ ಒಕ್ಕೂಟಕ್ಕೂ ಇಲ್ಲ. ಕರಡು ಸಂವಿಧಾನದಲ್ಲಿ ಸಲಹೆ ಮಾಡಿರುವ ಒಕ್ಕೂಟಕ್ಕೂ, ನಮಗೆ ತಿಳಿದಿರುವ ಇತರ ಯಾವುದೇ ಒಕ್ಕೂಟಗಳಿಗೂ ಇರುವ ಒಂದು ಮುಖ್ಯವಾದ ವ್ಯತ್ಯಾಸ ಇದು.

ಇದೊಂದೇ ಅಲ್ಲ. ಒಕ್ಕೂಟ ತತ್ವವನ್ನು ಪರಿಣಾಮಕಾರಿಯಲ್ಲದಿದ್ದರೂ ಒಂದು ದುರ್ಬಲವಾದ ಸ್ವರೂಪದ ಸರಕಾರ ಎಂದು ವರ್ಣಿಸಲಾಗಿದೆ. ಒಕ್ಕೂಟವು ಎರಡು ದೌರ್ಬಲ್ಯಗಳಿಂದ ಬಳಲುತ್ತದೆ. ಒಂದು ಪೆಡಸು ಅಥವಾ ಕಾಠಿಣ್ಯ, ಇನ್ನೊಂದು ಕಾನೂನು ನಿಷ್ಠೆ. ಈ ದೋಷಗಳು ಒಕ್ಕೂಟ ತತ್ವದಲ್ಲೇ ಅಂತರ್ಗತವಾಗಿವೆ ಎನ್ನುವುದರಲ್ಲಿ ಎರಡನೆಯ ಮಾತಿಲ್ಲ. ಒಂದು ಫೆಡರಲ್ ಸಂವಿಧಾನವು ಬರೆದ ಸಂವಿಧಾನವಾಗಿರಲೇಬೇಕು. ಫೆಡರಲ್ ಸಂವಿಧಾನವೆಂದರೆ ಪ್ರಭುತ್ವದ ವಿಭಜನೆ. ಇದರ ಪರಿಣಾಮವೂ ಎರಡು: ೧. ರಾಜ್ಯಗಳಿಗೆ ವಹಿಸಿರುವ ಯಾವುದೇ ಕ್ಷೇತ್ರಕ್ಕೆ ಫೆಡರಲ್ ಸರಕಾರವು ದಾಳಿಯಿಟ್ಟರೆ ಅಥವಾ ಅದಕ್ಕೆ ವ್ಯತಿರಿಕ್ತವಾಗಿ ರಾಜ್ಯ ಸರಕಾರವು ಫೆಡರಲ್ ಕ್ಷೇತ್ರಕ್ಕೆ ನುಗ್ಗಿದರೆ ಅದು ಸಂವಿಧಾನದ ಉಲ್ಲಂಘನೆಯಾಗುತ್ತದೆ. ೨. ಈ ಉಲ್ಲಂಘನೆಯ ನ್ಯಾಯತೀರ್ಮಾನ ಮಾಡಬೇಕಾದದ್ದು ನ್ಯಾಯಾಂಗ ಮಾತ್ರವೇ ಅದನ್ನು ನಿರ್ಧರಿಸಿ ತೀರ್ಪು ಕೊಡಬಲ್ಲದು. ಫೆಡರಲ್ ತತ್ವದ ಸ್ವರೂಪವೇ ಹೀಗಿರುವುದರಿಂದ ಫೆಡರಲ್ ಸಂವಿಧಾನವು ಅತಿಯಾದ ಕಾನೂನು ನಿಷ್ಠೆಯೆಂಬ ಆರೋಪವನ್ನು ತಪ್ಪಿಸಿಕೊಳ್ಳುವಂತಿಲ್ಲ. ಫೆಡರಲ್ ಸಂವಿಧಾನದ ಈ ದೋಷಗಳು ಸ್ಪಷ್ಟವಾದ ರೀತಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂವಿಧಾನದಲ್ಲಿ ಕಂಡುಬರುತ್ತದೆ.

ಮುಂದೆ ಫೆಡರಲ್ ವ್ಯವಸ್ಥೆಯನ್ನು ಅಳವಡಿಸಿಕೊಂಡ ದೇಶಗಳು ಅಂತರ್ಗತವಾದ ಕಾಠಿಣ್ಯ ಮತ್ತು ಅತಿ ಕಾನೂನು ನಿಷ್ಠೆಗಳಿಂದ ಉಂಟಾಗುವ ಅನಾನುಕೂಲತೆಗಳನ್ನು ತಗ್ಗಿಸಲು ಪ್ರಯತ್ನಿಸಿವೆ. ಈ ವಿಷಯದಲ್ಲಿ (ಆಸ್ಟ್ರೇಲಿಯಾದ ನಿದರ್ಶನವನ್ನು ಉಲ್ಲೇಖಿಸಬಹುದು) ಆಸ್ಟ್ರೇಲಿಯಾದ ಸಂವಿಧಾನವು ಈ ಕೆಳಗಿನ ವಿಧಾನವನ್ನು ಅನುಸರಿಸಿ ಸಂವಿಧಾನದ ಕಾಠಿಣ್ಯವನ್ನು ತಗ್ಗಿಸಿದೆ:

೧. ಕಾಮನ್‌ವೆಲ್ತಿನ ಪಾರ್ಲಿಮೆಂಟಿಗೆ ಸಮವರ್ತಿ ಶಾಸನಾಧಿಕಾರ (Concurrent legislation)ವನ್ನು ಹೆಚ್ಚಾಗಿಯೂ, ತನಗೇ ಸೇರಿದ ಶಾಸನಾಧಿಕಾರದ ಹಕ್ಕುಗಳನ್ನು ಸ್ವಲ್ಪವಾದರೂ ಕೊಡುವುದರಿಂದ;

೨. ಸಂವಿಧಾನದ ಕೆಲವು ಅವಕಾಶಗಳನ್ನು ತಾತ್ಕಾಲಿಕವಾಗಿ ಜಾರಿಯಲ್ಲಿರುವಂತೆ ಮಾಡಿ, "ಪಾರ್ಲಿಮೆಂಟು ಬೇರೆ ಅವಕಾಶವನ್ನು ಕಲ್ಪಿಸುವವರೆಗೂ ಚಾಲ್ತಿಯಲ್ಲಿರುವಂತೆ ಮಾಡುವುದರಿಂದ".

ಆಸ್ಟ್ರೇಲಿಯಾ ಸಂವಿಧಾನದ ಪ್ರಕಾರ ಅಲ್ಲಿಯ ಪಾರ್ಲಿಮೆಂಟು, ಅಮೆರಿಕದ ಕಾಂಗ್ರೆಸ್ಸಿನ ಅಳವಿನಲ್ಲಿಲ್ಲದ ಅನೇಕ ಕೆಲಸಗಳನ್ನು ಮಾಡಬಲ್ಲದು. ಅವುಗಳನ್ನು ಅಮೆರಿಕದ ಕಾಂಗ್ರೆಸ್ ಮಾಡಬೇಕಾದರೆ ಅಮೆರಿಕಾ ಸರಕಾರವು ಸರ್ವೋನ್ನತ ನ್ಯಾಯಾಲಯದ (Supreme Court) ಮೊರೆ ಹೋಗಬೇಕು. ಅದರ ಸಾಮರ್ಥ್ಯ, ಬುದ್ಧಿಶಕ್ತಿ, ಅಧಿಕಾರ ಚಲಾವಣೆಯನ್ನು ಸಮರ್ಥಿಸಲು ಒಂದು ಸಿದ್ಧಾಂತವನ್ನು ಕಂಡುಹಿಡಿಯಲು ಅಪೇಕ್ಷೆಗಳನ್ನು

ಅವಲಂಬಿಸಬೇಕಾಗುತ್ತದೆ.

ಕಾಠಿಣ್ಯ ಮತ್ತು ಅತಿ ಕಾನೂನು ನಿಷ್ಠೆಗಳ ಪೆಡಸುತನವನ್ನು ಶಮನಗೊಳಿಸುವಲ್ಲಿ ಸೂಚಿತ ಕರಡು ಸಂವಿಧಾನವು ಆಸ್ಟ್ರೇಲಿಯದ ಯೋಜನೆಯನ್ನು ಅಲ್ಲಿ ಬಳಸಿಕೊಂಡಿರುವುದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಅನುಸರಿಸಿದೆ. ಆಸ್ಟ್ರೇಲಿಯ ಸಂವಿಧಾನದಂತೆಯೇ ಇಲ್ಲಿಯೂ ಸಮವರ್ತಿ ಅಧಿಕಾರಕ್ಕೆ ಬರುವ ವಿಷಯಗಳ ಉದ್ದವಾದ ಪಟ್ಟಿಯನ್ನು ಹೊಂದಿವೆ. ಆಸ್ಟ್ರೇಲಿಯ ಸಂವಿಧಾನದಲ್ಲಿ ಸಮವರ್ತಿಗಳಾದ ೩೯ ವಿಷಯಗಳಿವೆ. ಸೂಚಿತ ಕರಡು ಸಂವಿಧಾನದಲ್ಲಿ ಆ ಸಂಖ್ಯೆ ೩೭. ಆಸ್ಟ್ರೇಲಿಯ ಸಂವಿಧಾನವನ್ನೇ ಅನುಸರಿಸಿ, ಈ ಕರಡಿನಲ್ಲೂ ಸುಮಾರು ಆರು ಪ್ರಕರಣಗಳು, ತಾತ್ಕಾಲಿಕ ಕಾಲಾವಧಿಗೆ ಸಂಬಂಧಿಸಿದ್ದು ಅವುಗಳ ಅವಕಾಶಗಳು ತಾತ್ಕಾಲಿಕವಾಗಿದ್ದು ಸಂದರ್ಭಕ್ಕೆ ತಕ್ಕಂತೆ ಅವುಗಳ ಸ್ಥಾನದಲ್ಲಿ ಅವಕಾಶಗಳನ್ನು ಅಳವಡಿಸುವವರೆಗೂ ಈ ಕ್ರಮ ಜಾರಿಯಲ್ಲಿರುತ್ತವೆ. ಆಸ್ಟ್ರೇಲಿಯದಕ್ಕಿಂತ ಇಲ್ಲಿನ ಕರಡು ಸಂವಿಧಾನ ಸಾಧಿಸಿರುವ ಅತ್ಯಂತ ದೊಡ್ಡ ಮುನ್ನಡೆ, ಪಾರ್ಲಿಮೆಂಟಿಗೆ ಕೊಟ್ಟಿರುವ ಪ್ರತ್ಯೇಕವಾದ ಶಾಸನಾಧಿಕಾರಗಳ ವಿಚಾರದಲ್ಲಿ. ಆಸ್ಟ್ರೇಲಿಯಾದ ಸಂವಿಧಾನವು ಕಾನೂನು ಮಾಡಲು ಕೇವಲ ಮೂರು ವಿಷಯಗಳಲ್ಲಿ ಪ್ರತ್ಯೇಕವಾದ ಅಧಿಕಾರ ಹೊಂದಿದ್ದರೆ, ಕರಡು ಸಂವಿಧಾನದಲ್ಲಿ ಸೂಚಿಸಿರುವ ಭಾರತೀಯ ಸಂಸತ್ತಿನ ಆ ಶಾಸನಾಧಿಕಾರವು ೯೧ ವಿಷಯಗಳಿಗೆ ವಿಸ್ತರಿಸಿದೆ. ಈ ರೀತಿಯಲ್ಲಿ ಸ್ವರೂಪದಿಂದಲೇ ಬಹು ಪೆಡಸಾದ, ಕಠಿಣವಾದ ಫೆಡರಲ್ ತತ್ವದಲ್ಲಿ ಸಾಧ್ಯವಿರುವಷ್ಟು ಅತ್ಯಂತ ಹೆಚ್ಚು ನಮ್ಯತೆಯನ್ನು ಒದಗಿಸಿದೆ.

ಕರಡು ಸಂವಿಧಾನವು ಆಸ್ಟ್ರೇಲಿಯದ ಸಂವಿಧಾನವನ್ನು ಅನುಸರಿಸುತ್ತದೆ ಎಂದಾಗಲಿ, ಅಥವಾ ಹೆಚ್ಚು ವ್ಯಾಪಕ ರೀತಿಯಲ್ಲಿ ಅದನ್ನು ಅನುಸರಿಸಿದೆ ಎಂದಾಗಲೀ ಹೇಳಿದರೆ ಸಾಲದು. ಅದು ಫೆಡರಲ್ ತತ್ವದಲ್ಲಿ ಅಂತರ್ಗತವಾಗಿರುವ ಬೇರೆಲ್ಲೂ ಕಂಡುಬರದ ಕಾಠಿಣ್ಯವನ್ನು ಅತಿ ಕಾನೂನು ನಿಷ್ಠೆಯನ್ನು ಹೋಗಲಾಡಿಸಲು ಹೊಸ ದಾರಿಗಳನ್ನು ರೂಪಿಸಿದೆ ಎಂಬುದನ್ನು ಗಮನಿಸಬೇಕು.

ಮೊದಲನೆಯದು, ಸಾಮಾನ್ಯ ಕಾಲದಲ್ಲಿ ಪ್ರಾಂತೀಯವಾಗಿರುವ ವಿಷಯಗಳ ಮೇಲೆ ಶಾಸನಗಳನ್ನು ಮಾಡಲು ಪಾರ್ಲಿಮೆಂಟಿಗೆ ನೀಡಿರುವ ಅಧಿಕಾರ. ನಾನು ಇಲ್ಲಿ ೨೨೬, ೨೨೭ ಮತ್ತು ೨೨೯ನೆಯ ಅನುಚ್ಛೇದಗಳನ್ನು ಉಲ್ಲೇಖಿಸಿದ್ದೇನೆ. ೨೨೬ನೆಯ ಅನುಚ್ಛೇದದ ಪ್ರಕಾರ, ಒಂದು ವಿಷಯವು ರಾಜ್ಯಪಟ್ಟಿಯಲ್ಲಿದ್ದರೂ, ಅದು ಪೂರ್ತಿಯಾಗಿ ಪ್ರಾಂತೀಯ ಕಾಳಜಿಯ ವಿಷಯವಾಗದೆ ರಾಷ್ಟ್ರೀಯ ಕಾಳಜಿಯ ವಿಷಯವಾಗಿರುವಾಗ ಪಾರ್ಲಿಮೆಂಟು ಅದನ್ನು ಕುರಿತು ಕಾನೂನು ಮಾಡಬಹುದು. ಹಾಗೆ ಕೇಂದ್ರವು ಅಧಿಕಾರ ಚಲಾಯಿಸುವುದರ ಪರವಾಗಿ ಮೇಲ್ಮನೆಯಲ್ಲಿ ೨/೩ ರಷ್ಟು ಬಹುಮತದಿಂದ ಒಂದು ನಿರ್ಣಯವನ್ನು ಅಂಗೀಕರಿಸಬೇಕು. ರಾಷ್ಟ್ರದ ತುರ್ತು ಪರಿಸ್ಥಿತಿಯಲ್ಲಿ ೨೨೭ನೆಯ ಅನುಚ್ಛೇದವು ಅದೇ ಬಗೆಯ ಅಧಿಕಾರವನ್ನು ಸಂಸತ್ತಿಗೆ ನೀಡುತ್ತದೆ. ಇನ್ನು ೨೨೯ನೆಯ ಅನುಚ್ಛೇದದ ಪ್ರಕಾರ, ಪ್ರಾಂತಗಳು ಸಮ್ಮತಿಸಿದರೆ, ಅದೇ ಅಧಿಕಾರವನ್ನು ಪಾರ್ಲಿಮೆಂಟು ಚಲಾಯಿಸಬಹುದು. ಕೊನೆಯ ಅವಕಾಶವು ಆಸ್ಟ್ರೇಲಿಯಾದ ಸಂವಿಧಾನದಲ್ಲಿದೆಯಾದರೂ ಮೊದಲಿನೆರಡು ಮಾತ್ರ ಕರಡು ಸಂವಿಧಾನದ ವಿಶೇಷ ಅಂಶಗಳಾಗಿರುತ್ತವೆ.

ಕಾಠಿಣ್ಯ ಹಾಗೂ ಅತಿ ಕಾನೂನು ನಿಷ್ಠೆಗಳನ್ನು ನಿವಾರಿಸಲು ಅಳವಡಿಸಿಕೊಂಡಿರುವ ಎರಡನೆಯ ಮಾರ್ಗ, ಸಂವಿಧಾನಕ್ಕೆ ತಿದ್ದುಪಡಿ ತರಲು ಸೌಕರ್ಯವನ್ನು ಒದಗಿಸುವುದು. ಸಂವಿಧಾನ ತಿದ್ದುಪಡಿಗೆ ಸಂಬಂಧಿಸಿದಂತೆ ಸೇರಿಸಿರುವ ಅವಕಾಶಗಳು ಸಂವಿಧಾನದ ಅನುಚ್ಛೇದಗಳನ್ನು ಎರಡು ಗುಂಪಾಗಿ ವರ್ಗೀಕರಿಸಿವೆ. ಒಂದು ಗುಂಪಿನಲ್ಲಿ (ಅ) ಕೇಂದ್ರ ಮತ್ತು ರಾಜ್ಯಗಳ ನಡುವೆ ಶಾಸನಾಧಿಕಾರಗಳ ಹಂಚಿಕೆ,

(ಆ) ಸಂಸತ್ತಿನಲ್ಲಿ ರಾಜ್ಯಗಳ ಪ್ರಾತಿನಿಧ್ಯ, ಮತ್ತು (ಇ) ನ್ಯಾಯಾಲಯಗಳ ಅಧಿಕಾರ ಇವುಗಳಿಗೆ ಸಂಬಂಧಿಸಿದ ಅನುಚ್ಛೇದಗಳು ಸೇರುತ್ತವೆ. ಮಿಕ್ಕ ಎಲ್ಲಾ ಅನುಚ್ಛೇದಗಳೂ ಎರಡನೆಯ ಗುಂಪಿಗೆ ಸೇರುತ್ತವೆ. ಎರಡನೆಯ ಗುಂಪಿನ ಅನುಚ್ಛೇದಗಳೇ ಸಂವಿಧಾನದ ಬಹುಭಾಗವನ್ನು ವ್ಯಾಪಿಸಿವೆ; ಪಾರ್ಲಿಮೆಂಟಿನಲ್ಲಿ ದುಪ್ಪಟ್ಟು ಬಹುಮತದಿಂದ, ಅಂದರೆ ಪ್ರತಿಯೊಂದು ಸದನದಲ್ಲೂ ಹಾಜರಿದ್ದು ವೋಟು ಹಾಕುವ ಸದಸ್ಯರ ಮೂರನೆ ಎರಡು ಬಹುಮತದಿಂದ, ಪ್ರತಿ ಸದನದ ಸಂಪೂರ್ಣ ಸದಸ್ಯತ್ವದ ಬಹುಮತದಿಂದ, ಅವುಗಳಿಗೆ ತಿದ್ದುಪಡಿ ಮಾಡಬಹುದು. ಈ ಅನುಚ್ಛೇದಗಳ ತಿದ್ದುಪಡಿಗೆ ರಾಜ್ಯಗಳ ಸ್ಥಿರೀಕರಣದ ಅಗತ್ಯವಿರುವುದಿಲ್ಲ. ಮೊದಲನೆಯ ಗುಂಪಿಗೆ ಸೇರಿಸಿರುವ ಅನುಚ್ಛೇದಗಳಿಗೆ ತಿದ್ದುಪಡಿ ತಂದಾಗ ಮಾತ್ರ ರಾಜ್ಯಗಳು ಅದನ್ನು ಸ್ವೀಕರಿಸಬೇಕೆಂಬ ಹೆಚ್ಚಿನ ಸುರಕ್ಷತೆಯನ್ನು ರೂಪಿಸಲಾಗಿದೆ.

ಆದ್ದರಿಂದ ಭಾರತ ಒಕ್ಕೂಟವು ಕಾಠಿಣ್ಯ ಅಥವಾ ಅತಿ ಕಾನೂನು ನಿಷ್ಠೆ ಎಂಬ ದೋಷಗಳಿಂದ ಬಳಲುವುದಿಲ್ಲ ಎಂದು ಕ್ಷೇಮವಾಗಿ ಹೇಳಬಹುದು. ಅದು ಸಂದರ್ಭಕ್ಕೆ ತಕ್ಕಂತೆ ಹೊಂದಿಸಲು ಸಾಧ್ಯವಿರುವ ಒಕ್ಕೂಟ ಎನ್ನುವುದೇ ಅದರ ವಿಶೇಷ ಲಕ್ಷಣ.

ಇತರ ಒಕ್ಕೂಟಗಳಿಂದ ಪ್ರಸ್ತಾವಿತ ಭಾರತ ಒಕ್ಕೂಟವನ್ನು ಭಿನ್ನವಾಗಿಸುವ ಇನ್ನೊಂದು ವಿಶೇಷ ಲಕ್ಷಣವೂ ಇದೆ. ಫೆಡರೇಷನ್ ಅಥವಾ ಒಕ್ಕೂಟ ಒಂದು ದ್ವಿ–ರಾಜ್ಯಾಡಳಿತ ವ್ಯವಸ್ಥೆ. ಪ್ರತ್ಯೇಕ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಅಧಿಕಾರಗಳು ಎರಡಕ್ಕೂ ಇವೆ. ಇದರಿಂದಾಗಿ, ಕಾನೂನುಗಳಲ್ಲಿ ಆಡಳಿತದಲ್ಲಿ ನ್ಯಾಯಾಂಗ ರಕ್ಷಣೆಯಲ್ಲಿ, ವೈವಿಧ್ಯವು ಉಂಟಾಗಿಯೇ ತೀರುತ್ತದೆ. ಒಂದು ಮಟ್ಟದವರೆಗೆ ಈ ವೈವಿಧ್ಯದಿಂದ ಏನೂ ತೊಂದರೆಯಿಲ್ಲ. ಸರಕಾರದ ಅಧಿಕಾರವನ್ನು ಸ್ಥಳೀಯ ಅಗತ್ಯಗಳು ಮತ್ತು ಸ್ಥಳೀಯ ಸನ್ನಿವೇಶಗಳಿಗೆ ತಕ್ಕಂತೆ ಅಳವಡಿಸುವ ಪ್ರಯತ್ನ ಎಂದು ಅದನ್ನು ಸ್ವಾಗತಿಸಬಹುದು. ಆದರೆ ವೈವಿಧ್ಯವು ಆ ಹಂತವನ್ನು ದಾಟಿ ಮುಂದಕ್ಕೂ ಹೋದರೆ ಅನಾಯಕತ್ವವನ್ನು ಸೃಷ್ಟಿಸಬಹುದು. ಅನೇಕ ಒಕ್ಕೂಟಗಳಲ್ಲಿ ಹಾಗಾಗಿದೆ. ನಮ್ಮ ಒಕ್ಕೂಟದಲ್ಲಿ ಇಪ್ಪತ್ತು ರಾಜ್ಯಗಳಿದ್ದರೆ, ವಿವಾಹ, ವಿಚ್ಛೇದನ, ಆಸ್ತಿಯನ್ನು ಪಡೆಯುವಿಕೆ, ಕೌಟುಂಬಿಕ ಬಿಲ್ಲುಗಳು – ಚೆಕ್ಕುಗಳು, ಬ್ಯಾಂಕಿಂಗ್ ಮತ್ತು ವಾಣಿಜ್ಯ, ನ್ಯಾಯವನ್ನು ಪಡೆಯಲು ಇರುವ ಮಾರ್ಗಗಳು, ಆಡಳಿತದ ಗುಣಮಟ್ಟ ಮತ್ತು ಕಾರ್ಯವಿಧಾನ – ಈ ಎಲ್ಲದರಲ್ಲೂ ಇಪ್ಪತ್ತು ಬಗೆಯ ಬೇರೆ ಬೇರೆ ಕಾನೂನುಗಳನ್ನು ಕಲ್ಪಿಸಿಕೊಂಡರೆ ಸಾಕು. ಅಂಥದೊಂದು ಪರಿಸ್ಥಿತಿಯು ರಾಜ್ಯವನ್ನು ದುರ್ಬಲಗೊಳಿಸುವುದು ಮಾತ್ರವಲ್ಲದೆ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗುವ ಪ್ರಜೆಗೆ ದುರ್ಭರವಾಗುತ್ತದೆ. ಏಕೆಂದರೆ ಒಂದು ರಾಜ್ಯದಲ್ಲಿ ಕಾನೂನು ಸಮ್ಮತವಾದದ್ದು ಇನ್ನೊಂದರಲ್ಲಿ ಕಾನೂನು ಸಮ್ಮತವಾಗಿರುವುದಿಲ್ಲ. ಆದ್ದರಿಂದ ಕರಡು ಸಂವಿಧಾನವು, ಭಾರತಕ್ಕೆ ಒಂದು ಒಕ್ಕೂಟವಿರುವಂತೆ, ಅದೇ ಸಮಯಕ್ಕೆ ದೇಶದ ಐಕ್ಯತೆಯನ್ನು ಕಾಪಾಡಲು ಅಗತ್ಯವಾದ ಮೂಲಭೂತ ವಿಚಾರಗಳಲ್ಲೆಲ್ಲಾ ಏಕರೂಪತೆಯಿರುವಂತೆ ಮಾರ್ಗಗಳನ್ನು ಕಂಡು ಹಿಡಿಯಲು ಶ್ರಮಿಸಿದೆ. ಇದಕ್ಕಾಗಿ ಕರಡು ಸಂವಿಧಾನವು ಅಳವಡಿಸಿರುವ ಮಾರ್ಗಗಳು ಮೂರು :

೧. ಇಡೀ ದೇಶಕ್ಕೆ ಅನ್ವಯವಾಗುವ ಒಂದು ನ್ಯಾಯಾಂಗ.

೨. ಮೂಲಭೂತ ಸಿವಿಲ್ ಮತ್ತು ಕ್ರಿಮಿನಲ್ ಕಾನೂನುಗಳಲ್ಲಿ ಏಕರೂಪತೆ.

೩. ಮುಖ್ಯವಾದ ಹುದ್ದೆಗಳಿಗಾಗಿ ಸಮಾನವಾದ ಒಂದು ಅಖಿಲ ಭಾರತ ಸಿವಿಲ್ ಸರ್ವಿಸ್ ವ್ಯವಸ್ಥೆ.

ಒಂದು ದ್ವಿ–ವಿಧ ನ್ಯಾಯಾಂಗ, ನ್ಯಾಯಿಕ ಸಂಹಿತೆಗಳ ವೈವಿಧ್ಯ, ಸಿವಿಲ್ ಸೇವೆಗಳಲ್ಲಿ ಇಬ್ಬಗೆ –

ಇವು ಒಂದು ಫೆಡರೇಷನ್ನಿನಲ್ಲಿ ಅಂತರ್ಗತವಾಗಿರುವ ದ್ವಿ–ರಾಜ್ಯಾಡಳಿತ ವ್ಯವಸ್ಥೆಯ ತಾರ್ಕಿಕ ಪರಿಣಾಮಗಳು ಎಂದು ಆಗಲೇ ಹೇಳಿದ್ದೇನೆ. ಅಮೆರಿಕದಲ್ಲಿ ಫೆಡರಲ್ ನ್ಯಾಯವ್ಯವಸ್ಥೆ ಹಾಗೂ ರಾಜ್ಯ ನ್ಯಾಯಾಂಗ ವ್ಯವಸ್ಥೆ ಎರಡೂ ಬೇರೆ ಬೇರೆ. ಒಂದರಿಂದೊಂದು ಸ್ವತಂತ್ರ, ಜೋಡಿ ಆಡಳಿತವಿದ್ದರೂ ಭಾರತ ಒಕ್ಕೂಟದಲ್ಲಿ ಜೋಡಿ ನ್ಯಾಯಾಂಗವಂತೂ ಇಲ್ಲ. ಹೈಕೋರ್ಟುಗಳು ಮತ್ತು ಸುಪ್ರೀಂ ಕೋರ್ಟು ಒಂದು ಸಮಗ್ರ ನ್ಯಾಯವಿತರಣ ವ್ಯವಸ್ಥೆಯಾಗಿದ್ದು, ಸಂವಿಧಾನಿಕ ಕಾನೂನಿನ ವ್ಯಾಪ್ತಿಗೆ ಬರುವ ಎಲ್ಲ ವ್ಯಾಜ್ಯಗಳಲ್ಲೂ ಪರಿಹಾರವನ್ನು ಒದಗಿಸುವ ನ್ಯಾಯಾಧಿಕಾರ ವ್ಯಾಪ್ತಿಯನ್ನು ಹೊಂದಿವೆ. ಅದು ಸಿವಿಲ್ ಕಾನೂನು ಆಗಬಹುದು, ಕ್ರಿಮಿನಲ್ ಕಾನೂನು ಆಗಬಹುದು, ಎಲ್ಲವೂ ಅದರಲ್ಲಿ ಸೇರುತ್ತವೆ. ಇದು ಪರಿಹಾರ ಕಾರ್ಯದಲ್ಲಿ ಕಾಣುವ ಎಲ್ಲಾ ಬಗೆಯ ವೈವಿಧ್ಯವನ್ನು ನಿವಾರಿಸಲು ಅಗತ್ಯವಾಗಿದೆ. ಇದಕ್ಕೆ ಸಮೀಪ ಹೋಲಿಕೆಯನ್ನು ಹೊಂದಿರುವುದು ಕೆನಡಾ ದೇಶ ಮಾತ್ರ. ಆಸ್ಟ್ರೇಲಿಯದ ವ್ಯವಸ್ಥೆ ಸುಮಾರಾಗಿ ಸಮೀಪದಲ್ಲಿದೆ ಅಷ್ಟೆ.

ಪೌರ ಹಾಗೂ ಸಾಂಘಿಕ ಜೀವನದ ತಳಹದಿಯಾಗಿರುವ ಕಾನೂನುಗಳಲ್ಲಿ ವೈವಿಧ್ಯತೆ, ಭಿನ್ನತೆಗಳನ್ನು ನಿವಾರಿಸಲು ಜಾಗರೂಕತೆ ವಹಿಸಲಾಗಿದೆ. ಉತ್ಕೃಷ್ಟವಾದ ಸಿವಿಲ್ ಮತ್ತು ಕ್ರಿಮಿನಲ್ ಕಾನೂನು ಸಂಹಿತೆಗಳಾದ, ಸಿವಿಲ್ ಪ್ರೊಸೀಜರ್ ಕೋಡ್, ಪೀನಲ್ ಕೋಡ್, ಕ್ರಿಮಿನಲ್ ಪ್ರೊಸೀಜರ್ ಕೋಡ್, ಎವಿಡೆನ್ಸ್ ಆ್ಯಕ್ಟ್, ಆಸ್ತಿ ವರ್ಗಾವಣೆ ಶಾಸನ, ವಿವಾಹ, ವಿಚ್ಛೇದನ ಹಾಗೂ ಉತ್ತರಾಧಿಕಾರ ಕಾನೂನುಗಳು – ಇವುಗಳನ್ನು ಸಮವರ್ತಿ ಸೂಚಿಯಲ್ಲಿ ಸೇರಿಸಿ ಸದಾಕಾಲವೂ ಫೆಡರಲ್ ವ್ಯವಸ್ಥೆಗೆ ಹಾನಿಯಾಗದಂತೆ ಏಕರೂಪತೆಯನ್ನು ಕಾಪಾಡಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಫೆಡರಲ್ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಇಮ್ಮುಖ ಆಡಳಿತದ ಹಿಂದೆಯೇ ಇಮ್ಮುಖ ಸೇವಾವರ್ಗಗಳೂ ಕಾಣಿಸಿಕೊಳ್ಳುತ್ತವೆ. ಎಲ್ಲಾ ಒಕ್ಕೂಟಗಳಲ್ಲೂ ಒಂದು ಫೆಡರಲ್ ಸಿವಿಲ್ ಸರ್ವಿಸ್ ಹಾಗೂ ಒಂದು ಸ್ಟೇಟ್ ಸಿವಿಲ್ ಸರ್ವಿಸ್ ಇರುತ್ತವೆ. ಭಾರತೀಯ ಫೆಡರೇಷನ್ ಒಂದು ಇಮ್ಮುಖ ಆಡಳಿತವಾಗಿದ್ದರೂ, ಇಮ್ಮುಖ ಸೇವಾವರ್ಗಗಳಿದ್ದರೂ ಒಂದು ವ್ಯತ್ಯಾಸವುಂಟು. ಪ್ರತಿಯೊಂದು ದೇಶದಲ್ಲೂ ಅದರ ಆಡಳಿತ ವ್ಯವಸ್ಥೆಯಲ್ಲಿ, ಒಂದು ಗುಣಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಬಹುಮುಖ್ಯವಾಗಿರುವ ಕೆಲವು ಹುದ್ದೆಗಳಿರುತ್ತವೆ. ಬೃಹದಾಕಾರದ, ಸಂಕೀರ್ಣವಾದೊಂದು ಆಡಳಿತಯಂತ್ರದಲ್ಲಿ ಆ ಹುದ್ದೆಗಳನ್ನು ಗುರುತಿಸುವುದು ಸುಲಭವಲ್ಲ. ಆದರೆ ಆಡಳಿತದ ಮಟ್ಟವು ಈ ಮುಖ್ಯ ಹುದ್ದೆಗಳಿಗೆ ನೇಮಕವಾಗುವ ಸಿವಿಲ್ ಅಧಿಕಾರಿಗಳ ವ್ಯಕ್ತಿತ್ವವನ್ನು ಅವಲಂಬಿಸಿರುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಅದೃಷ್ಟವಶಾತ್ ನಮಗೆ, ಇಡೀ ದೇಶಕ್ಕೆ ಸಮಾನವಾಗಿ ಅನ್ವಯವಾಗುತ್ತಿದ್ದ ಆಡಳಿತ ವ್ಯವಸ್ಥೆಯೊಂದಿದ್ದುದರಿಂದ, ಈ ಮಹತ್ವದ ಹುದ್ದೆಗಳು ಯಾವುವು ಎಂದು ನಮಗೆ ತಿಳಿದಿದೆ. ರಾಜ್ಯಗಳಿಗೆ ತಮ್ಮದೇ ಸಿವಿಲ್ ಸರ್ವಿಸ್‌ಗಳನ್ನು ರಚಿಸಿಕೊಳ್ಳಲು ಇರುವ ಹಕ್ಕನ್ನು ಅಪಹರಿಸದೆ, ಒಂದು ಅಖಿಲ ಭಾರತ ಸೇವಾವರ್ಗವನ್ನು ರೂಪಿಸಲು ಸಂವಿಧಾನವು ಅವಕಾಶ ಮಾಡಿದೆ. ಅದಕ್ಕೆ ಸಮಾನ ಅರ್ಹತೆಗಳು, ಸಮಾನ ವೇತನಗಳನ್ನುಳ್ಳ ಅಧಿಕಾರಿಗಳನ್ನು ನೇಮಿಸಲಾಗುತ್ತದೆ. ಅವರನ್ನು ಮಾತ್ರವೇ ದೇಶದಾದ್ಯಂತ ಇರುವ ಈ ಮಹತ್ವದ ಹುದ್ದೆಗಳಿಗೆ ನೇಮಿಸಲಾಗುತ್ತದೆ.

ಪ್ರಸ್ತಾಪಿತ ಫೆಡರೇಷನ್ನಿನ ವಿಶೇಷ ಲಕ್ಷಣಗಳು ಹೀಗಿವೆ. ಈಗ ಅದರ ವಿಷಯದಲ್ಲಿ ವಿಮರ್ಶಕರು ಏನು ಹೇಳುತ್ತಾರೆ ಎಂಬುದನ್ನು ಸ್ವಲ್ಪ ನೋಡಬಹುದು.

ಕರಡು ಸಂವಿಧಾನದಲ್ಲಿ ಹೊಸದೇನೂ ಇಲ್ಲ. ಅದರ ಅರ್ಧದಷ್ಟನ್ನು ೧೯೩೫ರ ಗವರ್ನಮೆಂಟ್ ಆಫ್ ಇಂಡಿಯಾ ಶಾಸನದಿಂದ ನಕಲು ಮಾಡಲಾಗಿದೆ, ಮಿಕ್ಕದ್ದನ್ನು ಇತರ ದೇಶಗಳ ಸಂವಿಧಾನಗಳಿಂದ

ಎರವಲು ತೆಗೆದುಕೊಳ್ಳಲಾಗಿದೆ. ನಮ್ಮದೇ ಮೂಲ ಅಂಶವಿರುವುದು ಅತ್ಯಲ್ಪ ಎಂದು ಹೇಳಿದ್ದಾರೆ.

ಜಗತ್ತಿನ ಇತಿಹಾಸದಲ್ಲಿ ಈ ಸಮಯದಲ್ಲಿ ರಚಿತವಾಗಿರುವ ಒಂದು ಸಂವಿಧಾನದಲ್ಲಿ ಹೊಸದೆನಿಸಿಕೊಳ್ಳುವುದು ಏನಾದರೂ ಇರಲು ಸಾಧ್ಯವಿದೆಯೆ ಎಂದು ಕೇಳಬೇಕಾಗಿದೆ. ಮೊಟ್ಟಮೊದಲನೆಯ ಸಂವಿಧಾನವು ರಚಿತವಾಗಿ ನೂರು ವರ್ಷಗಳಿಗಿಂತ ಹೆಚ್ಚು ಕಾಲ ಉರುಳಿಹೋಗಿದೆ. ಅನೇಕ ದೇಶಗಳು ಅದರ ಹಿಂದೆಯೇ ಕಾಣಿಸಿಕೊಂಡು ತಮ್ಮ ಸಂವಿಧಾನಗಳನ್ನು ಬರವಣಿಗೆಗೆ ಇಳಿಸಿವೆ. ಒಂದು ಸಂವಿಧಾನದ ವ್ಯಾಪ್ತಿ ಏನಿರಬೇಕು ಎನ್ನುವುದು ಬಹಳ ಹಿಂದೆಯೇ ನಿಗದಿಯಾಗಿಬಿಟ್ಟಿದೆ. ಹಾಗೆಯೇ ಒಂದು ಸಂವಿಧಾನದ ಮೂಲಾಂಶಗಳು ಯಾವುವು ಎಂಬುದನ್ನೂ ಪ್ರಪಂಚದಾದ್ಯಂತ ಪುರಸ್ಕರಿಸಲಾಗಿದೆ. ಈ ಸಂಗತಿಗಳ ಬೆಳಕಿನಲ್ಲಿ ಎಲ್ಲಾ ಸಂವಿಧಾನಗಳು, ಮುಖ್ಯ ಅವಕಾಶಗಳಲ್ಲಿ ಒಂದೇ ಬಗೆಯಾಗಿ ಕಾಣಲೇಬೇಕು. ಇಷ್ಟು ತಡವಾಗಿ ರಚಿತವಾಗುತ್ತಿರುವ ಒಂದು ಸಂವಿಧಾನದಲ್ಲಿ ಹೊಸ ಅಂಶಗಳು, ಏನಾದರೂ ಇದ್ದರೆ, ಅವು ದೋಷಗಳನ್ನು ತೆಗೆದುಹಾಕಿ, ದೇಶದ ಅಗತ್ಯಗಳಿಗೆ ತಕ್ಕಂತೆ ಹೊಂದಿಸುವಂಥವು ಮಾತ್ರ. ಇತರ ದೇಶಗಳ ಕುರುಹಾಗಿ ಮಾಡಿದ ನಕಲು ಎಂದು ಆರೋಪಿಸುವವರು ಸಂವಿಧಾನವನ್ನು ಸಾಕಷ್ಟು ಅಧ್ಯಯನ ಮಾಡಿಲ್ಲ ಎಂದು ಖಚಿತವಾಗಿ ಹೇಳಬಹುದು. ಕರಡು ಸಂವಿಧಾನದಲ್ಲಿ ಹೊಸತೇನಿದೆ ಎಂಬುದನ್ನು ನಾನು ತೋರಿಸಿಕೊಟ್ಟಿದ್ದೇನೆ. ಇತರ ಸಂವಿಧಾನಗಳನ್ನು ಅಧ್ಯಯನ ಮಾಡಿದವರು ಮತ್ತು ಭಾವಾವೇಶವಿಲ್ಲದೆ ವಿಚಾರವನ್ನು ಪರಿಶೀಲಿಸಲು ಸಿದ್ಧರಾಗಿರುವವರು, ಕರಡು ರಚನಾ ಸಮಿತಿಯು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಕುರುಡಾಗಿ, ಗುಲಾಮರಾಗಿ ಅನುಕರಿಸುವ ತಪ್ಪು ಮಾಡಿಲ್ಲ ಎಂಬುದನ್ನು ಒಪ್ಪುತ್ತಾರೆ.

ಇನ್ನು ಕರಡು ಸಂವಿಧಾನವು ೧೯೩೫ರ ಭಾರತ ಸರಕಾರ ಶಾಸನದ ಕಾನೂನು ಅವಕಾಶಗಳಲ್ಲಿ ಬಹುಭಾಗವನ್ನು ಎತ್ತಿಕೊಂಡಿದೆ ಎಂಬ ಆರೋಪವನ್ನು ಕುರಿತು, ನಾನು ಯಾವುದೇ ಸಮರ್ಥನೆ ಮಾಡಿಕೊಳ್ಳಬಯಸುವುದಿಲ್ಲ. ಎರವಲಾಗಿ ತೆಗೆದುಕೊಳ್ಳುವ ವಿಷಯದಲ್ಲಿ ನಾಚಿಕೆಪಡಬೇಕಾದುದು ಏನೂ ಇಲ್ಲ. ಅದು ಕೃತಿಚೌರ್ಯವಲ್ಲ. ಒಂದು ಸಂವಿಧಾನದ ಮೂಲ ವಿಚಾರಗಳಲ್ಲಿ ಯಾರಿಗೂ ಪೇಟೆಂಟ್ ಹಕ್ಕಿಲ್ಲ. ಇಲ್ಲಿ ನನಗೆ ವ್ಯಥೆಯುಂಟು ಮಾಡಿರುವುದೇನೆಂದರೆ ೧೯೩೫ರ ಭಾರತ ಸರಕಾರ ಶಾಸನದಿಂದ ತೆಗೆದುಕೊಂಡಿರುವ ಅವಕಾಶಗಳು ಬಹುತೇಕ ಆಡಳಿತದ ವಿವರಗಳಿಗೆ ಸಂಬಂಧಪಟ್ಟವು ಎನ್ನುವುದು. ಆಡಳಿತೀಯ ವಿವರಗಳಿಗೆ ಸಂವಿಧಾನದಲ್ಲಿ ಎಡೆಯಿರಬಾರದು. ಕರಡು ರಚನಾ ಸಮಿತಿಯು ಅವನ್ನು ಸಂವಿಧಾನದಲ್ಲಿ ಸೇರಿಸದಿರುವುದಕ್ಕೆ ತಕ್ಕ ದಾರಿಯನ್ನು ಹುಡುಕುತ್ತಾರೆ ಎಂದು ನಾನು ಬಹಳವಾಗಿ ಬಯಸುತ್ತೇನೆ. ಆದರೆ ಈ ಮಾತು ಆ ವಿವರಗಳನ್ನು ಸೇರಿಸಿರುವುದರ ಸಮರ್ಥನೆಯ ಅಗತ್ಯವನ್ನು ಕುರಿತಾಗಿರುತ್ತದೆ. ಪ್ರಸಿದ್ಧ ಗ್ರೀಕ್ ಇತಿಹಾಸಕರ ಗ್ರೋಟೆ (Grote) ಹೀಗೆ ಹೇಳಿದ್ದಾನೆ:

"ಯಾವುದೇ ಒಂದು ಸಮುದಾಯ ಬಹುಮತದಲ್ಲಿ ಮಾತ್ರವಲ್ಲದೆ, ಇಡಿಯಾಗಿ ಸಮುದಾಯದಲ್ಲಿ ಸಾಂವಿಧಾನಿಕ ನೈತಿಕತೆಯ ಪ್ರಸರಣವು ಸ್ವತಂತ್ರವೂ ಶಾಂತಿಯುತವೂ ಆದ ಒಂದು ಸರಕಾರದ ಅನಿವಾರ್ಯ ಪರಿಸ್ಥಿತಿಯಾಗಿರುತ್ತದೆ. ಶಕ್ತಿಯುತವೂ ಉದ್ಧತವೂ ಆದ ಅಲ್ಪಸಂಖ್ಯಾತರ ವರ್ಗವು ಕೂಡ ಸ್ವತಂತ್ರ ವ್ಯವಸ್ಥೆಯು ಕಾರ್ಯ ನಿರ್ವಾಹ ಮಾಡದಂತೆ ಅದು ಕಾರ್ಯಸಾಧ್ಯವಾಗದಂತೆ ಮಾಡಬಹುದು. ತಮಗೇ ಪರಮಾಧಿಕಾರವನ್ನು ಪಡೆಯುವಷ್ಟು ಶಕ್ತರಲ್ಲದವರು ಈ ಕೆಲಸದಲ್ಲಿ ತೊಡಗುತ್ತಾರೆ."

ಸಾಂವಿಧಾನಿಕ ನೈತಿಕತೆ ಎಂದರೆ ಗ್ರೋಟೆ ಕೊಡುವ ಅರ್ಥ, "ಸಂವಿಧಾನದ ಪ್ರಕಾರಗಳಿಗೆ ಪರಮೋನ್ನತ ಗೌರವವನ್ನು ಸಲ್ಲಿಸುವುದು, ಆ ಪ್ರಕಾರಗಳ ಅನ್ವಯ, ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧಿಕಾರಕ್ಕೆ ವಿಧೇಯವಾಗಿರುವುದು ಆದರೂ ಖಚಿತ ನ್ಯಾಯಿಕ ನಿಯಂತ್ರಣಕ್ಕೆ ಒಳಪಟ್ಟಂತೆ ಮುಕ್ತವಾಗಿ ಮಾತನಾಡುವುದು

ಮತ್ತು ವರ್ತಿಸುವುದು. ಪಕ್ಷಗಳ ಸ್ಪರ್ಧೆಯ ಕಹಿಯ ನಡುವೆಯೂ ತನ್ನದಕ್ಕಿಂತಲೂ ವಿರೋಧಿಗಳ ಕಣ್ಣಿನಲ್ಲಿ ಸಂವಿಧಾನದ ರೂಪಗಳ ಬಗೆಗೆ ಗೌರವ ಕಿಂಚಿತ್ತು ಕಡಿಮೆಯಾಗದ ಪರಿಸ್ಥಿತಿ". (ಕೇಳಿ! ಕೇಳಿ)

ಒಂದು ಪ್ರಜಾಪ್ರಭುತ್ವೀಯ ಸಂವಿಧಾನವು ಶಾಂತಿಯುತವಾಗಿ ಸಮರ್ಪಕವಾಗಿ ಕೆಲಸ ಮಾಡಬೇಕಾದರೆ ಸಂವಿಧಾನಿಕ ನೈತಿಕತೆಯ ಪ್ರಸಾರವಾಗಬೇಕಾದ ಅಗತ್ಯವಿದೆ ಎಂಬುದನ್ನು ಎಲ್ಲರೂ ಒಪ್ಪುವವರಾದರೂ, ಅದರೊಂದಿಗೆ ಹೆಣೆದುಕೊಂಡಿರುವ, ದುರದೃಷ್ಟವಶಾತ್ ಸಾಮಾನ್ಯವಾಗಿ ಪರಿಗಣಿಸಿಲ್ಲದ ಎರಡು ವಿಚಾರಗಳಿವೆ. ಒಂದು, ಆಡಳಿತದ ಸ್ವರೂಪವು ಸಂವಿಧಾನದ ಸ್ವರೂಪದೊಂದಿಗೆ ನಿಕಟವಾಗಿ ಸಂಬಂಧಪಟ್ಟಿದೆ ಎನ್ನುವುದು. ಆಡಳಿತವು ಸಂವಿಧಾನದ ಸ್ವರೂಪಕ್ಕೆ ಅನುಗುಣವಾಗಿರಬೇಕು, ಅದೇ ಅರ್ಥದಲ್ಲಿ ವ್ಯವಹರಿಸುತ್ತಿರಬೇಕು. ಇನ್ನೊಂದು, ಸಂವಿಧಾನ ಸ್ವರೂಪವನ್ನು ಬದಲಾಯಿಸದೆಯೇ, ಆಡಳಿತದ ರೂಪವನ್ನು ಬದಲಾಯಿಸಿ ಅದು ಅಸಂಗತವಾಗುವಂತೆ, ಸಂವಿಧಾನದ ಮೂಲ ಸತ್ವಕ್ಕೆ ವಿರುದ್ಧವಾಗುವಂತೆ ಮಾಡಲು ಸಾಧ್ಯ ಎನ್ನುವುದು. ಇದರಿಂದ ಹೊರಪಡುವುದೇನೆಂದರೆ ಇತಿಹಾಸಕಾರ ಗ್ರೋಟೆ ವರ್ಣಿಸುವಂತೆ ಸಂವಿಧಾನದ ನೈತಿಕತೆಯು ಕಣ್ಮರೆಯಾದಾಗ, ಸಂವಿಧಾನದಿಂದ ಆಡಳಿತಾತ್ಮಕ ವಿವರಗಳನ್ನು ಕೈಬಿಟ್ಟು, ಅವುಗಳನ್ನು ವಿಧಿಸುವ ಕೆಲಸವನ್ನು ಶಾಸಕಾಂಗಕ್ಕೆ ಬಿಡುವ ಅಪಾಯಕಾರೀ ಹೆಜ್ಜೆಯನ್ನಿಡಬಹುದು. ಇಲ್ಲಿ ಪ್ರಶ್ನೆ ಇದು: ನಾವು ಅಂತಹ ಸಾಂವಿಧಾನಿಕ ನೈತಿಕತೆಯ ಪ್ರಸರಣವಾಗಿದೆಯೆಂದು ಭಾವಿಸಿಕೊಳ್ಳಬಹುದೆ? ಸಾಂವಿಧಾನಿಕ ನೈತಿಕತೆಯೆನ್ನುವುದು ಸಹಜವಾದೊಂದು ಭಾವುಕತೆಯಲ್ಲ. ಅದನ್ನು ಪ್ರಯತ್ನಪೂರ್ವಕವಾಗಿ ಬೆಳೆಸಬೇಕು. ನಮ್ಮ ಜನತೆ ಅದನ್ನು ಇನ್ನೂ ಕಲಿಯಬೇಕಾಗಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಭಾರತದಲ್ಲಿ ಪ್ರಜಾಪ್ರಭುತ್ವವು ಮೂಲತಃ ಪ್ರಜಾಪ್ರಭುತ್ವವಲ್ಲದ ಭಾರತದ ಮಣ್ಣಿನ ಮೇಲೆ ಹರಡಿದ ವಸ್ತುವಾಗಿದೆ.

ಈ ಪರಿಸ್ಥಿತಿಯಲ್ಲಿ ಆಡಳಿತ ಸ್ವರೂಪವನ್ನು ವಿಧಿಸುವ ಕೆಲಸವನ್ನು ಶಾಸಕಾಂಗವು ನಿರ್ವಹಿಸುತ್ತದೆ ಎಂದು ನಂಬದಿರುವುದು ಬುದ್ಧಿವಂತಿಕೆ. ಅವುಗಳನ್ನು ಸಂವಿಧಾನದಲ್ಲಿ ಅಳವಡಿಸಿರುವುದಕ್ಕೆ ಇದೇ ಸಮರ್ಥನೆ.

ಕರಡು ಸಂವಿಧಾನವನ್ನು ಕುರಿತು ಇನ್ನೊಂದು ಆರೋಪ. ಅದರ ಯಾವ ಭಾಗವೂ ಭಾರತದ ಪ್ರಾಚೀನ ರಾಜ್ಯಾಡಳಿತವನ್ನು ವ್ಯಕ್ತಪಡಿಸುವುದಿಲ್ಲ ಎನ್ನುವುದು; ನೂತನ ಸಂವಿಧಾನವನ್ನು ಪ್ರಾಚೀನ ಹಿಂದೂ ರಾಜ್ಯದ ಮಾದರಿಯಲ್ಲಿ ರಚಿಸಬೇಕಾಗಿತ್ತು. ಪಾಶ್ಚಾತ್ಯ ತತ್ವಗಳನ್ನು ಅಳವಡಿಸುವ ಬದಲು, ನೂತನ ಸಂವಿಧಾನವನ್ನು ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳ ಮೇಲೆ ಕಟ್ಟಬೇಕಾಗಿತ್ತು ಎನ್ನುವುದು. ಇದಕ್ಕಿಂತಲೂ ಅತಿರೇಕದ ನಿಲುವನ್ನು ಕೆಲವರು ತಳೆದಿದ್ದಾರೆ. ಅವರಿಗೆ ಯಾವುದೇ ಬಗೆಯ ಕೇಂದ್ರ ಅಥವಾ ಪ್ರಾಂತೀಯ ಸರಕಾರಗಳು ಬೇಕಾಗಿಲ್ಲ; ಭಾರತದಲ್ಲಿ ಗ್ರಾಮ ಸರಕಾರಗಳಿದ್ದರೆ ಸಾಕು. ಗ್ರಾಮೀಣ ಸಮುದಾಯವನ್ನು ಕುರಿತು ಬುದ್ಧಿಜೀವಿ ಭಾರತೀಯರು ತೋರಿಸುವ ಪ್ರೇಮವು ವಿಷಾದನೀಯವಲ್ಲವಾದರೂ ಕೊನೆಯೇ ಇಲ್ಲದಷ್ಟಿದೆ (ನಗೆ), ಇದಕ್ಕೆ ಬಹುಮಟ್ಟಿಗೆ ಕಾರಣ ಮೆಟ್ಕಾಫನು ಅದನ್ನು ಮುಕ್ತವಾಗಿ ಪ್ರಶಂಸೆ ಮಾಡಿರುವುದು. ಗ್ರಾಮ ಸಮುದಾಯಗಳು ಪುಟ್ಟ ಗಣರಾಜ್ಯಗಳು, ತಮಗೆ ಬೇಕಾದುದೆಲ್ಲವನ್ನೂ ತಮ್ಮಲ್ಲೇ ಇಟ್ಟುಕೊಂಡಿದ್ದಾರೆ, ಯಾವುದೇ ಅನ್ಯ ಸಂಬಂಧಗಳಿಲ್ಲದೆ ಸ್ವತಂತ್ರವಾಗಿರುತ್ತಾರೆ ಎಂದು ಅವನು ವರ್ಣಿಸಿದನು. ಪ್ರತಿಯೊಂದೂ ಒಂದು ಪ್ರತ್ಯೇಕವಾದ ಪುಟ್ಟ ರಾಜ್ಯವಾಗಿ ಈ ಗ್ರಾಮ ಸಮುದಾಯಗಳು ಇರುವುದೇ, ಮೆಟ್ಕಾಫನ ಪ್ರಕಾರ, ಭಾರತದ ಜನಕೋಟಿಯ ಉಳಿವಿಗೆ ಬೇರಾವುದಕ್ಕಿಂತಲೂ ಮುಖ್ಯವಾಗಿ ಪೋಷಕವಾಗಿವೆ. ಎಷ್ಟೆಷ್ಟೋ ಕ್ರಾಂತಿಗಳು ಮತ್ತು ಬದಲಾವಣೆಗಳನ್ನು ಎದುರಿಸಿ, ಅವರು ಸುಖ ಸಂತೋಷಗಳನ್ನು ಅನುಭವಿಸಲು ಅತಿ ಹೆಚ್ಚಿನ ಸ್ವಾತಂತ್ರ್ಯವನ್ನು ಅನುಭವಿಸಲು ಸಹಾಯ

ಮಾಡಿವೆ. ನಿಜ, ಬೇರೆ ಯಾವುದೂ ಶಾಶ್ವತವಾಗಿ ಉಳಿಯದಿರುವಾಗ ಗ್ರಾಮ ಸಮುದಾಯಗಳು ಉಳಿದುಕೊಂಡು ಬಂದಿವೆ. ಆದರೆ ಗ್ರಾಮ ಸಮುದಾಯಗಳ ಬಗೆಗೆ ಹೆಮ್ಮೆ ಪಡುವವರು, ದೇಶದ ವ್ಯವಹಾರಗಳಿಗೆ ಮತ್ತು ಭವಿಷ್ಯತ್ತಿಗೆ ಸಂಬಂಧಿಸಿದಂತೆ ಯಾವ ಪಾತ್ರವನ್ನು ವಹಿಸಿದ್ದಾರೆ ಎಂಬುದನ್ನು ಪರಿಶೀಲಿಸಲು ಹೋಗುವುದಿಲ್ಲ. ಏಕೆ? ದೇಶದ ಭವಿತವ್ಯದಲ್ಲಿ ಗ್ರಾಮ ಸಮುದಾಯಗಳ ಪಾಲು ಏನೆಂಬುದನ್ನು ಮೆಟ್ಕಾಫನೇ ವರ್ಣಿಸಿದ್ದಾನೆ.

"ಮನೆತನವಾದ ಮೇಲೆ ಮನೆತನವು ಉರುಳಿಬೀಳುತ್ತದೆ. ಕ್ರಾಂತಿಯ ಹಿಂದೆಯೇ ಇನ್ನೊಂದು ಕ್ರಾಂತಿ ಬರುತ್ತದೆ. ಹಿಂದೂ, ಪಠಾಣ, ಮೊಗಲ್, ಮರಾಠಾ, ಸಿಖ್, ಇಂಗ್ಲಿಷ್, ಎಲ್ಲರೂ ಸರದಿಯ ಮೇಲೆ ಪ್ರಭುಗಳು. ಆದರೆ ಗ್ರಾಮ ಸಮುದಾಯಗಳು ಹಾಗೆಯೇ ಉಳಿದಿರುತ್ತವೆ. ಕಷ್ಟದ ಸಮಯದಲ್ಲಿ ಶಸ್ತ್ರಗಳನ್ನು ಹಿಡಿದು ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ. ವೈರಿ ಸೇನೆಯು ಹಾದುಹೋಗುತ್ತದೆ. ತಮ್ಮ ಹತ್ತಾರು ದನಕರುಗಳನ್ನು ತಮ್ಮ ಮನೆಯ ಗೋಡೆಗಳೊಳಗೆ ಜೋಪಾನವಾಗಿರಿಸಿಕೊಂಡು, ಆ ವೈರಿಯು ಮುಂದಕ್ಕೆ ಹಾದು ಹೋಗಲು ಬಿಟ್ಟುಬಿಡುತ್ತಾರೆ."

ಗ್ರಾಮ ಸಮುದಾಯಗಳು ತಮ್ಮ ದೇಶದ ಇತಿಹಾಸದಲ್ಲಿ ವಹಿಸಿರುವ ಪಾತ್ರ ಇಂಥದು. ಇದನ್ನು ತಿಳಿದ ಮೇಲೆ ಅವುಗಳ ಬಗೆಗೆ ಏನೆಂದು ಹೆಮ್ಮೆ ಪಡಬಹುದು? ಎಲ್ಲಾ ಅಲ್ಲೋಲಕಲ್ಲೋಲಗಳ ನಡುವೆ ಅವು ಉಳಿದುಕೊಂಡಿವೆ ಎಂಬುದು ಸತ್ಯಸಂಗತಿಯಾಗಿರಬಹುದು. ಆದರೆ ಕೇವಲ ಉಳಿಯುವುದಕ್ಕೆ ಅಷ್ಟೇನೂ ಬೆಲೆಯಿಲ್ಲ. ಯಾವ ಸ್ತರದಲ್ಲಿ ಅವು ಉಳಿದುಕೊಂಡವು ಎಂಬುದು ಇಲ್ಲಿ ಪ್ರಶ್ನೆ. ಅದು ಖಂಡಿತವಾಗಿ ಕೆಳಮಟ್ಟದ, ಸ್ವಾರ್ಥಪೂರಿತ ಸ್ತರ. ಭಾರತವನ್ನು ಈ ಗ್ರಾಮ ಗಣರಾಜ್ಯಗಳು ನಾಶಮಾಡಿವೆ ಎಂದು ನಾನು ಹೇಳುತ್ತೇನೆ. ಪ್ರಾಂತೀಯತೆಯನ್ನು ಮತೀಯತೆಯನ್ನು ಖಂಡಿಸುವ ಜನರು ಗ್ರಾಮಗಳ ಹಿತೈಷಿಗಳಾಗಿ ನೇತಾರರಾಗಿ ಮುಂದೆ ಬರುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಸ್ಥಳೀಯತೆಯ ಕೂಪ, ಅಜ್ಞಾನದ ಗವಿ, ಅಲ್ಪತನ ಮತ್ತು ಮತೀಯತೆಗಳ ತವರಲ್ಲದೆ ಗ್ರಾಮವು ಬೇರೆ ಏನಾಗಿದೆ? ಕರಡು ಸಂವಿಧಾನವು ಗ್ರಾಮವನ್ನು ಕೈಬಿಟ್ಟು ವ್ಯಕ್ತಿಯನ್ನು ತನ್ನ ಮೂಲ ಘಟಕವಾಗಿ ಇರಿಸಿಕೊಂಡಿರುವುದು ನನಗೆ ಸಂತೋಷವನ್ನುಂಟುಮಾಡಿದೆ.

ಅಲ್ಪಸಂಖ್ಯಾತರಿಗೆ ರಕ್ಷಣೋಪಾಯಗಳನ್ನು ಒದಗಿಸಿರುವುದಕ್ಕಾಗಿಯೂ ಕರಡು ಸಂವಿಧಾನವನ್ನು ಟೀಕಿಸಲಾಗಿದೆ. ಇದರಲ್ಲಿ ಕರಡು ರಚನಾ ಸಮಿತಿಯ ಹೊಣೆಗಾರಿಕೆಯೇನೂ ಇಲ್ಲ. ರಾಜ್ಯಾಂಗ ಸಭೆಯ ನಿರ್ಣಯಗಳನ್ನು ಅದು ಅನುಸರಿಸಿದೆ ಅಷ್ಟೆ. ನನ್ನ ಮಟ್ಟಿಗೆ ಹೇಳುವುದಾದರೆ, ಸಂವಿಧಾನ ಸಭೆಯು ಅಲ್ಪಸಂಖ್ಯಾತರಿಗೆ ಆ ರಕ್ಷಣೆಗಳನ್ನು ಒದಗಿಸಿ ವಿವೇಕಯುತವಾಗಿ ವರ್ತಿಸಿದೆ. ಈ ದೇಶದಲ್ಲಿ ಅಲ್ಪಸಂಖ್ಯಾತರು, ಬಹುಸಂಖ್ಯಾತರು ಇಬ್ಬರೂ ತಪ್ಪು ದಾರಿ ಹಿಡಿದಿದ್ದಾರೆ. ಅಲ್ಪಸಂಖ್ಯಾತರ ಅಸ್ತಿತ್ವವನ್ನೇ ಗಮನಕ್ಕೆ ತಂದುಕೊಳ್ಳದೆ ಹೋಗಿರುವುದು ಬಹುಸಂಖ್ಯಾತರ ತಪ್ಪು; ತಮ್ಮನ್ನು ಶಾಶ್ವತವಾಗಿ ಹಾಗೆಯೇ ಉಳಿಸಿಕೊಂಡಿರುವುದು ಅಲ್ಪಸಂಖ್ಯಾತರ ತಪ್ಪು. ಇಮ್ಮಡಿ ಉದ್ದೇಶವನ್ನು ಈಡೇರಿಸುವ ಪರಿಹಾರವೊಂದನ್ನು ಹುಡುಕಬೇಕಾಗಿದೆ. ಪ್ರಾರಂಭಕ್ಕೆ ಅದು ಅಲ್ಪಸಂಖ್ಯಾತರ ಅಸ್ತಿತ್ವವನ್ನು ಗುರುತಿಸಬೇಕು. ಮುಂದೆ ಎಂದಾದರೂ ಒಂದು ದಿನ ಬಹುಸಂಖ್ಯಾತರೂ, ಅಲ್ಪಸಂಖ್ಯಾತರೂ ಒಂದಾಗಿ ವಿಲೀನಗೊಳ್ಳುವುದಕ್ಕೆ ಅನುಕೂಲವಾಗುವಂಥದಿರಬೇಕು. ಸಂವಿಧಾನ ಸಭೆಯ ಸಲಹೆ ಮಾಡಿರುವ ಪರಿಹಾರವು ಸ್ವಾಗತಾರ್ಹವಾಗಿದೆ. ಏಕೆಂದರೆ, ಅದು ಈ ಎರಡು ಉದ್ದೇಶಗಳನ್ನು ಈಡೇರಿಸುವ ಪರಿಹಾರ. ಅಲ್ಪಸಂಖ್ಯಾತರ ರಕ್ಷಣೆಯ ವಿರುದ್ಧವಾಗಿ ಒಂದು ಬಗೆಯ ಕುರುಡು ವಿರೋಧವನ್ನು ಬೆಳೆಸಿಕೊಂಡಿರುವವರಿಗೆ ನಾನು ಎರಡು ವಿಷಯಗಳನ್ನು ಹೇಳಬಯಸುತ್ತೇನೆ.

ಮೊದಲನೆಯದು, ಅಲ್ಪಸಂಖ್ಯಾತರು ಒಂದು ಸ್ಫೋಟಕ ಶಕ್ತಿ, ಅದು ಸಿಡಿದಿದ್ದೇ ಆದರೆ ಸರಕಾರದ ಇಡೀ ವ್ಯವಸ್ಥೆಯನ್ನೇ ಉಡಾಯಿಸಿಬಿಡಬಲ್ಲದು. ಎರಡನೆಯದು, ಭಾರತದಲ್ಲಿನ ಅಲ್ಪಸಂಖ್ಯಾತರು ತಮ್ಮ ಉಳಿವನ್ನು ಬಹುಸಂಖ್ಯಾತರ ಕೈಗಳಲ್ಲಿಡಲು ಒಪ್ಪಿಕೊಂಡಿದ್ದಾರೆ. ಐರ್ಲೆಂಡಿನ ವಿಭಜನೆಯನ್ನು ನಿವಾರಿಸಲು ನಡೆದ ಮಾತುಕತೆಗಳು ಇತಿಹಾಸದಲ್ಲಿ ರೆಡ್‌ಮಾಂಡನು ಕಾರ್ಸನನಿಗೆ ಹೀಗೆ ಹೇಳಿದನು: 'ಪ್ರಾಟೆಸ್ಟೆಂಟ್ ಅಲ್ಪಸಂಖ್ಯಾತರಿಗೋಸ್ಕರವಾಗಿ ಯಾವ ರಕ್ಷಣೋಪಾಯಗಳನ್ನು ಬೇಕಾದರೂ ಕೇಳಿ, ಆದರೆ ಅಖಂಡ ಐರ್ಲೆಂಡನ್ನು ಉಳಿಸಿಕೊಳ್ಳೋಣ'. ಇದಕ್ಕೆ ಕಾರ್ಸನ್ ನೀಡಿದ ಉತ್ತರ, "ನಿಮ್ಮ ರಕ್ಷಣಾ ಮಾರ್ಗಗಳ ವಿಷಯ ಹಾಳಾಗಲಿ, ನಿಮ್ಮಿಂದ ಆಳಲ್ಪಡಲು ನಮಗೆ ಇಷ್ಟವಿಲ್ಲ". ಭಾರತದ ಯಾವ ಅಲ್ಪಸಂಖ್ಯಾತ ವರ್ಗವೂ ಈ ನಿಲುವನ್ನು ತಳೆದಿಲ್ಲ. ಅವರು ಮೂಲತಃ ರಾಜಕೀಯ ಬಹುಸಂಖ್ಯಾತಕತೆಯಾಗದೆ ಒಂದು ಮತೀಯ ಬಹುಸಂಖ್ಯಾಕತೆಯಾಗಿರುವ ಆಡಳಿತವನ್ನು ಪರಮ ವಿಧೇಯತೆಯಿಂದ ಒಪ್ಪಿಕೊಂಡಿದ್ದಾರೆ. ಅಲ್ಪಸಂಖ್ಯಾತರ ವಿರುದ್ಧವಾಗಿ ತಾರತಮ್ಯ ತೋರಿಸದೆ ನಡೆದುಕೊಳ್ಳುವುದು ತಮ್ಮ ಕರ್ತವ್ಯವೆಂಬುದನ್ನು ಅರಿಯುವುದು ಬಹುಸಂಖ್ಯಾತರಿಗೆ ಸೇರಿದ್ದು. ಅಲ್ಪಸಂಖ್ಯಾಕತೆಯು ಮುಂದುವರಿಯುತ್ತದೆಯೇ ಅಥವಾ ಕಣ್ಮರೆಯಾಗುತ್ತದೆಯೇ ಎನ್ನುವುದು ಬಹುಸಂಖ್ಯಾತರ ವರ್ತನೆಯನ್ನು ಅವಲಂಬಿಸಿದೆ. ಅವರು ಅಲ್ಪಸಂಖ್ಯಾತರ ವಿರುದ್ಧವಾಗಿ ತಾರತಮ್ಯ ಮಾಡುವ ಅಭ್ಯಾಸವನ್ನು ಯಾವ ಗಳಿಗೆಯಲ್ಲಿ ತೊರೆಯುತ್ತಾರೋ ಆ ಗಳಿಗೆಯಲ್ಲಿ ಅಲ್ಪಸಂಖ್ಯಾತರಾಗಿ ಉಳಿಯಲು ಆಧಾರವಿಲ್ಲವಾಗಿ ಆ ವರ್ಗವು ಕಣ್ಮರೆಯಾಗುತ್ತದೆ.

ಕರಡು ಸಂವಿಧಾನದಲ್ಲಿ ಅತ್ಯಂತ ಹೆಚ್ಚಾಗಿ ಟೀಕೆಗೆ ವಿಮರ್ಶೆಗೆ ಒಳಗಾಗಿರುವ ಭಾಗವೆಂದರೆ ಮೂಲಹಕ್ಕುಗಳಿಗೆ ಸಂಬಂಧಪಟ್ಟ ಭಾಗ. ಮೂಲಹಕ್ಕುಗಳನ್ನು ನಿರೂಪಿಸುವ ೧೩ನೆಯ ಅನುಚ್ಛೇದವು ಎಷ್ಟೊಂದು ಅಪವಾದಗಳಿಂದ ಇಡಿಕಿರಿದಿದೆಯೆಂದರೆ, ಅಪವಾದಗಳು ಹಕ್ಕುಗಳನ್ನೇ ನುಂಗಿಬಿಟ್ಟಿವೆ ಎಂದು ಹೇಳಲಾಗಿದೆ. ಇದೊಂದು ರೀತಿಯ ಮೋಸ ಎಂದು ಟೀಕಿಸಲಾಗಿದೆ. ಟೀಕಿಸುವವರ ಅಭಿಪ್ರಾಯದಲ್ಲಿ ಮೂಲಹಕ್ಕುಗಳು ಪರಿಪೂರ್ಣವಾದ ಹಕ್ಕುಗಳೂ ಆಗಿರದಿದ್ದರೆ ಮೂಲಹಕ್ಕುಗಳಲ್ಲ. ಅವರು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸಂವಿಧಾನವನ್ನು ಅದಕ್ಕೆ ಮಾಡಿರುವ ಮೊದಲ ಹತ್ತು ತಿದ್ದುಪಡಿಗಳಲ್ಲಿ ಸೇರಿರುವ ಹಕ್ಕುಗಳ ಮಸೂದೆ (Bill of Rights)ಯನ್ನೂ ಆಧಾರವಾಗಿಟ್ಟುಕೊಂಡಿದ್ದಾರೆ. ಅಮೆರಿಕದ ಹಕ್ಕುಗಳ ಮಸೂದೆಯಲ್ಲಿರುವ ಮೂಲಹಕ್ಕುಗಳೀಗ ನೆರವಾದವು. ಏಕೆಂದರೆ ಅವು ಮಿತಿಗಳಿಗಾಗಲೀ, ಅಪವಾದಗಳಿಗಾಗಲೀ ಒಳಪಡುವುದಿಲ್ಲ ಎಂದು ಹೇಳಲಾಗಿದೆ.

ಮೂಲಭೂತ ಹಕ್ಕುಗಳನ್ನು ಕುರಿತಾದ ಇಡೀ ಟೀಕೆಯು ತಪ್ಪು ಗ್ರಹಿಕೆಯ ಮೇಲೆ ಆಧಾರಗೊಂಡಿದೆ ಎಂದು ಹೇಳಲು ನನಗೆ ವಿಷಾದವಾಗುತ್ತದೆ. ಮೊದಲನೆಯದಾಗಿ ಮೂಲಭೂತ ಹಕ್ಕುಗಳನ್ನು ಅಲ್ಲದವುಗಳಿಂದ ಪ್ರತ್ಯೇಕಿಸುವುದಕ್ಕೆ ಪ್ರಯತ್ನಿಸುವವರೆಗೆ ಟೀಕೆಯು ಆಧಾರಯುತವಾಗಿಲ್ಲ. ಮೂಲ ಹಕ್ಕುಗಳು ನಿರಪೇಕ್ಷವಾದವು, ಮೂಲಹಕ್ಕುಗಳಲ್ಲದವು ನಿರಪೇಕ್ಷವಲ್ಲ ಎಂದು ಹೇಳುವುದು ಸರಿಯಲ್ಲ. ನಿಜವಾಗಿ ಅವುಗಳ ನಡುವೆ ಇರುವ ವ್ಯತ್ಯಾಸ ಇದು: ಮೂಲಹಕ್ಕುಗಳಲ್ಲದವರನ್ನು ಎರಡು ಪಕ್ಷಗಳ ನಡುವೆ ಒಪ್ಪಂದದಿಂದ ರೂಪಿಸಲಾಗುತ್ತದೆ. ಆದರೆ ಮೂಲಹಕ್ಕುಗಳು ಕಾನೂನು ಕೊಡುವ ಉಡುಗೊರೆ. ಸರಕಾರವು ನೀಡುವ ಕೊಡುಗೆಯೆಂದ ಮಾತ್ರಕ್ಕೆ ಮೂಲಭೂತ ಹಕ್ಕುಗಳನ್ನು ಸರಕಾರವು ಸೀಮಿತಗೊಳಿಸಲು ಸಾಧ್ಯವಿಲ್ಲವೆಂದು ಅರ್ಥವಾಗುವುದಿಲ್ಲ.

ಎರಡನೆಯದಾಗಿ ಅಮೆರಿಕದಲ್ಲಿ ಮೂಲಹಕ್ಕುಗಳು ನಿರಪೇಕ್ಷವಾಗಿವೆ ಎಂದು ಹೇಳುವುದು ತಪ್ಪು. ಅಮೆರಿಕಾ ಸಂವಿಧಾನದ ಪ್ರಕಾರ ಪರಿಸ್ಥಿತಿಗೂ ಕರಡು ಸಂವಿಧಾನದ ಪ್ರಕಾರವಾದ ಪರಿಸ್ಥಿತಿಗೂ ಇರುವ

ವ್ಯತ್ಯಾಸವು ರೂಪದ್ದೇ ಹೊರತು ವಸ್ತುವಿನದಲ್ಲ. ಅಮೆರಿಕದಲ್ಲೂ ಮೂಲಹಕ್ಕುಗಳು ನಿರಪೇಕ್ಷವಲ್ಲ ಎನ್ನುವುದು ನಿರ್ವಿವಾದ. ಕರಡು ಸಂವಿಧಾನದಲ್ಲಿ ನಿರೂಪಿಸಿರುವ ಮೂಲ ಹಕ್ಕುಗಳಿಗೆ ಕೊಟ್ಟಿರುವ ಒಂದೊಂದು ಉಪವಾದಕ್ಕೂ ಕೊನೆಯ ಪಕ್ಷ, ಅಮೆರಿಕದ ಸುಪ್ರೀಂ ಕೋರ್ಟಿನ ಒಂದು ತೀರ್ಪನ್ನು ಉಲ್ಲೇಖಿಸಬಹುದು. ಕರಡು ಸಂವಿಧಾನದ ೧೩ನೆಯ ಅನುಚ್ಛೇದದಲ್ಲಿರುವ ವಾಕ್‌ಸ್ವಾತಂತ್ರ್ಯದ ಹಕ್ಕಿಗೆ ಮಿತಿಯ ಸಮರ್ಥನೆಯಾಗಿ ಸುಪ್ರೀಂ ಕೋರ್ಟಿನ ಅಂತಹ ಒಂದು ತೀರ್ಪನ್ನು ಉದ್ಧರಿಸಿಕೊಟ್ಟರೆ ಸಾಕು ಎಂದು ತೋರುತ್ತದೆ. ಅದು ಗಿಟ್ಲೋ ವಿರುದ್ಧ ನ್ಯೂಯಾರ್ಕ್ ಮೊಕದ್ದಮೆ. ವಿಷಯ 'ನ್ಯೂಯಾರ್ಕ್ ಕ್ರಿಮಿನಲ್ ಅನಾರ್ಕಿ' ಲಾ. ಹಿಂಸಾರೂಪದಿಂದ ಬದಲಾವಣೆಗಳನ್ನು ಉಂಟುಮಾಡುವ ಉದ್ದೇಶದಿಂದ ಆಡಿದ ಮಾತುಗಳಿಗೆ ದಂಡನೆ ಕೊಡಲು ನ್ಯಾಯಾಲಯದಲ್ಲಿ ಮೊಕದ್ದಮೆ ನಡೆಯಿತು. ಸುಪ್ರೀಂ ಕೋರ್ಟ್ ಹೀಗೆ ಹೇಳಿತು:

'ಅದು ಬಹುಕಾಲದಿಂದ ಸ್ಥಾಪಿತವಾಗಿರುವ ಮೂಲತತ್ವ. ಸಂವಿಧಾನವು ವಾಕ್‌ಸ್ವಾತಂತ್ರ್ಯವನ್ನು, ಪತ್ರಿಕಾ ಸ್ವಾತಂತ್ರ್ಯವನ್ನು ನೀಡುತ್ತದೆ. ಆದರೆ ಅದು ಹೊಣೆಗಾರಿಕೆಯಿಲ್ಲದೆ ಮನಸ್ಸಿಗೆ ಬಂದಂತೆ ಮಾತನಾಡಲು ಅಥವಾ ಪ್ರಕಟಿಸಲು, ನಿರಪೇಕ್ಷವಾದ ಹಕ್ಕನ್ನು ನೀಡುವುದಿಲ್ಲ. ಭಾಷೆಯನ್ನು ಹೇಗೆ ಬೇಕಾದರೂ ಬಳಸಲು ಅನಿರ್ಬಂಧಿತವಾದ, ಕಡಿವಾಣವಿಲ್ಲದ ಪರವಾನಗಿ ಕೊಡುವುದಿಲ್ಲ. ಈ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳುವವರಿಗೆ ದಂಡನೆಯನ್ನು ತಪ್ಪಿಸಲು ಅವಕಾಶ ಕೊಡುವುದಿಲ್ಲ.'

ಆದ್ದರಿಂದ ಅಮೆರಿಕದ ಮೂಲ ಹಕ್ಕುಗಳು ನಿರಪೇಕ್ಷವಾಗಿವೆ, ಕರಡು ಸಂವಿಧಾನದಲ್ಲಿರುವುವು ನಿರಪೇಕ್ಷವಲ್ಲ ಎಂದು ಹೇಳುವುದು ತಪ್ಪಾಗುತ್ತದೆ. ಯಾವುದೇ ಮೂಲಹಕ್ಕನ್ನು ಪರಿಷ್ಕರಿಸಬೇಕಾಗಿದ್ದರೆ, ಸಂವಿಧಾನವೇ ಆ ಕೆಲಸ ಮಾಡಬೇಕು. ಅಮೆರಿಕದ ಸಂವಿಧಾನದಂತೆ ಎಂದು ಒಪ್ಪಲಾಗಿದೆ. ಸಂವಿಧಾನವು ಹಾಗೆ ಮಾಡದಿದ್ದಾಗ ನ್ಯಾಯಾಂಗವು ಸಂಬಂಧಿತ ಪರಿಗಣನೆಗಳೆಲ್ಲವನ್ನು ಗಮನಿಸಿ ನಿರ್ಧರಿಸಬೇಕಾಗುತ್ತದೆ. ಇದೆಲ್ಲವೂ ತಪ್ಪು ತಿಳಿವಳಿಕೆಯಿಂದ ಕೂಡಿದೆ ಎಂದು ಹೇಳಲು ವಿಷಾದಿಸುತ್ತೇನೆ. ಅಮೆರಿಕದ ಸಂವಿಧಾನವು ಅಂಥದೇನನ್ನು ಮಾಡುವುದಿಲ್ಲ. ಸಭೆ ಸೇರುವ ಹಕ್ಕು ಒಂದರ ಹೊರತು ಅಮೆರಿಕದ ಸಂವಿಧಾನವು ಅಲ್ಲಿಯ ಪ್ರಜೆಗಳಿಗೆ ಆಶ್ವಾಸನೆ ಕೊಟ್ಟಿರುವ ಮೂಲಹಕ್ಕುಗಳ ಮೇಲೆ ಯಾವುದೇ ಮಿತಿಗಳನ್ನು ಹೇರುವುದಿಲ್ಲ. ಹಾಗೆಯೇ ಮೂಲ ಹಕ್ಕುಗಳ ಮೇಲೆ ಮಿತಿ ಹಾಕುವ ಕೆಲಸವನ್ನು ಅಮೆರಿಕದ ಸಂವಿಧಾನವು ಅಲ್ಲಿಯ ನ್ಯಾಯಾಂಗಕ್ಕೆ ಬಿಟ್ಟಿದೆ ಎಂದು ಹೇಳುವುದೂ ಸರಿಯಲ್ಲ. ವಾಸ್ತವವಾಗಿ ಆ ಹಕ್ಕಿರುವುದು ಕಾಂಗ್ರೆಸ್ಸಿಗೆ. ನಿಜವಾದ ಪರಿಸ್ಥಿತಿಯು ವಿಮರ್ಶಕರು ಭಾವಿಸಿಕೊಂಡಿರುವುದಕ್ಕಿಂತ ಬೇರೆಯೇ ಆಗಿದೆ. ಅಮೆರಿಕದಲ್ಲಿ ಸಂವಿಧಾನವು ಶಾಸನಗೊಳಿಸಿರುವಂತೆ ಮೂಲ ಹಕ್ಕುಗಳು ನಿರಪೇಕ್ಷವೇ ಆಗಿದ್ದವು, ನಿಜ. ಆದರೆ ಈ ಮೂಲ ಹಕ್ಕುಗಳಿಗೆ ಕೆಲವು ಮಿತಿಗಳನ್ನು ಹಾಕಿ ಪರಿಷ್ಕರಿಸುವುದು ಅತ್ಯಂತ ಅಗತ್ಯ ಎಂದು ಕಾಂಗ್ರೆಸ್ ಬಹುಬೇಗ ಮನವರಿಕೆ ಮಾಡಿಕೊಂಡಿತು. ಈ ಮಿತಿಗಳ ಸಾಂವಿಧಾನಿಕತೆಯ ಪ್ರಶ್ನೆಯು ಸುಪ್ರೀಂ ಕೋರ್ಟಿನೆದುರಿಗೆ ಬಂದಾಗ, ಹಾಗೆ ಮಿತಿ ವಿಧಿಸಲು ಸಂವಿಧಾನವು ಅಮೆರಿಕದ ಕಾಂಗ್ರೆಸ್ಸಿಗೆ ಅಧಿಕಾರ ಕೊಟ್ಟಿಲ್ಲ ಎಂದು ವಾದಿಸಲಾಯಿತು. ಸುಪ್ರೀಂ ಕೋರ್ಟು ಪೋಲೀಸ್ ಅಧಿಕಾರದ ಸಿದ್ಧಾಂತವನ್ನು ಆವಿಷ್ಕರಿಸಿತು. ಮೂಲಹಕ್ಕುಗಳ ನಿರಪೇಕ್ಷತೆಯನ್ನು ಸಮರ್ಥಿಸುವವರನ್ನು ವಿರೋಧಿಸಿ, ಪ್ರತಿಯೊಂದು ರಾಜ್ಯಕ್ಕೂ ಅಂತರ್ಗತವಾದ ಪೋಲೀಸ್ ಶಕ್ತಿಯಿದೆ. ಅದನ್ನು ಸಂವಿಧಾನವು ಸ್ಪಷ್ಟವಾದ ಮಾತುಗಳಲ್ಲಿ ರಾಜ್ಯಕ್ಕೆ ನೀಡಬೇಕೆಂದಿಲ್ಲ. ಈಗಾಗಲೇ ನಾನು ಉಲ್ಲೇಖಿಸಿದ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟು ಹೇಳಿದ ಮಾತುಗಳಿವು: "ಒಂದು ರಾಜ್ಯವು ತನ್ನ ಪೋಲೀಸ್ ಅಧಿಕಾರವನ್ನು ಪ್ರಯೋಗಿಸಿ, ಸಾರ್ವಜನಿಕ ಕಲ್ಯಾಣಕ್ಕೆ ಮಾರಕವಾಗುವ ರೀತಿಯಲ್ಲಿ, ಸಾರ್ವಜನಿಕ ನೀತಿ ನಿಯಮಗಳನ್ನು ಹಾಳುಮಾಡುವ,

ಅಪರಾಧಗಳನ್ನು ಪ್ರಚೋದಿಸುವ ಅಥವಾ ಸಾರ್ವಜನಿಕ ಶಾಂತಿಯನ್ನು ಕಲಕುವ ರೀತಿಯಲ್ಲಿ ಮಾತನಾಡಿ, ಈ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಳ್ಳುವವರನ್ನು ಶಿಕ್ಷಿಸಬಹುದು."

ಕರಡು ಸಂವಿಧಾನವು ಮಾಡಿರುವುದಾದರೂ ಇದು : ಮೂಲಹಕ್ಕುಗಳನ್ನು ನಿರಪೇಕ್ಷವಾದ ರೀತಿಯಲ್ಲಿ ನಿರೂಪಿಸದೆ, ಪೋಲೀಸ್ ಶಕ್ತಿಯನ್ನು ಆವಿಷ್ಕರಿಸಿ ಪಾರ್ಲಿಮೆಂಟ್ ನೆರವಿಗೆ ಬರಲು ಸುಪ್ರೀಂ ಕೋರ್ಟನ್ನು ಅವಲಂಬಿಸದೆ, ಸರಕಾರವೇ ನೇರವಾಗಿ ಮೂಲಹಕ್ಕುಗಳ ಮೇಲೆ ಮಿತಿಗಳನ್ನು ಹೇರಲು ಅವಕಾಶ ನೀಡಿದೆ. ಫಲಿತಾಂಶದಲ್ಲಿ ಇದರಿಂದಾಗಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಒಂದು ಪ್ರತ್ಯಕ್ಷವಾಗಿ ಮಾಡುವುದನ್ನೇ, ಇನ್ನೊಂದು ಪರೋಕ್ಷವಾಗಿ ಮಾಡುತ್ತದೆ. ಎರಡೂ ಸಂದರ್ಭಗಳಲ್ಲಿ ಮೂಲಹಕ್ಕುಗಳು ನಿರಪೇಕ್ಷವಾಗಿಲ್ಲ.

ಕರಡು ಸಂವಿಧಾನದಲ್ಲಿ ಮೂಲಹಕ್ಕುಗಳಾದ ಮೇಲೆ "ನಿರ್ದೇಶಕ ತತ್ವಗಳು" ಬರುತ್ತವೆ. ಇವು ಸಾಂಸದಿಕ ಪ್ರಜಾಪ್ರಭುತ್ವಕ್ಕಾಗಿ ಸಂವಿಧಾನದಲ್ಲಿ ನಿರೂಪಿಸಲಾದ ಹೊಸ ಅಂಶ. ಇಂತಹ ತತ್ವಗಳನ್ನು ಒಳಗೊಂಡಂತೆ ಸಾಂಸದಿಕ ಪ್ರಜಾಪ್ರಭುತ್ವವನ್ನು ರಚಿಸಿರುವ ಬೇರೊಂದು ಸಂವಿಧಾನವು ಐರಿಷ್ ಫ್ರೀ ಸ್ಟೇಟ್. ಈ ನಿರ್ದೇಶಕ ತತ್ವಗಳನ್ನು ಟೀಕಿಸಲಾಗಿದೆ. ಅವು ಕೇವಲ ಶ್ರದ್ಧಾತ್ಮಕ ಹೇಳಿಕೆಗಳು. ಅವುಗಳಿಗೆ ಬದ್ಧಗೊಳಿಸುವ ಶಕ್ತಿಯಿಲ್ಲವೆಂದು ಹೇಳಲಾಗಿದೆ. ಈ ಟೀಕೆಯೇ ಅತಿಯಾಗಿದೆ. ಸಂವಿಧಾನವೇ ಹಾಗೆಂದು ಹೇಳುತ್ತದೆ.

ನಿರ್ದೇಶಕ ತತ್ವಗಳ ಹಿಂದೆ ನ್ಯಾಯಿಕವಾದ ಶಕ್ತಿಯಿಲ್ಲ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳಲು ನಾನು ಸಿದ್ಧನಾಗಿದ್ದೇನೆ. ಆದರೆ ಅವುಗಳಲ್ಲಿ ಯಾವುದೇ ಬಂಧಕ ಶಕ್ತಿಯಿಲ್ಲ ಎಂದು ಒಪ್ಪಿಕೊಳ್ಳಲು ನಾನು ಸಿದ್ಧವಾಗಿಲ್ಲ. ಕಾನೂನಿನಂತೆ ಬಂಧಕ ಶಕ್ತಿಯಿಲ್ಲದ ಮಾತ್ರದಿಂದ ಅವು ನಿರುಪಯುಕ್ತ ಎಂದು ಹೇಳಿದರೆ ಅದನ್ನು ನಾನು ಒಪ್ಪಲಾರೆ.

ನಿರ್ದೇಶಕ ತತ್ವಗಳು ೧೯೩೫ರ ಶಾಸನದಂತೆ ಗವರ್ನರ್ ಜನರಲ್ಲರಿಗೂ ವಸಾಹತುಗಳ ಗವರ್ನರಿಗೂ ಭಾರತದ ಗವರ್ನರಿಗೂ ಬ್ರಿಟಿಷ್ ಸರಕಾರವು ನೀಡಿದ ಸೂಚನೆಗಳ ಆದೇಶಗಳನ್ನು ಇವು ಹೋಲುತ್ತವೆ. ಕರಡು ಸಂವಿಧಾನದ ಪ್ರಕಾರ ಅಂತಹ ಆದೇಶಗಳನ್ನು ರಾಷ್ಟ್ರಪತಿಗಳಿಗೂ, ಗವರ್ನರರಿಗೂ ಕೊಡಲು ಉದ್ದೇಶಿಸಿದೆ. ಈ ಸೂಚನೆಗಳ ಆದೇಶಪ್ರಪತ್ರ ಪಠ್ಯವು ಸಂವಿಧಾನದ ೪ನೆಯ ಷೆಡ್ಯೂಲಿನಲ್ಲಿದೆ. ನಿರ್ದೇಶಕ ತತ್ವಗಳು ಈ ಸೂಚನೆಗಳ ಆದೇಶಪ್ರಪತ್ರದ ಇನ್ನೊಂದು ಹೆಸರು.

ಒಂದೇ ಒಂದು ವ್ಯತ್ಯಾಸವೆಂದರೆ, ಅವು ಶಾಸಕಾಂಗಕ್ಕೂ, ಕಾರ್ಯಾಂಗಕ್ಕೂ ನೀಡಿದ ಆದೇಶಗಳು. ಇಂಥದೊಂದನ್ನು ನಾವು ಸ್ವಾಗತಿಸಬೇಕು ಎಂದು ನನಗೆ ತೋರುತ್ತದೆ. ಶಾಂತಿ, ಸುವ್ಯವಸ್ಥೆ ಮತ್ತು ಉತ್ತಮ ಸರಕಾರಗಳಿಗಾಗಿ ಸಾಮಾನ್ಯ ಅಧಿಕಾರದ ನೀಡಿಕೆ ಎಲ್ಲೆಲ್ಲಿದೆಯೋ ಅಲ್ಲೆಲ್ಲಾ ಅದರ ಚಲಾವಣೆಯನ್ನು ನಿಯಂತ್ರಿಸುವ ಆದೇಶಗಳು ಇರುವುದು ಅಗತ್ಯ.

ಕರಡು ಪ್ರಸ್ತಾವನೆಯಂತೆ ಒಂದು ಸಂವಿಧಾನದಲ್ಲಿ ಅಂತಹ ಆದೇಶಗಳನ್ನು ಸೇರಿಸುವುದು ಇನ್ನೊಂದು ಕಾರಣಕ್ಕಾಗಿಯೂ ಸಮರ್ಥನೀಯವಾಗುತ್ತದೆ. ಕರಡು ಸಂವಿಧಾನವು, ಇಲ್ಲಿ ರಚಿತವಾಗಿರುವಂತೆ ದೇಶದ ಸರಕಾರಕ್ಕೆ ಒಂದು ಯಂತ್ರವನ್ನು ಒದಗಿಸುತ್ತದೆ. ಕೆಲವು ದೇಶಗಳಲ್ಲಿ ಆಗಿರುವಂತೆ ಯಾವುದೇ ನಿರ್ದಿಷ್ಟವಾದೊಂದು ಪಕ್ಷವನ್ನು ಅಧಿಕಾರದಲ್ಲಿ ಪ್ರತಿಷ್ಠಾಪಿಸಲು ಮಾಡಿದ ಒಂದು ಮೋಸವಲ್ಲ. ಅಧಿಕಾರದಲ್ಲಿ ಯಾರಿರಬೇಕು ಎಂಬುದನ್ನು ಜನರು ನಿರ್ಧರಿಸಲು ಬಿಡಲಾಗಿದೆ. ಪ್ರಜಾಪ್ರಭುತ್ವದ ಪರೀಕ್ಷೆಗಳನ್ನು ಅದು ಗೆಲ್ಲಬೇಕಾದರೆ ಅದು ಹಾಗೆಯೇ ಇರಬೇಕು. ಆದರೆ ಅಧಿಕಾರ ಗ್ರಹಣ ಮಾಡಿದವರು ಅದರಲ್ಲಿ ತಮಗಿಷ್ಟಬಂದಂತೆ ಮಾಡಲು ಸ್ವತಂತ್ರರಲ್ಲ. ಆ ಅಧಿಕಾರವನ್ನು ಚಲಾಯಿಸುವುದರಲ್ಲಿ ನಿರ್ದೇಶಕ ತತ್ವಗಳು

ಎಂದು ಕರೆಯುವ ಆದೇಶಗಳನ್ನು ಗೌರವಿಸಲೇಬೇಕು. ಅವನು ಅವುಗಳನ್ನು ಅಲಕ್ಷಿಸುವಂತಿಲ್ಲ. ಅವುಗಳನ್ನು ಉಲ್ಲಂಘಿಸಿದರೆ ನ್ಯಾಯಾಲಯದಲ್ಲಿ ಉತ್ತರ ಹೇಳಬೇಕಾಗದೆ ಇರಬಹುದು. ಆದರೆ ಚುನಾವಣೆಯ ಸಮಯದಲ್ಲಿ ಮತದಾರ ವರ್ಗದೆದುರಿಗೆ ಅವನು ಉತ್ತರ ಕೊಡಬೇಕಾಗುತ್ತದೆ, ಖಂಡಿತವಾಗಿ. ಈ ನಿರ್ದೇಶಕ ತತ್ವಗಳಿಗೆ ಎಂತಹ ಮಹತ್ವದ ಬೆಲೆಯಿದೆ ಎನ್ನುವುದು, ಬಲ ಶಕ್ತಿಗಳು ಅಧಿಕಾರವನ್ನು ಕಸಿದುಕೊಳ್ಳಲು ಪ್ರಯತ್ನಿಸಿದಾಗ ಚೆನ್ನಾಗಿ ಅರ್ಥವಾಗುತ್ತದೆ.

ಅವುಗಳಿಗೆ ಬಂಧಕ ಶಕ್ತಿಯಿಲ್ಲ ಎನ್ನುವುದು ಅವುಗಳನ್ನು ಸಂವಿಧಾನದಲ್ಲಿ ಸೇರಿಸಿರುವುದರ ವಿರುದ್ಧವಾದ ವಾದವಾಗುವುದಿಲ್ಲ. ಸಂವಿಧಾನದಲ್ಲಿ ಅವುಗಳನ್ನು ಎಲ್ಲಿ ಇರಿಸಬೇಕು ಎಂಬ ವಿಷಯದಲ್ಲಿ ಅಭಿಪ್ರಾಯ ಭಿನ್ನತೆ ಇರಬಹುದು. ಇತ್ಯಾತ್ಮಕ ನಿರ್ಬಂಧಗಳನ್ನು ಹೊಂದಿರುವ ಅವಕಾಶಗಳ ನಡುವೆ ಇತ್ಯಾತ್ಮಕ ನಿರ್ಬಂಧಗಳಿಲ್ಲದ ಅವಕಾಶಗಳನ್ನು ಅಳವಡಿಸುವುದು ಸೂಕ್ತವಾಗುವುದಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ನನ್ನ ಅಭಿಪ್ರಾಯದಲ್ಲಿ ಅವುಗಳಿಗೆ ಸೂಕ್ತವಾದ ಸ್ಥಳ ಮೂರು (ಅ) ಮತ್ತು ನಾಲ್ಕನೆಯ ಷೆಡ್ಯೂಲುಗಳು. ಅಲ್ಲಿ ರಾಷ್ಟ್ರಪತಿಗಳಿಗೂ, ಗವರ್ನರರಿಗೂ ಆದೇಶಗಳಿವೆ. ಅಲ್ಲಿ ಇವುಗಳನ್ನು ಸೇರಿಸಬಹುದು. ಏಕೆಂದರೆ, ಈಗಾಗಲೇ ಹೇಳಿದಂತೆ, ಅವು ನಿಜವಾಗಿ ಕಾರ್ಯಾಂಗ ಮತ್ತು ಶಾಸಕಾಂಗಗಳು ತಮ್ಮ ಅಧಿಕಾರವನ್ನು ಹೇಗೆ ಚಲಾಯಿಸಬೇಕೆಂದು ಹೇಳುವ ಆದೇಶವಾಗಿರುತ್ತವೆ. ಅದಿರಲಿ, ಅದೇನಿದ್ದರೂ ಜೋಡಣೆಯ ವಿಚಾರ.

ಕೇಂದ್ರವು ತುಂಬಾ ಬಲಶಾಲಿಯಾಗಿದೆ ಎಂದು ಕೆಲವರು ಟೀಕಿಸಿದ್ದಾರೆ. ಇತರ ಕೆಲವರು ಅದನ್ನು ಇನ್ನಷ್ಟು ಬಲಪಡಿಸಬೇಕು ಎಂದು ಹೇಳುತ್ತಾರೆ. ಕರಡು ಸಂವಿಧಾನವು ಇಬ್ಬರ ನಡುವೆ ಸಮತೋಲನವನ್ನು ಸಾಧಿಸಿದೆ. ಕೇಂದ್ರಕ್ಕೆ ಎಷ್ಟೇ ಮಟ್ಟಿಗೆ ಅಧಿಕಾರಗಳನ್ನು ನೀವು ಕೊಡದೆ ಹೋದರೂ ಅದು ಬಲವಾಗುವುದನ್ನು ತಪ್ಪಿಸಲು ನಿಮಗೆ ಸಾಧ್ಯವೇ ಇಲ್ಲ. ಆಧುನಿಕ ಜಗತ್ತಿನಲ್ಲಿ ಪರಿಸ್ಥಿತಿ ಹೇಗಿದೆಯೆಂದರೆ ಅಧಿಕಾರ ಕೇಂದ್ರೀಕರಣ ಅನಿವಾರ್ಯವಾಗಿದೆ. ಅಮೆರಿಕದ ಫೆಡರಲ್ ಸರಕಾರವನ್ನೇ ನೋಡಬಹುದು. ಸಂವಿಧಾನವು ನೀಡಿದ್ದ ತುಂಬಾ ಸೀಮಿತವಾದ ಅಧಿಕಾರಗಳಿದ್ದರೂ, ಹಿಂದಿನ ರೂಪವನ್ನು ಮೀರಿ ಬೆಳೆದು ರಾಜ್ಯ ಸರಕಾರಗಳನ್ನು ಮೀರಿಸಿಬಿಟ್ಟಿದೆ. ಆಧುನಿಕ ಪರಿಸ್ಥಿತಿಗಳೇ ಇದಕ್ಕೆ ಕಾರಣ. ಇವೇ ಕಾರಣಗಳೇ ಭಾರತ ಸರಕಾರದ ಮೇಲೂ ವರ್ತಿಸುವುದು ಖಂಡಿತ. ಅದು ಹೆಚ್ಚು ಬಲಶಾಲಿಯಾಗದಂತೆ ತಡೆಯಲು ಏನೊಂದೂ ಸಹಾಯಕವಾಗಲಾರದು. ಆದರೆ ಅದಕ್ಕೆ ವ್ಯತಿರಿಕ್ತವಾಗಿ, ಕೇಂದ್ರವನ್ನು ಹೆಚ್ಚು ಬಲಗೊಳಿಸುವ ಪ್ರವೃತ್ತಿಯನ್ನು ತಡೆಯಬೇಕು. ತಾನು ಅರಗಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಅಗಿಯಲಾರದು. ಅದರ ಬಲವು ಅದರ ತೂಕಕ್ಕೆ ಹೊಂದಿಕೆಯಾಗುವಂತಿರಬೇಕು. ಬಲ ವಿಪರೀತವಾಗಿ ತನ್ನ ಭಾರಕ್ಕೆ ತಾನೇ ಕುಸಿದುಬೀಳುವಂತೆ ಮಾಡುವುದು ಅವಿವೇಕವಾಗುತ್ತದೆ.

ಕೇಂದ್ರ ಮತ್ತು ಪ್ರಾಂತಗಳ ನಡುವೆ ಒಂದು ಬಗೆಯ ಸಂಬಂಧಗಳನ್ನೂ, ಕೇಂದ್ರ ಮತ್ತು ಭಾರತೀಯ ರಾಜ್ಯಗಳ ನಡುವೆ ಇನ್ನೊಂದು ಬಗೆಯ ಸಂಬಂಧಗಳನ್ನೂ ಹೊಂದಿರುವುದಕ್ಕಾಗಿ ಕರಡು ಸಂವಿಧಾನವನ್ನು ಟೀಕಿಸಲಾಗಿದೆ. ಭಾರತೀಯ ರಾಜ್ಯಗಳು ಕೇಂದ್ರ ಸೂಚಿಯಲ್ಲಿ ರಕ್ಷಣೆ, ವಿದೇಶಾಂಗ ವ್ಯವಹಾರ ಮತ್ತು ಸಂಪರ್ಕಗಳ ಹೊರತು ಮಿಕ್ಕವುಗಳನ್ನು ಒಪ್ಪಿಕೊಳ್ಳಬೇಕೆಂದಿಲ್ಲ. ಸಮವರ್ತಿ ಸೂಚಿಯಲ್ಲಿ ಸೇರಿಸಿರುವವನ್ನು ಅವು ಒಪ್ಪಿಕೊಳ್ಳಬೇಕಾಗಿಲ್ಲ. ಕರಡು ಸಂವಿಧಾನದಲ್ಲಿರುವಂತೆ ರಾಜ್ಯ ಸೂಚಿಯಲ್ಲಿರುವ ವಿಷಯಗಳನ್ನು ಒಪ್ಪಿಕೊಳ್ಳಬೇಕಾಗಿಲ್ಲ. ತಮ್ಮದೇ ರಾಜ್ಯಾಂಗ ರಚನಾ ಸಭೆಗಳನ್ನು ರಚಿಸಿಕೊಂಡು ತಮ್ಮವೇ ಸಂವಿಧಾನಗಳನ್ನು ರಚಿಸಿಕೊಳ್ಳಲು ಅವು ಸ್ವತಂತ್ರವಾಗಿವೆ. ಇದೆಲ್ಲಾ ತುಂಬಾ ದುರದೃಷ್ಟಕರ ಹಾಗೂ ಸಮರ್ಥನೀಯವಲ್ಲ

ಎಂದು ಹೇಳಬಯಸುತ್ತೇನೆ. ಈ ಅಸಮತೆಯು ಸರಕಾರದ ಕಾರ್ಯಕ್ಷಮತೆಗೆ ಮಾರಕವಾಗಬಹುದು. ಅಸಮತೆಯು ಇರುವವರೆಗೆ ಅಖಿಲ ಭಾರತ ವಿಚಾರಗಳಲ್ಲಿ ಕೇಂದ್ರದ ಅಧಿಕಾರವು ತನ್ನ ಕಾರ್ಯಕ್ಷಮತೆಯನ್ನು ಕಳೆದುಕೊಳ್ಳಬಹುದು. ಏಕೆಂದರೆ ಯಾವುದೇ ಅಧಿಕಾರವು ಎಲ್ಲಾ ಸಂದರ್ಭಗಳಿಗೂ ಎಲ್ಲಾ ಸ್ಥಳಗಳಲ್ಲೂ ಚಲಾಯಿಸಲು ಸಾಧ್ಯವಿಲ್ಲವಾದರೆ ಅದು ಅಧಿಕಾರವೇ ಅಲ್ಲ. ಯುದ್ಧದಿಂದ ಸೃಷ್ಟಿಯಾಗುವಂತಹ ಒಂದು ಪರಿಸ್ಥಿತಿಯಲ್ಲಿ ಕೆಲವು ಕ್ಷೇತ್ರಗಳಲ್ಲಿ ಮುಖ್ಯವಾದ ಅಧಿಕಾರವನ್ನು ಚಲಾಯಿಸುವುದರ ಮೇಲೆ ಇತಿಮಿತಿಯ ಸೀಮಿತಗಳನ್ನು ವಿಧಿಸುವುದರಿಂದ ರಾಜ್ಯದ ಅಸ್ತಿತ್ವಕ್ಕೇ ಹಾನಿಯುಂಟಾಗಬಹುದು. ಇದಕ್ಕಿಂತಲೂ ಕೆಟ್ಟದಾದ ಪರಿಸ್ಥಿತಿಯೆಂದರೆ, ಕರಡು ಸಂವಿಧಾನದಲ್ಲಿ ಭಾರತೀಯ ರಾಜ್ಯಗಳು ತಮ್ಮದೇ ಸೈನ್ಯವನ್ನು ಕಟ್ಟಿ ಕಾಪಾಡಿಕೊಂಡಿರಲು ಅನುಮತಿಯಿರುವುದು. ಇದು ಅತ್ಯಂತ ಹಿನ್ನಡೆಯ, ಅತ್ಯಂತ ಹಾನಿಕರವಾದ ಅವಕಾಶವೆಂದು ನಾನು ಭಾವಿಸುತ್ತೇನೆ. ಅದು ಭಾರತದ ಅಖಂಡತೆಯನ್ನು ಒಡೆಯಲು, ಕೇಂದ್ರ ಸರಕಾರವನ್ನು ಬುಡಮೇಲು ಮಾಡಲು ದಾರಿ ಮಾಡಬಹುದು. ಕರಡು ರಚನಾ ಸಮಿತಿಗೆ ಇದರಿಂದ ಸ್ವಲ್ಪವೂ ಸಂತೋಷವಾಗಿರಲಿಲ್ಲ. ಪ್ರಾಂತಗಳ ನಡುವೆ, ಭಾರತೀಯ ರಾಜ್ಯಗಳಿಗೆ ಕೇಂದ್ರದೊಂದಿಗೆ ಸಾಂವಿಧಾನಿಕ ಸಂಬಂಧಗಳಲ್ಲಿ ಏಕರೂಪತೆಯಿರಬೇಕೆಂದು ಅವರು ಬಹಳವಾಗಿ ಬಯಸಿದ್ದರು. ಆದರೆ ದುರದೃಷ್ಟವಶಾತ್, ಅವರು ಪರಿಸ್ಥಿತಿಯನ್ನು ಸುಧಾರಿಸಲು ಏನೂ ಮಾಡುವಂತಿರಲಿಲ್ಲ. ಸಂವಿಧಾನ ಸಭೆಯ ನಿರ್ಣಯಗಳಿಗೆ ಅವರು ಬದ್ಧರಾಗಿದ್ದರು. ಸಂವಿಧಾನ ಸಭೆಯಾದರೋ ಸಂಧಾನಕ್ಕೆ ಕುಳಿತ ಸಮಿತಿಗಳು ಕೈಗೊಂಡ ನಿರ್ಧಾರಗಳಿಗೆ ಬದ್ಧವಾಗಿದ್ದಿತು.

ಆದರೆ ಜರ್ಮನಿಯಲ್ಲಿ ಏನು ನಡೆಯಿತೋ ಅದರಿಂದ ನಾವು ಧೈರ್ಯ ತಾಳಬಹುದು. ೧೮೭೦ರಲ್ಲಿ ಬಿಸ್ಮಾರ್ಕನು ಸ್ಥಾಪಿಸಿದ ಜರ್ಮನ್ ಸಾಮ್ರಾಜ್ಯವು ಒಂದು ಸಂಯುಕ್ತ ರಾಜ್ಯವಾಗಿದ್ದಿತು. ಅದರಲ್ಲಿ ೨೫ ಘಟಕಗಳಿದ್ದವು. ಅವುಗಳ ಪೈಕಿ ೨೨ ರಾಜ್ಯಾಡಳಿತವಿದ್ದವು. ೩ ಮಾತ್ರ ಗಣರಾಜ್ಯ ನಗರ ರಾಜ್ಯಗಳು. ನಮಗೆಲ್ಲ ತಿಳಿದಿರುವಂತೆ ಕಾಲಕ್ರಮದಲ್ಲಿ ಈ ವ್ಯತ್ಯಾಸವು ಕಣ್ಮರೆಯಾಗಿ ಜರ್ಮನಿಯು ಒಂದು ಸಂವಿಧಾನದಲ್ಲಿ ಬದುಕುವ ಜನರುಳ್ಳ ಒಂದು ಅಖಂಡ ದೇಶವಾಯಿತು. ಭಾರತೀಯ ರಾಜ್ಯಗಳ ವಿಲೀನ ಪ್ರಕ್ರಿಯೆಯು ಜರ್ಮನಿಯಲ್ಲಿ ಆದುದಕ್ಕಿಂತಲೂ ಹೆಚ್ಚು ವೇಗವಾಗಿ ನಡೆಯುತ್ತಿದೆ. ೧೯೪೭ರ ಆಗಸ್ಟ್ ೧೫ರಂದು ೬೦೦ ಭಾರತೀಯ ರಾಜ್ಯಗಳಿದ್ದವು. ಇಂದು ಭಾರತೀಯ ರಾಜ್ಯಗಳು ಭಾರತೀಯ ಪ್ರಾಂತಗಳೊಂದಿಗೆ ವಿಲೀನವಾಗುವುದು, ತಮ್ಮ ತಮ್ಮೊಳಗೇ ಕೂಡಿಕೊಳ್ಳುವುದು ಅಥವಾ ಕೇಂದ್ರವು ಕೇಂದ್ರಾಡಳಿತ ಪ್ರದೇಶವಾಗಿ ವಹಿಸಿಕೊಳ್ಳುವುದು. ಈ ಪ್ರಕ್ರಿಯೆಗಳಿಂದಾಗಿ ೨೦/೩೦ ರಾಜ್ಯಗಳು ಉಳಿದಿವೆ. ಇದು ಬಹುವೇಗವಾಗಿ ಸಂಭವಿಸಿರುವ ಪ್ರಕ್ರಿಯೆ ಮತ್ತು ಪ್ರಗತಿ. ಇನ್ನೂ ಬೇರೆಯಾಗಿಯೇ ಉಳಿದುಕೊಂಡಿರುವ ರಾಜ್ಯಗಳಿಗೆ ಅವು ಭಾರತೀಯ ಪ್ರಾಂತಗಳೊಂದಿಗೆ ಕೂಡಿಕೊಂಡು ಭಾರತ ಒಕ್ಕೂಟದ ಪೂರ್ಣ ಘಟಕಗಳಾಗಿ ಭಾರತೀಯ ಪ್ರಾಂತಗಳ ಸಮಸಮವಾಗಿರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಆದ್ದರಿಂದ ಅವು ಭಾರತ ಯೂನಿಯನ್ನಿಗೆ ಅಗತ್ಯವಾಗಿ ಬೇಕಾಗಿರುವ ಶಕ್ತಿಯನ್ನು ನೀಡುತ್ತವೆ. ತಮ್ಮದೇ ಪ್ರತ್ಯೇಕ ಸಂವಿಧಾನ ಸಭೆಗಳನ್ನು ರಚಿಸಿ, ಪ್ರತ್ಯೇಕ ಸಂವಿಧಾನವನ್ನು ರಚಿಸಿಕೊಳ್ಳುವ ಕಷ್ಟವನ್ನು ತಪ್ಪಿಸಿಕೊಳ್ಳುತ್ತವೆ. ಅದರಿಂದ ಅವುಗಳಿಗೆ ನಷ್ಟವೇನೂ ಇಲ್ಲ. ನನ್ನ ಮನವಿಯು ವ್ಯರ್ಥವಾಗುವುದಿಲ್ಲ, ಈ ಸಂವಿಧಾನವು ಅಂಗೀಕೃತವಾಗುವುದರೊಳಗಾಗಿ ಪ್ರಾಂತಗಳಿಗೂ, ಭಾರತೀಯ ರಾಜ್ಯಗಳಿಗೂ ನಡುವೆ ವ್ಯತ್ಯಾಸಗಳನ್ನು ಅಳಿಸಿಹಾಕಿರುತ್ತೇವೆ ಎಂದು ಆಶಿಸುತ್ತೇನೆ.

ಕೆಲವರು, ಕರಡು ಸಂವಿಧಾನದ ೧ನೆಯ ಅನುಚ್ಛೇದದಲ್ಲಿ ಭಾರತವನ್ನು ರಾಜ್ಯಗಳ ಸಂಯೋಜನೆ

(ಯೂನಿಯನ್) ಎಂದು ವರ್ಣಿಸಿರುವುದನ್ನು ಆಕ್ಷೇಪಿಸಿದ್ದಾರೆ. ಸರಿಯಾದ ಪದಗುಚ್ಛ ರಾಜ್ಯಗಳ ಒಕ್ಕೂಟ (ಫೆಡರೇಷನ್) ಎಂದು ಹೇಳಲಾಗಿದೆ. ಏಕೀಕೃತ ರಾಜ್ಯವಾದ ದಕ್ಷಿಣ ಆಫ್ರಿಕಾವನ್ನು ಒಂದು ಯೂನಿಯನ್ ಎಂದು ವರ್ಣಿಸಿರುವುದು ನಿಜ. ಆದರೆ ಒಂದು ಫೆಡರೇಷನ್ ಆಗಿರುವ ಕೆನಡಾ ದೇಶವನ್ನೂ ಯೂನಿಯನ್ ಎಂದು ಕರೆಯಲಾಗಿದೆ. ಹಾಗಾಗಿ ಭಾರತವನ್ನು ಅದರ ಸಂವಿಧಾನವು ಫೆಡರಲ್ ಆದರೂ ಯೂನಿಯನ್ ಎಂದು ವರ್ಣಿಸಿರುವುದರಿಂದ ಬಳಕೆಯನ್ನು ಅತಿಕ್ರಮಿಸಿದಂತಾಗುವುದಿಲ್ಲ. ಆದರೆ ಇಲ್ಲಿ ಮುಖ್ಯವಾದುದೇನೆಂದರೆ 'ಯೂನಿಯನ್' ಎಂಬ ಪದದ ಬಳಕೆಯು ಉದ್ದೇಶಪೂರ್ವಕವಾಗಿರುವುದು. ಕೆನಡಾದ ಸಂವಿಧಾನದಲ್ಲಿ 'ಯೂನಿಯನ್' ಎಂಬ ಪದವನ್ನು ಏಕೆ ಬಳಸಲಾಯಿತೋ ನನಗೆ ಗೊತ್ತಿಲ್ಲ; ಅದರೆ ಕರಡು ರಚನಾ ಸಮಿತಿಯು ಅದನ್ನು ಏಕೆ ಬಳಸಿತು ಎಂದು ನಾನು ಹೇಳಬಲ್ಲೆ. ಭಾರತವು ಒಂದು ಫೆಡರೇಷನ್ ಆಗಲಿದ್ದರೂ, ಅದು ರಾಜ್ಯಗಳು ಫೆಡರೇಷನ್‌ಗೆ ಸೇರಿಕೊಳ್ಳುವ ಒಂದು ಒಪ್ಪಂದದ ಫಲವಾಗಿರಲಿಲ್ಲ. ಫೆಡರೇಷನ್, ಒಂದು ಒಪ್ಪಂದದ ಫಲವಾಗಿರಲಿಲ್ಲವಾದ್ದರಿಂದ ಅದರಿಂದ ಬೇರೆಯಾಗುವ ಹಕ್ಕು ಯಾವ ರಾಜ್ಯಕ್ಕೂ ಇರಲಿಲ್ಲ. ಫೆಡರೇಷನ್ನು ನಾಶಗೊಳ್ಳದುದರಿಂದ ಒಂದು ಯೂನಿಯನ್ ದೇಶವನ್ನೂ ಜನವನ್ನೂ ಆಡಳಿತದ ಅನುಕೂಲಕ್ಕೋಸ್ಕರವಾಗಿ ಬೇರೆ ಬೇರೆ ರಾಜ್ಯಗಳಾಗಿ ವಿಭಾಗವಾಗಿಸಿದ್ದರೂ ದೇಶವು ಅಖಂಡವಾದದ್ದು, ಸಮಗ್ರವಾದದ್ದು. ಜನರು ಒಂದು ಮೂಲದಿಂದ ಬಂದ ಒಂದು ಆಡಳಿತಕ್ಕೆ ಸೇರಿದ ಒಂದು ಜನ. ರಾಜ್ಯಗಳಿಗೆ ಸಿಡಿದು ಬೇರೆಯಾಗುವ ಹಕ್ಕಿಲ್ಲ, ತಮ್ಮ ಫೆಡರೇಷನ್ ನಾಶವಾಗದಂಥದ್ದು ಎಂದು ಸ್ಥಾಪಿಸಲು ಅಮೆರಿಕನ್ನರು ಒಂದು ಅಂತರ್ಯುದ್ಧವನ್ನೇ ಮಾಡಬೇಕಾಯಿತು. ಇದನ್ನು ಊಹೆಗೋ ವಿವಾದಕ್ಕೋ ಬಿಡುವುದಕ್ಕಿಂತ ಮೊದಲಿಗೇ ಸ್ಪಷ್ಟಪಡಿಸಿಬಿಡುವುದು ಉತ್ತಮ ಎಂದು ಕರಡು ರಚನಾ ಸಮಿತಿಯು ಯೋಚಿಸಿತು.

ಸಂವಿಧಾನದ ತಿದ್ದುಪಡಿಗೆ ಸಂಬಂಧಿಸಿದ ಅವಕಾಶಗಳೂ ಕರಡು ಸಂವಿಧಾನದ ಟೀಕಾಕಾರರ ಉಗ್ರ ದಾಳಿಗೆ ಬಲಿಯಾಗಿವೆ. ಕರಡಿನಲ್ಲಿರುವ ಅವಕಾಶಗಳಿಂದ ತಿದ್ದುಪಡಿಯು ಬಹಳ ಕಷ್ಟವಾಗುತ್ತದೆ ಎಂದು ಹೇಳಲಾಗಿದೆ. ಕೊನೆಯ ಪಕ್ಷ ಕೆಲವು ವರ್ಷಗಳವರೆಗೆ ಸರಳ ಬಹುಮತದಿಂದ ಸಂವಿಧಾನಕ್ಕೆ ತಿದ್ದುಪಡಿ ತರುವಂತಾಗಬೇಕೆಂದು ಸಲಹೆ ಮಾಡಲಾಗಿದೆ. ವಾದವು ಬಹು ಸೂಕ್ಷ್ಮವೂ ಬುದ್ಧಿವಂತಿಕೆಯದೂ ಆಗಿದೆ. ಈ ಸಂವಿಧಾನ ಸಭೆಯು ವಯಸ್ಕ ಮತದಾನದ ಮೂಲಕ ಚುನಾಯಿತವಾದುದಲ್ಲ, ಆದರೆ ಬರಲಿರುವ ಸಂಸತ್ತು ವಯಸ್ಕ ಮತದಾನದಿಂದ ಚುನಾಯಿತವಾಗುತ್ತದೆ. ಆದರೂ, ಸಂವಿಧಾನ ಸಭೆಗೆ ಸರಳ ಬಹುಮತದಿಂದ ಸಂವಿಧಾನವನ್ನು ಅಂಗೀಕರಿಸಲು ಅವಕಾಶ ಕೊಟ್ಟು ಸಂಸತ್ತಿಗೆ ಅದೇ ಹಕ್ಕನ್ನು ನಿರಾಕರಿಸಲಾಗಿದೆ ಎಂದು ಟೀಕಿಸಿದ್ದಾರೆ. ಅದು ಕರಡು ಸಂವಿಧಾನದ ಹಾಸ್ಯಾಸ್ಪದ ಅಂಶಗಳಲ್ಲಿ ಒಂದು ಎಂದು ಪ್ರದರ್ಶಿಸಿದ್ದಾರೆ. ಈ ಆರೋಪಕ್ಕೆ ಯಾವ ಆಧಾರವೂ ಇಲ್ಲವಾದ್ದರಿಂದ ನಾನು ನಿರಾಕರಿಸಲೇಬೇಕು. ಕರಡು ಸಂವಿಧಾನದಲ್ಲಿ ಸಂವಿಧಾನಕ್ಕೆ ತಿದ್ದುಪಡಿಮಾಡಲು ರೂಪಿಸಿರುವ ಅವಕಾಶಗಳು ಬಹಳ ಸರಳವಾಗಿದೆ ಎಂಬುದು ತಿಳಿಯಬೇಕಾದರೆ, ಅಮೆರಿಕಾ ಮತ್ತು ಅಸ್ಟ್ರೇಲಿಯಾ ಸಂವಿಧಾನಗಳಲ್ಲಿ ತಿದ್ದುಪಡಿ ಮಾಡಲು ಕೊಟ್ಟಿರುವ ಅವಕಾಶಗಳನ್ನು ಸ್ವಲ್ಪ ಅಧ್ಯಯನ ಮಾಡಬೇಕು. ಅವುಗಳಿಗೆ ಹೋಲಿಸಿದರೆ ನಮ್ಮ ಕರಡು ಸಂವಿಧಾನದಲ್ಲಿರುವವು ಅತ್ಯಂತ ಸರಳವಾದ ಅವಕಾಶಗಳು. ಒಂದು ಸಭೆ ಸೇರಿಸಿಯೋ, ಜನಾಭಿಪ್ರಾಯ ಪಡೆದೋ ತೀರ್ಮಾನ ತೆಗೆದುಕೊಳ್ಳುವಂತಹ ವಿಸ್ತಾರವಾದ, ಕಷ್ಟತರವಾದ ಕ್ರಮಗಳನ್ನು ಕರಡು ಸಂವಿಧಾನವು ನಿವಾರಿಸಿದೆ. ತಿದ್ದುಪಡಿಯ ಅಧಿಕಾರವನ್ನು ಕೇಂದ್ರೀಯ ಹಾಗೂ ಪ್ರಾಂತೀಯ ಶಾಸನ ಸಭೆಗಳಿಗೆ ಬಿಡಲಾಗಿದೆ. ಕೆಲವು ನಿರ್ದಿಷ್ಟ ವಿಷಯಗಳ ಮೇಲೆ – ಅವು ಕೆಲವು ಮಾತ್ರ – ರಾಜ್ಯ ಶಾಸನ ಸಭೆಗಳ ಅನುಮೋದನೆ

ಅಗತ್ಯವಾಗುತ್ತದೆ. ಸಂವಿಧಾನದ ಉಳಿದೆಲ್ಲಾ ಅನುಚ್ಛೇದಗಳ ತಿದ್ದುಪಡಿಯನ್ನು ಸಂಸತ್ತಿಗೆ ವಹಿಸಲಾಗಿದೆ. ಇದಕ್ಕೆ ವಿಧಿಸಿರುವ ಒಂದೇ ಒಂದು ಮಿತಿ ಇದು: ತಿದ್ದುಪಡಿ ಮಾಡಬೇಕಾದರೆ ಪ್ರತಿ ಸದನದಲ್ಲಿ ಹಾಜರಿದ್ದು ವೋಟು ಮಾಡಿದ ಸದಸ್ಯರ ಮೂರನೆ ಎರಡಕ್ಕಿಂತ ಕಡಿಮೆಯಾಗದಷ್ಟು ಬಹುಮತ, ಪ್ರತಿ ಸದನದ ಒಟ್ಟು ಸದಸ್ಯಬಲದ ಬಹುಮತ ಅದಕ್ಕೆ ದೊರಕಬೇಕು ಎನ್ನುವುದು. ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಇದಕ್ಕಿಂತ ಹೆಚ್ಚು ಸರಳವಾದ ವಿಧಾನವೊಂದನ್ನು ಕಲ್ಪಿಸಿಕೊಳ್ಳುವುದು ಕಷ್ಟ.

ತಿದ್ದುಪಡಿಗೆ ಸಂಬಂಧಿಸಿದ ಅವಕಾಶಗಳ ಅಸಂಗತ ಸ್ವರೂಪವೆಂದು ಹೇಳಿರುವುದು ತಪ್ಪು ಗ್ರಹಿಕೆಯಿಂದ. ಅದು ಸಂವಿಧಾನ ಸಭೆಯ ಹಾಗೂ ಸಂವಿಧಾನದ ಪ್ರಕಾರ ಚುನಾಯಿತವಾದ ಮುಂದಿನ ಸಂಸತ್ತಿನ ಸ್ವರೂಪವನ್ನು ಕುರಿತ ತಪ್ಪು ಗ್ರಹಿಕೆ. ಸಂವಿಧಾನವನ್ನು ರಚಿಸಲು ಹೊರಟ ಸಂವಿಧಾನ ಸಭೆಗೆ ಯಾವುದೇ ಪಕ್ಷಾಧಾರಿತ ಉದ್ದೇಶವಿಲ್ಲ. ಒಂದು ಉತ್ತಮವಾದ, ಕಾರ್ಯಸಾಧ್ಯವಾದ ಸಂವಿಧಾನವನ್ನು ರಚಿಸಬೇಕೆನ್ನುವುದಲ್ಲದೆ ಬೇರೆ ಸ್ವಾರ್ಥ ಯಾವುದೂ ಇಲ್ಲ. ಸಂವಿಧಾನದ ಅನುಚ್ಛೇದಗಳನ್ನು ಪರಿಗಣಿಸುವಾಗ ಒಂದು ನಿರ್ದಿಷ್ಟ ಕ್ರಮವನ್ನು ಅಂಗೀಕಾರಗೊಳಿಸುವುದರ ಕಡೆಗೆ ಕಣ್ಣನ್ನು ಇರಿಸಿಲ್ಲ. ಮುಂದಿನ ಸಂಸತ್ತು, ಸಂವಿಧಾನ ಸಭೆಯಾಗಿ ಕೂಡಿದ ಪಕ್ಷದಲ್ಲಿ, ಅದರ ಸದಸ್ಯರು ಸಂವಿಧಾನದ ಯಾವುದೇ ಅನುಚ್ಛೇದ ಕಾರಣವಾಗಿ ಸಂಸತ್ತಿನಲ್ಲಿ ಅಂಗೀಕಾರಗೊಳಿಸುವುದು ಸಾಧ್ಯವಾಗದೆ ಹೋದಾಗ ಪಕ್ಷದ ಕಾರ್ಯಕ್ರಮಗಳನ್ನು ಅನುಮೋದಿಸಿ ಸಂವಿಧಾನಕ್ಕೆ ತಿದ್ದುಪಡಿ ತರಲು ಪಕ್ಷದ ಸದಸ್ಯರಾಗಿ ವರ್ತಿಸುತ್ತಾರೆ. ಸಂಸತ್ತಿಗಾದರೂ ಒಂದಷ್ಟು ಸ್ವಾರ್ಥವಿರುತ್ತದೆ. ಸಂವಿಧಾನ ಸಭೆಗೆ ಈ ಸ್ವಾರ್ಥ ಇರುವುದಿಲ್ಲ. ಸಂವಿಧಾನ ಸಭೆಗೂ ಮುಂದಿನ ಪಾರ್ಲಿಮೆಂಟಿಗೂ ಇರುವ ವ್ಯತ್ಯಾಸ ಇದೆ. ಸಂವಿಧಾನ ಸಭೆಯು ಸೀಮಿತ ಮತದಾನದಿಂದ ಆಯ್ಕೆಯಾಗಿದ್ದರೂ ಸಂವಿಧಾನವನ್ನು ಸರಳ ಬಹುಮತದಿಂದ ಅಂಗೀಕರಿಸುವುದನ್ನು ಒಪ್ಪಬಹುದು. ಆದರೆ ಸಂಸತ್ತು ವಯಸ್ಕ ಮತದಾನದ ಮೂಲಕ ಚುನಾಯಿತವಾಗಿದ್ದರೂ, ಸಂವಿಧಾನಗಳ ತಿದ್ದುಪಡಿ ತರುವ ವಿಷಯದಲ್ಲಿ ಒಪ್ಪಲು ಸಾಧ್ಯವಾಗುವುದಿಲ್ಲ.

ಕರಡು ರಚನಾ ಸಮಿತಿಯು ರಚಿಸಿದ ಕರಡು ಸಂವಿಧಾನದ ವಿರುದ್ಧವಾಗಿ ಬಂದಿರುವ ವಿರೋಧೀ ಟೀಕೆಗಳನ್ನು ವ್ಯವಹರಿಸಿದ್ದೇನೆಂದು ಭಾವಿಸಿದ್ದೇನೆ. ಸಂವಿಧಾನವನ್ನು ಜನತೆಯ ಮುಂದಿರಿಸಿ ಎಂಟು ತಿಂಗಳುಗಳಾದವು. ಈ ಎಂಟು ತಿಂಗಳ ಅವಧಿಯಲ್ಲಿ ಅದನ್ನು ಕುರಿತು ಮಾಡಿದ ಅತ್ಯಂತ ಮುಖ್ಯವಾದ ಟೀಕೆಗಳನ್ನು ನಾನು ಕೈಬಿಟ್ಟಿಲ್ಲ ಎಂದು ಭಾವಿಸುತ್ತೇನೆ. ಈಗ ಕರಡು ರಚನಾ ಸಮಿತಿಯು ನಿರ್ಧರಿಸಿದ ರೀತಿಯಲ್ಲಿ ಸಂವಿಧಾನವನ್ನು ಒಪ್ಪಿಕೊಳ್ಳುವುದೋ ಇಲ್ಲವೆ, ಒಪ್ಪಿಕೊಳ್ಳುವ ಮೊದಲು ಅದರಲ್ಲಿ ಏನಾದರೂ ಬದಲಾವಣೆ ಮಾಡುವುದೋ ಎನ್ನುವುದು ಸಂವಿಧಾನ ಸಭೆಗೆ ಬಿಟ್ಟದ್ದು.

ಆದರೆ ನಾನು ಇಷ್ಟನ್ನು ಹೇಳಬೇಕು. ಸಂವಿಧಾನವನ್ನು ಭಾರತದ ಕೆಲವು ಪ್ರಾಂತೀಯ ವಿಧಾನ ಸಭೆಗಳಲ್ಲಿ ಮುಂಬಯಿ, ಮಧ್ಯಪ್ರಾಂತ (ಸಿ.ಪಿ.), ಪಶ್ಚಿಮ ಬಂಗಾಳ, ಬಿಹಾರ, ಮದರಾಸು ಮತ್ತು ಪೂರ್ವ ಪಂಜಾಬುಗಳಲ್ಲಿ ಚರ್ಚಿಸಲಾಯಿತು. ಕೆಲವು ಪ್ರಾಂತೀಯ ಅಸೆಂಬ್ಲಿಗಳಲ್ಲಿ ಸಂವಿಧಾನದ ಆರ್ಥಿಕ ಅವಕಾಶಗಳನ್ನು ಕುರಿತು, ಮದರಾಸಿನಲ್ಲಿ ೨೨೬ನೆಯ ವಿಧಿಯನ್ನು ಕುರಿತು ಗಂಭೀರವಾದ ಆಕ್ಷೇಪಣೆಗಳನ್ನು ಎತ್ತಲಾಯಿತು. ಇಷ್ಟನ್ನು ಬಿಟ್ಟರೆ, ಸಂವಿಧಾನದ ಅವಕಾಶಗಳನ್ನು ಕುರಿತು ಯಾವುದೇ ಗುರುತರ ಆಕ್ಷೇಪಣೆ ಯಾವುದೇ ಪ್ರಾಂತೀಯ ಅಸೆಂಬ್ಲಿಯಲ್ಲಿ ಬಂದಿಲ್ಲ. ಯಾವ ಸಂವಿಧಾನವೂ ಪರಿಪೂರ್ಣವಲ್ಲ. ಕರಡು ರಚನಾ ಸಮಿತಿಯೇ ಕರಡು ಸಂವಿಧಾನವನ್ನು ಉತ್ತಮ ಪಡಿಸಲು ಕೆಲವು ತಿದ್ದುಪಡಿಗಳನ್ನು ಸೂಚಿಸುತ್ತದೆ. ಪ್ರಾಂತೀಯ ವಿಧಾನಸಭೆಗಳಲ್ಲಿ ನಡೆದ ಚರ್ಚೆಗಳು, ಕರಡು ರಚನಾ ಸಮಿತಿಯು ಸಿದ್ಧಪಡಿಸಿರುವ ಈ ಸಂವಿಧಾನವು

ಈ ದೇಶದಲ್ಲಿ ಪ್ರಾರಂಭಕ್ಕೆ ಸಾಕಷ್ಟು ಉತ್ತಮವಾಗಿದೆ ಎಂದು ಹೇಳುವ ಧೈರ್ಯವನ್ನು ನನಗೆ ನೀಡಿವೆ. ಅದು ಕಾರ್ಯಸಾಧ್ಯವಾಗಿದೆ, ನಮ್ಯವಾಗಿದೆ, ಶಾಂತಿಕಾಲ –ಯುದ್ಧಕಾಲಗಳೆರಡರಲ್ಲೂ ದೇಶವನ್ನು ಒಂದಾಗಿ ಹಿಡಿದಿರಲು ತಕ್ಕಷ್ಟು ಬಲವಾಗಿದೆ. ವಾಸ್ತವವಾಗಿ, ನಾನು ಹೇಳಬಹುದಾದರೆ, ನೂತನ ಸಂವಿಧಾನದ ಪ್ರಕಾರ ಏನಾದರೂ ಹಾನಿಯುಂಟಾದರೆ ಅದಕ್ಕೆ ಕಾರಣ ನಮ್ಮಲ್ಲಿ ಕೆಟ್ಟದಾದ ಸಂವಿಧಾನವಿರುವುದಲ್ಲ, ಮನುಷ್ಯನು ಕೆಟ್ಟವನಾಗಿದ್ದನು ಎಂದು ಹೇಳಬೇಕು. ಇಷ್ಟು ಹೇಳಿ ನಿಲ್ಲಿಸುತ್ತೇನೆ.

(ಡಾ॥ ಅಂಬೇಡ್ಕರ್ ಅವರ ಭಾಷಣವಾದ ಮೇಲೆ ಸಂವಿಧಾನ ಸಭೆಯ ಸದಸ್ಯರು ಮೇಲೆದ್ದು ಕರಡು ಸಂವಿಧಾನವನ್ನು ಕುರಿತು ಮಾತನಾಡಿದರು. ಡಾ॥ ಅಂಬೇಡ್ಕರರ ಮತ್ತು ಕರಡು ರಚನಾ ಸಮಿತಿಯ ಕೆಲಸವನ್ನು ಪ್ರಶಂಸಿಸುವ ಕೆಲವು ಭಾಗಗಳನ್ನು ಇಲ್ಲಿ ಕೊಟ್ಟಿದೆ. – ಸಂಪಾದಕ)

* **ಮಿ. ಫ್ರಾಂಕ್ ಅಂತೋಣಿ** (ಸಿ.ಪಿ. ಮತ್ತು ಬಿರಾರ್ : ಸಾಮಾನ್ಯ) : ಅಧ್ಯಕ್ಷರೆ, ಡಾ॥ ಅಂಬೇಡ್ಕರ್ ಅವರು ಈಗ ಸದನದಲ್ಲಿ ಇಲ್ಲದಿದ್ದರೂ, ಕೊನೆಯ ಪಕ್ಷ ಒಬ್ಬ ವಕೀಲನಾಗಿ, ಅವರು ಕರಡು ಸಂವಿಧಾನದಲ್ಲಿ ಅಂತರ್ಗತವಾಗಿರುವ ತತ್ವಗಳನ್ನು ಪ್ರಮಾಣಬದ್ಧವಾಗಿ, ನಿರರ್ಗಳವಾಗಿ ವಿಶ್ಲೇಷಣೆ ಮಾಡಿರುವುದಕ್ಕಾಗಿ ಅಭಿನಂದಿಸಬೇಕು. ಈ ಕರಡು ಸಂವಿಧಾನವನ್ನು ಕುರಿತು ನಮಗೆ ಬೇರೆ ದೃಷ್ಟಿಗಳಿರಬಹುದು, ಆದರೆ ಬೇರೇನಲ್ಲದಿದ್ದರೂ ಭೌತಿಕ ದೃಷ್ಟಿಯಿಂದ ಇದೊಂದು ಅದ್ಭುತ ದಾಖಲೆ ಎಂದು ಒಪ್ಪಿಕೊಳ್ಳಬೇಕು. ಕರಡು ರಚನಾ ಸಮಿತಿಯ ಸದಸ್ಯರಿಗೆ ವಿಶೇಷ ವಂದನೆಗಳನ್ನು ಹೇಳದೆ ಹೋದರೆ, ತಪ್ಪಾದೀತು. ಏಕೆಂದರೆ ಅವರೆಲ್ಲರೂ ಅಪಾರವಾಗಿ ಶ್ರಮಪಟ್ಟಿದ್ದಾರೆ, ಬಹುವಾದ ಬುದ್ಧಿವಂತಿಕೆಯಿಂದ ಇಂಥದೊಂದು ಅಗಾಧವಾದ ದಾಖಲೆಯನ್ನು ಅವರು ಸಿದ್ಧಪಡಿಸಿದ್ದಾರೆ....

* * * *

* ಕೊನೆಯದಾಗಿ, ಅಲ್ಪಸಂಖ್ಯಾತರ ಪರವಾದ ಅವಕಾಶಗಳನ್ನು ಮೆಚ್ಚುವಾಗ ಡಾ॥ ಅಂಬೇಡ್ಕರ್ ಅವರು ವ್ಯಕ್ತಪಡಿಸಿದ ಭಾವನೆಯನ್ನು ನಾನು ಅನುಮೋದಿಸಬಯಸುತ್ತೇನೆ. ಅಲ್ಪಸಂಖ್ಯಾತರ ಅಥವಾ ಅಲ್ಪಸಂಖ್ಯಾತ ಸಮಸ್ಯೆಗಳ ಬಗೆಗೆ ಮಾತನಾಡುವುದು (ಭಾರತವು ಅನುಭವಿಸಿರುವುದನ್ನು ನೋಡಿದ ಮೇಲೆ) ಹಿತವಾದ ವಿಷಯವಲ್ಲ. ನಾನು ಇಲ್ಲಿ ಅಲ್ಪಸಂಖ್ಯಾತ ಅವಕಾಶಗಳನ್ನು ಮೆಚ್ಚಲು ನಿಂತಿಲ್ಲ. ಏಕೆಂದರೆ ಈಗಾಗಲೇ ಸಲಹಾ ಸಮಿತಿಯು ಅವುಗಳನ್ನು ಒಪ್ಪಿಕೊಂಡಿದೆ. ಅವುಗಳನ್ನು ಕಾಂಗ್ರೆಸ್ ಪಕ್ಷವು ಒಪ್ಪಿಕೊಂಡಿದೆ. ಈ ಸುಲಭವಲ್ಲದ ಸಮಸ್ಯೆಯನ್ನು ಕುರಿತು ವ್ಯವಹರಿಸಲು ವಾಸ್ತವಿಕವಾದ, ಉತ್ತಮ ಮುತ್ಸದ್ದಿತನವನ್ನು ತೋರಿಸುವ ಮಾರ್ಗವನ್ನು ಹಿಡಿದಿರುವುದಕ್ಕಾಗಿ, ಕಾಂಗ್ರೆಸ್ ಪಕ್ಷವನ್ನು ವಂದಿಸಲು ಮತ್ತು ಅಭಿನಂದಿಸಲು ಬಯಸುತ್ತೇನೆ. ಈ ಸಂಬಂಧವಾಗಿ ನಾನು ವಿಶೇಷವಾಗಿ ಸರ್ದಾರ್ ಪಟೇಲರನ್ನು ವಂದಿಸಬೇಕು. ಈ ದೇಶದಲ್ಲಿ ಅಲ್ಪಸಂಖ್ಯಾತರಿದ್ದಾರೆ ಎಂಬ ಸತ್ಯಸಂಗತಿಯನ್ನು ಒಪ್ಪಿಕೊಳ್ಳದೆ ಹಿಂಜರಿಯುವುದರಲ್ಲಿ, ಕಣ್ಣುಕಣ್ಣುಬಿಡುವುದರಲ್ಲಿ ಅರ್ಥವಿಲ್ಲ. ಈಗ ಕಾಂಗ್ರೆಸ್ ಪ್ರಾರಂಭ ಮಾಡಿರುವ ರೀತಿಯಲ್ಲಿ ಸಮಸ್ಯೆಯನ್ನು ಪರಿಹರಿಸಲು ತೊಡಗಿದ್ದೇ ಆದರೆ, ಇನ್ನು ಹತ್ತು ವರ್ಷಗಳಲ್ಲಿ ಈ ದೇಶದಲ್ಲಿ ಅಲ್ಪಸಂಖ್ಯಾತರ ಸಮಸ್ಯೆಯೇ ಇರುವುದಿಲ್ಲ ಎಂದು ನಾನು ನಂಬುತ್ತೇನೆ. ಈ ದೇಶವು ಅತ್ಯಂತ ಕಡಿಮೆ ಸಮಯದಲ್ಲಿ ನಿಜವಾದ ಜಾತ್ಯತೀತ ಪ್ರಜಾಪ್ರಭುತ್ವ ರಾಜ್ಯದ ಗುರಿಯನ್ನು ಮುಟ್ಟಬೇಕೆಂದು ಬಯಸದಿರುವ

---

* ಸಿ.ಎ.ಡಿ. ಸಂಪುಟ ೭, ನವೆಂಬರ್ ೫, ೧೯೪೮, ಪುಟ ೨೨೭

* ಸಿ.ಎ.ಡಿ. ಸಂಪುಟ ೭, ನವೆಂಬರ್ ೫, ೧೯೪೮, ಪುಟ ೨೨೭

ಒಬ್ಬನೇ ಒಬ್ಬ ಅಲ್ಪಸಂಖ್ಯಾತನೂ ಇಲ್ಲ ಎಂದು ನಾನು ಹೇಳುವುದನ್ನು ನಂಬಬೇಕು. ಆ ಗುರಿಯ ಸಾಧನೆಯಲ್ಲಿ ಈ ದೇಶದ ಯಾವುದೇ ಅಲ್ಪಸಂಖ್ಯಾತವರ್ಗದ ಭರವಸೆ ಇದೆ ಎಂಬುದನ್ನು ನಾವು ನಂಬಬೇಕು. ಡಾ. ಅಂಬೇಡ್ಕರ್ ಅವರು ಹೇಳಿದಂತೆ ಈ ವಿಷಯದಲ್ಲಿ ನಾವು ಸುವರ್ಣಮಾಧ್ಯಮವನ್ನು ಹಿಡಿದಿದ್ದೇವೆ. ಅಲ್ಪಸಂಖ್ಯಾತರೂ ಸಹಾಯಕರಾಗಿದ್ದಾರೆ....

ಕೊನೆಯದಾಗಿ ಮಾನ್ಯರೆ, ಇಷ್ಟು ಹೇಳಬಯಸುತ್ತೇನೆ. ಸಂವಿಧಾನದ ಮಹತ್ವವಿರುವುದು ಮುದ್ರಿತ ಅಕ್ಷರದಲ್ಲಲ್ಲ, ದೇಶದ ನಾಯಕರು ಮತ್ತು ಆಡಳಿತಗಾರರು ಈ ಸಂವಿಧಾನವನ್ನು ಕಾರ್ಯಗತಗೊಳಿಸುವುದರಲ್ಲಿ; ನಮ್ಮ ಎದುರಿಗಿರುವ ಸಮಸ್ಯೆಗಳನ್ನು ಅವರು ಎದುರಿಸುವ ರೀತಿಯಲ್ಲಿ. ಈ ಸಂವಿಧಾನದ ಸತ್ವವನ್ನು ನಾವು ಇಷ್ಟುಮಟ್ಟಿಗೆ ಆಚರಿಸುತ್ತೇನೆ ಎನ್ನುವುದರ ಮೇಲೆ ನಾವು ನಂಬುವ ಆದರ್ಶಗಳ ಪೂರೈಕೆ ನಿಂತಿದೆ.

* **ಶ್ರೀ ಕೃಷ್ಣಚಂದ್ರ ಶರ್ಮ** (ಯುನೈಟೆಡ್ ಪ್ರಾವಿನ್ಸಸ್ : ಸಾಮಾನ್ಯ) ಡಾ॥ ಅಂಬೇಡ್ಕರ್ ಅವರು ನಿರ್ವಹಿಸಿರುವ ಸೊಗಸಾದ ಯೋಜನೆಗೆ, ಬಹು ಕಷ್ಟಕರವಾದ ಕೆಲಸಕ್ಕೆ, ನಿನ್ನೆಯ ದಿನ ಅವರು ಮಾಡಿದ ಸಮರ್ಥವೂ ನಿರರ್ಗಳವೂ ಆದ ಭಾಷಣಕ್ಕೆ ಸಂತೋಷವಾಗಿ ಅಭಿನಂದಿಸುತ್ತೇನೆ.

ಮಾನ್ಯರೇ, ಒಂದು ಸಂವಿಧಾನವು ತನಗೆ ತಾನೇ ಲಕ್ಷ್ಯವಲ್ಲ, ಕೆಲವು ಉದ್ದೇಶಗಳ ಈಡೇರಿಕೆಗಾಗಿ ಸಂವಿಧಾನವು ರಚಿಸಲಾಗುತ್ತದೆ. ಈ ಉದ್ದೇಶಗಳು ಜನರ ಸಾಮಾನ್ಯ ಒಳಿತು, ದೇಶದ ಸ್ಥಿರತೆ, ವ್ಯಕ್ತಿಯ ಬೆಳವಣಿಗೆ ಮತ್ತು ಅಭಿವೃದ್ಧಿ. ಭಾರತದಲ್ಲಿ ವ್ಯಕ್ತಿಯ ಬೆಳವಣಿಗೆಯೆಂದರೆ, ಅವನ ಆತ್ಮ–ಸಾಕ್ಷಾತ್ಕಾರ, ಆತ್ಮಾಭಿವೃದ್ಧಿ ಮತ್ತು ಆತ್ಮಸಿದ್ಧಿ. ಜನರ ಬೆಳವಣಿಗೆಯೆಂದರೆ ಒಂದು ಬಲವಾದ ಏಕೀಕೃತ ರಾಷ್ಟ್ರ ಎಂದು ನಮ್ಮ ಅರ್ಥ.....

* * * *

** **ಶ್ರೀ ಟಿ.ಟಿ. ಕೃಷ್ಣಮಾಚಾರಿ** (ಮದರಾಸು : ಸಾಮಾನ್ಯ): ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಡಾ॥ ಅಂಬೇಡ್ಕರ್ ಅವರ ಭಾಷಣವನ್ನು ಗಮನವಿಟ್ಟು ಕೇಳಿದವರಲ್ಲಿ ನಾನೂ ಒಬ್ಬ. ಈ ಸಂವಿಧಾನದ ಕರಡು ತಯಾರಿಸುವುದರಲ್ಲಿ ಅವರು ಪಟ್ಟಿರುವ ಶ್ರಮ ಉತ್ಸಾಹ ಇವುಗಳ ಅರಿವು ನನಗಿದೆ. ಅದೇ ಸಮಯಕ್ಕೆ, ನಮಗೆ ಈ ಗಳಿಗೆಯಲ್ಲಿ, ಅಷ್ಟೊಂದು ಮುಖ್ಯವಾಗಿರುವ ಒಂದು ಸಂವಿಧಾನವನ್ನು ರಚಿಸಲು ಅಗತ್ಯವಾದಷ್ಟು ಗಮನವನ್ನು ಕರಡು ರಚನಾ ಸಮಿತಿಯು ನೀಡಿಲ್ಲ ಎಂಬುದೂ ನನಗೆ ಅರ್ಥವಾಗುತ್ತಿದೆ. ಸದನಕ್ಕೆ ಬಹುಶಃ ಅರಿವಿರುತ್ತದೆ, ನೀವು ನೇಮಿಸಿದ ಏಳು ಜನ ಸದಸ್ಯರಲ್ಲಿ ಒಬ್ಬರು ಸದನಕ್ಕೆ ರಾಜಿನಾಮೆ ಕೊಟ್ಟರು, ಅವರ ಸ್ಥಾನಕ್ಕೆ ಬೇರೊಬ್ಬರನ್ನು ನೇಮಿಸಲಾಯಿತು. ಒಬ್ಬರು ಮೃತರಾದರು, ಅವರ ಸ್ಥಾನಕ್ಕೆ ಬೇರೊಬ್ಬರು ಬರಲಿಲ್ಲ. ಒಬ್ಬರು ಅಮೆರಿಕಕ್ಕೆ ಹೋದರು, ಅವರ ಬದಲಿಗೆ ಇನ್ನೊಬ್ಬರು ನೇಮಿತರಾಗಲಿಲ್ಲ. ಇನ್ನೊಬ್ಬ ವ್ಯಕ್ತಿಯು ಸರಕಾರದ ಕೆಲಸದಲ್ಲಿ ತೊಡಗಿದ್ದರು. ಅಷ್ಟು ಮಟ್ಟಿಗೆ ಇಲ್ಲಿ ಕೆಲಸ ಇಲ್ಲವಾಯಿತು. ಒಬ್ಬಿಬ್ಬರು ದೆಹಲಿಯಿಂದ ಬಹುದೂರದಲ್ಲಿದ್ದು, ಅವರ ದೇಹಾರೋಗ್ಯವು ಬಹುಶಃ ಅವರಿಗೆ ಬರಲು ಅವಕಾಶ ಕೊಡಲಿಲ್ಲ. ಆದ್ದರಿಂದ ಅಂತಿಮವಾಗಿ ಈ ಸಂವಿಧಾನದ ಕರುಡು ಸಿದ್ಧಿಪಡಿಸುವ ಕೆಲಸವು ಡಾ॥ ಅಂಬೇಡ್ಕರ್ ಅವರ ಮೇಲೆ ಬಿದ್ದಿತು. ನಿಸ್ಸಂದೇಹವಾಗಿ ಪ್ರಶಂಸಾರ್ಹವಾದ ರೀತಿಯಲ್ಲಿ ಈ ಕೆಲಸವನ್ನು ನಿರ್ವಹಿಸಿರುವುದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಆದರೆ ನಾನು ಹೇಳಬೇಕಾಗಿರುವ ಮಾತು, ಇಂಥದೊಂದು

---

* ಸಿ.ಎ.ಡಿ. ಸಂಪುಟ ೭, ನವೆಂಬರ್ ೫, ೧೯೪೮, ಪುಟ ೨೨೯

** ಸಿ.ಎ.ಡಿ. ಸಂಪುಟ ೭, ನವೆಂಬರ್ ೫, ೧೯೪೮, ಪುಟ ೨೩೧–೨೩೨

ವಿಚಾರದಲ್ಲಿ ಕೊಡಬೇಕಾಗಿದ್ದಷ್ಟು ಗಮನವನ್ನು ಸಮಿತಿಯು ಒಟ್ಟಾಗಿ ಕೊಡಲು ಸಾಧ್ಯವಾಗಿಲ್ಲ ಎಂದು. ಏಪ್ರಿಲ್‌ನಲ್ಲಿ ಒಂದು ಸಾರಿ ಸಂವಿಧಾನ ಸಭೆಯ ಸಚಿವಾಲಯವು ನನಗೂ ಇತರರಿಗೂ ಒಂದು ವಿಚಾರವನ್ನು ತಿಳಿಸಿತ್ತು. ಕೇಂದ್ರ ಅಧಿಕಾರಿಗಳ ಸಮಿತಿ, ಕೇಂದ್ರ ಸಂವಿಧಾನ ಸಮಿತಿ, ಪ್ರಾಂತೀಯ ಸಂವಿಧಾನ ಸಮಿತಿ, ಅವುಗಳ ಸದಸ್ಯರು ಮತ್ತು ಆರಿಸಿದ ಇತರ ಕೆಲವರು ಸೇರಿ, ಸದನದ ಸದಸ್ಯರೂ, ಸಾರ್ವಜನಿಕರೂ ಸೂಚಿಸಿರುವ ಹಲವು ತಿದ್ದುಪಡಿಗಳನ್ನು ಚರ್ಚಿಸಬೇಕೆಂದು ತಿಳಿಸಿತು. ಏಪ್ರಿಲ್‌ನಲ್ಲಿ ಅದಕ್ಕಾಗಿ ಎರಡು ದಿನಗಳ ಸಭೆಯು ಏರ್ಪಾಡಾಯಿತು, ಸಾಕಷ್ಟು ಒಳ್ಳೆಯ ಕೆಲಸ ಅಲ್ಲಿ ನಡೆಯಿತು. ಸಮಿತಿಯ ಕೆಲವು ಶಿಫಾರಸುಗಳನ್ನು ಡಾ॥ ಅಂಬೇಡ್ಕರರು ಒಪ್ಪಿಕೊಂಡರು. ಆಮೇಲೆ ಈ ಸಮಿತಿಗೆ ಏನಾಯಿತೋ ಕೇಳಿಬರಲಿಲ್ಲ. ಕರಡು ರಚನಾ ಸಮಿತಿಗೆ ಕೊನೆಯ ಪಕ್ಷ ಡಾ॥ ಅಂಬೇಡ್ಕರ್ ಮತ್ತು ಮಿ॥ ಮಾಧವರಾವ್ ಕೂಡಿ ತಿದ್ದುಪಡಿಗಳನ್ನು ಪರೀಕ್ಷಿಸಿ ಕೆಲವು ಸೂಚನೆಗಳನ್ನು ಕೊಟ್ಟರು ಎಂದು ತಿಳಿದಿದ್ದೇನೆ. ಆದರೆ ತಾಂತ್ರಿಕವಾಗಿ ಅದು ಕರಡು ರಚನಾ ಸಮಿತಿಯಾಗಿರಲಿಲ್ಲ. ಈ ವಿಷಯದಲ್ಲಿ ತಾವು ನೀಡುವ ರೂಲಿಂಗ್ ಅನ್ನು ನಾನು ಪ್ರಶ್ನಿಸುವುದಿಲ್ಲವಾದರೂ, ಸಮಿತಿಯು ವರದಿ ಸಲ್ಲಿಸಿದ ಕೂಡಲೆ ಅದರ ಕೆಲಸ ಮುಗಿದುಹೋಗುತ್ತದೆ. ತಾವು ಮತ್ತೆ ಕರಡು ರಚನಾ ಸಮಿತಿಯನ್ನು ಪುನರ್ ನೇಮಿಸಿದಂತೆ ನನಗೆ ನೆನಪಿಲ್ಲ....

* * * *

* **ಶ್ರೀ ಬಿಸ್ವನಾಥ್ ದಾಸ್** (ಒರಿಸ್ಸಾ : ಸಾಮಾನ್ಯ): ಮಾನ್ಯ ಉಪಾಧ್ಯಕ್ಷರೆ, ಸಂವಿಧಾನ ಸಭೆಗೆ ನೀಡಿರುವ, ಸಂವಿಧಾನವನ್ನು ಕುರಿತ ಅಮೋಘವಾದ ವಿಶ್ಲೇಷಣೆಗಾಗಿ ಡಾ॥ ಅಂಬೇಡ್ಕರ್ ಅವರನ್ನು ವಂದಿಸುತ್ತೇನೆ. ಮಾನ್ಯರೆ, ಹಾಗೆಯೇ ಸುದೀರ್ಘವಾದ ಆರು ತಿಂಗಳ ಕಾಲ ಸಂವಿಧಾನದ ಕರಡು ರಚಿಸಲು ಬಹುವಾಗಿ ಶ್ರಮಿಸಿರುವ ಅವರ ಸಹೋದ್ಯೋಗಿಗಳನ್ನು ವಂದಿಸುತ್ತೇನೆ.......

\+ **ಶ್ರೀ ಬಿ. ದಾಸ್** (ಒರಿಸ್ಸಾ : ಸಾಮಾನ್ಯ) ಮಾನ್ಯ ಉಪಾಧ್ಯಕ್ಷರೆ, ಮೊದಲಿಗೆ ಇಂದು ನಾವು ಪರಿಶೀಲಿಸುತ್ತಿರುವ ಸಂವಿಧಾನ ಮಸೂದೆಗೆ ಬಹುಕಷ್ಟಪಟ್ಟು ಆಕಾರ, ರೂಪ ಕೊಟ್ಟಿರುವ ಕರಡು ರಚನಾ ಸಮಿತಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಅದರಲ್ಲಿ ನಮಗೆ ಸೂಕ್ತ ಕಂಡಂತೆ ಬದಲಾವಣೆಗಳನ್ನು ಮಾಡಿ ಭಾರತಕ್ಕೆ ಒಂದು ಸರ್ವೋನ್ನತವಾದ ಸಂವಿಧಾನವನ್ನು ರೂಪಿಸಬಹುದು. ಡಾ॥ ಅಂಬೇಡ್ಕರ್ ಅವರಿಗೂ ಅವರ ಸಹೋದ್ಯೋಗಿಗಳಿಗೂ ವಂದನೆ ಸಲ್ಲಿಸುವಾಗಲೇ ತಮ್ಮ ಸಲಹೆಕಾರರಿಗೂ ವಂದನೆಗಳನ್ನು ಸೂಚಿಸುತ್ತೇನೆ....

* * * *

** **ಶ್ರೀ ಲೋಕನಾಥ ಮಿಶ್ರಾ** (ಒರಿಸ್ಸಾ : ಸಾಮಾನ್ಯ) : .... ಮಾನ್ಯರೇ, ಭಾರತದ ಪರಮಾಧಿಕಾರವನ್ನು ಪ್ರತಿನಿಧಿಸುವ, ನಮ್ಮ ಸ್ವಾತಂತ್ರ್ಯಕ್ಕೆ ಆಕಾರ-ರೂಪಗಳನ್ನು, ಗೌರವ ಘನತೆಗಳನ್ನು ಕೊಡಬೇಕಾಗಿರುವ ಸಂವಿಧಾನ ಸಭೆಯು, ನಮ್ಮ ಭವಿಷ್ಯದ ಪಾಲಕವಾದ ಒಂದು ಸಂವಿಧಾನವನ್ನು ಕುರಿತು ಚರ್ಚೆ ನಡೆಸುತ್ತಿದೆ. ಆ ಗುರಿಯನ್ನೇ ದೃಷ್ಟಿಯಲ್ಲಿರಿಸಿಕೊಂಡು ನಮ್ಮ ನಾಯಕರು ಬಹಳ ಕಷ್ಟಪಟ್ಟಿದ್ದಾರೆ. ಕರಡು ಸಂವಿಧಾನವನ್ನು ರೂಪಿಸಿಕೊಟ್ಟಿದ್ದಾರೆ. ಅದನ್ನು ಕುರಿತು ಈಗ ಚರ್ಚೆ ಮಾಡಲಿದ್ದೇವೆ.

ನನ್ನ ಮೊದಲನೆಯ ವಿಚಾರ ಇದು : ಡಾ॥ ಅಂಬೇಡ್ಕರ್ ಅವರು ಅತ್ಯಂತ ಉಜ್ವಲವಾದ,

---

* ಸಿ.ಎ.ಡಿ. ಸಂಪುಟ ೭, ನವೆಂಬರ್ ೫, ೧೯೪೮, ಪುಟ ೨೩೭

\+ ಅದೇ – ಪುಟಗಳು ೨೩೯

** ಅದೇ – ಪುಟಗಳು ೨೪೦

ಬೋಧಪ್ರದವಾದ, ದಿಟ್ಟತನದ ನಿರರ್ಗಳವಾದ ಭಾಷಣ ಮಾಡಿ ಕರಡು ಸಂವಿಧಾನವನ್ನು ವಿಶ್ಲೇಷಿಸಿದ್ದರೂ...

....... ಅವರ ಭಾಷಣವನ್ನು ವಿಶ್ಲೇಷಿಸಲು ನನಗೆ ಇನ್ನಷ್ಟು ಸಮಯ ಬೇಕಾಗಿತ್ತು. ಅವರ ಜ್ಞಾನಕ್ಕೆ ನಾನು ತಲೆಬಾಗುತ್ತೇನೆ. ಅವರ ಮಾತುಗಾರಿಕೆಯ ಸ್ಪಷ್ಟತೆಗಾಗಿ ತಲೆಬಾಗುತ್ತೇನೆ. ಅವರ ಧೈರ್ಯಕ್ಕಾಗಿ ತಲೆಬಾಗುತ್ತೇನೆ. ಆದರೆ ಇಂತಹ ವಿದ್ಯಾವಂತ, ಭಾರತದ ಸುಪುತ್ರ ಭಾರತವನ್ನು ಕುರಿತು ಇಷ್ಟು ಕಡಮೆ ತಿಳಿದುಕೊಂಡಿರುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಅವರು ಕರಡು ಸಂವಿಧಾನದ ಜೀವವೇ ಆಗಿದ್ದಾರೆ. ಆದರೆ ಕರಡಿನಲ್ಲಿ ಸಂಪೂರ್ಣವಾದ ಭಾರತೀಯವಲ್ಲದ ಚಿತ್ರವನ್ನು ಕೊಟ್ಟಿದ್ದಾರೆ, 'ಭಾರತೀಯವಲ್ಲದ' ಎಂಬ ಮಾತಿಗೆ ನನ್ನ ಅರ್ಥ, ಅವರು ಎಷ್ಟೇ ಬಗೆಯಾಗಿ ವಿರೋಧಿಸಿದರೂ ಅವರು ಕೊಟ್ಟಿರುವುದು ಒಂದು ಗುಲಾಮೀ ನಕಲು, ಅಲ್ಲ ಅದಕ್ಕಿಂತ ಇನ್ನೂ ಹೆಚ್ಚು – ಪಶ್ಚಿಮಕ್ಕೆ ಗುಲಾಮ ಶರಣಾಗತಿ.

* * * *

* **ಕಾಜೀ ಸೈಯದ್ ಕರೀಮುದ್ದೀನ್** (ಸಿ.ಪಿ. ಮತ್ತು ಬಿರಾರ್ : ಮುಸ್ಲಿಂ): ಮಾನ್ಯ ಅಧ್ಯಕ್ಷರೇ, ಭಾರತದ ಕರಡು ಸಂವಿಧಾನದ ಪರಿಶೀಲನೆಗೆ ಸೂಚನೆಯನ್ನು ಮಂಡಿಸಿರುವುದಕ್ಕಾಗಿ ಡಾ॥ ಅಂಬೇಡ್ಕರ್ ಅವರನ್ನು ನಾನು ಅಭಿನಂದಿಸುತ್ತೇನೆ. ಅವರು ಮಾಡಿದ ಭಾಷಣ ಅಪೂರ್ವವಾಗಿತ್ತು. ಅವರ ಹೆಸರು ಇತಿಹಾಸದಲ್ಲಿ ಶ್ರೇಷ್ಠ ಸಂವಿಧಾನ ನಿರ್ಮಾಪಕನೆಂದು ಉಳಿಯುವುದೆಂಬ ಭರವಸೆ ನನಗಿದೆ.....

* * * *

** **ಪ್ರೊ. ಕೆ.ಟಿ. ಶಹಾ** (ಬಿಹಾರ : ಸಾಮಾನ್ಯ) ಕರಡು ರಚನಾ ಸಮಿತಿಗೂ ಅದರ ಅಧ್ಯಕ್ಷರಿಗೂ, ವಿಸ್ತಾರವಾದ ಕರಡು ಸಂವಿಧಾನವನ್ನು ಈ ಸದನದ ಮುಂದೆ ಇರಿಸಿದುದಕ್ಕಾಗಿ ಅವರಿಗೆ ಸಲ್ಲಿಸುತ್ತಿರುವ ವಂದನೆಗಳ ಮೇಳಕ್ಕೆ ನಾನೂ ದನಿಗೂಡಿಸುತ್ತೇನೆ. ವಿಶೇಷವಾಗಿ ಕಾನೂನು ಸಚಿವರನ್ನು ಅವರು ಸಂವಿಧಾನದ ಮುಖ್ಯಾಂಶಗಳನ್ನು ಸೊಗಸಾದ ರೀತಿಯಲ್ಲಿ ನಮ್ಮೆದುರಿಗಿರಿಸಿರುವುದಕ್ಕಾಗಿ ಅಭಿನಂದಿಸುತ್ತೇನೆ. ಅವರು ನಮ್ಮ ಅಲೋಚನೆಗಳನ್ನು ಪ್ರಚೋದಿಸುವ ವಿಚಾರಗಳನ್ನು ನೀಡಿದ್ದಾರೆ, ಕೆಲವು ಅಂಶಗಳನ್ನು ಏಕೆ ಒಂದು ರೀತಿಯಾಗಿ ಸೇರಿಸಿದೆ, ಮತ್ತೆ ಕೆಲವು ವಿಷಯಗಳನ್ನು ಬೇರೆ ರೀತಿಯಾಗಿ ಸೇರಿಸಿದೆ ಎಂದು ತಿಳಿಸಿದ್ದಾರೆ.....

* * * *

\+ **ಪಂಡಿತ ಲಕ್ಷ್ಮಿಕಾಂತ ಮೈತ್ರ** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯರೆ, ಮೊದಲು ನನ್ನ ಗೌರವಾನ್ವಿತ ಮಿತ್ರರೂ, ಹಳೆಯ ಸಹೋದ್ಯೋಗಿಗಳೂ ಆದ ಡಾ॥ ಅಂಬೇಡ್ಕರ್ ಅವರನ್ನು, ನೆನ್ನೆ ಅವರು ನಿರ್ವಹಿಸಿದ ಅದ್ಭುತ ಕಾರ್ಯಕ್ಕಾಗಿ ಅಭಿನಂದಿಸದೆ ಹೋದರೆ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ಸಾಂವಿಧಾನಿಕ ಸಲಹೆಗಳಿಗೆ ಖಚಿತವಾದ ರೂಪವನ್ನು ಕೊಡುವುದರಲ್ಲಿ ಅವರು ವ್ಯಯಿಸಿರುವ ಅಗಾಧ ಕಾಲ ಮತ್ತು ಶ್ರಮಗಳನ್ನು ಸದನವು ಗುರುತಿಸಿ ಪುರಸ್ಕರಿಸುತ್ತದೆ.......

* * * *

++ **ಶ್ರೀ ರಾಮನಾರಾಯಣ ಸಿಂಗ್** (ಬಿಹಾರ : ಸಾಮಾನ್ಯ) : ಈ ಸಂವಿಧಾನ ಮಸೂದೆಯನ್ನು ಮಂಡಿಸುವ ಅವಕಾಶವನ್ನು ಪಡೆದುದಕ್ಕಾಗಿ ನನ್ನ ಮಿತ್ರರಾದ ಡಾ॥ ಅಂಬೇಡ್ಕರ್ ಅವರನ್ನು ಅಭಿನಂದಿಸುತ್ತೇನೆ.

---

* ಸಿ.ಎ.ಡಿ. ಸಂಪುಟ ೭, ನವೆಂಬರ್ ೫, ೧೯೪೮, ಪುಟ ೨೪೨

** ಅದೇ ಪುಟ ೨೪೪

\+ ಅದೇ ಪುಟ ೨೪೬

++ ಅದೇ ಪುಟ ೨೫೨

ಅವರ ಸೂಚನೆಯನ್ನು ನಾನು ಅನುಮೋದಿಸುತ್ತೇನೆ.

* * * *

* **ಡಾ॥ ಪಿ.ಎಸ್. ದೇಶಮುಖ್** (ಸಿ.ಪಿ ಮತ್ತು ಬಿರಾರ್ : ಸಾಮಾನ್ಯ) : ಮಾನ್ಯರೇ, ಪ್ರಸ್ತಾವಿತ ಸಂವಿಧಾನವನ್ನು ಕುರಿತು ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ನನಗೆ ಈ ಅವಕಾಶ ನೀಡಿರುವುದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಸಮಯ ತುಂಬ ಕಡಿಮೆಯಿರುವುದರಿಂದ ನನ್ನ ಅಭಿಪ್ರಾಯಗಳು ಸಾಮಾನ್ಯ ಸ್ವರೂಪದವಾಗಿರುತ್ತವೆ. ವಿವಿಧ ಉಪವಾಕ್ಯಗಳನ್ನು ಪರಿಶೀಲಿಸಲು ತೊಡಗಿದಾಗ, ದುರದೃಷ್ಟವಶಾತ್ ನಾನು ಇಲ್ಲಿ ಇರುವುದಿಲ್ಲ. ಆದ್ದರಿಂದ ಈ ಕೆಲವು ನಿಮಿಷಗಳಿಗಾಗಿ ನಾನು ಇನ್ನೂ ಹೆಚ್ಚು ಕೃತಜ್ಞನಾಗಿದ್ದೇನೆ.

ನನ್ನ ಮಾನ್ಯ ಮಿತ್ರ ಡಾ॥ ಅಂಬೇಡ್ಕರ್ ಅವರು ನೀಡಿದ ಭಾಷಣವು ಬಹಳ ಉತ್ಕೃಷ್ಟವಾಗಿತ್ತು. ಮಂಡಿಸಿರುವ ಕರಡಿನ ಮೇಲೆ ಒಳ್ಳೆಯ ಭಾಷ್ಯವಾಗಿತ್ತು. ಎಲ್ಲರಿಗೂ ತಿಳಿದಿರುವಂತೆ ಅವರು ಒಬ್ಬ ಪ್ರಖ್ಯಾತ ವಕೀಲರು, ತಮ್ಮೆದುರಿಗೆ ಏನಿದೆಯೋ ಅದನ್ನು ಕುರಿತು ಬಹು ಸಮರ್ಥವಾಗಿ ವಾದ ಮಾಡಿದರು. ಅವರಿಗೇ ಅವಕಾಶವಿದ್ದಿದ್ದರೆ ಸಂವಿಧಾನವನ್ನು ಅವರು ಬಹುಶಃ ಬೇರೆಯೇ ರೀತಿಯಲ್ಲಿ ರೂಪಿಸುತ್ತಿದ್ದರು. ಆಡಳಿತವನ್ನು ಒಂದು ದಿನದಲ್ಲಿ ಬದಲಾಯಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದಾಗ, ತಮಗಿರುವ ಕಷ್ಟಗಳನ್ನು ಅವರು ಒಪ್ಪಿಕೊಂಡಿದ್ದಾರೆಂದು ನನಗನ್ನಿಸುತ್ತದೆ. ಪ್ರಸ್ತುತ ಸಂವಿಧಾನವನ್ನು ಒಂದು ಮಾತಿನಲ್ಲಿ ವರ್ಣಿಸಬಹುದಾದರೆ, ಅದು ಪ್ರಸ್ತುತ ಆಡಳಿತಕ್ಕೆ ಹೊಂದಿಕೊಳ್ಳುವ ಉದ್ದೇಶದಿಂದ ರಚಿತವಾಗಿರುವ ಸಂವಿಧಾನವಾಗಿದೆ......

* * * *

++ **ಶ್ರೀ ಎಸ್. ನಾಗಪ್ಪ :** ಮಾನ್ಯ ಉಪಾಧ್ಯಕ್ಷರೇ, ಕರಡು ರಚನಾ ಸಮಿತಿಯ ಗೌರವಾನ್ವಿತ ಅಧ್ಯಕ್ಷರನ್ನು, ಅದರ ಎಲ್ಲ ಸದಸ್ಯರನ್ನೂ ಅಭಿನಂದಿಸಿದ ಈ ಮುಂಚಿನ ಭಾಷಣಕಾರರೊಂದಿಗೆ ನಾನೂ ದನಿಗೂಡಿಸುತ್ತೇನೆ. ಸಮಿತಿಯವರು ಎಲ್ಲಾ ಸಮಸ್ಯೆಗಳ ಎಲ್ಲಾ ಮುಖಗಳನ್ನೂ ಅವರು ಪರಿಶೀಲಿಸಿದ್ದಾರೆ, ವಿವಿಧ ಸಮಿತಿಗಳ ವರದಿಗಳನ್ನು ಕ್ರೋಡೀಕರಿಸಿ ಪರೀಕ್ಷಿಸಿ ನೋಡಿದ್ದಾರೆ..........

ಬಲವಾದ ಕೇಂದ್ರವಿರಬೇಕೆಂದು ಹೇಳುವುದರಲ್ಲಿ ನಾನೂ ಒಬ್ಬ. ವಿಶೇಷವಾಗಿ, ಈಗಷ್ಟೇ ಸ್ವಾತಂತ್ರ್ಯವನ್ನು ಗಳಿಸಿರುವುದರಿಂದ ಅದರ ಅಗತ್ಯ ಹೆಚ್ಚು. ಅದನ್ನು ಕ್ರೋಡೀಕರಿಸಿ ಎಲ್ಲ ಕಾಲಕ್ಕೂ ಭದ್ರವಾಗಿ ಉಳಿಸಿಕೊಳ್ಳಲು ನಮಗೆ ಸಾಕಷ್ಟು ಸಮಯ ಬೇಕು. ಇನ್ನೊಂದು ಕಾರಣಕ್ಕೂ ಕೇಂದ್ರವು ಬಲವಾಗಿರುವುದು ಅಗತ್ಯವಾಗಿದೆ. ಈಗಾಗಲೇ ನಾವು ಅನೇಕ ವಿಧಗಳಿಂದ – ಮತೀಯವಾಗಿ, ಧಾರ್ಮಿಕ ಆಧಾರಗಳಿಂದ – ಬೇರೆ ಬೇರೆಯಾಗಿದ್ದೇವೆ. ಈಗ ಪ್ರಾಂತಗಳ ಆಧಾರದಿಂದ ಮತ್ತೆ ಬೇರೆ ಬೇರೆಯಾಗಿ ವಿಭಜಿತವಾಗುವುದು ಬೇಡ. ಎಲ್ಲಾ ಪ್ರಾಂತಗಳನ್ನು ಒಟ್ಟುಗೂಡಿಸಿ ಐಕ್ಯತೆಯನ್ನು ಮೂಡಿಸಲು, ಒಟ್ಟಿನಲ್ಲಿ ದೇಶದ ಹಿತಾಸಕ್ತಿಯಿಂದ ಪ್ರಬಲವಾದ ಕೇಂದ್ರವಿರುವುದು ಅವಶ್ಯಕ.

ಇನ್ನೊಂದು ವಿಚಾರ ಹೀಗಿದೆ: ಯುದ್ಧ ಮನೋಧರ್ಮವುಳ್ಳ ಪ್ರಬಲವಾದ ಒಂದು ಕೇಂದ್ರವಿರಬೇಕು ಎಂದು ಕೆಲವರು ಹೇಳುತ್ತಾರೆ. ಆ ಪ್ರವೃತ್ತಿ ಇರಬೇಕು ಎಂದು ನನಗನ್ನಿಸುವುದಿಲ್ಲ. ಅಹಿಂಸಾತ್ಮಕವಾಗಿ ಸತ್ಯವಂತರಾಗಿ ಇರಲು ನಮಗೆ ತರಬೇತಿ ದೊರಕಿದೆ. ನಮ್ಮ ತತ್ವಗಳು ಇವು. ಹಾಗಿರುವಾಗ ಕೇಂದ್ರವು

---

* ಅದೇ ಪುಟ ೨೫೦

++ ಅದೇ ಪುಟ ೨೫೨

ಯುದ್ಧ ಮನೋಧರ್ಮವನ್ನು ಹೊಂದಿರುವ ಸಾಧ್ಯತೆ ಇಲ್ಲ.

ಸನ್ಮಾನ್ಯ ಡಾ॥ ಅಂಬೇಡ್ಕರ್ ಅವರು ತಮ್ಮ ವರದಿಯನ್ನೂ, ಕರಡು ಸಂವಿಧಾನವನ್ನೂ ಮಂಡಿಸುತ್ತಾ, ಸಂವಿಧಾನವು ರಚನೆಯಲ್ಲಿ ಫೆಡರಲ್ ಆದರೂ ಲಕ್ಷಣದಲ್ಲಿ ಏಕೀಕೃತವಾಗಿದೆ ಎಂದು ಹೇಳಿದರು. ವಿಶೇಷವಾಗಿ ಈ ಹಂತದಲ್ಲಿ ನಮಗೆ ಅಂತಹ ಸಂವಿಧಾನವೇ ಬೇಕು. ಭಾರತ ಸರಕಾರ ಶಾಸನದಿಂದ ವಿಚಾರಗಳನ್ನು ಎರವಲು ಪಡೆದಿದ್ದಾರೆ ಎಂದು ಹೇಳಲಾಯಿತು. ಅದರಲ್ಲಿ ಉತ್ತಮವಾದುದಿದ್ದರೆ ಅದನ್ನು ನಕಲು ಮಾಡಿಕೊಳ್ಳೋಣ. ನಮ್ಮ ಪದ್ಧತಿಗೆ, ಸಂಸ್ಕೃತಿಗೆ ಉಪಯುಕ್ತವಾದುದು, ಹೊಂದುವಂಥದು ಬೇರೆ ಸಂವಿಧಾನಗಳಲ್ಲಿ ಇದ್ದರೆ ಅದನ್ನು ಅಳವಡಿಸಿಕೊಳ್ಳುವುದರಲ್ಲಿ ತಪ್ಪೇನೂ ಇಲ್ಲ.

ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ಸಾಕಷ್ಟು ಅನುಕೂಲಗಳನ್ನು ಒದಗಿಸಲಾಗಿದೆ. ಅಲ್ಪಸಂಖ್ಯಾತರ ಹಿತವನ್ನು ರಕ್ಷಿಸುವುದಕ್ಕಾಗಿ ಈ ಸದನಕ್ಕೆ ಹಿಂತಿರುಗಿ ಬಂದಿರುವವರಿಗೂ ಇದರಿಂದ ತುಂಬಾ ಸಂತೋಷವಾಗಿರುತ್ತದೆ. ಇದಕ್ಕಾಗಿ ನಾನು ಬಹುಸಂಖ್ಯಾತ ಸಮುದಾಯವನ್ನು ಅಭಿನಂದಿಸಬೇಕು. ಅಲ್ಪಸಂಖ್ಯಾತರಿಗೆ ಕೆಲವು ವಿಶೇಷ ಸೌಲಭ್ಯಗಳನ್ನು ಒದಗಿಸಿರುವುದಕ್ಕಾಗಿ ನಾವು ಬಹುಸಂಖ್ಯಾತರನ್ನು ಅಭಿನಂದಿಸಬೇಕು...........

ಮಾನ್ಯರೆ, ಮತ್ತೊಮ್ಮೆ ನಾನು ಡಾ॥ ಅಂಬೇಡ್ಕರ್ ಅವರನ್ನು ಈ ಸಂವಿಧಾನವನ್ನು ರಚಿಸಿದುದಕ್ಕಾಗಿ ವಂದಿಸುತ್ತೇನೆ. ಅದೊಂದು ಅಗಾಧವಾದ ಕೆಲಸ ನಿಜ, ಆದರೆ ಅದನ್ನು ಯಶಸ್ವಿಯಾಗಿ, ಇಷ್ಟು ಕಡಿಮೆ ಸಮಯದಲ್ಲಿ ಸಾಧಿಸಿದ್ದಾರೆ.......

* * * *

* **ಶ್ರೀ ಅರುಣ ಚಂದ್ರ ಗುಹಾ** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಉಪಾಧ್ಯಕ್ಷರೇ, ... ಇನ್ನು ಕರಡು ಸಂವಿಧಾನವನ್ನು ಕುರಿತು, ಕರಡು ರಚನಾ ಸಮಿತಿಯು ತನ್ನ ಕಾರ್ಯವ್ಯಾಪ್ತಿಯಿಂದ ಆಚೆಗೆ ಹೋಗಿದೆ ಎಂದು ನನಗೆ ಅನ್ನಿಸುತ್ತದೆ. ನಮ್ಮ ಮುಂದೆ ಇರಿಸಿರುವ ಇಡೀ ಸಂವಿಧಾನವು ರಾಜ್ಯಾಂಗ ಸಭೆಯು ಹಾಕಿಕೊಟ್ಟ ಮುಖ್ಯ ತತ್ವಗಳನ್ನು ಮೀರಿ ಆಚೆಗೆ ಹೋಗಿದೆಯೋ ಎಂದು ನನ್ನ ಭಾವನೆ. ಇಡೀ ಕರಡು ಸಂವಿಧಾನದಲ್ಲಿ ಎಲ್ಲಿಯೂ ಕಾಂಗ್ರೆಸ್ ದೃಷ್ಟಿಕೋನದ ಕುರುಹೂ ಇಲ್ಲ. ಗಾಂಧೀ ಸಾಮಾಜಿಕ ಹಾಗೂ ರಾಜಕೀಯ ದೃಷ್ಟಿಯ ಕುರುಹೂ ಇಲ್ಲ. ವಿದ್ವಾಂಸರಾದ ಡಾ॥ ಅಂಬೇಡ್ಕರ್ ಅವರಿಗೆ ತಮ್ಮ ವಿದ್ವತ್‌ಪೂರ್ಣವೂ ಸುದೀರ್ಘವೂ ಆದ ಭಾಷಣದಲ್ಲಿ ಎಲ್ಲಿಯೂ ಗಾಂಧೀಜಿ ಅಥವಾ ಕಾಂಗ್ರೆಸ್ ಅನ್ನು ಉಲ್ಲೇಖಿಸುವ ಸಂದರ್ಭ ಬಂದಿಲ್ಲ. ಇದರಲ್ಲೇನೂ ಆಶ್ಚರ್ಯವಿಲ್ಲ. ಏಕೆಂದರೆ ಇಡೀ ಸಂವಿಧಾನದಲ್ಲಿ ಕಾಂಗ್ರೆಸ್ ಸಿದ್ಧಾಂತದ ಕೊರತೆಯಿದೆ ಎಂದು ನನಗನ್ನಿಸುತ್ತದೆ. ಒಂದು ಸಂವಿಧಾನವನ್ನು ರಚಿಸುವಾಗ, ನಾವು ರಚಿಸುವುದು ಒಂದು ರಾಜಕೀಯ ರಚನೆಯನ್ನು ಮಾತ್ರವಲ್ಲ; ನಾವು ರೂಪಿಸುವುದು ಒಂದು ಆಡಳಿತ ಯಂತ್ರವನ್ನು ಮಾತ್ರವಲ್ಲ; ರಾಷ್ಟ್ರದ ಸಾಮಾಜಿಕ ಮತ್ತು ಆರ್ಥಿಕ ಭವಿಷ್ಯಕ್ಕೆ ಅಗತ್ಯವಾದ ಒಂದು ವ್ಯವಸ್ಥೆ ಕೂಡಾ ......

ಮೂಲಹಕ್ಕುಗಳನ್ನು ಕುರಿತು ಡಾ॥ ಅಂಬೇಡ್ಕರ್ – ಅವರೊಬ್ಬ ದೊಡ್ಡ ವಿದ್ವಾಂಸರು, ಅವರ ವಿದ್ವತ್ತನ್ನು, ಸಾಮರ್ಥ್ಯವನ್ನು ನಾನು ಒಪ್ಪಿಕೊಳ್ಳುತ್ತೇನೆ, ಕರಡು ಸಂವಿಧಾನವು ಮುಖ್ಯವಾಗಿ ಅವರ ಕೈವಾಡವೇ ಎಂದು ನನ್ನ ಭಾವನೆ – ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಅವರು ಒಂದು ಬಗೆಯಾಗಿ ದಾರ್ಶನಿಕ ಚರ್ಚೆಯಲ್ಲಿ ತೊಡಗಿದ್ದಾರೆ. ಅವರು ಒಂದು ಹೊಸ ಶಬ್ದವನ್ನು ಸೇರಿಸಿದ್ದಾರೆ. ಮಾನ್ಯರೇ,

---

* ಸಿ.ಎ.ಡಿ. ಸಂಪುಟ ೭, ನವೆಂಬರ್ ೫, ೧೯೪೮, ಪುಟ ೨೫೫–೫೬

ಪರಿಪೂರ್ಣವಾದ ಯಾವುದೇ ಒಂದು ಹಕ್ಕು ಈ ಜಗತ್ತಿನಲ್ಲಿಲ್ಲ. ಪ್ರತಿಯೊಂದು ಹಕ್ಕಿನ ಜೊತೆಯಲ್ಲೂ ಯಾವುದಾದರೊಂದು ಬಾಧ್ಯತೆಯಿರುತ್ತದೆ; ಬಾಧ್ಯತೆಯಿಲ್ಲದೆ ಯಾವುದೇ ಹಕ್ಕು ಇರುವುದು ಸಾಧ್ಯವಿಲ್ಲ.........

**ಉಪಾಧ್ಯಕ್ಷರು (ಡಾ॥ ಎಚ್.ಸಿ. ಮುಖರ್ಜಿ) :** ಸದನವನ್ನು ಉದ್ದೇಶಿಸಿ ಮಾತನಾಡಲು ಮುಂದಿನ ಸದಸ್ಯರನ್ನು ಕರೆಯುವುದಕ್ಕೆ ಮುಂಚಿತವಾಗಿ, ಒಂದು ಮಾತು ಹೇಳಬೇಕು. ಇಲ್ಲಿ ನನ್ನ ಬಳಿ ಮಾತನಾಡಲು ಅಪೇಕ್ಷಿಸುವವರ ನಲವತ್ತು ಚೀಟಿಗಳಿವೆ. ವಿಷಯ ಎಷ್ಟು ತುರ್ತಿನದು, ಎಷ್ಟು ಮುಖ್ಯವಾದುದು ಎಂದರೆ, ಕರಡು ಸಂವಿಧಾನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶ ಪ್ರತಿಯೊಬ್ಬರಿಗೂ ಇರಬೇಕು. ಆದ್ದರಿಂದ ಮಾನ್ಯ ಸದಸ್ಯರು ಹತ್ತು ನಿಮಿಷ ಎಂದು ನಾನು ನಿಗದಿಪಡಿಸಿರುವ ಕಾಲಮಿತಿಯನ್ನು ಮೀರಕೂಡದೆಂದು ಮನವಿ ಮಾಡಿಕೊಳ್ಳುತ್ತೇನೆ.

* * * *

* **ಶ್ರೀ ಟಿ. ಪ್ರಕಾಶಂ (ಮದರಾಸು : ಸಾಮಾನ್ಯ) :** ಮಾನ್ಯರೆ ಈ ಹೊಣೆ ಹೊತ್ತಿರುವ ಸನ್ಮಾನ್ಯ ಸದಸ್ಯರಾದ ಡಾ॥ ಅಂಬೇಡ್ಕರ್ ಅವರು ಮಂಡಿಸಿರುವ ಕರಡು ಸಂವಿಧಾನವು ಬಹು ದೊಡ್ಡ ದಾಖಲೆಯಾಗಿದೆ. ಅವರು ಹಾಗೂ ಅವರ ಸಹವರ್ತಿಗಳಾದವರು ಪಟ್ಟಿರುವ ಕಷ್ಟ ನಿಜವಾಗಿ ತುಂಬಾ ದೊಡ್ಡದಾಗಿರಬೇಕು. ನನ್ನ ಮಿತ್ರರಾದ ಟಿ.ಟಿ. ಕೃಷ್ಣಮಾಚಾರಿಯವರು ಮಾತನಾಡುವಾಗ ಹೇಗೆ ಡಾ॥ ಅಂಬೇಡ್ಕರ್‌ರವರು ಕಷ್ಟ ಪಡಬೇಕಾಯಿತು ಎಂದು ವಿವರಿಸಿದರು. ಸಮಿತಿಯ ಐದೋ–ಆರೋ ಜನರು ಹಲವು ಕಾರಣಗಳಿಂದಾಗಿ ಬಿಟ್ಟುಹೋಗಿ, ಅವರ ಸ್ಥಾನಗಳಿಗೆ ಬೇರೆಯವರನ್ನು ನೇಮಿಸದೆ ಅವರಿಗೆ ಬಹಳ ಕಷ್ಟವಾಗಿರುತ್ತದೆ.....

* * * *

**ಡಾ॥ ಜೋಸೆಫ್ ಅಲ್ಬನ್ ಡಿ ಸೋಜಾ** (ಮುಂಬಯಿ : ಸಾಮಾನ್ಯ) : ಮಾನ್ಯ ಉಪಾಧ್ಯಕ್ಷರೇ, ಈ ಮಹಾನ್ ದೇಶದ ಇತಿಹಾಸದಲ್ಲಿ ಹಿಂದೆಂದೂ, ಸಹಸ್ರಾರು ವರ್ಷಗಳ ಹಿಂದಕ್ಕೆ ಹೋಗುವ ಇತಿಹಾಸದಲ್ಲಿ ಹಿಂದೆಂದೂ ಅಥವಾ ಮುಂದೆ ಎಂದೆಂದಿಗೂ ಇಂತಹ ಸಂದರ್ಭ ಬಂದಿರಲಿಲ್ಲ, ಬರುವುದಿಲ್ಲ. ಈ ಸದನವು ಒಂದು ಸ್ವತಂತ್ರ, ಸರ್ವೋನ್ನತ, ಪ್ರಜಾಪ್ರಭುತ್ವ ಭಾರತೀಯ ಗಣರಾಜ್ಯಕ್ಕಾಗಿ, ಕರಡು ಸಂವಿಧಾನವನ್ನು ಉಪವಾಕ್ಯದ ಮೇಲೆ ಉಪವಾಕ್ಯದಂತೆ, ಅನುಚ್ಛೇದವಾದ ಮೇಲೆ ಅನುಚ್ಛೇದದಂತೆ ಪರಿಶೀಲಿಸುವ ಇದು ಅತ್ಯಂತ ಮಹತ್ವಪೂರ್ಣ ಸಂದರ್ಭ. ಸೀಜರನಿಗೆ ಸಲ್ಲಬೇಕಾದುದನ್ನು ಸೀಜರನಿಗೆ ಕೊಡುವುದಕ್ಕಾಗಿ ವೈಯಕ್ತಿಕವಾಗಿ ನಮ್ಮ ಆತ್ಮಸಾಕ್ಷಿಗಳನ್ನು ಪ್ರಾಮಾಣಿಕವಾಗಿ ಪರೀಕ್ಷಿಸಿಕೊಳ್ಳಬೇಕಾದ ಸಂದರ್ಭ ಇದು. ಈಗ ಸೋದರಿಕೆಯ ಮನೋಭಾವ, ಸಹಕಾರ ವ್ಯಕ್ತವಾಗಬೇಕು. ಅವುಗಳಿಂದ ಶಾಂತಿ, ಸಾಮರಸ್ಯ ಮತ್ತು ಸದ್ಭಾವನೆಗಳು ವೈಯಕ್ತಿಕವಾಗೂ, ಸಾಮೂಹಿಕವಾಗೂ ವ್ಯಕ್ತವಾಗುತ್ತದೆ. ದೃಷ್ಟಿಯು ವಿಶಾಲವಾದಾಗ ನಾವೀಗ ಸಾಂವಿಧಾನಿಕ ವ್ಯವಸ್ಥೆಗೆ ಸಂಬಂಧಿಸಿದಂತೆ ಎದುರಿಸಬೇಕಾಗಿರುವ ಜಟಿಲವೂ ಕಷ್ಟಕರವೂ ಆದ ಸಮಸ್ಯೆಗಳನ್ನು ಒಟ್ಟಾರೆ ದೇಶದ ಅಭ್ಯುದಯ ಮತ್ತು ಪ್ರಗತಿಗಳ ಮೂಲತರ ಕೋನದಿಂದ ಪರೀಕ್ಷಿಸಬಹುದಾಗುತ್ತದೆ. ಕೊನೆಯದಾಗಿ, ಸಾಕಷ್ಟು ಉದಾರವಾದ ಮತ್ತು ಧರ್ಮಯುತವಾದ ರೀತಿಯಲ್ಲಿ "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು" ತತ್ವದ ಅನುಸರಣೆ ಸಾಧ್ಯವಾಗುತ್ತದೆ. ದೇಶದ ಹಿತಾಸಕ್ತಿಗಳ ಎದುರಿಗೆ, ಭಾವುಕ, ಭಾವನಾತ್ಮಕವಾದ, ಪ್ರತ್ಯೇಕವಾದ ಧೋರಣೆಗಳನ್ನು ಬೆಳೆಯಲು, ದೇಶದ ಮೇಲೆ ದುಷ್ಪರಿಣಾಮ ಬೀರದಂತೆ ನೋಡಿಕೊಳ್ಳಬೇಕಾಗುತ್ತದೆ.

---

* ಸಿ.ಎ.ಡಿ. ಸಂಪುಟ ೭, ನವೆಂಬರ್ ೬, ೧೯೪೮, ಪುಟ ೨೫೭

ಹಲವು ಸದಸ್ಯರು, ನನಗಿಂತ ಮೊದಲು ಮಾತನಾಡಿದ ಪ್ರತಿಯೊಬ್ಬ ಸದಸ್ಯರೂ, ಕರಡು ಸಂವಿಧಾನವು ಅಪೂರ್ವವಾದ ಒಂದು ಕೃತಿ ಎಂದು ಒಪ್ಪಿದ್ದಾರೆ. ಇದೊಂದು ಅಗಾಧವಾದ ಕೃತಿ. ಡಾ॥ ಅಂಬೇಡ್ಕರ್ ಮತ್ತು ಅವರ ಕರಡು ರಚನಾ ಸಮಿತಿಯು ಹಲವು ತಿಂಗಳು ಬಹು ಕಷ್ಟಪಟ್ಟು ಸಿದ್ಧಪಡಿಸಿರುವ ಕೃತಿ. ಇದು ತಜ್ಞರ ಕೆಲಸ, ಮೊದಲಿನಿಂದ ಕೊನೆಯವರೆಗೆ ತೌಲನಿಕವೂ, ಆಯ್ಕೆಯದೂ, ಕಾರ್ಯಸಮರ್ಥವೂ ಆದ ಕೃತಿ ಎಂದು ಹೇಳಬಯಸುತ್ತೇನೆ ............

* * * *

* **ಶ್ರೀ ಕೆ. ಸಂತಾನಂ :** ....... ಕರಡು ರಚನಾ ಸಮಿತಿಯು ಬಹು ಉತ್ತಮವಾದ ಕೆಲಸ ಮಾಡಿದೆ. ಅದೇ ಸಮಯಕ್ಕೆ ಎರಡು ಆಕ್ಷೇಪಣೆಗಳನ್ನು ಅವರು ತಪ್ಪಿಸಿಕೊಳ್ಳಲಾರರು. ಸಮಿತಿಯು, ಕಾನೂನು ಬಾಹಿರವಾಗಿ, ಒಂದು ಸಂವಿಧಾನ ಸಮಿತಿಯಾಗಿ ತಮ್ಮನ್ನು ಪರಿವರ್ತಿಸಿಕೊಂಡಿದ್ದಾರೆ. ಈ ಸಭೆಯು ಅಂಗೀಕರಿಸಿದ ಕೆಲವು ಮಹತ್ವದ ಅವಕಾಶಗಳನ್ನು ಬದಲಾಯಿಸುವ ಹೊಣೆಯನ್ನು ಅವರು ಹೊತ್ತುಕೊಂಡಿದ್ದಾರೆ.

* * * *

\+ **ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬಿರಾರ್ : ಸಾಮಾನ್ಯ) : ಮಾನ್ಯ ಉಪಾಧ್ಯಕ್ಷರೇ, ತಜ್ಞರೂ ಸಮರ್ಥರೂ ವಕೀಲರಾದ ಗೌರವಾನ್ವಿತ ಡಾ॥ ಅಂಬೇಡ್ಕರ್ ಅವರು ಕರಡು ಸಂವಿಧಾನವನ್ನು ತಿಳಿಯಾದ ಮಾತುಗಳಲ್ಲಿ ಮಂಡಿಸಿದ್ದಾರೆ. ಅದರಿಂದ ಅವರು ಹೊರಜಗತ್ತಿನ ಮೇಲೆ ಹಾಗೂ ಇಲ್ಲಿ ಕೆಲವು ಗೌರವಾನ್ವಿತ ಸದಸ್ಯರ ಮೇಲೆ ಪ್ರಭಾವ ಬೀರಿದ್ದಾರೆ. ಆದರೆ ಅದು ಸಂವಿಧಾನವನ್ನು ಬೆಲೆಕಟ್ಟಲು ಆಧಾರವಾಗುವುದಿಲ್ಲ. ಇದು ಈ ದೇಶದಲ್ಲಿ ಪ್ರಜಾಪ್ರಭುತ್ವಕ್ಕೋಸ್ಕರವಾಗಿ ಸಿದ್ಧಪಡಿಸಿರುವ ಸಂವಿಧಾನ. ಆದರೆ ಡಾ॥ ಅಂಬೇಡ್ಕರರು ಸ್ಥಳೀಯ ಪ್ರಾಧಿಕಾರಗಳನ್ನೂ ಗ್ರಾಮಗಳನ್ನೂ ಅಲಕ್ಷಿಸುವುದರ ಮೂಲಕ ಪ್ರಜಾಪ್ರಭುತ್ವದ ಕಲ್ಪನೆಯನ್ನೇ ಇಲ್ಲವಾಗಿಸಿದ್ದಾರೆ.........

* * * *

** **ಶ್ರೀ ಜೈನಾರಾಯಣ್ ವ್ಯಾಸ್** (ಜೋಧಪುರ) : ಮಾನ್ಯ ಉಪಾಧ್ಯಕ್ಷರೆ, ಡಾ॥ ಅಂಬೇಡ್ಕರ್ ಅವರನ್ನೂ ಅವರ ಸಹೋದ್ಯೋಗಿಗಳು, ಬೆರಳಚ್ಚುಗಾರರು ಮತ್ತು ಪ್ರತಿಕಾರರನ್ನು ಈಗ ನಮ್ಮ ಮುಂದಿನ ಕರಡು ಸಂವಿಧಾನವನ್ನು ಸಿದ್ಧಪಡಿಸಲು ಪಟ್ಟಿರುವ ಕಷ್ಟಕ್ಕಾಗಿ ವಂದಿಸಬೇಕು. ಇದೊಂದು ಬಹುದೊಡ್ಡ ಕರಡು, ಅನೇಕಾನೇಕ ವಿಷಯಗಳು ಇದರಲ್ಲಿ ಸೇರ್ಪಡೆಯಾಗಿದೆ......

* * * *

**ಶ್ರೀ ಬಿ.ಎ. ಮ್ಯಾಂಡಲಾಯ್** (ಸಿ.ಪಿ. ಮತ್ತು ಬಿರಾರ್ : ಸಾಮಾನ್ಯ): ಮಾನ್ಯ ಉಪಾಧ್ಯಕ್ಷರೇ, ಕರಡು ರಚನಾ ಸಮಿತಿಯ ಅಧ್ಯಕ್ಷರಾದ ಡಾ॥ ಬಿ.ಆರ್. ಅಂಬೇಡ್ಕರ್ ಅವರು ಲಲಿತವಾದ ಭಾಷಣ ಮಾಡಿ ಕರಡು ಸಂವಿಧಾನದ ಮುಖ್ಯ ಅಂಶಗಳನ್ನು ವಿವರಿಸಿದ್ದಾರೆ. ಸರಕಾರದ ಸ್ವರೂಪವು ಹೇಗಿರುತ್ತದೆ, ದೇಶದ ಒಟ್ಟು ರಚನೆ ಹೇಗಿರುತ್ತದೆ ಎಂಬ ಪ್ರಶ್ನೆಗಳಿಗೆ ಅವರು, ಪ್ರಬಲವಾದ ಕೇಂದ್ರವಿರುವ ಒಕ್ಕೂಟ ಮಾದರಿಯ

---

* ಸಿ.ಎ.ಡಿ. ಸಂಪುಟ ೭, ನವೆಂಬರ್ ೬, ೧೯೪೮, ಪುಟ ೨೬೨

\+ ಅದೇ ಪುಟ ೨೬೫

** ಅದೇ ಪುಟ ೨೭೯

ಸರಕಾರ ಎಂದೂ, ಒಂದೇ ನ್ಯಾಯಾಂಗ ಹಾಗೂ ಮೂಲ ನಿಯಮಗಳ ಏಕರೂಪತೆಯಿರುವ ಸಾಂಸದಿಕ ಸ್ವರೂಪದ ಸರಕಾರ ಎಂದೂ ಹೇಳಿದ್ದಾರೆ. ಒತ್ತಡವು ಸ್ಥಿರತೆಗಿಂತ ಮಿಗಿಲಾಗಿ ಹೊಣೆಗಾರಿಕೆಯ ಮೇಲಿರುತ್ತದೆ. ಅದು ಶಾಂತಿಕಾಲದಲ್ಲಿಯೂ, ಯುದ್ಧಕಾಲದಲ್ಲಿಯೂ ಸಾಕಷ್ಟು ಪ್ರಬಲವಾಗಿರುತ್ತದೆ. ಕರಡು ಸಂವಿಧಾನದ ಮೇಲೆ ಬಂದಿರುವ ಆಕ್ಷೇಪಣೆಗಳಿಗೆ ಅವರು ಉತ್ತರ ಕೊಟ್ಟಿದ್ದಾರೆ. ಅವರ ಭಾಷಣವು ಕರಡು ಸಂವಿಧಾನದ ಒಂದು ತಿಳಿಯಾದ ಪ್ರತಿಪಾದನೆ. ಕರಡು ರಚನಾ ಸಮಿತಿಯು ಸಿದ್ಧಪಡಿಸಿರುವ ಕರಡು ಸಂವಿಧಾನವು ಹಲವು ಸಮಿತಿಗಳ ವರದಿಗಳನ್ನು ಆಧರಿಸಿದೆ. ಅವು ಕೇಂದ್ರ ಅಧಿಕಾರ ಸಮಿತಿ, ಪ್ರಾಂತೀಯ ಸಂವಿಧಾನ ಸಮಿತಿ, ಸಲಹಾ ಸಮಿತಿ ಮತ್ತು ಅಲ್ಪಸಂಖ್ಯಾತ ಸಮಿತಿ. ಸಂವಿಧಾನ ಸಭೆಯು ತನ್ನ ಮೊತ್ತಮೊದಲನೆಯ ಅಧಿವೇಶನದಲ್ಲಿಯೇ ನಮ್ಮ ಸಂವಿಧಾನವನ್ನು ಕುರಿತು ನಿರ್ಣಯವೊಂದನ್ನು ಅಂಗೀಕರಿಸಿತು. ಅದನ್ನು ನಮ್ಮ ಗೌರವಾನ್ವಿತ ನಾಯಕರಾದ ಪಂಡಿತ್ ಜವಾಹರಲಾಲ್ ನೆಹರೂ ಅವರು ಮಂಡಿಸಿದರು. ಸರ್ವಾನುಮತದಿಂದ ಅದು ಅಂಗೀಕೃತವಾಯಿತು. ಆ ಉದ್ದೇಶಗಳ ನಿರ್ಣಯದ ಆಧಾರದ ಮೇಲೆ ನಮ್ಮ ಸಂವಿಧಾನವು ನಿಲ್ಲುವಂತೆ ನಾವು ನೋಡಿಕೊಳ್ಳಬೇಕು. ಅದರಲ್ಲಿ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳನ್ನು ಎಲ್ಲರಿಗೂ ನೀಡಲಾಗಿದೆ. ಕರಡು ಸಂವಿಧಾನವು ಆ ನಮ್ಮ ಉದ್ದೇಶಗಳ ನಿರ್ಣಯದ ನಿಜ ಪ್ರತಿರೂಪವಾಗಿದೆ. ಆದ್ದರಿಂದ ಅದು ನಮ್ಮ ಉದ್ದೇಶವನ್ನು ನೆರವೇರಿಸಿದೆ ಎಂದು ಹೇಳಬಹುದು.

ನಮ್ಮ ಧ್ಯೇಯ – ಉದ್ದೇಶಗಳನ್ನು ಕರಡು ಸಂವಿಧಾನವು ಈಡೇರಿಸಿದೆಯೇ ಎಂದು ಪರೀಕ್ಷಿಸಲು ಇನ್ನೊಂದು ಒರೆಗಲ್ಲಿದೆ. ಅದು ನಮ್ಮ ಸ್ವಾತಂತ್ರ್ಯವನ್ನು ನಮ್ಮ ಪ್ರಜಾಪ್ರಭುತ್ವೀಯ ಜಾತ್ಯತೀತ ಸರಕಾರವನ್ನು ಉಳಿಸುತ್ತದೆಯೇ ಪೋಷಿಸುತ್ತದೆಯೇ ಎಂದು ನೋಡುವುದು. ಆ ದೃಷ್ಟಿಯಿಂದ ನೋಡಿದರೂ ಕರಡು ಸಂವಿಧಾನವು ನಮ್ಮ ಉದ್ದೇಶವನ್ನು ಪೂರೈಸುತ್ತದೆ.......

ಮಾನ್ಯರೇ, ನಮ್ಮ ಸಂವಿಧಾನವು ಜಗತ್ತಿನಾದ್ಯಂತ ನಾಗರಿಕ ದೇಶಗಳಲ್ಲಿ ಪ್ರಚಲಿತವಾಗಿರುವ ಹಲವು ಸಂವಿಧಾನಗಳೊಂದಿಗೆ ಹೋಲಿಸುತ್ತ ವಿಕಾಸಗೊಳಿಸಿದ್ದು. ಆ ಎಲ್ಲಾ ಸಂವಿಧಾನಗಳಲ್ಲಿನ ಉತ್ತಮ ಅಂಶಗಳನ್ನು ನಮ್ಮ ದೇಶದ ಹಿತಾಸಕ್ತಿಗಳಿಗೆ ಅಗತ್ಯವಾಗುವ ಮಾರ್ಪಾಟುಗಳನ್ನು ಮಾಡಿ ತೆಗೆದುಕೊಳ್ಳಲಾಗಿದೆ. ನಾವು ವಿಧೇಯತೆಯಿಂದ, ಪ್ರಾಮಾಣಿಕತೆಯಿಂದ ಅದನ್ನು ಕಾರ್ಯಗತಗೊಳಿಸಿದ ಪಕ್ಷದಲ್ಲಿ ನಮ್ಮ ದೇಶವು ಸಂತೋಷವಾಗಿರುತ್ತದೆ, ಬಲವಾಗಿರುತ್ತದೆ, ನಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ನಾವು ಸಮರ್ಥರಾಗುತ್ತೇವೆ. ಅಷ್ಟೇ ಅಲ್ಲ, ನಮ್ಮನ್ನು ಅಗಲಿರುವ ಮಹಾನಾಯಕ ರಾಷ್ಟ್ರಪಿತರ ಜೀವನ ಧ್ಯೇಯವನ್ನು ಈಡೇರಿಸುವುದಕ್ಕೆ ಸಮರ್ಥರಾಗುತ್ತೇವೆ. ಇನ್ನು ಮುಂದೆ ಭಾರತವು ಇತರ ಪರಾಧೀನ ದೇಶಗಳನ್ನು ಬಿಡುಗಡೆಗೊಳಿಸಲು, ಪ್ರಪಂಚದಾದ್ಯಂತ ಶಾಂತಿ ಸಮೃದ್ಧಿಗಳನ್ನು ತರಲು ಸಮರ್ಥವಾಗುತ್ತದೆ ಎಂದು ಅವರು ಹೇಳಿದರು.

ಈ ಕೆಲವು ಮಾತುಗಳಿಂದ ಡಾ॥ ಅಂಬೇಡ್ಕರ್ ಅವರು ಮಂಡಿಸಿದ ಸೂಚನೆಯನ್ನು ಸದನವು ಅಂಗೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

* * * *

* **ಪಂಡಿತ ಬಾಲಕೃಷ್ಣ ಶರ್ಮ** (ಯು.ಪಿ. ಸಾಮಾನ್ಯ) : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಹಲವು ಮಿತ್ರರು ಇಲ್ಲಿಗೆ ಬಂದು, ಕರಡು ಸಂವಿಧಾನದ ರಚನೆಯ ಹೊಣೆ ಹೊತ್ತಿದ್ದ ಮಾನ್ಯ ಕಾನೂನು ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಅದೇ ಭಾವನೆಗಳನ್ನು ನಾನೂ ವ್ಯಕ್ತಪಡಿಸಿದರೆ ಅದು

---

* ಸಿ.ಎ.ಡಿ. ಸಂಪುಟ ೭, ನವೆಂಬರ್ ೬, ೧೯೪೮, ಪುಟ ೨೭೨–೭೩

ಹೇಳಿದ್ದನ್ನೇ ಹೇಳಿದಂತಾಗುತ್ತದೆ. ಆದರೆ ಮಾನ್ಯ ಕಾನೂನು ಸಚಿವರಿಗೆ ವಿನಯಪೂರ್ವಕವಾಗಿ, ಗೌರವಪೂರ್ವಕವಾಗಿ ಅಭಿನಂದನೆ ಸಲ್ಲಿಸದೆ ಹೋದರೆ ಅದು ಕರ್ತವ್ಯಲೋಪವಾಗುತ್ತದೆ. ಅನೇಕ ಮಿತ್ರರು ಮತ್ತು ವಿಮರ್ಶಕರು ಇಲ್ಲಿಗೆ ಬಂದು ನಮ್ಮ ಸಂವಿಧಾನದ ಮೇಲೆ ಕೆಲವು ಅಕ್ಷೇಪಣೆಗಳನ್ನು ಮಾಡಿದ್ದಾರೆ. ಅನೇಕರು ಮತ್ತೆ ಮತ್ತೆ ಹೇಳಿರುವ ಒಂದು ಆಕ್ಷೇಪಣೆ, ನಮ್ಮದು ತುಂಬಾ ದೊಡ್ಡಗಾತ್ರದ ಸಂವಿಧಾನವಾಗಿದೆ ಎನ್ನುವುದು. ಸೂಚನೆಯನ್ನು ಮಂಡಿಸಿದವರೇ ಈ ದಾಖಲೆಯ ಗಾತ್ರವನ್ನು ಕುರಿತು ಉಲ್ಲೇಖಿಸಿದ್ದಾರೆ. ಇತರ ಸಂವಿಧಾನಗಳ ವಿಧಿಗಳನ್ನು ಉಪವಾಕ್ಯಗಳನ್ನು ಪರಿಶೀಲಿಸಿದರೆ ನಮ್ಮದು ನಿಜವಾಗಿ ಬೃಹತ್ ಆದ ಸಂವಿಧಾನವೆಂದು ನಿರ್ಣಯಕ್ಕೆ ಬರುತ್ತೇವೆ. ಮಾನ್ಯರೇ, ತಮಗೆ ತಿಳಿದಿರುವಂತೆ, ಅದರಲ್ಲಿ ೩೧೫ ವಿಧಿಗಳಿವೆ, ಬ್ರಿಟಿಷ್, ಉತ್ತರ ಅಮೆರಿಕದ, ಅಂದರೆ ಕೆನಡದ ಸಂವಿಧಾನದಲ್ಲಿ ೧೪೭ ವಿಧಿಗಳು ಮಾತ್ರ ಇವೆ; ಕಾಮನ್ ವೆಲ್ತ್ ಆಫ್ ಆಸ್ಟ್ರೇಲಿಯಾ ಶಾಸನದಲ್ಲಿ ಸುಮಾರು ೧೨೮ ಪ್ರಕರಣಗಳಿವೆ; ಯೂನಿಯನ್ ಆಫ್ ಸೌತ್ ಆಫ್ರಿಕಾ ಆ್ಯಕ್ಟ್ ೧೫೩ ಪ್ರಕರಣಗಳನ್ನು ಹೊಂದಿಕೊಂಡಿದೆ; ಐರಿಷ್ ಸಂವಿಧಾನದಲ್ಲಿ ಕೇವಲ ೬೩ ಪ್ರಕರಣಗಳಿವೆ; ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಂವಿಧಾನದಲ್ಲಿ ೨೮ ಅನುಚ್ಛೇದಗಳಿವೆ; ಯು.ಎಸ್.ಎಸ್.ಆರ್ ಸಂವಿಧಾನದಲ್ಲಿ ೧೪೬; ಸ್ವಿಸ್ ಫೆಡರಲ್ ಸಂವಿಧಾನದಲ್ಲಿ ೧೨೩; ಜರ್ಮನ್ ರೀಕ್ ಸಂವಿಧಾನದಲ್ಲಿ ೧೮೧; ಜಪಾನಿನ ಸಂವಿಧಾನದಲ್ಲಿ ೧೦೩ ಪ್ರಕರಣಗಳಿವೆ. ಇವು ಯಾವುದರಲ್ಲೂ ೨೦೦ಕ್ಕಿಂತ ಹೆಚ್ಚು ಸಂಖ್ಯೆಯ ವಿಧಿಗಳಿಲ್ಲ; ನಮ್ಮ ಸಂವಿಧಾನದಲ್ಲಿ ೩೧೫ ವಿಧಿಗಳಿವೆ.

ನಮ್ಮ ಸಂವಿಧಾನದ ಈ ಬೃಹತ್ ಗಾತ್ರವನ್ನೇ ಒಂದು ದೊಡ್ಡ ವಿಷಯವನ್ನಾಗಿ ಮಾಡಲು ವಿಮರ್ಶಕರು ಪ್ರಯತ್ನಿಸಿದ್ದಾರೆ. ನಮ್ಮದು ೩೩೦ ಮಿಲಿಯನ್ ಜನಸಂಖ್ಯೆಯಿರುವ ಬೃಹತ್ ದೇಶವೆಂಬುದನ್ನು ನಾವು ಮರೆಯಬಾರದು. ನಾವು ಹೆಚ್ಚು ಕಡಿಮೆ ಮಾನವ ಜನಾಂಗದ ಐದನೇ ಒಂದು ಭಾಗಕ್ಕೆ ಸಂವಿಧಾನವನ್ನು ರಚಿಸುತ್ತಿದ್ದೇವೆ. ಆದ್ದರಿಂದ ನಮ್ಮ ಸಂವಿಧಾನ ದೊಡ್ಡದಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ........

ಮಾನ್ಯರೆ, ನಮ್ಮ ದೇಶಕ್ಕೆ ವಿಶಿಷ್ಟವಾದ ಸಮಸ್ಯೆಗಳಿವೆ. ಜಗತ್ತಿನ ಬೇರೆ ಯಾವ ದೇಶದಲ್ಲೂ ನಾವು ಪ್ರಾಂತಗಳು–ರಾಜ್ಯಗಳು–ಎಂದು ಕರೆಯುವಂಥವು ಇಲ್ಲ. ಈ ಹಲವು ಅಂಗಗಳನ್ನು ಆಧುನಿಕ ಪ್ರಜಾಪ್ರಭುತ್ವ ತತ್ವಗಳಿಗೆ ಹೊಂದಿಕೆಯಾಗುವಂತೆ ಜೋಡಿಸಲು ಶ್ರಮಿಸಿದ ನಮ್ಮ ಸಂವಿಧಾನದ ಕರ್ತೃಗಳಿಗೆ ತಾವು ಹೇಳಬೇಕೆನಿಸಿದುದನ್ನೆಲ್ಲಾ ಕೆಲವೇ ವಿಧಿಗಳಿಗೆ ಅಡಗಿಸಲು ಸಾಧ್ಯವಾಗಿಲ್ಲ. ಆದ್ದರಿಂದ ನಮ್ಮ ಸಂವಿಧಾನದ ಗಾತ್ರವು ತುಂಬಾ ದೊಡ್ಡದು ಎಂದು ಆಲೋಚಿಸುವುದು ಹುರುಳಿಲ್ಲದ ಮಾತು ಎಂದು ನನಗೆ ತೋರುತ್ತದೆ.

* * * *

* **ಪಂಡಿತ ಠಾಕೂರ ದಾಸ್ ಭಾರ್ಗವ** (ಪೂರ್ವ ಪಂಜಾಬ್ : ಸಾಮಾನ್ಯ): ನಾನು ಇಂಗ್ಲಿಷ್‌ನಲ್ಲಿ ಮಾತನಾಡಬೇಕೆಂದು ಮಿತ್ರರು ಒತ್ತಾಯಪಡಿಸಿರುವುದರಿಂದ, ಅವರ ಅಪೇಕ್ಷೆಗೆ ನಾನು ಮಣಿಯುತ್ತೇನೆ. ನನ್ನ ವಿಚಾರಗಳನ್ನು ಹಿಂದಿಯಲ್ಲಿ ಹೆಚ್ಚು ಸರಾಗವಾಗಿ ವ್ಯಕ್ತಪಡಿಸಬಲ್ಲೆ ಎಂಬುದು ನಿಜ. ಆದರೂ ನನ್ನ ಮಾತುಗಳನ್ನು ಸದನದ ಎಲ್ಲ ಸದಸ್ಯರೂ ಅರ್ಥ ಮಾಡಿಕೊಳ್ಳಬೇಕೆಂದು ಬಯಸುತ್ತೇನೆ.

ಈ ಸದನವು ಕರಡು ರಚನಾ ಸಮಿತಿಯ ಮೇಲೆ ವರ್ಷಿಸಿರುವ ಪ್ರಶಂಸೆಯ ಮೇಳಗಾನಕ್ಕೆ ನಾನು ದನಿಗೂಡಿಸಬೇಕೆಂದು ಆಶಿಸುತ್ತೇನೆ. ಆದರೆ ಅಭ್ಯಂತರವಿಲ್ಲದೆ ಹಾಗೆ ಮಾಡಲಾರದವನಾಗಿದ್ದೇನೆ. ಕೆಲವು ಮಿತ್ರರು ವ್ಯಕ್ತಪಡಿಸಿರುವ ದೂರುಗಳನ್ನು ಗಮನಿಸಿದರೆ, ನಾವು ಕರಡು ರಚನಾ ಸಮಿತಿಯು ಏನು

* ಸಿ.ಎ.ಡಿ. ಸಂಪುಟ ೭, ನವೆಂಬರ್ ೬, ೧೯೪೮, ಪುಟ ೨೭೫

ಮಾಡಬೇಕೆಂದು ನಿರೀಕ್ಷಿಸಿದ್ದೆವೋ ಅದನ್ನು ಮಾಡಿಲ್ಲ ಎಂದು ನನಗನ್ನಿಸುತ್ತದೆ. ಕೆಲವು ಸದಸ್ಯರು ಹಾಜರಿರಲಿಲ್ಲ. ಕೆಲವರು ಕೆಲಸಕ್ಕೆ ಕೂಡಿಕೊಳ್ಳಲಿಲ್ಲ, ಕೆಲವರು ತಮ್ಮ ಮನಸ್ಸನ್ನು ಈ ವಿಷಯಕ್ಕೆ ಪೂರ್ತಿಯಾಗಿ ಹಾಕಲಿಲ್ಲ... ಈ ಸಂವಿಧಾನವು ಭಾರತದ ನಿಜವಾದ ಆತ್ಮವನ್ನು ಪ್ರತಿನಿಧಿಸಿಲ್ಲ. ಹಳ್ಳಿಗಳ ಸ್ವಾಯತ್ತತೆಯನ್ನು ವಿಸ್ತಾರಗೊಳಿಸಿ.... ಈ ಕ್ಯಾಮರವು (ಕರಡು ಸಂವಿಧಾನವನ್ನು ಕೈಯಲ್ಲಿ ಹಿಡಿದು) ಅನೇಕ ಜನರು ಭಾರತವು ಹೇಗಿರಬೇಕೆಂದು ಬಯಸುವವರೋ ಅದರ ನಿಜವಾದ ಚಿತ್ರವನ್ನು ಕೊಡುತ್ತಿಲ್ಲ. ಕರಡು ರಚನಾ ಸಮಿತಿಗೆ ಗಾಂಧೀಜಿಯವರ ಮನಸ್ಸು ದೊರಕಿಲ್ಲ, ಈ ಕ್ಯಾಮರಾದ ಮೂಲಕ ಭಾರತದ ಜನಕೋಟಿಯು ಪ್ರತಿಬಿಂಬಿತವಾಗಬೇಕೆಂದು ಬಯಸುವವರ ಮನಸ್ಸುಗಳು ಸಮಿತಿಗೆ ಲಭ್ಯವಾಗಿಲ್ಲ. ಆದರೇನು, ಈ ಸಂವಿಧಾನದ ರಚನೆಯಲ್ಲಿ ಡಾ॥ ಅಂಬೇಡ್ಕರ್ ಅವರು ತೋರಿಸಿದ ಶ್ರಮ, ಸಾಮರ್ಥ್ಯ, ದಕ್ಷತೆ ಇವುಗಳನ್ನು ಪ್ರಶಂಸಿಸದೆ ಇರಲು ಸಾಧ್ಯವಿಲ್ಲ. ಅವರು ಈ ಸದನದ ಮುಂದೆ ಭಾಷಣದಲ್ಲಿ ವ್ಯಕ್ತಪಡಿಸಿದ ಎಲ್ಲಾ ಭಾವನೆಗಳನ್ನು ಒಪ್ಪದೆಯೂ, ಆ ನಿರರ್ಗಳವಾದ, ಸುಂದರವಾದ ಭಾಷಣಕ್ಕೆ ನನ್ನ ಅಭಿನಂದನೆಗಳನ್ನು ಸೂಚಿಸುತ್ತೇನೆ.

ಮಾನ್ಯರೇ, ಈ ಸಂವಿಧಾನದ ಜೀವಾಳವಿರುವುದು ಪೀಠಿಕೆಯಲ್ಲಿ. ಡಾ॥ ಅಂಬೇಡ್ಕರ್ ಅವರು ಸೋದರತ್ವ (Fraternity) ಎಂಬ ಪದವನ್ನು ಆ ಭಾಗದಲ್ಲಿ ಸೇರಿಸಿದುದಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಪೀಠಿಕಾ ಭಾಗದ ಒರೆಗಲ್ಲನ್ನು ಇಡೀ ಸಂವಿಧಾನಕ್ಕೆ ಅನ್ವಯಿಸಲು ಬಯಸುತ್ತೇನೆ. ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳು ಈ ಸಂವಿಧಾನದಲ್ಲಿ ಕಂಡುಬಂದ ಪಕ್ಷದಲ್ಲಿ, ಈ ಸಂವಿಧಾನದ ಮೂಲಕ ಈ ಆದರ್ಶವನ್ನು ಸಾಧಿಸುವುದಾದ ಪಕ್ಷದಲ್ಲಿ ಸಂವಿಧಾನವು ಉತ್ತಮವಾಗಿದೆ ಎಂದು ಹೇಳುತ್ತೇನೆ.

* * *

* **ಪ್ರೊ॥ ಶಿಬ್ಬನ್‌ಲಾಲ್ ಸಕ್ಸೇನಾ** (ಯು.ಪಿ. : ಸಾಮಾನ್ಯ) : .... ಮಾನ್ಯ ಉಪಾಧ್ಯಕ್ಷರೇ, ಇಂದು ನಾವು ನಮ್ಮ ಕರಡು ಸಂವಿಧಾನದಲ್ಲಿ ಅಂತರ್ಗತವಾಗಿರುವ ತತ್ವಗಳನ್ನು ಕುರಿತು ಚರ್ಚಿಸಬೇಕಾಗಿದೆ. ಪ್ರಾರಂಭಕ್ಕೆ ವಿದ್ವಾಂಸರಾದ ಡಾ॥ ಅಂಬೇಡ್ಕರ್‌ರನ್ನು ಈ ಸೂಚನೆಯನ್ನು ಮಂಡಿಸಿದುದಕ್ಕಾಗಿ ಅಭಿನಂದಿಸಬೇಕು. ಅವರು ನೀಡಿದ ಭಾಷಣವನ್ನು ಹಲವು ಸಾರಿ ಓದಿದ್ದೇನೆ. ಅದು ನಮ್ಮ ಸಂವಿಧಾನವನ್ನು ಕುರಿತ ಸೊಗಸಾದ ನಿರೂಪಣೆ. ಇದಕ್ಕಿಂತ ಉತ್ತಮವಾಗಿ ಕರಡು ಸಂವಿಧಾನವನ್ನು ಸಮರ್ಥಿಸುವುದು ಸಾಧ್ಯವೇ ಇರಲಿಲ್ಲ..........

* * * *

....... ಕೊನೆಯದಾಗಿ ಮಾನ್ಯರೆ, ನಮಗೆ ಸೊಗಸಾದ ಒಂದು ಸಂವಿಧಾನವನ್ನು ಒದಗಿಸಿದುದಕ್ಕಾಗಿ ಕರಡು ರಚನಾ ಸಮಿತಿಯನ್ನು ನಾನು ವಂದಿಸುತ್ತೇನೆ. ನಾನು ಕೊಟ್ಟಿರುವ ಸೂಚನೆಗಳನ್ನು ಮುಂದೆ ತಿದ್ದುಪಡಿ ಹಂತದಲ್ಲಿ ಚರ್ಚಿಸಲಾಗುತ್ತದೆ. ಅಂತಿಮವಾಗಿ ನಮ್ಮ ದೇಶದ ಸಂವಿಧಾನದಲ್ಲಿ ಎಡೆಪಡೆಯುತ್ತದೆ ಎಂದೂ ಭಾವಿಸುತ್ತೇನೆ. ಈ ಮಾತುಗಳಿಂದ ಸೂಚನೆಯನ್ನು ಸಭೆಯು ಅಂಗೀಕರಿಸಬೇಕೆಂದು ಕೇಳುತ್ತೇನೆ.

* * * *

---

* ಸಿ.ಎ.ಡಿ. ಸಂಪುಟ ೭, ನವೆಂಬರ್ ೬, ೧೯೪೮, ಪುಟ ೨೮೪

** **ಶ್ರೀ ಸಾರಂಗಧರ ದಾಸ್** (ಒರಿಸ್ಸಾ ರಾಜ್ಯಗಳು) : ಮಾನ್ಯ ಉಪಾಧ್ಯಕ್ಷರೇ, ಈ ಮುಂಚೆ ಮಾತನಾಡಿದ ಎಲ್ಲ ಭಾಷಣಕಾರರಂತೆ ನಾನೂ ಸಹ ಕರಡು ರಚನಾ ಸಮಿತಿಗೆ, ವಿಶೇಷವಾಗಿ ಅದರ ಅಧ್ಯಕ್ಷರಾದ ಡಾ॥ ಅಂಬೇಡ್ಕರ್ ಅವರಿಗೆ ಅವರ ಬಹು ಕಷ್ಟದ ದುಡಿಮೆಗಾಗಿ ಅಭಿನಂದನೆ ಸಲ್ಲಿಸುತ್ತೇನೆ. ಅದೇ ಸಮಯಕ್ಕೆ ಅವರ ಭಾಷಣದಲ್ಲಿ ನಾನು ಒಪ್ಪದಿರುವಂತಹ ಕೆಲವು ಮಾತುಗಳಿವೆ......

* * * *

+ **ಶ್ರೀ ಆರ್.ಆರ್. ದಿವಾಕರ್** (ಮುಂಬಯಿ : ಸಾಮಾನ್ಯ): ಮಾನ್ಯ ಉಪಾಧ್ಯಕ್ಷರೇ, ನನಗಿಂತ ಮುಂದೆ ಮಾತನಾಡಿದ ಗೌರವಾನ್ವಿತ ಸದಸ್ಯರು ಬೇಕಾದಷ್ಟು ವಿಷಯಗಳನ್ನು ಹೇಳಿದ್ದಾರೆ, ಮತ್ತೆ ಅವುಗಳನ್ನೇ ಹೇಳುತ್ತಾ ಸದನದ ಸಮಯವನ್ನು ನಾನು ಕಬಳಿಸಬಾರದು. ನಮ್ಮ ದೇಶಕ್ಕೆ ಒಂದು ಹೊಸ ಸಂವಿಧಾನವನ್ನು ಕೊಟ್ಟುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಬಹುಮುಖ್ಯವೆಂದು ನನಗೆ ತೋರುವ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ನಾನು ಸ್ಪಷ್ಟಪಡಿಸಬೇಕಾಗಿರುವ ಒಂದು ವಿಚಾರವೆಂದರೆ ನಮ್ಮ ಮುಂದಿರುವ ಕರಡು ಸಂವಿಧಾನವು ನಿಜವಾಗಿಯೂ ಒಂದು ಮಹತ್ವಪೂರ್ಣವಾದ ಕೃತಿ. ನಾವೆಲ್ಲರೂ ಈಗಾಗಲೇ ಕರಡು ರಚನಾ ಸಮಿತಿಗೂ, ಈ ಸದನದ ಅನುಮೋದನೆ ಪಡೆಯಲು ಮುಂದಿಟ್ಟಿರುವ ಅದರ ಅಧ್ಯಕ್ಷರಾದ ಡಾ॥ ಅಂಬೇಡ್ಕರ್ ಅವರಿಗೂ ಅಭಿನಂದನೆಗಳನ್ನು ಹೇಳಿಯಾಗಿದೆ. ಅದೇ ಸಮಯಕ್ಕೆ ಇನ್ನೊಂದು ವಿಷಯವನ್ನು ಹೇಳಬೇಕು. ಸಮಿತಿಯು ಕರಡು ಸಂವಿಧಾನವನ್ನು ರಚಿಸುವುದರ ಜೊತೆಗೆ ನನ್ನ ನಮ್ರ ಅಭಿಪ್ರಾಯದಲ್ಲಿ ಅಷ್ಟಕ್ಕಿಂತ ಮುಂದೆ ಹೋಗಿದೆ. ಅದು ಸಂವಿಧಾನವನ್ನು ವಿಮರ್ಶೆ ಮಾಡಿದೆ, ಕೆಲವು ನಿರ್ಣಯಗಳನ್ನು ಪರಿಷ್ಕರಿಸಿದೆ. ಅನೇಕವನ್ನು ಮತ್ತೆ ಸೂಕ್ತ ಪದಗಳಲ್ಲಿ ನಿರ್ದೇಶಿಸಿದೆ. ಸನ್ನಿವೇಶಗಳು ಹಾಗಿದ್ದವೋ ಏನೋ. ಆ ಬಗೆಯಾಗಿ ವರ್ತಿಸುವುದು ಅನಿವಾರ್ಯವಾಗಿದ್ದಿರಬಹುದು. ಆದರೆ ಅದೇ ಸಮಯಕ್ಕೆ ಸಂವಿಧಾನ ಸಮಿತಿಯ ಸದಸ್ಯರಾಗಿರುವ ನಾವು ಕರಡನ್ನು ಪರಿಶೀಲಿಸಿ, ಅದಕ್ಕೆ ನಮ್ಮ ತಿದ್ದುಪಡಿಗಳನ್ನು ಸೂಚಿಸುವ ಸಂದರ್ಭದಲ್ಲಿ ನಮಗೆ ಈ ವಿಷಯವು ತಿಳಿದಿರಬೇಕು....

* * * *

* **ಮೆಹಬೂಬ್ ಆಲಿ ಬೇಗ್ ಸಾಹಿಬ್ ಬಹಾದುರ್** (ಮದರಾಸು : ಮುಸ್ಲಿಮ್) : ಮಾನ್ಯ ಉಪಾಧ್ಯಕ್ಷರೆ, ಡಾ॥ ಅಂಬೇಡ್ಕರ್ ಅವರು ಮಾಡಿದ ವಿಶ್ಲೇಷಣೆ ಮತ್ತು ವಿಮರ್ಶೆಯು ಅಪೂರ್ವವಾದ ರೀತಿಯಲ್ಲಿ ಲಲಿತವಾಗಿದ್ದವು. ತಜ್ಞತೆಯಿಂದ ಕೂಡಿದ್ದುವು, ಅಪಾರವಾಗಿ ಬೋಧಪ್ರದವೂ ವಿವರಣಾತ್ಮಕವೂ ಆಗಿದ್ದುವು. ಅವರ ಅಭಿಪ್ರಾಯಗಳನ್ನು ಒಪ್ಪಲೇಬೇಕೆಂದೇನೂ ಇಲ್ಲ. ಆದರೆ ಅವರು ಈ ಸರ್ವರ ಪರಿಶೀಲನೆಗೆ ಸೂಚನೆಯನ್ನು ಒಪ್ಪಿಸಿದಾಗ ಮಾಡಿದ ಭಾಷಣಕ್ಕಾಗಿ ಪ್ರಶಂಸೆ ಮಾಡದಿರುವುದು ಸಾಧ್ಯವಿಲ್ಲ....

* * * *

** **ಮಿ॥ ಜೆಡ್.ಹೆಚ್. ಲ್ಯಾರಿ : .........** ಅವಕಾಶಗಳ ಮೌಲ್ಯವನ್ನು ಅಂದಾಜು ಮಾಡುವಾಗ ನಾನು ಎರಡು ವಿಷಯಗಳನ್ನು ಮನಸ್ಸಿನಲ್ಲಿ ಇರಿಸಿಕೊಳ್ಳುವುದು ಅಗತ್ಯ. ಮೊದಲನೆಯದಾಗಿ ನಿರ್ಣಯದ ಸೂಚಕರು, ಅಂದರೆ ಸನ್ಮಾನ್ಯ ಡಾ॥ ಅಂಬೇಡ್ಕರ್ ಅವರು ಒಪ್ಪಿಕೊಂಡಿರುವ ಕೆಲವು ಅಂಶಗಳು.

** ಅದೇ, ಪುಟ ೨೮೬
+ ಅದೇ ಪುಟ ೨೯೧
* ಅದೇ ನವೆಂಬರ್ ೮, ೧೯೪೮, ಪುಟ ೨೯೫
** ಅದೇ ಪುಟ ೨೯೮

ಎರಡನೆಯದಾಗಿ, ಸ್ವಾತಂತ್ರ್ಯ ಬಂದ ಮೇಲೆ ಕಳೆದ ಹದಿನೈದು ತಿಂಗಳಲ್ಲಿ ಪ್ರಜಾಪ್ರಭುತ್ವದ ಕಾರ್ಯನೀತಿಯನ್ನು ಕುರಿತು ನಮ್ಮ ಅನುಭವ. ಕರಡು ಸಂವಿಧಾನದ ಆಧಾರಗಳಾದ ನಿರ್ಣಯಗಳನ್ನು ಸದನವು ಅಂಗೀಕರಿಸಿದಾಗ ನಮಗೆ ಆ ಅನುಭವ ಇರಲಿಲ್ಲ. ಆದರೆ ಈಗ ಇದೆ. ಮಾನ್ಯ ಸೂಚಕರು ಒಪ್ಪಿಕೊಂಡ ಮೊದಲನೆಯ ವಿಚಾರ, ಅವರದೇ ಮಾತುಗಳನ್ನು ಬಳಸುತ್ತೇನೆ: 'ಭಾರತದಲ್ಲಿ ಪ್ರಜಾಪ್ರಭುತ್ವವು ಮೂಲತಃ ಪ್ರಜಾಪ್ರಭುತ್ವೀಯವಲ್ಲದ ಮಣ್ಣಿನ ಮೇಲಿನ ಹರಡಿಕೆಯಾಗಿದೆ........." "ಆಡಳಿತ ರೂಪಗಳನ್ನು ವಿಧಿಸುವ ಕೆಲಸವನ್ನು ಶಾಸನ ಸಭೆಗಳಿಗೆ ಬಿಟ್ಟು ಅದನ್ನು ನಂಬುವುದು ಬುದ್ಧಿವಂತಿಕೆಯಲ್ಲ". ಸ್ಥೂಲವಾಗಿ ಅವರು ಹೇಳಿದ ಮಾತುಗಳು ಸರಿ.........

* * * *

*** **ಮಿ ಹುಸೇನ್ ಇಮಾಂ :** ......... ಕರಡು ರಚನಾ ಸಮಿತಿಯ ಅಧ್ಯಕ್ಷರ ಪರಿಸ್ಥಿತಿ ಯಾರೂ ಹೊಟ್ಟೆಕಿಚ್ಚು ಪಡಬಾರದಂಥದ್ದು. ಸೋವಿಯತ್ ಸಂವಿಧಾನವನ್ನು ಏಕೆ ನಕಲು ಮಾಡಿಲ್ಲ ಎಂದು ಎಡರಂಗದವರು ಟೀಕಿಸುತ್ತಾರೆ; ಗ್ರಾಮ ಪಂಚಾಯಿತಿಗಳನ್ನು ಮೂಲ ಘಟಕವನ್ನಾಗಿ ಬಿಟ್ಟುಕೊಟ್ಟದುದಕ್ಕೆ ಬಲಪಕ್ಷಗಳವರು ಆಕ್ಷೇಪಿಸುತ್ತಾರೆ. ನಮ್ಮ ಕೆಲವು ಮಿತ್ರರ ಮನಸ್ಸಿನಲ್ಲಿ ಗೊಂದಲವಿರುವಂತೆ ತೋರುತ್ತದೆ. ಭಾರತೀಯರು ಯಾವ ಯಾವ ಬಗೆಯ ಕಷ್ಟಗಳಿಗೊಳಗಾಗಿದ್ದಾರೋ ಅವೆಲ್ಲಕ್ಕೂ ಸಂವಿಧಾನವು ಪರಿಹಾರ ಕೊಡಬೇಕೆಂದು ಭಾವಿಸುತ್ತಾರೆ. ಆಹಾರವನ್ನಾಗಲಿ, ಬಟ್ಟೆಬರೆಯನ್ನಾಗಲೀ ಒದಗಿಸುವುದು ಸಂವಿಧಾನದ ಕೆಲಸವಲ್ಲ. ಗೌರವಾನ್ವಿತ ಸದಸ್ಯರೊಬ್ಬರು ಆ ಉದ್ದೇಶಕ್ಕಾಗಿ ಇಲ್ಲಿ ಯಾವ ಅವಕಾಶವನ್ನು ಮಾಡಿಲ್ಲ ಎಂದು ವಿಷಾದಿಸಿದ್ದಾರೆ. ನನ್ನ ನಮ್ರ ಅಭಿಪ್ರಾಯದಲ್ಲಿ ಸಂವಿಧಾನವು ದೇಶದ ಯಾವ ಅಗತ್ಯಗಳಿಗೆ ಅದನ್ನು ಅನ್ವಯಿಸಲಾಗುತ್ತದೆಯೋ ಅವುಗಳನ್ನು ಆಧರಿಸಿರುತ್ತದೆ. ಈ ಸಂವಿಧಾನವು ನಮ್ಮವೇ ವಿಶಿಷ್ಟ ಪರಿಸ್ಥಿತಿಗಳಿಗೆ ಅಗತ್ಯವಾದ ಮೂಲಾಂಶಗಳನ್ನು ಒದಗಿಸುತ್ತದೆಯೆ ಎಂಬುದನ್ನು ಕಾದು ನೋಡಬೇಕಾಗಿದೆ.

* * * *

* **ಬೇಗಂ ನವಾಜ್ ರಸೂಲ್** (ಯು.ಪಿ. ಮುಸ್ಲಿಂ): ಮಾನ್ಯರೆ, ಗೌರವಾನ್ವಿತ ಡಾ॥ ಅಂಬೇಡ್ಕರ್ ಅವರನ್ನು ತಿಳಿಯಾದ ಬೋಧಪ್ರದವಾದ ರೀತಿಯಲ್ಲಿ ಕರಡು ಸಂವಿಧಾನವನ್ನು ಪ್ರತಿಪಾದಿಸಿದುದಕ್ಕಾಗಿ ನಾನು ಅಭಿನಂದಿಸುತ್ತೇನೆ. ಅವರೂ ಕರಡು ರಚನಾ ಸಮಿತಿಯ ಸದಸ್ಯರೂ ಮಾಡಿರುವುದು ಸಾಮಾನ್ಯವಾದ ಕೆಲಸವಲ್ಲ. ನಮ್ಮ ಹೃತ್ಪೂರ್ವಕ ವಂದನೆಗಳು ಅವರಿಗೆ ಸಲ್ಲಬೇಕು.

ಸಂವಿಧಾನವನ್ನು ರಚಿಸುವ ಮಹತ್ಕಾರ್ಯದಲ್ಲಿ ಸೇರಿಕೊಳ್ಳುವ ಸದವಕಾಶವು ನನಗೆ ದೊರೆತದ್ದು ತುಂಬಾ ಸಂತೋಷಕರವಾಗಿದೆ. ಸಂದರ್ಭದ ಪಾವಿತ್ರ್ಯದ ಅರಿವು ನನಗಿದೆ. ಎರಡು ಶತಮಾನಗಳ ದಾಸ್ಯದ ನಂತರ ಪರಾಧೀನತೆಯ ಕತ್ತಲಿನಿಂದ ಸ್ವಾತಂತ್ರ್ಯದ ಬೆಳಕಿಗೆ ಭಾರತವು ಕಾಲಿಟ್ಟಿದೆ. ಇಂದು ಈ ಐತಿಹಾಸಿಕ ಸಂದರ್ಭದಲ್ಲಿ ಸ್ವತಂತ್ರ ಭಾರತಕ್ಕೆ ಒಂದು ಸಂವಿಧಾನವನ್ನು ರಚಿಸುವುದಕ್ಕಾಗಿ ನಾವಿಲ್ಲಿ ಸೇರಿದ್ದೇವೆ. ಅದು ನಮ್ಮ ಭವಿಷ್ಯತ್ತಿಗೆ ಒಂದು ರೂಪವನ್ನು ಕೊಟ್ಟು ಈ ವಿಶಾಲ ಉಪಖಂಡದಲ್ಲಿ ಬದುಕುತ್ತಿರುವ ಮೂವತ್ತು ಕೋಟಿ (ಮುನ್ನೂರು ಮಿಲಿಯನ್) ಜನರ ಸಾಮೂಹಿಕ, ರಾಜಕೀಯ ಮತ್ತು ಆರ್ಥಿಕ ಸ್ಥಾನಮಾನವನ್ನು ರೂಪಿಸುತ್ತದೆ. ಆದ್ದರಿಂದ ನಮ್ಮ ಜವಾಬ್ದಾರಿಗಳೇನೆಂದು ನಾವು ಚೆನ್ನಾಗಿ

---

*** ಅದೇ ಪುಟ ೩೦೨

* ಸಿ.ಎ.ಡಿ. ಸಂಪುಟ ೭, ನವೆಂಬರ್ ೮, ೧೯೪೮, ಪುಟ ೩೦೫

ತಿಳಿದುಕೊಂಡಿರಬೇಕು. ಇಲ್ಲಿ ಬದುಕುತ್ತಿರುವ ಜನಕೋಟಿಯ ಅಗತ್ಯಗಳು, ಬೇಡಿಕೆಗಳು, ಸಂಸ್ಕೃತಿ ಮತ್ತು ಬುದ್ಧಿಶಕ್ತಿಗಳಿಗೆ ಅತ್ಯುತ್ತಮವಾಗಿ ಹೊಂದಿಕೆಯಾಗುವಂತಹ ಒಂದು ವ್ಯವಸ್ಥೆಯನ್ನು ಅತ್ಯುತ್ತಮ ರೀತಿಯಲ್ಲಿ ರೂಪಿಸುವುದು ಹೇಗೆ ಎಂಬುದನ್ನು ತಿಳಿದುಕೊಂಡು ಕಾರ್ಯನಿರತರಾಗಿರಬೇಕು......

............. ಗ್ರಾಮಾಡಳಿತವನ್ನು ಕುರಿತು ಡಾ॥ ಅಂಬೇಡ್ಕರ್ ಅವರ ಅಭಿಪ್ರಾಯವನ್ನು ಕುರಿತು ಬೇಕಾದಷ್ಟು ಟೀಕೆಗಳು ಬಂದಿವೆ. ಮಾನ್ಯರೇ, ನಾನು ಅಂಬೇಡ್ಕರ್ ಅವರ ನಿಲುವನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಆಧುನಿಕ ವಿಚಾರಧಾರೆ ಪ್ರಜೆಗಳ ಹಕ್ಕಿನ ಪರವಾಗಿದೆಯೇ ಹೊರತು ಯಾವುದೇ ಸಾಂಘಿಕ ವ್ಯವಸ್ಥೆಯ ಕಡೆಗಲ್ಲ. ಗ್ರಾಮಪಂಚಾಯಿತಿಗಳೂ ನಿರಂಕುಶವಾಗಬಹುದು............

ಮಾನ್ಯರೆ, ಲಿಂಗಕಾರಣವಾಗಿ ತಾರತಮ್ಯವನ್ನು ಮಾಡಲಾಗುವುದಿಲ್ಲ ಎಂಬುದರಿಂದ, ಮಹಿಳೆಯಾಗಿ ನನಗೆ ಸಂತೋಷವಾಗಿದೆ. ಕರಡು ಸಂವಿಧಾನದಲ್ಲಿ ಅದಕ್ಕೆ ತಕ್ಕ ಅವಕಾಶಮಾಡಿರುವುದು ಅತ್ಯಂತ ಸೂಕ್ತವಾಗಿದೆ. ಮಹಿಳೆಯರು ಸಮಾನ ಅವಕಾಶಗಳನ್ನು ಎದುರು ನೋಡಬಹುದು.

* * * *

* **ಡಾ॥ ಮನೋಮೋಹನ್ ದಾಸ್** (ಪಶ್ಚಿಮ ಬಂಗಾಳ : ಸಾಮಾನ್ಯ): ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಸನ್ಮಾನ್ಯ ಕಾನೂನು ಸಚಿವರೂ, ಕರಡು ರಚನಾ ಸಮಿತಿಯ ಅಧ್ಯಕ್ಷರೂ ಆದ ಡಾ॥ ಅಂಬೇಡ್ಕರ್ ಅವರು ಕರಡು ಸಂವಿಧಾನವನ್ನು ಮಂಡಿಸಿ ಈಗ ಕೆಲವು ದಿನಗಳಾದವು. ಈ ಕೆಲವು ದಿನಗಳಲ್ಲಿ ಈ ಸದನದ ಅನೇಕ ಸದಸ್ಯರು ಅದನ್ನು ಬಹುವಾಗಿ ಟೀಕಿಸಿದ್ದಾರೆ. ಕರಡು ಸಂವಿಧಾನವನ್ನು ಅಂಗೀಕರಿಸಲು ಈ ಸದನಕ್ಕಿರುವ ಅರ್ಹತೆ ಮತ್ತು ಅಧಿಕಾರಗಳನ್ನು ಪ್ರಶ್ನಿಸಿರುವ ಕೆಲವು ಸದಸ್ಯರನ್ನು ಹೊರತುಪಡಿಸಿದರೆ, ಮಿಕ್ಕವರದು ಏಕಾಭಿಪ್ರಾಯದ ತೀರ್ಪು. ಕೆಲವು ಉಪವಾಕ್ಯಗಳಲ್ಲಿ ಮತ್ತು ಪ್ರಕರಣಗಳಲ್ಲಿ ಕೆಲವು ತಿದ್ದಾಣಿಕೆಗಳು, ಕೂಡು–ಕಳೆಯುವಿಕೆಗಳಿಂದ ಅವರು ಕರಡು ಸಂವಿಧಾನವನ್ನು ಅಂಗೀಕರಿಸಿದ್ದಾರೆ. ಅದು ಪ್ರಾರಂಭಕ್ಕೆ ತಕ್ಕುದಾದ ಕಾರ್ಯಸಾಧ್ಯವಾದ ಸಂವಿಧಾನವೆಂದು ಪರಿಗಣಿಸಿದ್ದಾರೆ. ಸಂವಿಧಾನದಲ್ಲಿ ಮತ್ತೆ ಮತ್ತೆ ಭರವಸೆ ಕೊಡುವ ಒಂದು ಅಂಶ ಏಕ ಪೌರತ್ವ, ಸಮಿತಿಯ ಅಧ್ಯಕ್ಷರು ಹೇಳಿದಂತೆ, ಅಮೆರಿಕದ ಸಂವಿಧಾನದಂತಲ್ಲದೆ, ಕರಡು ಸಂವಿಧಾನವು ಏಕ ಪೌರತ್ವವನ್ನು, ಭಾರತದ ಪೌರತ್ವವನ್ನು ನೀಡಿದೆ. ಪ್ರಾಂತೀಯತೆಯ ಈ ದಿನಗಳಲ್ಲಿ, ಪಕ್ಕದ ಪ್ರಾಂತಗಳ ಬೆಲೆ ಕೊಟ್ಟು ತಾನು ಬದುಕಬೇಕೆಂದು ಪ್ರತಿಯೊಂದು ಪ್ರಾಂತವೂ ಬಯಸುತ್ತಿರುವಾಗ ನಮ್ಮ ನೆರೆಯ ಪ್ರಾಂತಗಳ ಸಹಾನುಭೂತಿ ಮತ್ತು ಸದ್ಭಾವನೆಗಳನ್ನು ನಾವು ಕಳೆದುಕೊಂಡಿರುವಾಗ, ಇದು ನಿಜವಾಗಿಯೂ ನೆಮ್ಮದಿ ತರುವ ವಿಚಾರವಾಗಿದೆ. ಪಶ್ಚಿಮ ಬಂಗಾಳದಿಂದ ಬಂದ ಸದಸ್ಯನಾಗಿ ನನಗೆ ಇದರಿಂದ ತುಂಬಾ ಸಂತೋಷ. ಏಕೆಂದರೆ, ಈ ಸಂವಿಧಾನವು ಅಂಗೀಕೃತವಾಗಿ ಏಕ ಪೌರತ್ವದ ಈ ಉಪವಾಕ್ಯವು, ಭಾರತಾದ್ಯಂತ ಸಮಾನ ಹಕ್ಕುಗಳು ಮತ್ತು ಸೌಲಭ್ಯಗಳೊಂದಿಗೆ ಜಾರಿಗೆ ಬಂದಾಗ, ನಮ್ಮ ನೆರೆಯ ಪ್ರಾಂತಗಳ ಬಾಗಿಲುಗಳು ನಮಗಾಗಿ ತೆರೆಯುತ್ತವೆ. ಪೂರ್ವ ಪಾಕಿಸ್ತಾನದ ನಮ್ಮ ದುರದೃಷ್ಟಶಾಲೀ ಮಿತ್ರರು ನಮ್ಮ ನೆರೆಯ ಪ್ರಾಂತಗಳಲ್ಲಿ ಉಸಿರಾಡಲು ಅವಕಾಶ ಪಡೆಯುತ್ತಾರೆ.

* * * *

** **ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ** (ಮದರಾಸು : ಸಾಮಾನ್ಯ) : ಮಾನ್ಯ ಉಪಾಧ್ಯಕ್ಷರೇ,

---

* ಅದೇ ಪುಟ ೩೦೭

\+ ಸಿ.ಎ.ಡಿ. ಸಂಪುಟ ೭, ನವೆಂಬರ್ ೮, ೧೯೪೮, ಪುಟ ೩೦೮

ಈ ಗೌರವಯುತ ಸದನದಲ್ಲಾಗಲೀ, ಹೊರಗಾಗಲೀ ಯಾರೊಬ್ಬರೂ, ಈ ಸದನದ ಅನುಮೋದನೆಗಾಗಿ ಕರಡು ಸಂವಿಧಾನವನ್ನು ಮಂಡಿಸಿರುವ ಕರಡು ರಚನಾ ಸಮಿತಿಯ ಪ್ರಯತ್ನಗಳು ಮತ್ತು ಸೇವೆಗಳನ್ನು ಕಡೆಗಣಿಸುವಂತಿಲ್ಲ. ಇಂದು ಜಗತ್ತಿನೆಲ್ಲೆಡೆ ಲಭ್ಯವಿರುವ ಸಂವಿಧಾನಗಳನ್ನು ಅರಗಿಸಿಕೊಂಡು, ಈ ಉಪಖಂಡದ ಪುರೋಭಿವೃದ್ಧಿಗೆ ಅಗತ್ಯವಾಗುವಂಥದು ಅವುಗಳಲ್ಲಿ ಏನಾದರೂ ಇದ್ದರೆ ಅದನ್ನು ಆರಿಸಿಕೊಂಡಿರುವುದನ್ನು ನೋಡಿ ಮುಂದಿನ ಪೀಳಿಗೆಯು ತುಂಬಾ ಹೆಮ್ಮೆಪಡುತ್ತದೆ.........

ಈ ಕೆಲವು ಮಾತುಗಳಿಂದ ಕರಡು ರಚನಾ ಸಮಿತಿಯ ಅಧ್ಯಕ್ಷರನ್ನು, ಸದಸ್ಯರನ್ನು ಈ ಸಭೆಗೆ ಕರಡು ಸಂವಿಧಾನವನ್ನು ನೀಡಿ ಅಪಾರವಾದ ಸೇವೆ ಸಲ್ಲಿಸಿರುವುದಕ್ಕಾಗಿ ಅಭಿನಂದಿಸುತ್ತೇನೆ. ಈ ಸೂಚನೆಯನ್ನು ಸದನವು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

* * * *

* **ಶ್ರೀಮತಿ ದಾಕ್ಷಾಯಿಣಿ ವೇಲಾಯುಧನ್** (ಮದರಾಸು : ಸಾಮಾನ್ಯ): ಮಾನ್ಯ ಉಪಾಧ್ಯಕ್ಷರೇ, ಸಂವಿಧಾನದ ಕರಡು ಈಗ ಸಾಮಾನ್ಯ ಚರ್ಚೆಗಾಗಿ ನಮ್ಮ ಮುಂದಿದೆ. ಅದನ್ನು ಕುರಿತು ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅನುಮತಿಯನ್ನು ಕೋರುತ್ತೇನೆ. ಭಾರತದ ನೂತನ ರಾಜ್ಯಾಡಳಿತದ ಸಾಮಾನ್ಯ ವ್ಯವಸ್ಥೆಯ ವೃತ್ತಿಯಲ್ಲಿ ದಕ್ಷರಾದ ಅಧ್ಯಕ್ಷರೂ, ಕರಡು ರಚನಾ ಸಮಿತಿಯ ಸದಸ್ಯರೂ ತಮ್ಮ ಕರ್ತವ್ಯಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಒಂದು ವೇಳೆ ಅವರು ಇಷ್ಟಪಟ್ಟಿದ್ದರೂ ಆಡಳಿತದ ಹಸ್ತಾಂತರವು ಯಾವುದರ ಪ್ರಕಾರ ನಡೆಯಿತೋ ಆ ಸ್ಥೂಲ ತತ್ವಗಳ ವ್ಯಾಪ್ತಿಯಿಂದಾಚೆಗೆ ಹೋಗಲು ಅವರಿಗೆ ಸಾಧ್ಯವಿರಲಿಲ್ಲ ಎಂದು ನನಗನ್ನಿಸುತ್ತದೆ. ಆದ್ದರಿಂದ ಅವರು ಮಾಡಿದ ಟೀಕೆಗಳೆಲ್ಲವೂ ಇಡಿಯಾಗಿ ಅನ್ಯಾಯವಾದವು, ಸೂಕ್ತವಲ್ಲದವು. ಆಕ್ಷೇಪಣೆಯೇನಾದರೂ ಇದ್ದರೆ ಅದು ಈಗ ಇಲ್ಲಿ ಕುಳಿತಿರುವ ನಮಗೆ ಸಂವಿಧಾನವನ್ನು ರಚಿಸಿಕೊಡಬೇಕೆಂದು ಕೋಟ್ಯಾಂತರ ಜನರು ಜವಾಬ್ದಾರಿ ಹೊರಿಸಿ ಕಳುಹಿಸಿ ಕೊಟ್ಟ ನಮ್ಮ ಕೆಲವರಿಗೆ ಅನ್ವಯವಾಗಬೇಕು. ಅವರು ಸ್ವಾತಂತ್ರ್ಯಕ್ಕಾಗಿ ಅಪಾರವಾಗಿ ಕಷ್ಟಪಟ್ಟು ನಮ್ಮನ್ನು ಈ ಸಭೆಗೆ ಕಳುಹಿಸಿಕೊಡುವಾಗ ಬಹುವಾಗಿ ನಿರೀಕ್ಷೆಯನ್ನು ಇರಿಸಿಕೊಂಡಿದ್ದರು. ಅಂದಮಾತ್ರಕ್ಕೆ ಕರಡು ಸಂವಿಧಾನವನ್ನು ಕುರಿತು ನನ್ನ ಆಕ್ಷೇಪಣೆ ಏನೂ ಇಲ್ಲವೆಂದಲ್ಲ..........

* * * *

** **ಶ್ರೀ ದೇಶಬಂಧು ಗುಪ್ತ** (ದೆಹಲಿ) **:** ಮಾನ್ಯ ಅಧ್ಯಕ್ಷರೆ, ಸದನದ ವಿವಿಧ ಸದಸ್ಯರಿಂದ ಅಭಿನಂದನೆಗಳನ್ನು ಸ್ವೀಕರಿಸಿರುವ, ಕರಡು ರಚನಾ ಸಮಿತಿಯ ಅಧ್ಯಕ್ಷರಾದ ಡಾ॥ ಅಂಬೇಡ್ಕರ್ ಅವರನ್ನು ನಾನು ಅಭಿನಂದಿಸಲಾರೆನೆಂದು ಹೇಳಲು ವಿಷಾದಿಸುತ್ತೇನೆ......

............ ನಾನು ಹೇಳಬೇಕಾದುದು ಇಷ್ಟು. ದೆಹಲಿ ಮತ್ತು ಇತರ ಸ್ಥಳಗಳಿಗೆ ಸಂಬಂಧಿಸಿದಂತೆ, ಈ ಕೆಲವು ಸಂಗತಿಗಳನ್ನು ಗಮನಕ್ಕೆ ತಂದುಕೊಳ್ಳಬೇಕು. ದೆಹಲಿ ದೇಶದ ರಾಜಧಾನಿ. ಆದ್ದರಿಂದ ಅದಕ್ಕೆ ಪ್ರತ್ಯೇಕವಾದ ವಿಶೇಷ ಸ್ಥಾನಮಾನ ಇರಬೇಕು. ಈ ವಿಚಾರವಾಗಿ ನಾನು ಲಾಲಾ ದೇಶಬಂಧು ಗುಪ್ತ ಅವರ ಮಾತನ್ನು ಅನುಮೋದಿಸುತ್ತೇನೆ. ಆದರೆ ಆಜ್ಮೀರ್, ಮೇವಾರಾ, ಕೊಡಗು, ಪಂಟೀಪ್ಲೋಡಾ ಮೊದಲಾದ ಸಣ್ಣ ಪ್ರದೇಶಗಳನ್ನು ಪ್ರಾಂತಗಳಲ್ಲಿ ವಿಲೀನಗೊಳಿಸಬೇಕು. ಅವುಗಳನ್ನು ಕೇಂದ್ರಾಡಳಿತ

---

* ಅದೇ, ಪುಟ ೩೧೦

** ಅದೇ, ಪುಟ ೩೧೨–೧೭

ಪ್ರದೇಶಗಳನ್ನಾಗಿ ಮಾಡುವುದರಲ್ಲಿ ಏನೂ ಪ್ರಯೋಜನವಿಲ್ಲ. ಡಾಕ್ಟರ್ ಸಾಹಿಬ್ ಅವರಲ್ಲಿ ಇದಿಷ್ಟನ್ನು ಮಾತ್ರ ಹೇಳಲು ಬಯಸುತ್ತೇನೆ. ಅವರು ದೊಡ್ಡ ವಿದ್ವಾಂಸರು, ಅದರಿಂದ ಅವರು ಈ ದೇಶವನ್ನೂ ಮೇಧಾವಿತನದ ದೇಶದಂತೆ ಪರಿಗಣಿಸಬೇಕು. ಈ ಸಂವಿಧಾನದಲ್ಲಿ ಅವರು ಭಾರತದ ಜೀವಕ್ಕೆ ಸೂಕ್ತವಾದ ಸ್ಥಳವನ್ನು ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ......

* * * *

+ **ಗಿಯಾನಿ ಗುರುಮುಖ್ ಸಿಂಗ್ ಮುಸಾಫಿರ್** (ಪೂರ್ವ ಪಂಜಾಬು : ಸಿಖ್) : ಮಾನ್ಯ ಅಧ್ಯಕ್ಷರೆ, ನನ್ನ ಮಾನ್ಯ ಮಿತ್ರರಾದ ಶ್ರೀ ದೇಶಬಂಧು ಗುಪ್ತರಂತೆಯೇ ನಾನೂ ಕೂಡ, ಕರಡು ರಚನಾ ಸಮಿತಿಯ ಅಧ್ಯಕ್ಷರಾದ ಡಾ॥ ಅಂಬೇಡ್ಕರ್ ಅವರು ಅಭಿನಂದನೆಗೆ ಅರ್ಹರಲ್ಲ ಎಂದು ಹೇಳುವುದಿಲ್ಲ. ಹಲವು ಕಾರಣಗಳಿಂದ ಅವರು ಅಭಿನಂದನೀಯರಾಗಿದ್ದಾರೆ. ಈ ಮೊದಲನೆಯ ಸಂವಿಧಾನವನ್ನು ರಚಿಸುವುದರಲ್ಲಿ ಅವರು ಮತ್ತು ಸಮಿತಿ ಪಟ್ಟಿರುವ ಶ್ರಮ ನಿಜವಾಗಿಯೂ ಪ್ರಶಂಸನೀಯವಾದದ್ದು. ಹಾಗಿದ್ದರೂ ಯಾವುದಾದರೂ ತಪ್ಪನ್ನು ಕಂಡುಹಿಡಿದರೆ, ಅವರು ತಮ್ಮ ತಿಳುವಳಿಕೆಗೆ ಅನುಗುಣವಾಗಿ ಅದನ್ನು ತಿಳಿಸುತ್ತಾರೆ........

* * * *

* **ಸನ್ಮಾನ್ಯ ರೆ॥ ಜೆ.ಜೆ.ಎಂ. ನಿಕೋಲ್ಸ್ ರಾಯ್** (ಅಸ್ಸಾಂ : ಸಾಮಾನ್ಯ): ಮಾನ್ಯ ಉಪಾಧ್ಯಕ್ಷರೆ, ಡಾ॥ ಅಂಬೇಡ್ಕರ್ ಅವರಿಗೂ ಕರಡು ರಚನಾ ಸಮಿತಿಯ ಇತರ ಸದಸ್ಯರಿಗೂ ಗೌರವ ಸಲ್ಲಿಸುವುದರಲ್ಲಿ ನನ್ನನ್ನು ತೊಡಗಿಸಿಕೊಳ್ಳುವ ಅವಕಾಶ ದೊರೆತುದಕ್ಕಾಗಿ ಸಂತೋಷಪಡುತ್ತಿದ್ದೇನೆ. ಈ ಕರಡು ಸಂವಿಧಾನವನ್ನು ಹೊರತರಲು ಅವರು ಅಪಾರವಾಗಿ ಶ್ರಮಿಸಿದ್ದಾರೆ. ಅವರೆಲ್ಲರಿಗೂ ನಮ್ಮ ವಂದನೆಗಳು ಸಲ್ಲುತ್ತವೆ....

** ವಿಶೇಷವಾಗಿ, ಅಸ್ಸಾಮಿನ ಬೆಟ್ಟ ಪ್ರದೇಶದ ಜಿಲ್ಲೆಗಳಲ್ಲಿ ಸ್ವಯಮಾಡಳಿತವುಳ್ಳ ಜಿಲ್ಲಾ ಮಂಡಳಿ (District Councils)ಗಳನ್ನು ರಚಿಸಲು ಒಪ್ಪಿಕೊಂಡುದಕ್ಕಾಗಿ ಕರಡು ರಚನಾ ಸಮಿತಿಗೆ ವಂದನೆಗಳನ್ನು ಸಲ್ಲಿಸಬೇಕು. ಅವುಗಳನ್ನು ಆರನೆಯ ಷೆಡ್ಯೂಲಿನಲ್ಲಿ ಸೇರಿಸಿ ಸ್ವಯಮಾಡಳಿತವುಳ್ಳ ಜಿಲ್ಲೆಗಳು ಎಂದು ಕರೆಯಲಾಗಿದೆ.

* * * *

+ **ಮಿ॥ ಮಹಮದ್ ಇಸ್ಮೈಲ್ ಸಾಹಿಬ್** (ಮದರಾಸು : ಮುಸ್ಲಿಂ) : ಮಾನ್ಯ ಉಪಾಧ್ಯಕ್ಷರೆ, ಕರಡು ಸಂವಿಧಾನವನ್ನು ಪರಿಶೀಲನೆಗಾಗಿ ಈ ಸದನಕ್ಕೆ ಒಪ್ಪಿಸಿರುವ ಡಾ॥ ಅಂಬೇಡ್ಕರ್ ಮಾಡಿರುವ ಭಾಷಣ ನಿಜವಾಗಿಯೂ ಉತ್ಕೃಷ್ಟವಾದದ್ದು. ನಿರರ್ಗಳತೆ, ಮನವೊಲಿಕೆ, ಪ್ರಭಾವಕಾರಿತ್ವ ಮತ್ತು ತರ್ಕಬದ್ಧತೆ ಇವುಗಳಲ್ಲಿ ಅದನ್ನು ಬೇರೆ ಯಾವುವೂ ಮೀರಿಸಲಾರದು. ಅವರಿಗೆ ಅಭಿನಂದನೆಗಳು. ಆದರೆ, ಅವರು ಭಾಷಣದಲ್ಲಿ ಹೇಳಿದುದೆಲ್ಲವನ್ನೂ ಒಪ್ಪಿಕೊಳ್ಳಲಾಗಿದೆ ಎಂದು ಅದರ ಅರ್ಥವಲ್ಲ..........

* * * *

++ **ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್** (ಮದರಾಸು : ಸಾಮಾನ್ಯ) : ಮಾನ್ಯರೇ, ಕರಡು

---

+ ಅದೇ, ಪುಟ ೩೨೪

* ಅದೇ, ಪುಟ ೩೨೭

** ಅದೇ, ಪುಟ ೨೪೦

+ ಅದೇ, ಪುಟ ೩೩೦

++ ಸಿ.ಎ.ಡಿ., ಸಂಪುಟ ೭, ನವೆಂಬರ್ ೮, ೧೯೪೮, ಪುಟ ೩೩೪

ಸಂವಿಧಾನವನ್ನು ಕುರಿತು ಕೆಲವು ಮಾತುಗಳನ್ನು ಹೇಳುವುದಕ್ಕೆ ಮುಂಚೆ, ಕರಡು ಸಂವಿಧಾನದ ಮೂಲತತ್ವಗಳನ್ನು ಬಹು ಸಮರ್ಥವಾದ ರೀತಿಯಲ್ಲಿ ವಿವರಿಸಿದುದಕ್ಕಾಗಿ ಡಾ॥ ಅಂಬೇಡ್ಕರ್ ಅವರನ್ನು ಪ್ರಶಂಸಿಸುತ್ತೇನೆ. ಆದರೆ ಭಾರತದ ಗ್ರಾಮ ಸಮುದಾಯಗಳನ್ನು ಸಾರಾಸಗಟಾಗಿ ಅಲಕ್ಷಿಸಿರುವ ಅವರ ಅಭಿಪ್ರಾಯಗಳನ್ನು ನಾನು ಒಪ್ಪಲಾರೆ. ಅಷ್ಟೇ ಅಲ್ಲ, ಭಾರತದಲ್ಲಿ ಪ್ರಜಾಪ್ರಭುತ್ವವು ಮೇಲು ಮೇಲಿನ ಹರಡಿಕೆ ಮಾತ್ರ ಎಂದ ಅವರ ಹೇಳಿಕೆಯನ್ನು ನಾನು ವಿರೋಧಿಸುತ್ತೇನೆ...........

ಕರಡು ಸಂವಿಧಾನವನ್ನು ಕುರಿತು ನನ್ನ ಅಭಿಪ್ರಾಯಗಳನ್ನು ಹೇಳುವುದಕ್ಕೆ ಮುಂಚೆ, ನನ್ನ ಮಿತ್ರರಾದ ಶ್ರೀ ಟಿ.ಟಿ. ಕೃಷ್ಣಮಾಚಾರಿ ಅವರು ಕರಡು ರಚನಾ ಸಮಿತಿಯ ಕಾರ್ಯವನ್ನು ಅದರ ಸದಸ್ಯರ ಪಾತ್ರವನ್ನು ಗಮನದಲ್ಲಿಟ್ಟುಕೊಂಡು ಹೇಳಬೇಕಾದ ಕೆಲವು ಮಾತುಗಳಿವೆ. ಸಮಿತಿಯ ಸದಸ್ಯರಲ್ಲಿ ಒಬ್ಬನಾಗಿ, ಅನಾರೋಗ್ಯವಿದ್ದರೂ ಅದರ ಹಲವು ಸಭೆಗಳಲ್ಲಿ ನಾನು ಸಕ್ರಿಯವಾಗಿ ಭಾಗವಹಿಸಿದ್ದೇನೆ. ಕರಡು ಸಂವಿಧಾನವನ್ನು ಪ್ರಕಟಿಸುವುದಕ್ಕೆ ಮೊದಲು ಸಭೆಗೆ ಹೋಗಲು ಸಾಧ್ಯವಿಲ್ಲದಾಗಲೂ ನನ್ನ ಸಹೋದ್ಯೋಗಿಗಳ ಪರಿಶೀಲನೆಗಾಗಿ ಹಲವು ಟಿಪ್ಪಣಿಗಳನ್ನು, ಸಲಹೆಗಳನ್ನು ಕಳುಹಿಸಿಕೊಟ್ಟಿದ್ದೇನೆ. ಅದು ಪ್ರಕಟವಾದ ಮೇಲೆ, ಆರೋಗ್ಯವು ಸರಿಯಾಗಿರದಿದ್ದುದರಿಂದ ಸಮಿತಿಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಸಾಧ್ಯವಾಗದಾಯಿತು. ಆದ್ದರಿಂದ ಕರಡಿನ ಸುಧಾರಣೆಗೆ ಸೂಚನೆಗಳ ಕೀರ್ತಿ ನನಗೆ ಬರುವುದಿಲ್ಲ.........

* * * *

* ....... ಕರಡು ಸಂವಿಧಾನದ ಸಂಕ್ಷೇಪವಾದ ಸಮೀಕ್ಷೆಯಿಂದ, ಅದು ಪ್ರಜಾಪ್ರಭುತ್ವ ಸರಕಾರದ ಭದ್ರವಾದ ತತ್ವಗಳ ಮೇಲೆ ಆಧಾರಗೊಂಡಿದೆ ಎಂಬುದು ತಿಳಿಯುತ್ತದೆ. ಬೆಳವಣಿಗೆ ಮತ್ತು ವಿಸ್ತಾರಗಳಿಗೆ ಅಗತ್ಯವಾದ ಅಂಶಗಳನ್ನು ಅದು ತನ್ನಲ್ಲಿ ಒಳಗೊಂಡಿದೆ. ಹಾಗಾಗಿ ಅದು ಪ್ರಪಂಚದ ಅತ್ಯಂತ ಮುಂದುವರಿದ ಪ್ರಜಾಪ್ರಭುತ್ವ ಸಂವಿಧಾನಕ್ಕೆ ಸಮನಾಗಿದೆ. ಒಂದು ಸಂವಿಧಾನವು ನಾವು ಅದರಿಂದ ಏನನ್ನು ಅಪೇಕ್ಷಿಸುತ್ತೇವೆ ಎಂಬುದರ ಮೇಲೆ ನಿಲ್ಲುತ್ತದೆ. ಇದರ ಅತ್ಯುತ್ತಮ ನಿದರ್ಶನವನ್ನು ಅಮೆರಿಕದ ಸಂವಿಧಾನದಲ್ಲಿ ನೋಡಬಹುದು. ಬೇರೆ ಬೇರೆ ರಾಜ್ಯಗಳು ಅದನ್ನು ಅಳವಡಿಸಿಕೊಂಡಾಗ ಕನಿಷ್ಠ ಉತ್ಸಾಹದಿಂದ ಸ್ವೀಕರಿಸಲಾಯಿತು. ಆದರೆ ಕಾಲದ ಪರೀಕ್ಷೆಯನ್ನು ದಾಟಿ ಅದು ನಿಂತಿದೆ. ಇತರ ಪ್ರಜಾಪ್ರಭುತ್ವ ಜಗತ್ತು ಮಾದರಿ ಸಂವಿಧಾನವೆಂದು ಪರಿಗಣಿಸಿದೆ.

* * * *

** **ಪಂಡಿತ ಗೋವಿಂದ ಮಾಳವೀಯ** : ಮಾನ್ಯರೆ, ಬೇರೆ ಏನನ್ನಾದರೂ ಹೇಳುವುದಕ್ಕೆ ಮೊದಲು, ನಮಗೂ, ಕರಡು ರಚನಾ ಸಮಿತಿಗೂ, ಅದರ ಮೇಧಾವಿ ಅಧ್ಯಕ್ಷರಾದ ಡಾ॥ ಅಂಬೇಡ್ಕರ್ ಅವರಿಗೂ, ಈ ಅತ್ಯಂತ ಅಮೋಘವಾದ ಕೆಲಸ ಮಾಡಿ ಕರಡು ಸಂವಿಧಾನವನ್ನು ನೀಡಿದುದಕ್ಕಾಗಿ ಹೃತ್ಪೂರ್ವಕ ಅಭಿನಂದನೆಗಳು. ಅವರು ಎದುರಿಸಬೇಕಾಗಿ ಬಂದದ್ದು ಬಹು ಕ್ಲಿಷ್ಟವಾದ ಸಮಸ್ಯೆ. ಅದನ್ನು ಅವರು ಅತ್ಯಂತ ಸಮರ್ಥವಾದ ರೀತಿಯಲ್ಲಿ ನಿರ್ವಹಿಸಿದ್ದಾರೆ. ಅಲ್ಪ ಸ್ವಲ್ಪ ಭಿನ್ನಾಭಿಪ್ರಾಯವನ್ನು ಹೊಂದಿರಬಹುದಾದ ಅನೇಕ ವಿಚಾರಗಳು ಕರಡು ಸಂವಿಧಾನದಲ್ಲಿದೆ. ಎಲ್ಲೇ ಆಗಲಿ ಸಿದ್ಧಪಡಿಸಿದ ಯಾವುದೇ ವಸ್ತು ಹಾಗೆಯೇ ಇರುತ್ತದೆ ............

* * * *

---

* ಅದೇ, ಪುಟ ೩೩೮

** ಸಿ.ಎ.ಡಿ., ಸಂಪುಟ ೭, ನವೆಂಬರ್ ೮, ೧೯೪೮, ಪುಟ ೩೪೦

*** **ಶ್ರೀ ಆರ್ ಶಂಕರ್** (ತಿರುವಾಂಕೂರು) : ಮಾನ್ಯರೆ, ಮೊದಲು, ಕರಡು ಸಂವಿಧಾನವನ್ನು ದಕ್ಷವಾದ ರೀತಿಯಲ್ಲಿ ರಚಿಸಿಕೊಟ್ಟಿರುವ ಸಮಿತಿಯ ಸದಸ್ಯರನ್ನು ಅಭಿನಂದಿಸುತ್ತೇನೆ. ವಿಶೇಷವಾಗಿ ಡಾ॥ ಅಂಬೇಡ್ಕರ್ ಅವರು ಕರಡು ಸಂವಿಧಾನದ ಮೂಲತತ್ವಗಳನ್ನು ನಿರರ್ಗಳವಾಗಿ, ಸಮರ್ಥವಾಗಿ ತಮ್ಮ ಭಾಷಣದಲ್ಲಿ ನಿರೂಪಿಸಿದ್ದಾರೆ. ಇಲ್ಲಿ ಕರಡು ಸಂವಿಧಾನದ ವಿವರಗಳಿಗೆ ನಾನು ಕೈ ಹಾಕುವುದಿಲ್ಲ. ಆದರೆ ಒಂದೋ ಎರಡೋ ವಿಷಯಗಳನ್ನು ಪ್ರಸ್ತಾಪಿಸುವಷ್ಟಕ್ಕೆ ತೃಪ್ತನಾಗುತ್ತೇನೆ. ಕರಡು ಸಂವಿಧಾನದ ಅತ್ಯಂತ ಮುಖ್ಯವಾದ ಅಂಶಗಳು, ಪ್ರಬಲವಾದ ಕೇಂದ್ರ ಹಾಗೂ ಸ್ವಲ್ಪ ದುರ್ಬಲವಾದ ಆದರೆ ಏಕರೂಪತೆಯುಳ್ಳ ಘಟಕಗಳು. ರಾಜ್ಯದ ಪ್ರತಿನಿಧಿಗಳು, ಪ್ರಾಂತದ ಪ್ರತಿನಿಧಿಗಳು ಇದೇ ಮನೋಧರ್ಮವನ್ನು ತಳೆದು ಕಾಲಕ್ರಮದಲ್ಲಿ ರಾಜ್ಯಗಳು ಹಾಗೂ ಪ್ರಾಂತಗಳಲ್ಲಿ ಯಾವ ಭೇದವೂ ಇಲ್ಲದೆ ಒಕ್ಕೂಟದ ಏಕರೂಪವಾದ ಘಟಕಗಳನ್ನಾಗಿ ಸ್ಥಾಪಿಸಬೇಕು ಎಂದು ಅವರು ಕಳಕಳಿಯಿಂದ ಮನವಿ ಮಾಡಿದ್ದಾರೆ..........

* * * *

+ **ಶ್ರೀ ಎಂ. ಅನಂತಶಯನಂ ಅಯ್ಯಂಗಾರ್** (ಮದರಾಸು : ಸಾಮಾನ್ಯ) : ಮಾನ್ಯರೆ, ಕರಡು ರಚನಾ ಸಮಿತಿಯು ಸಿದ್ಧಪಡಿಸಿರುವ ಕರಡು ಸಂವಿಧಾನವನ್ನು ಕುರಿತು ಮೂಲಭೂತ ಪ್ರಾಮುಖ್ಯ ಆಕ್ಷೇಪಣೆಗಳನ್ನು ಮಾಡಲಾಗಿದೆ. ಈ ಸಂವಿಧಾನದಲ್ಲಿ ನಮ್ಮ ಪ್ರಾಚೀನ ಸಂಸ್ಕೃತಿಯನ್ನಾಗಲೀ, ನಮ್ಮ ಸಂಪ್ರದಾಯಗಳನ್ನಾಗಲಿ ಪ್ರತಿಬಿಂಬಿಸುವ ಏನೊಂದೂ ಇಲ್ಲ ನಿಜ. ಪಶ್ಚಿಮದ ಕೆಲವು ಹಳೆಯ ಸಂವಿಧಾನಗಳಿಂದಾರಿಸಿಕೊಂಡು ತೇಪೆ ಕೆಲಸ ಮಾಡಿರುವ ಕೃತಿ ಎನ್ನುವುದೂ ಹೌದು. ಅಲ್ಲೂ ಪಶ್ಚಿಮದ ಆಧುನಿಕ ಸಂವಿಧಾನಗಳನ್ನು ಪರಿಗಣಿಸಿಲ್ಲ. ಜೊತೆಗೆ ೧೯೩೫ರ ಭಾರತ ಸರಕಾರದ ಶಾಸನದ ಪ್ರತಿಕೃತಿಯಾಗಿದೆ. ಇದಕ್ಕೆ ಡಾ॥ ಅಂಬೇಡ್ಕರ್ ಹೊಣೆಗಾರರಲ್ಲ. ಸಂವಿಧಾನದ ಈ ಸ್ವರೂಪಕ್ಕೆ ಹೊಣೆಗಾರರು ನಮ್ಮ ಪ್ರಾಚೀನ ಸಂಸ್ಕೃತಿಯ ನೆನಪುಗಳು ಮರುಕಳಿಸುವಂತೆ ಮಾಡುವ ಹೊಸ ಲಕ್ಷಣವೊಂದನ್ನು ಅದಕ್ಕೆ ನೀಡಬೇಕೆಂದು ನಾವು ಯೋಚಿಸಿಲ್ಲ. ಇದು ಅಂಬೇಡ್ಕರರ ತಪ್ಪಲ್ಲ, ನಮ್ಮ ತಪ್ಪು.......

* * * *

* **ಶ್ರೀ ರೋಹಿಣಿ ಕುಮಾರ್ ಚೌಧುರಿ** (ಅಸ್ಸಾಂ : ಸಾಮಾನ್ಯ): ಮಾನ್ಯರೆ, ಈ ಮಹತ್ವದ ಪ್ರಾಮುಖ್ಯವುಳ್ಳ ಈ ಚರ್ಚೆಯಲ್ಲಿ ಭಾಗವಹಿಸಲು ನನಗೆ ಈ ಅವಕಾಶ ಕೊಟ್ಟಿದುದಕ್ಕಾಗಿ ನಾನು ತಮಗೆ ತುಂಬಾ ಕೃತಜ್ಞನಾಗಿದ್ದೇನೆ. ಮುಂದುವರಿಸುವುದಕ್ಕಿಂತ ಮೊದಲು ಕರಡು ರಚನಾ ಸಮಿತಿಯ ಸದಸ್ಯರಿಗೆ, ಅದರ ಅತ್ಯಂತ ಅರ್ಹ ಅಧ್ಯಕ್ಷರಿಗೆ ಮತ್ತು ಎಲ್ಲರಿಗಿಂತ ಮೇಲಾಗಿ ನಮ್ಮ ಸಾಂವಿಧಾನಿಕ ಸಲಹಾಕಾರರಿಗೆ ನನ್ನ ಪಾಲಿನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬಡ ಅಸ್ಸಾಂ ಪ್ರಾಂತಕ್ಕೆ ತಮ್ಮ ತಾರುಣ್ಯದ ದಿನಗಳಲ್ಲಿ ಅವರು ನೀಡಿದ ಸೇವೆಯನ್ನು ಹೆಚ್ಚು ಪ್ರೀತಿ ಮತ್ತು ಕೃತಜ್ಞತೆಗಳಿಂದ ಇಂದಿಗೂ ಸ್ಮರಿಸಲಾಗುತ್ತಿದೆ........

* * * *

++ **ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದರಾಸು : ಸಾಮಾನ್ಯ) : ಮಾನ್ಯ ಉಪಾಧ್ಯಕ್ಷರೆ, ಕರಡು ಸಂವಿಧಾನವನ್ನು ಕುರಿತ ಬೋಧಪ್ರದವೂ ಉಜ್ವಲವೂ ಆದ ಪ್ರತಿಪಾದನೆಗಾಗಿ ಡಾ॥ ಅಂಬೇಡ್ಕರ್ ಅವರು

*** ಅದೇ, ನವೆಂಬರ್ ೯, ೧೯೪೮, ಪುಟ ೩೪೫

\+ ಅದೇ ಪುಟ ೩೫೨

* ಸಿ.ಎ.ಡಿ. ಸಂಪುಟ ೭, ನವೆಂಬರ್ ೮, ೧೯೪೮, ಪುಟ ೩೫೪

++ ಅದೇ ಪುಟ ೩೨೫

ಹೃತ್ಪೂರ್ವಕ ಅಭಿನಂದನೆಗೆ ಅರ್ಹರಾಗಿದ್ದಾರೆ. ಕರಡಿನಲ್ಲಿರುವ ಅವಕಾಶಗಳಿಗಾಗಿ ಅವರಿಗೆ ಅಭಿನಂದನೆ ಸಲ್ಲಬೇಕಾಗಿಲ್ಲ. ಏಕೆಂದರೆ, ಅದು ಅವರದಲ್ಲ. ಮಾನ್ಯ ಸದಸ್ಯರಿಗೆ ನೆನಪಿರಬಹುದು, ಕರಡು ಸಂವಿಧಾನದ ಬಹುತೇಕ ಉಪವಾಕ್ಯಗಳನ್ನು ಈ ಸದನದಲ್ಲಿ ಚರ್ಚಿಸಿ, ನಿವಾರಿಸಿ, ನಿರ್ಧರಿಸಲಾಗಿದೆ. ಎಲ್ಲೋ ಕೆಲವೇ ಕೆಲವು ಅವಕಾಶಗಳನ್ನು ಮಾತ್ರ ಕರಡು ರಚನಾ ಸಮಿತಿಯು ಸೇರಿಸಲು ಬಿಡಲಾಯಿತು. ಆದರೂ ಅವುಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿರುವುದಕ್ಕಾಗಿ ಅವರ ಪರಿಶ್ರಮಕ್ಕೆ ವಂದನೆಗಳು ಸಲ್ಲಬೇಕು.......

* * * *

* **ಶ್ರೀ ವಿಶ್ವಂಭರ ದಯಾಳ ತ್ರಿಪಾಠಿ** (ಯು.ಪಿ. ಸಾಮಾನ್ಯ) : ಮಾನ್ಯರೆ, ವಿಷಯಕ್ಕೆ ನೇರವಾಗಿ ಬರುತ್ತೇನೆ. ಹೆಚ್ಚು ಕಡಮೆ ಎಲ್ಲಾ ಭಾಷಣಕಾರರೂ, ಕರಡು ರಚನಾ ಸಮಿತಿಯ ಸದಸ್ಯರನ್ನೂ, ಅದರ ಅಧ್ಯಕ್ಷರನ್ನೂ, ಅವರ ಪರಿಶ್ರಮಕ್ಕಾಗಿ ಅಭಿನಂದಿಸಿದ್ದಾರೆ, ಸಂವಿಧಾನದ ಹೆಗ್ಗಳಿಕೆಯನ್ನು ಕೊಂಡಾಡಿದ್ದಾರೆ. ಆದರೆ ನಾನು ಈ ಔಪಚಾರಿಕ ಮಾರ್ಗವನ್ನು ಹಿಡಿಯುವುದಿಲ್ಲ. ಅವರು ತುಂಬಾ ಕಷ್ಟಪಟ್ಟು ಈ ಸಂವಿಧಾನದ ಸಭೆಯಲ್ಲಿ ನಾವು ಹಾಕಿ ಕೊಟ್ಟ ಮುಖ್ಯ ತತ್ವಗಳ ಆಧಾರದ ಮೇಲೆ ಸಂವಿಧಾನದ ಒಂದು ಸಮಗ್ರ ಚಿತ್ರಣವನ್ನು ನಮ್ಮ ಮುಂದಿರಿಸಿದ್ದಾರೆ. ಈ ಕರಡು ಸಂವಿಧಾನದಲ್ಲಿ ಬೇಕಾದಷ್ಟು ಉತ್ತಮಾಂಶಗಳಿವೆ ಎನ್ನುವುದನ್ನು ನಾನು ಬಲ್ಲೆ. ಬೇರೆ ದೇಶಗಳ ಸಂವಿಧಾನಗಳನ್ನು ಆಮೂಲಾಗ್ರವಾಗಿ ಓದಿದ್ದಾರೆ. ನಮ್ಮ ದೇಶದ ಅಗತ್ಯಗಳಿಗೆ ತಕ್ಕಂತೆ ಅಲ್ಲಿರುವುದನ್ನು ಅಳವಡಿಸಿಕೊಂಡಿದ್ದಾರೆ. ಈ ಕರಡು ಸಂವಿಧಾನದ ಮುಖ್ಯವಾದ ಗುಣ ಎಂದರೆ:– ಅದು ಒಂದು 'ಸಾಂಪ್ರದಾಯಿಕ' ಸಂವಿಧಾನವಾಗಿರುವುದು........

* * * *

+ **ಶ್ರೀ ಎಸ್.ವಿ. ಕೃಷ್ಣಮೂರ್ತಿರಾವ್** (ಮೈಸೂರು) : ಮಾನ್ಯ ಉಪಾಧ್ಯಕ್ಷರೆ, ಕರಡು ಸಂವಿಧಾನವನ್ನು ಕುರಿತು ಮಾತನಾಡಲು ನನಗೆ ಅವಕಾಶ ಕೊಟ್ಟಿರುವುದಕ್ಕಾಗಿ ವಂದನೆಗಳು. ಕರಡು ರಚನಾ ಸಮಿತಿ ಹಾಗೂ ಅದರ ಅಧ್ಯಕ್ಷ ಡಾ॥ ಅಂಬೇಡ್ಕರ್ ಅವರನ್ನು ಪ್ರಶಂಸಿಸಿರುವ ವಿವಿಧ ಭಾಷಣಕಾರರೊಂದಿಗೆ ನಾನೂ ಸೇರಿಕೊಳ್ಳುತ್ತೇನೆ.

ಜಗತ್ತಿನ ಹಲವು ಪ್ರಜಾಪ್ರಭುತ್ವೀಯ ಸಂವಿಧಾನಗಳ ಅತ್ಯುತ್ತಮ ಅನುಭವವನ್ನು ಈ ಕರಡು ಸಂವಿಧಾನದಲ್ಲಿ ಸೇರಿಸಲು ಪ್ರಯತ್ನ ನಡೆದಿದೆ. ಯಾವ ಸಂವಿಧಾನವೂ ಪರಿಪೂರ್ಣವಾಗುವುದು ಸಾಧ್ಯವಿಲ್ಲ. ನಮ್ಮ ಸಂವಿಧಾನವೂ ಈ ಸದನದಿಂದ ಒಂದು ರೂಪ ಪಡೆದು ಹೊರಬರಬೇಕಾದರೆ ಅದರಲ್ಲಿ ಕೆಲವು ಬದಲಾವಣೆಗಳಾಗಬೇಕು.........

* * * *

** **ಶ್ರೀ ಎಸ್. ಮಾಧವರಾವ್** (ಒರಿಸ್ಸಾ ರಾಜ್ಯಗಳು): ಮಾನ್ಯ ಉಪಾಧ್ಯಕ್ಷರೆ, ಈ ಚರ್ಚೆಯಲ್ಲಿ ಭಾಗವಹಿಸುವ ಉದ್ದೇಶ ನನಗಿರಲಿಲ್ಲ. ಆದರೆ ಚರ್ಚೆಯಲ್ಲಿ, ಕರಡು ಸಂವಿಧಾನದ ಅವಕಾಶಗಳ ಮೇಲೆ ಮಾತ್ರವಲ್ಲ, ಕರಡು ರಚನಾ ಸಮಿತಿಯು ತಮ್ಮ ಕೆಲಸವನ್ನು ನಿರ್ವಹಿಸಿರುವ ರೀತಿಯ ಮೇಲೆಯೂ ಹಲವು ಆಕ್ಷೇಪಣೆಗಳು ಬಂದವು. ಸಮಿತಿಯು ಹಲವಂಶಗಳನ್ನು ಕೂಡಿಸಿದ, ಕಳೆದ, ಆರೋಪಿತ ದೋಷದ

---

* ಅದೇ, ಪುಟ ೩೬೯

+ ಸಿ.ಎ.ಡಿ. ಸಂಪುಟ ೭, ನವೆಂಬರ್ ೯, ೧೯೪೮, ಪುಟ ೩೮೨

** ಅದೇ ಪುಟ ೩೮೪–೮೫

ಮೇಲೆ ಕೂಡ ಟೀಕೆಗಳು ಎರಗಿದವು. ನಿನ್ನೆ ಭಾಷಣ ಮಾಡಿದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮತ್ತು ಸಮಿತಿಯ ಪರವಾಗಿ ಮುಂದೆ ಮಾತನಾಡಲಿರುವ ಮಿ। ಸಾದುಲ್ಲಾ ಆ ಆಕ್ಷೇಪಣೆಗಳಿಗೆ ಆಧಾರವಾಗಿರುವ ತಪ್ಪಾದ ಭಯಗಳನ್ನು ಹೋಗಲಾಡಿಸಿದ್ದಾರೆ ಅಥವಾ ಹೋಗಲಾಡಿಸುತ್ತಾರೆ. ಸಮಿತಿಯ ಸದಸ್ಯನಾಗಿ, ನಾನು ಸೇರಿಕೊಂಡ ನಂತರ ಅನೇಕ ಸಭೆಗಳಲ್ಲಿ ನಾನು ಭಾಗವಹಿಸಿದ್ದೇನೆ. ಈ ಸದನದ ಬಹುತೇಕ ಸದಸ್ಯರಲ್ಲಿ, ಇರಬಹುದಾದ ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಬೇಕು ಎಂದು ನನಗೆ ಅನ್ನಿಸಿದೆ.

ಕರಡು ಸಂವಿಧಾನವು ಎಲ್ಲಾ ವಿಚಾರಗಳನ್ನು ಕುರಿತು ಅವಕಾಶಗಳನ್ನು ಒದಗಿಸಿಲ್ಲ. ಅಥವಾ ವ್ಯಕ್ತಿಗತವಾಗಿ ಒಬ್ಬೊಬ್ಬರೂ ಅಪೇಕ್ಷಿಸುವ ರೀತಿಯಲ್ಲಿ ಒದಗಿಸಿಲ್ಲ ನಿಜ. ಉದಾಹರಣೆಗೆ, ಗೋಹತ್ಯೆಯನ್ನು ಸಂವಿಧಾನದಲ್ಲಿ ನಿಷೇಧಿಸಿಲ್ಲ; ಮೂಲಹಕ್ಕುಗಳ ಬಗೆಗೆ ತೀರಾ ಹೆಚ್ಚು ಅಪವಾದಗಳನ್ನು ಹೇಳಲಾಗಿದೆ, ರಾಷ್ಟ್ರಪಿತನನ್ನು ಕುರಿತಾಗಲೀ ರಾಷ್ಟ್ರಧ್ವಜ ಅಥವಾ ರಾಷ್ಟ್ರಗೀತೆಗಳನ್ನು ಕುರಿತಾಗಲೀ ಉಲ್ಲೇಖಿಸಿಲ್ಲ. ನನ್ನ ಇಬ್ಬರು ಮಿತ್ರರು ತೋರಿಸಿದಂತೆ ಕರಡು ಸಂವಿಧಾನದಲ್ಲಿ ಎಲ್ಲಿಯೂ ದೇವರ ಪ್ರಸ್ತಾಪವೂ ಇಲ್ಲ. ಇವೆಲ್ಲ ನಮಗೆ ಬಹಳ ಹಿತವಾದ ವಿಚಾರಗಳೇಯೆ. ಆದರೆ ಅವು ಸಂವಿಧಾನದ ಉದ್ದೇಶಕ್ಕೆ ಅನುಗುಣವಾಗಿರದಿದ್ದರೆ, ಸಂವಿಧಾನ ಸಭೆಯು ಅಂಗೀಕರಿಸಿರದಿದ್ದರೆ ಅವುಗಳನ್ನು ಸಂವಿಧಾನದಲ್ಲಿ ಸೇರಿಸುವುದು ಸಾಧ್ಯವಾಗುವುದಿಲ್ಲ.

ಹಲವು ಭಾಷಣಕಾರರು, ಕರಡು ಸಂವಿಧಾನವು ಗಾಂಧಿ ದರ್ಶನದ ಮುಕ್ತಿಯನ್ನು ಹೊಂದಿಲ್ಲ, ಅನ್ಯದೇಶೀಯ ಮೂಲಗಳಿಂದ ಕೆಲವು ಅವಕಾಶಗಳನ್ನು ಎರವಲಾಗಿ ಪಡೆಯುತ್ತಾ – ೧೯೩೫ರ ಭಾರತ ಸರಕಾರದ ಶಾಸನವೂ ಸೇರಿ – ಪ್ರಾಚೀನ ಭಾರತೀಯ ರಾಜ್ಯಾಡಳಿತದ ಮೂಲಾಂಶಗಳನ್ನು ತನ್ನ ನೇಯ್ಗೆಗೆ ಸೇರಿಸಿಕೊಳ್ಳದೆ ಬಿಟ್ಟಿದೆ – ಎಂಬ ಆಧಾರಗಳಿಂದ ಆಕ್ಷೇಪಿಸಿದ್ದಾರೆ.

ಗಾಂಧೀ ವಿಚಾರಗಳನ್ನು ಪ್ರತಿಪಾದಿಸುವ ನಮ್ಮ ಮಿತ್ರರು, ಆ ವಿಚಾರಗಳನ್ನು ಪಾಲಿಸುತ್ತಾ ಅವುಗಳ ತಾರ್ಕಿಕ ನಿರ್ಣಯಗಳಿಗೆ ಒಯ್ದು, ದೇಶಕ್ಕೆ ಸೈನ್ಯದ ಅವಶ್ಯಕತೆಯಿಲ್ಲ, ಶಾಸಕಾಂಗದ ಅಂಗ ಸಂಸ್ಥೆಗಳ ಅವಶ್ಯಕತೆಯಿಲ್ಲ ಎಂದು ಅವುಗಳನ್ನು ರದ್ದುಪಡಿಸಲು ಸಿದ್ಧರಾಗಿದ್ದಾರೆಯೇ? ಇವುಗಳ ಕೆಲಸವು ಸಮಯದ ಹಾಳು ಎಂದು ಗಾಂಧೀಜಿ ಪರಿಗಣಿಸಿದರು. ನಮ್ಮ ನ್ಯಾಯಾಂಗ ವ್ಯವಸ್ಥೆಯನ್ನು ರದ್ದುಪಡಿಸಿ ಅದರ ಬದಲಿಗೆ ನ್ಯಾಯ ವಿತರಣೆ ಮಾಡುವ ಸರಳವೂ ಅನೌಪಚಾರಿಕವೂ ಆದ ವಿಧಾನಗಳನ್ನು ಜಾರಿಗೆ ತರುವರೇನು? ಯಾವ ಸರಕಾರಿ ನೌಕರನು ಅಥವಾ ಸಾರ್ವಜನಿಕ ಕಾರ್ಯಕರ್ತನು ತಿಂಗಳಿಗೆ ೫೦೦ ರೂಪಾಯಿಗಳಿಗಿಂತ ಹೆಚ್ಚಾಗಿ ವೇತನ ಪಡೆಯಕೂಡದು ಎಂದು ನಿಗದಿಪಡಿಸಬಹುದೇನು? ಕೆಲವು ಕಾಂಗ್ರೆಸ್ ಮುಖಂಡರು ಇದೆಲ್ಲವನ್ನೂ ಜಾರಿಗೆ ತರಬೇಕು, ತರುವುದು ಸಾಧ್ಯ ಎಂದು ಪ್ರಾಮಾಣಿಕವಾಗಿ ನಂಬುತ್ತಾರೆ, ನನಗೆ ಗೊತ್ತು. ಆದರೆ ಈಗ ನಾವು ಮಾತನಾಡುತ್ತಿರುವುದು ಸಂವಿಧಾನ ಸಭೆಯು ನಿಗದಿ ಪಡಿಸಿದ ರೂಪದ ಸಂವಿಧಾನವನ್ನು ಕುರಿತು .......

* * * *

* **ಸೈಯ್ಯದ್ ಮಹಮದ್ ಸಾದುಲ್ಲಾ** (ಅಸ್ಸಾಂ : ಮುಸ್ಲಿಂ): ಮಾನ್ಯ ಉಪಾಧ್ಯಕ್ಷರೆ, ........... ಕರಡು ರಚನಾ ಸಮಿತಿಗೆ ತನಗೆ ತಾನೇ ಅಸ್ತಿತ್ವವಿಲ್ಲ. ೧೯೪೭ರ ಆಗಸ್ಟ್ ತಿಂಗಳಲ್ಲಿ ಈ ಸದನವು ಒಂದು ನಿರ್ಣಯದ ಮೂಲಕ ಅದನ್ನು ಸೃಷ್ಟಿಸಿತು. ನನಗೆ ಸರಿಯಾಗಿ ನೆನಪಿರುವುದಾದರೆ, ಆ ಸಮಯದಲ್ಲಿ

---

* ಸಿ.ಎ.ಡಿ. ಸಂಪುಟ ೭, ನವೆಂಬರ್ ೯, ೧೯೪೮, ಪುಟ ೩೮೮

ನಾನು ತೀವ್ರವಾದ ಅನಾರೋಗ್ಯದಿಂದ ಮಲಗಿದ್ದೆ. ಆ ಅಧಿವೇಶನಕ್ಕೆ ಬಂದಿರಲಿಲ್ಲ. ಅವರ ಕಾರ್ಯಕಲಾಪಗಳ ವರದಿಯಿಂದ ತಿಳಿಯುವುದು ಇದು. ಉದ್ದೇಶಗಳ ನಿರ್ಣಯ (Objective Resolution) ಯಾವುದಿದೆ, ಅದರ ನಾಲ್ಕು ಮೂಲೆಗಳೊಳಗೆ ಸಂವಿಧಾನವನ್ನು ರಚಿಸಬೇಕೆಂದು ಕರಡು ರಚನಾ ಸಮಿತಿಗೆ ಹೇಳಲಾಗಿದೆ. ಈಗ ನಾವು ಕೇಳಿರುವ ಆಕ್ಷೇಪಣೆಗಳನ್ನು ಎದುರಿಸಬೇಕಾಗುತ್ತದೆಂದು ತಿಳಿದಿದ್ದೆ. ಆಗಲೂ ಬುದ್ಧಿವಂತರು ಇದನ್ನು ನಿರೀಕ್ಷಿಸಿದ್ದರು. ಅಧಿಕೃತ ನಿರ್ಣಯಕ್ಕೆ ಮುಂಬಯಿಯ ಪ್ರಖ್ಯಾತ ಮುಖ್ಯಮಂತ್ರಿ ಶ್ರೀ ಖೇರ್ ಅವರು ಒಂದು ತಿದ್ದುಪಡಿ ಸೂಚಿಸಿದರು. ಅವರ ಭಾಷಣದಿಂದ ಈ ಭಾಗವನ್ನು ಓದುತ್ತೇನೆ. ಮೂಲ ನಿರ್ಣಯಕ್ಕೆ ಕರಡು ರಚನಾ ಸಮಿತಿಯೊಂದನ್ನು ರಚಿಸುವ ತಿದ್ದುಪಡಿಯನ್ನೂ ಸೂಚಿಸಿದ ಅವರು ನುಡಿದರು: "ಈಗಾಗಲೇ ಅಸೆಂಬ್ಲಿಯಲ್ಲಿ ಕೈಗೊಂಡ ನಿರ್ಣಯಗಳಿಗೆ ಸೂಕ್ತ ರೂಪಕೊಟ್ಟು ಸಾಂವಿಧಾನಿಕ ಸಲಹಾಕಾರರು ಸಿದ್ಧಪಡಿಸಿದ ಭಾರತ ಸಂವಿಧಾನ ಪತ್ರದ ಕರಡನ್ನು ಕರಡು ರಚನಾ ಸಮಿತಿಯು ಪರೀಕ್ಷಿಸಬೇಕು, ಆ ನಿರ್ಣಯಗಳಿಗೆ ಪೂರಕವಾಗುವಂತಹ ಎಲ್ಲಾ ಅಂಶಗಳನ್ನು, ಇಂಥದೊಂದು ಸಂವಿಧಾನದಲ್ಲಿ ಅಳವಡಿಸಬೇಕಾದ ಎಲ್ಲಾ ವಿಷಯಗಳನ್ನೂ ಸೇರಿಸಿ ಸದನದ ಮುಂದೆ ತರಬೇಕು. ಸಮಿತಿಯು ಪರಿಷ್ಕರಿಸಿದ ಕರಡು ಸಂವಿಧಾನವನ್ನು ಈ ಸಭೆಯು ಪರಿಶೀಲಿಸಬೇಕು".......

......... ಸದನವು ಒಪ್ಪಿಕೊಂಡ ತಿದ್ದುಪಡಿ ಅದು. ಮಾನ್ಯರೆ, ಸನ್ಮಾನ್ಯ ಖೇರ್ ಅವರು ಮಂಡಿಸಿ ಸದನವು ಒಪ್ಪಿಕೊಂಡ ಈ ತಿದ್ದುಪಡಿಯ ಬೆಳಕಿನಲ್ಲಿ ಸಂವಿಧಾನ ಸಭೆಯ ಸದಸ್ಯರು, ನಾವು ನಮ್ಮ ನ್ಯಾಯಾಧಿಕಾರ ವ್ಯಾಪ್ತಿಯನ್ನು ಅತಿಕ್ರಮಿಸಿ ಹೋಗಿದ್ದೇವೆ ಎಂದು ಹೇಳಲು ಸಾಧ್ಯವಿಲ್ಲ........

* * * *

**ಉಪಾಧ್ಯಕ್ಷರು** : ಈಗ ನಾವು ವಿಷಯವನ್ನು ಮುಂದುವರಿಸೋಣ.

* **ಸೈಯದ್ ಮಹಮದ್ ಸಾದುಲ್ಲಾ** : ......... ನಾನು ಹೇಗೆ ತಾನೆ ಸನ್ಮಾನ್ಯ ಸದಸ್ಯರಿಗೆ ವಿವರಿಸಿ ಹೇಳಬಹುದು? ಬಹಳ ಕಷ್ಟಪಟ್ಟು, ಶಕ್ತಿಮೀರಿ ಪ್ರಯತ್ನಿಸಿದ್ದೇವೆ. ಮೂರು ಬೇರೆ ಬೇರೆ ಖಂಡಗಳಿಗೆ ಸೇರಿದ ಪ್ರಾಚೀನವಾದ ಹಾಗೂ ಆಧುನಿಕವಾದ, ಗೊತ್ತಿದ್ದ ಎಲ್ಲಾ ಸಂವಿಧಾನಗಳನ್ನು ಜಾಲಾಡಿದೆವು. ಹಾಗೆ ಕಷ್ಟಪಟ್ಟು ಸಿದ್ಧಪಡಿಸಿದ ಕರಡನ್ನು ತೇಪೆ ಕೆಲಸವಲ್ಲದೆ ಬೇರೇನೂ ಅಲ್ಲ ಎಂದು ಟೀಕಿಸಲಾಯಿತು. ಆದರೆ ಕಲಾವಿದರಿಗೆ, ಕುಶಲಕಲೆಗಳನ್ನು ಪ್ರೀತಿಸುವವರಿಗೆ ಚೆನ್ನಾಗಿಯೇ ಗೊತ್ತು. ತೇಪೆ ಕೆಲಸದಿಂದಲೂ ಸುಂದರ ವಿನ್ಯಾಸಗಳನ್ನು ಪ್ರೀತಿಗೆ ಅರ್ಹವಾಗುವ ಮಾದರಿಗಳನ್ನು ಸೃಷ್ಟಿಸಬಹುದು. ಎಷ್ಟೇ ಕೊರತೆಗಳಿದ್ದರೂ ಈ ಕರಡಿನಲ್ಲಿ ಒಂದು ಸಮಗ್ರ ಚಿತ್ರವು ದೊರಕುವಂತೆ ಪ್ರಯತ್ನಿಸಿದ್ದೇವೆ. ಈ ಗೌರವಾನ್ವಿತ ಸಭೆಗೆ, ಚರ್ಚೆಯ ಆಧಾರವಾಗಿ ಎಷ್ಟು ಸಾಧ್ಯವೋ ಅಷ್ಟೂ ಸಂಪೂರ್ಣವಾದ ಸಮಗ್ರವಾದ ದಾಖಲೆಯನ್ನು ಕೊಡಲು ಶ್ರಮಿಸಿದ್ದೇವೆ ಎಂದಷ್ಟು ಮಾತ್ರ ಹೇಳಬಲ್ಲೆ. ಸಂವಿಧಾನವನ್ನು ಕುರಿತು ಇದೇ ಕೊನೆಯ ಮಾತು ಎಂದು ಕರಡು ರಚನಾ ಸಮಿತಿಯು ಎಂದೂ ಹೇಳಿಕೊಂಡಿಲ್ಲ. ಇಲ್ಲಿಯ ಅವಕಾಶಗಳು ಪೂರ್ತಿಯಾಗಿ ದೋಷರಹಿತವಾಗಿವೆ ಎಂದಾಗಲೀ, ಈ ಅವಕಾಶಗಳನ್ನು ಬದಲಾಯಿಸಲು ಸಾಧ್ಯವೇ ಇಲ್ಲ ಎಂದಾಗಲೀ ಹೇಳಲಿಲ್ಲ. ಕರಡು ಸಂವಿಧಾನವನ್ನು ಈ ಗೌರವಾನ್ವಿತ ಸದನದ ಮುಂದೆ, ಅಂತಿಮ ಅಂಗೀಕಾರಕ್ಕಾಗಿ ಇರಿಸಿರುವ ಈ ಕ್ರಮವೇ ನಾವು ಯಾವುದೇ ಒಂದು ನೀತಿಗೆ ಕಟ್ಟುಬಿದ್ದಿಲ್ಲ ಎಂಬುದನ್ನು ತೋರಿಸುತ್ತದೆ.

---

* ಸಿ.ಎ.ಡಿ. ಸಂಪುಟ ೭, ನವೆಂಬರ್ ೯, ೧೯೪೮, ಪುಟ ೩೪೯

ಎಲ್ಲಿ ನಾವು ಸಮಿತಿಗಳ ಶಿಫಾರಸುಗಳಿಂದ ಬೇರೆಯಾದ ಅಭಿಪ್ರಾಯ ಪಡೆದಿದ್ದೇವೋ, ಎಲ್ಲಿ ಈ ಸದನದ ಸ್ವೀಕೃತ ತತ್ವಗಳಿಂದ ಇಲ್ಲೊಂದು ಪದ ಅಲ್ಲೊಂದು ಪದವನ್ನು ಬದಲಾಯಿಸಬೇಕಾಗಿ ಬಂದಿತೋ ಅಲ್ಲೆಲ್ಲಾ ಅಡಿ ಟಿಪ್ಪಣಿಗಳಲ್ಲಿ ಸಾಕಷ್ಟು ಸೂಚನೆ ಕೊಟ್ಟಿದ್ದೇವೆ. ಹಾಗೂ, ಗಮನಕ್ಕೆ ಬಾರದಂತೆ ಏನನ್ನೂ ಸೇರಿಸಲು ಬರುವುದಿಲ್ಲ. ಸದನವು ಅಂಗೀಕರಿಸಿರುವ ತತ್ವಗಳಿಂದಲೋ, ಸಮಿತಿಯ ಶಿಫಾರಸುಗಳಿಂದಲೋ, ವ್ಯತ್ಯಾಸ ಮಾಡಬೇಕಾಗಿದೆ ಎಂದು ಕರಡು ರಚನಾ ಸಮಿತಿಯು ಭಾವಿಸಿದ ಸ್ಥಳಗಳಲ್ಲಿ ಸದನದ ಗಮನವನ್ನು ಆ ಕಡೆಗೆ ಸೆಳೆಯಲಾಗಿದೆ. ಆ ಕಡೆಗೆ ಸದನದ ಮಾನ್ಯ ಸದಸ್ಯರು ವಿಶೇಷ ಗಮನ ಕೊಡಬೇಕೆಂಬುದು ಉದ್ದೇಶ.

(ಮಿ. ಸಾದುಲ್ಲಾ ಅವರ ಭಾಷಣವಾದ ಮೇಲೆ ಗೊತ್ತುವಳಿಯನ್ನು ಮತಕ್ಕೆ ಹಾಕಲಾಯಿತು – ಸಂ)

**ಮಾನ್ಯ ಅಧ್ಯಕ್ಷರು :** ಇಲ್ಲಿ ಪ್ರಶ್ನೆ ಹೀಗಿದೆ:

"೧೯೪೭ ಆಗಸ್ಟ್ ೨೯ರಂದು ಸಂವಿಧಾನ ಸಭೆಯು ಕೈಗೊಂಡ ನಿರ್ಣಯದಂತೆ ನೇಮಿತವಾದ ಕರಡು ರಚನಾ ಸಮಿತಿಯು ಸಿದ್ಧಪಡಿಸಿದ, ಭಾರತದ ಕರಡು ಸಂವಿಧಾನವನ್ನು ಪರಿಶೀಲಿಸಲು ಸಂವಿಧಾನ ಸಭೆಯು ಮುಂದಿನ ಕ್ರಮವನ್ನು ಕೈಗೊಳ್ಳತಕ್ಕದ್ದು."

ಗೊತ್ತುವಳಿಯು ಅಂಗೀಕೃತವಾಯಿತು.

(ಕರಡು ಸಂವಿಧಾನವನ್ನು ಇಲ್ಲಿ ಅನುಬಂಧವಾಗಿ ಕೊಡಲಾಗಿದೆ. ಸಂವಿಧಾನದ ಒಂದೊಂದು ಉಪವಾಕ್ಯವನ್ನು ಕುರಿತ ಚರ್ಚೆಯು ಪ್ರಾರಂಭವಾಯಿತು. ಡಾ|| ಅಂಬೇಡ್ಕರ್ ಅವರು ಸಂವಿಧಾನವನ್ನು ಮುನ್ನಡೆಸಿದುದನ್ನು ಈ ಸಂಪುಟದ ಮುಂದಿನೆರಡು ಭಾಗಗಳಲ್ಲಿ ನೋಡಬಹುದು – ಸಂ.)

# ಅನುಬಂಧ

## ಭಾಗ – ೧

# ೯. ಗೆಜೆಟ್ ಆಫ್ ಇಂಡಿಯಾದಲ್ಲಿ ಪ್ರಕಟವಾಗಿರುವಂತೆ ಕರಡು ಸಂವಿಧಾನ

## ಭಾರತದ ಸಂವಿಧಾನ ಸಭೆ

## ನವದೆಹಲಿ, ೨೬ ಫೆಬ್ರವರಿ ೧೯೪೮

ನಂ/ಸಿ.ಎ./೯೯/ಕಾನ್ಸ್/೪೭.– ಸಂವಿಧಾನ ಕರಡು ಸಮಿತಿಯು ರಚಿಸಿದ ಭಾರತ ಸಂವಿಧಾನದ ಕರಡುಪ್ರತಿ, ಕರಡು ಸಮಿತಿಯ ಅಧ್ಯಕ್ಷರು, ಸಂವಿಧಾನ ಸಮಿತಿಯ ಅಧ್ಯಕ್ಷರಿಗೆ ಬರೆದ ಪತ್ರದೊಂದಿಗೆ, ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಈ ಕರಡುಪ್ರತಿಯನ್ನು ಮುಂದಿನ ಸಂವಿಧಾನ ಸಭೆಯ ಅಧಿವೇಶನದಲ್ಲಿ ಪರಿಶೀಲನೆಗೆ ಎತ್ತಿಕೊಳ್ಳಲಾಗುವುದು.

ನವದೆಹಲಿ
೨೧ ಫೆಬ್ರವರಿ ೧೯೪೮

ಗೆ,
ಮಾನನೀಯ ಅಧ್ಯಕ್ಷರು
ಭಾರತ ಸಂವಿಧಾನ ಸಭೆ
ನವದೆಹಲಿ

ಮಾನ್ಯರೆ,

ಪರಿಚಯ –

ಆಗಸ್ಟ್ ೨೯, ೧೯೪೭ರ ಸಂವಿಧಾನ ಸಮಿತಿಯ ನಡಾವಳಿಯಂತೆ ಸಂವಿಧಾನ ರಚನಾ ಸಮಿತಿಯ ಪರವಾಗಿ, ನಾನು ಭಾರತದ ನೂತನ ಸಂವಿಧಾನದ ಕರಡುಪ್ರತಿಯನ್ನು, ರಚನಾ ಸಮಿತಿಯು ನಿರ್ಣಯಿಸಿದಂತೆ ತಮಗೆ ಸಲ್ಲಿಸುತ್ತಿರುವೆ.

ಸಮಿತಿಯ ಪರವಾಗಿ, ರುಜು ಹಾಕಿ ತಮಗೆ ಸಲ್ಲಿಸುವ ಅಧಿಕಾರವನ್ನು ನಾನು ಹೊಂದಿದ್ದರೂ, ನಾನು ತಮ್ಮ ಅವಗಾಹನೆಗೆ ತರಬಹುದಾದ ವಿಷಯ ಎಂದರೆ ಸಮಿತಿಯ ಎಲ್ಲಾ ಸದಸ್ಯರೂ ಸಮಿತಿಯ ಸಭೆಯಲ್ಲಿ ಪಾಲುಗೊಳ್ಳುತ್ತಿರಲಿಲ್ಲ. ಆದರೆ ಸಮಿತಿಯ ಪ್ರತಿಯೊಂದು ಸಭೆಯಲ್ಲಿಯ ನಿರ್ಣಯಗಳಿಗೂ, ಅವಶ್ಯ ಕೋರಂ ಇದ್ದು ಬಹುಮತ ಇಲ್ಲವೇ ಅಧಿಕ ಮತದಿಂದ ಸಭೆಯಲ್ಲಿ ಹಾಜರಿದ್ದ ಸದಸ್ಯರಿಂದ ಮಂಜೂರಾಗಿವೆ.

ಈ ಕರಡುಪ್ರತಿಯನ್ನು ಸಿದ್ಧಗೊಳಿಸುವಾಗ, ರಚನಾ ಸಮಿತಿಯು ಸಂವಿಧಾನ ಸಮಿತಿಯಿಂದ ರಚಿಸಿದ ವಿವಿಧ ಸಮಿತಿಗಳು ಸ್ವೀಕರಿಸಿದ ನಿರ್ಣಯಗಳನ್ನು ತನ್ನ ಗಮನಕ್ಕೆ ತೆಗೆದುಕೊಂಡೇ ಕಾರ್ಯ ಮಾಡಿದೆ. ಆದರೆ ಕೆಲವು ವಿಷಯಗಳಲ್ಲಿ ರಚನಾ ಸಮಿತಿಯು, ತನ್ನದೇ ಆದ ಸಲಹೆ ಸೂಚನೆಗಳನ್ನು ವ್ಯಕ್ತಪಡಿಸಿದೆ. ಈ ವಿವಿಧ ಸೂಚನೆಗಳನ್ನು ರಚನಾ ಸಮಿತಿಯು ಅದರಡಿಯಲ್ಲಿ ಗೆರೆ ಎಳೆದು, ಅಥವಾ ಪಕ್ಕದಲ್ಲಿ ಗೆರೆ ಎಳೆದು ಮಹತ್ವವನ್ನು ಸೂಚಿಸಿದೆ. ಏನಾದರೂ ಬದಲಾವಣೆಗಳಿದ್ದಲ್ಲಿ ಕರಡು ರಚನಾ ಸಮಿತಿಯು, ಜಾಗರೂಕತೆಯಿಂದ ಅದರ ಬಗೆಗೆ ಅಡಿಯಲ್ಲಿ ಸೂಕ್ತ ಟಿಪ್ಪಣಿಗಳಿಂದ ತಿಳಿಸುವ ಕಾರ್ಯವನ್ನು ಕೈಗೊಂಡಿದೆ. ಆದಾಗ್ಯೂ ನಾನು ಈ ವಿಧವಾದ ಬದಲಾವಣೆಗಳನ್ನು ಕುರಿತಂತೆ ತಮ್ಮ ಹಾಗೂ ಸಂವಿಧಾನ ಸಮಿತಿಯ ಗಮನಕ್ಕೆ ಮಹತ್ವದ ಬದಲಾವಣೆಗಳನ್ನು ತಿಳಿಸಬಯಸುವೆ.

**೨. ಪೀಠಿಕೆ :**

ಜನವರಿ ೧೯೪೭ರಲ್ಲಿ ಪೀಠಿಕೆಗೆ ಸಂಬಂಧಿಸಿದಂತೆ ಸಂವಿಧಾನ ಸಮಿತಿಯು ಒಂದು ಗೊತ್ತುವಳಿಯನ್ನು ಅಂಗೀಕರಿಸಿ ಭಾರತವು ಸಾರ್ವಭೌಮ, ಸ್ವತಂತ್ರ ಗಣರಾಜ್ಯವಾಗಿರಬೇಕೆಂದು ತಿಳಿಸಿದೆ. ಆದರೆ ಕರಡು ಸಮಿತಿಯು ಸಾರ್ವಭೌಮ, ಪ್ರಜಾಸತ್ತಾತ್ಮಕ, ಗಣರಾಜ್ಯ ಎಂಬ ಪದಗಳಿರಬೇಕೆಂದು ನಿರ್ಣಯಿಸಿದೆ. ಏಕೆಂದರೆ ಸಾಮಾನ್ಯವಾಗಿ ಸಾರ್ವಭೌಮ ಪದವು ಸ್ವಾತಂತ್ರ್ಯದಿಂದ ಒಡಗೂಡಿದ್ದು, ಮತ್ತೆ ಸ್ವಾತಂತ್ರ್ಯ ಪದವನ್ನು ಪ್ರಯೋಗಿಸುವುದು ಸೂಕ್ತವಾಗಲಾರದು. ಪ್ರಜಾಸತ್ತಾತ್ಮಕ, ಗಣರಾಜ್ಯ ಬಾಂಧವ್ಯದ ಬಗೆಗೆ ಸಮಿತಿಯು ಇನ್ನೂ ನಿರ್ಣಯಿಸಬೇಕಾಗಿದೆ.

ಸಮಿತಿಯು ಪೀಠಿಕೆಯಲ್ಲಿ ಸಹೋದರತ್ವಕ್ಕೆ ಸಂಬಂಧಿಸಿದಂತೆ ಒಂದು ಉಪವಾಕ್ಯವನ್ನು ಸೇರಿಸಿದೆ. ಅದು ಉದ್ದೇಶ ಗೊತ್ತುವಳಿಯಲ್ಲಿಲ್ಲ. ಸಮಿತಿಯ ಅಭಿಪ್ರಾಯದಲ್ಲಿ ಇಂದಿನ ಭಾರತದಲ್ಲಿ ಭ್ರಾತೃತ್ವಸಹಮತ ಮತ್ತು ಸದ್ಭಾವನೆ ಅಗತ್ಯ ವಿರುವುದರಿಂದ ಈ ಬಗೆಯ ಉಪವಾಕ್ಯದಿಂದ ವಿಶೇಷವಾಗಿ ಅದನ್ನು ಪೀಠಿಕೆಯಲ್ಲಿ ಕಾಣಿಸಬೇಕೆಂದೇ ಇದ್ದುದರಿಂದ ಅದನ್ನು ಸೇರ್ಪಡಿಸಿದೆ.

ವಿಧಿ ೧

**೩. ಭಾರತದ ವಿವರಣೆ :**

ವಿಧಿ ೧ರಲ್ಲಿ ಭಾರತವನ್ನು ರಾಜ್ಯಗಳ ಒಕ್ಕೂಟವೆಂದೇ ವಿವರಿಸಲಾಗಿದೆ. ಸಮಿತಿಯು, ಸರಿಸಮಾನತೆಯ ದೃಷ್ಟಿಯಿಂದ, ನೂತನ ಸಂವಿಧಾನದ ಒಕ್ಕೂಟದಲ್ಲಿಯ ಅಂಗಗಳನ್ನು ಅಂದರೆ ಈಗ ಗವರ್ನರ್ ಪ್ರಾಂತ್ಯಗಳು, ಕಮೀಷನರ್ ಪ್ರಾಂತ್ಯಗಳು ಅಥವಾ ಭಾರತೀಯ ಸಂಸ್ಥಾನಗಳೆಂದು ಕರೆಯುತ್ತಿರುವ ಎಲ್ಲವನ್ನೂ ಒಕ್ಕೂಟದ ರಾಜ್ಯಗಳೆಂದು ಕರೆಯಲಾಗುತ್ತದೆ. ಆದರೆ ನೂತನ

ಸಂವಿಧಾನದಲ್ಲಿಯೂ ಒಕ್ಕೂಟದ ಅಂಗಗಳಲ್ಲಿ ತಾರತಮ್ಯವಿರುತ್ತದೆ. ಈ ತಾರತಮ್ಯವನ್ನು ಗುರುತಿಸಲೆಂದೇ ಸಮಿತಿಯು ರಾಜ್ಯಗಳನ್ನು ಮೂರು ವಿಧವಾಗಿ ವಿಂಗಡಿಸಿದೆ. ಮೊದಲನೆಯ ಅನುಸೂಚಿಯಲ್ಲಿ ವಿವರಿಸಿದ ಭಾಗ–I, ಭಾಗ–IIರಲ್ಲಿ ಮತ್ತು ಭಾಗ–IIIರಲ್ಲಿ ವಿವರಿಸಿದ್ದು ಅವು ಕ್ರಮವಾಗಿ ಈಗ ಜಾರಿಯಲ್ಲಿರುವ ಗವರ್ನರ್ ಪ್ರಾಂತಗಳು, ಕಮೀಷನರ್ ಪ್ರಾಂತಗಳು ಮತ್ತು ಭಾರತೀಯ ಸಂಸ್ಥಾನಗಳಿಗೆ ಸಮಾನವಾಗಿವೆ.

ಗಮನಿಸಬೇಕಾದ ಅಂಶವೆಂದರೆ ಸಮಿತಿಯು ಫೆಡರೇಷನ್‌ನ ಬದಲಾಗಿ ಒಕ್ಕೂಟ ಎಂಬ ಪದವನ್ನು ಪ್ರಯೋಗಿಸಿದೆ. ಈ ಹೆಸರಿಗೆ ಹೆಚ್ಚು ಮಹತ್ವವಿಲ್ಲದೇ ಹೋದರೂ, ಸಮಿತಿಯು, ಬ್ರಿಟಿಷ್ ಉತ್ತರ ಅಮೆರಿಕಾದ ೧೮೬೭ರ ಕಾನೂನಿನ ಪೀಠಿಕೆಯಲ್ಲಿ ಪ್ರಯೋಗಿಸಲಾದ ಭಾಷೆಯನ್ನೇ ಆಯ್ದುಕೊಂಡಿದೆ. ಏಕೆಂದರೆ ಭಾರತವನ್ನು ಒಕ್ಕೂಟವೆಂದು ಪರಿಗಣಿಸಿದರೂ, ಅದು ತನ್ನ ರಚನೆಯಲ್ಲಿ ಫೆಡರೇಷನ್ ಸ್ವರೂಪವನ್ನೇ ಹೊಂದಿರುವುದರಿಂದ, ಈ ವಿಧವಾದ ಭಾಷೆಯ ಆಯ್ಕೆ ಹೆಚ್ಚು ಅನುಕೂಲಕರವೆಂದೇ ಅಭಿಪ್ರಾಯಪಟ್ಟಿದೆ.

**ವಿಧಿ ೫ ಮತ್ತು ೬**

**೪. ಪೌರತ್ವ :**

ಸಮಿತಿಯು, ಒಕ್ಕೂಟದ ಪೌರತ್ವ ಕುರಿತಂತೆ ಗಂಭೀರ ಹಾಗೂ ದೀರ್ಘವಾಗಿ ಪರಿಶೀಲಿಸಿದೆ. ಸಮಿತಿಯ ದೃಷ್ಟಿಯಲ್ಲಿ ಒಕ್ಕೂಟದ ಕಲ್ಪನೆ ಜಾರಿಯಲ್ಲಿ ಬಂದ ಸಮಯದಲ್ಲಿ ಪೌರತ್ವವನ್ನು ಪಡೆಯಬೇಕಾದ ವ್ಯಕ್ತಿ ಜನನದಿಂದಾಗಲೀ, ವಾಸದಿಂದಾಗಲೀ ಅಥವಾ ರಕ್ತ ಸಂಬಂಧದಿಂದಾಗಲೀ ಅಥವಾ ಆನುವಂಶಿಕತೆಯಿಂದಾಗಲೀ ಪ್ರಾದೇಶಿಕ ಸಂಬಂಧ ಹೊಂದಿರಲೇಬೇಕೆಂದು ಅಭಿಪ್ರಾಯಪಟ್ಟಿದೆ. ಈ ವಿಧವಾದ ಭಾರತೀಯ ಪ್ರಾದೇಶಿಕ ಬಾಂಧವ್ಯವನ್ನು ಹೊಂದಿರದೇ ಹೋದ ವ್ಯಕ್ತಿಗಳು, ಭಾರತಕ್ಕೆ ಪ್ರಮಾಣ ಪೂರಕವಾಗಿ ವಿಧೇಯತ್ವವನ್ನು ತೋರಿಸಲು ಸಿದ್ಧವಿದ್ದು ಅವರು ವಿದೇಶಗಳಲ್ಲಿ ವಾಸವಾಗಿದ್ದಲ್ಲಿ ಅವರಿಗೆ ನಾಗರಿಕ ಅಧಿಕಾರಗಳನ್ನು ನೀಡಲು ಸಮಿತಿಯು ಸಂಶಯ ವ್ಯಕ್ತಪಡಿಸುತ್ತದೆ. ಆದರೂ ಸಮಿತಿಯು, ಅಧಿಕ ಸಂಖ್ಯೆಯಲ್ಲಿ ವಲಸೆ ಬಂದಿರಬಹುದಾದ ವ್ಯಕ್ತಿಗಳನ್ನು (ಇತ್ತೀಚಿನ ದಿನಗಳಲ್ಲಿ) ಗಮನದಲ್ಲಿರಿಸಿಕೊಂಡು ಅಂತಹವರಿಗೆ ವಿಶೇಷವಾದ ಆಸ್ಪದವನ್ನು ಕಲ್ಪಿಸಿದೆ. ಅವರ ಬಗೆಗೆ ಅವರ ತಂದೆ ಅಥವಾ ತಾತ ಮುಂತಾದವರು ಭಾರತ ಅಥವಾ ಪಾಕಿಸ್ತಾನದಲ್ಲಿ ಜನಿಸಿದ್ದರೆ, ಅವರು ಈ ವಿಧಾನವನ್ನು ಅನುಸರಿಸಬಹುದು.

ಅ. ಅಂತಹವರು ಜಿಲ್ಲಾ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿ ತಮಗೆ ಭಾರತದಲ್ಲಿ ವಾಸಿಸುವ ಹಕ್ಕು ನೀಡಬೇಕೆಂದು ಕೋರಬೇಕು ಮತ್ತು

ಆ. ಈ ವಿಧವಾದ ಹೇಳಿಕೆ ನೀಡುವ ಮುಂಚೆ, ಅವರು ಕನಿಷ್ಠ ಪಕ್ಷ ಒಂದು ತಿಂಗಳು ಅವಧಿ ಭಾರತದಲ್ಲಿ ವಾಸಿಸಿರಬೇಕು.

ವಿಧಿ ೭ ರಿಂದ ೨೭

**೫. ಮೂಲಭೂತ ಹಕ್ಕುಗಳು :**

ನ್ಯಾಯಾಲಯಗಳು, ಮೂಲಭೂತ ಹಕ್ಕುಗಳ ಬಗೆಗೆ ನಿರ್ಣಯ ನೀಡಬೇಕಾದುದರಿಂದ ಸಮಿತಿಯು, ಮೂಲಭೂತ ಹಕ್ಕುಗಳು ಮತ್ತು ಅವುಗಳ ಇತಿಮಿತಿಯನ್ನು ತಿಳಿಸಲು ಸಮಿತಿಯು ಪ್ರಯತ್ನಿಸಿದೆ.

ವಿಧಿ ೫೯

**೬. ಒಕ್ಕೂಟದ ಅಧ್ಯಕ್ಷರ ಅಧಿಕಾರಗಳು**

ಮರಣದಂಡನೆ ಕುರಿತಂತೆ ಅಧ್ಯಕ್ಷರಿಗೆ, ಭಾರತೀಯ ಸಂಸ್ಥಾನಗಳ ಅಧಿಪತಿಗಳ ಅಧಿಕಾರಕ್ಕೆ ಚ್ಯುತಿ ಬಾರದಂತೆ ಆ ವಿಧವಾದ ಮರಣದಂಡನೆ ಆಜ್ಞೆಗಳನ್ನು ಅಮಾನತುಗೊಳಿಸುವ, ಕಡಿತಮಾಡುವ, ಮನ್ನಿಸುವ ಅಧಿಕಾರ ಇರಬೇಕೆಂದು ಸಮಿತಿಯು ತೀರ್ಮಾನಿಸಿದೆ.

ವಿಧಿ ೨೭೮

ನಾವು ಸ್ಮರಿಸಬೇಕಾದ ವಿಷಯವೆಂದರೆ, ನೂತನ ಸಂವಿಧಾನದಲ್ಲಿ ರಾಜ್ಯಪಾಲರು ಹಲವಾರು ಸಂದರ್ಭಗಳಲ್ಲಿ ಸಂವಿಧಾನದ ಅಧಿಕಾರಗಳನ್ನು ಅಮಾನತಿನಲ್ಲಿರಿಸಿ ಸುಗ್ರೀವಾಜ್ಞೆಗಳನ್ನು ಸಾರಬಹುದು. ಆದರೆ ಈ ವಿಧವಾದ ಆಜ್ಞೆ ಕೇವಲ ಎರಡೇ ವಾರಕ್ಕೆ ಸೀಮಿತವಾಗಿದ್ದು ನಂತರ ಅದನ್ನು ಅಧ್ಯಕ್ಷರಿಗೆ ವರದಿ ಮಾಡಲೇಬೇಕು. ಈ ವಿಧವಾದ ವರದಿ ರಾಜ್ಯಪಾಲರಿಂದ ಬಂದ ಮೇಲೆ ಅಧ್ಯಕ್ಷರು ಅದನ್ನು ತೆರವು ಮಾಡಲೂಬಹುದು ಇಲ್ಲವೇ ತಮ್ಮದೇ ಆದ ನೂತನ ಆಜ್ಞೆಯೊಂದನ್ನು ಸಾರಬಹುದು. ಅದರ ಪರಿಣಾಮವೆಂದರೆ, ರಾಜ್ಯದ ಆಡಳಿತಾಧಿಕಾರವು ಕೇಂದ್ರದ ಆಡಳಿತಾಧಿಕಾರಕ್ಕೆ ಒಳಪಡುತ್ತದೆ. ಹೀಗಾಗಿ ರಾಜ್ಯ ಶಾಸನ ಸಭೆಯ ಬದಲು ಕೇಂದ್ರ ಶಾಸನ ಸಭೆಗೆ ಆಡಳಿತಾಧಿಕಾರ ದೊರೆಯುತ್ತದೆ. ಆದುದರಿಂದ ಆ ರಾಜ್ಯವು ಕೇಂದ್ರಾಡಳಿತಕ್ಕೆ ಒಳಗಾಗುತ್ತದೆ. ಇದು ೧೯೩೫ರ ಕಾಯ್ದೆಯ ಅಡಿಯಲ್ಲಿರುವ "ಸೆಕ್ಷನ್ ೯೩ ಆಡಳಿತದ" ಬದಲಾಗಿ ಜಾರಿಯಲ್ಲಿ ಬರುತ್ತದೆ.

ವಿಧಿ ೬೦

**೭. ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳ ಬಗೆಗೆ ಇರಬಹುದಾದ ಆಡಳಿತಾಧಿಕಾರ**

ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳ ಅಧಿಕಾರ ಕುರಿತಂತೆ

ಈಗ ಜಾರಿಯಲ್ಲಿರುವ ಸಂವಿಧಾನದಲ್ಲಿ, ಕೆಲವು ವಿಷಯಗಳಿಗೆ ಸೇರಿದಂತೆ ನಿರ್ದೇಶನ ನೀಡುವ ಅಧಿಕಾರವನ್ನು ಕೇಂದ್ರಕ್ಕೆ ನೀಡಲಾಗಿದ್ದು ಅದನ್ನು ಭಾಗ–I ಮತ್ತು IIರಲ್ಲಿ ನೀಡಿರಬಹುದಾದ ಶಾಸನ ಪಟ್ಟಿ ೧೯೩೫ರ ಕಾಯ್ದೆಯ ಏಳನೆಯ ಅನುಸೂಚಿಯಲ್ಲಿ ಕಾಣಬಹುದು. ಆದರೆ ಸಂವಿಧಾನ ಸಮಿತಿಯು ಸಿದ್ಧಪಡಿಸಿದ ಕರಡಿನಲ್ಲಿ ಈ ಯೋಜನೆಯಲ್ಲಿ ಅಲ್ಪ ಬದಲಾವಣೆಯನ್ನು ಸೂಚಿಸಿದೆ. ಅದೇನೆಂದರೆ ಆಡಳಿತಾಧಿಕಾರವು ಪ್ರಾಂತಗಳಿಗೆ (ಅಂದರೆ ಈಗ ರಾಜ್ಯವೆಂದು ಕರೆಯಲಾಗುವ) ಸೇರಿದ್ದು. "ಆದರೆ ವಿಶೇಷವಾಗಿ ಸಂಸತ್ತಿನಿಂದ ಅಥವಾ ಅದರಿಂದ ರಚಿತವಾದ ಕಾನೂನಿನಂತೆ" ಎಂಬ ವಾಕ್ಯವನ್ನು ಸೇರ್ಪಡಿಸಿದೆ. ಈ ವಾಕ್ಯದ ಪರಿಣಾಮವೆಂದರೆ, ನೂತನ ಸಂವಿಧಾನದಲ್ಲಿಯ ಸಂಸತ್ತಿಗೆ ಒಕ್ಕೂಟದ ಅಧಿಕಾರಗಳ ಆಡಳಿತಾಧಿಕಾರ ಕುರಿತಂತೆ ಒಕ್ಕೂಟಕ್ಕೆ ರಾಜ್ಯಗಳ ಮೇಲೆ ಹಲವು ಸಂದರ್ಭಗಳಲ್ಲಿ ಅಧಿಕಾರ ನೀಡುವುದರಿಂದ ಶಾಸನಾಧಿಕಾರವು ಕೇಂದ್ರ ಹಾಗೂ ರಾಜ್ಯಗಳ ಮಧ್ಯೆ ಸಮವರ್ತಿಯಾಗಿರಲು ಆಸ್ಪದ ನೀಡುತ್ತದೆ.

ವಿಧಿ ೬೭

**೮. ರಾಜ್ಯ ಸಭೆಯ ರಚನೆ:**

ಸಂವಿಧಾನ ಸಭೆಯ ನಿರ್ಣಯದಂತೆ, ರಾಜ್ಯಸಭೆಯು ೨೫೦ ಸದಸ್ಯರಿಂದ ಕೂಡಿರಬೇಕೆಂದೂ, ಅಲ್ಲದೆ ಅದು ಕಾರ್ಯಾಚರಣೆ ಪಟ್ಟಿ ಆಧಾರ ಹಾಗೂ ಮತದಾರರ ಕ್ಷೇತ್ರದಿಂದ ೨೫ ಸದಸ್ಯರಿಗಿಂತ ಮೀರಿ ಚುನಾಯಿಸಿರಕೂಡದು ಎಂದೇ ನಿರ್ಣಯಿಸಿತ್ತು. ಆದರೆ ಈ ವಿಧವಾದ ಪ್ಯಾನಲ್ ಪದ್ಧತಿಯನ್ನು ಐರ್‌ಲ್ಯಾಂಡ್‌ನಿಂದ ಆಯ್ದುಕೊಂಡಿದ್ದರೂ, ಅದು ಆ ದೇಶದಲ್ಲಿ ಫಲಪ್ರದವಾಗಿರದೇ ಹೋದುದರಿಂದ ಸಮಿತಿಯು ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿರಬಹುದಾದ ೧೫ ಸದಸ್ಯರನ್ನು ಅಧ್ಯಕ್ಷರು ನಾಮಕರಣ ಮಾಡಬಹುದೆಂಬ ನಿರ್ಣಯ ತೆಗೆದುಕೊಂಡಿದೆ. ಈ ವಿಧವಾದ ನಾಮಕರಣದಲ್ಲಿ ಸಮಿತಿಯ ಅಭಿಪ್ರಾಯವೆಂದರೆ ಸಾಹಿತ್ಯ, ವಿಜ್ಞಾನ, ಕಲೆಗಳಿಗೆ ಆದ್ಯತೆ ನೀಡಬೇಕು. ಕಾರ್ಮಿಕ, ಉದ್ದಿಮೆ, ವಾಣಿಜ್ಯಕ್ಕೆ ಆಸ್ಪದ ನೀಡಬಾರದು, ಏಕೆಂದರೆ ಸಾರ್ವತ್ರಿಕ ಚುನಾವಣೆಗಳನ್ನು ವಯಸ್ಕರ ಮತದಾನ ಪದ್ಧತಿಯಿಂದ ನಡೆಸುವುದರಿಂದ ಅವರಿಗೆ ಚುನಾವಣೆಯಲ್ಲಿ ಅವಕಾಶ ವಿಪುಲವಾಗಿದೆ.

ವಿಧಿ ೬೩ ಮತ್ತು ೧೫೧

**೯. ಸಂಸತ್ತಿನ ಹಾಗೂ ರಾಜ್ಯ ಶಾಸನ ಸಭೆಗಳ ಅವಧಿ :**

ಸಮಿತಿಯ ಅಭಿಪ್ರಾಯದಂತೆ, ನೂತನ ಸಂವಿಧಾನ, ವಯಸ್ಕರ ಮತದಾನ ಪದ್ಧತಿಯ ವ್ಯವಸ್ಥೆ ಹೊಂದಿರುವುದರಿಂದ, ಅದರ

ಅವಧಿ ನಾಲ್ಕು ವರ್ಷಕ್ಕೂ ಅಧಿಕವಾಗಿರಬೇಕು. ಏಕೆಂದರೆ ನೂತನವಾಗಿ ಆಯ್ಕೆಹೊಂದಿದ ಮಂತ್ರಿಮಹೋದಯರಿಗೆ ಆಡಳಿತದ ಬಗೆಗೆ ಅರಿಯಲು ಸಮಯಾವಕಾಶ ಬೇಕಾಗುತ್ತದೆ. ಅಲ್ಲದೆ ಅವರ ಆಡಳಿತದ ಕೊನೆಯ ಸಂವತ್ಸರ, ಅವರ ಮುಂದಿನ ಚುನಾವಣೆಯ ತಯಾರಿಕೆಯಲ್ಲಿ ಗತಿಸಿ ಹೋಗುವುದರಿಂದ ನಾಲ್ಕು ವರ್ಷ ಅವಧಿ ಸೂಕ್ತವಲ್ಲ. ಆದುದರಿಂದ ಅದು ನಾಲ್ಕು ವರ್ಷಕ್ಕೂ ಮಿಗಿಲಾಗಿರಬೇಕು.

ವಿಧಿ ೧೦೭ ಮತ್ತು ೨೦೦

**೧೦. ಸರ್ವೋನ್ನತ ಮತ್ತು ಶ್ರೇಷ್ಠ ನ್ಯಾಯಾಲಯಗಳು :**

ಇಂಗ್ಲೆಂಡ್ ಹಾಗೂ ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿರುವ ಪದ್ಧತಿಯಂತೆ, ನಿವೃತ್ತ ನ್ಯಾಯಾಧೀಶರನ್ನು ಹಲವು ಸಂದರ್ಭಗಳಲ್ಲಿ ನೇಮಿಸಿಕೊಳ್ಳಬಹುದು ಎಂಬ ಅಭಿಪ್ರಾಯಕ್ಕೆ ಸಮಿತಿಯು ಸಮ್ಮತಿ ನೀಡಿದೆ.

ವಿಧಿ ೧೩೧

**೧೧. ರಾಜ್ಯಪಾಲರ ಆಯ್ಕೆಯ ವಿಧಾನ :**

ಸಮಿತಿಯ ಹಲವು ಸದಸ್ಯರ ಅಭಿಪ್ರಾಯದಂತೆ, ಜನರಿಂದಲೇ ಆಯ್ಕೆಯಾದ ರಾಜ್ಯಪಾಲ ಹಾಗೂ ಶಾಸನ ಸಭೆಗೆ ಹೊಣೆಗಾರನಾದ ಮುಖ್ಯಮಂತ್ರಿಯ ಮಧ್ಯೆ ಪ್ರಬಲವಾದ ಪೈಪೋಟಿಗೆ ಆಸ್ಪದ ಉಂಟಾಗಬಹುದು. ಆದುದರಿಂದ ಸಮಿತಿಯು ರಾಜ್ಯಪಾಲರ ಆಯ್ಕೆಗೆ ನೂತನ ವಿಧಾನವನ್ನು ಸೂಚಿಸಬಯಸುತ್ತದೆ. ಅದೇನೆಂದರೆ ಶಾಸನ ಸಭೆಯು ಗವರ್ನರರ ಹುದ್ದೆಗೆಂದೇ ನಾಲ್ಕು ಸದಸ್ಯರ ಒಂದು ಪಟ್ಟಿಯನ್ನು ಸಿದ್ಧಪಡಿಸಿ ಅಧ್ಯಕ್ಷರಿಗೆ ಸಲ್ಲಿಸಬೇಕು. ಈ ಪಟ್ಟಿಯಲ್ಲಿರುವ ಸದಸ್ಯ ರಾಜ್ಯಕ್ಕೆ ಸೇರಿದವರೇ ಇರಬೇಕೆಂಬ ಕಡ್ಡಾಯವಿಲ್ಲ. ಅಧ್ಯಕ್ಷರು ಯಾರಾದರೊಬ್ಬರನ್ನು ರಾಜ್ಯಪಾಲರಾಗಿ ನೇಮಿಸಬಹುದು.

ವಿಧಿ ೧೩೮

**೧೨. ಉಪರಾಜ್ಯಪಾಲರು:**

ಸಮಿತಿಯ ಅಭಿಪ್ರಾಯದಲ್ಲಿ ಉಪರಾಜ್ಯಪಾಲರ ಅವಶ್ಯಕತೆ ಇಲ್ಲ. ಏಕೆಂದರೆ, ರಾಜ್ಯಪಾಲರು ಇರುವವರೆಗೆ, ಉಪ ರಾಜ್ಯಪಾಲರಿಗೆ ಯಾವ ಕಾರ್ಯವು ಇರಲಾರದು, ಕೇಂದ್ರದಲ್ಲಿಯ ವಿಷಯ ಬೇರೆಯಾಗಿದೆ. ಉಪ ರಾಷ್ಟ್ರಪತಿಯವರು ರಾಜ್ಯಸಭೆಯ ಅಧ್ಯಕ್ಷರೂ ಆಗಿರುತ್ತಾರೆ ಎಂಬುದನ್ನು ಗಮನಿಸಬಹುದು. ಆದರೆ ಅನೇಕ ರಾಜ್ಯಗಳಲ್ಲಿ ಮೇಲ್ಮನೆ ಜಾರಿಯಲ್ಲಿರದೇ ಹೋದುದರಿಂದ ಉಪರಾಜ್ಯಪಾಲರಿಗೆ ಏನೂ ಕಾರ್ಯವೇ ಇರಲಾರದು. ಅಲ್ಲದೆ ರಾಜ್ಯದ ಶಾಸಕಾಂಗದ ಕರಡು ಪ್ರತಿಯಲ್ಲಿ ವಿಶೇಷ ಸಂದರ್ಭಗಳಲ್ಲಿ ರಾಜ್ಯಪಾಲರ ಕಾರ್ಯವನ್ನು ನಡೆಸಿಕೊಂಡು ಹೋಗಬಲ್ಲ ವ್ಯವಸ್ಥೆಗೆ

ಆಸ್ಪದವನ್ನು ಕಲ್ಪಿಸಲಾಗಿದೆ.

ವಿಧಿ ೨೧೨ ರಿಂದ ೨೧೪

**೧೩. ಕೇಂದ್ರಾಡಳಿತ ಪ್ರದೇಶಗಳು :**

ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ, ಅಜ್ಮೀರ್, ಮೇವಾರ, ಕೊಡಗು, ಪಂತ ಪಿಪಲೋಡಾ ಹಾಗೂ ಅಂಡಮಾನ್ ನಿಕೋಬಾರ್ ದ್ವೀಪ– ಪ್ರದೇಶಗಳ ಆಡಳಿತಕ್ಕೆ ಸಂವಿಧಾನ ಬದಲಾವಣೆಗೆ ಕುರಿತಂತೆ, ತಮ್ಮ ಅಧ್ಯಕ್ಷರಾಗಿ ಒಂದು ಸಮಿತಿಯನ್ನು ನೇಮಕ ಮಾಡಿರುವಿರಿ. ಆ ಸಂವಿಧಾನ ಉಪಸಮಿತಿಯು ಅಕ್ಟೋಬರ್ ೨೧, ೧೯೪೮ರಂದು ತನ್ನ ವರದಿಯನ್ನು ಸಲ್ಲಿಸಿದ್ದು ಅದರ ಶಿಫಾರಸುಗಳು ಸಂಕ್ಷಿಪ್ತವಾಗಿ ಹೀಗಿವೆ:

೧. ದೆಹಲಿ, ಅಜ್ಮೀರ್, – ಮೇವಾರ ಹಾಗೂ ಕೊಡಗುಗಳಿಗೆ ಭಾರತದ ಅಧ್ಯಕ್ಷರು ಲೆಫ್ಟಿನೆಂಟ್ ಗವರ್ನರನ್ನು ನೇಮಿಸಬೇಕು.
೨. ಈ ಎಲ್ಲಾ ಪ್ರಾಂತಗಳು ಶಾಸಕಾಂಗಕ್ಕೆ ಹೊಣೆಬದ್ಧವಾದ ಮಂತ್ರಿಮಂಡಲದ ಆಡಳಿತದಿಂದೊಡಗೂಡಿರಬೇಕು.
೩. ಈ ಪ್ರತಿಯೊಂದು ಪ್ರಾಂತವೂ ಚುನಾಯಿತ ಶಾಸಕಾಂಗದಿಂದ ಕೂಡಿರಬೇಕು.

ಪಂತ ಪಿಪಲೋಡಾಕ್ಕೆ ಸಂಬಂಧಿಸಿದಂತೆ, ಸಮಿತಿಯು ಅದನ್ನು ಅಜ್ಮೀರ್–ಮೇವಾರದೊಂದಿಗೆ ಸೇರ್ಪಡಿಸಬೇಕೆಂದೇ ಶಿಫಾರಸು ಮಾಡಿದೆ. ಅಂಡಮಾನ್ ನಿಕೋಬಾರಿಗೆ ಸಂಬಂಧಿಸಿದಂತೆ ಸಮಿತಿಯ ಶಿಫಾರಸ್ಸೇನೆಂದರೆ, ಸದ್ಯ ಆ ದ್ವೀಪದ ಆಡಳಿತವು ಭಾರತ ಸರಕಾರದ ವಶದಲ್ಲಿಯೇ ಇರಬೇಕು. ಅದು ಮುಖ್ಯ ಆಯುಕ್ತರ ಆಡಳಿತದಲ್ಲಿಯೇ ಅಲ್ಪ ಬದಲಾವಣೆಯೊಂದಿಗೆ ಮುಂದುವರಿಯಬಹುದು. ಅಜ್ಮೀರ – ಮೇವಾರ ಹಾಗೂ ಕೊಡಗಿನ ಪ್ರತಿನಿಧಿಗಳು ಸಮಿತಿಯ ವರದಿಯಲ್ಲಿ ತಮ್ಮದೇ ಆದ ಟಿಪ್ಪಣಿ ಬರೆದಿದ್ದು ತಮ್ಮ ವಿಶೇಷ ಸಮಸ್ಯೆಯನ್ನು ಹೀಗೆ ತಿಳಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ತಮ್ಮ ಪ್ರಾಂತಗಳು ಚಿಕ್ಕದಾಗಿಯೂ ವಿಶಿಷ್ಟ ಭೌಗೋಳಿಕ ಪರಿಸ್ಥಿತಿಯಿಂದಾಗಿ ಸಾಕಷ್ಟು ಸಂಪನ್ಮೂಲಗಳನ್ನು ಹೊಂದಿರದೇ ಇರುವುದರಿಂದ ಈ ಪ್ರದೇಶಗಳು ಮುಂದೆ ತಮ್ಮ ನೆರೆ ಹೊರೆ ಪ್ರಾಂತವನ್ನು ಸೇರಲೂಬಹುದು. ಆದುದರಿಂದ ಈ ವಿಷಯ ಕುರಿತಂತೆ ಅಲ್ಲಿಯ ಜನಾಭಿಪ್ರಾಯವನ್ನು ಪಡೆಯಲು ಸಂವಿಧಾನದಲ್ಲಿ ಸೂಕ್ತ ಆಸ್ಪದವನ್ನು ಕಲ್ಪಿಸಬೇಕೆಂದು ಸಲಹೆ ಮಾಡಿದ್ದಾರೆ.

ದೆಹಲಿಗೆ ಸಂಬಂಧಿಸಿದಂತೆ ಭಾರತದ ರಾಜಧಾನಿ ಪಟ್ಟಣವನ್ನು ಯಾವ ಸರಕಾರದಡಿಯಲ್ಲಿರಿಸದೇ ಅದು ಕೇಂದ್ರಾಡಳಿತದಲ್ಲಿಯೇ

ಮುಂದುವರಿಯಬೇಕೆಂಬ ನಿರ್ಣಯಕ್ಕೆ ಸಮಿತಿ ಬಂದಿದೆ. ಆಸ್ಟ್ರೇಲಿಯಾ ಮತ್ತು ಅಮೆರಿಕಾದಲ್ಲಿ ಅಲ್ಲಿಯ ಸಂಸತ್ತುಗಳು ರಾಜಧಾನಿಯ ಆಡಳಿತವನ್ನು ನೋಡಿಕೊಂಡು ಹೋಗುತ್ತವೆ. ಆದುದರಿಂದ ಕರಡು ಸಮಿತಿಯು ನೀಡಿದ ಸಲಹೆಗಿಂತ ಸಮಗ್ರ ಆಡಳಿತ ವ್ಯವಸ್ಥೆಗೆ ಆಸ್ಪದ ನೀಡಬಲ್ಲ ಒಂದು ವ್ಯವಸ್ಥೆ ರೂಪಿಸಬೇಕು. ಹೀಗಾಗಿ ಕರಡು ಸಮಿತಿಯ ಅಭಿಪ್ರಾಯವೆಂದರೆ ಈ ಪ್ರಾಂತಗಳನ್ನು ಕೇಂದ್ರವೇ ಆಯುಕ್ತರು ಅಥವಾ ಲೆಫ್ಟಿನೆಂಟ್ ಗವರ್ನರ್ ಮುಖಾಂತರವೇ ಇಲ್ಲವಾದಲ್ಲಿ ನೆರೆರಾಜ್ಯದ ರಾಜ್ಯಪಾಲರ ಆಡಳಿತಕ್ಕೆ ಗುರಿಪಡಿಸಬಹುದು. ಈ ವಿಷಯಕ್ಕೆ ಸಂಬಂಧಿಸಿದ ಸಂಗತಿಯನ್ನು ಮಂತ್ರಿ ಮಂಡಳಿಯ ಸಲಹೆಯಂತೆ ಅಧ್ಯಕ್ಷರು ತಮ್ಮ ನಿರ್ಣಯ ತೆಗೆದುಕೊಳ್ಳಬಹುದು. ಅಧ್ಯಕ್ಷರು ಸಲಹೆಯಂತೆ, ದೆಹಲಿಯ ಆಡಳಿತವನ್ನು ಲೆಫ್ಟಿನೆಂಟ್ ಗವರ್ನರಿಂದ ಕೊಡಗಿನ ಆಡಳಿತೆಯನ್ನು ಅಲ್ಲಿಯ ಜನತೆಯ ಅಭಿಪ್ರಾಯ ಅರಿತುಕೊಂಡು ಮದ್ರಾಸಿನ ಗವರ್ನರ್ ಅಥವಾ ಮೈಸೂರಿನ ಅರಸನ ಆಡಳಿತಕ್ಕೆ ವಹಿಸಿಕೊಡಬಹುದು. ಅಲ್ಲದೆ ಅಧ್ಯಕ್ಷರು ಸ್ಥಳೀಯ ಶಾಸಕಾಂಗ ಅಥವಾ ಸಲಹಾ ಸದಸ್ಯರ ಮಂಡಳಿಯನ್ನು ಅವರದೇ ಆದ ಸಂವಿಧಾನದ ಮುಖಾಂತರ ಆಡಳಿತ ನಡೆಸುವಂತೆ ಆದೇಶಿಸಬಹುದು. ಸಮಿತಿಯ ಅಭಿಪ್ರಾಯದಲ್ಲಿ ಸ್ಥಳೀಯ ಅಗತ್ಯಗಳನ್ನು ಗಮನದಲ್ಲಿರಿಸಿ ಕೊಂಡು ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

ಭಾರತೀಯ ಸಂಸ್ಥಾನಗಳಿಗೆ (ಒರಿಸ್ಸಾ ಗುಂಪು) ಸೇರಿದಂತೆ ಕೇಂದ್ರಕ್ಕೆ ವಿಲೀನಗೊಳಿಸುವ ಸಂಪೂರ್ಣ ಅಧಿಕಾರವನ್ನು ನೀಡಿರುವ ಪ್ರಾಂತಗಳನ್ನು ಆಯುಕ್ತರ ಇಲ್ಲವೇ ಲೆಫ್ಟಿನೆಂಟ್ ಗವರ್ನರರ, ಅಥವಾ ನೆರೆರಾಜ್ಯದ ರಾಜ್ಯಪಾಲರ ಆಡಳಿತಕ್ಕೆ ಗುರಿಪಡಿಸಿ ಕೇಂದ್ರಾಡಳಿತ ನಡೆಸಬಹುದಾದ ಅಭಿಪ್ರಾಯವನ್ನು ಸಮಿತಿಯು ಅನುಮೋದಿಸುತ್ತದೆ.

ವಿಧಿ ೨೧೬ ರಿಂದ ೨೩೨

**೧೪. ಶಾಸಕಾಂಗದ ಅಧಿಕಾರಗಳ ಹಂಚಿಕೆ ವಿತರಣೆ :** ಒಕ್ಕೂಟದ ಅಧಿಕಾರಗಳಿಗೆಂದೇ ನೇಮಿಸಿದ ಉಪಸಮಿತಿಯ ಶಿಫಾರಸ್ಸುಗಳನ್ನೇ ಸಂವಿಧಾನ ಸಭೆಯು ಅಧಿಕವಾಗಿ ಅಂಗೀಕರಿಸಿದೆ. ಆದರೂ ನಾನು ಮೂರು ವಿಷಯಗಳ ಬಗೆಗೆ ಬದಲಾವಣೆ ಮಾಡಿದ್ದು ಅದನ್ನು ತಮ್ಮ ಗಮನಕ್ಕೆ ತರುವೆ.

ಅ) ರಾಜ್ಯಗಳ ಪಟ್ಟಿಯಲ್ಲಿ ನಮೂದಿಸಲಾದ ವಿಷಯ, ರಾಷ್ಟ್ರೀಯ ಮಹತ್ವವನ್ನು ಹೊಂದಿದ್ದಲ್ಲಿ ಆ ವಿಷಯದ ಬಗೆಗೆ

ಕೇಂದ್ರವು ಶಾಸನವನ್ನು ರಚಿಸಬಹುದು. ಆದರೆ ಕೇಂದ್ರವು ತನ್ನ ಈ ಅಧಿಕಾರವನ್ನು ದುರುಪಯೋಗ ಮಾಡದಂತೆ ಕರಡು ಸಮಿತಿಯು ಜಾಗರೂಕತೆಯನ್ನು ವಹಿಸಿದೆ. ಹೇಗೆಂದರೆ, ರಾಜ್ಯಗಳ ಸಭೆಯು ಈ ವಿಷಯದ ಬಗೆಗೆ ಆ ರಾಜ್ಯದ ಪ್ರತಿನಿಧಿಗಳು ಮಂಡಿಸಿದ ಸೂಚನೆಗೆ ಎರಡು ಮೂರಂಶ ಬಹುಮತದ ಒಪ್ಪಿಗೆಯನ್ನು ನೀಡಿದ್ದರೆ ಮಾತ್ರ ಕೇಂದ್ರ ಆ ವಿಷಯವನ್ನು ಕೈಗೆತ್ತಿಕೊಳ್ಳಬಹುದು.

ಬ) ವ್ಯವಸಾಯ ಭೂಮಿಯ ಆಸ್ತಿಯ ವಾರಸುದಾರಿಕೆಯನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ವಾರಸುದಾರಿ ವಿಷಯಗಳನ್ನು ಸಮಿತಿಯು ಸಮವರ್ತಿ ಪಟ್ಟಿಯಲ್ಲಿ ಸೇರ್ಪಡಿಸಿದೆ. ಇದೇ ಮಾದರಿಯಂತೆ ಸಮಿತಿಯು, ವೈಯಕ್ತಿಕ ಕಾನೂನಿಗೆ ಒಳಪಟ್ಟಿರುವ ಪಕ್ಷಗಳ ವಿಷಯವನ್ನೂ ಸಮವರ್ತಿ ಪಟ್ಟಿಯಲ್ಲಿ ಸೇರಿಸಿದ್ದು, ಮುಂದೆ ಈ ದಿಶೆಯಲ್ಲಿ ಭಾರತಾದ್ಯಂತ ಒಂದೇ ವಿಧವಾದ ಕಾನೂನು ರಚಿಸಲು ಆಸ್ಪದ ಕಲ್ಪಿಸಿದೆ.

ಕ) ಒಕ್ಕೂಟಕ್ಕೆ ಸಂಬಂಧಿಸಿದ ಭೂಸ್ವಾಧೀನ ಕಾಯ್ದೆಯನ್ನು ಒಕ್ಕೂಟದ ಪಟ್ಟಿಯಲ್ಲಿಯೂ ಅದೇ ವಿಧವಾಗಿ ರಾಜ್ಯ ಭೂಸ್ವಾಧೀನ ಕಾರ್ಯವನ್ನು ರಾಜ್ಯದ ಪಟ್ಟಿಯಲ್ಲಿ ಸಮಿತಿ ಸೇರ್ಪಡೆ ಮಾಡಿದೆ. ಆದರೆ ಈ ವಿಧವಾದ ಭೂಸ್ವಾಧೀನಕ್ಕೆ ನೀಡಬಹುದಾದ ಪರಿಹಾರದ ವಿಷಯವನ್ನು ಸಮಿತಿಯು ಜಂಟಿಪಟ್ಟಿಯಲ್ಲಿ ಸೇರಿಸಿದೆ. ಏಕೆಂದರೆ ಈ ದಿಶೆಯಲ್ಲಿ ಭಾರತಾದ್ಯಂತ ಏಕರೂಪತೆಗೆ ಆಸ್ಪದ ದೊರೆಯುತ್ತದೆ.

ಇದಲ್ಲದೆ ಇಂದಿನ ಗಂಭೀರ ಪರಿಸ್ಥಿತಿಯನ್ನು ಸಮಿತಿಯು ಗಮನಕ್ಕೆ ತೆಗೆದುಕೊಂಡು ಹಲವಾರು ವಿಷಯಗಳ ಬಗೆಗೆ ಕೇಂದ್ರದ ಅಧಿಕಾರವೇ ಇರಬೇಕೆಂಬ ನಿರ್ಣಯಕ್ಕೆ ಬಂದು ಪ್ರಮುಖ ವಿತರಣೆ, ವಾಣಿಜ್ಯ, ವ್ಯಾಪಾರ, ಉತ್ಪಾದನೆ, ಹಂಚಿಕೆ ಮತ್ತು ನಿರ್ವಾಸಿತರು, ಪುನರ್ವಸತಿ ಮುಂತಾದ ವಿಷಯಗಳು ಸಂವಿಧಾನ ಜಾರಿಗೆ ಬಂದ ದಿನದಿಂದ ಐದು ವರ್ಷಗಳವರೆಗೆ ಕೇಂದ್ರದ ಅಧೀನದಲ್ಲಿರಬೇಕೆಂದು ನಿರ್ಧರಿಸಿದೆ. ಈ ನಿರ್ಣಯವನ್ನು ೧೯೪೬ರ ಕೇಂದ್ರ ಸರಕಾರ ಹಾಗೂ ಶಾಸಕಾಂಗದ ಕಾನೂನಿನ ಆಧಾರದ ಮೇಲೆ ಕೈಕೊಳ್ಳಲಾಗಿದೆ.

ವಿಧಿ ೨೪೭ ರಿಂದ ೨೬೯

**೧೫. ಆರ್ಥಿಕ ಸಂಬಂಧೀ ವಿಚಾರಗಳು ಮತ್ತು ಅವಕಾಶಕಲ್ಪನೆ:**

ವಿಶಾಲ ಮನೋಭಾವನೆಯಿಂದ ಕರಡು ಸಮಿತಿಯು ಆರ್ಥಿಕ ತಜ್ಞರ ಸಮಿತಿಯ ವರದಿಯನ್ನೇ ಅನುಸರಿಸಿದ್ದರೂ, ಕೇಂದ್ರ ಹಾಗೂ

ರಾಜ್ಯಗಳಲ್ಲಿ ವರಮಾನ ಹಂಚುವಿಕೆಯ ಬಗೆಗೆ ಹಲವಾರು ವಿಷಯಗಳನ್ನು ಸೇರ್ಪಡಿಸಿದೆ. ಏಕೆಂದರೆ ಇಂದಿನ ಅನಿಶ್ಚಿತ ಪರಿಸ್ಥಿತಿಯಲ್ಲಿ ಹಣಕಾಸಿನ ಹಂಚಿಕೆಯ ಬಗೆಗೆ ಸಮಿತಿಯು, ಇದ್ದ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಹೋಗಲು ನಿರ್ಧರಿಸಿದ್ದು, ಮುಂದೆ ಈ ಬಗೆಗೆ ಆರ್ಥಿಕ ಆಯೋಗದ ಸಲಹೆಯಂತೆ ನಡೆಯಲು ಸಮಿತಿಯು ಸೂಚಿಸಿದೆ. ಈಗಿನ ವ್ಯವಸ್ಥೆ ಐದು ವರ್ಷಗಳ ಅವಧಿಗೆ ಮುಂದುವರಿಯುತ್ತದೆ.

**ವಿಧಿ ೨೮೧ ರಿಂದ ೨೮೩**

**೧೬. ಸೇವೆಗಳು :**

ಸೇವೆಗಳ ವಿಷಯದಲ್ಲಿ ಸಮಿತಿಯು ಬೇರೆ ದೇಶಗಳಲ್ಲಿರುವಂತೆ ಈ ವಿಷಯವನ್ನು ಶಾಸಕಾಂಗದ ಸೂಕ್ತ ನಿರ್ಣಯಕ್ಕೆ ಬಿಟ್ಟಿದೆ. ಹೀಗಾಗಿ ಅದು ಸಂವಿಧಾನದಲ್ಲಿ ಯಾವ ಹೆಚ್ಚಿನ ಅಂಶಗಳ ಸೇರ್ಪಡೆಗೆ ಕೈಹಾಕಿಲ್ಲ.

**ವಿಧಿ ೨೮೯ ರಿಂದ ೨೯೧**

**೧೭. ಮತದಾನ ಮತ್ತು ಚುನಾವಣೆ ಮುಂತಾದವು :**

ಸಮಿತಿಯ ಅಭಿಪ್ರಾಯದಲ್ಲಿ ಸಂವಿಧಾನದಲ್ಲಿ ಚುನಾವಣೆಗಳ ಬಗೆಗೆ ಹೆಚ್ಚಿನ ವಿವರಗಳನ್ನು ಸೇರಿಸುವುದು ಸೂಕ್ತವಲ್ಲ, ಮತದಾನ, ಕ್ಷೇತ್ರ ವಿಂಗಡಣೆ ಮುಂತಾದ ಅಂಶಗಳನ್ನು ಶಾಸನಗಳಿಂದ ನಿರೂಪಿಸಬಹುದು.

**ವಿಧಿ ೩೦೪**

**೧೮. ಸಂವಿಧಾನಕ್ಕೆ ತಿದ್ದುಪಡಿ :**

ಸಮಿತಿಯು ತಿದ್ದುಪಡಿಗೆ ಸಂಬಂಧಿಸಿದಂತೆ ಕೆಲವು ನಿರ್ದಿಷ್ಟ ವಿಷಯಗಳಲ್ಲಿ ರಾಜ್ಯ ಶಾಸಕಾಂಗಕ್ಕೆ ಹಲವು ಅಧಿಕಾರಗಳನ್ನು ನೀಡಿದೆ.

**ವಿಧಿ ೨೯೨, ೨೯೪ ಮತ್ತು ೩೦೫**

**೧೯. ಅಲ್ಪ ಸಂಖ್ಯಾತರ ರಕ್ಷಣೆ :**

ಶಾಸನ ಸಭೆಗಳಲ್ಲಿ ಹಾಗೂ ಸಾರ್ವಜನಿಕ ಸೇವೆಯಲ್ಲಿ ಮೀಸಲಾತಿ ಕುರಿತಂತೆ ಸಮಿತಿಯು ಸಂವಿಧಾನ ಸಭೆಯ ಸಲಹಾ ಸಮಿತಿಯ ನಿರ್ಣಯವನ್ನೇ ಅನುಮೋದಿಸಿದೆ. ಈ ಶಿಫಾರಸ್ಸುಗಳು ಭಾರತೀಯ ಸಂಸ್ಥಾನಗಳಿಗೆ ಅನ್ವಯಿಸದೇ ಹೋದರೂ, ಸಂಸ್ಥಾನಗಳು ಈ ವಿಷಯವನ್ನು ಕಡೆಗಣಿಸದೆ, ಅನುಷ್ಠಾನಕ್ಕೆ ತರಲು ಮುಂದಾಗಬೇಕೆಂಬ ವಿಷಯವನ್ನು ತಮ್ಮ ಗಮನಕ್ಕೆ ತರಬೇಕೆಂದು ಸಮಿತಿಯು ನನ್ನನ್ನು ಆಗ್ರಹಿಸಿದೆ.

**ಮೊದಲನೆ ಅನುಸೂಚಿ**

**೨೦. ಭಾಷಾವಾರು ಪ್ರಾಂತಗಳು :**

ವಿಶೇಷವಾಗಿ ಭಾಗ – I ಮೊದಲನೆಯ ಅನುಸೂಚಿಯ ಅಡಿಟಿಪ್ಪಣಿಯ ಬಗೆಗೆ ತಮ್ಮ ಗಮನ ಸೆಳೆಯಲು ಬಯಸುವೆ.

ಒಂದು ವೇಳೆ ಆಂಧ್ರ ಅಥವಾ ಬೇರೆ ಯಾವ ಭಾಷಾವಾರು ಪ್ರಾಂತಗಳ ಹೆಸರನ್ನು ಅನುಸೂಚಿಯಲ್ಲಿ ಸಂವಿಧಾನ ಜಾರಿಗೆ ಮುಂಚೆಯೇ ಸೇರ್ಪಡಿಸಬೇಕಾದರೆ ಶೀಘ್ರ ಕ್ರಮ ಕೈಕೊಂಡು ಆ ಪ್ರಾಂತಗಳನ್ನು ೧೯೩೫ನೇ ಕಾಯ್ದೆಯ ೨೯೦ ಸೆಕ್ಷನ್ ಅಡಿಯಲ್ಲಿ ಗವರ್ನರರ ಆಡಳಿತ ಪ್ರಾಂತಗಳೆಂದು ಸಾರಬೇಕು. ನೂತನ ಸಂವಿಧಾನದಲ್ಲಿ, ನೂತನ ಪ್ರಾಂತಗಳ ರಚನೆಯ ಬಗೆಗೆ ಆಸ್ಪದ ಕಲ್ಪಿಸಿರುವುದರಿಂದ ಸಂವಿಧಾನ ಜಾರಿಗೆ ಬಂದ ಮೇಲೆ ಅವು ಜಾರಿಗೊಳ್ಳುವುವು.

**ಐದು – ಆರನೆ ಅನುಸೂಚಿಗಳು**

**೨೧. ಪರಿಶಿಷ್ಟ ಪಂಗಡ, ಪರಿಶಿಷ್ಟ ಪ್ರದೇಶ ಹಾಗೂ ಗುಡ್ಡಗಾಡುಗಳ ಪ್ರದೇಶಗಳು :**

ಈ ವಿಷಯದ ಬಗೆಗೆ ಸಮಿತಿಯು, ಸಂವಿಧಾನ ಉಪಸಮಿತಿಯ ಶಿಫಾರಸ್ಸುಗಳನ್ನೇ ಅನುಸೂಚಿಗಳಲ್ಲಿ ಸೇರ್ಪಡಿಸಿದೆ.

೨೨. ಧೋರಣಾತ್ಮಕ ಬದಲಾವಣೆಗಳಿಲ್ಲದಂತೆ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರ ಸಲಹೆಗಳನ್ನು ಅವರ ಕೋರಿಕೆಯಂತೆ ಈ ವರದಿಗೆ ಲಗತ್ತಿಸಿದೆ.

೨೩. ಈ ವರದಿಯನ್ನು ತಮ್ಮ ಮುಂದೆ ಸಲ್ಲಿಸುವ ಮುಂದೆ ನಾನು ಹೇಳಲೇಬೇಕಾದ ಅಂಶ ಎಂದರೆ, ಸರ್ವಶ್ರೀ. ಬಿ.ಎನ್.ರಾವ್, ಸಂವಿಧಾನ ಸಲಹೆಗಾರ, ಶ್ರೀ ಎಸ್.ಎನ್. ಮುಖರ್ಜಿ, ಜಂಟಿ ಕಾರ್ಯದರ್ಶಿ ಮತ್ತು ಸಂವಿಧಾನ ಸಮಿತಿಯ ಕಾರ್ಯಾಲಯದ ಸಿಬ್ಬಂದಿ ವರ್ಗದವರ ಸಹಾಯ ಮತ್ತು ಸಹಕಾರಗಳನ್ನು ನಾನು ದಾಖಲಿಸಬಯಸುವೆ.

ತಮ್ಮ ನಂಬುಗೆಯ
**ಬಿ.ಆರ್. ಅಂಬೇಡ್ಕರ್**

**ಭಾರತದ ವಿಶೇಷ ಗೆಜೆಟ್ ಫೆಬ್ರವರಿ ೨೬, ೧೯೪೮**

## ಭಾರತ ಸಂವಿಧಾನದ ಕರಡು

**ಪೀಠಿಕೆ**

ನಾವು ಭಾರತದ ಜನರು ಶ್ರದ್ಧಾಪೂರ್ವಕವಾಗಿ, ಭಾರತವನ್ನು ಸಾರ್ವಭೌಮ, ಪ್ರಜಾಸತ್ತಾತ್ಮಕ ಗಣರಾಜ್ಯ* ಎಂದು ನಿರ್ಣಯಿಸಿ ಅದರ ಪ್ರಜೆಗಳಿಗೆ :

| | | |
|---|---|---|
| **ನ್ಯಾಯ** | : | **ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ;** |
| **ಸ್ವಾತಂತ್ರ್ಯ** | : | **ವಿಚಾರದ, ವಿಶ್ವಾಸದ, ನಂಬಿಕೆಯ, ಆರಾಧನೆ ಹಾಗೂ ಅಭಿವ್ಯಕ್ತಗೊಳಿಸುವ;** |
| **ಸಮಾನತೆ** | : | **ಸ್ಥಾನ ಮತ್ತು ಅವಕಾಶ ಮತ್ತು ಈ ಭಾವನೆಗಳನ್ನು ಸಮಸ್ತರಲ್ಲಿ ಹರಡಲು;** |
| **ಭ್ರಾತೃತ್ವ** | : | **ವ್ಯಕ್ತಿ ಗೌರವದ ಮತ್ತು ರಾಷ್ಟ್ರದ ಐಕ್ಯತೆಯನ್ನು ಕಾಪಾಡುವಲ್ಲಿ;** |

ನಮ್ಮ ಸಂವಿಧಾನ ಸಭೆಯಲ್ಲಿ ಈ ದಿನ ________(ಮೇ, ೧೯೪೮ ಕ್ರಿ.ಶ.) ಈ ಸಂವಿಧಾನವನ್ನು ಅಂಗೀಕರಿಸಿ ಅನುಷ್ಠಾನಗೊಳಿಸಲು ಅಧಿನಿಯಮಿತಗೊಳಿಸಿ ಆತ್ಮಾರ್ಪಿತ ಮಾಡಿಕೊಂಡಿರುವೆವು.

---

* ಸಂವಿಧಾನ ಸಭೆಯ ನಿರ್ಣಯದಂತೆ, ಬ್ರಿಟಿಷ್ ಕಾಮನ್‌ವೆಲ್ತ್ ಮತ್ತು ಈ ಪ್ರಜಾಸತ್ತಾತ್ಮಕ ಗಣರಾಜ್ಯದ ಮಧ್ಯೆ ಇರಬೇಕಾದ ಬಾಂಧವ್ಯದ ಬಗೆಗೆ ನಿರ್ಣಯ ಅಂಗೀಕರಿಸಬೇಕಾಗಿದೆ.

## ಭಾಗ – ೧
## ಒಕ್ಕೂಟ ಮತ್ತು ಅದರ ಪ್ರದೇಶದ ಗಡಿಗಳು ಮತ್ತು ವ್ಯಾಪ್ತಿ

**ಒಕ್ಕೂಟದ ಪ್ರದೇಶ – ಹೆಸರು**

೧. *(೧) ಭಾರತವು ರಾಜ್ಯಗಳ ಒಕ್ಕೂಟವಾಗಿದೆ.

(೨) ರಾಜ್ಯಗಳೆಂದರೆ ಮೊದಲನೆಯ ಅನುಸೂಚಿಯಲ್ಲಿ ಸೂಚಿಸಲಾದ ಭಾಗ– I, II ಮತ್ತು III

(೩) ಭಾರತದ ಪ್ರದೇಶ ಈ ವಿಧವಾಗಿ ಒಡಗೂಡಿದೆ.

(ಅ) ರಾಜ್ಯಗಳ ಪ್ರದೇಶ

(ಆ) ಮೊದಲನೆಯ ಅನುಸೂಚಿಯಲ್ಲಿ ತಿಳಿಸಿರಬಹುದಾದ ಮತ್ತು ಭಾಗ – IVರ ೧೦ರಲ್ಲಿ ಹೇಳಿರುವ ಪ್ರದೇಶಗಳು.

(ಇ) ಸ್ವಾಧೀನ ಪಡಿಸಿಕೊಳ್ಳಬಹುದಾದ ಪ್ರದೇಶ.

**ನೂತನ ರಾಜ್ಯಗಳ ನಿರ್ಮಾಣ ಹಾಗೂ ಸೇರ್ಪಡೆ**

೨. ಸಂಸತ್ತು ಕಾಲಕಾಲಕ್ಕೆ ಕಾನೂನುಗಳನ್ನು ರಚಿಸಿ ನೂತನ ರಾಜ್ಯಗಳನ್ನು ನಿರ್ಮಿಸುವ ಹಾಗೂ ಸೇರ್ಪಡೆ ಮಾಡುವಲ್ಲಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು.

**ನೂತನ ರಾಜ್ಯಗಳ ರಚನೆ ಮತ್ತು ಪ್ರದೇಶಗಳು, ಗಡಿಗಳು ಅಥವಾ ಅಸ್ತಿತ್ವದಲ್ಲಿರುವ ರಾಜ್ಯಗಳ ಹೆಸರುಗಳ ಬದಲಾವಣೆ**

೩. ನೂತನ ರಾಜ್ಯಗಳನ್ನು ನಿರ್ಮಿಸುವುದು, ವಿಸ್ತೀರ್ಣವನ್ನು, ಗಡಿಗಳನ್ನು ಅಥವಾ ಹಾಲಿ ಇರುವ ರಾಜ್ಯಗಳ ಹೆಸರುಗಳನ್ನು ಬದಲಾಯಿಸುವುದು.

ಅ. ಜಾರಿಯಲ್ಲಿರುವ ರಾಜ್ಯದ ಪ್ರದೇಶದ ಗಡಿಯನ್ನು ಬದಲಾಯಿಸಿ ಅಥವಾ ಎರಡು ರಾಜ್ಯಗಳ ಪ್ರದೇಶವನ್ನು ಒಗ್ಗೂಡಿಸಿ ನೂತನ ರಾಜ್ಯವನ್ನು ನಿರ್ಮಿಸಬಹುದು;

ಬ. ಯಾವುದೇ ರಾಜ್ಯದ ಪ್ರದೇಶವನ್ನು ವಿಸ್ತರಿಸಬಹುದು;

ಕ. ಯಾವುದೇ ರಾಜ್ಯದ ಪ್ರದೇಶವನ್ನು ಕುಗ್ಗಿಸಲೂಬಹುದು;

ಡ. ರಾಜ್ಯಗಳ ಗಡಿಗಳನ್ನು ಬದಲಾಯಿಸಬಹುದು;

ಇ. ರಾಜ್ಯಗಳ ಹೆಸರನ್ನೂ ಬದಲಾಯಿಸಬಹುದು;

ಈ ಉದ್ದೇಶಕ್ಕಾಗಿ ಸಂಸತ್ತಿನ ಎರಡೂ ಸದನಗಳಲ್ಲಿ ಕೇವಲ

---

* ಬ್ರಿಟಿಷ್ ಉತ್ತರ ಅಮೆರಿಕಾದ ೧೮೩೭ರ ಕಾಯ್ದೆಯಂತೆ; ಭಾರತವು ಸಂಯುಕ್ತ ರಾಜ್ಯ ವ್ಯವಸ್ಥೆಯನ್ನು ಹೊಂದಿದ್ದರೂ, ಸಮಿತಿಯ ಅಭಿಪ್ರಾಯದಲ್ಲಿ ಅದನ್ನು ಒಕ್ಕೂಟವೆಂದೇ ಕರೆಯಲು ಸಮ್ಮತಿಸಲಾಗಿದೆ.

ಭಾರತ ಸರಕಾರ ಮಾತ್ರ ಕಾನೂನಿನನ್ವಯ ಬದಲಾವಣೆ ತರಬಹುದು:

ಅ. ಹೇಗೆಂದರೆ

೧) ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಶಾಸಕಾಂಗವು ಪ್ರದೇಶದ ಬದಲಾವಣೆ ಅಥವಾ ಹೊರತುಪಡಿಸುವಂತೆ, ಬಹುಮತದಿಂದ ರಾಷ್ಟ್ರಪತಿಯವರಿಗೆ ಮನವಿ ಮಾಡಿಕೊಂಡಾಗ;

೨) ಯಾವುದೇ ರಾಜ್ಯದ ಗಡಿ ಬದಲಾವಣೆ ಅಥವಾ ಹೆಸರನ್ನು ಬದಲಾಯಿಸುವ ಬಗೆಗೆ ರಾಜ್ಯದ ಶಾಸನ ಸಭೆಯ ನಿರ್ಣಯದಿಂದ;

ಬ. ಮೊದಲನೆಯ ಅನುಸೂಚಿಯ ಭಾಗ III ರಲ್ಲಿ ನಮೂದಿಸಿರುವ ರಾಜ್ಯವನ್ನು ಅಥವಾ ಹೆಸರಿನ ಬದಲಾವಣೆಯ ಬೇಡಿಕೆಗೆ ಸೇರಿದಂತೆ* ರಾಜ್ಯದ ಶಾಸಕಾಂಗದ ಅಭಿಪ್ರಾಯವನ್ನು ಮತ್ತು ಮಸೂದೆಯನ್ನು ಮಂಡಿಸುವ ವಿಷಯದಲ್ಲಿ ಮತ್ತು ಸಮಿತಿಯನ್ನು ರಾಷ್ಟ್ರಪತಿಯವರು ಅರಿತುಕೊಂಡ ನಂತರ,

೪ (೧). ಈ ಸಂವಿಧಾನದ ವಿಧಿ ೨ ಅಥವಾ ವಿಧಿ ೩ ರಲ್ಲಿ ಉಲ್ಲೇಖಿಸಲಾದ ಯಾವುದೇ ಕಾನೂನು ಮೊದಲನೆ ಅನುಸೂಚಿಯ ತಿದ್ದುಪಡಿಗಳ ಉಪಬಂಧಗಳನ್ನು ಒಳಗೊಂಡಿದ್ದು ಅದು ಕಾನೂನಿನ ಉಪಬಂಧಗಳಿಗೆ ಪರಿಣಾಮ ಉಂಟುಮಾಡಲು ಅಗತ್ಯವಾಗಿರುತ್ತದೆ. ಮತ್ತು ಪಾರ್ಲಿಮೆಂಟಿಗೆ ಅಗತ್ಯವೆಂದು ಕಂಡುಬರುವ ಸಾಂದರ್ಭಿಕ ಮತ್ತು ತತ್ಪರಿಣಾಮವಾದ ಉಪಬಂಧಗಳನ್ನು ಕೂಡ ಒಳಗೊಂಡಿರುತ್ತವೆ.

(೨) ವಿಧಿ ೩೦೪ರ ಉದ್ದೇಶಕ್ಕೆ ಮೇಲೆ ಹೇಳಿದ ಯಾವುದೇ ಕಾನೂನು ಸಂವಿಧಾನದ ತಿದ್ದುಪಡಿಯಿಂದ ಪರಿಗಣಿಸಲಾಗದು.

---

* ಸಮಿತಿಯ ಅಭಿಪ್ರಾಯದಲ್ಲಿ ಯಾವುದೇ ರಾಜ್ಯ, ಭಾಗ III ಹೊರತಾಗಿ, ಪೂರ್ವಸಮ್ಮತಿ ಬೇಕಾಗಿರದೆ, ರಾಷ್ಟ್ರಪತಿಯವರು ರಾಜ್ಯದ ಶಾಸಕಾಂಗದ ಅಭಿಪ್ರಾಯವನ್ನು ಪಡೆದರೆ ಸಾಕು. ಮೊದಲನೆ ಅನುಸೂಚಿಗೆ ತಿದ್ದುಪಡಿ ಮತ್ತು ಸಾಂದರ್ಭಿಕ ಮತ್ತು ತತ್ಪರಿಣಾಮವಾದ ವಿಷಯಗಳ ತಿದ್ದುಪಡಿ ಒದಗಿಸುವುದಕ್ಕೆ ೨ ಮತ್ತು ೩ನೇ ವಿಧಿಗಳ ಅಡಿಯಲ್ಲಿ ಮಾಡಿದ ಕಾನೂನು ಮತ್ತು ಮೊದಲನೆ ಅನುಸೂಚಿ ಭಾಗ VII ರಲ್ಲಿ ನಮೂದಿಸಿದ ಯಾವುದೇ ರಾಜ್ಯ ಗಡಿಗಳ ಮೇಲೆ ಪರಿಣಾಮ ಬೀರುವಂತಹ ಪ್ರಸ್ತಾಪವೆದ್ದಾಗ ರಾಜ್ಯದ ಪೂರ್ವಭಾವಿ ಒಪ್ಪಿಗೆಯನ್ನು ಪಡೆದುಕೊಂಡಿರಬೇಕು.

## ಭಾಗ II
## ಪೌರತ್ವ

**ಸಂವಿಧಾನದ ಆರಂಭದಂದು ಪೌರತ್ವ**

೫. ಈ ಸಂವಿಧಾನ ಜಾರಿಗೆ ಬಂದ ದಿನಾಂಕದಿಂದ :

(ಅ) ಪ್ರತಿಯೋರ್ವ ವ್ಯಕ್ತಿ ಅಥವಾ ಅವರ ಪೋಷಕರು, ಅಥವಾ ಅವರ ಅಜ್ಜ-ಅಜ್ಜಿಯರು ಸಂವಿಧಾನದಲ್ಲಿ ಹೇಳಲಾದ ಪ್ರದೇಶಗಳಲ್ಲಿ ವಾಸಿಗಳಾಗಿದ್ದರೆ ಮತ್ತು ಅವರು ೧೯೪೭ ಏಪ್ರಿಲ್ ೧ರ ನಂತರ ವಿದೇಶಗಳಲ್ಲಿ ಶಾಶ್ವತ ನೆಲೆ ಹೊಂದದೇ ಇದ್ದರೆ ಮತ್ತು

(ಬ) ಪ್ರತಿಯೋರ್ವ ವ್ಯಕ್ತಿ ಅಥವಾ ಅವರ ಪೋಷಕರು, ಅಥವಾ ಅವರ ಅಜ್ಜ-ಅಜ್ಜಿಯರು ೧೯೩೫ನೆಯ ಮೂಲ ಕಾಯ್ದೆಯಂತೆ ಬರ್ಮಾ, ಸಿಲೋನ್ ಅಥವಾ ಮಲಯಾಗಳಲ್ಲಿ ಜನಿಸಿದ್ದು ಭಾರತೀಯ ವಾಸಿಗಳಾಗಿದ್ದರೆ ಸಂವಿಧಾನದ ವ್ಯಾಖ್ಯೆಯಂತೆ, ಅವರೆಲ್ಲರೂ ಭಾರತೀಯ ಪೌರತ್ವವನ್ನು ಪಡೆಯಬಹುದು, ಆದರೆ ಸಂವಿಧಾನ ಜಾರಿಗೆ ಬಂದಾಗ ಅವರು ವಿದೇಶೀ ಪೌರತ್ವವನ್ನು ಹೊಂದಿರಕೂಡದು.

**ವಿವರಣೆ :** ಈ ವಿಧಿಯ ಎರಡನೆಯ ಉಪನಿಯಮಕ್ಕೆ ಸೇರಿದಂತೆ ಯಾವುದೇ ವ್ಯಕ್ತಿಯನ್ನು ಭಾರತ ಪ್ರದೇಶದ ನಿವಾಸಿ ಎಂದೇ ಭಾವಿಸಲಾಗುವುದು –

(೧) ೧೯೨೫ರ ಭಾರತೀಯ ವಾರಸುದಾರ ಕಾನೂನು ಭಾಗ IIರ ಅಡಿಯಲ್ಲಿಯ ಅಂಶಗಳಂತೆ ಅವನನ್ನು ಭಾರತವಾಸಿ ಎಂದು ಭಾವಿಸಲಾಗುವುದು.

*(೨) ಸಂವಿಧಾನ ಜಾರಿಗೆ ಬರುವ ದಿನಾಂಕದ ಪೂರ್ವದಲ್ಲಿ ಒಂದು ತಿಂಗಳು ಭಾರತೀಯ ಪ್ರದೇಶದ ವಾಸಿಯಾಗಿದ್ದು ಜಿಲ್ಲಾ ಮ್ಯಾಜಿಸ್ಟ್ರೇಟರ್ ಕಾರ್ಯಾಲಯದಲ್ಲಿ ಪೌರತ್ವಕ್ಕೆ ಅರ್ಜಿ ನೀಡಿದ್ದಲ್ಲಿ ಅವನಿಗೆ ಪೌರತ್ವ ದೊರೆಯುತ್ತದೆ.

**ಪೌರತ್ವದ ಹಕ್ಕು ಕುರಿತಂತೆ ಸಂಸತ್ತು ಜಾರಿಗೊಳಿಸುವ ಅನ್ವಯಿಕ ಕಾಯದೆ**

೬. ಪೌರತ್ವಕ್ಕೆ ಸಂಬಂಧಿಸಿದ ಇತರ ಕಾಯ್ದೆಗಳನ್ನು ರಚಿಸುವ ಅಧಿಕಾರವನ್ನು ಸಂಸತ್ತು ಹೊಂದಿದೆ.

---

* ಸಮಿತಿಯ ಅಭಿಪ್ರಾಯದಲ್ಲಿ ಈ ಮಧ್ಯಂತರ ಕಾರ್ಯಾಚರಣೆ ಕಾರ್ಯವನ್ನು ಶಾಸನದ ಅಥವಾ ಬೇರೆ ಯಾವುದೇ ವಿಧಾನದಿಂದ ಸಂವಿಧಾನ ಜಾರಿಗೆ ಬರುವ ಮುಂಚೆಯೇ ಅರ್ಜಿಗಳ ಆಧಾರದ ಮೇಲೆ II ಉಪನಿಬಂಧನೆಯ ವಿವರಣೆಯಂತೆ ನಿರ್ಣಯಿಸಬಹುದಾಗಿದೆ.

## ಭಾಗ III
## ಮೂಲಭೂತ ಹಕ್ಕುಗಳು
## ಸಾಮಾನ್ಯ

**ಪರಿಭಾಷೆ**

೭. ಈ ಭಾಗದಲ್ಲಿ ಸಾಮಾನ್ಯವಾಗಿ "ರಾಜ್ಯ" ಎಂದರೆ ಭಾರತ ಸರಕಾರ ಮತ್ತು ಸಂಸತ್ತು ಮತ್ತು ಪ್ರತಿಯೊಂದು ರಾಜ್ಯದ ಸರಕಾರ ಮತ್ತು ಶಾಸನ ಸಭೆ, ಸ್ಥಳೀಯ ಅಥವಾ ಭಾರತ ಭೂಭಾಗದೊಳಗೆ ಎಲ್ಲಾ ಸ್ಥಳೀಯ ಅಥವಾ ಇತರ ಅಧಿಕಾರಿಗಳು ಎಂದೇ ಭಾವಿಸಬೇಕು.

**ಹೊರತುಪಡಿಸುವಿಕೆ**

೮. (೧) ಭಾರತ ಪ್ರದೇಶದಲ್ಲಿ ಸಂವಿಧಾನ ಜಾರಿಗೆ ಮುನ್ನ ಇರಬಹುದಾದ ಎಲ್ಲಾ ಕಾನೂನುಗಳೂ ಸಂವಿಧಾನದ ಅಂಶಗಳಿಗೆ ವಿರೋಧವಿದ್ದಲ್ಲಿ ಅವು ತಾವೇ ತಾವಾಗಿ ಅನೂರ್ಜಿತ ಹೊಂದುವುವು.

(೨) ಈ ಭಾಗದಲ್ಲಿ ತಿಳಿಸಿರಬಹುದಾದ ಹಕ್ಕುಗಳ ವಿರುದ್ಧ ರಾಜ್ಯ ಕಾನೂನುಗಳನ್ನು ರಚಿಸುವಂತಿಲ್ಲ. ಸಂವಿಧಾನದ ವಿರುದ್ಧ ರಚಿಸಿದ ಕಾನೂನುಗಳು ಸಂವಿಧಾನ ಬಾಹಿರವಾಗಿರುವುದರಿಂದ ಅವು ಜಾರಿಗೊಳ್ಳಲಾರವು.

* ಆದರೆ ಈ ಬಗೆಗೆ ಜಾರಿಯಲ್ಲಿರಬಹುದಾದ ಕಾಯ್ದೆಗಳಿಂದ ಅಸಮಾನತೆ, ಭೇದಭಾವ, ಅನಾನುಕೂಲತೆ, ವ್ಯತ್ಯಾಸಗಳು ಉದ್ಭವಿಸುವುದಾದರೆ ಅದನ್ನು ನಿವಾರಿಸಲು ಉಪಕ್ರಮಿಸಬಹುದು.

(೩) ಈ ವಿಧಿಯಲ್ಲಿ "ಕಾನೂನು" ಎಂದರೆ ಸುಗ್ರೀವಾಜ್ಞೆ, ಆಜ್ಞೆ, ಉಪಾಜ್ಞೆ, ಕಾನೂನಿನ ಕ್ರಮ ಪ್ರಕಟಣೆ, ಭಾರತೀಯ ಪ್ರದೇಶದಲ್ಲಿ ಜಾರಿಯಲ್ಲಿರಬಹುದಾದ ಶಾಸನಾತ್ಮಕ ಸಂಪ್ರದಾಯಗಳನ್ನು ಒಳಗೊಂಡಿರುವ ಭಾವನೆಗಳು; ಎಂದೇ ಭಾವಿಸಬಹುದು.

---

* ಜಾರಿಯಲ್ಲಿರಬಹುದಾದ ಭೇದಭಾವಗಳನ್ನು ನಿವಾರಿಸಲು ವಿಶೇಷ ಕಾನೂನುಗಳನ್ನು ರಚಿಸುವ ಅಧಿಕಾರವನ್ನು ರಾಜ್ಯ ಹೊಂದಿದೆ. ಹೀಗಾಗಿ ಈ ಕಾನೂನುಗಳು ಮೇಲುನೋಟಕ್ಕೆ ವ್ಯತ್ಯಾಸಕಂಡರೂ ಭೇದಭಾವನೆಗಳನ್ನು ನಿವಾರಿಸಲು ಅವು ಜಾರಿಯಲ್ಲಿರುತ್ತವೆ.

## ಸಮಾನತೆಯ ಹಕ್ಕುಗಳು

**ಧರ್ಮ, ಜಾತಿ, ಪಂಗಡ, ಲಿಂಗ ಭೇದಭಾವನೆಗಳನ್ನು ವಿರೋಧಿಸುವುದು**

೯. (೧) ರಾಜ್ಯವು ತನ್ನ ನಾಗರಿಕರನ್ನು ಜಾತಿ, ಧರ್ಮ, ಪಂಗಡ ಅಥವಾ ಲಿಂಗ ಭೇದ ಭಾವನೆಗಳಿಗೆ ಗುರಿ ಮಾಡುವಂತಿಲ್ಲ.

ವಿಶೇಷವಾಗಿ : (ಅ) ಸಾರ್ವಜನಿಕ ಸ್ಥಳ, ಮುಂಗಟ್ಟುಗಳು, ಹೋಟೆಲ್, ರೆಸ್ಟೋರೆಂಟು ಹಾಗೂ ಸಾರ್ವಜನಿಕ ಮನೋರಂಜನಾ ಸ್ಥಾನಗಳು.

(ಬ) ಬಾವಿಗಳ ಉಪಯೋಗ, ರಸ್ತೆಗಳ, ಸಾರ್ವಜನಿಕ ಉದ್ಯಾನ ವಿಹಾರ ಸ್ಥಾನಗಳಲ್ಲಿ ಜಾತಿ ಧರ್ಮ ಪಂಥ ಲಿಂಗ ಭೇದಭಾವನೆಗಳಿಗೆ ಆಸ್ಪದವಿಲ್ಲ.

(೨) ಆದರೆ ಸ್ತ್ರೀ ಹಾಗೂ ಮಕ್ಕಳಿಗೆಂದೇ ವಿಶೇಷ ವ್ಯವಸ್ಥೆ ಕಲ್ಪಿಸುವ ಅಧಿಕಾರ ರಾಜ್ಯಕ್ಕೆ ನೀಡಿದೆ.

**೧೦. ಸಾರ್ವಜನಿಕ ಹುದ್ದೆಗಳ ವಿಷಯದಲ್ಲಿ ಸಮಾನ ಅವಕಾಶ**

೧೦. (೧) ರಾಜ್ಯದ ಅಡಿಯಲ್ಲಿಯ ಹುದ್ದೆಗಳಲ್ಲಿ ಸಕಲ ನಾಗರಿಕರಿಗೂ ಸಮಾನ ಅವಕಾಶವನ್ನು ನೀಡಲಾಗಿದೆ.

(೨) ಯಾವ ನಾಗರಿಕನೇ ಆಗಿರಲಿ, ಧರ್ಮ, ಜಾತಿ, ಲಿಂಗ ಮತ್ತು ವಂಶ ಹುಟ್ಟಿನ ಆಧಾರಗಳ ತಾರತಮ್ಯ ಇರದೇ ಸಮಾನ ಅರ್ಹತೆ ಹೊಂದಿರುತ್ತಾರೆ.

(೩) ಆದರೆ ಈ ವಿಧಿಯಲ್ಲಿ ತಿಳಿಸಿದಂತೆ, ರಾಜ್ಯವು* ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸಲು ಯಾವ ನಿರ್ಬಂಧಗಳೂ ಇಲ್ಲ.

(೪) ಈ ವಿಧಿಯಲ್ಲಿ ಹೇಳಿದಂತಹ ಯಾವ ವಿಷಯವೂ, ಯಾವುದೇ ಧರ್ಮದ ಅಥವಾ ಉಪಧರ್ಮದ ಸಂಘಗಳಿಗೆ ಸಂಬಂಧಿಸಿರಬೇಕೆಂಬ ಕಡ್ಡಾಯವಿರದೇ ಯಾವುದೇ ಜಾತಿ ಧರ್ಮದ ನಂಬಿಕೆ ಹೊಂದಿರಬಹುದು. ಈ ವಿಷಯಕ್ಕೆ ಈ ವಿಧಿಯಿಂದ ಯಾವ ವಿಧದ ಅಡಚಣೆ ಇಲ್ಲ.

**ಅಸ್ಪೃಶ್ಯತೆ ನಿವಾರಣೆ**

೧೧. "ಅಸ್ಪೃಶ್ಯತೆ"ಯನ್ನು ನಿವಾರಿಸುವಲ್ಲಿ ಮತ್ತು ಅದನ್ನು ಯಾವುದೇ ವಿಧಾನದಲ್ಲಿ ಆಚರಿಸುವುದನ್ನು ನಿಷೇಧಿಸಲಾಗಿದೆ. ಅಸ್ಪೃಶ್ಯತೆಯಿಂದ ಉಂಟಾಗುವ ಯಾವುದೇ ಅನರ್ಹತೆಯನ್ನು ಕಾನೂನಿನ ವಿರೋಧವೆಂದು ಪರಿಗಣಿಸಿ ಶಿಕ್ಷೆ ನೀಡಲಾಗುವುದು.

---

* ಸಮಿತಿಯ ಅಭಿಪ್ರಾಯದಲ್ಲಿ 'ನಾಗರಿಕ ವರ್ಗ'ದ ಬದಲು 'ಹಿಂದುಳಿದ ವರ್ಗ' ಪದ ಸೇರ್ಪಡೆಯಾಗಬೇಕು.

**ಬಿರುದಾವಳಿಗಳನ್ನು ನಿಷೇಧಿಸಿದೆ**

೧೨. (೧) ರಾಜ್ಯದಿಂದ ಯಾವ ಬಿರುದಾವಳಿಗಳನ್ನು ನೀಡಲಾಗದು.

(೨) ಪರರಾಷ್ಟ್ರಗಳಿಂದ ಭಾರತದ ನಾಗರಿಕನು ಯಾವ ಬಿರುದುಗಳನ್ನೂ ಸ್ವೀಕರಿಸಬಾರದು.

(೩) ರಾಜ್ಯದ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಯಾವ ನಾಗರಿಕನೂ, ರಾಷ್ಟ್ರಪತಿಯ ಪರವಾನಗಿ ಇಲ್ಲದೇ, ಪರರಾಷ್ಟ್ರಗಳಿಂದ ಸಂಭಾವನೆ, ಬಿರುದು ಅಥವಾ ಯಾವ ಅಧಿಕಾರವನ್ನೂ ಪಡೆಯುವಂತಿಲ್ಲ.

**ವಾಕ್‌ಸ್ವಾತಂತ್ರ್ಯ ಇತ್ಯಾದಿಗಳನ್ನು ರಕ್ಷಿಸುವ ಹಲವು ಹಕ್ಕುಗಳು**

೧೩. (೧) ಈ ವಿಧಿಯ ಇತರ ಅಂಶಗಳಂತೆ ಸಮಸ್ತ ನಾಗರಿಕರೂ ಈ ವಿಧವಾದ ಹಕ್ಕುಗಳನ್ನು ಹೊಂದಿರುತ್ತಾರೆ:–

(ಅ) ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ;

(ಆ) ಆಯುಧಗಳನ್ನು ಹೊಂದದೆ ಶಾಂತಿಯುತ ಸಭೆ ಸೇರುವುದು;

(ಇ) ಸಂಘಟನೆ, ಸಂಸ್ಥೆಗಳನ್ನು ರಚಿಸುವುದು;

(ಈ) ಭಾರತದ ಪ್ರದೇಶದಲ್ಲಿ ಮುಕ್ತವಾಗಿ ಸಂಚರಿಸುವುದು;

(ಉ) ಭಾರತದ ಯಾವುದೇ ಭಾಗದಲ್ಲಿ ನೆಲಸುವುದು ಹಾಗೂ ವಾಸ ಮಾಡುವುದು;

(ಊ) ಆಸ್ತಿಯನ್ನು ಹೊಂದುವ ಹಾಗೂ ಮಾರಾಟ ಮಾಡುವುದು;

(ಋ) ಯಾವುದೇ ಹುದ್ದೆ, ವ್ಯವಹಾರ, ವ್ಯಾಪಾರ ಮಾಡುವುದು;

(೨) (೧)ನೆಯ ಕಲಮಿನ ಉಪಕಲಮಿನ (ಅ) ಅಡಿಯಲ್ಲಿ ತಿಳಿಸಿದಂತೆ, ರಾಜ್ಯದ ಅಸ್ತಿತ್ವಕ್ಕೆ ಅಪಾಯ ಒಡ್ಡುವ, ಅಪಮಾನಕರ ಹೇಳಿಕೆ, ಮಿಥ್ಯಾರೋಪ, ವಿದ್ರೋಹಿ ಕಾರ್ಯಕ್ಕೆ ಪ್ರೋತ್ಸಾಹ ನೀಡುವ ಹೇಳಿಕೆಗಳ ವಿರುದ್ಧ ಕಾನೂನು ರಚಿಸುವಲ್ಲಿ ಯಾವ ಅಡ್ಡಿಯನ್ನೂ ಹೇರಲಾಗದು. ಹೀಗಾಗಿ ಈ ದಿಶೆಯಲ್ಲಿ ಚಾಲ್ತಿಯಲ್ಲಿರುವ ಕಾಯ್ದೆ ಅಥವಾ ನೂತನ ಕಾಯ್ದೆಯನ್ನು ರಚಿಸಿ, ಉಪಯೋಗಿಸುವ ಅಧಿಕಾರ ಹೊಂದಿದೆ.

(೩) ಇದೇ ಕಲಮಿನ (ಆ) ಉಪಕಲಮಿನ ಅಡಿಯಲ್ಲಿ ಹೇಳಿದಂತೆ, ಜಾರಿಯಲ್ಲಿರುವ ಕಾಯ್ದೆಯನ್ನು ಬಳಸಿಕೊಳ್ಳಲು ಅಥವಾ ನೂತನ ಕಾನೂನನ್ನು ರಚಿಸಲು, ಸಾರ್ವಜನಿಕ ಆಡಳಿತಕ್ಕೆ ಧಕ್ಕೆ ಒದಗಬಹುದಾದ ಸಮಯದಲ್ಲಿ, ಅಧಿಕಾರವನ್ನು ರಾಜ್ಯಕ್ಕೆ ನೀಡಲಾಗಿದೆ.

(೪) ಇದೇ ಕಲಮಿನ (ಇ) ಉಪಕಲಮಿನಂತೆ, ಸಾರ್ವಜನಿಕ ಹಿತರಕ್ಷಣೆ ಕುರಿತಂತೆ ಪ್ರಸ್ತುತ ಅಥವಾ ನೂತನ ಶಾಸನದಿಂದ, ಹಕ್ಕುಗಳನ್ನು ಸ್ಥಗಿತಗೊಳಿಸಬಹುದು.

(೫) ಸಾರ್ವಜನಿಕ ಹಿತರಕ್ಷಣೆ ಮತ್ತು ಯಾವುದೇ ಮೂಲ ನಿವಾಸಿ ಪಂಗಡಗಳ (ಸಮಿತಿಯ ಅಭಿಪ್ರಾಯದಂತೆ, ಅಲ್ಪ ಸಂಖ್ಯಾತರ ರಕ್ಷಣೆ ಕುರಿತಂತೆ ಈ ವಿಧಿಯಲ್ಲಿ ಏನನ್ನೂ ಹೇಳಲಾಗದು) ಹಿತಾಸಕ್ತಿ ಕಾಪಾಡುವಲ್ಲಿ ಈ ಕಲಮಿನ (ಈ)(ಉ) ಮತ್ತು (ಊ)ಗಳಾಗಲೀ ಅಥವಾ ಪ್ರಸ್ತುತ ಜಾರಿಯಲ್ಲಿರುವ ಕಾಯ್ದೆಗಳಾಗಲೀ ಅಡ್ಡಿ ಉಂಟುಮಾಡಲಾರವು.

(೬) ಸಾರ್ವಜನಿಕ ಕಾನೂನು ಆಡಳಿತ ವ್ಯವಸ್ಥೆ ನೀತಿ ಅಥವಾ ಸೌಖ್ಯದ ದೃಷ್ಟಿಯಿಂದ ಯಾವುದೇ ಹುದ್ದೆ ಅಥವಾ ಕಾರ್ಯಕ್ಕೆ ಅನಿವಾರ್ಯವಾದ ತಾಂತ್ರಿಕ ಅರ್ಹತೆಯನ್ನು ವಿಧಿಸುವಲ್ಲಿ ಈ ಕಲಮಿನ (ಎ)ಯಲ್ಲಿ ತಿಳಿಸಲಾದ ಯಾವ ವಿಷಯವೂ ಅಡ್ಡಿ ಬಾರದು.

**ಅಪರಾಧ ಶಿಕ್ಷೆ–ರಕ್ಷಣೆ ಬಗೆಗೆ**

೧೪. (೧) ಯಾವುದೇ ವ್ಯಕ್ತಿಯನ್ನು, ಕಾನೂನು ಭಂಗದ ಕಾರ್ಯವೆಸಗಿದಾಗ ಮಾತ್ರ ಬಂಧನಕ್ಕೆ ಗುರಿ ಮಾಡಬಹುದು. ಅಲ್ಲದೆ ಅವನು ಎಸಗಿದ ಅಪರಾಧಕ್ಕೆ ಅನುಗುಣವಾದ ಶಿಕ್ಷೆಯನ್ನು ಮಾತ್ರ ವಿಧಿಸಬೇಕೇ ಹೊರತು ಅಧಿಕವಲ್ಲ; ಇದು ಕಾನೂನಿಗೆ ಸಮ್ಮತವಾಗಿರಬೇಕು.

(೨) ಯಾವುದೇ ಅಪರಾಧಕ್ಕೆ ಕೇವಲ ಒಂದು ಬಾರಿ ಮಾತ್ರ ಶಿಕ್ಷೆಯನ್ನು ನೀಡಬಹುದು.

(೩) ಅಪರಾಧಕ್ಕೆ ಗುರಿಯಾದ ವ್ಯಕ್ತಿಯನ್ನು ತನ್ನ ವಿರೋಧಕ್ಕೆ ಸಾಕ್ಷಿ ನೀಡುವಂತೆ ಆಗ್ರಹಿಸಬಾರದು.

**ಜೀವ, ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ ಇವುಗಳಿಗೆ ಕಾನೂನು ರಕ್ಷಣೆ**

*೧೫. ಕಾನೂನಿನ ಕ್ರಮಕ್ಕೆ ಸೂಕ್ಷ್ಮವಾಗಿದ್ದಾಗ ಮಾತ್ರ ವ್ಯಕ್ತಿಗೆ ಮರಣದಂಡನೆ ಶಿಕ್ಷೆ ವ್ಯಕ್ತಿ ಸ್ವಾತಂತ್ರ ಹಾಗೂ ಸಮಾನತೆಯ

---

* ಸಮಿತಿಯ ಅಭಿಪ್ರಾಯದಂತೆ ಅಲ್ಪಸಂಖ್ಯಾತರ ರಕ್ಷಣೆ ಕುರಿತಂತೆ ಈ ವಿಧಿಯಲ್ಲಿ ಏನನ್ನೂ ಹೇಳಲಾಗದು.

ಸಮಿತಿಯ ಅಭಿಪ್ರಾಯದಲ್ಲಿ 'ಸ್ವಾತಂತ್ರ್ಯ' ಪದದೊಂದಿಗೆ 'ವ್ಯಕ್ತಿ' ಪದವನ್ನು ಸೇರ್ಪಡಿಸಬೇಕು. ಈ ಪದ ಜೋಡಿಸದೆ ಹೋದರೆ ಸ್ವಾತಂತ್ರ್ಯ ಪದವು ತುಂಬಾ ವಿಶಾಲಾರ್ಥದಲ್ಲಿ ಉಪಯೋಗವಾಗುವ ಆಸ್ಪದ ಪಡೆದು ಈಗಾಗಲೇ ವಿಧಿ ೧೩ರಲ್ಲಿ ತಿಳಿಸಲಾದ ಸ್ವಾತಂತ್ರ್ಯಗಳಿಗೂ ಅನ್ವಯಿಸಬಹುದು. ಸಮಿತಿಯು 'ಕಾನೂನಿನ ಕ್ರಮದ ಪ್ರಕಾರ' ಎಂಬ ಪದಗಳನ್ನು "ಕಾನೂನಿನ ವಿಧಾನ"ದ ಬದಲಾಗಿ ಬಳಸಿದೆ. (ಜಪಾನಿನ ಸಂವಿಧಾನ ವಿಧಿ XXXi–೧೯೪೬) ಇದಕ್ಕೆ ಸಮಾನಾಂತರವಾದ ವಿಧಿಯನ್ನು ಐರ್ಲೆಂಡಿನ ಸಂವಿಧಾನದಲ್ಲಿ ಹೀಗೆ ಹೇಳಿದೆ :

ಯಾವ ವ್ಯಕ್ತಿಯ ಸ್ವಾತಂತ್ರ್ಯವನ್ನು ಕಾನೂನಿನ ವಿರುದ್ಧವಾಗಿ ಅಪಹರಿಸಲಾಗದು. ಮುಂದುವರಿದು ಸಮಿತಿಯ

ಅಪಹರಣಗೊಳಿಸಬಹುದು. ಕಾನೂನಿನ ಸಮಾನತೆ, ಎಲ್ಲಾ ಕಾನೂನುಗಳನ್ನು ಸಮನಾದ ದೃಷ್ಟಿಯಿಂದ ಕಾಣುವುದು, ಕಾನೂನಿನಡಿಯಲ್ಲಿ ಎಲ್ಲರೂ ಸಮಾನರೆಂದೇ ಪರಿಗಣಿಸಲಾಗುವುದು.

**** ವ್ಯಾಪಾರ, ವಾಣಿಜ್ಯ ಮತ್ತು ಭಾರತದೆಡೆಯಲ್ಲೆಲ್ಲ ಸಂಪರ್ಕದ ಸ್ವಾತಂತ್ರ್ಯ, ಮಾನವರ ಮಾರಾಟ ಮತ್ತು ಜೀತದಾಳು ವ್ಯವಸ್ಥೆ ವಿರೋಧ**

** ೧೬. ವಿಧಿ ೧೨೪೪ರಲ್ಲಿ ತಿಳಿಸಿದಂತೆ, ವಾಣಿಜ್ಯ ವ್ಯಾಪಾರದ ವಿಷಯದಲ್ಲಿ ಮುಕ್ತ ವ್ಯವಹಾರ ಸಂಬಂಧಗಳಿಗೆ ಸಂಸತ್ತು ಕಾನೂನಿನ್ವಯ ಮುಕ್ತಾವಕಾಶವನ್ನು ನೀಡಿದೆ.

೧೭. (೧) ಮಾನವರ ಮಾರಾಟ ಮತ್ತು ಭಿಕ್ಷಾಟನೆ ಹಾಗೂ ಇತರ ಕಡ್ಡಾಯ ಕಾರ್ಮಿಕ ವ್ಯವಸ್ಥೆಯನ್ನು ಬಹಿಷ್ಕರಿಸಲಾಗಿದ್ದು, ಅವು ಯಾವ ವಿಧದಲ್ಲಿ ಜರುಗಿದರೂ, ಅದನ್ನು ಕಾನೂನು ವಿರೋಧವೆಂದೇ ಪರಿಗಣಿಸಿ ಕಾಯ್ದೆಯಂತೆ ಶಿಕ್ಷೆ ವಿಧಿಸಲಾಗುವುದು.

(೨) ಈ ಉಪನಿಬಂಧನೆಯ ಯಾವ ಅಂಶಗಳೂ ರಾಜ್ಯವು ಸಾರ್ವಜನಿಕ ಉದ್ದೇಶಕ್ಕಾಗಿ ಕಡ್ಡಾಯ ಸೇವೆಯನ್ನು ವಿಧಿಸುವಲ್ಲಿ ಅಡ್ಡಿ ಬರಲಾರವು. ಈ ವಿಧವಾದ ಕಡ್ಡಾಯ ಸೇವೆಯನ್ನು ವಿಧಿಸುವಾಗ ಜನಾಂಗ, ಧರ್ಮ, ಜಾತಿ, ವರ್ಗ ಭೇದಭಾವನೆಗಳನ್ನು ಪರಿಗಣಿಸಲಾಗದು.

೧೮. ಹದಿನಾಲ್ಕು ವರ್ಷಗಳ ಒಳಗೆ ಇರಬಹುದಾದ ಮಕ್ಕಳನ್ನು ಕೂಲಿಕಾರ್ಯಕ್ಕೆ ತೆಗೆದುಕೊಳ್ಳುವಂತಿಲ್ಲ. ಫ್ಯಾಕ್ಟರಿ, ಗಣಿ ಅಥವಾ ಯಾವ ಕಷ್ಟದ ಕಾರ್ಯಗಳಲ್ಲೂ ಅವರ ಸೇವೆಯನ್ನು ನಿಷೇಧಿಸಿದೆ.

---

ಅಭಿಪ್ರಾಯದಲ್ಲಿ 'ಕಾನೂನುಗಳನ್ನು ಸಮಾನ ದೃಷ್ಟಿಯಿಂದ ರಕ್ಷಿಸಬೇಕು' ಪದಗಳ ಬದಲಾಗಿ 'ಕಾನೂನಿನ ಮುಂದೆ ಎಲ್ಲರೂ ಸರಿಸಮಾನರು' ಎಂದು ಸೇರ್ಪಡೆ ಮಾಡಬೇಕು. ಪ್ರಕರಣ ೧ ವಿಧಿ XIV ಅಮೆರಿಕಾ ಸಂವಿಧಾನ (೧೮೬೫).

** ಸಮಿತಿಯು 'ನಾಗರಿಕರಿಂದ ಮತ್ತು ಮಧ್ಯೆ' ಎಂಬ ಪದಗಳನ್ನು ಕೈಬಿಡಲಾಗಿದೆ. ಈ ಪದಗಳು ವ್ಯಾಪಾರ, ವಾಣಿಜ್ಯ ಸಂಬಂಧಗಳ ಮುಂದೆ ಉಪಯೋಗಿಸಲಾಗಿತ್ತು. ಏಕೆಂದರೆ ಈ ವಿಧವಾದ ವಿಶೇಷಣಗಳ ಪ್ರಯೋಗದಿಂದ ರಾಜ್ಯ ಹಾಗೂ ರಾಷ್ಟ್ರದ ಗಡಿಗಳ ವಿವರಣೆಯಲ್ಲಿ ಹಾಗೂ ರವಾನೆದಾರ ಮತ್ತು ರವಾನಿಸಿದ್ದನ್ನು ಪಡೆಯುವ ಅಂದರೆ ಗ್ರಾಹಕರಿಗೆ ಸಂಬಂಧಿಸಿದಂತೆ ವಿಶೇಷ ವಿವರಗಳನ್ನು ಒದಗಿಸಬೇಕಾಗುತ್ತದೆ.

## ಧಾರ್ಮಿಕ ಹಕ್ಕುಗಳು

**ಧರ್ಮಾಚರಣೆ ಪ್ರಚಾರ ಮತ್ತು ಅಂತಃಸಾಕ್ಷಿ ಸ್ವಾತಂತ್ರ್ಯ**

೧೯. (೧) ಸಾರ್ವಜನಿಕ ನೀತಿ ಸುರಕ್ಷತೆಯನ್ನು ಕಾಪಾಡಿಕೊಂಡು ಸುವ್ಯವಸ್ಥಿತ ಸಮಾಜದ ಆರೋಗ್ಯವನ್ನು ಮುಂದುವರಿಸಿಕೊಂಡು ಹೋಗುವಲ್ಲಿ, ಧರ್ಮಾಚರಣೆ, ಪ್ರಚಾರ ಹಾಗೂ ಅಂತಃಸಾಕ್ಷಿ ಸ್ವಾತಂತ್ರ್ಯ ಹಕ್ಕುಗಳನ್ನು ಸಕಲರಿಗೂ ಸಮಾನವಾಗಿ ನೀಡಲಾಗಿದೆ.

ವಿವರಣೆ : ಸಿಕ್ ಧರ್ಮಾನುಯಾಯಿಗಳು ಪೇಟ ಸುತ್ತಿಕೊಂಡು ಕಿರ್ಪಾಣವನ್ನು ಹೊಂದಬಹುದು.

(೨) ಜಾರಿಯಲ್ಲಿರುವ ಕಾಯ್ದೆಯಲ್ಲಿ ರಾಜ್ಯವು ಯಾವುದೇ ಬದಲಾವಣೆಯನ್ನು ಮಾಡುವ ಅಥವಾ ಪ್ರತಿಬಂಧಿಸುವ ಅಧಿಕಾರ ಹೊಂದಿದೆ :–

(ಅ) ಧರ್ಮಾನುಚರಣೆಗೆ ಸಂಬಂಧಿಸಿದ ಆರ್ಥಿಕ, ರಾಜಕೀಯ ಹಾಗೂ ಜಾತ್ಯತೀತ ವಿಷಯಗಳ ಮೇಲೆ ನಿರ್ಬಂಧನೆ ಅಥವಾ ಕ್ರಮಬದ್ಧಗೊಳಿಸುವ ಅಧಿಕಾರ ರಾಜ್ಯ ಹೊಂದಿದೆ.

(ಬ) ಹಿಂದೂ ಧಾರ್ಮಿಕ ಸಾರ್ವಜನಿಕ ಸಂಸ್ಥೆಗಳನ್ನು ಸಾರ್ವಜನಿಕರಿಗೆ ಮುಕ್ತಗೊಳಿಸುವ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪರಿಪೋಷಕವಾದ ಸುಧಾರಣೆಗಳನ್ನು ಜಾರಿಗೊಳಿಸಬಹುದು.

**ಧಾರ್ಮಿಕ ಉದ್ದೇಶಗಳಿಗಾಗಿ ಆಸ್ತಿ ಹೊಂದುವ ಹಾಗೂ ದಾನದತ್ತಿಗಳ ವ್ಯವಹಾರ ಹಕ್ಕು**

೨೦. ಎಲ್ಲಾ ಧಾರ್ಮಿಕ ಪಂಗಡಗಳು ಹಾಗೂ ಉಪ ಪಂಗಡಗಳು ಈ ಕೆಳಗಿನಂತೆ ಹಕ್ಕು ಪಡೆದಿವೆ :

(ಅ) ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ತನ್ಮೂಲಕ ಧಾರ್ಮಿಕ ಹಾಗೂ ದಾನ ಕಾರ್ಯ ನಡೆಸುವ;

(ಬ) ಧಾರ್ಮಿಕವಾದ ತನ್ನ ವ್ಯವಹಾರಗಳನ್ನು ನಡೆಸಿಕೊಂಡು ಹೋಗುವ;

(ಕ) ಈ ಕಾರ್ಯಗಳಿಗೆಂದೇ ಸ್ಥಿರ – ಚರ ಆಸ್ತಿಗಳನ್ನು ಹೊಂದುವ; ಹಾಗೂ

(ಡ) ಕಾಯ್ದೆಯಂತೆ ಈ ಆಸ್ತಿಯ ಆಡಳಿತ ನಡೆಸಿಕೊಂಡು ಹೋಗುವ ಹಕ್ಕು ಪಡೆದಿವೆ.

**ಧಾರ್ಮಿಕ ಉದ್ದೇಶ ಹಾಗೂ ಅಭಿವೃದ್ಧಿಗೆಂದೇ ಮೀಸಲಾದ ಹಣದ ಮೇಲೆ ಕರ ನೀಡುವ ಹಕ್ಕು**

೨೧. ಧಾರ್ಮಿಕ ಪಂಗಡಗಳ ಕಾರ್ಯಕ್ಕೆಂದೇ ನಿಗದಿಪಡಿಸಲಾದ ಆದಾಯದ ಬಗೆಗೆ ಯಾವ ವ್ಯಕ್ತಿಯನ್ನೂ ಕರ ನೀಡುವಂತೆ ಬಲಾತ್ಕಾರ ಪಡಿಸಲಾಗದು.

**ಧಾರ್ಮಿಕ ಸಂಸ್ಥೆ ಹಾಗೂ ಧಾರ್ಮಿಕ ಬೋಧನೆ – ಹಾಜರಿ ಹಕ್ಕು**

*೨೨. (೧) ರಾಜ್ಯದ ಹಣಕಾಸಿನ ನೆರವು ಪಡೆಯುತ್ತಿರುವ ಯಾವ ಸಂಘ ಸಂಸ್ಥೆಗಳಲ್ಲಿ ಧಾರ್ಮಿಕ ಚಟುವಟಿಕೆಗಳಿಗೆ ಅವಕಾಶ ನೀಡಲಾಗದು: ಆದರೆ ಧಾರ್ಮಿಕ ಕಾರ್ಯಗಳಿಗೆಂದೇ ನಿರ್ಮಾಣಗೊಂಡಿರುವ ದತ್ತಿನಿಧಿಗಳಿಗೆ ಈ ವಿಧಿ ಅಡ್ಡಬಾರದು.

(೨) ರಾಜ್ಯದಿಂದ ಧನ ಸಹಾಯ ಸ್ವೀಕರಿಸುವ ಯಾವುದೇ ಶೈಕ್ಷಣಿಕ ಸಂಸ್ಥೆಯಡಿಯಲ್ಲಿ ಯಾವ ವ್ಯಕ್ತಿಯೇ ಆಗಲೀ ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸುವ, ಪ್ರಚಾರ ಮಾಡುವುದನ್ನು ಅಥವಾ ಅದರ ಆವರಣವನ್ನು ಧಾರ್ಮಿಕ ವಿಚಾರಗಳಿಗೆ ಉಪಯೋಗಿಸುವುದನ್ನು ಪ್ರತಿಬಂಧಿಸಿದೆ.

(೩) ಆದರೆ ಮೇಲೆ ಹೇಳಲಾದ ಯಾವ ವಿಧಿಗಳೂ, ಒಂದು ಧಾರ್ಮಿಕ ವರ್ಗವು ತನ್ನ ಜನಾಂಗಕ್ಕೆ ಧಾರ್ಮಿಕ ಬೋಧನೆ ಮಾಡುವ ಹಕ್ಕುಗಳಿಗೆ ಅಡ್ಡಿ ಉಂಟುಮಾಡುವಂತಿಲ್ಲ. ಆದರೆ ಈ ಚಟುವಟಿಕೆಯನ್ನು ಅಧಿಕೃತ ಸಮಯದ ನಂತರವೇ ಮಾಡಬಹುದು.

## ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು

**ಅಲ್ಪಸಂಖ್ಯಾತರ ಹಿತಾಸಕ್ತಿ ರಕ್ಷಣೆ**

೨೩. (೧) ಭಾರತದ ಯಾವುದೇ ಪ್ರದೇಶದಲ್ಲಿ ನೆಲೆಸಿರಬಹುದಾದ ಜನಾಂಗವು ತಮ್ಮದೇ ಆದ ಭಾಷೆ ಲಿಪಿ ಮತ್ತು ಸಂಸ್ಕೃತಿಯನ್ನು ಕಾಪಾಡಿಕೊಂಡು, ಮುಂದುವರಿಸಿ ಕೊಂಡು ಹೋಗುವ ಹಕ್ಕನ್ನು ಹೊಂದಿದೆ.

(೨) ರಾಜ್ಯದಿಂದ ನಡೆಸಲಾದ ಯಾವ ಶಿಕ್ಷಣ ಸಂಸ್ಥೆಯಲ್ಲಿ ಧರ್ಮ, ಸಮುದಾಯ ಅಥವಾ ಭಾಷೆಗಳ ಅಲ್ಪಸಂಖ್ಯಾತರ ಪ್ರವೇಶ ಅಡ್ಡಿ ಉಂಟುಮಾಡಲಾರದು.

(೩) (ಅ) ಭಾಷೆ ಧರ್ಮ, ಮತ ಹಾಗೂ ಸಮುದಾಯ ಅಲ್ಪಸಂಖ್ಯಾತರಿಗೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಹಾಗೂ ಆಡಳಿತ ನಡೆಸುವ ಹಕ್ಕನ್ನು ನೀಡಲಾಗಿದೆ.

(ಬ) ಜಾತಿ, ಧರ್ಮ, ಮತ ಹಾಗೂ ಭಾಷೆಯ ಆಧಾರದ ಮೇಲೆ ರಾಜ್ಯ ಧನ ಸಹಾಯ ಅಥವಾ ಮಂಜೂರಾತಿಯನ್ನು ನಿರಾಕರಿಸುವಂತಿಲ್ಲ.

---

* ತಾತ್ಕಾಲಿಕ ಸಮಿತಿಯ ವರದಿಯ ಆಧಾರದಂತೆ ಈ ಕಲಂ ಸೇರಿಸಲಾಗಿದೆ.

## ಆಸ್ತಿಯ ಹಕ್ಕು

**ಆಸ್ತಿಯನ್ನು ಕಡ್ಡಾಯವಾಗಿ ವಶಪಡಿಸಿಕೊಳ್ಳುವುದು**

೨೪. (೧) ಕಾನೂನಿನಂತೆ ಮಾತ್ರ ಯಾವ ಆಸ್ತಿಯನ್ನಾದರೂ ವಶಪಡಿಸಿಕೊಳ್ಳಬಹುದು.

(೨) ಪರಿಹಾರ ನೀಡುವ ವಿಧಾನದಿಂದ ಯಾವುದೇ ಸ್ಥಿರ ಹಾಗೂ ಚರ ಆಸ್ತಿಯನ್ನು ವಶಪಡಿಸಿಕೊಳ್ಳಬಹುದು ಅಥವಾ ಯಾವುದೇ ವಾಣಿಜ್ಯ ಹಾಗೂ ಔದ್ಯೋಗಿಕ ಕಂಪನಿಗಳನ್ನು ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ವಶಪಡಿಸಿಕೊಳ್ಳುವಲ್ಲಿ, ಸೂಕ್ತ ಪರಿಹಾರ ನೀಡುವ ಅವಕಾಶ ಕಾನೂನಿನಲ್ಲಿದ್ದರೆ ಪರಿಹಾರವನ್ನು ನಿಗದಿಪಡಿಸಬಹುದು.

೩. ಆದರೆ ಮೇಲಿನ (೨)ರಲ್ಲಿ ತಿಳಿಸಿದ ಯಾವ ವಿಷಯವೂ ಈ ಕೆಳಕಂಡ ಉಪನಿಬಂಧನೆಗೆ ಅಡ್ಡಿಬಾರದು.

(ಅ) ಜಾರಿಯಲ್ಲಿರುವ ಕಾನೂನಿನ ಅಂಶಗಳು ಅಥವಾ

(ಬ) ರಾಜ್ಯವು ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ವಿಧಿಸಬಹುದಾದ ಕರ ಅಥವಾ ಸಾರ್ವಜನಿಕ ಆಸ್ತಿ ಹಾಗೂ ಜೀವನಕ್ಕೆ ಗಂಡಾಂತರಕಾರಿಯಾಗುವ ಬಗೆಗೆ ನಿರ್ಮಿಸಲಾದ ಕಾಯ್ದೆ ಅಂಶಗಳಿಗೆ ಅಡ್ಡಿಬಾರದು.

## ಸಂವಿಧಾನಾತ್ಮಕ ಪರಿಹಾರಗಳ ಹಕ್ಕು

**ಈ ಭಾಗದಲ್ಲಿ ನೀಡಲಾದ ಹಕ್ಕುಗಳನ್ನು ಜಾರಿಗೆ ತರಬೇಕಾದ ಕಾರ್ಯಕ್ರಮ**

೨೫. (೧) ಈ ಭಾಗಗಳಲ್ಲಿ ನೀಡಲಾದ ಹಕ್ಕುಗಳ ರಕ್ಷಣೆಗೆ ಕಾನೂನಿನ ಕ್ರಮದಂತೆ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸುವ ಅಭಯ ನೀಡಿದೆ.

(೨) ಹಕ್ಕುಗಳ ಜಾರಿಗೆಂದೇ ಸರ್ವೋಚ್ಚ ನ್ಯಾಯಾಲಯವು ಹೇಬಿಯಸ್ ಕಾರ್ಪಸ್, ಮೆಂಡಮಸ್ ರಿಟ್, ಸೆರ್‌ಟಿಯೊರಾರಿ, ಮುಂತಾದ ಆದೇಶಗಳನ್ನು ಜಾರಿಗೊಳಿಸಬಹುದು.

(೩) ಈ ಉಪನಿಬಂಧನೆ (೨)ರನ್ವಯ ಸಂಸತ್ತು ಕಾನೂನಿನ ಮೂಲಕ ಬೇರೆ ಯಾವುದೇ ನ್ಯಾಯಾಲಯಕ್ಕೆ, ಸ್ಥಳೀಯ ಪ್ರದೇಶಗಳಲ್ಲಿ ಈ ಅಧಿಕಾರವನ್ನು ನೀಡಬಹುದು.

(೪) ಈ ವಿಧಿಯಲ್ಲಿ ನೀಡಲಾದ ಹಕ್ಕುಗಳನ್ನು ಕಾನೂನಿನಂತೆ ಮಾತ್ರ ಸ್ಥಗಿತಗೊಳಿಸಬಹುದು. ಸಾಮಾನ್ಯವಾಗಿ ಹಕ್ಕುಗಳನ್ನು ಸ್ಥಗಿತಗೊಳಿಸಲಾಗದು.

**ಸೈನ್ಯ ಬಲಕ್ಕೆ ಸೇರಿದಂತೆ ಈ**

೨೬. ಈ ವಿಧವಾದ ಹಕ್ಕುಗಳು ಸಶಸ್ತ್ರ ಪಡೆಯವರಿಗೆ,

**ಹಕ್ಕುಗಳನ್ನು ಬದಲಾಯಿಸಬಲ್ಲ ಅಧಿಕಾರ ಸಂಸತ್ತಿಗಿದೆ.**

ಅವರ ಕಾರ್ಯ ಶಿಸ್ತುಗಳಿಗೆ ಭಂಗ ಬಾರದಂತೆ ಸಾರ್ವಜನಿಕ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಬೇಕಾದ ಬದಲಾವಣೆ ಅಥವಾ ಮೊಟಕುಗೊಳಿಸುವ ಅಧಿಕಾರವನ್ನು ಸಂಸತ್ತು ಹೊಂದಿದೆ.

**ಈ ಭಾಗದ ಅವಕಾಶಗಳಿಗೆ ಕಠಿಣ ಅಧಿಕಾರ ನೀಡುವ ಶಾಸನ**

೨೭. ಈ ಸಂವಿಧಾನದ ಬೇರೆ ಭಾಗಗಳಲ್ಲಿ ತಿಳಿಸಲಾದಂತೆ ಸಂಸತ್ತು ಹಾಗೂ ರಾಜ್ಯ ಶಾಸಕಾಂಗಗಳು ಭಾಗ I, II ಮತ್ತು III ಗಳಿಗೆ ಸದ್ಯದಲ್ಲಿ ಕಾನೂನು ರಚಿಸುವ ಅಧಿಕಾರವಿರುವುದಿಲ್ಲ.

(ಅ) ಪಾರ್ಲಿಮೆಂಟಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗೆಗೆ ಮತ್ತು

(ಬ) ಈ ಭಾಗದಲ್ಲಿ ನಿರ್ಣಯಿಸಿದ ಅಪರಾಧಗಳಿಗೆ ಶಿಕ್ಷೆ ನೀಡುವ ಮತ್ತು ಸಂವಿಧಾನ ಜಾರಿಗೆ ಬಂದ ಕೂಡಲೇ ಸಂಸತ್ತು ಈ ಅಪರಾಧಗಳಿಗೆ ಶಿಕ್ಷೆ ನೀಡುವ ಕುರಿತು ಕಾನೂನನ್ನು ಜಾರಿಗೊಳಿಸಬಹುದು:

ಭಾರತದ ಪ್ರದೇಶ ಅಥವಾ ಅದರ ಯಾವುದೇ ವಿಭಾಗದಲ್ಲಿ ಜಾರಿಯಲ್ಲಿರುವ ಕಾಯ್ದೆ ಈ ಉಪ ನಿಬಂಧನೆ (ಅ) ಅಡಿಯಲ್ಲಿ ಅಪರಾಧಕ್ಕೆ ಶಿಕ್ಷೆ ವಿಧಿಸಬೇಕೆಂದಿದ್ದಲ್ಲಿ ಅದು ತಿದ್ದುಪಡಿ ಅಥವಾ ವಜಾಗೊಳಿಸುವವರೆಗೂ ಜಾರಿಯಲ್ಲಿರುತ್ತದೆ.

* * * * *

## ಭಾಗ IV
## ರಾಜ್ಯ ನೀತಿಯ ನಿರ್ದೇಶನ ತತ್ವಗಳು :

**ಪರಿಭಾಷೆ**

೨೮. ಈ ಭಾಗದಲ್ಲಿ, ಬೇರೆ ಸಂದರ್ಭಗಳನ್ನು ಹೊರತುಪಡಿಸಿ "ರಾಜ್ಯ" ಎಂದರೆ ಸಂವಿಧಾನದ ಮೂರನೆಯ ಭಾಗದಲ್ಲಿ ತಿಳಿಸಲಾದ "ರಾಜ್ಯ" ಎಂದೇ ಭಾವಿಸಬೇಕು.

**ಈ ಭಾಗದಲ್ಲಿ ತಿಳಿಸಲಾದ ಸೂತ್ರಗಳ ಅನ್ವಯ ಜಾರಿ**

೨೯. ಈ ಭಾಗದಲ್ಲಿ ಸೂಚಿಸಿರುವ ನಿರ್ದೇಶನಗಳನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡುವಂತಿಲ್ಲ. ಆದರೆ ಇಲ್ಲಿ ಹೇಳಲಾದ ಸೂತ್ರಗಳಿಗೆ ಮೂಲಭೂತ ಹಕ್ಕುಗಳಷ್ಟೇ ಮಹತ್ವವಿದೆ. ಆದುದರಿಂದ ರಾಜ್ಯಾಂಗದ ಆಡಳಿತದ ವಿಷಯದಲ್ಲಿ ಈ ನಿರ್ದೇಶನಗಳನ್ನು ಸದಾ ಗಮನದಲ್ಲಿರಿಸಿಕೊಳ್ಳಬೇಕು.

**ಜನರ ಉನ್ನತಿಗೆ ಮತ್ತು ಕಲ್ಯಾಣಕ್ಕೆ ಒಂದು ಸಾಮಾಜಿಕ ವ್ಯವಸ್ಥೆಯನ್ನು ರಾಜ್ಯವು ಪಡೆಯುವುದು**

೩೦. ರಾಜ್ಯವು, ರಾಜಕೀಯ, ಆರ್ಥಿಕ, ಸಾಮಾಜಿಕ ನ್ಯಾಯವನ್ನು ಜನತೆಯ ಹಿತಾಸಕ್ತಿ ಕಾಪಾಡುವ ಎಲ್ಲಾ ಸಂಘ ಸಂಸ್ಥೆಗಳಲ್ಲಿ ಈ ನಿರ್ದೇಶನಗಳನ್ನು ಅನುಸರಿಸಲು ಪ್ರಯತ್ನ ಮಾಡಬೇಕು.

**ಹಲವು ನಿರ್ದಿಷ್ಟ ತತ್ವಗಳನ್ನು ರಾಜ್ಯ ಅನುಸರಿಸಬೇಕು.**

೩೧. ರಾಜ್ಯವು ವಿಶೇಷವಾಗಿ ಈ ತತ್ವಗಳನ್ನು ಧೋರಣೆಗಳನ್ನು ನಿರೂಪಿಸುವಾಗ ಗಮನದಲ್ಲಿರಿಸಿಕೊಳ್ಳಬೇಕು:–

(೧) ಸ್ತ್ರೀ ಮತ್ತು ಪುರುಷರಿಗೆ ಜೀವನಾಂಶಕ್ಕೆ ಅನಿವಾರ್ಯವಾದ ಸೂಕ್ತ ಸೌಕರ್ಯಗಳನ್ನು ಒದಗಿಸುವ ಅವಕಾಶ.

(೨) ಸಾಮಾಜಿಕ ಸಂಪನ್ಮೂಲಗಳು, ಸಾರ್ವಜನಿಕ ಹಿತಾಸಕ್ತಿಯಂತೆ ಸಕಲರಿಗೂ ದೊರೆಯುವಂತೆಯೂ ಹಾಗೂ ಅದರ ಒಡೆತನ, ನಿಯಂತ್ರಣ ಮತ್ತು ವಿತರಣೆ ಸರ್ವರಿಗೂ ದೊರೆಯಬೇಕು.

(೩) ಆರ್ಥಿಕ ವ್ಯವಸ್ಥೆ ಸಾರ್ವಜನಿಕ ಹಿತಾಸಕ್ತಿಗೆ ಪರಿಪೂರಕವಾಗಿರಬೇಕು. ಸಂಪನ್ಮೂಲಗಳ ಉತ್ಪಾದನೆ ಮತ್ತು ವಿತರಣೆ ಕೇಂದ್ರೀಕೃತವಾಗಿ ಸಾಮಾಜಿಕ ವಿಕಾಸಕ್ಕೆ ಮಾರಕವಾಗಬಾರದು.

(೪) ಸಮಾನ ಹುದ್ದೆಗಳಿಗೆ ಸಮಾನ ಪ್ರತಿಫಲ, ಸ್ತ್ರೀ ಹಾಗೂ ಪುರುಷರಿಗೆ ದೊರೆಯಬೇಕು.

(೫) ಸ್ತ್ರೀ, ಪುರುಷ ಹಾಗೂ ಮಕ್ಕಳ ಕಾರ್ಮಿಕಶಕ್ತಿ ಸ್ವಾಸ್ಥ್ಯವನ್ನು

ದುರುಪಯೋಗ ಮಾಡಬಾರದು. ಜೀವನಕ್ಕೆ ಅನಿವಾರ್ಯವೆಂದು ಜೀತದಾಳು ಅಥವಾ ಕಡ್ಡಾಯವಾಗಿ ಮನಸ್ಸಿಲ್ಲದ ಉದ್ಯೋಗ ಹೇರಲಾಗದು. ಈ ದಿಶೆಯಲ್ಲಿ ಕಾರ್ಮಿಕರ ಶಕ್ತಿ ಮತ್ತು ವಯಸ್ಸನ್ನು ಗಮನದಲ್ಲಿರಿಸಿಕೊಳ್ಳಬೇಕು.

(೬) ಮಕ್ಕಳು ಹಾಗೂ ಯುವಕರನ್ನು ಶೋಷಣೆಯ ವಿರುದ್ಧ ದುರುಪಯೋಗಕ್ಕೆ ಬಲಿಯಾಗದಂತೆ ಕಾಪಾಡಬೇಕು.

**ಉದ್ಯೋಗ ಶಿಕ್ಷಣದ ಹಕ್ಕು ಮತ್ತು ಕೆಲವು ನಿಶ್ಚಿತಪ್ರಕರಣಗಳಲ್ಲಿ ಸಾರ್ವಜನಿಕರಿಗೆ ಸಹಾಯ**

೩೨. ರಾಜ್ಯದ ಅಭಿವೃದ್ಧಿ ದೃಷ್ಟಿಕೋನದಿಂದ, ತನ್ನ ಆರ್ಥಿಕ ಸಾಮರ್ಥ್ಯದ ಇತಿಮಿತಿಯೊಳಗೆ ಉದ್ಯೋಗ ಹಕ್ಕು, ಶಿಕ್ಷಣದ ಹಕ್ಕು, ನಿರುದ್ಯೋಗ ಪರಿಹಾರ, ವೃದ್ಧಾಪ್ಯ ಯೋಜನೆ, ಅಂಗಹೀನರಿಗೆ, ಅಶಕ್ತರಿಗೆ ಹಣಕಾಸಿನ ಸಹಾಯ ಸಲ್ಲಿಸಬಹುದಾದ ಅಂಶಗಳಿಗೆ ಆಸ್ಪದ ಕಲ್ಪಿಸಬೇಕು.

**ಹೆರಿಗೆ ಸೌಕರ್ಯ ಮತ್ತು ಕಾರ್ಯ ಕ್ಷೇತ್ರದಲ್ಲಿ ಮಾನವೀಯ ಮತ್ತು ನ್ಯಾಯಯುತ ಸೌಕರ್ಯಗಳು– ಇವುಗಳಿಗೆ ಕಾನೂನು ಅವಕಾಶ**

೩೩. ರಾಜ್ಯವು ಕಾರ್ಯಕ್ಷೇತ್ರಗಳಲ್ಲಿ ಮಾನವೀಯ ಸೌಕರ್ಯಗಳನ್ನು ಹಾಗೂ ಹೆರಿಗೆಯ ಬಗೆಗೆ ಸೌಕರ್ಯಗಳನ್ನು ಕಲ್ಪಿಸಬೇಕು.

**ಕಾರ್ಮಿಕರಿಗೆ ಜೀವನಾಧರಿತ ಕೂಲಿ**

೩೪. ಕಾರ್ಮಿಕರಿಗೆಲ್ಲಾ ಜೀವನಾಧಾರಿತ ಕೂಲಿಯನ್ನು ನೀಡಬಲ್ಲ ಸೂಕ್ತ ಕಾನೂನುಗಳನ್ನು ನಿರ್ಮಿಸಬೇಕು. ಅಲ್ಲದೆ ಈ ಉದ್ದೇಶಕ್ಕೆಂದೇ ಆರ್ಥಿಕ ಸಂಘಟನೆಗಳನ್ನು ರಚಿಸಬೇಕು. ಕಾರ್ಮಿಕರಿಗೆ ಸೂಕ್ತ ವಿಶ್ರಾಂತಿ ವ್ಯವಸ್ಥೆ ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಕಾಶಗಳನ್ನೂ ಒದಗಿಸಬೇಕು.

**ಪೌರರಿಗೆ ಸಾಮಾನ್ಯ ನಾಗರಿಕ ಸಂಹಿತೆ**

೩೫. ಭಾರತ ಪ್ರದೇಶದ ಪ್ರಜೆಗಳಿಗೆಲ್ಲರಿಗೂ ಅನ್ವಯಿಸುವಂತೆ ಒಂದು ಸಾಮಾನ್ಯ ನಾಗರಿಕ ಸಂಹಿತೆಯನ್ನು ರಚಿಸಬೇಕು.

**ಮುಕ್ತ ಪ್ರಾಥಮಿಕ ಶಿಕ್ಷಣಕ್ಕೆ ಅವಕಾಶ**

೩೬. ಪ್ರತಿಯೋರ್ವ ನಾಗರಿಕನಿಗೆ ಮುಕ್ತ ಪ್ರಾಥಮಿಕ ಶಿಕ್ಷಣ ಪಡೆಯುವ ಹಕ್ಕಿದೆ. ಈ ಸಂವಿಧಾನ ಜಾರಿಗೆ ಬಂದ ಹತ್ತು ವರ್ಷದ ಅವಧಿಯಲ್ಲಿ ಹದಿನಾಲ್ಕು ವರ್ಷದಡಿಯಲ್ಲಿಯ ಎಲ್ಲಾ ಮಕ್ಕಳಿಗೂ ಉಚಿತ ಕಡ್ಡಾಯ ಶಿಕ್ಷಣ ನೀಡುವ ವ್ಯವಸ್ಥೆ ಜಾರಿಗೊಳಿಸಬೇಕು.

**ದುರ್ಬಲ ವರ್ಗದ ಮತ್ತು ಪರಿಶಿಷ್ಟ ವರ್ಗ ಹಾಗೂ ಪಂಗಡಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿ ಕಾಪಾಡುವ ಕಾನೂನು ಅವಕಾಶ**

೩೭. ದುರ್ಬಲ ವರ್ಗದವರ, ಅದರಲ್ಲಿಯೂ ವಿಶೇಷವಾಗಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರ ಶೈಕ್ಷಣಿಕ ಮತ್ತು ಆರ್ಥಿಕ ವಿಕಾಸ, ಸಾಮಾಜಿಕ ನ್ಯಾಯ ಹಾಗೂ ಎಲ್ಲ ವಿಧವಾ ಶೋಷಣೆಗಳಿಂದ ಮುಕ್ತಗೊಳಿಸುವಲ್ಲಿ ರಾಜ್ಯ ಆಸಕ್ತಿ ವಹಿಸಬೇಕು.

**ಪೋಷಕಾಂಶಗಳ ಮಟ್ಟ,**

೩೮. ರಾಜ್ಯವು ತನ್ನ ಪ್ರಜೆಗಳ ಜೀವನ ಮಟ್ಟವನ್ನು

**ಜೀವನ ಮಟ್ಟ ಹೆಚ್ಚಿಸುವ ರಾಜ್ಯದ ಕರ್ತವ್ಯ**

ಹೆಚ್ಚಿಸುವ ಹಾಗೂ ಸಾರ್ವಜನಿಕ ಆರೋಗ್ಯವನ್ನು ವೃದ್ಧಿಸುವ ಮತ್ತು ಉತ್ತಮ ಪೋಷಣೆಯನ್ನು ಒದಗಿಸುವುದಕ್ಕೆ ಆದ್ಯತೆ ನೀಡಬೇಕು.

**ಪುರಾತನ ಸ್ಮಾರಕಗಳು ಮತ್ತು ಅಂತಹ ಸ್ಥಳಗಳನ್ನು ರಕ್ಷಿಸುವುದು – ವಸ್ತುಗಳನ್ನು ಕಾಪಾಡುವುದು ..........**

೩೯. ಪುರಾತನ ಸ್ಮಾರಕಗಳನ್ನು ಸಂರಕ್ಷಿಸುವ ಹಾಗೂ ಚಾರಿತ್ರಿಕ ಮತ್ತು ಕಲಾತ್ಮಕ ವಸ್ತುಗಳನ್ನು ಜೋಪಾನ ಮಾಡುವುದು ರಾಜ್ಯದ ಹೊಣೆಯಾಗಿದೆ. ಸಂಸತ್ತು ಕಾನೂನಿನ ದ್ವಾರ ರಾಷ್ಟ್ರೀಯ ಮಹತ್ವವೆಂದು ಸಾರಿದ ಪ್ರಸಿದ್ಧ ಸ್ಥಳಗಳು ಹಾಳಾಗದಂತೆ ಕಾಪಾಡುವುದು ರಾಜ್ಯದ ಕಾರ್ಯವಾಗಿದೆ.

**ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆ –ಇವುಗಳನ್ನು ಪ್ರೋತ್ಸಾಹಿಸುವುದು.**

೪೦. ರಾಜ್ಯವು ವಿದೇಶಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿ ಅಂತರರಾಷ್ಟ್ರೀಯ ಶಾಂತಿ ಹಾಗೂ ಭದ್ರತೆಯನ್ನು ಕಾಪಾಡಿಕೊಂಡು ಹೋಗಬೇಕು. ಅಂತರರಾಷ್ಟ್ರೀಯ ಕಾನೂನನ್ನು ಮನ್ನಿಸಿ ಉತ್ತಮ ವ್ಯವಹಾರ ಸಂಬಂಧಗಳನ್ನು ಹೊಂದಬೇಕು.

* * * * *

## ಭಾಗ V
## ಒಕ್ಕೂಟ

### ಪ್ರಕರಣ ೧ – ಆಡಳಿತಾಂಗ
### ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ

**ಭಾರತದ ರಾಷ್ಟ್ರಪತಿ**

೫೧. ಭಾರತಕ್ಕೆ ಓರ್ವ ರಾಷ್ಟ್ರಪತಿ ಇರತಕ್ಕದ್ದು

**ಒಕ್ಕೂಟ ಕಾರ್ಯಾಂಗದ ಆಡಳಿತಾಧಿಕಾರ**

೫೨. (೧) ಒಕ್ಕೂಟದ ಆಡಳಿತಾಧಿಕಾರ ರಾಷ್ಟ್ರಪತಿಯವರಲ್ಲಿ ಅಡಕವಾಗಿದೆ. ಅದನ್ನು ಅವರು ಸಂವಿಧಾನದಲ್ಲಿ ಹೇಳಿದಂತೆ ಹಾಗೂ ಕಾನೂನಿನಂತೆ ಚಲಾಯಿಸುತ್ತಾರೆ.

(೨) ಯಾವ ವಿಷಯಕ್ಕೂ ಧಕ್ಕೆ ಬಾರದಂತೆ, ಸಾಮಾನ್ಯವಾಗಿ ಹೇಳಲಾದ ಅಂಶಗಳಂತೆ ಭದ್ರತಾ ಪಡೆಗಳ ಸರ್ವೋತ್ತಮ ದಂಡನಾಯಕರಾಗಿ ರಾಷ್ಟ್ರಪತಿಯವರು ಕಾಯ್ದೆಯಂತೆ ಅಧಿಕಾರ ಚಲಾಯಿಸುತ್ತಾರೆ.

(೩) ಈ ವಿಧಿಯಲ್ಲಿ ಹೇಳಲಾದ ವಿಷಯಕ್ಕೆ ಅಡ್ಡಿಯಾಗದಂತೆ:

(ಅ) ಜಾರಿಯಲ್ಲಿರುವ ಯಾವುದೇ ಕಾನೂನಿನಂತೆ, ರಾಜ್ಯ ಸರಕಾರದ ಮೇಲಿನ ಅಧಿಕಾರಗಳನ್ನು ಅಧ್ಯಕ್ಷರಿಂದ ವರ್ಗಾಯಿಸಿದೆ ಎಂದು ಭಾವಿಸಲಾಗದು. ಅಥವಾ

(ಬ) ಅಧ್ಯಕ್ಷರನ್ನು ಹೊರತು ಪಡಿಸಿ, ಯಾವುದೇ ಕಾರ್ಯವನ್ನು ಜರುಗಿಸಬೇಕಾದರೆ ಸಂಸತ್ತು ಸೂಕ್ತ ಕಾನೂನನ್ನು ರಚಿಸಬೇಕು.

**ರಾಷ್ಟ್ರಪತಿ ಚುನಾವಣೆ**

೫೩. ರಾಷ್ಟ್ರಪತಿಯವರು ಚುನಾವಣಾ ಕಾಲೇಜಿನ ಸದಸ್ಯರ ಮೂಲಕ ಚುನಾಯಿಸಲ್ಪಡುವರು.

(ಅ) ಸಂಸತ್ತಿನ ಉಭಯ ಸದನಗಳ ಸದಸ್ಯರು

(ಬ) ರಾಜ್ಯಗಳ ಶಾಸಕಾಂಗದ ಚುನಾಯಿತ ಸದಸ್ಯರು.

**ರಾಷ್ಟ್ರಪತಿಯನ್ನು ಚುನಾಯಿಸುವ ಕ್ರಮ**

೫೪. (೧) ರಾಷ್ಟ್ರಪತಿಯವರ ಚುನಾವಣೆಗೆ ಸಂಬಂಧಿಸಿದಂತೆ, ಸಾಧ್ಯವಿದ್ದಷ್ಟೂ ವಿವಿಧ ರಾಜ್ಯಗಳ ಪ್ರತಿನಿಧಿತ್ವದಲ್ಲಿ ಏಕರೂಪತೆಯನ್ನು ಕಾಪಾಡಲಾಗುವುದು.

* (೨) ಏಕರೂಪತೆಯನ್ನು ಕಾಪಾಡಲೋಸುಗ ಸಂಸತ್ತಿನ ಚುನಾಯಿತ ಪ್ರತಿಯೋರ್ವ ಸದಸ್ಯನಿಗೆ ಮತ್ತು ಪ್ರತಿಯೊಂದು ರಾಜ್ಯದ ಶಾಸನ ಸಭೆಗೆ ಚುನಾಯಿತಗೊಂಡ ಸದಸ್ಯನಿಗೆ ಈ ಕೆಳಗೆ ತಿಳಿಸಿದ ವಿಧಾನದಲ್ಲಿ ಮತಗಳನ್ನು ನೀಡಲಾಗುವುದು:

ಳಳನೇ ವಿಧಿ ಎರಡನೆ ಉಪನಿಬಂಧನೆಯಲ್ಲಿ ತಿಳಿಸಲಾದ ಮತ ಎಣಿಕೆ ವಿಧಾನವನ್ನು ಈ ಕೆಳಗೆ ತಿಳಿಸಲಾಗಿದೆ:– ಉಪನಿಬಂಧನೆ (೨)ರ (ಅ) ಮತ್ತು (ಬ)ಉಪನಿಬಂಧನೆಗಳಿಗೆ ಉದಾಹರಣೆಗಳು.

(ಅ) ರಾಜ್ಯದ ಚುನಾಯಿತ ಸದಸ್ಯನಿಗೆ ಸಾವಿರದ ಗುಣಾಕಾರದಲ್ಲಿ ಬರುವ ಭಾಗಲಬ್ಧ ಮತಗಳು ಅಂದರೆ ರಾಜ್ಯದ ಜನಸಂಖ್ಯೆಯನ್ನು ಚುನಾಯಿತ ಶಾಸಕಾಂಗ ಸದಸ್ಯರ ಸಂಖ್ಯೆಯಿಂದ ಭಾಗಿಸಲಾಗಿ ಬರುವ ಸಂಖ್ಯೆಯು ಮೊತ್ತ ಸದಸ್ಯರಿಗೆ ನೀಡಲಾಗುವುದು.

(ಬ) ಹೀಗೆ ಗಣನೆಗೆ ತೆಗೆದುಕೊಂಡ ಮತ ಒಂದು ಸಾವಿರದಲ್ಲಿ ೫೦೦ಕ್ಕೆ ಮೀರಿದ್ದರೆ ಅದನ್ನು ಸಾವಿರ ಎಂದೇ ಭಾವಿಸಿ ಒಂದು ಮತವನ್ನು ಹೆಚ್ಚಿಸಲಾಗುವುದು. ಉಪವಿಧಿ(೨)

(ಕ) ಸಂಸತ್ತಿನ ಉಭಯ ಸದನದ ಸದಸ್ಯರಿಗೂ, ಶಾಸಕಾಂಗ ಸದಸ್ಯರ ಒಟ್ಟು ಮತಗಳನ್ನು ಭಾಗಿಸಿ ಬಂದ ಸಂಖ್ಯೆ ಉಪನಿಬಂಧನೆ ಅ–(ಬ) ತಿಳಿಸಿದಂತೆ ನೀಡಲಾಗುವುದು. ಅರ್ಧಕ್ಕಿಂತ ಅಧಿಕವಾದಲ್ಲಿ ಅದನ್ನು ಒಂದೇ ಎಂದು ಪರಿಗಣಿಸಲಾಗುವುದು.

---

* ವಿವರಣೆ: ಈ ವಿಧಿಯಲ್ಲಿ "ರಾಜ್ಯದ ಶಾಸಕಾಂಗ" ಎಂದರೆ ದ್ವಿಸದನ ವ್ಯವಸ್ಥೆ ಇದ್ದಲ್ಲಿ 'ಕೆಳಮನೆ' ಎಂದೇ ಭಾವಿಸಬೇಕು. ಜನಸಂಖ್ಯೆ ಎಂದಲ್ಲಿ ಹಿಂದಿನ ಖಾನೇಶುಮಾರಿನಲ್ಲಿಯ ಜನಸಂಖ್ಯೆ ಎಂದೇ ಭಾವಿಸಬೇಕು.

(i) ಬೊಂಬಾಯಿಯ ಜನಸಂಖ್ಯೆ ೨೦, ೮೪೯, ೮೪೦, ಬೊಂಬಾಯಿ ಶಾಸಕಾಂಗದ ಚುನಾಯಿತ ಸದಸ್ಯರ ಸಂಖ್ಯೆ ೨೦೮ ಎಂದು ತಿಳಿಯೋಣ (ಒಂದು ಲಕ್ಷ ಜನರಿಗೆ ಓರ್ವ ಸದಸ್ಯ). ಪ್ರತಿಯೊಬ್ಬ ಚುನಾಯಿತ ಸದಸ್ಯನಿಗೆ ರಾಷ್ಟ್ರಪತಿ ಚುನಾವಣೆಯಲ್ಲಿ ಲಭ್ಯವಾಗುವ ಮತಗಳ ಮೊತ್ತ ಎಂದರೆ ೨೦, ೮೪೯, ೮೪೦ ÷ ೨೦೮ ಇದನ್ನು ಪುನಃ ೧೦೦೦ ಭಾಗಲಬ್ಧದಿಂದ ಭಾಗಿಸಬೇಕು. ಹೀಗೆ ಭಾಗಿಸಿದಾಗ ಬರುವ ಮೊತ್ತ ೧೦೦೨೩೯. ಪ್ರತಿಯೊಬ್ಬನಿಗೆ ದೊರೆಯುವ ಮೊತ್ತ ೧೦೦೨೩೯/೧೦೦೦ ಅಂದರೆ ೧೦೦ (೨೩೯ ಅರ್ಧಕ್ಕಿಂತ ಕಡಿಮೆ ಇರುವುದರಿಂದ ಕೈಬಿಡಬೇಕು).

(ii) ಮತ್ತೊಂದು ಉದಾ: ಬಿಕನೀರ್‌ನ ಜನಸಂಖ್ಯೆ ೧, ೨೯೨, ೯೩೮, ಬಿಕನೀರ್‌ನ ಶಾಸಕಾಂಗದ ಚುನಾಯಿತ ಸದಸ್ಯರು ೧೩೦ ಎಂದೇ ತಿಳಿಯೋಣ. (ಸುಮಾರಾಗಿ ೧೦,೦೦೦ಕ್ಕೆ ಓರ್ವ) ಈಗ ಮೇಲೆ ಹೇಳಿದ ಸೂತ್ರದಂತೆ ೧,೨೯೨,೯೩೮ ÷ ೧೩೦=೯೯೪೫÷೧೦೦೦=೧೦ (೯೪೫ – ೫೦೦ ಕ್ಕಿಂತ ಅಧಿಕವಾಗಿರುವುದರಿಂದ).

* ಉದಾಹರಣೆ (೨)(ಕ):– ಮೇಲೆ ವಿವರಿಸಿದಂತೆ ರಾಜ್ಯದ ಚುನಾಯಿತ ಸದಸ್ಯರಿಗೆ ಮತಗಳನ್ನು ನಿರ್ಣಯಿಸಿದ ನಂತರ ೭೪,೯೪೦ ಮತ್ತು ಸಂಸತ್ತಿನ ಒಟ್ಟು ಸದಸ್ಯರ ಸಂಖ್ಯೆ ೭೫೦ ಎಂದೇ ಭಾವಿಸಿ ಸಂಸತ್ ಸದಸ್ಯರಿಗೆ ದೊರೆಯುವ ಮತಗಳನ್ನು ನಿರ್ಧರಿಸಬೇಕು. ಅದಕ್ಕಾಗಿ ನಾವು ೭೪,೯೪೦ ÷ ೭೫೦. ಆಗ ಸಂಸತ್ ಸದಸ್ಯರಿಗೆ ಒಂದು ನೂರು ಮತ ದೊರೆಯುವುದು. ಹೀಗೆ ರಾಷ್ಟ್ರಪತಿ ಚುನಾವಣೆಯಲ್ಲಿ ಮತಗಣನೆ ಆಗುವುದು.

(೩) ರಾಷ್ಟ್ರಪತಿಯವರ ಚುನಾವಣೆಯನ್ನು ರಹಸ್ಯ ಮತದಾನದ ಮೂಲಕ ಏಕಮತ ವರ್ಗಾವಣೆ ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನದಿಂದ ಜರುಗಿಸ ಲಾಗುವುದು.

**ರಾಷ್ಟ್ರಪತಿ ಅಧಿಕಾರ ಅವಧಿ**

೪೫. ರಾಷ್ಟ್ರಪತಿಯವರು, ತಾವು ಅಧಿಕಾರವಹಿಸಿದ ದಿನದಿಂದ ಐದು ವರ್ಷದ ಅವಧಿಯವರೆಗೂ ಅಧಿಕಾರದಲ್ಲಿರುತ್ತಾರೆ. ಆದರೆ :

(ಅ) ರಾಷ್ಟ್ರಪತಿಯು ತಾವೇ ತಮ್ಮ ಕೈಬರಹದಲ್ಲಿ ಪತ್ರ ಬರೆದು ರಾಜೀನಾಮೆ ಸಲ್ಲಿಸಬಹುದು. ಈ ರಾಜೀನಾಮೆ ಪತ್ರ ಚೇರ್ಮನ್, ರಾಜ್ಯಸಭೆ ಹಾಗೂ ಅಧ್ಯಕ್ಷ, ಲೋಕಸಭೆಯವರಿಗೆ ನೀಡಬೇಕು.

(ಬ) ಸಂವಿಧಾನ ಉಲ್ಲಂಘನೆಗಾಗಿ ರಾಷ್ಟ್ರಪತಿಯವರನ್ನು ಆರೋಪಿಸಿ ಅವರನ್ನು ಹುದ್ದೆಯಿಂದ, ಈ ಸಂವಿಧಾನದ ೫೦ನೇ ವಿಧಿಯಲ್ಲಿ ತಿಳಿಸಿದಂತೆ, ಮಹಾಭಿಯೋಗಕ್ಕೆ ಗುರಿ ಮಾಡಿ, ವಜಾ ಮಾಡಬಹುದು.

(ಕ) ರಾಷ್ಟ್ರಪತಿಯವರ ಅಧಿಕಾರಾವಧಿಯು ಮುಗಿದಿದ್ದರೂ, ತಮ್ಮ ಉತ್ತರಾಧಿಕಾರಿ ಅಧಿಕಾರ ಸ್ವೀಕರಿಸುವವರೆಗೂ, ಅವರು ಅಧಿಕಾರದಲ್ಲಿ ಮುಂದುವರಿಯುತ್ತಾರೆ.

**ಪುನರಾಯ್ಕೆಗೆ ಯೋಗ್ಯತೆ**

೪೬. ಯಾವ ವ್ಯಕ್ತಿಯೇ ಆಗಲಿ ಒಂದು ಬಾರಿ ರಾಷ್ಟ್ರಪತಿಯಾಗಿ ಚುನಾವಣೆ ಹೊಂದಿದ ನಂತರ ಕೇವಲ ಮತ್ತೊಂದು ಅವಧಿಗೆ ಮಾತ್ರ ಯೋಗ್ಯತೆಯನ್ನು ಹೊಂದಿರುತ್ತಾರೆ.

**ರಾಷ್ಟ್ರಪತಿ ಚುನಾವಣೆ – ಅರ್ಹತೆ**

೪೭. (೧) ರಾಷ್ಟ್ರಪತಿಯಾಗಲು ಬಯಸುವ ವ್ಯಕ್ತಿ ಈ ಕೆಳಗೆ ನಮೂದಿಸಿದ ಅರ್ಹತೆಯನ್ನು ಹೊಂದಿರಲೇಬೇಕು.

(ಅ) ಭಾರತದ ನಾಗರಿಕನಾಗಿರಬೇಕು.

(ಬ) ೩೫ ವಯಸ್ಸು ಮೀರಿದವನಾಗಿರಬೇಕು.

(ಕ) ಲೋಕಸಭೆ ಸದಸ್ಯತ್ವದ ಅರ್ಹತೆಗಳನ್ನು ಹೊಂದಿದವನಾಗಿರಬೇಕು.

೨. ಯಾವ ವ್ಯಕ್ತಿಯೂ, ಕೇಂದ್ರ ಹಾಗೂ ರಾಜ್ಯ ಸರಕಾರಗಳಡಿಯಲ್ಲಿ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು ಅಥವಾ ಸರಕಾರಗಳ ಅಧಿಕಾರವನ್ನು ಹೊಂದಿರಲೂಬಾರದು.

ವಿವರಣೆ : ಈ ವಿಧಿಯಲ್ಲಿ ತಿಳಿಸಿದ ಉದ್ದೇಶಗಳಿಗಾಗಿ, ಅಭ್ಯರ್ಥಿಯು ಸರಕಾರದ ಅಧಿಕಾರ ಹಾಗೂ ಅದರಿಂದ ವೇತನ ಪಡೆಯಬಾರದು.

(ಅ) ಭಾಗ ೧ ಪ್ರಥಮ ಅನುಬಂಧದಲ್ಲಿ ತಿಳಿಸಲಾದಂತೆ ಅವನು ರಾಜ್ಯ ಅಥವಾ ರಾಷ್ಟ್ರಮಟ್ಟದಲ್ಲಿ ಮಂತ್ರಿ ಪದವಿಯನ್ನು ಹೊಂದಿರಕೂಡದು ಅಥವಾ

(ಬ) ಅನುಬಂಧ ೧ ಭಾಗ III ಹೇಳಿದಂತೆ, ರಾಜ್ಯ ವಿಧಾನಸಭೆಗೆ ಜವಾಬ್ದಾರಿಯಾಗಿರುವ ಮಂತ್ರಿಯಾಗಲೀ ಅಥವಾ ಯಾವುದೇ ಶಾಸಕಾಂಗದ ಸದಸ್ಯನಾಗಿರಬಾರದು ಅಥವಾ ಎರಡು ಸದನಗಳಿದ್ದಲ್ಲಿ ಕೆಳಮನೆಯು ೩/೪ ಅಂಶ ಸದಸ್ಯರು ಚುನಾಯಿತರಾಗಿದ್ದಲ್ಲಿ ಆ ಸದನದ ಸದಸ್ಯನಾಗಿರಬಾರದು.

**ಅಧ್ಯಕ್ಷರ ಅಧಿಕಾರ ಷರತ್ತುಗಳು**

೪೮. (೧) ಅಧ್ಯಕ್ಷ ಸ್ಥಾನದ ಅಭ್ಯರ್ಥಿಯು ಸಂಸತ್ತಿನ ಯಾವ ಸದನದ ಸದಸ್ಯತ್ವವನ್ನು ಹೊಂದಿರಕೂಡದು ಅಥವಾ ಯಾವ ರಾಜ್ಯದ ಶಾಸನ ಸಭೆಯ ಸದಸ್ಯನಾಗಿರಬಾರದು. ಒಂದು ವೇಳೆ ಆ ವಿಧವಾದ ಸಂಸತ್ತಿನ ಅಥವಾ ಶಾಸನ ಸಭೆಯ ಸದಸ್ಯತ್ವ ಹೊಂದಿದ್ದರೆ ಅದನ್ನು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ಕೂಡಲೇ ತೆರವು ಮಾಡಬೇಕು.

೨. ರಾಷ್ಟ್ರಾಧ್ಯಕ್ಷರು ಬೇರೆ ಯಾವ ಅಧಿಕಾರವನ್ನಾಗಲೀ ಅಥವಾ ಲಾಭದಾಯಕ ಹುದ್ದೆಯನ್ನು ಹೊಂದುವಂತಿಲ್ಲ.

೩. ರಾಷ್ಟ್ರಪತಿಯವರಿಗೆ ಅಧಿಕೃತ ನಿವಾಸ ಒದಗಿಸಲಾಗುವುದು. ಅಲ್ಲದೆ ಸಂಸತ್ತು ನಿರ್ಧರಿಸುವ ವೇತನ ಹಾಗೂ ಭತ್ತೆಗಳನ್ನು ನೀಡಲಾಗುವುದು. ಸಂಸತ್ತು ನಿರ್ಣಯಿಸುವವರೆಗೆ ಎರಡನೆಯ ಅನುಸೂಚಿಯಲ್ಲಿ ಸೂಚಿಸಿದಂತೆ ಅವರಿಗೆ ಗೌರವಧನವನ್ನು ನೀಡಲಾಗುವುದು.

೪. ಅವರ ಅಧಿಕಾರಾವಧಿಯಲ್ಲಿ ಅವರು ಪಡೆಯುತ್ತಿರುವ ವೇತನ ಮತ್ತು ತುಟ್ಟಿಭತ್ತೆಗಳಲ್ಲಿ ಯಾವ ವಿಧವಾದ ಕಡಿತವನ್ನು ಮಾಡಲಾಗದು.

**ಅಧಿಕಾರ ಸ್ವೀಕರಿಸುವ ವ್ಯಕ್ತಿಯಿಂದ ಪ್ರಮಾಣ ವಚನ ಸ್ವೀಕಾರ**

೪೯. ಪ್ರತಿಯೊಬ್ಬ ರಾಷ್ಟ್ರಪತಿ ಮತ್ತು ಅವರ ಸ್ಥಾನದಲ್ಲಿ ಹಂಗಾಮಿಯಾಗಿ ಕಾರ್ಯನಿರ್ವಹಿಸುವ ಯಾವ ವ್ಯಕ್ತಿಯೇ ಆಗಲಿ, ಅಧಿಕಾರ ಗ್ರಹಣಕ್ಕೆ ಮುನ್ನ ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಮೂರ್ತಿಯವರ ಮುಂದೆ ಈ ಕೆಳಗಿನ ಪ್ರಮಾಣ ವಚನ ಸ್ವೀಕರಿಸಬೇಕು.

'ನಾನು ...................... ವಿಧಿಯುಕ್ತವಾಗಿ ವಾಗ್ದಾನ ನೀಡುತ್ತಾ ನಾನು ಭಾರತದ ರಾಷ್ಟ್ರಪತಿಯ ಕಾರ್ಯವನ್ನು ತ್ರಿಕರಣ ಶುದ್ಧಿಯಿಂದ, ನನ್ನ ಶಕ್ತ್ಯಾನುಸಾರವಾಗಿ, ಭಾರತ ಸಂವಿಧಾನವನ್ನು ಕಾಪಾಡುವೆ; ಮತ್ತು ಕಾನೂನಿನಂತೆ ಭಾರತದ ಜನತೆಯ ಕಲ್ಯಾಣಕ್ಕೆಂದೇ ನನ್ನ

ಸೇವೆ ಮುಡುಪಾಗಿದೆ.'

**ಮಹಾಭಿಯೋಗ ವಿಧಾನ**

೫೦. (೧) ರಾಷ್ಟ್ರಪತಿಯವರು ಸಂವಿಧಾನವನ್ನು ಉಲ್ಲಂಘಿಸಿದಾಗ ಅವರನ್ನು ಸಂಸತ್ತಿನ ಯಾವ ಸದನವಾದರೂ, ಮಹಾಭಿಯೋಗಕ್ಕೆ ಗುರಿ ಮಾಡಬಹುದು.

೨. ಆದರೆ ಈ ವಿಧವಾದ ಆರೋಪಕ್ಕೆ ಗುರಿ ಮಾಡಬೇಕಾದಲ್ಲಿ:–

(ಅ) ಯಾವ ಸದನವು ಈ ಆರೋಪವನ್ನು ಮಂಡಿಸಬೇಕೆಂದಿದೆಯೋ ಆ ಸದನದ ಕನಿಷ್ಠ ಮೂವತ್ತು ಸದಸ್ಯರು ಆರೋಪ ಪಟ್ಟಿಗೆ ಸಹಿ ಮಾಡಿದ ನೋಟೀಸನ್ನು ನೀಡಬೇಕು.

(ಬ) ಈ ವಿಧಾನದ ಗೊತ್ತುವಳಿಗೆ ಸದನದ ಎರಡು ಮೂರಂಶ ಬಹುಮತದಿಂದ ಮಂಜೂರಾಗಬೇಕು.

೩. ಈ ವಿಧವಾದ ಆರೋಪ ಮಂಜೂರಾತಿಯನ್ನು ಹೊಂದಿದ ನಂತರ ಬೇರೆ ಸದನ ಅದರ ಬಗೆಗೆ ವಿಚಾರಣೆ ನಡೆಸಬಹುದು. ಈ ವಿಧವಾದ ವಿಚಾರಣೆಯಲ್ಲಿ ರಾಷ್ಟ್ರಪತಿಗೆ ತನ್ನ ಬಗೆಗೆ ಹೇಳಿಕೆ ನೀಡುವ ಆಸ್ಪದ ನೀಡಲಾಗುವುದು.

೪. ಯಾವ ಸದನ ರಾಷ್ಟ್ರಪತಿಯವರ ವಿರುದ್ಧ ಆರೋಪಗಳಿಗಾಗಿ ಆಪಾದಿಸಿದೆಯೋ ಆ ಸದನದ ಪರಿಶೋಧನೆಯ ನಂತರ, ಆಪಾದನೆಗಳು ಎರಡು ಮೂರಂಶ ಅಧಿಕ ಬಹುಮತದಿಂದ ಒಪ್ಪಲ್ಪಟ್ಟಲ್ಲಿ ಆ ದಿನಾಂಕದಿಂದಲೇ ರಾಷ್ಟ್ರಪತಿಯವರನ್ನು ಅಧಿಕಾರದಿಂದ ಮುಕ್ತಗೊಳಿಸಲಾಗುವುದು.

**ರಾಷ್ಟ್ರಪತಿಯ ಸ್ಥಾನ ಖಾಲಿ ಬಿದ್ದಲ್ಲಿ ಅವರ ಸ್ಥಾನಕ್ಕೆ ಬಂದವರ ಅಧಿಕಾರಾವಧಿ ಮತ್ತು**

೫೧. ೧. ರಾಷ್ಟ್ರಪತಿಯವರ ಅವಧಿ ಪೂರ್ಣಗೊಂಡು ಸ್ಥಾನ ತೆರವಾಗುವ ಮುನ್ನವೇ ರಾಷ್ಟ್ರಪತಿಯವರ ಸ್ಥಾನಕ್ಕೆ ಚುನಾವಣೆಯನ್ನು ಜರುಗಿಸಬೇಕು.

**ಹಂಗಾಮಿಯಾಗಿದ್ದಾಗ ತುಂಬಲು ಆಯ್ಕೆಯಾದ ವ್ಯಕ್ತಿಗಳ ಅಧಿಕಾರ ಚಲಾವಣೆಯ ಶರತ್ತುಗಳು**

೨.ರಾಜಿನಾಮೆ ಮರಣ ಅಥವಾ ಉಚ್ಚಾಟನೆ ಮುಂತಾದ ಕಾರಣಗಳಿಂದ ಸ್ಥಾನ ತೆರವಾದಲ್ಲಿ ಅತಿ ಶೀಘ್ರದಲ್ಲಿ ಅಂದರೆ ಆರು ತಿಂಗಳು ಅವಧಿಯ ಮುನ್ನವೇ ಚುನಾವಣೆ ನಡೆಸಿ ಸ್ಥಾನ ತುಂಬಬೇಕು. ಈ ವಿಧವಾಗಿ ಚುನಾಯಿತಗೊಂಡವರ ಅಧಿಕಾರ ಅವಧಿ ಅವರು ಚುನಾವಣೆ ಹೊಂದಿದ ದಿನದಿಂದ ಸಂವಿಧಾನದ ೪೫ನೇ ವಿಧಿಯಲ್ಲಿ ತಿಳಿಸಿದಂತೆ ಐದು ವರ್ಷವಾಗಿರುತ್ತದೆ.

**ಭಾರತದ ಉಪರಾಷ್ಟ್ರಪತಿ**

೫೨. ಭಾರತಕ್ಕೆ ಓರ್ವ ಉಪರಾಷ್ಟ್ರಪತಿ ಇರುತ್ತಾರೆ.

**ಉಪರಾಷ್ಟ್ರಪತಿ ರಾಜ್ಯ ಸಭೆಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ**

೫೩. ಉಪರಾಷ್ಟ್ರಪತಿಯು ತನ್ನ ಸ್ಥಾನಬಲದಿಂದ ರಾಜ್ಯ ಸಭೆಯ ಅಧ್ಯಕ್ಷರಾಗಿರುತ್ತಾರೆ. ಅವರು ಬೇರೆ ಯಾವ ಅಧಿಕಾರವನ್ನಾಗಲೀ ಅಥವಾ ಸ್ಥಾನವನ್ನಾಗಲೀ ಹೊಂದಿರ ಕೂಡದು:

ಈ ಸಂವಿಧಾನದ ೫೪ನೆಯ ವಿಧಿಯಲ್ಲಿ ಹೇಳಿದಂತೆ ಉಪರಾಷ್ಟ್ರಪತಿಯು ರಾಷ್ಟ್ರಪತಿಯ ಕಾರ್ಯಗಳನ್ನು ನೆರವೇರಿಸುವ ಅವಧಿಯಲ್ಲಿ ಅವರು ರಾಜ್ಯಸಭೆಯ ಅಧ್ಯಕ್ಷರ ಕಾರ್ಯಗಳನ್ನು ಮಾಡಲಾಗದು.

**ರಾಷ್ಟ್ರಪತಿಯವರ ಗೈರುಹಾಜರಿಯಲ್ಲಿ ಉಪರಾಷ್ಟ್ರಪತಿಯವರು ಹಂಗಾಮಿ ರಾಷ್ಟ್ರಪತಿ ಅಧಿಕಾರ ನಡೆಸುವರು**

೫೪. ೧. ಮರಣ ರಾಜೀನಾಮೆ ಅಥವಾ ಬೇರೆ ಯಾವ ಕಾರಣಗಳಿಂದ ರಾಷ್ಟ್ರಪತಿಯವರ ಸ್ಥಾನ ಖಾಲಿ ಬಿದ್ದ ಸಮಯ ದಲ್ಲಿ ಉಪರಾಷ್ಟ್ರಪತಿಯವರು ರಾಷ್ಟ್ರಪತಿಯಾಗಿ ಕಾರ್ಯಾಚರಣೆ ಮಾಡುವರು. ಆದರೆ ಅವರು ರಾಷ್ಟ್ರಪತಿಯವರ ಚುನಾವಣೆ ಈ ಪ್ರಕರಣದಲ್ಲಿ ತಿಳಿಸಿದಂತೆ ನೆರವೇರಿದ ಕೂಡಲೇ ತಮ್ಮ ಸ್ಥಾನ ತೆರವು ಮಾಡಬೇಕು.

೨. ರಾಷ್ಟ್ರಪತಿಯ ಅಥವಾ ಬೇರೆ ಯಾವ ಕಾರಣಗಳಿಂದ ತಮ್ಮ ಅಧಿಕಾರ ನಡೆಸದೇ ಇರುವ ಸಮಯದಲ್ಲಿ ಉಪ ರಾಷ್ಟ್ರಪತಿಯು ರಾಷ್ಟ್ರಪತಿಯಾಗಿ ಕಾರ್ಯ ನಿರ್ವಹಿಸುತ್ತಾರೆ. ಆದರೆ ರಾಷ್ಟ್ರಪತಿಯು ಅಧಿಕಾರ ವಹಿಸಿಕೊಂಡೊಡನೆ ಇವರ ಅಧಿಕಾರ ಅಂತ್ಯಗೊಳ್ಳುತ್ತದೆ.

೩. ಉಪರಾಷ್ಟ್ರಪತಿಯು ರಾಷ್ಟ್ರಪತಿಯ ಸ್ಥಾನವನ್ನು ಪಡೆದಾಗ ಅವರು ರಾಷ್ಟ್ರಪತಿಯ ವೇತನ ಹಾಗೂ ಸಕಲ ಅಧಿಕಾರಗಳನ್ನು ಹೊಂದಿದ್ದು ರಾಷ್ಟ್ರಪತಿಯಾಗಿಯೇ ಕಾರ್ಯ ನಿರ್ವಹಿಸುವರು.

**ಉಪರಾಷ್ಟ್ರಪತಿ ಚುನಾವಣೆ**

೫೫. ೧. ಸಂಸತ್ತಿನ ಎರಡೂ ಸದನದ ಸದಸ್ಯರಿಂದ ಪ್ರಮಾಣ ಬದ್ಧ ವರ್ಗಾಯಿಸುವ ಮತದಾನ ಪದ್ಧತಿಯಿಂದ ಉಪರಾಷ್ಟ್ರಪತಿಯವರು ಚುನಾಯಿಸಲ್ಪಡುವರು. ಈ ವಿಧವಾದ ಮತದಾನ ಗೌಪ್ಯ ವಿಧಾನದಿಂದ ನಡೆಸಲಾಗುವುದು.

೨. ಈ ವಿಧಾನದಿಂದ ಚುನಾಯಿತಗೊಂಡ ಸದಸ್ಯ ಸಂಸತ್ತಿನ ಅಥವಾ ಯಾವ ರಾಜ್ಯದ ಶಾಸನ ಸಭೆಯ ಸದನದ ಚುನಾಯಿತ ಪ್ರತಿನಿಧಿಯಾಗಿರಕೂಡದು.

ಒಂದು ವೇಳೆ ಆ ವಿಧವಾದ ಸದಸ್ಯತ್ವವನ್ನು ಹೊಂದಿದ್ದರೆ, ಚುನಾಯಿತಗೊಂಡ ಕೂಡಲೆ ಆ ಸ್ಥಾನಕ್ಕೆ ರಾಜೀನಾಮೆ ನೀಡಬೇಕು.

೩. ಉಪರಾಷ್ಟ್ರಪತಿಯ ಸ್ಥಾನಕ್ಕೆ ಇರಬೇಕಾದ ಅರ್ಹತೆ:

(ಅ) ಭಾರತದ ಪೌರನಾಗಿರಬೇಕು.

(ಬ) ೩೫ ವರ್ಷ ಮೀರಿದವನಾಗಿರಬೇಕು.

(ಕ) ರಾಜ್ಯಸಭೆಯ ಸದಸ್ಯತ್ವದ ಅರ್ಹತೆಗಳನ್ನು ಪಡೆದಿರಬೇಕು.

೪. ಯಾವುದೇ ವ್ಯಕ್ತಿ ಭಾರತ ಸರಕಾರ, ಅಥವಾ ರಾಜ್ಯ ಸರಕಾರ ಹಾಗೂ ಸ್ಥಳೀಯ ಸರಕಾರದಡಿಯಲ್ಲಿ ಅಧಿಕಾರ ಅಥವಾ

ಹುದ್ದೆ ಅಥವಾ ಸರಕಾರ ನಿಯಂತ್ರಿತ ಸಂಸ್ಥೆಯಲ್ಲಿ ಕಾರ್ಯನಿರತನಾಗಿದ್ದರೆ ಅವರು ಉಪರಾಷ್ಟ್ರಪತಿ ಪದವಿಗೆ ಅನರ್ಹರು.

ವಿವರಣೆ : ಈ ಕಲಮಿಗೆ ಸಂಬಂಧಿಸಿದಂತೆ ಈ ಕೆಳಗೆ ತಿಳಿಸಲಾದಂತೆ ಅಧಿಕಾರ ಅಥವಾ ಪದವಿ ಹೊಂದಿದ್ದಲ್ಲಿ ಅವನು ಅನರ್ಹನೆಂದು ಪರಿಗಣಿಸಲಾಗದು :

(ಅ) ಈ ಸಂವಿಧಾನದ ಮೊದಲನೆಯ ಅನುಬಂಧದ ೧ ಭಾಗದಲ್ಲಿ ತಿಳಿಸಿದಂತೆ ಅವನು ರಾಜ್ಯದ ಅಥವಾ ಭಾರತ ಸರಕಾರದ ಮಂತ್ರಿಯಾಗಿದ್ದರೆ.

(ಬ) ಮೊದಲನೆಯ ಅನುಬಂಧದ ೩ ಭಾಗದಲ್ಲಿ ತಿಳಿಸಿದಂತೆ; ಅವನು ಯಾವುದೇ ಸದನಕ್ಕೆ ಹೊಣೆಗಾರನಾಗಿದ್ದರೆ, ಅಥವಾ ದ್ವಿಸದನ ಹೊಂದಿದ ಶಾಸನ ಸಭೆಯ ಕೆಳಮನೆಯ ಸದಸ್ಯನಾಗಿದ್ದು ಈ ವಿಧವಾದ ಸದನ ೩/೪ ಸದಸ್ಯರು ಚುನಾಯಿತರಾಗಿದ್ದಲ್ಲಿ ಅನುಬಂಧದಲ್ಲಿ ತಿಳಿಸಲಾದ ಸಂದರ್ಭದಲ್ಲಿ ಪರಿಗಣಿಸಲಾಗುವುದು.

೫. ಉಪರಾಷ್ಟ್ರಪತಿಯ ಅವಧಿ ಅಂತ್ಯಗೊಳ್ಳುವ ಮುನ್ನವೇ ಆ ಸ್ಥಾನಕ್ಕೆ ಚುನಾವಣೆ ನಡೆಸಲಾಗುವುದು.

೬. ಮರಣ, ರಾಜೀನಾಮೆ, ಉಚ್ಚಾಟನೆ ಮುಂತಾದ ಕಾರಣಗಳಿಂದ ಉಪರಾಷ್ಟ್ರಪತಿ ಸ್ಥಾನವು ತೆರವು ಹೊಂದಿದಾಗ, ಚುನಾಯಿತನಾದ ವ್ಯಕ್ತಿ ಪೂರ್ಣ ೫ ವರ್ಷ ಅವಧಿಯನ್ನು ವಿಧಿ ೫೬ರಲ್ಲಿ ತಿಳಿಸಿದಂತೆ ಹೊಂದಿರುತ್ತಾನೆ.

**ಉಪರಾಷ್ಟ್ರಪತಿ ಅಧಿಕಾರ ಅವಧಿ**

೫೬. ಉಪರಾಷ್ಟ್ರಪತಿ ಅಧಿಕಾರ ಗ್ರಹಣದ ದಿನಾಂಕದಿಂದ ೫ ವರ್ಷ ಅವಧಿಯವರೆಗೂ ಅಧಿಕಾರದಲ್ಲಿ ಮುಂದುವರಿಯುತ್ತಾರೆ :

ಆದರೆ

(ಎ) ಅವರು ಸ್ವತಃ ತಮ್ಮ ಕೈ ಬರಹದಲ್ಲಿಯೇ ರಾಷ್ಟ್ರಪತಿಯವರಿಗೆ ರಾಜೀನಾಮೆ ನೀಡಿದಲ್ಲಿ.

(ಬಿ) ಅವಿಶ್ವಾಸ ಹಾಗೂ ಅಸಾಮರ್ಥ್ಯಕ್ಕಾಗಿ ಅವರನ್ನು ರಾಜ್ಯಸಭೆಯು ಅಧಿಕ ಬಹುಮತದಿಂದ ಗೊತ್ತುವಳಿ ಅಂಗೀಕರಿಸಿ, ಆ ಗೊತ್ತುವಳಿಯು ಲೋಕಸಭೆಯಿಂದ ಒಪ್ಪಿಗೆ ಪಡೆದಲ್ಲಿ ಅವರು ಹುದ್ದೆಯಲ್ಲಿ ಮುಂದುವರೆಯುವಂತಿಲ್ಲ. ಈ ವಿಧವಾದ ಗೊತ್ತುವಳಿಗೆ ಹದಿನಾಲ್ಕು ದಿನದ ಮುನ್ಸೂಚನೆ ನೀಡುವುದು ಕಡ್ಡಾಯವಾಗಿದೆ.

(ಸಿ) ಅವಧಿ ಮುಗಿದ ನಂತರವೂ ಬೇರೆಯೊಬ್ಬರು ಚುನಾಯಿತಗೊಂಡು ಅಧಿಕಾರ ಸ್ವೀಕರಿಸುವವರೆಗೂ ಅವರು

ಅಧಿಕಾರದಲ್ಲಿ ಮುಂದುವರಿಯುತ್ತಾರೆ.

**ರಾಷ್ಟ್ರಪತಿಯ ಕಾರ್ಯ ನಿರ್ವಹಣೆ ಬಗೆಗೆ ಅವಕಾಶ ಕಲ್ಪಿಸುವ ಸಂಸತ್ತಿನ ಅಧಿಕಾರ**

೫೭. ಈ ಅಧ್ಯಾಯದಲ್ಲಿ ತಿಳಿಸದೇ ಹೋದ ವಿಷಯಗಳ ಬಗೆಗೆ ರಾಷ್ಟ್ರಪತಿಯವರ ಅಧಿಕಾರಗಳ ಬಗೆಗೆ ಸಂಸತ್ತು ಸೂಕ್ತ ನಿರ್ಣಯವನ್ನು ಮಾಡಬಹುದು.

**ರಾಷ್ಟ್ರಪತಿ ಉಪರಾಷ್ಟ್ರಪತಿ ಸಂಬಂಧಿಸಿದ ಚುನಾವಣೆಯ ವಿಷಯಗಳು**

೫೮. (೧) ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿಗಳ ಚುನಾವಣೆಗೆ ಸಂಬಂಧಿಸಿದ ಸಂದೇಹ ಹಾಗೂ ತಗಾದೆಗಳನ್ನು ನಿರ್ಣಯಿಸುವ ಹಕ್ಕು ಸರ್ವೋನ್ನತ ನ್ಯಾಯಾಲಯಕ್ಕೆ ಸೇರಿದೆ. ಅದರ ನಿರ್ಣಯವೇ ಅಂತಿಮ.

(೨) ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿಯವರ ಚುನಾವಣೆಗೆ ಸಂಬಂಧಿಸಿದಂತೆ ಈ ಸಂವಿಧಾನದಲ್ಲಿ ತಿಳಿಸಿದಂತೆ ಎಲ್ಲಾ ಕಾನೂನುಗಳನ್ನು ಕ್ರಮಬದ್ಧಗೊಳಿಸುವ ಅಧಿಕಾರವನ್ನು ಸಂಸತ್ತು ಹೊಂದಿದೆ.

**ಕೆಲವು ನಿಶ್ಚಿತ ಪ್ರಕರಣಗಳಲ್ಲಿ ಶಿಕ್ಷೆಯ ಅಮಾನತ್ತು, ಕ್ಷಮಾದಾನ, ಶಿಕ್ಷೆಯಲ್ಲಿ ಕಡಿತ ಮತ್ತು ಕೈಗೊಳ್ಳುವ ಬದಲಾವಣೆ ಮುಂತಾದವುಗಳ ಬಗೆಗೆ ರಾಷ್ಟ್ರಪತಿಯವರ ಅಧಿಕಾರ**

೫೯. (ಬಿ) ರಾಷ್ಟ್ರಪತಿ ಅವರಿಗೆ ಅಪರಾಧಗಳಿಗೆ ಕ್ಷಮೆ ನೀಡುವ, ಮರಣದಂಡನೆಯನ್ನು ತಡೆಯುವ, ಮುಂದೂಡುವ, ಕ್ಷಮಾಪಣೆ ನೀಡುವ, ಕಡಿತಗೊಳಿಸುವ ಅಧಿಕಾರವಿದೆ:–

(ಎ) ಮಿಲಿಟರಿ ಕಾನೂನಿನ ಅಪರಾಧಗಳ

(ಬಿ) ಸಂಸತ್ತಿನ ಕಾನೂನುಗಳ ಅಥವಾ ಯಾವುದೇ ಶಾಸಕಾಂಗದ ಕಾನೂನಲ್ಲಿ ಉಲ್ಲೇಖಿಸದೇ ಹೋದ ಅಪರಾಧಗಳ

*(ಸಿ) ಎಲ್ಲಾ ಬಗೆಯ ಮರಣದಂಡನೆಗಳು ಕುರಿತಂತೆ ಅಧಿಕಾರವಿದೆ.

(೨) ಆದರೆ ಮೇಲೆ ಹೇಳಿದ ಉಪನಿಬಂಧನೆ (ಎ) ಮತ್ತು (ಬಿ) ಯಲ್ಲಿ ತಿಳಿಸಲಾದ ವಿಷಯಕ್ಕೆ ಸಂಬಂಧಿಸಿದ ಕಾನೂನಿನ ಅಧಿಕಾರ ಅಥವಾ ಮಿಲಿಟರಿ ನ್ಯಾಯಾಲಯದ ತೀರ್ಪಿನಂತೆ ಸಂರಕ್ಷಣಾ ಪಡೆಗೆ ಸೇರಿದ ವಿಷಯಗಳು ಮುಕ್ತವಾಗಿವೆ.

(೩) ಅದರಂತೆಯೇ ಉಪನಿಬಂಧನೆ (೧) ಕ್ಲಾಸ್ (ಸಿ)ಯಲ್ಲಿ ತಿಳಿಸಿದ ವಿಷಯ ರಾಜರು ಹಾಗೂ ರಾಜ್ಯಪಾಲರು ಜಾರಿಗೊಳಿಸಿದ ಕಾನೂನುಗಳಿಗೆ ಅನ್ವಯಿಸಲಾಗದು.

**೬೦. ಒಕ್ಕೂಟ ಕಾರ್ಯಾಂಗದ ಆಡಳಿತಾಧಿಕಾರ**

೬೦. (೧) ಸಂವಿಧಾನದ ಕಲಂಗಳಲ್ಲಿ ಸೂಚಿಸಿದಂತೆ ಒಕ್ಕೂಟದ ಅಧಿಕಾರ :–

---

* ಸಮಿತಿಯ ಅಭಿಪ್ರಾಯದಲ್ಲಿ ರಾಷ್ಟ್ರಪತಿಯವರು ರಾಜರ ಹಾಗೂ ರಾಜ್ಯಪಾಲರ ಅಧಿಕಾರಕ್ಕೆ ಧಕ್ಕೆ ಬಾರದಂತೆ, ಮರಣದಂಡನೆಯ ಬಗೆಗೆ ಕ್ಷಮಿಸುವ, ತಗ್ಗಿಸುವ, ಮುಂದೂಡುವ ಅಧಿಕಾರಗಳನ್ನು ಹೊಂದಿದ್ದಾರೆ.

(ಎ) ಸಂಸತ್ತು ಕಾನೂನುಗಳನ್ನು ರಚಿಸಿರುವ ವಿಷಯಗಳ ಬಗೆಗೆ

(ಬಿ) ಭಾರತ ಸರಕಾರವು ತನ್ನ ಅಧಿಕಾರ ವ್ಯಾಪ್ತಿಯೊಳಗೆ ಮಾಡಿಕೊಂಡಿರಬಹುದಾದ ಒಪ್ಪಂದ ಮತ್ತು ಕರಾರುಗಳಿಗೆ:

**ಮೇಲಿನ (ಎ)ಯಲ್ಲಿ ತಿಳಿಸಿದ ಆಡಳಿತಾಧಿಕಾರ, ಸಂವಿಧಾನದಲ್ಲಿ ಸೂಕ್ತವಾಗಿ ತಿಳಿಸಿದಂತೆ ಅಥವಾ ಸಂಸತ್ತಿನ ಕಾನೂನುಗಳಲ್ಲಿ ವಿವರಿಸಿರುವ, ಅಥವಾ ಶಾಸನ ಸಭೆ ರಚಿಸಿರಬಹುದಾದ ಕಾನೂನುಗಳಂತೆ ನಡೆಯಬೇಕು.

೨. ಸಂಸತ್ತಿನ ಕಾನೂನುಗಳು ರಚನೆ ಹೊಂದುವ ಮುನ್ನ ರಾಜ್ಯ ಅಥವಾ ಯಾವುದೇ ಅಧಿಕಾರಿಯು, ಈ ವಿಧಿಗಳಲ್ಲಿ ತಿಳಿಸಿದ ಅಧಿಕಾರವನ್ನು ಯಾವ ವಿಧವಾದ ಅಡಚಣೆಯಿಲ್ಲದೇ, ಸಂಸತ್ತಿನ ಅಥವಾ ರಾಜ್ಯ ಶಾಸಕಾಂಗದಲ್ಲಿ ಹೇಳಲಾದಂತೆ ಚಲಾಯಿಸಬಹುದು.

## ಮಂತ್ರಿ ಮಂಡಳ

**ಮಂತ್ರಿಮಂಡಳ, ರಾಷ್ಟ್ರಪತಿಗೆ ಅವರ ಸಲಹೆ ಮತ್ತು ಸಹಾಯ**

೬೧. (೧) ಪ್ರಧಾನಿಯವರ ಮುಖಂಡತ್ವದ ಮಂತ್ರಿ ಮಂಡಳಿಯ ಸಲಹೆ, ಸೂಚನೆಗಳಂತೆ ರಾಷ್ಟ್ರಪತಿಯು ಅಧಿಕಾರ ಚಲಾಯಿಸುತ್ತಾರೆ.

೨. ಈ ವಿಧವಾದ ಮಂತ್ರಿಮಂಡಳದ ಸಲಹೆಯನ್ನು ಯಾವ ನ್ಯಾಯಾಲಯದಲ್ಲೂ ಪ್ರಶ್ನಿಸಲಾಗದು.

**ಮಂತ್ರಿಗಳಿಗೆ ಸಂಬಂಧಿಸಿದ ಇತರ ಅಂಶಗಳು**

೬೨. ೧. ಪ್ರಧಾನಿಯವರು ರಾಷ್ಟ್ರಪತಿಯಿಂದ ನೇಮಿಸಿಲ್ಪಡುತ್ತಾರೆ. ಪ್ರಧಾನಿಯ ಸಲಹೆಯಂತೆ, ರಾಷ್ಟ್ರಪತಿಯವರು ಇತರ ಮಂತ್ರಿವರ್ಯರನ್ನು ನೇಮಿಸುತ್ತಾರೆ.

೨. ಮಂತ್ರಿವರ್ಯರು ರಾಷ್ಟ್ರಪತಿಯ ಇಚ್ಛೆಯಂತೆ ಅಧಿಕಾರದಲ್ಲಿ ಮುಂದುವರಿಯುತ್ತಾರೆ.

೩. ಮಂತ್ರಿ ಮಂಡಳಿಯು ಸಾಮೂಹಿಕವಾಗಿ ಲೋಕಸಭೆಗೆ ಹೊಣೆಯಾಗಿರುತ್ತದೆ.

೪. ಅಧಿಕಾರ ಸ್ವೀಕರಿಸುವ ಮುನ್ನ ರಾಷ್ಟ್ರಪತಿಯವರು ಮಂತ್ರಿವರ್ಯರಿಗೆ ಅಧಿಕಾರ ಪ್ರಮಾಣ ವಚನ ಹಾಗೂ ಗೌಪ್ಯತೆಯ

---

** ಸಂವಿಧಾನದಲ್ಲಿ ಒದಗಿಸಲಾಗಿರುವ ಅಥವಾ ಪಾರ್ಲಿಮೆಂಟು ಮಾಡಿದ ಯಾವುದೇ ಶಾಸನದಲ್ಲಿ ಒದಗಿಸಲಾಗಿರುವುದರ ವಿನಾ ವಿಷಯಗಳ ಬಗ್ಗೆ ಶಾಸಕಾಂಗದ ಅಧಿಕಾರವು ಸಂಬಂಧಪಟ್ಟ ರಾಜ್ಯದ ಅಧಿಕಾರದಲ್ಲಿರಬೇಕು ಎಂಬ ಅಭಿಪ್ರಾಯದಲ್ಲಿ ಸಮಿತಿಯು ಈ ನಿಯಮವನ್ನು ಸೇರಿಸಿದೆ.

ವಚನ ಬೋಧಿಸುತ್ತಾರೆ. ಇದನ್ನು ಮೂರನೆಯ ಅನುಬಂಧದಲ್ಲಿ ಸೂಚಿಸಲಾಗಿದೆ.

೫. ಸದನದ ಸದಸ್ಯರಾಗದೇ ಯಾರೇ ಮಂತ್ರಿ ಪದವಿ ಹೊಂದಿದ್ದಲ್ಲಿ ಆರು ತಿಂಗಳ ಅವಧಿಯೊಳಗೆ ಚುನಾವಣೆ ಹೊಂದದೇ ಹೋದಲ್ಲಿ ಅವರು ಮಂತ್ರಿಯಾಗಿ ಮುಂದುವರಿಯುವಂತಿಲ್ಲ.

೬. ಮಂತ್ರಿವರ್ಯರ ವೇತನ ಹಾಗೂ ಭತ್ತೆಗಳನ್ನು ಸಂಸತ್ತು ಕಾಲಕಾಲಕ್ಕೆ ನಿರ್ಣಯಿಸುವುದು. ಆ ನಿರ್ಣಯಕ್ಕೆ ಮುನ್ನ ಎರಡನೆಯ ಅನುಬಂಧದಲ್ಲಿ ಸೂಚಿಸಿದಂತೆ ಪಡೆಯಬಹುದು.

## ಭಾರತದ ಅಟಾರ್ನಿ ಜನರಲ್

**ಭಾರತದ ಅಟಾರ್ನಿ ಜನರಲ್**

*೬೩. (೧) ಸರ್ವೋನ್ನತ ನ್ಯಾಯಾಲಯದ ನ್ಯಾಯಮೂರ್ತಿಯಾಗಲು ಅರ್ಹತೆ ಹೊಂದಿರುವ ವ್ಯಕ್ತಿಯನ್ನು ರಾಷ್ಟ್ರಪತಿಯವರು ಭಾರತದ ಅಟಾರ್ನಿ ಜನರಲ್ ಎಂದು ನೇಮಕ ಮಾಡುತ್ತಾರೆ.

(೨) ಭಾರತದ ಅಟಾರ್ನಿ ಜನರಲ್ಲರು, ರಾಷ್ಟ್ರಪತಿಯವರಿಗೆ ಕಾಲಕಾಲಕ್ಕೆ ನ್ಯಾಯ ಕಾನೂನುಗಳ ಬಗೆಗೆ ಸಲಹೆ ನೀಡುವರು. ಅಲ್ಲದೆ ಸಂವಿಧಾನದಲ್ಲಿ ತಿಳಿಸಿದ ಇತರ ಕಾನೂನುಗಳ ಕಾರ್ಯ ಪೂರೈಸುವುದು, ಹಾಗೂ ಜಾರಿಯಲ್ಲಿರಬಹುದಾದ ಕಾನೂನುಗಳ ಬಗೆಗೆ ಸಲಹೆ ಸೂಚನೆಗಳನ್ನು ಒದಗಿಸುವುದು ಅವರ ಕರ್ತವ್ಯ.

(೩) ಈ ವಿಧವಾದ ಕಾರ್ಯಾಚರಣೆಗೆ ಸಂಬಂಧಿಸಿದಂತೆ, ಅಟಾರ್ನಿ ಜನರಲ್‌ರಿಗೆ ಭಾರತದ ಎಲ್ಲಾ ನ್ಯಾಯಾಲಯಗಳಲ್ಲಿ ಹಾಜರಾಗಿ ಪ್ರತಿಪಾದಿಸುವ ಮುಕ್ತ ಆಸ್ಪದವಿದೆ.

(೪) ಅಟಾರ್ನಿ ಜನರಲ್ ಅವರು ರಾಷ್ಟ್ರಪತಿಯವರ ಇಚ್ಛೆಯ ಮೇರೆಗೆ ಅಧಿಕಾರದಲ್ಲಿ ಮುಂದುವರೆಯುತ್ತಾರೆ ಹಾಗೂ ಕಾಲಕಾಲಕ್ಕೆ ಸಂಸತ್ತು ನಿರ್ಣಯಿಸಿದ ವೇತನ ಪಡೆಯುತ್ತಾರೆ.

---

* ಸಮಿತಿಯು 'ಅಡ್ವೋಕೇಟ್ ಜನರಲ್' ಪದದ ಬದಲಾಗಿ 'ಅಟಾರ್ನಿ ಜನರಲ್' ಪದ ಪ್ರಯೋಗಿಸಿದೆ. ಕಾರಣ ಎಂದರೆ ಇಂಗ್ಲೆಂಡ್ ಹಾಗೂ ಅಮೆರಿಕಾಗಳಲ್ಲಿ ಜಾರಿಯಲ್ಲಿರುವ ಪದಗಳನ್ನು ರೂಢಿಸಿಕೊಳ್ಳಬೇಕು. ಅಲ್ಲದೆ ರಾಜ್ಯಗಳ ಅಡ್ವೋಕೇಟ್ ಜನರಲ್ಲುಗಳಿಗಿಂತ ಕೇಂದ್ರದಲ್ಲಿ ಬೇರೆ ಪದವಿಯಿದ್ದಲ್ಲಿ ವ್ಯತ್ಯಾಸ ಮನಗಾಣಬಹುದು.

## ಸರಕಾರದ ವ್ಯವಹಾರ ನಿರ್ವಹಣೆಯ ಕ್ರಮ

**ಭಾರತದ ಸರಕಾರದ ವ್ಯವಹಾರ ನಿರ್ವಹಣೆಯ ಕ್ರಮ**

೬೪. ೧. ಭಾರತ ಸರಕಾರದ ಆಡಳಿತದ ವ್ಯವಹಾರ ವೆಲ್ಲವೂ ರಾಷ್ಟ್ರಪತಿಯವರ ಹೆಸರಿನಲ್ಲಿಯೇ ನಡೆಸಲಾಗುವುದು.

೨. ಅಪ್ಪಣೆ ಹಾಗೂ ಆಜ್ಞೆಗಳು ರಾಷ್ಟ್ರಪತಿಯಿಂದ ಜಾರಿಗೆ ಬಂದದ್ದನ್ನು ಎಲ್ಲೂ ಯಾರೂ ಪ್ರಶ್ನಿಸುವಂತಿಲ್ಲ. ಅವರ ಅಪ್ಪಣೆಗಳನ್ನು ಸೂಕ್ತವಾದ ವಿಧಿಯ ಮೂಲಕ ನಿಗದಿ ಮಾಡಿರುವ ವಿಷಯವನ್ನೂ ಯಾರೂ ಪ್ರಶ್ನಿಸುವಂತಿಲ್ಲ.

**ರಾಷ್ಟ್ರಪತಿಗಳಿಗೆ ಮಾಹಿತಿ ನೀಡುವ ಬಗೆಗೆ ಪ್ರಧಾನಿಯವರ ಕರ್ತವ್ಯ**

೬೫. ಪ್ರಧಾನಿಯವರ ಕರ್ತವ್ಯ :

(ಅ) ಭಾರತದ ಆಡಳಿತ ಕುರಿತಂತೆ ಮಂತ್ರಿ ಮಂಡಳಿಯ ಎಲ್ಲಾ ನಿರ್ಣಯಗಳನ್ನು ತಿಳಿಸುವುದು.

(ಬ) ಆಡಳಿತದ ಬಗೆಗೆ ರಚಿಸಬಹುದಾದ ಕಾನೂನುಗಳ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ರಾಷ್ಟ್ರಪತಿಗಳು ಕೋರಿದಾಗ ಅದನ್ನು ಒದಗಿಸುವುದು.

(ಕ) ಯಾವುದೇ ಒಂದು ಶಾಖೆಯ ಮಂತ್ರಿವರ್ಯ ತೆಗೆದುಕೊಂಡ ತೀರ್ಮಾನದ ಬಗೆಗೆ ಸಂಪುಟ ತನ್ನ ಒಪ್ಪಿಗೆಯನ್ನು ಸೂಚಿಸದೇ ಹೋದ ಸಂದರ್ಭದಲ್ಲಿ ಆ ವಿಷಯ ರಾಷ್ಟ್ರಪತಿಯವರ ಅವಗಾಹನೆಗೆ ತರುವುದು.

* * * * *

# ಭಾಗ II
# ಸಂಸತ್ತು

## ಸಾಮಾನ್ಯ

**ಸಂಸತ್ತಿನ ರಚನೆ**

೬೬. ಒಕ್ಕೂಟಕ್ಕೆ ಒಂದು ಸಂಸತ್ತು ಇರತಕ್ಕದ್ದು. ಅಂತಹ ಸಂಸತ್ತು ರಾಷ್ಟ್ರಪತಿ ಹಾಗೂ ಉಭಯ ಸದನಗಳಿಂದ ಕೂಡಿದ್ದು ಕ್ರಮವಾಗಿ ಉಭಯ ಸದನಗಳ ಹೆಸರು ರಾಜ್ಯಸಭೆ ಹಾಗೂ ಲೋಕಸಭೆ ಎಂದು ಕರೆಯಲಾಗುವುದು.

**ಸಂಸತ್ತಿನ ಸದನಗಳ ರಚನೆ**

೬೭. (೧) ರಾಜ್ಯಸಭೆಯು ೨೫೦ ಸದಸ್ಯರಿಂದ ಕೂಡಿದೆ; ಅದರಲ್ಲಿ

(ಅ) ಈ ವಿಧಿಯ ೨ನೇ ಉಪನಿಬಂಧನೆಯಲ್ಲಿ ಸೂಚಿಸಿದಂತೆ ರಾಷ್ಟ್ರಪತಿಯವರು ಹದಿನೈದು ನಾಮಕರಣ ಸದಸ್ಯರನ್ನು ನೇಮಿಸುತ್ತಾರೆ. ಮತ್ತು

(ಬ) ಮಿಕ್ಕ ಸದಸ್ಯರು ವಿವಿಧ ರಾಜ್ಯಗಳ ಪ್ರತಿನಿಧಿಗಳಾಗಿರುತ್ತಾರೆ.

ಆದರೆ, ಯಾವುದೇ ಒಂದು ರಾಜ್ಯದ ಪ್ರತಿನಿಧಿಗಳ ಸಂಖ್ಯೆಯು ಭಾಗ III ಮೊದಲನೆಯ ಅನುಸೂಚಿಯಲ್ಲಿ ಸೂಚಿಸಿದಂತೆ ಶೇಕಡಾ ನಲವತ್ತಕ್ಕೆ ಅಧಿಕವಾಗಿರಕೂಡದು.

*೨. ಉಪನಿಬಂಧನೆಯು (ಬ)ಯಲ್ಲಿ ತಿಳಿಸಿದಂತೆ ರಾಷ್ಟ್ರಪತಿಯಿಂದ ನಾಮಕರಣ ಹೊಂದಿದ ಸದಸ್ಯರು, ವಿಶೇಷವಾಗಿ ಕೆಳಗೆ ಸೂಚಿಸಿದ ಕಾರ್ಯಕ್ಷೇತ್ರಗಳಲ್ಲಿ ಪರಿಣತೆಯನ್ನು ಅನುಭವವನ್ನು ಪಡೆದ ತಜ್ಞರಾಗಿರಬೇಕು:

---

* ಸಮಿತಿಯ ಅಭಿಪ್ರಾಯದಲ್ಲಿ ರಾಷ್ಟ್ರಪತಿಯವರು ಹದಿನೈದು ಸದಸ್ಯರನ್ನು ನಾಮಕರಣ ಮಾಡುವಾಗ ವಯಸ್ಕರ ಮತದಾನ ಪದ್ಧತಿಯು ಜಾರಿಗೊಳ್ಳುವುದನ್ನು ಗಮನಿಸಿ ಕಾರ್ಮಿಕ, ವಾಣಿಜ್ಯ ಹಾಗೂ ಉದ್ದಿಮೆ ಕ್ಷೇತ್ರಗಳಿಂದ ನಾಮಕರಣ ಮಾಡಕೂಡದು. ಸಮಿತಿಯ ಅಭಿಪ್ರಾಯದಲ್ಲಿ, ಐರ್‌ಲ್ಯಾಂಡಿನಲ್ಲಿಯ ಪಟ್ಟಿ ಪದ್ಧತಿಯೂ ಜಾರಿಯಲ್ಲಿ ತರಲು ಸೂಕ್ತವಾದುದ್ದಲ್ಲ ಎಂದೇ ಭಾವಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿಯೇ ಸಮಿತಿಯು ನಾಮಕರಣ ವ್ಯವಸ್ಥೆಯನ್ನು ಆಯ್ದುಕೊಂಡಿದೆ. ಚುನಾವಣೆಯ ಬದಲಾಗಿ ನಾಮಕರಣ ವ್ಯವಸ್ಥೆಯನ್ನು ಆಯ್ದುಕೊಂಡಿರುವ ಸಮಿತಿಯ ಅಭಿಪ್ರಾಯದಲ್ಲಿ ಕಾರ್ಮಿಕ, ವಾಣಿಜ್ಯ, ಉದ್ದಿಮೆಗಳ ಪ್ರತಿನಿಧಿಗಳಿಗೆ ಚುನಾವಣೆಯಲ್ಲಿ ಆಸ್ಪದವಿರುವುದರಿಂದ ಕೈಬಿಡಲಾಗಿದೆ.

ಎ) ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಶಿಕ್ಷಣ

ಬಿ) ಬೇಸಾಯ, ಮೀನುಗಾರಿಕೆ ಮತ್ತು ತತ್ಸಂಬಂಧ ವಿಷಯ

ಸಿ) ತಂತ್ರಜ್ಞಾನ ಮತ್ತು ಶಿಲ್ಪಕಲೆ

ಡಿ) ಸಾರ್ವಜನಿಕ ಆಡಳಿತ ಮತ್ತು ಸಮಾಜ ಸೇವೆ.

೩. ಸದ್ಯದಲ್ಲಿ ಪ್ರತಿಯೊಂದು ರಾಜ್ಯದ ಪ್ರತಿನಿಧಿಗಳನ್ನು ಮೊದಲನೆಯ ಅನುಬಂಧದಲ್ಲಿ ಭಾಗ III ಅಥವಾ ಭಾಗ II ಸೂಚಿಸಿದಂತೆ ಚುನಾಯಿಸಲಾಗುವುದು.

ಎ) ಯಾವ ರಾಜ್ಯದಲ್ಲಿ ದ್ವಿಸದನಗಳಿವೆಯೋ ಅಲ್ಲಿಯ ಕೆಳಮನೆಯಿಂದ ಸದಸ್ಯರನ್ನು ಚುನಾಯಿಸಬೇಕು.

ಬಿ) ಎಲ್ಲಿ ಒಂದೇ ಸದನವಿದೆಯೋ, ಅಲ್ಲಿ ಆ ಸದನದ ಚುನಾಯಿತ ಸದಸ್ಯರಿಂದ ಚುನಾಯಿಸಬೇಕು.

ಸಿ) ಯಾವ ರಾಜ್ಯದಲ್ಲಿ ಸದನವೇ ಇರದೇ ಹೋದಲ್ಲಿ ಸಂಸತ್ತಿನ ಕಾನೂನು ಸೂಚಿಸಿದಂತೆ ಚುನಾಯಿಸಬೇಕು.

೪. ಸದ್ಯದ ಸಮಯದಲ್ಲಿ ರಾಜ್ಯಗಳ ಪ್ರತಿನಿಧಿಗಳನ್ನು ಮೊದಲನೆಯ ಅನುಸೂಚಿ ಭಾಗ II ರಲ್ಲಿ ಸೂಚಿಸಿದಂತೆ ಚುನಾಯಿಸಿ ನಂತರ ಸಂಸತ್ತು ರಚಿಸಬಹುದಾದ ಕಾನೂನಿನಂತೆ ಆಯ್ಕೆ ಮಾಡಲಾಗುವುದು.

೫. ಈ ಸಂವಿಧಾನದ ವಿಧಿಗಳು ೨೯೨ ಮತ್ತು ೨೯೩ರಲ್ಲಿ ಸೂಚಿಸಿದಂತೆ ಲೋಕಸಭೆ

ಎ) ಐದು ನೂರು ಸದಸ್ಯರಿಗೆ ಮಿಗಿಲಾಗದಂತೆ ರಾಜ್ಯಗಳ ವಿವಿಧ ಪ್ರದೇಶಗಳಿಂದ ನೇರವಾಗಿ ಜನತೆಯಿಂದಲೇ ಚುನಾಯಿಸಲ್ಪಡುತ್ತಾರೆ.

ಬಿ) ಉಪನಿಬಂಧನೆ (ಎ)ಯ ಉದ್ದೇಶಕ್ಕೆಂದೇ ಭಾರತದ ರಾಜ್ಯಗಳನ್ನು ವಿವಿಧ ಗುಂಪುಗಳಾಗಿ ವಿಭಜಿಸಿ ಪ್ರಾದೇಶಿಕ ಮತದಾರ ಕ್ಷೇತ್ರಗಳೆಂದು ವಿಂಗಡಿಸಿ ಹಾಗೂ ಪ್ರತಿಯೊಂದು ಮತದಾರ ಕ್ಷೇತ್ರದಿಂದ ಆಯ್ಕೆಯಾಗುವಂತಹ ಪ್ರತಿನಿಧಿಗಳನ್ನು ಚುನಾಯಿಸುವ ಮತದಾರರ ಸಂಖ್ಯೆಯನ್ನು ೭,೫೦,೦೦೦ ಎಂದೂ, ಹಾಗೂ ಪ್ರತಿ ೫,೦೦,೦೦೦ ಜನಸಂಖ್ಯೆಗೆ ಓರ್ವ ಪ್ರತಿನಿಧಿ ಇರಬೇಕೆಂಬ ಸೂತ್ರವನ್ನು ಅನುಸರಿಸಲಾಗುವುದು.

ಆದರೆ ಸದ್ಯದಲ್ಲಿ ಮೊದಲನೆಯ ಅನುಸೂಚಿ ಭಾಗ III ರಲ್ಲಿ ಹೇಳಿದಂತೆ ರಾಜ್ಯದ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಪ್ರತಿನಿಧಿಗಳ ಸಂಖ್ಯೆ ಮೀರದಂತೆ ರಾಜ್ಯಗಳ ಪ್ರತಿನಿಧಿಗಳು ಭಾಗ I ಮತ್ತು II ಅನುಸೂಚಿಯಲ್ಲಿ ಸೂಚಿಸಿದಂತೆ ಕ್ರಮವಹಿಸಲಾಗುವುದು.

ಸಿ) ಯಾವುದೇ ಒಂದು ಪ್ರಾದೇಶಿಕ ಮತದಾರ ಕ್ಷೇತ್ರದ ಜನಸಂಖ್ಯೆಯು ಒಂದೇ ರೀತಿಯಲ್ಲಿರುವಂತೆ ಕಾಪಾಡಲಾಗುವುದು. ಈ ಒಂದೇ ಪ್ರಮಾಣ ಸಾಮಾನ್ಯವಾಗಿ ಒಂದೇ ರೀತಿಯಲ್ಲಿರುವಂತೆ ನೋಡಿಕೊಳ್ಳಲಾಗುವುದು.

೬. ಲೋಕಸಭೆಯ ಚುನಾವಣೆಗಳು ವಯಸ್ಕರ ಮತದಾನ ಪದ್ಧತಿಯ ಮೇಲೆ ಜರುಗುವುದು. ಅಂದರೆ ೨೧ ವರ್ಷ ವಯಸ್ಸಿನ ಪೌರರಿಗೆಲ್ಲಾ ಮತದಾನದ ಹಕ್ಕಿದೆ. ಆದರೆ ಈ ಸಂವಿಧಾನದ ಅಥವಾ ಕಾನೂನಿನಂತೆ, ಅನಿವಾಸಿ, ಮಾನಸಿಕ ಅಸ್ವಸ್ಥತೆ, ಅಪರಾಧ, ಭ್ರಷ್ಟಾಚಾರ, ಮುಂತಾದ ಅನರ್ಹತೆಗೆ ಈಡಾದವರಿಗೆ ಮತದಾರರಾಗಿ ನೋಂದಾಯಿಸುವ ಅಧಿಕಾರವಿಲ್ಲ.

೭. ರಾಜ್ಯಗಳಲ್ಲದೆ ಬೇರೆ ಪ್ರದೇಶಗಳು ಸಂಸತ್ತಿನ ಸದಸ್ಯತ್ವ ಹೊಂದುವ ಬಗೆಗೆ ಸಂಸತ್ತಿನ ಕಾನೂನುಗಳಂತೆ ನಿರ್ಣಯಿಸಲಾಗುವುದು.

೮. ಸಂವಿಧಾನದ ೨೮೯ನೇ ವಿಧಿಯಲ್ಲಿ ಸೂಚಿಸಿದಂತೆ, ಪ್ರತಿಯೊಂದು ಜನಗಣನೆಯಾದ ನಂತರ ರಾಜ್ಯಸಭೆಯ ಹಾಗೂ ಲೋಕಸಭೆಯ ಮತದಾರ ಕ್ಷೇತ್ರದ ಮತದಾರರ ಸಂಖ್ಯೆಯನ್ನು ಪರಿಷ್ಕರಿಸಲಾಗುವುದು. ಈ ಕಾರ್ಯವನ್ನು ಸಂಸತ್ತಿನಿಂದ ನಿರ್ಣಯಿಸಲಾದ ಕಾನೂನಿನಂತೆ ನಡೆಸಲಾಗುವುದು.

೯. ಈಗ ಸದ್ಯದಲ್ಲಿ ಮೊದಲನೆಯ ಅನುಸೂಚಿಯ ಭಾಗ III ರಲ್ಲಿ ಸೂಚಿಸಿದಂತೆ ರಾಜ್ಯಗಳ ವಿವಿಧ ಗುಂಪುಗಳಿಂದ ರಾಜ್ಯಸಭೆಗೆ ಸದಸ್ಯರನ್ನು ಆಯ್ಕೆ ಮಾಡಲಾಗುವುದು. ಆದುದರಿಂದ ಪ್ರತಿಯೊಂದು ಗುಂಪನ್ನು ಒಂದು ರಾಜ್ಯವೆಂದೇ ಪರಿಗಣಿಸಲಾಗುವುದು.

**ಸಂಸತ್ತಿನ ಸದನಗಳ ಅವಧಿ**

೬೮. (೧) ರಾಜ್ಯಸಭೆಯು ವಿಸರ್ಜನೆಯಾಗದೆ ಮುಂದುವರಿಯುತ್ತದೆ. ಆದರೆ ಈ ದಿಶೆಯಲ್ಲಿ ಸಂಸತ್ತಿನ ಕಾನೂನಿನ ನಿರ್ಣಯದಂತೆ ಸರಿಸುಮಾರಾಗಿ ಒಂದು ಮೂರಂಶ ಸದಸ್ಯರು, ತಮ್ಮ ಅವಧಿ ಪೂರ್ಣವಾದ ನಂತರ ಪ್ರತಿ ಎರಡು ವರ್ಷಕ್ಕೆ ನಿವೃತ್ತರಾಗುತ್ತಾರೆ.

೨. ಲೋಕಸಭೆಯು ಅವಧಿಗೆ ಮುನ್ನ ವಿಸರ್ಜನೆಯಾಗದೇ ಇದ್ದಲ್ಲಿ * ೫ ವರ್ಷ ಅವಧಿಯನ್ನು ಅದರ ಮೊದಲನೆಯ ಸಭೆಯ

---

* (ಸಮಿತಿಯು ನಾಲ್ಕು ವರ್ಷದ ಅವಧಿಯ ಬದಲಾಗಿ ಐದು ವರ್ಷಗಳನ್ನು ನಿರ್ಧರಿಸಿದೆ; ಏಕೆಂದರೆ ಅದರ ಅಭಿಪ್ರಾಯದಲ್ಲಿ ಲೋಕಸಭೆಯ ಅವಧಿಯು ಸಂಸದೀಯ ಪದ್ಧತಿಯ ಸರಕಾರದಲ್ಲಿ ಮೊದಲನೆಯ ವರ್ಷ ಸಂಸತ್ತಿನ ಸಂಪ್ರದಾಯಗಳನ್ನು ಅರಿತುಕೊಳ್ಳುವ ಹಾಗೂ ಕೊನೆಯ ವರ್ಷ ಮುಂದಿನ ಚುನಾವಣೆಯ ಸಿದ್ಧತೆಗೆ ಮಂತ್ರಿಗಳ ಸಮಯ ವ್ಯಯವಾಗುವುದರಿಂದ ನಾಲ್ಕು ವರ್ಷ ಮುಂದಿನ ಚುನಾವಣೆಯ ಸಿದ್ಧತೆಗೆ ಮಂತ್ರಿಗಳ

ದಿನದಿಂದ ಹೊಂದಿದೆ. ಈ ಅವಧಿ ಪೂರ್ಣಗೊಂಡ ನಂತರ ಲೋಕಸಭೆಯನ್ನು ವಿಸರ್ಜಿಸಲಾಗುವುದು.

ಆದರೆ ಈ ಅವಧಿಯು ಪೂರ್ಣಗೊಂಡ ಸಮಯದಲ್ಲಿ ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದರೆ ಅದನ್ನು ಒಂದು ಸಂವತ್ಸರದ ಅವಧಿ ಮೀರದಂತೆ ವಿಸ್ತರಿಸಬಹುದು. ಆದರೆ ತುರ್ತು ಪರಿಸ್ಥಿತಿಯ ಘೋಷಣೆಯ ಅವಧಿ ಮುಗಿದ ಆರು ತಿಂಗಳ ಅವಧಿಯೊಳಗೆ ಸಂಸತ್ತಿನ ಅಧಿವೇಶನವನ್ನು ಕರೆಯಲೇಬೇಕು.

**ಸಂಸತ್ತಿನ ಸಭೆಗಳ ಮುಂದೂಡುವಿಕೆ ಮತ್ತು ವಿಸರ್ಜನೆ**

೬೯. (೧) ಸಂಸತ್ತಿನ ಅಧಿವೇಶನವನ್ನು ವರ್ಷದಲ್ಲಿ ಎರಡು ಬಾರಿ ಕರೆಯಲೇಬೇಕು. ಎರಡು ಅಧಿವೇಶನಗಳ ಮಧ್ಯೆ ಅಂತರವು ಆರು ತಿಂಗಳು ಮೀರಿರಬಾರದು.

(೨) ಈ ವಿಧಿಯಲ್ಲಿ ಸೂಚಿಸಿದಂತೆ ಕಾಲಕಾಲಕ್ಕೆ ರಾಷ್ಟ್ರಪತಿಯವರು:

ಎ) ನಿಗದಿಪಡಿಸಲಾದ ಸ್ಥಳದಲ್ಲಿ ಸದನಗಳನ್ನು ಕರೆಯುವ

ಬಿ) ಸದನಗಳನ್ನು ಮುಂದೆ ಹಾಕುವ

ಸಿ) ಲೋಕಸಭೆಯನ್ನು ವಿಸರ್ಜಿಸುವ ಅಧಿಕಾರ ಹೊಂದಿದ್ದಾರೆ.

**ರಾಷ್ಟ್ರಪತಿಯಿಂದ ಸದನಕ್ಕೆ ವಿಶೇಷ ಸಂದೇಶ ನೀಡುವ ಮತ್ತು ಉದ್ದೇಶಿಸಿ ಮಾತನಾಡುವ ಅಧಿಕಾರ**

೭೦. (೧) ರಾಷ್ಟ್ರಪತಿಯವರು ಸಂಸತ್ತಿನ ಯಾವ ಸದನವನ್ನಾದರೂ ಉದ್ದೇಶಿಸಿ ಮಾತನಾಡಬಹುದು ಅಲ್ಲದೆ ಜಂಟಿ ಅಧಿವೇಶನವನ್ನು ಕರೆದು ಮಾತನಾಡಬಹುದು. ಈ ಉದ್ದೇಶಕ್ಕೆ ಸದಸ್ಯರ ಹಾಜರಾತಿ ಅನಿವಾರ್ಯ.

(೨) ರಾಷ್ಟ್ರಪತಿಯವರು ಸಂಸತ್ತಿನ ಯಾವುದೇ ಸದನಕ್ಕೆ ಸಂದೇಶಗಳನ್ನು ರವಾನಿಸಬಹುದು. ಈ ವಿಧವಾದ ಸಂದೇಶವು ಯಾವ ಮಸೂದೆಗೆ ಸಂಬಂಧಿಸಿದೆಯೋ ಆ ವಿಷಯವನ್ನು ಸದನವು ಪರಿಶೀಲಿಸಬಹುದು.

**ಸಂಸತ್ತಿನ ಪ್ರತಿ ಒಂದು ಅಧಿವೇಶನ ಆರಂಭದಲ್ಲಿ ರಾಷ್ಟ್ರಪತಿಯವರು ಸಂಸತ್ತನ್ನು ಉದ್ದೇಶಿಸಿ ವಿಶೇಷ ಭಾಷಣ ಮಾಡುವ ಮತ್ತು ಭಾಷಣದ ಮೇಲಿನ ಸಂಸದೀಯ ಚರ್ಚೆಗೆ ಅವಕಾಶ ಕಲ್ಪನೆ**

೭೧. (೧) ಸಂಸತ್ತು ಸೇರುವ ಸಮಯದ ಉದ್ಘಾಟನಾ ಭಾಷಣವನ್ನು ರಾಷ್ಟ್ರಪತಿಯವರೇ ನೆರವೇರಿಸುತ್ತಾರೆ. ಜಂಟಿ ಅಧಿವೇಶನದ ಆರಂಭದಲ್ಲಿ ರಾಷ್ಟ್ರಪತಿಯವರ ಭಾಷಣದಲ್ಲಿ ಯಾವ ಉದ್ದೇಶಕ್ಕೆಂದೇ ಸಂಸತ್ತನ್ನು ಕರೆಯಲಾಗಿದೆ ಹಾಗೂ ಸರಕಾರದ ಧೋರಣೆಯ ಸ್ಥೂಲವಿವರಣೆಗಳನ್ನು ತಿಳಿಸ ಲಾಗುವುದು.

---

ಸಮಯ ವ್ಯಯವಾಗುವುದರಿಂದ ನಾಲ್ಕು ವರ್ಷ ಅವಧಿ ಒಪ್ಪಿದಲ್ಲಿ ಕೇವಲ ಎರಡೇ ವರ್ಷಗಳಲ್ಲಿ ಹೆಚ್ಚು ಕಾರ್ಯ ಮಾಡಲಾಗದೆಂದೇ ಭಾವಿಸಿ ಲೋಕಸಭೆಯ ಅವಧಿಯನ್ನು ಐದು ವರ್ಷಗಳಿಗೆ ನಿಗದಿ ಮಾಡಲಾಗಿದೆ.)

(೨) ಈ ವಿಧವಾಗಿ ತಿಳಿಸಲಾದ ವಿಷಯಗಳ ಚರ್ಚೆಗೆ ಅನಿವಾರ್ಯವಾದ ಸಮಯವನ್ನು ಒದಗಿಸುವಂತೆ, ಎರಡೂ ಸದನಗಳು ಕ್ರಮಬದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಸದನದ ವ್ಯವಹಾರಗಳಲ್ಲಿ ರಾಷ್ಟ್ರಪತಿಯ ಭಾಷಣಕ್ಕೆ ಆದ್ಯತೆ ಒದಗಿಸಬೇಕು.

**ಮಂತ್ರಿವರ್ಯರ ಹಾಗೂ ಅಟಾರ್ನಿ ಜನರಲ್‌ರ ಭಾಷಣದ ಅಧಿಕಾರಗಳು**

೭೨. ಪ್ರತಿಯೋರ್ವ ಮಂತ್ರಿವರ್ಯ ಹಾಗೂ ಅಟಾರ್ನಿ ಜನರಲ್‌ರಿಗೆ ಮಾತನಾಡುವ ಅಧಿಕಾರ ನೀಡಲಾಗಿದೆ. ಅಥವಾ ಅವರು ಯಾವುದೇ ಸದನದ ಚರ್ಚೆಯಲ್ಲಿಯೂ, ಅಥವಾ ಸಂಸತ್ತಿನ ಯಾವ ಸಮಿತಿಯಲ್ಲಿಯೂ ಭಾಗವಹಿಸುವ ಹಾಗೂ ಮತ ಚಲಾಯಿಸುವ ಹಕ್ಕನ್ನು ಹೊಂದಿದ್ದಾರೆ.

## ಸಂಸತ್ತಿನ ಪದಾಧಿಕಾರಿಗಳು

**ರಾಜ್ಯಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರು**

೭೩. (೧) ಭಾರತದ ಉಪರಾಷ್ಟ್ರಪತಿಯವರು ತನ್ನ ಸ್ಥಾನ ಗೌರವದಿಂದ ರಾಜ್ಯಸಭೆಯ ಅಧ್ಯಕ್ಷರಾಗಿರುತ್ತಾರೆ.

(೨) ರಾಜ್ಯಸಭೆಯ ಅಧಿವೇಶನ ಜಾರಿಯಾದ ದಿನದಂದೇ ಓರ್ವ ಉಪಾಧ್ಯಕ್ಷನನ್ನು ಚುನಾಯಿಸಬೇಕು. ಉಪಾಧ್ಯಕ್ಷರ ಸ್ಥಾನ ತೆರವಾದಲ್ಲಿ ರಾಜ್ಯಸಭೆಯ ಸದಸ್ಯರೇ ಬೇರೆ ಯಾವುದಾದರೂ ಸದಸ್ಯನನ್ನು ಆ ಸ್ಥಾನಕ್ಕೆ ಚುನಾಯಿಸಬೇಕು.

**ಉಪಸಭಾಪತಿಗಳ ರಾಜೀನಾಮೆ, ತೆಗೆದು ಹಾಕುವುದು ಹಾಗೂ ಸ್ಥಾನ ತೆರವಾಗುವುದು**

೭೪. ರಾಜ್ಯಸಭೆಯ ಉಪಾಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಸದಸ್ಯ ತನ್ನ ಸ್ಥಾನವನ್ನು ತೆರವು ಮಾಡಬೇಕು.

(ಎ) ರಾಜ್ಯಸಭೆಯ ಸದಸ್ಯನಾಗಿರದೇ ಹೋದಲ್ಲಿ

(ಬಿ) ಅಧ್ಯಕ್ಷರಿಗೆ ತನ್ನ ಕೈ ಬರಹದಿಂದ ರಾಜೀನಾಮೆ ನೀಡಿದ್ದಲ್ಲಿ ಮತ್ತು

(ಸಿ) ರಾಜ್ಯಸಭೆಯ ಸದಸ್ಯರ ಬಹುಮತದಿಂದ ಅಸಾಮರ್ಥ್ಯ ಅಥವಾ ಅವಿಶ್ವಾಸಕ್ಕೆ ಗುರಿಯಾಗಿ ತೆಗೆದು ಹಾಕಲ್ಪಟ್ಟಲ್ಲಿ.

ಆದರೆ ಈ ವಿಧವಾದ ಅಂದರೆ ಉಪನಿಬಂಧನೆ (ಸಿ)ಯಲ್ಲಿ ಸೂಚಿಸಿದ ಗೊತ್ತುವಳಿಯನ್ನು ಹದಿನಾಲ್ಕು ದಿನ ಮುಂಚೆ ನೋಟೀಸ್ ನೀಡುವುದು ಕಡ್ಡಾಯ. ಈ ವಿಧವಾದ ಮುನ್ಸೂಚನೆ ನೀಡದೆ ತೆಗೆಯುವಂತಿಲ್ಲ.

**ಉಪಸಭಾಪತಿ ಸಭಾಪತಿಯಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಯ ಅಧಿಕಾರಗಳು ಮತ್ತು ಕರ್ತವ್ಯ**

೭೫. (೧) ರಾಜ್ಯಸಭೆಯ ಅಧ್ಯಕ್ಷರ ಸ್ಥಾನ ತೆರವಾದಾಗ ಅಥವಾ ಉಪರಾಷ್ಟ್ರಪತಿಯು ರಾಷ್ಟ್ರಪತಿಯ ಕಾರ್ಯನಿರ್ವಹಿಸುತ್ತಿರುವಾಗ (ವಿಧಿ ೫೪ರಂತೆ) ಉಪಸಭಾಪತಿಯಾದ ವ್ಯಕ್ತಿಯು ಸಭಾಪತಿಯ ಕಾರ್ಯನಿರ್ವಹಿಸುತ್ತಾರೆ. ಉಪಸಭಾಪತಿಯ ಸ್ಥಾನ

ಖಾಲಿ ಬಿದ್ದಾಗ, ರಾಜ್ಯಸಭೆ ಈ ಕಾರ್ಯಕ್ಕೆಂದೇ ಆಯ್ಕೆ ಮಾಡಿದ ವ್ಯಕ್ತಿಯನ್ನು ರಾಷ್ಟ್ರಪತಿಯವರು ನೇಮಿಸುತ್ತಾರೆ.

(೨) ರಾಜ್ಯಸಭೆಯ ಸಭಾಪತಿಗಳ ಗೈರುಹಾಜರಿಯಲ್ಲಿ ಉಪಸಭಾಪತಿಯೂ, ಅವರ ಗೈರುಹಾಜರಿಯಲ್ಲಿ ರಾಜ್ಯಸಭೆಯ ನಿಯಮಾವಳಿಯಂತೆ ನಿರ್ಣಯಿಸಿದ ವ್ಯಕ್ತಿ ಅಥವಾ ಅವರು ಲಭ್ಯವಿಲ್ಲದೇ ಹೋದಲ್ಲಿ ರಾಜ್ಯಸಭೆ ತನ್ನ ಗೊತ್ತುವಳಿಯ ಮೂಲಕ ನಿರ್ಣಯಿಸಿದ ವ್ಯಕ್ತಿ ಸಭಾಪತಿಯಾಗಿ ಕಾರ್ಯನಿರ್ವಹಿಸುತ್ತಾರೆ.

**ಲೋಕಸಭೆಯ ಅಧ್ಯಕ್ಷ – ಉಪಾಧ್ಯಕ್ಷ**

೭೬. ಲೋಕಸಭೆ ರಚನೆಯಾದ ಕೂಡಲೇ ಇಬ್ಬರು ಸದಸ್ಯರನ್ನು ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಆಯ್ಕೆ ಮಾಡಬೇಕು. ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಗಳು ತೆರವಾದ ಶೀಘ್ರದಲ್ಲಿ ಸದನವೇ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಸ್ಥಾನವನ್ನು ಆಯ್ಕೆ ಮಾಡಬೇಕು.

**ಅಧ್ಯಕ್ಷ – ಉಪಾಧ್ಯಕ್ಷರ ಸ್ಥಾನ ರಾಜೀನಾಮೆ, ತೆಗೆದು ಹಾಕುವುದು ತೆರವಾಗುವುದು**

೭೭. ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನವನ್ನು ಹೊಂದಿದವರು: (ಎ) ಲೋಕಸಭೆಯ ಸದಸ್ಯನಾಗಿರದೇ ಇದ್ದಲ್ಲಿ ಅಧಿಕಾರದಲ್ಲಿ ಮುಂದುವರಿಯಲಾಗದು.

(ಬಿ) ತನ್ನ ಕೈ ಬರಹದಿಂದ ಅಧ್ಯಕ್ಷ ಉಪಾಧ್ಯಕ್ಷನಿಗೆ ಅಥವಾ ಉಪಾಧ್ಯಕ್ಷ ಅಧ್ಯಕ್ಷನಿಗೆ ರಾಜೀನಾಮೆ ಪತ್ರ ಸಲ್ಲಿಸಬಹುದು ಮತ್ತು

(ಸಿ) ಅವಿಶ್ವಾಸ ಮತ್ತು ಅಸಾಮರ್ಥ್ಯ ಕಾರಣಗಳಿಗಾಗಿ ಸದನದ ಬಹುಮತ ಗೊತ್ತುವಳಿಯಿಂದ ತೆಗೆದುಹಾಕಬಹುದು. ಆದರೆ ಈ ವಿಧವಾದ ಗೊತ್ತುವಳಿಯನ್ನು ಹದಿನಾಲ್ಕು ದಿನದ ಮುಂಚೆ ನೋಟೀಸ್ ನೀಡಿ ತಿಳಿಸಲೇಬೇಕು.

ಮುಂದುವರಿಕೆಯಾಗಿ ಯಾವುದೇ ಕಾರಣಕ್ಕಾಗಿ ಲೋಕಸಭೆ ವಿಸರ್ಜನೆ ಹೊಂದಿದಾಗ ಅಧ್ಯಕ್ಷರು ರಾಜೀನಾಮೆ ನೀಡದೆ ಮುಂದಿನ ಲೋಕಸಭೆಯ ಮೊದಲನೆಯ ಸಭೆ ಸೇರುವವರೆಗೂ ಅಧಿಕಾರದಲ್ಲಿ ಮುಂದುವರಿಯುತ್ತಾರೆ.

**ಉಪಾಧ್ಯಕ್ಷರ ಅಥವಾ ಉಪಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡವರ ಅಧಿಕಾರಗಳು**

೭೮. (೧) ಅಧ್ಯಕ್ಷರ ಸ್ಥಾನವು ತೆರವಾದ ಸಂದರ್ಭದಲ್ಲಿ; ಉಪಾಧ್ಯಕ್ಷರು ಅವರ ಕಾರ್ಯಗಳನ್ನು ನೆರವೇರಿಸುವರು, ಉಪಾಧ್ಯಕ್ಷರ ಸ್ಥಾನವೂ ಖಾಲಿಯಾದಾಗ ಲೋಕಸಭೆಯು ಆಯ್ಕೆ ಮಾಡಿದ ಸದಸ್ಯನನ್ನು ರಾಷ್ಟ್ರಪತಿಯವರು ನೇಮಿಸುತ್ತಾರೆ.

(೨) ಲೋಕಸಭೆಯ ಕಾರ್ಯಕಲಾಪಗಳ ಸಮಯದಲ್ಲಿ ಅಧ್ಯಕ್ಷರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು ಕಾರ್ಯ ಕಲಾಪಗಳನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಅವರೂ ಗೈರು

ಹಾಜರಿಯಾದಲ್ಲಿ ಲೋಕಸಭೆಯ ನಿಯಮಾವಳಿಯಂತೆ ನೇಮಿಸಲಾದ ಸದಸ್ಯರು ಕಾರ್ಯಕ್ರಮ ನಡೆಸಬೇಕು. ಅವರೂ ದೊರೆಯದೇ ಹೋದಲ್ಲಿ ಸಭೆಯು ನಿರ್ಣಯಿಸಿದ ವ್ಯಕ್ತಿ ಲೋಕಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವುದು.

೭೯. ರಾಜ್ಯಸಭೆಯ ಅಧ್ಯಕ್ಷ, ಉಪಾಧ್ಯಕ್ಷರಿಗೆ ಸಂಸತ್ತು ನಿರ್ಣಯಿಸಿದ ಕಾಯ್ದೆಯಂತೆ ವೇತನ ನೀಡಲಾಗುವುದು. ಸಂಸತ್ತು ಈ ಬಗೆಗೆ ನಿರ್ಣಯ ತೆಗೆದುಕೊಳ್ಳುವವರೆಗೂ ಎರಡನೆಯ ಅನುಸೂಚಿಯಲ್ಲಿ ಸೂಚಿಸಿದ ವೇತನ ನೀಡಲಾಗುವುದು.

## ವ್ಯವಹಾರ ನಿರ್ವಹಣೆ

**ಸದನಗಳಲ್ಲಿ ಮತದಾನ ಕೋರಂ, ತೆರವಿದ್ದ ಸ್ಥಾನಗಳು ಇದ್ದಾಗ್ಯೂ ಕಾರ್ಯ ನಿರ್ವಹಿಸುವ ಅಧಿಕಾರ**

೮೦. (೧) ಸಂವಿಧಾನದಲ್ಲಿ ತಿಳಿಸಲಾದಂತೆ, ಸದನ ಸೇರುವ ಜಂಟಿ ಅಧಿವೇಶನ ಮುಂತಾದ ಎಲ್ಲಾ ವಿಷಯಗಳ ಬಗೆಗೆ ಸದನವೇ ಬಹುಮತದಿಂದ ನಿರ್ಣಯಿಸಬೇಕು.

ಈ ಮತದಾನದಲ್ಲಿ ರಾಜ್ಯಸಭೆಯ ಹಾಗೂ ಲೋಕಸಭೆಯ ಅಧ್ಯಕ್ಷರು ಸಾಮಾನ್ಯವಾಗಿ ಮತದಾನ ಮಾಡುವಂತಿಲ್ಲ. ಆದರೆ, ಅವರು ಮೊದಲನೆಯ ಹಂತದಲ್ಲಿ ಮತದಾನ ಮಾಡದೇ ಹೋದರೂ, ಅವರು ಮತದಾನ ಪರ ಹಾಗೂ ವಿರೋಧವಾಗಿ ಸಮಾನವಾಗಿದ್ದ ಸಂದರ್ಭದಲ್ಲಿ ತಮ್ಮ ನಿರ್ಣಾಯಕ ಮತವನ್ನು ಚಲಾಯಿಸಬಹುದು.

(೨) ಎರಡೂ ಸದನಗಳೂ, ತೆರವಾದ ಸ್ಥಾನಗಳನ್ನು ಬಿಟ್ಟು ತಮ್ಮ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುವ ಹಕ್ಕನ್ನು ಹೊಂದಿವೆ. ಯಾವ ವ್ಯಕ್ತಿಯೂ ಸದಸ್ಯನಲ್ಲದೇ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದನೆಂದು ನಂತರ ತಿಳಿದು ಬಂದಲ್ಲಿ ಸಭೆಯ ಕಾರ್ಯಕಲಾಪಗಳು ರದ್ದಾಗಲಾರವು.

(೩) ಸದನ ಕಲಾಪಕ್ಕೆ ಸದನದ ಒಂದು ಆರಂಶ ಸದಸ್ಯರ ಕೋರಂ ಅನಿವಾರ್ಯ, ಈ ದಿಶೆಯಲ್ಲಿ ಸಭೆಯಲ್ಲಿ ಕೋರಂನ ಕೊರತೆ ಕಂಡಾಗ, ರಾಜ್ಯಸಭೆ ಹಾಗೂ ಲೋಕಸಭೆಯ ಅಧ್ಯಕ್ಷರು ಕಾರ್ಯ ಕಲಾಪಗಳನ್ನು ಮುಂದೂಡಿ ಕೋರಂ ಕೂಡಿದ ನಂತರ ಸಭೆಯ ಕಲಾಪಗಳನ್ನು ಜರುಗಿಸಬೇಕು.

## ಸದಸ್ಯತ್ವದ ಅರ್ಹತೆಗಳು

**ಸದಸ್ಯರಿಂದ ಘೋಷಣೆ**

೮೧. ಸಂಸತ್ತಿನ ಎರಡೂ ಸದನದ ಸದಸ್ಯರು ತಮ್ಮ ಸ್ಥಾನವನ್ನು ಗ್ರಹಣ ಮಾಡುವ ಮುಂಚೆ, ಮೂರನೆಯ ಅನುಸೂಚಿಯಲ್ಲಿ ತಿಳಿಸಿದ ಪ್ರಮಾಣ ವಚನವನ್ನು ರಾಷ್ಟ್ರಪತಿಯವರ ಮುಂದೆ ಅಥವಾ ಅವರಿಂದ ನೇಮಿಸಿದ ವ್ಯಕ್ತಿಯ ಮುಂದೆ ಸ್ವೀಕರಿಸಬೇಕು.

**ಸ್ಥಾನ ತೆರವು ಮಾಡುವಿಕೆ**

೮೨. (೧) ಸಂಸತ್ತಿನ ಎರಡೂ ಸದನದ ಸದಸ್ಯರಾಗುವಂತಿಲ್ಲ. ಈ ದಿಶೆಯಲ್ಲಿ ಸಂಸತ್ತು ಸೂಕ್ತ ಕಾಯ್ದೆಯನ್ನು ನಿರೂಪಿಸಿ, ಯಾವುದೇ ವ್ಯಕ್ತಿ ಉಭಯ ಸದನದ ಸದಸ್ಯನಾಗಿದ್ದಲ್ಲಿ ಒಂದು ಸದನದ ಸದಸ್ಯ ಸ್ಥಾನವನ್ನು ಕೂಡಲೇ ತೆರವು ಮಾಡುವಂತೆ ವಿಧಿಸಬೇಕು.

(೨) ಸಂಸತ್ತಿನ ಸದಸ್ಯರು ಎರಡೂ ಸದನಗಳು ಸೇರಿದಂತೆ

(ಎ) ಮುಂದೆ ತಿಳಿಸಲಾದ ವಿಧಿಯ (೧)ರಂತೆ ಅನರ್ಹತೆ ಹೊಂದಿದ್ದಲ್ಲಿ

(ಬಿ) ರಾಜ್ಯಸಭೆಯ ಅಧ್ಯಕ್ಷ ಅಥವಾ ಲೋಕಸಭೆಯ ಅಧ್ಯಕ್ಷರಿಗೆ ತನ್ನ ಸ್ವಹಸ್ತದಿಂದ ರಾಜೀನಾಮೆ ನೀಡಿದಲ್ಲಿ ಅವನ ಸ್ಥಾನ ತೆರವಾಗುವುದು.

ಉಭಯ ಸದನದ ಯಾವ ಸದಸ್ಯನಾದರೂ ಸತತವಾಗಿ ಅಧ್ಯಕ್ಷರ ಅಪ್ಪಣೆ ಪಡೆಯದೇ ಅರವತ್ತು ದಿನಗಳು ಸಭೆಗೆ ಗೈರುಹಾಜರಾದಲ್ಲಿ ಅವರ ಸ್ಥಾನವನ್ನು ತೆರವು ಗೊಳಿಸಲಾಗುವುದು.

ಆದರೆ ಈ ಅರವತ್ತು ದಿನಗಳನ್ನು ಲೆಕ್ಕ ಹಾಕುವಾಗ ಸದನವನ್ನು ಸತತವಾಗಿ ನಾಲ್ಕು ದಿನಗಳಿಗಿಂತ ಹೆಚ್ಚಾಗಿ ಮುಂದೂಡಿದ್ದನ್ನು ಗಣನೆಗೆ ತೆಗೆದುಕೊಳ್ಳಲಾಗದು.

**ಸದಸ್ಯತ್ವದ ಅನರ್ಹತೆಗಳು**

೮೨. (೧) ಸಂಸತ್ತಿನ ಎರಡು ಸದನಗಳ ಸದಸ್ಯತ್ವದ ಅನರ್ಹತೆಗಳು:

(ಎ) ಸರಕಾರದಿಂದ ಯಾವುದೇ ಲಾಭದ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಹುದ್ದೆಯಲ್ಲಿ ಅಥವಾ ಅಧಿಕಾರದಲ್ಲಿದ್ದರೆ, ಅವರು ಸದಸ್ಯರಾಗಿ ಮುಂದುವರಿಯಲಾರರು.

(ಬಿ) ಮಾನಸಿಕವಾಗಿ ಯೋಗ್ಯವಿಲ್ಲವೆಂದು ನ್ಯಾಯಾಲಯ ದಿಂದ ಸಾರಿದಾಗ

(ಸಿ) ದಿವಾಳಿಕೋರನೆಂದು ಸಾಬೀತಾದಾಗ

+ (ಡಿ) ವಿದೇಶೀ ಸರಕಾರಕ್ಕೆ ವಿಧೇಯತೆ ಅಥವಾ ವಿದೇಶೀ

---

+ ಸಮಿತಿಯ ಆಸ್ಟ್ರೇಲಿಯಾ ಕಾಮನ್ವೆಲ್ತ್ ಸಂವಿಧಾನ ಕಾಯ್ದೆಯ ಸೆಕ್ಷನ್ ೪೪(೧)ನ್ನು ಉಪನಿಬಂಧನೆಯಲ್ಲಿ ಅಳವಡಿಸಿದೆ.

ಪೌರತ್ವವನ್ನು ಪಡೆದಿದ್ದಲ್ಲಿ ವಿದೇಶದಲ್ಲಿ ಹಕ್ಕುಗಳನ್ನು ಹೊಂದಿದವರು ಅನರ್ಹರು.

(ಇ) ಸಂಸತ್ತಿನ ಕಾಯ್ದೆಗಳಿಂದ ಅನರ್ಹತೆಯನ್ನು ಹೊಂದಿದವರು

೨. ಈ ಉದ್ದೇಶಕ್ಕೆಂದೇ ಈ ವಿಧಿಯಲ್ಲಿ ಹೇಳಿದಂತೆ ಯಾವ ವ್ಯಕ್ತಿಯೇ ಆಗಲೀ ಸರಕಾರದಿಂದ ಲಾಭಗಳಿಸುವ ಅಧಿಕಾರ ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಹೊಂದಿದ್ದರೆ ಅಂದರೆ

(ಎ) ಮೊದಲನೆಯ ಅನುಸೂಚಿಯ ಭಾಗ I ರಲ್ಲಿ ತಿಳಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರಕಾರದ ಮಂತ್ರಿಯಾಗಿದ್ದಲ್ಲಿ ಅಥವಾ

(ಬಿ) ಮೊದಲನೆಯ ಅನುಸೂಚಿಯ ಭಾಗ III ರಲ್ಲಿ ತಿಳಿಸಿದಂತೆ ಯಾವುದೇ ದ್ವಿಸದನದ ಕೆಳಮನೆಯ ಸದಸ್ಯ ಎಲ್ಲಿ ಮೂರು ನಾಲ್ಕಂಶ ಸದಸ್ಯರು ನೇರವಾಗಿ ಆಯ್ಕೆ ಹೊಂದಿರುವರೋ ಆ ವಿಧವಾದ ಸದನ ಸದಸ್ಯನಾಗಿದ್ದಲ್ಲಿ ಆ ಕೂಡಲೇ ಅವರು ಅನರ್ಹರಲ್ಲ.

**ವಿಧಿ ೮೧ರಲ್ಲಿ ಹೇಳಿದಂತೆ ಪ್ರಮಾಣ ವಚನ ಸ್ವೀಕರಿಸದೇ ಮತದಾನದಲ್ಲಿ ಪಾಲುಗೊಂಡರೆ ತೆರಬೇಕಾದ ದಂಡ**

೮೪. ಯಾವುದೇ, ಉಭಯ ಸದನದ ಸದಸ್ಯರು ೮೧ನೇ ವಿಧಿಯಲ್ಲಿ ತಿಳಿಸಿದಂತೆ ಪ್ರಮಾಣ ಸ್ವೀಕರಿಸದೇ ಸದನದಲ್ಲಿ ಕೂಡುವುದಾಗಲೀ ಅಥವಾ ಮತದಾನದಲ್ಲಿ ಭಾಗವಹಿಸು ವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಸದನದಲ್ಲಿಯ ಕಾರ್ಯಕಲಾಪದಲ್ಲಿ ಪಾಲುಗೊಂಡರೆ ಆ ಅಪರಾಧಕ್ಕಾಗಿ ಸಂಸತ್ತಿನ ಕಾಯ್ದೆಯಂತೆ ಪ್ರತಿದಿನಕ್ಕೆ ಐದು ನೂರು ರೂಪಾಯಿಗಳ ದಂಡವನ್ನು ಭಾರತ ಸರಕಾರಕ್ಕೆ ನೀಡಬೇಕು.

## ಸದನದ ಸದಸ್ಯರ ಸವಲತ್ತುಗಳು ಮತ್ತು ರಕ್ಷಣೆಗಳು

**ಸದಸ್ಯರ ಸವಲತ್ತುಗಳು ಇತ್ಯಾದಿ**

೮೫. (೧) ಸಂಸತ್ತಿನಿಂದ ರಚಿಸಲಾದ ಆಜ್ಞೆಗಳು ಹಾಗೂ ಸಂಸತ್ತಿನ ನಡಾವಳಿಗೆ ಸಂಬಂಧಿಸಿದ ರೂಢಿಗಳಿಗನುಸರಿಸಿ ವಾಕ್ ಸ್ವಾತಂತ್ರ್ಯವಿದೆ.

(೨) ಸದನದಲ್ಲಿ ಸಂಸತ್ ಸದಸ್ಯರು ನೀಡಿರಬಹುದಾದ ಹೇಳಿಕೆ ಅಥವಾ ಮತದಾನ ಕುರಿತು ಯಾರೂ ನ್ಯಾಯಾಲಯಗಳಲ್ಲಿ ಪ್ರಶ್ನಿಸುವಂತಿಲ್ಲ. ಅಲ್ಲದೆ ಸಂಸತ್ತಿನಲ್ಲಿ ಅಥವಾ ಯಾವುದೇ ಸಮಿತಿಯ ಮುಂದೆ ಹಾಗೂ ಸಂಸತ್ತಿನಿಂದ ಹೊರಡಿಸಿರಬಹುದಾದ ಪ್ರಕಟಣೆ, ಮತದಾನ, ನಡಾವಳಿಯನ್ನೂ ಪ್ರಶ್ನಿಸಲಾಗದು.

(೩) ಬೇರೆ ಎಲ್ಲಾ ವಿಷಯಗಳಿಗೆ ಸೇರಿದಂತೆ, ಕಾಲಕಾಲಕ್ಕೆ ಸಂಸತ್ತು ನಿರ್ಣಯಿಸುವ ಆಜ್ಞೆಗಳಂತೆ ಸದಸ್ಯರು ಹಕ್ಕು

ಬಾಧ್ಯತೆಗಳನ್ನು ಹೊಂದಿರುತ್ತಾರೆ. ಈ ದಿಶೆಯಲ್ಲಿ ಸಂಸತ್ತು ನಿರ್ಣಯ ಕೈಕೊಳ್ಳುವ ಮುನ್ನ ಇಂಗ್ಲೆಂಡಿನ ಕೆಳಮನೆಯಾದ ಹೌಸ್ ಆಫ್ ಕಾಮನ್ಸ್ ಸಭೆಯ ರೂಢಿ ರಿವಾಜು ಆಜ್ಞೆಗಳಂತೆ ನಡೆದುಕೊಳ್ಳಲಾಗುವುದು.

(೪) ಮೇಲೆ ತಿಳಿಸಿದ ಉಪನಿಬಂಧನೆ(೧) (೨) ಮತ್ತು (೩)ರಲ್ಲಿ ತಿಳಿಸಿದಂತೆ, ಸಂವಿಧಾನದನ್ವಯ, ಸಂಸತ್ತಿನ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಸದಸ್ಯರಿಗೆ, ವಾಕ್ ಸ್ವಾತಂತ್ರ್ಯದ ಹಕ್ಕು – ಹಾಗೂ ಸಂಸತ್ತಿನ ಕಲಾಪಗಳಲ್ಲಿ ಪಾಲುಗೊಳ್ಳುವ ಹಕ್ಕನ್ನು ಪ್ರತಿಯೊಬ್ಬ ಸಂಸತ್ ಸದಸ್ಯನೂ ಹೊಂದಿರುತ್ತಾನೆ.

**ವೇತನ ಹಾಗೂ ಭತ್ತೆಗಳು**

೮೬. ಸಂಸತ್ತಿನ ಉಭಯ ಸದನ ಸದಸ್ಯರೂ ಕಾಲಕಾಲಕ್ಕೆ ಸಂಸತ್ತಿನಿಂದ ನಿರ್ಣಯಿಸಲಾದ ವೇತನ ಹಾಗೂ ಭತ್ತೆಗಳನ್ನು ಪಡೆಯುವರು. ಸಂಸತ್ತು ಈ ಬಗೆಗೆ ನಿರ್ಣಯ ತೆಗೆದುಕೊಳ್ಳುವ ಅವಧಿಯವರೆಗೂ ಭಾರತದ ಆಧಿಪತ್ಯದ ಶಾಸಕಾಂಗದಿಂದ ನಿರ್ಣಯಿಸಲಾದ ವೇತನ ಭತ್ತೆಗಳನ್ನು ಪಡೆಯಬಹುದು.

## ಶಾಸನ ಕಾರ್ಯ ವಿಧಾನ

**ಮಸೂದೆಗಳ ಮಂಡನೆ ಹಾಗೂ ಜಾರಿಗೊಳಿಸುವ ಅಂಶಗಳು**

೮೭. (೧) ೮೯ ಹಾಗೂ ೯೭ನೆಯ ವಿಧಿಯಲ್ಲಿ ಹೇಳಿದಂತೆ ಹಣಕಾಸಿನ ಮತ್ತು ಅದಕ್ಕೆ ಸಂಬಂಧಿಸಿದ ಮಸೂದೆಯನ್ನು ಸಂಸತ್ತಿನ ಯಾವ ಸದನದಲ್ಲಿಯಾದರೂ ಮಂಡಿಸಬಹುದು.

(೨) ಸಂವಿಧಾನದ ೮೮ ಮತ್ತು ೮೯ನೇ ವಿಧಿಗಳಲ್ಲಿ ತಿಳಿಸಿದಂತೆ ಯಾವ ಮಸೂದೆಯೇ ಆಗಲೀ ಸಂಸತ್ತಿನ ಎರಡೂ ಸದನಗಳ ಒಪ್ಪಿಗೆ ಪಡೆದ ನಂತರವೇ ಅದನ್ನು ಅಂಗೀಕರಿಸಲಾಗುವುದು. ಮಸೂದೆಯ ಬಗೆಗೆ ಸೂಚಿಸಲಾದ ತಿದ್ದುಪಡಿಗಳೂ ಎರಡೂ ಸದನದ ಒಪ್ಪಿಗೆ ಪಡೆದಿರಲೇಬೇಕು.

(೩) ಸಂಸತ್ತಿನ ಮುಂದೆ ಬಂದಿರಬಹುದಾದ ಮಸೂದೆ, ಸಂಸತ್ತಿನ ಮುಂದೂಡುವಿಕೆ ಕಾರಣದಿಂದ ಚ್ಯುತಿ ಹೊಂದಲಾರದು.

(೪) ರಾಜ್ಯಸಭೆಯ ಮುಂದೆ ಇರುವ ಯಾವ ಮಸೂದೆಯೂ ಲೋಕಸಭೆಯ ವಿಸರ್ಜನೆಯ ಕಾರಣದಿಂದ ಚ್ಯುತಿ ಹೊಂದುವುದಿಲ್ಲ.

(೫) ಆದರೆ ಸಂವಿಧಾನದ ೮೮ನೇ ವಿಧಿಯಂತೆ, ಲೋಕಸಭೆ ಅಂಗೀಕರಿಸಿದ್ದು ರಾಜ್ಯಸಭೆ ಅನುಮೋದನೆಯ ಮುಂಚೆಯೇ ಲೋಕಸಭೆ ವಿಸರ್ಜನೆ ಹೊಂದಿದಲ್ಲಿ ಆ ಮಸೂದೆ ಚ್ಯುತಿಗೆ

ಗುರಿಯಾಗುವುದು. ಹೀಗಾಗಿ ಅದನ್ನು ಕೈಬಿಡಬೇಕು.

**ಸದನಗಳ ಜಂಟಿ ಅಧಿವೇಶನ**

೮೮. (೧) ಒಂದು ಸದನದಿಂದ ಮಸೂದೆ ಅಂಗೀಕರಿಸಿ ಮತ್ತೊಂದು ಸದನದ ಅಂಗೀಕಾರಕ್ಕೆ ಕಳುಹಿಸಿದಾಗ :–

(ಎ) ಬೇರೆ ಸದನದಿಂದ ಮಸೂದೆ ತಿರಸ್ಕೃತವಾದಲ್ಲಿ ಅಥವಾ

(ಬಿ) ಸದನಗಳು ತಿದ್ದುಪಡಿಗಳ ಬಗೆಗೆ ಒಮ್ಮತಕ್ಕೆ ಬಾರದೇ ಇದ್ದರೆ ಅಥವಾ

(ಸಿ) ಬೇರೆ ಸದನ ಆರು ತಿಂಗಳ ಅವಧಿಯಾದರೂ ಅಂಗೀಕಾರ ನೀಡದೇ ಹೋದಲ್ಲಿ ಈ ಸಂದರ್ಭಗಳಲ್ಲಿ, ರಾಷ್ಟ್ರಪತಿಯವರು, ಇದ್ದರೆ, ಆ ಮಸೂದೆಯನ್ನು ಅಂಗೀಕರಿಸಲಿಕ್ಕೆಂದೇ ಜಂಟಿ ಅಧಿವೇಶನವನ್ನು ಕರೆಯುವ ಸಂದೇಶವನ್ನು ನೀಡಬಹುದು ಅಥವಾ ಸಾರ್ವಜನಿಕ ಪ್ರಕಟಣೆಯ ಮೂಲಕ ಜಂಟಿ ಅಧಿವೇಶನದ ಆಜ್ಞೆ ಹೊರಡಿಸಬಹುದು.

ಆದರೆ ಈ ವಿಷಯು ಹಣಕಾಸಿನ ಮಸೂದೆಗೆ ಅನ್ವಯಿಸುವುದಿಲ್ಲ.

(೨) ಈ ಮೇಲಿನ (೧) ಉಪನಿಬಂಧನೆಯಲ್ಲಿ ತಿಳಿಸಲಾದ ಆರು ತಿಂಗಳ ಅವಧಿಗೆ ಸದನದ ಮುಂದೂಡಿಕೆ ಅಥವಾ ತಳ್ಳಿಹಾಕಲಾದ ಅಂದರೆ ನಾಲ್ಕು ದಿನಗಳ ಮಟ್ಟಿಗೆ ಗಣನೆಗೆ ತೆಗೆದುಕೊಳ್ಳಲಾಗದು.

(೩) ಮೇಲೆ ತಿಳಿಸಿದ (೧) ಉಪನಿಬಂಧನೆಯಂತೆ ರಾಷ್ಟ್ರಪತಿಯವರು ಜಂಟಿ ಅಧಿವೇಶನದ ಬಗೆಗೆ ನಿರ್ಣಯಿಸಿದ ಮೇಲೆ, ಯಾವ ಸದನವೂ ಮಸೂದೆಯ ಬಗೆಗೆ ಪ್ರಸ್ತಾಪಿಸುವಂತಿಲ್ಲ. ರಾಷ್ಟ್ರಪತಿಯವರು, ನಿರ್ಣಯಿಸಿದ ಮೇಲೆ ಪ್ರಕಟಣೆಯ ಮೂಲಕ ಎಂದಾದರೂ ಜಂಟಿ ಅಧಿವೇಶನವನ್ನು ಕರೆಯಬಹುದು. ಇದರನ್ವಯ ಸದನಗಳು ಸೇರುತ್ತವೆ.

(೪) ಈ ವಿಧವಾದ ಜಂಟಿ ಅಧಿವೇಶನದಲ್ಲಿ ಯಾವುದೇ ಒಂದು ಸದನದಿಂದ ಅಂಗೀಕಾರವಾದ ಮಸೂದೆ ಬೇರೆ ಸದನದಿಂದ ಅಂಗೀಕರಿಸದೇ ಹೋದ ತಿದ್ದುಪಡಿ ಅಥವಾ ಒಪ್ಪಿಗೆಗೆ ಕುರಿತಂತೆ, ಜಂಟಿ ಅಧಿವೇಶನದಲ್ಲಿ ಹಾಜರಿದ್ದು ಮತದಾನ ಮಾಡುವವರ ಅಧಿಕ ಮತದಿಂದ ಪಾಸಾದಲ್ಲಿ, ಸಂವಿಧಾನದ ಈ ಮಸೂದೆಗೆ ಒಪ್ಪಿಗೆ ದೊರೆತಂತೆ :

ಆದರೆ ಈ ಜಂಟಿ ಅಧಿವೇಶನ :

(ಎ) ಮಸೂದೆಯನ್ನು ಒಂದು ಸದನ ಅಂಗೀಕರಿಸಿದ್ದು ಮತ್ತೊಂದು ಸದನ ಒಪ್ಪಿರದಿದ್ದರೆ ಹಾಗೂ ತಿದ್ದುಪಡಿಗಳೊಂದಿಗೆ

ಮೂಲ ಸದನಕ್ಕೆ ಮರಳಿಸಿದಾಗ ಮಸೂದೆಯಲ್ಲಿ ಯಾವ ವಿಧವಾದ ತಿದ್ದುಪಡಿಗಳಿಗೂ ಅವಕಾಶವಿರಲಾರದು.

(ಬಿ) ತಿದ್ದುಪಡಿಗಳೊಂದಿಗೆ ಕಳಿಸಲಾದ ಮಸೂದೆಗೆ ಮಾತ್ರ ಒಪ್ಪಿಗೆ ನೀಡಿದ್ದು, ಬೇರೆ ತಿದ್ದುಪಡಿಗಳನ್ನು ಮಾಡದಂತೆ ಇದ್ದಾಗ, ಈ ವಿಧವಾದ ತಿದ್ದುಪಡಿಗೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರ ತೀರ್ಮಾನವೇ ಅಂತಿಮವಾದದ್ದು.

(೫) ಈ ವಿಧವಾದ ಜಂಟಿ ಅಧಿವೇಶನದಲ್ಲಿ ಅಂಗೀಕರಿಸಲಾದ ಮಸೂದೆಗೆ ಲೋಕಸಭೆಯ ವಿಸರ್ಜನೆಯು ರಾಷ್ಟ್ರಪತಿಯವರು ಘೋಷಿಸಿದ ನಂತರ ಯಾವ ಅಡಚಣೆಯನ್ನು ಉಂಟುಮಾಡಲಾರದು.

**ಹಣಕಾಸಿನ ಮಸೂದೆ ಬಗೆಗೆ ವಿಶೇಷ ಕ್ರಮ**

೮೯. (೧) ಹಣಕಾಸಿನ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಲಾಗದು.

(೨) ಹಣಕಾಸಿನ ಮಸೂದೆಯನ್ನು ರಾಜ್ಯಸಭೆಯಲ್ಲಿ ಅಂಗೀಕರಿಸಿ, ರಾಜ್ಯಸಭೆಗೆ ಕಳುಹಿಸಿದ ನಂತರ ರಾಜ್ಯಸಭೆಯು ಆ ಮಸೂದೆಯನ್ನು ೩೦ ದಿನಗಳ ಅವಧಿಯಲ್ಲಿ ಮರಳಿಸಬೇಕು. ರಾಜ್ಯಸಭೆಯ ಸಲಹೆ ಸೂಚನೆಗಳನ್ನು ಲೋಕಸಭೆಯು ಒಪ್ಪಲೂಬಹುದು ಅಥವಾ ತಿರಸ್ಕರಿಸಲೂ ಬಹುದು.

(೩) ಲೋಕಸಭೆಯು, ರಾಜ್ಯಸಭೆಯ ಸೂಚನೆಗಳನ್ನು ಅಂಗೀಕರಿಸಿದಲ್ಲಿ ಮಸೂದೆಯು ಎರಡೂ ಸದನಗಳಿಂದ ಅಂಗೀಕೃತವಾಗುತ್ತದೆ.

(೪) ಒಂದು ವೇಳೆ ಲೋಕಸಭೆಯು, ರಾಜ್ಯಸಭೆಯ ಸೂಚನೆಗಳನ್ನು ಒಪ್ಪದೇ ಹೋಗಿ ಮಸೂದೆಯನ್ನು ಅಂಗೀಕರಿಸಿದಾಗಲೂ ಮಸೂದೆ ಮಂಜೂರಾಗುತ್ತದೆ.

(೫) ಹಣಕಾಸಿನ ಮಸೂದೆಯು ಲೋಕಸಭೆಯ ಅನುಮೋದನೆ ಹೊಂದಿ, ಸಲಹೆ ಸೂಚನೆಗಳಿಗೆಂದು, ರಾಜ್ಯಸಭೆಗೆ ರವಾನಿಸಿದ ಮೂವತ್ತು ದಿನಗಳ ಅವಧಿಯಲ್ಲಿ ರಾಜ್ಯಸಭೆ ತನ್ನ ಅನುಮೋದನೆ ನೀಡದೇ ಹೋದರೂ, ಹಣಕಾಸಿನ ಮಸೂದೆ ಅಂಗೀಕರಿಸಲ್ಪಟ್ಟಂತೆಯೇ.

**ಹಣಕಾಸಿನ ಮಸೂದೆಯ ವ್ಯಾಖ್ಯೆ–ಪರಿಕಲ್ಪನೆ**

೯೦. (೧) ಈ ಪ್ರಕರಣಕ್ಕೆ ಸಂಬಂಧಿಸಿದಂತೆ, 'ಹಣಕಾಸಿನ ಮಸೂದೆ' ಎಂದರೆ ಮಸೂದೆಯು ಈ ಕೆಳಕಂಡ ವಿಷಯಗಳಿಂದ ಕೂಡಿರಬೇಕು :

(ಎ) ಕ್ರಮಬದ್ಧವಾಗಿ ಕರ ಹೇರುವುದು, ರದ್ದುಪಡಿಸುವುದು, ಬದಲಾಯಿಸುವುದು ಅಥವಾ ಕಡಿಮೆ ಮಾಡುವುದು;

(ಬಿ) ಸಾಲರೂಪವಾಗಿ ಧನ ಪಡೆಯುವ ಅಥವಾ ಭಾರತ ಸರಕಾರ ಕೈಗೊಂಡಿರುವ ಯಾವುದೇ ಹಣಕಾಸಿನ ಕಾಯ್ದೆಗೆ ತಿದ್ದುಪಡಿ ಮಂಡಿಸುವುದು;

(ಸಿ) ಒದಗಿಸುವುದು;

(ಡಿ) ಭಾರತದ ಆದಾಯವನ್ನು ಹಂಚುವುದು;

(ಇ) ಭಾರತ ಸರಕಾರದ ಖರ್ಚು ವೆಚ್ಚವನ್ನು ನಿರ್ಣಯಿಸುವುದು ಹಾಗೂ ಈ ವಿಧವಾದ ವೆಚ್ಚವನ್ನು ಆದಾಯದಿಂದ ಪಡೆಯುವುದು ಅಧಿಕಗೊಳಿಸುವುದು;

(ಎಫ್) ಭಾರತ ಸರಕಾರದ ಆದಾಯದಿಂದ ಅಥವಾ ಅಧೀನದಲ್ಲಿರುವ ಅಥವಾ ಅದರಿಂದ ನೀಡಿರಬಹುದಾದ ಹಣ, ಅದರ ಲೆಕ್ಕ ಪತ್ರಗಳನ್ನು ಪರಿಶೋಧಿಸುವುದು ಅಥವಾ

(ಜಿ) ಈ ಮೇಲೆ ತಿಳಿಸಿದ (ಎ) ಯಿಂದ (ಎಫ್)ಗೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೆ ಸಂಬಂಧಿಸಿದುದು.

(೨) ಆದರೆ ಒಂದು ಮಸೂದೆಯು; ಸ್ಥಳೀಯ ಅಧಿಕಾರದಿಂದ ಸ್ಥಳೀಯ ಉದ್ದೇಶಕ್ಕೆಂದೇ ಹಣಕಾಸಿನ ದಂಡವಿಧಿಸುವ, ಅಥವಾ ನಿಗದಿತ ಶುಲ್ಕ ವಸೂಲಿ, ಅಥವಾ ನೀಡುವ ನಿಗದಿತ ಸೇವೆಗಾಗಿ, ವಿಧಿಸುವ, ತೆಗೆದು ಹಾಕುವ, ಕಡಿಮೆಗೊಳಿಸುವ ವಿಷಯಗಳನ್ನು ಹಣಕಾಸಿನ ಮಸೂದೆ ಎಂದು ಪರಿಗಣಿಸಲಾಗದು.

(೩) ಯಾವುದೇ ಒಂದು ಮಸೂದೆಯನ್ನು 'ಹಣಕಾಸಿನ ಮಸೂದೆ' ಎಂದು ಪರಿಗಣಿಸುವ ವಿಷಯದಲ್ಲಿ ತಕರಾರು ಉಂಟಾದರೆ ಲೋಕಸಭೆಯ ಅಧ್ಯಕ್ಷರ ನಿರ್ಣಯುವೇ ಅಂತಿಮವಾದದ್ದು.

(೪) ಯಾವುದೇ ಹಣಕಾಸಿನ ಮಸೂದೆ, ರಾಜ್ಯಸಭೆಗೆ ಕಳಿಸುವ ಮುನ್ನ ಅಥವಾ ರಾಷ್ಟ್ರಪತಿಯವರ ಅಂಗೀಕಾರಕ್ಕೆ ಹೋಗುವ ಮುನ್ನ ಲೋಕಸಭೆಯ ಅಧ್ಯಕ್ಷರಿಂದ, ಸಹಿಯಾಗಿ ಅದು ಹಣಕಾಸಿನ ಮಸೂದೆ ಎಂದು ದೃಢೀಕರಿಸಿರಬೇಕು.

**ಮಸೂದೆಗೆ ಒಪ್ಪಿಗೆ**

೯೧. ಯಾವುದೇ ಮಸೂದೆ ಎರಡೂ ಸದನಗಳಿಂದ ಒಪ್ಪಿಗೆ ಪಡೆದ ನಂತರ ಅದನ್ನು ರಾಷ್ಟ್ರಪತಿಯವರ ಒಪ್ಪಿಗೆಗೆ ಕಳಿಸಿದಾಗ, ರಾಷ್ಟ್ರಪತಿಯವರು ಮಸೂದೆಗೆ ಅನುಮತಿ ನೀಡಿ ಒಪ್ಪಿಗೆ ನೀಡಬಹುದು ಅಥವಾ ಅದನ್ನು ತಡೆ ಹಿಡಿಯಬಹುದು.

ಆದರೆ ರಾಷ್ಟ್ರಪತಿಯವರು ಹಣಕಾಸಿನ ಮಸೂದೆಯನ್ನು ತಮ್ಮ ಸಲಹೆ ಸೂಚನೆಗಳೊಂದಿಗೆ ಆರು ವಾರದ ಅವಧಿಯೊಳಗೆ

ಸದನಕ್ಕೆ ಮರಳಿಸಿ ಅದನ್ನು ಮರು ಪರಿಶೀಲಿಸುವಂತೆ ಆದೇಶಿಸಬಹುದು. ಆದರೆ ಈ ಕ್ರಮ ಹಣಕಾಸಿನ ಮಸೂದೆಗೆ ಅನ್ವಯಿಸಲಾರದು. ರಾಷ್ಟ್ರಪತಿಯವರಿಂದ ಮರಳಿ ಬಂದ ಮಸೂದೆಯನ್ನು ಸದನಗಳು ಪರಿಶೀಲಿಸಬಹುದು.

**ಹಣಕಾಸಿನ ವಿಷಯಗಳ ಬಗೆಗೆ ಅನುಸರಿಸಬೇಕಾದ ಕ್ರಮ**

**ವಾರ್ಷಿಕ ಹಣಕಾಸಿನ ಮಸೂದೆ**

೯೨. ೧) ರಾಷ್ಟ್ರಪತಿಯು, ಪ್ರತಿವರ್ಷವೂ ಈ ಸಂವಿಧಾನದಲ್ಲಿ ಸೂಚಿಸಿರುವಂತೆ "ವಾರ್ಷಿಕ ಹಣಕಾಸಿನ ಹೇಳಿಕೆ"ಯನ್ನು ಸಂಸತ್ತಿನ ಮುಂದೆ ಮಂಡಿಸಬೇಕು. ಈ ಹೇಳಿಕೆಯು ಅಂದಾಜು ಆದಾಯ ಹಾಗೂ ವೆಚ್ಚಗಳಿಂದ ಕೂಡಿದ ಅಂದಾಜು ಪತ್ರಿಕೆ ಅಥವಾ ಮುಂಗಡ ಪತ್ರವಾಗಿದೆ.

(೨) ಈ ವಿಧವಾದ ಅಂದಾಜು ಪತ್ರಿಕೆಯು ವಾರ್ಷಿಕ ಹಣಕಾಸಿನ ಖರ್ಚುವೆಚ್ಚಗಳನ್ನು ಬೇರೆ ಬೇರೆಯಾಗಿ ಈ ಕೆಳಗೆ ಸೂಚಿಸಿದಂತೆ ತೋರಿಸಬೇಕು.

(ಎ) ಈ ಸಂವಿಧಾನದಲ್ಲಿ ಸೂಚಿಸಿದಂತೆ ಭಾರತ ಸರಕಾರದ ಆದಾಯದಿಂದ ವೆಚ್ಚ ಮಾಡಬಹುದಾದ ಹಣದ ಮೊತ್ತವನ್ನು ಸಂಗ್ರಹಿಸುವುದು.

(ಬಿ) ಆದಾಯದಿಂದ ಇತರ ಖರ್ಚಿನ ಮೊತ್ತವನ್ನು ಸರಿದೂಗಿಸುವುದು ಮತ್ತು ಆದಾಯ ಖರ್ಚು ವೆಚ್ಚ ಹಾಗೂ ಇತರೆ ಖರ್ಚುಗಳನ್ನು ಗುರುತಿಸುವುದು.

೩. ಈ ಕೆಳಗಿನ ವೆಚ್ಚವನ್ನು ಭಾರತದ ಆದಾಯದ ಲೆಕ್ಕಕ್ಕೆ ಪಡೆದುಕೊಳ್ಳಬೇಕು.

(ಎ) ರಾಷ್ಟ್ರಪತಿಯವರ ವೇತನ, ಭತ್ತೆ ಹಾಗೂ ಅವರ ಕಾರ್ಯಾಲಯದ ಇತರೇ ಖರ್ಚು

(ಬಿ) ಲೋಕಸಭೆ ಮತ್ತು ರಾಜ್ಯಸಭೆಗಳ ಅಧ್ಯಕ್ಷರು, ಉಪಾಧ್ಯಕ್ಷರ ವೇತನ ಹಾಗೂ ಭತ್ತೆಗಳು

(ಸಿ) ಭಾರತ ಸರಕಾರದಿಂದ ಮಾಡಲಾದ ಸಾಲ, ಅದರ ಬಡ್ಡಿ, ಮುಳುಗಡೆಯಾದ ಹಣ, ಬಿಡುಗಡೆಯ ಹಣ ಹಾಗೂ ಸಾಲ ಎತ್ತುವಿಕೆ, ಅದರ ಖರ್ಚು, ಅದಕ್ಕೆ ಸಂಬಂಧಿಸಿದ ಸೂಟಿಬಿಡುವ ಹಣಕಾಸಿನ ಮೊತ್ತ.

(ಡಿ) i. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ವೇತನ, ಭತ್ತೆ ಹಾಗೂ ಪಿಂಚಣಿ ಮೊತ್ತಗಳು.

ii. ಫೆಡರಲ್ ನ್ಯಾಯಾಲಯಗಳ ನ್ಯಾಯಾಧೀಶರುಗಳ ಪಿಂಚಣಿ

iii. ಸಂವಿಧಾನದ ಮೊದಲನೆಯ ಅನುಸೂಚಿ ಭಾಗ ೧ ಮತ್ತು ೨ರಲ್ಲಿ ಹೇಳಲಾದ ರಾಜ್ಯಗಳ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರ ಪಿಂಚಣಿಯನ್ನು ಸಂವಿಧಾನ ಜಾರಿಗೆ ಬರುವ ಮುನ್ನ ನೀಡಬೇಕಾದ ಹಣದ ಮೊತ್ತ.

(ಇ) ಯಾವುದೇ ನ್ಯಾಯಾಲಯ ಅಥವಾ ಮಧ್ಯಸ್ಥಿಕೆಯ ನ್ಯಾಯ ಮಂಡಳಿಯ ಯಾವುದೇ ತೀರ್ಮಾನ, ಡಿಕ್ರಿ ಅಥವಾ ಅವಾರ್ಡನ್ನು ಪೂರೈಸಲು ಬೇಕಾಗಿರುವ ಯಾವುದೇ ಮೊಬಲಗುಗಳು.

(ಎಫ್) ಈ ಸಂವಿಧಾನ ಅಥವಾ ಪಾರ್ಲಿಮೆಂಟಿನಿಂದ ಘೋಷಿಸಲಾದ ಕಾನೂನಿನಿಂದ ವಿಧಿಸಬಹುದಾದ ಇತರೆ ಯಾವುದೇ ವೆಚ್ಚ.

**ಅಂದಾಜುಗಳ ಬಗ್ಗೆ ಪಾರ್ಲಿಮೆಂಟಿನಲ್ಲಿ ಕಾರ್ಯ ವಿಧಾನಗಳು**

೯೩. (೧) ಭಾರತದ ರಾಜಸ್ವಕ್ಕೆ ವಿಧಿಸಬಹುದಾದ ವೆಚ್ಚಕ್ಕೆ ಸಂಬಂಧಿಸಿದಷ್ಟು ಅಂದಾಜುಗಳನ್ನು ಪಾರ್ಲಿಮೆಂಟಿನ ಮತಕ್ಕೆ ಮಂಡಿಸಬೇಕಾಗಿಲ್ಲ. ಆದರೆ ಈ ಖಂಡದಲ್ಲಿರುವ ಯಾವುದೇ ಅಂಶವೇ ಆಗಲಿ ಯಾವುದೇ ಅಂದಾಜುಗಳ ಚರ್ಚೆಯನ್ನು ಪಾರ್ಲಿಮೆಂಟಿನ ಯಾವುದೇ ಸದನದಲ್ಲಿ ತಡೆಯುತ್ತದೆ ಎಂದು ಅರ್ಥೈಸಬಾರದು.

(೨) ಇತರ ವೆಚ್ಚಕ್ಕೆ ಸಂಬಂಧಿಸಿರುವಂತೆ ಸದರಿ ಅಂದಾಜಿನಷ್ಟು ಭಾಗವನ್ನು ಲೋಕಸಭೆಯಲ್ಲಿ ಅನುದಾನಗಳ ಬೇಡಿಕೆಯ ರೂಪದಲ್ಲಿ ಮಂಡಿಸಬೇಕು ಮತ್ತು ಸಂಸತ್ತಿಗೆ ಒಪ್ಪಿಗೆ ನೀಡಲು ಅಥವಾ ಯಾವುದೇ ಬೇಡಿಕೆಗೆ ಒಪ್ಪಿಗೆಯನ್ನು ನಿರಾಕರಿಸಲು ಅಥವಾ ಅದರಲ್ಲಿ ನಮೂದಿಸಿರುವ ಮೊಬಲಗನ್ನು ಕಡಿಮೆ ಮಾಡುವುದಕ್ಕೆ ಒಳಪಟ್ಟು ಯಾವುದೇ ಬೇಡಿಕೆಯನ್ನು ಅಂಗೀಕರಿಸದಿರಲು ಲೋಕಸಭೆಗೆ ಅಧಿಕಾರವಿದೆ.

(೩) ರಾಷ್ಟ್ರಪತಿಗಳ ಶಿಫಾರಸ್ಸಿಲ್ಲದೆ ಯಾವುದೇ ಅನುದಾನದ ಬೇಡಿಕೆಯನ್ನು ಮಾಡುವ ಹಾಗಿಲ್ಲ.

**ಅಧಿಕೃತ ವೆಚ್ಚದ ಅನುಸೂಚಿಯ ದೃಢೀಕರಣಗೊಳಿಸುವುದು**

೯೪. (೧) ರಾಷ್ಟ್ರಾಧ್ಯಕ್ಷರು ತಮ್ಮ ಸಹಿ ಹಾಕಿ ಈ ಕೆಳಗೆ ನಮೂದಿಸಿರುವ ಒಂದು ಅನುಸೂಚಿಯನ್ನು ಅಧಿಕೃತ ಗೊಳಿಸಬಹುದು.

(ಎ) ಇತರ ಹಿಂದಿನ ವಿಧಿಯಡಿಯಲ್ಲಿ ಲೋಕಸಭೆಯಿಂದ ಮಾಡಲಾದ ಅನುದಾನಗಳು.

(ಬಿ) ಯಾವುದೇ ಸಂದರ್ಭದಲ್ಲಿ ಪಾರ್ಲಿಮೆಂಟಿನ ಮುಂದೆ ಹಿಂದೆಯೇ ಮಂಡಿಸಲಾದ ತಃಖ್ತೆಯಲ್ಲಿ ತೋರಿಸಿರುವ

ಮೊಬಲಗಿಗಿಂತ ಯಾವುದೇ ಸಂದರ್ಭದಲ್ಲಿ ಮೀರದಿರುವಂತೆ ಭಾರತದ ರಾಜ್ಯಕ್ಕೆ ಖರ್ಚು ಹಾಕಿದ ವೆಚ್ಚವನ್ನು ಭರಿಸಲು ಬೇಕಾಗಿರುವ ಅನೇಕ ಮೊಬಲಗುಗಳು.

(೨) ಈ ರೀತಿ ಅಧಿಕೃತಗೊಳಿಸಿದ ಅನುಸೂಚಿಯನ್ನು ಲೋಕಸಭೆಯ ಮುಂದೆ ಮಂಡಿಸಬೇಕು, ಆದರೆ ಪಾರ್ಲಿಮೆಂಟಿನಲ್ಲಿ ಚರ್ಚೆ ಮಾಡುವಂತಿಲ್ಲ ಅಥವಾ ಮತ ಹಾಕುವಂತಿಲ್ಲ.

(೩) ಮುಂದಿನ ಎರಡು ವಿಧಿಗಳ ಉಪಬಂಧಗಳಿಗೆ ಒಳಪಟ್ಟು ಅಧಿಕೃತಗೊಳಿಸಿದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸದಿದ್ದಕ್ಕೆ, ಭಾರತದ ರಾಜಸ್ವದಿಂದ ಯಾವುದೇ ವೆಚ್ಚವನ್ನು ಅಧಿಕೃತಗೊಳಿಸಲಾಗಿದೆಯೆಂದು ಭಾವಿಸಬಾರದು.

**ವೆಚ್ಚದ ಪೂರಕ ವಿವರಣ ಪಟ್ಟಿಯಲ್ಲಿನ ಹೇಳಿಕೆಗಳು**

೯೫. ಯಾವುದೇ ಹಣಕಾಸಿನ ವರ್ಷದಲ್ಲಿ ಆ ವರ್ಷಕ್ಕೆ ಅಧಿಕಾರ ನೀಡಲಾದುದಕ್ಕಿಂತ ಹೆಚ್ಚಾಗಿ ಭಾರತದ ರಾಜಸ್ವದಿಂದ ಹೆಚ್ಚಿನ ಅಗತ್ಯವಾದರೆ ಆ ವೆಚ್ಚದ ಅಂದಾಜು ಮೊಬಲಗನ್ನು ತೋರಿಸುವ ಒಂದು ಪೂರಕ ವಿವರಣ ಪಟ್ಟಿಯನ್ನು ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಮಂಡಿಸುವಂತೆ ರಾಷ್ಟ್ರಾಧ್ಯಕ್ಷರು ಮಾಡಬೇಕು ಮತ್ತು ಹಿಂದಿನ ವಿಧಿಗಳ ಉಪಬಂಧಗಳು ಆ ವಿವರಣಾ ಪಟ್ಟಿಗೆ ಸಂಬಂಧಿಸಿದಂತೆ ಮತ್ತು ವಾರ್ಷಿಕ ಹಣಕಾಸು ವಿವರಣಾ ಪಟ್ಟಿಗೆ ಸಂಬಂಧಿಸಿದಂತೆ ಆ ವೆಚ್ಚ ಮತ್ತು ಅದರಲ್ಲಿ ನಮೂದಿಸಿರುವ ವೆಚ್ಚಕ್ಕೆ ಸಂಬಂಧಿಸಿದರೆ ಪರಿಣಾಮಕಾರಿಯಾಗಿರುತ್ತದೆ.

**ಅಧಿಕ ಅನುದಾನಗಳು**

*೯೬. ಯಾವುದೇ ಹಣಕಾಸು ವರ್ಷದಲ್ಲಿ ಯಾವುದೇ ಸೇವೆಗೆ ಮಂಜೂರಾದ ಮೊಬಲಗಿಗಿಂತ ಹೆಚ್ಚಾಗಿ ಅಗತ್ಯವಾಗಿದ್ದು ಭಾರತದ ರಾಜಸ್ವದಿಂದ ವೆಚ್ಚವನ್ನು ಮಾಡುವುದು ಅಗತ್ಯವಾದಾಗ ಲೋಕಸಭೆಯ ಮತವು ಆ ಸೇವೆಗೆ ಅಗತ್ಯವಾಗುತ್ತದೆ ಮತ್ತು ಆ ವರ್ಷಕ್ಕೆ ಅಧಿಕ ಮೊಬಲಗಿಗೆ ಬೇಡಿಕೆಯನ್ನು ಲೋಕಸಭೆಯಲ್ಲಿ ಮಂಡಿಸಬೇಕು ಮತ್ತು ಈ ಸಂವಿಧಾನದ ೯೩ ಮತ್ತು ೯೪ನೇ ವಿಧಿಗಳ ಉಪಬಂಧಗಳು ಅನುದಾನಕ್ಕೆ ಬೇಡಿಕೆಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾಗಿರುತ್ತವೆ.

**ಹಣಕಾಸು ಮಸೂದೆಗಳಿಗೆ ವಿಶೇಷ ಅವಕಾಶಗಳು**

೯೭. (೧) ಈ ಸಂವಿಧಾನದ ವಿಧಿ ೯೦ರ ಉಪಬಂಧ (೧)ರ (ಎ) ಇಂದ (ಎಫ್) ವರೆಗಿನ ಅಂಶಗಳಲ್ಲಿ

---

* ಈ ವಿಧಿಯು ಸಂವಿಧಾನದ ಹಣಕಾಸಿನ ಅವಕಾಶಗಳ ತಜ್ಞರ ಸಮಿತಿಯ ಶಿಫಾರಸ್ಸುಗಳನ್ನು ಅನುಸರಿಸುತ್ತದೆ.

ನಮೂದಿಸಲಾಗಿರುವ ಯಾವುದೇ ವಿಷಯಗಳಿಗೆ ಮಾಡುವ ಒಂದು ಮಸೂದೆ ಅಥವಾ ತಿದ್ದುಪಡಿಯನ್ನು ರಾಷ್ಟ್ರಾಧ್ಯಕ್ಷ ಶಿಫಾರಸ್ಸಿಲ್ಲದೆ ಮಂಡಿಸಬಾರದು ಅಥವಾ ವಿನಂತಿಸಬಾರದು ಮತ್ತು ಅಂತಹ ಅವಕಾಶವನ್ನು ಮಾಡುವುದಕ್ಕೆ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಬಾರದು:

ಆದರೆ ಯಾವುದೇ ತೆರಿಗೆಯನ್ನು ಕಡಿಮೆಮಾಡುವುದಕ್ಕೆ ಅಥವಾ ವಜಾ ಮಾಡುವುದಕ್ಕೆ ಅವಕಾಶವುಂಟುಮಾಡಲು ಒಂದು ತಿದ್ದುಪಡಿಯನ್ನು ಮಂಡಿಸುವುದಕ್ಕೆ ಈ ಉಪಬಂಧದ ಅಡಿಯಲ್ಲಿ ಯಾವುದೇ ಶಿಫಾರಸ್ಸು ಅಗತ್ಯವಿಲ್ಲ.

(೨) ದಂಡವನ್ನು ಅಥವಾ ಇತರ ಹಣಕಾಸಿ ಸಂಬಂಧದ ದಂಡಗಳನ್ನು ವಿಧಿಸುವುದಕ್ಕೆ ಅಥವಾ ಲೈಸೆನ್ಸುಗಳ ಶುಲ್ಕದ ಬೇಡಿಕೆಗೆ ಅಥವಾ ಪಾವತಿಗೆ ಅಥವಾ ಮಾಡಿದ ಸೇವೆಗಳಿಗೆ ಶುಲ್ಕಗಳು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಸ್ಥಳೀಯ ಉದ್ದೇಶಗಳಿಗೆ ಸಂಸ್ಥೆಯು ಯಾವುದೇ ತೆರಿಗೆಯನ್ನು ವಜಾ ಮಾಡುವುದಕ್ಕೆ, ಮಾಫಿ ಮಾಡುವುದಕ್ಕೆ ಬದಲಾಯಿಸುವುದಕ್ಕೆ ಅಥವಾ ಕ್ರಮಗೊಳಿಸುವ ಕಾರಣಕ್ಕಾಗಿ ಮೇಲೆ ಹೇಳಿದ ವಿಷಯಗಳಿಗೆ ಮಸೂದೆ ಅಥವಾ ತಿದ್ದುಪಡಿಯು ಅವಕಾಶ ಮಾಡುತ್ತದೆಯೆಂದು ಭಾವಿಸಕೂಡದು.

(೩) ಭಾರತದ ರಾಜಸ್ವಗಳಿಂದ ವೆಚ್ಚವನ್ನು ಒಳಗೊಂಡಿರುವ ಒಂದು ಮಸೂದೆಯನ್ನು ಅಧಿನಿಯಮ ಮಾಡಿ ಜಾರಿಗೆ ತಂದರೆ, ಆ ಮಸೂದೆಯನ್ನು ಸದನಗಳ ಪರಿಗಣನೆಗೆ ರಾಷ್ಟ್ರಾಧ್ಯಕ್ಷರು ಶಿಫಾರಸ್ಸು ಮಾಡದಿದ್ದರೆ ಪಾರ್ಲಿಮೆಂಟಿನ ಯಾವುದೇ ಸದನವು ಅನುಮೋದಿಸ ಕೂಡದು.

## ಸಾಮಾನ್ಯ ಪ್ರಕ್ರಿಯೆ

**ನಿಯಮಾವಳಿ ಬದ್ಧ ಪ್ರಕ್ರಿಯೆ**

೯೮. (೧) ಸಂಸತ್ತಿನ ಪ್ರತಿಯೊಂದು ಸದನವು ಸಂವಿಧಾನಕ್ಕೆ ಅನುಗುಣವಾಗಿ ತನ್ನ ಕಾರ್ಯಾಚರಣೆಗೆ ಸಂಬಂಧಿಸಿದ ನಿಯಮಾವಳಿಗಳನ್ನು ಮತ್ತು ವಿಧಾನವನ್ನು ರೂಪಿಸಿಕೊಳ್ಳಬಹುದು.

(೨) ಈ ವಿಧಿಯ ಮೊದಲನೆಯ ಉಪನಿಬಂಧನೆಯಲ್ಲಿ ತಿಳಿಸಿದಂತೆ ನಿಯಮಾವಳಿಗಳನ್ನು ನಿರ್ಣಯಿಸುವವರೆಗೆ; ಸಂವಿಧಾನ ಜಾರಿಗೆ ಬರುವ ಮುನ್ನ ಒಕ್ಕೂಟದ ಶಾಸಕಾಂಗದಲ್ಲಿ ಅನುಸರಿಸಿದ್ದ ನಿಯಮಾವಳಿಯನ್ನೇ ಸಂಸತ್ತಿಗೆ ಅನ್ವಯಿಸುವುವು.

ಬದಲಾವಣೆಯನ್ನೇನಾದರೂ ಮಾಡಬಯಸಿದರೆ, ರಾಜ್ಯಸಭೆಯ ಹಾಗೂ ಲೋಕಸಭೆಯ ಅಧ್ಯಕ್ಷರು ಮಾಡಬಹುದು.

೩. ರಾಷ್ಟ್ರಪತಿಯು ಲೋಕಸಭೆ ಹಾಗೂ ರಾಜ್ಯಸಭೆಯ ಅಧ್ಯಕ್ಷರೊಂದಿಗೆ ಜಂಟಿ ಅಧಿವೇಶನದ ಬಗೆಗೆ ಸಮಾಲೋಚಿಸಿ, ವಿಧಾನ ಮತ್ತು ನಿಯಮಾವಳಿಯನ್ನು ಎರಡೂ ಸದನಗಳಿಗೆ ಅರುಹಬಹುದು.

೪. ಜಂಟಿ ಸಮಾವೇಶನದ ಅಧ್ಯಕ್ಷ ಸ್ಥಾನವನ್ನು ಲೋಕಸಭೆಯ *ಅಧ್ಯಕ್ಷರೇ ವಹಿಸುವರು. ಅವರ ಗೈರುಹಾಜರಿಯಲ್ಲಿ (೩) ಉಪನಿಬಂಧನೆಯಂತೆ ನಿರ್ಧರಿಸಲಾದ ವ್ಯಕ್ತಿ ಅಧ್ಯಕ್ಷ ಸ್ಥಾನ ವಹಿಸಬಹುದು.

**ಸಂಸತ್ತಿನಲ್ಲಿ ಉಪಯೋಗಿಸಬೇಕಾದ ಭಾಷೆ**

೯೯. (೧) ಸಂಸತ್ತಿನ ಎಲ್ಲಾ ಕಾರ್ಯಕಲಾಪಗಳನ್ನು ಹಿಂದಿ ಅಥವಾ ಆಂಗ್ಲ ಭಾಷೆಯಲ್ಲಿ ನಡೆಸಬಹುದು.

ಆದರೆ ರಾಜ್ಯಸಭೆಯ ಅಧ್ಯಕ್ಷ ಹಾಗೂ ಲೋಕಸಭೆಯ ಅಧ್ಯಕ್ಷರ ಅಪ್ಪಣೆ ಪಡೆದು, ಸದಸ್ಯರು ತಮ್ಮ ಮಾತೃಭಾಷೆಯನ್ನು ಉಪಯೋಗಿಸಬಹುದು.

(೨) ರಾಜ್ಯಸಭೆಯ ಅಧ್ಯಕ್ಷರು ಅಥವಾ ಲೋಕಸಭೆಯ ಅಧ್ಯಕ್ಷರು ತಮಗೆ ತೋರಿದಂತೆ ಯಾವ ಸದಸ್ಯನಾಗಲಿ ತಮ್ಮ ಮಾತೃಭಾಷೆಯಲ್ಲಿ ಮಾತನಾಡಿದಾಗ, ಆ ಭಾಷಣದ ಸಾರಾಂಶವನ್ನು ಹಿಂದಿ ಅಥವಾ ಆಂಗ್ಲ ಭಾಷೆಯಲ್ಲಿ ಪರಿವರ್ತಿಸಿ ಸದನಗಳ ದಾಖಲೆಯಲ್ಲಿ ಅಂದರೆ ನಡವಳಿಕೆಯಲ್ಲಿ ಸೇರ್ಪಡಿಸಬಹುದು.

**ಸಂಸತ್ತಿನಲ್ಲಿಯ ಚರ್ಚೆಯ ಬಗೆಗೆ ನಿಬಂಧಗಳು**

೧೦೦. (೧) ಸಂಸತ್ತಿನಲ್ಲಿ ಸರ್ವೋಚ್ಚ ನ್ಯಾಯಾಲಯ ಅಥವಾ ಶ್ರೇಷ್ಠ ನ್ಯಾಯಾಲಯಗಳ ನ್ಯಾಯಧೀಶ ಬಗೆಗೆ ಅಥವಾ ಅವರ ಕಾರ್ಯದ ಬಗೆಗೆ ಚರ್ಚಿಸಲಾಗದು. ಆದರೆ ಯಾವುದೇ ನ್ಯಾಯಾಧೀಶರನ್ನು ತೆಗೆದು ಹಾಕಬೇಕೆಂಬ ಕೋರಿಕೆಯನ್ನು ರಾಷ್ಟ್ರಪತಿಯವರಿಗೆ ಸೂಚಿಸುವ ಸಮಯದಲ್ಲಿ ಮಾತ್ರ ಅದೂ ಗೊತ್ತುವಳಿ ಮಂಡನೆ ಮುಖಾಂತರ ಚರ್ಚಿಸಬಹುದು.

(೨) ಈ ವಿಧಿಯಲ್ಲಿ ಶ್ರೇಷ್ಠ ನ್ಯಾಯಾಲಯವೆಂದು ಪರಿಗಣಿಸಲಾದ ನ್ಯಾಯಾಲಯವು ಮೊದಲನೆಯ ಅನುಸೂಚಿಯ ಭಾಗ III ಪ್ರಕರಣ IVರಲ್ಲಿಯ ಯಾವುದೇ ಉದ್ದೇಶಕ್ಕೆಂದು ರಚಿಸಿರಬಹುದಾದ ಶ್ರೇಷ್ಠ ನ್ಯಾಯಾಲಯಗಳನ್ನು ಒಳಗೊಂಡಿದೆ.

---

* ಸಮಿತಿಯ ಅಭಿಪ್ರಾಯದಲ್ಲಿ ಅಧಿಕ ಸಂಖ್ಯೆಯ ಸದಸ್ಯರನ್ನು ಹೊಂದಿರುವ ಲೋಕಸಭೆಯ ಅಧ್ಯಕ್ಷರೇ ಜಂಟಿ ಸದನದ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಬೇಕೆಂದಾಗಿದೆ.

**ಸಂಸತ್ತಿನಲ್ಲಿಯ ಕಾರ್ಯವನ್ನು ನ್ಯಾಯಾಲಯಗಳು ಪ್ರಶ್ನಿಸುವಂತಿಲ್ಲ**

೧೦೧. (೧) ಸಂಸತ್ತಿನಲ್ಲಿ ನಡೆದ ಕಾರ್ಯಕಲಾಪಗಳ ನ್ಯಾಯಬದ್ಧತೆಯನ್ನು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸಲಾಗದು.

(೨) ಸಂಸತ್ತಿನ ಪದಾಧಿಕಾರಿಗಳ ಕ್ರಮಗಳನ್ನು ಸದನದ ಕಾರ್ಯಕಲಾಪಗಳ ಬಗೆಗೆ ಅವರ ನಿರ್ಣಯ, ವಿಧಾನ, ಆಜ್ಞೆ ಮುಂತಾದವುಗಳನ್ನು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸಲಾಗದು.

## ಪ್ರಕರಣ III ರಾಷ್ಟ್ರಪತಿಯವರ ಶಾಸನಾಧಿಕಾರಗಳು

೧೦೨. (೧) ಸಂಸತ್ತಿನ ಎರಡು ಸದನಗಳು ಅಧಿವೇಶನದಲ್ಲಿರದ ಸಮಯದಲ್ಲಿ ರಾಷ್ಟ್ರಪತಿಯವರಿಗೆ ಮನವರಿಕೆಯಾದರೆ ಅಂತಹ ಸನ್ನಿವೇಶದಲ್ಲಿ ಅವರು ಸುಗ್ರೀವಾಜ್ಞೆಗಳನ್ನು ಜಾರಿಗೊಳಿಸಬಹುದು.

**ಸಂಸತ್ತು ಅಧಿವೇಶನದಲ್ಲಿಲ್ಲದಾಗ ಸುಗ್ರೀವಾಜ್ಞೆಯನ್ನು ಹೊರಡಿಸಲು ರಾಷ್ಟ್ರಪತಿಯವರಿಗೆ ಅಧಿಕಾರ**

(೨) ಈ ವಿಧಿಯಡಿಯಲ್ಲಿ ಹೊರಡಿಸಲಾದ ಸುಗ್ರೀವಾಜ್ಞೆಗೆ ಸಂಸತ್ತಿನಿಂದ ಮಂಜೂರಾತಿ ಪಡೆದ ಮಸೂದೆಯ ಸ್ಥಾನವಿರುತ್ತದೆ. ಆದರೆ ಈ ವಿಧವಾದ ಪ್ರತಿಯೊಂದು ಸುಗ್ರೀವಾಜ್ಞೆ:

(ಎ) ಈ ಸುಗ್ರೀವಾಜ್ಞೆಯನ್ನು ಸಂಸತ್ತಿನ ಎರಡು ಸದನಗಳು ಕಾರ್ಯಾರಂಭಮಾಡಿದ ಆರುವಾರದ ಅವಧಿಯೊಳಗೆ ಮನ್ನಣೆ ಪಡೆಯದೇ ಹೋದಲ್ಲಿ ಅದು ತಾನೇ ತಾನಾಗಿ ರದ್ದುಗೊಳ್ಳುವುದು. ಸುಗ್ರೀವಾಜ್ಞೆಯ ಅವಧಿಯು ಮುಗಿಯುವ ಮುನ್ನವೇ ಸದನಗಳು ಅದರ ವಿರುದ್ಧ ನಿಲುವಳಿಯನ್ನು ಅಂಗೀಕರಿಸಿದರೆ ಅದರ ಆಯಸ್ಸು ಮುಗಿದಂತೆ ಮತ್ತು

(ಬಿ) ರಾಷ್ಟ್ರಪತಿಯವರೇ ಅದನ್ನು ಯಾವ ಸಮಯದಲ್ಲಾಗಲೀ ಮರಳಿ ಪಡೆಯಬಹುದು.

ವಿವರಣೆ : ಸಂಸತ್ತಿನ ಎರಡು ಸದನಗಳ ಅಧಿವೇಶನಗಳನ್ನು ಬೇರೆ ಬೇರೆ ದಿನಾಂಕಗಳಂದು ಕರೆಯಲಾದ ಸಮಯದಲ್ಲಿ ಉತ್ತರಾರ್ಧದ ದಿನದಿಂದಲೇ ಆರುವಾರಗಳ ಅವಧಿಯನ್ನು ಗಣನೆಗೆ ತೆಗೆದುಕೊಳ್ಳಬೇಕು.

(೩) ಈ ಸಂವಿಧಾನದಡಿಯಲ್ಲಿ ಸಂಸತ್ತಿಗೆ ನೀಡಿದ ಶಾಸನದ ಅಧಿಕಾರಕ್ಕೆ ಹಾಗೂ ಅದರ ವ್ಯಾಪ್ತಿಗೆ ಮೀರಿದ ಸುಗ್ರೀವಾಜ್ಞೆಯನ್ನು ಹೊರಡಿಸಲಾಗದು. ಹಾಗೇನಾದರೂ ಆಜ್ಞೆ ಹೊರಡಿಸಿದರೆ ಅದನ್ನು ಸಂವಿಧಾನ ಬಾಹಿರ ಎಂದೇ ಪರಿಗಣಿಸಲಾಗುವುದು.

## ಪ್ರಕರಣ IV ಒಕ್ಕೂಟದ ನ್ಯಾಯಾಂಗ

**ಸರ್ವೋಚ್ಚ ನ್ಯಾಯಾಲಯ ಸ್ಥಾಪನೆ ಹಾಗೂ ರಚನೆ**

೧೦೩. (೧) ಮುಖ್ಯ ನ್ಯಾಯಾಧೀಶ ಹಾಗೂ *ಏಳು ನ್ಯಾಯಮೂರ್ತಿಗಳಿಗಿಂತ ಕಡಿಮೆ ಇರದ ಭಾರತದ ಸರ್ವೋಚ್ಚ ನ್ಯಾಯಾಲಯವು, ಸಂಸತ್ತಿನ ಕಾಯ್ದೆಯಂತೆ ಜಾರಿಯಲ್ಲಿ ತರಲಾಗುವುದು.

(೨) ಸರ್ವೋಚ್ಚ ನ್ಯಾಯಾಲಯದ ಅಥವಾ ರಾಜ್ಯಗಳ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಿಸುವ ಅಧಿಕಾರ ರಾಷ್ಟ್ರಪತಿಯವರದು. ಅವರು ತಮ್ಮ ಕೈಬರಹದ ಆದೇಶ ಮತ್ತು ಮುದ್ರೆಯೊಂದಿಗೆ ಕೂಡಿದ ಆಜ್ಞೆಯ ಮೂಲಕ ನೇಮಿಸುತ್ತಾರೆ. ಈ ದಿಶೆಯಲ್ಲಿ ಅವರು ಸರ್ವೋಚ್ಚ ಅಥವಾ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರೊಂದಿಗೆ ಸಮಾಲೋಚಿಸಿ ಆಜ್ಞೆ ನೀಡುತ್ತಾರೆ. ಈ ವಿಧವಾಗಿ ನೇಮಕ ಹೊಂದಿದವರು ೬೫ ವರ್ಷಗಳವರೆಗೂ ಸೇವೆಯಲ್ಲಿರುತ್ತಾರೆ.

ಆದರೆ ಮುಖ್ಯ ನ್ಯಾಯಾಧೀಶರ ನೇಮಕಾತಿಯನ್ನು ಬಿಟ್ಟು ಬೇರೆ ನ್ಯಾಯಾಧೀಶರನ್ನು ನೇಮಿಸುವಾಗ ಭಾರತದ ಸರ್ವೋಚ್ಚ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶರ ಸಲಹೆಯನ್ನು ಪಡೆಯಬೇಕು :

ಆದರೆ ಮುಂದೆ ಹೇಳಲಾದಂತೆ

(ಎ) ನ್ಯಾಯಾಧೀಶರು ತಮ್ಮ ಕೈಬರಹದಿಂದ ಬರೆದ ರಾಜೀನಾಮೆಯನ್ನು ರಾಷ್ಟ್ರಪತಿಗೆ ಸಲ್ಲಿಸಬಹುದು.

(ಬಿ) ಉಪನಿಬಂಧನೆ (೪)ರಲ್ಲಿ ಸೂಚಿಸಿದಂತೆ ನ್ಯಾಯಾಧೀಶರನ್ನು ಅವರ ಅಧಿಕಾರದಿಂದ ವಜಾಮಾಡಬಹುದು.

(೩) ಭಾರತದ ಪೌರತ್ವವನ್ನು ಪಡೆಯದೇ ಇರುವವರನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ನೇಮಿಸಲಾಗದು ಮತ್ತು

(ಎ) ಯಾವುದೇ ಒಂದು ಅಥವಾ ಎರಡು ಶ್ರೇಷ್ಠ ನ್ಯಾಯಾಲಯಗಳಲ್ಲಿ ಕನಿಷ್ಠ ಐದು ವರ್ಷ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿರಬೇಕು.

(ಬಿ) ಒಂದು ಅಥವಾ ಎರಡು ಶ್ರೇಷ್ಠ ನ್ಯಾಯಾಲಯಗಳಲ್ಲಿ ನ್ಯಾಯವಾದಿಯಾಗಿ ಕನಿಷ್ಟ ಹತ್ತು ವರ್ಷಗಳ ಸೇವೆ ಸಲ್ಲಿಸಿರಬೇಕು.

---

* ಆರಂಭ ದಿಶೆಯಲ್ಲಿ ಏಳು ನ್ಯಾಯಾಧೀಶರಿಂದ ಕೂಡಿದ ಸರ್ವೋಚ್ಚ ನ್ಯಾಯಾಲವಿದ್ದು ನಂತರ ಸಂಸತ್ತಿನ ತೀರ್ಮಾನದಂತೆ ಬದಲಾಯಿಸಬಹುದೆಂಬ ಅಭಿಪ್ರಾಯವನ್ನು ಸಮಿತಿಯು ಹೊಂದಿದೆ.

ವಿವರಣೆ I: ಈ ನಿಬಂಧನೆಯಲ್ಲಿ 'ಶ್ರೇಷ್ಠ ನ್ಯಾಯಾಲಯ ಎಂದರೆ ಸಂವಿಧಾನ ಜಾರಿಗೆ ಬರುವ ಮುನ್ನ ಭಾರತದ ಪ್ರದೇಶದಲ್ಲಿ ಶ್ರೇಷ್ಠ ನ್ಯಾಯಾಲಯದ ಕರ್ತವ್ಯಗಳನ್ನು ನಿಭಾಯಿಸುತ್ತಿದ್ದ ನ್ಯಾಯಾಲಯಗಳು.

ವಿವರಣೆ II: ಈ ನಿಬಂಧನೆಯಲ್ಲಿ ನ್ಯಾಯವಾದಿಯಾಗಿ ಸಲ್ಲಿಸಿದ ಸೇವೆಯನ್ನು ಗಣನೆಗೆ ತೆಗೆದುಕೊಂಡಾಗ ಅವರು ನ್ಯಾಯಾಧೀಶರಾಗಿ ಸಲ್ಲಿಸಿರಬಹುದಾದ ಸೇವೆಯನ್ನೂ ಗಣನೆಗೆ ತೆಗೆದುಕೊಳ್ಳಬೇಕು.

(೪) ಸರ್ವೋಚ್ಚ ನ್ಯಾಯಾಲಯದ ನ್ಯಾಯ ಮೂರ್ತಿಗಳನ್ನು ರಾಷ್ಟ್ರಪತಿಯುವರಿಗೆ ಸಂಸತ್ತಿನ ಎರಡೂ ಸದನಗಳು ನ್ಯಾಯಮೂರ್ತಿಗಳ ದುರ್ನಡತೆಗೆ ಸಂಬಂಧಿಸಿದಂತೆ ೨/೩ ಬಹುಮತದಿಂದ ಗೊತ್ತುವಳಿಯನ್ನು ಸ್ವೀಕರಿಸಿ ತಿಳಿಸಿದಾಗ ಮಾತ್ರ, ಸೇವೆಯಿಂದ ವಜಾ ಮಾಡಬಹುದು.

(೫) ನ್ಯಾಯಮೂರ್ತಿಗಳ ದುರ್ನಡತೆ, ಅಸಮರ್ಥತೆಯನ್ನು ಸಿದ್ಧಪಡಿಸುವ ಗೊತ್ತುವಳಿಯ ವಿಚಾರಣೆಯಲ್ಲಿ ಅನುಸರಿಸಬೇಕಾದ ರೀತಿ–ನೀತಿಗಳನ್ನು ಕ್ರಮಗೊಳಿಸುವ ಬಗೆಗೆ ಸಂಸತ್ತಿಗೆ ಅಧಿಕಾರ ನೀಡಲಾಗಿದೆ.

(೬) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಅಧಿಕಾರ ಸ್ವೀಕರಿಸುವ ಮುನ್ನ ಮೂರನೆಯ ಅನುಬಂಧದಲ್ಲಿ ಸೂಚಿಸಿದಂತೆ ರಾಷ್ಟ್ರಪತಿ ಅಥವಾ ಅವರಿಂದ ನಿಯಮಿಸಲಾದವರ ಮುಂದೆ ಪ್ರಮಾಣವಚನ ಸ್ವೀಕರಿಸಿ ಸಹಿ ಹಾಕಬೇಕು.

(೭) ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ ನ್ಯಾಯಾಧೀಶರು ಭಾರತ ಪ್ರದೇಶದಲ್ಲಿಯ ಯಾವ ನ್ಯಾಯಾಲಯಗಳ ಮುಂದೆ ವಕೀಲಿ ವೃತ್ತಿಯನ್ನು ಮಾಡುವಂತಿಲ್ಲ.

**ನ್ಯಾಯಾಧೀಶರ ವೇತನಗಳು ಇತ್ಯಾದಿ**

೧೦೪. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ವೇತನ, ಭತ್ತೆ ಹಾಗೂ ಇತರ ಸೌಕರ್ಯ, ರಜೆ ಮತ್ತು ಪಿಂಚಣಿ ಮುಂತಾದವನ್ನು ಕಾಲಕಾಲಕ್ಕೆ ಸಂಸತ್ತು ನಿರ್ಣಯಿಸುವುದು. ಸಂಸತ್ತು ಈ ಬಗೆಗೆ ನಿರ್ಣಯಿಸುವವರೆಗೆ ಎರಡನೆಯ ಅನುಸೂಚಿಯಲ್ಲಿ ಸೂಚಿಸಿದಂತೆ ಅವರು ವೇತನ ಭತ್ತೆ ಮುಂತಾದವನ್ನು ಪಡೆಯಬಹುದು.

ಆದರೆ ಯಾವ ನ್ಯಾಯಾಧೀಶರ ವೇತನ ಹಾಗೂ ಅವರಿಗೆ ನೀಡಿದ ಸೌಕರ್ಯಗಳನ್ನು ಅವರ ಸೇವಾ ಅವಧಿಯಲ್ಲಿ

ಕಡಿತಗೊಳಿಸಲಾಗದು ಹಾಗೂ ಅವರಿಗೆ ಅನಾನುಕೂಲವಾಗುವ ರೀತಿಯಲ್ಲಿ ಬದಲಾಯಿಸಲಾಗದು.

**ಹಂಗಾಮಿ ಪ್ರಮುಖ ನ್ಯಾಯಾಧೀಶನ ನೇಮಕ**

೧೦೫. ಸರ್ವೋಚ್ಚ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶ ಸ್ಥಾನ, ಅವರ ಗೈರುಹಾಜರಿ ಅಥವಾ ಬೇರೆ ಯಾವುದೇ ಕಾರಣದಿಂದ ತೆರವಾದಾಗ ಅವರ ಕರ್ತವ್ಯಗಳನ್ನು ಪಾಲಿಸಿಕೊಂಡು ಹೋಗಲು ಅದೇ ನ್ಯಾಯಾಲಯದ ಓರ್ವ ನ್ಯಾಯಾಧೀಶರನ್ನು ಹಂಗಾಮಿ ಪ್ರಮುಖ ನ್ಯಾಯಾಧೀಶರೆಂದು ರಾಷ್ಟ್ರಪತಿಯವರು ನೇಮಿಸಬಹುದು.

**ಹಂಗಾಮಿ ಪ್ರಮುಖ ನ್ಯಾಯಾಧೀಶರ ನೇಮಕಾತಿ**

೧೦೬. (೧) ಯಾವುದೇ ಸಮಯದಲ್ಲಿ ಸರ್ವೋಚ್ಚ ನ್ಯಾಯಾಲಯದ ಅಧಿವೇಶನದ ಕಾರ್ಯಕಲಾಪಗಳನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಕೋರಂನ ಅಭಾವ ತಲೆದೋರಿದಾಗ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ, ಶ್ರೇಷ್ಠ ನ್ಯಾಯಾಲಯದ ಪ್ರಮುಖ ನ್ಯಾಯಮೂರ್ತಿಯೊಂದಿಗೆ ಸಮಾಲೋಚಿಸಿ, ಬರಹ ಮೂಲಕ ಅವರ ತಾತ್ಕಾಲಿಕ ಸೇವೆಯನ್ನು ಕೋರಬಹುದು. ಈ ವಿಧವಾದ ತಾತ್ಕಾಲಿಕ ನ್ಯಾಯಾಧೀಶನನ್ನು ನೇಮಿಸಿಕೊಳ್ಳುವ ಅಧಿಕಾರ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗಿದೆ.

(೨) ಈ ವಿಧವಾಗಿ ನೇಮಕ ಹೊಂದಿದ ನ್ಯಾಯಾಧೀಶರು, ಸರ್ವೋಚ್ಚ ನ್ಯಾಯಾಲಯದ ಕರ್ತವ್ಯಕ್ಕೆ ಆದ್ಯತೆಯನ್ನು ನೀಡಿ ಕಾರ್ಯಮಾಡಬೇಕು. ಹೀಗೆ ಸರ್ವೋಚ್ಚ ನ್ಯಾಯಾಲಯದ ಕಾರ್ಯವನ್ನು ನಿರ್ವಹಿಸುವ ಅವಧಿಯಲ್ಲಿ ಅವರಿಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ಸಲ್ಲುವ ಸಕಲ ಸ್ಥಾನಮಾನ, ಸೌಕರ್ಯಗಳು, ಅಧಿಕಾರಗಳನ್ನೇ ಹೊಂದಿರುತ್ತಾರೆ.

**ಸರ್ವೋಚ್ಚ ನ್ಯಾಯಾಲಯದ ಸೇವೆಯಲ್ಲಿ ನಿವೃತ್ತ ನ್ಯಾಯಾಧೀಶರ ಸೇವಾನಿಯುಕ್ತಿ**

* ೧೦೭. ಈ ಪ್ರಕರಣದಲ್ಲಿ ಸೂಚಿಸಿದ ಯಾವ ವಿಷಯಕ್ಕೆ ಧಕ್ಕೆ ಬಾರದಂತೆ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನು, ಈ ವಿಧಿಯಲ್ಲಿ ಹೇಳಲಾದಂತೆ, ಸಂಯುಕ್ತ ಅಥವಾ ಸರ್ವೋಚ್ಚ ನ್ಯಾಯಾಲಯಗಳಲ್ಲಿ ಸೇವೆ ಸಲ್ಲಿಸಿದ ನ್ಯಾಯಾಮೂರ್ತಿಯು ಸೇವೆಯನ್ನು ಪಡೆಯಬಹುದು. ಈ ವಿಧದಲ್ಲಿ ಸೇವೆ ಸಲ್ಲಿಸಿದ ನ್ಯಾಯಮೂರ್ತಿಯ ಅಧಿಕಾರ ಸೌಕರ್ಯ ಹಾಗೂ ಕಾರ್ಯವ್ಯಾಪ್ತಿ

---

* ಈ ವಿಧವಾಗಿ ನಿವೃತ್ತ ನ್ಯಾಯಾಧೀಶರ ಎರವಲು ಸೇವೆಯನ್ನು ಪಡೆಯುವ ಸಂಪ್ರದಾಯವನ್ನು ಅಮೆರಿಕ ಹಾಗೂ ಇಂಗ್ಲೆಂಡ್ ದೇಶಗಳಿಂದ ಅನುಕರಣೆ ಮಾಡಿದೆ.

ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಂತೆಯೇ ಪರಿಗಣಿಸಲಾಗುವುದು.

ಆದರೆ ಈ ವಿಧಿಯಲ್ಲಿ ಸೂಚಿಸಿದಂತೆ ಕಾರ್ಯಾಚರಣೆಗೆಂದು ಕೋರಲಾದ ನ್ಯಾಯಮೂರ್ತಿ, ಈ ಕಾರ್ಯಕ್ಕೆ ತಮ್ಮ ಅನುಮತಿಯನ್ನು ಸೂಚಿಸಿರಬೇಕು.

**ಸರ್ವೋಚ್ಚ ನ್ಯಾಯಾಲಯದ ಪೀಠ**

೧೦೮. ದಾಖಲೆಗಳ ನ್ಯಾಯಾಲಯವಾದ ಸರ್ವೋಚ್ಚ ನ್ಯಾಯಾಲಯದ ಪೀಠವು ದೆಹಲಿಯಲ್ಲಿ ಕುಳಿತುಕೊಳ್ಳುತ್ತದೆ. ಹಾಗೂ ಮತ್ತೆ ಬೇರೆ ಯಾವ ಸ್ಥಳದಲ್ಲಿಯಾಗಲೀ ರಾಷ್ಟ್ರಪತಿಯವರ ಅನುಮತಿ ಪಡೆದು, ಸರ್ವೋಚ್ಚ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶರು ಕಾಲಕಾಲಕ್ಕೆ ಕರೆಯಬಹುದು.

**ಸರ್ವೋಚ್ಚ ನ್ಯಾಯಾಲಯದ ಮೂಲ ನ್ಯಾಯವ್ಯಾಪ್ತಿ**

೧೦೯. ಈ ಸಂವಿಧಾನದಲ್ಲಿ ತಿಳಿಸಲಾದ ಅಂಶಗಳಂತೆ, ಬೇರೆ ಎಲ್ಲಾ ನ್ಯಾಯಾಲಯಗಳನ್ನು ಹೊರತುಪಡಿಸಿ, ಸರ್ವೋಚ್ಚ ನ್ಯಾಯಾಲಯವು ಈ ಕೆಳಕಂಡ ಮೂಲಾಧಿಕರಣ ವ್ಯಾಪ್ತಿಯನ್ನು ಹೊಂದಿದೆ :

(ಎ) ಭಾರತ ಸರಕಾರ ಹಾಗೂ ವಿವಿಧ ದೇಶಗಳ ಮಧ್ಯೆ ಅಥವಾ

(ಬಿ) ಭಾರತ ಸರಕಾರ ಹಾಗೂ ಒಂದು ಅಥವಾ ಬೇರೆ ಬೇರೆ ರಾಜ್ಯಗಳ ನಡುವೆ, ಒಂದು ಅಥವಾ ಹೆಚ್ಚಿನ ರಾಜ್ಯಗಳ ನಡುವೆ ಉದ್ಭವಿಸಬಹುದಾದ
ಅಥವಾ

(ಸಿ) ಎರಡು ರಾಜ್ಯಗಳ ಅಥವಾ ಮಿಗಿಲಾದ ರಾಜ್ಯಗಳ ಮಧ್ಯೆ ಉದ್ಭವಿಸುವ, ಕಾನೂನಿನ ಅಥವಾ ಮೂಲ ವಿಷಯಗಳಿಗೆ ಸಂಬಂಧಿಸಿದ ಕಾನೂನಿನ ಅಧಿಕಾರಗಳ ಕುರಿತಂತೆ :

(i) ಮೊದಲನೆಯ ಅನುಸೂಚಿಯ ಭಾಗ IIIರಲ್ಲಿ ಸೂಚಿಸಿದ ರಾಜ್ಯ ಸದ್ಯದಲ್ಲಿ ವ್ಯಾಜ್ಯ ಕಕ್ಷಿದಾರನಾಗಿದ್ದು ವ್ಯಾಜ್ಯವು ಒಪ್ಪಂದ, ಒಡಂಬಡಿಕೆ, ನಿರ್ಣಯ, ಸನ್ನದು ಮುಂತಾದವುಗಳಿಗೆ ಸಂಬಂಧಿಸಿದ್ದು, ಸಂವಿಧಾನ ಜಾರಿಗೆ ಬರುವ ಮುನ್ನವೇ ಅಥವಾ ಜಾರಿಗೆ ಬಂದ ದಿನಾಂಕದ ನಂತರವೂ ಜಾರಿಯಲ್ಲಿದ್ದರೆ;

(ii) ಯಾವುದೇ ವ್ಯಾಜ್ಯಕ್ಕೆ ರಾಜ್ಯವು ಕಕ್ಷಿದಾರನಾಗಿದ್ದು ಆ ವ್ಯಾಜ್ಯ ಒಪ್ಪಂದ, ಒಡಂಬಡಿಕೆ, ನಿರ್ಣಯ, ಸನ್ನದು ಹಾಗೂ ಇತರ ದಾಖಲೆಗಳ ವ್ಯಾಪ್ತಿಗೆ ಒಳಪಟ್ಟಿದ್ದರೆ ಆ ವಿಧವಾದ ವ್ಯಾಜ್ಯಗಳು.

**ಕೆಲವು ನಿಶ್ಚಿತಪ್ರಕರಣಗಳಲ್ಲಿ ರಾಜ್ಯಗಳ**

೧೧೦. (೧) ಯಾವುದೇ ರಾಜ್ಯದ ಶ್ರೇಷ್ಠ ನ್ಯಾಯಾಲಯವು

**ಶ್ರೇಷ್ಠ ನ್ಯಾಯಾಲಯಗಳಿಂದ ಮೇಲ್ಮನವಿಗೆ ಸಂಬಂಧಿಸಿದ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದ ಮೇಲ್ಮನವಿ ವ್ಯಾಪ್ತಿ**

ತಾನು ನೀಡಿದ ತೀರ್ಪಿನ ಕುರಿತು ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವ ಬಗೆಗೆ, ಸಿವಿಲ್ ಮತ್ತು ಕ್ರಿಮಿನಲ್ ಹಾಗೂ ಇತರ ಮೊಕದ್ದಮೆಗಳ ಬಗೆಗೆ ಪ್ರಮಾಣ ಪತ್ರ ನೀಡಿದಲ್ಲಿ ಅಪೀಲು ಮಾಡಬಹುದು.

(೨) ಒಂದು ವೇಳೆ ಮೇಲ್ಮನವಿಗೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ರಾಜ್ಯ ಶ್ರೇಷ್ಠ ನ್ಯಾಯಾಲಯವು ನೀಡದೇ ಹೋದ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಸಂವಿಧಾನ ಅರ್ಥೈಸುವ ಹಾಗೂ ಕಾನೂನಿನ ಪ್ರಬಲ ಅಂಶ ಅಡಕವಾಗಿದೆ ಎಂದು ಮನವರಿಕೆಯಾದಲ್ಲಿ ವಿಶೇಷ ಮೇಲ್ಮನವಿಗೆ ಸರ್ವೋಚ್ಚ ನ್ಯಾಯಾಲಯವು ಅನುಮತಿ ನೀಡಬಹುದು.

(೩) ಎಲ್ಲಿ ಮೇಲ್ಮನವಿಗೆ ಪ್ರಮಾಣ ಪತ್ರವನ್ನು ನೀಡಲಾಗಿದೆಯೋ ಆ ಬಗೆಗೆ ಎಲ್ಲಾ ವ್ಯಾಜ್ಯಗಳಲ್ಲಿ ಹಾಗೂ ಶ್ರೇಷ್ಠ ನ್ಯಾಯಾಲಯದ ತೀರ್ಪು ಸಕ್ರಮವಾಗಿಲ್ಲವೆಂದು ತೋರಿದ ವಿಷಯಗಳಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬಹುದು.

ವಿವರಣೆ : ಈ ವಿಧಿಯ ಉದ್ದೇಶಕ್ಕೆ ಸಂಬಂಧಿಸಿದಂತೆ "ಕೊನೆಯ ಆಜ್ಞೆ" ಎಂದರೆ ಅಪೀಲುದಾರರ ಪರವಾಗಿ ನೀಡಿರಬಹುದಾದ ಯಾವುದೇ ಬಗೆಯ ನಿರ್ಣಯ ಎಂದೇ ತಿಳಿಯಬೇಕು.

**ಸರ್ವೋಚ್ಚ ನ್ಯಾಯಾಲಯದ ಮೇಲ್ಮನವಿಯ ವ್ಯಾಪ್ತಿಗೆ ಸಂಬಂಧಿಸಿದಂತೆ ರಾಜ್ಯಗಳ ಶ್ರೇಷ್ಠ ನ್ಯಾಯಾಲಯಗಳು: ಈಗ ಮೊದಲನೆಯ ಅನುಸೂಚಿ ಭಾಗ III ರಲ್ಲಿಯ ರಾಜ್ಯಗಳನ್ನು ಹೊರತುಪಡಿಸಿ**

೧೧೧. (೧) ಮೊದಲನೆಯ ಅನುಬಂಧ ಭಾಗ IIIರಲ್ಲಿಯ ಸೂಚಿಸಿದ ರಾಜ್ಯಗಳನ್ನು ಹೊರತುಪಡಿಸಿ ಭಾರತೀಯ ಪ್ರದೇಶ ದಲ್ಲಿರುವ ಬೇರೆ ಯಾವ ರಾಜ್ಯದ ಶ್ರೇಷ್ಠ ನ್ಯಾಯಾಲಯಗಳಿಂದ ನೀಡಿದ ಸಿವಿಲ್ ತೀರ್ಪುಗಳ ಬಗೆಗೆ ಮೇಲ್ಮನವಿ ಸಲ್ಲಿಸುವ ಪ್ರಮಾಣಪತ್ರ ನೀಡಿದ್ದಲ್ಲಿ :

(ಎ) ಆ ವ್ಯಾಜ್ಯದ ಹಣದ ಮೊತ್ತವು ಇಪ್ಪತ್ತು ಸಹಸ್ರಕ್ಕೂ ಮೀರಿದ್ದಲ್ಲಿ ಅಥವಾ

(ಬಿ) ನಿರ್ಣಯ ಅಥವಾ ಡಿಕ್ರಿಯು ಅಥವಾ ಅಂತಿಮ ನಿರ್ಣಯವು ನೇರ ಅಥವಾ ಪರೋಕ್ಷವಾಗಿ ಸಂಬಂಧಿಸಿದ ಆಸ್ತಿಯ ಮೊತ್ತ ಅಧಿಕವಾಗಿದ್ದಲ್ಲಿ

(ಸಿ) ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಗೆ ಅರ್ಹವೆನಿಸಿದಲ್ಲಿ ಮತ್ತು ತೀರ್ಪು, ಡಿಕ್ರಿ ಅಥವಾ ಕೊನೆಯ ನಿರ್ಣಯ ಮುಂತಾದವುಗಳು ಹಾಗೂ (ಸಿ) ಯಲ್ಲಿ ಸೂಚಿಸಿದ ವ್ಯಾಜ್ಯಗಳ ಬಗೆಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ

ಆಸ್ಪದವಿದೆ.

(೨) ೧೧೦ನೆಯ ವಿಧಿಯಲ್ಲಿ ತಿಳಿಸಲಾದ ಅಂಶಗಳನ್ನು ಗಮನಿಸದೆ, ಯಾರೇ ಆಗಲೀ ಉಪನಿಬಂಧನೆ (೧) ಈ ವಿಧಿಯಲ್ಲಿ ತಿಳಿಸಿದಂತೆ ಸಂವಿಧಾನದ ಅರ್ಥೈಸುವ ಹಾಗೂ ಕಾನೂನಿಗ ಸಮಗ್ರತೆ ಬಗೆಗೆ ಕೆಳಕೋರ್ಟಿನ ನಿರ್ಣಯದ ಸಮಂಜಸತೆಯನ್ನು ಮೇಲ್ಮನವಿಯ ಮುಖೇನ ಪ್ರಶ್ನಿಸಬಹುದು.

**ಕೆಲವು ನಿಶ್ಚಿತ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಪರವಾನಗಿ ಮೂಲಕ ಮೇಲ್ಮನವಿ**

೧೧೨. ಸಂವಿಧಾನದ ಮೊದಲನೆಯ ಅನುಸೂಚಿ ಭಾಗ IIIರ ರಾಜ್ಯಗಳನ್ನು ಹೊರತುಪಡಿಸಿ ಹಾಗೂ ೧೧೦ ಮತ್ತು ೧೧೧ ವಿಧಿಗಳಿಗೆ ಮೀರಿದ ವ್ಯಾಜ್ಯಗಳನ್ನು ಕುರಿತಂತೆ ಸರ್ವೋಚ್ಚ ನ್ಯಾಯಾಲಯವು ವಿಶೇಷ ಪರವಾನಗಿಯ ಮುಖಾಂತರ ಮೇಲ್ಮನವಿಗೆ ಆಸ್ಪದ ನೀಡಬಹುದು.

**ಮೊದಲನೆಯ ಅನುಸೂಚಿಯ ಭಾಗ III ರಲ್ಲಿ ಹೇಳಲಾದ ರಾಜ್ಯಗಳ ಶ್ರೇಷ್ಠ ನ್ಯಾಯಾಲಯಗಳಿಂದ ಸರ್ವೋಚ್ಚ ನ್ಯಾಯಾಲಯದ ಸಲಹೆ ಕೋರಿ ಪರಾಮರ್ಶಿಸಿ ಕಳಿಸುವುದು.**

೧೧೩. (೧) ಸಂವಿಧಾನದ ಮೊದಲನೆಯ ಅನುಸೂಚಿಯ ಭಾಗ III ರಲ್ಲಿ ಸೂಚಿಸಿದ ರಾಜ್ಯಗಳ ಶ್ರೇಷ್ಠ ನ್ಯಾಯಾಲಯವು ತನ್ನ ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆಗಳ ಬಗೆಗೆ, ಸಂಸತ್ತಿನಿಂದ ರಚಿಸಿದ ಕಾನೂನು ಅಥವಾ ರಾಜ್ಯದ ಶಾಸಕಾಂಗದಿಂದ ನಿರ್ಮಾಣ ಹೊಂದಿದ ಕಾಯ್ದೆಗಳನ್ನು ಅರ್ಥೈಸುವ ವಿಷಯದಲ್ಲಿ ಸಂದೇಹ ಅಥವಾ ಸಂದಿಗ್ಧತೆ ತಲೆದೋರಿದಾಗ ಅಥವಾ ನ್ಯಾಯಾಲಯದ ತೀರ್ಪಿನ ಬಗೆಗೆ ಸಂಶಯ ಉದ್ಭವಿಸಿದಾಗ ಅಂಥ ವಿಷಯಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಅರುಹಿ ಅದರ ಸಲಹೆಯನ್ನು ಪಡೆಯಬಹುದು.

(೨) ಈ ವಿಧಿಯ (೧) ನಿಬಂಧನೆಯಲ್ಲಿ ಸೂಚಿಸಿದಂತೆ, ಶ್ರೇಷ್ಠ ನ್ಯಾಯಾಲಯವು ಅಂತಹ ವ್ಯಾಜ್ಯವನ್ನು ಸರ್ವೋಚ್ಚ ನ್ಯಾಯಾಲಯದ ಗಮನಕ್ಕೆ ತರಲು ನಿರಾಕರಿಸಿದಲ್ಲಿ ವ್ಯಾಜ್ಯ ಮಂಡನೆಗೆ ಆಗ್ರಹಿಸಬಹುದು.

(೩) ಈ ವಿಧಿಯ (೧) ಹಾಗೂ (೨)ರಲ್ಲಿ ಸೂಚಿಸಿದಂತೆ, ವ್ಯಾಜ್ಯವು ಸರ್ವೋಚ್ಚ ನ್ಯಾಯಾಲಯದ ಪರಾಮರ್ಶೆಗೆ ಒಳಗಾದ ಸಂದರ್ಭದಲ್ಲಿ ಶ್ರೇಷ್ಠ ನ್ಯಾಯಾಲಯವು ತನ್ನ ಎಲ್ಲಾ ವಿಚಾರಣೆಯನ್ನು ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯ ಹೊರಬೀಳುವ ಅವಧಿಯವರೆಗೂ ತಡೆಹಿಡಿದಿಡಬೇಕು.

(೪) ಸರ್ವೋಚ್ಚ ನ್ಯಾಯಾಲಯ ಈ ವಿಧವಾದ ಮೊಕದ್ದಮೆಗಳಿಗೆ ಸಂಬಂಧಿಸಿದ ಕಕ್ಷಿದಾರರಿಗೆ ನೋಟೀಸು ನೀಡಿ, ಅವರಿಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಆಸ್ಪದ ನೀಡಿ,

ತನ್ನ ಸಲಹೆಯನ್ನು ನೀಡಿ ಅದರ ಒಂದು ಪ್ರತಿಯನ್ನು ಶ್ರೇಷ್ಠ ನ್ಯಾಯಾಲಯಕ್ಕೆ ಕಳುಹಿಸಿದ ನಂತರ ರಾಜ್ಯದ ಶ್ರೇಷ್ಠ ನ್ಯಾಯಾಲಯ ಸರ್ವೋಚ್ಚ ನ್ಯಾಯಾಲಯದ ಸಲಹೆಗೆ ವಿರೋಧವಾಗದಂತೆ ತನ್ನ ಮುಂದಿರುವ ವ್ಯಾಜ್ಯವನ್ನು ಬಗೆಹರಿಸಬೇಕು.

(೫) ಹೆಚ್ಚಿನ ವಿವರಗಳನ್ನು ಕೋರಿ ಸರ್ವೋಚ್ಚ ನ್ಯಾಯಾಲಯವು ಮೊಕದ್ದಮೆಯನ್ನು ಸಂಬಂಧಿಸಿದ ಶ್ರೇಷ್ಠ ನ್ಯಾಯಾಲಯಕ್ಕೆ ಮರಳಿ ಕಳಿಸಬಹುದು.

**ಸರ್ವೋಚ್ಚ ನ್ಯಾಯಾಲಯದ ನ್ಯಾಯವಿವಕ್ಷೆಯ ವ್ಯಾಪ್ತಿಯನ್ನು ವಿಸ್ತರಿಸುವುದು.**

೧೧೪. (೧) ಸಂಸತ್ತಿನ ಕಾನೂನಿನಿಂದ, ಒಕ್ಕೂಟದ ಪಟ್ಟಿಯಲ್ಲಿ ಸೂಚಿಸಲಾದ ವಿಷಯಗಳ ಅಧಿಕಾರ ಹಾಗೂ ವ್ಯಾಪ್ತಿಯ ಮುಖಾಂತರ ಸರ್ವೋಚ್ಚ ನ್ಯಾಯಾಲಯದ ನ್ಯಾಯವಿವಕ್ಷೆಯ ವ್ಯಾಪ್ತಿಯನ್ನು ಅಧಿಕಗೊಳಿಸಬಹುದು.

(೨) ಭಾರತ ಸರಕಾರದ ಹಾಗೂ ರಾಜ್ಯ ಸರಕಾರದ ಕಾನೂನುಗಳಿಂದ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಅಧಿಕಗೊಳಿಸಬಹುದು.

**ಕೆಲವು ನಿಶ್ಚಿತ ರಿಟ್ ಹೊರಡಿಸುವ ಅಧಿಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡುವುದು.**

೧೧೫. ಸಂಸತ್ತಿನಿಂದ ರಚಿಸಲಾದ ಕಾಯ್ದೆಯ ಮೂಲಕ; ಸರ್ವೋಚ್ಚ ನ್ಯಾಯಾಲಯಕ್ಕೆ ಹೇಬಿಯಸ್ ಕಾರ್ಪಸ್ ರಿಟ್ ಅರ್ಜಿ, ಮ್ಯಾಂಡಮಸ್, ನಿಷೇಧಾಜ್ಞೆ, ಕೊವಾರೆಂಟೊ, ಸರ್ಷಿಯೊರ ಮುಂತಾದ ಆದೇಶಗಳನ್ನು ವಿಧಿ ೨೫(೨) ಹೊರತುಪಡಿಸಿ (ಮೂಲಭೂತ ಹಕ್ಕುಗಳ ಆಚರಣೆ) ನೀಡುವ ಅಧಿಕಾರವನ್ನು ವಹಿಸಬಹುದು.

**ಸರ್ವೋಚ್ಚ ನ್ಯಾಯಾಲಯಕ್ಕೆ ತತ್ಸಂಬಂಧ ಅಧಿಕಾರಗಳು**

೧೧೬. ಸಂಸತ್ತು ತನ್ನ ಕಾಯ್ದೆ ಮೂಲಕ, ಸರ್ವೋಚ್ಚ ನ್ಯಾಯಾಲಯದ ಕಾರ್ಯಾಚರಣೆಯನ್ನು ಸಮರ್ಥವಾಗಿ ನಡೆಸಿಕೊಂಡು ಹೋಗುವಲ್ಲಿ ಹೆಚ್ಚುವರಿ ತತ್ಸಂಬಂಧ ಅಧಿಕಾರವನ್ನು ಚಲಾಯಿಸಲು ಆಸ್ಪದ ನೀಡಬಹುದು. ಆಗ ನ್ಯಾಯಾಲಯವು ಸಂವಿಧಾನದ ವ್ಯಾಪ್ತಿಯಲ್ಲಿ ಸಮರ್ಥವಾಗಿ ಕಾರ್ಯಾಚರಣೆ ಮಾಡಲು ಅನುವಾಗುತ್ತದೆ.

**ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಎಲ್ಲಾ ನ್ಯಾಯಾಲಯಗಳ ಬದ್ಧತೆ**

೧೧೭. ಭಾರತದ ಪ್ರದೇಶದಲ್ಲಿಯ ಎಲ್ಲಾ ನ್ಯಾಯಾಲಯಗಳೂ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಬದ್ಧವಾಗಿರ ತಕ್ಕದ್ದು.

**ಸರ್ವೋಚ್ಚ ನ್ಯಾಯಾಲಯದ ಆಜ್ಞೆಗಳು ಆದೇಶಗಳ ಪರಿಪಾಲನೆ**

೧೧೮. (೧) ಸರ್ವೋಚ್ಚ ನ್ಯಾಯಾಲಯವು ತನ್ನ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ನ್ಯಾಯ ನಿರ್ವಹಣೆಗಾಗಿ ಹೊರಡಿಸಬಹುದಾದ ಡಿಕ್ರಿ ಮುಂತಾದವನ್ನು ಭಾರತದ ಎಲ್ಲಾ ಪ್ರದೇಶಗಳಲ್ಲಿ ಜಾರಿಗೊಳಿಸುವುದು ಕಡ್ಡಾಯವಾಗಿದೆ.

ಈ ವಿಧ'ವಾದ ಆದೇಶಗಳು ಂಯಾವ ವಿಧ'ವಾಗಿ ಜಾರಿಗೊಳಿಸಬೇಕೆಂಬುದರ ಬಗೆಗೆ ಕಾಯ್ದೆ ನಿರ್ಮಿಸುವ ಅಧಿಕಾರ ಸಂಸತ್ತು ಹೊಂದಿದೆ.

(೨) ಈ ದಿಶೆಯಲ್ಲಿ ಸಂಸತ್ತಿನಿಂದ ಅಂಗೀಕರಿಸಿದ ಕಾಯ್ದೆಯ ಮುಖಾಂತರ, ಸರ್ವೋಚ್ಚ ನ್ಯಾಯಾಲಯವು ಭಾರತದ ಪ್ರದೇಶದಾದ್ಯಂತ ಆಜ್ಞೆ ಹೊರಡಿಸಬಹುದು. ಯಾವುದೇ ವ್ಯಕ್ತಿಯ ಹಾಜರಿ ಪಡೆಯುವ, ದಾಖಲೆಗಳನ್ನು ಪರಿಶೋಧಿಸುವ, ಪರಿಶೀಲಿಸುವ ಅಥವಾ ಆಜ್ಞೆಯನ್ನು ಒಪ್ಪದೇ ಹೋದಲ್ಲಿ ನ್ಯಾಯಾಲಯ ನಿಂದನೆಗೆ ಅನುಗುಣವಾಗಿ ಶಿಕ್ಷಿಸುವ ಅಧಿಕಾರ ಹೊಂದಿದೆ.

**ಸರ್ವೋಚ್ಚ ನ್ಯಾಯಾಲಯದ ಸಲಹೆಯನ್ನು ಪಡೆಯುವ ರಾಷ್ಟ್ರಪತಿಗಳ ಅಧಿಕಾರ**

೧೧೯. (೧) ಕಾನೂನಿನ ಹಾಗೂ ಇತರ ವಾಸ್ತವಿಕ ಮಾಹಿತಿಗಳ ಬಗೆಗೆ, ಹಾಗೂ ಸಾರ್ವಜನಿಕ ಮಹತ್ವ ವಿಷಯ ಗಳ ಬಗೆಗೆ, ತಮಗೆ ಬೇಕೆಂದಾಗ ರಾಷ್ಟ್ರಪತಿಯವರು, ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ಅರುಹಬಹುದು.

(೨) ಈ ಸಂವಿಧಾನದ ವಿಧಿ ೧೦೦ರ ಉಪಬಂಧ (೧)ರಲ್ಲಿ ಏನೇ ಇದ್ದರೂ ರಾಷ್ಟ್ರಾಧ್ಯಕ್ಷರು ಸದರಿ ಉಪಬಂಧದಲ್ಲಿ ನಮೂದಿಸಿದ ಒಂದು ವಿವಾದವನ್ನು ತೀರ್ಮಾನಕ್ಕೆ ಸರ್ವೋಚ್ಚ ನ್ಯಾಯಾಲಯಕ್ಕೆ ಉಲ್ಲೇಖಿಸಬಹುದು ಮತ್ತು ಅಲ್ಲಿಂದಾಚೆಗೆ ಸರ್ವೋಚ್ಚ ನ್ಯಾಯಾಲಯ ಕಕ್ಷಿಗಳಿಗೆ ಅಹವಾಲು ಮಂಡಿಸಲು ಅವಕಾಶ ನೀಡಿ ನಿರ್ಣಯಿಸಿ ಅದನ್ನು ರಾಷ್ಟ್ರಾಧ್ಯಕ್ಷರಿಗೆ ವರದಿ ಮಾಡಬೇಕು.

**ಸಿವಿಲ್ ಮತ್ತು ನ್ಯಾಯಾಂಗ ಅಧಿಕಾರಿಗಳು ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಕಡ್ಡಾಯವಾಗಿ ಪರಿಪಾಲಿಸಬೇಕು.**

೧೨೦. ಸಿವಿಲ್ ಮತ್ತು ನ್ಯಾಯಾಂಗದ ಸಮಸ್ತ ಅಧಿಕಾರ ಸರ್ವೋಚ್ಚ ನ್ಯಾಯಾಲಯಕ್ಕಿದೆ. ಭಾರತ ಪ್ರದೇಶದ ಎಲ್ಲ ಅಧಿಕಾರಿಗಳು ಇದಕ್ಕೆ ಅನುಗುಣವಾಗಿ ವರ್ತಿಸಲೇಬೇಕು. ಇದು ಕಡ್ಡಾಯ.

**ನ್ಯಾಯಾಲಯದ ನಿಯಮಗಳು**

*೧೨೧. ಸಂಸತ್ತಿನಿಂದ ನಿರ್ಣಯಿಸಲಾದ ಕಾನೂನಿನಂತೆ,

---

೧೨೧.* (ಅಮೆರಿಕಾದ ಸರ್ವೋಚ್ಚ ನ್ಯಾಯಾಲಯದಲ್ಲಿ ಈ ಬಗೆಯ ವಿಚಾರಣೆ ಸಮಯದಲ್ಲಿ ಸಂಪೂರ್ಣವಾಗಿ ಎಲ್ಲಾ ನ್ಯಾಯಾಧೀಶರೂ ಭಾಗವಹಿಸುತ್ತಾರೆ. ಅಲ್ಲಿಯ ನ್ಯಾಯಾಲಯ ಈ ದಿಶೆಯಲ್ಲಿ ವಿಭಜನೆಯನ್ನು ಒಪ್ಪದೇ ಎಲ್ಲಾ ನ್ಯಾಯಾಧೀಶರೂ ನಿರ್ಣಯದಲ್ಲಿ ಭಾಗವಹಿಸುತ್ತಾರೆ. ಆದರೆ ಈ ದಿಶೆಯಲ್ಲಿ ಸಮಿತಿಯ ಅಭಿಪ್ರಾಯವೇನೆಂದರೆ, ಭಾರತದಲ್ಲಿ ಕನಿಷ್ಠ ಎರಡು ವಿಧವಾದ ಕೇಸುಗಳಲ್ಲಿ ಅಂದರೆ, ಸಂವಿಧಾನವನ್ನು ಅರ್ಥೈಸುವ ಹಾಗೂ ರಾಷ್ಟ್ರಪತಿಯವರು ನ್ಯಾಯಾಲಯದ ಅಭಿಪ್ರಾಯ ಕೋರಿದಾಗ ಎಲ್ಲ ನ್ಯಾಯಾಧೀಶರೂ ಪಾಲುಗೊಳ್ಳಬೇಕು. ಬೇರೆ ವಿಷಯಗಳ ಬಗೆಗೆ ಅಮೆರಿಕಾದ ಮಾದರಿಯನ್ನು ಅನುಸರಿಸುವ ಬಗೆಗೆ ಸಂಸತ್ತು ಸೂಕ್ತ ನಿರ್ಣಯವನ್ನು ಕೈಕೊಳ್ಳಬಹುದು.

**ಮುಂತಾದವು**

ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರಪತಿಯ ಅನುಮೋದನೆಯೊಂದಿಗೆ ಕಾಲಕಾಲಕ್ಕೆ ತನ್ನ ಕಾರ್ಯಕಲಾಪಗಳ ವಿಧಾನಕ್ಕೆ ಸಂಬಂಧಿಸಿದ ವಿಧಾನ, ಆಚರಣೆಗಳ ಜತೆಗೆ ಕ್ರಮಬದ್ಧ ನಿಯಮಾವಳಿಗಳನ್ನು ರಚಿಸಬಹುದು.

(ಎ) ನ್ಯಾಯಾಲಯದ ಮುಂದೆ ವಾದಿಸುವ ವ್ಯಕ್ತಿಗಳ ಅರ್ಹತೆಯ ಬಗೆಗೆ ನಿಯಮಗಳು.

(ಬಿ) ನ್ಯಾಯಾಲಯದಲ್ಲಿ ಮರುಪರಿಶೀಲನೆಗೆಂದು ಬರುವ ಮೊಕದ್ದಮೆಗಳ ಹಾಗೂ ನ್ಯಾಯವಾದಿಗಳಿಗೆ ವಾದಿಸಲು ನೀಡಬಹುದಾದ ಸಮಯ, ಮುಂತಾದ ನಿಯಮಾವಳಿಗಳ ಬಗೆಗೆ.

(ಸಿ) ನ್ಯಾಯಾಲಯ ವಿಧಿಸಬಹುದಾದ ಫೀಸ್ ಹಾಗೂ ಇತರ ವೆಚ್ಚಗಳ ಬಗೆಗೆ ವಸೂಲು ಮಾಡಬೇಕಾದ ಹಣ ಇತ್ಯಾದಿ ನಿಯಮಗಳನ್ನು ರಚಿಸುವುದು.

(ಡಿ) ಜಾಮೀನು ಮಂಜೂರು ಮಾಡುವ ನಿಯಮಗಳು

(ಇ) ತಡೆಯಾಜ್ಞೆ ನೀಡುವ ನಿಯಮಾವಳಿ ಮತ್ತು

(ಎಫ್) ಕೇವಲ ಸಮಯಗಳಿಸಲೆಂದೇ ಬರಬಹುದಾದ ಮರು ಪರಿಶೀಲನೆಯ ಅರ್ಜಿಗಳ ಹಾಗೂ ವಿನಾಕಾರಣದ ಅರ್ಜಿಗಳ ವಿಲೇವಾರಿ.

(೨) ಯಾವುದಾದರೂ ಕಾನೂನಿನ ಮಹತ್ವದ ಅಂಶವನ್ನು ಹಾಗೂ ಸಂವಿಧಾನದ ಅರ್ಥವನ್ನು ನಿರ್ಧರಿಸುವಲ್ಲಿ ನ್ಯಾಯ ವಿಚಾರಣೆ ಪೀಠದಲ್ಲಿರಲೇಬೇಕಾದ ನ್ಯಾಯಾಧೀಶರ ಸಂಖ್ಯೆಯು ಅಥವಾ ೧೧೯ನೇ ವಿಧಿಯಡಿಯಲ್ಲಿ ವಿಚಾರಣೆಗೆ ಬರುವ ವಿಷಯಕ್ಕೆ ಸೇರಿದಂತೆ ನಿರ್ಣಯ ತೆಗೆದುಕೊಳ್ಳುವ ಈ ವಿಷಯಗಳ ಬಗೆಗೆ ಯಾವ ನ್ಯಾಯಮೂರ್ತಿಯು ತನ್ನ ಅನಾರೋಗ್ಯ ಅಥವಾ ವ್ಯಕ್ತಿಗತ ಕಾರಣಗಳಿಗಾಗಿ ಅಥವಾ ಬೇರೆ ಯಾವುದೇ ನಿಗದಿತ ಕಾರ್ಯದಿಂದ ಗೈರುಹಾಜರಿಯಾಗಬಹುದು. ಆದರೆ ಸಾಮಾನ್ಯವಾಗಿ ಎಲ್ಲರೂ ಹಾಜರಿರಲೇಬೇಕು.

---

ವಿಷಯ(ಬಿ) ನ್ಯಾಯಾಲಯದ ಮುಂದೆ ನ್ಯಾಯವಾದಿಗಳು ತಮ್ಮ ವಾದವನ್ನು ಒಂದು ಗಂಟೆ ಅವಧಿಯೊಳಗೆ ಮಂಡಿಸಬೇಕು. ಮಿಕ್ಕದ್ದನ್ನೆಲ್ಲಾ ತಮ್ಮ ಅರ್ಜಿಯ ಮೂಲಕ ತಿಳಿಸಬೇಕೆಂಬ ನಿಯಮವನ್ನು ಈ ವಿಧಿಯಲ್ಲಿ ಸೇರ್ಪಡಿಸಬೇಕೆಂಬ ಸಲಹೆಯನ್ನು ಅಮೆರಿಕಾದಂತೆ ಭಾರತದಲ್ಲಿಯೂ ಜಾರಿಗೊಳಿಸಬೇಕೆಂಬುದರ ಬಗೆಗೆ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರವರ ಸಲಹೆಯಂತೆ ಅದನ್ನು ಸೇರಿಸಬೇಕಾಗಿಲ್ಲ. ಏಕೆಂದರೆ ಭಾರತದ ಸರ್ವೋಚ್ಚ ನ್ಯಾಯಾಲಯ ಅಮೆರಿಕೆಯ ನ್ಯಾಯಾಲಯಕ್ಕಿಂತ ಭಿನ್ನವಾಗಿದೆ.)

(೩) ಸಂವಿಧಾನದ ೧೧೯ನೇ ವಿಧಿಯಂತೆ ಸಲಹೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ನ್ಯಾಯಾಧೀಶರು ತಮ್ಮ ಸಲಹೆಗಳನ್ನು ಬಹಿರಂಗ ಪಡಿಸಬೇಕು.

(೪) ಈ ವಿಧವಾದ ವರದಿಯನ್ನಾಗಲೀ ಅಥವಾ ತೀರ್ಪುಗಳನ್ನು ಹಾಜರಿದ್ದ ಬಹುಮತ ನ್ಯಾಯಾಧೀಶರ ಸಮ್ಮತಿಯಿಂದ ಕೂಡಿರಬೇಕು. ಆದರೆ ಈ ತೀರ್ಪಿನ ಬಗೆಗೆ ನ್ಯಾಯಾಧೀಶನೋರ್ವನು ತನ್ನ ಭಿನ್ನಾಭಿಪ್ರಾಯದ ತೀರ್ಪನ್ನೂ ನೀಡಲು ಆಸ್ಪದವಿದೆ.

**ಸರ್ವೋಚ್ಚ ನ್ಯಾಯಾಲಯದ ಅಧಿಕಾರಿಗಳ ಮತ್ತು ನೌಕರರ ವೇತನ, ಭತ್ತೆ, ಪಿಂಚಣಿ, ನೌಕರರ ಖರ್ಚು, ನ್ಯಾಯಾಲಯದ ವೆಚ್ಚ ಕುರಿತಂತೆ**

೧೨೨. (೧) ಸರ್ವೋಚ್ಚ ನ್ಯಾಯಾಲಯದ ಅಧಿಕಾರಿಗಳ, ನೌಕರರ ವೇತನ ಭತ್ತೆ ಮತ್ತು ಪಿಂಚಣಿಗಳನ್ನು ನೀಡುವ ಬಗೆಗೆ ಪ್ರಮುಖ ನ್ಯಾಯಾಧೀಶರು, ರಾಷ್ಟ್ರಪತಿಯವರೊಂದಿಗೆ ಸಮಾಲೋಚಿಸಿ ನಿರ್ಧರಿಸಬಹುದು.

(೨) ಸರ್ವೋಚ್ಚ ನ್ಯಾಯಾಲಯದ ಆಡಳಿತ ವೆಚ್ಚ ಮತ್ತು ಅಧಿಕಾರಿಗಳಿಗೆ, ನೌಕರರಿಗೆ ನೀಡುವ ವೇತನ, ಭತ್ತೆ ಹಾಗೂ ಪಿಂಚಣಿ ಮುಂತಾದ ಎಲ್ಲವನ್ನೂ ಭಾರತ ಸರಕಾರದ ಆದಾಯದ ಖಾತೆಯಿಂದ ಪಡೆಯಬೇಕು. ಕೋರ್ಟು ಪಡೆದಿರುವ ಫೀಸಿನ ಮೊತ್ತವೂ ಈ ಆದಾಯದ ಬಾಬತ್ತಿಗೆ ಸಲ್ಲಬೇಕು.

**ಸಂವಿಧಾನದ ಮೊದಲನೆಯ ಅನುಸೂಚಿ ಭಾಗ III ರಲ್ಲಿ ಉಕ್ತವಾಗಿರುವ ರಾಜ್ಯಗಳ ಶ್ರೇಷ್ಠ ನ್ಯಾಯಾಲಯದ ರಚನೆ ಕುರಿತು**

೧೨೩. (೧) ೧೦೩ ಮತ್ತು ೧೦೬ನೆಯ ವಿಧಿಗಳ ಪ್ರಕರಣಗಳಲ್ಲಿ ಹೇಳಿದ ಶ್ರೇಷ್ಠ ನ್ಯಾಯಾಲಯಗಳು ಸದ್ಯದಲ್ಲಿ ಭಾಗ III ಒಂದನೆಯ ಅನುಬಂಧದಲ್ಲಿ ಸೂಚಿಸಿದ ರಾಜ್ಯದ ಯಾವ ನ್ಯಾಯಾಲಯದ ಬಗೆಗೆ ರಾಷ್ಟ್ರಪತಿಯು ಸರ್ವೋಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ, ಅಲ್ಲಿಯ ರಾಜನೊಂದಿಗೆ, ಅಲ್ಲಿಯ ನ್ಯಾಯಾಲಯದ ಸ್ಥಾನಮಾನವನ್ನು ಶ್ರೇಷ್ಠ ನ್ಯಾಯಾಲಯವೆಂದು ಪರಿಗಣಿಸಬಹುದು. ಇದು ಭಾಗ I ಒಂದರಲ್ಲಿ ಸೂಚಿಸಿದ ರಾಜ್ಯಗಳಿಗೂ ಅನ್ವಯಿಸುವುದು.

(೨) ಸಂವಿಧಾನದ ಮೊದಲನೆಯ ಅನುಬಂಧ ಭಾಗ III ರಲ್ಲಿ ಸೂಚಿಸಿದ ರಾಜ್ಯಗಳ ನ್ಯಾಯಾಲಯಗಳ ಮರು ಪರಿಶೀಲನೆಯ ವ್ಯಾಪ್ತಿಯ ಬಗೆಗೆ ೧೧೦ ಮತ್ತು ೧೧೩ನೇ ವಿಧಿಯಲ್ಲಿ ಸೂಚಿಸಲಾಗಿದೆ.

## ಪ್ರಕರಣ – V ಭಾರತಕ್ಕೆ ಆಡಿಟರ್ ಜನರಲ್
### (ಭಾರತದ ಮಹಾಲೆಕ್ಕ ಪರಿಶೋಧಕ)

**ಭಾರತ ಸರಕಾರದ ಮಹಾಲೆಕ್ಕ ಪರಿಶೋಧಕ**

೧೨೪. (೧) ಭಾರತ ಸರ್ಕಾರದ ಮಹಾಲೆಕ್ಕ ಪರಿಶೋಧಕರನ್ನು ನಿಯುಮಿಸುವ ಅಧಿಕಾರವನ್ನು ರಾಷ್ಟ್ರಪತಿಯವರಿಗೆ ನೀಡಲಾಗಿದೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ತೆಗೆದುಹಾಕುವಲ್ಲಿಯ ವಿಧಾನವೇ ಮಹಾಲೆಕ್ಕ ಪರಿಶೋಧಕರಿಗೂ ಅನ್ವಯಿಸುತ್ತದೆ.

(೨) ಮಹಾಲೆಕ್ಕ ಪರಿಶೋಧಕನ ವೇತನ, ಭತ್ತೆ ಹಾಗೂ ಇತರ ಸೇವಾ ನಿಯಮಗಳನ್ನು ಸಂಸತ್ತು ಕಾಯ್ದೆಯ ಮೂಲಕ ನಿರ್ಧರಿಸುವುದು. ಈ ಬಗೆಯ ನಿರ್ಣಯ ಸಂಸತ್ತು ತೆಗೆದುಕೊಳ್ಳುವ ಅವಧಿಯ ಮುನ್ನ ಎರಡನೆಯ ಅನುಸೂಚಿಯಲ್ಲಿ ಸೂಚಿಸಿದಂತೆ ನಿರ್ಣಯಿಸಬಹುದು.

ಮಹಾಲೆಕ್ಕ ಪರಿಶೋಧಕ ಸೇವಾ ಅವಧಿಯಲ್ಲಿ ಅವರ ವೇತನ, ಭತ್ತೆ, ಸೌಕರ್ಯಗಳು, ರಜೆಗಳು, ಪಿಂಚಣಿ ಮುಂತಾದ ವಿಷಯಗಳಲ್ಲಿ ಯಾವ ಬದಲಾವಣೆಗಳಲ್ಲಿ ಕಡಿತಕ್ಕೆ ಅವಕಾಶವಿಲ್ಲ.

(೩) ಮಹಾಲೆಕ್ಕ ಪರಿಶೋಧಕರು ತಮ್ಮ ಸ್ಥಾನ ತೆರವು ಮಾಡಿದ ಮೇಲೆ ಭಾರತ ಸರಕಾರದ ಅಥವಾ ರಾಜ್ಯ ಸರಕಾರದ ಹುದ್ದೆಗಳಲ್ಲಿ ಮುಂದುವರಿಯುವಂತಿಲ್ಲ.

(೪) ಮಹಾಲೆಕ್ಕ ಪರಿಶೋಧಕರ ಕಾರ್ಯಾಲಯದ ಅಧಿಕಾರಿಗಳ ವೇತನ, ಭತ್ತೆ ಮುಂತಾದವನ್ನು ಮಹಾಲೆಕ್ಕ ಪರಿಶೋಧಕರು, ರಾಷ್ಟ್ರಪತಿಯೊಂದಿಗೆ ಸಮಾಲೋಚಿಸಿ ನಿರ್ಧರಿಸುವರು.

(೫) ಮಹಾಲೆಕ್ಕ ಪರಿಶೋಧಕರ ಕಾರ್ಯಾಲಯದ ಖರ್ಚುವೆಚ್ಚಗಳನ್ನು ಭಾರತದ ಆದಾಯದ ಬಾಬತ್ತಿಗೆ ಸಂದಾಯಿಸಲಾಗುವುದು.

**ಮಹಾಲೆಕ್ಕ ಪರಿಶೋಧಕರ ಅಧಿಕಾರ ಮತ್ತು ಕರ್ತವ್ಯಗಳು**

೧೨೫. ಭಾರತದ ಸಂವಿಧಾನದಲ್ಲಿ ಸೂಚಿಸಿದಂತೆ ಭಾರತ ಸರಕಾರದ ಲೆಕ್ಕಪತ್ರಗಳ ಬಗೆಗೆ ಇರುವ ಅಧಿಕಾರ ಹಾಗೂ ಸಂಸತ್ತಿನ ಕಾನೂನಿನಂತೆ ಇತರ ರಾಜ್ಯ ಸರಕಾರಗಳ ಬಗೆಗೆ ಲೆಕ್ಕಪತ್ರ ಪರಿಶೋಧನೆ ಅಧಿಕಾರ ನೀಡಲಾಗಿದೆ.

ಈ ಬಗೆಗೆ ಸಂಸತ್ತಿನಿಂದ ರಚಿಸಿದ ಕಾಯ್ದೆ ಎಂದರೆ ಈಗ ಜಾರಿಯಲ್ಲಿರುವ ಕಾಯ್ದೆಗಳಿಗೂ ಅನ್ವಯಿಸುತ್ತದೆ.

**ಲೆಕ್ಕ ಪರಿಶೋಧನೆಯ ಪರಿಶೀಲನೆ ಬಗೆಗೆ**

೧೨೬. ಭಾರತ ಸರಕಾರದ ಲೆಕ್ಕ ಪತ್ರಗಳು, ರಾಷ್ಟ್ರಪತಿಯವರ ಅನುಮೋದನೆಯೊಂದಿಗೆ ಮಹಾಲೆಕ್ಕಪರಿಶೋಧಕರು

**ನಿರ್ದೇಶಿಸುವ ಅಧಿಕಾರ** ನೀಡುವ ಸಲಹೆ ಸೂಚನೆಗಳಂತೆ, ಇರಬೇಕು. ಆಡಿಟರ್ ಜನರಲ್ಲರೂ ಸೂಚಿಸಬಹುದಾದ ಕ್ರಮದಂತೆ ಭಾರತ ಹಾಗೂ ರಾಜ್ಯ ಸರಕಾರಗಳು ಲೆಕ್ಕಪತ್ರಗಳನ್ನು ಸಿದ್ಧಪಡಿಸಬೇಕು.

೧೨೭. ಭಾರತದ ಮಹಾಲೆಕ್ಕ ಪರಿಶೋಧಕರು ತಯಾರು ಪಡಿಸಿದ ವರದಿಯನ್ನು ರಾಷ್ಟ್ರಪತಿಯವರಿಗೆ ಸಲ್ಲಿಸಬೇಕು. ಆ ವರದಿಯನ್ನು ರಾಷ್ಟ್ರಪತಿಯವರು ಸಂಸತ್ತಿಗೆ ಮಂಡಿಸುವರು.

## ಭಾಗ VI
## ಮೊದಲನೆಯ ಅನುಸೂಚಿಯಲ್ಲಿಯ ಭಾಗ Iರ ರಾಜ್ಯಗಳು
## ಪ್ರಕರಣ I ಸಾಮಾನ್ಯ

**ಪರಿಭಾಷೆ** ೧೨೮. ಈ ಭಾಗದಲ್ಲಿ ಬೇರೆಯಾಗಿ ಹೇಳದೇ ಹೋದ ಸಂದರ್ಭದಲ್ಲಿ "ರಾಜ್ಯ" ಎಂದರೆ ಸದ್ಯದಲ್ಲಿ ಮೊದಲನೆಯ ಅನುಬಂಧದಲ್ಲಿಯ ಭಾಗ Iರಲ್ಲಿ ತಿಳಿಸಿದ ರಾಜ್ಯವೆಂದೇ ಭಾವಿಸಬೇಕು.

## ಪ್ರಕರಣ II – ಕಾರ್ಯಾಂಗ
### ರಾಜ್ಯಪಾಲರು

**ರಾಜ್ಯದ ರಾಜ್ಯಪಾಲರು** ೧೨೯. ಪ್ರತಿಯೊಂದು ರಾಜ್ಯಕ್ಕೂ ಓರ್ವ ರಾಜ್ಯ ಪಾಲರಿರಬೇಕು.

**ರಾಜ್ಯಗಳ ಕಾರ್ಯಾಂಗಾಧಿಕಾರ** ೧೩೦. (೧) ರಾಜ್ಯದ ಕಾರ್ಯಾಂಗಾಧಿಕಾರವನ್ನು ರಾಜ್ಯಪಾಲರಿಗೆ ನೀಡಿದೆ. ಅವರು ಸಂವಿಧಾನ ಹಾಗೂ ಕಾಯ್ದೆಗೆ ಅನುಗುಣವಾಗಿ ಈ ಅಧಿಕಾರವನ್ನು ಚಲಾಯಿಸಬೇಕು.

(೨) ಈ ವಿಧಿಯಲ್ಲಿ ಹೇಳಿದ ಯಾವುದೇ ವಿಷಯ:

(ಎ) ಜಾರಿಯಲ್ಲಿರುವ ಕಾಯ್ದೆ ಹಾಗೂ ಯಾವುದೇ ಅಧಿಕಾರವನ್ನು ರಾಜ್ಯಪಾಲರಿಗೆ ವರ್ಗಾಯಿಸಿಲ್ಲ ಎಂದು ಭಾವಿಸಲಾಗದು.

(ಬಿ) ಸಂಸತ್ತು ಅಥವಾ ರಾಜ್ಯ ಶಾಸಕಾಂಗಗಳು ತಮ್ಮ ಕಾಯ್ದೆಗಳ ಮೂಲಕ ಅವರ ಅಧಿಕಾರದ ಅಡಿಯಲ್ಲಿ ಬರಬಹುದಾದ ವಿಷಯಗಳ ಬಗೆಗೆ ಕಾನೂನು ರಚಿಸಬಹುದು.

**ರಾಜ್ಯಪಾಲರ ಚುನಾವಣೆ** ೧೩೧. ರಾಜ್ಯ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಭಾಗವಹಿಸುವ ಮತದಾರರು ರಾಜ್ಯಪಾಲರನ್ನು

ಚುನಾಯಿಸಬಹುದು. ಅಥವಾ ಅನ್ಯ ಮಾರ್ಗ

ಪರ್ಯಾಯವಾಗಿ

೧೩೧. ರಾಜ್ಯದ ರಾಜ್ಯಪಾಲರನ್ನು ರಾಜ್ಯದ ವಿಧಾನ ಸಭೆಯು ಆಯ್ಕೆ ಮಾಡಿದ ನಾಲ್ಕು ಸದಸ್ಯರ ಪಟ್ಟಿಯಿಂದ ರಾಷ್ಟ್ರಪತಿಯವರು ತಮ್ಮ ಮೊಹರು ಮತ್ತು ಕೈಬರೆಹದಿಂದ ಹೊರಡಿಸಿ ವಾರೆಂಟ್ ಮೂಲಕ ಒಬ್ಬ ಸದಸ್ಯರನ್ನು ರಾಜ್ಯಪಾಲ ಹುದ್ದೆಗೆ ನೇಮಿಸಬೇಕು. ಅಥವಾ ವಿಧಾನಸಭೆ ಹಾಗೂ ವಿಧಾನಪರಿಷತ್ತುಗಳು ಅಸ್ತಿತ್ವದಲ್ಲಿ ಇದ್ದಲ್ಲಿ, ಜಂಟಿ ಅಧಿವೇಶನ ಕರೆದು ಪ್ರಮಾಣಬದ್ಧ ವರ್ಗಾವಣೆ ಮತದಾನದ ಮೂಲಕ ಚುನಾಯಿಸಬೇಕು. ಈ ವಿಧವಾದ ಮತದಾನವನ್ನು ರಹಸ್ಯವಾಗಿ ಜರುಗಿಸಬೇಕು.

**ರಾಜ್ಯಪಾಲರ ಅಧಿಕಾರಾವಧಿ**

೧೩೨. ರಾಜ್ಯಪಾಲರು, ತಾವು ಅಧಿಕಾರವಹಿಸಿಕೊಂಡ ದಿನಾಂಕದಿಂದ, *ಐದು ವರ್ಷದ ಅವಧಿಯುವರೆಗೆ ಅಧಿಕಾರದಲ್ಲಿರುತ್ತಾರೆ.

ಆದರೆ :

(ಎ) ರಾಜ್ಯಪಾಲರು ತಮ್ಮ ಕೈಬರೆಹದಿಂದ ಬರೆದ ರಾಜೀನಾಮೆಯನ್ನು, ವಿಧಾನಸಭೆಯ ಅಧ್ಯಕ್ಷರಿಗೆ, ಎಲ್ಲಿ ದ್ವಿಸದನ ಪದ್ಧತಿ ಇದ್ದಲ್ಲಿ ವಿಧಾನಸಭೆಯ ಹಾಗೂ ವಿಧಾನಪರಿಷತ್ತಿನ ಅಧ್ಯಕ್ಷರುಗಳಿಗೆ ಸಲ್ಲಿಸಿದ್ದಲ್ಲಿ.

(ಬಿ) ರಾಜ್ಯಪಾಲರಿಂದ** ಸಂವಿಧಾನ ಉಲ್ಲಂಘನೆಯಾದಾಗ ಅವರನ್ನು ಮಹಾಭಿಯೋಗಕ್ಕೆ ವಿಧಿ ೧೩೭ರಲ್ಲಿ ಸೂಚಿಸಿದಂತೆ ತೆಗೆದು ಹಾಕಿದಾಗ

(ಸಿ) ರಾಜ್ಯಪಾಲರು ತಮ್ಮ ಅವಧಿ ಪೂರ್ಣಗೊಂಡಾಗ, ಬೇರೆಯೊಬ್ಬರು ಬಂದು ಅಧಿಕಾರ ಸ್ವೀಕರಿಸುವವರೆಗೂ, ಅಧಿಕಾರದಲ್ಲಿ ಮುಂದುವರಿಯುತ್ತಾರೆ.

*** **ಪುನರಾಯ್ಕೆಯ ಅರ್ಹತೆಗಳು**

೧೩೩. ರಾಜ್ಯಪಾಲರಾಗಿ ನೇಮಕಗೊಂಡ ವ್ಯಕ್ತಿಯನ್ನು ಕೇವಲ ಒಂದು ಬಾರಿ ಮಾತ್ರ ಪುನರ್‌ನೇಮಕ/ಪುನರಾಯ್ಕೆ ಮಾಡಬಹುದು.

---

* ಸಮಿತಿಯ ಅಭಿಪ್ರಾಯದಲ್ಲಿ ರಾಜ್ಯಪಾಲರ ಅಧಿಕಾರಾವಧಿಯು ನಾಲ್ಕು ವರ್ಷಗಳ ಬದಲಾಗಿ ಐದು ವರ್ಷವಿರಬೇಕೆಂಬ ನಿರ್ಧಾರಕ್ಕೆ ಬಂದಿದೆ. ಏಕೆಂದರೆ ವಿಧಾನಸಭೆಯ ಅವಧಿಯನ್ನು ನಾಲ್ಕರಿಂದ ಐದು ವರ್ಷಗಳಿಗೆ ಬದಲಾಯಿಸಿದೆ.

** ಸಮಿತಿಯ ಅಭಿಪ್ರಾಯದಲ್ಲಿ ರಾಜ್ಯಪಾಲರನ್ನು ಸಂವಿಧಾನಕ್ಕೆ ವಿರೋಧವಾಗಿ ನಡೆದುಕೊಂಡಾಗ ಮಾತ್ರ ಮಹಾಭಿಯೋಗಕ್ಕೆ ಗುರಿ ಮಾಡಬೇಕು. ರಾಷ್ಟ್ರಪತಿಯಂತೆ ದುರ್ನಡತೆಗೆ ಅಲ್ಲ.

*** ಎರಡನೆಯ ಬದಲಾವಣೆಯನ್ನು ೧೩೧ನೆಯ ವಿಧಿಯಲ್ಲಿ ಅಳವಡಿಸಲಾಗಿದ್ದರೆ "ಪುನರ್‌ನೇಮಕ" ಪದದ ಬದಲಾಗಿ ಈ ವಿಧಿಯಲ್ಲಿ "ಪುನರಾಯ್ಕೆ" ಪದ ಬಳಸಬೇಕು.

**ರಾಜ್ಯಪಾಲರಾಗಿ ಆಯ್ಕೆಯಾಗಲು ಅರ್ಹತೆಗಳು**

೧೩೪. (೧) ರಾಜ್ಯಪಾಲರಾಗಿ ನೇಮಕಹೊಂದುವ ವ್ಯಕ್ತಿಯು ಭಾರತದ ನಾಗರಿಕನಾಗಿರಬೇಕು ಮತ್ತು ೩೫ ವರ್ಷ ಮೀರಿದವನಿರಬೇಕು

(೨) ಯಾವುದೇ ವ್ಯಕ್ತಿ ಶಾಸನಸಭೆಗೆ ಚುನಾಯಿತಗೊಳ್ಳುವ ಅರ್ಹತೆಯನ್ನು ಹೊಂದದೇ ಇದ್ದಲ್ಲಿ

(ಎ) ಅವನು ರಾಜ್ಯಪಾಲ ಹುದ್ದೆಗೆ ಅನರ್ಹನು. ಆದರೆ ಅವನು ರಾಜ್ಯದ ನಿವಾಸಿಯಾಗಿರಲೇಬೇಕೆಂಬ ಕಡ್ಡಾಯವಿಲ್ಲ.

(ಬಿ) ಸಂವಿಧಾನದ ಮೊದಲನೆಯ ಅನುಸೂಚಿಯಲ್ಲಿ ಸೂಚಿಸಿದ ರಾಜ್ಯಗಳಲ್ಲಿ ಅಥವಾ ಭಾರತ ಸರಕಾರದ ಅಡಿಯಲ್ಲಿ ಯಾವ ವಿಧವಾದ ಹುದ್ದೆ ಅಥವಾ ಲಾಭದಾಯಕ ವ್ಯವಹಾರ ಹೊಂದಿರಬಾರದು, ಸ್ಥಳೀಯ ಸಂಸ್ಥೆಗಳ ಅಥವಾ ಸರಕಾರಗಳಿಂದ ಲಾಭದಾಯಕ ಹುದ್ದೆ ಹೊಂದಿರಕೂಡದು.

ವಿವರಣೆ : ಈ ನಿಬಂಧನೆಯಲ್ಲಿ ತಿಳಿಸಿದ ಉದ್ದೇಶಕ್ಕೆಂದೇ ವ್ಯಕ್ತಿಯ ಅಧಿಕಾರ ಅಥವಾ ಸ್ಥಾನವನ್ನು ಹೊಂದಿದ್ದಲ್ಲಿ ಅಂದರೆ;

(ಎ) ಭಾರತ ಸರಕಾರ ಅಥವಾ ಸದ್ಯದಲ್ಲಿ ಮೊದಲನೆಯ ಅನುಬಂಧ ಭಾಗ Iರ ರಾಜ್ಯದ ಮಂತ್ರಿಯಾಗಿ ಸೇವೆಯಲ್ಲಿದ್ದರೆ

(ಬಿ) ಸದ್ಯದಲ್ಲಿ ಮೊದಲನೆಯ ಅನುಬಂಧ ಭಾಗ III ರಲ್ಲಿ ಅಥವಾ ದ್ವಿಸದನ ಶಾಸಕಾಂಗಕ್ಕೆ ಹೊಣೆಗಾರನಾಗಿದ್ದರೆ, ಅಥವಾ ಯಾವುದೇ ಶಾಸಕಾಂಗದ ೩/೪ ಪ್ರತಿನಿಧಿಗಳು ಚುನಾವಣೆಗೊಂಡ ಸದನದ ಸದಸ್ಯನಾಗಿದ್ದರೆ, ಪ್ರತಿಫಲದ ಹುದ್ದೆ ಅಥವಾ ಸ್ಥಾನವನ್ನು ಹೊಂದಿಲ್ಲವೆಂದು ಭಾವಿಸಬೇಕು.

**ರಾಜ್ಯಪಾಲರಾಗಿ ನೇಮಕ ಹೊಂದಲು ಅರ್ಹತೆಗಳು**

*೧೩೪. (೧) ರಾಜ್ಯಪಾಲನಾಗಿ ನೇಮಕ ಹೊಂದುವ ವ್ಯಕ್ತಿ ೩೫ವರ್ಷ ಮೀರಿದ ಭಾರತೀಯ ನಾಗರಿಕನಾಗಿರಲೇ ಬೇಕು.

(೨) ಶಾಸಕಾಂಗದ ಸದಸ್ಯನಾಗುವ ಅರ್ಹತೆಗಳಿಲ್ಲದೇ ಹೋದಲ್ಲಿ ಅವನು ರಾಜ್ಯಪಾಲನಾಗಲು ಅನರ್ಹನು.

ಆದರೆ ಅವನು ರಾಜ್ಯ ನಿವಾಸಿ ಆಗಿರಬೇಕೆಂಬ ಕಡ್ಡಾಯವಿಲ್ಲ.

**ರಾಜ್ಯಪಾಲರ ಹುದ್ದೆಯ ನಿಬಂಧನೆಗಳು**

೧೩೫. (೧) ಭಾರತ ಸಂವಿಧಾನದ ಮೊದಲನೆಯ ಅನುಬಂಧದಲ್ಲಿ ತಿಳಿಸಿದ ಯಾವುದೇ ರಾಜ್ಯದ ಅಥವಾ ಸಂಸತ್ತಿನ ಸದಸ್ಯತ್ವವನ್ನು ರಾಜ್ಯಪಾಲರು ಹೊಂದಿರಕೂಡದು. ಒಂದು ವೇಳೆ

---

* ಈ ಎರಡನೇ ವಿಧಾನವನ್ನು ೧೩೧ನೇ ವಿಧಿಯಲ್ಲಿ ಅಳವಡಿಸಿದ್ದಲ್ಲಿ, ಈ ವಿಧಾನವನ್ನು ಪ್ರಸ್ತುತ ವಿಧಿಯಲ್ಲಿ ಸೇರ್ಪಡಿಸಬಹುದು.

ಈ ಬಗೆಯ ಸದಸ್ಯತ್ವವನ್ನು ಹೊಂದಿದ ವ್ಯಕ್ತಿಯು ನೇಮಕಗೊಂಡರೆ ಅವರು ರಾಜ್ಯಪಾಲರ ಹುದ್ದೆಯನ್ನು ಸ್ವೀಕರಿಸಿ ಅಧಿಕಾರ ಪಡೆದ ದಿನಾಂಕದಿಂದ ಅವರನ್ನು ಸದನದ ಸದಸ್ಯರೆಂದು ಪರಿಗಣಿಸಲಾಗದು.

(೨) ರಾಜ್ಯಪಾಲರು ಬೇರೆ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು.

(೩) ರಾಜ್ಯಪಾಲಕರಿಗೆ ಅಧಿಕೃತ ನಿವಾಸ ಒದಗಿಸಲಾಗುವುದು ಅಲ್ಲದೆ ಶಾಸಕಾಂಗವು ನಿರ್ಣಯಿಸುವ ಮೊತ್ತದ ವೇತನ ಹಾಗೂ ಭತ್ತೆಗಳನ್ನು ನೀಡಲಾಗುವುದು. ಈ ನಿರ್ಧಾರ ತೆಗೆದುಕೊಳ್ಳುವವರೆಗೂ ಎರಡನೆಯ ಅನುಬಂಧದಲ್ಲಿ ಸೂಚಿಸಿದಂತೆ ನಡೆದುಕೊಳ್ಳಬೇಕು.

(೪) ರಾಜ್ಯಪಾಲರ ವೇತನ ಹಾಗೂ ಭತ್ತೆಗಳನ್ನು ಅವರ ಅಧಿಕಾರಾವಧಿಯಲ್ಲಿ ತಗ್ಗಿಸಲಾಗದು.

**ರಾಜ್ಯಪಾಲ ಅಥವಾ ರಾಜ್ಯಪಾಲರಾಗಿ ಕಾರ್ಯ ನಿರ್ವಹಿಸುವ ಪೂರ್ವದಲ್ಲಿ ಅಂತಹ ವ್ಯಕ್ತಿಯಿಂದ ಪ್ರಮಾಣ ವಚನ ಸ್ವೀಕಾರ**

೧೩೬. ಪ್ರತಿಯೋರ್ವ ರಾಜ್ಯಪಾಲ ಅಥವಾ ರಾಜ್ಯಪಾಲ ನಾಗಿ ಕಾರ್ಯನಿರ್ವಹಿಸುವ ವ್ಯಕ್ತಿ ಅಧಿಕಾರವಹಿಸುವ ಮುನ್ನ ರಾಜ್ಯ ಶಾಸಕಾಂಗದ ಸದಸ್ಯರ ಮುಂದೆ ಈ ಕೆಳಗಿನಂತೆ ಪ್ರಮಾಣವಚನವನ್ನು ಸ್ವೀಕರಿಸಬೇಕು :

"ನಾನು............................ ವಿಧಿವತ್ತಾಗಿ ಹಾಗೂ ವಿಧೇಯನಾಗಿ ರಾಜ್ಯಪಾಲರ ಕರ್ತವ್ಯಗಳನ್ನು ರಾಜ್ಯದ ಹೆಸರಿನಲ್ಲಿ, ನನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಹಾಗೂ ಸಂವಿಧಾನ ಬದ್ಧವಾಗಿ ಪಾಲಿಸುವೆ. ನಾನು ರಾಜ್ಯದ ಜನಹಿತವನ್ನು ಕಾಪಾಡುವೆ."

**ರಾಜ್ಯಪಾಲರನ್ನು ಮಹಾಭಿಯೋಗಕ್ಕೆ ಗುರಿಪಡಿಸುವ ವಿಧಾನ**

೧೩೭. (೧) ರಾಜ್ಯಪಾಲರನ್ನು ಮಹಾಭಿಯೋಗಕ್ಕೆ ಗುರಿಪಡಿಸುವ ಸಂವಿಧಾನ ಉಲ್ಲಂಘನೆಯ ಆರೋಪವನ್ನು ವಿಧಾನಸಭೆಯು ಮಂಡಿಸಬೇಕು.

(೨) (ಎ) ಆದರೆ ಆ ವಿಧವಾದ ಗೊತ್ತುವಳಿಯನ್ನು, ಸದನದ ಮೂವತ್ತು ಸದಸ್ಯರಿಗಿಂತ ಮಿಗಿಲಾದವರು ಅಂಗೀಕರಿಸಿ ನೋಟೀಸನ್ನು ಜಾರಿಗೊಳಿಸಬೇಕು.

(ಬಿ) ಈ ವಿಧವಾದ ನಿಲುವಳಿಯು ಸದನದ ೨/೩ ಬಹುಮತದಿಂದ ಅಂಗೀಕಾರವಾಗಬೇಕು.

(೩) ಈ ವಿಧವಾಗಿ ಅಂಗೀಕರಿಸಿದ ಗೊತ್ತುವಳಿಯನ್ನು ವಿಧಾನ ಸಭೆಯ ಅಧ್ಯಕ್ಷರು, ವಿಧಾನ ಪರಿಷತ್ತಿನ ಅಧ್ಯಕ್ಷರಿಗೆ ತಿಳಿಸಬೇಕು. ನಂತರ ವಿಧಾನ ಪರಿಷತ್ತಿನ ಅಧ್ಯಕ್ಷರು, ಪರಿಷತ್ತಿನ ಸದಸ್ಯರಲ್ಲದೇ ಇರುವ ಒಂದು ಸಮಿತಿಯನ್ನು ನೇಮಿಸಿ

ಪರಿಶೋಧನೆ ಕೈಕೊಳ್ಳಬೇಕು. ಈ ವಿಚಾರಣೆಯಲ್ಲಿ ರಾಜ್ಯಪಾಲರಿಗೆ ಸೂಕ್ತ ಹೇಳಿಕೆ, ಹಾಗೂ ಹಾಜರಾಗುವ ಅವಕಾಶ ನೀಡಬೇಕು.

(೪) ಈ ವಿಧವಾಗಿ ಪರಿಶೀಲನೆಯ ನಂತರ, ಗೊತ್ತುವಳಿಯುನ್ನು ವಿಧಾನಪರಿಷತ್ತಿನ ಸದಸ್ಯರು ೨/೩ ಬಹುಮತದಿಂದ ಮಹಾಭಿಯೋಗವನ್ನು ಬೆಂಬಲಿಸಿದರೆ, ರಾಜ್ಯಪಾಲರನ್ನು ತೆಗೆದುಹಾಕುವ ನಿರ್ಣಯವನ್ನು ವಿಧಾನಸಭೆಯ ಅಧ್ಯಕ್ಷರಿಗೆ ತಿಳಿಸಬೇಕು.

**ರಾಜ್ಯ ಶಾಸಕಾಂಗ ಅಥವಾ ರಾಷ್ಟ್ರಪತಿಯವರ ರಾಜ್ಯಪಾಲರ ಅಧಿಕಾರದ ಅವಕಾಶ**

೧೩೮.* ಈ ಪ್ರಕರಣದಲ್ಲಿ ಹೇಳಿದಂತೆ ಯಾವುದೇ ಸಂದರ್ಭದಲ್ಲಿ, ರಾಜ್ಯದ ಶಾಸಕಾಂಗ ತನಗೆ ಸೂಕ್ತವೆನಿಸಿದಲ್ಲಿ ಅಥವಾ ರಾಷ್ಟ್ರಪತಿಯವರು ತಮಗೆ ಸರಿ ಎನಿಸಿದಲ್ಲಿ ರಾಜ್ಯಪಾಲರ ಕರ್ತವ್ಯಗಳ ಬಗೆಗೆ ಬದಲಾವಣೆಗಳನ್ನು ಮಾಡಬಹುದು.

**ರಾಜ್ಯಪಾಲರ ಹುದ್ದೆಗೆ ಭರ್ತಿ ಮಾಡಲು ಸೂಚಿಸಬಹುದಾದ ಪಟ್ಟಿಯ ಚುನಾವಣೆ ಸಮಯದ ನಿರ್ಧಾರ**

**೧೩೯. (೧) ಚುನಾವಣೆ/ರಾಜ್ಯಪಾಲರನ್ನು ನೇಮಿಸುವ ಬಗೆಗೆ, ಹೆಸರುಗಳ ಪಟ್ಟಿಯನ್ನು ನಿರ್ಧರಿಸುವುದು ಅವರ ಅವಧಿ ಮುಗಿಯುವ ಮುನ್ನವೇ ನಡೆಯಬೇಕು.

(೨) ಚುನಾವಣೆ / ಅಥವಾ ಹೆಸರುಗಳ ಪಟ್ಟಿಯನ್ನು ಅವರ ಮರಣದ ಕಾರಣ ಅಥವಾ ಅವರನ್ನು ತೆಗೆದು ಹಾಕುವ ಕ್ರಮದಿಂದ ಅಥವಾ ರಾಜೀನಾಮೆಯಿಂದ ಉದ್ಭವಿಸಿದ ಸಮಯದಲ್ಲಿ ನೇಮಕ ಹೊಂದಿದವರು ತಮ್ಮ ಪೂರ್ಣಾವಧಿಯವರೆಗೂ ಹುದ್ದೆಯಲ್ಲಿ ೧೩೨ನೇ ವಿಧಿಯಲ್ಲಿ ಸೂಚಿಸಿದಂತೆ ಮುಂದುವರಿಯುತ್ತಾರೆ.

**ರಾಜ್ಯಪಾಲರ ಚುನಾವಣೆ**

***೧೪೦. (೧) ರಾಜ್ಯಪಾಲರ ಚುನಾವಣೆಯ ಬಗೆಗೆ

---

* (೧೩೮) ಸಮಿತಿಯ ಅಭಿಪ್ರಾಯದಲ್ಲಿ ರಾಜ್ಯಪಾಲರನ್ನು ಚುನಾವಣೆಯ ಮೂಲಕವೇ ಆಗಲೀ ಅಥವಾ ವಿಧಾನ ಸಭೆಯು ಸೂಚಿಸಿದ ಪಟ್ಟಿಯಿಂದ ರಾಷ್ಟ್ರಪತಿಯವರು ನೇಮಿಸಿದಾಗಲೀ, ಉಪರಾಜ್ಯಪಾಲರ ಹುದ್ದೆಯು ಬೇಕಾಗಿಲ್ಲ. ಏಕೆಂದರೆ ಕೇಂದ್ರದಲ್ಲಿಯ ಉಪರಾಷ್ಟ್ರಪತಿಯವರಂತೆ ರಾಜ್ಯದಲ್ಲಿಯ ಉಪರಾಜ್ಯಪಾಲರಿಗೆ ವಿಧಾನ ಪರಿಷತ್ತಿನ ಅಧ್ಯಕ್ಷ ಪದವಿಯು ಇಲ್ಲ. ಏಕೆಂದರೆ ಅನೇಕ ರಾಜ್ಯಗಳು ಮೇಲ್ಮನೆಯನ್ನು ಹೊಂದಿಲ್ಲ. ಹೀಗಾಗಿ ಉಪರಾಜ್ಯಪಾಲರು ನಿರ್ವಹಿಸಬೇಕಾದ ಕರ್ತವ್ಯಗಳೇ ಇಲ್ಲ. ಉಪರಾಜ್ಯಪಾಲರ ಹುದ್ದೆಗೆ ಇರುವ ಏಕೈಕ ಕಾರಣವೆಂದರೆ ರಾಜ್ಯಪಾಲರ ಗೈರುಹಾಜರಿಯಲ್ಲಿ ಕಾರ್ಯಾಚರಣೆಗೆ ಮಾತ್ರ. ಈ ಬಗೆಗೆ ಶಾಸಕಾಂಗ ಅಥವಾ ರಾಷ್ಟ್ರಪತಿಯವರು ಮುಂಚೆಯೇ ಕ್ರಮ ತೆಗೆದುಕೊಳ್ಳಬಹುದಾಗಿದೆ. ಅಥವಾ ದಕ್ಷಿಣ ಆಫ್ರಿಕಾದ ಒಕ್ಕೂಟದಲ್ಲಿಯ ಮಾದರಿಯ ಮೇಲೆ ರಾಜ್ಯದ ಶ್ರೇಷ್ಠನ್ಯಾಯಾಲಯದ ಪ್ರಮುಖ ನ್ಯಾಯಾಧೀಶರು ಆ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬಹುದು.

** ಎರಡನೆ ಪರ್ಯಾಯ ವಿಧಾನವನ್ನು ವಿಧಿ ೧೩೧ರಲ್ಲಿ ಅನುಸರಿಸಿದರೆ, "ಹೆಸರುಗಳ ಪಟ್ಟಿಯನ್ನು ರಚಿಸಲು ಚುನಾವಣೆ"ಯನ್ನು "ಚುನಾವಣೆ" ಎನ್ನುವ ಪದವನ್ನು ಆ ವಿಧಿಯ ಖಂಡ (೧) ಮತ್ತು (೨)ರಲ್ಲಿ ಉಪಯೋಗಿಸಬೇಕು ಮತ್ತು 'ಚುನಾಯಿತರಾದವರು' ಎಂಬುದಕ್ಕೆ ಬದಲಾಗಿ ಈ ವಿಧಿಯ ಖಂಡ (೨)ರಲ್ಲಿ "ನೇಮಿಸಲಾಗಿದೆ" ಎಂಬುದನ್ನು ಉಪಯೋಗಿಸಬೇಕು.

*** ವಿಧಿ ೧೩೧ರಲ್ಲಿ ಎರಡನೆಯ ಪರ್ಯಾಯವನ್ನು ಉಪಯೋಗಿಸಿದರೆ, ಈ ವಿಧಿಯ ಖಂಡ (೧) ಮತ್ತು (೨)ರಲ್ಲಿನ "ರಾಜ್ಯಪಾಲ ಚುನಾವಣೆ" ಎಂಬ ಪದಗಳ ಬದಲಾಗಿ "ರಾಜ್ಯಪಾಲರ ನೇಮಕಕ್ಕೋಸ್ಕರ" ಹೆಸರುಗಳ ಪಟ್ಟಿಯನ್ನು ರಚಿಸಲು "ಚುನಾವಣೆ" ಎಂಬ ಪದಗಳನ್ನು ಬಳಸಬೇಕು.

**ಅಥವಾ ಅವರ ಚುನಾವಣೆಯ ಪಟ್ಟಿಯನ್ನು ತಯಾರಿಸುವ ಅಥವಾ ನೇಮಕಾತಿಯ ಬಗೆಗಿನ ಸಂಬಂಧಿಸಿದ ಅಧಿಕಾರಗಳು**

ಉದ್ಭವಿಸಬಹುದಾದ ಎಲ್ಲ ಸಂದೇಹಗಳು ಅಥವಾ ವಿವಾದಗಳು /ರಾಜ್ಯಪಾಲರ ನೇಮಕಾತಿಯ ಬಗೆಗೆ ರಚಿಸಬಹುದಾದ ಪಟ್ಟಿಯ ಮುಂತಾದ ಎಲ್ಲಾ ವಿಷಯಗಳನ್ನು ಸರ್ವೋಚ್ಚ ನ್ಯಾಯಾಲಯ ನಿರ್ಧರಿಸುತ್ತದೆ. ಅದರ ತೀರ್ಪು ಅಂತಿಮವಾದುದು.

(೨) ಈ ಸಂವಿಧಾನದಲ್ಲಿ ಹೇಳಲಾದಂತೆ, ರಾಜ್ಯದ ಶಾಸಕಾಂಗವು, ರಾಜ್ಯಪಾಲರ ಚುನಾವಣೆಯ ಬಗೆಗೆ/ ಅವರನ್ನು ಚುನಾಯಿಸುವ ಪಟ್ಟಿಯನ್ನು ತಯಾರಿಸುವ ಬಗೆಗೆ ಕಾನೂನುಗಳನ್ನು ಕ್ರಮಬದ್ಧವಾಗಿ ರಚಿಸಬಹುದು.

**ಹಲವಾರು ಮೊಕದ್ದಮೆಗಳಲ್ಲಿ ಕ್ಷಮಾಪಣೆ, ಶಿಕ್ಷೆಯನ್ನು ಕಡಿಮೆ ಮಾಡುವ, ಸ್ಥಗಿತಗೊಳಿಸುವ ರಾಜ್ಯಪಾಲರಿಗೆ ಇರಬಹುದಾದ ಅಧಿಕಾರ**

೧೪೧. ರಾಜ್ಯದ ರಾಜ್ಯಪಾಲರಿಗೆ ಶಿಕ್ಷೆಯನ್ನು ತಗ್ಗಿಸುವ, ಕ್ಷಮಾದಾನ ನೀಡುವ ಮತ್ತು ದಂಡಗಳನ್ನು ಕಡಿಮೆ ಮಾಡುವ ಅಧಿಕಾರವಿದೆ. ಈ ಅಧಿಕಾರವು ರಾಜ್ಯದ ಶಾಸಕಾಂಗದಿಂದ ರಚಿಸಿದ ಎಲ್ಲಾ ಶಾಸನಗಳಿಗೂ ಅನ್ವಯಿಸುತ್ತದೆ.

**ರಾಜ್ಯದ ಆಡಳಿತಾಧಿಕಾರಕ್ಕೆ ಸೇರಿದಂತೆ**

೧೪೨. ಸಂವಿಧಾನದಲ್ಲಿ ಹೇಳಿದಂತೆ ರಾಜ್ಯದ ರಾಜ್ಯಪಾಲರಿಗೆ ಈ ಕೆಳಗಿನಂತೆ ಕಾರ್ಯಾಂಗಾಧಿಕಾರವನ್ನು ನೀಡಲಾಗಿದೆ.

(ಎ) ರಾಜ್ಯದ ಶಾಸಕಾಂಗದಿಂದ ನಿರ್ಮಿಸಲಾಗುವ ಎಲ್ಲಾ ಕಾಯ್ದೆಗಳಿಗೂ ಸೇರಿದಂತೆ ಮತ್ತು

(ಬಿ) ಸದ್ಯ ಸಂವಿಧಾನದ ಮೊದಲನೆಯ ಅನುಬಂಧದ ಭಾಗ III ರಲ್ಲಿ ಸೂಚಿಸಿದ ರಾಜ್ಯಗಳ ಕುರಿತಂತೆ ೨೩೬ ಮತ್ತು ೨೩೭ ವಿಧಿಗಳಲ್ಲಿ ತಿಳಿಸಿದಂತೆ ರಾಜ್ಯ ಚಲಾಯಿಸುವ ಹಕ್ಕುಗಳು ಅಧಿಕಾರ ಮತ್ತು ವ್ಯಾಪ್ತಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗೆಗೂ.

## ಮಂತ್ರಿಮಂಡಳ

**ರಾಜ್ಯಪಾಲರಿಗೆ ಮಂತ್ರಿಮಂಡಳದ ಸಲಹೆ ಸಹಕಾರ ನೀಡುವಿಕೆ**

೧೪೩. (೧) ಸಂವಿಧಾನದಲ್ಲಿ ತಿಳಿಸಿರಬಹುದಾದ ಅಧಿಕಾರಗಳನ್ನು ಚಲಾಯಿಸುವ ಬಗೆಗೆ ಮುಖ್ಯಮಂತ್ರಿಯ ನೇತೃತ್ವದಲ್ಲಿಯ ಮಂತ್ರಿಮಂಡಳವು ರಾಜ್ಯಪಾಲರಿಗೆ ಸಲಹೆ ಸಹಕಾರಗಳನ್ನು ನೀಡಬೇಕು. ರಾಜ್ಯಪಾಲರ ವಿವೇಚನೆಗೆ ಈ ಅಗತ್ಯವಿಲ್ಲ.

(೨) ಸಂವಿಧಾನದಲ್ಲಿ ಸೂಚಿಸಿದ ಕರ್ತವ್ಯಗಳ ಕಾರ್ಯಾಚರಣೆಯ ಬಗೆಗೆ ಅವರ ವಿವೇಚನೆಯುನ್ನು ಪ್ರಶ್ನಿಸುವಂತಿಲ್ಲ. ಆದುದರಿಂದ ಅವರು ಕೈಕೊಂಡ ನಿರ್ಣಯಗಳನ್ನು

ಎಲ್ಲಿಯೂ ಪ್ರಶ್ನಿಸಲಾಗದು.

(೩) ಮಂತ್ರಿಮಂಡಳವು ನೀಡಿರಬಹುದಾದ ಸಲಹೆಯ ಔಚಿತ್ಯವನ್ನು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸಲಾಗದು.

**ಮಂತ್ರಿಗಳಿಗೆ ಸಂಬಂಧಿಸಿದ ಇತರ ಕಾನೂನು ಅವಕಾಶ**

೧೪೪. (೧) ರಾಜ್ಯಪಾಲರು ತಮ್ಮ ಮಂತ್ರಿಗಳನ್ನು ನಿಯಮಿಸುವರು. ಹಾಗೂ ಈ ಮಂತ್ರಿಗಳು ರಾಜ್ಯಪಾಲರ ಸಂತುಷ್ಟಿಯವರೆಗೂ ಪದವಿಯಲ್ಲಿ ಮುಂದುವರಿಯುತ್ತಾರೆ.

ಪರಂತು ಬಿಹಾರ, ಮಧ್ಯಪ್ರಾಂತಗಳಲ್ಲಿ ಮತ್ತು ಬಿರಾರ ಹಾಗೂ ಒರಿಸ್ಸಾ ಪ್ರಾಂತ್ಯಗಳಲ್ಲಿ ಪರಿಶಿಷ್ಟ ಪಂಗಡಗಳ ಅಥವಾ ಜನಾಂಗಗಳಿಗೆಂದೇ ಓರ್ವ ಮಂತ್ರಿ ಇರುತ್ತಾನೆ. ಅವನು ಪರಿಶಿಷ್ಟ ಜಾತಿ, ಪಂಗಡಗಳ ಅಭಿವೃದ್ಧಿ ಕಾರ್ಯವನ್ನು ನೋಡಿಕೊಳ್ಳುವನು.

(೨) ಸಂವಿಧಾನದ ಮೂರನೆಯ ಅನುಬಂಧದಲ್ಲಿ ತಿಳಿಸಿದಂತೆ ಪ್ರತಿಯೋರ್ವ ಮಂತ್ರಿಯು ಅಧಿಕಾರ ಮತ್ತು ಗೌಪ್ಯತೆಗೆ ಸಂಬಂಧಿಸಿದಂತೆ ಪ್ರಮಾಣವಚನವನ್ನು ರಾಜ್ಯಪಾಲರು ಬೋಧಿಸಿದಂತೆ ಸ್ವೀಕರಿಸಬೇಕು.

(೩) ಯಾವುದೇ ಮಂತ್ರಿಯು ಆರು ತಿಂಗಳ ಅವಧಿಯವರೆಗೆ ಶಾಸನಸಭೆಗೆ ಚುನಾಯಿತನಾಗದೇ ಹೋದಲ್ಲಿ ಅವನ ಮಂತ್ರಿ ಪದವಿ ತನಗೆ ತಾನೇ ರದ್ದಾಗುವುದು.

(೪) ರಾಜ್ಯಪಾಲರು ತಮ್ಮ ಮಂತ್ರಿಗಳನ್ನು ಆಯ್ಕೆ ಮಾಡುವ ಹಾಗೂ ಅವರೊಡನೆ ಹೊಂದಿರಬಹುದಾದ ಸಂಬಂಧಗಳನ್ನು ನಾಲ್ಕನೆಯ ಅನುಬಂಧದಲ್ಲಿ ತಿಳಿಸಿದಂತೆ ಇರುತ್ತದೆ. ಈ ಸಂಬಂಧಗಳ ಆಚರಣೆಯುನ್ನು ಯಾರೂ ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸಲಾಗದು.

(೫) ಮಂತ್ರಿಗಳ ವೇತನ ಹಾಗೂ ಭತ್ತೆಗಳನ್ನು ಶಾಸಕಾಂಗವು ತನ್ನ ಕಾಯ್ದೆಗಳ ಮೂಲಕ ಕಾಲಕಾಲಕ್ಕೆ ನಿರ್ಣಯಿಸುವುದು. ಅಲ್ಲಿಯವರೆಗೂ ಎರಡನೆಯ ಅನುಬಂಧದಲ್ಲಿ ಹೇಳಿದಂತೆ ನಡೆಯಬೇಕು.

(೬) ಈ ವಿಧಿಯಲ್ಲಿ ತಿಳಿಸಿದಂತೆ ಮಂತ್ರಿಗಳ ನೇಮಕ ಹಾಗೂ ತೆಗೆದು ಹಾಕುವ ಅಧಿಕಾರ ರಾಜ್ಯಪಾಲರ ವಿವೇಚನೆಗೆ ಸೇರಿದ್ದು.

## ರಾಜ್ಯಕ್ಕಾಗಿ ಅಡ್ವೊಕೇಟ್ ಜನರಲ್

**ರಾಜ್ಯದ ಅಡ್ವೊಕೇಟ್ ಜನರಲ್**

೧೪೫. (೧) ರಾಜ್ಯದ ರಾಜ್ಯಪಾಲರು, ರಾಜ್ಯದ ಶ್ರೇಷ್ಠ ನ್ಯಾಯಾಲಯಕ್ಕೆ ನ್ಯಾಯಾಧೀಶರಾಗಿ ನೇಮಕ ಹೊಂದುವ ಅರ್ಹತೆಯನ್ನು ಹೊಂದಿರಬಹುದಾದ ಓರ್ವರನ್ನು ರಾಜ್ಯದ ಅಡ್ವೊಕೇಟ್ ಜನರಲ್ ಪದವಿಗೆ ನೇಮಿಸಬಹುದು.

(೨) ರಾಜ್ಯದ ಅಡ್ವೊಕೇಟ್ ಜನರಲ್ಲರ ಕರ್ತವ್ಯವೆಂದರೆ, ರಾಜ್ಯಪಾಲರಿಂದ ಸೂಚಿತವಾದ ಕಾಯ್ದೆಗೆ ಸಂಬಂಧಿಸಿದ ವಿಷಯಗಳ ಬಗೆಗೆ ಸಲಹೆ ನೀಡುವುದು ಹಾಗೂ ಕಾನೂನಿಗೆ ಸೇರಿದ ಕಾರ್ಯಗಳನ್ನು ನಿರ್ವಹಿಸುವುದು ಅಲ್ಲದೆ ಸಂವಿಧಾನದಡಿಯಲ್ಲಿ ಹೇಳಲಾದ ಕರ್ತವ್ಯಗಳನ್ನು ಹಾಗೂ ಜಾರಿಯಲ್ಲಿರುವ ಕಾಯ್ದೆಗಳ ಬಗೆಗೆ ಉದ್ಭವಿಸಬಹುದಾದ ಸಮಸ್ಯೆಗಳ ಬಗೆಗೆ ಸಲಹೆ ನೀಡುವುದು.

(೩) ರಾಜ್ಯದ ಅಡ್ವೊಕೇಟ್ ಜನರಲ್‌ರು ರಾಜ್ಯದ ಮುಖ್ಯಮಂತ್ರಿಯ ಅಧಿಕಾರಾವಧಿಯಲ್ಲಿ ಮಾತ್ರ ಮುಂದುವರಿಯಬಹುದು. ಆದರೆ ಆ ಸ್ಥಾನಕ್ಕೆ ಬೇರೆಯೊಬ್ಬರನ್ನು ನೇಮಿಸುವವರೆಗೂ ಅಧಿಕಾರದಲ್ಲಿ ಮುಂದುವರಿಯಬಹುದು.

(೪) ರಾಜ್ಯಪಾಲರಿಂದ ನಿಗದಿಪಡಿಸಲಾದ ಮೊತ್ತದ ವೇತನವನ್ನು ಅವರು ಪಡೆಯುವರು.

## ಸರಕಾರದ ವ್ಯವಹಾರವನ್ನು ನಡೆಸುವ ಕ್ರಮ

**ರಾಜ್ಯ ಸರಕಾರದ ವ್ಯವಹಾರದ ಕ್ರಮ**

೧೪೬. (೧) ರಾಜ್ಯದ ಸಮಸ್ತ ಆಡಳಿತ ಕಾರ್ಯವನ್ನು ರಾಜ್ಯಪಾಲರ ಹೆಸರಿನಲ್ಲಿಯೇ ನಡೆಸಲಾಗುವುದು.

(೨) ರಾಜ್ಯಪಾಲರಿಂದ ಹೊರಡಿಸಲಾದ ಆಜ್ಞೆ, ಆದೇಶಗಳನ್ನು ರಾಜ್ಯಪಾಲರಿಂದ ಹೊರಡಿಸಿದ ಕಾಯ್ದೆಗಳಂತೆ ಕ್ರಮಬದ್ಧವಾಗಿ ಜಾರಿಯಲ್ಲಿ ಬರುತ್ತವೆ. ಈ ವಿಧವಾಗಿ ಅಧಿಕೃತವಾಗಿ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಿದ ಆದೇಶಗಳನ್ನು ಯಾರೂ ಪ್ರಶ್ನಿಸುವಂತಿಲ್ಲ.

**ರಾಜ್ಯಪಾಲರಿಗೆ ಮಾಹಿತಿ ನೀಡುವ ಮುಖ್ಯಮಂತ್ರಿಗಳ ಕರ್ತವ್ಯ**

೧೪೭. ರಾಜ್ಯದ ಮುಖ್ಯಮಂತ್ರಿಯ ಕರ್ತವ್ಯಗಳೆಂದರೆ:
(ಎ) ರಾಜ್ಯದ ಆಡಳಿತ ಬಗೆಗೆ ಮಂತ್ರಿಮಂಡಳಿಯು ತೆಗೆದುಕೊಂಡ ಎಲ್ಲ ನಿರ್ಣಯಗಳನ್ನೂ ಹಾಗೂ ರಾಜ್ಯಾಂಗದಾಡಳಿತಕ್ಕೆ ಕೈಕೊಳ್ಳಬೇಕಾದ ಕ್ರಮಗಳನ್ನು ರಾಜ್ಯಪಾಲರ ಅವಗಾಹನೆಗೆ ತರಬೇಕು.

(ಬಿ) ರಾಜ್ಯಪಾಲರು, ರಾಜ್ಯಾಂಗದ ಆಡಳಿತ ಅಥವಾ

ಶಾಸನಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕೋರಿದಾಗ ಅದನ್ನು ಮುಖ್ಯಮಂತ್ರಿಯವರು ಒದಗಿಸಲೇಬೇಕು.

(ಸಿ) ಓರ್ವ ಮಂತ್ರಿಯು ಕೈಕೊಂಡ ನಿರ್ಣಯವನ್ನು ಮಂತ್ರಿ ಮಂಡಳದ ಮುಂದೆ ಬರುವ ಮುನ್ನವೇ ರಾಜ್ಯಪಾಲರು ತಮ್ಮ ಸಲಹೆ ನೀಡಿದಲ್ಲಿ ಅದನ್ನು ಪರಿಗಣಿಸಬೇಕು.

## ಪ್ರಕರಣ III ರಾಜ್ಯದ ಶಾಸಕಾಂಗ

### ಸಾಮಾನ್ಯ

**ಮೊದಲನೆಯ ಅನುಬಂಧ ಭಾಗ I ರ ರಾಜ್ಯ ಶಾಸಕಾಂಗದ ರಚನೆ**

೧೪೮. (೧) ಪ್ರತಿಯೊಂದು ರಾಜ್ಯದ ಶಾಸಕಾಂಗವು ರಾಜ್ಯಪಾಲರು ಮತ್ತು

a) ರಾಜ್ಯದ...................... ದ್ವಿಸದನಗಳಿಂದ ಒಡಗೂಡಿರುತ್ತದೆ.*

b) ಬೇರೆ ರಾಜ್ಯದಲ್ಲಿ ಏಕ ಸದನದಿಂದ ಒಡಗೂಡಿರುತ್ತದೆ.

(೨) ಎಲ್ಲಿ ದ್ವಿಸದನಗಳಿವೆಯೋ ಅಲ್ಲಿ ಒಂದು ಸದನದ ಹೆಸರು ವಿಧಾನ ಪರಿಷತ್ತೆಂದೂ, ಮತ್ತೊಂದರ ಹೆಸರನ್ನು ವಿಧಾನಸಭೆಯೆಂದೂ ಕರೆಯಲಾಗುವುದು. ಏಕಸದನವಿದ್ದಲ್ಲಿ ಅದನ್ನು ವಿಧಾನ ಸಭೆಯೆಂದೇ ಕರೆಯಲಾಗುವುದು.

**ವಿಧಾನಸಭೆ ರಚನೆ**

೧೪೯. (೧) ಈ ಸಂವಿಧಾನದ ೨೯೪ ಹಾಗೂ ೨೯೫ನೆಯ ವಿಧಿಗಳಂತೆ ಪ್ರತಿಯೊಂದು ರಾಜ್ಯದ ಶಾಸನ ಸಭೆಯನ್ನು ನೇರ ಚುನಾವಣೆಯ ವಿಧಾನದಿಂದ ರಚಿಸಲಾಗುವುದು.

(೨) ಈ ವಿಧವಾದ ಚುನಾವಣೆಯು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯ ವಿಧಾನದಂತೆ ನಡೆಸಲಾಗುವುದು. ಅಂದರೆ ಯಾವ ಪೌರನೇ ಆಗಲೀ ೨೧ ವರ್ಷಕ್ಕೆ ಮೀರಿದವನಾಗಿದ್ದು ಈ ಸಂವಿಧಾನದಲ್ಲಿ ಸೂಚಿಸಿದಂತೆ ಅಥವಾ ರಾಜ್ಯದ ಶಾಸಕಾಂಗ ರಚಿಸಿದ ಕಾನೂನಿನಂತೆ ಅನರ್ಹತೆಗಳನ್ನು ಹೊಂದಿರಕೂಡದು. ಅಂದರೆ ರಾಜ್ಯದ ಅನಿವಾಸಿಯಾಗಿರದೇ ಹಾಗೂ ಅಸ್ವಸ್ಥ ಮಾನಸಿಕ ತೊಂದರೆಗೆ ಈಡಾಗಿರದೆ ಮತ್ತು ಯಾವ ಅಪರಾಧಗಳಿಗೂ ಶಿಕ್ಷೆ ಹೊಂದಿರಬಾರದು, ಅಲ್ಲದೆ ರಾಜ್ಯದ ಮತದಾರನಾಗಿ ನೋಂದಾವಣೆಯಾಗಿರಲೇಬೇಕು.

---

* ಯಾವ ರಾಜ್ಯಗಳಲ್ಲಿ ದ್ವಿಸದನಗಳಿವೆಯೋ ಆ ರಾಜ್ಯದ ಹೆಸರುಗಳನ್ನು ಭರ್ತಿ ಮಾಡಿಕೊಳ್ಳಬೇಕು.

(೩) ರಾಜ್ಯದ ಶಾಸನಸಭೆಯ ಪ್ರಾದೇಶಿಕ ಮತದಾರ ಕ್ಷೇತ್ರವನ್ನು ಹಿಂದಿನ ಜನಗಣತಿ ಸಂಖ್ಯೆಯು ಆಧಾರದ ಮೇಲೆ ನಿರ್ಣಯಿಸಲಾಗುವುದು. ಆದರೆ ಅಸ್ಸಾಂ ರಾಜ್ಯದ ಸ್ವಾಯತ್ತ ಜಿಲ್ಲೆಗಳಿಗೆ ಮಾತ್ರ ಒಂದು ಲಕ್ಷ ಜನಸಂಖ್ಯೆಗೆ ಓರ್ವ ಪ್ರತಿನಿಧಿಯನ್ನು ನೀಡಲಾಗಿದೆ.

ಆದರೆ ಯಾವುದೇ ಶಾಸನಸಭೆಯು ಮೂರು ನೂರು ಪ್ರತಿನಿಧಿಗಳಿಗಿಂತ ಅಧಿಕ ಸಂಖ್ಯೆಯ ಸದಸ್ಯರನ್ನು ಹೊಂದಿರಕೂಡದು ಅಲ್ಲದೆ ಅರವತ್ತು ಕನಿಷ್ಟ ಸದಸ್ಯರನ್ನು ಹೊಂದಿರಲೇಬೇಕು.

(೪) ಪ್ರತಿಯೊಂದು ಜನಗಣತಿಯ ಆಧಾರದ ಮೇಲೆ, ಸಂವಿಧಾನದ ವಿಧಿ ೨೮೯ರಲ್ಲಿ ಸೂಚಿಸಿದಂತೆ ಮತದಾರ ಕ್ಷೇತ್ರಗಳನ್ನು ಪರಿಷ್ಕರಿಸಲಾಗುವುದು. ಈ ದಿಶೆಯಲ್ಲಿ ರಾಜ್ಯದ ಶಾಸಕಾಂಗ ಸಭೆಯು ತೀರ್ಮಾನಿಸಿದ ಕಾಯ್ದೆಯನ್ನು ಅನುಸರಿಸಲಾಗುವುದು.

ಆದರೆ, ರಾಜ್ಯದಲ್ಲಿಯ ಶಾಸಕಾಂಗ ಸಭೆಯ ಅವಧಿ ಮುಗಿದ ನಂತರವೇ ಈ ವಿಧವಾದ ಪರಿಷ್ಕರಣೆಯ ಕಾರ್ಯ ಕೈಗೆತ್ತಿಕೊಳ್ಳಬೇಕು.

**ವಿಧಾನ ಪರಿಷತ್ತಿನ ರಚನೆ**

೧೫೦. (೧) ಯಾವುದೇ ರಾಜ್ಯವು ವಿಧಾನ ಪರಿಷತ್ತನ್ನು ಹೊಂದಿದ್ದಲ್ಲಿ, ಆ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆಯು, ಅಲ್ಲಿನ ವಿಧಾನ ಸಭೆಯ ಸದಸ್ಯರ ಸಂಖ್ಯೆಯ ಶೇಕಡಾ ಇಪ್ಪತ್ತೈದಕ್ಕಿಂತ ಅಧಿಕವಿರಬಾರದು.

(೨) ವಿಧಾನ ಪರಿಷತ್ತಿನ ಸದಸ್ಯರ ಒಟ್ಟು ಮೊತ್ತದಲ್ಲಿ :

(ಎ) ಈ ಉಪನಿಬಂಧನೆ (೩)ರಲ್ಲಿ ಉಕ್ತವಾದಂತೆ ಅರ್ಧ ಮೊತ್ತ ಸದಸ್ಯರನ್ನು ಪಟ್ಟಿಯಿಂದ ಆಯ್ಕೆ ಮಾಡಿಕೊಳ್ಳಬೇಕು.

(ಬಿ) ಒಂದು ಮೂರಂಶ ಮೊತ್ತದ ಸದಸ್ಯರನ್ನು ವಿಧಾನ ಸಭೆಯಿಂದ ಪ್ರಮಾಣಬದ್ಧ ಏಕಮತ ವರ್ಗಾವಣೆಯ ವಿಧಾನದಿಂದ ಆಯ್ಕೆ ಮಾಡಿಕೊಳ್ಳಬೇಕು.

(ಸಿ) ಮಿಕ್ಕ ಮೊತ್ತದ ಸದಸ್ಯರನ್ನು ರಾಜ್ಯಪಾಲರು ನಾಮಕರಣ ಮಾಡಬೇಕು.

(೩) ಮೊದಲನೆಯ ಸಾರ್ವತ್ರಿಕ ಚುನಾವಣೆಯ ಮುನ್ನ, ನಂತರದ ಮೂರು ವರ್ಷಗಳಿಗೊಮ್ಮೆ ನಡೆಯಬಹುದಾದ ಸಾರ್ವತ್ರಿಕ ಚುನಾವಣೆಗಳಲ್ಲಿ ವಿಧಾನ ಪರಿಷತ್ತಿನ ರಚನೆಯನ್ನು ಸಂವಿಧಾನದ ೧೫೧ನೇ ವಿಧಿಯ (೨)ರಲ್ಲಿ ಸೂಚಿಸಿದಂತೆ, ಅಭ್ಯರ್ಥಿಗಳ ಐದು ಪಟ್ಟಿಯನ್ನು ಸಿದ್ಧಪಡಿಸಿರಬೇಕು. ಆ ಪಟ್ಟಿಯಲ್ಲಿ

ವಿಶ್ವವಿದ್ಯಾಲಯದ ಪ್ರತಿನಿಧಿಯೋರ್ವನು ಇದ್ದು ಮಿಕ್ಕ ನ್ಯಾಯ ಪಟ್ಟಿಯಲ್ಲಿ ಈ ಕೆಳಗೆ ಸೂಚಿಸಿದ ಕ್ಷೇತ್ರಗಳಲ್ಲಿ ಪರಿಣತೆ ಅನುಭವ ಹೊಂದಿರುವ ವ್ಯಕ್ತಿಗಳಿಂದೊಡಗೂಡಿರಬೇಕು :

(ಎ) ಸಾಹಿತ್ಯ, ಕಲೆ, ವಿಜ್ಞಾನ

(ಬಿ) ವ್ಯವಸಾಯ, ಮೀನುಗಾರಿಕೆ ತತ್ಸಂಬಂಧ ವಿಷಯ

(ಸಿ) ತಂತ್ರಜ್ಞಾನ – ಶಿಲ್ಪಕಲೆ

(ಡಿ) ಸಾರ್ವಜನಿಕ ಆಡಳಿತ – ಸಮಾಜಸೇವೆ

(೪) ಈ ವಿಧವಾಗಿ (೩)ನೆಯ ಉಪನಿಬಂಧನೆಯಲ್ಲಿ ಸೂಚಿಸಿದ ಪಟ್ಟಿಯಲ್ಲಿ ಆಯ್ಕೆ ಮಾಡಬೇಕಾದ ಮೊತ್ತದ ಎರಡರಷ್ಟು ಸದಸ್ಯರನ್ನು ಸೂಚಿಸಬೇಕು.

(೫) ಖಂಡ (೩) ಮತ್ತು (೪)ರಲ್ಲಿ ಹೇಳಿದ ಉಪ ಚುನಾವಣೆಗಳಿಗೆ ಸಂಬಂಧಿಸಿದಂತೆ ಬದಲಾವಣೆಯನ್ನು ಸೂಚಿಸುವ ಅಧಿಕಾರ ಕಾನೂನಿನಂತೆ ಶಾಸನ ಸಭೆಗೆ ಸೇರಿದೆ.

**ರಾಜ್ಯ ವಿಧಾನ ಸಭೆಯ ಕಾಲಾವಧಿ**

೧೫೧. (೧) ಪ್ರತಿಯೊಂದು ರಾಜ್ಯದ ವಿಧಾನಸಭೆಯ ತನ್ನ ಕಾರ್ಯಾಚರಣೆಯ ಮೊದಲನೆಯ ದಿನದಿಂದ* ಐದು ವರ್ಷ ಅವಧಿಯನ್ನು ಹೊಂದಿರುತ್ತದೆ. ಆದರೆ ಅದು ಮುಂಚೆಯೇ ವಿಸರ್ಜಿಸಲೂಬಹುದಾಗಿದೆ. ಐದು ವರ್ಷದ ಅವಧಿ ಪೂರ್ಣಗೊಂಡಾಗ ಅದು ವಿಸರ್ಜನೆಗೊಂಡಂತೆ.

(೨) ರಾಜ್ಯದ ವಿಧಾನ ಪರಿಷತ್ತು ವಿಸರ್ಜನೆಗೆ ಗುರಿಯಾಗದೇ ಕಾರ್ಯ ನಡೆಸುವುದು. ಆದರೆ ಅದರ ಒಂದು ಮೂರಂಶ ಸದಸ್ಯರು ತಮ್ಮ ಅವಧಿ ಮುಗಿದ ನಂತರ ಮೂರು ವರ್ಷಕ್ಕೆ ಒಮ್ಮೆ ನಿವೃತ್ತಿಯಾಗುವರು. ಈ ಒಂದು ವ್ಯವಸ್ಥೆಯನ್ನು ಶಾಸಕಾಂಗವು ನಿರ್ಮಿಸಿದ ಕಾಯ್ದೆಯಂತೆ ಜಾರಿಯಲ್ಲಿ ತರಲಾಗುವುದು.

**ರಾಜ್ಯ ಶಾಸಕಾಂಗ ಸದಸ್ಯತ್ವದ ವಯೋಮಿತಿ**

೧೫೨. ರಾಜ್ಯದ ವಿಧಾನಸಭೆಯ ಸದಸ್ಯನಾಗಲು ೨೫ ವರ್ಷಕ್ಕಿಂತ ಅಧಿಕ ವಯೋಮಿತಿ ಹಾಗೂ ವಿಧಾನಪರಿಷತ್ತಿನ ಸದಸ್ಯನಾಗಲು ೩೫ ವರ್ಷಕ್ಕಿಂತ ಅಧಿಕ ವಯೋಮಿತಿಯನ್ನು ನಿಗದಿಪಡಿಸಿದೆ.

---

* ಸಮಿತಿಯು ನಾಲ್ಕು ವರ್ಷದ ಬದಲು ಐದು ವರ್ಷಗಳನ್ನು ನಿಗದಿ ಪಡಿಸಿದೆ. ಏಕೆಂದರೆ ಸಂಸದೀಯ ವ್ಯವಸ್ಥೆಯಡಿಯ ಸರಕಾರದಲ್ಲಿ ಮಂತ್ರಿಗಳ ಮೊದಲನೆಯ ವರ್ಷವು ವಿಷಯವನ್ನು ಅರಿಯುವುದರಲ್ಲಿ ಹಾಗೂ ಕೊನೆಯ ವರ್ಷವು ತಮ್ಮ ಮುಂದಿನ ಚುನಾವಣೆಯ ಸಿದ್ಧತೆಯಲ್ಲಿಯೇ ವ್ಯಯವಾಗುವುದರಿಂದ ಏನೂ ಕಾರ್ಯ ಮಾಡಲಾಗದು. ಹೀಗಾಗಿ ಕೇವಲ ಎರಡು ವರ್ಷಗಳಲ್ಲಿ ಯಾವುದೇ ಯೋಜಿತ ಕಾರ್ಯಕ್ರಮವನ್ನು ಸಮರ್ಥನೀಯವಾಗಿ ಮಾಡಲಾಗದು. ಹೀಗಾಗಿ ಐದು ವರ್ಷ ಅವಧಿಯನ್ನು ನಿಗದಿಮಾಡಿದೆ.

**ಶಾಸಕಾಂಗದ ಅಧಿವೇಶನವನ್ನು ಮುಂದೂಡುವುದು ಮತ್ತು ವಿಸರ್ಜಿಸುವುದು**

೧೫೩. (೧) ರಾಜ್ಯದ ಶಾಸಕಾಂಗದ ಸದನ ಹಾಗೂ ಸದನಗಳನ್ನು ಕನಿಷ್ಠ ಎರಡು ಬಾರಿಯಾದರೂ ಒಂದು ವರ್ಷದ ಅವಧಿಯಲ್ಲಿ ಕರೆಯತಕ್ಕದ್ದು. ಕನಿಷ್ಠ ಆರು ತಿಂಗಳ ಅವಧಿಯ ಅಂತರದಲ್ಲಿ ಈ ಸಮಾವೇಶಗಳು ಜರುಗಲೇಬೇಕು.

(೨) ಈ ವಿಧಿಯಲ್ಲಿ ಸೂಚಿಸಲಾದ ಅಂಶಗಳನ್ನು ಗಮನಿಸಿ ರಾಜ್ಯಪಾಲರು ಕಾಲಕಾಲಕ್ಕೆ

(ಎ) ಸದನ ಅಥವಾ ಸದನಗಳ ಸಮಾವೇಶವನ್ನು ತಮಗೆ ಸೂಕ್ತವೆನಿಸಿದ ಸಮಯ ಹಾಗೂ ಸ್ಥಾನದಲ್ಲಿ ಕರೆಯತಕ್ಕದ್ದು.

(ಬಿ) ಸದನ ಹಾಗೂ ಸದನಗಳನ್ನು ಮುಂದೂಡಬಹುದು.

(ಸಿ) ವಿಧಾನ ಸಭೆಯನ್ನು ವಿಸರ್ಜಿಸಬಹುದು.

(೩) ರಾಜ್ಯಪಾಲರು ಉಪನಿಬಂಧನೆ (೨)ರಲ್ಲಿ ಸೂಚಿಸಿದ (ಎ) ಮತ್ತು (ಸಿ) ವಿಷಯವನ್ನು ತಮ್ಮ ವಿವೇಚನೆಯಂತೆ ಕಾರ್ಯಗತ ಮಾಡತಕ್ಕದ್ದು.

**೧೫೪. ಸದನಗಳಿಗೆ ಭಾಷಣ ಮಾಡುವ ಅಥವಾ ಸಂದೇಶವನ್ನು ನೀಡುವ ರಾಜ್ಯಪಾಲರ ಹಕ್ಕು**

೧೫೪. (೧) ರಾಜ್ಯಪಾಲರು ತಮಗೆ ಸೂಕ್ತವೆನಿಸಿದಾಗ ವಿಧಾನಸಭೆ ಅಥವಾ ಕೇವಲ ವಿಧಾನಪರಿಷತ್ತನ್ನು ಹೊಂದಿರುವ ರಾಜ್ಯದಲ್ಲಿ ಯಾವುದೇ ಒಂದು ಸದನವನ್ನು ಎರಡೂ ಸದನಗಳನ್ನು ಹಾಗೂ ಜಂಟಿ ಸದನಗಳನ್ನು ಉದ್ದೇಶಿಸಿ ಮಾತನಾಡಬಹುದು. ಈ ಅಧಿವೇಶನಕ್ಕೆ ಸದಸ್ಯರು ಹಾಜರಾಗಲೇಬೇಕು.

(೨) ರಾಜ್ಯಪಾಲರು ಯಾವುದೇ ಸದನಕ್ಕೆ ಸೂಕ್ತ ಸಂದೇಶಗಳ ಮೂಲಕ, ಸದನದ ಮುಂದೆ ಬಂದ ಮಸೂದೆಯನ್ನು ಮರುಪರಿಶೀಲಿಸುವಂತೆ ಸಲಹೆ ಮಾಡಬಹುದು. ಇದನ್ನು ಸಭೆಯು ಸೂಕ್ತವಾದ ರೀತಿಯಲ್ಲಿ ಮರುಪರಿಶೀಲನೆ ಮಾಡಲೇಬೇಕು.

**ಪ್ರತಿಯೊಂದು ಅಧಿವೇಶನದ ಆರಂಭದಲ್ಲಿ ಅಥವಾ ವಿಶೇಷ ಅಧಿವೇಶನಗಳನ್ನು ಉದ್ದೇಶಿಸಿ ಮಾತನಾಡುವ ರಾಜ್ಯಪಾಲರ ಅಧಿಕಾರ ಮತ್ತು ಭಾಷಣದಲ್ಲಿ ಹೇಳಲಾಗದ ವಿಷಯಗಳನ್ನು ಕುರಿತ ಚರ್ಚೆ**

* ೧೫೫. (೧) ಪ್ರತಿಯೊಂದು ಆರಂಭ ಅಧಿವೇಶನ ಸಮಾವೇಶಗೊಂಡಾಗ, ವಿಧಾನಸಭೆ ಅಥವಾ ಎಲ್ಲಿ ಕೇವಲ ವಿಧಾನ ಪರಿಷತ್ತಿದೆಯೋ, ಎರಡೂ ಸದನಗಳನ್ನುದ್ದೇಶಿಸಿ, ಅಧಿವೇಶನದ ಉದ್ದೇಶಗಳನ್ನು ರಾಜ್ಯಪಾಲರು ತಮ್ಮ ಭಾಷಣದ ಮೂಲಕ ಹೇಳಬಹುದು.

(೨) ಈ ವಿಧವಾದ, ರಾಜ್ಯಪಾಲರ ಸಂದೇಶವನ್ನು, ಸದನದ ಮುಂದೆ ಬರಬಹುದಾದ ಎಲ್ಲಾ ವಿಷಯಗಳಿಗಿಂತ ಆದ್ಯತೆ ನೀಡಿ

---

* ಈ ಖಂಡವನ್ನು ಯುನೈಟೆಡ್ ಕಿಂಗ್ಡಂನ ಪಾರ್ಲಿಮೆಂಟಿನಲ್ಲಿ ಆಚರಿಸಲಾಗುವ ಪದ್ಧತಿಯನ್ನು ಆಧರಿಸಿ ಸಮಿತಿಯು ಸೇರಿಸಿದ್ದು ನಮ್ಮ ಸಂವಿಧಾನದಲ್ಲೂ ಅದು ಉಪಯುಕ್ತವಾಗುತ್ತದೆಂದು ಪರಿಗಣಿಸಲಾಗಿದೆ.

ಮೊದಲು ಚರ್ಚಿಸುವಂತೆ ಸೂಕ್ತವಾದ ನಿಯಮಾವಳಿಯ ಮುಖಾಂತರ ಚರ್ಚಿಸಲು ಆಸ್ಪದ ಕಲ್ಪಿಸಬೇಕು.

**ಸದನದ ವಿಷಯದಲ್ಲಿ ಮಂತ್ರಿಗಳು ಹಾಗೂ ಅಡ್ವೋಕೇಟ್ ಜನರಲ್ಲರ ಹಕ್ಕುಗಳು**

೧೫೬. ರಾಜ್ಯದ ಮಂತ್ರಿ ಹಾಗೂ ಅಡ್ವೋಕೇಟ್ ಜನರಲ್ಲರೂ ಯಾವ ಸದನದ ಹಾಗೂ ಸಮಿತಿಗಳ ಸದಸ್ಯರಾಗಿದ್ದಲ್ಲಿ ಅವುಗಳ ಚರ್ಚೆಯಲ್ಲಿ ಭಾಗವಹಿಸುವ ಅಧಿಕಾರವನ್ನು ಹೊಂದಿದ್ದಾರೆ. ಆದರೆ ಈ ವಿಧಿಯಲ್ಲಿ ಹೇಳಿದಂತೆ ಅವರಿಗೆ ಮತದಾನ ಮಾಡುವ ಹಕ್ಕು ಇಲ್ಲ.

## ರಾಜ್ಯ ಶಾಸಕಾಂಗದ ಪದಾಧಿಕಾರಿಗಳು

**ವಿಧಾನ ಸಭೆಯ ಅಧ್ಯಕ್ಷರು – ಉಪಾಧ್ಯಕ್ಷರು**

೧೫೭. ಪ್ರತಿಯೊಂದು ವಿಧಾನಸಭೆಯೂ ಇಬ್ಬರು ಅಧಿಕಾರಿಗಳನ್ನು ಅಂದರೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ತಮ್ಮ ಪ್ರಥಮ ಅಧಿವೇಶನದಲ್ಲಿಯೇ ಆಯ್ಕೆಮಾಡಬೇಕು. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸ್ಥಾನ ಖಾಲಿ ಬಿದ್ದ ಸಮಯದಲ್ಲಿ ಸಭೆಯೇ ತನ್ನ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಆಯ್ಕೆ ಮಾಡಿಕೊಳ್ಳಬೇಕು.

**ಅಧ್ಯಕ್ಷ ಉಪಾಧ್ಯಕ್ಷರ ಸ್ಥಾನ ತೆರವಾದಾಗ, ರಾಜೀನಾಮೆ ನೀಡಿದಲ್ಲಿ ಅಥವಾ ತೆಗೆದು ಹಾಕಿದಾಗ**

೧೫೮. ಯಾವ ಸದಸ್ಯನೇ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಅಧಿಕಾರವನ್ನು ಹೊಂದಿದಾಗ :

(ಎ) ಸದನದ ಸದಸ್ಯನಾಗಿ ಮುಂದುವರಿಯದೇ ಹೋದಲ್ಲಿ ಸ್ಥಾನ ತ್ಯಜಿಸಬೇಕು.

(ಬಿ) ಅಧ್ಯಕ್ಷರಿಗೆ ತಮ್ಮ ಕೈಬರಹದಲ್ಲಿ ರಾಜೀನಾಮೆ ನೀಡಿದಾಗ

(ಸಿ) ಅವಿಶ್ವಾಸ ಗೊತ್ತುವಳಿ, ಅಥವಾ ಅಸಾಮರ್ಥ್ಯ ಕಾರಣದಿಂದ, ಸಭೆಯು ಇವರ ವಿರುದ್ಧ ಬಹುಮತದ ನಿರ್ಣಯವನ್ನು ಅಂಗೀಕರಿಸಿದಾಗ

ಆದರೆ ಉಪನಿಬಂಧನೆ (ಸಿ) ಯಲ್ಲಿ ಸೂಚಿಸಿದ ಅವಿಶ್ವಾಸ ಗೊತ್ತುವಳಿಯನ್ನು ಅಂಗೀಕರಿಸುವ ಮುನ್ನ ಹದಿನಾಲ್ಕು ದಿನಗಳ ನೋಟೀಸನ್ನು ಜಾರಿ ಮಾಡದೇ ಗೊತ್ತುವಳಿಯುನ್ನು ಚರ್ಚಿಸಲಾಗದು.

ಸದನವು ಯಾವ ಕಾರಣಕ್ಕೇ ವಿಸರ್ಜನೆ ಹೊಂದಿದಾಗ, ಮುಂದಿನ ಸಭೆಯ ಅಧಿವೇಶನದ ಅವಧಿಯವರೆಗೂ ಅಧ್ಯಕ್ಷರು ತಮ್ಮ ಅಧಿಕಾರದಲ್ಲಿ ಮುಂದುವರಿಯುತ್ತಾರೆ.

**ಉಪಾಧ್ಯಕ್ಷರು ಅಥವಾ ಇತರರು ಅಧಿಕಾರ ವಹಿಸಿಕೊಂಡಾಗ ಅಧಿಕಾರಗಳು**

೧೫೯. (೧) ಅಧ್ಯಕ್ಷರ ಸ್ಥಾನ ತೆರವಾದಾಗ ಉಪಾಧ್ಯಕ್ಷರು, ಅಧ್ಯಕ್ಷರ ಕರ್ತವ್ಯಗಳನ್ನು ನೆರವೇರಿಸುತ್ತಾರೆ. ಉಪಾಧ್ಯಕ್ಷರ ಸ್ಥಾನ ತೆರವಾದಾಗ, ಸಭೆಯು ಆಯ್ಕೆ ಮಾಡುವ ಸದಸ್ಯನು

ಉಪಾಧ್ಯಕ್ಷರ ಕಾರ್ಯಗಳನ್ನು ನೆರವೇರಿಸುತ್ತಾರೆ.

(೨) ಅಧ್ಯಕ್ಷರ, ಉಪಾಧ್ಯಕ್ಷರ, ಅಥವಾ ಅವರ ಗೈರುಹಾಜರಾದಲ್ಲಿ, ಆಯ್ಕೆ ಮಾಡಿದ ಸದಸ್ಯರೂ ಗೈರುಹಾಜರಾದಲ್ಲಿ ಸದನವು ಓರ್ವ ಸದಸ್ಯರನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿಕೊಂಡು ಕಾರ್ಯಕಲಾಪಗಳನ್ನು ಮುಂದುವರಿಸಬಹುದು.

**ವಿಧಾನ ಪರಿಷತ್ತಿನ ಅಧ್ಯಕ್ಷ ಉಪಾಧ್ಯಕ್ಷರು**

೧೬೦. ಪ್ರತಿಯೊಂದು ರಾಜ್ಯ ಎಲ್ಲಿ ವಿಧಾನಪರಿಷತ್ತನ್ನು ಹೊಂದಿದೆಯೋ ಅಲ್ಲಿ ಅಧಿವೇಶನವನ್ನು ಕರೆದು ಶೀಘ್ರವಾಗಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆಯ್ಕೆಮಾಡಬೇಕು. ಅವರಿಬ್ಬರ ಗೈರುಹಾಜರಿಯಲ್ಲಿ ಬೇರೆ ಸದಸ್ಯರನ್ನು ಆಯ್ಕೆಮಾಡಿಕೊಳ್ಳಬೇಕು.

**ಅಧ್ಯಕ್ಷ ಉಪಾಧ್ಯಕ್ಷರ ರಾಜೀನಾಮೆ, ಸ್ಥಾನ ತೆರವಾದಾಗ ಅಥವಾ ತೆಗೆದು ಹಾಕಿದಾಗ**

೧೬೧. ವಿಧಾನಪರಿಷತ್ತಿನ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನವನ್ನು ಹೊಂದಿದ ಯಾವ ಸದಸ್ಯನಾಗಲೀ :

(ಎ) ಸದಸ್ಯತ್ವವನ್ನು ಹೊಂದಿರದೇ ಹೋದಲ್ಲಿ ಸ್ಥಾನ ತೆರವು ಮಾಡಬೇಕು.

(ಬಿ) ಯಾವ ಸಮಯದಲ್ಲಿಯೇ ಆಗಲಿ ಅಧ್ಯಕ್ಷ ಉಪಾಧ್ಯಕ್ಷನಿಗೂ, ಉಪಾಧ್ಯಕ್ಷ ಅಧ್ಯಕ್ಷನಿಗೂ ತಮ್ಮ ಕೈ ಬರೆಹದಲ್ಲಿ ರಾಜೀನಾಮೆ ಸಲ್ಲಿಸಿದ ಸಂದರ್ಭ ಮತ್ತು

(ಸಿ) ಅವರ ಅಸಾಮರ್ಥ್ಯ ಹಾಗೂ ಅವಿಶ್ವಾಸದಿಂದ ಅವರ ವಿರುದ್ಧ ಸದನವು ಬಹುಮತದ ಗೊತ್ತುವಳಿಯನ್ನು ಅಂಗೀಕರಿಸಿದಾಗ.

ಆದರೆ ಈ ಉಪನಿಬಂಧನೆಯಲ್ಲಿ ಹೇಳಿದಂತೆ ಯಾವ ಗೊತ್ತುವಳಿಯನ್ನು ಅಂಗೀಕರಿಸಲು ಹದಿನಾಲ್ಕು ದಿನದ ನೋಟೀಸನ್ನು ನೀಡಲೇಬೇಕು.

**ಉಪಾಧ್ಯಕ್ಷ ಸ್ಥಾನ ಹಾಗೂ ಅವರು ಅಧ್ಯಕ್ಷ ಸ್ಥಾನದ ಕಾರ್ಯ ನಿರ್ವಹಿಸುವುದು ಇದಕ್ಕಾಗಿ ಅಧಿಕಾರ**

೧೬೨. (೧) ಅಧ್ಯಕ್ಷರ ಸ್ಥಾನ ತೆರವಾದಾಗ ಅವರ ಕರ್ತವ್ಯಗಳನ್ನು ಉಪಾಧ್ಯಕ್ಷರು ನೆರವೇರಿಸುತ್ತಾರೆ, ಹಾಗೂ ಉಪಾಧ್ಯಕ್ಷರ ಸ್ಥಾನ ತೆರವಾದಾಗ ರಾಜ್ಯಪಾಲರು ಆ ಸ್ಥಾನದ ಕರ್ತವ್ಯಗಳನ್ನು ನಡೆಸಿಕೊಂಡು ಹೋಗಲು ಯಾರನ್ನಾದರೂ ನೇಮಿಸಬಹುದು.

(೨) ಪರಿಷತ್ತಿನ ಅಧಿವೇಶನದ ಸಮಯದಲ್ಲಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಗೈರುಹಾಜರಿಯಲ್ಲಿ ವಿಧಾನಪರಿಷತ್ತಿನ ನಿಯಮಾವಳಿಯಂತೆ ನೇಮಿಸಿದ ಸದಸ್ಯ ಅಥವಾ ಅವರೂ ಗೈರುಹಾಜರಿದ್ದರೆ, ಸದನವೇ ಆಯ್ಕೆಮಾಡಿದ ಸದಸ್ಯರು ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿಕೊಂಡು ಹೋಗಬಹುದು.

**ವಿಧಾನಸಭೆ ವಿಧಾನಪರಿಷತ್ತಿನ**

೧೬೩. ವಿಧಾನಸಭೆಯ ಅಧ್ಯಕ್ಷ – ಉಪಾಧ್ಯಕ್ಷರು ಹಾಗೂ

**ಅಧ್ಯಕ್ಷ – ಉಪಾಧ್ಯಕ್ಷರ ವೇತನ – ಭತ್ತೆ**

ಪರಿಷತ್ತಿನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರು ಶಾಸಕಾಂಗದ ನಿಯಮದಲ್ಲಿ ಹೇಳಲಾದ ವೇತನ ಹಾಗೂ ಭತ್ತೆಗಳನ್ನು ಪಡೆಯುತ್ತಾರೆ. ಈ ವಿಧವಾದ ನಿಯಮಗಳನ್ನು ರೂಪಿಸುವ ಅವಧಿಯವರೆಗೂ ಎರಡನೇ ಅನುಬಂಧದಲ್ಲಿ ಸೂಚಿಸಿದ ವೇತನ ಭತ್ತೆಗಳನ್ನು ಪಡೆಯಬಹುದು.

## ಕಾರ್ಯಕಲಾಪಗಳ ನಡಾವಳಿ

**ಸದನಗಳಲ್ಲಿ ಮತದಾನ ಹಾಗೂ ಅಧಿಕಾರ ಕೋರಂ**

೧೬೪. (೧) ಸಂವಿಧಾನದಲ್ಲಿ ಸೂಚಿಸಿದಂತೆ, ಸದನಗಳಲ್ಲಿಯ ಎಲ್ಲಾ ಪ್ರಶ್ನೆಗಳನ್ನೂ ಜಂಟಿ ಅಧಿವೇಶನವೂ ಒಡಗೂಡಿದಂತೆ, ರಾಜ್ಯಶಾಸಕಾಂಗಗಳಲ್ಲಿ ಹಾಜರಿದ್ದು ಮತದಾನ ನೀಡುವ ಅಧ್ಯಕ್ಷರನ್ನು ಹೊರತುಪಡಿಸಿ, ಬಹುಮತದಿಂದ ನಿರ್ಣಯಗಳನ್ನು ನಿರ್ಧರಿಸತಕ್ಕದ್ದು.

ಸ್ಪೀಕರ್ ಅಥವಾ ವಿಧಾನ ಪರಿಷತ್ತಿನ ಅಧ್ಯಕ್ಷರು ಸಾಮಾನ್ಯವಾಗಿ ಮತ ಚಲಾಯಿಸುವಂತಿಲ್ಲ. ಆದರೆ ಅವರು ಪರ ಹಾಗೂ ವಿರೋಧ ಮತಗಳು ಸಮನಾದ ವಿಶೇಷ ಸಂದರ್ಭದಲ್ಲಿ ತಮ್ಮ ನಿರ್ಣಾಯಕ ಮತವನ್ನು ಚಲಾಯಿಸಬಹುದು.

(೨) ಸದನದಲ್ಲಿ ತೆರವಾದ ಸ್ಥಾನಗಳಿದ್ದರೂ, ರಾಜ್ಯದ ಶಾಸಕಾಂಗವು ತನ್ನ ಕಾರ್ಯಕಲಾಪಗಳನ್ನು ಮುಂದುವರಿಸಿಕೊಂಡು ಹೋಗುವ ಅಧಿಕಾರವನ್ನು ಹೊಂದಿದೆ. ಯಾವುದೇ ವ್ಯಕ್ತಿಯು ಅಕ್ರಮವಾಗಿ ಮತದಾನ ನೀಡಿದನೆಂದು ತಿಳಿದುಬಂದರೂ ಈ ಅಧಿಕಾರವು ಆಬಾಧಿತವಾಗಿರುತ್ತದೆ.

(೩) ಯಾವುದೇ ಸಮಯದಲ್ಲಿ ವಿಧಾನಸಭೆಯ ಹಾಗೂ ವಿಧಾನಪರಿಷತ್ತಿನ ಸಭೆಗಳಲ್ಲಿ ಕೋರಂನ ಅಭಾವವಿದ್ದಲ್ಲಿ, ಸಭೆಯ ಅಧ್ಯಕ್ಷರು, ಕೋರಂಗಾಗಿ ಸಭೆಯನ್ನು ಮುಂದೂಡಬೇಕು ಹಾಗೂ ಸಭೆಯ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸುವುದು ಅವರ ಕರ್ತವ್ಯವಾಗಿದೆ.

ಸದನಗಳ ಕಾರ್ಯಕಲಾಪಗಳಿಗೆ ಕೋರಂ ಹತ್ತು ಜನ ಸದಸ್ಯರು ಅಥವಾ ಸದನದ ಸದಸ್ಯರ ಒಂದು ಆರಂಶ ಸದಸ್ಯರು ಯಾವುದು ಅಧಿಕವೋ ಅದರನ್ವಯವಾಗಿ ನಡೆದುಕೊಳ್ಳತಕ್ಕದ್ದು.

## ಸದಸ್ಯರ ಅನರ್ಹತೆಗಳು

**ಸದಸ್ಯರಿಂದ ಪ್ರಮಾಣ ಸ್ವೀಕರಿಸುವ ಘೋಷಣೆ**

೧೬೫. ರಾಜ್ಯಗಳ ವಿಧಾನಸಭೆ ಹಾಗೂ ವಿಧಾನಪರಿಷತ್ತಿನ ಸದಸ್ಯರು ತಾವು ತಮ್ಮ ಅಧಿಕಾರ ಸ್ಥಾನವನ್ನು ಪಡೆಯುವ ಮುನ್ನ ಪ್ರಮಾಣ ವಚನವನ್ನು ಸ್ವೀಕರಿಸಬೇಕು. ಈ ಪ್ರಮಾಣವಚನ ಕಾರ್ಯಕ್ಕೆಂದೇ ರಾಜ್ಯಪಾಲರು ಯಾರನ್ನಾದರೂ ನೇಮಿಸಬಹುದು. ಹೀಗೆ ನೇಮಕ ಹೊಂದಿದ ಅಧಿಕಾರಿಯ ಮುಂದೆ ಸದಸ್ಯರು ಮೂರನೇ ಅನುಬಂಧದಲ್ಲಿ ಸೂಚಿಸಿದಂತೆ ಘೋಷಣಾ ಪ್ರಮಾಣಪತ್ರಕ್ಕೆ ಸಹಿ ಹಾಕಬೇಕು.

**ಸ್ಥಾನಗಳ ತೆರವು**

೧೬೬. (೧) ಯಾವ ಸದಸ್ಯನೂ, ರಾಜ್ಯದ ಎರಡೂ ಸದನಗಳ ಸದಸ್ಯನಾಗಿರುವಂತಿಲ್ಲ. ಹಾಗೆ ಯಾರಾದರೂ ಎರಡೂ ಸದನದ ಸದಸ್ಯರಾಗಿದ್ದಲ್ಲಿ ಅವರು ಒಂದಕ್ಕೆ ಕೂಡಲೇ ರಾಜೀನಾಮೆ ನೀಡಬೇಕು.

(೨) ಯಾವ ವ್ಯಕ್ತಿಯೇ ಆಗಲೀ ಸಂಸತ್ತಿನ ಹಾಗೂ ಶಾಸನಸಭೆಯ ಸದಸ್ಯನಾಗಿ ಆಯ್ಕೆಯಾದಲ್ಲಿ ರಾಜ್ಯಪಾಲರಿಂದ ನಿರ್ಣಯಿಸಲಾದ ನಿಯಮಾವಳಿಯ ಅವಧಿಯಂತೆ ಆ ಸದಸ್ಯನ ಸ್ಥಾನವು, ರಾಜ್ಯದ ಸದನದಲ್ಲಿ ತೆರವಾಗಿದೆ ಎಂದೇ ಸಾರಲಾಗುವುದು. ಅಥವಾ ಸದಸ್ಯನು ತನ್ನ ಸಂಸತ್ತಿನ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಬಹುದು. ಆಗ ಅವನು ರಾಜ್ಯದ ಸದನದ ಸದಸ್ಯನಾಗಿ ಮುಂದುವರಿಯುತ್ತಾನೆ.

(೩) ಯಾವ ಸದಸ್ಯನೇ ಆಗಲೀ ಶಾಸಕಾಂಗದ ಸದಸ್ಯನಾಗಿ ಮುಂದುವರೆಯಲಾರ :

(ಎ) ಈ ವಿಧಿಯ (೧)ರಲ್ಲಿ ಸೂಚಿಸಿದಂತೆ ಅನರ್ಹತೆಗಳನ್ನು ಹೊಂದಿದ್ದಲ್ಲಿ ಅಥವಾ ಮುಂದಿನ ಉಪನಿಬಂಧನೆಯಲ್ಲಿ ತಿಳಿಸಿದಂತೆ

(ಬಿ) ಸದಸ್ಯರು ತಮ್ಮ ಕೈಬರೆಹದ ಮೂಲಕ ವಿಧಾನಸಭೆ ಅಥವಾ ವಿಧಾನಪರಿಷತ್ತಿನ ಅಧ್ಯಕ್ಷರಿಗೆ ರಾಜೀನಾಮೆ ಸಲ್ಲಿಸಿದ್ದರೆ ಅವರ ಸ್ಥಾನಗಳು ತೆರವಾದಂತೆ.

(೪) ಸದಸ್ಯರು ಸದನದ ಅಧ್ಯಕ್ಷರ ಅಪ್ಪಣೆ ಪಡೆಯದೆ, ಸತತವಾಗಿ ಅಂದಿನ ಸದನಕ್ಕೆ ಗೈರುಹಾಜರಾದರೆ ಅವರ ಸದಸ್ಯತ್ವವು ರದ್ದಾಗುವುದು.

ಆದರೆ ಈ ೬೦ ದಿನಗಳನ್ನು ಕೂಡುವಾಗ, ಸದನದ ಮುಂದೂಡಿಕೆ ಮತ್ತು ತಳ್ಳಲಾದ ನಾಲ್ಕಕ್ಕೂ ಅಧಿಕವಾದ ದಿನಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಂತಿಲ್ಲ.

**ಸದಸ್ಯರ ಅನರ್ಹತೆಗಳು**

೧೬೭. (೧) ರಾಜ್ಯದ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯನೆಂದು ಆಯ್ಕೆಯಾದವರು ಈ ಕೆಳಗೆ ಹೇಳಿದಂತೆ ಅನರ್ಹರಾಗುತ್ತಾರೆ :

(ಎ) ಮೊದಲನೆಯ ಅನುಬಂಧದಲ್ಲಿ ಸೂಚಿಸಿದಂತೆ ಯಾರೇ ಆಗಲೀ ಭಾರತ ಸರಕಾರ ಹಾಗೂ ರಾಜ್ಯ ಸರಕಾರಗಳ ಲಾಭದಾಯಕ ಹುದ್ದೆಯಲ್ಲಿರಬಾರದು. ಆದರೆ ಮೊದಲನೆಯ ಅನುಬಂಧದಲ್ಲಿ ಸೂಚಿಸಿದ ಲಾಭದಾಯಕವಲ್ಲದ ಅಧಿಕಾರವನ್ನು ಹೊಂದಿರಬಹುದು.

(ಬಿ) ಮಾನಸಿಕವಾಗಿ ಅಸ್ವಸ್ಥನಾಗಿದ್ದಾನೆಂದು ನ್ಯಾಯಾಲಯವು ಸಾರಿದ್ದರೆ

(ಸಿ) ದಿವಾಳಿಕೋರನೆಂದು ಸಾರಲಾಗಿದ್ದರೆ

*(ಡಿ) ಅವನು ವಿದೇಶೀ ಅಧಿಕಾರಕ್ಕೆ ವಿಧೇಯನಾಗಿದ್ದಾನೆ ಎಂದು ತಿಳಿದುಬಂದಲ್ಲಿ ಅಥವಾ ವಿದೇಶೀಯ ಪೌರತ್ವ ಮತ್ತು ವಿದೇಶೀ ಸೌಲಭ್ಯಗಳನ್ನು ಹೊಂದಿದ್ದಲ್ಲಿ,

(ಇ) ಅವನು ರಾಜ್ಯದ ಶಾಸಕಾಂಗದಿಂದ ರಚಿಸಲಾದ ಕಾಯ್ದೆಯಂತೆ ಅನರ್ಹತೆಗಳನ್ನು ಹೊಂದಿದ್ದರೆ

(೨) ಈ ವಿಧಿಯ ಉದ್ದೇಶಕ್ಕೆ ಅನುಗುಣವಾಗಿ ಸಂವಿಧಾನದ ಮೊದಲನೆಯ ಅನುಬಂಧದಲ್ಲಿ ತಿಳಿಸಿದಂತೆ, ಭಾರತ ಸರಕಾರ ಹಾಗೂ ರಾಜ್ಯ ಸರಕಾರಗಳಲ್ಲಿ ಲಾಭದಾಯಕ ವೃತ್ತಿಯನ್ನು ಹೊಂದಿರಬಾರದು :

(ಎ) ಮೊದಲನೆಯ ಅನುಬಂಧ ಭಾಗ I ರಲ್ಲಿ ಸೂಚಿಸಿದಂತೆ ಕೇಂದ್ರ ಹಾಗೂ ರಾಜ್ಯದಲ್ಲಿ ಮಂತ್ರಿ ಪದವಿ ಹೊಂದಿದ್ದರೆ ಅಥವಾ

(ಬಿ) ಮೊದಲನೆಯ ಅನುಬಂಧದ ಭಾಗ III ರಲ್ಲಿ ತಾತ್ಕಾಲಿಕವಾಗಿ ಸೂಚಿಸಿದಂತೆ ರಾಜ್ಯದ ಮಂತ್ರಿ ಪದವಿ ಅಥವಾ ದ್ವಿಸದನವಿರುವ ಶಾಸಕಾಂಗದ ಯಾವುದೇ ಸದನದ ಸದಸ್ಯ ಅಥವಾ ಕೆಳಮನೆಯ ಸದಸ್ಯನಾಗಿ ३/४ ಅಂಶದ ಸದಸ್ಯ ಚುನಾಯಿತಗೊಂಡ ಸದನದ ಸದಸ್ಯನಾಗಿದ್ದರೆ.

**೧೬೫ನೇ ವಿಧಿಗೆ ವಿರೋಧವಾಗಿ ಸದಸ್ಯರು ಸದನದಲ್ಲಿ ಮತದಾನ ಮಾಡಿದಾಗ ವಿಧಿಸಬಹುದಾದ ದಂಡ**

೧೬೮. ಯಾವ ವ್ಯಕ್ತಿಯೇ ಆಗಲೀ ವಿಧಿ ೧೬೫ರಲ್ಲಿ ತಿಳಿಸಿದಂತೆ ತಾನು ಸಭೆಯ ಸದಸ್ಯತ್ವವನ್ನು ಪಡೆಯದೇ ಹೋದ ಪರಿಸ್ಥಿತಿಯಲ್ಲಿ ಸದನದ ಕಲಾಪಗಳಲ್ಲಿ ಭಾಗವಹಿಸಿದರೆ ಹಾಗೂ ಮತದಾನ ಮಾಡಿದಲ್ಲಿ ಅಂಥವರಿಗೆ ಪ್ರತಿದಿನ ಒಂದಕ್ಕೆ ರೂಪಾಯಿ

---

* ಸಮಿತಿಯು ಆಸ್ಟ್ರೇಲಿಯಾ ಸಂವಿಧಾನದ ४४(೧)ನ್ನು ಈ ಉಪನಿಬಂಧನೆಯಲ್ಲಿ ಅಳವಡಿಸಿಕೊಂಡಿದೆ.

೫೦೦ ದಂಡ ವಿಧಿಸಿ ಆ ದಂಡವನ್ನು ರಾಜ್ಯಕ್ಕೆ ಸಂದಾಯವಾಗಬೇಕಾದ ಧನ ಎಂದು ಪರಿಗಣಿಸಿ ಅವರಿಂದ ವಸೂಲಿ ಮಾಡಬೇಕು.

## ಸದಸ್ಯರ ಹಕ್ಕು – ಬಾಧ್ಯತೆಗಳು ಮತ್ತು ವಿನಾಯಿತಿಗಳು

**ಸದಸ್ಯರ ಹಕ್ಕು ಬಾಧ್ಯತೆಗಳು ಮತ್ತು ವಿನಾಯಿತಿಗಳು**

೧೬೯. (೧) ಸದನದ ಕಾರ್ಯಕಲಾಪಗಳಿಗೆ ಸಂಬಂಧಿಸಿದ ನಿಯಮಾವಳಿಗಳಂತೆ, ರಾಜ್ಯದ ಶಾಸಕಾಂಗಗಳಲ್ಲಿ ವಾಕ್ ಸ್ವಾತಂತ್ರ್ಯಕ್ಕೆ ಮುಕ್ತ ಅವಕಾಶವಿದೆ.

(೨) ರಾಜ್ಯ ಶಾಸಕಾಂಗದ ಸದಸ್ಯರು, ಸದನದಲ್ಲಿ ನೀಡಿದ ಹೇಳಿಕೆ ಅಥವಾ ಮತದಾನಕ್ಕೆ ಸಂಬಂಧಿಸಿದಂತೆ, ಅಥವಾ ಅವರು ಸಮಿತಿಯ ಮುಂದೆ ನೀಡಿದ ಹೇಳಿಕೆಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ ಅಥವಾ ಅವರು ಸದನಗಳಲ್ಲಿ ನೀಡಿದ ಹೇಳಿಕೆಯನ್ನು ಮಾನಹಾನಿಕರವೆಂದು ಎಲ್ಲಿಯೂ ಪ್ರಶ್ನಿಸುವಂತಿಲ್ಲ.

(೩) ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಶಾಸಕಾಂಗವು ಸೂಕ್ತ ಶಾಸನಗಳನ್ನು ರಚಿಸುವವರೆಗೂ, ಈ ದಿಶೆಯಲ್ಲಿ ಬ್ರಿಟಿಷ್ ಸಂಸತ್ತಿನಲ್ಲಿ ಜಾರಿಯಲ್ಲಿರುವ ಪರಂಪರೆಯನ್ನೇ ಅನುಸರಿಸಲಾಗುವುದು.

(೪) ಈ ವಿಧಿಯ ಉಪನಿಬಂಧನೆಗಳಾದ (೧) (೨) ಮತ್ತು (೩) ಸಂವಿಧಾನದನ್ವಯ ರಾಜ್ಯ ಶಾಸಕಾಂಗದ ಸದಸ್ಯರಿಗೆ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ವಾಕ್ ಸ್ವಾತಂತ್ರ್ಯದಂತೆ ಕ್ರಮ ಕೈಗೊಳ್ಳಲಾಗುವುದು.

**ಸದಸ್ಯರ ವೇತನ ಭತ್ತೆಗಳು**

೧೭೦. ವಿಧಾನ ಪರಿಷತ್ತಿನ ಹಾಗೂ ಸಭೆಯ ಸದಸ್ಯರು, ಕಾಲಕಾಲಕ್ಕೆ ಶಾಸಕಾಂಗದಿಂದ ನಿರ್ಧರಿಸಿದ ಕಾಯ್ದೆಯಂತೆ ವೇತನ ಹಾಗೂ ಭತ್ತೆಗಳನ್ನು ಪಡೆಯಬೇಕು.

ಈ ಬಗೆಗೆ ಕಾನೂನುಗಳನ್ನು ರಚಿಸುವ ಮುನ್ನ ಜಾರಿಯಲ್ಲಿರುವ ಶಾಸಕಾಂಗದ ಕಾಯ್ದೆಯಂತೆ ವೇತನ ಹಾಗೂ ಭತ್ತೆಗಳನ್ನು ಪಡೆಯಬಹುದು.

## ಶಾಸನದ ವಿಧಾನಗಳು

**ವಿಧೇಯಕಗಳನ್ನು ಮಂಡಿಸುವ**

೧೭೧. (೧) ಈ ಸಂವಿಧಾನದ ೧೭೩ ಹಾಗೂ ೧೮೨ನೆಯ

**ಮಂಜೂರು ಮಾಡುವ ಬಗೆಗೆ ಕ್ರಮಗಳು**

ವಿಧಿಗಳನ್ವಯ ಹಣಕಾಸಿನ ಮಸೂದೆ ಹಾಗೂ ತತ್ಸಂಬಂಧ ಮಸೂದೆಗಳನ್ನು ಹೊರತುಪಡಿಸಿ, ಯಾವ ಮಸೂದೆಯನ್ನಾಗಲೀ ಶಾಸಕಾಂಗದ ವಿಧಾನಪರಿಷತ್ತನ್ನು ಹೊಂದಿದ ರಾಜ್ಯಗಳಲ್ಲಿ ಯಾವುದೇ ಸದನದಲ್ಲಿ ಮಂಡಿಸಬಹುದು.

(೨) ಈ ಸಂವಿಧಾನದ ೧೭೨ ಮತ್ತು ೧೭೩ನೆಯ ವಿಧಿಯಲ್ಲಿ ಹೇಳಿದಂತೆ, ಯಾವುದೇ ಒಂದು ಮಸೂದೆಯು ಎರಡು ಸದನಗಳಲ್ಲಿ ಅಂಗೀಕರಿಸಿದ ನಂತರವೇ ಅಂದರೆ ಎಲ್ಲಿ ವಿಧಾನ ಪರಿಷತ್ತಿದೆಯೋ ಅಲ್ಲಿ, ಯಾವ ತಿದ್ದುಪಡಿಯಿಲ್ಲದೇ ಒಪ್ಪಿದ ನಂತರವೇ ಜಾರಿಯಲ್ಲಿ ಬರುವುದು.

(೩) ಯಾವುದೇ ಒಂದು ಮಸೂದೆಯು, ಸದನದ ಅಥವಾ ಸದನಗಳ ಮುಂದೂಡುವಿಕೆಯಿಂದಾಗಿ ಚ್ಯುತಿಗೆ ಗುರಿಯಾಗಲಾರದು.

(೪) ವಿಧಾನಪರಿಷತ್ತಿನ ಮುಂದೆ ಚರ್ಚೆಗೆ ಬಂದಿರಬಹುದಾದ ಮಸೂದೆಯು, ವಿಧಾನ ಸಭೆಯು ವಿಸರ್ಜನೆಯಿಂದ ಚರ್ಚೆಯಾಗದೇ ಹೋಗಿದ್ದಲ್ಲಿ ಅದು ಚ್ಯುತಿ ಹೊಂದುವುದಿಲ್ಲ.

(೫) ಒಂದು ಮಸೂದೆಯು ವಿಧಾನಸಭೆಯಿಂದ ಮಂಜೂರಾಗಿ, ವಿಧಾನಪರಿಷತ್ತಿನ ಮುಂದೆ ಚರ್ಚೆಗೆ ಬರಬೇಕಾಗಿದ್ದ ಸಮಯದಲ್ಲಿ ವಿಧಾನಸಭೆಯನ್ನು ವಿಸರ್ಜಿಸಿದರೆ ಆ ಮಸೂದೆ ಚ್ಯುತಿಗೆ ಗುರಿಯಾಗುವುದು.

**ವಿಧಾನ ಪರಿಷತ್ತು ಹೊಂದಿರುವಲ್ಲಿ ಕೆಲವು ಸಂದರ್ಭಗಳಲ್ಲಿ ಜಂಟಿ ಅಧಿವೇಶನ ಬಗೆಗೆ**

೧೭೨. (೧) ಯಾವುದೇ ಒಂದು ಮಸೂದೆಯು ವಿಧಾನ ಸಭೆಯಿಂದ ಮಂಜೂರಾಗಿ, ವಿಧಾನಪರಿಷತ್ತಿಗೆ ಮಂಜೂರಾತಿಗೆ ಕಳುಹಿಸಿದ ಆರು ತಿಂಗಳ ಅವಧಿಯ ನಂತರವೂ ಮಸೂದೆ ಎರಡೂ ಸದನಗಳಿಂದ ಅಂಗೀಕರಿಸದೇ ಹೋದಲ್ಲಿ, ಮಸೂದೆ ವಿಸರ್ಜನೆಯ ಕಾರಣದಿಂದ ಚ್ಯುತಿಯಾಗದೇ ಹೋದ ಸಂದರ್ಭದಲ್ಲಿ ರಾಜ್ಯಪಾಲರು, ಆ ಮಸೂದೆಯ ಚರ್ಚೆಗೆಂದೇ ಜಂಟಿ ಅಧಿವೇಶನವನ್ನು ಕರೆಯಬಹುದು.

ಆದರೆ ಈ ವಿಧಾನವು ಹಣಕಾಸಿನ ಮಸೂದೆಗೆ ಅನ್ವಯಿಸಲಾಗದು.

(೨) ಆದರೆ ಈ ಆರು ತಿಂಗಳ ಅವಧಿಯುನ್ನು ನಿರ್ಣಯಿಸುವಲ್ಲಿ ಯಾವುದೇ ಸದನಗಳನ್ನು ಮುಂದೂಡಿದ ನಾಲ್ಕು ದಿನಗಳ ಅವಧಿಗೆ ಮಿಗಿಲಾದ ಸಮಯವನ್ನು ಗಣನೆಗೆ ತೆಗೆದುಕೊಳ್ಳಲಾಗದು.

(೩) ಈ ವಿಧವಾದ ಜಂಟಿ ಅಧಿವೇಶನದಲ್ಲಿ ಎರಡೂ

ಸದನಗಳ ಸದಸ್ಯರು ಹಾಜರಿದ್ದು ಮತಗಣನೆಯಲ್ಲಿ ಭಾಗವಹಿಸಿ, ತಿದ್ದುಪಡಿಗಳನ್ನು ಬಹುಮತದಿಂದ ಅಂಗೀಕರಿಸಿದರೆ ಆ ಮಸೂದೆಯು ಜಂಟಿ ಅಧಿವೇಶನದಲ್ಲಿ ಎರಡೂ ಸದನಗಳು ಅಂಗೀಕರಿಸಿದಂತೆ ಭಾವಿಸಬೇಕು

(ಎ) ವಿಧಾನಪರಿಷತ್ತಿನಿಂದ ಯಾವ ವಿಧವಾದ ತಿದ್ದುಪಡಿ ಸೂಚನೆಗಳಿಲ್ಲದೇ ವಿಧಾನಸಭೆಗೆ ಮರಳಿಸಿದಾಗ, ಯಾವ ತಿದ್ದುಪಡಿಯನ್ನು ಸೂಚಿಸುವಂತಿಲ್ಲ, ಆದರೆ ವಿಳಂಬದಿಂದಾಗಿ ಅನಿವಾರ್ಯವಾಗಿ ಸೂಚಿಸಲೇಬೇಕಾದ ತಿದ್ದುಪಡಿಗಳಿದ್ದಲ್ಲಿ ಮಂಡಿಸಬಹುದು.

(ಬಿ) ಆದರೆ ಯಾವುದೇ ಮಸೂದೆಯು ತಿದ್ದುಪಡಿಗಳೊಂದಿಗೆ ವಿಧಾನಪರಿಷತ್ತಿನಲ್ಲಿ ಮಂಜೂರಾಗಿದ್ದು ಎರಡೂ ಸದನಗಳಿಗೆ ಒಪ್ಪಿಗೆಯಾದ ತಿದ್ದುಪಡಿಗಳನ್ನು ಮಾತ್ರ ಚರ್ಚಿಸಬಹುದು.

ಈ ದಿಶೆಯಲ್ಲಿ ಜಂಟಿ ಸದನದ ಅಧ್ಯಕ್ಷ ಸ್ಥಾನದಿಂದ ನೀಡುವ ತೀರ್ಪು ಅಂತಿಮವಾದದ್ದು.

**ಹಣಕಾಸಿನ ವಿಧೇಯಕದ ಬಗೆಗೆ ವಿಶೇಷ ವಿಧಾನ**

೧೭೩. (೧) ಹಣಕಾಸಿನ ಮಸೂದೆಯನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸಲಾಗದು.

(೨) ವಿಧಾನಸಭೆಯು ಹಣಕಾಸಿನ ಮಸೂದೆಯನ್ನು ಅಂಗೀಕರಿಸಿದನಂತರ ರಾಜ್ಯ ಶಾಸಕಾಂಗದಲ್ಲಿಯ ವಿಧಾನಪರಿಷತ್ತಿನ ಸಲಹೆ ಸೂಚನೆಗಳಿಗಾಗಿ ಮಸೂದೆಯನ್ನು ಕಳಿಸಿಕೊಡಬಹುದು. ಈ ವಿಧವಾಗಿ ವಿಧಾನಸಭೆಯಿಂದ ಕಳಿಸಲಾದ ವಿಧೇಯಕವನ್ನು ಮೂವತ್ತು ದಿನಗಳ ಅವಧಿಯೊಳಗೆ ತನ್ನ ಸೂಚನೆಗಳೊಂದಿಗೆ ವಿಧಾನಪರಿಷತ್ತು ಮರಳಿಸದೇ ಹೋದರೆ ವಿಧಾನಪರಿಷತ್ತಿನ ಸಲಹೆ ಸೂಚನೆಗಳೇನಿದ್ದರೂ ಅದನ್ನು ವಿಧಾನಸಭೆ ತಳ್ಳಿಹಾಕಬಹುದು.

(೩) ಒಂದು ವೇಳೆ ವಿಧಾನಸಭೆಯು, ವಿಧಾನ ಪರಿಷತ್ತಿನಿಂದ ಸೂಚಿಸಿದ ಸಲಹೆಯನ್ನು ಅಂಗೀಕರಿಸಿದಲ್ಲಿ ಆ ವಿಧವಾದ ಹಣಕಾಸಿನ ಮಸೂದೆಯು ಶಾಸಕಾಂಗದ ಎರಡೂ ಸದನಗಳಿಂದ ಅಂಗೀಕರಿಸಿದಂತೆ.

(೪) ಒಂದು ವೇಳೆ ವಿಧಾನಸಭೆಯು, ಹಣಕಾಸಿನ ಮಸೂದೆಗೆ ವಿಧಾನಪರಿಷತ್ತು ಸೂಚಿಸಿದ ಸಲಹೆಯನ್ನು ಅಂಗೀಕರಿಸದೆ, ವಿಧೇಯಕವನ್ನು ಪಾಸುಮಾಡಿದಲ್ಲಿ ಹಣಕಾಸಿನ ಮಸೂದೆ ಅಂಗೀಕೃತವಾದಂತೆ.

(೫) ಒಂದು ವೇಳೆ ವಿಧಾನಸಭೆಯಿಂದ ಅಂಗೀಕಾರ ಪಡೆದ ಹಣಕಾಸಿನ ಮಸೂದೆಯನ್ನು ವಿಧಾನ ಪರಿಷತ್ತಿಗೆ ಕಳಿಸಿ ಮೂವತ್ತು

ದಿನಗಳಾದರೂ ವಿಧಾನಪರಿಷತ್ತು ಮಸೂದೆಯನ್ನು ಮರಳಿಸದೇ ಹೋದರೂ, ಮಸೂದೆ ಅಂಗೀಕೃತವಾದಂತೆ ಭಾವಿಸಬೇಕು.

**ಹಣಕಾಸಿನ ಮಸೂದೆಯ ಪರಿಭಾಷೆ**

೧೭೪. (೧) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಣಕಾಸಿನ ಮಸೂದೆ ಎಂದರೆ ಈ ಕೆಳಗಿನ ಯಾವ ಅಂಶಗಳನ್ನಾದರೂ ಹೊಂದಿರಬಹುದು.

(ಎ) ಕರಗಳನ್ನು ಹೇರುವ, ತೆಗೆದುಹಾಕುವ, ಕಡಿತಕ್ಕೆ ಗುರಿಮಾಡುವ, ಬದಲಾಯಿಸುವ ಕ್ರಮಗೊಳಿಸುವ ವಿಧೇಯಕಗಳು.

(ಬಿ) ಕ್ರಮಬದ್ಧವಾಗಿ ಸಾಲರೂಪದಿಂದ ಹಣ ಎತ್ತುವ, ಅಥವಾ ರಾಜ್ಯದಿಂದ ಹಣಕ್ಕೆ ಭದ್ರತೆಯನ್ನು ಒದಗಿಸುವ, ಅಥವಾ ಆರ್ಥಿಕ ಸೌಲಭ್ಯಗಳನ್ನು ಪಡೆಯಲು ಕಾನೂನಿನಲ್ಲಿ ತಿದ್ದುಪಡಿ ತರುವ ಅಥವಾ ರಾಜ್ಯದಿಂದಲೇ ವ್ಯವಹಾರ ಕೈಗೆತ್ತಿಕೊಳ್ಳುವ

(ಸಿ) ಹಣ ಒದಗಿಸುವ

(ಡಿ) ಈ ಕಾರ್ಯಕ್ಕೆಂದೇ ರಾಜ್ಯದ ಆದಾಯದಿಂದ ಹಣ ಒದಗಿಸುವ

(ಇ) ಖರ್ಚು ಮಾಡಿದ ಹಣ ರಾಜ್ಯದ ಆದಾಯದ ಲೆಕ್ಕಾಚಾರದಡಿಯಲ್ಲಿ ಜಮಾ ಖರ್ಚಿನ ಬಾಬತ್ತಿನಿಂದ ಅಥವಾ ಈ ವಿಧವಾದ ಖರ್ಚನ್ನು ಅಧಿಕಗೊಳಿಸುವ

(ಎಫ್) ಈ ದಿಶೆಯಲ್ಲಿ ಬಂದ ಹಣವನ್ನು ರಾಜ್ಯದ ಆದಾಯವೆಂದೇ ಅದರ ಹೊಣೆಗಾರಿಕೆಯನ್ನು ಹೊರುವ, ಹಾಗೂ ಹಣ ನೀಡುವ ಲೆಕ್ಕ ಪರಿಶೋಧಿಸುವ ಅಥವಾ

(ಜಿ) ಈ ಉಪನಿಬಂಧನೆಯಲ್ಲಿ ಹೇಳಲಾದ (ಎ) ಯಿಂದ (ಎಫ್) ಗೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೆ ಸೇರಬಹುದಾದ ಎಲ್ಲಾ ಸಂಗತಿಗಳನ್ನು ಹಣಕಾಸಿನ ಮಸೂದೆ ಎಂದೇ ಭಾವಿಸಬಹುದು.

(೨) ಯಾವುದೇ ಒಂದು ವಿಧೇಯಕವು ಕೇವಲ ದಂಡಗಳಿಂದ ವಿಧಿಸುವ, ಅಥವಾ ಹಣಕಾಸಿನ ಚಿಲ್ಲರೆ ದಂಡಗಳಿಂದ ಕೂಡಿರುವ, ಅಥವಾ ಲೈಸೆನ್ಸ್‌ಗಳಿಗೆ ಹಣನೀಡಿರುವ ಅಥವಾ ವಿವಿಧ ಸೇವೆಗಳಿಗಾಗಿ ಹಣ ನೀಡುವ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಕರ ಹೇರುವ, ತೆಗೆದು ಹಾಕುವ, ಕಡಿಮೆ ಮಾಡುವ ಮುಂತಾದವನ್ನು ಹಣಕಾಸಿನ ವಿಧೇಯಕವೆಂದು ಪರಿಗಣಿಸಲಾಗದು.

(೩) ವಿಧಾನ ಪರಿಷತ್ತು ಹೊಂದಿರುವ ಶಾಸಕಾಂಗದಲ್ಲಿ ಯಾವುದೇ ಒಂದು ಮಸೂದೆಯು ಹಣಕಾಸಿನ ಮಸೂದೆಯು ಹೌದು ಅಥವಾ ಅಲ್ಲವೋ ಎಂದು ನಿರ್ಧರಿಸುವ ಅಧಿಕಾರ ಕೇವಲ

ವಿಧಾನ ಸಭೆಯ ಸ್ಪೀಕರ್‌ಗೆ ಮಾತ್ರ ಸೇರಿದೆ. ಅವರ ನಿರ್ಣಯ ಅಂತಿಮ.

(೪) ಪ್ರತಿಯೊಂದು ಹಣಕಾಸಿನ ಮಸೂದೆಯನ್ನು ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ಕಳುಹಿಸಿದಾಗ ಹಾಗೂ ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಿದಾಗ, ಆ ವಿಧೇಯಕಗಳು ಹಣಕಾಸಿನ ಮಸೂದೆ ಎಂದು ಸ್ಪೀಕರರಿಂದ ಪ್ರಮಾಣ ಪತ್ರ ಹೊಂದಿರಲೇಬೇಕು.

**ಮಸೂದೆಗಳಿಗೆ ಅಂಗೀಕಾರ**

೧೭೫. ಯಾವುದೇ ಒಂದು ವಿಧೇಯಕವು ವಿಧಾನ ಸಭೆಯಿಂದ ಅಂಗೀಕರಿಸಿದಾಗ ಅಥವಾ ವಿಧಾನ ಪರಿಷತ್ ಇದ್ದ ಶಾಸಕಾಂಗದಲ್ಲಿ ಎರಡೂ ಸದನಗಳಿಂದ ಅಂಗೀಕಾರವಾದಾಗ ಆ ಮಸೂದೆಯನ್ನು ರಾಜ್ಯಪಾಲರ ಒಪ್ಪಿಗೆಗೆ ಕಳಿಸಬೇಕು. ಆಗ ರಾಜ್ಯಪಾಲರು ತಮ್ಮ ಅಂಗೀಕಾರವನ್ನು ನೀಡಬಹುದು ಅಥವಾ ರಾಷ್ಟ್ರಪತಿ ಯವರ ಅವಗಾಹನೆಗೆಂದು ತಮ್ಮ ಒಪ್ಪಿಗೆಯನ್ನು ತಡೆ ಹಿಡಿಯಬಹುದು:

ಆದರೆ ಎಲ್ಲಿ ಕೇವಲ ವಿಧಾನ ಸಭೆಯೊಂದೇ ಇದ್ದು, ವಿಧೇಯಕವನ್ನು ಅಂಗೀಕರಿಸಿ ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಿದ್ದಲ್ಲಿ ರಾಜ್ಯಪಾಲರು ತಮ್ಮ ವಿವೇಚನೆಯಿಂದ ಸಂದೇಶ ಸೂಚಿಸಿ ವಿಧೇಯಕವನ್ನು ಮರುಪರಿಶೀಲಿಸುವಂತೆ ಸದನಕ್ಕೆ ಮರಳಿಸಬಹುದು. ಈ ಸೂಚನೆಗಳನ್ನು ಸದನವು ಒಪ್ಪಿದಲ್ಲಿ ಅಥವಾ ಒಪ್ಪದೇ ವಿಧೇಯಕವನ್ನು ಮತ್ತೊಂದು ಬಾರಿ ಅಂಗೀಕರಿಸಿ ರಾಜ್ಯಪಾಲರಿಗೆ ಕಳಿಸಿದಲ್ಲಿ ರಾಜ್ಯಪಾಲರು ತಮ್ಮ ಒಪ್ಪಿಗೆಯನ್ನು ನಿರಾಕರಿಸುವಂತಿಲ್ಲ.

**ವಿಧೇಯಕಗಳ ಮರು ಪರಿಶೀಲನೆ**

೧೭೬. ಯಾವುದೇ ಒಂದು ವಿಧೇಯಕವನ್ನು ರಾಜ್ಯಪಾಲರು, ರಾಷ್ಟ್ರಪತಿಯವರ ಸಮಾಲೋಚನೆಗೆಂದೇ ಕಳಿಸಿದಲ್ಲಿ ಅವರು ತಮ್ಮ ಒಪ್ಪಿಗೆ ಸೂಚಿಸಬಹುದು ಅಥವಾ ನಿರಾಕರಿಸಲೂ ಬಹುದು:

ಆದರೆ ಆ ವಿಧೇಯಕವು ಹಣಕಾಸಿನ ಮಸೂದೆ ಯಾಗಿರದೇ ಬೇರೆ ಯಾವುದೇ ಮಸೂದೆಯಾಗಿದ್ದಾಗ ರಾಷ್ಟ್ರಪತಿಯವರು, ಅದನ್ನು ಸದನಕ್ಕೆ ಮರಳಿಸಬೇಕೆಂದು ರಾಜ್ಯಪಾಲರಿಗೆ ಸೂಚಿಸಬಹುದು. ಈ ವಿಧವಾಗಿ ಮರಳಿಸಿದ ಮಸೂದೆಯನ್ನು ಸದನ ಅಥವಾ ಸದನಗಳು ತಿದ್ದುಪಡಿಗಳೊಂದಿಗೆ ಆರು ತಿಂಗಳ ಅವಧಿಯೊಳಗೆ ಅಂಗೀಕರಿಸಿ ಅಥವಾ ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕರಿಸಿ ಮರಳಿ ಒಪ್ಪಿಗೆಗೆ ಕಳಿಸಿಕೊಡಬಹುದು.

## ಹಣಕಾಸಿನ ವಿಷಯಗಳ ಬಗೆಗೆ ಅನುಸರಿಸಬೇಕಾದ ಕ್ರಮಗಳು

**ವಾರ್ಷಿಕ ಹಣಕಾಸಿನ ವರದಿ**

೧೭೭. (೧) ಈ ಸಂವಿಧಾನದ ಭಾಗದಲ್ಲಿ ಹೇಳಲಾದಂತೆ, ರಾಜ್ಯಪಾಲರು ಪ್ರತಿವರ್ಷ ಶಾಸಕಾಂಗದ ಸದನಗಳ ಮುಂದೆ, ರಾಜ್ಯದ ಅಂದಾಜು ಆದಾಯ ಖರ್ಚುಗಳ "ಹಣಕಾಸಿನ ವರದಿ" ಒಂದನ್ನು ಮಂಡಿಸಬೇಕು:

(೨) ಈ ಅಂದಾಜು ಪ್ರತಿಕೆಯಲ್ಲಿ ಹಣಕಾಸಿನ ವರ್ಷದ ಖರ್ಚುಗಳನ್ನು ಬೇರೆ ಬೇರೆಯಾಗಿ ತೋರಿಸಬೇಕು :

(ಎ) ಸಂವಿಧಾನದಲ್ಲಿ ಸೂಚಿಸಿದಂತೆ ರಾಜ್ಯಕ್ಕೆಂದು ವ್ಯಯಮಾಡಿದ ಹಣವನ್ನು ರಾಜ್ಯದ ಆದಾಯದಿಂದಲೇ ಪಡೆಯಬೇಕು.

(ಬಿ) ಬೇರೆಯ ಖರ್ಚುಗಳಿಗಾಗಿ ಸೂಚಿಸಲಾದ ಮೊತ್ತವನ್ನೂ ಆದಾಯದಿಂದ ಪಡೆದಂತೆ ವಿವಿಧ ಲೆಕ್ಕಾಚಾರ ತೋರಿಸಬೇಕು.

(೩) ಈ ಕೆಳಗಿನ ಖರ್ಚುವೆಚ್ಚಗಳನ್ನು ರಾಜ್ಯದ ಆದಾಯದ ಲೆಕ್ಕದಿಂದ ಪಡೆಯಬೇಕು.

(ಎ) ರಾಜ್ಯಪಾಲರ ಕಾರ್ಯಾಲಯದ ವೆಚ್ಚ ಹಾಗೂ ಅವರಿಗೆ ನೀಡಲಾದ ವೇತನದ ಹಣ ಮತ್ತು ಭತ್ತೆಗಳು.

(ಬಿ) ವಿಧಾನ ಸಭೆಯ ಹಾಗೂ ವಿಧಾನ ಪರಿಷತ್ತಿದ್ದಲ್ಲಿ ಈ ಸಭೆಗಳ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ನೀಡುವ ವೇತನ ಹಾಗೂ ಭತ್ತೆಗಳು.

(ಸಿ) ರಾಜ್ಯದಿಂದ ಮಾಡಲಾದ ಸಾಲ ಹಾಗೂ ಅದರ ಬಡ್ಡಿ ಈ ಸಾಲಗಳನ್ನು ಎತ್ತುವಲ್ಲಿ ಆದ ಖರ್ಚು ವೆಚ್ಚ ಹಾಗೂ ಸಾಲದಿಂದ ಮುಳುಗಡೆಯಾದ ಹಣ ಅಥವಾ ಮಾಫಿ ಮಾಡಲಾದ ಸಾಲದ ಮೊತ್ತ

(ಡಿ) ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ನೀಡಿದ ವೇತನ ಹಾಗೂ ಭತ್ತೆಗಳು.

(ಇ) ಕೋರ್ಟು ಅಥವಾ ನ್ಯಾಯಮಂಡಳಿಗಳಿಂದ ನೀಡಿದ ತೀರ್ಪಿನಂತೆ ಸೂಚಿಸಿದ ಮೊತ್ತಗಳು.

(ಎಫ್) ರಾಜ್ಯದ ಶಾಸಕಾಂಗವು ಸಂವಿಧಾನದನ್ವಯವಾಗಿ ಸೂಚಿಸಬಹುದಾದ ಇತರ ವೆಚ್ಚಗಳು.

**ಅಂದಾಜು ಪತ್ರಿಕೆಯ ಬಗೆಗೆ ಅನುಸರಿಸಬೇಕಾದ ಕ್ರಮಗಳು**

೧೭೮. (೧) ಈ ಮೇಲೆ ಸೂಚಿಸಿದ ಖರ್ಚುಗಳನ್ನು ರಾಜ್ಯದ ಆದಾಯದಿಂದ ಪಡೆದರೂ, ಅದನ್ನು ವಿಧಾನಸಭೆಯ ಮತದಾನಕ್ಕೆ ಮಂಡಿಸಲಾಗದು, ಆದರೆ ವಿಧಾನಸಭೆಯಲ್ಲಿಯ

ಮುಂಗಡ ಪತ್ರಿಕೆಯನ್ನು ಚರ್ಚಿಸುವಾಗ ಇದರ ಬಗೆಗೂ ಚರ್ಚೆ ಮಾಡಬಾರದೆಂದು ಭಾವಿಸಬಾರದು.

(೨) ಬೇರೆ ವಿಷಯಗಳಿಗಾಗಿ ಖರ್ಚು ಮಾಡಬಹುದಾದ ಮೊತ್ತವನ್ನು ವಿಧಾನಸಭೆಯ ಮುಂದೆ ಮಂಡಿಸಿ, ಅದರ ಅನುಮೋದನೆಯೊಂದಿಗೆ, ಚರ್ಚೆಯ ನಂತರ ಪಡೆಯಲಾಗುವುದು. ಈ ಖರ್ಚುವೆಚ್ಚಗಳ ಬಗೆಗೆ ಅನುಮೋದಿಸುವ ಹಾಗೂ ನಿರಾಕರಿಸುವ ಅಧಿಕಾರ ವಿಧಾನಸಭೆಗೆ ಇದೆ.

(೩) ಯಾವುದೇ ಹಣಕಾಸಿನ ಬೇಡಿಕೆಯನ್ನು ರಾಜ್ಯಪಾಲರ ಶಿಫಾರಸ್ಸಿನಿಂದಲೇ ಪಡೆಯಬೇಕು.

**ಪರಿಶಿಷ್ಟ ಬೇಡಿಕೆಗಳ ಕ್ರಮಬದ್ಧತೆ ಬಗೆಗೆ ದೃಢೀಕರಣ**

೧೭೯. ಈ ಕೆಳಕಂಡ ತಪ್ಸಿನಲ್ಲಿ ತಿಳಿಸಿರಬಹುದಾದ ವಿಷಯಗಳನ್ನು ರಾಜ್ಯಪಾಲರು ತಮ್ಮ ಸಹಿಯ ಮುಖಾಂತರ ಪ್ರಮಾಣೀಕರಿಸಬೇಕು :–

(ಎ) ಹಿಂದಿನ ವಿಧಿಯಲ್ಲಿ ತಿಳಿಸಿದ ವಿಧಾನ ಸಭೆಯಿಂದ ಅನುದಾನಗಳು

(ಬಿ) ಸದನದ ಮುಂದೆ ಇಡಲಾದ ಅಧಿಕೃತ ಖರ್ಚಿನ ಪತ್ರಿಕೆ ಹಾಗೂ ಅದರ ವಿವರಣೆ.

(೨) ಈ ವಿಧವಾಗಿ ಪ್ರಮಾಣೀಕರಿಸಿದ ತಪ್ಸೀಲಿನ ಪಟ್ಟಿಯನ್ನು ಸದನದ ಮುಂದೆ ಚರ್ಚೆಗಾಗಿ ಹಾಗೂ ಮತದಾನಕ್ಕಾಗಿ ಮಂಡಿಸಬೇಕು.

(೩) ಮುಂದಿನ ಎರಡು ವಿಧಿಗಳಲ್ಲಿ ತಿಳಿಸದಂತೆ ರಾಜ್ಯದ ಆದಾಯದ ಯಾವ ಖರ್ಚಿನ ಬಾಬತ್ತುಗಳು ತಪ್ಸೀಲಿನಂತೆ ಪ್ರಮಾಣೀಕರಿಸದೇ ಖರ್ಚುಮಾಡುವಂತಿಲ್ಲ.

**ವಿಶೇಷ ಖರ್ಚುಗಳ ಬಗ್ಗೆ ಪುರವಣಿ ಘೋಷಣೆ**

೧೮೦. ಒಂದು ಹಣಕಾಸಿನ ವರ್ಷದ ರಾಜ್ಯದ ಆದಾಯ ದಿಂದ ನಿಗದಿಗೊಳಿಸಿದ ಮೊತ್ತಕ್ಕಿಂತ ಅಧಿಕವಾದ ಖರ್ಚಿನ ಬಗೆಗೆ ರಾಜ್ಯಪಾಲರು ವಿಶೇಷ ಮುಂಗಡ ಪತ್ರವನ್ನು ಸದನದ ಅಥವಾ ಸದನಗಳ ಮುಂದೆ ಮಂಡಿಸಿ ಒಪ್ಪಿಗೆ ಪಡೆಯಬಹುದು.

**ಅಧಿಕ ಅನುದಾನ**

೧೮೧. * ಹಣಕಾಸಿನ ವರುಷದ ಯಾವುದೇ ಖರ್ಚುವೆಚ್ಚ ರಾಜ್ಯದ ಆದಾಯಕ್ಕಿಂತ, ವಿಧಾನ ಸಭೆಯ ಮತದಾನದ ಮೂಲಕ ಮಂಜೂರಾಗಿದ್ದ ಮೊತ್ತಕ್ಕಿಂತ ಅಧಿಕವಾಗಿದ್ದಲ್ಲಿ ಈ ವಿಧಾನದ ಅಧಿಕ ಮೊತ್ತವನ್ನು ಸಂವಿಧಾನದ ೧೭೮ ಮತ್ತು ೧೭೯ ವಿಧಿಯಂತೆ

---

* ಈ ವಿಧಿಯನ್ನು ಹಣಕಾಸಿನ ತಜ್ಞರ ಸಮಿತಿಯ ವರದಿಯ ಆಧಾರದಂತೆ ಸೇರ್ಪಡಿಸಿದೆ.

ವಿಧಾನ ಸಭೆಯಲ್ಲಿ ಮಂಡಿಸಿ ಮಂಜೂರಾತಿಯನ್ನು ಪಡೆಯಬಹುದು.

**ಹಣಕಾಸಿನ ವಿಷಯಕ್ಕೆ ವಿಶೇಷ ವ್ಯವಸ್ಥೆ**

೧೮೨. (೧) ಸಂವಿಧಾನದ ೧೭೪ನೇ ವಿಧಿಯ (ಎ) ಯಿಂದ (ಎಫ್)ನಲ್ಲಿ ಸೂಚಿಸಿದ ವಿಷಯಗಳಿಗೆ ಸಂಬಂಧಿಸಿದ ವಿಧೇಯಕ ಹಾಗೂ ತಿದ್ದುಪಡಿಗಳನ್ನು ರಾಜ್ಯಪಾಲರ ಸಮ್ಮತಿ ಪಡೆಯದೇ ಮಂಡಿಸಲಾಗದು. ಅಲ್ಲದೆ ಈ ಬಗೆಯ ಹಣಕಾಸಿನ ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸುವಂತಿಲ್ಲ.

ಅಲ್ಲದೇ ಈ ವಿಧವಾದ ಮಸೂದೆಗಳಿಗೆ ಯಾವ ಬಗೆಯ ಕಡಿತವನ್ನು ಸೂಚಿಸುವ ಅಥವಾ ತಿದ್ದುಪಡಿಯ, ಅಥವಾ ತೆಗೆದು ಹಾಕುವ ಶಿಫಾರಸ್ಸುಗಳನ್ನು ತೆರಿಗೆಗೆ ಸಂಬಂಧಿಸಿದಂತೆ ಈ ವಿಧಿಯಡಿಯಲ್ಲಿ ತರಲಾಗದು.

(೨) ಮೇಲೆ ಹೇಳಲಾದ ವಿಷಯಗಳಿಗೆ ಸಂಬಂಧಿಸಿದಂತೆ ದಂಡ ವಿಧಿಸುವ, ಇತರ ಹಣಕಾಸಿನ ದಂಡಗಳು, ಅಥವಾ ಲೈಸೆನ್ಸ್‌ಗೆ ಸಂಬಂಧಿಸಿದ ಕರಾಕರಣೆ ಅಥವಾ ಸಲ್ಲಿಸಿದ ಸೇವೆಗಳ ಶುಲ್ಕ ಹಾಗೂ ಕರದಲ್ಲಿ ಬದಲಾವಣೆ ಹಾಗೂ ಸ್ಥಳೀಯ ಅಧಿಕಾರ ಮತ್ತು ಸಂಸ್ಥೆಗಳಿಂದ ಈ ಉದ್ದೇಶಕ್ಕೆಂದೇ ಆಕರಿಸುವ ಬಗೆಯ ವಿಧೇಯಕಗಳು.

(೩) ಯಾವುದೇ ವಿಧೇಯಕದ ಅಂಗೀಕಾರದಿಂದಾಗಿ ರಾಜ್ಯದ ಆದಾಯಕ್ಕೆ ಸೇರಿದಂತೆ ಖರ್ಚು ತಗಲುವಲ್ಲಿ, ಆ ವಿಧೇಯಕವನ್ನು ರಾಜ್ಯಪಾಲರ ಅನುಮತಿ ಇಲ್ಲದೆ ವಿಧಾನ ಸಭೆಯು ಮಂಜೂರು ಮಾಡುವಂತಿಲ್ಲ.

## ಸಾಮಾನ್ಯ ಕಾರ್ಯವಿಧಾನಗಳು

**ಕಾರ್ಯವಿಧಾನದ ನಿಯಾಮವಳಿ**

೧೮೩. (೧) ರಾಜ್ಯದ ಶಾಸಕಾಂಗವು ಸಂವಿಧಾನಕ್ಕನುಗುಣವಾಗಿ ತನ್ನ ವ್ಯವಹಾರಗಳನ್ನು ಕ್ರಮಬದ್ಧವಾಗಿ ಜರುಗಿಸುವ ನಿಯಮಾವಳಿಗಳನ್ನು ರಚಿಸಬಹುದು.

(೨) ಈ ಉಪನಿಬಂಧನೆ (೧)ರಲ್ಲಿ ಸೂಚಿಸಿದ ನಿಯಮಾವಳಿಗಳನ್ನು ರಚಿಸುವುದಕ್ಕೆ ಮುನ್ನ, ಈ ಹಿಂದೆ ಜಾರಿಯಲ್ಲಿದ್ದ ಪ್ರಾಂತೀಯ ಶಾಸನಸಭೆಯ ನಿಯಮಾವಳಿಗಳೇ ಸದ್ಯದಲ್ಲಿ ಜಾರಿಯಲ್ಲಿದ್ದು, ಸಭಾಧ್ಯಕ್ಷರು ಸೂಚಿಸಬಹುದಾದ ಬದಲಾವಣೆಯೊಂದಿಗೆ ವಿಧಾನಸಭೆ ಹಾಗೂ ವಿಧಾನಪರಿಷತ್ತಿನ ಕಾರ್ಯಕಲಾಪಗಳನ್ನು ಮುಂದುವರಿಸಿಕೊಂಡು ಹೋಗಬಹುದು.

(೩) ಯಾವ ರಾಜ್ಯದಲ್ಲಿ ವಿಧಾನಪರಿಷತ್ತಿದೆಯೋ ಅಲ್ಲಿ ರಾಜ್ಯಪಾಲರು ವಿಧಾನಸಭೆ ಹಾಗೂ ವಿಧಾನಪರಿಷತ್ತಿನ ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಜಂಟಿ ಅಧಿವೇಶನದ ಸಭೆಯ ಸಮಾವೇಶನದ ಬಗೆಗೆ ನಿರ್ಣಯ ತೆಗೆದುಕೊಳ್ಳಬಹುದು.

(೪) ಈ ವಿಧವಾದ ಜಂಟಿ ಅಧಿವೇಶನದ ಅಧ್ಯಕ್ಷತೆಯನ್ನು ವಿಧಾನಸಭೆಯ ಅಧ್ಯಕ್ಷ* ಅಥವಾ ಅವರ ಗೈರುಹಾಜರಿಯಲ್ಲಿ ಮೇಲಿನ ಉಪನಿಬಂಧನೆ (೩)ರಲ್ಲಿ ಸೂಚಿಸಿದ ವಿಧಾನದಂತೆ ಅಧ್ಯಕ್ಷ ಸ್ಥಾನವನ್ನು ವಹಿಸಬಹುದು.

**ರಾಜ್ಯದ ಶಾಸಕಾಂಗದಲ್ಲಿ ಉಪಯೋಗಿಸಬೇಕಾದ ಭಾಷೆ**

೧೮೪. (೧) ರಾಜ್ಯದ ಶಾಸನಸಭೆಗಳಲ್ಲಿ ಸಾಮಾನ್ಯವಾಗಿ ವ್ಯವಹಾರವನ್ನು ರಾಜ್ಯದ ಪ್ರಾದೇಶಿಕ ಭಾಷೆ ಹಿಂದಿ ಅಥವಾ ಇಂಗ್ಲಿಷ್ ಭಾಷೆಗಳಲ್ಲಿ ನಡೆಸಬೇಕು.

(೨) ವಿಧಾನಸಭೆಯ ಅಧ್ಯಕ್ಷ ಅಥವಾ ವಿಧಾನಪರಿಷತ್ತಿನ ಅಧ್ಯಕ್ಷರು ತಮಗೆ ಸೂಕ್ತವೆಂದು ತೋರಿಸಿದಾಗ ರಾಜ್ಯದ ಆಡುಭಾಷೆಯಲ್ಲಿ ಅಥವಾ ಸದಸ್ಯರಿಗೆ ಅನುಕೂಲಕ್ಕೆ ಆಂಗ್ಲ ಭಾಷೆಯ ಭಾಷಾಂತರವನ್ನು ಸಾರಾಂಶ ರೂಪದಲ್ಲಿ ಒದಗಿಸಬಹುದು. ಈ ವಿಧವಾದ ಭಾಷಾಂತರದ ಸಾರಾಂಶವನ್ನು ಸದನದ ದಾಖಲೆ ಎಂದೇ ಭಾವಿಸಿ ನಡವಳಿಕೆಯಲ್ಲಿ ಸೇರ್ಪಡಿಸಬೇಕು.

**ಸದನಗಳಲ್ಲಿಯ ಚರ್ಚೆಯ ಮೇಲೆ ನಿರ್ಬಂಧಗಳು**

೧೮೫. (೧) ಸದನದಲ್ಲಿ ಸರ್ವೋಚ್ಚ ನ್ಯಾಯಾಲಯ ಹಾಗೂ ಶ್ರೇಷ್ಠ ನ್ಯಾಯಾಲಯಗಳ ನ್ಯಾಯಾಧೀಶರ ಕಾರ್ಯಾಚರಣೆಯ ಬಗೆಗೆ ಚರ್ಚಿಸಲಾಗದು.

(೨) ಈ ವಿಧಿಯಲ್ಲಿ ಹೇಳಲಾದ ಶ್ರೇಷ್ಠ ನ್ಯಾಯಾಲಯಗಳೆಂದರೆ ಸಂವಿಧಾನದ ಮೊದಲನೆಯ ಅನುಬಂಧ ಭಾಗ III ರಲ್ಲಿ ಸದ್ಯ ಸೂಚಿಸಿದ ಹಾಗೂ ಉದ್ದೇಶಕ್ಕೆ ಈ ಸಂವಿಧಾನದ Vಭಾಗ ಪ್ರಕರಣ IV ರಲ್ಲಿ ತಿಳಿಸಲಾದ ಎಲ್ಲಾ ನ್ಯಾಯಾಲಯಗಳು.

**ಶಾಸಕಾಂಗದ ಕಾರ್ಯ ಕಲಾಪಗಳನ್ನು ನ್ಯಾಯಾಲಯ ಪ್ರಶ್ನಿಸುವಂತಿಲ್ಲ**

೧೮೬. (೧) ರಾಜ್ಯದ ಶಾಸನ ಸಭೆಯಲ್ಲಿಯ ಕಾರ್ಯ ಕಲಾಪಗಳ ವಿಧಾನವು ಅಕ್ರಮವೆಂದು ಯಾವ ನ್ಯಾಯಾಲಯ ದಲ್ಲಿಯೂ ಪ್ರಶ್ನಿಸಲಾಗದು.

(೨) ಯಾವ ಅಧಿಕಾರಿ ಅಥವಾ ರಾಜ್ಯದ ಶಾಸಕಾಂಗದ ಸದಸ್ಯನಲ್ಲಿ ಕಾರ್ಯಕಲಾಪಗಳನ್ನು ಜರುಗಿಸುವ ಅಧಿಕಾರ ಹೊಂದಿರುವರೋ ಅವರ ಕಾರ್ಯಾಡಳಿತ ವಿಧಾನವನ್ನು ಅಥವಾ

---

* ವಿಧಾನಸಭೆಯ ಸದಸ್ಯರೇ ಅಧಿಕ ಸಂಖ್ಯೆಯಲ್ಲಿರುವುದರಿಂದ, ಅದರ ಅಧ್ಯಕ್ಷರೇ ಜಂಟಿ ಸದನಗಳ ಅಧ್ಯಕ್ಷತೆಯನ್ನು ವಹಿಸಬೇಕೆಂಬ ತೀರ್ಮಾನಕ್ಕೆ ಸಮಿತಿ ಬಂದಿದೆ.

ಅವರು ಸದನದ ಕಲಾಪಗಳಿಗೆ ಸಂಬಂಧಿಸಿದಂತೆ ನೀಡಿದ ಆಜ್ಞೆಗಳನ್ನು ವಿಚಾರಿಸುವ ಅಧಿಕಾರ ವ್ಯಾಪ್ತಿ ನ್ಯಾಯಾಲಯಗಳಿಗಿಲ್ಲ.

## ಪ್ರಕರಣ IV ರಾಜ್ಯಪಾಲರ ಶಾಸನಾಧಿಕಾರಗಳು

**ಶಾಸಕಾಂಗದ ಗೈರುಹಾಜರಿಯಲ್ಲಿ ಸುಗ್ರೀವಾಜ್ಞೆಗಳನ್ನು ಜಾರಿಗೊಳಿಸುವ ರಾಜ್ಯಪಾಲರ ಅಧಿಕಾರ**

೧೮೭. (೧) ಯಾವುದೇ ಸಮಯದಲ್ಲಿ ವಿಧಾನಸಭೆಯ ಅಧಿವೇಶನ ಹಾಗೂ ವಿಧಾನಪರಿಷತ್ತಿನ ಅಧಿವೇಶನದ ಸಮಯ ಹೊರತು ಪಡಿಸಿ ರಾಜ್ಯಪಾಲರಿಗೆ ಮನವರಿಕೆಯಾದಾಗ ತುರ್ತು ಕಾರ್ಯಾಚರಣೆಗಾಗಿ ಸುಗ್ರೀವಾಜ್ಞೆಯನ್ನು ಹೊರಡಿಸಬಹುದು.

ಆದರೆ ಈ ವಿಧವಾದ ರಾಜ್ಯಪಾಲರಿಂದ ಹೊರಡಿಸಿದ ಸುಗ್ರೀವಾಜ್ಞೆಗೆ ರಾಷ್ಟ್ರಪತಿಯವರ ಸೂಚನೆ ಇಲ್ಲದೆ ಹಾಗೂ ಸಂವಿಧಾನದನ್ವಯ, ಶಾಸಕಾಂಗವು ರಚಿಸಿದ ವಿಧೇಯಕವು ಸಂವಿಧಾನ ವಿರೋಧವಾಗಿದ್ದಲ್ಲಿ ಅಥವಾ ರಾಷ್ಟ್ರಪತಿಯವರ ಅನುಮೋದನೆಗೆ ಕಳಿಸಿರಬಹುದಾದ ಹಾಗೂ ಅವರಿಂದ ಸಮ್ಮತಿ ದೊರಕಿದ ವಿಧೇಯಕಗಳಿಗೆ ಸಂಬಂಧಿಸಿರಕೂಡದು.

(೨) ಈ ವಿಧವಾಗಿ ಈ ವಿಧಿಯಡಿಯಲ್ಲಿ ಹೊರಡಿಸಲಾದ ಸುಗ್ರೀವಾಜ್ಞೆಗಳು, ಶಾಸಕಾಂಗದಿಂದ ಅಂಗೀಕರಿಸಿದ ಕಾಯ್ದೆಯ ಸ್ಥಾನಮಾನಗಳನ್ನೇ ಹೊಂದಿರುತ್ತವೆ. ಆದರೆ ಈ ವಿಧವಾದ ಪ್ರತಿಯೊಂದು ಸುಗ್ರೀವಾಜ್ಞೆಯೂ:

(ಎ) ವಿಧಾನಸಭೆ ಎಲ್ಲಿ ವಿಧಾನಪರಿಷತ್ತಿದೆಯೋ ಅಲ್ಲಿ ಸುಗ್ರೀವಾಜ್ಞೆ ಜಾರಿಗೊಂಡ ಆರು ವಾರಗಳಲ್ಲಿ ಸದನದಿಂದ ಮಂಜೂರಾತಿ ಪಡೆಯಬೇಕು ಅಥವಾ ಸದನಗಳು ತಿರಸ್ಕರಿಸಿದಲ್ಲಿ ಸುಗ್ರೀವಾಜ್ಞೆ ತಾನೇ ತಾನಾಗಿ ತೆರವುಗೊಳ್ಳುತ್ತದೆ.

(ಬಿ) ಈ ವಿಧವಾದ ಸುಗ್ರೀವಾಜ್ಞೆಯನ್ನು ಹೊರಡಿಸಿದ ರಾಜ್ಯಪಾಲರು ಯಾವುದೇ ಸಮಯದಲ್ಲಿ ಅದನ್ನು ಮರಳಿ ಪಡೆಯಲೂಬಹುದು.

ವಿವರಣೆ : ಎಲ್ಲಿ ಶಾಸಕಾಂಗವು ವಿಧಾನ ಪರಿಷತ್ತನ್ನು ಹೊಂದಿದ್ದು ಅವುಗಳನ್ನು ಬೇರೆ ಬೇರೆ ದಿನಾಂಕಗಳಲ್ಲಿ ಮರು ಅಧಿವೇಶನವನ್ನು ಕರೆದಿದ್ದಾಗ ಆರು ವಾರದ ಅವಧಿಯನ್ನು ತಡವಾಗಿ ಕರೆಯಲಾದ ದಿನಾಂಕದಿಂದ ಪರಿಗಣಿಸಲಾಗುವುದು.

(೩) ಹೀಗೆ ಹೊರಡಿಸಲಾದ ಸುಗ್ರೀವಾಜ್ಞೆಯ ಬಗೆಗೆ ಸದನವು ಕಾನೂನನ್ನು ಪೂರ್ಣ ಅಥವಾ ಅಂಶತಃವಾಗಿ ರಾಜ್ಯಪಾಲರಿಂದ ಅಂಗೀಕರಿಸಿದ್ದಲ್ಲಿ ಸುಗ್ರೀವಾಜ್ಞೆ ರದ್ದಾಗುವುದು.

ಆದರೆ ಸಂವಿಧಾನಕ್ಕೆ ಸೇರಿದಂತೆ, ರಾಜ್ಯದ ಶಾಸಕಾಂಗವು ರಚಿಸಿದ ವಿಧೇಯಕವು ಸಂಸತ್ತಿನಿಂದ ಹೊರಬಿದ್ದ ಕಾಯ್ದೆಗೆ ವಿರೋಧವಾಗಿದ್ದಲ್ಲಿ ಅಥವಾ ಸಮವರ್ತಿ ಪಟ್ಟಿಯಲ್ಲಿದ್ದ ವಿಷಯಕ್ಕೆ ಸಂಬಂಧಿಸಿದ್ದು, ಈ ಬಗೆಗೆ ಹೊರಡಿಸಿರಬಹುದಾದ ಆಜ್ಞೆಗೆ ರಾಷ್ಟ್ರಪತಿಯವರು ಸಲಹೆ ನೀಡಿದ್ದಲ್ಲಿ, ಅದು ರಾಜ್ಯದ ಶಾಸಕಾಂಗದ ಕಾನೂನೆಂದೇ ಭಾವಿಸಬಹುದು.

## ಪ್ರಕರಣ V ತುರ್ತು ಅಥವಾ ಗಂಡಾಂತರ ಪರಿಸ್ಥಿತಿಯಲ್ಲಿ ಮುನ್ನೇರ್ಪಾಡುಗಳು

**ಗಂಡಾಂತರ ಪರಿಸ್ಥಿತಿಯಲ್ಲಿ ರಾಜ್ಯಪಾಲರ ಅಧಿಕಾರ**

೧೮೮. (೧) ಯಾವುದೇ ಸಂದರ್ಭದಲ್ಲಿ ರಾಜ್ಯದ ರಾಜ್ಯಪಾಲರಿಗೆ, ಗಂಡಾಂತರ ಪರಿಸ್ಥಿತಿ ಉದ್ಭವಿಸಿದೆ ಎಂದು ಮನವರಿಕೆಯಾದಾಗ, ಗಂಡಾಂತರ ಪರಿಸ್ಥಿತಿಯಿಂದ ರಾಜ್ಯದ ಆಡಳಿತೆಗೆ ಅಪಾಯ ಒದಗಬಹುದೆಂದು ಅವರು ವಿವೇಚಿಸಿದಲ್ಲಿ ಅವರು ತುರ್ತು ಪರಿಸ್ಥಿತಿಯನ್ನು ಸಾರಬಹುದು. ಅಲ್ಲದೆ ಸಂವಿಧಾನದಲ್ಲಿ ಈ ಬಗೆಗೆ ತಿಳಿಸಿದ ಸೂಕ್ತ ಕ್ರಮಗಳನ್ನು ಕೈಗೆತ್ತಿಕೊಳ್ಳಬಹುದು. ಈ ಕಾರ್ಯಾಚರಣೆಗೆಂದೇ ಸಂವಿಧಾನವನ್ನು ಪೂರ್ಣ ಹಾಗೂ ಅಂಶತಃವಾಗಿ ಸ್ಥಗಿತಗೊಳಿಸಲೂಬಹುದು.

ಆದರೆ ಈ ಉಪನಿಬಂಧನೆಯಲ್ಲಿ ಹೇಳಿದ ಗಂಡಾಂತರ ಪರಿಸ್ಥಿತಿಯಲ್ಲಿ ರಾಜ್ಯಪಾಲರು ಶ್ರೇಷ್ಠ ನ್ಯಾಯಾಲಯದ ಕಾರ್ಯಾಚರಣೆಯನ್ನು ಸಂಪೂರ್ಣ ಹಾಗೂ ಅಂಶತಃವಾಗಿ ನಿಷೇಧಿಸುವಂತಿಲ್ಲ.

(೨) ಈ ವಿಧವಾಗಿ ಸಾರಲಾದ ಗಂಡಾಂತರ ಪರಿಸ್ಥಿತಿಯನ್ನು ರಾಜ್ಯಪಾಲರು ಕೂಡಲೇ ರಾಷ್ಟ್ರಪತಿಗಳ ಅವಗಾಹನೆಗೆ ತರಬೇಕು. ಸಂವಿಧಾನದ ೨೭೮ನೇ ವಿಧಿಯಂತೆ ರಾಷ್ಟ್ರಪತಿಯವರು, ಗಂಡಾಂತರ ಪರಿಸ್ಥಿತಿಯನ್ನು ತೆಗೆದು ಹಾಕುವ ಅಥವಾ ಜಾರಿಗೊಳಿಸುವ ಅಧಿಕಾರವನ್ನು ಹೊಂದಿದ್ದಾರೆ.

(೩) ಈ ವಿಧವಾಗಿ ಸಾರಿದ ಘೋಷಣೆಯು ಎರಡು ವಾರದ ಅವಧಿಯ ನಂತರ ಕಾರ್ಯಾಚರಣೆಯಲ್ಲಿರದು ಅಥವಾ ಈ ಅವಧಿಯ ಮುನ್ನವೇ ರಾಜ್ಯಪಾಲರು ಅಥವಾ ರಾಷ್ಟ್ರಪತಿಯವರು ಅದನ್ನು ತೆಗೆದು ಹಾಕಬಹುದು.

(೪) ಈ ಸಮಯದಲ್ಲಿ ರಾಜ್ಯಪಾಲರು ತಮ್ಮ ವಿವೇಚನೆಗೆ ಅನುಗುಣವಾಗಿ ಕಾರ್ಯಾಚರಣೆ ಮಾಡಬಹುದು.

## ಪ್ರಕರಣ VI ಪರಿಶಿಷ್ಟ ಮತ್ತು ಬುಡಕಟ್ಟು ಪ್ರದೇಶಗಳು

**ಪರಿಭಾಷೆಗಳು**

೧೮೯. ಈ ಸಂವಿಧಾನದಲ್ಲಿ

(ಎ) "ಪರಿಶಿಷ್ಟ ಪ್ರದೇಶಗಳು" ಎಂದರೆ ಸಂವಿಧಾನದ ಐದನೆಯ ಅನುಬಂಧದ ಭಾಗ I ರಿಂದ VII ರಲ್ಲಿಯ ೧೮ನೇ ಪ್ಯಾರಾದಲ್ಲಿ ಸೂಚಿಸಲಾದ ಪ್ರದೇಶಗಳೆಂದೇ ತಿಳಿಯಬೇಕು. ಈ ಪ್ರದೇಶಗಳು ಯಾವ ರಾಜ್ಯದ ಪ್ರದೇಶಗಳಲ್ಲಿವೆಯೋ ಆ ಪ್ರದೇಶಗಳಿಗೆ ಮಾತ್ರ ಅನ್ವಯಿಸುತ್ತದೆ.

(ಬಿ) "ಬುಡಕಟ್ಟು ಪ್ರದೇಶ" ಎಂದರೆ ಸಂವಿಧಾನದ ಆರನೆಯ ಅನುಬಂಧದ ಭಾಗ I ಮತ್ತು IIಪ್ಯಾರಾ ೧೯ರಲ್ಲಿ ಸೂಚಿಸಲಾದ ಪ್ರದೇಶಗಳು.

**ಬುಡಕಟ್ಟು ಹಾಗೂ ಪರಿಶಿಷ್ಟ ಪ್ರದೇಶಗಳ ಆದೇಶ**

೧೯೦. (೧) ಸಂವಿಧಾನದ ಐದನೆಯ ಅನುಬಂಧದಲ್ಲಿ ಸೂಚಿಸಿದ ಅಂಶಗಳು ಪರಿಶಿಷ್ಟ ಹಾಗೂ ಬುಡಕಟ್ಟು ಪ್ರದೇಶಗಳ ಆಡಳಿತಕ್ಕೆ ಸದ್ಯದಲ್ಲಿ ಮೊದಲನೆಯ ಅನುಬಂಧದ ಭಾಗ I ರಲ್ಲಿ ತಿಳಿಸಿದಂತೆ ನಡೆಸತಕ್ಕದ್ದು.

(೨) ಆರನೆಯ ಅನುಬಂಧದಲ್ಲಿ ಸೂಚಿಸಿದ ಅಂಶಗಳು ಅಸ್ಸಾಂ ರಾಜ್ಯದ ಬುಡಕಟ್ಟು ಪ್ರದೇಶದ ಆಡಳಿತಕ್ಕೆ ಅನ್ವಯಿಸುವವು.

## ಪ್ರಕರಣ VII ರಾಜ್ಯಗಳ ಶ್ರೇಷ್ಠ ನ್ಯಾಯಾಲಯಗಳು

**ಶ್ರೇಷ್ಠ ನ್ಯಾಯಾಲಯ ಅರ್ಥ ವಿವರಣೆ**

೧೯೧. (೧) ಸಂವಿಧಾನದ ಉದ್ದೇಶಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ನ್ಯಾಯಾಲಯಗಳನ್ನು ಅವುಗಳಿಗೆ ಸೇರಿದ ಪ್ರದೇಶಗಳಿಗನುಗುಣವಾಗಿ ಮೊದಲನೆಯ ಅನುಬಂಧದ ಭಾಗ III ರಲ್ಲಿ ಸೂಚಿಸಿದ ನ್ಯಾಯಾಲಯವೆಂದು ಪರಿಗಣಿಸಲಾಗಿದೆ:

(ಎ) ಕಲ್ಕತ್ತಾ, ಮದ್ರಾಸ್, ಬೊಂಬಾಯಿ, ಅಲಹಾಬಾದ್, ಪಾಟ್ನಾ ಮತ್ತು ನಾಗಪುರ, ಪೂರ್ವ ಪಂಜಾಬು ಹಾಗೂ ಔದ್ ಮುಖ್ಯ ನ್ಯಾಯಾಲಯಗಳು.

(ಬಿ) ಈ ರಾಜ್ಯಗಳಲ್ಲಿ ಸಂಘಟಿತ ಅಥವಾ ಪುನರ್ ಸಂಘಟಿತ ಉನ್ನತ ನ್ಯಾಯಾಲಯಗಳೆಂದು ನಾಮ ನಿರ್ದೇಶಿತವಾದ ನ್ಯಾಯಾಲಯಗಳು.

(ಸಿ) ಸಂವಿಧಾನಕ್ಕೆ ಸಂಬಂಧಿಸಿದಂತೆ ಯಾವುದೇ ರಾಜ್ಯ ಶಾಸಕಾಂಗದಿಂದ ಸೂಕ್ತ ಕಾಯ್ದೆಯ ಮುಖಾಂತರ ರಚಿಸಲಾದ ಶ್ರೇಷ್ಠ ನ್ಯಾಯಾಲಯಗಳು.

ಯಾವುದೇ ಒಂದು ಶಾಸಕಾಂಗದಿಂದ ಜಾರಿಯಲ್ಲಿರುವ ನ್ಯಾಯಾಲಯಕ್ಕೆ ಬದಲಾಗಿ ಬೇರೆ ನ್ಯಾಯಾಲಯ ಒಂದನ್ನು ಸ್ಥಾಪಿಸಬೇಕೆಂದು ನಿರ್ಧರಿಸಿ ಘೋಷಿಸಿದ ಸಂದರ್ಭದಲ್ಲಿ ಶ್ರೇಷ್ಠ ನ್ಯಾಯಾಲಯಗಳು ಇವು ಜಾರಿಗೆ ಬಂದ ದಿನದಿಂದ ಹಿಂದಿನ ನ್ಯಾಯಾಲಯಗಳು ತಮ್ಮ ಕಾರ್ಯಾಚರಣೆಯನ್ನು ಮುಕ್ತಾಯಗೊಳಿಸುತ್ತವೆ.

(೨) ಈ ಪ್ರಕರಣದಲ್ಲಿ ಸೂಚಿಸಿದಂತೆ ಉಪನಿಬಂಧನೆ(೧)ರಲ್ಲಿ ತಿಳಿಸಿದ ವಿಷಯ ಎಲ್ಲಾ ಶ್ರೇಷ್ಠ ನ್ಯಾಯಾಲಯಗಳಿಗೂ ಅನ್ವಯಿಸುತ್ತದೆ.

**ಶ್ರೇಷ್ಠ ನ್ಯಾಯಾಲಯ ರಚನೆ**

೧೯೨. ಪ್ರತಿಯೊಂದು ಶ್ರೇಷ್ಠ ನ್ಯಾಯಾಲಯವೂ, ದಾಖಲೆಗಳ ನ್ಯಾಯಾಲಯವಾಗಿದ್ದು ಓರ್ವ ಪ್ರಮುಖ ನ್ಯಾಯಾಧೀಶ ಮತ್ತು ಇತರೆ ನ್ಯಾಯಾಧೀಶರಿಂದ, ಕಾಲಕಾಲಕ್ಕೆ ರಾಷ್ಟ್ರಪತಿಗಳಿಂದ ನಿಯಮಿತಗೊಂಡಿರುತ್ತದೆ.

ಆದರೆ ನಿಯಮಿತ ಹೊಂದಿದ ನ್ಯಾಯಾಧೀಶರಲ್ಲದೆ, ಹೆಚ್ಚುವರಿ ನ್ಯಾಯಾಧೀಶರನ್ನು ರಾಷ್ಟ್ರಪತಿಯವರು ನೇಮಿಸಿದಾಗ ಆ ಸಂಖ್ಯೆಯನ್ನು ರಾಷ್ಟ್ರಪತಿ ಈ ಕೆಳಕಂಡ ವಿಧಾನದಂತೆ ನೇಮಿಸಬಹುದು.

**ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿ ಹಾಗೂ ಇತರ ವಿಷಯಗಳು**

೧೯೩. (೧) ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರನ್ನು ರಾಷ್ಟ್ರಪತಿಯವರು ತಮ್ಮ ಕೈಬರೆಹದ ವಾರೆಂಟಿನ ಮೂಲಕ ನೇಮಿಸುವರು. ಈ ವಿಧವಾದ ನೇಮಕಾತಿಯನ್ನು, ಸರ್ವೋಚ್ಚ ನ್ಯಾಯಾಲಯದ ಪ್ರಮುಖ ನ್ಯಾಯಮೂರ್ತಿಯೊಂದಿಗೆ, ಹಾಗೂ ರಾಜ್ಯದ ರಾಜ್ಯಪಾಲರೊಂದಿಗೆ ಸಮಾಲೋಚಿಸಿ ಮಾಡಬೇಕು. ಶ್ರೇಷ್ಠ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶರೊಂದಿಗೆ ಸಮಾಲೋಚನೆಯಿಂದ ನೇಮಿಸಬೇಕು. ಪ್ರತಿಯೊಬ್ಬ ನ್ಯಾಯಾಧೀಶನೂ ೬೦ ವರ್ಷ ಅಥವಾ *ಅಧಿಕವೆಂದರೆ ೬೫

* ಹೆಚ್ಚಿನ ವಯಸ್ಸಿನ ಅವಕಾಶವು ೧೯೩೫ರ ಭಾರತ ಸರಕಾರದ ಕಾಯ್ದೆಯಲ್ಲಿಲ್ಲ. ಇದರ ಪರಿಣಾಮವೇನೆಂದರೆ ವಕೀಲ ವರ್ಗದ ಅತ್ಯುತ್ತಮ ವ್ಯಕ್ತಿಗಳು ನ್ಯಾಯಪೀಠದ ನೇಮಕಾತಿಗಳನ್ನು ತಿರಸ್ಕರಿಸುತ್ತಾರೆ. ಏಕೆಂದರೆ ಈಗಿನ ೬೦ ವರ್ಷಗಳ ವಯೋಮಿತಿಯು ಪೂರ್ಣ ಪ್ರಮಾಣದ ನಿವೃತ್ತಿ ವೇತನ ಪಡೆಯುವುದಕ್ಕೆ ಸಾಕಷ್ಟು ಕಾಲ ಅವರಿಗಿರುವುದಿಲ್ಲ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ವಯೋಮಿತಿಯು ೬೫ ವರ್ಷಗಳಿರುವಾಗ, ೬೦ ವರ್ಷಗಳಾದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಒಬ್ಬ ನ್ಯಾಯಾಧೀಶನು ತುಂಬಾ ವಯಸ್ಕನಾಗಿದ್ದಾನೆ ಎಂದು ಹೇಳಲು ಸಾಧ್ಯವಿಲ್ಲ. ವಿವಿಧ ರಾಜ್ಯಗಳಲ್ಲಿರುವ ವೈವಿಧ್ಯಮಯ ಪರಿಸ್ಥಿತಿಗಳಿಂದಾಗಿ ಸಮಿತಿಯು ಕೆಳಗೆ ಗೆರೆ ಎಳೆದಿರುವ ಪದಗಳನ್ನು ಈ ವಿಧಿಯಲ್ಲಿ ಸೇರಿಸಿದ್ದು ಇದರಿಂದ ಪ್ರತಿಯೊಂದು ರಾಜ್ಯದ ಶಾಸಕಾಂಗವು ವಯೋಮಿತಿಯನ್ನು ೬೫ ವರ್ಷಗಳಿಗೆ ಮೀರದಂತೆ ನಿಗದಿಪಡಿಸಲು ಸಹಾಯವಾಗಿದೆ.

ವರ್ಷದವರೆಗೆ ರಾಜ್ಯದ ಶಾಸಕಾಂಗದ ನಿರ್ಣಯದಂತೆ ಸೇವೆಯಲ್ಲಿರುತ್ತಾರೆ.

ಪರಂತು,

(ಎ) ನ್ಯಾಯಾಧೀಶರು ತಮ್ಮ ಕೈಬರೆಹದಿಂದ ರಾಜ್ಯಪಾಲರಿಗೆ ರಾಜೀನಾಮೆ ನೀಡಬಹುದು.

(ಬಿ) ಸಂವಿಧಾನದ ೧೦೩(೪)ರಲ್ಲಿ ಸೂಚಿಸಿದಂತೆ ರಾಷ್ಟ್ರಪತಿಯವರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ತೆಗೆದುಹಾಕಬಹುದು.

(ಸಿ) ಯಾವುದೇ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶನನ್ನು, ರಾಷ್ಟ್ರಪತಿಯವರು ಸರ್ವೋಚ್ಚ ನ್ಯಾಯಾಲಯಕ್ಕೆ ನೇಮಿಸಿದಾಗ

(೨) ಭಾರತದ ಪೌರತ್ವವನ್ನು ಹೊಂದದೇ ಇರುವ ಯಾವ ವ್ಯಕ್ತಿಯೇ ಆಗಲೀ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕ ಹೊಂದುವಂತಿಲ್ಲ.

(ಎ) ಶ್ರೇಷ್ಠ ನ್ಯಾಯಾಲಯದಲ್ಲಿ ಅಥವಾ ರಾಜ್ಯ ನ್ಯಾಯಾಂಗದ ಅಧಿಕಾರಿಯಾಗಿ ಹತ್ತು ವರ್ಷ ಸೇವೆ ಸಲ್ಲಿಸಿದ್ದಲ್ಲಿ

(ಬಿ) ಶ್ರೇಷ್ಠ ನ್ಯಾಯಾಲಯದ ನ್ಯಾಯವಾದಿಯಾಗಿ ಹತ್ತು ವರ್ಷ ಸೇವೆ ಸಲ್ಲಿಸಿದ್ದಲ್ಲಿ

ವಿವರಣೆ I: ಈ ಉಪನಿಬಂಧನೆಯ ಉದ್ದೇಶಕ್ಕಾಗಿ

(ಎ) ಶ್ರೇಷ್ಠ ನ್ಯಾಯಾಲಯದ ನ್ಯಾಯವಾದಿಯಾಗಿ ಕಾರ್ಯ ಮಾಡಿದ ಅವಧಿಯನ್ನು ಅವರು ನ್ಯಾಯಾಂಗದ ಅಧಿಕಾರಿಯಾಗಿ ಕಾರ್ಯ ಮಾಡಿದ್ದರೆ ಅದನ್ನು ಸೇರ್ಪಡಿಸಿಕೊಳ್ಳಬೇಕು.

(ಬಿ) ಸಂವಿಧಾನದ ಮೊದಲನೆಯ ಅನುಬಂಧದಲ್ಲಿಯ ಭಾಗ I – II ರಲ್ಲಿ ಸೂಚಿಸಿದ ಶ್ರೇಷ್ಠ ನ್ಯಾಯಾಲಯಗಳಲ್ಲಿ, ಸಂವಿಧಾನ ಜಾರಿಗೆ ಬರುವ ಮುನ್ನ ನ್ಯಾಯಾಂಗ ಅಧಿಕಾರಿಯಾಗಿ ಸಲ್ಲಿಸಿದ ಸೇವಾ ಅವಧಿ ಆಗಸ್ಟ್ ೧೫, ೧೯೪೭ ಪೂರ್ವದ ೧೯೩೫ರ ಭಾರತ ಸರಕಾರ ಕಾಯ್ದೆಯಂತೆ ಸೂಚಿಸಿದ ಪ್ರದೇಶಗಳ ಶ್ರೇಷ್ಠ ನ್ಯಾಯಾಲಯದಂತೆ ಸೇವೆ ಸಲ್ಲಿಸಿದ್ದರೆ ಅದನ್ನೂ ಲೆಕ್ಕಕ್ಕೆ ಸೇರ್ಪಡಿಸಿಕೊಳ್ಳಬೇಕು.

ವಿವರಣೆ II: ಈ ಉಪನಿಬಂಧನೆಗಳು (ಎ) ಮತ್ತು (ಬಿ) ಸೂಚಿಸಿದ ಶ್ರೇಷ್ಠ ನ್ಯಾಯಾಲಯವೆಂದರೆ, ೧೦೬ ವಿಧಿಗಳಂತೆ ಹೇಳಲಾದ ನ್ಯಾಯಾಲಯಗಳು ಎಂದೇ ಭಾವಿಸಬೇಕು.

**ಸರ್ವೋಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದ ಹಲವು ವಿಷಯ**

೧೯೪. ಸಂವಿಧಾನದ ೧೦೩ನೇ ವಿಧಿಯ (೪) ಮತ್ತು (೫) ಉಪನಿಬಂಧನೆಯಲ್ಲಿ ಸೂಚಿಸಿದ ಸರ್ವೋಚ್ಚ

**ಶ್ರೇಷ್ಠ ನ್ಯಾಯಾಲಯಕ್ಕೆ ಅನ್ವಯಿಸುವುದು**

ನ್ಯಾಯಾಲಯದ ವಿಷಯಗಳು, ಶ್ರೇಷ್ಠ ನ್ಯಾಯಾಲಯಗಳಿಗೂ ಅನ್ವಯಿಸುತ್ತವೆ.

**ಅಧಿಕಾರ ವಹಿಸಿಕೊಳ್ಳುವ ಮುನ್ನ ಪ್ರಮಾಣ ವಚನ ಸ್ವೀಕಾರ**

೧೯೫. ಸಂವಿಧಾನದ ಮೂರನೇ ಅನುಬಂಧದಲ್ಲಿ ವಿವರಿಸಿದಂತೆ, ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶನಾಗಿ ಅಧಿಕಾರ ಸ್ವೀಕರಿಸುವ ಮುನ್ನ ರಾಜ್ಯಪಾಲರ ಅಥವಾ ಈ ಕಾರ್ಯಕ್ಕೆಂದೇ ನೇಮಕಗೊಂಡವರ ಮುಂದೆ ಪ್ರಮಾಣವಚನ ಸ್ವೀಕರಿಸಿ ಸಹಿ ಮಾಡಬೇಕು.

**ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರ ಅಧಿಕಾರದಲ್ಲಿದ್ದ ವ್ಯಕ್ತಿಯು ಯಾವುದೇ ನ್ಯಾಯಾಲಯಗಳು ಅಥವಾ ಯಾವುದೇ ಅಧಿಕೃತರ ಮುಂದೆ ವಕೀಲವೃತ್ತಿ ನಡೆಸುವುದರ ನಿಷೇಧ**

* ೧೯೬. ಯಾವ ವ್ಯಕ್ತಿಯೇ ಆಗಲಿ

(ಎ) ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶನಾಗಿ, ವಕೀಲರ ಸಂಘದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರೆ ಅವರು ಯಾವುದೇ ನ್ಯಾಯಾಲಯದ ಮುಂದೆ ವಾದ ಮಾಡಕೂಡದು.

**ನ್ಯಾಯಾಧೀಶರ ವೇತನ ಇತ್ಯಾದಿ**

೧೯೭. ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರು, ರಾಜ್ಯದ ಶಾಸಕಾಂಗವು ಕಾಲಕಾಲಕ್ಕೆ ನಿರ್ಣಯಿಸುವ ವೇತನ, ಭತ್ತೆ, ರಜೆ, ಪಿಂಚಣಿ, ಸೌಕರ್ಯಗಳನ್ನು ಪಡೆಯಬಹುದು. ಈ ವಿಧವಾದ ಕಾಯ್ದೆ ಜಾರಿಗೆ ಬರುವ ಮುನ್ನ ಸಂವಿಧಾನದ ಎರಡನೆಯ ಅನುಬಂಧದಲ್ಲಿ ಸೂಚಿಸಿದಂತೆ ವೇತನ, ಭತ್ತೆ ಪಿಂಚಣಿ ಹಾಗೂ ರಜೆಯ ಸೌಕರ್ಯಗಳನ್ನು ಪಡೆಯಬಹುದು.

ಆದರೆ ಶ್ರೇಷ್ಠ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶರಿಗೆ ಮಾಸಿಕ ರೂ. ೪೦೦೦/– ಕ್ಕಿಂತ ಕಡಿಮೆ ವೇತನ ಹಾಗೂ ಇತರ ನ್ಯಾಯಾಧೀಶರಿಗೆ ರೂ. ೩೫೦೦/– ಕ್ಕಿಂತ ಕಡಿಮೆ ವೇತನ ನೀಡಲಾಗದು.

ಪರಂತು ಯಾವುದೇ ನ್ಯಾಯಾಧೀಶರ ವೇತನ, ರಜೆ ಸೌಕರ್ಯ ಸೌಲಭ್ಯಗಳನ್ನು ಅವರ ಸೇವೆಯಲ್ಲಿದ್ದಾಗ ಕಡಿಮೆ ಅಥವಾ ತಗ್ಗಿಸುವಂತಿಲ್ಲ.

**ತಾತ್ಕಾಲಿಕ ನ್ಯಾಯಾಧೀಶರು**

೧೯೮. (೧) ಯಾವುದೇ ಕಾರಣಕ್ಕಾಗಿ, ಶ್ರೇಷ್ಠ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶ ಸ್ಥಾನ ತೆರವಾದಾಗ, ಅಥವಾ ಅವರ

---

* ಸಮಿತಿಯ ಅಭಿಪ್ರಾಯದಲ್ಲಿ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರು ನ್ಯಾಯವಾದಿಗಳಾಗಿ ಯಾವ ನ್ಯಾಯಾಲಯದಲ್ಲಿಯೂ ವಾದ ಮಾಡಬಾರದೆಂಬ ಅಭಿಪ್ರಾಯಹೊಂದಿದೆ.

ಗೈರು ಹಾಜರಿಯಲ್ಲಿ ಹಾಗೂ ಅವರು ಕರ್ತವ್ಯ ನಿರ್ವಹಿಸದೇ ಇದ್ದ ಪರಿಸ್ಥಿತಿಯಲ್ಲಿ ರಾಷ್ಟ್ರಪತಿ ಅವರು ಆ ಸ್ಥಾನಕ್ಕೆ ನ್ಯಾಯಾಲಯದ ಬೇರೊಬ್ಬ ನ್ಯಾಯಾಧೀಶರನ್ನು ನೇಮಿಸಬಹುದು. ಆದರೆ ಈ ನೇಮಕಾತಿಯು ತಾತ್ಕಾಲಿಕವಾಗಿರುತ್ತದೆ.

(೨) ಯಾವುದೇ ಕಾರಣಕ್ಕಾಗಿ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರ ಸ್ಥಾನ ತೆರವಾದಾಗ ಅಥವಾ ಅವರು ಪ್ರಮುಖ ನ್ಯಾಯಾಧೀಶರ ಸ್ಥಾನಕ್ಕೆ ನೇಮಕಗೊಂಡಾಗ ಹಾಗೂ ಕಾರ್ಯಮಾಡದೇ ಇರುವ ಪರಿಸ್ಥಿತಿಯಲ್ಲಿ ರಾಷ್ಟ್ರಪತಿಯವರು ಆ ಸ್ಥಾನವನ್ನು ಅರ್ಹತೆಯುಳ್ಳ ವ್ಯಕ್ತಿಯಿಂದ ತುಂಬಬಹುದು.

(ಬಿ) ಹೀಗೆ ನೇಮಕ ಹೊಂದಿದವರು ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿಯ ಸ್ಥಾನಮಾನ ಅಧಿಕಾರಗಳನ್ನೇ ಹೊಂದಿರುತ್ತಾರೆ.

(ಸಿ) ಈ ಮೇಲೆ ಹೇಳಿದಂತೆ ನೇಮಕಾತಿಯನ್ನು ರದ್ದುಗೊಳಿಸುವ ಅಧಿಕಾರ ರಾಷ್ಟ್ರಪತಿಯವರಿಗಿದೆ.

**ಹೆಚ್ಚುವರಿ ನ್ಯಾಯಾಧೀಶರು**

೧೯೯. ಶ್ರೇಷ್ಠ ನ್ಯಾಯಾಲಯದಲ್ಲಿ ತಾತ್ಕಾಲಿಕವಾಗಿ ಅಧಿಕ ಕಾರ್ಯ ಮಾಡಬೇಕಾದ ಹಾಗೂ ಮೊಕದ್ದಮೆಗಳು ಬಾಕಿ ಉಳಿದಿದ್ದರೆ, ಈ ಕಾರ್ಯಗಳಿಗೆಂದೇ ರಾಷ್ಟ್ರಪತಿಯವರು ಹೆಚ್ಚುವರಿ ನ್ಯಾಯಾಧೀಶರನ್ನು ನೇಮಕ ಮಾಡಬಹುದು. ಈ ವಿಧವಾಗಿ ನೇಮಕಗೊಂಡವರ ಸೇವಾ ಅವಧಿ ಎರಡು ವರ್ಷಕ್ಕೆ ಮೀರಕೂಡದು.

**ನಿವೃತ್ತ ನ್ಯಾಯಾಧೀಶರ ಸೇವೆ**

*೨೦೦. ಈ ಪ್ರಕರಣದಲ್ಲಿ ಸೂಚಿಸಿದ ಯಾವ ವಿಷಯಕ್ಕೆ ಧಕ್ಕೆ ಬಾರದಂತೆ, ಶ್ರೇಷ್ಠ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶರು ಯಾವುದೇ ನಿವೃತ್ತ ನ್ಯಾಯಾಧೀಶರನ್ನು ನ್ಯಾಯಾಲಯದ ಕಾರ್ಯ ನಡೆಸಿಕೊಡುವಂತೆ ಆಹ್ವಾನಿಸಬಹುದು. ಹೀಗೆ ಆಹ್ವಾನದ ಮೇರೆಗೆ ಕಾರ್ಯನಿರತ ನ್ಯಾಯಾಧೀಶ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರ ಸ್ಥಾನಮಾನ ಹಾಗೂ ಅಧಿಕಾರವನ್ನು ಹೊಂದಿರುತ್ತಾರೆ.

ಆದರೆ, ಈ ವಿಧಿಯಲ್ಲಿ ಸೂಚಿಸಿದಂತೆ ಕಾರ್ಯಕ್ಕೆಂದು ಕರೆಯಲಾದ ನ್ಯಾಯಾಧೀಶರ ಸಮ್ಮತಿ ಅನಿವಾರ್ಯ.

**ಜಾರಿಯಲ್ಲಿರುವ ಶ್ರೇಷ್ಠ ನ್ಯಾಯಾಲಯದ ಅಧಿಕಾರ ವ್ಯಾಪ್ತಿ**

೨೦೧. ಈ ಸಂವಿಧಾನದಲ್ಲಿ ತಿಳಿಸಿದಂತೆ ಹಾಗೂ ರಾಜ್ಯದ ಶಾಸಕಾಂಗಗಳಿಗೆ ನೀಡಿರುವ ಅಧಿಕಾರದಂತೆ ರಾಜ್ಯದ

---

* ನಿವೃತ್ತರಾಗಿರುವ ನ್ಯಾಯಾಧೀಶರುಗಳ ನೇಮಕಾತಿಯು ಯುನೈಟೆಡ್ ಕಿಂಗ್‌ಡಂ ಮತ್ತು ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ಪದ್ಧತಿಯನ್ನು ಅನುಸರಿಸಿದೆ.

ಶ್ರೇಷ್ಠ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಬಗೆಗೆ ಹಾಗೂ ಶ್ರೇಷ್ಠ ನ್ಯಾಯಾಲಯದ ಆಡಳಿತ ಮತ್ತು ಅದರ ಕಾರ್ಯಾಚರಣೆಯ ಸ್ಥಳ ಹಾಗೂ ಅದರಡಿಯಲ್ಲಿ ಕಾಯನಿರ್ವಹಿಸುವ ವಿವಿಧ ನ್ಯಾಯಾಲಯಗಳ ಬಗೆಗೆ ಸೂಕ್ತಕ್ರಮ ತೆಗೆದುಕೊಳ್ಳಬಹುದು.

ಆದರೆ, ಸದ್ಯದಲ್ಲಿ ಜಾರಿಯಲ್ಲಿರಬಹುದಾದ, ಮೂಲ ಅಧಿಕಾರದ ವ್ಯಾಪ್ತಿ ರೆವಿನ್ಯೂ ವಿಷಯಗಳ ಬಗೆಗೆ ಅಥವಾ ವಿವಿಧ ಆಜ್ಞೆಗಳು ಸಂವಿಧಾನ ಜಾರಿಗೆ ಬಂದನಂತರ ಜಾರಿಯಲ್ಲಿರಲಾರವು.

**ರಿಟ್ ಜಾರಿಗೊಳಿಸುವ ಬಗೆಗೆ ಶ್ರೇಷ್ಠ ನ್ಯಾಯಾಲಯದ ಅಧಿಕಾರ**

೨೦೨. (೧) ಸಂವಿಧಾನದ ೨೫ನೆಯ ವಿಧಿಯಲ್ಲಿ ಸೂಚಿಸಿದ ವಿಷಯಕ್ಕೆ ಬಾಧೆಯಾಗದಂತೆ ಪ್ರತಿಯೊಂದು ಶ್ರೇಷ್ಠ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿ ಪ್ರದೇಶಗಳಲ್ಲಿ ಹೇಬಿಯಸ್ ಕಾರ್ಪಸ್, ಮ್ಯಾಂಡಮಸ್, ನಿಷೇಧಾಜ್ಞೆ, ಕೋವಾರೆಂಟೋ ಮುಂತಾದ ಆದೇಶಗಳನ್ನು ಸಂವಿಧಾನದ ಭಾಗ III ರಲ್ಲಿ ಸೂಚಿಸಿದ ಉದ್ದೇಶಗಳಿಗಾಗಿ ನೀಡುವ ಅಧಿಕಾರ ಹೊಂದಿದೆ.

(೨) ಶ್ರೇಷ್ಠ ನ್ಯಾಯಾಲಯಗಳಿಗೆ ಈ ಉಪನಿಬಂಧನೆಗೆ (೧)ರಲ್ಲಿ ನೀಡಿದ ಅಧಿಕಾರವು ಸಂವಿಧಾನದ ವಿಧಿ ೨೫ (೨)ರಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿದ ಅಧಿಕಾರಕ್ಕೆ ಅಡ್ಡಿಬಾರದು.

**ಶ್ರೇಷ್ಠ ನ್ಯಾಯಾಲಯಗಳ ಆಡಳಿತ ಅಧಿಕಾರ**

೨೦೩. (೧) ಪ್ರತಿಯೊಂದು ಶ್ರೇಷ್ಠ ನ್ಯಾಯಾಲಯಕ್ಕೂ ತನ್ನ ವ್ಯಾಪ್ತಿಯಲ್ಲಿ ಬರುವ ವಿವಿಧ ನ್ಯಾಯಾಲಯಗಳ ಮೇಲೆ ಆಡಳಿತಾಧಿಕಾರವನ್ನು ನೀಡಿದೆ :

(೨) ಶ್ರೇಷ್ಠ ನ್ಯಾಯಾಲಯವು :–

(ಎ) ಆ ನ್ಯಾಯಾಲಯಗಳಿಂದ ಪ್ರಕರಣಗಳನ್ನು ಮರಳಿಸುವಂತೆ ಆದೇಶಿಸಬಹುದು.

(ಬಿ) ನ್ಯಾಯಾಲಯದ ಮುಂದೆ ವಿಚಾರಣೆಗೆಂದು ಬಂದಿರುವ ಅರ್ಜಿಗಳನ್ನು ವರ್ಗಾಯಿಸುವಂತೆ, ಅಥವಾ ಮನವಿಗಳನ್ನು ಮರಳಿ ಪಡೆಯುವಂತೆ ಆದೇಶಿಸಬಹುದು.

(ಸಿ) ತನ್ನ ವ್ಯಾಪ್ತಿಯಲ್ಲಿರುವ ನ್ಯಾಯಾಲಯಗಳ ಆಡಳಿತ ಕ್ರಮದ ಬಗೆಗೆ ಸಾಮಾನ್ಯ ನಿಯಮಾವಳಿಗಳನ್ನು ರೂಪಿಸಬಹುದು.

(ಡಿ) ಲೆಕ್ಕ ಪತ್ರಗಳು, ಫಾರಂಗಳು ಹಾಗೂ ವಿವಿಧ ದಾಖಲೆಗಳನ್ನು ಬರೆದಿಡುವ ಪುಸ್ತಕಗಳನ್ನು ರೂಪಿಸಿ ಅದರಂತೆ ಕಾರ್ಯಾಚರಣೆಗೆ ಆದೇಶಿಸಬಹುದು.

(೩) ಶ್ರೇಷ್ಠ ನ್ಯಾಯಾಲಯವು, ನ್ಯಾಯಾಲಯ ಮೊಕದ್ದಮೆಗಳ ವಿಚಾರಣೆಗೆಂದು ಆಕರಿಸಬಹುದಾದ ಶುಲ್ಕದ ಮೊತ್ತ ಹಾಗೂ ಈ ವಿಷಯಕ್ಕೆ ಎಂದೇ ಕೋರ್ಟು ಅಧಿಕಾರಗಳು, ವಕೀಲರು,

ಅಡ್ವೋಕೇಟ್, ಪ್ಲೀಡರ್‌ಗಳಿಗೆ ನೀಡಬಹುದಾದ ಶುಲ್ಕದ ಮೊತ್ತವನ್ನು ನಿಗದಿ ಮಾಡಬಹುದು.

ಆದರೆ ಈ ಮೇಲಿನ ಉಪನಿಬಂಧನೆಗಳಲ್ಲಿ ಸೂಚಿಸಲಾದ, ಶುಲ್ಕದ ಮಟ್ಟ ಮತ್ತು ಫಾರಂಗಳು ಜಾರಿಯಲ್ಲಿರುವ ಕಾಯ್ದೆಗಳಿಗೆ ವಿರೋಧವಾಗಿರಕೂಡದು, ಅಲ್ಲದೆ ಈ ಎಲ್ಲ ವಿಷಯಗಳೂ ರಾಜ್ಯಪಾಲರ ಅನುಮತಿ ಪಡೆದೇ ಆಚರಿಸಬೇಕು.

**ಹಲವು ಮೊಕದ್ದಮೆಗಳನ್ನು ಶ್ರೇಷ್ಠ ನ್ಯಾಯಾಲಯಕ್ಕೆ ವರ್ಗಾಯಿಸುವುದು.**

೨೦೪. ತನ್ನ ಅಧೀನ ನ್ಯಾಯಾಲಯದ ಮುಂದೆ ವಿಚಾರಣೆಗೆ ಬಂದ ಮೊಕದ್ದಮೆಯಲ್ಲಿ ಗಂಭೀರವಾದ ನ್ಯಾಯ ಸಮಸ್ಯೆ ಅಡಕವಾಗಿದೆಯೆಂದು ಶ್ರೇಷ್ಠ ನ್ಯಾಯಾಲಯಕ್ಕೆ ಮನವರಿಕೆಯಾದ ಸಂದರ್ಭದಲ್ಲಿ ಅಂತಹ ಮೊಕದ್ದಮೆಗಳನ್ನು ತನಗೆ ವರ್ಗಾಯಿಸುವಂತೆ ಆದೇಶ ನೀಡಬಹುದು.

ವಿವರಣೆ : ಈ ವಿಧಿಯಲ್ಲಿ "ಶ್ರೇಷ್ಠ ನ್ಯಾಯಾಲಯ" ಎಂದರೆ ಸಂವಿಧಾನದ ಮೊದಲನೆಯ ಅನುಬಂಧ ಭಾಗ III ರಲ್ಲಿ ಸೂಚಿಸಿದ ನ್ಯಾಯಾಲಯಗಳು ಎಂದೇ ಭಾವಿಸಬೇಕು.

**ಶ್ರೇಷ್ಠ ನ್ಯಾಯಾಲಯದ ಅಧಿಕಾರಿಗಳ, ನೌಕರರ ವೇತನ, ಪಿಂಚಣಿ ಭತ್ತೆ ಹಾಗೂ ನ್ಯಾಯಾಲಯದ ವೆಚ್ಚ**

೨೦೫. (೧) ಶ್ರೇಷ್ಠ ನ್ಯಾಯಾಲಯದ ವಿವಿಧ ಅಧಿಕಾರಿಗಳ, ಪೇದೆಗಳ ವೇತನ, ಭತ್ತೆ, ಪಿಂಚಣಿ ಮುಂತಾದ ವಿಷಯ ಗಳನ್ನು ನಿರ್ಣಯಿಸುವ ಅಧಿಕಾರ ಪ್ರಮುಖ ನ್ಯಾಯಾಧೀಶರಿಗೆ ಸೇರಿದೆ. ಆದರೆ ಅವರು ರಾಜ್ಯಪಾಲರೊಂದಿಗೆ ಸಮಾಲೋಚನೆ ಮಾಡಿ ನಿರ್ಣಯಿಸಬೇಕು.

(೨) ನ್ಯಾಯಾಲಯದ ಆಡಳಿತ ವೆಚ್ಚ, ವೇತನ, ಭತ್ತೆ, ಪಿಂಚಣಿ ಎಲ್ಲವೂ ಸೇರಿದಂತೆ ನ್ಯಾಯಾಧೀಶರ ವೇತನಗಳು ಸೇರಿದಂತೆ, ಎಲ್ಲವನ್ನೂ ರಾಜ್ಯದ ಬೊಕ್ಕಸದ ಆದಾಯದಿಂದ ಪಡೆಯಬಹುದು.

**ಶ್ರೇಷ್ಠ ನ್ಯಾಯಾಲಯ ರಚಿಸುವ ಹಾಗೂ ಪುನರ್ರಚಿಸುವ ಅಧಿಕಾರ**

೨೦೬. (೧) ಸಂವಿಧಾನದ ಮೊದಲನೆಯ ಅನುಬಂಧದ ಭಾಗ Iರಲ್ಲಿ ಸೂಚಿಸಿದಂತೆ, ಕಾಯ್ದೆಯ ಮೂಲಕ ರಾಜ್ಯದ ಶಾಸಕಾಂಗವು ಶ್ರೇಷ್ಠ ನ್ಯಾಯಾಲಯವನ್ನು ರಚಿಸುವ, ಪುನರ್ರಚಿಸುವ ಬದಲಾಯಿಸುವ ಅಧಿಕಾರಗಳನ್ನು ಹೊಂದಿದೆ.

(೨) ಯಾವುದೇ ಒಂದು ನ್ಯಾಯಾಲಯವು ಪುನರ್ರಚನೆ ಹೊಂದಿದಾಗ, ಅಥವಾ ಎರಡು ನ್ಯಾಯಾಲಯುಗಳನ್ನು ಒಂದುಗೂಡಿಸಿದಾಗ, ಶಾಸಕಾಂಗದಿಂದ ರಚಿಸಲಾದ ಕಾಯ್ದೆ ಈ ವಿಷಯಗಳನ್ನೂ ಸ್ಪಷ್ಟಪಡಿಸಬೇಕು.

(ಎ) ನ್ಯಾಯಾಲಯದ ಅಧಿಕಾರಿಗಳು, ನ್ಯಾಯಾಧೀಶರು ಹಾಗೂ ಸಿಬ್ಬಂದಿವರ್ಗವು ಸೇವೆಯಲ್ಲಿ ಮುಂದುವರಿಯಲೇ ಬೇಕು.

(ಬಿ) ಪುನರ್ರಚನೆ ಹೊಂದಿದ ನ್ಯಾಯಾಲಯವು, ಹಿಂದಿನ

ಕಾರ್ಯಕಲಾಪವನ್ನು ಮುಂದುವರಿಸಿಕೊಂಡು ಬರಲೇಬೇಕು. ಅಲ್ಲದೆ ಅವಶ್ಯಕವಾದ ವಿಷಯಗಳನ್ನು ಮುಂದುವರಿಸಿಕೊಂಡು ಬರುವಂತೆ ನೋಡಿಕೊಳ್ಳಬೇಕು. ಒಂದುಗೂಡಿಸದ ನ್ಯಾಯಾಲಯಕ್ಕೂ ಇದು ಅನ್ವಯಿಸುತ್ತದೆ.

**ಶ್ರೇಷ್ಠ ನ್ಯಾಯಾಲಯದ ಅಧಿಕಾರ ವ್ಯಾಪ್ತಿ ವಿಸ್ತರಿಸುವುದು ಹಾಗೂ ಮೊಟಕುಗೊಳಿಸುವುದು**

೨೦೭. ಸಂಸತ್ತು ತಾನು ರಚಿಸುವ ಕಾಯ್ದೆ ಮೂಲಕ :

(ಎ) ಶ್ರೇಷ್ಠ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಬಹುದು. ಅಥವಾ

(ಬಿ) ಶ್ರೇಷ್ಠ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ರದ್ದುಪಡಿಸಬಹುದು.

ಯಾವುದೇ ರಾಜ್ಯ ಅಥವಾ ಅದಕ್ಕೆ ಸೇರದೇ ಹೋದ ಪ್ರದೇಶ ಅಥವಾ ನ್ಯಾಯಾಲಯದ ಪೀಠವಿರುವ ಪ್ರದೇಶ, ಆದರೆ ಈ ಉದ್ದೇಶಕ್ಕೆಂದೇ ಸಂಸತ್ತಿನ ಯಾವುದೇ ಸದನದಲ್ಲಿ ಕಾಯ್ದೆಯನ್ನು ರೂಪಿಸುವಂತಿಲ್ಲ :

i) ಸದ್ಯದಲ್ಲಿ ಹೇಳಲಾದ ಭಾಗ I ಅಥವಾ ಡಿವಿಷನ್ ಎ ಭಾಗ III ಮೊದಲನೆಯ ಅನುಬಂಧದಲ್ಲಿ ತಿಳಿಸಿದ ಪ್ರದೇಶ, ಆದರೆ ಈ ಉದ್ದೇಶಕ್ಕೆಂದೇ ಸಂಸತ್ತಿನ ಯಾವುದೇ ಸದನದಲ್ಲಿ ಕಾಯ್ದೆಯನ್ನು ರೂಪಿಸುವಂತಿಲ್ಲ.

ii) ಎಲ್ಲಿ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಲಾಗುವುದೋ, ಅಲ್ಲಿ ಶ್ರೇಷ್ಠ ನ್ಯಾಯಾಲಯ ತನ್ನ ಪೀಠವನ್ನು ಹೊಂದಿದ್ದಲ್ಲಿ ಅದರ ಸಮ್ಮತಿ ಪಡೆಯಬೇಕು.

**ರಾಜ್ಯದ ಹೊರಗೆ ಶ್ರೇಷ್ಠ ನ್ಯಾಯಾಲಯಕ್ಕೆ ಇರಬಹುದಾದ ಅಧಿಕಾರಗಳನ್ನು ನಿರ್ಬಂಧಿಸುವಲ್ಲಿ ರಾಜ್ಯ ಶಾಸಕಾಂಗದ ಅಧಿಕಾರ**

೨೦೮. ಎಲ್ಲಿ ಶ್ರೇಷ್ಠ ನ್ಯಾಯಾಲಯವು ತಾವು ಹೊಂದಿರುವ ಪೀಠ ಪ್ರದೇಶಗಳಿಂದ, ಬೇರೆ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯನ್ನು ಪಡೆದಿದ್ದಲ್ಲಿ, ಸಂವಿಧಾನವು ಕೈಗೆತ್ತಿಕೊಳ್ಳಕೂಡದು:

(ಎ) ರಾಜ್ಯದ ಶಾಸಕಾಂಗಕ್ಕೆ ಶ್ರೇಷ್ಠ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಅದು ಹೊಂದಿರುವ ಪೀಠದ ಪ್ರದೇಶದಿಂದ ಮೊಟಕು ಹಾಗೂ ವಿಸ್ತರಿಸುವ ಅಧಿಕಾರ ನೀಡಲಾಗದು.

(ಬಿ) ಸದ್ಯ ತಿಳಿಸಿದ ಭಾಗ I ಅಥವಾ ಭಾಗ III ಮೊದಲನೆಯ ಅನುಬಂಧಕ್ಕೆ ಸಂಬಂಧಿಸಿದ ಪ್ರದೇಶಗಳಲ್ಲಿ ಅಧಿಕಾರ ವ್ಯಾಪ್ತಿಯನ್ನು ರದ್ದುಗೊಳಿಸಲಾಗದು.

(ಸಿ) ಈ ವಿಧಿಯ(ಬಿ) ಉಪನಿಬಂಧನೆಯಲ್ಲಿ ಹೇಳಿದಂತೆ, ಶಾಸಕಾಂಗವನ್ನು ಪ್ರತಿಬಂಧಿಸುವ ದಿಶೆಯಲ್ಲಿ, ಅಧಿಕಾರ ಹೊಂದಿದ ಪ್ರದೇಶ.

**ಅರ್ಥವ್ಯಾಖ್ಯಾನ**

೨೦೯. ಎಲ್ಲಿ ಶ್ರೇಷ್ಠ ನ್ಯಾಯಾಲಯವು ಒಂದು ರಾಜ್ಯ ಪ್ರದೇಶಕ್ಕಿಂತ ಮಿಗಿಲಾದ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದಲ್ಲಿ :

(ಎ) ಈ ಅಧ್ಯಾಯಗಳಲ್ಲಿ ತಿಳಿಸಲಾದ ರಾಜ್ಯಪಾಲರಿಗೆ ಶ್ರೇಷ್ಠ ನ್ಯಾಯಾಲಯಗಳಿಗೆ ನೀಡಬಹುದಾದ ಸಂದೇಶಗಳೆಂದರೆ ಶ್ರೇಷ್ಠ ನ್ಯಾಯಾಲಯವು ಪೀಠ ಹೊಂದಿರುವ ಪ್ರದೇಶದ ರಾಜ್ಯಪಾಲರೆಂದೇ ಭಾವಿಸಬೇಕು.

(ಬಿ) ರಾಜ್ಯಪಾಲರ ಸಮ್ಮತಿಗೆಂದು, ಅಧೀನ ನ್ಯಾಯಾಲಯಗಳ ನಿಬಂಧನೆಗಳೆಂದರೆ, ರಾಜ್ಯಪಾಲ ಅಥವಾ ರಾಜ್ಯದ ಅರಸು ಎಂದೇ ಭಾವಿಸಬೇಕು. ಅಥವಾ ನ್ಯಾಯಾಲಯವು ಸೂಚಿಸಿದ ಪ್ರದೇಶಗಳ ಹೊರಗೆ ಇದ್ದಲ್ಲಿ ಅಂದರೆ ಭಾಗ I ಅಥವಾ III ಮೊದಲನೆಯ ಅನುಬಂಧದಲ್ಲಿ ಸೂಚಿಸಿದಂತಿದ್ದರೆ ಅವು ರಾಷ್ಟ್ರಪತಿಯವರ ಸಮ್ಮತಿಗೆ ಮತ್ತು

(ಸಿ) ರಾಜ್ಯದ ಕಂದಾಯ ಆದಾಯಕ್ಕೆ ಸಂಬಂಧಿಸಿದ್ದರೆ, ನ್ಯಾಯಾಲಯದ ಪೀಠ ಪ್ರದೇಶಕ್ಕೆಂದೇ ಭಾವಿಸಬೇಕು.

## * ಪ್ರಕರಣ IX ರಾಜ್ಯಗಳ ಪ್ರಮುಖ ಲೆಕ್ಕ ಪರಿಶೋಧಕರು

**ರಾಜ್ಯದ ಮುಖ್ಯ ಲೆಕ್ಕಪರಿಶೋಧಕರು**

೨೧೦. (೧) ಮೊದಲನೆಯ ಅನುಬಂಧದಲ್ಲಿ ಸೂಚಿಸಿದ ರಾಜ್ಯದ ಶಾಸಕಾಂಗವು ತನ್ನ ಕಾಯ್ದೆಯಲ್ಲಿ ರಾಜ್ಯದ ಪ್ರಮುಖ ಲೆಕ್ಕಪರಿಶೋಧಕರ ನೇಮಕಾತಿಗೆ ಅನುವು ಮಾಡಿಕೊಡಬೇಕು. ಈ ಪ್ರಮುಖ ಲೆಕ್ಕಪರಿಶೋಧಕರನ್ನು ರಾಜ್ಯಪಾಲರೇ ನೇಮಿಸಬೇಕು. ಅಲ್ಲದೆ ಹೀಗೆ ನೇಮಕಗೊಂಡ ಲೆಕ್ಕ ಪರಿಶೋಧಕರನ್ನು, ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರನ್ನು ತೆಗೆದುಹಾಕುವ ವಿಧಾನದಂತೆ ರಾಜ್ಯಪಾಲರು ತೆಗೆದು ಹಾಕಬಹುದು.

(೨) ಲೆಕ್ಕಪರಿಶೋಧಕರನ್ನು ನೇಮಕಮಾಡುವ ಕಾಯ್ದೆಯು ಪಾಸಾದ ಮೂರು ವರ್ಷ ಅವಧಿಗೆ ಮುನ್ನ ಈ ದಿಶೆಯಲ್ಲಿ ಶಾಸಕಾಂಗವು ನೂತನ ಮಸೂದೆಯನ್ನು ಮಂಡಿಸುವಂತಿಲ್ಲ.

(೩) ಹೀಗೆ ಪಾಸು ಮಾಡಿದ ಮಸೂದೆಯು ಲೆಕ್ಕಶೋಧಕರ ಸೇವಾ ನಿಯುಮಗಳನ್ನು ನಿರ್ಣಯಿಸದಂತೆ ಪ್ರಮುಖ

---

* ರಾಜ್ಯದಲ್ಲಿ ಪ್ರಮುಖ ಲೆಕ್ಕ ಪರಿಶೋಧಕರ ಕೆಲಸ ಮಾಡುವ ವ್ಯಕ್ತಿಯು ಭಾರತದ ಮಹಾಲೆಕ್ಕಪರಿಶೋಧಕರಿಂದ ಭಿನ್ನವಾಗಿರಲು ಮುಖ್ಯ ಲೆಕ್ಕಪರಿಶೋಧಕರೆಂದು ನಾಮಕರಣ ಮಾಡಬೇಕೆಂದು ಸಮಿತಿಯು ಅಭಿಪ್ರಾಯಪಡುತ್ತದೆ.

ಲೆಕ್ಕಪರಿಶೋಧಕರ ವೇತನ, ಪಿಂಚಣಿ, ಮುಂತಾದವನ್ನು ರಾಜ್ಯ ಬೊಕ್ಕಸದ ಆದಾಯದಿಂದ ನೀಡಬೇಕು.

(೪) ಈ ವಿಧವಾಗಿ ನೇಮಕಗೊಂಡ ರಾಜ್ಯದ ಪ್ರಮುಖ ಲೆಕ್ಕಪರಿಶೋಧಕರು ಭಾರತದ ಪ್ರಮುಖ ಲೆಕ್ಕಪರಿಶೋಧಕರ ಹುದ್ದೆಯ ನೇಮಕಾತಿಗೆ ಅರ್ಹರಾಗಿರುತ್ತಾರೆ ಅಥವಾ ಸಂವಿಧಾನದ ಮೊದಲನೆಯ ಅನುಬಂಧ ಭಾಗ I ರಲ್ಲಿ ಸೂಚಿಸಿದ ಯಾವ ರಾಜ್ಯದಲ್ಲಿಯೂ ನೇಮಕಾತಿಗೆ ಅರ್ಹರಾಗಿರುತ್ತಾರೆ.

(೫) ವೇತನ, ಭತ್ತೆ, ಪಿಂಚಣಿ ಮುಂತಾದವನ್ನು ಪ್ರಮುಖ ಲೆಕ್ಕಪರಿಶೋಧಕರು ರಾಜ್ಯಪಾಲರೊಂದಿಗೆ ಸಮಾಲೋಚಿಸಿ ಸಿಬ್ಬಂದಿ ವರ್ಗಕ್ಕೆ ನೀಡಬಹುದು. ಅದನ್ನು ರಾಜ್ಯದ ಬೊಕ್ಕಸಕ್ಕೆ ಖರ್ಚು ಹಾಕಬೇಕು.

(೬) ಈ ನಿಯಮಾವಳಿಯಲ್ಲಿ ಬದಲಾವಣೆ ಮಾಡುವ ಅಧಿಕಾರ ಭಾರತದ ಪ್ರಮುಖ ಲೆಕ್ಕಪರಿಶೋಧಕರಿಗೆ ಇದೆ. ಅಲ್ಲದೆ ವಿಧಿ ೧೨೬ರಲ್ಲಿ ಸೂಚಿಸಿದಂತೆ ಭಾಗ I ಮತ್ತು III ಮೊದಲನೆಯ ಅನುಬಂಧದಲ್ಲಿ ಸೂಚಿಸಿದ ರಾಜ್ಯಗಳಿಗೂ ಅವರು ಆದೇಶ ನೀಡಬಹುದು.

**ಆಡಿಟ್ ವರದಿ**

೨೧೧. ಭಾರತದ ಆಡಿಟರ್ ಜನರಲ್ ಹಾಗೂ ರಾಜ್ಯದ ಪ್ರಮುಖ ಲೆಕ್ಕಪರಿಶೋಧಕರು ಅಥವಾ ಸದ್ಯ ಮೊದಲನೆಯ ಅನುಬಂಧ ಭಾಗ I ರಲ್ಲಿ ಸೂಚಿಸಿದ ರಾಜ್ಯಗಳಲ್ಲಿ ಇವರು ತಯಾರಿಸಿದ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸಬೇಕು. ನಂತರ ರಾಜ್ಯಪಾಲರು ಆ ವರದಿಯನ್ನು ಶಾಸಕಾಂಗದ ಮುಂದೆ ಮಂಡಿಸಬಹುದು.

## ಭಾಗ VII

## * ಮೊದಲನೆಯ ಅನುಸೂಚಿ ಭಾಗ II ರಲ್ಲಿಯ ರಾಜ್ಯಗಳು

**ಮೊದಲನೆಯ ಅನುಸೂಚಿ ಭಾಗ II ರಲ್ಲಿಯ ರಾಜ್ಯಗಳ ಆಡಳಿತ**

೨೧೨.(೧) ಈ ಭಾಗದ ಇತರ ವಿವರಗಳಿಗೆ ಸಂಬಂಧಿಸಿದಂತೆ, ಸದ್ಯದಲ್ಲಿ ಮೊದಲನೆಯ ಅನುಬಂಧ ಭಾಗ ಎರಡರಲ್ಲಿಯ ರಾಜ್ಯಗಳ ಆಡಳಿತವನ್ನು ರಾಷ್ಟ್ರಾಧ್ಯಕ್ಷರು, ತಮ್ಮ ವಿವೇಚನೆಯಂತೆ, ಪ್ರಮುಖ ಆಯುಕ್ತರು ಅಥವಾ ಲೆಫ್ಟಿನೆಂಟ್ ಗವರ್ನರ್ ಅಥವಾ ರಾಜ್ಯಪಾಲರು ಅಥವಾ ನೆರೆರಾಜ್ಯದ ರಾಜ ಪ್ರಮುಖರಿಂದ ನಡೆಸುತ್ತಾರೆ.

ಆದರೆ ರಾಷ್ಟ್ರಾಧ್ಯಕ್ಷರು ರಾಜ್ಯಪಾಲ ಅಥವಾ ನೆರೆರಾಜ್ಯದ ರಾಜಪ್ರಮುಖರಿಂದ

(ಅ) ರಾಜ್ಯಪಾಲರ ಅಥವಾ ರಾಜಪ್ರಮುಖರ ಸಲಹೆಯನ್ನು ಪಡೆಯದೇ ಮತ್ತು

(ಆ) ತಮಗೆ ಸೂಕ್ತವೆಂದು ತೋರಿದ ವಿಧಾನದಲ್ಲಿ ರಾಜ್ಯದ ಜನತೆಯ ಅಭಿಪ್ರಾಯವನ್ನು ಅರಿತುಕೊಂಡು, ರಾಜ್ಯದ ಆಡಳಿತವನ್ನು ನಡೆಸಬೇಕು.

** ೨) ಮೊದಲನೆಯ ಅನುಸೂಚಿ ಭಾಗ III ರಲ್ಲಿ ವಿವರಿಸಲಾದ ಯಾವುದೇ ರಾಜ್ಯದ ರಾಜನು ರಾಜ್ಯದ ಆಡಳಿತ ಕುರಿತಂತೆ, ತನ್ನ ಅಧಿಕಾರ ಹಾಗೂ ಪ್ರದೇಶವನ್ನು ಸಂಪೂರ್ಣವಾಗಿ ಭಾರತ ಸರಕಾರಕ್ಕೆ ವಹಿಸಿಕೊಟ್ಟಿದ್ದಲ್ಲಿ, ಭಾರತ ಸರಕಾರವು ಸದ್ಯದ ಸಮಯದಲ್ಲಿ ಸಂವಿಧಾನದ ಮೊದಲನೆ ನಿಬಂಧನೆಯ ಭಾಗ II ರಲ್ಲಿಯ ವಿವರಗಳನ್ನು ಈ ರಾಜ್ಯಗಳಿಗೂ ಅನ್ವಯಿಸಬೇಕು.

**ಸ್ಥಳೀಯ ಶಾಸನ ಸಭೆಗಳ ಹಾಗೂ ಮಂಡಳಿಯ ರಚನೆ ಅಥವಾ ಮುಂದುವರಿಕೆ**

೨೧೩. ಮೊದಲನೆಯ ನಿಬಂಧನೆಯ ಎರಡನೆಯ ಭಾಗದಲ್ಲಿ ಸೂಚಿಸಲಾದ ರಾಜ್ಯಗಳ ಆಡಳಿತವನ್ನು ರಾಷ್ಟ್ರಾಧ್ಯಕ್ಷರು ಪ್ರಮುಖ ಆಯುಕ್ತರ ಅಥವಾ ಲೆಫ್ಟಿನೆಂಟ್ ಗವರ್ನರರ ಮುಖಾಂತರ –

---

* ಸಮಿತಿಯ ಅಭಿಪ್ರಾಯದಲ್ಲಿ ಮೊದಲನೆಯ ಅನುಬಂಧ ಭಾಗ II, ಈಗ ತಾತ್ಕಾಲಿಕ ಸಮಿತಿಯ ಸೂಚನೆಯಂತೆ ಪ್ರಮುಖ ಆಯುಕ್ತರ ಆಡಳಿತದಲ್ಲಿರುವುದರಿಂದ ಹಾಗೂ ಈ ಭಾಗಕ್ಕೆ ಸಂಬಂಧಿಸಿದ ಪರಿಷ್ಕೃತ ವಿವರಗಳನ್ನು ಸಂವಿಧಾನ ಸಮಿತಿ ಒಪ್ಪಿಕೊಂಡಂತೆ ಅಧ್ಯಕ್ಷರು ತಮ್ಮ ಆಡಳಿತಕ್ಕೆ ಅನುಮೋದನೆ ನೀಡಬಹುದಾದುದರಿಂದ, ಸಂವಿಧಾನದಲ್ಲಿ ಈ ಬಗೆಗೆ ಹೆಚ್ಚು ವಿವರಗಳನ್ನು ನೀಡಬೇಕಾಗಿಲ್ಲ.

** ಸಮಿತಿಯ ಈ ನಿಬಂಧನೆಯನ್ನು ಮೊದಲನೆಯ ಅನುಬಂಧ ಭಾಗ III ಅಂದರೆ (ಒರಿಸ್ಸಾ ರಾಜ್ಯಗಳಿಗೆ) ಯಾವ ರಾಜ್ಯಗಳು ತಮ್ಮ ಸಂಪೂರ್ಣ ಪ್ರದೇಶ ಮತ್ತು ಅಧಿಕಾರವನ್ನು ಭಾರತ ಸರಕಾರಕ್ಕೆ ಬಿಟ್ಟುಕೊಟ್ಟಿರುವವೋ ಅವುಗಳಿಗಾಗಿ ಸೇರ್ಪಡೆ ಮಾಡಿದೆ.

(ಅ) ಸ್ಥಳೀಯ ಶಾಸಕಾಂಗ

(ಆ) ಸಲಹಾ ಮಂಡಳಿ ಅಥವಾ ಎರಡನ್ನೂ ಸಂವಿಧಾನ ರೂಪದಲ್ಲಿ ಅಧಿಕಾರ ಮತ್ತು ಕಾರ್ಯಗಳನ್ನು ಸೂಚಿಸಿ ತಮ್ಮ ಆಜ್ಞೆಯ ಮೂಲಕ ಆಡಳಿತ ನಡೆಸಬಹುದು.

೨೪೧. ಈ ದಿಶೆಯಲ್ಲಿ ರಾಷ್ಟ್ರಾಧ್ಯಕ್ಷರಿಂದ ಇತರ ವಿವರಗಳನ್ನು ಪ್ರಕಟಿಸುವವರೆಗೂ ಕೊಡಗಿನ ವಿಧಾನ ಪರಿಷತ್ತಿನ ಅಧಿಕಾರ ಹಾಗೂ ಕಾರ್ಯಗಳು ಮತ್ತು ಕಂದಾಯ ವಸೂಲಿ ಮತ್ತು ವೆಚ್ಚಗಳಲ್ಲಿ ಯಾವ ಬದಲಾವಣೆಯನ್ನು ಮಾಡಲಾಗದು.

## ಭಾಗ VIII

## ಮೊದಲನೆಯ ಅನುಬಂಧ ಭಾಗ IV ರಲ್ಲಿಯ ಪ್ರದೇಶಗಳು ಮತ್ತು ಈ ಅನುಬಂಧದಲ್ಲಿ ನಮೂದಿಸಿರುವ ಪ್ರದೇಶಗಳು

**ಮೊದಲನೆಯ ಅನುಬಂಧದಲ್ಲಿ ನಮೂದಿಸಿರುವ ಪ್ರದೇಶ ಹಾಗೂ ಈ ಅನುಬಂಧದಲ್ಲಿ ನಮೂದಿಸದಿರುವ ಪ್ರದೇಶಗಳ ಆಡಳಿತ**

೨೧೫. (೧) ಮೊದಲನೆಯ ಅನುಬಂಧದ ನಾಲ್ಕನೆಯ ಭಾಗದಲ್ಲಿ ಸೂಚಿಸಲಾದ ಪ್ರದೇಶಗಳ ಮತ್ತು ಭಾರತದ ಬೇರೆ ಯಾವ ಪ್ರದೇಶ ಈ ಅನುಬಂಧದಲ್ಲಿ ಸೂಚಿಸದಿರುವ ಪ್ರದೇಶಗಳ ಆಡಳಿತವನ್ನು ರಾಷ್ಟ್ರಾಧ್ಯಕ್ಷ ತಮಗೆ ಸರಿತೋರಿದಂತೆ ಪ್ರಮುಖ ಆಯುಕ್ತರ ಅಥವಾ ಬೇರೆ ಯಾವ ಅಧಿಕಾರವನ್ನು ನೇಮಿಸಿ ಆಡಳಿತವನ್ನು ನಡೆಸಬಹುದು.

(೨) ಈ ಪ್ರದೇಶಗಳ ಶಾಂತಿ ಹಾಗೂ ಸುಭದ್ರ ಸರಕಾರಕ್ಕಾಗಿ ರಾಷ್ಟ್ರಾಧ್ಯಕ್ಷರು, ಸಂಸತ್ತಿನಿಂದ ಮಾಡಿರಬಹುದಾದ ಶಾಸನವನ್ನು ತಿದ್ದುಪಡಿ ಅಥವಾ ತೊಡೆದು ಹಾಕುವ ಕ್ರಮದಿಂದ ಅಥವಾ ಸುಗ್ರೀವಾಜ್ಞೆಯ ಮೂಲಕ ಆಡಳಿತ ನಡೆಸಬಹುದು. ಈ ವಿಧವಾದ ಕ್ರಮಕ್ಕೆ ಸಂಸತ್ತು ರೂಪಿಸಿದ ಕಾನೂನಿನ ಸ್ಥಾನಮಾನವಿರುತ್ತದೆ.

# ಭಾಗ IX
# ಒಕ್ಕೂಟ ಹಾಗೂ ರಾಜ್ಯಗಳ ನಡುವಿನ ಬಾಂಧವ್ಯಗಳು

## ಪ್ರಕರಣ ೧ – ಶಾಸನಾತ್ಮಕ ಸಂಬಂಧಗಳು
### ಶಾಸನ ಅಧಿಕಾರಗಳ ವಿತರಣೆ

**ಸಂಸತ್ತು ಹಾಗೂ ಶಾಸನ ಸಭೆಗಳಿಂದ ರಚಿಸಲಾದ ಕಾನೂನುಗಳ ವ್ಯಾಪಕತೆ**

೨೧೬. (೧) ಸಂವಿಧಾನಕ್ಕೆ ಅನುಗುಣವಾಗಿ ಸಂಸತ್ತು ಸಂಪೂರ್ಣ ಭಾರತ ಅಥವಾ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಬಹುದು, ಮತ್ತು ಶಾಸನ ಸಭೆಯು ರಾಜ್ಯಕ್ಕೆ ಸಂಬಂಧಿಸಿದಂತೆ ಅಥವಾ ರಾಜ್ಯದ ಯಾವ ಪ್ರದೇಶಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಬಹುದು.

(೨) ಸಂಸತ್ತಿನಿಂದ ರಚಿಸಲಾದ ಯಾವ ಕಾನೂನೇ ಆಗಲಿ; ಬಾಹ್ಯ ಕಾರ್ಯಾಚರಣೆಯ ಕಾರಣಕ್ಕಾಗಿ ಅಸಿಂಧುವೆಂದು ಸಾರಲಾಗದು.

* ೨೧೭. (೧) ಈ ಮುಂದೆ ಸೂಚಿಸಿರುವ ಎರಡು ನಿಬಂಧನೆಗಳಲ್ಲದೆ, ಸಂವಿಧಾನದ ಏಳನೆಯ ಅನುಬಂಧ ಮೊದಲನೆಯ ಪಟ್ಟಿಯಲ್ಲಿ ಸೂಚಿಸಿದ ವಿಷಯಗಳ (ಒಕ್ಕೂಟ ಪಟ್ಟಿ ಎಂದೇ ಕರೆದಿರುವ) ಬಗೆಗೆ ಕಾನೂನು ರಚಿಸುವ ಸಂಪೂರ್ಣ ಅಧಿಕಾರ ಸಂಸತ್ತು ಹೊಂದಿದೆ.

(೨) ಮುಂದಿನ ಎರಡು ನಿಬಂಧನೆಗಳಲ್ಲಿ ಹೇಳಿರಬಹುದಾದ ವಿಷಯಕ್ಕೆ ಅಡಚಣೆಯಾಗದಂತೆ ಸಂಸತ್ತು ಮತ್ತು ಹಿಂದಿನ ಉಪನಿಬಂಧನೆಯಲ್ಲಿ ಹೇಳಿದಂತೆ, ಮೊದಲನೆಯ ಅನುಬಂಧದ ಭಾಗ Iರಲ್ಲಿಯ ರಾಜ್ಯದ ಶಾಸಕಾಂಗಗಳಿಗೆ ಏಳನೇ ಅನುಬಂಧದ ಮೂರನೆಯ ಪಟ್ಟಿಯಲ್ಲಿ ತಿಳಿಸಿದ (ಸಂವಿಧಾನದಲ್ಲಿ ಸಮವರ್ತಿ ಪಟ್ಟಿ) ಎಲ್ಲ ವಿಷಯಗಳ ಬಗೆಗೆ ಕಾನೂನು ರಚಿಸುವ ಅಧಿಕಾರವಿದೆ.

(೩) ಹಿಂದಿನ ಎರಡು ನಿಬಂಧನೆಗಳನ್ವಯ ಮೊದಲನೆಯ ಅನುಬಂಧದ ಭಾಗ I ರ ರಾಜ್ಯದ ಶಾಸಕಾಂಗವು, ಏಳನೇ

---

* ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರ ಅಭಿಪ್ರಾಯದಲ್ಲಿ ವಿಶೇಷಾಧಿಕಾರಿಗಳನ್ನು ಸಂಸತ್ತೇ ಹೊಂದಿರುವುದರಿಂದ, ಶಾಸನೀಯ ಅಧಿಕಾರವನ್ನು ಹಂಚುವ ಹಳೆಯ ವಿಧಾನವನ್ನು ಅನುಸರಿಸದೆ, ರಾಜ್ಯಗಳ ಶಾಸನೀಯ ಅಧಿಕಾರದ ನಂತರ, ಸಂಸತ್ತಿನೊಂದಿಗೆ ಸಹಮತದ ಶಾಸನೀಯ ಅಧಿಕಾರಗಳನ್ನು ಚರ್ಚಿಸಿ ಸಂಸತ್ತಿನ ನಂತರ, ಸಂಸತ್ತಿನ ಅಧಿಕಾರಗಳನ್ನು ಚರ್ಚಿಸಬಹುದೆಂದು ಸೂಚಿಸಿದರು. ಏಕೆಂದರೆ ಇದು ಕೇವಲ ಸ್ವರೂಪದ ಪ್ರಶ್ನೆಯಾಗಿದೆ. ಆದ್ದರಿಂದ ಅನೇಕ ಸದಸ್ಯರು ಸದ್ಯದ ವ್ಯವಸ್ಥೆಯೇ ಇರಲೆಂದು ಅಭಿಪ್ರಾಯಪಟ್ಟರು.

ಅನುಬಂಧದ ಪಟ್ಟಿ II ರಲ್ಲಿ ತಿಳಿಸಿದ (ರಾಜ್ಯದ ಪಟ್ಟಿ) ಎಲ್ಲಾ ವಿಷಯಗಳ ಬಗೆಗೆ ಕಾನೂನು ರಚಿಸುವ ಅಧಿಕಾರವನ್ನು ಹೊಂದಿದೆ.

(೪) ಸಂಸತ್ತು ಭಾರತ ಪ್ರದೇಶದ ಅಂದರೆ ಭಾಗ I ಹಾಗೂ ಭಾಗ II ರಲ್ಲಿ ತಿಳಿಸದೇ ಹೋದ ಎಲ್ಲಾ ವಿಷಯಗಳ ಬಗೆಗೂ, ರಾಜ್ಯದ ಪಟ್ಟಿಯ ವಿಷಯದ ಬಗೆಗೂ ಕಾನೂನು ರಚಿಸುವ ಅಧಿಕಾರ ಹೊಂದಿದೆ.

**ಸರ್ವೋಚ್ಚ ನ್ಯಾಯಾಲಯದ ಬಗೆಗೆ ಶಾಸನ**

*೨೧೮. ಸರ್ವೋಚ್ಚ ನ್ಯಾಯಾಲಯದ ರಚನೆ, ಸಂಘಟನೆ ಹಾಗೂ ವ್ಯಾಪ್ತಿ ಮತ್ತು ಅಧಿಕಾರವನ್ನು ನಿರ್ಣಯಿಸುವ ಸಂಪೂರ್ಣ ಅಧಿಕಾರ ಸಂಸತ್ತಿಗಿದೆ.

**ಇತರ ಅಧಿಕ ನ್ಯಾಯಾಲಯಗಳನ್ನು ರಚಿಸುವಲ್ಲಿ ಸಂಸತ್ತಿನ ಅಧಿಕಾರ**

೨೧೯. ಈ ಪ್ರಕರಣದಲ್ಲಿಯ ಯಾವ ವಿಷಯಗಳಿಗೆ ಅಡ್ಡಿಯಾಗದಂತೆ, ಸಂಸತ್ತು ಇತರ ಅಧಿಕ ನ್ಯಾಯಾಲಯಗಳನ್ನು ಸಂಸತ್ತಿನಿಂದ ರಚಿಸಿದ ಕಾನೂನು ಹಾಗೂ ಜಾರಿಯಲ್ಲಿರುವ ಇತರ ಕಾನೂನುಗಳು, ಒಕ್ಕೂಟದ ಪಟ್ಟಿಯಲ್ಲಿ ಸೂಚಿಸಿದ ಕಾನೂನುಗಳ ಉತ್ತಮ ಆಡಳಿತಕ್ಕಾಗಿ ರಚಿಸಬಹುದು.

**ಶ್ರೇಷ್ಠ ನ್ಯಾಯಾಲಯಗಳ ಬಗೆಗೆ ಶಾಸನ ಹಾಗೂ ಸಂಘಟನೆ**

೨೨೦. (೧) ಸಂವಿಧಾನದ ಮೊದಲನೆಯ ಅನುಬಂಧ ಭಾಗ I ರಲ್ಲಿ ಸೂಚಿಸಿದ ರಾಜ್ಯ ಶಾಸಕಾಂಗವು ಶ್ರೇಷ್ಠ ನ್ಯಾಯಾಲಯದ ಪೀಠ, ರಚನೆ, ಸಂಘಟನೆಯನ್ನು ನಿರ್ಣಯಿಸುವ ಅಧಿಕಾರವನ್ನೂ ಹೊಂದಿದೆ.

(೨) ಸಂವಿಧಾನದ ಮೊದಲನೆಯ ಅನುಬಂಧ ಭಾಗ II ರಲ್ಲಿ ಸೂಚಿಸಿದ ರಾಜ್ಯಗಳ ಶ್ರೇಷ್ಠ ನ್ಯಾಯಾಲಯದ ಪೀಠ, ಸಂಘಟನೆ ಹಾಗೂ ರಚನೆಯ ಅಧಿಕಾರ ಸಂಸತ್ತು ಹೊಂದಿದೆ.

**ಉಚ್ಚನ್ಯಾಯಲಯದ ನ್ಯಾಯ ವ್ಯಾಪ್ತಿ ಮತ್ತು ಅಧಿಕಾರಿಗಳ ವಿಷಯದಲ್ಲಿ ಶಾಸನ**

*೨೨೧ (೧) ಕೇಂದ್ರದ ಪಟ್ಟಿಯಲ್ಲಿ ನಮೂದಿಸಲಾಗಿರುವ ಯಾವುದೇ ಉಚ್ಚನ್ಯಾಯಾಲಯದ ವ್ಯಾಪ್ತಿ ಮತ್ತು ಅಧಿಕಾರಿಗಳ ಬಗ್ಗೆ ಪಾರ್ಲಿಮೆಂಟು ವಿಶಿಷ್ಟವಾದ ಅಧಿಕಾರವನ್ನು ಹೊಂದಿದೆ.

(೨) ಒಂದು ಉಚ್ಚತಮ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಮೊದಲನೆ ಅನುಸೂಚಿಯಲ್ಲಿ ಭಾಗ ೧ರಲ್ಲಿ ಸದ್ಯದಲ್ಲಿ ನಮೂದಿಸಿರುವಂತೆ ಒಂದು ರಾಜ್ಯದ ಶಾಸಕಾಂಗವು ರಾಜ್ಯಪಟ್ಟಿಯಲ್ಲಿ ನಮೂದಿಸಿರುವ ಯಾವುದೇ ರಾಜ್ಯ ಅಥವಾ ಪ್ರದೇಶಕ್ಕೆ ಸಂಬಂಧಿಸಿದಂತೆ ರಾಜ್ಯದ

---

* ಸಮಿತಿಯ ಹಲವು ಸದಸ್ಯರ ದೃಷ್ಟಿಯಲ್ಲಿ ವಿಧಿ ೧೨೮, ೨೨೦, ೨೨೧ ಮತ್ತು ೨೨೨ ಈಗಿನ ೨೧೭ನೆಯ ವಿಧಿಯಿಂದಾಗಿ ಅವಶ್ಯವಿರುವುದಿಲ್ಲ.

ಶಾಸನ ಮಾಡಲು ವಿಶಿಷ್ಟವಾದ ಅಧಿಕಾರವನ್ನು ಹೊಂದಿದೆ.

(೩) ಸದ್ಯಕ್ಕೆ ಪಾರ್ಲಿಮೆಂಟು ಮತ್ತು ಒಂದು ರಾಜ್ಯದ ಶಾಸಕಾಂಗ ಕೂಡ, ಮೊದಲನೆ ಅನುಸೂಚಿ ಭಾಗ ೧ರಲ್ಲಿ ನಮೂದಿಸುವಂತೆ ಅಲ್ಲಿರುವ ಉಚ್ಚ ನ್ಯಾಯಾಲಯದ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಸಮವರ್ತಿ ಪಟ್ಟಿಯಲ್ಲಿ ನಮೂದಿಸಿರುವ ಯಾವುದೇ ವಿಷಯದ ಬಗ್ಗೆ ಅಂತಹ ಉಚ್ಚ ನ್ಯಾಯಾಲಯದ ವ್ಯಾಪ್ತಿ ಮತ್ತು ಅಧಿಕಾರಿಗಳ ವಿಷಯದಲ್ಲಿ ಶಾಸನಗಳನ್ನು ಮಾಡಲು ಅಧಿಕಾರವುಳ್ಳದ್ದಾಗಿದೆ.

(೪) ಸದ್ಯಕ್ಕೆ ಮೊದಲನೆ ಅನುಸೂಚಿಯ ಭಾಗ ೨ರಲ್ಲಿ ನಮೂದಿಸಿರುವಂತೆ ಒಂದು ರಾಜ್ಯಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ವ್ಯಾಪ್ತಿ ಮತ್ತು ಅಧಿಕಾರಿಗಳ ಬಗ್ಗೆ ಅಥವಾ ರಾಜ್ಯಪಟ್ಟಿಯಲ್ಲಿ ನಮೂದಿಸಲಾಗಿರುವ ಯಾವುದೇ ವಿಷಯಗಳ ಬಗ್ಗೆ ಅಂತಹ ರಾಜ್ಯದ ಪ್ರದೇಶದೊಳಗೆ ಶಾಸನಗಳನ್ನು ಮಾಡಲು ಪಾರ್ಲಿಮೆಂಟಿಗೆ ಅಧಿಕಾರವಿದೆ.

**ಸಿವಿಲ್ ಹಾಗೂ ಕ್ರಿಮಿನಲ್ ವಿಷಯಗಳಲ್ಲಿ ಶ್ರೇಷ್ಠ ನ್ಯಾಯಾಲಯ ಅನುಸರಿಸಬೇಕಾದ ಪ್ರಕ್ರಿಯೆ ಬಗೆಗೆ ಶಾಸನ**

* ೨೨೨. ಸಂಸತ್ತು ಮತ್ತು ಮೊದಲನೆಯ ಅನುಬಂಧದಲ್ಲಿ ತಾತ್ಕಾಲಿಕವಾಗಿ ಸೂಚಿಸಿರುವ ರಾಜ್ಯಗಳ ಶಾಸಕಾಂಗಗಳು, ಶ್ರೇಷ್ಠ ನ್ಯಾಯಾಲಯವು ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆಗಳ ಬಗೆಗೆ ಅನುಸರಿಸಬೇಕಾದ ವಿಧಾನವನ್ನು ನಿರ್ಣಯಿಸುವ ಕಾನೂನುಗಳನ್ನು ರಚಿಸುವ ಅಧಿಕಾರವನ್ನು ಹೊಂದಿವೆ.

**ಶೇಷಾಧಿಕಾರದ ಬಗೆಗೆ ಶಾಸನ**

೨೨೩. (೧) ರಾಜ್ಯಗಳ ಪಟ್ಟಿ ಮತ್ತು ಸಮವರ್ತಿ ಪಟ್ಟಿಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ವಿಷಯಗಳ ಬಗೆಗೆ ಕಾನೂನುಗಳನ್ನು ರಚಿಸುವ ಅಧಿಕಾರ ಸಂಸತ್ತು ಹೊಂದಿದೆ.

(೨) ಈ ವಿಧವಾಗಿ ಹೊಂದಿರುವ ಅಧಿಕಾರ, ಎರಡೂ ಪಟ್ಟಿಗಳಲ್ಲಿ ಸೂಚಿಸಿರದೇ ಹೋದ ಕರಗಳನ್ನು ಹೇರುವ ಅಧಿಕಾರವನ್ನೂ ಒಳಗೊಂಡಿದೆ.

**ಮೊದಲನೆಯ ಅನುಬಂಧ**

* ೨೨೪. ಸಂವಿಧಾನದ ೨೧೭. ವಿಧಿ (೧)ಕ್ಕೆ ಸೂಚಿಸಿದಂತೆ–

---

* ಸಮಿತಿಯ ಹಲವು ಸದಸ್ಯರ ದೃಷ್ಟಿಯಲ್ಲಿ ವಿಧಿ ೨೧೮, ೨೨೦, ೨೨೧ ಮತ್ತು ೨೨೨ ಈಗಿನ ೨೧೭ನೆಯ ವಿಧಿಯಿಂದಾಗಿ ಅವಶ್ಯವಿರುವುದಿಲ್ಲ.

** ಈ ಸಂವಿಧಾನ ರಚನೆ ಸಭೆಯಿಂದ ಅಂತಿಮವಾಗಿ ಪಾಸು ಆಗುವುದಕ್ಕೆ ಮುಂಚೆ ಈ ಅಧ್ಯಾಯದ ಕೆಲವು ವಿಧಿಗಳನ್ನು ಪುನಃ ವ್ಯವಸ್ಥೆಗೊಳಿಸುವ ಅಗತ್ಯವಿದೆ ಎಂದು ಸಮಿತಿಯು ಅಭಿಪ್ರಾಯಪಟ್ಟಿದೆ.
ಸಮಿತಿಯ ಅಭಿಪ್ರಾಯದಲ್ಲಿ ರಾಜ್ಯಪಟ್ಟಿಯ ವಿಷಯದಲ್ಲಿ ರಾಷ್ಟ್ರೀಯ ಮಹತ್ವದ ದೃಷ್ಟಿಯಿಂದ ರಾಜ್ಯ ಪಟ್ಟಿಯಲ್ಲಿಯ ವಿಷಯವನ್ನು ಬದಲಾಯಿಸುವ ಅಧಿಕಾರ ಸಂಸತ್ತಿಗೆ ನೀಡಬೇಕು.

**ಭಾಗIIIರ ರಾಜ್ಯಗಳ ವಿಷಯ ಬದಲಾವಣೆಯ ಬಗೆಗೆ ಸಂಸತ್ತಿನ ಅಧಿಕಾರ ನಿರ್ಬಂಧನೆಗಳು**

(ಅ) ಮೊದಲನೆಯ ಅನುಬಂಧ ಭಾಗ III ರಲ್ಲಿ ಸೂಚಿಸಿದ ರಾಜ್ಯಗಳಲ್ಲಿ ಅಂಚೆ ಹಾಗೂ ತಂತಿ ಇಲಾಖೆಗೆ ಸಂಬಂಧಿಸಿದಂತೆ, ಸಂಸತ್ತಿಗೆ ಅಧಿಕಾರವಿಲ್ಲ.

ಸಮಿತಿಯ ಅಭಿಪ್ರಾಯದಲ್ಲಿ ರಾಜ್ಯಪಟ್ಟಿಯ ವಿಷಯದಲ್ಲಿ ರಾಷ್ಟ್ರೀಯ ಮಹತ್ವದ ದೃಷ್ಟಿಯಿಂದ ರಾಜ್ಯ ಪಟ್ಟಿಯಲ್ಲಿಯ ವಿಷಯವನ್ನು ಬದಲಾಯಿಸುವ ಅಧಿಕಾರ ಸಂಸತ್ತಿಗೆ ನೀಡಬೇಕು.

ಆದರೆ ಸಂವಿಧಾನ ಜಾರಿಗೆ ಬಂದ ಮೇಲೆ ಭಾರತ ಸರಕಾರ ಹಾಗೂ ಸಂಬಂಧಿಸಿದ ರಾಜ್ಯ ಅಥವಾ ರಾಜ್ಯಗಳ ಸಮೂಹದೊಂದಿಗೆ ಒಪ್ಪಂದ ಅಥವಾ ಭಾರತ ಸರಕಾರ ಪಡೆದಲ್ಲಿ ಬದಲಾವಣೆ ತರಬಹುದು. ಆದರೆ ಸದ್ಯದಲ್ಲಿ ಆ ಅಧಿಕಾರ ಸಂಸತ್ತಿಗಿಲ್ಲ.

ಆದಾಗ್ಯೂ ಈ ವಿಧಿಯಲ್ಲಿ ಸೂಚಿಸಿದಂತೆ ಸಂಸತ್ತು ಅಂಚೆ ಹಾಗೂ ತಂತಿ ಇಲಾಖೆಗಳನ್ನು ಕ್ರಮಬದ್ಧಗೊಳಿಸುವಲ್ಲಿ ಶಾಸನಗಳನ್ನು ರಚಿಸುವಲ್ಲಿ ನಿರ್ಬಂಧನೆಗಳಿಂದ ಮುಕ್ತವಿದೆ.

(ಆ) ಹೀಗೆ ಮೊದಲನೆಯ ಅನುಬಂಧ ಭಾಗ III ರಲ್ಲಿ ಸೂಚಿಸಿದ ರಾಜ್ಯಗಳಲ್ಲಿಯು ದೂರವಾಣಿ, ಪ್ರಸಾರ ಮತ್ತು ತಂತಿವಾರ್ತೆಗಳನ್ನು ಕ್ರಮಬದ್ಧಗೊಳಿಸುವ ಶಾಸನಗಳನ್ನು ರಚಿಸಿ ಹತೋಟಿ ಪಡೆಯಬಹುದು.

(ಇ) ಆದರೆ ಸಂಸತ್ತಿನ ಮೊದಲನೆಯ ಅನುಬಂಧ ಭಾಗ III ರಲ್ಲಿ ಸೂಚಿಸಿದ ರಾಜ್ಯಗಳು ಹೊಂದಿರಬಹುದಾದ ನಿಗಮಗಳನ್ನು ಬದಲಾಯಿಸುವ ಹಾಗೂ ಅದರ ವ್ಯವಹಾರಗಳನ್ನು ನಿಯಂತ್ರಿಸುವ, ಸ್ಥಾಪಿಸುವ ಅಧಿಕಾರ ಹೊಂದಿಲ್ಲ.

**ಮೊದಲನೆಯ ಅನುಬಂಧ ಭಾಗ III ರಾಜ್ಯಗಳ ಬಗೆಗೆ ಶಾಸನ ರಚಿಸುವ ಅಧಿಕಾರದ ಮೇಲಿನ ಅಧಿಕಾರದ ಬಗೆಗೆ ಸಂಸತ್ತಿನ ಮೇಲೆ ಮಿತಿ ಹೇರಿಕೆ**

೨೨೫. ಮೊದಲನೆಯ ಅನುಬಂಧ ಭಾಗ III ರ ರಾಜ್ಯಗಳ ಬಗೆಗೆ ಶಾಸನ ರಚಿಸುವ ಸಂಸತ್ತಿನ ಅಧಿಕಾರವು, ಆ ರಾಜ್ಯ ಅಥವಾ ರಾಜ್ಯಗಳ ಸಮೂಹದೊಂದಿಗೆ ಮಾಡಿಕೊಂಡಿರಬಹುದಾದ ಒಪ್ಪಂದಕ್ಕೆ ಅನುಗುಣವಾಗಿ ಇತಿಮಿತಿಗಳನ್ನು ಹೊಂದಿದೆ.

**ರಾಷ್ಟ್ರೀಯ ಹಿತಾಸಕ್ತಿಯಲ್ಲಿಯ**

೨೨೬. * ಈ ಪ್ರಕರಣದಲ್ಲಿ ಮುಂದೆ ಸೂಚಿಸಲಾದ

---

* ಸಮಿತಿಯ ಅಭಿಪ್ರಾಯದಲ್ಲಿ ಈ ವಿಧಿಗಳು, ಘಟನಾ ಸಮಿತಿಯ ಮುಂದೆ ಬರುವ ಮುನ್ನವೇ ಅನೇಕ ಬದಲಾವಣೆಯನ್ನೂ ಹೊಂದಬಹುದು ಎಂದಿದೆ. ಈ ದಿಶೆಯಲ್ಲಿ ಸಮಿತಿಯು ತನ್ನ ಬಹುಮತ ನಿರ್ಣಯದಿಂದ ರಾಷ್ಟ್ರೀಯ ಮಹತ್ವದ ದೃಷ್ಟಿಯಿಂದ ವಿಷಯವನ್ನು ಬದಲಾಯಿಸುವ ಅಧಿಕಾರದ ಬಗೆಗೆ ನಿರ್ಣಯ ತೆಗೆದುಕೊಂಡಿದೆ. ಆದರೆ ಶ್ರೀ. ಅಲ್ಲಾಡಿ ಕೃಷ್ಣಸ್ವಾಮಿ ಅವರು ಹಾಗೂ ಅದನ್ನು ಸಮವರ್ತಿ ಪಟ್ಟಿಯ ವಿಷಯದಂತೆ ಭಾವಿಸಬೇಕು. ಅವರು ಇದಕ್ಕೆ ತಮ್ಮ ಭಿನ್ನಾಭಿಪ್ರಾಯ ಸೂಚಿಸಿ ಆ ಅಧಿಕಾರ ರಾಜ್ಯಕ್ಕೆ ಶಾಸನ ಮಾಡುವುದರ ಅಧಿಕಾರದ

**ದೃಷ್ಟಿಯಿಂದ ರಾಜ್ಯಪಟ್ಟಿಯ ವಿಷಯದ ಮೇಲೆ ಕಾನೂನು ಮಾಡುವ ಸಂಸತ್ತಿನ ಅಧಿಕಾರ**

ವಿವರಗಳಿಗೆ ಅಡಚಣೆ ಉಂಟಾಗದಂತೆ ರಾಜ್ಯಸಭೆಯು, ರಾಷ್ಟ್ರೀಯ ಹಿತದೃಷ್ಟಿಯಿಂದ ೨/೩ ಹಾಜರಿದ್ದು ಮತಚಲಾಯಿಸಿ ಬಹುಮತದ ನಿರ್ಣಯದಂತೆ ರಾಜ್ಯಪಟ್ಟಿಯಲ್ಲಿಯ ವಿಷಯದ ಬಗೆಗೆ ಬದಲಾವಣೆ ಸೂಚಿಸಿದರೆ ಅದು ನ್ಯಾಯಬದ್ಧ. ಈ ವಿಧವಾದ ಬದಲಾವಣೆ ಆನುಷಂಗಿಕ ಅಥವಾ ಭಾರತದ ಯಾವ ಪ್ರದೇಶಕ್ಕಾದರೂ ಅನ್ವಯಿಸಬಹುದು. ಅದು ಕಾನೂನುಬದ್ಧ ಕ್ರಮವಾಗಿರುತ್ತದೆ.

**ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ ರಾಜ್ಯಗಳ ಪಟ್ಟಿಯಲ್ಲಿಯ ವಿಷಯಗಳ ಬಗೆಗೆ ಕಾನೂನು ರಚಿಸುವ ಅಧಿಕಾರ**

೨೨೭. ** (ಅ) ಈ ಪ್ರಕರಣದಲ್ಲಿ ಹೇಳಲಾದ ಯಾವ ವಿಷಯಕ್ಕೂ ಅಡ್ಡಿಬಾರದಂತೆ ತುರ್ತು ಪರಿಸ್ಥಿತಿ ಜಾರಿಯಲ್ಲಿದಾಗ ಭಾರತದ ಯಾವ ಪ್ರದೇಶದಲ್ಲಿಯೇ ಆಗಲಿ ರಾಜ್ಯಪಟ್ಟಿಯ ವಿಷಯಗಳ ಬಗೆಗೆ ಕಾನೂನು ರಚಿಸುವ ಅಧಿಕಾರವು ಸಂಸತ್ತಿಗೆ ಇದೆ.

(ಆ) ಈ ವಿಧವಾಗಿ ತುರ್ತು ಪರಿಸ್ಥಿತಿಯ ಘೋಷಣೆಯಿಂದಾಗಿ ಸಂಸತ್ತು ರಚಿಸಿರಬಹುದಾದ ಕಾನೂನು ಆರು ತಿಂಗಳ ಅವಧಿಯವರೆಗೂ ಜಾರಿಯಲ್ಲಿದ್ದು, ತುರ್ತು ಪರಿಸ್ಥಿತಿ ಮುಕ್ತಾಯಗೊಂಡೊಡನೆ ಅದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ.

**೨೨೬-೨೨೭ ವಿಧಿಗಳ ಅನ್ವಯ ತಿಳಿಸಿ ಸಂಸತ್ತು ಮತ್ತು ಶಾಸನ ಸಭೆಗಳಿಂದ ರಚಿಸಲಾದ ಶಾಸನಗಳ ನಡುವಿನ ಅಸಮಂಜಸತೆ**

***೨೨೮. ೨೨೬ ಹಾಗೂ ೨೨೭ ವಿಧಿಗಳಲ್ಲಿ ತಿಳಿಸಿದಂತೆ, ಶಾಸಕಾಂಗದ ಕಾನೂನು ರಚಿಸುವ ಅಧಿಕಾರವನ್ನು ಹೊಂದಿದೆ. ಆದರೆ ಈ ವಿಧವಾದ ಶಾಸಕಾಂಗದಿಂದ ರಚಿಸಲಾದ ಕಾನೂನು, ಸಂಸತ್ತಿನಿಂದ ಈ ದಿಶೆಯಲ್ಲಿ ರಚಿಸಲಾದ ಕಾನೂನು, ಸಂಸತ್ತಿನ ಈ ದಿಶೆಯಲ್ಲಿ ರಚಿಸಲಾದ ಕಾನೂನಿಗೆ ವಿರೋಧವಾಗಿದ್ದಲ್ಲಿ ಸಂಸತ್ತಿನ ಕಾನೂನು ಜಾರಿಯಲ್ಲಿ ಬರುವುದು. ಶಾಸಕಾಂಗದ ಕಾನೂನು ರಚನೆಯಾದ ನಂತರವೂ ಸಂಸತ್ತು ಕಾನೂನನ್ನು ರಚಿಸಿದಲ್ಲಿ ಆ ಕಾನೂನನ್ನೇ ಜಾರಿಗೊಳಿಸಬೇಕು. ಶಾಸಕಾಂಗದ ಕಾನೂನು ಅಲ್ಲ.

---

ವಿರುದ್ಧವಿದ್ದು ಅವರ ಅಭಿಪ್ರಾಯದ ಪ್ರಕಾರ ಈ ಅಧಿಕಾರವನ್ನು ಉಳಿಸಿಕೊಂಡರೆ ಕೇಂದ್ರಕ್ಕೆ ಅಧಿಕಾರ ಹೆಚ್ಚಾಗಿ ಕ್ರಮೇಣ ರಾಜ್ಯದ ಕ್ಷೇತ್ರದಲ್ಲಿ ಅತಿಕ್ರಮಿಸಿ ಸಂವಿಧಾನದ ಸಂಯುಕ್ತ ರಚನೆಗೆ ಧಕ್ಕೆ ತರುತ್ತದೆ.

** ರಾಜ್ಯದ ಪಟ್ಟಿಯಲ್ಲಿ ಸೂಚಿಸಲಾದ ವಿಷಯ ರಾಷ್ಟ್ರೀಯ ಮಹತ್ವವನ್ನು ಹೊಂದಿದ್ದಾದರೆ ಆ ವಿಷಯ ಕುರಿತು ಸಂಸತ್ತು ಕಾನೂನನ್ನು ರಚಿಸಬಹುದೆಂಬ ಉದ್ದೇಶದಿಂದ ಈ ವಿಧಿಯನ್ನು ಅಳವಡಿಸಲಾಗಿದೆ.

*** ಸಮಿತಿಯು ತನ್ನ ಬಹುಮತ ನಿರ್ಣಯದಂತೆ ಸಂಸತ್ತು ರಾಜ್ಯದ ಪಟ್ಟಿಯಲ್ಲಿಯ ವಿಷಯದ ಬಗೆಗೆ ರಚಿಸಿದ ಕಾನೂನನ್ನು ಸಮವರ್ತಿ ಪಟ್ಟಿಯ ವಿಷಯದಂತೆ ಭಾವಿಸಬೇಕು ಎಂದು ತೀರ್ಮಾನ ಕೈಕೊಂಡಿತು. ಆದರೆ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದರು.

**೨೨೯. ಒಂದು ಅಥವಾ ಅಧಿಕ ರಾಜ್ಯಗಳ ಸಮ್ಮತಿಯಿಂದ ಕಾನೂನು ರಚಿಸುವ ಸಂಸದೀಯ ಅಧಿಕಾರ ಮತ್ತು ಯಾವುದೇ ಇನ್ನೊಂದು ರಾಜ್ಯದಿಂದ ಅಳವಡಿಕೆ**

೨೨೯. (ಅ) ಯಾವುದೇ ಒಂದು ಶಾಸನ ಸಭೆ ಅಥವಾ ಅಧಿಕ ರಾಜ್ಯಗಳ ಅಭಿಪ್ರಾಯದಲ್ಲಿ, ೨೨೬ ಮತ್ತು ೨೨೭ರಲ್ಲಿ ಸೂಚಿಸಿದಂತೆ ಸಂಸತ್ತಿಗೆ ಕಾನೂನು ರಚಿಸುವ ಅಧಿಕಾರವಿಲ್ಲದೇ ಹೋದರೂ ಅದರ ಬಗೆಗೆ ಶಾಸಕಾಂಗವು ನಿರ್ಣಯವನ್ನು ಅಂಗೀಕರಿಸಿದಲ್ಲಿ ಏಕಸದನ ಅಥವಾ ದ್ವಿಸದನಗಳಲ್ಲಿ ಈ ದಿಶೆಯಲ್ಲಿ ಸಂಸತ್ತಿಗೆ ಕಾನೂನು ರಚಿಸುವ ಅಧಿಕಾರ ಪಡೆಯುತ್ತದೆ, ಅದು ರಚಿಸಿದ ಕಾನೂನನ್ನು ರಾಜ್ಯ ಅಥವಾ ರಾಜ್ಯಗಳ ಸದನ ಅಥವಾ ಸದನಗಳು ಅಂಗೀಕಾರ ನೀಡಬೇಕು.

*(ಆ) ಈ ವಿಧವಾಗಿ ಸಂಸತ್ತಿನಿಂದ ರಚಿಸಲಾದ ಶಾಸನವನ್ನು ಸಂಸತ್ತೇ ರದ್ದುಗೊಳಿಸಬಹುದೇ ಹೊರತು, ಆ ಶಾಸನವನ್ನು ರದ್ದುಪಡಿಸುವ ಅಧಿಕಾರ ಶಾಸಕಾಂಗಕ್ಕೆ ಇಲ್ಲ.

**ಅಂತರರಾಷ್ಟ್ರೀಯ ಒಡಂಬಡಿಕೆಗಳನ್ನು ಜಾರಿಗೊಳಿಸುವ ಬಗೆಗೆ ಶಾಸನ**

**೨೩೦. ಈ ಪ್ರಕರಣದಲ್ಲಿ ಮುಂದೆ ಹೇಳಲಾದ ಯಾವ ವಿಷಯಗಳಿಗೂ ಅಡ್ಡಿಯಾಗದಂತೆ ಸಂಸತ್ತು ರಾಜ್ಯದ ಅಥವಾ ಅದರ ಯಾವ ಭಾಗಕ್ಕೆ ಅಂತರರಾಷ್ಟ್ರೀಯ ಒಪ್ಪಂದಗಳು ಜಾರಿಗೆ ಬರುವಂತೆ ಕಾನೂನು ರಚಿಸುವ ಅಧಿಕಾರವನ್ನು ಹೊಂದಿದೆ.

೨೩೧. (೧) ಶಾಸಕಾಂಗದಿಂದ ರಚಿಸಿರಬಹುದಾದ ಯಾವುದೇ ಕಾನೂನು, ಸಂಸತ್ತಿನಿಂದ ರಚಿಸಿದ ಕಾನೂನಿಗೆ ವ್ಯತಿರಿಕ್ತವಾಗಿದ್ದಲ್ಲಿ, ಸಂಸತ್ತಿನಿಂದ ರಚಿಸಿದ ಕಾನೂನು ಊರ್ಜಿತವಾಗಿರುತ್ತದೆ. ಈ ವಿಧಿಯ (೨)ನೇ ಉಪನಿಬಂಧನೆಯಲ್ಲಿ ಸೂಚಿಸಿದಂತೆ ಶಾಸಕಾಂಗದಿಂದ ರಚನೆಗೊಂಡ ಕಾನೂನಿನ ಮುನ್ನ ಅಥವಾ ನಂತರದಲ್ಲಿಯೂ, ಸಂಸತ್ತಿನ ಕಾನೂನೇ ಜಾರಿಯಲ್ಲಿರುತ್ತದೆ. ಆದುದರಿಂದ ಶಾಸಕಾಂಗದ ಕಾನೂನು ತಾನೇ ತಾನಾಗಿ ರದ್ದುಗೊಳ್ಳುತ್ತದೆ.

(೨) ಸಂವಿಧಾನದ ಮೊದಲನೆಯ ಅನುಬಂಧ ಭಾಗ I ರಲ್ಲಿ ಹೇಳಲಾದ ರಾಜ್ಯಗಳ ಶಾಸಕಾಂಗದಿಂದ ಸಮವರ್ತಿ ಪಟ್ಟಿಯ ವಿಷಯದ ಬಗೆಗೆ ರಚಿಸಿರಬಹುದಾದ ಕಾನೂನು ಸಂಸತ್ತಿನಿಂದ ರಚಿಸಿದ ಕಾನೂನಿಗೆ ವ್ಯತಿರಿಕ್ತವಾಗಿದ್ದಲ್ಲಿ ಅದು ಊರ್ಜಿತವಾಗುವುದಿಲ್ಲ. ಹೀಗೆ ರಾಜ್ಯದಿಂದ ರಚಿತವಾದ ಕಾನೂನನ್ನು ರಾಷ್ಟ್ರಪತಿಯವರ ವಿವೇಚನೆಗೆ ಕಳುಹಿಸಿ ಅವರಿಂದ

---

* ಸಮಿತಿಯ ಅಭಿಪ್ರಾಯದಲ್ಲಿ ಆಸ್ಟ್ರೇಲಿಯಾ ಕಾಮನ್ ವೆಲ್ತ್ ಆಕ್ಟ್‌ನ ೧೨೯ (೫೬)ರಂತೆ ಸಂಸತ್ತು ರಚಿಸಿದ ಕಾನೂನನ್ನು ಶಾಸಕಾಂಗ ರದ್ದು ಮಾಡಬಾರದೆಂದೇ ಈ ವಿಧಿಯನ್ನು ಅಳವಡಿಸಲಾಗಿದೆ.

** ಸಮಿತಿಯ ಅಭಿಪ್ರಾಯದಲ್ಲಿ ಸಂಸತ್ತಿಗೆ ಅನಿರ್ಬಂಧ ಅಧಿಕಾರ ನೀಡುವ ಏಕೈಕ ಉದ್ದೇಶದಿಂದ ಈ ವಿಧಿಯನ್ನು ಅಳವಡಿಸಲಾಗಿದೆ.

ಅಂಗೀಕಾರ ಪಡೆದಿದ್ದರೆ ಮಾತ್ರ ಜಾರಿಯಲ್ಲಿ ಬರಬಹುದು.

ಆದಾಗ್ಯೂ ಈ ವಿಧಿಯಲ್ಲಿ ತಿಳಿಸಿದಂತೆ ಯಾವುದೇ ವಿಷಯ, ಸಂಸತ್ತಿನ ಅಧಿಕಾರಕ್ಕೆ ಶಾಸನ ರಚಿಸುವ, ತಿದ್ದುಪಡಿ ತರುವ ಅಥವಾ ರದ್ದುಗೊಳಿಸುವ ಬಗೆಗೆ ಅಡ್ಡಿ ಉಂಟು ಮಾಡಲಾರದು.

## ಶಾಸನಾಧಿಕಾರಿಗಳ ಮೇಲಿನ ನಿರ್ಬಂಧಗಳು

**ಮಾರ್ಪಾಡಿಗಾಗಿ ಮಾಡಿದ ಶಿಫಾರಸ್ಸುಗಳು ಕೇವಲ ಪ್ರಕ್ರಿಯಾತ್ಮಕ ಮಾತ್ರ**

೨೩೨. ಸಂವಿಧಾನದ ಮೊದಲನೆಯ ಅನುಬಂಧ ಭಾಗ Iರಲ್ಲಿ ಸೂಚಿಸಿದ ರಾಜ್ಯಗಳ ಶಾಸಕಾಂಗ ಅಥವಾ ಸಂಸತ್ತಿನಿಂದ ರಚಿಸಿದ ಶಾಸನಗಳ ವಿಧಿ ವಿಧಾನಗಳ ಬಗೆಗೆ ಮಾಡಿರಬಹುದಾದ ಶಿಫಾರಸ್ಸುಗಳು ಒಂದು ವೇಳೆ ಆ ವಿಧವಾದ ಶಾಸನಕ್ಕೆ ಅಂಗೀಕಾರ ನೀಡಿದ್ದಲ್ಲಿ ಅಥವಾ ಬೇರೆ ಯಾವುದೇ ಕಾರಣಕ್ಕಾಗಿ ಅನೂರ್ಜಿತವಾಗಲಾರವು.

(ಅ) ಎಲ್ಲಿ ರಾಜ್ಯಪಾಲರ ಅಥವಾ ರಾಷ್ಟ್ರಪತಿಯವರ ಮಂಜೂರಾತಿ ಆ ವಿಧದ ಶಿಫಾರಸಿಗೆ ಬೇಕಾಗಿದ್ದ ಸಂದರ್ಭದಲ್ಲಿ;

(ಆ) ಎಲ್ಲಿ ಆ ವಿಧದ ಶಿಫಾರಸಿಗೆ ಅಧ್ಯಕ್ಷರ ಅಂಗೀಕಾರ ಬೇಕೋ ಅಲ್ಲಿ ಅಧ್ಯಕ್ಷರಿಂದ ದೊರಕಿದ್ದಲ್ಲಿ.

## ಪ್ರಕರಣ II ಆಡಳಿತ ಸಂಬಂಧಗಳು
## ಸಾಮಾನ್ಯ

**ರಾಜ್ಯಗಳ ಹಾಗೂ ಒಕ್ಕೂಟದ ಬಾಧ್ಯತೆ**

೨೩೩. ಪ್ರತಿಯೊಂದು ರಾಜ್ಯದ ಆಡಳಿತಾಧಿಕಾರವು, ಸಂಸತ್ತು ಮಾಡಿದ ಕಾನೂನುಗಳಿಗೆ ಅನುಗುಣವಾಗಿ ಮತ್ತು ಒಕ್ಕೂಟದ ಆಡಳಿತಾಧಿಕಾರದ ನಿರ್ದೇಶನಗಳಂತೆ ಅಂದರೆ ಭಾರತ ಸರಕಾರದ ಆದೇಶಕ್ಕೆ ಅನುಗುಣವಾಗಿರಬೇಕು.

**ಒಕ್ಕೂಟದ ಅಧಿಕಾರಕ್ಕೆ ಅಡ್ಡಿಯಾಗದೆ ಹಾಗೂ ವಿರೋಧವಾಗದಂತೆ ನಡೆದುಕೊಳ್ಳುವುದೇ ರಾಜ್ಯಗಳ ಕರ್ತವ್ಯ**

೨೩೪. (೧) ಪ್ರತಿಯೊಂದು ರಾಜ್ಯದ ಆಡಳಿತಾಧಿಕಾರವನ್ನು ಒಕ್ಕೂಟದ ಅಧಿಕಾರಕ್ಕೆ ಅಡ್ಡಿಯಾಗದಂತೆ ಹಾಗೂ ವಿರೋಧ ವಾಗದಂತೆ ನಡೆಸಬೇಕು. ಭಾರತ ಸರಕಾರವು ತನಗೆ ಸರಿ ದೋರಿದಾಗ ಯಾವ ಉದ್ದೇಶಕ್ಕಾಗಲೀ, ರಾಜ್ಯಸರಕಾರಗಳಿಗೆ ನಿರ್ದೇಶನ ನೀಡಬಹುದು.

(೨) ರಾಷ್ಟ್ರೀಯ ಹಾಗೂ ಮಿಲಿಟರಿ ಉದ್ದೇಶಗಳಿಗಾಗಿ ಒಕ್ಕೂಟ ತನ್ನ ಕಾರ್ಯಾಂಗಾಧಿಕಾರಿ ಆದೇಶಗಳ ಮೂಲಕ,

ರಾಜ್ಯಗಳಿಗೆ ಸಂಪರ್ಕ ಮಾಧ್ಯಮಗಳನ್ನು ರಚಿಸುವಂತೆ ಸೂಚಿಸಬಹುದಾದ ಅಧಿಕಾರ ಹೊಂದಿದೆ.

ಪರಂತು ಈ ಮೇಲೆ ಹೇಳಿದ ಅಂಶಗಳಿಂದ, ಹೆದ್ದಾರಿ, ಜಲಮಾರ್ಗ, ರಾಷ್ಟ್ರೀಯ ಹೆದ್ದಾರಿ ಅಥವಾ ಜಲಮಾರ್ಗಗಳೆಂದು ಘೋಷಿಸುವ ಅಧಿಕಾರ ಸಂಸತ್ತಿಗೆ ಇಲ್ಲ ಎಂದು ಭಾವಿಸಲಾಗದು. ಈ ವಿಧವಾದ ಸಂಪರ್ಕ ಮಾಧ್ಯಮಗಳ ಮಿಲಿಟರಿ, ನೌಕಾ ಹಾಗೂ ವಾಯುಯಾನಗಳಿಗೆ ಸಂಬಂಧಿಸಿದಂತೆ, ಘೋಷಿಸುವ ಅಧಿಕಾರವನ್ನು ಸಂಸತ್ತು ಹೊಂದಿದೆ.

**ರಾಜ್ಯಗಳಿಗೆ ಹಲವು ಪ್ರಕರಣಗಳಲ್ಲಿ ಅಧಿಕಾರವನ್ನು ಸಂಸತ್ತು ನೀಡಬಹುದು.**

೨೩೫. (೧) ಈ ಸಂವಿಧಾನದಲ್ಲಿ ಸೂಚಿಸಿದ ಯಾವ ವಿಷಯಕ್ಕೂ ಅಡಚಣೆ ಉಂಟಾಗದಂತೆ ರಾಷ್ಟ್ರಪತಿಯವರು, ರಾಜ್ಯದ ಮಂಜೂರಾತಿ ಪಡೆದು, ಒಕ್ಕೂಟದ ಅಧಿಕಾರದ ಕಾರ್ಯಗಳನ್ನು ನಿರ್ಬಂಧಿತ ಅಥವಾ ಅನಿರ್ಬಂಧವಾಗಿ ವಿಸ್ತರಿಸಬಹುದು.

(೨) ರಾಜ್ಯ ಸರಕಾರಕ್ಕೆ ಕಾನೂನು ರಚಿಸುವ ಅಧಿಕಾರವಿಲ್ಲದೇ ಹೋದ ಯಾವುದೇ ವಿಷಯದ ಬಗೆಗೆ ಸಂಸತ್ತು ಮಾಡಿರಬಹುದಾದ ಶಾಸನದ ಅಡಿಯಲ್ಲಿ ಕರಗಳನ್ನು ಹೇರಬಹುದು. ಇದು ರಾಜ್ಯದ ಅಧಿಕಾರಿಗಳಿಗೆ ಬಂಧನಕಾರಿ.

(೩) ಈ ವಿಧಿಯಡಿಯಲ್ಲಿರುವ ಅಧಿಕಾರದಿಂದ ರಾಜ್ಯದ ಅಧಿಕಾರ ಹಾಗೂ ಅಧಿಕಾರಿಗಳಿಗೆ ಹೆಚ್ಚಿನ ಕರ್ತವ್ಯವನ್ನು ವಹಿಸಿದಲ್ಲಿ ಅವರಿಗೆ ಭಾರತ ಸರಕಾರವು, ರಾಜ್ಯ ಸರಕಾರಕ್ಕೆ ಒಪ್ಪಂದದಂತೆ ಹಣ ನೀಡಬೇಕು. ಈ ಒಪ್ಪಂದವು ಭಾರತದ ಸರ್ವೋಚ್ಚ ನ್ಯಾಯಾಲಯದ ಪ್ರಮುಖ ನ್ಯಾಯಮೂರ್ತಿಯವರಿಂದ ನೇಮಿಸಿದ ಸಂಧಾನಕಾರರಿಂದ ನಿರ್ಣಯಿಸಲಾಗುವುದು.

**ಕೆಲವು ರಾಜ್ಯಗಳ ಆಡಳಿತಾಧಿಕಾರ, ಶಾಸನಾಧಿಕಾರ ಹಾಗೂ ನ್ಯಾಯಾಂಗ ಅಧಿಕಾರಗಳನ್ನು ವಹಿಸಿಕೊಳ್ಳುವಲ್ಲಿ ಒಕ್ಕೂಟದ ಅಧಿಕಾರ**

೨೩೬. (೧) ಸಂವಿಧಾನದ ಮೊದಲನೆಯ ಅನುಬಂಧ ದಲ್ಲಿಯ ಭಾಗ IIIರಲ್ಲಿ ಸೂಚಿಸಲಾದ ರಾಜ್ಯಗಳೊಡನೆ ಭಾರತ ಸರಕಾರವು ಮಾಡಿಕೊಂಡಿರಬಹುದಾದ ಒಪ್ಪಂದದಂತೆ, ಸಂವಿಧಾನದ ಅಂಶಗಳಂತೆ, ಒಕ್ಕೂಟವು, ರಾಜ್ಯಗಳ ಆಡಳಿತಾಧಿಕಾರ, ಶಾಸನಾಧಿಕಾರ ಮತ್ತು ನ್ಯಾಯಾಂಗ ಕಾರ್ಯಗಳನ್ನು ವಹಿಸಿಕೊಳ್ಳಬಹುದು.

(೨) ಭಾರತ ಸರಕಾರವು ಮೊದಲನೆಯ ಅನುಬಂಧದಲ್ಲಿ ಸದ್ಯ ಸೂಚಿಸಿರದ ಯಾವುದೇ ರಾಜ್ಯದೊಂದಿಗೆ ಒಪ್ಪಂದ ಮಾಡಿಕೊಂಡಲ್ಲಿ, ಆ ವಿಧವಾದ ಒಪ್ಪಂದವು ಸದ್ಯ ಜಾರಿಯಲ್ಲಿರುವ ವಿದೇಶೀ ಪ್ರದೇಶಗಳ ಕಾನೂನಿಗೆ ಅಧೀನವಾಗಿರುತ್ತದೆ.

**ವಿವರ :** ಈ ವಿಧಿಯಲ್ಲಿ 'ಭಾರತೀಯ ರಾಜ್ಯ' ಎಂದರೆ ಭಾರತ ಪ್ರದೇಶಕ್ಕೆ ಸೇರಿರದ ಮತ್ತು ಅಧ್ಯಕ್ಷರಿಂದ ರಾಜ್ಯ ಎಂದು ಪರಿಗಣಿಸಿರುವ ರಾಜ್ಯ ಎಂದೇ ಭಾವಿಸಬೇಕು.

(೩) ಸಂವಿಧಾನದ ೨೩೭ನೆಯ ವಿಧಿಯಲ್ಲಿ ತಿಳಿಸಿದಂತೆ, ಈ ವಿಧಿಯ (ಅ)ದ ಉಪನಿಬಂಧನೆಯಲ್ಲಿ ಹೇಳಿರುವಂತೆ, ಭಾರತ ಸರಕಾರವು ಯಾವುದೇ ರಾಜ್ಯದೊಂದಿಗೆ ಒಪ್ಪಂದ ಮಾಡಿಕೊಂಡಿದ್ದರೆ ಆ ವಿಧವಾದ ಒಪ್ಪಂದವು ಜಾರಿಯಲ್ಲಿ ಬರುವುದೇ ಹೊರತು ಹಿಂದಿನ ಒಪ್ಪಂದಗಳಲ್ಲ.

(೪) ಮೊದಲನೆಯ ಅನುಬಂಧ ಭಾಗ III ರಲ್ಲಿಯ ರಾಜ್ಯಗಳೊಂದಿಗೆ ಸದ್ಯದಲ್ಲಿ ಒಕ್ಕೂಟವೇನಾದರೂ ಒಪ್ಪಂದವನ್ನು ಮಾಡಿಕೊಂಡಿದ್ದಲ್ಲಿ

(ಅ) ಒಕ್ಕೂಟದ ಆಡಳಿತಾಧಿಕಾರವು ಒಪ್ಪಂದದಂತೆ ಎಲ್ಲಾ ವಿಷಯಗಳಿಗೆ ಅನ್ವಯಿಸುವುದು.

(ಆ) ಸಂಸತ್ತು ಒಪ್ಪಂದಕ್ಕೆ ಅನುಗುಣವಾಗಿ ಸೂಚಿಸಲಾದ ಎಲ್ಲಾ ವಿಷಯಗಳಿಗೂ ತನ್ನ ಶಾಸನಾಧಿಕಾರ ವಿಸ್ತರಿಸಬಹುದು.

ವಿಧಿ ೧೧೪(೨)ನೆಯ ಉಪನಿಬಂಧನೆಯಂತೆ, ಭಾರತದ ಸರ್ವೋಚ್ಚ ನ್ಯಾಯಾಲಯವು ಒಪ್ಪಂದದಡಿಯಲ್ಲಿ ಸೂಚಿಸಿದಂತೆ ತನ್ನ ಅಧಿಕಾರವನ್ನು ವಿಸ್ತರಿಸಬಹುದು.

**ಮೊದಲನೆಯ ಅನುಬಂಧ ಭಾಗ I ರಲ್ಲಿಯ ರಾಜ್ಯವು ಭಾಗ IIIರಲ್ಲಿಯ ರಾಜ್ಯಗಳಲ್ಲಿಯ ಆಡಳಿತ ಶಾಸನೀಯ ನ್ಯಾಯಾಂಗ ಅಧಿಕಾರ ವಹಿಸಿಕೊಳ್ಳುವ ಅಧಿಕಾರ**

೨೩೭. ಮೊದಲನೆಯ ಅನುಬಂಧ ಭಾಗ I ರಲ್ಲಿ ಸೂಚಿಸಲಾದ ರಾಜ್ಯ ಸರಕಾರಗಳು ಮುಂದಾಗಿಯೇ ರಾಷ್ಟ್ರಪತಿಯವರ ಸಮ್ಮತಿಯನ್ನು ಪಡೆದು, ಮೊದಲನೆಯ ಅನುಬಂಧದಲ್ಲಿಯ ಭಾಗ IIIರ ರಾಜ್ಯಗಳೊಂದಿಗೆ ಹೊಂದಿರಬಹುದಾದ ಒಪ್ಪಂದದನ್ವಯ ಶಾಸನೀಯ ಆಡಳಿತ ನ್ಯಾಯಾಂಗ ಸಮವರ್ತಿ ಅಥವಾ ರಾಜ್ಯಪಟ್ಟಿಗೆ ಸೇರಿದ ವಿಷಯಗಳನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿವೆ.

(೨) ಈ ವಿಧಿಯ (೧) ಉಪನಿಬಂಧನೆಯಲ್ಲಿ ಸದ್ಯದಲ್ಲಿ ಅನುಬಂಧ ಒಂದು ಭಾಗ I ಹಾಗೂ III ರಲ್ಲಿ ಸೂಚಿಸಲಾದ ರಾಜ್ಯಗಳು ಮಾಡಿಕೊಂಡಿರಬಹುದಾದ ಒಪ್ಪಂದದಂತೆ

(ಅ) ಭಾಗ I, ಅನುಬಂಧದಲ್ಲಿಯ ರಾಜ್ಯದ ಆಡಳಿತಾಧಿಕಾರವು ಒಪ್ಪಂದದ ಎಲ್ಲ ವಿಷಯಗಳಿಗೂ ಅನ್ವಯಿಸುವುದು.

(ಆ) ಭಾಗ I, ಅನುಬಂಧದಲ್ಲಿ ಸೂಚಿಸಲಾದ ರಾಜ್ಯದ ಶಾಸಕಾಂಗವು ಒಪ್ಪಂದದಂತೆ ಎಲ್ಲಾ ವಿಷಯಗಳ ಬಗೆಗೂ ಶಾಸನ ರಚಿಸುವ ಅಧಿಕಾರ ಹೊಂದಿದೆ.

(ಇ) ಮೊದಲನೆಯ ಅನುಬಂಧ ಭಾಗ ಒಂದರಲ್ಲಿಯ ರಾಜ್ಯಗಳ ಶ್ರೇಷ್ಠ ಹಾಗೂ ಇತರ ನ್ಯಾಯಾಲಯಗಳು ಒಪ್ಪಂದದಂತೆ ಎಲ್ಲಾ ವಿಷಯಗಳ ಮೇಲೆ ತಮ್ಮ ಹತೋಟಿಯನ್ನು ಹೊಂದಿವೆ.

**ಸಾರ್ವಜನಿಕ ಹಾಗೂ ನ್ಯಾಯಾಂಗ ವಿಧಾನಗಳ ದಾಖಲೆಗಳು**

೨೩೮. * ೧. ಭಾರತ ಪ್ರದೇಶದ ಎಲ್ಲೆಡೆಯಲ್ಲಿಯೂ, ಸಾರ್ವಜನಿಕ ಶಾಸನ, ದಾಖಲೆ ಮತ್ತು ನ್ಯಾಯಾಂಗದ ನಡಾವಳಿಗೆ ಸಂಪೂರ್ಣ ಗೌರವ ಮತ್ತು ನಂಬಿಕೆಯನ್ನು ಒಕ್ಕೂಟ ಹಾಗೂ ರಾಜ್ಯಗಳು ನೀಡಬೇಕು.

(೨) ಈ ಮೇಲಿನ ಉಪನಿಬಂಧನೆಯಲ್ಲಿ ತಿಳಿಸಲಾದ ಸಾರ್ವಜನಿಕ ಶಾಸನ, ದಾಖಲೆ ಹಾಗೂ ನಡಾವಳಿಗಳು ಕಾನೂನಿನಲ್ಲಿ ಸೂಚಿಸಿದ ಸಂದರ್ಭ ಹಾಗೂ ವಿಧಾನದಂತೆ ಜರುಗಬೇಕು.

(೩) ಕಾನೂನಿನ ಪ್ರಕಾರ ನ್ಯಾಯಾಲಯಗಳು ನೀಡಿದ ತೀರ್ಪು ಹಾಗೂ ಅಂತಿಮ ತೀರ್ಪುಗಳನ್ನು ಭಾರತದ ಪ್ರದೇಶಗಳಲ್ಲಿ ಕಾನೂನಿನಂತೆ ಜಾರಿಗೊಳ್ಳಬೇಕು.

ಆದರೆ ಮೊದಲನೆಯ ಅನುಬಂಧದ ಭಾಗ III ರಲ್ಲಿ ಸದ್ಯ ಸೂಚಿಸಿರುವ ರಾಜ್ಯಗಳಿಗೆ ಉಪನಿಬಂಧನೆ (೧) ಹಾಗೂ (೩)ರಲ್ಲಿ ಸೂಚಿಸಿರುವ ವಿಷಯ, ಸಂಸತ್ತು ಒಕ್ಕೂಟ ಅಥವಾ ರಾಜ್ಯಗಳು ಒಪ್ಪಂದ ಮಾಡಿಕೊಂಡಿದ್ದರೆ ಮಾತ್ರ ೨, ೪ ಮತ್ತು ೫ ಸಮವರ್ತಿ ಪಟ್ಟಿಯ ದಾಖಲೆಯಂತೆ ಜಾರಿಗೊಳ್ಳದು.

## ನೀರು ಸರಬರಾಜಿಗೆ ಅಡ್ಡಿಯುಂಟುಮಾಡುವ ಬಗ್ಗೆ

**ನೀರು ಸರಬರಾಜಿಗೆ ಅಡಚಣೆಯ ಬಗೆಗೆ ದೂರು**

೨೩೯. ಸಂವಿಧಾನದ ಮೊದಲನೆಯ ಅನುಬಂಧ ಭಾಗ I ಮತ್ತು III ರಲ್ಲಿ ಸೂಚಿಸಿದ ರಾಜ್ಯಗಳಿಗೆ ಹಾಗೂ ಅವುಗಳ ನಿವಾಸಿಗಳಿಗೆ ಪ್ರಕೃತಿಯಿಂದ ದೊರೆಯುತ್ತಿರುವ ನೀರಿಗೆ ಅಡಚಣೆ ಉಂಟಾಗಬಹುದೆಂಬ ಸಂಶಯ ಉಂಟಾದಲ್ಲಿ –

(ಅ) ಯಾವ ಬಗೆಯ ಆಡಳಿತ ಕಾರ್ಯಾಚರಣೆಯಿಂದ, ಅಥವಾ ಶಾಸನದ ರಚನೆ ಅಥವಾ ರಚಿಸಬಹುದಾದ ಅಥವಾ

(ಆ) ಸಂಬಂಧಿಸಿದ ಅಧಿಕಾರಿಗಳ ಕರ್ತವ್ಯ ಲೋಪ, ನೀರಿನ

---

* ಸಮಿತಿಯ ಅಭಿಪ್ರಾಯದಲ್ಲಿ ಈ ವಿಧಿಯನ್ನು ಮೂಲಭೂತ ಹಕ್ಕುಗಳ ಭಾಗ IIIಕ್ಕಿಂತ ಈ ಪ್ರಕರಣದಲ್ಲಿಯೇ ಸೂಚಿಸುವುದು ಸೂಕ್ತ ಎಂದಿದೆ. ಮುಂದುವರಿದು ಸಮಿತಿಯ ಅಭಿಪ್ರಾಯವೆಂದರೆ ಈ ಅಂಶಗಳನ್ನು ಕೂಡಲೇ ಮೊದಲನೆಯ ಅನುಬಂಧ ಭಾಗ III ರಲ್ಲಿ ಸೂಚಿಸಿದ ರಾಜ್ಯಗಳ ಸಮವರ್ತಿ ಪಟ್ಟಿಯಲ್ಲಿ ಭೇದವಿರುವುದರಿಂದ, ನಾಗರಿಕ ದಂಡ ಹಾಗೂ ಸಾಕ್ಷಿ ವಿಧಾನಗಳಿಗೆ ಸಂಬಂಧಿಸಿದ ವಿಷಯಗಳ ಬಗೆಗೆ ದಾರಿ ಮಾಡದೇ, ಸಮಿತಿಯು ಈ ನಿಬಂಧನೆಯನ್ನು ಪುನರ್ ಪರಿಶೀಲಿಸಿ ಯಾವ ರಾಜ್ಯಗಳು ಒಕ್ಕೂಟದೊಂದಿಗೆ ವಿಲೀನ ಹೊಂದಿವೆಯೋ ಆ ರಾಜ್ಯದ ಸಮವರ್ತಿ ಪಟ್ಟಿಗೆ ಮಾತ್ರ ಅನ್ವಯಿಸಿದೆ.

ಹಂಚಿಕೆ, ಹತೋಟಿ ಹಾಗೂ ಜಲ ಸಂಪನ್ಮೂಲಗಳ ರಕ್ಷಣೆಯ ಬಗೆಗೆ ಆ ರಾಜ್ಯದ ಸರಕಾರವು ರಾಷ್ಟ್ರಾಧ್ಯಕ್ಷರಿಗೆ ದೂರು ಸಲ್ಲಿಸಬಹುದು.

**ದೂರುಗಳ ತೀರ್ಮಾನ**

೨೪೦. (೧) ಮೇಲೆ ವಿವರಿಸಿದಂತೆ ರಾಷ್ಟ್ರಾಧ್ಯಕ್ಷರು ದೂರನ್ನು ಪಡೆದಾಗ, ಅವರ ವಿವೇಚನೆಯಂತೆ ದೂರು ಮಹತ್ವದ್ದಾಗಿದ್ದು ಅದರ ಪರಿಹಾರಕ್ಕೆ ಆಯೋಗವನ್ನು ರಚಿಸಬೇಕೆಂದು ಮನವರಿಕೆಯಾದಲ್ಲಿ ಅವರು, ಈ ವಿಷಯದ ಬಗೆಗೆ ತಜ್ಞ ನೀರಾವರಿ ಇಂಜಿನಿಯರ್, ಆಡಳಿತಾಧಿಕಾರಿ, ಹಣ ಮತ್ತು ಕಾನೂನು ತಜ್ಞರಿಂದ ಒಡಗೂಡಿದ ಒಂದು ಆಯೋಗವನ್ನು ರಚಿಸಿ ಅದಕ್ಕೆ ಸೂಕ್ತ ಆದೇಶಗಳನ್ನು ನೀಡಬಹುದು.

(೨) ಈ ವಿಧವಾಗಿ ನೇಮಕ ಹೊಂದಿದ ಆಯೋಗವು ದೂರನ್ನು ಪರಿಶೀಲಿಸಿ ರಾಷ್ಟ್ರಾಧ್ಯಕ್ಷರಿಗೆ ತಮಗೆ ತಿಳಿದಂತೆ ಸೂಕ್ತ ಪರಿಹಾರಗಳನ್ನು ಶಿಫಾರಸ್ಸು ಮಾಡಬಹುದು.

(೩) ಈ ವಿಧವಾದ ವರದಿಯ ಪರಿಶೀಲನೆಯ ನಂತರ ರಾಷ್ಟ್ರಾಧ್ಯಕ್ಷರಿಗೆ ಸೂಕ್ತ ಸಲಹೆಗಳ ಬಗೆಗೆ ವಿವರಣೆ ಅಥವಾ ಮಾರ್ಗದರ್ಶನ ಬೇಕು ಎಂದಲ್ಲಿ ಅದನ್ನು ಆಯೋಗಕ್ಕೆ ಹೆಚ್ಚುವರಿ ಪರಿಶೀಲನೆಗೆಂದು ಮರಳಿ ಕಳಿಸಿಕೊಡಬಹುದು.

(೪) ಈ ಉದ್ದೇಶಗಳಿಗೆಂದೇ ನೇಮಿಸಲಾದ ಆಯೋಗಕ್ಕೆ ಪರಿಶೀಲನೆಯ ದಿಶೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಸಹಕಾರವನ್ನು ಕೋರಿದಲ್ಲಿ ನ್ಯಾಯಾಲಯವು ಈ ಕಾರಣಕ್ಕಾಗಿ ಆಯೋಗದ ನಡಾವಳಿಗಳನ್ನು ಪರಾಂಬರಿಸಿ ತನ್ನ ಅಧೀನಕ್ಕೆ ಒಳಪಡುವ ಸೂಕ್ತ ನಿರ್ದೇಶನಗಳನ್ನು ನೀಡಬಹುದು.

(೫) ಆಯೋಗವು ತನ್ನ ವರದಿಯ ಶಿಫಾರಸ್ಸಿನಲ್ಲಿ ಸರಕಾರ ಅಥವಾ ವ್ಯಕ್ತಿಗಳಿಂದ, ಆಯೋಗದ ಖರ್ಚು ವೆಚ್ಚ ಹಾಗೂ ಸರಕಾರದಿಂದ ಮತ್ತು ವ್ಯಕ್ತಿಗಳಿಂದಾದ ಆಯೋಗ ಮುಂದೆ ಹಾಜರಾದವರಿಂದ ಆಗಿರಬಹುದಾದ ವೆಚ್ಚವನ್ನು ಭರಿಸುವಂತೆ ರಾಷ್ಟ್ರಪತಿಯವರು ನೀಡಿದ ಆಜ್ಞೆಯಂತೆ ಪರಿಗಣಿಸಬೇಕು.

(೬) ಆಯೋಗದಿಂದ ಬಂದ ವರದಿಯನ್ನು ಪರಿಶೀಲಿಸಿದ ನಂತರ ರಾಷ್ಟ್ರಾಧ್ಯಕ್ಷರು ಅದರಲ್ಲಿಯ ವಿಷಯದಂತೆ ಆಜ್ಞೆಯನ್ನು ಹೊರಡಿಸಬೇಕು.

(೭) ಆಯೋಗದ ವರದಿಯನ್ನು ಪರಿಶೀಲಿಸಿದ ನಂತರ ಕಾನೂನಿನ ಮಹತ್ವದ ಅಂಶ ಅಡಕವಾಗಿದೆಯೆಂದು ರಾಷ್ಟ್ರಾಧ್ಯಕ್ಷರಿಗೆ ಮನವರಿಕೆಯಾದರೆ, ಈ ಸಂಗತಿಯನ್ನು ವಿಧಿ ೧೧೯ರಂತೆ ಅವರು

ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯಕ್ಕೆ ಕೋರಬಹುದು. ನಂತರ ಸರ್ವೋಚ್ಚ ನ್ಯಾಯಾಲಯವು ಆಯೋಗದ ವರದಿಗೆ ಸಹಮತ ಅಥವಾ ತನ್ನ ಅಭಿಪ್ರಾಯಗಳೊಂದಿಗೆ ಸಲಹೆ ನೀಡಿ ಅದನ್ನು ಆಯೋಗಕ್ಕೆ ಮರಳಿಸಬೇಕು. ಆಗ ಆಯೋಗವು ಸರ್ವೋಚ್ಚ ನ್ಯಾಯಾಲಯದ ಸಲಹೆಗಳನ್ನು ತನ್ನ ವರದಿಯಲ್ಲಿ ಅಳವಡಿಸಿ ಅದನ್ನು ರಾಷ್ಟ್ರಾಧ್ಯಕ್ಷರಿಗೆ ಸಲ್ಲಿಸಬೇಕು.

(೮) ತೊಂದರೆಗೆ ಈಡಾದ ರಾಜ್ಯಕ್ಕೆ ಈ ವಿಧಿಯ ಅಡಿಯಲ್ಲಿ ಆಯೋಗದ ವರದಿಯನ್ನು ಜಾರಿಗೊಳಿಸಲಾಗುವುದು ಮತ್ತು ರಾಜ್ಯದ ಶಾಸಕಾಂಗವು ಈ ಆದೇಶಕ್ಕೆ ವಿರುದ್ಧವಾದ ಶಾಸನವೇನಾದರೂ ರಚಿಸಿದ್ದರೆ, ಈ ಆದೇಶಕ್ಕೆ ಸಂಬಂಧಿಸಿದಂತೆ ಆ ಶಾಸನವು ಅನೂರ್ಜಿತವಾಗುತ್ತದೆ.

(೯) ತೊಂದರೆಗೆ ಈಡಾದ ರಾಜ್ಯವು ರಾಷ್ಟ್ರಾಧ್ಯಕ್ಷರಿಗೆ ಮನವಿ ಮಾಡಿದಾಗ, ಮೇಲೆ ವಿವರಿಸಿದಂತೆ ಆಯೋಗವನ್ನು ರಚಿಸಿದ್ದು ಅದರ ಶಿಫಾರಸ್ಸುಗಳನ್ನು ಅಥವಾ ಮಾರ್ಪಡಿಸಿದ ಆದೇಶವನ್ನು ನೀಡಬಹುದು.

**ಮೊದಲನೆಯ ಅನುಬಂಧ ಭಾಗ II ರ ರಾಜ್ಯಗಳ ನೀರು ಸರಬರಾಜಿಗೆ ತೊಂದರೆ ನೀಡುವುದು**

೨೪೧. ಸಂವಿಧಾನದ ಮೊದಲನೆಯ ಅನುಬಂಧ ಭಾಗ II ರಲ್ಲಿಯ ರಾಜ್ಯಗಳ ಹಿತಾಸಕ್ತಿಗೆ ಅಡ್ಡಿಯುಂಟಾಗಿದೆ ಎಂದು ರಾಷ್ಟ್ರಾಧ್ಯಕ್ಷರಿಗೆ ಮನವರಿಕೆಯಾದಲ್ಲಿ ಅಥವಾ ಆ ರಾಜ್ಯದ ನಿವಾಸಿಗಳಿಂದ ದೂರು ಬಂದಲ್ಲಿ ಅಥವಾ ಸದ್ಯದಲ್ಲಿ ಮೊದಲನೆಯ ಅನುಬಂಧದ ಭಾಗ I ಮತ್ತು III ಪ್ರಾಕೃತಿಕ ಜಲ ಸಂಪತ್ತಿಗೆ ತೊಂದರೆ ಉಂಟಾಗಿದ್ದರೆ

(ಅ) ಯಾವುದೇ ಆಡಳಿತ ಕಾರ್ಯಾಚರಣೆಯಿಂದಾಗಲೀ, ಅಥವಾ ಶಾಸನದಿಂದಾಗಲೀ ಅಥವಾ ಶಾಸನ ರಚಿಸುವುದರಿಂದ ಅಥವಾ ಜಾರಿಗೊಳಿಸುವುದರಿಂದ

ಅಥವಾ

(ಆ) ಅಧಿಕಾರಿಗಳಿಂದ ಈ ದಿಶೆಯಲ್ಲಿ ಆಜ್ಞೆಗಳನ್ನು ಜಾರಿಗೊಳಿಸುವಲ್ಲಿ ಕರ್ತವ್ಯಲೋಪವಾಗಿದ್ದರೆ ನೀರನ್ನು ಉಪಯೋಗಿಸುವಲ್ಲಿ, ಹಂಚುವಲ್ಲಿ, ನಿಯಂತ್ರಿಸುವಲ್ಲಿ ಅವರಿಗೆ ಸರಿ ಎಂದು ಕಂಡುಬಂದಲ್ಲಿ ಆ ವಿಷಯವನ್ನು ಈ ಹಿಂದಿನ ವಿಧಿಯಲ್ಲಿ ಸೂಚಿಸಿದಂತೆ ನೇಮಕಗೊಂಡ ಆಯೋಗದ ಆದೇಶಗಳನ್ನು ಮೊದಲನೆಯ ಅನುಬಂಧ ಭಾಗ II ಹಾಗೂ I ರಾಷ್ಟ್ರಾಧ್ಯಕ್ಷರಿಗೆ ಅಥವಾ ರಾಜ್ಯಪಾಲರಿಗೆ ದೂರು ಸಲ್ಲಿಸಿದಂತೆ ಗ್ರಹಿಸಿ ಅನುಷ್ಠಾನಗೊಳಿಸಬಹುದು.

**ನ್ಯಾಯಾಲಯಗಳ ನ್ಯಾಯವ್ಯಾಪ್ತಿಯ ನಿಷೇಧ**

೨೪೨. ಈ ಸಂವಿಧಾನದಲ್ಲಿ ಏನೇ ಹೇಳಿದ್ದರೂ ಸಹಾ ಮೂರು ವಿಧಿಗಳಿಗೆ ಸಂಬಂಧಿಸಿದಂತೆ, ಯಾವ ಕಾರ್ಯದ ಅಥವಾ ಆಚರಣೆ ಅನುಕರಣೆಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ ಅಥವಾ ಯಾವ ನ್ಯಾಯಾಲಯದ ವ್ಯಾಪ್ತಿಗೂ ಬರುವುದಿಲ್ಲ.

## ಅಂತರ ರಾಜ್ಯ ವ್ಯಾಪಾರ ಮತ್ತು ವಾಣಿಜ್ಯ

**ವ್ಯಾಪಾರ ಹಾಗೂ ವಾಣಿಜ್ಯ ನಿಬಂಧನೆಗಳು ರಾಜ್ಯಗಳ ಮಧ್ಯೆ ತಾರತಮ್ಯ ತರದಂತೆ ನಿಷೇಧ**

* ೨೪೩. ಭೂಪ್ರದೇಶ ಅಥವಾ ಜಲಮಾರ್ಗಗಳಲ್ಲಿ ಜರುಗುವ ವ್ಯಾಪಾರ ಹಾಗೂ ವಾಣಿಜ್ಯಗಳಿಗೆ ಸಂಬಂಧಿಸಿದಂತೆ, ಎಲ್ಲಾ ರಾಜ್ಯಗಳಿಗೂ ಒಂದೇ ವಿಧವಾದ ಕಾನೂನು ರಚಿಸುವ ಮೂಲಕ ಅವುಗಳಲ್ಲಿ ಯಾವ ತಾರತಮ್ಯಕ್ಕೂ ಆಸ್ಪದ ನೀಡಲಾಗದು.

**ರಾಜ್ಯಗಳ ನಡುವಿನ ವ್ಯಾಪಾರ, ವಾಣಿಜ್ಯ ಅಥವಾ ಪರಸ್ಪರ ಸಂಬಂಧ**

** ೨೪೪. ವಿಧಿ ೧೬ ಅಥವಾ ಈ ಮೇಲಿನ ವಿಧಿಯಲ್ಲಿ ತಿಳಿಸಿದ ಯಾವ ವಿಷಯಕ್ಕೂ ಅಡ್ಡಿಯಾಗದಂತೆ ಯಾವುದೇ ರಾಜ್ಯವು ಕಾನೂನುಬದ್ಧವಾಗಿ

(ಅ) ಬೇರೆ ರಾಜ್ಯಗಳಿಂದ ಆಮದು ಮಾಡಿಕೊಂಡ ವಸ್ತುಗಳ ಮೇಲೆ ಕರ ಹೇರುವ ಅಧಿಕಾರವನ್ನು ಹೊಂದಿದೆ. ಆದರೆ ಈ ವಿಧವಾದ ಕರವು ರಾಜ್ಯದಲ್ಲಿ ಉತ್ಪಾದಿಸಿದ ಅಥವಾ ತಯಾರಾದ ಆ ಮಾದರಿಯ ವಸ್ತುಗಳ ಮೇಲೆ ಹೇರಲಾದ ಕರಕ್ಕಿಂತ ಬೇರೆಯಾಗಿರಬಾರದು.

(ಅ) ಸಾರ್ವಜನಿಕ ಹಿತದೃಷ್ಟಿಯಿಂದ ಕಾನೂನುಬದ್ಧವಾದ ಹಾಗೂ ಸಕಾರಣ ನಿರ್ಬಂಧನೆಗಳನ್ನು ಹೇರುವುದು ಅಂತರ ರಾಜ್ಯಗಳಲ್ಲಿಯ ವ್ಯಾಪಾರ ಮತ್ತು ವಾಣಿಜ್ಯಗಳ ಸ್ವಾತಂತ್ರ್ಯಕ್ಕೆ ವಿರೋಧವಾದುದಲ್ಲ.

ಆದರೆ ಈ ವಿಧವಾದ ನಿರ್ಬಂಧನೆಗಳನ್ನು ಸಂವಿಧಾನ ಜಾರಿಗೆ ಬಂದ ಐದು ವರ್ಷ ಅವಧಿಯವರೆಗೆ ಉಪನಿಬಂಧನೆಯ (ಆ) ದಲ್ಲಿ ನಿರ್ಬಂಧನೆಗಳು ಸಂವಿಧಾನದ ೩೦೬ (ಅ) ತಿಳಿಸಲಾದ ವಸ್ತುಗಳ ಮೇಲೆ ಹೇರಲಾಗದು.

---

* ಸಮಿತಿಯ ಅಭಿಪ್ರಾಯದಲ್ಲಿ ೨೪೩ ಹಾಗೂ ೨೪೪ರಲ್ಲಿ ತಿಳಿಸಿದ ಅಂಶಗಳು ಭಾಗ III ಮೂಲಭೂತ ಹಕ್ಕುಗಳ ಪ್ರಕರಣಕ್ಕಿಂತ ಈ ಪ್ರಕರಣದಲ್ಲಿ ಸೇರ್ಪಡಿಸಿರುವುದೇ ಸೂಕ್ತ.

** ಸಮಿತಿಯು ಅಭಿಪ್ರಾಯ ಪಡುವುದೇನೆಂದರೆ ಮಿತಿಯಾಗದ ಅಧಿಕಾರಗಳ ಅಂತರರಾಜ್ಯ ಸಮಿತಿಯನ್ನು ಸ್ಥಾಪಿಸುವ ಬದಲು ೨೪೩ರ ಮತ್ತು ೨೪೪ ವಿಧಿಗಳ ಅವಕಾಶಗಳನ್ನು ಕಾರ್ಯಗತ ಮಾಡಲು ಒಂದು ಪ್ರಾಧಿಕಾರವನ್ನು ರೂಪಿಸುವುದು ಹೆಚ್ಚು ಸೂಕ್ತವೆಂದೂ, ಹಾಗಾಗಿ ವ್ಯಾಪಾರ ಮತ್ತು ವಾಣಿಜ್ಯಗಳಿಗೆ ವಿವಾದಗಳ ನ್ಯಾಯ ತೀರ್ಮಾನಿಸಲು ಅಧಿಕಾರ ನೀಡಿ ನೇಮಿಸಿದ ಅಧಿಕೃತರಿಗೆ ಸಾಕಷ್ಟು ಕೆಲಸವಿರಲಾರದು.

**೨೪೩ – ೨೪೪ರಲ್ಲಿ ತಿಳಿಸಿದ ವಿಷಯಗಳ ಜಾರಿಗೆ ತರಲು ಅಧಿಕಾರಿಗಳ ನೇಮಕ**

೨೪೫. ಸಂಸತ್ತು ೨೪೩ ಹಾಗೂ ೨೪೪ರಲ್ಲಿ ತಿಳಿಸಲಾದ ವಿಷಯವನ್ನು ಜಾರಿಗೆ ತರಲು ಸೂಕ್ತ ಅಧಿಕಾರಿಯನ್ನು ನೇಮಿಸುವ ಹಾಗೂ ಅವರ ಅಧಿಕಾರ ಮತ್ತು ಕರ್ತವ್ಯಗಳ ಮತ್ತು ಅವರ ಅಧಿಕಾರವನ್ನು ನಿರ್ಣಯಿಸುವಲ್ಲಿ ಸೂಕ್ತ ಕಾಯ್ದೆಯನ್ನು ರಚಿಸಬಹುದು.

## ರಾಜ್ಯಗಳ ಮಧ್ಯೆ ಸಮನ್ವಯ

**ಅಂತರರಾಜ್ಯ ಸಮಿತಿಯ ಸಂಬಂಧವಾಗಿ ಕಾನೂನು ಅವಕಾಶ**

೨೪೬. ಯಾವುದೇ ಸಂದರ್ಭದಲ್ಲಿ ಮಂಡಳಿಯೊಂದನ್ನು ಸ್ಥಾಪಿಸುವುದರಿಂದ ಸಾರ್ವಜನಿಕ ಹಿತರಕ್ಷಣೆಯಾಗಬಲ್ಲದು ಎಂಬ ವಿಷಯ ರಾಷ್ಟ್ರಪತಿಯವರಿಗೆ ಮನವರಿಕೆಯಾದಲ್ಲಿ

(ಅ) ರಾಜ್ಯಗಳ ನಡುವೆ ಉದ್ಭವಿಸಿದ ವಿವಾದಗಳನ್ನು ನಿವಾರಿಸುವ

(ಆ) ರಾಜ್ಯ – ರಾಜ್ಯಗಳ ರಾಜ್ಯ ಹಾಗೂ ಕೇಂದ್ರ ಹಾಗೂ ಅಧಿಕ ರಾಜ್ಯಗಳ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳನ್ನು ಪರಿಶೋಧಿಸುವ ಮತ್ತು ಚರ್ಚಿಸುವ ಬಗೆಗೆ

(ಇ) ಯಾವುದೇ ಒಂದು ನಿರ್ದಿಷ್ಟ ವಿಷಯದ ಸಮನ್ವಯತೆಯ ಬಗೆಗೆ ನೀತಿಯನ್ನು ನಿರ್ಣಯಿಸುವ ಶಿಫಾರಸ್ಸುಗಳನ್ನು ನೀಡುವ ಬಗೆಗೆ

ಈ ದಿಶೆಯಲ್ಲಿ ರಾಷ್ಟ್ರಪತಿಯವರು ಕೈಗೆತ್ತಿಕೊಳ್ಳುವ ಕಾರ್ಯ ಕಾನೂನುಬದ್ಧ. ರಾಷ್ಟ್ರಪತಿಯವರು ಮಂಡಳಿಯ ಗೊತ್ತು ಗುರಿ, ರಚನೆ ಹಾಗೂ ವಿಧಾನಗಳನ್ನೂ ನಿರ್ಧರಿಸಬಹುದು.

# ಭಾಗ X
# ಹಣಕಾಸು – ಆಸ್ತಿ – ದಾವೆ – ಒಪ್ಪಂದಗಳು

## ಪ್ರಕರಣ I – ಹಣಕಾಸು
## * ಒಕ್ಕೂಟ ಮತ್ತು ರಾಜ್ಯಗಳ ಮಧ್ಯೆ ವರಮಾನದ ಹಂಚಿಕೆ

**ವ್ಯಾಖ್ಯಾನ**

೨೪೭. ಬೇರೆ ಸಂದರ್ಭಗಳನ್ನು ಹೊರತುಪಡಿಸಿ ಈ ಭಾಗದಲ್ಲಿ ಹೇಳಿದ –

(ಅ) "ಹಣಕಾಸಿನ ಆಯೋಗ" ಎಂದರೆ ಸಂವಿಧಾನದ ೨೬೦ನೇ ವಿಧಿ ಅಡಿಯಲ್ಲಿ ರಚಿಸಿದ ಹಣಕಾಸಿನ ಆಯೋಗ; ಎಂದೇ ಭಾವಿಸಬೇಕು.

(ಆ) 'ರಾಜ್ಯ' ಎಂದರೆ ಮೊದಲನೆಯ ಅನುಬಂಧ ಭಾಗ II ರಲ್ಲಿಯ ರಾಜ್ಯಗಳನ್ನು ಹೊರತುಪಡಿಸಿದ ರಾಜ್ಯ.

(ಇ) ಸದ್ಯ ರಾಜ್ಯಗಳು ಎಂದು, ಮೊದಲನೆಯ ಅನುಬಂಧದ ಭಾಗ II ರಲ್ಲಿ ಸೂಚಿಸಿದ ಹಾಗೂ ಭಾಗ IV ಮತ್ತು ಭಾರತದ ಇತರ ಯಾವ ಪ್ರದೇಶಗಳು ಆದರೆ ಅನುಬಂಧದಲ್ಲಿ ಸೂಚಿಸದಿರುವುದು

**"ಭಾರತದ ರಾಜಸ್ವ" ಮತ್ತು "ರಾಜ್ಯದ ರಾಜದ" ಅರ್ಥ**

೨೪೮. ಈ ಪ್ರಕರಣದ ಒಳಗಡೆ ಸೂಚಿಸಿದ ಅಂಶಗಳಂತೆ ಕರಗಳ ಮತ್ತು ಸುಂಕಗಳಿಗೆ ಸಂಬಂಧಿಸಿದ ಒಟ್ಟು ಅಥವಾ ಅಂಶತಃ ಆದಾಯ; "ಭಾರತದ ರಾಜಸ್ವ" ವೆಂದರೆ ಎಲ್ಲಾ ಸಾರ್ವಜನಿಕ ಹಣ ಹಾಗೂ ರಾಜಸ್ವ ಭಾರತ ಸರಕಾರದಿಂದ ವಸೂಲಿ ಮಾಡಿದ ಮತ್ತು 'ರಾಜ್ಯದ ಆದಾಯ' ಎಂದರೆ ಎಲ್ಲಾ ಸಾರ್ವಜನಿಕ ಹಣ ಮತ್ತು ರಾಜ್ಯ ಸರಕಾರ ಸಂಗ್ರಹಿಸಿದ ರಾಜಸ್ವವೆಂದೇ ಪರಿಗಣಿಸಬೇಕು.

**ಒಕ್ಕೂಟ ವಿಧಿಸಿದ ಸುಂಕಗಳು ಆದರೆ ರಾಜ್ಯಗಳಿಂದ ವಸೂಲಿ ಮಾಡಿ ಸಂಗ್ರಹಿಸಿದ ಕರಗಳು**

೨೪೯. (೧) ಛಾಪಾ ಪತ್ರದ ಸುಂಕಗಳು ಮತ್ತು ವೈದ್ಯಕೀಯ ಸೌಂದರ್ಯ ಸಾಮಗ್ರಿಗಳ ಮೇಲೆ ಮತ್ತು ಒಕ್ಕೂಟದ ಪಟ್ಟಿಯಲ್ಲಿ ಸೂಚಿಸಿದ ವಿವಿಧ ವಸ್ತುಗಳ ಮೇಲೆ ಭಾರತ ಸರಕಾರದಿಂದ ಹೇರಿದ ಸುಂಕಗಳನ್ನು ಆಕರಿಸುವ –

---

* ಈ ಕರಡಿನಲ್ಲಿ ಸಮಿತಿಯು ಹಣಕಾಸಿನ ಅಂಶಗಳ ಬಗೆಗೆ ತಜ್ಞರ ಸಮಿತಿಯು ಸೂಚಿಸಿದ ಅಂಶಗಳನ್ನೂ ಅಳವಡಿಸಿಲ್ಲ. ಸದ್ಯ ಪರಿಸ್ಥಿತಿಯು ಉತ್ತಮವಾಗಿರದೇ ಹೋದುದರಿಂದ ಮುಂದಿನ ಐದು ವರ್ಷದ ಅವಧಿಯವರೆಗೂ ಭಾರತ ಸರಕಾರದ ೧೯೩೫ನೇ ಕಾನೂನಿನಲ್ಲಿ ಸೂಚಿಸಿರುವ ಅಂಶಗಳನ್ನೇ ಮುಂದುವರಿಸಿಕೊಂಡು ಹೋಗಲು ನಿರ್ಣಯಿಸಿದೆ. ಅಲ್ಲದೆ ತಜ್ಞರ ಸಮಿತಿಯು ತನ್ನ ವರದಿಯ ೬೬ರ ಪ್ಯಾರಾದಲ್ಲಿ ಹೇಳಿದ ಅಭಿಪ್ರಾಯಕ್ಕೆ ಸಹಮತ ಹೊಂದಿದೆ.

(ಅ) ಮೊದಲನೆಯ ಅನುಬಂಧದ ಭಾಗ II ರಲ್ಲಿ ಸೂಚಿಸಿದ ರಾಜ್ಯಗಳಲ್ಲಿ ಭಾರತ ಸರಕಾರದಿಂದ ವಿಧಿಸಿರುವ ಸುಂಕಗಳನ್ನು

(ಆ) ಬೇರೆ ಪ್ರಕರಣಗಳಲ್ಲಿ ರಾಜ್ಯ ಸರಕಾರದಿಂದಲೇ ವಿಧಿಸಿರಬಹುದಾದ ಸುಂಕಗಳನ್ನು ವಸೂಲಿಮಾಡುವುದು.

(೨) ಈ ವಿಧವಾಗಿ ಹಣಕಾಸಿನ ವರ್ಷದಲ್ಲಿ ಆ ವರ್ಷದ ವಸೂಲಿ ನಿಗದಿ ಮಾಡಿದ ಸುಂಕಗಳು ಭಾರತದ ಆದಾಯದಡಿಯಲ್ಲಿ ಬಾರದೇ ಅದನ್ನು ರಾಜ್ಯಕ್ಕೆ ವಹಿಸಿಕೊಡಲಾಗುವುದು.

**ಒಕ್ಕೂಟದಿಂದ ಆಕರಿಸಿದ ಕರಗಳು ಮತ್ತು ರಾಜ್ಯಗಳಿಗೆ ನೀಡಲಾದವು**

೨೫೦. ೧. ಈ ಕೆಳಗೆ ಸೂಚಿಸಲಾದ ಸುಂಕ ಹಾಗೂ ಕರಗಳನ್ನು ಭಾರತ ಸರಕಾರದಿಂದ ವಿಧಿಸಿದ್ದು ಮತ್ತು ಆಕರಿಸಿದ್ದರೂ, ಅದನ್ನು ರಾಜ್ಯ ಸರಕಾರಗಳಿಗೆ ವಿಧಿಯ (೨)ನೇ ಉಪನಿಬಂಧನೆಯಂತೆ ಹಂಚಲಾಗುವುದು :–

(ಅ) ಆಸ್ತಿ ಹಾಗೂ ವ್ಯವಸಾಯ ಭೂಮಿಯ ವರ್ಗಾವಣೆ ಸುಂಕಗಳು

(ಆ)ವ್ಯವಸಾಯ ಭೂಮಿಯಲ್ಲದ ಆಸ್ತಿಗಳ ಬಗೆಗಿನ ಸುಂಕಗಳು

(ಇ) ರೈಲು ಅಥವಾ ವಿಮಾನ ಪ್ರಯಾಣಿಕರಿಂದ ಆಕರಿಸಲಾದ ಕರಗಳು

(ಈ) ರೈಲು ದರಗಳು ಹಾಗೂ ಸರಕುಗಳ ಸಾಗಾಣಿಕೆಯ ಕರಗಳು

೨. ಹಣಕಾಸಿನ ವರ್ಷದಲ್ಲಿ ಈ ವಿಧವಾಗಿ ಮೊದಲನೆಯ ಅನುಬಂಧ ಭಾಗ II ರಲ್ಲಿಯ ರಾಜ್ಯಗಳಲ್ಲಿ ಸಂಗ್ರಹಿಸಲಾದ ಒಟ್ಟು ಮೊತ್ತ ಭಾರತ ಸರಕಾರದ ಆದಾಯದವಲ್ಲ. ಹೀಗಾಗಿ ಅದು ರಾಜ್ಯದ ಆ ವರ್ಷದ ಆದಾಯವೆಂದೇ, ಸಂಸತ್ತು ನಿರ್ಣಯಿಸಿದ ಸೂತ್ರಗಳಂತೆ ಹಂಚಲಾಗುವುದು.

**ಒಕ್ಕೂಟ ವಿಧಿಸಿದ ಕರಗಳನ್ನು ಒಕ್ಕೂಟ ಹಾಗೂ ರಾಜ್ಯಗಳ ಮಧ್ಯೆ ಹಂಚುವುದು.**

೨೫೧. (೧) ಮೇಲೆ ಹೇಳಿದ ವಿಧಿಯ (೨)ರಲ್ಲಿ ಸೂಚಿಸಿದಂತೆ ವ್ಯವಸಾಯದ ಆದಾಯ ಹೊರತುಪಡಿಸಿ ಮಿಕ್ಕ ಎಲ್ಲಾ ಆದಾಯದ ಮೇಲೆ ಹೇರಲಾದ ಹಾಗೂ ಭಾರತ ಸರಕಾರ ವಿಧಿಸಿದ ಕರಗಳನ್ನು ರಾಜ್ಯ ಹಾಗೂ ಒಕ್ಕೂಟಗಳ ಮಧ್ಯೆ ಹಂಚಲಾಗುವುದು

(೨) ಯಾವ ಹಣಕಾಸಿನ ವರ್ಷದಲ್ಲಿಯಾಗಲೀ ನಿಗದಿ ಪಡಿಸಿದ ದಾಮಾಷದಂತೆ ಅನುಬಂಧ ಒಂದು ಭಾಗ II ರ ರಾಜ್ಯಗಳ ಅಥವಾ ಒಕ್ಕೂಟದ ವೇತನ ಮತ್ತು ಕರಗಳು ಭಾರತದ ಆದಾಯಕ್ಕೆ ಸಂಬಂಧಿಸಿರದೆ ಅವನ್ನು ರಾಜ್ಯದ ಆದಾಯವೆಂದೇ ಪರಿಗಣಿಸಿ ರಾಜ್ಯಗಳಿಗೆ ಹಂಚಲಾಗುವುದು.

(೩) ಉಪನಿಬಂಧನೆ (೨)ಕ್ಕೆ ಸಂಬಂಧಿಸಿದಂತೆ ಪ್ರತಿ ಹಣಕಾಸಿನ ವರ್ಷದಲ್ಲಿ ನಿಗದಿಪಡಿಸಿದ ದಾಮಾಶದಂತೆ ಒಟ್ಟು ಕರಗಳ ಉತ್ಪನ್ನವನ್ನು ಒಕ್ಕೂಟದ ವೇತನ ಹಾಗೂ ಕರಗಳು ಮೊದಲನೆಯ ಅನುಬಂಧ ಭಾಗ II ರಲ್ಲಿ ಸೂಚಿಸಲಾದ ರಾಜ್ಯಗಳ ಒಟ್ಟು ಆದಾಯ

(೪) ಈ ವಿಧಿಯಲ್ಲಿ

(ಅ) 'ಆದಾಯಗಳ ಮೇಲಿನ ಕರ' ಎಂದರೆ ಸಂವಿಧಾನದ ೨೬೬(ಎ)ನೆ ವಿಧಿಯಂತೆ ಭಾರತ ಸರಕಾರದಿಂದ ಹೇರಿದ ಕರವೇ ಹೊರತು ಕಾರ್ಪೋರೇಷನ್ ಕರವಲ್ಲ.

(ಆ) 'ಸೂಚಿಸಲಾದ' ಎಂದರೆ

(i) ಹಣಕಾಸಿನ ಆಯೋಗ ನೇಮಕ ಹೊಂದುವವರೆಗೂ ರಾಷ್ಟ್ರಪತಿಯವರು ಸೂಚಿಸಿದಂತೆ ಅಥವಾ ಆಜ್ಞೆಯಂತೆ

(ii) ಹಣಕಾಸಿನ ಆಯೋಗ ನೇಮಕ ಹೊಂದಿದ ಮೇಲೆ ಅದರ ಶಿಫಾರಸ್ಸುಗಳಂತೆ ರಾಷ್ಟ್ರಪತಿಯವರು ಹೊರಡಿಸುವ ಆಜ್ಞೆಯಂತೆ

(ಇ) ಒಕ್ಕೂಟದ ವೇತನಗಳು ಭಾರತದ ಆದಾಯದಿಂದ ನೀಡಿದ ವೇತನ ಮತ್ತು ಪಿಂಚಣಿಯ ಮೊತ್ತ ಆದಾಯಕರದೊಂದಿಗೆ.

**ಒಕ್ಕೂಟದ ಉದ್ದೇಶಕ್ಕೆ ವಿಧಿಸಲಾದ ಕೆಲವು ಸುಂಕಗಳು ಮತ್ತು ಕರಗಳ ಮೇಲೆ ಸರ್‌ಚಾರ್ಜ್**

ವಿಧಿಗಳು ೨೫೦ ಹಾಗೂ ೨೫೧ರಲ್ಲಿ ಹೇಳಿದ ವಿಷಯಕ್ಕೆ ಅಡಚಣೆಯಾಗದಂತೆ ಸಂಸತ್ತು ಯಾವ ಸಂದರ್ಭದಲ್ಲಿ ಯಾದರೂ ಸುಂಕ ಮತ್ತು ಕರಗಳನ್ನು ಸರ್‌ಚಾರ್ಜ್ ವಿಧಿಸುವ ಮೂಲಕ ಅಧಿಕಗೊಳಿಸಬಹುದು. ಈ ವಿಧವಾಗಿ ಅಧಿಕಗೊಳಿಸಿದ ಸರ್‌ಚಾರ್ಜ್‌ನಿಂದ ಬಂದ ಆದಾಯವು ಭಾರತದ ಆದಾಯಕ್ಕೆ ಸಂದಾಯವಾಗುತ್ತದೆ.

**ಒಕ್ಕೂಟದಿಂದ ವಿಧಿಸಿ ಸಂಗ್ರಹಿಸಲಾದ ಆದಾಯವನ್ನು ರಾಜ್ಯ ಹಾಗೂ ಒಕ್ಕೂಟಗಳ ಮಧ್ಯೆ ಹಂಚಿಕೆ**

*೨೫೩. (೧) ಉಪ್ಪಿನ ಮೇಲೆ ಒಕ್ಕೂಟದಿಂದ ಯಾವ ವಿಧವಾದ ಸುಂಕವನ್ನೂ ಹೇರಲಾಗದು.

(೨) ಒಕ್ಕೂಟದಿಂದ ವೈದ್ಯಕೀಯ ಹಾಗೂ ಸೌಂದರ್ಯ ಸಾಧನಗಳ ಮೇಲಿನ ಸುಂಕ ಹೊರತುಪಡಿಸಿ ಒಕ್ಕೂಟದ ಪಟ್ಟಿಯಲ್ಲಿ ತಿಳಿಸಿದ ಬೇರೆ ವಸ್ತುಗಳ ಸುಂಕವನ್ನು ಭಾರತ ಸರಕಾರವೇ ವಿಧಿಸಿ, ಆಕರಿಸುತ್ತದೆ; ಆದರೆ ಸಂಸತ್ತು ನಿರ್ಣಯಿಸುವ ಶಾಸನದಂತೆ ಭಾರತ

---

* ಸಮಿತಿಯ ಸದಸ್ಯರ ಬಹುಮತ ಅಭಿಪ್ರಾಯದಲ್ಲಿ ಉಪ್ಪಿನ ಮೇಲೆ ಸುಂಕ ವಿಧಿಸುವುದರ ಬಗೆಗೆ ಯಾವ ನಿರ್ಬಂಧನೆಗಳಿರಕೂಡದು ಹಾಗೂ ಈ ವಿಷಯವನ್ನು ಸಂಸತ್ತಿಗೆ ಬಿಡಬೇಕು, ಆದರೆ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರ ಅಭಿಪ್ರಾಯದಂತೆ ಈ ವಿಧಿಯನ್ನು ಇರಿಸಿಕೊಳ್ಳಬೇಕೆಂದೇ ಹೇಳಿದರು.

ಸರಕಾರದ ಆದಾಯದಿಂದ ಸುಂಕ ವಿಧಿಸಿದ ಕಾನೂನಿನಂತೆ ಸಮ ಮೊತ್ತವನ್ನು ರಾಜ್ಯಗಳಿಗೆ ಸಂದಾಯಿಸಲ್ಪಡಬೇಕು ಹಾಗೂ ಸಂಸತ್ತಿನ ಸೂತ್ರದಂತೆ ರಾಜ್ಯಗಳಿಗೆ ಹಂಚಬೇಕು.

**ಸೆಣಬಿನ ನಾರು ಹಾಗೂ ಸೆಣಬಿನ ನಾರಿನ ಉತ್ಪಾದನೆಗಳ ಸುಂಕ ಹಂಚಿಕೆ**

೨೫೪. ೨೫೩ನೇ ವಿಧಿಯಲ್ಲಿ ತಿಳಿಸಿದ ಅಂಶಗಳಿಗೆ ಅಡ್ಡಿ ಬಾರದಂತೆ ಪ್ರತಿವರ್ಷವು ಸೆಣಬು ನಾರು ಮತ್ತು ನಾರಿನ ಉತ್ಪಾದನೆಯ ಸುಂಕದ ಆದಾಯವನ್ನು ಸಂಸತ್ತು ಕಾನೂನಿನ ಮೂಲಕ ನಿರ್ಣಯಿಸಿದ ಅಂಶವನ್ನು ಸೆಣಬಿನ ನಾರು ಉತ್ಪಾದಿಸುವ ರಾಜ್ಯಗಳಿಗೆ ನೀಡಬೇಕು.

ಆದರೆ ಸಂಸತ್ತು ಜಾರಿಯಲ್ಲಿ ಬಂದು ನಿರ್ಣಯಿಸುವ ಅವಧಿಯಲ್ಲಿ ಈ ಉತ್ಪಾದನೆಯನ್ನು ಭಾರತ ಸರಕಾರದ ೧೯೩೫ನೇ ಕಾನೂನಿನಲ್ಲಿ ತಿಳಿಸಿರುವ ಪ್ರಮಾಣದಲ್ಲಿ ಹಂಚಬೇಕು.

**ಕೆಲವು ರಾಜ್ಯಗಳಿಗೆ ಒಕ್ಕೂಟದಿಂದ ಅನುದಾನ**

೨೫೫. ಸಂಸತ್ತು ತನ್ನ ಶಾಸನದಿಂದ ಕೆಲವು ಅವಶ್ಯಕತೆ ಉಳ್ಳ ರಾಜ್ಯಗಳಿಗೆ ಅನುದಾನದ ಮೂಲಕ ಸಹಾಯ ನೀಡಬೇಕೆಂದು ನಿರ್ಣಯಿಸಿದಲ್ಲಿ ಅದನ್ನು ಭಾರತ ಸರಕಾರದ ಆದಾಯ ಖಾತೆಯಿಂದ ನೀಡಬಹುದು. ಆದರೆ ಈ ಸಹಾಯಧನವು ರಾಜ್ಯದಿಂದ ರಾಜ್ಯಕ್ಕೆ ಬೇರೆಯಾಗಿರಬಹುದು. ಈ ಸಹಾಯಧನವನ್ನು ಮೊದಲನೆಯ ಅನುಬಂಧ ಭಾಗ Iರ ರಾಜ್ಯಗಳ ಭಾರತ ಸರಕಾರದ ಆದಾಯದಿಂದ ಮತ್ತು ಅದರ ಅನುಮೋದನೆಯಿಂದ ಕೈಗೆತ್ತಿಕೊಂಡಿರುವ ವಿಕಾಸ ಕಾರ್ಯಗಳಿಗೆ ಅದೂ ಪರಿಶಿಷ್ಟ ವರ್ಗ ಮತ್ತು ಪಂಗಡಗಳ ಕಾರ್ಯಕ್ಕೆ ನೀಡಬೇಕು.

ಸಂದರ್ಭದಲ್ಲಿ ಮುಂದೆ ಈ ಅನುದಾನವನ್ನು ಅಸ್ಸಾಮ್ ರಾಜ್ಯದ ಮೂಲ ಹಣ ಹಾಗೂ ಪುನಃ ಪ್ರಾಪ್ತವಾಗುವ ಮೊತ್ತಕ್ಕೆ ಸಮಾನವಾದ ಹಣ ನೀಡಬಹುದು.

(ಅ) ಆರನೆಯ ಅನುಬಂಧದ ಭಾಗ Iರ ೧೯ನೆಯ ಪ್ಯಾರಾದಲ್ಲಿ ಸೂಚಿಸಲಾದ ಗುಡ್ಡಗಾಡು ಪ್ರದೇಶಗಳ ಆಡಳಿತಕ್ಕೆ ಸರಾಸರಿ ಮೂರು ವರ್ಷಗಳ ಆದಾಯದ ಮೊತ್ತವನ್ನು ಸಂವಿಧಾನ ಜಾರಿಗೆ ಬಂದ ಶೀಘ್ರದಲ್ಲಿಯೇ ನೀಡಬಹುದು.

(ಆ) ಆ ಪ್ರದೇಶಗಳ ಹಾಗೂ ಇತರ ಪ್ರದೇಶಗಳ ಆಡಳಿತ ಸುಧಾರಣೆಯ ಯೋಜನೆಗೆ ತಗಲಬಹುದಾದ ವೆಚ್ಚ ನೀಡಬಹುದು.

**ವೃತ್ತಿಗಳ ವ್ಯಾಪಾರ ಹಾಗೂ ಉದ್ಯೋಗಗಳ ತೆರಿಗೆಗಳು**

(೧) ಸಂವಿಧಾನ ೨೧೭ನೆಯ ವಿಧಿ ಏನೇ ಹೇಳಿದ್ದರು ಈ ವಿಧಿಯ (೨) ಮತ್ತು (೩) ಅನುಬಂಧಗಳ ಅನ್ವಯದಂತೆ, ರಾಜ್ಯದ ಶಾಸಕಾಂಗವು ವೃತ್ತಿ ವ್ಯಾಪಾರ ಕಸುಬು ಮತ್ತು ಉದ್ಯೋಗಗಳಿಗೆ ಸಂಬಂಧಿಸಿದ ಕರಗಳ ಬಗೆಗೆ ರಾಜ್ಯ

ಮುನಿಸಿಪಾಲಿಟಿ, ಜಿಲ್ಲಾ ಬೋರ್ಡ್ ಮತ್ತು ಸ್ಥಳೀಯ ಸಂಸ್ಥೆಗಳಿಗೆಂದು ಶಾಸನ ರಚಿಸಬಹುದು.

(೨) ವ್ಯಕ್ತಿ, ಮುನಿಸಿಪಾಲಿಟಿ, ಜಿಲ್ಲಾ ಬೋರ್ಡ್ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಈ ವಿಧವಾಗಿ ವಿಧಿಸಲ್ಪಟ್ಟ ಕರವು ಸಾಲಿಯಾನ ರೂಪಾಯಿ ೨೫೦ಕ್ಕೆ ಮೀರಕೂಡದು.

ಆದರೆ ಹಲವು ಸಂದರ್ಭದಲ್ಲಿ ಸಂವಿಧಾನ ಜಾರಿಗೆ ಬರುವ ಮುನ್ನವೇ ಯಾವುದಾದರೂ ರಾಜ್ಯದಲ್ಲಿ ಈ ವಿಧವಾದ ಕರವು ರೂ. ೨೫೦ಕ್ಕಿಂತ ಹೆಚ್ಚು ಇದ್ದಲ್ಲಿ, ಅದಕ್ಕೆ ವಿರೋಧವಾಗಿ ಕಾನೂನನ್ನು ಸಾಮಾನ್ಯ ಅಥವಾ ನಿರ್ದಿಷ್ಟ ರಾಜ್ಯಗಳ ಮುನಿಸಿಪಾಲಿಟಿ, ಬೋರ್ಡ್ ಅಧಿಕಾರಕ್ಕೆ ಸಂಬಂಧಿಸಿದಂತೆ ರಚಿಸಬಹುದು.

(೩) ಮೇಲೆ ಹೇಳಿದಂತೆ ಶಾಸನಗಳನ್ನು ರಚಿಸುವ ಶಾಸಕಾಂಗದ ಅಧಿಕಾರವು ಯಾವುದೇ ವಿಧವಾಗಿ ವೃತ್ತಿ, ವ್ಯಾಪಾರ, ಉದ್ಯೋಗ ಹಾಗೂ ಕಸುಬು ವಿಷಯಗಳಿಗೆ ಸಂಬಂಧಿಸಿದಂತೆ, ಶಾಸನವನ್ನು ರಚಿಸುವ ಅಧಿಕಾರ ಕಾಲಕಾಲಕ್ಕೆ ಸಂಸತ್ತಿಗಿಲ್ಲ ಎಂದು ಭಾವಿಸಲಾಗದು.

**ನಿರಸನ**

೨೫೭. ಸಂವಿಧಾನ ಜಾರಿಗೆ ಬರುವ ಮುನ್ನವೇ ಶಾಸನ ಬದ್ಧವಾಗಿ ಯಾವುದೇ ರಾಜ್ಯವು ಅಥವಾ ಮುನಿಸಿಪಾಲಿಟಿ ಹಾಗೂ ಸ್ಥಳೀಯ ಆಡಳಿತ ಅಧಿಕಾರವು ಯಾವುದೇ ವಿಧವಾದ ಕರ, ಸುಂಕ, ಸೆಸ್‌ಗಳನ್ನು ವಿಧಿಸಿದ್ದರೆ, ಅಥವಾ ಈ ವಿಧವಾದ ಕರಗಳನ್ನು ಒಕ್ಕೂಟದ ಪಟ್ಟಿಯಲ್ಲಿ ತಿಳಿಸಲಾಗಿದ್ದರೆ, ಅವು ಸಂಸತ್ತಿನಿಂದ ಶಾಸನ ರಚಿಸುವ ಅವಧಿಯವರೆಗೂ ಜಾರಿಯಲ್ಲಿರಬಹುದು.

**ಮೊದಲನೆಯ ಅನುಬಂಧ ಭಾಗ III ರ ರಾಜ್ಯಗಳಿಗೆ ಸುಂಕದ ಕರ ಹೇರುವ ಹಾಗೂ ಹಂಚಿಕೆಯ ಬಗೆಗೆ ಒಪ್ಪಂದ**

೨೫೮. (೧) ಈ ಪ್ರಕರಣದಲ್ಲಿಯ ಅಂಶಗಳಿಗೆ ಅಡಚಣೆ ಯಾಗದಂತೆ, ಒಕ್ಕೂಟವು ಈ ವಿಧಿಯ (೨) ರಲ್ಲಿ ಸೂಚಿಸಿ ದಂತೆ, ಮೊದಲನೆಯ ಅನುಬಂಧ ಭಾಗ III ರಲ್ಲಿಯ ರಾಜ್ಯ ಗಳೊಂದಿಗೆ ಕರ ಹೇರುವ ಹಾಗೂ ಆಕರಿಸುವ ಅಥವಾ ಸುಂಕಗಳ ಬಗೆಗೆ ಭಾರತ ಸರಕಾರ ಒಪ್ಪಂದ ಮಾಡಿಕೊಳ್ಳಬಹುದು. ಹೀಗೆ ಮಾಡಿಕೊಳ್ಳಲಾದ ಒಪ್ಪಂದದಂತೆ ವಸೂಲಿಯಾದ ಕರದ ಮೊತ್ತವನ್ನು ಹಂಚಿಕೊಳ್ಳಬಹುದು.

(೨) ಈ ವಿಧಿಯ (೧)ರಂತೆ ಮಾಡಿಕೊಂಡ ಒಪ್ಪಂದವು ಸಂವಿಧಾನ ಜಾರಿಗೆ ಬಂದಂದಿನಿಂದ ಹತ್ತು ವರ್ಷ ಜಾರಿಯಲ್ಲಿರುವುದು.

ಆದರೆ ಐದು ವರ್ಷ ಅವಧಿ ಮುಗಿದ ಸಂದರ್ಭದಲ್ಲಿ

ಹಣಕಾಸಿನ ಆಯೋಗದ ಅಭಿಪ್ರಾಯದಂತೆ ರಾಷ್ಟ್ರಪತಿಯವರು ಅದರಲ್ಲಿ ಮಾರ್ಪಾಡು ಅಥವಾ ಮೊಟಕುಗೊಳಿಸಬಹುದು.

**ಒಟ್ಟು ಆದಾಯದ ಲೆಕ್ಕಾಚಾರ**

೨೫೯. (೧) ಈ ಪ್ರಕರಣದಲ್ಲಿ ಮುಂದೆ ವಿವರಿಸಲಾದ ಅಂಶದಂತೆ 'ಒಟ್ಟು ಆದಾಯ' ಎಂದರೆ ಯಾವುದೇ ಕರ ಹಾಗೂ ಸುಂಕದ ಆಕರಣೆಯ ವೆಚ್ಚವನ್ನು ಕಳೆದು ಉಳಿಯಬಹುದಾದ ಆದಾಯ ಅಥವಾ ಭಾರತದ ಆಡಿಟರ್ ಜನರಲ್ ಅವರು ಯಾವ ಪ್ರದೇಶದ ಕರ ಹಾಗೂ ಸುಂಕದ ವಿಷಯ ಅರಿತು ಆದಾಯ ಎಂದು ಪ್ರಮಾಣೀಕರಿಸುವ ಮೊತ್ತ ಎಂದೇ ಭಾವಿಸಬೇಕು.

(೨) ಮೇಲೆ ತಿಳಿಸಿದಂತೆ ಅಥವಾ ಸಂಸತ್ತಿನಿಂದ ಈ ಪ್ರಕರಣದ ಅಂಶಗಳಿಗೆ ಸಂಬಂಧಿಸಿದಂತೆ ಶಾಸನ ನಿರ್ಮಿತ ಕಾನೂನು ಅಥವಾ ರಾಷ್ಟ್ರಪತಿಯವರ ಆಜ್ಞೆ ಯಾವುದೇ ಪ್ರಕರಣದಲ್ಲಿ ಸಂವಿಧಾನದಲ್ಲಿ ಒಟ್ಟು ಆದಾಯವೆಂದರೆ ಕರ ಹಾಗೂ ಸುಂಕ ಯಾವುದೇ ರಾಜ್ಯದಿಂದ ಸಮಯ ಸಮಯಕ್ಕೆ ಆಕರಿಸಬಹುದೆಂದೂ ಹಾಗೂ ಅದಕ್ಕೆ ತಗಲಬಹುದಾದ ವೆಚ್ಚಖರ್ಚುಗಳ ಲೆಕ್ಕಾಚಾರ ಒಂದು ಹಣಕಾಸಿನ ವರ್ಷದಿಂದ ಮತ್ತೊಂದು ಹಣಕಾಸಿನ ವರ್ಷದಲ್ಲಿ ಹೊಂದಾಣಿಕೆ ಕಾರ್ಯಗಳಿಂದ ಉಳಿಯುಬಹುದಾದ ಆದಾಯವೆಂದು ಪರಿಗಣಿಸಬಹುದು.

**ಹಣಕಾಸಿನ ಆಯೋಗ**

೨೬೦. (೧) ಸಂವಿಧಾನ ಜಾರಿಯಲ್ಲಿ ಬಂದ ಐದು ವರ್ಷಗಳ ನಂತರ ಹಾಗೂ ಪ್ರತಿ ಐದು ವರ್ಷ ಅಥವಾ ಅದಕ್ಕೂ ಮುಂಚೆಯೇ, ಮನವರಿಕೆಯಾದಲ್ಲಿ ರಾಷ್ಟ್ರಪತಿಯವರು ಹಣಕಾಸಿನ ಆಯೋಗವನ್ನು ನೇಮಿಸಬಹುದು. ಈ ಹಣಕಾಸಿನ ಆಯೋಗಕ್ಕೆ ಓರ್ವ ಅಧ್ಯಕ್ಷ ಹಾಗೂ ನಾಲ್ವರು ಸದಸ್ಯರನ್ನು ರಾಷ್ಟ್ರಪತಿಯವರೇ ನೇಮಿಸುತ್ತಾರೆ.

(೨) ಈ ಆಯೋಗದ ಸದಸ್ಯರ ಅರ್ಹತೆಗಳನ್ನು ಹಾಗೂ ಆಯ್ಕೆಯ ವಿಧಾನಗಳನ್ನು ಸಂಸತ್ತು ಕಾನೂನಿನ ಮೂಲಕ ನಿರ್ಣಯಿಸುವುದು.

(೩) ಈ ವಿಧವಾಗಿ ನೇಮಕ ಹೊಂದಿದ ಆಯೋಗವು, ರಾಷ್ಟ್ರಪತಿಯವರಿಗೆ ತನ್ನ ಶಿಫಾರಸುಗಳನ್ನು ನೀಡಬೇಕು.

(ಅ) ಕರ ಹಾಗೂ ಸುಂಕಗಳಿಂದ ಬಂದ ಆದಾಯವನ್ನು ಒಕ್ಕೂಟ ಮತ್ತು ರಾಜ್ಯಗಳಿಗೆ ಹೇಗೆ ಹಂಚಬೇಕು, ಅಥವಾ ಈ ಪ್ರಕರಣದಲ್ಲಿಯ ಅಂಶಗಳಂತೆ ವಿವಿಧ ರಾಜ್ಯಗಳಿಗೆ ಆದಾಯವನ್ನು ಹೇಗೆ ನೀಡಬಹುದು ಎಂಬುದು;

(ಆ) ಭಾರತ ಸರಕಾರದ ಆದಾಯದಿಂದ ರಾಜ್ಯಗಳಿಗೆ ನೀಡಬಹುದಾದ ಅನುದಾನ ಸೂತ್ರಗಳು

(ಇ) ಮೊದಲನೆಯ ಅನುಬಂಧದ ಭಾಗ III ರಾಜ್ಯಗಳೊಂದಿಗೆ ಹೇರಬಹುದಾದ, ಆಕರಿಸುವ, ಹಂಚಿಕೆಯ ಬಗೆಯಲ್ಲಿ ಮಾಡಿಕೊಂಡಿರುವ ಒಪ್ಪಂದವನ್ನು ಮುಂದುವರಿಸುವ ಹಾಗೂ ಬದಲಾಯಿಸುವ ಬಗೆಗೆ

(ಈ) ಉತ್ತಮ ಹಣಕಾಸಿನ ವ್ಯವಸ್ಥೆಗೆಂದೇ ರಾಷ್ಟ್ರಪತಿಯವರು, ಆಯೋಗಕ್ಕೆ ಸಲಹೆ ಕೋರಿದರೆ

(೪) ಸಂಸತ್ತು ಆಯೋಗದ ಕಾರ್ಯಾಚರಣೆಗೆಂದು ರಚಿಸಿದ ಶಾಸನದನ್ವಯ ಆಯೋಗ ತನ್ನ ಅಧಿಕಾರ ಹಾಗೂ ವಿಧಿವಿಧಾನಗಳನ್ನು ಹೊಂದಿದೆ.

**ಹಣಕಾಸಿನ ಆಯೋಗದ ಶಿಫಾರಸ್ಸುಗಳು**

(೧) ಈ ಪ್ರಕರಣದ ಅಂಶಗಳಲ್ಲಿ ತಿಳಿಸಿದಂತೆ, ರಾಷ್ಟ್ರಪತಿಯವರು, ಹಣಕಾಸು ಆಯೋಗ ನೀಡಿದ ಶಿಫಾರಸ್ಸುಗಳನ್ನು ಸೂಕ್ತ ವಿವರಣೆಯೊಂದಿಗೆ ಕಾರ್ಯರೂಪದಲ್ಲಿ ತರುವಂತೆ ಸಂಸತ್ತಿಗೆ ಮಂಡಿಸುವರು.

## ಸಂಕೀರ್ಣ ಆರ್ಥಿಕ ಅವಕಾಶಗಳು

**ಭಾರತದ ರಾಜಸ್ವದಿಂದ ಖರ್ಚುವೆಚ್ಚ ವಿನಿಯೋಗ**

೨೬೨. ಸಂಸತ್ತು ಹಾಗೂ ರಾಜ್ಯಗಳ ಉದ್ದೇಶಕ್ಕೆ ಅಡ್ಡಿ ಬಾರದಂತೆ ಸಾರ್ವಜನಿಕ ಉದ್ದೇಶಗಳಿಗಾಗಿ ಸಂಸತ್ತು ಹಾಗೂ ರಾಜ್ಯಗಳು ಅನುದಾನವನ್ನು ನೀಡಬಹುದು.

**ಸಾರ್ವಜನಿಕ ಹಣದ ಸ್ವಾಧೀನಕ್ಕೆ ಕಾನೂನು ಅವಕಾಶಗಳು**

೨೬೩. (೧) ರಾಷ್ಟ್ರಪತಿ ಅಥವಾ ರಾಜ್ಯಪಾಲರು ಭಾರತ ಹಾಗೂ ರಾಜ್ಯಗಳ ಆದಾಯದಿಂದ ಬಂದ ಸಾರ್ವಜನಿಕ ಹಣದ ಸ್ವಾಧೀನಕ್ಕಾಗಿ ಶಾಸನ ಮಾಡಬಹುದು. ಹೀಗೆ ರಚಿಸಿದ ಶಾಸನದಂತೆ ಹಲವು ಅಪರಾಧಗಳನ್ನು ಹೊರತುಪಡಿಸಿ ಭಾರತ ಮತ್ತು ರಾಜ್ಯಗಳ ರಾಜಸ್ವದ ವಶಕ್ಕಾಗಿ ಯಾವುದಾದರೂ ಓರ್ವ ವ್ಯಕ್ತಿಯನ್ನು ನಿರ್ಣಯಿಸಿ ಸೂಕ್ತ ವಿಧಾನಗಳಿಂದ ರಕ್ಷಿಸಲಾದ ಹಣದಿಂದ ಹಾಗೂ ಲೆಕ್ಕದಿಂದ ಕಾರ್ಯಕ್ಕೆ ಪಾವತಿ ಮಾಡಬಹುದು.

(೨) ಈ ವಿಧಿಯಲ್ಲಿ ತಿಳಿಸಿದ ಕಾನೂನುಗಳ ಅವಕಾಶಗಳಿಗೆ ಅಡಚಣೆ ಉಂಟಾಗದಂತೆ ಸಂಸತ್ತು ಭಾರತದ ಆದಾಯದಿಂದ ಬಂದ ಹಣದ ರಕ್ಷಣೆ ಶಾಸನ ಮಾಡಿ ಅದನ್ನು ಸಾರ್ವಜನಿಕ ಖಾತೆಯಲ್ಲಿರಿಸಿ ಅದರಿಂದ ವಿವಿಧ ಕಾರ್ಯಗಳಿಗೆ ಹಣವನ್ನು ಪಡೆಯಬಹುದು. ರಾಜ್ಯದ ಶಾಸಕಾಂಗವೂ ಕ್ರಮಬದ್ಧವಾದ ಕಾನೂನಿನಂತೆ ಹಣವನ್ನು ಸಾರ್ವಜನಿಕ ಖಾತೆಗೆ ಸಂದಾಯಿಸಿ ಹಣವನ್ನು ತೆಗೆದುಕೊಳ್ಳಬಹುದು.

**ಹಲವು ಸಾರ್ವಜನಿಕ ಆಸ್ತಿಗಳಿಗೆ ಕರದಿಂದ ವಿನಾಯಿತಿ**

೨೬೪. ಒಕ್ಕೂಟದ ಆಸ್ತಿಯು, ಸಂಸತ್ತು ರಚಿಸಿರಬಹುದಾದ ಶಾಸನದಂತೆ ಯಾವುದೇ ಅಧಿಕಾರ ಅಥವಾ ರಾಜ್ಯದ ಕರಗಳಿಂದ ವಿನಾಯಿತಿ ಪಡೆದಿರುತ್ತದೆ.

ಆದರೆ ಸಂವಿಧಾನ ಜಾರಿಗೆ ಬರುವ ಮುನ್ನವೇ ಅಥವಾ ಶಾಸನ ರಚಿಸುವ ಮುನ್ನ ನೀಡುತ್ತಿದ್ದ ಕರಗಳನ್ನು ಮುಂದುವರಿಸಿಕೊಂಡು ಬರಲೇಬೇಕು. ಕರಗಳಿಂದ ಯಾವ ವಿನಾಯಿತಿಯನ್ನು ಪಡೆಯದೇ ನೀಡುತ್ತಲಿರಬೇಕು.

**ವಿದ್ಯುತ್‌ಶಕ್ತಿ ಕರದಿಂದ ವಿನಾಯಿತಿ**

೨೬೫. ಸಂಸತ್ತು ತನ್ನ ಶಾಸನದಿಂದ ಅಥವಾ ಬೇರೆ ವಿಧಾನದಿಂದ ಸೂಚಿಸುವವರೆಗೂ ಯಾವುದೇ ರಾಜ್ಯ ಸರಕಾರದಿಂದ ಉಪಯೋಗಿಸಲಾದ ವಿದ್ಯುತ್ ಶಕ್ತಿ ಅಥವಾ ಅದರ ಮಾರಾಟದ ಮೇಲೆ ಯಾವ ವಿಧವಾದ ತೆರಿಗೆಯನ್ನೂ ವಿಧಿಸುವಂತಿಲ್ಲ.

(ಅ) ಭಾರತ ಸರಕಾರದಿಂದ ಬಳಕೆ ಮಾಡಿರುವ ಅಥವಾ

(ಆ) ಒಕ್ಕೂಟದ ರೈಲು ಕಾರ್ಯಾಚರಣೆ ಅಥವಾ ಯಾವುದೇ ಕಂಪನಿ ಈ ಕಾರ್ಯ ಮಾಡುತ್ತಿದ್ದರೆ ಅಥವಾ ಈ ಕಾರ್ಯಕ್ಕೆಂದೇ ಮಾರಾಟ ಮಾಡಲಾದ ವಿದ್ಯುತ್ ಶಕ್ತಿಯ ಮೇಲೆ ವಿಧಿಸಬಹುದಾದ ಕರದಿಂದ ಮುಕ್ತವಾಗಿದೆ. ಮತ್ತು ಈ ದಿಶೆಯಲ್ಲಿ ಕರ ಹೇರುವ ಅಥವಾ ಅಧಿಕಾರ ವಹಿಸುವ ವಿದ್ಯುತ್‌ಶಕ್ತಿ ಮಾರಾಟವು ಸರಕಾರದ ಹಾಗೂ ರೇಲ್ವೆ ರಚನೆ ಕಾರ್ಯಗಳಿಗೆಂದೇ ನಿಗದಿಪಡಿಸಿದ ಬೆಲೆ ಅಥವಾ ಯಾವುದೇ ರೈಲ್ವೆ ಕಂಪನಿಗೆ ಮೇಲೆ ತಿಳಿಸಿದ ಕಾರ್ಯಗಳಿಗೆ ಒಕ್ಕೂಟದ ದರಕ್ಕಿಂತ ಕಡಿಮೆ ಮೊತ್ತದ ಕರ, ಬೇರೆ ಗ್ರಾಹಕರ ಕರ ಬೆಲೆಗಿಂತ ಕಡಿಮೆ ದರದಲ್ಲಿ ಸರಬರಾಜು ಮಾಡಬಹುದು.

**ರಾಜ್ಯ ಸರಕಾರಗಳಿಗೆ ಒಕ್ಕೂಟದ ಕರಗಳಿಂದ ವಿನಾಯಿತಿ**

೨೬೬. ಈ ಮುಂದೆ ತಿಳಿಸಬಹುದಾದ ವಿಷಯದಂತೆ, ರಾಜ್ಯ ಸರಕಾರಗಳ ಭೂಮಿ ಕಟ್ಟಡಗಳು ಭಾರತದ ಯಾವ ಪ್ರದೇಶದಲ್ಲಿದ್ದರೂ ಆ ವಿಧವಾದ ಆಸ್ತಿಯಿಂದ ಬರುವ ಲಾಭ ಒಕ್ಕೂಟದ ಕರಗಳಿಂದ ವಿನಾಯಿತಿ ಹೊಂದಿದೆ.

ಆದರೆ ಅದು

(ಅ) ರಾಜ್ಯ ಸರಕಾರದ ವ್ಯಾಪಾರ ಹಾಗೂ ಯಾವುದೇ ವ್ಯವಹಾರವನ್ನು ನಡೆಸಲಾಗುವುದೋ, ಆ ಸಂದರ್ಭದಲ್ಲಿ ಈ ವಿಧಿಯಲ್ಲಿ ತಿಳಿಸಿದಂತೆ ಆ ಸರಕಾರಕ್ಕೆ ಒಕ್ಕೂಟದ ಕರ ಅಥವಾ ಆ ಮೊತ್ತದ ಪರವಾಗಿ ಯಾವ ವಿನಾಯಿತಿಯನ್ನು ಅದರಿಂದ ಬಂದ ಆದಾಯ ಅಥವಾ ಆಸ್ತಿಗೆ ನೀಡಲಾಗದು.

(ಆ) ಮೊದಲನೆಯ ಅನುಬಂಧ ಭಾಗ III ರಲ್ಲಿಯ ರಾಜ್ಯಗಳ,

ರಾಜರಿಗೆ ಈ ವಿಧಿಯಲ್ಲಿ ತಿಳಿಸಿದ ಒಕ್ಕೂಟ ಕರದ ವಿನಾಯಿತಿ, ಅವರು ಹೊಂದಿರಬಹುದಾದ ಭೂಮಿ ಕಟ್ಟಡಗಳು, ಆಸ್ತಿ ಮತ್ತು ವೈಯಕ್ತಿಕ ಆದಾಯಗಳಿಗೆ ನೀಡಲಾಗದು.

ವಿವರಣೆ : ಈ ವಿಧಿಗೆ ಸಂಬಂಧಿಸಿದಂತೆ ಹೇಳಬಹುದಾದರೆ ಸಾಮಾನ್ಯವಾಗಿ ಸರಕಾರದ ಅರಣ್ಯ ವಸ್ತುಗಳ, ಬಂದೀಖಾನೆಯಲ್ಲಿ ತಯಾರಿಸಿದ ವಸ್ತುಗಳ ಮಾರಾಟವನ್ನು ವ್ಯಾಪಾರವೆಂದು ಪರಿಗಣಿಸಲಾಗದು.

**ಹಲವು ವೆಚ್ಚಗಳ ಹಾಗೂ ಪಿಂಚಣಿಯ ಬಗೆಗೆ ಹೊಂದಾಣಿಕೆ**

೨೬೭. ಈ ಸಂವಿಧಾನದಲ್ಲಿಯ ಅಂಶಗಳಡಿಯಲ್ಲಿ ಕೋರ್ಟು ಅಥವಾ ಆಯೋಗಗಳ ವೆಚ್ಚ ಅಥವಾ ಸಂವಿಧಾನ ಜಾರಿಗೆ ಬರುವ ಮುನ್ನ ಸೇವೆ ಸಲ್ಲಿಸಿದವರ ನಿವೃತ್ತಿವೇತನಗಳನ್ನು ಭಾರತದ ಆದಾಯ ಅಥವಾ ಮೊದಲನೆಯ ಅನುಬಂಧ ಭಾಗ I ರಾಜ್ಯದ ಲೆಕ್ಕಕ್ಕೆ ಸೇರಿಸಲಾಗುವುದು ಆದರೆ

(ಅ) ಭಾರತದ ಆದಾಯಕ್ಕೆ ಸಂಬಂಧಿಸಿದಂತೆ ಕೋರ್ಟು ಅಥವಾ ಆಯೋಗವು, ರಾಜ್ಯದ ವಿಶೇಷ ನಿರ್ದಿಷ್ಟ ಆವಶ್ಯಕತೆಗಳನ್ನು ಪೂರೈಸಿದ್ದರೆ, ಆ ವಿಧವಾಗಿ ವ್ಯಕ್ತಿ ಪೂರ್ಣ ಅಥವಾ ಭಾಗಶಃ ಸೇವೆಯನ್ನು ಸಲ್ಲಿಸಿದ್ದಲ್ಲಿ ಅಥವಾ

(ಆ) ರಾಜ್ಯದ ಆದಾಯಕ್ಕೆ ನಿರ್ದಿಷ್ಟವಾಗಿ ಕೋರ್ಟು ಅಥವಾ ಆಯೋಗವು ಬೇರ್ಪಡಿಸಿದ, ಒಕ್ಕೂಟದ ಅಥವಾ ರಾಜ್ಯದ ವಿಷಯಗಳಿಗೆ ಸಂಬಂಧಿಸಿದಂತೆ ಒಕ್ಕೂಟ ಅಥವಾ ಬೇರೆ ಯಾವ ರಾಜ್ಯದ ಬಗೆಗೆ ಸಲ್ಲಿಸಿರುವ ಸೇವೆ. ಇಂಥ ಸೇವೆಗಳ ವೆಚ್ಚವನ್ನು ರಾಜ್ಯದ ಅಥವಾ ಒಕ್ಕೂಟದ ಆದಾಯಕ್ಕೆ ಅವರ ದೇಣಿಗೆ ಎಂದು ಮುಖ್ಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ನೇಮಿಸಿದ ಮಧ್ಯಸ್ಥಗಾರರ ಸಲಹೆಯಂತೆ ಖರ್ಚುಹಾಕಬಹುದು.

## ಪ್ರಕರಣ II ಸಾಲಗಳು

**ಭಾರತ ಸರಕಾರ ಪಡೆದ ಸಾಲಗಳು**

೨೬೮. ಒಕ್ಕೂಟದ ಆಡಳಿತಾಧಿಕಾರವು, ಭಾರತದ ಆದಾಯದ ಆಧಾರದ ಮೇಲೆ, ಕಾಲಕಾಲಕ್ಕೆ ಸಂಸತ್ತು ನಿರ್ಣಯಿಸಬಹುದಾದ ಶಾಸನದ ಮಿತಿಯಂತೆ ಸಾಲಗಳನ್ನು ಎತ್ತಬಹುದು ಹಾಗೂ ಸಂಸತ್ತಿನಿಂದ ನಿರ್ಧರಿಸಿದ ಮಿತಿಯಂತೆ ಸಾಲಗಳಿಗೆ ಜಾಮೀನು ನೀಡಬಹುದು.

**ರಾಜ್ಯದಿಂದ ಸಾಲಗಳು**

೨೬೯. (೧) ಸಂವಿಧಾನದ ಮೊದಲನೆಯ ಅನುಬಂಧದ ಭಾಗ I ರ ರಾಜ್ಯಗಳು ಈ ವಿಧಿಯಲ್ಲಿ ಸೂಚಿಸಿದಂತೆ, ಭಾರತ

ಪ್ರದೇಶದಲ್ಲಿ ರಾಜ್ಯದ ಶಾಸಕಾಂಗವು ನಿರ್ಣಯಿಸಿದ ಮಿತಿಯಂತೆ ಸಾಲಗಳನ್ನು ಎತ್ತಬಹುದು ಹಾಗೂ ಸಾಲಗಳಿಗೆ ಜಾಮೀನನ್ನೂ ನೀಡಬಹುದು.

(೨) ಭಾರತ ಸರಕಾರಕ್ಕೆ ಸೂಕ್ತವೆಂದು ಮನದಟ್ಟಾದಾಗ, ಮೊದಲನೆಯ ಅನುಬಂಧದಲ್ಲಿಯ ರಾಜ್ಯಗಳಿಗೆ ಹಿಂದಿನ ವಿಧಿಯಲ್ಲಿ ಸೂಚಿಸಿದ ಮಿತಿಯಂತೆ ಸಾಲಗಳನ್ನು ನೀಡಬಹುದು; ಹಾಗೆಯೇ ರಾಜ್ಯದಿಂದ ಎತ್ತಲಾದ ಸಾಲಗಳಿಗೆ ಜಾಮೀನನ್ನೂ ನೀಡಬಹುದು. ಹೀಗೆ ನೀಡಲಾದ ಸಾಲವನ್ನು ಭಾರತದ ಆದಾಯಕ್ಕೆ ಖರ್ಚು ಹಾಕಬಹುದು.

(೩) ಮೊದಲನೆಯ ಅನುಬಂಧ ಭಾಗ III ರಲ್ಲಿಯ ರಾಜ್ಯಗಳು, ಭಾರತ ಸರಕಾರದ ಸಮ್ಮತಿ ಪಡೆಯದೆ ಸಾಲಗಳನ್ನು ಎತ್ತುವಂತಿಲ್ಲ. ಆದರೆ ಈ ಹಿಂದೆಯೇ ಭಾರತ ಸರಕಾರದಿಂದ ಅಥವಾ ಅದರ ಪೂರ್ವಾಧಿಕಾರಿಯಿಂದ ನೀಡಲಾದ ಸಾಲ ಹಾಗೂ ಜಾಮೀನುಗಳು ಮುಂದುವರಿಯುತ್ತವೆ.

ಈ ಉಪನಿಬಂಧನೆಯಲ್ಲಿ ಸೂಚಿಸಿದಂತೆ ಸಮ್ಮತಿಯನ್ನು ಭಾರತ ಸರಕಾರವು ತನಗೆ ಸೂಕ್ತವೆಂದು ತೋರಿದ ನಿಯಮಗಳಂತೆ ವಿಧಿಸಬಹುದು.

## ಪ್ರಕರಣ III ಆಸ್ತಿ, ಒಪ್ಪಂದ ಮತ್ತು ದಾವೆ, ಬಾಧ್ಯತೆಗಳು

**ಆಸ್ತಿಗಳು, ಹಕ್ಕುಗಳು ಮತ್ತು ಬಾಧ್ಯತೆಗಳ ಉತ್ತರಾಧಿಕಾರ**

೨೭೦. ಸಂವಿಧಾನ ಜಾರಿಗೆ ಬಂದಂದಿನಿಂದ ಭಾರತ ಸರಕಾರ ಹಾಗೂ ಅನುಬಂಧ ಒಂದು ಭಾಗ I ರಲ್ಲಿಯ ರಾಜ್ಯಗಳು, ವಸಾಹತು ಭಾರತ ಸರಕಾರ ಹಾಗೂ ಅಂದಿನ ರಾಜ್ಯಗಳ ರಾಜ್ಯಪಾಲರ ಪ್ರಾಂತಗಳ ಉತ್ತರಾಧಿಕಾರತ್ವವನ್ನು ಪಡೆಯುವುದರಿಂದ, ಸಂವಿಧಾನ ಪೂರ್ವದಲ್ಲಿಯ ಆಸ್ತಿ ಹೊಣೆಗಾರಿಕೆಯ ದಿಶೆಯಲ್ಲಿ ಸಂವಿಧಾನ ಜಾರಿಗೆಂದೇ ತಂದಿರಬಹುದಾದ ಪಾಕಿಸ್ತಾನ ವಸಾಹತು ಪಶ್ಚಿಮ ಬಂಗಾಳ ಪೂರ್ವ ಬಂಗಾಳ, ಪಶ್ಚಿಮ ಮತ್ತು ಪೂರ್ವ ಪಂಜಾಬ ರಾಜ್ಯಗಳು ಹೊಣೆಗಾರರಾಗಿವೆ.

**ರಾಜ್ಯ ಸೇರಿದ ವ್ಯವಹಾರ ಹಾಗೂ ಸ್ವಾಮಿವಿಹೀನ ಆಸ್ತಿಯ ಮೇಲಿನ ರಾಜ್ಯದ ಹಕ್ಕು**

೨೭೧. ಈ ವಿಷಯದಲ್ಲಿ ಮುಂದೆ ಸೂಚಿಸಿದಂತೆ, ಅನುಬಂಧ ಒಂದು ಭಾಗ I ರಲ್ಲಿಯ ರಾಜ್ಯಗಳ ಆಸ್ತಿಯು; ಭಾರತ ಪ್ರದೇಶ ಹೊರತುಪಡಿಸಿ, ಸಂವಿಧಾನ ಜಾರಿಗೆ ಬರುವ ಮುನ್ನ ಅದು ಪ್ರತಿಯೊಂದು ರಾಜ್ಯದ ರಾಜನಿಗೆ ಸೇರಿದ್ದಾಗಿತ್ತು.

ಆದರೆ ಮೊದಲನೆಯ ಅನುಬಂಧ ಭಾಗ I ರಲ್ಲಿಯ ರಾಜ್ಯದ ಪ್ರದೇಶಕ್ಕೆ ಒಳಪಡದಿದ್ದರೆ ಅದು ಯಾವ ಉತ್ತರಾಧಿಕಾರಿ ಇಲ್ಲದೇ ಹೋದುದರಿಂದ ರಾಜ್ಯದ ಕೈತಪ್ಪಿಹೋಗಿ, ಭಾರತ ಸರಕಾರದ ಅಧೀನಕ್ಕೆ ಸೇರ್ಪಡೆಯಾಗುತ್ತದೆ.

ಆದರೆ ಈ ವಿಧವಾದ ಆಸ್ತಿಯು, ಯಾವ ದಿನಾಂಕದಿಂದಾಗಲೀ, ಭಾರತ ಸರಕಾರ ಅಥವಾ ರಾಜ್ಯ ಸರಕಾರದ ಅಧೀನತೆಯ ನಿಯಂತ್ರಣದಲ್ಲಿ ಎಂದರೆ ಅನುಬಂಧ ಒಂದು ಭಾಗ I ರಾಜ್ಯಗಳ ಯಾವುದೇ ಉದ್ದೇಶಕ್ಕಾಗಿದ್ದಲ್ಲಿ ಆ ನಿರ್ದಿಷ್ಟ ಉದ್ದೇಶಗಳಿಗೆ ಅದು ಭಾರತ ಸರಕಾರ ಅಥವಾ ರಾಜ್ಯದ ಅಧೀನತೆಯಲ್ಲಿಯೇ ಮುಂದುವರಿಯುವುದು.

**ಆಸ್ತಿಯನ್ನು ಪಡೆಯುವ ಅಧಿಕಾರ**

೨೬೨. (೧) ಭಾರತದ ಒಕ್ಕೂಟ, ಅಥವಾ ಮೊದಲನೆಯ ಅನುಬಂಧ ಭಾಗ I ರಲ್ಲಿಯ ರಾಜ್ಯಗಳ ಆಡಳಿತಾಧಿಕಾರವು, ಸಂಬಂಧಿಸಿದ ಶಾಸಕಾಂಗವು ರಚಿಸಬಹುದಾದ ಶಾಸನದಂತೆ ಮಾರಾಟ ಮಾಡುವ, ಒತ್ತೆಹಾಕುವ, ಬಿಡುಗಡೆಗೊಳಿಸುವ, ಅಥವಾ ಒಪ್ಪಿಗೆ ನೀಡುವ ಅಥವಾ ಖರೀದಿಸುವ, ವಶಪಡಿಸಿಕೊಳ್ಳುವ ಅಥವಾ ಯಾವುದೇ ಉದ್ದೇಶಕ್ಕಾಗಿ ಒಪ್ಪಂದ ಮಾಡಿಕೊಳ್ಳಬಹುದಾದ ಅಧಿಕಾರ ಹೊಂದಿದೆ.

(೨) ಭಾರತ ಸರಕಾರ ಅಥವಾ ಅನುಬಂಧ ಒಂದು, ಭಾಗ I ರಾಜ್ಯ ಸರಕಾರದಿಂದ ಈ ಉದ್ದೇಶಕ್ಕಾಗಿ ವಶಪಡಿಸಿಕೊಂಡಿರುವ ಆಸ್ತಿ ಕ್ರಮಬದ್ಧವಾಗಿ ಅವುಗಳಿಗೆ ಸಲ್ಲುತ್ತದೆ.

**ಒಪ್ಪಂದಗಳು**

೨೬೩. (೧) ಒಕ್ಕೂಟದ ಅಥವಾ ಅನುಬಂಧ ಒಂದು ಭಾಗ Iರಲ್ಲಿಯ ರಾಜ್ಯಗಳ ಆಡಳಿತಾಧಿಕಾರದಂತೆ ಮಾಡಿಕೊಳ್ಳಲಾದ ಒಪ್ಪಂದಗಳು, ರಾಷ್ಟ್ರಪತಿ ಅಥವಾ ರಾಜ್ಯದ ರಾಜ್ಯಪಾಲರುಗಳ ಹೆಸರಿನಲ್ಲಿ ಅವರು ಸೂಚಿಸಬಹುದಾದ ಹಾಗೂ ನಿರ್ದೇಶಿಸಿರುವ ಅಧಿಕಾರಿಯಲ್ಲಿ ಅಡಕವಾಗಿರುತ್ತದೆ.

(೨) ಆದುದರಿಂದ ರಾಷ್ಟ್ರಪತಿಯೇ ಆಗಲಿ ಅಥವಾ ರಾಜ್ಯಪಾಲರೇ ಆಗಲೀ ಈ ವಿಧವಾದ ಒಪ್ಪಂದಕ್ಕೆ ವೈಯಕ್ತಿಕ ಹೊಣೆಗಾರರಾಗಿರಲಾರರು. ಅಲ್ಲದೆ ಈ ವಿಧವಾದ ಎಲ್ಲಾ ಒಪ್ಪಂದಗಳಿಗೂ ಭಾರತ ಸರಕಾರ ಅಥವಾ ರಾಜ್ಯ ಸರಕಾರವೇ ಹೊಣೆಗಾರಿಕೆಯನ್ನು ಹೊಂದಿರುತ್ತದೆಯೇ ಹೊರತು ಅದಕ್ಕೆ ಸಹಿ ಹಾಕಿದ ವ್ಯಕ್ತಿಯಲ್ಲ.

**ದಾವೆಗಳು ಮತ್ತು ನಡಾವಳಿಗಳು**

೨೬೪. (೧) ಭಾರತ ಸರಕಾರ, ಅಥವಾ ಅನುಬಂಧ ಒಂದು ಭಾಗ I ರಲ್ಲಿಯ ರಾಜ್ಯಗಳು ದಾವೆಗೆ ಗುರಿಯಾಗುವ

ಹಾಗೂ ದಾವೆ ಹೂಡುವ ಅಧಿಕಾರ ಹೊಂದಿದ್ದು, ಈ ವಿಷಯ ಸಂಸತ್ತಿನ ಹಾಗೂ ರಾಜ್ಯ ಸರಕಾರದ, ಸಂವಿಧಾನ ಬದ್ಧ ಶಾಸನಕ್ಕೆ ಅಧೀನವಾಗಿದೆ. ಸಂವಿಧಾನದ ರಚನೆಗೆ ಪೂರ್ವದಲ್ಲಿನ ಭಾರತ ವಸಾಹತು ಸರಕಾರ ಮತ್ತು ಪ್ರಾಂತಗಳಿಗೂ ಇದು ಅನ್ವಯಿಸುತ್ತದೆ.

(೨) ಆದರೆ ಈ ಸಂವಿಧಾನ ಜಾರಿಗೆ ಬಂದ ದಿನಾಂಕದಿಂದ

(ಅ) ಯಾವುದೇ ಕಾನೂನಿನ ನಡಾವಳಿಗಳಿಗೆ ಭಾರತ ವಸಾಹತು ಸರಕಾರವು ಕಕ್ಷಿಯಾಗಿದ್ದಲ್ಲಿ ನ್ಯಾಯಾಲಯದಲ್ಲಿ ಉಳಿದುಕೊಂಡಿದ್ದರೆ ಅಂತಹ ವಿವಾದಕ್ಕೆ ಭಾರತ ಸರಕಾರವೂ ಬದ್ಧವಾಗಿದೆ ಮತ್ತು

(ಆ) ಯಾವುದೇ ಕಾನೂನಿನ ನಡಾವಳಿಗೆ ರಾಜ್ಯ ಸರಕಾರ ಕಕ್ಷಿಯಾಗಿದ್ದು ಅದು ನ್ಯಾಯಾಲಯದಲ್ಲಿ ಉಳಿದುಕೊಂಡಿದ್ದಲ್ಲಿ ಆ ವಿವಾದಕ್ಕೆ ರಾಜ್ಯ ಸರಕಾರ ಬದ್ಧವಾಗಿದೆ.

# ಭಾಗ XI
# ತುರ್ತು ಪರಿಸ್ಥಿತಿಯ ಅಂಶಗಳು

**ತುರ್ತು ಪರಿಸ್ಥಿತಿಯ ಘೋಷಣೆ**

೨೭೫. (೧) ಯುದ್ಧದಿಂದಾಗಲೀ, ಆಂತರಿಕ ಹಿಂಸಾಚಾರದಿಂದಾಗಲೀ, ಭಾರತದ ಭದ್ರತೆಗೆ ಗಂಡಾಂತರ ಮತ್ತು ಗಂಭೀರ ವಿಪತ್ತು ಉಂಟಾಗಬಹುದಾದ ಪರಿಸ್ಥಿತಿ ರಾಷ್ಟ್ರಪತಿಯವರಿಗೆ ಮನವರಿಕೆಯಾದಲ್ಲಿ ಅವರು ತುರ್ತುಪರಿಸ್ಥಿತಿಯನ್ನು ಘೋಷಿಸಬಹುದು.

(೨) ಮೇಲಿನ ಉಪನಿಬಂಧನೆ(೧)ರಡಿಯಲ್ಲಿ ಸಾರಲಾದ ತುರ್ತು ಪರಿಸ್ಥಿತಿಯ ಘೋಷಣೆ

(ಅ) ಮರು ಘೋಷಣೆಯಿಂದ ರದ್ದುಪಡಿಸಬಹುದು.

(ಆ) ಸಂಸತ್ತಿನ ಎರಡೂ ಸದನಗಳ ಮುಂದೆ ಮಂಡಿಸಲೇಬೇಕು.

(ಇ) ಆರು ತಿಂಗಳ ಅವಧಿಯ ಒಳಗೆ ಸಂಸತ್ತಿನ ಸದನಗಳು ಒಪ್ಪಿಗೆ ನೀಡದೆ ಹೋದಲ್ಲಿ ಅದು ತಾನೇ ತಾನಾಗಿ ರದ್ದು ಹೊಂದುವುದು.

(೩) ಈ ವಿಧವಾದ ತುರ್ತು ಪರಿಸ್ಥಿತಿಯ ಘೋಷಣೆಯನ್ನು ಯುದ್ಧ ಹಾಗೂ ಆಂತರಿಕ ಹಿಂಸಾಚಾರದಿಂದ ಉಂಟಾಗಬಹುದೆಂದು ರಾಷ್ಟ್ರಪತಿಯವರಿಗೆ ಮನವರಿಕೆಯಾದಲ್ಲಿ ಮುಂಬರುವ ಅಪಾಯದ ನಿವಾರಣೆಗೆ ತುರ್ತು ಪರಿಸ್ಥಿತಿಯನ್ನು ರಾಷ್ಟ್ರಪತಿಯವರು ಘೋಷಿಸಬಹುದು.

**ತುರ್ತು ಪರಿಸ್ಥಿತಿಯ ಘೋಷಣೆಯ ಪರಿಣಾಮ**

೨೭೬. ಯಾವ ಸಂದರ್ಭದಲ್ಲಿ ಈ ವಿಧವಾದ ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ ಈ ಸಂವಿಧಾನದಲ್ಲಿ ಅಡಕವಾಗಿರುವ ವಿಷಯಕ್ಕೆ ಅಡಚಣೆಯಾಗದಂತೆ –

(ಅ) ಒಕ್ಕೂಟದ ಅಧಿಕಾರವನ್ನು ರಾಜ್ಯಗಳಿಗೆ ನಿರ್ದೇಶಿಸುವ ಮತ್ತು ಚಲಾಯಿಸುವ ಅಧಿಕಾರವಿದೆ.

(ಆ) ಎಲ್ಲಾ ರಾಜ್ಯಗಳ ಮೇಲೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಹಾಗೂ ಕರಗಳನ್ನು ವಿಧಿಸುವ, ಸುಂಕಗಳನ್ನು ಹೇರುವ ಅಧಿಕಾರ ಸಂಸತ್ತಿಗೆ ಇದೆ.

**ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ ಆದಾಯದ ಹಂಚಿಕೆಯ ಬಗೆಗಿನ ಕಾನೂನು ಅವಕಾಶ ಅನ್ವಯ**

೨೭೭. ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ, ರಾಷ್ಟ್ರಪತಿಯವರು ತಮ್ಮ ಆಜ್ಞೆಯ ಮೂಲಕ ಆದೇಶ ನೀಡಿ ವಿಧಿ ೨೪೯ ರಿಂದ ೨೫೯ರ ಅಂಶಗಳು, ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದ ಹಣಕಾಸಿನ ವರ್ಷದ ಅವಧಿ ತೀರಿಹೋಗಿದ್ದರೆ ಅದನ್ನು ಸೂಕ್ತವಾದ

ಆಜ್ಞೆಯಿಂದ ಮಾರ್ಪಾಟುಮಾಡಿ ಮುಂದುವರಿಸಬಹುದು.

**೨೭೮. ಮೊದಲನೆಯ ಅನುಬಂಧ ಭಾಗ Iರ ರಾಜ್ಯಗಳಲ್ಲಿ ಸಂವಿಧಾನ ಕುಸಿದುಬಿದ್ದಾಗ ಅನ್ವಯವಾಗುವ ಕಾನೂನು ಅವಕಾಶ**

೨೭೮. (೧) ಈ ಸಂವಿಧಾನದ ವಿಧಿ ೧೮೮ರಂತೆ ರಾಜ್ಯಪಾಲರಿಂದ ಜಾರಿಗೊಳಿಸಲಾದ ತುರ್ತುಪರಿಸ್ಥಿತಿಯ ಘೋಷಣೆ ರಾಷ್ಟ್ರಪತಿಯವರಿಗೆ ತಲುಪಿದಾಗ, ರಾಜ್ಯದ ಆಡಳಿತವು ಸಂವಿಧಾನದನ್ವಯ ನಡೆಸಲಾಗದು ಎಂದು ಮನವರಿಕೆಯಾದಲ್ಲಿ ಅವರು

ತಮ್ಮ ಘೋಷಣೆಯ ಮೂಲಕ

(ಅ) ರಾಜ್ಯದ ಎಲ್ಲಾ ಅಧಿಕಾರಗಳನ್ನು ಎಂದರೆ ರಾಜ್ಯ ಸರಕಾರದ ಕಾರ್ಯಗಳು, ರಾಜ್ಯಪಾಲರ ಅಧಿಕಾರ, ಅಥವಾ ಮಂಡಳಿ, ರಾಜ್ಯ ಶಾಸಕಾಂಗವನ್ನು ಹೊರತುಪಡಿಸಿ ಎಲ್ಲವನ್ನೂ ವಹಿಸಿಕೊಳ್ಳಬಹುದು.

(ಆ) ಆ ರಾಜ್ಯದ ಶಾಸಕಾಂಗ ಅಧಿಕಾರವನ್ನು ಸಂಸತ್ತು ನಿರ್ವಹಿಸುವಂತೆ ಘೋಷಿಸಬಹುದು ಮತ್ತು ಅವರಿಗೆ ಗ್ರಹಿಕೆಯಾದ, ಇತರ ಆಕಸ್ಮಿಕ ಹಾಗೂ ಆನುಷಂಗಿಕ ವಿಷಯಗಳನ್ನೂ ಘೋಷಣೆಯಲ್ಲಿ ಸೇರ್ಪಡಿಸಬಹುದು. ರಾಜ್ಯದ ಮೇಲಿರುವ ಹತೋಟಿಯ ಸಂವಿಧಾನದ ಅಂಶಗಳನ್ನು ಅಂಶತಃ ಅಥವಾ ಸಂಪೂರ್ಣವಾಗಿ ಸ್ಥಗಿತಗೊಳಿಸಬಹುದು.

ಪರಂತು, ಈ ಉಪನಿಬಂಧನೆಯಲ್ಲಿ ಸೂಚಿಸಿದ ಯಾವ ಅಧಿಕಾರವೇ ಆಗಲಿ ರಾಷ್ಟ್ರಪತಿಯವರಿಗೆ ರಾಜ್ಯದ ಶ್ರೇಷ್ಠ ನ್ಯಾಯಾಲಯದ ಅಧಿಕಾರವನ್ನು ವಹಿಸಿಕೊಳ್ಳಲು ಅವಕಾಶ ನೀಡದು. ಅಥವಾ ಸಂವಿಧಾನದನ್ವಯ ಶ್ರೇಷ್ಠ ನ್ಯಾಯಾಲಯದ ಕಾರ್ಯಾಚರಣೆ ಕಲಮುಗಳನ್ನು ಸಂಪೂರ್ಣ ಹಾಗೂ ಅಂಶತಃವಾಗಿ ಸ್ಥಗಿತಗೊಳಿಸುವ ಅಧಿಕಾರ ನೀಡುವುದಿಲ್ಲ.

(೨) ಯಾವುದೇ ವಿಧವಾದ ಘೋಷಣೆಯನ್ನು ಮರುಘೋಷಣೆಯ ಮೂಲಕ ರದ್ದುಪಡಿಸಬಹುದು.

(೩) ಈ ವಿಧಿಯಡಿಯಲ್ಲಿ ಘೋಷಿಸಿದ –

(ಅ) ಸಂಸತ್ತಿನ ಎರಡೂ ಸದನದ ಮುಂದೆ ಮಂಡಿಸಲೇಬೇಕು.

(ಆ) ಆರು ತಿಂಗಳು ಅವಧಿಯಲ್ಲಿ ರದ್ದಾಗಬಹುದಾದ ತುರ್ತು ಪರಿಸ್ಥಿತಿಯ ಘೋಷಣೆಯನ್ನು ರದ್ದುಪಡಿಸುವ ಘೋಷಣೆ :

ಆದರೆ ಯಾವ ಸಮಯದಲ್ಲಿಯಾದರೂ ತುರ್ತು ಪರಿಸ್ಥಿತಿಯನ್ನು ಮುಂದುವರಿಸಬಹುದಾದ ನಿರ್ಣಯ ಸಂಸತ್ತಿನ

ಎರಡೂ ಸದನಗಳಿಂದ ಕೈಕೊಂಡಾಗ, ಅದನ್ನು ರದ್ದುಗೊಳಿಸದೇ ಹೋದ ಸಮಯದಲ್ಲಿ ಅದು ಹನ್ನೆರಡು ತಿಂಗಳ ಅವಧಿ ಅಂದರೆ ಜಾರಿಗೆ ಬಂದ ದಿನದಿಂದ ಆದರೆ ಯಾವ ಘೋಷಣೆಯೇ ಆದರೂ ಮೂರು ವರ್ಷ ಅವಧಿಗೆ ಮೀರಿ ಮುಂದುವರಿಯಲಾರದು.

೪. ಈ(೧)ನೆಯ ಉಪನಿಬಂಧನೆಯಂತೆ, ಎಲ್ಲ ರಾಜ್ಯಗಳ ಶಾಸಕಾಂಗದ ಅಧಿಕಾರವನ್ನು ಸಂಸತ್ತೇ ಚಲಾಯಿಸುವುದೆಂದು ನಿರ್ಣಯಿಸಲಾಗಿದ್ದಲ್ಲಿ, ಅದನ್ನು ಜಾರಿ ಮಾಡಲು

(ಅ) ಸಂಸತ್ತು ತನ್ನ ಶಾಸನದ ಮೂಲಕ ಸುಂಕವನ್ನು ಹೇರುವ ಅಧಿಕಾರವನ್ನು ವಹಿಸುವ ಆದೇಶವನ್ನು ಭಾರತ ಸರಕಾರ ಅಧಿಕಾರಿಗಳಿಗೆ ವಹಿಸಬಹುದು.

(ಆ) ಸಂವಿಧಾನದ ೧೦೨ ನೆ ವಿಧಿಯಂತೆ, ರಾಷ್ಟ್ರಪತಿಯವರು, ಸಂಸತ್ತಿನ ಎರಡು ಸದನಗಳು ಜಾರಿಯಲ್ಲಿರದಾಗ ಮಾತ್ರ ಸುಗ್ರೀವಾಜ್ಞೆಯನ್ನು ಜಾರಿಗೊಳಿಸಬಹುದು.

೫. ಈ ವಿಧಿಯಡಿಯಲ್ಲಿ, ರಾಜ್ಯದ ಪರವಾಗಿ ಸಂಸತ್ತು ಘೋಷಿಸಿರುವ ಶಾಸನವು ಕೇವಲ ಒಂದು ವರ್ಷ ಅವಧಿಯವರೆಗೂ ಜಾರಿಯಲ್ಲಿದ್ದು ನಂತರ ತಾನೇ ತಾನಾಗಿ ರದ್ದಾಗುವುದು. ಆದರೆ ರದ್ದಾಗುವ ಮುನ್ನ ಮುಂದುವರಿಸುವ ಅಥವಾ ರದ್ದುಗೊಳಿಸುವ ಅಥವಾ ಮಾರ್ಪಾಟು ಮಾಡುವ ಬಗೆಗೆ ರಾಜ್ಯ ಶಾಸಕಾಂಗದ ನಿರ್ಣಯವನ್ನು ಅವಲಂಬಿಸಿದೆ.

**ತುರ್ತುಪರಿಸ್ಥಿತಿಯಲ್ಲಿ ವಿಧಿ ೧೩ನ್ನು ಸ್ಥಗಿತಗೊಳಿಸುವುದು**

೨೭೯. ತುರ್ತು ಪರಿಸ್ಥಿತಿಯು ಜಾರಿಯಲ್ಲಿದ್ದಾಗ ಭಾಗ IIIರಲ್ಲಿಯ ೧೩ನೇ ವಿಧಿಯಲ್ಲಿ ಸೂಚಿಸಿದ ಅಧಿಕಾರ ರಾಜ್ಯ ಸರಕಾರವನ್ನು ಶಾಸನ ರಚಿಸದಂತೆ ನಿರ್ಬಂಧನೆ ಮಾಡಲಾಗದು. ರಾಜ್ಯದ ಆಡಳಿತಾಧಿಕಾರವು ಶಾಸನ ರಚನೆಗೆ ಸಮರ್ಥವಾಗಿದೆ.

*೨೮೦. ಜರೂರು ಪರಿಸ್ಥಿತಿಯು ಜಾರಿಯಲ್ಲಿದ್ದಾಗ ರಾಷ್ಟ್ರಪತಿಯವರು ತಮ್ಮ ಆಜ್ಞೆಯ ಮುಖಾಂತರ ಸಂವಿಧಾನದ ೨೫ನೇ ವಿಧಿಯಲ್ಲಿ ತಿಳಿಸಿದ ಹಕ್ಕುಗಳನ್ನು ಸ್ಥಗಿತಗೊಳಿಸಬಹುದು. ಆದರೆ ಇದು ಆರು ತಿಂಗಳ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ.

---

* ಸಧ್ಯದಲ್ಲಿ ಮೊದಲನೆಯ ಅನುಬಂಧ ಭಾಗ III ರಲ್ಲಿಯ ರಾಜ್ಯಗಳಲ್ಲಿ ವಿಧಿ ೧೩ ಅಥವಾ ೨೫ ರಲ್ಲಿಯ ಹಕ್ಕುಗಳನ್ನು ಸ್ಥಗಿತಗೊಳಿಸಿದರೆ ವಿನಾಕಾರಣ ಗೊಂದಲಕ್ಕೆ ಆಸ್ಪದ ನೀಡುವುದು. ಆದುದರಿಂದ ಅಂಥಾ ಕ್ರಮ ಕೈಗೆತ್ತಿಕೊಳ್ಳಬಾರದೆಂದೇ ಸಮಿತಿಯ ಅಭಿಪ್ರಾಯವಾಗಿದೆ.

# ಭಾಗ XII
# ಒಕ್ಕೂಟ ಮತ್ತು ರಾಜ್ಯಗಳಡಿಯಲ್ಲಿಯ ಸೇವೆಗಳು

## ಅಧ್ಯಾಯ ೧ – *ಸೇವೆಗಳು

**ವ್ಯಾಖ್ಯಾನಿಸುವುದು**

೨೮೧. ಈ ಭಾಗದಲ್ಲಿ "ರಾಜ್ಯ" ಎಂದರೆ, ಸಂವಿಧಾನದ ಮೊದಲನೆಯ ಅನುಬಂಧ ಭಾಗ Iರ ರಾಜ್ಯ ಎಂದೇ ಭಾವಿಸಬೇಕು.

**ಒಕ್ಕೂಟ ಹಾಗೂ ರಾಜ್ಯದ ಸೇವೆಯಲ್ಲಿರುವ ವ್ಯಕ್ತಿಗಳನ್ನು ಭರ್ತಿಮಾಡಿಕೊಳ್ಳುವುದು**

೨೮೨. (೧) ಈ ವಿಧಿಯ ಎರಡನೆಯ ಉಪನಿಬಂಧನೆಯಂತೆ ರಾಜ್ಯದ ಶಾಸಕಾಂಗವು, ಸಾರ್ವಜನಿಕ ಸೇವೆಗೆ ಬೇಕಾದ ವ್ಯಕ್ತಿಗಳನ್ನು ಭರ್ತಿ ಮಾಡಿಕೊಳ್ಳುವ ಹಾಗೂ ಅವರ ಸೇವಾನಿಯಮಗಳನ್ನು ಕ್ರಮಬದ್ಧಗೊಳಿಸುವ ಮತ್ತು ಒಕ್ಕೂಟದ ಹಾಗೂ ರಾಜ್ಯದ ವಿಷಯಗಳಿಗೆ ಸಂಬಂಧಿಸಿದ ಶಾಸನಗಳನ್ನು ರಚಿಸಬಹುದು.

(೨) ರಾಜ್ಯ ಅಥವಾ ಭಾರತ ಸರಕಾರದ ಸೇವೆಯಲ್ಲಿರುವ ಯಾವ ವ್ಯಕ್ತಿಯನ್ನೇ, ಸೂಕ್ತ ಅವಕಾಶ ನೀಡದೇ ಸೇವೆಯಿಂದ ವಜಾಗೊಳಿಸಲಾಗದು; ಹಾಗೆಯೇ ಅವನು ಹೊಂದಿರಬಹುದಾದ ಸ್ಥಾನದಿಂದ ಕಡಿಮೆ ದರ್ಜೆಗೆ ವರ್ಗಾಯಿಸಲಾಗದು. ಸೂಕ್ತ ನೋಟೀಸ್ ನೀಡಿ ಅವರಿಗೆ ತಮ್ಮ ಕಾರ್ಯದ ಬಗೆಗೆ ವಿವರಣೆಯ ಆಸ್ಪದವನ್ನು ನೀಡದೆ ಯಾರನ್ನೂ ಸೇವೆಯಿಂದ ವಜಾ ಮಾಡಲಾಗದು.

ಆದರೆ ಈ ಉಪನಿಬಂಧನೆ ಜಾರಿಯಲ್ಲಿ ಬಾರದೆ ಇರುವ ಪ್ರಸಂಗ –

(ಅ) ಎಲ್ಲಿ ಓರ್ವ ವ್ಯಕ್ತಿಯು ತನ್ನ ಕಾರ್ಯದಿಂದ ಕಾರಾಗೃಹವಾಸದ ಶಿಕ್ಷೆಗೆ ಗುರಿಯಾದ ಸಮಯದಲ್ಲಿ ತೆಗೆದುಹಾಕಲ್ಪಟ್ಟಿದ್ದರೆ, ಅಥವಾ ದರ್ಜೆಯಲ್ಲಿ ಹಿಂಬಡತಿಯಾಗಿದ್ದಲ್ಲಿ

(ಆ) ಎಲ್ಲಿ ಸಂಬಂಧಿಸಿದ ಅಧಿಕಾರಿಯು ಸಕಾರಣದಿಂದ ಸೇವೆಯಿಂದ ವಜಾ ಮಾಡಿದ್ದಲ್ಲಿ ಹಾಗೂ ಅವನಿಂದ ಸಕಾರಣ ಉತ್ತರ ಪಡೆಯುವುದು ಸೂಕ್ತವಾದುದಲ್ಲ ಎಂದು ಅನಿಸಿದಾಗ

**ತಾತ್ಕಾಲಿಕ ಅಂಶ**

ಈ ದಿಶೆಯಲ್ಲಿ ಸಂವಿಧಾನದಲ್ಲಿ ಸೂಕ್ತ ಕಾನೂನುಗಳನ್ನು ರಚಿಸುವವರೆಗೂ ಅಂದರೆ ಸಂವಿಧಾನ ಜಾರಿಗೆ ಮುನ್ನ

---

* ಸಮಿತಿಯ ಅಭಿಪ್ರಾಯದಲ್ಲಿ ರಕ್ಷಣಾ ಸೇವೆ ಹಾಗೂ ನಾಗರಿಕ ಸೇವೆಗಳ ಭರ್ತಿ ಮಾಡುವ ಹಾಗೂ ಇತರ ಸೇವಾ ನಿಯಮಗಳನ್ನು ಸೂಕ್ತ ಶಾಸಕಾಂಗಗಳಿಗೆ ನೀಡಬೇಕು. ಅದನ್ನು ಸಂವಿಧಾನದಲ್ಲಿ ತಿಳಿಪಡಿಸುವುದು ಸಮಂಜಸವಲ್ಲ ಎಂದಿದೆ.

ಇದ್ದಿರಬಹುದಾದ ನಿಯಮಗಳನ್ನೇ ಅನುಸರಿಸಿ ಸಂವಿಧಾನ ಜಾರಿಗೆ ಬಂದ ನಂತರ ಆ ನಿಯಮಗಳನ್ನೇ ಜಾರಿಗೊಳಿಸಲು ಬರುವಂತಿದ್ದರೆ ಮುಂದುವರಿಸಬಹುದು.

## ಲೋಕಸೇವೆ

### ಪ್ರಕರಣ II ಲೋಕಸೇವಾ ಆಯೋಗಗಳು

**ಒಕ್ಕೂಟ ಹಾಗೂ ರಾಜ್ಯಗಳ ಸಾರ್ವಜನಿಕ ಸೇವಾ ಆಯೋಗಗಳು**

೨೮೪. (೧) ಈ ವಿಧಿಯ ಉಪನಿಬಂಧನೆಯಲ್ಲಿ ತಿಳಿಸಿದಂತೆ ಒಕ್ಕೂಟಕ್ಕೆ ಒಂದು ಲೋಕ ಸೇವಾ ಆಯೋಗ ಹಾಗೂ ಪ್ರತಿಯೊಂದು ರಾಜ್ಯಕ್ಕೂ ಲೋಕ ಸೇವಾ ಆಯೋಗ ಇರಲೇಬೇಕು.

(೨) ಎರಡಕ್ಕಿಂತ ಅಧಿಕವಾದ ರಾಜ್ಯಗಳು ಸಮ್ಮತಿಸಿದಲ್ಲಿ

(ಅ) ಆ ವಿಧವಾಗಿ ಸಮ್ಮತಿಸಿದ ರಾಜ್ಯಗಳಿಗೆ ಒಂದೇ ಲೋಕಸೇವಾ ಆಯೋಗವನ್ನು ರಚಿಸಬಹುದು ಅಥವಾ

(ಆ) ಒಂದು ರಾಜ್ಯಕ್ಕೆಂದೇ ಲೋಕ ಸೇವಾ ಆಯೋಗವು ಎಲ್ಲ ರಾಜ್ಯಗಳ ಆವಶ್ಯಕತೆಗಳನ್ನು ಪೂರೈಸಲೂಬಹುದು.

ಹೀಗೆ ಯಾವುದಾದರೊಂದು ಒಪ್ಪಂದಕ್ಕೆ ಸಮ್ಮತಿಸಿದ್ದಲ್ಲಿ, ಆ ಒಪ್ಪಂದದಲ್ಲಿ ಸಂದರ್ಭಾನುಸಾರ ಹಾಗೂ ಆಕಸ್ಮಿಕವಾಗಿ ತಲೆದೋರಬಹುದಾದ ವಿಷಯಗಳು ಹಾಗೂ ಯಾವ ರಾಜ್ಯದ ರಾಜ್ಯಪಾಲರಿಗೆ ಈ ದಿಶೆಯಲ್ಲಿ ಕಾರ್ಯಕೈಕೊಳ್ಳುವ ಅಧಿಕಾರ ವಹಿಸಿಕೊಡಬೇಕೆಂಬ ವಿಷಯವನ್ನು ಸ್ಪಷ್ಟಗೊಳಿಸಬೇಕು.

(೩) ಒಂದು ವೇಳೆ, ಯಾವುದೇ ರಾಜ್ಯಪಾಲನು, ಈ ಕಾರ್ಯವನ್ನು ಒಕ್ಕೂಟದ ಲೋಕಸೇವಾ ಆಯೋಗದಿಂದಲೇ ಜರುಗಿಸಬಹುದೆಂಬ ಅಭಿಪ್ರಾಯ ಸೂಚಿಸಿದಲ್ಲಿ, ರಾಷ್ಟ್ರಪತಿಯವರ ಸಮ್ಮತಿಯಿಂದ ಹಾಗೆ ಮಾಡಲೂಬಹುದು.

(೪) ಈ ಸಂವಿಧಾನದಲ್ಲಿ ಸೂಚಿಸಿದಂತೆ ಒಕ್ಕೂಟ ಹಾಗೂ ರಾಜ್ಯಗಳ ಲೋಕ ಸೇವಾ ಆಯೋಗಗಳೆಂದೇ ಭಾವಿಸಬೇಕು. ವಿಶಿಷ್ಟ ರೀತಿಯಲ್ಲಿ ಹೇಳಿದಾಗ ಅದರಲ್ಲಿ ಸ್ಪಷ್ಟವಾಗಿ ಸೂಚಿಸಬೇಕು.

**ಆಯೋಗದ ಸಿಬ್ಬಂದಿ ವರ್ಗದ ರಚನೆ**

೨೮೫. (೧) ಲೋಕಸೇವಾ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರನ್ನು ಒಕ್ಕೂಟದ ಆಯೋಗಕ್ಕೆ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯದ ಆಯೋಗಕ್ಕೆ ರಾಜ್ಯಪಾಲರ ಇಚ್ಛೆಯಂತೆ ನೇಮಿಸಲಾಗುವುದು.

ಆದರೆ ಆಯೋಗದ ಸದಸ್ಯರಲ್ಲಿ ಕನಿಷ್ಠ ಅರ್ಧಕ್ಕಿಂತ ಹೆಚ್ಚು ಸದಸ್ಯರು, ತಮ್ಮ ನೇಮಕಾತಿಯ ದಿನಾಂಕಕ್ಕೆ ಮುನ್ನ ಕನಿಷ್ಠ ಹತ್ತು ವರ್ಷ ಭಾರತ ಅಥವಾ ರಾಜ್ಯ ಸರಕಾರದಲ್ಲಿ ಸೇವೆ

ಸಲ್ಲಿಸಿದವರಾಗಿರಬೇಕು; ಆದರೆ ಈ ಬಗೆಗೆ ಲೆಕ್ಕ ಹಾಕುವಾಗ ಸಂವಿಧಾನ ಜಾರಿಗೆ ಬರುವ ಮುನ್ನ ಸಲ್ಲಿಸಿದ ಸೇವೆಯನ್ನೂ ಪರಿಗಣಿಸಲಾಗುವುದು.

(೨) ಒಕ್ಕೂಟದ ಆಯೋಗಕ್ಕೆ ರಾಷ್ಟ್ರಪತಿಯವರು, ರಾಜ್ಯ ಆಯೋಗಕ್ಕೆ ರಾಜ್ಯಪಾಲರು ಅನುಕ್ರಮವಾಗಿ –

(ಅ) ಸದಸ್ಯರ ಸಂಖ್ಯೆ, ಅವರ ಅವಧಿ, ಸೇವಾ ಸ್ಥಿತಿಯನ್ನು ನಿರ್ಧರಿಸುವರು.

(೩) ಸೇವಾ ಅವಧಿ ಮುಗಿದ ನಂತರ

(ಅ) ಒಕ್ಕೂಟದ ಸೇವಾ ಆಯೋಗದ ಅಧ್ಯಕ್ಷನು ಭಾರತ ಅಥವಾ ರಾಜ್ಯಗಳ ಯಾವುದೇ ಹುದ್ದೆಯನ್ನು ಅಂಗೀಕರಿಸುವಂತಿಲ್ಲ.

(ಆ) ರಾಜ್ಯ ಸೇವಾ ಆಯೋಗದ ಅಧ್ಯಕ್ಷರು ಒಕ್ಕೂಟ ಸೇವಾ ಆಯೋಗದ ಅಧ್ಯಕ್ಷನೆಂದಾಗಲೀ ಅಥವಾ ಸದಸ್ಯನೆಂದಾಗಲೀ ಅಥವಾ ಬೇರೆ ರಾಜ್ಯದ ಆಯೋಗದ ಸದಸ್ಯನೆಂದಾಗಲೀ ನೇಮಕ ಹೊಂದಬಹುದು, ಆದರೆ ಯಾವ ರಾಜ್ಯ ಸರಕಾರ ಅಥವಾ ಭಾರತ ಸರಕಾರದ ಹುದ್ದೆಗಳನ್ನು ಹೊಂದುವಂತಿಲ್ಲ.

(ಇ) ಬೇರೆ ಸದಸ್ಯರು, ಒಕ್ಕೂಟದ ಅಥವಾ ರಾಜ್ಯದ ಆಯೋಗದವರು, ಭಾರತ ಅಥವಾ ರಾಜ್ಯದ ಹುದ್ದೆಗಳನ್ನು ರಾಷ್ಟ್ರಪತಿ ಇಲ್ಲವೇ ರಾಜ್ಯಪಾಲರ ಅನುಮತಿ ಪಡೆಯದೇ ಸ್ವೀಕರಿಸುವಂತಿಲ್ಲ.

**ಲೋಕ ಸೇವಾ ಆಯೋಗದ ಕಾರ್ಯಗಳು**

೨೮೬. (೧) ಒಕ್ಕೂಟದ ಹಾಗೂ ರಾಜ್ಯದ ಸೇವಾ ಆಯೋಗಗಳು. ಸರಕಾರದ ಹುದ್ದೆಗಳಿಗಾಗಿ ಪರೀಕ್ಷೆಗಳನ್ನು ನಡೆಸಲೇಬೇಕು. ಇದು ಅವುಗಳ ಕರ್ತವ್ಯ.

(೨) ಒಂದು ವೇಳೆ ಯಾವುದಾದರೂ ಎರಡು ರಾಜ್ಯಗಳು ಕೋರಿದಲ್ಲಿ ಒಕ್ಕೂಟದ ಆಯೋಗವು ಅವುಗಳ ಕಾರ್ಯ ಯೋಜನೆ ಜಂಟಿಯಾಗಿ ಭರ್ತಿ ಮಾಡುವ ಹಾಗೂ ಅರ್ಹತೆಗಳನ್ನು ಸೂಚಿಸಿ, ಸಲಹೆ ಮಾಡಬೇಕು. ಇದು ಅದರ ಕರ್ತವ್ಯ.

(೩) ಅಖಿಲ ಭಾರತದ ಸೇವೆಗಳ ಒಕ್ಕೂಟದ ವಿವಿಧ ಹುದ್ದೆಗಳ ಹಾಗೂ ಸೇವೆಗಳ ಬಗೆಗೆ ರಾಷ್ಟ್ರಪತಿಯು ರಾಜ್ಯದ ವಿವಿಧ ಸೇವೆಗಳ ಹಾಗೂ ಹುದ್ದೆಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಕ್ರಮ ಕೈಕೊಳ್ಳುವ ಅಥವಾ ಯಾವುದೇ ಒಂದು ಸಂದರ್ಭದಲ್ಲಿ ವರ್ಗಗಳನ್ನು ನಿರ್ಣಯಿಸುವ ಬಗೆಗೆ ಸಾರ್ವಜನಿಕ ಆಯೋಗದ ಸಲಹೆಯನ್ನು ಕೇಳಲೇಬೇಕೆಂಬ ನಿರ್ಬಂಧನೆ ಇಲ್ಲದೇ ಹೋದರೂ ಈ ಮುಂದೆ ತಿಳಿಸಿದಂತೆ ಸಲಹೆಯನ್ನು ಪಡೆಯಲೇಬೇಕು:–

(ಅ) ನಾಗರಿಕ ಸೇವಾ ಕಾರ್ಯಗಳಿಗೆ ಮತ್ತು ಸ್ಥಾನಗಳಿಗೆ ಭರ್ತಿ ಮಾಡುವ ವಿಷಯ ಮತ್ತು ವಿಧಾನಗಳು

(ಆ) ನೇಮಕಾತಿ, ಬಡ್ತಿ ಮತ್ತು ವರ್ಗಾವಣೆಗಳಲ್ಲಿ ಅನುಸರಿಸಬೇಕಾದ ಸೂತ್ರಗಳು ಮತ್ತು ಹುದ್ದೆಗೆ ಬೇಕಾಗಿರಬಹುದಾದ ಅರ್ಹ ಅಭ್ಯರ್ಥಿಗಳ ಆಯ್ಕೆಯ ಕುರಿತು

(ಇ) ಭಾರತ ಸರಕಾರ ಅಥವಾ ರಾಜ್ಯ ಸರಕಾರದ ಸೇವೆಯಲ್ಲಿರುವ ನೌಕರರ ವಿರುದ್ಧ ಶಿಸ್ತಿನ ಕ್ರಮ ಮತ್ತು ಈ ದಿಶೆಯಲ್ಲಿ ಬರಬಹುದಾದ ಮನವಿ ಅರ್ಜಿಗಳ ವಿಲೇವಾರಿ

(ಈ) ಯಾವುದೇ ನೌಕರನು ಭಾರತ ಸರಕಾರ, ರಾಜ್ಯ ಸರಕಾರ, ಅಥವಾ ಬ್ರಿಟನ್ನಿನ ಅರಸೊತ್ತಿಗೆಯ ಸರಕಾರದ ಸೇವೆಗಳಲ್ಲಿದ್ದಾಗ, ಸರಕಾರದ ಕಾರ್ಯಾಚರಣೆಯಲ್ಲಿ ಅವನ ವಿರುದ್ಧ ಹೂಡಲಾದ ಮೊಕದ್ದಮೆಗಳು ಕುರಿತಂತೆ ಇರಬಹುದಾದ "ಕ್ಲೇಮ್"ಗಳ ವೆಚ್ಚವನ್ನು ಭಾರತ ಇಲ್ಲವೇ ರಾಜ್ಯ ಸರಕಾರಗಳ ಆದಾಯದಿಂದ ನೀಡುವ ಬಗೆಗೆ

(ಉ) ಭಾರತ ಸರಕಾರದ – ರಾಜ್ಯ ಹಾಗೂ ಬ್ರಿಟನ್ನಿನ ಅರಸೊತ್ತಿಗೆಯ ಸೇವೆಯಲ್ಲಿದ್ದಾಗ ಸಂಭವಿಸಿದ ಗಾಯಗಳಿಂದಾಗಿ ನೀಡಬೇಕಾದ ಪರಿಹಾರ ಅಥವಾ ಪಿಂಚಣಿಯ ಮೊತ್ತವನ್ನು ನೀಡಲೇಬೇಕಾದಲ್ಲಿ ಲೋಕ ಸೇವಾ ಆಯೋಗದ ಕರ್ತವ್ಯದಂತೆ ಆಯೋಗವು ಈ ವಿಷಯಗಳ ಬಗೆಗೆ ಸಲಹೆ ಕೋರಿದಾಗ, ರಾಷ್ಟ್ರಪತಿ ಅಥವಾ ರಾಜ್ಯಪಾಲರಿಗೆ ಸೂಚನೆಗಳನ್ನು ನೀಡಬಹುದು.

**ಲೋಕಸೇವಾ ಆಯೋಗದ ಕಾರ್ಯಗಳನ್ನು ವಿಸ್ತರಿಸುವ ಅಧಿಕಾರ**

೨೮೭. ಈ ವಿಧಿಗೆ ಅನುಸರಿಸಿ, ಸಂಸತ್ತು ಅಥವಾ ರಾಜ್ಯದ ಶಾಸಕಾಂಗವು, ಹೆಚ್ಚುವರಿ ಕಾರ್ಯಗಳನ್ನು ಜರುಗಿಸಿಕೊಂಡು ಹೋಗುವ ಬಗೆಗೆ ಅಧಿಕಾರ ನೀಡಬಹುದಾದ ಶಾಸನ ಮಾಡಬಹುದು. ಆದರೆ ಈ ಬಗೆಗೆ ರಾಜ್ಯದ ಶಾಸಕಾಂಗವು ರಚಿಸಿರಬಹುದಾದ ಅಧಿಕಾರವನ್ನು ರಾಷ್ಟ್ರಪತಿಯವರ ಸಮ್ಮತಿ ಪಡೆಯದೆ ಯಾವ ವ್ಯಕ್ತಿಯ ಮೇಲೆ ಚಲಾಯಿಸಲಾಗದು.

**ಲೋಕಸೇವಾ ಆಯೋಗದ ಖರ್ಚು ವೆಚ್ಚಗಳು**

೨೮೮. ಒಕ್ಕೂಟ ಅಥವಾ ರಾಜ್ಯ ಸೇವಾ ಆಯೋಗಗಳ ವೇತನ ಭತ್ತೆ ಮತ್ತು ಪಿಂಚಣಿ ಹಾಗೂ ಸಿಬ್ಬಂದಿ ವರ್ಗದ ಖರ್ಚುಗಳನ್ನು ಭಾರತದ ಆದಾಯ ಅಥವಾ ರಾಜ್ಯಗಳ ಆದಾಯದಿಂದಲೇ ನೀಡಬೇಕು.

# ಭಾಗ XIII
# ಚುನಾವಣೆಗಳು

**ಚುನಾವಣೆಗಳ ಮೇಲ್ವಿಚಾರಣೆ, ನಿರ್ದೇಶನ ಮತ್ತು ಹತೋಟಿ ಚುನಾವಣಾ ಆಯೋಗವೊಂದರಲ್ಲಿ ನಿಹಿತವಾಗಿರುವುದು**

೨೮೯. (೧) ಸಂಸತ್ತಿನ ಚುನಾವಣೆ ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿಯವರ ಚುನಾವಣೆಗಳ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣ ಮತ್ತು ಚುನಾವಣೆಯ ಬಗೆಗೆ ಉದ್ಭವಿಸಬಹುದಾದ ಸಂದೇಹಗಳ ನಿವಾರಣೆಗೆಂದು ರಚಿಸಲಾದ ನ್ಯಾಯಪೀಠ, ಎಲ್ಲಾ ಕಾರ್ಯಗಳನ್ನು ರಾಷ್ಟ್ರಪತಿಯವರಿಂದ ನೇಮಕ ಹೊಂದಿದ, ಚುನಾವಣಾ ಆಯೋಗಕ್ಕೆ ವಹಿಸಲಾಗಿದೆ.

(೨) ಸಂವಿಧಾನದ ಮೊದಲನೆಯ ಅನುಬಂಧ ಭಾಗ I ರಲ್ಲಿಯ ರಾಜ್ಯಗಳ ಶಾಸಕಾಂಗದ ಚುನಾವಣೆಗಳು, ರಾಜ್ಯಪಾಲರ *ಚುನಾವಣೆಗೆಂದೇ ರಚಿಸಬಹುದಾದ ಪ್ಯಾನಲ್ ಮೇಲ್ವಿಚಾರಣೆ ನಿರ್ದೇಶನ, ನಿಯಂತ್ರಣ ಚುನಾವಣಾ ನ್ಯಾಯ ಪೀಠ ಮುಂತಾದ ಎಲ್ಲಾ ವಿಷಯಗಳಿಗೆ ಅಧಿಕಾರವನ್ನು ರಾಜ್ಯಪಾಲರಿಂದ ನೇಮಕಗೊಂಡ ಚುನಾವಣಾ ಆಯೋಗಕ್ಕೆ ವಹಿಸಲಾಗಿದೆ.**

**ಸಂಸತ್ತಿನ ಚುನಾವಣೆಗಳು**

೨೯೦. ಸಂವಿಧಾನದಲ್ಲಿಯ ಅಂಶಗಳಂತೆ, ಕಾಲಕಾಲಕ್ಕೆ ಸಂಸತ್ತು, ತನ್ನ ಶಾಸನದ ಮೂಲಕ ಸಂಸತ್ತಿನ ಎರಡು ಸದನಗಳ ರಚನೆ, ಚುನಾವಣೆ, ಮತದಾರ ಕ್ಷೇತ್ರಗಳ ಸಂಘಟನೆಗೆ ಸಂಬಂಧಿಸಿದ ನಿಯಮಗಳನ್ನು ರಚಿಸಬಹುದು.

**ರಾಜ್ಯ ಶಾಸಕಾಂಗದ ಚುನಾವಣೆಗಳು**

೨೯೧. ಸಂವಿಧಾನದಲ್ಲಿಯ ಅಂಶಗಳಂತೆ, ಮೊದಲನೆಯ ಅನುಬಂಧ ಭಾಗ I ರ ರಾಜ್ಯದ ಶಾಸಕಾಂಗವು, ಕಾಲಕಾಲಕ್ಕೆ ಸದನ ಅಥವಾ ಸದನಗಳ ಚುನಾವಣೆ, ಸದನಗಳ ರಚನೆ ಮತ್ತು ಮತದಾರ ಕ್ಷೇತ್ರಗಳ ಸಂಘಟನೆಗೆ ಸಂಬಂಧಿಸಿದ ಶಾಸನಗಳನ್ನು ರಚಿಸಬಹುದು.

---

* "ರಾಜ್ಯಪಾಲರ ಚುನಾವಣೆಗೆಂದೇ ರಚಿಸಲಾದ ಪ್ಯಾನೆಲ್" ಎಂಬ ಪದಗಳನ್ನು ರಾಜ್ಯದ ರಾಜ್ಯಪಾಲರ ಚುನಾವಣೆಗಳ ಬದಲಾಗಿ ಉಪಯೋಗಿಸಲಾಗಿರುವ ಕಾರಣವೆಂದರೆ ಎರಡನೆಯದನ್ನು ವಿಧಿ ೧೩೧ರಲ್ಲಿ ಅಳವಡಿಸಬಹುದಾಗಿದೆ.

** ಸಮಿತಿಯ ಅಭಿಪ್ರಾಯದಲ್ಲಿ ಚುನಾವಣಾ ಆಯೋಗವು ಮೊದಲನೆಯ ಅನುಬಂಧ ಭಾಗ I ರ ರಾಜ್ಯಗಳ ಶಾಸಕಾಂಗದ ಚುನಾವಣೆಗಳ ಮೇಲ್ವಿಚಾರಣೆ, ನಿರ್ದೇಶನ ನಿಯಂತ್ರಣವನ್ನು ರಾಜ್ಯಪಾಲರಿಂದ ನೇಮಕಗೊಂಡ ಚುನಾವಣಾ ಆಯೋಗದಿಂದ ಜರುಗಿಸಬೇಕೆಂದೇ ಸೂಚಿಸಿದೆ.

# ಭಾಗ XIV
# ಅಲ್ಪಸಂಖ್ಯಾತರಿಗೆಂದೇ ವಿಶೇಷ ಅಂಶಗಳು

**ಲೋಕಸಭೆಯಲ್ಲಿ ಅಲ್ಪ ಸಂಖ್ಯಾತರಿಗೆ ಸ್ಥಾನ ಕಾದಿರಿಸುವುದು**

೨೯೨. ಲೋಕಸಭೆಯಲ್ಲಿ ಸ್ಥಾನಗಳನ್ನು ಕಾದಿರಿಸುವುದು.

(ಅ) ಮುಸ್ಲಿಂ ಜನಾಂಗ ಮತ್ತು ಪರಿಶಿಷ್ಟ ಜಾತಿಗಳಿಗೆ

(ಆ) ಸದ್ಯ ಸಂವಿಧಾನದ ಮೊದಲನೆಯ ಅನುಬಂಧ ಭಾಗ Iರ ರಾಜ್ಯದ ಪರಿಶಿಷ್ಟ ಪಂಗಡದವರಿಗೆ

(ಇ) ಮದ್ರಾಸ್ ಹಾಗೂ ಬೊಂಬಾಯಿ ರಾಜ್ಯ ಕ್ರಿಶ್ಚಿಯನ್ ಪಂಗಡಗಳಿಗೆ, ಸಂವಿಧಾನದ ೬೭(೫)ರಲ್ಲಿ ಸೂಚಿಸಿದಂತೆ.

**ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಲೋಕಸಭೆಯಲ್ಲಿ ವಿಶೇಷ ಸ್ಥಾನ**

೨೯೩. ಈ ಸಂವಿಧಾನದ ೬೭ನೆ ವಿಧಿಯಲ್ಲಿ ಏನೇ ಹೇಳಿದ್ದರೂ ರಾಷ್ಟ್ರಪತಿಯವರ ಅಭಿಪ್ರಾಯದಲ್ಲಿ ಆಂಗ್ಲೋ ಇಂಡಿಯನ್ ಪಂಗಡಕ್ಕೆ ಸೂಕ್ತ ಪ್ರಾತಿನಿಧಿತ್ವ ದೊರೆತಿಲ್ಲವೆಂದಾಗ, ಅವರು ಲೋಕಸಭೆಗೆ ಆ ಪಂಗಡದ ಈರ್ವರು ಸದಸ್ಯರನ್ನು ನೇಮಿಸಬಹುದು.

**ರಾಜ್ಯ ಸಭೆಗಳಲ್ಲಿ ಅಲ್ಪಸಂಖ್ಯಾತರಿಗೆ ಸ್ಥಾನಗಳ ಮೀಸಲಾತಿ**

೨೯೪. (೧) ಸ್ಥಾನಗಳನ್ನು ಕಾದಿರಿಸುವ –

(ಅ) ಸದ್ಯ ಸಂವಿಧಾನದ ಮೊದಲನೆಯ ಅನುಬಂಧ ಭಾಗ Iರ ರಾಜ್ಯಗಳ ವಿಧಾನ ಸಭೆಗಳಲ್ಲಿ ಮುಸ್ಲಿಂ ಜನಾಂಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ (ಅಸ್ಸಾಂ ರಾಜ್ಯದ ಸ್ವಾಯತ್ತ ಜಿಲ್ಲೆಗಳನ್ನು ಬಿಟ್ಟು) ಮತ್ತು

(ಆ) ಮದ್ರಾಸ್ ಹಾಗೂ ಬೊಂಬಾಯಿಗಳ ವಿಧಾನ ಸಭೆಗಳಲ್ಲಿ ಕ್ರಿಶ್ಚಿಯನ್ ಸಮುದಾಯಕ್ಕೆ ಸಂವಿಧಾನದ ೧೪೯(೩)ರಲ್ಲಿ ಸೂಚಿಸಿದಂತೆ

(೨) ಅಸ್ಸಾಂ ರಾಜ್ಯದ ಸ್ವಾಯತ್ತ ಜಿಲ್ಲೆಗಳಲ್ಲಿ ಸ್ಥಾನಗಳನ್ನು ಕಾದಿರಿಸಬೇಕು.

(೩) ಯಾವುದೇ ಒಂದು ಜನಾಂಗಕ್ಕೆ ಮೀಸಲಿಡಬಹುದಾದ ಸ್ಥಾನಗಳು, ಅನುಬಂಧ ಒಂದು ಭಾಗ Iರ ರಾಜ್ಯದಲ್ಲಿ ವಿಧಾನ ಸಭೆಯಲ್ಲಿ ಒಟ್ಟು ಸ್ಥಾನಗಳಿಗೆ ನಿರ್ಧರಿಸಿದ ದಾಮಾಶವನ್ನೇ ಆಧರಿಸಿ ಅಷ್ಟು ಸ್ಥಾನಗಳನ್ನು ಕಾದಿರಿಸಬೇಕು.

ವಿವರಣೆ : ರಾಜ್ಯದ ಎಲ್ಲಾ ಪರಿಶಿಷ್ಟ ವರ್ಗ ಹಾಗೂ ಪಂಗಡಗಳನ್ನು ಒಂದೇ ಜನಾಂಗವೆಂದು ಭಾವಿಸಬೇಕು.

(೪) ಅಸ್ಸಾಂ ರಾಜ್ಯದ ಸ್ವಾಯತ್ತ ಜಿಲ್ಲೆಗಳಿಗೆ ಸಂಬಂಧಿಸಿದಂತೆ, ರಾಜ್ಯದ ವಿಧಾನ ಸಭೆಯ ಸ್ಥಾನಗಳಿಗೆ ಅನುಗುಣವಾದ

ಅನುಪಾತವನ್ನೇ ಆಧರಿಸಬೇಕು.

(೫) ಹೀಗೆ ಅಸ್ಸಾಂ ರಾಜ್ಯದ ಸ್ವಾಯತ್ತ ಜಿಲ್ಲೆಗಳಿಗೆಂದೇ ಕಾದಿರಿಸಿದ ಸ್ಥಾನಗಳಿಗೆ ಜಿಲ್ಲೆಯ ಹೊರಗಡೆಯ ಯಾವ ಪ್ರದೇಶಗಳನ್ನೂ ಸೇರಿಸಲಾಗದು.

(೬) ಯಾವ ವ್ಯಕ್ತಿಯೇ ಆಗಲಿ, ಸ್ವಾಯತ್ತ ಜಿಲ್ಲೆಗಳ ಪರಿಶಿಷ್ಟ ಪಂಗಡದ ಸದಸ್ಯನಾಗಿರದೇ ಹೋದಲ್ಲಿ ಅವರು ಚುನಾವಣೆಗೆ ಸ್ಪರ್ಧಿಸುವಂತಿಲ್ಲ*; (ಆದರೆ ಷಿಲಾಂಗ್ ಮುನಿಸಿಪಾಲಿಟಿ ದಂಡು ಪ್ರದೇಶಕ್ಕೆ ಇದು ಅನ್ವಯಿಸುವುದಿಲ್ಲ.)

**ವಿಧಾನಸಭೆಗಳಲ್ಲಿ ಆಂಗ್ಲೋ ಇಂಡಿಯನ್ ಸಮೂಹದ ಪ್ರಾತಿನಿಧ್ಯಕ್ಕೆ ವಿಶೇಷ ಕಾಯ್ದಿರಿಸುವಿಕೆ**

೨೯೫. ಸಂವಿಧಾನದಲ್ಲಿಯ ೧೪೯ ವಿಧಿಗೆ ಅಡಚಣೆ ಉಂಟಾಗದಂತೆ, ರಾಜ್ಯಪಾಲರಿಗೆ ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಸೂಕ್ತ ಪ್ರಾತಿನಿಧಿತ್ವ ದೊರೆತಿಲ್ಲ ಎಂದು ಮನವರಿಕೆಯಾದಾಗ ಅವರು ವಿಧಾನಸಭೆಗೆ ತಮಗೆ ತೋರಿದಂತೆ ನೇಮಕಾತಿ ಮಾಡಬಹುದು.

೨೯೬. ಮುಂದೆ ಹೇಳಬಹುದಾದ ವಿಧಿಯಲ್ಲಿ ಸೂಚಿಸಿದಂತೆ, ಎಲ್ಲಾ ಅಲ್ಪಸಂಖ್ಯಾತ ಪಂಗಡಗಳ ಸ್ಥಾನ ಕಾದಿರಿಸುವಿಕೆಯನ್ನು ಆಡಳಿತ ಸಾಮರ್ಥ್ಯದ ಆಧಾರದ ಮೇಲೆ ವಿವಿಧ ಸೇವೆಗಳಲ್ಲಿ ಅಂದರೆ ಒಕ್ಕೂಟ ಮತ್ತು ರಾಜ್ಯಗಳ ಅಂದರೆ ಅನುಬಂಧ ಒಂದು ಭಾಗ I ಪರಿಶೀಲಿಸಲಾಗುವುದು.

**ಹಲವು ನಿರ್ದಿಷ್ಟ ಸೇವೆಗಳಲ್ಲಿ ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ವಿಶೇಷ ಕಾನೂನು ಅವಕಾಶಗಳು**

೨೯೭. (೧) ಸ್ವಾತಂತ್ರ್ಯ ದೊರೆತ ಮೊದಲು ಎರಡು ವರ್ಷಗಳಲ್ಲಿ, ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ರೈಲ್ವೆ, ಸುಂಕ, ಅಂಚೆ, ದೂರ ತಂತಿ ಇಲಾಖೆಯ ಸೇವೆಯಲ್ಲಿ ಆಗಸ್ಟ್ ೧೯೪೭ರ ಮುಂಚೆ ಇದ್ದ ಹುದ್ದೆಗಳ ಆಧಾರದ ಮೇಲೆಯೇ ನೀಡಲಾಗುವುದು.

ಎರಡು ವರ್ಷ ಕಳೆದ ನಂತರ, ಈ ಸಮುದಾಯಕ್ಕೆ ಕಾದಿರಿಸಲಾದ ಹುದ್ದೆಗಳ ಪ್ರಮಾಣಗಳು ಶೇಕಡಾ ಹತ್ತರಷ್ಟು ಕಡಿತಕ್ಕೆ ಒಳಪಡುತ್ತವೆ.

ನಂತರ ಸಂವಿಧಾನ ಜಾರಿಗೆ ಬಂದ ಹತ್ತು ವರ್ಷಗಳ ನಂತರ ಮೀಸಲಾತಿಯು ತಾನೇ ತಾನಾಗಿ ರದ್ದುಗೊಳ್ಳುವುದು.

(೨) ಈ ವಿಧಿಯು (೧)ರಲ್ಲಿ ಸೂಚಿಸಿದ ಯಾವ ವಿಷಯದಲ್ಲಿಯೇ, ಮೀಸಲಾತಿ ಹುದ್ದೆಗಳನ್ನು ತೊರೆದು,

---

* ಕಂಸದಲ್ಲಿರುವ 'ಷಿಲಾಂಗ ಪಟ್ಟಣ' ಪದವನ್ನು ; ಭಾಗ ೧ ಪಾತ ೧೯ ಆರನೆಯ ಅನುಬಂಧದ ಐಟಮ್ ಒಂದರಲ್ಲಿ ಸೇರ್ಪಡಿಸಿದ್ದರೆ, ಕೈ ಬಿಡಬೇಕು.

ಬೇರೆಯವರಿಗೆಂದು ನಿಗದಿ ಪಡಿಸಿದ ಹುದ್ದೆಗಳನ್ನು ಈ ಸಮುದಾಯದ ಅಭ್ಯರ್ಥಿಗಳು, ತಮ್ಮ ಸಾಮರ್ಥ್ಯದಿಂದ ಪಡೆಯಲು ಯಾವ ಅಡ್ಡಿ ಆತಂಕಗಳಿಲ್ಲ.

**ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಶೈಕ್ಷಣಿಕ ಸೌಲಭ್ಯಗಳು**

೨೯೮. ಸಂವಿಧಾನ ಜಾರಿಗೆ ಬಂದ ದಿನದಿಂದ ಮೂರು ವರ್ಷದ ಅವಧಿಯವರೆಗೂ ಸಂವಿಧಾನದ ಮೊದಲನೆಯ ಅನುಬಂಧ ಭಾಗ Iರ ರಾಜ್ಯಗಳಲ್ಲಿ ಅಥವಾ ಒಕ್ಕೂಟದಲ್ಲಿ ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಮಾರ್ಚ್ ೧೯೪೮ರಲ್ಲಿ ಶಿಕ್ಷಣಕ್ಕೆಂದು ನೀಡಲಾಗುತ್ತಿದ್ದ ಸಹಾಯ ಧನವನ್ನೇ ನೀಡಲಾಗುವುದು.

ಮುಂದಿನ ಪ್ರತಿ ಮೂರು ವರ್ಷಗಳಲ್ಲಿ ಸಹಾಯ ಧನದಲ್ಲಿ ಶೇಕಡಾ ಹತ್ತು ಕಡಿಮೆಯಾಗುತ್ತಲೇ ಹೋಗುವುದು.

ಆದರೆ ಸಂವಿಧಾನ ಜಾರಿಗೆ ಬಂದು ಹತ್ತು ವರ್ಷಗಳಿಗೆ ಈ ವಿಧವಾದ ಅನುದಾನವು, ವಿಶೇಷವಾಗಿ ಆಂಗ್ಲೋ ಇಂಡಿಯನ್ ಸಮೂಹಕ್ಕೆ ಸಂವಿಧಾನದಲ್ಲಿ ತಡೆ ಹಿಡಿಯಲಾಗುವುದು. ಮುಂದಿನ ಸಂದರ್ಭಗಳಲ್ಲಿ ಯಾವುದೇ ವಿದ್ಯಾಸಂಸ್ಥೆ ಈ ನಿಧಿಯಡಿಯಲ್ಲಿ ಕನಿಷ್ಠ ಶೇ. ೪೦ರಷ್ಟು ಪ್ರವೇಶಾವಕಾಶವನ್ನು ಆಂಗ್ಲೋ ಇಂಡಿಯನ್‌ರ ಸಮೂಹದ ಸದಸ್ಯರಿಗೆ ನೀಡಬಹುದು.

**ರಾಜ್ಯ ಹಾಗೂ ಒಕ್ಕೂಟಗಳಲ್ಲಿ ಅಲ್ಪಸಂಖ್ಯಾತರಿಗೆ ವಿಶೇಷ ಅಧಿಕಾರಿ**

೨೯೯. (೧) ಅಲ್ಪಸಂಖ್ಯಾತರಿಗೆಂದೇ ಒಕ್ಕೂಟದಲ್ಲಿ ಒಬ್ಬ ವಿಶೇಷ ಅಧಿಕಾರಿಯಿದ್ದು ಅವರನ್ನು ರಾಷ್ಟ್ರಪತಿಯವರು ನೇಮಿಸುತ್ತಾರೆ; ಅನುಬಂಧ ಒಂದು ಭಾಗ Iರ ರಾಜ್ಯಗಳಲ್ಲಿ ಅಲ್ಪಸಂಖ್ಯಾತರಿಗೆಂದೇ ಒಬ್ಬ ವಿಶೇಷಾಧಿಕಾರಿಯನ್ನು ರಾಜ್ಯಪಾಲರು ನೇಮಿಸುತ್ತಾರೆ.

(೨) ಈ ವಿಶೇಷ ಅಧಿಕಾರಿಯು, ಸಂವಿಧಾನದಲ್ಲಿ ಅಲ್ಪ ಸಂಖ್ಯಾತರಿಗೆ ಮಾಡಿರಬಹುದಾದ ವಿಷಯಗಳ ರಕ್ಷಣೆ ಹಾಗೂ ಕಾರ್ಯಾಚರಣೆಯನ್ನು ಕಾಲಕಾಲಕ್ಕೆ ಪರಿಶೀಲಿಸಿ ಅವನ್ನು ರಾಷ್ಟ್ರಪತಿಯವರ ಅವಗಾಹನೆಗೆ ತರಬೇಕು. ಇದು ಅವರ ಕರ್ತವ್ಯ. ಈ ವಿಧವಾದ ವರದಿಗಳನ್ನು ರಾಷ್ಟ್ರಪತಿಯವರು ಸಂಸತ್ತಿನ ಮುಂದೆ ಮಂಡಿಸಬೇಕು.

(೩) ಈ ವಿಶೇಷಾಧಿಕಾರಿಯ ಕರ್ತವ್ಯದಂತೆ, ಅಲ್ಪ ಸಂಖ್ಯಾತರ ರಕ್ಷಣೆಗೆಂದೇ ಇರಬಹುದಾದ ವಿಷಯಗಳ ಕಾರ್ಯಾಚರಣೆಯ ಬಗೆಗೆ ಕಾಲಕಾಲಕ್ಕೆ ಪರಿಶೀಲಿಸಿ, ಅದನ್ನು ರಾಜ್ಯಪಾಲರ ಅವಗಾಹನೆಗೆ ತರಬೇಕು. ಈ ವರದಿಗಳನ್ನು ರಾಜ್ಯಪಾಲರು ರಾಜ್ಯದ ಶಾಸಕಾಂಗದ ಮುಂದೆ ಮಂಡಿಸಬೇಕು.

**ಮೊದಲನೆಯ ಅನುಬಂಧದ**

೩೦೦. (೧) ರಾಷ್ಟ್ರಪತಿಯವರು ಸಂವಿಧಾನ ಜಾರಿಗೆ

**ರಾಜ್ಯಗಳಲ್ಲಿಯ ಪರಿಶಿಷ್ಟ ಪಂಗಡಗಳ ಪ್ರದೇಶದಲ್ಲಿ ಅವರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಆಡಳಿತದ ಮೇಲೆ ಒಕ್ಕೂಟದ ನಿಯಂತ್ರಣ**

ಬಂದು ಹತ್ತು ವರ್ಷಗಳಾದ ಮೇಲೆ ಆಯೋಗವನ್ನು ನೇಮಿಸಿ, ಪರಿಶಿಷ್ಟ ಪ್ರದೇಶಗಳ ಆಡಳಿತ ಹಾಗೂ ಪರಿಶಿಷ್ಟ ಜನಾಂಗದ ಕಲ್ಯಾಣದ ಬಗೆಗೆ ವರದಿ, ಭಾಗ I ಅನುಬಂಧ ಒಂದು ರಾಜ್ಯ ಕುರಿತಂತೆ, ಸಲ್ಲಿಸುವಂತೆ ಆಜ್ಞೆ ಮಾಡಬಹುದು.

ಈ ಆಜ್ಞೆಯಲ್ಲಿ, ಆಯೋಗದ ರಚನೆ, ಅಧಿಕಾರ, ವಿಧಿ ವಿಧಾನಗಳು ಮತ್ತು ಸಾಂದರ್ಭಿಕ, ಕಾರ್ಯಾಚರಣೆ / ವಿಷಯಗಳ ಬಗೆಗೆ ರಾಷ್ಟ್ರಪತಿಯವರು ಸೂಕ್ತವಾಗಿ ಆದೇಶಿಸುತ್ತಾರೆ.

(೨) ಈ ವಿಧವಾದ ಒಕ್ಕೂಟದ ಆಜ್ಞೆಯು ಸಂಬಂಧಿಸಿದ ರಾಜ್ಯಗಳಿಗೆ ನಿರ್ದೇಶನ ನೀಡಿ ಕಲ್ಯಾಣಕ್ಕೆ ಅನಿವಾರ್ಯವಾದ ವಿಷಯಗಳನ್ನು ಜಾರಿಗೊಳಿಸುವಂತೆ ಸೂಚಿಸಬಹುದು.

**ಹಿಂದುಳಿದ ವರ್ಗಗಳ ಸ್ಥಿತಿಗತಿಯನ್ನು ಪರಿಶೀಲಿಸಲು ಆಯೋಗ ನೇಮಕ**

೩೦೧. (೧) ರಾಷ್ಟ್ರಪತಿಯವರು ತಮ್ಮ ಆಜ್ಞೆಯ ಮೂಲಕ, ತಮಗೆ ಸರಿದೋರಿದ ವ್ಯಕ್ತಿಗಳಿಂದ ಕೂಡಿದ ಆಯೋಗವನ್ನು ರಚಿಸಿ; ಸಾಮಾಜಿಕವಾಗಿ, ಶೈಕ್ಷಣಿವಾಗಿ, ಭಾರತ ಪ್ರದೇಶದಲ್ಲಿ, ಹಿಂದುಳಿದ ವರ್ಗದವರ ಸ್ಥಿತಿಗತಿಗಳನ್ನು ಪರಿಶೀಲಿಸಿ ಶಿಫಾರಸ್ಸುಗಳನ್ನು ನೀಡುವಂತೆ ಕೋರಬಹುದು. ಅಲ್ಲದೆ ರಾಜ್ಯ ಮತ್ತು ಒಕ್ಕೂಟದಲ್ಲಿ ಅವರ ಪರಿಸ್ಥಿತಿಯ ಆಧಾರದ ಮೇಲೆ ಸಹಾಯಧನ ನೀಡುವ ಬಗೆಗೂ ಸಲಹೆ ಸೂಚಿಸುವಂತೆ ಕೇಳಬಹುದು.

(೨) ಈ ವಿಧವಾಗಿ ನೇಮಕಗೊಂಡ ಆಯೋಗವು, ತನಗೆ ಸೂಚಿಸಿದ ಎಲ್ಲಾ ವಿಷಯಗಳನ್ನು ಪರಿಶೀಲಿಸಿ, ರಾಷ್ಟ್ರಪತಿಯವರಿಗೆ, ತಮಗೆ ಸೂಕ್ತವೆನಿಸಿದ ರೀತಿಯಲ್ಲಿ ವರದಿ ಸಲ್ಲಿಸಬೇಕು.

(೩) ಈ ವಿಧವಾದ ವರದಿಯನ್ನು ರಾಷ್ಟ್ರಪತಿಯವರು ಸಂಸತ್ತಿನ ಮುಂದೆ ಮಂಡಿಸಬೇಕು.

# ಭಾಗ XV
# ಸಂಕೀರ್ಣ (ಇತರ)

**ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ರಕ್ಷಣೆ**

೩೦೨. (೧) ರಾಷ್ಟ್ರಪತಿ ಅಥವಾ ರಾಜ್ಯಪಾಲರ ಅಧಿಕಾರವನ್ನು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸುವಂತಿಲ್ಲ. ಅವರು ತಮ್ಮ ಅಧಿಕಾರಾವಧಿಯಲ್ಲಿಯ ಕರ್ತವ್ಯಗಳಿಗಾಗಿ ಯಾವ ನ್ಯಾಯಾಲಯದ ಕಟ್ಟುಪಾಡಿಗೆ ಗುರಿಯಾಗುವುದಿಲ್ಲ.

ಪರಂತು, ಸಂದರ್ಭಾನುಸಾರವಾಗಿ, ರಾಷ್ಟ್ರಪತಿಯವರ ನಡತೆಯನ್ನು ನ್ಯಾಯಾಂಗ ಪರಿಶೀಲನೆಗೆ ಗುರಿಪಡಿಸಬಹುದು; ಅಥವಾ ಸಂಸತ್ತಿನ ಯಾವುದೇ ಸದನವು, ವಿಧಿ ೫೦ರಲ್ಲಿ ಸೂಚಿಸಿದಂತೆ, ನ್ಯಾಯಾಧಿಕರಣದ ಮೂಲಕ ಅವರ ದೋಷಗಳನ್ನು ಪರಿಶೀಲನೆಗೆ ಗುರಿಪಡಿಸಬಹುದು;

ಸಂದರ್ಭಾನುಸಾರದಂತೆ ಯಾವ ವ್ಯಕ್ತಿಯೇ ಆದರೂ, ಭಾರತ ಸರಕಾರ ಅಥವಾ ರಾಜ್ಯ ಸರಕಾರದ ನಡತೆಯನ್ನು ಟೀಕಿಸಲು ಈ ಉಪನಿಬಂಧನೆ ಸಂವಿಧಾನ; ಪ್ರಕರಣ III ಭಾಗ X ರಂತೆ ಅಡ್ಡಿಯಾಗದು.

(೨) ರಾಷ್ಟ್ರಪತಿ ಹಾಗೂ ರಾಜ್ಯಪಾಲರ ಅಧಿಕಾರಾವಧಿಯಲ್ಲಿ ಅವರ ವಿರುದ್ಧ ನ್ಯಾಯಾಲಯದಲ್ಲಿ ಕ್ರಿಮಿನಲ್ ದಾವೆಗಳನ್ನು ಹೂಡಲು ಬಾರದು.

(೩) ಅವರ ಅಧಿಕಾರಾವಧಿಯಲ್ಲಿ ಯಾವ ನ್ಯಾಯಾಲಯವೂ ಅವರಿಗೆ ದಸ್ತಗಿರಿ ವಾರೆಂಟ್ ಹಾಗೂ ಬಂಧನಕ್ಕೆ ಗುರಿ ಮಾಡುವಂತಿಲ್ಲ.

(೪) ರಾಷ್ಟ್ರಪತಿ ಹಾಗೂ ರಾಜ್ಯಪಾಲರ ಅಧಿಕಾರಾವಧಿಯಲ್ಲಿ ಅವರ ವಿರುದ್ಧ ಯಾವ ನ್ಯಾಯಾಲಯದಲ್ಲಿಯೂ, ಅವರು ಮಾಡಿದ ಕಾರ್ಯಗಳಿಗಾಗಿ ಸಿವಿಲ್ ಮೊಕದ್ದಮೆಯನ್ನು ಹೂಡಲು ಆಸ್ಪದವಿಲ್ಲ. ಅವರು ಅಧಿಕಾರ ಪಡೆಯುವ ಮುನ್ನ ಅಥವಾ ತರುವಾಯ, ಎರಡು ತಿಂಗಳ ಅವಧಿಯವರೆಗೂ, ಅವರು ವೈಯಕ್ತಿಕವಾಗಿ ಮಾಡಿರಬಹುದಾದ ಕಾರ್ಯಗಳ ಬಗೆಗೆ ದಾವೆ ಹೂಡಲು ಬಾರದು. ಆದರೆ ಅವರ ಕಾರ್ಯಾಲಯದಲ್ಲಿ ಈ ಬಗೆಗೆ ಲಿಖಿತ ನೋಟೀಸನ್ನು ಸಲ್ಲಿಸಿ, ಅವರಿಂದ ಪಡೆಯಬೇಕೆಂದಿರುವ ಪರಿಹಾರದ ಬಗೆಗೆ ಸೂಚಿಸಬಹುದು.

**ಅರ್ಥೈಸುವಿಕೆ ಮುಂತಾದವು**

೩೦೩. (೧) ಈ ಸಂವಿಧಾನದಲ್ಲಿ ತಿಳಿಸಲಾದ ವಿಷಯಗಳಿಗೆ, ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ, ಈ ಕೆಳಗೆ

ಸೂಚಿಸಿದಂತೆಯೇ ಅರ್ಥೈಸಬೇಕು:–

(ಅ) "ವ್ಯವಸಾಯ ಉತ್ಪನ್ನ" ಎಂದರೆ ಭಾರತದ ಆದಾಯಕರದಲ್ಲಿರುವ ವ್ಯಾಖ್ಯೆಯಂತೆ

(ಆ) "ಆಂಗ್ಲೋ ಇಂಡಿಯನ್" ಎಂದರೆ ಯಾವ ವ್ಯಕ್ತಿಯೇ ಆಗಲೀ ಯುರೋಪಿಯನ್ ಪುರುಷನಿಂದ ಅಥವಾ ಅವರ ವಂಶಜರಿಂದ, ಆದರೆ ಭಾರತದ ಪ್ರದೇಶದಲ್ಲಿ ವಾಸವಾಗಿದ್ದ ಅಥವಾ ನೆಲೆಸಿದ್ದವರಿಂದ ಜನನ ಪಡೆದವ

(ಇ) "ಇಂಡಿಯನ್ ಕ್ರಿಶ್ಚಿಯನ್" ಎಂದರೆ ಯುರೋಪಿಯನ್ನೇತರ, ಆಂಗ್ಲೋ ಇಂಡಿಯನ್ನೇತರರ ವ್ಯಕ್ತಿಯಾಗಿದ್ದು ಕ್ರಿಶ್ಚಿಯನ್ ಯಾವುದೇ ಪಂಗಡದ ಧರ್ಮದಲ್ಲಿ ನಂಬಿಕೆ ಹೊಂದಿದವ.

(ಈ) "ಸಾಲ" ಎಂದರೆ ವಾರ್ಷಿಕ ಆದಾಯದ ಆಧಾರದ ಮೇಲೆ ಪಡೆದುಕೊಳ್ಳುವ ಹಣ, ಋಣಕ್ಕೂ ಇದೇ ಅರ್ಥ

(ಉ) "ಮುಖ್ಯ ನ್ಯಾಯಾಧೀಶ" ಎಂದರೆ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಒಳಗೊಂಡಂತೆ

(ಊ) (ಸಾಮೂಹಿಕ) "ಕಾರ್ಪೋರೇಷನ್ ಟ್ಯಾಕ್ಸ್" ಎಂದರೆ ಕಂಪನಿಗಳ ಆದಾಯದ ಮೇಲೆ ನೀಡಬಹುದಾದ ಕರ ಹಾಗೂ ಯಾವುದೇ ಕರ ಈ ಕೆಳಗೆ ನೀಡಿದ ವ್ಯವಸ್ಥೆಗೆ ಒಳಪಟ್ಟಂತೆ –

i) ವ್ಯವಸಾಯ ಉತ್ಪನ್ನಕ್ಕೆ ಸಂಬಂಧಿಸಿದ ಆದಾಯ

ii) ಕಂಪನಿಗಳು ನೀಡಿರಬಹುದಾದ ಡಿವಿಡೆಂಡ್ಸ್ ಬಗೆಗೆ ಕರಗಳನ್ನು ಆಕರಿಸಲಾಗದು.

iii) ಭಾರತದ ಆದಾಯ ಕರದಲ್ಲಿ ಈ ವಿಧವಾಗಿ ನೀಡಲಾದ ಕರಗಳ ಕೂಡಿಹಾಕುವ ಬಗೆಗೆ ಯಾವ ಅಂಶಗಳಿಂದ ಒಡಗೂಡಿರದೇ ಡಿವಿಡೆಂಡ್ಸ್ ಬಗೆಗೆ ವ್ಯಕ್ತಿಗಳಿಂದಲೇ ಕರ ಆಕರಿಸಬಹುದು. ಕಂಪನಿಯಿಂದಲ್ಲ.

(ಋ) "ಹೋಲಿಕೆಯ ಪ್ರಾಂತ" ಅಥವಾ 'ಹೋಲಿಕೆಯ ರಾಜ್ಯ' ಎಂದರೆ ಈ ವಿಷಯದಲ್ಲಿ ಸಂದೇಹವೇನಾದರೂ ಇದ್ದರೆ, ಅದನ್ನು ರಾಷ್ಟ್ರಪತಿಯವರು, ಉದ್ದೇಶಿತ ಪ್ರಶ್ನೆಯ ಬಗೆಗೆ ನಿರ್ಣಯಿಸಬಹುದು.

(ಎ) 'ಡೆಟ್' 'ಋಣ' ಎಂದರೆ ವಾರ್ಷಿಕ ಆದಾಯದ ಮೊತ್ತದ ಮೇಲೆ ಪಡೆದಿರುವ ಸಾಲದ ಹೊಣೆಗಾರಿಕೆ ಹಾಗೂ ಈ ದಿಶೆಯಲ್ಲಿ ನೀಡಿರಬಹುದಾದ ಜಾಮೀನುಗಳು ಎಂದೇ ಭಾವಿಸಬೇಕು.

(ಏ) "ಜಾರಿಯಲ್ಲಿರುವ ಕಾನೂನು" ಎಂದರೆ ಯಾವುದೇ

ಕಾನೂನು, ಸುಗ್ರೀವಾಜ್ಞೆ, ಆಜ್ಞೆ ಉಪ–ಶಾಸನ, ನಿಯಮಗಳು, ಸಂವಿಧಾನದ ಜಾರಿಗೆ ಬರುವ ಮುನ್ನ ಶಾಸಕಾಂಗದಿಂದ ಅಥವಾ ಅಧಿಕಾರ ಹೊಂದಿದ ವ್ಯಕ್ತಿಯಿಂದ ಜಾರಿಗೊಳಿಸಿದ; ಆದರೆ ಬ್ರಿಟಿಷ್ ಸಂಸತ್ತಿನಿಂದ ಹೊರಡಿಸಿದ ಶಾಸನಗಳಲ್ಲದೆ, ಕಾನೂನುಗಳು.

(ಐ) "ಸಂಯುಕ್ತ ನ್ಯಾಯಾಂಗ" ಎಂದರೆ ೧೯೩೫ರ ಭಾರತ ಸರಕಾರದ ಕಾನೂನಿನಂತೆ ರಚಿಸಲಾದ ನ್ಯಾಯಾಲಯ.

(ಒ) "ವಸ್ತುಗಳು" ಎಂದರೆ ಸಕಲ ಸಾಮಗ್ರಿಗಳು, ವಸ್ತುಗಳು ಮತ್ತು ಸರಕುಗಳು

(ಓ) "ಜಾಮೀನು" ಎಂದರೆ ಸಂವಿಧಾನ ಜಾರಿಗೆ ಬರುವ ಮುನ್ನ ನೀಡಿದ ಭರವಸೆಗಳು, ಹಣ ನೀಡುವ ಅಥವಾ ನಿರ್ದಿಷ್ಟ ಮೊತ್ತವನ್ನು ನೀಡುವ ಭರವಸೆಗಳಿಂದ ಒಡಗೂಡಿದ ಹೊಣೆಗಾರಿಕೆ ಎಂದೇ ತಿಳಿಯಬೇಕು.

(ಔ) "ಪಿಂಚಣಿ" ಎಂದರೆ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ನೀಡಬಹುದಾದ ನಿವೃತ್ತಿ ವೇತನ, ಯಾವುದೇ ವಿಧವಾದ ಪ್ರಾವಿಡೆಂಟ್ ಫಂಡ್, ಗ್ರಾಚ್ಯುಟಿ ಮುಂತಾದವು.

(ಕ) "ಸಾರ್ವಜನಿಕ ಪ್ರಕಟಣೆ" ಎಂದರೆ ಭಾರತದ ಗೆಜೆಟ್ ನಲ್ಲಿ ಪ್ರಕಟಿಸಿದ ಅಥವಾ ರಾಜ್ಯದ ಗೆಜೆಟ್‌ನಲ್ಲಿ ಪ್ರಕಟಿಸಿದ ಪ್ರಕಟಣೆಗಳು

(ಖ) "ಕರಗಳು" ಹೇರಬಹುದಾದ ಸಾರ್ವಜನಿಕ ಅಥವಾ ಸ್ಥಳೀಯ, ವಿಶೇಷ ಕರಗಳು

(ಗ) "ಆದಾಯದ ಮೇಲಿನ ಕರ" ಅಧಿಕ ಲಾಭ ಸ್ವರೂಪದ ಆದಾಯಗಳ ಮೇಲಿನ ಕರ

(ಘ) "ರೈಲುಗಳು" ಅಂದರೆ ನಗರ ಸಭೆಯ ಹದ್ದು ಮೀರಿರುವ ಟ್ರಾಂವೇಗಳನ್ನು ಒಳಗೊಂಡಂತೆ;

(ಚ) "ಒಕ್ಕೂಟದ ರೈಲು" ರಾಜ್ಯದ ರೈಲುಗಳನ್ನು ಒಳಗೊಂಡಿರುವುದಿಲ್ಲ, ಆದರೆ ಮೇಲೆ ಸೂಚಿಸಿದ ಬೃಹತ್ ರೈಲುಗಳಿಂದ ಒಡಗೂಡಿರುತ್ತದೆ.

(ಛ) "ಭಾರತೀಯ ರಾಜ್ಯ ರೈಲ್ವೆ" ಎಂದರೆ, ಸದ್ಯ ಸಂವಿಧಾನದ ಮೊದಲನೆಯ ಅನುಬಂಧದ ಭಾಗ III ರಲ್ಲಿಯ ರಾಜ್ಯಗಳಿಂದ ಕಾರ್ಯಾಚರಣೆಯಲ್ಲಿರುವ ರೈಲುಗಳು, ಅಥವಾ ಅವರ ಪರವಾಗಿ ಒಪ್ಪಂದ ಮಾಡಿಕೊಂಡಿರಬಹುದಾದ ಕಂಪನಿಗಳ ರೈಲುಗಳೆಂದೇ ಭಾವಿಸಬೇಕು.

(ಜ) "ಮೈನರ್ ರೈಲು" ಎಂದರೆ ಸಂಪೂರ್ಣವಾಗಿ ಒಂದೇ

ರಾಜ್ಯದಲ್ಲಿ ಕಾರ್ಯ ಮಾಡುತ್ತಿರುವ, ಒಕ್ಕೂಟ ರೈಲಿನೊಂದಿಗೆ ಸಂಪರ್ಕ ಹೊಂದಿರದ ಹಾಗೂ ಬೇರೆ ಮಾದರಿಯ ಗೇಜ್ ವ್ಯವಸ್ಥೆ ಹೊಂದಿದವು.

(ಝ) "ಅನುಬಂಧ" ಎಂದರೆ ಸಂವಿಧಾನದಲ್ಲಿಯ ಅನುಬಂಧಗಳು.

(ಟ) "ಪರಿಶಿಷ್ಟ ಜಾತಿ: ಎಂದರೆ ಸಂವಿಧಾನದ ಮೊದಲನೆಯ ಅನುಬಂಧದ ಭಾಗ I ರಲ್ಲಿ ಸೂಚಿಸಿರುವ, ಜಾತಿ, ಜನಾಂಗ, ಕುಲಗಳು ಅಥವಾ ಅವುಗಳ ಒಳಪಂಗಡಗಳು. ೧೯೩೬ರ ಭಾರತ ಸರಕಾರದ ಆಜ್ಞೆಯಲ್ಲಿ ಸೂಚಿಸಿದ ಹಾಗೂ ೧೯೩೫ ಕಾಯ್ದೆಯ ೫ ಮತ್ತು ೬ ಅನುಬಂಧಗಳಲ್ಲಿ ಸೂಚಿಸಿದ ಪ್ರಾಂತಗಳಿಗೂ ಸಂಬಂಧಿಸಿದಂತೆ.

(ಠ) "ಪರಿಶಿಷ್ಟ ಪಂಗಡ" ಎಂದರೆ ಸಂವಿಧಾನದ ಮೊದಲನೆಯ ಅನುಬಂಧ ಭಾಗ Iರಲ್ಲಿಯ ರಾಜ್ಯಕ್ಕೆ ಸಂಬಂಧಿಸಿದಂತೆ ಭಾಗಗಳು I ರಿಂದ II ರಲ್ಲಿ ನಿರ್ದಿಷ್ಟವಾಗಿ ಸೂಚಿಸಿದ ಪಂಗಡ ಹಾಗೂ ಸಮೂಹಗಳು.

(೨) ಬೇರೆ ಸಂದರ್ಭಗಳಿಗೆ ಅನುಸರಿಸಿ ೧೮೯೭ (X ೧೮೯೭) ಸಾಮಾನ್ಯ ಉಪನಿಬಂಧನೆಗಳಿಗೆ ಅನುಗುಣವಾಗಿ ಈ ಸಂವಿಧಾನವನ್ನು ಅರ್ಥೈಸಬಹುದು.

(೩) ಈ ಸಂವಿಧಾನದನ್ವಯ ಮಾಡಲಾದ ಯಾವುದೇ ಆಕ್ಟ್ ಅಥವಾ ಕಾನೂನಾಗಲೀ ಸಂಸತ್ತಿನಿಂದಾಗಲೀ ಅನುಬಂಧ ೧ ಭಾಗ ೧ರ ರಾಜ್ಯಗಳ ಸಂಬಂಧಿಸಿದಂತೆ ರಾಷ್ಟ್ರಪತಿಯು ಅಥವಾ ರಾಜ್ಯಪಾಲರು ಸುಗ್ರೀವಾಜ್ಞೆ ಹೊರಡಿಸಬಹುದು.

# ಭಾಗ XVI
# ಸಂವಿಧಾನಕ್ಕೆ ತಿದ್ದುಪಡಿಗಳು

**ಸಂವಿಧಾನದ ತಿದ್ದುಪಡಿಯ ವಿಧಾನಗಳು**

೩೦೪. ೧. ಸಂಸತ್ತಿನ ಯಾವುದೇ ಸದನವು ಸಂವಿಧಾನದ ತಿದ್ದುಪಡಿಯ ಮಸೂದೆಯನ್ನು ಮಂಡಿಸಬಹುದು. ಈ ವಿಧವಾಗಿ ಮಂಡಿಸಲಾದ ಮಸೂದೆಯು ಎರಡೂ ಸದನಗಳಲ್ಲಿಯ ೨/೩ ಬಹುಮತದಿಂದ ಹಾಜರಿದ್ದು ಮತ ಚಲಾಯಿಸಿದ ಸದಸ್ಯ ಸಂಖ್ಯೆಗೆ ಅನುಸರಿಸಿ, ಮಂಜೂರಾತಿ ಪಡೆದ ನಂತರ, ಆ ಮಸೂದೆಯನ್ನು ರಾಷ್ಟ್ರಪತಿಗಳ ಅಂಗೀಕಾರಕ್ಕೆ ಕಳಿಸಬೇಕು. ರಾಷ್ಟ್ರಪತಿಯವರು ಸಹಿ ಮಾಡಿ ತಮ್ಮ ಅಂಗೀಕಾರ ನೀಡಿದ ಮೇಲೆ ಮಸೂದೆಯಲ್ಲಿ ಸೂಚಿಸಲಾದಂತೆ ತಿದ್ದುಪಡಿ ಜಾರಿಗೊಳ್ಳುವುದು :–

ಆದರೆ ಆ ವಿಧವಾದ ಮಸೂದೆಯು ತಿದ್ದುಪಡಿಯನ್ನು ಅಪೇಕ್ಷಿಸುವ ಸಂದರ್ಭಗಳು –

(ಅ*) ಏಳನೆಯ ಅನುಬಂಧದಲ್ಲಿ ಸೂಚಿಸಿದ ಯಾವ ಪಟ್ಟಿಯೇ ಆಗಲಿ

(ಆ) ಸಂಸತ್ತಿನಲ್ಲಿ ರಾಜ್ಯಗಳ ಪ್ರತಿನಿಧಿತ್ವಕ್ಕೆ

(ಇ) ಸರ್ವೋಚ್ಚ ನ್ಯಾಯಾಲಯದ ಅಧಿಕಾರಕ್ಕೆ ಸಂಬಂಧಿಸಿದ, ತಿದ್ದುಪಡಿಗಳು ಭಾಗ I ಅನುಬಂಧ I ರ ರಾಜ್ಯಗಳ ಅರ್ಧ ರಾಜ್ಯಗಳಿಗಿಂತ ಅಧಿಕ ರಾಜ್ಯಗಳ ಶಾಸಕಾಂಗದ ೧/೩ ಅಧಿಕ ಬಹುಮತದಿಂದ ಅಂಗೀಕಾರವನ್ನು ಪಡೆಯಬೇಕು.

೨. **ಈ ಮೇಲೆ ತಿಳಿಸಿದ ಉಪನಿಬಂಧನೆಗೆ ಅಡಚಣೆಯಾಗದಂತೆ, ಈ ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಅಂಶಗಳು ***ರಾಜ್ಯಪಾಲರ ಆಯ್ಕೆ ಹಾಗೂ ಶಾಸಕಾಂಗದಲ್ಲಿಯ ಸದನಗಳ ಸಂಖ್ಯೆಗೆ ಭಾಗ I ಅನುಬಂಧ I ರಾಜ್ಯಗಳಿಗೆ ಸಂಬಂಧಿಸಿದ್ದಲ್ಲಿ ಅಂತಹ ಮಸೂದೆಯನ್ನು ಮಂಡಿಸಿ, ರಾಜ್ಯದ

---

* ಸಮಿತಿಯ ಅಭಿಪ್ರಾಯದಂತೆ ಐಟಮ್ (೧) ಉಪನಿಬಂಧನೆ (೧)ಯು ಏಳನೇ ಅನುಬಂಧದಲ್ಲಿಯ ಪಟ್ಟಿಯನ್ನು ಅನುಸರಿಸಬೇಕು.

** ಸಮಿತಿಯ ಅಭಿಪ್ರಾಯವೆಂದರೆ : ಈ ವಿಧಿಯಲ್ಲಿ ಅನುಬಂಧ ೧ ಭಾಗ I ರ ರಾಜ್ಯದ ಶಾಸಕಾಂಗ ಸೂಚಿಸಬಹುದಾದ ತಿದ್ದುಪಡಿಯ ಮಸೂದೆಯ ಅಂಶವಾದ ರಾಜ್ಯಪಾಲರ ಆಯ್ಕೆಯ ಮತ್ತು ಸದನಗಳ ವಿಷಯದಲ್ಲಿ ಸಂಸತ್ತು ತನ್ನ ಅಧಿಕ ಬಹುಮತದಿಂದ ಎಂಬ ಸಂಗತಿಯನ್ನು (೨) ರಲ್ಲಿ ಸೂಚಿಸಬಹುದೆಂದಿತ್ತು.

*** "ರಾಜ್ಯಪಾಲರ ಆಯ್ಕೆ" ಈ ಪದಗಳನ್ನು ಈ ಉಪನಿಬಂಧನೆಯಲ್ಲಿಯೇ ಉಳಿಸಿಕೊಳ್ಳಬಹುದು. ಇನ್ನೊಂದು ಅಭಿಪ್ರಾಯದಂತೆ ೧೩೧ ವಿಧಿಯನ್ನು ಅಂಗೀಕರಿಸದೇ ಇರುವುದು.

ಶಾಸಕಾಂಗದ ಬಹುಮತದಿಂದ, ವಿಧಾನ ಸಭೆ, ವಿಧಾನ ಪರಿಷತ್ತುಗಳಿಗನುಗುಣವಾಗಿ ಅನುಮೋದನೆ ಪಡೆದು, ಆ ಮಸೂದೆಯನ್ನು ಸಂಸತ್ತಿನ ಪ್ರತಿಯೊಂದು ಸಭೆಯ ಹಾಜರಿದ್ದ ಸದಸ್ಯರ ಬಹುಮತದಿಂದ ಅಂಗೀಕಾರ ಪಡೆದು ನಂತರ ಅದನ್ನು ರಾಷ್ಟ್ರಪತಿಯವರ ಅನುಮೋದನೆಗೆ ಕಳಿಸಬೇಕು. ಈ ವಿಧವಾದ ಅಂಗೀಕಾರ ಪಡೆದ ನಂತರ ಮಸೂದೆಯಲ್ಲಿ ಸೂಚಿಸಿದ ತಿದ್ದುಪಡಿ ಜಾರಿಯಲ್ಲಿ ಬರುತ್ತದೆ.

ವಿವರಣೆ :– ಈ (೧) ವಿಧಿಗೆ ಸಂಬಂಧಿಸಿದಂತೆ ಸಂವಿಧಾನದ ಮೊದಲನೆಯ ಅನುಬಂಧದ III ಭಾಗದಲ್ಲಿ ಸೂಚಿಸಿದ ರಾಜ್ಯಗಳ ಸಮೂಹವನ್ನು ಒಂದೇ ಎಂದು ಪರಿಗಣಿಸಲಾಗುವುದು.

**ಅಲ್ಪಸಂಖ್ಯಾತರ ಮೀಸಲಾತಿಯು ಹತ್ತುವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುವುದು, ಸಂವಿಧಾನದ ತಿದ್ದುಪಡಿಯಿಂದ ಮುಂದುವರೆಯುವುದು.**

೩೦೫. ೩೦೪ನೇ ವಿಧಿಯಲ್ಲಿ ಸೂಚಿಸಿದ ಯಾವುದೇ ವಿಷಯಕ್ಕೆ ಅಡಚಣೆ ಉಂಟಾಗದಂತೆ ಈ ಸಂವಿಧಾನದಲ್ಲಿ ಮುಸಲ್ಮಾನರ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಸ್ಥಾನಗಳ ಮೀಸಲಾತಿ ಹಾಗೂ ಸಂಸತ್ತಿನಲ್ಲಿ ಮತ್ತು ಶಾಸನ ಸದನದಲ್ಲಿ ಇಂಡಿಯನ್ ಕ್ರಿಶ್ಚಿಯನ್ನರಿಗೆ ಭಾಗ I ಅನುಬಂಧ I ನೀಡಲಾದ ಮೀಸಲಾತಿಯನ್ನು ಸಂವಿಧಾನ ಜಾರಿಗೆ ಬಂದಂದಿನಿಂದ ಹತ್ತು ವರ್ಷಗಳ ಅವಧಿಯವರೆಗೆ ಮುಂದುವರಿಸಲಾಗುವುದು. ನಂತರ ಸಂವಿಧಾನದ ತಿದ್ದುಪಡಿಯ ಮೂಲಕ ಅವಧಿಯನ್ನು ಮುಂದುವರಿಸಬಹುದು.

## ಭಾಗ XVII
## ತಾತ್ಕಾಲಿಕ ಮತ್ತು ಪರಿವರ್ತನಾ ಕಾಲದ ಅಂಶಗಳು

**ರಾಜ್ಯದ ಪಟ್ಟಿಯ ಹಲವು ವಿಷಯಗಳ ಬಗೆಗೆ ಸಮವರ್ತಿ ಪಟ್ಟಿಯಂತೆ ಭಾವಿಸುವ ಸಂಸತ್ತಿನ ನಡಾವಳಿ ಅಧಿಕಾರ**

* ೩೦೬. ಈ ಸಂವಿಧಾನದಲ್ಲಿ ತಿಳಿಸಲಾದ ಸಂಗತಿಗೆ ಧಕ್ಕೆ ಬಾರದಂತೆ ಸಂವಿಧಾನ ಜಾರಿಗೆ ಬಂದ ಐದು ವರ್ಷದ ಅವಧಿಯಲ್ಲಿ, ಈ ಕೆಳಕಂಡ ವಿಷಯಗಳ ಸಮವರ್ತಿ ಪಟ್ಟಿಯಂತೆ ನಿರ್ಣಯಿಸುವ ಅಧಿಕಾರವನ್ನು ಸಂಸತ್ತು ಹೊಂದಿದೆ:–

---

* ತಾತ್ಕಾಲಿಕವಾಗಿ, ಈ ಅಧಿಕಾರಗಳು ರಾಜ್ಯದ ಪಟ್ಟಿಯಲ್ಲಿದ್ದರೂ, ವಿಶೇಷವಾಗಿ ನಿರಾಶ್ರಿತರ ವಸತಿ ಮತ್ತು ಪರಿಹಾರ ಸಮಸ್ಯೆ ಜಟಿಲವಾಗಿರುವುದರಿಂದ, ಸದ್ಯ ಈ ಅಧಿಕಾರವನ್ನು ಸಂಸತ್ತಿಗೆ ವಹಿಸಿಕೊಡುವುದೇ ಸೂಕ್ತ ಎಂದೇ ಸಮಿತಿಯ ಅಭಿಪ್ರಾಯ. ಏಕೆಂದರೆ ಈ ವಿಧವಾದ ಆಸ್ಪದವನ್ನು ೧೯೪೬ (ಕೇಂದ್ರ ಸರಕಾರ – ಶಾಸಕಾಂಗ) ಮಸೂದೆಯಲ್ಲಿ ಕಲ್ಪಿಸಲಾಗಿತ್ತು.

(ಅ) ರಾಜ್ಯದ ವ್ಯಾಪಾರ ಹಾಗೂ ವಾಣಿಜ್ಯಕ್ಕೆ ಸಂಬಂಧಿಸಿದಂತೆ, ಹತ್ತಿ ಮತ್ತು ಉಣ್ಣೆ ಬಟ್ಟೆಗಳು, ಕಾಗದ (ಮುದ್ರಣ ಕಾಗದ ಸೇರಿದಂತೆ), ಆಹಾರ ವಸ್ತುಗಳು (ಖಾದ್ಯ ಎಣ್ಣೆ ಹಾಗೂ ಎಣ್ಣೆ ಬೀಜಗಳು ಮತ್ತು ಎಣ್ಣೆ ಸೇರಿದಂತೆ), ಪೆಟ್ರೋಲ್ ಹಾಗೂ ಪೆಟ್ರೋಲಿಯಂ ವಸ್ತುಗಳು, ಯಾಂತ್ರಿಕವಾಗಿ ಚಲಿಸುವ ವಾಹನಗಳು, ಕಲ್ಲಿದ್ದಲು, ಕಬ್ಬಿಣ, ಉಕ್ಕು ಮತ್ತು ಕಾಗೆ ಬಂಗಾರಗಳ ಉತ್ಪಾದನೆ, ಸರಬರಾಜು ಹಾಗೂ ಹಂಚಾಣಿಕೆ.

(ಆ) ನಿರಾಶ್ರಿತರಿಗೆ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವುದು.

(ಇ) ಮೇಲಿನ (ಚ) ಹಾಗೂ (ಚಿ)ಯಲ್ಲಿ ತಿಳಿಸಿದ ವಿಷಯಗಳ ಬಗೆಗಿನ ಅಪರಾಧಗಳು; ಈ ವಿಷಯಗಳ ವಿಚಾರಣೆ, ಅಂಕಿ ಸಂಖ್ಯೆಗಳು, ಪ್ರದೇಶ ಮತ್ತು ನ್ಯಾಯಾಲಯಗಳ ಅಧಿಕಾರ ಸರ್ವೋಚ್ಚ ನ್ಯಾಯಾಲಯ ಹೊರತು ಪಡಿಸಿ, ಮತ್ತು ಶುಲ್ಕಗಳು ಕೋರ್ಟ್ ಶುಲ್ಕ ಬಿಟ್ಟು ಉಳಿದಂತೆ ನಿಗದಿತ ಅವಧಿ ಮುಗಿದ ನಂತರ, ಈ ವಿಷಯಗಳ ಬಗೆಗೆ ಅಸಾಮರ್ಥ್ಯ ತೋರಿದಲ್ಲಿ ಸಂಸತ್ತು ಈ ವಿಧಿಗಳಿಗೆ ಕಾನೂನುಗಳನ್ನು ರಚಿಸಬಹುದು.

**ಜಾರಿಯಲ್ಲಿರುವ ಕಾನೂನುಗಳನ್ನು ಮುಂದುವರಿಸುವ ಹಾಗೂ ಅಳವಡಿಸಿಕೊಳ್ಳುವ ಬಗ್ಗೆ**

೩೦೭. (೧) ಸಂವಿಧಾನದ ಇತರ ಅಂಶಗಳನ್ನು ಗಮನಿಸಿ ಕೊಂಡು ಸಂವಿಧಾನ ಜಾರಿ ಬರುವ ಪೂರ್ವದಲ್ಲಿ ಭಾರತದ ಪ್ರದೇಶದಲ್ಲಿದ್ದ ಎಲ್ಲಾ ಶಾಸನಗಳೂ ಬದಲಾಯಿಸುವ, ತೆಗೆದು ಹಾಕುವ, ಅಥವಾ ತಿದ್ದುಪಡಿಯಾಗುವವರೆಗೂ ಮುಂದುವರಿಯುತ್ತವೆ.

(೨) ರಾಷ್ಟ್ರಪತಿಯವರು ತಮ್ಮ ಆಜ್ಞೆಯ ಮೂಲಕ, ನಿರ್ದಿಷ್ಟ ದಿನಾಂಕದಿಂದ, ಭಾರತ ಪ್ರದೇಶದ ಅಥವಾ ಯಾವುದೇ ಪ್ರದೇಶದಲ್ಲಿ, ಸಂಬಂಧಿಸಿದ ಶಾಸಕಾಂಗದಿಂದ ಅಥವಾ ಬೇರೆ ಸಮರ್ಥ ಅಧಿಕಾರದಿಂದ ತೆಗೆದು ಹಾಕುವ, ಬದಲಾಯಿಸುವ ತಿದ್ದುಪಡಿಯಾಗುವವರೆಗೂ ಈ ಅಧಿಕಾರವನ್ನು ಯಾವ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗದು.

ವಿವರಣೆ I : "ಜಾರಿಯಲ್ಲಿರುವ ಕಾನೂನು" ಭಾವನೆ ಈ ವಿಧಿಯಲ್ಲಿ ತಿಳಿಸಿದಂತೆ, ಯಾವುದೇ ಶಾಸಕಾಂಗದಿಂದ ಅಥವಾ ಸಮರ್ಥನೀಯ ಅಧಿಕಾರಿಯಿಂದ ಸಂವಿಧಾನ ಜಾರಿಗೆ ಬರುವ ಮುನ್ನ ಜಾರಿಗೊಳಿಸಿದ ಅಥವಾ ರದ್ದುಗೊಳಿಸಿದ, ಶಾಸನವೆಂದೇ ಭಾವಿಸಬೇಕು.

ವಿವರಣೆ II : ಯಾವುದೇ ಶಾಸನ, ಶಾಸಕಾಂಗ ಅಥವಾ ಸಮರ್ಥ ಅಧಿಕಾರದಿಂದ ಭಾರತ ಪ್ರದೇಶದಲ್ಲಿ ಸಂವಿಧಾನ ಜಾರಿಗೆ

ಬರುವ ಮುನ್ನ ಶೀಘ್ರದಲ್ಲಿ ವಿವಿಧ ಪ್ರದೇಶ ಹಾಗೂ ಭಾರತದ ಪ್ರದೇಶದಲ್ಲಿ ಪ್ರಬಲ ಪ್ರಭಾವ ಹೊಂದಿದ್ದು ಮಾರ್ಪಾಡು ಅಥವಾ ಹೊಂದಾಣಿಕೆಗೆ ಗುರಿಯಾದ ಪ್ರಭಾವಶಾಲಿಯಾಗಿರುವುದು.

ವಿವರಣೆ III: ಈ ವಿಧಿಯಲ್ಲಿ ತಿಳಿಸಿದ ಯಾವ ವಿಷಯಕ್ಕೆ ಧಕ್ಕೆ ಉಂಟಾಗದಂತೆ ಯಾವುದೇ ತಾತ್ಕಾಲಿಕ ಮಸೂದೆಯನ್ನು ಅದು ರದ್ದುಗೊಳ್ಳುವ ದಿನಾಂಕದಿಂದ ಮುಂದುವರಿಸಲಾಗದು.

**ಫೆಡರಲ್ ಕೋರ್ಟಿನ ನ್ಯಾಯಾಧೀಶರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗುವುದು ಮತ್ತು ಫೆಡರಲ್ ಕೋರ್ಟಿನ ಮತ್ತು ಮಂಡಳಿಯಲ್ಲಿನ ಬ್ರಿಟಿಷ್ ರಾಜನ ಮುಂದಿರುವ ವ್ಯಾಜ್ಯಗಳು ಸುಪ್ರೀಂ ಕೋರ್ಟಿನ ವ್ಯಾಜ್ಯಗಳಾಗುವುದು.**

೩೦೮. ೧. ಸಂವಿಧಾನ ಜಾರಿಗೆ ಬರುವ ಮುನ್ನ ಫೆಡರಲ್ ಕೋರ್ಟಿನಲ್ಲಿ ಸೇವೆ ಮಾಡುತ್ತಿದ್ದ ನ್ಯಾಯಮೂರ್ತಿಗಳು, ಅವರು ಬೇರೆಯಾಗಿ ಇರಲು ಬಯಸದೇ ಹೋದಲ್ಲಿ ಅವರೆಲ್ಲರನ್ನೂ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳೆಂದೇ ಭಾವಿಸಬೇಕು. ಆ ದಿನಾಂಕದಿಂದ ಸಂವಿಧಾನದ ೧೦೪ನೆಯ ವಿಧಿಯಲ್ಲಿ ಸೂಚಿಸಿರುವಂತೆ ಅವರ ವೇತನ, ಭತ್ತೆ, ರಜೆ ಹಾಗೂ ಇತರ ಸೌಲಭ್ಯಗಳು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ನೀಡುವಂತೆ ನೀಡಲಾಗುವುದು.

(೨) ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆಗಳು, ದಾವೆಗಳು, ಮನವಿಗಳು ಮತ್ತು ನಡಾವಳಿಗಳು, ಸಂವಿಧಾನ ಜಾರಿಗೆ ಬರುವ ಮುನ್ನ ಫೆಡರಲ್ ಕೋರ್ಟಿನಲ್ಲಿರಬಹುದಾದ ಎಲ್ಲ ವಿಷಯಗಳು ಸರ್ವೋಚ್ಚ ನ್ಯಾಯಾಲಯದ ವಿವಕ್ಷೆಗೆ ಸೇರುತ್ತವೆ. ಸರ್ವೋಚ್ಚ ನ್ಯಾಯಾಲಯದ ಪರಿಮಿತಿಯನ್ನು ಅವಕ್ಕೂ ವಿಸ್ತರಿಸಲಾಗುತ್ತದೆ. ಫೆಡರಲ್ ಕೋರ್ಟು ನೀಡಿರಬಹುದಾದ ತೀರ್ಪು ಹಾಗೂ ಆಜ್ಞೆಗಳನ್ನು ಅನುಷ್ಠಾನಗೊಳಿಸಲಾಗುವುದು.

*(೩) ಸಂವಿಧಾನವು ಜಾರಿಗೆ ಬಂದ ದಿನಾಂಕದಿಂದ ಮಂಡಳಿಯಲ್ಲಿನ ಬ್ರಿಟಿಷ್ ಚಕ್ರವರ್ತಿಯ ವ್ಯಾಪ್ತಿಯಲ್ಲಿದ್ದ ಮನವಿಗಳು, ಅರ್ಜಿಗಳು ಅಥವಾ ಈ ದಿಶೆಯಲ್ಲಿ ಹೊರಡಿಸಿದ ಡಿಕ್ರಿಗಳು ಸಕಲ ಕಾರ್ಯ ಆಜ್ಞೆಗಳು, ಭಾರತ ಪ್ರದೇಶಕ್ಕೆ ಸೇರಿದಂತೆ ವಿಷಯಗಳು ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತವೆ. ಎಲ್ಲವನ್ನೂ ಸರ್ವೋಚ್ಚ ನ್ಯಾಯಾಲಯವೇ ನಿರ್ಣಯಿಸುತ್ತದೆ.

---

* ಸಮಿತಿಯ ಅಭಿಪ್ರಾಯದಲ್ಲಿ ಸಂವಿಧಾನ ಜಾರಿಗೆ ಬರುವ ಹೊತ್ತಿಗೆ ಚಕ್ರವರ್ತಿ ಮಂಡಳಿಯು ಎಲ್ಲಾ ದಾವೆಗಳನ್ನು ಬಗೆಹರಿಸಬಹುದು. ಒಂದು ವೇಳೆ ಬಾಕಿ ಇದ್ದರೆ ಅವನ್ನು ರಾಷ್ಟ್ರಪತಿಯವರ ಒಂದು ಆಜ್ಞೆಯ ಮುಖಾಂತರ (ವಿಧಿ ೩೧೩) "ತೊಂದರೆಗಳ ನಿವಾರಣೆ"ಯ ಅಡಿಯಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ವರ್ಗಾಯಿಸಬಹುದು.

(೪) ಈ ವಿಧಿಗೆ ಪೂರಕವಾಗಿ ಬೇಕಾಗಬಹುದಾದ ಇತರ ಅಂಶಗಳನ್ನು ಸಂಸತ್ತು ಶಾಸನ ರಚಿಸುವ ಮೂಲಕ ಕೈಕೊಳ್ಳಬಹುದು.

**ನ್ಯಾಯಾಲಯಗಳು, ಅಧಿಕೃತರು ಮತ್ತು ಅಧಿಕಾರಿಗಳು ಸಂವಿಧಾನ ಜಾರಿಗೆ ಬಂದ ಮೇಲೆ ಕಾನೂನಿಗೆ ಒಳಪಟ್ಟು ಮುಂದುವರೆಯುವುದು**

೩೦೯. ಈ ಸಂವಿಧಾನಕ್ಕೆ ಅನುಗುಣವಾಗಿ; ಎಲ್ಲಾ ಸಿವಿಲ್ ಹಾಗೂ ಕ್ರಿಮಿನಲ್ ನ್ಯಾಯಾಲಯಗಳು ಮತ್ತು ಕಂದಾಯ ಪರಿಮಿತಿಯ ಅಧಿಕಾರಿಗಳು ನ್ಯಾಯಾಂಗ, ಆಡಳಿತ ಹಾಗೂ ಶಾಸಕಾಂಗದ ಸೇವೆಯಲ್ಲಿರುವ ಭಾರತ ಪ್ರದೇಶದಲ್ಲಿಯ ಎಲ್ಲಾ ಅಧಿಕಾರಿಗಳೂ ತಮ್ಮ ಅಧಿಕಾರವನ್ನು ಚಲಾಯಿಸಬಹುದು.

**ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿಗಳ ಮುಂದುವರಿಕೆ ಮತ್ತು ಕಾನೂನು**

೩೧೦. ಸಂವಿಧಾನ ಜಾರಿಗೆ ಬರುವ ಮುನ್ನ ಸೇವೆಯಲ್ಲಿದ್ದ ಯಾವುದೇ ಪ್ರಾಂತದ ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿ ಅಧಿಕಾರದಲ್ಲಿದ್ದರೆ, ಅವರು ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರೆಂದು ಸೇವೆಯಲ್ಲಿ ಮುಂದುವರಿಯುತ್ತಾರೆ; ಹಾಗೂ ವಿಧಿ ೧೯೭. ರಂತೆ ವೇತನ, ಭತ್ತೆ, ಸೌಲಭ್ಯಗಳನ್ನು ಪಡೆಯುತ್ತಾರೆ.

**ಕೇಂದ್ರದ ಹಂಗಾಮಿ ಶಾಸಕಾಂಗಗಳು ಅಧ್ಯಕ್ಷರ ಬಗೆಗೆ**

೩೧೧. (೧) ಈ ಸಂವಿಧಾನದಡಿಯಲ್ಲಿ ಸಂಸತ್ತಿನ ಎರಡೂ ಸದನಗಳು ರಚನೆ ಹೊಂದಿ, ಅವುಗಳ ಮೊದಲನೆಯ ಅಧಿವೇಶನ ಕರೆಯುವವರೆಗೂ, ಭಾರತದ ಸಂವಿಧಾನ ಸಭೆಯೇ ಸಂಸತ್ತಿನ ಎಲ್ಲಾ ಅಧಿಕಾರಗಳನ್ನು ಹೊಂದಿದ್ದು ಎಲ್ಲಾ ಕಾನೂನು ಅದರಲ್ಲಿಯೂ ಸದನಗಳನ್ನು ರಚಿಸುವ ಅವುಗಳ ಚುನಾವಣೆಗೆ, ಮತದಾರ ಕ್ಷೇತ್ರವನ್ನು ಗುರುತಿಸುವ ಮುಂತಾದ, ಸಂವಿಧಾನಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಮಾಡುವ ಅಧಿಕಾರ ಪಡೆದಿದೆ.

ವಿವರಣೆ : ಈ ಉಪನಿಬಂಧನೆಗಾಗಿ, ಡೊಮಿನಿಯನ್ ಭಾರತದ ಸಂವಿಧಾನ ಸಭೆಯು ಆಕಸ್ಮಿಕವಾಗಿ ತೆರವಾಗಿದ್ದ ಸ್ಥಾನಗಳನ್ನು ತುಂಬಲು, ಈ ದಿಶೆಯಲ್ಲಿ ಸಭೆಯಿಂದಲೇ ರಚಿಸಲಾದ ನಿಯಮ ಪಾಲಿಸಬೇಕು; ಆದರೆ ಈ ವಿಧವಾಗಿ ತೆರವಾದ ಸ್ಥಾನಗಳನ್ನು ಮೊದಲನೆಯ ಅನುಬಂಧದಲ್ಲಿ ಸೂಚಿಸಿರುವ ಪ್ರದೇಶಗಳ ಸದಸ್ಯರನ್ನೇ ಆರಿಸಬೇಕೇ ಹೊರತು ಬೇರೆ ಪ್ರದೇಶಗಳಿಂದಲ್ಲ.

(೨) ಸಂವಿಧಾನ ಸಭೆಯ ಅಧ್ಯಕ್ಷರು, ೧೯೩೫ರ ಕಾಯ್ದೆಯ ಡೊಮಿನಿಯನ್ ಭಾರತದ ಶಾಸಕಾಂಗದ ಅಧ್ಯಕ್ಷರಂತೆ, ಈ ವಿಧಿಯ (೧)ರಂತೆ ಮುಂದುವರಿಯುತ್ತಾರೆ.

(೩) *ಡೊಮಿನಿಯನ್ ಭಾರತದ ಸಂವಿಧಾನ ಸಭೆಯು,

ತನಗೆ ಸೂಕ್ತವೆನಿಸಿದ ತಾತ್ಕಾಲಿಕ ಅಧ್ಯಕ್ಷನನ್ನು ಚುನಾಯಿಸಬಹುದು. ಈ ವಿಧವಾಗಿ ಚುನಾಯಿತಗೊಂಡ ವ್ಯಕ್ತಿಯೇ ತಾತ್ಕಾಲಿವಾಗಿ ಭಾರತದ ರಾಷ್ಟ್ರಪತಿ, ಭಾಗ V ಪ್ರಕರಣ ೧ರಲ್ಲಿ ಸೂಚಿಸಿದಂತೆ ಆಯ್ಕೆಯಾಗುವವರೆಗೂ, ಹಂಗಾಮಿ ರಾಷ್ಟ್ರಪತಿಯಾಗಿ ಮುಂದುವರಿಯುವರು.

೪. ಶೀಘ್ರದಲ್ಲಿ ಸಂವಿಧಾನ ಜಾರಿಗೆ ಬರುವ ಮುನ್ನ ಡೊಮಿನಿಯನ್ ಭಾರತದಲ್ಲಿ ಮಂತ್ರಿಗಳಾಗಿದ್ದವರೇ ಸಂವಿಧಾನ ಜಾರಿಗೆ ಬಂದ ಹೊಸತರಲ್ಲಿ ಹಂಗಾಮಿ ರಾಷ್ಟ್ರಪತಿಗಳ, ಮಂತ್ರಿ ಮಂಡಳದ ಸದಸ್ಯರಾಗಿ ಮುಂದುವರಿಯುತ್ತಾರೆ.

**ಮೊದಲನೆಯ ಅನುಬಂಧ ಭಾಗ I ರ ತಾತ್ಕಾಲಿಕ ಶಾಸಕಾಂಗ – ರಾಜ್ಯಪಾಲರಿಗೆ ಸಂಬಂಧಿಸಿದ ಕಾನೂನು**

೩೧೨. ೧. ಸದ್ಯ ಸಂವಿಧಾನದ ಮೊದಲನೆಯ ಅನುಬಂಧ ಭಾಗ I ರಲ್ಲಿಯ ರಾಜ್ಯಗಳ ಶಾಸನ ಸಭೆಗಳ ರಚನೆ, ಏಕ ಅಥವಾ ದ್ವಿ ಸದನ ರೀತಿಯಲ್ಲಿ ರಚನೆಯಾಗುವವರೆಗೂ, ಹಾಗೂ ರಚನೆ ಹೊಂದಿ ಅಧಿವೇಶನ ಕರೆಯುವವರೆಗೂ, ಜಾರಿಯಲ್ಲಿರುವ ಶಾಸಕಾಂಗವೇ ಅಧಿಕಾರವನ್ನು ಚಲಾಯಿಸುವುದು.

೨. ಯಾವುದೇ ವ್ಯಕ್ತಿಯು, ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ; ಶೀಘ್ರದಲ್ಲಿಯೇ ಜಾರಿಗೆ ಬರಲಿರುವ ಸಂವಿಧಾನದ ಮುನ್ನ ಅಧಿಕಾರದಲ್ಲಿದ್ದರೇ ಅವರೇ ಅಧಿಕಾರದಲ್ಲಿ; ಭಾಗ I ಅನುಬಂಧ I ರ ರಾಜ್ಯಗಳಲ್ಲಿ ಮುಂದುವರಿಯುತ್ತಾರೆ.

**೩. ಅನುಬಂಧ ಒಂದು ಭಾಗ I ರ ರಾಜ್ಯಗಳಲ್ಲಿ ಶೀಘ್ರದಲ್ಲಿಯೇ ಜಾರಿಗೆ ಬರುವ ಸಂವಿಧಾನ ಜಾರಿಗೆ ಬರುವ ಮುನ್ನ ಅಧಿಕಾರ ಹೊಂದಿದ್ದ ರಾಜ್ಯಪಾಲರನ್ನೇ, ಸಂವಿಧಾನದ ಭಾಗ VI ಪ್ರಕರಣ II ರಲ್ಲಿ ತಿಳಿಸಿದಂತೆ ನೇಮಕ ಹೊಂದುವರು.

೪. ಸಂವಿಧಾನ ಜಾರಿಗೆ ಬರುವ ಮುನ್ನ ಮಂತ್ರಿಗಳಾಗಿ ಸೇವೆಯಲ್ಲಿದ್ದರೆ, ಸಂವಿಧಾನ ಜಾರಿಗೆ ಬಂದ ಶೀಘ್ರದಲ್ಲಿ, ಅನುಬಂಧ I ಭಾಗ I ರಾಜ್ಯಗಳಲ್ಲಿಯ ಸೇವೆಯಲ್ಲಿ ಅವರೇ ಮಂತ್ರಿಗಳಾಗಿ ಮುಂದುವರಿಯುತ್ತಾರೆ.

---

* ಸಮಿತಿಯ ಮಾನ್ಯ ಇಬ್ಬರು ಸದಸ್ಯರು ಡಾ॥ ಬಿ.ಆರ್. ಅಂಬೇಡ್ಕರ್ ಹಾಗೂ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರ ಅಭಿಪ್ರಾಯದಂತೆ ೨೧೧(೩)ರ ಬದಲು ಈ ಕೆಳಗೆ ಸೂಚಿಸಿದ ಉಪನಿಬಂಧನೆಯನ್ನು ಅಳವಡಿಸಬೇಕು:

(೩) ಸಂವಿಧಾನ ಸಭೆಯ ಅಧ್ಯಕ್ಷರು "ಭಾರತದ ಹಂಗಾಮಿ ರಾಷ್ಟ್ರಪತಿಯಾಗಿ ಭಾಗ ೫ರ ಪ್ರಕರಣ ೧ರಲ್ಲಿ ಸೂಚಿಸಿದಂತೆ, ರಾಷ್ಟ್ರಪತಿಯವರ ಆಯ್ಕೆಯಾಗುವ ಅವಧಿಯವರೆಗೂ ಅಧಿಕಾರದಲ್ಲಿರಬೇಕು."

** ವಿಧಿ ೧೩೧ರಲ್ಲಿ ಎರಡನೆ ಪರ್ಯಾಯವನ್ನು ಅನುಸರಿಸಿದರೆ "ನೇಮಕಾತಿ" ಎಂಬ ಪದವನ್ನು "ಆಯ್ಕೆ" ಯ ಬದಲಾಗಿ ಉಪಯೋಗಿಸಬೇಕು.

**ತೊಂದರೆಗಳನ್ನು ನಿವಾರಿಸುವಲ್ಲಿ ರಾಷ್ಟ್ರಪತಿಯವರ ಅಧಿಕಾರ**

೩೧೩. (೧) ಸಂವಿಧಾನದ ವಿಧಿ ೩೧೧(೧)ರಂತೆ, ತೊಂದರೆಗಳನ್ನು ನಿವಾರಿಸುವಲ್ಲಿ, ವಿಶೇಷವಾಗಿ ೧೯೩೫ರ ಕಾಯ್ದೆ ಹಾಗೂ ಸಂವಿಧಾನದ ಅಂಶಗಳಿಗೆ ಸೇರಿದಂತೆ, ರಾಷ್ಟ್ರಪತಿಯವರು ತಮ್ಮ ಆಜ್ಞೆಯ ಮೂಲಕ, ಈ ಸಂವಿಧಾನದಲ್ಲಿ ಸೂಕ್ತ ಮಾರ್ಪಾಟುಗಳನ್ನು ಮಾಡಲು ನಿರ್ದೇಶಿಸಬಹುದು.

ಆದರೆ, ಆ ವಿಧವಾದ ಆಜ್ಞೆಯನ್ನು ಸಂಸತ್ತಿನ ಮೊದಲನೆಯ ಅಧಿವೇಶನದ ನಂತರ (ಪ್ರಕರಣ II ಭಾಗ V) ನೀಡಬಾರದು.

(೨) ಉಪನಿಬಂಧನೆಯ (೧)ರಲ್ಲಿ ನೀಡಿದ ಪ್ರತಿಯೊಂದು ಆಜ್ಞೆಯನ್ನೂ ಸದನದ ಮುಂದೆ ಮಂಡಿಸಲೇಬೇಕು.

## ಭಾಗ XVIII
## ಆರಂಭ ಮತ್ತು ನಿರಸನ

**ಜಾರಿಯಲ್ಲಿ ಬರುವುದು**

೩೧೪. ಈ ಸಂವಿಧಾನವು ದಿನಾಂಕ ____________ ಜಾರಿಗೆ ಬರತಕ್ಕದ್ದು.

**ರದ್ದಾಗುವುದು**

೩೧೫. ೧೯೪೭ ಭಾರತದ ಸ್ವಾತಂತ್ರ್ಯ ಕಾಯ್ದೆ ಹಾಗೂ ೧೯೪೬ ರ ಭಾರತದ ಕೇಂದ್ರ ಮತ್ತು ಶಾಸಕಾಂಗದ ಕಾಯ್ದೆ ಹಾಗೂ ೧೯೩೫ರ ಕಾಯ್ದೆಗೆ ಅನುಬಂಧವಾಗಿ ರಚಿಸಿರಬಹುದಾದ ಎಲ್ಲಾ ಶಾಸನಗಳು ರದ್ದಾಗುವುವು.

*****

# ಮೊದಲನೆಯ ಅನುಸೂಚಿ

(ವಿಧಿಗಳು ೧ ಮತ್ತು ೪)

## ರಾಜ್ಯಗಳು ಮತ್ತು ಭಾರತದ ಪ್ರದೇಶಗಳು

### *ಭಾಗ I

ಶೀಘ್ರದಲ್ಲಿಯೇ ಜಾರಿಗೆ ಬರುವ ಸಂವಿಧಾನವು ಜಾರಿಗೆ ಬರುವ ಮುನ್ನ ಇದ್ದ ಗವರ್ನರ ಪ್ರಾಂತಗಳು.

೧. ಮದ್ರಾಸ್

೨. ಬೊಂಬಾಯಿ

೩. ಪಶ್ಚಿಮ ಬಂಗಾಳ

೪. ಸಂಯುಕ್ತ ಪ್ರಾಂತಗಳು

೫. ಬಿಹಾರ

೬. ಪೂರ್ವ ಪಂಜಾಬ್

೭. ಮಧ್ಯಪ್ರಾಂತಗಳು ಮತ್ತು ಬಿರಾರ್

೮. ಅಸ್ಸಾಂ

೯. ಒರಿಸ್ಸಾ

### ಭಾಗ II

ಸಂವಿಧಾನ ಜಾರಿಗೆ ಮುನ್ನ ಇದ್ದ ಕಮಿಷನರ್ ಪ್ರಾಂತಗಳು:

೧. ದೆಹಲಿ

೨. ಅಜಮೀರ್, ಮೇವಾಡ, ಪಂತ್ ಪಿಪ್‌ಲೋಡಾ ಸೇರಿದಂತೆ

೩. ಕೊಡಗು

---

* ಆಂಧ್ರ ಪ್ರದೇಶವನ್ನು ಒಂದು ರಾಜ್ಯವೆಂದು ಈ ಅನುಬಂಧದಲ್ಲಿಯೇ ಸೇರ್ಪಡಿಸಬಹುದೇ ಎಂಬ ಸಂಗತಿಯ ಬಗೆಗೆ ಸಮಿತಿಯು ತನ್ನ ಕಾತರವನ್ನು ಸೂಚಿಸಿದೆ. ಏಕೆಂದರೆ ಸರಕಾರವು ಈ ಪ್ರಾಂತದ ರಚನೆಯ ಬಗೆಗೆ ಹೇಳಿಕೆ ನೀಡಿದ್ದು ೧೯೩೫ರ ಕಾಯ್ದೆಗೆ ಅನುಗುಣವಾಗಿ ಒರಿಸ್ಸಾ ಹಾಗೂ ಸಿಂಧ್ ಪ್ರಾಂತಗಳನ್ನು ರಚಿಸಿದಂತೆ; ಒಂದು ಹಂತದಲ್ಲಿ ಸಮಿತಿಯು ಆಂಧ್ರ ಪ್ರಾಂತವನ್ನು ಸೇರ್ಪಡಿಸಿ ಅದನ್ನು ಈ ಅನುಬಂಧದಲ್ಲಿ ಜಿಲ್ಲೆಯ ರಾಜ್ಯವೆಂದು ಪರಿಗಣಿಸಬೇಕೆಂದು ಯೋಚಿಸಿತ್ತು. ಆದರೆ ದೀರ್ಘಾಲೋಚನೆಯ ನಂತರ ಕೈಬಿಡಲಾಯಿತು. ೧೯೩೫ರ ಕಾಯ್ದೆ ಅಡಿಯಲ್ಲಿ ಒರಿಸ್ಸಾ ಮತ್ತು ಸಿಂಧ್ ಪ್ರಾಂತಗಳ ರಚನೆಗೆ ಕೈಕೊಂಡ ಆರಂಭಿಕ ಕಾರ್ಯಗಳನ್ನು ಈ ನೂತನ ರಾಜ್ಯದ ಬಗೆಗೆ ಕೈಗೆತ್ತಿಕೊಂಡು ನೂತನ ಸಂವಿಧಾನದಲ್ಲಿ ಸೇರ್ಪಡೆಯಾಗುವಂತೆ ನೋಡಬೇಕು. ಆದುದರಿಂದ ಈ ಎಲ್ಲಾ ವಿಷಯಗಳ ಪರಿಶೀಲನೆಗೆಂದೇ ಒಂದು ಆಯೋಗವನ್ನು ನೇಮಿಸುವಂತೆ ಸಮಿತಿ ಸಲಹೆ ಮಾಡಿದೆ. ಈ ವಿಧವಾದ ಆಯೋಗವು ಕೇವಲ ಆಂಧ್ರಕ್ಕೆ ಮಾತ್ರ ಸೀಮಿತವಾಗಿರದೆ, ಇತರ ರಾಜ್ಯಗಳ ರಚನೆಯ ಬಗೆಗೆ (೧೯೩೫ರ ಕಾಯ್ದೆಯ ಕಲಂ ೨೯೦ರಡಿಯಲ್ಲಿ) ನೂತನ ಸಂವಿಧಾನದ ಅನುಬಂಧದಲ್ಲಿ ಸೂಚಿಸಲು ಎಡೆಮಾಡಿಕೊಡಬಹುದು.

## ಭಾಗ III

**ವಿಭಾಗ ಸಿ**

ಕೆಳಗಿನ ಭಾರತೀಯ ಸಂಸ್ಥಾನಗಳು :

೧. ಮೈಸೂರು
೨. ಕಾಶ್ಮೀರ
೩. ಗ್ವಾಲಿಯರ್
೪. ಬರೋಡಾ
೫. ತಿರುವಾಂಕೂರು
೬. ಕೊಚ್ಚಿನ್
೭. ಉದಯಪುರ
೮. ಜಯಪುರ
೯. ಜೋಧಪುರ
೧೦. ಬಿಕನೇರ
೧೧. ಅಲ್ವಾರ
೧೨. ಕೋಟಾ
೧೩. ಇಂದೋರ್
೧೪. ಭೋಪಾಲ
೧೫. ರೇವಾ
೧೬. ಕೊಲ್ಲಾಪುರ
೧೭. ಪಾಟಿಯಾಲ
೧೮. ಮಯೂರಭಂಜ್
೧೯. ಕಾಥಿವಾರದ ಸಂಯುಕ್ತ ರಾಜ್ಯ

### ವಿಭಾಗ ಡಿ*

ಸಂವಿಧಾನ ಜಾರಿಗೆ ಬರುವ ಪೂರ್ವದಲ್ಲಿ, ಡೊಮಿನಿಯನ್ ಭಾರತದ ಪ್ರದೇಶದಲ್ಲಿದ್ದ ಇತರ ಭಾರತೀಯ ಸಂಸ್ಥಾನಗಳು.

---

* ಸಂಸ್ಥಾನಗಳ ವಿಲೀನಿಕರಣವು ವಿವಿಧ ಹಂತಗಳಲ್ಲಿರುವುದರಿಂದ ಹಲವಾರು ಸಂಸ್ಥಾನಗಳು ವಿಲೀನ ಹೊಂದಿ ಒಂದು ಘಟಕವಾಗಿ ಮರೆಯಾಗಿ ಹೋಗಬಹುದು. ಆದುದರಿಂದ ಸಂವಿಧಾನವನ್ನು ಅಂಗೀಕರಿಸುವ ಕೊನೆಯ ಹಂತದಲ್ಲಿ ಮತ್ತೊಮ್ಮೆ ಎಲ್ಲಾ ರಾಜ್ಯಗಳನ್ನು ಸೂಚಿಸಬೇಕಾಗಬಹುದು.

## ಭಾಗ IV
## ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು

## ಎರಡನೆಯ ಅನುಸೂಚಿ

ವಿಧಿಗಳು ೪೮(೩), ೬೨(೬), ೭೯, ೧೦೪(೨), ೧೩೫(೩), ೧೪೫(೫), ೧೬೩ ಮತ್ತು ೧೯೭

### ಭಾಗ I

ಮೊದಲನೆಯ ಅನುಸೂಚಿ ಭಾಗ I ರ ರಾಜ್ಯಗಳ ರಾಜ್ಯಪಾಲರು ಮತ್ತು ರಾಷ್ಟ್ರಪತಿಯವರಿಗೆ ಸಂಬಂಧಿಸಿದ ಪ್ರಸ್ತುತ ಅವಕಾಶಗಳು.

೧. ಪ್ರಸ್ತುತ ಭಾಗ I ಅನುಸೂಚಿ I ರಲ್ಲಿ ಸೂಚಿಸಿದ ರಾಜ್ಯದ ಕೆಳಗೆ ನಮೂದಿಸಿದಂತೆ ವೇತನ ಪಡೆಯುವವರಲ್ಲಿ ರಾಜ್ಯಪಾಲರು ಹಾಗೂ ರಾಷ್ಟ್ರಪತಿಯವರಿರಬೇಕು.

ರಾಷ್ಟ್ರಪತಿ ..................... ೫,೫೦೦ ರೂಪಾಯಿ ಮಾಹೆಯಾನ
ರಾಜ್ಯಪಾಲರು ..................... ೪,೫೦೦ ರೂಪಾಯಿ ಮಾಹೆಯಾನ

೨. ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗೆ ಹಾಗೂ ಅವರ ಅಧಿಕಾರಾವಧಿಯಲ್ಲಿ ಮಾಹೆಯಾನ ಈ ಕೆಳಕಂಡ ಭತ್ತೆ ನೀಡಬೇಕು. ಇದರಿಂದಾಗಿ ಅವರು ಗೌರವಯುತ ಸೇವೆ ಸಲ್ಲಿಸುವಂತಾಗುತ್ತದೆ.

ರಾಷ್ಟ್ರಪತಿ ..................... ......................... ರೂ.ಗಳು
ರಾಜ್ಯಪಾಲರು ..................... ......................... ರೂ.ಗಳು

೩. ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗೆ ಹಾಗೂ ಅವರ ಕುಟುಂಬದ ಸದಸ್ಯರಿಗೆ ಅವರು ಅಧಿಕಾರವಹಿಸಿಕೊಂಡ ದಿನದಿಂದ ಪ್ರಯಾಣ ಭತ್ತೆಯನ್ನು ನೀಡಬೇಕು.

೪. ರಾಷ್ಟ್ರಪತಿ ಮತ್ತು ರಾಜ್ಯಪಾಲರು ಬಾಡಿಗೆರಹಿತ ಅಧಿಕೃತ ನಿವಾಸ ಮತ್ತು ಇತರ ವಾಹನ ಸೌಕರ್ಯಗಳು ಅಂದರೆ ಕಾರು, ವಿಮಾನ, ಹಡಗಿನ ಪ್ರಯಾಣ ಮುಂತಾದವನ್ನು ಅವರ ಅಧಿಕಾರಾವಧಿಯಲ್ಲಿ ಹೊಂದಿರುತ್ತಾರೆ.

೫. ಉಪರಾಷ್ಟ್ರಪತಿ ಅಥವಾ ರಾಜ್ಯಪಾಲರ ಹಾಗೂ ರಾಷ್ಟ್ರಪತಿಯ ಸ್ಥಾನದ ಕಾರ್ಯವನ್ನು ನಿರ್ವಹಿಸುವ ಎಲ್ಲರಿಗೂ ಈ ಅನುಬಂಧದಲ್ಲಿ ಸೂಚಿಸಿದ ವೇತನ, ಭತ್ತೆ ಮುಂತಾದವನ್ನು ನೀಡಬೇಕು. ರಾಷ್ಟ್ರಪತಿಯವರ ಸ್ಥಾನದ ಕರ್ತವ್ಯಗಳನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಆ ಸ್ಥಾನದ ವೇತನ, ಭತ್ತೆಗಳನ್ನೇ ಪಡೆಯಬೇಕು.

## ಭಾಗ II
## ಒಕ್ಕೂಟದ ಹಾಗೂ ಅನುಸೂಚಿ I ಭಾಗ I ರ ರಾಜ್ಯದ ಮಂತ್ರಿವರ್ಯರ ಕುರಿತ ಕಾನೂನು ಅವಕಾಶಗಳು

೬. ಸಂವಿಧಾನ ಜಾರಿಗೆ ಬರುವ ಮುಂಚೆ ಡೊಮಿನಿಯನ್ ಭಾರತದ ಪ್ರಧಾನ ಮಂತ್ರಿ ಹಾಗೂ ಇತರ ಮಂತ್ರಿಗಳು ಪಡೆಯುತ್ತಿದ್ದ ವೇತನವನ್ನೇ ಈ ಪ್ರಧಾನಿ ಹಾಗೂ ಇತರ ಮಂತ್ರಿಗಳಿಗೆ ನೀಡಲಾಗುವುದು.

೭. ಭಾಗ I ಅನುಬಂಧ I ರ ರಾಜ್ಯಗಳ ಮಂತ್ರಿವರ್ಯರಿಗೂ ಸಂವಿಧಾನ ಜಾರಿಗೆ ಬರುವ ಮುಂಚೆ ಇದ್ದಿರಬಹುದಾದ ವೇತನವನ್ನೇ ನೀಡಲಾಗುವುದು.

## ಭಾಗ III
## ಲೋಕಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ರಾಜ್ಯಸಭೆಯ ಅಧ್ಯಕ್ಷ – ಉಪಾಧ್ಯಕ್ಷರು ಮತ್ತು ವಿಧಾನ ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು, ವಿಧಾನ ಪರಿಷತ್ತಿನ ಅಧ್ಯಕ್ಷರು – ಉಪಾಧ್ಯಕ್ಷರಿಗೆ ಸಂಬಂಧಿಸಿದ ಕಾನೂನು ಅವಕಾಶಗಳು

೮. ಲೋಕಸಭೆ ಹಾಗೂ ರಾಜ್ಯಸಭೆಗಳ ಅಧ್ಯಕ್ಷರಿಗೆ ಡೊಮಿನಿಯನ್ ಭಾರತದಲ್ಲಿ ನೀಡಲಾಗುತ್ತಿದ್ದ ವೇತನಗಳನ್ನೇ ನೀಡಬೇಕು. ಅದರಂತೆಯೇ ಲೋಕಸಭೆ ಹಾಗೂ ರಾಜ್ಯಸಭೆಯ ಉಪಾಧ್ಯಕ್ಷರಿಗೆ, ಡೊಮಿನಿಯನ್ ಭಾರತದಲ್ಲಿಯ ವಿಧಾನ ಸಭೆ, ವಿಧಾನ ಪರಿಷತ್ತು ಉಪಾಧ್ಯಕ್ಷರಿಗೆ ನೀಡುತ್ತಿದ್ದ ವೇತನ ನೀಡಬೇಕು.

೯. ಪ್ರಸ್ತುತ ಸಂವಿಧಾನದಲ್ಲಿ ಅನುಬಂಧ I ಭಾಗ I ರ ರಾಜ್ಯಗಳ ವಿಧಾನ ಸಭೆಯ ಅಧ್ಯಕ್ಷರು – ಉಪಾಧ್ಯಕ್ಷರಿಗೆ ಸಂವಿಧಾನ ಜಾರಿ ಪೂರ್ವದಲ್ಲಿಯ ವೇತನಗಳನ್ನೇ ನೀಡಬೇಕು. ವಿಧಾನಪರಿಷತ್ತಿನ ಅಧ್ಯಕ್ಷರು – ಉಪಾಧ್ಯಕ್ಷರಿಗೂ ಮೇಲಿನ ವಿಧಾನದಂತೆ ವೇತನ ನೀಡಬೇಕು.

## ಭಾಗ IV
## ಸರ್ವೋಚ್ಚ ನ್ಯಾಯಾಲಯ ಮತ್ತು ಶ್ರೇಷ್ಠ ನ್ಯಾಯಾಲಯಗಳ ನ್ಯಾಯಾಧೀಶರ ಕುರಿತಿರುವ ಅಂಶಗಳು

೧೦. ವೇತನ ಪಡೆಯುತ್ತಿರುವ ನ್ಯಾಯಾಧೀಶರನ್ನು ಸರ್ವೋಚ್ಚ ಹಾಗೂ ಶ್ರೇಷ್ಠ ನ್ಯಾಯಾಲಯಗಳಲ್ಲಿ ನೇಮಕ ಮಾಡಬೇಕು; ಮೊದಲನೆಯ ಅನುಬಂಧ ಭಾಗ III ರ ರಾಜ್ಯ ಹೊರತುಪಡಿಸಿ ಹಾಗೂ ಅವರಿಗೆ ಮಾಹೆಯಾನಾ ಈ ಕೆಳಕಂಡ ವೇತನ ನೀಡಬೇಕು :–

| | |
|---|---|
| ಸರ್ವೋಚ್ಚ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶ | ೫೦೦೦ ರೂ. |
| ಸರ್ವೋಚ್ಚ ನ್ಯಾಯಾಲಯದ ಇತರ ನ್ಯಾಯಾಧೀಶರು | ೪೫೦೦ ರೂ. |
| ಶ್ರೇಷ್ಠ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶ | ೪೦೦೦ ರೂ. |
| ಶ್ರೇಷ್ಠ ನ್ಯಾಯಾಲಯದ ಇತರ ನ್ಯಾಯಾಧೀಶರು | ೩೫೦೦ ರೂ. |

ಆದರೆ ಯಾವ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಯೇ, ನೇಮಕಗೊಂಡಾಗ ಅವರು ಹಿಂದೆ ಸಲ್ಲಿಸಿದ ಸೇವೆಗಾಗಿ ಭಾರತ ಸರಕಾರ ಅಥವಾ ಅದರ ಹಿಂದಿನ ಸರಕಾರದಿಂದ ಪಿಂಚಣಿ ಪಡೆಯುತ್ತಿದ್ದರೆ (ಗಾಯ, ಅಸಾಮರ್ಥ್ಯ ಪಿಂಚಣಿ ಹೊರತು ಪಡಿಸಿ) ಅವನ್ನು ಕೂಡಿ ಹಾಕಿ ಅವರಿಗೆ ವೇತನ ನಿಗದಿ ಪಡಿಸಬೇಕು.

೧೧. ಕಾಲಕಾಲಕ್ಕೆ ಸರ್ವೋಚ್ಚ ನ್ಯಾಯಾಲಯದ ಹಾಗೂ ಶ್ರೇಷ್ಠ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶರು ಭಾಗ III ಮೊದಲನೆಯ ಅನುಬಂಧ ಹೊರತುಪಡಿಸಿ ಭಾರತದ ಯಾವ ಪ್ರದೇಶದಲ್ಲಿದ್ದರೂ ಅವರಿಗೆ ರಾಷ್ಟ್ರಪತಿಯವರಿಗೆ ನೀಡುವ ಪ್ರಯಾಣ ಭತ್ತೆ ಹಾಗೂ ಇತರ ಭತ್ತೆಗಳನ್ನು ಸರ್ವೋಚ್ಚ ನ್ಯಾಯಾಲಯದ ಎಲ್ಲಾ ನ್ಯಾಯಾಧೀಶರಿಗೂ ನೀಡತಕ್ಕದ್ದು. ಅದರಂತೆಯೇ ರಾಜ್ಯಪಾಲರಿಗೆ ನೀಡುತ್ತಿರುವ ಪ್ರಯಾಣ ಭತ್ತೆ ಮತ್ತು ಇತರ ಭತ್ತೆಗಳನ್ನು ಶ್ರೇಷ್ಠ ನ್ಯಾಯಾಲಯದ ಎಲ್ಲಾ ನ್ಯಾಯಾಧೀಶರಿಗೂ ನೀಡತಕ್ಕದ್ದು.

೧೨. (೧) ಹಕ್ಕುಗಳು, ಗೈರು ಹಾಜರಿಯ ರಜೆ ಸೌಲಭ್ಯ ಮತ್ತು ಪಿಂಚಣಿ, ಸರ್ವೋಚ್ಚ ನ್ಯಾಯಾಲಯದ ಪ್ರಮುಖ ಹಾಗೂ ಇತರ ನ್ಯಾಯಾಧೀಶರಿಗೆ ಸಂಬಂಧಿಸಿದಂತೆ; ಫೆಡರಲ್ ಕೋರ್ಟಿನ ನ್ಯಾಯಾಧೀಶರಿಗೆ ನೀಡುತ್ತಿದ್ದಂತೆಯೇ ನೀಡಬೇಕು.

(೨) ಹಕ್ಕುಗಳು, ಗೈರು ಹಾಜರಿ ರಜೆಯ ಸೌಲಭ್ಯ, ಪಿಂಚಣಿಯನ್ನು ಶ್ರೇಷ್ಠ ನ್ಯಾಯಾಲಯದ ಪ್ರಮುಖ ಹಾಗೂ ಇತರ ನ್ಯಾಯಾಧೀಶರಿಗೆ ಸಂವಿಧಾನ ಪೂರ್ವದಲ್ಲಿದ್ದಂತೆಯೇ ನೀಡಬೇಕು. ಆದರೆ ಭಾಗ III ಅನುಬಂಧ I ರ ರಾಜ್ಯಗಳಿಗೆ ಇದು ಅನ್ವಯಿಸುವುದಿಲ್ಲ.

(೩) ಈ ಪ್ಯಾರಾಗ್ರಾಫ್‌ಗೆಂದೇ, ಓರ್ವ ವ್ಯಕ್ತಿ ತಾತ್ಕಾಲಿಕವಾಗಿ ಹಂಗಾಮಿ, ಹೆಚ್ಚುವರಿ, ಅಡಹ್ಯಾಕ್ ನ್ಯಾಯಾಧೀಶನಾಗಿ, ಸಂವಿಧಾನ ಆರಂಭಗೊಂಡಾಗ ಸೇವೆ ಸಲ್ಲಿಸುತ್ತಿದ್ದರೆ, ಅವನನ್ನು ಸಂಪೂರ್ಣ ಸಮಯದ ನ್ಯಾಯಾಧೀಶನೆಂದೇ ಪರಿಗಣಿಸಿ ಅವರಿಗೆ ಸಲ್ಲುವ ವೇತನವನ್ನೇ ನೀಡಿ ಸೇವೆಯಲ್ಲಿ ಮುಂದುವರಿಸಬೇಕು.

೧೩. ಈ ಭಾಗದಲ್ಲಿ ಬೇರೆ ಸಂದರ್ಭ ಹೊರತುಪಡಿಸಿ

(ಅ) 'ಪ್ರಮುಖ ನ್ಯಾಯಾಧೀಶ' ಎಂದರೆ ಪ್ರಮುಖ ಅಡ್‌ಹ್ಯಾಕ್ ಹಾಗೂ ಹೆಚ್ಚುವರಿ ನ್ಯಾಯಾಧೀಶರೆಲ್ಲರೂ

(ಆ) 'ನೈಜ ಸೇವೆ' (actual service)ಎಂದರೆ ಅದು –

i. ರಾಷ್ಟ್ರಪತಿ, ರಾಜ್ಯಪಾಲರು ನಿರ್ದೇಶಿಸಿದ, ಆಯೋಗದ, ನ್ಯಾಯಾಧೀಶರು ಖಚಿತ ಸೇವೆಯ ಸಮಯ ಹಾಗೂ ವಿವಿಧ ಸೇವೆಗಳನ್ನು ಒಳಗೊಂಡಿದೆ.

ii. ರಜೆಗಳು, ಗೈರುಹಾಜರಿ ರಜೆ ಮುಂತಾದವು.

iii. ವರ್ಗಾವಣೆ ಸಮಯದಲ್ಲಿ ಸೇವೆಗೆ ಸೇರಲು ಒಂದು ನ್ಯಾಯಾಲಯದಿಂದ ಮತ್ತೊಂದು ನ್ಯಾಯಾಲಯಕ್ಕೆ ಹಿಡಿಯಬಹುದಾದ ಸಮಯ ಎಲ್ಲವೂ ಅಡಕವಾಗಿವೆ.

## ಭಾಗ V

## ಭಾರತದ ಆಡಿಟರ್ ಜನರಲ್‌ರಿಗೆ ಸಂಬಂಧಿಸಿದ ಅಂಶಗಳು

೧೪. ಮಾಹೆಯಾನ ರೂ. ೪೦೦೦ ವೇತನದಂತೆ, ಭಾರತದ ಆಡಿಟರ್ ಜನರಲ್ಲರನ್ನು ನೇಮಿಸಬೇಕು.

೧೫. ಆಡಿಟರ್ ಜನರಲ್ಲರ, ರಜೆಯ ಹಕ್ಕು, ಪಿಂಚಣಿ ಮುಂತಾದವನ್ನು ಈ ಹಿಂದೆ ಜಾರಿಯಲ್ಲಿದ್ದಂತೆಯೇ ಮುಂದುವರಿಸಿಕೊಂಡು ಹೋಗಬೇಕು. ಹಿಂದೆ ಭಾರತದ ಗವರ್ನರ್ ಜನರಲ್ಲರು ಇವರ ಬಗೆಗೆ ಅನುಸರಿಸಿದ ವಿಧಾನವನ್ನೇ ರಾಷ್ಟ್ರಪತಿಯವರೂ ಅನುಸರಿಸಬೇಕು.

## ಅನುಸೂಚಿ III

(ವಿಧಿಗಳು ೬೨(೪),೮೧,೧೦೩(೬), ೧೪೪(೨), ೧೬೫ ಮತ್ತು ೧೯೫)

## ಘೋಷಣೆಯ ನಮೂನೆಗಳು (Forms of Declaration)

### I

ಒಕ್ಕೂಟದ ಮಂತ್ರಿವರ್ಯರು, ಅಧಿಕಾರ ಪ್ರಮಾಣ ವಚನ ಸ್ವೀಕರಿಸುವ – ನಮೂನೆ :–

ನಾನು ................................ ವಿಧಿವತ್ತಾಗಿ ಪ್ರಮಾಣ ಮಾಡುವುದೇನೆಂದರೆ, ನಾನು ಸತ್ಯ ಮತ್ತು ವಿಧೇಯ ಪೂರ್ವಕವಾಗಿ, ಕಾನೂನಿನಿಂದ ಸ್ಥಾಪಿಸಿದ ಸಂವಿಧಾನವನ್ನು ಗೌರವಿಸುವೆ. ನಾನು ಮಂತ್ರಿಯಾಗಿ ಸಂವಿಧಾನ ಬದ್ಧನಾಗಿ ಕಾನೂನಿನಂತೆ ಯಾರಿಗೂ ಬೆದರದೆ ಅನುಗ್ರಹ ತೋರದೆ, ವೈರತ್ವ ಅಥವಾ ಮೋಹಕ್ಕೆ ಒಳಗಾಗದೆ, ಎಲ್ಲ ಪ್ರಜೆಗಳಿಗೂ ಹಿತಕರವಾಗುವಂತೆ ನನ್ನ ಕರ್ತವ್ಯಗಳನ್ನು ಶ್ರದ್ಧೆಯಿಂದ ಮಾಡುವೆ.

### II

ಒಕ್ಕೂಟದ ಮಂತ್ರಿವರ್ಯರು ರಹಸ್ಯ ರಕ್ಷಿಸುವ ಕುರಿತು ಸ್ವೀಕರಿಸುವ – ನಮೂನೆ :–

ನಾನು ................................ ವಿಧಿವತ್ತಾಗಿ ಪ್ರಮಾಣ ಮಾಡುವುದೇನೆಂದರೆ, ಮಂತ್ರಿಯಾಗಿರುವ ನನ್ನ ಗಮನಕ್ಕೆ ಬಂದಿರಬಹುದಾದ ಒಕ್ಕೂಟದ ರಹಸ್ಯಗಳನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಯಾವ ವ್ಯಕ್ತಿಗೂ ಬಹಿರಂಗ ಪಡಿಸುವುದಿಲ್ಲ, ಆದರೆ ಮಂತ್ರಿಯಾಗಿ ಕರ್ತವ್ಯ ದೃಷ್ಟಿಯಿಂದ ಮಾತ್ರ ತಿಳಿಸುವೆ.

### III

ಸಂಸತ್ತಿನ ಸದಸ್ಯರು ತೆಗೆದುಕೊಳ್ಳಬೇಕಾದ ಪ್ರಮಾಣ ವಚನದ – ನಮೂನೆ :–

ನಾನು ................................ ಲೋಕಸಭೆ ಅಥವಾ ರಾಜ್ಯಸಭೆಗೆ ಆಯ್ಕೆ ಹೊಂದಿ ಅಥವಾ ನಾಮಕರಣಗೊಂಡು ; ವಿಧಿವತ್ತಾಗಿ ಮತ್ತು ವಿನಯಪೂರ್ವಕವಾಗಿ ಸ್ವೀಕರಿಸುವ ಪ್ರಮಾಣ ವಚನವೆಂದರೆ, ನಾನು ಸತ್ಯವಾಗಿ ಮತ್ತು ವಿಧೇಯನಾಗಿ, ಕಾನೂನು ಬದ್ಧ ಸಂವಿಧಾನಕ್ಕೆ ಗೌರವ ಸೂಚಿಸುವೆ ಮತ್ತು ನಾನು ನನ್ನ ಕರ್ತವ್ಯಗಳನ್ನು ವಿಧೇಯ ಪೂರ್ವಕ ಮಾಡುವೆ.

## IV

ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ತೆಗೆದುಕೊಳ್ಳಬೇಕಾದ ಪ್ರಮಾಣ ವಚನದ ನಮೂನೆ :–

ನಾನು ................................ ಸರ್ವೋಚ್ಚ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶ ಅಥವಾ ನ್ಯಾಯಾಧೀಶನಾಗಿ ನೇಮಕ ಹೊಂದಿರುವೆನು. ವಿಧಿವತ್ತಾಗಿ ಮತ್ತು ವಿನಯಪೂರ್ವಕವಾಗಿ ಸ್ವೀಕರಿಸುವ ಪ್ರಮಾಣ ವಚನವೆಂದರೆ, ನಾನು ಕಾನೂನುಬದ್ಧವಾಗಿರುವ ಭಾರತೀಯ ಸಂವಿಧಾನಕ್ಕೆ ವಿಧೇಯನಾಗಿ, ನನ್ನ ಕರ್ತವ್ಯವನ್ನು ನನ್ನ ಸಾಮರ್ಥ್ಯದಂತೆ ವಿವೇಚನೆಯಂತೆ, ತೀರ್ಪಿನಂತೆ, ಯಾರಿಗೂ ಬೆದರದೆ, ಮೋಹ ಮತ್ಸರಕ್ಕೆ ಈಡಾಗದೆ ಯಾವ ಅನುಗ್ರಹಕ್ಕೂ ಒಳಗಾಗದೆ, ಸಂವಿಧಾನ ಮತ್ತು ಶಾಸನಗಳನ್ನು ಎತ್ತಿ ಹಿಡಿಯುವೆ.

## V

ಮೊದಲನೆಯ ಅನುಬಂಧ ಭಾಗ Iರ ರಾಜ್ಯಗಳ ಮಂತ್ರಿವರ್ಯರು ಸ್ವೀಕರಿಸಬೇಕಾದ ಪ್ರಮಾಣ ವಚನದ – ನಮೂನೆ:

ನಾನು ................................ ವಿಧಿವತ್ತಾಗಿ ಸ್ವೀಕರಿಸುವ ಪ್ರಮಾಣ ವಚನದಂತೆ, ನಾನು ಸತ್ಯವಾಗಿ ಹಾಗೂ ವಿಧೇಯನಾಗಿ, ಕಾನೂನು ಬದ್ಧವಾಗಿರುವ ಸಂವಿಧಾನವನ್ನು ಗೌರವಿಸುವೆ. ನಾನು ನನ್ನ ಕರ್ತವ್ಯಗಳನ್ನು ರಾಜ್ಯದ ಮಂತ್ರಿಯಾಗಿ, ವಿಧೇಯ ಹಾಗೂ ಮನಃಪೂರ್ವಕವಾಗಿ ನೆರವೇರಿಸುವೆ. ಈ ದಿಶೆಯಲ್ಲಿ ಕಾನೂನು ಹಾಗೂ ಸಂವಿಧಾನಬದ್ಧನಾಗಿ ಯಾರ ಬೆದರಿಕೆಗೆ ಈಡಾಗದೇ ಅನುಗ್ರಹಕ್ಕೆ ಒಳಗಾಗದೆ, ಮೋಹ – ಮತ್ಸರವಿಲ್ಲದೇ ಎಲ್ಲಾ ಜನರ ಹಿತಕ್ಕೆಂದೇ ಕಾರ್ಯ ಮಾಡುವೆ.

## VI

ಅನುಬಂಧ I ಭಾಗ Iರ ರಾಜ್ಯದ ಮಂತ್ರಿವರ್ಯರು ಕೈಕೊಳ್ಳಬೇಕಾದ ರಹಸ್ಯ ರಕ್ಷಣೆ ಪ್ರಮಾಣ ವಚನ – ನಮೂನೆ:

ನಾನು ................................ ವಿಧಿವತ್ತಾಗಿ ಸ್ವೀಕರಿಸುವ ಪ್ರಮಾಣ ವಚನದಂತೆ, ನಾನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ, ಮಂತ್ರಿಯಾಗಿ ನನ್ನ ಗಮನಕ್ಕೆ ಬಂದಿರುವ ರಹಸ್ಯ ವಿಷಯಗಳನ್ನು ಯಾವ ವ್ಯಕ್ತಿಗೂ ತಿಳಿಸುವುದಿಲ್ಲ. ಆದರೆ ಕರ್ತವ್ಯ ದೃಷ್ಟಿಯಿಂದ ಅನಿವಾರ್ಯವಾದಲ್ಲಿ ಮಾತ್ರ ಬಹಿರಂಗ ಪಡಿಸುವೆ.

## VII

ಮೊದಲನೆಯ ಅನುಬಂಧ ಭಾಗ Iರಾಜ್ಯದ ಶಾಸಕಾಂಗ ಸದಸ್ಯರ ಪ್ರಮಾಣ ವಚನ – ನಮೂನೆ:

ನಾನು ................................ ಶ್ರೇಷ್ಠ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶ ಅಥವಾ ನ್ಯಾಯಾಧೀಶನಾಗಿ ನೇಮಕ ಹೊಂದಿ ವಿಧಿವತ್ತಾಗಿ ಹಾಗೂ ವಿನಯದಿಂದ ಸ್ವೀಕರಿಸುವ ಪ್ರಮಾಣ ವಚನದಂತೆ ನಾನು ಸಂವಿಧಾನಕ್ಕೆ ಬದ್ಧನಾಗಿ, ನನ್ನ ಸಾಮರ್ಥ್ಯ, ವಿವೇಚನೆ, ತೀರ್ಮಾನದಂತೆ, ಅಧಿಕಾರ ಕರ್ತವ್ಯವನ್ನು ಯಾರ ಬೆದರಿಕೆಗೆ ಮಣಿಯದೆ, ಅನುಗ್ರಹಕ್ಕಾಗಲೀ ಮೋಹ ಮತ್ಸರಕ್ಕಾಗಲೀ ಈಡಾಗದೆ ಸಂವಿಧಾನ ಮತ್ತು ಶಾಸನವನ್ನು ಎತ್ತಿ ಹಿಡಿಯುವೆ.

## ನಾಲ್ಕನೆಯ ಅನುಸೂಚಿ

**ವಿಧಿ ೧೪೪(೪)**

**ಅನುಬಂಧ I ಭಾಗ I ರ ರಾಜ್ಯದ ರಾಜ್ಯಪಾಲರಿಗೆ ಸೂಚನೆಗಳು**

೧. ಈ ಸೂಚನೆಯಲ್ಲಿ ನೀಡಿದ ಸಂದರ್ಭಕ್ಕನುಗುಣವಾಗಿ "ರಾಜ್ಯಪಾಲ" ಎಂದರೆ ಯಾವುದೇ ವ್ಯಕ್ತಿ ಸದ್ಯದಲ್ಲಿ, ಸಂವಿಧಾನಕ್ಕೆ ಅನುಗುಣವಾಗಿ ರಾಜ್ಯಪಾಲರೆಂದು ಭಾವಿಸಬೇಕು.

೨. ರಾಜ್ಯಪಾಲರಾದವರು ಉತ್ತಮ ಪ್ರಯತ್ನಗಳಿಂದ ತಮ್ಮ ಮಂತ್ರಿಮಂಡಲವನ್ನು ಆಯ್ಕೆ ಮಾಡುವಾಗ ಕೆಳಕಂಡ ವಿಧಾನವನ್ನು ಅನುಸರಿಸಬೇಕು. ತನ್ನ ಅಭಿಪ್ರಾಯದಲ್ಲಿ ಸ್ಥಿರ ಬಹುಮತ ಪಡೆದಿರಬಹುದಾದ ವ್ಯಕ್ತಿಯೊಂದಿಗೆ ಸಮಾಲೋಚಿಸಿ (ಅಲ್ಪಸಂಖ್ಯಾತರ ಸಮೂಹಗಳು ಒಳಗೊಂಡಂತೆ) ಯಾರು ಶಾಸನ ಸದನದ ನಂಬಿಕೆಯನ್ನು ಹೊಂದಿರಬಹುದೋ ಹಾಗೂ ಸಾಮೂಹಿಕ ಜವಾಬ್ದಾರಿಯ ಹೊಣೆಗಾರಿಕೆ ಹೊಂದಿರುವವರೋ ಅವರೊಡನೆ ಸಮಾಲೋಚಿಸಬೇಕು.

೩. ರಾಜ್ಯದ ಆಡಳಿತ ಅಧಿಕಾರದ ಪರಿಮಿತಿಯಲ್ಲಿರುವ ಎಲ್ಲಾ ವಿಷಯಗಳಲ್ಲಿ ಹಾಗೂ ಸಂವಿಧಾನಬದ್ಧವಾಗಿ ತಮ್ಮ ವಿವೇಚನೆಯಂತೆ, ರಾಜ್ಯಪಾಲರು ತಮ್ಮ ಕರ್ತವ್ಯ ಪಾಲನೆಯಲ್ಲಿ ಮಂತ್ರಿಗಳ ಸಲಹೆಯಂತೆ ನಡೆದುಕೊಳ್ಳಬೇಕು.

೪. ಉತ್ತಮ ಆಡಳಿತ ನಡೆಸುವಲ್ಲಿ ಅಥವಾ ನೀಡುವಲ್ಲಿ ರಾಜ್ಯಪಾಲರು ಸಾಮಾಜಿಕ, ಆರ್ಥಿಕ, ನೈತಿಕ ಕಲ್ಯಾಣ ಹಾಗೂ ಎಲ್ಲಾ ವರ್ಗಗಳ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಮತ್ತು ಎಲ್ಲಾ ವರ್ಗಗಳಲ್ಲಿ ಸದ್ಭಾವನೆ ಮತ್ತು ಪರಸ್ಪರ ಧರ್ಮಗಳಲ್ಲಿ ನಂಬಿಕೆ ಮೂಡಿಸುವಲ್ಲಿ ತಮ್ಮ ಸಾಮರ್ಥ್ಯವನ್ನು ತೊಡಗಿಸಬೇಕು.

## ಐದನೆಯ ಅನುಸೂಚಿ

**ವಿಧಿಗಳು ೧೮೯ ಬಿ ಮತ್ತು ೧೯೦(೧)**

**ಪರಿಶಿಷ್ಟ ಪ್ರದೇಶಗಳ ಮತ್ತು ಪರಿಶಿಷ್ಟ ಪಂಗಡಗಳ ಆಡಳಿತ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದ ಕಾನೂನು ಅವಕಾಶಗಳು**

**ಭಾಗ I**

**ಸಾಮಾನ್ಯ**

(೧) **ಪರಿಶಿಷ್ಟ ಪ್ರದೇಶಗಳಲ್ಲಿ ರಾಜ್ಯದ ಕಾರ್ಯಾಂಗಾಧಿಕಾರ :–** ಅನುಬಂಧ I ಭಾಗ I ರ ರಾಜ್ಯಗಳಿಗೆ ಈ ಅನುಬಂಧದಲ್ಲಿ ಸೂಚಿಸಿದಂತೆ, ಪರಿಶಿಷ್ಟ ಪ್ರದೇಶಗಳಲ್ಲಿ ರಾಜ್ಯ ಆಡಳಿತಾಧಿಕಾರ ಹೊಂದಿದೆ.

(೨) **ಪರಿಶಿಷ್ಟ ಪ್ರದೇಶಗಳ ಆಡಳಿತದ ಬಗೆಗೆ ಭಾರತ ಸರಕಾರಕ್ಕೆ ರಾಜ್ಯಪಾಲರ ವರದಿ:** ಪರಿಶಿಷ್ಟ ಪ್ರದೇಶಗಳನ್ನೊಳಗೊಂಡಿರುವ, ಪ್ರತಿಯೊಂದು ರಾಜ್ಯದ ರಾಜ್ಯಪಾಲನು ವಾರ್ಷಿಕವಾಗಿ ಅಥವಾ ಭಾರತ ಸರಕಾರ ಅಪೇಕ್ಷಿಸಿದಾಗ, ಪರಿಶಿಷ್ಟ ಪ್ರದೇಶಗಳ ಆಡಳಿತದ ಬಗೆಗೆ ವರದಿ ಸಲ್ಲಿಸಿ, ಒಕ್ಕೂಟ ನೀಡಿದ ಆದೇಶಗಳನ್ನು ಪಾಲಿಸಬೇಕು.

## ಭಾಗ II

## ಮದ್ರಾಸ್, ಬೊಂಬಾಯಿ, ಪಶ್ಚಿಮ ಬಂಗಾಳ, ಬಿಹಾರ, ಮಧ್ಯಪ್ರಾಂತಗಳು ಮತ್ತು ಬಿರಾರ್ ಮತ್ತು ಒರಿಸ್ಸಾಗಳಿಗೆ ಸಂಬಂಧಿಸಿದ ಅವಕಾಶಗಳು

(೩) ಭಾಗ II ಅನ್ವಯಿಸುವಂತೆ ಈ ಭಾಗದ ಕಾನೂನು ಅವಕಾಶಗಳು ಕೇವಲ ಮದ್ರಾಸ್, ಬೊಂಬಾಯಿ, ಪಶ್ಚಿಮ ಬಂಗಾಳ, ಬಿಹಾರ, ಮಧ್ಯಪ್ರಾಂತಗಳು, ಬಿರಾರ್, ಒರಿಸ್ಸಾಗಳಿಗೆ ಮಾತ್ರ ಅನ್ವಯಿಸುತ್ತವೆ.

**(೪) ಪಂಗಡಗಳ ಸಲಹಾ ಸಮಿತಿ :**

(೧) ಸಂವಿಧಾನ ಜಾರಿಗೆ ಬಂದ ನಂತರ ಅತಿ ಶೀಘ್ರದಲ್ಲಿಯೇ ಮದ್ರಾಸ್, ಬೊಂಬಾಯಿ, ಪಶ್ಚಿಮ ಬಂಗಾಳ, ಬಿಹಾರ, ಮಧ್ಯಪ್ರಾಂತಗಳು, ಬಿರಾರ್, ಒರಿಸ್ಸಾ ಪ್ರಾಂತಗಳಲ್ಲಿ ಪಂಗಡಗಳ ಸಲಹಾ ಸಮಿತಿಗಳನ್ನು ಹತ್ತು ಸದಸ್ಯರಿಗಿಂತ ಕಡಿಮೆಯಿರದೆ ಹಾಗೂ ಇಪ್ಪತ್ತೈದು ಜನರಿಗಿಂತ ಅಧಿಕವಾಗಿರದಂತೆ ಅದರಲ್ಲಿ ೩/೪ ಸದಸ್ಯರು ಚುನಾವಣೆ ಮುಖಾಂತರವಾಗಿಯೂ ಶಾಸಕಾಂಗದ ಪರಿಶಿಷ್ಟ ವರ್ಗಕ್ಕೆ ಸೇರಿದಂತೆ, ನೇಮಿಸಲಾಗುವುದು.

(೨) ಈ ವಿಧವಾಗಿ ರಚನೆಗೊಂಡ ಪಂಗಡ ಸಲಹಾ ಸಮಿತಿಯು ರಾಜ್ಯ ಸರಕಾರಕ್ಕೆ ಪರಿಶಿಷ್ಟ ಪ್ರದೇಶಗಳ ಹಾಗೂ ಪರಿಶಿಷ್ಟ ಪಂಗಡದವರ ಕಲ್ಯಾಣದ ವಿಷಯಗಳಲ್ಲಿ ಸಲಹೆ ಸೂಚನೆಗಳನ್ನು ನೀಡಬೇಕು.

(೩) ವಿಷಯುಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ನಿಯುಮಗಳನ್ನು ರಚಿಸಿ ಕ್ರಮಬದ್ಧಗೊಳಿಸಬಹುದು.

(ಅ) ಸಮಿತಿಯ ಸದಸ್ಯರ ಸಂಖ್ಯೆ

(ಆ) ಸಭೆಗಳನ್ನು ಕರೆಯುವ ಸಾಮಾನ್ಯ ವಿಧಾನಗಳನ್ನು ಅನುಸರಿಸುವ

(ಇ) ರಾಜ್ಯ, ಸ್ಥಳೀಯ ಸಂಸ್ಥೆಗಳು, ಅಧಿಕಾರಿಗಳೊಂದಿಗೆ ಇರುವ ಬಾಂಧವ್ಯ

(ಈ) ಸಾಂದರ್ಭಿಕ ಇತರ ವಿಷಯಗಳು

**(೫) ಪರಿಶಿಷ್ಟ ಪ್ರದೇಶಗಳಿಗೆ ಅನ್ವಯಿಸಬಹುದಾದ ಕಾನೂನುಗಳು :**

(೧) ರಾಜ್ಯಪಾಲರು ಪಂಗಡಗಳ ಸಮಿತಿಯ ಸಲಹೆಯಂತೆ, ಯಾವುದೇ ನಿರ್ದಿಷ್ಟ ಮಸೂದೆ ಸಂಸತ್ತಿನ ಅಥವಾ ರಾಜ್ಯದಿಂದ ಅನುಮೋದಿಸಿರುವ, ಭಾಗ ಅಥವಾ ಸಂಪೂರ್ಣವಾಗಿ ಪರಿಶಿಷ್ಟ ಪ್ರದೇಶಕ್ಕೆ ಅನ್ವಯಿಸಲಾಗದೆಂದು ಮಾರ್ಪಾಡು ವಿನಾಯಿತಿಗಳಿಗೆ ಸೇರಿದಂತೆ ಕೆಳಕಂಡ ವಿಷಯಗಳಿಗೆ ಮಾತ್ರ ಪ್ರಕಟಿಸಬಹುದು.

(ಅ) ಮದುವೆಗಳಿಗೆ

(ಆ) ಆಸ್ತಿಯ ವಾರಸುದಾರಿಕೆಗೆ

(ಇ) ಪಂಗಡಗಳ ಸಾಮಾಜಿಕ ಸಂಪ್ರದಾಯಗಳು.

(ಈ) ಭಾರತೀಯ ಅರಣ್ಯ ಭೂಮಿಯ ೧೯೨೭ರ ಅಧಿನಿಯಮದಿಂದ ಮಸೂದೆಗೆ ಹೊರತು ಪಡಿಸಿದ ಭೂಮಿ, ಅಥವಾ ಗೇಣಿದಾರರ ಹಕ್ಕಿಗೆ ಸಂಬಂಧಿಸಿದ ಕಾನೂನಿನನ್ವಯ, ಯಾವುದೇ ಉದ್ದೇಶಕ್ಕೆಂದು ಕಾದಿರಿಸಿದ ಭೂಮಿ ಬಿಟ್ಟು

(ಉ) ಹಳ್ಳಿಗಳ ಪಂಚಾಯಿತಿಯ ಆಡಳಿತ ಹಾಗೂ ಅವುಗಳ ರಚನೆಗೆ ಸಂಬಂಧಿಸಿದ

ವಿಷಯದ ಬಗೆಗೆ ರಾಜ್ಯಪಾಲರು, ಸಮಿತಿಯ ಸಲಹೆಯಂತೆ ಆದೇಶ ನೀಡಬಹುದು.

(೨) ರಾಜ್ಯಪಾಲರು, ಸಮಾಲೋಚನೆಯ ನಂತರ, ಪಂಗಡಗಳ ಸಲಹಾ ಸಮಿತಿಯ ಸಲಹೆಯಂತೆ ಪ್ರಸ್ತುತ ಶಾಸನದಲ್ಲಿ ಪರಿಶಿಷ್ಟ ಪ್ರದೇಶದ ಬಗೆಗೆ ಇರದೇ ಹೋದ ವಿಷಯಕ್ಕೆ ಕ್ರಮಬದ್ಧ ನಿಯಂತ್ರಕಗಳನ್ನು ರಚಿಸಬಹುದು.

(೩) ರಾಜ್ಯಪಾಲರು, ಪರಿಶಿಷ್ಟ ಪ್ರದೇಶಗಳಲ್ಲಿಯ ಪ್ರಕರಣಗಳನ್ನು ವಿಚಾರಿಸಲು ನಿಯಂತ್ರಕಗಳನ್ನು ರಚಿಸಬಹುದು ಹಾಗೂ ಶಿಕ್ಷಿಸಬಹುದು. ಆದರೆ ಮರಣದಂಡನೆ, ಜೀವಾವಧಿ ಶಿಕ್ಷೆ, ಗಡಿಪಾರು ಮಾಡುವ ಐದು ವರ್ಷಕ್ಕೂ ಅಧಿಕ ಶಿಕ್ಷೆ ನೀಡಬಹುದಾದ ವ್ಯಾಜ್ಯಗಳು ಈ ನಿಯಂತ್ರಕಗಳ ಅಡಿಯಲ್ಲಿ ಬರುವುದಿಲ್ಲ. ಈ ವಿಧವಾದ ಅಧಿಕಾರವನ್ನು ರಾಜ್ಯಪಾಲರು ಹಳ್ಳಿಯ ಮುಖಿಯಾ ಅಥವಾ ಪಂಚಾಯತ್ ಪ್ರಮುಖನಿಗೆ ವಹಿಸಬಹುದು.

(೪) ಈ ಪ್ಯಾರಾದಡಿಯಲ್ಲಿ ಮಾಡಿರಬಹುದಾದ ಕಟ್ಟಳೆಗಳು, ರಾಜ್ಯಪಾಲರಿಂದ ಜಾರಿಗೊಂಡಲ್ಲಿ ಅದಕ್ಕೆ ಶಾಸನಬದ್ಧ ಜಾರಿಯಲ್ಲಿರುವ ಕಾನೂನಿನಷ್ಟೇ ಮಹತ್ವವಿರುತ್ತದೆ.

೬. ಪರಿಶಿಷ್ಟ ಪ್ರದೇಶಗಳಲ್ಲಿ ಪಂಗಡೇತರರಿಗೆ ಜಮೀನು ನೀಡುವ ಹಾಗೂ ಪರಭಾರೆ ಮಾಡುವ

(೧) ಪರಿಶಿಷ್ಟ ಜನಾಂಗದ ಸದಸ್ಯನು, ಪರಿಶಿಷ್ಟ ಪ್ರದೇಶದಲ್ಲಿಯ ಭೂಮಿಯನ್ನು ಪಂಗಡೇತರರಿಗೆ ವರ್ಗಾಯಿಸುವುದು ಕಾನೂನುಬದ್ಧ ಕ್ರಮವೆನಿಸದು.

(೨) ಪರಿಶಿಷ್ಟ ಪ್ರದೇಶದಲ್ಲಿಯ ಭೂಮಿಯನ್ನು ಯಾರಿಗೂ ನೀಡಲಾಗದು, ಅಥವಾ ಪಂಗಡೇತರ ವ್ಯಕ್ತಿಗೆ ನೀಡಲೂಬಾರದು. ಈ ಬಗೆಗೆ ರಾಜ್ಯಪಾಲರು ಪಂಗಡ ಸಲಹಾ ಸಮಿತಿಯ ಸಲಹೆಯೊಂದಿಗೆ ರಚಿಸಿರಬಹುದಾದ ಕಟ್ಟಳೆಗಳಂತೆ ವರ್ತಿಸಬಹುದು.

೭. ಪರಿಶಿಷ್ಟ ಪ್ರದೇಶಗಳಲ್ಲಿ ಸಾಲ ನೀಡುವ ಬಗ್ಗೆ ಕಟ್ಟಳೆಗಳು :

ರಾಜ್ಯಪಾಲರು, ಪಂಗಡಗಳ ಸಲಹಾ ಸಮಿತಿಯ ಸಲಹೆಯಂತೆ, ಸಾರ್ವಜನಿಕ ಪ್ರಕಟಣೆಯ ಮೂಲಕ, ಸಂಬಂಧಪಟ್ಟ ಅಧಿಕಾರಿಯಿಂದ ಲೈಸೆನ್ಸ್ ಪಡೆಯದೇ ಸಾಲ ನೀಡುವ ವ್ಯವಹಾರವನ್ನು ಮಾಡಲಾಗದು ಎಂದು ನಿರ್ದೇಶಿಸಬಹುದು. ಹಾಗೆ ಮಾಡಿದ್ದೇ ಆದರೆ ಅದು ದಂಡನೀಯ ಅಪರಾಧವಾಗುವುದು.

೮. ವಾರ್ಷಿಕ ಅಂದಾಜು ಪತ್ರಿಕೆಯಲ್ಲಿ ಪರಿಶಿಷ್ಟ ಪ್ರದೇಶಗಳಿಗೆ ಸಂಬಂಧಿಸಿದಂತೆ ಆಯ–ವ್ಯಯಗಳನ್ನು ಬೇರೆಯಾಗಿಯೇ ತೋರಿಸಬೇಕು. ಸಂವಿಧಾನದ ೧೭೭ನೆಯ ವಿಧಿಯನ್ವಯ ರಾಜ್ಯದ ಪರಿಶಿಷ್ಟ ಪ್ರದೇಶಗಳು ರಾಜ್ಯದ ಆದಾಯದಿಂದ ಪಡೆಯುವ ಆಯ–ವ್ಯಯಗಳನ್ನು ಆರ್ಥಿಕ ವರ್ಷದ ಅಂದಾಜು ಪತ್ರಿಕೆಯಲ್ಲಿ ಬೇರೆಯಾಗಿ ತೋರಿಸಬೇಕು.

೯. ಪರಿಶಿಷ್ಟ ಪ್ರದೇಶಗಳನ್ನು ಬಿಟ್ಟು ಬೇರೆ ಪ್ರದೇಶಗಳಿಗೆ ಭಾಗ II ಅನ್ವಯಿಸುವ ಬಗೆಗೆ

(೧) ರಾಜ್ಯಪಾಲರು, ಯಾವುದೇ ಸಮಯದಲ್ಲಿ ಸಾರ್ವಜನಿಕ ಪ್ರಕಟಣೆಯ ಮೂಲಕ, ಈ ಭಾಗದ ಎಲ್ಲಾ ಅಥವಾ ಯಾವುದೇ ಅಂಶಗಳನ್ನು ನಿರ್ದಿಷ್ಟ ನೋಟೀಸಿನ ಮೂಲಕ ಯಾವುದೇ ದಿನಾಂಕದಿಂದ ಪರಿಶಿಷ್ಟ ಪ್ರದೇಶಗಳನ್ನು ಬಿಟ್ಟು ಬೇರೆ ಪ್ರದೇಶಗಳಿಗೆ ಅನ್ವಯಿಸುವ ಪ್ರಕಟಣೆಯ ಮೂಲಕ ನಿರ್ದೇಶಿಸಬಹುದು.

(೨) ರಾಜ್ಯಪಾಲರು ಮೇಲಿನ (೧) ಉಪ ಪ್ಯಾರಾದಲ್ಲಿ ಹೇಳಿದಂತೆ ಈ ಭಾಗದ ಎಲ್ಲಾ ಅಥವಾ ಯಾವ ಅಂಶಗಳು ನಿರ್ದಿಷ್ಟ ನೋಟೀಸ್, ಯಾವುದೇ ದಿನಾಂಕದಿಂದ ಜಾರಿಗೊಳಿಸಬಹುದು.

## ಭಾಗ III
## ಸಂಯುಕ್ತ ಪ್ರಾಂತಕ್ಕೆ ಸಂಬಂಧಿಸಿದ ಅಂಶಗಳು

೧೦. ಭಾಗ IIIರ ಅನ್ವಯಿಸುವ :– ಈ ಭಾಗದಲ್ಲಿಯ ಅಂಶಗಳು, ಸಂಯುಕ್ತ ಪ್ರಾಂತಕ್ಕೆ ಅನ್ವಯಿಸುತ್ತವೆ.

೧೧. ಪರಿಶಿಷ್ಟ ಪ್ರದೇಶಗಳ ಸಲಹಾ ಸಮಿತಿ :–

(೧) ಸಂವಿಧಾನ ಜಾರಿಗೆ ಬಂದ ಮೇಲೆ ಎಷ್ಟು ಸಾಧ್ಯವೋ ಅಷ್ಟು ಶೀಘ್ರವಾಗಿ ರಾಜ್ಯಪಾಲರು ತಮ್ಮ ಆಜ್ಞೆಯ ಮುಖಾಂತರ ರಾಜ್ಯ ಪರಿಶಿಷ್ಟ ಪ್ರದೇಶಗಳ ಸಲಹಾ ಸಮಿತಿಯನ್ನು ನೇಮಿಸಿ, ಅದರಲ್ಲಿಯ ೨/೩ ಸದಸ್ಯರು ಪರಿಶಿಷ್ಟ ಪಂಗಡದವರಿರುವಂತೆ ನೇಮಿಸಬೇಕು. ಈ ವಿಧವಾದ ಆಜ್ಞೆಯು ಅದರ ರಚನೆ, ಅಧಿಕಾರ, ಹಾಗೂ ಸಮಿತಿಯ ವಿಧಿ ವಿಧಾನಗಳನ್ನು ಸಾಂದರ್ಭಿಕ ವಿಷಯಗಳನ್ನೂ ಒಡಗೂಡಿರಬೇಕು.

(೨) ಸಾಮಾನ್ಯವಾಗಿ ಪರಿಶಿಷ್ಟ ಪ್ರದೇಶಗಳ ವಿಕಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ಸೂಚಿಸಬೇಕು.

೧೨. ಹಲವು ಪ್ರಕರಣಗಳಲ್ಲಿ ನಿಯಂತ್ರಕಗಳನ್ನು ರೂಪಿಸುವ ಅಧಿಕಾರ ರಾಜ್ಯಪಾಲರಿಗಿರುತ್ತದೆ.

(೧) ಮರಣದಂಡನೆ, ಜೀವಾವಧಿ ಶಿಕ್ಷೆ, ಗಡೀಪಾರು ಮತ್ತು ಐದು ವರ್ಷಕ್ಕಿಂತ ಅಧಿಕವಾಗಿ ಶಿಕ್ಷೆ ವಿಧಿಸುವ ಪ್ರಕರಣ ಬಿಟ್ಟು ರಾಜ್ಯಪಾಲರು ಮಿಕ್ಕ ವಿಷಯಗಳ ಬಗೆಗೆ ಹಳ್ಳಿಯ ಪಂಚಾಯಿತಿ ಪ್ರಮುಖರಿಗೆ ಅಧಿಕಾರ ನೀಡಬಲ್ಲ ನಿಯಂತ್ರಕ ರೂಪಿಸಬಹುದು.

(೨) ಪರಿಶಿಷ್ಟ ಪಂಗಡದ ಸದಸ್ಯನಿಂದ, ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಗೆ ಭೂಮಿಯನ್ನು ವರ್ಗಾಯಿಸದಂತೆ, ರಾಜ್ಯಪಾಲರು ನಿಯಂತ್ರಕ ಮಾಡಬಹುದು.

(೩) ಈ ಪ್ಯಾರಾದಡಿಯಲ್ಲಿ ಮಾಡಿರಬಹುದಾದ ನಿಯಂತ್ರಕಗಳನ್ನು ರಾಜ್ಯಪಾಲರು ತಮ್ಮ ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸಿರುವ ಮೂಲಕ ನಿಯಂತ್ರಕಗಳಿಗೆ, ಶಾಸಕಾಂಗದ ಆಜ್ಞೆಯಷ್ಟೇ ಅಧಿಕಾರವಿದೆ.

೧೩. ವಾರ್ಷಿಕ ಮುಂಗಡ ಪತ್ರದಲ್ಲಿ ಪರಿಶಿಷ್ಟ ಪ್ರದೇಶಗಳ ಆಯ–ವ್ಯಯಗಳನ್ನು ಬೇರೆಯಾಗಿಯೇ ತೋರಿಸಬೇಕು.

ಅಂದಾಜು ಪತ್ರಿಕೆಯಲ್ಲಿ, ಪರಿಶಿಷ್ಟ ಪ್ರದೇಶಗಳ ಆಯ–ವ್ಯಯವನ್ನು ರಾಜ್ಯದ ಆದಾಯದಿಂದ ಪಡೆದಿರುವ ಹಾಗೂ ಅದಕ್ಕೆ ಜಮಾ ಮಾಡಿರುವ ಹಣದ ಲೆಕ್ಕವನ್ನು ಬೇರೆಯಾಗಿ, ವಿಧಿ ೧೭೭ ರಂತೆ, ಶಾಸಕಾಂಗದ ಮುಂದೆ ಮಂಡಿಸಬೇಕು.

## ಭಾಗ IV

## ಪೂರ್ವ ಪಂಜಾಬ್ ರಾಜ್ಯಕ್ಕೆ ಸಂಬಂಧಿಸಿದ ಅಂಶಗಳು

೧೪. ಭಾಗ IV ಅನ್ವಯಿಸುವ – ಈ ಭಾಗದಲ್ಲಿಯ ಅಂಶಗಳು ಕೇವಲ ಪೂರ್ವ ಪಂಜಾಬ್ ರಾಜ್ಯಕ್ಕೆ ಮಾತ್ರ ಅನ್ವಯಿಸಲಾಗುವುದು.

೧೫. ಪರಿಶಿಷ್ಟ ಪ್ರದೇಶಗಳ ಸಲಹಾ ಸಮಿತಿಯ ನೇಮಕ :–

(೧) ಸಂವಿಧಾನ ಜಾರಿಗೆ ಬಂದ ಕೂಡಲೇ ರಾಜ್ಯಪಾಲರು ತಮ್ಮ ಆಜ್ಞೆಯ ಮೂಲಕ ರಾಜ್ಯದ ಪರಿಶಿಷ್ಟ ಸಲಹಾ ಸಮಿತಿಯೊಂದನ್ನು ರಚಿಸಬಹುದು. ಈ ಸಮಿತಿಯ ೨/೩ ಸದಸ್ಯರು ರಾಜ್ಯದ ಪರಿಶಿಷ್ಟ ಪ್ರದೇಶದ ನಿವಾಸಿಗಳಾಗಿರಬೇಕು. ರಾಜ್ಯಪಾಲರ ಆಜ್ಞೆಯಂತೆ, ರಚನೆ, ಅಧಿಕಾರ, ವಿಧಿ ವಿಧಾನಗಳನ್ನು ಅನುಸರಿಸಬಹುದು.

(೨) ಸಾಮಾನ್ಯವಾಗಿ, ಈ ವಿಧವಾದ ಪರಿಶಿಷ್ಟ ಪ್ರದೇಶಗಳ ಸಲಹಾ ಸಮಿತಿಯು, ಸರಕಾರಕ್ಕೆ ಪರಿಶಿಷ್ಟ ವರ್ಗಗಳ ವಿಕಾಸಕ್ಕೆ ಸಂಬಂಧಿಸಿದ ವಿಷಯಗಳ ಬಗೆಗೆ ಸಲಹೆ ನೀಡಬೇಕು.

೧೬. ಪರಿಶಿಷ್ಟ ಪ್ರದೇಶಗಳಿಗೆ ಸಂಸತ್ತಿನ ಮತ್ತು ಶಾಸಕಾಂಗದ ಮಸೂದೆಗಳನ್ನು ಅನ್ವಯಿಸುವುದು:– ರಾಜ್ಯಪಾಲರು ಸಾರ್ವಜನಿಕ ಪ್ರಕಟಣೆಯ ಮುಖಾಂತರ ಪರಿಶಿಷ್ಟ ಪ್ರದೇಶಗಳ ಬಗೆಗೆ ಸಂಸತ್ ಹಾಗೂ ಶಾಸಕಾಂಗದ ಮಸೂದೆಗಳು, ಅಂಶತಃ ಮತ್ತು ಮಾರ್ಪಾಟಾದ ರೀತಿಯಲ್ಲಿ ಅನ್ವಯಿಸುವ ಬಗೆಗೆ ಪ್ರಕಟಿಸಬಹುದು.

೧೭. ನಿಯಂತ್ರಕಗಳನ್ನು ರೂಪಿಸುವಲ್ಲಿ ರಾಜ್ಯಪಾಲರ ಅಧಿಕಾರಗಳು :

(೧) ರಾಜ್ಯಪಾಲರು ಪರಿಶಿಷ್ಟ ಪ್ರದೇಶಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯ ಬಗೆಗೆ ಹಲವಾರು ನಿಯಂತ್ರಕಗಳನ್ನು ರೂಪಿಸಬಹುದು. ಆದರೆ ಆ ವಿಧವಾದ ನಿಯಂತ್ರಕಗಳು, ಮರಣದಂಡನೆ, ಜೀವಾವಧಿ ಶಿಕ್ಷೆ, ಗಡಿಪಾರು ಹಾಗೂ ಐದು ವರ್ಷದ ಅವಧಿಗೆ ಮೀರಿದ ಶಿಕ್ಷೆಯನ್ನು ವಿಧಿಸುವ ಪ್ರಕರಣಗಳಿಗೆ ಅನ್ವಯಿಸಲಾಗದು.

(೨) ರಾಜ್ಯಪಾಲರು ರಾಜ್ಯದ ಪರಿಶಿಷ್ಟ ಪ್ರದೇಶಗಳ ಭೂಮಿಯನ್ನು ಪರಿಶಿಷ್ಟ ಜನಾಂಗೇತರ ಹಾಗೂ ಪರಿಶಿಷ್ಟ ಪ್ರದೇಶಗಳಿಗೆ ಸಂಬಂಧಿಸಿದವರಿಗಲ್ಲದೇ ಬೇರೆಯವರಿಗೆ ಮಾರಾಟ ಮಾಡುವುದನ್ನು ನಿಷೇಧಿಸುವ ಬಗೆಗೆ ನಿಯಂತ್ರಕ ರಚಿಸಬಹುದು.

(೩) ಈ ಪ್ಯಾರಾದಲ್ಲಿ ಸುಗ್ರೀವಾಜ್ಞೆಯ ಮುಖಾಂತರ ವಿಧಿಸಿದ ನಿಯಂತ್ರಕಗಳಿಗೆ, ಶಾಸಕಾಂಗದ ಶಾಸನದಷ್ಟೇ ಅಧಿಕಾರವಿರುತ್ತದೆ.

## ಭಾಗ V
## ಪರಿಶಿಷ್ಟ ಪ್ರದೇಶಗಳು

* ೧೮. ಪರಿಶಿಷ್ಟ ಪ್ರದೇಶಗಳು :

(೧) ಭಾಗಗಳು I ರಿಂದ VII ರಲ್ಲಿ ನಿರ್ದಿಷ್ಟವಾಗಿ, ಈ ಕೆಳಕಂಡ ಪಟ್ಟಿಯಲ್ಲಿ ಸೂಚಿಸಲಾದ ಪ್ರದೇಶಗಳನ್ನು ಸಂವಿಧಾನದ ಅರ್ಥದಲ್ಲಿ ಪರಿಶಿಷ್ಟ ಪ್ರದೇಶಗಳೆಂದೂ ಮತ್ತು ಪಟ್ಟಿಯಲ್ಲಿ ಸೂಚಿಸಿರಬಹುದಾದ ಯಾವುದೇ ಭಾಗ, ಜಿಲ್ಲೆ, ಆಡಳಿತಾಧಿಕಾರದ ಪ್ರದೇಶಗಳನ್ನು ಸಂವಿಧಾನ ಜಾರಿಗೆ ಬಂದ ದಿನದಿಂದ ಪರಿಶಿಷ್ಟ ಪ್ರದೇಶಗಳೆಂದೂ ಭಾವಿಸಲಾಗುವುದು.

(೨) ರಾಷ್ಟ್ರಪತಿಯವರು ಯಾವುದೇ ಸಮಯದಲ್ಲಿ –

(ಅ) ನಿರ್ದೇಶನದ ದ್ವಾರ, ನಿರ್ದಿಷ್ಟ ಪ್ರದೇಶವನ್ನು ಪರಿಶಿಷ್ಟ ಪ್ರದೇಶ ಅಥವಾ ಅಲ್ಲವೆಂದೂ ಸಾರಬಹುದು.

(ಆ) ಪರಿಶಿಷ್ಟ ಪ್ರದೇಶಗಳ ಗಡಿಗಳನ್ನು ಬದಲಾಯಿಸಲೂಬಹುದು.

(ಇ) ಮೊದಲನೆಯ ಅನುಸೂಚಿಯ ಭಾಗ I ರಾಜ್ಯ ಅಥವಾ ಆ ಅನುಬಂಧದ ಭಾಗ I ರ ರಾಜ್ಯಕ್ಕೆ ನೂತನ ರಾಜ್ಯದ ಸೇರ್ಪಡೆಯಾದರೆ ಅದರಿಂದಾದ ಗಡಿ ಬದಲಾವಣೆಗಳಿಂದ ಉಂಟಾದ ಸಾಂದರ್ಭಿಕ ಬದಲಾವಣೆಗಳನ್ನು ರಾಷ್ಟ್ರಪತಿಯವರು ಪ್ರಕಟಿಸಬಹುದು.

### ಕೋಷ್ಟಕ (Table)
### I ಮದ್ರಾಸ್

ಲಕ್ಕಾದೀವಿ ದ್ವೀಪಗಳು ಮಿನಿಕೊಯಿ ಸೇರಿದಂತೆ ಮತ್ತು ಅಮಿನಿದೀವಿ ದ್ವೀಪಗಳು ಪೂರ್ವ ಗೋದಾವರಿ ಏಜೆನ್ಸಿ ಮತ್ತು ವಿಶಾಖಪಟ್ಟಣ ಏಜೆನ್ಸಿ ೧೯೩೬ ಒರಿಸ್ಸಾ ರಚನೆಯ ಸಮಯದಲ್ಲಿ ವರ್ಗಾಯಿಸದೇ ಹೋದ ಭಾಗಗಳು.

### II ಬೊಂಬಾಯಿ

ಪಶ್ಚಿಮ ಖಾನ್ ದೇಶ ಜಿಲ್ಲೆ – ನವಪುರ ಪೇಠಾ, ಅಕ್ರಾನಿಮಹಲ್ ಮತ್ತು ಮೆಹವಾಸಿ ಮುಖ್ಯಸ್ಥರಿಗೆ ಸೇರಿದ ಹಳ್ಳಿಗಳು :– ೧. ಪಾರ್ಲಿಕಾಧಿಯ, ೨. ನಲಪಾರ್ಲಿ, ೩. ಸಿಂಗಪುರ ಪಾರ್ಲಿ. ೪. ಗಹೋಲಿ ವಾಲ್ಲಿವ, ೫. ಚಿಕ್ಲಿ ವಾಸವಾ, ೬. ನವಲಾಪುರ ಪಾರ್ಲಿ

---

* ಭಾರತ ಸರ್ಕಾರದ ಕಾಯ್ದೆ ೧೯೩೫ರ ಸೆಕ್ಷನ್ ೯೧(೨)ರ ಮಾದರಿಯಲ್ಲಿ ಮೂಲಭೂತವಾಗಿ ಜಾರಿಗೊಳಿಸಿದ್ದಂತಹ ಒಂದು ಬದಲಾವಣೆಯನ್ನು ಯಾವುದೇ ಪ್ರದೇಶವನ್ನು ಪರಿಶಿಷ್ಟ ಪ್ರದೇಶಗಳಲ್ಲಿ ಸೇರಿಸಿಕೊಳ್ಳಲು ಅಥವಾ ಸೇರಿಸಿಕೊಳ್ಳದಿರಲು ಅನುಕೂಲವಾಗುವಂತೆ ಈ ಪ್ಯಾರಾದಲ್ಲಿ ಸೇರಿಸಿಕೊಳ್ಳಬೇಕೆಂಬುದು ಸಮಿತಿಯ ಅಭಿಪ್ರಾಯವಾದುದರಿಂದ, ಅದಕ್ಕನುಸಾರವಾಗಿ ಸಮಿತಿಯ ಈ ಪ್ಯಾರಾಗೆ ಉಪಪ್ಯಾರಾ(೨)ಅನ್ನು ಸೇರಿಸಿದೆ.

ಪೂರ್ವಖಾನ್ ದೇಶದ ಜಿಲ್ಲೆ – ಕಾದಿಟ್ಟ ಅರಣ್ಯಗಳ ಪ್ರದೇಶದ ಸಾತ್ಪುರ ಬೆಟ್ಟಗಳು ಥಾನಾ ಜಿಲ್ಲೆಯ: ಥಾನು ಮತ್ತು ಷಾಪುರ ತಾಲೂಕುಗಳು ಮತ್ತು ಮೊಖಡಾ ಮತ್ತು ಅಂಬೇರಗಾಂ ಪೇತಾಗಳು.

### III ಸಂಯುಕ್ತ ಪ್ರಾಂತಗಳು

ಡೆಹರಾಡೂನ್ ಜಿಲ್ಲೆ ಜುನಸಾರ – ಬವರಾ ಪರಗಣ

ಮಿರ್ಜಾಪುರ ಜಿಲ್ಲೆಯ ಕೈಮೂರ್ ರೇಂಜಿನ ದಕ್ಷಿಣದ ಭಾಗ.

### IV ಪೂರ್ವ ಪಂಜಾಬು

ಕಾನಗ್ರಾ ಜಿಲ್ಲೆಯ ಸ್ಪಿತಿ –ಲಾಹುಲಾ

### V ಬಿಹಾರ

ರಾಂಚಿ ಮತ್ತು ಸಿಂಘಭೂಮ್ ಜಿಲ್ಲೆಗಳು ಮತ್ತು ಛೋಟಾ ನಾಗಪುರ ವಿಭಾಗದ ಪಲಮಾನ್ ಜಿಲ್ಲೆಯ ಲಾಚಾರ್ ಉಪವಿಭಾಗ, ಗೊಡ್ಡ ಮತ್ತು ದೇವ್‌ಗರ್ ಉಪವಿಭಾಗಗಳನ್ನು ಹೊರತುಪಡಿಸಿ ಸಂಕಾಲಪರಗಣ ಜಿಲ್ಲೆ.

### VI ಮಧ್ಯಪ್ರಾಂತಗಳು ಮತ್ತು ಬಿರಾರ

ಚಾಂದ ಜಿಲ್ಲೆಯ ಅಹಿತಿ ಜಮೀನ್‌ದಾರಿ ಸಿರೋನ್ಚಾ ತಹಸೀಲ್ ಮತ್ತು ಧನೋರಾ, ದೂದ್‌ಮಾಲಾ, ಗೆವಾರ್ಧ, ಜಹರಾಪಾರ, ಖುಟ್‌ಗಾಂ, ಕೊಟಗಲ್, ಮುರಾಂಗಾಂ, ಪಲಾಸಗರಾ, ರಾನ್ಗಿ, ಸಿರಸುಂದಿ, ಸೊನ್‌ಸಾರಿ, ಚಂದಾಲ, ಗಿಲ್‌ಗಾಂ, ಪಾಯಿಮುರಾಂದಾ ಮತ್ತು ಫರ್ ಚಿರೋಲಿ ತಹಸಿಲಿನ ಪೊಟೆಗಾಂ ಜಮೀನುದಾರಿಗಳು.

ಹರಾಯಿ, ಗೋರಖ್ ಘಾಟ್, ಗೊರಪಾನಿ, ಭಟ್ಕಾ ಘರ್, ಬಾರ್ಡ್ಡಾಫರ್, ಪ್ರತಾಪಘರ್ (ಘಾಗರ) ಆಲ್ಮೋಡ್ ಮತ್ತು ಚಿಂದವಾಡ ಜಿಲ್ಲೆಯ ಸೊನ್‌ಪುರ ಜಹಗೀರ್ ಮತ್ತು ಚಿಂದವಾರ ಜಿಲ್ಲೆಯ ಪಚಮಾರಿ ಜಹಗೀರಿನ ಕೆಲವು ಭಾಗಗಳು.

ಮಂಡಲಾ ಜಿಲ್ಲೆ

ಪೆಂದ್ರಾ, ಕೆನಡಾ, ಮಾಟಿನ್, ಲಾಪ್, ಉಪರೋರಾ, ಛೂರಿ ಮತ್ತು ಬಿಲಾಸ್ ಪುರ ಜಿಲ್ಲೆಯ ಕೊರ್‌ಬಾ ಜಹಗೀರ್‌ದಾರಿಗಳು

ಅಂಧಿ, ಕೊರಚಾ, ಪಾನಾಬಾರಾಸ್ ಮತ್ತು ದುರ್ಗ ಜಿಲ್ಲೆಯ ಅಂಬಾಘರ್ ಜಮೀನ್ದಾರಿ

ಬಾಲಾಘಾಟ್‌ನ ಬಿಹಾರಿ ತಹಸೀಲ್

ಅಮರೋಟಿ ಜಿಲ್ಲೆಯ ಮೇಲ್‌ಘಾಟ್ ತಾಲೂಕ

ಬೆತುಲ್ ಜಿಲ್ಲೆಯ ಬಾಯ್ಹಿನ್ ವೇಹಿ.

## VII ಒರಿಸ್ಸಾ
## ಕೊನ್ಡಾಮಹಲ ಕೂಡಿದಂತೆ ಗಂಜಾಂ ಏಜೆನ್ಸಿ ಟ್ರಾಕ್ಟ್ಸ್ ಕೊರಾಪುಟ್ ಜಿಲ್ಲೆ

# ಆರನೆಯ ಅನುಸೂಚಿ
## ವಿಧಿಗಳು ೧೪೪(ಆ) ಮತ್ತು ೧೯೦(೨)

ಅಸ್ಸಾಂ ಬುಡಕಟ್ಟು ಪ್ರದೇಶಗಳ ಆಡಳಿತಕ್ಕೆ – ಅಂಶಗಳು

೧. ಸ್ವಾಯತ್ತ ಜಿಲ್ಲೆಗಳು ಮತ್ತು ಸ್ವಾಯತ್ತ ಪ್ರದೇಶಗಳು :–

(೧) ಸ್ವಾಯತ್ತ ಜಿಲ್ಲೆಗಳೆಂದರೆ, ಭಾಗ I ಟೇಬಲ್ ನ ಪ್ಯಾರಾ ೧೯, ಈ ಅನುಬಂಧದಲ್ಲಿ ತಾತ್ಕಾಲಿಕವಾಗಿ ಪಟ್ಟಿಯಲ್ಲಿರುವ ಪ್ರದೇಶಗಳೇ ಗುಡ್ಡಗಾಡು ಪ್ರದೇಶಗಳು.

(೨) ಇವಲ್ಲದೆ ಬೇರೆ ವಿಧವಾದ ಪರಿಶಿಷ್ಟ ಪಂಗಡಗಳಿಗೆಂದೇ ಸ್ವಾಯತ್ತ ಜಿಲ್ಲೆಗಳನ್ನು ಪ್ರಕಟಿಸಿ ಅವುಗಳನ್ನೂ ರಾಜ್ಯಪಾಲರು ಸ್ವಾಯತ್ತ ಜಿಲ್ಲೆಗಳೆಂದು ಸೂಚಿಸಬಹುದು.

(೩) ರಾಜ್ಯಪಾಲರು ಸಾರ್ವಜನಿಕ ಪ್ರಕಟಣೆಯ ಮೂಲಕ :–

(ಅ) ಭಾಗ I ರ, ಪಟ್ಟಿಯಲ್ಲಿ ಸೂಚಿಸಿದ ಯಾವ ಪ್ರದೇಶವನ್ನಾದರೂ, ಸೇರ್ಪಡಿಸಬಹುದು.

(ಆ) ನೂತನ ಸ್ವಾಯತ್ತ ಜಿಲ್ಲೆಗಳನ್ನು ರಚಿಸಬಹುದು.

(ಇ) ಸ್ವಾಯತ್ತ ಜಿಲ್ಲೆಯ ಪ್ರದೇಶವನ್ನು ವಿಸ್ತರಿಸಬಹುದು.

(ಈ) ಭಾಗ I ಟೇಬಲ್ಲಿನಿಂದ ಯಾವ ಪ್ರದೇಶವನ್ನೂ ಬೇರ್ಪಡಿಸಬಹುದು.

(ಉ) ಸ್ವಾಯತ್ತ ಜಿಲ್ಲೆಯ ಪ್ರದೇಶವನ್ನು ಕುಗ್ಗಿಸಬಹುದು.

ಆದರೆ ಈ ಅನುಬಂಧ ೧೪ನೆಯ ಪ್ಯಾರಾ, ಉಪಪ್ಯಾರಾ (೧)ರಂತೆ ನೇಮಕಗೊಂಡ ಆಯೋಗದ ಸಲಹೆ ಇಲ್ಲದೆ, ರಾಜ್ಯಪಾಲರು ಉಪನಿಬಂಧನೆ(ಆ) ಅಥವಾ (ಇ)ಗಳ ಬಗೆಗೆ ಯಾವ ಆಜ್ಞೆಯನ್ನೂ ರಚಿಸುವಂತಿಲ್ಲ. ಅಲ್ಲದೆ, ಉಪನಿಬಂಧನೆ (ಇ) ಅಥವಾ (ಈ) ಗಳಿಗೆ ಕುರಿತಂತೆ, ಸ್ವಾಯತ್ತ ಜಿಲ್ಲೆ ಸಲಹಾ ಮಂಡಳಿಯ ಶಿಫಾರಸು ಇಲ್ಲದೆ ಯಾವ ಆಜ್ಞೆಯನ್ನೂ ರಾಜ್ಯಪಾಲರು ಮಾಡುವಂತಿಲ್ಲ.

೨. ಜಿಲ್ಲಾ ಮಂಡಳಿ ಮತ್ತು ಪ್ರಾದೇಶಿಕ ಮಂಡಳಿಗಳ ರಚನೆ :–

(೧) ಪ್ರತಿಯೊಂದು ಸ್ವಾಯತ್ತ ಜಿಲ್ಲೆಗೆ ಜಿಲ್ಲಾ ಮಂಡಳಿಯನ್ನು ರಚಿಸಬೇಕು. ಈ ಮಂಡಳಿಯಲ್ಲಿ ೨೦ ರಿಂದ ೪೦ ಸದಸ್ಯರಿದ್ದು, ಅದರಲ್ಲಿ ನಾಲ್ಕರಲ್ಲಿ ಮೂರಂಶ ಸದಸ್ಯರನ್ನು ವಯಸ್ಕರ ಮತದಾನ ಪದ್ಧತಿಯಂತೆ ಚುನಾಯಿಸಬೇಕು.

(೨) ಈ ವಿಧವಾದ ಮತದಾನಕ್ಕೆ ಜಿಲ್ಲೆಯಲ್ಲಿ ವಾಸವಾಗಿರುವ ವಿವಿಧ ಪರಿಶಿಷ್ಟ ಪಂಗಡಗಳಿಗೆ, ಹಾಗೂ ಇತರೇ ಜನಾಂಗಕ್ಕೆ ಬೇರೆ ಬೇರೆ ಮತದಾರ ಕ್ಷೇತ್ರಗಳನ್ನು ನಿರ್ಮಿಸಬೇಕು. ಆದರೆ ಯಾವುದೇ ಮತದಾರ ಕ್ಷೇತ್ರ ಐದುನೂರು ಸದಸ್ಯರಿಗಿಂತ ಕಡಿಮೆ ಇರಕೂಡದು.

(೩) ಈ ಅನುಸೂಚಿ ಪ್ಯಾರಾ ೧ರ ಉಪಪ್ಯಾರಾ (೨)ರನ್ವಯ ಪ್ರತಿಯೊಂದು ಪ್ರದೇಶಕ್ಕೂ ಪ್ರತ್ಯೇಕ ಪ್ರಾದೇಶಿಕ ಮಂಡಳಿಯೊಂದನ್ನು ರಚಿಸಬೇಕು.

(೪) ಪ್ರತಿಯೊಂದು ಜಿಲ್ಲೆ ಹಾಗೂ ಪ್ರದೇಶದ ಮಂಡಳಿಗಳು ಸಾಮೂಹಿಕವಾಗಿ ತಮ್ಮ ಜಿಲ್ಲೆಯ ಅಥವಾ ಪ್ರದೇಶದ ಹೆಸರಿನಲ್ಲಿರುವ ಮೊಹರುಗಳಿಗೆ ಸರ್ವಕಾಲದಲ್ಲಿ

ವಾರಸುದಾರರಾಗಿರುತ್ತಾರೆ. ಈ ಹೆಸರಿನ ಮೇಲೆಯೇ ಎಲ್ಲಾ ಪ್ರಕರಣಗಳಲ್ಲಿ ಅವರ ಮೇಲೆ ದಾವೆ ಹೂಡಬಹುದು ಹಾಗೂ ಅವರು ಬೇರೆಯವರ ಮೇಲೆ ದಾವೆ ದಾಖಲಿಸಬಹುದು.

(೫) ಈ ಅನುಬಂಧದಲ್ಲಿ ಹೇಳಿದಂತೆ, ಸ್ವಾಯತ್ತ ಜಿಲ್ಲೆಯ ಆಡಳಿತಾಧಿಕಾರವು, ಈ ಜಿಲ್ಲೆಯಡಿಯಲ್ಲಿರಬಹುದಾದ ಪ್ರಾದೇಶಿಕ ಮಂಡಳಿಗೆ ನೀಡಿರಬಹುದಾದ ಅಧಿಕಾರ ಬಿಟ್ಟು ಮಿಕ್ಕ ಅಧಿಕಾರವೆಲ್ಲಾ ಜಿಲ್ಲಾ ಮಂಡಳಿ ಹಾಗೂ ಪ್ರಾದೇಶಿಕ ಮಂಡಳಿಗಳಿಗೆ ನೀಡಿದೆ.

(೬) ಯಾವುದೇ ಸ್ವಾಯತ್ತ ಜಿಲ್ಲೆಯು, ಪ್ರಾದೇಶಿಕ ಮಂಡಳಿ ಹೊಂದಿದ್ದರೆ ಜಿಲ್ಲಾ ಮಂಡಳಿಯು ಪ್ರಾದೇಶಿಕ ಮಂಡಳಿಯು ವಹಿಸಿಕೊಟ್ಟಿರುವ ಅಧಿಕಾರವನ್ನು ಮಾತ್ರ ಹೊಂದಿರುತ್ತದೆ.

(೭) ರಾಜ್ಯಪಾಲರು ಮೊದಲಬಾರಿಗೆ ಜಾರಿಗೆ ಬಂದಿರುವ ಜಿಲ್ಲಾ ಮಂಡಳಿ ಹಾಗೂ ಪ್ರಾದೇಶಿಕ ಮಂಡಳಿಗಳ ನಿಯಮಾವಳಿಗಳನ್ನು ಜಾರಿಯಲ್ಲಿರುವ ಗುಡ್ಡಗಾಡು ಮಂಡಳಿ ಅಥವಾ ಬೇರೆ ಯಾವುದೇ ಗುಡ್ಡಗಾಡು ಸಂಘಟನೆಯ ಸಲಹೆಯನ್ನು ಪಡೆದು, ಜಿಲ್ಲಾ ಮಂಡಳಿ ಪ್ರಾದೇಶಿಕ ಮಂಡಳಿಗೆ ಅನ್ವಯಿಸಬಹುದಾದ ಅಂಶಗಳನ್ನು:–

(ಅ) ಜಿಲ್ಲಾ ಮಂಡಳಿ, ಪ್ರಾದೇಶಿಕ ಮಂಡಳಿಗಳ ರಚನೆ ಹಾಗೂ ಸ್ಥಾನಗಳು

(ಆ) ಈ ಮಂಡಳಿಗಳ ಚುನಾವಣೆಗೆಂದೇ ಮತದಾರ ಕ್ಷೇತ್ರಗಳ ರಚನೆ

(ಇ) ಮತದಾರರ ಯಾದಿ ರಚನೆ ಹಾಗೂ ಅರ್ಹತೆಯನ್ನು ನಿರ್ಧರಿಸುವುದು

(ಈ) ಈ ವಿಧವಾದ ಮಂಡಳಿಗಳ ಸದಸ್ಯರ ಆಯ್ಕೆಯ ಅರ್ಹತೆಗಳು

(ಉ) ಜಿಲ್ಲೆ ಹಾಗೂ ಪ್ರಾದೇಶಿಕ ಮಂಡಳಿಗೆ ನಾಮಕರಣ ಮಾಡುವ ಇತರೆ ವಿಷಯಗಳು

(ಊ) ಜಿಲ್ಲೆ ಹಾಗೂ ಪ್ರಾದೇಶಿಕ ಮಂಡಳಿಯ ವ್ಯವಹಾರವನ್ನು ನಡೆಸುವ ವಿಧಿ ವಿಧಾನಗಳು,

(ಋ) ಜಿಲ್ಲೆ ಹಾಗೂ ಪ್ರಾದೇಶಿಕ ಮಂಡಳಿಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದ ನೇಮಕಾತಿ, ಮುಂತಾದವನ್ನು ಜಾರಿಗೊಳಿಸುತ್ತಾರೆ.

(೮) ಈ ವಿಧವಾಗಿ ಮೊದಲ ಬಾರಿಗೆ ರಚನೆ ಹೊಂದಿದ ನಂತರ ಜಿಲ್ಲಾ ಅಥವಾ ಪ್ರಾದೇಶಿಕ ಮಂಡಳಿಗಳು ಈ ಪ್ಯಾರಾದ (೭) ಉಪಪ್ಯಾರಾದಲ್ಲಿ ತಿಳಿಸಿರುವ ವಿಷಯಗಳ ಬಗೆಗೆ ನಿಯಮಾವಳಿಗಳನ್ನು ರಚಿಸಿ ಕ್ರಮವಾಗಿ :–

(ಅ) ಉಪ ಸ್ಥಳೀಯ ಮಂಡಳಿ ಅಥವಾ ಬೋರ್ಡ್‌ಗಳ ರಚನೆ ಹಾಗೂ ಕಾರ್ಯಾಚರಣೆಯ ವಿಧಿ ವಿಧಾನಗಳು ಮತ್ತು

(ಆ) ಜಿಲ್ಲೆ ಅಥವಾ ಪ್ರದೇಶದ, ವ್ಯವಹಾರ ನಡೆಸಿಕೊಂಡು ಹೋಗುವ ಸಾಮಾನ್ಯ ವಿಷಯಗಳ ಬಗೆಗೆ

ಆದರೆ ಜಿಲ್ಲಾ ಅಥವಾ ಪ್ರದೇಶ ಮಂಡಳಿಗಳಿಂದ ಅಥವಾ (೭) ಸಬ್ ಪ್ಯಾರಾದಂತೆ ರಾಜ್ಯಪಾಲರಿಂದ, ಚುನಾವಣೆ ಅಧಿಕಾರಿಗಳು, ಸಿಬ್ಬಂದಿ ವರ್ಗ ವಿಧಿ ವಿಧಾನಗಳಿಗೆ ನಿಯಮಾವಳಿ ರಚಿಸುವವರೆಗೂ.

ಸಂದರ್ಭಾನುಸಾರವಾಗಿ ಮಿಕಿರ್ ಮತ್ತು ಕಾಚಾರ್ ಗುಡ್ಡಗಳ ಜಿಲ್ಲಾಧಿಕಾರಿಯಾಗಲೀ ಅಥವಾ ಉಪ–ವಿಭಾಗಾಧಿಕಾರಿಯಾಗಲೀ ಆ ಜಿಲ್ಲೆಯ ಮಂಡಳಿಯ ಪದಾಧಿಕಾರಿ ಅಧ್ಯಕ್ಷರಾಗಿ ಐಟಮ್ ೫ ಮತ್ತು ೬ ಭಾಗ Iರ ಪಟ್ಟಿಯಲ್ಲಿಯ ಟೇಬಲ್‌ನ ೧೯ ಪ್ಯಾರಾದಲ್ಲಿಯ ಪ್ರದೇಶಗಳಿಗೆ ೬ ವರ್ಷ ಅವಧಿಯವರೆಗೂ,

ಮೊದಲು ಬಾರಿ ರಚನೆ ಹೊಂದಿದ ಸಮಯದಲ್ಲಿ ಅಧಿಕಾರದಲ್ಲಿರುತ್ತಾರೆ. ಆದರೆ ಈ ಎಲ್ಲ ವಿಷಯಗಳಲ್ಲಿ ರಾಜ್ಯಪಾಲರಿಗೆ ಗೊತ್ತುವಳಿಯ ಮೂಲಕ ಮಾರ್ಪಾಟು ಮಾಡುವ ತಡೆ ಹಿಡಿಯುವ ಆದೇಶಗಳನ್ನು ಹೊರಡಿಸುವ ಅಧಿಕಾರವಿದೆ. ಜಿಲ್ಲಾ ಮಂಡಳಿಯು ಈ ವಿಧವಾದ ಆದೇಶ ಮನ್ನಿಸಬೇಕು.

೩. ಜಿಲ್ಲಾ ಮಂಡಳಿ ಹಾಗೂ ಪ್ರಾದೇಶಿಕ ಮಂಡಳಿಗಳಿಗೆ ಕಾನೂನು ರಚಿಸುವ ಅಧಿಕಾರ

(೧) ಪ್ರಾದೇಶಿಕ ಮಂಡಳಿ ಹಾಗೂ ಜಿಲ್ಲಾ ಮಂಡಳಿಗಳಿಗೆ ಕಾನೂನು ರಚಿಸಬಹುದಾದ ಅಧಿಕಾರ ಯಾವ ಜಿಲ್ಲೆಯಲ್ಲಿ ಪ್ರಾದೇಶಿಕ ಮಂಡಳಿಗಳಿದ್ದರೆ ಅದನ್ನು ಹೊರತುಪಡಿಸಿ – ಸಂಬಂಧಿಸಿದ

(ಅ) ಭೂಪ್ರದೇಶಗಳು, ಅರಣ್ಯ, ವ್ಯವಸಾಯ, ವಾಸ, ಗೋಮಾಳ ಅಥವಾ ಹಳ್ಳಿಯ ವಿಕಾಸಕ್ಕೆಂದು ಮೀಸಲಿಟ್ಟವನ್ನು ಹೊರತುಪಡಿಸಿ ಮಿಕ್ಕ ಭೂಮಿಯನ್ನು ನೀಡುವ – ಉಪಯೋಗಿಸುವ

ಆದರೆ ಯಾವ ಸಂದರ್ಭದಲ್ಲಿಯೇ ಆದರೂ ಮೀಸಲಿಟ್ಟ ಹಾಗೂ ಮೀಸಲಿರಿಸದೇ ಹೋದ ಭೂಪ್ರದೇಶವನ್ನು ಅಸ್ಸಾಂ ಸರಕಾರ ಸಾರ್ವಜನಿಕ ಉದ್ದೇಶಕ್ಕೆಂದು ವಶಪಡಿಸಿಕೊಳ್ಳಲುಬಾರದು.

(ಆ) ಕಾದಿರಿಸದೇ ಹೋದ ಅರಣ್ಯದ ವ್ಯವಸ್ಥಾಪನೆ

(ಇ) ವ್ಯವಸಾಯಕ್ಕೆಂದೇ ಯಾವುದೇ ಕಾಲುವೆ ಹಾಗೂ ಹರಿಯುವ ನೀರನ್ನು ಬಳಕೆ ಮಾಡುವುದು.

(ಈ) ಜುಹಮ್ ಅಥವಾ ಇತರ ಬದಲಾಯಿಸಬಲ್ಲ ವ್ಯವಸಾಯ ವಿಧಾನ ಅನುಸರಿಸುವ ಬಗೆಗೆ ಕಟ್ಟಳೆಗಳನ್ನು ರಚಿಸಬಹುದು.

(ಉ) ಹಳ್ಳಿ ಹಾಗೂ ಪಟ್ಟಣ ಸಮಿತಿಗಳನ್ನು ರಚಿಸುವ ಮತ್ತು ಅವುಗಳ ಅಧಿಕಾರಗಳನ್ನು ನಿರ್ಧರಿಸುವುದು;

(ಊ) ಹಳ್ಳಿಗಳ ಹಾಗೂ ಪಟ್ಟಣಗಳ, ಆರೋಗ್ಯ, ಪೊಲೀಸ್, ನೈರ್ಮಲ್ಯದ ವಿಷಯಗಳ ಬಗೆಗಿನ ಆಡಳಿತದ ಬಗೆಗೆ;

(ಋ) ಹಳ್ಳಿಯ ಮುಖ್ಯಸ್ಥರನ್ನು ನೇಮಿಸುವುದು;

(ೠ) ಆಸ್ತಿಯನ್ನು ಉಪಭೋಗಿಸುವುದು;

(ಎ) ವಿವಾಹಗಳು;

(ಏ) ಸಾಮಾಜಿಕ ಪದ್ಧತಿಗಳು

(೨) "ಕಾದಿರಿಸಿದ ಅರಣ್ಯ" ಎಂದರೆ ೧೮೯೧ರ ಅಸ್ಸಾಂ ಅರಣ್ಯ ಕಟ್ಟಳೆಯ ಅಡಿಯಲ್ಲಿ ಬರುವ ಪ್ರದೇಶಗಳು ಅಥವಾ ಜಾರಿಯಲ್ಲಿರುವ ಯಾವುದೇ ಆಜ್ಞೆಯಂತೆ ಎಂದು ಭಾವಿಸಬೇಕು.

೪. ಸ್ವಾಯತ್ತ ಜಿಲ್ಲೆ ಹಾಗೂ ಸ್ವಾಯತ್ತ ಪ್ರದೇಶಗಳಲ್ಲಿ ನ್ಯಾಯಾಡಳಿತ

(೧) ಸ್ವಾಯತ್ತ ಪ್ರದೇಶಗಳಲ್ಲಿಯ ಪ್ರಾದೇಶಿಕ ಮಂಡಳಿ, ಮತ್ತು ಸ್ವಾಯತ್ತ ಜಿಲ್ಲೆಯ ಜಿಲ್ಲಾ ಮಂಡಳಿ ಮತ್ತು ಪ್ರಾದೇಶಿಕ ಮಂಡಳಿಯಿಂದ ಅಧಿಕಾರ ಪಡೆದಿರುವ ಬೇರೆ ಯಾವುದೇ ಸಂಸ್ಥೆಗಳು ಹಳ್ಳಿಯ ಮಂಡಳಿ ಅಥವಾ ನ್ಯಾಯಾಲಯಗಳನ್ನು ರಚಿಸಿ ಈ ಅನುಬಂಧದ ಪ್ಯಾರಾ ೫ರ ಉಪಪ್ಯಾರಾ (೧)ರಡಿಯಲ್ಲಿ ಬರುವ ದಾವೆ, ಇತರ ಪ್ರಕರಣಗಳನ್ನು ವಿಚಾರಿಸಬಹುದು. ಬೇರೆ ಯಾವ ನ್ಯಾಯಾಲಯಕ್ಕೆ ಹೊರತು ಪಡಿಸಿ ಹೀಗೆ ರಚನೆ ಹೊಂದಿದ ನ್ಯಾಯಾಲಯಗಳ

ವಿಚಾರಣಾಧಿಕಾರಿ ಹಾಗೂ ಇತರ ಆಡಳಿತ ಸಿಬ್ಬಂದಿಯನ್ನು ನೇಮಿಸಬಹುದು, ಆದರೆ ಅವರು ಈ ಅನುಬಂಧದ ಪ್ಯಾರಾ (೩)ರಲ್ಲಿ ತಿಳಿಸಿದಂತೆ ಕಾರ್ಯ ನಿರ್ವಹಿಸುವರು.

(೨) ಸಂವಿಧಾನದಲ್ಲಿ ಸೂಚಿಸಿದ ವಿಷಯಕ್ಕೆ ಅಡಚಣೆಯಾಗದಂತೆ, ಸ್ವಾಯತ್ತ ಪ್ರದೇಶದ ಪ್ರಾದೇಶಿಕ ಮಂಡಳಿಯಿಂದ ಈ ಬಗೆಗೆ ರಚಿಸಲಾದ ನ್ಯಾಯಾಲಯ, ಅಥವಾ ಪ್ರಾದೇಶಿಕ ಮಂಡಳಿ, ಜಿಲ್ಲಾ ಮಂಡಳಿಗಳಿಲ್ಲದೇ ಹೋದಲ್ಲಿ ಅವುಗಳ ಪರವಾಗಿ ಮೇಲ್ಮನವಿಗಳನ್ನು ವಿಚಾರಿಸುವ ಅಧಿಕಾರ ಈ ಮಂಡಳಿಗೆ ಮಾತ್ರವಿದೆಯೇ ಹೊರತು, ರಾಜ್ಯದ ಬೇರೆ ಯಾವ ನ್ಯಾಯಾಲಯಕ್ಕೂ ಇಲ್ಲ.

೫. ೧೯೦೮ರ ಸಿವಿಲ್ ಪ್ರೊಸೀಜರ್ ಕೋಡ್ ಮತ್ತು ೧೮೯೮ರ ಕ್ರಿಮಿನಲ್ ಪ್ರೊಸೀಜರ್ ಕೋಡ್‌ಗಳಡಿಯಲ್ಲಿ ಪ್ರಾದೇಶಿಕ ಮತ್ತು ಜಿಲ್ಲಾ ಮಂಡಳಿಗಳ ಮತ್ತು ಇತರ ನ್ಯಾಯಾಲಯಗಳ ಅಧಿಕಾರಿಗಳ ದಾವೆ, ಅಪರಾಧಗಳ ವಿಚಾರಣೆಯ ಅಧಿಕಾರ.

(೧) ದಾವೆಗಳ ಹಾಗೂ ಇತರ ಪ್ರಕರಣಗಳ ವಿಚಾರಣೆಗೆ ಅಥವಾ ಸ್ವಾಯತ್ತ ಜಿಲ್ಲೆ ಮತ್ತು ಪ್ರದೇಶಗಳಲ್ಲಿಯ ಶಾಸನದ ಬಗೆಗೆ ಅಥವಾ ಇಂಡಿಯನ್ ಪೀನಲ್ ಕೋಡಿನಡಿಯಲ್ಲಿಯ ಮರಣದಂಡನೆ ಜೀವಾವಧಿ ಶಿಕ್ಷೆ ಹಾಗೂ ಐದು ವರ್ಷ ಅವಧಿಗಿಂತ ಕಡಿಮೆ ಶಿಕ್ಷೆ ಪಡೆದ ಹಾಗೂ ಸದ್ಯ ಜಾರಿಯಲ್ಲಿರುವ ಕಾನೂನುಗಳ ವಿಚಾರಣೆಯ ಬಗೆಗೆ ರಾಜ್ಯಪಾಲರಿಗೆ, ನೇಮಕ ಮಾಡುವ ಅಧಿಕಾರವಿದೆ. ೧೯೦೮ರ ಹಾಗೂ ೧೮೯೮ರ ಕಾನೂನಿನ ಅಡಿಯಲ್ಲಿ ಬರಬಹುದಾದ ಅಪರಾಧಗಳನ್ನು ವಿಚಾರಣೆಗೆ ಗುರಿಪಡಿಸುವ ಅಧಿಕಾರವನ್ನು ರಾಜ್ಯಪಾಲರು ಹೊಂದಿದ್ದಾರೆ.

(೨) ರಾಜ್ಯಪಾಲರಿಗೆ, ಜಿಲ್ಲಾ ಮಂಡಳಿ, ಪ್ರದೇಶ ಮಂಡಳಿಗಳಿಗೆ ನೀಡಿರಬಹುದಾದ ಅಧಿಕಾರವನ್ನು ಮೊಟಕುಗೊಳಿಸುವ ಹಿಂತೆಗೆದುಕೊಳ್ಳುವ ಅಧಿಕಾರವಿದೆ.

(೩) ಈ ಪ್ಯಾರಾದಲ್ಲಿ ನಿರ್ದಿಷ್ಟವಾಗಿ ಸೂಚಿಸಿದಂತೆ ೧೯೦೮ರ ಸಿವಿಲ್ ಪ್ರೊಸೀಜರ್ ಕೋಡ್ ಹಾಗೂ ೧೮೯೮ರ ಕ್ರಿಮಿನಲ್ ಪ್ರೊಸೀಜರ್ ಕೋಡುಗಳು, ಸ್ವಾಯತ್ತ ಜಿಲ್ಲೆ ಹಾಗೂ ಸ್ವಾಯತ್ತ ಪ್ರದೇಶಗಳ ದಾವೆ, ಪ್ರಕರಣಗಳಿಗೆ ಅನ್ವಯಿಸಲಾರವು.

೬. ಪ್ರಾಥಮಿಕ ಶಾಲೆಗಳನ್ನು ಆರಂಭಿಸಲು ಜಿಲ್ಲಾ ಮಂಡಳಿಯ ಅಧಿಕಾರಗಳು ಸ್ವಾಯತ್ತ ಹಾಗೂ ಆಡಳಿತ ನಡೆಸುವ ಆಸ್ಪತ್ರೆಗಳನ್ನು ಮಾರುಕಟ್ಟೆಗಳನ್ನು ಬನ್ನಿ ದೊಡ್ಡಿ, ದೋಣಿ ಸಂಚಾರ, ಮೀನುಗಾರಿಕೆ, ರಸ್ತೆ, ಜಲಮಾರ್ಗ, ಜಿಲ್ಲೆಯ ಭಾಷೆ ಹಾಗೂ ಶಿಕ್ಷಣ ಮಾಧ್ಯಮ ಮುಂತಾದ ವಿಷಯಗಳ ಬಗೆಗೆ ಅಧಿಕಾರ ಹೊಂದಿದೆ.

೭. ಜಿಲ್ಲೆ ಮತ್ತು ಪ್ರದೇಶದ ನಿಧಿ

(೧) ಸಂವಿಧಾನದ ಅವಕಾಶಗಳಂತೆ ಜಿಲ್ಲೆ ಅಥವಾ ಪ್ರದೇಶಗಳ ಆಡಳಿತ ಆದಾಯಕ್ಕೆ ಸಂದಿರಬಹುದಾದ ಹಣದಿಂದ ಆಯಾ ಸ್ವಾಯತ್ತ ಜಿಲ್ಲೆ ಅಥವಾ ಸ್ವಾಯತ್ತ ಪ್ರದೇಶದ ನಿಧಿಯನ್ನು ಸ್ಥಾಪಿಸುವುದು ಕಡ್ಡಾಯವಾಗಿದೆ.

(೨) ಜಿಲ್ಲಾ ಮಂಡಳಿ ಹಾಗೂ ಪ್ರಾದೇಶಿಕ ಮಂಡಳಿಗಳು ರಾಜ್ಯಪಾಲರ ಅನುಮತಿಯಿಂದ ಜಿಲ್ಲಾ ನಿಧಿಯ ವ್ಯವಸ್ಥಾಪನೆ ಅಥವಾ ಪ್ರಾದೇಶಿಕ ನಿಧಿಗಳ ಬಗೆಗೆ ನಿಯಮಗಳನ್ನು ರಚಿಸಿ, ಆ ನಿಯಮಗಳಡಿಯಲ್ಲಿ ಆ ನಿಧಿಯಿಂದ ಹಣ ತೆಗೆದುಕೊಳ್ಳುವ ಹಾಗೂ ನಿಧಿಗೆ

ಹಣ ನೀಡುವ ನಿಯಮಗಳನ್ನು ರಚಿಸಬಹುದು.

೮. ಭೂಕಂದಾಯ ನಿರ್ಣಯಿಸುವ, ಆಕರಿಸುವ, ಹೇರುವ ಅಧಿಕಾರಗಳು

(೧) ಸ್ವಾಯತ್ತ ಪ್ರದೇಶದ, ಪ್ರಾದೇಶಿಕ ಮಂಡಳಿಯು ತನ್ನ ಪ್ರದೇಶದಲ್ಲಿಯ ಮತ್ತು ಸ್ವಾಯತ್ತ ಜಿಲ್ಲಾ ಮಂಡಳಿಯು ತನ್ನ ಪ್ರದೇಶದಲ್ಲಿ ಎಲ್ಲಾ ಭೂಮಿಯ ಮೇಲೆ, ಸ್ವಾಯತ್ತ ಜಿಲ್ಲೆಯಲ್ಲಿಯ ಪ್ರಾದೇಶಿಕ ಮಂಡಳಿಯನ್ನು ಹೊರತುಪಡಿಸಿ, ಮಿಕ್ಕ ಭೂಮಿಯ ಮೇಲೆ ಕಂದಾಯ ಹೇರುವ, ಆಕರಿಸುವ ಮತ್ತು ನಿರ್ಣಯಿಸುವ ನಿಯಮಗಳನ್ನು ಸದ್ಯ ಅಸ್ಸಾಂ ಸರಕಾರದಿಂದ ಜಾರಿಯಲ್ಲಿರುವಂತೆ ನಿರ್ಣಯಿಸುವ ಅಧಿಕಾರ ಹೊಂದಿವೆ.

(೨) ಸ್ವಾಯತ್ತ ಪ್ರದೇಶದ ಪ್ರದೇಶ ಮಂಡಳಿ, ಜಿಲ್ಲಾ ಮಂಡಳಿ, ಜಿಲ್ಲೆಯಲ್ಲಿರುವ ಪ್ರದೇಶ ಮಂಡಳಿ ಬಿಟ್ಟು ಎಲ್ಲಾ ಪ್ರದೇಶಗಳ ಭೂಮಿಯ ಮೇಲೆ ಕರಗಳನ್ನು ಮತ್ತು ಕಟ್ಟಡದ ಕರಗಳನ್ನು, ಸುಂಕಗಳನ್ನು ಆ ಪ್ರದೇಶಗಳಲ್ಲಿ ವಾಸಿಸುತ್ತಿರುವ ವ್ಯಕ್ತಿಗಳಿಂದ ವಸೂಲಿ ಮಾಡಬಹುದು.

(೩) ಸ್ವಾಯತ್ತ ಜಿಲ್ಲೆಯ ಮಂಡಳಿಯು, ತನ್ನ ಜಿಲ್ಲೆಯಡಿಯಲ್ಲಿ ಈ ಕೆಳಕಂಡ ಕರಗಳನ್ನು ಹೇರುವ ಹಾಗೂ ವಸೂಲಿ ಮಾಡುವ ಅಧಿಕಾರವನ್ನು ಹೊಂದಿದೆ :–

(ಅ) ವೃತ್ತಿ ಕರ, ವ್ಯಾಪಾರ ಹಾಗೂ ಉದ್ಯೋಗ

(ಆ) ವಾಹನಗಳ, ಪ್ರಾಣಿಗಳ ಹಾಗೂ ದೋಣಿಗಳ ಕರ

(ಇ) ಮಾರುಕಟ್ಟೆ ಪ್ರವೇಶ ದರ ವಸ್ತುಗಳ ಮೇಲೆ, ದೋಣಿಗಳಲ್ಲಿ ಕೊಂಡು ಹೋಗುವ ವಸ್ತು ಮತ್ತು ವ್ಯಕ್ತಿಗಳ ಮೇಲೆ ಸುಂಕವಿಧಿಸುವ ಮತ್ತು

(ಈ) ಆಸ್ಪತ್ರೆ, ಶಾಲೆ ಮತ್ತು ರಸ್ತೆಗಳ ವ್ಯವಸ್ಥಾಪನೆಗೆಂದೇ ಕರಗಳು.

೪. ಪ್ರದೇಶ ಮಂಡಳಿ ಅಥವಾ ಜಿಲ್ಲಾ ಮಂಡಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಯಂತ್ರಕಗಳನ್ನು ರಚಿಸುವುದರ ಮೂಲಕ, ಉಪ ಪ್ಯಾರ(೨) ಮತ್ತು (೩)ರಲ್ಲಿ ನಿರ್ಧರಿಸಿದ ಕರಗಳನ್ನು ಹೇರುವ ಹಾಗೂ ವಸೂಲಿ ಮಾಡಲು ಅನುವು ಮಾಡಿಕೊಡಬೇಕು.

೯. ಗಣಿಗಳ ಅಭಿವೃದ್ಧಿಗಾಗಿ ಲೈಸೆನ್ಸ್ ನೀಡುವುದು ಹಾಗೂ ಗುತ್ತಿಗೆ ನೀಡುವುದು

(೧) ಅಸ್ಸಾಂ ಸರಕಾರವು ಸ್ವಾಯುತ್ತ ಜಿಲ್ಲೆಗಳಲ್ಲಿಯ ಗಣಿಗಳ ಅಭಿವೃದ್ಧಿಗೆ ಲೈಸೆನ್ಸ್ ಅಥವಾ ಗುತ್ತಿಗೆಯನ್ನು ಜಿಲ್ಲೆಯ ಮಂಡಳಿಯ ಪರವಾನಿಗೆ ಪಡೆಯದೆ ನೀಡುವಂತಿಲ್ಲ.

(೨) ಹೀಗೆ ಅಸ್ಸಾಂ ಸರಕಾರದಿಂದ, ಸ್ವಾಯತ್ತ ಜಿಲ್ಲೆಯ ಪ್ರದೇಶದಲ್ಲಿಯ ಗಣಿಗಾರಿಕೆಗಳ ಲೈಸೆನ್ಸ್ ಗುತ್ತಿಗೆಗಳಿಂದ ವರ್ಷ ವರ್ಷಕ್ಕೂ ಸಲ್ಲುವ ರಾಜಧನ ಅಥವಾ ರಾಜಾದಾಯವನ್ನು ಒಪ್ಪಂದದಂತೆ, ಜಿಲ್ಲೆಯ ಮಂಡಳಿಗೆ ಅದರ ಭಾಗವನ್ನು ನೀಡಬೇಕು.

(೩) ಈ ಹಂಚಿಕೆಯ ಬಗೆಗೆ ತಗಾದೆ ಉಂಟಾದಲ್ಲಿ ಅದನ್ನು ರಾಜ್ಯಪಾಲರಿಗೆ ಬಿಟ್ಟುಕೊಟ್ಟು ಅವರು ನಿರ್ಣಯಿಸಿದ ಮೊತ್ತ ವಿಧಿಸುವುದು ಉಪಪ್ಯಾರ (೨)ರಂತೆ, ಅವರ ನಿರ್ಣಯವೇ ಅಂತಿಮ ನಿರ್ಣಯ.

೧೦. ಜಿಲ್ಲೆಯಲ್ಲಿ ಗುಡ್ಡಗಾಡು ಜನಾಂಗದವರಲ್ಲದವರಿಂದ ಹಣ ಸಾಲ ನೀಡುವ ಮತ್ತು ವ್ಯಾಪಾರ ನಡೆಸುವ ಬಗೆಗೆ ಕ್ರಮ ಕೈಕೊಳ್ಳುವ ಅಧಿಕಾರ

(೧) ಸ್ವಾಯತ್ತ ಜಿಲ್ಲೆಯ ಜಿಲ್ಲಾ ಮಂಡಳಿಯು, ಜಿಲ್ಲೆಯಲ್ಲಿ ಅನ್ಯರಿಂದ ಅಂದರೆ ಗುಡ್ಡಗಾಡು

ಜನಾಂಗಕ್ಕೆ ಸೇರದೇ ಇರುವ ಜನರಿಂದ, ಹಣ ನೀಡುವ ಹಾಗೂ ವ್ಯಾಪಾರ ಮಾಡುವ ಬಗೆಗೆ ಕ್ರಮಗಳನ್ನು ನಿರ್ಣಯಿಸಬಹುದು.

(೨) ಈ ವಿಧವಾದ ನಿಯಮಗಳು :–

(ಅ) ಲೇವಾದೇವಿಯಲ್ಲಿ ಅಧಿಕ ಬಡ್ಡಿ ಮೊತ್ತವನ್ನು ನಿರ್ಧರಿಸುವುದು.

(ಇ) ಲೇವಾದೇವಿಯ ಲೆಕ್ಕ ಪತ್ರಗಳನ್ನು ಇಡುವ ಹಾಗೂ ಅವನ್ನು ಜಿಲ್ಲಾ ಮಂಡಳಿಯವರ ಪರವಾಗಿ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸುವುದು

(ಈ) ಪರಿಶಿಷ್ಟ ಪಂಗಡಕ್ಕೆ ಸೇರಿರದ ಯಾವ ವ್ಯಕ್ತಿಯೇ ಆಗಲಿ ಸಗಟು ವ್ಯಾಪಾರವನ್ನು ಪರವಾನಗಿ ಇಲ್ಲದೆ ನಡೆಸುವಂತಿಲ್ಲ.

ಆದರೆ ಈ ವಿಧವಾದ ನಿಯಮಗಳು ಜಿಲ್ಲಾ ಮಂಡಳಿಯ ಒಟ್ಟು ಸದಸ್ಯರ ನಾಲ್ಕನೇ ಮೂರು ಬಹುಮತದಿಂದ ಮಂಜೂರಾದಾಗ ಮಾತ್ರ ಜಾರಿಗೊಳಿಸಬಹುದು.

ಆದರೆ ಈ ವಿಧವಾಗಿ ನಿಯಮಗಳನ್ನು ರಚಿಸುವ ಮುನ್ನವೇ ಜಿಲ್ಲೆಯಲ್ಲಿ ಈ ವ್ಯವಹಾರವನ್ನು ನಡೆಸಿಕೊಂಡು ಬಂದಿರುವ ವ್ಯಕ್ತಿಗಳಿಗೆ ಪರವಾನಗಿಯನ್ನು ನಿರಾಕರಿಸಲಾಗದು.

೧೧. ಈ ಅನುಬಂಧದಡಿಯಲ್ಲಿಯ ಶಾಸನ, ಕಾನೂನು, ನಿಯಮಾವಳಿಗಳ ಪ್ರಕಟಣೆ:

ಎಲ್ಲಾ ಶಾಸನ, ಕಾನೂನು, ನಿಯಮಾವಳಿಗಳ, ಜಿಲ್ಲಾ ಮಂಡಳಿ ಅಥವಾ ಪ್ರದೇಶ ಮಂಡಳಿಗಳಿಂದ ಜಾರಿಗೊಳಿಸಿದ, ಎಲ್ಲವನ್ನೂ ಶೀಘ್ರವಾಗಿ ಗೆಜೆಟ್‌ನಲ್ಲಿ ಪ್ರಕಟಿಸಬೇಕು. ಈ ವಿಧವಾದ ಪ್ರಕಟಣೆಗಳಿಗೆ ಕಾನೂನಿನ ಸ್ಥಾನಮಾನವಿದೆ.

೧೨. ಈ ಸಂವಿಧಾನದಂತೆ, ಸಂಸತ್ತು ಹಾಗೂ ಶಾಸನ ಸಭೆಗಳ ಮಸೂದೆಗಳನ್ನು ಸ್ವಾಯತ್ತ ಜಿಲ್ಲೆ ಮತ್ತು ಸ್ವಾಯತ್ತ ಪ್ರದೇಶಗಳಿಗೆ ಅನ್ವಯಿಸುವ ಬಗೆಗೆ

(ಅ) ಈ ಅನುಬಂಧದಲ್ಲಿಯ ೩ನೆಯ ಪ್ಯಾರಾದಲ್ಲಿ ಸೂಚಿಸಲಾದ ಯಾವುದೇ ವಿಷಯದಲ್ಲಿ ಜಿಲ್ಲಾ ಮಂಡಳಿ ಅಥವಾ ಪ್ರದೇಶ ಮಂಡಳಿ ಮಾಡಿರಬಹುದಾದ ನಿಯಮಗಳಿಗೆ, ರಾಜ್ಯದ ಶಾಸಕಾಂಗದಿಂದ ರಚಿಸಿದ ಯಾವುದೇ ಕಾನೂನಿಂದ ಅಡಚಣೆ ಉಂಟಾಗದು. ರಾಜ್ಯದ ಶಾಸಕಾಂಗದ ಯಾವುದೇ ಕಾನೂನು; ಪಾನ ನಿರೋಧ ನಿಯಮಗಳು ಅಥವಾ ಮತ್ತು ಬರಿಸುವ ಮಾದಕ ಪಾನೀಯಗಳ ಸೇವನೆಯ ಮೇಲೆ ನಿರ್ಬಂಧನೆಗಳು, ಸ್ವಾಯತ್ತ ಜಿಲ್ಲೆ ಹಾಗೂ ಸ್ವಾಯತ್ತ ಪ್ರದೇಶಗಳಿಗೆ ಅನ್ವಯಿಸಲಾಗದು. ಆದರೆ ಎರಡೂ ವಿಷಯಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಮಂಡಳಿಯು ವಿಶೇಷ ರೂಪದಲ್ಲಿ ಏನಾದರೂ ನಿರ್ದೇಶನಗಳನ್ನಾಗಲೀ ಅಥವಾ ಮಾರ್ಪಾಟುಗಳನ್ನು ಸೂಚಿಸಿದ್ದರೆ ಜಾರಿಗೊಳ್ಳುವುದು.

(ಆ) ಸಂಸತ್ತಿನ ಹಾಗೂ ಶಾಸಕಾಂಗದ ಯಾವುದೇ ಮಸೂದೆಗಳು ಉಪನಿಂಧನೆ (ಅ) ಪ್ಯಾರಾದಲ್ಲಿ ಸೂಚಿಸಿದಂತೆ, ಸ್ವಾಯತ್ತ ಜಿಲ್ಲೆ ಅಥವಾ ಪ್ರದೇಶಗಳಿಗೆ ಅನ್ವಯಿಸುವ ಬಗೆಗೆ ರಾಜ್ಯಪಾಲರು, ಸಾರ್ವಜನಿಕ ಪ್ರಕಟಣೆಯ ಮೂಲಕ ಪ್ರಚುರಪಡಿಸಬೇಕು. ಅಥವಾ ಜಿಲ್ಲಾ ಮಂಡಳಿ ಹಾಗೂ ಪ್ರದೇಶ ಮಂಡಳಿಗಳು ನಿರ್ಣಯಿಸಿದಂತೆ, ಯಾವ ಭಾಗದಲ್ಲಿ ಎಷ್ಟರ ಮಟ್ಟಿಗೆ ಅನ್ವಯಿಸಲಾಗವುದು ಎಂಬುದನ್ನು ಮನವರಿಕೆ ಮಾಡಿಕೊಂಡು ನಿರ್ದೇಶನಗಳನ್ನು ನೀಡಬಹುದು.

೧೩. ಸ್ವಾಯತ್ತ ಜಿಲ್ಲೆಗಳ ಅಂದಾಜು ವಾರ್ಷಿಕ ಆಯ–ವ್ಯಯವನ್ನು ಹಣಕಾಸಿನ ವರದಿಯಲ್ಲಿ ಬೇರೆಯಾಗಿಯೇ ತೋರ್ಪಡಿಸಬೇಕು.

ಅಸ್ಸಾಂ ರಾಜ್ಯದ ಆದಾಯಕ್ಕೆ ಸಂಬಂಧಿಸಿದಂತೆ, ಸ್ವಾಯತ್ತ ಜಿಲ್ಲೆಗಳ ಆಯ–ವ್ಯಯಗಳನ್ನು ವಾರ್ಷಿಕ ಹಣಕಾಸಿನ ವರದಿಯಲ್ಲಿ ಬೇರೆಯಾಗಿ ತೋರ್ಪಡಿಸಬೇಕು. ಅಲ್ಲದೆ ಈ ವರದಿಯನ್ನು ಸಂವಿಧಾನದ ೧೭೭ ವಿಧಿಯಂತೆ ರಾಜ್ಯದ ಶಾಸಕಾಂಗದ ಮುಂದೆ ಮಂಡಿಸಬೇಕು.

೧೪. ಸ್ವಾಯತ್ತ ಜಿಲ್ಲೆಗಳ ಆಡಳಿತದ ಬಗೆಗೆ ವರದಿ ಮಾಡಲು ಆಯೋಗ ಒಂದನ್ನು ನೇಮಿಸಬೇಕು.

(೧) ಅಸ್ಸಾಂನ ರಾಜ್ಯಪಾಲರು, ಯಾವುದೇ ಸಮಯದಲ್ಲಿ ಆಯೋಗ ರಚಿಸಿ, ರಾಜ್ಯದಲ್ಲಿ ಸ್ವಾಯತ್ತ ಜಿಲ್ಲೆಗಳ ಆಡಳಿತದ ಬಗೆಗೆ ವರದಿಯನ್ನು ಕೋರಬಹುದು. ಕಾಲಕಾಲಕ್ಕೆ ತನಗೆ ಸೂಕ್ತವೆನಿಸಿದ ವಿಷಯಗಳ ಬಗೆಗೂ ಹಾಗೂ ನಿರ್ದಿಷ್ಟವಾಗಿ –

(ಅ) ಶೈಕ್ಷಣಿಕ, ವೈದ್ಯಕೀಯ ಮತ್ತು ಸಂಪರ್ಕ ಮಾಧ್ಯಮಗಳ

(ಆ) ಯಾವುದೇ ಜಿಲ್ಲೆಯಲ್ಲಿ ನೂತನ ಮತ್ತು ವಿಶೇಷ ಶಾಸನದ ರಚನೆಯ ಅವಶ್ಯಕತೆ

(ಇ) ಜಿಲ್ಲೆ ಹಾಗೂ ಪ್ರದೇಶ ಮಂಡಳಿಗಳಿಂದ ರಚಿಸಿದ ಕಾನೂನು ನಿಯಮಾವಳಿಗಳ ಆಡಳಿತ ಕುರಿತಂತೆ ಹಾಗೂ ಆಯೋಗವು ಅನುಸರಿಸಬೇಕಾದ ವಿಧಿ ವಿಧಾನಗಳು.

(೨) ಈ ವಿಧವಾಗಿ ಆಯೋಗವು ನೀಡಿರಬಹುದಾದ ವರದಿಯನ್ನು ರಾಜ್ಯಪಾಲರು ತಮ್ಮ ಶಿಫಾರಸ್ಸುಗಳೊಂದಿಗೆ ಸಂಬಂಧಿಸಿದ ಮಂತ್ರಿಯ ಮೂಲಕ, ರಾಜ್ಯ ಶಾಸಕಾಂಗದ ಮುಂದೆ ಮಂಡಿಸಬೇಕು. ಈ ಬಗೆಗೆ ಮನವಿಗಳೇನಿದ್ದರೂ ಅದನ್ನೂ ಸೂಕ್ತ ಸಲಹೆಗಳೊಂದಿಗೆ ಮಂಡಿಸಬಹುದು. ಅಸ್ಸಾಂ ಸರಕಾರವು ಕೈಗೊಂಡಿರುವ ವಿಷಯವನ್ನು ಪ್ರಸ್ತುತ ಪಡಿಸಬೇಕು.

(೩) ಅಸ್ಸಾಂನ ರಾಜ್ಯಪಾಲರು, ತಮ್ಮ ಮಂತ್ರಿಗಳಿಗೆ ವಿವಿಧ ಕಾರ್ಯಗಳನ್ನು ವಹಿಸಿಕೊಡುವಾಗ ವಿಶೇಷವಾಗಿ, ರಾಜ್ಯದ ಸ್ವಾಯತ್ತ ಜಿಲ್ಲೆಗಳ ವಿಕಾಸಕ್ಕೆಂದೇ ಓರ್ವ ಮಂತ್ರಿಯನ್ನು ನೇಮಿಸಬೇಕು.

೧೫. ಜಿಲ್ಲೆ ಹಾಗೂ ಪ್ರದೇಶ ಮಂಡಳಿಗಳ ನಿರ್ಣಯಗಳನ್ನು ಸ್ಥಗಿತಗೊಳಿಸುವ ಅಥವಾ ರದ್ದು ಪಡಿಸುವ ಬಗೆಗೆ

(೧) ಜಿಲ್ಲೆ ಹಾಗೂ ಪ್ರದೇಶದ ಮಂಡಳಿಗಳು ತೆಗೆದುಕೊಂಡ ನಿರ್ಣಯಗಳಿಂದ, ಭಾರತಕ್ಕೆ ಗಂಡಾಂತರ ಒದಗಬಹುದೆಂದು, ರಾಜ್ಯಪಾಲರಿಗೆ ಮನವರಿಕೆಯಾದಲ್ಲಿ ಅವರು ಆ ನಿರ್ಣಯಗಳನ್ನು ಸ್ಥಗಿತ ಅಥವಾ ರದ್ದು ಮಾಡಲೂಬಹುದು.

(೨) ಈ ವಿಧವಾಗಿ, ರಾಜ್ಯಪಾಲರಿಂದ ಮೇಲಿನ ಪ್ಯಾರಾದಲ್ಲಿ ಸೂಚಿಸಿದಂತೆ, ಕಾರಣಗಳನ್ನು ನೀಡಿ ಹೊರಡಿಸಿದ ಆಜ್ಞೆಯನ್ನು ಆದಷ್ಟೂ ಶೀಘ್ರದಲ್ಲಿ ಶಾಸಕಾಂಗದ ಮುಂದೆ ಮಂಡಿಸಬೇಕು. ಶಾಸಕಾಂಗ ಈ ಆಜ್ಞೆಯನ್ನು ತಿರಸ್ಕರಿಸದೇ ಇದ್ದಲ್ಲಿ ಜಾರಿಗೊಳಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೂ ಅದು ಜಾರಿಯಲ್ಲಿರುತ್ತದೆ.

ಒಂದು ವೇಳೆ, ಶಾಸಕಾಂಗದಿಂದ ಅದರ ಮುಂದುವರಿಕೆಗೆ ನಿರ್ಣಯ ಕೈಕೊಂಡಲ್ಲಿ ಅದು ಮುಂದೆ ಒಂದು ವರ್ಷ ಅವಧಿಯವರೆಗೂ ಮುಂದುವರಿಯುತ್ತದೆ. ಇಲ್ಲದೇ ಹೋದಲ್ಲಿ ಅದು ತಾನೇ ತಾನಾಗಿ ರದ್ದುಗೊಳ್ಳುವುದು.

(೩) ಈ ಪ್ಯಾರಾದಲ್ಲಿ ಸೂಚಿಸಿದಂತೆ, ರಾಜ್ಯಪಾಲರು, ಕಾರ್ಯಗಳನ್ನು ತಮ್ಮ ವಿವೇಚನೆಯಂತೆ ನೆರವೇರಿಸುವರು.

೧೬. ಜಿಲ್ಲೆ ಹಾಗೂ ಪ್ರದೇಶ ಮಂಡಳಿಗಳ ವಿಸರ್ಜನೆ : ಪ್ಯಾರಾ ೧೪ರಲ್ಲಿ ತಿಳಿಸಿದಂತೆ, ಆಯೋಗದ ಶಿಫಾರಸಿನಂತೆ, ರಾಜ್ಯಪಾಲರು, ಸಾರ್ವಜನಿಕ ಪ್ರಕಟಣೆಯ ಮೂಲಕ ಜಿಲ್ಲಾ ಹಾಗೂ ಪ್ರದೇಶ ಮಂಡಳಿಗಳನ್ನು ವಿಸರ್ಜಿಸಬಹುದು :–

(ಅ) ಮಂಡಳಿಗಳ ಪುನರ್‌ರಚನೆಗೆಂದೇ ಚುನಾವಣೆಗಳನ್ನು ನಡೆಸಬಹುದು.

(ಆ) ರಾಜ್ಯದ ಶಾಸಕಾಂಗದಲ್ಲಿ ಸೂಚಿಸಿದಂತೆ, ಆ ಪ್ರದೇಶಗಳ ಆಡಳಿತವನ್ನು ನೇರವಾಗಿ ತಾವೇ ನಡೆಸಬಹುದು ಅಥವಾ ಬೇರೆ ಯಾವುದೇ ಅಧಿಕಾರಿಗೆ ಆಡಳಿತ ನಡೆಸಿಕೊಂಡು ಹೋಗುವ ಆದೇಶವನ್ನೂ ನೀಡಬಹುದು, ಆದರೆ ಇದು ಒಂದು ವರ್ಷಕ್ಕೆ ಸೀಮಿತವಾಗಿದೆ. ಆದರೆ (ಅ) ದಲ್ಲಿ ಸೂಚಿಸಿದಂತೆ ಕಾರ್ಯಾಚರಣೆ ಕೈಕೊಂಡಾಗ ರಾಜ್ಯಪಾಲರು (ಆ)ದಲ್ಲಿ ಸೂಚಿಸಿದಂತೆ ಚುನಾವಣೆ ಜರುಗುವ ಮಂಡಳಿಯನ್ನು ಪುನರ್ ಘಟಿಸಬಹುದು.

ಆದರೆ, ಈ ದಿಶೆಯಲ್ಲಿ ಮುಂದಿನ ಕಾರ್ಯಾಚರಣೆ (ಆ) ಪ್ಯಾರಾದಲ್ಲಿ ಸೂಚಿಸಿದಂತೆ, ತೆಗೆದುಕೊಳ್ಳಲಾಗದು, ಏಕೆಂದರೆ ಈ ಬಗೆಗೆ ಮಂಡಳಿಗೆ ತನ್ನ ಪರಿಸ್ಥಿತಿಯನ್ನು ಶಾಸಕಾಂಗದ ಮುಂದೆ ವಿವರಿಸಲು ಆಸ್ಪದ ನೀಡಬೇಕು.

೧೭. ಭಾಗ IIರ ಪ್ಯಾರಾ ೧೯ಕ್ಕೆ ಸಂಬಂಧಿಸಿದ ಟೇಬಲ್‌ನಲ್ಲಿ ಸೂಚಿಸಿದ ಪ್ರದೇಶಗಳಿಗೆ ಅನ್ವಯಿಸಬಹುದಾದ ಅಂಶಗಳು

(೧) ಅಸ್ಸಾಂನ ರಾಜ್ಯಪಾಲರು :–

(ಅ) ರಾಷ್ಟ್ರಪತಿಯವರ ಸಮ್ಮತಿ ಪಡೆದು, ಸಾರ್ವಜನಿಕ ಪ್ರಕಟಣೆಯ ಮೂಲಕ ಭಾಗ IIರ ೧೯ನೇ ಪ್ಯಾರಾದಲ್ಲಿ ಸೂಚಿಸಿದ ಟೇಬಲ್ಲಿನ ಗುಡ್ಡಗಾಡು ಪ್ರದೇಶಗಳ ಬಗೆಯ ಕಾನೂನು ಅವಕಾಶಗಳನ್ನು ಆಡಳಿತದಲ್ಲಿ ರಾಜ್ಯಪಾಲರು ಅಳವಡಿಸಬಹುದು.

(ಆ) ಹಾಗೆಯೇ ಮೇಲಿನ ಟೇಬಲ್‌ನಲ್ಲಿ ಸೂಚಿಸಿದ ಭಾಗ IIರ ನಿರ್ದಿಷ್ಟ ಗುಡ್ಡಗಾಡು ಪ್ರದೇಶಗಳನ್ನು ಕೈಬಿಡಲೂಬಹುದು.

(೨) ಉಪಪ್ಯಾರಾ (೧)ರಲ್ಲಿ ಸೂಚಿಸಿದ ಗುಡ್ಡಗಾಡುಗಳ ಪ್ರದೇಶಗಳ ಬಗೆಗೆ ಸಾರ್ವಜನಿಕ ಪ್ರಕಟಣೆಯ ಮೂಲಕ ನೀಡಿದ ಮೇಲೆ ರಾಷ್ಟ್ರಪತಿಯವರು ಈ ಪ್ರದೇಶಗಳ ಆಡಳಿತವನ್ನು ಅಸ್ಸಾಂ ರಾಜ್ಯಪಾಲರ ಮೂಲಕ, ಸಂವಿಧಾನದ ಭಾಗ VIIರಲ್ಲಿ ತಿಳಿಸಿದಂತೆ, ಮೊದಲನೆಯ ಅನುಬಂಧ ಭಾಗ IVರಲ್ಲಿ ನಿರ್ದೇಶಿಸಿದಂತೆ ಆಡಳಿತ ಮುಂದುವರಿಸಬಹುದು.

೧೮. ಪರಿವರ್ತಕ ಕಾಲದ ಅವಕಾಶಗಳು

ಸಂವಿಧಾನ ಜಾರಿಗೆ ಬಂದ ಮೇಲೆ ಆದಷ್ಟು ಶೀಘ್ರವಾಗಿ ಜಿಲ್ಲಾ ಮಂಡಳಿಗಳು ರಚನೆಯಾಗುವವರೆಗೂ, ಅಸ್ಸಾಂನ ರಾಜ್ಯಪಾಲರು, ಈ ವಿಧವಾದ ಸ್ವಾಯತ್ತ ಜಿಲ್ಲೆಗಳ ಆಡಳಿತವನ್ನು ತಮ್ಮ ವಿವೇಚನೆಯಂತೆ, ಈ ಕೆಳಕಂಡ ಅವಕಾಶಗಳನ್ನು ಮುಂದುವರಿಸಿಕೊಂಡು ಹೋಗಬಹುದು.

(ಅ) ಸಂಸತ್ತಿನ ಹಾಗೂ ರಾಜ್ಯ ಶಾಸಕಾಂಗದ ಮಸೂದೆಗಳು, ರಾಜ್ಯಪಾಲರು ಸಾರ್ವಜನಿಕ ಪ್ರಕಟಣೆಯ ಮುಖಾಂತರ ಪ್ರಕಟಿಸಿದ ನಂತರವೇ ಅನ್ವಯಿಸಬಲ್ಲವು. ಹೀಗಾಗಿ ಯಾವುದೇ ಮಸೂದೆಗಳು ರಾಜ್ಯಪಾಲರು ನಿರ್ದೇಶಿಸಬಹುದಾದ ಅಂಶಗಳನ್ನೇ ಅವಲಂಬಿಸಿವೆ.

(ಆ) ರಾಜ್ಯದ ಉತ್ತಮ ಆಡಳಿತ ಹಾಗೂ ಶಾಂತಿಗಾಗಿ, ರಾಜ್ಯಪಾಲರು ಈ ಪ್ರದೇಶಗಳಲ್ಲಿ ಸಂಸತ್ತಿನಿಂದ ಅಥವಾ ಶಾಸಕಾಂಗದಿಂದ ಮಾಡಿರಬಹುದಾದ, ಸದ್ಯ ಜಾರಿಯಲ್ಲಿರುವ

ಶಾಸನಗಳನ್ನು ರಾಷ್ಟ್ರಪತಿಯವರ ಅವಗಾಹನೆಗೆ ತಂದು, ಅವರು ಸಮ್ಮತಿಸಿದ ನಂತರವೇ ಜಾರಿಗೊಳಿಸಬಹುದು.

(ಇ) (ಅ) ಮತ್ತು (ಆ)ಗಳಲ್ಲಿ ಸೂಚಿಸಲಾದ ಕಾರ್ಯಗಳ ಬಗೆಗೆ ರಾಜ್ಯಪಾಲರು ತಮ್ಮ ವಿವೇಚನೆಯಂತೆ ಕಾರ್ಯಾಚರಿಸಬಹುದು.

೧೯. ಗುಡ್ಡಗಾಡು ಪ್ರದೇಶಗಳು

ಭಾಗ I ಮತ್ತು II ರಲ್ಲಿಯ ಪ್ರದೇಶಗಳು ಕೆಳಗೆ ಸೂಚಿಸಿದ ಕೋಷ್ಟಕದಂತೆ ಅಸ್ಸಾಂ ರಾಜ್ಯದಲ್ಲಿ ಗುಡ್ಡಗಾಡು ಪ್ರದೇಶಗಳೆಂದೇ ತಿಳಿಯಬೇಕು; ಸಂವಿಧಾನ ಜಾರಿಗೆ ಬರುವ ಮುನ್ನ ಈ ಪ್ರದೇಶಗಳನ್ನು ಮೇಲೆ ತಿಳಿಸಿದ ಪ್ರದೇಶಗಳೆಂದೇ ಭಾವಿಸಬೇಕು.

## ಕೋಷ್ಟಕ

### ಭಾಗ I

೧. ಷಿಲಾಂಗ ನಗರ ಬಿಟ್ಟು ಖಾಸಿ ಮತ್ತು ಜೈಟಿಯಾ ಗುಡ್ಡ ಜಿಲ್ಲೆಗಳು
೨. ಗಾರೋ ಗುಡ್ಡಗಳ ಜಿಲ್ಲೆ
೩. ಲೂಷಾಯಿ ಗುಡ್ಡ ಜಿಲ್ಲೆ
೪. ನಾಗಾ ಗುಡ್ಡ ಜಿಲ್ಲೆ
೫. ಕಚಾರ ಜಿಲ್ಲೆಯ ಉಪವಿಭಾಗ ಉತ್ತರ ಕಚಾರ
೬. ಮುಝಾಸ್ ಭರತಪುರ ಹಾಗೂ ಸರೂಪಾಧರ ಹೊರತುಪಡಿಸಿ ನವಗಾಂಗ್‌ನ ಮಿಕಿರ್ ಗುಡ್ಡ ಪ್ರದೇಶ ಮತ್ತು ಸಿಬಸಾಗರ ಜಿಲ್ಲೆ

### ಭಾಗ II

೧. ಸಾದಿಯಾ ಮತ್ತು ಬಾಲಿಪಾರ ಗಡಿ ಪ್ರದೇಶಗಳು
೨. ಟಿರಾಪ್ ಗಡಿ ಅಂಚು (ಲಕ್ಷ್ಮಿಪುರಗಡಿ ಅಂಚು ಹೊರತು)
೩. ನಾಗಾ ಗುಡ್ಡಗಾಡು ಪ್ರದೇಶ

# ಏಳನೆಯ ಅನುಸೂಚಿ

## ವಿಧಿ ೨೧೭

## ಪಟ್ಟಿ – ೧ ಒಕ್ಕೂಟ ಪಟ್ಟಿ

*೧. ಭಾರತ ಪ್ರದೇಶ ಹಾಗೂ ಅದರ ಯಾವುದೇ ಭಾಗದ ರಕ್ಷಣೆ, ಸಾಮಾನ್ಯವಾಗಿ ರಕ್ಷಣೆಯ ಹಾಗೂ ತತ್ಸಂಬಂಧಿ, ಯುದ್ಧ ಸಮಯದಲ್ಲಿಯ ಕಾರ್ಯಗಳು, ಅದನ್ನು ಫಲಪ್ರದವಾಗಿ ಜಾರಿಗೊಳಿಸುವ ಹಾಗೂ ಯುದ್ಧಾ ನಂತರ ಅದನ್ನು ನಿಯಂತ್ರಿಸುವುದು, ಕೊನೆಗೊಳಿಸುವುದು.

೨. ಕೇಂದ್ರ ತನಿಖಾ ಮಂಡಳಿ

೩. ಭಾರತ ಪ್ರದೇಶದಲ್ಲಿ **ರಕ್ಷಣೆ ಹಾಗೂ ವಿದೇಶ ವ್ಯವಹಾರಗಳು, ಭಾರತದ ಭದ್ರತೆಗಾಗಿ ರಚಿಸುವ ಪ್ರತಿಬಂಧಕಾಜ್ಞೆ

***೪. ನೌಕಾದಳದ ರಚನೆ, ತರಬೇತಿ, ನಿಯಂತ್ರಣ, ಮಿಲಿಟರಿ, ವಾಯುಪಡೆ ಒಕ್ಕೂಟದ ಹಾಗೂ ಸಧ್ಯದಲ್ಲಿ ಅನುಬಂಧ ಒಂದು ಭಾಗ III ರಲ್ಲಿಯ ರಾಜ್ಯಗಳಲ್ಲಿ ನಿಯಮಿಸಿದಂತೆ.

೫. ಸಂಸತ್ತಿನ ಕಾಯ್ದೆಯಿಂದ ಪೋಷಿಸಿದ ಉದ್ದಿಮೆಗಳು, ರಕ್ಷಣೆ ಹಾಗೂ ಸಮರಕ್ಕೆ ಸಂಬಂಧಿಸಿದುದು

೬. ನೌಕಾದಳ, ಮಿಲಿಟರಿ, ವಾಯುದಳ ಕಾರ್ಯಗಳು

೭. ಕ್ಯಾಂಟೋನ್ಮೆಂಟ್ ದಂಡಿನ ಪ್ರದೇಶದ ಸ್ಥಳೀಯ ಸರಕಾರಗಳ ರಚನೆ, ಅವುಗಳ ಅಧಿಕಾರ, ವಸತಿ ಸೌಕರ್ಯ, ಕ್ಷೇತ್ರ ವಿಂಗಡಣೆ, ಪ್ರದೇಶ

೮. ಅಸ್ತ್ರಗಳು, ಮದ್ದುಗುಂಡುಗಳು, ಸ್ಫೋಟಕಗಳು

೯. ಅಣುಶಕ್ತಿ ಅಗತ್ಯವಿರುವ ಲೋಹಸಂಪನ್ಮೂಲ ಉತ್ಪಾದನೆಗಾಗಿ

೧೦. ಒಕ್ಕೂಟದ ಇತರ ದೇಶಗಳೊಂದಿಗೆ ವ್ಯವಹರಿಸುವ ವಿದೇಶ ವ್ಯವಹಾರಗಳು

೧೧. ರಾಯಭಾರಿ, ಕಾನ್ಸುಲೇಟ್ ಹಾಗೂ ವ್ಯಾಪಾರ ಪ್ರಾತಿನಿಧ್ಯ.

೧೨. ಸಂಯುಕ್ತ ರಾಷ್ಟ್ರ ಸಂಘ

೧೩. ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸುವುದು ಹಾಗೂ ಅದರ ನಿರ್ಣಯಗಳನ್ನು ಕಾರ್ಯಗತಗೊಳಿಸುವುದು

೧೪. ಯುದ್ಧ ಹಾಗೂ ಶಾಂತಿ

೧೫. ವಿದೇಶಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವುದು ಮತ್ತು ಅನುಷ್ಠಾನಗೊಳಿಸುವುದು

---

* ರಕ್ಷಣೆಯ ಉದ್ದೇಶಗಳಿಗಾಗಿ, ಭೂಸ್ವಾಧೀನಗೊಳಿಸುವ ಮತ್ತು ಸಮರಾಭ್ಯಾಸ ಹಾಗೂ ತರಬೇತಿಗಳಿಗೆ ಈ ವಿಷಯವನ್ನು ೪೩ನೇ ಎಂಟ್ರಿ ಅಡಕವಾಗಿದೆ.

** ಪದಗಳು, ರಕ್ಷಣೆ, ವಿದೇಶ ವ್ಯವಹಾರ, ಭಾರತದ ರಕ್ಷಣೆಗಳನ್ನು 'ರಾಜ್ಯದ ಕಾರಣ'ಗಳೆಂದೆ ತಿಳಿಸಿದ್ದು, ಅದನ್ನು ರಾಜ್ಯ ಪಟ್ಟಿಯ ಒಂದನೇ ಎಂಟ್ರಿಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಸೇರಿಸಲಾಗಿದೆ.

*** ಮೊದಲನೆಯ ಅನುಬಂಧ ಭಾಗ IIIರಲ್ಲಿಯ ರಾಜ್ಯಗಳಲ್ಲಿ ಕೈಬಿಡಲಾಗಿದೆ. ಏಕೆಂದರೆ ರಚನಾ ಸಮಿತಿಯ ಅಧ್ಯಕ್ಷರು ಬಲವಾಗಿ ವಿರೋಧಿಸಿದರು.

೧೬. ವಿದೇಶಿ ನ್ಯಾಯವಿವಕ್ಷೆ
೧೭. ವಿದೇಶೀ ರಾಷ್ಟ್ರಗಳೊಂದಿಗಿನ ವ್ಯಾಪಾರ ಹಾಗೂ ವಾಣಿಜ್ಯ
೧೮. ವಿದೇಶೀ ಸಾಲಗಳು
೧೯. ಪೌರತ್ವ–ವಿದೇಶೀ–ಪ್ರಾಕೃತಿಕ
೨೦. ಗಡೀಪಾರು ಮಾಡುವುದು
೨೧. ವೀಸಾ ಹಾಗೂ ಪಾಸ್‌ಪೋರ್ಟ್
೨೨. ಪ್ರದೇಶ, ಸಮುದ್ರ, ವಾಯುಮಂಡಳದಲ್ಲಿ, ಅಂತರರಾಷ್ಟ್ರೀಯ ಶಾಸನಗಳ ವಿರುದ್ಧ ಮಾಡಲಾದ ಅಪರಾಧಗಳು.
೨೩. ಭಾರತ ಪ್ರದೇಶಕ್ಕೆ ಸೇರ್ಪಡಿಸಿಕೊಳ್ಳುವುದು, ಹೊರಗೆ ಹಾಕುವುದು, ಆಶ್ರಯ ನೀಡುವುದು
೨೪. ಭಾರತದ ಹೊರಗಿರುವ ತೀರ್ಥಯಾತ್ರೆ ಸ್ಥಳಗಳು
೨೫. ಬಂದರುಗಳು, ಸಾಗರ ಆಸ್ಪತ್ರೆಗಳು, ರೋಗ ನಿರೋಧಕಗಳ ಕ್ರಮ
೨೬. ಭಾರತ ಸರಕಾರದಿಂದ ಗಡಿ ನಿರ್ಣಯಕ್ಕೆ ಸಂಬಂಧಿಸಿದಂತೆ ಆಮದು, ರಫ್ತು ಸುಂಕಗಳು
೨೭. * ಅಂಚೆ ದೂರ ತಂತಿಗಳ
೨೮. ** ದೂರವಾಣಿ, ರೇಡಿಯೋ, ಪ್ರಸಾರ ಹಾಗೂ ಇತರ ಪ್ರಸಾರ ಮಾಧ್ಯಮಗಳು
೨೯. ಅಂಚೆ ಉಳಿತಾಯ ಯೋಜನೆ
೩೦. ರಾಜ್ಯಗಳ ಹಾಗೂ ಇತರರಿಂದ ವಾಯುಮಾರ್ಗ, ವಿಮಾನಗಳು, ವಾಯುಯಾನ, ವಿಮಾನ ನಿಲ್ದಾಣಗಳು, ವಾಯುಯಾನದ ಸಂಘಟನೆ, ಕ್ರಮಗಳು, ವೈಮಾನಿಕ ಶಿಕ್ಷಣ, ತರಬೇತಿ
೩೧. ಸಂಸತ್ತಿನ ಶಾಸನದಿಂದ ನಿರ್ಧರಿಸಿರುವ ರಾಷ್ಟ್ರೀಯ ಹೆದ್ದಾರಿಗಳು
೩೨. ದೋಣಿ ಹಾಗೂ ದೋಣಿಗಳ ಮೂಲಕ ಒಳನಾಡಿನ ಜಲಮಾರ್ಗಗಳು ಸಂಸತ್ತಿನಿಂದ ನಿರ್ಧರಿಸಿದ ರಾಷ್ಟ್ರೀಯ ಜಲಮಾರ್ಗಗಳೆಂದು ನಿರ್ಧರಿಸಿದವು, ಯಂತ್ರ ಸಹಾಯದಿಂದ ಸಂಚರಿಸುವ ದೋಣಿ ಹಾಗೂ ಪ್ರಯಾಣಿಕರ ಸಂಚಾರದ ದೋಣಿಗಳು
೩೩. ರಾಜ್ಯಗಳಿಂದ ಹಾಗೂ ಇತರರಿಂದ ಯುದ್ಧ ಹಡಗುಗಳು, ಮತ್ತು ನೌಕಾ ಸಂಚಾರ, ಸಮುದ್ರಯಾನದ ಹಡಗುಗಳು, ಹಡಗು ಉದ್ದಿಮೆ, ಶಿಕ್ಷಣ, ತರಬೇತಿ
೩೪. ನೌಕಾಧಿಕಾರದ ವ್ಯಾಪ್ತಿಗೆ ಒಳಪಟ್ಟ ಪ್ರದೇಶಗಳು
೩೫. ಹಿರಿಯ ಬಂದರುಗಳು ಸಂಸತ್ತಿನ ಶಾಸನದಲ್ಲಿ ತಿಳಿಸಲಾದ, ಅವುಗಳ ರಚನೆ, ಅಧಿಕಾರ, ಬಂದರು ಅಧಿಕಾರಿಗಳ ಅಧಿಕಾರ
೩೬. ಹಡಗುಗಳ ಮತ್ತು ವಿಮಾನಗಳ ರಕ್ಷಣೆಗೆ ದೀಪದ ಗೋಪುರ, ದೀಪ
೩೭. ವಾಯು ಹಾಗೂ ಸಮುದ್ರ ಮಾರ್ಗಗಳ ಪ್ರಯಾಣ

---

* ರಾಜ್ಯದ 'ಅಂಚೆ ಮತ್ತು ತಂತಿ' ವಿಭಾಗಗಳ ಮೇಲೆ ಸಂಸತ್ತಿನ ಅಧಿಕಾರವನ್ನು ನಿರ್ಬಂಧಿಸಲು, ಸದ್ಯ ಮೊದಲನೆಯ ಅನುಬಂಧ ಭಾಗ III ರಾಜ್ಯಗಳಿಗೆ ಸಂಬಂಧಿಸಿದಂತೆ ವಿಧಿ ೨೨೪ಬಿ ನೋಡಿರಿ.

** ದೂರವಾಣಿ, ನಿಯಂತ್ರಣದ ಬಗೆಗೆ ಸಂಸತ್ತಿನ ಅಧಿಕಾರವನ್ನು ನಿರ್ಬಂಧಿಸುವಲ್ಲಿ ಟೆಲಿಫೋನ್, ರೇಡಿಯೋ, ಪ್ರಸಾರ ಹಾಗೂ ಇತರ ಮಾಧ್ಯಮಗಳಿಗೆ ವಿಧಿ ೨೨೪ (ಅ) ನೋಡಿರಿ.

೩೮. ಒಕ್ಕೂಟ ರೈಲ್ವೆ, ರೈಲುಗಳ ಕ್ರಮಬದ್ಧತೆ, ಅವುಗಳ ರಕ್ಷಣೆ, ಕನಿಷ್ಠ ಮತ್ತು ಗರಿಷ್ಠ ಪ್ರಯಾಣ ದರಗಳು, ನಿಲ್ದಾಣಗಳು, ಸೇವೆಗಳು, ವಸ್ತುಗಳ ಸಾಗಾಟದ ಮೇಲೆ ವಿಧಿಸುವ ಹಾಗೂ ಪ್ರಯಾಣಿಕರ ಪ್ರಯಾಣದ ಮೇಲೆ ವಿಧಿಸುವ ಶುಲ್ಕಗಳು, ಅವರ ರಕ್ಷಣೆಯ ಆಡಳಿತದ ಮೇಲಿನ ನಿಯಂತ್ರಣ.

೩೯. ದಿನಾಂಕ ೧೫ ಆಗಸ್ಟ್ ೧೯೪೭ ರಂದು ರಾಷ್ಟ್ರೀಯ ಸಂಸ್ಥೆಗಳೆಂದು ಜಾರಿಯಲ್ಲಿದ್ದ ಇಂಪೀರಿಯಲ್ ಲೈಬ್ರರಿ, ಇಂಡಿಯನ್ ಮ್ಯೂಸಿಯಂ, ಇಂಪೀರಿಯಲ್ ವಾರ್ ಮ್ಯೂಸಿಯಂ, ವಿಕ್ಟೋರಿಯಾ ಮೆಮೋರಿಯಲ್ ಹಾಗೂ ಭಾರತ ಸರಕಾರದಿಂದ ಧನ ಸಹಾಯ ಪಡೆದ ಮತ್ತು ರಾಷ್ಟ್ರೀಯ ಮಹತ್ವದ ದೃಷ್ಟಿಯಿಂದ, ಸಂಸತ್ತು ಶಾಸನದಿಂದ ಸಾರಿರಬಹುದಾದ ಸಂಸ್ಥೆಗಳು.

೪೦. ದಿನಾಂಕ ೧೫ ಆಗಸ್ಟ್ ೧೯೪೭ರಂದು 'ಬನಾರಸ್ ಹಿಂದೂ ವಿಶ್ವವಿದ್ಯಾಲಯ' ಹಾಗೂ 'ಅಲಿಘಡ್ ಮುಸ್ಲಿಂ ವಿಶ್ವವಿದ್ಯಾಲಯ' ಸಂಸ್ಥೆಗಳು.

೪೧. ಸರ್ವೆ ಆಫ್ ಇಂಡಿಯಾ, ಜಿಯೊಲಾಜಿಕಲ್, ಬೊಟಾನಿಕಲ್ ಮತ್ತು ಜೂವಲಾಜಿಕಲ್ ಸರ್ವೆ ಆಫ್ ಇಂಡಿಯಾ, ಯೂನಿಯನ್ ಮೀಟಿಯೊರಾಲಾಜಿಕಲ್ ಸಂಸ್ಥೆಗಳು.

೪೨. ರಾಜ್ಯದ ಶಾಸಕಾಂಗದ ಶಾಸನದಂತೆ, ಸಂಸತ್ತಿನಿಂದ ನಿರ್ಣಯಿಸಿದ್ದನ್ನು ಹೊರತುಪಡಿಸಿ, ಒಕ್ಕೂಟದ ಆಸ್ತಿಗಳು ಅದರ ಆದಾಯಗಳು ರಾಜ್ಯಗಳಲ್ಲಿಯ ಆಸ್ತಿಗಳು.

೪೩. IIIನೆಯ ಲಿಸ್ಟ್‌ನಲ್ಲಿ ಹೇಳಲಾದ ನಿಯಮಗಳಿಗೊಳಪಟ್ಟಂತೆ ಒಕ್ಕೂಟದ ಉದ್ದೇಶಗಳಿಗಾಗಿ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ, ಇಲ್ಲವೆ ಪಡೆದುಕೊಳ್ಳುವುದಕ್ಕಾಗಿ ಮತ್ತು ಆ ಉದ್ದೇಶಕ್ಕಾಗಿ ಪಡೆದುಕೊಳ್ಳಬಹುದಾದ ಆಸ್ತಿಗೆ ಕೊಡಬಹುದಾದ ಪರಿಹಾರದ ತತ್ವಗಳನ್ನು ನಿರ್ಣಯಿಸುವುದು.

೪೪. ಭಾರತದ ರಿಜರ್ವ್ ಬ್ಯಾಂಕು.

೪೫. ಒಕ್ಕೂಟದ ಸಾರ್ವಜನಿಕ ಸಾಲ

೪೬. ನಾಣ್ಯ ಚಲಾವಣೆ, ವಿದೇಶೀ ವಿನಿಮಯ ನಾಣ್ಯ ಮತ್ತು ಕಾನೂನು ಬದ್ಧ ಚಾಲ್ತಿ ಹಣ.

೪೭. ಬ್ಯಾಂಕ್ ವ್ಯವಹಾರ

೪೮. ಚಕ್ಕುಗಳು, ವಿನಿಮಯದ ಬಿಲ್ಲುಗಳು, ಪ್ರಾಮಿಸರಿ ಪತ್ರ ಮತ್ತು ಆ ತರಹದ ಇತರ ದಸ್ತಾವೇಜುಗಳು.

೪೯. ವಿಮೆ.

೫೦. ನಿಗಮಗಳು, ಎಂದರೆ ವ್ಯಾಪಾರೀ ನಿಗಮಗಳ ಸ್ಥಾಪನೆ, ನಿಯಮಿತಗೊಳಿಸುವಿಕೆ ಮತ್ತು ಅವುಗಳನ್ನು ಮುಚ್ಚುವುದು. ಇವುಗಳಲ್ಲಿ ಬ್ಯಾಂಕುಗಳು, ವಿಮಾ ಮತ್ತು ಹಣಕಾಸು ಸಂಸ್ಥೆಗಳೂ ಸೇರುತ್ತವೆ. ಆದರೆ ಇವುಗಳಲ್ಲಿ ಸಹಕಾರಿ ಸೊಸೈಟಿಗಳು ಮತ್ತು ನಿಗಮಗಳು–ಅವು ವ್ಯಾಪಾರಿ ಅಥವಾ ಒಂದು ರಾಜ್ಯಕ್ಕೇ ಸೀಮಿತವಾಗಿರದ ಆದರೆ ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿದುದು.

೫೧. ಪೇಟೆಂಟ್‌ಗಳು, ಕಾಪಿರೈಟ್‌ಗಳು, ಆವಿಷ್ಕಾರಗಳು, ಮಾದರಿಗಳು, ಟ್ರೇಡ್‌ಮಾರ್ಕ್‌ಗಳು ಮತ್ತು ವಾಣಿಜ್ಯ ಚಿಹ್ನೆಗಳು.

೫೨. ಸುಪ್ರೀಮ್ ಕೋರ್ಟಿನ ಸ್ಥಾಪನೆ, ವ್ಯವಸ್ಥೆ ಮತ್ತು ಅಧಿಕಾರ ಕ್ಷೇತ್ರದ ಮತ್ತು ಅಧಿಕಾರಗಳ ಮತ್ತು ಇದಕ್ಕಾಗಿ ಸಂಗ್ರಹಿಸಲಾದ ಶುಲ್ಕ.

೫೩. ಭಾರತದ ಭೂಪ್ರದೇಶದಲ್ಲಿರುವ ಯಾವುದೇ ರಾಜ್ಯದಲ್ಲಿ ತನ್ನ ಪ್ರಧಾನ ಪೀಠ ಹೊಂದಿರುವ ಉಚ್ಚ ನ್ಯಾಯಾಲಯದ ಅಧಿಕಾರ ಕ್ಷೇತ್ರವನ್ನು ವಿಸ್ತರಿಸುವುದು – ಈಗ ಸದ್ಯ ಒಂದನೆಯ ಅನುಸೂಚಿಯ ಭಾಗ III ರಲ್ಲಿ ನಮೂದಿಸಲಾದ ರಾಜ್ಯಗಳನ್ನು ಹೊರತುಪಡಿಸಿ ಮತ್ತು ಯಾವುದೇ ಉಚ್ಚ

ನ್ಯಾಯಾಲಯದ ಅಧಿಕಾರ ಕ್ಷೇತ್ರವನ್ನು ಆ ರಾಜ್ಯದ ಹೊರಗಿನ ಯಾವುದೇ ಕ್ಷೇತ್ರದಿಂದ ಹೊರತು ಪಡಿಸುವುದು.

೫೪. ಈ ಪಟ್ಟಿಯಲ್ಲಿನ ಯಾವುದೇ ವಿಷಯಗಳ ಮೇಲೆ ಸುಪ್ರೀಂ ಕೋರ್ಟಿನ ಅಧಿಕಾರವನ್ನು ಹೊರತುಪಡಿಸಿ ಇತರ ಎಲ್ಲಾ ನ್ಯಾಯಾಲಯದ ಅಧಿಕಾರ ಮತ್ತು ಅಧಿಕಾರ ಕ್ಷೇತ್ರ.

೫೫. ಜನಗಣತಿ.

೫೬. ಒಕ್ಕೂಟದ ಉದ್ದೇಶಕ್ಕಾಗಿ ವಿಚಾರಣೆ, ಸರ್ವೆ ಮತ್ತು ಅಂಕಿ ಅಂಶಗಳು.

೫೭. ಈ ಕೆಳಗಿನ ಉದ್ದೇಶಗಳಿಗಾಗಿ ಇರುವ ಒಕ್ಕೂಟದ ಸಂಸ್ಥೆಗಳು ಎಂದರೆ ಸಂಶೋಧನೆ, ಔದ್ಯೋಗಿಕ ಅಥವಾ ತಾಂತ್ರಿಕ ತರಬೇತಿ ಅಥವಾ ವಿಶೇಷ ಅಧ್ಯಯನಗಳ ಪ್ರೋತ್ಸಾಹ.

೫೮. ಒಕ್ಕೂಟದ ಸಾರ್ವಜನಿಕ ಸೇವೆಗಳು ಮತ್ತು ಒಕ್ಕೂಟದ ಲೋಕಸೇವಾ ಆಯೋಗ

೫೯. ಒಕ್ಕೂಟದ ಕರ್ಮಚಾರಿಗಳಿಗೆ ಸಂಬಂಧಿಸಿದ ಔದ್ಯೋಗಿಕ ವಿವಾದಗಳು.

೬೦. ರಾಷ್ಟ್ರೀಯ ಮಹತ್ವದವುಗಳೆಂದು ಸಂಸತ್ತಿನಿಂದ ಘೋಷಿಸಲ್ಪಟ್ಟ ಐತಿಹಾಸಿಕ ಸ್ಮಾರಕಗಳು, ಪುರಾತತ್ವ ಸ್ಥಳಗಳು ಇತ್ಯಾದಿ.

೬೧. ತೂಕ ಮತ್ತು ಅಳತೆಗಳ ಪ್ರಮಾಣ ಹಾಗೂ ಮಾನದಂಡಗಳನ್ನು ನಿಗದಿಪಡಿಸುವುದು.

೬೨. ಅಫೀಮಿನ ಕೃಷಿ ಮತ್ತು ಸಿದ್ಧಪಡಿಸುವುದು ಮತ್ತು ಮಾರಾಟ, ರಫ್ತು

೬೩. ಸಂಸತ್ತು ತನ್ನ ಕಾನೂನಿನಲ್ಲಿ ಯಾವುದೇ ಅತ್ಯಂತ ಅಪಾಯಕಾರಿ ರೀತಿಯಲ್ಲಿ ಹೊತ್ತಿಕೊಳ್ಳುವಂತಹ ಪೆಟ್ರೋಲಿಯಂ ಮತ್ತು

೬೪. ಸಂಸತ್ತು ತನ್ನ ಕಾಯಿದೆಯ ಮೂಲಕ ಯಾವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಅತ್ಯವಶ್ಯಕವೆಂದು ತೋರಿದ ಕೈಗಾರಿಕೆಗಳ ಅಭಿವೃದ್ಧಿಗಾಗಿ ಒಕ್ಕೂಟದಲ್ಲಿರಬೇಕಾಗಿದೆಯೋ ಅಂತಹ ಕೈಗಾರಿಕೆಗಳ ಅಭಿವೃದ್ಧಿ.

೬೫. ಗಣಿಗಳು ಮತ್ತು ತೈಲ ಬಾವಿಗಳಲ್ಲಿ ಸುರಕ್ಷತೆ ಮತ್ತು ಕಾರ್ಮಿಕರ ಕ್ಷೇಮ ಇವುಗಳನ್ನು ಕ್ರಮಪಡಿಸುವುದು.

೬೬ ಗಣಿಗಳು ಮತ್ತು ತೈಲ ಬಾವಿಗಳ ಮತ್ತು ಖನಿಜಾಭಿವೃದ್ಧಿಗಳನ್ನು ಸಾರ್ವಜನಿಕ ಹಿತಾಸಕ್ತಿಯಿಂದ ಎಷ್ಟರಮಟ್ಟಿಗೆ ಒಕ್ಕೂಟದ ನಿಯಂತ್ರಣದಲ್ಲಿರಬೇಕಾಗುತ್ತದೆ ಎಂದು ಸಂಸತ್ತು ಕಾಯಿದೆಯ ಮೂಲಕ ಘೋಷಿಸುವುದು.

೬೭. ಯಾವುದೇ ರಾಜ್ಯದ ಯಾವುದೇ ಭಾಗದಲ್ಲಿ ಸದ್ಯ ಒಂದನೆಯ ಅನುಸೂಚಿಯ ಭಾಗ ೧ ಮತ್ತು ಭಾಗ ೨ರಲ್ಲಿ ನಮೂದಿಸಲಾದ ಸಿಬ್ಬಂದಿಯ ಅಧಿಕಾರ ಕ್ಷೇತ್ರ ಮತ್ತು ಅಧಿಕಾರಗಳನ್ನು ಈ ರೀತಿ ನಮೂದಿಸಲಾದ ರಾಜ್ಯದ ಯಾವುದೇ ಭಾಗಗಳಿಗೆ ವಿಸ್ತರಿಸುವುದು, ಆದರೆ ರಾಜ್ಯದ ಒಪ್ಪಿಗೆ ಇಲ್ಲದೆ ಹಾಗೆ ಮಾಡಲು ಬರುವುದಿಲ್ಲ. ಈ ಸಿಬ್ಬಂದಿಗೆ ಸೇರಿದವರ ಅಧಿಕಾರಗಳ ಮತ್ತು ಅಧಿಕಾರ ಕ್ಷೇತ್ರವನ್ನು ರಾಜ್ಯದ ಹೊರಗಡೆಯ ರೈಲ್ವೆಗಳಿಗೆ ಅನ್ವಯಿಸಲಾಗದು.

೬೮. ಸಂಸತ್ತಿಗೆ ಚುನಾವಣೆಗಳು, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗಳು ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ಅಂತಹ ಚುನಾವಣೆಗಳ ನಿಯಂತ್ರಣ.

೬೯. ರಾಷ್ಟ್ರಪತಿಗಳು ರಜೆ ಮೇಲೆ ತೆರಳಿದಾಗಿನ ಅವರ ಸಂಬಳ ಮತ್ತು ಭತ್ಯೆಗಳು ಒಕ್ಕೂಟ ಸರ್ಕಾರದ ಮಂತ್ರಿಗಳ ಮತ್ತು ರಾಜ್ಯಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಮತ್ತು ಲೋಕಸಭೆಯ ಸ್ಪೀಕರ್ ಮತ್ತು ಉಪ ಸ್ಪೀಕರ್‌ರವರ ಸಂಬಳ ಮತ್ತು ಭತ್ಯೆಗಳು, ಸಂಸತ್ತಿನ ಸದಸ್ಯರ ಸಂಬಳ, ಭತ್ಯೆ ಮತ್ತು

ವಿಶೇಷಾಧಿಕಾರ ಹಕ್ಕುಗಳು, ಭಾರತದ ಆಡಿಟರ್–ಜನರಲ್‌ರವರ ಸಂಬಳ ಭತ್ಯಗಳು ಮತ್ತು ಸೇವಾ ನಿಯಮಗಳು.

೭೦. ಸಂಸತ್ತಿನ ಸಮಿತಿಗಳೆದುರು ಹಾಜರಾಗಿ ಸಾಕ್ಷ್ಯ ನೀಡುವುದು ಅಥವಾ ದಾಖಲೆಗಳನ್ನು ಹಾಜರುಪಡಿಸುವುದನ್ನು ಜಾರಿ ಮಾಡುವುದು.

೭೧. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವಲಸೆ ಅಥವಾ ಸ್ಥಾನಾಂತರ.

೭೨. ಅಂತರರಾಜ್ಯ ಸಂಪರ್ಕ ನಿಷೇಧ.

೭೩. ಪಟ್ಟಿ IIರ ೩೩ನೆಯ ನಮೂದಿನ ನಿಬಂಧನೆಗಳಿಗೊಳಪಟ್ಟಂತೆ ಅಂತರ್ ರಾಜ್ಯ ವ್ಯಾಪಾರ ಮತ್ತು ವಾಣಿಜ್ಯ

೭೪. ಪ್ರವಾಹ ನಿಯಂತ್ರಣ, ನೀರಾವರಿ, ಜಲಸಂಚಾರ ಮತ್ತು ಜಲ ವಿದ್ಯುಚ್ಛಕ್ತಿ ಉದ್ದೇಶಗಳಿಗಾಗಿ ಅಂತರರಾಜ್ಯ ಜಲಮಾರ್ಗಗಳ ಅಭಿವೃದ್ಧಿ.

೭೫. ಭೂಪ್ರದೇಶದ ಆಚೆಗಿನ ನೀರಿನಲ್ಲಿ ಮೀನು ಹಿಡಿಯುವುದು ಮತ್ತು ಮತ್ಸ್ಯೋದ್ಯಮ.

೭೬. ಒಕ್ಕೂಟದ ಏಜೆನ್ಸಿಯಿಂದ ಉಪ್ಪಿನ ಉತ್ಪಾದನೆ ಮತ್ತು ವಿತರಣೆ; ಮತ್ತು ಇತರ ಏಜೆನ್ಸಿಗಳಿಂದ ಉಪ್ಪಿನ ಉತ್ಪಾದನೆ ಮತ್ತು ವಿತರಣೆಯ ನಿಯಂತ್ರಣ ಮತ್ತು ಕ್ರಮಗೊಳಿಸುವುದು.

೭೭. ಭಾರತದ ಯಾವುದೇ ಭಾಗಗಳಲ್ಲಿ ಒಕ್ಕೂಟಕ್ಕೆ ಧಕ್ಕೆಯುಂಟಾಗುವಂತಹ ಗಂಭೀರ ಸ್ವರೂಪದ ಆಪತ್ಕಾಲವನ್ನು ಎದುರಿಸಲು ಅವಶ್ಯವಾದ ವ್ಯವಧಾನಗಳು.

೭೮. ಭಾರತ ಸರಕಾರದ ಅಥವಾ ಯಾವುದೇ ರಾಜ್ಯ ಸರಕಾರದ ಲಾಟರಿಗಳು.

೭೯. ಸ್ಟಾಕ್ ಎಕ್ಸ್‌ಚೇಂಜ್ ಮತ್ತು ಸಟ್ಟಾ ವ್ಯಾಪಾರ ಮತ್ತು ಸ್ಟಾಂಪ್ ಕರವನ್ನು ಹೊರತಾದ ಇತರ ವ್ಯವಹಾರಗಳು.

೮೦. ವಿನಿಮಯ ಪತ್ರಗಳು, ಚಕ್ಕುಗಳು, ಪ್ರಾಮಿಸರಿ ನೋಟುಗಳು, ಟ್ರೇಡಿಂಗ್ ಬಿಲ್ಲುಗಳು, ಖಾತರಿ ಪತ್ರಗಳು, ವಿಮಾ ಪಾಲಿಸಿಗಳು, ಶೇರುಗಳ ವರ್ಗಾವಣೆ, ಸಾಲ ಪತ್ರಗಳು, ಪ್ರತಿನಿಧಿ ಮತ್ತು ಬದಲಿ ಪಾವತಿಗಳ ಮೇಲಣ ಸ್ಟಾಂಪ್ ಕರದ ದರ.

೮೧. ಕೃಷಿ ಭೂಮಿಯ ಹೊರತು ಇತರ ವಿಧದ ಆಸ್ತಿಯ ಮೇಲೆ ವಾರಸಾದ ಮೇಲೆ ಕರ.

೮೨. ಕೃಷಿ ಭೂಮಿಯ ಹೊರತು ಇತರೆ ಆಸ್ತಿಯ ಮೇಲಿನ ಆಸ್ತಿ ತೆರಿಗೆ.

೮೩. ರೈಲ್ವೆ ಮತ್ತು ವಿಮಾನ ಪ್ರಯಾಣಿಕರು ಮತ್ತು ಸರಕುಗಳ ಮೇಲಿನ ಶುಲ್ಕ ಮತ್ತು ರೈಲು ಪ್ರಯಾಣ ದರ ಮತ್ತು ಸರಕುಗಳ ದರಗಳ ಮೇಲಿನ ತೆರಿಗೆ.

೮೪. ಕೃಷಿಯೇತರ ಆದಾಯದ ಮೇಲೆ ತೆರಿಗೆ.

೮೫. ನಿಯಾತ ತೆರಿಗೆಯೂ ಸೇರಿದಂತೆ ಸುಂಕದ ಮೇಲಣ ತೆರಿಗೆ.

೮೬. ತಂಬಾಕಿನ ಮೇಲೆ ಸುಂಕ ಮತ್ತು ಭಾರತದಲ್ಲಿ ಸಿದ್ಧಪಡಿಸಿದ ಇತರ ವಸ್ತುಗಳು, ಇವುಗಳನ್ನು ಹೊರತುಪಡಿಸಿ :

(೧) ಮಾನವನ ಸೇವೆಗಾಗಿರುವ ಮದ್ಯ;

(೨) ಅಫೀಮು, ದೇಶೀಯ ಗಾಂಜಾ ಮತ್ತು ಇತರ ವಿಧದ ಮಯಕಜನಕ ಔಷಧಿಗಳು ಮತ್ತು ಮಯಕಜನಕವಲ್ಲದ ಔಷಧಿಗಳು, ಹಾಗೂ ಮದ್ಯಸಾರವುಳ್ಳ ಔಷಧಿ ಮತ್ತು ಸೌಂದರ್ಯ ಸಾಧನಗಳೂ ಹಾಗೂ ಮೇಲಿನ ಪ್ಯಾರಾದಲ್ಲಿ ಹೇಳಲಾದ ಇತರ ಯಾವುದೇ ವಸ್ತುಗಳನ್ನು

ಹೊಂದಿದ ವಸ್ತುಗಳು

೮೭. ಕಾರ್ಪೋರೇಷನ್ ತೆರಿಗೆ.

೮೮. ಕೃಷಿ ಭೂಮಿ ಹೊರತುಪಡಿಸಿ ವ್ಯಕ್ತಿಗಳ ಮತ್ತು ಕಂಪನಿಗಳ ಆಸ್ತಿಗಳ ಬಂಡವಾಳ ಬೆಲೆ – ಮತ್ತು ಕಂಪನಿಗಳ ಬಂಡವಾಳದ ಮೇಲೆ ತೆರಿಗೆ.

೮೯. ಈ ಪಟ್ಟಿಯಲ್ಲಿ ಹೇಳಲಾದ ವಿಷಯಗಳಲ್ಲದೆ ಇತರ ಕಾನೂನುಗಳ ವಿರುದ್ಧದ ಅಪರಾಧಗಳು

೯೦. ಈ ಪಟ್ಟಿಯಲ್ಲಿ ಸೇರಿರದ ಇತರ ಯಾವುದೇ ವಿಷಯಗಳ ಮೇಲಿನ ಶುಲ್ಕ, ಆದರೆ ಯಾವುದೇ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾದ ಶುಲ್ಕವನ್ನು ಹೊರತುಪಡಿಸಿ.

೯೧. ವಿಷಯಗಳ ಪಟ್ಟಿ II ಮತ್ತು IIIರಲ್ಲಿ ಹೇಳದೇ ಇರುವ ವಿಷಯ ಮತ್ತು ಈ ಪಟ್ಟಿಗಳಲ್ಲಿ ಹೇಳದೆ ಇರುವ ತೆರಿಗೆಗಳು.

## ಪಟ್ಟಿ II – ರಾಜ್ಯ ಪಟ್ಟಿ

೧. ಸಾರ್ವಜನಿಕ ಶಾಂತಿ ವ್ಯವಸ್ಥೆ (ಆದರೆ ನಾಗರಿಕ ಆಡಳಿತಕ್ಕಾಗಿ ನೌಕಾ, ಮಿಲಿಟರಿ, ಅಥವಾ ವಾಯುಸೇನೆಯ ಬಳಕೆಯನ್ನು ಹೊರತುಪಡಿಸಿ;) ಸಾರ್ವಜನಿಕ ಸುವ್ಯವಸ್ಥೆ ಕಾಯ್ದುಕೊಳ್ಳುವುದಕ್ಕಾಗಿ ನಿರೋಧಕ ಬಂಧನ, ಅಂತಹ ಬಂಧನಕ್ಕೊಳಪಟ್ಟ ವ್ಯಕ್ತಿಗಳು.

೨. ನ್ಯಾಯದಾನ, ಎಲ್ಲಾ ನ್ಯಾಯಾಲಯಗಳ ಸ್ಥಾಪನೆ ಮತ್ತು ವ್ಯವಸ್ಥೆ – ಸುಪ್ರೀಂ ಕೋರ್ಟನ್ನು ಹೊರತುಪಡಿಸಿ, ಮತ್ತು ಅದಕ್ಕಾಗಿ ಸಂಗ್ರಹಿಸಲಾದ ಶುಲ್ಕ.

೩. ಸುಪ್ರೀಂ ಕೋರ್ಟ್ ಹೊರತುಪಡಿಸಿ ಈ ಪಟ್ಟಿಯಲ್ಲಿ ಹೇಳಲಾದ ಎಲ್ಲಾ ವಿಷಯಗಳ ಬಗ್ಗೆ ಎಲ್ಲಾ ನ್ಯಾಯಾಲಯಗಳ ಅಧಿಕಾರಗಳು, ಬಾಡಿಗೆಗಳ ಮತ್ತು ಕಂದಾಯ ನ್ಯಾಯಾಲಯಗಳ ಕಾರ್ಯವ್ಯಾಪ್ತಿ ಕಾರ್ಯವಿಧಾನಗಳು.

೪. ರೈಲ್ವೆ ಮತ್ತು ಗ್ರಾಮ ಪೊಲೀಸು.

೫. ಬಂದೀಖಾನೆಗಳು, ಸುಧಾರಣಾ ಗೃಹಗಳು, ಬೋರ್ಸ್ಟಲ್ ಶಾಲೆಗಳು ಮತ್ತು ಇಂತಹ ಇತರ ಸಂಸ್ಥೆಗಳು ಮತ್ತು ಅವುಗಳಲ್ಲಿ ನಿರ್ಬಂಧಿತರಾದ ವ್ಯಕ್ತಿಗಳು, ಬಂಧಿಗಳ ವಿನಿಮಯಕ್ಕಾಗಿ ಇತರ ರಾಜ್ಯಗಳೊಡನೆ ವ್ಯವಸ್ಥೆ.

೬. ರಾಜ್ಯದ ಸಾರ್ವಜನಿಕ ಸಾಲ.

೭ ರಾಜ್ಯದ ಸಾರ್ವಜನಿಕ ಸೇವೆಗಳು ಮತ್ತು ರಾಜ್ಯ ಸಾರ್ವಜನಿಕ ಸೇವಾ ಆಯೋಗಗಳು.

೮. ರಾಜ್ಯಕ್ಕೆ ಸೇರಿದ ಅಥವಾ ನಿಹಿತಗೊಳಿಸಲಾದ ಕಾಮಗಾರಿಗಳು, ಭೂಮಿಗಳು ಮತ್ತು ಕಟ್ಟಡಗಳು.

೯. ಒಕ್ಕೂಟದ ಉಪಯೋಗಕ್ಕಾಗಿ ಹೊರತುಪಡಿಸಿ ಭೂಮಿಯನ್ನು ಕಡ್ಡಾಯವಾಗಿ ಸ್ವಾಧೀನ ಪಡಿಸಿಕೊಳ್ಳುವುದು. ಆದರೆ ಹೀಗೆ ಮಾಡುವಾಗ ಅದು ಪಟ್ಟಿ III ರಲ್ಲಿ ವಶಪಡಿಸಿಕೊಂಡ ಆಸ್ತಿಗೆ ಕೊಡಬೇಕಾದ ಪರಿಹಾರದ ಸಂಬಂಧವಾಗಿ ಹೇಳಲಾದ ತತ್ವಗಳ ಪ್ರಕಾರ ಸ್ವಾಧೀನಪಡಿಸಿಕೊಳ್ಳಲಾಗುವ ಆಸ್ತಿಗೆ ಕೊಡಬೇಕಾದ ಪರಿಹಾರವನ್ನು ನಿಗದಿಪಡಿಸುವಿಕೆ. ಇದು ರಾಜ್ಯದ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಆಸ್ತಿಗೂ ಅನ್ವಯಿಸುತ್ತದೆ.

೧೦. ರಾಜ್ಯದಿಂದ ಹಣಕಾಸು ಪಡೆಯುವ ಮತ್ತು ರಾಜ್ಯದಿಂದ ನಿಯಂತ್ರಿಸಲ್ಪಡುವ ಗ್ರಂಥ ಭಂಡಾರ, ವಸ್ತುಸಂಗ್ರಹಾಲಯ ಮತ್ತು ಇಂತಹ ಇತರ ಸಂಸ್ಥೆಗಳು.

೧೧. ರಾಜ್ಯ ಶಾಸನ ಸಭೆಗಳಿಗೆ ಚುನಾವಣೆಗಳು ಮತ್ತು ರಾಜ್ಯದ ರಾಜ್ಯಪಾಲರ ರಾಜ್ಯಕ್ಕೆ ನೇಮಕ ಮಾಡಬೇಕಾದ ರಾಜ್ಯಪಾಲರ ನೇಮಕಕ್ಕಾಗಿ ತಜ್ಞರ ಸಮಿತಿಯನ್ನು ನೇಮಿಸುವುದು; ಮತ್ತು ಇಂತಹ ಚುನಾವಣೆಗಳನ್ನು ನಿರ್ದೇಶಿಸುವುದಕ್ಕಾಗಿ ಮತ್ತು ನಿಯಂತ್ರಿಸುವುದಕ್ಕಾಗಿ.

೧೨. ರಾಜ್ಯದ ರಾಜ್ಯಪಾಲರ ರಜೆ ಭತ್ಯೆ, ವೇತನ ಮತ್ತು ಹಕ್ಕುಗಳು; ರಾಜ್ಯದ ಮಂತ್ರಿಗಳು ರಾಜ್ಯ ವಿಧಾನ ಸಭೆಯ ಸ್ಪೀಕರ್ ಮತ್ತು ಡೆಪ್ಯೂಟಿ ಸ್ಪೀಕರ್ ಮತ್ತು ವಿಧಾನ ಪರಿಷತ್ತನ್ನು ಹೊಂದಿದ್ದರೆ ಅದರ ಸಭಾಪತಿ ಮತ್ತು ಉಪಸಭಾಪತಿ ಇವರ ವೇತನ ಮತ್ತು ಭತ್ಯೆ; ಮತ್ತು ರಾಜ್ಯದ ಶಾಸಕಾಂಗದ ಸದಸ್ಯರ ವೇತನ, ಭತ್ಯೆಗಳು ಮತ್ತು ಅವರ ವಿಶೇಷ ಅಧಿಕಾರಗಳು.

೧೩. ರಾಜ್ಯ ಶಾಸನಸಭೆಯ ಸಮಿತಿಗಳೆದುರು ಸಾಕ್ಷ್ಯ ನೀಡಲು ಹಾಜರಾಗುವುದು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸುವುದನ್ನು ಜಾರಿ ಮಾಡುವುದು.

೧೪. ಸ್ಥಳೀಯ ಸಂಸ್ಥೆಗಳು, ಎಂದರೆ ಮುನಿಸಿಪಲ್ ಕಾರ್ಪೋರೇಷನ್‌ಗಳ ಸ್ಥಾಪನೆ, ಅವುಗಳ ಅಧಿಕಾರಗಳು, ಅಭಿವೃದ್ಧಿ ಟ್ರಸ್ಟ್‌ಗಳು, ಜಿಲ್ಲಾ ಬೋರ್ಡ್‌ಗಳು ಗಣಿ ನಿರ್ಧಾರ ವ್ಯವಸ್ಥೆ ಮತ್ತು ಸ್ಥಳೀಯ ಸ್ವಾಯತ್ತ ಸಂಸ್ಥೆಗಳ ಮತ್ತು ಗ್ರಾಮಾಡಳಿತಕ್ಕಾಗಿರುವ ಸ್ಥಳೀಯ ಸ್ವಾಯತ್ತ ಆಡಳಿತ.

೧೫. ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ, ಆಸ್ಪತ್ರೆಗಳು ಮತ್ತು ಔಷಧಾಲಯಗಳು; ಜನನ ಮರಣಗಳ ದಾಖಲೆ.

೧೬. ಯಾತ್ರೆಗೆ ಹೊರಡುವುದು ಭಾರತದ ಆಚೆಯ ಸ್ಥಳಗಳ ಯಾತ್ರೆಗಳನ್ನು ಬಿಟ್ಟು ಉಳಿದ ಎಲ್ಲಾ ಯಾತ್ರೆಗಳು.

೧೭. ಶವ ಹೂಳುವುದು ಮತ್ತು ಶವ ಹೂಳುವ ಸ್ಥಳಗಳು; ಶವವನ್ನು ಸುಡುವುದು ಹಾಗೂ ಶವವನ್ನು ಸುಡುವ ಸ್ಥಳಗಳು.

೧೮. ಪಟ್ಟಿ ಒಂದು ದಾಖಲು ೪೦ರಲ್ಲಿ ಸ್ಪಷ್ಟಗೊಳಿಸಿ ಶಿಕ್ಷಣವನ್ನು ಹೊರತುಪಡಿಸಿ ವಿಶ್ವವಿದ್ಯಾಲಯಗಳನ್ನು ಒಳಗೊಂಡ ಶಿಕ್ಷಣ.

೧೯. ಪಟ್ಟಿ ಒಂದರಲ್ಲಿ ಸ್ಪಷ್ಟಗೊಳಿಸಲಾಗದ ಇತರ ಸಂಪರ್ಕ ಸಾಧನಗಳು ಅಂದರೆ –ರಸ್ತೆಗಳು, ಸೇತುವೆಗಳು, ಹರಿಗೋಲುಗಳು; (ಪಟ್ಟಿ ಒಂದರ ಅಥವಾ ರೈಲುಗಳಿಗೆ ಸಂಬಂಧಪಟ್ಟ ಮುನ್ನೇರ್ಪಾಡುಗಳಿಗೆ ಅನುಗುಣವಾಗಿರುವ) ಅಪ್ರಮುಖ ರೈಲುಗಳು; ಪೌರಸಭೆಯ ರಸ್ತೆ ಬಂಡಿಗಳು; ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಮಾನು ಮತ್ತು ಪ್ರಯಾಣಿಕರನ್ನು ಕೊಂಡೊಯ್ಯುವ – ಕಂಬಗಳ ಮೇಲೆ ಆಧಾರವಿರುವ ಮಾರ್ಗ ಹಗ್ಗದ ದಾರಿಗಳು (Ropeways)ಗಳು; ಒಳನಾಡಿನ ಜಲಮಾರ್ಗಗಳು ಮತ್ತು ಅದರ ಸಂಚಾರ (ಇಂಥಾ ಜಲಮಾರ್ಗಗಳಿಗೆ ಸಂಬಂಧಿಸುವ ಪಟ್ಟಿ ೧ ಮತ್ತು ಪಟ್ಟಿ ೩ರ ಮುನ್ನೇರ್ಪಾಡುಗಳಿಗೆ ಅನುಗುಣವಾಗಿ) ಬಂದರುಗಳು (ಇವುಗಳ ಪಟ್ಟಿ ಒಂದರ ಪ್ರಮುಖ ಬಂದರುಗಳಿಗೆ ಸಂಬಂಧಿಸಿರುವ ಮುನ್ನೇರ್ಪಾಡುಗಳಿಗೆ ಅನುಗುಣವಾಗಿ) ಯಾಂತ್ರಿಕವಾಗಿ ನಡೆಸಲ್ಪಡದ ವಾಹನಗಳು.

೨೦. ನೀರು, ಅಂದರೆ ನೀರಿನ ಪೂರೈಕೆಗಳು, ನೀರಾವರಿ ಮತ್ತು ಕಾಲುವೆಗಳು, ಚರಂಡಿ ವ್ಯವಸ್ಥೆ ಮತ್ತು ಒಡ್ಡುಗಳು ಮತ್ತು ಪಟ್ಟಿ ಒಂದರ ದಾಖಲಾತಿ ೭೪ರಲ್ಲಿನ ಮುನ್ನೇರ್ಪಾಡುಗಳಿಗೆ ಅನುಗುಣವಾಗಿರುವ ಜಲಶಕ್ತಿ ಮತ್ತು ನೀರನ್ನು ಸಂಗ್ರಹಿಸುವುದು.

೨೧. ಕೃಷಿ ಶಿಕ್ಷಣ ಮತ್ತು ಸಂಶೋಧನೆಯನ್ನೂ ಒಳಗೊಂಡ ಕೃಷಿ, ಕೀಟಗಳ ವಿರುದ್ಧ ರಕ್ಷಣೆ ಮತ್ತು

ಸಸ್ಯ ರೋಗಗಳ ನಿವಾರಣೆ.

೨೨. ಜಾನುವಾರುಗಳ ತಳಿಯ ಸುಧಾರಣೆ ಮತ್ತು ಅವುಗಳ ರೋಗಗಳ ನಿವಾರಣೆ, ಪಶುಚಿಕಿತ್ಸಕ ತರಬೇತಿ ಮತ್ತು ಆಚರಣೆ.

೨೩. ದನಗಳ ದೊಡ್ಡಿ ಮತ್ತು ದನಗಳ ಅತಿಕ್ರಮಣವನ್ನು ತಡೆಗಟ್ಟುವುದು.

೨೪. ಭೂಮಿಯಲ್ಲಿನ ಮತ್ತು ಮೇಲಿನ ಹಕ್ಕುಗಳು, ಭೂಮಾಲಿಕ ಮತ್ತು ಗೇಣಿದಾರರ ಸಂಬಂಧಗಳನ್ನು ಒಳಗೊಂಡಿರುವ ಭೂ ಗೇಣಿಗಳು ಮತ್ತು ಭೂ ಬಾಡಿಗೆಗಳ ವಸೂಲಾತಿ, ಕೃಷಿ ಭೂಮಿಯ ಹಸ್ತಾಂತರ, ಭೂ ಅಭಿವೃದ್ಧಿ ಮತ್ತು ಕೃಷಿ ಸಾಲಗಳು; ನೆಲೆಸುವಿಕೆ.

೨೫. ಅಪ್ರಾಪ್ತ ವಯಸ್ಕರ ನ್ಯಾಯಾಲಯಗಳು, ಸಾಲದ ಹೊರೆಯನ್ನು ಹೊಂದಿರುವ ಜಪ್ತಿ ಮಾಡಿದ ಆಸ್ತಿಗಳು.

೨೬. ನಿಧಿ ನಿಕ್ಷೇಪಗಳು.

೨೭. ಅರಣ್ಯಗಳು

೨೮ ಗಣಿಗಳ ಮತ್ತು ತೈಲ ಸ್ಥಾವರಗಳು ಹಾಗೂ ಅದಿರುಗಳ ಬೆಳವಣಿಗೆ (ಇದು, ಪಟ್ಟಿ ಒಂದರ ಕೇಂದ್ರದ ನಿಯಂತ್ರಣದೊಳಗಿನ ನಿರ್ಬಂಧನೆ ಮತ್ತು ಬೆಳವಣಿಗೆಗೆ ಸಂಬಂಧಿಸಿದ ಮುನ್ನೇರ್ಪಾಡುಗಳಿಗೆ ಅನುಗುಣವಾಗಿರಬೇಕು).

೨೯. ಮೀನುಗಾರಿಕೆ.

೩೦. ಕಾಡು ಪಕ್ಷಿಗಳ ಮತ್ತು ಕಾಡು ಪ್ರಾಣಿಗಳ ರಕ್ಷಣೆ.

೩೧. ಅನಿಲ ಮತ್ತು ಅನಿಲ ಕಾರ್ಖಾನೆ.

೩೨. ರಾಜ್ಯದೊಳಗಿನ ವ್ಯಾಪಾರ ಮತ್ತು ವಾಣಿಜ್ಯ; ಮಾರುಕಟ್ಟೆಗಳು ಹಾಗೂ ಜಾತ್ರೆಗಳು.

೩೩. ಈ ಸಂವಿಧಾನದ ನಿಯಮ ೨೪೪ರ ಮುನ್ನೇರ್ಪಾಡುಗಳ ಉದ್ದೇಶಗಳಿಗಾಗಿ ಒಂದು ರಾಜ್ಯ ಇತರ ರಾಜ್ಯಗಳೊಂದಿಗೆ ಹೊಂದಿರುವ ವ್ಯಾಪಾರ, ವಾಣಿಜ್ಯ ಹಾಗೂ ವ್ಯವಹಾರದ ನಿಯಂತ್ರಣ.

೩೪. ಬಡ್ಡಿ ವ್ಯವಹಾರ ಮತ್ತು ಬಡ್ಡಿ ವ್ಯವಹಾರ ಮಾಡುವವರು; ಕೃಷಿ ಸಾಲದ ಪರಿಹಾರ.

೩೫. ಹೋಟೆಲುಗಳು ಮತ್ತು ಹೋಟೆಲುಗಳ ಮಾಲೀಕರು.

೩೬. ವಸ್ತುಗಳ ಉತ್ಪಾದನೆ, ಪೂರೈಕೆ ಮತ್ತು ವಿತರಣೆ.

೩೭. ಪ್ರಥಮ ಪಟ್ಟಿಯಲ್ಲಿನ ಮುನ್ನೇರ್ಪಾಡಿನಂತೆ ಕೇಂದ್ರದ ನಿಯಂತ್ರಣಗಳೊಳಗಿನ ಕೆಲವು ಉದ್ದಿಮೆಗಳ ಬೆಳವಣಿಗೆ, ತನ್ನ ರಾಜ್ಯದ ಉದ್ದಿಮೆಗಳ ಬೆಳವಣಿಗೆ.

೩೮. ಆಹಾರ ಮತ್ತು ಇತರ ವಸ್ತುಗಳ ಕಲಬೆರಕೆ.

೩೯. ಗುಣಮಟ್ಟಗಳನ್ನು ಸ್ಥಾಪಿಸುವುದನ್ನು ಹೊರತುಪಡಿಸಿ ಅಳತೆ ಮತ್ತು ತೂಕಗಳನ್ನು ನಿರ್ಧರಿಸುವುದು.

೪೦. ಮತ್ತೇರಿಸುವ ಮದ್ಯಗಳು, ಗಾಂಜಾ (ಒಂದನೆಯ ಪಟ್ಟಿಯ ಮುನ್ನೇರ್ಪಾಡುಗಳಿಗೆ ಅನುಗುಣವಾಗಿದೆ) ಮತ್ತು ಇತರ ಇಂದ್ರಿಯ ಸ್ಥಂಭನದ (ಮೂರನೆಯ ಪಟ್ಟಿಯ ಮುನ್ನೇರ್ಪಾಡುಗಳಿಗೆ ಅನುಗುಣವಾಗಿ) ಔಷಧಗಳ ಉತ್ಪಾದನೆ, ತಯಾರಿಕೆ, ಅವುಗಳನ್ನು ಹೊಂದಿರುವಿಕೆ, ಸಾಗಾಣಿಕೆ ಹಾಗೂ ಅವುಗಳನ್ನು ಕೊಳ್ಳುವುದು ಮತ್ತು ಮಾರುವುದು.

೪೧. ಬಡವರಿಗೆ ನೀಡುವ ಪರಿಹಾರ, ನಿರುದ್ಯೋಗ.

೪೨. ಪಟ್ಟಿ ಒಂದರಲ್ಲಿ ನಮೂದಿಸಿದ ಕಾರ್ಪೋರೇಷನ್‌ಗಳನ್ನು ಹೊರತುಪಡಿಸಿ, ಇತರ

ಕಾರ್ಪೋರೇಷನ್‌ಗಳ ಸ್ಥಾಪನೆ, ನಿಯಂತ್ರಣ ಮತ್ತು ಅವುಗಳನ್ನು ಮುಚ್ಚುವುದು.

೪೩. ಧರ್ಮಕಾರ್ಯಗಳು, ಧರ್ಮಕಾರ್ಯ ಸಂಸ್ಥೆಗಳು, ಧರ್ಮಕಾರ್ಯಗಳು ಮತ್ತು ಧಾರ್ಮಿಕ ದತ್ತಿಗಳು ಹಾಗೂ ಧಾರ್ಮಿಕ ಸಂಸ್ಥೆಗಳು.

೪೪. ರಂಗಭೂಮಿಗಳು, ನಾಟಕಗಳನ್ನು ಆಡುವುದು ಮತ್ತು ಚಲನಚಿತ್ರಗಳು (ಪ್ರದರ್ಶನಕ್ಕೆಂದು ಚಲನಚಿತ್ರಗಳನ್ನು ಮಂಜೂರಾತಿ ಹೊರತುಪಡಿಸಿ).

೪೫. ಪಣ ಒಡ್ಡುವುದು ಮತ್ತು ಜೂಜಾಡುವುದು.

೪೬. ಪ್ರತಿ ಎಕರೆಯ ಭೂ ಕಂದಾಯದ ನಿರ್ಧಾರ ಮತ್ತು ಕಂದಾಯದ ವಸೂಲಾತಿ, ಭೂಮಿಯ ದಾಖಲೆಗಳನ್ನು ಸಂರಕ್ಷಿಸುವುದು, ಕಂದಾಯದ ಸಲುವಾಗಿ ಭೂ ಸಮೀಕ್ಷೆ ಮತ್ತು ಭೂಮಿಯ ಹಕ್ಕುಗಳ ದಾಖಲೆಗಳು ಹಾಗೂ ಕಂದಾಯಗಳನ್ನು ಬೇರೆ ಇಡುವುದು.

೪೭. ಪಟ್ಟಿ ಒಂದರಲ್ಲಿನ ಮುನ್ನೇರ್ಪಾಡುಗಳನ್ನು ಬಿಟ್ಟು ಇತರ ಕಾಗದ ಪತ್ರಗಳಿಗೆ ಸಂಬಂಧಿಸಿದ ಸ್ಟ್ಯಾಂಪ್ ಸುಂಕದ ದರಗಳು.

೪೮. ಕೃಷಿ ಭೂಮಿ ಉತ್ತರಾಧಿಕಾರಕ್ಕೆ ಸಂಬಂಧಪಟ್ಟ ಸುಂಕಗಳು.

೪೯. ಕೃಷಿ ಭೂಮಿಗೆ ಸಂಬಂಧಿಸಿದಂತೆ, ಸ್ಥಿರಾಸ್ತಿಯ ಸುಂಕ.

೫೦. ಆಂತರಿಕ ಜಲಮಾರ್ಗಗಳಲ್ಲಿ ಸಾಗಿಸಲಾದ ಯಾತ್ರಿಕರ ಮತ್ತು ವಸ್ತುಗಳ ಮೇಲಿನ ತೆರಿಗೆಗಳು.

೫೧. ಕೃಷಿ ಆದಾಯದ ಮೇಲಿನ ತೆರಿಗೆ.

೫೨. ರಾಜ್ಯದಲ್ಲಿ ಉತ್ಪಾದಿಸಲಾದ ಅಥವಾ ತಯಾರಿಸಲಾದ ಈ ಕೆಳಗಿನ ವಸ್ತುಗಳ ಮೇಲಿನ ಅಬಕಾರಿ ಸುಂಕಗಳು ಮತ್ತು ಭಾರತದಲ್ಲಿ ಎಲ್ಲಿಯಾದರೂ ಉತ್ಪಾದಿಸಲಾದ ಅಥವಾ ತಯಾರಿಸಲಾದ ಇವುಗಳಿಗೆ ಹೋಲುವ ವಸ್ತುಗಳ ಮೇಲಿನ (Counter wailing) ಈಡು ಸುಂಕಗಳು ಮತ್ತು ಕಡಿಮೆ ದರದ ಸುಂಕಗಳು.

ಅ) ಮಾನವನ ಉಪಭೋಗಕ್ಕಾಗಿರುವ ನಶೆತರುವ ಮದ್ಯಗಳು

ಆ) ಗಾಂಜಾ, ಭಾರತೀಯ ಭಂಗಿ, ಇಂದ್ರಿಯ ಸ್ಥಂಭನ ಮತ್ತು ಇಂದ್ರಿಯ ಸ್ಥಂಭನಗಳನ್ನು ಹೊಂದಿಲ್ಲದ ಔಷಧಗಳು.

* ಆದರೆ, ಈ ದಾಖಲಾತಿ ಉಪ–ಪ್ಯಾರಾದ (ಬ)ದಲ್ಲಿರುವ ವಸ್ತುಗಳು ಅಂದರೆ ಮದ್ಯವನ್ನು ಒಳಗೊಂಡಿರುವ ವೈದ್ಯಕೀಯ ಮತ್ತು ಅಲಂಕಾರಿಕ ವಸ್ತುಗಳನ್ನು ಇಲ್ಲಿ ಸೇರಿಸಲಾಗಿಲ್ಲ.

೫೩. ಭೂಮಿ ಮತ್ತು ಕಟ್ಟಡಗಳ ಮೇಲಿನ ತೆರಿಗೆಗಳು.

೫೪. ಖನಿಜಗಳ ಹಕ್ಕುಗಳ ಮೇಲಿನ ತೆರಿಗೆಗಳು; ಇವುಗಳನ್ನು ಖನಿಜಗಳ ಬೆಳವಣಿಗೆಗೆ ಸಂಬಂಧಿಸಿದ ಪಾರ್ಲಿಮೆಂಟಿನ ಹೇರಿದ ಕಾಯಿದೆಯ ಮಿತಿಗಳಲ್ಲಿ ಹೇರಲಾಗುತ್ತದೆ.

೫೫. ಕ್ಯಾಪಿಟೇಶನ್ ತೆರಿಗೆಗಳು.

೫೬. ಉದ್ಯೋಗಗಳ, ವ್ಯಾಪಾರಗಳ, ಕಸಬುಗಳ ಮತ್ತು ವೃತ್ತಿಗಳ ಮೇಲಿನ ತೆರಿಗೆಗಳು.

೫೭. ಪ್ರಾಣಿಗಳ ಮತ್ತು ನಾವೆಗಳ ಮೇಲಿನ ತೆರಿಗೆಗಳು.

---

* ಪಟ್ಟಿ ಒಂದರ ದಾಖಲಾತಿ ೮೬ನ ಟಿಪ್ಪಣಿಯನ್ನು ನೋಡಿ (ಕೇಂದ್ರ ಪಟ್ಟಿ).

೫೮. ** ವಸ್ತುಗಳ ಮಾರಾಟ, ವಹಿವಾಟು ಅಥವಾ ಕೊಳ್ಳುವಿಕೆಯ ಮೇಲಿನ ತೆರಿಗೆಗಳು – ಇವುಗಳ ಸ್ಥಳದಲ್ಲಿ ರಾಜ್ಯದೊಳಗಿನ ವಸ್ತುಗಳ ಉಪಯೋಗ ಅಥವಾ ಉಪಭೋಗ ಮೇಲಿನ ತೆರಿಗೆಗಳು; ಜಾಹೀರಾತುಗಳ ಮೇಲಿನ ತೆರಿಗೆಗಳು.

೫೯. ರಸ್ತೆಯ ಮೇಲೆ ಓಡಾಡಲು ಯೋಗ್ಯವಾದ ವಾಹನಗಳ ಮೇಲೆ ತೆರಿಗೆಗಳು.

೬೦. ವಿದ್ಯುತ್ ಶಕ್ತಿಯ ಉಪಭೋಗ ಅಥವಾ ಮಾರಾಟದ ಮೇಲಿನ ಕರಗಳು.

೬೧. ಉಪಭೋಗ, ಉಪಯೋಗ ಅಥವಾ ಮಾರುವುದಕ್ಕಾಗಿ ವಸ್ತುಗಳನ್ನು ಸ್ಥಾನೀಯ ಪ್ರದೇಶಗಳೊಳಗೆ ತರುವುದರ ಮೇಲಿನ ತೆರಿಗೆಗಳು.

೬೨. ವಿಲಾಸಿ ವಸ್ತುಗಳ ಮೇಲಿನ ಕರಗಳು, ಮನರಂಜನೆಗಳ, ಕ್ರೀಡೆಗಳ, ಪಂದ್ಯಾಟಗಳ ಮತ್ತು ಜೂಜಾಟಗಳ ಮೇಲಿನ ಕರಗಳು.

೬೩. ಸುಂಕಗಳು.

೬೪. ಈ ಪಟ್ಟಿಯಲ್ಲಿನ ವಿಷಯಗಳ ಉದ್ದೇಶಕ್ಕಾಗಿರುವ ವಿಚಾರಣೆಗಳು ಮತ್ತು ಅಂಕಿ ಸಂಖ್ಯೆಗಳು.

೬೫. ಈ ಪಟ್ಟಿಯಲ್ಲಿರುವ ಯಾವುದೇ ವಿಷಯಗಳಿಗೆ ಸಂಬಂಧಿಸಿದ ಕಾಯಿದೆಗಳ ವಿರುದ್ಧದ ಅಪರಾಧಗಳು.

೬೬. ಈ ಪಟ್ಟಿಯಲ್ಲಿರುವ ಯಾವುದೇ ವಿಷಯಗಳಿಗೆ ಸಂಬಂಧಿಸಿದ ಶುಲ್ಕಗಳು; ಆದರೆ ಇದು ಯಾವುದೇ ನ್ಯಾಯಾಲಯ ತೆಗೆದುಕೊಂಡ 'ಶುಲ್ಕ'ವನ್ನು ಒಳಗೊಂಡಿರುವುದಿಲ್ಲ.

---

** ಸಂವಿಧಾನದ ಹಣಕಾಸಿನ ಮುನ್ನೇರ್ಪಾಡುಗಳ ಮೇಲಿನ ಪರಿಣತರ ಸಮಿತಿಯ ಶಿಫಾರಸುಗಳನ್ನು ಅನುಸರಿಸಿ ಈ ದಾಖಲು ಪತ್ರವನ್ನು ಸುಧಾರಿಸಲಾಗಿದೆ.

## ಪಟ್ಟಿ –೩ ಸಮವರ್ತಿ ಪಟ್ಟಿ (Concurrent List)

೧. ಅಪರಾಧದ ಕಾಯಿದೆ (Criminal Law) ಮತ್ತು ಈ ಸಂವಿಧಾನ ಜಾರಿಗೆ ಬಂದ ದಿನಾಂಕದಿಂದ ಭಾರತೀಯ ದಂಡ ನೀತಿ ಒಳಗೊಂಡಿರುವ ಎಲ್ಲಾ ವಿಷಯಗಳು; ಆದರೆ ಇದು ಪಟ್ಟಿ 'ಒಂದು' ಅಥವಾ ಪಟ್ಟಿ 'ಎರಡ'ರಲ್ಲಿ ನಮೂದಿಸಲಾದ ಯಾವುದೇ ವಿಷಯಗಳಿಗೆ ಸಂಬಂಧಿಸಿದ ಕಾಯಿದೆಗಳ ವಿರುದ್ಧ ಮಾಡಿದ ಅಪರಾಧಗಳನ್ನು; ಮತ್ತು ನೌಕಾಪಡೆ, ಮಿಲಿಟರಿ ಹಾಗೂ ವಾಯುದಳಗಳು ನಾಗರಿಕ ಶಕ್ತಿಗೆ ನೆರವಾಗುವಲ್ಲಿ ಮಾಡಿದ ಅಪರಾಧಗಳನ್ನು ಇವು ಒಳಗೊಂಡಿರುವುದಿಲ್ಲ.

೨. ಈ ಸಂವಿಧಾನ ಜಾರಿಯಲ್ಲಿ ಬರುವ ದಿನದಂದು ಅಸ್ತಿತ್ವದಲ್ಲಿರುವ ಅಪರಾಧ ಕಾರ್ಯವಿಧಾನ ದಂಡ ಪ್ರಕ್ರಿಯೆ ಸಂಹಿತೆ ಒಳಗೊಂಡಂತೆ – (Code of Criminal Procedure).

೩. ಕೈದಿಗಳ ಮತ್ತು ಆಪಾದನೆಗೆ ಒಳಗಾದ ಜನರನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾಗಿಸುವುದು.

೪. ಈ ಸಂವಿಧಾನ ಜಾರಿಗೆ ಬಂದಂದಿನಿಂದ ನಾಗರಿಕ ಕಾರ್ಯವಿಧಾನದ ಸಂಹಿತೆಯಲ್ಲಿ ಸೇರಿಸಲಾದ ಎಲ್ಲಾ ವಿಷಯಗಳು ಮತ್ತು ಕಾಲಮಿತಿಯ ಕಾಯಿದೆಯನ್ನು ಒಳಗೊಂಡ ನಾಗರಿಕ ಕಾರ್ಯ ವಿಧಾನ; ಸದ್ಯದಲ್ಲಿ ಈ ಸಂವಿಧಾನದ ಪ್ರಥಮ ಅನುಸೂಚಿಯ ಮೊದಲ ಅಥವಾ ಎರಡನೆ ಭಾಗದಲ್ಲಿನ ರಾಜ್ಯಗಳ ತೆರಿಗೆಗೆ ಸಂಬಂಧಿಸಿದ ಮತ್ತು ಇತರ ಸಾರ್ವಜನಿಕ ಬೇಡಿಕೆಗಳು – ಅಂದರೆ ಭೂಕಂದಾಯ ಸಂದಾಯದ ಬಾಕಿಗಳು ಮತ್ತು ರಾಜ್ಯದ ಹೊರಗಡೆ ಉಂಟಾಗುವ ಇಂಥಾ ಬಾಕಿಗಳ ವಸೂಲಾತಿ.

೫. ಸಾಕ್ಷಿ ಮತ್ತು ಆಣೆಗಳು; ಕಾಯಿದೆಗಳ ಗುರುತಿಸುವಿಕೆ, ಸಾರ್ವಜನಿಕ ಕಾರ್ಯಗಳು ಮತ್ತು ದಾಖಲೆಗಳು ಮತ್ತು ನ್ಯಾಯಸ್ಥಾನದ ನಡವಳಿಕೆಗಳು.

೬. ಮದುವೆ ಮತ್ತು ವಿವಾಹ ವಿಚ್ಛೇದನ, ಮಕ್ಕಳುಗಳ ಮತ್ತು ಅಪ್ರಾಪ್ತವಯಸ್ಸಿನ ಹುಡುಗರ ದತ್ತು ಸ್ವೀಕಾರ.

೭. * ಅಂತಿಮ ಇಷ್ಟಾಪತ್ರ (Will) ಅಂತಿಮ ಇಷ್ಟಾಪತ್ರ ಬರೆದಿಡದೆ ಒಬ್ಬ ವ್ಯಕ್ತಿ ಸತ್ತುಹೋದ ಪರಿಸ್ಥಿತಿ(Intestate); ಅವಿಭಕ್ತ ಕುಟುಂಬ (Joint family) ಮತ್ತು ಪಾಲು ಮಾಡುವಿಕೆ; ಮತ್ತಿತರ (ಎಲ್ಲಾ ಈ ಸಂವಿಧಾನ ಜಾರಿಯಲ್ಲಿ ಬರುವ ಮುನ್ನ ಅವರವರ ವೈಯಕ್ತಿಕ ಕಾಯಿದೆಯ ಮಿತಿಯನ್ನು ಒಳಗೊಂಡಿರುವ) ಎಲ್ಲಾ ಕುಟುಂಬದ ವಿಷಯಗಳಿಗೆ ಸಂಬಂಧಿಸಿದ ನ್ಯಾಯಸ್ಥಾನದ ನಡವಳಿಕೆಗಳು.

೮. ಕೃಷಿ ಭೂಮಿಯನ್ನು ಬಿಟ್ಟು ಉಳಿದ ಆಸ್ತಿಯ ಹಸ್ತಾಂತರಗಳು, ನೋಂದಣಿ ಪತ್ರಗಳು ಮತ್ತು ದಾಖಲೆಗಳು.

೯. ಮತ್ತೊಬ್ಬರ ಪ್ರಯೋಜನಾರ್ಥವಾಗಿ ನಿರ್ವಹಿಸಬೇಕಾದ ಆಸ್ತಿಗೆ ಒಬ್ಬನನ್ನು ಹೆಸರಿಗೆ ಮಾತ್ರ

---

* ಒಂದು ವೇಳೆ ಭಾರತದಲ್ಲಿ ಏಕಪ್ರಕಾರದ ವೈಯಕ್ತಿಕ ಕಾಯಿದೆ ಇರಬೇಕೆಂದರೆ, (ಅಂದರೆ ದೇಶದಾದ್ಯಂತ ಹಿಂದುಗಳಲ್ಲಿ) ಇಲ್ಲಿ ಸೇರಿಸಲಾದ ಎಲ್ಲಾ ವಿಷಯಗಳನ್ನೂ ಸಮವರ್ತಿ ಪಟ್ಟಿಯಲ್ಲಿ ಇಡಬೇಕೆಂದು ಸಮಿತಿಯು ಅಭಿಪ್ರಾಯಪಡುತ್ತದೆ. ಆದ್ದರಿಂದ, ಈ ದಾಖಲು ಪತ್ರ ದೊಡ್ಡದಾಗಿರುತ್ತದೆ.

ಒಡೆಯನಾಗಿ ಮಾಡಿ ಅವನಲ್ಲಿ ಇಡುವ ನಂಬಿಕೆ ಅಥವಾ ಅಂಥ ನ್ಯಾಸ (Trust) ಮತ್ತು ಅಂಥಾ ಸಂಸ್ಥೆಗಳ ನ್ಯಾಸಧಾರಿಗಳು (Trustee).

೧೦. ಪಾಲುಗಾರಿಕೆ ಸಂಸ್ಥೆ ಮತ್ತು ವಾಹನಗಳಿಗಿರುವ ಒಪ್ಪಂದಗಳು ಹಾಗೂ ಇತರ ವಿಶೇಷ ವಿಧದ ಒಪ್ಪಂದಗಳನ್ನು ಒಳಗೊಂಡ ಒಪ್ಪಂದಗಳು. ಆದರೆ ಈ ಒಪ್ಪಂದಗಳು ಕೃಷಿ ಭೂಮಿಯ ಬಗೆಗಿನ ಒಪ್ಪಂದಗಳನ್ನು ಒಳಗೊಂಡಿರುವುದಿಲ್ಲ.

೧೧. ಪಂಚಾಯತಿ.

೧೨. ದಿವಾಳಿತನ ಮತ್ತು ಸಾಲ ತೀರಿಸಲಾಗದಿರುವುದು.

೧೩. ಆಡಳಿತಾಧಿಕಾರಿಗಳು – ಸಾಮಾನ್ಯ ಮತ್ತು ಅಧಿಕೃತ ಧರ್ಮದರ್ಶಿಗಳು.

೧೪. ನ್ಯಾಯಾಂಗದ ಸ್ಟ್ಯಾಂಪಿನಿಂದ ವಸೂಲು ಮಾಡಲಾದ ಸುಂಕ ಅಥವಾ ಶುಲ್ಕಗಳಿಗಿಂತ ವಿಭಿನ್ನವಾದ ಸ್ಟ್ಯಾಂಪ್ ಸುಂಕಗಳು; ಆದರೆ ಸ್ಟ್ಯಾಂಪ್ ಸುಂಕದ ದರಗಳನ್ನು ಇದು ಒಳಗೊಂಡಿರುವುದಿಲ್ಲ.

೧೫. ಕ್ರಮಕೈಕೊಳ್ಳಬಹುದಾದ ತಪ್ಪುಗಳು, ಪಟ್ಟಿ ಎರಡರಲ್ಲಿ ಸ್ಪಷ್ಟಗೊಳಿಸಿದ ಯಾವುದೇ ವಿಷಯಗಳ ಸಂಬಂಧವಾಗಿರುವ ಕಾಯಿದೆಗಳನ್ನು ಇದು ಒಳಗೊಂಡಿರುವುದಿಲ್ಲ.

೧೬. ಈ ಪಟ್ಟಿಯಲ್ಲಿನ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಎಲ್ಲಾ ನ್ಯಾಯಾಲಯಗಳ ಅಧಿಕಾರಗಳು ಮತ್ತು ಅವುಗಳ ಅಧಿಕಾರ ವ್ಯಾಪ್ತಿ; ಸರ್ವೋಚ್ಚ ನ್ಯಾಯಾಲಯಕ್ಕೆ ಇದು ಸಂಬಂಧಿಸಿರುವುದಿಲ್ಲ.

೧೭. ಕಾನೂನಿನ, ವೈದ್ಯಕೀಯಕ್ಕೆ ಸಂಬಂಧಪಟ್ಟ ಮತ್ತು ಇತರ ವೃತ್ತಿಗಳು.

೧೮. ವೃತ್ತಪತ್ರಿಕೆಗಳು, ಪುಸ್ತಕಗಳು ಮತ್ತು ಮುದ್ರಣಾಲಯಗಳು.

೧೯. ಹುಚ್ಚಿನ ಮತ್ತು ಮಾನಸಿಕ ಕೊರತೆಯ ವಿಷಯಗಳು; ಇವುಗಳು ಹುಚ್ಚರ ಹಾಗೂ ನ್ಯೂನಬುದ್ಧಿಯವರನ್ನು ಸೇರಿಸಿಕೊಳ್ಳುವ ಮತ್ತು ಅವರಿಗೆ ಚಿಕಿತ್ಸೆ ನೀಡುವ ಸ್ಥಳಗಳು.

೨೦. ವಿಷ ಮತ್ತು ಅಪಾಯಕಾರಿ ಔಷಧಗಳು.

೨೧. ಯಂತ್ರದಿಂದ ಚಲಿಸುವ ವಾಹನಗಳು.

೨೨. ಕುದಿ ಪಾತ್ರೆಗಳು (Boilers)

೨೩. ಪ್ರಾಣಿಗಳ ಮೇಲಿನ ಕ್ರೂರತನವನ್ನು ತಡೆಹಿಡಿಯುವುದು.

೨೪. ಪೋಲಿ ಪುಂಡತನ; ಅಲೆಮಾರಿ ಮತ್ತು ವಲಸೆ ಹೋಗುವ ಬುಡಕಟ್ಟುಗಳು.

೨೫. ಕಾರ್ಖಾನೆಗಳು.

೨೬. ಕಾರ್ಮಿಕರ ಕಲ್ಯಾಣ; ಕೂಲಿಗಾರರ ಪರಿಸ್ಥಿತಿಗಳು; ಅವರ ಭವಿಷ್ಯ ನಿಧಿಗಳು; ಮಾಲಿಕರ ಜವಾಬ್ದಾರಿ ಮತ್ತು ಕಾರ್ಮಿಕರಿಗಿರುವ ಪರಿಹಾರ; ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವಾಗ ಗಾಯಗೊಂಡವರ ಪಿಂಚಣಿಯನ್ನು ಒಳಗೊಂಡ ಕಾರ್ಮಿಕರ ಆರೋಗ್ಯ ವಿಮೆ; ಅವರ ಮುಪ್ಪಿನ ಪಿಂಚಣಿಗಳು.

೨೭. ನಿರುದ್ಯೋಗ ಮತ್ತು ಸಾಮಾಜಿಕ ವಿಮೆ.

೨೮. ಕಾರ್ಮಿಕರ ಸಂಘ; ಔದ್ಯಮಿಕ ಹಾಗೂ ಕಾರ್ಮಿಕರ ವ್ಯಾಜ್ಯಗಳು.

೨೯. ಮನುಷ್ಯರಿಗೆ, ಪ್ರಾಣಿಗಳಿಗೆ ಅಥವಾ ಸಸ್ಯರಾಶಿಗಳಿಗೆ ಅಂಟಿಕೊಳ್ಳುವ ಸಾಂಕ್ರಾಮಿಕ ಅಥವಾ ಅಂಟು ರೋಗಗಳನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹಬ್ಬದಂತೆ ತಡೆಹಿಡಿಯುವುದು.

೩೦. ವಿದ್ಯುತ್ ಶಕ್ತಿ.

೩೧. ಯಾಂತ್ರಿಕವಾಗಿ ನಡೆಸಲ್ಪಟ್ಟ ಹಡಗುಗಳಿಗೆ ಸಂಬಂಧಿಸಿದ ಒಳನಾಡಿನ ಜಲಸಾರಿಗೆ; ಅಂಥಾ

ಜಲಸಾರಿಗೆಗಾಗಿ ನಿಯಮಗಳನ್ನು ಮಾಡುವುದು ಮತ್ತು ಈ ಜಲಸಾರಿಗೆಯಲ್ಲಿ ಪ್ರಯಾಣಿಕರ ಮತ್ತು ವಸ್ತುಗಳ ಸಾಗಾಟ ಮಾಡುವುದು, ರಾಷ್ಟ್ರೀಯ ಜಲಸಾರಿಗೆಗಳಿಗೆ ಸಂಬಂಧಿಸಿದ ಪಟ್ಟಿ ಒಂದರ ಮುನ್ನೇರ್ಪಾಡುಗಳಿಗೆ ಅನುಗುಣವಾಗಿರುತ್ತದೆ.

೩೨. ಪ್ರದರ್ಶನಕ್ಕಾಗಿ ಚಲನಚಿತ್ರ ಶಾಸ್ತ್ರದ ಚಿತ್ರಗಳನ್ನು ಮಂಜೂರು ನೀಡುವುದು.

೩೩. ಕೇಂದ್ರದ ಅಧಿಕಾರ ವ್ಯಾಪ್ತಿಯೊಳಗಡೆ ಪ್ರತಿಬಂಧಕ ಬಂಧನಕ್ಕೆ (Preventive Detention) ಒಳಗಾಗಿರುವ ವ್ಯಕ್ತಿಗಳು.

೩೪. ಆರ್ಥಿಕ ಮತ್ತು ಸಾಮಾಜಿಕ ಯೋಜನೆ.

೩೫. * ಕೇಂದ್ರದ ಅಥವಾ ಒಂದು ರಾಜ್ಯದ ಉದ್ದೇಶಗಳಿಗಾಗಿ ಪಡೆಯಲಾದ ಅಥವಾ ಬಳಸಲಾದ (Requisitioned) ಆಸ್ತಿಗೆ ಪರಿಹಾರದ ಮೊತ್ತವನ್ನು ನಿರ್ಧರಿಸುವ ನಿಯಮಗಳು.

೩೬. ಈ ಪಟ್ಟಿಯಲ್ಲಿರುವ ಯಾವುದಾದರೂ ವಿಷಯಗಳ ಉದ್ದೇಶಕ್ಕಾಗಿರುವ ವಿಚಾರಣೆಗಳು ಮತ್ತು ಅಂಕಿ ಸಂಖ್ಯೆಗಳು.

೩೭. ಈ ಪಟ್ಟಿಯ ಯಾವುದೇ ವಿಷಯಗಳ ಶುಲ್ಕಗಳು; ಆದರೆ ಯಾವುದೇ ನ್ಯಾಯಾಲಯ ತೆಗೆದುಕೊಂಡ ಶುಲ್ಕಗಳನ್ನು ಇದು ಒಳಗೊಂಡಿರುವುದಿಲ್ಲ.

---

* ಪಟ್ಟಿ ಒಂದರ ದಾಖಲಾತಿ ೪೩ರ ಅಡಿ ಟಿಪ್ಪಣಿಯನ್ನು ನೋಡಿ (ಕೇಂದ್ರ ಪಟ್ಟಿ)

# ಎಂಟನೆಯ ಅನುಸೂಚಿ

## (ವಿಧಿ ೩೦೩ (I) (X)

### ಪರಿಶಿಷ್ಟ ಪಂಗಡಗಳು
### ಭಾಗ – ೧

### ಮದ್ರಾಸ್

| | | | |
|---|---|---|---|
| ೧. | ಬಗಾಟಾ | – | |
| ೨. | ಭೊಟ್ಟದಾಗಳು | – | ಬೋಡೋ, ಭೊಟ್ಟದಾ, ಮುರಿಯಾ ಭೊಟ್ಟದಾ ಮತ್ತು ಸಾನೊ ಭೊಟ್ಟದಾ |
| ೩. | ಭೂಮಿಯಾಗಳು | – | ಭೂರಿ ಭೂಮಿಯಾ ಮತ್ತು ಬೋಡೋ ಭೂಮಿಯಾ |
| ೪. | ಬಿಸ್ಸೊಯ್ | – | ಬರಂಗೀ ಜೋಡಿಯಾ, ಬೆನ್ನಂಗಿ ಡಡುವಾ, ಫ್ರಾಂಗಿ, ಹೊಲ್ಲರ್, ರ್ಘೋರಿಯಾ ಕೊಲ್ಲಾಯಿ ಕೊಂಡೆ, ಪರಂಗಾ, ಪೆಂಗ ಜೋಡಿಯಾ, ಸೋಡೋ ಜೊಡಿಯಾ ಮತ್ತು ಟಕ್ಕೊರಾ. |
| ೫. | ಧಕ್ಕಡಾ | – | |
| ೬. | ಡೊಂಬ್ಸ್ | – | ಅಂಧಿಯಾ ಡೊಂಬ್ಸ, ಅವುಡಿನಿಯಾ ಡೊಂಬ್ಸ ಚೊನೆಲ್ ಡೊಂಬ್ಸ, ಕ್ರಿಶ್ಚಿಯನ್ ಡೊಂಬ್ಸ, ಒರಿಯಾ ಡೊಂಬ್ಸ, ಪೋನಾಕಾ ಡೂಂಬ್ಸ, ತೆಲಗಾ ಮತ್ತು ಉಮ್ಮಿಯಾ. |
| ೭. | ಗಡಬಾಗಳು | – | ಬೊಡಾ ಗಡಬಾ, ಸೆರಿಲಿಯಮ್ ಗಡಬಾ, ಫ್ರಾನ್‌ಜಿ ಗಡಬಾ, ಜೊಡಿಯಾ ಗಡಬಾ, ಒಲಾರೊ ಗಡಬಾ, ಪಾಂಗಿ ಗಡಬಾ ಮತ್ತು ಪರಾಂಗಾ ಗಡಬಾ. |
| ೮. | ಘಾಸಿಗಳು | – | ಬೋಡಾ ಘಾಸಿಗಳು ಮತ್ತು ಸಾನ್ ಘಾಸಿಗಳು. |
| ೯. | ಗೊಂಡಿ | – | ಮೊಡ್ಕಾ ಗೊಂಡ ಮತ್ತು ರಾಜೋ ಗೊಂಡ. |
| ೧೦. | ಗೌಡುಗಳು | – | ಬಾಟೋ, ಬಿರ್ಥಿಯಾ, ಡುಧೋಕೌರಿಯಾ, ಹಾಟೋ, ಜಟಾಕೋ ಮತ್ತು ಜೊರಿಯ |
| ೧೧. | ಕೊಸಲ್ಯಾ ಗೌಡುಗಳು | – | ಬೊಸೊಥೋರಿಯಾ ಗೌಡುಗಳು, ಬಿತ್ತಿ ಗೌಡುಗಳು, ದಂಗಾಯತ್ ಗೌಡುಗಳು, ದೊಡ್ಡು ಕಮಾರಿಯಾ, ದುದ್ದು ಕಾವಾರಾವ್, ಲಡಿಯಾ ಗೌಡುಗಳು ಮತ್ತು ಪುಲ್ಲೊಸೊರಿಯಾ ಗೌಡುಗಳು. |

೧೨. ಮಗಾಥಾ ಗೌಡುಗಳು – ಬೆರ್ನಿಯಾ ಗೌಡು, ಬೊಡೋ ಮಗಾಥಾ, ದೊಂಗಾಯಥ ಗೌಡು, ಲಡ್‌ಯಾ ಗೌಡು, ಪೊನ್ನ ಮಗಾಥಾ ಮತ್ತು ಸಾನಾ ಮಗಾಥಾ

೧೩. ಸೀರಿಥಿ ಗೌಡರು

೧೪. ಹೊಲ್‌ವಾ

೧೫. ಜಾಡಾಪುಗಳು

೧೬. ಜಟಾಪುಸ್‌ಗಳು

೧೭. ಕಮ್ಮಾರರು

೧೮. ಖತ್ತೀಯರು – ಖತ್ತಿ, ಕೊಮ್ಮಾರೋ ಮತ್ತು ಲೊಹಾರಾ

೧೯. ಕೊಡು

೨೦. ಕೊಮ್ಮಾರ

೨೧. ಕೊಂಡಾ ಧೊರಾರು

೨೨. ಕೊಂಡಾ ರೌಪುಗಳು

೨೩. ಕೊಂಡಾರೆಡ್ಡಿಗಳು

೨೪. ಕೊಂಡಾಗಳು – ದೇಶಯಾ ಕೊಂಡಾ, ದೊಂಗರಾಯ ಕೊಂಡಾ, ಕುಟ್ಟಿಯಾ ಕೊಂಡಾ, ಟಿಕಿರಿಯಾ ಕೊಂಡಾ, ಮಂಚು ಯುನಿಟಿ ಕೊಂಡಾಗಳು

೨೫. ಕೊಟಿಯಾ – ಬರ್ತಿಕಾ, ಬೆಂತೊ ಒರಿಯಾ, ಧುಲಿಯಾ ಅಥವಾ ದುಲಿಯಾ, ಹೊಲ್ವಾ ಪಾಯಿಕೊ, ಪುಟಿಯಾ ಸನ್‌ರೊನಾ ಮತ್ತು ಸಿಧೊಪೈಕೊ.

೨೬. ಕೊಯಾ ಅಥವಾ ಗೌಡ ಅವರ ಪ್ರಜೆಗಳೊಂದಿಗೆ – ರಶಾ ಕೊಯಾರ ರಾಜ, ಲಿಂಗಧಾರಿ ಕೊಯಾಗಳು, (ಸಾಮಾನ್ಯ) ಮತ್ತು ಕೊಟ್ಟು ಕೊಯಾಗಳು

೨೭. ಮಾದಿಗರು

೨೮. ಮಾಲಾಗಳು ಅಥವಾ ಏಜೆನ್ಸಿ ಮಾಲಾಗಳು ಅಥವಾ ವಾಲ್ಮೀಕಿಗಳು

೨೯. ಮಾಲಿಗಳು – ಕೊರ್‌ಚಿಮಾ ಮಾಲಿಗಳು, ಪೈಕೊ ಮಾಲಿಗಳು ಮತ್ತು ಪೆದ್ದ ಮಾಲಿಗಳು

೩೦. ಮವುನೆ

೩೧. ಮನ್ನಾ ಧೊರಾ – ನೂತಾ ಧೊರಾ

೩೨. ಮುಖ ಧೊರಾ – ನೂತಾ ಧೊರಾ

೩೩. ಮುಲಿ ಅಥವಾ ಮಿಲಿಯಾ

೩೪. ಮುರಿಯ

೩೫. ಒಜಲುಗಳು ಅಥವಾ ಮೆಟ್ಟಾ ಕೊಮಸಾಲಿಗಳು
೩೬. ಒಮಾನಾ ಇಟೊ
೩೭. ಪೈಗರಾಪು
೩೮. ಪಲಾಸಿ
೩೯. ಪಲ್ಲಿ
೪೦. ಪೆಂಟಿಯಾಗಳು
೪೧. ಪೊರಜಾಗಳು – ಬೊಡೊ, ಬೊಂಡಾ, ದರುವಾ, ಡಿಡಿವಾ, ಜೊಡಿಯಾ, ಮರಿದಿಲಿ, ಪೆಂಗು, ಪಿಡಿ ಮತ್ತು ಸಾಲಿಯಾ
೪೨. ರೆಡ್ಡಿ ಧೊರಾಗಳು
೪೩. ರೆಲ್ಲಿ ಅಥವಾ ಸಚ್ಚಾಂದಿ
೪೪. ರೋನಾಗಳು
೪೫. ಸಾವಾರಾಗಳು – ಕಾಪು ಸಾವಾರಾಗಳು, ಖುಟ್ಟೊ ಸಾವಾರಾಗಳು ಮತ್ತು ಮರಿಯಾ ಸಾವಾರಾಗಳು
೪೬. ಲಕಡಿವ್, ಮಿನಿಕೊಯಿ ಮತ್ತು ಅಮಿನ್‌ದಿವಿ ನಡುಗಡ್ಡೆಗಳ ನಿವಾಸಿಗಳು.

## ಭಾಗ – ೨
## ಬೊಂಬಾಯಿ

೧. ಬರ್ದಾ
೨. ಬವಾಚಾ
೩. ಭಿಲ್
೪. ಚೊಧ್ರಾ
೫. ಧಂಕಾ
೬. ಧೋಡಿಯಾ
೭. ದುಬ್‌ಲಾ
೮. ಗಮಿಟ ಅಥವಾ ಗಮ್‌ತಾ
೯. ಗೊಂಡ್
೧೦. ಕಥೋಡಿ ಅಥವಾ ಕಾಟ್‌ಕಾರಿ
೧೧. ಕೊಂಕನಾ
೧೨. ಕೊಲಿ ಮಹಾದೇಬ್
೧೩. ಮಾವ್‌ಚಿ
೧೪. ನಾಯಕ್‌ದಾ ಅಥವಾ ನಾಯಕ
೧೫. ಪರಧಿ (ಅಡವಿಚಿಂಚೇರ ಅಥವಾ ಫಾನ್‌ಸೆ ಪರ್ಧಿಯನ್ನು ಒಳಗೊಂಡು)

೧೬. ಪಾಟೇಲಿಯಾ
೧೭. ಪೊಮ್‌ಲಾ
೧೮. ರಾಥ್‌ವಾ
೧೯. ತಡ್ವಿ ಭಿಲ್
೨೦. ಟಾಕುರ್
೨೧. ವಲ್‌ವಾಯಿ
೨೨. ವರ್ಲಿ
೨೩. ವಸಾವಾ

## ಭಾಗ – ೩
## ಪಶ್ಚಿಮ ಬಂಗಾಳ

೧. ಬೊಟಿಯಾ
೨. ಚಕ್ಮಾ
೩. ಕುಕಿ
೪. ಲೆಪ್‌ಚಾ
೫. ಮುಂಡಾ
೬. ಮಘ್
೭. ಮ್ರೊ
೮. ಒರಾವೊನ್
೯. ಗಂತಾಲ್
೧೦. ತ್ರಿಪ್ಪೆರಾ
೧೧. ಪಶ್ಚಿಮ ಬಂಗಾಳ ಸರಕಾರ ಸೃಷ್ಟೀಕರಿಸಿದ ಇತರ ಯಾವುದೇ ಜನಾಂಗ

## ಭಾಗ – ೪
## ಸಂಯುಕ್ತ ಪ್ರಾಂತಗಳು

೧. ಭುನಿಯಾ
೨. ಬೈಸ್ವಾರ್
೩. ಬೈಗಾ
೪. ಗೊಂಡ್
೫. ಖಾರವಾರ್
೬. ಕೊಲ್
೭. ಒಝಾ

೮. ಸಂಯುಕ್ತ ಪ್ರಾಂತಗಳ ಸರಕಾರದಿಂದ ಪ್ರಕಟಿಸಲಾದ ಇತರ ಯಾವುದೇ ಜನಾಂಗ

## ಭಾಗ – ೫
## ಪೂರ್ವ ಪಂಜಾಬ್

ಸ್ಥಿತಿಯಲ್ಲಿನ ಟಿಬೇಟಿಯನ್‌ರು ಮತ್ತು ಕಾಂಗರಾ ಜಿಲ್ಲೆಯ ಲಾಹವುಲ್‌ರು

## ಭಾಗ – ೬
## ಬಿಹಾರ

**೧. ಬಿಹಾರ ರಾಜ್ಯದ ಈ ಕೆಳಗಿನ ಜನಾಂಗಗಳಿಗೆ ಸಂಬಂಧಿಸಿದ ಯಾವುದೇ ನಿವಾಸಿ.**

೧. ಅಸುರ
೨. ಬಂಜಾರಾ
೩. ಬಾಥುಡಿ
೪. ಬೆಂತ್ಕರ
೫. ಬಿಂಝಿಯಾ
೬. ಬಿರ್‌ಹೊರ್
೭ ಬಿರ್‌ಜಿಯಾ
೮. ಚೆರೊ
೯. ಚಿಕ್ ಬರಾಯಿಕ್
೧೦. ಗಡಬಾ
೧೧. ಘಟವಾರ
೧೨. ಗೊಂಡ್
೧೩. ಗೊರಾಯಿಟ್
೧೪. ಹೊ
೧೫. ಜುವಾಂಗ್
೧೬. ಕರ್ಮಾಲಿ
೧೭. ಖಾರಿಯಾ
೧೮. ಖಾರವಾರ್

೧೯. ಖೆಟಾವುರಿ
೨೦. ಖೊಂದ್
೨೧. ಕಿಸಾನ್
೨೨. ಕೊಲಿ
೨೩. ಕೊರಾ
೨೪. ಕೊರವಾ
೨೫. ಮಹಲಿ
೨೬. ಮಾಲ್ ಪಹಾರಿಯಾ
೨೭. ಮುಂಡಾ
೨೮. ಒರಾಓನ್
೨೯. ಪಾರಹಿಯಾ
೩೦. ಸನ್‌ತಾಲ್
೩೧. ಸವುರಿಯಾ ಪಹಾರಿಯಾ
೩೨. ಸಾವಾರ್
೩೩. ಥಾರು

II. ಈ ಕೆಳಗಿನ ಯಾವುದಾದರೊಂದು ಜಿಲ್ಲೆಗಳ ಅಥವಾ ಪೋಲಿಸ್ ಠಾಣೆಗಳ ಈ ಕೆಳಗಿನ ಯಾವುದಾದರೊಂದು ಜನಾಂಗದ ನಿವಾಸಿ, ಅಂದರೆ ರಾಂಚಿ, ಸಿಂಘಭೂಮ್, ಹಜಾರಿ ಬಾಗ್ ಮತ್ತು ಸನ್‌ಟಾಲ ಪರಗಣಗಳ ಜಿಲ್ಲೆಗಳ ಮತ್ತು ಆರ್‌ಶಾ, ಬಲರಾಮಪುರ, ಝಾಲ್‌ಡಾ, ಜೈಪುರ ಭಾಘಮುಂಡಿ, ಚಾಂಡಿಲ್, ಈಚಾಗಢ, ಬರಹಾಭುಮ್, ಪಟಾಮ್‌ಡಾ ಬಡೌನ್ ಮತ್ತು ಮನ್‌ಭೂಮ್ ಜಿಲ್ಲೆಯ ಮನ್‌ಬಾಜಾರ್ ಪೋಲಿಸ್ ಠಾಣೆಗಳಿಗೆ ಸಂಬಂಧಿಸಿದ ನಿವಾಸಿ

೧. ಬವುರಿ
೨. ಭೋಗ್ತಾ
೩. ಭುಯಿಯಾ
೪. ಭುಮಿಜಿ
೫. ಘಸಿ
೬. ಪಾನ್
೭ ರಾಜವಾರ
೮. ಟುರಿ

III ಭೂಮಿಜಿ ಪಂಗಡದ ಧನಬಾದ್ ಉಪವಿಭಾಗದ ಅಥವಾ ಮನ್‌ಭುಮ್ ಜಿಲ್ಲೆಯ ಈ ಕೆಳಗಿನ ಪೋಲಿಸ್ ಠಾಣೆಗಳ, ಅಂದರೆ ಪುರುಲಿಯಾ, ಹುರಾ, ಪಂಚಾ, ರಘುನಾಥಪುರ, ಸಂತೋರಿ, ನಿತುರಿಯಾ, ಪಾರಾ, ಛಾಸ್, ಚಂದನ ಕಿಯ್ಯುರಿ ಮತ್ತು ಕಾಶಿಪುರ ಪೋಲಿಸ್ ಠಾಣೆಗಳ ನಿವಾಸಿ

## ಭಾಗ – ೭
## ಮಧ್ಯ ಪ್ರಾಂತಗಳು

೧. ಗೊಂಡ
೨. ಕಾವಾರ
೩. ಮಾರಿಯಾ
೪. ಮುರಿಯಾ
೫. ಹಲ್‌ಬಾ
೬. ಪರ್‌ಧಾನ್
೭ ಒರಾಓನ್
೮. ಬಿನ್‌ಝುವಾರ್
೯. ಅಂಧ್
೧೦. ಭಾರಿಯಾ–ಭೂಮಿಯಾ
೧೧. ಕೊಲಿ
೧೨. ಭಾಟ್ರಾ
೧೩. ಬೈಗಾ
೧೪. ಕೊಲಾಮ್
೧೫. ಭಿಲ್
೧೬. ಭುಏನ್‌ಹಾರ್
೧೭. ಧನವಾರ
೧೮. ಭೈಯಿನಾ
೧೯. ಪಾರ್‌ಜಾ
೨೦. ಕಾಮಾರ್
೨೧. ಭುಂಜಿಯಾ
೨೨. ನಾಗರ್ಚಿ
೨೩. ಓಝಾ
೨೪. ಕೊರಕು
೨೫. ಕೋಲ್
೨೬. ನಾಗಶಿಯಾ
೨೭. ಸಾವಾರಾ
೨೮. ಕೊರ್‌ವಾ
೨೯. ಮಝುವಾರ್
೩೦. ಖಾರಿಯಾ
೩೧. ಸಾವುನ್‌ಟಾ

೩೨. ಕೊಂಧ
೩೩. ನಿಹಾಲ್
೩೪. ಬಿರ್‌ಹುಲ್ (ಅಥವಾ ಬಿರ್‌ಹೊರ್)
೩೫. ರಾವುಟಿಯಾ
೩೬. ಪಾಂಡೊ

## ಭಾಗ – ೮
## ಅಸ್ಸಾಮ್

ಈ ಕೆಳಗಿನ ಪಂಗಡ ಮತ್ತು ವರ್ಗಗಳು
೧. ಕಾಚಾರಿ
೨. ಬೊರೊ ಅಥವಾ ಬೊರೊ–ಕಚಾರಿ
೩. ರಭಾ
೪. ಮಿರಿ
೫. ಲಾಲುಂಗ್
೬. ಮಿಕಿರ್
೭. ಗಾರೊ
೮. ಹಜೊನಫಿ
೯. ದೆವರಿ
೧೦. ಅಬೋರ
೧೧. ಮಿಷ್‌ಮಿ
೧೨. ದಫ್ಲಾ
೧೩. ಸಿಂಗಫೊ
೧೪. ಖಾಏಲ್‌ಪ್ಪಿ
೧೫. ಯಾವುದೇ ನಾಗ ಅಥವಾ ಕುಕಿ ಜನಾಂಗ
೧೬. ಅಸ್ಸಾಮ ಸರಕಾರದಿಂದ ಸೂಚಿತವಾದ ಯಾವುದೇ ಇತರ ಪಂಗಡ ಅಥವಾ ವರ್ಗ

## ಭಾಗ – ೯
## ಒರಿಸ್ಸಾ

ಈ ಕೆಳಗಿನ ಯಾವುದೇ ಜನಾಂಗಕ್ಕೆ ಸೇರಿದ ಒರಿಸ್ಸಾ ರಾಜ್ಯದ ಒಬ್ಬ ನಿವಾಸಿ
೧. ಬಗಾಟಾ
೨. ಬಂಜಾರಿ
೩. ಚೆಂಚು

೪. ಗಡಬಾ
೫. ಗೊಂಡ
೬. ಜಟಾಪು
೭. ಖೊಂಡ(ಕೊಂಡ)
೮. ಕೊಂಡ–ದೊರಾ
೯. ಕೊಯಾ
೧೦. ಪರೋಜಾ
೧೧. ಸಓರಾ (ಸಾವರಾ)
೧೨. ಒರಾಓನ್
೧೩. ನಂದಾಲ್
೧೪. ಖಾರಿಯಾ
೧೫. ಮುಂಡಾ
೧೬. ಬಂಜಾರಾ
೧೭. ಬಿಂಝಿಯಾ
೧೮. ಕಿಸಾನ್
೧೯. ಕೊಲಿ
೨೦. ಕೊರಾ

II ಈ ಕೆಳಗಿನ ಯಾವುದೇ ಕ್ಷೇತ್ರದ ನಿವಾಸಿ, ಅಂದರೆ, ಕೊರಾಪುಟ್ ಮತ್ತು ಖೊಂಡಮಾಲ್ಸ ಜಿಲ್ಲೆಗಳ ಮತ್ತು ಗಂಜಮ್ ಸಂಸ್ಥೆಯ, (೧) ಡೊಮ್ ಅಥವಾ ಡೊಂಬೋ ಮತ್ತು (೨) ಪಾನ ಅಥವ ಪಾನೋ ಪಂಗಡಗಳ ಜನ.

III ಸಂಭಲಪುರ ಜಿಲ್ಲೆಯ ನಿವಾಸಿಯಾದ ಈ ಕೆಳಗಿನ ಯಾವುದೇ ಜನಾಂಗಕ್ಕೆ ಸಂಬಂಧಿಸಿದ ನಿವಾಸಿ.

೧. ಬವುರಿ
೨. ಭುಯ್ಯಾ
೩. ಭುಮ್‌ಜಿ
೪. ಘಾಸಿ
೫. ತುರಿ
೬. ಪಾನ್ ಅಥವಾ ಪಾನೋ

# ಅನುಬಂಧ (Appendix)

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಸದಸ್ಯರು, ಕರಡು ಪ್ರತಿ ಸಿದ್ಧಪಡಿಸುವ ಸಮಿತಿ, ಇವರು ಸಂವಿಧಾನ ರಚನಾ ಸಮಿತಿಯ ಸ್ಥಾಪನೆಗೆ ನೀಡಿದ ಪ್ರತ್ಯೇಕ ಟಿಪ್ಪಣಿ.**

ಪಾರ್ಲಿಮೆಂಟ್ ಮತ್ತು ಅದರ ಘಟಕಗಳ (Units) ನಡುವಿನ ಶಾಸನ ಅಧಿಕಾರಿಗಳ ವಿತರಣೆ ಅಥವಾ ಕೇಂದ್ರ ಪಾರ್ಲಿಮೆಂಟ್ ಪ್ರಾಂತೀಯ (ರಾಜ್ಯದ) ಪಟ್ಟಿ ಒಳಗಿನ ಒಂದು ವಿಷಯದ ಮೇಲೆ ಅಧಿಕಾರ ಚಲಾಯಿಸುವುದಕ್ಕೆ (ಯಾವಾಗ ಅದು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಹೊಂದಿರುತ್ತದೆಯೋ) ತಾತ್ವಿಕವಾಗಿ ನನ್ನ ಸಹೋದ್ಯೋಗಿ ಮತ್ತು ನನ್ನ ನಡುವೆ ಯಾವ ಭಿನ್ನಾಭಿಪ್ರಾಯ ಹೊಂದಿರುವುದಿಲ್ಲವೆಂದು ಹೇಳುತ್ತಾ ನಾನು ವಿಧಿ ೨೧೭, ೨೨೩ (೧) ಮತ್ತು ೨೨೬ ವಿಷಯಗಳ ಮೇಲೆ ಸಂವಿಧಾನ ರಚನಾ ಸಮಿತಿಗೆ ಈ ಕೆಳಗಿನ ಪ್ರತ್ಯೇಕ ಟಿಪ್ಪಣಿಯನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

**ಶಾಸಕಾಂಗ ಅಧಿಕಾರಿಗಳ ವಿತರಣೆಯ ವಿಷಯದ ೨೧೭ ಮತ್ತು ೨೨೩(೧) ವಿಧಿಗಳು:**

೨. ಶಾಸಕಾಂಗ ಅಧಿಕಾರದ ವಿತರಣೆಯ ಪ್ರಶ್ನೆಯನ್ನು ಸಂವಿಧಾನ ರಚನಾ ಸಮಿತಿ ಈಗಾಗಲೇ ನಿಶ್ಚಯಿಸಿದೆ ಮತ್ತು ಇವುಗಳನ್ನು ಕೇಂದ್ರಕ್ಕೆ ವಹಿಸಿಕೊಡಬೇಕೆಂಬುದು ನಿಶ್ಚಯಿತವಾಗಿರುತ್ತದೆ. ಆದ್ದರಿಂದ, ಈ ವಿಚಾರವನ್ನು ಅನುಷ್ಠಾನದಲ್ಲಿ ತರಲು ನಿಯಮಗಳನ್ನು ಹೇಗೆ ರಚಿಸಬೇಕೆಂಬುದೇ ಇಲ್ಲಿನ ಒಂದೇ ಪ್ರಶ್ನೆಯಾಗಿರುತ್ತದೆ. ನನ್ನ ಸಹೋದ್ಯೋಗಿಗಳು ಭಾರತ ಸರಕಾರ ಕಾಯಿದೆಯ ಪರಿಚ್ಛೇದ ೧೦೦ರಲ್ಲಿನ ಯೋಜನೆಯನ್ನು ಅನುಸರಿಸಲು ನಿರ್ಧರಿಸಿದ್ದಾರೆ ಮತ್ತು ಉಳಿದಿರುವ ಅಧಿಕಾರಗಳಿಗಾಗಿ ಒಂದು ಬೇರೆ ನಿಯಮವನ್ನು ಹೊಂದುವ ಮತ್ತು ಕೇಂದ್ರಕ್ಕೆ ಅದರ ಪಟ್ಟಿಯಲ್ಲಿ ಇದು ಒಂದು ವಿಷಯವಾಗಿ ಹಂಚಬೇಕೆಂದು ಅಭಿಪ್ರಾಯಪಡುತ್ತಾರೆ. ನನ್ನ ಯೋಜನೆಯು ಸಹ ಉಳಿದಿರುವ ಅಧಿಕಾರಗಳನ್ನು ಕೇಂದ್ರವೇ (ಕೇಂದ್ರ ಪಾರ್ಲಿಮೆಂಟು) ಹೊಂದಿರಬೇಕೆಂಬುದಾಗಿದೆ (vest) ಮತ್ತು ಕೇಂದ್ರ ಪಟ್ಟಿಯ ವಿಷಯಗಳಲ್ಲಿನ ಹಲವಾರು ನಮೂದಿಸಿದ (enumerated) ವಿಷಯಗಳು ಹೆಚ್ಚು ಕಡಿಮೆ ಕೇವಲ ವಿಶದೀಕರಿಸಲಾದ ಕೇಂದ್ರದ ಉಳಿದಿರುವ ಅಧಿಕಾರಗಳಲ್ಲಿಯೇ ಇರುತ್ತದೆ ಎಂದು ವಿವರಿಸುತ್ತವೆ. ಆದುದರಿಂದ, ರಾಜ್ಯಗಳ ಅಥವಾ ಪ್ರಾಂತೀಯ ಘಟಕಗಳ ಅಧಿಕಾರಗಳನ್ನು ಮೊದಲಲ್ಲಿ ಹೇಳಿ, ನಂತರ ಸಮವರ್ತಿ ಪಟ್ಟಿಯ ಜೊತೆಗೆ ವ್ಯವಹರಿಸಿ ಕೊನೆಯಲ್ಲಿ ಕೇಂದ್ರದ ಅಥವಾ ಕೇಂದ್ರ ಪಾರ್ಲಿಮೆಂಟಿನ ಅಧಿಕಾರಗಳನ್ನು ನಿಶ್ಚಯಿಸುವುದು ಒಂದು ಯೋಗ್ಯ ವಿಚಾರವಾಗಿರುತ್ತದೆ. ಇದೆ ಸಮಯದಲ್ಲಿ ಕೇಂದ್ರವು ಹೊಂದಿರುವ ಅಧಿಕಾರಗಳ ಒಂದು ವ್ಯಾಪಕ ಪಟ್ಟಿ ಮಾಡಬೇಕಾಗುತ್ತದೆ. ಭಾರತ ಸರಕಾರದ ಪರಿಚ್ಛೇದ ೧೦೦ರಲ್ಲಿನ ಯೋಜನೆಯನ್ನು ಸ್ವೀಕರಿಸುವುದು ರಾಜಕೀಯ ಪಕ್ಷಗಳು ಉಳಿದಿರುವ ಅಧಿಕಾರಗಳನ್ನು ಎಲ್ಲಿಡಬೇಕೆಂಬುದಕ್ಕೆ ಒಪ್ಪದಿದ್ದ ಕಾರಣ ಇಂಥಾ ಅಧಿಕಾರ ಯಾವ ಶಾಸಕಾಂಗ (ಒಂದು ವೇಳೆ ಈ ಅಧಿಕಾರವನ್ನು ಯಾವ ಪಟ್ಟಿಯೂ ಹೊಂದಿರದಿದ್ದಲ್ಲಿ) ಅವುಗಳನ್ನು ಉಪಯೋಗಿಸಬೇಕೆಂಬುದನ್ನು ಗೌವರ್ನರ್ ಜನರಲ್ಲರಿಗೆ (Governor-General) ಬಿಡಲಾಯಿತು.

ಈಗ ಅಂಥಾ ಸಮಸ್ಯೆಯನ್ನು ನಾವು ಎದುರಿಸುತ್ತಿಲ್ಲ. ಹಿಂದಿನ ಭಾರತ ಸರಕಾರ ಕಾಯಿದೆಯ ಮುನ್ನೇರ್ಪಾಡುಗಳಿಗಿಂತಲೂ ಈಗ ಕೇಂದ್ರ ಪಟ್ಟಿಯಲ್ಲಿರುವ ಪ್ರತಿಯೊಂದು ವಿಷಯದ ಅರ್ಥ ಮತ್ತು ಭಾವದ ಬಗ್ಗೆ ವಿಮರ್ಶೆ ಮಾಡುವುದು ಅಷ್ಟೊಂದು ಮಹತ್ವದ್ದಾಗಿರುವುದಿಲ್ಲ.

೧೧೦ರಲ್ಲಿನ ಪ್ರತಿಯೊಂದು ಕಲಂನಲ್ಲಿ 'ಆದಾಗ್ಯೂ' ಎಂಬ ಪದವನ್ನು ಪುನಃ ಪುನಃ ಹೇಳಿರುವುದು ನ್ಯಾಯಾಲಯಗಳಲ್ಲಿ ಅನವಶ್ಯಕ ಚರ್ಚೆ ಮತ್ತು ಸುದೀರ್ಘದ ವಾದ ವಿವಾದಗಳಿಗೆ ಎಡೆ ಮಾಡಿಕೊಟ್ಟಿರುತ್ತದೆ. ಸಂವಿಧಾನ ರಚನಾ ಸಮಿತಿಯು ಭಾಗ ಮೂರರಲ್ಲಿ ರಾಜ್ಯಗಳನ್ನು ಕೇಂದ್ರದ ಯೋಜನೆ (Scheme) ಯಲ್ಲಿ ಬರುವಂತೆ ಮಾಡಿರುವುದು ಯಾವುದೇ ತೊಡಕನ್ನು ಉಂಟುಮಾಡುವುದಿಲ್ಲ; ಏಕೆಂದರೆ, ಇದು ವಿಧಿ ೨೨೪ ಮತ್ತು ೨೨೫ಗಳಲ್ಲಿನ ರಾಜ್ಯಗಳ ಜೊತೆಗಿನ ಒಪ್ಪಂದಕ್ಕೆ ಒಳಪಟ್ಟಿರುತ್ತದೆ.

ಮುಂದುವರಿದು, ರಚಿಸಲಾದ ಈ ವಿಧಿಗಳಲ್ಲಿ ಶಾಸಕಾಂಗ ಅಧಿಕಾರ (Legislative Authority) ಪರಿಣಾಮಕಾರಿಯಾಗಲು ಅವಶ್ಯಕವಿರುವ ಯಾವ ಮುನ್ನೇರ್ಪಾಡುಗಳನ್ನು ಒಳಗೊಂಡಿರುವುದಿಲ್ಲ. ಅಂಥಾ ಕೆಲವು ವಿಧಿಗಳನ್ನು ಆಸ್ಟ್ರೇಲಿಯಾದ ಮತ್ತು ಅಮೆರಿಕಾದ ಸಂವಿಧಾನಗಳಲ್ಲಿ ನಾವು ಕಾಣುತ್ತೇವೆ; ಅಂದರೆ ಆಸ್ಟ್ರೇಲಿಯಾದ ಸಂವಿಧಾನದಲ್ಲಿನ ಕಲಂ ೫೧ ವಿಧಿ ೧ ಮತ್ತು ಅಮೆರಿಕಾದ ಸಂವಿಧಾನದಲ್ಲಿನ ವಿಧಿ ೮ ಮತ್ತು ಕಲಂ ೮, ಉಪಕಲಂ ೧೮ ಗಳಲ್ಲಿ ನಾವು ಕಾಣುತ್ತೇವೆ.

ಆದ್ದರಿಂದ ಈಗ ನಾನು, ಸಂವಿಧಾನ ರಚನಾ ಸಮಿತಿಯ ಗಮನಕ್ಕಾಗಿ ಈ ಕೆಳಗಿನ ವಿಧಿಗಳನ್ನು ಕರಡಿನಲ್ಲಿನ ೨೧೭ ಮತ್ತು ೨೨೩ (೧) ವಿಧಿಗಳಿಗೆ ಬದಲಿಯಾಗಿ ಕೆಳಗಿನವುಗಳನ್ನು ಗಮನಕ್ಕೆ ತರುತ್ತೇನೆ.

'(೧) ಭಾಗ ೧ ಮತ್ತು ಅನುಸೂಚಿ ೧ ರಲ್ಲಿನ ರಾಜ್ಯಗಳ ಶಾಸಕಾಂಗ ಇಡೀ ರಾಜ್ಯಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಪಟ್ಟಿ ಒಂದರಲ್ಲಿ ಬರುವ ವರ್ಗಗಳ ವಿಷಯಗಳಿಗಾಗಿ ಸಂಬಂಧಿಸಿದಂತೆ ಕಾಯಿದೆಗಳನ್ನು ಮಾಡುವ ವಿಶೇಷಾಧಿಕಾರವನ್ನು ಹೊಂದಿರುತ್ತದೆ.'

'(೨) ಭಾಗ ೧ ಮತ್ತು ಅನುಸೂಚಿ ೧ರಲ್ಲಿನ ಯಾವುದೇ ರಾಜ್ಯದ ಶಾಸಕಾಂಗಕ್ಕೆ, ಕಲಂ (೧)ರಲ್ಲಿನ ಅಧಿಕಾರಗಳಿಗಿಂತಲೂ ಹೆಚ್ಚಿನ ಅಧಿಕಾರವನ್ನು ಪಟ್ಟಿ ಎರಡರಲ್ಲಿ ಬರುವ ವಿಷಯ ವರ್ಗಗಳಿಗೆ ಸಂಬಂಧಿಸಿದಂತೆ ಕಾಯಿದೆಗಳನ್ನು ಮಾಡಲು ಅಧಿಕಾರವಿರುತ್ತದೆ. ಆದರೆ ಕೇಂದ್ರದ ಪಾರ್ಲಿಮೆಂಟಿಗೆ ತನ್ನ ಎಲ್ಲಾ ಕ್ಷೇತ್ರ ಅಥವಾ ಯಾವುದಾದರೂ ಒಂದು ಉಪ–ಕ್ಷೇತ್ರದಲ್ಲಿ ಅಂಥಾ ಕಾಯಿದೆಗಳನ್ನು ಮಾಡುವ ಅಧಿಕಾರವಿರಬೇಕು; ರಾಜ್ಯದ ಕಾಯಿದೆ ಆ ರಾಜ್ಯದಲ್ಲಿ ಪರಿಣಾಮ ಬೀರಬೇಕು ಮತ್ತು ಅಂಥ ಕಾಯಿದೆ ಕೇಂದ್ರದ ಪಾರ್ಲಿಮೆಂಟಿನ ಕಾಯಿದೆಗೆ ವಿರುದ್ಧವಾಗಿರಬಾರದು.'

'(೩) ಹಿಂದಿನ ಉಪ ಕಲಮಿನಲ್ಲಿ ನೀಡಲಾದ ಅಧಿಕಾರಿಗಳ ಜೊತೆಗೆ, ಕೇಂದ್ರದ ಪಾರ್ಲಿಮೆಂಟು ಇಡೀ ಕೇಂದ್ರಕ್ಕಾಗಿ ಅಥವಾ ಆದರೆ ಯಾವುದೇ ಭಾಗಕ್ಕಾಗಿ ಪಟ್ಟಿ ಒಂದರಲ್ಲಿ ಹೇಳಿದ ಎಲ್ಲಾ ವಿಷಯ ವರ್ಗಗಳ ಪರಿಧಿಯಲ್ಲಿ ಬೀರುವ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಮತ್ತು ಯಾರಿಗೂ ಕೆಡುಕಾಗ (Prejudice) ದಂತೆ ಅನ್ವಯವಾಗುವ ಮತ್ತು ಕೇಂದ್ರದ ಶಾಂತಿ, ಸುವ್ಯವಸ್ಥೆ ಮತ್ತು ಒಳ್ಳೆಯ ಆಡಳಿತಕ್ಕಾಗಿ ಕಾಯಿದೆಗಳನ್ನು ಮಾಡಬಹುದು. ಇದಲ್ಲದೆ ಕೇಂದ್ರದ ಪಾರ್ಲಿಮೆಂಟ್ ಪಟ್ಟಿ ಮೂರರಲ್ಲಿ ಬರುವ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೆ ಕಾಯಿದೆಗಳನ್ನು ಮಾಡುವ ವಿಶೇಷಾಧಿಕಾರವನ್ನು ಹೊಂದಿರುತ್ತದೆ.'

'೪(ಎ) ಮೊದಲನೆಯ ಅನುಸೂಚಿಯ ಭಾಗ ಎರಡರಲ್ಲಿನ ರಾಜ್ಯಗಳು ಶಾಂತಿ, ಸುವ್ಯವಸ್ಥೆ ಮತ್ತು ಒಳ್ಳೆಯ ಆಡಳಿತಕ್ಕಾಗಿ ಕಾಯಿದೆಗಳನ್ನು ಮಾಡುವ ಅಧಿಕಾರವನ್ನು ಕೇಂದ್ರದ ಪಾರ್ಲಿಮೆಂಟು ಹೊಂದಿರುತ್ತದೆ.

೪(ಬಿ) ಉಪ ಕಲಮು (ಅ) ದ ಅಡಿಯಲ್ಲಿ ಪಾರ್ಲಿಮೆಂಟಿನ ಸಾಮಾನ್ಯ/ ಸಾರ್ವತ್ರಿಕ ಅಧಿಕಾರಗಳಿಗೆ ಅನುಗುಣವಾಗಿ, ಮೊದಲನೆ ಅನುಸೂಚಿ ಭಾಗ ಎರಡರಲ್ಲಿನ ರಾಜ್ಯಗಳ ಶಾಸಕಾಂಗ ಈ ಕೆಳಗಿನ ವರ್ಗಗಳ ವಿಷಯಗಳ ಸಂಬಂಧವಾಗಿ ಕಾಯಿದೆಗಳನ್ನು ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

ಒಂದು ಘಟಕ ಮಾಡಿದ ಯಾವುದೇ ಕಾಯಿದೆ ಆ ಘಟಕದಲ್ಲಿ ಮಾತ್ರ ಪರಿಣಾಮವನ್ನು ಬೀರುತ್ತದೆ;

ಇಂಥಾ ಪರಿಣಾಮ ಎಲ್ಲಿಯವರೆಗೆ ಕೇಂದ್ರದ ಪಾರ್ಲಿಮೆಂಟು ಮಾಡಿದ ಯಾವುದೇ ಕಾಯಿದೆಗೆ ವಿರುದ್ಧವಾಗಿರುವುದಿಲ್ಲವೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

(ಒಂದು ವೇಳೆ ಈ ಸಂಬಂಧದಲ್ಲಿ ಪ್ರಾಂತಗಳ ಪ್ರಮುಖ ಮುಖ್ಯ ಆಯುಕ್ತರ ಮೇಲಿನ ಹಂಗಾಮಿ ಸಮಿತಿಯ ಶಿಫಾರಸುಗಳನ್ನು ಒಪ್ಪಿಕೊಳ್ಳುವುದಾದರೆ, ಈ ಮುನ್ನೇರ್ಪಾಡು ಅವಶ್ಯಕವಾಗಿರುತ್ತದೆ).

"(೫) ಕೇಂದ್ರದ ಪಾರ್ಲಿಮೆಂಟು ಅಥವಾ ಯಾವುದೇ ರಾಜ್ಯದ ಶಾಸಕಾಂಗ ಕಾಯಿದೆಯನ್ನು ಮಾಡುವ ಅಧಿಕಾರ, (ಅದು) ಒಂದು ನಿರ್ದಿಷ್ಟ ಶಾಸಕಾಂಗ ಹೊಂದಿರುವ ಕಾಯಿದೆ ಮಾಡುವ ಅಧಿಕಾರ ಆ ರಾಜ್ಯದ ಎಲ್ಲಾ ವಿಷಯಗಳಿಗೆ ಅನ್ವಯಿಸುತ್ತದೆ."

"(೬) ಎಲ್ಲಿ ಒಂದು ರಾಜ್ಯದ ಕಾಯಿದೆ ಕೇಂದ್ರದ ಕಾಯಿದೆಗೆ ಅಥವಾ ಪಟ್ಟಿ ಒಂದು ಅಥವಾ ಪಟ್ಟಿ ಎರಡರಲ್ಲಿನ ಯಾವುದೇ ವಿಷಯಗಳಿಗೆ ಸಂಬಂಧಿಸಿದ ನಿಯಮಕ್ಕೆ ಹೊಂದಿಕೊಳ್ಳದಿದ್ದಲ್ಲಿ, ಪಾರ್ಲಿಮೆಂಟಿನ ಕಾಯಿದೆ ಅಥವಾ ಅಸ್ತಿತ್ವದಲ್ಲಿನ ಯಾವುದೇ ಅನುಷ್ಠಾನದಲ್ಲಿ ಉಳಿಯುತ್ತದೆ ಮತ್ತು ರಾಜ್ಯದ ಕಾಯಿದೆ ಅಸಾಂಗತ್ಯವೆನಿಸುವಷ್ಟು ನಿಷ್ಪ್ರಯೋಜಕವಾಗುತ್ತದೆ."

(ಇದು ಆಸ್ಟ್ರೇಲಿಯ ಮತ್ತು ಅಮೆರಿಕಾದ ಮುನ್ನೇರ್ಪಾಡುಗಳನ್ನು ಅನುಸರಿಸುತ್ತದೆ. ಈ ಕಾಯಿದೆಯ ಪ್ರತಿಯೊಂದು ಪರಿಚ್ಛೇದ ಮತ್ತು ಪ್ರತಿಯೊಂದು ಕಲಮಿನ ಪರೀಕ್ಷೆಯನ್ನು ಮಾಡದೆ ಒಂದು ನ್ಯಾಯಾಲಯ ಈ ಕಾಯಿದೆ ಇನ್ನೊಂದು ಕಾಯಿದೆಗೆ ಹೋಲಿಸಿದಾಗ ಸಂಪೂರ್ಣವಾಗಿ ಅಸಂಗತವಾದುದು ಎಂಬ ನಿರ್ಣಯಕ್ಕೆ ಬರಬಹುದು).

ಒಂದು ವೇಳೆ ಇದು ಅವಶ್ಯಕವೆನಿಸಿದಲ್ಲಿ, ಸಮವರ್ತಿಪಟ್ಟಿಯಲ್ಲಿನ ವಿಷಯಗಳಿಗೆ ಸಂಬಂಧಿಸಿದಂತೆ ವಿಧಿ ೨೫೧(೨)ರಲ್ಲಿ ವಿಶೇಷ ಮುನ್ನೇರ್ಪಾಡನ್ನು ಸೇರಿಸಬಹುದು. ಆದರೆ ಕೇಂದ್ರ ಶಾಸಕಾಂಗಕ್ಕೆ ಇತರರ ತೀರ್ಪನ್ನು ತಳ್ಳಿಹಾಕುವ ಅಧಿಕಾರ ಇರುವುದರಿಂದ ಇದರ ಅವಶ್ಯಕತೆ ಬರದೇ ಇರಬಹುದು.

**೨೨೬ ಮತ್ತು ೨೨ನೆಯ ವಿಧಿಗಳು**

೩. ಒಂದು ವೇಳೆ ಪ್ರಾಂತೀಯ ಪಟ್ಟಿಯ ಯಾವುದೇ ವಿಷಯ ರಾಷ್ಟ್ರೀಯ ಮಹತ್ವವನ್ನು ಪಡೆದರೆ ಅಥವಾ ರಾಷ್ಟ್ರೀಯ ಆಸಕ್ತಿಯ ವಿಷಯವಾದಲ್ಲಿ ಕೇಂದ್ರಕ್ಕೆ ಪ್ರಾಂತೀಯ ಪಟ್ಟಿಯನ್ನು ಅತಿಕ್ರಮಣ ಮಾಡುವ (ಒಂದು ವೇಳೆ ಇಂಥ ಶಬ್ದವನ್ನೂ ಉಪಯೋಗಮಾಡಿದರೆ) ಅಂಥಾ ಯಾವುದೇ ವಿಷಯದ ಮೇಲೆ ನಿಯಮವನ್ನು ಮಾಡುವ ಅಧಿಕಾರ ಇರುತ್ತದೆ. ಒಂದು ರಾಜ್ಯಕ್ಕೆ ಪ್ರಮುಖವಾಗಿರುವ ವಿಷಯ ಆ ರಾಜ್ಯಕ್ಕೆ ಅಷ್ಟೇ ಸೀಮಿತವಾಗಿಲ್ಲ. ಅದರ ಮಹತ್ವ ರಾಷ್ಟ್ರೀಯ ಆಯಾಮ (Dimension) ಪಡೆಯುತ್ತದೆ ಎನ್ನುವ ತರ್ಕವೇ ಕೇಂದ್ರದ ಈ ಅಧಿಕಾರದ ಬುನಾದಿಯಾಗಿರುತ್ತದೆ. ಒಂದು ವೇಳೆ ಈ ತರ್ಕಾಧಾರ (Premise) ಸರಿಯಾಗಿದ್ದಲ್ಲಿ, ಆಗ ರಾಜ್ಯ ಆ ವಿಷಯದಲ್ಲಿ ಅಧಿಕಾರವನ್ನೂ ತನ್ನಲ್ಲಿ ಉಳಿಸಿಕೊಳ್ಳುವುದಕ್ಕೆ ಯಾವ ಸಮರ್ಥನೆಯನ್ನು ಹೊಂದಿರುವುದಿಲ್ಲ. ಕೇಂದ್ರ ಈ ರೀತಿ ಸಂವಿಧಾನವನ್ನು ಬದಲಾಯಿಸಿದೆ. ಪ್ರಾಂತೀಯ ಅಥವಾ ರಾಜ್ಯದ ಅಧಿಕಾರವನ್ನು ಸಹಜವಾಗಿ ಮತ್ತು ಸರಳವಾಗಿ ಸಮವರ್ತಿ ಪಟ್ಟಿಯಲ್ಲಿ ಬದಲಾಯಿಸುವುದಕ್ಕೋಸ್ಕರ ಅಧಿಕಾರವನ್ನು ಪಡೆಯಬಾರದು. ವಿಧಿ ೨೨೮ ಪ್ರಾಂತಕ್ಕೆ ಈ ವಿಶೇಷ ವಿಷಯದಲ್ಲಿ ಕಾಯಿದೆಯನ್ನು ರೂಪಿಸುವ ಅಧಿಕಾರವನ್ನು ಹೊಂದಿರುತ್ತದೆ ಎಂಬ ತತ್ವವನ್ನು ಇಲ್ಲಿ ಮರೆಯಲಾಗಿದೆ. ಪ್ರಾಂತೀಯ ಅಧಿಕಾರವನ್ನು ಸಮವರ್ತಿ ಅಧಿಕಾರದಲ್ಲಿ ಪರಿವರ್ತಿಸುವ ಕೇಂದ್ರದ ಈ ಹಸ್ತಕ್ಷೇಪ ಸಂವಿಧಾನದ ಸಂಯುಕ್ತ ರಚನೆಯನ್ನು ಕೊನೆಯಲ್ಲಿ ಹೊಡೆದು ಹಾಕಬಹುದಾಗಿದೆ. ಆದುದರಿಂದ

ಈ ಕೆಳಗಿನ ಶಬ್ದಗಳನ್ನು ಬದಲಾಯಿಸಲು ಸೂಚಿಸುತ್ತೇನೆ:

"ರಾಜ್ಯದ ಪಟ್ಟಿಯಲ್ಲಿರುವ ನಮೂದಿಸಿದ ಯಾವುದೇ ವಿಷಯ ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಪಡೆದಿದೆ ಎಂಬ ಆಧಾರದ ಮೇಲೆ" ಎಂಬ ಶಬ್ದಗಳನ್ನು :

"ಅಥವಾ ರಾಷ್ಟ್ರೀಯ ಆಸಕ್ತಿಗೆ ಸಮಯೋಚಿತವಾದ – ನಿರ್ಣಯ" ಎಂಬ ಶಬ್ದಗಳಿಂದ ಬದಲಾಯಿಸಬೇಕು ಮತ್ತು

"ಅಂಥ ವಿಷಯಕ್ಕೆ ಸಂಬಂಧಿಸಿದಂತೆ ಪಾರ್ಲಿಮೆಂಟ್ ಕಾಯಿದೆಗಳನ್ನು ಮಾಡಲೇಬೇಕು' ಎಂಬ ಶಬ್ದಗಳನ್ನು ಸೇರಿಸಬೇಕು. " ಪಾರ್ಲಿಮೆಂಟಿಗೆ ಇದು ಕಾಯಿದೆ ಬದ್ಧವಾಗಿರುತ್ತದೆ" ಎಂಬ ಶಬ್ದಗಳ ಮುಂಚೆ ಇವುಗಳನ್ನು ಸೇರಿಸಬೇಕು.

ವಿಧಿ ೨೨೮ರಲ್ಲಿರುವ "೨೨೬ ಮತ್ತು ೨೨೭ ವಿಧಿಗಳಲ್ಲಿನ ಯಾವುದೂ ಇಲ್ಲ" ಎಂಬ ಶಬ್ದಗಳನ್ನು " ೨೨೭ ವಿಧಿಯಲ್ಲಿನ ಯಾವುದೂ ಇಲ್ಲ" ಎಂದು ಬದಲಿಸಬೇಕು.

**ಅಲ್ಲಾಡಿ ಕೃಷ್ಣಸ್ವಾಮಿ**

ವಿಧಿ ೨೧೮ಯು ಅವಶ್ಯಕವಾಗಿರುವುದಿಲ್ಲ, ಏಕೆಂದರೆ ಇದು ಪ್ರಥಮ ಪಟ್ಟಿ ((List 1) ಯಲ್ಲಿನ ಒಂದು ವಿಷಯವಾದ ಸರ್ವೋಚ್ಚ ನ್ಯಾಯಾಲಯವನ್ನು ಕುರಿತು ಇದು ಹೇಳುತ್ತದೆ.

ವಿಧಿ ೨೨೧ ಉಚ್ಚನ್ಯಾಯಾಲಯವನ್ನು ಕುರಿತು ಹೇಳುತ್ತದೆ. ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ವಿಶೇಷ ಒತ್ತುಕೊಡುವುದರಲ್ಲಿ ಯಾವ ಅರ್ಥವಿರುವುದಿಲ್ಲ: ಏಕೆಂದರೆ ಉಚ್ಚನ್ಯಾಯಾಲಯವನ್ನು ಒಳಗೊಂಡ ಎಲ್ಲಾ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಗೆ ಸಂಬಂಧಿಸಿದ ವಿಷಯಗಳ ಮೂರು ಪಟ್ಟಿಗಳಲ್ಲಿ (3 Lists) ಅಡಕವಾಗಿರುತ್ತದೆ. ಶಾಸಕಾಂಗದ ಅಧಿಕಾರಗಳ ವಿತರಣೆಗೆ ಸಂಬಂಧಿಸಿದ ವಿಧಿಗಳೆಲ್ಲವುಗಳು ವಿಶೇಷವಾಗಿ ಈ ಪಟ್ಟಿಗಳಿಗೆ (Lists) ಸಂಬಂಧಿಸಿರುವುದರಿಂದ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ವಿಧಿ ಯಾವುದಕ್ಕೂ ಉಪಯೋಗಕ್ಕೆ ಬರುವುದಿಲ್ಲ ಮತ್ತು ಅನಾವಶ್ಯಕವಾಗಿರುತ್ತದೆ.

**ಅಲ್ಲಾಡಿ ಕೃಷ್ಣಸ್ವಾಮಿ**

**ಆಜ್ಞೆಯ ಮೇರೆಗೆ**
**ಎಚ್. ವಿ.ಆರ್. ಅಯ್ಯಂಗಾರ್**
**ಕಾರ್ಯದರ್ಶಿ**

ವಿಭಾಗ – ೪

# ಭಾರತ ಸಂವಿಧಾನ
## ಕಲಮುವಾರು ಚರ್ಚೆ

(೧೯೪೮ರ ನವೆಂಬರ್ ೧೫ ರಿಂದ
೧೯೪೯ರ ಜನವರಿ ೮ರ ವರೆಗೆ)

# ಟಿಪ್ಪಣಿ

ಸಂವಿಧಾನದ ಪ್ರತಿಯೊಂದು ಕರಡು ವಿಧಿಯ ಮೇಲಿನ ಚರ್ಚೆ ೧೯೪೮ರ ನವೆಂಬರ್ ೧೫ರಂದು ಪ್ರಾರಂಭವಾಯಿತು.

ಡಾ। ಅಂಬೇಡ್ಕರರು ಒಪ್ಪಿದ ತಿದ್ದುಪಡಿಗಳನ್ನೇ ಸದನದಲ್ಲಿ ಸ್ವೀಕರಿಸಲಾಯಿತು. ಇಂಥ ತಿದ್ದುಪಡಿಗಳನ್ನು ಇಲ್ಲಿ ಸೇರಿಸಲಾಗಿರುತ್ತದೆ.

ಮೊದಲಲ್ಲಿ, ಕೆಲವೊಂದು ತಿದ್ದುಪಡಿಗಳು ಡಾ। ಅಂಬೇಡ್ಕರರಿಂದ ತಿರಸ್ಕರಿಸಲ್ಪಟ್ಟಿವೆ. ಆದರೆ ಅವುಗಳ ಸವಿಸ್ತಾರ ವಿವರಣೆಯನ್ನು ನೀಡಲಾಗಿಲ್ಲ. ಇಂಥ ಕೆಲವು ತಿದ್ದುಪಡಿಗಳನ್ನು ಇಲ್ಲಿ ನೀಡಲಾಗಿರುತ್ತದೆ. ಆದರೆ, ಅನಂತರ, ಅಂಥ ವಿಧಿಗಳ ಚರ್ಚೆಯ ಕಾಲದಲ್ಲಿ ಡಾ। ಅಂಬೇಡ್ಕರರು ಕೆಲವೊಂದು ತಿದ್ದುಪಡಿಗಳನ್ನು ತಾನೇಕೆ ಒಪ್ಪಿರುವೆ ಮತ್ತು ಉಳಿದವುಗಳನ್ನು ಏಕೆ ಒಪ್ಪಿಲ್ಲ ಎಂಬುದನ್ನೂ ಸವಿಸ್ತಾರವಾಗಿ ವಿವರಿಸಿದ್ದಾರೆ. ಒಟ್ಟಿನಲ್ಲಿ ತಿರಸ್ಕೃತ ತಿದ್ದುಪಡಿಗಳ ಸಂಖ್ಯೆಯೇ ಹೆಚ್ಚಾಗಿರುತ್ತದೆ; ಇವೆಲ್ಲವುಗಳನ್ನು ಈ ಸಂಪುಟದ ಗಾತ್ರ ದೊಡ್ಡದಾಗುತ್ತದೆ ಎಂಬ ಕಾರಣದಿಂದ ಇಲ್ಲಿ ಸೇರಿಸಲಾಗಿಲ್ಲ. ಆದರೆ, ಸಭೆ ಸ್ವೀಕರಿಸಿದ ಗೊತ್ತುವಳಿಗಳ ಬಗ್ಗೆ ಇರುವ ವಿವರಗಳೆಲ್ಲವನ್ನೂ ಇಲ್ಲಿ ನೀಡಲಾಗಿದೆ. ಇಂಥ ಸ್ವೀಕರಿಸಲಾದ ತಿದ್ದುಪಡಿಗಳು ಮತ್ತು ಅದರ ಜೊತೆಗಿನ ಡಾ। ಅಂಬೇಡ್ಕರರ ವಿವರಣೆ ಓದುಗರಿಗೆ ವಿಧಿ (Article) ಯ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವಲ್ಲಿ ನೆರವಾಗುತ್ತವೆ.

ಈ ಸಂಪುಟ ಡಾ। ಅಂಬೇಡ್ಕರರ ಕೃತಿಯ ಬಗ್ಗೆ ಮುಖ್ಯವಾಗಿ ಸಂಬಂಧಿಸಿದೆ; ಆದುದರಿಂದ ಅವರು ಸದನದಲ್ಲಿ ಹೇಳಿದ್ದನ್ನೆಲ್ಲವನ್ನೂ ಒಳಗೊಂಡಿರುತ್ತವೆ ಮತ್ತು ಇದು ಇಲ್ಲಿನ ಚರ್ಚೆಗಳಲ್ಲಿ ಸೇರಿಸಲಾಗಿದೆ. ಡಾ। ಅಂಬೇಡ್ಕರರ ವಿಚಾರಗಳನ್ನು ಮೆಚ್ಚುವಲ್ಲಿ ಮತ್ತು ವಿವರಿಸುವಲ್ಲಿ ಅವಶ್ಯಕವಾಗಿರುವ ಗೌರವಾನ್ವಿತ ಸದಸ್ಯರುಗಳ ಟೀಕೆ ಹಾಗೂ ವಿಮರ್ಶೆಯನ್ನು ಸಂಪುಟದಲ್ಲಿ ಸೇರಿಸಲಾಗಿದೆ ಮತ್ತು ಇದು ಆ ಸನ್ನಿವೇಶ ಹಾಗೂ ಸಂದರ್ಭಕ್ಕೆ ತಕ್ಕಂತಿರುತ್ತದೆ.

ಸಂಪಾದಕ

## ವಿಧಿ – ೧

* **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ : (ಬೊಂಬಾಯಿ:ಸಾಮಾನ್ಯ) :** ಮಾನ್ಯ ಉಪಸಭಾಪತಿ; ಸ್ವಾಮಿ, ನಾನು ಪ್ರೊಫೆಸರ್ ಕೆ.ಟಿ. ಶಹಾ (+) ರವರ ತಿದ್ದುಪಡಿಯನ್ನು ಒಪ್ಪಲಾರೆ ಎಂದು ವಿಷಾದದಿಂದ ಹೇಳುತ್ತೇನೆ. ಅವರ ತಿದ್ದುಪಡಿಗೆ ನನ್ನ ಆಕ್ಷೇಪಣೆಗಳು ಸಂಕ್ಷಿಪ್ತವಾಗಿ ಎರಡಿರುತ್ತವೆ. ಮೊದಲನೆಯದಾಗಿ, ನಾನು ನನ್ನ ಈ ಸದನದಲ್ಲಿ ಮಾಡಿದ ಗೊತ್ತುವಳಿಯ ಪರವಾಗಿನ ಆರಂಭದ ಭಾಷಣದಲ್ಲಿ ಈಗಾಗಲೇ ಹೇಳಿದಂತೆ ಈ ಸಂವಿಧಾನ ಸರಕಾರದ ಹಲವಾರು ಅಂಗಗಳ ಕಾರ್ಯವನ್ನು ನಿಯಂತ್ರಿಸಲು ಉದ್ದೇಶಿಸುವ ಕೇವಲ ಒಂದು ವ್ಯವಸ್ಥೆಯೇ ಹೊರತು ಯಾವುದೇ ಪಾರ್ಟಿಯ ಸದಸ್ಯರನ್ನು ಕಛೇರಿಯಲ್ಲಿ ಕೂಡಿಸುವ ವ್ಯವಸ್ಥೆಯಲ್ಲ. ಸರಕಾರದ ನೀತಿ ಹೇಗಿರಬೇಕು ಮತ್ತು ಸಮಾಜಕ್ಕೆ ಯಾವ ರೀತಿಯ ಸಾಮಾಜಿಕ ಮತ್ತು ಆರ್ಥಿಕ ತಳಹದಿಬೇಕು ಎನ್ನುವ ವಿಷಯ ಕಾಲ ಹಾಗೂ ಸನ್ನಿವೇಶಗಳಿಗನುಸಾರವಾಗಿ ಅದರ ಪ್ರಜೆಗಳು ನಿರ್ಧರಿಸಬೇಕು. ಇಂಥ ವಿಷಯವನ್ನು ಮುಂಚೆಯೇ ಸಂವಿಧಾನದಲ್ಲಿ ಅಳವಡಿಸಲು ಬರುವುದಿಲ್ಲ; ಏಕೆಂದರೆ ಇದು ಪ್ರಜಾತಂತ್ರವನ್ನು ಸಂಪೂರ್ಣವಾಗಿ ನಾಶಗೊಳಿಸುತ್ತದೆ. ಒಂದು ವೇಳೆ, ಈ ಸರಕಾರ ಒಂದು ಪ್ರತ್ಯೇಕ ವಿಧದ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರಲೇಬೇಕು ಎಂಬುದನ್ನು ಸಂವಿಧಾನ ಹೇಳಿದರೆ, ನನ್ನ ಅಭಿಪ್ರಾಯದಲ್ಲಿ ಅದು, ಪ್ರಜೆಗಳು ಯಾವ ರೀತಿಯ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರಬೇಕೆಂದು ನಿರ್ಧರಿಸುವ ಸ್ವಾತಂತ್ರ್ಯವನ್ನು ಅವರಿಂದ ಸರಕಾರ ಕಸಿದುಕೊಂಡಂತಾಗುತ್ತದೆ. ಇಂದು ಸಮಾಜದ ಬಹುತೇಕ ಜನ ಆರ್ಥಿಕ ವ್ಯವಸ್ಥೆಯಲ್ಲಿ ಬಂಡವಾಳಶಾಹಿ ವ್ಯವಸ್ಥೆಗಿಂತ ಸಮಾಜವಾದಿ ವ್ಯವಸ್ಥೆ ಇರುವದೇ ಉತ್ತಮವಾಗಿರುತ್ತದೆಂಬ ಅಭಿಪ್ರಾಯ ಹೊಂದಿರುವುದು ನಿಜ; ಆದರೆ ಚಿಂತನಶೀಲ ಜನ ಇಂದಿನ ಅಥವಾ ಮುಂಬರುವ ಸಮಾಜವಾದಿ ಸಂಘಟನೆಗಿಂತ ಉತ್ತಮವಾದ ಸಮಾಜವಾದಿ ಸಂಘಟನೆಯನ್ನು ನಾಳೆ ಅನುಷ್ಠಾನದಲ್ಲಿ ತರುವುದು ಸಂಪೂರ್ಣವಾಗಿ ಸಾಧ್ಯವಾಗಬಹುದು. ಆದುದರಿಂದ, ಸಂವಿಧಾನವು ಜನರನ್ನು ಒಂದು ನಿರ್ದಿಷ್ಟ ವಿಧದ ಜೀವನ ನಡೆಸಬೇಕೆಂಬುದರ ನಿರ್ಧಾರ ಅವರಿಗೆ ಬಿಟ್ಟು ಬಿಡಬೇಕು. ಈ ಒಂದು ಕಾರಣಕ್ಕಾಗಿ ಈ ತಿದ್ದುಪಡಿಯನ್ನು ವಿರೋಧಿಸಲೇಬೇಕು.

ಶಹಾರ ತಿದ್ದುಪಡಿಯನ್ನು ವಿರೋಧಿಸುವ ಎರಡನೇ ಕಾರಣ ಕೇವಲ ತೋರಿಕೆದ್ದಾಗಿರುತ್ತದೆ. ನಮ್ಮ ಸಂವಿಧಾನದಲ್ಲಿ ನಾವು ಮೂಲಭೂತ ಹಕ್ಕುಗಳನ್ನಲ್ಲದೆ ನಿರ್ದೇಶನ ತತ್ವಗಳನ್ನು (Directive Principles) ಸಹ ಹೊಂದಿರುತ್ತೇವೆ ಎಂಬುದನ್ನು ನನ್ನ ಗೌರವಾನ್ವಿತ ಗೆಳೆಯ ಕೆ.ಟಿ. ಶಹಾರು ಮರೆತರೆಂದು ಕಾಣುತ್ತದೆ. ಒಂದು ವೇಳೆ ನನ್ನ ಗೌರವಾನ್ವಿತ ಗೆಳೆಯ ಸಂವಿಧಾನದ ಭಾಗ ನಾಲ್ಕರಲ್ಲಿನ ವಿಧಿಯನ್ನು ಓದಿದ್ದೇ ಆದರೆ, ಶಾಸಕಾಂಗ (Legislature) ಮತ್ತು ಕಾರ್ಯಾಂಗ (Executive) ಗಳನ್ನು ಈ ಸಂವಿಧಾನದಲ್ಲಿ ಅವುಗಳು ಇಂತಹದೇ ನೀತಿಯನ್ನು ಅನುಷ್ಠಾನದಲ್ಲಿ ತರಲು ಅವುಗಳ ಮೇಲೆ ನಿರ್ಬಂಧನೆ ಹೇರಿದ್ದೇವೆ ಎಂಬುದು ಗೊತ್ತಾಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದ ಒಂದೇ ಒಂದು ವಿಧಿ, ಅಂದರೆ, ವಿಧಿ ೩೧, ಈ ವಿಷಯವನ್ನು

---

* ಸಿ. ಎ. ಡಿ(ಅಧಿಕೃತ ವರದಿ) ಸಂಪುಟ ೮, ೧೫ನೆಯ ನವೆಂಬರ್, ೧೯೪೮, ಪುಟ ೪೦೧–೦೨

(+) ಡಾ। ಅಂಬೇಡ್ಕರರ ಭಾಷಣದ ನಂತರ ಪ್ರೊಫೆಸರ್ ಕೆ.ಟಿ. ಶಹಾರ ತಿದ್ದುಪಡಿಯನ್ನು ಸದನದಲ್ಲಿ ಮಂಡಿಸಲಾಯಿತು.

ಈ ರೀತಿ ಹೇಳುತ್ತದೆ:

"ಸರಕಾರ, ಪ್ರತ್ಯೇಕವಾಗಿ, ತನ್ನ ನೀತಿಯನ್ನು ಈ ಕೆಳಗಿನವುಗಳಿಂದ ಪಡೆಯಲು ನಿರ್ದೇಶಿಸುತ್ತದೆ.

೧. ನಾಗರೀಕರು, ಪುರುಷ ಮತ್ತು ಸ್ತ್ರೀ, ಸಮಾನವಾಗಿ ತಮ್ಮ ಜೀವನೋಪಾಯವನ್ನು ಪಡೆದು ನಡೆಸುವ ಹಕ್ಕನ್ನು ಹೊಂದಿರುತ್ತಾರೆ.

೨. ಸಾಮಾಜಿಕ ಒಳಿತಿಗೆ ಅನುವಾಗುವ ಅತ್ಯುತ್ತಮ ರೀತಿಯಲ್ಲಿ ಸಮಾಜದ ಭೌತಿಕ ಸಂಪನ್ಮೂಲಗಳ ಸ್ವಾಮ್ಯತೆ ಮತ್ತು ನಿಯಂತ್ರಣ.

೩. ಸಾಮಾನ್ಯರ ಹಿತಾಸಕ್ತಿಗೆ ಕೆಡಕು ಉಂಟುಮಾಡುವ / ಆಗುವ ರೀತಿಯಲ್ಲಿ ಉತ್ಪಾದನಾ ಸಾಧನಗಳನ್ನು ಮತ್ತು ಸಂಪತ್ತನ್ನು ಕೇಂದ್ರೀಕೃತವಾಗದಂತೆ ಆರ್ಥಿಕ ವ್ಯವಸ್ಥೆಯ ಕಾರ್ಯಾಚರಣೆಯನ್ನು ನಡೆಸುವುದು;

೪. ಪುರುಷ ಮತ್ತು ಸ್ತ್ರೀ ತಮ್ಮ ಕೆಲಸಕ್ಕೆ ಸಮನಾದ ವೇತನವನ್ನು ಪಡೆಯುವುದು ........."

ಉಳಿದ ಇನ್ನು ಕೆಲವು ನೀತಿಗಳು ಬಹುತೇಕ ಅದೇ ಧಾಟಿಯಲ್ಲಿರುತ್ತವೆ. ನಾನು ತಮ್ಮ ಗಮನಕ್ಕೆ ತಂದ (ಈ ಮೇಲಿನ) ನಿರ್ದೇಶನ ತತ್ತ್ವಗಳು ಒಂದು ವೇಳೆ ತಮ್ಮ ರಚನೆ ಮತ್ತು ನಿರ್ದೇಶನದಲ್ಲಿ ಸಮಾಜವಾದಿ ರೂಪದಲ್ಲಿ ಇರದಿದ್ದಲ್ಲಿ, ಇದಕ್ಕಿಂತ ಮಿಗಿಲಾದ 'ಸಮಾಜವಾದ' ಹೇಗಿರುತ್ತದೆಂಬುದನ್ನು ತಿಳಿದುಕೊಳ್ಳಲು ನನಗೆ ಆಗುತ್ತಿರಲಿಲ್ಲವೆಂಬುದನ್ನು ಪ್ರೊಫೆಸರ್ ಶಹಾರವರಿಗೆ ನಾನು ತಿಳಿಸಬಯಸುತ್ತೇನೆ.

ನಮ್ಮ ಸಂವಿಧಾನ ಈಗಾಗಲೇ ಇಂಥ ಸಮಾಜವಾದಿ ತತ್ವಗಳನ್ನು ಹೊಂದಿರುವುದರಿಂದ ಈ ತಿದ್ದುಪಡಿಯನ್ನು ಒಪ್ಪುವುದು ಅನಾವಶ್ಯಕವೆನಿಸುತ್ತದೆ ಎಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ.

* * * * *

(ಪ್ರೊ. ಕೆ. ಟಿ. ಶಹಾರ ಈ ಕೆಳಗಿನ ತಿದ್ದುಪಡಿಯನ್ನು ಅಭಿಮತಕ್ಕಾಗಿ ಇಡಲಾಯಿತು)

* **ಮಾನ್ಯ ಉಪಸಭಾಪತಿ :** ಇಲ್ಲಿನ ಪ್ರಶ್ನೆ ಏನೆಂದರೆ "ವಿಧಿ ಒಂದರ ಕಲಂ ಒಂದರಲ್ಲಿ ಬರುವ 'ಒಂದು ಇರಬೇಕು' ಎಂಬ ಶಬ್ದಗಳ ನಂತರ 'ಧರ್ಮ', ನಿರಪೇಕ್ಷ, ಸಂಯುಕ್ತ, ಸಮಾಜವಾದಿ' ಎಂಬ ಶಬ್ದಗಳನ್ನು ಸೇರಸಬೇಕು."

ತಿದ್ದುಪಡಿಯನ್ನು ನಿರಾಕರಿಸಲಾಯಿತು

* * * * *

ಮಾನ್ಯ ಉಪಸಭಾಪತಿ : ಒಂದು ವಿಷಯವನ್ನು ನಾನು ಸ್ಪಷ್ಟಗೊಳಿಸಬಯಸುತ್ತೇನೆ. ಡಾ. ಅಂಬೇಡ್ಕರರು ನೀಡಿದ ಉತ್ತರದ ನಂತರ ಯಾವ ಚರ್ಚೆಗೂ ನಾನು ಸಮ್ಮತಿಸುವುದಿಲ್ಲ. ಇಂತಹ ಪ್ರಮಾಣವನ್ನು ಈಗಾಗಲೇ ಮಾಡಿದ್ದೇನೆ ಮತ್ತು ಇದನ್ನು ನಾನು ಪುನಃ ಮಾಡುವುದಿಲ್ಲ (ಸದನದಲ್ಲಿ ನಗೆ)

**ಮಾನ್ಯ ಮಹಬೂಬ್ ಅಲಿ ಬೇಗ್ ಸಾಹಿಬ್ ಬಹದೂರ್** (ಮದ್ರಾಸ್ : ಮುಸ್ಲಿಂ): ಮಿ। ಉಪಸಭಾಪತಿಗಳೆ, ಸ್ವಾಮಿ ನಾನು :–

"ವಿಧಿ ಒಂದರ ಕಲಂ (೧)ರಲ್ಲಿನ 'ರಾಜ್ಯಗಳು' ಎಂಬ ಶಬ್ದವನ್ನು 'ಪ್ರಾಂತಗಳೆಂದು' ಬದಲಾಯಿಸಬೇಕೆಂಬ" ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

ಸ್ವಾಮಿ ನೀವು ಜ್ಞಾಪಿಸಿಕೊಳ್ಳಿ ಡಾ। ಅಂಬೇಡ್ಕರರು ಸಂವಿಧಾನ ಕರಡನ್ನು ನಿಮ್ಮ ಗಮನಕ್ಕೆ ತರಲು

---

* ಸಿ.ಎ.ಡಿ. ಸಂಪುಟ ೭, ೧೫ನೆಯ ನವೆಂಬರ್, ೧೯೪೮, ಪುಟ ೪೦೨

ಗೊತ್ತುವಳಿ ಒಂದನ್ನು ಸದನದಲ್ಲಿ ಮಂಡಿಸಿದಾಗ, ಯಾವಾಗ ಅವರು ಸರಕಾರದ ವಿಧದ ಬಗ್ಗೆ ಆಲೋಚಿಸುತ್ತಿರುವಾಗ ಈ ರೀತಿ ಹೇಳಿದರು .....

**ಮಾನ್ಯ ಉಪಸಭಾಪತಿ :** ಇಂಥಾ ಸ್ವರೂಪದ ಚರ್ಚೆ ನಮಗೆ ಬೇಕಾಗಿರುವುದಿಲ್ಲ. ಗೌರವಾನ್ವಿತ ಸದಸ್ಯರು ಆ ವಿಷಯವಲ್ಲದೆ ಬೇರೆ ಯಾವುದಾದರೂ ಹೊಸತನ್ನು ಹೇಳುವುದಿದ್ದಲ್ಲಿ ಮಾತನಾಡಲಿ ಎಂದು ವಿನಂತಿಸಿಕೊಳ್ಳುತ್ತೇನೆ.

* * * * *

+**ಮಾನ್ಯ ಮಹಬೂಬ ಅಲಿ ಬೇಗ್ ಸಾಹಿಬ್ ಬಹದೂರ್ :** ಒಂದು ವೇಳೆ ಡಾ। ಅಂಬೇಡ್ಕರರು 'ಕೇಂದ್ರ' ಎಂಬ ಪದ ಯಾವುದೇ ಮಹತ್ತರ ಪ್ರಾಮುಖ್ಯತೆಯನ್ನು ಸೂಚಿಸುವ ಹಾಗೆ ಉಪಯೋಗ ಮಾಡದಿದ್ದಲ್ಲಿ, ಆಗ ನಾವು ಸರಿಯಾದ ಶಬ್ದ ಅಂದರೆ "ಸಂಯುಕ್ತ" ಎಂಬ ಪದ ಉಪಯೋಗಿಸದಿರಲು ಯಾವ ಕಾರಣಗಳು ಇರುವುದಿಲ್ಲ. ಆದರೆ, ಇನ್ನೊಂದು ರೀತಿಯಲ್ಲಿ 'ಕೇಂದ್ರ' ಎಂಬ ಶಬ್ದವನ್ನು ಕೆಲಸಮಯದ ನಂತರ 'ಸಂಯುಕ್ತ' ವಿಧದ ಸರಕಾರವನ್ನು ಕೇಂದ್ರ ವಿಧದ ಸರಕಾರದ ಪರಿವರ್ತಿಸುವ ಉದ್ದೇಶದಿಂದ ಉಪಯೋಗಿಸಿದ್ದಲ್ಲಿ, ಆಗ ಈ ಸದನಕ್ಕೆ ಸರಕಾರದ ವಿಧದ ಸಲುವಾಗಿ ಸರಿಯಾದ ಪದವನ್ನು ಉಪಯೋಗಿಸಬೇಕು; ಏಕೆಂದರೆ ಭವಿಷ್ಯದಲ್ಲಿ ಯಾವುದಾದರೂ ಅಧಿಕಾರ ದಾಹವುಳ್ಳ ಒಂದು ರಾಜಕೀಯ ಪಕ್ಷ ಆಡಳಿತಕ್ಕೆ ಬಂದು 'ಸಂಯುಕ್ತ' ವಿಧದ ಸರಕಾರವನ್ನು 'ಕೇಂದ್ರ' ವಿಧದ ಸರಕಾರದಲ್ಲಿ ಬದಲಾಯಿಸಲು ಅದಕ್ಕೆ ಸಾಧ್ಯವಾಗಲಿಕ್ಕಿಲ್ಲ. ಆದುದರಿಂದ ಈ ಸದನವು 'ಕೇಂದ್ರ' ಎಂಬದ ಪದದ ಬದಲಾಗಿ 'ಸಂಯುಕ್ತ ರಾಜ್ಯ' (Federation) ಎಂಬ ಸರಿಯಾದ ಪದ ಉಪಯೋಗಿಸಲೇಬೇಕು. ಸ್ವಾಮಿ, ನಾನು ತಿದ್ದುಪಡಿಯನ್ನು ಮಂಡಿಸಲು ಇರುವ ಸಮರ್ಥನೆ ಇದೇ ಆಗಿರುತ್ತದೆ. ಒಂದು ವೇಳೆ ಸರಕಾರ ಸಂಯುಕ್ತ ಸರಕಾರವಾಗಿರಲೇಬೇಕಲ್ಲದೆ, ಕೇಂದ್ರ ಸರಕಾರವಾಗಿರಬಾರದು ಎಂದು ನೀವು ಅರ್ಥೈಸುವುದಾದರೆ, ಒಂದು ವೇಳೆ ಭವಿಷ್ಯದಲ್ಲಿ ಅಧಿಕಾರದಾಹವುಳ್ಳ ರಾಜಕೀಯ ಪಕ್ಷ ಸಂಯುಕ್ತ ಸರಕಾರವನ್ನು ಕೇಂದ್ರಿಯ ಸರಕಾರದಲ್ಲಿ ಬದಲಾಯಿಸಿ ಫ್ಯಾಸಿಸ್ಟ್ ಸರ್ವಾಧಿಕಾರ ಮತ್ತು ಕೇಂದ್ರಿಕೃತ ಸರಕಾರವಾಗದಿರದಂತೆ ಮಾಡಬೇಕಾದಲ್ಲಿ, ಈಗ ನಾವು "ಸಂಯುಕ್ತ" ಎಂಬ ಸರಿಯಾದ ಪದವನ್ನು ಉಪಯೋಗಿಸಲೇಬೇಕು. ಆದ್ದರಿಂದ ಸ್ವಾಮಿ, 'ಕೇಂದ್ರ' ಎಂಬ ಶಬ್ದದ ಬದಲಾಗಿ 'ಒಕ್ಕೂಟ' ಎಂಬ ಶಬ್ದವನ್ನು ಉಪಯೋಗಿಸಲೇಬೇಕೆಂಬ ಗೊತ್ತುವಳಿಯನ್ನು ಮಂಡಿಸುತ್ತೇನೆ.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ತಿದ್ದುಪಡಿಯನ್ನು ನಾನು ಸ್ವೀಕರಿಸಲಾರೆ, ತಿದ್ದುಪಡಿಯನ್ನು ನಿರಾಕರಿಸಲಾಯಿತು

**********

* **ಗೌರವಾನ್ವಿತ ಶ್ರೀ ಘನಶ್ಯಾಮ್ ಸಿಂಗ್ ಗುಪ್ತಾ** (ಸಿ. ಪಿ. ಮತ್ತು ಬೇರಾರ್: ಸಾಮಾನ್ಯ ) ಸ್ವಾಮಿ, ನಾನು,

"ವಿಧಿ ಒಂದರಲ್ಲಿನ 'ರಾಜ್ಯ' ಎಂಬ ಶಬ್ದ ಎಲ್ಲೆಲ್ಲಿ ಬರುತ್ತದೆಯೋ ಅಲ್ಲಲ್ಲಿ ಅದನ್ನು 'ಪ್ರದೇಶ'ವೆಂದು ಬದಲಾಯಿಸುವ ಮತ್ತು ಹೀಗೆ ಮಾಡುವುದರಿಂದ ಉದ್ಭವಿಸುವ ಬದಲಾವಣೆಗಳನ್ನು ಕರಡು ಪ್ರತಿ

---

\+ ಸಿ.ಎ.ಡಿ. (ಕಛೇರಿಯ ವರದಿ) ಸಂಪುಟ ೮, ೧೫ನೆಯ ನವೆಂಬರ್, ೧೯೪೮, ಪುಟ ೪೦೪

* ಸಿ.ಎ.ಡಿ. (ಸರಕಾರ ವರದಿ) ಸಂಪುಟ ೭, ೧೫ ನವೆಂಬರ್, ೧೯೪೮, ಪುಟ ೪೦೬

ಸಂವಿಧಾನದಲ್ಲೆಲ್ಲಾ ತರಬೇಕೆಂದು" ಮಂಡಿಸುತ್ತೇನೆ.

* * * * *

+ **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ತಿದ್ದುಪಡಿಯನ್ನು ನಾನು ವಿರೋಧಿಸುವೆ.

**ಮಾನ್ಯ ಉಪಸಭಾಪತಿ :** ಪ್ರಶ್ನೆ ಏನೆಂದರೆ: "ವಿಧಿ ಒಂದರಲ್ಲಿನ 'ರಾಜ್ಯ' ಎಂಬ ಶಬ್ದ ಎಲ್ಲೆಲ್ಲಿ ಬರುತ್ತದೆಯೋ ಅಲ್ಲಲ್ಲಿ ಅದನ್ನು 'ಪ್ರದೇಶ' ವೆಂದು ಬದಲಾಯಿಸುವ ಮತ್ತು ಹೀಗೆ ಮಾಡುವುದರಿಂದ ಉದ್ಭವಿಸುವ ಬದಲಾವಣೆಗಳನ್ನು ಕರಡು ಪ್ರತಿ ಸಂವಿಧಾನದಲ್ಲೆಲ್ಲಾ ತರುವುದಾಗಿರುತ್ತದೆ."

............ "Noesನೋಗಳು' ಒಪ್ಪುವುದಿಲ್ಲ. ಬಹುತೇಕ ಹೊಂದಿದ್ದಾರೆಂದು ನಾನು ಭಾವಿಸುತ್ತೇನೆ.

**ಶ್ರೀ ಹೆಚ್. ವಿ. ಕಾಮತ್ :** ಮತಕ್ಕೆ ಹಾಕಲು ನಾನು ಕೋರುತ್ತೇನೆ.

**ಮಾನ್ಯ ಉಪಸಭಾಪತಿ :** ನೋಗಳು ಬಹುಮತ ಹೊಂದಿದ್ದಾರೆಂದು ನನಗೆ ಕಂಡುಬರುತ್ತದೆ. ಆದುದರಿಂದ ಇದನ್ನು ವಿಭಜನಾ ಅಥವಾ ಪ್ರತ್ಯೇಕ ಚಲಾವಣೆ ಮಾಡುವ ಆವಶ್ಯಕತೆ ಇರುವುದಿಲ್ಲ. ನಿಮ್ಮ ಬೇಡಿಕೆಯನ್ನು ಮನ್ನಿಸದಿರಲು ನನಗೆ ಅಧಿಕಾರವಿದೆ. ಪರಿಸ್ಥಿತಿಯ ಬಗ್ಗೆ ಆಲೋಚಿಸಲು ನಾನು ಸದನದ ಗೌರವಾನ್ವಿತ ಸದಸ್ಯರುಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ನೋಗಳು ಬಹುತೇಕ ಹೊಂದಿದ್ದಾರೆಂಬುದು ತುಂಬಾ ಸ್ಪಷ್ಟವಾಗಿರುತ್ತದೆ.

**ಗೌರವಾನ್ವಿತ ಶ್ರೀ ಘನಶ್ಯಾಮ್‌ಸಿಂಗ್ ಗುಪ್ತಾ :** ನೋಗಳು–ಬಹುಮತ ಹೊಂದಿರುತ್ತಾರೆ ಎಂಬ ನಿಲುವನ್ನು ನಾನು ಒಪ್ಪುವೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ ನೆಹರೂ :** ಈ ರೀತಿ ವಿನಂತಿಸಿಕೊಳ್ಳುವುದರ ಬದಲು ನಾವು ನಮ್ಮ ಕೈಗಳನ್ನು ಎತ್ತಬೇಕು. ಈ ವಿಷಯ ಎಲ್ಲಿ ನಿಂತಿದೆ ಎಂಬುದರ ಪಕ್ಷಪಾತವಿಲ್ಲದ ಸೂಚನೆಯನ್ನು ನೀಡುತ್ತದೆ.

* * * * *

**ಮಾನ್ಯ ಉಪಸಭಾಪತಿ :** ಗೌರವಾನ್ವಿತ ಜಿ.ಎಸ್.ಗುಪ್ತಾರವರು ನೋಗಳು ಬಹುಮತ ಹೊಂದಿದ್ದಾರೆ ಎಂಬುದನ್ನು ಒಪ್ಪುತ್ತಾರೆಯೇ ?

**ಗೌರವಾನ್ವಿತ ಶ್ರೀ ಘನಶ್ಯಾಮ್‌ಸಿಂಗ್ ಗುಪ್ತ :** ನೋಗಳು ಬಹುಮತ ಹೊಂದಿರುತ್ತಾರೆ ಎಂಬುದನ್ನು ನಾನು ಒಪ್ಪುತ್ತೇನೆ.

ತಿದ್ದುಪಡಿಯನ್ನು ನಿರಾಕರಿಸಲಾಯಿತು

**ಶ್ರೀ ಹೆಚ್.ವಿ. ಕಾಮತ್ :** ಸ್ವಾಮಿ 'ವಿಧಿ ಒಂದರ ಕಲಂ ಒಂದರಲ್ಲಿನ 'ರಾಜ್ಯಗಳು' ಎಂಬ ಶಬ್ದವನ್ನು ಪ್ರದೇಶಗಳು, ಎಂದು ಬದಲಾಯಿಸಬೇಕೆಂಬ ಗೊತ್ತುವಳಿಯನ್ನು ಮಂಡಿಸಲು ಪ್ರಾರ್ಥಿಸುತ್ತೇನೆ.

(ವಿಚಾರವಿನಿಮಯ ಮುಂದುವರಿಯುವುದು)

* * * * *

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ನಾನು ತಿದ್ದುಪಡಿಯನ್ನು ಒಪ್ಪುವುದಿಲ್ಲ.

(ಈ ಹಂತದಲ್ಲಿ ಶ್ರೀ ಹಿಮ್ಮತ್ ಸಿಂಗ್ ಮತ್ತು ಕೆ. ಮಹೇಶ್ವರಿಯವರು ಮಾತನಾಡಲು ಎದ್ದು ನಿಲ್ಲುತ್ತಾರೆ)

---

\+ ಅದೇ, ಪು. ೪೧೨

**ಮಾನ್ಯ ಉಪಸಭಾಪತಿ :** ಗೌರವಾನ್ವಿತ ಡಾ।ಬಿ.ಆರ್. ಅಂಬೇಡ್ಕರರು ಚರ್ಚೆಗೆ ಈಗಾಗಲೇ ಉತ್ತರ ನೀಡಿದ್ದಾರೆ. ಮತ್ತು ಈ ಗೊತ್ತುವಳಿಯ ಮೇಲೆ ಮುಂದಿನ ಚರ್ಚೆಗೆ ನಾನು ಅನುಮತಿ ನೀಡಲು ಬಯಸುವುದಿಲ್ಲ.

**ಪಂಡಿತ್ ಹೃದಯನಾಥ ಕುಂಜ್ರು (ಸಂಯುಕ್ತ ಪ್ರಾಂತಗಳು : ಸಾಮಾನ್ಯ):** ಸ್ವಾಮಿ, ಒಂದು ವೇಳೆ ಒಬ್ಬ ಸದಸ್ಯ ಮಂಡಿಸಿದ ಪ್ರತಿಯೊಂದು ಗೊತ್ತುವಳಿಯ ನಂತರ ನೀವು ಡಾ॥ ಅಂಬೇಡ್ಕರರಿಗೆ ಇದಕ್ಕೆ ನಿಮ್ಮ ಒಪ್ಪಿಗೆ ಇದೆಯೋ ಇಲ್ಲವೋ ಎಂದು ಕೇಳಿ ಅನಂತರ ಗೊತ್ತುವಳಿಯ ಮೇಲೆ ಅವರಿಗೆ ಅಭಿಪ್ರಾಯ ಮಂಡಿಸಲು ಅನುಮತಿ ನೀಡಿ ಉಳಿದ ಸದಸ್ಯರನ್ನು ಆ ವಿಷಯದ ಮೇಲೆ ಮಾತನಾಡಲು ಅನುಮತಿ ನೀಡದಿದ್ದಲ್ಲಿ ಅವರನ್ನು ಸದನದಲ್ಲಿ ನಿಷ್ಕರುಣೆಯಿಂದ ನೋಡಿದಂತಾಗುತ್ತದೆ.

**ಮಾನ್ಯ ಉಪಸಭಾಪತಿ :** ನನ್ನ ನಿಲುವನ್ನು ಪಂಡಿತ ಹೃದಯನಾಥ ಕುಂಜ್ರುರವರು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ಭಾವಿಸುತ್ತೇನೆ. ಈ ಸದನದಲ್ಲಿ ಎಲ್ಲಾ ಸದಸ್ಯರಿಗೆ ಸಾಧ್ಯವಾಗುವ ಎಲ್ಲಾ ಸವಲತ್ತುಗಳನ್ನು ನೀಡಲು ತಯಾರಿದ್ದೇನೆ. ಈ ದಿಶೆಯಲ್ಲಿ ಇತ್ತೀಚಿನ ದಿನಗಳಲ್ಲಿ ನಾನು ನಿಮ್ಮ ಜೊತೆಗೆ ಹೇಗೆ ವರ್ತಿಸಿದ್ದೇನೆಂಬುದನ್ನು ಇಲ್ಲಿ ಮತ್ತೊಮ್ಮೆ ಹೇಳಬಯಸುವುದಿಲ್ಲ. ಆದರೆ, ಈಗ ನಮಗೆ ಸಮಯ ಅಭಾವವಿದೆ. ಮಾನ್ಯ ಕಾಮತರು ತಿದ್ದುಪಡಿ ಮಂಡಿಸಿದ ನಂತರ ಯಾರಾದರೂ ಎದ್ದುನಿಂತು ವಾದವನ್ನು ಪ್ರಾರಂಭಿಸುತ್ತಾರೋ ಇಲ್ಲವೋ ಎಂಬುದನ್ನು ನಾನು ಸ್ವಲ್ಪಹೊತ್ತು ಕಾದು ನೋಡಿದೆ; ಯಾರೂ ಎದ್ದು ನಿಲ್ಲಲಿಲ್ಲ; ಇದಲ್ಲದೆ ಮಾನ್ಯ ಕಾಮತರು ತಾವೇ ಮಂಡಿಸಿದ ವಾದಗಳನ್ನೇ ಪುನರಾವರ್ತಿಸಿದರು. ಆದಕಾರಣ ನಾನು ಡಾ। ಅಂಬೇಡ್ಕರರು ಉತ್ತರ ನೀಡಲು ತಯಾರಾಗಿದ್ದರೋ ಇಲ್ಲವೋ ಎಂಬುದನ್ನು ಕೇಳಿದೆ. ವಿಷಯದ ಸದನದ ಆಶಯದ ವಿರುದ್ಧ ಹೋಗಬಾರದೆಂದು ಅವರಿಗೆ ಈ ಗೊತ್ತುವಳಿ ಬಗೆಗಿನ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಕೇಳಿಕೊಂಡೆ, ಅಷ್ಟೆ. ಒಂದು ವೇಳೆ ಸದನ ಹೊಂದಿರುವ ನಿಲುವನ್ನು ಸರಿಯಾಗಿ ತಿಳಿದುಕೊಳ್ಳುವಲ್ಲಿ ನಾನು ವಿಫಲಗೊಂಡಲ್ಲಿ ನನ್ನನ್ನು ಕ್ಷಮಿಸಿ.

**ಪಂಡಿತ್ ಹೃದಯನಾಥ ಕುಂಜ್ರು :** ಒಂದು ಕಲಮು (Clause) ಚರ್ಚೆಗೆ ಅನರ್ಹವಾಗುವಷ್ಟು ತುಚ್ಛ (Trivial) ಇದ್ದು ಮತ್ತು ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ ಎಂಬ ಆಧಾರದ ಮೇಲೆ ಅದರ ಬಗ್ಗೆ ಹೆಚ್ಚಿನ ವಿಚಾರಣೆಗೆ ಪರವಾನಗಿ ಕೊಡದೇ ಇರುವುದು ಸಂಪೂರ್ಣವಾಗಿ ನಿಮ್ಮ ಹಕ್ಕಿನೊಳಗೆ ಬರುತ್ತದೆ. ಚರ್ಚೆ ನಿಲ್ಲಿಸುವ ಅಧಿಕಾರವನ್ನು ಹೊಂದಿದ್ದು ಸದಸ್ಯರಿಗೆ ಉತ್ತರ ನೀಡಲು ಸಹ ನೀವು ಹೇಳಬಹುದು. ಒಂದು ವೇಳೆ ಇಂಥ ನಿಮ್ಮ ಅಧಿಕಾರವನ್ನು ಚಲಾಯಿಸಿ ಡಾ॥ ಅಂಬೇಡ್ಕರರಿಗೆ ನೀವು ಉತ್ತರ ಕೊಡಲು ಹೇಳಿದ್ದರೆ ಆಗ ನೀವು ಹೀಗೆ ಮಾಡಿದುದಕ್ಕೆ ನನ್ನ ಆಕ್ಷೇಪಣೆ ಏನೂ ಇರುವುದಿಲ್ಲ.

**ಮಾನ್ಯ ಉಪಸಭಾಪತಿ :** ಹಾಗಾದರೆ ಈ ತಿದ್ದುಪಡಿಯನ್ನು ನಾನು ಅಭಿಮತಕ್ಕಾಗಿ ಸದನದಲ್ಲಿಡುತ್ತೇನೆ.

ಮಾನ್ಯ ಕಾಮತರ ಗೊತ್ತುವಳಿಯನ್ನು ನಿರಾಕರಿಸಲಾಯಿತು.

* * * * *

+ **ಶ್ರೀ ಮಹಾವೀರ ತ್ಯಾಗಿ :** ಸ್ವಾಮಿ, ನನ್ನ ಗೊತ್ತುವಳಿಯಲ್ಲಿ ಹೇಳಲಾದ ಎಲ್ಲಾ ಶಬ್ದಗಳನ್ನೂ ಹಾಗೆಯೇ ಉಳಿಸಿಕೊಳ್ಳುವ ಆಸಕ್ತಿಯನ್ನು ನಾನು ಅಷ್ಟಾಗಿ ಹೊಂದಿರುವುದಿಲ್ಲ. ಇದಕ್ಕೋಸ್ಕರ ನಾನು

---

+ ಹಿಂದಿನದೇ, ಪುಟ ೪೧೩.

ಭಾಷಣ ಮಾಡಿ ಈ ಸದನದ ವೇಳೆಯನ್ನು ವ್ಯರ್ಥವಾಗಿ ಕಳೆಯಲು ಇಚ್ಛಿಸುವುದಿಲ್ಲ. ಈ ವಿಷಯ ಏನೇ ಇರಲಿ, ನಾನು ಒಂದು ವಿಷಯವನ್ನು ಸ್ಪಷ್ಟಗೊಳಿಸಲು ಇಚ್ಛಿಸುತ್ತೇನೆ. ಮತ್ತು ಗುರಿಯನ್ನು ಮನದಲ್ಲಿಟ್ಟುಕೊಂಡು ನಾನು;

"ವಿಧಿ ಒಂದರ, ಕಲಂ ಒಂದರಲ್ಲಿನ "ರಾಜ್ಯಗಳು" ಎಂಬ ಶಬ್ದವನ್ನು 'ಪರಸ್ಪರ ರಾಜ್ಯಗಳು' ಮತ್ತು ಕೇಂದ್ರದ ಸಾರ್ವಭೌಮತ್ವ 'ಜನರ ಕೈಯಲ್ಲಿಯೇ ಇರುತ್ತದೆ' ಎಂಬ ಪದಗಳಿಂದ ಬದಲಾಯಿಸಬೇಕು." ತಿದ್ದುಪಡಿಯನ್ನು ವಿಧಿವತ್ತಾಗಿ ಮಂಡಿಸುತ್ತೇನೆ.

* * * * *

* **ಮಾನ್ಯ ಉಪಸಭಾಪತಿ :** ತ್ಯಾಗಿಯವರ ತಿದ್ದುಪಡಿಯನ್ನು ಅಭಿಮತಕ್ಕಾಗಿ ನಾನು ಈಗ ಇಡುತ್ತಿದ್ದೇನೆ.

**ಶ್ರೀ ಮಹಾವೀರ ತ್ಯಾಗಿ :** ಮಾನ್ಯ ಉಪಸಭಾಪತಿ, ಸ್ವಾಮಿ, ಈ ಕರಡು ಪ್ರತಿ ಇದ್ದರೂ, ನಿಜವಾದ ಸಾರ್ವಭೌಮತ್ವ ಪ್ರಜೆಗಳ ಕೈಯಲ್ಲಿಯೇ ಇದೆ ಎಂದು ಪಾರ್ಲಿಮೆಂಟಿನ ಮಸೂದೆಗಳ ಕರಡುಪ್ರತಿ ತಯಾರಿಸುವವರು, ವಿದ್ಯಾವಂತರು ಹೇಳಿರುವುದರಿಂದ ಈ ತಿದ್ದುಪಡಿಗೆ ನಾನು ಒತ್ತಾಯಿಸಲಾರೆ. ಸ್ವಾಮಿ ಈ ಕರಡು ಪ್ರತಿ ಅರ್ಥವೇನೆಂದರೆ ಸಾರ್ವಭೌಮತ್ವ ಜನರ ಕೈಯಲ್ಲಿಯೇ ಇದೆ ಎಂದು ಅರ್ಥ ಎಂಬುದನ್ನು ಡಾ। ಅಂಬೇಡ್ಕರರು ಒಪ್ಪುತ್ತಾರೆಂದು ನಾನು ಭಾವಿಸುವೆ ಮತ್ತು ಇವರ ಈ ರೀತಿಯ ವಿವರಣೆ ಭವಿಷ್ಯದ ದಾಖಲೆಗಾಗಿ ಬರವಣಿಗೆಯಲ್ಲಿ ಇರಲಿ.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್:** ಸಾರ್ವಭೌಮತ್ವ ಪ್ರಜೆಗಳ ಕೈಯಲ್ಲಿಯೇ ಇದೆ ಎಂಬುದಕ್ಕೆ ಯಾರೂ ಸಂಶಯಪಡಬೇಕಾಗಿಲ್ಲ. ಒಂದು ವೇಳೆ ಪೂರ್ವ ಪೀಠಿಕೆ (Preamble) ಬಗ್ಗೆ ನಾವು ವಿಚಾರ ಮಾಡುವಾಗ ಈ ವಿಷಯವನ್ನು ಮತ್ತೊಮ್ಮೆ ಪ್ರಸ್ತಾಪಕ್ಕೆ ತಂದಲ್ಲಿ ಇದಕ್ಕೆ ನನ್ನ ಆಕ್ಷೇಪಣೆ ಎಳ್ಳಷ್ಟೂ ಇರುವುದಿಲ್ಲ.

**ಶ್ರೀ ಮಹಾವೀರ ತ್ಯಾಗಿ :** ಹಾಗಿದ್ದರೆ, ನನ್ನ ತಿದ್ದುಪಡಿಯನ್ನು ವಾಪಸು ಪಡೆಯಲು ಈ ಸದನದ ಅನುಮತಿ ಕೇಳುತ್ತೇನೆ.

ತಿದ್ದುಪಡಿಯನ್ನು ಸಭೆಯ ಅನುಮತಿ ಪಡೆದು ಹಿಂತೆಗೆದುಕೊಳ್ಳಲಾಯಿತು.

**ಪ್ರೊ। ಕೆ.ಟಿ. ಶಹ :** ಮಾನ್ಯ ಉಪಸಭಾಪತಿ, ಸ್ವಾಮಿ, "ವಿಧಿ ಒಂದರಲ್ಲಿನ ಕಲಂ ಒಂದರಲ್ಲಿ 'ರಾಜ್ಯಗಳು' ಎಂಬ ಶಬ್ದದ ನಂತರ 'ಪರಸ್ಪರ' (Interse) ಎಂಬ ಶಬ್ದಗಳನ್ನು ಸೇರಿಸಬೇಕು" ಎಂಬ ತಿದ್ದುಪಡಿಯನ್ನು ಮಂಡಿಸಲು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

(ತಮ್ಮ ತಿದ್ದುಪಡಿಯನ್ನು ಪ್ರೊ. ಶಹಾರು ವಿವರಿಸಿದರು ಮತ್ತು ಇದಕ್ಕೆ ಸಂಬಂಧಿಸಿದ ಚರ್ಚೆ ಮುಂದುವರಿಯಿತು)

\+ **ಗೌರವಾನ್ವಿತ ಡಾ। ಬಿ.ಆರ್.ಅಂಬೇಡ್ಕರ್:** ಸ್ವಾಮಿ, ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

**ಮಾನ್ಯ ಉಪಸಭಾಪತಿ :** ನಾನು ತಿದ್ದುಪಡಿಯನ್ನು ಅಭಿಮತಕ್ಕಾಗಿ ಇಡುತ್ತೇನೆ.

ತಿದ್ದುಪಡಿಯನ್ನು ನಿರಾಕರಿಸಲಾಯಿತು.

---

* ಸಿ.ಎ.ಡಿ. (ಕಛೇರಿಯ ವರದಿ) ಸಂಪುಟ ೭, ನವೆಂಬರ್ ೧೫, ೧೯೪೮, ಪುಟ ೪೧೮

\+ ಹಿಂದಿನದೇ ಪುಟ (ibid) ೪೨೨–೨೪

**ಮಾನ್ಯ ನಜೀರುದ್ದೀನ್ ಅಹ್ಮದ್ : ಸ್ವಾಮಿ, :** "ವಿಧಿ ಒಂದರಲ್ಲಿನ ಕಲಮ್ ಒಂದರ ಕೊನೆಗೆ ಮತ್ತು ರಾಜ್ಯಗಳ ಒಕ್ಕೂಟವೆಂಬ ಹೆಸರಿನಿಂದ" ಎಲ್ಲರಿಗೂ ಗೊತ್ತಾಗಲಿ ಎಂಬುದನ್ನು ಸೇರಿಸಲು ತಿದ್ದುಪಡಿಯನ್ನು ಮಂಡಿಸಲು ನಾನು ನಿಮ್ಮಲ್ಲಿ ವಿನಂತಿಸುತ್ತೇನೆ.

ಸ್ವಾಮಿ, ನನ್ನ ತಿದ್ದುಪಡಿ ಒಂದು ವಿವಾದಾಸ್ಪದವಲ್ಲದ ತಿದ್ದುಪಡಿಯಾಗಿದೆ ..............ಇದಕ್ಕೆ ಪರ್ಯಾಯವಾಗಿ "ವಿಧಿ ಒಂದರ ಕಲಮ್‌ನ ಒಂದರ ಕೊನೆಗೆ 'ಮತ್ತು ಭಾರತದ ಒಕ್ಕೂಟವೆಂಬ ಹೆಸರಿನಲ್ಲಿ ಎಲ್ಲರಿಗೂ ಗೊತ್ತಾಗಲಿ' ಎಂಬುದನ್ನು ಸೇರಿಸಲು ತಿದ್ದುಪಡಿಯನ್ನು ಮಂಡಿಸುತ್ತೇನೆ.

* * * * *

........... ನನ್ನ ಇನ್ನೊಂದು ತಿದ್ದುಪಡಿ ಹೀಗಿರುತ್ತದೆ.

"ವಿಧಿ ಒಂದರ ಕಲಮ್‌ನ ಒಂದರ ಕೊನೆಗೆ 'ಮತ್ತು ಭಾರತೀಯ ಒಕ್ಕೂಟವೆಂಬ ಹೆಸರಿನಲ್ಲಿ 'ಎಲ್ಲರಿಗೂ ಗೊತ್ತಾಗಲಿ' ಎಂಬುದನ್ನು ಸೇರಿಸಲು ಮಂಡಿಸುತ್ತೇನೆ.

ಸ್ವಾಮಿ, ಈ ಮೂರು ಪರ್ಯಾಯ ಶಬ್ದಗಳಾಗಿವೆ. ಇವುಗಳಲ್ಲಿ ನಾನು ಮೊದಲನೆಯದನ್ನು ಆರಿಸಿಕೊಳ್ಳುವೆ. ಆದರೆ ಈ ಮೂರು ಪರ್ಯಾಯ ಶಬ್ದಗಳ ವಿಷಯದಲ್ಲಿ ಈ ಸದನ ಯಾವ ರೀತಿ ವಿಚಾರ ಮಾಡುತ್ತದೆ ಎಂಬುದರ ಮೇಲೆ ಎಲ್ಲಾ ಅವಲಂಬಿಸಿದೆ.

(ಮಿ। ಅಹ್ಮದರ ತಿದ್ದುಪಡಿಯನ್ನು ಮಿ। ಕಾಮತರು ಟೀಕೆ ಮಾಡಿದ ನಂತರ ಡಾ। ಅಂಬೇಡ್ಕರರು ಉತ್ತರ ನೀಡಲು ಎದ್ದು ನಿಲ್ಲುತ್ತಾರೆ)

* * * * *

**ಗೌರವಾನ್ವಿತ ಡಾ। ಬಿ.ಆರ್.ಅಂಬೇಡ್ಕರ್ :** ಸ್ವಾಮಿ, ಈ ಎಲ್ಲಾ ತಿದ್ದುಪಡಿಗಳನ್ನು ನಾನು ವಿರೋಧಿಸುತ್ತೇನೆ. 'ಭಾರತ'ವನ್ನು 'ಭಾರತ ಸಂಯುಕ್ತ ರಾಜ್ಯ'ವಾಗಬೇಕೆಂಬ ಅಹ್ಮದರ ಮೊದಲನೆಯ ತಿದ್ದುಪಡಿಗೆ ನನ್ನ ಗೆಳೆಯ ಮಿ। ಕಾಮತರು ಸರಿಯಾದ ರೀತಿಯಲ್ಲಿಯೇ ವಿರೋಧಿಸಿದ್ದಾರೆ; ನಾನು ಅವರ ವಾದವನ್ನು ಹೃದಯಪೂರ್ವಕವಾಗಿ ಒಪ್ಪುತ್ತೇನೆ. 'ಒಕ್ಕೂಟ'ವೆಂಬ ಪದ ಇಲ್ಲಿ ಏಕೆ ಉಪಯೋಗಿಸಲಾಗಿದೆ ಮತ್ತು 'ಗಣರಾಜ್ಯ' ಎಂಬ ಪದ ಏಕೆ ಉಪಯೋಗಿಸಲಾಗಿಲ್ಲವೆಂಬುದರ ಬಗ್ಗೆ ನನ್ನ ಅಭಿಪ್ರಾಯಗಳನ್ನು ಈಗಾಗಲೇ ವ್ಯಕ್ತಪಡಿಸಿದ್ದೇನೆ.

'ಭಾರತ'ವನ್ನು 'ಭಾರತದ ಒಕ್ಕೂಟ'ವೆಂದು ಹೆಸರಿಡುವ ಅವರ ಇನ್ನೊಂದು ತಿದ್ದುಪಡಿಗೆ ಸಹ ನಾನು ಒಂದು ಅನಾವಶ್ಯಕ ತಿದ್ದುಪಡಿ ಎಂದು ಹೇಳುವೆ. ಈ ದೇಶ 'ಭಾರತ'ವೆಂದೇ ಮೊದಲಿನಿಂದಲೂ (ಭಾರತದ ಒಕ್ಕೂಟದ ಇತರ ಭಾಗಗಳು ಈ ದೇಶದ ಹೆಸರಿನೊಂದಿಗೆ ಯಾವ ಸಂಬಂಧವನ್ನು ಹೊಂದಿಲ್ಲದಿದ್ದರೂ ಪರವಾಗಿಲ್ಲ) ಜಗತ್ತಿನ ಹಿಂದಿನಿಂದಲೂ ಗೊತ್ತಾಗಿರುತ್ತದೆ ಎಂಬುದು ನನ್ನ ಅಭಿಪ್ರಾಯ. ಭಾರತ, ಇತಿಹಾಸದುದ್ದಕ್ಕೂ ಭಾರತವೆಂದೇ ಪ್ರಸಿದ್ಧವಾಗಿದೆ. ಸಂಯುಕ್ತ ರಾಷ್ಟ್ರ ಸಂಸ್ಥೆ (United Nations Organisations) ಯ ಒಂದು ಸದಸ್ಯ ರಾಷ್ಟ್ರವಾಗಿ ಈ ದೇಶ 'ಭಾರತ'ವೆಂದೇ ಹೆಸರಾಗಿದೆ ಮತ್ತು ಎಲ್ಲಾ ಒಪ್ಪಂದಗಳಲ್ಲಿ ಇದೇ ಹೆಸರಿನ ಹಸ್ತಾಕ್ಷರವಿರುತ್ತದೆ. ಆದುದರಿಂದ ಒಂದು ದೇಶದ ಹೆಸರು ಆ ದೇಶ ತನ್ನ ಅಧೀನ ವಿಭಾಗಗಳಲ್ಲಿ ಏನನ್ನು ಹೊಂದಿರುತ್ತದೆ ಎಂಬುದಕ್ಕೆ ಅಷ್ಟೊಂದು ಮಹತ್ವವನ್ನು ಯಾರೂ ನೀಡಬಾರದು ಎಂಬ ಭಾವನೆಯನ್ನು ನಾನು ವೈಯಕ್ತಿಕವಾಗಿ ಹೊಂದಿರುತ್ತೇನೆ. ಆದುದರಿಂದ ದೇಶದ ಈ ಹೆಸರಿಗೆ ಸಂಬಂಧಿಸಿದ ತಿದ್ದುಪಡಿಗಳನ್ನು ನಾನು ವಿರೋಧಿಸುತ್ತೇನೆ. ಅಲ್ಲದೆ 'ಕರಡ'ನ್ನು ಈಗ ಹೇಗೆ ಸದನದಲ್ಲಿ ಮಂಡಿಸಲಾಗಿದೆಯೇ ಅದೇ ರೀತಿ ಅತ್ಯುತ್ತಮವಾಗಿದೆ ಎಂಬ ವಾದವನ್ನು ಮಂಡಿಸುತ್ತೇನೆ.

**ಮಾನ್ಯ ಉಪಸಭಾಪತಿ :** ಈಗ ನಾನು ಅಹ್ಮದರ ತಿದ್ದುಪಡಿಗಳನ್ನು ಒಂದಾದ ನಂತರ ಒಂದರಂತೆ ಅಭಿಮತಕ್ಕಾಗಿ ಸದನದಲ್ಲಿ ಇಡುತ್ತೇನೆ.

**ಮಿ. ನಜೀರುದ್ದೀನ್ ಅಹ್ಮದ್ :** ಸ್ವಾಮಿ ನಾನು ನನ್ನ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲು ವಿನಂತಿಸಿಕೊಳ್ಳುತ್ತೇನೆ.

ಇವರ ತಿದ್ದುಪಡಿಗಳನ್ನು ಸದನದ ಅನುಮತಿ ಪಡೆದು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಉಪಸಭಾಪತಿ :** ತಿದ್ದುಪಡಿ ಸಂಖ್ಯೆ ೧೧೩ ಅನ್ನು ಮಂಡಿಸಿರಿ.

**ಮಾನ್ಯ ನಜೀರುದ್ದೀನ್ ಅಹ್ಮದ್ :** ೧೧೩ರ ತಿದ್ದುಪಡಿಯನ್ನು ನಾನು ಮಂಡಿಸುವುದಿಲ್ಲ, ಆದರೆ ಈ ಕೆಳಗಿನ ೧೧೪ರ ತಿದ್ದುಪಡಿಯನ್ನು ಅಂದರೆ – "ವಿಧಿ ಒಂದರ ಕಲಂ ಎರಡರಲ್ಲಿನ ಶಬ್ದ 'ದಿ' (The) ಎಂಬ ಮೊದಲಲ್ಲಿ ಬರುವ ಶಬ್ದವನ್ನು ತೆಗೆದುಹಾಕಬೇಕೆಂಬ ತಿದ್ದುಪಡಿಯನ್ನು ಮಂಡಿಸಲು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

* * * * *

\+ **ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ನಾನು ವಿಧಿ ಬಿಂದುವನ್ನು ಎತ್ತುತ್ತಿದ್ದೇನೆ. ನನ್ನ ಕ್ರಮ ವಿಚಾರದಲ್ಲಿ ಇದೊಂದು ತಿದ್ದುಪಡಿಯಾಗಿರುವುದಿಲ್ಲ; ಇದರಲ್ಲಿನ ಮೂಲ ಹೇಳಿಕೆಯಲ್ಲಿನ ವಿಷಯದಲ್ಲಿ ಬದಲಾವಣೆ ತರುವವರೆಗೆ ಇದೊಂದು ತಿದ್ದುಪಡಿಯಾಗುವುದಿಲ್ಲ. ನಾನು ಮೇರವರ ಶಾಸನ ಸಭೆಯ ರೂಢಿಗೆ ಸಂಬಂಧವನ್ನು ಹುಡುಕಲು ಯತ್ನಿಸುತ್ತಿದ್ದೇನೆ. ಆದರೆ ಈ ಕ್ಷಣ ನಾನು ಈ ವಿಷಯಗಳನ್ನು ಹೇಳಲು ಈ ಕ್ರಮ ವಿಚಾರವನ್ನು ಎತ್ತುತ್ತಿದ್ದೇನೆ. ಒಂದು ವೇಳೆ ನನ್ನ ಗೆಳೆಯ ನನ್ನನ್ನು ಕ್ಷಮಿಸಿದಲ್ಲಿ, ಆತ ಹಲವಾರು ವಿಧದ ತಿದ್ದುಪಡಿಗಳನ್ನು ಮಂಡಿಸುವ ಚಟ ಹೊಂದಿದವನಾಗಿದ್ದಾರೆ, ಆದುದರಿಂದ ಆತ ಇಲ್ಲಿ ಅಲ್ಪವಿರಾಮಬೇಕೆಂದು ಅಲ್ಲಿ ಅಲ್ಪವಿರಾಮವಿರಬಾರದೆಂದು ಇತ್ಯಾದಿ ಹೇಳುತ್ತಿದ್ದಾನೆ ಮತ್ತು ಇಂಥ ವಿಷಯಕ್ಕೆ ಮೊದಲಿನಿಂದಲೂ ಪೂರ್ಣವಿರಾಮ ಇಡಬೇಕೆಂಬುದು ನನ್ನ ಅಭಿಪ್ರಾಯವಾಗಿರುತ್ತದೆ.

**ಮಿ॥ ನಜೀರುದ್ದೀನ್ ಅಹ್ಮದ್ :** ದೇಶ ಸ್ವಾತಂತ್ರ್ಯವಾದ ಮೊದಲಲ್ಲಿಯೇ ನನ್ನನ್ನು ಈ ರೀತಿ ತಡೆದಲ್ಲಿ ನಾನು ನಿರಾಶೆ ಹೊಂದಿ ಸಭಾಧ್ಯಕ್ಷರ ನಿರ್ಣಯಕ್ಕೆ ಸಮ್ಮತಿಸಬೇಕಾಗುತ್ತದೆ.

**ಮಾನ್ಯ ಉಪಸಭಾಪತಿ :** ಡಾ॥ ಅಂಬೇಡ್ಕರ ಕ್ರಮ ವಿಚಾರಕ್ಕೆ ನಿಮ್ಮ ಉತ್ತರವೇನು?

**ಮಾನ್ಯ ನಜೀರುದ್ದೀನ್ ಅಹ್ಮದ್ :** ನನ್ನ ತಿದ್ದುಪಡಿಗೆ ಮಾಡಿದ ಕ್ರಮ ವಿಚಾರಕ್ಕೆ ನನ್ನ ಉತ್ತರವೆಂದರೆ ನಾನು "ದಿ" (The) ಎಂಬ ಶಬ್ದವನ್ನು ಅದರಿಂದ ತೆಗೆದು ಹಾಕುವೆ, ಆದುದರಿಂದ ಅದೊಂದು ತಿದ್ದುಪಡಿ ಎನಿಸುತ್ತದೆ. ಇದೊಂದು ನಿಜವಾಗಿ ಕರಡು ಪ್ರತಿ ಸಿದ್ಧಮಾಡುವ ತಿದ್ದುಪಡಿಯಾಗುತ್ತದೆ. ನಾನು ಈ ರೀತಿ ಮಾಡುವುದನ್ನು ಅದು ಅರ್ಥವಿಲ್ಲವೆಂದು, ಕಾಯಿದೆ ಬಾಹಿರವೆಂದು ಅಥವಾ ಉದ್ದೇಶವಿಲ್ಲದಿದ್ದುದೆಂದು, ಅಥವಾ ಉಪಯೋಗವಿಲ್ಲದ್ದೆಂದು ಇತ್ಯಾದಿ ಹೇಳಿ ವಿರೋಧಿಸಬಹುದು. ಆದರೆ ಡಾ॥ ಅಂಬೇಡ್ಕರರು ಇದೊಂದು ತಿದ್ದುಪಡಿ ಅಲ್ಲವೇ ಅಲ್ಲ ಎಂದು ಪ್ರತಿಪಾದಿಸುವುದು ಉಚಿತವಾಗಿರುವುದಿಲ್ಲ. ತಾಂತ್ರಿಕ ತಳಹದಿಯ ಮೇಲೆ ನಾನು ತರುವ ತಿದ್ದುಪಡಿ, ತಿದ್ದುಪಡಿಯೇ ಅಲ್ಲವೆಂದು ತಳ್ಳಿಹಾಕಬಹುದು.

---

\+ ಹಿಂದಿನದೇ ಪುಟ (ibid) ೪೨೨–೨೪

ನಾನು ವಿರಾಮ ಚಿನ್ಹೆ ಮತ್ತು ಇತರೆ ಬದಲಾವಣೆಗಳನ್ನು ಒಳಗೊಂಡ ತಿದ್ದುಪಡಿಗಳನ್ನು ತರುವ ಚಟವುಳ್ಳವನಾಗಿದ್ದೇನೆಂಬ ನನ್ನ ಗೌರವಾನ್ವಿತ ಗೆಳೆಯರ ಟೀಕೆಯ ಮೇಲೆ ಹೇಳುವುದಾದರೆ, ಈ ತಿದ್ದುಪಡಿಗೆ ಸಂಬಂಧಿಸಿದಂತೆ ಆ ಚಟವನ್ನು ಬಿಟ್ಟಿದ್ದೇನೆಂದು ಅವರಿಗೆ ತಿಳಿಸಲು ನನಗೆ ಸಂತೋಷವೆನಿಸುತ್ತದೆ (ನಗೆ)

**ಮಾನ್ಯ ಉಪಸಭಾಪತಿ :** ಇದೊಂದು ಕರಡು ಪ್ರತಿಯ ತಿದ್ದುಪಡಿ ಎಂದು ನೀವು ಹೇಳುತ್ತಿರುವಿರಿ. ಹಾಗಿದ್ದಲ್ಲಿ ನಾವು ಇದನ್ನು ಕರಡು ಪ್ರತಿ ಸಮಿತಿಗೆ ಮತ್ತು ಅದರ ಅಧ್ಯಕ್ಷರಿಗೆ ಇದನ್ನು ಪರಿಶೀಲಿಸಲು ಮೂರನೆಯ ವಾಚನದಲ್ಲಿ ಬಿಡೋಣವೇನು? ಇಂಥ ತಿದ್ದುಪಡಿಗಳಲ್ಲಿ ಏನಾದರೂ ತಿರುಳು ಇದ್ದಲ್ಲಿ ಅವರು ಇವುಗಳನ್ನು ನಿಸ್ಸಂದೇಹವಾಗಿ ಸ್ವೀಕರಿಸುತ್ತಾರೆ.

**ಮಾನ್ಯ ನಜೀರುದ್ದೀನ್ ಅಹ್ಮದ್ :** ಹಾಗಿದ್ದಲ್ಲಿ, ಈ ವಿಷಯವನ್ನು ಈ ಸದನದ ತೀರ್ಮಾನಕ್ಕೆ ಬಿಡದೆ ಕರಡು ಪ್ರತಿ ಸಮಿತಿಗೆ ಬಿಡಬೇಕಾಗುವುದು. ಕರಡು ಸಮಿತಿಯ ಪ್ರತಿನಿಧಿ ಈಗಾಗಲೇ ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಒಂದು ವೇಳೆ, ಈ ವಿಷಯವನ್ನು ಕರಡು ಸಮಿತಿಗೆ ಬಿಡಲು ನಾನು ಒಪ್ಪಿದರೆ, ಈ ನಿಮ್ಮ ನಿರ್ಧಾರ ಇದನ್ನು ಹಿಂತೆಗೆದುಕೊಂಡಷ್ಟೆ ಆಗುತ್ತದೆ. ಆದುದರಿಂದ ನಾನು ನಿಮಗೆ ಮತ್ತೊಮ್ಮೆ ವಿನಂತಿಸಿಕೊಳ್ಳುವುದೇನೆಂದರೆ 'ದಿ' (The) ಎಂಬ ಪದ ಒಂದು ಹೆಸರಿನ ಭಾಗವಾಗಿರುವುದಿಲ್ಲ.

**ಮಾನ್ಯ ಉಪಸಭಾಪತಿ :** ಈ ವಿಚಾರದ ಮೇಲೆ ಡಾ। ಅಂಬೇಡ್ಕರರು ಏನೆನ್ನುತ್ತಾರೋ ಎನ್ನುವುದನ್ನು ತಿಳಿಯಲು ಕಾತರನಾಗಿದ್ದೇನೆ.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ಗೌರವಾನ್ವಿತ ಸದಸ್ಯ, 'ದಿ' ಎಂಬ ಶಬ್ದಕ್ಕೆ ಏಕೆ ಆಕ್ಷೇಪಣೆಯನ್ನು ಎತ್ತುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. 'ದಿ' ಎನ್ನುವುದು ಒಂದು ನಿರ್ದೇಶಕ ಗುಣವಾಚಿ ಆಗಿದೆ; ಅನುಸೂಚಿಯಲ್ಲಿರುವ ರಾಜ್ಯಗಳಿಗೆ ಸಂಬಂಧಿಸಿರುವುದರಿಂದ ಇದು ವ್ಯಾಖ್ಯೆಯಲ್ಲಿರುವುದು ಅತಿ ಅವಶ್ಯಕವಾಗಿರುತ್ತದೆ. 'ದಿ' ಎನ್ನುವುದು ಅನುಸೂಚಿಯಲ್ಲಿರುವ ನಿಶ್ಚಿತ ರಾಜ್ಯಗಳಿಗೆ ಅನ್ವಯಿಸುತ್ತದೆ.

ಎರಡನೆಯದಾಗಿ, ನಾನು ಇಲ್ಲಿ ಹೀಗೆ ಹೇಳುತ್ತಿದ್ದೇನೆ (ನನ್ನನ್ನು ಕುರಿತೂ ನಾನು ಮಾತನಾಡುತ್ತಿದ್ದೇನೆ) ಯಾವುದೇ ಭಾರತೀಯ ಆಂಗ್ಲ ಭಾಷೆಯ ಮೇಲೆ ತನ್ನ ಖಚಿತ ಪ್ರಭುತ್ವವನ್ನು ಹೊಂದಿ ದೃಢವಾಗಿ ಒಂದು ವ್ಯಾಖ್ಯೆಯಲ್ಲಿ ಇಲ್ಲಿ ಅಲ್ಪವಿರಾಮ ಬೇಕು, ಅಲ್ಲಿ ಅರ್ಧವಿರಾಮ ಚಿನ್ಹೆ ಅವಶ್ಯಕವಾಗಿ ಅಥವಾ ಇಲ್ಲಿ ಒಂದು (A) ಎಂಬುದು ಸರಿಯಾಗಿದೆ, ಅಲ್ಲಿ 'ದಿ' ಎಂಬುದು ಸರಿಯಾಗಿದೆ ಇತ್ಯಾದಿ ಎಂದು ಹೇಳುವುದು ಸರಿಯಲ್ಲ. ಆದರೆ 'ಒಂದು' ವೇಳೆ ಆಂಗ್ಲಭಾಷೆಗೆ ಸಂಬಂಧಿಸಿದಂತೆ ನನ್ನ ಗೆಳೆಯನಿಗೆ ತಾನೊಬ್ಬ ಪರಿಪೂರ್ಣ ವ್ಯಾಕರಣ ಶಾಸ್ತ್ರಜ್ಞ ಎಂದು ಅಹಂ ಇದ್ದಲ್ಲಿ, ನಾನು 'ದಿ' ಎಂಬ ಶಬ್ದವನ್ನು ಆಸ್ಟ್ರೇಲಿಯಾದ ಸಂವಿಧಾನದಿಂದ ಎರವಲಾಗಿ ಪಡೆದಿದ್ದೇನೆ ಎಂದು ಅವರ ಗಮನವನ್ನು ಸೆಳೆಯಬಯಸುತ್ತೇನೆ. ಆದ್ದರಿಂದ ನಾನು ಈ ಪದವನ್ನು ಉಪಯೋಗಿಸುವುದು ಸರಿಯಾಗಿದೆ ಎಂದು ಆಸ್ಟ್ರೇಲಿಯಾದ ಸಂವಿಧಾನದ ಆಶ್ರಯ ತೆಗೆದುಕೊಳ್ಳಬಯಸುತ್ತೇನೆ. ಅಲ್ಲಿನ ಸಂವಿಧಾನದಲ್ಲಿ ಉತ್ತಮ ಪಾರ್ಲಿಮೆಂಟಿನ ಮಸೂದೆಗಳ ತಯಾರಕರಾದ ಜನರೇ ಬರೆದಿರುವುದರಿಂದ ಮತ್ತು ಅವರು ಆಂಗ್ಲಭಾಷೆಯನ್ನೂ ಬಲ್ಲವರಾಗಿರುವುದರಿಂದ, ಅವರು ಉಪಯೋಗಿಸುದ ಭಾಷೆಯಲ್ಲಿ ನಾವು ತಪ್ಪುಗಳನ್ನು ಕಂಡುಹಿಡಿದು ಅವರಿಗೆ ದೋಷ ಕೊಡಲು ಆಗುವುದಿಲ್ಲ.

**ಮಾನ್ಯ ಉಪಸಭಾಪತಿ :** ಈ ತಿದ್ದುಪಡಿಯನ್ನು ಅಭಿಮತಕ್ಕಾಗಿ ನಾನು ಇಡುತ್ತಿರುವೆ.

–ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಉಪಸಭಾಪತಿ :** ಈಗ ಮಿ.ನಜೀರುದ್ದೀನ ಅಹ್ಮದರ ಸಂಖ್ಯೆ ೧೯೯ರ ತಿದ್ದುಪಡಿಯ ಸರದಿ.

**ಮಾನ್ಯ ನಜೀರುದ್ದೀನ್ ಅಹ್ಮದ್ :** ಸ್ವಾಮಿ, ನಾನು "ವಿಧಿ ಒಂದರಲ್ಲಿ ಕಲಮು ಮೂರರ ಉಪ–ಕಲಮು(ಸಿ)ಯಲ್ಲಿ 'ಹಾಗೆ ಆಗಬಹುದು' ಎಂಬ ಶಬ್ದಗಳ ನಂತರ 'ಇನ್ನು ಮುಂದೆ' ಎಂಬ ಶಬ್ದವನ್ನು ಸೇರಿಸಬೇಕೆಂಬ ತಿದ್ದುಪಡಿಯನ್ನು ಮಂಡಿಸಲು ವಿನಂತಿಸುತ್ತೇನೆ."

ಸ್ವಾಮಿ, ಕರಡು ಪ್ರತಿ ಸಿದ್ಧಪಡಿಸುವ ಸಮಿತಿಯ ಗೌರವಾನ್ವಿತ ಅಧ್ಯಕ್ಷರನ್ನು ಅಸಂತೋಷಗೊಳಿಸುವ ಮಹಾಸಾಹಸ ಮಾಡಿದನಂತರ ಈ ತಿದ್ದುಪಡಿಯನ್ನು ಮಂಡಿಸಿರುವೆ. ಇಷ್ಟಾದರೂ ನಾನು ಏನನ್ನು ಅರಿಕೆ ಮಾಡಿಕೊಳ್ಳುವೆ ಎಂದರೆ, ಸದನದ ಸದಸ್ಯರು ತಮಗೆ ಏನನ್ನು ಹೇಳಬೇಕು ಎಂದು ಅನಿಸುತ್ತದೆಯೋ ಅದನ್ನೆಲ್ಲಾ ಈ ಸದನದಲ್ಲಿ ಹೇಳಲೇಬೇಕು ಮತ್ತು ಅದಕ್ಕೆ ಈ ಸದನದ ಒಪ್ಪಿಗೆಯನ್ನು ಪಡೆಯಲೇಬೇಕು. ಒಂದು ವೇಳೆ ನಾನು ಈ ತಿದ್ದುಪಡಿ ಮಂಡಿಸುವುದರ ಮೂಲಕ ಯಾರಾದರೂ ಸದಸ್ಯರ ಮನ ನೋಯಿಸಿದ್ದಲ್ಲಿ ............

**ಮಾನ್ಯ ಉಪಸಭಾಪತಿ :** ಯಾರ ಮನಸ್ಸನ್ನೂ ನೋಯಿಸುವ ಪ್ರಶ್ನೆ ಉದ್ಭವವಾಗುವುದಿಲ್ಲ.

**ಮಾನ್ಯ ನಜೀರುದ್ದೀನ್ ಅಹ್ಮದ್ :** ಸ್ವಾಮಿ ನಾನು ಉಪಯೋಗಿಸದ 'ಇನ್ನು ಮುಂದೆ' ಎಂಬ ಶಬ್ದದ ಸಂದರ್ಭ ಹೇಳಲು ವಿನಂತಿಸಿಕೊಳ್ಳುತ್ತೇನೆ. ಇದು ಈ ನಂತರ ಪಡೆಯಲಾದ ರಾಜ್ಯಗಳಿಗೆ ಅನ್ವಯಿಸುತ್ತದೆ. ಆದುದರಿಂದ, ಈ ಶಬ್ದವನ್ನು ಇಲ್ಲಿ ಸೇರಿಸುವುದು ಸಮಂಜಸವಾಗಿರುತ್ತದೆ ಮತ್ತು ಇದನ್ನು ನಿಯಮದಲ್ಲಿ ಸೇರಿಸಿಕೊಳ್ಳಲು ವಿಚಾರಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

**ಗೌರವಾನ್ವಿತ ಡಾ। ಬಿ.ಆರ್.ಅಂಬೇಡ್ಕರ್ :** ಇದು ಅನಾವಶ್ಯವಾಗಿರುವುದರಿಂದ ಇದನ್ನು ನಾನು ವಿರೋಧಿಸುತ್ತೇನೆ.

**ಮಾನ್ಯ ಉಪಸಭಾಪತಿ :** ತಿದ್ದುಪಡಿಯನ್ನು ಅಭಿಮತಕ್ಕಾಗಿ ಇಡುತ್ತೇನೆ.

ತಿದ್ದುಪಡಿಯನ್ನು ನಿರಾಕರಿಸಲಾಯಿತು.

(ಸದನ ಪುನಃ ಸೇರುವುದನ್ನು ನವೆಂಬರ್ ೧೭, ೧೯೪೮ರವರೆಗೆ ಮುಂದೂಡಲಾಯಿತು)

* * * * *

***ಮಾನ್ಯ ಉಪಸಭಾಪತಿ :** (ಡಾ। ಎಚ್.ಸಿ. ಮುಖರ್ಜಿ): ನಾವು ಈಗ ತಿದ್ದುಪಡಿಗಳನ್ನು ತೆಗೆದುಕೊಳ್ಳೋಣವೇ? ಪ್ರೊ। ಶಹಾರವರ ತಿದ್ದುಪಡಿ ಸಂಖ್ಯೆ ೧೨೬ ಇದೆ.

**ಪ್ರೊ. ಕೆ. ಟಿ. ಶಹ: (ಬಿಹಾರ ಸಾಮಾನ್ಯ) :** ಮಿ। ಉಪಸಭಾಪತಿಗಳೇ, ನಾನು "ವಿಧಿ ಒಂದರ ಕಲಮು ಮೂರರ ಉಪಕಲಮು (ಸಿ)ಯ ಕೊನೆಯಲ್ಲಿ ಈ ಕೆಳಗಿನ ಶಬ್ದಗಳನ್ನು ಸೇರಿಸಬಯಸುತ್ತೇನೆ 'ಅಥವಾ ಕೇಂದ್ರವನ್ನು ಸೇರಲು ಅಥವಾ ಅದರೊಂದಿಗೆ ಸಮ್ಮತಿಸಲು ಅಥವಾ ಅದರೊಂದಿಗೆ ಐಕ್ಯವಾಗಿ ಹೋಗಲು ಒಪ್ಪಿರುವ" ತಿದ್ದುಪಡಿಯನ್ನು ಮಂಡಿಸಲು ವಿನಂತಿಸುತ್ತೇನೆ.

(ಮಂಡಿಸಿದ ನಂತರ ಪ್ರೊ. ಶಹಾರವರು ಭಾಷಣ ಮಾಡುತ್ತಾರೆ)

****ಗೌರವಾನ್ವಿತ ಡಾ। ಬಿ.ಆರ್.ಅಂಬೇಡ್ಕರ್** (ಬೊಂಬಾಯಿ: ಸಾಮಾನ್ಯ): ಸ್ವಾಮಿ, ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

ತಿದ್ದುಪಡಿಯನ್ನು ನಿರಾಕರಿಸಲಾಯಿತು

* * * * *

---

* ಸಿ.ಎ.ಡಿ. (ಸರಕಾರಿ ವರದಿ) ಸಂಪುಟ ೭, ೧೫ ನವೆಂಬರ್ ೧೯೪೮, ಪುಟ ೪೨೫

** ಸಿ.ಎ.ಡಿ. (ಸರಕಾರಿ ವರದಿ) ಸಂಪುಟ ೭, ೧೫ ನವೆಂಬರ್ ೧೯೪೮, ಪುಟ ೪೨೬

**ಪ್ರೊ| ಕೆ.ಟಿ. ಶಹ :** ಮಿ| ಉಪಸಭಾಪತಿ, ಸ್ವಾಮಿ ಈ ತಿದ್ದುಪಡಿ ನನ್ನ ಹೆಸರಿನಲ್ಲಿದ್ದರೂ ಹೀಗಿದೆ.

"ವಿಧಿ ಒಂದಕ್ಕೆ ಈ ಕೆಳಗಿನ ಪರಂತುವನ್ನು ಸೇರಿಸಬೇಕು 'ಈ ಸಂವಿಧಾನ ಜಾರಿಗೆ ಬಂದ ದಿನದಿಂದ ೧೦ ವರ್ಷಗಳ ಅವಧಿಯ ಒಳಗಡೆ ಈ ಸಂವಿಧಾನ ತನ್ನ ಹಲವಾರು ಅನುಸೂಚಿಗಳಲ್ಲಿನ ಮತ್ತು ಇವುಗಳಿಗೆ ಹೊಂದಿದ ಹಲವಾರು ವಿಧಿಗಳಲ್ಲಿನ ಭಿನ್ನಾಭಿಪ್ರಾಯಗಳನ್ನು ಅಥವಾ ವ್ಯತ್ಯಾಸಗಳನ್ನು ರದ್ದುಗೊಳಿಸಬೇಕು ಮತ್ತು ಭಾರತದ ಒಕ್ಕೂಟದ ಎಲ್ಲಾ ಸದಸ್ಯ ರಾಜ್ಯಗಳನ್ನೂ ಸಹಕಾರಿ ತಳಹದಿಯ ಹಳ್ಳಿ ಪಂಚಾಯಿತಿಗಳ ಗುಂಪುಗಳ ಆಧಾರದ ಮೇಲೆ ಏಕಪ್ರಕಾರವಾಗಿ (Uniformly) ಅವರವರಲ್ಲಿ ಭಾರತದ ಒಕ್ಕೂಟದೊಳಗೆ ಅವುಗಳು ಪ್ರಜಾತಾಂತ್ರಿಕ ಘಟಕಗಳಂತೆ ಕಾರ್ಯ ನಿರ್ವಹಿಸಬೇಕು.

(ಮಂಡನೆ ಚರ್ಚೆಯೊಂದಿಗೆ ಮುಂದುವರೆಯಿತು)

* * * * *

\+ **ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್:** ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

**ಮಾನ್ಯ ಉಪಸಭಾಪತಿ :** ಈಗ ನಾನು ತಿದ್ದುಪಡಿಯನ್ನು ಅಭಿಮತಕ್ಕಾಗಿ ಇಡುತ್ತೇನೆ.

(ಪ್ರೊ. ಶಹಾರ ತಿದ್ದುಪಡಿಯನ್ನು ನಿರಾಕರಿಸಲಾಯಿತು)

% **ಮಾನ್ಯ ನಜೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ: ಮುಸ್ಲಿಂ): ಸ್ವಾಮಿ ನಾನು "ವಿಧಿ ೧ರ ಮೇಲಿನ ತಲೆಬರಹದ ಮೊದಲಲ್ಲಿ ಶಬ್ದ ಮತ್ತು ರೋಮನ್ ಅಂಕಿ **'CHAPTER'** ಎಂಬುದನ್ನು ಸೇರಿಸಬೇಕೆಂಬ ತಿದ್ದುಪಡಿಯನ್ನು ಮಂಡಿಸುತ್ತೇನೆ.

(ಇದು ಅಹ್ಮದರ ಭಾಷಣದೊಂದಿಗೆ ಮುಂದುವರಿಯಿತು)

* **ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್:** ಸ್ವಾಮಿ, ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

ತಿದ್ದುಪಡಿಯನ್ನು ನಿರಾಕರಿಸಲಾಯಿತು

** **ಗೌರವಾನ್ವಿತ ಪಂಡಿತ ಗೋವಿಂದ ವಲ್ಲಭ ಪಂತ** (ಸಂಯುಕ್ತ ಪ್ರಾಂತಗಳು: ಸಾಮಾನ್ಯ): ಸ್ವಾಮಿ, ನಾವು ಈಗ ನಿಯಮ ಎರಡಕ್ಕೆ ಸಾಗೋಣವೆಂದು ಅಭಿಪ್ರಾಯ ಮಂಡಿಸುತ್ತೇನೆ ಮತ್ತು ನಿಯಮ ಒಂದರ ಇನ್ನುಳಿದ ತಿದ್ದುಪಡಿಗಳ ಚರ್ಚೆಯನ್ನು ಮುಂದೂಡಬೇಕೆಂದು ಹೇಳುತ್ತಿದ್ದೇನೆ. ಇಲ್ಲಿಯವರೆಗೆ ಈ ಮುಖ್ಯ ವಿಷಯದ ಮೇಲೇ ನಮ್ಮಲ್ಲಿ ಯಾವ ಒಮ್ಮತಕ್ಕೆ ಬರಲಾಗಲಿಲ್ಲ; ಆದುದರಿಂದ ಇದರ ಮೇಲಿನ ಚರ್ಚೆಯನ್ನು ಮುಂದೂಡಿದ್ದಲ್ಲಿ ಎಲ್ಲರಿಗೆ ಒಪ್ಪಿಗೆಯಾಗುವ ಪರಿಹಾರ ಹೊಂದಲು ಸಾಧ್ಯವಾಗಬಹುದೆಂಬ ಭರವಸೆ ನನಗಿದೆ. ಆದ್ದರಿಂದ, ಹೀಗೆ ಮುಂದೂಡುವಿಕೆಯಿಂದ ಏನನ್ನೂ ಕಳೆದುಕೊಂಡಂತಾಗುವುದಿಲ್ಲ .........

(ಮಿ| ಪಂತರ ಸಲಹೆಯನ್ನು ಮಿ| ಆರ್. ಕೆ. ಸಿಧ್ವಾರು ಬೆಂಬಲಿಸುತ್ತಾರೆ)

* * * * *

(+) **ಗೌರವಾನ್ವಿತ ಡಾ| ಬಿ. ಆರ್. ಅಂಬೇಡ್ಕರ್:** ಪಂಡಿತ್ ಗೋವಿಂದ ವಲ್ಲಭ ಪಂತರ ಸಲಹೆಯನ್ನು ನಾನು ಬೆಂಬಲಿಸುತ್ತೇನೆ.

---

\+ ಮೇಲಿನಂತೆ ಪುಟ ೪೨೬

% ಮೇಲಿನಂತೆ ಪುಟ ೪೩೦

* ಮೇಲಿನಂತೆ ಪುಟ ೪೩೦

** ಮೇಲಿನಂತೆ ಪುಟ ೪೩೧

\+ ಮೇಲಿನಂತೆ ಪುಟ ೪೩೧

**ಶ್ರೀಸೇಠ್ ಗೋವಿಂದ ದಾಸ** (ಸಿ.ಪಿ. ಮತ್ತು ಬಿರಾರ: ಸಾಮಾನ್ಯ): ಸ್ವಾಮಿ, ಪಂಡಿತ ಪಂತರ ಯೋಜನೆಯನ್ನು ನಾನು ಹೃದಯಪೂರ್ವಕವಾಗಿ ಬೆಂಬಲಿಸುತ್ತೇನೆ.

**ಶ್ರೀ ಎಚ್.ವಿ. ಕಾಮತ್:** ಈ ತಿದ್ದುಪಡಿಗಳನ್ನು ಎಷ್ಟು ದಿನಗಳವರೆಗೆ ಅನಾಮತ್ತಿನಲ್ಲಿಡಬಹುದು ಎಂಬುದನ್ನು ಮಾತ್ರ ತಿಳಿಯಬಯಸುತ್ತೇನೆ.

**ಒಬ್ಬ ಗೌರವಾನ್ವಿತ ಸದಸ್ಯ:** ಇದು ಒಂದು ದಿನವಾಗಬಹುದು, ಒಂದು ವಾರವಾಗಬಹುದು ಅಥವಾ ಹದಿನೈದು ದಿನಗಳಾಗಬಹುದು.

**ಮಾನ್ಯ ಉಪಸಭಾಪತಿ:** ನನ್ನ ಅಭಿಪ್ರಾಯದಲ್ಲಿ ಈ ಕೆಲವು ಕಲಮುಗಳ ಮೇಲಿನ ಚರ್ಚೆ, ಸದನ ಸದಸ್ಯರು ಒಂದು ತರಹದ ಒಮ್ಮತ ಬರುವ ತನಕ ಮುಂದುವರಿಯಲಿ. ಇದು, ಈ ಸದನದ ಮತ್ತು ದೇಶದ ಅತ್ಯುತ್ತಮ ಹಿತಾಸಕ್ತಿಯ ಪರವಾಗಿದೆ.

******

## ವಿಧಿ – ೨

++ ಮಾನ್ಯ ನಜೀರುದ್ದೀನ್ ಅಹ್ಮದ್: ಸ್ವಾಮಿ ನಾನು ವಿಧಿ ೨ ಮತ್ತು ೩ರಲ್ಲಿ ಈ ಕೆಳಗಿನವುಗಳನ್ನು ಬದಲಾಯಿಸಬೇಕು.

'೨ ಕಾಯಿದೆಯ ಮೂಲಕ ಸಂಸತ್ತು ಈ ಕೆಳಗಿನವುಗಳನ್ನು ಮಾಡಬಹುದು–

(ಅ) ಭಾರತ ಒಕ್ಕೂಟಕ್ಕೆ ಹೊಸ ರಾಜ್ಯಗಳನ್ನು ಸೇರಿಸುವುದು;

(ಬ) ಯಾವುದೇ ರಾಜ್ಯವನ್ನು ೨ ಅಥವಾ ೩ ರಾಜ್ಯಗಳಾಗಿ ವಿಭಜಿಸುವುದು;

(ಕ) ಈ ಕೆಳಗಿನ ವರ್ಗಗಳ ಎರಡು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಪ್ರದೇಶಗಳನ್ನು ಒಂದು ರಾಜ್ಯದ ರಚನೆಯಾಗಿ ಕೂಡಿಸುವುದು

(i) ರಾಜ್ಯಗಳು

(ii) ಯಾವುದೇ ರಾಜ್ಯದ ಭಾಗ ಅಥವಾ ಭಾಗಗಳು

(iii) ಹೊಸತಾಗಿ ಪಡೆಯಲಾದ ಪ್ರದೇಶ

(ಡ) ಈ ವಿಧಿಯ (ಅ), (ಬ) ಮತ್ತು (ಕ) ಅಂಶಗಳಲ್ಲಿ ರಚಿಸಲಾದ ಯಾವುದೇ ರಾಜ್ಯಕ್ಕೆ ಹೆಸರನ್ನು ನೀಡುವುದು.

(ಇ) ಯಾವುದೇ ರಾಜ್ಯದ ಹೆಸರನ್ನು ಬದಲಾಯಿಸಬಹುದು. ಆದರೆ ಇಲ್ಲಿ ಈ ಉದ್ದೇಶಕ್ಕಾಗಿ ಸಂಸತ್ತಿನ ಎರಡೂ ಸದನದಲ್ಲಿ (ರಾಷ್ಟ್ರಪತಿಯವರ ಶಿಫಾರಸ್ಸನ್ನು ಬಿಟ್ಟು) ಯಾವುದೇ ಮಸೂದೆಯನ್ನು ಮಂಡಿಸಬಾರದು ಮತ್ತು ಈ ಕೆಳಗೆ ಸೂಚಿಸಿದವುಗಳಲ್ಲಿ ಯಾವುದನ್ನೂ ಜಾರಿಗೆ ತರಬಾರದು; ಆದರೆ ಕೆಳಗಿನವುಗಳ ಹೊರತುಪಡಿಸಿದೆ.

(ಆ) ಎಲ್ಲಿ ಮಸೂದೆಯಲ್ಲಿನ ಯೋಜನೆ ಮೊದಲನೆಯ ಪರಂತು ಭಾಗ ಒಂದರಲ್ಲಿ ನಮೂದಿಸಲಾದ ಯಾವುದೇ ಒಂದು ರಾಜ್ಯ ಅಥವಾ ರಾಜ್ಯಗಳ ಹೆಸರಿಗೆ ಅಥವಾ ಅವುಗಳ ಗಡಿಗಳಿಗೆ ಬಾಧಕವಾಗುವ; ಅಥವಾ ಅವುಗಳ ವಿಧಾನಮಂಡಲದ ಅಥವಾ ಎರಡು ಶಾಸನ ಸಭೆಗಳುಳ್ಳ ರಾಜ್ಯಗಳ ವಿಚಾರಗಳಲ್ಲಿ

---

++ ಮೇಲಿನಂತೆ ಪುಟ ೪೩೧

ಅಥವಾ ಪ್ರತಿಯೊಂದು ರಾಜ್ಯ ತನ್ನ ಮಸೂದೆಯನ್ನು ಅನುಷ್ಠಾನದಲ್ಲಿ ತರಲು ಯೋಜಿಸುವ ವಿಷಯದಲ್ಲಿ ಮತ್ತು ರಾಷ್ಟ್ರಪತಿಯಿಂದ ಗೊತ್ತುಮಾಡಲಾದ ಆ ರಾಜ್ಯದ ಮುನ್ನೇರ್ಪಾಡುಗಳ ವಿಷಯದಲ್ಲಿ ಮತ್ತು

(ಬ) ಎಲ್ಲಿ ಯೋಜನೆಯು ಮೊದಲನೆಯ ಪರಂತು ಭಾಗ ಮೂರರಲ್ಲಿ ನಮೂದಿಸಲಾದ ಯಾವುದೇ ರಾಜ್ಯ ಅಥವಾ ರಾಜ್ಯಗಳ ಸೀಮೆಗಳನ್ನೂ ಮತ್ತು ಅವುಗಳ ಹೆಸರಿನ ಮೇಲೆ ಪರಿಣಾಮ ಬೀರುತ್ತಿರುವಾಗ, ಅಲ್ಲಿ ಆ ರಾಜ್ಯದ ಮುಂಚಿನ ಒಪ್ಪಿಗೆಯನ್ನು ಪಡೆದು ಮಸೂದೆಯೊಂದನ್ನು ಅನುಷ್ಠಾನದಲ್ಲಿ ತರಬಹುದು" ಎಂದು ತಿದ್ದುಪಡಿಯನ್ನು ಮಂಡಿಸುತ್ತೇನೆ.

(ಈ ತಿದ್ದುಪಡಿಯ ಮಂಡನೆ ನಂತರ, ಈ ತಿದ್ದುಪಡಿಯನ್ನು ಮಂಡಿಸುವವರು ಭಾಷಣ ಮಾಡಿದರು)

* * * * *

* **ಮಾನ್ಯ ನಜೀರುದ್ದೀನ್ ಅಹ್ಮದ್:** ಈ ಸಂದರ್ಭದಲ್ಲಿ ನಾನು ಮಂಡಿಸುವ ನನ್ನ ನಂತರದ ತಿದ್ದುಪಡಿ ಈ ಕೆಳಗಿನಂತೆ ಇದೆ:

"ವಿಧಿ ೨ ರಲ್ಲಿನ 'ಕಾಲಕಾಲಕ್ಕೆ' (from time to time) ಎಂಬ ಶಬ್ದಗಳನ್ನೂ ಅದರಿಂದ ತೆಗೆದುಹಾಕುವುದಕ್ಕೆ ಸಂಬಂಧಿಸಿರುತ್ತದೆ."

(ಮಾನ್ಯ ಅಹ್ಮದರು ತಮ್ಮ ತಿದ್ದುಪಡಿಯನ್ನು ವಿವರಿಸುತ್ತಾರೆ)

* * * * *

\+ **ಶ್ರೀ ಎಮ್. ಅನಂತಶಯನಂ ಅಯ್ಯಂಗಾರ್ :** ಸ್ವಾಮಿ, ಈ ತಿದ್ದುಪಡಿಗಳನ್ನು ನಾನು ವಿರೋಧಿಸುತ್ತೇನೆ. ಇವುಗಳು ಕೇವಲ ಪದಗಳಿಗೆ (Verbal) ಸಂಬಂಧಿಸಿದ ವಿಷಯಗಳಾಗಿವೆ ಮತ್ತು ನಾನು ಇಂಥವುಗಳನ್ನು ತರಬಾರದು ಎಂದು ಸಹ ನಿಮಗೆ ವಿನಂತಿಸಿಕೊಳ್ಳುವೆ. ಈಗ ಇವುಗಳನ್ನು ಅಭಿಮತಕ್ಕಾಗಿ ಇಡುವೆ.

* * * * *

* **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಈ ತಿದ್ದುಪಡಿಯನ್ನು ನಾನು ವಿರೋಧಿಸುವೆ.

**ಮಾನ್ಯ ಉಪಸಭಾಪತಿ :** ನಾನು ಸಂಖ್ಯೆ ೧೩೧ ಮತ್ತು ೧೩೨ ರ ತಿದ್ದುಪಡಿಗಳನ್ನು ಅಭಿಮತಕ್ಕಾಗಿ ಇಡುತ್ತಿದ್ದೇನೆ. ಇವುಗಳ ಮೇಲೆ ಡಾ॥ ಬಿ.ಆರ್. ಅಂಬೇಡ್ಕರರು ಈಗಾಗಲೇ ಮಾತನಾಡಿರುವುದರಿಂದ ಈ ವಿಷಯದ ಮೇಲೆ ಮುಂದಿನ ಚರ್ಚೆ ಏನೂ ಇರುವುದಿಲ್ಲ.

ತಿದ್ದುಪಡಿಗಳನ್ನು ನಿರಾಕರಿಸಲಾಯಿತು.

* * * * *

**ಶ್ರೀ ಹೆಚ್.ವಿ. ಕಾಮತ್ :** ಸ್ವಾಮಿ, ನಾನು ವಿಧಿ ಎರಡರ ಮೇಲೆ ಮಾತನಾಡಬಯಸುತ್ತೇನೆ.

**ಮಾನ್ಯ ಉಪಸಭಾಪತಿ :** ಸ್ವಾಮಿ, ವಿಧಿ ಎರಡರಲ್ಲಿ ಸ್ವಲ್ಪ ಲೋಪವಿದೆ ಎಂದು ನನಗೆ ಅನ್ನಿಸುತ್ತದೆ; ಇದನ್ನು ಸಮರ್ಥ ನ್ಯಾಯಶಾಸ್ತ್ರಜ್ಞ ಮತ್ತು ಸಂವಿಧಾನದ ವಕೀಲರಾದ ನನ್ನ ಗೌರವಾನ್ವಿತ ಗೆಳೆಯ ಸಂವಿಧಾನ ರಚನಾ ಸಮಿತಿಯಲ್ಲಿ ಕೊನೆಯಲ್ಲಿ ಸರಿಪಡಿಸಬಹುದು. ಈ ಸಮಿತಿಯ ವರದಿಯು ಜುಲೈಯಿಂದ ಆಗಸ್ಟ್ ೧೯೪೭ರವರೆಗೆ ಇರುವ ೨ನೇ ಶ್ರೇಣಿಯಲ್ಲಿ (ಇದರ ಪ್ರತಿ ಸದನದ ಎಲ್ಲಾ ಸದಸ್ಯರಿಗೆ ಕಳೆದ

---

* ಹಿಂದಿನಂತೆ ಪುಟ ೪೩೫

\+ ಮೇಲಿನಂತೆ ಪುಟ ೪೩೫

* ಸಿ.ಎ.ಡಿ. (ಸರಕಾರಿ ವರದಿ) ಸಂಪುಟ ೭, ೧೮ ನವೆಂಬರ್ ೧೯೪೮, ಪುಟ ೪೩೫

ವರ್ಷವೇ ಒದಗಿಸಲಾಗಿರುತ್ತದೆ) "ನಮ್ಮ ಒಕ್ಕೂಟದ ಪಾರ್ಲಿಮೆಂಟ್" ಎಂಬ ಈ ನಿಯಮ ಪ್ರಾರಂಭವಾಗುತ್ತದೆ. ನಾವು ಒಕ್ಕೂಟವನ್ನು ಈಗಾಗಲೇ ಕೇಂದ್ರ (Union) ಎಂದು ಬದಲಾಯಿಸಿದ್ದೇವೆ ಆದರೂ ಒಮ್ಮಿಂದೊಮ್ಮೆಲೆ ಎರಡನೆಯ ನಿಯಮದಲ್ಲಿ ಈ 'ಪಾರ್ಲಿಮೆಂಟ್' ಎನ್ನುವ ಶಬ್ದವನ್ನು ಆಮದು ಮಾಡಿಕೊಂಡಿದ್ದು ಮತ್ತು ಯಾವ ಪಾರ್ಲಿಮೆಂಟಿಗೆ ಇದು ಸಂಬಂಧಿಸಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿರುವುದಿಲ್ಲ. ಇದು ಒಂದು ಲೋಪ; ಏಕೆಂದರೆ ನಿಯಮ ಒಂದರಲ್ಲಿ ಪಾರ್ಲಿಮೆಂಟಿಗೆ ಸಂಬಂಧಿಸಿದಂತೆ ಯಾವ ವಿವರಣೆಯೂ ಇರುವುದಿಲ್ಲ. ಆದ್ದರಿಂದ "ಕೇಂದ್ರದ ಪಾರ್ಲಿಮೆಂಟ್" ಎಂದು ಇಲ್ಲಿ ಹೇಳಲೇಬೇಕು. ಈ ಲೋಪದೋಷವನ್ನು ಸರಿಪಡಿಸಲಾಗುವುದು ಎಂದು ನಾನು ............

**ಗೌರವಾನ್ವಿತ ಡಾ। ಬಿ. ಆರ್. ಅಂಬೇಡ್ಕರ್:** ಮಿ। ಕಾಮತ್ ಏನನ್ನು ಹೇಳಿದ್ದಾರೆಂಬುದನ್ನು ನಾವು ಗಮನಿಸುತ್ತೇವೆ.

ವಿಧಿ ಎರಡನ್ನು ಸಂವಿಧಾನಕ್ಕೆ ಸೇರಿಸಲಾಯಿತು.

* * * * *

## ವಿಧಿ – ೩

+**ಗೌರವಾನ್ವಿತ ಶ್ರೀ ಕೆ. ಸಂತಾನಮ್** (ಮದ್ರಾಸು : ಸಾಮಾನ್ಯ) : ಸ್ವಾಮಿ, ನಾನು "ಮೂರನೆಯ ವಿಧಿಯ ಕಲಮು (ಅ) ದಲ್ಲಿ ಕೊನೆಗೆ ಈ ಕೆಳಗಿನ ಶಬ್ದಗಳನ್ನು ಸೇರಿಸಬೇಕೆಂದು; 'ಅಥವಾ' ರಾಜ್ಯಗಳಿಗೆ ಅಥವಾ ಅವುಗಳ ಭಾಗಗಳಿಗೆ ಉಳಿದ ಪ್ರದೇಶಗಳ ಸೇರಿಸುವಿಕೆಯಿಂದ" ಎಂಬ ತಿದ್ದುಪಡಿಯನ್ನು ಮಂಡಿಸುತ್ತೇನೆ.

* * * * *

* **ಶ್ರೀ ಎಮ್. ಅನಂತಶಯನಂ ಅಯ್ಯಂಗಾರ್ :** ಈ ತಿದ್ದುಪಡಿಯನ್ನು ಸದನ ಸ್ವೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ; ಏಕೆಂದರೆ ತಿದ್ದುಪಡಿ ಸೇರಿಸುವ ತನಕ ವಿಧಿ ಮೂರು ಸಂಪೂರ್ಣವಾಗದು.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿ, ನನ್ನ ಗೆಳೆಯ ಮಾನ್ಯ ಸಂತಾನಮ್ ಮಂಡಿಸಿದ ತಿದ್ದುಪಡಿಗೆ ತಾತ್ವಿಕವಾಗಿ ನಾನು ಒಪ್ಪುತ್ತೇನೆ. ನನ್ನ ಒಂದೇ ಒಂದು ಸೂಚನೆಯೆಂದರೆ ಇದರ ಭಾಷೆಯನ್ನು ಸ್ವಲ್ಪ ಬದಲಾಯಿಸಿ ಅದನ್ನು "ಅಥವಾ ಯಾವುದೇ ರಾಜ್ಯದ ಒಂದು ಭಾಗದಂತೆ ಯಾವುದೇ ಪ್ರದೇಶವನ್ನೂ ಅದಕ್ಕೆ ಹೊಂದಿಕೆ" ಮಾಡಬೇಕೆಂದಿರುವೆ.

**ಗೌರವಾನ್ವಿತ ಎಂ. ಸಂತಾನಮ್ :** ಈ ಬದಲಾವಣೆಗೆ ನಾನು ಒಪ್ಪುತ್ತೇನೆ.

ಗೊತ್ತುವಳಿಯನ್ನು ಸ್ವೀಕರಿಸಲಾಯಿತು

* * * * *

****ರಾವ್ ಬಹದ್ದೂರ್ ಶಾಮನಂದನ ಸಹಾಯ್** (ಬಿಹಾರ : ಸಾಮಾನ್ಯ) : ಸ್ವಾಮಿ, ನಾನೊಂದು

---

\+ ಮೇಲಿನ ಪುಟ ೪೩೫

*

** ಸಿ.ಎ.ಡಿ. (ಸರಕಾರಿ ವರದಿ) ಸಂಪುಟ ೭, ೧೭ ನವೆಂಬರ್ ೧೯೪೮, ಪುಟ ೪೫೯–೪೦

ಮನವಿ ಮಾಡಿಕೊಳ್ಳಲೇ? ಒಂದು ವೇಳೆ ಡಾ। ಅಂಬೇಡ್ಕರರು ತಮ್ಮ ಮುಂದಿನ ತಿದ್ದುಪಡಿಯನ್ನು ಮಂಡಿಸಿದಲ್ಲಿ ಆಗ ವಿಷಯಗಳು ತಿಳಿಯಾಗುತ್ತವೆ ಮತ್ತು ನಮ್ಮ ಹೆಸರುಗಳಲ್ಲಿ ಇರುವ ತಿದ್ದುಪಡಿಗಳನ್ನು ಮಂಡಿಸಬೇಕೋ ಅಥವಾ ಇಲ್ಲವೋ ಎಂಬುದನ್ನು ಸಹ ನಾವು ಆಗ ನಾವು ನಿಶ್ಚಯಿಸಬಹುದು.

**ಮಾನ್ಯ ಉಪಸಭಾಪತಿ :** ನೀವು ಹೇಳಿದ್ದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಡಾ। ಅಂಬೇಡ್ಕರ್ ನೀವು ಈಗ ನಿಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್:** ಸ್ವಾಮಿ, ನಾನು: "ವಿಧಿ ಮೂರರ ಈಗಿನ ಪರಂತುಕ ಈ ಕೆಳಗಿನ ಪರಂತುಕದಿಂದ ಬದಲಾಯಿಸಬೇಕು ಎಂಬ : 'ಈ ಬದಲಾವಣೆಯ ಸಲುವಾಗಿ ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ರಾಷ್ಟ್ರಪತಿಯ ಶಿಫಾರಸ್ಸು ಒಂದನ್ನು ಬಿಟ್ಟು, ಯಾವ ಮಸೂದೆಯನ್ನು ಅನುಷ್ಠಾನದಲ್ಲಿ ತರಕೂಡದು ಮತ್ತು ಒಂದು ವೇಳೆ;

(ಅ) ಎಲ್ಲಿ ಮಸೂದೆ ಒಳಗೊಂಡ ಯೋಜನೆ ಪ್ರಥಮ ಅನುಸೂಚಿಯಲ್ಲಿನ ಭಾಗ ಒಂದರಲ್ಲಿ ಸ್ಪಷ್ಟಪಡಿಸಲಾದ ಯಾವುದೇ ರಾಜ್ಯ ಅಥವಾ ರಾಜ್ಯಗಳಲ್ಲಿ ಹೆಸರು ಮತ್ತು ಸರಹದ್ದು(Boundaries) ಗಳಿಗೆ ಅಡ್ಡಬರುತ್ತದೆಯೋ, ರಾಜ್ಯದ ವಿಧಾನಸಭೆಯ ಅನಿಸಿಕೆಗಳ ಪ್ರಕಾರ ಅಥವಾ ವಿಷಯ ಹೇಗಿರುತ್ತದೆಯೋ ಹಾಗೆ, ಈ ಪ್ರತಿಯೊಂದು ರಾಜ್ಯಗಳು ಮಸೂದೆಯನ್ನು ಪ್ರಸ್ತಾಪಿಸುವ ಯೋಜನೆ ಮತ್ತು ಅದರ ಜೊತೆಗಿನ ಪರಂತುಕಗಳನ್ನು ರಾಷ್ಟ್ರಪತಿಯಿಂದ ಮನವರಿಕೆ ಮಾಡಿಕೊಳ್ಳಬೇಕು. ಮತ್ತು:

(ಬ) ಎಲ್ಲಿ ಅಂಥ ಯೋಜನೆ ಪ್ರಥಮ ಅನುಸೂಚಿಯ ಮೂರನೇ ಒಂದು ಭಾಗದಲ್ಲಿ ಸ್ಪಷ್ಟಗೊಳಿಸಲಾದ ಯಾವುದೇ ರಾಜ್ಯದ ಅಥವಾ ರಾಜ್ಯಗಳ ಸೀಮೆಗಳಿಗೆ ಹಾನಿ ಉಂಟು ಮಾಡುತ್ತದೆಯೋ ಆಗ ಈ ಯೋಜನೆಗೆ ರಾಜ್ಯದ ಮುಂಚಿನ ಒಪ್ಪಿಗೆಯನ್ನು ಅಥವಾ ವಿಷಯ ಹೇಗಿರುತ್ತದೆಯೋ ಹಾಗೆಯೇ ಪ್ರತಿಯೊಂದು ರಾಜ್ಯದ ಒಪ್ಪಿಗೆಯನ್ನು ಪಡೆಯಬೇಕು" ಎಂಬ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಮಾನ್ಯ ಉಪಸಭಾಪತಿ :** ಒಂದು ವೇಳೆ ತಿದ್ದುಪಡಿಸಲಾದ ಪರಂತುಕವನ್ನು ಮೂಲ ಮುನ್ನೇರ್ಪಾಡಿನೊಂದಿಗೆ ಹೋಲಿಸಿದಾಗ ಈ ಹೊಸ ಪರಂತುಕ ಎರಡು ಬದಲಾವಣೆಯನ್ನು ಅನುಷ್ಠಾನದಲ್ಲಿ ತರುತ್ತದೆ ಎಂಬುದನ್ನು ಸದಸ್ಯರು ಗಮನಿಸಬಹುದು. ಮೊದಲನೆಯ ಬದಲಾವಣೆ ಹೀಗಿರುತ್ತದೆ.

ಮೂಲತಃ ಮಸೂದೆಯನ್ನು ಜಾರಿಗೆ ತರುವ ಅಧಿಕಾರ ಭಾರತ ಸರಕಾರಕ್ಕೆ ಇತ್ತು ಮತ್ತು ಸಂಸತ್ತಿನ ಒಬ್ಬ ಸದಸ್ಯನಿಗೆ ಕಾಯಿದೆಯನ್ನು ಪ್ರಸ್ಥಾಪಿಸುವ ಅಧಿಕಾರವಿರಲಿಲ್ಲ; ಇದು ಪಾರ್ಲಿಮೆಂಟ್ ಸದಸ್ಯರು ತಮಗೆ ಮನಬಂದಂತೆ ಮತ್ತು ತಮಗೆ ಯಾವುದು ಅವಶ್ಯಕವೆಂದು ಭಾವಿಸುತ್ತಾರೋ ಹಾಗೆ ಯಾವುದಾದರೂ ಮಸೂದೆಯನ್ನು ಮಂಡಿಸುವ ಹಕ್ಕನ್ನು ಕಸಿದುಕೊಂಡಂತಾಗುವುದರಿಂದ ಈ ಬದಲಾವಣೆ ಅವರ ಮೇಲೆ ಸ್ವಲ್ಪ ನಿರ್ದಾಕ್ಷಿಣ್ಯದ್ದಾಗಿದೆ ಎಂದು ಕರಡು ಪ್ರತಿ ಸಿದ್ಧಪಡಿಸುವ ಸಮಿತಿಯ ಗಮನಕ್ಕೆ ವಿಷಯವನ್ನು ತರಲಾಯಿತು. ಇದರ ಪರಿಣಾಮವಾಗಿ, ಕಾಯಿದೆಯನ್ನು ಮಾಡುವ ವಿಶೇಷಾಧಿಕಾರವನ್ನು ಭಾರತ ಸರ್ಕಾರ ಮಾತ್ರ ಹೊಂದಿರಬೇಕೆಂಬುದರಿಂದ ಈ ಅಧಿಕಾರವನ್ನು ರಾಷ್ಟ್ರಪತಿಗೆ ಕೊಡಲಾಯಿತು. ಕೊನೆಗೆ ಯಾವುದೇ ಮಸೂದೆ, ಭಾರತ ಸರಕಾರದಿಂದಾಗಲೀ ಅಥವಾ ಯಾವುದೇ ಖಾಸಗಿ ಸದಸ್ಯನಿಂದಾಗಲಿ ಬಂದ ಮಸೂದೆ, ರಾಷ್ಟ್ರಪತಿಯವರ ಶಿಫಾರಸನ್ನು ಹೊಂದಿರಬೇಕೆಂಬ ಬದಲಾವಣೆಯಾಗಿರುತ್ತದೆ. ಇದು ಮೊದಲನೆಯ ಬದಲಾವಣೆಯಾಗಿರುತ್ತದೆ.

ಎರಡನೆಯ ಬದಲಾವಣೆ ಹೀಗಿರುತ್ತದೆ; ಮೂಲ ವಿಧಿ ಮೂರರಲ್ಲಿ ಭಾರತ ಸರಕಾರದ ಕಾಯಿದೆಯನ್ನು ಮಾಡುವ ಅಧಿಕಾರ ಎರಡು ಷರತ್ತುಗಳಿಗೆ ಮಿತಿಗೊಂಡಿತ್ತು ಮತ್ತು ಇವುಗಳನ್ನು ವಿಧಿಯ ಕಲಮು(ಅ)ದಲ್ಲಿನ

(i) ಮತ್ತು (ii) ರಲ್ಲಿ ಹೇಳಲಾಗಿರುತ್ತದೆ. ಈ ಷರತ್ತುಗಳೇನೆಂದರೆ, ರಾಜ್ಯಗಳ ಮೇರೆಗಳಲ್ಲಿ (Boundaries) ಬದಲಾವಣೆ ತರುವ, ಯಾವುದೇ ಕ್ರಮ ತೆಗೆದುಕೊಳ್ಳುವ ಮುನ್ನ, ಒಂದು ರಾಜ್ಯದ ವಿಧಾನ ಸಭೆಯಿಂದ ಅಲ್ಲಿನ ಬಹುತೇಕ ಪ್ರತಿನಿಧಿಗಳು ರಾಷ್ಟ್ರಪತಿಗಳಿಗೆ ಮನವಿ ಮಾಡಿಕೊಂಡಿರಬೇಕು ಅಥವಾ ಯಾವ ರಾಜ್ಯದ ಮೇರೆಗಳಲ್ಲಿ ಬದಲಾವಣೆ ಆಗಬೇಕೋ ಅಂಥ ರಾಜ್ಯದ ವಿಧಾನ ಸಭೆಯು ಇದಕ್ಕಾಗಿ ಒಂದು ನಿರ್ಣಯವನ್ನು ಈಗಾಗಲೇ ತೆಗೆದುಕೊಂಡಿರಬೇಕು. ಇಲ್ಲಿಯೂ ಸಹ ಸ್ವಲ್ಪವೇ ಜನರಿರುವ ಅಲ್ಪಸಂಖ್ಯಾತ ಜನಾಂಗ ರಾಜ್ಯದ ಗಡಿ ಬದಲಾವಣೆಯಾಗದ ಹೊರತು ತಮ್ಮ ಹಿತಾಸಕ್ತಿಯ ರಕ್ಷಣೆಯಾಗದೆಂದು ಬಹಳ ತೀವ್ರವಾಗಿ ಭಾವಿಸಿದಲ್ಲಿ ಮತ್ತು ಆ ಪ್ರತ್ಯೇಕ ಅಲ್ಪಸಂಖ್ಯಾತರು ಇತರ ರಾಜ್ಯದಲ್ಲಿನ ತಮ್ಮ ಅಣ್ಣತಮ್ಮಂದಿರನ್ನು ಸೇರಲು ಅನುಮತಿ ದೊರೆತು ತದನಂತರ ಒಂದು ವೇಳೆ ಅವರು ಅಲ್ಲಿಯೇ ಉಳಿದರೆ ಸರಕಾರಿ ಕ್ರಮ ಸಂಪೂರ್ಣ ಶಕ್ತಿಹೀನವಾಗುತ್ತದೆ. ಆದುದರಿಂದ, ನಾವು ತಿದ್ದುಪಡಿಯಾದ ಕರಡಿನಲ್ಲಿ ಈಗ ಪರಿಚ್ಛೇದ(i) ಮತ್ತು (ii) (ಎ) ಹಾಗೂ ಮೂಲ ಕರಡಿನಲ್ಲಿನ ಪರಿಚ್ಛೇದ (ಬ)ವನ್ನು ಸಹ ತೆಗೆದುಹಾಕಲು ಯೋಜಿಸಿದ್ದೇವೆ. ಇವುಗಳನ್ನು (ಅ) ಮತ್ತು (ಬ) ಸಹ ಎಂದು ಎರಡು ಭಾಗಗಳಲ್ಲಿ ಬೇರ್ಪಡಿಸಲಾಗಿದೆ. (ಅ) ಇದು ಮೊದಲನೆ ಅನುಸೂಚಿಯಲ್ಲಿನ ರಾಜ್ಯಗಳ ಅಂದರೆ ಪ್ರಾಂತಗಳ, ಪ್ರದೇಶದ ಪುನಾರಚನೆಗೆ ಸಂಬಂಧಿಸಿರುತ್ತದೆ ಮತ್ತು ಹೊಸ ತಿದ್ದುಪಡಿಯಾದ (ಬ) ಈಗಿನ ಭಾರತದ ರಾಜ್ಯಗಳಿಗೆ ಸಂಬಂಧಿಸಿರುತ್ತದೆ. ನನ್ನ ತಿದ್ದುಪಡಿಯ ಹೊಸ ಉಪ–ಕಲಮುಗಳಾದ (ಅ) ಮತ್ತು (ಬ)ಗಳಲ್ಲಿನ ಪ್ರಮುಖ ವ್ಯತ್ಯಾಸ ಇದೇ ಆಗಿದೆ. ಕಲಮು (ಅ) ಅಂದರೆ, ಮೊದಲನೆಯ ಅನುಸೂಚಿಯಲ್ಲಿ ರಾಜ್ಯಗಳಲ್ಲಿನ ಪ್ರದೇಶಗಳಲ್ಲಿನ, ಪುನಾರಚನೆಯಲ್ಲಿ 'ಸಮಾಲೋಚನೆ' ಅವಶ್ಯವಾಗಿರುತ್ತದೆ ಹೊರತು 'ಒಪ್ಪಿಗೆ'ಯ ಅವಶ್ಯಕತೆ ಇರುವುದಿಲ್ಲ. ರಾಜ್ಯಗಳಲ್ಲಿನ ಪ್ರದೇಶಗಳ ಪುನಾ ರಚನೆಗೆ ಶಿಫಾರಸ್ಸು ಮಾಡುವ ಮುನ್ನ ಅಲ್ಪಸಂಖ್ಯಾತರ ಆಶೋತ್ತರಗಳನ್ನು ಗಮನದಲ್ಲಿ ಇಟ್ಟುಕೊಳ್ಳಲಾಗಿದೆ ಎಂಬ ವಿಷಯದ ಬಗ್ಗೆ ಮನವರಿಕೆಯನ್ನು ರಾಷ್ಟ್ರಪತಿ ಹೊಂದಬೇಕು ಅಷ್ಟೆ.

ಕಲಮು (ಬ)ದ ವಿಷಯದಲ್ಲಿ ಪ್ರದೇಶಗಳ ಒಪ್ಪಿಗೆ ಬೇಕಾಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ, ಪ್ರಾಂತಗಳ ಸ್ಥಾನ ರಾಜ್ಯಗಳ ಸ್ಥಾನಕ್ಕಿಂತ ಭಿನ್ನವಾಗಿರುತ್ತದೆ. ರಾಜ್ಯಗಳು ಸಾರ್ವಭೌಮತ್ವ ಹೊಂದಿರುವ ರಾಜ್ಯಗಳಾಗಿವೆ. ಪ್ರಾಂತಗಳ ಸಾರ್ವಭೌಮತ್ವ ಹೊಂದಿರುವ ರಾಜ್ಯಗಳಾಗಿಲ್ಲ. ಆದುದರಿಂದ, ಸರಕಾರ ಪ್ರಾಂತಗಳ ಗಡಿಗಳನ್ನು ಬದಲಾಯಿಸಬೇಕಾದರೆ ಅವುಗಳ ಒಪ್ಪಿಗೆಯನ್ನು ಪಡೆಯುವುದು ಅವಶ್ಯವಾಗಿರುವುದಿಲ್ಲ; ಆದರೆ ಭಾರತದ ರಾಜ್ಯಗಳ ವಿಷಯದಲ್ಲಿ ಅವುಗಳ ಒಪ್ಪಿಗೆ ಅವಶ್ಯವಾಗಿರುತ್ತದೆ. ರಾಜ್ಯಗಳ ವಿಷಯದಲ್ಲಿ ಅವುಗಳ ಸಾರ್ವಭೌಮತ್ವ ಅವುಗಳಲ್ಲಿಯೇ ಉಳಿಯುವುದರಿಂದ ಅವುಗಳ ಒಪ್ಪಿಗೆಯನ್ನು ಪಡೆಯುವುದು ಸಮಂಜಸವಾಗಿರುತ್ತದೆ.

ಪ್ರೊ। ಶಹರವರು ಮಂಡಿಸಿದ ತಿದ್ದುಪಡಿಗೆ ಸಂಬಂಧಿಸಿದಂತೆ ಹೇಳುವುದಾದರೆ ಉಪ–ಕಲಮು (ಅ)ದಲ್ಲಿನ ಹೊಸ ಅವಕಾಶಗಳಲ್ಲಿ ನನ್ನ ತಿದ್ದುಪಡಿ ಮತ್ತು ಅವರ ತಿದ್ದುಪಡಿ ನಡುವೆ ಬಹಳ ಭಿನ್ನತೆ ನನಗೆ ಕಂಡುಬರುವುದಿಲ್ಲ. ರಾಜ್ಯಗಳೇ ಚರ್ಚೆಯನ್ನು ಪ್ರಾರಂಭಿಸಬೇಕೆಂದು ಅವರು ಹೇಳುತ್ತಾರೆ. ನನ್ನ ತಿದ್ದುಪಡಿ ಉಪಕಲಮು(ಅ)ದಲ್ಲಿನ ಅವಕಾಶಗಳು ಸಹ ರಾಜ್ಯಗಳೊಂದಿಗಿನ ಸಮಾಲೋಚನೆಗೆ ಅನುವು ಮಾಡಿಕೊಡುತ್ತದೆ. ರಾಷ್ಟ್ರಪತಿಯು, ಪ್ರಧಾನಮಂತ್ರಿ ಅಥವಾ ರಾಜ್ಯಪಾಲರಿಗೆ ಸರಹದ್ದು ಬದಲಾವಣೆಯಿಂದ ತೊಂದರೆಗಳಿಗೆ ಒಳಗಾಗಬಹುದಾದ ಒಂದು ರಾಜ್ಯ, ಅದರ ವಿಧಾನಸಭೆಯಲ್ಲಿಯೇ ಸರಹದ್ದು ಬದಲಿಸಬೇಕೋ/ಬೇಡವೋ ಎಂಬ ನಿರ್ಣಯವನ್ನು ಮಂಡಿಸಲು ಕೇಳುತ್ತಾರೆ. ಇದೇ ರಾಜ್ಯಗಳನ್ನು ನಾವು ಸಮಾಲೋಚನೆಗೆ ತರುವ ಉತ್ತಮ ವಿಧಾನವಾಗಿದೆ ಎಂದು ನಿಸ್ಸಂದೇಹವಾಗಿ ನಾನು ಹೇಳಬಲ್ಲೆ; ಇಲ್ಲಿ ಸಮಸ್ಯೆಯ ಬಗೆಗಿನ ಚರ್ಚೆಯ ಪ್ರಾರಂಭ ಸ್ಥಾನೀಯ ಶಾಸಕಾಂಗದಲ್ಲಿ ಆರಂಭವಾಗುತ್ತದೆ ಹೊರತು

ಕೇಂದ್ರದ ಪಾರ್ಲಿಮೆಂಟಿನಲ್ಲಿ ಅಲ್ಲ. ಆದುದರಿಂದ, ನಾನು ಪ್ರೊಫೆಸರ್ ಶಹಾರವರ ತಿದ್ದುಪಡಿ ಅನಾವಶ್ಯಕವಾಗಿರುತ್ತದೆಂದು ನಾನು ಹೇಳುತ್ತೇನೆ.

**ಗೌರವಾನ್ವಿತ ಶ್ರೀ ಕೆ. ಸಂತಾನಮ್ :** ........... ಆದರೆ, ದುರದೃಷ್ಟವಶಾತ್, ಶಹರು ತಮ್ಮ ತತ್ವವನ್ನು ಪಾಲಿಸುವ ಉತ್ಸಾಹದಲ್ಲಿ, ತಮ್ಮದೇ ಗುರಿಯನ್ನು ಸೋಲಿಸುವ ತಿದ್ದುಪಡಿಯನ್ನು ಜಾರಿಗೆ ತಂದಿರುತ್ತಾರೆ. ಆದುದರಿಂದ, ನಾನು ಅವರ ತಿದ್ದುಪಡಿಯನ್ನು ತಿರಸ್ಕರಿಸಿ, ಡಾ। ಅಂಬೇಡ್ಕರರು ಸದನದಲ್ಲಿ ಮಂಡಿಸಿದ ತಿದ್ದುಪಡಿಯನ್ನು ಸ್ವೀಕರಿಸಬೇಕೆಂಬುದನ್ನು ಸೂಚಿಸುತ್ತೇನೆ.

* * * * *

**ಮಾನ್ಯ ಉಪಸಭಾಪತಿ :** ಮಿ। ಸಿಧ್ವಾ ಏನು ಹೇಳುತ್ತಾರೋ ಕೇಳೋಣ. ಮಾನ್ಯ ಕಾಮತರು ನಮ್ಮ ಗಮನ ಸೆಳೆದಿರುವ ತಿದ್ದುಪಡಿಗಳನ್ನು ನಾವು ಖಚಿತವಾಗಿ ತೆಗೆದುಕೊಳ್ಳೋಣ.

**ಶ್ರೀ ಆರ್.ಕೆ. ಸಿಧ್ವಾ :** ಪ್ರೊಫೆಸರ್ ಶಹಾರ ತಿದ್ದುಪಡಿ ವಿರುದ್ಧ ಮಂಡಿಸಲಾದ ಮಿ॥ ಸಂತಾನಮ್‌ರವರ ತಿದ್ದುಪಡಿಗಳನ್ನು ನಾನು ಸ್ವೀಕರಿಸುವುದಿಲ್ಲ ......... ಡಾ। ಅಂಬೇಡ್ಕರರ ತಿದ್ದುಪಡಿ ಬಹಳ ಸ್ಪಷ್ಟ ಮತ್ತು ವ್ಯಾಪಕವಾದದ್ದಾಗಿರುತ್ತದೆ; ಆದುದರಿಂದ ನಾನು ಅವರ ತಿದ್ದುಪಡಿಯನ್ನು ಈ ಸದನಕ್ಕೆ ಶಿಫಾರಸು ಮಾಡುತ್ತೇನೆ.

(ನಜೀರುದ್ದೀನ್ ಅಹ್ಮದ್ ತಿದ್ದುಪಡಿಯನ್ನು ಸದನದಲ್ಲಿ ಮಂಡಿಸಲಾಗಲಿಲ್ಲ)

* **ಮಾನ್ಯ ಉಪಸಭಾಪತಿ :** ಪಂಡಿತ ಹೃದಯನಾಥ ಕುಂಜ್ರು

**ಪಂಡಿತ ಹೃದಯನಾಥ ಕುಂಜ್ರು :** (ಸಂಯುಕ್ತ ಪ್ರಾಂತಗಳು :ಸಾಮಾನ್ಯ) ಮಿ। ಉಪಸಭಾಪತಿ, ನಾನು ಈ ಗೊತ್ತುವಳಿಯನ್ನು; " ಈಗಾಗಲೇ ಡಾ। ಅಂಬೇಡ್ಕರರು ಮಂಡಿಸಲಾದ ಗೊತ್ತುವಳಿಯಲ್ಲಿ, 'ಹಿಂದಿನ ಒಪ್ಪಿಗೆ' ಎಂಬ ಶಬ್ದಗಳ ಬದಲಾಗಿ 'ಇಂಥಾ ವಿಚಾರಗಳು' ಎಂಬ ಶಬ್ದವನ್ನು ಮತ್ತು 'ಹಿಂದಿನಿಂದಲೂ' ಎಂಬ ಶಬ್ದಗಳಿಗೆ ಬದಲಾಗಿ 'ಹಿಂದಿನವುಗಳಿಂದಲೂ' ಎಂಬ ಶಬ್ದಗಳನ್ನು ಸೇರಿಸಬೇಕೆಂದು" ತಿದ್ದುಪಡಿಯನ್ನು ಮಂಡಿಸಲು ವಿನಂತಿಸಿಕೊಳ್ಳುತ್ತೇನೆ.

(ಮಂಡನೆಯ ನಂತರ ಭಾಷಣ ಮತ್ತು ಚರ್ಚೆ ಮುಂದುವರಿಯುತ್ತದೆ)

* * * * *

\+ **ಶ್ರೀ ರೋಹಿಣಿ ಕುಮಾರ ಚೌಧರಿ** (ಅಸ್ಸಾಮ : ಸಾಮಾನ್ಯ) ಸ್ವಾಮಿ, ಈ ಸದನ ಇಬ್ಬರು ಧೀರ ಸದಸ್ಯರುಗಳಾದ ಪ್ರೊ. ಶಹಾ ಮತ್ತು ಪಂಡಿತ್ ಕುಂಜ್ರುರವರು ಮಂಡಿಸಿದ ತಿದ್ದುಪಡಿಗಳನ್ನು ನಾನು ವಿರೋಧಿಸುತ್ತಿರುವುದು ಒಂದು ದುರದೃಷ್ಟಕರ ಸಂಗತಿ. ಅವುಗಳನ್ನು ನಾನು ಇಷ್ಟಪಡುತ್ತಿಲ್ಲವೆಂದು ವಿರೋಧಿಸುತ್ತಿಲ್ಲ; ಆದರೆ ಇಂದಿನ ಪರಿಸ್ಥಿತಿಗೆ ಬಹಳ ಚೆನ್ನಾಗಿ ಹೊಂದಿಕೊಳ್ಳುವ ಡಾ। ಅಂಬೇಡ್ಕರರ ತಿದ್ದುಪಡಿಯನ್ನು ಹೆಚ್ಚಾಗಿ ಇಷ್ಟಪಡುತ್ತೇನೆ.

* * * * *

++ **ಶ್ರೀ ಆರ್. ಕೆ. ಸಿಧ್ವಾ** (ಕೇಂದ್ರ ಪ್ರಾಂತ್ಯಗಳು ಮತ್ತು ಬಿರಾರ : ಸಾಮಾನ್ಯ) ........... ರಾಜ್ಯಗಳ

---

* ಸಿ.ಎ.ಡಿ. (ಸರಕಾರಿ ವರದಿ) ಸಂಪುಟ ೭, ೧೭ನೆಯ ನವೆಂಬರ್ ೧೯೪೮, ಪುಟ ೪೪೧

\+ ಹಿಂದಿನಂತೆ ಪುಟ ೪೪೬

++ ಹಿಂದಿನಂತೆ ಪುಟ ೪೫೬–೫೯

ಮತ್ತು ಪ್ರಾಂತಗಳ ನಡುವಿನ ಈ ಅಂತರ ಏಕಿದೆ ಎಂಬ ವಿಷಯವನ್ನು ಡಾ। ಅಂಬೇಡ್ಕರರು ನಮಗೆ ತಿಳಿಯಪಡಿಸಬೇಕು. ನನ್ನ ಈ ಅನಿಸಿಕೆಗಳೊಂದಿಗೆ, ನಾನು ಅವರ ತಿದ್ದುಪಡಿಯನ್ನು ಬಲವಾಗಿ ಬೆಂಬಲಿಸುತ್ತೇನೆ ಮತ್ತು ಡಾ। ಅಂಬೇಡ್ಕರರು ರಾಜ್ಯಗಳ ವಿಷಯಕ್ಕೆ ಬಂದಾಗ ಅವುಗಳನ್ನು ಪ್ರಾಂತ್ಯಗಳಿಂದ ಏಕೆ ಬೇರೆ ಮಾಡಲಾಗಿದೆ ಎಂಬ ವಿಷಯವನ್ನು ತಿಳಿಯಪಡಿಸಲು, ಪ್ರಾಂತಗಳ ವಿಷಯದಲ್ಲಿ ಶಾಸಕಾಂಗದ ವಿಚಾರಗಳನ್ನು ಏಕೆ ಖಚಿತಪಡಿಸಿಕೊಳ್ಳಬೇಕೆಂದು ಅವರು ಹೇಳಿದ್ದಾರೆಂದು; ಅದೇ ರಾಜ್ಯಗಳ ವಿಷಯಕ್ಕೆ ಸಂಬಂಧಿಸಿದಂತೆ ಅವುಗಳ ಒಪ್ಪಿಗೆಯನ್ನು ಮೊದಲೇ ಏಕೆ ಪಡೆಯಬೇಕೆಂಬುದನ್ನು ನಮಗೆ ಅವರು ಸ್ಪಷ್ಟಪಡಿಸುತ್ತಾರೆಂದು ಭಾವಿಸುತ್ತೇನೆ.

**ಮಾನ್ಯ ಉಪಸಭಾಪತಿ :** ಡಾ। ಅಂಬೇಡ್ಕರ .........

**ಓರ್ವ ಗೌರವಾನ್ವಿತ ಸದಸ್ಯ :** ಸ್ವಾಮಿ, ಪ್ರಶ್ನೆಯನ್ನು ಈಗ ನೀವು ಕೇಳಬೇಕು.

**ಮೌಲಾನಾ ಹಸರತ್ ಮೊಹಾನಿ :** (ಸಂಯುಕ್ತ ಪ್ರಾಂತಗಳು : ಮುಸ್ಲಿಂ) ಸ್ವಾಮಿ, ವಿಧಿ ಬಿಂದು ಷರತ್ತನ್ನು(Point of Order) ಎತ್ತುತ್ತೇನೆ. ಡಾ। ಅಂಬೇಡ್ಕರರೇ ತಿದ್ದುಪಡಿ ಮಂಡಿಸಿದ್ದಾರೆ. ಆದ್ದರಿಂದ ಅವರಿಗೆ ಉತ್ತರ ಕೊಡುವ ಹಕ್ಕು ಇರುವುದಿಲ್ಲವೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಈ ಸದನದ ಇಂಥಾ ಒಂದು ನಿರ್ಣಯ ನನ್ನ ಹತ್ತಿರವಿರುತ್ತದೆ; ಅದರ ಪ್ರಕಾರ ಖಚಿತವಾಗಿ ಈ ಮಾತನ್ನು ಹೇಳಿದ್ದೇನೆ.

**ಶ್ರೀ ಆರ್. ಕೆ. ಸಿಧ್ವಾ :** ಸಂಪೂರ್ಣ ಸಮಯವನ್ನು ಚರ್ಚೆಗೆ ಒಳಪಡಿಸಲಾಗಿದೆ ಎಂದು ನನಗೆ ಅನಿಸುತ್ತದೆ. ಆದ್ದರಿಂದ ಡಾ। ಅಂಬೇಡ್ಕರರು ಉತ್ತರ ನೀಡುವ ಹಕ್ಕನ್ನು ಹೊಂದಿರುತ್ತಾರೆ ಎನಿಸುತ್ತದೆ ನನಗೆ.

**ಮಾನ್ಯ ಮೌಲಾನಾ ಹಸರತ್ ಮೊಹಾನಿ :** ಡಾ। ಅಂಬೇಡ್ಕರರು ಈಗಾಗಲೇ ಮಾತನಾಡಿದ್ದಾರೆ; ಆದ್ದರಿಂದ ಮತ್ತೊಮ್ಮೆ ಭಾಷಣ ಮಾಡುವ ಹಕ್ಕನ್ನು ಅವರು ಹೊಂದಿರುವುದಿಲ್ಲ.

**ಮಾನ್ಯ ಉಪಸಭಾಪತಿ :** ದಯವಿಟ್ಟು ಸಭಾಧ್ಯಕ್ಷರಲ್ಲಿ ಮೊರೆಯಿಡಿ.

**ಮೌಲಾನಾ ಹಸರತ್ ಮೊಹಾನಿ :** ಸ್ವಾಮಿ, ನಾನು ಯಾರು ತಿದ್ದುಪಡಿಯನ್ನು ಮಂಡಿಸುತ್ತಾರೋ (ಇದನ್ನು ಈ ಸದನದ ಮುದ್ರಿತ ನಡವಳಿಕೆಯನ್ನು ನೋಡಿ ಹೇಳುತ್ತಿರುವೆ) ಅವರು ಉತ್ತರ ಕೊಡುವ ಹಕ್ಕನ್ನು ಹೊಂದಿರುವುದಿಲ್ಲವೆಂದು ನಿರ್ಣಯ ಹೇಳುತ್ತದೆ ಎಂಬುದನ್ನು ಇಲ್ಲಿ ಹೇಳಲು ವಿನಂತಿಸಿಕೊಳ್ಳುತ್ತೇನೆ. ತಿದ್ದುಪಡಿ ಮಂಡಿಸುವ ಸದಸ್ಯ ಎರಡನೆಯ ಸಲ ಭಾಷಣ ಮಾಡಲಾರ.

**ಮಾನ್ಯ ಉಪಸಭಾಪತಿ :** ಈ ನಿಯಮವಲ್ಲದೆ ಅದರ ಮೇಲಿನ ತಿದ್ದುಪಡಿಗಳು ಕೂಡ ಚರ್ಚೆಗೆ ಒಳಗಾಗಿರುತ್ತವೆ ಡಾ। ಅಂಬೇಡ್ಕರ್ .

**ಗೌರವಾನ್ವಿತ ಘನಶ್ಯಾಮ್ ಸಿಂಗ್ ಗುಪ್ತಾ :** (ಸಿ. ಪಿ. ಮತ್ತು ಬಿರಾರ್ : ಸಾಮಾನ್ಯ); ಸ್ವಾಮಿ, ತಿದ್ದುಪಡಿ ಮಂಡಿಸುವಾತ ಉತ್ತರ ಕೊಡುವ ಹಕ್ಕನ್ನು ಹೊಂದಿರುತ್ತಾನೆ ಎಂಬ ಅಭಿಪ್ರಾಯ ನನ್ನದಾಗಿದೆ.

**ಮಾನ್ಯ ಉಪಸಭಾಪತಿ :** ಇದು ನನ್ನ ನಿಲುವನ್ನು ಹೆಚ್ಚು ಬಲಪಡಿಸುತ್ತದೆ.

**ಗೌರವಾನ್ವಿತ ಘನಶ್ಯಾಮ್ ಸಿಂಗ್ ಗುಪ್ತಾ :** ನಾನು ಏನನ್ನು ಹೇಳಬಯಸುವೆ ಎಂದರೆ, ಸ್ವಾಮಿ, ತಿದ್ದುಪಡಿ ಮಂಡಿಸಿದ ಸದಸ್ಯ ಉತ್ತರ ಕೊಡುವ ಹಕ್ಕನ್ನು ಹೊಂದಿರುತ್ತಾನೆ.

**ಮಾನ್ಯ ಉಪಸಭಾಪತಿ :** ನೀವು ಡಾ। ಅಂಬೇಡ್ಕರರು ಉತ್ತರಿಸುವುದಕ್ಕೆ ಆಕ್ಷೇಪಣೆ ಮಾಡುವುದಿಲ್ಲವೇನು?

**ಗೌರವಾನ್ವಿತ ಘನಶ್ಯಾಮ್ ಸಿಂಗ್ ಗುಪ್ತಾ :** ನಾನು, ಅವರು ಉತ್ತರಿಸುವುದಕ್ಕೆ ಆಕ್ಷೇಪಣೆ ಮಾಡುವುದಿಲ್ಲ; ಅಷ್ಟೇ ಅಲ್ಲ ನಾನು, ಪ್ರತಿಯೊಬ್ಬ ತಿದ್ದುಪಡಿ ಮಂಡಿಸುವ ಸದಸ್ಯನಿಗೆ ಉತ್ತರ ನೀಡುವ ಹಕ್ಕಿದೆ ಎಂಬ

ರೂಢಿಯನ್ನು ಜಾರಿಗೆ ತರಲು ಇಚ್ಛಿಸುತ್ತೇನೆ; ಏಕೆಂದರೆ ಶಾಸಕಾಂಗದ (Legislative) ಕಡೆಯಿಂದ ರಚಿಸಲಾದ ಕಾಯಿದೆಗಳು ನಾವು ಪಾರ್ಲಿಮೆಂಟಿನಲ್ಲಿ ರಚಿಸಲಾದ ನಿಯಮಗಳಿಗಿಂತ ಭಿನ್ನವಾಗಿರುತ್ತವೆ.

**ಮಾನ್ಯ ಉಪಸಭಾಪತಿ :** ಡಾ। ಅಂಬೇಡ್ಕರರು ತಮ್ಮ ಉತ್ತರ ನೀಡಿದ ನಂತರ ಈ ವಿಷಯವನ್ನು ನಿರ್ಧರಿಸೋಣ.

**ಶ್ರೀ ಲಕ್ಷ್ಮಿನಾರಾಯಣ ಸಾಹು** (ಒರಿಸ್ಸಾ : ಸಾಮಾನ್ಯ): ಸ್ವಾಮಿ, ನನ್ನ ಹೆಸರಿನಲ್ಲಿ ಒಂದು ತಿದ್ದುಪಡಿ ಇದೆ.

**ಮಾನ್ಯ ಉಪಸಭಾಪತಿ :** ಮಾನ್ಯ ಸಾಹು ಮತ್ತು ಡಾ। ಅಂಬೇಡ್ಕರರೆ ದಯವಿಟ್ಟು ಕುಳಿತುಕೊಳ್ಳಿ.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್** (ಬೊಂಬಾಯಿ : ಸಾಮಾನ್ಯ): ನನ್ನ ಗೆಳೆಯ ಮಿ। ಕುಂಜ್ರು ಮಂಡಿಸಿದ ತಿದ್ದುಪಡಿಯು ನನ್ನ ಸಾಕಷ್ಟು ಸಹಾನುಭೂತಿ ಹೊಂದಿದ ತಿದ್ದುಪಡಿಯಾಗಿರುತ್ತದೆ; ಆದರೆ ನಾನು ಇರುವ ಇಂದಿನ ಪರಿಸ್ಥಿತಿಯಲ್ಲಿ ಅದನ್ನು ಒಪ್ಪುವ ಸ್ಥಿತಿಯಲ್ಲಿ ನಾನಿರುವುದಿಲ್ಲ. ನನ್ನ ಗೆಳೆಯ ತನ್ನ ತಿದ್ದುಪಡಿಯನ್ನು ಬೆಂಬಲಿಸಲು ಮಾಡಿದ ವಾದಗಳು, ನಾನು ನನ್ನ ತಿದ್ದುಪಡಿಯನ್ನು ಮಂಡಿಸುವಾಗ ಮಾಡಿದ ವಾದಗಳಂತೆ ಇರುತ್ತವೆ. ನಾನು ಆಗ ಕೆಲವು ವಿಷಯಗಳಿಗೆ ತಿದ್ದುಪಡಿ ಮಂಡಿಸಿದ್ದುದರ ಕಾರಣ ಆ ವಿಷಯಗಳು ಸಂವಿಧಾನದ ಕೆಲವು ವಿಧಿ ಮತ್ತು ಕಲಮುಗಳಿಗೆ ಸರಿಹೊಂದುವುದಿಲ್ಲವೆನ್ನುವುದಾಗಿತ್ತು. ಈಗ, ರಾಜ್ಯಗಳ ಮತ್ತು ಪ್ರಾಂತಗಳ ನಡುವಿನ ಭಿನ್ನತೆಯನ್ನು ಸಮರ್ಥಿಸುವ ನನ್ನ ವಾದ ಮೂರನೆಯ ವಿಧಿಗೆ ಸಂಬಂಧಿಸಿರುತ್ತೆ ಮತ್ತು ಇದು ವಿಧಿಗಳಾದ ೨೨೬, ೨೩೦ ಹಾಗೂ ೨೯೮ಗಳ ಜೊತೆಗೆ ಯಾವ ಸಾಮರಸ್ಯವನ್ನು ಹೊಂದಿರುವುದಿಲ್ಲವೆಂಬುದನ್ನು ನನ್ನ ಗೆಳೆಯ ಕುಂಜ್ರು ಹೇಳಿರುತ್ತಾರೆ. ಈಗ ಪ್ರಾಂತಗಳು ಮತ್ತು ರಾಜ್ಯಗಳು ಎರಡೂ ಭಿನ್ನಭಿನ್ನವಾಗಿರುತ್ತವೆ ಎನ್ನುವ ವಾದಗಳಲ್ಲಿ ಮತ್ತು ಈ ಮಾತನ್ನೇ ಎತ್ತಿ ತೋರಿಸಲು ಉಪಯೋಗಕ್ಕೆ ಬರುವ ವಿಧಿಗಳಲ್ಲಿ ಯಾವ ಅಸಂಬದ್ಧತೆಯೂ ಇರುವುದಿಲ್ಲವೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಕೇಂದ್ರದ ಶಾಸಕಾಂಗಕ್ಕೆ ಪ್ರಾಂತೀಯ ಪಟ್ಟಿಯಲ್ಲಿನ ವಿಷಯಗಳಿಗೆ ಸಂಬಂಧಿಸಿದ ವಿಧಿಯನ್ನು ಪಾಸು ಮಾಡಲು ಅನುವಾಗುವ ವಿಧಿಯ ಸಂಖ್ಯೆ ೨೨೬ರ ವಿಷಯದಲ್ಲಿ ನನ್ನ ಅರಿಕೆ ಇಷ್ಟೆ. ಪಾರ್ಲಿಮೆಂಟಿಗೆ ತನ್ನ ಮೇಲ್ಮನೆಯಲ್ಲಿ ೨/೩ ಬಹುಮತದ ನಿರ್ಣಯದ ಪ್ರಭಾವದಿಂದ ಈ ಅಧಿಕಾರ ಪ್ರಾಪ್ತವಾಗುತ್ತದೆ. ಮೇಲ್ಮನೆ ಅಥವಾ ರಾಜ್ಯಗಳ ವಿಧಾನಮಂಡಲಗಳು, ರಾಜ್ಯಗಳ ಪ್ರತಿನಿಧಿಗಳ ಸಂಖ್ಯೆಗೆ ಸಮವಾಗಿ ಪ್ರಾಂತಗಳ ಪ್ರತಿನಿಧಿಗಳನ್ನು ಹೊಂದಿರುತ್ತವೆ ಎಂಬುದನ್ನು ಕುಂಜ್ರು ಮನಗಾಣಬೇಕು. ಈ ಪ್ರತಿನಿಧಿಗಳು ಪಾರ್ಲಿಮೆಂಟು ಪ್ರಾಂತೀಯ ವಿಷಯಗಳ ಮೇಲಿನ ಕಾಯಿದೆ ಮಾಡುವ ಪ್ರತ್ಯೇಕ ನಿರ್ಣಯದ ನಡವಳಿಕೆಗಳಲ್ಲಿ ನಿಸ್ಸಂದೇಹವಾಗಿ ಭಾಗವಹಿಸುತ್ತಾರೆ. ಆದುದರಿಂದ ವಿಷಯ ೨೨೬ ಭಾರತೀಯ ರಾಜ್ಯಗಳ ಸಾರ್ವಭೌಮತ್ವವನ್ನು ತನ್ನಷ್ಟಕ್ಕೆ ತಾನೆ ಕಿತ್ತುಕೊಳ್ಳುತ್ತದೆ ಎಂಬ ವಾದ ಎಳ್ಳಷ್ಟೂ ಸಮಂಜಸವಾಗಿರುವುದಿಲ್ಲ. ವಾಸ್ತವದಲ್ಲಿ, ಇದೊಂದು, ಮೇಲ್ಮನೆಯಲ್ಲಿ ರಾಜ್ಯಗಳು ಸಂಪೂರ್ಣವಾಗಿ ಪ್ರತಿನಿಧಿಸಿ ಅನಂತರ ಮಂಜೂರು ಮಾಡಲಾದ ವಿಶೇಷ ನಿರ್ಣಯ ಹಾಗೂ ಒಂದು ಯಥಾರ್ಥವಾದ ಕಾನೂನಾಗಿರುತ್ತದೆ. ಆದುದರಿಂದ ಇದು ಅಸಂಬದ್ಧತೆಯ ಒಂದು ವಿವರಣೆಯಾಗಿರುವುದಿಲ್ಲ.

ವಿಷಯ ಸಂಖ್ಯೆ ೨೩೦ಕ್ಕೆ ಸಂಬಂಧಿಸಿದ ನನ್ನ ಅರಿಕೆ ವಿಧಿ ಸಂಖ್ಯೆ ೨೨೬ಕ್ಕೆ ಮಾಡಿದ ಅರಿಕೆಯಂತಿರುತ್ತದೆ. ಭಾರತದ ರಾಜ್ಯಗಳು ಈ ಸಂವಿಧಾನದ ಚಲಾವಣೆಯಲ್ಲಿ ಬಂದ ನಂತರ ಏನು ಮಾಡುತ್ತವೆಂಬ ವಿಷಯವನ್ನು ಬದಿಗಿರಿಸಿ, ಸದ್ಯಕ್ಕೆ ತಮ್ಮ ಮೂರು ಉದ್ದೇಶಗಳ ಈಡೇರಿಕೆಗಾಗಿ, ಅವುಗಳು

ಭಾರತದ ಒಕ್ಕೂಟಕ್ಕೆ ಸೇರಿರುತ್ತವೆ. ಈ ಮೂರರಲ್ಲಿ 'ವಿದೇಶ ವ್ಯವಹಾರಗಳು' ಒಂದು ವಿಷಯವಾಗಿರುತ್ತದೆ ಎಂಬುದು ನನ್ನ ಪಂಡಿತ ಗೆಳೆಯ ನೆನಪಿಟ್ಟುಕೊಳ್ಳಬಹುದು. ಆದುದರಿಂದ, ರಾಜ್ಯಗಳು ಈ ಒಪ್ಪಂದವನ್ನು ಪಾಲಿಸಲಿಕ್ಕೆ ನೀಡಿದ ಅಧಿಕಾರವನ್ನೂ ಉಪಯೋಗಿಸಬೇಕು ಎನ್ನುವುದೇ ಹೊರತು ಬೇರೆ ಏನೂ ಅಲ್ಲ; ಆದಕಾರಣ ರಾಜ್ಯಗಳ ಸಾರ್ವಭೌಮತ್ವ ಹಕ್ಕುಗಳನ್ನು ಕಿತ್ತುಕೊಳ್ಳುವ ಪ್ರಶ್ನೆಯೇ ಇಲ್ಲಿ ಉದ್ಭವವಾಗಲಾರದು.'

ಭಾರತದ ರಾಜ್ಯಗಳಲ್ಲಿನ ಅಲ್ಪಸಂಖ್ಯಾತರ ರಕ್ಷಣೆಗಾಗಿರುವ ಅವಕಾಶಗಳ ವಿಸ್ತರಣೆಯೊಂದಿಗೆ ವ್ಯವಹರಿಸುವ ಕೇಂದ್ರದ ವಿಷಯ ಸಂಖ್ಯೆ ೨೯೪ರ ಬಗ್ಗೆ ಹೇಳುವುದಾದರೆ, ಈ ಅವಕಾಶಗಳು ಒಂದು ಕ್ಷಣ ಭಾರತದ ಸಾರ್ವಭೌಮತ್ವದ ಮೇಲಿನ ಒಂದು ತರಹದ ಅತಿಕ್ರಮವೆಂದು ನಿಸ್ಸಂದೇಹವಾಗಿ ತೋರಬಹುದು. ಆದರೆ ಅವುಗಳಲ್ಲಿ ಅಂತಹದ್ದೇನು ಇರುವುದಿಲ್ಲ. ಭಾರತೀಯ ರಾಜ್ಯಗಳು ಭಾರತದ ಒಕ್ಕೂಟಕ್ಕೆ ಸೇರಲು ಇಚ್ಛಿಸುವಾಗ ಷರತ್ತುಗಳನ್ನು ಒಪ್ಪಬೇಕಾಗಿರುತ್ತದೆ; ಮತ್ತು ೨೯೪ರ ವಿಧಿಯನ್ನು ಒಪ್ಪುವಂತೆ ಮಾಡುವ ಹಲವಾರು ಷರತ್ತುಗಳಲ್ಲಿನ ಒಂದು ಷರತ್ತಾಗಿರುತ್ತವೆ. ಈ ಷರತ್ತಗಳನ್ನು ಕರಡು ಪ್ರತಿ ಸಿದ್ಧಪಡಿಸುವ ಸಮಿತಿ ರೂಪಿಸಿರುತ್ತದೆ. ಏಕೆಂದರೆ ಕೆಲವು ಭಾರತೀಯ ರಾಜ್ಯಗಳ ರಾಜ್ಯವ್ಯವಸ್ಥೆಯ ಸಭೆಗಳು (Constituent Assemblies) ಬಹಳ ವೈವಿಧ್ಯತೆಯ ಮತ್ತು ಅಪಾಯಕಾರಿ ಪೂರ್ವಸಿದ್ಧತೆಗಳನ್ನು ಮಾಡುತ್ತಿವೆ ಎಂಬ ಸುದ್ದಿ ಕರಡು ಪ್ರತಿ ಸಿದ್ಧಪಡಿಸುವ ಸಮಿತಿಯ ಕಿವಿಗೆ ಬಿದ್ದ ಕಾರಣ ಈ ಸಮಿತಿ ಅಲ್ಪಸಂಖ್ಯಾತರ ರಕ್ಷಣೆಗಾಗಿ ಕೇಂದ್ರ ಸರಕಾರ ಸ್ವೀಕಾರ ಮಾಡುವ ಅಥವಾ ಮಾಡದಿರುವ ಹಲವಾರು ಷರತ್ತುಗಳನ್ನು ಹಾಕುವುದು ಅತ್ಯುತ್ತಮವೆಂದು ಯೋಚಿಸಿತು ಹಾಗೂ ಅದನ್ನು ಅನುಷ್ಠಾನದಲ್ಲಿ ತಂದಿತು, ಇಂಥಾ ಏರ್ಪಾಡುಗಳೆಲ್ಲವೂ ವಿಷಯ ೨೯೪ರಲ್ಲಿರುತ್ತವೆ.

ಈಗ, ಸ್ವಾಮಿ, ಭಾರತೀಯ ರಾಜ್ಯಗಳು ಮತ್ತು ಬ್ರಿಟಿಷ್ ಭಾರತದ ಪ್ರಾಂತಗಳ ನಡುವಿನ ವ್ಯತ್ಯಾಸದ ಪ್ರಶ್ನೆಗೆ ಸಂಬಂಧಿಸಿದಂತೆ ಬಹಳಷ್ಟು ಈಗಾಗಲೇ ಹೇಳಲಾಗಿದೆ ಮತ್ತು ಈ ಸಂವಿಧಾನ ಮಾಡುವ ಇಂಥಾ ವ್ಯತ್ಯಾಸದ ಬಗ್ಗೆ ತಿಳಿಯಲು ಈ ಸದನ ತುಂಬಾ ಭಾವೋದ್ರೇಕವನ್ನು ಹೊಂದಿರುತ್ತದೆ; ಆದರೆ ಈ ಸಂದರ್ಭದಲ್ಲಿ ಸದನಕ್ಕೆ ನಾನು ಎರಡು ವಿಷಯಗಳನ್ನು ಹೇಳಬಯಸುತ್ತೇನೆ. ಒಂದನೆಯದೇನೆಂದರೆ, ನಾವು ಸದ್ಯದ ಈ ಕ್ಷಣದಲ್ಲಿ ಎರಡು ಸಂವಿಧಾನ ಸಮಿತಿಗಳನ್ನು, ಅಂದರೆ, ಒಂದು ಬ್ರಿಟಿಷ್ ಪ್ರಾಂತಗಳನ್ನು ಪ್ರತಿನಿಧಿಸುವ ಭಾರತೀಯ ರಾಜ್ಯವ್ಯವಸ್ಥಾ ಸಭೆ (Constituent Assembly) ಮತ್ತೊಂದು ಭಾರತೀಯ ರಾಜ್ಯಗಳು ಮತ್ತು ಬ್ರಿಟಿಷ್ ಪ್ರಾಂತಗಳು, ಇವೆರಡನ್ನು ಒಳಗೊಂಡಿರುವ ಒಂದು ಸಾರ್ವಜನಿಕ ಸಂವಿಧಾನವನ್ನು ಸಿದ್ಧಪಡಿಸಲು ಭಾರತೀಯ ರಾಜ್ಯಗಳು ನೇಮಿಸಲಾದ ಪ್ರತಿನಿಧಿಗಳ ಸಮಿತಿ ಇವುಗಳ ಒಪ್ಪಂದದ ಕರಾರುಗಳಿಗೆ ಬದ್ಧರಾಗಿರುತ್ತೇವೆ. ಸಂಧಾನ ನಡೆಸುವ ಸಮಿತಿಗಳ ವರದಿಗಳ ವಿವರಗಳನ್ನು ಕೂಲಂಕಷವಾಗಿ, ವಿಚಾರಮಾಡಲು ನಾನು ಇಚ್ಛಿಸುತ್ತಿಲ್ಲ; ಆದರೆ ಒಂದು ವೇಳೆ ನನ್ನ ಗೌರವಾನ್ವಿತ ಗೆಳೆಯ ಪಂಡಿತ ಕುಂಜ್ರು ಸಮಿತಿಯ ವರದಿಗಳನ್ನು ಓದಿ ತಮ್ಮ ಜ್ಞಾಪಕ ಶಕ್ತಿಯನ್ನು ಚುರುಕುಗೊಳಿಸಿಕೊಂಡಿದ್ದರೆ, ಈ ಸಮಿತಿಯ ವರದಿಗಳಲ್ಲಿ, ಭಾರತೀಯ ಒಕ್ಕೂಟ–ಭಾರತ ರಾಜ್ಯಗಳ ಪ್ರದೇಶಗಳನ್ನು ಕಬಳಿಸುವ ಯಾವ ಯೋಜನೆ ಅದರಲ್ಲಿ ಇರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ನನ್ನ ವಿನಂತಿ ಇಷ್ಟೇ ಆಗಿರುತ್ತದೆ. ಒಂದು ವೇಳೆ ಅದು ಭಾರತೀಯ ಒಕ್ಕೂಟ ಮತ್ತು ಭಾರತೀಯ ರಾಜ್ಯಗಳ ನಡುವೆ ಒಂದು ಒಮ್ಮನಸ್ಸು (Understanding) ಆಗಿದ್ದರೂ, ಈ ಹಂತದಲ್ಲಿ ಅದು ಎರಡು ಪಕ್ಷಗಳ ಒಪ್ಪಂದ ಅಥವಾ ಕರಾರು ಎಂದು ಭಾವಿಸದೆ, ಇದನ್ನು ಅವುಗಳ ನಡುವೆ ಇರುವ ಒಮ್ಮನಸ್ಸು ಎಂದು ಅದಕ್ಕೆ ಮರ್ಯಾದೆ ನೀಡಿ, ನಾನು ಇನ್ನೊಂದು ವಿಷಯವನ್ನು ಎತ್ತಿ ತೋರಿಸಲು ಇಚ್ಛಿಸುತ್ತೇನೆ. ಈ ಇನ್ನೊಂದು ವಿಷಯವೆಂದರೆ ಸಂವಿಧಾನದಲ್ಲಿನ ಇನ್ನೊಂದು ವಿಧಿ

ಮತ್ತು ಈ ವಿಧಿಯ ಬಗ್ಗೆ ನನ್ನ ಗೆಳೆಯ ಕುಂಜ್ರು ಏನನ್ನೂ ಹೇಳಿರುವುದಿಲ್ಲ. ಇದು ವಿಧಿ ೨೧೨ ಆಗಿದೆ ಮತ್ತು ಇದೊಂದು ಬಹಳ ಮಹತ್ವದ ವಿಧಿ ಆಗಿದೆ ಮತ್ತು ಭಾರತದ ಕರಡು ಪ್ರತಿ ಸಂವಿಧಾನ ಭಾರತೀಯ ರಾಜ್ಯಗಳಿಗೆ ಸಂಬಂಧಿಸಿದ ಯಾವ ಖಚಿತವಾದ ಸಾಧ್ಯತೆಗಳಿಗೆ ಅವಕಾಶ ಒದಗಿಸಿದೆ ಎಂಬುದನ್ನು ನಾನು ವಿವರಿಸಲು ಇಚ್ಛಿಸುತ್ತೇನೆ. ಸಂವಿಧಾನದ ಮೂರನೆಯ ವಿಧಿ ಭಾರತೀಯ ರಾಜ್ಯಗಳು. ಅವುಗಳನ್ನು ಭಾರತದ ಒಕ್ಕೂಟದೊಳಗೆ ಅಂಗೀಕಾರದ ಸಾಧನ (Instrument of Accession) ವನ್ನು ಅನುಷ್ಠಾನದಲ್ಲಿ ತರುವ ಮೂಲಕ ಒಳಗೊಳ್ಳುವಂತೆ ಮಾಡುತ್ತದೆ ಎಂಬುದಾಗಿ ಗೌರವಾನ್ವಿತ ಸದಸ್ಯರೆಲ್ಲರಿಗೆ ಗೊತ್ತಿರಬೇಕು. ಯಾವಾಗ ಒಂದು ರಾಜ್ಯ ಭಾರತದ ಒಕ್ಕೂಟ ಸೇರುತ್ತದೆಯೊ ಅಂತಹ ಸಂದರ್ಭದಲ್ಲಿ ಅದರ ಕೇಂದ್ರ ಸರಕಾರದ ಜೊತೆಗಿನ ಸ್ಥಾನ ಮತ್ತು ಪ್ರಾಂತಗಳ ಜೊತೆಗಿನ ಸ್ಥಾನವನ್ನೂ 'ಅಂಗೀಕಾರದ ಸಾಧನ'ದಲ್ಲಿನ ಕರಾರುಗಳಿಗನುಗುಣವಾಗಿ ಅದು ನಿಯಂತ್ರಿಸಬೇಕು; ಆದರೆ ಈ 'ಅಂಗೀಕಾರದ ಸಾಧನ' ಒಂದೇ ಭಾರತೀಯ ರಾಜ್ಯಗಳನ್ನು ಭಾರತದ ಸಂವಿಧಾನದಲ್ಲಿ ತರುವ ಒಂದೇ ಒಂದು ವಿಧಾನವಾಗಿಲ್ಲ. ಸಂವಿಧಾನದಲ್ಲಿ ಸಂಖ್ಯೆ ೨೧೨ಿರ ಇನ್ನೊಂದು ಬಹಳ ಮಹತ್ವದ ವಿಧಿ ಇದೆ. ವಿಧಿ ೨೧೨ರ ಪ್ರಕಾರ ಭಾರತದ ರಾಜ್ಯದ ಯಾವುದೆ ರಾಜ ತನ್ನ ರಾಜ್ಯದ ಸಾರ್ವಭೌಮತ್ವವನ್ನು ಸಂಪೂರ್ಣವಾಗಿ ಭಾರತದ ಒಕ್ಕೂಟಕ್ಕೆ ಹಸ್ತಾಂತರ ಮಾಡಬಹುದು. ಯಾವಾಗ ಒಂದು ಪ್ರದೇಶ (ಅಥವಾ ರಾಜ್ಯ) ಈ ರೀತಿ ತನ್ನ ಸಾರ್ವಭೌಮತ್ವವನ್ನು ವಿಧಿ ೨೧೨ರಲ್ಲಿ ಭಾರತದ ಒಕ್ಕೂಟಕ್ಕೆ ಹಸ್ತಾಂತರಗೊಳಿಸಿದ ನಂತರ ಆ ಪ್ರದೇಶ ಭಾರತದ ಪ್ರದೇಶವಾಗುತ್ತದೆ ಮತ್ತು ಅದರ ಸಾರ್ವಭೌಮತ್ವ ಸಂಪೂರ್ಣವಾಗಿ ಭಾರತದ ಒಕ್ಕೂಟದಲ್ಲಿ ಲೀನವಾಗುತ್ತದೆ. ಅನಂತರ ವಿಧಿ ೨೧೨ರ ಅಡಿಯಲ್ಲಿ ಪ್ರದೇಶಕ್ಕೆ ಅಧಿಕಾರವನ್ನು ನೀಡಲಾಗುತ್ತದೆ; ಇದರಿಂದ ನಿಜವಾಗಿ ಒಂದು ಪ್ರದೇಶದ ಸಾರ್ವಭೌಮತ್ವವನ್ನು ಆ ಪ್ರದೇಶದ ರಾಜನಿಂದ ಪಡೆದು ಭಾರತದ ಒಕ್ಕೂಟಕ್ಕೆ ಸಂಪೂರ್ಣವಾಗಿ ಹಸ್ತಾಂತರ ಮಾಡಿದ ತರುವಾಯ ಅಂಥಾ ಪ್ರದೇಶವನ್ನು ಒಂದು ಭಾರತದ ಪ್ರಾಂತವೆಂದು ಪರಿಗಣಿಸಿ ಭಾರತದ ಒಕ್ಕೂಟ ಅದರ ಆಡಳಿತವನ್ನು ವಹಿಸುತ್ತದೆ; ಹಾಗಿದ್ದಲ್ಲಿ ಭಾರತದ ಪ್ರಾಂತಗಳ ರಚನೆಯನ್ನು ವ್ಯಾಖ್ಯಾನಿಸುವ ಸಂವಿಧಾನದ ಭಾಗ ಎರಡು ಇಂಥಾ ರಾಜ್ಯಕ್ಕೆ ಅನ್ವಯಿಸುತ್ತದೆ; ಅಥವಾ ಈ ರಾಜ್ಯವನ್ನು ಭಾರತ ಸರಕಾರ ಒಂದು ಕೇಂದ್ರಾಡಳಿತ ಪ್ರದೇಶವೆಂದು ಪರಿಗಣಿಸಿ ಅದರ ಆಡಳಿತವನ್ನು ನಿರ್ವಹಿಸಬಹುದು; ಮತ್ತು ಅಂಥಾ ಪ್ರದೇಶಕ್ಕೆ ಯಾವುದೇ ವಿಧದ 'ಆಡಳಿತ' ರಚನೆಯನ್ನು ಮಾಡಲು ರಾಷ್ಟ್ರಪತಿ ಮತ್ತು ಕೇಂದ್ರೀಯ ಪಾರ್ಲಿಮೆಂಟು ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ. ಆದುದರಿಂದ ನಾನು ಈ ಸದನಕ್ಕೆ ವಿನಂತಿಸಿಕೊಳ್ಳುವುದೇನೆಂದರೆ ಈ ವಿಷಯದ ಬಗ್ಗೆ, ಒಂದು ವೇಳೆ ನಾನು ಈ ರೀತಿಯ ಹೇಳಿಕೆಯನ್ನು ಪ್ರಯೋಗಿಸಿದರೆ, ಉದ್ರೇಕಗೊಳ್ಳುವ ಅವಶ್ಯಕತೆಯೇ ಇರುವುದಿಲ್ಲ.

ಒಂದು ವೇಳೆ ನಾವು ಸ್ವಲ್ಪ ತಾಳ್ಮೆಯಿಂದ ಇದ್ದರೆ, ಭಾರತದ ರಾಜ್ಯಗಳಿಗಾಗಿ ಇರುವ ನಮ್ಮ ಮಂತ್ರಿ, ನಾವು ಸಂವಿಧಾನ ರಚಿಸಲು ಪ್ರಾರಂಭಿಸಿದ ಸಮಯಕ್ಕಿಂತ ಮುಂಚೆ ಇದ್ದು ಅವ್ಯವಸ್ಥೆಯನ್ನು ಕಡಿಮೆ ಮಾಡಲು ಬಹಳಷ್ಟು ಕೆಲಸವನ್ನು ಮಾಡಿರುತ್ತಾರೆ. ಈಗ ಅವರು ಮುಂದುವರಿದು ಕೇಂದ್ರ ಸರಕಾರ ಹೊಂದಿರುವ ಸಾರ್ವಭೌಮತ್ವವನ್ನು ನಿಜವಾಗಿಯೂ ಉಪಯೋಗಿಸಿ ಅವ್ಯವಸ್ಥೆಯನ್ನು ಮತ್ತಷ್ಟು ಕಡಿಮೆ ಮಾಡಿ ವ್ಯವಸ್ಥೆಯನ್ನು ತರಬೇಕು. ಭಾರತೀಯ ರಾಜ್ಯಗಳು ತಮಗೆ ಅನ್ವಯವಾಗುವ ಭಾರತ ಸರಕಾರದ ಕಾನೂನನ್ನು ಒಪ್ಪಿಕೊಳ್ಳುವಂತೆ ಮಾಡಿ ಅಥವಾ ವಿಧಿ ೨೧೨ರ ಪರಂತುಕ ಮುನ್ನೇರ್ಪಾಡುಗಳನ್ನು ಅನುಸರಿಸಲು ಮತ್ತು ತಮ್ಮ ಸಾರ್ವಭೌಮತ್ವವನ್ನು ಸಂಪೂರ್ಣವಾಗಿ ಭಾರತಕ್ಕೆ ಒಪ್ಪಿಸುವುದರಿಂದ ಸುವ್ಯವಸ್ಥೆಯನ್ನು ಕಾಪಾಡಬಹುದು; ಹೀಗೆ ಮಾಡಿದಲ್ಲಿ ಪ್ರಾಂತಗಳ ಜೊತೆ ಭಾರತ ಒಕ್ಕೂಟ ಹೇಗೆ

ವ್ಯವಹರಿಸುತ್ತದೆಯೋ ಹಾಗೆಯೇ ಭಾರತದ ರಾಜ್ಯಗಳ ಜೊತೆಗೂ ವ್ಯವಹರಿಸುವುದು ಸಾಧ್ಯವಾಗುತ್ತದೆ.

ಇಂದಿನ ಪರಿಸ್ಥಿತಿಗಳಲ್ಲಿ ನಾವು ಎರಡು ಸಂಧಾನ ಮಾಡುವ ಸಮಿತಿಗಳ ಒಪ್ಪಂದಕ್ಕೆ ಮಾನ್ಯತೆ ನೀಡುವುದೇ ನಮ್ಮ ಜಾಣತನವಾಗುತ್ತದೆ ಎಂದು ಸದನಕ್ಕೆ ವಿನಂತಿಸಿಕೊಳ್ಳುತ್ತೇನೆ; ಮತ್ತು ಇನ್ನೊಂದು ಒಪ್ಪಂದದಿಂದ ರಾಜ್ಯ ಮತ್ತು ಕೇಂದ್ರದ ಸಂಬಂಧದ ಮೂಲವನ್ನು ಸದ್ಭಾವನೆ, ಶಾಂತಿ ಮತ್ತು ಮರ್ಯಾದೆಯಿಂದ ಬದಲಾಯಿಸುವವರೆಗೂ ಈ ಒಪ್ಪಂದವನ್ನೇ ಅನುಸರಿಸೋಣ.

ಸ್ವಾಮಿ, ನಾನು ತಿದ್ದುಪಡಿಯನ್ನು ವಿರೋಧಿಸುತ್ತೇನೆ. (ಜಯಘೋಷ–ಜೈ, ಜೈ, ಜೈ Cheers)

**ಮಾನ್ಯ ಉಪಸಭಾಪತಿ :** ಈಗ ನಾನು ತಿದ್ದುಪಡಿ ಸಂಖ್ಯೆ ೧೫೦ ಮಂಡಿಸುತ್ತೇನೆ; ಇದು ಎಚ್.ಎನ್. ಕುಂಜ್ರುರವರಿಂದ ಮಾರ್ಪಡಿಸಲಾಗಿದೆ (ಅವರು ಮಾತನಾಡುವಾಗ ಸದಸ್ಯರು ಅಡ್ಡಬರುತ್ತಾರೆ). ದಯವಿಟ್ಟು ನಾನು ಹೇಗೆ ನನ್ನ ಮನಸ್ಸಿನಲ್ಲಿ ಅಂದುಕೊಂಡಿರುತ್ತೇನೆ ಅದೇ ತರಹ ಈ ಸದನದ ಕಾರ್ಯಕಲಾಪಗಳನ್ನು ನಡೆಸಲು ನನಗೆ ಪರವಾನಗಿ ನೀಡಿ.

* * * * *

***ಮಾನ್ಯ ಉಪಸಭಾಪತಿ :** ನಾನು ನಿರ್ಣಯವನ್ನು (ruling) ನೀಡಲಿದ್ದೇನೆ. ಈ ಸದನ ಕಾಯಿದೆಗಳಲ್ಲಿ ತಿದ್ದುಪಡಿ ಮಂಡಿಸಲಾದ ವ್ಯಕ್ತಿಗೆ ಆತ ಅದಕ್ಕೆ ಉತ್ತರ ನೀಡಲು ಹಕ್ಕು ನೀಡುವ ಯಾವುದಾದರೂ ಕಾಯಿದೆ ಇದೆ ಎಂಬುದು ನನಗೆ ಗೊತ್ತಾಗಿಲ್ಲ. ಒಂದು ವೇಳೆ ನಾನು ಅಂಬೇಡ್ಕರರಿಗೆ ತಕ್ಕ ಹಾಗೂ ಸಮಂಜಸ ಪ್ರಶ್ನೆಗೆ ಉತ್ತರ ನೀಡಲು ಕೇಳಿದರೆ, ಅದಕ್ಕೆ ಅದು ಉತ್ತರ ನೀಡಲು ಆತನಿಗೆ ಹಕ್ಕು/ ಅಧಿಕಾರಗಳನ್ನು ಕೊಡುತ್ತದೆ; ಅಧಿಕಾರ ನೀಡಲು ಅದಕ್ಕೆ ಸರಕಾರದ ಅನುಮತಿ ಸಹ ಇರುತ್ತದೆ. ಇದು ನನ್ನ ತೀರ್ಮಾನ.

ಈಗ ನಾನು ಪಂಡಿತ್ ಕುಂಜ್ರುರವರ ತಿದ್ದುಪಡಿಯನ್ನು ಅಭಿಮತಕ್ಕಾಗಿ ಇಡುತ್ತೇನೆ.

(ಕುಂಜ್ರುರವರ ತಿದ್ದುಪಡಿಯನ್ನು ನಕಾರಾತ್ಮಕಗೊಳಿಸಲಾಯಿತು. ಡಾ। ಅಂಬೇಡ್ಕರರ ತಿದ್ದುಪಡಿಯನ್ನು ಮಾತ್ರ ಸ್ವೀಕರಿಸಲಾಯಿತು)

* * * * *

+**ಮಾನ್ಯ ಉಪಸಭಾಪತಿ :** ಪ್ರೊ। ಕೆ.ಟಿ. ಶಹಾರ ಮತ್ತು ಅದಾದ ನಂತರ ಬರುವ ಸಂಖ್ಯೆ ೧೭೫ರವರೆಗಿನ ತಿದ್ದುಪಡಿಗಳ ಕಟ್ಟು ಡಾ। ಅಂಬೇಡ್ಕರರ ತಿದ್ದುಪಡಿಯ ನಂತರ ತಪ್ಪಿ ಹೋಗುತ್ತವೆ.

(ತಿದ್ದುಪಡಿ ಸಂಖ್ಯೆ ೧೭೬ನ್ನು ಮಂಡಿಸಲಾಗಲಿಲ್ಲ)

................ ಇದು ಮೂರನೆಯ ವಿಧಿಯನ್ನು ಪೂರ್ತಿಗೊಳಿಸುತ್ತದೆ. ಯಾರಾದರೂ ಈ ವಿಧಿಯನ್ನು ಇಡಿಯಾಗಿ ಚರ್ಚಿಸಲು ಬಯಸುವಿರೋ?

**ಪಂಡಿತ್ ಲಕ್ಷ್ಮಿಕಾಂತ ಮೈತ್ರ** (ಪಶ್ಚಿಮ ಬಂಗಾಳ : ಸಾಮಾನ್ಯ) : ಒಂದು ವೇಳೆ ಗೌರವಾನ್ವಿತ ಸದಸ್ಯರಿಗೆ ಮೂರನೆಯ ವಿಧಿಯ ಮೇಲೆ ಇಡಿಯಾಗಿ ಮಾತನಾಡಲು ಅವಕಾಶ ನೀಡಿದಲ್ಲಿ ಪರಿಸ್ಥಿತಿ ಏನಾಗುತ್ತದೆ? ಆತನ ಮಾತಿಗೆ ಉತ್ತರ ಕೊಡಲು ಪುನಃ ಡಾ। ಅಂಬೇಡ್ಕರರನ್ನು ಕೇಳಲಾಗುತ್ತದೆಯೇ?

**ಮಾನ್ಯ ಉಪ ಸಭಾಪತಿ :** ಬಹುತೇಕ ಖಚಿತವಾಗಿ ಇಲ್ಲ.

---

* ಸಿ.ಎ.ಡಿ. (ಸರಕಾರಿ ವರದಿ) ಸಂಪುಟ ೭, ೧೮ನೆಯ ನವೆಂಬರ್, ೧೯೪೮, ಪುಟ ೪೬೧

\+ ಹಿಂದಿನಂತೆಯೇ ಪುಟ ೪೬೨

**ಪಂಡಿತ ಲಕ್ಷ್ಮಿಕಾಂತ ಮೈತ್ರ :** ಮೂರನೆಯ ವಿಧಿಯನ್ನು ಇಡಿಯಾಗಿ ಇನ್ನೂ ಫೈಸಲು ಮಾಡಿಲ್ಲ ಮತ್ತು ಡಾ। ಅಂಬೇಡ್ಕರರು ಅದರ ಮೇಲಿನ ತಿದ್ದುಪಡಿಗೆ ಉತ್ತರ ನೀಡುವರೇ ಹೊರತು ಇಡೀ ವಿಧಿಗಲ್ಲ.

**ಮಾನ್ಯ ಉಪಸಭಾಪತಿ :** ಗೌರವಾನ್ವಿತ ಸದಸ್ಯರು ಏನು ಹೇಳುತ್ತಾರೆಯೋ ಕೇಳೋಣ? ಒಂದು ವೇಳೆ ಆತ ಹಳೇ ಹಾದಿಯನ್ನೇ ಹಿಡಿದರೆ ಹಾಗೆ ಏಕೆ ಮಾಡಿದಿರಿ ಎಂದು ನಾವು ಕೇಳಲೇಬೇಕಾಗುತ್ತದೆ.

**ಪಂಡಿತ ಲಕ್ಷ್ಮಿಕಾಂತ ಮೈತ್ರ :** ಆದ್ದರಿಂದ ಡಾ। ಅಂಬೇಡ್ಕರರಿಂದ ಉತ್ತರ ಪಡೆಯುವುದು ನಿಮ್ಮ ಹಕ್ಕು ಎಂದು ತಿಳಿಯಬಾರದು.

**ಮಾನ್ಯ ಉಪಸಭಾಪತಿ :** ಇಲ್ಲ

**ಶ್ರೀ ಎಮ್. ಅನಂತಶಯನಂ ಅಯ್ಯಂಗಾರ್**(ಮದ್ರಾಸ್ : ಸಾಮಾನ್ಯ): ಇದು ಕಲ್ಪಿತ ವಿಷಯವಾಗಿದ್ದು ನಿಜವಾದ ವಿಷಯವಾಗಿಲ್ಲ.

* * * * *

* **ಮಾನ್ಯ ಉಪಸಭಾಪತಿ :** ಪ್ರಶ್ನೆ ಏನೆಂದರೆ; ತಿದ್ದುವಾಗ ವಿಧಿ ಮೂರು, ಸಂವಿಧಾನದ ಒಂದು ಭಾಗವಾಗುತ್ತದೆ.

ಗೊತ್ತುವಳಿಯನ್ನು ಸ್ವೀಕರಿಸಲಾಯಿತು.

* * * * *

## ವಿಧಿ – ೪

* **ಮಾನ್ಯ ನಜೀರುದ್ದೀನ್ ಅಹ್ಮದ್** (ಬಂಗಾಳ: ಮುಸ್ಲಿಂ): ಸ್ವಾಮಿ, ನಾನು 'ವಿಧಿ ನಾಲ್ಕರ ಕಲಂ (೧)ರಲ್ಲಿನ 'ಈ ಸಂವಿಧಾನದ' ಎಂಬ ಶಬ್ದಗಳನ್ನು ಮತ್ತು ಕರಡು ಪ್ರತಿ ಸಂವಿಧಾನದಲ್ಲಿ ಇಂಥಾ ಪ್ರಸಂಗದಲ್ಲಿ ಎಲ್ಲೆಲ್ಲಿ ಬರುತ್ತವೆಯೋ ಅಲ್ಲಲ್ಲಿ ಅವುಗಳನ್ನು ತೆಗೆದುಹಾಕಬೇಕು; ಮತ್ತು ವಿಧಿ ೩೦೩ರ ಕಲಂ(೧)ರಲ್ಲಿನ (bb) ಎಂಬ ಹೊಸ ವ್ಯಾಖ್ಯೆಯನ್ನು ಸೇರಿಸಬೇಕು' ಎಂಬ ತಿದ್ದುಪಡಿಯನ್ನು ಮಂಡಿಸುತ್ತೇನೆ.

'(bb) 'ವಿಧಿ' ಎಂದರೆ ಈ ಸಂವಿಧಾನದಲ್ಲಿನ ವಿಧಿ'

ಇದರ ನಂತರ ಅವರು ಭಾಷಣ ಮಾಡುತ್ತಾರೆ.

* * * * *

**ಮಾನ್ಯ ಉಪಸಭಾಪತಿ :** ಗೌರವಾನ್ವಿತ ಸದಸ್ಯ ವಿಧಿ ನಾಲ್ಕರವರೆಗೆ ಇರುವ ಎಲ್ಲಾ ತಿದ್ದುಪಡಿಗಳನ್ನು ಒಂದರ ನಂತರ ಒಂದರಂತೆ ೧೮೧ರವರೆಗಿನ, ಈ ಆಜ್ಞಾಪತ್ರದಲ್ಲಿರುವ ಕ್ರಮದಲ್ಲಿ ಎಷ್ಟು ಸಂಕ್ಷಿಪ್ತವಾಗಿ ಸಾಧ್ಯವೋ ಅಷ್ಟು ಸಂಕ್ಷೇಪವಾಗಿ ಮಂಡಿಸಬೇಕು.

**ಮಾನ್ಯ ನಜೀರುದ್ದೀನ ಅಹ್ಮದ್ :** ............. ಸ್ವಾಮಿ ನಾನು : 'ವಿಧಿ ನಾಲ್ಕರ ಕಲಮು (೧) 'ವಿಧಿ ೨ ಅಥವಾ ವಿಧಿ ೩' ಶಬ್ದಗಳಿಗೆ 'ವಿಧಿ ೨ ಅಥವಾ ೩' ಎಂಬ ಅಂಕಿ ಮತ್ತು ಶಬ್ದಗಳಿಂದ ಬದಲಿಸಬೇಕು." ವಿಧಿ ಒಂದರಲ್ಲಿ ಮತ್ತು ಕರಡುಪ್ರತಿ ಸಂವಿಧಾನದಲ್ಲಿ ಹೇಳಿದಂತೆ 'ವಿಧಿ' ಎಂಬ ಶಬ್ದವನ್ನು ಪದೇ ಪದೇ ಹೇಳಬಾರದು.

---

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೧೮ನೆಯ ನವೆಂಬರ್, ೧೯೪೮, ಪುಟ ೪೬೫–೬೬

ಈಗ ನಾನು ಮಂಡಿಸುವೆ:

'ವಿಧಿ ೪ರ ಕಲಮು (೧) ರಲ್ಲಿನ 'ವಿಧಿ ೨ ಅಥವಾ ವಿಧಿ ೩' ಎಂಬ ಶಬ್ದ ಮತ್ತು ಅಂಕಿಗಳನ್ನು 'ವಿಧಿ ೩' ಎಂಬ ಶಬ್ದ ಮತ್ತು ಅಂಕಿಯಿಂದ ಬದಲಿಸಬೇಕು.

ಈ ಇನ್ನೊಂದನ್ನು ಮಂಡಿಸುವೆ:

"ವಿಧಿ ನಾಲ್ಕರ ಕಲಮು(೧) ರಲ್ಲಿನ 'ಅಂಥಾ ಅವಕಾಶಗಳನ್ನು ಹೊಂದಿರಬೇಕು' ಎನ್ನುವ ಶಬ್ದಗಳಿಗೆ 'ಇವುಗಳಿಗೂ ಸಹ ಏರ್ಪಾಡು ಮಾಡಬೇಕು' ಎಂಬ ಶಬ್ದಗಳಿಂದ ಬದಲಿಸಬೇಕು.

ಇದೊಂದು ಬಹಳ ಸರಳ ತಿದ್ದುಪಡಿಯಾಗಿದೆ. ಈಗ ನಾನು ಈ ವಿಧಿಯ ಮೇಲೆ ಕೊನೆಯ ತಿದ್ದುಪಡಿಯನ್ನು ಮಂಡಿಸುತ್ತೇನೆ :

"ನಾಲ್ಕನೆಯ ವಿಧಿಯ ಕಲಮು ಎರಡರಲ್ಲಿನ ' ಈ ಉದ್ದೇಶಕ್ಕಾಗಿರುವ' ಎಂಬ ಶಬ್ದಗಳನ್ನು 'ಇಂಥ ಅರ್ಥದೊಳಗಡೆಯೇ' ಎಂಬ ಶಬ್ದಗಳಿಂದ ಬದಲಿಸುತ್ತೇನೆ."

ಇದೊಂದು ಕೇವಲ ಶಾಬ್ದಿಕ ತಿದ್ದುಪಡಿಯಾಗಿರುತ್ತದೆ.

* * * * *

**ಮೆಹಬೂಬ್ ಅಲಿ ಬೇಗ್ ಸಾಹಿಬ್ ಬಹದೂರ್** (ಮದ್ರಾಸ : ಮುಸ್ಲಿಂ) ಸ್ವಾಮಿ, ನಾನು ಸಂಖ್ಯೆ ೧೮೪ರ ತಿದ್ದುಪಡಿಯನ್ನು ಮಂಡಿಸುತ್ತೇನೆ :

"ನಾಲ್ಕನೆಯ ವಿಧಿಯ ಎರಡನೆಯ ಕಲಮಿನಲ್ಲಿರುವ '೩೦೪ ವಿಧಿಯ ಉದ್ದೇಶಕ್ಕಾಗಿರುವ ಎಂಬ ಶಬ್ದಗಳನ್ನು '೩೦೪ ವಿಧಿಯೊಳಗಿನ' ಎಂಬ ಶಬ್ದಗಳಿಂದ ಬದಲಿಸಬೇಕು."

ಈಗಿರುವ ಶಬ್ದಗಳನ್ನು ಹಾಗೆ ಉಳಿಸಿಕೊಂಡಾಗ ಅದು ಒಂದು ತರಹದ ತೊಡಕಿಗೆ ಅನುವುಮಾಡಿಕೊಡುತ್ತದೆ. ಆದುದರಿಂದ '೩೦೪ ವಿಧಿಯೊಳಗಿನ' ಎಂಬ ಶಬ್ದಗಳನ್ನು ಬದಲಾಯಿಸಬೇಕೆಂದು ಮಂಡಿಸುತ್ತೇನೆ.

**ಶ್ರೀ ಹೆಚ್.ವಿ ಕಾಮತ್ :** ಮಾನ್ಯ ಉಪಸಭಾಪತಿ, ನಿಮ್ಮ ಪರವಾನಗಿ ಪಡೆದು ನಾನು ನನ್ನ ಗೌರವಾನ್ವಿತ ಗೆಳೆಯ ಮಿ। ನಜೀರುದ್ದೀನ್ ಅಹ್ಮದರು ಮಂಡಿಸಿದ ಸಂಖ್ಯೆ ೧೭೭ರ ತಿದ್ದುಪಡಿಯ ಮೇಲೆ ಸಂಕ್ಷಿಪ್ತವಾಗಿ ಅವಲೋಕನ ಮಾಡುತ್ತೇನೆ. ಈ ತಿದ್ದುಪಡಿಗೆ ಉತ್ತರ ಕೊಡಲು ನೀವು ಡಾ। ಅಂಬೇಡ್ಕರರನ್ನು ಕರೆಯುವ ಮುನ್ನ ನಾನು ಅವರಿಗೆ, ಒಂದು ವೇಳೆ ಈ ತಿದ್ದುಪಡಿಯನ್ನು ತಿರಸ್ಕರಿಸಬೇಕೆಂಬ ಅಭಿಪ್ರಾಯ ಹೊಂದಿದ್ದಲ್ಲಿ, 'ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ?' ಎಂಬ ಸಾಮಾನ್ಯ ಸೂತ್ರದಿಂದ ತಿರಸ್ಕರಿಸದೆ ಕೆಲವು ಸಕಾರಣಗಳನ್ನು ನೀಡಿ ನಂತರ ಅದನ್ನು ವಿರೋಧಿಸಲಿ ಎಂದು ಕೇಳಿಕೊಳ್ಳುತ್ತೇನೆ..........

........................ ಕೊನೆಯದಾಗಿ, ಮತ್ತೊಮ್ಮೆ ನಾನು ಡಾ। ಅಂಬೇಡ್ಕರರಿಗೆ ವಿನಂತಿಸಿಕೊಳ್ಳುವುದೇನೆಂದರೆ 'ನಾನು ವಿರೋಧಿಸುತ್ತೇನೆ' ಎಂಬ ಸಾಮಾನ್ಯ ಸೂತ್ರದಿಂದ ಈ ತಿದ್ದುಪಡಿಯನ್ನು ತಿರಸ್ಕರಿಸದೆ ಕೆಲವು ಸಕಾರಣಗಳನ್ನು ನೀಡಿ ಇದನ್ನು ವಿರೋಧಿಸಲು ಕೇಳಿಕೊಳ್ಳುತ್ತೇನೆ.

**ಶ್ರೀ ರೋಹಿಣಿ ಕುಮಾರ್ ಚೌಧರಿ :** ಈ ತಿದ್ದುಪಡಿಯನ್ನು ವಿರೋಧಿಸಿ ನನ್ನ ಗೆಳೆಯ ಮಿ। ನಜೀರುದ್ದೀನ್ ಅಹ್ಮದರಿಗೆ ಗೌರವ ನೀಡಲು ನಾನು ಉಪದೇಶ ವೇದಿಕೆಗೆ ಬಂದಿರುವೆ. (ನಗೆ)...........

* * * * *

**ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್ :** ಮಿ| ಉಪಸಭಾಪತಿ, ಸ್ವಾಮಿ; ಈ ವಿಷಯಕ್ಕೆ ನಾನು ಭಾಷಣ ಮಾಡುವುದು ಅಗತ್ಯವಿರಲಿಲ್ಲ, ಆದರೆ ಮಿ| ಕಾಮತರು ನಾನು ಈ ತಿದ್ದುಪಡಿಯನ್ನು ಕೇವಲ ನಕಾರಾತ್ಮಕಗೊಳಿಸುವುದಲ್ಲದೆ ಈ ತಿದ್ದುಪಡಿಯನ್ನು ಸ್ವೀಕರಿಸಲು ಏಕೆ ತಯಾರಿಲ್ಲ ಎಂಬುದನ್ನು ಹೇಳಲು ನನ್ನ ಗೌರವಾನ್ವಿತ ಗೆಳೆಯ ಮಿ| ನಜೀರುದ್ದೀನ್ ಅಹ್ಮದರು ಸೂಚಿಸಿರುವುದರಿಂದ ನಾನು ನನ್ನ ವಿವರಣೆಯನ್ನು ನೀಡಲು ಇಲ್ಲಿಗೆ ಬಂದಿರುವೆ. ತಿರುಳಿಗೆ ಸಂಬಂಧಿಸದೆ ಕೇವಲ ಪದವಿನ್ಯಾಸದ ಇಂಥಾ ವಿಧದ ವಿಷಯಗಳಲ್ಲಿ 'ತತ್ವ'ದ ವಿಷಯವೇನಿರದು ಎಂಬುದಕ್ಕೆ ಎಲ್ಲರ ಒಪ್ಪಿಗೆ ಇದೆ ಎಂದು ನಾನು ಭಾವಿಸುತ್ತೇನೆ. ಹೊಂದಿಕೆಯಾಗುವ ವಿಷಯಗಳಲ್ಲಿ ವಿವಿಧ ಸಂವಿಧಾನಗಳು ಭಾಷೆಯನ್ನು ಯಾವ ರೀತಿ ಉಪಯೋಗಿಸಿವೆ ಎಂದು ಕೇವಲ ದೃಷ್ಟಾಂತವಾಗಿರುತ್ತದೆ. ನಾವು ಉಪಯೋಗಿಸಿರುವ ಭಾಷೆಯಲ್ಲಿ ನಾವು 'ಇಂಥಾ ಸಂವಿಧಾನ' ಎಂಬ ಪದಗಳನ್ನು ಪದೇ ಪದೇ ಉಪಯೋಗ ಮಾಡುವ ಪ್ರಶ್ನೆಗೆ ಸಂಬಂಧಿಸಿದ ಪ್ರಶ್ನೆಯ ಸಂಬಂಧದಲ್ಲಿ ಇಂಥಾ ರೂಢಿ ಸಂಪೂರ್ಣವಾಗಿ ಕಾಪಾಡಲ್ಪಟ್ಟಿರುತ್ತವೆ ಎಂಬುದೇ ನನ್ನ ವಿನಂತಿಯಾಗಿದೆ. ನನ್ನ ಗೆಳೆಯ ಮಿ| ಕಾಮತರು 'ಆಸ್ಟ್ರೇಲಿಯಾ ಮತ್ತು ಇತರ ಕೆಲವು ದೇಶಗಳ ಹಲವಾರು ಸಂವಿಧಾನಗಳನ್ನು ನಾನು ಪರೀಕ್ಷಿಸಿದ್ದೇನೆ ಅವುಗಳಲ್ಲಿ "ಇಂಥಾ ಸಂವಿಧಾನ" ಎಂಬ ಪದಗಳು ಉಪಯೋಗವಾಗಿಲ್ಲ' ಎಂದು ಹೇಳಿರುತ್ತಾರೆ. ನನ್ನನ್ನು ಕ್ಷಮಿಸಿ, ಅವರ ಪರೀಕ್ಷೆ ಐರಿಷ್ ಸಂವಿಧಾನಕ್ಕೆ ವಿಸ್ತಾರವಾಗಿಲ್ಲವೆಂದು ಕಾಣಿಸುತ್ತದೆ. ಒಂದು ವೇಳೆ ಐರಿಷ್ ಸಂವಿಧಾನಕ್ಕೆ ಅವರ ಪರೀಕ್ಷೆ ವಿಸ್ತಾರಗೊಂಡಿದ್ದರೆ ನಾವು ನಮ್ಮ ಕರಡು ಪ್ರತಿ ಸಂವಿಧಾನದಲ್ಲಿ ಉಪಯೋಗಿಸಿದ ಅವರು ಇಂತಹುದೇ ಪದವಿನ್ಯಾಸ ಅದರಲ್ಲೂ ಉಪಯೋಗಮಾಡಲಾಗಿದೆ ಎಂಬುದನ್ನು ಗಮನಿಸುತ್ತಿದ್ದರು. ಆತನ ಸಲುವಾಗಿ ನಾನು ಐರಿಷ್ ಸಂವಿಧಾನದ ವಿಧಿ ೧೯ಕ್ಕೆ ಅವರ ಗಮನ ಸೆಳೆಯುತ್ತಿರುವೆ, ಇದರಲ್ಲಿ ಬರುವ ವಿಧಿ ೨೭ ಉಪಕಲಂ (೪), ವಿಧಿ ೩೨ ಮತ್ತು ವಿಧಿ ೪೬ ಉಪಕಲಂ (೫) ಇವುಗಳಲ್ಲಿ ಎಲ್ಲೆಲ್ಲಿ "ವಿಧಿ" ಎನ್ನುವ ಶಬ್ದ ಬರುತ್ತದೆಯೋ ಅಲ್ಲಲ್ಲಿ ಅದು 'ಇಂಥಾ ಸಂವಿಧಾನ' ಎಂಬ ಪದಗಳಿಂದ ಅನುಸರಿಸಿವೆ.

ಭಾರತ ಸರಕಾರದ ೧೯೩೫ರ ಕಾಯ್ದೆ ಇಂಥಾ ಪದವಿನ್ಯಾಸವನ್ನು ಹೊಂದಿದೆ ಎಂದು ಕಾಮತರಿಗೆ ಹೇಳಬಯಸುವೆ; ನನಗೆ ಈ ಕಾಯಿದೆಯ ಎಲ್ಲಾ ಪರಿಚ್ಛೇದಗಳನ್ನೂ ಪರೀಕ್ಷಿಸಲು ಸಮಯವಿಲ್ಲ. ಕ್ಷಮಿಸಿ, ಆದರೆ ೧೪೨–ಎ ಪರಿಚ್ಛೇದದಲ್ಲಿ ಇಂಥಾ ಪದವಿನ್ಯಾಸ ಉಪಯೋಗಿಸಿದ್ದುದು ನನಗೆ ಕಂಡುಬಂದಿದೆ. ಆದುದರಿಂದ ನನ್ನ ಗೌರವಾನ್ವಿತ ಗೆಳೆಯ ಮಿ| ನಜೀರುದ್ದೀನ್ ಅಹ್ಮದರು ಮಂಡಿಸಿದ ತಿದ್ದುಪಡಿಯ ಮೊದಲನೆಯ ಭಾಗಕ್ಕೆ ಸಂಬಂಧಿಸಿದಂತೆ ನನ್ನ ವಿನಂತಿ ಇಷ್ಟೆ, ನಾವು ನಮ್ಮ ಮನಸ್ಸಿನ ಇಚ್ಛೆಯಂತೆ ಇತರ ದೇಶಗಳ ಸಂವಿಧಾನಗಳು ಒಳಗೊಂಡ ಪದವಿನ್ಯಾಸವನ್ನು ಉಪಯೋಗಿಸಿದ್ದೇವೆ.

ಅದರ ಎರಡನೆ ತಿದ್ದುಪಡಿಗೆ ಸಂಬಂಧಿಸಿದಂತೆ ಹೇಳುವುದಾದರೆ, ನಾವು "ವಿಧಿ" ಎಂಬ ಶಬ್ದವನ್ನು "ಅಥವಾ" ಎಂಬ ಶಬ್ದದ ನಂತರ ಪುನಃ ಪುನಃ ಹೇಳಬಾರದು ಮತ್ತು ಕೇವಲ "ವಿಧಿ ೨ ಅಥವಾ ೩" ಎಂದು ಹೇಳಲೇ ಬಾರದು ಎಂಬುದೇ ನನ್ನ ವಿನಂತಿಯಾಗಿದೆ. ಇಲ್ಲಿಯೂ ಸಹ ನಾವು ಹೆಸರಾಂತ ಸಂವಿಧಾನಗಳನ್ನು ಅನುಸರಿಸಿದ್ದೇವೆ, ಮತ್ತು ಒಂದು ವೇಳೆ ನನ್ನ ಗೆಳೆಯ ಅವುಗಳನ್ನು ಪರೀಕ್ಷಿಸಿದಲ್ಲಿ ಇಂಥ ಪದವಿನ್ಯಾಸ ಬೇರೆ ಕಡೆ ಸಹ ಬರುತ್ತದೆ. ಆತನ ಮಾಹಿತಿಗಾಗಿ, ನಾನು ಆತನನ್ನು ಪರಿಚ್ಛೇದ ೪೯ ಉಪಕಲಂ (೩) ಭಾರತ ಸರಕಾರದ ಕಾಯಿದೆಯನ್ನು ಓದಲು ಹೇಳುತ್ತೇನೆ. ಅಲ್ಲಿ 'ಪ್ಯಾರಾ' ಎಂಬ ಪದ ಉಪಯೋಗಿಸಲಾಗಿದೆ. ಇದು 'ಪ್ಯಾರಾ(ಡಿ) ಅಥವಾ ಪ್ಯಾರಾ (ಈ)' ಎಂದು ಹೇಳುತ್ತದೆಯೋ ಹೊರತು 'ಪ್ಯಾರಾ (ಡಿ) ಅಥವಾ (ಈ)' ಎಂದಲ್ಲ. ಆದ್ದರಿಂದ ಈ ವಿಷಯದ ವಿವಾದದ ವಿಷಯವಾಗಲಾರದು

ಅಥವಾ ತತ್ವದ ಪ್ರಕಾರ ಇದು ಅಭಿಪ್ರಾಯದಲ್ಲಿನ ವಿಷಯ ಭಿನ್ನತೆ ಸಹ ಆಗದು. ಇದೊಂದು ಕೇವಲ ದೃಷ್ಟಾಂತದ ವಿಷಯವಾಗಿರುತ್ತದೆ, ಮತ್ತು ಒಳಗೊಂಡಿದ್ದನ್ನು ಏನಾದರೂ ನಾವು ಮಾಡಿದ್ದೇವೆಯೊ? ಎಂಬ ಪ್ರಶ್ನೆಯನ್ನು ಕೇಳಬಹುದಾಗಿದೆ. ಇಲ್ಲಿ ಪದವಿನ್ಯಾಸ ಉಪಯೋಗಿಸುವ ವಿಷಯದಲ್ಲಿ ನಾವು ಏನಾದರೂ ಮಾಡಿದ್ದರೆ ಅದು ರೂಢಿಗೆ ವಿರುದ್ಧವಾಗಿರುವುದಿಲ್ಲ ಮತ್ತು ಆದ್ದರಿಂದ ಈ ಕರಡಿನಲ್ಲಿ ಇರುವ ಯಾವುದೇ ಕಲಂಗೆ ಯಾವ ಆಕ್ಷೇಪಣೆ ಇರಬಾರದು ಎಂಬುದೇ ನನ್ನ ವಿನಂತಿಯಾಗಿರುತ್ತದೆ.

**ಮಾನ್ಯ ನಜೀರುದ್ದೀನ್ ಅಹ್ಮದ್ :** ಈಗ ನಾಲ್ಕನೆಯ ವಿಧಿಯ ಎರಡನೆಯ ಕಲಂ ಬಗ್ಗೆ ಏನು ಹೇಳುತ್ತೀರಿ? ಕಲಂ ಕರಡನ್ನು (draft) ಸ್ಪಷ್ಟಗೊಳಿಸಲು ಇಲ್ಲಿ 'ಈ ಸಂವಿಧಾನದ್ದು' ಎಂಬ ಶಬ್ದಗಳನ್ನು ಉಪಯೋಗಿಸಲು ಒಂದು ಅಲ್ಪಕಾಲಿನ ಸೂಚನಾ ತಿದ್ದುಪಡಿಯನ್ನು ತರಬೇಕೆಂದು ನಾನು ಯೋಚಿಸುತ್ತಿದ್ದೇನೆ.

**ಮಾನ್ಯ ಉಪಸಭಾಪತಿ** : ಒಂದು ಅಲ್ಪಕಾಲಿನ ತಿದ್ದುಪಡಿಯನ್ನು ಅನುಮೋದಿಸಿ ನಾನು ಒಂದು ಕೆಟ್ಟ ದೃಷ್ಟಾಂತವನ್ನು ಸೃಷ್ಟಿಸಲಾರೆ.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ಇದನ್ನು ನಾನು ಸ್ವೀಕರಿಸಲಾರೆ.

**ಮಾನ್ಯ ಉಪಸಭಾಪತಿ :** ಹಾಗಾದರೆ, ಈ ತಿದ್ದುಪಡಿಗಳನ್ನು ನಾನು ಒಂದರ ನಂತರ ಒಂದರಂತೆ ಸದನದಲ್ಲಿ ಮಂಡಿಸುತ್ತೇನೆ.

(ಮಿ. ನಜೀರುದ್ದೀನ್ ಅಹ್ಮದರ ಎಲ್ಲಾ ತಿದ್ದುಪಡಿಗಳನ್ನು ನಿರಾಕರಿಸಗೊಳಿಸಲಾಯಿತು ಮತ್ತು ವಿಧಿ ನಾಲ್ಕರ ಕಲಂ (೧) ಮತ್ತು (೨) ಸಂವಿಧಾನದ ಭಾಗಗಳಾಗಿ ಉಳಿದವು).

* * * * *

## ವಿಧಿ ೨೮

* **ಮಾನ್ಯ ಉಪಸಭಾಪತಿ :** .............. ಈ ನಂತರದ ಸಂಖ್ಯೆ ೮೩೮ರ ತಿದ್ದುಪಡಿ ಮಿ। ಕಾಮತರ ಹೆಸರಿನಲ್ಲಿದೆ. ಕಾಮತರೆ, ಈ ತಿದ್ದುಪಡಿಯನ್ನು ನೀವು ಮಂಡಿಸುತ್ತೀರಾ?

**ಶ್ರೀ ಹೆಚ್.ವಿ. ಕಾಮತ್ :** ಮಾನ್ಯ ಉಪಸಭಾಪತಿ, ನಾನು " ಸಂವಿಧಾನದ ಭಾಗ ನಾಲ್ಕರಲ್ಲಿನ ಶಿರೋನಾಮೆಯಲ್ಲಿನ 'ನಿರ್ದೇಶಿತ' ಎಂಬ ಶಬ್ದವನ್ನು 'ಮೂಲಭೂತ' ಎಂಬ ಪದದಿಂದ ಬದಲಾಯಿಸಬೇಕು." ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸ್ವಾಮಿ, ಈ ತಿದ್ದುಪಡಿಯನ್ನು ಮಂಡಿಸುವಾಗ ನನ್ನ ಗೌರವಾನ್ವಿತ ಗೆಳೆಯ ಡಾ। ಅಂಬೇಡ್ಕರ್ ಮತ್ತು ಈ ಸದನದ ಗಮನಕ್ಕಾಗಿ ಕೇವಲ ಎರಡು ಕಾರಣಗಳನ್ನು ಮುಂದಿಡಬೇಕೆಂದಿದ್ದೇನೆ...........

**********

\+ **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ** (ಬೊಂಬಾಯಿ : ಸಾಮಾನ್ಯ): ಈ ಎರಡೂ ತಿದ್ದುಪಡಿಗಳನ್ನು ನಾನು ಒಪ್ಪಲಾರೆ, ಕ್ಷಮೆ ಇರಲಿ. ಮಾನ್ಯ ಕಾಮತರ ತಿದ್ದುಪಡಿ ಬದಲಾಯಿಸಿದ ಪದ ವಿನ್ಯಾಸದಲ್ಲಿ

---

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೧೯ನೆಯ ನವೆಂಬರ್, ೧೯೪೮, ಪುಟ ೪೭೪

\+ ಹಿಂದಿನದೇ ಪುಟ ೪೭೬

ಇರುತ್ತದೆ; 'ಮೂಲಭೂತ' ಎಂಬ ಪದ, ಯಾವ ರೀತಿ ಮಾನ್ಯ ಕಾಮತರು, ಹುಡುಕಿದಂತೆ ಈ ಭಾಗದ ಮೊದಲನೆಯ ವಿಧಿಯಲ್ಲಿರುತ್ತದೆ. ಆದ್ದರಿಂದ ಈ ತತ್ವಗಳನ್ನು 'ಮೂಲಭೂತ' ತತ್ವಗಳೆಂದು ತಿಳಿಯಬೇಕೆಂದು ಅವರು ಉದ್ದೇಶಿಸಿದ್ದನ್ನು ಈ ವಿಧಿಯಲ್ಲಿನ ಶಬ್ದಗಳು ತಿಳಿಯಪಡಿಸುತ್ತವೆ. 'ನಿರ್ದೇಶಿತ' (directive) ಎಂಬ ಪದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಈ ಶಬ್ದವನ್ನು ಹಾಗೆಯೇ ಉಳಿಸಿಕೊಳ್ಳುವುದು ಅವಶ್ಯಕ ಮತ್ತು ಮಹತ್ವದ್ದಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ, ಏಕೆಂದರೆ, ಸಂವಿಧಾನದ ಈ ಭಾಗದಲ್ಲಿ ಕಾನೂನನ್ನು ಮಾಡುವಾಗ ಸಂವಿಧಾನ ರಚನಾ ಸಮಿತಿ (Constituent Assembly), ಈಗಾಗಲೇ ನಾನು ಹೇಳಿದಂತೆ ಭವಿಷ್ಯದ ಶಾಸಕಾಂಗ ಮತ್ತು ಭವಿಷ್ಯದ ಕಾರ್ಯಾಂಗಗಳಿಗೆ ಯಾವ ರೀತಿ ತಾವು ಹೊಂದಿರುವ ಅಧಿಕಾರಗಳನ್ನು ಉಪಯೋಗಿಸಬೇಕೆಂಬುದಕ್ಕೆ ಕೆಲವು ನಿರ್ದೇಶನಗಳನ್ನು ನೀಡುತ್ತದೆ. ಒಂದು ವೇಳೆ 'ನಿರ್ದೇಶಿತ' ಎಂಬ ಶಬ್ದವನ್ನು ಇಲ್ಲಿಂದ ತೆಗೆದುಹಾಕಿದರೆ, ಈ ಭಾಗದಲ್ಲಿ ಕಾನೂನು ಮಾಡಲು ರಚಿಸಲಾದ ಸಂವಿಧಾನ ರಚನಾ ಸಮಿತಿ ತನ್ನ ಉದ್ದೇಶದಲ್ಲಿ ಜಯಗಳಿಸುವುದಿಲ್ಲ ಎಂಬ ಅಂಜಿಕೆ ನನಗಿದೆ. ಈಗಾಗಲೇ ಕೆಲವರು ಹೇಳಿದಂತೆ ಸಂವಿಧಾನದ ಈ ಭಾಗದಲ್ಲಿನ ಈ ತತ್ವಗಳು ಕೇವಲ ಮಾನವ ಹಿತಕ್ಕಾಗಿರುವ ಹೇಳಿಕೆಗಳಾಗಿರುವುದಿಲ್ಲ. ಈ ಸಮಿತಿಯ ಉದ್ದೇಶವೇನೆಂದರೆ ಭವಿಷ್ಯದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗ ಈ ಭಾಗದಲ್ಲಿ ಕಾನೂನು ಮಾಡಲು ರಚಿಸಲಾದ ತತ್ವಗಳಿಗೆ ಕೇವಲ ಔಪಚಾರಿಕ ಮರ್ಯಾದೆಯನ್ನು ನೀಡದೆ, ಇವುಗಳ ತಳಹದಿಯ ಮೇಲೆ ದೇಶದ ಆಡಳಿತಕ್ಕೆ ಸಂಬಂಧಿಸಿದ ವಿಷಯದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗದ ಕಾರ್ಯಾಚರಣೆಯನ್ನು ಮಾಡಬೇಕಾಗಿರುತ್ತದೆ. ಆದ್ದರಿಂದ ನಾನು 'ಮೂಲಭೂತ' ಮತ್ತು 'ನಿರ್ದೇಶಿತ' ಎಂಬ ಎರಡೂ ಶಬ್ದಗಳನ್ನು ಉಳಿಸಿಕೊಳ್ಳಲೇಬೇಕೆಂದು ವಿನಂತಿಸಿಕೊಳ್ಳುತ್ತೇನೆ.

(ಕಾಮತರ ತಿದ್ದುಪಡಿಯನ್ನು ನಿರಾಕರಿಸಗೊಳಿಸಲಾಯಿತು)

**ಶ್ರೀ ಹೆಚ್.ವಿ. ಕಾಮತ್ :** ಸ್ವಾಮಿ, ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಸದನದ ಅಪ್ಪಣೆ ಕೇಳುತ್ತಿದ್ದೇನೆ.

ಸಮಿತಿಯ ಅಪ್ಪಣೆ ಪಡೆದ ನಂತರ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಉಪಸಭಾಪತಿ :** ಈಗ ನಾವು ತಿದ್ದುಪಡಿ ಸಂಖ್ಯೆಗಳಾದ ೮೪೧ರಿಂದ ೮೪೬ ತಿದ್ದುಪಡಿಗಳನ್ನು ತೆಗೆದುಕೊಳ್ಳೋಣ. ಇವುಗಳನ್ನು ಮಂಡಿಸುವವರು ಒಂದರ ನಂತರ ಇನ್ನೊಂದರಂತೆ ಅವುಗಳನ್ನು ಮಂಡಿಸಲಿ. ಆನಂತರ ಅವುಗಳ ಬಗ್ಗೆ ಚರ್ಚೆ ನಡೆಯುತ್ತದೆ.

ತಿದ್ದುಪಡಿ ಸಂಖ್ಯೆ ೮೪೧ ನಕಾರಾತ್ಮಕವಾಗಿದೆ, ಆದುದರಿಂದ ಅದು ಕ್ರಮಬದ್ಧವಾಗಿರುವುದಿಲ್ಲ. ತಿದ್ದುಪಡಿ ಸಂಖ್ಯೆ ೮೪೨ನ್ನು ಮಂಡಿಸಿದ ಸದಸ್ಯ ಸದನದಲ್ಲಿ ಇಲ್ಲ. ಆದುದರಿಂದ ಅದು ಬಿದ್ದು ಹೋಗುತ್ತದೆ. ಸಂಖ್ಯೆ ೮೪೩ ರಿಂದ ೮೪೬ರವರೆಗಿನ ತಿದ್ದುಪಡಿಗಳನ್ನು ಮಿ। ನಜೀರುದ್ದೀನ್ ಅಹ್ಮದರೇ, ಮಂಡಿಸಿರಿ.

**ಮಾನ್ಯ ನಜೀರುದ್ದೀನ್ ಅಹ್ಮದ್ :** ನಾನು ೮೪೩, ೮೪೪ ಮತ್ತು ೮೪೬ ತಿದ್ದುಪಡಿಗಳನ್ನು ಮಂಡಿಸುತ್ತೇನೆ. ಆದರೆ ೮೪೫ ತಿದ್ದುಪಡಿಯನ್ನು ಮಂಡಿಸುವುದಿಲ್ಲ.

ಸ್ವಾಮಿ ನಾನು "ವಿಧಿಯ ೨೮ರಲ್ಲಿನ 'ಪರಿಸ್ಥಿತಿ ಅನ್ಯಥಾ ಅವಶ್ಯಕವಾಗಿಸಿದರೆ' ಎಂಬ ಪದಗಳನ್ನು ತೆಗೆದುಹಾಕಲು."

"ವಿಧಿಯ ೨೮ರಲ್ಲಿನ 'ಅವಶ್ಯಕವಾಗಿರು' ಎಂಬ ಶಬ್ದಕ್ಕೆ 'ಸೂಚಿಸುತ್ತದೆ' ಎಂಬ ಶಬ್ದದಿಂದ ಬದಲಿಸಲು "ವಿಧಿಯ ೨೮ರಲ್ಲಿನ "ಇಂತಹ ರಾಜ್ಯ" ಎಂಬ ಶಬ್ದವನ್ನು 'ರಾಜ್ಯ' ಎಂಬ ಶಬ್ದ"ದಿಂದ ಬದಲಿಸಲು ಮಂಡಿಸುತ್ತೇನೆ.

(ಅಹ್ಮದರು ಮಂಡಿಸಿದ ಬಳಿಕ ಭಾಷಣ ಮಾಡಿದರು)

* * * * *

* **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ನಾನು ನನ್ನ ಗೆಳೆಯ ಮಿ। ನಜೀರುದ್ದೀನ್ ಅಹ್ಮದರ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ. ವಿಧಿ ೨೮ರಲ್ಲಿನ 'ಇಂತಹ ರಾಜ್ಯ' ಎಂಬ ಶಬ್ದಗಳನ್ನು ಬೇಕೆಂತಲೇ ಉಪಯೋಗಿಸಲಾಗಿರುತ್ತದೆ. ಈ ಸಂವಿಧಾನದಲ್ಲಿ 'ರಾಜ್ಯ ಎನ್ನುವ ಶಬ್ದ ಎರಡು ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸಲಾಗಿರುತ್ತದೆ. ಇದನ್ನು ಇತ್ತ ಕೇಂದ್ರ ಅತ್ತ ಪ್ರಾಂತವನ್ನು (ಇವೆರಡನ್ನು ಸಂವಿಧಾನದ ಕೆಲಭಾಗಗಳಲ್ಲಿ 'ರಾಜ್ಯ'ವೆಂದು ಕರೆಯಲಾಗಿರುತ್ತದೆ) ಸಮುದಾಯ ಸಂಸ್ಥೆಯಾಗಿ (Collective Entity) ಉಪಯೋಗಿಸಲಾಗಿದೆ. ಇಲ್ಲಿ "ಇಂಥಾ ರಾಜ್ಯ" ಎಂಬ ಪದಗಳನ್ನು ಸಮುದಾಯ ಅರ್ಥದಲ್ಲಿ ಮತ್ತು ವಿತರಣಾತ್ಮಕ ಅರ್ಥಗಳಲ್ಲಿ ಉಪಯೋಗಿಸಲಾಗಿದೆ. ಒಂದು ವೇಳೆ ನನ್ನ ಗೆಳೆಯ ಸಂವಿಧಾನದ ಮೂರನೆಯ ಭಾಗವನ್ನು ನೋಡಿದರೆ, ಅದು ಸಂವಿಧಾನದ ಏಳನೆಯ ನಿಯಮದೊಂದಿಗೆ ಪ್ರಾರಂಭವಾಗುತ್ತದೆ. ಅಲ್ಲಿ 'ರಾಜ್ಯ' ಎಂಬ ಪದವನ್ನು ಯಾವ ಅರ್ಥದಲ್ಲಿ ಉಪಯೋಗಿಸಲಾಗಿದೆ ಎಂಬುದನ್ನು ಆತ ನೋಡಬಹುದು. ಈ ಭಾಗದಲ್ಲಿ ಅನ್ಯಥಾ ಪರಿಸ್ಥಿತಿ ಬೇರೊಂದು ಅವಶ್ಯವೆನಿಸಿದರೆ ಮಾತ್ರ 'ಇಂತಹ ರಾಜ್ಯ' ಎನ್ನುವ ಪದ, ಭಾರತದ ಸರಕಾರ ಮತ್ತು ಪಾರ್ಲಿಮೆಂಟನ್ನು, ಮತ್ತು ಪ್ರತಿಯೊಂದು ರಾಜ್ಯಗಳ ಸರಕಾರ ಮತ್ತು ಅವುಗಳ ಶಾಸಕಾಂಗಗಳನ್ನು ಹಾಗೂ ಎಲ್ಲಾ ಸ್ಥಾನೀಯ ಅಥವಾ ಭಾರತದ ಪ್ರದೇಶದಲ್ಲಿನ ಇತರ ಎಲ್ಲಾ ಅಧಿಕಾರಗಳನ್ನು ಒಳಗೊಂಡಿರುತ್ತದೆ. ಆದುದರಿಂದ, ನಿರ್ದೇಶಿತ ತತ್ವಗಳಿಗೆ ಸಂಬಂಧಿಸಿದಂತೆ, ಒಂದು ಗ್ರಾಮದ ಪಂಚಾಯಿತಿ, ಅಥವಾ ಒಂದು ಜಿಲ್ಲೆ ಅಥವಾ ಸ್ಥಾನೀಯ ಮಂಡಳಿಯು ಸಹ ಒಂದು ರಾಜ್ಯವಾಗಿರುತ್ತದೆ. ಈ ಎರಡು ಪದಗಳ ಅರ್ಥವನ್ನು ಬೇರೆ ಬೇರೆಯಾಗಿ ಸೂಚಿಸಲು ಇವುಗಳನ್ನು 'ರಾಜ್ಯ' ಹಾಗೂ 'ಇಂಥಾ ರಾಜ್ಯ' ಎಂದು ಕೆಲವು ವ್ಯಾಖ್ಯೆಗಳ ಮೂಲಕ ತೋರಿಸಬೇಕಾಗುತ್ತದೆ. ಈ ಎರಡು ಶಬ್ದಗಳ ಭಿನ್ನ ಭಿನ್ನ ವ್ಯಾಖ್ಯೆಗಳಲ್ಲಿನ ಉಪಯೋಗವನ್ನು, ಗೌರವಾನ್ವಿತ ಸದಸ್ಯರುಗಳೇ ಈ ಸಂವಿಧಾನದ ವಿಧಿ ೧೨ರಲ್ಲಿಯೂ ಮಾಡಲಾಗಿದೆ; ಆದುದರಿಂದ ನಾವು ಹೀಗೆ ಹೇಳಿರುತ್ತೇವೆ.'

'ಇಂತಹ ರಾಜ್ಯದಿಂದ ಯಾವ ಬಿರುದನ್ನೂ ಕೊಡಲಾಗುವುದಿಲ್ಲ.'

'ಭಾರತದ ಯಾವ ಪ್ರಜೆಯೂ ವಿದೇಶಿ ಸರಕಾರದಿಂದ ಯಾವ ಬಿರುದನ್ನೂ ಸ್ವೀಕರಿಸಬಾರದು.'

ಇಲ್ಲಿ 'ಇಂತಹ ರಾಜ್ಯ' ಎಂಬ ಶಬ್ದಗಳನ್ನು ನಾವು ಉಪಯೋಗಮಾಡುವುದಿಲ್ಲ. ಆದರೆ ಮೊದಲನೆಯ ಭಾಗದಲ್ಲಿ 'ಇಂತಹ ರಾಜ್ಯ' ಎಂಬ ಪದಗಳನ್ನು ನಾವು ಉಪಯೋಗಿಸಿದ್ದೇವೆ. ಕೇಂದ್ರವಾಗಲೀ ಅಥವಾ ಪ್ರಾಂತಗಳಾಗಲಿ ಯಾವುದೇ ವ್ಯಕ್ತಿಗೆ ಬಿರುದನ್ನು ನೀಡಬಾರದು. ಇದೇ ಈ ಪದಗಳಲ್ಲಿನ ಭಿನ್ನತೆಯಾಗಿರುವುದರಿಂದ, ವಿಧಿ ೨೮ರಲ್ಲಿ, 'ಇಂತಹ ರಾಜ್ಯ' ಎಂಬ ಪದಗಳನ್ನು ಉಳಿಸಿಕೊಂಡಿರುವುದು ಈ ಸಂವಿಧಾನವನ್ನು ಬರೆಯುವಾಗ ನಾವು ಸ್ವೀಕರಿಸಲಾದ ರೂಢಿಗೆ ಅನುಗುಣವಾಗಿರುತ್ತದೆ ಎಂಬುದನ್ನು ಸದನ ಮನಗಾಣುವುದರಲ್ಲಿ ಯಾವ ಸಂಶಯವಿರುವುದಿಲ್ಲ.

**ಮಾನ್ಯ ಉಪಸಭಾಪತಿ :** ಈಗ ನಾನು ಈ ಮೂರು ತಿದ್ದುಪಡಿಗಳನ್ನು ಅಭಿಮತಕ್ಕಾಗಿ ಇಡುತ್ತೇನೆ.

(ಮಾನ್ಯ ನಜೀರುದ್ದೀನ ಅಹ್ಮದರ ಎಲ್ಲಾ ತಿದ್ದುಪಡಿಗಳನ್ನು ನಿರಾಕರಿಸಲಾಯಿತು. ವಿಧಿ ೨೮ನ್ನು ಸಂವಿಧಾನದಲ್ಲಿ ಸೇರಿಸಲಾಯಿತು)

* * * * *

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೧೯ನೆಯ ನವೆಂಬರ್, ೧೯೪೮, ಪುಟ ೪೭೭–೭೮

(ವಿಧಿ ೨೯ ರ ಎಲ್ಲಾ ತಿದ್ದುಪಡಿಗಳನ್ನು ನಕಾರಾತ್ಮಗೊಳಿಸಲಾಯಿತು ಮತ್ತು ವಿಧಿ ೨೯ನ್ನು ಸ್ವೀಕರಿಸಲಾಯಿತು)

* * * * *

## ವಿಧಿ – ೩೦

* **ಮಾನ್ಯ ನಜೀರುದ್ದೀನ್ ಅಹ್ಮದ್ :** ................. ಸ್ವಾಮಿ, ನಾನು,

"ವಿಧಿ ೩೦ರಲ್ಲಿನ 'ಪ್ರಯತ್ನಿಸಬೇಕು' (strive to) ಎಂಬ ಶಬ್ದಗಳನ್ನು ತೆಗೆದುಹಾಕಬೇಕೆಂದು ತಿದ್ದುಪಡಿಯನ್ನು ಮಂಡಿಸುತ್ತೇನೆ.

* * * * *

+ **ಶ್ರೀ ಹೆಚ್. ವಿ. ಕಾಮತ್ :** ಸ್ವಾಮಿ, ನಾನು ಸಂಖ್ಯೆ ೮೭೦ರ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ವಿಧಿ ೩೦ರಲ್ಲಿ 'ರಾಷ್ಟ್ರೀಯ ಜೀವನ' ಎಂಬ ಪದಗಳ ಮುಂದೆ ಬರುವ 'ದಿ' (the) ಎನ್ನುವ ಪದವನ್ನು ತೆಗೆದುಹಾಕಬೇಕು' ಎಂದು ವಿನಂತಿಸಿಕೊಳ್ಳುತ್ತೇನೆ.

ಸ್ವಾಮಿ, ಈ ತಿದ್ದುಪಡಿಯ ಸೂಚನೆಯನ್ನು ನೀಡಲು ನನಗೆ ಅಷ್ಟೊಂದು ಮನಸ್ಸಿರಲಿಲ್ಲ. ಏಕೆಂದರೆ ಇದೊಂದು ಪ್ರಮುಖ ವಿಷಯವಾಗಿರುವುದಿಲ್ಲ. ಆದರೂ 'ದಿ' ಎಂಬ ಪದ ನನ್ನ ಕಿವಿಯ ಮೇಲೆ ಕಠೋರವಾಗಿರುತ್ತದೆ ಮತ್ತು ಕೊನೆಯಲ್ಲಿ ಈ ತಿದ್ದುಪಡಿಯನ್ನು ಕಳುಹಿಸಲು ನಾನು ನಿಶ್ಚಯಿಸಿದೆ. ಭಾಷೆಯ ವಿಷಯಗಳ ಮೇಲೆ ನನ್ನ ಪಂಡಿತ ಮಿತ್ರ ಡಾ। ಅಂಬೇಡ್ಕರರಿಗೆ ಅಥವಾ ಕರಡು ಪ್ರತಿ ಸಿದ್ಧಪಡಿಸುವ ಸಮಿತಿಯ ಅವರ ಇತರ ಸಹೋದ್ಯೋಗಿಗಳಿಗೆ ಬುದ್ಧಿವಾದ ಹೇಳುವಷ್ಟು ನಾನು ದುರಹಂಕಾರಿಯಲ್ಲ, ಆದರೆ ಈ ವಿಷಯದಲ್ಲಿ 'ದಿ' ಎಂಬ ಪದವು ನನ್ನ ಕಿವಿಗಳಿಗೆ ಕಠೋರವಾದರೆ ಅವರ ಕಿವಿಗಳಿಗೂ ಕಠೋರವಾಗಿರುತ್ತದೆ – ಎಂದು ನನ್ನ ನಂಬಿಕೆ ಆಗಿರುತ್ತದೆ, ಮತ್ತು ಇದು ಮಧುರತೆ ಕಾಯಿದೆಯನ್ನು ಉಲ್ಲಂಘಿಸಿರುತ್ತದೆ. ಆದುದರಿಂದ ನಾನು ಈ ಪದವನ್ನು ತೆಗೆದುಹಾಕಲು ಆತನಿಗೆ ವಿನಂತಿಸಿಕೊಳ್ಳುತ್ತೇನೆ.

**ಗೌರವಾನ್ವಿತ ಡಾ। ಬಿ.ಆರ್.ಅಂಬೇಡ್ಕರ್ :** ಈ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ.

**ಮಾನ್ಯ ಉಪಸಭಾಪತಿ :** ಸಂಖ್ಯೆ ೮೭೧ ತಿದ್ದುಪಡಿಯನ್ನು ಮಂಡಿಸಲಾಗಲಿಲ್ಲ.

ಈಗ ಈ ನಿಯಮ ಚರ್ಚೆಗಾಗಿ ಸದನದಲ್ಲಿ ಮಂಡಿಸಲಾಗಿದೆ.

* * * * *

* **ಶ್ರೀ ಮೋಹನಲಾಲ ಗೌತಮ :** ಚರ್ಚೆ ಈಗ ಮುಗಿದು ಹೋಗುತ್ತದೆಯೇ?

**ಮಾನ್ಯ ಉಪಸಭಾಪತಿ :** ಈ ತಿದ್ದುಪಡಿಗಳ ಮೇಲಿನ ಪರ ಹಾಗೂ ವಿರೋಧ ಚರ್ಚೆಗೆ ಈಗಾಗಲೇ ನಾನು ಸಾಕಷ್ಟು ಸಮಯ ನೀಡಿರುತ್ತೇನೆ.

**ಶ್ರೀ ಮೋಹನಲಾಲ ಗೌತಮ :** ದಯವಿಟ್ಟು ನನಗೆ ಮಾತನಾಡಲು ಪರವಾನಗಿ ನೀಡುವಿರಾ?

---

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೧೯ನೆಯ ನವೆಂಬರ್, ೧೯೪೮, ಪುಟ ೪೮೭

+ ಹಿಂದಿನಂತೆ, ಪುಟ ೪೮೭–೮೮

* ಹಿಂದಿನಂತೆ, ಪುಟ ೪೯೩

**ಮಾನ್ಯ ಉಪಸಭಾಪತಿ :** ನಾವು ಚರ್ಚೆಗಾಗಿ ಸಾಕಷ್ಟು ಅಂದರೆ ಸುಮಾರು ಒಂದು ಗಂಟೆ ಕಾಲ ಸಮಯ ವ್ಯಯ ಮಾಡಿದ್ದೇವೆ ಪುನಃ ಹೇಳುತ್ತೇನೆ, ಈಗ ಡಾ। ಅಂಬೇಡ್ಕರರು ಈಗ ಸದನದಲ್ಲಿ ಭಾಷಣ ಮಾಡಲಿ.

* * * * *

** **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿ, ಸಂವಿಧಾನದಲ್ಲಿರುವ ನಿರ್ದೇಶಕ ತತ್ವಗಳನ್ನು (directive principles) ಅನುಷ್ಠಾನದಲ್ಲಿ ತರಲು ಆಸಕ್ತಿ ಉಳ್ಳವರಿಗೆ, ಈ ಸಂವಿಧಾನ ಅವುಗಳನ್ನು ಜಾರಿಯಲ್ಲಿ ತರಲು ಯಾವ ಯಾವ ನಿಜವಾದ ಅವಕಾಶಗಳನ್ನು ನೀಡುತ್ತದೆ ಎಂಬುದಕ್ಕೆ ಸದಸ್ಯರಲ್ಲಿ ತುಂಬಾ ತಪ್ಪು ತಿಳಿವಳಿಕೆ ಇರುವುದನ್ನು ನಾನು ಕಾಣುತ್ತೇನೆ. ಈ ನಿರ್ದೇಶಿತ ತತ್ವಗಳಿರುವ ತಪ್ಪು ತಿಳಿವಳಿಕೆ ಅಥವಾ ಸಾಕಾಗದ ತಿಳಿವಳಿಕೆ ಏಕಿದೆ ಎಂದರೆ ಈ ನನ್ನ ಗೊತ್ತುವಳಿಯ ಬೆಂಬಲಕ್ಕಾಗಿ ಮಾಡಿದ ಭಾಷಣದಲ್ಲಿ ವಿಷಯವನ್ನು ಕುರಿತು ನಾನೇ ಸದನದಲ್ಲಿ ಮಾತನಾಡಲಿಲ್ಲ. ನಾನು ಈ ಸದನಕ್ಕೆ ವಿಷಯವನ್ನು ಒಂದು ಸ್ಪಷ್ಟ ಮಾದರಿಯಲ್ಲಿ ಹೇಳಲು ಬಯಸುತ್ತಿಲ್ಲವೆಂದಲ್ಲ; ಆದರೆ ಆಗಲೇ ನನ್ನ ಭಾಷಣ ತುಂಬಾ ದೊಡ್ಡದಾಗಿತ್ತು ಮತ್ತು ಬೇಸರ ತರುವುದಾಗಿತ್ತು. ಆದುದರಿಂದ ಅದನ್ನು ಹೆಚ್ಚಿಸಿ ಭಾಷಣವನ್ನು ಮತ್ತಷ್ಟು ಬೇಸರ ತರುವ ಹಾಗೆ ಮಾಡಲು ನನ್ನ ಇಚ್ಛೆ ಇರಲಿಲ್ಲ. ಆದರೆ ಈಗ ನಾನು ನಿರ್ದೇಶಿತ ತತ್ವಗಳ ಬಗ್ಗೆ ಸಂವಿಧಾನದ ಯಾವ ಮೂಲಭೂತವಾದ ಸ್ಥಾನ ಕೈಗೊಂಡಿದೆ ಎಂದು ಹೇಳಲು ಈ ಸದನದ ಕೆಲವು ನಿಮಿಷಗಳನ್ನು ತೆಗೆದುಕೊಳ್ಳಲೇಬೇಕಾಗಿದೆ. ಈ ಹಿಂದೆ ಹೇಳಿದಂತೆ, ನಮ್ಮ ಸಂವಿಧಾನದ, ನಮ್ಮ ವ್ಯವಸ್ಥೆಯನ್ನು ಸಂಸದೀಯ ಪ್ರಜಾಪ್ರಭುತ್ವ (Parliamentary Democracy) ವೆಂದು ಕರೆಯುವ ಒಂದು ಸಾಧನವಾಗಿರುತ್ತದೆ. ಸಂಸದೀಯ ಪ್ರಜಾಪ್ರಭುತ್ವವೆಂದರೆ 'ಒಬ್ಬನಿಗೆ ಒಂದು ಓಟು' (One man one vote). ಪ್ರತಿಯೊಂದು ಸರಕಾರ ತನ್ನ ದಿನನಿತ್ಯದ ಕೆಲಸಗಳಲ್ಲಾಗಲೀ ಮತ್ತು ಒಂದು ಖಚಿತ ಅವಧಿಯ ಕೊನೆಗೆ ಯಾವಾಗ ಓಟು ಹಾಕುವವರು ಮತ್ತು ಚುನಾಯಿತ ಸಮುದಾಯಕ್ಕೆ ಸರಕಾರ ತಾನು ಕೆಲಸದ ಮೌಲೀಕರಣಕ್ಕಾಗಿ ಒಂದು ಅವಕಾಶ ನೀಡುವ ಸಂಪ್ರದಾಯವನ್ನು ತನ್ನ ಮುಂದೆ, ಇಟ್ಟುಕೊಂಡಿರಬೇಕು. ರಾಜಕೀಯ ಪ್ರಜಾಪ್ರಭುತ್ವವು ಏಕೆ ನಮ್ಮ ಸಂವಿಧಾನದಲ್ಲಿ ಸ್ಥಾಪಿತವಾಗಿದೆ ಎಂದರೆ, ನಾವು ಹೇಗಾದರೂ ಮಾಡಿ ಯಾವುದಾದರೂ ಒಂದು ನಿರಂತರ ಸರ್ವಾಧಿಕಾರತ್ವ ಅಥವಾ ಯಾವುದೇ ಪ್ರತ್ಯೇಕ ಜನರ ಸಂಸ್ಥಾನವನ್ನು ಸ್ಥಾಪಿಸಲು ಇಚ್ಛಿಸುವುದಿಲ್ಲ. ರಾಜಕೀಯ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ ಮೇಲೆ, ಒಂದು ಆದರ್ಶ ಆರ್ಥಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು ಸಹ ನಮ್ಮ ಆಶೆಯಾಗಿರುತ್ತದೆ. ನಾವು ಜನರಿಗೆ ರಾಜಕೀಯದಲ್ಲಿ ಪ್ರವೇಶಿಸಿ ಅಧಿಕಾರವನ್ನು ಸ್ವಾಧೀನಪಡಿಸಿಕೊಳ್ಳಲು ಇರುವ ಅವಕಾಶನೀಡುವ ಕೇವಲ ಒಂದು ಸಾಧನದಂತೆ ರಾಜಕೀಯ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ನಾವು ಇಚ್ಛಿಸುವುದಿಲ್ಲ. ಯಾರು ಸರಕಾರದ ರಚನೆ ಮಾಡುವರೋ ಅಂಥವರ ಮುಂದೆ ಈ ಸಂವಿಧಾನ ಒಂದು ಆದರ್ಶವನ್ನು ಮುಂದಿಡುತ್ತದೆ; ಆ ಆದರ್ಶವೇ 'ಆರ್ಥಿಕ ಪ್ರಜಾಪ್ರಭುತ್ವ.' ನನಗೆ ತಿಳಿದಷ್ಟು ಮಟ್ಟಿಗೆ ಇದು 'ಒಬ್ಬ ವ್ಯಕ್ತಿ ಒಂದು ಓಟು' ಎಂಬ ಅರ್ಥ ಮಾಡಿಕೊಡುತ್ತದೆ. ಇಲ್ಲಿನ ಪ್ರಶ್ನೆಯೆಂದರೆ ನಾವು ಆರ್ಥಿಕ ಪ್ರಜಾಪ್ರಭುತ್ವವನ್ನು ತರಲು ನಿರ್ದಿಷ್ಟ ಉಪಾಯವೇನಾದರೂ ಇದೆಯೋ ಅಥವಾ ಇಲ್ಲವೋ ಎಂಬುದಾಗಿರುತ್ತದೆ. ಹಲವಾರು ರೀತಿಯಲ್ಲಿ ಆರ್ಥಿಕ ಪ್ರಜಾಪ್ರಭುತ್ವವನ್ನು ತರಬಹುದು; ಸಮಾಜವಾದಿ ರಾಜ್ಯವೇ ಅತ್ಯುತ್ತಮ ವಿಧದ

---

** ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೨೨ನೆಯ ನವೆಂಬರ್, ೧೯೪೮, ಪುಟ ೪೯೪–೯೫

ಆರ್ಥಿಕ ಪ್ರಜಾಪ್ರಭುತ್ವವೆಂದು ನಂಬುವವರೂ ಇದ್ದಾರೆ; ಮತ್ತು ಕಮ್ಯೂನಿಸ್ಟ್ ವಿಚಾರವನ್ನೇ ಅತ್ಯುತ್ತಮ ವಿಧದ ಆರ್ಥಿಕ ಪ್ರಜಾಪ್ರಭುತ್ವವೆನ್ನುವವರೂ ಇದ್ದಾರೆ. ಆರ್ಥಿಕ ಪ್ರಜಾಪ್ರಭುತ್ವ ತರುವ ಹಲವಾರು ದಾರಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ನಾವು ನಿರ್ದೇಶಿತ ತತ್ವಗಳ ವಿಷಯದಲ್ಲಿ ಬೇಕೆಂತಲೆ ಯಾವುದೇ ಒಂದು ನಿಗದಿತ (fixed) ಅಥವಾ ಸ್ಥಾಯಿತ್ವದ ಭಾಷೆಯನ್ನು ಉಪಯೋಗಿಸಿಲ್ಲ. ಆರ್ಥಿಕ ಪ್ರಜಾಪ್ರಭುತ್ವದ ಆದರ್ಶವನ್ನು ನನಸಾಗಿಸುವ ವಿಷಯದಲ್ಲಿ ಜನರಿಗೆ ತಮ್ಮದೇ ಆದ ದಾರಿಯಲ್ಲಿ ಇದಕ್ಕಾಗಿ ಶ್ರಮಿಸಲು ಮತ್ತು ಚುನಾಯಿತ ಸಮುದಾಯಕ್ಕೆ ಇದೊಂದೇ ಆರ್ಥಿಕ ಪ್ರಜಾಪ್ರಭುತ್ವದ ಆದರ್ಶವನ್ನು ಮುಟ್ಟಲು ಇರುವ ದಾರಿ ಎಂದು ನಂಬಿಸಲು ಮತ್ತು ಅವರ ಯಾವ ರೀತಿಯಲ್ಲಿ ಕಾರ್ಯೋನ್ಮುಖರಾಗುತ್ತಾರೋ ಅದೇ ದಾರಿಯಲ್ಲಿ ಅವರಿಗೆ ಕಾರ್ಯೋನ್ಮುಖರಾಗಲು ಅವರಿಗೆ ಸಂಪೂರ್ಣ ಸದವಕಾಶವನ್ನು ನೀಡಲಾಗಿರುತ್ತದೆ.

ಸ್ವಾಮಿ, ಸಂವಿಧಾನದ ಭಾಗ ನಾಲ್ಕರಲ್ಲಿನ ವಿಧಿಗಳ ಭಾಷೆಯನ್ನು ಕರಡುಪ್ರತಿ ಸಿದ್ಧಪಡಿಸುವ ಸಮಿತಿ ಅದು ಯಾವ ರೀತಿ ಅತ್ಯುತ್ತಮವಾಗಿರುತ್ತದೆ ಎಂದಿತೋ ಹಾಗೆಯೇ ಅದನ್ನು ಬಿಡಲಾಗಿದೆ. ಯಾವುದೇ ಒಂದು ವಿಷಯ, ನಿಗದಿತ (fixed) ಮತ್ತು ಸ್ಥಾಯಿತ್ವ (rigid)ಇರಲಾರದ್ದನ್ನು, ನಿಗದಿತ ಹಾಗೂ ಸ್ಥಾಯಿತ್ವದ ವಿಧದಲ್ಲಿ ಇಡುವುದು ಯಾವ ಉಪಯೋಗಕ್ಕೆ ಬರುವುದಿಲ್ಲ; ಈ ವಿಚಾರಗಳು ಮೂಲಭೂತವಾಗಿ ಬದಲಾಯಿಸುತ್ತಾ ಇರುತ್ತವೆ, ಮತ್ತು ಕಾಲ ಹಾಗೂ ಪರಿಸ್ಥಿತಿಗಳಿಗನುಗುಣವಾಗಿ ನಾವು ಇವುಗಳನ್ನು ಬದಲಾಯಿಸುತ್ತಾ ಇರಬೇಕು. ಆದುದರಿಂದ, ನಿರ್ದೇಶಿತ ತತ್ವಗಳಿಗೆ ಯಾವ ಮೌಲ್ಯವಿಲ್ಲವೆಂದು ಹೇಳಿದರೆ ಏನೂ ಪ್ರಯೋಜನವಾಗಲಾರದು. ನನ್ನ ನಿರ್ಣಯದಲ್ಲಿ, ಈ ತತ್ವಗಳು ಬಹಳಷ್ಟು ಮೌಲಿಕವಾಗಿರುತ್ತವೆ. ನಮ್ಮ ಆರ್ಥಿಕ ಆದರ್ಶಕ್ಕೆ ಯಾವ ನಿರ್ದೇಶನ ನೀಡದ ಮತ್ತು ನಮ್ಮ ಸಾಮಾಜಿಕ ವ್ಯವಸ್ಥೆ ಹೀಗಿರಲೇಬೇಕೆಂದು ಹೇಳದ ಕೇವಲ ಒಂದು ಸಂಸದೀಯ ರೀತಿಯ ಸರಕಾರವನ್ನು ಸ್ಥಾಪಿಸಲು ನಾವು ಬಯಸುವುದಿಲ್ಲ; ಆದುದರಿಂದಲೇ ನಾವು ನಮ್ಮ ಸಂವಿಧಾನದಲ್ಲಿ ನಾವು ಬೇಕೆಂತಲೇ ನಿರ್ದೇಶಕ ತತ್ವಗಳನ್ನು ಸೇರಿಸಿದ್ದೇವೆ. ನಿರ್ದೇಶಿತ ತತ್ವಗಳನ್ನು ಏಕೆ ಸಂವಿಧಾನದಲ್ಲಿ ಸೇರಿಸಿದ್ದೇವೆ. ಇದು ನಮಗೆ ತಿಳಿಯದ ವಿಷಯವಾಗಿದೆ ಎಂದು ಮಾನಸಿಕವಾಗಿ ನನ್ನ ಗೆಳೆಯರು ಉದ್ರೇಕಗೊಳ್ಳದಿದ್ದಲ್ಲಿ ನಾನು ಅವರಿಗೆ ಈ ಸಂವಿಧಾನವನ್ನು ರಚಿಸುವಾಗ ನಮ್ಮ ಉದ್ದೇಶಗಳು ಎರಡಿದ್ದವು ಎಂದು ಹೇಳಬಯಸುತ್ತೇನೆ. ಅಂದರೆ, (೧) ರಾಜಕೀಯ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು ಮತ್ತು (೨) ಅರ್ಥಿಕ ಪ್ರಜಾಪ್ರಭುತ್ವವನ್ನು ತರುವುದು ಮತ್ತು ಅಧಿಕಾರದಲ್ಲಿರುವ ಪ್ರತಿಯೊಂದು ಸರಕಾರಕ್ಕೆ ಅದನ್ನು ತರಲು ಶ್ರಮಿಸುವಂತೆ ಮಾಡುವುದಾಗಿರುತ್ತದೆ. ಈ ನನ್ನ ಹೇಳಿಕೆ ಸದನದಲ್ಲಿರುವ ಬಹುತೇಕ ಸದಸ್ಯರುಗಳ ಮನಸ್ಸಿನಲ್ಲಿರುವ ತಪ್ಪು ತಿಳುವಳಿಕೆಯನ್ನು ಮಾಯವಾಗುವಂತೆ ಮಾಡುತ್ತದೆ ಎಂದು ನಾನು ಅಂದುಕೊಂಡಿರುವೆ.

ನನ್ನ ಗೆಳೆಯ ಶ್ರೀ ತ್ಯಾಗಿ "ಶ್ರಮಿಸುವುದು" ಎಂಬ ಶಬ್ದವನ್ನು ಮತ್ತು 'ದಿ' ಪದಗಳನ್ನು ಸಂವಿಧಾನದಿಂದ ತೆಗೆದುಹಾಕಲು ನನ್ನಲ್ಲಿ ವಿನಂತಿಸಿಕೊಂಡಿರುತ್ತಾರೆ. 'ಶ್ರಮಿಸುವುದು' ಎಂಬ ಶಬ್ದವನ್ನು ನಾವು ಇಲ್ಲಿ ಏಕೆ ಉಪಯೋಗಿಸಿದ್ದೇವೆ ಎಂಬುದನ್ನು ಅವರಂತೆ ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ನನಗನಿಸುತ್ತದೆ.

ಈ ಸಂವಿಧಾನದಲ್ಲಿ ಬರುವ "ಶ್ರಮಿಸುವುದು" ಎಂಬ ಪದ ನನ್ನ ಅಭಿಮತದಲ್ಲಿ ಬಹಳ ಮಹತ್ವದ್ದಾಗಿರುತ್ತದೆ. ಈ ಶಬ್ದವನ್ನು ಉಪಯೋಗಿಸುವಲ್ಲಿ ಇದರ ಹಿಂದೆ ಇದ್ದ ನಮ್ಮ ಉದ್ದೇಶವೇನೆಂದರೆ, ಒಂದು ವೇಳೆ ನಿರ್ದೇಶಿತ ತತ್ವಗಳನ್ನು ಅನುಷ್ಠಾನದಲ್ಲಿ ತರುವಲ್ಲಿ ಪರಿಸ್ಥಿತಿಗಳು ಪ್ರತಿಕೂಲವಾಗಿದ್ದರೂ, ಮತ್ತು ಪರಿಸ್ಥಿತಿ ಕಠಿಣ ಹಾಗೂ ಪ್ರತಿಕೂಲವಾಗಿದ್ದರೂ, ಸರಕಾರ ಅವುಗಳನ್ನು ಅನುಷ್ಠಾನದಲ್ಲಿ ತರಲು ಶ್ರಮಿಸಬೇಕು. ಆದುದರಿಂದಲೇ ನಾವು 'ಶ್ರಮಿಸಬೇಕು' ಎಂಬ ಪದವನ್ನು ಉಪಯೋಗಿಸಿದ್ದೇವೆ. ಅನ್ಯಥಾ

ಯಾವುದೇ ಸರಕಾರ ನಾನೇನು ಮಾಡಲಿ ಪರಿಸ್ಥಿತಿಗಳು ತುಂಬಾ ಕೆಟ್ಟಿವೆ, ಮತ್ತು ಹಣಕಾಸಿನ ತೊಂದರೆ ಬಹಳ ಇದೆ ಎಂದು ಹೇಳಲಿಕ್ಕೆ ಬರುತ್ತದೆ. ನನ್ನ ಗೆಳೆಯ 'ಶ್ರಮಿಸಬೇಕು' ಎಂಬ ಪದವನ್ನು ಇಂಥಾ ತುಂಬಾ ಮಹತ್ವದ ಸನ್ನಿವೇಶದಲ್ಲಿ ನೋಡುತ್ತಾರೆಂದು ನಾನು ಭಾವಿಸುತ್ತೇನೆ ಮತ್ತು ಇದನ್ನು ತೆಗೆದುಹಾಕುವುದು ಬಹಳ ತಪ್ಪಾಗುತ್ತದೆ ಎಂದು ಭಾವಿಸುತ್ತೇನೆ.

ಇನ್ನಿತರ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ನಾನು ಅವುಗಳನ್ನು ವಿರೋಧಿಸಬೇಕಾಗುತ್ತದೆ.

**ಮಾನ್ಯ ಉಪಸಭಾಪತಿ :** ಕೇವಲ ಎರಡು ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಅವುಗಳನ್ನು ಅಭಿಮತಕ್ಕಾಗಿ ಇಡುವೆ. ಮೊದಲನೆಯ ತಿದ್ದುಪಡಿ ಸಂಖ್ಯೆ ೮೬೩, ಮತ್ತು ಇದು ಸ್ವರೂಪ ಸೇಥರಿಗೆ ಸಂಬಂಧಿಸಿದೆ.........

ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಶ್ರೀ ಹೆಚ್.ವಿ. ಕಾಮತ್ :** ಸ್ವಾಮಿ, ನನ್ನ ತಿದ್ದುಪಡಿಗಾಗಿ ನಾನು ಒತ್ತಾಯಿಸುತ್ತಿಲ್ಲ.

**ಮಾನ್ಯ ಉಪಸಭಾಪತಿ :** ಎರಡನೆಯ ತಿದ್ದುಪಡಿ ಸಂಖ್ಯೆ ೮೬೭ ಮತ್ತು ಇದು ನಜೀರುದ್ದೀನ್ ಅಹ್ಮದರದ್ದಾಗಿದೆ.

ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ : ಸಾಮಾನ್ಯ): ಸ್ವಾಮಿ, ಕಾಮತರು ತಮ್ಮ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಸದನದ ಅನುಮತಿ ಬೇಕು.

**ಶ್ರೀ ಹುಸೇನ ಇಮಾಮ್ :** ಮಂಡಿಸುವರು ತಿದ್ದುಪಡಿಯನ್ನು ಸ್ವೀಕರಿಸಿದ್ದಾರೆ!

**ಮಾನ್ಯ ಉಪಸಭಾಪತಿ :** ಈ ಸದನ ಅವರಿಗೆ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡುತ್ತದೆ ಏನು?

**ಹಲವಾರು ಗೌರವಾನ್ವಿತ ಸದಸ್ಯರುಗಳು** : ಹೌದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಪರವಾನಗಿ ಕೊಡುವುದಕ್ಕೆ ನಾನು ಆಕ್ಷೇಪಿಸುತ್ತೇನೆ.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಒಂದು ವೇಳೆ ಅವರು ಅದನ್ನು ಹಿಂದಕ್ಕೆ ತೆಗೆದುಕೊಳ್ಳಲು ಬಯಸಿದಲ್ಲಿ ಅವರು ಹಾಗೆ ಮಾಡಲಿ, ನನ್ನ ಅಭ್ಯಂತರವೇನೂ ಇಲ್ಲ.

**ಶ್ರೀ ಹೆಚ್.ವಿ. ಕಾಮತ್ :** ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಬೇಕೆ–ಬೇಡವೆ ಎಂಬುದಕ್ಕೆ ಸದನದಲ್ಲಿ ಸ್ವಲ್ಪ ತಿಕ್ಕಾಟವಿದೆ ಎಂದು ಕಂಡುಬರುತ್ತದೆ. ಒರ್ವ ಗೌರವಾನ್ವಿತ ಸದಸ್ಯರು ಡಾ॥ ಅಂಬೇಡ್ಕರ್ ಇದನ್ನು ಒಪ್ಪಿದ್ದಾರೆಂದು ಭಾವಿಸುತ್ತಾರೆ. ಒಂದು ವೇಳೆ ಅವರು ಇದನ್ನು ಒಪ್ಪಿದಲ್ಲಿ, ಆಗ, ಈ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ.

**ಮಾನ್ಯ ಉಪಸಭಾಪತಿ :** ನೀವು ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಬಯಸುವಿರಾ.

**ಶ್ರೀ ಹೆಚ್. ವಿ. ಕಾಮತ್ :** ಹೌದು.

ತಿದ್ದುಪಡಿಯನ್ನು ಸಭೆಯ ಅನುಮತಿಯಿಂದ ಹಿಂತೆಗೆದುಕೊಳ್ಳಲಾಯಿತು.

ವಿಧಿ ೩೦ನ್ನು ಸಂವಿಧಾನದಲ್ಲಿ ಸೇರಸಲಾಯಿತು.

* * * * *

## ವಿಧಿ ೩೦–ಎ

* **ಮಾನ್ಯ ಉಪಸಭಾಪತಿ** (ಡಾ। ಹೆಚ್. ಸಿ. ಮುಖರ್ಜಿ): ........... ಈಗ ನಾವು ಹೊಸ ವಿಧಿ ೩೦–ಎ ಮೇಲೆ ವಿಚಾರ ವಿನಿಮಯವನ್ನು ಮುಂದುವರಿಸೋಣ. ಸಂಖ್ಯೆ ೮೭೨ ತಿದ್ದುಪಡಿಯ ಮೇಲೆ ಯಾರಾದರೂ ಮಾತನಾಡಲು ಇಚ್ಚಿಸುವರೋ?

+ **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್** (ಬೊಂಬಾಯಿ : ಸಾಮಾನ್ಯ): ಸ್ವಾಮಿ, ಈ ತಿದ್ದುಪಡಿ ಯಾವ ವಿಷಯಕ್ಕೆ ಸಂಬಂಧಿಸಿದೆ ಎಂಬುದು ನನಗೆ ಖಚಿತವಾಗಿ ಗೊತ್ತಿಲ್ಲ. ಆದರೆ ಒಂದು ವೇಳೆ ಈ ವಿಷಯ ಪಾನ ನಿರೋಧಕ್ಕೆ ಸಂಬಂಧಿಸಿದ್ದರೆ ..............

**ಮಾನ್ಯ ಉಪಸಭಾಪತಿ :** ಹೌದು

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಹಾಗಿದ್ದಲ್ಲಿ ವಿಧಿ ೩೮ಕ್ಕೆ ಒಂದು ತಿದ್ದುಪಡಿ ಸೂಚಿಸಬೇಕೆಂದು ಮತ್ತು ನಾನು ತಿದ್ದುಪಡಿಯನ್ನು ಒಪ್ಪಲು ಪ್ರಸ್ತಾಪಿಸಬೇಕೆಂದು ನನ್ನ ಮತ್ತು ತ್ಯಾಗಿಯವರ ಮಧ್ಯ ಈಗಾಗಲೇ ಒಪ್ಪಂದವಾಗಿದೆ. ಆದ್ದರಿಂದ, ಈ ವಿಷಯವನ್ನು ವಿಧಿ ೩೮ರ ಸಮಾಲೋಚನೆ ಬರುವವರೆಗೂ ಮುಂದೂಡಬಹುದು.

**ಮಾನ್ಯ ಉಪಸಭಾಪತಿ :** ಹಾಗಿದ್ದಲ್ಲಿ ನಾವು ಮುಂದಿನ ಸಂಖ್ಯೆ ೮೭೩ ತಿದ್ದುಪಡಿಗೆ ಸಾಗೋಣ.

* * * * *

++ **ಮಾನ್ಯ ಉಪಸಭಾಪತಿ :** ಈಗಾಗಲೇ ಈ (ಸಂಖ್ಯೆ ೮೭೪) ತಿದ್ದುಪಡಿಯನ್ನು ವಿಧಿವತ್ತಾಗಿ ಮಂಡಿಸಲಾಗಿದೆಯೋ ಇಲ್ಲವೋ ನನಗೆ ಗೊತ್ತಾಗಲಿಲ್ಲ.

**ಶ್ರೀ ರಾಜ ಬಹದ್ದೂರ್ :** ನಾನು ಈ ತಿದ್ದುಪಡಿಯನ್ನು ವಿಧಿವತ್ತಾಗಿ ಮಂಡಿಸಿಲ್ಲ. ಈ ಪ್ರಶ್ನೆಯ ಮೇಲೆ ಸದನದ ಗಮನ ಸೆಳೆಯಲು ನಾನೇ ಇದರ ಕೆಲವು ಮಾತುಗಳನ್ನು ಆಡಿದ್ದೆ, ಅಷ್ಟೆ.

**ಶ್ರೀ ಹೆಚ್. ವಿ. ಕಾಮತ್**(ಸಿ.ಪಿ. ಮತ್ತು ಬಿರಾರ್ : ಸಾಮಾನ್ಯ) ............ ಡಾ। ಅಂಬೇಡ್ಕರರ ಗೊತ್ತುವಳಿಯ ಮೇಲೆ ಮಾತನಾಡುವಾಗ ಹೇಳಿದ ವಿಷಯವನ್ನೇ ಮತ್ತೆ ನಾನು ಹೇಳಬಯಸುವುದಿಲ್ಲ. ಎಲ್ಲಿ ಬಂಡವಾಳಶಾಹಿ ........... ಪ್ರಜಾಪ್ರಭುತ್ವ ಹೊಂದಿದ ಯೂರೋಪ್ ಮತ್ತು ಅಮೆರಿಕ ಮತ್ತು ಎಲ್ಲಿ ಕೇಂದ್ರೀಕೃತ ಸಮಾಜವಾದ ಪ್ರತಿರೂಪವೆನಿಸಿದ ಸೋವಿಯತ್ ಒಕ್ಕೂಟ ಮನುಕುಲಕ್ಕೆ ಶಾಂತಿ, ಸಂತೋಷ ಮತ್ತು ಸಮೃದ್ಧಿಯನ್ನು ತರುವಲ್ಲಿ ವಿಫಲವಾಗಿಯೋ, ನಾನು, ಭಾರತದಲ್ಲಿ ಒಂದು ಹೊಸ ರಾಜಕೀಯ ಮತ್ತು ಆರ್ಥಿಕ ಮಾದರಿಯನ್ನು ರಚಿಸಲು ಮತ್ತು ಮಹಾತ್ಮಗಾಂಧಿ ಕನಸು ಕಂಡ ಪಂಚಾಯತ್ ರಾಜ್ಯವನ್ನು ನನಸಾಗಿಸಲು ಸಮರ್ಥರಾಗಬಹುದು; ಮತ್ತು ಇಂಥಾ ವಿಕೇಂದ್ರೀಕರಣದ ಸಮಾಜವಾದದ ಮೂಲಕ ಮನುಕುಲವನ್ನೂ ಮತ್ತು ಜಗತ್ತನ್ನೂ ಅದರ ಶಾಂತಿ ಮತ್ತು ಸಂತೋಷದ ಉದ್ದೇಶಗಳಿಗೆ ನಾವು ಕೊಂಡೊಯ್ಯಬಹುದು.

ನಾನು, ಆದ್ದರಿಂದ, ಈ ತಿದ್ದುಪಡಿಯನ್ನು ಮಂಡಿಸಲು ವಿಧಿವತ್ತಾಗಿ ನಿಮ್ಮ ಅಪ್ಪಣೆಯನ್ನು ಕೇಳುತ್ತೇನೆ

---

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೧೯ನೆಯ ನವೆಂಬರ್, ೧೯೪೮, ಪುಟ ೪೯೫

+ ಮೇಲಿನಂತೆ, ೨೨ನೆಯ ನವೆಂಬರ್ ೧೯೪೮, ಪುಟ ೫೦೧

++ ಮೇಲಿನಂತೆ, ಪುಟ ೫೦೧

ಮತ್ತು ಈ ನಿಯಮದ ಉಳಿದ ತಿದ್ದುಪಡಿಗಳು ಬರುವ ತನಕ ಹಾಗೆಯೇ ಇದನ್ನು ಹಿಡಿದುಕೊಂಡಿರಬೇಕೆಂದು ವೈಯಕ್ತಿಕವಾಗಿ ವಿನಂತಿಸಿಕೊಳ್ಳುತ್ತೇನೆ. ನನ್ನ ಈ ಕೆಳಗಿನ ತಿದ್ದುಪಡಿಯನ್ನು ನಾನು ಓದುತ್ತೇನೆ:

"ವಿಧಿ ೩೦ರ ನಂತರ ಈ ಕೆಳಗಿನ ಹೊಸ ವಿಧಿಯನ್ನು ಸೇರಿಸಬೇಕು –

"೩೦–ಎ, ಗ್ರಾಮಪಂಚಾಯತಿಗಳನ್ನು ಅಂತಿಮವಾಗಿ ಆಡಳಿತದ ಮೂಲ (basic) ಘಟಕಗಳಂತೆ ಸರಿಯಾಗಿ ಬೆಳೆಯುವುದನ್ನು ಪ್ರೋತ್ಸಾಹಿಸಲು ಸರಕಾರ ಶ್ರಮಿಸಬೇಕು."

**ಮಾನ್ಯ ಉಪಸಭಾಪತಿ :** ಈ ತಿದ್ದುಪಡಿಯ ಮೇಲೆ ಡಾ| ಅಂಬೇಡ್ಕರರು ಏನಾದರೂ ಹೇಳಲು ಇಚ್ಛಿಸುವರೋ?

**ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್ :** ಈ ವಿಷಯವನ್ನು ಹಾಗೇ ಇಟ್ಟಿರಿ ಎಂದು ಮಂಡಿಸುತ್ತೇನೆ.

**ಮಾನ್ಯ ಉಪಸಭಾಪತಿ :** ಹೊಸ ನಿಯಮ ೩೧–ಎ ಯನ್ನು ಸೇರಿಸಲು ಒಂದು ತಿದ್ದುಪಡಿ ಇರುತ್ತದೆ ಮತ್ತು ಇದರ ಸಂಖ್ಯೆ ಪಟ್ಟಿಯಲ್ಲಿ ೯೨೭ ಆಗಿರುತ್ತದೆ. ಹಾಗೂ ಇದು ಶ್ರೀ ಕೆ. ಸಂತಾನಂ ಅವರ ಹೆಸರಿನಲ್ಲಿರುತ್ತದೆ. ಇದನ್ನು ಮತ್ತು ಈ ತಿದ್ದುಪಡಿ ಎರಡನ್ನು ಸೇರಿಸಿ ಚರ್ಚೆಗೆ ತೆಗೆದುಕೊಳ್ಳಬಹುದಾಗಿದೆ. ಈ ರೀತಿ ಮಾಡುವುದು ಈ ಸದನದ ಆಶಯವಾಗಿದೆಯೋ?

**ಗೌರವಾನ್ವಿತ ಸದಸ್ಯರು :** ಹೌದು.

* * * * *

## ವಿಧಿ – ೩೧

* **ಮಾನ್ಯ ಉಪಸಭಾಪತಿ :** ಈಗ ಸದನ ವಿಧಿ–೩೧ನ್ನು ಚರ್ಚೆಗೆ ತೆಗೆದುಕೊಳ್ಳುತ್ತದೆ.

**ಮಾನ್ಯ ನಜೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಂ): ಸ್ವಾಮಿ, ನಾನು "ವಿಧಿ ೩೧ರ ಕಲಂ (i) ರಲ್ಲಿನ 'ಗಂಡಸರು ಮತ್ತು ಹೆಂಗಸರು ಸಮಾನವಾಗಿ' ಎಂಬ ಶಬ್ದಗಳನ್ನು ಹೊಡೆದುಹಾಕಲು" ತಿದ್ದುಪಡಿಯನ್ನು ಮಂಡಿಸಲು ವಿನಂತಿಸುತ್ತೇನೆ.

* * * * *

**ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್** : ಸ್ವಾಮಿ, ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

* * * * *

** **ಶ್ರೀ ಎಸ್. ವಿ. ಕೃಷ್ಣಮೂರ್ತಿ ರಾವ್(ಮೈಸೂರು) :** ಸ್ವಾಮಿ, ನಾನು "ವಿಧಿ ೩೧ರ ಕಲಂ (ಡ)ರಲ್ಲಿನ 'ಇಂತಹ ಶಕ್ತಿ ಮತ್ತು ಆರೋಗ್ಯ' ಎಂಬ ಶಬ್ದಗಳನ್ನು 'ಇಂತಹ ಆರೋಗ್ಯ ಮತ್ತು ಶಕ್ತಿ' ಎಂಬ ಶಬ್ದಗಳಿಂದ ಬದಲಾಯಿಸುವ" ತಿದ್ದುಪಡಿಯನ್ನು ಮಂಡಿಸುತ್ತೇನೆ.

---

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೨೨ನೆಯ ನವೆಂಬರ್, ೧೯೪೮, ಪುಟ ೫೦೪

** ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೨೨ನೆಯ ನವೆಂಬರ್, ೧೯೪೮, ಪುಟ ೫೦೪

ಪದವಿನ್ಯಾಸದ ಪುನರ್‌ವ್ಯವಸ್ಥೆಗಾಗಿ ಮಾತ್ರ ನನ್ನ ತಿದ್ದುಪಡಿ ಇರುತ್ತದೆ. ಇದಕ್ಕೆ ಇರುವ ಒಂದೇ ಸಮರ್ಥನೆ ಎಂದರೆ ಆರೋಗ್ಯದಿಂದ ಶಕ್ತಿ ಬರುತ್ತದೆ ಮತ್ತು ಈ ಪದವಿನ್ಯಾಸ ಉತ್ತಮವಾಗಿರುತ್ತದೆ. ಸ್ವಾಮಿ, ನಾನು ಇದನ್ನು ಮಂಡಿಸುತ್ತೇನೆ.

* * * * *

+ **ಶ್ರೀ ಬ್ರಜೇಶ್ವರ ಪ್ರಸಾದ್** (ಬಿಹಾರ : ಸಾಮಾನ್ಯ): ಸ್ವಾಮಿ ನಾನು ಮಾತನಾಡಲೇ?

**ಮಾನ್ಯ ಉಪಸಭಾಪತಿ** : ನನ್ನನ್ನು ಕ್ಷಮಿಸಿರಿ, ಈಗಾಗಲೇ ಸಾಕಷ್ಟು ಚರ್ಚೆ ಆಗಿರುತ್ತದೆ.

**ಗೌರವಾನ್ವಿತ ಡಾ। ಅಂಬೇಡ್ಕರ್** : ಸ್ವಾಮಿ, ಮಿ. ಉಪಸಭಾಪತಿ, ಈ ವಿಧಿಗೆ ಸಂಬಂಧಿಸಿದಂತೆ ಹಲವಾರು ತಿದ್ದುಪಡಿಗಳನ್ನು ಮಂಡಿಸಲಾಗಿದೆ, ಆದರೆ, ಅವುಗಳಲ್ಲಿ ಕೇವಲ ನಾಲ್ಕು ತಿದ್ದುಪಡಿಗಳು ನಮ್ಮೆಲ್ಲರ ಅವಗಾಹನೆಯಾಗಿ ಉಳಿಯುತ್ತವೆ. ಮೊದಲಲ್ಲಿ ನಾನು ಮಿ। ಕೃಷ್ಣಮೂರ್ತಿರಾವ್‌ರ ತಿದ್ದುಪಡಿಯನ್ನು ತೆಗೆದುಕೊಳ್ಳುತ್ತೇನೆ. ಇದೊಂದು ಕೇವಲ ಶಾಬ್ದಿಕ ತಿದ್ದುಪಡಿಯಾಗಿರುವುದರಿಂದ ಈ ತಿದ್ದುಪಡಿಯನ್ನು ಒಪ್ಪಲು ತಯಾರಿದ್ದೇನೆಂದು ನಾನು ನೇರವಾಗಿ ಹೇಳುತ್ತಿದ್ದೇನೆ.

ಅನಂತರ ಉಳಿಯುವುದು ನನ್ನ ಗೆಳೆಯ ಪ್ರೊಫೆಸರ್ ಕೆ.ಟಿ. ಶಹಾ ಮಂಡಿಸಿದ ಮೂರು ತಿದ್ದುಪಡಿಗಳು. ಅವರ ಮೊದಲನೆಯ ತಿದ್ದುಪಡಿ 'ಇಂಥಾ ನಾಗರಿಕರು' ಎಂಬ ಶಬ್ದಗಳನ್ನು 'ಪ್ರತಿಯೊಬ್ಬ ನಾಗರಿಕ' ಎಂಬ ಶಬ್ದಗಳಿಂದ ಬದಲಾಯಿಸುವುದಾಗಿರುತ್ತದೆ. ಈಗ ಒಂದು ವೇಳೆ ಇದೊಂದೇ ತಿದ್ದುಪಡಿ ಅವರು ಮಂಡಿಸುತ್ತಿದ್ದಲ್ಲಿ ನನಗೆ ಅವರ ತಿದ್ದುಪಡಿ ಸ್ವೀಕರಿಸುವುದು ಬಹಳಷ್ಟು ತೊಂದರೆಯಾಗುತ್ತಿರಲಿಲ್ಲ; ಆದರೆ ಅವರು 'ಸ್ತ್ರೀ ಮತ್ತು ಪುರುಷರು ಸಮಾನವಾಗಿ' ಎಂಬ ಶಬ್ದಗಳನ್ನು ತೆಗೆದುಹಾಕಬೇಕೆನ್ನುತ್ತಾರೆ. ಇದಕ್ಕೆ ನನ್ನ ಬಹಳಷ್ಟು ಆಕ್ಷೇಪಣೆ ಇರುತ್ತದೆ. ಆದ್ದರಿಂದ, ಈ ಪ್ರತ್ಯೇಕ ತಿದ್ದುಪಡಿಗೆ ನನ್ನನ್ನು ಒಪ್ಪಿಸಲು ಅವರು ಒತ್ತಾಯ ಮಾಡಬಾರದೆಂದು ಕೇಳುತ್ತೇನೆ. ಮತ್ತು ಇದು ಈ ಸಂವಿಧಾನ ಸದನದಲ್ಲಿ ಎಲ್ಲರ ಗಮನಕ್ಕೆ ಬಂದು ಪುನಃ ಕರಡುಪ್ರತಿ ತಯಾರು ಮಾಡುವ ಸಮಿತಿಯ ಮುಂದೆ ಅದರಲ್ಲಿನ ಶಬ್ದಗಳ ಬದಲಾವಣೆಗೆ ಗಮನಕ್ಕೆ ತಂದಾಗ, ಆಗ ನಾನು ಅವರಲ್ಲಿನ ಅನಿಸಿಕೆಗಳನ್ನು ಸಂಬಂಧಿಸಿದ ನಿಯಮದಲ್ಲಿ ಸೇರಿಸಿಕೊಳ್ಳುವೆ ಎಂದು ಆಶ್ವಾಸನೆ ನೀಡುವೆ. ಯಾಕೆಂದರೆ 'ಇಂಥಾ ನಾಗರಿಕರು' ಎನ್ನುವ ಪದಗಳಿಗಿಂತಲೂ 'ಪ್ರತಿಯೊಬ್ಬ ನಾಗರಿಕ' ಎನ್ನುವ ಪದವಿನ್ಯಾಸ ಉತ್ತಮವಾಗಿದೆ ಎಂದು ನನಗೂ ಅನ್ನಿಸುತ್ತದೆ.

ಪ್ರೊ॥ ಶಹಾರ ಇತರ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಉದಾಹರಣೆಗೆ, ವಿಧಿ ೩೧ರ ಉಪ ಕಲಂ (ii) ಮತ್ತು (iii) ಗಳನ್ನು ಅವರು, ತನ್ನ ಕಲಮುಗಳಿಂದ ಬದಲಾಯಿಸುವಿಕೆಗೆ ಸಂಬಂಧ ಹೇಳುವುದಾದರೆ, ಒಂದು ವೇಳೆ, ಅವರು ತನ್ನ ಕಲಮುಗಳನ್ನು ಈಗಿರುವ ಭಾಷೆಯಲ್ಲಿ ಈ ವಿಧಿ ಉಪ–ಕಲಮುಗಳಿಗೆ ಬದಲಾಯಿಸಲು ಸಾಧ್ಯವಿಲ್ಲ ಎಂಬುದು ನನಗೆ ಗೊತ್ತಿದೆ ಎಂದು ಹೇಳಿದ್ದಾರೆ, ನಾನು ಅವುಗಳನ್ನು ತಿದ್ದುಪಡಿಯಲ್ಲಿ ಒಪ್ಪಬಹುದಾಗಿತ್ತು. ಎಲ್ಲಿಯವರೆಗೆ ನಾನು ವಿಚಾರ ಮಾಡಬಹುದೋ ಅಲ್ಲಿಯವರೆಗೆ ನಾವು ಕರಡು ಪ್ರತಿಯಲ್ಲಿ ಉಪಯೋಗಿಸಿದ ಭಾಷೆಗೆ ವ್ಯಾಪಕವಾದ ಅರ್ಥವನ್ನು ಕೊಡುವಂತಹದ್ದಾಗಿರುತ್ತದೆ ಮತ್ತು ಇದು ಪ್ರೊಫೆಸರ್ ಶಹಾರ ಪ್ರತ್ಯೇಕ ಪ್ರಸ್ತಾವನೆಗಳನ್ನು ಸಹ ಒಳಗೊಂಡಿರುತ್ತದೆ. ಆದ್ದರಿಂದ, ನಾನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಬೇಕೆಂತಲೇ ಸಾರ್ವತ್ರಿಕ ಭಾಷೆಯನ್ನು ಉಪಯೋಗ ಮಾಡಿ ಈ ವಿಧಿಯ ಉಪ–ಕಲಮುಗಳನ್ನು ತಯಾರಿಸಿರುವೆ. ಆದುದರಿಂದ ಇವುಗಳನ್ನು

---

\+ ಮೇಲಿನಂತೆ, ಪುಟ ೫೧೩

ಅವರ ಮಿತಿಯುಳ್ಳ ಪ್ರತ್ಯೇಕ ಕಲಮಿನಿಂದ ಬದಲಾಯಿಸುವ ಅವಶ್ಯಕವೆನಿಸುವುದಿಲ್ಲ.

**ಮಾನ್ಯ ಉಪಸಭಾಪತಿ :** ಈಗ ನಾನು ಈ ತಿದ್ದುಪಡಿಗಳನ್ನು ಅಭಿಮತಕ್ಕಾಗಿ ಒಂದರ ನಂತರ ಒಂದರಂತೆ ಇಡುತ್ತೇನೆ.

* * * * *

(ಒಟ್ಟಿನಲ್ಲಿ ಎರಡು ತಿದ್ದುಪಡಿಗಳನ್ನು ನಿರಾಕರಿಸಲಾಯಿತು. ಒಂದನ್ನು ಕೈಬಿಡಲಾಯಿತು ಮಿ॥ ಕೃಷ್ಣಮೂರ್ತಿಯವರ ಒಂದೇ ಒಂದು ತಿದ್ದುಪಡಿಯನ್ನು ಒಪ್ಪಿಕೊಳ್ಳಲಾಯಿತು ಮತ್ತು ಸ್ವೀಕರಿಸಲಾಯಿತು. ಆದ್ದರಿಂದ ವಿಧಿ ೩೧ನ್ನು ತಿದ್ದುಪಡಿ ಮಾಡಿ ಅದನ್ನು ಸಂವಿಧಾನಕ್ಕೆ ಸೇರಿಸಲಾಯಿತು).

* * * * *

## ವಿಧಿ ೩೧–ಎ

* **ಮಾನ್ಯ ಉಪಸಭಾಪತಿ :** ಮಿ. ಸಂತಾನಂರವರು ತಿದ್ದುಪಡಿಯನ್ನು ಮಂಡನೆ ಮಾಡಲಿ.

**ಗೌರವಾನ್ವಿತ ಶ್ರೀ ಕೆ. ಸಂತಾನಂ :** ಸ್ವಾಮಿ ನಾನು ವಿಧಿ ೩೧ರ ನಂತರ ಈ ಕೆಳಗಿನ ಹೊಸ ವಿಧಿಯನ್ನು ಸೇರಿಸಬೇಕು.

"೩೧–ಎ ಸರಕಾರ, ಗ್ರಾಮ ಪಂಚಾಯಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳಬೇಕು ಮತ್ತು ಸ್ವರಾಜ್ಯದ (Self-Government) ಘಟಕಗಳಂತೆ ಕಾರ್ಯಕೈಗೊಳ್ಳಲು ಅವುಗಳಿಗೆ ಅವಶ್ಯವಿರುವ ಎಲ್ಲಾ ಸಾಮರ್ಥ್ಯಗಳನ್ನು ಮತ್ತು ಅಧಿಕಾರವನ್ನು ನೀಡಬೇಕು" ಎಂಬ ತಿದ್ದುಪಡಿಯನ್ನು ಮಂಡಿಸಲು ವಿನಂತಿಸಿಕೊಳ್ಳುತ್ತೇನೆ.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ನಾನು ತಿದ್ದುಪಡಿಯನ್ನು ಒಪ್ಪುತ್ತೇನೆ.

* * * * *

\+ **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ನಾನು ಸಂತಾನಂರವರ ತಿದ್ದುಪಡಿಯನ್ನು ಒಪ್ಪುತ್ತಿರುವುದುರಿಂದ, ಇದರ ಬಗ್ಗೆ ಹೆಚ್ಚಿನದು ಏನನ್ನೂ ಹೇಳಲಾರೆ.

(ಒಬ್ಬ ಗೌರವಾನ್ವಿತ ಸದಸ್ಯ ಮಾತನಾಡಲು ಎದ್ದು ನಿಲ್ಲುತ್ತಾರೆ)

**ಮಾನ್ಯ ಉಪಸಭಾಪತಿ :** ಈ ವಿಷಯದಲ್ಲಿ ನನ್ನ ನಿರ್ಣಯವೇ ಕೊನೆಯ ಮಾತಾಗಿರುತ್ತದೆ. ಮಿ। ಸಂತಾನಂ ಮಂಡಿಸಿದ ಗೊತ್ತುವಳಿಯನ್ನು ಯಾರು ವಿರೋಧಿಸುವುದು ನನಗೆ ಕಂಡುಬಂದಿಲ್ಲ. ಇದನ್ನು ಹೊಗಳುವ ರೀತಿ ಬೇರೆ ಬೇರೆಯಾಗಿರಬಹುದು, ಆದರೆ ನಿಜವಾಗಿ ಮತ್ತು ಮೂಲಭೂತವಾಗಿ ಸದಸ್ಯರ ಎಲ್ಲಾ ಭಾಷಣಗಳು ಈ ತಿದ್ದುಪಡಿಯನ್ನು ಹೊಗಳುವಂಥಹದಾಗಿರುತ್ತವೆ.

ಗೊತ್ತುವಳಿಯನ್ನು ಸ್ವೀಕರಿಸಲಾಯಿತು.

ವಿಧಿ ೩೧–ಎ ನ್ನು ಸಂವಿಧಾನಕ್ಕೆ ಸೇರಿಸಲಾಯಿತು.

* * * * *

---

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೨೨ನೆಯ ನವೆಂಬರ್ ೧೯೪೮, ಪುಟ ೫೧೮–೧೯

\+ ಮೇಲಿನಂತೆ ಪುಟ ೫೨೭

## ವಿಧಿ – ೩೨

* **ಶ್ರೀ ಶಾಮನಂದನ ಸಹಾಯ್** (ಬಿಹಾರ : ಸಾಮಾನ್ಯ) :ಸ್ವಾಮಿ, ನಾನು ನಿಮ್ಮ ಪರವಾನಗಿ ಪಡೆದು ಸಂಖ್ಯೆ ೯೩೩ ಮತ್ತು ೯೩೪ ತಿದ್ದುಪಡಿಗಳನ್ನು ಏಕಕಾಲದಲ್ಲಿಯೇ ಮಂಡಿಸುತ್ತೇನೆ.

"(೧) ವಿಧಿ ೩೨ರಲ್ಲಿ ಉಪಯೋಗಿಸಿದ "ಶಿಕ್ಷಣ" ಎಂಬ ಪದದ ನಂತರ ಒಂದು ಅಲ್ಪವಿರಾಮವಿತ್ತು ನಂತರ "ವೈದ್ಯಕೀಯ ನೆರವಿಗೆ" ಎಂಬ ಶಬ್ದಗಳನ್ನು ಸೇರಿಸಬೇಕು ಮತ್ತು ..........

(೨) 'ನ್ಯಾಯವಲ್ಲದ ಬೇಡಿಕೆ' ಎಂಬ ಶಬ್ದಗಳನ್ನು ಸೇರಿ 'ಯೋಗ್ಯವಾದ ಪರಿಹಾರ' ಎಂಬ ಪದಗಳಿಂದ ಬದಲಾಯಿಸಬೇಕು."

* * * * *

+ **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** (ಬೊಂಬಾಯಿ : ಸಾಮಾನ್ಯ): ಸ್ವಾಮಿ, ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

**ಮಾನ್ಯ ಉಪಸಭಾಪತಿ :** (ಡಾ। ಹೆಚ್. ಸಿ. ಮುಖರ್ಜಿ): ಈ ತಿದ್ದುಪಡಿಗಳನ್ನು ಮತಕ್ಕಾಗಿ ಇಡುತ್ತೇನೆ.

(ತಿದ್ದುಪಡಿ ಸಂಖ್ಯೆಗಳಾದ ೯೩೩ ಮತ್ತು ೯೩೪ ಹಾಗೂ ಅನಂತರ ತಿದ್ದುಪಡಿಸಿದ ಸಂಖ್ಯೆ ೯೩೬ಗಳನ್ನು ನಿರಾಕರಿಸಲಾಯಿತು

* * * * *

## ವಿಧಿ ೩೪

++ **ಮಾನ್ಯ ಉಪಸಭಾಪತಿ :** ಮಿ॥ ರಾಮಲಿಂಗಂ ಚೆಟ್ಟಿಯಾರರ ತಿದ್ದುಪಡಿ ಈ ರೀತಿ ಇರುತ್ತದೆ.

"ಮತ್ತು ಪ್ರತ್ಯೇಕವಾಗಿ, ಸರಕಾರ ಗ್ರಾಮೀಣ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳನ್ನು ಸಹಕಾರಿ ಕ್ಷೇತ್ರದಡಿಯಲ್ಲಿ ಪ್ರೋತ್ಸಾಹಿಸಲು ಶ್ರಮಿಸಬೇಕು."

ಮೇಲಿನ ಭಾಷೆಯಲ್ಲಿ ಮಿ। ಚೆಟ್ಟಿಯಾರು ತಿದ್ದುಪಡಿಯನ್ನು ಮತ್ತು ಇದು ಸರಿಯಾಗಿಯೇ ಇದೆ. ಈಗ ಈ ವಿಧಿಯನ್ನು ಸಾಮಾನ್ಯ ಚರ್ಚೆಗೆ ಮಂಡಿಸಲಾಗಿದೆ.

* * * * *

* **ಶ್ರೀ ಎಸ್. ನಾಗಪ್ಪ** (ಮದ್ರಾಸ್ : ಸಾಮಾನ್ಯ) : ಈ ಸದನದ ವೇಳೆಯನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ. ನಾನು ಕೇವಲ ಒಂದು ತಿದ್ದುಪಡಿಯನ್ನು ತರಲು ಇಚ್ಛಿಸುತ್ತೇನೆ. ಅದೇನೆಂದರೆ, 'ಎಲ್ಲಾ ಕೆಲಸಗಾರರು, ಉದ್ದಿಮೆ'ಯ ಎಂಬ ಶಬ್ದಗಳ ನಂತರ ಅದಕ್ಕೆ 'ಕೃಷಿಯ' ಎಂಬ ಶಬ್ದವನ್ನು ಸೇರಿಸಬೇಕು.

---

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೨೨ನೆಯ ನವೆಂಬರ್, ೧೯೪೮, ಪುಟ ೫೨೯

\+ ಮೇಲಿನಂತೆ ಪುಟ ೫೨೯

++ ಮೇಲಿನಂತೆ ಪುಟ ೫೩೨

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೨೨ನೆಯ ನವೆಂಬರ್, ೧೯೪೮, ಪುಟ ೫೩೪–೩೫

ಸ್ವಾಮಿ, ಕೆಲಸಗಾರರ ಜನಸಂಖ್ಯೆಯಲ್ಲಿ ಬಹಳಷ್ಟು ಸಂಖ್ಯೆ ಕೃಷಿ ಕಾರ್ಮಿಕರದ್ದೇ ಆಗಿರುತ್ತದೆ ಎಂದು ಹೇಳುವ ಅವಶ್ಯಕತೆ ಇರುವುದಿಲ್ಲ.

**ಮಾನ್ಯ ಉಪಸಭಾಪತಿ :** ಇದು ಕ್ರಮಬದ್ಧವಾಗಿರುವುದಿಲ್ಲ.

**ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್ :** ಸಂವಿಧಾನದಲ್ಲಿನ ನಿರ್ದೇಶಿತ ತತ್ವಗಳು ಗುಡಿ ಕೈಗಾರಿಕೆಗಳ ಬಗ್ಗೆ ಏನಾದರೂ ಹೇಳಲೇಬೇಕೆಂಬ ಅನಿಸಿಕೆ ಎಲ್ಲರ ಮನದಲ್ಲಿದೆ. ವಿಧಿ ೩೪ ಇದಕ್ಕಾಗಿ ಅವಕಾಶ ಮಾಡಿಕೊಡಬೇಕು. ಆದುದರಿಂದ ನಾನು ನನ್ನ ಗೆಳೆಯ ಮಿ| ರಾಮಲಿಂಗಮ್ ಚೆಟ್ಟಿಯಾರರು ಮಂಡಿಸಿದ ತಿದ್ದುಪಡಿಯನ್ನು ಅದರಲ್ಲಿನ ಒಂದು ಅಥವಾ ಎರಡು ಶಬ್ದಗಳ ಬದಲಿಕೆಯಾದ ಮೇಲೆ ಒಪ್ಪಲು ತಯಾರಿದ್ದೇನೆ. ಮೊದಲನೆಯದಾಗಿ, ಅದರಲ್ಲಿ ನಾನು 'ಗುಡಿ ಕೈಗಾರಿಕೆಗಳ ಮೇಲೆ' ಎಂಬ ಶಬ್ದಗಳಾದ ಮೇಲೆ "ನಾನು ವೈಯಕ್ತಿಕ ಅಥವಾ" ಎಂಬ ಶಬ್ದಗಳನ್ನು ಸೇರಿಸಲು, ಎರಡನೆಯದಾಗಿ, ಅವರ 'ಹಾದಿಗಳಲ್ಲಿ (lines)' ಎಂಬ ಪದವನ್ನು 'ತಳಹದಿ(bases)' ಎಂದು ಬದಲಾಯಿಸಿ, ಅದನ್ನು ಒಪ್ಪುತ್ತೇನೆ. ಈ ಬದಲಿಕೆಗಳ ನಂತರ ಅವರ ತಿದ್ದುಪಡಿಯನ್ನು ಕೆಳಗಿನಂತೆ ಓದಬಹುದಾಗಿದೆ.

"ಮತ್ತು ಪ್ರತ್ಯೇಕವಾಗಿ, ಸರಕಾರ ಗ್ರಾಮೀಣ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳನ್ನು ವೈಯಕ್ತಿಕ ಅಥವಾ ಸಹಕಾರಿ ತಳಹದಿಯ ಮೇಲೆ ಪ್ರೋತ್ಸಾಹಿಸಲು ಶ್ರಮಿಸಬೇಕು"

ಇದು, ಈ ವಿಷಯದಲ್ಲಿ ವಿಶೇಷವಾದ ಆಸಕ್ತಿಯುಳ್ಳ ಸದಸ್ಯರ ಆಶೋತ್ತರಗಳನ್ನು ಪೂರೈಸುತ್ತದೆ.

ಶ್ರೀ ನಾಗಪ್ಪನವರ ತಿದ್ದುಪಡಿಯಲ್ಲಿ, ಅಂದರೆ, ಅದರಲ್ಲಿ ಬರುವ "ಉದ್ದಿಮೆ"ಯ ಶಬ್ದದ ನಂತರ "ಕೃಷಿಯ" ಎಂಬ ಶಬ್ದವನ್ನು ಸೇರಿಸುವುದು ಅವಶ್ಯಕವಾಗಿರುತ್ತದೆ ಎಂಬುದನ್ನೂ ಸಹ ಹೇಳುತ್ತಿದ್ದೇನೆ.

**ಮಾನ್ಯ ಉಪಸಭಾಪತಿ :** ಇದಕ್ಕೆ ಪರವಾನಗಿ ಸಿಗುವುದಿಲ್ಲ.

**ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್ :** ನೀವು ಇದಕ್ಕೆ ಪರವಾನಗಿ ನೀಡಿದಲ್ಲಿ ನನ್ನ ಅಭ್ಯಂತರವೇನಿರುವುದಿಲ್ಲ. ಕೃಷಿ ಕಾರ್ಮಿಕರು, ಔದ್ಯಮಿಕ ಕಾರ್ಮಿಕರಷ್ಟೇ ಪ್ರಾಮುಖ್ಯತೆಯನ್ನು ಹೊಂದಿರುತ್ತಾರೆ. ಆವರನ್ನು 'ಅನ್ಯಥಾ (otherwise)' ಎಂದು ಸಂಬೋಧಿಸಬಾರದು ಎಂಬ ನಾಗಪ್ಪನವರ ಸಲಹೆ ತನ್ನದೆ ಆದ ವಾಸ್ತವಾಂಶ ಹೊಂದಿರುತ್ತದೆ. ಇದು ಏನೇ ಇರಲಿ, ಈ ವಿಷಯದ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕೋ ಬೇಡವೋ ಇದನ್ನು ನೀವೇ ನಿರ್ಧರಿಸಬೇಕು.

**ಶ್ರೀ ಟಿ.ಎ. ರಾಮಲಿಂಗಮ್ ಚೆಟ್ಟಿಯಾರ್ :** ನಾನು ಡಾ| ಅಂಬೇಡ್ಕರರ ತಿದ್ದುಪಡಿಗಳನ್ನು ಸ್ವೀಕರಿಸುತ್ತೇನೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ : ಸಾಮಾನ್ಯ): ಸ್ವಾಮಿ, ನಾವು ಸಣ್ಣ ಕೈಗಾರಿಕೆಗಳಿಗೆ ನಿಂತು ಬಿಡೋಣ, ಮತ್ತು ಉಳಿದವುಗಳನ್ನು ಕೈ ಬಿಡೋಣ. 'ವೈಯಕ್ತಿಕ ಅಥವಾ ಸಹಕಾರಿ ತಳಹದಿಯ ಮೇಲೆ' ಎನ್ನುವ ಪದಗಳು ನಿಮಗೇಕೆ ಬೇಕು? ನೀವು ಸಹಕಾರಿ – ತಳಹದಿಯ ಮೇಲೆ ವಿಶೇಷ ಒತ್ತು (emphasis) ನೀಡದಿದ್ದಲ್ಲಿ ಈ ಶಬ್ದಗಳನ್ನೂ ಇಲ್ಲಿ ಸೇರಿಸುವಲ್ಲಿ ಯಾವ ಪುರುಷಾರ್ಥ ಸಾಧನೆಯಾಗುವುದಿಲ್ಲ. ಆದ್ದರಿಂದ 'ವೈಯಕ್ತಿಕ ಅಥವಾ ಸಹಕಾರಿ–ತಳಹದಿಯ ಮೇಲೆ' ಎನ್ನುವ ಶಬ್ದಗಳನ್ನು ತೆಗೆದುಹಾಕಬೇಕು.

**ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ನಾನು ವಿಷಯವನ್ನು ವಿವರಿಸಿ ಹೇಳಲೆ? ಈ ವಿಷಯದಲ್ಲಿ ಆಸಕ್ತಿ ಇರುವವರಲ್ಲಿ ಎರಡು ವಿಭಾಜಕ ರೇಖೆಗಳಿವೆ. ಮೊದಲನೆಯದು, ಕೇವಲ ಸಹಕಾರಿ ತಳಹದಿಯ ಮೇಲಿರುವ ಸಣ್ಣ ಕೈಗಾರಿಕೆಗಳಿಗೆ ಬೆಳವಣಿಗೆಯ ಮೇಲೆ ನಂಬಿಕೆ ಇಟ್ಟಿರುತ್ತಾರೆ. ಎರಡನೆಯ ವಿಭಜನೆ ಇಂಥಾ ಯಾವುದೇ ಮಿತಿಯನ್ನು ಒಳಗೊಂಡಿರುವ ರೀತಿಯಲ್ಲಿ ಗುಡಿ ಕೈಗಾರಿಕೆಗಳು

ಬೆಳೆಯಬೇಕೆನ್ನುತ್ತದೆ. ಇವರಿಬ್ಬರನ್ನೂ ತೃಪ್ತಿಗೊಳಿಸುವುದಕ್ಕಾಗಿಯೇ ನಾನು ಬೇಕೆಂತಲೇ ಇಂಥಾ ಪದವಿನ್ಯಾಸವನ್ನು ಉಪಯೋಗಿಸಿರುತ್ತೇನೆ; ಇದರಿಂದಾಗಿ ಇವರಿಬ್ಬರ ವಿಚಾರಗಳಿಗೆ ಮಾನ್ಯತೆ ನೀಡಲಾಗಿದೆ.

**ಶ್ರೀ ಎಮ್. ಅನಂತಶಯನಂ ಅಯ್ಯಂಗಾರ್ :** (ಮದ್ರಾಸ್ : ಸಾಮಾನ್ಯ): ನಾನು ಮಾತನಾಡಲು ಬಯಸುವುದಿಲ್ಲ.

**ಮಾನ್ಯ ಉಪಸಭಾಪತಿ :** ಈ ವಿಷಯದ ಮೇಲೆ ಸಾಕಷ್ಟು ಚರ್ಚೆಯಾಗಿರುತ್ತದೆ ಎಂದು ಭಾವಿಸುತ್ತೇನೆ, ಈಗ ನಾವು ಇವುಗಳ ಮತಕ್ಕಾಗಿ ಮುಂದುವರಿಯೋಣ.

**ಶ್ರೀ ಮಹಾವೀರ ತ್ಯಾಗಿ :** ಸ್ವಾವಲಂಬನೆಯ ತಳಹದಿಯ ಮೇಲೆ ಇದನ್ನೆಲ್ಲಾ ಮಾಡಲಾಗುತ್ತದೆ ಎಂದು ಆಶಿಸಿ ಡಾ। ಅಂಬೇಡ್ಕರರು ಅಂತಿಮವಾಗಿ ಪ್ರಸ್ತಾಪಿಸಿದ ನನ್ನ ತಿದ್ದುಪಡಿಯ ಮೇಲಿನ ಅವರ ತಿದ್ದುಪಡಿಯನ್ನು ನಾನು ಸ್ವೀಕರಿಸುತ್ತೇನೆ ಮತ್ತು ನಾನು ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತೇನೆ.

ಸಭೆಯ ಪರವಾನಗಿ ಪಡೆದ ನಂತರ ತಿದ್ದುಪಡಿಯನ್ನು ಹಿಂದೆ ತೆಗೆದುಕೊಳ್ಳಲಾಯಿತು.

**ಶ್ರೀ ಆಮಿಯೋ ಕುಮಾರ ಘೋಷ್ :** ಸ್ವಾಮಿ, 'ಕೃಷಿ ಕಾರ್ಮಿಕರನ್ನು' ತಿದ್ದುಪಡಿಯಲ್ಲಿ ಸೇರಿಸಲಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ತಿಳಿಯಬಯಸುತ್ತೇನೆ.

**ಮಾನ್ಯ ಉಪಸಭಾಪತಿ :** 'ಕೃಷಿ ಕಾರ್ಮಿಕ'ರನ್ನು ತಿದ್ದುಪಡಿಯಲ್ಲಿ ಸೇರಿಸಲಾಗಿಲ್ಲ, ಆದರೆ ಡಾ। ಅಂಬೇಡ್ಕರರ ಸೂಚನೆಯನ್ನು ಸದನದ ಎಲ್ಲಾ ಸದಸ್ಯರು ಭಿನ್ನಾಭಿಪ್ರಾಯವಿಲ್ಲದೆ ಒಪ್ಪಿದಲ್ಲಿ ನಾನು ನನ್ನ ಹಿಂದಿನ ತೀರ್ಮಾನವನ್ನು ಬದಲಿಸಲು ತಯಾರಿದ್ದೇನೆ.

**ಗೌರವಾನ್ವಿತ ಸದಸ್ಯರು :** ಹೌದು.

**ಮಾನ್ಯ ಉಪಸಭಾಪತಿ :** ಹಾಗಿದ್ದಲ್ಲಿ, ಡಾ। ಅಂಬೇಡ್ಕರರಿಂದ ತಿದ್ದುಪಡಿ ಮಾಡಲಾದ ಶ್ರೀ ರಾಮಲಿಂಗಂ ಚೆಟ್ಟಿಯಾರರವರು ಮಂಡಿಸಿದ ತಿದ್ದುಪಡಿಯನ್ನು ನಾನು ಮತಕ್ಕಾಗಿ ಇಡುತ್ತೇನೆ.

ತಿದ್ದುಪಡಿಯನ್ನು ಮಾರ್ಪಡಿಸಲಾಯಿತು ಮತ್ತು ಅದನ್ನು ಸ್ವೀಕರಿಸಲಾಯಿತು.

ಶ್ರೀ ನಾಗಪ್ಪರವರಿಂದ ಮಾರ್ಪಟ್ಟ ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

ತಿದ್ದುಪಡಿಗೆ ಒಳಗಾದ ವಿಧಿ ೩೪ನ್ನು ಸಂವಿಧಾನದಲ್ಲಿ ಸೇರಸಲಾಯಿತು.

* * * * *

## ವಿಧಿ – ೩೫

* **ಮಾನ್ಯ ಉಪಸಭಾಪತಿ :** ಈಗ ನಾವು ೩೫ನೆಯ ವಿಧಿಗೆ ಬರೋಣ.

**ಗೌರವಾನ್ವಿತ ಡಾ। ಬಿ.ಆರ್.ಅಂಬೇಡ್ಕರ್ :** ಸ್ವಾಮಿ ಸದ್ಯ ಈ ನಿಯಮವನ್ನು ವಿಚಾರಿಸುವುದು ಬೇಡ. ಹಾಗೇ ಇದನ್ನು ಮುಂದಕ್ಕೆ ಹಾಕಲು ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಮಾನ್ಯ ಉಪಸಭಾಪತಿ :** ಭವಿಷ್ಯದಲ್ಲಿ ವಿಚಾರಿಸಲು ಈಗ ಈ ನಿಯಮವನ್ನು ಮುಂದಕ್ಕೆ ಹಾಕಲು ಅನುಮತಿಸಲಾಗಿದೆ. ಈ ಸದನಕ್ಕೆ ಇದು ಒಪ್ಪಿಗೆ ಇದೆಯೋ?

**ಗೌರವಾನ್ವಿತ ಸದಸ್ಯರು :** ಹೌದು.

---

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೨೩ನೆಯ ನವೆಂಬರ್, ೧೯೪೮, ಪುಟ ೫೩೮

## ವಿಧಿ – ೩೬

**ಪಂಡಿತ ಲಕ್ಷ್ಮೀಕಾಂತ ಮೈತ್ರ** (ಪಶ್ಚಿಮ ಬಂಗಾಳ : ಸಾಮಾನ್ಯ) ಮಾನ್ಯ ಉಪಸಭಾಪತಿ, ಸ್ವಾಮಿ ನಾನು "ವಿಧಿ ೩೬ರಲ್ಲಿನ 'ಪ್ರತಿಯೊಬ್ಬ ನಾಗರಿಕನಿಗೆ ಮುಕ್ತಟೆ ಪ್ರಾಥಮಿಕ ಶಿಕ್ಷಣ ಪಡೆಯುವ ಹಕ್ಕಿದೆ ಮತ್ತು" ಎಂಬ ಶಬ್ದಗಳನ್ನು ತೆಗೆದುಹಾಕಬೇಕೆಂದು ತಿದ್ದುಪಡಿಯನ್ನು ಮಂಡಿಸಲು ವಿನಂತಿಸಿಕೊಳ್ಳುತ್ತೇನೆ.

ಸ್ವಾಮಿ, ಭಾಷಣಗಳನ್ನು ಕಡಿಮೆ ಮಾಡಬೇಕೆಂಬ ವಿಷಯದಲ್ಲಿ ನೀವು ನೀಡಿದ ಆಜ್ಞೆಯನ್ನು ಖಂಡಿತವಾಗಿ ಪಾಲಿಸುತ್ತೇನೆ. ಆದ್ದರಿಂದ, ನಾನು ಈ ತಿದ್ದುಪಡಿ ಮಂಡಿಸುವ ಉದ್ದೇಶವನ್ನು ಕೇವಲ ಅರ್ಧಡಜನ್ ವಾಕ್ಯಗಳಲ್ಲಿ ಹೇಳುತ್ತಿದ್ದೇನೆ. ಒಂದು ವೇಳೆ ಸದನ ಈ ತಿದ್ದುಪಡಿಯನ್ನು ಒಪ್ಪಿದಲ್ಲಿ, ನನಗೆ ಭರವಸೆ ಇದೆ, ಸದನ ಇದನ್ನು ಒಪ್ಪುತ್ತದೆ ಎಂದು, ಆಗ ಈ ವಿಧಿಯನ್ನು ಈ ಕೆಳಗಿನ ರೀತಿಯಲ್ಲಿ ಓದಬಹುದು.

"ಸರಕಾರ, ಈ ಸಂವಿಧಾನ ಅನುಷ್ಠಾನದಲ್ಲಿ ಬಂದಂದಿನಿಂದ ಹತ್ತು ವರ್ಷಗಳ ಅವಧಿಯ ಒಳಗಡೆ ಎಲ್ಲಾ ಮಕ್ಕಳಿಗೆ ಅವರು ೧೪ ವರ್ಷದವರಾಗುವವರೆಗೆ ಮುಕ್ತಟೆ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲು ಶ್ರಮಿಸುತ್ತದೆ..........."

* * * * *

**ಶ್ರೀ ನಜೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಂ): ಸ್ವಾಮಿ ನಾನು: "ವಿಧಿ ೩೬ ಒಳಗಿನ 'ಶಿಕ್ಷಣ' ಎಂಬ ಶಬ್ದವನ್ನು 'ಪ್ರಾಥಮಿಕ ಶಿಕ್ಷಣ' ಎಂಬ ಶಬ್ದಗಳಿಂದ ಬದಲಾಯಿಸಬೇಕು" ಎಂದು ಮಂಡಿಸುತ್ತೇನೆ.

* * * * *

* **ಗೌರವಾನ್ವಿತ ಡಾ। ಬಿ. ಆರ್. ಅಂಬೇಡ್ಕರ್** : ಸ್ವಾಮಿ, ನಾನು, 'ಮುಕ್ತಟೆ ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಪ್ರತಿಯೊಬ್ಬ ನಾಗರೀಕನಿಗೆ ಹಕ್ಕಿದೆ ಮತ್ತು' ಎಂಬ ಶಬ್ದಗಳನ್ನು ೩೬ನೇ ವಿಧಿಯಿಂದ ತೆಗೆದುಹಾಕಬೇಕೆಂದು ಸೂಚಿಸುವ ನನ್ನ ಗೆಳೆಯ ಮೈತ್ರಾರು ಪ್ರಸ್ತಾಪಿಸಿರುವ ತಿದ್ದುಪಡಿಯನ್ನು ಒಪ್ಪುತ್ತೇನೆ. ಆದರೆ ನನ್ನ ಮಿತ್ರ ನಜೀರುದ್ದೀನ್ ಅಹ್ಮದರ ತಿದ್ದುಪಡಿಯನ್ನು ಸ್ವೀಕರಿಸಲು ನಾನು ತಯಾರಿಲ್ಲ. ವಿಧಿ ೩೬ರಲ್ಲಿನ ಕಲಮಿನ (clause) ಉದ್ದೇಶ ಕೇವಲ ಮುಕ್ತಟೆ ಪ್ರಾಥಮಿಕ ಶಿಕ್ಷಣಕ್ಕೆ ಸೀಮಿತವಾಗಿದೆ ಎಂದು ಅವರು ವಿಚಾರ ಮಾಡಿದ್ದಾರೆಂದು ನನಗೆ ಅನಿಸುತ್ತದೆ. ಆದರೆ ವಿಷಯ ಹಾಗಿಲ್ಲ. ಈ ಕಲಮು ತಿದ್ದುಪಡಿಯಾದ ನಂತರ ಪ್ರತಿಯೊಂದು ಮಗು ೧೪ ವರ್ಷಗಳಾಗುವವರೆಗೆ ತರಬೇತಿಗಾಗಿ ಶೈಕ್ಷಣಿಕ ಸಂಸ್ಥೆಯಲ್ಲಿ ಇಡಲು ಸಹ ಇದು ಅನುವು ಮಾಡಿಕೊಡುತ್ತದೆ. ಒಂದು ವೇಳೆ ನನ್ನ ಗೌರವಾನ್ವಿತ ಮಿತ್ರ ನಜೀರುದ್ದೀನ್ ಅಹ್ಮದ್ ಮೂಲಭೂತ ಹಕ್ಕುಗಳ ಭಾಗವಾದ ೧೮ನೆಯ ವಿಧಿಯನ್ನು ಓದಿದಲ್ಲಿ ಈ ವಿಧಿ ಯಾವುದೇ ಮಗುವನ್ನು ಅದು ೧೪ ವರ್ಷಗಳಾಗುವವರೆಗೆ ಕೆಲಸಕ್ಕೆ ನೇಮಿಸಿಕೊಳ್ಳುವುದನ್ನು ನಿಷೇಧಿಸುತ್ತದೆ. ನಿಸ್ಸಂಶಯವಾಗಿ, ಒಂದು ವೇಳೆ ಮಗುವನ್ನು ೧೪ ವರ್ಷದವರೆಗೆ ಕೆಲಸಕ್ಕೆ ನೇಮಿಸಿಕೊಳ್ಳದೆ ಹೋದಲ್ಲಿ ಅದು ಯಾವುದಾದರೊಂದು ಶೈಕ್ಷಣಿಕ ಸಂಸ್ಥೆಯಲ್ಲಿ ವಿದ್ಯೆ ಕಲಿಯಲು ತೊಡಗಲೇ ಬೇಕು. ಇದೇ ೩೬ರ ವಿಧಿಯ ಉದ್ದೇಶ ಮತ್ತು ಆದಕಾರಣ ನಾನು ಪ್ರಾಥಮಿಕ ಎಂಬ ಪದ ಈ ಪ್ರತ್ಯೇಕ ಕಲಮಿನಲ್ಲಿ ಸರಿಹೊಂದುವುದಿಲ್ಲವೆಂದು ಹೇಳುತ್ತೇನೆ. ಆದುದರಿಂದಲೇ ಅವರ ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

---

* ಅದೇ ಮಟ ೫೪೦

(ಪಂಡಿತ ಮೈತ್ರರವರ ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ನಜೀರುದ್ದೀನ ಅಹ್ಮದರ ಗೊತ್ತುವಳಿಯನ್ನು ತಿರಸ್ಕರಿಸಲಾಯಿತು).

ವಿಧಿ ೩೬ನ್ನು ತಿದ್ದುಪಡಿ ಮಾಡಿದಂತೆ ಸಂವಿಧಾನಕ್ಕೆ ಸೇರಿಸಲಾಯಿತು.

**ವಿಧಿ ೩೫**

* **ಶ್ರೀ ಮೊಹಮ್ಮದ್ ಇಸ್ಮಾಯಿಲ್ ಸಾಹಿಬ್** (ಮದ್ರಾಸ್ : ಮುಸ್ಲಿಂ): ಸ್ವಾಮಿ, ಈ ಕೆಳಗಿನ ಪರಂತುಕವನ್ನು ೩೫ನೆಯ ವಿಧಿಗೆ ಸೇರಿಸಬೇಕೆಂದು ನಾನು ಮಂಡಿಸುತ್ತೇನೆ. 'ಯಾವುದೇ ಗುಂಪು, ವರ್ಗ ಅಥವಾ ಕೋಮಿನ ಜನ ಒಂದು ವೇಳೆ ವೈಯಕ್ತಿಕ ಕಾನೂನನ್ನು ಹೊಂದಿದ್ದಲ್ಲಿ, ಅವರು ಅದನ್ನು ಬಿಟ್ಟುಕೊಡಬೇಕಾಗಿಲ್ಲ.'

* * * * *

+ **ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ಈ ನಿಯಮಕ್ಕೆ ಮಂಡಿಸಲಾದ ತಿದ್ದುಪಡಿಗಳನ್ನು ನಾನು ಒಪ್ಪಲಾರೆ. ಇವುಗಳ ವಿಷಯದಲ್ಲಿ ಹೆಚ್ಚಿಗೆ ಹೇಳುವುದಾದರೆ, ಈ ದೇಶ ಏಕಮಾತ್ರ ನಾಗರಿಕ ಸಂಹಿತೆ (Civil Code) ಹೊಂದಿರಬೇಕೋ ಅಥವಾ ಹೊಂದಿರಬಾರದೋ ಎಂಬ ಪ್ರಶ್ನೆಯ ಒಳಿತುಗಳನ್ನು ಪ್ರಸ್ತಾಪಿಸಬಯಸುವುದಿಲ್ಲ. ಈಗಾಗಲೇ ಇದರ ಬಗ್ಗೆ ನನ್ನ ಗೆಳೆಯ ಮುನ್ಷಿ ಹಾಗೂ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿಯವರು ಈ ವಿಷಯದ ಬಗ್ಗೆ ಸಾಕಷ್ಟು ಹೇಳಿರುತ್ತಾರೆ. ಯಾವಾಗ ಮೂಲಭೂತ ಹಕ್ಕುಗಳನ್ನು ಮಂಡಿಸಲಾಗುತ್ತದೆಯೋ ಆಗ ಈ ವಿಷಯದ ಬಗ್ಗೆ ಒಂದು ಪರಿಪೂರ್ಣ ಹೇಳಿಕೆಯನ್ನು ಮಾಡುವುದು ನನಗೆ ಸಾಧ್ಯವಾಗಬಹುದು. ಆದುದರಿಂದ, ಅದನ್ನು ಇಲ್ಲಿ ಪ್ರಸ್ತಾಪಿಸಲು ನಾನು ಇಚ್ಛಿಸುವುದಿಲ್ಲ.

ನನ್ನ ಗೆಳೆಯ ಶ್ರೀ ಹುಸೇನ್ ಇಮಾಮ್, ಈ ತಿದ್ದುಪಡಿಗಳನ್ನು ಬೆಂಬಲಿಸುವಲ್ಲಿ, ಇಂಥಾ ವಿಶಾಲವಾದ ದೇಶದ ಸಲುವಾಗಿ ಏಕಪ್ರಕಾರದ ನ್ಯಾಯ ಸೂತ್ರಗಳು ಇರುವುದು ನ್ಯಾಯವೇ ಮತ್ತು ಸಾಧ್ಯವೇ ಅಥವಾ ಅಲ್ಲವೇ ಎಂದು ಪ್ರಶ್ನಿಸಿದ್ದಾರೆ. ಈಗ, ಇಂಥಾ ಹೇಳಿಕೆಗಳು ನನಗೆ ಬಹಳಷ್ಟು ಅಚ್ಚರಿಯನ್ನುಂಟು ಮಾಡಿವೆ ಎಂದು ನಾನು ಹೇಳಲೇಬೇಕಾಗಿದೆ. ಏಕೆಂದರೆ ಈಗಾಗಲೇ ನಾವು ಬಹುತೇಕ ಮನುಷ್ಯನ ಎಲ್ಲಾ ಸಂಬಂಧಗಳಿಗೆ ಅನ್ವಯವಾಗುವ ಏಕಪ್ರಕಾರದ ನ್ಯಾಯಸೂತ್ರಗಳನ್ನು ಈ ದೇಶ ಹೊಂದಿರುತ್ತದೆ. ದೇಶದ ಎಲ್ಲೆಡೆಯಲ್ಲಿಯೂ ಜಾರಿಯಲ್ಲಿರುವ ಒಂದು ಏಕಪ್ರಕಾರದ ಮತ್ತು ಪರಿಪೂರ್ಣವಾದ ಅಪರಾಧ ಸಂಹಿತೆ (Criminal Code) ಇದೆ. ಇದನ್ನು ದಂಡಸಂಹಿತೆ (Penal Code) ಮತ್ತು ಅಪರಾಧ ಪ್ರಕ್ರಿಯೆ ಸಂಹಿತೆ (Criminal Procedure Code) ಯಲ್ಲಿ ಅಳವಡಿಸಲಾಗಿರುತ್ತದೆ. ನಾವು ಇಡೀ ದೇಶಗಳಲ್ಲಿನ ಆಸ್ತಿ ಸಂಬಂಧಗಳಿಗೆ ವ್ಯವಹರಿಸಲು ಜಾರಿಯಲ್ಲಿರುವ ಆಸ್ತಿ ವರ್ಗಾವಣೆಯ ಕಾನೂನನ್ನು ಹೊಂದಿರುತ್ತೇವೆ. ನಮ್ಮಲ್ಲಿ 'ಹಸ್ತಾಂತರ ಉಪಕರಣಗಳ ಕಾಯಿದೆಗಳು' (Negotiable Insturments Acts) ಇವೆ ಮತ್ತು ದೇಶದ ಎಲ್ಲೆಡೆಯಲ್ಲಿಯೂ ಅನ್ವಯಿಸುವ ಹಾಗೂ ತನ್ನ ರಚನೆಯಲ್ಲಿ ಏಕಪ್ರಕಾರದ್ದಾಗಿರುವ ನಾಗರಿಕ ಸಂಹಿತೆಯನ್ನು ಈ ದೇಶ ಹೊಂದಿದೆ ಎಂಬುದನ್ನು ಇತರರಿಗೆ ಮನವರಿಕೆ ಮಾಡಲು ಅಸಂಖ್ಯಾತ ಕಾನೂನುಗಳನ್ನು ನಾನು ಉದಾಹರಿಸಬಲ್ಲೆ. ಮದುವೆ ಮತ್ತು ವಾರಸುದಾರಿಕೆ (Succession)ಯ ವಿಷಯಗಳ ಕ್ಷೇತ್ರವನ್ನು ಮಾತ್ರ ಇನ್ನೂ ಈ ನಾಗರಿಕ ಕಾನೂನು ಆಕ್ರಮಿಸಿಕೊಳ್ಳುವುದು ಇಲ್ಲಿಯವರೆಗೆ ಆಗಿಲ್ಲ. ಈ ಮಹತ್ವವಲ್ಲದ

---

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೨೩ನೆಯ ನವೆಂಬರ್, ೧೯೪೮, ಪುಟ ೫೪೦

ದಿಕ್ಕಿನಲ್ಲಿ ಇಲ್ಲಿಯವರೆಗೆ ಆಕ್ರಮಣ ಮಾಡುವುದು ನಮಗೆ ಸಾಧ್ಯವಾಗಿಲ್ಲ ಮತ್ತು ಉದ್ದೇಶವನ್ನು ಸಾಧಿಸುವುದಕ್ಕಾಗಿಯೇ ವಿಧಿ ೩೫ನ್ನು ಸಂವಿಧಾನದ ಭಾಗವನ್ನಾಗಿ ಮಾಡಲಾಗಿದೆ. ಆದುದರಿಂದ, ಇಡೀ ದೇಶಕ್ಕಾಗಿ ಒಂದು ಏಕಪ್ರಕಾರದ ನ್ಯಾಯಸೂತ್ರವನ್ನು ಅನುಷ್ಠಾನದಲ್ಲಿ ತರಬೇಕೋ ಅಥವಾ ಇಲ್ಲವೋ ಎಂಬ ಪ್ರಯತ್ನ ಸ್ವಲ್ಪ ಮಟ್ಟಿಗೆ ಸಮಯೋಜಿತವಾಗಿಲ್ಲ. ಏಕೆಂದರೆ ನಾವು ನಿಜದಲ್ಲಿ ಏಕಪ್ರಕಾರದ ನಾಗರೀಕ ಕಾನೂನಿನ ಮುಖಾಂತರ ಈಗಾಗಲೇ ವಿವಿಧ ಕ್ಷೇತ್ರಗಳನ್ನು ವ್ಯಾಪಿಸಿಕೊಂಡದ್ದಾಗಿದೆ. ಆದುದರಿಂದ ಏಕಪ್ರಕಾರದ ಕಾನೂನನ್ನು ಜಾರಿಯಲ್ಲಿ ತರಲು ಶಕ್ತರಿದ್ದೇವೆಯೋ ಇಲ್ಲವೋ ಎಂಬ ಪ್ರಶ್ನೆಯನ್ನು ನಾವು ಬಹಳ ತಡಮಾಡಿ ಕೇಳಿದಂತೆ ಆಗುತ್ತದೆ. ಒಟ್ಟಿನಲ್ಲಿ, ಹೇಳುವುದೇನೆಂದರೆ, ನಾವು ಈಗಾಗಲೇ ಈ ಕೆಲಸವನ್ನು ಪೂರ್ತಿಗೊಳಿಸಿದ್ದೇವೆ ಎಂಬುದಾಗಿದೆ.

ತಿದ್ದುಪಡಿಗಳ ಬಗ್ಗೆ ಹೇಳುವುದಾದರೆ, ನಾವು ಮಾಡಿದ ಅಭಿಪ್ರಾಯೋಕ್ತಿಗಳು ಎರಡಿರುತ್ತವೆ. ಮೊದಲನೆಯ ಟೀಕಾತ್ಮಕ ಹೇಳಿಕೆ ಎಂದರೆ, ಮುಸ್ಲಿಮರ ವೈಯಕ್ತಿಕ ಕಾಯಿದೆ ಮಾರ್ಪಾಡು ಆಗದಿರುವಂಥಾ ಕಾಯಿದೆ ಮತ್ತು ದೇಶದಾದ್ಯಂತ ಅನ್ವಯಿಸುವ ಕಾನೂನು ಎಂಬ ಹೇಳಿಕೆಯನ್ನು ನಾನು ಪ್ರತಿಭಟಿಸುತ್ತೇನೆ. ಮುಸ್ಲಿಮರ ಕಾನೂನಿನ ತಿದ್ದುಪಡಿಯ ಪರವಾಗಿ ಮಾತನಾಡಿದ ನನ್ನ ಗೆಳೆಯರು ವಾಯವ್ಯ ಗಡಿನಾಡಿನ ಪ್ರಾಂತದಲ್ಲಿ ೧೯೩೫ರವರೆಗೆ ಶರಿಯಾತ್ ಕಾನೂನು (Shariat Law) ಜಾರಿಯಲ್ಲಿ ಇರಲಿಲ್ಲವೆಂಬ ವಿಷಯವನ್ನು ಮರೆತಿದ್ದಾರೆಂದು ಕಾಣುತ್ತದೆ. ೧೯೩೫ರವರೆಗೆ ಈ ಪ್ರಾಂತ ತನ್ನ ಆಸ್ತಿ ವಾರಸುದಾರಿಕೆ ಮತ್ತಿತರ ವಿಷಯಗಳಲ್ಲಿ ಹಿಂದೂ ಕಾನೂನನ್ನೇ ಅನುಸರಿಸುತ್ತಿತ್ತು. ಇದು ಎಲ್ಲಿಯವರೆಗೆ ಹೋಯಿತು ಎಂದರೆ ಕೇಂದ್ರದ ಶಾಸಕಾಂಗ, ವಾಸ್ತವದಲ್ಲಿ ಈ ಪ್ರಾಂತದಲ್ಲಿನ ಮುಸ್ಲಿಮರಿಗೆ ಹಿಂದೂ ಕಾಯಿದೆ ಅನ್ವಯಿಸುವುದನ್ನು ರದ್ದುಪಡಿಸಲು ಹಾಗೂ ಅದರ ಸ್ಥಳದಲ್ಲಿ ಶೆರಿಯತ್ ಕಾಯಿದೆ ಅನ್ವಯಿಸುವಂತೆ ಮಾಡಲು ತುಂಬಾ ಪ್ರಯಾಸಪಡಬೇಕಾಯಿತು. ಹಾಗೇ ಕತೆ ಇಷ್ಟಕ್ಕೇ ಮುಗಿಯುವುದಿಲ್ಲ.

ಮುಂದುವರಿದು, ವಾಯವ್ಯ ಗಡಿನಾಡಿನ ಪ್ರಾಂತವಲ್ಲದೆ ಭಾರತದ ಉಳಿದ ಕಡೆಯಲ್ಲಿ ಅಂದರೆ ಏಕೀಕರಣದ ಪ್ರಾಂತಗಳು ಮತ್ತು ಕೇಂದ್ರೀಯ ಪ್ರಾಂತಗಳು ಮತ್ತು ಬೊಂಬಾಯಿಯಲ್ಲಿ ಮುಸ್ಲಿಮರು ಬಹಳಷ್ಟು ಮಟ್ಟಿಗೆ ೧೯೩೭ರ ವರೆಗೆ ಆಸ್ತಿಯ ಉತ್ತರಾಧಿಕಾರದ ಸಂಬಂಧದಲ್ಲಿ ಹಿಂದೂ ಕಾಯಿದೆಯ ಪ್ರಭಾವಕ್ಕೆ ಒಳಗಾಗಿದ್ದರು. ಶೆರಿಯತ್ ಕಾಯಿದೆಯನ್ನು ಪಾಲಿಸುವ ಉಳಿದ ಮುಸ್ಲಿಮರೊಂದಿಗೆ ಇವರನ್ನು ಸೇರಿಸಬೇಕೆಂದು, ಏಕರೂಪತೆಯನ್ನು ತರಲು ೧೯೩೭ರಲ್ಲಿ ಶಾಸಕಾಂಗ ಹಸ್ತಕ್ಷೇಪ ಮಾಡಬೇಕಾಯಿತು ಮತ್ತು ಶೆರಿಯತ್ ಕಾಯಿದೆಯನ್ನು ಇಡೀ ಭಾರತಕ್ಕೆ ಅನ್ವಯವಾಗುವಂತೆ ಜಾರಿಯಲ್ಲಿ ತರಬೇಕಾಯಿತು.

ನನ್ನ ಗೆಳೆಯ, ಶ್ರೀ ಕರುಣಾಕರ ಮೆನನ್ ಸಹ ಉತ್ತರ ಮಲಬಾರ ಮರುಮಕ್ಕತ್ತಾಯಮ್ ಕಾನೂನು (Marumakkathayam Law) ಹಿಂದೂಗಳಿಗಲ್ಲದೆ ಮುಸ್ಲಿಮರಿಗೂ ಅನ್ವಯಿಸುತ್ತಿತ್ತು ಎಂದು ನನಗೆ ಮಾಹಿತಿಯನ್ನು ನೀಡಿರುತ್ತಾರೆ. ಆದರೆ ಮರುಮಕ್ಕತ್ತಾಯಮ್ ಕಾಯಿದೆ ಮಾತೃ ಪ್ರಧಾನ ಕಾಯಿದೆ ಆಗಿದೆ ಹೊರತು ಪಿತೃಪ್ರಧಾನ ಕಾಯಿದೆ ಅಲ್ಲವೆಂಬುದನ್ನು ನಾವು ನೆನಪಿನಲ್ಲಿಡಬೇಕು.

ಆದ್ದರಿಂದ, ಇಲ್ಲಿಯವರೆಗೆ ಉತ್ತರ ಮಲಬಾರಿನ ಮುಸ್ಲಿಮರು ಮರುಮಕ್ಕತ್ತಾಯಮ್ ಕಾಯಿದೆಯನ್ನು ಅನುಸರಿಸುತ್ತಿದ್ದರು. ಆದಕಾರಣ ಮುಸ್ಲಿಮ್ ಕಾಯಿದೆ ಮೊದಲಿನಿಂದಲೂ ಮಾರ್ಪಾಟಾಗದ ಕಾಯಿದೆಯಾಗಿರುತ್ತದೆ ಮತ್ತು ಅದನ್ನು ಪುರಾತನ ಕಾಲದಿಂದಲೂ ಅನುಸರಿಸುತ್ತಾ ಬರಲಾಗಿದೆ ಎಂದು ಖಚಿತವಾದ ಹೇಳಿಕೆಯನ್ನು ಮಾಡುವುದರಿಂದ ಯಾವ ಉಪಯೋಗವಿರುವುದಿಲ್ಲ. ಈ ಕಾಯಿದೆ, ನಿಜವಾಗಿ, ದೇಶದ ಕೆಲವು ಭಾಗಗಳಲ್ಲಿ ಜಾರಿಯಲ್ಲಿ ಇರಲಿಲ್ಲ ಮತ್ತು ಇದನ್ನು ಹತ್ತು ವರ್ಷದ ಹಿಂದೆ ಎಲ್ಲರಿಗೂ

ಅನ್ವಯಿಸುವಂತೆ ಮಾಡಲಾಗಿರುತ್ತದೆ. ಆದ್ದರಿಂದ ದೇಶದ ಎಲ್ಲಾ ನಾಗರಿಕರಿಗೆ ಅವರ ಧರ್ಮವನ್ನು ಗಣನೆಗೆ ತೆಗೆದುಕೊಳ್ಳದೆ ಅನ್ವಯವಾಗುವಂಥ ಏಕ ನಾಗರೀಕ ಸಂಹಿತೆಯನ್ನು (Single Civil Code) ರೂಪಿಸುವ ಸಲುವಾಗಿ ನಾವು ಹಿಂದೂ ಕಾನೂನಿನ ಕೆಲವು ಭಾಗಗಳನ್ನು, ಅವುಗಳು ಹಿಂದೂ ಕಾಯಿದೆಗಳಲ್ಲಿವೆ ಎಂದಲ್ಲ, ಆದರೆ ಅವುಗಳು ಬಹಳಷ್ಟು ಸರಿಬೀಳುತ್ತವೆ ಎಂದು ನಾವು ಹೊಸ ನಾಗರೀಕ ನೀತಿ ನಿಧಿ ೩೫ರಲ್ಲಿ ಅಳವಡಿಸಿಕೊಂಡಿರುತ್ತೇವೆ. ಆದುದರಿಂದ, ಮುಸ್ಲಿಂ ನಾಗರಿಕರು, ನಾಗರಿಕ ನೀತಿ ಸಂಹಿತೆ ಮಾಡುವವರು ತಮ್ಮ ಮುಸ್ಲಿಂ ಪಂಗಡದ ಭಾವನೆಗಳಿಗೆ ತುಂಬಾ ಘಾಸಿಗೊಳಿಸಿದ್ದಾರೆಂದು ನೇರವಾಗಿ ಹೇಳಲು ಬರುವುದಿಲ್ಲ.

ಮುಸ್ಲಿಮರಿಗೆ ಭರವಸೆ ನೀಡುವುದು ನನ್ನ ಎರಡನೆಯ ಲಕ್ಷ್ಯವಾಗಿದೆ. ಈ ವಿಷಯದಲ್ಲಿ ಅವರ ಭಾವನೆಗಳನ್ನು ಸಾಕಷ್ಟು ಮನವರಿಕೆ ಮಾಡಿಕೊಂಡಿರುವೆ, ಆದರೆ, ಅವರು ೩೫ನೆಯ ವಿಧಿಯನ್ನು, ಮೂಲದಲ್ಲಿರುವದಕ್ಕಿಂತ ಹೆಚ್ಚಿನ ಅರ್ಥ ಹುಡುಕಿದ್ದಾರೆಂದು ನನ್ನ ಅಭಿಪ್ರಾಯ; ನಿಜದಲ್ಲಿ ಇದು ಸರಕಾರ ತನ್ನ ದೇಶದ ಎಲ್ಲಾ ನಾಗರಿಕರಿಗೆ ಒಂದು ನಾಗರಿಕ ನೀತಿ ಸಂಹಿತೆ ನೀಡಬೇಕೆಂದು ಶ್ರಮಿಸುತ್ತದೆ, ಅಷ್ಟೆ. ಭವಿಷ್ಯದ ಪಾರ್ಲಿಮೆಂಟು ಯಾವ ನೀತಿ ಸಂಹಿತೆಯ ಮಿತಿ ಒಳಗೆ ಇರುತ್ತದೆ ಎಂಬ ಹೇಳಿಕೆಯನ್ನು ನೀಡುವವರಿಗೆ ಮಾತ್ರ ಅದು ಅನ್ವಯಿಸುತ್ತದೆ ಎಂಬ ಅವಕಾಶ ಮಾಡಿಕೊಡುವುದು ಸಂಪೂರ್ಣವಾಗಿ ಸಾಧ್ಯವಾಗಬಹುದು; ಹಾಗಾದಲ್ಲಿ ಅಂಥಾ ನೀತಿ ಸಂಹಿತೆಯ ಅನ್ವಯಿಸುವಿಕೆ ಪೂರ್ತಿಯಾಗಿ ಐಚ್ಛಿಕವಾಗಬಹುದು. ಪಾರ್ಲಿಮೆಂಟು ನಾಗರಿಕರ ಮನದ ಇಂಗಿತವನ್ನು ಯಾವುದಾದರೊಂದು ವಿಧಾನದಿಂದ ಅರಿತುಕೊಳ್ಳಬಹುದು. ಇದೊಂದು ಹೊಸ ವಿಧಾನವೇನಲ್ಲ. ಇಂಥಾ ವಿಧಾನವನ್ನು ಶೆರಿಯತ್ ಕಾಯಿದೆ ೧೯೩೭ರಲ್ಲಿ ಸ್ವೀಕರಿಸಲಾಗಿತ್ತು ಮತ್ತು ಈಗ ಇದನ್ನು ವಾಯವ್ಯ ಸರಹದ್ದು ಪ್ರಾಂತಗಳಲ್ಲದ ಪ್ರದೇಶಗಳಿಗೆ ಅನ್ವಯಿಸಲಾಗಿತ್ತು. ಈ ಕಾಯಿದೆ ಈ ಸಂದರ್ಭದಲ್ಲಿ ವಿಷಯವನ್ನು ಹೀಗೆ ಹೇಳಿತು – 'ಯಾವ ಮುಸಲ್ಮಾನ ತಾನು ಶೆರಿಯತ್ ನಿಯಮ ನಿರ್ಬಂಧನೆಯಲ್ಲಿ ಬರಲು ಬಯಸುತ್ತಾನೋ ಆತನಿಗೆ ಮಾತ್ರ ಈ ಕಾಯಿದೆ ಅನ್ವಯಿಸುವಂತೆ ಮಾಡಬೇಕು; ಆತ ಸರಕಾರದ ಅಧಿಕಾರಿಯಲ್ಲಿಗೆ ಹೋಗಿ ನಾನು ಈ ಕಾಯಿದೆಯ ನಿರ್ಬಂಧನೆಗೆ ಒಳಗಾಗಲು ಇಚ್ಛಿಸುವೆ ಎಂಬ ಹೇಳಿಕೆಯನ್ನು ನೀಡಬೇಕು; ಅಂಥಾ ಹೇಳಿಕೆ ಆತ ನೀಡಿದ ನಂತರ ಆತನಿಗೆ ಮತ್ತು ಆತನ ವಾರಸುದಾರರಿಗೆ ಈ ಕಾಯಿದೆ ಅನ್ವಯಿಸುತ್ತದೆ.' ಪಾರ್ಲಿಮೆಂಟಿಗೆ ಇಂಥಾ ವಿಧದ ಅವಕಾಶ ಅನುಷ್ಠಾನದಲ್ಲಿ ತರಲು ಸಂಪೂರ್ಣವಾಗಿ ಸಾಧ್ಯವಾಗಬಹುದು; ಇದರಿಂದಾಗಿ ನನ್ನ ಗೆಳೆಯರು ಈಗಾಗಲೇ ಹೇಳಿರುವ ಅಂಜಿಕೆ ಸಂಪೂರ್ಣವಾಗಿ ಇಲ್ಲದಂತಾಗಬಹುದು. ಆದುದರಿಂದ, ಇಂಥಾ ತಿದ್ದುಪಡಿಗಳಲ್ಲಿ ಯಾವ ತಿರುಳು ಇಲ್ಲವೆಂದು ನಾನು ವಿನಂತಿಸಿಕೊಳ್ಳುತ್ತೇನೆ ಮತ್ತು ಅವುಗಳನ್ನು ವಿರೋಧಿಸುತ್ತೇನೆ.

(ಮೊಹಮದ್ ಇಸ್ಮಾಯಿಲ್ ಸಾಹೇಬ ಮತ್ತು ಬಿ. ಪೊಕರ ಸಾಹಿಬ್ ಬಹದೂರರ ಗೊತ್ತುವಳಿಗಳನ್ನು ತಿರಸ್ಕರಿಸಲಾಯಿತು. ವಿಧಿ ೩೫ನ್ನು ಸಂವಿಧಾನಕ್ಕೆ ಸೇರಿಸಲಾಯಿತು)

## ವಿಧಿ ೩೭

* **ಸರದಾರ ಹುಕುಮಸಿಂಗ್** (ಪೂರ್ವ ಪಂಜಾಬ್ : ಸಿಖ್) ಮಾನ್ಯ ಉಪಸಭಾಪತಿ, ನಾನು :

---

* ಸಿ.ಎ.ಡಿ. (ಅಧಿಕೃತ ವರದಿ) ಸಂಪುಟ ೭, ೨೩ನೆಯ ನವೆಂಬರ್, ೧೯೪೮, ಪುಟ ೫೪೦

"೩೭ನೆಯ ವಿಧಿಯಲ್ಲಿರುವ 'ಪರಿಶಿಷ್ಟ ಜಾತಿಗಳು' ಎಂಬ ಶಬ್ದಗಳನ್ನು "ಯಾವುದೇ ಧರ್ಮದ ಅಥವಾ ವರ್ಗದ ಎಲ್ಲಾ ಹಿಂದುಳಿದ ಪಂಗಡಗಳು" ಎಂಬ ಶಬ್ದಗಳಿಂದ ಬದಲಾಯಿಸಬೇಕೆಂದು ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

ಸ್ವಾಮಿ, ಈ ಕರಡುಪ್ರತಿ ಸಂವಿಧಾನದಲ್ಲಿನ ವಿಧಿ ೩೦೩ ಯ (ಡಿ) ದಲ್ಲಿ 'ಪರಿಶಿಷ್ಟ ಜಾತಿ'ಗಳನ್ನು ವ್ಯಾಖ್ಯಿಸಲಾಗಿದೆ; ಇದರ ಪ್ರಕಾರ, ಭಾರತ ಸರಕಾರ (ಪರಿಶಿಷ್ಟ ಜಾತಿಗಳ) ಕಾನೂನು ೧೯೩೬ರಲ್ಲಿ, ನಮೂದಿಸಲಾದ ಜಾತಿ ಮತ್ತು ಜನಾಂಗಗಳೇ ಪರಿಶಿಷ್ಟ ಜಾತಿಗಳಾಗಿರುತ್ತವೆ. ಇಂಥಾ ಕಾನೂನಿನಲ್ಲಿ ಬಹುತೇಕದ ಬುಡಕಟ್ಟಿನವರನ್ನು ಜಾತಿಗಳನ್ನು ಮತ್ತು ಉಪ-ಜಾತಿಗಳನ್ನು ಸೇರಿಸಲಾಗಿರುತ್ತದೆ ಮತ್ತು ಇವುಗಳು ಬವೇರಿಯಾ, ಚಮಾರ, ಚುಬ್ರಾ, ಬಾಲ್ಮಿಕಿ, ಒದ್, ನನ್ಸಿ, ಸಿರ್ಕಿಬಾಂದ್ ಮತ್ತು ರಾಮದಾಸಿಗಳನ್ನು ಒಳಗೊಂಡಿರುತ್ತವೆ. ಈ ಜಾತಿಗಳು ವಿವಿಧ ನಂಬಿಕೆಯ ಮತ್ತು ವಿಶ್ವಾಸದ ಜನರನ್ನು ಹೊಂದಿರುತ್ತವೆ. ಉದಾಹರಣೆಗಾಗಿ, ಇವರಲ್ಲಿ, ಸಿಖ್ ರಾಮದಾಸಿಗಳು, ಬಡ್‌ಗಳು, ಬಾಲ್ಮಿಕಿಗಳು ಮತ್ತು ಚಮಾರರು ಬಹಳ ಸಂಖ್ಯೆಯಲ್ಲಿ ಇದ್ದಾರೆ. ಇತರ ನಂಬಿಕೆಗಳ ಹಿಂದುಳಿದ ಅಣ್ಣತಮ್ಮಂದಿರಷ್ಟೆ ಇವರುಗಳು ಸಹ ಹಿಂದುಳಿದವರಾಗಿರುತ್ತಾರೆ. ಆದರೆ, ಇಲ್ಲಿಯವರೆಗೆ ಈ ಸಿಖ್ ಜನಾಂಗದಲ್ಲಿ ಬರುವ ಹಿಂದುಳಿದ ವರ್ಗದವರನ್ನು ಪರಿಶಿಷ್ಟ ಜಾತಿಗಳಿಗೆ ಸಿಗುವ ಅನುಕೂಲತೆಗಳಿಂದ ದೂರವಿಡಲಾಗಿದೆ. ಅವರಲ್ಲಿನ ಹೆಚ್ಚಾದ ಅಸಂತೋಷ ಅಥವಾ ಅವರ ಬೃಹತ್ ಪ್ರಮಾಣದಲ್ಲಿನ ಮತಾಂತರಗಳೇ ಇದರ ಕೆಟ್ಟ ಪರಿಣಾಮವಾಗುತ್ತದೆ.

ಶಾಸಕಾಂಗದ ಚುನಾವಣೆಯ ಬಗ್ಗೆ ಹೇಳುವುದಾದರೆ ಸಿಖ್‌ರು ಪರಿಶಿಷ್ಟ ಜಾತಿಯ ಜನರಂತೆ ಸಾಮಾನ್ಯ ಸ್ಥಾನಗಳಿಂದ ಕೆಲವು ಸ್ಥಾನಗಳನ್ನು ಮೀಸಲಾಗಿ ಪಡೆಯಬೇಕೆಂಬ ವಾದದಲ್ಲಿ ಸತ್ಯವಿದೆ ಎಂಬುದನ್ನು ನಾನು ಮನಗಂಡಿರುವೆ. ಶ್ರೀ ಎಸ್. ಗೋಪಾಲ ಸಿಂಗ್ ಖಾಲಸಾರ ಪ್ರಸಿದ್ಧ ವ್ಯಾಜ್ಯದಲ್ಲಿ ಆತ ನಾನು ಸಿಖ್ ಅಲ್ಲ ಎಂದು ಹೇಳಿಕೆ ನೀಡಿದ ನಂತರ ಚುನಾವಣೆಯಲ್ಲಿ ಆತನಿಗೆ ಪರವಾನಗಿ ಕೊಟ್ಟದ್ದಾಗಿರುತ್ತದೆ. ಇಂಥಾ ವ್ಯಾಜ್ಯಗಳ ಕೆಲವು ವರ್ಗಗಳಲ್ಲಿ ನಮಗೆ ಅನ್ಯಾಯವಾಗಿದೆ ಎಂಬ ನಂಬಿಕೆ ಹುಟ್ಟಿಸಿ ಅವರಲ್ಲಿ ನಿರಾಶೆ ಮತ್ತು ಅಸಂತೋಷವನ್ನು ಉಂಟುಮಾಡಿರುತ್ತವೆ.

ಸಮಾಜದ ಹಿಂದುಳಿದ ವರ್ಗಗಳು ಸಹ ರಾಷ್ಟ್ರೀಯ ಚಟುವಟಿಕೆಗಳಲ್ಲಿ ಉಳಿದವರಂತೆ ಸಮಾನವಾದ ಕೊಡುಗೆಯನ್ನು ನೀಡಬೇಕೆಂಬ ಉದ್ದೇಶವೇ ಅವರನ್ನು ಮೇಲೆತ್ತಲು ಇರುವ ಮೂಲಭೂತ ಉದ್ದೇಶವಾಗಿರುತ್ತದೆ. ಈ ವಿಚಾರವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಈಗಿನ ಕಾನೂನಿನ ಮೊದಲ ಭಾಗ ನಮ್ಮ ಜನತೆಯಲ್ಲಿನ ದೀನ ದುರ್ಬಲ ವರ್ಗಗಳಿಗೆ ಶೈಕ್ಷಣಿಕ ಮತ್ತು ಆರ್ಥಿಕ ಲಾಭಗಳ ಹೆಚ್ಚಳಕ್ಕಾಗಿ ಅನುವು ಮಾಡಿಕೊಡುತ್ತದೆ. ಇಲ್ಲಿಯವರೆಗೆ ಈ ಕಾನೂನು ಒಳ್ಳೆಯದಾಗಿದೆ ಮತ್ತು ಸಮಾಜದ ಪ್ರತಿಯೊಂದು ಹಿಂದುಳಿದ ವರ್ಗಗಳಿಗೆ ಅನ್ವಯಿಸುತ್ತದೆ. ಆದರೆ, 'ದುರ್ಬಲ ವರ್ಗಗಳು' ಯಾವುವು ಎಂಬುದನ್ನು ಎಲ್ಲಿಯೂ ವ್ಯಾಖ್ಯಾನಿಸದೆ ಇರುವುದರಿಂದ, ಈ ಕಾಯಿದೆಯನ್ನು ಅನಂತರದ ಭಾಗ ಅಂದರೆ ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದ ಭಾಗಕ್ಕೆ ಎಲ್ಲರ ಗಮನ ಹೋಗುತ್ತದೆ; ಮತ್ತು ಇಲ್ಲಿನ 'ದುರ್ಬಲವರ್ಗ'ಗಳಿಗೆ ಏನೂ ಅರ್ಥವಿಲ್ಲವೆಂಬ ಅಂಜಿಕೆ ನಮ್ಮ ಮನದಲ್ಲಿ ಬರುತ್ತದೆ. ಮೇಲಾಗಿ, ಈ ಕಾನೂನು ಸಹ ಅದರ ಅನಂತರದ ಭಾಗದಲ್ಲಿರುವ ವಿಶೇಷವಾಗಿ ನಮೂದಿಸಲಾದ ಪರಿಶಿಷ್ಟ ಜಾತಿಗಳ ಮೇಲೆ ಸಂಪೂರ್ಣ ಒತ್ತು ನೀಡುತ್ತದೆ.

ನಾನು ಈ ಮೇಲೆ ಹೇಳಿದ ವಿಷಯವನ್ನು ಯಾರು ತಪ್ಪಾಗಿ ತಿಳಿದುಕೊಳ್ಳಲ್ಲಿಕ್ಕಿಲ್ಲವೆಂಬ ಭಾವನೆ

ನನಗಿದೆ. ಸರಕಾರದ ಪರಿಶಿಷ್ಟ ಜಾತಿಗಳ ಕಡೆ ಇರುವ ವಿಶೇಷ ಕಾಳಜಿ ಬಗ್ಗೆ ನನಗೇನೂ ಅಸಂತೋಷವಿಲ್ಲ. ಆದರೆ ಸರಕಾರ ಹಿಂದುಳಿದ ವರ್ಗಗಳಿಗೆ ಇನ್ನೂ ಹೆಚ್ಚಿನ ಸವಲತ್ತುಗಳನ್ನು ಮತ್ತು ಅಧಿಕ ಕಾಳಜಿ ನೀಡುವುದನ್ನು ನಾನು ಬೆಂಬಲಿಸುತ್ತೇನೆ. ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ಜಾತಿಗಳ ನಡುವೆ ಯಾವ ತಾರತಮ್ಯ ಇರಬಾರದೆಂಬುದೇ ನನ್ನ ಒಂದೇ ಒಂದು ಉದ್ದೇಶವಾಗಿದೆ. ಸರಕಾರದ ನಿಯಮದ ಇಚ್ಛೆಯೂ ಸಹ ಇವೆರಡಲ್ಲಿ ತಾರತಮ್ಯ ಮಾಡಬಾರದೆಂಬುದಾಗಿರುತ್ತದೆ. ಸಿಖ್ ಧರ್ಮವನ್ನು ಬೋಧಿಸುವವರು ಪರಿಶಿಷ್ಟ ಜಾತಿಯವರಿಂದ ಬೇರೆ ಇರುತ್ತಾರೆ ಎಂಬುದು ಸಾಮಾನ್ಯ ಜನರ ತಿಳುವಳಿಕೆಯಾಗಿರುತ್ತದೆ. ಇಂಥಾ ತಪ್ಪು ಕಲ್ಪನೆ ಅಥವಾ ತಾರತಮ್ಯವನ್ನು ಪ್ರೋತ್ಸಾಹಿಸುವ ಶಕ್ತಿಗಳ ವಿರುದ್ಧ ನಾವು ವಿಶೇಷವಾಗಿ ಹೋರಾಟ ಮಾಡಬೇಕಾಗಿದೆ. ಪ್ರಸ್ತುತ ನಿಯಮದ ಅಡಿಯಲ್ಲಿ, 'ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು' ಪ್ರೋತ್ಸಾಹಿಸಬೇಕಾಗಿರುವುದರಿಂದ ಇದು ಒಂದು ಪ್ರತ್ಯೇಕ ಧರ್ಮ ಅಥವಾ ನಂಬುಗೆಗೆ ಅನ್ವಯಿಸದೆ ಎಲ್ಲಾ ಹಿಂದುಳಿದ ವರ್ಗಗಳಿಗೂ ಅನ್ವಯಿಸಬೇಕೆಂಬುದನ್ನು ನಾವು ಪ್ರೋತ್ಸಾಹಿಸಬೇಕು. ಆದ್ದರಿಂದ ಈ ತಿದ್ದುಪಡಿಯನ್ನು ಸದನದ ಸ್ವೀಕಾರಕ್ಕಾಗಿ ನಾನು ಶಿಫಾರಸು ಮಾಡುತ್ತೇನೆ.

**ಶ್ರೀ ಎ.ವಿ.ಠಕ್ಕರ್** (ಕಾಥಿಯಾವಡದ ಒಕ್ಕೂಟ ರಾಜ್ಯಗಳು : ಸೌರಾಷ್ಟ್ರ): ಸ್ವಾಮಿ, ಹಿಂದುಗಳಲ್ಲಿನ ಮತ್ತು ಮುಸ್ಲಿಮರಲ್ಲಿನ ಹಿಂದುಳಿದ ವರ್ಗದವರನ್ನು 'ಹಿಂದುಳಿದ ವರ್ಗಗಳಲ್ಲಿ' ಸೇರಿಸಲು ಕೇಳುವ ತಿದ್ದುಪಡಿಯನ್ನು ನಾನು ವಿನಂತಿಸಿಕೊಳ್ಳುತ್ತೇನೆ.

**ಗೌರವಾನ್ವಿತ ಬಿ.ಆರ್. ಅಂಬೇಡ್ಕರ್ :** ನಾನು ಒಂದು ಹೇಳಿಕೆಯನ್ನು ನೀಡಬಹುದೇ? ಅನುಸೂಚಿಯಲ್ಲಿಯೇ ಹಿಂದುಳಿದ ವರ್ಗಗಳು ಇತ್ಯಾದಿ ಎಂಬ ಈ ಎರಡು ತಿದ್ದುಪಡಿಗಳು ಹೆಚ್ಚಿಗೆ ಕಂಡುಬರುತ್ತವೆ ಎಂದು ನಾನು ನಂಬಿದ್ದೇನೆ. ಆದುದರಿಂದ ಅನುಸೂಚಿಯ ಸಂಗಡ ಇವೆರಡರ ಜೊತೆಗೆ ವ್ಯವಹರಿಸಿದಲ್ಲಿ ಅದು ಉತ್ತಮವಿರುತ್ತದೆ. ಆದುದರಿಂದ, ಈ ತಿದ್ದುಪಡಿಗಳ ಬಗೆಗಿನ ತೀರ್ಮಾನವನ್ನು ಸ್ವಲ್ಪ ಮುಂದೂಡಬಹುದು.

**ಶ್ರೀ ಎ.ವಿ. ಠಕ್ಕರ್ :** ನನ್ನ ತಿದ್ದುಪಡಿ ಕೆಲವು ತತ್ವಗಳನ್ನು ರಚಿಸಲು ಪ್ರಯತ್ನಿಸುತ್ತಿದೆ.

**ಮಾನ್ಯ ಉಪಸಭಾಪತಿ :** ಅನುಸೂಚಿಯಲ್ಲಿ ಇವುಗಳಿಗೆ ಸಾಧ್ಯವಾಗಬಹುದಾದ –ಸಂಪೂರ್ಣ– ಗಮನವನ್ನು ನೀಡಲು ಪ್ರಸ್ತಾಪಿಸಿದ್ದಾರೆ.

**ಶ್ರೀ ಎ.ವಿ. ಠಕ್ಕರ್ :** ಎಲ್ಲಾ ಹಿಂದುಳಿದ ವರ್ಗಗಳನ್ನು ಅವರು ಅನುಸೂಚಿಯಲ್ಲಿ ಸೇರಸಲು ಒಪ್ಪಿರುವರೋ?

**ಮಾನ್ಯ ಉಪಸಭಾಪತಿ :** ಸದ್ಯದ ಪರಿಸ್ಥಿತಿಯಲ್ಲಿ ನಾನು ಯಾವುದಕ್ಕೂ ಒಪ್ಪಲಾರೆ. ಮುಂದಿನ ದಿನಗಳಲ್ಲಿ ಈ ವಿಷಯ ಚರ್ಚೆಗೆ ತೆರೆದಿದೆ.

**ಶ್ರೀ ಎ.ವಿ. ಠಕ್ಕರ್ :** ಹಾಗಾದರೆ, ಈಗ ನಾನು ನನ್ನ ತಿದ್ದುಪಡಿಯನ್ನು ಮಂಡಿಸುವುದಿಲ್ಲ.

**ಮಿ। ನಜೀರುದ್ದೀನ್ ಅಹ್ಮದ್ :** ಸ್ವಾಮಿ ನಾನು ನನ್ನ ಸಂಖ್ಯೆ ೯೮೫ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ. ಇದು ಪರಿಶಿಷ್ಟ ಜಾತಿಗಳ ವಿಷಯದಲ್ಲಿ ದೊಡ್ಡಕ್ಷರ (Capital Letters) ಪದಗಳನ್ನು ಉಪಯೋಗಿಸುವುದಕ್ಕಾಗಿ ಮಾತ್ರ ಸಂಬಂಧಿಸಿದೆ. ನಾನು ಸಂವಿಧಾನದ ಕರಡು ಪ್ರತಿಯ ಪುಟ ೧೪೭ರಲ್ಲಿರುವ ವಿಧಿ ೩೦೩ (i) ವಿಷಯಗಳಾದ (w) ಮತ್ತು (x)ಗಳ ಮೇಲೆ. ಈ ಸಮಿತಿಯ ಅಧ್ಯಕ್ಷರ ಗಮನವನ್ನು ಗೌರವಪೂರ್ವಕವಾಗಿ ಸೆಳೆಯಬೇಕೆಂದಿದ್ದೇನೆ. ಅದರಲ್ಲಿ 'ಪರಿಶಿಷ್ಟ ಜಾತಿಗಳು' ಮತ್ತು 'ಪರಿಶಿಷ್ಟ ಜನಾಂಗಗಳು'

ಎಂಬ ಎರಡು ರೀತಿಯ ವಿಶೇಷ ವ್ಯಾಖ್ಯೆಗಳಿವೆ. 'ಪರಿಶಿಷ್ಟ ಜಾತಿಗಳು' ಎಂಬ ಶಬ್ದಗಳನ್ನು ಎಲ್ಲಾ ಕಡೆ ದಪ್ಪಕ್ಷರಗಳಲ್ಲಿ ಬರೆಯಲಾಗಿದೆ, ಆದರೆ 'ಪರಿಶಿಷ್ಟ ಜನಾಂಗಗಳು' ಎಂಬ ಪದಗಳನ್ನು ಚಿಕ್ಕ ಅಕ್ಷರಗಳಲ್ಲಿ ಬರೆಯಲಾಗಿರುತ್ತದೆ.

**ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್ :** ಇದನ್ನು ನಾವು ಗಮನಿಸುತ್ತೇವೆ.

**ಸರದಾರ ಹುಕುಮ್ ಸಿಂಗ್ :** ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ನಾನು ಕೇಳಿಕೊಳ್ಳುತ್ತೇನೆ. ಸಭೆಯ ಅನುಮತಿ ಪಡೆದು ತಿದ್ದುಪಡಿಯನ್ನು ವಾಪಸು ಪಡೆಯಲಾಯಿತು.

ವಿಧಿ ೩೭ನ್ನು ಸಂವಿಧಾನಕ್ಕೆ ಸೇರಿಸಲಾಯಿತು.

* * * * *

## ವಿಧಿ ೩೮

* **ಮಾನ್ಯ ಉಪಸಭಾಪತಿ :** ಈ ದಿನದ ಕಾರ್ಯಕಲಾಪಗಳನ್ನು ಮೊದಲು ನಾವು ಸಂವಿಧಾನದ ಕರಡುಪ್ರತಿಯಲ್ಲಿನ ಒಂದು ಪ್ರತ್ಯೇಕ ನಿಯಮದ ಬಗ್ಗೆ ವಿಚಾರಗಳನ್ನು ಮಂಡಿಸುವುದರಿಂದ ಪ್ರಾರಂಭಿಸೋಣ. ಒಂದು ಮಸೂದೆಯನ್ನು ಪ್ರಸ್ತಾಪಿಸುವ ಕಾರ್ಯ ಅನಂತರ ಕೈಗೆತ್ತಿಕೊಳ್ಳೋಣ.

**ಪ್ರೊ. ಶಿಬ್ಬಾನ್ ಲಾಲ ಸಕ್ಸೇನಾ** (ಸಂಯುಕ್ತ ಪ್ರಾಂತಗಳು : ಸಾಮಾನ್ಯ) ಮಹಾವೀರ ತ್ಯಾಗಿಯವರ ತಿದ್ದುಪಡಿಯ ಮೇಲಿನ ಒಂದು ತಿದ್ದುಪಡಿಯನ್ನು ಸದನದಲ್ಲಿ ನಾನು ಇಡುತ್ತಿದ್ದೇನೆ. ಅವರು ತನ್ನ ತಿದ್ದುಪಡಿಯಲ್ಲಿ 'ವೈದ್ಯಕೀಯ ಉದ್ದೇಶಗಳಿಗೆ ಹೊರತಾದ' ಎಂಬ ಶಬ್ದಗಳನ್ನು ಸೇರಿಸಿಲ್ಲ; ಇವುಗಳನ್ನು ನಾನು ಸೇರಿಸಿದ್ದೇನೆ. ಆದುದರಿಂದ, ಇದು ಅವರಿಗೆ ಒಪ್ಪಿಗೆಯಾಗುತ್ತದೆ ಎಂಬ ನಂಬಿಕೆ ನನಗೆ ಇರುತ್ತದೆ. ಒಂದು ವೇಳೆ ತ್ಯಾಗಿಯವರ ತಿದ್ದುಪಡಿಯನ್ನು ನನ್ನ ಶಬ್ದಗಳನ್ನು ಅದಕ್ಕೆ ಸೇರಿಸಿದ ಮೇಲೆ ಅದನ್ನು ನನ್ನ ತಿದ್ದುಪಡಿಯೆಂದು ಒಪ್ಪಿದಲ್ಲಿ, ಅದು ಬಹಳ ಉತ್ತಮವಾಗಿ ಬಿಡುತ್ತದೆ. ಪಟ್ಟಿ ನಾಲ್ಕರಲ್ಲಿನ ಸಂಖ್ಯೆಯನ್ನು ೮೬ರಲ್ಲಿ ಹೇಳಲಾದ ನನ್ನ ಈ ತಿದ್ದುಪಡಿಯನ್ನು ಡಾ| ಅಂಬೇಡ್ಕರರು ಒಪ್ಪುತ್ತಾರೆಂದು ನಾನು ಆಶಿಸುತ್ತೇನೆ.

ಸ್ವಾಮಿ ನಾನು : "೩೮ ನೆಯ ವಿಧಿಯ ಕೊನೆಗೆ ಈ ಕೆಳಗಿನ ಪದಗಳನ್ನು; ಮತ್ತು ವೈದ್ಯಕೀಯ ಉದ್ದೇಶಗಳಿಗೆ ಹೊರತಾಗಿ ನಶೆ ಬರಿಸುವ ಪೇಯ ಮತ್ತು ಔಷಧಗಳ ಸೇವನೆಯ ನಿಷೇಧಕ್ಕಾಗಿ ಶ್ರಮಿಸಲಾಗುವುದು' ಎಂಬ ಪದಗಳಿಂದ ಬದಲಾಯಿಸಬೇಕು" ಎಂಬ ತಿದ್ದುಪಡಿಯನ್ನು ಮಂಡಿಸಲು ನಾನು ವಿನಂತಿಸಿಕೊಳ್ಳುತ್ತೇನೆ.

* * * * *

** **ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿ, ಪ್ರೊ. ಶಿಬ್ಬಾನ್ ಲಾಲ ಸಕ್ಸೇನಾರು ಮಂಡಿಸಿದ ಮೇಲಿನ ತಿದ್ದುಪಡಿಯನ್ನು ಅದರಲ್ಲಿ ಮೊದಲಲ್ಲಿ ಬರುವ 'ಮತ್ತು' ಎಂಬ ಶಬ್ದದ ನಂತರ 'ಪ್ರತ್ಯೇಕವಾಗಿ' ಎಂಬ ಶಬ್ದವನ್ನು ಸೇರಿಸಿ ನಾನು ಅದನ್ನು ಒಪ್ಪುತ್ತೇನೆ.

**ಶ್ರೀ ಮಹಾವೀರ ತ್ಯಾಗಿ :** ಪ್ರೊ. ಶಿಬ್ಬಾನರು ಮಂಡಿಸಿದ ತಿದ್ದುಪಡಿಯನ್ನು ಗೌರವಾನ್ವಿತ

---

* ಸಿ.ಎ.ಡಿ. ಸಂಪುಟ ೭, ೨೪ನೆಯ ನವೆಂಬರ್, ೧೯೪೮, ಪುಟ ೫೫೫

** ಸಿ.ಎ.ಡಿ. ಸಂಪುಟ ೭, ೨೪ನೆಯ ನವೆಂಬರ್, ೧೯೪೮, ಪುಟ ೫೬೬–೬೭

ಡಾ। ಬಿ.ಆರ್. ಅಂಬೇಡ್ಕರ್‌ರು ಹೇಗೆ ಒಪ್ಪುತ್ತಾರೆಂಬ ವಿಷಯ ನನಗೆ ನಿಜವಾಗಿ ಅರ್ಥವಾಗುತ್ತಿಲ್ಲ. ಇಲ್ಲಿ ಚರ್ಚೆಯಾಗುತ್ತಿರುವ ತಿದ್ದುಪಡಿ ನನ್ನದಿದೆ.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ಪ್ರೊ. ಶಿಬ್ಬಾನ್ ಲಾಲ ಸಕ್ಸೇನಾರ ತಿದ್ದುಪಡಿಯಿಂದ ತಿದ್ದಲಾದ ಮಿ। ತ್ಯಾಗಿಯವರ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ. (ನಗೆ)

**ಮಾನ್ಯ ಉಪಸಭಾಪತಿ :** ಶ್ರೀ ತ್ಯಾಗಿಯವರು ಹಕ್ಕುಗಳಿಗೆ ಅಂಟಿಕೊಳ್ಳುವ ಒಬ್ಬ ವ್ಯಕ್ತಿಯಾಗಿದ್ದಾರೆ (great sticker for rights).

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ಒಂದು ವೇಳೆ ನೀವು ಹಾಗೆ ಹೇಳುವುದಾದರೆ ಈ ಹಕ್ಕು ನನಗೆ ಸಂಬಂಧಿಸಿರುತ್ತವೆ, ಏಕೆಂದರೆ ಈ ತಿದ್ದುಪಡಿಯನ್ನು ಬರೆದುಕೊಟ್ಟವನು ನಾನು (ಪುನಃ ಎಲ್ಲರೂ ನಗುವರು)

**ಮಾನ್ಯ ಉಪಸಭಾಪತಿ :** ಡಾ। ಅಂಬೇಡ್ಕರರ ಈ ಮಾತು ವಿಷಯವನ್ನು ಹೊಸ ಬೆಳಕಿನಲ್ಲಿಡುತ್ತದೆ.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಇಂಥಾ ತಿದ್ದುಪಡಿಯನ್ನು ಒಪ್ಪಿಕೊಳ್ಳುವಲ್ಲಿ ಏನಾದರೂ ತೊಂದರೆ ಅನುಭವಿಸಬಹುದೆಂದು ನನಗೆ ಅನಿಸಿಲ್ಲ. ಆದರೂ, ಇದರ ವಿರುದ್ಧ ಎರಡು ವಿಷಯಗಳನ್ನು ಎತ್ತಲಾಗಿದೆ. ಮೊದಲನೆಯದು ಕೊಲ್ಹಾಪುರವನ್ನು ಈ ಸಭೆಯಲ್ಲಿ ಪ್ರತಿನಿಧಿಸುವ ಪ್ರೊ। ಖಾಂಡೇಕರದ್ದಾಗಿರುತ್ತದೆ. ಇದು, ನಿರ್ದೇಶಿತ ತತ್ವಗಳ ನೀತಿಯನ್ನು ಪ್ರತ್ಯೇಕವಾಗಿ ಹೇಳುವ ವಿಧಿ ಒಂದರ ಕಲಮು ಆಗಿರುತ್ತದೆ ಎಂಬುದನ್ನು ಮಿ। ಖಾಂಡೇಕರರು ಸಾಕಷ್ಟು ಹೊಗಳುತ್ತಿಲ್ಲವೆಂಬುದು ನನಗೆ ಖಚಿತವಾಗಿದೆ. ಆದ್ದರಿಂದ ಈ ತತ್ವವನ್ನು ಅನುಷ್ಠಾನಕ್ಕೆ ತರಲು ಸರಕಾರಕ್ಕೆ ಯಾವ ಒತ್ತಾಯ ಇರುವುದಿಲ್ಲ. ಈ ತತ್ವವನ್ನು ಅನುಷ್ಠಾನಕ್ಕೆ ತರಬೇಕೋ ಬೇಡವೋ ಮತ್ತು ಯಾವಾಗ ಈ ತತ್ವವನ್ನು ಅನುಷ್ಠಾನಕ್ಕೆ ತರಬೇಕು ಎನ್ನುವುದು ಸರಕಾರ ಮತ್ತು ಸಾರ್ವಜನಿಕರ ಅಭಿಪ್ರಾಯಕ್ಕೆ ಬಿಟ್ಟಿರುವ ವಿಷಯವಾಗಿದೆ. ಆದಕಾರಣ, ಒಂದು ವೇಳೆ ಸರಕಾರ ನಿರ್ದೇಶನ ತತ್ವಗಳ ಅಡಿಯಲ್ಲಿ ಪಾನ ನಿರೋಧವನ್ನು ಪ್ರಾರಂಭಿಸಲು ತಕ್ಕ ಸಮಯ ಇನ್ನೂ ಬಂದಿಲ್ಲವೆಂದು ಭಾವಿಸಿದ್ದಲ್ಲಿ ಅಥವಾ ಇದನ್ನು ಕ್ರಮೇಣ ಅಥವಾ ಭಾಗಶಃ ಪ್ರಾರಂಭಿಸಬಹುದೆಂದಾದಲ್ಲಿ, ಅದು ಆ ರೀತಿ ಕಾರ್ಯವನ್ನು ಕೈಗೊಳ್ಳುವ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿರುತ್ತದೆ. ಆದ್ದರಿಂದ, ನಾನು ಇಂಥಾ ವಿಷಯದಲ್ಲಿ ಯಾವುದೇ ಬಗೆಯ ಒತ್ತಾಯವನ್ನು ಹೊಂದಿರಬಾರದು.

ಆದರೆ, ಸ್ವಾಮಿ, ನಾನು ನನ್ನ ಗೆಳೆಯ ಮಿ. ಜಯಪಾಲ ಸಿಂಘರು ಮಾಡಿದ ಭಾಷಣ ನನಗೆ ತುಂಬಾ ಆಶ್ಚರ್ಯವಾಗಿದೆ. ಅವರು, ಈ ವಿಷಯವನ್ನು ಈ ಹಂತದಲ್ಲಿ ಚರ್ಚಿಸಲೇ ಬಾರದೆಂದು ಹೇಳಿದ್ದಾರೆ; ಆದರೆ ಈ ವಿಷಯವನ್ನು ಬುಡಕಟ್ಟಿನ ಪ್ರದೇಶಗಳ, ಸಲಹಾ ಸಮಿತಿಯ ವರದಿಯನ್ನು ಗಮನಕ್ಕೆ ತೆಗೆದುಕೊಳ್ಳುವವರೆಗೆ ಇದನ್ನು ಮುಂದಕ್ಕೆ ಹಾಕಬಹುದು. ಒಂದು ವೇಳೆ ಅವರು ಕರಡುಪ್ರತಿ ಸಂವಿಧಾನವನ್ನು, ಅದರಲ್ಲೂ ಅದರ ಆರನೆಯ ಅನುಸೂಚಿಯಲ್ಲಿನ ೧೨ನೆಯ ಪ್ಯಾರಾವನ್ನು ಓದಿದ್ದಲ್ಲಿ ಅವರು ಗುಡ್ಡಗಾಡಿನ ಜನರ ದರ್ಜೆಯನ್ನು ಪಾನ ನಿರೋಧದ ಪ್ರಶ್ನೆಗೆ ಸಂಬಂಧಿಸಿದಂತೆ ಕಾಪಾಡಿಕೊಂಡು ಬರುವ ಸಾಕಷ್ಟು ಅವಕಾಶಗಳನ್ನು ಕಂಡುಕೊಳ್ಳಬಹುದಾಗಿತ್ತು. ಗುಡ್ಡಗಾಡು ಪ್ರದೇಶಗಳ ಯೋಜನೆಗಳ ವಿಷಯದಲ್ಲಿ ಸರಕಾರದಿಂದ ಮಾಡಲ್ಪಟ್ಟ ಕಾಯಿದೆಗಳು, ಅವು ಪ್ರಾಂತೀಯ ಸರಕಾರದಿಂದ ಮಾಡಿದವುಗಳಾಗಿರಬಹುದು ಅಥವಾ ಕೇಂದ್ರ ಸರಕಾರದವುಗಳಾಗಿರಬಹುದು, ಅಪ್ರಯತ್ನವಾಗಿ ಆ ಪ್ರದೇಶಗಳಿಗೆ ಅನ್ವಯವಾಗುವುದಿಲ್ಲ. ಮೊದಲಲ್ಲಿ, ಕಾಯಿದೆಗಳನ್ನು ಮಾಡಬೇಕಾಗುವುದು. ಎರಡನೆಯದಾಗಿ ಇಂಥಾ ಪ್ರದೇಶಗಳ ವ್ಯವಹಾರಗಳನ್ನು ನಿರ್ವಹಿಸಲು ಸಂವಿಧಾನದಲ್ಲಿ ಸ್ಥಾಪಿಸಲಾದ ಜಿಲ್ಲಾ ಮಂಡಳಿಗಳು

ಅಥವಾ ಪ್ರಾದೇಶಿಕ ಮಂಡಳಿಗಳಿಗೆ ಪ್ರಾಂತೀಯ ಅಥವಾ ಕೇಂದ್ರ ಸರಕಾರ ಮಾಡಿದ ಪ್ರತ್ಯೇಕ ಕಾಯಿದೆ ಗುಡ್ಡಗಾಡು ಜನರು ವಾಸಿಸುತ್ತಿರುವ ಪ್ರತ್ಯೇಕ ಪ್ರದೇಶಕ್ಕೆ ಅನ್ವಯಿಸಬೇಕೋ ಇಲ್ಲವೋ ಎಂಬುದನ್ನು ಹೇಳಬೇಕು ಮತ್ತು ಪಾನನಿರೋಧ ಕಾನೂನಿನ ಅನ್ವಯಿಸುವಿಕೆಯ ಸಂಬಂಧದಲ್ಲಿ ಪ್ರತ್ಯೇಕವಾಗಿ ಹೇಳಬೇಕು. ಕರಡು ಪ್ರತಿ ಸಂವಿಧಾನದದ ೧೮೪ನೇ ಪುಟದಲ್ಲಿರುವ ಪ್ಯಾರಾ ೧೨ ಮತ್ತು ಅದರ ಉಪ– ಪ್ಯಾರಾವನ್ನು ಈಗ ಓದುತ್ತೇನೆ. ಇದು ಹೀಗಿದೆ.

"ಇಂತಹ ಸಂವಿಧಾನದಲ್ಲಿ ಅಸ್ತಿತ್ವದಲ್ಲಿನ ಕಾನೂನುಗಳನ್ನು ಹೊರತುಪಡಿಸಿ–

(ಅ) ಒಂದು ಜಿಲ್ಲಾ ಮಂಡಳಿ ಅಥವಾ ಒಂದು ಪ್ರಾದೇಶಿಕ ಮಂಡಳಿ ಯಾವ ವಿಷಯಗಳ ಕಾಯಿದೆಗಳನ್ನು ಮಾಡಬಹುದೋ ಅಂಥಾ ವಿಷಯಗಳಿಗೆ ಈ ಅನುಸೂಚಿಯಲ್ಲಿನ ಪ್ಯಾರಾ ಮೂರರಲ್ಲಿನ ಸರಕಾರದ ಶಾಸಕಾಂಗದ ಕಾಯಿದೆಗಳು ಅನ್ವಯಿಸುವುದಿಲ್ಲ. ಮತ್ತು ಸರಕಾರದ ಶಾಸಕಾಂಗದ ಭಟ್ಟಿ ಇಳಿಸಲಾರದ ಮತ್ತು ನಶೆ ಬರಿಸುವ ಮದ್ಯದ ಉಪಭೋಗವನ್ನು ನಿರ್ಬಂಧಿಸುವ ಅಥವಾ ನಿಷೇಧಿಸುವ ಕಾಯಿದೆ ಯಾವುದೇ ಸ್ವತಂತ್ರ ಜಿಲ್ಲೆ ಅಥವಾ ಪ್ರದೇಶಕ್ಕೆ, ಅಂಥಾ ಜಿಲ್ಲೆಯ ಆ ಜಿಲ್ಲಾ ಮಂಡಳಿ ಅಥವಾ ಅಂಥಾ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಂದು ಪ್ರಾದೇಶಿಕ ಮಂಡಳಿ ಯಾವುದೇ ಒಂದು ಕಾಯಿದೆಯನ್ನು ತನಗೆ ಸರಿಹೊಂದುವಂತೆ ಮಾರ್ಪಡಿಸಿ ಅಥವಾ ಒಂದು ಅಪವಾದವೆಂಬಂತೆ ಅದನ್ನು ತನ್ನ ಜಿಲ್ಲೆ ಅಥವಾ ಪ್ರದೇಶಗಳಿಗೆ ಅನ್ವಯಿಸುವಂತೆ ಮಾಡದಿದ್ದಲ್ಲಿ, ಅನ್ವಯಿಸಲಾರದು."

ಈಗ, ಆರನೆಯ ಅನುಸೂಚಿಯಲ್ಲಿನ ಪ್ಯಾರಾ ೧೨ರಲ್ಲಿ ಇನ್ನೆಂಥಾ ಮುನ್ನೇರ್ಪಾಡು ಬೇಕಾಗಿದೆಯೋ ನನ್ನ ಮಿತ್ರ ಮಿ. ಜಯಪಾಲ ಸಿಂಗ್‌ರಿಗೆ, ಹಾಗೂ ನನಗೆ ಗೊತ್ತಿಲ್ಲ. ಆತ ಆರನೆಯ ಅನುಸೂಚಿಯನ್ನು ಓದಿಲ್ಲವೆಂಬುದೇ ನನ್ನ ಅಂಜಿಕೆ, ಒಂದು ವೇಳೆ ಆತ ಓದಿದ್ದಲ್ಲಿ, ಸರಕಾರ ತನ್ನ ಪಾನ ನಿರೋಧ ಕಾನೂನನ್ನು ದೇಶದ ಯಾವುದೇ ಭಾಗದಲ್ಲಿ ಅನ್ವಯವಾಗುವಂತೆ ಮಾಡಿದರೂ, ಜಿಲ್ಲಾ ಮಂಡಳಿಗಳ ಅಥವಾ ಪ್ರಾದೇಶಿಕ ಮಂಡಳಿಗಳ ಒಪ್ಪಿಗೆ ಇಲ್ಲದೆ ಗುಡ್ಡಗಾಡಿನ ಪ್ರದೇಶಗಳಲ್ಲಿ ಅನ್ವಯಿಸುವಂತೆ ಮಾಡಲು ಅದಕ್ಕೆ ಯಾವ ಹಕ್ಕೂ ಇರುವುದಿಲ್ಲ.

**ಮಾನ್ಯ ಉಪಸಭಾಪತಿ :** ಇಲ್ಲಿ ಮೂರು ತಿದ್ದುಪಡಿಗಳಿವೆ. ಇವುಗಳಲ್ಲಿ ಒಂದು ಮಿ. ಮಹಾವೀರ ತ್ಯಾಗಿಯವರದ್ದಾಗಿದೆ. ಮತ್ತು ಇದರ ಸಂಖ್ಯೆ ೭೧ ಇದೆ ಹಾಗೂ ಇದು ಎರಡನೆಯ ಪಟ್ಟಿಯಲ್ಲಿದೆ. ಒಂದು ವೇಳೆ ನಾನು ಪರಿಸ್ಥಿತಿಯನ್ನು ಸರಿಯಾಗಿ ಅರಿತುಕೊಂಡಿದ್ದಲ್ಲಿ ಈ ತಿದ್ದುಪಡಿಯನ್ನು ವಾಸ್ತವದಲ್ಲಿ ಹಿಂತೆಗೆದುಕೊಳ್ಳಲಾಗಿರುತ್ತದೆ. ನಾನು ಹೇಳುವುದು ಸರಿಯಾಗಿದೆಯೇ, ಶ್ರೀ ತ್ಯಾಗಿ ?

**ಶ್ರೀ ಮಹಾವೀರ ತ್ಯಾಗಿ :** ನಾನು ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಂಡಿರುವುದಿಲ್ಲ. ಪ್ರೊ. ಶಿಬ್ಬಾನ್ ಲಾಲ ಸಕ್ಸೇನಾರು ನನ್ನ ತಿದ್ದುಪಡಿಗೆ ಸೇರಿಸಿರುವ ಶಬ್ದಗಳನ್ನಷ್ಟೇ ನಾನು ಒಪ್ಪಿರುವೆ.

**ಮಾನ್ಯ ಉಪಸಭಾಪತಿ :** ತ್ಯಾಗಿಯವರೆ, ನಿಮ್ಮ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಮತಕ್ಕಾಗಿ ಇಡಲೋ ಬೇಡವೋ ಎಂಬುದನ್ನು ನಾನು ನಿಮ್ಮಿಂದ ತಿಳಿಯಬಯಸುವೆ.

**ಶ್ರೀ ಮಹಾವೀರ ತ್ಯಾಗಿ :** ಹೌದು ಸ್ವಾಮಿ, ನನ್ನ ತಿದ್ದುಪಡಿಯನ್ನು ಮತಕ್ಕಾಗಿ ಇಡಿ. ಈಗಾಗಲೇ ಹೇಳಿರುವಂತೆ ನಾನು ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದಿರುವೆ. ಸಕ್ಸೇನಾರು ನನ್ನ ತಿದ್ದುಪಡಿಗೆ 'ವೈದ್ಯಕೀಯ ಉದ್ದೇಶಗಳ ಹೊರತಾಗಿ' ಎಂಬ ಶಬ್ದಗಳನ್ನಷ್ಟೇ ಸೇರಿಸಿದ್ದಾರೆ. ಆದುದರಿಂದ, ನನ್ನ ತಿದ್ದುಪಡಿಯೇ ಮೂಲ ತಿದ್ದುಪಡಿಯಾಗಿರುತ್ತದೆ.

**ಮಾನ್ಯ ಉಪಸಭಾಪತಿ :** ಪರಿಸ್ಥಿತಿಯನ್ನು ನಾನು ಅರಿತುಕೊಂಡಿರುವೆ. ನಾನು ಈಗ ಮೊದಲು

ಪ್ರೊ. ಶಿಬ್ಬಾನ್ ಲಾಲ್ ಸಕ್ಸೇನಾರಿಂದ ಅನಂತರ ಡಾ. ಅಂಬೇಡ್ಕರರಿಂದ ಪರಿಷ್ಕರಿಸಲಾದ ಮಾನ್ಯ ಮಹಾವೀರ ತ್ಯಾಗಿಯವರ ತಿದ್ದುಪಡಿಯನ್ನು ಮತಕ್ಕಾಗಿ ಸದನದಲ್ಲಿ ಇಡುತ್ತಿದ್ದೇನೆ.

**ಶ್ರೀ ಮಹಾವೀರ ತ್ಯಾಗಿ :** ನನ್ನ ತಿದ್ದುಪಡಿಯ ಮೇಲೆ ವಿಧಿಬಿಂದು ವಿಷಯದ ಮೇಲೆ ಅದಕ್ಕೆ **"**ಪ್ರತ್ಯೇಕ**"** ಎಂಬ ಪದವನ್ನು ಡಾ। ಅಂಬೇಡ್ಕರರು ಸೇರಿಸಿದ್ದಾರೆ. ಆದರೆ ಹಾಗೆ ಮಾಡಲು ನನ್ನ ಅನುಮತಿಯನ್ನು ಅವರು ತೆಗೆದುಕೊಂಡಿಲ್ಲ.

**ಮಾನ್ಯ ಉಪಸಭಾಪತಿ :** ಡಾ. ಅಂಬೇಡ್ಕರರ ಪರವಾಗಿ ನಾನು ನಿಮ್ಮ ಪರವಾನಗಿಯನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಮಹಾವೀರ ತ್ಯಾಗಿ :** ಸ್ವಾಮಿ, ನಾನು ಅವರ ತಿದ್ದುಪಡಿಯನ್ನು ಒಪ್ಪುತ್ತೇನೆ.

ಈ ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

(ತಿದ್ದುಪಡಿ ಹೊಂದಿದ ನಿಯಮ ೩೮ನ್ನು ಸಂವಿಧಾನಕ್ಕೆ ಸೇರಿಸಲಾಯಿತು)

* * * * *

## ವಿಧಿ ೩೮–ಎ

* **ಪಂಡಿತ ಠಾಕೂರ್‌ದಾಸ್ ಭಾರ್ಗವ** (ಪೂರ್ವ ಪಂಜಾಬ್ : ಸಾಮಾನ್ಯ): (++) ಮಾನ್ಯ ಸಭಾಪತಿ, ಸಂಖ್ಯೆ ೭೨ರ ತಿದ್ದುಪಡಿಯ ಶಬ್ದಗಳನ್ನು ತಿದ್ದುಪಡಿ ಸಂಖ್ಯೆ ೧೦೦೨ರಲ್ಲಿ ಮಂಡಿಸುತ್ತಿರುವೆ ಮತ್ತು ಅವುಗಳು ಈ ಕೆಳಗಿನಂತಿವೆ.

"ವಿಧಿ ೩೮–ಎ ಗೆ ಸಂಬಂಧಿಸಿದ ತಿದ್ದುಪಡಿಗಳಲ್ಲಿನ ಸಂಖ್ಯೆ ೧೦೦೨ರಲ್ಲಿ ಕೆಳಗಿನದನ್ನು ಬದಲಾಯಿಸಬೇಕು.":–

"೩೮–ಎ ಈ ಸರಕಾರ ಕೃಷಿ ಮತ್ತು ಹೈನುಗಾರಿಕೆಯನ್ನು ಆಧುನಿಕ ಮತ್ತು ವೈಜ್ಞಾನಿಕ ರೀತಿಯಲ್ಲಿ ರಚಿಸಬೇಕು ಹಾಗೂ ವಿಶೇಷವಾಗಿ ಪಶುಗಳ ತಳಿಗಳನ್ನು ರಕ್ಷಿಸುವ ಮತ್ತು ಸುಧಾರಿಸಲು ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಆಕಳು ಮತ್ತಿತರ ಪಶುಗಳ, ಅದರಲ್ಲೂ ಹಾಲು ನೀಡುವ ಮತ್ತು ಬೇಸಾಯಕ್ಕೆ ಉಪಯೋಗಿಸುವ ಪಶು ಹಾಗೂ ಕರುಗಳ, ಕೊಲ್ಲುವಿಕೆಯನ್ನು ನಿಷೇಧಿಸಬೇಕು."

ಪ್ರಥಮತಃ ನಾನು ಈ ತಿದ್ದುಪಡಿ ಹೀಗಿದೆ ಎಂದು ............... ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎಸ್. ನಾಗಪ್ಪ** (ಮದ್ರಾಸ್ : ಸಾಮಾನ್ಯ) ಸ್ವಾಮಿ, ಇಲ್ಲಿ ನಾನು ವಿಧಿಬಿಂದು (Point of order)ವನ್ನು ತರಲು ಇಚ್ಛಿಸುತ್ತೇನೆ. ಏಕೆಂದರೆ, ನನ್ನ ಗೌರವಾನ್ವಿತ ಗೆಳೆಯ ಆಂಗ್ಲಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡಬಲ್ಲರು; ಆದರೂ ಹೆಚ್ಚಿನ ಸಂಖ್ಯೆಯಲ್ಲಿ ದಕ್ಷಿಣ ಭಾರತೀಯರು ಅರ್ಥಮಾಡಿಕೊಳ್ಳಲಾರದ ಉರ್ದು ಅಥವಾ ಹಿಂದೂಸ್ಥಾನಿ ಭಾಷೆಯಲ್ಲಿ ಬೇಕೆಂತಲೇ ಮಾತನಾಡುತ್ತಿದ್ದಾರೆ.

**ಮಾನ್ಯ ಉಪಸಭಾಪತಿ :** ಈ ಗೌರವಾನ್ವಿತ ಸದಸ್ಯ ಯಾವುದೇ ಭಾಷೆಯಲ್ಲಿ ಸರಳವಾಗಿ ಮಾತನಾಡಲು

---

* ಸಿ.ಎ.ಡಿ. ಸಂಪುಟ ೭, ೨೪ನೆಯ ನವೆಂಬರ್, ೧೯೪೮, ಪುಟ ೫೬೮

(++) ಹಿಂದೂಸ್ತಾನಿ ಭಾಷಣವನ್ನು ಭಾಷಾಂತರಿಸಲಾಗಿದೆ.

ಹಕ್ಕನ್ನು ಹೊಂದಿರುತ್ತಾರೆ, ಆದರೂ ಆತನನ್ನು ಆಂಗ್ಲಭಾಷೆಯಲ್ಲಿ ಮಾತಾಡಲು (ಆಂಗ್ಲ ಭಾಷೆಯಲ್ಲಿ ಮಾತನಾಡಬೇಕೆಂಬ ಕಟ್ಟಪ್ಪಣೆ ಏನೂ ಇಲ್ಲ) ಬೇಡಿಕೊಳ್ಳುವೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನನ್ನ ಸ್ವಂತ ಭಾಷೆಯಾದ ಹಿಂದಿಯಲ್ಲಿ ಆಕಳಿನ ಬಗ್ಗೆ ಮಾತನಾಡುವುದಕ್ಕೆ ಇಚ್ಛಿಸಿದ್ದೆ ಮತ್ತು ನನಗೆ ಇಂಗ್ಲೀಷಿನಲ್ಲಿ ಮಾತನಾಡಲು ಆಜ್ಞೆ ಮಾಡಬೇಡಿ. ನಾನು ಮಾತನಾಡುವ ವಿಷಯ ಬಹಳ ಮಹತ್ವದ್ದಾಗಿರುವುದರಿಂದ ಈ ವಿಷಯದ ಬಗ್ಗೆ ನಾನು ಯಾವ ಭಾಷೆಯಲ್ಲಿ ಹೆಚ್ಚಿನ ಸರಳತೆ ಮತ್ತು ನಿರರ್ಗಳವಾಗಿ ಮಾತನಾಡಬಲ್ಲೆನೋ ಆ ಭಾಷೆಯಲ್ಲಿಯೇ ಮಾತನಾಡುತ್ತೇನೆ. ಆದುದರಿಂದ, ನನಗೆ ಹಿಂದಿಯಲ್ಲಿ ಮಾತನಾಡಲು ಅವಕಾಶ ನೀಡಿರೆಂದು ನಮ್ರತೆಯಿಂದ ತಮ್ಮನ್ನು ಬೇಡಿಕೊಳ್ಳುತ್ತೇನೆ.

(ಮಾನ್ಯ ಉಪಸಭಾಪತಿ, ಈ ತಿದ್ದುಪಡಿಯ ಬಗ್ಗೆ ನಾನು ಈ ಸದನದಲ್ಲಿ ಹೇಳುವುದೇನೆಂದರೆ, ನಿಜದಲ್ಲಿ, ಇದು, ಇತರ, ಇಂಥಾ ತಿದ್ದುಪಡಿಗಳಂತೆ ಡಾ. ಅಂಬೇಡ್ಕರರು ತಯಾರಿಸಿದ (ಅಂದರೆ ಬರೆದ) ತಿದ್ದುಪಡಿಯಾಗಿರುತ್ತದೆ).

* * * * *

* **ಗೌರವಾನ್ವಿತ ಡಾ। ಬಿ. ಆರ್. ಅಂಬೇಡ್ಕರ್ :** ಪಂಡಿತ ಠಾಕೂರ್ ದಾಸ್ ಭಾರ್ಗವರ ಈ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ.

**ಮಾನ್ಯ ಉಪಸಭಾಪತಿ :** ಈಗ ನಾನು ಈ ತಿದ್ದುಪಡಿಗಳನ್ನು ಒಂದರ ನಂತರ ಮತ್ತೊಂದರಂತೆ ಮತಕ್ಕಾಗಿ ಇಡುವೆ. ಠಾಕೂರ್ ದಾಸ್ ಭಾರ್ಗರವರು ಮಂಡಿಸಿದ ತಿದ್ದುಪಡಿಯ ಸಂಖ್ಯೆ ೭೨ ಇದೆ ಮತ್ತು ಇದು ಪಟ್ಟಿ ಎರಡರಲ್ಲಿದೆ.

(ಮಸೂದೆಯನ್ನು ಸ್ವೀಕರಿಸಲಾಯಿತು)

ವಿಧಿ ೩೮-ಎ ಯನ್ನು ತಿದ್ದುಪಡಿಸಲಾಯಿತು ಮತ್ತು ಸಂವಿಧಾನದಲ್ಲಿ ಅದನ್ನು ಸೇರಿಸಲಾಯಿತು.

* * * * *

## ವಿಧಿ ೩೯

** **ಮಾನ್ಯ ಉಪಸಭಾಪತಿ :** ಕಾರ್ಯಸೂಚಿಯಲ್ಲಿರುವ ಮುಂದಿನ ವಿಷಯಕ್ಕೆ ನಾವು ಹೋಗೋಣವೇನು? ತಿದ್ದುಪಡಿ ಸಂಖ್ಯೆ ೧೦೦೩ರ ವಿಷಯವನ್ನೂ ಈಗಾಗಲೇ ಮಂಡಿಸಲಾಗಿದೆ -- --- ಅನಂತರ ಈಗ ಸಂಖ್ಯೆ ೧೦೦೫ರ ವಿಷಯಕ್ಕೆ ಬರೋಣ; ಇದರ ಮೊದಲನೆಯ ಭಾಗವನ್ನು ಮಂಡಿಸಲಾಗದು, ಆದರೆ ಎರಡನೆಯ ಭಾಗವನ್ನು ಮಂಡಿಸಬಹುದು (ಆದರೆ ಇದನ್ನು ಮಂಡಿಸಲಾಗಲಿಲ್ಲ).

---

* ಸಿ.ಎ.ಡಿ. ಸಂಪುಟ ೭, ೨೪ನೆಯ ನವೆಂಬರ್, ೧೯೪೮, ಪುಟ ೫೮೦

** ಸಿ.ಎ.ಡಿ. ಸಂಪುಟ ೭, ೨೪ನೆಯ ನವೆಂಬರ್, ೧೯೪೮, ಪುಟ ೫೮೧

ಈಗ ವಿಧಿ ೩೯ಕ್ಕೆ ಸಂಬಂಧಿಸಿದ ಗೊತ್ತುವಳಿಗಳು ಸದನದ ಮುಂದೆ ಬಂದಿವೆ. ಈ ವಿಧಿಗೆ ಸಂಬಂಧಿಸಿದಂತೆ ಹಲವಾರು ತಿದ್ದುಪಡಿಗಳಿವೆ. (ತಿದ್ದುಪಡಿ ಸಂಖ್ಯೆ ೧೦೦೬, ೧೦೦೭ ಮತ್ತು ೧೦೦೮ಗಳನ್ನು ಮಂಡಿಸಲಾಗಲಿಲ್ಲ) ತಿದ್ದುಪಡಿ ಸಂಖ್ಯೆ ೧೦೦೯ನ್ನು ಅಂಬೇಡ್ಕರ್ ಮತ್ತು ಅವರ ಸಂಗಾತಿಗಳಿಂದ ಮಂಡಿಸಲಾಗುವುದು.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ವಿಧಿ ೩೯ರಲ್ಲಿನ 'ಕೊಳ್ಳೆ ಲೂಟಿ' ಎಂಬ ಶಬ್ದಗಳಾದ ಮೇಲೆ 'ವಿಕಾರಗೊಳಿಸು' ಎಂಬ ಶಬ್ದವನ್ನು ಸೇರಿಸಬೇಕು, ಎಂದು ನಾನು ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಪ್ರೊ. ಶಿಬ್ಬಾನ್ ಸಕ್ಸೇನಾ :** ಮಾನ್ಯ ಉಪಸಭಾಪತಿ, ಸ್ವಾಮಿ, ೩೯ರ ವಿಧಿಯಲ್ಲಿನ 'ಲೂಟಿ' ಎಂಬ ಶಬ್ದದ ನಂತರ 'ವಿಕಾರಗೊಳಿಸು' ಮತ್ತು ಇರಬಹುದು. ಶಬ್ದದ ನಂತರ ನಿಯಮದ ಕೊನೆಗೆ ಬರುವ ಎಲ್ಲಾ ಶಬ್ದಗಳನ್ನು ತೆಗೆದುಹಾಕಬೇಕೆಂಬ ತಿದ್ದುಪಡಿಯನ್ನು ನಾನು ಬೇಡಿಕೊಳ್ಳುತ್ತೇನೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್ :** ಸ್ವಾಮಿ, ನಾನು ನಿಮ್ಮ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತಿರುವಾಗ ನೀವು ಭಾಷಣ ಮಾಡಲು ಏಕೆ ಇಚ್ಛಿಸುವಿರಿ?

**ಪ್ರೊ. ಶಿಬ್ಬಾನ್ ಲಾಲ ಸಕ್ಸೇನಾ :** ಡಾ. ಅಂಬೇಡ್ಕರ್‌ರು ಈ ತಿದ್ದುಪಡಿಯನ್ನು ಒಪ್ಪಲಿದ್ದಾರೆ ಎಂಬುದು ನನಗೆ ಸಂತೋಷವಾಗಿದೆ. ಈ ತಿದ್ದುಪಡಿಗೆ ಸಂಬಂಧಿಸಿದ ನಿಯಮ 'ನಿರ್ದೇಶಿತ' ತತ್ವವಾಗಿರುವುದರಿಂದ, ಇದು ಸಂಸತ್ತಿನ ಕಾಯಿದೆ ಬಗ್ಗೆ ಏನನ್ನೂ ಹೇಳಬಾರದು. ಆದುದರಿಂದ ಸಂಸತ್ತು ಮಾಡಿದ ಕಾಯಿದೆಯ ಮೂಲಕ ಇಂಥಾ 'ಸ್ಮಾರಕ' ಅಥವಾ 'ಸ್ಥಳ' ಅಥವಾ 'ಮೂರ್ತಿಗಳನ್ನು' ರಕ್ಷಿಸಬೇಕು ಮತ್ತು ಸರಿಯಾದ ಸ್ಥಿತಿಯಲ್ಲಿಡಬೇಕು' ಎಂಬ ಇದರಲ್ಲಿನ ಶಬ್ದಗಳನ್ನು ಬಿಡಬೇಕು.

**ಗೌರವಾನ್ವಿತ ಡಾ| ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ಈ ತಿದ್ದುಪಡಿಯನ್ನು ಒಪ್ಪುತ್ತೇನೆ.

* * * * *

**ಮಾನ್ಯ ಉಪಸಭಾಪತಿ :** ಈ ತಿದ್ದುಪಡಿಗಳನ್ನು ಒಂದರ ನಂತರ ಒಂದರಂತೆ ಸದನದ ಮುಂದೆ ಇಡುತ್ತೇನೆ. ಗೊತ್ತುವಳಿಗಳನ್ನು ಸ್ವೀಕರಿಸಬೇಕು.

**ಮಾನ್ಯ ಉಪಸಭಾಪತಿ :** ಪ್ರೊ. ಶಿಬ್ಬಾನ್ ಲಾಲ ಸಕ್ಸೇನಾರು ಮಂಡಿಸಿದ ತಿದ್ದುಪಡಿ ಇಲ್ಲಿದೆ.

**ಬೇಗಂ ಐಜಾಜ್ ರಸೂಲ್ :** ಪ್ರೊ. ಶಿಬ್ಬಾನ್ ಸಕ್ಸೇನಾರ ತಿದ್ದುಪಡಿಯನ್ನು ಡಾ| ಬಿ.ಆರ್. ಅಂಬೇಡ್ಕರರು ಒಪ್ಪಿರುವರೋ ಇಲ್ಲವೋ ಎಂಬ ವಿಷಯವನ್ನು ತಿಳಿಯಲು ಬಯಸುತ್ತೇನೆ. ಒಂದು ವೇಳೆ ಒಪ್ಪದಿದ್ದಲ್ಲಿ, ನಾನು ಅದರ ಎರಡನೆಯ ಭಾಗವನ್ನು ವಿರೋಧಿಸುತ್ತೇನೆ.

**ಮಾನ್ಯ ಉಪಸಭಾಪತಿ :** ನನಗೆ ಗೊತ್ತಿದ್ದಂತೆ ಈ ತಿದ್ದುಪಡಿಯಲ್ಲಿ ಎರಡನೆಯ ಭಾಗವಿಲ್ಲ. ಇದು ಅದರಲ್ಲಿನ ಕೆಲವು ಶಬ್ದಗಳನ್ನು ತೆಗೆದುಹಾಕುವುದಕ್ಕೆ ಸಂಬಂಧಿಸಿರುತ್ತದೆ.

**ಬೇಗಮ್ ಐಜಾಜ್ ರಸೂಲ್ :** ಈ ತಿದ್ದುಪಡಿಯನ್ನು ನಾನು ವಿರೋಧಿಸಬಯಸುವೆ.

**ಮಾನ್ಯ ಉಪಸಭಾಪತಿ :** ನೀವು ಈ ತಿದ್ದುಪಡಿಯನ್ನು ಬಹಳ ತಡವಾಗಿ ವಿರೋಧಿಸುತ್ತಿರುವಿರಿ ಎಂಬ ಅಂಜಿಕೆ ನನಗಿದೆ.

ತಿದ್ದುಪಡಿಯನ್ನು ಸ್ವೀಕರಿಸಲಾಯಿತು

ತಿದ್ದುಪಡಿಯಾದ ವಿಧಿ ೩೯ನ್ನು ಸಂವಿಧಾನಕ್ಕೆ ಸೇರಿಸಲಾಯಿತು.

* * * * *

## ವಿಧಿ ೩೯–ಎ

***ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಮಾನ್ಯ ಉಪಸಭಾಪತಿ, ಸ್ವಾಮಿ, ನಾನು "ವಿಧಿ ೩೯ರ ನಂತರ, ಈ ಕೆಳಗಿನ ಹೊಸ ವಿಧಿಯನ್ನು ಸೇರಿಸಬೇಕು:

'೩೯–ಎ, ಈ ಸಂವಿಧಾನ ಜಾರಿಗೆ ಬಂದ ನಂತರ ಮೂರು ವರ್ಷಗಳ ಅವಧಿಯಲ್ಲಿ ಈ ಸರಕಾರ ತನ್ನ ಲೋಕ ಸೇವೆಗಳಲ್ಲಿ ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಲು ಕ್ರಮಗಳನ್ನು ನಿರಾತಂಕವಾಗಿ ಕೈಗೊಳ್ಳಬೇಕೆಂದು' ಪ್ರಸ್ತಾಪಿಸುತ್ತೇನೆ."

ನಾನು ಪ್ರಸ್ತಾಪಿಸಿದ ಈ ತಿದ್ದುಪಡಿಯ ಬೆಂಬಲವಾಗಿ ಬಹಳ ಉದ್ದದ ವಿವರಣೆಯನ್ನು ನೀಡುವುದು ಅವಶ್ಯಕವಾಗಿದೆ ಎಂದು ನನಗೆ ಅನ್ನಿಸುವುದಿಲ್ಲ. ಈ ದೇಶದ ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಬೇಕೆಂಬ ಬೇಡಿಕೆ ಬಹಳ ದಿನಗಳಿಂದಲೂ ಮುಂದುವರಿಯುತ್ತಿದೆ ಮತ್ತು ಈ ಬೇಡಿಕೆ ಕಾಂಗ್ರೆಸ್ ಪಕ್ಷ ಹುಟ್ಟಿದಂದಿನಿಂದಲೂ ಹಾಗೆಯೇ ಮುಂದುವರಿಯುತ್ತಿದೆ. ದುರದೃಷ್ಟವಶಾತ್, ಈ ದೇಶದ ಆಡಳಿತದಲ್ಲಿ ಇಂಥಾ ಸುಧಾರಣೆಯನ್ನು ತರುವ ಕಾಂಗ್ರೆಸ್ಸಿನ ಗೊತ್ತುವಳಿಗಳನ್ನು, ಈ ಹಿಂದೆ, ಬ್ರಿಟಿಷ್ ಸರಕಾರ ಫಲಕಾರಿಯಾಗಲು ಬಿಡಲಿಲ್ಲ. ಈಗ, ಇಂಥಾ ಸುಧಾರಣೆಯನ್ನು ಅನುಷ್ಠಾನದಲ್ಲಿ ತರುವ ಕಾಲ ಬಂದಿದೆ ಎಂದು ನಾವು ಭಾವಿಸುತ್ತೇವೆ. ಇಂಥಾ ಸುಧಾರಣೆಯನ್ನು ಅನುಷ್ಠಾನದಲ್ಲಿ ತರುವಲ್ಲಿ ಕೆಲವು ತೊಂದರೆಗಳು ಇದ್ದೇ ಇರುತ್ತವೆ; ಆದುದರಿಂದ ಈ ತಿದ್ದುಪಡಿ ತೊಂದರೆ ಎನಿಸಿಕೊಳ್ಳಬಹುದಾದ ಎರಡು ವಿಶಿಷ್ಟ ವಿಷಯಗಳನ್ನು ತನ್ನ ಗಮನದಲ್ಲಿರಿಸಿಕೊಂಡಿರುತ್ತದೆ. ನಾವು ಈ ವಿಷಯವನ್ನು ಬೇಕೆಂತಲೇ ಮೂಲಭೂತ ನಿಯಮದಲ್ಲಿ ಪರಿವರ್ತಿಸಿಲ್ಲ, ಏಕೆಂದರೆ ಒಂದು ವೇಳೆ ನಾವು ಹಾಗೆ ಮಾಡಿದಲ್ಲಿ ಸಂವಿಧಾನದಲ್ಲಿ ಇಂಥಾ ತಿದ್ದುಪಡಿ ಸೇರಿದ ತಕ್ಷಣವೇ ಕಾರ್ಯಾಂಗವನ್ನು ನ್ಯಾಯಾಂಗದಿಂದ ಬೇರ್ಪಡಿಸಲೇ ಬೇಕಾಗುತ್ತದೆ. ಇದೊಂದು ತೊಂದರೆಯಾಗಿರುತ್ತದೆ. ಆದುದರಿಂದಲೇ ನಾವು ಈ ವಿಷಯವನ್ನು ನಿರ್ದೇಶಿತ ತತ್ವಗಳ ಅಧ್ಯಾಯದಲ್ಲಿಟ್ಟಿರುತ್ತೇವೆ. ಹಾಗೂ ಈ ಸುಧಾರಣೆಯನ್ನು ಸಂಸತ್ತು ಒಪ್ಪಿದ ನಂತರ ಮೂರು ವರ್ಷಗಳೊಳಗಾಗಿ ಅನುಷ್ಠಾನದಲ್ಲಿ ತರಲು ಅನುವು ಮಾಡಿಕೊಟ್ಟಿರುತ್ತೇವೆ, ಹೀಗಾಗಿ ಈ ವಿಷಯವನ್ನು ಮುಂದೆ ಹಾಕುವುದಕ್ಕೆ (procastination) ಯಾವ ಅವಕಾಶವೂ ಇರುವುದಿಲ್ಲ. ಸ್ವಾಮಿ, ನಾನು ಇದನ್ನು ಮಂಡಿಸುತ್ತೇನೆ.

* * * * *

## ವಿಧಿ ೩೯–ಎ

**ಮಾನ್ಯ ಉಪಸಭಾಪತಿ :** (ಡಾ। ಆರ್.ಸಿ. ಮುಖರ್ಜಿ) : ನಾನು ತಿದ್ದುಪಡಿಯ ಸೂಚನಾ ಪತ್ರವನ್ನು ಡಾ. ಅಂಬೇಡ್ಕರರಿಂದ ಪಡೆದಿರುವೆ. ಡಾ. ಅಂಬೇಡ್ಕರರೆ, ನಿಮ್ಮ ತಿದ್ದುಪಡಿಯನ್ನು ಮಂಡಿಸುವಿರಾ?

* **ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** (ಬೊಂಬಾಯಿ : ಸಾಮಾನ್ಯ): ಮಾನ್ಯ ಉಪಸಭಾಪತಿ. ನಾನು: " ವಿಧಿ ೩೯–ಎ ರಲ್ಲಿ 'ನಿರಾಂತಕವಾಗಿ' ಎಂಬ ಶಬ್ದಗಳಿಂದ ಪ್ರಾರಂಭವಾಗಿ 'ಬೇರ್ಪಡೆ ಮಾಡು'

---

* ಸಿ.ಎ.ಡಿ. ಸಂಪುಟ ೭, ೨೪ನೆಯ ನವೆಂಬರ್, ೧೯೪೮, ಪುಟ ೮೨೧

ಎಂಬುವವರೆಗಿನ ಎಲ್ಲಾ ಶಬ್ದಗಳನ್ನು ತೆಗೆದುಹಾಕಿ ಅವುಗಳಿಗೆ ಬದಲಾಗಿ 'ಬೇರ್ಪಡೆ' ಎನ್ನುವ ಶಬ್ದವನ್ನು ಇಡಬೇಕೆಂಬ ತಿದ್ದುಪಡಿಯನ್ನು ಮಂಡಿಸುತ್ತೇನೆ.

ತಿದ್ದುಪಡಿ ಆದನಂತರ ವಿಧಿ ೩೯–ಎ ಈ ಕೆಳಗಿನಂತೆ ಆಗುತ್ತದೆ.

"ಸರಕಾರ ತನ್ನ ಸಾರ್ವಜನಿಕ ಸೇವೆಗಳಲ್ಲಿನ ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಲು ಕ್ರಮಗಳನ್ನು ತೆಗೆದುಕೊಳ್ಳಲೇಬೇಕು."

ಈ ತಿದ್ದುಪಡಿ ಮೂಲತಃ ೩೯–ಎ ವಿಧಿಯಲ್ಲಿ ಪ್ರಸ್ಥಾಪಿಸಲಾದ ಮೂರು ವರ್ಷಗಳ ಅವಧಿಯನ್ನು ಕಿತ್ತುಹಾಕುವ ಉದ್ದೇಶವನ್ನು ಹೊಂದಿದೆ ಎಂದು ಸದನ ಗ್ರಹಿಸಬಹುದು. ಇಂಥಾ ತಿದ್ದುಪಡಿಯನ್ನು ನಾನು ಸಂತೋಷದಿಂದ ತರಲು ಈ ಕಾರಣಗಳು ಇರುತ್ತವೆ. ಮೊದಲನೆಯದಾಗಿ, ಇಂಥಾ ನಿರ್ದೇಶಿತ ತತ್ವಗಳನ್ನು ಅನುಷ್ಠಾನದಲ್ಲಿ ತರುವಾಗ ಅವುಗಳನ್ನು ತರುವಲ್ಲಿನ ಅವಧಿ ಮತ್ತು ಕಾರ್ಯವಿಧಾನಗಳಿಗೆ ಸಂಬಂಧಿಸಿದ ವಿಷಯಗಳನ್ನು ಹೇಳಲೇಬಾರದೆಂಬ ಅಭಿಪ್ರಾಯ ಈ ಸದನದ ಒಂದು ವರ್ಗ ಹೊಂದಿರುತ್ತದೆ. ಈ ನಿರ್ದೇಶಿತ ತತ್ವಗಳು ತತ್ವಗಳಂತೆಯೇ ಸ್ಪಷ್ಟವಾಗಿರಬೇಕೇ ಹೊರತು ಅವುಗಳು ತತ್ವಗಳನ್ನು ತಯಾರಿಸುವ ವಿಧಾನಗಳನ್ನು ಸೂಚಿಸಬೇಕಾಗಿಲ್ಲ. ಅನುಷ್ಠಾನದಲ್ಲಿ ತರಲು ಬೇಕಾಗಿರುವ ಅವಧಿಯನ್ನಲ್ಲ. ಇದೊಂದು ಕಾರಣಕ್ಕಾಗಿ ನಾನು ವಿಧಿ ೩೯–ಎ ದಲ್ಲಿಂದ ಮೂರು ವರ್ಷಗಳ ಅವಧಿಯನ್ನು ತೊಡೆದುಹಾಕಬೇಕೆಂದು ನನ್ನ ಅನಿಸಿಕೆಯಾಗಿದೆ.

ಈ ತಿದ್ದುಪಡಿಯನ್ನು ಅನುಷ್ಠಾನದಲ್ಲಿ ತರಲು ನಾನು ಒತ್ತಾಯಿಸಲು ಎರಡನೆಯ ಕಾರಣ ಹೀಗಿದೆ. "ಮೂರು ವರ್ಷಗಳು" ಎಂಬ ಹೇಳಿಕೆ ಸದನದ ಕೆಲವು ಸದಸ್ಯರ ಅಭಿಪ್ರಾಯಗಳಲ್ಲಿ, ಪುನಃ ಒಂದು ತರಹದ ವಿಭಜನೆಯನ್ನು ತಂದಿರುತ್ತದೆ. ಒಂದು ವೇಳೆ ಮೂರು ವರ್ಷದವರೆಗೆ ಸಮಯ ಸರಕಾರಕ್ಕೆ ದೊರೆತಲ್ಲಿ, ಅದು ಮೂರನೆಯ ವರ್ಷದವರೆಗೆ ಯಾವ ಕ್ರಮವನ್ನೂ ಕೈಗೊಳ್ಳುವುದಿಲ್ಲವೆಂದು ಕೆಲವರು ಹೇಳುತ್ತಾರೆ. ಈ ವಿಧಿಯಲ್ಲಿ ಮೂರು ವರ್ಷಗಳ ಅವಧಿಯನ್ನು ಹೇಳುವುದರಿಂದ ಪ್ರಾಂತೀಯ ಶಾಸಕಾಂಗಗಳನ್ನು ಮೂರು ವರ್ಷಗಳವರೆಗೆ, ವಾಸ್ತವದಲ್ಲಿ, ಯಾವ ಕ್ರಮಗಳನ್ನು ತೆಗೆದುಕೊಳ್ಳಲು ಪರವಾನಗಿಯನ್ನು ನೀವು ನೀಡುವುದಿಲ್ಲ. ಇನ್ನು ಕೆಲವರು ಮೂರು ವರ್ಷಗಳ ಅವಧಿ ಅತಿ ಕಡಿಮೆ ಎನ್ನುತ್ತಾರೆ. ಪ್ರಾಂತಗಳ ವಿಷಯದಲ್ಲಿ ಈ ಮೂರು ವರ್ಷಗಳ ಅವಧಿ ಬಹಳ ಉದ್ದದ ಅವಧಿಯಾಗಿರುತ್ತದೆ; ಏಕೆಂದರೆ ಇವುಗಳಲ್ಲಿನ ಆಡಳಿತಯಂತ್ರವನ್ನು ಚೆನ್ನಾಗಿ ಸ್ಥಾಪಿಸಲಾಗಿರುತ್ತದೆ ಮತ್ತು ಇದನ್ನು ಬದಲಾಯಿಸಬಹುದು ಮತ್ತು ತಿದ್ದುಪಡಿ ಮಾಡಬಹುದು. ಮತ್ತು ಹಾಗೆ ಮಾಡುವುದರಿಂದ ಅಗಲಿಕೆಯನ್ನು ತರಬಹುದಾಗಿದೆ. ಆದರೆ, ನಾವು ನಿರ್ದೇಶಿತ ತತ್ವಗಳಲ್ಲಿ "ರಾಜ್ಯ" ಎಂಬ ಶಬ್ದವನ್ನು, ಪ್ರಾಂತೀಯ ಸರಕಾರಗಳನ್ನಲ್ಲದೆ, ಭಾರತೀಯ ರಾಜ್ಯಗಳ ಸರಕಾರಗಳನ್ನು ಸಹ ಒಳಗೊಂಡಿರುವ ರೀತಿಯಲ್ಲಿ ಉಪಯೋಗಿಸಿದ್ದೇವೆ. ಭಾರತೀಯ ರಾಜ್ಯಗಳಲ್ಲಿನ ಆಡಳಿತಯಂತ್ರ ಬಹಳ ದಿನಗಳಿಂದಲೂ ಇಂಥಾ ಅವಶ್ಯಕ ಪರಿಣಾಮ ತರುವಂಥಹದ್ದಾಗಿಲ್ಲವಾಗಿರುತ್ತದೆ. ಆದುದರಿಂದ, ಭಾರತೀಯ ರಾಜ್ಯಗಳ ವಿಷಯಕ್ಕೆ ಸಂಬಂಧಿಸಿದಂತೆ ಮೂರು ವರ್ಷಗಳ ಅವಧಿ, ಬಹಳ ಕಡಿಮೆಯಾಗಿರುತ್ತದೆ. ಈ ಎಲ್ಲಾ ವಾದಗಳಲ್ಲಿ ಸ್ವಲ್ಪ ಮಟ್ಟಿಗೆ ಸತ್ವವಿರುವುದನ್ನು ನಾನು ನಿಸ್ಸಂದೇಹವಾಗಿ ತಾತ್ಸಾರ ಮಾಡಬಾರದು. ಆದುದರಿಂದ, ಈ 'ವಿಧಿ', ನಾವೆಲ್ಲರೂ ಹೊಂದಿರುವ ಉದ್ದೇಶವನ್ನು ಸಾಧಿಸಬಲ್ಲದಾಗಿದೆ: ಒಂದು ವೇಳೆ ಈ ವಿಧಿ ಭಾರತೀಯ

---

* ಸಿ.ಎ.ಡಿ. ಸಂಪುಟ ೭, ೨೫ನೆಯ ನವೆಂಬರ್, ೧೯೪೮, ಪುಟ ೫೮೫–೫೮೬

ರಾಜ್ಯಗಳಿಗೆ ಹಾಗೂ ಪ್ರಾಂತಗಳಿಗೆ ತಮ್ಮ ಸಾರ್ವಜನಿಕ ಸೇವೆಗಳಲ್ಲಿನ ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವುದು ಒಂದು ಕರ್ತವ್ಯವೆಂಬಂತೆ ಈ 'ಸಂವಿಧಾನ' ಆಜ್ಞೆ ಮಾಡುತ್ತದೆ ಎಂದು ನಿರ್ದೇಶಿಸಿದಲ್ಲಿ, ಎಲ್ಲಿ ಸಾಧ್ಯವಾಗುತ್ತದೆಯೋ ಅಲ್ಲಿ ಇದನ್ನು ಕೂಡಲೇ ಅನುಷ್ಠಾನದಲ್ಲಿ ತರಲಾಗುತ್ತದೆ, ಮತ್ತು ಎಲ್ಲಿ ಇದರ ತಕ್ಷಣದ ಅನುಷ್ಠಾನ ಸಾಧ್ಯವಿಲ್ಲವೋ ಅಲ್ಲಿಯೂ ಸಹ ಇದೊಂದು ಬಿಡಲಿಕ್ಕೆ ಬಾರದಂಥ ಕರ್ತವ್ಯವೆಂದು ಭಾವಿಸಲಾಗುತ್ತದೆ. ಮತ್ತು ಈ ಸಂವಿಧಾನ ತತ್ವಗಳು ಇದರ ಅನುಷ್ಠಾನವನ್ನು ಮುಂದೂಡುವುದನ್ನು ಸಹಿಸುವುದಿಲ್ಲ. ಆದುದರಿಂದ, ನಾನು, ಈ ಸದನದಲ್ಲಿ ಪ್ರಚಲಿತವಿರುವ ಎಲ್ಲಾ ವಿಚಾರಗಳಿಗೆ ಸರಿಹೊಂದುವ ಈ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ ಮತ್ತು ಈ ಸದನ ಇಂತಹ ತಿದ್ದುಪಡಿಗೆ ತನ್ನ ಒಪ್ಪಿಗೆಯನ್ನು ನೀಡುವುದೆಂದು ಭಾವಿಸುತ್ತೇನೆ.

**ಪ್ರೊ. ಶಿಬ್ಬಾನ್ ಲಾಲ ಸಕ್ಸೇನಾ** (ಸಂಯುಕ್ತ ಪ್ರಾಂತಗಳು : ಸಾಮಾನ್ಯ): ಸ್ವಾಮಿ ಡಾ. ಅಂಬೇಡ್ಕರರು ಒಂದು ತಿದ್ದುಪಡಿಯನ್ನು ಈಗಾಗಲೇ ಮಂಡಿಸಿ ವಿಧಿ ಸಂಖ್ಯೆ ೩೯–ಎ ಎಂಬ ಹೊಸ ವಿಧಿಯನ್ನು ಪ್ರಸ್ತಾಪಿಸಿದ್ದಾರೆ. ಒಬ್ಬ ಸದಸ್ಯ ತನ್ನ ತಿದ್ದುಪಡಿಯನ್ನು ತಾನೇ ಮಾರ್ಪಾಡು ಮಾಡಲು ಬರುತ್ತದೆಯೇ?

**ಮಾನ್ಯ ಉಪಸಭಾಪತಿ :** ಹೌದು ಬರುತ್ತದೆ. ಮೂಲಭೂತವಾದ ವಿಷಯಕ್ಕೆ ಹೋಗಬೇಕೇ ಹೊರತು ಕೇವಲ ಪಾರಿಭಾಷಿಕ ನಿರೂಪಣೆಗಳ ಕಡೆಯಲ್ಲ ಎಂಬ ವಿಷಯವನ್ನು ನಾವೆಲ್ಲರು ಮನದಲ್ಲಿರಸಬೇಕು ಎಂದು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಆರ್. ಕೆ. ಸಿಧ್ವಾ** (ಸಿ.ಪಿ. ಮತ್ತು ಬೆರಾರ್ : ಸಾಮಾನ್ಯ): ಸ್ವಾಮಿ, ಉಪಸಭಾಪತಿಗಳೆ, ಡಾ. ಅಂಬೇಡ್ಕರರು ಈ ತಿದ್ದುಪಡಿಯನ್ನು ಮಂಡಿಸಿರುತ್ತಾರೆ ಮತ್ತು ಆದುದರಿಂದ ಕೊನೆಯ ಹಂತದಲ್ಲಿ ಉತ್ತಮ ಉಪದೇಶ ಮತ್ತು ವಿವೇಕಗಳು ಅನುಷ್ಠಾನದಲ್ಲಿ ಬಂದಿವೆ ಎಂಬುದು ನನಗೆ ತುಂಬಾ ಸಂತಸ ತಂದಿದೆ.

ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ವಿಧಿ ೩೯–ಎ ಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

***ಮಾನ್ಯ ಮೊಹಮದ್ ತಾಹಿರ್** (ಬಿಹಾರ : ಮುಸ್ಲಿಂ) : ಮಾನ್ಯ ಉಪಸಭಾಪತಿಗಳೇ, ಸ್ವಾಮಿ, ನಾನು ವಿಧಿ ೩೯ರ ನಂತರ ಕೆಳಗಿನ ಹೊಸ ವಿಧಿಯನ್ನು ಸೇರಿಸಲು ಮತ್ತು ಉಳಿದ ವಿಧಿಗಳ ಸಂಖ್ಯೆಗಳನ್ನು ಪುನಃ ಹೊಸದಾಗಿ ಸಂಖ್ಯೆಗಳನ್ನು ನೀಡುವ ಪ್ರಸ್ತಾಪವನ್ನು ಮಂಡಿಸಲು ತಮ್ಮನ್ನು ಕೇಳಿಕೊಳ್ಳುತ್ತೇನೆ.

"೪೦, ಸರಕಾರ, ಗುರುದ್ವಾರ, ಚರ್ಚುಗಳು, ದೇವಾಲಯಗಳು ಮುಂತಾದ ಪ್ರಾರ್ಥಿಸುವ ಸ್ಥಳಗಳನ್ನು ಅಲ್ಲದೆ ರುದ್ರಭೂಮಿಗಳನ್ನು ಹಾಗೂ ಶವ ಸುಡುವ ಸ್ಥಳಗಳನ್ನು ಸಹ ರಕ್ಷಿಸುವುದು ಸರಕಾರದ ಕರ್ತವ್ಯವಾಗಿರುತ್ತದೆ."

* * * * *

+ **ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್** : ಸ್ವಾಮಿ, ಶ್ರೀ ತಾಹಿರರ ತಿದ್ದುಪಡಿಯನ್ನು ನಾನು ಒಪ್ಪುವುದಿಲ್ಲ.

**ಮಾನ್ಯ ಉಪಸಭಾಪತಿ :** ಈ ತಿದ್ದುಪಡಿಯನ್ನು ಮತಕ್ಕಾಗಿ ಸದನದಲ್ಲಿ ಇಡುವೆ.

ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.

* * * * *

---

* ಸಿ.ಎ.ಡಿ. ಸಂಪುಟ ೭, ೨೫ನೆಯ ನವೆಂಬರ್, ೧೯೪೮, ಪುಟ ೫೯೩

\+ ಮೇಲಿನಂತೆ ಪುಟ ೫೯೪

# ವಿಧಿ–೪೦

***ಮಾನ್ಯ ಉಪಸಭಾಪತಿ :** ಸಂಖ್ಯೆ ೧೦೧೮ರ ತಿದ್ದುಪಡಿ ಡಾ. ಅಂಬೇಡ್ಕರವರದಾಗಿರುತ್ತದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ತಿದ್ದುಪಡಿ ಒಂದನ್ನು ಮಿ. ಕಾಮತರು ಪ್ರಸ್ತಾಪಿಸುತ್ತಿದ್ದಾರೆಂಬುದು ನನ್ನ ಗ್ರಹಿಕೆಯಾಗಿರುತ್ತದೆ.

**ಶ್ರೀ ಹೆಚ್.ವಿ. ಕಾಮತ್ :** ಡಾ. ಅಂಬೇಡ್ಕರರು ತಮ್ಮ ತಿದ್ದುಪಡಿಯನ್ನು ಮಂಡಿಸಿದ ನಂತರ ನಾನು ನನ್ನ ತಿದ್ದುಪಡಿಯನ್ನು ಮಂಡಿಸುವೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ನಾನು ಅಸ್ತಿತ್ವದಲ್ಲಿರುವ ೪೦ನೆಯ ವಿಧಿಗೆ ಈ ಕೆಳಗೆ ನೀಡಿದ ಬದಲಿಕೆಯನ್ನು ತರಲು

"೪೦. ಸರಕಾರ:–

(ಅ) ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಗೆ ಉತ್ತೇಜನ ನೀಡಬೇಕು;

(ಬ) ರಾಷ್ಟ್ರಗಳ ನಡುವೆ ನ್ಯಾಯದ ಮತ್ತು ಗೌರವ ಹೆಚ್ಚಿಸುವ ಸಂಬಂಧಗಳನ್ನು ಮುಂದುವರಿಸಿಕೊಂಡು ಬರಲು ಪ್ರಯತ್ನಿಸಬೇಕು; ಮತ್ತು

(ಕ) ಸಂಘಟಿತ ಜನರು ತಮ್ಮೊಳಗೆ ಹೊಂದಿರುವ ಒಪ್ಪಂದಗಳ ಮತ್ತು ಅಂತರರಾಷ್ಟ್ರೀಯ ಕಾಯಿದೆಯ ಅನುಷ್ಠಾನಕ್ಕೆ ನಿರಂತರ ಲಕ್ಷ್ಯ ಕೊಡಬೇಕು" – ಎಂಬ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸ್ವಾಮಿ, ಈ ತಿದ್ದುಪಡಿ ಮೂಲ ವಿಧಿ ೪೦ನ್ನು ಕೇವಲ ಸರಳಗೊಳಿಸುತ್ತದೆ. ಈ ವಿಧಿಯನ್ನು ಕೆಲವು ಭಾಗಗಳಲ್ಲಿ ವಿಂಗಡಿಸಿ ತನ್ನ ವಿಚಾರಗಳನ್ನು ಬೇರೆ ಬೇರೆಯಾಗಿಸುತ್ತದೆ; ಹೀಗೆ ಮಾಡುವುದರಿಂದ ಈ ವಿಧಿಯು ಏನನ್ನು ಒಳಗೊಂಡಿದೆ ಎಂಬುದರ ಸ್ಪಷ್ಟ ಮತ್ತು ಸಂಪೂರ್ಣ ವಿಚಾರವನ್ನು ಓದುಗರಿಗೆ ಗೊತ್ತುಮಾಡಿ ಕೊಡುತ್ತದೆ.

ಇದರಲ್ಲಿನ ಪ್ರಸ್ತಾಪಗಳು ಬಹಳ ಸರಳವಾಗಿವೆ, ಆದುದರಿಂದ ಇವುಗಳನ್ನು ಒಂದು ಸುದೀರ್ಘ ಭಾಷಣದಿಂದ ಸದನದಲ್ಲಿ ವಿವರಿಸಲು ಯತ್ನಿಸುವುದು ಅತಿ ದುರಭಿಮಾನದ ವಿಷಯ ಎಂದು ನನಗೆ ಅನಿಸುತ್ತದೆ. ಸ್ವಾಮಿ, ನಾನು ಮಂಡಿಸುತ್ತೇನೆ.

**ಮಾನ್ಯ ಉಪಸಭಾಪತಿ :** ಈಗ ಡಾ. ಅಂಬೇಡ್ಕರರ ತಿದ್ದುಪಡಿಗೆ ಕೆಲವು ತಿದ್ದುಪಡಿ ಇರುತ್ತವೆ. ಅವುಗಳನ್ನು ಮಂಡಿಸುವವರನ್ನು ನಾನು ಹೆಸರಿನಿಂದ ಕರೆಯುತ್ತೇನೆ. ಉದಾಹರಣೆಗೆ ಸಂಖ್ಯೆ ೭೪ರ ತಿದ್ದುಪಡಿ ಶ್ರೀ ಸರವಟೆಯವರದ್ದಾಗಿದೆ.

**ಶ್ರೀ ವಿ. ಎಸ್. ಸರವಟೆ** (ಗ್ವಾಲಿಯರ್ – ಇಂದೋರ್ – ಮಾಲ್ವಾ – ಮಧ್ಯಭಾರತಗಳ ಒಕ್ಕೂಟ ರಾಜ್ಯಗಳು) : ಮಾನ್ಯ ಉಪಸಭಾಪತಿ, ಸ್ವಾಮಿ, ಶ್ರೀ ಅಹ್ಮದರ ತಿದ್ದುಪಡಿಗೆ ನಾನೊಂದು ತಿದ್ದುಪಡಿಯನ್ನು ಮಂಡಿಸಲು ನಿಮ್ಮಲ್ಲಿ ವಿನಂತಿಸುತ್ತೇನೆ. ನನ್ನ ತಿದ್ದುಪಡಿ ಈ ಕೆಳಗಿನಂತಿರುತ್ತದೆ.

"ವಿಧಿ ೪೦ರಲ್ಲಿನ ತಿದ್ದುಪಡಿಗಳಲ್ಲಿನವುಗಳಲ್ಲಿನ ಪಟ್ಟಿಯ ಸಂಖ್ಯೆ ೧೦೧೮ರ ತಿದ್ದುಪಡಿಯಲ್ಲಿ, 'ಸರಕಾರ ಮಾಡಲೇಬೇಕು' ಎಂಬ ಶಬ್ದಗಳ ನಂತರ ಮತ್ತು ಇದರ ಉಪ–ಕಲಮು (ಅ)ಕ್ಕಿಂತ ಮುಂಚೆ

---

* ಮೇಲಿನಂತೆ ಪುಟ ೫೫೫

ಇಂಥಾ ಹೊಸ ಕಲಮನ್ನು ಸೇರಿಸಬೇಕು ಮತ್ತು ಈಗಿನ ಕಲಮಿಗೆ ಅದಕ್ಕೆ ತಕ್ಕಂತೆ ಪುನಃ ಸಂಖ್ಯೆಯನ್ನು ನೀಡುವುದು;

(ಅ) ನಾಗರಿಕರಲ್ಲಿ ಸತ್ಯ, ನ್ಯಾಯ, ಮತ್ತು ಕರ್ತವ್ಯದ ಪ್ರಜ್ಞೆಯನ್ನು ಹೆಚ್ಚುವಂತೆ ಮಾಡುವುದು".

* * * * *

* **ಶ್ರೀ ಹೆಚ್. ವಿ. ಕಾಮತ್ :** .............. ಸ್ವಾಮಿ, ನಾನು " ವಿಧಿ ೪೦ಕ್ಕೆ ಸಂಬಂಧಿಸಿದ ೧೦೧೮ನೆಯ ತಿದ್ದುಪಡಿಯಲ್ಲಿ 'ಮಾಡಬೇಕು' (shall) ಎಂಬ ಶಬ್ದದ ನಂತರ 'ಪ್ರಯತ್ನ' (endeavour to) ಎಂಬ ಪದವನ್ನು ಸೇರಿಸಲು, ಅದರ (ಬ) ಕಲಮಿನಲ್ಲಿನ 'ಪಡೆಯಲು' ಎಂಬ ಪದಗಳನ್ನು ತೆಗೆದುಹಾಕಲು ಹಾಗೂ (ಕ) ಕಲಮಿನಲ್ಲಿ 'ಪ್ರಯತ್ನ' ಎಂಬ ಶಬ್ದಗಳನ್ನು ತೆಗೆದುಹಾಕಲು" ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಮಾನ್ಯ ಉಪಸಭಾಪತಿ :** ಅಸ್ತಿತ್ವದಲ್ಲಿರುವ ವಿಧಿಗಾಗಿ ಈ ಕೆಳಗಿನವುಗಳನ್ನು ಬದಲಾಯಿಸುವುದೇ ಇಲ್ಲಿನ ಕ್ರಮವಾಗಿರುತ್ತದೆ. ಹಾಗೆ ಮಾಡುವುದರಿಂದ, ಒಂದು ವೇಳೆ ಇಂಥಾ ತಿದ್ದುಪಡಿಯನ್ನು ಸದನ ಸ್ವೀಕರಿಸಿದಲ್ಲಿ, ಕರಡು ಪ್ರತಿ ಸಮಿತಿಯ ತಿದ್ದುಪಡಿಯನ್ನು ಈ ಕೆಳಗಿನಂತೆ ಓದಬಹುದಾಗಿದೆ.

"೪೦ ಸರಕಾರ –

(ಅ) ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಗೆ ಉತ್ತೇಜನ ನೀಡಲು

(ಬ) ದೇಶಗಳ ನಡುವೆ ಗೌರವದ ಮತ್ತು ನ್ಯಾಯದ ಸಂಬಂಧಗಳನ್ನು ಉಳಿಸಿಕೊಂಡು ಬರಲು

(ಕ) ಸುಸಂಘಟಿತ ಜನರು ತಮ್ಮೊಳಗಿನ ವ್ಯವಹಾರಗಳಲ್ಲಿನ ಒಪ್ಪಂದದಲ್ಲಿನ ಕರ್ತವ್ಯಗಳಿಗೆ ಮತ್ತು ಅಂತರರಾಷ್ಟ್ರೀಯ ಕಾನೂನಿಗೆ ಮರ್ಯಾದೆಗೆ ಪ್ರೋತ್ಸಾಹಿಸುವುದು ಹಾಗೂ

(ಡ) ಅಂತರರಾಷ್ಟ್ರೀಯ ವಿವಾದಗಳನ್ನು ಮಧ್ಯಸ್ತಿಕೆ ಮೂಲಕ ಬಗೆಹರಿಸುವುದನ್ನು ಪ್ರೋತ್ಸಾಹಿಸುವುದು" ಇವುಗಳಿಗೆ ಪ್ರಯತ್ನಿಸಬೇಕು.

ಇಂಥಾ ತಿದ್ದುಪಡಿಯು, ಈಗಾಗಲೇ ಡಾ। ಅಂಬೇಡ್ಕರರು ಮಂಡಿಸಿದ ತಿದ್ದುಪಡಿಯಲ್ಲಿ ಕೇವಲ ಸ್ವಲ್ಪ ಸ್ವರೂಪಾತ್ಮಕ ಬದಲಾವಣೆಯನ್ನು ತರಲು ಪ್ರಯತ್ನಿಸುತ್ತಿದೆ; ಹಾಗೆ ಮಾಡುವುದರಿಂದ ವಿಧಿ ೪೦ರಲ್ಲಿನ ತತ್ವದ ನಿರ್ದೇಶಿತ ಸ್ವರೂಪವನ್ನು ಇದು ಸೂಚಿಸಲು ಯತ್ನಿಸುತ್ತದೆ............

* * * * *

* **ಮಾನ್ಯ ಉಪಸಭಾಪತಿ :** ಶ್ರೀ ಅಯ್ಯಂಗಾರರೆ, ಈ ತಿದ್ದುಪಡಿಯನ್ನು ವಿಧಿವತ್ತಾಗಿ ಮಂಡಿಸಬಲ್ಲಿರಾ?

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ :** ಸ್ವಾಮಿ, ನಾನು ಡಾ. ಅಂಬೇಡ್ಕರರು ತಿದ್ದುಪಡಿಯಲ್ಲಿ ಅದರ ಕೊನೆಗೆ ಈ ಕೆಳಗಿನ ಉಪ–ಕಲಮು ಸೇರಿಸಲು:

"ಮತ್ತು (ಡ) ಅಂತರರಾಷ್ಟ್ರೀಯ ವಿವಾದಗಳನ್ನು ಮಧ್ಯಸ್ತಿಕೆಯ ಮೂಲಕ ಬಗೆಹರಿಸಲು ಉತ್ತೇಜನ ನೀಡಬೇಕು" ಎಂಬ ತಿದ್ದುಪಡಿಯನ್ನು ಮಂಡಿಸುತ್ತೇನೆ.

ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

+ **ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ಮಾನ್ಯ ಕಾಮತರ ಮೂರು ತಿದ್ದುಪಡಿಗಳನ್ನು

---

* ಸಿ.ಎ.ಡಿ, ಸಂಪುಟ ೭, ೨೫ನೆಯ ನವೆಂಬರ್ ೧೯೪೮, ಪು. ೫೯೬

* ಸಿ.ಎ.ಡಿ, ಸಂ. ೭, ೨೫ನೆಯ ನವೆಂಬರ್, ೧೯೪೮, ಪುಟ ೫೯೫–೬೦೫

\+ ಮೇಲಿನಂತೆ, ಪುಟ ೬೦೪

ನಾನು ಒಪ್ಪುವೆ. ನಾನು ಡಾ. ಸುಬ್ಬರಾಯರ ತಿದ್ದುಪಡಿಯನ್ನು ಒಪ್ಪುವೆ ಮತ್ತು ನನ್ನ ಗೌರವಾನ್ವಿತ ಗೆಳೆಯ ಮಾನ್ಯ ಅನಂತಶಯನಂ ಅಯ್ಯಂಗಾರರು ಮಂಡಿಸಿದ ತಿದ್ದುಪಡಿಯನ್ನು ಒಪ್ಪುವೆ. ಬೇರೆ ಯಾವ ತಿದ್ದುಪಡಿಯನ್ನು ನಾನು ಒಪ್ಪಲಾರೆ.

ತಿದ್ದುಪಡಿಗಳನ್ನು ನಿರಾಕರಿಸಲಾಯಿತು.

* * * * *

## ವಿಧಿ ೭

* **ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್:** ಸ್ವಾಮಿ, ನಾನು "ವಿಧಿ ೭ಅ ರ ಕೊನೆಗೆ ಈ ಕೆಳಗಿನ ಪದಗಳನ್ನು ಸೇರಿಸಬೇಕು: ಅಥವಾ 'ಭಾರತ ಸರಕಾರದ ನಿಯಂತ್ರಣದ ಅಡಿಯಲ್ಲಿ' ಎಂಬ ತಿದ್ದುಪಡಿಯನ್ನು" ಮಂಡಿಸುತ್ತೇನೆ.

ಸ್ವಾಮಿ, ಇಲ್ಲಿ ಭಾರತ ಸರಕಾರ ತನ್ನ ಭಾಗವಾಗಿರುವ ಪ್ರದೇಶಗಳಲ್ಲದೆ ತನ್ನ ಭಾಗವಾಗಿರದ ಆದರೂ ಅವುಗಳ ಮೇಲೆ ತನ್ನ ನಿಯಂತ್ರಣವಿದ್ದ ಇತರ ಪ್ರದೇಶಗಳನ್ನು ಹೊಂದಿರಬಹುದು. ಇಂದು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಒಂದು ದೇಶಕ್ಕೆ ತನ್ನದಲ್ಲದ ಇತರ ದೇಶಗಳ ಪ್ರದೇಶಗಳನ್ನು ನಿರ್ವಾಹಕದರ್ಶಿ (trusteeship) ಅಥವಾ ಕಾನೂನಿಗನುಸಾರವಾದ ಆಜ್ಞೆಯ ಅಡಿಯಲ್ಲಿ ಅವುಗಳ ಆಡಳಿತ ಉದ್ದೇಶಗಳಿಗಾಗಿ ಅದಕ್ಕೆ ನೀಡಲಾಗುತ್ತದೆ. ಜನರು ಮೂಲಭೂತ ಹಕ್ಕುಗಳನ್ನು ಉಪಯೋಗಿಸುವ ವಿಚಾರದಲ್ಲಿ ಭಾರತೀಯ ಪ್ರಜೆಗಳಿಗೂ ಮತ್ತು ನಿರ್ವಾಹಕದರ್ಶಿ ಅಥವಾ ಕಾನೂನಿಗನುಸಾರವಾದ ಆಜ್ಞೆಯ ಅಡಿಯಲ್ಲಿ ಆಡಳಿತಕ್ಕಾಗಿ ಕೊಡಮಾಡಿರುವ ಇತರ ಪ್ರದೇಶಗಳ ಜನರಿಗೂ ಯಾವ ಭೇದಭಾವ ಇರಲೇಬಾರದು ಎಂಬುದು ಅವಶ್ಯಕವಾಗಿರುತ್ತದೆ. ಆದುದರಿಂದ, ಭಾರತದ ನಾಗರಿಕರಿಗೆ ಅಲ್ಲದೆ ಅಂಥಾ ಪ್ರದೇಶಗಳ ನಿವಾಸಿಗಳಿಗೆ ಸಹ ಮೂಲಭೂತ ಹಕ್ಕುಗಳನ್ನು ವಿಸ್ತರಿಸಲು ಇಂಥಾ ತಿದ್ದುಪಡಿಯನ್ನು ತರಲೇಬೇಕಾಗಿದೆ.

* * * * *

+ **ಮಾನ್ಯ ಉಪಸಭಾಪತಿ:** ಇಲ್ಲಿ ಶ್ರೀ ಅಲಿ ಬೇಗರು ಎತ್ತಲಾದ ವಿಷಯಗಳ ಮೇಲೆ ನಮಗೆ ಹೆಚ್ಚಿನ ಮಾಹಿತಿಯನ್ನು ನೀಡಲು ಡಾ. ಅಂಬೇಡ್ಕರರಿಗೆ ವಿನಂತಿಸಿಕೊಳ್ಳುತ್ತೇನೆ. ನಾವೆಲ್ಲಾ ಸಾಮಾನ್ಯ ಜನರು, ಆದುದರಿಂದ ಅವರು ಏನು ಹೇಳುತ್ತಾರೆ ಎಂಬುದನ್ನು ನಾವು ಕೇಳಬಯಸುತ್ತೇವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿಗಳೇ, ನಾನು, ಈ ತಿದ್ದುಪಡಿಯನ್ನು ಮಂಡಿಸಿದ ನನ್ನ ಗೆಳಯ ಬೇಗ್‌ರ ಭಾಷಣವನ್ನು ಗಮನವಿಟ್ಟು ಕೇಳಿದೆನಾದರೂ, ಆತ ನನ್ನಿಂದ ಏನನ್ನು ತಿಳಿದುಕೊಳ್ಳಲು ಬಯಸಿದ್ದರು ಎಂಬುದನ್ನು ನಾನು ತಿಳಿಯದೇ ಹೋದೆ ಎಂಬುದನ್ನು ಒಪ್ಪಲೇಬೇಕು. ಒಂದು ವೇಳೆ, ಅವರು ತಿದ್ದುಪಡಿ ವಿಧಿ ೭ ನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂಬುದಾಗಿದ್ದಲ್ಲಿ ಈ ವಿಧಿ ವಿಧಾನದ ಒಂದು ಭಾಗವಾಗಿ ಏಕೆ ಉಳಿಯಬೇಕೆಂಬುದನ್ನು ನಾನು ಸರಳವಾಗಿ ವಿವರಿಸಬಲ್ಲೆ.

---

* ಸಿ.ಎ.ಡಿ, ಸಂ. ೭, ೨೫ನೆಯ ನವೆಂಬರ್, ೧೯೪೮, ಪುಟ ೬೦೭

\+ ಮೇಲಿನಂತೆ, ಪುಟ ೬೧೦

ಮೂಲಭೂತ ಹಕ್ಕುಗಳ ಉದ್ದೇಶಗಳು ಎರಡಿರುತ್ತವೆ, ಮೊದಲನೆಯದಾಗಿ, ಪ್ರತಿಯೊಬ್ಬ ನಾಗರಿಕನೂ ಅಂತಹ ಹಕ್ಕುಗಳನ್ನು ಹಕ್ಕೊತ್ತಾಯ ಮಾಡುವ ಸ್ಥಿತಿಯಲ್ಲಿರಬೇಕು. ಎರಡನೆಯದಾಗಿ, ಈ ಹಕ್ಕುಗಳನ್ನು ಪ್ರತಿಯೊಂದು ತರಹದ ಅಧಿಕಾರ ಒಪ್ಪಲೇಬೇಕು. ಈಗ ನಾನು 'ಅಧಿಕಾರ' ಎಂಬ ಪದದ ಬಗ್ಗೆ ವಿವರಣೆಯನ್ನು ನೀಡುತ್ತೇನೆ. "ಅಧಿಕಾರ" ವೆಂದರೆ ಕಾನೂನುಗಳನ್ನು ಮಾಡಲು ಅಧಿಕಾರವನ್ನು ಹೊಂದಿರುವ ಅಥವಾ ತನ್ನಲ್ಲಿಯೇ ಕಾನೂನನ್ನು ಹೊಂದಲು ವಿಶೇಷ ಅಧಿಕಾರವುಳ್ಳ ಯಾವುದೇ ಒಂದು ಸಂಸ್ಥೆಯೆಂದು ನಾನು ಹೇಳಬಯಸುತ್ತೇನೆ. ಆದುದರಿಂದ, ಒಂದು ವೇಳೆ, ಮೂಲಭೂತ ಹಕ್ಕುಗಳು ಸ್ಪಷ್ಟವಾಗಿರಬೇಕೆನ್ನುವುದಾದಲ್ಲಿ, ಆಗ, ಕೇಂದ್ರ ಸರಕಾರ, ಪ್ರಾಂತೀಯ ಸರಕಾರ, ಭಾರತದ ರಾಜ್ಯಗಳಲ್ಲಿ ಸ್ಥಾಪಿತವಾದ ಸರಕಾರ, ಜಿಲ್ಲಾ ಸ್ಥಾನೀಯ ಮಂಡಳಿಗಳು, ಪುರಸಭೆಗಳು, ಗ್ರಾಮಪಂಚಾಯಿತಿಗಳು ಮತ್ತು ತಾಲ್ಲೂಕು ಮಂಡಳಿಗಳು ಮುಂತಾದವುಗಳೆಲ್ಲವೂ ಇವುಗಳನ್ನು ಒಪ್ಪಲೇಬೇಕು. ವಾಸ್ತವದಲ್ಲಿ, ಕಾನೂನಿನ ಮೂಲಕ ಸೃಷ್ಟಿಸಲಾದ ಯಾವುದೇ ಅಧಿಕಾರ ಮತ್ತು ಕಾನೂನನ್ನು ಮಾಡಲು ಅಧಿಕಾರ ಹೊಂದಿರುವ ಯಾವುದೇ ಸಂಸ್ಥೆ, ಮುಂದುವರಿದು, ಕಾಯಿದೆಗಳನ್ನು ಅಥವಾ ಉಪ ಕಾಯಿದೆಗಳನ್ನು ಮಾಡಲು ಅಧಿಕಾರ ಹೊಂದಿರುವ ಯಾವುದೇ ಸರಕಾರಿ ಸಂಸ್ಥೆ ಮೂಲಭೂತ ಹಕ್ಕುಗಳಿಗೆ ಬದ್ಧವಾಗಿರಲೇಬೇಕು.

ಒಂದು ವೇಳೆ ಮೂಲಭೂತ ಹಕ್ಕುಗಳನ್ನು ಎಲ್ಲಾ ಅಧಿಕಾರವನ್ನು ಹೊಂದಿದ ಸಂಸ್ಥೆಗಳು ಒಪ್ಪಲೇಬೇಕೆಂಬ ಮೇಲಿನ ಪ್ರಸ್ತಾವನೆಯನ್ನು ಈ ಸಭೆ ಒಪ್ಪಿದರೆ, ಆಗ ಕಾನೂನಿನಿಂದ ಸೃಷ್ಟಿಸಲಾದ ಪ್ರತಿಯೊಂದು ಅಧಿಕಾರವನ್ನು ಹೊಂದಿರುವ ಸಂಸ್ಥೆಗೆ ಮೂಲಭೂತ ಹಕ್ಕುಗಳಿಗೆ ಬದ್ಧವಾಗಿ ಮಾಡುವ ಸಾರ್ವತ್ರಿಕ ಕರ್ತವ್ಯಕ್ಕೆ ಯಾವ ಕಡೆಯಿಂದಲೂ ಆಕ್ಷೇಪಣೆ ಬರುವುದಿಲ್ಲವೆಂದು ನನಗೆ ಅನಿಸುತ್ತದೆ. ಆಗ ಇಲ್ಲಿ ನಾವು ನಮ್ಮ ಉದ್ದೇಶಗಳನ್ನು ಸ್ಪಷ್ಟವಾಗಿಸಲು ಏನನ್ನು ಮಾಡಬಹುದು? ನಮ್ಮ ಉದ್ದೇಶಗಳನ್ನು ಸ್ಪಷ್ಟವಾಗಿಸಲು ನಾವು ಎರಡು ಕೆಲಸಗಳನ್ನು ಮಾಡಬಹುದು. ಮೊದಲನೆಯದಾಗಿ, ವಿಧಿ ೭ರಲ್ಲಿ ಈಗಾಗಲೇ ನಾವು ಉಪಯೋಗಿಸಿದಂತೆ " ಇಂಥಾ ಸರಕಾರ" ಎಂಬ ಸಂಯುಕ್ತ ಪದವನ್ನು ಉಪಯೋಗಿಸಬಹುದು; ಅಥವಾ ಎರಡನೆಯದಾಗಿ, ಪ್ರತಿ ಸಲ 'ಆ ಕೇಂದ್ರ ಸರಕಾರ, ಆ ಪ್ರಾಂತೀಯ ಸರಕಾರ, ಆ ರಾಜ್ಯ ಸರಕಾರ, ಆ ಪುರಸಭೆ, ಆ ಸ್ಥಾನೀಯ ಮಂಡಳಿ, ಆ ಬಂದರು ಸಂಸ್ಥೆ ಅಥವಾ ಇನ್ನಿತರ ಯಾವುದೇ ಅಧಿಕಾರ" ಎನ್ನಬೇಕಾಗುತ್ತದೆ. ಯಾವುದೇ ಒಂದು ಅಧಿಕಾರದ ಬಗ್ಗೆ ನಾವು ಹೇಳುವಾಗ ಈ 'ಅಧಿಕಾರ' ಎಂಬ ಪದವನ್ನು ಪ್ರತಿಸಲ ಪುನರುಚ್ಚಾರ ಮಾಡುವುದು ಜಾಣತನದ ಮಾತಾಗಿರುವುದಿಲ್ಲ. ಇಂಥಾ ಸಂದರ್ಭಗಳಲ್ಲಿ, ನಾವು ಒಂದು ವ್ಯಾಪಕ ಶಬ್ದವನ್ನು ಉಪಯೋಗಿಸುವುದೇ ಅತ್ಯಂತ ವಿವೇಕದ ವಿಧಾನವಾಗಿರುತ್ತದೆ. ಈ ವಿವರಣೆಯ ನಂತರ ಈ ವಿಧಿಯಲ್ಲಿ ನಾವು "ಸರಕಾರ" ಎಂಬ ಶಬ್ದವನ್ನು ಏಕೆ ಉಪಯೋಗಿಸುತ್ತೇವೆ ಮತ್ತು ಈ ವಿಧಿ ಸಂವಿಧಾನದ ಒಂದು ಭಾಗವಾಗಿ ಏಕೆ ಉಳಿಯಬೇಕು ಎಂಬುದನ್ನು ನನ್ನ ಗೆಳೆಯ ಸರಳವಾಗಿ ತಿಳಿದುಕೊಳ್ಳಬಲ್ಲರು ಎಂದು ನಾನು ಭಾವಿಸುವೆ.

**ಮಾನ್ಯ ಉಪಸಭಾಪತಿ :** ನಾನು ಈಗ ಈ ತಿದ್ದುಪಡಿಯನ್ನು ಮತಕ್ಕಾಗಿ ಇಡುತ್ತೇನೆ. ಮೊದಲನೆಯದಾಗಿ, ಶ್ರೀ ನಜೀರುದ್ದೀನ್ ಅಹ್ಮದರು ಮಂಡಿಸಿದ ಸಂಖ್ಯೆ ೨೧೧ರ ತಿದ್ದುಪಡಿಯನ್ನು ಇಡುತ್ತೇನೆ. ಇದು ಸಂಖ್ಯೆ ೨೪೬ರ ತಿದ್ದುಪಡಿಯ ಮೇಲಿನ ಒಂದು ತಿದ್ದುಪಡಿಯಾಗಿರುತ್ತದೆ. ಇದು: ಪ್ರಶ್ನೆ ಏನೆಂದರೆ. "ವಿಧಿ ೭ಕ್ಕೆ ಸಂಬಂಧಿಸಿದ ತಿದ್ದುಪಡಿಯ ಪಟ್ಟಿಯ ಸಂಖ್ಯೆ ೨೪೬ಕ್ಕೆ ಸಂಬಂಧಿಸಿರುವ ಶಬ್ದಗಳಲ್ಲಿ" ಮತ್ತು "ಭಾರತದ ಪ್ರದೇಶದಲ್ಲಿನ ಅಥವಾ ಭಾರತ ಸರಕಾರದ ನಿಯಂತ್ರಣದಲ್ಲಿನ ಎಲ್ಲಾ ಸ್ಥಾನೀಯ ಅಥವಾ ಇತರ ಅಧಿಕಾರಗಳನ್ನು" ಎಂಬ ಪದಗಳನ್ನು ತೆಗೆದುಹಾಕಬೇಕು" ಎಂದಿರುತ್ತದೆ.

ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಪತಿ :** ಮುಂದಿನ ತಿದ್ದುಪಡಿಯ ಸಂಖ್ಯೆ ೨೪೬ ಇದೆ ಮತ್ತು ಅದನ್ನು ಡಾ. ಅಂಬೇಡ್ಕರರು ಮಂಡಿಸಿದ್ದಾರೆ. ಪ್ರಶ್ನೆ ಏನೆಂದರೆ "ವಿಧಿ ೭ರ ಕೊನೆಗೆ ಕೆಳಗಿನ ಶಬ್ದಗಳನ್ನು ಸೇರಿಸಬೇಕು ಅಥವಾ ಭಾರತ ಸರಕಾರದ ನಿಯಂತ್ರಣದೊಳಗಿನ"

ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಲಾಯಿತು. (ಇನ್ನಿತರ ಎರಡು ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು).

ತಿದ್ದುಪಡಿಸಲಾದ ವಿಧಿ ೭ನ್ನು ಸಂವಿಧಾನದಲ್ಲಿ ಸೇರಿಸಲಾಯಿತು.

* * * * *

## ವಿಧಿ – ೮

* **ಮಾನ್ಯ ಉಪಸಭಾಪತಿ :** ನಮ್ಮಲ್ಲಿ ೧೫ ನಿಮಿಷಗಳ ಸಮಯವಿದೆ. ಆದುದರಿಂದ, ಕರಡುಪ್ರತಿ ಸಂವಿಧಾನದಲ್ಲಿನ ವಿಧಿ '೮' ರ ಮೇಲಿನ ಚರ್ಚೆಯನ್ನು ಮುಂದುವರಿಸಬಹುದು.

**ಪಂಡಿತ ಲಕ್ಷ್ಮಿಕಾಂತ ಮೈತ್ರ** (ಪಶ್ಚಿಮ ಬಂಗಾಳ : ಸಾಮಾನ್ಯ): ಈಗ ನಾವೂ ಸಭೆಯನ್ನು ಮುಂದೂಡೋಣ.

**ಮಾನ್ಯ ಉಪಸಭಾಪತಿ :** ನಮ್ಮ ಸಮಯ ಅಮೂಲ್ಯವಾದದ್ದಾಗಿದೆ. ಹದಿನೈದು ನಿಮಿಷದ ವೇಳೆಯನ್ನು ವೃಥಾ ಹೋಗಗೊಡಬಾರದು.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಸ್ವಾಮಿ ನಾನು : 'ವಿಧಿ ೮ರ ಕಲಮು (೩)ರಲ್ಲಿ ಈ ಕೆಳಗಿನದನ್ನು ಬದಲಿಸಬೇಕೆಂದು:

(೩) ಈ ವಿಧಿಯಲ್ಲಿ –

(ಅ) 'ಕಾನೂನು' ಎನ್ನುವ ಹೇಳಿಕೆ ಯಾವುದೇ ಉಪ–ಕಾನೂನು, ನಿಯಮ, ನಿಯಂತ್ರಣ, ಪ್ರಕಟಣೆ, ಭಾರತದ ಪ್ರದೇಶದ ಅಥವಾ ಅದರ ಯಾವುದೇ ಭಾಗದಲ್ಲಿ ಕಾನೂನಿನ ಬಲವನ್ನು ಹೊಂದಿರುವ ಯಾವುದೇ ರೂಢಿ ಅಥವಾ ಸಂಪ್ರದಾಯ ಒಳಗೊಂಡಿರುತ್ತದೆ.

(ಬ) 'ಜಾರಿಯಲ್ಲಿರುವ ಕಾನೂನು' ಎನ್ನುವ ಹೇಳಿಕೆಯು ಒಂದು ಶಾಸಕಸಭೆಯಿಂದ ಪಾಸು ಮಾಡಲಾದ ಅಥವಾ ಈ ಸಂವಿಧಾನ ಜಾರಿಯಲ್ಲಿ ಬರುವುದಕ್ಕಿಂತ ಮುಂಚೆ ಭಾರತ ದೇಶದಲ್ಲಿನ ಇತರ ಸಮರ್ಥ ಅಧಿಕಾರಿಯಿಂದ ಮಾಡಿದ ಮತ್ತು ಹಿಂದೆಂದೂ ರದ್ದಾಗಲಾರದ ಕಾಯಿದೆಯನ್ನು ಒಳಗೊಂಡಿರುತ್ತದೆ; ಹಿಂದೆ ಭಾರತ ದೇಶದ ಸಮರ್ಥ ಅಧಿಕಾರಿಯಿಂದ ಮಾಡಿದ ಯಾವುದೇ ಕಾನೂನು ಅಥವಾ ಅದರ ಯಾವುದೇ ಭಾಗ ಭಾರತ ಪ್ರದೇಶದಲ್ಲಿ ಅಥವಾ ಅದರ ಯಾವುದೇ ಪ್ರತ್ಯೇಕ ಭಾಗಗಳಲ್ಲಿ ಆಗ ಕಾರ್ಯಾಚರಣೆಯಲ್ಲಿ ಇದ್ದಿಲ್ಲವೆಂಬ ವಿಷಯ ಗೌಣವಾಗಿರುತ್ತದೆ – ಇಲ್ಲಿ' ಎಂದು ಮಂಡಿಸುತ್ತೇನೆ.

ಸ್ವಾಮಿ, ಈ ತಿದ್ದುಪಡಿಯನ್ನು ಮಂಡಿಸಲು ಕಾರಣ ಹೀಗಿದೆ: ವಿಧಿ (೮)ರಲ್ಲಿ ಎರಡು ಹೇಳಿಕೆಗಳಿರುತ್ತವೆ ಎಂಬುದನ್ನು ನೀವು ನೋಡಬಹುದು. ವಿಧಿ '೮'ರ ಉಪ ಕಲಮು (೧)ರಲ್ಲಿ 'ಜಾರಿಯಲ್ಲಿರುವ ಕಾನೂನುಗಳು'

---

* ಸಿ.ಎ.ಡಿ. ಸಂಪುಟ ೭, ೨೬ನೆಯ ನವೆಂಬರ್, ೧೯೪೮, ಪುಟ ೬೪೦

ಎಂಬ ಮೊದಲನೆಯ ಹೇಳಿಕೆ ಇರುತ್ತದೆ. ಇದೇ ವಿಧಿಯ ಉಪ–ಕಲಮು (೨)ರಲ್ಲಿ "ಯಾವುದೇ ಕಾನೂನು" ಎಂಬ ಪದಗಳು ಎರಡನೆಯ ಹೇಳಿಕೆಯನ್ನು ಸೂಚಿಸುತ್ತವೆ, ಈ ಸದನಕ್ಕೆ ಸಲ್ಲಿಸಿದ ಮೂಲ ಕರಡು ಪ್ರತಿಯಲ್ಲಿ ಈ ವಿಧಿಯ ಉಪ–ಕಲಮು (೩)ರಲ್ಲಿರುವ 'ಕಾನೂನು' ಎಂಬ ಪದವನ್ನು ಮಾತ್ರ ವ್ಯಾಖ್ಯಿಸಲಾಗಿರುತ್ತದೆ ಮತ್ತು 'ಜಾರಿಯಲ್ಲಿರುವ ಕಾನೂನು' ಎಂಬ ಪದವನ್ನು ವ್ಯಾಖ್ಯಿಸಲಾಗಿಲ್ಲ. ನನ್ನ ತಿದ್ದುಪಡಿ ಈ ನ್ಯೂನತೆಯನ್ನು ಸರಿಪಡಿಸಲು ಶ್ರಮಿಸುತ್ತದೆ. ನಾವು ಏನನ್ನು ಮಾಡಿದ್ದೇವೆ ಎಂದರೆ – ಇಲ್ಲಿ ಉಪ–ಕಲಮು(೩)ನ್ನು (ಅ) ಮತ್ತು (ಬ) ಎಂಬ ಎರಡು ಭಾಗಗಳಲ್ಲಿ ಬೇರ್ಪಡಿಸಿದ್ದೇವೆ. (ಅ) ಭಾಗವು ಮೂಲ ಉಪ–ಕಲಮು(೩) ಒಳಗೊಂಡಿರುವ "ಕಾನೂನು" ಪದದ ವ್ಯಾಖ್ಯಾನವನ್ನು ಹೊಂದಿರುತ್ತದೆ ಮತ್ತು ಭಾಗ (ಬ) ಇದೇ ವಿಧಿ '೮'ರ ಉಪ–ಕಲಮು (೧)ರಲ್ಲಿ ಬರುವ "ಅನುಷ್ಠಾನದಲ್ಲಿರುವ ಕಾನೂನುಗಳು" ಎಂಬ ಹೇಳಿಕೆಯ ವ್ಯಾಖ್ಯಾನವನ್ನು ಹೊಂದಿರುತ್ತದೆ. ಇದಕ್ಕಿಂತ ಹೆಚ್ಚಿನ ಯಾವ ವಿವರಣೆಯ ಅವಶ್ಯಕತೆ ಇದೆ ಎಂದು ನಾನು ಭಾವಿಸುವುದಿಲ್ಲ.

* * * * *

* **ಮಾನ್ಯ ನಜೀರುದ್ದೀನ್ ಅಹ್ಮದ್ :** ಸ್ವಾಮಿ, ನಾನು ನನ್ನ ತಿದ್ದುಪಡಿ ಮಂಡಿಸುವ ಮುನ್ನ ಕಾನೂನಿಗೆ ಸಂಬಂಧಿಸಿದಂತೆ ಗೌರವಾನ್ವಿತ ಡಾ। ಅಂಬೇಡ್ಕರರು ಈಗಾಗಲೇ ಒಂದು ವ್ಯಾಪಕ ತಿದ್ದುಪಡಿಯನ್ನು ಮಂಡಿಸಿದ್ದಾರೆಂಬುದನ್ನು ಎತ್ತಿ ತೋರಿಸಲು ವಿನಂತಿಸಿಕೊಳ್ಳುತ್ತೇನೆ. ನನ್ನ ಈ ತಿದ್ದುಪಡಿಯನ್ನು ಅವರ ಆ ತಿದ್ದುಪಡಿಗೆ ಅನ್ವಯವಾಗುವಂತೆ ಮಾರ್ಪಾಡು ಮಾಡಿ ಸ್ವೀಕರಿಸಬೇಕು. ನಾನು ನನ್ನ ತಿದ್ದುಪಡಿಯ ಎರಡನೆಯ ಭಾಗವನ್ನು ಮಾತ್ರ ಮಂಡಿಸಲು ಇಚ್ಛಿಸುತ್ತೇನೆ.

**ಮಾನ್ಯ ಉಪಸಭಾಪತಿ :** ಮೊದಲು, ನಿಮ್ಮ ತಿದ್ದುಪಡಿಯನ್ನು ಅವರು ಒಪ್ಪುತ್ತಾರೆಯೋ ಇಲ್ಲವೋ ತಿಳಿದುಕೊಳ್ಳಿ.

**ಮಾನ್ಯ ನಜೀರುದ್ದೀನ್ ಅಹ್ಮದ್ :** ನಾನು ವಿಷಯ ತಿಳಿಸುವವರೆಗೆ ಅವರು ಅದನ್ನು ಒಪ್ಪುವುದಿಲ್ಲ. ಸ್ವಾಮಿ, ಈ ನನ್ನ ತಿದ್ದುಪಡಿಯನ್ನು ಒಪ್ಪಲೇ ಬೇಕೆಂದು ನಾನು ಭಾವಿಸುತ್ತೇನೆ. ನಾನು "ಡಾ. ಅಂಬೇಡ್ಕರರಿಂದ ಮಂಡಿಸಲಾದ ಸಂಖ್ಯೆ ೨೬೦ರ ತಿದ್ದುಪಡಿಯಲ್ಲಿ ಭಾರತ ದೇಶದಲ್ಲಿನ ಅಥವಾ ಅದರ ಯಾವುದೇ ಭಾಗದಲ್ಲಿನ ಕಾನೂನಿನ ಬಲವುಳ್ಳ ರೂಢಿ ಅಥವಾ ಸಂಪ್ರದಾಯ" ಎಂಬ ಶಬ್ದಗಳನ್ನು ತೆಗೆದುಹಾಕಬೇಕು.

**ಮಾನ್ಯ ಉಪಸಭಾಪತಿ :** ಯಾವ ಮನ್ಸೂಚನೆಯನ್ನೂ ನೀಡದೆ ಆ ತಿದ್ದುಪಡಿಯಲ್ಲಿ ಬೇರೆಯದನ್ನು ನೀವು ಹೇಗೆ ಸೇರಿಸುವಿರಿ? ಇದು ಕ್ರಮಬದ್ಧವಾಗಿರುವುದಿಲ್ಲ. ನೀವು ಕೇವಲ ಸಲಹೆಯನ್ನು ಮಾಡಬಲ್ಲಿರಿ. ಅಷ್ಟೆ.

**ಮಾನ್ಯ ನಜೀರುದ್ದೀನ್ ಅಹ್ಮದ್ :** ಮೂಲ ವಿಧಿಗೆ ಸಂಬಂಧಿಸಿದ ತಿದ್ದುಪಡಿಗಾಗಿ ಈಗಾಗಲೇ ನಾನು ಸೂಚನೆಯನ್ನು ಇಟ್ಟಿರುವೆ. ಡಾ॥ ಅಂಬೇಡ್ಕರರ ತಿದ್ದುಪಡಿಯನ್ನು ಗಮನದಲ್ಲಿಟ್ಟುಕೊಂಡು ಅವುಗಳಲ್ಲಿ ಸಾಂದರ್ಭಿಕ ಬದಲಾವಣೆಗಳಾಗಬೇಕಿದೆ.

**ಮಾನ್ಯ ಉಪಸಭಾಪತಿ :** ಹಾಗೆಯೇ ಆಗಲಿ.

* * * * *

---

* ಸಿ.ಎ.ಡಿ. ಸಂಪುಟ ೭, ೨೬ನೆಯ ನವೆಂಬರ್, ೧೯೪೮, ಪುಟ ೬೪೦

* **ಮಾನ್ಯ ನಜೀರುದ್ದೀನ್ ಅಹ್ಮದ್ :** ಡಾ. ಅಂಬೇಡ್ಕರರು ನಡುವೆ ಬಂದು ತಾವು ತಿದ್ದುಪಡಿಯನ್ನು ಮಂಡಿಸಿದುದಕ್ಕಾಗಿ ನಾನು ತುಂಬಾ ಸಂತೋಷನ್ನು ವ್ಯಕ್ತಪಡಿಸುತ್ತೇನೆ. ಆದರೆ ನನ್ನ ತೊಂದರೆಗಳನ್ನು ಇದು ಹೋಗಿಸುವುದೇ ಇಲ್ಲ. ಸರಕಾರ ಕೇವಲ 'ರೂಢಿ' ಅಥವಾ 'ಸಂಪ್ರದಾಯ' (Usage) ವನ್ನು ಅನುಷ್ಠಾನದಲ್ಲಿ ತರುವುದಕ್ಕೆ ಮಾತ್ರ ಇದೆ ಎಂದು ನಾವು ತಿಳಿದುಕೊಳ್ಳಬೇಕೆ ? ಇಷ್ಟಾದರೂ, ಸರಕಾರ ರೂಢಿ ಅಥವಾ ಸಂಪ್ರದಾಯವನ್ನು ಒಳಗೊಂಡ ಕಾನೂನನ್ನು ಮಾಡುತ್ತದೆ ಎಂಬ ತೊಂದರೆಯನ್ನು ನೀವು ಎದುರಿಸಬೇಕಾಗುತ್ತದೆ.

**ಗೌರವಾನ್ವಿತ ಡಾ. ಬಿ.ಜಿ. ಖೇರ್ :** ನಿಜವಾಗಿಯೂ, 'ಅವಶ್ಯಕವಾದಾಗ' (Whenever necessary) ಎಂಬ ಅರ್ಥವನ್ನು ಇದು ಕೊಡುತ್ತದೆ. ನಾನು ಮಧ್ಯೆ ಮಾತನಾಡಿದುದಕ್ಕೆ ಕ್ಷಮೆ ಕೇಳುತ್ತೇನೆ. ಕಾನೂನಿನಲ್ಲಿ ಇಷ್ಟನ್ನು ನಾವು ಯಾವಾಗಲೂ ತಿಳಿದಿರಬೇಕು. ನಡುವೆ ಮಾತನಾಡಿದುದಕ್ಕಾಗಿ ನನ್ನನ್ನು ಕ್ಷಮಿಸಿರಿ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಒಂದು ವೇಳೆ ನಾನು "ಕಾನೂನು" ಎನ್ನುವ ಹೇಳಿಕೆ ೩ನೆಯ ಕಾನೂನು (ಅ) ಕಲಮಿಗಲ್ಲದೆ ೮ನೆಯ ಕಾನೂನಿನ (೧)ಕ್ಕೆ ಅನ್ವಯವಾಗುತ್ತದೆ ಎಂಬ ನಿಜ ಸಂಗತಿಯನ್ನು ತಿಳಿದಲ್ಲಿ, ಅವರು ತನ್ನ ಭಾಷಣ ಮುಂದುವರಿಸುವುದು ಅವಶ್ಯಕವೆಂದುಕೊಳ್ಳುತ್ತಿರಲಿಲ್ಲವೇನೋ?

**ಮಾನ್ಯ ನಜೀರುದ್ದೀನ್ ಅಹ್ಮದ್ :** ರೂಢಿ ಮತ್ತು ಸಂಪ್ರದಾಯ ಶಬ್ದಗಳು ಕಾಯಿದೆಯ ಬಲವನ್ನು ಹೊಂದಿರುತ್ತವೆ ........... ಎಂದು ನಾನು ಮಾತನಾಡುತ್ತಿರುವಾಗ ಡಾ. ಅಂಬೇಡ್ಕರರು ಬಂದು ಹೇಳಿದುದಕ್ಕೆ ನಾನು ಅವರಿಗೆ ಪುನಃ ಆಭಾರಿಯಾಗಿರುವೆ.

*+ **ಮಾನ್ಯ ಉಪಸಭಾಪತಿ :** ನಾವು ವಿಧಿ ೮ರ ಮೇಲಿನ ಚರ್ಚೆಯನ್ನು ಮುಂದುವರಿಸೋಣವೆ? ಯಾರಾದರೂ, ಗೌರವಾನ್ವಿತ ಸದಸ್ಯರು ಇದರ ಮೇಲೆ ಮಾತನಾಡಲು ಇಚ್ಛಿಸುವಿರೋ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** (ಬೊಂಬಾಯಿ : ಸಾಮಾನ್ಯ): ಮಾನ್ಯ ಉಪಸಭಾಪತಿಗಳೇ, ಮಾನ್ಯ ನಜೀರುದ್ದೀನ್ ಅಹ್ಮದರು ಮಂಡಿಸಿದ ತಿದ್ದುಪಡಿಯನ್ನು ತಿಳಿದುಕೊಂಡಂತೆ ಇಲ್ಲಿ ಸ್ವಲ್ಪ ತೊಂದರೆ ಉಂಟುಮಾಡುತ್ತಿರುವುದರಿಂದ ಇದನ್ನು ನಿವಾರಿಸುವುದು ಅವಶ್ಯಕವಾಗಿರುತ್ತದೆ. ಈಗಿನ ಕರಡು ಪ್ರತಿಯಲ್ಲಿ ಒಂದು ಅಸಂಬದ್ಧತೆ ಇದೆ ಮತ್ತು ಅದನ್ನು ತೊಡೆದುಹಾಕುವ ಉದ್ದೇಶವನ್ನು ನನ್ನ ತಿದ್ದುಪಡಿ ಹೊಂದಿರುತ್ತದೆ ಎಂದು ಅಹ್ಮದರು ಹೇಳುತ್ತಾರೆ. ಒಂದು ವೇಳೆ ಅವರ ವಾದವನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಿದ್ದಲ್ಲಿ, ಅದು ಕಾನೂನಿನ ವ್ಯಾಖ್ಯಾನದಲ್ಲಿ ನಾವು ರೂಢಿಯನ್ನು ಉಳಿಸಿಕೊಂಡಿದ್ದೇವೆ, ರೂಢಿಯನ್ನು ಉಳಿಸಿಕೊಂಡೂ ನಾವು ಸರಕಾರ ಯಾವುದಾದರೂ ಕಾನೂನನ್ನು ಮಾಡುವ ಹಕ್ಕು ಇದೆ ಎಂದು ತಿಳಿಯುತ್ತೇವೆ. ಇದೊಂದು ಅಸಂಬದ್ಧತೆಯಾಗಿರುತ್ತದೆ, ಮತ್ತು ನಮ್ಮ ವ್ಯಾಖ್ಯಾನದಲ್ಲಿ ಕಾನೂನು 'ರೂಢಿ'ಯನ್ನು ಸೇರಿಸಿಕೊಂಡಿರುತ್ತದೆ. ಇಂತಹ ವ್ಯಾಖ್ಯಾನ (Construction) ಸಾಧ್ಯವಾಗಿರುವುದಿಲ್ಲ. ಏಕೆಂದರೆ, ವಿಧಿ ೮ ಸಂಪೂರ್ಣ ವಿಧಿ ೮ಕ್ಕೆ ಅನ್ವಯವಾಗುತ್ತದೆ ಹೊರತು ಈ ವಿಧಿಯ ಉಪ ಕಲಮು ಎರಡಕ್ಕಷ್ಟೇ ಅಲ್ಲ. ವಿಷಯ ಹೀಗಿರುವುದರಿಂದ, ಸಮಂಜಸ ಹೇಳಿಕೆ ಎಂದರೆ ಕಾನೂನನ್ನು, ಅಂದರೆ ಎಂಟನೆಯ ವಿಧಿಗೆ ಸಂಬಂಧಿಸಿದಂತೆ ಕಾನೂನು ವಿವರಣಾತ್ಮಕವಾಗಿ ನಾವು ಓದಬೇಕು; ಹಾಗೆ ಮಾಡಿದಾಗ ವಿಧಿ ೮ರಲ್ಲಿನ ಉಪ ಕಲಮು (೧)ಕ್ಕೆ

---

* ಸಿ.ಎ.ಡಿ. ಸಂಪುಟ ೭, ೨೬ನೆಯ ನವೆಂಬರ್, ೧೯೪೮, ಪುಟ ೬೪೧

* ಸಿ.ಎ.ಡಿ. ಸಂಪುಟ ೭, ೨೬ನೆಯ ನವೆಂಬರ್, ೧೯೪೮, ಪುಟ ೬೪೨

\+ ಸಿ.ಎ.ಡಿ. ಸಂಪುಟ ೭, ೨೯ನೆಯ ನವೆಂಬರ್, ೧೯೪೮, ಪುಟ ೬೪೪–೪೫

ಸಂಬಂಧಿಸಿದಂತೆ 'ಕಾನೂನು' 'ರೂಢಿ'ಯನ್ನು ಒಳಗೊಂಡಿರುತ್ತದೆ ಹಾಗೂ ಉಪ–ಕಲಮು (೨) ಕ್ಕೆ ಸಂಬಂಧಿಸಿದಂತೆ ಅದು 'ರೂಢಿ'ಯನ್ನು ತನ್ನಲ್ಲಿ ಒಳಗೊಂಡಿರುವುದಿಲ್ಲ. ನನ್ನ ನಿರ್ಣಯದಲ್ಲಿ ಈ ರೀತಿ ಓದುವುದೇ ನನ್ನ ನಿರ್ಣಯದಲ್ಲಿ ಸರಿಯಾಗಿ ಓದುವುದಾಗಿರುತ್ತದೆ ಮತ್ತು ಈ ರೀತಿ ನಿಯಮವನ್ನು ಓದಿದ್ದಲ್ಲಿ ನನ್ನ ಗೆಳೆಯ ಹೇಳಿದ ಇಂಥಾ ಅಸಂಬದ್ಧತೆಯು ತಲೆ ಎತ್ತುತ್ತಿರಲಿಲ್ಲ.

ಆದರೆ ಕಾಯಿದೆಗಳ ಸರಿಯಾದ ಅರ್ಥವನ್ನು ತಿಳಿದವರು ಈ ನಿಯಮವನ್ನು ಶ್ರೀ ನಜೀರುದ್ದೀನ ಅಹ್ಮದ್‌ರು ಹೇಳಿದ ರೀತಿಯಲ್ಲಿ ಅರ್ಥೈಸಿ ನಮಗೆ ಸಂಶಯ ಬರುವಂತೆ ಮಾಡಬಹುದು. ಆದುದರಿಂದ ಇಂಥಾ ತೊಂದರೆಯನ್ನು ತಪ್ಪಿಸಲು, ನಾನು ಮಂಡಿಸಿದ ವಿಧಿ ೮ರ ಉಪ ಕಲಮು (೩) ರಲ್ಲಿ, ಆ ವಿಧಿಯ 'ಇಂಥಾ ನಿಯಮದಲ್ಲಿ' ಈ ಕೆಳಗಿನ ಪದಗಳನ್ನು ಸೇರಿಸಲು ನನಗೆ ಪರವಾನಗಿಯನ್ನು ನೀಡಬೇಕು. ನಾನು ಸೇರಿಸಲು ಬಯಸುವ ಪದಗಳು ಹೀಗಿವೆ.

ಪರಿಸ್ಥಿತಿ ಅನ್ಯಥಾ ಬೇರೊಂದನ್ನು ಅವಶ್ಯಕವೆನಿಸದಿದ್ದಲ್ಲಿ –

(ಅ) ಕಾನೂನು ಎಂಬ ಹೇಳಿಕೆ ಭಾರತದಲ್ಲಿನ ಅಥವಾ ಯಾವುದೇ ಅದರ ಒಂದು ಪ್ರದೇಶದ ಶಾಸನ, ಆಜ್ಞೆ, ಉಪ–ಕಾಯಿದೆ, ಆಡಳಿತ ಕಾಯಿದೆ ನಿಯಂತ್ರಣ, ಪ್ರಕಟಣೆ ರೂಢಿ ಅಥವಾ ಕಾನೂನಿನ ಬಲವನ್ನು ಹೊಂದಿರುವ ಸಂಪ್ರದಾಯ (Usage) ವನ್ನು ಒಳಗೊಂಡಿರುತ್ತದೆ.

(ಬ) ಇಂಥಾ ಹೇಳಿಕೆ ..................

ಇಲ್ಲಿರುವುದೆಲ್ಲವನ್ನು ನಾನು ಓದುವುದು ಅವಶ್ಯಕವಾಗಿರುವುದಿಲ್ಲ.

ಆದ್ದರಿಂದ, ಈ ಸಂದರ್ಭದಲ್ಲಿ ಒಂದು ವೇಳೆ ವಿಧಿ ೮ (೧) 'ಕಾನೂನು' ಎಂಬ ಶಬ್ದವನ್ನು ರೂಢಿಯಲ್ಲಿ ಸೇರಿಸಿಕೊಂಡಲ್ಲಿ ಅಂಥಾ ರಚನೆ ಸಾಧ್ಯವಾಗಬಲ್ಲದು. ಒಂದು ವೇಳೆ ವಿಧಿ ೮(೨)ರಲ್ಲಿ 'ಕಾನೂನು' ಎಂಬ ಶಬ್ದ ರೂಢಿಯನ್ನು ಸೇರಿಸಿಕೊಳ್ಳಲು ನಿರಾಕರಿಸಿದಲ್ಲಿ, ಆಗ 'ಕಾನೂನು' ಎಂಬ ಶಬ್ದ ರೂಢಿಯನ್ನು ಸೇರಿಸಿಕೊಂಡು ಓದುವುದು ಸಾಧ್ಯವಾಗಲಾರದು. ಈ ನನ್ನ ಹೇಳಿಕೆ ನನ್ನ ಗೆಳೆಯ ತನ್ನ ತಿದ್ದುಪಡಿಯಲ್ಲಿ ಎತ್ತಿ ತೋರಿಸಿದ ತೊಂದರೆಯನ್ನು ನಿವಾರಿಸುತ್ತದೆ.

**ಮಾನ್ಯ ಉಪಸಭಾಪತಿ :** ಈ ತಿದ್ದುಪಡಿಗಳನ್ನು ಒಂದರ ನಂತರ ಒಂದರಂತೆ ಮತಕ್ಕಾಗಿ ಸದನದಲ್ಲಿ ಮಂಡಿಸುತ್ತೇನೆ. ಈ ಸಂದರ್ಭದಲ್ಲಿ ಹಳೆಯ ಪಟ್ಟಿಯ ತಿದ್ದುಪಡಿಗಳ ಸಂಖ್ಯೆಯನ್ನು ನನ್ನ ತಲೆಯಲ್ಲಿಟ್ಟುಕೊಂಡಿರುತ್ತೇನೆ.............

ಮೆಹಬೂಬ್ ಆಲಿ ಬೇಗಂನ ಹೆಸರಿನಲ್ಲಿರುವ ಸಂಖ್ಯೆ ೨೫೨ರ ತಿದ್ದುಪಡಿಯನ್ನು ಮತಕ್ಕಾಗಿ ಇಡುತ್ತೇನೆ. ಇಲ್ಲಿ ಪ್ರಶ್ನೆ ಏನೆಂದರೆ :

ವಿಧಿ ೮ರ ಕಲಮು (೨) ರಲ್ಲಿರುವ ಅವಕಾಶವನ್ನು ತೆಗೆದುಹಾಕಬೇಕಾಗಿದೆ.

ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

(ಶ್ರೀ ಲೋಕನಾಥ ಮಿಶ್ರಾರ ಹೆಸರಿನಲ್ಲಿರುವ ಸಂಖ್ಯೆ ೨೫೯ ತಿದ್ದುಪಡಿಯನ್ನು ನಿರಾಕರಿಸಲಾಯಿತು)

* * * * *

***ಮಾನ್ಯ ಉಪಸಭಾಪತಿ :** ಈಗ ನಾನು ಡಾ. ಅಂಬೇಡ್ಕರು ತಿದ್ದಿದ ಸಂಖ್ಯೆ ೨೬೦ರ ತಿದ್ದುಪಡಿಯನ್ನು ಮಂಡಿಸುತ್ತೇನೆ. ಇಲ್ಲಿನ ಪ್ರಶ್ನೆ ಏನೆಂದರೆ :

---

* ಸಿ.ಎ.ಡಿ. ಸಂಪುಟ ೭, ೨೬ನೆಯ ನವೆಂಬರ್, ೧೯೪೮, ಪುಟ ೬೪೫

"ವಿಧಿ ೮ರ ಕಲಮು (೩) ರ ಸಲುವಾಗಿ ಈ ಕೆಳಗಿನದುದನ್ನು ಬದಲಾಯಿಸಬೇಕು:

(೩) ಪರಿಸ್ಥಿತಿ ಅನ್ಯಥಾ ಅವಶ್ಯಕಗೊಳಿಸದಿದ್ದಲ್ಲಿ ಈ ವಿಧಿಯಲ್ಲಿ

(ಅ) ಕಾನೂನು ಎಂಬ ಹೇಳಿಕೆಯು ಭಾರತದ ಅಥವಾ ಅದರ ಒಂದು ಭಾಗದ ಯಾವುದೇ ಆದೇಶ, ಆಜ್ಞೆ, ಉಪ–ಕಾನೂನು, ನಿಯಮ, ನಿಯಂತ್ರಣ, ಪ್ರಕಟನೆ, ರೂಢಿ ಅಥವಾ ಬಳಕೆಯನ್ನು ಒಳಗೊಂಡಿರುತ್ತದೆ;

(ಬ) ಅನುಷ್ಠಾನದಲ್ಲಿರುವ ಕಾನೂನುಗಳು (Laws in force) ಶಾಸಕಾಂಗದಿಂದ ಮಂಜೂರು ಮಾಡಲಾದ ಅಥವಾ ರೂಪಿಸಲಾದ ಕಾನೂನುಗಳು ಅಥವಾ, ಈ ಹಿಂದೆ ಮರುಕಳಿಸದ ಮತ್ತು ಈ ಸಂವಿಧಾನದ ಜಾರಿಯಲ್ಲಿ ಬರುವುದಕ್ಕಿಂತ ಮೊದಲು ಯೋಗ್ಯ (Competent)ಅಧಿಕಾರ (authority). ಇಂಥ ಭಾರತದ ಪ್ರದೇಶದಲ್ಲಿ ಮಾಡಲಾಗಿದ್ದ ಕಾನೂನು, ಈ ಪ್ರತ್ಯೇಕ ಪ್ರದೇಶಗಳಲ್ಲಿ ಆಗ ಆಚರಣೆಯಲ್ಲಿ ಇಲ್ಲದ ಕಾನೂನು ಸಹ ಇದಾಗಿರಬಹುದು."

ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

(ಇನ್ನು ಎರಡು ತಿದ್ದುಪಡಿಗಳನ್ನು ನಿರಾಕರಿಸಲಾಯಿತು)

ತಿದ್ದುಪಡಿಯಾದ ನಂತರ, ವಿಧಿ ೮ನ್ನು ಸಂವಿಧಾನದಲ್ಲಿ ಸೇರಿಸಲಾಯಿತು.

* * * * *

## ವಿಧಿ–೮–ಎ

+ **ಮಾನ್ಯ ಉಪಸಭಾಪತಿ :** ಹೊಸ ಪಟ್ಟಿಯಲ್ಲಿರುವ ಮುಂದಿನ ತಿದ್ದುಪಡಿಯ ಸಂಖ್ಯೆ ೨೭೩ ಆಗಿದೆ ಮತ್ತು ಇದು ಶ್ರೀ ಎಲ್.ಎನ್. ಮಿಶ್ರಾರವರದ್ದಾಗಿದೆ.

**ಶ್ರೀ ಲೋಕನಾಥ ಮಿಶ್ರಾ** (ಒರಿಸ್ಸಾ : ಸಾಮಾನ್ಯ): ಸ್ವಾಮಿ, ನಾನು ವಿಧಿ ೮ರ ನಂತರ ಈ ಕೆಳಗಿನ ಹೊಸ ವಿಧಿ ೮–ಎನ್ನು ಸೇರಿಸಬೇಕು:

'ಮತ ನೀಡುವ ಅಧಿಕಾರ ಮತ್ತು ಚುನಾವಣೆ –

ವಿಧಿ ೮–ಎ(೧) ೨೧ ವರ್ಷ ವಯಸ್ಸಾದ ಪ್ರತಿಯೊಬ್ಬ ನಾಗರಿಕನಿಗೆ, ಅನ್ಯಥಾ ಈ ಸಂವಿಧಾನದ ಅಡಿಯಲ್ಲಿ ಅಥವಾ ಕೇಂದ್ರ ಪಾರ್ಲಿಮೆಂಟು ಅಥವಾ ರಾಜ್ಯ ಶಾಸಕಾಂಗ ಈ ಕೆಳಗಿನ ಕಾರಣಗಳಿಂದ ಅನರ್ಹಗೊಳಿಸದಿದ್ದಲ್ಲಿ, ಮತದಾನದ ಹಕ್ಕನ್ನು ಕೊಡಬೇಕೆಂದು ಸೂಚಿಸುತ್ತದೆ. ಆದರೆ, ಈ ಕಾರಣಗಳಿಗಾಗಿ ಅಂದರೆ ಆತ, ಭಾರತದ ನಿವಾಸಿಯಾಗಿದ್ದಿದ್ದರೆ, ಮತಿ ಭ್ರಮಣೆಯಾದವನಾಗಿದ್ದರೆ, ಅಪರಾಧಿಯಾಗಿದ್ದರೆ, ಕಾಯ್ದೆಬಾಹಿರ ಕ್ರಮ ಕೈಗೊಂಡರೆ, ಅಥವಾ ಭ್ರಷ್ಟಾಚಾರ ಎಸಗಿದ್ದರೆ, ಮತದಾನದ ಹಕ್ಕಿನಿಂದ ವಂಚಿತರಾಗಿರುತ್ತಾನೆ."

---

\+ ಸಿ.ಎ.ಡಿ. ಸಂಪುಟ ೭, ೨೯ನೆಯ ನವೆಂಬರ್, ೧೯೪೮, ಪುಟ ೬೪೬

* ಸಿ.ಎ.ಡಿ. ಸಂಪುಟ ೭, ೨೯ನೆಯ ನವೆಂಬರ್, ೧೯೪೮, ಪುಟ ೬೪೬

++ ಹಿಂದೂಸ್ಥಾನಿ ಭಾಷಣ ಭಾಷಾಂತರ

(೨) ಮುಂದಿನ ಉಪ–ಕಲಮಿನಲ್ಲಿ ವಿವರಿಸಿದಂತೆ, ಚುನಾವಣೆ ಪ್ರೌಢ ಮತದಾನದ ಮೇಲೆ ನಡೆಯುತ್ತದೆ. ಮತ್ತು ಅದು ಪರೋಕ್ಷವಾಗಿರುತ್ತದೆ. ಅಂದರೆ, ಮೊದಲು ಪೌರ ಮತ್ತು ಗ್ರಾಮ ಪಂಚಾಯಿತಿಗಳು, ಅಥವಾ ಹಳ್ಳಿಗಳ ಗುಂಪು, ಒಂದು ಸಣ್ಣ ಹಳ್ಳಿ ಅಥವಾ ಕೆಲವು ಪ್ರತ್ಯೇಕ ಸಂಖ್ಯೆಯ ಮತದಾರರಿರುವ ಅದರ ಒಂದು ಭಾಗ; ಅಥವಾ ಸ್ಥಾನೀಯ ಸ್ವಯಂ ಸರಕಾರದ ಒಂದು ಸ್ವತಂತ್ರ ಘಟಕ – ಇವುಗಳೆಲ್ಲವುಗಳು, ಮೊದಲಲ್ಲಿ ಪ್ರಾಥಮಿಕ ಸದಸ್ಯರನ್ನು ಆರಿಸಿಬರುತ್ತಾರೆ: ಇವರೆಲ್ಲ ಪ್ರತಿನಿಧಿಯಾಗಿ, ಕೇಂದ್ರ ಪಾರ್ಲಿಮೆಂಟಿಗೆ ಮತ್ತು ರಾಜ್ಯ ಶಾಸನಸಭೆಗೆ ಸದಸ್ಯರನ್ನು ಆರಿಸುತ್ತಾರೆ.

(೩) ಈ ಪ್ರಾಥಮಿಕ ಸದಸ್ಯರು, ತಾವು ಪಾರ್ಲಿಮೆಂಟಿಗೆ ಮತ್ತು ರಾಜ್ಯ ಶಾಸನಸಭೆಗೆ ಆರಿಸಿ ಕಳುಹಿಸುವ ಸದಸ್ಯರನ್ನು ವಾಪಸು ಕರೆಯಿಸಿಕೊಳ್ಳುವ ಅಧಿಕಾರವನ್ನು ಹೊಂದಿರುತ್ತಾರೆ.

(೪) ಓಟು ಹಾಕುವವ ಚುನಾವಣೆಯಲ್ಲಿ ಅಭ್ಯರ್ಥಿಯಾಗುವ ಹಕ್ಕನ್ನು ಹೊಂದಿರುತ್ತಾನೆ ಮತ್ತು ಚುನಾವಣೆಯ ಖರ್ಚನ್ನು ಸರಕಾರ ಭರಿಸುತ್ತದೆ.

(೫) ಪ್ರತಿಯೊಬ್ಬ ಉಮೇದುವಾಗಿ ಜನರಿಂದ ಆರಿಸಿಬರುತ್ತಾನೆ. ಒಂದು ವೇಳೆ ಆತನಿಗೆ **'**ವಿರೋಧ**'**ವಿಲ್ಲದಿದ್ದರೂ ಆತ ಒಟ್ಟೂ ಓಟುಗಳ ೧/೨ ದಷ್ಟು ಮತಗಳಿಂದ ಆರಿಸಿಬರಲೇಬೇಕಾಗುತ್ತದೆ; ಇಷ್ಟು ಮತಗಳು ಒಂದು ವೇಳೆ ಆತನಿಗೆ ಬೀಳದಿದ್ದಲ್ಲಿ ಆತ ಆರಿಸಿಬರಲಾರ.

* * * * *

* **ಶ್ರೀ ಅಲಗೂ ರೈ ಶಾಸ್ತ್ರಿ** (ಸಂಯುಕ್ತ ಪ್ರಾಂತಗಳು : ಸಾಮಾನ್ಯ) ಮಾನ್ಯ ಸಭಾಪತಿ ++ ನನ್ನ ಗೆಳೆಯ ಮಂಡಿಸಲಾದ ತಿದ್ದುಪಡಿಯನ್ನು ವಿರೋಧಿಸಲು ನಾನು ನಿಂತಿರುವೆ.

ನಾನು ತಿದ್ದುಪಡಿಯನ್ನು ವಿರೋಧಿಸಲು ಇರುವ ಮೊದಲನೆಯ ಕಾರಣ, ಇಲ್ಲಿ ಎತ್ತಲಾದ ಪ್ರಶ್ನೆಗೆ ಇದು, ಯಾವ ರೀತಿಯ ಸಂಬಂಧವನ್ನೂ ಹೊಂದಿರುವುದಿಲ್ಲ. ಕರಡು ಪ್ರತಿ ಸಂವಿಧಾನದಲ್ಲಿ ಬೇರೆ ಕಡೆ ಚುನಾವಣೆಗೆ ಸಂಬಂಧಿಸಿದ ವಿಷಯಗಳನ್ನು ಅಂದರೆ, ಶಾಸಕಾಂಗವನ್ನು ನಾವು ಹೇಗೆ ರಚಿಸಬೇಕು, ಇದರ ಸದಸ್ಯರು ಯಾರು; ಇವರ ಹಕ್ಕುಗಳು ಯಾವುವು ಮತ್ತು ಇವರ ಚುನಾವಣೆಗೆ ಸಂಬಂಧಿಸಿದ ವಿಧಿ ವಿಧಾನಗಳು ಯಾವುವು ಎಂಬುದನ್ನು ಚರ್ಚಿಸಲಾಗಿದೆ. ಚುನಾವಣೆಗಳ ವಿಷಯಗಳಿಗೆ ಸಂಬಂಧಪಟ್ಟ ನಿಯಮಗಳು ಚರ್ಚೆಗೆ ಬಂದಾಗ ಇಂಥಾ ತಿದ್ದುಪಡಿಯನ್ನು ಮಂಡಿಸಬೇಕು. ಕರಡು ಪ್ರತಿ ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳಿಗೆ ಈ ತಿದ್ದುಪಡಿ ಸಂಪೂರ್ಣವಾಗಿ ಅಸಮಂಜಸವಾಗಿರುತ್ತದೆ....... ಆದುದರಿಂದ ಈ ತಿದ್ದುಪಡಿಯನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡಬೇಕು ಮತ್ತು ಇದನ್ನು ಯಾವತ್ತೂ ಒಪ್ಪಬಾರದು.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಈ ತಿದ್ದುಪಡಿಯನ್ನು ನಾನು ಒಪ್ಪುವುದಿಲ್ಲ.

ಲೋಕನಾಥ ಮಿಶ್ರಾರವರ ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.

* * * * *

## ವಿಧಿ – ೯

* **ಮಾನ್ಯ ಉಪಸಭಾಪತಿ :** ತಿದ್ದುಪಡಿ ಸಂಖ್ಯೆ ೩೧೩ ಕೇವಲ ಶಾಬ್ದಿಕವಾಗಿರುವುದರಿಂದ ನಾನು ಇದಕ್ಕೆ ಅನುಮತಿ ನೀಡುವುದಿಲ್ಲ. ತಿದ್ದುಪಡಿ ಸಂಖ್ಯೆ ೩೧೪ ಡಾ. ಅಂಬೇಡ್ಕರರದ್ದು

**ಶ್ರೀ ಹೆಚ್. ವಿ. ಕಾಮತ್ :** ಮಾನ್ಯ ಉಪಸಭಾಪತಿಗಳೇ, ಈ ನನ್ನ ತಿದ್ದುಪಡಿ ಕೇವಲ ಶಾಬ್ದಿಕವಾಗಿದೆಯೋ ಅಥವಾ ಹೆಚ್ಚೆಂದರೆ ಒಂದು ಔಪಚಾರಿಕ ತಿದ್ದುಪಡಿಯಾಗಿದೆಯೋ ಎಂದು ಭಾವಿಸಿ ಇದಕ್ಕೆ ಅನುಮತಿ ನೀಡಲಾಗುತ್ತಿಲ್ಲವೇನು? ಈ ತಿದ್ದುಪಡಿ, 'ಸರಕಾರದ ಆದಾಯಗಳು' ಎಂಬ ಪದಗಳ ಬದಲಾಗಿ 'ಸರಕಾರದ ನಿಧಿಗಳು' ಎಂದು ಹೇಳಬೇಕು ಎಂಬುದಕ್ಕೆ ಮಾತ್ರ ಸಂಬಂಧಿಸಿರುತ್ತದೆ.

**ಮಾನ್ಯ ಉಪಸಭಾಪತಿ :** ನಾನು, ನೀವು ಎತ್ತಿದ ಈ ವಿಷಯವನ್ನು ಮನದೊಳಗೆ ಇಟ್ಟುಕೊಂಡಿದ್ದೇನೆ. ಡಾ. ಅಂಬೇಡ್ಕರರೇ, ಈಗ ನೀವು ಇವರು ಎತ್ತಿದ ವಿಷಯದ ಬಗ್ಗೆಯೂ ಸಹ ನಿಮ್ಮ ತಿದ್ದುಪಡಿಯಲ್ಲಿ ದಯಮಾಡಿ ಹೇಳುತ್ತೀರ?

**ಡಾ. ಬಿ.ಆರ್. ಅಂಬೇಡ್ಕರ್ :** ಸ್ವಾಮಿ ನಾನು "ವಿಧಿ ಒಂಬತ್ತನೆಯ ಕಲಮು(೧) ಎರಡನೆಯ ಪ್ಯಾರಾದಲ್ಲಿ ಉಪ–ಕಲಮು (ಬ)ದಲ್ಲಿರುವ 'ಸರಕಾರದ ಆದಾಯಗಳು' ಎಂಬ ಶಬ್ದಗಳನ್ನು 'ಸರಕಾರದ ನಿಧಿಗಳು' ಎಂಬುದಾಗಿ ಬದಲಾಯಿಸಬೇಕೆಂಬ

ತಿದ್ದುಪಡಿಯನ್ನು ನಾನು ಮಂಡಿಸುತ್ತಿದ್ದೇನೆ.

ಸಂವಿಧಾನ ಕರಡುಪ್ರತಿ ಸಿದ್ಧಪಡಿಸುವ ಸಮಿತಿಯು 'ಸರಕಾರದ ಆದಾಯಗಳು' ಎಂಬ ಪದಗಳನ್ನು 'ಸರಕಾರದ ನಿಧಿಗಳು' ಎಂಬ ಪದಗಳಿಂದ ಬದಲಾಯಿಸಲು ಏಕೆ ನಿರ್ಧರಿಸಿತು ಎನ್ನುವುದು ಬಹಳ ಸರಳವಾದ ವಿಷಯವಾಗಿರುತ್ತದೆ. ಬಹಳ ದಿನಗಳಿಂದಲೂ ಭಾರತದಲ್ಲಿ ಪ್ರಚಲಿತವಿರುವ ಆಡಳಿತ್ಮಾತಕ ಬಳಕೆಯ ಭಾಷೆಯಲ್ಲಿ ನಾವು ಪ್ರಾಂತೀಯ ಸರಕಾರದ ಆದಾಯಗಳ ಅಥವಾ ಕೇಂದ್ರ ಸರಕಾರದ ಆದಾಯಗಳ ಬಗ್ಗೆ ಮಾತನಾಡುವ ರೂಢಿಗೆ ಹೊಂದಿಕೊಂಡಿರುತ್ತೇವೆ; ಆದರೆ ಜಿಲ್ಲಾಮಂಡಳಿ ಅಥವಾ ಸ್ಥಾನೀಯ ಮಂಡಳಿಗಳ ಬಗ್ಗೆ ಮಾತನಾಡುವಾಗ ನಾವು 'ಸ್ಥಾನೀಯ ನಿಧಿಗಳು' ಎಂಬ ಪದಗಳನ್ನು ಸಾಮಾನ್ಯವಾಗಿ ಉಪಯೋಗಿಸುತ್ತೇವೆಯೇ ಹೊರತು 'ಸ್ಥಾನೀಯ ಆದಾಯ'ಗಳೆಂಬ ಪದವನ್ನಲ್ಲ. ಮತ್ತು ಭಾರತಾದ್ಯಂತ ಇರುವ ಎಲ್ಲಾ ಪ್ರಾಂತಗಳಲ್ಲಿ ಇಂಥಾ ಪದವಿನ್ಯಾಸವೇ ಉಪಯೋಗದಲ್ಲಿರುತ್ತದೆ. ಇದು ಏನೇ ಇರಲಿ, ಈಗ, ಈ ಸದನದ ಗೌರವಾನ್ವಿತ ಸದಸ್ಯರು, ನಾವು ಈ ಭಾಗದಲ್ಲಿ, 'ಸರಕಾರ' ಎಂಬ ಪದವನ್ನು ಕೇಂದ್ರ ಸರಕಾರ, ಪ್ರಾಂತೀಯ ಸರಕಾರಗಳು ಮತ್ತು ಭಾರತೀಯ ರಾಜ್ಯಗಳು ಎಂಬುದನ್ನಷ್ಟೆ ಒಳಗೊಳ್ಳದೆ, ಜಿಲ್ಲಾ ಮಂಡಳಿ ಅಥವಾ ತಾಲೂಕು ಮಂಡಳಿಗಳು ಅಥವಾ ತಾಲೂಕು ಸ್ಥಾನೀಯ ಮಂಡಳಿಗಳು ಅಥವಾ ಬಂದರು ಅಡಳಿತಗಾರ ಅಧಿಕಾರಿಗಳನ್ನು ಒಳಗೊಂಡ ಎಲ್ಲಾ ಸ್ಥಾನೀಯ ಅಧಿಕಾರಿಗಳನ್ನು ಸಹ ಒಳಗೊಳ್ಳಲು ಉಪಯೋಗಿಸುತ್ತಿದ್ದೇವೆ ಎಂಬುದನ್ನು ಮರೆಯಬಾರದು. ಇವೆಲ್ಲವುಗಳ ವಿಷಯದಲ್ಲಿ 'ನಿಧಿ' ಎಂಬ ಶಬ್ದವೇ 'ಯೋಗ್ಯ'ವಾಗಿರುತ್ತದೆ. ನಾವು ಮೂಲಭೂತ ಹಕ್ಕುಗಳನ್ನು ಕೇಂದ್ರ ಹಾಗೂ ಪ್ರಾಂತೀಯ ಸರಕಾರಗಳಲ್ಲದೆ ಇತರ ಎಲ್ಲಾ ಮಂಡಳಿಗಳಿಗೆ ಅನ್ವಯಿಸುವಂತಹ ಕಾರ್ಯಕ್ರಮವನ್ನು ಜಾರಿಯಲ್ಲಿ ತರುತ್ತಿರುವಾಗ ಒಂದು ವಿಶಾಲಾರ್ಥದ ವಿನ್ಯಾಸವನ್ನು ಕೇಂದ್ರ ಸರಕಾರಕ್ಕೆ ಅಷ್ಟೇ ಅಲ್ಲದೆ,

---

* ಸಿ.ಎ.ಡಿ. ಸಂಪುಟ ೭, ೨೬ನೆಯ ನವೆಂಬರ್, ೧೯೪೮, ಪುಟ ೬೫೩–೫೪

'ಸರಕಾರ' ಎಂಬ ಶಬ್ದದ ವ್ಯಾಖ್ಯಾನದಲ್ಲಿ ಸೇರಿಸಲಾದ ಸ್ಥಾನೀಯ ಮಂಡಳಿಗಳಿಗೂ ಅನ್ವಯಿಸುವಂತೆ ಮಾಡಬೇಕಾದುದು ಅವಶ್ಯಕವಾಗುತ್ತದೆ. ಆದುದರಿಂದ, ಈಗ, ನನ್ನ ಗೌರವಾನ್ವಿತ ಗೆಳೆಯ ಶ್ರೀ ಕಾಮತ್, ನಾನು ಮಂಡಿಸಿದ ಈ ತಿದ್ದುಪಡಿ ಕೇವಲ ಶಾಬ್ದಿಕ ಆಗಿರದೆ ಅದರಲ್ಲೂ ಸ್ವಲ್ಪ ಸತ್ಯಾಂಶವನ್ನು ಒಳಗೊಂಡಿದೆ ಎಂಬುದನ್ನು ತಿಳಿಯುತ್ತಾರೆಂದು ಆಶಿಸುತ್ತೇನೆ.

ಸ್ವಾಮಿ, ನಾನು ತಿದ್ದುಪಡಿಯನ್ನು ಮಂಡಿಸುವೆ.

* * * * *

* (ಒಬ್ಬರು ಅಥವಾ ಇಬ್ಬರು ಗೌರವಾನ್ವಿತ ಸದಸ್ಯರು ಮಾತನಾಡಲು ಎದ್ದುನಿಲ್ಲುತ್ತಾರೆ)

**ಮಾನ್ಯ ಉಪಸಭಾಪತಿ :** ಗೌರವಾನ್ವಿತ ಸದಸ್ಯರೇ, ನಾನು ತಮ್ಮ ಎಲ್ಲಾ ಆಶಯಗಳಿಗೆ ಸ್ಪಂದಿಸದಿದ್ದಲ್ಲಿ ನನ್ನನ್ನು ತಾವು ಕ್ಷಮಿಸಬೇಕು. ಸದನದ ಸಂಪೂರ್ಣ ಸಹಕಾರವನ್ನು ನಾನು ಬಯಸುತ್ತೇನೆ ಮತ್ತು ವಿಶೇಷವಾಗಿ ನಾನು ಈಗ ಸಹಕಾರಕ್ಕಾಗಿ ತಮ್ಮನ್ನು ಕೇಳಿಕೊಳ್ಳುತ್ತೇನೆ. ಡಾ॥ ಅಂಬೇಡ್ಕರರೆ, ನೀವು ಮಾತನಾಡಿ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಇಲ್ಲಿ ಮಂಡಿಸಲಾದ ತಿದ್ದುಪಡಿಗಳ ಬಗ್ಗೆ ಹೇಳುವುದಾದರೆ, ಶ್ರೀ ರೌಘರು ಮಂಡಿಸಿದ ಸಂಖ್ಯೆ ೨೮೦ರ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಶಾಮನಂದನ ಸಹಾಯ :** ಸದನದಲ್ಲಿ ಮಂಡಿಸಲಾಗದ ತಿದ್ದುಪಡಿಗಳ ಬಗ್ಗೆ ಗೌರವಾನ್ವಿತ ಸದಸ್ಯ ಡಾ. ಅಂಬೇಡ್ಕರರು ತಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸುವಿರಾ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ನನ್ನನ್ನು ಕ್ಷಮಿಸಿರಿ, ನಾನು ಮಂಡಿಸಲಾಗದ ತಿದ್ದುಪಡಿಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ನೀಡಲಾರೆ.

**ಶ್ರೀ ಶಾಮನಂದನ ಸಹಾಯ :** ಇದು ಸದಸ್ಯರಿಗೆ (ಅಂದರೆ ಡಾ.ಅಂಬೇಡ್ಕರರಿಗೆ) ಸಂಬಂಧಿಸಿದ ತಪ್ಪು ಆಗಿರುವುದಿಲ್ಲ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ನಾನು, ನಿಸ್ಸಹಾಯಕನಾಗಿರುವೆ. ಶ್ರೀ ರೌಘರು ಮಂಡಿಸಿದ ತಿದ್ದುಪಡಿಗೆ, ನಾನು 'ಜನಿಸಿದ ಸ್ಥಾನ' (Place of Birth) ಎಂಬ ಪದಗಳನ್ನು ಸೇರಿಸಿ ಅದನ್ನು ನಾನು ಸ್ವೀಕರಿಸುತ್ತೇನೆ. ನಾನು ಶ್ರೀ ಸುಬ್ರಮಣ್ಯಂರವರ ತಿದ್ದುಪಡಿ (ಪಟ್ಟಿ ಒಂದರಲ್ಲಿನ ಸಂಖ್ಯೆ ೩೭ರ) ಯನ್ನು ವಿಧಿ ೯ರ ಕಲಮು (೧)ರಲ್ಲಿನ 'ಪ್ರತ್ಯೇಕವಾಗಿ' (in particular) ಎಂಬ ಪದಗಳನ್ನು ತೆಗೆದುಹಾಕಿದ ನಂತರ ನಿರ್ದಿಷ್ಟವಾಗಿ ಒಪ್ಪಿಕೊಳ್ಳುತ್ತೇನೆ.

ಶ್ರೀ ಗುಪ್ತನಾಥ ಸಿಂಗರು ಮಂಡಿಸಿದ ಸಂಖ್ಯೆ ೩೦೩ರ ತಿದ್ದುಪಡಿಯ ಬಗ್ಗೆ ಹೇಳುವುದಾದರೆ, ಅವರು ತನ್ನ ತಿದ್ದುಪಡಿಯಿಂದ 'ಕುಂಡ್ಸ' ಎಂಬ ಶಬ್ದ ತೆಗೆದುಹಾಕಲು ಒಪ್ಪಿದಲ್ಲಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಗುಪ್ತನಾಥ ಸಿಂಗ್ :** ನಾನು ಈಗಾಗಲೇ ಶಬ್ದವನ್ನು ತೆಗೆದುಹಾಕಿರುವೆ ಸ್ವಾಮಿ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್ :** ಇಲ್ಲಿ ಮಂಡಿಸಿದ ಹಲವಾರು ತಿದ್ದುಪಡಿಗಳನ್ನು ನಾನು

---

* ಸಿ.ಎ.ಡಿ. ಸಂಪುಟ ೭, ೨೯ನೆಯ ನವೆಂಬರ್, ೧೯೪೮, ಪುಟ ೬೬೦–೬೪

ಒಪ್ಪಲಾರೆ, ಕ್ಷಮಿಸಿರಿ. ಇವುಗಳಲ್ಲಿನ ಎರಡು ತಿದ್ದುಪಡಿಗಳ ಬಗ್ಗೆ ಸ್ವಲ್ಪ ವಿವರಿಸುವುದು ಅವಶ್ಯಕವಾಗಿರುತ್ತದೆ. ಮೊದಲನೆಯದಾಗಿ, ಶ್ರೀ ತಾಹಿರರವರು ಮಂಡಿಸಿದ ಸಂಖ್ಯೆ ೩೧೫ರ ತಿದ್ದುಪಡಿ. ಇದು ವಿಧಿ ೯ರಲ್ಲಿನ ಮುನ್ನೇರ್ಪಾಡುಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಒಂದು ಅಪರಾಧವಾಗಿರುತ್ತದೆ ಮತ್ತು ಕಾನೂನಿನಿಂದ ಶಿಕ್ಷೆಗೆ ಅರ್ಹವಾಗಿದೆ. ನನ್ನ ಗೆಳೆಯ ಶ್ರೀ ತಾಹಿರರ ಈ ತಿದ್ದುಪಡಿ ಅಸ್ಪೃಶ್ಯರ ಸ್ಥಾನಕ್ಕೆ ವಿಶೇಷವಾಗಿ ಸಂಬಂಧಿಸಿರುತ್ತದೆ ಮತ್ತು ಈತ ಅಸ್ಪೃಶ್ಯರಲ್ಲದ ಎಲ್ಲಾ ಜನರು ಹೊಂದಿ ಆನಂದಿಸುವ ಹಕ್ಕುಗಳನ್ನು ಸಮನಾಗಿ ಅಸ್ಪೃಶ್ಯರೊಂದಿಗೆ ಹಂಚಿಕೊಳ್ಳುವ ಕಾನೂನುಗಳ ವಿಷಯಕ್ಕೆ ಸಂಬಂಧಿಸಿದಂತೆ, ಅಂದರೆ ಉದಾಹರಣೆಗಾಗಿ ಸಾರ್ವಜನಿಕ ವಿಹಾರಗಳಂಥ ಸ್ಥಳಗಳನ್ನು ಅಸ್ಪೃಶ್ಯರು ಉಪಯೋಗ ಮಾಡುವುದನ್ನು ತಡೆಹಿಡಿಯುವ ಕೃತ್ಯ, ಇದು ಎಲ್ಲಿಯವರೆಗೆ ಒಂದು ಅಪರಾಧವೆಂದು ಈ ಕಾನೂನುಗಳು ಪರಿಗಣಿಸುವುದಿಲ್ಲವೋ, ಅಲ್ಲಿಯವರೆಗೆ ಅಂಥಾ ಕಾನೂನುಗಳನ್ನು ಅನುಷ್ಠಾನದಲ್ಲಿ ತರುವ ಉದ್ದೇಶದಲ್ಲಿ ನಾವು ಯಶಸ್ವಿಯಾಗುವುದಿಲ್ಲವೆಂದು ಹೇಳಿರುತ್ತಾನೆ. ಈ ವಿಷಯದಲ್ಲಿ ಶ್ರೀ ತಾಹಿರರ ಮತ್ತು ಸದನದ ಇತರ ಸದಸ್ಯರ ನಡುವೆ ಯಾವ ಭಿನ್ನಾಭಿಪ್ರಾಯವಿಲ್ಲ, ಏಕೆಂದರೆ ನಾವೆಲ್ಲರೂ ಈ ದುರ್ದೈವಿ ವರ್ಗ ಸಮಾಜದ ಇತರ ಪಂಗಡಗಳಂತೆ ಯಾರಿಂದಲೂ ವಿರೋಧಿಸದೆ (let) ಅಥವಾ ಅಡೆತಡೆ ಇಲ್ಲದೆ ಇಂಥಾ ಹಕ್ಕುಗಳಿಗೆ ನಾವು ಯೋಗ್ಯರಿದ್ದೇವೆ (entitle) ಎಂಬ ಅಭಿಪ್ರಾಯವನ್ನು ಹೊಂದಿರುತ್ತೇವೆ. ಆದರೆ ಆತ ಈ ಉದ್ದೇಶ ಅಸ್ಪೃಶ್ಯತೆಗೆ ಸ್ಪಷ್ಟವಾಗಿ ಸಂಬಂಧಿಸಿದ ವಿಧಿ ೧೧ ರಲ್ಲಿನ ಮುನ್ನೇರ್ಪಾಡುಗಳಿಂದಲೇ ಸಂಪೂರ್ಣವಾಗಿ ಅನುಷ್ಠಾನದಲ್ಲಿ ತರಬೇಕು. ಈ ವಿಧಿಯೇ ಅಸ್ಪೃಶ್ಯರ ಹಕ್ಕುಗಳಲ್ಲಿನ ಯಾವುದೇ ಹಸ್ತಕ್ಷೇಪ ಕಾನೂನಿನ ಪ್ರಕಾರ ಅಪರಾಧವೆಂದು ಪರಿಗಣಿಸಲ್ಪಟ್ಟಿದ್ದುದರಿಂದ ಇದನ್ನು ಒಂದು ಅಪರಾಧವಾಗಿ ಪರಿಗಣಿಸುವುದಕ್ಕೆ ಪಾರ್ಲಿಮೆಂಟಿಗೆ ಅಥವಾ ರಾಜ್ಯಕ್ಕೆ ಬಿಡುವ ಅವಶ್ಯಕತೆಯೇ ಇಲ್ಲವೆನ್ನುತ್ತಾರೆ. ಈ ಸಂವಿಧಾನದಲ್ಲಿಯೇ ವಿಧಿ–೯ ಹೊಂದಿರುವ ಕಾನೂನಿನ ಅವಕಾಶಗಳಿಗೆ (ಅಸ್ಪೃಶ್ಯರು ಇತರ ಸಾಮಾನ್ಯರಂತೆ ಎಲ್ಲಾ ಹಕ್ಕುಗಳನ್ನು ಅನುಭವಿಸುವ ಅವಕಾಶಗಳು) ಹಸ್ತಕ್ಷೇಪ ಉಂಟುಮಾಡುವುದನ್ನು ತಡೆಹಿಡಿಯುವ ಕಾನೂನಿನ ಮುನ್ನೇರ್ಪಾಡುಗಳು ಇರಲೇಬೇಕೆಂಬುದು ಅವರ ದೃಷ್ಟಿಕೋನವಾದಲ್ಲಿ, ನಾನು ಅದರ ಗಮನವನ್ನು ಇಂಥಾ ಹಸ್ತಕ್ಷೇಪವನ್ನು ಅಪರಾಧವೆಂದು ಮತ್ತು ಅದನ್ನು ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಮಾಡಬೇಕೆಂಬುದು ಪಾರ್ಲಿಮೆಂಟಿನ ಕರ್ತವ್ಯವೆಂದು ಸಾರುವ ಸಂವಿಧಾನದ ವಿಧಿ ೨೭ಕ್ಕೆ ಗಮನ ಸೆಳೆಯಬಯಸುತ್ತೇನೆ. ಇಂಥ ಅಧಿಕಾರ ಪಾರ್ಲಿಮೆಂಟಿಗಷ್ಟೇ ಏಕೆ ನೀಡಲಾಗಿದೆ ಎಂದರೆ, ಇದು ಮೂಲಭೂತಹಕ್ಕುಗಳಿಗೆ ಸಂಬಂಧಿಸಿರುತ್ತದೆ; ಆದ್ದರಿಂದ ಇದನ್ನು ಪಾರ್ಲಿಮೆಂಟಿಗೆ ಬಿಡುವುದರಿಂದ ಕಾನೂನಿನ ಉಲ್ಲಂಘನೆಯ ವಿಷಯದಲ್ಲಿ ಏಕಪ್ರಕಾರದ ಶಿಕ್ಷೆ ಎಲ್ಲ ಜನರಿಗೆ ನೀಡಲಾಗುತ್ತದೆ; ಒಂದು ವೇಳೆ ಇಂಥಾ ಅಧಿಕಾರ ವಿವಿಧ ರಾಜ್ಯಗಳಿಗೆ ಮತ್ತು ಪ್ರಾಂತಗಳಿಗೆ ನೀಡಿದಲ್ಲಿ ಅವುಗಳು ಇಂಥಾ ನಿಯಂತ್ರಣಗಳನ್ನು ಏಕಪ್ರಕಾರದಲ್ಲಿ ಅನುಷ್ಠಾನಕ್ಕೆ ತರದೇ ತಮಗೆ ಮನಸ್ಸಿಗೆ ಬಂದಂತೆ ಅವುಗಳನ್ನು ಜಾರಿಯಲ್ಲಿ ತರಬಹುದಾಗಿದೆ. ಆದುದರಿಂದ, ನಿಮ್ಮಲ್ಲಿ ನನ್ನ ನಿವೇದನೆ ಇಷ್ಟೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಸಾಕಷ್ಟು ಕಾನೂನಿನ ಅವಕಾಶಗಳಿರುತ್ತವೆ ಮತ್ತು ಇವುಗಳಿಗಿಂತ ಹೆಚ್ಚಿನದು ಏನು ನಿಜವಾಗಿಯೂ ಬೇಕಾಗಿರುವುದಿಲ್ಲ.

"ಪರಿಶಿಷ್ಟ ಜಾತಿಗಳು" ಮತ್ತು "ಪರಿಶಿಷ್ಟ ಜನಾಂಗ"ಗಳೊಂದಿಗೆ ಸ್ತ್ರೀಯರನ್ನು ಮತ್ತು ಚಿಕ್ಕಮಕ್ಕಳನ್ನು ಸೇರಿಸುವ ಉದ್ದೇಶ ಹೊಂದಿರುವ ಪ್ರೊಫೆಸರ್ ಕೆ.ಟಿ. ಶಹರು ಮಂಡಿಸಿದ ತಿದ್ದುಪಡಿ ಸಂಖ್ಯೆ ೩೨೩ಕ್ಕೆ ಸಂಬಂಧಿಸಿದಂತೆ ಏನಾದರೂ ಹೇಳಬೇಕಾದರೆ, ಈ ರೀತಿ ಮಾಡುವುದು ಅವರು ತಮ್ಮ ಮನಸ್ಸಿನಲ್ಲಿ ಅಂದುಕೊಂಡುದರ ವಿರುದ್ಧ ಪರಿಣಾಮ ಉಂಟಾಗುತ್ತದೆ ಎಂಬ ಭಯ ನನಗಿರುತ್ತದೆ.

ನಮ್ಮೆಲ್ಲರ ಮನಸ್ಸಿನಲ್ಲಿರುವ ಉದ್ದೇಶವೇನೆಂದರೆ, ಸಾಮಾನ್ಯ ಜನರಿಂದ (General Public) ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಜನಾಂಗಗಳ ಜನರು ಬೇರೆಯಾಗಿರಬಾರದು (Segregare) ಎಂಬುದಾಗಿದೆ.

ಉದಾಹರಣೆಗಾಗಿ, ಹಳ್ಳಿಯೊಳಗಿನ ಎಲ್ಲಾ ಜಾತಿಯ ಮತ್ತು ವರ್ಗದ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಒಂದು ಶಾಲೆಯೇ ಇರುವಾಗ, ಪರಿಶಿಷ್ಟ ಜಾತಿಯವರಿಗಾಗಿಯೇ ಒಂದು ಬೇರೆ ಶಾಲೆಯನ್ನು ಸ್ಥಾಪಿಸುವದಕ್ಕೆ ನಾವ್ಯಾರೂ ಬಯಸುವುದಿಲ್ಲ. ಇಂಥಾ ಶಬ್ದಗಳನ್ನು ಮುಂದೆ ಮಾಡಿ (add) ಒಂದು ರಾಜ್ಯ "ನಿಜವಾಗಿಯೂ (Well) ಪರಿಶಿಷ್ಟಜಾತಿಗಳ ಸಲುವಾಗಿ ನಾವು ವಿಶೇಷ ಕಾನೂನಿನ ಅವಕಾಶಗಳನ್ನು ಮಾಡುತ್ತಿದ್ದೇವೆ" ಎಂದು ಬಹುಶಃ ಹೇಳಬಹುದು. ಪ್ರೊಫೆಸರ್ ಶಹಾರವರು ಬಯಸಿದ ರೀತಿಯಲ್ಲಿ ವಿಧಿಯ ತಿದ್ದುಪಡಿ ತಂದು, ಅದರ ಅಡಿಯಲ್ಲಿ ಈ ರೀತಿ ರಾಜ್ಯಗಳು ಸುರಕ್ಷಿತವಾಗಿರ (safely) ಬಹುದೆಂದು ನನಗೆ ಅನಿಸುತ್ತದೆ. ಆದುದರಿಂದ, ಇದೊಂದು ಅಪೇಕ್ಷಣೀಯ (desirable) ತಿದ್ದುಪಡಿ ಎಂದು ನಾನು ಭಾವಿಸುವುದಿಲ್ಲ.

ಈಗ ನಾನು ನನ್ನ ಗೆಳೆಯ ಶ್ರೀ ನಾಗಪ್ಪರವರ ವಿಷಯಕ್ಕೆ ಬರುತ್ತೇನೆ. ಈ ವಿಧದಲ್ಲಿ ಉಪಯೋಗಿಸಲಾದ ಕೆಲವು ಶಬ್ದಗಳನ್ನು ವಿವರಿಸಬೇಕೆಂದು ಅವರು ನನ್ನನ್ನು ಕೇಳಿರುತ್ತಾರೆ. ಇಲ್ಲಿ ಉಪಯೋಗಿಸಲಾದ "ಅಂಗಡಿ" ಎನ್ನುವ ಶಬ್ದ ಅಗಸನ ಬಟ್ಟೆಯ ಮತ್ತು ಹಜಾಮನ ಹಜಾಮತಿ ಅಂಗಡಿಗಳನ್ನು ಒಳಗೊಂಡಿದೆಯೋ ಅಥವಾ ಇಲ್ಲವೋ ಎಂಬುದು ಅವರ ಮೊದಲನೆಯ ಪ್ರಶ್ನೆಯಾಗಿರುತ್ತದೆ. ನನಗೆ ಸಂಬಂಧಿಸಿದಂತೆ ಹೇಳುವುದಾದರೆ "ಅಂಗಡಿ" ಎನ್ನುವ ಪದ ಅಗಸನ ಬಟ್ಟೆ ಮತ್ತು ಹಜಾಮತಿ ಸ್ಥಳಗಳನ್ನು ಒಳಗೊಂಡಿರುತ್ತದೆ ಎಂದು ನಿಸ್ಸಂಶಯವಾಗಿ ಹೇಳುತ್ತೇನೆ. ಸಾಮಾನ್ಯ (generic) ಅರ್ಥದ "ಅಂಗಡಿ" ಎನ್ನುವ ಪದವನ್ನು ವ್ಯಾಖ್ಯಾನಿಸುವುದಾದರೆ, ಅದು ಎಲ್ಲಿ ಮಾಲಿಕ ತನ್ನ ಸೇವೆಯನ್ನು ಅದನ್ನು ಬೇಡುವವರಿಗೆ ನೀಡಲು ತಯಾರಾಗಿರುವ ಒಂದು ಸ್ಥಳವೆಂಬ ಅರ್ಥ ಕೊಡುತ್ತದೆ. ಆದುದರಿಂದ ಒಬ್ಬ ಅಗಸ ಗಿರಾಕಿಗಳ ಕೊಳೆಯಾದ ಬಟ್ಟೆಗಳನ್ನು ತೊಳೆದು ಕೊಡುವ ಸೇವೆಯನ್ನು ಆತನಿಗೆ ನೀಡುವುದಕ್ಕಾಗಿಯೇ ತನ್ನ ಅಂಗಡಿಯಲ್ಲಿ ಕುಳಿತುಕೊಂಡಿರುತ್ತಾನೆ. ಈ ರೀತಿ ಪ್ರತ್ಯೇಕವಾಗಿ ಸಾಮಾನ್ಯ ಜನರ ಸೇವೆಯನ್ನು ಆತ ಮಾಡುತ್ತಾನೆ. ಅದೇ ರೀತಿ, ಒಂದು ಹಜಾಮತಿ ಅಂಗಡಿಯ ಮಾಲಿಕ ತನ್ನ ಅಂಗಡಿಯಲ್ಲಿ ಒಳಗೆ ಯಾರು ಬರುತ್ತಾರೋ ಅವರಿಗೆ ತನ್ನ ಸೇವೆಯನ್ನು ಸಲ್ಲಿಸುವುದಕ್ಕೆ ತಯಾರಾಗಿ ಕುಳಿತುಕೊಂಡಿರುತ್ತಾನೆ.

**ಗೌರವಾನ್ವಿತ ಶ್ರೀ ಬಿ.ಜಿ. ಖೇರ್ :** ಅಂಗಡಿ ಎನ್ನುವುದು ವಕೀಲರ ಮತ್ತು ಡಾಕ್ಟರರ ಕಛೇರಿಗಳನ್ನು ಒಳಗೊಂಡಿರುತ್ತವೆಯೋ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಅಂಗಡಿ ಎನ್ನುವುದು ಯಾರು ತಮ್ಮ ಸೇವೆಯನ್ನು ಗ್ರಾಹಕರಿಗೆ ನೀಡುತ್ತಾರೋ ಅವುಗಳೆಲ್ಲವನ್ನು ಒಳಗೊಂಡಿರುತ್ತದೆ. ನಾನು ಈ ಪದವನ್ನು ಸಾಮಾನ್ಯದ ಅರ್ಥದಲ್ಲಿ ಉಪಯೋಗಿಸಿರುತ್ತೇನೆ.

ಆದುದರಿಂದ, ಇಲ್ಲಿ 'ಅಂಗಡಿ' ಎಂಬ ಪದವನ್ನು ಅದರ ಒಳಗಡೆ ಬರಲು ಅನುಮತಿಯ ಸಂಕುಚಿತ ಅರ್ಥದಲ್ಲಿ ನಾನು ಉಪಯೋಗಿಸಿಲ್ಲವೆಂಬುದನ್ನು ನಾನು ಸ್ಪಷ್ಟವಾಗಿ ಹೇಳಲೇಬೇಕಾಗಿದೆ. ಇದನ್ನು ಒಂದು ವೇಳೆ ಮಾಲೀಕ ಮತ್ತು ಗ್ರಾಹಕರು ಒಪ್ಪಿಕೊಂಡಿರುವ ಸೇವೆಯ ಅರ್ಥದಲ್ಲಿ ಉಪಯೋಗಿಸಲಾಗಿದೆ.

ಸಾರ್ವಜನಿಕರ ಉಪಯೋಗಕ್ಕೆ ಬರುವ ಸ್ಥಳಗಳಲ್ಲಿ ಶವಾಗಾರಗಳನ್ನು ಸೇರಿಸಲಾಗಿದೆಯೋ

ಇಲ್ಲವೋ ಎಂಬುದು ನನಗೆ ಹಾಕಲಾದ ಎರಡನೆಯ ಪ್ರಶ್ನೆಯಾಗಿದೆ. ಕೆಲವೇ ಜನರು ಶವವನ್ನು ಹೂಳುವ ಸ್ಥಳದ ಬಗ್ಗೆ ಆಸಕ್ತಿ ವಹಿಸುತ್ತಾರೆಂದು ನಾನು ಭಾವಿಸುವೆ. ಏಕೆಂದರೆ ಒಬ್ಬ ಮನುಷ್ಯ ಸತ್ತಮೇಲೆ ತನಗೆ ಏನಾಗುತ್ತದೆ ಎಂಬುದನ್ನು ತಿಳಿಯುವ ಕಾಳಜಿ ವಹಿಸುವುದಿಲ್ಲ. ಆದರೆ, ನನ್ನ ಗೆಳೆಯ ಶ್ರೀ ನಾಗಪ್ಪನವರು ಈ ವಿಷಯದಲ್ಲಿ ಆಸಕ್ತಿ ಹೊಂದಿರುವುದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಶವಾಗಾರ ಸ್ಥಳವನ್ನು ಕೂಡಿಸಲಾಗಿದೆ ಎಂಬುದರಲ್ಲಿ ಯಾವ ಸಂಶಯವಿಲ್ಲ; ಅದರಲ್ಲೂ ಶವಾಗಾರ ಸಾರ್ವಜನಿಕ ನಿಧಿಗಳಿಂದ (funds) ಸಂಪೂರ್ಣವಾಗಿ ಅಥವಾ ಭಾಗಶಃ ನೋಡಿಕೊಂಡು ಹೋಗುತ್ತಿದ್ದಲ್ಲಿ ಅದೊಂದು ಸಾರ್ವಜನಿಕ ಸ್ಥಳವಾಗುತ್ತದೆ. ಎಲ್ಲಿ ಇಂಥಾ ಸ್ಥಳಗಳನ್ನು ಪುರಸಭೆ, ಸ್ಥಾನೀಯ ಮಂಡಳಿ ಅಥವಾ ತಾಲೂಕು ಮಂಡಳಿ, ಅಥವಾ ಪ್ರಾಂತೀಯ ಸರಕಾರ, ಅಥವಾ ಹಳ್ಳಿ ಪಂಚಾಯತಿಯವರು ಹಣ ಖರ್ಚುಮಾಡಿ ಸರಿಯಾಗಿ ಇಟ್ಟುಕೊಂಡು ಬರುವವರೆಗೆ ಅದರ ಮೇಲೆ ಯಾರ ಹಕ್ಕೂ ಇರುವುದಿಲ್ಲ. ಆದರೆ, ಒಂದು ವೇಳೆ, ಸರಕಾರ ತನ್ನ ಸಂಪನ್ಮೂಲಗಳಿಂದ ಶವಾಗಾರವನ್ನು ನೋಡಿಕೊಂಡು ಬರುತ್ತಿದ್ದಲ್ಲಿ, ಆಗ ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಶರೀರವನ್ನು ಹೂಳಲು ಅಥವಾ ಸುಡಲು ಹಕ್ಕಿರುತ್ತದೆ.

ಹೊಂಡಗಳನ್ನು ಕೆರೆಗಳಲ್ಲಿ ಕೂಡಿಸಬೇಕೋ/ಬಾರದೋ ಎಂಬುದನ್ನು ನನ್ನ ಗೆಳೆಯ ನನಗೆ ಕೇಳಿರುತ್ತಾರೆ. ಇದಕ್ಕೆ ಉತ್ತರ ಸ್ಪಷ್ಟವಾಗಿ ಅಹುದು ಎನ್ನುವುದಾಗಿರುತ್ತದೆ. ಕೆರೆಯು ವಿಶಾಲವಾಗಿರುತ್ತದೆ ಮತ್ತು ಅದು ಹೊಂಡವನ್ನು ತನ್ನಲ್ಲಿ ಕೂಡಿಸಿಕೊಳ್ಳಲೇಬೇಕು.

ನದಿಗಳನ್ನು–ಹಳ್ಳಗಳನ್ನು–ಕಾಲುವೆಗಳನ್ನು ಮತ್ತು ಇತರ ನೀರಿನ ಮೂಲಗಳನ್ನು ಅಸ್ಪೃಶ್ಯರ ಉಪಯೋಗಕ್ಕೆ ಅವಕಾಶ ನೀಡಲಾಗಿದೆಯೋ ಇಲ್ಲವೋ ಎಂಬುದು ಅವರು ನನಗೆ ಕೇಳಿದ ಇನ್ನೊಂದು ಪ್ರಶ್ನೆಯಾಗಿರುತ್ತದೆ. ಬಾವಿ, ನದಿ, ಹಳ್ಳ ಮತ್ತು ಕಾಲುವೆಗಳು ವಿಧಿ ೯ರಲ್ಲಿ ಬರುವುದಿಲ್ಲ; ಆದರೆ ಇವುಗಳನ್ನು ವಿಧಿ ೧೧ರ ಕಾನೂನಿನ ಅವಕಾಶಗಳಲ್ಲಿ ಖಚಿತವಾಗಿ ಸೇರಿಸಲಾಗುತ್ತದೆ ಮತ್ತು ಈ ವಿಧಿ ಅಸ್ಪೃಶ್ಯರಿಗಿರುವ ಸಮಾಜದ ಇತರ ಜಾತಿಗಳ ಜೊತೆಗಿನ ಸಮನಾದ ವ್ಯವಹಾರದ ಹಕ್ಕನ್ನು ಹಸ್ತಕ್ಷೇಪಮಾಡುವ ಯಾವುದೇ ಪ್ರಯತ್ನವನ್ನು ಒಂದು ಅಪರಾಧವಾಗಿಸುತ್ತವೆ. ಆದ್ದರಿಂದ, ನನ್ನ ಮಿತ್ರ ಶ್ರೀ ನಾಗಪ್ಪನವರಿಗೆ ನನ್ನ ಉತ್ತರ ಇಷ್ಟೆ – ಆತ ನದಿ, ಹಳ್ಳ ಮತ್ತು ಕಾಲುವೆ ಮುಂತಾದವುಗಳನ್ನು ಅಸ್ಪೃಶ್ಯರು ಉಪಯೋಗಿಸುವುದರಲ್ಲಿ ಯಾವ ಅಂಜಿಕೆಯೂ ಬೇಡ: ಏಕೆಂದರೆ, ಒಂದು ವೇಳೆ ಈ ವಿಷಯದಲ್ಲಿ ಯಾವುದೇ ನ್ಯೂನ್ಯತೆ ಕಂಡುಬಂದಲ್ಲಿ ಅದನ್ನು ನಿರ್ಮೂಲನ ಮಾಡಲು ಪಾರ್ಲಿಮೆಂಟಿಗೆ ತನ್ನ ವಿಧಿ ೧೧ರೊಳಗಡೆ ಯಾವುದೇ ಕಾನೂನನ್ನು ಜಾರಿಗೆ ತರಲು ಸಂಪೂರ್ಣವಾದ ಅವಕಾಶವಿರುತ್ತದೆ.

**ಶ್ರೀ ಎಸ್. ನಾಗಪ್ಪ :** ನೀರಿನ ಹರಿವುಗಳ ಉಪಯೋಗದ ವಿಷಯದಲ್ಲಿ ನೀವು ಏನು ಹೇಳುವಿರಿ?

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಈ ವಿಧಿಗೆ, ಈ ಹಂತದಲ್ಲಿ ನಾನು ಏನನ್ನೂ ಸೇರಿಸಲಾರೆ. ಆದರೆ, ನದಿಗಳನ್ನು ಮತ್ತು ಕಾಲುವೆಗಳ ಸಂಬಂಧವಾಗಿ ಯಾವುದೇ ಅವಶ್ಯಕವಾಗಿರುವ ಮತ್ತು ಕ್ರಮಬದ್ಧವಾದ ಹಾಗೂ ಯಥೋಚಿತ ಕ್ರಮಗಳನ್ನು ವಿಧಿ ೧೧ರೊಳಗೆ ತೆಗೆದುಕೊಳ್ಳಲು ಬರುವುದೆಂಬುದಕ್ಕೆ ನನಗೇನೂ ಸಂಶಯವಿರುವುದಿಲ್ಲ.

**ಶ್ರೀ ಆರ್.ಕೆ. ಸಿಧ್ವಾ :** ಸಾರ್ವಜನಿಕ ಸ್ಥಳ (Public places) ಎಂಬ ಪದದ ಅರ್ಥವಿವರಣೆಯ ಬಗ್ಗೆ ನೀವೇನು ಹೇಳುವಿರಿ?

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ನನ್ನ ಮಿತ್ರ ಶ್ರೀ ಸಿಧ್ವಾ ಭಾರತದ ದಂಡ ಸಂಹಿತೆ (Indian Penal Code) ಯಿಂದ **'ಸಾರ್ವಜನಿಕ'** ಎಂಬ ಶಬ್ದಕ್ಕೆ ನೀಡಲಾದ ವ್ಯಾಖ್ಯಾನವೊಂದನ್ನು

ಓದಿರುತ್ತಾರೆ. ಇದರ ಪ್ರಕಾರ 'ಸಾರ್ವಜನಿಕ' ಎಂಬ ಶಬ್ದವು ಒಂದು ವರ್ಗಕ್ಕೆ ಸಂಬಂಧಿಸಿದಂತೆ ಬಹಳ ಮಿತದ ಅರ್ಥದಲ್ಲಿ ಉಪಯೋಗಿಸಲಾಗಿದೆ ಎಂದಿದ್ದಾರೆ. ಭಾರತದ ದಂಡ ಸಂಹಿತೆಯಲ್ಲಿ 'ಸಾರ್ವಜನಿಕ' ಎಂಬ ಶಬ್ದ ವಿಶೇಷ ಅರ್ಥದಲ್ಲಿ ಮಾತ್ರ ಬಳಸಲಾಗಿದೆ ಎಂದು ಅವರ ಗಮನವನ್ನು ನಾನು ಸೆಳೆಯಬಯಸುತ್ತೇನೆ. ಒಂದು ಸ್ಥಳವನ್ನು ಒಂದು ವೇಳೆ, ಸಂಪೂರ್ಣ ಅಥವಾ ಭಾಗಶಃ ಸರಕಾರದ ಹಣದಿಂದ ಅದನ್ನು ಸರಿಯಾಗಿ ಇಟ್ಟಿದ್ದಲ್ಲಿ ಅದು ಸಾರ್ವಜನಿಕ ಸ್ಥಳವಾಗುತ್ತದೆ. ಇದು, ಭಾರತೀಯ ದಂಡ ಸಂಹಿತೆಯಲ್ಲಿ ನೀಡಿರುವ ವ್ಯಾಖ್ಯೆಗೆ ಯಾವ ಸಂಬಂಧವನ್ನು ಹೊಂದಿರುವುದಿಲ್ಲ.

**ಶ್ರೀ ಮಹಾವೀರ ತ್ಯಾಗಿ :** ನೀವು ಕೆಲವು ತಿದ್ದುಪಡಿಗಳನ್ನು ಕೇವಲ ಶಾಬ್ದಿಕ ತಿದ್ದುಪಡಿಗಳು ಅಂದಿರುವಿರಿ; ಅವುಗಳ ಗತಿ ಏನು ಎಂಬುದು ನಾನು ನಿಮ್ಮಿಂದ ತಿಳಿಯಬಹುದೇ? ಅವುಗಳಲ್ಲಿನ ಕೆಲ ತಿದ್ದುಪಡಿಗಳು ಕೇವಲ ಶಾಬ್ದಿಕವಾಗಿರದೆ ವಿಧಿಯ ಅಥವಾ ಅದರ ಕಲಮಿನಲ್ಲಿ ಸಾಕಷ್ಟು ಬದಲಾವಣೆಯನ್ನು ತರುವ ಉದ್ದೇಶವನ್ನು ಹೊಂದಿರುತ್ತವೆ ಎಂಬ ಅಂಜಿಕೆ ನನಗಿದೆ.

**ಮಾನ್ಯ ಉಪಸಭಾಪತಿ :** ಈ ವಿಷಯವನ್ನು ನಿರ್ಣಯ ಕೊಡುವವನು ನಾನೊಬ್ಬನೇ ಇದ್ದೇನೆ. ನೀವು ನನಗೆ ವಿಶೇಷಾಧಿಕಾರವನ್ನು ಇತ್ತಿರುವಿರಿ ಮತ್ತು ನಾನು ಈ ಅಧಿಕಾರವನ್ನು ನನ್ನದೇ ಆದ ರೀತಿಯಲ್ಲಿ ಉಪಯೋಗ ಮಾಡಲು ಬಯಸುತ್ತೇನೆ.

**ಶ್ರೀ ಮಹಾವೀರ ತ್ಯಾಗಿ :** ನನಗೆ ಮಾಹಿತಿ ಬೇಕು. ನಾನು ನಿಮ್ಮ ನಿರ್ಣಯ ಅಥವಾ ನಿಮ್ಮ ಹಕ್ಕಿನ ಬಗ್ಗೆ ವಾದಿಸುವುದಿಲ್ಲ. ನಾನು ತಿದ್ದುಪಡಿಗಳ ನಿರಾಕರಣದ ವಿಷಯದಲ್ಲಿ ಈ ಸದನದ ವಿವೇಚನೆಯನ್ನು ಉಪಯೋಗಿಸಲಾಯಿತೋ ಅಥವಾ ಕರಡು ಪ್ರತಿ ಸಿದ್ಧಪಡಿಸುವ ಸಮಿತಿ ಅವುಗಳನ್ನು ನಿರಾಕರಿಸಿತೋ ಅಥವಾ ಇತರ ಯಾವುದೇ ಸಮಿತಿ ಅವುಗಳನ್ನು ನಿರಾಕರಿಸಿತೋ ಎಂಬುದನ್ನು ನಿಮ್ಮಿಂದ ತಿಳಿಯಬಯಸುತ್ತೇನೆ. ನಿಮಗೆ ನನ್ನ ಸಲಹೆ ಏನೆಂದರೆ, ಕೇವಲ ಶಾಬ್ದಿಕ ತಿದ್ದುಪಡಿಗಳೆಂದು ನಿರಾಕರಿಸಲ್ಪಟ್ಟಿರುವ ತಿದ್ದುಪಡಿಗಳನ್ನು ಪರಿಶೀಲಿಸಿ ಮತ್ತು ಇವುಗಳಲ್ಲಿ ಕೆಲವೊಂದಾದರೂ ಒಂದು ವಿಧಿಯ ಕಲಮಿನ ಅರ್ಥ ಬದಲಾವಣೆಯನ್ನು ತರುವ ಉದ್ದೇಶವನ್ನು ಹೊಂದಿವೆಯೋ ಇಲ್ಲವೋ ಎಂಬುದನ್ನು ಕಂಡುಹಿಡಿಯಲು ಈ ಸದನ ಒಂದು ಉಪಸಮಿತಿಯನ್ನು ನೇಮಿಸಿದ್ದಲ್ಲಿ ಅದು ಈ ಸದನಕ್ಕೆ ಒಳ್ಳೆಯದಾಗಿರುತ್ತದೆ. ನಾನು ನೀವು ಹೇಳಿದುದ್ದರ ಬಗ್ಗೆ ಯಾವ ತಕರಾರು ಮಾಡುವುದಿಲ್ಲ. ಅಥವಾ ತಿದ್ದುಪಡಿಗಳನ್ನು ನೀವು ನಿರಾಕರಿಸಿದ್ದರಿಂದ ಅವುಗಳು ಕ್ರಮಬದ್ಧವಾಗಿರುವುದಿಲ್ಲ. ಆದರೆ, ಅಲ್ಪವಿರಾಮ (commas) ಮತ್ತು ಪೂರ್ಣವಿರಾಮಗಳು ಸ್ವಲ್ಪಮಟ್ಟಿಗೆ ಮೌಲ್ಯವನ್ನು ಹೊಂದಿರುತ್ತವೆ, ನನ್ನ ಒಂದೆ ಒಂದು ವಿನಂತಿ ಏನೆಂದರೆ .............

**ಮಾನ್ಯ ಉಪಸಭಾಪತಿ :** ಒಂದು ಉಪ–ಸಮಿತಿಯನ್ನು ನೇಮಕ ಮಾಡುವುದಕ್ಕಿಂತಲೂ ಉತ್ತಮವಾದ ಒಂದು ದಾರಿಯನ್ನು ಅದರಲ್ಲೂ ಎಲ್ಲರಿಗೆ ಒಪ್ಪಿಗೆಯಾಗುವಂಥಾ (appeal), ಆಗುವಂತಹ ಒಂದು ಉತ್ತಮ ದಾರಿಯನ್ನು ನಿಮಗೆ ಸೂಚಿಸಲೇ? ಯಾರು ತಮ್ಮ ತಿದ್ದುಪಡಿಗಳಲ್ಲಿ ಸ್ವಲ್ಪ ತಿರುಳು ಇದೆ ಎಂದು ಆಲೋಚಿಸುತ್ತಾರೋ ಅವರೇ ನೇರವಾಗಿ ಕರಡುಪ್ರತಿ ಸಮಿತಿಯವರನ್ನು ಕಾಣಲಿ. ಒಂದು ವೇಳೆ ಅವರು ಹಾಗೆ ಮಾಡಿದಲ್ಲಿ, ಕರಡು ಪ್ರತಿ ಸಮಿತಿಯವರು ಅವರಿಗೆ ತಕ್ಕ ಪ್ರಾಮುಖ್ಯತೆ ತೋರಿಸುವುದರಲ್ಲಿ ನನಗೆ ಯಾವ ಸಂದೇಹವಿಲ್ಲ.

**ಶ್ರೀ ಮಹಾವೀರ ತ್ಯಾಗಿ :** ಸ್ವಾಮಿ, ಈಗ ನನಗೆ ಸಮಾಧಾನವಾಯಿತು.

**ಶ್ರೀ ಮೊಹಮದ್ ತಾಹಿರ್ :** ನನ್ನ ತಿದ್ದುಪಡಿ ಸಂಖ್ಯೆ ೩೧೫೮ರ ವಿಷಯದಲ್ಲಿ ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರರು ನನ್ನ ಪ್ರಶ್ನೆಗಳಿಗೆ ನನಗೆ ಸಮಾಧಾನವಾಗುವಂತೆ ಉತ್ತರ ನೀಡಿದುದರಿಂದ ನಾನು

ಅದನ್ನು ಹಿಂತೆಗೆದುಕೊಳ್ಳಲು ಸದನದ ಪರವಾನಗಿಯನ್ನು ಬೇಡುತ್ತಿರುವೆ.

ಅವರ ತಿದ್ದುಪಡಿಯನ್ನು ಸಭೆಯ ಪರವಾನಗಿ ಪಡೆದು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಉಪಸಭಾಪತಿ :** ಈಗ ನಾನು ಉಳಿದ ತಿದ್ದುಪಡಿಗಳನ್ನು ಸದನದಲ್ಲಿ ಮತಕ್ಕಾಗಿ ಇಡುತ್ತಿರುವೆ. ಇವುಗಳಲ್ಲಿನ ಮೊದಲನೆಯದನ್ನು ಡಾ। ಅಂಬೇಡ್ಕರರು ಈಗಾಗಲೇ ಸ್ವೀಕರಿಸಿರುತ್ತಾರೆ.

(ಡಾ। ಅಂಬೇಡ್ಕರರ ಸಲಹೆಯಂತೆ ಕೆಳಗಿನ ತಿದ್ದುಪಡಿಗಳನ್ನು ಸ್ವೀಕರಿಸಲಾಯಿತು)

(೧) "ತಿದ್ದುಪಡಿಯ ಪಟ್ಟಿಯಲ್ಲಿನ ಸಂಖ್ಯೆ ೨೭೬ ತಿದ್ದುಪಡಿಯಲ್ಲಿನ ಈ ಕೆಳಗಿನದನ್ನು ಬದಲಾಯಿಸಬೇಕು;

"ವಿಧಿ ೯ರ (ಅ) ಕಲಮಿನ ಎರಡನೆಯ ಪ್ಯಾರಾವನ್ನು ಹೊಸ ಕಲಮು (೧–ಎ) ಸಂಖ್ಯೆಯಿಂದ ಬದಲಿಸಬೇಕು ಮತ್ತು ಹೀಗೆ ರಚಿಸಲಾದ ಹೊಸ ಕಲಮಿನಲ್ಲಿರುವ 'ನಿರ್ದಿಷ್ಟವಾಗಿರುವ' (In particular) ಎಂಬ ಶಬ್ದಗಳನ್ನು ಅದರಿಂದ ತೆಗೆದುಹಾಕಬೇಕು."

* * * * *

**ಮಾನ್ಯ ಉಪಸಭಾಪತಿ :** ಮುಂದಿನ ತಿದ್ದುಪಡಿಯ ಸಂಖ್ಯೆ ೨೮೦ ಆಗಿರುತ್ತದೆ ಮತ್ತು ಇದನ್ನು ಡಾ। ಅಂಬೇಡ್ಕರರು ಒಪ್ಪಿರುತ್ತಾರೆ. ಇಲ್ಲಿನ ಪ್ರಶ್ನೆ ಏನೆಂದರೆ,

(೨) ಸಂಖ್ಯೆ ೨೮೦ –

"ವಿಧಿ ೯ರಲ್ಲಿ ಎಲ್ಲೆಲ್ಲಿ 'ಲಿಂಗ'(Sex) ಎಂಬ ಶಬ್ದ ಬರುತ್ತದೆಯೋ ಅಲ್ಲಲ್ಲಿ ಆ ಶಬ್ದದ ನಂತರ 'ಹುಟ್ಟಿದ ಸ್ಥಳ' (Place of Birth) ಎಂಬ ಶಬ್ದಗಳನ್ನು ಸೇರಿಸಬೇಕು.

(೩) ಸಂಖ್ಯೆ ೨೮೬– ( ಶ್ರೀ ಸಿ. ಸುಬ್ರಮಣ್ಯಂ ಅವರಿಂದ) "ವಿಧಿ ೯ರ ಕಲಮು(೧) ರಲ್ಲಿನ ಉಪ–ಕಲಮು (ಅ) ದಲ್ಲಿ ಬರುವ ಭೋಜನ ಮಂದಿರ, ಹೋಟೆಲ್‌ಗಳು ಎಂಬ ಶಬ್ದಗಳ ನಂತರ ಧರ್ಮಶಾಲೆಗಳು , ಮುಸಾಫಿರಖಾನೆಗಳು ಎಂಬ ಶಬ್ದಗಳನ್ನು ಸೇರಿಸಬೇಕು."

(೪) ಸಂಖ್ಯೆ ೩೦೩ – (ಶ್ರೀ ಗುಪ್ತನಾಥ ಸಿಂಗರಿಂದ)– " ವಿಧಿ ೯ರ ಕಲಮು (೧) ರ ಎರಡನೆಯ ಪ್ಯಾರಾದಲ್ಲಿ ಬರುವ ಉಪ –ಕಲಮು (ಬ) ದಲ್ಲಿ ಬರುವ 'ಬಾವಿಗಳು, ಕೆರೆಗಳು' ಎಂಬ ಶಬ್ದದ ನಂತರ 'ಸ್ನಾನ ಮಾಡುವ ಸ್ನಾನದ ಘಟ್ಟ' ಎಂಬ ಶಬ್ದಗಳನ್ನು ಸೇರಿಸಬೇಕು."

(೫) ಸಂಖ್ಯೆ ೩೧೪ – 'ವಿಧಿ ೯ರ ಕಲಮು (೧) ರಲ್ಲಿ ಬರುವ ಎರಡನೆಯ ಪ್ಯಾರಾದ ಉಪಕಲಮು (ಬ)ದಲ್ಲಿ ಬರುವ 'ಸರಕಾರದ ಆದಾಯಗಳು' ಎಂಬ ಶಬ್ದಗಳನ್ನು 'ಸರಕಾರದ ನಿಧಿಗಳು' ಎಂಬ ಪದಗಳಿಂದ ಬದಲಾಯಿಸಬೇಕು.

(ಉಳಿದ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು) ವಿಧಿ ೯ನ್ನು ತಿದ್ದುಪಡಿ ಮಾಡಿದ ಮೇಲೆ, ಸಂವಿಧಾನದಲ್ಲಿ ಸೇರಿಸಲಾಯಿತು.

* * * * *

## ವಿಧಿ ೧೦

* **ಮಾನ್ಯ ಉಪಸಭಾಪತಿ :** ಮುಂದಿನ ವಿಧಿ, ಹೊಸ ವಿಧಿ ೯–ಎ ಗೆ, ಈಗ ನಾವು ಬರೋಣವೇನು? ಇಲ್ಲಿನ ತಿದ್ದುಪಡಿಗಳು ನಿರ್ದೇಶಿತ ತತ್ವಗಳ ರೂಪದಲ್ಲಿರುತ್ತವೆ. ನಾನು ಇವುಗಳ ಮಂಡನೆಗೆ ಪರವಾನಗಿ ನೀಡುವುದಿಲ್ಲ. ಆದಕಾರಣ, ವಿಧಿ ೧೦ಕ್ಕೆ ನಾವು ಹೋಗೋಣ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ** (ಮದ್ರಾಸ್: ಸಾಮಾನ್ಯ) : ವಿಧಿ ೧೦ರ ತಿದ್ದುಪಡಿಗಳನ್ನು ಈಗ ಹಿಡಿದಿಡುವುದೇ ಒಳ್ಳೆಯ ವಿಚಾರ ಎಂದು ನಾನು ಭಾವಿಸುವೆ.

**ಗೌರವಾನ್ವಿತ ಡಾ। ಅಂಬೇಡ್ಕರ್ :** ನಾನು ಈ ವಿಧಿಯನ್ನು ಈಗ ಹಿಡಿದಿಡುವುದಕ್ಕೆ ನಿಮ್ಮನ್ನು ವಿನಂತಿಸಿಕೊಳ್ಳುತ್ತೇನೆ.

**ಮಾನ್ಯ ಉಪಸಭಾಪತಿ :** ಹಾಗಾದರೆ, ಈಗ ನಾವು ಮುಂದಿನ ವಿಧಿ ೧೦–ಎ ಗೆ ಹೋಗೋಣ

(ತಿದ್ದುಪಡಿ ಸಂಖ್ಯೆ ೩೬೯ನ್ನು ಮಂಡಿಸಲಾಗಲಿಲ್ಲ)

* * * * *

## ವಿಧಿ ೧೧

* **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಶ್ರೀ ನಜೀರುದ್ದೀನ್ ಅಹ್ಮದರ ತಿದ್ದುಪಡಿಯನ್ನು ನಾನು ಒಪ್ಪಲಾರೆ.

**ಮಾನ್ಯ ಉಪಸಭಾಪತಿ :** ಡಾ। ಅಂಬೇಡ್ಕರರೇ, ಶ್ರೀ ಶಹರ ಸಲಹೆಗೆ ನೀವು ಉತ್ತರ ಕೊಡಬಯಸುವಿರಾ?

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಇಲ್ಲ

**ಮಾನ್ಯ ಉಪಸಭಾಪತಿ :** ಈಗ ನಾನು ತಿದ್ದುಪಡಿ ಸಂಖ್ಯೆ ೩೭೨ನ್ನು ಮತಕ್ಕಾಗಿ ಸದನದಲ್ಲಿಡುತ್ತೇನೆ.

ಪ್ರಶ್ನೆ ಏನೆಂದರೆ : "ವಿಧಿ ೧೧ರ ಸಲುವಾಗಿ ಈ ಕೆಳಗಿನ ವಿಧಿಯನ್ನು ಬದಲಾಯಿಸಬೇಕು: '೧೧ ಧರ್ಮ ಮತ್ತು ಮತದಿಂದ ಯಾವುದೇ ವ್ಯಕ್ತಿಯನ್ನು ಅಸ್ಪೃಶ್ಯನಂತೆ ನಡೆದುಕೊಳ್ಳುವುದು (treated) ಅಥವಾ ಭಾವಿಸುವುದು (regarded); ಮತ್ತು ಅಸ್ಪೃಶ್ಯತೆಯನ್ನು ಯಾವುದೇ ಒಂದು ರೂಪದಲ್ಲಿ ಆಚರಣೆಯಲ್ಲಿ ತರುವುದನ್ನು ಕಾನೂನಿನ ರೀತಿ ಶಿಕ್ಷಾರ್ಹವನ್ನಾಗಿ ಮಾಡಬಹುದು."

(ಶ್ರೀ ನಜೀರುದ್ದೀನರ ತಿದ್ದುಪಡಿಯನ್ನು ತಿರಸ್ಕರಿಸಲಾಯಿತು)

ವಿಧಿ ೧೧ನ್ನು ಸ್ವೀಕರಿಸಲಾಯಿತು ಮತ್ತು ಅದನ್ನು ಸಂವಿಧಾನದಲ್ಲಿ ಸೇರಿಸಲಾಯಿತು.

**ಗೌರವಾನ್ವಿತ ಸದಸ್ಯರು :** 'ಮಹಾತ್ಮ ಗಾಂಧೀಜಿಯವರಿಗೆ ಜಯವಾಗಲಿ'

(ಈ ವಿಧಿಯ ಮೇಲೆ ಆರು ಜನ ಸದಸ್ಯರು ಮಾತನಾಡಿದರು. ಡಾ। ಅಂಬೇಡ್ಕರರು ಮಾತನಾಡಲಿಲ್ಲ)

* * * * *

---

* ಮೇಲಿನಂತೆ, ೩೦ನೆಯ ನವೆಂಬರ್, ೧೯೪೮, ಪುಟ ೬೬೯

# ವಿಧಿ ೧೧ ಎ ಮತ್ತು ಬಿ

**ಮಾನ್ಯ ಜೆಡ್. ಹೆಚ್. ಲಾರಿ** (ಏಕೀಕರಣದ ಪ್ರಾಂತಗಳು : ಮುಸ್ಲಿಂ): ಮಾನ್ಯ ಉಪಸಭಾಪತಿ, ನಾನು ವಿಧಿ ೧೧ರ ನಂತರ ಈ ಕೆಳಗಿನ ಹೊಸ ವಿಧಿಯನ್ನು ಸೇರಿಸಬೇಕೆಂದು ಮಂಡಿಸುತ್ತೇನೆ.

"೧೧-ಎ ಸಾಲದ ಮರುಪಾವತಿಯನ್ನು ಮಾಡದ ಸಲುವಾಗಿ ಬಂಧನದಲ್ಲಿಡುವು (Imprisonment)ದನ್ನು ತೆಗೆದುಹಾಕಬೇಕು.

೧೧-ಬಿ ಹಿಂಸೆಯನ್ನು ಒಳಗೊಂಡ ರಾಜದ್ರೋಹವನ್ನು ಹೊರತುಪಡಿಸಿ ಇತರ ಅಪರಾಧಗಳಿಗಿರುವ ಮರಣದಂಡನೆಯ ಶಿಕ್ಷೆಯನ್ನು ತೆಗೆದುಹಾಕಬೇಕು"

ಸ್ವಾಮಿ, ಈ ಎರಡು ಕಲಮುಗಳು ಬೇರೆ ಬೇರೆಯಾಗಿರುತ್ತವೆ. ಆದಕಾರಣ ಈ ಸದನ ಇವೆರಡನ್ನು ಒಟ್ಟಿಗೆ ಒಪ್ಪುವುದು ಅಥವಾ ಎರಡನ್ನು ತಿರಸ್ಕರಿಸುವುದು ಅವಶ್ಯಕವಾಗಿಲ್ಲ.

ಈ ಸದನ ಇವೆರಡರಲ್ಲಿ ಒಂದನ್ನು ಒಪ್ಪಿ, ಇನ್ನೊಂದನ್ನು ಒಪ್ಪದೇ ಇರಬಹುದು

ಅಥವಾ ಎರಡನ್ನು ಒಪ್ಪಬಹುದು.

**ಮಾನ್ಯ ಉಪಸಭಾಪತಿ :** ಇವೆರಡನ್ನು ಬೇರೆಬೇರೆಯಾಗಿ ಏಕೆ ಮಂಡಿಸಬಾರದು?

* * * * *

* **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್:** (ಬೊಂಬಾಯಿ : ಸಾಮಾನ್ಯ) ನಾನು ಈ ತಿದ್ದುಪಡಿಯನ್ನು ಒಪ್ಪುವುದಿಲ್ಲ.

**ಮಾನ್ಯ ಉಪಸಭಾಪತಿ :** ಈ ತಿದ್ದುಪಡಿಯನ್ನು ಮತಕ್ಕಾಗಿ ಇಡುತ್ತಿದ್ದೇನೆ.

ತಿದ್ದುಪಡಿಯನ್ನು ತಿರಸ್ಕರಿಸಲಾಯಿತು

* * * * *

# ವಿಧಿ ೧೦

** **ಮಾನ್ಯ ಉಪಸಭಾಪತಿ :** ಈಗ ನಾವು ಹಿಂತಿರುಗಿ ವಿಧಿ ಸಂಖ್ಯೆ ೧೦ ಕ್ಕೆ ಹೋಗೋಣ. ಈ ಸದನದ ಮುಂದಿರುವ ಮಂಡನೆ ಇದು:

ವಿಧಿ ೧೦ ಸಂವಿಧಾನದ ಭಾಗವಾಗಿರುತ್ತದೆ.

* * * * *

+ **ಶ್ರೀ ಹೆಚ್. ವಿ. ಕಾಮತ್ :** ಸ್ವಾಮಿ, ಸದನದಲ್ಲಿ ಹೇಳದಾದ "ಮೊದಲನೆಯ ಅನುಸೂಚಿಯಲ್ಲಿ

---

* ಸಿ.ಎ.ಡಿ. ಸಂಪುಟ ೭, ೩೦ನೆಯ ನವೆಂಬರ್, ೧೯೪೮, ಪುಟ ೬೭೨

** ಮೇಲಿನಂತೆ, ಪುಟ ೬೭೨

\+ ಮೇಲಿನಂತೆ, ಪುಟ ೬೭೮

ಸದ್ಯದ ಮಟ್ಟಿಗೆ ಸ್ಪಷ್ಟವಾಗಿಸಿದ ಯಾವುದೇ ರಾಜ್ಯ "ಎನ್ನುವ ಶಬ್ದಗಳು ಮೊದಲನೆಯ ಅನುಸೂಚಿಯ ನಾಲ್ಕು ಭಾಗಗಳಿಗೆ ಅನ್ವಯಿಸುತ್ತದೆಯೋ ಇಲ್ಲವೋ ಎಂಬುದನ್ನು ನಾನು ನನ್ನ ಗೌರವಾನ್ವಿತ ಗೆಳೆಯ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಇವರಿಂದ ನಾನು ತಿಳಿಯಬಹುದೇ? ಇದೊಂದು ಸ್ಪಷ್ಟೀಕರಣದ ವಿಷಯವಾಗಿದೆ. ಮೊದಲನೆಯ ಅನುಸೂಚಿಯು ನಾಲ್ಕು ಭಾಗಗಳನ್ನು ಹೊಂದಿರುತ್ತದೆ. ಅದರಲ್ಲಿನ ಮೂರು ಭಾಗಗಳು ರಾಜ್ಯಗಳಿಗೆ ಸಂಬಂಧಿಸಿರುತ್ತದೆ; ಮತ್ತು ಕೊನೆಯ ಭಾಗ ಅಂಡಮಾನ್ ಹಾಗೂ ನಿಕೋಬರ್ ದ್ವೀಪಗಳಿಗೆ ಸಂಬಂಧಿಸಿರುತ್ತದೆ; ಮತ್ತು ಈಗಾಗಲೇ ನಾವು ಸ್ವೀಕರಿಸಿದ ವಿಧಿ '೧' ರ ಉಪ–ಕಲಮು(೨) "ರಾಜ್ಯಗಳೆಂದರೆ ಮೊದಲನೆಯ ಅನುಸೂಚಿಯಲ್ಲಿ ಸದ್ಯದ ಮಟ್ಟಿಗೆ ಸ್ಪಷ್ಟಪಡಿಸಿದ ಭಾಗ ೧, ೨ ಮತ್ತು ೩ರಲ್ಲಿನ ರಾಜ್ಯಗಳು" ಎಂದು ಸಾರುತ್ತದೆ. "ಮೊದಲನೆಯ ಅನುಸೂಚಿಯಲ್ಲಿನ ಸದ್ಯದ ಮಟ್ಟಿಗೆ ಸ್ಪಷ್ಟಗೊಳಿಸಿದ ಯಾವುದೇ ರಾಜ್ಯ"ವೆಂದರೆ, ಈ ಅನುಸೂಚಿಯಲ್ಲಿನ ಎಲ್ಲಾ ನಾಲ್ಕು ಭಾಗಗಳು ಹೊಂದಿರುವ ಎಲ್ಲಾ ರಾಜ್ಯಗಳು ಮತ್ತು ಪ್ರದೇಶಗಳು ಎಂಬ ಅರ್ಥ ಕೊಡುತ್ತದೆಯೋ ಇಲ್ಲವೋ ಎಂಬುದನ್ನು ಅವರಿಂದ ನಾನು ತಿಳಿಯಬಹುದೇ? ಈ ಸಂದರ್ಭದಲ್ಲಿ ಈ ತಿದ್ದುಪಡಿಯ ಭಾಷೆಯನ್ನು ಬದಲಾಯಿಸಬೇಕಾಗುತ್ತದೆ. ಈಗ ಇದು, "ಮೊದಲನೆಯ ಅನುಸೂಚಿಯಲ್ಲಿನ ಪ್ರಥಮ ನಾಲ್ಕು ಭಾಗಗಳು ಅಂದರೆ, ೧,೨,೩ ಮತ್ತು ೪ ಭಾಗಗಳಲ್ಲಿರುವ ಯಾವುದೇ ರಾಜ್ಯ ಅಥವಾ ಪ್ರದೇಶ"ವೆಂದು ಆಗಬೇಕಾಗುತ್ತದೆ; ಮತ್ತು ನೀವು ಕೇವಲ 'ರಾಜ್ಯ' ಎಂಬ ಶಬ್ದವನ್ನು ಉಳಿಸಿಕೊಳ್ಳಬೇಕು ಎಂದು ಇಚ್ಛಿಸಿದಲ್ಲಿ ಆಗ ಇದು 'ಮೊದಲನೆಯ ಅನುಸೂಚಿಯಲ್ಲಿ ಸ್ಪಷ್ಟಗೊಳಿಸಲಾದ ಭಾಗ ೧, ೨ ಮತ್ತು ಮೂರುಗಳಲ್ಲಿನ ಯಾವುದೇ ರಾಜ್ಯ'ವೆಂದಾಗುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾವು ಭಾಗಗಳನ್ನು ಸ್ಪಷ್ಟಗೊಳಿಸಿಲ್ಲವೆಂಬುದು ಬಹಳ ಸ್ಪಷ್ಟವಾಗಿರುತ್ತದೆ. ನಾವು 'ಮೊದಲನೆಯ ಅನುಸೂಚಿ' ಎಂದು ಮಾತ್ರ ಹೇಳಿದ್ದೇವೆ ಮತ್ತು ಮೊದಲನೆಯ ಅನುಸೂಚಿ, ಮೊದಲನೆಯ ಅನುಸೂಚಿಯಲ್ಲಿರುವ ಎಲ್ಲಾ ರಾಜ್ಯಗಳನ್ನು ಒಳಗೊಂಡಿರುತ್ತದೆ.

**ಶ್ರೀ ಹೆಚ್.ವಿ.ಕಾಮತ್ :** ಮೊದಲನೆಯ ಅನುಸೂಚಿಯಲ್ಲಿನ ಸದ್ಯದ ಮಟ್ಟಿಗೆ ಸ್ಪಷ್ಟಗೊಳಿಸಲಾದ ಭಾಗ ೧, ೨ ಮತ್ತು ೩ ಒಳಗೊಂಡಿರುವ ರಾಜ್ಯಗಳು ಎಂದು ವಿಧಿ ೧ ಹೇಳುತ್ತದೆ. ಸಂವಿಧಾನದ ಪ್ರಕಾರ ಭಾಗ ೪ರಲ್ಲಿರುವ ಪ್ರದೇಶಗಳು 'ರಾಜ್ಯ'ಗಳಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ರೀತಿಯ ಭಿನ್ನತೆಯನ್ನು ಮಾಡಲು ಯಾವ ಪ್ರಯತ್ನ ಮಾಡಬಾರದು.

**ಶ್ರೀ ಹೆಚ್.ವಿ. ಕಾಮತ್ :** ಒಂದು ವೇಳೆ ನನ್ನ ಪ್ರಶ್ನೆಗೆ ಉತ್ತರವಿಲ್ಲದಿದ್ದಲ್ಲಿ, ನಾನು ಏನೂ ಹೇಳುವುದಿಲ್ಲ.

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ :** ನೀವು ಒಂದು ವೇಳೆ ಕೇವಲ ಮೊದಲನೆಯ ಅನುಸೂಚಿಯನ್ನು ಓದಿದ್ದಾದರೆ, ಅದರಲ್ಲಿನ ಭಾಗ ೧, ಈ ಸಂವಿಧಾನದ ಜಾರಿಗೆ ಬರುವ ಮುನ್ನ ಗವರನರರ ಪ್ರಾಂತಗಳೆಂದು ಹೆಸರಾಗಿದ್ದ ಪ್ರದೇಶಗಳನ್ನು ಅದು ಒಳಗೊಂಡಿರುತ್ತದೆ ಎಂಬ ವಿಷಯ ನೀವು ಕಂಡುಕೊಳ್ಳುತ್ತೀರಿ. ಭಾಗ ೨ ಈ ಸಂವಿಧಾನ ಜಾರಿಯಲ್ಲಿ ಬರುವುದಕ್ಕಿಂತ ಮುಂಚೆ ಇದ್ದ ಮುಖ್ಯ ನಿಯೋಗಿ ಪ್ರಾಂತಗಳಾದ ದೆಹಲಿ, ಅಜ್ಮೀರ, ಮೆರವಾಡಾ ಮುಂತಾದುವುಗಳನ್ನು ಒಳಗೊಂಡಿರುತ್ತದೆ. ಭಾಗ ೩ ಭಾರತೀಯ ರಾಜ್ಯಗಳೊಂದಿಗೆ ವ್ಯವಹರಿಸುತ್ತದೆ. ಈ ಎಲ್ಲಾ ಮೂರು ಗುಂಪುಗ(Categories)ಳನ್ನು ವಿಧಿ ೧ರಲ್ಲಿ 'ರಾಜ್ಯಗಳೆಂದು' ಸಂಬೋಧಿಸಲಾಗಿದೆ ಮತ್ತು ವರ್ಣಿಸಲಾಗಿದೆ. ಅನುಸೂಚಿ ಒಂದರ ನಾಲ್ಕನೆಯ ಭಾಗದಲ್ಲಿ ಅಂಡಮಾನ ಮತ್ತು ನಿಕೋಬಾರ್ ದ್ವೀಪಗಳಿಗೆ, ಇವುಗಳು 'ರಾಜ್ಯಗಳಲ್ಲಿ' ಪ್ರದೇಶಗಳಾಗಿವೆ.

* * * * *

* **ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿ, ಸ್ವಾಮಿ, ಈ ಚರ್ಚೆಯಲ್ಲಿ ಎತ್ತಲಾದ ಪ್ರತ್ಯೇಕ ಪ್ರಶ್ನೆಗಳೊಂದಿಗೆ ವ್ಯವಹರಿಸುವ ಮುನ್ನ ನಾನು ಮೊದಲಲ್ಲಿಯೇ ಶ್ರೀ ಮಿಶ್ರಾರು ಮಂಡಿಸಿದ ತಿದ್ದುಪಡಿ ಸಂಖ್ಯೆ ೩೩೪ನ್ನು ನಾನು ಒಪ್ಪಲಾರೆ ಎಂದು ಹೇಳುತ್ತೇನೆ; ಇದಲ್ಲದೆ ನನ್ನ ಗೆಳೆಯ ಶ್ರೀ ನಜೀರುದ್ದೀನ್ ಅಹ್ಮದರು ಮಂಡಿಸಿದ ತಿದ್ದುಪಡಿಗಳಾದ ಸಂಖ್ಯೆ ೩೩೬ ಮತ್ತು ೩೩೭ನ್ನು ಸಹ ನಾನು ಒಪ್ಪುವುದಿಲ್ಲ. ಆದರೆ, ಶ್ರೀ ಅನಂತಶಯನಂ ಅಯ್ಯಂಗಾರರು ಮಂಡಿಸಿದ ಸಂಖ್ಯೆ ೭೭ರ ತಿದ್ದುಪಡಿಯಿಂದ ತಿದ್ದಲಾದ ಶ್ರೀ ಇಮಾಮರ ಸಂಖ್ಯೆ ೩೩೮ರ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ. ನನ್ನ ಗೆಳೆಯರಾದ ಮಾನ್ಯ ಮುನ್ಷಿ ಮತ್ತು ಮಾನ್ಯ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರರು ಮಂಡಿಸಿದ ತಿದ್ದುಪಡಿ ಸಂಖ್ಯೆಗಳಾದ ೮೧ ಮತ್ತು ೮೨ ಗಳಿಂದ ತಿದ್ದಲಾದ ಮಾನ್ಯ ಕಪೂರರ ಸಂಖ್ಯೆ ೩೪೦ನ್ನು ನಾನು ಒಪ್ಪುತ್ತೇನೆ.

ತಿದ್ದುಪಡಿ ಸಂಖ್ಯೆಗಳಾದ ೩೩೪, ೩೩೬ ಮತ್ತು ೩೩೭ರ ಬಗ್ಗೆ ನಾನು ಮಾತನಾಡಬೇಕೆಂದು ಯಾರು ಭಾವಿಸಿಲ್ಲವೆಂಬುದು ನನ್ನ ವಿಚಾರವಾಗಿದೆ. ಆದುದರಿಂದ, ನಾನು ಈಗ ಮಾಡುತ್ತಿರುವ ಭಾಷಣ ವಿಧಿ ೧೦ರ ಕಲಮು (೩)ರಲ್ಲಿ ಬರುವ ಒಬ್ಬನಿಗೆ ಕೆಲಸಕ್ಕೆ ನೇಮಿಸುವ ವಿಷಯದಲ್ಲಿ ಆತನ ವಾಸಸ್ಥಳ ಎಂಬ ಪ್ರಶ್ನೆಗೆ ಮತ್ತು 'ಹಿಂದುಳಿದ' ಎಂಬ ಪದದ ಉಪಯೋಗಕ್ಕೆ ಸೀಮಿತವಾಗಿರುತ್ತದೆ (ಇವೆರಡರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ಆಗಿರುತ್ತದೆ.) ನನ್ನ ಗೆಳೆಯ ಮಾನ್ಯ ಟಿ.ಟಿ. ಕೃಷ್ಣಮಾಚಾರಿಯವರು ಕರಡು ಪ್ರತಿ ಸಿದ್ಧಪಡಿಸುವ ಸಮಿತಿ ಬಹುಶಃ ಈ ಸಮಿತಿಯ ಕೆಲವು ಸದಸ್ಯರ ಹಿತಾಸಕ್ತಿಯನ್ನು ಮನದಲ್ಲಿಟ್ಟುಕೊಂಡು, ಒಂದು ಸಂವಿಧಾನ ರೂಢಿಸುವ ಬದಲು, ವಕೀಲರ ಸ್ವರ್ಗಸೃಷ್ಟಿಗಳಾಗಿದೆ ಎಂದು ಹೇಳುತ್ತಾರೆ. ಭಾರತದಾದ್ಯಂತ ಏಕಪ್ರಕಾರದ ಸಾರ್ವತ್ರಿಕ ಪೌರತ್ವವನ್ನು ಜಾರಿಯಲ್ಲಿ ತಂದಿರುವುದರಿಂದ, ಒಂದು ರಾಜ್ಯದಲ್ಲಿನ ಯಾವುದೇ ಪ್ರತ್ಯೇಕ ಹುದ್ದೆಯನ್ನು ಹೊಂದುವುದರಲ್ಲಿ ವ್ಯಕ್ತಿಗಳ 'ವಾಸ'ವನ್ನು ಒಂದು ಅರ್ಹತೆಯನ್ನಾಗಿ ಮಾಡಿದಲ್ಲಿ ಅದು ಈ ನಮ್ಮ ಸಂವಿಧಾನದಿಂದ ಸ್ಥಾಪಿತವಾದ ಸಾರ್ವತ್ರಿಕ ಪೌರತ್ವದ ಮೌಲ್ಯವನ್ನು ಕಡಿಮೆಮಾಡಿದಂತಾಗುತ್ತದೆ. ಆದುದರಿಂದ, ನನ್ನ ನಿರ್ಣಯದ ಪ್ರಕಾರ ರಾಜ್ಯದಲ್ಲಿನ ಸರಕಾರಿ ಹುದ್ದೆಗಳನ್ನು ಯಾರಾದರೂ ಪಡೆಯುವಲ್ಲಿ 'ವಾಸಸ್ಥಳ' ಎಂಬ ಕರಾರು ಇರಬಾರದು (ಮತ್ತು ಈ ವಾದವು ಒಂದು ಸಂಪೂರ್ಣ ಸಮಂಜಸವಾದ ಹಾಗೂ ಒಳ್ಳೆಯ ವಾದವಾಗಿರುತ್ತದೆ). ಇದೇ ಸಮಯದಲ್ಲಿ, ನೀವು ಜನರನ್ನು ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ಮತ್ತು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹಾಕುವುದು, ಯಾವುದೇ ಒಂದು ನೆಲೆಯಿಲ್ಲದೆ (root) ಹಕ್ಕಿಗಳ ಹಾಗೆ, ಯಾವುದೇ ಸಂಬಂಧವಿರದ ರೀತಿಯಲ್ಲಿ ಹಾರಲು ಬಿಡಬಾರದೆಂಬುದನ್ನು ಮನವರಿಕೆ ಮಾಡಿಕೊಳ್ಳಲೇ ಬೇಕು; ಇಲ್ಲದಿದ್ದಲ್ಲಿ ಜನರು ಬೇರೆ ಪ್ರಾಂತ ಮತ್ತು ರಾಜ್ಯಗಳಿಂದ ಸುಮ್ಮನೆ ಬರುತ್ತಾರೆ, ಹುದ್ದೆಗಳಿಗಾಗಿ ಅರ್ಜಿ ಸಲ್ಲಿಸುತ್ತಾರೆ ಮತ್ತು ಹಾಗೆ ಮುಂದುವರಿಯುವುದಾದರೆ, ಹಣ್ಣುಗಳನ್ನು ಅಂದರೆ ಹುದ್ದೆಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಅವರು ಸುಲಭವಾಗಿ ಮುಂದೆ ಸಾಗುತ್ತಾರೆ. ಆದುದರಿಂದ, ಇಲ್ಲಿ, ಸ್ವಲ್ಪ ಮಿತಿ ಹಾಕುವುದು ಅವಶ್ಯಕವಾಗಿರುತ್ತದೆ. ನಾವು ಹುದ್ದೆಗಳ ವಿಷಯವನ್ನು ವಿಚಾರಣೆ ಮಾಡಿದಾಗ ಈಗಾಗಲೇ ಅನೇಕ ಪ್ರಾಂತಗಳಲ್ಲಿ ಅವುಗಳ ಸರಕಾರಗಳು ಒಂದು ಪ್ರತ್ಯೇಕ ಹುದ್ದೆಗೆ ಅರ್ಜಿ ಹಾಕುವವರು ಅಂಥಾ ಪ್ರಾಂತದಲ್ಲಿ ಕೆಲಕಾಲ ವಾಸಿಸಿರಬೇಕೆಂಬ ಕರಾರನ್ನು ವಿಧಿಸಲಾಗಿದೆ ಎಂದು ನಮಗೆ ಗೊತ್ತಾಗಿರುತ್ತದೆ. ಆದುದರಿಂದ, ಈ ತಿದ್ದುಪಡಿಯ ಪ್ರಸ್ತಾಪವೆಂದರೆ 'ವಾಸವಾಗಿರಬೇಕೆಂಬ' ಸಾರ್ವತ್ರಿಕ ನಿಯಮ ಒಂದು ಕರಾರು ಆಗದಿದ್ದರೂ ಕೆಲವು ಅಪವಾದಗಳನ್ನು ನಾವು ಮಾಡುವುದು ಅಸಾಮಾನ್ಯ ಕೆಲಸವೇನಲ್ಲ. ನಾವು ಇಲ್ಲಿ ಈಗಾಗಲೇ ಹಲವಾರು ಪ್ರಾಂತಗಳಲ್ಲಿ ಸ್ಥಾಪಿಸಲಾದ ರೂಢಿಯನ್ನೇ ಮುಂದುವರಿಸುತ್ತಿದ್ದೇವೆ. ಇದು ಏನೇ ಆಗಲಿ, ವಿವಿಧ ಪ್ರಾಂತಗಳು ತಮ್ಮಲ್ಲಿರುವ

ಹುದ್ದೆಗಳಿಗಾಗಿ ಬರುವ ವ್ಯಕ್ತಿಗಳು ಕೆಲಕಾಲ ತಮ್ಮಲ್ಲಿಯೇ ವಾಸವಾಗಿರಬೇಕೆಂಬ ಕರಾರನ್ನು ಕಂಡುಕೊಂಡಿದ್ದೇವೆಯಾದರೂ, ವಾಸದ ಈ ಅವಧಿ ಆ ಪ್ರಾಂತಗಳಲ್ಲಿ ಬಹಳಷ್ಟು ಬೇರೆ ಬೇರೆ ಅವಧಿಯದ್ದಾಗಿರುತ್ತದೆ.

ಕೆಲವೊಂದು ಪ್ರಾಂತಗಳು ಇಂಥಾ ಹುದ್ದೆಗಳಿಗೆ ಅರ್ಜಿ ಹಾಕುವಾಗ ಆ ವ್ಯಕ್ತಿ ವಾಸ್ತವದಲ್ಲಿ ಆ ಪ್ರಾಂತದಲ್ಲಿ ನೆಲೆಸಿದವರಾಗಿರಬೇಕೆಂದು ಹೇಳಿರುತ್ತವೆ. ಇದು ಏನು ಅರ್ಥಮಾಡಿಕೊಡುತ್ತದೆಂಬುದು ಯಾರಿಗೂ ಗೊತ್ತಿಲ್ಲ; ಇತರ ಪ್ರಾಂತಗಳು, ಈ ಅವಧಿಯನ್ನು ಹತ್ತು ವರ್ಷ ಎಂದು ನಿಗದಿಪಡಿಸಿದರೆ, ಇನ್ನು ಕೆಲವು ಪ್ರಾಂತಗಳು ಈ ಅವಧಿಯನ್ನು ಏಳು ವರ್ಷ ಇತ್ಯಾದಿ, ಇತ್ಯಾದಿ ಎಂದಿವೆ. ಆದುದರಿಂದ, 'ವಾಸ'ವೆಂಬುದು ಹುದ್ದೆಗೆ ಒಂದು ಅರ್ಹತೆಯ ಪರೀಕ್ಷೆಯನ್ನಾಗಿ ನಿಗದಿಪಡಿಸುವಾಗ ಒಂದು ನಿಶ್ಚಿತ ಅವಧಿಯನ್ನು ನಿಗದಿಪಡಿಸುವುದು ಅವಶ್ಯಕವಾಗಿದ್ದರೂ ಆ ಅರ್ಹತೆಯ ಪರೀಕ್ಷೆ ಭಾರತಾದ್ಯಂತ ಏಕಪ್ರಕಾರದ್ದಾಗಿರಬೇಕೆಂಬುದು ನಮಗೆ ಅನಿಸಿದೆ. ಒಂದು ವೇಳೆ ಈ ಉದ್ದೇಶ ಸಾಧಿಸಬೇಕಾದಲ್ಲಿ, ಈ ವಿಷಯವನ್ನು ಕೇವಲ ಪಾರ್ಲಿಮೆಂಟಿಗೆ ಅಧಿಕಾರ ನೀಡುವುದರಿಂದ ಸಾಧಿಸಬಹುದಾಗಿದೆಯೆ ಹೊರತು ಸ್ಥಾನೀಯ ಘಟಕಗಳಾದ ಪ್ರಾಂತಗಳಾಗಲಿ ಅಥವಾ ರಾಜ್ಯಗಳಿಗಾಗಲಿ ಈ ಅಧಿಕಾರವನ್ನು ಕೊಟ್ಟರೆ ಅದರಿಂದ ಯಾವ ಪ್ರಯೋಜನವಾಗಲಾರದು. 'ವಾಸ'ವೆನ್ನುವುದು ಒಂದು ಅರ್ಹತೆಯಂತೆ ಇರುವ ಈ ತಿದ್ದುಪಡಿಯ ಉದ್ದೇಶ ಇದೇ ಆಗಿರುತ್ತದೆ.

ನನ್ನ ಮಾನ್ಯ ಗೆಳೆಯ ಕಾಮತ್ ಎತ್ತಿದ ವಿಷಯಕ್ಕೆ ಸಂಬಂಧಿಸಿದಂತೆ ನಾನು ಅವರೊಂದಿಗೆ ಏನನ್ನೂ ಪ್ರಸ್ತಾಪ ಮಾಡುತ್ತಿಲ್ಲ; ಏಕೆಂದರೆ ನನ್ನ ಇನ್ನೊಬ್ಬ ಮಾನ್ಯ ಗೆಳೆಯ ಮುನ್ಷಿ ಈಗಾಗಲೇ ಇದನ್ನು ಪ್ರಸ್ತಾಪಿಸಿದ್ದಾರೆ. ತಿದ್ದುಪಡಿಯಲ್ಲಿನ ಭಾಷೆ ಈಗ ಇದ್ದಂತೆಯೇ ಈ ಸಂವಿಧಾನದ ಇತರ ಕಾನೂನಿನ ಅವಕಾಶಗಳಿಗೆ ಸಂಪೂರ್ಣವಾಗಿ ಹೇಗೆ ಹೊಂದಿಕೊಳ್ಳುತ್ತದೆ ಎಂಬುದನ್ನು ಅವರಿಗೆ ಹೇಳಿರುತ್ತಾರೆ.

ಈಗ, ಸ್ವಾಮಿ, ೧೦ನೆಯ ವಿಧಿಯ ಕಲಮು ೯೩ ರಲ್ಲಿ ಉಪಯೋಗಿಸಲಾದ 'ಹಿಂದುಳಿದ' ಎಂಬ ಶಬ್ದ (ಈ ಸದನದ ಸದಸ್ಯರ ಮನದಲ್ಲಿ ಕೊರೆಯುತ್ತಿರುವ ಶಬ್ದ)ಕ್ಕೆ ನಾನು ಬರುತ್ತೇನೆ. ಈ ವಿಶೇಷ ಕಲಮಿನಲ್ಲಿ ' ಹಿಂದುಳಿದ' ಎಂಬ ಶಬ್ದವನ್ನು ಉಪಯೋಗಿಸುವ ಮಹತ್ವ ಮತ್ತು ಅವಶ್ಯಕತೆಯನ್ನು ಸದಸ್ಯರಿಗೆ ತಿಳಿಸಲು ನಾನು ಇಲ್ಲಿ ಕೆಲವು ಸಾಮಾನ್ಯವಾಗಿರುವ ಅಭಿಪ್ರಾಯೋಕ್ತಿಗಳಿಂದ ನನ್ನ ಪ್ರಯತ್ನವನ್ನು ಪ್ರಾರಂಭಿಸುತ್ತೇನೆ. ಒಂದು ವೇಳೆ ಈ ವಿಷಯದ ಮೇಲೆ ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡಿದ್ದಾದರೆ ಮತ್ತು ಅವುಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದರೆ, ಅವರು ಎಲ್ಲರೂ ಸ್ವೀಕರಿಸಬಹುದಾದ ಒಂದು ಕಾರ್ಯಾತ್ಮಕ ಪ್ರಾಸ್ತಾವನೆಯನ್ನು ಮಾಡುವಲ್ಲಿ ಅವರು ತಮ್ಮ ಮೂರು ವಿಚಾರಗಳಲ್ಲಿ ರಾಜಿ ಮಾಡಿಕೊಳ್ಳಲೇಬೇಕಾಗುತ್ತದೆ. ಈ ಮೂರು ವಿಚಾರಗಳಲ್ಲಿ, ಎಲ್ಲಾ ನಾಗರಿಕರಿಗೆ ಮುಂದೆ ಬರಲು ಯಾವ ಅಡೆತಡೆ ಇರಲೇಕೂಡದು ಮತ್ತು ಅವರಿಗೆ ಸಮಾನ ಅವಕಾಶಗಳಿರಬೇಕೆಂಬುದು ಮೊದಲನೆಯ ವಿಚಾರವಾಗಿರುತ್ತದೆ. ಈ ಸದನದ ಒಂದು ಭಾಗದ ಜನರಲ್ಲಿ ಹಂಚಲ್ಪಟ್ಟ, ಇನ್ನೊಂದು ವಿಚಾರವೆಂದರೆ, ಒಂದು ವೇಳೆ ಈ ತತ್ವ ಕಾರ್ಯಾಚರಣೆಯಲ್ಲಿ ಬರಬಲ್ಲುದು. ಯಾವುದೇ ಹುದ್ದೆಗೆ ಯಾವುದೇ ತರಹದ ವರ್ಗ ಅಥವಾ ಪಂಗಡಗಳ ಮೇಲೆ ಆಧಾರಿತ ಮೀಸಲಾತಿಗಳು ಇರಲೇ ಬಾರದು. ಸಾರ್ವಜನಿಕ ಸೇವೆಗಳಲ್ಲಿ, ಎಲ್ಲಾ ನಾಗರಿಕರನ್ನು, ಒಂದು ವೇಳೆ ಅವರು ಅರ್ಹತೆಯನ್ನು ಪಡೆದಿದ್ದಲ್ಲಿ, ಸಮಾನತೆಯ ತಳಹದಿಯ ಮೇಲೆ ಆ ಸೇವೆಗಳನ್ನು ಸೇರಲು ಅವಕಾಶ ನೀಡಬೇಕು ಎಂಬುದೇ ಇದರ ವಾದವಾಗಿರುತ್ತದೆ. ಇದು, ನಾವು ಹೊಂದಿರುವ ಎರಡನೆಯ ವಿಚಾರವಾಗಿರುತ್ತದೆ. ಸಮಾನ ಅವಕಾಶಗಳು ಎಲ್ಲರಿಗೂ

ಇರಬೇಕು ಎನ್ನುವ ತತ್ವವನ್ನು ಅಳವಡಿಸಿಕೊಳ್ಳುವುದು ತಾತ್ವಿಕವಾಗಿ ಒಳ್ಳೆಯದಾದರೂ, ಇಲ್ಲಿಯವರೆಗೆ ಆಡಳಿತದಿಂದ ಹೊರಗಿದ್ದ ಕೆಲವು ಪಂಗಡಗಳ ಆಡಳಿತದಲ್ಲಿನ ಬರುವಿಕೆಗೆ ಕೆಲವು ಕಾನೂನಿನ ಅವಕಾಶಗಳು ಇರಲೇಬೇಕೆಂಬುದು ಒಂದು ಎಲ್ಲಾ ಜನರ ಅಭಿಪ್ರಾಯವಿರುತ್ತದೆ. ಇದು ಮೂರನೆಯ ವಿಚಾರವಾಗಿದೆ. ನಾನು ಈಗಾಗಲೇ ಹೇಳಿದಂತೆ, ಕರಡು ಪ್ರತಿ ಸಿದ್ಧಪಡಿಸುವ ಸಮಿತಿಯು ಈ ಮೂರು ವಿಚಾರಗಳಲ್ಲಿ ಹೊಂದಾಣಿಕೆ (reconcile) ತರುವ ಒಂದು ವಿಧಾನವನ್ನು ರೂಪಿಸಬೇಕಾಯಿತು. ಮೊದಲನೆಯದು ಅವಕಾಶಗಳು ಎಲ್ಲರಿಗೂ ಸಮನಾಗಿ ಇರಬೇಕೆಂಬುದು. ಎರಡನೆಯದು, ಇಲ್ಲಿಯವರೆಗೆ ಆಡಳಿತದಿಂದ ಹೊರಗಿರುವ ಕೆಲವು ಪಂಗಡಗಳ ಪರವಾಗಿ ಮೀಸಲಾತಿಯನ್ನು ಹೊಂದಿರುವುದು ಎಂಬ ವಿಧಾನವನ್ನು ಈ ಸಮಿತಿ ಸಿದ್ಧಪಡಿಸಿರುತ್ತದೆ. ಒಂದು ವೇಳೆ ಗೌರವಾನ್ವಿತ ಸದಸ್ಯರುಗಳ ಮೇಲೆ ಹೇಳಿದ ಮೂರು ತತ್ವಗಳಲ್ಲಿ ಹೊಂದಾಣಿಕೆ ತರಬೇಕಾದಲ್ಲಿ ಆಗ ಅವರು ವಿಧಿ ೧೦ರ ಉಪ ಕಲಮು(೧) ರಲ್ಲಿನ ಸಂಯೋಜಿತಗೊಂಡ ವಿಧಾನ ಬಿಟ್ಟು ಬೇರೆ ಉತ್ತಮ ವಿಧಾನವನ್ನು ನೀಡುವುದು ಸಾಧ್ಯವಿಲ್ಲ ಎಂಬುದನ್ನು ಮನಗಾಣಲೇ ಬೇಕಾಗುತ್ತದೆ. ಇದೊಂದು ಸಾಮಾನ್ಯ ತತ್ವವಾಗಿರುತ್ತದೆ. ಇದೇ ಸಮಯದಲ್ಲಿ, ನಾನು ಈ ಹಿಂದೆ ಹೇಳಿದಂತೆ ಈ ವಿಧಾನವನ್ನು ಒಂದು ಜಾತಿ ಅಥವಾ ಕೆಲವು ಜಾತಿಗಳಿಂದ ಆಡಳಿತವನ್ನು ಈ ಹಿಂದೆ ಐತಿಹಾಸಿಕ ಕಾರಣದಿಂದಾಗಿ ನಿಯಂತ್ರಿಸಲಾದುದನ್ನು ಈಗ, ಇತರ ಜಾತಿಯವರು ಸಹ ಸಾರ್ವಜನಿಕ ಸೇವೆಗಳಲ್ಲಿ ಬರಲು ಸದಾವಕಾಶಗಳನ್ನು ನೀಡುವುದರಿಂದ, ಮಾಯವಾಗುವಂತೆ ಕಾರ್ಯಕ್ರಮವನ್ನು ಅನುಷ್ಠಾನದಲ್ಲಿ ತರಬಹುದಾಗಿದೆ.

ಉದಾಹರಣೆಗಾಗಿ, ಒಂದು ವೇಳೆ ನಾವು ಇಲ್ಲಿಯವರೆಗೆ ಸರಕಾರಿ ಹುದ್ದೆಗಳಲ್ಲಿ ನೇಮಿಸಿಕೊಳ್ಳಲಾಗದ ಜಾತಿಗಳ ಬೇಡಿಕೆಗೆ ಮಾತ್ರ ಆಡಳಿತದಲ್ಲಿ ಅವಕಾಶ ನೀಡಿದಲ್ಲಿ ಆಗ ನಿಜವಾಗಿಯೂ ಏನು ಸಂಭವಿಸುತ್ತದೆ ಎಂದರೆ ನಾವೇ ಒಪ್ಪಿಕೊಂಡ ಸದವಕಾಶಗಳಲ್ಲಿನ ಸಮಾನತೆ ತತ್ವವನ್ನು ಸಂಪೂರ್ಣವಾಗಿ ನಾಶಪಡಿಸಿದಂತಾಗುತ್ತದೆ. ನಿಮಗೊಂದು ವಿವರಣೆಯನ್ನು ನೀಡಲು ನನಗೆ ಅವಕಾಶ ಕೊಡಿ. ಉದಾಹರಣೆಗೆ, ಸರಕಾರ ಒಂದು ಜಾತಿಯ ಸಲುವಾಗಿ ಅಥವಾ ಜಾತಿಗಳ ಒಂದು ಗುಂಪಿಗಾಗಿ ಶೇಕಡಾ ೭೦ರಷ್ಟು ಹುದ್ದೆಗಳನ್ನು ಮೀಸಲಾಗಿಟ್ಟರೆ, ಕೇವಲ ಶೇಕಡಾ ೩೦ರಷ್ಟು ಅದರ ಹುದ್ದೆಗಳು ಮೀಸಲಾತಿ ಅನ್ವಯಿಸಿದವರಿಗೆ ಉಳಿಸಿಕೊಂಡಂತಾಗುತ್ತದೆ. ಸಾರ್ವತ್ರಿಕ ಪೈಪೋಟಿಗಾಗಿ ಶೇಕಡಾ ೩೦ ಹುದ್ದೆಗಳನ್ನು 'ಸದಾವಕಾಶವನ್ನು ಹೊಂದಿರುವುದರಲ್ಲಿನ ಸಮಾನತೆಯ' ತತ್ವದಿಂದ ತೃಪ್ತಿಯಾಗಿರಬಲ್ಲದೇ? ನನ್ನ ನಿರ್ಣಯದಲ್ಲಿ ಈ ರೀತಿ ಆಗಲೇಬಾರದು. ಆದುದರಿಂದ ವಿಧಿ ೧೦ರ ಉಪಕಲಮು (೧)ಕ್ಕೆ ಹೊಂದುವ ರೀತಿಯಲ್ಲಿ, ಕೆಲವೇ ಕೆಲವು ಹುದ್ದೆಗಳನ್ನು ಮೀಸಲಾಗಿ ಇಡಬೇಕಾಗುತ್ತದೆ. ಈ ಕ್ರಮವನ್ನು ಕೈಗೊಂಡ ನಂತರವೇ ಪ್ರಥಮ ತತ್ವ, ಅಂದರೆ ಸದಾವಕಾಶಗಳಲ್ಲಿನ ಸಮಾನತೆಗೆ ಈ ಸಂವಿಧಾನದಲ್ಲಿ ಸ್ಥಾನ ಸಿಗುತ್ತದೆ ಮತ್ತು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಲ್ಲಿಯೂ ಬರುತ್ತದೆ. ಒಂದು ವೇಳೆ. ಗೌರವಾನ್ವಿತ ಸದಸ್ಯರು ನಾವು ಎರಡು ವಿಷಯಗಳನ್ನು ಸುರಕ್ಷಿತವಾಗಿ ಇಡಬೇಕಾಗುತ್ತದೆ. ಅವು ಯಾವುವೆಂದರೆ, ಮೊದಲನೆಯದಾಗಿ ಸದವಕಾಶಗಳಲ್ಲಿನ ಸಮಾನತೆ ಮತ್ತು ಅದೇ ಸಮಯದಲ್ಲಿ ಎರಡನೆಯದಾಗಿ ಸರಕಾರದಲ್ಲಿ ಇಲ್ಲಿಯವರೆಗೆ ಪ್ರತಿನಿಧಿಸಲಾಗದ ಜಾತಿಗಳ ಬೇಡಿಕೆಯನ್ನು ತೃಪ್ತಿ ಪಡಿಸುವುದು, ಹಾಗಿದ್ದಲ್ಲಿ, ಮೀಸಲಾತಿಗೆ 'ಹಿಂದುಳಿದ' ಎಂಬ ಯೋಗ್ಯತಾ ಪದ ಹಚ್ಚದ ಹೊರತು ಈ ಮೀಸಲಾತಿ ಕೊನೆಯಲ್ಲಿ ಇಡೀ ವಿಧಿಯನ್ನು ತಿಂದುಬಿಡುತ್ತದೆ ಎಂದು ನನ್ನ ನಂಬಿಕೆಯಾಗಿರುತ್ತದೆ. ಹಾಗಾದಲ್ಲಿ ಕಾನೂನು ಎಳ್ಳಷ್ಟೂ ಉಳಿಯುವುದಿಲ್ಲ. ಈ ರೀತಿ ವಿಚಾರ ಮಾಡುವುದು ಸರಿ ಎಂದುಕೊಂಡು, ಕರಡು ಪ್ರತಿ ಸಿದ್ಧಪಡಿಸುವ ಸಮಿತಿಯು 'ಹಿಂದುಳಿದ' ಎಂಬ ಶಬ್ದವನ್ನು ಅನುಷ್ಠಾನದಲ್ಲಿ

ತರುವ ಜವಾಬ್ದಾರಿಯನ್ನು ತನ್ನ ಮೇಲೆ ಹೊತ್ತಿರುತ್ತದೆ; ಈ 'ಪದ' ಈ ಸಭೆಯಿಂದ ಮಂಜೂರು ಮಾಡಲಾದ ಮೂಲಭೂತ ಹಕ್ಕುಗಳಲ್ಲಿ ಮೂಲತಃ ಯಾವ ಸ್ಥಾನವನ್ನು ಹೊಂದಿರಲಿಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಗೌರವಾನ್ವಿತ ಸದಸ್ಯರು, ಕರಡು ಪ್ರತಿ ಸಿದ್ಧಪಡಿಸುವ ಸಮಿತಿ ಒಂದು ತಪ್ಪು ತಪ್ಪಾದ ಕರಡು ಪ್ರತಿ ನೀಡಿದೆ ಎಂದು ಇದರಲ್ಲಿನ ಕೆಲವೊಂದು ವಿಷಯಗಳು ಕೆಲವೊಂದು ಸಲ ಅಯೋಗ್ಯವಾಗಿವೆ ಮತ್ತು ಇತ್ಯಾದಿ ಇತ್ಯಾದಿ (So on) ಎಂದು ಈಗಾಗಲೇ ಗೇಲಿ ಮಾಡಲಾಗಿರುತ್ತದೆ; ಇವೆಲ್ಲವುಗಳು, ಕರಡು ಪ್ರತಿ ಸಿದ್ಧಪಡಿಸುವ ಸಮಿತಿಯವರು ರಚಿಸಿದ ಸಂವಿಧಾನದಲ್ಲಿ ಅಪವಾದಗಳೇ (exceptions) ಹೆಚ್ಚಾಗಿರುವುದರಿಂದ ಇದರಲ್ಲಿ ಕಾನೂನಿನ ಕಾರ್ಯಾಚರಣೆಗಾಗಿ ಯಾವ ಅವಕಾಶವಿರುವುದಿಲ್ಲ ಎಂಬ ಮತ್ತೊಂದು ದಾಳಿಗೆ ಅನುವು ಮಾಡಿಕೊಟ್ಟಿರುತ್ತವೆ. ಆದುದರಿಂದ ಇಲ್ಲಿ 'ಹಿಂದುಳಿದ' ಎಂಬ ಪದವನ್ನು ಏಕೆ ಉಪಯೋಗಿಸಲಾಗಿದೆ ಎಂದು ಸಮರ್ಥಿಸಿಕೊಳ್ಳಲು ನನ್ನ ಈ ವಿವರಣೆ ಸಾಕೆಂದು ಭಾವಿಸುತ್ತೇನೆ.

ಅಲ್ಪ ಸಂಖ್ಯಾತರ ಸಂಬಂಧದಲ್ಲಿ ವಿಧಿ ೨೯೬ದೊಳಗೆ ಒಂದು ವಿಶೇಷ ವಿವರಣೆ ಇರುತ್ತದೆ ಮತ್ತು ಅವರಿಗಾಗಿಯೇ ನೌಕರಿಯಲ್ಲಿ ಸ್ವಲ್ಪ ಅವಕಾಶವನ್ನು ಅದರಲ್ಲಿಯೇ ಇಡಲಾಗಿರುತ್ತದೆ. ಇಲ್ಲಿ, ನಾನು ಅವರ ನೌಕರಿಗಾಗಿ ಯಾವುದೇ ಅನುಪಾತವನ್ನು ಇಟ್ಟಿರುವುದಿಲ್ಲ. ಇದು ಪರಿಚ್ಛೇದದಿಂದ ಸ್ಪಷ್ಟವಾಗುತ್ತದೆ; ಆದರೆ ಅಲ್ಪಸಂಖ್ಯಾತರನ್ನು ನಾವು ನಮ್ಮ ಗಮನದಿಂದ ಸಂಪೂರ್ಣವಾಗಿ ತೆಗೆದುಹಾಕಿಲ್ಲ. 'ಹಿಂದುಳಿದ ಜನಾಂಗವೆಂದರೇನು?' ಎಂದು ಒಬ್ಬರು ನನಗೆ ಕೇಳಿದ್ದಾರೆ. ಈ ವಿಷಯವನ್ನು ನಿರ್ಧರಿಸಲು ಎಲ್ಲವನ್ನು ಪ್ರತಿಯೊಂದು ಸ್ಥಾನೀಯ ಸರಕಾರಕ್ಕೆ ನಾವು ಬಿಟ್ಟಿದ್ದೇವೆ ಎಂಬುದು ಕರಡುಪ್ರತಿಯನ್ನು ಓದಿದವರಿಗೆ ಗೊತ್ತಾಗುತ್ತದೆ. ಹಿಂದುಳಿದ ಜನಾಂಗ ಒಂದು ಇಂಥಾ ಜನಾಂಗವಾಗಿದೆ ಮತ್ತು ಈ ಜನಾಂಗ ಸರಕಾರದ ಅಭಿಪ್ರಾಯದಲ್ಲಿ ಹಿಂದುಳಿದಿರುತ್ತದೆ. ನನ್ನ ಗೌರವಾನ್ವಿತ ಗೆಳೆಯ ಮಾನ್ಯ ಟಿ.ಟಿ. ಕೃಷ್ಣಮಾಚಾರಿಯವರು ಇಂಥಾ ಕಾನೂನು ವ್ಯವಹಾರ ಅಧಿಕಾರಗೊಳಪಟ್ಟದ್ದೋ (Justiceable) ಇಲ್ಲವೋ ಎಂಬುದನ್ನು ನನಗೆ ಕೇಳಿರುತ್ತಾರೆ. ಇದಕ್ಕೆ ಒಂದು ಅಧಿಕಾರಯುಕ್ತ (dogmatic) ಉತ್ತರ ನೀಡುವುದು ಕಷ್ಟವಾಗಿರುತ್ತದೆ. ಒಂದು ವೇಳೆ ಒಂದು ಸ್ಥಾನೀಯ ಸರಕಾರ ಮೀಸಲಾತಿಗಳ ವರ್ಗದಲ್ಲಿ ಅಧಿಕ ಸಂಖ್ಯೆಯ ಹುದ್ದೆಗಳನ್ನು ಸೇರಿಸಿದಲ್ಲಿ, ಯಾರಾದರೂ ಅದನ್ನು ಸಂಯುಕ್ತ ನ್ಯಾಯಾಲಯ (Federal Court) ಮತ್ತು ಸರ್ವೋಚ್ಚ ನ್ಯಾಯಾಲಯ (Supreme Court) ಕ್ಕೆ ತೆಗೆದುಕೊಂಡು ಹೋಗಿ ಅಂಥಾ ಹೆಚ್ಚಿನ ಪ್ರಮಾಣದಲ್ಲಿ ಮೀಸಲಾತಿ 'ಸದವಕಾಶಗಳಲ್ಲಿನ ಸಮಾನತೆ' ತತ್ವವನ್ನು ನಾಶಪಡಿಸುತ್ತದೆ ಎಂದು ವಾದಿಸಬಹುದು ಮತ್ತು ಆಗ ನ್ಯಾಯಾಲಯ, ಸ್ಥಾನೀಯ ಸರಕಾರವಾಗಲಿ ಅಥವಾ ರಾಜ್ಯ ಸರಕಾರವಾಗಲಿ ಈ ವಿಷಯದಲ್ಲಿ ವಿವೇಕಯುತವಾಗಿ ಮತ್ತು ಜಾಣತನದಿಂದ ನಡೆದುಕೊಂಡಿದೆಯೋ ಇಲ್ಲವೋ ಎಂಬ ನಿರ್ಣಯಕ್ಕೆ ಬರುತ್ತದೆ. 'ಯಾವ ಮನುಷ್ಯ ವಿವೇಕಯುತವಾಗಿದ್ದಾನೆ ಮತ್ತು ಯಾವ ಮನುಷ್ಯ ಜಾಣನಾಗಿದ್ದಾನೆ?' ಈ ವಿಷಯಗಳು 'ವಿವಾದದ (litigation) ವಿಷಮಗಳಾಗಿರುತ್ತವೆ' ಎಂದು ಮಾನ್ಯ ಕೃಷ್ಣಮಾಚಾರಿಯವರು ಕೇಳಿರುತ್ತಾರೆ. ನಿಜವಾಗಿಯೂ ಇಂಥಾ ವಿಷಯಗಳು ವಿವಾದದ ವಿಷಯಗಳಾಗಿರುತ್ತವೆ. ಆದರೆ ನನ್ನ ಗೌರವಾನ್ವಿತ ಗೆಳೆಯ ಮಾನ್ಯ ಕೃಷ್ಣಮಾಚಾರಿಯವರು 'ವಿವೇಕವುಳ್ಳ ಜನರು ಮತ್ತು ಜಾಣರಾದ ಜನರು' ಎಂಬ ಪದಗಳನ್ನು ಹಲವಾರು ಕಾನೂನುಗಳಲ್ಲಿ ಈಗಾಗಲೇ ಉಪಯೋಗಿಸಲಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು ಮತ್ತು ಒಂದು ವೇಳೆ ಅವರು ಆಸ್ತಿ ಹಸ್ತಾಂತರದ ಕಾಯಿದೆ ಒಂದನ್ನೇ ಉದಾಹರಣೆಗಾಗಿ ತೆಗೆದುಕೊಂಡರೆ ಅವರು ಅದರ ಹಲವಾರು ವ್ಯಾಜ್ಯಗಳಲ್ಲಿ (cases) 'ಒಬ್ಬ ವಿವೇಕಶಾಲಿ ಮನುಷ್ಯ ಮತ್ತು ಒಬ್ಬ ಜಾಣ ಮನುಷ್ಯ' ಎಂಬ ಪದಗಳನ್ನು ನೋಡಬಹುದು. ಅವುಗಳನ್ನು ಆ ಕಾನೂನಿನಲ್ಲಿ

ಸರಿಯಾಗಿ ವ್ಯಾಖ್ಯಾನಿಸಲಾಗಿದೆ ಹಾಗೂ ಈ ಪದಗಳನ್ನು ವ್ಯಾಖ್ಯಾನಿಸುವಲ್ಲಿ ನ್ಯಾಯಾಲಯ ಯಾವ ತೊಂದರೆಯನ್ನು ಅನುಭವಿಸಿರುವುದಿಲ್ಲ. ಆದುದರಿಂದ, ನಾನು ಒಪ್ಪಿಗೆ ನೀಡಿದ ತಿದ್ದುಪಡಿಗಳನ್ನು ಈ ಸದನ ಒಪ್ಪುತ್ತದೆ ಎಂದು ಭಾವಿಸಿರುವೆ.

**ಮಾನ್ಯ ಉಪಸಭಾಪತಿ :** ಒಂದಾದ ನಂತರ ಒಂದರಂತೆ ತಿದ್ದುಪಡಿಗಳನ್ನು ನಾನು ಮತಕ್ಕಾಗಿ ಇಡಲು ಪ್ರಾರಂಭಿಸುತ್ತೇನೆ.

**ಗೌರವಾನ್ವಿತ ಡಾ। ಬಿ.ಆರ್. ಅಂಬೇಡ್ಕರ್ :** ನನ್ನನ್ನು ಕ್ಷಮಿಸಿರಿ, ನಾನು ತಿದ್ದುಪಡಿ ಸಂಖ್ಯೆ ೩೪೨ನ್ನು ಒಪ್ಪುತ್ತೇನೆಂದು ಹೇಳಲು ಮರೆತುಹೋದೆ.

(ಈ ಕೆಳಗಿನ ತಿದ್ದುಪಡಿಗಳನ್ನು ಡಾ। ಅಂಬೇಡ್ಕರರು ಒಪ್ಪಿದರು ಮತ್ತು ಸದನ ಇವುಗಳನ್ನು ಸ್ವೀಕರಿಸಿತು)

**“**(ಜಿ) ವಿಧಿ ೧೦ರ ಕಲಮು(೧)ರಲ್ಲಿನ **“**ಉದ್ಯೋಗದ ವಿಷಯಗಳಲ್ಲಿ**”** ಪದಗಳ ಬದಲಾಗಿ **‘**ಉದ್ಯೋಗಕ್ಕೆ ಸಂಬಂಧಿಸಿರುವ ವಿಷಯಗಳಲ್ಲಿ ಅಥವಾ ಕಛೇರಿಗೆ ಮೊದಲೇ ಯೋಚಿಸಬೇಕಾಗಿತ್ತು.**’**

ಶ್ರೀ ಕಾಮತರು ಎರಡನೆಯ ಪ್ರಶ್ನೆಯ ಬಗ್ಗೆ ಹೇಳುವುದಾದರೆ, ಒಂದು ವೇಳೆ ನಾನು ಅವರನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆಂದಾದರೆ, ಬಿರುದನ್ನು ಸ್ವೀಕರಿಸದೆ ಇರುವುದು ಮತ್ತೊಬ್ಬನ ಅಧಿಕಾರಕ್ಕೆ ಒಳಪಟ್ಟ ಹಕ್ಕು ಆಗಿದೆಯೋ ಇಲ್ಲವೋ ಅಲ್ಲವೋ ಎಂಬುದಾಗಿದೆ. ಈ ಪ್ರಶ್ನೆಗೆ ನನ್ನ ಉತ್ತರ ಸರಳವಾಗಿದೆ. ಇದೊಂದು ಮತ್ತೊಬ್ಬನ ಅಧಿಕಾರಕ್ಕೆ ಒಳಪಟ್ಟ ಹಕ್ಕು ಅಲ್ಲ. (೧) ಒಬ್ಬ ವ್ಯಕ್ತಿ ನಾಗರಿಕನಾಗಿ ಮುಂದುವರಿಯಲು ಆತ ಯಾವ ಬಿರುದನ್ನು ಸ್ವೀಕರಿಸಬಾರದೆಂಬ ಕರಾರು ಇರುತ್ತದೆ. ಇದು ಹಕ್ಕು ಅಲ್ಲವೇ ಅಲ್ಲ, ಇದೊಂದು ಕರ್ತವ್ಯ. ಒಬ್ಬ ವ್ಯಕ್ತಿ ಈ ದೇಶದ ನಾಗರಿಕನಾಗಿ ಉಳಿಯಬೇಕಾದಲ್ಲಿ ಆತನ ಮೇಲೆ ಈ ಕರ್ತವ್ಯವನ್ನು ಹೇರಲಾಗುತ್ತದೆ. ಅದೇನೆಂದರೆ ಆತ ಸರಕಾರ ಹಾಕುವ ಕೆಲವು ಷರತ್ತುಗಳನ್ನು ತಾಳಿಕೊಳ್ಳಲೇಬೇಕು, ಅವುಗಳಲ್ಲಿ ‘ಬಿರುದನ್ನು ಸ್ವೀಕರಿಸಲೇಬಾರದು’ ಎಂಬುದು ಒಂದು ಕರಾರು ಆಗಿರುತ್ತದೆ. ಯಾವಾಗ ಪಾರ್ಲಿಮೆಂಟು ಒಂದು ಕಾನೂನನ್ನು ಮಾಡಿ ಈ ಷರತ್ತನ್ನು ಒಪ್ಪದವರಿಗೆ ಈ ವಿಧಿಯಲ್ಲಿ ಏನು ಮಾಡಬೇಕೆಂಬುದನ್ನು ವಿಧಿ ೧೨ (೧) ಅಥವಾ (೨) ಹೇಳಿರುತ್ತದೆ. ಅಂದರೆ ಆತನಿಗೆ ದಂಡಗಳನ್ನು ತೆತ್ತಬೇಕಾಗಿ ಬರಬಹುದು ಎಂಬುದು ಅದಕ್ಕೆ ಬಿಡಲಾಗಿರುತ್ತದೆ. ವ್ಯಕ್ತಿಯ ‘ನಾಗರಿಕ ಹಕ್ಕು’ಗಳನ್ನು ಬಿಟ್ಟುಕೊಡುವುದು ಅಂತಹ ದಂಡಗಳಲ್ಲಿ ಒಂದಾಗಿರುತ್ತದೆ. ಆದುದರಿಂದ, ಈ ಬಿರುದನ್ನು ಕಾನೂನಿನ ವಿರುದ್ಧವಾಗಿ ಸ್ವೀಕರಿಸುವುದಕ್ಕೆ ದಂಡಗಳ ರೂಪದಲ್ಲಿರುವ ಕಾನೂನಿನ ಅವಕಾಶಗಳನ್ನು ತಿಳಿದುಕೊಳ್ಳುವುದರಲ್ಲಿ ಯಾವ ತೊಂದರೆ ಉಂಟಾಗುವುದಿಲ್ಲ ಮತ್ತು ನಾಗರಿಕತೆಯನ್ನು ನೀಡುವುದಕ್ಕೆ ಅಂಟಿಸಲಾದ ಕರಾರು ಒಂದು ಮತ್ತೊಬ್ಬನ ಅಧಿಕಾರಕ್ಕೆ ಒಳಪಟ್ಟ ಹಕ್ಕು (Justiceiable Right) ಆಗಿರುವುದಿಲ್ಲ.

**ಶ್ರೀ ಹೆಚ್. ವಿ. ಕಾಮತ್ :** ಈಗ ಅಸ್ತಿತ್ವದಲ್ಲಿರುವ ಬಿರುದುಗಳನ್ನು ಸರಕಾರ ಗುರುತಿಸುವುದಕ್ಕೆ ನನ್ನ ವಿಷಯ ಸಂಬಂಧಿಸಿರುತ್ತದೆ.

* * * * *

## ವಿಧಿ ೧೨

* **ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಮಾನ್ಯರೇ, ನಾನು ಮಂಡಿಸುತ್ತೇನೆ : "ವಿಧಿ ೧೨ರ ಕಲಮು (೧)ರಲ್ಲಿ "ಬಿರುದು" (ಟೈಟಲ್) ಈ ಶಬ್ದದ ನಂತರ ಮಿಲಿಟರಿ ಅಥವಾ ಶೈಕ್ಷಣಿಕ ವೈಶಿಷ್ಟ್ಯ ಆಗಿರದ' ಈ ಶಬ್ದಗಳನ್ನು ಸೇರಿಸುವುದು."

ಮಾನ್ಯರೆ, ತಿದ್ದುಪಡಿಯಾದಂತೆ ವಿಧಿ ೧೨ ಕಲಮು(೧) ಈ ಮುಂದಿನಂತೆ ಓದಲ್ಪಡುವುದು:

"ಮಿಲಿಟರಿ ಅಥವಾ ಶೈಕ್ಷಣಿಕ ವೈಶಿಷ್ಟ್ಯದ್ದಾಗಿರದ ಯಾವುದೇ ಬಿರುದನ್ನು ರಾಜ್ಯದಿಂದ ಪ್ರದಾನ ಮಾಡತಕ್ಕುದ್ದಲ್ಲ."

* * * * *

\+ **ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನನ್ನ ಮಿತ್ರ ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಮಂಡಿಸಿರುವ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುತ್ತೇನೆ.

ನನ್ನ ಮಿತ್ರ ಶ್ರೀ ನಜೀರುದ್ದೀನ ಅಹಮದರವರು ಮಂಡಿಸಿದ ತಿದ್ದುಪಡಿಯಂತೆ ಅವರು "ಅಕ್ಸೆಪ್ಟೆಡ್" (ಒಪ್ಪಿಕೊಳ್ಳಲಾಯಿತು) ಶಬ್ದಕ್ಕೆ "ರೆಕಗ್ನೈಝ್ಡ್" (ಅಂಗೀಕರಿಸಲಾಯಿತು) ಪದವನ್ನು ಬದಲಿ ಇಡಬಯಸಿದ್ದರು. ಅವರ ವಾದ ಏನಾಗಿತ್ತೆಂದರೆ, ಪೌರನು ಬಿರುದೊಂದನ್ನು (ಟೈಟಲ್) ಒಪ್ಪಿಕೊಳ್ಳಲಿಲ್ಲ ಎಂದಿಟ್ಟುಕೊಳ್ಳೋಣ, ಆಗ ಆ ಕಾರ್ಯವನ್ನು ರದ್ದು ಮಾಡುವ ಪೀನಲ್ ಉಪಬಂಧ ಸಂವಿಧಾನದಲ್ಲಿ ಯಾವುದಿದೆ ಎನ್ನುವುದು? ಅದಕ್ಕೆ ನನ್ನ ಉತ್ತರ ಬಹಳೇ ಸರಳವಾಗಿದೆ: ಈ ವಿಧಿಯ ಉಪಬಂಧಗಳಿಗೆ ಪ್ರತಿಕೂಲವಾಗಿ ಬಿರುದನ್ನು ಒಪ್ಪಿಕೊಳ್ಳದ ವ್ಯಕ್ತಿಗೆ ಸಂಬಂಧಿಸಿದಂತೆ ಏನು ಮಾಡಬೇಕೆಂಬುದನ್ನು ಕಾನೂನು ಮಾಡಿ ಗೊತ್ತುಮಾಡುವ ಅಧಿಕಾರ ಸಂವಿಧಾನದಲ್ಲಿ ಪಾರ್ಲಿಮೆಂಟಿಗೆ ತನ್ನ ಶೇಷ (ರೆಸಿಡ್ಯೂಅರಿ) ಅಧಿಕಾರದಲ್ಲಿ ಪರಿಪೂರ್ಣವಾಗಿ ತೆರೆದಿದೆ. ಅವರು ಸಭೆಯ ಎದುರಿಗೆ ಇಟ್ಟಿರುವ ವಿಷಯವನ್ನು ನಿರ್ವಹಿಸಲು ಅದೊಂದು ಸಾಕಾಗಬಹುದಾದ ಉಪಬಂಧವೆಂದು ನಾನು ಬಗೆದಿದ್ದಿರಬಹುದು.

ಶ್ರೀ ಕಾಮತ್‌ರವರ ಎರಡನೆ ಅಂಶದ ಬಗೆಗೆ, ಒಂದು ವೇಳೆ ನಾನು ಅವರನ್ನು ಸರಿಯಾಗಿ ಅರಿತುಕೊಂಡಿರುವೆನಾದರೆ, ಇದೊಂದು ಸಮರ್ಥನೀಯ ಹಕ್ಕೇ ಎಂದಾಗಿ ಪ್ರಶ್ನೆಮಾಡಿದ್ದಾರೆ. ಅದಕ್ಕೆ ನನ್ನ ಉತ್ತರ ಬಹಳೇ ಸರಳವಾದದ್ದು: ಅದೊಂದು ಸಮರ್ಥನೀಯವಾದ ಹಕ್ಕು ಆಗಿಲ್ಲ. ಬಿರುದನ್ನು ಒಪ್ಪಿಕೊಳ್ಳದಿರುವುದು ಮುಂದುವರಿದ ಪೌರತ್ವದ ಸ್ಥಿತಿಯಾಗಿದೆ; ಅದು ಹಕ್ಕು ಅಲ್ಲ, ಒಂದು ವೇಳೆ ಆತನು ಈ ದೇಶದ ಪೌರನಾಗಿ ಮುಂದುವರಿದಲ್ಲಿ ವ್ಯಕ್ತಿಯ ಮೇಲೆ ವಿಧಿಸಲಾದ ಅದೊಂದು ಕರ್ತವ್ಯ –ಅತನು ಕೆಲ ಕರಾರುಗಳಿಗೆ ಒಳಗಾಗಿ ಬದ್ಧನಾಗಿರತಕ್ಕದ್ದು. ಅಂತಹ ಒಂದು ಕರಾರು ಎಂದರೆ ಆತನು ಬಿರುದನ್ನು ಒಪ್ಪಿಕೊಳ್ಳತಕ್ಕದ್ದಲ್ಲ, ಏಕೆಂದರೆ ಅದು ಪಾರ್ಲಿಮೆಂಟಿಗೆ ಬಿಟ್ಟ ವಿಷಯವಾಗುತ್ತದೆ, ಅದು ಕಾನೂನಿನನ್ವಯ ಈ ವಿಧಿಯ ಉಪಬಂಧಗಳಿಗೆ ಭಂಗ ತರುವ ವ್ಯಕ್ತಿಗಳಿಗೆ ಏನು ಮಾಡಬೇಕೆಂಬುದನ್ನು ನಿಗದಿಗೊಳಿಸುತ್ತದೆ. ಹೇಳುವುದಾದರೆ ಯಾವುದೇ ವ್ಯಕ್ತಿಯು ವಿಧಿ ೧೨(೧) ಅಥವಾ (೨)ರ ಉಪಬಂಧಗಳಿಗೆ ತದ್ವಿರುದ್ಧವಾಗಿ ಬಿರುದನ್ನು ಒಪ್ಪಿಕೊಂಡಲ್ಲಿ, ಕೆಲ ದಂಡಗಳು ಆಗಬಹುದಾಗಿದೆ. ದಂಡಗಳಲ್ಲಿ ಒಂದು ಆಗಿರಬಹುದಾದದ್ದೆಂದರೆ

---

* ಸಿ.ಎ.ಡಿ. ಸಂಪುಟ ೭, ೩೦ನೆಯ ನವೆಂಬರ್, ೧೯೪೮, ಪುಟ ೭೦೪

\+ ಅದೇ, ಪುಟ ೭೦೮–೯

ಆತನು ಪೌರತ್ವದ ಹಕ್ಕನ್ನು ಕಳೆದುಕೊಳ್ಳಬಹುದು. ಇದೊಂದು ತನ್ನಷ್ಟಕ್ಕೆ ತಾನೆ ಪೌರತ್ವಕ್ಕೆ ಹೊಂದಿಕೊಂಡ ನಿರ್ಬಂಧನೆಯಾದ್ದರಿಂದ ಸಮರ್ಥನೀಯ ಹಕ್ಕು ಆಗಿಲ್ಲವಾದ್ದರಿಂದ, ಈ ಉಪಬಂಧವನ್ನು ತಿಳಿದುಕೊಳ್ಳುವುದರಲ್ಲಿ ನಿಜವಾಗಿ ಯಾವುದೇ ಅಡಚಣೆ ಇಲ್ಲ.

**ಶ್ರೀ ಹೆಚ್. ವಿ. ಕಾಮತ್ :** ನನ್ನ ಗಮನಾಂಶ ಜಾರಿಯಲ್ಲಿರುವ ಬಿರುದುಗಳನ್ನು ರಾಜ್ಯದಿಂದ ಮನ್ನಣೆಗೆ ಸಂಬಂಧಿಸಿದುದಾಗಿದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ನನ್ನ ಮಿತ್ರ ಶ್ರೀ ನಜೀರುದ್ದೀನ್ ಅಹಮದರವರಿಗೆ ನೀಡಿದ ಉತ್ತರದಲ್ಲಿ ನಾನು ಹೇಳಿರುವಂತೆ, ತಾನು ಇಚ್ಛಿಸಿದಂತೆ ಅಂತಹ ಕ್ರಮವನ್ನು ತೆಗೆದುಕೊಳ್ಳಲು ಪಾರ್ಲಿಮೆಂಟಿಗೆ ಮುಕ್ತ ಅವಕಾಶವಿದೆ. ಅಲ್ಲದೆ ಆ ಬಿರುದುಗಳನ್ನು ನಾವು ಮನ್ನಿಸುವುದಿಲ್ಲ ಎಂದಾದ ಕ್ರಮವು ಅವುಗಳಲ್ಲೊಂದು.

**ಶ್ರೀ ಹೆಚ್. ವಿ. ಕಾಮತ್ :** ಡಾ. ಅಂಬೇಡ್ಕರ್‌ರವರು ತತ್ವವನ್ನು ಒಪ್ಪಿಕೊಳ್ಳಲೆಂದು ನಾನು ಬಯಸುತ್ತೇನೆ. ಪಾರ್ಲಿಮೆಂಟು ಮುಂದೆ ತನ್ನ ಇಚ್ಛೆಯಂತೆ ಮಾಡಬಹುದು.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಒಂದು ವೇಳೆ ಸಂವಿಧಾನದವು ಯಾವ ವ್ಯಕ್ತಿಯೂ ಬಿರುದನ್ನು ಒಪ್ಪಿಕೊಳ್ಳಕೂಡದೆಂದು ಹೇಳಿದಲ್ಲಿ ನಿಶ್ಚಿತವಾಗಿಯೂ ಯಾರೇ ಪೌರನು ಆ ಉಪಬಂಧಗಳನ್ನು ಉಲ್ಲಂಘಿಸದಂತೆ ನೋಡಿಕೊಳ್ಳುವುದೊಂದು ಪಾರ್ಲಿಮೆಂಟಿನ ಅನಿವಾರ್ಯತೆಯಾಗುತ್ತದೆ.

* * * * *

* **ಮಾನ್ಯ ಉಪಸಭಾಪತಿ (ಡಾ.ಹೆಚ್.ಸಿ. ಮುಖರ್ಜಿ) :** ಸದನದ ಅಪೇಕ್ಷೆಗಳನ್ನು ಪೂರೈಸಲು ನಾವು ಪ್ರಯತ್ನಿಸೋಣ.

ವಿಧಿ ೧೨ರ ಮೇಲಿನ ಚರ್ಚೆಯನ್ನು ನಾವು ಮುಗಿಸಿದ್ದೇವೆ ಮತ್ತು ಡಾ. ಅಂಬೇಡ್ಕರರು ತಮ್ಮ ಉತ್ತರ ನೀಡಿದ್ದಾರೆ. ಅದನ್ನು ಚರ್ಚೆಗೆ ಪುನಃ ತೆರೆಯಬೇಕೆಂಬ ಸದಸ್ಯರುಗಳಿಗೆ ಅವಕಾಶ ನೀಡಲು ನನಗೆ ಆಗುವುದಿಲ್ಲ ಕ್ಷಮಿಸಿ. ಈಗ ನಾನು ವಿವಿಧ ತಿದ್ದುಪಡಿಗಳನ್ನು ಒಂದಾದ ಮೇಲೊಂದರಂತೆ ಮತದಾನಕ್ಕಾಗಿ ಮುಂದಿಡುತ್ತೇನೆ.

**ಮಾನ್ಯ ಉಪಸಭಾಪತಿ :** ಪ್ರಶ್ನೆ ಇರುವುದು:

ವಿಧಿ ೧೨ರ ಕಲಮು(೧)ರಲ್ಲಿ 'ಟೈಟಲ್ (ಬಿರುದು) ಈ ಪದದ ನಂತರ 'ಮಿಲಿಟರಿ ಅಥವಾ ಶೈಕ್ಷಣಿಕ ವೈಶಿಷ್ಟ್ಯ' ಆಗಿರದ ಈ ಪದಗಳನ್ನು ಸೇರಿಸುವುದು.'

ಶ್ರೀ ಕೃಷ್ಣಮಾಚಾರಿಯವರ ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

(ಉಳಿದ ನಾಲ್ಕು ತಿದ್ದುಪಡಿಗಳು ನಿರಾಕರಣಗೊಂಡವು)

ತಿದ್ದುಪಡಿಗೊಂಡಂತೆ, ವಿಧಿ ೧೨, ಸಂವಿಧಾನಕ್ಕೆ ಸೇರ್ಪಡೆಗೊಂಡಿತು.

* * * * *

---

* ಸಿ.ಎ.ಡಿ. ಸಂಪುಟ ೭, ೧ನೆಯ ಡಿಸೆಂಬರ್, ೧೯೪೮, ಪುಟ ೭೧೧

\+ ಸಿ.ಎ.ಡಿ. ಸಂಪುಟ ೭, ೧ನೆಯ ಡಿಸೆಂಬರ್, ೧೯೪೮, ಪುಟ ೭೧೧

## ವಿಧಿ ೧೩

* **ಮಹಬೂಬ ಆಲಿ ಬೇಗ ಸಾಹಿಬ್ ಬಹಾದೂರ :** ............. ಹೇಗಾದರೂ ಕರಡು ಸಮಿತಿಯ ಚೇರ್‌ಮನ್‌ರವರಿಗೆ ನಾನು ಈ ಪ್ರಶ್ನೆ ಹಾಕುತ್ತೇನೆ. ಇಂತಹ ಸಂದರ್ಭಗಳಲ್ಲಿ, ಅಂದರೆ ಸಂವಿಧಾನದಲ್ಲಿಯ ಉಪಬಂಧವು ಶಾಸಕಾಂಗಕ್ಕೆ ಅಥವಾ ಕಾರ್ಯಾಂಗಕ್ಕೆ ಆಜ್ಞೆಯನ್ನು ಪಾಸು ಮಾಡುವ ಅಥವಾ ಕಲಮು (೧)ರಲ್ಲಿ ಉಲ್ಲೇಖಿಸಿರುವ ಹಕ್ಕಗಳನ್ನು ಸಂಕ್ಷೇಪಿಸುವ ಅಧಿಕಾರ ನೀಡಿ ಸಶಕ್ತೀಕರಣಗೊಳಿಸಿರುವಾಗ, ಕೋರ್ಟು ಆ ಆಜ್ಞೆ ಅಥವಾ ಕಾನೂನಿನ ಗುಣಗಳನ್ನು ಅಥವಾ ಕಾನೂನೊಂದನ್ನು ಸಮರ್ಥನೀಯವೆಂದಾಗಲಿ ಘೋಷಿಸುವುದು. ನನ್ನ ದೃಷ್ಟಿಯಲ್ಲಿ ಸಂವಿಧಾನದಲ್ಲಿಯೇ ರಾಜ್ಯವು ಸಾರ್ವಜನಿಕ ವ್ಯವಸ್ಥೆಯ ಹಿತದೃಷ್ಟಿಯಿಂದ ಮಾನನಷ್ಟದ, ಸಂಘ ಅಥವಾ ಸಭೆ ಇವುಗಳಿಗೆ ಸಂಬಂಧಿತ ಕಾನೂನುಗಳನ್ನು ಮಾಡುವ, ಚಲಾವಣೆಗೆ ತರುವುದರ ಮೇಲೆ ನಿರ್ಬಂಧಿಸುವುದು........... ಅಧಿಕಾರ ಹೊಂದಿರುವ ಬಗೆಗೆ ಸ್ಪಷ್ಟವಾಗಿ ನಮೂದಿಸುವುದರಿಂದ ಕೋರ್ಟಿನ ವ್ಯಾಪ್ತಿಯನ್ನು ಹೊರಹಾಕಿದಂತಾಗುತ್ತದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** (ಬಾಂಬೆ, ಸಾಮಾನ್ಯ): ಮಾನ್ಯರೆ, ನನ್ನ ಮಾನ್ಯ ಮಿತ್ರರಿಗೆ ನಾನು ತಡೆಯುವುದಾದರೆ, ನಾನು ಅವರ ಪಾಯಿಂಟನ್ನು ತಿಳಿದುಕೊಂಡಿದ್ದೇನೆ ಮತ್ತು ನಾನು ಅದನ್ನು ಪ್ರಶಂಸಿಸುತ್ತೇನೆ. ಹಾಗೂ ನಾನು ಅವರಿಗೆ ಅದರ ಅರ್ಥ ಏನಾಗುತ್ತದೆ ಎಂದು ಉತ್ತರಿಸುವ ಅಲ್ಲದೆ ಸಮಾಧಾನ ಪಡಿಸುವ ವಾಗ್ದಾನ ಮಾಡುತ್ತೇನೆ.

* * * * *

* **ಪಂಡಿತ ಠಾಕುರದಾಸ್ ಭಾರ್ಗವ :** ..........ಅದರಂತೆ, ಶಸ್ತ್ರಾಸ್ತ್ರಗಳಿಲ್ಲದೆ ಮತ್ತು ಶಾಂತಿಯಿಂದ ಸಭೆ ಸೇರುವ ಹಕ್ಕು ಪ್ರಸಕ್ತ ನಿಮಗಿದೆ. ಅಲ್ಲದೆ ೧೯೪೭ರಲ್ಲಿ ಕಾನೂನೊಂದನ್ನು ಪಾಸು ಮಾಡಿರುವಿರಿ. ಅದರ ಅಂತರ್ಗತ ಶಾಂತಿಯುತ ಸಭೆ ಸೇರಿಕೆಯನ್ನೂ ಯಾವ ಮುನ್ನೆಚ್ಚರಿಕೆ ಇಲ್ಲದೆ ಆಕಾಶದಿಂದ ಬಾಂಬು ಮಾಡಬಹುದಾಗಿದೆ. ಈ ಶಾಂತಿಯುತ ಸಭೆ ಸೇರಿಕೆಯ ವಿರುದ್ಧವಾಗಿರುವ ಅನೇಕ ಉಪಬಂಧಗಳನ್ನು ನಾವು ಹೊಂದಿರುತ್ತೇವೆ. ಅದೇ ಪ್ರಕಾರವಾಗಿ, ಸಂಘ ಅಥವಾ ಯೂನಿಯನ್ನುಗಳ ಮೇಲೆ ನಿಷೇಧಕ್ಕೆ ಸಂಬಂಧಿಸಿದಂತೆ ಕೂಡ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಮಾನ್ಯ ಮಿತ್ರರಿಗೆ ಆ ಕಲಮುಗಳ ಮೇಲೆ ಸಾಮಾನ್ಯವಾಗಿ ಮಾತನಾಡಲು ಮುಕ್ತತೆ ಇದೆಯೆ?

**ಮಾನ್ಯ ಉಪಸಭಾಪತಿ :** ಇದನ್ನೇ ನಾನು ಅವರ ಗಮನಕ್ಕೆ ತರಲು ಪ್ರಯತ್ನಿಸುತ್ತಿರುವುದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸಭೆಯ ನಡವಳಿಯ ಇದೊಂದು ದುರುಪಯೋಗ, ಅದನ್ನು ಹೇಳದಿರಲು ನಾನು ಅಸಹಾಯಕ. ಯಾವಾಗ ಸದಸ್ಯನೋರ್ವನು ತಿದ್ದಪಡಿಯ ಮೇಲೆ ಮಾತನಾಡುತ್ತಾನೋ. ಆತನು ತನ್ನನ್ನು ಆ ತಿದ್ದುಪಡಿಗೆ ಸೀಮಿತಗೊಳಿಸಿಕೊಳ್ಳತಕ್ಕದ್ದು. ಈ ಅವಕಾಶವನ್ನು ಆತನು ಪೂರ್ಣಕ್ಷೇತ್ರದ ಮೇಲೆ ಸುತ್ತಾಡಲು ಉಪಯೋಗಿಸಿಕೊಳ್ಳುವಂತಿಲ್ಲ.

**ಪಂಡಿತ್ ಠಾಕುರ ದಾಸ್ ಭಾರ್ಗವ :** ನಾನು ತಿದ್ದುಪಡಿಯ ಮೇಲೆಯೇ ಮಾತನಾಡುತ್ತಿದ್ದೇನೆ: ಆದರೆ ಡಾ. ಅಂಬೇಡ್ಕರ್‌ರು ಮಾತನಾಡುವ ಮತ್ತು ತಮ್ಮನ್ನು ವ್ಯಕ್ತಗೊಳಿಸುವ ವಿಧಾನ ಅತಿ ಆಕ್ಷೇಪಾರ್ಹ.

---

* ಸಿ.ಎ.ಡಿ. ಸಂಪುಟ ೭, ೧ನೆಯ ಡಿಸೆಂಬರ್, ೧೯೪೮, ಪುಟ ೭೩೮

ಅವರು ಏಕೆ ಎದ್ದು ನಿಲ್ಲಬೇಕು ಮತ್ತು ಬೆದರಿಸುವ ಮನಸ್ಥಿತಿಯಲ್ಲಿ ಅಥವಾ ಆಳುವ ದನಿಯಲ್ಲಿ ಮಾತನಾಡಬೇಕು?

**ಮಾನ್ಯ ಉಪಸಭಾಪತಿ :** ಸಭಾಪತಿಯ ಚೇರ್‌ನಲ್ಲಿದ್ದವರ ಹೊರತು ಉಳಿದವರೆಲ್ಲ ತಮ್ಮ ಟೆಂಪರ್ ಕಳೆದುಕೊಂಡಂತಿದೆ (ನಗು). ಶ್ರೀ ಭಾರ್ಗವ ಅವರಿಗೆ ನಾನು ಎಚ್ಚರಿಕೆ ನೀಡಿದ್ದೆ ಮತ್ತು, ಇದೀಗ, ಯಾವಾಗ ಡಾ. ಅಂಬೇಡ್ಕರ್ ಎದ್ದು ನಿಂತರೋ ಆಗ ಅದನ್ನು ಇನ್ನೇನು ಪುನರಾವರ್ತಿಸುವವನಿದ್ದೆ. ಅವರು ತಮ್ಮ ಭಾವನೆಗಳ ಸೆಳೆತಕ್ಕೊಳಗಾಗಿದ್ದರೆಂದು ನಾನು ಖಚಿತಗೊಂಡಿದ್ದೇನೆ. ಅದೇಕೆ ಅಷ್ಟೊಂದು ಭಾವನೆ ಕೆರಳಬೇಕು ಎನ್ನುವುದಕ್ಕೆ ನಾನು ಯಾವುದೇ ಕಾರಣ ಕಾಣುವುದಿಲ್ಲ. ಅನೇಕ ದಿವಸಗಳ ಒಟ್ಟಿನ ಬಿಗಿ ಪ್ರಯಾಸಕ್ಕೆ ಅವರು ಒಳಗಾಗಿರುತ್ತಾರೆ. ಅವರ ಸ್ಥಿತಿಯನ್ನು ನಾನು ಚೆನ್ನಾಗಿ ಅರಿಯ ಬಲ್ಲೆ ಮತ್ತು ಈ ಸಭೆಯು ಆ ವಿಷಯವನ್ನು ಅಲ್ಲಿಗೇ ನಿಲ್ಲಿಸಲು ಅನುಮತಿಸುತ್ತದೆ ಎಂದು ಆಶಿಸುತ್ತೇನೆ.

ಈಗ, ಶ್ರೀ ಭಾರ್ಗವ ಅವರು ಸ್ಥಿತಿಯ ಅರಿವನ್ನು ಮಾಡಿಕೊಂಡಿರುವರೆಂದು ನನ್ನ ಆಶಯ.

* * * * *

* **ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುತ್ತೇನೆ:

"ಅದು ತಿದ್ದುಪಡಿ ನಂ. ೪೫೪ಕ್ಕೆ ಸಂಬಂಧಿಸಿದಂತೆ ......"

**ಶ್ರೀ ಹೆಚ್.ವಿ.ಕಾಮತ್ :** ಕ್ರಿಯಾಲೋಪ ಕುರಿತು, ಮಾನ್ಯರೆ ತಿದ್ದುಪಡಿ ಸಂಖ್ಯೆ ೪೫೪ ಮಂಡಿಸಲ್ಪಟ್ಟಿದೆಯೇ?

**ಉಪಸಭಾಪತಿ :** ದಯವಿಟ್ಟು ಮುಂದುವರಿಯಿರಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** "ತಿದ್ದುಪಡಿಗಳ ಪಟ್ಟಿಯ ತಿದ್ದುಪಡಿ ಸಂ. ೪೫೪ಕ್ಕೆ ಸಂಬಂಧಿಸಿದಂತೆ.

ವಿಧಿ : (i) ೧೩ರೊಳಗಣ (೩), (೪), (೫) ಮತ್ತು (೬) ಕಲಮಿನೊಳಗೆ ಯಾವುದೇ ಜಾರಿಯಲ್ಲಿರುವ ಕಾನೂನು ಈ ಪದಗಳ ಮುಂದೆ 'ಅದು ಹೇಗೆ ವಿಧಿಸುತ್ತದೆಯೋ' ಸೇರಿಸುವುದು; ಮತ್ತು

(ii) ವಿಧಿ ೧೩ರ ಕಲಮು (೬)ರಲ್ಲಿ 'ವಿಶೇಷವಾಗಿ' ಈ ಪದಗಳ ನಂತರ 'ಹೇಳಲಾದ ಕಲಮಿನಲ್ಲಿ ಯಾವುದೇ ಅಂಶವು ಕಾರ್ಯಾಚರಣೆಯಲ್ಲಿರುವ ಯಾವುದೇ ಕಾನೂನು ಯಾವುದು ಎಲ್ಲಿಯವರೆಗೆ ಅದು ಯಾವುದೇ ಪ್ರಾಧಿಕಾರಕ್ಕೆ ವಿಧಿಸಲು ನಿಗದಿಪಡಿಸುತ್ತದೆಯೋ ಅಥವಾ ಸಶಕ್ತಗೊಳಿಸುತ್ತದೆಯೋ ಇಲ್ಲವೆ ರಾಜ್ಯಕ್ಕೆ ಯಾವುದೇ ಕಾನೂನು ಮಾಡುವುದರಿಂದ ತಡೆಯುತ್ತದೆಯೋ ಅದಕ್ಕೆ ಬಾಧೆಪಡಿಸುವುದಿಲ್ಲ' ಸೇರಿಸತಕ್ಕದ್ದು.

**ಸೈಯದ್ ಅಬ್ದುಲ್ ರವೂಫ್** (ಅಸ್ಸಾಮ : ಮುಸ್ಲಿಂ) : ಕ್ರಿಯಾಲೋಪವೊಂದರ ಮೇಲೆ, ಮಾನ್ಯರೆ, ಡಾ. ಅಂಬೇಡ್ಕರರ ತಿದ್ದುಪಡಿ ಸಂ. ೪೫೪ಕ್ಕೆ ತಿದ್ದುಪಡಿಯಾಗಲಾರದೆಂದು ನನ್ನ ವಿಚಾರ. ತಿದ್ದುಪಡಿ ಸಂ. ೪೫೪(೨), (೩), (೪), (೫) ಮತ್ತು (೬)ನೇ ಕಲಮುಗಳನ್ನು ತೆಗೆದುಹಾಕುವುದಕ್ಕೆ ಸಂಬಂಧಿಸಿದೆ. ಆದರೆ ಡಾ. ಅಂಬೇಡ್ಕರ್‌ರವರ ತಿದ್ದುಪಡಿ ಈ ಕಲಮುಗಳಲ್ಲಿ ಕೆಲ ಶಬ್ದಗಳನ್ನು ಸೇರಿಸಬಯಸುತ್ತದೆ. ಆದುದರಿಂದ ತಿದ್ದುಪಡಿಯೊಂದಕ್ಕೆ ತಿದ್ದುಪಡಿಯನ್ನು ಸೂಚಿಸುವ ಮಂಡನೆ ಮಾಡಲಾಗದು.

---

* ಸಿ.ಎ.ಡಿ. ಸಂಪುಟ ೭, ೧ನೆಯ ಡಿಸೆಂಬರ್, ೧೯೪೮, ಪುಟ ೭೪೦–೪೨

**ಉಪಾಧ್ಯಕ್ಷರು :** ಡಾ.ಅಂಬೇಡ್ಕರ್‌ರವರು ನಿಜಕ್ಕೂ ಮಾಡಲಿಚ್ಛಿಸುತ್ತಿರುವುದು ಮೂಲ ಕಲಮುಗಳನ್ನು ಕೆಲ ಅರ್ಹತೆಗಳೊಂದಿಗೆ ಉಳಿಸಿಕೊಳ್ಳುವುದು ಎಂದು ನನಗೆ ಅನಿಸುತ್ತದೆ. ಆದುದರಿಂದ ಅವರ ಕ್ರಮ ಸರಿ ಎಂದು ನಾನು ಆದೇಶಿಸುತ್ತೇನೆ.

**ಶ್ರೀ ಹೆಚ್.ವಿ. ಕಾಮತ್ :** ಇದರ ಪರಿಣಾಮ ಮೂಲ ತಿದ್ದುಪಡಿಗೆ ನಕಾರಗೊಳಿಸುವುದಾಗುತ್ತದೆ.

**ಉಪಾಧ್ಯಕ್ಷರು :** ದಯವಿಟ್ಟು ನಿಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ವಿಧಿ ೧೩ ಮತ್ತು ವಿಧಿ ೮ ಮತ್ತು ವಿಧಿ ೧೩ರ ಕೆಲ ಉಪಬಂಧಗಳಲ್ಲಿ ಬರುವ ಶಬ್ದಗಳು "ಈಗಿರುವ ಕಾನೂನು"ಗಳ ಬಗೆಗೆ ಮಾಡಲಾಗಿರುವ ಭಾಷೆಗಳಿಂದಾಗಿ ನನಗೆ ಅನ್ನಿಸುತ್ತಿರುವುದೇನೆಂದರೆ, ಜಾರಿಯಲ್ಲಿರುವ ಕಾನೂನಿನ ಬಗೆಗೆ ಮಾಡಲು ಬಯಸುವುದರ ಬಗೆಗೆ ಬಹಳಷ್ಟು ಮಟ್ಟಿನ ತಪ್ಪು ತಿಳಿವಳಿಕೆ ಇದೆ ಎಂದು. ಈಗ ಮುಖ್ಯವಾಗಿರುವ ವಿಧಿಯೆಂದರೆ ವಿಧಿ ೮ ಯಾವುದು ವಿಶೇಷವಾಗಿ, ಯಾವುದೇ ತರಹದ ಅನುಮಾನವಿಲ್ಲದೆ, ಸಂವಿಧಾನದ ಈ ಭಾಗದಲ್ಲಿ ಅಧಿನಿಯಮನ ಮಾಡಲ್ಪಟ್ಟ ಮೂಲಭೂತ ಹಕ್ಕುಗಳಿಗೆ ಯಾವುದೇ ಜಾರಿಯಲ್ಲಿರುವ ಕಾನೂನು ಅಸಮಂಜಸವಾಗಿದ್ದಲ್ಲಿ ಶೂನ್ಯವಾಗತಕ್ಕದ್ದೆಂದು ಹೇಳುತ್ತದೆ. ಇದೊಂದು ಮೂಲಭೂತ ಪ್ರಸ್ತಾಪ ಆಗಿದೆ ಮತ್ತು ಯಾವುದೇ ನುರಿತ ನ್ಯಾಯವಾದಿಯು ಒಂದು ವೇಳೆ ಆತನನ್ನು ವಿಧಿ ೧೩ರಲ್ಲಿಯ ಉಪಕಲಮುಗಳಲ್ಲಿಯ "ಜಾರಿಯಲ್ಲಿರುವ ಕಾನೂನು" ಇದರ ಅರ್ಥವಿವರಣೆ ಮಾಡಲು ಕೇಳಿದಲ್ಲಿ "ಜಾರಿಯಲ್ಲಿರುವ ಕಾನೂನು" ಎಂಬುದನ್ನು ಓದುವುದು ಮೂಲಭೂತ ಹಕ್ಕುಗಳಿಗೆ ಅಸಂಗತವಾಗಿರುವ ರೀತಿಯಲ್ಲಿ ಎನ್ನುವುದರ ಬಗೆಗೆ ನನಗೆ ಯಾವ ಅನುಮಾನವೇ ಇಲ್ಲ. ಈ ರೀತಿಯಾಗಿ ಉಪಬಂಧಗಳಲ್ಲಿಯ "ಜಾರಿಯಲ್ಲಿರುವ ಕಾನೂನು" ಎಂಬ ಪದಗಳಲ್ಲಿ ಅರ್ಥೈಸಲಾಗುವುದೆಂಬುದರ ಬಗೆಗೆ ಅನುಮಾನವಿಲ್ಲ. ಜಾರಿಯಲ್ಲಿರುವ ಕಾನೂನು ಪದಗಳ ಪ್ರಸ್ತಾಪ ಬಂದಾಗಲೆಲ್ಲ ವಿಧಿ ೮ರಲ್ಲಿ ಹೇಳಲಾದ ಪ್ರಸ್ತಾಪ ಪುನರುಚ್ಚರಿಸುವುದು ಅನಗತ್ಯ. ಏಕೆಂದರೆ ಯಾವುದೇ ಕಾನೂನನ್ನು ಅರ್ಥೈಸುವಾಗ ಎಲ್ಲ ಸಂಬಂಧಿತ ಭಾಗಗಳನ್ನು ಒಂದು ಮತ್ತೊಂದಕ್ಕೆ ಹೊಂದಿಕೊಳ್ಳುವಂತೆ ಲೆಕ್ಕಕ್ಕೆ ತೆಗೆದುಕೊಳ್ಳುವುದು ಮತ್ತು ಓದುವುದು ಅರ್ಥೈಸುವಿಕೆಯ ನಿಯಮವೇ ಆಗಿದೆ. ಆದುದರಿಂದ ಕರಡು ಸಮಿತಿಯಂತೆ ವಿಧಿ ೮ರಲ್ಲಿ ನಿಗದಿಪಡಿಸಿರುವಂತೆ ಯಾವುದೆ ಜಾರಿಯಲ್ಲಿರುವ ಕಾನೂನು ಮೂಲಭೂತಹಕ್ಕುಗಳಿಗೆ ಸರಿಹೊಂದದಿದ್ದಲ್ಲಿ ಅಂತ್ಯಗೊಳ್ಳುತ್ತದೆ. ಕರಡು ಸಮಿತಿಯು ಈ ಶಬ್ದಗಳು ಬಳಕೆಯಾಗುವ ಕಡೆಗಳಲ್ಲೆಲ್ಲ "ಜಾರಿಗತ ಕಾನೂನು" ಪದಗಳನ್ನು ವಿವಿಧ ಕಲಮುಗಳಲ್ಲಿ ಬಳಸುವ ಅಗತ್ಯವಿದೆ ಎಂದು ಬಗೆಯುವುದಿಲ್ಲ. ನಾನು ಕಾಣುವಂತೆ, ಬಹಳಷ್ಟು ಜನ ಈ ಕಲಮನ್ನು ಆ ರೀತಿಯಲ್ಲಿ ಓದಲು ಶಕ್ತರಾಗಿಲ್ಲ. "ಜಾರಿಯಲ್ಲಿರುವ ಕಾನೂನು" ಇದನ್ನು ಓದುವಾಗ ವಿಧಿ ೮ರಲ್ಲಿ ಈಗಾಗಲೇ ಹೇಳಿರುವುದನ್ನು ಅವರು ಮರೆಯುವಂತೆ ಕಾಣುತ್ತದೆ. ತಜ್ಞನಲ್ಲದ ಸಾಮಾನ್ಯ ವ್ಯಕ್ತಿಯ ಮನದಲ್ಲಿ ಉಂಟಾಗಬಹುದಾದ ಈ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಲು, (೩), (೪), (೫) ಮತ್ತು (೬) ಈ ಉಪಕಲಮುಗಳಿಗೆ ನಾನು ಈ ತಿದ್ದಪಡಿಯನ್ನು ಮುಂದಿಟ್ಟಿರುತ್ತೇನೆ, ನಿರೂಪಣೆಗಾಗಿ ನನ್ನ ತಿದ್ದುಪಡಿಯೊಂದಿಗಿನ ಉಪಕಲಮು (೩) ನ್ನು ನಾನು ಓದುತ್ತೇನೆ.

"ಸಾರ್ವಜನಿಕ ಸುವ್ಯವಸ್ಥೆಯ ಹಿತದೃಷ್ಟಿಯಿಂದ, ಜಾರಿಯಲ್ಲಿರುವ ಯಾವುದೇ ಕಾನೂನನ್ನು ರಾಜ್ಯವು, ಮಾಡುವುದಕ್ಕಾಗಿ ವಿಧಿಸುತ್ತದೆಯೋ ಇಲ್ಲವೆ ತಡೆಯುತ್ತದೆಯೋ ಅದಕ್ಕೆ ಉಪಕಲಮು (ಬಿ)ನಲ್ಲಿಯ ಯಾವುದೇ ಕಲಮು ಪರಿಣಾಮ ಬೀರುವುದಿಲ್ಲ."

ಭಾರ್ಗವರವರ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುತ್ತೇನೆ ಅಲ್ಲದೆ 'ಸಮಂಜಸ' ಈ ಶಬ್ದವನ್ನು ಕೂಡ ನಾನು ಸೇರಿಸುತ್ತೇನೆ.

"ಸಾರ್ವಜನಿಕ ಸುವ್ಯವಸ್ಥೆಯ ಹಿತದೃಷ್ಟಿಯಿಂದ ಹೇಳಲಾದ ಉಪಕಲಮಿನಲ್ಲಿ ನೀಡಲಾದ ಹಕ್ಕುಗಳನ್ನು ಬಳಸುವಲ್ಲಿ ನಿರ್ಬಂಧನೆಗಳನ್ನು ಹಾಕುವುದು."

ಈಗ, "ಎಲ್ಲಿಯವರೆಗೆ ಅದು ವಿಧಿಸುತ್ತದೆಯೋ" ಈ ಪದಗಳು ನನಗೆ ಹೊಳೆಯುವಂತೆ ಈಗಿರುವ ಕಾನೂನು ಎಲ್ಲಿಯವರೆಗೆ ಅದು ಸಮಂಜಸ ನಿರ್ಬಂಧನೆಗಳನ್ನು ವಿಧಿಸುತ್ತದೆಯೋ ಅಲ್ಲಿಯವರೆಗೆ ಮಾತ್ರ ಜಾರಿಯಲ್ಲಿರುವ ಕಾನೂನು ರಕ್ಷಿತಗೊಳ್ಳುತ್ತದೆ ಎನ್ನುವುದು ಪೂರ್ಣ ವಿಚಾರ ಮತ್ತು ಯಾವುದೇ ಅನುಮಾನದಿಂದ ಮುಕ್ತವಾದದ್ದು. ಆ ತಿದ್ದುಪಡಿಯೊಂದಿಗೆ ನನಗೆ ಅನಿಸಿದ ಮಟ್ಟಿಗೆ ಜಾರಿಯಲ್ಲಿರುವ ಕಾನೂನು ಸೀಮಿತ ಮಟ್ಟಿಗೆ ರಕ್ಷಿತ, ಮೂಲಭೂತ ಹಕ್ಕುಗಳಿಗೆ ಸಂಘರ್ಷಕ್ಕೆ ಬರಲಾರದವರೆಗೆ ಮಾತ್ರ ಅದು ಸುರಕ್ಷಿತ ಎನ್ನುವುದನ್ನು ತಿಳಿದುಕೊಳ್ಳಲು ಯಾವ ತೊಂದರೆಯೂ ಇಲ್ಲ.

ಉಪಕಲಮು (೨)ನ್ನು ಬೇರೆ ರೀತಿಯಾಗಿ ಬರೆಯಲಾಗಿದೆ, ಏಕೆಂದರೆ ಅದರಲ್ಲಿ ಬರುವ ಪದ ಉಪಕಲಮುಗಳು (೩), (೪) ಮತ್ತು (೫)ಗಳಲ್ಲಿ ಬರುವ ಪದಕ್ಕಿಂತ ಭಿನ್ನವಾಗಿದೆ. ಮಾನ್ಯ ಸದಸ್ಯರುಗಳು, ಅದು ನಿಖರವಾಗಿ ಏನು ಅರ್ಥವನ್ನು ಕೊಡುತ್ತದೆ ಎನ್ನುವುದನ್ನು ತಾವಾಗಿಯೇ ಓದಿಕೊಳ್ಳಲು ಶಕ್ತರಾಗಿರುತ್ತಾರೆ.

ಈಗ, ನನ್ನ ಮಿತ್ರ, ಪಂಡಿತ ಠಾಕುರದಾಸ್ ಭಾರ್ಗವರವರು ಜಾರಿಯಲ್ಲಿರುವ ಕಾನೂನನ್ನು ಉಳಿಸಲು ಕರಡು ಸಮಿತಿಯವರು ಮಿತಿ ಮೀರಿ ಹೋಗಿರುತ್ತಾರೆ ಎನ್ನುವ ಆಪಾದನೆಯೊಂದಿಗೆ ಅದರ ವಿರುದ್ಧ ಅತಿ ಹೋರಾಟಕ್ಕೆ ತೊಡಗಿದ್ದಾರೆ. ಅವರು ಕರಡು ಸಮಿತಿಯವರು ಏನು ಮಾಡಬೇಕೆನ್ನುವುದನ್ನು ಅವರು ಬಯಸುತ್ತಾರೆಯೋ ನನಗೆ ತಿಳಿಯದು. ಸಂವಿಧಾನ ಜಾರಿಗೆ ಬಂದ ದಿನವೇ ಜಾರಿಯಲ್ಲಿರುವ ಎಲ್ಲಾ ಕಾನೂನುಗಳು ರದ್ದುಗೊಳ್ಳಬೇಕೆಂದು ನಾವು ನೇರವಾಗಿ ಹೇಳಬೇಕೆಂದು ಅವರು ಬಯಸುವರೆ?

**ಪಂಡಿತ್ ಠಾಕೂರ ದಾಸ ಭಾರ್ಗವಾ :** ಹಾಗೇನಿಲ್ಲ.

**ಮಾನ್ಯ ಡಾ॥ ಬಿ. ಅರ್. ಅಂಬೇಡ್ಕರ್ :** ನಾವು ಹೇಳಿರುವುದೇನೆಂದರೆ ಜಾರಿಯಲ್ಲಿರುವ ಕಾನೂನುಗಳು ಸಂವಿಧಾನದಲ್ಲಿಯ ಪ್ರಾವಧಾನಗಳಿಗೆ ಅಸಮಂಜಸವಾಗಿರುವುದಾದರೆ ರದ್ದುಗೊಳ್ಳುವುದು ಎಂದು. ಖಂಡಿತವಾಗಿಯೂ ದೇಶದ ಆಡಳಿತವು ಇಂದು ಜಾರಿಯಲ್ಲಿರುವ ಕಾನೂನುಗಳ ಮುಂದುವರಿಕೆಯ ಮೇಲೆ ನಿರ್ಭರವಾಗಿದೆ. ಒಂದು ವೇಳೆ ಜಾರಿಯಲ್ಲಿರುವ ಕಾನೂನುಗಳು ಸಂಪೂರ್ಣವಾಗಿ ಮತ್ತು ಎಲ್ಲವೂ ಸೇರಿದಂತೆ ರದ್ದುಗೊಂಡಲ್ಲಿ ಸಂಪೂರ್ಣ ಆಡಳಿತವನ್ನು ಅದು ಚೂರು ಮಾಡಿ ಕೆಳತರುತ್ತದೆ.

ಈಗ ನಾನು ವಿಧಿ ೩೦೭ನ್ನು ತೆಗೆದುಕೊಳ್ಳುತ್ತೇನೆ. ತಿದ್ದುಪಡಿ ಮಾಡದೆ ಇರುವವರೆಗೆ ಜಾರಿಗತ ಕಾನೂನುಗಳು ಅಸ್ತಿತ್ವದಲ್ಲಿರಲು ನಾವು ಅವಕಾಶ ಮಾಡಿರುವೆವೆಂದು ಅವರು ಹೇಳಿರುತ್ತಾರೆ. ಈಗ ನಾನು ವಿಚಾರಿಸಿರುವುದೇನೆಂದರೆ ಈ ಸಂವಿಧಾನ ಜಾರಿಗತಗೊಂಡಮೇಲೆ, ಈ ದೇಶದ ಕಾರ್ಯಾಂಗದ ಕಾನೂನು ಮಾಡುವ ಅಧಿಕಾರವು ಪಾರ್ಲಿಮೆಂಟಿಗೆ ಅಥವಾ ತಮ್ಮದೇ ಆದ ವ್ಯಾಪ್ತಿ ಹೊಂದಿರುವ ಅನೇಕ ಸ್ಥಳೀಯ ಶಾಸಕಾಂಗಗಳಿಗೆ ಸೇರಿರುತ್ತದೆ ಎನ್ನುವ ಅಂಶವನ್ನು ಕಾನೂನಿನ ಬಗೆಗೆ ಅರಿವುಳ್ಳ ವ್ಯಕ್ತಿ ತಿಳಿದು ಕೊಳ್ಳಬಲ್ಲವನಾಗಿರುತ್ತಾನೆ. ಸ್ಪಷ್ಟವಾಗಿ ಒಂದು ವೇಳೆ ನೀವು ಇನ್ನುಮುಂದೆ ಪಾರ್ಲಿಮೆಂಟಿನಿಂದ ರಚಿತಗೊಳ್ಳದ ಹೊರತು ಯಾವುದೇ ಕಾನೂನು ಜಾರಿಯಲ್ಲಿರಕೂಡದು ಅಥವಾ ಯಾವುದೇ ಶಕ್ತಿ ಅಥವಾ ಮನ್ನಣೆ ಹೊಂದಿರದು ಎಂಬ ಪ್ರಸ್ತಾಪವನ್ನು ಪ್ರತಿಪಾದಿಸುವುದಾದರೆ ಏನು ಸ್ಥಿತಿಯಾಗಿರುತ್ತದೆ?

ಉಂಟಾಗುವ ಸ್ಥಿತಿ ಎಂದರೆ ಈ ಸಂವಿಧಾನದಲ್ಲಿ ಕಾನೂನು ಮಾಡುವ ಅಧಿಕಾರ ಹೊಂದಿರುವ ಪಾರ್ಲಿಮೆಂಟು ಅಥವಾ ಯಾವುದೇ ಸ್ಥಳೀಯ ಶಾಸಕಾಂಗಗಳಿಂದ ಯಾವುದೇ ಮನ್ನಣೆ ಇರದ ಕಾರಣ ಈ ಮೊದಲಿನ ಶಾಸಕಾಂಗಗಳು, ಕೇಂದ್ರ ಶಾಸಕೀಯ ಅಸೆಂಬ್ಲಿ ಅಥವಾ ಪ್ರಾಂತೀಯ ಅಸೆಂಬ್ಲಿಗಳಿಂದ ರಚಿತ ಎಲ್ಲ ಕಾನೂನುಗಳು ಚೂರು–ಚೂರಾಗುತ್ತವೆ. ಆದುದರಿಂದ, ಇದೇ ಕಾರಣಕ್ಕಾಗಿ ಪಾರ್ಲಿಮೆಂಟಿನಿಂದ ರಚಿತಗೊಂಡಿಲ್ಲ ಎಂಬ ಮಾತ್ರಕ್ಕೆ ಈಗಾಗಲೇ ರಚಿತ ಕಾನೂನುಗಳು ಸ್ಥಗಿತಗೊಳ್ಳದಿರಲೆಂದು ಸಂವಿಧಾನದಲ್ಲಿ ಪೂರ್ವಸಿದ್ಧತೆ ಇರಬೇಕಾದ ಅಗತ್ಯತೆ ಇದೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ವಿಧಿ ೩೦೭ನ್ನು ಸೇರಿಸಲಾಗಿದೆ. ಆದುದರಿಂದ ಮಾನ್ಯರೆ, ನಾನು ಸಲ್ಲಿಸುವುದೇನೆಂದರೆ ಜಾರಿಗತ ಕಾನೂನನ್ನು ಕುರಿತು ವಿಶೇಷವಾಗಿ ತಿಳಿಸುವ ನನ್ನ ತಿದ್ದುಪಡಿಯನ್ನು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ, ತೊಂದರೆ ಎದುರಿಸುವಂತಿದ್ದಲ್ಲಿ ಹೊರತು ಅದು ಮುಂದುವರಿಯುವುದು. ಇದನ್ನೇ ಕುರಿತು ಅನೇಕ ಮಾನ್ಯ ಸದಸ್ಯರುಗಳು ವಿಧಿ ೧೩ರ ಜೊತೆ ವಿಧಿ ೮ರ ಜೊತೆ ಓದುವಾಗ ತೊಂದರೆ ಅನುಭವಿಸುತ್ತಿರುವುದು. ಆದುದರಿಂದ ನನ್ನ ವಿಚಾರವೆಂದರೆ ನನ್ನ ಈ ತಿದ್ದುಪಡಿ ಸ್ಥಿತಿಯನ್ನು ತಿಳಿಗೊಳಿಸುತ್ತದೆ ಅಲ್ಲದೆ ಸಭೆಯು ಇದನ್ನು ಒಪ್ಪಿಕೊಳ್ಳುವಲ್ಲಿ ಯಾವುದೇ ತೊಂದರೆ ಅನುಭವಿಸದೆಂದು ನನ್ನ ಆಶಯ.

(ಈ ತಿಳುವಳಿಕೆ ನೀಡಿದ ನಂತರ ಅನೇಕ ತಿದ್ದುಪಡಿಗಳು ಮಂಡಿಸಲ್ಪಡಲಿಲ್ಲ.)

* * * * *

* **ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುತ್ತೇನೆ:

'ವಿಧಿ ೧೩ರ ಕಲಮು (೪)ರಲ್ಲಿಯ 'ಜನ ಸಾಮಾನ್ಯರು' ಬದಲಾಗಿ 'ಸಾರ್ವಜನಿಕ ವ್ಯವಸ್ಥೆ ಅಥವಾ ನೈತಿಕತೆ' ಈ ಪದಗಳನ್ನು ಸೇರಿಸುವುದು."

ಈ ಪದಗಳು ಆ ಕಲಮಿನಲ್ಲಿ ಸರಿಹೊಂದುವುದಿಲ್ಲ.

**ಉಪ ಸಭಾಪತಿ :** ೪೭೭ ಅದರಂತಿದೆ. ೪೭೯, ೪೮೦ ಮತ್ತು ೪೮೬ ಇವುಗಳೂ ಅದೇ ತಾತ್ಪರ್ಯದವು.

(ತಿದ್ದುಪಡಿ ಸಂಖ್ಯೆಗಳು ೪೭೯, ೪೮೦, ಮತ್ತು ೪೮೬ ಇವುಗಳ ಮಂಡನೆಯಾಗಲಿಲ್ಲ)

* * * * *

+ **ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿಯವರೆ ನಾನು ಮಂಡಿಸುತ್ತೇನೆ:

ವಿಧಿ ೧೩ರ ಕಲಮು ೫ರಲ್ಲಿಯ ಪದ 'ಆದಿಮ'ಕ್ಕೆ ಬದಲಾಗಿ 'ಪರಿಶಿಷ್ಟ' ಸೇರಿಸುವುದು."

ಕರಡು ಸಮಿತಿಯು ಮೂಲಭೂತ ಹಕ್ಕುಗಳ ಪ್ರಶ್ನೆಯ ಸಂಬಂಧ ಚರ್ಚಿಸುತ್ತಿದ್ದಾಗ, ಟ್ರೈಬಲ್ ಪ್ರದೇಶಗಳ ಬಗೆಗೆ ನೇಮಕಗೊಂಡಿದ್ದ ಕಮಿಟಿ ತನ್ನ ವರದಿ ಸಲ್ಲಿಸಿರಲಿಲ್ಲ, ಹೀಗಾಗಿ ಕರಡು ತಯಾರಿಸಿದಾಗ ನಮಗೆ 'ಆದಿಮ' ಶಬ್ದ ಬಳಸಬೇಕಾಯಿತು. ತದನಂತರ, ಟ್ರೈಬಲ್ ಪ್ರದೇಶಗಳ ಮೇಲಣ ಕಮಿಟಿಯು 'ಪರಿಶಿಷ್ಟ ಪಂಗಡ" ಪದಗಳನ್ನು ಬಳಸಿರುವುದರಿಂದ ಸಂವಿಧಾನದ ಪರಿಶಿಷ್ಟಗಳಲ್ಲಿ ನಮಗೆ ಪರಿಶಿಷ್ಟ ಪಂಗಡ ಪದಗಳನ್ನು ಬಳಸಬೇಕಾಗಿ ಬಂದಿತು. ಭಾಷೆಯ ಏಕರೂಪತೆಯನ್ನು ಕಾಪಾಡಲು 'ಆದಿಮ' ಪದಕ್ಕೆ ಬದಲಾಗಿ 'ಪರಿಶಿಷ್ಟ' ಪದ ಬಳಸಬೇಕಾದ ಅಗತ್ಯವಾಯಿತು.

---

* ಸಿ.ಎ.ಡಿ. ಸಂಪುಟ ೭, ೧ನೆಯ ಡಿಸೆಂಬರ್, ೧೯೪೮, ಪುಟ ೭೪೪

\+ ಸಿ.ಎ.ಡಿ. ಸಂಪುಟ ೭, ೧ನೆಯ ಡಿಸೆಂಬರ್, ೧೯೪೮, ಪುಟ ೭೪೬

**ಉಪಸಭಾಪತಿ :** ನಾನು ತಿಳಿದಿರುವಂತೆ, ಈ ತಿದ್ದುಪಡಿಗೆ ತಿದ್ದುಪಡಿಯೊಂದಿದೆ, ಮತ್ತು ಅದು ಶ್ರೀ ಘೂಲಸಿಂಗ್‌ರವರ ಹೇಸರಿನಲ್ಲಿರುವ ಪಟ್ಟಿ ೧ರ ತಿದ್ದುಪಡಿ ಸಂ. ೫೬ ಆಗಿದೆ.

(ಪಟ್ಟಿ ೧ರಲ್ಲಿ) ತಿದ್ದುಪಡಿ ಸಂಖ್ಯೆ ೫೬ ಮಂಡಿಸಲ್ಪಡಲಿಲ್ಲ.)

**ಉಪಸಭಾಪತಿ :** ಅದರ ಅರ್ಥ ತಿದ್ದುಪಡಿ ಸಂ. ४೯೧ ಇರುವಂತೆ ಉಳಿಯುತ್ತದೆ.

ಆಮೇಲೆ ನಾವು ತಿದ್ದುಪಡಿ ಸಂ. ೮೪೪ಕ್ಕೆ ಬರುತ್ತೇವೆ. (ತಿದ್ದುಪಡಿ ಸಂ. ४೮೮ ಮಂಡಿಸಲ್ಪಡಲಿಲ್ಲ).

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುತ್ತೇನೆ:

ಪರಿಚ್ಛೇದ ೧೨ರ ಕಲಮು (೬)ರಲ್ಲಿಯ "ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಅಥವಾ ಆರೋಗ್ಯ ಈ ಶಬ್ದಗಳಿಗೆ ಬದಲಾಗಿ 'ಸಾಮಾನ್ಯ ಜನತೆ' ಈ ಶಬ್ದಗಳನ್ನು ಸೇರಿಸುವುದು."

ಒಂದು ಪ್ರತ್ಯೇಕ ಕಲಮಿನಲ್ಲಿ 'ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಅಥವಾ ಆರೋಗ್ಯ' ಈ ಪದಗಳು ಸಮಗ್ರವಾಗಿ ಅನುಚಿತವೆನಿಸುತ್ತವೆ.

* **ಶ್ರೀ ಅನಂತಶಯನಂ ಅಯ್ಯಂಗಾರ್ :** ......... ಈಗ, ಆದುದರಿಂದ ಡಾ.ಅಂಬೇಡ್ಕರ್‌ರವರಿಗೆ ಒಪ್ಪಿಗೆಯಾಗದ ತಿದ್ದುಪಡಿಗಳ ಹೊರತಾದ ಯಾವುದೇ ತಿದ್ದುಪಡಿಗಳನ್ನು ಒಪ್ಪಿಕೊಳ್ಳತಕ್ಕದ್ದಲ್ಲ. ಅವುಗಳು ಆಕ್ಷೇಪಾರ್ಹ ಮತ್ತು ಸಂವಿಧಾನದಲ್ಲಿ ಸ್ಥಾನ ಪಡೆಯಕೂಡದು.

**ಶ್ರೀ ಸತ್ಯನಾರಾಯಣ ಸಿನ್ಹಾ** (ಬಿಹಾರ : ಸಾಮಾನ್ಯ): ಈಗ ಪ್ರಶ್ನೆಯನ್ನು ಇಡಬೇಕೆಂದು ನಾನು ಮಂಡಿಸುತ್ತೇನೆ.

**ಉಪಸಭಾಪತಿ :** ನಾನು ಈ ಸಭೆಯ ಕಾರ್ಯಕಲಾಪಗಳನ್ನು ಹೇಗೆ ನಡೆಸಲೆತ್ನಿಸಿರುವೆ ಎನ್ನುವುದರ ಕುರಿತು ನನ್ನ ಬಗ್ಗೆ ವಿಚಾರಣೆ ಮಾಡಲಾಗಿದೆ. ಆ ಸಮಯದಲ್ಲಿ ಮಾಹಿತಿ ಒದಗಿಸಲು ನಾನು ನಿರಾಕರಿಸಿದ್ದೆ, ಏಕೆಂದರೆ ನಾನು ಕಾರ್ಯಕಲಾಪಗಳನ್ನು ಹೇಗೆ ನಡೆಸುವೆ ಎನ್ನುವ ವಿವರಣೆ ನೀಡುವುದು ನನ್ನ ಸ್ವಇಚ್ಛಾ ಅಧಿಕಾರಕ್ಕೆ ಬಿಟ್ಟದ್ದು ಎಂಬುದಾಗಿ ನಾನು ಬಗೆದಿದ್ದೆ. ಮಾತನಾಡಬಯಸಿದ್ದ ಸದಸ್ಯರುಗಳಿಗೆಲ್ಲ ಸಮಾಧಾನ ಪಡಿಸಲು ನನ್ನಿಂದ ಆಗಿಲ್ಲವೆಂದು ನಾನು ಕಾಣುತ್ತೇನೆ. ಈ ಕ್ಷಣದಲ್ಲಿ, ಇಲ್ಲಿ ನನ್ನ ಹತ್ತಿರ ೨೫ ವಿವಿಧ ಸದಸ್ಯರುಗಳು ಮಾತನಾಡಲು ಉದ್ಯುಕ್ತರಾಗಿರುವ ೨೫ ಚೀಟಿಗಳಿವೆ. ಅವರಲ್ಲಿ ಪ್ರತಿಯೊಬ್ಬರು ಚರ್ಚೆಗೆ ಏನನ್ನಾದರೂ ಕೊಡಲು ಶಕ್ತರು ಎನ್ನುವುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ. ಆದರೆ ಚರ್ಚೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದುವರಿಸುವಂತಿಲ್ಲ. ಇತರೆ ಸದಸ್ಯರುಗಳು ಅದೇ ರೀತಿಯಲ್ಲಿ ತಮ್ಮ ಅಭಿಪ್ರಾಯ ನೀಡುವ ಸಾಮರ್ಥ್ಯವುಳ್ಳ, ಎದ್ದು ನಿಂತಿರುವ, ಅವರುಗಳಿಗೆ ಚೀಟಿಗಳನ್ನು ನನಗೆ ಕಳಿಸುವ ಅವಕಾಶ ದೊರೆಯದಿದ್ದವರ ಲೆಕ್ಕ ಇದರಲ್ಲಿ ಪರಿಗಣಿಸಿಲ್ಲ. ಸಭೆಯ ಒಟ್ಟಾರೆ ಅಭಿಪ್ರಾಯಗಳನ್ನು ಪಡೆಯಲು ನಾನು ಪ್ರಯತ್ನಿಸಿರುವೆ. ಒಂದು ವೇಳೆ ಗೌರವಾನ್ವಿತ ಸದಸ್ಯರುಗಳು ದಯವಿಟ್ಟು ಈಗಾಗಲೇ ಸಭೆಯಲ್ಲಿ ಮಾತನಾಡಿರುವ ವಕ್ತಾರರುಗಳ ಪಟ್ಟಿಯನ್ನು ಪರಿಗಣಿಸುವರಾದರೆ ಅವರು ಪ್ರತಿ ಪ್ರಾಂತದ ಅಲ್ಲದೆ ಪ್ರತಿ ಪ್ರಾಂತದಲ್ಲಿಯ ಅಲ್ಪಸಂಖ್ಯಾತರು ಪ್ರತಿನಿಧಿಸಿರುವುದನ್ನು ಕಾಣಬಹುದಾಗಿದೆ. ನನ್ನ ದೃಷ್ಟಿಯಲ್ಲಿ ಪಂಡಿತ ಎಲ್.ಕೆ. ಮೈತ್ರಾರವರು ಏನು ಹೇಳಿರುತ್ತಾರೋ ಅಲ್ಲದೆ ಬೆಂಗಾಲೀಯರು ಬಹುಸಂಖ್ಯಾತರು. ಆದುದರಿಂದ ನನ್ನ ದೃಷ್ಟಿಯಲ್ಲಿ ಪ್ರಶ್ನೆಯನ್ನು ಸಂಪೂರ್ಣವಾಗಿ ಚರ್ಚಿಸಿಯಾಗಿದೆ. ಆದರೆ, ಮಾಮೂಲಿನಂತೆ, ನಾವು ಈ ಚರ್ಚೆಯನ್ನು ಮುಗಿಸೋಣ ಎನ್ನುವುದು ಸಭೆಯ ಆಶಯವಾಗಿದೆಯೆ ಹೇಗೆ ಎನ್ನುವುದನ್ನು ನಾನು

---

* ಸಿ.ಎ.ಡಿ. ಸಂಪುಟ ೭, ೨ನೆಯ ಡಿಸೆಂಬರ್, ೧೯४೮, ಪುಟ ೭೭೯–೮೩

ತಿಳಿದುಕೊಳ್ಳಬಯಸುತ್ತೇನೆ.

**ಮಾನ್ಯ ಸದಸ್ಯರುಗಳು :** ಹೌದು, ಹೌದು

**ಉಪಸಭಾಪತಿ :** ಹಾಗಾದರೆ ನಾನು ಡಾ. ಅಂಬೇಡ್ಕರರವರನ್ನು ಉತ್ತರಿಸಲು ಕರೆಯುತ್ತೇನೆ.

**ಗೌರವಾನ್ವಿತ ಡಾ.ಬಿ.ಆರ್.ಅಂಬೇಡ್ಕರ್ :** (ಬಾಂಬೆ : ಸಾಮಾನ್ಯ): ಉಪಸಭಾಪತಿಯವರೆ, ಮಾನ್ಯರೆ, ವಿಧಿ ೧೩ಕ್ಕೆ ಮಂಡಿಸಲಾದ ಅನೇಕ ತಿದ್ದುಪಡಿಗಳಲ್ಲಿ, ಶ್ರೀ ಮುನ್ಷಿಯವರ ತಿದ್ದುಪಡಿ ಸಂಖ್ಯೆ ೮೬ರಂತೆ ಮಾಡಲಾದ ತಿದ್ದುಪಡಿ ಮತ್ತು ಪಟ್ಟಿ ೧ರಲ್ಲಿ 'ಸಮಂಜಸ' ಈ ಪದವನ್ನು ಸೇರಿಸಲು ಶ್ರೀ ಠಾಕೂರದಾಸ ಭಾರ್ಗವ ಇವರ ತಿದ್ದುಪಡಿ ಸಂ.೪೯ ಇವುಗಳನ್ನು ಒಪ್ಪಿಕೊಳ್ಳಲು ನಾನು ಪ್ರಸ್ತಾಪಿಸುತ್ತೇನೆ.

**ಉಪಸಭಾಪತಿ:** ದಯವಿಟ್ಟು ತಿದ್ದುಪಡಿ ಸಂ.೪೧೫ನ್ನು ಒಪ್ಪಿಕೊಳ್ಳಲು ತಾವು ಹೇಗೆ ಪ್ರಸ್ತಾವಿಸುವಿರೆಂದು ನಮಗೆ ತಿಳಿಸುವಿರಾ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್ :** 'ಈ ವಿಧಿಯ ಇತರ ಉಪಬಂಧಗಳಿಗೆ ಒಳಪಟ್ಟಂತೆ' ಈ ಶಬ್ದಗಳನ್ನು ತೆಗೆದು ಹಾಕಲು ತಿದ್ದುಪಡಿ ಬಯಸುತ್ತದೆ.

**ಉಪಸಭಾಪತಿ :** ಆಮೇಲೆ ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್ :** ಆ ಮೇಲೆ ನಾನು ತಿದ್ದುಪಡಿ ಸಂ.೮೬. ಮಾರ್ಪಾಡುಮಾಡಿರುವಂತೆ ಸಂ.೪೫೩.ನ್ನು ಮತ್ತು ಪಟ್ಟಿ ೧ರಲ್ಲಿ ಪಂಡಿತ ಠಾಕೂರ ದಾಸ್ ಭಾರ್ಗವ ಅವರಿಂದ ತಿದ್ದುಪಡಿಸಲಾದ ತಿದ್ದುಪಡಿ ಯಾವುದು 'ಸಮಂಜಸ' ಈ ಶಬ್ದವನ್ನು ಸೇರಿಸುತ್ತದೆಯೋ ಒಪ್ಪಿಕೊಳ್ಳುತ್ತೇನೆ.

ಮಾನ್ಯರೆ, ಈಗ ಇತರ ತಿದ್ದುಪಡಿಗಳಿಗೆ ಮತ್ತು ವಕ್ತಾರುಗಳು ತಮ್ಮ ಭಾಷಣಗಳಲ್ಲಿ ೮ ತಿದ್ದುಪಡಿಗಳನ್ನು ಮಂಡಿಸುವಾಗ ಎತ್ತಿರುವ ಪ್ರಶ್ನೆಗಳಿಗೆ ಬರುವುದಾದರೆ, ಉತ್ತರ ನೀಡಬೇಕಾದ ಅಂಶಗಳು ಕೇವಲ ಕೆಲವೇ ಎಂದು ನಾನು ಭಾವಿಸುತ್ತೇನೆ.

ವಿಧಿ ೧೩ರ ಮೇಲೆ ಮಾಡಲಾಗಿರುವ ಸಾಮಾನ್ಯ ದಾಳಿ, ಕೇಂದ್ರೀಕೃತಗೊಂಡದ್ದು ಕಲಮು(೧)ರ ಉಪಕಲಮಿನ ಬಗೆಗೆ. ನಾನು ವಿಚಾರಿಸುವುದು, ಹೇಳಬಹುದಾದರೆ ಈ ಸಭೆಯು ಈಗ ಅದರಲ್ಲಿ ಸೇರ್ಪಡಿಸಲಾಗಿರುವ ತಿದ್ದುಪಡಿಗಳೊಂದಿಗಿನ ಈ ವಿಧಿ ಬಗೆಗೆ ಸಾಮಾನ್ಯವಾಗಿ ತೃಪ್ತಿದಾಯಕವಾಗುವ ರೀತಿಯಲ್ಲಿ ಹೊರಹೊಮ್ಮಿದೆಯೆನ್ನವ ಭಾವದ ಸ್ಥಿತಿಯಲ್ಲಿರಲಿದೆ. ವಿಧಿ ೮ರ ಮಹತ್ವದ ಬಗೆಗೆ ನನ್ನ ವಿವರಣೆ, 'ಜಾರಿಯಲ್ಲಿರುವ ಕಾನೂನು' ಈ ಪದಗಳಿಗೆ ನನ್ನ ತಿದ್ದುಪಡಿ ಮತ್ತು 'ಸಮಂಜಸ' ಈ ಪದದ ಪರಿಚಯ, ಮಾನ್ಯ ಸದಸ್ಯರುಗಳು ಈ ವಿಧಿಯ ಬಗೆಗೆ ಮಾತನಾಡಿದಾಗ ಎತ್ತಿ ತೋರಿದ ದೋಷಗಳು, ನನಗೆ ಅನಿಸಿದಂತೆ ನನ್ನ ಮಿತ್ರರುಗಳಾದ, ಪ್ರೊಫೆಸರ್ ಶಿಬ್ಬನ್ ಲಾಲ್ ಸಕ್ಸೇನಾ ಮತ್ತು ಟಿ.ಟಿ. ಕೃಷ್ಣಮಾಚಾರಿ ಮತ್ತು ಶ್ರೀ ಅಲ್ಲುರಾಯ ಶಾಸ್ತ್ರಿ ಇವರುಗಳ ಭಾಷಣಗಳು ಸಭೆಗೆ ತಿದ್ದುಪಡಿಯೊಂದಿಗೆ ಈಗಿರುವ ವಿಧಿಯನ್ನು ಒಪ್ಪಿಕೊಳ್ಳುವಲ್ಲಿ ಯಾವುದೇ ತೊಂದರೆ ಆಗಲಾರದು. ಆದುದರಿಂದ ಈ ವಿಧಿಗೆ ಪೂರಕವಾಗಿ ನನ್ನ ಮಿತ್ರರುಗಳು ಹೇಳಿರುವುದಕ್ಕೆ ನಾನು ಏನನ್ನೂ ಸೇರಿಸಲು ಇಚ್ಛಿಸುವುದಿಲ್ಲ. ವಾಸ್ತವವಾಗಿ ಈ ವಿಧಿಗೆ ಪೂರಕವಾಗಿ ಮಂಡಿಸಿದ ಭಾಷಣಗಳಲ್ಲಿಯ ವಾದಗಳಿಗೆ ಹೆಚ್ಚಿನ ಸುಧಾರಣೆ ಮಾಡಲು ನಾನು ಸಾಕಷ್ಟು ತೊಂದರೆ ಅನುಭವಿಸುವೆ.

ಆದುದರಿಂದ ನಾನು ಇತರ ಅಂಶಗಳನ್ನು ಎತ್ತಿಕೊಳ್ಳುತ್ತೇನೆ. ಅವುಗಳಲ್ಲಿ ಹೆಚ್ಚಿನವುಗಳನ್ನು ನನ್ನ ಮಿತ್ರ ಶ್ರೀ ಅನಂತಶಯನಮ್ ಅಯ್ಯಂಗಾರ್‌ರವರು ಪರಿಗಣಿಸಿರುತ್ತಾರೆ ಮತ್ತು ಮಾನ್ಯರೆ ತಾವು ನನ್ನನ್ನು

ಕರೆಯದೇ ಹೋಗಿದ್ದಲ್ಲಿ ಅವರ ಭಾಷಣವನ್ನೇ ನನ್ನ ಭಾಷಣವೆಂದು ಪರಿಗಣಿಸಬೇಕೆಂದು ಹೇಳುತ್ತಿದ್ದೆ, ಏಕೆಂದರೆ ನಾನು ಬರೆದುಕೊಂಡು ಇಟ್ಟಿರುವ ಎಲ್ಲ ಅಂಶಗಳನ್ನು ಅವರು ಉದ್ಧರಿಸಿರುತ್ತಾರೆ.

ಈಗ, ಒಂದೇ ಒಂದು ಪಾಯಿಂಟ್ ಯಾವುದನ್ನು ನಾನು ನಮೂದಿಸಿ ಕೊಂಡಿದ್ದು ನನ್ನ ಉತ್ತರದಲ್ಲಿ ತಿಳಿಸಬೇಕೆಂದಿದ್ದೆ. ಅದನ್ನೂ ಈಗಾಗಲೇ ನನ್ನ ಮಿತ್ರ ಪ್ರೊಫೆಸರ್ ಕೆ.ಟಿ.ಶಾಹ ಅವರು ವ್ಯಕ್ತಪಡಿಸಿದ್ದಾರೆ. ಅದೆಂದರೆ ಮೂಲಭೂತ ಹಕ್ಕುಗಳ ಪತ್ರಿಕೆಗಳ ಸ್ವಾತಂತ್ರ್ಯದ ಬಗೆಗೆ ತಿಳಿಸುವುದಿಲ್ಲವೆಂಬುದು. ನನ್ನ ಮಿತ್ರ ಶ್ರೀ ಅನಂತಶಯನಮ್ ಅಯ್ಯಂಗಾರ್‌ರವರು ನೀಡಿರುವ ಉತ್ತರವು, ನನ್ನ ನಿರ್ಣಯದಲ್ಲಿ ಪೂರ್ಣ ಉತ್ತರವಾಗಿದೆ. ಪತ್ರಿಕೆಯು ಕೇವಲ ಓರ್ವ ವ್ಯಕ್ತಿ ಅಥವಾ ಪೌರನ ಹೇಳಿಕೆಯ ಮತ್ತೊಂದು ವಿಧವಾಗಿದೆ. ಪ್ರೆಸ್‌ಗೆ ವಿಶೇಷ ಹಕ್ಕುಗಳಿಲ್ಲ, ಯಾವುವುಗಳನ್ನು ಕೊಡುವಂತಿಲ್ಲ ಅಥವಾ ಯಾವುವುಗಳನ್ನು ಪೌರರು ತಮ್ಮ ವೈಯಕ್ತಿಕ ಅಧಿಕಾರದಲ್ಲಿ ಬಳಸುವಂತೆ ಇಲ್ಲ. ಪ್ರೆಸ್‌ವೊಂದರ ಸಂಪಾದಕರು ಅಥವಾ ವ್ಯವಸ್ಥಾಪಕ ಎಲ್ಲರು ಪೌರರು ಮತ್ತು ಹೀಗಾಗಿ ಯಾವಾಗ ಅವರು ಸುದ್ದಿ ಪತ್ರಿಕೆಗಳಲ್ಲಿ ಬರೆಯಲು ಆಯ್ಕೆ ಮಾಡುತ್ತಾರೋ, ಆಗ ಕೇವಲ ಅವರು ತಮ್ಮ ವ್ಯಕ್ತಗೊಳಿಸುವ ಹಕ್ಕನ್ನು ಬಳಸುತ್ತಾರೆ. ಅಲ್ಲದೆ ನನ್ನ ನಿರ್ಣಯದಂತೆ ಪತ್ರಿಕಾ ಸ್ವಾತಂತ್ರ್ಯದ ಬಗೆಗೆ ವಿಶೇಷವಾಗಿ ನಮೂದಿಸುವ ಅಗತ್ಯವೇ ಇಲ್ಲ.

ಈಗ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಪ್ರಶ್ನೆಯ ಬಗೆಗೆ ನನ್ನ ಮಿತ್ರ ಶ್ರೀ ಕಾಮತ್‌ರವರು ಭೀಕರವಾಗಿ ಉದ್ರೇಕರಾಗಿದ್ದರು. ನನಗೆನಿಸಿದಂತೆ ನಾವು ತೆಗೆದುಕೊಂಡ ನಿಲುವು ಬಹಳ ಸ್ಪಷ್ಟವಾಗಿದೆ. ಇದು ಸತ್ಯವಾದದ್ದು ಮತ್ತು ಪ್ರತಿಯೊಬ್ಬರಿಗೆ ಗೊತ್ತೆ ಇದ್ದಂತೆ ಕಾಂಗ್ರೆಸ್ ಆ ಗೊತ್ತುವಳಿಗಳನ್ನು ಪಾಸುಮಾಡಿದ ಸಂದರ್ಭದಲ್ಲಿ ಇದ್ದ ಪರಿಸ್ಥಿತಿಗಳ ಸತ್ಯಾಂಶಗಳನ್ನು ಮರೆಯುವಂತಿಲ್ಲ, ಈಗ ಆ ಪರಿಸ್ಥಿತಿಗಳು ಈಗಿನವರೆಗೆ ಉಳಿದಿಲ್ಲ.

**ಶ್ರೀ ಹೆಚ್. ವಿ. ಕಾಮತ್ :** ಇದೊಂದು ನಿಪುಣವಾದ ವಾದ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಬ್ರಿಟಿಷ್ ಸರಕಾರವು ಶಾಂತಿ ಮತ್ತು ಸುವ್ಯವಸ್ಥೆಯ ಆಧಾರದ ಮೇಲಲ್ಲದೆ, ವಿದೇಶೀ ಸರಕಾರದ ವಿರುದ್ಧ ಸಂಘಟಿತಗೊಂಡು ಸರಕಾರವನ್ನು ಉರುಳಿಸದಿರಲೆಂದು ಭಾರತೀಯರಿಗೆ ಶಸ್ತ್ರಾಸ್ತ್ರಗಳನ್ನು ಹೊಂದಿರುವುದನ್ನು ತಿರಸ್ಕರಿಸಿದ್ದರು ಮತ್ತು ತತ್ಪರಿಣಾಮವಾಗಿ ಯಾವ ಆಧಾರದ ಮೇಲೆ ನಾವು ಈ ಗೊತ್ತುವಳಿಗಳನ್ನು ಪಾಸುಮಾಡಿದ್ದೇವೋ, ನನ್ನ ನಿರ್ಣಯದಲ್ಲಿ ಅವು ಇಲ್ಲವಾಗಿವೆ. ಪ್ರಸ್ತಕ ಪರಿಸ್ಥಿತಿಗಳಲ್ಲಿ, ರಾಜ್ಯದಿಂದ ಯಾವುದೇ ತಡೆ ಅಥವಾ ಅಡ್ಡಿ ಆತಂಕ ಇಲ್ಲದೆ ಪ್ರತಿಯೊಬ್ಬ ವ್ಯಕ್ತಿಯು ಮಾರುಕಟ್ಟೆಗೆ ಹೋಗಿ ದಾಳಿಯಿಡುವ ಎಲ್ಲ ಪ್ರಕಾರದ ಆಯುಧಗಳನ್ನು ಖರೀದಿಸುವ ಹಕ್ಕು ಹೊಂದಿರುವುದಾದರೆ ರಾಜ್ಯಕ್ಕೆ ಆಡಳಿತ ನಡೆಸುವುದು ಹೇಗೆ ಸಾಧ್ಯ ಎನ್ನುವುದು ನನ್ನ ವೈಯಕ್ತಿಕ ಗ್ರಹಿಕೆಯಾಗಿದೆ.

**ಶ್ರೀ ಹೆಚ್.ವಿ. ಕಾಮತ್ :** ವಿಷಯವೊಂದರ ಮೇಲೆ ಸ್ಪಷ್ಟನೆ, ಮಾನ್ಯರೆ, ಆ ಹಕ್ಕನ್ನು ಮಿತಿಗೊಳಿಸಲು ಅವಕಾಶವಿದೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಆ ಮಿತಿ ನಿರ್ದೇಶನ ಮಾಡುವುದೇನು? ಆ ಮಿತಿ ನಿರ್ದೇಶನ ಏನು ಹೇಳುತ್ತದೆ. ಮಿತಿ ನಿರ್ದೇಶನ ಮಾಡಬಹುದಾದದ್ದೇನೆಂದರೆ ನಿಯಂತ್ರಿಸುವುದು, ಮತ್ತೆ **'ಕಾನೂನು'** ಈ ಶಬ್ದವನ್ನು ನ್ಯಾಯಿಕವಾಗಿ ಸ್ಥಿತಿಗಳನ್ನು ವಿಧಿಸುವುದು ಎಂದು ಅರ್ಥೈಸಲಾಗಿದೆ, ಆದರೆ ಸ್ಥಿತಿಗಳು ಎಂದಿಗೂ ಪೌರನನ್ನು ಶಸ್ತ್ರಾಸ್ತ್ರ ಹೊಂದಿರುವ ಹಕ್ಕನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವುದಿಲ್ಲ. ಆದುದರಿಂದ ನಿಯಂತ್ರಣವು ತನ್ನಷ್ಟಕ್ಕೆ ತಾನೇ ಶಸ್ತ್ರಾಸ್ತ್ರ ಹೊಂದುವ ಹಕ್ಕನ್ನು ಬಳಸುವ ಪೌರನನ್ನು ತಡೆಯುವಂತಿರುವುದಿಲ್ಲ. ಎಲ್ಲ ಪೌರರಿಗೆ ಅಂತಹ ತಾರತಮ್ಯವಿಲ್ಲದೆ ನೀಡುವ ಯಾವುದೇ ಮೂಲಭೂತ

ಹಕ್ಕನ್ನು ನೀಡುವ ನೀತಿಯನ್ನು ನಾನು ಪ್ರಶ್ನಿಸುತ್ತೇನೆ. ಉದಾಹರಣೆಗೆ, ಶ್ರೀ ಕಾಮತ್‌ರವರ ಪ್ರಸ್ತಾಪವನ್ನು ಒಪ್ಪಿಕೊಂಡಲ್ಲಿ, ಪ್ರತಿ ಪೌರನಿಗೆ ಶಸ್ತ್ರಾಸ್ತ್ರಗಳನ್ನು ಹೊಂದುವ ಮೂಲಭೂತ ಹಕ್ಕು ಇರಬೇಕಾಗುತ್ತದೆ, ಅದು ಇಂದು ಯಾರಿಗೆ ನಾವು ಅಪರಾಧಿ ಬುಡಕಟ್ಟುಗಳು ಎನ್ನುತ್ತೇವೆಯೋ ಅಂತಹ ಸಾವಿರಾರು, ಸಾವಿರಾರು ಪೌರರಿಗೆ ಶಸ್ತ್ರಾಸ್ತ್ರಗಳನ್ನು ಧರಿಸುವ ಮುಕ್ತತೆ ಒದಗುತ್ತದೆ. ಎಲ್ಲ ಪ್ರಕಾರದ ಅಭ್ಯಾಸಗೊಂಡ ಅಪರಾಧಿಗಳಿಗೆಲ್ಲರಿಗೆ ಶಸ್ತ್ರಾಸ್ತ್ರ ಹೊಂದಿರುವ ಹಕ್ಕನ್ನು ಬಯಸುವ ಮುಕ್ತತೆ ಇರಲಿದೆ. ಆಗ ನಿಮಗೆ ವಿಧಿಯನ್ವಯ ವ್ಯಕ್ತಿಯೋರ್ವನು ವಿಶೇಷ ವರ್ಗದವನಾಗಿರುವ ಕಾರಣಕ್ಕಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿರಲು ಹಕ್ಕುಳ್ಳವನಾಗಿರಲಾರ ಎಂದು ಹೇಳಲಿಕ್ಕಾಗದು.

**ಶ್ರೀ ಹೆಚ್. ವಿ. ಕಾಮತ್ :** ಒಂದು ವೇಳೆ ಡಾ. ಅಂಬೇಡ್ಕರರು ವಿಧಿಯನ್ನು ಪೂರ್ಣವಾಗಿ ಮತ್ತು ಸ್ಪಷ್ಟವಾಗಿ ಅರಿತುಕೊಂಡಲ್ಲಿ ನನ್ನ ತಿದ್ದುಪಡಿಯಿಂದಾಗಿ ಅಂತಹ ಪರಿಣಾಮವಾಗುವುದಿಲ್ಲವೆಂಬುದನ್ನು ಕಾಣಬಹುದು.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ನಾನೀಗ ಮಣಿಯಲಾರೆ. ನನಗೀಗ ಹೆಚ್ಚು ಸಮಯ ಉಳಿದಿಲ್ಲ. ಕರಡು ಸಮಿತಿಯು ತಳೆದಿರುವ ನಿಲುವನ್ನು ನಾನು ವಿವರಿಸುತ್ತಿರುವೆ. ಅಂಶವೆಂದರೆ ಈ ಅವ್ಯವಸ್ಥಿತ ಹಕ್ಕನ್ನು ಒದಗಿಸಲು ಸಾಧ್ಯವಿಲ್ಲ. ಬದಲಿಗೆ ಶಸ್ತ್ರಾಸ್ತ್ರಗಳನ್ನು ಹೊಂದಿರುವುದಕ್ಕೆ ಸಂಬಂಧಿಸಿದಂತೆ ನನ್ನ ಅರಿಕೆ ಎಂದರೆ ಒತ್ತಾಯಿಸಬೇಕಾಗಿರುವ ಅಂಶವೆಂದರೆ ವ್ಯಕ್ತಿಯು ಶಸ್ತ್ರಾಸ್ತ್ರಗಳನ್ನು ಹೊಂದಿರುವ ಆದರೆ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಆತನ ಕರ್ತವ್ಯವನ್ನು. (ಓರ್ವ ಮಾನ್ಯ ಸದಸ್ಯ : ಕೇಳಿ, ಕೇಳಿ), ವಾಸ್ತವದಲ್ಲಿ ತುರ್ತುಪರಿಸ್ಥಿತಿ ಉಂಟಾದಾಗ ನಾವು ಭದ್ರಪಡಿಸಬೇಕಾದ್ದೇನೆಂದರೆ, ಯಾವಾಗ ಯುದ್ಧ ನಡೆಯುತ್ತದೆಯೋ, ದಂಗೆಯೇಳುತ್ತದೆಯೋ, ಯಾವಾಗ ರಾಜ್ಯದ ಸ್ಥಿರತೆ ಮತ್ತು ಸುರಕ್ಷೆ ಧಕ್ಕೆಗೊಳಗಾಗುತ್ತದೆಯೋ, ಆಗ ರಾಜ್ಯದ ರಕ್ಷಣೆಯ ದೃಷ್ಟಿಯಿಂದ ಪ್ರತಿ ಪೌರನಿಗೆ ಶಸ್ತ್ರಾಸ್ತ್ರಗಳನ್ನು ಧರಿಸಲು ಕರೆ ನೀಡುವ ಹಕ್ಕನ್ನು ರಾಜ್ಯ ಹೊಂದಿರಬೇಕು. ನಾವು ಪರಿಚಯಿಸಬೇಕಾದದ್ದು ಆ ಪ್ರಸ್ತಾವನೆಯನ್ನು ಮತ್ತು ಅದೇ ಸ್ಥಿತಿಯನ್ನು. ನಾವು ವಿಧಿ ೧೭ಕ್ಕೆ ವಿಧಿಜೋಡಿಸಿ ಸಂಪೂರ್ಣವಾಗಿ ಸುರಕ್ಷಿತಗೊಳಿಸಿರುತ್ತೇವೆ.

**ಶ್ರೀ ಹೆಚ್.ವಿ. ಕಾಮತ್ :** (ತಡೆಯಲು ಎದ್ದು ನಿಂತದ್ದು) ಉಪಸಭಾಪತಿ.

**ಉಪಸಭಾಪತಿ :** ಶ್ರೀ ಕಾಮತರೆ ನೀವು ತಡೆಯಬೇಡಿ, ನಾನು ನಿಮಗೆ ಪೂರ್ಣ ಅವಕಾಶ ನೀಡಿಲ್ಲವೆಂದು ನೀವು ಹೇಳುವಂತಿಲ್ಲ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ವೈಯಕ್ತಿಕ ಕಾನೂನಿನ ಉಳಿಸುವಿಕೆಯ ಪ್ರಶ್ನೆಗೆ ಬರುವುದಾದರೆ, ನನಗೆ ಅನಿಸುವುದೇನೆಂದರೆ ಈ ವಿಷಯವನ್ನು ಸಂವಿಧಾನದ ನೀತಿ ನಿರ್ದೇಶಕ ತತ್ವ ರಾಜ್ಯವು ಏಕರೂಪದ ನಾಗರಿಕ ಸಂಹಿತೆಗಾಗಿ ರಾಜ್ಯವು ಸಂಬಂಧಿತವಾಗಿರುವ ನಾವು ಪರಿಪೂರ್ಣವಾಗಿ ಮತ್ತು ಸಾಕಷ್ಟು ಚರ್ಚಿಸಿರುತ್ತೇವೆ ಅಲ್ಲದೆ ವಾದಿಸಿರುತ್ತೇವೆ. ಹೀಗಾಗಿ ಆ ಬಗೆಗಿನ ಹೆಚ್ಚಿನ ಉಲ್ಲೇಖನದ ಅಗತ್ಯವಿದೆಯೆಂದು ನನಗೆ ಅನಿಸುವುದಿಲ್ಲ. ಆದರೆ ಅಂತಹ ಒಂದು ಕಾಪುಷರತ್ತನ್ನು ಸಂವಿಧಾನದಲ್ಲಿ ಸೇರಿಸಿದುದಾದರೆ ಅದು ಭಾರತದ ಶಾಸಕಾಂಗಗಳಿಗೆ ಯಾವುದೇ ಸಾಮಾಜಿಕ ಕ್ರಮಮಾನವನ್ನು ರಚಿಸುವಿಕೆಯಿಂದ ಊನಗೊಳಿಸುವುದೆಂದು ನಾನು ಹೇಳಲಿಚ್ಛಿಸುತ್ತೇನೆ. ಈ ದೇಶದಲ್ಲಿ ಧಾರ್ಮಿಕ ಪರಿಕಲ್ಪನೆಗಳು ಎಷ್ಟೊಂದು ವಿಸ್ತಾರವಾಗಿವೆಯೆಂದರೆ ಅವು ಹುಟ್ಟಿನಿಂದ ಸಾವಿನವರೆಗಿನ ಜೀವನದ ಎಲ್ಲ ದೃಷ್ಟಿಗಳನ್ನು ಒಳಗೊಂಡಿದೆ. ಧರ್ಮವಲ್ಲದ್ದು ಯಾವುದೂ ಇಲ್ಲ, ಅಲ್ಲದೆ ವೈಯಕ್ತಿಕ ಕಾನೂನನ್ನು ಉಳಿಸುವುದಾದರೆ, ಸಾಮಾಜಿಕ ವಿಷಯಗಳಲ್ಲಿ ನಾವು ನಿಲುಗಡೆಯ ಸ್ಥಿತಿಗೆ ಬರುತ್ತೇವೆ ಎನ್ನುವುದು ನನ್ನ

ಮಟ್ಟಿಗೆ ಖಚಿತ. ಅಂತಹ ಮಟ್ಟಿನ ಸ್ಥಿತಿಯೊಂದನ್ನು ಒಪ್ಪಿಕೊಳ್ಳಲು ಸಾಧ್ಯವೆಂದು ನಾನು ಬಗೆಯಲಾರೆ. ಇನ್ನು ಮುಂದೆ ನಾವು ಧರ್ಮದ ವ್ಯಾಖ್ಯೆಯನ್ನು ಮೂಲತಃ ಧಾರ್ಮಿಕವಾಗಿರುವ ನಂಬಿಕೆಗಳು ಮತ್ತು ಸಮಾರಂಭಯುತ ಕಾರ್ಯಾಚರಣೆಗಳಿಗೆ ಮೀರದಂತಹ ಅಂಶಗಳಿಗೆ ಮಿತಿಗೊಳಿಸಲೆತ್ನಿಸಬೇಕೆಂದು ಹೇಳುವಾಗ ಸಾಮಾನ್ಯಕ್ಕಿಂತಲು ಮೀರಿದ್ದಾಗಿರುವುದಿಲ್ಲ. ಕಾನೂನುಗಳನ್ನು ಉದಾಹರಿಸುವುದಾದರೆ ಗೇಣಿದಾರಿಕೆ ಅಥವಾ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಕಾನೂನುಗಳು ಧರ್ಮದಿಂದ ನಡೆಸಲ್ಪಡುವ ಅಗತ್ಯವಿರುವುದಿಲ್ಲ. ಯೂರೋಪಿನಲ್ಲಿ ಕ್ರೈಸ್ತಧರ್ಮವಿದೆ ಆದರೆ ಕ್ರೈಸ್ತಧರ್ಮವೆಂದರೆ ಜಗತ್ತಿನಲ್ಲಿ ಹರಡಿರುವ ಅಥವಾ ಯೂರೋಪಿನ ಯಾವುದೇ ಭಾಗದಲ್ಲಿ ವಾಸಿಸುವ ಕ್ರಿಶ್ಚಿಯನ್ನರು ಏಕರೂಪದ ಪಿತ್ರಾರ್ಜಿತ ಕಾನೂನು ವ್ಯವಸ್ಥೆ ಹೊಂದಿರಬೇಕಾದ ಅಗತ್ಯವೇನಿಲ್ಲ. ಅಂತಹ ಯಾವುದೇ ವ್ಯವಸ್ಥೆ ಜಾರಿಗತವಾಗಿಲ್ಲ. ಪೂರ್ಣಜೀವನಕ್ಕೆ ವ್ಯಾಪಿಸುವ ಅಷ್ಟೊಂದು ವಿಶಾಲ ವ್ಯಾಪ್ತಿಯನ್ನು ಅದೇಕೆ ಕೊಡಬೇಕೋ ಮತ್ತು ಶಾಸಕಾಂಗಕ್ಕೆ ಆ ಕ್ಷೇತ್ರಕ್ಕೆ ವಿಸ್ತರಿಸುವಿಕೆಯಿಂದೇಕೆ ತಡೆಯಬೇಕೋ ವೈಯಕ್ತಿಕವಾಗಿ ತಿಳಿಯದು. ನಾವು ಸ್ವಾತಂತ್ರ್ಯವನ್ನು ಹೊಂದಿರುವುದಾದರೂ ಏಕೆ? ನಾವು ಈ ಸ್ವಾತಂತ್ರ್ಯವನ್ನು ಹೊಂದಿರುವುದು ಪಕ್ಷಪಾತ, ಅಸಮಾನತೆ, ಭೇದ ಇವೇ ಮುಂತಾದವುಗಳಿಂದ ಕೂಡಿರುವ ನಮ್ಮ ಮೂಲಭೂತ ಹಕ್ಕುಗಳೊಂದಿಗೆ ಸಂಘರ್ಷಿಸುವ ಸಾಮಾಜಿಕ ವ್ಯವಸ್ಥೆಯನ್ನು ಸುಧಾರಿಸಲು. ಆದುದರಿಂದ ವೈಯಕ್ತಿಕ ಕಾನೂನನ್ನು ರಾಜ್ಯದ ವ್ಯಾಪ್ತಿಯಿಂದ ಹೊರತು ಪಡಿಸುವುದು ಯಾರಿಗೇ ಆಗಲಿ ಗ್ರಹಿಕೆ ಮಾಡುವುದು ಸಾಧ್ಯವಾಗದ್ದು. ಅದನ್ನು ಹೇಳಿಯಾದ ಮೇಲೆ, ನಾನು ಎತ್ತಿ ತೋರಿಸುವುದೇನೆಂದರೆ ರಾಜ್ಯವು ಈ ವಿಷಯದಲ್ಲಿ ವಿಧೇಯಕ ಮಾಡುವ ಹಕ್ಕನ್ನು ಕೋರುತ್ತದೆ. ವೈಯಕ್ತಿಕ ಕಾನೂನುಗಳಿಂದ ದೂರ ಇರಬೇಕಾದ ಹೊಣೆ ರಾಜ್ಯದ ಮೇಲೆ ಇರುವುದಿಲ್ಲ. ಅದು ಕೇವಲ ಅಧಿಕಾರವೊಂದನ್ನು ನೀಡುವುದು. ಆದುದರಿಂದ, ರಾಜ್ಯವು ಅಧಿಕಾರ ಹೊಂದಿದ ಮಾತ್ರಕ್ಕೆ ಅದು ಕೂಡಲೆ ಮುಸ್ಲಿಮರಿಗಾಗಲಿ, ಅಥವಾ ಕ್ರಿಶ್ಚಿಯನ್‌ರಿಗಾಗಲಿ ಇಲ್ಲವೆ ಮತ್ತಾವುದೇ ಭಾರತದಲ್ಲಿಯ ಸಮುದಾಯಕ್ಕಾಗಲಿ ಆಕ್ಷೇಪಣೆ ಎಂದೆನಿಸಬಹುದಾದ ವಿಧದಲ್ಲಿ ಕೂಡಲೆ ಕಾರ್ಯಗತ ಇಲ್ಲವೆ ಜಾರಿಗೊಳಿಸುವುದೆಂಬ ಶಂಕೆ ಯಾರೂ ತಳೆಯಬೇಕಾದ ಅಗತ್ಯವಿಲ್ಲ.

ಈ ವಿಷಯದ ಮೇಲೆ ಮಾತನಾಡಿರುವ ಮುಸ್ಲಿಂ ಸಮುದಾಯದ ಸದಸ್ಯರುಗಳು ಸೇರಿದಂತೆ – ನಾವೆಲ್ಲ ನೆನಪಿಡತಕ್ಕದ್ದೇನೆಂದರೆ ನಾವು ಅವರ ಭಾವನೆಗಳನ್ನು ಪ್ರಶಂಸಿಸಬೇಕು. ನೀವು ಯಾರೂ ಸಾರ್ವಭೌಮತ್ವವು ಅಸೀಮಿತ ಎಂದು ವಾದಿಸಿದಾಗ್ಯೂ ಅದು ಎಂದಿಗೂ ಸೀಮಿತವೇ – ಏಕೆಂದರೆ ಸಾರ್ವಭೌಮತ್ವ ಅಧಿಕಾರ ಬಳಸುವಾಗ ವಿವಿಧ ಸಮುದಾಯಗಳ ಭಾವನೆಗಳಿಗೆ ಸಮಾಧಾನಪಡಿಸಬೇಕಾಗುತ್ತದೆ. ಯಾವ ಸರಕಾರವೂ ಮುಸ್ಲಿಂ ಸಮುದಾಯಕ್ಕೆ ದಂಗೆಯೇಳುವಷ್ಟರ ಮಟ್ಟಕ್ಕೆ ಪ್ರಚೋದನೆಗೊಳಿಸುವ ಮಟ್ಟಿಗೆ ತನ್ನ ಅಧಿಕಾರ ಬಳಸುವಂತಿಲ್ಲ. ಅದು ಹಾಗೆ ಮಾಡಿದ್ದೇ ಆದರೆ ಅದು ಹುಚ್ಚು ಸರಕಾರವಾಗಿರುತ್ತದೆ ಎಂದು ನನ್ನ ವಿಚಾರ. ಆದರೆ ಅದು ಅಧಿಕಾರಕ್ಕೆ ಸಂಬಂಧಿಸಿದ ವಿಷಯವಾಗಿರದೆ ಅಧಿಕಾರದ ಚಲಾವಣೆಗೆ ಸಂಬಂಧಿತವಾದದ್ದಾಗಿರುತ್ತದೆ.

ಮಾನ್ಯರೆ, ಈಗ ನನ್ನ ಮಿತ್ರ, ಶ್ರೀ ಜಯಪಾಲಸಿಂಗ್‌ರು ಆದಿವಾಸಿಗಳ ಬಗೆಗೆ ಕೆಲ ಪ್ರಶ್ನೆಗಳನ್ನು ಕೇಳಿರುತ್ತಾರೆ. ಆ ಪ್ರಶ್ನೆಯನ್ನು ನಾವು ಐದನೇ ಮತ್ತು ಆರನೇ ಪರಿಶಿಷ್ಟಗಳ ಚರ್ಚೆಮಾಡುತ್ತಿದ್ದಾಗ ಸೂಕ್ತವಾಗಿ ಎತ್ತಿರಬಹುದಾಗಿತ್ತೆಂದು ನನಗೆ ಅನಿಸುತ್ತದೆ, ಆದರೆ ಅವರಿಗೆ ತೋಚಿದ ಕೆಲ ತೊಂದರೆಗಳನ್ನು ವಿವರಿಸಲು ಅವರು ನನಗೆ ವಿಶೇಷವಾಗಿ ಕೇಳಿರುತ್ತಾರೆ. ಈ ಹಂತದಲ್ಲಿ ನಾನು ಈ ವಿಷಯಗಳನ್ನು ವಿವರಿಸುತ್ತೇನೆ. ಆದಿವಾಸಿಗಳಿಗೆ ಸಂಬಂಧಿಸಿದಂತೆ ನಾವು ಕರಡು ಸಂವಿಧಾನದಲ್ಲಿ ತಳೆದಿರುವ ನಿಲುವನ್ನು

ಈ ಸಭೆ ಅರ್ಥಮಾಡಿಕೊಳ್ಳುತ್ತದೆ. ನಾವು ಎರಡು ಪ್ರಕಾರದ ಕ್ಷೇತ್ರಗಳನ್ನು ಹೊಂದಿದ್ದೇವೆ – ಪರಿಶಿಷ್ಟ ಪ್ರದೇಶಗಳು ಮತ್ತು ಟ್ರೈಬಲ್/ಬುಡಕಟ್ಟಿನ ಪ್ರದೇಶಗಳು. ಬುಡಕಟ್ಟು ಪ್ರದೇಶಗಳು ಕೇವಲ ಅಸ್ಸಾಮ ಪ್ರಾಂತಕ್ಕೆ ಮಾತ್ರ ಸಂಬಂಧಿತವಾದುವುಗಳು. ಆದರೆ ಪರಿಶಿಷ್ಟ ಪ್ರದೇಶಗಳು ಅಸ್ಸಾಮ ಹೊರತಾದ ಪ್ರಾಂತಗಳಲ್ಲಿ ಹಂಚಿಹೋಗಿವೆ. ವಾಸ್ತವದಲ್ಲಿ ಭಾರತ ಸರಕಾರ ಕಾಯಿದೆಯಲ್ಲಿ ನಾವು ಬಳಸುತ್ತಿದ್ದ 'ಆಂಶಿಕವಾಗಿ ಬೇರ್ಪಡಿಸಲ್ಪಟ್ಟ ಪ್ರದೇಶಗಳು' ಇದಕ್ಕೆ ಮತ್ತೊಂದು ಬೇರೆ ಹೆಸರು. ಅದರ ಹೊರತಾಗಿ ಮತ್ತೇನಿಲ್ಲ. ಈಗ ಪರಿಶಿಷ್ಟ ಜನಾಂಗಗಳು ಎರಡರಲ್ಲೂ ಅಂದರೆ ಪರಿಶಿಷ್ಟ ಪ್ರದೇಶಗಳಲ್ಲಿ ಹಾಗೂ ಬುಡಕಟ್ಟಿನ ಪ್ರದೇಶಗಳಲ್ಲಿ ವಾಸಿಸುತ್ತವೆ ಮತ್ತು ಪರಿಶಿಷ್ಟ ಪ್ರದೇಶದ ಪರಿಶಿಷ್ಟ ಜನಾಂಗ ಹಾಗೂ ಬುಡಕಟ್ಟು ಪ್ರದೇಶದ ಬುಡಕಟ್ಟಿನ ಜನಾಂಗ ಇವರುಗಳು ನಡುವಣ ಅಂತರ ಇರುವುದು. ಪರಿಶಿಷ್ಟ ಪ್ರದೇಶದಲ್ಲಿಯ ಪರಿಶಿಷ್ಟ ಜನಾಂಗದವರು ಐದನೇ ಪರಿಶಿಷ್ಟದಲ್ಲಿಯ ಲೇಖಪರಿಚ್ಛೇದ Vರ ಉಪಬಂಧಗಳಿಂದ ಶಾಸನಕ್ಕೆ ಒಳಗಾಗುವರು. ಆ ಪರಿಶಿಷ್ಟದ ಪ್ರಕಾರ, ಪಾರ್ಲಿಮೆಂಟಿನಿಂದಾಗಲಿ ಅಥವಾ ಸ್ಥಳೀಯ ಶಾಸಕಾಂಗದಿಂದಾಗಲಿ ಪಾಸಾದ ಸಾಮಾನ್ಯ ಕಾನೂನು, ಗವರ್ನರನಿಂದ ಆ ಕಾನೂನು ಯಾ ಕಾನೂನಿನ ಭಾಗವು ಅನ್ವಯಿಸುವುದಿಲ್ಲವೆಂದು ಘೋಷಿಸಿದ ಹೊರತು, ಸ್ವಯಂಚಾಲಿತವಾಗಿ ಅನ್ವಯಿಸುತ್ತದೆ. ಟ್ರೈಬಲ್ ಏರಿಯಾದಲ್ಲಿಯ ಪರಿಶಿಷ್ಟ ಜನಾಂಗದವರಿಗೆ ಸಂಬಂಧಿಸಿದಂತೆ ಸ್ಥಿತಿಯು ಸ್ವಲ್ಪ ಭಿನ್ನವಾದದ್ದಾಗಿದೆ. ಆ ಸಂದರ್ಭದಲ್ಲಿ ಪಾರ್ಲಿಮೆಂಟಿನಿಂದ ಇಲ್ಲವೇ ಅಸ್ಸಾಮದ ಸ್ಥಳೀಯ ಶಾಸಕಾಂಗದಿಂದ ಮಾಡಲ್ಪಟ್ಟ ಕಾನೂನು ಗವರ್ನರನು ಆ ಕಾನೂನನ್ನು ಬುಡಕಟ್ಟಿನ ಪ್ರದೇಶಕ್ಕೆ ವಿಸ್ತರಿಸದ ಹೊರತು ಅನ್ವಯಿಸುವುದಿಲ್ಲ. ಒಂದು ಸಂದರ್ಭದಲ್ಲಿ ಪ್ರತ್ಯೇಕಿಸದ ಹೊರತು ಅದು ಅನ್ವಯಿಸುತ್ತದೆ. ಮತ್ತೊಂದು ಸಂದರ್ಭದಲ್ಲಿ ವಿಸ್ತರಿಸದ ಹೊರತು ಅದು ಅನ್ವಯಿಸುವುದಿಲ್ಲ. ಇರುವ ಸ್ಥಿತಿ ಅದಾಗಿದೆ.

ಈಗ ಪರಿಶಿಷ್ಟ ಜನಾಂಗಗಳ ಪ್ರಶ್ನೆಗೆ ಬರುವುದಾದರೆ, ಮತ್ತೆ "ಆದಿವಾಸಿ" ಶಬ್ದಕ್ಕೆ ಬದಲಾಗಿ ನಾನೇಕೆ 'ಪರಿಶಿಷ್ಟ' ಪದ ಬಳಸಿರುವೆ ಎನ್ನುವುದಕ್ಕೆ ವಿವರಣೆ ಹೀಗಿದೆ. ನಾನು ಹೇಳಿದಂತೆ "ಪರಿಶಿಷ್ಟ ಜನಾಂಗ' ಪದಕ್ಕೆ ನಿಗದಿತ ಅರ್ಥವಿದೆ. ಏಕೆಂದರೆ ಅದು ಎರಡು ಪರಿಶಿಷ್ಟಗಳಲ್ಲಿ ನೀವು ಕಾಣುವಂತೆ ಅದು ಜನಾಂಗಗಳನ್ನು ಗಣಿಸುತ್ತದೆ. ಸರಿ, "ಆದಿವಾಸಿ" ಪದವು ನಿಜಕ್ಕೂ ಸಾಮಾನ್ಯ ಪದವಾಗಿದ್ದು, ಖಚಿತ ಕಾನೂನಾತ್ಮಕ ಅರ್ಥಹೊಂದಿರುವುದಿಲ್ಲ, 'ಅಸ್ಪೃಶ್ಯ' ಪದದಂತೆ ಇದೊಂದು ಸಾಮಾನ್ಯ ಪದವಾಗಿದೆ. 'ಅಸ್ಪೃಶ್ಯ' ಪದದಲ್ಲಿ ಯಾರು ಯಾರನ್ನೂ ಸೇರಿಸಬಹುದಾಗಿದೆ. ಅದಕ್ಕೆ ಖಚಿತವಾದ ಕಾನೂನಾತ್ಮಕ ಅರ್ಥವಿಲ್ಲ. ಅದೇ ಕಾರಣದಿಂದಾಗಿ ೧೯೩೫ರ ಭಾರತ ಸರಕಾರ ಕಾಯಿದೆಯಲ್ಲಿ 'ಅಸ್ಪೃಶ್ಯ' ಪದಕ್ಕೆ ಕಾನೂನಾತ್ಮಕ ಅರ್ಥ ನೀಡುವ ಅಗತ್ಯತೆ ಅನುಭವಿಸಲಾಗಿ ಅದಕ್ಕೆ ತೋಚಿದ ಒಂದೇ ದಾರಿ ಎಂದರೆ ವಿವಿಧ ಭಾಗಗಳಿಂದ ಮತ್ತು ಸ್ಥಳಗಳಿಂದ ಜನರ ಪರೀಕ್ಷೆಗೆ ತೃಪ್ತಿದಾಯಕವಾಗುವಂತಹ ರೀತಿಯಲ್ಲಿ ಸಮುದಾಯಗಳನ್ನು ಎಣಿಕೆಮಾಡುವುದು.

ಆದಿವಾಸಿಗಳಿಗೆ ಸಂಬಂಧಿಸಿದಂತೆ ಅದೇ ಪ್ರಶ್ನೆ ಉದ್ಭವಿಸಬಹುದು. ಆದಿವಾಸಿಗಳು ಯಾರು? ಮತ್ತು ಆ ಪ್ರಶ್ನೆ ಪ್ರಸಂಗೋಚಿತವಾದದ್ದು. ಏಕೆಂದರೆ ಈ ಸಂವಿಧಾನದ ಮೂಲಕ ಕೆಲ ವಿಶೇಷ ಅಧಿಕಾರಗಳನ್ನು ಮತ್ತು ಹಕ್ಕುಗಳನ್ನು ಈ ಆದಿವಾಸಿಗಳಿಗೆ ಒದಗಿಸುತ್ತಿದ್ದೇವೆ. ಆ ಕಾರಣಕ್ಕಾಗಿ, ಸದಸ್ಯನೋರ್ವನನ್ನು ಕಾನೂನಿನ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋದಲ್ಲಿ, ಆದಿವಾಸಿ ಯಾರೆಂಬುದರ ಬಗೆಗೆ ನಿಖರವಾದ ವ್ಯಾಖ್ಯೆ ಇರತಕ್ಕದ್ದಾದ್ದರಿಂದ ಮತ್ತೊಂದು ಪ್ರಕಾರ ಅಥವಾ ಮತ್ತೊಂದು 'ಪರಿಶಿಷ್ಟ ಜನಾಂಗ' ಎಂಬ ಮತ್ತೊಂದು ಪದವನ್ನು ಯಾವ ಪಟ್ಟಿಯಲ್ಲಿ ಆದಿವಾಸಿಗಳನ್ನು ಗಣಿಸಬಹುದೋ ಶೋಧಿಸಲಾಯಿತು.

ಈಗ ನಾನು ವಿಚಾರಿಸುವಂತೆ ನನ್ನ ಮಿತ್ರ ಜಯಪಾಲಸಿಂಗ್‌ರು ಆದಿವಾಸಿಗಳೆಂದು ಸಾಮಾನ್ಯವಾಗಿ ವಿವರಿಸಿರುವ ಅನೇಕ ಸಮುದಾಯಗಳನ್ನು ಅವರು ತೆಗೆದುಕೊಂಡು ಪರಿಶಿಷ್ಟ ಜನಾಂಗದ ಪಟ್ಟಿಯಲ್ಲಿರುವ ಸಮುದಾಯಗಳೊಂದಿಗೆ ಹೋಲಿಸಿದಲ್ಲಿ ಅವರು ಕಾಣುವುದೇನೆಂದರೆ ಸಾಮಾನ್ಯವಾಗಿ ಆದಿವಾಸಿಯೆಂದು ಪರಿಗಣಿಸಿದ ಯಾವುದೇ ಸಮುದಾಯ ಪರಿಶಿಷ್ಟದಲ್ಲಿ ಸೇರಿಸದಿರುವುದನ್ನು. ನನ್ನ ವಿಚಾರದಲ್ಲಿ, ಅಲ್ಲಿ ಇಲ್ಲಿ ತಪ್ಪೇನಾದರು ಆಗಿದ್ದಿರಬಹುದು ಮತ್ತು ಆದಿವಾಸಿಯಾಗಿರದ ಸಮುದಾಯ ಸೇರಿಸಿದ್ದಿರಬಹುದು. ನಿಜವಾಗಿಯೂ ಆದಿವಾಸಿ ಸಮುದಾಯವಾಗಿದ್ದಿದ್ದನ್ನು ಸೇರಿಸದೇ ಇದ್ದಿರಬಹುದು. ಆದರೆ ಒಂದು ವೇಳೆ ಇದುವರೆಗೆ ಯಾವೊಂದು ಸಮುದಾಯವನ್ನು ಆದಿವಾಸಿ ಸಮುದಾಯ ಎಂದು ಬಗೆಯುತ್ತ ಬಂದಿದ್ದುದನ್ನು ಪರಿಶಿಷ್ಟ ಜನಾಂಗದ ಪಟ್ಟಿಯಲ್ಲಿ ಸೇರಿಸಿಲ್ಲ. ಕರಡು ಸಂವಿಧಾನದಲ್ಲಿ ನಾವು ತಿದ್ದುಪಡಿಯೊಂದನ್ನು ಯಾವುದರ ಮೂಲಕ ಸ್ಥಳೀಯ ಸರಕಾರವೊಂದಕ್ಕೆ ಪ್ರಕಟಣೆ ಹೊರಡಿಸುವುದರ ಮೂಲಕ ಯಾವೊಂದು ಸಮುದಾಯವನ್ನು ಇದುವರೆಗೆ ಸೇರ್ಪಡೆಯಾಗದೆ ಇದ್ದಲ್ಲಿ ಪರಿಶಿಷ್ಟ ಜನಾಂಗದ ಪಟ್ಟಿಗೆ ಸೇರಿಸಲು ಅನುಮತಿಸುವ ಅವಕಾಶ ಮಾಡಿ ಸೇರಿಸಿರುವುದನ್ನು ಕಾಣಬಹುದಾಗಿದೆ. ಶ್ರೀ ಜಯಪಾಲಸಿಂಗ್‌ರಿಗೆ ಅದು ಸಮಾಧಾನ ಕೊಡುವುದೆಂದು ನಾನು ಭಾವಿಸುವೆ.

ಅವರು ನನಗೆ ಕೇಳಿರುವ ಮತ್ತೊಂದು ಪ್ರಶ್ನೆ ಇದು. ಪರಿಶಿಷ್ಟ ಜನಾಂಗದ ಸದಸ್ಯನೋರ್ವನು ಪರಿಶಿಷ್ಟ ಸ್ಥಳದಲ್ಲಿ ವಾಸಿಸುತ್ತಿರುವೆನೆಂದಾದರೆ ಅಥವಾ ಪರಿಶಿಷ್ಟ ಜನಾಂಗದ ಸದಸ್ಯನೋರ್ವನು ಆದಿವಾಸಿ ಏರಿಯಾದ ವಾಸಿಯಾಗಿದ್ದು ಪರಿಶಿಷ್ಟ ಏರಿಯಾ ಮತ್ತು ಆದಿವಾಸಿ ಏರಿಯಾ ಎರಡರಿಂದ ಹೊರಗೆ ಇರುವ ಭಾರತದ ಮತ್ತಾವುದೇ ಭೂ ಪ್ರದೇಶಕ್ಕೆ ವಲಸೆ ಹೋದನೆಂದು ಊಹಿಸುವುದಾದರೆ ಆತನು ವಾಸಿಸುವ ವ್ಯಾಪ್ತಿಗೆ ಬರುವ ಅಲ್ಲಿಯ ಸ್ಥಳೀಯ ಸರಕಾರದಿಂದ ಅವೇ ವಿಶೇಷ ಅಧಿಕಾರಗಳನ್ನು ಮೊದಲಿನಂತೆ ಪಡೆಯಲು ಸಾಧ್ಯವೆ? ಎನ್ನುವುದು. ಇದೊಂದು ಉತ್ತರಿಸಲು ಕಷ್ಟಕರವಾದ ಪ್ರಶ್ನೆ. ಈ ವಿಷಯದ ಮೇಲೆ ನಿರ್ಣಯ ಆಗುವ ಕಡೆ ಈ ವಿಷಯದ ಬಗೆಗೆ ತೀವ್ರ ವಾದ ನಡೆದಲ್ಲಿ ಸಂವಿಧಾನದಲ್ಲಿ ಕಲಮು ಒಂದರ ರೂಪದಲ್ಲಿ ಈ ಪ್ರಶ್ನೆಗೆ ಖಚಿತವಾಗಿ ಉತ್ತರಿಸಲು ನಾವು ಶಕ್ತರಾಗಿರುವೆವು. ಆದರೆ, ಪ್ರಸಕ್ತ ಸಂವಿಧಾನದ ನಿಲುವಿನಂತೆ, ಪರಿಶಿಷ್ಟ ಪ್ರದೇಶ ಅಥವಾ ಪರಿಶಿಷ್ಟ ಪ್ರದೇಶದಿಂದ ಯಾವುದೇ ಪರಿಶಿಷ್ಟ ಬುಡಕಟ್ಟಿನ ಸದಸ್ಯನು ಹೊರಗೆ ಹೋದಲ್ಲಿ ಪರಿಶಿಷ್ಟ ಪ್ರದೇಶ ಅಥವಾ ಬುಡಕಟ್ಟಿನ ಪ್ರದೇಶದಲ್ಲಿ ಅನುಭವಿಸಲು ಹಕ್ಕು ಹೊಂದಿದ್ದ ವಿಶೇಷ ಅಧಿಕಾರಗಳನ್ನು ಖಚಿತವಾಗಿಯೂ ಹೊಂದಿರಲಾರ. ನಾನು ಕಾಣುವಂತೆ, ವ್ಯವಹಾರಿಕವಾಗಿ ಬುಡಕಟ್ಟು ಪ್ರದೇಶ ಅಥವಾ ಪರಿಶಿಷ್ಟ ಪ್ರದೇಶಗಳಿಗೆ ಅನ್ವಯಿಸುವ ಅವಕಾಶವನ್ನು ಅವುಗಳ ವ್ಯಾಪ್ತಿಯ ಹೊರಗೆ ಬರುವ ಪ್ರದೇಶಗಳಲ್ಲಿ ಜಾರಿಗತಗೊಳಿಸುವುದು ಸಾಧ್ಯವಿಲ್ಲ.

ಮಾನ್ಯರೆ, ಈ ವಾಕ್ಯಾಂಗಕ್ಕೆ ತಿದ್ದುಪಡಿ ಕುರಿತು ಮಾತನಾಡುವಾಗ ವಿವಿಧ ವಕ್ತಾರರು ಎತ್ತಿದ ಎಲ್ಲ ಅಂಶಗಳಿಗೆ ನಾನು ಉತ್ತರಿಸಿರುವೆನೆಂದು ನಾನು ಆಶಿಸುತ್ತೇನೆ ಮತ್ತು ಅವರು ಎತ್ತಿರುವ ಎಲ್ಲ ಅಂಶಗಳಿಗೆ ನಾನು ನೀಡಿರುವ ವಿವರಣೆ ಅವರಿಗೆ ಸಮಾಧಾನ ನೀಡುತ್ತದೆ ಎಂದು ನಂಬುವೆ. ತಿದ್ದುಪಡಿಗೊಳಿಸಿರುವಂತೆ ಈ ವಿಧಿ ಸಭೆಯಿಂದ ಮನ್ನಣೆಗೊಳ್ಳಲಿದೆ ಎಂಬ ಆಶಯ ನನ್ನದು.

**ಉಪಸಭಾಪತಿ :** ಮಂಡಿಸಿದ ಸಂಖ್ಯೆಯಲ್ಲಿ ಮೂವತ್ತು ಆಗಿರುವ ತಿದ್ದುಪಡಿಗಳನ್ನು, ಒಂದಾದ ಮೇಲೆ ಒಂದರಂತೆ ನಾನೀಗ ಮತಕ್ಕೆ ಇಡುತ್ತೇನೆ.

(ಮುಂದೆ ಕಾಣಿಸಿರುವ ತಿದ್ದುಪಡಿಗಳನ್ನು ಡಾ.ಅಂಬೇಡ್ಕರ್‌ರಿಂದ ಒಪ್ಪಿಕೊಳ್ಳಲ್ಪಟ್ಟವು ಮತ್ತು ಸಭೆಯಿಂದ ಸ್ವೀಕೃತಗೊಂಡವು. ಉಳಿದ ೨೮ ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು).

(i) "ವಿಧಿ ೧೩ರ ಕಲಮು (೧)ರಲ್ಲಿಯ ಶಬ್ದಗಳಾದ ಈ ವಿಧಿಯ ಇತರ ಷರತ್ತುಗಳಿಗೆ ಬದ್ಧವಾಗಿರುವಂತೆ" ಇವುಗಳನ್ನು ತೆಗೆದು ಹಾಕುವುದು.

(ii) ವಿಧಿ ೧೩ರ ಕಲಮು (೨) ಕ್ಕೆ ಬದಲಾಗಿ ಈ ಕೆಳಗಿನದನ್ನು ಸೇರಿಸುವುದು:–

"(೨) ಈ ವಿಧಿಯ ಕಲಮು (೧)ರ ಉಪಕಲಮು (ಎ)ನಲ್ಲಿಯ ಯಾವುದು, ರಾಜ್ಯಕ್ಕೆ ಮಾನನಷ್ಟ ನಿಂದನೆ, ಮಾನಹಾನಿ ಅಥವಾ ಯಾವುದೇ ವಿಷಯ ಯಾವುದು ಘನತೆ ಅಥವಾ ನೈತಿಕತೆ ಅಥವಾ ಸುರಕ್ಷೆ ಕುಂದಿಸುವ ಅಥವಾ ಉರುಳಿಸುವುದಕ್ಕೆ ಕಾರಣವಾಗುವ ಇವುಗಳಿಗೆ ಸಂಬಂಧಿಸಿದಂತೆ ರಾಜ್ಯ ಕಾನೂನು ಮಾಡುವುದರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

(iii) ತಿದ್ದುಪಡಿಗಳ ಪಟ್ಟಿಯ ತಿದ್ದುಪಡಿ ನಂ. ೪೫೪ಕ್ಕೆ ಸಂಬಂಧಿಸಿದಂತೆ (i) ವಿಧಿ ೧೩ರ (i) ಕಲಮುಗಳಾದ (ಇ), (೪), (೫) ಮತ್ತು (೬) ಇವುಗಳಲ್ಲಿ

"ಯಾವುದೇ ಜಾರಿಯಲ್ಲಿರುವ ಕಾನೂನು" ಈ ಪದಗಳ ನಂತರ "ಎಲ್ಲಿಯವರೆಗೆ ಅದು ವಿಧಿಸುತ್ತದೆಯೋ" ಈ ಪದಗಳನ್ನು ಸೇರಿಸತಕ್ಕದ್ದು, ಮತ್ತು

(ii) ವಿಧಿ ೧೩ರ ಕಲಮು (೬)ರಲ್ಲಿ "ವಿಶೇಷತಃ" ಈ ಶಬ್ದಗಳ ಮುಂದೆ "ಹೇಳಲಾದ ಕಲಮಿನಲ್ಲಿಯ ಯಾವುದೂ, ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಎಲ್ಲಿಯವರೆಗೆ ಅದು ವಿಧಿಸುತ್ತದೆಯೋ ಅಥವಾ ಯಾವುದೇ ಅಧಿಕಾರಕ್ಕೆ ವಿಧಿಸಲು ಸಶಕ್ತಗೊಳಿಸುತ್ತದೆಯೋ ಅಥವಾ ಯಾವುದೇ ಕಾನೂನು ಮಾಡಲು ರಾಜ್ಯಕ್ಕೆ ತಡೆಯುತ್ತದೆಯೋ, ಬಾಧಿಸುವುದಿಲ್ಲ" ಇವುಗಳನ್ನು ಸೇರಿಸತಕ್ಕದ್ದು.

(iv) ವಿಧಿ ೧೩ರಲ್ಲಿಯ ಕಲಮುಗಳಾದ (ಇ), (೪), (೫) ಮತ್ತು (೬)ರಲ್ಲಿ ನಿರ್ಬಂಧನೆಗಳು, ಈ ಪದಕ್ಕೆ ಮೊದಲು "ಯುಕ್ತವಾದ" ಈ ಪದವನ್ನು ಸೇರಿಸುವುದು."

(v) ವಿಧಿ ೧೩ರ ಕಲಮು ೪ರಲ್ಲಿ "ಸಾಮಾನ್ಯ ಜನತೆ" ಈ ಪದಗಳಿಗೆ ಬದಲಾಗಿ "ಸಾರ್ವಜನಿಕ ವ್ಯವಸ್ಥೆ" ಅಥವಾ "ನೈತಿಕತೆ" ಈ ಶಬ್ದಗಳನ್ನು ಸೇರಿಸುವುದು.

(vi) ವಿಧಿ ೧೩ರ ಕಲಮು(೫)ರಲ್ಲಿ "ಬುಡಕಟ್ಟುಜನಾಂಗ" ಪದಗಳಿಗೆ ಬದಲಾಗಿ "ಪರಿಶಿಷ್ಟ" ಈ ಪದ ಸೇರಿಸುವುದು.

(vii)) ವಿಧಿ ೧೩ರ ಕಲಮು(೬)ರಲ್ಲಿ "ನೈತಿಕತೆ ಅಥವಾ ಆರೋಗ್ಯ" ಪದಗಳಿಗೆ ಬದಲಾಗಿ "ಸಾಮಾನ್ಯ ಜನತೆ" ಈ ಪದಗಳನ್ನು ಸೇರಿಸುವುದು.

ವಿಧಿ ೧೩ನ್ನು ಸಂವಿಧಾನಕ್ಕೆ ಸೇರಿಸಲಾಯಿತು.

* * * * *

# ವಿಧಿ ೧೪

* **ಶ್ರೀ ಟಿ.ಟಿ ಕೃಷ್ಣಮಾಚಾರಿ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಯಾವ ಅಂಶವನ್ನು ನಾನು ಸಭೆಯ ಎದುರಿಗೆ ಇಡಬಯಸುತ್ತಿರುವೆನೋ ಅದು ಹೋಲಿಕೆಯಲ್ಲಿ ಸಂಕುಚಿತವಾದದ್ದಾಗಿದೆ...

ತಿದ್ದುಪಡಿಯೊಂದನ್ನು ಮಂಡಿಸುವಲ್ಲಿ ನಾನು ತಡ ಮಾಡಿರುವೆನೆಂಬುದನ್ನು ಒಪ್ಪಿಕೊಳ್ಳುತ್ತೇನೆ.

ಕಲಮನ್ನು ನಾನು ಈ ರೀತಿಯಲ್ಲಿ ಪದಗಳಲ್ಲಿರಿಸಬಯಸುತ್ತೇನೆ. 'ಯಾವನೇ ವ್ಯಕ್ತಿಯನ್ನು ಒಂದೇ ಅಪರಾಧಕ್ಕಾಗಿ ಒಂದು ಸಲಕ್ಕಿಂತಲೂ ಹೆಚ್ಚಾಗಿ ಪ್ರಾಸಿಕ್ಯೂಷನ್‌ಗೆ ಗುರಿ ಮಾಡತಕ್ಕುದ್ದಲ್ಲ ಹಾಗೂ ದಂಡಿಸಕ್ಕದ್ದಲ್ಲ.'

ನನ್ನ ಗೌರವಾನ್ವಿತ ಮಿತ್ರ ಡಾ. ಅಂಬೇಡ್ಕರ್‌ರವರು **'ಶಿಕ್ಷಿಸ'** ಪದಕ್ಕೆ ಮೊದಲು 'ಕ್ರಮ ಜರುಗಿಸ ಮತ್ತು' ಪದಗಳನ್ನು ಸೇರಿಸಲು ಒಪ್ಪಲಿರುವವರಾದರೆ, ಮಾನ್ಯರೆ ತಾವು ಮತ್ತು ಸಭೆಯ ಅವರಿಗೆ ಹಾಗೆ ಮಾಡಲು ಅನುಮತಿಸಬೇಕು. ಹಾಗೆ ಮಾಡುವುದು ಕೇವಲ ಜಾಣತನ ಅಷ್ಟೇ ಆಗದೆ ಮುಂದಿನ ಸರಕಾರಗಳಿಗೆ ಆಗಬಹುದಾದ ತೊಂದರೆಗಳಿಂದ ಉಳಿಸುವುದು ಆ ಸಲಹೆಯನ್ನು ಸಭೆಯ ಎದುರಿಗೆ ಸಾದರಪಡಿಸುವ ಸಾಹಸವನ್ನು ಮಾಡಿರುವೆ. ಆ ಬಗೆಗೆ ತನಗೆ ಸೂಕ್ತ ಕಂಡ ಯಾವುದೇ ರೀತಿಯಲ್ಲಿ ನಿರ್ಣಯಿಸುವುದು ಸಭೆಗೆ ಬಿಟ್ಟ ವಿಷಯ.

**ಉಪಸಭಾಪತಿ :** ಶ್ರೀ ಟಿ.ಟಿ.ಕೃಷ್ಣಮಾಚಾರಿಯವರು ಕೇಳಿದುದಕ್ಕೆ ಸಭೆಯು ಅನುಮತಿ ನೀಡುವುದೆ?

**ಗೌರವಾನ್ವಿತ ಸದಸ್ಯರುಗಳು :** ಹೌದು.

**ಉಪಸಭಾಪತಿ :** ಈಗ ನಾನು ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಸಲಹೆಮಾಡಿರುವ ತಿದ್ದುಪಡಿಯನ್ನು ಮಂಡಿಸಲು ಡಾ. ಅಂಬೇಡ್ಕರ್‌ರವರಿಗೆ ಕರೆ ನೀಡುತ್ತೇನೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಉಪಸಭಾಪತಿ ಶ್ರೀ, ಮಾನ್ಯರೆ, ಈ ವಿಧಿಗೆ ಮಂಡಿಸಲ್ಪಟ್ಟಿರುವ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ, ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಮಂಡಿಸಿರುವ ತಿದ್ದುಪಡಿಗಳಿಗೆ ಒಪ್ಪಲು ಸಿದ್ಧನಿದ್ದೇನೆಂದು ನಾನು ಹೇಳಬಲ್ಲೆ. ವಾಸ್ತವವಾಗಿ ಹೇಳುವುದಾದರೆ, ಆ ತಿದ್ದುಪಡಿಯ ಅಗತ್ಯವಿಲ್ಲ ಆದರೆ "ಶಿಕ್ಷಿಸು' ಈ ಪದವನ್ನು ಹಲವಾರು ರೀತಿಯಲ್ಲಿ ಅರ್ಥೈಸಬಹುದಾಗಿದೆ ಎಂಬ ಕೆಲ ಅನುಮಾನಗಳು ವ್ಯಕ್ತಗೊಂಡಿವೆಯಾದ್ದರಿಂದ 'ಕ್ರಮಜರುಗಿಸ ಮತ್ತು ಶಿಕ್ಷಿಸ' ಈ ಪದಗಳನ್ನು ಸೇರಿಸುವುದು ಅಪೇಕ್ಷಣೀಯ ಎಂದು ನನಗೆ ಅನ್ನಿಸುತ್ತದೆ.

ನನ್ನ ಮಿತ್ರ ನಜೀರುದ್ದೀನ್ ಅಹಮದ್‌ರವರು ಮಂಡಿಸಿರುವ ತಿದ್ದುಪಡಿಗಳ ಸಂಖ್ಯೆ ೫೦೬ ಮತ್ತು ೫೦೯ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ...........

**ಶ್ರೀ ನಜೀರುದ್ದೀನ್ ಅಹಮದ್ :** ಅದು ಸಂಖ್ಯೆ ೫೧೦ ಆಗಿದೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಇರಲಿ, ನಿನ್ನೆ ಪೂರ್ತಿದಿನ ನಾನು ಸ್ಥಿತಿಯನ್ನು ಪರೀಕ್ಷಿಸಿರುವೆ ಮತ್ತು ಈ ತಿದ್ದುಪಡಿಗಳಿಗೆ ಒಪ್ಪಿಕೊಳ್ಳುವುದರಿಂದ ಯಾವುದೇ ಒಳಿತು ಆಗುವುದಿಲ್ಲ ಎಂಬುದು ನನಗೆ ತೃಪ್ತಿದಾಯಕವಾಗಿ ಅನಿಸಿದೆ. ಆದಾಗ್ಯೂ ನಾನು ಶ್ರೀ ಕರಿಮುದ್ದೀನರು ಮಂಡಿಸಿರುವ ತಿದ್ದುಪಡಿ ಸಂಖ್ಯೆ ೫೧೨ನ್ನು ಒಪ್ಪಿಕೊಳ್ಳಲು ಸಿದ್ಧನಿರುವೆ. ನನಗೆ ಅನಿಸಿದ ಮಟ್ಟಿಗೆ ಅದೊಂದು ಉಪಯುಕ್ತ ಉಪಬಂಧವಾಗಿದೆ ಮತ್ತು ನಮ್ಮ ಸಂವಿಧಾನದಲ್ಲಿ ಸ್ಥಳ ಪಡೆಯಬಹುದೆಂದು ನಾನು ವಿಚಾರಿಸುವೆ. ಅದರಲ್ಲಿ ಹೊಸತು ಏನೂ

* ಸಿ.ಎ.ಡಿ. ಸಂಪುಟ ೭, ೨ನೆಯ ಡಿಸೆಂಬರ್, ೧೯೪೮, ಪುಟ ೭೯೫–೯೭

ಇಲ್ಲ. ಏಕೆಂದರೆ ಅವರು ಸಲಹೆ ಮಾಡಿರುವ ಸಂಪೂರ್ಣ ಉಪಬಂಧವು ದಂಡ ಪ್ರಕ್ರಿಯೆ ಸಂಹಿತೆಯಲ್ಲಿ ಕಾಣಬಹುದಾಗಿದ್ದು ಅದು ಒಂದು ಅರ್ಥದಲ್ಲಿ ಈಗಾಗಲೇ ದೇಶದ ಕಾನೂನಿನ ಭಾಗವಾಗಿದೆ. ಅವರ ತಿದ್ದುಪಡಿಯಲ್ಲಿ ವಿಶದಪಡಿಸಲಾಗಿರುವ ಉಪಬಂಧಗಳನ್ನು ಭವಿಷ್ಯದ ಶಾಸಕಾಂಗಗಳು ರದ್ದುಗೊಳಿಸುವ ಸಾಧ್ಯತೆಗಳಿವೆಯಾದ್ದರಿಂದ, ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಅವುಗಳನ್ನು ಶಾಸಕಾಂಗದ ಹಿಡಿತಕ್ಕೆ ತಲುಪದಂತೆ ಇರಿಸುವುದು ಅತ್ಯಂತ ಮಹತ್ವದ್ದಾಗಿದೆಯಾದ್ದರಿಂದ ನಾನು ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಿದ್ಧನಿರುವೆ.

ನನ್ನ ಮಿತ್ರ ಕಕ್ಕನ್‌ರವರು ಮಂಡಿಸಿರುವ ತಿದ್ದುಪಡಿ ಸಂಖ್ಯೆ ೫೧೩ಕ್ಕೆ ಸಂಬಂಧಿಸಿದಂತೆ...........

**ಓರ್ವ ಗೌರವಾನ್ವಿತ ಸದಸ್ಯ :** ಅದನ್ನು ಮಂಡಿಸಿಲ್ಲ.

**ಉಪ ಸಭಾಪತಿ :** ತಿದ್ದುಪಡಿ ಸಂಖ್ಯೆಗಳಾದ ೫೦೫ ಮತ್ತು ೫೦೬ ಇವುಗಳ ವಿಷಯವೇನು?

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ತಿದ್ದುಪಡಿ ಸಂಖ್ಯೆಗಳಾದ ೫೦೬ ಮತ್ತು ೫೧೦ ಇವುಗಳನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲನೆಂದು ಈಗಾಗಲೇ ಹೇಳಿರುತ್ತೇನೆ.

**ಉಪಸಭಾಪತಿ :** ಪಟ್ಟಿ ಐದರಲ್ಲಿ ತಿದ್ದುಪಡಿ ಸಂಖ್ಯೆ ೯೨ರಂತೆ ಎರಡನೆ ಭಾಗ ಮಾರ್ಪಾಡು ಮಾಡಲ್ಪಟ್ಟಿರುವ ತಿದ್ದುಪಡಿ ಸಂಖ್ಯೆ ೫೦೫ರ ಬಗೆಗೆ ನಿಮಗೇನಾದರು ಹೇಳುವುದಿದೆಯೇ? ಬಹುಶಃ ನೀವದನ್ನು ಅಲಕ್ಷಿಸಿರುವಿರಿ. ಅದು ಪಂಡಿತ್ ಠಾಕೂರದಾಸ್ ಭಾರ್ಗವ ಅವರ ಹೆಸರಿನಲ್ಲಿದೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಅವರು ಸೂಚಿಸಿರುವ ತಿದ್ದುಪಡಿಯನ್ನು ನಾನು ಸ್ವೀಕರಿಸುತ್ತೇನೆ.

**ಉಪಸಭಾಪತಿ :** ನಾನು ತಿದ್ದುಪಡಿಗಳನ್ನು ಒಂದಾದ ಮೇಲೆ ಒಂದರಂತೆ ಮತಕ್ಕೆ ಹಾಕುತ್ತಿದ್ದೇನೆ.

ಪಟ್ಟಿ ಐದರ ತಿದ್ದುಪಡಿ ಸಂಖ್ಯೆ ೯೨ರಂತೆ ಮಾರ್ಪಡಿಸಲಾಗಿರುವ ತಿದ್ದುಪಡಿ ಸಂಖ್ಯೆ ೫೦೫, ನಾನು ತಿಳಿದಿರುವಂತೆ ಡಾ. ಅಂಬೇಡ್ಕರ್‌ರವರು ಒಪ್ಪಿರುತ್ತಾರೆ. ಪ್ರಶ್ನೆ ಇರುವುದು.

"ವಿಧಿ ೧೪ರ ಕಲಮು(೧)ರಲ್ಲಿಯ "ಜಾರಿಗೊಳಿಸುವ ಸಮಯದಲ್ಲಿ ಕಾನೂನಿನ ಅಂತರ್ಗತ" ಈ ಪದಗಳಿಗೆ 'ಜಾರಿಗೊಳಿಸುವ ಸಮಯದಲ್ಲಿ ಜಾರಿಯಲ್ಲಿರುವ ಕಾನೂನಿನ ಅಂತರ್ಗತ' ಈ ಪದಗಳನ್ನು ಬದಲಿ ಇಡುವುದು."

ಆ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

(ಎರಡು ತಿದ್ದುಪಡಿಗಳು ನಿರಾಕರಿಸಲ್ಪಟ್ಟವು)

* * * * *

**ಉಪಸಭಾಪತಿ :** ಖಾಜಿ ಸೈಯದ ಕರಿಮುದ್ದೀನರಿಂದ ಸೂಚಿತ ತಿದ್ದುಪಡಿ ಸಂಖ್ಯೆ ೫೧೨ ಡಾ. ಅಂಬೇಡ್ಕರ್‌ರಿಂದ ಒಪ್ಪಿಕೊಳ್ಳಲ್ಪಟ್ಟಿದೆ. ಪ್ರಶ್ನೆ ಇರುವುದು

ವಿಧಿ ೧೪ರಲ್ಲಿ ಈ ಕೆಳಗಿನದ್ದನ್ನು ಕಲಮು(೪) ಆಗಿ ಸೇರಿಸುವುದು:

"(೪) ಜನರ ವ್ಯಕ್ತಿತ್ವ, ಮನೆಗಳು, ಕಾಗದ ಪತ್ರಗಳು ಮತ್ತು ಅಸಮಂಜಸ ಪರಿಣಾಮಗಳ, ಶೋಧನೆಗಳ ಮತ್ತು ಜಪ್ತಿಗಳ, ವಿರುದ್ಧ ಜನರ ಹಕ್ಕನ್ನು ಉಲ್ಲಂಘಿಸತಕ್ಕದ್ದಲ್ಲ ಅಲ್ಲದೆ ಪ್ರಮಾಣವಚನ ಅಥವಾ ದೃಢೀಕರಣದೊಂದಿಗಿನ ಸಂಭಾವ್ಯ ಕಾರಣವಿಲ್ಲದೆ ಮತ್ತು ವಿಶೇಷವಾಗಿ ಶೋಧನೆ ಮಾಡಬೇಕಾದ ಸ್ಥಳ ಮತ್ತು ವಶಪಡಿಸಿಕೊಳ್ಳ ಬೇಕಾಗಿರುವ ವ್ಯಕ್ತಿ ಅಥವಾ ವಸ್ತುಗಳ ವಿವರಣೆ ಇಲ್ಲದೆ ಯಾವುದೇ ವಾರಂಟುಗಳನ್ನು ಹೊರಡಿಸಕೂಡದು.

ನನಗೆನಿಸುತ್ತದೆ. ಇದಕ್ಕೆ 'ಹೌದು ಎನ್ನುವವರೇ' ಬಹಳ

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಬೇಡ ಎನ್ನುವವರೇ ಅಧಿಕ.

**ಉಪಸಭಾಪತಿ :** ನಾನು ಇದನ್ನು ಪುನಃ ಮತಕ್ಕೆ ಹಾಕುತ್ತೇನೆ. ನನಗೆ ಅನಿಸುತ್ತದೆ ಹೌದು ಎನ್ನುವವರೇ ಬಹಳ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಇಲ್ಲ ಮಾನ್ಯರೆ, ಬೇಡ ಎನ್ನುವವರೇ ಅಧಿಕ.

**ಉಪಸಭಾಪತಿ :** ಮೊದಲಿಗೆ ನಾನು ಕೈಗಳನ್ನು ಎತ್ತಿ ತೋರಿಸಲು ಕರೆಯುತ್ತೇನೆ.

(ವಿಭಜನೆಯ ಗಂಟೆ ಬಾರಿಸಲ್ಪಟ್ಟಿತು.)

**ಶ್ರೀ ಮಹಾವೀರ ತ್ಯಾಗಿ** (ಯುನೈಟೆಡ್ ಪ್ರಾವಿನ್ಸಸ್ : ಸಾಮಾನ್ಯ): ಸದಸ್ಯರುಗಳಿಗೆ ತಮ್ಮ ತಮ್ಮಲ್ಲಿ ಚರ್ಚಿಸಿ ನಿರ್ಣಯವೊಂದಕ್ಕೆ ಬರಲು ಅವಕಾಶ ಒದಗಿಸಲು ಸದ್ಯ ಸ್ವಲ್ಪ ಸಮಯಕ್ಕಾಗಿ ಈ ಪ್ರಶ್ನೆಯನ್ನು ಮುಂದೂಡುವುದಕ್ಕೆ ನಾನು ಪ್ರಸ್ತಾವನೆ ಮಾಡಬಹುದೆ? ಬ್ರಿಟಿಷ್ ಸಾಮಾನ್ಯರ ಸಭೆ ಕೂಡ ಕೆಲವು ಸಲ ಕಮಿಟಿಯಾಗಿ ಪರಿವರ್ತನೆಗೊಳಿಸಿಕೊಂಡು ವಿವಿಧ ಪಕ್ಷಗಳಿಗೆ ವಿಚಾರ ವಿನಿಯಮಕ್ಕೆ ಮತ್ತು ಒಪ್ಪಂದದ ಪರಿಹಾರಕ್ಕೆ ತಲುಪಲು ಅವಕಾಶ ನೀಡುತ್ತದೆ.

**ಉಪಸಭಾಪತಿ :** ಸಭೆಯು ನನಗೆ ಅಗತ್ಯವಾದ ಅನುಮತಿಯನ್ನು ಕೊಡುವುದಾದರೆ ನಾನು ಈ ತಿದ್ದುಪಡಿಯನ್ನು ಮತಕ್ಕೆ ಹಾಕುವುದನ್ನು ಮುಂದೂಡಲು ಸಿದ್ಧನಿದ್ದೇನೆ. ಸಭೆಯು ಶಾಂತತೆ ತಳೆಯಲು ನಾನು ಕೇಳಿಕೊಳ್ಳುವೆ. ನಿರ್ಣಯಕ್ಕೆ ಬರುವ ದಾರಿ ಇದಲ್ಲ. ಅದನ್ನು ತಲುಪಬೇಕಾದದ್ದು ಸಹಕಾರಯುತ ಪ್ರಯತ್ನ ಮತ್ತು ಸದ್ಭಾವನೆಯಿಂದ. ಇದರ ಮೇಲೆ ಮತ ಹಾಕುವುದನ್ನು ಮುಂದೂಡಲು ಅಗತ್ಯ ಅಧಿಕಾರವನ್ನು ಸಭೆಯು ನನಗೆ ನೀಡುವುದೇ?

**ಗೌರವಾನ್ವಿತ ಪಂಡಿತ ಜವಾಹರಲಾಲ ನೆಹರು :** ಮಾನ್ಯ ಉಪಸಭಾಪತಿಯವರೆ, ಸದಸ್ಯರುಗಳ ಮನಸ್ಸಿನಲ್ಲಿ ಈ ಅಂಶದ ಬಗೆಗೆ ಸ್ವಲ್ಪಮಟ್ಟಿನ ಗೊಂದಲ ಉಂಟಾಗಿರುವಂತೆ ಕಾಣುತ್ತದೆ. ಮಾನ್ಯರೆ, ನೀಡಲಾಗಿರುವ ಸಲಹೆಯು ಪ್ರಾಮುಖ್ಯವಾಗಿ ಅಪೇಕ್ಷಣೀಯ, ಈ ವಿಷಯವನ್ನು ನಾವು ಸ್ವಲ್ಪ ಸಮಯದ ನಂತರ ತೆಗೆದುಕೊಳ್ಳಬಹುದಾಗಿದೆ, ಮತ್ತು ನಾವೀಗ ಉಳಿದ ವಿಷಯಗಳತ್ತ ಸಾಗಬಹುದೆಂದು ನನಗೆ ಅನಿಸುತ್ತದೆ. ಸಭೆಯ ಅಪೇಕ್ಷೆಯೇ ಅಂತಿಮವಾದ್ದೇನೋ ಸರಿ. ಮಾನ್ಯರೆ, ನಾನು ತಮಗೆ ಹಾಗೂ ಸಭೆಗೆ ತಮ್ಮ ಸಲಹೆಯನ್ನು ಒಪ್ಪಿಕೊಳ್ಳಲು ಸಲಹೆ ಮಾಡುವೆ.

**ಡಾ. ಬಿ.ವಿ.ಕೇಸ್ಕರ್** (ಯುನೈಟೆಡ್ ಪ್ರಾವಿನ್ಸ್ : ಸಾಮಾನ್ಯ): ಇದನ್ನು ವಿಭಜನೆಯ ಗಂಟೆ ಬಾರಿಸಿದ ನಂತರ ಮಾಡಬಹುದೇ?

**ಉಪ ಸಭಾಪತಿ :** ತಾಂತ್ರಿಕತೆಗಳಿಂದ ನಾನೆಂದಿಗೂ ಹೋಗಲಾರೆ. ನಾನಿಲ್ಲಿರುವವರೆಗೆ ವ್ಯವಹಾರಜ್ಞಾನದ ಬಳಕೆಯೊಂದಿಗೆ ಮುಂದುವರಿಯುವೆ. ತಾಂತ್ರಿಕತೆಗಳ ಬಗೆಗಿನ ನನ್ನ ಜ್ಞಾನ ಕಡಿಮೆ, ಆದರೆ ಮಾನವ ಸ್ವಭಾವದ ಬಗೆಗೆ ಸ್ವಲ್ಪ ಜ್ಞಾನವಿದೆ. ಸಮಯದುದ್ದಕ್ಕೆ ಮಹತ್ವ ತಳೆಯುವುದು, ಒಳ್ಳೆಯ ಜ್ಞಾನ, ವ್ಯವಹಾರ ಜ್ಞಾನ, ಸ್ವೇಚ್ಛೆಗಳೇ ಎಂಬುದು ನನಗೆ ಗೊತ್ತು. ನಾನು ಮತದಾನದ ಮುಂದೂಡಿಕೆಗೆ ಸಭೆಯ ಅನುಮತಿ ಕೇಳುತ್ತೇನೆ.

**ಗೌರವಾನ್ವಿತ ಸದಸ್ಯರುಗಳು :** ಹೌದು

## ವಿಧಿ ೧೬

* **ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಉಪಸಭಾಪತಿ ಶ್ರೀಯವರೆ, ನಾನು ಒಂದು ವೇಳೆ ಸರಿಯಾಗಿ ಅರಿತುಕೊಂಡಿದ್ದೇ ಆದರೆ ಶ್ರೀ ಸುಬ್ರಮಣ್ಯಂ ಅವರಿಂದ ನಾನು ತಿಳಿದಿರುವುದೇನೆಂದರೆ ಅವರು ಆಕ್ಷೇಪಿಸುತ್ತಿರುವುದು ವಿಧಿ ೧೬ಕ್ಕಲ್ಲ. ಆದರೆ ಅವರ ಆಕ್ಷೇಪಣೆ ಇರುವುದು ಈ ವಿಧಿಗೆ ದೊರಕುತ್ತಿರುವ ಸ್ಥಾನದ ಬಗೆಗೆ. ಅವರು ಇದರ ಬಗ್ಗೆ ಹೇಳುತ್ತಿರುವುದೇನೆಂದರೆ ಈ ವಿಧಿಯು ಉಪಯುಕ್ತವೂ ಹಾಗೂ ಅಗತ್ಯವೂ ಆಗಿದೆಯಾದರೂ ಮೂಲಭೂತ ಹಕ್ಕುಗಳಲ್ಲಿ ಇದಕ್ಕೆ ಸ್ಥಾನ ಸಿಗಬೇಕಾಗಿಲ್ಲ ಎಂದು. ಅವರನ್ನು ನಾನು ಸರಿಯಾಗಿ ತಿಳಿದುಕೊಂಡದ್ದೇ ಆದರೆ ಅವರ ಎರಡನೆ ಪ್ರಶ್ನಾಂಶವೆಂದರೆ ಈ ವಿಧಿಯನ್ನು ೨೪೪ನೇ ವಿಧಿಗೆ ಒಳಪಡಿಸಲಾಗಿದೆ. ವಿಧಿ ೧೬ನ್ನು ಸಂಪೂರ್ಣವಾಗಿ ಪರಿಣಾಮ ಶೂನ್ಯ ಗೊಳಿಸಬಹುದಾಗಿದೆ. ಅವರ ಶಬ್ದಗಳನ್ನೇ ಬಳಸುವುದಾದರೆ ವಿಧಿ ೨೪೪ನ್ನು ಬಳಸಿದ್ದೇ ಆದರೆ ಅದರ ಶೇಷ ಉಳಿಯಲಿಕ್ಕಿಲ್ಲ. ಅವರು ಹೇಳಿದ್ದನ್ನು ಸಾರಾಂಶಗೊಳಿಸುವಲ್ಲಿ ನಾನು ಸರಿ ಎಂದು ನನ್ನ ಭಾವನೆ.

ಈಗ, ಈ ವಿಧಿ ೧೬ರಲ್ಲಿ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸರಿಹೊಂದುವುದಿಲ್ಲವೆಂಬ ವಾದವನ್ನು ನಾನು ಪ್ರಶಂಸಿಸುತ್ತೇನೆ. ಅಲ್ಲದೆ ಶ್ರೀ ಸುಬ್ರಮಣ್ಯಂ ಅವರೊಂದಿಗೆ ನಾನು ಸಹಮತಿಸುತ್ತೇನೆ. ಆದರೆ ನಾನು ಅವರಿಗೆ ಈ ವಿಷಯವನ್ನು ಮೂಲಭೂತ ಹಕ್ಕುಗಳಲ್ಲಿ ಅಗತ್ಯ ಕಂಡುಬಂದದ್ದೇಕೆ ಎನ್ನುವ ಬಗ್ಗೆ ವಿವರಿಸಲಿರುವೆ. ನನ್ನ ಮಿತ್ರರಾದ ಶ್ರೀ ಸುಬ್ರಮಣ್ಯಂ ಅವರಿಗೆ ನೆನಪಿರಬೇಕು. ಸಂವಿಧಾನ ಸಭೆಯನ್ನು ನಾವು ಕೆಲ ಮಿತಿಗಳೊಂದಿಗೆ ಆರಂಭಿಸಿದೆವು. ಆಗಿದ್ದಿದ್ದ ಒಂದು ಮಿತಿ ಎಂದರೆ ಭಾರತೀಯ ರಾಜ್ಯಗಳು ಒಕ್ಕೂಟಕ್ಕೆ ಸೇರಲಿದ್ದದ್ದು ಕೇವಲ ವಿದೇಶ ವ್ಯವಹಾರ, ರಕ್ಷಣೆ ಮತ್ತು ಸಂಪರ್ಕ ಈ ಮೂರು ವಿಷಯಗಳಿಗಾಗಿ. ಉಳಿದ ಯಾವುದೇ ವಿಷಯದ ಬಗೆಗೆ ಅವು ಭಾರತದ ಪಾರ್ಲಿಮೆಂಟಿನ ಶಾಸಕೀಯ ಮತ್ತು ನ್ಯಾಯಾಂಗೀಯ ವ್ಯಾಪ್ತಿಯನ್ನು ವಿಸ್ತರಿಸಲು ಒಪ್ಪಲು ಸಿದ್ಧರಿರಲಿಲ್ಲ. ಆದುದರಿಂದ ಅವರು ಸಂವಿಧಾನ ಸಭೆ ಅಲ್ಲದೆ ಕರಡು ಸಮಿತಿಗಳನ್ನು ಬಹಳ ಗಹನ ಮಿತಿಗೆ ಒಳಪಡಿಸಲಾಗುತ್ತೆಂಬುದನ್ನು ಅವರು ಮನವರಿಕೆ ಮಾಡಿಕೊಳ್ಳಬಹುದು. ಒಂದು ಕಡೆ ವ್ಯಾಪಾರ ಮತ್ತು ವಾಣಿಜ್ಯವನ್ನು ಮುಕ್ತ ಇಡದಿದ್ದಲ್ಲಿ ಅಖಿಲ ಭಾರತ ಒಕ್ಕೂಟ ಸ್ಥಾಪನೆಯಿಂದ ಉಪಯೋಗವೂ ಆಗದು ಮತ್ತು ಯಾವುದೇ ಉದ್ದೇಶ ಸಾಧಿಸದು ಎಂಬ ಮನವರಿಕೆಯಾಗಿದ್ದಿತು. ಅದು ಸಾಮಾನ್ಯ ದೃಷ್ಟಿಕೋನ. ಮತ್ತೊಂದು ಕಡೆ ರಾಜ್ಯಗಳ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಯಾವುದರ ಬಗೆಗೆ ನಾನು ಈಗಾಗಲೇ ಉಲ್ಲೇಖಿಸಿರುವೆನೋ ಕಂಡದ್ದೇನೆಂದರೆ ರಾಜ್ಯಗಳು ಭಾರತದಾದ್ಯಂತದ ವ್ಯಾಪಾರ ಮತ್ತು ವಾಣಿಜ್ಯವನ್ನು ಒಕ್ಕೂಟದ ಪಾರ್ಲಿಮೆಂಟಿನ ಶಾಸಕೀಯ ಅಧಿಕಾರದ ಅಧೀನಕ್ಕೆ ತರುವುದಕ್ಕೆ ಬಿಡಲು ಸಿದ್ಧರಿರದಿದ್ದದ್ದು. ಅಥವಾ ಬೇರೆ ಭಾಷೆಯಲ್ಲಿ ಅದನ್ನು ಸಂಕ್ಷಿಪ್ತವಾಗಿ ಇಡುವುದಾದರೆ ವ್ಯಾಪಾರ ಮತ್ತು ವಾಣಿಜ್ಯವನ್ನು ಅವರು ಪಟ್ಟಿ ಸಂಖ್ಯೆ ೧ರಲ್ಲಿ ಸೇರ್ಪಡೆಗೆ ಅನುಮತಿಸುವುದಕ್ಕೆ ಸಿದ್ಧರಿರಲಿಲ್ಲ. ಒಂದು ವೇಳೆ ನಮಗೆ ವ್ಯಾಪಾರ ಮತ್ತು ವಾಣಿಜ್ಯವನ್ನು ಪಟ್ಟಿ ೧ರಲ್ಲಿ ಸೇರಿಸಲು ಸಾಧ್ಯವಾಗಿದ್ದಿದ್ದರೆ ಹಾಗೆಂದರೆ ಭಾರತದಾದ್ಯಂತ ವ್ಯಾಪಾರ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ಕಾರ್ಯಗತಗೊಳಿಸುವ ಅಧಿಕಾರ, ಕಾನೂನು ಮಾಡುವ ಅಧಿಕಾರ ಪಾರ್ಲಿಮೆಂಟ್ ಹೊಂದಿರುವಂತಿದ್ದಲ್ಲಿ ಆಗ ನಮಗೆ ವಿಧಿ ೧೬ರ ಅಂತರ್ಗತ, ಮೂಲಭೂತ ಹಕ್ಕುಗಳಲ್ಲಿ ತರುವ ಅಗತ್ಯ ಕಂಡು ಬರುತ್ತಿರಲಿಲ್ಲ. ಆದರೆ ಆ ಬಾಗಿಲು

* ಸಿ.ಎ.ಡಿ. ಸಂಪುಟ ೭, ೩ನೆಯ ಡಿಸೆಂಬರ್, ೧೯೪೮, ಪುಟ ೮೦೨–೮೦೩

ನಮಗೆ ಮುಚ್ಚಿದ್ದುದ್ದರಿಂದ, ಸಂವಿಧಾನ ಸಭೆಯ ಆರಂಭದಲ್ಲಿ ಯಾವ ಮೂಲ ಪರಿಗಣನೆಗಳು ಕೆಲಸಮಾಡುತ್ತಿದ್ದವೊ, ಕೆಲ ಪ್ರಧಾನ ಅಂಶಗಳಲ್ಲಿ ಭಾರತದಾದ್ಯಂತ ವ್ಯಾಪಾರ ಮತ್ತು ವಾಣಿಜ್ಯ ವಿಷಯದಲ್ಲಿ ಏಕರೂಪತೆಯ ಉದ್ದೇಶದಿಂದ ನಮಗೆ ಸ್ವಲ್ಪ ಸ್ಥಳಾವಕಾಶ ಹುಡುಕಿ ಕೊಳ್ಳಬೇಕಾಯಿತು. ಬಹಳಷ್ಟು ಮಟ್ಟಿನ ಚತುರೋಪಾಯ ಬಳಿಸಿದನಂತರ, ಬಹುಸಂಖ್ಯಾತ ನಮ್ಮ ಜನರ ಆಸೆ–ಆಕಾಂಕ್ಷೆಗೆ ಪರಿಣಾಮಕಾರಿಯಾಗಿಸಲು ನಾವು ಕಂಡುಕೊಂಡ ಒಂದೇ ವಿಧಾನವೆಂದರೆ ವ್ಯಾಪಾರ ಮತ್ತು ವಾಣಿಜ್ಯವನ್ನು ಭಾರತದಾದ್ಯಂತ ಮುಕ್ತವಿರಲೆಂದು ಅದನ್ನು ಮೂಲಭೂತ ಹಕ್ಕಿನ ಅಂತರ್ಗತ ತಂದಿರುವುದು. ಅದೇ ಕಾರಣದಿಂದಾಗಿ, ಅದು ತೊಡಕಿನದ್ದಾಗಿ ಕಾಣಬಹುದು, ವ್ಯಾಪಾರ ಮತ್ತು ವಾಣಿಜ್ಯವನ್ನು ಮೂಲಹಕ್ಕುಗಳ ಅಂತರ್ಗತ ತರದೇ ಬೇರೆ ದಾರಿ ಉಳಿದಿರಲಿಲ್ಲವೆಂದು ನಾವು ವಿಚಾರಿಸಿದೆವು. ನಾವೇಕೆ ವ್ಯಾಪಾರ ಮತ್ತು ವಾಣಿಜ್ಯ ಇವುಗಳಿಗೆ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸ್ಥಾನ ನೀಡಿದೆವು ಅನ್ನುವುದು ನನ್ನ ಮಿತ್ರ ಶ್ರೀ ಸುಬ್ರಮಣ್ಯಂ ಅವರಿಗೆ ಸಮಾಧಾನ ತಂದಿದೆ ಎಂದು ನನಗೆ ಅನಿಸುತ್ತದೆ. ಆದಾಗ್ಯೂ, ಸೈದ್ಧಾಂತಿಕವಾಗಿ ಮೂಲಭೂತ ಹಕ್ಕುಗಳ ವಿಷಯದೊಂದಿಗೆ ಈ ವಿಷಯ ಸಂಗತವಾದದ್ದಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ.

ವ್ಯಾಪಾರ ಮತ್ತು ವಾಣಿಜ್ಯವನ್ನು ನಾವು ವಿಧಿ ೨೪೪ರ ಅಧೀನಕ್ಕೆ ಒಳಪಡಿಸಿರುವುದರಿಂದ ವ್ಯಾವಹಾರಿಕವಾಗಿ ಮೂಲಭೂತ ಹಕ್ಕನ್ನು ನಾವು ಹಾಳು ಮಾಡಿದ್ದೇವೆ ಎನ್ನುವ ಇನ್ನೊಂದು ವಾದಕ್ಕೆ ಸಂಬಂಧಿಸಿದಂತೆ, ನಾನು ವಿಚಾರಿಸುವುದೇನೆಂದರೆ ನಾನು ನ್ಯಾಯವಾಗಿ ಹೇಳಬಹುದಾದದ್ದೇನೆಂದರೆ ನನ್ನ ಮಿತ್ರ ಶ್ರೀ ಸುಬ್ರಮಣ್ಯಂ ಅವರು ಇಲ್ಲವೆ ೨೨೪ನ್ನು ಓದಿಲ್ಲ ಅಥವಾ ವಿಧಿಯನ್ನು ತಪ್ಪಾಗಿ ಓದಿದ್ದಾರೆ ಎಂದು. ವಿಧಿ ೨೨೪ ಹೊಂದಿರುವ ವ್ಯಾಪ್ತಿ ಅತಿ ಸೀಮಿತ. ಹೆಚ್ಚು –ಹೆಚ್ಚೆಂದರೆ ಅದು ಪ್ರಾಂತೀಯ ಶಾಸಕಾಂಗಗಳಿಗೆ ಅಂತರ –ರಾಜ್ಯ ವಾಣಿಜ್ಯ ಮತ್ತು ವ್ಯಾಪಾರದೊಂದಿಗೆ ವ್ಯವಹರಿಸಲು, ಬೇರೆ ರಾಜ್ಯದಲ್ಲಿ ಉತ್ಪಾದಿತ ಅಥವಾ ಸಾಗಾಣಿಸಲ್ಪಟ್ಟ ವಸ್ತುಗಳಿಗೆ ಒಳ ತರಲು ಕೆಲ ನಿರ್ಬಂಧನೆಗಳನ್ನು ಅಧಿಕಾರಗಳನ್ನು ನೀಡುವುದು. ಅದು ಕೂಡ ಶಾಸನವು ರಾಜ್ಯದ ಒಳಗಡೆ ಉತ್ಪಾದಿಸಿದ ವಸ್ತುಗಳು ಮತ್ತು ರಾಜ್ಯದ ಹೊರಗಡೆಯಿಂದ ಆಮದು ಮಾಡಲ್ಪಟ್ಟಿರುವ ವಸ್ತುಗಳ ನಡುವೆ ಯಾವುದೇ ತರಹದ ತಾರತಮ್ಯ, ಭೇದ ವಿಧಿಸದೇ ಇರುವ ಸಂದರ್ಭದಲ್ಲಿ ಮಾತ್ರ. ಅದೊಂದು ಬಹಳ ಸೀಮಿತ ಕಾನೂನು ಎನ್ನುವುದಕ್ಕೆ ಅವರು ಒಪ್ಪುವರೆಂಬುದು ನನಗೆ ಖಚಿತ. ಸ್ವತಂತ್ರವಾಗಿ ಇರಬೇಕಾದ ಭಾರತದಾದ್ಯಂತ ಜರುಗುವ ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರದ ಹಕ್ಕನ್ನು ಅದು ಖಂಡಿತವಾಗಿಯೂ ತೆಗೆದುಕೊಳ್ಳದು.

**ಶ್ರೀ ಸಿ. ಸುಬ್ರಮಣ್ಯಂ :** ............. ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೆನಿಸುವಂತೆ ರಾಜ್ಯವು ಕಾನೂನು ಮಾಡುವುದರ ಮೂಲಕ ವ್ಯಾಪಾರ, ವಾಣಿಜ್ಯ ಅಥವಾ ಪರಸ್ಪರ ವ್ಯವಹರಿಸುವಿಕೆಗಳ ಸ್ವಾತಂತ್ರ್ಯದ ಮೇಲೆ ಸಮಂಜಸ ನಿರ್ಬಂಧನೆಗಳನ್ನು ಹೇರುವುದು ಕಾನೂನಾತ್ಮಕವಾಗಿರಲಿದೆ ಎಂದು ಕಲಮು ಹೇಳುತ್ತದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಹೌದು, ಆದರೆ ಸಮಂಜಸ ನಿರ್ಬಂಧನೆಗಳೆಂದರೆ ವ್ಯಾಪಾರದ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಒಟ್ಟಾರೆ ಹಾಳು ಮಾಡುವುದೆಂದೇನಲ್ಲ. ಹಾಗೆಂದೂ ಅದರ ಅರ್ಥವಾಗುವುದಿಲ್ಲ.

ಆದುದರಿಂದ, ಮಾನ್ಯರೆ, ಈಗಿರುವಂತೆ ಅನುಚ್ಛೇದವು ಪರಿಪೂರ್ಣವಾಗಿ ವ್ಯವಸ್ಥಿತವಾದದ್ದಾಗಿದೆ ಮತ್ತು ನಾನದನ್ನು ಸಭೆಗೆ ಶಿಫಾರಸು ಮಾಡುತ್ತೇನೆ.

ವಿಧಿ ೧೬ನ್ನು ಅಂಗೀಕರಿಸಲಾಯಿತಲ್ಲದೆ ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

## ವಿಧಿ : ೧೭

*****ಉಪಸಭಾಪತಿ :** ನಾವೀಗ ವಿಧಿ ೧೭ಕ್ಕೆ ಬರುತ್ತೇವೆ. ವಿಧಿ ೧೭ ಸಂವಿಧಾನದ ಭಾಗವಾಗಲಿ ಎನ್ನುವ ಗೊತ್ತವಳಿ ಸಭೆಯ ಎದುರಿಗಿದೆ.

ಈ ವಿಧಿಗೆ ಹಲವಾರು ತಿದ್ದುಪಡಿಗಳಿದ್ದು, ಈಗ ಅವುಗಳನ್ನು ತೆಗೆದುಕೊಳ್ಳಲಾಗುವುದು. ನನ್ನ ಪಟ್ಟಿಯಲ್ಲಿ ಮೊದಲನೆಯದಾಗಿ ಇರುವುದು ಸಂ. ೫೪೩ ಅದು ನಕಾರಾತ್ಮಕವಾಗಿರುವುದಾದ್ದರಿಂದ ತಳ್ಳಿಹಾಕಲಾಗಿದೆ.

ಈ ತಿದ್ದುಪಡಿಗೆ ಶ್ರೀ ರಾಮಚಂದ್ರ ಉಪಾಧ್ಯಾಯ ಅವರ ಹೆಸರಿನಲ್ಲಿ ತಿದ್ದುಪಡಿಯೊಂದಿದೆ, ಅದು ಪಟ್ಟಿ (V)ರಲ್ಲಿಯ ಸಂ.೯೩...

(ಶ್ರೀ ಕಾಮತ ಅವರಿಂದ ತಡೆ)

* * * * *

+ **ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್:** ಉಪಸಭಾಪತಿಯವರೆ, ಆರಂಭದಲ್ಲಿಯೇ ಯಾವ ತಿದ್ದುಪಡಿಗಳನ್ನು ನಾನು ಒಪ್ಪಿಕೊಳ್ಳಲು ಸಿದ್ಧನಿರುವೆ ತಿಳಿಸಲು ನನಗೆ ಭಯವಿದೆ, ಯಾವುವುಗಳನ್ನು ನಾನು ಒಪ್ಪಿಕೊಳ್ಳುವುದಿಲ್ಲ ಎನ್ನುವುದನ್ನು ಹೇಳಲೇಬೇಕೆಂದು ಇಚ್ಛಿಸುವೆ. ಸೂಚಿಸಲಾಗಿರುವ ತಿದ್ದುಪಡಿಗಳಲ್ಲಿ ಪ್ರೊ.ಕೆ.ಟಿ. ಶಾಹರ ತಿದ್ದುಪಡಿ ಸಂಖ್ಯೆ ೫೫೯, ಯಾವುದು ವಿಧಿ ೧೭ರ ಕಲಮು(೨)ರಲ್ಲಿ ಯಾವುದು "ಆಧಾರದ ಮೇಲೆ ಪಕ್ಷಪಾತ" ಈ ಶಬ್ದಗಳ ನಂತರ "ಕೇವಲ" ಈ ಪದ ಸೇರಿಸಲು ಸೂಚಿಸಿರುವ ತಿದ್ದುಪಡಿಯನ್ನು ಮಾತ್ರ ನಾನು ಒಪ್ಪಿಕೊಳ್ಳಲು ಸಿದ್ಧನಿರುವೆ. ಉಳಿದೆಲ್ಲ ತಿದ್ದುಪಡಿಗಳನ್ನು ನಾನು ಒಪ್ಪಿಕೊಳ್ಳಲಾರೆನೆಂಬ ಭಯ. ತಿದ್ದುಪಡಿಗಳಿಗೆ ಸಂಬಂಧಿಸಿರುವಂತೆ ನಾನು ಹೇಳಿರುವಂತೆ, ಯಾವೊಂದನ್ನು ನಾನು ಒಪ್ಪಿಕೊಳ್ಳಲು ಸಿದ್ಧನಿಲ್ಲವೋ ಅದು ಪ್ರೊ.ಕೆ.ಟಿ. ಶಾಹರವರ "ಆದಿವಾಸಿಗಳು" ಈ ಪದ ಸೇರಿಸಿರುವುದಕ್ಕೆ ಸಂಬಂಧಿತವಾಗಿದೆ! ಈಗ ನನಗೆ ಮನವರಿಕೆಯಾಗಿರುವಂತೆ "ಆದಿವಾಸಿಗಳು" ಇದನ್ನು ಸೇರಿಸುವುದಕ್ಕೆ ಮಂಡಿತ ವಾದಕ್ಕೆ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಸಭೆಯ ಇತರೆ ಸದಸ್ಯರುಗಳು ಉತ್ತರಿಸಿರುತ್ತಾರೆ ಮತ್ತು ನಾನು ಈಗಾಗಲೇ ಮಂಡಿಸಲಾಗಿರುವ ವಾದಗಳಿಗೆ ನನ್ನಿಂದ ಸೇರಿಸಲ್ಪಡುವುದು ಏನಾದರೂ ಉಪಯೋಗವಾಗುವುದೆಂದು ಭಾವಿಸಲಾರೆ.

ನನ್ನ ಮಿತ್ರ ಶ್ರೀ ಎಮ್.ವಿ.ಕಾಮತ್‌ರವರು 'ಪಬ್ಲಿಕ್' ಈ ಶಬ್ದದ ಸ್ಥಾನದಲ್ಲಿ 'ಸಾಮಾಜಿಕ ಮತ್ತು ರಾಷ್ಟ್ರೀಯ' ಈ ಶಬ್ದಗಳನ್ನು ಇಚ್ಛಿಸಿ ಸೂಚಿಸಿರುವ ತಿದ್ದುಪಡಿಗೆ ಸಂಬಂಧಿಸಿದಂತೆ. ನಾನು ವಿಚಾರಿಸಿದ್ದೇನೆಂದರೆ 'ಪಬ್ಲಿಕ್' ಶಬ್ದವು 'ರಾಷ್ಟ್ರೀಯ' ಮತ್ತು 'ಸಾಮಾಜಿಕ' ಎರಡ ಶಬ್ದಗಳ ಸಾಕಷ್ಟು ಅರ್ಥವನ್ನೊಳಗೊಂಡಿದೆಯಾದ್ದರಿಂದ ಒಂದೇ ಶಬ್ದದಿಂದ ಉದ್ದೇಶ ಸಾಧನೆಯಾಗಲಿದೆಯಾದಾಗ ಎರಡು ಶಬ್ದಗಳ ಬಳಕೆ ಅನಗತ್ಯ. ಹೀಗಾಗಿ ಅವರು ಅದು ಸರಿಯೆಂದು ತೆಗೆದುಕೊಳ್ಳುವರೆಂದು ನನ್ನ ವಿಚಾರ.

---

* ಸಿ.ಎ.ಡಿ. ಸಂಪುಟ ೭, ೩ನೆಯ ಡಿಸೆಂಬರ್, ೧೯೪೮, ಪುಟ ೮೦೩

\+ ಅದೇ ಪು. ಪು ೮೧೨–೧೩.

ಗೌರವಾನ್ವಿತ ಮಿತ್ರ ಶ್ರೀ ದಾಮೋದರ ಸ್ವರೂಪ ಸೇಠರ ತಿದ್ದುಪಡಿಗೆ ಸಂಬಂಧಿಸಿದಂತೆ, ಅದು ಅನಗತ್ಯ ಎನಿಸುವುದರಿಂದ ನಾನದನ್ನು ಒಪ್ಪಿಕೊಳ್ಳುವುದಿಲ್ಲ. ಸರದಾರ ಭೂಪೇಂದ್ರ ಸಿಂಗ್ ಮಾನರ ತಿದ್ದುಪಡಿಯಂತೆ ಅವರು ಬಯಸುವುದು, ವಿಧಿ ೧೭ರ ಕಲಮು(೨)ರಲ್ಲಿಯ ಉಪಬಂಧಗಳನ್ವಯ ರಾಜ್ಯವು ವಿಧಿಸುವ ಯಾವುದೇ ಕಡ್ಡಾಯದ ಕ್ರಮಕ್ಕೆ ಅದು ರಾಜ್ಯದಿಂದ ಅದಕ್ಕೆ ಎಂದಿಗೂ ಪ್ರತಿಫಲ ಸಂದಾಯ ಮಾಡಬೇಕೆನ್ನುವುದಕ್ಕೆ ಸಂಬಂಧಿಸಿದಂತೆ ಈಗ, ರಾಜ್ಯಕ್ಕೆ ಬೇಕಾಗಬಹುದಾದ ಅಂತಹ ಕಡ್ಡಾಯದ ಸೇವೆಯನ್ನು ಪಡೆಯುವ ಅಧಿಕಾರದ ಮೇಲೆ ಯಾವುದೇ ಅಂತಹ ಮಿತಿಯನ್ನು ಹೇರುವುದು ಅಪೇಕ್ಷಣೀಯ ಎಂದು ನಾನು ತಿಳಿಯುವುದಿಲ್ಲ. ಈ ಕಲಮುಗಳನ್ನು ಬಳಸುವಿಕೆಯ ಕಾರಣದಿಂದ ಅಧೀನ ರಾಜ್ಯದಿಂದ ಬೇಡಲ್ಪಟ್ಟ ಕಡ್ಡಾಯದ ಸೇವೆ ಪೌರರಿಂದ ಕೆಲ ಗಂಟೆಗಳಿಗೆ ಸೀಮಿತಗೊಳಿಸಲ್ಪಟ್ಟದ್ದಾಗಿದ್ದು ಅದು ಆತನ ಜೀವನೋಪಾಯಕ್ಕಾಗಿ ಗಳಿಸಿಕೊಳ್ಳಲು ಸಾಕಷ್ಟು ಅವಕಾಶ ಒದಗಿಸಿಕೊಡಬಹುದಾದಂತಹ ಪೂರ್ಣ ಸಾಧ್ಯತೆಗಳಿರಬಹುದು, ಮತ್ತೆ ಹಾಗಿದ್ದಲ್ಲಿ, ಉದಾಹರಣೆಗೆ, ಅಂತಹ ಕಡ್ಡಾಯದ ಸೇವೆ ಬಿಡುವಿನ ಗಂಟೆಗಳು ಅಥವಾ ಜೀವನೋಪಾಯಕ್ಕೆ ಗಳಿಸುವ ಸಮಯದ ಹೊರತಾಗಿರಬಹುದದ್ದಾರಿಂದ, ರಾಜ್ಯವು ಪರಿಹಾರ ಒದಗಿಸುವುದಿಲ್ಲ ಎಂದು ಹೇಳುವುದು ಸಂಪೂರ್ಣವಾಗಿ ನ್ಯಾಯ ಸಮ್ಮತವಾದದ್ದೇ ಆಗಿರುತ್ತದೆ.

ಈ ಕಲಮಿನಲ್ಲಿ, ಪರಿಹಾರ ನೀಡದೆ ಇರುವುದು ಮುಗಿಬೀಳುವುದಕ್ಕೆ ಆಧಾರವಾಗದು ಎನ್ನುವುದನ್ನು ಕಾಣಬಹುದು: ಏಕೆಂದರೆ ಉಪ ಕಲಮು (೨) ಇದರಲ್ಲಿ ನಿರೂಪಿಸಲ್ಪಟ್ಟಿರುವ ಮೂಲಭೂತ ಹೇಳಿಕೆ ಇದಾಗಿದೆ. ಯಾವಾಗ ಕಡ್ಡಾಯದ ಶ್ರಮ ಅಥವಾ ಕಡ್ಡಾಯದ ಸೇವೆ ಬೇಡಲ್ಪಡುವುದೋ, ಅದು ಎಲ್ಲರಿಂದ ಬೇಡಲ್ಪಟ್ಟಿರುತ್ತದೆ ಮತ್ತು ಯಾವಾಗ ರಾಜ್ಯವು ಎಲ್ಲರಿಂದ ಸೇವೆಯನ್ನು ಅಪೇಕ್ಷಿಸುವುದೋ ಆವಾಗ ಪರಿಹಾರ ನೀಡುವುದಿಲ್ಲ, ಹೀಗೆ ಮಾಡಿದಾಗ ರಾಜ್ಯವು ಯಾವೊಂದು ದೊಡ್ಡ ಅನ್ಯಾಯ ಎಸಗುತ್ತದೆ ಎಂದು ನನಗೆ ಅನಿಸುವುದಿಲ್ಲ. ನನಗೆ ಅನಿಸುವಂತೆ, ಮಾನ್ಯರೆ ವಿಧಿಯಲ್ಲಿ ಈಗಿರುವಂತೆ ಈ ಸ್ಥಿತಿಯನ್ನು ಹೀಗೆಯೇ ಸರಳವಾಗಿ ಇರಬಿಡುವುದೇ ಅಪೇಕ್ಷಣೀಯ.

**ಶ್ರೀ ಹೆಚ್.ವಿ. ಕಾಮತ್ :** ಮಾಹಿತಿಯ ಪಾಯಿಂಟ್‌ವೊಂದರ ಮೇಲೆ, ಮಾನ್ಯರೆ, ನನ್ನ ತಿದ್ದುಪಡಿಗೆ ಡಾ. ಬಿ.ಆರ್. ಅಂಬೇಡ್ಕರ್‌ರ ವಿರೋಧವು ಕೇವಲ ಒಂದು ಶಬ್ದದ ಬದಲಾಗಿ ಎರಡು ಶಬ್ದಗಳ ಒಳಗೊಳ್ಳುವಿಕೆ ಈ ಆಧಾರಿತವಾದದ್ದಾಗಿದೆಯೆ? ಆ ಸಂದರ್ಭದಲ್ಲಿ, 'ಪಬ್ಲಿಕ್' ಈ ಶಬ್ದದ ಬದಲಾಗಿ 'ಸಾಮಾಜಿಕ' ಅಥವಾ 'ರಾಷ್ಟ್ರೀಯ' ಇವುಗಳಲ್ಲಿ ಯಾವೊಂದನ್ನು ಬಳಸಿದರೂ ನನಗೆ ಸಂತೋಷ,

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಎರಡನ್ನೂ ಒಳಗೊಳ್ಳುವ ವಿಶಾಲ ಅರ್ಥದ ಪದಗುಚ್ಛವೊಂದನ್ನು ಬಳಸುವುದು ಹೆಚ್ಚು ಸೂಕ್ತ.

**ಶ್ರೀ ರೋಹಿಣಿ ಕುಮಾರ ಚೌಧರಿ** (ಅಸ್ಸಾಮ : ಸಾಮಾನ್ಯ) ಮಾನ್ಯರೆ, ಜ್ಞಾನಿ ಗುರುಮುಖ್ ಸಿಂಗ್ ಮುಸಾಫಿರ್‌ರವರು ಮಂಡಿಸಿದ ವೇಶ್ಯಾವೃತ್ತಿಗೆ ಸಂಬಂಧಿಸಿದ ತಿದ್ದುಪಡಿ ಸಂಖ್ಯೆ ೫೪೮ನ್ನು ಗೌರವಾನ್ವಿತ ಸದಸ್ಯರು ಒಪ್ಪಿಕೊಳ್ಳುವರೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಗೌರವಾನ್ವಿತ ಡಾ. ಬಿ.ಆರ್.ಅಂಬೇಡ್ಕರ್ :** ನನಗೆ ತಿಳಿದಿರುವಂತೆ ಅದು ಮಂಡಿಸಲ್ಪಟ್ಟಿಲ್ಲ.

**ಉಪಸಭಾಪತಿ :** ಅದು ಮಂಡಿಸಲ್ಪಟ್ಟಿಲ್ಲ. ಈಗ ನಾನು ತಿದ್ದುಪಡಿಗಳನ್ನು ಒಂದೊಂದಾಗಿ ಮತಕ್ಕೆ ಹಾಕುತ್ತೇನೆ. ಖಾಜಿ ಸೈಯದ ಕರಿಮುದ್ದೀನರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೫೪೪ ನಿರಾಕರಣಗೊಂಡಿತು.

ಶ್ರೀ ದಾಮೋದರ ಸ್ವರೂಪ ಸೇಠರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೫೪೫ ನಿರಾಕರಣಗೊಂಡಿತು.

ಪ್ರೊ. ಕೆ. ಟಿ. ಶಾಹರವರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೫೪೬ ಕೂಡ ನಿರಾಕರಣಗೊಂಡಿತು.

ಸರದಾರ ಭೂಪೇಂದ್ರ ಸಿಂಗ್ ಮಾನರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೫೬೦ ಹಿಂತೆಗೆದುಕೊಳ್ಳಲ್ಪಟ್ಟಿದೆ.

(ಶ್ರೀ ಕಾಮತ್‌ರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೫೫೬ ನಿರಾಕರಣಗೊಂಡಿತು)

ಪ್ರೊ. ಕೆ. ಟಿ. ಶಾಹರವರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೫೫೯ ಡಾ. ಅಂಬೇಡ್ಕರ್‌ರಿಂದ ಒಪ್ಪಿಕೊಳ್ಳಲ್ಪಟ್ಟಿತು ಮತ್ತು ಅಂಗೀಕೃತಗೊಂಡಿತು.

ವಿಧಿ ೧೭ರ ಕಲಮು (೨) ರಲ್ಲಿ 'ಆಧಾರದ ಮೇಲೆ ತಾರತಮ್ಯ' ಈ ಶಬ್ದಗಳ ನಂತರ "ಕೇವಲ" ಸೇರಿಸುವುದು.

ತಿದ್ದುಪಡಿಯಾದಂತೆ ವಿಧಿ ೧೭ ಅಂಗೀಕರಿಸಲ್ಪಟ್ಟಿತು. ಅಲ್ಲದೆ ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

* * * * *

## ವಿಧಿ ೧೮

* **ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಶ್ರೀ ದಾಮೋದರ ಸ್ವರೂಪ ಅವರಿಂದ ಮಂಡಿಸಲ್ಪಟ್ಟ ತಿದ್ದುಪಡಿ – ಸಂ. ೫೬೪ನ್ನು ನಾನು ಒಪ್ಪಿಕೊಳ್ಳಲಾರೆ.

ಆ ತಿದ್ದುಪಡಿ ನಿರಾಕರಣಗೊಂಡಿತು.

ವಿಧಿ ೧೮ ಅಂಗೀಕರಿಸಲ್ಪಟ್ಟಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

## ವಿಧಿ ೧೯

* **ಉಪಸಭಾಪತಿ :** ತಿದ್ದುಪಡಿ ಸಂ. ೫೯೬. ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** (ಬಾಂಬೆ : ಸಾಮಾನ್ಯ): ಮಾನ್ಯರೆ, ನಾನು ಮಂಡಿಸಲು ಅನುಮತಿ ಕೋರುತ್ತೇನೆ.

"ವಿಧಿ ೧೯ರ ಕಲಮು (೨)ರಲ್ಲಿ "ಹೊರಗಿಡು" ಶಬ್ದಕ್ಕೆ "ತಡೆ" ಈ ಶಬ್ದವನ್ನು ಬದಲಾಗಿ ಸೇರಿಸುವುದು."

ಇದರ ಉದ್ದೇಶ ಕೇವಲ ಇತರೆ ವಿಧಿಯಲ್ಲಿ ಬಳಸಲಾದ ಭಾಷೆಯೊಂದಿಗೆ ಅನುರೂಪತೆ ಕಾಪಾಡುವುದಾಗಿದೆ.

* * * * *

\+ **ಗೌರವಾನ್ವಿತ ಶ್ರೀ ಸಂತಾನಮ್ :** ಮಾನ್ಯರೆ, ರಾಜ್ಯಕ್ಕೆ ಏಕರೂಪದ ಸಿವಿಲ್ ಕೋಡನ್ನು ರೂಪಿಸಲು ಕೇಳಿಕೊಂಡು ನಾವು ನಿರ್ದೇಶನವೊಂದನ್ನು ಅಂಗೀಕರಿಸಿರುತ್ತೇವೆ ಮತ್ತು ಈ ಒಂದು ತಿದ್ದುಪಡಿ ನಿರ್ದೇಶನದ

---

* ಸಿ.ಎ.ಡಿ. ಸಂಪುಟ ೭, ೬ನೆಯ ಡಿಸೆಂಬರ್, ೧೯೪೮, ಪುಟ ೮೨೬

\+ ಸಿ.ಎ.ಡಿ. ಸಂಪುಟ ೭, ೬ನೆಯ ಡಿಸೆಂಬರ್, ೧೯೪೮, ಪುಟ ೮೨೯–೩೦

ಪ್ರತ್ಯಕ್ಷ ನಿರಾಕರಣೆಯಾಗಿದೆ. ಆ ಆಧಾರದ ಮೇಲೆ ಕೂಡ ಇದು ಈ ಸಂದರ್ಭದಲ್ಲಿ ಒಟ್ಟಾರೆ ಅಪ್ರಸ್ತುತವೆಂದು ನನ್ನ ವಿಚಾರ.

**ಉಪ ಸಭಾಪತಿ :** ಡಾ. ಅಂಬೇಡ್ಕರ್‌ರವರೆ, ಈ ವಿಷಯದ ಮೇಲೆ ನೀವೇನಾದರು ಹೇಳಲಿಚ್ಛಿಸುವಿರಾ? ಶ್ರೀ ಸಂತಾನಮ್ ಅವರು ವ್ಯಕ್ತಪಡಿಸಿ ಮುಂದಿಟ್ಟಿರುವ ವಿಚಾರಗಳ ಹಿನ್ನೆಲೆಯಲ್ಲಿ ಈ ತಿದ್ದುಪಡಿಯು ಸರಿಯಾದದ್ದಾಗಿದೆಯೆ ಅಥವಾ ಇಲ್ಲವೇ ಎನ್ನುವುದರ ಬಗೆಗೆ ನಿಮ್ಮ ಸಲಹೆಗೆ ನಾನು ಬೆಲೆಕೊಡುವೆ.

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್ :** ನಾನು ಶ್ರೀ ರಂಗಾ ಅವರೊಂದಿಗೆ ಮತ್ತೊಂದು ತಿದ್ದುಪಡಿಯನ್ನು ಚರ್ಚಿಸುತ್ತಿದ್ದೆ. ಹೀಗಾಗಿ ............

**ಗೌರವಾನ್ವಿತ ಶ್ರೀ ಕೆ. ಸಂತಾನಮ್ :** ವೈಯಕ್ತಿಕ ಕಾನೂನಿನ ಬಗೆಗಿನ ತಿದ್ದಪಡಿ ಸಂ.೬೧೨ ಮಂಡಿಸಬಯಸುವೆ.

**ಗೌರವಾನ್ವಿತ ಡಾ. ಅಂಬೇಡ್ಕರ್ :** ನೀತಿ ನಿರ್ದೇಶಕ ತತ್ವಗಳ ಬಗೆಗೆ ನಾವು ಚರ್ಚಿಸಿದಾಗ ಮತ್ತಲ್ಲದೆ ಅದೊಂದು ದಿನ ನಾವು ಮತ್ತೊಂದು ತಿದ್ದುಪಡಿಗೆ ಚರ್ಚೆ ನಡೆಸಿದಾಗ ಈ ಅಂಶವನ್ನು ಈಗಾಗಲೇ ಮುಗಿಸಿರುತ್ತೇವೆ.

* * * * *

* **ಉಪಸಭಾಪತಿ :** ಇಲ್ಲಿ ನನ್ನ ಪಟ್ಟಿಯಲ್ಲಿ ೧೫ ತಿದ್ದುಪಡಿಗಳಿವೆ, ಅವುಗಳಲ್ಲಿ ಹೆಚ್ಚಿನವುಗಳು ಸಭೆಯಲ್ಲಿ ಮಂಡಿಸಲ್ಪಟ್ಟಿವೆ. ನನಗೆ ಅನ್ನಿಸಿದ ಮಟ್ಟಿಗೆ ಅವು ಈ ಒಂದು ವಿಧಿಯ ಮೇಲೆ ವಿವಿಧ ದೃಷ್ಟಿಕೋನಗಳಿಂದ ಅಭಿಪ್ರಾಯಗಳನ್ನು ಒದಗಿಸುತ್ತದೆ. ಏಳು ಅಥವಾ ಎಂಟು ಜನ ವಕ್ತಾರರುಗಳು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿರುತ್ತಾರೆ. ಈ ವಿಧಿಯ ಬಗೆಗೆ ಸಾಕಷ್ಟು ಚರ್ಚೆ ಆಗಿದೆ ಎಂದು ನನಗೆ ಅನಿಸುತ್ತದೆ. ನಾನು ಡಾ. ಅಂಬೇಡ್ಕರ್‌ರವರಿಗೆ ಉತ್ತರ ನೀಡಲು ಕರೆ ನೀಡುತ್ತೇನೆ.

**ಗೌರವಾನ್ವಿತ ಡಾ.ಬಿ. ಆರ್. ಅಂಬೇಡ್ಕರ್ :** ಮಾನ್ಯ ಉಪ ಸಭಾಪತಿಯವರೆ, ಈ ವಿಧಿಯ ಪರವಾಗಿ ಮಾತನಾಡಿದ ಅನೇಕ ವಕ್ತಾರರ ಹೇಳಿಕೆಗಳಿಗೆ ನನ್ನ ಪರವಾಗಿ ಸೇರಿಸುವುದೇನೂ ಇಲ್ಲ. ನಾನು ಕೇವಲ ತಿದ್ದುಪಡಿ ಸಂಖ್ಯೆ ೬೮೯ನ್ನು ಮಾತ್ರ ಒಪ್ಪಿಕೊಳ್ಳಲು ಸಿದ್ಧನಿರುವೆ ಎಂದು ಹೇಳಬಯಸುತ್ತೇವೆ.

**ಶ್ರೀ ಹೆಚ್.ವಿ. ಕಾಮತ್ :** "ನಾನು ವಿರೋಧಿಸುವೆ, ನನಗೆ ಹೇಳುವುದೇನಿಲ್ಲ" ಎಂದು ಡಾ. ಅಂಬೇಡ್ಕರರು ಹೇಳಿದ ಮಾತ್ರಕ್ಕೆ ಸಾಕಾಗಲಿದೆಯೆ ಎಂದು ನಾನು ಕೇಳಬಹುದೇ? ಸಭೆಗೆ ಒಳಿತನ್ನು ತರಲು ಅವರು ತಿದ್ದುಪಡಿಗಳಿಗೆ ಮತ್ತು ಚರ್ಚೆಯ ನಡುವೆ ಎತ್ತಲಾದ ಅಂಶಗಳಿಗೆ ಉತ್ತರಿಸಲೇಬೇಕೆಂದು ನನ್ನ ವಿಚಾರ.

**ಉಪಸಭಾಪತಿ :** ವಿವಿಧ ತಿದ್ದುಪಡಿಗಳನ್ನು ತಿರಸ್ಕರಿಸುವುದಕ್ಕೆ ಕಾರಣಗಳನ್ನು ಕೊಡಲು ಡಾ. ಅಂಬೇಡ್ಕರ್‌ರವರಿಗೆ ನಾನು ಒತ್ತಾಯಿಸಲಿಕ್ಕಾಗದೆಂದೆನಿಸುತ್ತದೆ.

**ಶ್ರೀ ನಿಜಾಮುದ್ದೀನ್ ಅಹಮದ್** (ಪಶ್ಚಿಮ ಬಂಗಾಳ, ಮುಸ್ಲಿಂ) : ಉಪ ಸಭಾಪತಿಯವರೆ, ತಿದ್ದುಪಡಿ ಸಂಖ್ಯೆ ೬೮೯ ಯಾವುದಕ್ಕೆ ಗೌರವಾನ್ವಿತ ಡಾ॥ ಅಂಬೇಡ್ಕರ್‌ರವರು ಸಮ್ಮತಿಸಿರುವರೋ ಅದು ಕೇವಲ ಮೌಖಿಕ ತಿದ್ದುಪಡಿ ಎಂದು ನಾನು ಹೇಳಬಹುದೆ?

---

* ಅದೇ ಪು. ೮೩೮

**ಉಪಸಭಾಪತಿ :** ಅದನ್ನು ನಡವಳಿಗಳಲ್ಲಿ ದಾಖಲಿಸಲಾಗುವುದು. ಈಗ ನಾವು ತಿದ್ದುಪಡಿಗಳನ್ನು ಒಂದಾದ ಮೇಲೆ ಒಂದರಂತೆ ಪರಿಶೀಲಿಸೋಣ.

(ಕೆಳಕಾಣಿಸಿದ ತಿದ್ದುಪಡಿಯು ಡಾ. ಅಂಬೇಡ್ಕರರಿಂದ ಒಪ್ಪಿಕೊಳ್ಳಲ್ಪಟ್ಟಿತು ಮತ್ತು ಸಭೆಯಿಂದ ಅಂಗೀಕರಿಸಲ್ಪಟ್ಟಿತು: ಒಟ್ಟಿನಲ್ಲಿ ೧೨ ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು ಮತ್ತು ಒಂದನ್ನು ಹಿಂತೆಗೆದುಕೊಳ್ಳಲಾಯಿತು.)

"ವಿಧಿ ೧೯ರ ಕಲಮು (೨)ರಲ್ಲಿ "ಹೊರಗಿಡು" ಈ ಪದಕ್ಕೆ "ತಡೆ" ಈ ಶಬ್ದವನ್ನು ಬದಲಾಗಿ ಸೇರಿಸುವುದು." ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

* * * * *

* **ಉಪ ಸಭಾಪತಿ :** ಪ್ರಶ್ನೆ ಇರುವುದು :

"ವಿಧಿ ೧೯ರ ಕಲಮು (೨)ರ ಉಪಕಲಮು ಆದ (ಬಿ)ಯಲ್ಲಿ "ಯಾವುದೇ ವರ್ಗ ಅಥವಾ ಪಂಗಡಕ್ಕೆ" ಈ ಶಬ್ದಗಳಿಗೆ "ಎಲ್ಲ ವರ್ಗಗಳು ಮತ್ತು ಪಂಗಡಗಳು" ಈ ಶಬ್ದಗಳನ್ನು ಸೇರಿಸುವುದು."

ಡಾ. ಅಂಬೇಡ್ಕರರವರೆ ನೀವು ಇದನ್ನು ಒಪ್ಪಿಕೊಂಡಿರುವಿರಾ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಹೌದು ಮಾನ್ಯರೆ,

**ಉಪ ಸಭಾಪತಿ :** ತಿದ್ದುಪಡಿಯು ಡಾ. ಅಂಬೇಡ್ಕರ್‌ರವರಿಂದ ಒಪ್ಪಿಕೊಳ್ಳಲ್ಪಟ್ಟಿದೆ. ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

(ತಿದ್ದುಪಡಿ ಸಂಖ್ಯೆಗಳು ೫೯೬ ಮತ್ತು ೬೦೯ರಂತೆ ತಿದ್ದುಪಡಿಗೊಳಪಟ್ಟ ವಿಧಿ ೧೯ ಅಂಗೀಕರಿಸಲ್ಪಟ್ಟಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.)

## ವಿಧಿ ೧೪ (ಮುಂದುವರಿದದ್ದು)

* * * * *

** **ಉಪ ಸಭಾಪತಿ :** ನಾವು ವಿಧಿ ೧೪ಕ್ಕೆ ಹಿಂದೆ ಹೋಗೋಣ. ನಾನು ನೆನಪಿಟ್ಟಿರುವಂತೆ – ಕ್ಷಮಿಸಿ ನನ್ನ ಟಿಪ್ಪಣಿಗಳನ್ನು ಸರಿ ಹೊಂದಿಸಿಕೊಂಡಿಲ್ಲ – ವಿಧಿ ೧೪ಕ್ಕೆ ಅನೇಕ ತಿದ್ದುಪಡಿಗಳಿದ್ದವು, ಅವುಗಳನ್ನು ಒಂದಾದ ಮೇಲೆ ಒಂದರಂತೆ ಮತಕ್ಕೆ ಹಾಕಲಾಯಿತು. ಸಭೆಗೆ ಕಾರಣಗಳು ತಿಳಿದಿರುವಂತೆ ನಾವು ಎರಡೇ ತಿದ್ದುಪಡಿಗಳನ್ನು ಪರಿಶೀಲಿಸುತ್ತಿದ್ದೆವು. ಆದರೆ ಪರಿಶೀಲನೆ ಮುಂದೂಡಲಾಗಿದ್ದಿತು. ಅದರಲ್ಲಿ ಒಂದು ಖಾಜೀ ಸೈಯದ್ ಕರಿಮುದ್ದೀನರಿಂದ ಮಂಡಿಸಲ್ಪಟ್ಟಿದ್ದ ತಿದ್ದುಪಡಿ ಸಂ.೫೧೨ ಮತ್ತೆ ಇನ್ನೊಂದು ನಾನು ಸರಿ ಎಂದಾದರೆ ಅದು ಶ್ರೀ ಟಿ.ಟಿ ಕೃಷ್ಣಮಾಚಾರಿಯವರ ಸಲಹೆಯಾಗಿತ್ತೆ? ಶ್ರೀ ಟಿ.ಟಿ.

---

* ಸಿ.ಎ.ಡಿ. ಸಂಪುಟ ೭, ೬ನೆಯ ಡಿಸೆಂಬರ್, ೧೯೪೮, ಪುಟ ೮೫೩

** ಅದೇ ಪುಟ ೮೪೦

ಕೃಷ್ಣಮಾಚಾರಿಯವರೆ, ತಾವು ಇದನ್ನು ನನಗೆ ತಿಳಿಯಪಡಿಸುವಿರಾ? ಅದು ಸಲಹೆಯಾಗಿತ್ತೇ ಅಥವಾ ಅದೊಂದು ಅಲ್ಪಾವಧಿ ಸೂಚನೆಯ ತಿದ್ದುಪಡಿಯಾಗಿತ್ತೆ?

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಅದೊಂದು ಅಲ್ಪಾವಧಿ ಸೂಚನೆಯ ತಿದ್ದುಪಡಿಯಾಗಿತ್ತು.

**ಉಪ ಸಭಾಪತಿ :** ಅದೊಂದು ನನ್ನಿಂದ ಸೇರಿಕೆಗೆ ಅಂಗೀಕೃತಗೊಂಡಿದ್ದ ಅಲ್ಪಾವಧಿ ಸೂಚನೆಯ ತಿದ್ದುಪಡಿಯಾಗಿದ್ದಿತು. ಈ ಎರಡು ಮಾತ್ರ ಮತಕ್ಕೆ ಹಾಕಲು ಉಳಿದುಕೊಂಡಿವೆ.

* * * * *

+ **ಉಪಸಭಾಪತಿ :** ಡಾ. ಅಂಬೇಡ್ಕರ್‌ರವರಿಂದ ಒಪ್ಪಿಕೊಳ್ಳಲ್ಪಟ್ಟಿರುವ ಶ್ರೀಕೃಷ್ಣಮಾಚಾರಿಯವರ ತಿದ್ದುಪಡಿಗೆ ನಾವೀಗ ಬರುತ್ತೇವೆ.

**ಶ್ರೀ ಹೆಚ್.ವಿ. ಕಾಮತ್** : ಪ್ರತಿಸಲ ಡಾ. ಅಂಬೇಡ್ಕರ್‌ರು ಒಪ್ಪಿರುತ್ತಾರೆ ಅಥವಾ ತಿರಸ್ಕರಿಸಿರುತ್ತಾರೆ ಎಂದು ಹೇಳುವುದು ಅಗತ್ಯವಾದದ್ದೇ?

**ಉಪಸಭಾಪತಿ :** ಕೆಲವು ಸಲ ಅದು ಅಗತ್ಯ. ಎಲ್ಲ ಕಾಲಕ್ಕೆ ಅಲ್ಲ. ನಾನೀಗ ತಿದ್ದುಪಡಿಯನ್ನು ಮತಕ್ಕೆ ಇರಿಸುತ್ತೇನೆ.

**ಪ್ರಶ್ನೆ ಇರುವುದು :**

"ವಿಧಿ ೧೪೮ ಕಲಮು ೨ರಲ್ಲಿ "ಇರುವುದು" ಈ ಶಬ್ದದ ಮುಂದೆ 'ಕಾನೂನಿನ ಕ್ರಮ ಜರುಗಿಸುವುದು' ಮತ್ತು ಇವುಗಳನ್ನು ಸೇರಿಸುವುದು."

ಆ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

ತಿದ್ದುಪಡಿಗೊಂಡಂತೆ ವಿಧಿ ೧೪೮ನ್ನು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

* * * * *

## ವಿಧಿ ೧೫೫ (ಮುಂದುವರಿದುದು)

* **ಉಪಸಭಾಪತಿ :** (ಡಾ. ಹೆಚ್.ಸಿ. ಮುಖರ್ಜಿ) ನಾವೀಗ ವಿಧಿ ೧೫೫ರ ಮೇಲಣ ಚರ್ಚೆಯನ್ನು ಮತ್ತೆ ತೆಗೆದುಕೊಳ್ಳೋಣ.

**ಗೌರವಾನ್ವಿತ ಡಾ. ಅಂಬೇಡ್ಕರ್** (ಬೊಂಬಾಯಿ ಸಾಮಾನ್ಯ): ಮಾನ್ಯರೆ, ಸ್ವಲ್ಪಮಟ್ಟಿನವರೆಗೆ ಈ ವಿಷಯವನ್ನು ಹಾಗೇ ಇರಿಸಲು ನಾನು ಕೇಳಿಕೊಳ್ಳಬಹುದೇ?

**ಉಪಸಭಾಪತಿ :** ಅದು ಸಭೆಯ ಇಚ್ಛೆ ಹಾಗಿದೆಯೆ?

**ಗೌರವಾನ್ವಿತ ಸದಸ್ಯರುಗಳು :** ಹೌದು.

---

\+ ಸಿ.ಎ.ಡಿ. ಸಂಪುಟ ೭, ೩೬ನೆಯ ಡಿಸೆಂಬರ್, ೧೯೪೮, ಪುಟ ೮೪೨

* ಅದೇ, ೭ನೇ ಡಿಸೆಂಬರ್, ೧೯೪೮, ಪು.೮೫೫

## ವಿಧಿ ೨೦

**ಉಪ ಸಭಾಪತಿ :** ಹಾಗಾದರೆ ನಾವು ಮುಂದಿನ ವಿಧಿಗೆ ಹೋಗೋಣ, ಅದು ವಿಧಿ ೨೦ ಆಗಿದೆ. ಸಭೆಯ ಎದುರಿಗಿರುವ ಮಂಡನೆ ಎಂದರೆ :

"ವಿಧಿ ೨೦, ಸಂವಿಧಾನದ ಭಾಗವಾಗಿರಬೇಕು."

ನನ್ನ ಹತ್ತಿರ ತಿದ್ದುಪಡಿಗಳ ಪಟ್ಟಿಯೇ ಇದ್ದು ನಾನು ಅವುಗಳನ್ನು ಓದಲಿರುವೆ. ನಕಾರಾತ್ಮಕ ಮತ ಪರಿಣಾಮ ಹೊಂದಿರುವುದರಿಂದ ತಿದ್ದುಪಡಿ ನಂ. ೬೧೩ ತಳ್ಳಿ ಹಾಕಲ್ಪಟ್ಟಿದೆ. ತಿದ್ದುಪಡಿಗಳಾದ ೬೧೪ ಮತ್ತು ೬೧೬ ಒಂದೇ ತೆರನಾದವುಗಳು : ಸಂ. ೬೧೪ ಮಂಡಿಸಬಹುದು.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ ನಾನು ಮಂಡಿಸುವೆ.

'ವಿಧಿ ೨೦ರ ಆರಂಭದಲ್ಲಿ "ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯ" ಈ ಪದಗಳನ್ನು ಸೇರಿಸುವುದು.'

ಮಾನ್ಯರೆ, ಅದು ಬಿಟ್ಟು ಹೋದ ಅಂಶ ಮಾತ್ರ. ಗೌರವಾನ್ವಿತ ಸದಸ್ಯರುಗಳು ಕಾಣಲಿರುವಂತೆ ವಿಧಿ ೧೯ರಲ್ಲಿ ಅವೇ ಇವೆ, ಸತ್ಯಾಂಶವೆಂದರೆ ವಿಧಿ ೨೦ರಲ್ಲೂ ಅದೇ ಇರಬೇಕು ಏಕೆಂದರೆ ಧರ್ಮಕ್ಕೆ ಸಂಬಂಧಿಸಿದಂತೆ ಈ ವಿಷಯಗಳಲ್ಲಿ ಸಂಪೂರ್ಣ ರೀತಿಯ ಹಕ್ಕುಗಳನ್ನು ನೀಡುವ ಉದ್ದೇಶವಿಲ್ಲ. ರಾಜ್ಯವು ತನ್ನ ಮಟ್ಟಿಗೆ ಈ ಎಲ್ಲ ಸಂಸ್ಥೆಗಳಿಗೆ ಮತ್ತು ಅವುಗಳ ಕಾರ್ಯವ್ಯವಹಾರಗಳಿಗೆ ನಿಯಂತ್ರಿಸುವ ಹಕ್ಕುಗಳನ್ನು ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯ ಇವುಗಳಿಗಾಗಿ ಅಗತ್ಯವೆನಿಸಿದಾಗ ಬಳಸಲು ಕಾದಿರಿಸಿಕೊಂಡಿರಬಹುದು.

**ಉಪಸಭಾಪತಿ :** ಅದನ್ನು ಪಾಸು ಮಾಡಬೇಕಿದ್ದಲ್ಲಿ ನಾನು ತಿದ್ದುಪಡಿ ಸಂ.೬೧೬ನ್ನು ಮತಕ್ಕೆ ಹಾಕಬಹುದು. ಈ ವಿಷಯದಲ್ಲಿ ಯಾವುದೇ ಸದಸ್ಯರಿಗೆ ಏನನ್ನಾದರು ಹೇಳುವುದಿದೆಯೆ?

*********

(ತಿದ್ದುಪಡಿ ಸಂಖ್ಯೆ ೬೧೬ನ್ನು ಮಂಡಿಸಲಿಲ್ಲ.)

* **ಶ್ರೀ ತಾಜಮುಲ್ ಹುಸೇನ :**

"ಪ್ರತಿ ಧಾರ್ಮಿಕ ವರ್ಗ ಅಥವಾ ಅದರ ಯಾವುದೇ ಭಾಗ –

(ಅ) ಧಾರ್ಮಿಕ ಮತ್ತು ಧರ್ಮಾರ್ಥ ಉದ್ದೇಶಗಳಿಗಾಗಿ ಸಂಸ್ಥೆಗಳನ್ನು ಸ್ಥಾಪಿಸಿ ಕಾಪಾಡಿಕೊಂಡು ಹೋಗುವ ಹಕ್ಕನ್ನು ಹೊಂದಿರತಕ್ಕದ್ದು."

ಇವುಗಳು ವಿಧಿಯ ಖಚಿತ ಪದಗಳು. ನಾನು ಈ ಪದಗಳು ಅವು ಇರುವಂತಿರಲು ಇಚ್ಛಿಸುವೆ. ಈ ಪದಗಳನ್ನು ನಾನು ತೆಗೆಯಲು ಇಚ್ಛಿಸುವುದಿಲ್ಲ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ನನಗೆ ಹೇಳುವುದೇನೂ ಇಲ್ಲ.

**ಉಪಸಭಾಪತಿ :** ನಾನೀಗ ತಿದ್ದುಪಡಿಗಳನ್ನು ಒಂದಾದ ಮೇಲೆ ಒಂದರಂತೆ ಮತಕ್ಕೆ ಇಡುವೆ.

ಪ್ರಶ್ನೆಯಿರುವುದು :

---

* ಸಿ.ಎ.ಡಿ. ಸಂಪುಟ ೭, ೭ನೆಯ ಡಿಸೆಂಬರ್, ೧೯೪೮, ಪುಟ ೮೬೩.

"ವಿಧಿ ೨೦ರ ಆರಂಭದಲ್ಲಿ 'ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯ' ಈ ಶಬ್ದಗಳನ್ನು ಸೇರಿಸುವುದು."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

(ಇತರೆ ನಾಲ್ಕು ತಿದ್ದುಪಡಿಗಳನ್ನು ನಿರಾಕರಿಸಲಾಯಿತು)

ತಿದ್ದುಪಡಿಯಾದಂತೆ ವಿಧಿ ೨೦ನ್ನು ಸಂವಿಧಾನಕ್ಕೆ ಸೇರ್ಪಡಿಸಲಾಯಿತು)

## ಹೊಸ ವಿಧಿ ೨೦ ಎ

* **ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ತಿದ್ದುಪಡಿ ಸಂಖ್ಯೆ ೬೩೨ ಅಥವಾ ತಿದ್ದುಪಡಿ ನಂ. ೬೩೩ ಇವುಗಳನ್ನು ನಾನು ಒಪ್ಪಿಕೊಳ್ಳುವುದಿಲ್ಲ.

**ಶ್ರೀ ಹೆಚ್. ಖಾಂಡೇಕರ :** (ಸಿ.ಪಿ. ಮತ್ತು ಬೆರಾರ. ಸಾಮಾನ್ಯ) : ಮಾನ್ಯರೆ, ನಾನು ಮಾತನಾಡಲಿಚ್ಛಿಸುತ್ತೇನೆ.

**ಉಪ ಸಭಾಪತಿ :** ಬಹಳ ತಡವಾಯಿತೆಂಬ ಭಯ ನನಗೆ. ಈಗ ನಾನು ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

(ಈ ಕೆಳಗಿನ ಎರಡೂ ತಿದ್ದುಪಡಿಗಳು ತಿರಸ್ಕೃತಗೊಂಡವು)

(೧) "ವಿಧಿ ೨೧ರಲ್ಲಿ 'ಯಾವುದು' ಈ ಪದದ ನಂತರ ಪೂರ್ತಿಯಾಗಿ ಅಥವಾ ಆಂಶಿಕವಾಗಿ ಸೇರಿಸುವುದು."

(೨) ವಿಧಿ ೨೧ರಲ್ಲಿ "ಯಾವುದರ ವರಮಾನಗಳು" ಈ ಪದಗಳಿಗೆ ಬದಲಾಗಿ "ಯಾವುದೇ ಆದಾಯದ ಮೇಲೆ ಯಾವುದು"ಗಳನ್ನು ಸೇರಿಸುವುದು.

ವಿಧಿ ೨೧ನ್ನು ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ ೨೨

** **ಉಪಸಭಾಪತಿ :** ಡಾ. ಅಂಬೇಡ್ಕರ್‌ರವರ ಹೆಸರಿನಲ್ಲಿರುವ ತಿದ್ದುಪಡಿ ಸಂ. ೬೪೫.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುವೆ.

"ವಿಧಿ ೨೨ರ ಕಲಮು (೧)ರಲ್ಲಿ "ರಾಜ್ಯದಿಂದ" ಈ ಪದಗಳನ್ನು ಬಿಟ್ಟು ಬಿಡುವುದು."

ಈ ತಿದ್ದುಪಡಿಯ ಉದ್ದೇಶ ಉಂಟಾಗಬಹುದಾದ ಅನುಮಾನವನ್ನು ಹೋಗಲಾಡಿಸುವುದಾಗಿದೆ. ಈಗಿರುವಂತೆ ಕರಡಿನಲ್ಲಿ "ರಾಜ್ಯದಿಂದ" ಈ ಪದವು ಉಳಿಯುವುದಾದರೆ, ಈ ಅನುಚ್ಛೇದವು ರಾಜ್ಯಕ್ಕೆ ಹೊರತಾದ ಸಂಸ್ಥೆಗಳಿಗೆ ಧಾರ್ಮಿಕ ಶಿಕ್ಷಣ ನೀಡುವ ಅನುಮತಿ ಕೊಡುತ್ತದೆ ಎಂಬ ಅರ್ಥ ಕಲ್ಪಿಸುತ್ತದೆ. ಈ ವಿಧಿಯಲ್ಲಿ ಅಡಗಿರುವ ತತ್ವವೆಂದರೆ ರಾಜ್ಯದ ಫಂಡಿನಿಂದ ನಡೆಸಲ್ಪಡುವ ಯಾವುದೇ ಸಂಸ್ಥೆಯನ್ನು

---

* ಅದೇ ಪು. ೮೬೬.

** ಸಿ.ಎ.ಡಿ. ಸಂಪುಟ ೭, ೭ನೆಯ ಡಿಸೆಂಬರ್, ೧೯೪೮, ಪುಟ ೪೭೧

ಧಾರ್ಮಿಕ ಶಿಕ್ಷಣ ನೀಡುವ ಉದ್ದೇಶಕ್ಕಾಗಿ ಬಳಸಕೂಡದೆಂಬುದು. ಆ ಧಾರ್ಮಿಕ ಶಿಕ್ಷಣವು ರಾಜ್ಯದಿಂದ ನೀಡಲ್ಪಟ್ಟಿದೆಯೇ ಅಥವಾ ಮತ್ತಾವುದೇ ಸಂಸ್ಥೆಯಿಂದ ನೀಡಲ್ಪಟ್ಟಿದೆಯೇ ಎಂಬ ಪ್ರಶ್ನೆ ಇಲ್ಲ.

* * * * *

* **ಉಪಸಭಾಪತಿ :** ಎಷ್ಟೊಂದು ಸಾಧ್ಯವೋ ಅಷ್ಟೊಂದು ಸದಸ್ಯರುಗಳಿಗೆ ನಾನು ಅವಕಾಶ ನೀಡಬಯಸುತ್ತೇನೆ. ಅವರ ಅಭಿಪ್ರಾಯಗಳನ್ನು ನಾನು ಗೌರವಿಸುತ್ತೇನೆ. ಈಗಾಗಲೆ ಬಹಳಷ್ಟು ಸಂಖ್ಯೆಯ ವಕ್ತಾರರು ಮಾತನಾಡಿರುವುದನ್ನು ನಾನು ಕಾಣುತ್ತೇನೆ. ಹನ್ನೆರಡು ತಿದ್ದುಪಡಿಗಳನ್ನು ಮತಕ್ಕೆ ಹಾಕಬೇಕಾಗಿದೆ. ಒಂಬತ್ತು ತಿದ್ದುಪಡಿಗಳನ್ನು ಮಂಡಿಸಬೇಕಾಗಿದೆ, ಆರು ಜನ ವಕ್ತಾರರು ಈಗಾಗಲೆ ಮಾತನಾಡಿರುತ್ತಾರೆ. ಈ ವಿಧಿಯ ಬಗೆಗೆ ಸಾಕಷ್ಟು ಚರ್ಚೆಯಾಗಿದೆ ಎಂದು ನನಗೆ ಅನಿಸುತ್ತದೆ. ಈಗ ನಾನು ಅಂಬೇಡ್ಕರ್‌ರಿಗೆ ಮಾತನಾಡಲು ಕರೆಯುತ್ತೇನೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** (ಪಶ್ಚಿಮ ಬಂಗಾಳ : ಸಾಮಾನ್ಯ) ಮಾನ್ಯರೆ, ನಾನು ಒಂದು ಅಥವಾ ಎರಡು ಅಂಶಗಳ ಸ್ಪಷ್ಟನೆ ಬಯಸುತ್ತೇನೆ. ನಾನು ಭಾಷಣ ಮಾಡಲು ಹೊರಟಿಲ್ಲ. ಕೇವಲ ಒಂದು ಅಥವಾ ಎರಡು ಅಂಶಗಳನ್ನು ವಿವರಿಸಬಯಸುತ್ತೇನೆ.

**ಉಪಸಭಾಪತಿ :** ಈಗಾಗಲೇ ನನ್ನ ರೂಲಿಂಗ್ ನೀಡಿರುತ್ತೇನೆ. ಹೆಚ್ಚಿನ ಯಾವುದೇ ಭಾಷಣಕ್ಕೆ ಅವಕಾಶ ನೀಡಲಾರೆ, ವಿಶೇಷವಾಗಿ ನೀವು ಅದೇ ಪ್ರಾಂತಕ್ಕೆ ಸೇರಿರುವುದರಿಂದ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಅದೇ ಪ್ರಾಂತಕ್ಕೆ ಸೇರಿರುವುದಕ್ಕೆ ಇದಕ್ಕೆ ಏನೂ ಸಂಬಂಧ ಹೊಂದಿಲ್ಲ. ನಾನು ಬಯಸಿರುವುದು ಕೇವಲ ಒಂದು ಅಂಶದ ಮೇಲೆ ಸ್ಪಷ್ಟನೆ.

**ಉಪಸಭಾಪತಿ :** ಪಂಡಿತಜೀ ನನ್ನ ನಿರ್ಣಯ ಅಂತಿಮ. ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿಯವರೆ, ಮಂಡಿಸಲ್ಪಟ್ಟಿರುವ ತಿದ್ದುಪಡಿಗಳಲ್ಲಿ ನಾನು ಒಪ್ಪಿಕೊಳ್ಳುವುದು ಕೇವಲ ಶ್ರೀ ಕಪೂರರ ತಿದ್ದುಪಡಿ ಸಂಖ್ಯೆ ೬೬೧ನ್ನು ಮಾತ್ರ, ಇದು ವಿಧಿಯಿಂದ ಕಲಮು(೩)ನ್ನು ಬಿಟ್ಟು ಬಿಡುವುದಕ್ಕೆ ಸಂಬಂಧಿಸಿದುದಾಗಿದೆ. ಕ್ಷಮಿಸಿ ಉಳಿದ ತಿದ್ದುಪಡಿಗಳನ್ನು ನಾನು ಒಪ್ಪಿಕೊಳ್ಳಲಾರೆ.

ಈ ಸಭೆಯ ಅಂಗಣದಲ್ಲಿ ಬಹುವಿಧದ ದೃಷ್ಟಿಕೋನಗಳು ವ್ಯಕ್ತಗೊಂಡಿವೆಯಾದ್ದರಿಂದ ಈ ವಿಧಿ ಮಾಡಬಯಸುವುದೇನು ಎನ್ನುವುದನ್ನು ವಿವರಿಸುವುದು ಬಹುಶಃ ಅಪೇಕ್ಷಣೀಯ. ಮಂಡಿಸಲ್ಪಟ್ಟ ಅನೇಕ ತಿದ್ದುಪಡಿಗಳನ್ನು ಗಣಿಸಿದಲ್ಲಿ ಮೂರು ಪ್ರತ್ಯೇಕ ದೃಷ್ಟಿಕೋನಗಳಿವೆ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಮದ್ರಾಸಿನ ಶ್ರೀ ಇಸ್ಮೈಲ್‌ರವರ ವಿಚಾರ ಒಂದು ದೃಷ್ಟಿಕೋನವನ್ನು ಪ್ರತಿನಿಧಿಸುತ್ತದೆ. ಅವರ ಅಭಿಪ್ರಾಯದಲ್ಲಿ, ಧಾರ್ಮಿಕ ಬೋಧನೆ ನೀಡುತ್ತಿರುವುದಕ್ಕೆ ಯಾವುದೇ ತಡೆ ಇರಕೂಡದು ಎನ್ನುವುದು. ಅವರು ವಾದಿಸುವ ಒಂದು ಮಿತಿಯೆಂದರೆ, ಅವುಗಳಿಗೆ ಹಾಜರಾಗುವಂತೆ ಯಾರನ್ನೂ ಒತ್ತಾಯಿಸದಿರುವುದು. ನಾನು ಅವರನ್ನು ಸರಿಯಾಗಿ ಅರ್ಥಮಾಡಿಕೊಂಡಿರುವೆನೆಂದಾದರೆ, ಅದು ಅವರು ತಳೆದಿರುವ ನಿಲುವು ಆಗಿದೆ. ನನ್ನ ಮಿತ್ರ ಶ್ರೀ ಮಾನ್ ಮತ್ತು ಶ್ರೀ ತಾಜಮುಲ್ ಹುಸೇನ ಇವರು ಪ್ರತಿನಿಧಿಸುವ ಇನ್ನೊಂದು ವಿಚಾರವಿದೆ. ಅವರುಗಳ ಪ್ರಕಾರ, ಧಾರ್ಮಿಕ ಬೋಧನೆಯೇ ಇರಕೂಡದು, ಶೈಕ್ಷಣಿಕ ಸಂಸ್ಥೆಗಳಲ್ಲೂ ಕೂಡ. ಪ್ರೊ. ಕೆ.ಟಿ. ಶಾಹ ಅವರಿಂದ ವ್ಯಕ್ತಪಡಿಸಲ್ಪಟ್ಟಿರುವ ಮೂರನೇ ದೃಷ್ಟಿಕೋನವೂ ಇದೇ. ಅವರು ಹೇಳುವುದು

---

\+ ಅದೇ ಪು.ಪು. ೮೮೨ – ೮೬

ರಾಜ್ಯದ ಫಂಡಿನಿಂದ ನಡೆಸಲ್ಪಡುವ ಆ ಜಿಲ್ಲಾ ಬೋರ್ಡು ತನ್ನ ವ್ಯಾಪ್ತಿಯಲ್ಲಿ ಬರುವ ಪ್ರತಿಯೋರ್ವ ವ್ಯಕ್ತಿಯ ಮೇಲೆ ಲೆವಿ ವಿಧಿಸಿರುತ್ತದೆ. ಅದೊಂದು ಸಾಮಾನ್ಯ ಟ್ಯಾಕ್ಸ್ ಆಗಿರುತ್ತದೆ. ಒಂದು ವೇಳೆ ಆ ಜಿಲ್ಲಾ ಅಥವಾ ಲೋಕಲ್ ಬೋರ್ಡ್‌ನಿಂದ ನೀಡಲ್ಪಟ್ಟ ಧಾರ್ಮಿಕ ಬೋಧನೆ ಬಹುಸಂಖ್ಯಾತ ಸಮುದಾಯದ ಮಕ್ಕಳಿಗೆ ಸೀಮಿತಗೊಳಿಸಿದಲ್ಲಿ ಅದು ವಿಧಿ ೨೧ರ ದುರುಪಯೋಗವಾದಂತೆ. ಏಕೆಂದರೆ ಮುಸ್ಲಿಂ ಸಮುದಾಯದ ಮಕ್ಕಳು ಅಥವಾ ಮತ್ತಾವುದೇ ಸಮುದಾಯದ ಮಕ್ಕಳು ಶಾಲೆಯಲ್ಲಿ ನೀಡಲಾದ ಆ ಧಾರ್ಮಿಕ ಬೋಧನೆಗೆ ಹಾಜರಾಗಲು ಆಸಕ್ತರಾಗದೆ ಇರಬಹುದು. ಅಂತಹವರ ಪಾಲಿಗೆ ಜಿಲ್ಲಾ, ಲೋಕಲ್ ಬೋರ್ಡ್ ಫಂಡ್‌ಗೆ ವಂತಿಗೆ ಕೊಡಲು ಒತ್ತಾಯಿಸುವುದಕ್ಕಿಂತ ಕಡಿಮೆಯೇನು ಆಗುವುದಿಲ್ಲ.

ಎರಡನೆ ಅಡಚಣೆಯು ಮೊದಲನೆಯದಕ್ಕಿಂತ ಹೆಚ್ಚು ವಾಸ್ತವವಾದದ್ದು. ಈ ದೇಶದಲ್ಲಿ ನಾವು ಅನೇಕ ಧರ್ಮಗಳನ್ನು ಹೊಂದಿದ್ದೇವೆ. ಉದಾಹರಣೆಗೆ ಅನೇಕ ಮತ ಪಂಥಗಳಲ್ಲಿ ನಂಬಿಗೆಯುಳ್ಳ ಅನೇಕ ಪ್ರಕಾರದ ಜನರನ್ನೊಳಗೊಂಡ ಮುಂಬಯಿ ಪಟ್ಟಣವನ್ನೇ ತೆಗೆದುಕೊಳ್ಳಿ. ಉದಾಹರಣೆಗೆಂದು ಮುಂಬಯಿ ನಗರ ಪಾಲಿಕೆಯಿಂದ ನಡೆಸಿಕೊಂಡು ಬರುತ್ತಿದ್ದ ಶಾಲೆ ಇತ್ತೆಂದು ಊಹಿಸಿಕೊಳ್ಳಿ. ನಿಸ್ಸಂಶಯವಾಗಿ ಅಂತಹ ಶಾಲೆ ಹಿಂದೂ ಧರ್ಮದಲ್ಲಿ ನಂಬಿಗೆಯುಳ್ಳ ಹಿಂದುಗಳ ಮಕ್ಕಳನ್ನು ಒಳಗೊಂಡಿರುತ್ತದೆ, ಕ್ರಿಶ್ಚಿಯನ್ ಸಮುದಾಯಕ್ಕೆ, ಝೋರೋಸ್ಟ್ರಿಯನ್ ಸಮುದಾಯಕ್ಕೆ ಅಥವಾ ಜ್ಯೂಯಿಶ್ ಸಮುದಾಯಕ್ಕೆ ಸೇರಿದ ಮಕ್ಕಳೂ ಅಲ್ಲಿ ಇರುತ್ತಾರೆ. ಸಂಸ್ಥೆಗಳಲ್ಲಿ ಯಾವುದೇ ಧಾರ್ಮಿಕ ಬೋಧನೆಗೆ ಅನುಮತಿ ನೀಡಕೂಡದು. ಅಷ್ಟೇ ಅಲ್ಲ, ಆಂಶಿಕವಾಗಿ ರಾಜ್ಯದ ಫಂಡಿನಿಂದ ನಡೆಸಲ್ಪಡುವ ಶೈಕ್ಷಣಿಕ ಸಂಸ್ಥೆಗಳಲ್ಲಿಯೂ ಕೂಡ ಯಾವುದೇ ಧಾರ್ಮಿಕ ಬೋಧನೆಗೆ ಅನುಮತಿ ನೀಡಕೂಡದು ಎಂದು.

ಈಗ, ಕರಡಿನಲ್ಲಿ ಈಗಿರುವಂತೆ ಮಧ್ಯಮ ಮಾರ್ಗವನ್ನು ಅನುಸರಿಸಲಾಗಿದೆ ಎಂದು ಹೇಳುವ ಸ್ವಾತಂತ್ರ್ಯ ತೆಗೆದುಕೊಳ್ಳುತ್ತೇನೆ. ಸಭೆಗೆ ಅದು ಒಪ್ಪಿಗೆಯಾಗುವುದೆಂದು ಆಶಿಸುತ್ತೇನೆ. ಶ್ರೀ ಇಸ್ಮಾಯಿಲ್‌ರವರು ಪ್ರತಿಪಾದಿಸಿರುವ ದೃಷ್ಟಿಕೋನ ಹೆಸರಿಸುವುದಾದರೆ ಧಾರ್ಮಿಕ ಭೋಧನೆಯ ಮೇಲೆ ಯಾವುದೇ ಪ್ರತಿಬಂಧವಿರಕೂಡದು. ಹೆಚ್ಚಾಗಿ ಆ ಧಾರ್ಮಿಕ ಬೋಧನೆಗೆ ಅವಕಾಶ ಒದಗಿಸುವುದು. ಇವುಗಳನ್ನು ಒಪ್ಪಿಕೊಳ್ಳುವಲ್ಲಿ ನನ್ನ ನಿರ್ಣಯದಲ್ಲಿ ಮೂರು ಕಾರಣಗಳು ಅಡ್ಡಿಯೊಡ್ಡುತ್ತವೆ. ಆ ಕಾರಣಗಳನ್ನು ನಾನು ಸಂಕ್ಷಿಪ್ತವಾಗಿ ಹೇಳುತ್ತೇನೆ.

ಮೊದಲನೆಯ ಕಾರಣವಿದು. ವಿಧಿ ೨೧, ಒಳಗೊಂಡಿರುವ, ತೆರಿಗೆಗಳ ಮೂಲಕ ಎತ್ತಲಾಗಿರುವ ಸಾರ್ವಜನಿಕ ಫಂಡನ್ನು ಯಾವುದೇ ವಿಶೇಷ ಸಮುದಾಯದ ಲಾಭಕ್ಕಾಗಿ ಬಳಸಕೂಡದು ಎನ್ನುವ ಪ್ರಸ್ತಾಪವನ್ನು ನಾವು ಒಪ್ಪಿಕೊಂಡಿರುತ್ತೇವೆ. ಉದಾಹರಣೆಗೆ ನಾವು ಯಾವುದೇ ವಿಶೇಷ ಧಾರ್ಮಿಕ ಬೋಧನೆಗೆ ಅನುಮತಿ ನೀಡಿದ್ದರೆ, ಜಿಲ್ಲಾ ಅಥವಾ ಲೋಕಲ್ ಬೋರ್ಡನಿಂದ ಸ್ಥಾಪಿಸಲ್ಪಟ್ಟ ಶಾಲೆಯೊಂದು, ಅದರಲ್ಲಿ ಅಭ್ಯಾಸ ಮಾಡುವ ಬಹುಸಂಖ್ಯಾತ ವಿದ್ಯಾರ್ಥಿಗಳು ಹಿಂದುಗಳಾಗಿರುವರೆಂಬ ಆಧಾರದ ಮೇಲೆ ಧಾರ್ಮಿಕ ಬೋಧನೆಗೆ ಅವಕಾಶ ನೀಡಿದಲ್ಲಿ ಅದರ ಪರಿಣಾಮವು ವಿಧಿ ೨೧ರಲ್ಲಿಯ ಪ್ರಸ್ತಾಪಗಳಿಗೆ ವಿರುದ್ಧ ಹೋಗುತ್ತದೆ. ಮುಂದೆ ಹೋದಲ್ಲಿ, ಎರಡನೆಯ ಕಾರಣ ನನಗೆ ಅನ್ನಿಸುತ್ತದೆ ಇದಕ್ಕೂ ಮುಂದೆ ಹೋಗುವುದು ಅಪೇಕ್ಷಣೀಯವೂ ಹೌದು, ಹಿಂದೂಗಳನ್ನು ಮತ್ತೆ ಅನೇಕ ಪ್ರಕಾರಗಳಾಗಿ ವಿಂಗಡಿಸಬಹುದು, ಸನಾತನ ಹಿಂದೂಗಳಿರುತ್ತಾರೆ, ವೈದಿಕ ಧರ್ಮದಲ್ಲಿ ನಂಬಿಕೆಯಿಡುವ ವೈದಿಕ ಹಿಂದೂಗಳೂ, ಬೌದ್ಧರು, ಜೈನರು ಇರುತ್ತಾರೆ – ಹಿಂದೂಗಳಲ್ಲಿಯೇ ಶೈವರು ವೈಷ್ಣವರು ಹೀಗೆ. ಶೈಕ್ಷಣಿಕ ಸಂಸ್ಥೆಗಳು ಈ ಎಲ್ಲ ಮಕ್ಕಳನ್ನು ಒಂದೇ ತೆರನಾಗಿ ಸಮಾನವಾಗಿ ಕಾಣಬೇಕೆ ಅಲ್ಲದೆ ಎಲ್ಲ ಹೆಸರಿನಲ್ಲಿ ಬೋಧನೆ ನೀಡಬೇಕೆ?

ಅಂತಹ ಹೊಣೆಯನ್ನು ರಾಜ್ಯಕ್ಕೆ ವಹಿಸಿಕೊಡುವುದೆಂದರೆ ಅಸಾಧ್ಯವಾದದ್ದನ್ನು ಮಾಡಲು ಅದಕ್ಕೆ ಕೇಳಿಕೊಂಡಂತೆ ಎಂದು ನನಗೆ ಅನಿಸುತ್ತದೆ.

ಮೂರನೆಯ ಅಂಶ ಯಾವುದನ್ನು ನಾನು ಈ ಸಂರ್ಭದಲ್ಲಿ ಉಲ್ಲೇಖಿಸ ಬಯಸುವೆನೋ ದುರ್ದೈವದಿಂದ ಅದೆಂದರೆ ಈ ದೇಶದಲ್ಲಿ ಜಾರಿಯಲ್ಲಿರುವ ಧರ್ಮಗಳು ಕೇವಲ ಸಾಮಾಜಿಕವಲ್ಲದವು ಅಷ್ಟೆ ಆಗಿಲ್ಲ; ಅವುಗಳ ಪರಸ್ಪರ ಸಂಬಂಧಗಳಿಗೆ ಸಂಬಂಧಿಸಿದಂತೆ ಅವುಗಳು ಸಮಾಜ ವಿರೋಧಿ ಕೂಡ ಆಗಿವೆ, ಒಂದು ಧರ್ಮ ಹೇಳುವುದು ತನ್ನ ಬೋಧನೆಗಳೇ ಮುಕ್ತಿಗೆ ದಾರಿ, ಉಳಿದ ಧರ್ಮಗಳೆಲ್ಲ ತಪ್ಪು ಎನ್ನುವುದು; ಮುಸ್ಲಿಮರು ನಂಬುವುದು ಇಸ್ಲಾಂನ ಮತ ತತ್ವಸಿದ್ಧಾಂತದಲ್ಲಿ ನಂಬಿಗೆ ಇಲ್ಲದಿರುವವ ಕಾಫಿರ್‌ನು, ಅವನು ಮುಸ್ಲಿಂಮರಿಗೆ ನೀಡುವ ಬಂಧುತ್ವ ರೀತಿಯ ಆಚರಣೆಗೆ ಅನರ್ಹನು ಎಂದು. ಕ್ರಿಶ್ಚಿಯನ್ನರೂ ಅಂತಹುದೇ ನಂಬಿಕೆ ಹೊಂದಿದವರಾಗಿದ್ದಾರೆ. ಈ ದೃಷ್ಟಿಯಿಂದ, ಶಾಲೆಯಲ್ಲಿ ಇಂತಹ ಧರ್ಮವೊಂದರ ಸತ್ಯವಾದ ಲಕ್ಷಣ ಮತ್ತು ಮತ್ತೊಂದರ ದೋಷಯುಕ್ತ ಲಕ್ಷಣವುಳ್ಳ ವಿರೋಧಾಭಾಸಗಳನ್ನು ಜೊತೆ ಜೊತೆಯಲ್ಲಿ ಇಡುವುದರಿಂದ ಸಂಸ್ಥೆಯೊಂದರ ಶಾಂತಿಯುತ ಪರಿಸರವನ್ನು ನಾವು ಬಹಳಷ್ಟು ಮಟ್ಟಿಗೆ ಕದಡಿಸಿದಂತಾಗುತ್ತದೆ ಎಂದು ನನಗೆ ಅನಿಸುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ, ವಿಧಿ ೨೨(೧)ರಲ್ಲಿ ರಾಜ್ಯದ ಸಂಸ್ಥೆಗಳಲ್ಲಿ ಯಾವುದೇ ಧಾರ್ಮಿಕ ಬೋಧನೆ ಇರಕೂಡದು ಎನ್ನುವ ನಿಯಮ ಹಾಕುವುದರಿಂದ ನನ್ನ ನಿರ್ಣಯದಲ್ಲಿ ಸಂಪೂರ್ಣ ಸುರಕ್ಷಿತ ದಾರಿ ಅನುಸರಿಸಿದಂತಾಗುತ್ತದೆ.

ಈ ಎರಡನೇ ಕಲಮಿಗೆ ಸಂಬಂಧಿಸಿದಂತೆ ನನ್ನ ವಿಚಾರವೆಂದರೆ ಅದನ್ನು ಸಾಕಷ್ಟು ಒಳ್ಳೆಯ ರೀತಿಯಲ್ಲಿ ತಿಳಿಯಲಾಗಿಲ್ಲ. ನಾವು ಸಮುದಾಯವೊಂದರ ಯಾವುದು ತನ್ನ ಮಕ್ಕಳ ಶೈಕ್ಷಣಿಕ ಅಥವಾ ಸಾಂಸ್ಕೃತಿಕ ವಿಷಯದ ಉನ್ನತಿಗಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದೆಯೋ, ಅದು ರಾಜ್ಯದಿಂದ ಸಹಾಯ ಪಡೆಯುತ್ತದೆ ಎನ್ನುವ ಸತ್ಯಾಂಶವನ್ನು ಪರಿಗಣಿಸದೆ ಅಂತಹ ಸಂಸ್ಥೆಯಲ್ಲಿ ಧಾರ್ಮಿಕ ಬೋಧನೆ ನೀಡಲು ಅವಕಾಶ ಬಗೆದಿರುವಿಕೆಯನ್ನು ರಾಜಿ ಮಾಡಿಕೊಳ್ಳಲು ಯತ್ನಿಸಿರುತ್ತೇವೆ. ರಾಜ್ಯವು ಅನುದಾನ ನೀಡುವ ಸ್ವಾತಂತ್ರ್ಯ ಹೊಂದಿದೆ; ಅನುದಾನ ನೀಡದೆ ಇರುವ ಸ್ವಾತಂತ್ರ್ಯವು ಅದಕ್ಕಿದೆ: ನಾವು ಹಾಕಿರುವ ಒಂದೇ ಮಿತಿ ಎಂದರೆ ಸಂಸ್ಥೆಯೊಂದು ಸಾರ್ವಜನಿಕ ಸಮಿತಿಯಿಂದ ನಡೆಸಲ್ಪಡದೆ ಸಮುದಾಯವೊಂದರಿಂದ ಸ್ಥಾಪಿಸಿ ನಡೆಸಲ್ಪಡುತ್ತದೆ ಎನ್ನುವ ಆಧಾರದ ಮೇಲೆ ರಾಜ್ಯವು ಗ್ರಾಂಟ್ – ಇನ್ – ಏಡ್‌ಕೋಡ್‌ನ ಅಂತರ್ಗತ ಗ್ರ್ಯಾಂಟನ್ನು ಕ್ಲೇಮ್ ಮಾಡುವ ಹಕ್ಕಿನಿಂದ ಅದನ್ನು ವಂಚಿತ ಗೊಳಿಸುವಂತಿಲ್ಲ. ನಾವು ವಿಧಿಸುವ ಮತ್ತೊಂದು ಅರ್ಹತೆ ಏನೆಂದರೆ ನಂತರ ಸಂಸ್ಥೆಯೊಂದಕ್ಕೆ ಧಾರ್ಮಿಕ ಬೋಧನೆಗೆ ಅವಕಾಶ ನೀಡುವ ಸ್ವಾತಂತ್ರ್ಯವಿರುತ್ತದೆ, ರಾಜ್ಯದಿಂದ ಗ್ರ್ಯಾಂಟ್ ಅಂತಹ ಸಂಸ್ಥೆಗೆ ನೀಡಕೂಡದೆಂದೇನಿಲ್ಲ. ಎಲ್ಲಿಯವರೆಗೆ ಬೇರೆ ಸಮುದಾಯಕ್ಕೆ ಸೇರಿದ ಮಕ್ಕಳ ಪಾಲಕರಿಂದ ಅನುಮತಿಯನ್ನು ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅದು ಅವರಿಗೆ ಧಾರ್ಮಿಕ ಬೋಧನೆ ನೀಡುವಂತಿಲ್ಲ ಅಥವಾ ಅವರಿಗೆ ಅದನ್ನು ಕಡ್ಡಾಯಗೊಳಿಸುವಂತಿಲ್ಲ. ನನಗೆ ಅನಿಸುತ್ತದೆ ಅದೊಂದು ಹಿತರಕವಾದ ಷರತ್ತು ಆಗಿದೆ. ಅದು ಎರಡು ಕಾರ್ಯಗಳನ್ನು ನಿರ್ವಹಿಸುತ್ತದೆ...........

**ಶ್ರೀ ಹೆಚ್.ವಿ. ಕಾಮತ್ :** ಸ್ಪಷ್ಟನೆಯ ಪಾಯಿಂಟ್‌ವೊಂದರ ಮೇಲೆ, ಯಾವ ಸಂಸ್ಥೆಗಳು ಮತ್ತು ಶಾಲೆಗಳು ಸಮುದಾಯ ಅಥವಾ ಅಲ್ಪಸಂಖ್ಯಾತರಿಂದ ತಮ್ಮ ಮಕ್ಕಳಿಗೋಸ್ಕರವೇ ಅಂದರೆ ಎಲ್ಲ ಸಮುದಾಯಗಳ ಮಕ್ಕಳಿಂದ ಕೂಡಿದ ಮಿಶ್ರ ಶಾಲೆಯಲ್ಲಿ, ಸಮುದಾಯವೊಂದರಿಂದ ತನ್ನ ಸಮುದಾಯದ ಮಕ್ಕಳಿಗಾಗಿ ನಡೆಸಲ್ಪಡುವ ಶಾಲೆಯ ಸ್ಥಿತಿ ಏನು ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ನನ್ನ ಮಿತ್ರ ಶ್ರೀ ಕಾಮತರು ಮತ್ತೊಂದು ವಿಧಿಯನ್ನು ಓದಿದ್ದಾರೆ. ಅವರು ಕಾಣುವುದೆಂದರೆ, ಯಾವೊಂದು ಸಂಸ್ಥೆ ಅದು ಸಮುದಾಯದಿಂದ ನಡೆಸಲ್ಪಡುವುದಾಗಿರಬಹುದು ಇಲ್ಲವೆ ಬೇರೆಯಾಗಿರಬಹುದು. ಒಂದು ವೇಳೆ ಗ್ರ್ಯಾಂಟ್ ಪಡೆಯಿತೆಂದರೆ ಆ ಶಾಲೆಯನ್ನು ಎಲ್ಲ ಸಮುದಾಯಗಳಿಗಾಗಿ ತೆರೆದಿಡಬೇಕಾಗುತ್ತದೆ. ಆ ಉಪಬಂಧವನ್ನು ಅವರು ಓದಿಲ್ಲ.

ಆದುದರಿಂದ, ಉಪಕಲಮು (೨)ರಿಂದ ನಾವು ನಿಜವಾಗಿಯೂ ಎರಡು ಉದ್ದೇಶಗಳನ್ನು ಸಾಧಿಸುತ್ತಿದ್ದೇವೆ. ಒಂದು ಎಂದರೆ ನಾವು ಸಮುದಾಯವೊಂದಕ್ಕೆ ಯಾವುದು ಸಂಸ್ಥೆಯೊಂದನ್ನು ತನ್ನ ಧಾರ್ಮಿಕ ಅಥವಾ ಸಾಂಸ್ಕೃತಿಕ ಜೀವನವನ್ನು ಉನ್ನತಗೊಳಿಸಿಕೊಳ್ಳಲು ಸ್ಥಾಪಿಸಿಕೊಂಡಿದೆಯೋ ಅದಕ್ಕೆ ಶಾಲೆಯಲ್ಲಿ ಅಂತಹ ಬೋಧನೆಗೆ ಅನುಮತಿಸಿರುವುದು. ಆ ಶಾಲೆಯಲ್ಲಿ ಓದುವ ಇತರ ಸಮುದಾಯದ ಮಕ್ಕಳಿಗೆ ಅವರ ಪಾಲಕರು ಅನುಮತಿಸದ ಹೊರತು ನಿಸ್ಸಂಶಯವಾಗಿ ಧಾರ್ಮಿಕ ಬೋಧನೆಗೆ ಹಾಜರಾಗುವುದಕ್ಕೆ ಕಡ್ಡಾಯಗೊಳಿಸದಿರುವುದಕ್ಕೂ ನಾವು ಅವಕಾಶ ಒದಗಿಸಿರುತ್ತೇವೆ. ನಾನು ಹೇಳಿರುವಂತೆ, ನಾವು ದ್ವಿ ಉದ್ದೇಶಗಳನ್ನು ಸಾಧಿಸಿರುತ್ತೇವೆ ಮತ್ತು ಧಾರ್ಮಿಕ ಶಿಕ್ಷಣ ನೀಡಬಯಸುವವರು ತಮ್ಮ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಲು ಸ್ವಾತಂತ್ರ್ಯ ಹೊಂದಿದ್ದಾರೆ. ಅವುಗಳು ರಾಜ್ಯದಿಂದ ಧನಸಹಾಯ ಕ್ಲೇಮ್ ಮಾಡಬಹುದು, ಧಾರ್ಮಿಕ ಬೋಧನೆ ನೀಡಬಹುದು. ಆದರೆ ಇತರೆ ಧರ್ಮದವರ ಮೇಲೆ ಆ ಬೋಧನೆಯನ್ನು ಒತ್ತಾಯಿಸುವಂತಿಲ್ಲ. ಆದುದರಿಂದ ಈ ವಿಧಿಯಿಂದ ನಾವು ಸಂಪೂರ್ಣ ಧಾರ್ಮಿಕ ಶಿಕ್ಷಣಕ್ಕೇನೆ ನಿರ್ಬಂಧನೆ ಹೇರಿರುತ್ತೇವೆ ಎಂದು ಹೇಳುವುದು ಸರಿಯಲ್ಲ. ಕೆಲ ಸ್ಥಿತಿಗಳಿಗೆ ಒಳಪಟ್ಟಂತೆ ತನ್ನ ಧ್ಯೇಯ ಧೋರಣೆಗಳಂತೆ ಪ್ರತಿಯೊಂದು ಸಮುದಾಯಕ್ಕೆ ಧಾರ್ಮಿಕ ಶಿಕ್ಷಣ ನೀಡುವ ಸ್ವಾತಂತ್ರ್ಯ ಕೊಡಲಾಗಿದೆ. ತಡೆಹಾಕಲಾಗಿರುವುದೆಂದರೆ, ಪಬ್ಲಿಕ್ ಫಂಡಿನಿಂದಲೇ ನಡೆಸಲ್ಪಡುವ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣ ನೀಡುವ ಮುಕ್ತತೆ ಇರುವುದಿಲ್ಲ ಎನ್ನುವುದು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನಾನು ಗೌರವಾನ್ವಿತ ಸದಸ್ಯರಿಗೆ ಪ್ರಶ್ನೆಯೊಂದನ್ನು ಹಾಕಬಹುದೆ? ಉದಾಹರಣೆಗೆ ಸಂಪೂರ್ಣವಾಗಿ ಸರಕಾರದಿಂದಲೇ ನಡೆಸಲ್ಪಡುವ ಕಲ್ಕತ್ತಾದ ಸಂಸ್ಕೃತ ಕಾಲೇಜಿನಂತಹ ಶೈಕ್ಷಣಿಕ ಸಂಸ್ಥೆಯೊಂದಿದೆ ಎಂದಿಟ್ಟುಕೊಳ್ಳೋಣ. ಅದರಲ್ಲಿ ವೇದಗಳನ್ನು ಕಲಿಸಲಾಗುತ್ತದೆ, ಸ್ಮೃತಿಗಳನ್ನು ಕಲಿಸಲಾಗುತ್ತದೆ, ಗೀತೆಯನ್ನು ಕಲಿಸಲಾಗುತ್ತದೆ, ಉಪನಿಷತ್‌ಗಳನ್ನು ಕಲಿಸಲಾಗುತ್ತದೆ. ಬಂಗಾಲದ ಹಲವಾರು ಭಾಗಗಳಲ್ಲಿ ಅಂತಹ ಸಂಸ್ಕೃತ ಬೋಧನೆ ನೀಡಲಾಗುವ ಸಂಸ್ಥೆಗಳಿವೆ. ವಿಧಿ ೨೨ (೧)ರನ್ವಯ ರಾಜ್ಯದ ಫಂಡಿನಿಂದ ನಡೆಸಲ್ಪಡುವ ಸಂಸ್ಥೆಯಲ್ಲಿ ಕಡ್ಡಾಯದ ಧಾರ್ಮಿಕ ಬೋಧನೆ ನೀಡುವಂತಿಲ್ಲ. ನನ್ನ ಪಾಯಿಂಟ್ ಏನಿದೆ ಎಂದರೆ ವೇದಗಳ ಅಥಾವ ಸ್ಮೃತಿಗಳ ಅಥವಾ ಶಾಸ್ತ್ರಗಳ ಅಥವಾ ಉಪನಿಷತ್ತುಗಳ ಬೋಧನೆ ಧಾರ್ಮಿಕ ಬೋಧನೆ ಅರ್ಥದ ಅಂತರ್ಗತ ಬರುವುದೆಂದು ಅರ್ಥೈಸಬಹುದೇ ಹೇಗೆ ಎನ್ನುವುದು. ಆ ಸಂದರ್ಭದಲ್ಲಿ ಈ ಎಲ್ಲ ಸಂಸ್ಥೆಗಳನ್ನು ಮುಚ್ಚಬೇಕಾಗಿ ಬರುತ್ತದೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಸರಿ, ನನ್ನ ಮಿತ್ರ ಶ್ರೀ ಮೈತ್ರಾರವರು ಉಲ್ಲೇಖಿಸಿರುವ ಸಂಸ್ಥೆಗಳ ಲಕ್ಷಣಗಳ ಬಗೆಗೆ ಖಚಿತವಾದ ತಿಳಿವಳಿಕೆ ನನಗೆ ಇಲ್ಲವಾದ್ದರಿಂದ ನನಗೆ ಏನನ್ನೂ ಹೇಳಲು ಸಾಧ್ಯವಿಲ್ಲ.

**ಪಂಡಿತ ಲಕ್ಷ್ಮೀ ಕಾಂತ ಮೈತ್ರಾ :** ಸರಕಾರಿ ಸಂಸ್ಕೃತ ಕಾಲೇಜುಗಳಲ್ಲಿ ಮತ್ತು ಶಾಲೆಗಳಲ್ಲಿ ಗೀತಾ, ಉಪನಿಷತ್ತುಗಳು ಮತ್ತು ವೇದಗಳ ಬೋಧನೆಯ ಉದಾಹರಣೆಯನ್ನು ತೆಗೆದುಕೊಳ್ಳಿ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ನನ್ನದೇ ಆದ ದೃಷ್ಟಿಕೋನ ಹೀಗಿದೆ. ಅದೆಂದರೆ ಸಂಶೋಧನೆ ಅಥವಾ ಅಧ್ಯಯನವನ್ನು ಧಾರ್ಮಿಕ ಬೋಧನೆಯಿಂದ ಬೇರ್ಪಡಿಸಬೇಕು ಎನ್ನುವುದು. ಅವುಗಳು ಬೇರೆ ವಿಷಯಗಳು. ಧಾರ್ಮಿಕ ಬೋಧನೆ ಎಂದರೆ ಇದು ಉದಾಹರಣೆಗೆ, ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದಂತೆ, ಅವರು ನಂಬುವುದು ಒಂದು ದೇವರಲ್ಲಿ, ಕೊನೆಯ ಪ್ರವಾದಿ ಪೈಗಂಬರನಲ್ಲಿ ನಂಬಿಕೆ ಇತ್ಯಾದಿ, ಬೇರೆ ಶಬ್ದಗಳಲ್ಲಿ ನಾವಿದನ್ನು ಕರೆಯುವುದು "ಮತ ತತ್ವ" ಎಂದು. ಮತ ತತ್ವವು ಅಧ್ಯಯನಕ್ಕಿಂತ ಭಿನ್ನ.

**ಉಪಸಭಾಪತಿ :** ಒಂದು ನಿಮಿಷಕ್ಕೆ ನಾನು ಮಧ್ಯ ಬರಬಹುದೇ? ಕಲಕತ್ತಾ ವಿಶ್ವವಿದ್ಯಾಲಯದ ಕಾಲೇಜುಗಳ ಇನ್ಸ್‌ಪೆಕ್ಟರನಾಗಿ, ಪಂಡಿತ ಮೈತ್ರಾರವರಿಗೆ ತಿಳಿದಂತೆ ನಾನು ಸಂಸ್ಕೃತ ಕಾಲೇಜಿನ ತನಿಖೆ ಮಾಡುತ್ತಿದ್ದೆ. ಅಲ್ಲಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಕೋರ್ಸು ಅಲ್ಲದೆ ಸಂಸ್ಕೃತ ಸಾಹಿತ್ಯದ ವಾಸ್ತವದಲ್ಲಿ ಸಂಸ್ಕೃತದ ಪವಿತ್ರಗ್ರಂಥಗಳ ಅಧ್ಯಯನ ಮಾಡಬೇಕಾಗುತ್ತದೆಯಾದರೂ ಅದನ್ನು ಎಂದೂ ಧಾರ್ಮಿಕ ಬೋಧನೆಯಿಂದಾಗಿ ಪರಿಗಣಿಸದೆ ಸಾಂಸ್ಕೃತಿಕ ಕೋರ್ಸು ಎಂದು ಪರಿಗಣಿಸಲ್ಪಡುತ್ತಿತ್ತು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನನ್ನ ವಾದವಿದು. ಇದೊಂದು ಸಂಶೋಧನೆಯ ಪ್ರಶ್ನೆಯಲ್ಲ. ಇದು ಕೇವಲ ಧಾರ್ಮಿಕ ಬೋಧನೆ ಅಥವಾ ಅಧ್ಯಯನದ ಧಾರ್ಮಿಕ ಶಾಖೆಯಾಗಿದೆ.

ಗೀತಾ ಅಥವಾ ಉಪನಿಷತ್ತುಗಳ ಮೇಲಿನ ಉಪನ್ಯಾಸಗಳನ್ನು ಧಾರ್ಮಿಕ ಬೋಧನೆಯೆಂದು ಪರಿಗಣಿಸಲಾಗುವುದೆ? ಎಂದು ನಾನು ಕೇಳುತ್ತೇನೆ. ಉಪನಿಷತ್ತುಗಳನ್ನು ನಿರೂಪಿಸುವುದು ಸಂಶೋಧನೆಯ ವಿಷಯವಲ್ಲ.

**ಉಪಸಭಾಪತಿ :** ಇದೊಂದು ವಿದ್ಯಾರ್ಥಿಗಳಿಗೆ ಕಲಿಸುವ ಪ್ರಶ್ನೆಯಾಗಿದೆ ಮತ್ತು ಸಂಸ್ಕೃತ ಕಾಲೇಜಿನಲ್ಲಿ ಓರ್ವ ಮುಸ್ಲಿಂ ವಿದ್ಯಾರ್ಥಿ ಇದ್ದ ಘಟನೆಯನ್ನು ನಾನು ಅರಿತಿರುವೆ.

**ಶ್ರೀ ಹೆಚ್. ವಿ. ಕಾಮತ್ :** ಅಂಶವೊಂದರ ಸ್ಪಷ್ಟನೆಯ ಮೇಲೆ ನನ್ನ ಮಿತ್ರ ಡಾ. ಅಂಬೇಡ್ಕರ್‌ರವರು ಸಮುದಾಯವೊಂದು ಕೇವಲ ತನ್ನ ಸಮುದಾಯದ ವಿದ್ಯಾರ್ಥಿಗಳಿಗೆಂದೇ ನಡೆಸುವ ಶಾಲೆಯಲ್ಲಿ ಧಾರ್ಮಿಕ ಬೋಧನೆ ಕಡ್ಡಾಯವಾಗಿರಬಾರದೆ ಅನ್ನುವರೆ?

**ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್ :** ಅದು ಅವರಿಗೆ ಬಿಟ್ಟದ್ದು. ಅದನ್ನು ಕಡ್ಡಾಯಗೊಳಿಸುವುದು ಅಥವಾ ಬಿಡುವುದು ಆ ಸಮುದಾಯಕ್ಕೆ ಬಿಟ್ಟದ್ದು. ಶಾಲೆಯನ್ನು ನಡೆಸುವ ಆ ಸಮುದಾಯಕ್ಕೆ ಸೇರದೆ ಇರುವ ವಿದ್ಯಾರ್ಥಿಗಳಿಗೆ ಅದನ್ನು ಕಡ್ಡಾಯವಾಗಿಸುವ ಹಕ್ಕನ್ನು ಹೊಂದಿರಲಾರದೆಂಬ ನಿಯಮ ಹೇರುವುದನ್ನೇ ನಾವು ಮಾಡುವುದು.

**ಪ್ರೊಫೆಸರ್ ಸಿಬ್ಬನ್ ಲಾಲ ಸಕ್ಸೇನಾ :** "ಧಾರ್ಮಿಕ ಬೋಧನೆ" ಶಬ್ದವನ್ನು ನೀವು ಯಾವ ರೀತಿಯಲ್ಲಿ ವಿವರಿಸಿರುವಿರೋ ಅದು ಸಂವಿಧಾನದಲ್ಲಿ ಸ್ಥಾನ ಪಡೆಯತಕ್ಕದ್ದು.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ನ್ಯಾಯಾಲಯಗಳು ಆ ವಿಷಯ ತಮ್ಮ ಎದುರಿಗೆ ಬಂದಾಗ ನಿರ್ಣಯಿಸುವುವು ಎಂದು ನನಗೆ ಅನಿಸುತ್ತದೆ.

**ಶ್ರೀ ನಜೀರುದ್ದೀನ ಅಹ್ಮದ್ :** ಗೌರವಾನ್ವಿತ ಸದಸ್ಯರು ಕಲಮು(೩)ನ್ನು ತೆಗೆದು ಹಾಕಲು ಒಪ್ಪಿಕೊಳ್ಳಲು ಪ್ರಸ್ತಾವನೆ ಮಾಡಿರುತ್ತಾರೆ. ಇದೊಂದು ವಿವರಣೆ ನೀಡುವ ಟಿಪ್ಪಣಿ ಆಗಿದೆ. ಅದನ್ನು ತೆಗೆದು ಹಾಕುವುದರಿಂದ ಅದರಲ್ಲಿ ನಿಹಿತವಾಗಿರುವ ತತ್ವದ ಅನ್ವಯಿತೆ ಇಲ್ಲದಾಗಿಸಲು ಸಾಧ್ಯವೇ ಎಂದು ನಾನು ಕೇಳುತ್ತೇನೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಸರಿ, ನಾನು ತೆಗೆದುಕೊಳ್ಳುವ ದೃಷ್ಟಿಕೋನ ಹೀಗಿದೆ, ಕಲಮು (೩) ನಿಜಕ್ಕೂ ಅನಗತ್ಯ. ಸಮುದಾಯದಿಂದ ನಡೆಸಲ್ಪಡುವ ಶಾಲೆಗೆ ಅದು ಸಂಬಂಧಿಸಿದುದಾಗಿದೆ.

ಶಾಲಾ ಸಮಯದ ನಂತರ, ಸಮುದಾಯವು ಅದನ್ನು ತನ್ನಿಚ್ಛೆಯಂತೆ ನಡೆಸಿಕೊಂಡು ಹೋಗಲು ಸ್ವತಂತ್ರವಾಗಿರುತ್ತದೆ. ಸಂವಿಧಾನದಲ್ಲಿ ಯಾವುದೇ ಅವಕಾಶ ಇರಲೇಬೇಕಾಗಿಲ್ಲ.

ಈಗ, ಮಾನ್ಯರೇ, ಇನ್ನೊಂದು ಅಂಶವಿದೆ. ಇದರ ಬಗೆಗೆ ನಾನು ಉಲ್ಲೇಖಿಸಬಯಸುತ್ತೇನೆ. ಅದನ್ನು ಈಗಾಗಲೇ ಪ್ರೊ.ಕೆ.ಟಿ. ಶಾಹರವರು ಎತ್ತಿರುತ್ತಾರೆ ಅದೆಂದರೆ ಯಾವುದರ ಧರ್ಮದರ್ಶಿತ್ವವನ್ನು ರಾಜ್ಯವು ಒಪ್ಪಿಕೊಂಡಿದೆಯೋ ಆ ಸಂಸ್ಥೆಗಳಲ್ಲಿ ಧಾರ್ಮಿಕ ಬೋಧನೆಯನ್ನು ಮುಂದುವರಿಸಲು ಉಪಬಂಧವು ರಾಜ್ಯಕ್ಕೆ ಅನುಮತಿಸುತ್ತದೆ ಎನ್ನುವುದು. ಪ್ರೊ. ಶಾಹರವರು ಎತ್ತಿರುವ ವಾದಾಂಶದಲ್ಲಿ ಹೆಚ್ಚಿನದೇನಾದರು ಸತ್ವ ಇದೆಯೆಂದು ನಾನು ಬಗೆಯಲಾರೆ. ನನಗನಿಸುತ್ತದೆ ಅವರು ಈ ದೇಶದಲ್ಲಿ ಇತಿಹಾಸದ ಆರಂಭದ ಭಾಗದಲ್ಲಿ ಧಾರ್ಮಿಕ ಬೋಧನೆ ನೀಡುವ ಉದ್ದೇಶದಿಂದ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿರುವ ನಿದರ್ಶನಗಳು ಇವೆಯೆಂಬುದನ್ನು ಅದೇ ಕಾರಣದಿಂದಾಗಿ ಅವುಗಳ ವ್ಯವಸ್ಥಾಪನೆಗೊಳಿಸಲು ಜನಗಳು ದೊರಕದ್ದರಿಂದ ಅವುಗಳನ್ನು ರಾಜ್ಯವು ತಾನು ಟ್ರಸ್ಟಿಯಾಗಿ ತೆಗೆದುಕೊಳ್ಳಬೇಕಾಯಿತು ಎನ್ನುವುದನ್ನು ಅವರು ಅರಿಯಬಹುದು. ಈಗ ಯಾವಾಗ ನೀವು ಟ್ರಸ್ಟ್‌ವೊಂದನ್ನು ಒಪ್ಪಿಕೊಳ್ಳುವಿರೋ ಅದನ್ನು ಎಲ್ಲಾ ರೀತಿಯಲ್ಲಿ ಪೂರ್ಣಗೊಳಿಸಬೇಕಾಗುತ್ತದೆ. ಒಂದುವೇಳೆ ಈ ಸಂಸ್ಥೆಗಳನ್ನು ರಾಜ್ಯವು ಈಗಾಗಲೇ ತೆಗೆದುಕೊಂಡು ಟ್ರಸ್ಟಿಗೆ ವಹಿಸಿಕೊಟ್ಟಿದೆಯೆಂದಾದರೆ, ಆಗ ನಿಮಗೆ ಸರಕಾರಕ್ಕೆ ಸತ್ಯಾಂಶವನ್ನು ಬದಿಗೊತ್ತಿ ಈ ಸಂಸ್ಥೆಗಳಲ್ಲಿ ಧಾರ್ಮಿಕ ಬೋಧನೆ ನೀಡಲಾಗುತ್ತಿತ್ತು ಇನ್ನು ಮುಂದೆ ಅಂತಹ ಬೋಧನೆಯನ್ನು ನೀವು ಕೊಡಬೇಡಿ ಎಂದು ಹೇಳಲಿಕ್ಕೆ ಆಗದು. ನನಗನಿಸುವುದೇನೆಂದರೆ ಅದು ರಾಜ್ಯಕ್ಕೆ ಅನುಮತಿಸುವುದಷ್ಟೇ ಆಗುವುದಿಲ್ಲ. ಆದರೆ ಟ್ರಸ್ಟನ್ನು ಮುರಿಯಲು ಒತ್ತಾಯಿಸಿದಂತಾಗುತ್ತದೆ. ಹೀಗಾಗಿ ಪರಿಸ್ಥಿತಿಯನ್ನು ತಿಳಿಯಾಗಿರಿಸುವ ದೃಷ್ಟಿಯಿಂದ ಷರತ್ತೊಂದನ್ನು ಸೇರಿಸುವುದು ಅಗತ್ಯವೆಂದು, ಅದು ನಿಸ್ಸಂಶಯವಾಗಿ ವಿಧಿ ೨೦ರ ಉಪಕಲಮು (೧)ರಲ್ಲಿಯ ಮೂಲ ಪ್ರಸ್ತಾಪಕ್ಕೆ ಸಮಂಜಸವಾದದ್ದಾಗಿಲ್ಲವಾದರೂ ನಾವು ಬಗೆದಿದ್ದೇವೆ. ಮಾನ್ಯರೆ, ಸಭೆಯು, ವಿಧಿಯು ಈಗಿರುವಂತೆ ಸಮಾಧಾನಕರವಾಗಿರುತ್ತದೆ ಎಂದು ಬಗೆಯುತ್ತದೆ ಅಲ್ಲದೆ ಒಪ್ಪಿಕೊಳ್ಳುತ್ತದೆ ಎಂದು ಆಶಿಸುತ್ತೇನೆ.

**ಉಪಸಭಾಪತಿ :** ನಾನೀಗ ತಿದ್ದುಪಡಿಗಳನ್ನು ಒಂದಾದಮೇಲೆ ಒಂದರಂತೆ ಮತಕ್ಕೆ ಇಡುತ್ತಿದ್ದೇನೆ.

(ಒಟ್ಟಾರೆ, ೧೨ ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು. ಶ್ರೀ ಕಪೂರರವರ ಕೆಳಕಾಣಿಸಿರುವ ಒಂದೇ ಒಂದು ತಿದ್ದುಪಡಿ ಡಾ. ಅಂಬೇಡ್ಕರರವರಿಂದ ಒಪ್ಪಿಕೊಳ್ಳಲ್ಪಟ್ಟಿತು ಮತ್ತು ಅಂಗೀಕೃತಗೊಂಡಿತು).

ಪ್ರಶ್ನೆ ಇರುವುದು :

"ವಿಧಿ ೨೨ರ ಕಲಮು (೩) ಬಿಡುವುದು"

(ತಿದ್ದುಪಡಿಯಾದಂತೆ ವಿಧಿ ೨೨ನ್ನು ಅಂಗೀಕರಿಸಲಾಯಿತು ಮತ್ತು ಸಂವಿಧಾನಕ್ಕೆ ಸೇರ್ಪಡಿಸಲಾಯಿತು)

## ವಿಧಿ ೨೨ ಎ (ಹೊಸ ವಿಧಿ)

* **ಪ್ರೊ .ಕೆ.ಟಿ. ಶಾಹ :** ಮಾನ್ಯರೆ, ನಾನು ಮಂಡಿಸಲು ಪ್ರಾರ್ಥಿಸುತ್ತೇನೆ : ವಿಧಿ ೨೨ರ ನಂತರ, ಈ ಕೆಳಕಾಣಿಸಿದ ಹೊಸ ವಿಧಿ ಸೇರಿಸುವುದು :–

---

* ಸಿ.ಎ.ಡಿ. ಸಂಪುಟ ೭, ೭ನೆಯ ಡಿಸೆಂಬರ್, ೧೯೪೮, ಪುಟ ೮೮೮

"೨೨–ಎ. ಧಾರ್ಮಿಕ ಸಂಘಟನೆಗಳ ಮುಖ್ಯಸ್ಥರುಗಳ ಎಲ್ಲ ವಿಶೇಷಾಧಿಕಾರಗಳನ್ನು, ರಕ್ಷಣೆಗಳನ್ನು ಅಥವಾ ವಿನಾಯಿತಿಗಳನ್ನು ರದ್ದುಗೊಳಿಸುವುದು."

********

** **ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಉಪಸಭಾಪತಿಶ್ರೀಯವರೆ, ಮಾನ್ಯರೆ, ಗುರಿಯಲ್ಲಿ ಈ ತಿದ್ದುಪಡಿಯು ಸಾಕಷ್ಟು ಸ್ತುತ್ಯವಾದದ್ದಾಗಿದೆ ಆದರೆ ಈ ತಿದ್ದುಪಡಿಯು ಅಗತ್ಯವೇ ಎನ್ನುವುದು ನನಗೆ ತಿಳಿಯದು. ಮೊದಲನೆಯದಾಗಿ ಈ ಧಾರ್ಮಿಕ ಗಣ್ಯಮಾನ್ಯರುಗಳು ಹೊಂದಿರುವ ಬಿರುದಾವಳಿಗಳು ರಾಜ್ಯದಿಂದ ನೀಡಲ್ಪಡದವುಗಳು. ಏಕೆಂದರೆ ನಾವು ಈಗಾಗಲೇ ಮೂಲಭೂತ ಹಕ್ಕುಗಳಲ್ಲಿ ಯಾವುದೇ ಬಿರುದುಗಳು ನೀಡಕೂಡದೆಂಬ ಅಂಶವನ್ನು ಸೇರಿಸಿರುತ್ತೇವೆ. ಹೀಗಾಗಿ ಅಂತಹ ಯಾವುದೇ ಬಿರುದು ರಾಜ್ಯದಿಂದ ಪ್ರದಾನ ಮಾಡಲಿಕ್ಕಾಗದು. ಎರಡನೆಯದಾಗಿ, ನನ್ನ ಗೌರವಾನ್ವಿತ ಮಿತ್ರರು ಬಹುಶಃ ತಿಳಿದಿರಬಹುದು, ಯಾವುದೇ ವ್ಯಕ್ತಿಯು ತನಗೆ ತಾನೆ ಅಂತಹ ಬಿರುದನ್ನು ಕೊಟ್ಟು ಕೊಂಡಲ್ಲಿ ಅದಕ್ಕೆ ದಾವೆ ಇರುವುದಿಲ್ಲ. ಯಾವೋರ್ವ ವ್ಯಕ್ತಿಯು ತನ್ನನ್ನು ತಾನು ಓರ್ವ ಶಂಕರಾಚಾರ್ಯನೆಂದು ಕರೆದುಕೊಂಡು, ಮತ್ತೋರ್ವ ವ್ಯಕ್ತಿಯು ಆತನನ್ನು ಶಂಕರಾಚಾರ್ಯನೆಂದು ಕರೆಯಲು ನಿರಾಕರಿಸಿದಲ್ಲಿ ದಾವೆ ಹೂಡಲು ಯಾವುದೇ ಹಕ್ಕು ಇರುವುದಿಲ್ಲ. ನೀವು ಯಾವೊಂದನ್ನು ಪದವಿ ಎಂದು ಕರೆದಲ್ಲಿ ಅದರ ಕಾರ್ಯಾನ್ವಯಕ್ಕೆ ದಾವೆ ಹೂಡಲು ಯಾವುದೇ ಅವಕಾಶ ಇರುವುದಿಲ್ಲ ಎನ್ನುವುದನ್ನು ದೀವಾಣಿ ಪ್ರಕ್ರಿಯಾ ಸಂಹಿತೆಯ ಪ್ರಕರಣ ೯ರಲ್ಲಿ ಸಂಪೂರ್ಣವಾಗಿ ಸ್ಪಷ್ಟಗೊಳಿಸಲಾಗಿದೆ. ಒಂದು ವೇಳೆ ಆ ಪದವಿ ಯಾವುದೇ ಪ್ರಕಾರದ ವರಮಾನಗಳನ್ನು ಅಥವಾ ಆಸ್ತಿಯನ್ನು ತನ್ನೊಂದಿಗೆ ತರುತ್ತಿದ್ದಲ್ಲಿ ಅದು ಬೇರೆ ವಿಷಯವಾಗುತ್ತದೆ, ಆದರೆ ಕೇವಲ ಪದವಿ ಕಾರ್ಯ ಜರುಗಿಸಲು ಆಧಾರವಾಗದು.

ಬಹುಶಃ ಅವರಲ್ಲಿ ಕೆಲವರು ಅನುಭವಿಸುವ ಸೌಕರ್ಯಗಳ ಬಗೆಗೆ ಸಂಬಂಧಿಸಿದಂತೆ, ಅವುಗಳನ್ನು ಹಿಂತೆಗೆದುಕೊಳ್ಳುವ ಅಧಿಕಾರಗಳು ಕಾರ್ಯಾಂಗದ ಮತ್ತು ಶಾಸಕಾಂಗದ ಮಿತಿಯಲ್ಲಿರುತ್ತವೆ. ನನ್ನ ಗೌರವಾನ್ವಿತ ಮಿತ್ರ ಶ್ರೀ ಚೌಧರಿಯವರು ಹೇಳಿರುವಂತೆ, ಕೆಲ ಸಂದರ್ಭಗಳಲ್ಲಿ ಮೆಜಿಸ್ಟ್ರೇಟರುಗಳಿಂದ ಸಮನ್ಸುಗಳು ನೀಡಿರುವುದು ಸತ್ಯ. ಮತ್ತೆ ಕೆಲ ಕೇಸುಗಳಲ್ಲಿ ಯಾವಾಗ ಸಂಬಂಧಿತನು ಜೀವನದಲ್ಲಿ ದೊಡ್ಡದಾದ ಸ್ಥಾನ ಹೊಂದಿರುತ್ತಾನೆಯೋ, ಸಮನ್ಸುಗಳನ್ನು ಕಳುಹಿಸುವುದಕ್ಕೆ ಬದಲಾಗಿ, ಪತ್ರಗಳನ್ನು ಕಳಿಸಲಾಗುತ್ತದೆ. ಕೆಲ ವ್ಯಕ್ತಿಗಳಿಗೆ ಕೋರ್ಟುಗಳಲ್ಲಿ ಹಾಜರಾಗಬೇಕಾಗಿ ಬಂದಾಗ ನಿಲ್ಲುವಂತೆ ಮಾಡಲಾಗುತ್ತದೆ, ಮತ್ತೆ ಕೆಲ ವ್ಯಕ್ತಿಗಳಿಗೆ ಆಸನ ಒದಗಿಸಲಾಗುತ್ತದೆ. ಈ ಎಲ್ಲ ಘನತೆಯ ವಿಷಯಗಳು ಸಂಪೂರ್ಣವಾಗಿ ಶಾಸಕಾಂಗ ಮತ್ತು ಸರಕಾರದ ವ್ಯಾಪ್ತಿಯಲ್ಲಿವೆ. ಪೌರ ಪೌರನ ನಡುವೆ ಯಾವುದೇ ಅಸಂಗತತೆ ಅಥವಾ ಪಕ್ಷಪಾತ ಅಥವಾ ತಾರತಮ್ಯ ತೋರಲಾಗಿದೆ ಎಂದಾದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗ ಎರಡಕ್ಕೂ ಆ ಅಸಂಗತತೆಯನ್ನು ಹೊಗಲಾಡಿಸುವ ಅಧಿಕಾರ ಇರುತ್ತದೆ. ಆದುದರಿಂದ ನನ್ನ ವಿಚಾರದಲ್ಲಿ ಈ ತಿದ್ದುಪಡಿಯು ಅನಗತ್ಯವಾದದ್ದು.

(ಪ್ರೊ. ಶಾಹ ಅವರ ಪ್ರಸ್ತಾಪ ನಿರಾಕರಣಗೊಂಡಿತು)

***********

---

** ಅದೇ ಪು. ೮೯೧

# ವಿಧಿ ೨೩ (ಮುಂದುವರಿದುದು)

* **ಉಪಸಭಾಪತಿ :** (ಡಾ. ಹೆಚ್. ಸಿ. ಮುಖರ್ಜಿ): ಈಗ ನಾವು ವಿಧಿ ೨೩ ಯಾವುದಕ್ಕೆ ಎರಡು ತಿದ್ದುಪಡಿಗಳು ಪ್ರಸ್ತಾಪಿಸಲ್ಪಟ್ಟಿವೆಯೋ ಅದರ ಚರ್ಚೆಯನ್ನು ಮತ್ತೆ ತೆಗೆದುಕೊಳ್ಳೋಣ. ತಿದ್ದುಪಡಿ ಸಂಖ್ಯೆ ೬೭೭ ರಾಷ್ಟ್ರೀಯ ಭಾಷೆ ಮತ್ತು ಬರವಣಿಗೆಗೆ ಸಂಬಂಧಿಸಿದುದಾಗಿದೆ. ಆದ್ದರಿಂದ ಮೂಂದೂಡಲ್ಪಟ್ಟಿದೆ. ತಿದ್ದುಪಡಿ ಸಂಖ್ಯೆಗಳಾದ ೬೭೮, ೬೭೯, ೬೮೦, ಮತ್ತು ೬೮೧ (೧ನೇ ಭಾಗ) ಇವುಗಳು ಏಕರೂಪದ ಮಹತ್ವದವುಗಳಾದ್ದರಿಂದ ಒಟ್ಟಿಗೆ ಚರ್ಚಿಸಬಹುದಾಗಿದೆ. ಈಗ ನಾನು ಸಂಖ್ಯೆ ೬೭೮ನ್ನು ಪ್ರಸ್ತಾಪಿಸಲು ಬಿಡುವೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್** (ಬಾಂಬೇ : ಸಾಮಾನ್ಯ) :ಮಾನ್ಯರೆ, ನಾನು ಮಂಡಿಸುವೆ–

"ವಿಧಿ ೨೩ರ ಕಲಮು(೧)ರಲ್ಲಿ "ಬರೆವಣಿಗೆ ಮತ್ತು ಸಂಸ್ಕೃತಿ" ಈ ಪದಗಳ ಸ್ಥಾನದಲ್ಲಿ "ಬರೆವಣಿಗೆ ಅಥವಾ ಸಂಸ್ಕೃತಿ" ಪದಗಳನ್ನು ಬದಲಿ ಇಡುವುದು."

ಕೇವಲ ಒಂದೇ ಪರಿವರ್ತನೆ ಎಂದರೆ 'ಮತ್ತು' ಇದರಿಂದ 'ಅಥವಾ' ಅಲ್ಲದೆ ಈ ಬದಲಾವಣೆಯ ಅಗತ್ಯ ಬಹಳೇ ಇದ್ದು ಅದರ ಬಗೆಗೆ ಏನನ್ನಾದರು ಹೇಳುವುದು ಅಗತ್ಯವಿದೆಯೆಂದು ನನಗೆ ಅನಿಸುವುದಿಲ್ಲ."

**********

** **ಉಪಸಭಾಪತಿ :** ತಿದ್ದುಪಡಿ ಸಂಖ್ಯೆ ೬೭೯

**ಶ್ರೀ ಹೆಚ್.ವಿ. ಕಾಮತ :** (ಸಿ.ಪಿ. ಮತ್ತು ಬೆರಾರ : ಸಾಮಾನ್ಯ):

ನಾನು ಮಾಡಬೇಕಾಗಿದ್ದುದನ್ನು ಡಾ. ಅಂಬೇಡ್ಕರರವರು ಮೊದಲೇ ಮಾಡಿರುತ್ತಾರೆ. ಆದುದರಿಂದ ನಾನು ಸಂ. ೬೭೯ನ್ನು ಮಂಡಿಸುವುದಿಲ್ಲ.

**ಉಪಸಭಾಪತಿ :** ಸಂ.೬೮೦ಗಾಗಿ ನೀವು ಒತ್ತಾಯಿಸುವಿರಾ?

**ಮೊಹಮ್ಮದ ಇಸ್ಮಾಯಿಲ್ ಸಾಹಿಬ** (ಮದ್ರಾಸ : ಮುಸ್ಲಿಂ) : ಹೌದು.

**ಉಪಸಭಾಪತಿ :** ೬೮೧ರ ಮೊದಲ ಭಾಗವನ್ನು ಮತಕ್ಕೆ ಹಾಕಬೇಕೆನ್ನುವುದನ್ನು ನೀವು ಬಯಸುವಿರಾ?

**ಪ್ರೊ.ಕೆ.ಟಿ. ಶಾಹ** (ಬಿಹಾರ : ಸಾಮಾನ್ಯ): ಡಾ.ಅಂಬೇಡ್ಕರರ ತಿದ್ದುಪಡಿಯು ಮೊದಲನೇ ಭಾಗವನ್ನು ಒಳಗೊಂಡಿದೆ. ಆದರೆ ನಾನು ಎರಡನೆ ಭಾಗವನ್ನು ಪ್ರಸ್ತಾಪಿಸಲು ಇಚ್ಛಿಸುವೆ.

********

* **ಶ್ರೀ ಜಯಪಾಲ ಸಿಂಗ್** (ಬಿಹಾರ : ಸಾಮಾನ್ಯ) : ಮಾನ್ಯ ಉಪ ಸಭಾಪತಿಗಳೆ, ನನಗೆ ಈ ವಿಧಿಯನ್ನು ಸ್ವಾಗತಿಸುವಲ್ಲಿ ಅತೀವ ಸಂತೋಷವೆನಿಸುತ್ತದೆ. ಅದರಲ್ಲೂ ಡಾ. ಅಂಬೇಡ್ಕರ್‌ರವರಿಂದ ಸೂಕ್ತವಾಗಿ ತಿದ್ದುಪಡಿಗೊಳಿಸಿರುವುದರಿಂದ, ಮತ್ತೆ ಈ ತಿದ್ದುಪಡಿಯು ಸಭೆಯಿಂದ ಒಪ್ಪಿಗೆ ಪಡೆಯುವುದೆಂದು ನಾನು ಆಶಿಸುತ್ತೇನೆ. ಮಾನ್ಯರೆ, ನನಗೆ ಅನಿಸಿದಂತೆ ಈ ಅನುಚ್ಛೇದವು ಭಾರತಕ್ಕೊಂದು ಹೊಸ ಯುಗವನ್ನೇ ತೆರೆಯಲಿದೆ...............

---

* ಸಿ.ಎ.ಡಿ. ಸಂಪುಟ ೭, ೮ನೆಯ ಡಿಸೆಂಬರ್, ೧೯೪೮, ಪುಟ ೮೯೫

** ಸಿಎ.ಡಿ. ಸಂಪುಟ ೭, ೭ನೇ ಡಿಸೆಂಬರ್, ೧೯೪೮, ಪು. ೮೯೫

* ಅದೇ, ಪು. ೯೦೭

+ **ಉಪಸಭಾಪತಿ :** ಡಾ. ಅಂಬೇಡ್ಕರ್.

**ಪ್ರೊ. ಸಿಬ್ಬನ್ ಲಾಲ್ ಸಕ್ಸೇನಾ** (ಯುನೈಟೆಟ್ ಪ್ರಾವಿನ್ಸ್‌ಸ್ : ಸಾಮಾನ್ಯ): ಮಾನ್ಯರೆ, ನನಗೆ ಸ್ವಲ್ಪವೇನೋ ಹೇಳಬೇಕಾಗಿದೆ, ಮತ್ತು ..................

**ಉಪಸಭಾಪತಿ :** ನಾನು ಚರ್ಚೆಯನ್ನು ಇನ್ನೂ ಹೆಚ್ಚು ಮುಂದೂಡಿಕೊಂಡು ಹೋಗಲು ಅನುಮತಿಸಲಾರೆ, ಮತ್ತು ಈ ವಿಷಯದಲ್ಲಿ ನನ್ನ ನಿರ್ಧಾರ ಅಂತಿಮವಾದದ್ದು.

**ಪ್ರೊ. ಸಿಬ್ಬನ್ ಲಾಲ್ ಸಕ್ಸೇನಾ :** ಕೆಲ ವ್ಯಕ್ತಿಗಳನ್ನು ಅನುಮತಿಸುವುದು ಮತ್ತೆ ಕೆಲವರನ್ನು ಬಿಡುವುದು ಸರಿಯಲ್ಲ.

**ಉಪಸಭಾಪತಿ :** ಅದನ್ನು ಅಸಮರ್ಪಕವೆಂದು ಪರಿಗಣಿಸಲಾಗುತ್ತದೆ ಎಂದು ನಾನು ಬಲ್ಲೆ, ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ವಿಧಿ ೨೩ಕ್ಕೆ ಮಂಡಿಸಲಾಗಿರುವ ತಿದ್ದುಪಡಿಗಳಲ್ಲಿ, ಪಂಡಿತ ಠಾಕೂರ ದಾಸ ಭಾರ್ಗವರ ತಿದ್ದುಪಡಿ ಸಂ. ೬೮೭ಕ್ಕೆ ತಿದುಪಡಿ ಸಂ. ೨೬ಕ್ಕೆ ನಾನು ಒಪ್ಪಿಕೊಳ್ಳಬಲ್ಲೆ. ಪಂಡಿತ ಠಾಕೂರ ದಾಸ ಭಾರ್ಗವರಿಂದಲೇ ತಿದ್ದುಪಡಿ ಸಂ. ೬೯೦ಕ್ಕೆ ಮಂಡಿಸಲ್ಪಟ್ಟಿರುವ ತಿದ್ದುಪಡಿ ಸಂಖ್ಯೆ ೩೧ನ್ನು ಕೂಡ ನಾನು ಒಪ್ಪಿಕೊಳ್ಳಲು ಸಿದ್ಧನಿರುವೆ. ಮಂಡಿಸಲಾಗಿರುವ ಇತರೆ ತಿದ್ದುಪಡಿಗಳಲ್ಲಿ ನನಗೆನಿಸುತ್ತದೆ, ನಾನು ಉತ್ತರಿಸಬೇಕಾದದ್ದು ಎರಡೇ. ಅವುಗಳೆಂದರೆ ಶ್ರೀ ಲಾರಿ ಅವರಿಂದ ಮಂಡಿತ ತಿದ್ದುಪಡಿ ಸಂ.೬೭೬ ಮತ್ತು ೭೧೪. ಈ ಎರಡು ತಿದ್ದುಪಡಿಗಳಿಂದ ಉದ್ಭವಿಸಿರುವ ಪ್ರಶ್ನೆಗಳನ್ನು ನಾನು ಉತ್ತರ ನೀಡುವಾಗ ಬೇರ್ಪಡಿಸುವುದು ಅಪೇಕ್ಷಣೀಯವೆಂದು ನಾನು ವಿಚಾರಿಸುವೆ.

ತಿದ್ದುಪಡಿ ಸಂ. ೬೭೬ ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳೊಂದಿಗೆ ವ್ಯವಹರಿಸುತ್ತದೆ. ಆದರೆ ಇನ್ನೊಂದು ತಿದ್ದುಪಡಿ ಸಂ. ೭೧೪ ಎತ್ತುವ ಪ್ರಶ್ನೆಯೆಂದರೆ ಅಲ್ಪಸಂಖ್ಯಾತ ಸಮುದಾಯವು ಸಂವಿಧಾನದಲ್ಲಿ ಸೇರ್ಪಟ್ಟಂತೆ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಮೂಲಭೂತ ಹಕ್ಕನ್ನು ಹೊಂದಿರಬಾರದೆ? ಎನ್ನುವುದು.

ಮೊದಲನೆಯ ಪ್ರಶ್ನೆಗೆ ಸಂಬಂಧಿಸಿದಂತೆ ನನ್ನ ಮಿತ್ರ ಶ್ರೀ ಲಾರಿಯವರು ಮತ್ತು ನನ್ನ ಮಿತ್ರರುಗಳಾದ ಮೌಲಾನಾ ಹಸರತ್ ಮೋಹಾನಿ ಇವರೀರ್ವರು ಕೂಡ ಈ ಸಭೆಯಿಂದ ಪಾಸುಮಾಡಲಾಗಿದ್ದ ಮೂಲಭೂತ ಹಕ್ಕುಗಳ ಮೂಲ ಪ್ರಸ್ತಾವನವನ್ನು ಬದಲಿಸಿದ್ದಾರೆಂದು ಕರಡು ಸಮಿತಿಯ ಮೇಲೆ ಆಪಾದನೆ ಮಾಡಿರುತ್ತಾರೆ. ಮೂಲಭೂತ ಹಕ್ಕುಗಳ ಕಮಿಟಿಯ ೧೮ನೇ ಪ್ಯಾರಾಗ್ರಾಫ್‌ನ ಭಾಷೆಯಲ್ಲಿ ಕರಡು ಸಮಿತಿಯವರು ಹಾಗೆ ಭಾಷೆ ತಿದ್ದಿದುದಕ್ಕೆ ಸಾಕಷ್ಟು ಸಮರ್ಥನೆ ಇದೆ ಎಂದು ಹೇಳುವಲ್ಲಿ ನನಗೆ ಯಾವುದೇ ಸಂಕೋಚ ಇಲ್ಲ.

ಮೂಲಭೂತ ಹಕ್ಕಿನ ಪ್ಯಾರಾಗ್ರಾಫ್‌ನ ೧೮ರ ಭಾಷೆಯನ್ನು ಕರಡು ಸಮಿತಿ ತಿದ್ದುವ ಅಗತ್ಯ ಕಂಡು ಕೊಂಡದ್ದೇಕೆ ಎನ್ನುವುದನ್ನು ಸಭೆಗೆ ತಿಳಿಸಲು ನಾನು ಮಂಡಿಸುವ ಮೊದಲನೆ ಅಂಶವಿದು. ಮೂಲ ಮೂಲಭೂತ ಹಕ್ಕುಗಳು ಒಳಗೊಂಡಿದ್ದ ಪ್ಯಾರಾಗ್ರಾಫ್ ಓದಿದ್ದಲ್ಲಿ ಗಮನಕ್ಕೆ ಬರುವುದೇನೆಂದರೆ ಅದರಲ್ಲಿ ಬಳಸಿದ್ದ "ಅಲ್ಪಸಂಖ್ಯಾತ" ಈ ಶಬ್ದವು ತಾಂತ್ರಿಕ ಅರ್ಥದಲ್ಲಿ ನಾವು ಶಾಸಕಾಂಗದಲ್ಲಿ ಪ್ರಾತಿನಿಧ್ಯತೆ, ಸೇವೆಗಳಲ್ಲಿ ಪ್ರಾತಿನಿಧಿತ ಮುಂತಾದುವುಗಳಲ್ಲಿ ರಾಜಕೀಯ ರಕ್ಷಣೆ ಒದಗಿಸಲು ಸಾಮಾನ್ಯವಾಗಿ ಬಳಸುವ ಅಭ್ಯಾಸದಂತೆ ಅಲ್ಪಸಂಖ್ಯಾತ ಅರ್ಥ ಕೊಡುವ ರೀತಿಯಲ್ಲಿ ಬಳಸದಿರುವುದು. ಪದವನ್ನು ಬಳಸಿರುವುದು.

---

+ ಸಿ.ಎ.ಡಿ. ಸಂಪುಟ ೭, ೮ನೆಯ ಡಿಸೆಂಬರ್, ೧೯೪೮, ಪುಟ ೯೨೨–೨೫

ಪದವನ್ನು ತಾಂತ್ರಿಕ ಅರ್ಥದಲ್ಲಿ ಕೇವಲ ಅಲ್ಪಸಂಖ್ಯಾತರು ಎನ್ನುವ ಅರ್ಥದಲ್ಲಿ ಬಳಸದೆ, ಇದನ್ನು ತಾಂತ್ರಿಕ ಅರ್ಥದಲ್ಲಿ ಯಾರು ಅಲ್ಪಸಂಖ್ಯಾತರು ಅಲ್ಲವೋ ಅವರನ್ನು ಒಳಗೊಳ್ಳುವಂತೆಯೂ ಬಳಸಲಾಗಿದೆ. ಆದರೆ ಅವರುಗಳೂ ಸಾಂಸ್ಕೃತಿಕ ಮತ್ತು ಭಾಷಿಕ ಅರ್ಥದಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಉದಾಹರಣೆಗೆ, ಈ ವಿಧಿ ೧೯ರ ಉದ್ದೇಶದಿಂದ, ಮದ್ರಾಸ್‌ನಿಂದ ಕೆಲವ್ಯಕ್ತಿಗಳು ಬೊಂಬಾಯಿಯಲ್ಲಿ ಕೆಲ ಉದ್ದೇಶಕ್ಕಾಗಿ ಬಂದು ನೆಲೆಸಿದಲ್ಲಿ ತಾಂತ್ರಿಕ ಅರ್ಥದಲ್ಲಿ ಅವರು ಅಲ್ಪಸಂಖ್ಯಾತರಾಗಿರದೆ ಸಾಂಸ್ಕೃತಿಕವಾಗಿ ಅಲ್ಪಸಂಖ್ಯಾತರಾಗಿರುತ್ತಾರೆ. ಅದರಂತೆಯೇ ಕೆಲ ಸಂಖ್ಯೆಯ ಮಹಾರಾಷ್ಟ್ರಿಯನ್ನರು ಮಹಾರಾಷ್ಟ್ರದಿಂದ ಹೋಗಿ ಬಂಗಾಲದಲ್ಲಿ ನೆಲೆಸಿದಲ್ಲಿ ಅವರು ತಾಂತ್ರಿಕ ಅರ್ಥದಲ್ಲಿ ಅಲ್ಪಸಂಖ್ಯಾತರಾಗಿರದೆ, ಅವರುಗಳು ಬಂಗಾಳದಲ್ಲಿ ಸಾಂಸ್ಕೃತಿಕ ಮತ್ತು ಭಾಷಾ ಅಲ್ಪಸಂಖ್ಯಾತರಾಗಿರುತ್ತಾರೆ. ಇದೇ ಈಗ ನಾನು ವಿವರಿಸಿರುವಂತೆ ಈ ವಿಧಿಯ ಸಾಂಸ್ಕೃತಿಕ, ಭಾಷಿಕ ಮತ್ತು ಲಿಪಿಯ ವಿಷಯದಲ್ಲಿ ತಾಂತ್ರಿಕ ಅರ್ಥದ ಅಲ್ಪಸಂಖ್ಯಾತರಿಗಷ್ಟೇ ಅಲ್ಲದೆ ವಿಶಾಲ ಅರ್ಥದಲ್ಲಿಯ ಅಲ್ಪಸಂಖ್ಯಾತರುಗಳಿಗೂ ರಕ್ಷಣೆ ನೀಡುವ ಉದ್ದೇಶ ಹೊಂದಿದೆ. ಈ ಕಾರಣದಿಂದಾಗಿ ನಾವು **“ಅಲ್ಪಸಂಖ್ಯಾತ”** ಪದವನ್ನು ಕೈಬಿಟ್ಟಿದ್ದೇವೆ. ಏಕೆಂದರೆ ನಮಗೆ ಅನಿಸಿದ್ದು ಈ ಪದವನ್ನು ಸಂಕುಚಿತ ಅರ್ಥದಲ್ಲಿ ಬಳಸಲಾಗಿದೆಯೆಂಬುದು. ಆದರೆ ಈ ಸಭೆಯು ವಿಧಿ ೧೮ನ್ನು ಬಳಸಿದ್ದು ಬಹಳ ವಿಶಾಲ ಅರ್ಥದಲ್ಲಿ. ಅವರ ಬಯಕೆ ತಾಂತ್ರಿಕ ಅರ್ಥದಲ್ಲಿ ಅಲ್ಪಸಂಖ್ಯಾತರಲ್ಲದಿದ್ದಾಗ್ಯೂ ಅಲ್ಪಸಂಖ್ಯಾತರಿಗೆ ಕಡಿಮೆ ಅಲ್ಲದವರಿಗೂ ಸಾಂಸ್ಕೃತಿಕ ರಕ್ಷಣೆ ನೀಡುವುದಾಗಿದ್ದಿತು. ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ಹೋಗುವ ಜನರು ಅಲ್ಲಿ ಖಾಯಂ ಆಗಿ ನೆಲೆಸುವುದಿಲ್ಲ. ಈ ಕಾರಣಕ್ಕಾಗಿ ನಮಗೆ ಈ ರಕ್ಷಣೆ ಅಗತ್ಯವೆಂದು ಅನಿಸಿದ್ದು. ಅವರು ಯಾವ ಪ್ರಾಂತದಿಂದ ವಲಸೆ ಹೋಗಿರುವರೋ ಅಲ್ಲಿನಿಂದ ತಮ್ಮ ಬೇರನ್ನು ಕಡಿದುಕೊಳ್ಳದೆ ಸಂಬಂಧಗಳನ್ನು ಇಟ್ಟುಕೊಂಡಿರುತ್ತಾರೆ. ಮದುವೆ ಉದ್ದೇಶಕ್ಕಾಗಿ ತಮ್ಮ ಪ್ರಾಂತಕ್ಕೆ ಹಿಂತಿರುಗಿ ಹೋಗುತ್ತಾರೆ. ಇನ್ನೂ ಅನೇಕ ಕಾರಣಗಳಿಂದಾಗಿ ಅವರು ತಮ್ಮ ಪ್ರಾಂತಕ್ಕೆ ಹಿಂತಿರುಗಿ ಹೋಗುತ್ತಾರೆ. ಸ್ಥಳೀಯ ಶಾಸಕಾಂಗದ ಅಧೀನ ಬರುವ ಅವರುಗಳಿಗೆ ಒಂದು ವೇಳೆ ಈ ರಕ್ಷಣೆ ನೀಡದೆ ಹೋದಲ್ಲಿ ತಮ್ಮ ಸಾಂಸ್ಕೃತಿಕ ಸಂರಕ್ಷಣೆಯ ಅವಕಾಶವನ್ನು ಸ್ಥಳೀಯ ಶಾಸಕಾಂಗವು ನಿರಾಕರಿಸಬಹುದು. ಅಂತಹ ಸಂದರ್ಭದಲ್ಲಿ ಅಂತಹ ಸಾಂಸ್ಕೃತಿಕ ಅಲ್ಪಸಂಖ್ಯಾತರಿಗೆ ಹಿಂತಿರುಗಿ ತಮ್ಮ ಪ್ರಾಂತಕ್ಕೆ ಹೋಗಿ ಮೂಲದ ಜನರೊಂದಿಗೆ ತಮ್ಮನ್ನು ಬೆರೆಸಿಕೊಳ್ಳುವುದು ಕಷ್ಟವಾಗುತ್ತದೆ. ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ವಲಸೆ ಹೋಗುವ ಸ್ಥಿತಿಯನ್ನು ಎದುರಿಸಲು ಈ ಉಪಬಂಧವನ್ನು ಸಂವಿಧಾನದಲ್ಲಿ ಸೇರ್ಪಡಿಸುವುದು ಸೂಕ್ತವೆಂದು ನಾವು ಬಗೆದೆವು.

ನನ್ನ ವಿಚಾರದಲ್ಲಿ ವಿಧಿ ೨೩ನ್ನು ಓದುವಾಗ ನಾವು ನೆನಪಿಡಬೇಕಾದ ಇನ್ನೊಂದು ಅಂಶ ಎಂದರೆ ಇದು ರಾಜ್ಯದ ಮೇಲೆ ಯಾವುದೇ ಬಾಧ್ಯತೆ ಅಥವಾ ಭಾರವನ್ನು ವಿಧಿಸುವುದಿಲ್ಲ ಎನ್ನುವುದು. ಉದಾಹರಣೆಗೆ ಮದ್ರಾಸಿನ ಜನರು ಬೊಂಬಾಯಿಗೆ ಬಂದಾಗ, ಕಾನೂನಿನನ್ವಯ ಬೊಂಬಾಯಿಯ ಸರಕಾರವು ತಮಿಳು ಭಾಷೆಯಲ್ಲಿ ಶಿಕ್ಷಣ ನೀಡುವ ಯೋಜನೆಗೆ ಹಣಕಾಸು ಒದಗಿಸಬೇಕೆಂದು ಅದು ಹೇಳುವುದಿಲ್ಲ. ರಾಜ್ಯದ ಮೇಲೆ ಯಾವುದು ಭಾರ ಇರುವುದಿಲ್ಲ. ವಿಧಿ ೨೩ ವಿಧಿಸುವ ಒಂದೇ ಮಿತಿ ಎಂದರೆ ಒಂದು ವೇಳೆ ಸಾಂಸ್ಕೃತಿಕ ಅಲ್ಪ ಸಂಖ್ಯಾತರಿದ್ದು ಅವರು ತಮ್ಮ ಭಾಷೆ, ತಮ್ಮ ಲಿಪಿ ಮತ್ತು ತಮ್ಮ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ಇಚ್ಛಿಸಿದಲ್ಲಿ ರಾಜ್ಯವು ಕಾನೂನು ಮಾಡಿ ಅದರ ಮೇಲೆ ಸ್ಥಳೀಯ ಅಥವಾ ಮತ್ತಾವುದೇ ಸಂಸ್ಕೃತಿಯನ್ನು ವಿಧಿಸುವಂತಿಲ್ಲ ಎನ್ನುವುದು.

ಆದುದರಿಂದ ಈ ವಿಧಿಯನ್ನು ನಿಜಕ್ಕೂ ವಿಶಾಲ ಅರ್ಥದಲ್ಲಿ ಓದಬೇಕು ಮತ್ತು ಇದು ನಾವು ನಮ್ಮ

ಸಂವಿಧಾನದಲ್ಲಿ ಬಳಸುವಂತೆ ಕೇವಲ ಯಾರನ್ನು ನಾವು ತಾಂತ್ರಿಕವಾದ ಅಲ್ಪಸಂಖ್ಯಾತರೆನ್ನುತ್ತೇವೆಯೋ ಅವರಿಗೆ ಅನ್ವಯಿಸುವುದಿಲ್ಲ. ಆ ಕಾರಣಕ್ಕಾಗಿ ಮೂಲ ಉಪಬಂಧದಿಂದ ನಾವು "ಅಲ್ಪಸಂಖ್ಯಾತ" ಶಬ್ದವನ್ನು ತೆಗೆದುಹಾಕಿರುವುದು.

ಆದರೆ "ಅಲ್ಪಸಂಖ್ಯಾತ" ಈ ಪದವನ್ನು ಬಿಟ್ಟುಬಿಡುವಾಗ ನನ್ನ ಮಿತ್ರ ಶ್ರೀ ಲಾರಿಯವರು ಮೂಲ ವಿಧಿ ಮೂಲಭೂತ ಹಕ್ಕುಗಳಲ್ಲಿ ನೀಡಲ್ಪಟ್ಟಿದ್ದ ರಕ್ಷಣೆಗಿಂತ ಹೆಚ್ಚಿನ ಸುಧಾರಣೆಯನ್ನು ನಾವು ಮಾಡಿರುವುದನ್ನು ನೋಡಲು ಮರೆತಿದ್ದಾರೆಂದು ನನ್ನ ವಿಚಾರ. ಮೂಲಭೂತ ಹಕ್ಕುಗಳಲ್ಲಿ ಮೂಲ ವಿಧಿಯಲ್ಲಿ ರಾಜ್ಯದ ಮೇಲೆ ಕೇವಲ ಅವರ ಸಂಸ್ಕೃತಿ, ಅವರ ಲಿಪಿ ಮತ್ತು ಅವರ ಭಾಷೆಯನ್ನು ರಕ್ಷಿಸಬೇಕೆಂಬ ಹೊಣೆಯನ್ನು ಹಾಕಿತ್ತು. ಮೂಲ ವಿಧಿಯು ಆಯಾ ವಿವಿಧ ಸಮುದಾಯಗಳಿಗೆ ಯಾವುದೇ ಮೂಲಭೂತ ಹಕ್ಕನ್ನು ಕೊಟ್ಟಿರಲಿಲ್ಲ. ಅದು ಕೇವಲ ಕರ್ತವ್ಯವನ್ನು ವಿಧಿಸಿದ್ದಿತು. ಅಲ್ಲದೆ ಭಾಷೆ, ಸಂಸ್ಕೃತಿ ಮತ್ತು ಲಿಪಿ ಇವುಗಳ ಮೇಲೆ ರಾಜ್ಯವು ಮಿತಿಗಳನ್ನು ವಿಧಿಸಬಹುದಾದ ಹಕ್ಕಿನ ಕಲಮನ್ನು ಸೇರಿಸಿದ್ದಿತು. ಒತ್ತಾಯಿಸುವದೆನ್ನಬಹುದಾದ ಯಾವುದೇ ಕಾನೂನನ್ನು ರಾಜ್ಯವು ಮಾಡಕೂಡದೆಂದು. ಹಾಗೆಂದರೆ ಈ ವಿಷಯಗಳನ್ನು ಕಾರ್ಯಗತಗೊಳಿಸಲು ರಾಜ್ಯವು ಕಾನೂನು ಮಾಡುವ ಹಕ್ಕನ್ನು ಹೊಂದಿಲ್ಲವೆಂದಲ್ಲ. ಆದರೆ ಕಾನೂನು ಒತ್ತಾಯಿಸುವಂತಹದಾಗಿರಬಾರದು. ಈಗ, ನನಗೆ ಖಚಿತ ಅನಿಸಿದಂತೆ ಮೂಲ ವಿಧಿಯಲ್ಲಿ ನೀಡಲಾಗಿದ್ದ ರಕ್ಷಣೆಯು ಬಹಳ ಅಸುರಕ್ಷಿತವಾದದ್ದಾಗಿತ್ತು. ಅದು ರಾಜ್ಯದ ಸದಿಚ್ಛೆಯನ್ನು ಅವಲಂಬಿಸಿತ್ತು. ವಿಧಿ ೨೩ರಲ್ಲಿ ನಿರೂಪಿಸಿರುವಂತೆ ಪ್ರಸಕ್ತ ಸ್ಥಿತಿಯು ನೀವು ಕಾಣುವಂತೆ ನಮ್ಮಿಂದ ಅದು ಮೂಲಭೂತ ಹಕ್ಕಾಗಿ ಬದಲಿಸಲ್ಪಟ್ಟಿದೆ. ಏಕೆಂದರೆ ರಾಜ್ಯವು ಮಾಡಿದ ಯಾವುದೇ ಕಾನೂನು ಈ ವಿಧಿಯ ಉಪಬಂಧಗಳಿಗೆ ಸರಿಹೊಂದದಿದ್ದಲ್ಲಿ, ಈಗಾಗಲೇ ನಾವು ಪಾಸು ಮಾಡಿರುವ ವಿಧಿ ೮ರ ಪರಿಣಾಮವಾಗಿ ಆ ಕಾನೂನು ಅಮಾನ್ಯವಾಗುತ್ತದೆ.

ಆದುದರಿಂದ ನನ್ನ ಮಿತ್ರ ಶ್ರೀ ಲಾರಿ ಮತ್ತು ಮೌಲಾನಾ ಇವರು ಮೂಲ ವಿಧಿಯಲ್ಲಿ ಇದ್ದುದಕ್ಕಿಂತ, ಅವರ ವಿಚಾರ ಸರಣಿಯಂತೆ, ಹೆಚ್ಚಿನ ಸುಧಾರಣೆಯಾದ್ದನ್ನು ಕಾಣಲಿರುವರು. ನಿಶ್ಚಿತವಾಗಿಯೂ ಕರಡು ಸಮಿತಿಯವರು ಮಾಡಿರುವ ಪರಿವರ್ತನೆಯ ಪರಿಣಾಮವಾಗಿ ಸ್ಥಿತಿಯಲ್ಲಿ ಯಾವುದೇ ಇಳಿಕೆಯಾಗಿರುವುದಿಲ್ಲ.

ಮತ್ತೊಂದು ಪ್ರಶ್ನೆಗೆ ಬರುವುದಾದರೆ, ಹೆಸರಿಸುವುದಾದರೆ, ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕು ಮೂಲಭೂತ ಹಕ್ಕೆಂದು ಸ್ಪಷ್ಟ ಪದಗಳಲ್ಲಿ ಈ ಸಂವಿಧಾನವು ವ್ಯಕ್ತಪಡಿಸಬಾರದೇಕೆ ಎನ್ನುವುದು ತಿಳುವಳಿಕೆಯುಳ್ಳವರ ನಡುವೆ ಈ ಬಗೆಗೆ ಯಾವುದೇ ವ್ಯಾಜ್ಯವಿರುವುದೆಂದು ನನಗೆ ಅನಿಸುವುದಿಲ್ಲ. ಪ್ರಾಥಮಿಕ ಶಿಕ್ಷಣವು ಯಾವುದೇ ಸೇವೆ ಸಲ್ಲಿಸುವುದಾಗಿದೆಯಾದರೆ ಅದು ಮಗುವಿನ ಮಾತೃಭಾಷೆಯಲ್ಲಿಯೇ ಕೊಡಬೇಕಾಗುವುದೆಂಬುದು ವಾಸ್ತವಾಂಶ. ಹಾಗಿಲ್ಲದೆ ಪ್ರಾಥಮಿಕ ಶಿಕ್ಷಣವು ಮೌಲ್ಯವಿಲ್ಲದ್ದು ಮತ್ತು ಅರ್ಥವಿಲ್ಲದ್ದಾಗುತ್ತದೆ. ಆ ಬಗೆಗೆ ಯಾವುದೇ ವಾಜ್ಯವಿಲ್ಲವೆಂಬುದು ನನ್ನ ಅನಿಸಿಕೆಯಂತೆ ಖಚಿತ. ಅದನ್ನು ಹೇಳಲು ನನಗೆ ನಾನು ಯಾವ ಸರಕಾರಕ್ಕೆ ಸೇರಿರುವೆನೋ ಆ ಸರಕಾರದಿಂದ ಅಧಿಕಾರ ಪಡೆದುಕೊಳ್ಳಬೇಕೆಂದು ಬಗೆಯಲಾರೆ. ಅದೊಂದು ಸಾರ್ವತ್ರಿಕವಾಗಿ ಒಪ್ಪಿಕೊಂಡಿರುವ ಸ್ಥಿತಿ ಮತ್ತು ಅದು ಎಷ್ಟು ಸೂಕ್ತವಾದದ್ದೆಂದರೆ ಈ ತತ್ವದ ಬಗೆಗೆ ಯಾವುದೇ ವಾದ –ವಿವಾದ ಇರದು. ಪ್ರಶ್ನೆ ಇರುವುದು ನಾವು ಅದನ್ನು ಕಾನೂನಿನಲ್ಲಿ ಇಲ್ಲವೆ ಸಂವಿಧಾನದಲ್ಲಿ ಸೇರಿಸಲೇಬೇಕೇ ಎನ್ನುವುದು. ಮುಚ್ಚುಮರೆ ಇಲ್ಲದೆ ಹೇಳುವುದಾದರೆ ಈ ವಿಷಯವನ್ನು ಸಂವಿಧಾನದಲ್ಲಿ ವಿಶೇಷ ಅನುಚ್ಛೇದವನ್ನಾಗಿ ಇರಿಸಲು ನನಗೆ ಸ್ವಲ್ಪ ತೊಂದರೆಯಿದೆ. ನನ್ನ ಗೌರವಾನ್ವಿತ ಮಿತ್ರ ಪಂಡಿತ ಕುಂಜ್ರು ಅವರು ಗಮನಿಸಿರುವಂತೆ, ಸತ್ಯಾಂಶವೆಂದರೆ, ಅಂತಹ ಮೂಲಭೂತ

ಹಕ್ಕನ್ನು ಜಾರಿಗತಗೊಳಿಸುವಲ್ಲಿ ತೊಂದರೆ ಬರುವುದು. ಇದನ್ನು ಈಗಾಗಲೇ ನನ್ನ ಮಿತ್ರ ಶ್ರೀ ಕರಿಮುದ್ದೀನರವರು ತಿದ್ದುಪಡಿಯನ್ನು ಮಂಡಿಸುವ ಮೂಲಕ ಸ್ವಲ್ಪಮಟ್ಟಿಗೆ ಉಪಶಮನ ಇಲ್ಲವೆ ನಿವಾರಿಸಿದ್ದಾರೆ. ಅದೇಂದರೆ ಆ ತತ್ವವು ಗಣನಾರ್ಹ ಸಂಖ್ಯೆಯ ಅಂತಹ ವಿದ್ಯಾರ್ಥಿಗಳು ದೊರಕುವ ಸಂದರ್ಭದಲ್ಲಿ ಜಾರಿಗತಗೊಳ್ಳಬೇಕು ಎನ್ನುವುದಾಗಿದೆ. ನನ್ನ ಮಿತ್ರ ಶ್ರೀ ಕರೀಮುದ್ದೀನರವರ ಗಮನವನ್ನು ನಾನು ಅವರ ತಿದ್ದುಪಡಿಯು ತೊಂದರೆಯನ್ನು ನಿಜಕ್ಕೂ ಪರಿಹರಿಸದು ಎನ್ನುವತ್ತ ಸೆಳೆಯಬಯಸುತ್ತೇನೆ. ಅದು ತತ್ವವನ್ನು ಒಪ್ಪಿಕೊಳ್ಳುವುದರ ಮಧ್ಯ ಬರುತ್ತದೆ. ಮೊದಲನೆಯದಾಗಿ, ಗಣನಾರ್ಹ ಸಂಖ್ಯೆ ಎಷ್ಟೆಂಬುದನ್ನು ನಿರ್ಧರಿಸುವವರಾರು? ದೃಷ್ಟಾಂತವೊಂದನ್ನು ಕೊಡುವೆ. ಇರಬೇಕಾದಂತೆ ಈ ವಿಷಯವನ್ನು ಕಾರ್ಯಾಂಗಕ್ಕೆ ಬಿಡುವುದು ಎಂದಿಟ್ಟು ಕೊಳ್ಳೋಣ ಮತ್ತು ಕಾರ್ಯಾಂಗವು ಪ್ರಾಥಮಿಕ ಶಾಲೆಯಲ್ಲಿ ೪೯ ಪ್ರತಿಶತ ಅಂತಹ ಮಕ್ಕಳು ಇರದಿದ್ದಲ್ಲಿ ಅದನ್ನು ಗಮನಾರ್ಹ ಸಂಖ್ಯೆಯಾಗುವುದಿಲ್ಲ ಎಂದಾಗಿ ಕಾಯಿದೆ ಮಾಡಿದೆ ಎಂದು ಊಹಿಸೋಣ. ಅಂತಹ ಅಧಿಕಾರ ಕಾರ್ಯಾಂಗಕ್ಕೆ ಬಿಟ್ಟುಕೊಡುವುದು ಅವರಿಗೆ ಸಮಾಧಾನ ತಂದು ಕೊಡಲಿದೆಯೆ? ಆಮೇಲೆ ಈ ವಿಷಯವನ್ನು ನ್ಯಾಯ ನಿರ್ಣಾಯಕ ವಿಷಯವನ್ನಾಗಿಸುವುದು ಎಂದಿಟ್ಟುಕೊಳ್ಳೋಣ. ಇದು ಯಾವ ಅನುಮಾನವೂ ಇಲ್ಲದೆ ನೀವಿದನ್ನು ಮೂಲಭೂತ ಹಕ್ಕನ್ನಾಗಿ ಸೇರಿಸಿದಾಗ ಮಾತ್ರ ಸಾಧ್ಯ. ಯಾವುದೇ ಮೂಲಭೂತ ಹಕ್ಕು ನಿರ್ಣಾಯಕವಾಗಿರದ ಹೊರತು ಮೂಲಭೂತ ಹಕ್ಕಾಗಿರುವುದಿಲ್ಲ. ಯಾವೊಂದು ಶಾಲೆಯಲ್ಲಿ ಗಣನಾರ್ಹ ಸಂಖ್ಯೆ ಮಕ್ಕಳು ಲಭ್ಯವಿರುವರೇ ಎಂಬ ಪ್ರಶ್ನೆಯನ್ನು ಕೋರ್ಟಿಗೆ ಎಳೆದು ನ್ಯಾಯಾಲಯವು ನಿರ್ಣಯಿಸುವಂತೆ ಮಾಡುವುದು ಸೂಕ್ತವೆ, ಅಪೇಕ್ಷಣೀಯವೆ? ಈ ತೊಂದರೆಯಿಂದ ಪಾರಾಗಲು ನನಗೆ ಬೇರೆ ದಾರಿ ಕಾಣುವುದಿಲ್ಲ. "ಗಣನೀಯ" ಪದದ ಅರ್ಥೈಸುವಿಕೆಯನ್ನು ಇಲ್ಲವೆ ಕಾರ್ಯಾಂಗಕ್ಕೆ ಅಥವಾ ನ್ಯಾಯಾಂಗಕ್ಕೆ ಬಿಟ್ಟು ಕೊಡಬೇಕಾಗುತ್ತದೆ. ನನ್ನ ನಿರ್ಣಯದಲ್ಲಿ ಯಾವೊಂದು ವಿಧಾನವೂ ಅಲ್ಪಸಂಖ್ಯಾತ ಗುಂಪಿನ ಗುರಿ ಸಾಧಿಸಲು ಸುರಕ್ಷಿತವಾದ ವಿಧಾನವಾಗಿಲ್ಲ. ಆದುದರಿಂದ ನಾವುಗಳು ಮನಗಾಣಬೇಕಾದ ಅಂಶವೆಂದರೆ ಯಾವುದೇ ಪ್ರಾಂತೀಯ ಸರಕಾರವು ಅದರ ಶೈಕ್ಷಣಿಕ ಹಕ್ಕುಗಳ ವಿಷಯದಲ್ಲಿ ಜನಸಂಖ್ಯೆಯ ಯಾವೊಂದು ಭಾಗಕ್ಕೆ ಹಾನಿಯೊಡ್ಡದೆ ಈ ತತ್ವವನ್ನು ನ್ಯಾಯಯುತವಾಗಿ ರದ್ದುಗೊಳಿಸಿ ಜಾರಿಗೊಳಿಸಲಾಗದೆಂಬುದನ್ನು. ಇದು ನನ್ನ ನಿವೇದನೆ. ಆದುದರಿಂದ ಈ ವಿಧಿಯನ್ನು ತಿದ್ದುಪಡಿಯಾಗಿರುವಂತೆ ಸಭೆಯು ಒಪ್ಪಿಕೊಳ್ಳಬೇಕೆಂಬುದು ನನ್ನ ನಿವೇದನೆ.

*********

(ಮುಂದಿನ ೩ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲಾಯಿತು. ಆರು ತಿದ್ದುಪಡಿಗಳನ್ನು ನಿರಾಕರಿಸಲಾಯಿತು)

(೧) "ವಿಧಿ ೨೩ರ ಕಲಮು (೧)ರಲ್ಲಿ "ಲಿಪಿ ಮತ್ತು ಸಂಸ್ಕೃತಿ" ಈ ಪದಗಳಿಗೆ "ಲಿಪಿ ಅಥವಾ ಸಂಸ್ಕೃತಿ" ಬದಲಾಗಿ ಸೇರಿಸುವುದು."

(೨) " ವಿಧಿ ೨೩ರ ಕಲಮು (೩)ರಲ್ಲಿ "ಸಮುದಾಯ" ಈ ಪದವು ಎಲ್ಲೆಲ್ಲಿ ಬರುವುದೋ ತೆಗೆದುಹಾಕುವುದು."

(೩) "ವಿಧಿ ೨೩ರ ಕಲಮು (೨)ಕ್ಕೆ ಬದಲಾಗಿ ಈ ಮುಂದಿನದನ್ನು ಬದಲಿ ಸೇರಿಸುವುದು:–

"ರಾಜ್ಯವು ನಿರ್ವಹಿಸುತ್ತಿರುವ ಅಥವಾ ರಾಜ್ಯ ನಿಧಿಗಳಿಂದ ನೆರವು ಪಡೆಯುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆಗೆ, ಯಾವನೇ ನಾಗರಿಕನಿಗೆ ಧರ್ಮ, ಮೂಲವಂಶ, ಜಾತಿ, ಭಾಷೆ ಅಥವಾ ಅವುಗಳಲ್ಲಿ ಯಾವುದಾದರೊಂದು ಆಧಾರದ ಮೇಲೆ ಮಾತ್ರವೇ. ಪ್ರವೇಶವನ್ನು ನಿರಾಕರಿಸತಕ್ಕುದ್ದಲ್ಲ." ಮತ್ತು ವಿಧಿ ೨೩ರ ಕಲಮು (೩)ರ ಉಪಕಲಮುಗಳಾದ (ಎ) ಮತ್ತು (ಬಿ)ಗಳನ್ನು ಹೊಸ ವಿಧಿ ೨೩–ಎ ಎಂದಾಗಿ

ಪುನರ್ ಸಂಖ್ಯೆ ನೀಡುವುದು.

(ತಿದ್ದುಪಡಿಯಾದಂತೆ ವಿಧಿ ೨೩ನ್ನು ಅಂಗೀಕರಿಸಲಾಯಿತು ಮತ್ತು ಸಂವಿಧಾನಕ್ಕೆ ಸೇರಿಸಲಾಯಿತು.)

***********

## ವಿಧಿ ೨೪

* **ಶ್ರೀ. ಟಿ. ಟಿ. ಕೃಷ್ಣಮಾಚಾರಿ** (ಮದ್ರಾಸು : ಸಾಮಾನ್ಯ): ಈ ವಿಧಿಯನ್ನು ನಾವು ಈಗ ತೆಗೆದುಕೊಳ್ಳಕೂಡದು ಮತ್ತು ಅನಂತರ ತೆಗೆದುಕೊಳ್ಳಬೇಕು, ಎನ್ನುವುದು ಈ ಸಭೆಯ ಅನೇಕ ಗೌರವಾನ್ವಿತ ಸದಸ್ಯರುಗಳ ಇಚ್ಛೆಯಾಗಿದೆ. ಏಕೆಂದರೆ, ಒಪ್ಪಂದವೊಂದಕ್ಕೆ ಬರಲು ನಾವು ಅನೇಕ ತಿದ್ದುಪಡಿಗಳನ್ನು ನಿಜಕ್ಕೂ ಪರಿಗಣಿಸುತ್ತಿದ್ದೇವೆ. ಡಾ. ಅಂಬೇಡ್ಕರರವರು ಈ ವಿಷಯದ ಅಂಶವನ್ನು ನನ್ನೊಂದಿಗೆ ಸಹಮತಿಸುವರೆಂದೆನಿಸುತ್ತದೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್** (ಬೊಂಬಾಯಿ : ಸಾಮಾನ್ಯ): ಹೌದು. ಮಾನ್ಯರೆ, ವಿಧಿ ೨೪ನ್ನು ಹಿಂದಕ್ಕಿಡಲು ನಾನು ಕೇಳಿಕೊಳ್ಳುತ್ತೇನೆ.

**ಉಪಸಭಾಪತಿ :** ಸಭೆಯ ಆಶಯವೂ ಇದೇ ಆಗಿದೆಯೇ?

ಗೌರವಾನ್ವಿತ ಸದಸ್ಯರುಗಳು : ಹೌದು.

**ಶ್ರೀ ಝೆಡ್.ಹೆಚ್.ಲಾರಿ** (ಯುನೈಟೆಡ್ ಪ್ರಾವಿನ್ಸ್ : ಮುಸ್ಲಿಂ): ಮಾನ್ಯರೆ, ಅಂದಮೇಲೆ ವಿಧಿ ೧೫ ಬಗೆಗೆ ಏನು?

**ಉಪಸಭಾಪತಿ :** ಆ ವಿಧಿಯ ಪರಿಶೀಲನೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.

**********

## ವಿಧಿ ೨೫

****ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ನನ್ನ ಗೌರವಾನ್ವಿತ ಮಿತ್ರ ಶ್ರೀ ಕರಿಮುದ್ದೀನರವರು ಉಲ್ಲೇಖಿಸಿರುವ ಇತರ ವಿಧಿಗಳ ಉಪಬಂಧಗಳಿಗೆ ಈ ವಿಧಿ ಒಳಪಟ್ಟಿರುವುದರಿಂದ, ಈಗ ವಿಧಿಯ ಪರಿಗಣನೆ ಸಾಧ್ಯವಿಲ್ಲ ಎಂದು ನಾನು ವಿಚಾರಿಸುವುದಿಲ್ಲ. ಏಕೆಂದರೆ, ಕಾಣಬಹುದಾಗಿರುವಂತೆ ವಿಧಿ ೨೮೫ ಅಥವಾ ಅದಕ್ಕೆ ಸಂಬಂಧಿತ ಯಾವುದಲ್ಲಿಯಾಗಲಿ ನಾವು ಬದಲಾವಣೆಗಳನ್ನು ಮಾಡುವುದಿಲ್ಲವೆಂದಾದರೆ, ವಿಧಿ ೨೫ರಲ್ಲಿ ಪರಿಮಿತ ಬದಲಾವಣೆಗಳನ್ನು ನಾವು ಸುಲಭವಾಗಿ ಮಾಡಬಹುದು. ಆದುದರಿಂದ ಅದೊಂದು ತಡೆಯಾಗಲಾರದು. ಹೀಗಾಗಿ, ಈ ಹಂತದಲ್ಲಿ ನಮಗೆ ಸಂಪೂರ್ಣವಾಗಿ ವಿಧಿ ೨೫ರ ಪರಿಗಣನೆ ಸಾಧ್ಯ. ಇದರಿಂದಾಗಿ ತದನಂತರ ಅದರಲ್ಲಿ ತತ್ಪರಿಣಾಮವಾಗಿ ಯಾವುದೇ ಬದಲಾವಣೆ ಪರಿಚಯಿಸಲು ಅಡ್ಡಿಯಾಗುವುದಿಲ್ಲ. ಈ ವಿಧಿಯಲ್ಲಿ ಕೆಲ ಬದಲಾವಣೆಗಳನ್ನು ಮಾಡಿದವೆಂದು ಊಹಿಸದಾಗ್ಯೂ ಆ ನಂತರ ............

* ಸಿ.ಎ.ಡಿ. ಸಂಪುಟ ೭, ೯ನೆಯ ಡಿಸೆಂಬರ್, ೧೯೪೮, ಪುಟ ೯೩೦

* ಅದೇ ಪು. ೯೩೧

**ಖಾಜಿ ಸೈಯದ ಕರಿಮುದ್ದೀನ :** ಹಾಗಾದರೆ ನಾವು ಇದನ್ನು ಏಕೆ ಮುಂದೂಡಬಾರದು?

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಆಗದು.

**ಉಪಾಧ್ಯಕ್ಷರು :** ನಾನು ಈ ತಿದ್ದುಪಡಿಯನ್ನು ಮತಕ್ಕೆ ಹಾಕಲು ಹೊರಟಿರುವೆ. ಏಕೆಂದರೆ ಇದನ್ನು ಮುಂದುವರಿಸಿದಲ್ಲಿ ಉಳಿದೆಲ್ಲ ತಿದ್ದುಪಡಿಗಳ ಪರಿಶೀಲನೆ ಮುಂದೂಡಲ್ಪಡುತ್ತದೆ.

**ಉಪಸಭಾಪತಿ :** ಪ್ರಶ್ನೆ ಇರುವುದು ಹೀಗಿದೆ:

"ಈ ಕರಡು ಸಂವಿಧಾನದ ಭಾಗ XI ರ ಪರಿಶೀಲನೆಯಾಗುವವರೆಗೆ ಈ ಕಲಮಿನ ಪರಿಶೀಲನೆಯನ್ನು ಮುಂದೂಡುವುದು."

ಗೊತ್ತುವಳಿ ತಿರಸ್ಕೃತಗೊಂಡಿತು.

***********

**ಶ್ರೀ ನಜೀರುದ್ದೀನ ಅಹ್ಮದ :** ಬಹುಶಃ ಯಾವುದೋ ಅಚ್ಚು–ದೋಷವಿದೆ; ನನಗೆ ತಿಳಿಯದು. ಒಂದು ವೇಳೆ ಅಚ್ಚುದೋಷ ಇಲ್ಲವೆಂದಲ್ಲಿ ಖಚಿತವಾಗಿಯೂ ಇದು ಅಸ್ಪಷ್ಟವಾಗಿರುವುದರಿಂದ ಹಾಗೆ ಟಿಪ್ಪಣಿ ಮಾಡಲು ಮುಕ್ತವಾಗಿದೆ.

ನನ್ನ ಮನಸ್ಸಿನಲ್ಲಿದ್ದ ಒಂದೇ ಅಂಶವೆಂದರೆ ಸೂಕ್ತ ಕಾರ್ಯವರ್ತನೆಯಿಂದ ಸುಪ್ರೀಂ ಕೋರ್ಟಿಗೆ ಹೋಗುವ ಹಕ್ಕನ್ನು ಖಾತರಿಗೊಳಿಸಿದೆ ಎನ್ನುವುದು. ಜನಗಳು ಇತರೆ ಕೋರ್ಟುಗಳಿಗೆ ಹೋಗಲು ಅನುಮತಿಸುವುದನ್ನು ನಾನು ಬಯಸಿದ್ದೆ. ಇಲ್ಲಿ ಒಂದು ವೇಳೆ ಬಡ ವ್ಯಕ್ತಿಯೋರ್ವನಿಗೆ ಸುಪ್ರೀಂ ಕೋರ್ಟಿಗೆ ಹೋಗಲು ಒತ್ತಾಯಿಸಿದ್ದಾದಲ್ಲಿ.....

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಉಪಕಲಮು (೩) ನೋಡಿರಿ.

ಶ್ರೀ ನಜೀರುದ್ದೀನ ಅಹ್ಮದ : ಆ ಉಪಕಲಮು ಮತ್ತೆ ಕೆಲ ನಿರ್ದೇಶಿತ ನ್ಯಾಯಾಲಯಗಳಿಗೆ ಈ ವಿಷಯದೊಂದಿಗೆ ವ್ಯವಹರಿಸಲು ಶಕ್ತತೆ ನೀಡುತ್ತದೆ; ಆದರೆ ನಾನು ಅದನ್ನು ಹೆಚ್ಚು ಸಾಮಾನ್ಯಗೊಳಿಸ ಬಯಸಿದ್ದೆ. ಮೂಲಭೂತ ಹಕ್ಕುಗಳು ಯಾವುದೇ ನ್ಯಾಯಾಲಯದಿಂದ ಗೊತ್ತುವಳಿಯೊಂದರಿಂದ ಜಾರಿಗತಗೊಳಿಸುವ ಶಕ್ತತೆ ಹೊಂದಿರತಕ್ಕದ್ದು............

**********

**ಶ್ರೀ ಹೆಚ್.ವಿ. ಕಾಮತ್ :** ...........ಯಾವುದೇ ಒಂದು ನ್ಯಾಯಾಧಿಕರಣದಲ್ಲಿ ಯಾವ ನಿರ್ದಿಷ್ಟ ರಿಟ್ಟುಗಳನ್ನು ಅಥವಾ ಆಜ್ಞೆಗಳನ್ನು ಅಥವಾ ನಿರ್ದೇಶನಗಳನ್ನು ನಿರ್ಧರಿಸಬೇಕೆನ್ನುವುದನ್ನು ಸುಪ್ರೀಂ ಕೋರ್ಟಿಗೆ ಏಕೆ ಬಿಡಬಾರದು, ಆ ನಿರ್ದಿಷ್ಟ ರಿಟ್ಟುಗಳನ್ನು ಇಲ್ಲಿ ನಿರ್ದಿಷ್ಟವಾಗಿ ನಮೂದಿಸಬೇಕಾದ ಅಗತ್ಯವಿದೆಯೆಂದು ಅವರು ವಿಚಾರಿಸುವುದೇಕೆ ಎನ್ನುವ ಬಗೆಗೆ ನಮಗೆ ಹೇಳುತ್ತಾರೆಂದು ಭಾವಿಸುತ್ತೇನೆ. ಅವರು ಕೇವಲ ಪ್ರಿಸ್ಟಿಜ್ ಅಥವಾ ಮತ್ತಾವುದೇ ಆಲೋಚನೆಯನ್ನು ನಮ್ಮ ಮುಂದೆ ಇಡದೆ ಈ ವಿಧಿಯ ಕಲಮಿನಲ್ಲಿ ಈ ಪ್ರತ್ಯೇಕ ರಿಟ್ಟ್‌ಗಳನ್ನು ನಮೂದಿಸುವ ಬಗೆಗೆ ಒತ್ತಾಯಿಸುವುದಕ್ಕೆ ಸಮಾಧಾನಕರವಾದ ಮತ್ತು ಮಾನ್ಯ ಕಾರಣಗಳನ್ನು ನೀಡುವರೆಂದು ಆಶಿಸುತ್ತೇನೆ.

** **ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಶ್ರೀ ಎಂ.ಎ. ಬೇಗರವರು ಸಭೆಯಲ್ಲಿ

---

* ಸಿಎಡಿ, ಸಂಪುಟ ೭, ೯ನೇ ಡಿಸೆಂಬರ್, ೧೯೪೮ ಪು ೯೩೧.

** ಸಿ.ಎ.ಡಿ. ಸಂಪುಟ ೭, ೯ನೆಯ ಡಿಸೆಂಬರ್, ೧೯೪೮, ಪುಟ ೯೩೩

ಇಲ್ಲವೆಂದು ನನ್ನ ತಿಳುವಳಿಕೆ. ತಾವು ನನಗೆ ೭೮೯ನ್ನು ಮಂಡಿಸಲು ಅನುಮತಿಸುವಿರಾ. ನಾನು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಲಿರುವೆ. ಅದಕ್ಕೆ ಔಪಚಾರಿಕವಾಗಿ ಮಂಡಿಸಬೇಕಾಗುವುದು.

**ಶ್ರೀ ನಜೀರುದ್ದೀನ ಅಹ್ಮದ :** ಅದು ಒಂದು ವೇಳೆ ಸಭೆಗೆ ಒಪ್ಪಿಗೆಯಾಗುವುದಾದರೆ ನಾನದನ್ನು ಮಂಡಿಸಲು ಆಶಿಸುವೆ.

**ಉಪಸಭಾಪತಿ :** ಇದನ್ನು ಮಂಡಿಸಲು ಸಭೆಯ ಶ್ರೀ ನಜೀರುದ್ದೀನ ಅಹ್ಮದರವರಿಗೆ ಅನುಮತಿಸುವುದೇ?

**ಗೌರವಾನ್ವಿತ ಸದಸ್ಯರುಗಳು :** ಹೌದು.

**ಶ್ರೀ ನಜೀರುದ್ದೀನ ಅಹ್ಮದ :** ಮಾನ್ಯರೆ, ನಾನು ಮಂಡಿಸುವೆ :

"ವಿಧಿ ೨೫ರ ಕಲಮು (೨)ರಲ್ಲಿ, "ರಿಟ್‌ಗಳ ಸ್ವರೂಪದಲ್ಲಿ" ಈ ಪದಗಳಿಗೆ ಬದಲಾಗಿ "ಅಥವಾ ರಿಟ್‌ಗಳ, ರಿಟ್‌ಗಳ ಸ್ವರೂಪಗಳು ಸೇರಿದಂತೆ" ಈ ಪದಗಳನ್ನು ಬದಲಿ ಸೇರಿಸುವುದು."

ಮಾನ್ಯರೆ, ಈ ಸಭೆಯಲ್ಲಿ ಇದು ನನ್ನ ಜೀವನದಲ್ಲಿಯ ಕೆಂಪು ಅಕ್ಷರದ ದಿನವಾಗಿದೆ, ಈ ಒಂದು ಏಕ ತಿದ್ದುಪಡಿಯಾಗಿದೆ ಯಾವುದನ್ನು ಒಪ್ಪಿಕೊಳ್ಳಲು ಹೊರಟಿರುವೆವು. ಈ ತಿದ್ದುಪಡಿಯು ನನ್ನ ಪೋಷಿತ ಶಿಶು ಆಗಿದೆ, ಆದ ಕಾರಣಕ್ಕಾಗಿ ಬಹುಶಃ ಗೌರವಾನ್ವಿತ ಸದಸ್ಯರು ಇದನ್ನು ಒಪ್ಪಿಕೊಳ್ಳಲಿದ್ದಾರೆ. ಇದಕ್ಕೆ ವಿವರಣೆ ಬೇಕಾಗಿಲ್ಲ.

**ಶ್ರೀ ಹೆಚ್. ವಿ. ಕಾಮತ್ :** ಕ್ರಿಯಾಲೋಪವೊಂದರ ಮೇಲೆ, ಕೇವಲ ಮಂಡಿಸಿದ ಹಂತದಲ್ಲಿ ಮಾತ್ರವೇ ಅದನ್ನು ಒಪ್ಪಿಕೊಳ್ಳಲಿರುವೆವು ಎಂದು ನನ್ನ ಮಿತ್ರರು ಹೇಳುತ್ತಿರುವುದು ಸರಿಯೆ?

**ಶ್ರೀ ನಜೀರುದ್ದೀನ ಅಹ್ಮದ :** ಅದನ್ನು ಒಪ್ಪಿಕೊಳ್ಳಲಾಗುವುದು ಎನ್ನುವ ವದಂತಿ ಕೇಳಿದ್ದೆ.

**ಉಪಸಭಾಪತಿ :** ಸಂ.ಗಳು ೭೯೩ ಮತ್ತು ೭೯೨ ಇವುಗಳನ್ನು ಶಾಬ್ದಿಕ ತಿದ್ದುಪಡಿಗಳಾಗಿ ತಳ್ಳಿಹಾಕಲಾಯಿತು.

(ತಿದ್ದುಪಡಿ ಸಂ.೯೭೩ ಅನ್ನು ಮಂಡಿಸಲಿಲ್ಲ.)

**ಉಪಸಭಾಪತಿ :** ಸಂ.ಗಳು ೭೯೪, ೭೯೫ ಮತ್ತು ೭೯೯ ಏಕ ಪ್ರಕಾರದವುಗಳಾಗಿವೆ ಮತ್ತು ಜೊತೆಯಲ್ಲಿ ಪರಿಗಣಿಸಲಾಗುವುದು. ೭೯೪ನ್ನು ಮಂಡಿಸಲು ಅನುಮತಿಸಲಾಗಿದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ತಮ್ಮ ಅನುಮತಿಯೊಂದಿಗೆ ನಾನು ಒಂದು ಅಥವಾ ಎರಡು ಸರಿಪಡಿಕೆಗಳನ್ನು ಮಾಡುವೆ. ಅವು ಕರಡಿನಲ್ಲಿ ತಪ್ಪಾಗಿ ನುಸುಳಿಕೊಂಡಿವೆ. ಮಾನ್ಯರೆ, ಆ ಸರಿಪಡಿಕೆಗಳೊಂದಿಗೆ ನನ್ನ ತಿದ್ದುಪಡಿ ಓದಲ್ಪಡುವುದು ಹೀಗೆ:

ಈಗಿರುವ ವಿಧಿ ೨೫ರ ಉಪ–ಕಲಮು(೩)ಕ್ಕೆ ಬದಲಾಗಿ ಈ ಮುಂದೆ ಕಾಣಿಸಿರುವ ಕಲಮನ್ನು ಬದಲಿ ಇಡುವುದು:

"ಸರ್ವೋಚ್ಚ ನ್ಯಾಯಾಲಯಕ್ಕೆ (೧)ನೆಯ ಮತ್ತು (೨)ನೆಯ ಖಂಡಗಳಿಂದ ಪ್ರದಾನ ಮಾಡಲಾಗಿರುವ ಅಧಿಕಾರಗಳಿಗೆ, ಬಾಧಕವಾಗದಂತೆ, ಇತರ ಯಾವುದೇ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ ಈ ವಿಧಿ (೨)ನೆಯ ಖಂಡದ ಮೇರೆಗೆ, ಸರ್ವೋಚ್ಚ ನ್ಯಾಯಾಲಯವು, ಚಲಾಯಿಸಬಹುದಾದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸುವಂತೆ, ಆ ನ್ಯಾಯಾಲಯಕ್ಕೆ ಸಂಸತ್ತು ಕಾನೂನು ಮೂಲಕ ಅಧಿಕಾರ ನೀಡಬಹುದು."

ಈ (೧) ಮತ್ತು (೨) ಕಲಮುಗಳನ್ನು ಸೇರಿಸಲು ಕಾರಣವೆಂದರೆ (೧) ಮತ್ತು (೨) ಕಲಮುಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಉಲ್ಲೇಖಿಸುತ್ತವೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಉಪಸಭಾಪತಿ ಮಾನ್ಯರೆ, ಈ ವಿಧಿಗೆ ಮಂಡಿಸಲ್ಪಟ್ಟಿರುವ ತಿದ್ದುಪಡಿಗಳಲ್ಲಿ ಶ್ರೀ ಬೇಗ ಅವರ ಹೆಸರಿನಲ್ಲಿರುವ ಆದರೆ ನಿಜವಾಗಿ ಶ್ರೀ ನಿಜಾಮುದ್ದೀನ ಅಹಮದ್‌ರವರಿಂದ ಮಂಡಿಸಲ್ಪಟ್ಟ ತಿದ್ದುಪಡಿ ಸಂಖ್ಯೆ ೭೯೯ನ್ನು ಮಾತ್ರ ನಾನು ಒಪ್ಪಿಕೊಳ್ಳುವುದು. ಅದು ಕರಡಿನ ಭಾಷೆಯನ್ನು ನಿಜಕ್ಕೂ ಉತ್ತಮಗೊಳಿಸುವುದರಿಂದ ಅದನ್ನು ನಾನು ಒಪ್ಪಿಕೊಳ್ಳುವುದು. ಉಳಿದ ತಿದ್ದುಪಡಿಗಳಲ್ಲಿ ನಾನು ಮೊದಲಿಗೆ ತೆಗೆದುಕೊಳ್ಳುವುದು ಶ್ರೀ ತಾಜಮುಲ ಹುಸೇನರಿಂದ ಮಂಡಿಸಲ್ಪಟ್ಟ ತಿದ್ದುಪಡಿ (ಸಂ.೮೦೧) ಮತ್ತು ಶ್ರೀ ಕರಿಮುದ್ದೀನರಿಂದ ಮಂಡಿತ ತಿದ್ದುಪಡಿ (ಸಂ.೮೦೨). ಅವೆರಡೂ ಒಂದೇ ಪ್ರಕಾರದ ಲಕ್ಷಣಗಳು ಹೊಂದಿದವು. ಶ್ರೀ ತಾಜಮುಲ ಹುಸೇನರಿಂದ ಮಂಡಿತ ತಿದ್ದುಪಡಿಯ ಗುರಿ ಈ ವಿಧಿಯ ಉಪಕಲಮು (೪)ನ್ನು ಸಮಗ್ರವಾಗಿ ತೆಗೆದು ಹಾಕುವುದಾಗಿದೆ ಮತ್ತು ಶ್ರೀ ಕರಿಮುದ್ದೀನರ ತಿದ್ದುಪಡಿ **'**ಬಂಡಾಯ ಅಥವಾ ದಾಳಿಯಾದ ಸಂದರ್ಭದಲ್ಲಿ**'** ಈ ಪದಗಳನ್ನು ಉಪಕಲಮು (೪)ರಲ್ಲಿ ಸೇರಿಸುವುದರ ಮೂಲಕ ಅದರ ಭಾಷೆಯನ್ನು ಸೀಮಿತಗೊಳಿಸುವುದಾಗಿದೆ.

ಈಗ, ಮಾನ್ಯರೆ, ಕಲಮು (೪)ನ್ನು ತೆಗೆದುಬಿಡಬೇಕೆಂಬ ವಾದಕ್ಕೆ ಸಂಬಂಧಿಸಿದಂತೆ, ನನಗೆ ಭಯವಿದೆ, ಯಾವ ತಪ್ಪೆಸಗದೆ ನಾನು ಹಾಗೆ ಹೇಳಬಹುದಾದರೆ, ಅದೊಂದು ಮಿತಿ ಮೀರಿದ, ನ್ಯಾಯವಲ್ಲದ ಬೇಡಿಕೆಯಾಗಿದೆ. ವ್ಯಕ್ತಿಯು ತನ್ನ ಸ್ವಂತದ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸಿಕೊಳ್ಳಲು ಅಗತ್ಯ ಸುರಕ್ಷೆ ಮತ್ತು ಸ್ವಾತಂತ್ರ್ಯವನ್ನು ಹೊಂದಲು ರಾಜ್ಯವು ವ್ಯಕ್ತಿಗೆ ಕೆಲ ಮೂಲಭೂತ ಹಕ್ಕುಗಳ ಭರವಸೆ ಕೊಡಲೇಬೇಕು ಎನ್ನುವುದರ ಬಗೆಗೆ ಯಾವುದೇ ಅನುಮಾನ ಇರಬೇಕಾಗಿಲ್ಲ. ಕೆಲ ಸಂದರ್ಭಗಳಲ್ಲಿ ಉದಾಹರಣೆಗೆ, ರಾಜ್ಯದ ಜೀವವೇ ಅಪಾಯದಲ್ಲಿದ್ದಾಗ ಆ ಹಕ್ಕುಗಳು ಸ್ವಲ್ಪ ಮಟ್ಟಿನ ಮಿತಿಗೆ ಒಳಪಡಬೇಕಾದದ್ದು ಅಷ್ಟೆ ಸ್ಪಷ್ಟವಾದದ್ದು.

ಸಾಮಾನ್ಯ ಶಾಂತಿಯಿಂದ ಕೂಡಿದ ಸಮಯಗಳು ತುರ್ತುಪರಿಸ್ಥಿತಿಗಳಿಗಿಂತ ಭಿನ್ನವಾದವುಗಳು. ತುರ್ತುಪರಿಸ್ಥಿತಿಯಲ್ಲಿ ರಾಜ್ಯದ ಅಸ್ತಿತ್ವವೇ ಗಂಡಾಂತರದಲ್ಲಿರುತ್ತದೆ. ಅಲ್ಲದೆ ಅಂತಹ ತುರ್ತುಪರಿಸ್ಥಿತಿ ಸಮಯದಲ್ಲಿ ರಾಜ್ಯವು ತನ್ನನ್ನು ತಾನು ರಕ್ಷಸಿಕೊಳ್ಳಲು ಸಕ್ಷಮವಾಗಿರದಿದ್ದಲ್ಲಿ ವ್ಯಕ್ತಿಯು ತನ್ನ ಉಳಿಯುವಿಕೆಯನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿರುತ್ತಾನೆ. ತತ್ಪರಿಣಾಮವಾಗಿ, ತುರ್ತುಪರಿಸ್ಥಿತಿಯಲ್ಲಿ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕು ಶ್ರೇಷ್ಠತಮವಾದದ್ದಾಗಿರುತ್ತದೆ. ಏಕೆಂದರೆ ಅದು ಉಳಿದಲ್ಲಿ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯ, ರಾಜ್ಯದ ಅಧೀನ ಬರುವ ವ್ಯಕ್ತಿಯು ತನಗೆ ನೀಡಲಾದ ಹಕ್ಕುಗಳನ್ನು ಸುರಕ್ಷಿತವಾಗಿ ಅನುಭವಿಸುವಂತೆ ಮಾಡುವುದು ಸಾಧ್ಯವಾಗುತ್ತದೆ. ಹಕ್ಕುಗಳನ್ನು ನೀಡಿ ತುರ್ತುಪರಿಸ್ಥಿತಿಯಲ್ಲಿ ಅವುಗಳನ್ನು ಮಿತಿಗೊಳಿಸದೆ ರಾಜ್ಯವು ತನ್ನನ್ನು ರಕ್ಷಿಸಿಕೊಳ್ಳದಿರುವ ವ್ಯವಸ್ಥೆಯ ಯಾವೊಂದು ಸಂವಿಧಾನ ನನಗೆ ತಿಳಿದಿಲ್ಲ. ಮೂಲಭೂತ ಹಕ್ಕುಗಳನ್ನು ಖಾತರಿಪಡಿಸಿರುವ ಯಾವೊಂದು ಸಂವಿಧಾನವನ್ನೇ ತೆಗೆದುಕೊಳ್ಳಿ, ನೀವು ಕಾಣುವುದು ತುರ್ತುಪರಿಸ್ಥಿತಿಯಲ್ಲಿ ರಾಜ್ಯದಿಂದ ಅವುಗಳನ್ನು ಸ್ಥಗಿತಗೊಳಿಸುವ ಅವಕಾಶವನ್ನು ಮಾಡಿರುವುದು. ಹೀಗಾಗಿ, ಆದುದರಿಂದ, ಕಲಮು (೪)ನ್ನು ತೆಗೆದು ಹಾಕುವ ತಿದ್ದುಪಡಿಗೆ ಸಂಬಂಧಿಸಿದಂತೆ, ಇದೊಂದು ತಾತ್ವಿಕ ಪ್ರಶ್ನೆಯಾಗಿದ್ದು, ನನಗೆ ಭಯವಿದೆ, ನಾನು ತಿದ್ದುಪಡಿ ಸೂಚಿಸಿದವರೊಂದಿಗೆ ಸಹಮತಿಸಲಾರೆ. ಆದುದರಿಂದ ನನಗೆ ಅದನ್ನು ವಿರೋಧಿಸಲೇ ಬೇಕಾಗುತ್ತದೆ.

ಈಗ, ಮಾನ್ಯರೆ, ನಾನು ವಿವರಕ್ಕೆ ಹೋಗುವೆ. ನನ್ನ ಮಿತ್ರ ಶ್ರೀ ತಾಜಮುಲ್ ಹುಸೇನರು ಅಧ್ಯಾಯದಲ್ಲಿ ಸೇರಿಸಲಾಗಿರುವ ಮೂಲಭೂತ ಹಕ್ಕುಗಳಿಗೆ ಸಂಬಂಧಿತ ಹಲವಾರು ವಿಧಿಗಳನ್ನು ಉಲ್ಲೇಖಿಸಿ ವಿವರ್ಣವಾದ ಚಿತ್ರವನ್ನೇ ಬಿಡಿಸಿರುತ್ತಾರೆ. ಇಲ್ಲಿ ನೀರು ತೆಗೆದುಕೊಳ್ಳುವ ಅಧಿಕಾರವಿದೆ, ಅಲ್ಲಿ ಅಂಗಡಿಯೊಂದಕ್ಕೆ

ಪ್ರವೇಶಿಸುವ ಹಕ್ಕು ಇದೆ, ಸ್ನಾನದ ಘಾಟಗೆ ಹೋಗಲು ಸ್ವಾತಂತ್ರ್ಯವಿದೆ ಎಂದಾಗಿ ಅವರು ಹೇಳಿದ್ದಾರೆ. ಈಗ ಒಂದು ವೇಳೆ ಕಲಮು (೪) ಜಾರಿಗತಗೊಂಡಲ್ಲಿ ಈ ಎಲ್ಲ ಪ್ರಾಥಮಿಕ ಮಾನವ ಹಕ್ಕುಗಳು ಯಾವನ್ನು ಮೂಲಭೂತ ಭಾಗ ಖಾತರಿಗೊಳಿಸಿದೆಯೋ –ಯಾವುದೇ ತಡೆ ಇಲ್ಲದೆ ಮನುಷ್ಯನೋರ್ವನಿಗೆ ನೀರು ಕುಡಿಯಲು ಬಾವಿಗೆ ಹೋಗುವ, ರಸ್ತೆಯ ಮೇಲೆ ನಡೆದಾಡುವ, ಸಿನೆಮಾ ಅಥವಾ ಥಿಯೇಟರಿಗೆ ಹೋಗಲು, ಅನುಮತಿಸಿದೆಯೋ ಅವುಗಳೆಲ್ಲ ಇಲ್ಲವಾಗುವುವು ಎಂದು ಅವರು ಸಲಹೆಮಾಡಿರುತ್ತಾರೆ. ಶ್ರೀ ತಾಜಮುಲ ಹುಸೇನರು ಈ ವಿಚಾರವನ್ನು ಎಲ್ಲಿಂದ ಪಡೆದುಕೊಂಡರೋ ನನಗೆ ಗೊತ್ತಿಲ್ಲ. ಅವರು ಒಂದು ವೇಳೆ ವಿಧಿ ೨೭೯ ಯಾವುದು ರಾಷ್ಟ್ರಪತಿಗಳಿಗೆ ತುರ್ತುಪರಿಸ್ಥಿತಿಯಲ್ಲಿ ಘೋಷಣೆಯನ್ನು ಹೊರಡಿಸುವ ಅಧಿಕಾರ ನೀಡುವುದಕ್ಕೆ ಸಂಬಂಧಿಸಿದುದಾಗಿದೆಯೋ ಅದನ್ನು ಉಲ್ಲೇಖಿಸುವುದಾದರೆ, ಅವರು ಕಲಮು (೪) ಯಾವುದು ಈ ಹಕ್ಕುಗಳನ್ನು ರದ್ದುಪಡಿಸುತ್ತದೆ. ಉಲ್ಲೇಖಿಸಿದಲ್ಲಿ ಅದು ವಿಧಿ ೧೩ ಆಗಿದ್ದು ಮತ್ತಾವುದೇ ವಿಧಿಯಲ್ಲ. ತುರ್ತುಪರಿಸ್ಥಿತಿಯಲ್ಲಿ ರಾಷ್ಟ್ರಪತಿಗಳು ಘೋಷಣೆ ಹೊರಡಿಸಿ ರದ್ದುಪಡಿಸಬಹುದಾದ ಹಕ್ಕುಗಳು ಕೇವಲ ವಿಧಿ ೧೩ರಲ್ಲಿವೆ: ಉಳಿದೆಲ್ಲ ವಿಧಿಗಳು, ಅದರ ಅಂತರ್ಗತ ನೀಡಲ್ಪಟ್ಟ ಹಕ್ಕುಗಳು ಇದ್ದಂತೆ ಉಳಿಯುತ್ತವೆ, ಅವುಗಳಲ್ಲಿ ಯಾವುವು ಪರಿಣಾಮಕ್ಕೊಳಗಾಗುವುದಿಲ್ಲ. ತತ್ಪರಿಣಾಮವಾಗಿ, ಸಭೆಗೆ ಸಾದರಪಡಿಸಿರುವ ಅವರ ವಾದಗಳು ಸಂಪೂರ್ಣವಾಗಿ ವಿಧಿ ೨೭೯ರೊಳಗಣ ಉಪಬಂಧಗಳಿಗೆ ಹೊರತಾಗಿವೆ.

**ಶ್ರೀ ಹೆಚ್. ವಿ. ಕಾಮತ್ :** ವಿಧಿ ೨೮೦ರ ಬಗೆಗೆ ಏನು?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಅದು ಮಾಡುವುದೆಲ್ಲ ಏನೆಂದರೆ, ಪರಿಹಾರಗಳನ್ನು ರದ್ದುಪಡಿಸುವುದು. ಈ ಪರಿಹಾರಗಳ ಸ್ವರೂಪದ ಸಾಮಾನ್ಯ ಪ್ರಶ್ನೆಯ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ ನಾನು ಅವುಗಳನ್ನು ವಿಚಾರಿಸಬೇಕೆಂದು ಅಂದುಕೊಂಡಿದ್ದೆ. ಹಾಗಾಗಿ ಆ ಬಗೆಗೆ ಇಲ್ಲಿ ಪ್ರಸ್ತಾಪಿಸಲಿಲ್ಲ.

ಶ್ರೀ ಕರಿಮುದ್ದೀನರ ವಿಚಾರಾಂಶವನ್ನು ತೆಗೆದುಕೊಳ್ಳುತ್ತ ಅವರು ರೂಪಿಸಲು ಪ್ರಯತ್ನಿಸುತ್ತಿರುವುದು ಕಲಮು (೪)ನ್ನು ಬಂಡಾಯ ಅಥವಾ ದಾಳಿಯ ಪ್ರಕರಣಗಳಿಗೆ ಸೀಮಿತಗೊಳಿಸುವುದನ್ನು. ನನಗೆ ಅನಿಸುವುದೇನೆಂದರೆ ಒಂದು ವೇಳೆ ಅವರು ವಿಧಿ ೨೭೫ನ್ನು ಗಮನವಿಟ್ಟು ಓದಿದ್ದಾದರೆ, ವಿಧಿ ೨೭೫ ಒಳಗೊಂಡಿರುವ ಉಪಬಂಧಗಳು ಮತ್ತು ಅವರು ಪ್ರಸ್ತಾವಿಸಿರುವ ತಿದ್ದುಪಡಿ ಇವುಗಳ ನಡುವೆ ಯಾವುದೇ ನೈಜವ್ಯಾವಹಾರಿಕ ಅಂತರವಿಲ್ಲ. ವಿಧಿ ೨೭೫ ರಾಷ್ಟ್ರಪತಿಗಳಿಗೆ ವಹಿಸಿರುವ ತುರ್ತುಪರಿಸ್ಥಿತಿ ಘೋಷಿಸುವ ಅಧಿಕಾರ ಸೀಮಿತವಾಗಿರುವುದು ಕೇವಲ ಯುದ್ಧ ಅಥವಾ ಆಂತರಿಕ ಹಿಂಸಾತ್ಮಕ ಗಲಭೆಯ ಕೇಸುಗಳಿಗೆ ಮಾತ್ರ ಸೀಮಿತ.

**ಖಾಜಿ ಸೈಯದ ಕರಿಮುದ್ದೀನ :** ಒಂದು ವೇಳೆ ಯುದ್ಧದ ಭಯ ಒಡ್ಡಿದ ಮಾತ್ರಕ್ಕೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಖಚಿತವಾಗಿಯೂ ಯುದ್ಧವಾದಾಗ ಮಾತ್ರ ತುರ್ತು ಪರಿಸ್ಥಿತಿ ಉಂಟಾಗುವುದಿಲ್ಲ – ಯುದ್ಧದ ಭಯ ಒಡ್ಡಿದ ಪರಿಸ್ಥಿತಿಯನ್ನೂ ತುರ್ತುಪರಿಸ್ಥಿತಿ ಎಂದು ಪರಿಗಣಿಸಬಹುದಾಗಿದೆ. ತತ್ಪರಿಣಾಮವಾಗಿ, ಒಂದು ವೇಳೆ ನಾವು ಏನನ್ನು ಮಾಡಲು ರಾಷ್ಟ್ರಪತಿಯವರಿಗೆ ವಿಧಿ ೨೭೫ ಅನುಮತಿಸುತ್ತದೆಯೋ ಆ ಪದಗಳನ್ನು ಶ್ರೀ ಕರಿಮುದ್ದೀನರ ತಿದ್ದುಪಡಿ ಒಪ್ಪಿಗೆ ನೀಡಿ ಹೋಲಿಸಿದಲ್ಲಿ ರಾಷ್ಟ್ರಪತಿಯವರಿಗೆ ದೊರಕುವ ಅಧಿಕಾರಗಳು ಅವೇ ಆಗಿರುತ್ತವೆ. ಆದುದರಿಂದ ಮಾನ್ಯರೆ, ನಾನು ಕೇಳಿಕೊಳ್ಳುವುದೇನೆಂದರೆ ತಿದ್ದುಪಡಿ ಸಂ. ೮೦೧ ಮತ್ತು ೮೦೨ರ ಅಗತ್ಯವೇ ಇಲ್ಲ ಎನ್ನುವುದು. ನನ್ನ ಮಟ್ಟಿಗೆ ಹೇಳುವುದಾದರೆ ಸಂ. ೮೦೧ ನಾನು ನಿರೂಪಿಸಿರುವ ತತ್ವಗಳಿಗೆ ಪೂರ್ಣವಾಗಿ

ವಿರೋಧವಾದದ್ದಾಗಿದೆ.

ನಾನೀಗ ನನ್ನ ಮಿತ್ರ ಕಾಮತ್‌ರ ಪಟ್ಟಿ ೧೧೧ರಲ್ಲಿಯ ಸಂಖ್ಯೆ ೩೪ರ ಜೊತೆಗೆ ಓದಲಾಗುವ ತಿದ್ದುಪಡಿ ಸಂ.೭೮೭ ಮತ್ತು ನನ್ನ ಮಿತ್ರ ಸರ್ವಟೆಯವರ ಸಂ.೪೩ರಿಂದ ತಿದ್ದುಪಡಿ ಮಾಡಲ್ಪಟ್ಟ ಸಂ. ೭೮೩ನ್ನು ತೆಗೆದುಕೊಳ್ಳುತ್ತೇನೆ. ನನ್ನ ಮಿತ್ರ ಶ್ರೀ ಕಾಮತ, ನಾನು ಅವರನ್ನು ಸರಿಯಾಗಿ ಅರಿತುಕೊಂಡಿದ್ದಾದರೆ, ಪ್ರತ್ಯೇಕಗೊಳಿಸುವುದು ಅಗತ್ಯವಿಲ್ಲವೆನ್ನುವುದು ಅವರ ಸಲಹೆಯಾಗಿದೆ. ಈಗಿರುವಂತೆ ವಿಧಿಯಲ್ಲಿಯ ವಿವಿಧ ರಿಟ್‌ಗಳು ಮಾಡುವಂತೆ, ಆಯಾ ಕೇಸುಗಳ ಸೂಕ್ತ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟಿಗೆ ಪರಿಹಾರಗಳನ್ನು ವಿಕಸನಗೊಳಿಸಲು ಬಿಡುವುದಾಗಿದೆ. ಈ ವಿಧಿಯನ್ನು ಶ್ರೀ ಕಾಮತರವರು ಜಾಗರೂಕತೆಯಿಂದ ಓದಿರುವರೆಂದು ನನಗೆ ಅನಿಸುವುದಿಲ್ಲ. ಅವರು ವಿಧಿಯನ್ನು ಗಮನವಿಟ್ಟು ಓದಿದ್ದೇ ಆದಲ್ಲಿ ಅವರು ಕರಡಿನಲ್ಲಿ ಸಾಮಾನ್ಯ ಅಧಿಕಾರಗಳನ್ನು ಮತ್ತು ಪ್ರತ್ಯೇಕ ಪರಿಹಾರಗಳನ್ನು ನೀಡಿರುವುದನ್ನು ಗಮನಿಸಬಹುದಾಗಿದೆ. ಈ ವಿಧಿಯ ಭಾಷೆ ಬಹಳ ಸ್ಪಷ್ಟವಾಗಿದೆ.

"ಈ ಭಾಗದಲ್ಲಿ ನೀಡಲ್ಪಟ್ಟಿರುವ ಹಕ್ಕುಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸೂಕ್ತ ಕಾರ್ಯವಿಧಾನ ಅನುಸರಿಸಿ ಸುಪ್ರೀಂ ಕೋರ್ಟಿಗೆ ಹೋಗುವ ಹಕ್ಕನ್ನು ಖಚಿತಪಡಿಸಲಾಗಿದೆ.

ರಿಟ್ಟುಗಳ ಸ್ವರೂಪದಲ್ಲಿ ನಿರ್ದೇಶನಗಳನ್ನು ಅಥವಾ ಆಜ್ಞೆಗಳನ್ನು ಹೊರಡಿಸುವ ಅಧಿಕಾರ ಸುಪ್ರೀಂ ಕೋರ್ಟು ಹೊಂದಿರುವುದು............."

ಇವುಗಳು ಅತಿ ಸಾಮಾನ್ಯ ಹಾಗೂ ವಿಶಾಲ ನಿಬಂಧನೆಗಳಾಗಿವೆ.

**ಶ್ರೀ ಹೆಚ್. ವಿ. ಕಾಮತ್ :** ಒಂದು ವಿವರಣೆ ಬಗೆಗೆ, ಮಾನ್ಯರೆ, ನನ್ನ ಮಿತ್ರ ಶ್ರೀ ಬೇಗ್ ಅವರ ತಿದ್ದುಪಡಿಯನ್ನು ಒಪ್ಪುವುದರೊಂದಿಗೆ ಕಲಮು ಓದಲ್ಪಡುವುದು ಹೀಗೆ.

"ಹೇಬಿಯಸ್ ಕಾರ್ಪಸ್ ಸ್ವರೂಪದ ರಿಟ್ಟುಗಳು ಸೇರಿದಂತೆ ನಿರ್ದೇಶನಗಳನ್ನು ಅಥವಾ ಆಜ್ಞೆಗಳನ್ನು ಅಥವಾ ರಿಟ್ಟುಗಳನ್ನು ಹೊರಡಿಸುವ ಅಧಿಕಾರ ಸುಪ್ರೀಂ ಕೋರ್ಟು ಹೊಂದಿರುವುದು..........."

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಹೌದು, " ನಿರ್ದೇಶನಗಳು ಮತ್ತು ಆಜ್ಞೆಗಳು" ಈ ಪದಗಳು ಇವೆ.

**ಶ್ರೀ ಹೆಚ್.ವಿ. ಕಾಮತ್ :** ಮತ್ತು "ರಿಟ್‌ಗಳು"

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಹೌದು.

ಸುಪ್ರೀಂ ಕೋರ್ಟಿಗೆ ಆಜ್ಞೆಗಳನ್ನು ಮತ್ತು ನಿರ್ದೇಶನಗಳನ್ನು ನೀಡುವ ಅಧಿಕಾರಗಳು ಇವೆಯಾದರೂ, ಕರಡು ಸಂವಿಧಾನದಲ್ಲಿ ಈ ವಿಶೇಷ ರಿಟ್ಟುಗಳನ್ನು ನಮೂದಿಸುವುದು ಅಪೇಕ್ಷಣೀಯವೆಂದು ಬಗೆಯಲಾಯಿತು. ಈಗ, ಈ ವಿಶೇಷ ರಿಟ್ಟುಗಳ ಬಗೆಗೆ ತಿಳಿಸುವ ಮತ್ತು ಈ ಬಗೆಗೆ ಉಲ್ಲೇಖಿಸುವ ಅಗತ್ಯ ವ್ಯಕ್ತಗೊಂಡಿತು. ಈ ರಿಟ್‌ಗಳು ಗ್ರೇಟ್ ಬ್ರಿಟನ್‌ನಲ್ಲಿ ಹಲವಾರು ವರ್ಷಗಳಿಂದ ಜಾರಿಯಲ್ಲಿವೆ. ಅವುಗಳ ಸ್ವರೂಪ ಮತ್ತು ಅವುಗಳು ಒದಗಿಸುವ ಪರಿಹಾರಗಳು ಎಲ್ಲ ಲಾಯರುಗಳಿಗೆ ತಿಳಿದಿದೆ ಮತ್ತು ತತ್ಪರಿಣಾಮವಾಗಿ ನಾನು ವಿಚಾರಿಸಿದ್ದೇನೆಂದರೆ ಪ್ರತಿ ಇಂಗ್ಲಿಷ್‌ಮನ್‌ನ ಸ್ವಾತಂತ್ರ್ಯವನ್ನು ರಕ್ಷಿಸಲು ಬಹುಶಃ ಸಾವಿರಾರು ವರ್ಷಗಳಿಂದ ಜಾರಿಯಲ್ಲಿದ್ದು, ಸಂಪೂರ್ಣ ತೃಪ್ತಿ ನೀಡಿರುವ ಇವುಗಳ ಬಗೆಗೆ ಯಾವೊಬ್ಬ ವ್ಯಕ್ತಿಯು ಎಷ್ಟೇ ಫಲವಂತಿಕೆಯ ಕಲ್ಪನೆಯನ್ನು ಬಳಸಿದಾಗ್ಯೂ ಇವುಗಳ ಇನ್ನಷ್ಟು ಸುಧಾರಣೆ ಅಸಾಧ್ಯವೆಂದು. ಆದುದರಿಂದ ನಾವು ವಿಚಾರಿಸಿದ್ದೇನೆಂದರೆ ಹಾಗೆ ಹೇಳುವುದಾದರೆ ಈ ರಿಟ್‌ಗಳನ್ನೊಳಗೊಂಡ ಇಂಗ್ಲೀಷ್ ನ್ಯಾಯಶಾಸ್ತ್ರ ಒಳಗೊಂಡಿದ್ದಂತೆ ಈ ಸ್ಥಿತಿಯನ್ನು ಸುರಕ್ಷಿತವಾದದ್ದಾಗಿ ಹೆಸರು ಸಹಿತ ನ್ಯಾಯ ನೀಡಲು ಸುಪ್ರೀಂ

ಕೋರ್ಟಿನ ಹಕ್ಕಿಗೆ ಯಾವುದೇ ಪೂರ್ವಾಗ್ರಹವಿಲ್ಲದೆ ಸಂವಿಧಾನದಲ್ಲಿ ಸೇರಿಸಲಾಗಿದೆ. ಹಾಗೆ ಮಾಡುವುದು ಬೇರೆ ರೀತಿಯಲ್ಲಿ ಅಪೇಕ್ಷಣೀಯ ಎಂದೆನಿಸಿತ್ತು. ಆದುದರಿಂದಾಗಿ ಆ ಆಧಾರದ ಮೇಲೆ ಶ್ರೀ ಕಾಮತ್‌ರವರಿಗೆ ಆಕ್ಷೇಪಣೆ ಮಾಡಲು ಯಾವು ಆಧಾರವೂ ಇಲ್ಲ.

ನನ್ನ ಮಿತ್ರ ಶ್ರೀ ಸರ್ವಾಟೆಯವರು ಈ ವಿಧಿಯಲ್ಲಿ ಕೊಡಲ್ಪಟ್ಟಿರುವ ಅಧಿಕಾರಗಳನ್ನು ಬಳಸುವಾಗ ಕೋರ್ಟಿಗೆ ಕೇಸಿನ ಸತ್ಯಾಂಶಗಳಲ್ಲಿ ಒಳ ಹೋಗುವ ಸ್ವಾತಂತ್ರ್ಯವಿರುತ್ತದೆ ಎಂದು ಹೇಳಿರುತ್ತಾರೆ. ಶ್ರೀ ಸರ್ವಾಟೆಯವರು ಈ ರಿಟ್‌ಗಳ ವ್ಯಾಪ್ತಿ ಮತ್ತು ಸ್ವರೂಪವನ್ನು ತಪ್ಪಾಗಿ ತಿಳಿದಿರುತ್ತಾರೆ ಎನ್ನುವುದರ ಬಗೆಗೆ ಯಾವ ಅನುಮಾನವಿಲ್ಲ. ಆದುದರಿಂದ ನಾನು ಅಭಿಪ್ರಾಯಪಡುವುದೇನೆಂದರೆ ಈ ರಿಟ್‌ಗಳ ಸ್ವರೂಪವನ್ನು ವಿವರಿಸಲು ನಾನು ಕ್ಷಮೆ ಕೇಳುವ ಅಗತ್ಯವಿಲ್ಲ. ಇಂಗ್ಲೀಷ್ ಕಾನೂನಿನ ಬಗೆಗೆ ತಿಳಿದಿರುವ ಯಾರೇ ಆಗಲಿ ಈ ವಿಧಿಯಲ್ಲಿ ಉಲ್ಲೇಖಿಸಲ್ಪಟ್ಟಿರುವ ರಿಟ್‌ಗಳು ಎರಡು ಪ್ರಕಾರದವುಗಳಾಗಿ ವಿಂಗಡಣೆಗೊಳ್ಳುತ್ತವೆ ಎಂದು ಗ್ರಹಿಸುತ್ತಾರೆ. ಒಂದು ಅರ್ಥದಲ್ಲಿ ಅವುಗಳ "ವಿಶಿಷ್ಟಾಧಿಕಾರ ರಿಟ್‌ಗಳು" ಮತ್ತೊಂದು ಅರ್ಥದಲ್ಲಿ "ಕಾರ್ಯದಲ್ಲಿಯ ರಿಟ್‌ಗಳು" ಎಂದು ಕರೆಯಲ್ಪಡುತ್ತವೆ. ಮ್ಯಾಂಡಮಸ್‌ರಿಟ್ ಪ್ರೋಹಿಬಿಷನ್ ರಿಟ್, ಸರ್ಟಿಯೋರಾರಿ ರಿಟ್‌ಗಳನ್ನು ಎರಡಕ್ಕೂ ಬಳಸಬಹುದು ಅಥವಾ ಅನ್ವಯಿಸಬಹುದಾಗಿದೆ; ಅದನ್ನು ವಿಶಿಷ್ಠಾಧಿಕಾರ ರಿಟ್ ಆಗಿಯೂ ಅಥವಾ ದಾವೇದಾರನೋರ್ವನಿಂದ ದಾವೆ ಅಥವಾ ನಡವಳಿಯೊಂದರ ಅಂತರ್ಗತ ಅನ್ವಯಿಸಬಹುದಾಗಿದೆ. ಈ ವಿಧಿಯೊಳಗಣ ರಿಟ್‌ಗಳ ಮಹತ್ವವು ಅವುಗಳು ವಿಶಿಷ್ಠಾಧಿಕಾರ ರಿಟ್‌ಗಳಾಗಿರುವ ಅಂಶದಲ್ಲಡಗಿದೆ; ಬಾಧಿತಪಕ್ಷದಿಂದ ಯಾವುದೇ ವ್ಯವಹರಣೆ ಅಥವಾ ದಾವೆಯನ್ನು ತರದೆ ಅವುಗಳನ್ನು ಕೋರಬಹುದಾಗಿದೆ. ಸಾಮಾನ್ಯವಾಗಿ, ನ್ಯಾಯಾಲಯದಿಂದ ಯಾವುದೇ ಪ್ರಕಾರದ ಆಜ್ಞೆ ಪಡೆಯಲು ನಿಮಗೆ ಮೊದಲು ದಾವೆಯೊಂದನ್ನು ದಾಖಲು ಮಾಡಬೇಕಾಗುತ್ತದೆ, ಆ ಆಜ್ಞೆ ಮ್ಯಾಂಡಮಸ್‌ನ, ಪ್ರೋಹಿಬಿಷನ್ ಅಥವಾ ಸರ್ಟಿಯೋರಾರಿ ಅಥವಾ ಮತ್ತಾವುದೇ ಪ್ರಕಾರದ್ದಾಗಿರಬಹುದು. ಆದರೆ ಇಲ್ಲಿ, ಈ ವಿಧಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹರಣೆಯನ್ನು ದಾಖಲು ಮಾಡದೆ ನೀವು ನೇರವಾಗಿ ನ್ಯಾಯಾಲಯಕ್ಕೆ ಹೋಗಿ ರಿಟ್‌ಗಾಗಿ ಅರ್ಜಿಹಾಕಬಹುದಾಗಿದೆ. ಆ ರಿಟ್‌ನ ಗುರಿ ನಿಜಕ್ಕೂ ಯಾವುದನ್ನು ನಾನು ಆಂತರಿಮ ರಿಲೀಫ್ ಎನ್ನಬಹುದೋ ನೀಡುವುದಾಗಿದೆ. ಉದಾಹರಣೆಗೆ ವ್ಯಕ್ತಿಯೋರ್ವನು ಬಂಧಿಸಲ್ಪಟ್ಟಲ್ಲಿ, ಬಂಧಿಸಿರುವ ಅಧಿಕಾರಿಯ ವಿರುದ್ಧ ಯಾವುದೇ ದಾವೆ ಅಥವಾ ನಡವಳಿ ಹೂಡದೆ ಇದ್ದಲ್ಲಿ ನ್ಯಾಯಾಲಯಕ್ಕೆ ಆತನು ತನ್ನನ್ನು ಸ್ವತಂತ್ರಗೊಳಿಸಲು ಮನವಿಸಲ್ಲಿಸಬಹುದು. ಆತನಿಗೆ ಮೊದಲು ಅಧಿಕಾರಿಯ ವಿರುದ್ಧ ದಾವೆ ಅಥವಾ ನಡವಳಿಕೆ ಹೂಡಬೇಕಾಗಿಲ್ಲ. ಈ ಪ್ರಕಾರದ ನಡವಳಿಕೆಯಲ್ಲಿ, ಎಲ್ಲಿ ಅನ್ವಯಿಕೆಯು ವಿಶಿಷ್ಠಾಧಿಕಾರ ರಿಟ್‌ಗಾಗಿ ಇದೆಯೋ, ನ್ಯಾಯಾಲಯ ಖಚಿತಪಡಿಸಿಕೊಳ್ಳಲೆತ್ನಿಸುವುದು ಆ ಬಂಧನವು ಕಾನೂನಿಗನುಗುಣವಾಗಿದೆಯೇ ಎನ್ನುವುದು. ಆ ಹಂತದಲ್ಲಿ ನ್ಯಾಯಾಲಯವು ಯಾವ ಕಾನೂನಿನ ಅಂತರ್ಗತವಾಗಿ ವ್ಯಕ್ತಿಯು ಬಂಧಿಸಲ್ಪಟ್ಟಿರುವನೋ ಆ ಕಾನೂನು ಒಳ್ಳೆಯದೇ ಅಥವಾ ಕೆಟ್ಟ ಕಾನೂನೇ, ಅದು ಸಂವಿಧಾನದ ಯಾವುದೇ ಉಪಬಂಧದೊಂದಿಗೆ ಸಂಘರ್ಷ ಮಾಡುವುದೇ ಅಥವಾ ಸಂಘರ್ಷ ಮಾಡುವುದಿಲ್ಲವೆ ಈ ಪ್ರಶ್ನೆಗೆ ಹೋಗುವುದಿಲ್ಲ. ಹೇಬಿಯಸ್ ಕಾರ್ಪಸ್ ನಡವಳಿಕೆಗಳಲ್ಲಿ ನ್ಯಾಯಾಲಯವು ಪ್ರಶ್ನಿಸುವುದು ಬಂಧನವು ಕಾನೂನಿನನ್ವಯ ಇದೆಯೇ ಅನ್ನುವುದನ್ನು ಮತ್ತು ನ್ಯಾಯಾಲಯಗಳ ವ್ಯವಹಾರವಾಗಿರುವಂತೆ, ಕಾನೂನಿನ ಗುಣದ ಪ್ರಶ್ನೆಗೆ ಹೋಗದೆ ಇರುವುದು. ಯಾವಾಗ ವ್ಯಕ್ತಿಯೋರ್ವನು ವಾಸ್ತವದಲ್ಲಿ ಬಂಧಿಸಲ್ಪಟ್ಟಿರುವನೋ ಮತ್ತು ಆತನ ವಿಚಾರಣೆ ಆರಂಭಗೊಂಡಿದೆಯೋ, ಈ ನಡವಳಿಕೆಗಳ ನಡುವೆ ನ್ಯಾಯಾಲಯಕ್ಕೆ ಸತ್ಯಾಂಶಗಳಲ್ಲಿ ಒಳಹೋಗುವ ಮತ್ತು ಯಾವ ಕಾನೂನಿನ ಅಂತರ್ಗತ

ವ್ಯಕ್ತಿಯ ಬಂಧನವಾಗಿದೆಯೋ ಆ ಕಾನೂನು ಒಳ್ಳೆಯದೇ ಅಥವಾ ಕೆಟ್ಟದ್ದೇ ಎನ್ನುವ ನಿರ್ಣಯಕ್ಕೆ ಬರುವ ಹಕ್ಕು ಇರುತ್ತದೆ. ತದನಂತರ ನ್ಯಾಯಾಲಯವು ಅದು ಸಂವಿಧಾನದ ಉಪಬಂಧಗಳಿಗೆ ಸಂಘರ್ಷಿಸುವುದೇ ಎನ್ನುವ ಪ್ರಶ್ನೆಗೆ ಹೋಗುತ್ತದೆ. ತತ್ಪರಿಣಾಮವಾಗಿ, ನನ್ನ ಮಿತ್ರ ಶ್ರೀ ವಿ.ಎಸ್. ಸರ್ವಟೆಯವರಿಂದ ಮಂಡಿಸಲ್ಪಟ್ಟ ತಿದ್ದುಪಡಿಯು, ನಾನು ಹಾಗೆ ಹೇಳಬಹುದಾದರೆ, ಇಲ್ಲಿ ಸರಿಹೊಂದುವುದಿಲ್ಲ. ಇಲ್ಲಿ ಅಂತಹ ಉಪಬಂಧ ಮಾಡಲು ಆಗದು. ಅವರು ವಿಧಿ ೧೧೫ನ್ನು ಉಲ್ಲೇಖಿಸುವುದಾದರೆ, ಅಲ್ಲಿ ಅಂತಹ ರಿಟ್‌ಗಳಿಗೆ ಅವಕಾಶಮಾಡಲಾಗಿದೆ ಎನ್ನುವುದನ್ನು ಅವರು ಕಾಣಬಹುದು. ಆದರೆ ಆ ರಿಟ್‌ಗಳು ಹೊರಡಿಸಲ್ಪಡುವುದು ಸತ್ಯಾಂಶ ಮತ್ತು ಕಾನೂನಿನ ಪ್ರಶ್ನೆಗಳಿಗೆ ಸಂಬಂಧ ಹೊಂದಿರುವವುಗಳು. ಅವುಗಳನ್ನು ಖಚಿತವಾಗಿಯೂ ನ್ಯಾಯಾಲಯಗಳಿಂದ ತನಿಖೆಗೆ ಒಳಗಾಗುವುದು.

ಈಗ, ಮಾನ್ಯರೆ, ನನಗೆ ಸಂತೋಷವೆನಿಸುತ್ತಿರುವುದು ಈ ವಿಧಿಯ ಬಗೆಗೆ ಮಾತನಾಡಿರುವವರಲ್ಲಿ ಬಹುತೇಕ ಸದಸ್ಯರುಗಳು ಈ ವಿಧಿಯ ಮಹತ್ವ ಮತ್ತು ಪ್ರಾಮುಖ್ಯತೆಯ ಬಗೆಗೆ ಮನಗಂಡಿರುತ್ತಾರೆ. ನನಗೆ ಈ ಸಂವಿಧಾನದ ಅತಿ ಮಹತ್ವದ ಯಾವೊಂದು ವಿಧಿ ಬಗೆಗೆ ಹೆಸರಿಸಲು ಕೇಳಿದ್ದೆ. ಆದರೆ ಇದರ ಹೊರತು ಮತ್ತಾವುದೇ ವಿಧಿಯ ಬಗೆಗೆ ನಾನು ಉಲ್ಲೇಖಿಸಲಾರೆ. ಈ ವಿಧಿ ಇಲ್ಲದೇ ಹೋದಲ್ಲಿ ಸಂವಿಧಾನ ಶೂನ್ಯವಾಗುತ್ತದೆ. ಇದು ಸಂವಿಧಾನದ ಆತ್ಮವೇ ಆಗಿದೆ. ಇದು ಅದರ ಹೃದಯ. ಸಭೆಯು ಆ ಮಹತ್ವವನ್ನು ಗುರುತಿಸಿರುವುದು ನನಗೆ ಸಂತೋಷವನ್ನು ತಂದಿದೆ.

ಆದರೆ ಇದರ ಮೇಲೆ ಮಾತನಾಡಿರುವ ಸದಸ್ಯರುಗಳು, ನಾನು ಗ್ರಹಿಸಿರುವಂತೆ ಒಂದು ಅಂಶದ ಬಗೆಗೆ ಸಾಕಷ್ಟು ಮನವರಿಕೆ ಮಾಡಿಕೊಂಡಿಲ್ಲ. ನಾನು ಕುಳಿತುಕೊಳ್ಳುವ ಮೊದಲು ಈ ಅಂಶವನ್ನು ಪ್ರಸ್ತಾಪಿಸುತ್ತೇನೆ. ಈ ವಿಧಿಯಲ್ಲಿ ಯವ ರಿಟ್‌ಗಳ ಬಗೆಗೆ ಉಲ್ಲೇಖಿಸಲಾಗಿದೆಯೋ ಅದರಲ್ಲಿ ಒಂದು ಅರ್ಥದಲ್ಲಿ ಹೊಸವೇನೂ ಅಲ್ಲ. ಹೇಬಿಯಸ್ ಕಾರ್ಪಸ್ ನಮ್ಮ ದಂಡ ಪ್ರಕ್ರಿಯೆ ಸಂಹಿತೆಯಲ್ಲಿ ಈಗಾಗಲೆ ಇದೆ. ಮ್ಯಾಂಡಮಸ್ ರಿಟ್ ನಮ್ಮ ವಿಶಿಷ್ಟ ಪರಿಹಾರ ಕಾನೂನು ಮತ್ತು ಇಲ್ಲಿ ಉಲ್ಲೇಖಿಸಲಾಗಿರುವ ಇತರೆ ಕೆಲ ರಿಟ್‌ಗಳಲ್ಲಿ ಸ್ಥಾನ ಪಡೆದಿದ್ದು ಇತರೆ ಕೆಲ ಕಾನೂನುಗಳಲ್ಲಿಯೂ ನಮೂದಿಸಲ್ಪಟ್ಟಿದೆ. ಆದರೆ ಈ ರಿಟ್‌ಗಳ ಬಗೆಗೆ ಈಗ ಇರುವ ಸ್ಥಿತಿ ಮತ್ತು ಈ ಸಂವಿಧಾನ ಪಾಸಾದ ನಂತರ ಇರುವ ಸ್ಥಿತಿ ಇವುಗಳ ನಡುವಣ ಅಂತರವಿದು. ನಮ್ಮ ವಿವಿಧ ಕಾನೂನುಗಳಲ್ಲಿರುವ ರಿಟ್‌ಗಳ ಶಾಸಕಾಂಗದ ದಯೆಯನ್ನವಲಂಬಿಸಿರುತ್ತವೆ. ನಮ್ಮ ದಂಡ ಪ್ರಕ್ರಿಯೆ ಸಂಹಿತೆಯ ಉಪಬಂಧಗಳಲ್ಲಿಯ ಹೇಬಿಯಸ್ ಕಾರ್ಪಸ್ ಈಗಿನ ಶಾಸಕಾಂಗದಿಂದ ತಿದ್ದುಪಡಿಗೊಳಿಸಬಹುದು. ನಮ್ಮ ವಿಶಿಷ್ಟ ಪರಿಹಾರ ಕಾನೂನು ಕೂಡ ತಿದ್ದುಪಡಿ ಮಾಡಬಹುದಾದದ್ದೇ. ಏಕ ಮನಸ್ಸಿನ ಬಹುಮತ ಹೊಂದಿರುವ ಶಾಸಕಾಂಗದ ಪಕ್ಷದಿಂದ ತಿದ್ದುಪಡಿಗೊಳಿಸಿ ಹೇಬಿಯಸ್ ಕಾರ್ಪಸ್ ಮತ್ತು ಮ್ಯಾಂಡಮಸ್‌ನ ಹಕ್ಕನ್ನು ಯಾವುದೇ ಅಡಚಣೆ ಇಲ್ಲದೆ ತೆಗೆದುಹಾಕಬಹುದಾಗಿದೆ. ಇನ್ನು ಮುಂದೆ ಈ ವಿಧಿಯಲ್ಲಿ ನಮೂದಿಸಲಾಗಿರುವ ಯಾವುದೇ ರಿಟ್‌ಗಳನ್ನು ಯಾವುದೇ ಶಾಸಕಾಂಗದಿಂದ ತೆಗೆದುಕೊಳ್ಳಲು ಸಾಧ್ಯ ಆಗುವುದಿಲ್ಲ. ಯಾವುದೇ ಶಾಸಕಾಂಗದ ಮಧುರ ಇಚ್ಛೆಯಿಂದ ಕಾನೂನು ಮಾಡಿ ಸುಪ್ರೀಂಕೋರ್ಟಿಗೆ ಈ ರಿಟ್‌ಗಳನ್ನು ನೀಡುವ ಹಕ್ಕು ಕೊಡಲ್ಪಟ್ಟಿಲ್ಲ. ಈ ಹಕ್ಕುಗಳನ್ನು ಸುಪ್ರೀಂ ಕೋರ್ಟಿನಲ್ಲಿ ಹೂಡಿಸಿರುವುದು ಸಂವಿಧಾನ ಅಲ್ಲದೆ ಶಾಸಕಾಂಗಕ್ಕೆ ನೀಡಲಾಗಿರುವ ಅಧಿಕಾರ ಬಳಸಿ ಸಂವಿಧಾನಕ್ಕೆ ತಿದ್ದುಪಡಿ ಮಾಡದ ಹೊರತು ಈ ಹಕ್ಕುಗಳನ್ನು ತೆಗೆದುಕೊಳ್ಳುವಂತಿಲ್ಲ. ನನ್ನ ನಿರ್ಣಯದಲ್ಲಿ ಇದೊಂದು ವ್ಯಕ್ತಿಯ ಭದ್ರತೆ ಸುರಕ್ಷೆಗೆ ಖಚಿತಪಡಿಸಲು ಒದಗಿಸಬಹುದಾದ ಅತಿ ಹೆಚ್ಚಿನ ಸುರಕ್ಷೆಯಾಗಿದೆ. ಆದುದರಿಂದ ನಾವು ಸಂವಿಧಾನ ನೀಡಿರುವ ಸ್ವಾತಂತ್ರ್ಯವನ್ನು ಬಹುಮತವಿದೆಯೆಂದ

ಮಟ್ಟಿಗೆ ಯಾವುದೇ ಶಾಸಕಾಂಗ ತೆಗೆದುಕೊಳ್ಳುವುದೆಂಬ ಆತಂಕ ಹೊಂದಬೇಕಾದ್ದಿಲ್ಲ.

ಮಾನ್ಯರೆ, ಗಮನಿಸಿರುವ ಇನ್ನೊಂದು ಅಂಶವನ್ನು ನಾನು ವ್ಯಕ್ತಪಡಿಸುವೆ. ಈ ಸಭೆಯಲ್ಲಿ ನೀತಿ ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಹಕ್ಕುಗಳು ಇವುಗಳ ಬಗೆಗಿನ ಚರ್ಚೆ ನಡೆದಿದೆ. ಕೆಲ ಹಕ್ಕುಗಳನ್ನು ಅಥವಾ ಕೆಲ ನೀತಿಗಳನ್ನು ನಮ್ಮ ಮೂಲಭೂತ ಹಕ್ಕುಗಳಲ್ಲಿ ಅಥವಾ ಸದಸ್ಯರುಗಳು ತಾವು ಮಾಡಿದ ಭಾಷಣಗಳಲ್ಲಿ ದೂರಿರುತ್ತಾರೆ. ರಷ್ಯ ಮತ್ತು ಇತರೆ ದೇಶಗಳಲ್ಲಿಯ ಅಂತಹ ಘೋಷಣೆಗಳ ಬಗೆಗೆ ಸದಸ್ಯರುಗಳು ಉಲ್ಲೇಖಿಸಿರುತ್ತಾರೆ. ಅವರುಗಳು ತಿದ್ದುಪಡಿಗಳ ಮೂಲಕ ಸೇರಿಸಬಯಸಿದವುಗಳಿಗೆ ಸ್ಥಳ ದೊರಕಿದೆ.

ಮಾನ್ಯರೆ, ನನ್ನ ವಿಚಾರದಲ್ಲಿ ಈ ತಿದ್ದುಪಡಿಗಳಿಗೆ ಹೊಣೆಗಾರರಾದ ಯಾರಿಗೂ ಯಾವ ಅಪಚಾರ ಬಗೆಯದೆ ನಾನು ಹೇಳುವುದೇನೆಂದರೆ, ಹಕ್ಕುಗಳಿಗೆ ವ್ಯವಹರಿಸುವಲ್ಲಿ ಬ್ರಿಟಿಷರು ಅನುಸರಿಸುವ ವಿಧಾನಗಳಿಗೆ ನಾನು ಆದ್ಯತೆ ನೀಡುತ್ತೇನೆ. ಬ್ರಿಟಿಷ ವಿಧಾನವು ವಿಲಕ್ಷಣವಾದದ್ದು, ವಾಸ್ತವಿಕ ಮತ್ತು ಉತ್ತಮ ವಿಧಾನವಾಗಿದೆ. ಬ್ರಿಟಿಷ್ ನ್ಯಾಯಶಾಸ್ತ್ರವು ಒತ್ತು ನೀಡುವುದು ಸಂವಿಧಾನವು ಪರಿಹಾರ ಒದಗಿಸದ ಹೊರತು ಹಕ್ಕು ಇರುವುದಿಲ್ಲ ಎನ್ನುವ ಅಂಶಕ್ಕೆ. ಹಕ್ಕನ್ನು ವಾಸ್ತವಗೊಳಿಸುವುದು ಪರಿಹಾರವೇ. ಪರಿಹಾರ ಇಲ್ಲವೆಂದರೆ ಹಕ್ಕು ಇಲ್ಲವೇ ಇಲ್ಲ. ಹೀಗಾಗಿ ನಾನು ಪವಿತ್ರ ಘೋಷಣೆಗಳಿಂದ ಸಂವಿಧಾನವನ್ನು ಭಾರವಾಗಿಸಲಿಚ್ಛಿಸುವುದಿಲ್ಲ. ಅವುಗಳು ಸಾಮಾನ್ಯ ಮಿಣುಕುಗಳಾಗಬಹುದು ಆದರೆ ಸಂವಿಧಾನವು ಉಪಬಂಧಗಳ ಮೂಲಕ ಪರಿಹಾರ ಒದಗಿಸಿರುವುದಿಲ್ಲ. ನಮ್ಮ ಹಕ್ಕುಗಳ ವ್ಯಾಪ್ತಿಯಲ್ಲಿ ಸೀಮಿತವಾಗಿರುವುದು ಹೆಚ್ಚು ಉತ್ತಮ, ಸಂವಿಧಾನದಲ್ಲಿ ಅನೇಕ ಶ್ರದ್ಧಾವಂತ ಆಸೆಗಳನ್ನು ಸೇರಿಸುವುದಕ್ಕಿಂತ ಅವುಗಳನ್ನು ಪರಿಹಾರಗಳನ್ನು ಒದಗಿಸಿ ವಾಸ್ತವಗೊಳಿಸುವುದು ಹೆಚ್ಚು ಸೂಕ್ತ. ಈ ಸಭೆಯು ನಾವು ಒದಗಿಸಿರುವ ಪರಿಹಾರಗಳು ಈ ಸಂವಿಧಾನದ ಮೂಲಭೂತ ಭಾಗವಾಗಿರುವುದನ್ನು ಕಂಡಿರುವುದು ನನಗೆ ಸಂತೋಷ ತಂದಿದೆ. ಮಾನ್ಯರೆ, ಈ ಮಾತುಗಳೊಂದಿಗೆ ನಾನು ಈ ವಿಧಿಯನ್ನು ಸಭೆಗೆ ಶಿಫಾರಸ್ಸು ಮಾಡುತ್ತೇನೆ.

**ಶ್ರೀ ಹೆಚ್. ವಿ. ಕಾಮತ್ :** ಮಾನ್ಯರೆ, ಸ್ಪಷ್ಟೀಕರಣದ ಅಂಶವೊಂದರ ಬಗೆಗೆ, ನಾವು ವ್ಯವಹರಿಸುತ್ತಿರುವುದು ನ್ಯಾಯವಾಗಿದೆ. ಮೂಲಭೂತ ಹಕ್ಕುಗಳು ಮತ್ತು ಸುಪ್ರೀಂ ಕೋರ್ಟಿನಿಂದ ಅವುಗಳಿಗೆ ಖಾತರಿ ಪಡಿಸುವುದರ ಬಗೆಗೆ. ವಿಧಿ ೨೮೦ಕ್ಕೂ ಕೂಡ ಮೊರೆ ಇಡಲಾಗಿರುವ ದೃಷ್ಟಿಯಿಂದ "ಈ ವಿಧಿಯಿಂದ ಖಾತರಿಗೊಳಿಸಲ್ಪಟ್ಟ ಹಕ್ಕುಗಳನ್ನು ಪೂರ್ತಿಯಾಗಿಯಾಗಲಿ ಅಥವಾ ಆಂಶಿಕವಾಗಿಯಾಗಲಿ ತೆಗೆದುಹಾಕಬಾರದು"........ ಅಥವಾ ಅಂತಹ ಯಾವುದೇ ಗುಂಪಿನ ಪದಗಳನ್ನು ಕಾನೂನಿನ ತಜ್ಞರು ಆರಿಸಬಹುದೇ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** "ಅಮಾನತ್ತಿನಲ್ಲಿಡುವುದಿಲ್ಲ" ಎರಡನ್ನೂ ಒಳಗೊಂಡಿರುತ್ತದೆ. ಅದನ್ನು ವಿಶದಗೊಳಿಸುವುದು ಅನಗತ್ಯ.

ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.

********

**ಉಪಸಭಾಪತಿ :** ಪ್ರಶ್ನೆ ಇರುವುದು.

**ಉಪಸಭಾಪತಿ :** ಶ್ರೀ ಕಾಮತರವರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೭೮೭.

**ಶ್ರೀ ಹೆಚ್.ವಿ. ಕಾಮತ್ :** ಈ ವಿಷಯ ಕುರಿತು ಡಾ.ಬಿ.ಆರ್. ಅಂಬೇಡ್ಕರ್‌ರವರು ಮಾಡಿರುವ ಟೀಕೆಗಳ ಹಿನ್ನೆಲೆಯಲ್ಲಿ ನಾನದನ್ನು ಒತ್ತಾಯಿಸಲು ಇಚ್ಛಿಸುವುದಿಲ್ಲ.

ಅಸೆಂಬ್ಲಿಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

**ಉಪಸಭಾಪತಿ :** ಆಮೇಲೆ ನಾವು ಶ್ರೀ ಮಹಬೂಬ ಅಲಿ ಬೇಗರ ಹೆಸರಿನಲ್ಲಿರುವ, ಶ್ರೀ ನಜೀರುದ್ದೀನ ಅಹಮದರಿಂದ ಮಂಡಿಸಲ್ಪಟ್ಟ ತಿದ್ದುಪಡಿ ಸಂಖ್ಯೆ ೭೮೯ಕ್ಕೆ ಬರುತ್ತೇವೆ.

ಪ್ರಶ್ನೆ ಇರುವುದು :

"ವಿಧಿ ೨೫ರ ಕಲಮು (೨)ರಲ್ಲಿಯ ಪದಗಳಾದ "ಸ್ವಭಾವದ ರಿಟ್‌ಗಳಾದ" ಇವುಗಳಿಗೆ "ಅಥವಾ ರಿಟ್‌ಗಳು, ಸ್ವಭಾವದ ರಿಟ್‌ಗಳನ್ನೊಳಗೊಂಡು" ಬದಲಿ ಸೇರಿಸುವುದು:

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಉಪಾಧ್ಯಕ್ಷ :** ಡಾ. ಅಂಬೇಡ್ಕರ್, ಶ್ರೀ ಮಾಧವ ರಾವ್ ಮತ್ತು ಶ್ರೀ ಸಾದುಲ್ಲಾ ಇವರುಗಳ ಹೆಸರುಗಳಲ್ಲಿರುವ ತಿದ್ದುಪಡಿ ಸಂ. ೭೯೪.

ಪ್ರಶ್ನೆ ಇರುವುದು :

"ಈಗಿರುವ ವಿಧಿ ೨೫ರ ಕಲಮು(೩)ಕ್ಕೆ ಈ ಕೆಳಕಾಣಿಸಿದ ಕಲಮನ್ನು ಬದಲಿ ಸೇರಿಸುವುದು:

"(೩) ಸರ್ವೋಚ್ಚ ನ್ಯಾಯಾಲಯಕ್ಕೆ (೧)ನೆಯ ಮತ್ತು (೨)ನೆಯ ಖಂಡಗಳಿಂದ ಪ್ರದಾನ ಮಾಡಲಾಗಿರುವ ಅಧಿಕಾರಗಳಿಗೆ, ಬಾಧಕವಾಗದಂತೆ ಇತರ ಯಾವುದೇ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ (೨)ನೆಯ ಖಂಡದ ಮೇರೆಗೆ, ಸರ್ವೋಚ್ಚ ನ್ಯಾಯಾಲಯವು, ಚಲಾಯಿಸಬಹುದಾದ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸುವಂತೆ, ಆ ನ್ಯಾಯಾಲಯಕ್ಕೆ, ಸಂಸತ್ತು ಕಾನೂನು ಮೂಲಕ ಅಧಿಕಾರ ನೀಡಬಹುದು."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಉಪಸಭಾಪತಿ :** ಪಟ್ಟಿ ೧ರ ಶ್ರೀ ಸರ್ವಟೆಯವರ ಹೆಸರಿನಲ್ಲಿರುವ ತಿದ್ದುಪಡಿ ಸಂ. ೪೩.

**ಶ್ರೀ ವಿ.ಎಸ್. ಸರ್ವಟೆ :** ಅದನ್ನು ಒತ್ತಾಯಿಸಲು ನಾನು ಆಶಿಸುವುದಿಲ್ಲ.

ಅಸೆಂಬ್ಲಿಯ ಅನುಮತಿಯಿಂದ ಹಿಂತೆಗೆದುಕೊಳ್ಳಲಾಯಿತು.

(ನಾಲ್ಕು ಇತರೆ ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು)

ತಿದ್ದುಪಡಿಗೊಂಡಂತೆ ವಿಧಿ ೨೫ ಅಂಗೀಕರಿಸಲ್ಪಟ್ಟಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

**********

## ವಿಧಿ ೨೬

* **ಉಪಸಭಾಪತಿ :** ನಾವು ವಿಧಿ ೨೬ಕ್ಕೆ ಬರುತ್ತೇವೆ. ಸಭೆಯ ಎದುರಿಗಿರುವ ಮಂಡನೆ:

ವಿಧಿ ೨೬ ಸಂವಿಧಾನದ ಭಾಗವಾಗಿರುತ್ತದೆ.

ತಿದ್ದುಪಡಿ ಸಂಖ್ಯೆ ೮೦೯ ನಕಾರಾತ್ಮಕ ಸ್ವರೂಪದ್ದಾಗಿದ್ದುದರಿಂದ ತಿರಸ್ಕರಿಸಲ್ಪಟ್ಟಿತು.

(ತಿದ್ದುಪಡಿ ಸಂ. ೮೧೦ ಮಂಡಿಸಲಿಲ್ಲ.)

---

* ಸಿ.ಎ.ಡಿ. ಸಂಪುಟ ೭, ೯ನೆಯ ನವೆಂಬರ್, ೧೯೪೮, ಪುಟ ೯೫೫

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುವೆ.

"ವಿಧಿ ೨೬ರಲ್ಲಿ ಇದರಲ್ಲಿ ಖಾತರಿಪಡಿಸಲಾಗಿರುವ" ಈ ಪದಗಳಿಗೆ ಬದಲಾಗಿ "ಇದರಿಂದ ಪ್ರದಾನ ಮಾಡಲ್ಪಟ್ಟ" ಈ ಪದಗಳನ್ನು ಇಡುವುದು."

ಈ ಭಾಗವು ಈ ಹಕ್ಕುಗಳನ್ನು ಖಾತರಿ ಪಡಿಸುವುದಿಲ್ಲ. ಆದರೆ ಕೇವಲ ಪ್ರದಾನ ಮಾಡುತ್ತದೆ. ಆದುದರಿಂದ ಭಾಷೆ ಸರಿದೂಗುವಂತೆ ನಾನು ಈ ತಿದ್ದುಪಡಿಯನ್ನು ಸೂಚಿಸುತ್ತೇನೆ.

(ಡಾ. ಅಂಬೇಡ್ಕರ್ ಅವರ ತಿದ್ದುಪಡಿ ಮಾತ್ರ ಅಂಗೀಕರಿಸಲ್ಪಟ್ಟಿತು. ತಿದ್ದುಪಡಿಗೊಂಡಂತೆ ವಿಧಿ ೨೬ ಅಂಗೀಕರಿಸಲ್ಪಟ್ಟಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.)

*********

## ವಿಧಿ ೨೭

** **ಉಪಸಭಾಪತಿ :** ತಿದ್ದುಪಡಿ ಸಂ.ಗಳು ೮೧೭ ಮತ್ತು ೮೧೮ ಇವುಗಳನ್ನು ಜೊತೆಯಾಗಿ ಪರಿಗಣಿಸುವುದು. ೮೧೭ನ್ನು ಮಂಡಿಸಬಹುದಾಗಿದೆ: ಅದು ಡಾ. ಅಂಬೇಡ್ಕರ್‌ರ ಹೆಸರಿನಲ್ಲಿದೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ನಾನು ಹೀಗೆ ಮಂಡಿಸುವೆ.

"ವಿಧಿ ೨೭ರ ಕಲಮು(ಎ) "ಗೆ ಬದಲಾಗಿ ಈ ಮುಂದಿನದನ್ನು ಬದಲಿ ಇಡುವುದು:

"(ಎ) ವಿಧಿ ೧೦ರ ಕಲಮು(೨ ಎ), ವಿಧಿ ೧೬, ವಿಧಿ ೨೫ರ ಕಲಮು(೩), ಮತ್ತು ವಿಧಿ ೨೬ ಇವುಗಳಲ್ಲಿಯ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಸಂಸತ್ತಿನಿಂದ ಶಾಸನ ಮಾಡುವುದರಿಂದ ಒದಗಿಸಬಹುದಾಗಿದೆ, ಮತ್ತು"

ವಿಧಿ ೧೦ ಕಲಮು (೨ ಎ) ಕ್ಕೆ ಈ ಹೆಚ್ಚಿನವನ್ನು ಸೇರಿಸುವ ಉದ್ದೇಶವೇನೆಂದರೆ, ಇದೊಂದು ಸಭೆಯಿಂದ ಅಂಗೀಕರಿಸಲ್ಪಟ್ಟಿರುವ ಹೊಸ ಕಲಮು ಆಗಿದೆ. ಆದುದರಿಂದ ಈ ವಿಧಿಯಲ್ಲಿ ಅದನ್ನು ಉಲ್ಲೇಖಿಸುವುದು ಅಗತ್ಯವಾಗಿದೆ.

**ಉಪಸಭಾಪತಿ :** ಈ ತಿದ್ದುಪಡಿಗೆ ತಿದ್ದುಪಡಿಯೊಂದಿದೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ತಿದ್ದುಪಡಿಯಾದಂತೆ ನಾನು ಅದನ್ನು ಮಂಡಿಸಿರುವೆ.

**ಉಪಸಭಾಪತಿ :** ಹೀಗೋ.

(ತಿದ್ದುಪಡಿ ೮೧೮ ಮಂಡಿಸಲಿಲ್ಲ)

ತಿದ್ದುಪಡಿ ಸಂಖ್ಯೆಯ ೮೧೯ ಮೌಖಿಕ ತಿದ್ದುಪಡಿಯಾಗಿದೆ, ತಿದ್ದುಪಡಿ ಸಂಖ್ಯೆ ೮೨೦ನ್ನು ಮಂಡಿಸಬಹುದಾಗಿದೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುವೆ.

"ಅಂತಹ ವಿಷಯಗಳಿಗೆ ಒದಗಿಸಲು ಮತ್ತು ಅಂತಹ ಕೃತ್ಯಗಳಿಗೆ ಶಿಕ್ಷೆಯನ್ನು ನಿಗದಿಪಡಿಸಲು" ಈ ಶಬ್ದಗಳಿಗೆ ಬದಲಾಗಿ "ಈ ವಿಧಿಯ ಕಲಮು (ಬಿ)ಯಲ್ಲಿ ಉಲ್ಲೇಖಿಸಲಾಗಿರುವ ಕೃತ್ಯಗಳಿಗೆ ಶಿಕ್ಷೆಯನ್ನು ನಿಗದಿಪಡಿಸಲು" ಈ ಪದಗಳನ್ನು ಸೇರಿಸುವುದು.

*****

** ಅದೇ., ಪು.ಪು. ೯೫೬–೫೮

**ಉಪಸಭಾಪತಿ :** ತಿದ್ದುಪಡಿ ಸಂ.ಗಳಾದ ೮೨೨ ಮತ್ತು ೮೨೩ ಅಷ್ಟೇ ಮಹತ್ವದವುಗಳು. ಸಂಖ್ಯೆ ೮೨೨ ಮಂಡಿಸಬಹುದು.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುವೆ.

"ವಿಧಿ ೨೭ಕ್ಕೆ ಉಪಬಂಧ ಮತ್ತು ವಿವರಣೆಗೆ ಈ ಕೆಳಗಿನದನ್ನು ಬದಲಿ ಸೇರಿಸುವುದು: 'ಭಾರತದ ಭೂಪ್ರದೇಶ ಅಥವಾ ಅದರ ಯಾವುದೇ ಭಾಗದಲ್ಲಿ ಈ ಸಂವಿಧಾನ ಜಾರಿಗೆ ಬರುವ ನಿಕಟ ಪೂರ್ವದಲ್ಲಿ ಈ ವಿಧಿಯ ಕಲಮು (ಎ) ಇದರಲ್ಲಿಯ ಯಾವುದೇ ಕೃತ್ಯಕ್ಕೆ ಶಿಕ್ಷೆ ವಿಧಿಸುವುದಕ್ಕೆ ಸಂಬಂಧಿಸಿದಂತೆ ಇರುವ ಈ ವಿಧಿಯ (ಬಿ) ಉಪಬಂಧದಲ್ಲಿ ಅದಕ್ಕೆ ಅಧೀನವಾಗುವಂತೆ ಯಾವುದೇ ಕಾನೂನು ಸಂಸತ್ತಿನಿಂದ ಬದಲಿಸುವ ಅಥವಾ ತೆಗೆದುಹಾಕುವ ಅಥವಾ ತಿದ್ದುಪಡಿ ಮಾಡುವವರೆಗೆ ಮುಂದುವರಿಯುತ್ತವೆ."

"ವಿವರಣೆ – ಈ ವಿಧಿಯಲ್ಲಿ 'ಜಾರಿಯಲ್ಲಿರುವ ಕಾನೂನು' ಹೇಳಿಕೆ ಈ ಸಂವಿಧಾನದ ವಿಧಿ ೩೦೭ ರಲ್ಲಿಯಂತೆ ಅದೇ ಅರ್ಥವನ್ನು ನೀಡುತ್ತದೆ."

(ಪಟ್ಟಿ ೧ರ ತಿದ್ದುಪಡಿ ಸಂಖ್ಯೆಗಳಾದ ೫೦, ಪಟ್ಟಿ ಸಂ.(V)ರ ೬೫ರ ಮತ್ತು ೮೨೩ ಇವುಗಳನ್ನು ಮಂಡಿಸಲಿಲ್ಲ.)

**ಉಪಸಭಾಪತಿ :** ಈ ವಿಧಿಯು ಈಗ ಚರ್ಚೆಗೆ ಮುಕ್ತವಾಗಿದೆ.

(ಈ ಹಂತದಲ್ಲಿ ಶ್ರೀ ಕಾಮತರು ಮಾತನಾಡಲು ಎದ್ದು ನಿಂತರು)

**ಉಪಸಭಾಪತಿ :** ನಾವು ಹೊರಹೋಗುವುದರೊಳಗಾಗಿ ಎಲ್ಲ ವಿಷಯಗಳನ್ನು ಮುಗಿಸಲು ಅನುಮತಿಸುವಿರೆಂದು ಆಶಿಸುತ್ತೇನೆ, ಹಾಗಿದ್ದಲ್ಲಿ ನಾನು ಸಭೆಯನ್ನು ೧ ಗಂಟೆ ಮುಂದೂಡುತ್ತೇನೆ.

**ಶ್ರೀ ಹೆಚ್. ವಿ. ಕಾಮತ್ :** ನಾನು ಕೊಡ ಅಷ್ಟೇ ವ್ಯಾಕುಲಿತನಾಗಿದ್ದೇನೆ. ಉಪಾಧ್ಯಕ್ಷರವರೆ, ನಾನಿಲ್ಲಿ ಡಾ. ಅಂಬೇಡ್ಕರ್ ರವರಿಂದ ಮಂಡಿಸಲ್ಪಟ್ಟ ತಿದ್ದುಪಡಿ ಸಂಖ್ಯೆ ೮೨೦ಕ್ಕೆ ಸಂಬಂಧಿಸಿದಂತೆ ಅವರಿಂದ ಸ್ವಲ್ಪ ತಿಳಿವಳಿಕೆ ಬಯಸುತ್ತೇನೆ. ವಿಧಿಯಲ್ಲಿ ಈಗಿರುವ ಪದಗಳಿಗೆ ಬದಲಿಗೆ ಅವರು ಸೂಚಿಸಿರುವ ಪದಗಳನ್ನು ಸೇರಿಸಬೇಕೆಂದು ಏಕೆ ಅಪೇಕ್ಷಿಸುವರೋ ನನಗೆ ಸರಿಯಾಗಿ ತಿಳಿಯದು. ಅವರ ತಿದ್ದುಪಡಿಯನ್ನು ಒಪ್ಪಿದಲ್ಲಿ ಅದರ ಅರ್ಥ ಕಲಮು (ಬಿ)ಯಲ್ಲಿ ಹೇಳಲಾದ ಕೃತ್ಯಗಳಿಗೆ ಶಿಕ್ಷೆ ನಿಗದಿಪಡಿಸುವ ಅಧಿಕಾರ ಪಾರ್ಲಿಮೆಂಟಿಗೆ ಇರುವುದೆಂದು ಆಗುತ್ತದೆ. ಹಾಗಾದರೆ ಮತ್ತಾವುದೇ ವಿಷಯದಲ್ಲಿ ಕಲಮು (ಎ)ನಲ್ಲಿಯಂತೆ ಶಾಸನ ಮಾಡಿಕೊಡುವಂತೆ ಪಾರ್ಲಿಮೆಂಟಿಗೆ ಕಾನೂನು ಮಾಡಿಕೊಡುವುದು ಏನು? ಅವರು ತಮ್ಮ ತಿದ್ದುಪಡಿಯಿಂದ ಈ ವಿಧಿಯ ಕಲಮು (ಎ) ಪ್ರಕಾರ ನೀಡಲ್ಪಟ್ಟಿರುವ ಅಧಿಕಾರಗಳನ್ನು ಹಿಂತೆಗೆದುಕೊಳ್ಳ ಬಯಸುವರೆ? ...... ನಾನು ಅವರ ತಿದ್ದುಪಡಿಯ ಮಹತ್ವವೇನೆಂಬುದನ್ನು ನಿಖರವಾಗಿ ತಿಳಿದುಕೊಳ್ಳಬಯಸುತ್ತೇನೆ ಮತ್ತು ಈ ಕಲಮು (ಎ)ಯನ್ನು ಈ ರೀತಿಯಲ್ಲಿ ತಿದ್ದುಪಡಿ ಬಯಸಿರುವುದೇಕೆ ಎನ್ನುವುದನ್ನೂ ತಿಳಿಯಬೇಕು.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಕ್ಷಮಿಸಬೇಕು, ಶ್ರೀ ಕಾಮತರು ವಿಧಿ ೨೭ ಒಳಗೊಂಡಿರುವ ಯೋಜನೆಯನ್ನು ತಿಳಿದುಕೊಳ್ಳುವಲ್ಲಿ ಶಕ್ತರಾಗಿಲ್ಲ. ಈ ವಿಧಿಯು ಮೂರು ತತ್ವಗಳನ್ನು ಒಳಗೊಂಡಿರುತ್ತದೆ. ಮೊದಲನೆ ತತ್ವವು ಎಲ್ಲೆಲ್ಲಿ ಈ ಸಂವಿಧಾನವು ಯಾವುದೇ ಮೂಲಭೂತ ಹಕ್ಕಿಗೆ ಕಾರ್ಯ ಪರಿಣಾಮ ನೀಡಲು ಕಾನೂನು ಮಾಡಲು ನಿಗದಿ ಪಡಿಸುವುದೋ ಅಥವಾ ಎಲ್ಲಿ ಕೃತ್ಯವೊಂದಕ್ಕೆ ಶಿಕ್ಷಾರ್ಹಗೊಳಿಸಲು ಕಾನೂನು ಮಾಡಬೇಕಾಗಿರುವುದೋ, ಯಾವುದು ಮೂಲಭೂತಹಕ್ಕುಗಳಿಗೆ ಮಧ್ಯ ಪ್ರವೇಶಿಸುವುದೋ, ಆ ಹಕ್ಕನ್ನು ಕೇವಲ ಸಂಸತ್ತಿನಿಂದ ಬಳಸಲ್ಪಡಬೇಕು. ಅಧಿಕಾರ ಹಂಚಿಕೆಯ ಪಟ್ಟಿಗೆ ಸಂಬಂಧಿತ, ಅಂತಹ

ಕಾನೂನು ರಾಜ್ಯ ಶಾಸಕಾಂಗದ ಮೇರೆಯಲ್ಲಿ ಸೇರಿರುತ್ತದೆ, ಅದನ್ನು ಪರಿಗಣಿಸಬೇಕಾಗಿಲ್ಲ. ಇದರ ಉದ್ದೇಶ ಮೂಲಭೂತ ಹಕ್ಕುಗಳು, ಅವುಗಳ ಸ್ವರೂಪ ಮತ್ತು ಅವುಗಳನ್ನು ಉಲ್ಲಂಘಿಸಿದಲ್ಲಿ ನೀಡಲಾಗುವ ಶಿಕ್ಷೆ ಸೇರಿದಂತೆ, ಭಾರತದಾದ್ಯಂತ ಏಕರೂಪದವುಗಳಾಗಿರಬೇಕು ಎನ್ನುವುದು.

ಆದುದರಿಂದ, ಆ ಗುರಿಯನ್ನು ಸಾಧಿಸಬೇಕಾದಲ್ಲಿ, ಹೆಸರಿಸುವುದಾದರೆ, ಮೂಲಭೂತ ಹಕ್ಕುಗಳು ಏಕರೂಪದವುಗಳಾಗಿರಬೇಕು ಮತ್ತು ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಲ್ಲಿ ನೀಡಲಾಗುವ ಶಿಕ್ಷೆಯು ಕೂಡ ಏಕರೂಪದ್ದಾಗಿರಬೇಕು ಎಂದಲ್ಲಿ ಆ ಅಧಿಕಾರವನ್ನು ಸಂಸತ್ತು ಮಾತ್ರ ಪ್ರಯೋಗಿಸಬೇಕು. ಆಗ ಮಾತ್ರ ಏಕರೂಪತೆ ಬರುವುದು.

ಎರಡನೆಯ ಅಂಶ ಇದಾಗಿದೆ. ಮೂಲಭೂತ ಹಕ್ಕುಗಳ ಉಲ್ಲಂಘನೆಗೆ ಈಗಾಗಲೇ ಕಾನೂನುಗಳು ಇದ್ದಲ್ಲಿ, ಸಂಸತ್ತು ಮತ್ತೊಂದು ಅಥವಾ ಉತ್ತಮ ಕಾನೂನು ಮಾಡುವವರೆಗೆ ಅಂತಹವುಗಳು ಜಾರಿಯಲ್ಲಿರುತ್ತವೆ. ಅದು ಒಟ್ಟಾರೆ ಯೋಜನೆಯಾಗಿದೆ. ವಿಧಿ ೨೭ ಒಳಗೊಂಡಿರುವ ಉಪಬಂಧಗಳನ್ನು ತಿಳಿದುಕೊಳ್ಳುವಲ್ಲಿ ಯಾವುದೇ ತೊಂದರೆ ಇರಬೇಕೆ ಎಂಬುದು ನನಗೆ ಕಾಣದು.

**ಶ್ರೀ ಹೆಚ್. ವಿ. ಕಾಮತ್ :** ಕ್ಷಮಿಸಿ, ಮಾನ್ಯರೆ, ಡಾ.ಅಂಬೇಡ್ಕರ್‌ರರು ನನ್ನನ್ನು ಸ್ಪಷ್ಟವಾಗಿ ಅನುಸರಿಸುವಲ್ಲಿ ಶಕ್ತರಾಗಿಲ್ಲ(ನಗು)

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಅದು ಸಮಗ್ರವಾಗಿ ಸಾಧ್ಯ.

**ಮಾನ್ಯ ಉಪಸಭಾಪತಿ :** ಶ್ರೀ ಕಾಮತರೇ, ಅದೇ ಬೇರೆ ರೀತಿಯಲ್ಲಾಗಿರಬಹುದು.

**********

**ಶ್ರೀ ಹೆಚ್. ವಿ. ಕಾಮತ್ :** ಮಾನ್ಯರೆ, ಯಾವಾಗಲಿನಂತೆ ನಾನು ತಮ್ಮನ್ನು ಸಂಬೋಧಿಸುತ್ತಿರುವೆ, ಉಂಟಾಗುವ ತೊಂದರೆ ಇದು. ಈ ವಿಧಿಯಲ್ಲಿ ಪ್ರಸಕ್ತ ಇರುವಂತೆ ಕಲಮು (೧) ಸಂಸತ್ತಿಗೆ ಮಾತ್ರ ಅಧಿಕಾರ ನೀಡುತ್ತದೆ. ನಾನಿದನ್ನು ಪ್ರಶ್ನಿಸುವುದಿಲ್ಲ: ಸಂಸತ್ತು ಮತ್ತು ಸಂಸತ್ತು ಮಾತ್ರವೇ ಹಕ್ಕನ್ನು ಹೊಂದಿರಬೇಕು: ನಾನು ಒಪ್ಪುತ್ತೇನೆ. ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನು ಮಾಡಲು ಸಂಸತ್ತಿಗೆ ಅಧಿಕಾರವಿರಬೇಕೆಂದು ನೀವು ಹೇಳುವಿರಿ, ಮುಂದುವರಿದು, ನೀವು ಹೇಳುವುದು, ಈ ಸಂವಿಧಾನ ಜಾರಿಗೆ ಬಂದ ಮೇಲೆ ಆದಷ್ಟು ಬೇಗ ಸಂಸತ್ತು ಕಾನೂನಗಳನ್ನು ಮಾಡಿ ಒದಗಿಸಬೇಕು ಇತ್ಯಾದಿ, ಈಗ ಡಾ. ಅಂಬೇಡ್ಕರರು ಈ ನಂತರದ ಭಾಗವನ್ನು ತಿದ್ದುಪಡಿ ಸಂಖ್ಯೆ ೮೨೦ರಿಂದ ಬದಲಿಸಬಯಸುತ್ತಾರೆ. "ಅಂತಹ ವಿಷಯಗಳಿಗೆ ಒದಗಿಸುವುದು" ಈ ಪದಗಳನ್ನು ಬಿಟ್ಟು ಬಿಡಲು ನೀವು ಬಯಸುವಿರಿ ಮತ್ತು ಶಿಕ್ಷೆಗೆ ಸಂಬಂಧಿಸಿದ ಉಪಬಂಧಗಳನ್ನು ಮಾತ್ರ ಉಳಿಸಿಕೊಳ್ಳಬಯಸುವಿರಿ. ಅಂತಹ ವಿಷಯಗಳಿಗೆ ಕಾನೂನು ಮಾಡುವುದರ ಬಗೆಗೆ ಏನು? ನೀವೇಕೆ ಆ ಭಾಗವನ್ನು ತೆಗೆದು ಹಾಕುವಿರಿ? ಶಿಕ್ಷೆಗೆ ಸಂಬಂಧಿಸಿದ ಭಾಗವನ್ನಷ್ಟೇ ಏಕೆ ನೀವು ಉಳಿಸಿಕೊಳ್ಳುವಿರಿ? ಅದು ನನ್ನ ವಾದಾಂಶ. ಆದರೆ ಡಾ. ಅಂಬೇಡ್ಕರ್‌ರು ಉತ್ತರಿಸಿರುವ ಅಂಶ ಬೇರೆಯದ್ದೇ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಉದಾಹರಣೆಗೆ, ನಾನು ಕಲಮು (ಎ)ಗೆ ತಿದ್ದುಪಡಿ ತಂದಿರುವುದಕ್ಕೆ ಕಾರಣವೆಂದರೆ ಸಂಸತ್ತಿಗೆ ಈ ವಿಶೇಷ ವಿಷಯಗಳಲ್ಲಿ ಮಾತ್ರ ದಂಡಾಧಿಕಾರ ನೀಡಲಾಗಿದೆ ಮತ್ತು ಈ ವಿಧಿಗಳ ಬಗೆಗೆ ನನ್ನ ತಿದ್ದುಪಡಿಯಲ್ಲಿ ಉಲ್ಲೇಖಿಸಲಾಗಿದೆ. ನನ್ನ ಮಿತ್ರ ಶ್ರೀ ಕಾಮತ್‌ರು ಗ್ರಹಿಕೆ ಪ್ರಕಾರ ಕಲಮು (ಎ) ಸಂಸತ್ತಿಗೆ ಕಾನೂನುಗಳನ್ನು ಮಾಡಲು ವಿಶೇಷವಾಗಿ ಅಧಿಕಾರ ನೀಡುವ ಯಾವುದೇ

ವಿಧಿಯ ಬಗೆಗೆ ಉಲ್ಲೇಖಿಸುವುದಿಲ್ಲ. ಆ ಅಂಶವನ್ನು ಸ್ಪಷ್ಟಗೊಳಿಸಲು ನನ್ನ ವಿಚಾರಕ್ಕೆ ಹೊಳೆದದ್ದು ವಿಧಿ ೧೦ ರ ಕಲಮು (೨ಎ), ವಿಧಿ ೧೬, ವಿಧಿ ೧೦ ರ ಕಲಮು (೨ಎ) ವಿಧಿ ೧೬, ವಿಧಿ ೨೫ರ ಕಲಮು (೩) ಮತ್ತು ವಿಧಿ ೨೬, ಇವುಗಳಿಗೆ ಉಲ್ಲೇಖಿಸುವುದು ಅಪೇಕ್ಷಣಿಯ ಎಂಬುದು. ಏಕೆಂದರೆ, ಸಂಸತ್ತು ಈ ವಿಶೇಷ ವಿಧಿಗಳಿಗೆ ಪ್ರತ್ಯೇಕವಾಗಿ ವ್ಯವಹರಿಸಬೇಕಾಗುತ್ತದೆ.

**ಮಾನ್ಯ ಉಪಸಭಾಪತಿ :** ನಾನೀಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಇವೆಲ್ಲವುಗಳು ಡಾ. ಅಂಬೇಡ್ಕರ್‌ರ ಹೆಸರಿನಲ್ಲಿವೆ.

(ಡಾ. ಅಂಬೇಡ್ಕರ್‌ರವರಿಂದ ಮಂಡಿತ ತಿದ್ದುಪಡಿ ಸಂಖ್ಯೆಗಳಾದ ೮೧೭, ೮೨೦ ಮತ್ತು ೮೨೨ ಇವುಗಳು ಅಂಗೀಕರಿಸಲ್ಪಟ್ಟವು. ತಿದ್ದುಪಡಿಯಾದಂತೆ ವಿಧಿ ೨೭ ಅಂಗೀಕರಿಸಲ್ಪಟ್ಟಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು).

*********

# ವಿಧಿ ೨೭ ಎ

* **ಮಾನ್ಯ ಉಪಸಭಾಪತಿ :** ಮಾತನಾಡಲು ಇಚ್ಛಿಸುವ ಸದಸ್ಯರುಗಳು ಇನ್ನೂ ಅನೇಕರು ಇರುವರೆಂಬುದನ್ನು ಅಲ್ಲದೆ ಅವರುಗಳು ಈ ವಿಷಯದ ಪೂರ್ಣ ಪರಿಣತರೂ ಆಗಿರುವರೆಂಬುದನ್ನು ನಾನು ಚೆನ್ನಾಗಿ ಬಲ್ಲೆನಾದರೂ ಈ ಬಗೆಗೆ ಸಾಕಷ್ಟು ಚರ್ಚೆಯಾಗಿದೆ ಎನ್ನುವುದು ನನ್ನ ವಿಚಾರ. ಆದುದರಿಂದ ನಾನು ಡಾ. ಅಂಬೇಡ್ಕರ್‌ರವರನ್ನು ಕರೆಯುತ್ತೇನೆ. ಮಾನ್ಯ ಸದಸ್ಯರುಗಳಿಗೆ ನಾನು ಅವಕಾಶ ನೀಡುತ್ತಿಲ್ಲ ಎನ್ನುವುದು ನನಗೆ ಖೇದ ಉಂಟುಮಾಡಿದೆ. ಆದರೆ ಪ್ರತಿದಿನ ನಾವು ಎಷ್ಟಾದರೂ ಪ್ರಗತಿ ತೋರಬೇಕೆಂಬ ಅಂಶವನ್ನು ಅವರು ಗಣನೆಗೆ ತೆಗೆದುಕೊಳ್ಳುತ್ತಾರೆ ಎನ್ನುವುದು ನನ್ನ ವಿಚಾರ.

**ಶ್ರೀ ಲೋಕನಾಥ ಮಿಶ್ರಾ** (ಒರಿಸ್ಸಾ : ಸಾಮಾನ್ಯ): ಆದರೆ ಬಹಳಷ್ಟು ಅಂಶಗಳು ಚರ್ಚಿಸದೆ ಉಳಿದಿವೆ.

**ಮಾನ್ಯ ಉಪಭಾಪತಿ :** ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** (ಬಾಂಬೆ : ಸಾಮಾನ್ಯ) ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾವು ಪಾಸು ಮಾಡಿರುವ ನೀತಿ ನಿರ್ದೇಶಕ ತತ್ವದ ವಿಧಿಯೊಂದನ್ನು ನಾವು ಚರ್ಚಿಸುವಾಗ ಈ ವಿಷಯವನ್ನು ಚರ್ಚಿಸಿರುತ್ತೇವೆ ಎಂಬುದಾಗಿ ಸದಸ್ಯರುಗಳು ನೆನಪಿಗೆ ತಂದುಕೊಳ್ಳಬಹುದು. ಕಾರ್ಯಾಂಗ ಮತ್ತು ನ್ಯಾಯಾಂಗವನ್ನು ಬೇರ್ಪಡಿಸಬೇಕೆನ್ನುವ ಅಂಶವೊಂದರ ಬಗೆಗೆ, ನನ್ನ ಒತ್ತಾಯದ ಮೇರೆಗೆ ನೀತಿ ನಿರ್ದೇಶಕ ತತ್ವದಲ್ಲಿ ಈ ಅಂಶವನ್ನು ಒಳಪಡಿಸಲಾಯಿತು. ಮೂಲತಃ ಪ್ರಸ್ತಾಪನೆಯು ಮೂರು ವರ್ಷಗಳ ಸಮಯ ಸೀಮೆಯನ್ನು ಒಳಗೊಂಡಿದ್ದಿತು. ತದನಂತರ ಚರ್ಚೆಯ ಪರಿಣಾಮವಾಗಿ, ತತ್ವವನ್ನು ಕಾರ್ಯಗತಗೊಳಿಸಲು ಬರುವ ಸಮಸ್ಯೆಗಳನ್ನು ಎತ್ತಿ ತೋರಿಸಿದ ಪರಿಣಾಮವಾಗಿ ಸಭೆಯು ಪ್ರಾಂತೀಯ ಸರಕಾರಗಳು ನ್ಯಾಯಾಂಗದಿಂದ ಕಾರ್ಯಾಂಗವನ್ನು ಬೇರ್ಪಡಿಸಲು ಒಂದು ರೀತಿಯ ಧನಾತ್ಮಕ ನಿರ್ಬಂಧನೆಯನ್ನು ಹಾಕಲು ಮೂರು ವರ್ಷಗಳ ಸಮಯ ಸೀಮೆಯನ್ನು ಹಾಕುವುದನ್ನು ತೆಗೆದುಹಾಕಿತು.

* ಸಿ.ಎ.ಡಿ. ಸಂಪುಟ ೭, ೧೦ನೆಯ ಡಿಸೆಂಬರ್, ೧೯೪೮, ಪು. ೯೬೭–೬೮

ಆ ಸಂದರ್ಭದಲ್ಲಿ, ಈ ಎಲ್ಲ ವಿಷಯಗಳ ಬಗೆಗೆ ಚರ್ಚೆ ನಡೆಯಿತು. ಹೀಗಾಗಿ ಈಗ ನಾನು ಅಲ್ಲಿ ಹೇಳಿದ್ದನ್ನು ಪುನಃ ಹೇಳುವ ಅಗತ್ಯವಿದೆಯೆಂದು ಭಾವಿಸಲಾರೆ. ಕಾರ್ಯಾಂಗವನ್ನು ನ್ಯಾಯಾಂಗದಿಂದ ಬೇರ್ಪಡಿಸಬೇಕೆನ್ನುವುದರ ಬಗೆಗೆ ಯಾವುದೇ ತರಹದ ಭಿನ್ನಮತವಿಲ್ಲ.

ಕಾರ್ಯಾಂಗವನ್ನು ಶಾಸಕಾಂಗದಿಂದ ಬೇರ್ಪಡಿಸಬೇಕೆನ್ನುವುದರ ಬಗೆಗೆ, ಅಂತಹ ಪ್ರತ್ಯೇಕತೆ ಯುನೈಟೆಡ್ ಸ್ಟೇಟ್ಸ್‌ನ ಸಂವಿಧಾನದಲ್ಲಿ ಜಾರಿಯಲ್ಲಿರುತ್ತದೆ ಎನ್ನುವುದು ಸತ್ಯ; ಆದರೆ ನನ್ನ ಮಿತ್ರ ಪ್ರೊ. ಶಾಹ ಅವರು ಯುನೈಟೆಡ್ ಸ್ಟೇಟ್ಸ್‌ನ ಸಂವಿಧಾನದ ಆ ಪ್ರತ್ಯೇಕ ಅವಕಾಶದ ಬಗೆಗೆ ಇತ್ತೀಚಿನ ಟೀಕೆಗಳನ್ನು ಓದಿರುತ್ತಾರೆ. ಅನೇಕ ಅಮೇರಿಕನ್ನರು ಸ್ವತಃ ಅಲ್ಲಿಯ ಶಾಸಕಾಂಗ ಮತ್ತು ಕಾರ್ಯಾಂಗದ ನಡುವಣ ಕಠಿಣ ಪ್ರತ್ಯೇಕತೆಯ ಬಗೆಗೆ ಅಸಮಾಧಾನಗೊಂಡಿರುತ್ತಾರೆ. ಯು.ಕೆ.ನಲ್ಲಿರುವ ಉದಾಹರಣೆಯಂತೆ ಸ್ಥಿತಿಯನ್ನು ನಿರ್ಮಿಸಲು ಅಮೆರಿಕೆಯ ಸಂವಿಧಾನದಲ್ಲಿ ಪ್ರಸಕ್ತ ಕಾರ್ಯಾಂಗ ಮತ್ತು ನ್ಯಾಯಾಂಗಗಳ ನಡುವಣ ಅಂತರವನ್ನು ಸಂಪೂರ್ಣವಾಗಿ ತೊಡೆಯುವ ಸಲಹೆ ಅನೇಕ ಅಮೆರಿಕೆಯ ಸಂವಿಧಾನದ ವಿದ್ಯಾರ್ಥಿಗಳ ಸಲಹೆಗಳಲ್ಲೊಂದಾಗಿದೆ. ಯು.ಕೆ.ನಲ್ಲಿ ಕಾರ್ಯಾಂಗ ಮತ್ತು ಶಾಸಕಾಂಗದ ನಡುವೆ ಅಂತರ ಅಥವಾ ಪ್ರತ್ಯೇಕತೆ ಇಲ್ಲ. ಕಾರ್ಯಾಂಗದ ಸದಸ್ಯರುಗಳು ಪ್ರತಿನಿಧಿ ಸಭೆ ಅಥವಾ ಸೆನೆಟ್‌ನ ಸಭೆಗಳಲ್ಲಿ ಕುಳಿತುಕೊಳ್ಳಲು ಅರ್ಹತೆ ದೊರಕುವಂತೆ ಮಾಡಲು ಯುನೈಟೆಡ್ ಸ್ಟೇಟ್ಸ್‌ನ ಸಂವಿಧಾನದಲ್ಲಿ ಅವಕಾಶ ಕಲ್ಪಿಸಬೇಕೆನ್ನುವ ವಾದ ಮಾಡಲಾಗಿದೆ. ಸಭೆಗಳಲ್ಲಿಯ ಆ ಹಾಜರಾತಿ ಮತದಾನದಲ್ಲಿ ಪಾಲ್ಗೊಳ್ಳುವಿಕೆಯಂತಹ ಎಲ್ಲ ಉದ್ದೇಶಗಳಿಗಾಗಿ ಆಗದೇ ಇದ್ದರೂ, ಕನಿಷ್ಟ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ಹಾಗೂ ವಾದ ಮತ್ತು ಚರ್ಚೆಗಳ ಕಾರ್ಯವಿಧಾನಗಳಲ್ಲಿ ಅಥವಾ ಯಾವುದೇ ವಿಶೇಷ ಕ್ರಮ ಸಂದರ್ಭಗಳಲ್ಲಿ ಆಗಬೇಕು.

ಆ ದೃಷ್ಟಿಯಿಂದಾಗಿ, ಕಾರ್ಯಾಂಗ ಮತ್ತು ಶಾಸಕಾಂಗದ ನಡುವಣ ಸಂಪೂರ್ಣ ಪ್ರತ್ಯೇಕತೆಯಿಂದಾಗುವ ಅನುಕೂಲತೆ ಬಗೆಗಿನ ಅನುಮಾನ ಅಮೆರಿಕನ್ನರನ್ನು ಕಾಡುತ್ತಿದೆ ಎನ್ನುವ ಅಂಶವನ್ನು ಪರಿಗಣಿಸುವುದಗತ್ಯ. ಈ ಬಗೆಗೆ ನನ್ನ ಮನದಲ್ಲಾಗಲಿ ಇಲ್ಲವೆ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳ ಮನದಲ್ಲಾಗಲಿ ಕ್ಲಿಷ್ಟ ಹಾಗೂ ವಿಸ್ತಾರವಾದ ಶಾಸಕಾಂಗದ ಕಾರ್ಯದಲ್ಲಿ ಎಲ್ಲಿಯವರೆಗೆ ಶಾಸಕಾಂಗದ ಸದಸ್ಯರುಗಳು ಶಾಸಕಾಂಗದಲ್ಲಿ ಕುಳಿತ ಕಾರ್ಯಾಂಗದ ಸದಸ್ಯರು ಗಳಿಸಿದ ಪ್ರತ್ಯಕ್ಷ ಮಾರ್ಗದರ್ಶನ ಮತ್ತು ಚಾಲನೆ ಪಡೆಯುವುದಿಲ್ಲವೋ ಅಲ್ಲಿಯವರೆಗೆ ಶಾಸಕಾಂಗದ ಸದಸ್ಯರುಗಳಿಗೆ ತಮ್ಮ ರಾಜಕೀಯ ಕಾರ್ಯವನ್ನು ನಿರ್ವಹಿಸುವುದು ಅತ್ಯಂತ ಕಠಿಣವಾಗುತ್ತದೆ ಎನ್ನುವುದರಲ್ಲಿ ಕಿಂಚಿತ್ತಾದರೂ ಅನುಮಾನವಿಲ್ಲ. ಕಾರ್ಯಾಂಗದ ಸದಸ್ಯರುಗಳು ಶಾಸಕಾಂಗದ ಸದಸ್ಯರುಗಳೊಂದಿಗೆ ಶಾಸಕೀಯ ಕ್ರಮಗಳ ಚರ್ಚೆಯಲ್ಲಿ ಜೊತೆಗೂಡಿ ಕೆಲಸ ನಿರ್ವಹಿಸುವುದು ಯಾವುದೇ ಅನುಮಾನವಿಲ್ಲದೆ ಲಾಭದಾಯಕವಾದದ್ದಾಗಿದೆ. ಕ್ಲಿಷ್ಟಕರ ವಿಷಯಗಳಲ್ಲಿ ಶಾಸಕಾಂಗದ ಸದಸ್ಯರುಗಳು ಅಗತ್ಯ ಮಾರ್ಗದರ್ಶನ ಪಡೆಯಬಹುದು. ಆದುದರಿಂದ, ಶಾಸಕಾಂಗದಿಂದ ಕಾರ್ಯಾಂಗದಿಂದ ಬೇರ್ಪಡಿಸುವ ಅಮೆರಿಕನ್ ವಿಧಾನವನ್ನು ಅಳವಡಿಸಿಕೊಳ್ಳದಿದ್ದಲ್ಲಿ ಯಾವುದೇ ದೊಡ್ಡ ಸಂಭಾವ್ಯ ಹಾನಿಯಾಗುವುದೆಂದು ನಾನು ವೈಯಕ್ತಿಕವಾಗಿ ಭಾವಿಸಲಾರೆ.

ನ್ಯಾಯಾಂಗದಿಂದ ಕಾರ್ಯಾಂಗವನ್ನು ಬೇರ್ಪಡಿಸುವ ಪ್ರಶ್ನೆಯ ಬಗೆಗೆ, ನಾನು ಹೇಳಿರುವಂತೆ, ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅಲ್ಲದೆ, ನನ್ನ ನಿರ್ಣಯದಂತೆ ಆ ಅವಕಾಶ ಕಲ್ಪನೆಯು ನಾವು ಅಧ್ಯಕ್ಷೀಯ ಪದ್ಧತಿಯನ್ನು ಹೊಂದಿರುತ್ತೇವೆಯೇ ಅಥವಾ ಪಾರ್ಲಿಮೆಂಟರಿ (ಸಂಸದೀಯ) ಪದ್ಧತಿಯನ್ನು ಹೊಂದಿರುತ್ತೇವೆಯೆ ಎನ್ನುವ ಪ್ರಶ್ನೆಯನ್ನವಲಂಬಿಸಿರುವುದಿಲ್ಲ. ಏಕೆಂದರೆ ಸಂಸದೀಯ ಪದ್ಧತಿಯ ಸರಕಾರದಲ್ಲೂ ಕಾರ್ಯಾಂಗದಿಂದ ನ್ಯಾಯಾಂಗದ ಬೇರ್ಪಡಿಕೆಯು ಸಮ್ಮತ ತತ್ವವಾಗಿದೆ. ನಾವು ಕೂಡ ಮಂಜೂರು

ಮಾಡಿರುವ ಅನುಚ್ಛೇದದನ್ವಯ ಅದಕ್ಕೆ ಬದ್ಧರಾಗಿರುತ್ತೇವೆ. ಈಗ ಅದು ನೀತಿ ನಿರ್ದೇಶಕ ತತ್ವಗಳ ಭಾಗವೂ ಆಗಿದೆ. ಆದುದರಿಂದ ಇದನ್ನು ಒಪ್ಪಿಕೊಳ್ಳಲು ನನಗೆ ಸಾಧ್ಯವಿಲ್ಲವೆನ್ನುವುದು ನನ್ನ ವಿಚಾರ.

(ಪ್ರೊ. ಶಾಹರ ತಿದ್ದುಪಡಿ ನಿರಾಕೃತವಾಯಿತು)

********

## ವಿಧಿ ೪೧

* **ಮಾನ್ಯ ಉಪಸಭಾಪತಿ :** ಡಾ. ಅಂಬೇಡ್ಕರ್‌ರವರ ಕಾರ್ಯಕ್ಕೆ ನಿಮಗೆ ಕಾರಣ ನೀಡಬೇಕಾಗಿಲ್ಲ.

**ಶ್ರೀ ಹೆಚ್. ವಿ. ಕಾಮತ್ :** ನಾನು ಡಾ. ಅಂಬೇಡ್ಕರ್‌ರವರು ಕಾರ್ಯನಿರತರಾಗಲು ಕಾರಣವಾಗಿರಬಹುದಾದ ಕಾರಣಗಳನ್ನು ಅಲ್ಲದೇ ನನ್ನದೇ ದೃಷ್ಟಿಕೋನ ಮುಂದಿಡಲು ಬಯಸಿದ್ದೆ. ಕಳೆದ ವರ್ಷ ಅಸೆಂಬ್ಲಿಯಿಂದ ಏಕಮತದಿಂದ ಪಾಸು ಮಾಡಲಾಗಿರುವ ಈ ವಿಧಿಯ ಹಿನ್ನೆಲೆಯಲ್ಲಿ, ಅವರು ಮತ್ತು ಕರಡು ಸಮಿತಿಯ ಅವರ ಸಹಪಾಠಿಗಳು ಕರಡು ಸಂವಿಧಾನದಲ್ಲಿ ಕಾಣಬರುವಂತಹ 'ರಾಷ್ಟ್ರಪತಿ' ಪದವನ್ನು ಏಕೆ ತೆಗೆದು ಹಾಕಬಯಸುತ್ತಾರೆ ಎನ್ನುವುದನ್ನು ಡಾ.ಅಂಬೇಡ್ಕರ್‌ರವರಿಂದ ತಿಳಿಯಬಯಸುತ್ತೇನೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿಯವರೆ, ಪ್ರೊ. ಕೆ.ಟಿ. ಶಾಹರವರು ತಮ್ಮ ತಿದ್ದುಪಡಿಯನ್ನು ಮಂಡಿಸುತ್ತ ಎತ್ತಿರುವ ಅಂಶಗಳನ್ನು ತೆಗೆದುಕೊಳ್ಳುವ ಮುನ್ನ ನನಗೆ ಅನಿಸಿರುವಂತೆ ಶ್ರೀ ಕಾಮತರವರು ಮಾಡಿರುವ ಸಣ್ಣ ಟೀಕೆಯನ್ನು ಮುಗಿಸಬಯಸುತ್ತೇನೆ. ಶ್ರೀ ಕಾಮತರು ಒಕ್ಕೂಟದ ಸಂವಿಧಾನಕ್ಕೆ ಸಂಬಂಧಿತ ಕಮಿಟಿ ಮಾಡಿರುವ ವರದಿಯಲ್ಲಿಯ ಭಾಷೆಯನ್ನು ಮುನ್ಸೂಚನೆಯಿಲ್ಲದೆ ತಿದ್ದಿರುವುದಕ್ಕೆ ಕರಡು ಸಮಿತಿಯನ್ನು ತರಾಟೆಗೆ ತೆಗೆದುಕೊಂಡಿರುತ್ತಾರೆ. ನಾನು ಅವರನ್ನು ಸರಿಯಾಗಿ ತಿಳಿದುಕೊಂಡದ್ದೇ ಆದರೆ, ಅವರು ಕಮಿಟಿಯ ವರದಿಯಲ್ಲಿ ಪ್ಯಾರಾಗ್ರಾಫ್ ೧ರಲ್ಲಿ ಅಧ್ಯಕ್ಷ ಈ ಪದದ ನಂತರ ಆವರಣ ಚಿನ್ಹೆಗಳ ನಡುವೆ ಇದ್ದ "ರಾಷ್ಟ್ರಪತಿ" ಈ ಪದವನ್ನು ಕೈಬಿಟ್ಟಿರುವುದರಿಂದ ಕರಡು ಸಮಿತಿಯನ್ನು ಆಪಾದಿಸಿರುತ್ತಾರೆ. ಈಗ, ಮಾನ್ಯರೆ, ಕರಡು ಸಮಿತಿಯ ಈ ಕ್ರಮಕ್ಕೂ "ರಾಷ್ಟ್ರಪತಿ" ಈ ಪದದ ವಿರುದ್ಧವಾಗಲಿ ಅಥವಾ ಸಂವಿಧಾನದಲ್ಲಿ ಹಿಂದೀ ಪದದ ಬಳಕೆಗಾಗಲಿ ಯಾವುದೇ ದುರುದ್ದೇಶವಿಲ್ಲ. ಅದನ್ನು ಬಿಟ್ಟುದ್ದು ಏಕೆ ಎನ್ನುವುದಕ್ಕೆ ಕಾರಣವೆಂದರೆ ಸಂವಿಧಾನ ಸಮಿತಿಯ ಅಧ್ಯಕ್ಷರು ಕರಡು ಸಮಿತಿಯ ಜೊತೆಗೆ ಮತ್ತೊಂದು ಸಮಿತಿಯನ್ನು, ಹಾಗೆ ಹೇಳುವುದಾದರೆ ಎರಡು ಸಮಿತಿಗಳನ್ನು ನೇಮಿಸಿದ್ದರೆಂದು ನಮಗೆ ತಿಳಿಸಲಾಗಿತ್ತು. ಅದರ ಉದ್ದೇಶ ಸಂವಿಧಾನದ ಕರಡನ್ನು ಹಿಂದೀ ಹಾಗೂ ಹಿಂದೂಸ್ತಾನಿಯಲ್ಲಿ ರಚಿಸುವುದಾಗಿದ್ದಿತು. ಆದುದರಿಂದ ಸಂವಿಧಾನದ ಇಂಗ್ಲೀಷ್ ಕರಡನ್ನು ತಯಾರಿಸುತ್ತಿರುವ ನಾವು "ರಾಷ್ಟ್ರಪತಿ" ಪದವು ಇಂಗ್ಲೀಷ್ ಪದ ಆಗಿಲ್ಲವಾದ್ದರಿಂದ, ಆ ಸಮಿತಿಗಳವರು ಆ ಪದವನ್ನು ಬಳಸಲಿ ಎನ್ನುವ ದೃಷ್ಟಿಯಿಂದ ಅದನ್ನು ಹಿಂದೀ ಮತ್ತು ಹಿಂದೂಸ್ಥಾನಿ ಕರಡಿನಲ್ಲಿ ಸೇರ್ಪಡೆಗೆ ಬಿಡುವುದು ಸರಿ ಎಂದೆವು. ಈಗ ನನ್ನ ಮಿತ್ರರು "ರಾಷ್ಟ್ರಪತಿ" ಪದವು ಹಲವಾರು ವರ್ಷಗಳಿಂದ ಕಾಂಗ್ರೆಸ್‌ನ ಆಡುಭಾಷೆಯ ಪದವಾಗಿರುವ ಅಂಶ ನನಗೆ ತಿಳಿದಿರಲಿಲ್ಲವೇ ಎಂದು ಕೇಳಿರುತ್ತಾರೆ. ಇದು ಸತ್ಯ ಎನ್ನುವುದು ನನಗೆ

---

* ಸಿ.ಎ.ಡಿ. ಸಂಪುಟ ೭, ೧೦ನೆಯ ಡಿಸೆಂಬರ್, ೧೯೪೮, ಪುಟ ೯೭೩–೭೪

ತಿಳಿದಿದೆ. "ರಾಷ್ಟ್ರಪತಿ" ಪದವನ್ನು ನಾನು ಅನೇಕ ಕಡೆಗಳಲ್ಲಿ ಬಳಸಿರುವುದನ್ನು ಓದಿರುತ್ತೇನೆ. ಅದರ ಬಗೆಗೆ ಯಾವ ಸಂಶಯವೂ ಇಲ್ಲ. ಆದರೆ ಇದೊಂದು ತಾಂತ್ರಿಕ ಪದ ಆಗಿದೆಯೆ, ಈ ಬಗೆಗೆ ನನಗೆ ಖಚಿತವಾಗಿಲ್ಲ. ಆದುದರಿಂದ ಉತ್ತರಿಸಲು ಎದ್ದು ನಿಲ್ಲುವ ಮುನ್ನ, ನಾನು ಒಂದು ಹಿಂದಿಯಲ್ಲಿ ಮತ್ತು ಮತ್ತೊಂದು ಹಿಂದುಸ್ತಾನಿಯಲ್ಲಿ ಸಿದ್ಧಪಡಿಸಲಾಗಿರುವ ಕರಡು ಸಂವಿಧಾನಗಳನ್ನು ಪರಾಮರ್ಶಿಸಲು ಬಯಸಿದೆ. ಈಗ, ನಾನು ಶ್ರೀ ಕಾಮತರವರ ಗಮನವನ್ನು ಆ ಎರಡು ಸಮಿತಿಗಳು ಬಳಸಿರುವ ಭಾಷೆಯತ್ತ ಸೆಳೆಯ ಬಯಸುತ್ತೇನೆ. ನಾನು ಹಿಂದುಸ್ತಾನಿ ಕರಡಿನಿಂದ ಓದುತ್ತಿರುವ, ಮತ್ತು ಅದು ಹೇಳುತ್ತದೆ:–

"ಹಿಂದ ಕಾ ಏಕ ಪ್ರಸಿಡೆಂಟ್ ಹೋಗಾ ...........

"ರಾಷ್ಟ್ರಪತಿ" ಈ ಪದವನ್ನು ಅಲ್ಲಿ ಬಳಸಿರುವುದಿಲ್ಲ.

ಆಮೇಲೆ, ಹಿಂದೀ ಕಮಿಟಿಯು ತಯಾರಿಸಿರುವ ಕರಡನ್ನು ತೆಗೆದುಕೊಳ್ಳುತ್ತ, ವಿಧಿ ೪೧ರಲ್ಲಿ, ಬಳಸಲಾಗಿರುವ ಪದ (ಪ್ರಧಾನ) ಆಗಿದೆ. ಅಲ್ಲಿ ಕೂಡ "ರಾಷ್ಟ್ರಪತಿ" ಈ ಪದವಿಲ್ಲ.

**ಶ್ರೀ ಹೆಚ್.ವಿ. ಕಾಮತ :** ಆದರೆ, ಮಾನ್ಯರೆ, ನಾನು ಎತ್ತಿರುವ ಪ್ರಶ್ನೆ ಈ ಸಭೆಯು ಸಮ್ಮತಿಸಿದಂತೆ ಇರುವ ವಿಧಿಯಲ್ಲಿ "ರಾಷ್ಟ್ರಪತಿ" ಈ ಪದವನ್ನು ಸೇರಿಸಲಾಗಿದ್ದಿತು ಎನ್ನುವುದು. ಹಿಂದಿ ಅಥವಾ ಹಿಂದೂಸ್ತಾನಿ ಸಮಿತಿಗಳ ವರದಿಗಳು ಸಭೆಯ ಎದುರಿಗೆ ಇಲ್ಲ. ಈಗ ಪರಿಶೀಲಿಸಲಾಗುತ್ತಿರುವ ಕರಡು ಸಂವಿಧಾನದಲ್ಲಿ ಪದವು ಸ್ಥಾನ ಪಡೆಯಬೇಕೆನ್ನುವುದು ನಾನು ಬಯಸಿರುವುದು.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮತ್ತೆ ಇದೇ ಈಗ ನನಗೆ ತಿಳಿದು ಬಂದಿರುವುದೇನೆಂದರೆ ಉರ್ದು ಕರಡಿನಲ್ಲಿ "ಸದರ" ಪದ ಬಳಸಲಾಗಿದೆ ಎನ್ನುವುದು (ನಗು).

ಪ್ರಸ್ತುತ ಮಾನ್ಯರೆ, ಪ್ರೊ.ಕೆ.ಟಿ. ಶಾಹರವರ ತಿದ್ದುಪಡಿಯಿಂದ ಸತ್ವಯುತವಾಗಿ ಎತ್ತಲಾಗಿರುವ ಪ್ರಶ್ನೆಗೆ ಬರುವೆ. ಅವರ ತಿದ್ದುಪಡಿ, ನಾನು ಅವರನ್ನು ಸರಿಯಾಗಿ ಅರಿತುಕೊಂಡಿರುವೆನೆಂದಾದರೆ, ಕರಡು ಸಂವಿಧಾನದಲ್ಲಿ ಒಪ್ಪಿಕೊಳ್ಳಲಾಗಿರುವ ಯೋಜನೆಗಿಂತ ಮೂಲಭೂತವಾಗಿ ಭಿನ್ನವಾಗಿದೆ. ಪ್ರೊ.ಕೆ.ಟಿ. ಶಾಹರವರು "ಮುಖ್ಯ ಕಾರ್ಯಕಾರೀ ಮತ್ತು ರಾಜ್ಯದ ಮುಖ್ಯಸ್ಥ" ಈ ಪದಗಳನ್ನು ಬಳಸುತ್ತಾರೆ. ಅವರು ಅದನ್ನು ಸೇರಿಸುವುದರ ಅರ್ಥ, ನನಗೆ ಯಾವ ಅನುಮಾನವೂ ಇಲ್ಲ, ಅಮೆರಿಕೆಯ ಅಧ್ಯಕ್ಷೀಯ ಪದ್ಧತಿಯ ಕಾರ್ಯಾಂಗವಾಗಿದ್ದು ಕರಡಿನಲ್ಲಿ ಒಳಗೊಂಡಿರುವ ಪಾರ್ಲಿಮೆಂಟರಿ ಪದ್ಧತಿಯ ಕಾರ್ಯಾಂಗ ಅಲ್ಲ. ಒಂದು ವೇಳೆ ನನ್ನ ಮಿತ್ರ ಪ್ರೊ. ಶಾಹ ಅವರು ಒಕ್ಕೂಟದ ಸಂವಿಧಾನದ ಸಮಿತಿಯ ವರದಿಯತ್ತ ಗಮನಹರಿಸಿದರೆ, ಸಮಿತಿಯ ವರದಿಯ ಸಲಹೆಗಳನ್ನು ಕರಡು ಸಮಿತಿಯವರು ಅನುಸರಿಸಿರುವುದನ್ನು ಕಾಣುತ್ತಾರೆ. ಆ ವರದಿಯು ಅಧ್ಯಕ್ಷರು ಕಾರ್ಯಾಂಗದ ಮುಖ್ಯಸ್ಥರಾಗಿರಬೇಕು, ಅವರಿಗೆ ಸಂವಿಧಾನದಲ್ಲಿ ನೀಡಲ್ಪಟ್ಟಿರುವ ಅಧಿಕಾರಗಳಂತೆ ಮಂತ್ರಿಮಂಡಲದ ಸಲಹೆಯಿಂದ ಮಾರ್ಗದರ್ಶಿತಗೊಳ್ಳಬೇಕಲ್ಲದೆ, ಅದರ ಸಲಹೆಗಳಿಗೆ ಎಲ್ಲ ಕಾರ್ಯಗಳಿಗೆ ಬದ್ಧರಾಗಿರಬೇಕೆಂದು ಹೇಳುತ್ತದೆ. ಯಾರದೇ ಸಲಹೆಗಳಿಂದ ಅನಿಯಂತ್ರಿತವಾಗಿರದ, ಪರಮ ಸರ್ವೋಚ್ಚ ಮುಖ್ಯಸ್ಥನು ಆತನಲ್ಲ. ಅದುವೇ ಪಾರ್ಲಿಮೆಂಟರಿ ಪದ್ಧತಿಯ ಸರಕಾರ. ಯುನೈಟೆಡ್ ಸ್ಟೇಟ್ಸ್‌ನಲ್ಲಿ, ನಿಃಸ್ಸಂಶಯವಾಗಿ ಅಲ್ಲಿಯ ವಿವಿಧ ಇಲಾಖೆಗಳ ಮುಖ್ಯಸ್ಥರಾಗಿ ವಿವಿಧ ಸ್ಟೇಟ್ ಕಾರ್ಯದರ್ಶಿಗಳು ಅಧಿಕಾರ ಭಾರ ವಹಿಸಿಕೊಂಡಿರುತ್ತಾರೆಯಲ್ಲದೆ ಆಡಳಿತವನ್ನು ನಿರ್ವಹಿಸಿಕೊಂಡು ಹೋಗುತ್ತಾರೆ. ಯಾವ ಅನುಮಾನವೂ ಇಲ್ಲದೆ ಅವರುಗಳು ತಮ್ಮ ಆಡಳಿತ ಅಂತರ್ಗತ ಉದ್ಭವಿಸುವ ವಿಷಯಗಳಿಗೆ ಸಂಬಂಧಿತ ವಿಷಯಗಳ ಬಗೆಗೆ ಸಲಹೆ ನೀಡುತ್ತಾರೆ. ಒಟ್ಟಾರೆ, ಸಿದ್ಧಾಂತದಲ್ಲಿ,

ಅಧ್ಯಕ್ಷನು ಸೆಕ್ರೆಟರಿಸ್ ಆಫ್ ಸ್ಟೇಟ್ಸ್ ಇವರ ಸಲಹೆಗಳನ್ನು ಒಪ್ಪಿಕೊಳ್ಳಲು ಬದ್ಧನಾಗಿರುವುದಿಲ್ಲ. ಹಾಗಾಗಿ ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷನನ್ನು ಕಾರ್ಯಾಂಗದ ಪ್ರಧಾನ ಮುಖ್ಯಕಾರ್ಯಕಾರಿ ಎಂದು ಬಣ್ಣಿಸಲಾಗುತ್ತದೆ. ನಾವು ಆ ವ್ಯವಸ್ಥೆಯನ್ನು ಅಂಗೀಕರಿಸಿರುವುದಿಲ್ಲ, ನಾವು ಸಂಸದೀಯ ಪದ್ಧತಿಯನ್ನು ಅಂಗೀಕರಿಸಿರುತ್ತೇವೆ. ಆದುದರಿಂದ ಹೀಗಾಗಿ, ಈ ಹಂತದಲ್ಲಿ ನನ್ನ ಮನವಿ ಏನೆಂದರೆ ಪ್ರೊ.ಕೆ.ಟಿ. ಶಾಹರವರು ಪ್ರಸ್ತಾಪಿಸಿರುವ ವಿಷಯವನ್ನು ಎಲ್ಲಿಯವರೆಗೆ ನಾವು ಮೊದಲು ಕರಡು ಸಂವಿಧಾನದ ವಿಧಿ ೬೧ ಯಾವುದು ಅಧ್ಯಕ್ಷನಿಗೆ ಮಂತ್ರಿಮಂಡಲದ ಸಲಹೆಯಂತೆ ಕಾರ್ಯಮಾಡಲು ಬಾಧ್ಯಗೊಳಿಸುತ್ತದೆ ಅದನ್ನು ಕೈಬಿಡದ ಹೊರತು ಬಿಟ್ಟುಬಿಡಲು ಆಗುವುದಿಲ್ಲ. ಅಧ್ಯಕ್ಷನು ತನ್ನ ಮಂತ್ರಿಗಳ ಸಲಹೆಗೆ ಬದ್ಧನಾಗಿರಬೇಕು ಅದನ್ನು ನಾವು ಹೇಳಲು ಇಚ್ಛಿಸುತ್ತೇವೆಯೋ ಅಥವಾ ಇಲ್ಲವೋ? ಅದುವೇ ಪ್ರಮುಖವಾದ ಪ್ರಶ್ನೆ. ಒಂದು ವೇಳೆ ನಾವು ಅಧ್ಯಕ್ಷನು ಮಂತ್ರಿಮಂಡಲದ ಸಲಹೆಗೆ ಬದ್ಧನಾಗಬೇಕಿಲ್ಲ ಎಂದು ನಿರ್ಧರಿಸುವುದಾದ ಪಕ್ಷದಲ್ಲಿ ಈ ಸಭೆಗೆ ಪ್ರೊ. ಕೆ.ಟಿ. ಶಾಹರವರ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದು. ಆದರೆ ಈ ಹಂತದಲ್ಲಿ ನನ್ನ ಸಲಹೆಯೆಂದರೆ, ವಿಷಯವು ಸಂಪೂರ್ಣವಾಗಿ ಅಪರಿಪಕ್ವವಾದದ್ದಾಗಿದೆ. ನಾವು ವಿಧಿ ೬೧ನ್ನು ತೆಗೆದುಹಾಕಲು ಒಪ್ಪಿಕೊಂಡಲ್ಲಿ ಪ್ರೊ. ಶಾಹರವರು ಮಾಡಿರುವ ಸಲಹೆಯನ್ನು ಒಪ್ಪಿಕೊಂಡು ತತ್ಪರಿಣಾಮದ ಬದಲಾವಣೆಗಳನ್ನು ತರುವ ಸ್ಥಿತಿಯಲ್ಲಿರುತ್ತೇವೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಕ್ಷಣದಲ್ಲಿ ನಾನು ಪೂರ್ಣಖಚಿತನಾಗಿದ್ದೇನೆ, ಇದು ಪರಿಪಕ್ವವಾಗಿಲ್ಲ ಮತ್ತು ಪರಿಗಣಿಸಕೂಡದು.

**ಮಾನ್ಯ ಉಪಸಭಾಪತಿ** : ನಾನೀಗ ತಿದ್ದುಪಡಿಯನ್ನು ಮತಕ್ಕೆ ಹಾಕಲಿದ್ದೇನೆ. ಪ್ರೊ.ಕೆ.ಟಿ. ಶಾಹರ ಹೆಸರಿನಲ್ಲಿರುವ ತಿದ್ದುಪಡಿ ಸಂ.೧೦೩೬ರ ಮೊದಲನೆ ಭಾಗ.

ಮಂಡನೆ ತಿರಸ್ಕೃತಗೊಂಡಿತು.

ವಿಧಿ ೪೧ ಅಂಗೀಕರಿಸಲ್ಪಟ್ಟಿತು ಮತ್ತು ಸಂವಿಧಾನಕ್ಕೆ ಸೇರ್ಪಡಿಸಲಾಯಿತು.

*********

## ವಿಧಿ ೪೨

* **ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸು : ಸಾಮಾನ್ಯ): ಮಾನ್ಯ ಉಪಾಧ್ಯಕ್ಷರವರೆ, ಪ್ರೊ.ಶಾಹರವರ ತಿದ್ದುಪಡಿಗೆ ಅವರು ನೀಡಿದ ಕಾರಣಗಳಿಗಾಗಿ ಸಭೆಯ ಸಮ್ಮತಿ ದೊರಕುವುದಾದರೆ, ಈ ಸಭೆಯ ವಿವಿಧ ಸಮಿತಿಗಳು ಅಲ್ಲದೆ ಸಂವಿಧಾನ ಸಭೆಯು ಈ ಹಿಂದೆ ಸಾಕಷ್ಟು ಸಲ ಚರ್ಚೆಗಳನ್ನು ನಡೆಸಿ ತೆಗೆದು ನಿರ್ಣಯಗಳಿಂದ ಹಿಂದೆ ಸರಿದಂತೆ ಅರ್ಥವಾಗುತ್ತದೆ......

..........ಶೈಶವ ಹಂತದ ಪ್ರಜಾಪ್ರಭುತ್ವ ಆಧುನಿಕ ಸ್ಥಿತಿಗಳಲ್ಲಿ, ನಿರಂತರ ಭಿನ್ನಮತದ ಅಥವಾ ಸಂಘರ್ಷದ ಇಲ್ಲವೆ ಶಾಸಕಾಂಗ ಮತ್ತು ಕಾರ್ಯಾಂಗದ ನಡುವಣ ಸಂಘರ್ಷದ ಹೊಣೆ ಹೊರುವುದನ್ನು ಸಮರ್ಥಿಸಲು ಈಗಿನ ಸಂವೈಧಾನಿಕ ರಚನೆಯ ಗುರಿ ಶಾಸಕಾಂಗ ಮತ್ತು ಕಾರ್ಯಾಂಗದ ನಡುವಣ ಸಂಘರ್ಷ ತಡೆದು ಸರಕಾರದ ವ್ಯವಸ್ಥೆಯ ವಿವಿಧ ಭಾಗಗಳ ನಡುವೆ ಸಾಮರಸ್ಯವನ್ನು ಅಭಿವೃದ್ಧಿ ಪಡಿಸುವುದಾಗಿದೆ. ಸಂವಿಧಾನವೊಂದರ ಮುಖ್ಯ ಗುರಿಯೇ ಇದು. ಅಧ್ಯಕ್ಷೀಯ ಪದ್ಧತಿಗಿಂತಲು ಕ್ಯಾಬಿನೆಟ್ ಪದ್ಧತಿಯ

---

* ಸಿ.ಎ.ಡಿ. ಸಂಪುಟ ೭, ೧೦ನೆಯ ಡಿಸೆಂಬರ್, ೧೯೪೮, ಪುಟ ೯೮೫.

ಸರಕಾರಕ್ಕೆ ಆದ್ಯತೆ ನೀಡಿ ಅದನ್ನು ಸ್ವೀಕರಿಸಲು ಈ ಅಸೆಂಬ್ಲಿಗೆ, ಅಲ್ಲದೆ ವಿವಿಧ ಸಮಿತಿಗಳಿಗೆ ಪ್ರಭಾವ ಬೀರಲು ಕಾರಣಗಳು ಇವು. ಕ್ಯಾಬಿನೆಟ್ ಪದ್ಧತಿಯ ಬಗೆಗೆ ಹೆಚ್ಚಿನ ವಿವರಣೆ ಇಲ್ಲಿ ಅನಗತ್ಯ. ಬೆಗೂಟ್‌ರವರ ಪದಗಳಲ್ಲಿ ಇದು ಶಾಸಕಾಂಗ ಮತ್ತು ಕಾರ್ಯಾಂಗದ ನಡುವೆ ಸಂಯೋಗ ಚಿನ್ಹೆ. ನಮ್ಮ ದೇಶದಲ್ಲಿ ಆಧುನಿಕ ಸ್ಥಿತಿಗಳಲ್ಲಿ ಪ್ರಜಾತಂತ್ರದ ಆರಂಭದ ಹಂತದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗಗಳ ನಡುವೆ ಸಮೀಪದ ಸಂಬಂಧ ಇರಬೇಕಾದದ್ದು ಅತ್ಯಗತ್ಯವೆಂಬ ಕಾರಣಗಳಿಂದಾಗಿ ಈ ಸಭೆಯ ಒಕ್ಕೂಟದ ಸಂವಿಧಾನ ಸಮಿತಿಯು ಯಾವುದನ್ನು ಕ್ಯಾಬಿನೆಟ್ ಪದ್ಧತಿಯೆಂದು ಕರೆಯುತ್ತೇವೆಯೋ ಅದನ್ನು ಒಪ್ಪಿಕೊಂಡಿದೆ. ಅಮೆರಿಕಾದಲ್ಲಿ ಅಧ್ಯಕ್ಷೀಯ ಪದ್ಧತಿಯು ಐತಿಹಾಸಿಕ ಕಾರಣಗಳಿಂದಾಗಿ ಕಾರ್ಯ ನಿರ್ವಹಿಸಿದೆ. ಅಧ್ಯಕ್ಷನು ನಿಸ್ಸಂದೇಹವಾಗಿ ಹೆಚ್ಚಿನ ಗೌರವ ಪಡೆಯುತ್ತಾನೆ. ಅದು ಕೇವಲ ಅಧ್ಯಕ್ಷೀಯ ಪದ್ಧತಿಯಿಂದಾಗಿ ಅಲ್ಲ, ಅಮೆರಿಕೆಯು ಬೆಳಸಿಕೊಂಡು ಬಂದ ಸಮೃದ್ಧ ಮಾರ್ಗದಿಂದಾಗಿ. ಇವೇ ಕಾರಣಗಳಿಂದಾಗಿ ನಾನು ಸಂವಿಧಾನವನ್ನು ಈಗಿರುವಂತೆ ಬೆಂಬಲಿಸುತ್ತೇನೆ ಅಲ್ಲದೆ ಪ್ರೊ. ಶಾಹರವರ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಕ್ಷಮಿಸಿ, ಮಂಡಿಸಲಾಗಿರುವ ಯಾವುದೇ ತಿದ್ದುಪಡಿಯನ್ನು ನಾನು ಸ್ವೀಕರಿಸಲಾರೆ. ಉಪವಾಕ್ಯಾಂಗದ ಮೇಲಿನ ಸಾಮಾನ್ಯ ಚರ್ಚೆಗೆ ಸಂಬಂಧಿಸಿದಂತೆ, ನನ್ನ ಮಿತ್ರರುಗಳಾದ ಶ್ರೀ ಮುನ್ಷಿ ಮತ್ತು ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರವರು ಈಗಾಗಲೆ ಹೇಳಿರುವುದಕ್ಕೆ ನಾನು ಉಪಯುಕ್ತವಾದದ್ದೇನನ್ನೂ ಸೇರಿಸುವೆನೆಂದು ನನಗೆ ಅನಿಸದು.

**ಮಾನ್ಯ ಉಪಸಭಾಪತಿ :** ಒಂದೊಂದಾಗಿ ತಿದ್ದುಪಡಿಗಳನ್ನು ನಾನು ಮತಕ್ಕೆ ಹಾಕುವೆ.

ಎಲ್ಲ ೫ ತಿದ್ದುಪಡಿಗಳು ತಿರಸ್ಕೃತಗೊಂಡವು

(ವಿಧಿ ೪೨ ಸಂವಿಧಾನಕ್ಕೆ ಸೇರಿಸಲ್ಪಟ್ಟಿತು)

**********

## ವಿಧಿ ೪೩

* **ಮಾನ್ಯ ಉಪಸಭಾಪತಿ :** ನಾನು ಡಾ. ಅಂಬೇಡ್ಕರ್‌ರವರ ಮತ್ತು ಇತರರ ಹೆಸರಿನಲ್ಲಿರುವ ತಿದ್ದುಪಡಿ ಸಂ. ೧೦೬೩ ಯನ್ನು ಮತಕ್ಕೆ ಇಡುತ್ತಿಲ್ಲ, ಏಕೆಂದರೆ ಅದು ಈಗಾಗಲೆ ಮಂಡಿಸಲ್ಪಟ್ಟಿರುವ ೧೦೬೪ ರಂತೆಯೇ ಇದೆ.

ಡಾ. ಅಂಬೇಡ್ಕರರವರೆ ನೀವದನ್ನು ಒಪ್ಪುವಿರಾ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** (ಬಾಂಬೆ : ಸಾಮಾನ್ಯ): ಹೌದು ಮಾನ್ಯರೆ.

**ಮಾನ್ಯ ಉಪಸಭಾಪತಿ :** ಹಾಗಿದ್ದಲ್ಲಿ ನಾನದನ್ನು ಮತಕ್ಕೆ ಇಡುವುದಿಲ್ಲ.

ಗೌರವಾನ್ವಿತ ಸದಸ್ಯರು ಸಭೆಯಲ್ಲಿ ಇಲ್ಲದಿದ್ದಕಾರಣ ಶ್ರೀ ಗೋಕುಲ ಭಾಯಿ ದೌಲತರಾಮ ಭಟ್‌ರವರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೧೦೬೪ಗೆ ತಿದ್ದುಪಡಿಯನ್ನು ಮಂಡಿಸಲಿಲ್ಲ.

ಕೇವಲ ಮೌಖಿಕವಾಗಿರುವ ತಿದ್ದುಪಡಿ ಸಂ. ೧೦೬೫ ಮತ್ತು ೧೦೬೬ ಇವುಗಳನ್ನು ನಾನು ಅನುಮತಿಸುವುದಿಲ್ಲ.

---

* ಸಿ.ಎ.ಡಿ. ಸಂಪುಟ ೭, ೧೦ನೆಯ ಡಿಸೆಂಬರ್, ೧೯೪೮, ಪುಟ ೯೪೪.

**ಶ್ರೀ ಎಸ್.ನಾಗಪ್ಪ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ತಿದ್ದುಪಡಿ ಸಂಖ್ಯೆ ೧೦೬೯ನ್ನು ನಾನು ಮಂಡಿಸುವುದಿಲ್ಲ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿ, ನಾನು ಮಂಡಿಸುತ್ತೇನೆ;

"ವಿಧಿ ೪೩ಕ್ಕೆ ಈ ಮುಂದಿನ ವಿವರಣೆಯನ್ನು ಸೇರಿಸುವುದು :–

"ವಿವರಣೆ – ಇದರ ಮತ್ತು ಇದಾದ ನಂತರ ಬರುವ ವಿಧಿಯಲ್ಲಿ "ರಾಜ್ಯವೊಂದರ ಶಾಸಕಾಂಗ" ಇದು ಅರ್ಥನೀಡುವುದು ಎಲ್ಲಿ ಶಾಸಕಾಂಗ ದ್ವಿಸದನಗಳನ್ನು ಹೊಂದಿದೆಯೋ ಅಲ್ಲಿ ಶಾಸಕಾಂಗದ ಕೆಳಮನೆ ಎಂದು."

ಈ ತಿದ್ದುಪಡಿ ಮಾಡಬೇಕಾದದ್ದು ಅಪೇಕ್ಷಣೀಯವಾಗಿದೆ. ಏಕೆಂದರೆ ಕೆಲರಾಜ್ಯದ ಶಾಸಕಾಂಗಗಳು ಎರಡು ಸದನಗಳನ್ನು ಹೊಂದಿರಬಹುದಾಗಿದೆ. ಹೀಗಾಗಿ ತಿದ್ದುಪಡಿ ಮಾಡದೇ ಹೋದ ಪ್ರಸಂಗದಲ್ಲಿ ಅಧ್ಯಕ್ಷರ ಚುನಾವಣೆಯಲ್ಲಿ ಮೇಲ್ಮನೆಯ ಸದಸ್ಯರುಗಳಿಗೂ ಪಾಲ್ಗೊಳ್ಳುವ ಅವಕಾಶ ಮುಕ್ತವಾಗಿರುತ್ತದೆ. ಅದು ನಮ್ಮ ಆಶಯ ಆಗಿಲ್ಲ. ಅಧ್ಯಕ್ಷರ ಚುನಾವಣೆಯಲ್ಲಿ ಜನರ ನೇರಮತಗಳಿಂದ ಆಯ್ಕೆಗೊಂಡ ಸದಸ್ಯರುಗಳಿಗೆ ಮಾತ್ರ ಆ ಅವಕಾಶವಿರಬೇಕೆಂಬುದು ನಮ್ಮ ಅಪೇಕ್ಷೆ. ಆದುದರಿಂದ ಈ ತಿದ್ದುಪಡಿ.

**ಮಾನ್ಯ ಉಪಾಧ್ಯಕ್ಷ :** ಶ್ರೀ ಮೊಹಮ್ಮದ ತಾಹಿರರವರು ಈ ತಿದ್ದುಪಡಿಗೆ ತಿದ್ದುಪಡಿ ಸಂಖ್ಯೆ ೨೩ನ್ನು ಮಂಡಿಸಬಹುದು.

***********

* **ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿಯವರೆ, ಮಂಡಿಸಲಾಗಿರುವ ತಿದ್ದುಪಡಿಗಳಲ್ಲಿ ನಾನು ಒಪ್ಪಿಕೊಳ್ಳುವುದು ೧೦೬೪ ಒಂದನ್ನು ಮಾತ್ರ. ಮತ್ತು ನಾನು ಉಳಿದ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಆಗದ್ದಕ್ಕೆ ಬಹಳಷ್ಟು ವಿಷಾದಿಸುವೆ.

ಈಗ, ಮಾನ್ಯರೆ, ಈ ವಿಧಿಯ ಮೇಲಿನ ಸಾಮಾನ್ಯ ಚರ್ಚೆಯತ್ತ ಹೊರಳುವುದಾದರೆ, ಅತಿ ಮಹತ್ವದ ತಿದ್ದುಪಡಿ ಎಂದರೆ ಪ್ರೊ. ಕೆ.ಟಿ. ಶಾಹರವರ ತಿದ್ದುಪಡಿಯಾಗಿದೆ. ಅದು ಪ್ರಸ್ತಾಪಿಸುವುದು ಅಧ್ಯಕ್ಷರು ವಯಸ್ಕ ಮತದಾನ ಪದ್ಧತಿಯಿಂದ ನೇರವಾಗಿ, ಚುನಾಯಿತರಾಗಬೇಕು ಎನ್ನುವುದನ್ನು ನನ್ನ ನಿರ್ಣಯದಲ್ಲಿ ಈ ವಿಷಯವು ಮೂರು ದೃಷ್ಟಿಕೋನಗಳಿಂದ ಪರಿಶೀಲಿಸಬೇಕಾದದು. ಎಲ್ಲಕ್ಕೂ ಮುನ್ನ, ಇದನ್ನು ಪರಿಶೀಲಿಸಬೇಕಾದದ್ದು ಮತದಾರರ ಸಮೂಹದ ಆಕಾರದ ದೃಷ್ಟಿಯಿಂದ ಪ್ರೊ. ಕೆ.ಟಿ. ಶಾಹರವರು ಸಲಹೆಯನ್ನು ನಾವು ಒಪ್ಪಿಕೊಂಡದ್ದೇ ಆದರೆ ಅಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸಲಿರುವ ಒಟ್ಟು ಮತದಾರರ ಸಂಖ್ಯೆಯ ಸ್ವಲ್ಪ ಚಿತ್ರವನ್ನು ಸಭೆಗೆ ಕೊಡಬಯಸುತ್ತೇನೆ.

ದೊರಕುವ ಅಂಕಿ – ಸಂಖ್ಯೆಯ ಬಗೆಗೆ ಹೇಳುವುದಾದರೆ, ಗವರ್ನರುಗಳ ಪ್ರಾಂತಗಳ ಮತ್ತು ಕಮಿಷನರುಗಳ ಪ್ರಾಂತಗಳ ಒಟ್ಟು ಜನಸಂಖ್ಯೆ ಸುಮಾರು ೨೨೮, ೧೬೩, ೬೩೭ ಆಗಿದೆ. ರಾಜ್ಯಗಳ ಒಟ್ಟು ಸಂಖ್ಯೆ ೮೮, ೮೦೮, ೪೩೪ ಆಗುವುದು. ಎಲ್ಲವನ್ನು ಒಟ್ಟು ಗೂಡಿಸಿದಲ್ಲಿ ಭಾರತದ ಭೂ ಪ್ರದೇಶದ ಜನಸಂಖ್ಯೆ ೩೧೭ ಮಿಲಿಯನ್‌ಗೆ ತಲುಪುತ್ತದೆ. ವಯಸ್ಕ ಮತದಾರರು ಅಧ್ಯಕ್ಷರ ಚುನಾವಣೆಯಲ್ಲಿ ಪಾಲ್ಗೊಳ್ಳುವರೆಂದಾದರೆ ಅದು ಒಟ್ಟು ಜನಸಂಖ್ಯೆಯ ೫೦ ಪ್ರತಿಶತ ಆಗುವುದು ಮತ್ತು ೫೮೫ ಮಿಲಿಯನ್

---

* ಸಿ.ಎ.ಡಿ. ಸಂಪುಟ ೭, ೧೩ನೆಯ ಡಿಸೆಂಬರ್, ೧೯೪೮, ಪುಟ ೯೯೭–೯೮.

ಸಂಖ್ಯೆ ಆಗಿರುವುದು. ಅಮೆರಿಕೆಯ ಅಧ್ಯಕ್ಷರ ಚುನಾವಣೆಯಲ್ಲಿ ಭಾಗಿಯಾಗುವ ಮತದಾರರ ಸಮೂಹದ ಅಂಕಿ–ಸಂಖ್ಯೆಯನ್ನೂ ನೀಡುವೆ. ನನಗೆ ತಿಳಿದಿರುವಂತೆ ಅಮೆರಿಕೆಯ ಮತದಾರರ ಸಮೂಹದ ಒಟ್ಟು ಮತದಾರರು – ಸರಿಪಡಿಸಬಹುದಾಗಿರುವಂತೆ – ಸುಮಾರು ೭೫ ಮಿಲಿಯನ್‌ಗಳು ನನಗನಿಸುತ್ತದೆ. ಒಂದು ವೇಳೆ ಗೌರವಾನ್ವಿತ ಸದಸ್ಯರುಗಳು ನಾನು ನೀಡಿರುವ ಅಂಕಿ – ಸಂಖ್ಯೆಯನ್ನು ಅಂದರೆ ೧೫೮.೫ ಮಿಲಿಯನ್ ನೆನಪಿನಲ್ಲಿಟ್ಟುಕೊಂಡಲ್ಲಿ ಅಂತಹ ಚುನಾವಣೆ ಯಾವುದರಲ್ಲಿ ೧೫೮,೫ ಮಿಲಿಯನ್ ಜನಸಂಖ್ಯೆ ಪಾಲ್ಗೊಳ್ಳುತ್ತದೆಯೋ, ಆ ಅಸಾಧ್ಯತೆಯನ್ನು ಪರಿಗಣಿಸುವರು. ಮತದಾರರ ಸಮೂಹದ ಗಾತ್ರವು ನನ್ನ ನಿರ್ಣಯದಂತೆ ಅಧ್ಯಕ್ಷರ ಚುನಾವಣೆಯ ವಿಷಯದಲ್ಲಿ ವಯಸ್ಕ ಮತದಾನ ಪದ್ಧತಿ ಅಳವಡಿಸುವುದರಲ್ಲಿ ನಮ್ಮನ್ನು ತಡೆಗಟ್ಟುತ್ತದೆ.

ಈ ಪ್ರಶ್ನೆಗೆ ಸಂಬಂಧಿಸಿದಂತೆ ಎರಡನೆ ಪ್ರಶ್ನೆ ಯಾವುದನ್ನು ನಾವು ಗಮನದಲ್ಲಿಡಬೇಕಾಗುತ್ತದೆಯೋ ಅದೆಂದರೆ ವಯಸ್ಕ ಮತದಾನ ಪದ್ಧತಿಯನ್ನು ನಿರ್ವಹಿಸುವ ಆಡಳಿತ ಯಂತ್ರದ ಬಗೆಗಿನದ್ದು. ೧೫೮.೫ ಮಿಲಿಯನ್‌ನಷ್ಟು ಜನರು ಚುನಾವಣೆಗಳಲ್ಲಿ ಬಂದು ಮತ ಹಾಕಲು ವಿವಿಧ ಮತದಾನ ಕೇಂದ್ರಗಳಲ್ಲಿ ಅಗತ್ಯವಾಗಬಹುದಾದ ಸಿಬ್ಬಂದಿಯನ್ನು ಒದಗಿಸಲು ಈ ದೇಶಕ್ಕೆ ಸಾಧ್ಯವೆ? ನನಗೆ ಖಚಿತವಿದೆ ಚುನಾವಣೆಗೆ ಬಹಳಷ್ಟು ಸಂಖ್ಯೆಯ ಅಭ್ಯರ್ಥಿಗಳು ನಿಲ್ಲಲಿಕ್ಕಿಲ್ಲ, ಅಲ್ಲದೆ ಅವರುಗಳು ಅಧಿಕಾರೇತರ ಏಜನ್ಸಿಗಳನ್ನು ನೇಮಕಗೊಳಿಸಲು ಇಚ್ಛಿಸಲಿಕ್ಕಿಲ್ಲ. ಅದಕ್ಕೆ ಸರಳ ಕಾರಣವೆಂದರೆ ಅಧಿಕಾರೇತರ ಏಜನ್ಸಿಗಳು ರಾಜ್ಯದ ನಿಯಂತ್ರಣದ ವ್ಯಾಪ್ತಿಗೆ ಬರುವುದಿಲ್ಲವಲ್ಲದೆ ಲಂಚಗುಳಿತನ, ಭ್ರಷ್ಟಾಚಾರ, ಕುನಿರ್ವಹಣೆಯಂತಹ ಅನಪೇಕ್ಷಿತ ಪ್ರಭಾವಗಳಿಗೊಳಗಾಗಬಹುದು. ಆದುದರಿಂದ ನಿರ್ವಹಣಾ ಯಂತ್ರವನ್ನು ಸಂಪೂರ್ಣವಾಗಿ ಸರಕಾರದ ಆಡಳಿತ ಯಂತ್ರದಿಂದಲೇ ಒದಗಿಸಬೇಕಾಗುತ್ತದೆ. ಭಾರತ ಸರಕಾರಕ್ಕಾಗಲಿ ಅಥವಾ ರಾಜ್ಯ ಸರಕಾರಗಳಿಗಾಗಲಿ ಯಾವ ಚುನಾವಣೆಯಲ್ಲಿ ೧೫೮.೫ ಮಿಲಿಯನ್‌ಗಳಷ್ಟು ಜನ ಪಾಲ್ಗೊಳ್ಳುವರೋ ಅದಕ್ಕೆ ಅಗತ್ಯ ಸಂಖ್ಯೆಯ ಅಧಿಕಾರಗಳನ್ನು ನಿಯೋಜಿಸಲು ಸಾಧ್ಯವಾಗುವುದೆ? ಅದು ಕೂಡ ನನಗೆ ಅನಿಸುವಂತೆ ಸಂಪೂರ್ಣವಾಗಿ ಅಸಾಧ್ಯವಾದದ್ದು. ಈ ಎರಡು ಪರಿಗಣನೆಗಳಲ್ಲದೆ ವಯಸ್ಕ ಮತದಾನ ಪದ್ಧತಿ ದೂರವಿಡಲು ಕರಡು ಸಮಿತಿ ಅಲ್ಲದೆ ಒಕ್ಕೂಟದ ಸಮಿತಿ ಪರಿಗಣಿಸಿದ ಮತ್ತೊಂದು ಗಣನೆ ಎಂದರೆ ಸಂವಿಧಾನದಲ್ಲಿ ಅಧ್ಯಕ್ಷರ ಸ್ಥಾನಮಾನ. ಒಂದು ವೇಳೆ ಅಧ್ಯಕ್ಷನ ಸ್ಥಾನಮಾನವು ಎಲ್ಲ ಕಾರ್ಯಕಾರಿ ಅಧಿಕಾರಗಳನ್ನು ಒಳಗೊಂಡಿರುವ ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷನಂತಾಗಿದ್ದಿದ್ದಲ್ಲಿ, ನೇರ ಚುನಾವಣೆಯ ಪರವಾಗಿರುವ ವಾದವನ್ನು ನಾನು ಒಪ್ಪಿಕೊಳ್ಳಬಹುದಾಗಿದ್ದಿತು. ಏಕೆಂದರೆ ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷನಿಗೆ ನೀಡಿರುವಂತಹ ಹೆಚ್ಚಿನ ಪ್ರಮಾಣದ ಅಧಿಕಾರಗಳನ್ನು ನೀಡಿದ್ದೇ ಆದಲ್ಲಿ ಅಂತಹ ವ್ಯಕ್ತಿಯ ಆಯ್ಕೆ ಜನರಿಂದ ನೇರವಾಗಿ ಆಗಬೇಕಾದದ್ದು ಸಹಜವೆ. ಆದರೆ ಭಾರತದ ಒಕ್ಕೂಟದಲ್ಲಿ ಅಧ್ಯಕ್ಷನ ಸ್ಥಾನಮಾನವೇನು? ಪ್ರೊ.ಕೆ.ಟಿ. ಶಾಹ ಅವರು ಸಂವಿಧಾನದ ಇಂತಹ ಅವಕಾಶಕಲ್ಪನೆಗಳನ್ನು ಪರೀಕ್ಷಿಸುವರಾದರೆ ಅವರು ಕಾಣುವುದು ಅಧ್ಯಕ್ಷನು ಕೇವಲ ನಾಮ ಮಾತ್ರದ ಮುಖ್ಯಸ್ಥನು ಎಂಬುದನ್ನು. ಆತನು ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷನ ಸರಿಸಮಾನ ಸ್ಥಾನದಲ್ಲಿಲ್ಲ. ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷನೊಂದಿಗೆ ನಮ್ಮ ಸಂವಿಧಾನದಲ್ಲಿಯ ಯಾವುದೇ ಕಾರ್ಯಕಾರಿಯನ್ನು ಹೋಲಿಸುವುದಾದರೆ ಆತನು ಪ್ರಧಾನ ಮಂತ್ರಿಯಾಗಿರುವವನೇ ಹೊರತು ಒಕ್ಕೂಟದ ಅಧ್ಯಕ್ಷನಲ್ಲ. ಪ್ರಧಾನ ಮಂತ್ರಿಗೆ ಸಂಬಂಧಿಸಿರುವಂತೆ, ಸಂವಿಧಾನದಲ್ಲಿ ಒದಗಿಸಿರುವಂತೆ ನಿಸ್ಸಂದೇಹವಾಗಿ ಆತನು ಜನರಿಂದ ವಯಸ್ಕ ಮತದಾನ ಪದ್ಧತಿಯಂತೆ ಚುನಾಯಿತಗೊಳ್ಳಬೇಕು. ಈಗ ನಾನು ಉಲ್ಲೇಖಿಸಿರುವ ಸತ್ಯಾಂಶವನ್ನು ಪರಿಗಣಿಸುತ್ತ, ಅಧ್ಯಕ್ಷನು ನಿಜಕ್ಕೂ ಕಾರ್ಯಗತಗೊಳಿಸಲು ಅಧಿಕಾರ

ಹೊಂದಿದಾತನಾಗಿರದಿದ್ದರಿಂದ, ಆತನು ವಯಸ್ಕ ಮತದಾನದಿಂದ ಚುನಾಯಿತನಾಗಬೇಕೆನ್ನುವುದರ ಪರವಾಗಿರುವ ವಾದ ಉರುಳಿಬೀಳುತ್ತದೆ. ಆದುದರಿಂದ ನಾನು ಪ್ರಸ್ತುತಪಡಿಸುವುದೇನೆಂದರೆ, ಮತದಾರರ ಸಮೂಹದ ಗಾತ್ರ ಪರಿಗಣಿಸಿ, ಅಂತಹ ಬೃಹತ್ ಪ್ರಮಾಣದ ಚುನಾವಣೆಯನ್ನು ವ್ಯವಸ್ಥಾಪನೆಗೊಳಿಸಲು ಅಗತ್ಯ ಆಡಳಿತ ಯಂತ್ರವನ್ನು ಒದಗಿಸಲು ಆಗದೆ ಇದ್ದುದರಿಂದ ಅಲ್ಲದೆ ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷನಿಗೆ ಸಮನಾದ ಕಾರ್ಯಕಾರಿ ಅಥವಾ ಆಡಳಿತ ಅಧಿಕಾರ ಹೊಂದಿರದೆ ಇರುವುದರಿಂದ, ನನ್ನ ಮನವಿ ಎಂದರೆ ಅಧ್ಯಕ್ಷನ ಚುನಾವಣೆಗೆ ವಯಸ್ಕ ಮತದಾನ ಪದ್ಧತಿಯನ್ನು ಒದಗಿಸುವ ಪ್ರಶ್ನೆಗೆ ಹೋಗುವುದು ಅನಗತ್ಯ ಪ್ರಶ್ನೆಯಾಗಿದೆ ಎನ್ನುವುದು.

ನನ್ನ ನಿರ್ಣಯದಂತೆ, ಕರಡು ಸಂವಿಧಾನದಲ್ಲಿಯ ನಮ್ಮ ಪ್ರಸ್ತಾವನೆಗಳು ಕೇಸಿನ ಅಗತ್ಯತೆಗೆ ಸಾಕಾಗುವಷ್ಟಾಗಿವೆ. ಆತನು ರಾಜ್ಯಗಳ ಶಾಸಕಾಂಗದ ಚುನಾಯಿತ ಸದಸ್ಯರುಗಳು ಯಾರು ವಯಸ್ಕ ಮತದಾನ ಪದ್ಧತಿಯಾಧರಿಸಿ ಚುನಾಯಿತರಾಗಿರುವರೋ ಅವರಿಂದ ಚುನಾಯಿತರಾಗಬೇಕೆಂಬುದಕ್ಕೆ ಅವಕಾಶ ಒದಗಿಸಿರುತ್ತೇವೆ. ಆತನು ಪಾರ್ಲಿಮೆಂಟಿನ ಎರಡೂ ಸಭೆಗಳಿಂದಲೂ ಚುನಾಯಿತನಾಗಬೇಕಾಗುತ್ತದೆ. ಪಾರ್ಲಿಮೆಂಟಿನ ಕೆಳಮನೆ ಕೂಡ ವಯಸ್ಕ ಮತದಾನ ಪದ್ಧತಿ ಆಧರಿಸಿ ಜನರಿಂದ ನೇರವಾಗಿ ಆಯ್ಕೆಗೊಂಡದ್ದಾಗಿದೆ. ಮೇಲ್ಮನೆ ರಾಜ್ಯ ಶಾಸಕಾಂಗಗಳ ಕೆಳಮನೆಗಳಿಂದ ಆಯ್ಕೆಗೊಂಡಿರುವುದು ಯಾವುಗಳು ಆಯ್ಕೆಗೊಳ್ಳುವುದು ವಯಸ್ಕ ಮತದಾನ ಪದ್ಧತಿಯಿಂದ. ಆದುದರಿಂದ, ಈ ಅವಕಾಶ ಕಲ್ಪನೆಗಳನ್ನು ಗೌರವಿಸುತ್ತ, ನಾನು ಅಭಿಪ್ರಾಯಪಡುವುದೆಂದರೆ ಪ್ರೊ. ಕೆ.ಟಿ. ಶಾಹರವರ ತಿದ್ದುಪಡಿಗೆ ಇಲ್ಲಿ ಯಾವುದೇ ಸ್ಥಾನ ಇಲ್ಲ ಎನ್ನುವುದು. ಆದುದರಿಂದ ನಾನು ಆ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

**ಮಾನ್ಯ ಉಪಸಭಾಪತಿ :** ಈಗ ನಾನು ತಿದ್ದುಪಡಿಗಳನ್ನು ಒಂದಾದನಂತರ ಒಂದನ್ನು ಮತಕ್ಕೆ ಹಾಕುತ್ತೇನೆ. ............

ಒಟ್ಟಿನಲ್ಲಿ ಐದು ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು. ಕೆಳಕಾಣಿಸಿದ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು:–

"ವಿಧಿ ೪೩ರ ಕಲಮು (ಎ)ನಲ್ಲಿ "ಸದಸ್ಯರುಗಳು" ಈ ಪದಗಳಿಗೆ ಬದಲಾಗಿ "ಚುನಾಯಿತ ಸದಸ್ಯರುಗಳು" ಪದಗಳನ್ನು ಇಡುವುದು."

ಡಾ. ಅಂಬೇಡ್ಕರ್‌ರ ಹೆಸರಿನಲ್ಲಿರುವ ತಿದ್ದುಪಡಿ ಸಂ. ೧೦೭೦.

"ವಿಧಿ ೪೩ಕ್ಕೆ ಈ ಮುಂದಿನ ವಿವರಣೆ ಸೇರಿಸುವುದು :–

"ವಿವರಣೆ – ಇದರಲ್ಲಿ ಮತ್ತು ಮುಂದೆ ಬರುವ ವಿಧಿಯಲ್ಲಿ, 'ರಾಜ್ಯವೊಂದರ ಶಾಸಕಾಂಗ' ಈ ಅಭಿವ್ಯಕ್ತಿ ಅರ್ಥಕೊಡುವುದು, ಎಲ್ಲಿ ಶಾಸಕಾಂಗ ದ್ವಿಸದನ ಪದ್ಧತಿಯದ್ದಾಗಿದೆಯೋ ಅಲ್ಲಿ ಶಾಸಕಾಂಗದ ಕೆಳಮನೆ ಎಂದು."

ತಿದ್ದುಪಡಿಗೊಂಡಂತೆ ವಿಧಿ ೪೩ ಅಂಗೀಕರಿಸಲ್ಪಟ್ಟಿತಲ್ಲದೆ ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

**********

## ವಿಧಿ ೧೫

* **ಮಾನ್ಯ ಉಪಸಭಾಪತಿ :** ಸಭೆಯ ಅನುಮತಿಯೊಂದಿಗೆ, ಉಳಿದುಕೊಂಡಿರುವ ವಿಧಿಗೆ ಹಿಂತಿರುಗಲಿಚ್ಛಿಸುತ್ತೇನೆ: ಅದು ವಿಧಿ ೧೫ ಆಗಿದೆ. ನನ್ನ ಎದುರಿಗೆ ಸಭೆಯ ಕಾರ್ಯಕಲಾಪ ಇವೆ. ಅದರಿಂದ ತಿಳಿದು ಬರುವುದು ಇದನ್ನು ೬ನೇ ಡಿಸೆಂಬರಂದು ಪರಿಗಣಿಸಲಾಯಿತು ಎನ್ನುವುದು. ಅಂದು ಸಾಮಾನ್ಯ ಚರ್ಚೆ ಮುಗಿದಿದ್ದಿತು ಮತ್ತು ನಾನು ಡಾ. ಅಂಬೇಡ್ಕರ್‌ರಿಗೆ ಉತ್ತರಿಸಲು ಕರೆದಿದ್ದೆ. ಆ ಸಮಯದಲ್ಲಿ ಯಾರು ಯಾರು ತಿದ್ದುಪಡಿಗಳನ್ನು ಮಂಡಿಸಿದ್ದರೋ ಅವರುಗಳು ಒಂದು ತಿಳಿವಳಿಕೆಗೆ ಬರಲು ಪ್ರಯತ್ನಗಳನ್ನು ನಡೆಸಲು ಸಲಹೆ ಮಾಡಲಾಗಿದ್ದಿತು. ಈಗಿರುವ ಪರಿಸ್ಥಿತಿ ನನಗೆ ತಿಳಿದಿಲ್ಲ; ಆದರೆ ಇದಕ್ಕಿಂತ ಹೆಚ್ಚು ದಾರಿ ಕಾಯಲು ಆಗುವುದಿಲ್ಲ. ಡಾ. ಅಂಬೇಡ್ಕರ್‌ರವರೆ ಸ್ಥಿತಿ ಏನಿದೆ ಎನ್ನುವುದನ್ನು ಸ್ಪಷ್ಟಪಡಿಸುವಿರಾ. ಯಾವುದೇ ಒಂದು ತಿಳಿವಳಿಕೆಗೆ ಬಂದಿಲ್ಲವೆಂದಾದರೆ, ನೀವು ಉತ್ತರಿಸಲು ಕೇಳಿಕೊಳ್ಳುತ್ತೇನೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಉಪಾಧ್ಯಕ್ಷರೆ, ವಿಧಿ ೧೫ರ ಬಗೆಗೆ ಮತ್ತು ನನ್ನ ಮಿತ್ರ ಪಂಡಿತ ಭಾರ್ಗವ ಅವರು "ಕಾನೂನಿನ ಪ್ರಕಾರ ಕ್ರಮ" ಈ ಪದಗಳನ್ನು ತೆಗೆದು ಹಾಕಲು ಮತ್ತು ಆ ಸ್ಥಳದಲ್ಲಿ "ಯಥೋಚಿತ ಪ್ರಕ್ರಿಯೆ" ಈ ಪದಗಳನ್ನು ಸೇರಿಸಲು ಮಂಡಿಸಿರುವ ತಿದ್ದುಪಡಿಯ ಬಗೆಗೆ ನಾನು ಕಠಿಣ ಸ್ಥಿತಿಯಲ್ಲಿರುವೆನೆಂದು ಒಪ್ಪಿಕೊಳ್ಳುತ್ತೇನೆ.

ಯಾರು ಈ ಹಿಂದೆ ನಡೆದ ಚರ್ಚೆಯನ್ನು ಆಲಿಸಿರುವರೋ ಅವರಿಗೆ ಎರಡು ತೀಕ್ಷ್ಣ ಅಭಿಪ್ರಾಯಗಳಿವೆ ಎನ್ನುವುದು ಸ್ಪಷ್ಟವಾಗುತ್ತದೆ. ಒಂದು ದೃಷ್ಟಿಕೋನ ಹೇಳುವುದೇನೆಂದರೆ ಈ ವಿಧಿಯಲ್ಲಿ "ಕಾನೂನಿನ ಯಥೋಚಿತ ಪ್ರಕ್ರಿಯೆ" ಇರಬೇಕು, ಇಲ್ಲದಿದ್ದ ಪಕ್ಷದಲ್ಲಿ ವಿಧಿಯು ಅರ್ಥಹೀನವಾಗುತ್ತದೆ ಎನ್ನುವುದು. ಮತ್ತೊಂದು ವಿಚಾರ ದೃಷ್ಟಿಯೆಂದರೆ ಪ್ರಸಕ್ತ ಇರುವ ಪದಗಳ ಬಳಕೆ ಉದ್ದೇಶಕ್ಕಾಗಿ ಸಾಕಷ್ಟು ಸೂಕ್ತವಾಗಿದೆ ಎನ್ನುವುದು. "ಯಥೋಚಿತ ಪ್ರಕ್ರಿಯೆ" ಏನನ್ನು ನಿಖರವಾಗಿ ಒಳಗೊಂಡಿರುತ್ತದೆ ಎನ್ನುವುದನ್ನು ವಿವರಿಸಲು ನನಗೆ ಬಿಡಿ.

ನನ್ನ ನಿರ್ಣಯದಂತೆ "ಯಥೋಚಿತ ಪ್ರಕ್ರಿಯೆ" ಪ್ರಶ್ನೆಯು ಶಾಸಕಾಂಗ ಮತ್ತು ನ್ಯಾಯಾಂಗ ಇವುಗಳ ನಡುವಣ ಸಂಬಂಧಗಳ ಪ್ರಶ್ನೆಯನ್ನು ಎತ್ತುತ್ತದೆ. ಸಂಯುಕ್ತ ಸಂವಿಧಾನವೊಂದರಲ್ಲಿ ಶಾಸಕಾಂಗದಿಂದ ಪಾಸುಮಾಡಲಾದ ಯಾವೊಂದು ಪ್ರತ್ಯೇಕ ಕಾನೂನು ಅದಕ್ಕೆ ಸಂವಿಧಾನ ನೀಡಿರುವ ಅಧಿಕಾರದ ಹಿನ್ನೆಲೆಯಲ್ಲಿ ಆ ಕಾನೂನು ಅಧಿಕಾರಾತೀತವಾದದ್ದೇ ಅಥವಾ ವಿಧಿವತ್ತಾಗಿ ಅಧಿಕಾರಕ್ಕೊಳಪಟ್ಟಿದೆಯೇ ಎನ್ನುವುದನ್ನು ನಿರ್ಣಯಿಸುವ ಅಧಿಕಾರ ನ್ಯಾಯಾಂಗಕ್ಕಿರುತ್ತದೆ. ಯಾವುದೇ ಶಾಸಕಾಂಗದಿಂದ ಮಾಡಲ್ಪಟ್ಟ ಕಾನೂನು, ಅದಕ್ಕೆ ನೀಡಲಾಗಿರುವ ಸಂವಿಧಾನದಿಂದ ಅಧಿಕಾರದ ಸೀಮೆಯನ್ನು ಮೀರಿದಲ್ಲಿ ಅಂತಹ ಕಾನೂನು ಅಧಿಕಾರಾತೀತ ಮತ್ತು ಅಮಾನ್ಯವಾಗುತ್ತದೆ. ಎಲ್ಲ ಸಂಯುಕ್ತ ಸಂವಿಧಾನಗಳಲ್ಲಿ ಹಾಗೆ ಆಗುವುದು ಸರ್ವೇಸಾಮಾನ್ಯ. ಸಂಯುಕ್ತ ಸಂವಿಧಾನದಲ್ಲಿ ಪ್ರತಿಯೊಂದು ಕಾನೂನು, ಅದು ಕೇಂದ್ರದಲ್ಲಿ ಪಾರ್ಲಿಮೆಂಟಿನಿಂದ ಮಾಡಿದ್ದಾಗಿರಬಹುದು ಅಥವಾ ರಾಜ್ಯದ ಶಾಸಕಾಂಗದಿಂದ ರಚಿತಗೊಂಡಿದ್ದಾಗಿರಬಹುದು. ಯಾವಾಗಲು ಶಾಸಕಾಂಗದ ಕಾನೂನು ಮಾಡುವ ಅಧಿಕಾರ ವ್ಯಾಪ್ತಿಯ ದೃಷ್ಟಿಯಿಂದ ನ್ಯಾಯಾಂಗದಿಂದ ಪರಿವೀಕ್ಷಣೆಗೆ ಅಧೀನವಾದದ್ದಾಗಿರುತ್ತದೆ. ನನ್ನ ನಿರ್ಣಯದಲ್ಲಿ "ಯಥೋಚಿತ ಪ್ರಕ್ರಿಯೆ" ಕಲಮು ಮತ್ತೊಂದು ಆಧಾರದ

---

* ಸಿ.ಎ.ಡಿ. ಸಂಪುಟ ೭, ೧೩ನೆಯ ಡಿಸೆಂಬರ್, ೧೯೪೮, ಪುಟ ೯೯೯–೧೦೦೧

ಮೇಲೆ ನ್ಯಾಯಾಂಗಕ್ಕೆ ಶಾಸಕಾಂಗದಿಂದ ಮಾಡಲ್ಪಟ್ಟಿರುವ ಕಾನೂನನ್ನು ಪ್ರಶ್ನಿಸುವ ಅಧಿಕಾರ ಒದಗಿಸುತ್ತದೆ. ಆ ಆಧಾರವು ವ್ಯಕ್ತಿಗಳ ಹಕ್ಕುಗಳಿಗೆ ಸಂಬಂಧಿಸಿದಂತೆ, ಆ ಕಾನೂನು ಕೆಲ ಮೂಲಭೂತ ತತ್ವಗಳಿಗೆ ಕಾಪಾಡುವುದೇ ಎನ್ನುವುದಾಗಿದೆ. ಬೇರೆ ಪದಗಳಲ್ಲಿ ಹೇಳುವುದಾದರೆ, ನ್ಯಾಯಾಂಗವು ಶಾಸಕಾಂಗವನ್ನು ಪ್ರಶ್ನಿಸುವ ಅಧಿಕಾರ ಹೊಂದಿರುವುದು ಶಾಸಕಾಂಗ ತನ್ನ ಅಧಿಕಾರದ ಮಿತಿಯನ್ನು ಮೀರಿ ಹೋಗಿದೆಯೆ ಎನ್ನುವುದನ್ನು ಆಧರಿಸಿದುದಷ್ಟೇ ಅಲ್ಲ, ಆದರೆ ಶಾಸಕಾಂಗದ ಕಾನೂನು ಮಾಡುವ ಅಧಿಕಾರದ ಪ್ರಶ್ನೆಗೆ ಮೀರಿ ಆ ಕಾನೂನು ಒಳ್ಳೆಯದೆ ಎನ್ನುವುದನ್ನು ನೋಡುವುದಾಗಿದೆ. ಕಾನೂನು ಪರಿಪೂರ್ಣವಾಗಿ ಒಳ್ಳೆಯದಾಗಿರಬಹುದು ಅಲ್ಲದೆ ಶಾಸಕಾಂಗದ ಅಧಿಕಾರಕ್ಕೆ ಸಂಬಂಧಿಸಿದಂತೆ ಮಾನ್ಯವೂ ಆಗಿರಬಹುದು. ಆದರೆ, ಅದೊಂದು ಒಳ್ಳೆಯ ಕಾನೂನು ಆಗಿರಲಿಕ್ಕಿಲ್ಲ. ಹಾಗೆಂದರೆ, ಅದು ಕೆಲ ಮೂಲಭೂತ ತತ್ವಗಳನ್ನು ಉಲ್ಲಂಘಿಸುವುದಾಗಿರುವುದು ಮತ್ತು ನ್ಯಾಯಾಂಗವು ಅಂತಹ ಕಾನೂನನ್ನು ಅಮಾನ್ಯವೆಂದು ಘೋಷಿಸುವ ಹೆಚ್ಚುವರಿ ಅಧಿಕಾರ ಹೊಂದಿರುವುದು. ಈ ವಿಷಯವನ್ನು ಪರಿಗಣಿಸುವಾಗ ಏಳುವ ಪ್ರಶ್ನೆ ಎಂದರೆ ನ್ಯಾಯಾಂಗಕ್ಕೆ ನಾವು ನೀಡಿರುವ ಅಧಿಕಾರದ ಆಧಾರ ವಿವಿಧ ಶಾಸನ ಸಭೆಗಳಿಂದ ಮಾಡಲಾದ ಕಾನೂನುಗಳು ಅದಕ್ಕೆ ನೀಡಲಾಗಿರುವ ಅಧಿಕಾರಗಳಿಗನುಗುಣವಾಗಿದೆಯೇ ಎನ್ನುವುದನ್ನು ಪರೀಕ್ಷಿಸುವುದು. ಈಗ **"ಯಥೋಚಿತ ಪ್ರಕ್ರಿಯೆ"** ಈ ವಾಕ್ಯಾಂಶ ಸೇರಿಸುವುದರಿಂದ ಉದ್ಭವಿಸಿರುವ ಪ್ರಶ್ನೆ, ಅದು ಕೆಲ ಮೂಲಭೂತ ತತ್ವಗಳನ್ನು ಉಲ್ಲಂಘಿಸುತ್ತದೆ ಎನ್ನುವ ಆಧಾರದ ಮೇಲೆ ರಾಜ್ಯದಿಂದ ಮಾಡಲ್ಪಟ್ಟ ಕಾನೂನುಗಳಿಗೆ ಪ್ರಶ್ನಿಸುವ ಅಧಿಕಾರ ನ್ಯಾಯಾಂಗಕ್ಕೆ ನೀಡಬೇಕೆ ಹೇಗೆ ಎನ್ನುವುದಾಗಿದೆ.

ಈ ಅಂಶದ ಬಗೆಗೆ ಎರಡು ದೃಷ್ಟಿಕೋನಗಳಿವೆ. ಒಂದು ದೃಷ್ಟಿಕೋನ ಇರುವುದು ಹೀಗೆ: ಮಾನವನ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ಯಾವುದೇ ಕಾನೂನನ್ನು ಶಾಸಕಾಂಗ ಮಾಡುವುದಿಲ್ಲ ಎನ್ನುವ ವಿಶ್ವಾಸ ತಳೆಯುವುದು. ಹೇಳುವದಾದರೆ, ಮೂಲಭೂತ ಹಕ್ಕುಗಳು ಯಾವುವು ಪ್ರತಿ ವ್ಯಕ್ತಿಗೆ ಅನ್ವಯಿಸುವುವು, ಮತ್ತು ತತ್ಪರಿಣಾಮವಾಗಿ, ವಾಕ್ಯಾಂಶ 'ಯಥೋಚಿತ ಪ್ರಕ್ರಿಯೆ'ಯ ಸೇರಿಸುವಿಕೆಯಿಂದ ಯಾವುದೇ ಅಪಾಯ ಇರುವುದಿಲ್ಲ. ಮತ್ತೊಂದು ಅಭಿಪ್ರಾಯ ಹೀಗಿದೆ: ಶಾಸಕಾಂಗದ ಮೇಲೆ ಭರವಸೆ ಇಡಲು ಸಾಧ್ಯವಿಲ್ಲ: ಅದು ತಪ್ಪು ಎಸಗುವ ಸಾಧ್ಯತೆ ಉಂಟು, ಅದು ಭಾವಾವೇಷದಿಂದ ನಡೆದುಕೊಳ್ಳುವುದು ಸಾಧ್ಯ – ಅದು ಸ್ವಲ್ಪ ಪೂರ್ವಾಗ್ರಹದಿಂದ ಆಗಿರಬಹುದು ಇಲ್ಲವೆ ಪಕ್ಷದ ಪರಿಗಣನೆಯಿಂದಾಗಿರಬಹುದು. ಹೀಗೆ ಅದು ಯಾವ ಮೂಲಭೂತ ತತ್ವಗಳು ಪೌರರ ವ್ಯಕ್ತಿಗಳ ಹಕ್ಕುಗಳನ್ನು ರಕ್ಷಿಸುವುವೊ ಶಾಸಕಾಂಗ ಅವುಗಳನ್ನು ಕಾನೂನು ಮಾಡಿ ಕುಂಠಿತಗೊಳಿಸಬಹುದಾಗಿದೆ. ಆದುದರಿಂದ ನಾವು ಎರಡು ಕಠಿಣ ಸ್ಥಿತಿಗಳಲ್ಲಿ ಸಿಲುಕಿಕೊಂಡಿದ್ದೇವೆ. ಒಂದು ಮೂಲಭೂತ ತತ್ವಗಳ ಸಂಗತದಿಂದ ಶಾಸಕಾಂಗದಿಂದ ಮಾಡಲ್ಪಟ್ಟ ಕಾನೂನು. ಅದೊಂದು ಉತ್ತಮ ಕಾನೂನು ಆಗಿಲ್ಲವೆಂದು ಪ್ರಶ್ನಿಸಿ ಶಾಸಕಾಂಗದ ಇಚ್ಛೆಯ ಮೇಲೆ ನಿರ್ಣಾಯಕವಾಗಿ ಕೊಡುವ ಅಧಿಕಾರವನ್ನು ನ್ಯಾಯಾಂಗಕ್ಕೆ ನೀಡುವುದಾಗಿದೆ. ಅದೊಂದು ಅಪೇಕ್ಷಣೀಯ ತತ್ವವೆ? ಎರಡನೆ ಸ್ಥಿತಿ ಶಾಸಕಾಂಗ ಅನುಚಿತ ಕಾನೂನುಗಳನ್ನು ಮಾಡುವುದಿಲ್ಲ ಎನ್ನುವ ಅದರ ಮೇಲೆ ವಿಶ್ವಾಸ ತಳೆಯುವುದಾಗಿದೆ. ಯಾವುದೇ ಖಚಿತ ನಿರ್ಣಯಕ್ಕೆ ಬರುವುದೂ ಕಷ್ಟಕರ. ಎರಡೂ ಕಡೆಗಳಲ್ಲಿ ಅಪಾಯಗಳಿವೆ. ನನ್ನ ಪರವಾಗಿ ನಾನು ಪಕ್ಷದ ಜನರನ್ನೊಳಗೊಂಡ ಶಾಸಕಾಂಗ ವ್ಯಕ್ತಿಯ ಜೀವ ಹಾಗೂ ಸ್ವಾತಂತ್ರ್ಯಕ್ಕೆ ಧಕ್ಕೆತರುವ ಕೆಲ ಮೂಲಭೂತ ತತ್ವಗಳನ್ನು ಉಲ್ಲಂಘಿಸಿ, ಹಕ್ಕುಗಳನ್ನು ಮೊಟಕುಗೊಳಿಸುವ ಕಾನೂನುಗಳನ್ನು ಮಾಡುವ ಶಾಸಕಾಂಗದ ಸಾಧ್ಯತೆಯನ್ನು ಸಂಪೂರ್ಣವಾಗಿ ಅಲ್ಲಗಳೆಯಲಾರೆ. ಅದೇ ಕಾಲದಲ್ಲಿ ಶಾಸಕಾಂಗ ಮಾಡಿರುವ ಕಾನೂನುಗಳನ್ನು ಪರೀಕ್ಷಿಸಲು ಫೆಡರಲ್

ಅಥವಾ ಸುಪ್ರೀಂ ಕೋರ್ಟಿನಲ್ಲಿ ಕುಳಿತಿರುವ ಐದು ಅಥವಾ ಆರು ನ್ಯಾಯತಜ್ಞ ಸಭ್ಯರು ಯಾವ ಕಾನೂನು ಒಳ್ಳೆಯದು, ಯಾವ ಕಾನೂನು ಒಳ್ಳೆಯದಲ್ಲ ಇದನ್ನು ನಿರ್ಣಯಿಸುವಲ್ಲಿ ತಮ್ಮದೇ ವೈಯಕ್ತಿಕ ಆತ್ಮಸಾಕ್ಷಿಯಿಂದ ಅಥವಾ ಅವರ ಪಕ್ಷಪಾತ ಅಥವಾ ಅವರುಗಳು ಪೂರ್ವಾಗ್ರಹ ಹೊಂದಿರುವುದಿಲ್ಲ ಎನ್ನುವ ಬಗೆಗೂ ನನ್ನ ಅನುಮಾನ. ಇದೊಂದು ವ್ಯಕ್ತಿಯೋರ್ವನು ಚಾರ್ಬಿಡಿಸ್ ಮತ್ತು ಸ್ಕೆಲ್ಲಾಗಳ ಮಧ್ಯ ತೇಲಿ ಹಾಯ್ದು ಹೋಗುವಂತಹ ಪ್ರಕರಣವಾಗಿದೆಯಾದ್ದರಿಂದ ನಾನು ಏನನ್ನೂ ಹೇಳಲಾರೆ. ಇದನ್ನು ತನಗೆ ಹೇಗೆ ಬೇಕೋ ಹಾಗೆ ನಿರ್ಣಯಿಸಲು ಸಭೆಗೇ ಬಿಡುತ್ತೇನೆ.

**ಉಪಸಭಾಪತಿ :** ಈಗ ನಾನು ತಿದ್ದುಪಡಿಗಳನ್ನು ಒಂದಾದ ನಂತರ ಒಂದು ಮತಕ್ಕೆ ಹಾಕುವೆ.

(ಒಟ್ಟಿನಲ್ಲಿ ಐದು ತಿದ್ದುಪಡಿಗಳು ತಿರಸ್ಕೃತಗೊಂಡವು ಮತ್ತು ಒಂದು ಹಿಂತೆಗೆದುಕೊಳ್ಳಲ್ಪಟ್ಟಿತು. ಯಾವ ತಿದ್ದುಪಡಿಯು ಒಪ್ಪಿಗೆ ಪಡೆಯಲಿಲ್ಲ. ವಿಧಿ ೧೫ ಅಂಗೀಕೃತಗೊಂಡಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.)

*********

## ವಿಧಿ ೪೪

* **ಮಾನ್ಯ ಉಪಸಭಾಪತಿ :** ನಾವೀಗ ವಿಧಿ ೪೪ನ್ನು ತೆಗೆದುಕೊಳ್ಳೋಣ.

ಮಂಡನೆ ಇರುವುದು : ವಿಧಿ ೪೪ ಸಂವಿಧಾನದ ಭಾಗವಾಗುವುದು. ನಾನು ತಿದ್ದುಪಡಿಯನ್ನು ಒಂದಾದ ನಂತರ ಒಂದನ್ನು ತೆಗೆದುಕೊಳ್ಳುತ್ತೇನೆ.

ತಿದ್ದುಪಡಿ ಸಂಖ್ಯೆ ೧೦೭೫ : ಡಾ. ಅಂಬೇಡ್ಕರ್

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ ನಾನು ಮಂಡಿಸುತ್ತೇನೆ "ವಿಧಿ ೪೪ರ ಕಲಮು (೨)ರ ಉಪಕಲಮು(ಸಿ)ಯಲ್ಲಿ :"ಅಂತಹ ಸದಸ್ಯ" ಈ ಪದಗಳಿಗೆ ಬದಲಿಗೆ "ಪಾರ್ಲಿಮೆಂಟಿನ ಎರಡೂ ಸದನಗಳ ಚುನಾಯಿತ ಸದಸ್ಯರುಗಳು" ಈ ಪದಗಳನ್ನು ಸೇರಿಸುವುದು."

ಈ ತಿದ್ದುಪಡಿಗೆ ಕಾರಣಗಳನ್ನು ಕೊಡಲು ಹೋಗುವ ಮುನ್ನ ತಮ್ಮ ಅನುಮತಿಯೊಂದಿಗೆ ನಾನು ಒಂದು ಕ್ಷಣಕಾಲ ಈ ವಿಧಿಯ ಕಲಮು (೨)ಕ್ಕೆ ಹಿಂತಿರುಗಬಯಸುತ್ತೇನೆ ಮತ್ತು ಆ ಕಲಮಿನ ಉಪಕಲಮುಗಳಾದ (ಎ) ಮತ್ತು (ಬಿ)ಗಳಲ್ಲಿ ಹೇಳಲಾಗಿರುವ ಯೋಜನೆಯನ್ನು ವಿವರಿಸಬಯಸುತ್ತೇನೆ. ಗೌರವಾನ್ವಿತ ಸದಸ್ಯರುಗಳು ಕಾಣುವಂತೆ ಅಧ್ಯಕ್ಷನನ್ನು ಆರಿಸಬೇಕಾದದ್ದು ಪ್ರತಿ ರಾಜ್ಯದ ಶಾಸಕಾಂಗದ ಕೆಳಮನೆಯ ಚುನಾಯಿತ ಸದಸ್ಯರುಗಳು ಮತ್ತು ಪಾರ್ಲಿಮೆಂಟಿನ ಎರಡೂ ಸಭೆಗಳ ಚುನಾಯಿತ ಸದಸ್ಯರುಗಳು. ಎರಡೂ ಘಟಕಗಳು ಸೇರಿ ಆಗುವುದು ಒಂದೇ ಚುನಾಯಿತ ಕಾಲೇಜು. ವಿಧಿ ೪೪ರ ಉಪಕಲಮು (೧) ಹೇಳುವುದು ಸಾಧ್ಯವಾದಷ್ಟು ವ್ಯವಹಾರದ ಮಟ್ಟಿಗೆ ಅಧ್ಯಕ್ಷರ ಚುನಾವಣೆಯಲ್ಲಿ ವಿವಿಧ ರಾಜ್ಯಗಳ ನಡುವೆ ಏಕರೂಪತೆ ಇರತಕ್ಕದು. ಇದನ್ನು ಚುನಾಯಿತ ಕಾಲೇಜಿನ ಪ್ರತಿ ಸದಸ್ಯನಿಗೆ ಸರಳ ವಿಧಾನದಿಂದ ಪ್ರತಿ ಸದಸ್ಯನಿಗೆ ಒಂದು ಮತ ನೀಡುವುದರ ಮೂಲಕ ಸಾಧ್ಯವಾಗಬೇಕಾಗಿತ್ತು. ಆದರೆ ವಿವಿಧ ರಾಜ್ಯಗಳ ಶಾಸಕಾಂಗದ ಸದಸ್ಯರುಗಳ ನಡುವೆ ಮತ್ತು ಜನಸಂಖ್ಯೆಯ ಪ್ರಮಾಣದ ನಡುವೆ

---

* ಸಿ.ಎ.ಡಿ. ಸಂಪುಟ ೭, ೧೯ನೆಯ ನವೆಂಬರ್, ೧೯೪೮, ಪುಟ ೪೭೭-೭೮

ಅಂತರವಿರುವುದರಿಂದ ಸಾಧ್ಯವಾಗುವುದಿಲ್ಲ. ವಿಧಿ ೧೪೯ (೩)ರ ಭಾಗ ೧ರ ಪ್ರಥಮ ಪರಿಶಿಷ್ಟವು ರಾಜ್ಯಗಳಿಗೆ ಸಂಬಂಧಿಸಿದಂತೆ ಪ್ರತಿನಿಧಿತ್ವದ ಪ್ರಮಾಣ – ಒಂದು ಲಕ್ಷ ಜನಸಂಖ್ಯೆಗೆ ಓರ್ವ ಪ್ರತಿನಿಧಿಯಂತೆ ನಿಗದಿಪಡಿಸುತ್ತದೆ. ಈ ಪ್ರಮಾಣ ಭಾಗ IIIರಲ್ಲಿಯ ರಾಜ್ಯಗಳಿಗೆ ನಿಗದಿಯಾಗಿಲ್ಲ. ರಾಜ್ಯದಿಂದ ರಾಜ್ಯಕ್ಕೆ ಈ ಪ್ರಮಾಣವು ಭಿನ್ನವಾಗಿರಬಹುದು. ಒಂದು ರಾಜ್ಯದಲ್ಲಿ, ಅದು ೧೦,೦೦೦ ಜನಸಂಖ್ಯೆಗೆ ಓರ್ವ ಪ್ರತಿನಿಧಿಯಾಗಿರಬಹುದು. ಮತ್ತೊಂದು ರಾಜ್ಯದಲ್ಲಿ ಪ್ರತಿ ೨೦,೦೦೦ ಕ್ಕೆ ಓರ್ವ ಪ್ರತಿನಿಧಿಯಾಗಿರಬಹುದು. ಪರಿಸ್ಥಿತಿ ಹಾಗಿರುವಾಗ, ಅಧ್ಯಕ್ಷನ ಚುನಾವಣೆಯಲ್ಲಿ ರಾಜ್ಯ ಶಾಸಕಾಂಗದ ಸದಸ್ಯರುಗಳು ನೀಡಿದ ಮತದಾನದ ಮೌಲ್ಯವನ್ನು ಓರ್ವನಿಗೆ ಒಂದು ಮತದ ಸರಳ ನಿಯಮದ ಮೂಲಕ ಅಳೆಯಲಾಗುವುದಿಲ್ಲ. ಆದುದರಿಂದ ಒಂದೇ ಚುನಾಯಿತ ಘಟಕವನ್ನು ಪ್ರತಿನಿಧಿಸದ ಸದಸ್ಯರುಗಳಿಂದ ಚಲಾಯಿಸಲಾದ ಮತಗಳ ಮೌಲ್ಯದಲ್ಲಿ ಏಕರೂಪತೆಯನ್ನು ಹೇಗೆ ಸಾಧಿಸಬೇಕು ಎನ್ನುವುದು ಸಮಸ್ಯೆಯಾಗಿದೆ. ರಾಜ್ಯ ಶಾಸಕಾಂಗದ ಸದಸ್ಯನು ಚಲಾಯಿಸಿದ ಮತದ ಮೌಲ್ಯವನ್ನು ಗುರುತಿಸಲು ಅಳವಡಿಸಲಾಗಿರುವ ತತ್ವವು ರಾಜ್ಯದ ಜನಸಂಖ್ಯೆಯನ್ನು ಆ ರಾಜ್ಯದ ಶಾಸಕಾಂಗದ ಚುನಾಯಿತ ಸದಸ್ಯರುಗಳ ಸಂಖ್ಯೆಯಿಂದ ಭಾಗಿಸುವುದಾಗಿದೆ; ಮತ್ತೆ ಪಡೆದ ಆ ಭಾಗಾಂಶವನ್ನು ೧೦೦೦ದಿಂದ ಭಾಗಿಸಿ ಶೇಷವು ೫೦೦ಕ್ಕಿಂತ ಹೆಚ್ಚು ಉಳಿದಲ್ಲಿ ಭಾಗಲಬ್ಧಕ್ಕೆ ಒಂದು ಸೇರಿಸುವುದು. ಕಲಮು (೨)ರ ಉಪ ಕಲಮು (ಬಿ) ಮತ್ತು (ಸಿ)ಗಳಲ್ಲಿ ಇದನ್ನು ಹೇಳಲಾಗಿದೆ.

ಈಗ ನಾನು ಮಂಡಿಸಿರುವ ಉಪಕಲಮು (ಸಿ)ಯ ತಿದ್ದುಪಡಿಯತ್ತ ಬರುತ್ತೇನೆ. ಪಾರ್ಲಿಮೆಂಟಿನ ಸದಸ್ಯರುಗಳಿಂದ ಚಲಾಯಿಸಲಾಗಿರುವ ಮತದಾನಗಳಿಗೆ ಸಂಬಂಧಿಸಿದಂತೆ, ನಮ್ಮ ಎದುರಿಗೆ ಬರುವುದು ಮತ್ತೆ ಅದೇ ಸಮಸ್ಯೆ. ಹೆಸರಿಸುವುದಾದರೆ ಚುನಾಯತ ಘಟಕಗಳ ನಡುವಣ ಅಂತರ ಮತ್ತು ತತ್ಪರಿಣಾಮದ ಅವರುಗಳಿಂದ ಚಲಾಯಿತ ಮತಗಳ ಮೌಲ್ಯಗಳ ನಡುವಣ ಅಂತರ. ಈ ಅಂತರ ಉಂಟಾಗುವುದು ಕೂಡ ಅದೇ ಕಾರಣಗಳಿಂದ. ಮೊದಲನೆಯದಾಗಿ, ರಾಜ್ಯ ಶಾಸಕಾಂಗಗಳಿಂದ ಚುನಾಯಿತ ರಾಜ್ಯ ಸಭೆಗೆ ಸಂಬಂಧಿಸಿದಂತೆ ಭಾಗ I ಮತ್ತು ಭಾಗ IIIರಲ್ಲಿ ರಾಜ್ಯಗಳ ನಡುವಣ ಅಂತರವೇ ಇಲ್ಲೂ ವ್ಯಕ್ತಗೊಳ್ಳುತ್ತದೆ. ಎರಡನೆ ಸ್ಥಾನದಲ್ಲಿ, ಭಾಗ I ಮತ್ತು ಭಾಗ IIIರಲ್ಲಿ ರಾಜ್ಯಗಳ ಜನಸಂಖ್ಯೆ ಸೀಟುಗಳ ನಡುವಣ ಪ್ರಮಾಣದ ಅಂತರದಂತೆ ಪಾರ್ಲಿಮೆಂಟಿನ ಸದಸ್ಯರುಗಳ ಚುನಾವಣೆಯ ನಡುವೆಯೂ ಅದೇ ತರಹದ ಅಂತರವಿದೆ.

ಪಾರ್ಲಿಮೆಂಟಿನ ಸದಸ್ಯರುಗಳಿಂದ ಮತದಾನದಲ್ಲಿ ಏಕರೂಪತೆ ಸಾಧಿಸಲು ಎರಡು ದಾರಿಗಳಿವೆ. ಒಂದು ದಾರಿ ಎಂದರೆ ಎಲ್ಲ ರಾಜ್ಯಗಳ ಶಾಸಕಾಂಗಗಳ ಶಕ್ತ ಮತಗಳನ್ನು ಶಾಸಕಾಂಗದ ಒಟ್ಟು ಸದಸ್ಯರುಗಳ ಸಂಖ್ಯೆಯಿಂದ ಭಾಗಿಸುವುದು, ಬರುವ ಭಾಗಲಬ್ಧವು ಪ್ರತಿಯೊಬ್ಬ ಸದಸ್ಯನ ಮತ ಮೌಲ್ಯವಾಗಿರುತ್ತದೆ. ಮತ್ತೊಂದು ದಾರಿ ಎಂದರೆ ಎಲ್ಲ ರಾಜ್ಯಗಳ ಶಾಸಕಾಂಗದ ಸದಸ್ಯರುಗಳು ಹಾಕಬಹುದಾದ ಮತಗಳನ್ನು ಪಾರ್ಲಿಮೆಂಟಿನ ಎರಡೂ ಸದನಗಳ ಒಟ್ಟು ಚುನಾಯಿತ ಸದಸ್ಯರುಗಳ ಸಂಖ್ಯೆಯಿಂದ ಭಾಗಿಸುವುದು. ಮೊದಲನೆ ವಿಧಾನವನ್ನು ಈಗಿರುವಂತೆ ಉಪಕಲಮು (ಸಿ)ನಲ್ಲಿ ತಿಳಿಸಲಾಗಿದೆ. ಎರಡನೆ ವಿಧಾನವು ನಾನು ಉಪಕಲಮು (ಸಿ)ಗೆ ಮಂಡಿಸಿರುವ ತಿದ್ದುಪಡಿ ಒಳಗೊಂಡಿದೆ. ಎರಡು ವಿಧಾನಗಳ ನಡುವಣ ಅಂತರ ಇದರಲ್ಲಿ ಅಡಗಿದೆ. ಮೊದಲನೆ ವಿಧಾನದಲ್ಲಿ ಅಧ್ಯಕ್ಷನ ಚುನಾವಣೆಯಲ್ಲಿ ಪಾಲ್ಗೊಳ್ಳುವ ಎಲ್ಲ ಮತದಾರರ ಕಾಲೇಜಿನ ಸದಸ್ಯರುಗಳನ್ನು ಮತಗಳ ಮೌಲ್ಯಗಣನೆಯ ದೃಷ್ಟಿಯಿಂದ ಎಲ್ಲರನ್ನು ಸಮಾನವಾಗಿ ಪರಿಗಣಿಸಲಾಗುವುದು.

ಎರಡನೆ ವಿಧಾನಕ್ಕನುಗುಣವಾಗಿ ಪಾರ್ಲಿಮೆಂಟಿನ ಸದಸ್ಯರುಗಳಿಗೆ ಮತದಾನದ ವಿಷಯದಲ್ಲಿ ರಾಜ್ಯದ ಶಾಸಕಾಂಗದ ಸದಸ್ಯರುಗಳಿಗಿರುವಂತೆ ಸಮನಾದ ಸಂಖ್ಯೆ ನೀಡಲಾಗುವುದು. ಈಗ ಉಪಕಲಮು

(ಸಿ)ನಲ್ಲಿರುವುದಕ್ಕಿಂತ ಪಾರ್ಲಿಮೆಂಟಿನ ಸದಸ್ಯರುಗಳಿಗೆ ಉತ್ತಮ ಧ್ವನಿ ಇರಬೇಕೆಂದೆನಿಸಿದೆ. ಆದುದರಿಂದ ಈ ತಿದ್ದುಪಡಿ.

**********

## ವಿಧಿ ೪೪ (ಮುಂದುವರಿದಿದೆ)

* **ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿ ಶ್ರೀಯವರೆ. ನನ್ನ ಮಿತ್ರ ಶ್ರೀ ನಜೀರುದ್ದೀನ ಅಹಮದರವರು ತಿದ್ದುಪಡಿ ಸಂ. ೧೦೮೩ಗೆ ಮಂಡಿಸಿರುವ ಪಟ್ಟಿ ೧ರ ತಿದ್ದುಪಡಿ ೨೫ನ್ನು ಒಪ್ಪಿಕೊಳ್ಳುತ್ತೇನೆ. ಇತರ ತಿದ್ದುಪಡಿಗಳನ್ನು, ನನ್ನನ್ನು ಕ್ಷಮಿಸಿ, ಒಪ್ಪಿಕೊಳ್ಳಲಾರೆ. ಈಗ ಮಾನ್ಯರೆ, ಸಾಮಾನ್ಯ ಚರ್ಚೆ ನಡೆಯುತ್ತಿದ್ದಾಗ ಎರಡು ಪ್ರಶ್ನೆಗಳನ್ನು ಎತ್ತಲಾಯಿತು. ಒಂದು ಶ್ರೀ ನಜೀರುದ್ದೀನರ ತಿದ್ದುಪಡಿಯ ಮೇಲೆ ಅನೇಕ ವಕ್ತಾರರುಗಳಿಂದ ಯಾವುದೇ ಚುನಾವಣೆಯನ್ನು ಕಳೆದ ಜನಗಣತಿ ಅಂದರೆ ೧೯೪೧ನ್ನು ಆಧರಿಸುವುದು ತಪ್ಪಾಗುವುದು ಎನ್ನುವ ಅಂಶವನ್ನು ಎತ್ತಿ ತೋರಿಸಿರುತ್ತಾರೆ. ಈ ಅಂಶದ ಮೇಲೆ ವಿವಿಧ ವಕ್ತಾರರುಗಳು ಹೇಳಿರುವುದರಲ್ಲಿ ಬಹಳ ಬಲವಿದೆ ಎನ್ನುವುದರ ಬಗೆಗೆ ನಾನು ಖಚಿತ ಗೊಂಡಿರುವೆ. ೧೯೪೧ರ ಜನಗಣತಿ ಕೆಲ ಕ್ಷೇತ್ರಗಳಲ್ಲಿ ಹೇಗೋ ಮೋಸದ್ದು ಎನ್ನುವುದು ಸತ್ಯ; ಅದೊಂದು ಜಾರಿಯಲ್ಲಿದ್ದ ಸ್ಥಳೀಯ ಸರಕಾರದಿಂದ ಕೆಲ ಸಮುದಾಯಗಳ ಪಕ್ಷವಾಗಿ ನಡೆಸಿದ ಕುಟಲ ಗಣತಿಯದು. ಅದು ಮತ್ತೆ ಕೆಲ ಸಮುದಾಯಗಳ ವಿರುದ್ಧ ನಡೆಸಲಾದದ್ದು. ಅದೂ ಅಲ್ಲದೆ, ಭಾರತದ ವಿಭಜನೆಯಿಂದಾಗಿ ಜನಸಂಖ್ಯೆ ಮತ್ತು ಕೆಲ ಪ್ರಾಂತಗಳಲ್ಲಿ ಉದಾಹರಣೆಗೆ ಪೂರ್ವ ಪಂಜಾಬ್, ಬೊಂಬಾಯಿ, ಪಶ್ಚಿಮ ಬಂಗಾಲ ಮತ್ತು ಕೆಲಮಟ್ಟಿಗೆ ಯು.ಪಿ ಇವುಗಳಲ್ಲಿ ಸಾಂಪ್ರದಾಯಿಕ ರಚನೆಯಲ್ಲಿ ಅತೀವ ಬದಲಾವಣೆಯಾಗಿರುವುದು ಕೂಡ ಸತ್ಯ. ಸಾಮಾನ್ಯ ಜನಸಂಖ್ಯೆಗೆ ಸಂವಿಧಾನವು ವಿವಿಧ ಸಮುದಾಯಗಳಿಗೆ ಆಯಾ ಸಮುದಾಯಗಳ ಪ್ರಮಾಣಕ್ಕನುಗುಣವಾಗಿ ಪ್ರಾತಿನಿಧ್ಯ ಅಂಶದ ದೃಷ್ಟಿಯಿಂದ ಚುನಾವಣೆಗಳಿಗಾಗಿ ಸೂಕ್ತ ಆಧಾರಗಳನ್ನು ಒದಗಿಸಬೇಕಾಗುತ್ತದೆಯಾದ್ದರಿಂದ ಪ್ರತಿಯೊಂದು ಪ್ರಾಂತದ ಒಟ್ಟು ಜನಸಂಖ್ಯೆಯನ್ನು ಅರಿತುಕೊಳ್ಳುವುದಷ್ಟೇ ಅಲ್ಲ, ವಿವಿಧ ಸಮುದಾಯಗಳ ಭಾಗಗಳನ್ನೂ ಅರಿತುಕೊಳ್ಳಬೇಕಾಗುತ್ತದೆ. ಚುನಾವಣೆಗಳಿಗೆ ಸಂಬಂಧಿಸಿದಂತೆ ಸಂವಿಧಾನದ ಬುನಾದಿ ಹಾಕುವ ಮುನ್ನ ನೀಡಿರುವ ಭರವಸೆಗಳಿಂದಾಗಿ ಇದು ಅಗತ್ಯವಾಗುತ್ತದೆ.

ಚುನಾವಣೆಗಳನ್ನು ನಡೆಸುವ ಮುನ್ನ ಸರಕಾರವು ಮಂಡಿಸಲಾದ ಅನೇಕ ವಾದಗಳತ್ತ ಗಮನ ನೀಡಿ ನಿಜವಾದ ಜನಗಣತಿ ನಡೆಸುವುದೆಂಬ ಭರವಸೆ ನನಗಿದೆ. ನಾನು ಹಾಗೆ ಹೇಳಬಹುದಾದರೆ, ನನ್ನ ಮಿತ್ರ ಶ್ರೀ ನಜೀರುದ್ದೀನ ಅಹಮದರವರ ತಿದ್ದುಪಡಿ ಒಪ್ಪಿಕೊಳ್ಳಲು ಮನವೊಲಿಸಿದ ಕಾರಣವೆಂದರೆ ಅವರು 'ಕೊನೆಯ' ಈ ಪದದ ಬದಲಾಗಿ 'ಇತ್ತೀಚಿನ' ಪದ ಬಳಸಿರುವುದು. 'ಕೊನೆಯ' ಈ ಪದ ಒಂದು ರೀತಿಯ ಸ್ಥಳೀಯ ಬಣ್ಣ ಹೊಂದಿತ್ತು ಎಂದು ನನಗೆ ಅನಿಸಿದ್ದು. ಆ ಅರ್ಥದಲ್ಲಿ ಕೊನೆಯ ಜನಗಣತಿ ಎನ್ನುವುದು ಹತ್ತು ವರ್ಷಗಳಿಗೊಮ್ಮೆ ಆಗಾಗ ನಡೆಯುವ ಚುನಾವಣೆ ಎನ್ನುವ ಅರ್ಥವಾಗಬಹುದು; ಮತ್ತು ಇತ್ತೀಚಿನ **'ಜನಗಣತಿ' ಎಂದರೆ ಯಾವುದೇ ಚುನಾವಣೆ ಆರಂಭಗೊಳ್ಳುವ ಮುನ್ನ ನಡೆಸಲಾದ ಜನಗಣತಿ ಎಂದರ್ಥ.

---

* ಸಿ.ಎ.ಡಿ. ಸಂಪುಟ ೭, ೧೩ನೆಯ ಡಿಸೆಂಬರ್, ೧೯೪೮, ಪುಟ ೧೦೧೬-೧೮

** ಚರ್ಚೆಗಳಲ್ಲಿ ಕೊನೆಯ ಎಂದು ತಪ್ಪಾಗಿ ಮುದ್ರಿತ.

**ಶ್ರೀ ನಜೀರುದ್ದೀನ ಅಹಮದ :** ಆ ಪದಗಳನ್ನು ನಾನು ಬಳಸಿಲ್ಲ. ನಾನು ಹೇಳಿದ್ದು ಕೊನೆಯ ಮುಂದಾಗಿ ಬರುವ ಜನಗಣತಿ ಎಂದು.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಹೇಗಾದರೂ, ಅವರು ಹೇಳಿದ್ದೇನು ಎನ್ನುವುದರತ್ತ ನಾನು ಹೆಚ್ಚಿನ ಗಮನ ನೀಡಿರಲಿಲ್ಲ. ಆದರೆ ಅದು ಖಚಿತವಾಗಿಯೂ ನನ್ನ ವಿಚಾರವಾಗಿದೆ. ಈ ಕಲಮು ಸರಕಾರಕ್ಕೆ ಹೊಸ ಶಾಸಕಾಂಗಕ್ಕಾಗಿ ಹೋಗುವ ಮುನ್ನ ಹೊಸ ಜನಗಣತಿಯನ್ನು ನಡೆಸಲು ತಡೆಗಟ್ಟುವುದಿಲ್ಲ. ಈ ವಿಷಯದ ಬಗೆಗೆ ಆತಂಕ ಹೊಂದಿರುವ ಅನೇಕ ಸದಸ್ಯರುಗಳಿಗೆ ಅದು ತೃಪ್ತಿಯನ್ನು ನೀಡಲೇಬೇಕು.

**ಶ್ರೀ ಮಹಾವೀರ ತ್ಯಾಗಿ :** ಅಂತಹ ಜನಗಣತಿಯನ್ನು ಜರುಗಿಸಲಾಗುವುದು ಎನ್ನುವ ಭರವಸೆಯನ್ನು ನೀವು ನೀಡುವಿರೆಂದು ನಾನು ಅಂದುಕೊಳ್ಳಬಹುದೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಬಹುಶಃ ನಾನು ಅಂತಹ ಭರವಸೆ ನೀಡೆನು. ಆದರೆ ವಿವಿಧ ಪ್ರಾಂತಗಳಲ್ಲಿಯ ಒಟ್ಟಾರೆ ಜನಸಂಖ್ಯೆಯ ರಚನೆಯಲ್ಲಿ ಆಗಿರುವ ಬೃಹತ್ ಬದಲಾವಣೆಯನ್ನು ಯಾವ ಸರಕಾರವೂ ಕಡೆಗಣಿಸುವಂತಿಲ್ಲ. ಅನೇಕಾನೇಕ ಅಲ್ಪಸಂಖ್ಯಾತರುಗಳನ್ನೊಳಗೊಂಡ ಹೆಚ್ಚಿನ ಜನಸಂಖ್ಯೆಗೆ ನಾವು ಪ್ರತಿನಿಧಿತ್ವದ ಭರವಸೆ ನೀಡಿರುತ್ತೇವೆ. ಗೌರವಾನ್ವಿತ ಸದಸ್ಯರುಗಳು ತಿಳಿದಿರುವಂತೆ, ಗುರುತ್ವದ–ವೆಯ್ಟೇಜ್‌ನ ಪ್ರಶ್ನೆಯ ಕುರಿತು ಸಾಕಷ್ಟು ಚರ್ಚೆ ನಡೆದು, ಅದನ್ನು ತಿರಸ್ಕರಿಸಿರುವ ಬಗೆಗೆ ನಾವು ತಿಳಿದಿದ್ದೇವೆ. ಈಗ ನಾವು ಚುನಾವಣೆಗಳನ್ನು ಹೊಂದಿದ್ದು, ಅವುಗಳನ್ನು ನಡೆಯಲು ಅನುಮತಿಸಿ ಈಗಿರುವ ಜನಸಂಖ್ಯೆ ಆಧಾರದ ಮೇಲೆ ಸೀಟುಗಳನ್ನು ಒದಗಿಸಿಕೊಟ್ಟಿಲ್ಲ, ಆ ಆಧಾರವೇ ವಾಸ್ತವದಲ್ಲಿ ಸ್ಥಳಾಂತರ ಹೋಗಿರುವುದರಿಂದ ಕಳೆದು ಹೋಗಿರುವಾಗ ಅದು ವಿವಿಧ ಸಮುದಾಯಗಳಿಗೆ ಗುರುತ್ವ–ವೆಯ್ಟೇಜಿನಲ್ಲಿ ಪರಿಣಮಿಸಿ ಕೆಲ ಸಮುದಾಯಗಳಿಗೆ ಪ್ರತಿನಿಧಿತ್ವವೇ ಇಲ್ಲದೇ ಹೋಗಬಹುದು. ವಿಶದವಾಗಿ ಅಂತಹುದನ್ನು ತಡೆಯಲು ಅಲ್ಲದೆ ಯಾವುದೇ ಸಮುದಾಯಕ್ಕೆ ಗುರುತ್ವ–ವೆಯ್ಟೇಜ್ ದೊರಕದಂತೆ ಸರಕಾರವು ನೋಡಿಕೊಳ್ಳಬೇಕಾದದ್ದು, ಯಾವ ಅನುಮಾನವಿಲ್ಲದೆ, ಜನಗಣತಿಯು ಸೂಕ್ತ ಜನಗಣತಿ ಆಗಿರಲಿದೆ ಎನ್ನುವುದನ್ನು.

**ಪಂಡಿತ ಲಕ್ಷ್ಮಿ ಕಾಂತ ಮಿಶ್ರಾ :** ಜನಗಣತಿ ನಡೆಸದ ಹೊರತು ಹೊಸ ಸಂವಿಧಾನದಲ್ಲಿ ಚುನಾವಣೆಗಳನ್ನು ನಡೆಸಲಾಗುವುದಿಲ್ಲ ಎನ್ನುವುದು ಗೌರವಾನ್ವಿತ ಸದಸ್ಯರ ಅರ್ಥವೆ ಹೇಗೆ ಎನ್ನುವುದನ್ನು ನಾನು ತಿಳಿದುಕೊಳ್ಳಬಯಸುತ್ತೇನೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಸರಿ, ಇದೊಂದು ನನಗೆ ಸ್ವಾಭಾವಿಕ ಸಾರಾಂಶವೆಂದು ಕಾಣುತ್ತಿದೆ, ಏಕೆಂದರೆ ಎಲ್ಲಿಯವರೆಗೆ ವಿವಿಧ ಸಮುದಾಯಗಳ ಜನಸಂಖ್ಯೆಯನ್ನು ಖಚಿತಪಡಿಸಿಕೊಳ್ಳಲಾಗುವುದಿಲ್ಲವೋ ಅಲ್ಲಿಯವರೆಗೆ ಚುನಾವಣೆಗಳಿಗಾಗಿ ಸೀಟುಗಳನ್ನು ಹಂಚಿಕೊಡಲಾಗುವುದಿಲ್ಲ. ಆದುದರಿಂದ ಅದೊಂದು ತಾರ್ಕಿಕ ನಿರ್ಣಯದಂತೆ ನನಗೆ ಕಾಣುತ್ತಿದ್ದು ಹೊಸ ಜನಗಣತಿಯು ಅನಿವಾರ್ಯವಾಗಲಿದೆ.

ಮತ್ತೊಂದು ಪ್ರಶ್ನೆ ಯಾವುದರ ಬಗೆಗೆ ಶ್ರೀ ತ್ಯಾಗಿ ಮತ್ತು ಬೇಗಂ ಅಯಿಝು ರಸೂಲ ಮತ್ತು ಇನ್ನಿತರ ಸದಸ್ಯರುಗಳು ಬಹಳಷ್ಟು ವಿರೋಧ ವ್ಯಕ್ತಪಡಿಸಿರುವರೋ ಅದು ಅಧ್ಯಕ್ಷರ ಚುನಾವಣೆಗೆ ಸಂಬಂಧಿಸಿದುದಾಗಿದೆ. ಈಗ, ಅಧ್ಯಕ್ಷರನ್ನು ಚುನಾಯಿಸಲು ಎರಡು ದಾರಿಗಳಿವೆ. ಒಂದು ದಾರಿಯೆಂದರೆ ಯಾವುದನ್ನು ನಾವು ಸಭೆಯ ಕೇವಲ ಮಾತ್ರ ಬಹುಮತ ಎನ್ನುತ್ತೇವೆಯೋ ಅದರಿಂದ ಅಧ್ಯಕ್ಷನನ್ನು ಚುನಾಯಿಸುವುದು. ಒಂದು ವೇಳೆ ವ್ಯಕ್ತಿಯೋರ್ವನು ೫೧ ಪ್ರತಿಶತ ಪಡೆದರೆ ಚುನಾಯಿತಗೊಳ್ಳುವನು.

ಇದು ಅಧ್ಯಕ್ಷನನ್ನು ಚುನಾಯಿಸುವ ಒಂದು ವಿಧಾನ ಮತ್ತು ಅದೊಂದು ಸರಳ ಮತ್ತು ನೇರವಾದ ವಿಧಾನವಾಗಿರುತ್ತದೆ. ಈಗ, ಅದರ ಬಗೆಗೆ ಬಹುಮತ ಹೊಂದಿದ ಪಕ್ಷವು ಅಲ್ಪಸಂಖ್ಯಾತ ಪಕ್ಷಕ್ಕೆ ಯಾವುದೇ ಪದವಿಲ್ಲದೆಯೇ, ಅಧ್ಯಕ್ಷನನ್ನು ಚುನಾಯಿಸುವ ಸಾಮರ್ಥ್ಯ ಹೊಂದಿರಬಹುದು. ವಿಶದವಾಗಿ ಸಭೆಯ ಯಾವುದೇ ಸದಸ್ಯನು ಕೇವಲ ಬಹುಮತದಿಂದ ಅಧ್ಯಕ್ಷನು ಚುನಾಯಿತನಾಗಬೇಕೆಂದಾಗಲಿ ಅಥವಾ ಅಲ್ಪಸಂಖ್ಯಾತರಿಗೆ ಯಾವುದೇ ಪಾತ್ರ ಇರದ ವ್ಯವಸ್ಥೆಯಾಗಲಿ ಇಷ್ಟಪಡುವುದಿಲ್ಲ. ಅದು ಹಾಗೆ ಇರಲು, ಕೇವಲ ಬಹುಮತದಿಂದ ಅಧ್ಯಕ್ಷನನ್ನು ಚುನಾಯಿಸುವುದನ್ನು ಅಲ್ಲಗಳೆಯಬೇಕು, ಮತ್ತು ಅಲ್ಪಸಂಖ್ಯಾತರಿಗೆ ಅಧ್ಯಕ್ಷನ ಚುನಾವಣೆಯಲ್ಲಿ ವ್ಯಕ್ತತೆಗೆ ಅವಕಾಶವಿರುವಂತಹ ವ್ಯವಸ್ಥೆಯನ್ನು ಒದಗಿಸಬೇಕು. ಅಧ್ಯಕ್ಷರ ಚುನಾವಣೆಯಲ್ಲಿ ಬಹುಮತದ ಜೊತೆಗೆ ಅಲ್ಪಸಂಖ್ಯಾತರಿಗೆ ಪ್ರಭಾವಕ್ಕೆ ಅವಕಾಶ ನೀಡಲು ಒಂದೇ ವಿಧಾನವೆಂದರೆ, ಹಾಗೆ ಹೇಳುವುದಾದರೆ, ಪ್ರತಿಯೊಂದು ಅಲ್ಪಸಂಖ್ಯಾತ ಗುಂಪಿಗೆ ಪ್ರತ್ಯೇಕತೆ ಇರುವಂತೆ ಅವಕಾಶ ಒದಗಿಸುವುದು. ಇದರಿಂದಾಗಿ ಅಧ್ಯಕ್ಷನಿಗೆ ಬಹುಮತದ ಜೊತೆಗೆ ಪ್ರತಿ ಅಲ್ಪಸಂಖ್ಯಾತರ ಗುಂಪಿನಿಂದ ಸಾಕಷ್ಟು ಸಂಖ್ಯೆಯ ಮತಗಳೂ ದೊರಕುತ್ತವೆ. ಆದರೆ ಅದು ಕೂಡ, ನನಗೆ ಅನಿಸಿದಂತೆ, ನಾನು ಸಂವಿಧಾನದಲ್ಲಿ ಈಗಾಗಲೇ ನಿಗದಿಪಡಿಸಿರುವಂತೆ ಪ್ರತ್ಯೇಕ ಮತದಾರರ ಸಮೂಹಗಳಿರಕೂಡದೆಂಬ ತತ್ವಕ್ಕೆ ತೀರ ವಿರುದ್ಧ ಹೋಗುತ್ತದೆಯಾದ್ದರಿಂದ ಒಪ್ಪಿಕೊಳ್ಳಲಿಕ್ಕಾಗದು. ಆದುದರಿಂದ ಉಳಿಯುವ ಒಂದೇ ಇತರ ವಿಧಾನವೆಂದರೆ ಅಂತಹ ಚುನಾವಣೆಯನ್ನು ರೂಪಿಸುವುದು ಅಲ್ಪಸಂಖ್ಯಾತರಿಗೆ ಅವಕಾಶವಿದ್ದು ಅವರೂ ತಮ್ಮ ಪ್ರಭಾವ ಬೀರಲು ಅನುವುಮಾಡಿ ಕೊಡುವ ವ್ಯವಸ್ಥೆ ಯಾವ ಅನುಮಾನವೂ ಇಲ್ಲದೆ ಸಂವಿಧಾನದಲ್ಲಿ ಅಳವಡಿಸಲಾಗಿರುವ ಅನುಪಾತಿಕ ಪ್ರಾತಿನಿಧ್ಯ ವ್ಯವಸ್ಥೆ.

**ಶ್ರೀ ನಜೀರುದ್ದೀನ ಅಹಮದ್ :** ವರ್ಗಾವಣೆಯ ಅವಕಾಶ ಇರಬೇಕು. ಓರ್ವ ವ್ಯಕ್ತಿಯ ಆಯ್ಕೆ ಇರುವಲ್ಲಿ ಅನುಪಾತಿಕ ಪ್ರಾತಿನಿಧ್ಯವಿರಲು ಅದು ಹೇಗೆ ಸಾಧ್ಯ ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ನಿಜಕ್ಕೂ ನಾನು ಪ್ರಶ್ನೆಯ ವಿವರಕ್ಕೆ ಹೋಗಲಾರೆ. ಹಾಗೆ ಮಾಡಲು ನಾನು ತರಗತಿಯೊಂದನ್ನು ತೆರೆದು ವಿಷಯದ ಮೇಲೆ ಉಪನ್ಯಾಸ ನೀಡಬೇಕಾಗುತ್ತದೆ; ಆ ಕಾರ್ಯವನ್ನು ನಾನು ಈ ಹಂತದಲ್ಲಿ ತೆಗೆದುಕೊಳ್ಳುವುದಿಲ್ಲ. ಆದಾಗ್ಯೂ, ಎಲ್ಲರಿಗೂ ಗೊತ್ತೇ ಇದೆ ಮತ್ತು ವ್ಯವಸ್ಥೆ ಹೇಗೆ ಕೆಲಸ ಮಾಡುವುದೆಂದು ಎಲ್ಲರು ಬಲ್ಲರು.

**ಮಾನ್ಯ ಉಪಾಧ್ಯಕ್ಷ :** ಈ ಮಧ್ಯ ಪ್ರವೇಶಗಳು ಕೆಲ ಸದಸ್ಯರಿಗೆ ಅನುಪಾತಿಕ ಪ್ರತಿನಿಧಿತ್ವದ ನಿಜ ಸ್ವರೂಪದ ಬಗ್ಗೆ ಗೊತ್ತಿಲ್ಲ ಎನ್ನುವುದನ್ನು ತೋರಿಸುತ್ತವೆ.

**ಮೌಲಾನಾ ಹಸರತ್ ಮೊಹನಿ :** ಒಂದು ವೇಳೆ ಓರ್ವನೇ ಅಭ್ಯರ್ಥಿ ಇರಲು ನೀವೇನು ಮಾಡುವಿರಿ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಒಂದು ವೇಳೆ ಓರ್ವನೇ ಅಭ್ಯರ್ಥಿ ಇದ್ದಲ್ಲಿ ಆತನು ಒಮ್ಮತದಿಂದ ಆಯ್ಕೆಗೊಳ್ಳುವನು (ನಗು), ಮತ್ತು ಅಲ್ಲಿ ಬಹುಮತದವರು ಆಗಲಿ ಅಥವಾ ಅಲ್ಪಸಂಖ್ಯಾತದವರಾಗಲಿ ಈ ಪ್ರಶ್ನೆ ಏಳುವುದೇ ಇಲ್ಲ.

ಶ್ರೀ ತ್ಯಾಗಿಯವರು ಕೇಳಿದ ಇನ್ನೊಂದು ಪ್ರಶ್ನೆ ಎಂದರೆ ಅಭ್ಯರ್ಥಿಗಳನ್ನು ತೆಗೆದು ಹಾಕಲು ಯಾವುದೇ ವಿಧಾನ ಕ್ರಮ ಇದೆಯೆ ಎಂದು.

**ಮಹಾವೀರ ತ್ಯಾಗಿ :** ಮಾನ್ಯರೆ, ಮಾಹಿತಿಯ ಅಂಶವೊಂದರ ಮೇಲೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಅವಕಾಶವಿಲ್ಲ ನಾನು ಒಪ್ಪಿಕೊಳ್ಳಲಾರೆ. ನಾನು ನಿಮ್ಮ ಅಂಶದ ಬಗೆಗೆ ಉತ್ತರಿಸುತ್ತಿರುವೆ. ನೀವು ಕೇಳಬೇಕೆಂದಿರುವ ಅಂಶ ತೆಗೆದುಹಾಕಲು ಪ್ರಕ್ರಿಯೆ ಇದೆಯೆ

ಎನ್ನುವುದು ನನ್ನ ಎದುರಿಗಿರುವ ಅಂಶವೆಂದರೆ ನಾನು ಬಯಸುವುದು ಅಧ್ಯಕ್ಷನ ಚುನಾವಣೆ ಅಥವಾ ಸಾಮಾನ್ಯ ಪ್ರತಿನಿಧಿತ್ವ ತೆಗೆದುಹಾಕುವಿಕೆಯನ್ನೊಳಗೊಂಡಿರುತ್ತದೆ. ಅದರ ಹೊರತು ಅದಕ್ಕೆ ಅರ್ಥವೇ ಇರುವುದಿಲ್ಲ. ನಾವು ಮಾಡಿರುವ ಒಂದೇ ಕೆಲಸವೆಂದರೆ ಹಲವಾರು ಪ್ರಮಾಣಬದ್ಧ ಪ್ರಾತಿನಿಧ್ಯಗಳ ಬದಲಾಗಿ ಒದಗಿಸಲ್ಪಟ್ಟಿರುವುದು ಕೇವಲ ಏಕಪ್ರಮಾಣಬದ್ಧ ಪ್ರಾತಿನಿಧ್ಯವನ್ನು. ಯಾವುದರಲ್ಲಿ ಕೆಳ ತಳದ ಪ್ರತಿ ಅಭ್ಯರ್ಥಿಯು ಹೊರದೂಡಲ್ಪಡುವನು, ಈ ಪ್ರಕ್ರಿಯೆಯು ಓರ್ವ ವ್ಯಕ್ತಿಯು ಯಾವುದನ್ನು ನಾವು ದೇಯಾಂಶ (ಕೋಟಾ) ಎಂದು ಕರೆಯುತ್ತೇವೆಯೋ ಅದನ್ನು ತಲುಪುವವರೆಗೆ ಜರುಗುತ್ತಿರುತ್ತದೆ.

**ಶ್ರೀ ಮಹಾವೀರ ತ್ಯಾಗಿ :** ಆದರೆ ಪಾರ್ಲಿಮೆಂಟಿನಲ್ಲಿ ಪರ್ಯಾಯ ಮತಗಳ ಪದ್ಧತಿಯನ್ನು ಅಳವಡಿಸಲಾಗಿದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಪರ್ಯಾಯವು ಪ್ರಮಾಣಬದ್ಧತೆಗೆ ಇರುವ ಇನ್ನೊಂದು ಹೆಸರು.

ಮಾನ್ಯರೆ, ಈ ಅಂಶದ ಬಗೆಗೆ ನನಗೆ ಹೆಚ್ಚಿಗೆ ಹೇಳುವುದೇನೂ ಇಲ್ಲ.

**ಶ್ರೀ ಮಹಾವೀರ ತ್ಯಾಗಿ :** ಮಾನ್ಯರೆ, ನಾನು ತಿಳಿದುಕೊಳ್ಳ ಬಯಸುತ್ತೇನೆ........

**ಮಾನ್ಯ ಉಪಸಭಾಪತಿ :** ಶ್ರೀ ತ್ಯಾಗಿಯವರೇ, ನನ್ನ ತೊಂದರೆ ಎಂದರೆ ನಾನು ಕರಡು ಸಮಿತಿಯ ಚೇರಮನ್‌ರವರಿಗೆ ನಿಮ್ಮ ಪ್ರಶ್ನೆಗೆ ಉತ್ತರಿಸಲು ಒತ್ತಾಯಿಸಲಾರೆ. ನಿಮ್ಮ ಅನುಮಾನಗಳಿಗೆ ಸ್ಪಷ್ಟೀಕರಣ ಒದಗಿಸಲೂ ನಾನವರಿಗೆ ಒತ್ತಾಯಿಸಲಾರೆ ಕೂಡ.

ಈ ತಿದ್ದುಪಡಿಗಳನ್ನು ನಾನು ಒಂದೊಂದಾಗಿ ಇಡಲಿರುವೆ. ನಾನು ತಿದ್ದುಪಡಿ ಸಂ. ೧೦೭೫ ನ್ನು ಮತಕ್ಕೆ ಹಾಕುವೆ.

(ಇದನ್ನು ಡಾ. ಅಂಬೇಡ್ಕರ್‌ರರು ಮಂಡಿಸಿದರು).

(ಕೆಳಕಾಣಿಸಿದ ಎರಡು ತಿದ್ದುಪಡಿಗಳು ಅಂಗೀಕರಿಸಲ್ಪಟ್ಟವು ಮತ್ತು ಇನ್ನೆರಡು ತಿರಸ್ಕೃತಗೊಂಡವು)

(೧) ವಿಧಿ ೪೪ರ ಕಲಮು(೨) ರ ಉಪಕಲಮು (ಸಿ)ಯಲ್ಲಿ : "ಅಂತಹ ಸದಸ್ಯ" ಈ ಪದಗಳಿಗೆ ಬದಲಾಗಿ" ಪಾರ್ಲಿಮೆಂಟಿನ ಎರಡೂ ಸದನಗಳ ಚುನಾಯಿತ ಸದಸ್ಯರುಗಳು" ಈ ಪದಗಳನ್ನು ಬದಲಿ ಇಡುವುದು.

ಶ್ರೀ ನಜೀರುದ್ದೀನ್ ಅಹಮದರಿಂದ ಮಂಡಿಸಲ್ಪಟ್ಟ ಈ ಕೆಳಕಾಣಿಸಿದ ತಿದ್ದುಪಡಿಯು ಡಾ.ಅಂಬೇಡ್ಕರ್ ರಿಂದ ಒಪ್ಪಿಕೊಳ್ಳಲ್ಪಟ್ಟಿತು.

(೨) ವಿಧಿ ೪೪ಕ್ಕೆ ವಿವರಣೆಯಾಗಿ, ಕೆಳಕಾಣಿಸಿದ ವಿವರಣೆಯನ್ನು ಬದಲಿ ಇಡುವುದು.

"ವಿವರಣೆ– ಈ ವಿಧಿಯಲ್ಲಿ "ಜನಸಂಖ್ಯೆ" ಈ ಅಭಿವ್ಯಕ್ತಿಯು ಕಳೆದ ಚುನಾವಣೆ ಯಾವುದರ ಸಂಬಂಧಿತ ಅಂಶಗಳನ್ನು ಈ ಹಿಂದೆ ಕೊನೆಯಲ್ಲಿ ನಡೆದ ಜನಗಣತಿಯಿಂದ ತೆಗೆದುಕೊಂಡು ಪ್ರಕಟಿಸಲಾಗಿದೆಯೋ ಅದು ಒಂದು ಅರ್ಥ."

ತಿದ್ದುಪಡಿಯಾದಂತೆ ವಿಧಿ ೪೪ನ್ನು ಅಂಗೀಕರಿಸಲಾಯಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

**********

## ವಿಧಿ ೪೫

* **ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಮಾನ್ಯರೆ, ಗೌರವಾನ್ವಿತ ಸದಸ್ಯರ ತಿದ್ದುಪಡಿಯು ಸಾರಭೂತವಾಗಿ ವಿಧಿಯಂತೆಯೇ ಇದೆ, ಅಲ್ಲದೆ ಕಲಮಿನ ಕೇವಲ ಸಾರಭೂತ ಭಾಗಕ್ಕೆ ಸಂಬಂಧಿಸಿದುದಾಗಿದ್ದು ಉಪಬಂಧಕ್ಕೆ ಸಂಬಂಧಿಸಿದುದಾಗಿಲ್ಲ. ಗೌರವಾನ್ವಿತ ಸದಸ್ಯರ ತಿದ್ದುಪಡಿಯು ಸಾರಭೂತವಾಗಿ ವಿಧಿಯಂತೆಯೇ ಇದೆ, ಅಲ್ಲದೆ ಕಲಮಿನ ಕೇವಲ ಸಾರಭೂತ ಭಾಗಕ್ಕೆ ಸಂಬಂಧಿಸಿದುದಾಗಿದ್ದು ಉಪಬಂಧಕ್ಕೆ ಸಂಬಂಧಿಸಿದುದಾಗಿಲ್ಲ. ಗೌರವಾನ್ವಿತ ಸದಸ್ಯರು ತಮ್ಮ ತಿದ್ದುಪಡಿ ಮಂಡಿಸುವಲ್ಲಿ ಗುರಿಯೇನಾದರು ಇದೆಯೆ?

**ಶ್ರೀ ಮೊಹಮ್ಮದ ತಾಹೀರ :** ತಿದ್ದುಪಡಿ ಮತ್ತು ವಿಧಿ ಇವುಗಳ ಅರ್ಥಗಳ ನಡುವೆ ಅಂತರವಿದ್ದು, ಅದೇನಿದೆ ಎನ್ನುವುದನ್ನು ನಾನೀಗ ವಿವರಿಸುವೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಅದು ತಿದ್ದುಪಡಿಯೇ ಅಲ್ಲ; ಅದು ಕೇವಲ ಪದಗಳ ಅದಲು ಬದಲು ಮಾತ್ರ. ಭೇದವೇ ಇಲ್ಲ.

*********

* **ಮಾನ್ಯ ಉಪಸಭಾಪತಿ :** ತಿದ್ದುಪಡಿ ಸಂ.೧೦೮೬ ಕೇವಲ ಮೌಖಿಕ ತಿದ್ದುಪಡಿಯಾದದ್ದರಿಂದ ತಳ್ಳಿಹಾಕಲಾಗಿದೆ.

ತಿದ್ದುಪಡಿ ಸಂಖ್ಯೆಗಳು ೧೦೮೭ ಮತ್ತು ೧೦೮೮ ಒಂದೇ ತೆರನಾದುವುಗಳು. ಡಾ. ಅಂಬೇಡ್ಕರ್‌ರವರು ಸಂ. ೧೦೮೭ನ್ನು ಮಂಡಿಸಬಹುದಾಗಿದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುವೆ:

"ವಿಧಿ ೪೫ರ ಅನುಬಂಧದ ಕಲಮು (ಎ)ನಲ್ಲಿ 'ತ್ಯಾಗಪತ್ರ' ಪದಕ್ಕೆ 'ಬರೆವಣಿಗೆ' ಈ ಪದವನ್ನು ಬದಲಿ ಇಡುವುದು"

** **ಮಾನ್ಯ ಉಪಸಭಾಪತಿ :** ಈ ವಿಧಿಯ ಮೇಲಿನ ಸಾಮಾನ್ಯ ಚರ್ಚೆಯ ಮೇಲೆ ಯಾವುದೇ ಸದಸ್ಯರು ಮಾತನಾಡಲು ಇಚ್ಛಿಸಿಲ್ಲವಾದ್ದರಿಂದ, ಚರ್ಚೆಗೆ ಉತ್ತರ ನೀಡಲು ನಾನು ಡಾ.ಅಂಬೇಡ್ಕರ್‌ರಿಗೆ ಕೇಳಲು ಪ್ರಸ್ತಾಪಿಸುತ್ತೇನೆ. ಇದೀಗ ನಾನು ಮಾತನಾಡಲು ಅವಕಾಶ ಕೋರಿ ಬರೆದ ಚೀಟಿಯೊಂದನ್ನು ಪಡೆದಿರುತ್ತೇನೆ. ಇದು ಬಹಳ ತಡವಾಗಿ ಬಂದಿದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಶ್ರೀ ಗುಪ್ತಾರವರ ತಿದ್ದುಪಡಿಯಿಂದ ತಿದ್ದುಪಡಿಗೊಳಿಸಲ್ಪಟ್ಟ ತಿದ್ದುಪಡಿ.

ತಿದ್ದುಪಡಿ ಸಂಖ್ಯೆ ೧೯೯೦ ಇದೊಂದನ್ನು ಮಾತ್ರ ನಾನು ಒಪ್ಪಿಕೊಳ್ಳುವುದು. ಉಳಿದವುಗಳ ಬಗೆಗೆ, ಕ್ಷಮಿಸಿ, ನಾನು ಒಪ್ಪಿಕೊಳ್ಳಲಾರೆ. ಯಾವುದೇ ಸದಸ್ಯನಿಂದ ಯಾವುದಕ್ಕೆ ಏನೇ ವಿವರಣೆ ಬೇಕೋ ಅಂತಹ ಯಾವುದೇ ಅಂಶ ಎತ್ತಲ್ಪಟ್ಟಿಲ್ಲ.

**ಮಾನ್ಯ ಉಪಸಭಾಪತಿ :** ನಾನು ತಿದ್ದುಪಡಿಯನ್ನು ಮತಕ್ಕೆ ಹಾಕಲಿರುವೆ.

---

* ಸಿ.ಎ.ಡಿ. ಸಂಪುಟ ೭, ೧೩ನೆಯ ಡಿಸೆಂಬರ್, ೧೯೪೮, ಪುಟ ೧೦೧೯

* ಸಿ.ಎ.ಡಿ. ಸಂಪುಟ ೭, ೧೩ನೆಯ ಡಿಸೆಂಬರ್, ೧೯೪೮, ಪುಟ ೧೦೧೯–೨೦

** ಅದೇ, ಪು. ೧೦೨೨

(ಒಟ್ಟಿನಲ್ಲಿ ಐದು ತಿದ್ದುಪಡಿಗಳು ಡಾ. ಅಂಬೇಡ್ಕರರಿಂದ ಒಪ್ಪಿಗೆ ಪಡೆಯಲಿಲ್ಲವಾದ್ದರಿಂದ ತಿರಸ್ಕರಿಸಲ್ಪಟ್ಟವು. ಕೆಳಗೆ ಕಾಣಿಸಿದ ಎರಡು ತಿದ್ದುಪಡಿಗಳು ಮಾತ್ರ ಅಂಗೀಕೃತಗೊಂಡವು).

**ಮಾನ್ಯ ಉಪಸಭಾಪತಿ :** ಈಗ, ಪ್ರಶ್ನೆ ಇರುವುದು:–

ವಿಧಿ ೪೫ರ ಉಪಬಂಧದ ಕಲಮು (ಎ)ನಲ್ಲಿ 'ತ್ಯಾಗಪತ್ರ' ಈ ಪದಕ್ಕೆ ಬದಲಾಗಿ 'ಬರೆವಣಿಗೆ' ಈ ಪದವನ್ನು ಬದಲಿ ಇಡುವುದು.

(ಡಾ. ಅಂಬೇಡ್ಕರರಿಂದ ಮಂಡಿತ ತಿದ್ದುಪಡಿ ಅಂಗೀಕೃತಗೊಂಡಿತು)

**********

**ಮಾನ್ಯ ಉಪಸಭಾಪತಿ :** ಈಗ ನಾನು ಶ್ರೀ ಬಿ.ಎಂ. ಗುಪ್ತೆಯವರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೨೬ (ಎ)ಯಂತೆ ಬದಲಿಸಲ್ಪಟ್ಟ ತಿದ್ದುಪಡಿ ಸಂಖ್ಯೆ ೧೯೦ನ್ನು ಸಭೆಯ ಮತಕ್ಕೆ ಹಾಕಲಿರುವೆ.

ಪ್ರಶ್ನೆ ಇರುವುದು :

ಅದು –

(೧) ವಿಧಿ ೪೫ನ್ನು ಅದೇ ವಿಧಿಯ ಕಲಮು (೧) ಎಂದು ಪುನರ್‌ಸಂಖ್ಯೆ ಗೊಳಿಸುವುದು.

(೨) ಹಾಗೆ ಪುನರ್‌ಸಂಖ್ಯೆ ಗೊಳಿಸಿದ ಕಲಮಿನ ಉಪಬಂಧದ ಕಲಮು(ಎ)ನಲ್ಲಿಯ ಪದಗಳಾದ "ಕೌನ್ಸಿಲ್ ಆಫ್ ಸ್ಟೇಟ್ಸ್‌ನ ಚೇರಮನ್ ಮತ್ತು ಹೌಸ್ ಆಫ್ ಪೀಪಲ್ಸ್‌ನ ಸ್ಪೀಕರ್" ಈ ಪದಗಳಿಗೆ ಬದಲಾಗಿ 'ಉಪಾಧ್ಯಕ್ಷ' ಪದವನ್ನು ಬದಲಿ ಇಡುವುದು.

(೩) ಪುನರ್ ಸಂಖ್ಯೆಗೊಳಿಸಿದ ಹೇಳಲಾದ ವಿಧಿಯಲ್ಲಿ ಈ ಕೆಳಗಿನ ಕಲಮನ್ನು ಸೇರಿಸುವುದು:

"(೨) ಈ ವಿಧಿಯ ಉಪಬಂಧದ ಕಲಮು (೧)ರ ಕಲಮು (ಅ) ಇದರ ಅಂತರ್ಗತ ಉಪಾಧ್ಯಕ್ಷರಿಗೆ ಸಂಬೋಧಿತ ಯಾವುದೇ ರಾಜೀನಾಮೆಯನ್ನು ಮುಂದೆ ಅವರು ಲೋಕಸಭೆಯ ಸ್ಪೀಕರ್‌ರವರಿಗೆ ಸಂಪರ್ಕಿಸಿ ತಿಳಿಸುವುದು."

ಆ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

ತಿದ್ದುಪಡಿಗೊಂಡಂತೆ ವಿಧಿ ೪೫, ಅಂಗೀಕೃತಗೊಂಡಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

*********

## ವಿಧಿ ೪೬

* **ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿಯವರೆ, ಶ್ರೀ ಶರ್ಮಾರವರ ತಿದ್ದುಪಡಿಯನ್ನು, ಅದೆಂದರೆ ಸಂಖ್ಯೆ ೧೯೮ನ್ನು ಮಾತ್ರ ನಾನು ಒಪ್ಪಿಕೊಳ್ಳಲು ಸಿದ್ಧನಿರುವೆ. ಅದು "ಒಂದು ಸಲ ಆದರೆ ಒಂದು ಸಲ ಮಾತ್ರ" ಈ ಶಬ್ದಗಳನ್ನು ತೆಗೆದುಹಾಕುವುದಕ್ಕೆ ಸಂಬಂಧಿಸಿದುದಾಗಿದೆ.

ಶ್ರೀ ಕಾಮತ್‌ರವರ ತಿದ್ದುಪಡಿಗೆ ಸಂಬಂಧಿಸಿದುದಂತೆ, ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಯ ಅರ್ಹತೆಗಳಿಗೆ ಸಂಬಂಧಿಸಿದ ಅಂಶಗಳನ್ನು ಚರ್ಚಿಸುವಾಗ ಅದು ಸೂಕ್ತ ಸಮಯವಾಗಿರುತ್ತದೆ ಎನ್ನುವುದು ನನ್ನ ವಿಚಾರ.

---

* ಸಿ.ಎ.ಡಿ. ಸಂಪುಟ ೭, ೨೭ನೇ ಡಿಸೆಂಬರ್, ೧೯೪೮, ಪು. ೧೦೨೭

ಶ್ರೀ ತ್ಯಾಗಿಯವರಿಗೆ ನಾನು ಹೇಳಬಹುದಾದದ್ದೇನೆಂದರೆ "ಒಂದು ಸಲ ಆದರೆ ಒಂದು ಸಲ ಮಾತ್ರ" ಈ ಪದಗಳನ್ನು ತೆಗೆದುಹಾಕುವುದರ ಹಿನ್ನಲೆಯಲ್ಲಿ ಉಪಾಧ್ಯಕ್ಷರ ಬಗೆಗಿನ ಅವರ ಭಯಗಳು ಆಧಾರರಹಿತವಾದವುಗಳು.

**ಮಾನ್ಯ ಉಪಸಭಾಪತಿ :** ಈಗ ನಾನು ತಿದ್ದುಪಡಿಗಳನ್ನು ಒಂದಾದ ನಂತರ ಒಂದರಂತೆ ಮತಕ್ಕೆ ಹಾಕುತ್ತೇನೆ.

ತಿದ್ದುಪಡಿ ಸಂಖ್ಯೆ ೧೧೯೮. ಪ್ರಶ್ನೆ ಇರುವುದು:

"ವಿಧಿ ೪೬ರಲ್ಲಿ 'ಒಂದು ಸಲ ಆದರೆ ಒಂದು ಸಲ ಮಾತ್ರ' ಈ ಪದಗಳನ್ನು ತೆಗೆದು ಹಾಕುವುದು."

ತಿದ್ದುಪಡಿ ಅಂಗೀಕೃತಗೊಂಡಿತು.

**ಉಪಸಭಾಪತಿ :** ತಿದ್ದುಪಡಿ ಸಂ. ೧೧೦೦.

**ಶ್ರೀ ಹೆಚ್.ವಿ. ಕಾಮತ್ :** ಡಾ. ಅಂಬೇಡ್ಕರ್‌ರವರ ಹೇಳಿಕೆ ದೃಷ್ಟಿಯಿಂದ, ನಾನದನ್ನು ಒತ್ತಾಯಿಸಲಿಚ್ಛಿಸುವುದಿಲ್ಲ.

ಅಸೆಂಬ್ಲಿಯ ಅನುಮತಿಯೊಂದಿಗೆ ತಿದ್ದುಪಡಿ ಹಿಂತೆಗೆದುಕೊಳ್ಳಲ್ಪಟ್ಟಿತು.

**ಉಪಸಭಾಪತಿ :** ಶ್ರೀ ತ್ಯಾಗಿಯವರ ತಿದ್ದುಪಡಿ. ಡಾ. ಅಂಬೇಡ್ಕರ್‌ರವರ ಭಾಷಣದ ನಂತರ ಅದರ ಅಗತ್ಯ ಏಳುವುದಿಲ್ಲ, ಆದರೆ ತಾಂತ್ರಿಕತೆಯ ಕೆಲ ಪಂಡಿತರು ನಾನದನ್ನು ಮತಕ್ಕೆ ಹಾಕಲಿಲ್ಲವೆಂದು ಹೇಳಬಹುದು. ಶ್ರೀ ತ್ಯಾಗಿಯವರು ಅದನ್ನು ಹಿಂತೆಗೆದುಕೊಳ್ಳುವರೋ ಹೇಗೆ ನಾನು ತಿಳಿದುಕೊಳ್ಳಬಯಸುವೆ.

**ಶ್ರೀ ಮಹಾವೀರ ತ್ಯಾಗಿ :** ಮಾನ್ಯರೆ, ನಾನದನ್ನು ಹಿಂತೆಗೆದುಕೊಳ್ಳುತ್ತೇನೆ.

ಅಸೆಂಬ್ಲಿಯ ಅನುಮತಿಯೊಂದಿಗೆ ತಿದ್ದುಪಡಿ ಹಿಂತೆಗೆದುಕೊಳ್ಳಲ್ಪಟ್ಟಿತು.

**ಉಪಸಭಾಪತಿ :** ಪ್ರಶ್ನೆ ಇರುವುದು :

"ತಿದ್ದುಪಡಿಗೊಂಡಂತೆ ವಿಧಿ ೪೬, ಸಂವಿಧಾನದ ಭಾಗವಾಗುವುದು." ಸೂಚನೆಯನ್ನು ಒಪ್ಪಿಕೊಳ್ಳಲಾಯಿತು.

ತಿದ್ದುಪಡಿಗೊಂಡಂತೆ ವಿಧಿ ೪೬, ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

*********

## ವಿಧಿ ೪೭

* **ಮಾನ್ಯ ಉಪಸಭಾಪತಿ :** ತಿದ್ದುಪಡಿ ಸಂ.೧೧೧೯, ಮೌಖಿಕ, ನಿರಾಕರಿಸಲಾಯಿತು. ತಿದ್ದುಪಡಿ ಸಂಖ್ಯೆಗಳಾದ ೧೧೧೦ ರಿಂದ ೧೧೧೨ ಇವುಗಳು ಸಮಾನ ತಾತ್ಪರ್ಯದವುಗಳು. ಇವುಗಳಲ್ಲಿಯ ಪ್ರಥಮವಾದದ್ದನ್ನು ಮಂಡಿಸಬಹುದು. ಅದು ಡಾ.ಅಂಬೇಡ್ಕರ್‌ರವರ ಹೆಸರಿನಲ್ಲಿದೆ.

**ಗೌರವಾನ್ವಿತ ಡಾ.ಬಿ.ಆರ್.ಅಂಬೇಡ್ಕರ್ :** (ಬೊಂಬಾಯಿ : ಸಾಮಾನ್ಯ) : ಮಾನ್ಯ ಉಪಸಭಾಪತಿಯವರೆ, ನಾನು ಮಂಡಿಸುವೆ:

"ವಿಧಿ ೪೭ರ ಕಲಮು (೨)ರಲ್ಲಿ ಮತ್ತು ಕಲಮು ೨ರ ವಿವರಣೆಯಲ್ಲಿ, 'ಯಾವುದೇ ಹುದ್ದೆ ಅಥವಾ

---

* ಸಿ.ಎ.ಡಿ. ಸಂಪುಟ ೭, ೨೭ನೆಯ ಡಿಸೆಂಬರ್, ೧೯೪೮, ಪುಟ ೧೦೨೭

ಪಗಾರಸಹಿತವಾದ ಹುದ್ದೆ' ಅವುಗಳು ಕಾಣಿಸಿಕೊಳ್ಳುವೆಡೆಯಲ್ಲೆಲ್ಲ, 'ಯಾವುದೇ ಲಾಭದಾಯಕ ಹುದ್ದೆ' ಈ ಪದಗಳನ್ನು ಬದಲಿ ಇಡುವುದು."

ಮಾನ್ಯರೆ, ಈ ತಿದ್ದುಪಡಿಯ ಉದ್ದೇಶ ಕರಡಿನ ಭಾಷೆಯನ್ನು ಸುಧಾರಿಸುವುದು ಮಾತ್ರವಾಗಿದೆ.

**ಮಾನ್ಯ ಉಪಸಭಾಪತಿ :** ತಿದ್ದುಪಡಿ ಸಂಖ್ಯೆ.೧೧೧೧ ಅದನ್ನು ಮತಕ್ಕೆ ಹಾಕಲೇ ಬೇಕೆ?

**ಶ್ರೀ ಹೆಚ್.ವಿ. ಕಾಮತ್ :** (ಸಿ.ಪಿ. ಮತ್ತು ಬೆರಾರ್ : ಸಾಮಾನ್ಯ):

ಡಾ. ಅಂಬೇಡ್ಕರ್ ರವರು ನನಗಿಂತ ಮೊದಲಿಗೇ ಆರಂಭಿಸಿರುತ್ತಾರೆ. ಇದರ ಪ್ರಶ್ನೆ ಏಳುವುದಿಲ್ಲ.

**ಮಾನ್ಯ ಉಪಸಭಾಪತಿ :** ತಿದ್ದುಪಡಿ ಸಂ.೧೧೧೨.

**ಶ್ರೀ ಮಿಹಿರ್ ಲಾಲ್ ಚೌಧರಿ** (ಪಶ್ಚಿಮ ಬಂಗಾಳ : ಸಾಮಾನ್ಯ): ಮಾನ್ಯರೆ ಇದನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ.

(ತಿದ್ದುಪಡಿ ಸಂ. ೧೧೧೩ಯನ್ನು ಮಂಡಿಸಲಿಲ್ಲ).

**ಮಾನ್ಯ ಉಪಸಭಾಪತಿ :** ತಿದ್ದುಪಡಿ ಸಂ.ಗಳಾದ ೧೧೧೪,೧೧೧೫ ಮತ್ತು ೧೧೧೬ ಇವುಗಳು ಮೌಖಿಕವಾಗಿವೆ ಹೀಗಾಗಿ ಅನುಮತಿಸಲಾಗುವುದಿಲ್ಲ. ತಿದ್ದುಪಡಿ ಸಂ.೧೧೧೭ ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುವೆ:

"ವಿಧಿ ೪೭ರ ಕಲಮು ೨ರ ವಿವರಣೆಯ ಉಪ-ಕಲಮು (ಎ)ಗೆ ಈ ಮುಂದಿನದನ್ನು ಬದಲಿ ಇಡುವುದು:-

"(ಅ) ಭಾಗ ೧ರ ಪ್ರಥಮ ಪರಿಶಿಷ್ಟದಲ್ಲಿ ನಿರ್ದಿಷ್ಟಗೊಳಿಸಲಾಗಿರುವಂತೆ ತಾತ್ಕಾಲಿಕವಾಗಿ ಆತನು ಯಾವುದೇ ರಾಜ್ಯದ ರಾಜ್ಯಪಾಲ ಅಥವಾ ಭಾರತದ ಅಥವಾ ಯಾವುದೇ ಅಂತಹ ರಾಜ್ಯದ ಮಂತ್ರಿ; ಅಥವಾ"

ಈ ತಿದ್ದುಪಡಿಯ ಉದ್ದೇಶ ಅರಸೊತ್ತಿಗೆಯ ಅಂತರ್ಗತ ಲಾಭದಾಯಕ ಹುದ್ದೆಯನ್ನು ಹೊಂದಿರುವ ರಾಜ್ಯವೊಂದರ ರಾಜ್ಯಪಾಲ ಅಥವಾ ಮಂತ್ರಿಯು ಉಂಟಾಗಬಹುದಾದ ಅನರ್ಹತೆಯನ್ನು ಹೋಗಲಾಡಿಸುವುದಾಗಿದೆ. ರಾಜ್ಯವೊಂದರ ರಾಜ್ಯಪಾಲ ಅಲ್ಲದೆ ಕೇಂದ್ರ ಹಾಗೂ ರಾಜ್ಯಗಳೆರಡರ ಮಂತ್ರಿಗಳಿಗೆ ಚುನಾವಣೆಗೆ ಸ್ಪರ್ಧಿಸಲು ಅನುವು ಮಾಡಿಕೊಡುವುದು ಅಲ್ಲದೆ ಅವರ ದಾರಿಯಲ್ಲಿ ಅರಸೊತ್ತಿಗೆಯ ಲಾಭದಾಯಕ ಹುದ್ದೆ ಕಾನೂನು ಅವರ ದಾರಿಯಲ್ಲಿ ಬರಕೂಡದು. ಇದು ಅಪೇಕ್ಷಣೀಯ.

*********

* **ಮಾನ್ಯ ಉಪಸಭಾಪತಿ :** ಡಾ. ಅಂಬೇಡ್ಕರ್.

ಶ್ರೀ ಶಾಮನಂದನ್ ಸಹಾಯ (ಬಿಹಾರ: ಸಾಮಾನ್ಯ): ಮಾನ್ಯರೆ, ನಾನು ಹೊಂದಿರುವುದು .............

**ಮಾನ್ಯ ಉಪಸಭಾಪತಿ :** ನಾನು ಡಾ. ಅಂಬೇಡ್ಕರ್‌ರವರನ್ನು ಕರೆದಿರುವೆ, ಕ್ಷಮಿಸಿ, ನೀವೇನಾದರು ತಿದ್ದುಪಡಿ ಹೊಂದಿರುವಿರಾ?

**ಶ್ರೀ ಶ್ಯಾಮನಂದನ್ ಸಹಾಯ :** ಇಲ್ಲ, ನಾನು ಯಾವ ತಿದ್ದುಪಡಿ ಹೊಂದಿಲ್ಲ, ಆದರೆ .............

---

* ಸಿ.ಎ.ಡಿ. ಸಂಪುಟ ೭, ೨೭ನೆಯ ನವೆಂಬರ್, ೧೯೪೮, ಪುಟ ೧೦೩೧

**ಮಾನ್ಯ ಉಪಸಭಾಪತಿ :** ತಾವು ಮುಂದುಗಡೆ ಏನಾದರೂ ಬಂದಿದ್ದರೆ, ನನ್ನ ಕಣ್ಣಿಗೆ ಬೀಳುತ್ತಿದ್ದಿರಿ, ಏಕೆಂದರೆ ಆ ದಿಸೆಯಲ್ಲಿ ಹೊಳಪಿದೆ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೆರಾರ : ಸಾಮಾನ್ಯ) : ಆದರೆ, ಮಾನ್ಯರೆ, ಈ ವಿಧಿಯ ಬಗೆಗೆ ನಾವು ಸೂಕ್ತವಾಗುವಷ್ಟು ಚರ್ಚೆ ನಡೆಸಲಿಲ್ಲ. ಕೇವಲ ಓರ್ವ ಸದಸ್ಯ ಮಾತ್ರ ಮಾತನಾಡಿರುವುದು.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಅವರುಗಳು ಹೆಚ್ಚಿನ ಚರ್ಚೆಯನ್ನು ಬಯಸಿದಲ್ಲಿ ನನ್ನದೇನು ಅಭ್ಯಂತರವಿಲ್ಲ.

**ಮಾನ್ಯ ಉಪಸಭಾಪತಿ :** ಇತರ ಸದಸ್ಯರುಗಳು ಮಾತನಾಡಿದಲ್ಲಿ ಅವರದ್ದೇನೂ ಆಕ್ಷೇಪಣೆ ಇರುವುದಿಲ್ಲವೆಂದು ಡಾ. ಅಂಬೇಡ್ಕರ್‌ರು ಹೇಳಿರುವುದು ಅವರ ಒಳ್ಳೆಯತನ. ಶ್ರೀ ಶಾಮನಂದನ್ ಸಹಾಯರು ದಯವಿಟ್ಟು ಮೈಕಿಗೆ ಬರುವರೆ?

**ಶ್ರೀ ಆರ್.ಕೆ. ಸಿಧ್ವಾ :** ಮಾನ್ಯರೆ, ......................

**ಮಾನ್ಯ ಉಪಸಭಾಪತಿ :** ಶ್ರೀ ಸಿಧ್ವಾ ಅವರದ್ದು ಎಂದಿಗೂ ಕೊನೆಯ ಮಾತಾಗಿರುತ್ತದೆ. ನಾನು ಅವರಿಗೆ ಕೊನೆಯ ಮಾತಿಗೆ ಅವಕಾಶ ನೀಡುವೆ.

**ಶ್ರೀ ಶಾನಂದನ್ ಸಹಾಯ :** ಮಾನ್ಯ ಉಪಸಭಾಪತಿಯವರೆ, ನಾನಿಲ್ಲಿ ಪ್ರೊ.ಕೆ.ಟಿ. ಶಾಹರವರು ಮಂಡಿಸಿರುವ ತಿದ್ದುಪಡಿಯನ್ನು ಬೆಂಬಲಿಸಲಿಕ್ಕಿದ್ದೇನೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಪ್ರೊ. ಶಾಹರವರ ಯಾವ ತಿದ್ದುಪಡಿ?

**ಶ್ರೀ ಶ್ಯಾಮನಂದನ ಸಹಾಯ :** ಈ ರೀತಿಯಾಗಿ ಓದುವ ತಿದ್ದುಪಡಿ ಸಂ. ೧೧೨೪. ಅಭ್ಯರ್ಥಿಯಾಗಿ ತೊಡಗಿಸಿಕೊಳ್ಳುವ ಮುನ್ನ ತನ್ನ ಹುದ್ದೆಗೆ ರಾಜೀನಾಮೆ ನೀಡಿರಬೇಕು."

***********

* **ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಉಪಾಧ್ಯಕ್ಷರವರೆ, ನನ್ನ ಗೌರವಾನ್ವಿತ ಮಿತ್ರ ಪ್ರೊ. ಕೆ.ಟಿ. ಶಾಹರವರು ಮಂಡಿಸಿರುವ ಯಾವುದೇ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ನಾನು ಅಶಕ್ತನಾಗಿರುವೆ. ಪ್ರೊ.ಕೆ.ಟಿ. ಶಾಹರವರಿಂದ ಮಂಡಿತ ಮೂರು ತಿದ್ದುಪಡಿಗಳಿವೆ. ಅವುಗಳಲ್ಲಿ ಒಂದು ಅಧ್ಯಕ್ಷೀಯ ಹುದ್ದೆಗೆ ಅಭ್ಯರ್ಥಿಯಾಗುವ ಮಂತ್ರಿಗೆ ಸಂಬಂಧಿಸಿದುದಾಗಿದೆ ಮತ್ತು ಇತರೆ ಎರಡು ತಿದ್ದುಪಡಿಗಳು ಅಧ್ಯಕ್ಷನಿಗೆ ಸಂಬಂಧಿಸಿದವುಗಳು. ಮೂರು ತಿದ್ದುಪಡಿಗಳಿಗೆ ಅವರ ಭಾಷಣಗಳಿಗೆ ಉತ್ತರ ರೂಪದಲ್ಲಿ ನನ್ನ ಅಭಿಪ್ರಾಯಗಳನ್ನು ಎರಡು ಭಾಗಗಳಲ್ಲಿ ವಿಭಾಗಿಸಲು ಪ್ರಸ್ತಾಪಿಸುತ್ತೇನೆ. ಮೊದಲನೆ ಭಾಗದಲ್ಲಿ ಮಂತ್ರಿಗೆ ಸಂಬಂಧಿತ ತಿದ್ದುಪಡಿಗಳಿಗೆ ನಾನು ವಿವರಿಸುತ್ತೇನೆ.

ಪ್ರೊ. ಕೆ.ಟಿ. ಶಾಹರ ತಿದ್ದುಪಡಿಯಂತೆ ವ್ಯಕ್ತಿಯೋರ್ವನು ಒಂದು ವೇಳೆ ಮಂತ್ರಿ ಪದವಿಯನ್ನು ಹೊಂದಿದ್ದಲ್ಲಿ ಮತ್ತು ಚುನಾವಣೆಗೆ ಸ್ಪರ್ಧಿಸ ಬಯಸಿದಲ್ಲಿ, ಮೊದಲನೆಯದಾಗಿ ಮಂತ್ರಿಯ ಹುದ್ದೆಗೆ ರಾಜೀನಾಮೆ ನೀಡಬೇಕಾಗುತ್ತದೆ. ಬೇರೆ ಮಾತುಗಳಲ್ಲಿ, ಆ ಮಂತ್ರಿತ್ವ ಹುದ್ದೆಯೇ ಚುನಾವಣೆಗಳ ಅನರ್ಹತೆಯಾಗುತ್ತದೆ. ಪ್ರೊ. ಕೆ.ಟಿ. ಶಾಹರವರು ತಮ್ಮ ತಿದ್ದುಪಡಿಗೆ ಸಾಕಷ್ಟು ಗಮನ ನೀಡಿಲ್ಲವೆಂದು ನನಗೆ ಅನಿಸುತ್ತದೆ. ಮೊದಲನೆಯದಾಗಿ, ಒಂದು ವೇಳೆ ಮಂತ್ರಿಯು ರಾಜೀನಾಮೆ ನೀಡಿದಲ್ಲಿ

---

* ಸಿ.ಎ.ಡಿ. ಸಂಪುಟ ೭, ೨೭ನೆಯ ಡಿಸೆಂಬರ್, ೧೯೪೮, ಪು. ೧೦೩೪–೩೭

ಈ ತಿದ್ದುಪಡಿ ಅನಗತ್ಯ. ನನಗೆ ಅನಿಸಿದಂತೆ ಪ್ರೊ. ಶಾಹರವರು ಪರಿಗಣಿಸದಿರುವ ಎರಡನೆ ಅಂಶವೆಂದರೆ, ಅಲ್ಲದೆ ನನ್ನ ದೃಷ್ಟಿಯಲ್ಲಿ ಅತಿ ಮಹತ್ವದ್ದೆಂದರೆ ಇದು. ನಾವು ತಿದ್ದುಪಡಿಯನ್ನು ಒಪ್ಪಿಕೊಳ್ಳುವೆಂದಾದರೆ, ಅಧ್ಯಕ್ಷ ಹುದ್ದೆಗೆ ಅಭ್ಯರ್ಥಿಯಾಗಿ ನಿಲ್ಲುವ ಮುನ್ನ ಮಂತ್ರಿಪದವಿಗೆ ರಾಜೀನಾಮೆ ನೀಡಬೇಕು. ನಮಗೆ ಸ್ಪಷ್ಟವಾಗಿ ತಿಳಿದೇ ಇದೆ. ಹಳೆ ಪಾರ್ಲಿಮೆಂಟು ಭಂಗಗೊಂಡು ಹೊಸ ಪಾರ್ಲಿಮೆಂಟು ಸಭೆ ಸೇರುವ ನಡುವಣ ಅವಧಿಯಲ್ಲಿ ಆಡಳಿತ ಭಾರ ಹೊಂದಿ ಯಾವ ಮಂತ್ರಿಯೂ ಇರಬೇಕಿಲ್ಲ. ನಾವು ಯಾವ ಪ್ರಶ್ನೆಯನ್ನು ಪರಿಗಣಿಸಬೇಕಾಗಿದೆಯೋ ಅದು ಇದಾಗಿದೆ. ಹಳೆ ಪಾರ್ಲಿಮೆಂಟಿನ ಭಂಗಗೊಳಿಸುವಿಕೆ ಮತ್ತು ಹೊಸ ಪಾರ್ಲಿಮೆಂಟಿನ ಪ್ರಥಮ ಸಭೆ ಇವುಗಳ ನಡುವಣ ಅವಧಿಯಲ್ಲಿ ಆಡಳಿತಕ್ಕೆ ಏನಾಗಬೇಕು? ನಾವು ಆಡಳಿತವನ್ನು ನೌಕರಶಾಹಿಗೆ ವಹಿಸಿಕೊಡಬೇಕೆ ಅಥವಾ ಆಡಳಿತ ಇಲಾಖೆಗಳ ಮುಖ್ಯಸ್ಥರುಗಳು ಹೊಸ ಪಾರ್ಲಿಮೆಂಟಿನ ಚುನಾವಣೆಗಳು ಜರುಗುವವರೆಗೆ ಆಡಳಿತವನ್ನು ನಡೆಸಿಕೊಂಡು ಹೋಗಬೇಕೆ? ಅಥವಾ ಆ ಮಧ್ಯಾವಧಿಯ ಎರಡು ಅಥವಾ ಮೂರು ತಿಂಗಳುಗಳಿಗಾಗಿ ತಾತ್ಪೂರ್ತಿಕ ಮಂತ್ರಿಗಳ ತಂಡವೊಂದನ್ನು ನೇಮಿಸಿ ಸರಕಾರ ನಡೆಸಿಕೊಂಡು ಹೋಗುವ ಜವಾಬ್ದಾರಿ ವಹಿಸಿಕೊಡಬೇಕೆ ಮತ್ತು ಹೀಗಾಗಿ ಚುನಾವಣೆಗೆ ಸ್ಪರ್ಧಿಸಿ ಹೊಸ ಪಾರ್ಲಿಮೆಂಟಿನಲ್ಲಿ ಪೂರ್ಣ ಅವಧಿಗಾಗಿ ಮಂತ್ರಿಗಳಾಗುವ ಅವಕಾಶವನ್ನು ಕಳೆದುಕೊಳ್ಳಬೇಕೆ? ನನಗೆ ಅನಿಸುತ್ತದೆ, ಒಂದು ವೇಳೆ ನಾವು ಪ್ರೊ. ಕೆ.ಟಿ. ಶಾಹರವರ ತಿದ್ದುಪಡಿಯನ್ನು ಒಪ್ಪಿಕೊಂಡದ್ದೇ ಆದರೆ ದೇಶದ ಸರಕಾರದಲ್ಲಿ ಆಡಳಿತದ ಪೂರ್ಣ ಅಸ್ತವ್ಯಸ್ತತೆಯನ್ನುಂಟು ಮಾಡಲಿದ್ದೇವೆ. ಆದುದರಿಂದ ನಾನು ಪ್ರಸ್ತಾಪಿಸುವುದೇನೆಂದರೆ........... *

**ಶ್ರೀ ಕೃಷ್ಣಸ್ವಾಮಿ ಭಾರತಿ** (ಮದ್ರಾಸ : ಸಾಮಾನ್ಯ) : ಅದು ಎಲ್ಲ ಮಂತ್ರಿಗಳಿಗೆ ಸಂಬಂಧಿಸಿದುದಲ್ಲ: ಅದು ಕೇವಲ ಓರ್ವ ಮಂತ್ರಿಯನ್ನೇ ಪ್ರಸ್ತಾಪಿಸುತ್ತದೆ.

**ಶ್ರೀ ಮಹಾವೀರ ತ್ಯಾಗಿ** (ಯುನೈಟೆಡ್‌ಪ್ರಾವಿನ್ಸ್ : ಸಾಮಾನ್ಯ): ಮತ್ತು ಉಪಮಂತ್ರಿಗೂ ಕೂಡ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಪ್ರತಿಯೋರ್ವ ಮಂತ್ರಿಯೂ ಚುನಾವಣೆಗೆ ಸ್ಪರ್ಧಿಸಬಯಸುವನೆಂದು ಊಹಿಸಿಕೊಂಡಲ್ಲಿ ಮಂತ್ರಿಗಳೆಲ್ಲರೂ ರಾಜೀನಾಮೆ ನೀಡಬೇಕಾಗುತ್ತದೆ.

ಪ್ರೊ. ಕೆ.ಟಿ. ಶಾಹರವರು ಮಂತ್ರಿಗಳು ಸಾಮಾನ್ಯವಾಗಿ ಚುನಾವಣೆಯಲ್ಲಿ ತಮಗೆ ಅನುಕೂಲವಾಗುವಂತೆ ಕೈವಾಡ ತೋರಿಸಬಹುದು ಅಥವಾ ಆಡಳಿತದ ಮೇಲೆ ತಮ್ಮ ಪ್ರಭಾವ ಬೀರಬಹುದು ಎನ್ನುವ ಸತ್ಯಾಂಶವನ್ನು ಉಲ್ಲೇಖಿಸಿದ್ದಾರೆ. ಅದು ಸ್ವಲ್ಪಮಟ್ಟಿಗೆ ಬಹುಶಃ ಸತ್ಯ. ಆದರೆ ಮಂತ್ರಿಗಳು ಬೀರಬಹುದಾದ ಪ್ರಭಾವವನ್ನು ಹೋಗಲಾಡಿಸಲು ಅಥವಾ ಚುನಾವಣೆಗಳಲ್ಲಿ ಬಳಸಬಹುದಾದದ್ದನ್ನು ಕರಡು ಸಮಿತಿಯು ಕೆಲ ವಿಧಿಗಳಲ್ಲಿ (ವಿಧಿಗಳು ೨೮೯ ಮತ್ತು ೨೯೨) ಯಾವುದನ್ನು ನಾವು ಚುನಾವಣಾ ಆಯೋಗವೆಂದು ಕರೆಯುತ್ತೇವೆಯೋ ಕೇಂದ್ರ ಮತ್ತು ಪ್ರಾಂತಗಳೆರಡರಲ್ಲಿ ಅಂತಹ ವಿಶೇಷ ಯಂತ್ರವನ್ನು ಭಾರವಹಿಸಿಕೊಳ್ಳಲು ಒದಗಿಸಿಕೊಟ್ಟಿದೆ. ಅವುಗಳು ಪಾರ್ಲಿಮೆಂಟಿನ ಹಾಗೂ ರಾಜ್ಯ ಶಾಸಕಾಂಗಗಳ ಚುನಾವಣೆಗಳ ಅಧಿಭಾರವನ್ನು ವಹಿಸಿಕೊಳ್ಳುವುವು. ಅವುಗಳು ಚುನಾವಣೆಗಳ ಸಂಪೂರ್ಣ ನಿರೀಕ್ಷಣೆ, ನಿಯಂತ್ರಣ ಮತ್ತು ವ್ಯವಸ್ಥಾಪನೆ ವಹಿಸಿಕೊಳ್ಳುತ್ತವೆ. ಹೀಗಾಗಿ ಮಂತ್ರಿಗಳು ಚುನಾವಣೆಗಳಲ್ಲಿ ಪ್ರಭಾವ ಬೀರುತ್ತಾರೆ ಎನ್ನುವ ಯಾವ ಸಾಧ್ಯತೆಗಳಿರುತ್ತವೆಯೋ ಅದನ್ನು ಹೋಗಲಾಡಿಸದಂತಾಗುತ್ತದೆ. ತತ್ಪರಿಣಾಮವಾಗಿ ಯಾವ ಭಯದ ಬಗೆಗೆ ಪ್ರೊ.ಕೆ.ಟಿ. ಶಾಹರವರು ಆತಂಕ ವಾಸ್ತವ ತೋರಿರುವರೋ ಅದಕ್ಕೆ ವಾಸ್ತವದಲ್ಲಿ ಯಾವ ಅವಕಾಶವೂ

---

* ಮೂಲ ಡಿಬೇಟಿನಲ್ಲಿಯ ಚಿನ್ಹೆಗಳು ತಡೆಯನ್ನು ಸೂಚಿಸುತ್ತವೆ.

ಇರುವುದಿಲ್ಲ. ಈ ಕಾರಣಗಳಿಂದಾಗಿ ನಾನು ಅವರ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಅಶಕ್ತನಾಗಿದ್ದೇನೆ.

ಅಧ್ಯಕ್ಷರಿಗೆ ಸಂಬಂಧಿತ ತಿದ್ದುಪಡಿಗಳಿಗೆ ಬರುವುದಾದರೆ, ಅವರ ಮೊದಲನೆ ತಿದ್ದುಪಡಿ ಸಂ.೧೧೦೮ ಕೆಲ ಅನರ್ಹತೆಗಳನ್ನು ನಿಗದಿಪಡಿಸುತ್ತದೆ. ಅವುಗಳಲ್ಲಿ ಕೆಲವು ಎಂದರೆ ರಾಜದ್ರೋಹಕ್ಕಾಗಿ ಶಿಕ್ಷೆಗೆ ಒಳಗಾದದ್ದು, ರಾಜ್ಯದ ವಿರುದ್ಧ ಯಾವುದೇ ಅಪರಾಧ  ಅಥವಾ ಸಂವಿಧಾನದ ಉಲ್ಲಂಘನೆ, ಇತ್ಯಾದಿ. ಈ ಕಾರಣದಿಂದ, ಉದಾಹರಣೆಗೆ ಚರ್ಚೆಯಲ್ಲಿರುವ ವಿಧಿಯಲ್ಲಿ ನಾವು ವಿಶೇಷವಾಗಿ ಈ ಅನರ್ಹತೆಗಳನ್ನು ನಿಗದಿಪಡಿಸಿರುವುದಿಲ್ಲ. ಪ್ರೊ. ಶಾಹರವರ ವಿಚಾರದಲ್ಲಿಯ ಗುರಿಗಳನ್ನು ಹೊಂದಿರುವ ಅಂಶಗಳನ್ನು ನಾವು ಬೇರೆ ಪ್ರಾವಧಾನಗಳಲ್ಲಿ ಒದಗಿಸಿಕೊಟ್ಟಿರುವುದನ್ನು ಸದಸ್ಯರುಗಳು ನೆನಪಿಗೆ ತಂದುಕೊಳ್ಳಬಹುದಾಗಿದೆ. ಈ ಸಂಬಂಧದಲ್ಲಿ ಈ ಸಭೆಯ ಗಮನವನ್ನು ನಾನು ವಿಧಿ ೪೮ರ ಉಪಕಲಮು (ಸಿ)ಯತ್ತ ಸೆಳೆಯಬಯಸುತ್ತೇನೆ. ಅದು ನಿಗದಿಪಡಿಸುವುದು "ಅಧ್ಯಕ್ಷನು ಪಾರ್ಲಿಮೆಂಟಿನ ಚುನಾವಣೆಗೆ ಅರ್ಹನಾಗುವಂತಹ ವ್ಯಕ್ತಿಯಾಗಿರಬೇಕು" ಎನ್ನುವುದನ್ನು ಪಾರ್ಲಿಮೆಂಟಿನ ಚುನಾವಣೆಗೆ ಅಗತ್ಯ ಅರ್ಹತೆಗಳನ್ನು ವಿಧಿ ೮೩ರಲ್ಲಿ ಅಳವಡಿಸಲಾಗಿದೆ. ವಿಧಿ ೮೩ರ ಉಪಕಲಮು (ಇ) ಅದನ್ನು ಪಾರ್ಲಿಮೆಂಟಿಗೆ ಬಿಟ್ಟಿದೆ. ಸೇರಿಸಬೇಕೆಂಬ ಅಥವಾ ಅಪೇಕ್ಷಣೀಯ ಎಂದು ಕಂಡುಬಂದಲ್ಲಿ ಪಾರ್ಲಿಮೆಂಟು ತಾನು ವಿಚಾರಿಸಿದಂತೆ ಅನರ್ಹತೆಗಳನ್ನು ಸೇರಿಸಬಹುದಾಗಿದೆ. ಆದುದರಿಂದ ಪಾರ್ಲಿಮೆಂಟಿಗೆ ವಿಧಿ ೮೩ರ ಉಪಕಲಮು (ಇ)ನ ಅಂತರ್ಗತ ನೀಡಲಾಗಿರುವ ಅಧಿಕಾರಗಳನ್ನು ಬಳಸಿ ಅನರ್ಹತೆಗಳನ್ನು ಪಟ್ಟಿಮಾಡಿ ಸೇರಿಸುವ ಬಗೆಗೆ ಅದು ಅಪೇಕ್ಷಣೀಯವೆಂದು ವಿಚಾರ ಮಾಡಬಹುದು (ವಿಧಿ ೮೩ರಲ್ಲಿ ಈಗಾಗಲೆ ಇವುಗಳನ್ನು ಸೇರಿಸುವ ಬಗೆಗೆ ಸೂಚಿಸಲಾಗಿದೆ). ಪ್ರೊ. ಕೆ.ಟಿ. ಶಾಹರವರು ಇವುಗಳಲ್ಲಿಯ ಕೆಲವನ್ನು ತಮ್ಮ ತಿದ್ದುಪಡಿ ಪ್ರಸ್ತಾವನೆಯಲ್ಲಿ ಪಟ್ಟಿಮಾಡಿರುತ್ತಾರೆ. ಆದುದರಿಂದ ನಾನು ಮಂಡಿಸುವುದೇನೆಂದರೆ ಪ್ರೊ. ಶಾಹರವರು ತಿಳಿಸಿರುವ ಅನರ್ಹತೆಗಳನ್ನು ಈ ವಿಶೇಷ ಕಲಮಿನಲ್ಲಿ ಉಲ್ಲೇಖಿಸಿಲ್ಲವಾದರೂ, ಪಾರ್ಲಿಮೆಂಟ್ ಕಾನೂನುಗಳನ್ನು ಮಾಡಿ ವಿಧಿ ೮೩ರ ಉಪಕಲಮು ೮೩ರಲ್ಲಿ ಸೇರ್ಪಡೆ ಮಾಡಬಹುದಾದ ಸಾಧ್ಯತೆ ಇದೆ.

**ಶ್ರೀ ಹೆಚ್.ವಿ. ಕಾಮತ್ :** ಉಪಸಭಾಪತಿಯವರೆ, ಸ್ಪಷ್ಟನೆಯ ಒಂದು ಅಂಶವನ್ನು ಕುರಿತು ಹೇಳುವೆ. ಒಂದು ವೇಳೆ 'ಚಿತ್ತ ಭ್ರಮಣೆ ಮತ್ತು 'ವಿಮೋಚನೆಯಾಗದ ದಿವಾಳಿ'ಯಂತಹ ವಿಷಯಗಳನ್ನು ವಿಧಿಯಲ್ಲಿಯೇ ಒಳಗೊಳಿಸುವುದಾದರೆ, ಪಾರ್ಲಿಮೆಂಟಿಗೆ ಹೆಚ್ಚಿನ ಮಹತ್ವದ ಮತ್ತು ಮೂಲಭೂತ ಅಂಶಗಳನ್ನು ಬಿಡುವುದರಲ್ಲಿ ಏನು ಅರ್ಥ, ಸಂವಿಧಾನದಲ್ಲಿಯೇ ಅವುಗಳಿಗೆ ಏಕೆ ಸ್ಥಾನ ನೀಡಬಾರದು?

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ನನಗೆ ಗೊತ್ತಿಲ್ಲ. ಇದು ಕೇವಲ ತರ್ಕದ ವಿಷಯವಾಗಿದೆ. ಪ್ರತಿಯೊಂದು ಅನರ್ಹತೆಯನ್ನು ಇಲ್ಲಿಯೇ ನಿಗದಿಪಡಿಸಬೇಕೆಂದು ಹೇಳುವುದು ಪರಿಪೂರ್ಣವಾಗಿಸಾಧ್ಯ. ಕೆಲವನ್ನು ಇಲ್ಲಿ ನಿಗದಿಪಡಿಸಬೇಕು ಮತ್ತೆ ಕೆಲವನ್ನು ಪಾರ್ಲಿಮೆಂಟಿಗೆ ಬಿಡಬೇಕು ಎಂದು ಹೇಳುವುದು ಕೂಡ ಅಷ್ಟೇ ಸಾಧ್ಯ. ಅದರಲ್ಲಿ ನಾನು ಯಾವುದೇ ಅಸಂಗತತೆಯನ್ನು ಕಾಣಲಾರೆ.

ಪ್ರೊ. ಶಾಹರವರ ಕೊನೆಯ ತಿದ್ದುಪಡಿ ಸಂ.೧೧೨೫ಕ್ಕೆ ಬರುವುದಾದರೆ, ನಾನು ವಿಚಾರಿಸುವುದೇನೆಂದರೆ ಎಚ್ಚರಿಕೆಯ ಮನವೊಲಿಕೆಯ ಭಾಷೆಯನ್ನು ಬಳಸುವುದು ಅತ್ಯಗತ್ಯ. ಪ್ರೊಫೆಸರ್‌ರವರು ಬಯಸುವುದೇನೆಂದರೆ ಅಧ್ಯಕ್ಷನಾಗುವ ಪ್ರತಿ ವ್ಯಕ್ತಿಯೂ ಹುದ್ದೆವಹಿಸಿಕೊಳ್ಳುವ ಮುನ್ನ, ಸರಕಾರದಿಂದ ಪಾಲಿತ ಅಥವಾ ಸರಕಾರದಿಂದ ನಡೆಸಲ್ಪಡುವ ವ್ಯವಹಾರಗಳಿಂದ ತನ್ನ ಆಸಕ್ತಿ, ಹಕ್ಕುಗಳನ್ನು ಪದನಾಮ ಮುಂತಾದವುಗಳಿಂದ ತನ್ನನ್ನು ಬೇರ್ಪಡಿಸಿಕೊಳ್ಳಬೇಕು. ಮತ್ತು ಎರಡನೆಯದಾಗಿ ಸರಕಾರವು ಅಧ್ಯಕ್ಷನಿಂದ ಇವುಗಳನ್ನು ಪಡೆದುಕೊಳ್ಳಬೇಕು. ಈ ಸಂಬಂಧದಲ್ಲಿ, ಮೊದಲನೇ ಅಂಶ ಯಾವುದು ನನ್ನ ಗಮನಕ್ಕೆ ಬರುತ್ತದೆಯೋ ಅದೆಂದರೆ ಇದೊಂದು

ನಾನು ಎಂದೂ ಕಾಣದ ವಿಲಕ್ಷಣ ಪ್ರಸ್ತಾವವಾಗಿದೆ. ಜಗತ್ತಿನಲ್ಲಿ ಎಲ್ಲಿಯೇ ಆಗಲಿ ಇಂತಹ ಯಾವುದೇ ನಿರ್ಬಂಧನೆ ಯಾವುದೇ ಸಂವಿಧಾನ ವಿಧಿಸಿರುವುದೆಂಬ ಅಂಶ ನನಗೆ ನೆನಪಿಲ್ಲ. ಅಂತಹ ನಿರ್ಬಂಧನೆ ಎಲ್ಲಿಯಾದರೂ ಸಂವಿಧಾನದಲ್ಲಿ ಇರಬೇಕೆಂಬ ಅಗತ್ಯ ಇದ್ದಲ್ಲಿ ಅದು ಆಡಳಿತ ನಿಯಂತ್ರಣ ಅವಕಾಶ ಹೊಂದಿರುವ ಮತ್ತು ಆಡಳಿತಾತ್ಮಕ ಸ್ವಇಚ್ಛೆ ಅಧಿಕಾರ ಹೊಂದಿರುವ ಅಧ್ಯಕ್ಷನಿರುವ ಯುನೈಟೆಡ್ ಸ್ಟೇಟ್ಸ್‌ನಲ್ಲಿ, ಅಲ್ಲಿ ವೈಯಕ್ತಿಕವಾಗಿ ಅಧಿಕಾರ ಬಳಕೆಗೆ ಹೆಚ್ಚಿನ ಅವಕಾಶವಿರುವುದರಿಂದ ಇದು ಅಗತ್ಯ. ಮತ್ತು ಆದಾಗ್ಯೂ ಯುನೈಟೆಡ್ ಸ್ಟೇಟ್ಸ್‌ನ ಸಂವಿಧಾನವು ಅಂತಹ ನಿರ್ಬಂಧನೆಗಳ ಬಗೆಗೆ ಸಂಪೂರ್ಣವಾಗಿ ಮೌನವಾಗಿದೆ. ಪ್ರೊಫೆಸರ್ ಶಾಹರವರು ಯಾವುದೇ ಅನುಮಾನವಿಲ್ಲದೆ ತಮ್ಮ ತಿದ್ದುಪಡಿಯನ್ನು ಇಟ್ಟಿರುವುದು ಮೂಲ ಹೇಳಿಕೆಗೆ ಯಾವುದನ್ನು ತಿದ್ದುಪಡಿಯಾಗಿಸಿರುವರೋ ಇದು ತತ್ಪರಿಣಾಮವಾಗಿ ಅಗತ್ಯವೆಂದು ಬಗೆದುದರಿಂದ ಹೆಸರಿಸುವುದಾದರೆ ಅಧ್ಯಕ್ಷನು ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷನಿಗೆ ಸಮನಾದ ಸ್ಥಾನಮಾನ ಹೊಂದಿರಬೇಕೆಂದು ಬಗೆದದ್ದರಿಂದ. ಆದರೆ ನಮ್ಮ ಸಂವಿಧಾನವು, ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷನಿಗೆ ಒದಗಿಸಲಾಗಿರುವ ಸ್ಥಾನಮಾನಕ್ಕಿಂತ ಸಂಪೂರ್ಣವಾಗಿ ಬೇರೆಯಾದದ್ದನ್ನೇ ಒದಗಿಸಿದೆ. ನಾನು ಪುನಃ ಪುನಃ ಹೇಳಿರುವಂತೆ ನಮ್ಮ ಅಧ್ಯಕ್ಷರು ಕೇವಲ ನಾಮಮಾತ್ರದ ಮುಖ್ಯಸ್ಥರು. ಅವರಿಗೆ ಸ್ವ–ವಿವೇಚನೆ ಅಧಿಕಾರ ಇಲ್ಲ; ಅವರಿಗೆ ಆಡಳಿತ ಯಾವುದೇ ಅಧಿಕಾರಗಳಿಲ್ಲ. ಆದುದರಿಂದ, ನಮ್ಮ ಅಧ್ಯಕ್ಷರಿಗೆ ಸಂಬಂಧಿಸಿದಂತೆ ಈ ಪ್ರಾವಧಾನ ಪೂರ್ಣವಾಗಿ ಅನಗತ್ಯ. ಅದು ಅಗತ್ಯವೇ ಎಂದಾದರೆ ಅದು ಪ್ರಧಾನ ಮಂತ್ರಿಗೆ ಮತ್ತು ಇತರ ರಾಜ್ಯಮಂತ್ರಿಗಳಿಗೆ. ಏಕೆಂದರೆ ಅವರುಗಳೇ ರಾಜ್ಯದ ಆಡಳಿತದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿದವರಾಗಿರುತ್ತಾರೆ. ಭಾರತ ಸರಕಾರದ ಅಂತರ್ಗತ ಯಾರಿಗೇ ಆಗಲಿ ಅಧಿಕಾರ ಬಳಸುವ ಅಧಿಕಾರವಿದ್ದಲ್ಲಿ ಅದು ಇರುವುದು ಪ್ರಧಾನಮಂತ್ರಿಗೆ ಅಥವಾ ರಾಜ್ಯಮಂತ್ರಿಗಳಿಗೆ. ಹೀಗಾಗಿ ಅಂತಹ ಪ್ರಾವಧಾನ ಅವರ ಕಾರ್ಯಕಾಲ ಅವಧಿಯಲ್ಲಿ ಒದಗಿಸಬೇಕಾದದ್ದು ಅವರುಗಳಿಗೆ ಮಾತ್ರವಲ್ಲದೆ ಅಧ್ಯಕ್ಷರಿಗಲ್ಲ.

ಉದ್ಭವಿಸುವ ಮೂರನೇ ಪ್ರಶ್ನೆ ಎಂದರೆ – ನನಗೆ ಅನಿಸಿದ ಮಟ್ಟಿಗೆ ಅತಿ ವಾಸ್ತವಿಕವಾದ ಪ್ರಶ್ನೆ ಇದಾಗಿದೆ. ನಾವು ಅಂತಹ ಯಾವುದೇ ಸ್ಥಿತಿಯನ್ನು ಹಾಕುವೆವೆಂದು ಊಹಿಸುವುದಾದರೆ; ನಾವು ಬಾಳುತ್ತಿರುವ ಪರಿಸ್ಥಿತಿಗಳಲ್ಲಿ ಪ್ರೊಫೆಸರ್ ಶಾಹ ಅವರು ವಿಧಿಸಿರುವ ಕಡ್ಡಾಯಗಳನ್ನು ಪೂರ್ಣಗೊಳಿಸಿ ಯಾರಾದರೂ ತನ್ನನ್ನು ತಾನು ಅಧ್ಯಕ್ಷೀಯ ಹುದ್ದೆಗೆ ಒಪ್ಪಿಸಿಕೊಳ್ಳುವುದು ಸಾಧ್ಯವೆ? ಈ ಕಡ್ಡಾಯಗಳನ್ನು ವಿಧಿಸಿದಲ್ಲಿ ಪ್ರೊಫೆಸರ್ ಶಾಹರವರಿಗೆ ಸ್ವತಃ ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕೆ ಒಪ್ಪುವುದು ಸಾಧ್ಯವೆ ಎನ್ನುವ ಅನುಮಾನ ನನಗೆ.

**ಪ್ರೊ. ಕೆ.ಟಿ. ಶಾಹ :** ಮಾತನಾಡುವವರಿಗೆ ತಡೆಯುವುದು ನನ್ನ ಸಂಪ್ರಾದಾಯ ಆಗಿಲ್ಲವೇ ಇಲ್ಲ. ಆದರೆ ನಾವು ಅವರಿಗೆ ಸ್ಪಷ್ಟವಾದ ಭರವಸೆಯನ್ನು ನೀಡಬಹುದಾದರೆ, ನನ್ನ ಸ್ವತಃಕ್ಕೆ ಸಂಬಂಧಿಸಿದಂತೆ ಅವರಿಗೆ ಭರವಸೆಯಿರಲಿ ನಾನು ಎಲ್ಲ ಅವಸ್ಥೆಗಳನ್ನು ಪೂರ್ಣಗೊಳಿಸಲಿರುವೆ. (ನಗು).

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ನನಗೆ ಸಂತೋಷವಾಯಿತು. ಆದರೆ ಪ್ರೊಫೆಸರ್ ಶಾಹರವರೋರ್ವರೇ ಯಾರು ಅಧ್ಯಕ್ಷೀಯ ಹುದ್ದೆಗೆ ತಮ್ಮನ್ನು ಅಭ್ಯರ್ಥಿಯಾಗಲಿರುವರೆಂಬ ಅನಿಸಿಕೆಯೊಂದಿಗೆ ಈ ದೇಶದಲ್ಲಿ ಮುಂದುವರಿಯಲಾಗದು (ನಗು). ಸುರಕ್ಷತೆ ಅಡಗಿರುವುದು ಅಭ್ಯರ್ಥಿಗಳ ಬಹುತ್ವದಲ್ಲಿ. ಆದುದರಿಂದ ನಾವು ವ್ಯವಹಾರಿಕ ದೃಷ್ಟಿಯಿದ ಆವೊಂದು ವಿಶೇಷ ಹುದ್ದೆಗೆ ಹುರಿಯಾಳಾಗಿ ಸಾಕಷ್ಟು ಅಭ್ಯರ್ಥಿಗಳು ಇರಲಿರುವರೆ ಎನ್ನುವುದನ್ನು ಪರಿಗಣಿಸಬೇಕು. ಒಂದು ವೇಳೆ ನಾವು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಾದರೆ, ಈ ತಿದ್ದುಪಡಿಯ ಸದ್ಗುಣಿ ಲಕ್ಷಣಗಳನ್ನು ವಿರೋಧಿಸದೆ ನಾವು ವ್ಯವಹಾರಿಕವಾಗಿ

ಸಂವಿಧಾನದಿಂದ ಈ ಒಂದು ಪ್ರಾವಧಾನವನ್ನು ಸ್ಥಗಿತಗೊಳಿಸಿರುತ್ತೇವೆ. ಈ ಬಗೆಗೆ ನನಗೆ ಕಿಂಚಿತ್ ಅನುಮಾನವೂ ಇಲ್ಲ.

ಈ ಕಾರಣಗಳಿಂದಾಗಿ ನಾನು ಯಾವುದೇ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲಾರೆ.

**ಶ್ರೀ ಹೆಚ್.ವಿ.ಕಾಮತ್ :** ಅಭ್ಯರ್ಥಿಯ ಹಿತ ಅಥವಾ ಪಾಲನ್ನು ವ್ಯಕ್ತಪಡಿಸುವುದನ್ನು ಕೂಡ ಡಾ. ಅಂಬೇಡ್ಕರ್‌ರು ವಿರೋಧಿಸುವರೆ? ಅಂತಹ ಘೋಷಣೆಯನ್ನೂ ಅವರು ವಿರೋಧಿಸುವರೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಆದರೆ ಅದು ತಿದ್ದುಪಡಿಯಲ್ಲ.

**ಶ್ರೀ ಹೆಚ್. ವಿ. ಕಾಮತ್ :** ಅದು ತಿದ್ದುಪಡಿಯ ಭಾಗವಾಗಿದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಆದರೆ ಅದು ತಿದ್ದುಪಡಿಯಲ್ಲ.

**ಮಾನ್ಯ ಉಪಸಭಾಪತಿ :** ನಾನೀಗ ತಿದ್ದುಪಡಿಗಳನ್ನು ಒಂದೊಂದಾಗಿ ಮತಕ್ಕೆ ಇಡುತ್ತೇನೆ.

(ಕೆಳಕಾಣಿಸಿದ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು; ಮೂರು ತಿದ್ದುಪಡಿಗಳು ತಿರಸ್ಕೃತಗೊಂಡವು)

**ಮಾನ್ಯ ಉಪಸಭಾಪತಿ :** ಪ್ರಶ್ನೆ ಇರುವುದು:

"ವಿಧಿ ೪೭ರ ಕಲಮು (೨)ರಲ್ಲಿ ಕಲಮು ೨ರ ವಿವರಣೆಯಲ್ಲಿ 'ಯಾವುದೇ ಹುದ್ದೆ ಅಥವಾ ಲಾಭದ ಹುದ್ದೆ' ಈ ಪದಗಳು ಬರುವ ಕಡೆಗಳಲ್ಲೆಲ್ಲ ಅವುಗಳ ಬದಲಾಗಿ 'ಯಾವುದೇ ಲಾಭದಾಯಕ ಹುದ್ದೆ' ಈ ಪದಗಳನ್ನು ಇಡುವುದು."

ಮಾನ್ಯ ಉಪಸಭಾಪತಿ : ಪ್ರಶ್ನೆ ಇರುವುದು :

"ವಿಧಿ ೪೭ರ ಕಲಮು(೨)ರ ವಿವರಣೆಯ ಉಪ–ಕಲಮು (ಎ)ಗೆ ಮುಂದಿನದನ್ನು ಬದಲಿ ಇಡುವುದು."

"(ಅ) ಆತನು ಮೊದಲನೆ ಪರಿಶಿಷ್ಟದ ಭಾಗ ೧ರಲ್ಲಿ ವಿವರಿಸಿದ ಯಾವುದೇ ರಾಜ್ಯದ ತಾತ್ಕಾಲಿಕ ರಾಜ್ಯಪಾಲನಾಗಿರಬಹುದು ಅಥವಾ ಭಾರತದ ಇಲ್ಲವೆ ಅಂತಹ ಯಾವುದೇ ರಾಜ್ಯದ ಮಂತ್ರಿ, ಅಥವಾ."

ತಿದ್ದುಪಡಿಯಾದಂತೆ ವಿಧಿ ೪೭ನ್ನು ಅಂಗೀಕರಿಸಲ್ಪಟ್ಟಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

**********

## ವಿಧಿ ೪೭–ಎ

* **ಶ್ರೀ ತಾಜಮುಲ ಹುಸ್ಸೇನ :** ............... ಮಾನ್ಯರೆ, ಈಗ ನನ್ನ ಅಭಿಪ್ರಾಯದಲ್ಲಿ ಇದೊಂದು ಒಳ್ಳೆಯ ತಿದ್ದುಪಡಿಯಾಗಿದೆ. ಆದರೆ ಇದನ್ನು ಗೌರವಾನ್ವಿತ ಡಾ.ಅಂಬೇಡ್ಕರ್‌ರವರು ಒಪ್ಪಿಕೊಳ್ಳುವುದಿಲ್ಲವೆಂಬ ಭಯವಿದೆ. ಪ್ರೊಫೆಸರ್ ಶಾಹರವರು ಸುಂದರ ತಿದ್ದುಪಡಿಗಳೊಂದಿಗೆ ಮುಂದೆ ಬರುತ್ತಾರೆ. ಆದರೆ ಅವುಗಳೆಲ್ಲ ಕರಡು ಸಮಿತಿಯ ಭಾರ ಹೊಂದಿರುವ ಗೌರವಾನ್ವಿತ ಸದಸ್ಯರು ಅವುಗಳ ಪರ ಇರಲಾರದ್ದರಿಂದ ಎಲ್ಲವು ಮುಗಿಬೀಳುತ್ತವೆ. ಆದುದರಿಂದ ತಮ್ಮ ಅನುಮತಿಯೊಂದಿಗೆ, ಇದಕ್ಕೆ ನಾನು ಒಂದು ಮೌಖಿಕ

---

* ಸಿ.ಎ.ಡಿ. ಸಂಪುಟ ೭, ೨೭ನೆಯ ಡಿಸೆಂಬರ್, ೧೯೪೮, ಪುಟ ೧೦೪೦

ತಿದ್ದುಪಡಿಯನ್ನು ಮಂಡಿಸಬಯಸುವೆ.

**ಮಾನ್ಯ ಉಪಸಭಾಪತಿ :** ನಿಮಗೆ ಹಾಗೆ ಮಾಡಲು ನಾನು ಅನುಮತಿಸಲಾರೆ. ಹಾಗಾದಲ್ಲಿ ಇತರರು ಕೂಡ ಮೌಖಿಕ ತಿದ್ದುಪಡಿಗಳೊಂದಿಗೆ ಮುಂದೆ ಬರುತ್ತಾರೆ. ಡಾ. ಅಂಬೇಡ್ಕರ್‌ರರು ಒಪ್ಪಿಕೊಳ್ಳಲು ನೀವು ಸಲಹೆ ಮಾಡಬಹುದಾಗಿದೆ.

**ಶ್ರೀ ತಾಜಮುಲ ಹುಸೇನ :** ನನ್ನ ಸಲಹೆ ಇದಾಗಿದೆ : ಶ್ರೀ ಶಾಹರವರ ತಿದ್ದುಪಡಿಯು ವ್ಯಕ್ತಿಯೋರ್ವನು ಅಧ್ಯಕ್ಷನಾಗಿ ಆಯ್ಕೆಗೊಂಡಲ್ಲಿ ಆತನು ಆಸ್ತಿ, ಹಿತಾಸಕ್ತಿ ಘೋಷಿಸಬೇಕು, ಅಲ್ಲದೆ ತನ್ನ ಎಲ್ಲ ವೈಯಕ್ತಿಕ ಆಸ್ತಿಯನ್ನೂ ತಿರುಗಿಸಬೇಕೆಂದು ಹೇಳುವುದಿಲ್ಲ. ಅವರು ಹೇಳುವುದು ಆ ವ್ಯಕ್ತಿ ತನ್ನೆಲ್ಲ ಹಕ್ಕುಗಳನ್ನು, ಪಾಲು ಅಥವಾ ಹಿತಗಳನ್ನು ಸರಕಾರದಿಂದ ಸಹಾಯ ಪಡೆದ ಇಲ್ಲವೆ ಬೆಂಬಲಿಸಿದ ಮತ್ತು ಅಂತಹ ಎಲ್ಲ ಹಕ್ಕುಗಳು ಇತ್ಯಾದಿಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ತನ್ನನ್ನು ತಾನು ಭಾರತ ಸರಕಾರದ ಹಿಡಿತದಲ್ಲಿರಿಸಬೇಕು ಎಂದು. ಅದು ಭಾರತ ಸರಕಾರಕ್ಕೆ ಬರುವುದೆಂದು ನಾನು ಹೇಳುತ್ತೇನೆ, ನಾನು ಅಂದುಕೊಂಡದ್ದು ಡಾ.ಅಂಬೇಡ್ಕರ್‌ರರು ಅದನ್ನು ಒಪ್ಪುವರೆಂದು. ಭಾರತ ಸರಕಾರದ ಕಾನೂನು ಮಂತ್ರಿಯಾಗಿ ಡಾ. ಅಂಬೇಡ್ಕರ್‌ರರು ಅದನ್ನು ಒಪ್ಪಿಕೊಳ್ಳದೆ ಹೋದಲ್ಲಿ 'ಭಾರತ ಸರಕಾರದ' ಬದಲಾಗಿ ಅದು ಅಧ್ಯಕ್ಷರ ಪತ್ನಿ ಮತ್ತು ಮಕ್ಕಳಿಗೆ ಹೋಗಲಿ, ಅದೊಂದು ಸರಳ ವಿಷಯ ............

ತಿದ್ದುಪಡಿಗೆ ನಾನು ಬೆಂಬಲಿಸುತ್ತೇನೆ ಮತ್ತು ನಾನು ನನ್ನ ಮೌಖಿಕ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಮಾನ್ಯ ಉಪಸಭಾಪತಿ :** ಮಂಡಿಸಲು ಯಾವುದೇ ತಿದ್ದುಪಡಿ ಇಲ್ಲ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನನಗೆ ಹೇಳುವುದೇನೂ ಇಲ್ಲ.

(ಪ್ರೊ. ಕೆ.ಟಿ. ಶಾಹರವರ ತಿದ್ದುಪಡಿಯನ್ನು ಮತಕ್ಕೆ ಹಾಕಲಾಯಿತು. ಆದರೆ ಸಭೆಯಿಂದ ತಿರಸ್ಕರಿಸಲ್ಪಟ್ಟಿತು).

***********

## ವಿಧಿ ೪೮

* **ಮಾನ್ಯ ಉಪಸಭಾಪತಿ :** ಒಂದೊಂದಾಗಿ ತಿದ್ದುಪಡಿಗಳನ್ನು ನೋಡಲಾಗಿ, ತಿದ್ದುಪಡಿ ಸಂ.೧೧೨೭, ೧೧೨೮ ಮತ್ತು ೧೧೩೦ ಇವುಗಳು ಒಂದೇ ತೆರನಾದವುಗಳೆಂದು ನಾನು ಕಾಣುತ್ತೇನೆ. ತಿದ್ದುಪಡಿ ಸಂ. ೧೧೩೦ ಹೆಚ್ಚು ವ್ಯಾಪಕವಾದದ್ದೆಂದಿನಿಸುತ್ತದೆಯಾದ್ದರಿಂದ ಮಂಡಿಸಬಹುದಾಗಿದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಾಧ್ಯಕ್ಷರೆ, ನಾನು ಮಂಡಿಸುವೆ:

" ವಿಧಿ ೪೮ರ ಕಲಮು ೧ರಲ್ಲಿ :–

" (ಎ) 'ಪಾರ್ಲಿಮೆಂಟು ಎರಡರಲ್ಲಿ ಅಥವಾ' ಈ ಪದಗಳಿಗೆ ಬದಲಾಗಿ 'ಪಾರ್ಲಿಮೆಂಟಿನ ಎರಡು ಸಭೆಗಳಲ್ಲೊಂದು ಅಥವಾ ಸಭೆಯೊಂದರ' ಈ ಪದಗಳನ್ನು ಸೇರಿಸುವುದು;

(ಬಿ) 'ಪಾರ್ಲಿಮೆಂಟಿನ ಸದಸ್ಯ ಅಥವಾ' ಈ ಪದಗಳಿಗೆ 'ಪಾರ್ಲಿಮೆಂಟಿನ ಯಾವುದೇ ಸಭೆಯ ಸದಸ್ಯ ಅಥವಾ ಒಂದು ಸಭೆಯ' ಈ ಪದಗಳನ್ನು ಬದಲಿ ಇಡುವುದು.

---

* ಸಿ.ಎ.ಡಿ. ಸಂಪುಟ ೭, ೨೭ನೆಯ ಡಿಸೆಂಬರ್, ೧೯೪೮, ಪು ೧೦೪೨.

(ಸಿ) 'ಸಂದರ್ಭ ಹೇಗಿರುತ್ತದೆಯೋ, ಅಂತಹ ಶಾಸಕಾಂಗದ ಪಾರ್ಲಿಮೆಂಟಿನಲ್ಲಿ' ಈ ಪದಗಳಿಗೆ ಬದಲಾಗಿ 'ಆ ಸಭೆಯಲ್ಲಿ' ಈ ಪದಗಳನ್ನು ಬದಲಿ ಇಡುವುದು."

ಮೂಲ ಭಾಷೆಯಲ್ಲಿ ಸ್ವಲ್ಪ ದೋಷವಿತ್ತು ಮತ್ತು ಅದನ್ನು ಸುಧಾರಿಸಲು ನಾವು ಪ್ರಯತ್ನಿಸಿರುತ್ತೇವೆ.

**ಶ್ರೀ ನಜೀರುದ್ದೀನ ಅಹಮದ** (ಪಶ್ಚಿಮ ಬಂಗಾಲ : ಮುಸ್ಲಿಂ) : ಉಪಸಭಾಪತಿ ಶ್ರೀಯವರೆ, ಕೆಲ ನಿಯಮಗಳನ್ನು ಒಪ್ಪಿಕೊಳ್ಳುವುದರ ಮೂಲಕ ನಾವು ಈಗಾಗಲೆ ನಿರ್ಣಯಿಸಿರುವಂತೆ ವಿಧಿಯ ಭಾಷೆಯನ್ನು ಸುಂದರಗೊಳಿಸುವ ತಿದ್ದುಪಡಿಗಳಿಗೆ ಅನುಮತಿಸಲಾಗದು. ಭಾಷೆಯನ್ನು ಸುಂದರಗೊಳಿಸುವುದು ತಿದ್ದುಪಡಿಯೊಂದರ ಗುರಿ ಈಗಲ್ಲ. ತಿದ್ದುಪಡಿ ಮಂಡಿಸದ ಮುನ್ನ ಅದೊಂದು ಹೇರಲ್ಪಟ್ಟ ತಿದ್ದುಪಡಿಯಂತೆ ಕಾಣುತ್ತಿತ್ತು. ಆದರೆ ಡಾ. ಅಂಬೇಡ್ಕರ್‌ರರು ಸ್ಪಷ್ಟವಾಗಿ ಒಪ್ಪಿಕೊಳ್ಳುವಂತೆ ಇದೊಂದು ಕೇವಲ ವಿಧಿಯ ಭಾಷೆಯ ಸುಧಾರಣೆಯ ಉದ್ದೇಶಿತ ಎಂದು. ಆ ದೃಷ್ಟಿಯಲ್ಲಿ ಇದನ್ನು ಮಂಡಿಸಲಾಗಿದೆಯಾದರೂ, ಇದನ್ನು ಮತಕ್ಕೆ ಹಾಕಬೇಕಾಗಿಲ್ಲ.

**ಮಾನ್ಯ ಉಪಸಭಾಪತಿ :** ಸಭಾಧ್ಯಕ್ಷರಿಗೆ ಕೆಲ ಅಧಿಕಾರಗಳನ್ನು ನೀಡಬೇಕಾಗಿರುತ್ತದೆಯಲ್ಲದೆ ಸಭಾಧ್ಯಕ್ಷರು ಅವುಗಳನ್ನು ಯಾವ ರೀತಿಯಲ್ಲಿ ಸೂಕ್ತವೋ ಹಾಗೆ ಬಳಸುತ್ತಾರೆ.

**********

* **ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುವೆ.

"ವಿಧಿ ೪೮೮ರ ಕಲಮು (೨)ರಲ್ಲಿ 'ಅಥವಾ ವೇತನದ ಸ್ಥಿತಿಯಲ್ಲಿ' ಈ ಪದಗಳಿಗೆ "ಲಾಭದಾಯಕವಾದ" ಈ ಪದಗಳನ್ನು ಬದಲಿ ಇಡುವುದು."

ಮಾನ್ಯರೆ, ಈ ತಿದ್ದುಪಡಿ ಕೇವಲ ಏಕರೂಪತೆಗಾಗಿ.

**ಮಾನ್ಯ ಉಪಸಭಾಪತಿ :** ತಿದ್ದುಪಡಿ ಸಂಖ್ಯೆ ೧೧೩೪. ನಾನಿದನ್ನು ಮತಕ್ಕೆ ಹಾಕಲು ನೀವು ಬಯಸುವಿರಾ?

**ಶ್ರೀ ಹೆಚ್. ವಿ. ಕಾಮತ್ :** ನನ್ನ ಕೆಲಸವನ್ನು ಡಾ.ಅಂಬೇಡ್ಕರ್‌ರವರು ಮೊದಲೇ ಮಾಡಿಬಿಟ್ಟಿರುತ್ತಾರೆ. ಆದರೆ ನಾನು ತಿದ್ದುಪಡಿ ಸಂ. ೧೧೩೫ ಮಂಡಿಸಬಯಸುತ್ತೇನೆ.

**ಮಾನ್ಯ ಉಪಸಭಾಪತಿ :** ನಾವೀಗ ಕೇವಲ ತಿದ್ದುಪಡಿ ಸಂ.೧೧೩೪ವರೆಗೆ ಬಂದಿರುತ್ತೇವೆ. ತಿದ್ದುಪಡಿ ಸಂ. ೧೧೩೫ ನೀವದನ್ನು ಮಂಡಿಸಬಹುದು.

**ಶ್ರೀ ಹೆಚ್.ವಿ. ಕಾಮತ್ :** ನಾನು ಮಂಡಿಸುವೆ, ಮಾನ್ಯರೆ, "ವಿಧಿ ೪೮೮ರ ಕಲಮು (೩)ರಲ್ಲಿ 'ಅಧ್ಯಕ್ಷನು ಅಧಿಕೃತ ನಿವಾಸವನ್ನು ಹೊಂದಿರುವುದು ಮತ್ತು ಈ ಶಬ್ದಗಳನ್ನು ತೆಗೆದುಹಾಕುವುದು.

ಹಾಗೆಂದರೆ, ತಿದ್ದುಪಡಿ ಒಪ್ಪಿಕೊಂಡಲ್ಲಿ ಆ ಕಲಮು ಓದಲ್ಪಡುವುದು ಹೀಗೆ.

"ಅಧ್ಯಕ್ಷರಿಗೆ ಅಂತಹ ವರಮಾನಗಳು ಮತ್ತು ಭತ್ತೆಗಳನ್ನು ಸಂದಾಯ ಮಾಡುವುದು ಇತ್ಯಾದಿ ಇತ್ಯಾದಿ ..........".

ಈ ತಿದ್ದುಪಡಿಯನ್ನು ಮಂಡಿಸುವಲ್ಲಿ, ಮಾನ್ಯರೆ, ಡಾ.ಅಂಬೇಡ್ಕರ್‌ರರಿಂದ ಸ್ವಲ್ಪ ಬೆಳಕನ್ನು ಬಯಸುತ್ತೇನೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಯಾವ ತಿದ್ದುಪಡಿ?

**ಶ್ರೀ ಹೆಚ್.ವಿ. ಕಾಮತ್ :** ತಿದ್ದುಪಡಿ ಸಂ. ೧೧೩೫. ಈ ಸಭೆಯ ಎದುರಿಗೆ ಈ ತಿದ್ದುಪಡಿಯನ್ನು ಮಂಡಿಸುವುದರ ನನ್ನ ಉದ್ದೇಶ ಡಾ. ಅಂಬೇಡ್ಕರ್‌ರವರಿಗೆ ಅಂತಹ ಅಷ್ಟೇನು ಮಹತ್ವವಲ್ಲದ, ಆ ಪ್ರಧಾನ

ಅಂಶದ ಬಗೆಗೆ ನಮ್ಮ ಸಂವಿಧಾನದಲ್ಲಿ ಸೇರ್ಪಡೆ ಮಾಡುವ ಅಗತ್ಯತೆ ಏನಿದೆ ಎನ್ನುವುದರ ಬಗೆಗೆ ಕೇಳಿಕೊಳ್ಳುವುದಾಗಿದೆ...............

***********

* **ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಉಪಸಭಾಪತಿ ಮಾನ್ಯರೆ, ಮಂಡಿಸಲಾಗಿರುವ ತಿದ್ದುಪಡಿಗಳನ್ನು ನಾನು ಒಪ್ಪಿಕೊಳ್ಳಲಾರೆ, ಖೇದ ವ್ಯಕ್ತಪಡಿಸುವೆ. ಪ್ರೊಫೆಸರ ಶಾಹರವರ ತಿದ್ದುಪಡಿ ಸಂ.೧೧೩೮ ಅನಾವಶ್ಯಕವೆನಿಸುತ್ತದೆ. ಅದು ಅಧ್ಯಕ್ಷರಿಗೆ ಕಾರ್ಯಾಲಯ ಸಹಾಯ ಒದಗಿಸಬೇಕೆನ್ನುವುದನ್ನು ತಿಳಿಸುತ್ತದೆ. ಸಂವಿಧಾನದಲ್ಲಿ ಯಾವುದೇ ಪ್ರಾವಧಾನ ಇರಲಿ ಅಥವಾ ಇಲ್ಲದಿರಲಿ ಅದನ್ನು ಒದಗಿಸಲಾಗುವುದು ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ.

ಅವರ ಎರಡನೆ ತಿದ್ದುಪಡಿ ಸಂ.೧೧೪೦ ನಿವೃತ್ತಿ ಹೊಂದಿದ ನಂತರ ಅಧ್ಯಕ್ಷರಿಗೆ ಪಿಂಚಣಿ ಕೊಡುವುದನ್ನು ನಿಗದಿಮಾಡುವುದಕ್ಕೆ ಸಂಬಂಧಿತವಾದದ್ದು, ಭಾವನೆಗಳಿಗೆ ನಾನು ಒಪ್ಪುವೆ. ಅವರು ವ್ಯಕ್ತಪಡಿಸಿರುವುದೇನೆಂದರೆ ವ್ಯಕ್ತಿಗಳು ಪಾರ್ಲಿಮೆಂಟಿನ ಸದಸ್ಯರಾಗಿ ಜನರ ಸೇವೆ ಗೈದು ಬಹಳಷ್ಟು ವೈಯಕ್ತಿಕ ತ್ಯಾಗವನ್ನು ಮಾಡುತ್ತಾರೆ, ಅವರ ಜೀವನದ ಕೊನೆಯಲ್ಲಿ ಅವರಿಗೆ ಏನನ್ನೂ ಒದಗಿಸದೆ ಇರುವುದೂ ಅಪೇಕ್ಷಣೀಯವಾದದ್ದಲ್ಲ ಎನ್ನುವ ಅಂಶ. ಈ ವಿಶೇಷ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದೂ ಕಷ್ಟವೆನಿಸುತ್ತದೆ. ಅವರ ಪ್ರಕಾರ, ಪ್ರತಿ ವ್ಯಕ್ತಿ ಅಧ್ಯಕ್ಷನಾಗಿ ಅವಧಿಯೊಂದಕ್ಕೆ, ಯಾವುದು ೫ ವರ್ಷಗಳಾಗಿದೆಯೋ ಸೇವೆ ಸಲ್ಲಿಸಿ, ಐದು ವರ್ಷಗಳ ನಂತರ ಪಿಂಚಣಿಗೆ ಅರ್ಹನಾಗಬೇಕು ಎನ್ನುವುದು. ಎರಡನೆ ತೊಂದರೆ ಎಂದರೆ ಅವರ ತಿದ್ದುಪಡಿಯ ಪ್ರಕಾರ ಅವರ ಜೀವಮಾನದಲ್ಲಿ ಅವರ ಪಿಂಚಣಿಯನ್ನು ಬದಲಿಸತಕ್ಕದ್ದಲ್ಲ ಎನ್ನುವುದು. ಈಗ ಊಹಿಸುವುದಾದರೆ ಉದಾಹರಣೆಗೆ ವ್ಯಕ್ತಿಯೋರ್ವ ಯಾರು ಅಧ್ಯಕ್ಷರಾಗಿದ್ದರೋ ಅಲ್ಲದೆ ಅಧಿಕಾರವಾಧಿ ಪೂರ್ಣಗೊಳಿಸಿ ಪ್ರೊಫೆಸರ ಶಾಹರವರ ತಿದ್ದುಪಡಿಯಂತೆ ಪಿಂಚಣಿ ಪಡೆದಿರುತ್ತಾರೆ ಎಂದಿಟ್ಟುಕೊಳ್ಳೋಣ. ಆತನು ಪುನಃ ಅಧ್ಯಕ್ಷನಾಗಿ ಚುನಾಯಿತನಾದಲ್ಲಿ ಸ್ಥಿತಿ ಏನು? ಸ್ಥಿತಿ ಹೇಗಿರುವುದೆಂದರೆ ಆತನು ಅಧ್ಯಕ್ಷನಾಗಿ ಪಗಾರದ ಜೊತೆಗೆ ತಾನು ಅರ್ಹನಾಗಿರುವ ಪಿಂಚಣಿ ಕೂಡ ಪಡೆಯುತ್ತಿರುತ್ತಾನೆ. ಆತನ ಪಗಾರದ ಮಟ್ಟಕ್ಕೆ ತರಲು ಆತನ ಪಿಂಚಣಿಯನ್ನು ಕಡಿಮೆ ಗೊಳಿಸುವ ಸ್ಥಿತಿಯಲ್ಲಿ ಇರುವುದಿಲ್ಲ. ಆದುದರಿಂದ, ಯಾವ ರೀತಿಯಲ್ಲಿ ತಿದ್ದುಪಡಿ ಮಂಡಿಸಲ್ಪಟ್ಟಿದೆಯೋ ಯಾರಿಂದಲೇ ಅದು ಒಪ್ಪಿಕೊಳ್ಳಲು ವ್ಯವಹಾರಿಕವಾದದ್ದಲ್ಲವೆಂದು ನನಗೆ ಅನಿಸುತ್ತದೆ. ಆದರೆ ಅವರು ವ್ಯಕ್ತಪಡಿಸಿರುವ ಸಾಮಾನ್ಯ ದೃಷ್ಟಿಯ ಬಗೆಗೆ ಯಾವ ಅನುಮಾನವೂ ಇಲ್ಲ. ಪಾರ್ಲಿಮೆಂಟನಲ್ಲಿ ಕೆಲ ಕಾಲದ ಸೇವೆ ಸಲ್ಲಿಸಿದ ನಂತರ ಸದಸ್ಯರುಗಳು, ಅಧ್ಯಕ್ಷರೂ ಸೇರಿದಂತೆ ಯಾವುದೋ ರೀತಿಯ ಪಿಂಚಣಿಗೆ ಅರ್ಹರಾಗಬೇಕು. ಇದು ಸ್ತುತ್ಯಾರ್ಹವಾದ ವಿಚಾರ. ಇದನ್ನು ಬ್ರಿಟಿಷ್ ಪಾರ್ಲಿಮೆಂಟನಲ್ಲಿ ಕಾರ್ಯದಲ್ಲಿ ತರಲಾಗಿದೆ. ಭವಿಷ್ಯದಲ್ಲಿ ನಮ್ಮ ಪಾರ್ಲಿಮೆಂಟ್ ಕೂಡ ಈ ಅಂಶವನ್ನು ಗಮನದಲ್ಲಿ ಇಟ್ಟುಕೊಳ್ಳಲಿದೆ ಎನ್ನುವುದರ ಬಗೆಗೆ ನನಗೆ ಯಾವ ಅನುಮಾನವೂ ಇಲ್ಲ.

ಪ್ರೊಫೆಸರ್ ಕಾಮತರವರು ಎತ್ತಿರುವ ನಿವಾಸ ಸಂಬಂಧಿ ಪ್ರಶ್ನೆಯ ಬಗೆಗೆ ..................*

**ಶ್ರೀ ಹೆಚ್.ವಿ. ಕಾಮತ :** ಮಾನ್ಯರೆ ನಾನು ಪ್ರೊಫೆಸರ ಕಾಮತ್ ಅಲ್ಲ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಅವರು ಎಷ್ಟೊಂದು ಸಲ ಮಾತನಾಡುತ್ತಾರೆಯಾದ್ದರಿಂದ

---

* ಮೂಲ ಚರ್ಚೆಯಲ್ಲಿ ಚುಕ್ಕೆಗಳು ತಡೆಯನ್ನು ಸೂಚಿಸುತ್ತವೆ.

ಅವರು ಪ್ರೊಫೆಸರ್ ಎಂದು ಕರೆಸಿಕೊಳ್ಳಲು ಅರ್ಹರಾಗಿದ್ದಾರೆ. (ನಗು).

**ಶ್ರೀ ಹೆಚ್. ವಿ. ಕಾಮತ್ :** ನಾನು ಎಂದಿಗೂ ಪ್ರೊಫೆಸರ್ ಆಗದಂತೆ ದೇವರು ನನ್ನನ್ನು ತಡೆಯಲಿ. (ನಗು).

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಸರಿ, ನನ್ನ ಮಿತ್ರ ಶ್ರೀ ಕಾಮತರು ನಾವೇಕೆ ಈ ಪ್ರಾವಧಾನವನ್ನು ಸೇರಿಸುತ್ತೇವೆ ಎನ್ನುವುದನ್ನು ವಿವರಿಸಲು ಕೇಳಿರುತ್ತಾರೆ. ಅವರ ಕೇಳಿಕೆ ಅಧ್ಯಕ್ಷರ ಅಧಿಕೃತ ನಿವಾಸದ ಬಗ್ಗೆಯಾಗಿದ್ದು, ಅದನ್ನು ಮತ್ತು ಇನ್ನಿತರೆ ಚಿಕ್ಕ ಅಂಶಗಳನ್ನು ಸಂವಿಧಾನದಲ್ಲಿ ಸೇರಿಸಿ ಭಾರಗೊಳಿಸುವುದೇಕೆ ಎಂದು ನನ್ನನ್ನು ಕೆದಕಿದ್ದಾರೆ. ಅದೊಂದು ಸಣ್ಣ ವಿಷಯವಾಗಿದ್ದಿದ್ದಲ್ಲಿ ಸಂವಿಧಾನದಲ್ಲಿ ಸೇರಿಸುತ್ತಿರಲಿಲ್ಲ. ಆದರೆ ನಾನು ಶ್ರೀ ಕಾಮತರಿಗೆ ಕೇಳುವ ಪ್ರಶ್ನೆ ಇದು. ಅಧ್ಯಕ್ಷರು ಅಧಿಕೃತನಿವಾಸ ಹೊಂದಿರಬೇಕೆನ್ನುವುದು ಅವರು ಬಯಸುವರೆ ಅಥವಾ ಇಲ್ಲವೆ? ಅಲ್ಲದೆ ಪಾರ್ಲಿಮೆಂಟ್ ಅದಕ್ಕೆ ಪ್ರಾವಧಾನ ಮಾಡಬೇಕೆ ಇಲ್ಲವೆ? ಅದನ್ನು ಸಂವಿಧಾನದಲ್ಲಿ ವ್ಯಕ್ತಗೊಳಿಸುವುದು ತಪ್ಪೆ? ಒಂದು ವೇಳೆ ಉದ್ದೇಶವು ಆಗಿದ್ದಲ್ಲಿ..............

**ಶ್ರೀ ಹೆಚ್. ವಿ. ಕಾಮತ್ :** ಮಾನ್ಯರೆ, ಪ್ರಧಾನಮಂತ್ರಿಯು ಅಧಿಕೃತ ನಿವಾಸ ಹೊಂದಿರಲಿರುವರೆ ಇಲ್ಲವೆ ಎನ್ನುವುದನ್ನು ನಾನು ತಿಳಿಯಬಹುದೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಹೌದು, ಇದೊಂದು ಕೇವಲ ತಾರ್ಕಿಕ ವಿಷಯವಾಗಿದೆ. ನಾನು ತಿಳಿಯಬಯಸುವುದು ಅವರು ಅಧ್ಯಕ್ಷರು ಅಧಿಕೃತ ನಿವಾಸ ಹೊಂದಿರಬೇಕೆನ್ನುವ ಪ್ರಸ್ತಾಪವನ್ನು ಬೆಂಬಲಿಸುವರೇ ಅಥವಾ ಇಲ್ಲವೇ ಎನ್ನುವುದನ್ನು. ಅವರು ಆ ಪ್ರಸ್ತಾಪವನ್ನು ಒಪ್ಪಿಕೊಳ್ಳುವುದಾದರೆ ಅದೊಂದು ಕಡಿಮೆ ಮಹತ್ವದ ವಿಷಯವಾಗಲಿದೆ. ಅದನ್ನು ಸಂವಿಧಾನದಲ್ಲಿಯೇ ಪ್ರಾವಧಾನ ಮಾಡಿದರೂ ಅಷ್ಟೆ ಇಲ್ಲವೆ ಆ ವಿಷಯವನ್ನು ಭವಿಷ್ಯದ ಪಾರ್ಲಿಮೆಂಟಿಗೆ ನಿರ್ಣಯಿಸಲು ಬಿಟ್ಟರೂ ಅಷ್ಟೆ. ಈ ವಿಷಯವನ್ನು ಸಂವಿಧಾನದಲ್ಲಿ ಪರಿಚಯಿಸುವುದಕ್ಕೆ ಕಾರಣವೆಂದರೆ ಭಾರತ ಸರಕಾರದ ಕಾಯಿದೆಯಲ್ಲಿ, ಭಾರತ ಸರಕಾರ ಕಾಯಿದೆಯ ಎರಡನೇ ಪರಿಶಿಷ್ಟದಲ್ಲಿ ನೀಡಲ್ಪಟ್ಟ ಅಧಿಕಾರದನ್ವಯ ರಾಜ್ಯ ಕಾರ್ಯದರ್ಶಿಯವರು ಹಲವಾರು ಕೌನ್ಸಿಲ್‌ನಲ್ಲಿ ಆಜ್ಞೆಗಳನ್ನು ಹೊರಡಿಸಿ ಗೌವರ್ನರ ಜನರಲ್ ಮತ್ತು ಗೌವರ್ನರುಗಳಿಗಾಗಿ ನಿವಾಸಗಳನ್ನು ಒದಗಿಸಿರುತ್ತಾರೆ; ನಾವು ಕೇವಲ ಜಾರಿಯಲ್ಲಿರುವ ಆ ರೂಢಿಯನ್ನು ಸಂವಿಧಾನದ ಪ್ರಾವಧಾನವೊಂದರಲ್ಲಿ ಅಳವಡಿಸಿರುತ್ತೇವೆ; ಮತ್ತು ನಾವು ಮಾಡಿರುವುದು ಒಳ್ಳೆಯ ಅಭಿರುಚಿಯ ಉಲ್ಲಂಘನೆಯೂ ಅಲ್ಲ ಅಥವಾ ಮಾಡಬಾರದ್ದೇನೂ ಮಾಡಿಲ್ಲ.

**ಶ್ರೀ ಹೆಚ್.ವಿ. ಕಾಮತ್ :** ಮಾನ್ಯರೆ, ಸ್ಪಷ್ಟನೆಯೊಂದನ್ನು ಕುರಿತು, ವಿಧಿ ೪೮ರ ಈ ಒಂದು ಪ್ರತ್ಯೇಕ ಕಲಮು ಅಧ್ಯಕ್ಷರಿಗೆ ಒಂದಕ್ಕಿಂತ ಹೆಚ್ಚು ಅಧಿಕೃತ ನಿವಾಸಗಳನ್ನು ಒದಗಿಸುವಲ್ಲಿ ಅಡ್ಡಿಯುಂಟು ಮಾಡುವುದೆ? ಅದು ಅಧ್ಯಕ್ಷರು **"**ಒಂದು ಅಧಿಕೃತ ನಿವಾಸ**"** ಹೊಂದಿರುವುದರ ಬಗೆಗೆ ತಿಳಿಸುತ್ತದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಹಾಗೇನಿಲ್ಲ ಎರಡು ಅಧಿಕೃತ ನಿವಾಸಗಳಿರಬಹುದು.

ಆಮೇಲೆ, ಶ್ರೀ ಸರ್ವಟೆಯವರ ತಿದ್ದುಪಡಿ ಸಂ.೨೮ಕ್ಕೆ ಸಂಬಂಧಿಸಿದಂತೆ, ನಾನು ಹೇಳ ಬಯಸುವುದೇನೆಂದರೆ ಈ ವಿಷಯವನ್ನು ನಾವು ಭಾರತದ ಒಕ್ಕೂಟಕ್ಕೆ ಸೇರಲಿರುವ ರಾಜ್ಯಗಳ ಸಂವಿಧಾನದ ಪರಿಶೀಲನೆ ಮಾಡುವಾಗ ಪರಿಗಣನೆ ಮಾಡಬಹುದಾಗಿದೆ. ಇಂದಿನ ಪರಿಸ್ಥಿತಿ ಬಹಳೇ ಅಸ್ಥಿರವಾದದ್ದಾಗಿದೆ. ಶ್ರೀ ಸರ್ವಟೆಯವರು ಸಲಹೆಮಾಡಿರುವ ಅಂತಹ ಯಾವುದೇ ಪ್ರಾವಧಾನ ಮಾಡುವುದು ಬಲು ಕಷ್ಟ.

**ಮಾನ್ಯ ಉಪಸಭಾಪತಿ :** ತಿದ್ದುಪಡಿಗಳನ್ನು ಈಗ ಒಂದಾದ ನಂತರ ಒಂದು ಮತಕ್ಕೆ ಹಾಕಲಾಗುವುದು.

ಡಾ. ಅಂಬೇಡ್ಕರ್ ಇವರ ಹೆಸರಿನಲ್ಲಿರುವ ತಿದ್ದುಪಡಿ ಸಂ.೧೧೩೦.

(ಕಾಣಿಸಲ್ಪಟ್ಟಿರುವಂತೆ ಡಾ. ಅಂಬೇಡ್ಕರ್‌ರವರ ಎಲ್ಲ ತಿದ್ದುಪಡಿಗಳು ಅಂಗೀಕರಿಸಲ್ಪಟ್ಟವು. ಶ್ರೀ ಸರ್ವಟೆ, ಶ್ರೀ ನಜೀರುದ್ದೀನ ಅಹಮದ, ಶ್ರೀ ಕಾಮತ ಮತ್ತು ಶ್ರೀ ಕೆ.ಟಿ. ಶಾಹರವರ ಹೆಸರಿನಲ್ಲಿರುವ ತಿದ್ದುಪಡಿಗಳು ನಿರಾಕರಿಸಲ್ಪಟ್ಟವು. ವಿಧಿ ೪೮, ತಿದ್ದುಪಡಿಯಾದಂತೆ ಅಂಗೀಕರಿಸಲ್ಪಟ್ಟಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು).

*************

## ವಿಧಿ ೪೯

* **ಮಾನ್ಯ ಉಪಸಭಾಪತಿ :** ಈಗ ನಾವು ವಿಧಿ ೪೯ಕ್ಕೆ ಬರುತ್ತೇವೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಉಪಾಧ್ಯಕ್ಷ ಶ್ರೀ ಮಾನ್ಯರೆ, ನಾನು ಮಂಡಿಸುವೆ.

"ವಿಧಿ ೪೯ರಲ್ಲಿ ಭಾರತದ ಮುಖ್ಯ ನ್ಯಾಯಾಧೀಶ' ಈ ಪದಗಳ ನಂತರ 'ಅಥವಾ ಅವರ ಅನುಪಸ್ಥಿತಿಯಲ್ಲಿ ದೊರಕಬಹುದಾದ ಸೇವೆಯಲ್ಲಿ ಜ್ಯೇಷ್ಠರಾಗಿರುವ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನು' ಈ ಪದಗಳನ್ನು ಸೇರಿಸುವುದು."

ಮಾನ್ಯರೆ, ಭಾರತದ ಮುಖ್ಯ ನ್ಯಾಯಾಧೀಶರು ಉಪಸ್ಥಿತರಿರದಿದ್ದ ಸಂದರ್ಭದಲ್ಲಿ ಅವಕಾಶ ಮಾಡಿಕೊಡಲು ಇದಾಗಿದೆ. ಅವರ ಕೆಲಸವನ್ನು ಮತ್ತೆ ಇತರ ನ್ಯಾಯಾಧೀಶರು ಮಾಡಬೇಕು, ಅಲ್ಲದೆ ಅದನ್ನು ಸೇವೆಯಲ್ಲಿ ಜೇಷ್ಠರಾದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರೇ ಮಾಡುವುದು ಸೂಕ್ತ. ಮಾನ್ಯರೆ, ಇದಕ್ಕೆ ಹೆಚ್ಚಿನ ವಿವರಣೆ ಅಗತ್ಯವಿಲ್ಲವಾದ್ದರಿಂದ ಸಭೆಯು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದೆಂದು ನಂಬುತ್ತೇನೆ.

**ಮಾನ್ಯ ಉಪಸಭಾಪತಿ :** ಡಾ. ಅಂಬೇಡ್ಕರ್, ನೀವು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವಿರಾ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಹೌದು, ನಾನು ಒಪ್ಪಿಕೊಳ್ಳುವೆ.

*******

** **ಮಾನ್ಯ ಉಪಸಭಾಪತಿ :** ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಉಪಾಧ್ಯಕ್ಷ ಶ್ರೀ ಮಾನ್ಯರೆ, ನಾನು ಶ್ರೀ ಟಿ.ಟಿ. ಕೃಷ್ಣಮಾಚಾರಿಯವರಿಂದ ಮಂಡಿಸಲ್ಪಟ್ಟಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಿದ್ಧನಾಗಿರುವೆ. ಅದು ತಿದ್ದುಪಡಿ ಸಂ.೧೧೪೪ ಆಗಿದೆ. ಅದಲ್ಲದೆ ಶ್ರೀ ತ್ಯಾಗಿಯವರಿಂದ ತಿದ್ದುಪಡಿಯಾದಂತಹ ಶ್ರೀ ಕಾಮತರ ತಿದ್ದುಪಡಿ ಸಂ. ೧೧೪೬ನ್ನು ಕೂಡ ಒಪ್ಪಿಕೊಳ್ಳಲು ಸಿದ್ಧನಾಗಿರುವೆ.

ಶ್ರೀ ಟಿ.ಟಿ. ಕೃಷ್ಣಮಾಚಾರಿಯವರಿಂದ ಮಂಡಿತ ಮೊದಲನೆ ತಿದ್ದುಪಡಿಗೆ ಸಂಬಂಧಿಸಿದಂತೆ ಹೆಚ್ಚಿನ ವಾದದ ಅಗತ್ಯವಿಲ್ಲ. ನನ್ನ ಹೆಸರಿನಲ್ಲಿದ್ದ ತಿದ್ದುಪಡಿಗಿಂತ ಅವರ ತಿದ್ದುಪಡಿ ನಿಜಕ್ಕೂ ಉತ್ತಮವಾದದ್ದಾಗಿದೆ.

ಸಂ.೧೧೪೬, ಎರಡನೆ ತಿದ್ದುಪಡಿಗೆ ಸಂಬಂಧಿಸಿದಂತೆ, ಶ್ರೀ ತ್ಯಾಗಿಯವರಿಂದ ತಿದ್ದುಪಡಿಯಾದ

---

* ಸಿ.ಎ.ಡಿ. ಸಂಪುಟ ೭, ೨೭ನೆಯ ಡಿಸೆಂಬರ್, ೧೯೪೮, ಪುಟ ೧೦೪೭

** ಸಿ.ಎ.ಡಿ. ಸಂಪುಟ ೭. ೨೭ನೇ ಡಿಸೆಂಬರ್, ೧೯೪೮. ಪು. ೧೦೬೦–೬೨

ರೂಪದಲ್ಲಿ ನಾನು ಒಪ್ಪಿಕೊಳ್ಳಲು ಸಿದ್ಧನಿರುವೆ. ಪ್ರಶ್ನೆಯ ವಿಷಯದ ಗುಣಾಂಶಗಳಲ್ಲಿ ಹೋಗಲು ನನ್ನನ್ನು ಕರೆಯಲಾಗಿದೆ ಎಂದೆನಿಸುವುದಿಲ್ಲ. ಆದಾಗ್ಯೂ ಕರಡು ಸಮಿತಿಯು ತನ್ನ ಮೂಲ ಕರಡಿನಲ್ಲಿ "ದೇವರ ಹೆಸರಿನಲ್ಲಿ" ಈ ಪದಗಳನ್ನು ಏಕೆ ಸೇರಿಸಲಿಲ್ಲ ಎನ್ನುವುದಕ್ಕೆ ಸಂಬಂಧಿಸಿದಂತೆ ಕೆಲ ಮಾತುಗಳನ್ನು ನಾನು ಹೇಳಲೇ ಬೇಕು. ಮಾನ್ಯರೆ ಕರಡು ಸಮಿತಿಯು ಈ ವಿಷಯದ ಬಗೆಗೆ ಸಾಕಷ್ಟು ಚರ್ಚೆಯನ್ನು ನಡೆಸಿತೆಂದು ನನಗೆ ಅನಿಸುವುದಿಲ್ಲ. ಆದುದರಿಂದ ಆ ಪದಗಳನ್ನು ಮೂಲದಲ್ಲಿ ಏಕೆ ಸೇರಿಸಲಿಲ್ಲ ಎನ್ನುವುದಕ್ಕೆ ಯಾವುದೇ ಕಾರಣಗಳನ್ನು ನಾನು ಇಡಲಾರೆ.

ನಾನು ಸಂಬಂಧಪಟ್ಟಿರುವಂತೆ, ಈ ವಿಷಯದ ಬಗೆಗೆ ಪರಿಶೀಲನೆ ಅಗತ್ಯವೆಂದು ನನಗೆ ಅನಿಸುತ್ತದೆ. ಸಭೆಯು ನನಗೆ ಅನುಮತಿಸಿದಲ್ಲಿ, ವಿಷಯದ ಮೇಲೆ ನನ್ನ ಅಭಿಪ್ರಾಯ ವ್ಯಕ್ತಪಡಿಸುವೆ. ಅದರ ಬಗೆಗೆ ನನಗೆ ಅನಿಸಿದ್ದು ಹೀಗೆ. "ದೇವರು" ಈ ಪದ ನನಗೆ ತಿಳಿದಿರುವ ಮಟ್ಟಿಗೆ, ವಿವಿಧ ಧರ್ಮಗಳಲ್ಲಿ ವಿವಿಧ ಮಹತ್ವ ಹೊಂದಿದೆ. ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು ದೇವರನ್ನು ನಂಬುವುದು ಕೇವಲ ಪರಿಕಲ್ಪನೆಯಲ್ಲಷ್ಟೇ ಅಲ್ಲ, ಆದರೆ ಜಗತ್ತನ್ನಾಳುವ ಒಂದು ಶಕ್ತಿಯಂತೆ. ಆದುದರಿಂದ ಅದು ದೇವರಲ್ಲಿ ನಂಬಿಗೆ ಇಟ್ಟಿರುವವರ ನೈತಿಕ ಮತ್ತು ಆಧ್ಯಾತ್ಮಿಕ ಕಾರ್ಯಗಳನ್ನೂ ಆಳುತ್ತದೆ. ಎಲ್ಲಿಯವರೆಗೆ ಹಿಂದೂ ಧರ್ಮಶಾಸ್ತ್ರ ಸಂಬಂಧಪಟ್ಟಿದೆಯೋ, ನನ್ನ ತಿಳಿವಳಿಕೆಯಂತೆ – ನಾನು ಸಂಪೂರ್ಣವಾಗಿ ತಪ್ಪೂ ಆಗಿರಬಹುದು, ಆ ವಿಷಯದ ವಿದ್ಯಾರ್ಥಿಯೂ ನಾನಾಗಿರುವೆನೆಂದು ಭಾವಿಸುವುದಿಲ್ಲ – "ಈಶ್ವರ" ಪದವು ನನಗೆ ಅನಿಸಿದಂತೆ ಅಥವಾ ಅದಕ್ಕಿಂತ ಹೆಚ್ಚಿನ ಪದ "ಪರಮೇಶ್ವರ" ವಿಚಾರದ, ಪರಿಕಲ್ಪನೆಯ ಒಟ್ಟು ಅಂಶವಾಗಿದೆ. ನಾನು ಹೇಳಿರುವಂತೆ, ನಾನು ಬಳಸುವುದು ಸಮಗ್ರ ಕಲ್ಪನೆಯಾಗಿದೆ, ನೀವು ಬೇರಿಜುಗಳನ್ನು ಒಟ್ಟುಗೂಡಿಸಿದಲ್ಲಿ ಪಡೆಯುವುದು ಯಾವುದು ಸಾಮಾನ್ಯವೋ ನೀವಿದನ್ನು 'ಎಸ್' ಎಂದು ಕರೆಯುವಿರಿ. ಅದು ಕೇವಲ ಒಂದು ಶಿಖರ. ಅದರ ಹಿಂದೆ ವಾಸ್ತವಿಕವಾದ ವಸ್ತು ಯಾವುದೂ ಇಲ್ಲ. ಹಿಂದೂ ಧರ್ಮ ಶಾಸ್ತ್ರದಲ್ಲಿ ಯಾವುದಾದರೂ ವಾಸ್ತವಿಕವಾದವಿದ್ದಿದ್ದಲ್ಲಿ ಅದು "ಬ್ರಹ್ಮ", "ವಿಷ್ಣು", "ಮಹೇಶ", "ಶಿವ", "ಶಕ್ತಿ", ಹಿಂದುಗಳಿಂದ ಮಾನ್ಯಮಾಡಲ್ಪಟ್ಟ, ಜಗತ್ತನ್ನು ಆಳುವ ಶಕ್ತಿಗಳಿವೆ. ನನಗೆ ಅನಿಸುತ್ತದೆ ಕರಡು ಸಮಿತಿಯವರಿಗೆ ಈ ಆಧಾರದ ಮೇಲೆ ಮುಂದುವರಿದು ದೇವರ ಬಗೆಗಿನ ಆ ಶಿವನ ಕೆಳಗಣ, ಆ ವಿಷ್ಣುವಿನ ಕೆಳಗಣ, ಆ ಬ್ರಹ್ಮನ ಕೆಳಗಣ, ಆ ಶಕ್ತಿಯ ಕೆಳಗಣ ಮುಂತಾದ ತಿಳಿವಳಿಕೆ ಅಗತ್ಯವಿರುವ ಶಬ್ದಾವಳಿಗಳನ್ನು ಬಳಸಿ ಮುಂದುವರಿಯುವುದು ಅತಿ ಕಷ್ಟಕರವಾಗಿದ್ದಿತು. ಈ ಇಕ್ಕಟ್ಟಿನ ಪರಿಸ್ಥಿತಿಯಿಂದಾಗಿ ನಾವು ಪರಿಸ್ಥಿತಿಯನ್ನು, ನೀವು ಕರಡು ಸಮಿತಿಯಲ್ಲಿ ಕಾಣುವಂತೆ ಹಾಗೆಯೇ ಖಾಲಿ ಬಿಟ್ಟಿರುತ್ತೇವೆ.

**ಶ್ರೀ ಎ.ವಿ. ಠಕ್ಕರ** (ಕಾಠಿಯಾವಾಡ ಸಂಯುಕ್ತರಾಜ್ಯ) (ಸೌರಾಷ್ಟ್ರ): ಆದರೆ ಎಲ್ಲದರ ಮೇಲೆ ಯಾರೂ ಇಲ್ಲ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಈ ತಿದ್ದುಪಡಿಯನ್ನು ಪರಿಚಯಿಸಲಾಗಿದೆ, ಇದರಿಂದಾಗಿ ನಾನು ಸಂತೋಷಗೊಂಡಿದ್ದೇನೆ. ಈಗ ಕೆಲ ಸದಸ್ಯರುಗಳು ತಿದ್ದುಪಡಿಗೆ ಆಕ್ಷೇಪ ಎತ್ತಿದ್ದಾರೆ. ಸಂವಿಧಾನದಲ್ಲಿ ಧರ್ಮನಿರಪೇಕ್ಷ ರಾಜ್ಯ ಎಂದು ಯಾವುದನ್ನು ಘೋಷಿಸಲಾಗಿದೆಯೋ ಅದರ ಸ್ವರೂಪವನ್ನು, ದೇವರು ಎನ್ನುವ ಪದವನ್ನು ಸಂವಿಧಾನದಲ್ಲಿ ಬಳಸಿರುವುದು ಬದಲಿಸಲಿದೆ ಎನ್ನುವುದು ನನ್ನ ಭಯ. ನನ್ನ ನಿರ್ಣಯದಲ್ಲಿ ದೇವರು ಈ ಪದವನ್ನು ಪರಿಚಯಿಸಿರುವುದು ಆ ಪ್ರಶ್ನೆಯನ್ನು ಎತ್ತುವುದೇ ಇಲ್ಲ. ದೇವರು ಈ ಪದವನ್ನು ಪರಿಚಯಿಸಿರುವುದಕ್ಕೆ ಕಾರಣ ಸರಳವಾದದ್ದು ಆಗಿದೆ. ಸಂವಿಧಾನವು ಅಧ್ಯಕ್ಷರ ಮೇಲೆ ಕೆಲ ಹೊಣೆಗಳನ್ನು ಹೇರಿದೆ. ಈ ಹೊಣೆಗಳು ಸ್ಪಷ್ಟವಾಗಿ ಎರಡು ಪ್ರಕಾರದವುಗಳಾಗಿ ವಿಭಜಿಸಬಹುದಾದವುಗಳು,

ಹೊಣೆಗಳು ಯಾವುದಕ್ಕೆ ಕಾನೂನಾತ್ಮಕ ಮನ್ನಣೆ ಇದ್ದು, ಕಾನೂನಿನನ್ವಯ ಶಿಕ್ಷೆ ಒದಗಿಸಲಾಗಿದೆ ಮತ್ತೆ ಕೆಲ ಹೊಣೆಗಳಿವೆ, ಅವುಗಳಿಗೆ ಕಾನೂನಿನ ನಿಯಮಗಳನ್ನೂ ಒದಗಿಸಲಾಗಿಲ್ಲ ಇಲ್ಲವೆ ಯಾವುದೇ ಶಿಕ್ಷೆಯೂ ಒದಗಿಸಿಲ್ಲ. ಆದುದರಿಂದ, ಪ್ರತಿಯೊಂದು ಸಂವಿಧಾನದಲ್ಲಿ ಈ ಪ್ರಶ್ನೆ ಯಾವಾಗಲೂ ಉದ್ಭವಿಸುತ್ತದೆ. ಅಂತಹ ಕರ್ತವ್ಯಗಳು, ಅಂತಹ ಹೊಣೆಗಾರಿಕೆಗಳು ಯಾವುಗಳನ್ನು ವಿಶೇಷ ಕಾರ್ಯಕಾರಿಗೆ ವಹಿಸಿಕೊಡಲಾಗಿದ್ದು ಯಾವುಗಳಿಗೆ ಕಾನೂನು ಅಪರಾಧಿಕ ಮಂಜೂರಿ ಅಥವಾ ಶಿಕ್ಷೆ ವಿಧಿಸುವುದಿಲ್ಲವೊ ಅಂತಹ ಮಂಜೂರಿಯ ಉಪಯೋಗವೇನು ? ಎಲ್ಲಿಯವರೆಗೆ ನಾವು ನಿರ್ಣಯಿಸುವುದಿಲ್ಲವೋ ಅಥವಾ ನಂಬುವುದಿಲ್ಲವೋ ಇಂತಹ ನೈತಿಕ ಕರ್ತವ್ಯಗಳಿಗೆ ಯಾವುಗಳಿಗೆ ಅಪರಾಧಿಕ ಅಥವಾ ಕಾನೂನಾತ್ಮಕ ಮಂಜೂರಿ ಕೇವಲ ಪವಿತ್ರ ಕಂತೆ ಪುರಾಣವಾಗುತ್ತದೆಯಾದ್ದರಿಂದ ನಾವು ಕೆಲ ಪ್ರಕಾರದ ಒಪ್ಪಿಗೆ ಒದಗಿಸಲೇಬೇಕಾಗುತ್ತದೆ. ಕೆಲ ಜನರಿಗೆ ದೇವರು ಒಪ್ಪಿಗೆಯಾಗಿರುತ್ತಾನೆ. ದೇವರು ವಿಶ್ವದ ಹಾಗೂ ವ್ಯಕ್ತಿಗಳ ಜೀವನದ ನಿಯಂತ್ರಕ ಶಕ್ತಿಯಾಗಿರುವುದರಿಂದ ಅವರು ಒಂದು ವೇಳೆ ದೇವರ ಹೆಸರಿನಲ್ಲಿ ಪ್ರಮಾಣ ಮಾಡುವುದರಿಂದ ಅವರು ತಿಳಿಯುವುದು ದೇವರು ಅಂತಹ ಮಂಜೂರಿ ನೀಡುತ್ತಾನೆ ಎಂದು. ಅದು ಹೊಣೆಗಾರಿಕೆಗಳನ್ನು ಪೂರೈಸಲು, ಅಂತಹ ನೈತಿಕ ಅಂಶ ಯಾವುದಕ್ಕೆ ಮಂಜೂರಿ ಒದಗಿಸಿಲ್ಲವೊ ಅದು ಅಗತ್ಯವಾಗುತ್ತದೆ.

ಅಂತಹ ಜನಗಳೂ ಇದ್ದಾರೆ. ಯಾರು ತಮ್ಮ ಅಂತಃಸಾಕ್ಷಿಯೇ ಅಪ್ಪಣೆ ಎಂದು ಭಾವಿಸುತ್ತಾರೋ ಅವರಿಗೆ ಕಾರ್ಯಜರುಗಿಸಲು ಪಕ್ಕದಲ್ಲಿ ಕಾವಲು ವ್ಯಕ್ತಿಯ ರೂಪದಲ್ಲಿ ದೇವರ ಅಗತ್ಯವಿರುವುದಿಲ್ಲ. ತಮ್ಮ ಅಂತಃಸಾಕ್ಷಿಯಿಂದ ಬಂದ ಅಪ್ಪಣೆ ಶ್ರದ್ಧಾಪೂರ್ವಕ ನಿಷ್ಠೆಯ ಪ್ರತಿಜ್ಞೆಯಾಗಿ ಸಾಕೆಂದು ಅವರು ತಿಳಿಯುವುದು. ಬ್ರಾಡ್‌ಲಾ ಮತ್ತು ಸಾಮಾನ್ಯ ಸಭೆಯ ನಡುವೆ ನಡೆದ ಸಂಘರ್ಷದ ಬಗೆಗಿನ ವಿಷಯವನ್ನು ಯಾವ ಸದಸ್ಯರುಗಳು ಓದಿರುತ್ತಾರೋ ಅವರು ಮನಗಾಣುವುದೇನೆಂದರೆ ೧೮೮೦ ಅಥವಾ ಸುಮಾರಿಗೆ ಶ್ರೀ ಬ್ರಾಡ್‌ಲಾ ಒತ್ತಾಯಿಸಿದುದು ತಾನೋರ್ವ ನೈತಿಕ ಜೀವಿ ಮತ್ತು ತನ್ನ ಅಂತಃಸಾಕ್ಷಿ ಸಾಕಷ್ಟು ಚುರುಕಾಗಿದೆ, ಒಂದು ವೇಳೆ ತಾನು ಪ್ರಮಾಣ ಸ್ವೀಕರಿಸಿದಲ್ಲಿ ಆತನನ್ನು ನಿಯಂತ್ರಣದಲ್ಲಿರಿಸಲು ಆ ಮಂಜೂರಿಯೇ ಸಾಕು ಎಂಬುದಕ್ಕೆ. ಸಾಮಾನ್ಯ ಸಭೆಯಲ್ಲಿ ಬಹಳ ಕಾಲ ನಡೆದ ಹೋರಾಟ ಯಾವುದರ ಒಂದು ಸಂದರ್ಭದಲ್ಲಿ ಪ್ರಮಾಣವಚನ ಸ್ವೀಕರಿಸದೇ ಕಾಮನ್ಸ್ ಸಭೆಯಲ್ಲಿ ಕೊಡಲೆತ್ನಿಸಿದುದಕ್ಕಾಗಿ ಮತ್ತು ಕಾರ್ಯಕಲಾಪಗಳಲ್ಲಿ ಭಾಗವಹಿಸಿದುದಕ್ಕಾಗಿ. ಸಾರ್ಜಂಟ–ಎಟ್–ಆರ್ಮ್ಸ್‌ನಿಂದ ಎಲ್ಲಿ ಸಾಯುವನೋ ಎನ್ನುವಷ್ಟರ ಮಟ್ಟಿಗೆ ಬಡಿಯಲ್ಪಟಿದ್ದನು. ಶ್ರೀ ಗ್ಲಾಡಸ್ಟೋನನು ಅಂತಿಮವಾಗಿ ಮಣಿಯಬೇಕಾಗಿ ಬಂದು ಹೆಚ್ಚುವರಿ ಅಥವಾ ಬದಲೀ ವ್ಯವಸ್ಥೆಗೆ ಅನುವು ಮಾಡಿಕೊಡಬೇಕಾಯಿತು. ಅದನ್ನೇ ಶ್ರದ್ಧಾಪೂರ್ವಕ ನಿಷ್ಠೆಯ ಪ್ರತಿಜ್ಞೆ ಎಂದು ಕರೆಯುವುದು. ಆದುದರಿಂದ ಈ ತಿದ್ದುಪಡಿಯಲ್ಲಿ ಒಳಗೊಂಡಿರುವ ವಿಷಯ ರಾಜ್ಯದ ಸ್ವರೂಪದೊಂದಿಗೆ ಯಾವುದೇ ಸಂಬಂಧ ಹೊಂದಿಲ್ಲ. ಅದೊಂದು ಧರ್ಮ ನಿರಪೇಕ್ಷ ರಾಜ್ಯವಾಗಿರಬಹುದು ಇಲ್ಲವೆ ಧಾರ್ಮಿಕ ರಾಜ್ಯವಾಗಿರಬಹುದು. ಎತ್ತಿರುವ ಪ್ರಶ್ನೆ ಸೀಮೆಯ ಹೊರಗೇ ಇದೆ. ಎತ್ತಲಾಗಿರುವ ಒಂದೇ ಪ್ರಶ್ನೆ ಎಂದರೆ ಅಧ್ಯಕ್ಷರ ಮೇಲೆ ಒಂದು ರೀತಿಯ ಯಾವುದು ಒಂದು ರೀತಿಯ ಮಂಜೂರಿ ನೀಡುತ್ತದೆಯೋ ಅಂತಹ ನೈತಿಕ ಹೊಣೆಯನ್ನು ಹೇರಬೇಕೆ ಅಥವಾ ಇಲ್ಲವೆ ಎನ್ನುವುದು. ಒಂದು ವೇಳೆ ಅಧ್ಯಕ್ಷನು ದೇವರು ಓರ್ವ ಅಧಿಮಾರ್ಗದರ್ಶಿ ಎಂದು ತಿಳಿದು ಮತ್ತು ತಾನು ವಹಿಸಿಕೊಳ್ಳುವ ಕರ್ತವ್ಯಗಳಿಗೆ ದೇವರ ಹೆಸರಿನಲ್ಲಿ ಪ್ರಮಾಣ ಮಾಡದೆ ನಿಜವಾಗಿ ನಡೆದುಕೊಳ್ಳಲು ಆಗದು ಎಂದು ಬಗೆದಲ್ಲಿ, ನನ್ನ ವಿಚಾರವೆಂದರೆ ನಾವು ಆತನಿಗೆ ದೇವರ ಹೆಸರಿನಲ್ಲಿ ಪ್ರಮಾಣ ಮಾಡುವ

ಸ್ವಾತಂತ್ರ್ಯವನ್ನು ನೀಡಬೇಕು. ಮತ್ತೊರ್ವ ವ್ಯಕ್ತಿ ಯಾರಿಗೆ ದೇವರು ಅಧಿಮಾರ್ಗದರ್ಶಿ ಆಗಿಲ್ಲವೋ ಆತನಿಗೆ ನಾವು ಪ್ರಮಾಣ ಮಾಡುವ ಸ್ವಾತಂತ್ರ್ಯ ನೀಡಿ ಆ ಪ್ರಮಾಣದ ಆಧಾರದ ಮೇಲೆ ಕರ್ತವ್ಯಗಳನ್ನು ನಿರ್ವಹಿಸಲು ಅವಕಾಶ ಮಾಡಿಕೊಡಬೇಕು.

ಆದುದರಿಂದ ನಾನು ನಿವೇದಿಸುವುದೇನೆಂದರೆ ತಿದ್ದುಪಡಿ ಒಳ್ಳೆಯದಾಗಿದ್ದು ನಾನದನ್ನು ಒಪ್ಪಿಕೊಳ್ಳಲು ಸಿದ್ಧನಿರುವೆ.

**ಮಾನ್ಯ ಉಪಸಭಾಪತಿ :** ಶ್ರೀ ಕರಿಮುದ್ದೀನ ಮತ್ತು ಪ್ರೊ. ಶಾಹರವರಿಂದ ಮಂಡಿಸಲ್ಪಟ್ಟಿರುವ ತಿದ್ದುಪಡಿಗಳ ಬಗೆಗೆ ನಿಮಗೆ ಏನೂ ಹೇಳುವುದಿಲ್ಲವೆ?

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಇಲ್ಲ. ಮಾನ್ಯರೆ.

(ಈ ಹಿಂದೆ ತಿಳಿಸಲಾದ ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಮಂಡಿಸಿದ ತಿದ್ದುಪಡಿಯನ್ನು ಅಂಗೀಕರಿಸಲಾಯಿತು).

**ಮಾನ್ಯ ಉಪಸಭಾಪತಿ :** ನಂತರದ ತಿದ್ದುಪಡಿ ಯಾವುದನ್ನು ಮತಕ್ಕೆ ಹಾಕಬೇಕಾಗಿದೆಯೋ ಅದು ಸಂ.೧೧೪೬ ಆಗಿದೆ. ಆದರೆ ಇದು ಶ್ರೀ ಮಹಾವೀರ ತ್ಯಾಗಿಯವರ ತಿದ್ದುಪಡಿಯಂತಹುದೇ ಆಗಿದೆ ಮತ್ತು ಶ್ರೀ ಕಾಮತರು ಒಪ್ಪಿದಲ್ಲಿ ನಾನಿದನ್ನು ಮತಕ್ಕೆ ಹಾಕುತ್ತೇನೆ.

**ಶ್ರೀ ಹೆಚ್.ವಿ. ಕಾಮತ್ :** ಶ್ರೀ ತ್ಯಾಗಿಯವರ ತಿದ್ದುಪಡಿಗೆ ನನ್ನ ಅಭ್ಯಂತರವಿಲ್ಲ. ಏಕೆಂದರೆ ಅವರ ಮತ್ತು ನನ್ನ ತಿದ್ದುಪಡಿಗಳ ನಡುವೆ ಇರುವುದು ಕೇವಲ ಶಾಬ್ದಿಕ ಅಂತರ ಮಾತ್ರ.

**ಮಾನ್ಯ ಉಪಸಭಾಪತಿ :** ಹಾಗಿದ್ದಲ್ಲಿ ನಾನು ಶ್ರೀ ತ್ಯಾಗಿಯವರ ತಿದ್ದುಪಡಿ ಯಾವುದರ ಸಂ. ೧೧೪೬ ಆಗಿದೆಯೋ ಅದನ್ನು ಮತಕ್ಕೆ ಹಾಕುವೆ.

**ಶ್ರೀ ಹೆಚ್.ವಿ. ಕಾಮತ್ :** ಇಲ್ಲ, ಮಾನ್ಯರೆ, ನನ್ನ ತಿದ್ದುಪಡಿ ಶ್ರೀ ತ್ಯಾಗಿಯವರಿಂದ ತಿದ್ದುಪಡಿಯಾದಂತೆ ಮತಕ್ಕೆ ಹಾಕಬೇಕು.

**ಮಾನ್ಯ ಉಪಸಭಾಪತಿ :** ಹೌದು, ಹೌದು; ಅದು ತಿಳಿದೇ ಇದೆ; ನೀವು ಸ್ವರೂಪ ಮಾದರಿಗೆ ಅಷ್ಟೊಂದು ಅಂಟಿಕೊಳ್ಳುವವರೆಂದು ನಾನು ತಿಳಿದಿರಲಿಲ್ಲ. ನೀವು ಮಾದರಿಗಳನ್ನು ಅಷ್ಟೊಂದು ವ್ಯವಸ್ಥಿತವಾಗಿ ಮುರಿಯುವಿರಿ.

ಪ್ರಶ್ನೆ ಇರುವುದು.

"ವಿಧಿ ೪೯ರಲ್ಲಿ "ಶ್ರದ್ಧಾ ಪೂರ್ವಕವಾಗಿ ದೃಢೀಕರಿಸುತ್ತೇನೆ (ಅಥವಾ ಪ್ರಮಾಣ ಮಾಡುತ್ತೇನೆ)" ಈ ಪದಗಳಿಗೆ ಬದಲಾಗಿ ಈ ಕೆಳಗಿನದನ್ನು ಬದಲಿ ಇಡುವುದು:–

"ಮಾಡುತ್ತೇನೆ ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ"

* ಪ್ರಶ್ನೆ ಇರುವುದು.

''ಮಾಡುತ್ತೇನೆ ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ''

ವಿಧಿ ೪೯ರಲ್ಲಿ 'ದೃಢವಾಗಿ ಪ್ರತಿಜ್ಞೆ ಮಾಡುತ್ತೇನೆ (ಅಥವಾ ಪ್ರಮಾಣ ಮಾಡುತ್ತೇನೆ) ಎಂದು ಬರುವ ಪದಗಳಿಗೆ ಬದಲಾಗಿ

---

* ಸಿ.ಎ.ಡಿ. ಸಂಪುಟ ೭, ೨೮ನೆಯ ಡಿಸೆಂಬರ್, ೧೯೪೮, ಪುಟ ೧೦೬೫

ದೇವರ ಹೆಸರಿನಲ್ಲಿ ಪ್ರಮಾಣ / ದೃಢವಾಗಿ ಪ್ರತಿಜ್ಞೆ ಮಾಡುತ್ತೇನೆ

ಎಂದು ಬದಲಿಸಬೇಕು.

ತಿದ್ದುಪಡಿಯನ್ನು ಅಳವಡಿಸಿಕೊಳ್ಳಲಾಯಿತು.

ಮೇಲಿನಂತೆ ತಿದ್ದುಪಡಿಯಾದ ವಿಧಿ ೪೯ ಅವನ್ನು ಅಂಗೀಕರಿಸಿ ಸಂವಿಧಾನದಲ್ಲಿ ಸೇರ್ಪಡೆ ಮಾಡಲಾಯಿತು.

******

**ಮಿ. ಉಪಸಭಾಪತಿ :** ತಿದ್ದುಪಡಿ ಸಂಖ್ಯೆಗಳು ೧೯೬೭, ೧೧೬೭, ೧೧೬೮ ಮತ್ತು ೧೧೬೯. ಇವುಗಳಲ್ಲಿ ಸಾಮ್ಯತೆ ಹೋಲಿಕೆಗಳಿವೆ. ೧೧೬೭ ತಿದ್ದುಪಡಿಯನ್ನು ಮಂಡಿಸಬಹುದು. ಇದು ಡಾ. ಅಂಬೇಡ್ಕರ್ ಹೆಸರಿನಲ್ಲಿದೆ.

**ಗೌರವಾನ್ವಿತ ಡಾ. ಅಂಬೇಡ್ಕರ್ :** (ಬಾಂಬೆ, ಸಾಮಾನ್ಯ) ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ.

ವಿಧಿ ೫೦ರ ೨ನೇ ಖಂಡದ ಉಪಖಂಡ (ಬಿ)ಯಲ್ಲಿರುವ 'ರಿಂದ ಬೆಂಬಲಿತವಾದ ಎಂಬ ಪದಗಳಿಗೆ ಬದಲಾಗಿ ಬಹುಮತದಿಂದ ಮಂಜೂರಾದ' ಎಂಬ ಪದಗಳಿಂದ ಬದಲಿಸಬೇಕು.

**ಮಿ. ಉಪಸಭಾಪತಿ :** ಮಹಮ್ಮದ್ ತಾಹಿಕ್ ಮತ್ತು ಸಯೀದ್‌ಜಾಫರ್ ಇಮಾಮ್ ಇವರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೧೧೬೬.

**ಮಿ. ಮಹಮ್ಮದ್ ತಾಹಿರ್ :** ನನ್ನ ತಿದ್ದುಪಡಿಯು ಡಾ. ಅಂಬೇಡ್ಕರರ ತಿದ್ದುಪಡಿಗಿಂತ ವಿಭಿನ್ನವಾಗಿದೆ. ಚರ್ಚೆಯಾಗಬೇಕೆಂದು ನನ್ನ ಅಪೇಕ್ಷೆ.

**ಮಿ. ಉಪಸಭಾಪತಿ :** ಮತದಾನಕ್ಕೆ ಹಾಕಬಹುದು, ಆಗ ನಡೆಯುವ ಚರ್ಚೆಯಲ್ಲಿ ನೀವು ಭಾಗವಹಿಸಬಹುದು, ಹಾಗೂ ನಿಮ್ಮ ಅಭಿಪ್ರಾಯವನ್ನು ಮನಗಾಣಿಸಿ ಕೊಡಬಹುದು. ಈ ರೀತಿಯ ಕ್ರಮವೇ ಒಳ್ಳೆಯದೆಂದು ನಾನು ಭಾವಿಸುತ್ತೇನೆ.

*****

\+ **ಮಿ. ಉಪಸಭಾಪತಿಗಳು :** ತಿದ್ದುಪಡಿ ಸಂಖ್ಯೆ ೧೦೭೭ ಇದನ್ನು ಮಂಡಿಸಬಹುದು.

**ಗೌರವಾನ್ವಿತ ಡಾ. ಅಂಬೇಡ್ಕರ್ :** ಹೀಗೆ ಮಂಡಿಸಲು ಅವಕಾಶ ಬೇಡುತ್ತೇನೆ.

ವಿಧಿ ೫೦ ಪ್ರಕರಣ(೨) ಒಳಪ್ರಕರಣ(ಚ)ಯಲ್ಲಿರುವ "ಬೆಂಬಲದಿಂದ ಮಂಜೂರಾದ" ಎಂಬ ಪದಗಳಿಗೆ ಬದಲಾಗಿ "ಬಹುಮತದ ಮೂಲಕ ಮಂಜೂರಾದ" ಪದಗಳಿಂದ ಬದಲಿಸುವುದು.

*****

**ಗೌರವಾನ್ವಿತ ಡಾ. ಅಂಬೇಡ್ಕರ್ :** ಉಪಸಭಾಪತಿ ಮಾನ್ಯರೇ, ಈ ವಿಧಿಯ ಮೇಲೆ ಮಂಡಿಸಲಾದ ಅನೇಕ ತಿದ್ದುಪಡಿಗಳಲ್ಲಿ ನಾನು ಎರಡನ್ನು ಮಾತ್ರ ಒಪ್ಪಬಲ್ಲೆ. ಮಿ. ಗುಪ್ತೆಯವರು ಮಂಡಿಸಿದ ತಿದ್ದುಪಡಿ ಸಂಖ್ಯೆ ೧೧೫೮ ಅದರಲ್ಲಿ ಒಂದು, ಅಧ್ಯಕ್ಷರನ್ನು ಮಹಾಭಿಯೋಗಕ್ಕೆ ಗುರಿಪಡಿಸುವ ಗೊತ್ತುವಳಿ ಚರ್ಚೆಗೆ ಮಂಡನಾಪೂರ್ವದಲ್ಲಿ ಹದಿನಾಲ್ಕುದಿನ ಅವಧಿ ನೀಡಿ ತಿಳಿವಳಿಕೆ ಪತ್ರವನ್ನು ನೀಡುವ ಅವಕಾಶ ಕಲ್ಪಿಸುವುದು

---

\+ ಅದೇ ಪುಟ. ೧೦೬೭

\# ಅದೇ ಪುಟ ೧೦೭೯-೮೨

ಹಾಗೂ ನಾನು ಅಂಗೀಕರಿಸಲು ಸಿದ್ಧವಿರುವ ಇನ್ನೊಂದು ತಿದ್ದುಪಡಿ ಎಂದರೆ ತಿದ್ದುಪಡಿ ಸಂಖ್ಯೆ ೧೧೬೦ ನನ್ನ ಮಿತ್ರರಾದ ಮಿದೇಟ್ ಅವರು ಮಂಡಿಸಿರುವುದು ಹಾಗೂ ಮಿ. ಕೃಷ್ಣಮಾಚಾರಿಯವರ ತಿದ್ದುಪಡಿಗಳಿಗೆ ಒಳಪಟ್ಟಿರುವುದು. ಗೊತ್ತುವಳಿ ಮಂಡಿಸಲು ಅಗತ್ಯವಿರುವ ಪೂರ್ವಭಾವಿ ಶರತ್ತು ಎಂದರೆ ಅಗತ್ಯವಿರುವ ಸಾಕಷ್ಟು ಸದಸ್ಯರುಗಳ ಬೆಂಬಲ ನಿರೂಪಣೆಯ ಅವಕಾಶ ಕಲ್ಪನೆ, ಕರಡು ಸಂವಿಧಾನದಲ್ಲಿರಲಿಲ್ಲವೆಂದು ನನ್ನ ಭಾವನೆ ತಿದ್ದುಪಡಿಯಲ್ಲಿ ತರಲು ಉದ್ದೇಶಿಸಿದ ಬದಲಾವಣೆ ಉತ್ತಮ, ಅಂತೆಯೇ ಅದನ್ನು ಒಪ್ಪಿಕೊಳ್ಳಲು ನಾನು ತಯಾರಿದ್ದೇನೆ.

ಮಾನ್ಯರೇ, ಈಗ ನಾನು ಉಳಿದ ತಿದ್ದುಪಡಿಗಳ ವಿಚಾರಕ್ಕೆ ಬರುತ್ತೇನೆ ಮತ್ತು ಅವುಗಳನ್ನು ನಾನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ತಿಳಿಸಲು ವಿಷಾದಿಸುತ್ತೇನೆ. ಆದರೆ ಅವುಗಳಿಗೆ ಉತ್ತರ ನೀಡುವ ಅಗತ್ಯವಿದೆ ಎಂದು ಭಾವಿಸುತ್ತೇನೆ. ಪ್ರಸ್ತುತ, ಉತ್ತರದ ಅಗತ್ಯವಿರುವ ತಿದ್ದುಪಡಿಗಳ ಸಂಖ್ಯೆ ೧೦೫೧, ೧೧೭೧, ೧೧೭೭, ೧೧೭೯ ಮತ್ತು ೧೧೮೯ ಇವನ್ನು ಪ್ರೊಫೆಸರ್ ಕೆ.ಟಿ. ಷಾರವರು ಮಂಡಿಸಿದ್ದಾರೆ. ಮಾನ್ಯರೇ, ಪ್ರೊಫೆಸರ್ ಕೆ.ಟಿ. ಷಾರವರು ಮಂಡಿಸಿದ ತಿದ್ದುಪಡಿಗಳು ಈ ಎರಡು ಪ್ರಶ್ನೆಗಳನ್ನು ಕುರಿತಾಗಿವೆ. ಮೊದಲನೆಯದು ಕರಡು ಸಂವಿಧಾನದಲ್ಲಿ ಹೇಳಲಾದ ಮಹಾಭಿಯೋಗದ ಪ್ರಕ್ರಿಯೆಗೆ ಸಂಬಂಧಿಸಿದುದು ಮತ್ತು ಎರಡನೆಯದು, ಅಧ್ಯಕ್ಷರ ವಿರುದ್ಧ ದೋಷಾರೋಪದ ವಿಚಾರಣೆ ನಡೆಯುವಾಗ ಸದನದಲ್ಲಿ ಲಾಯರ್ ಮೂಲಕ ಹಾಜರಾಗುವುದು ಮತ್ತು ಸಮರ್ಥಿಸಿಕೊಳ್ಳುವುದು.

ಶಾಹರವರ ಎರಡನೆ ತಿದ್ದುಪಡಿಗೆ ಸಂಬಂಧಿಸಿದಂತೆ ಅಂತಹ ತಿದ್ದುಪಡಿಯ ಅಗತ್ಯವೇನಾದರೂ ಇದೆ ಎಂದು ನನಗೆ ಅನಿಸುವುದಿಲ್ಲ; ಏಕೆಂದರೆ ಪ್ರೊ. ಶಾಹರವರು ಉಲ್ಲೇಖಿಸುವುದು ವಿಧಿಯ ಉಪಕಲಮು (೪) ಅಥವಾ (೩), -ಅದು ಅಧ್ಯಕ್ಷನಿಗೆ ಪರಿಶೋಧನೆ ನಡೆಸುವ ಸಭೆಯ ಎದುರಿಗೆ ಹಾಜರಾಗುವ ಅಲ್ಲದೆ ಯಾವುದೇ ವ್ಯಕ್ತಿಯ ಮೂಲಕ ಹೆಸರಿಸುವುದಾದರೆ ಲಾಯರ ಮೂಲಕ ಪ್ರತಿನಿಧಿಸುವ ಸಾಕಷ್ಟು ಅವಕಾಶವನ್ನು ಒದಗಿಸಿಕೊಡುತ್ತದೆ. ಪ್ರೊ. ಶಾಹರವರು ಒಟ್ಟಾರೆ ಮಾಡಿರುವುದೆಂದರೆ ಕಲಮಿನ ಈ ಒಂದು ಭಾಗವನ್ನು ಪ್ರತ್ಯೇಕಿಸಿ, ಅದನ್ನು ಒಂದು ಸ್ವತಂತ್ರ ಪ್ರಸ್ತಾಪವನ್ನಾಗಿಸಲು ಉಪಕಲಮು (೩) (ಎ) ಆಗಿ ಇಟ್ಟಿರುವುದು. ಅವರು ಅನುಸರಿಸಿರುವ ಅಂತಹ ಉಪಾಯದ ಅಗತ್ಯವೇನಾದರು ಇದೆ ಎಂದು ನನಗೆ ತೋರುವುದಿಲ್ಲ.

ಈಗ, ನಾನು ಬರುವುದು ಮೊದಲನೆ ಭಾಗಕ್ಕೆ, ಹೆಸರಿಸುವುದಾದರೆ, ಕರಡು ಸಂವಿಧಾನದಲ್ಲಿ ತೋರಿಸಲಾಗಿರುವ ಮಹಾ ಅಭಿಯೋಗ ವ್ಯವಸ್ಥೆಯಲ್ಲಿಯ ಕುಂದುಕೊರತೆಗಳನ್ನು. ಅವರ ಅಂಶಗಳಿಗೆ ಉತ್ತರ ನೀಡಲು ಹೋಗುವ ಮೊದಲು, ನಾನು ವಿಚಾರಿಸುವುದೆಂದರೆ, ಕರಡು ಸಂವಿಧಾನದಲ್ಲಿ ಒಳಪಡಿಸಲಾಗಿರುವ ವ್ಯವಸ್ಥೆಯ ಉಪಬಂಧಗಳ ಚಿತ್ರವನ್ನು ಸಭೆ ಹೊಂದಬೇಕು ಎನ್ನುವುದು. ಯಾರೇ ಆಗಲಿ ಈ ವಿಧಿಯನ್ನು ವಿಶ್ಲೇಷಿಸಿದಲ್ಲಿ, ಅದು ನಾಲ್ಕು ವಿವಿಧ ಪ್ರಸ್ತಾಪನೆಗಳು ಒಳಗೊಂಡಿರುವುದನ್ನು ಕಾಣುತ್ತಾರೆ. ಮೊದಲನೆಯದಾಗಿ ಮಹಾಅಭಿಯೋಗಕ್ಕಾಗಿ ಪ್ರಸ್ತಾವನೆಯನ್ನು ಯಾವುದೇ ಸಭೆಯಲ್ಲಿ, ಇಲ್ಲವೆ ರಾಜ್ಯಸಭೆ ಅಥವಾ ಲೋಕಸಭೆಯಲ್ಲಿ ಆರಂಭಿಸಬಹುದಾಗಿದೆ. ಎರಡನೆಯದಾಗಿ, ಅಂತಹ ಪ್ರಸ್ತಾವನೆಯನ್ನು ಅಗತ್ಯ ಸಂಖ್ಯೆಯ ಸದಸ್ಯರುಗಳಿಂದ ಬೆಂಬಲ ಪಡೆದಿರಬೇಕು. ಮೂರನೆಯದಾಗಿ, ಯಾವ ಸಭೆಯು ತಪಾಸಣೆಗಾಗಿ ಮಂಡನೆಯನ್ನು ಪಾಸು ಮಾಡಿದೆಯೋ ಆ ಸಭೆಗೆ ಆಪಾದನೆಯನ್ನು ಪರಿಶೀಲಿಸುವ ಅಧಿಕಾರ ಹೊಂದಿರುವುದಿಲ್ಲ, ಮತ್ತು ನಾಲ್ಕನೆಯದಾಗಿ ಯಾವ ಸಭೆಯು ಆಪಾದನೆಗಳನ್ನು ಪರಿಶೀಲಿಸಿದೆಯೋ, ಅದು ಅಧ್ಯಕ್ಷರು ತಪ್ಪಿತಸ್ಥರೆಂದು ಕಂಡಲ್ಲಿ ಅದನ್ನು ಮೂರನೇ-ಎರಡರಷ್ಟು

ಬಹುಮತದಿಂದ ನಿರ್ಣಯಿಸಬೇಕು.

ಈ ಒಂದು ವಿಧಿಯು ನಾಲ್ಕು ಪ್ರಸ್ತಾವನೆಗಳನ್ನು ಒಳಗೊಂಡಿದೆ. ಈ ಪ್ರೊ. ಶಾಹರವರ ಪ್ರಸ್ತಾವನೆ ಎಂದರೆ ಮೇಲ್ಮನೆಯು ಅಧ್ಯಕ್ಷರ ಮಹಾಭಿಯೋಗಕ್ಕೆ ಸಂಬಂಧವೇ ಹೊಂದಿರಬಾರದು ಎನ್ನುವುದು ಮತ್ತು ಅಧ್ಯಕ್ಷರ ಮಹಾಅಭಿಯೋಗಕ್ಕೆ ಸಂಬಂಧಿಸಿದ ವ್ಯಾಪ್ತಿಯು, ತಪಾಸಣೆ ಮಾಡುವ ಮತ್ತು ತನ್ನದೇ ಆದ ನಿರ್ಣಯಕ್ಕೆ ಬರುವ ಅಧಿಕಾರವು ಸಂಪೂರ್ಣವಾಗಿ ಲೋಕಸಭೆಗೆ ಸೇರಿರಬೇಕು ಎನ್ನುವುದು. ಕೆಳಮನೆಯೇ ಈ ವಿಶೇಷ ಅಧಿಕಾರ ವ್ಯಾಪ್ತಿಯನ್ನು ಹೊಂದಿರಬೇಕೆಂದು ಪ್ರೊ. ಕೆ.ಟಿ. ಶಹಾರವರು ಬಯಸುವುದಕ್ಕೆ ಕಾರಣಗಳೇನೆಂಬುದು ನನಗೆ ತಿಳಿಯದು. ಆ ಒಂದು ವಿಶೇಷ ಹುದ್ದೆಯನ್ನು ಹೊಂದಿರುವ ವ್ಯಕ್ತಿಯು ಅಧ್ಯಕ್ಷೀಯ ಹುದ್ದೆಯ ಘನತೆ, ಗೌರವ ಮತ್ತು ನೀತಿ ನಿಷ್ಠೆಗಳನ್ನು ಕಾಪಾಡಿಕೊಂಡು ಹೋಗಲಿ ಎನ್ನುವುದೇ ಅಧ್ಯಕ್ಷರ ಬಗೆಗಿನ ಈ ಪ್ರಯೋಗದ ಮತ್ತು ಮಹಾ ಅಭಿಯೋಗದ ಉದ್ದೇಶವಾಗಿದೆ. ಸ್ಪಷ್ಟವಾಗಿ ಹೇಳುವುದಾದರೆ ಹುದ್ದೆಯ ಗೌರವ, ಘನತೆ ಮತ್ತು ನೀತಿನಿಷ್ಠೆ ಕೇವಲ ಕೆಳಮನೆಯ ಸಂಬಂಧದ ವಿಷಯವಾಗಿರದೆ ಮೇಲ್ಮನೆಯೂ ಕೂಡ ಅಷ್ಟೇ ಸಂಬಂಧ ಹೊಂದಿದೆ. ಆದುದರಿಂದ ನಾನು ಮೇಲ್ಮನೆಯೂ ಕೂಡ ಅಧ್ಯಕ್ಷರು ಸಂವಿಧಾನದ ಪ್ರಾವಧಾನಗಳಿಗನುಗುಣವಾಗಿ ನಡೆದುಕೊಂಡು ಹೋಗುವಲ್ಲಿ ಕೆಳಮನೆಯಂತೆ ಅಷ್ಟೇ ಸಂಬಂಧ ಹೊಂದಿದೆ. ಮೇಲ್ಮನೆಗೂ ಕೂಡ ಅಧ್ಯಕ್ಷರ ಮೇಲಿನ ಆಪಾದನೆಗಳನ್ನು ತನಿಖೆ ಮಾಡಲು, ಆಪಾದಿಸಲು ಅಷ್ಟೇ ಏಕೆ ಇರಕೂಡದೆಂದು ನಾನು ಚಿಂತಿಸುತ್ತೇನೆ. ಪ್ರೊ. ಕೆ.ಟಿ. ಶಾಹರವರು ತಮ್ಮ ಪ್ರಸ್ತಾವನೆಯನ್ನು ಎಷ್ಟೊಂದು ಖಚಿತವೆಂದು ಬಗೆದಿರುವರೆಂದರೆ, ತಮ್ಮ ವಾದ ಮಂಡನೆಯ ನಡುವೆ ಯಾರು ಗುಲಾಮಗಿರಿಯ ರೀತಿಯಲ್ಲಿ ಇತರ ಸಂವಿಧಾನಗಳ ನಕಲು ಮಾಡುತ್ತಿರುವರೋ ಅವರುಗಳು ತಮ್ಮ ತಿದ್ದುಪಡಿಗಳಿಗೆ ವಿರೋಧಮಾಡುವ ಧೈರ್ಯ ಹೊಂದಿರುವರು ಎಂದಿದ್ದರು. ಅವರು ಕರಡು ಸಮಿತಿಯನ್ನು ಕುರಿತು ಮಾಡಿರುವ ಟೀಕೆಯನ್ನು ನಾನು ಗಣಿಸುವುದಿಲ್ಲ. ನಾನು ನನ್ನ ಆರಂಭಿಕ ಭಾಷಣದಲ್ಲಿ ಹೇಳಿರುವಂತೆ, ಬೇರೆ ಸಂವಿಧಾನಗಳಲ್ಲಿ ಎಲ್ಲಿ ನಾವು ಕಂಡುಹಿಡಿಯುವುದಕ್ಕಿಂತ ಉತ್ತಮವಾದದ್ದನ್ನು ನಾವು ಕಂಡುಕೊಳ್ಳಬಹುದೋ ಈ ದೇಶದ ಹಿತದೃಷ್ಟಿಯಲ್ಲಿ ಅಂತಹದನ್ನು ತೆಗೆದುಕೊಳ್ಳುವಲ್ಲಿ ನಾವು ಅಂಜಿರುವುದಿಲ್ಲ. ಆದರೆ ನಾನು ಅಂದುಕೊಂಡೆ ಪ್ರೊ. ಕೆ.ಟಿ. ಶಾಹರವರು, ಯಾರಾದರೂ ಗಮನಿಸಿರುವರೋ ಇಲ್ಲವೋ, ನಾನು ಆ ದಿಶೆಯಲ್ಲಿ ಶಕ್ತನಾಗಿರುವೆ. ಯುನೈಟೆಡ್ ಸ್ಟೇಟ್ಸ್‌ನ ಸಂವಿಧಾನವನ್ನು ಗುಲಾಮಗಿರಿಯ ರೀತಿಯಲ್ಲಿ ನಕಲು ಮಾಡಿರುವವರಲ್ಲಿ ಪ್ರೊ. ಶಾಹ ಅವರನ್ನು ಹೊರತು ನಾನು ಯಾವ ವ್ಯಕ್ತಿಯನ್ನು ಬೆರಳು ಮಾಡಿ ತೋರಿಸಲಾರೆ (ನಗು). ಕರಡು ಸಮಿತಿಯವರು ಒಳಪಡಿಸಿರುವ ಸರಕಾರದ ಯೋಜನೆಗೆ ಬದಲಿಯಾಗಿ ಅವರು ಸೂಚಿಸಿರುವ ಯೋಜನೆ ಯುನೈಟೆಡ್ ಸ್ಟೇಟ್ಸ್‌ನ ಸಂವಿಧಾನದಿಂದ ಪೂರ್ಣವಾಗಿ ಪೂರ್ಣವಿರಾಮ ಮತ್ತು ಅರೆ ಪೂರ್ಣವಿರಾಮ ಚಿನ್ಹೆಗಳ ಸಮೇತವಾಗಿ ಪಡೆದುಕೊಳ್ಳಲಾಗಿದೆ ಎಂದು ನನಗೆ ಅನಿಸಿತು. ಯಾವಾಗ ಅವರು ತಮ್ಮ ಮುಖ್ಯ ಪ್ರಸ್ತಾಪದಲ್ಲಿ ಸೋಲಿಸಲ್ಪಟ್ಟಿರೋ, ಆಗ ಅವರ ಯುನೈಟೆಡ್ ಸ್ಟೇಟ್ಸ್‌ನ ಸಂವಿಧಾನದ ಬಗೆಗಿನ ಭಕ್ತಿ ಗಾಢವಾದದ್ದಾಗಿದ್ದಿತು, ಆಳವಾಗಿದ್ದಿತು. ಅವರು ಒತ್ತಾಯಪಡಿಸುತ್ತಿದ್ದ ತಿದ್ದುಪಡಿಗಳು, ಅವರೇ ತಿಳಿದಿರುವಂತೆ ಕೇವಲ ಪರಿಣಾಮಕಾರಕವಾದವುಗಳಾಗಿದ್ದವಲ್ಲದೆ ಅಂತಃಸತ್ವ ಹೊಂದಿರಲಿಲ್ಲ. ಆದುದರಿಂದ ಅವರು ಕರಡು ಸಮಿತಿಯ ಬಗೆಗಿನ ಟೀಕೆಗಳನ್ನು ನಾನು ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ.

ಮತ್ತೊಂದು ಪ್ರಸ್ತಾವನೆ ಯಾವುದನ್ನು ಪ್ರೊ. ಕೆ.ಟಿ. ಶಾಹರವರು ಸಂವಿಧಾನದಲ್ಲಿ ಪರಿಚಯಿಸಬಯಸಿರುವರೋ ಅದೆಂದರೆ ಮತ್ತೊಂದು ಸಭೆಯ ಮತೈಕ್ಯ ಇರಲೇ ಬೇಕು ಎನ್ನುವುದು

ಸ್ಪಷ್ಟವಾಗಿ ಅವರು ನಿರ್ಧರಿಸುವುದು ಕರಡು ಸಂವಿಧಾನದಲ್ಲಿ ಇರುವ ಮುಖ್ಯ ಯೋಜನೆಯನ್ನು. ಅವರು ಬಯಸುವುದೇನೆಂದರೆ ತಪಾಸಣೆ ನಡೆಸಿರುವ ಒಂದು ಸಭೆಯು ನಿರ್ಣಯಕ್ಕೆ ಬಂದಾಗ್ಯೂ, ಅದು ಮತ್ತೊಂದು ಸಭೆ ಒಪ್ಪಿ ಕೊಳ್ಳುವವರೆಗೂ ಕಾರ್ಯಗತಗೊಳ್ಳಕೂಡದು ಎಂದು ನಾನು ತಿಳಿಯಲಾರೆ. ಏಕೆ, ಉದಾಹರಣೆಗೆ, ನ್ಯಾಯದರ್ಶಿಗಳ ನಿರ್ಣಯ –ಇದೂ ಒಂದು ರೀತಿಯಲ್ಲಿ ನ್ಯಾಯದರ್ಶಿಯೇ, ಯಾವುದು ತನಿಖೆ ನಡೆಸಿ ನಡೆಸುವುದು – ನನಗೆ ತಿಳಿಯದು. ಅದೇಕೆ ಒಂದು ಸಭೆಯ ನಿರ್ಣಯ, ಅದು ಪರಿಶೋಧನೆಯ ನಂತರ ಬಂದಿರುವುದು. ಅದನ್ನೇಕೆ ಮತ್ತೊಂದು ನ್ಯಾಯದರ್ಶಿಗೆ ಒಪ್ಪಿಸಬೇಕು. ನಾನೆಂದೂ ಅಂತಹ ತತ್ವ ಅಥವಾ ರೂಢಿಯ ಬಗೆಗೆ ತಿಳಿದಿಲ್ಲ. ಎರಡನೆಯದಾಗಿ, ಒಂದು ವೇಳೆ ಮತ್ತೊಂದು ಸಭೆಯು ಅದನ್ನು ಒಪ್ಪಿಕೊಳ್ಳಲಿಲ್ಲವೆಂದರೆ ಪರಿಣಾಮ ಏನಾಗಬಹುದೆಂಬುದರ ಬಗೆಗೂ ನನಗೆ ತಿಳಿಯದು. ಮತ್ತೊಂದು ಸಭೆಯು ಅದನ್ನು ಸಾದಾ ಬಹುಮತದಿಂದ ಒಪ್ಪಿಕೊಳ್ಳಬೇಕೆ ಅಥವಾ ಎರಡು–ಮೂರರಷ್ಟು ಬಹುಮತದಿಂದ ಒಪ್ಪಿಕೊಳಬೇಕೆ? ಒಂದು ವೇಳೆ ಒಂದು ಸಭೆಯ ನಿರ್ಣಯವನ್ನು ಮತ್ತೊಂದು ಸಭೆ ಒಪ್ಪಿಕೊಳ್ಳದೇ ಇದ್ದಲ್ಲಿ ಮಾಡಬೇಕೇನು? ಸ್ಪಷ್ಟವಾಗಿ ಅಲ್ಲಿ ಆತಂಕ ಉಂಟಾಗುತ್ತದೆ. ಪ್ರೊ. ಶಾಹರವರು ನನ್ನ ನಿರ್ಣಯದಂತೆ ಬಿಕ್ಕಟ್ಟನ್ನು ನಿವಾರಿಸಲು ಯಾವುದೇ ಪರಿಹಾರ ಒದಗಿಸಿಲ್ಲ. ಈ ಕಾರಣಗಳಿಂದಾಗಿ ಪ್ರೊ. ಕೆ.ಟಿ. ಶಾಹರವರು ಮಂಡಿಸಿರುವ ತಿದ್ದುಪಡಿಗಳಲ್ಲಿ ಯಾವುದನ್ನು ಒಪ್ಪಿಕೊಳ್ಳಲು ಅಶಕ್ತನಾಗಿರುವೆ.

ಪ್ರೊ. ಕೆ.ಟಿ. ಶಾಹರವರು ಮಂಡಿಸಿರುವ ತಿದ್ದುಪಡಿಯಂತಹುದೆ ಇನ್ನೊಂದು ತಿದ್ದುಪಡಿ ಇದ್ದು ಈಗ ನಾನು ಅದರ ಬಗ್ಗೆ ಚರ್ಚಿಸುವೆ. ಅದು ನನ್ನ ಮಿತ್ರ ಶ್ರೀ ಮೊಹಮ್ಮದ ತಾಹಿರ ಅವರಿಂದ ಮಂಡಿಸಲ್ಪಟ್ಟ ತಿದ್ದುಪಡಿ ಸಂ. ೧೧೭೮ ಆಗಿದೆ. ಸಂವಿಧಾನದ ಉಲ್ಲಂಘನೆಯ ತಪ್ಪಿನ ಆಪಾದನೆ ಹೊರಿಸಲು ಎರಡು–ಮೂರರಷ್ಟು ಬಹುಮತ ಅನಗತ್ಯವೆಂದು ಅವರು ಹೇಳುತ್ತಾರೆ. ಅವರು ಹೇಳುವುದು ಕೇವಲ ಸರಳ ಬಹುಮತ ಸಾಕೆನ್ನುವುದು. ಈಗ, ಮಾನ್ಯರೇ, ಮಹಾಅಭಿಯೋಗದ ಮಂಡನೆಯ ಅವಿಶ್ವಾಸ ಪ್ರಸ್ತಾವನೆಗಿಂತ ಬಹಳ ಭಿನ್ನವೆನ್ನುವ ಸತ್ಯಾಂಶವನ್ನು ನನ್ನ ಮಿತ್ರ ಶ್ರೀ ಮೊಹಮ್ಮದ ತಾಹಿರರವರು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ನನಗೆ ಅನಿಸುತ್ತದೆ. ಅವಿಶ್ವಾಸ ಪ್ರಸ್ತಾವನೆಯು ಯಾವುದೇ ಅವಮಾನ ಅಥವಾ ನೈತಿಕತೆಯನ್ನು ಒಳಗೊಂಡಿರುವುದಿಲ್ಲ. ಅವಿಶ್ವಾಸ ಪ್ರಸ್ತಾವದ ಅರ್ಥ ಕೇವಲ ಪಕ್ಷವು ಒಪ್ಪಿಕೊಳ್ಳುವುದಿಲ್ಲ ಅಥವಾ ಸಭೆಯು ಸರಕಾರದ ನೀತಿಯನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಅರ್ಥವಾಗುತ್ತದೆ. ಅವಿಶ್ವಾಸ ಪ್ರಸ್ತಾವದ ಮಂಡನೆಯಲ್ಲಿ ಅದರ ಆಚೆಯ ಯಾವುದೇ ಖಂಡನೆ ಇರುವುದಿಲ್ಲ. ಆದರೆ ಮಹಾ ಅಭಿಯೋಗ ಮಂಡನೆಯು ಸಂಪೂರ್ಣವಾಗಿ ಭಿನ್ನ ಆಧಾರದ ಮೇಲೆ ನಿಂತಿರುತ್ತದೆ. ಒಂದು ವೇಳೆ ವ್ಯಕ್ತಿಯೋರ್ವನು ಮಹಾ ಅಭಿಯೋಗದ ಪ್ರಸ್ತಾವನೆಯಿಂದ ದೋಷಾರೋಪಿಸಲ್ಪಟ್ಟಲ್ಲಿ, ಅದು ವ್ಯಾವಹಾರಿಕವಾಗಿ ಆತನ ಸಾರ್ವಜನಿಕ ಜೀವನ ಹಾಳಾದಂತೆಯೆ. ಆ ಅಂತರ ಇರಲಾಗಿ, ನನಗೆ ಅನಿಸುವಂತೆ, ಅಂತಹ ಘನವಾದ ಪರಿಣಾಮದ ಅಂಶವನ್ನು ಸರಳಬಹುಮತದ ನಿರ್ಣಯಕ್ಕೆ ಬಿಡುವುದು ಉಚಿತವಾದದ್ದಾಗುವುದಿಲ್ಲ. ಈ ಪ್ರಕಾರದ ಭಿನ್ನತೆಯಿಂದಾಗಿ ಕರಡು ಸಮಿತಿಯು ತಪ್ಪಿತಸ್ಥನೆಂದು ನೀಡುವ ನಿರ್ಣಯವು ಮೂರನೇ–ಎರಡರಷ್ಟು ಬಹುಮತದಿಂದ ಬೆಂಬಲಿಸಲ್ಪಡಬೇಕೆಂಬುದನ್ನು ಸಂವಿಧಾನ ತಿಳಿಸುತ್ತದೆ.

ಈಗ, ಮಾನ್ಯರೆ, ನಾನು ಬರುವುದು ನನ್ನ ಗೌರವಾನ್ವಿತ ಮಿತ್ರ ಖಾಜಿ ಸೈಯದ ಕರೀಮುದ್ದೀನರ ತಿದ್ದುಪಡಿಗಳತ್ತ. ಅವರ ಮೊದಲನೆ ತಿದ್ದುಪಡಿ ಯಾವುದನ್ನು ನಾನು ಪರಿಶೀಲನೆ ತೆಗೆದುಕೊಳ್ಳ ಬಯಸುವೆನೋ ಅದು ತಿದ್ದುಪಡಿ ಸಂ. ೧೧೫೨ ಆಗಿದೆ. ಈ ತಿದ್ದುಪಡಿಯ ಮೂಲಕ ಅವರು 'ಸಂವಿಧಾನದ ಉಲ್ಲಂಘನೆ' ಈ ಪದಗಳ ನಂತರ ರಾಜದ್ರೋಹ, ಲಂಚಗುಳಿತನ ಮತ್ತು ಇತರೆ ಹೆಚ್ಚಿನ ಅಪರಾಧಗಳು ಮತ್ತು

ದುರ್ನಡತೆಗಳನ್ನು ಸೇರಿಸಬಯಸುತ್ತಾರೆ. ನನ್ನ ಸ್ವಂತದ ವಿಚಾರ ಹೀಗಿದೆ. 'ಸಂವಿಧಾನದ ಉಲ್ಲಂಘನೆ' ಈ ವಾಕ್ಯಾಂಗ ಬಲು ವಿಶಾಲವಾದದ್ದು. ರಾಜದ್ರೋಹ, ಲಂಚಗುಳಿತನ ಮತ್ತು ಇತರೆ ಹೆಚ್ಚಿನ ಅಪರಾಧಗಳು ಮತ್ತು ದುರ್ನಡತೆಗಳೆಲ್ಲವನ್ನು ಒಳಗೊಂಡಿರಬಹುದು. ಏಕೆಂದರೆ ರಾಜದ್ರೋಹ, ಖಂಡಿತವಾಗಿಯೂ, ಸಂವಿಧಾನದ ಉಲ್ಲಂಘನೆಯಾಗಿದೆ. ಲಂಚಗುಳಿತನ ಕೂಡ ಸಂವಿಧಾನದ ಉಲ್ಲಂಘನೆಯೇ. ಏಕೆಂದರೆ ಅದು ಅಧ್ಯಕ್ಷರ ಯಾವುದೇ ಅಪರಾಧಗಳು ಅಥವಾ ದುರ್ನಡತೆಗಳಿಗಾಗಿ ವಿಚಾರಣೆ ನಡೆಸಲು ನಾವು ವಿವಿಧ ಕಾನೂನು ಅವಕಾಶಗಳನ್ನು ಕಲ್ಪಿಸಿರುತ್ತೇವೆ. ಆದುದರಿಂದ ನನ್ನ ದೃಷ್ಟಿಯಲ್ಲಿ, ರಾಜದ್ರೋಹ ಮತ್ತು ಲಂಚಗುಳಿತನ ಈ ಪದಗಳ ಸೇರಿಸುವಿಕೆ – ಅನಗತ್ಯವೆನಿಸುತ್ತದೆ. "ಸಂವಿಧಾನದ ಉಲ್ಲಂಘನೆ" ಈ ವಾಕ್ಯಾಂಶದಲ್ಲಿ ಇವೆಲ್ಲವೂ ಒಳಗೊಂಡಿದೆ.

ಅವರ ಇನ್ನೊಂದು ತಿದ್ದುಪಡಿ ಸಂ.೧೧೭೦ ಆಗಿದೆ. ಅದರ ಮೂಲಕ ಶ್ರೀ ಕರಿಮುದ್ದೀನರು ಒದಗಿಸಬಯಸುವುದೇನೆಂದರೆ, ಮಹಾ ಅಭಿಯೋಗದ ತನಿಖೆ ನಡೆಯುವ ಕಾಲಕ್ಕೆ ಭಾರತದ ಮುಖ್ಯ ನ್ಯಾಯಾಧೀಶರು ಅಧ್ಯಕ್ಷತೆ ವಹಿಸಬೇಕು ಎನ್ನುವುದು. ಅವರ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ತಕರಾರು ಇಲ್ಲ. ಮಹಾ ಅಭಿಯೋಗ ಅಪಾದನೆ ವಿಷಯಕ್ಕೆ ಸಂಬಂಧಿಸಿದಂತೆ ತನಿಖೆ ನ್ಯಾಯಯುತ ವಿಧಾನದಲ್ಲಿ ಜರುಗಬೇಕು. ದಂಡ ಪ್ರಕ್ರಿಯೆ ಸಂಹಿತೆ ಮತ್ತು ಸಾಕ್ಷ್ಯ ಅಧಿನಿಯಮಗಳ ಉಪಬಂಧಗಳಿಗೆ ಗಣನೆ ಕೂಡ ಮಾಡಬೇಕು. ನಾನು ಹೇಳಿರುವಂತೆ, ಅವರ ಗುರಿಗಳ ಬಗೆಗೆ ನನ್ನ ಜಗಳವಿಲ್ಲ; ವಾಸ್ತವದಲ್ಲಿ, ನಾನವುಗಳನ್ನು ಒಪ್ಪುವೆ. ಒಂದೇ ಅಂಶವೆಂದರೆ; ಈ ವಿಷಯವನ್ನು ಎರಡೂ ಸಭೆಗಳಿಗೆ ನಡಾವಳಿ ನಿಯಮಗಳನ್ನು ಮಾಡಿ ಒದಗಿಸಬೇಕೆ ಅಥವಾ ವಿಷಯವನ್ನು ಸಂವಿಧಾನದಲ್ಲಿಯೇ ಖಚಿತ ಮತ್ತು ವ್ಯಕ್ತ ರೀತಿಯಲ್ಲಿ ಇರಿಸಬೇಕೆ ಎನ್ನುವುದಾಗಿದೆ. ನನ್ನ ಮಿತ್ರ ಶ್ರೀ ಕರಿಮುದ್ದೀನರವರು ಕಾಣಬಹುದಾಗಿರುವಂತೆ ಉಪಕಲಮು (೩)ರಲ್ಲಿ ಸಭೆಯು ತನಿಖೆ ನಡೆಸಬೇಕೆನ್ನುವುದಕ್ಕೆ ಅವಕಾಶ ಒದಗಿಸಲಾಗಿದೆ. ಆದುದರಿಂದ ಎರಡೂ ಸಭೆಗಳು ನಡಾವಳಿ ನಿಯಮಗಳನ್ನು ಮಾಡಿ ಮಹಾಭಿಯೋಗಕ್ಕೆ ಸಂಬಂಧಿಸಿದ ವಿಧಾನಗಳ ಒಂದು ಭಾಗದಲ್ಲಿ ಒಳಗೊಂಡಿರುವಂತೆ ಮಾಡಬೇಕು ಎನ್ನುವುದು ಸ್ಪಷ್ಟವೇ ಆಗಿದೆ. ಏಕೆಂದರೆ, ಒಂದು ಸಲ ಆರಂಭ ಮೇಲ್ಮನೆಯಲ್ಲಿ ಆಗಿ ವಿಚಾರಣೆ ಕೆಳಮನೆಯಲ್ಲಿ ಮತ್ತು ತಿರುವುಮುರುವಾಗಿ ಆಗಬಹುದು. ಹೀಗೆ, ಎರಡೂ ಸಭೆಗಳು ಪ್ರತಿಯೊಂದರ ನಡಾವಳಿಯಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಭಾಗವನ್ನು ಹೊಂದಿರಬೇಕಾಗುತ್ತದೆ. ಅದು ಹೀಗಿರಲು, ಶಾಸಕಾಂಗಕ್ಕೆ ಯಾವಾಗಲೇ ಅಂತಹ ತನಿಖೆ ಮಾಡಿದಾಗ, ಮುಖ್ಯ ನ್ಯಾಯಾಧೀಶರೇ ಅಧ್ಯಕ್ಷತೆ ವಹಿಸಬಹುದು ಅಥವಾ ಮತ್ತಾರೇ ನ್ಯಾಯಾಧೀಶರು ಅಧ್ಯಕ್ಷತೆ ವಹಿಸಬಹುದು. ಎರಡೂ ಸಭೆಗಳ ನಡಾವಳಿ ನಿಯಮದ ಭಾಗವನ್ನು ಒದಗಿಸಲು ಯಾವುದೂ ತಡೆಯುಂಟು ಮಾಡುವುದಿಲ್ಲ. ಆದುದರಿಂದ ನನಗೆ ಅನಿಸುವುದೇನೆಂದರೆ ಎರಡೂ ಸಭೆಗಳ ನಡಾವಳಿಕೆ ನಿಯಮಗಳ ಭಾಗಗಳಿಂದ ಗುರಿಗಳನ್ನು ಸಾಧಿಸಬಹುದಾಗಿದೆ. ಆದುದರಿಂದ ಈ ಉಪಬಂಧವು ಅನಗತ್ಯವಾಗಿದೆ.

ನಾನು ಅವರ ಮೂರನೇ ತಿದ್ದುಪಡಿ, ಸಂ.೧೧೮೭ಗೆ ಬರುತ್ತೇನೆ. ಅವರು ಬಯಸುವುದೇನೆಂದರೆ ಮಹಾಅಭಿಯೋಗದ ಮೇಲೆ ತಪ್ಪಿನ ಆಪಾದನೆಯಿಂದ ಉದ್ಭವಿಸುವ ಅನರ್ಹತೆಗಳನ್ನು ಸಂವಿಧಾನವು ಹಾಕಬೇಕೆ ಎನ್ನುವುದು. ಅವರು ತೆಗೆದುಕೊಂಡಿರುವ ಭಾಷೆ ಯುನೈಟೆಡ್ ಸ್ಟೇಟ್ಸ್‌ನ ಸಂವಿಧಾನದಿಂದ ತೆಗೆದುಕೊಂಡದ್ದೆನಿಸುತ್ತದೆ. ಈ ವಿಷಯದ ಬಗೆಗೆ ನನ್ನ ದೃಷ್ಟಿ ಹೀಗಿದೆ. ಶಾಸಕಾಂಗದ ಸದಸ್ಯತ್ವಕ್ಕೆ ಸಂಬಂಧಿಸಿದಂತೆ, ಈ ಹಿಂದಿನ ಸಂದರ್ಭಗಳಲ್ಲಿ ನಾನು ಎತ್ತಿ ತೋರಿಸಿರುವಂತೆ, ವಿಧಿ ೮೩ರ ಉಪಬಂಧಗಳಲ್ಲಿ

ವಿಷಯವು ಸೇರಿದೆ. ಅದು ಶಾಸಕಾಂಗದ ಸದಸ್ಯತ್ವದ ಅನರ್ಹತೆಗಳನ್ನು ಹಾಕಿಕೊಡುತ್ತದೆ. ನಾನು ಆಗಲೇ ಹೇಳಿರುವಂತೆ ಕಲಮೊಂದನ್ನು ಸೇರಿಸಿ ಹೆಚ್ಚುವರಿ ಅನರ್ಹತೆಗಳನ್ನು ನಿಗದಿ ಪಡಿಸಿ, ಸಂವಿಧಾನದ ಅಂತರ್ಗತ ಮಹಾಅಭಿಯೋಗಕ್ಕೆ ಗುರಿಯಾದ ವ್ಯಕ್ತಿ ಶಾಸಕಾಂಗದ ಸದಸ್ಯನಾಗಲು ಅನರ್ಹನೆಂದು ಘೋಷಿಸುವುದು ಸಂಪೂರ್ಣವಾಗಿ ಸಾಧ್ಯವಾಗಬಹುದು. ಆದುದರಿಂದ, ವಿಧಿ ೮೩ರ ಪರಿಣಾಮವಾಗಿ ಮಹಾಅಭಿಯೋಗಕ್ಕೆ ಗುರಿಯಾದ ಅಧ್ಯಕ್ಷನನ್ನು ಶಾಸಕಾಂಗದ ಸದಸ್ಯತ್ವದಿಂದ ಹೊರಗೆ ಇಡಲು ಪರಿಪೂರ್ಣವಾಗಿ ಸಾಧ್ಯವಾಗುತ್ತದೆ.

ಉಳಿಯುವ ಇತರೆ ಇನ್ನೊಂದು ವಿಷಯವೆಂದರೆ ಹುದ್ದೆಗೆ ನೇಮಕ ಮಾಡುವುದು; ನನಗೆ ಅನಿಸುತ್ತದೆ, ಬಹಳಷ್ಟು ಅಂಶಗಳನ್ನು ಈ ಬಗ್ಗೆ ಗಮನದಲ್ಲಿ ಇಡಬೇಕಾಗುತ್ತದೆ ಎಂದು. ಕರಡು ಸಂವಿಧಾನದ ಉಪಬಂಧಗಳು ಈ ವಿಷಯವನ್ನು ಹಾಗೆಯೇ ಬಿಟ್ಟಿರುವುದು ಸತ್ಯವೆ. ಆದರೆ, ಸಾರ್ವಜನಿಕ ಸೇವಕರ ಕಾಯಿದೆ ರಚಿಸುವಾಗ ಪಾರ್ಲಿಮೆಂಟಿಗೆ ಸಾರ್ವಜನಿಕ ಸೇವಕರ ಅರ್ಹತೆಗಳನ್ನು ಅವರ ಪಗಾರ ಮತ್ತು ಸಾರ್ವಜನಿಕ ಸೇವೆಗೆ ಸಂಬಂಧಿಸಿದ ಇತರೆ ಎಲ್ಲ ಉಪಬಂಧಗಳನ್ನು ನಿಗದಿ ಪಡಿಸುವುದು ಸಾಧ್ಯವಾಗಬಹುದು ಎಂದು ನನಗೆ ಅನ್ನಿಸುತ್ತದೆ. ಭವಿಷ್ಯದ ಪಾರ್ಲಿಮೆಂಟಿಗೆ ಹಾಗೂ ಮಾಡಬೇಕಾಗುತ್ತದೆ. ಸ್ಪಷ್ಟವಾಗಿ, ಯಾವುದೇ ವ್ಯಕ್ತಿಯು ಈ ಸಂವಿಧಾನದ ಕಾನೂನಿನ ಅನ್ವಯ ಮಹಾಅಭಿಯೋಗಕ್ಕೆ ಗುರಿಯಾಗಿದ್ದಲ್ಲಿ ಯಾವುದೇ ಪ್ರತ್ಯೇಕ ಹುದ್ದೆಗೆ ಅದು ಸರಕಾರದ ಹೊರಗಣ ಅದು ರಾಯಭಾರಿತ್ವದ ಹುದ್ದೆಯಾಗಿರಬಹುದು ಇಲ್ಲವೆ ಸರಕಾರದ ಒಳಗಿನ ಯಾವುದೇ ವಿಭಾಗದ ಹುದ್ದೆಯಾಗಿರಬಹುದು. ಇದಕ್ಕೆ ನೇಮಕಗೊಳ್ಳಲು ಅನರ್ಹನಾಗುವನೆಂದು ಘೋಷಿಸಲು ಪಾರ್ಲಿಮೆಂಟಿಗೆ ಅಧಿಕಾರವಿರುತ್ತದೆ. ಆದುದರಿಂದ, ಆ ವಿಷಯವು, ನಾನು ಕಾಣುವಂತೆ, ಪಾರ್ಲಿಮೆಂಟಿನ ಶಾಸನದ ಅಧೀನ ಕೂಡ ತರಬಹುದಾಗಿದೆ.

**ಶ್ರೀ ಹೆಚ್.ವಿ. ಕಾಮತ್** : ಡಾ. ಅಂಬೇಡ್ಕರರು ವೈಯಕ್ತಿಕವಾಗಿ ಈ ತಿದ್ದುಪಡಿಗಳ ಪರವಾಗಿರುವರೆಂದು ನಾನು ತಿಳಿಯಬಹುದೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಹೌದು; ನನ್ನ ವಿಚಾರವೆಂದರೆ ಈ ತಿದ್ದುಪಡಿಯಲ್ಲಿ ಇದನ್ನು ಬೇರೆ ವಿಧಗಳಿಂದ ಪೂರ್ತಿಗೊಳಿಸಬಹುದೆಂಬ ಅಂಶ ಬಿಟ್ಟರೆ ಇದರಲ್ಲಿ ಮತ್ತೆ ಏನೂ ಇಲ್ಲ. ಈಗ ಮಾನ್ಯರೆ, ಮತ್ತೊಂದು ಪ್ರಶ್ನೆ ಇರುವುದು ಇದು: ಈ ಅನರ್ಹತೆಗಳನ್ನು ವಿಶೇಷವಾಗಿ ಮತ್ತು ಸ್ಪಷ್ಟವಾಗಿ ಸಂವಿಧಾನದಲ್ಲಿ ಸೇರಿಸಲ್ಪಡುವುದು ಅಗತ್ಯವೆ? ನನಗೆ ಅನಿಸುವುದೇನೆಂದರೆ ಇದು ಎರಡು ಕಾರಣಗಳಿಂದಾಗಿ ಅನಗತ್ಯ. ಒಂದೆಂದರೆ, ಈ ವಿಧದಲ್ಲಿ ಸಾರ್ವಜನಿಕ ವಿಚಾರಣೆಯಲ್ಲಿ ಸಾರ್ವಜನಿಕ ಶತ್ರುವೆಂದು ಘೋಷಿಸಲ್ಪಟ್ಟು ಈ ರೀತಿಯಲ್ಲಿ ಅವಮಾನಿತಗೊಂಡ ಯಾವ ವ್ಯಕ್ತಿಯೂ ತನ್ನನ್ನು ತಾನು ಯಾವೊಂದು ಹುದ್ದೆಗೆ ಅಭ್ಯರ್ಥಿ ಎಂದು ಒದಗಿಸುವ ಸಾಹಸ ಮಾಡಲಾರ. ಆದುದರಿಂದ, ಆ ಸಾಧ್ಯತೆ, ನಾನು ವಿಚಾರಿಸುವುದು ಈ ಪರಿಗಣನೆಯಿಂದಾಗಿ ಹೊರಗಿಡಲ್ಪಡುತ್ತದೆ. ಎರಡನೆಯದು ಇದು: ಈ ದೇಶದ ಜನರು, ಅಂತಹ ವ್ಯಕ್ತಿ ಒಂದು ವೇಳೆ ಇಷ್ಟಪಟ್ಟಲ್ಲಿ ಆರಿಸಲು ಸಾರ್ವಜನಿಕ ಕರ್ತವ್ಯ ಮತ್ತು ಸಾರ್ವಜನಿಕ ಸೇವಾ ಮನೋಭಾವ ತೊರೆದವರಾಗಿರುವುದಿಲ್ಲ. ಸಂವಿಧಾನದಲ್ಲಿ ಇಂತಹ ಒಂದು ಉಪಬಂಧವನ್ನು ಮಾಡುವುದು ಅಗತ್ಯ. ಏಕೆಂದರೆ ಜನರು ಅಪರಾಧಿಗಳನ್ನು, ವಿಶ್ವಾಸ ದ್ರೋಹಿಗಳನ್ನು ಯಾರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ತಪ್ಪಿರುವರೋ ಅಂತಹವರನ್ನು ಚುನಾಯಿಸುವರು ಎಂದೆನ್ನುವುದು ಈ ದೇಶದ ಜನರಿಗೆ ಅವಮಾನಕರ. ಇಂತಹ ಬಲಹೀನತೆ ಎಲ್ಲ ಸಮಾಜಗಳಲ್ಲಿ ಇರುವವೇ. ಅವುಗಳನ್ನು ಪ್ರಚಾರ ಮಾಡುವುದು ಸಂವಿಧಾನದಲ್ಲಿ ಇರಿಸುವುದರಿಂದ ಯಾವ ಪ್ರಯೋಜನವೂ ಆಗದು. ಆದುದರಿಂದ ನಾನು ವಿಚಾರಿಸುವುದೇನೆಂದರೆ,

ತಿದ್ದುಪಡಿಗಳು ಎಷ್ಟೇ ಹೊಗಳತಕ್ಕವಾದರೂ ಸಂವಿಧಾನದಲ್ಲಿ ಸೇರಿಸುವ ಅಗತ್ಯವಿರುವುದಿಲ್ಲ.

**ಮಾನ್ಯ ಉಪಸಭಾಪತಿ** : ಮಂಡಿಸಲಾಗಿರುವ ತಿದ್ದುಪಡಿಗಳನ್ನು ಈಗ ಮತಕ್ಕೆ ಇಡಲಾಗುವುದು.

(ಈ ಕೆಳಕಾಣಿಸಿದ ತಿದ್ದುಪಡಿಗಳು ಡಾ. ಅಂಬೇಡ್ಕರ್‌ರವರಿಂದ ಒಪ್ಪಿಗೆ ಪಡೆದವು ಮತ್ತು ಸಭೆಯಿಂದ ಅಂಗೀಕರಿಸಲ್ಪಟ್ಟವು.)

*****

* **ಮಾನ್ಯ ಉಪಸಭಾಪತಿ** : ಶ್ರೀ ಟಿ.ಟಿ. ಕೃಷ್ಣಮಾಚಾರಿಯವರ ತಿದ್ದುಪಡಿಯಿಂದ ಮಾರ್ಪಡಿಸಲ್ಪಟ್ಟ ತಿದ್ದುಪಡಿ ಸಂ. ೧೧೬೦ಯನ್ನು ನಾನೀಗ ಮತಕ್ಕೆ ಹಾಕುತ್ತೇನೆ.

ಪ್ರಶ್ನೆ ಇರುವುದು:

"ವಿಧಿ ೫೦ರ ಕಲಮು (೨)ರ ಉಪಕಲಮು (ಎ)ನಲ್ಲಿ 'ಮುವತ್ತು ಸದಸ್ಯರುಗಳು' ಈ ಪದಗಳಿಗೆ 'ಒಟ್ಟು ಸದಸ್ಯರುಗಳ ಸಂಖ್ಯೆಯ ನಾಲ್ಕನೇ-ಒಂದರಷ್ಟು' ಈ ಪದಗಳನ್ನು ಬದಲಿ ಇಡುವುದು.

ತಿದ್ದುಪಡಿಯನ್ನು ಒಪ್ಪಿಕೊಳ್ಳಲಾಯಿತು.

**ಮಾನ್ಯ ಉಪಸಭಾಪತಿ** : ಪ್ರಶ್ನೆ ಹೀಗಿದೆ:

"ವಿಧಿ ೫೦ರ ಕಲಮು (೨)ರ ಉಪಕಲಮು (ಎ)ನಲ್ಲಿ 'ನೋಟಿಸಿನ ನಂತರ' ಈ ಪದಗಳಿಗೆ 'ಏನಿಲ್ಲವೆಂದರೆ ೧೪ ದಿವಸಗಳ ನೋಟಿಸಿನ ನಂತರ ಈ ಪದಗಳನ್ನು ಬದಲಿ ಇಡುವುದು."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಉಪಸಭಾಪತಿ** : ಪ್ರಶ್ನೆ ಹೀಗಿದೆ.

"ವಿಧಿ ೫೦ರಲ್ಲಿ ಕಲಮು (೨)ರ ಉಪಕಲಮು (ಬಿ)ನಲ್ಲಿ 'ಇಂದ ಬೆಂಬಲಿಸಿದ' ಈ ಪದಗಳಿಗೆ 'ಬಹುಮತದಿಂದ ಪಾಸುಮಾಡಿದ' ಈ ಪದಗಳನ್ನು ಬದಲಿ ಇಡುವುದು."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

(ಒಟ್ಟಿನಲ್ಲಿ ೧೫ ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು. ಅವುಗಳಲ್ಲಿ ಒಂದನ್ನು ಈ ಕೆಳಗಿನಂತೆ ಚರ್ಚಿಸಲಾಯಿತು)

* * * *

* **ಮಾನ್ಯ ಉಪಸಭಾಪತಿ :** ಪ್ರಶ್ನೆ ಇರುವುದು ತಿದ್ದುಪಡಿ ಸಂ. ೧೧೮೫.

ಶ್ರೀ ನಜೀರುದ್ದೀನ ಅಹಮದ : ಮಾನ್ಯರೆ, ನನ್ನ ತಿದ್ದುಪಡಿಗೆ ಡಾ. ಅಂಬೇಡ್ಕರರು ಯಾವುದೇ ಉತ್ತರ ಕೊಟ್ಟಿರುವುದಿಲ್ಲ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ವಿರೋಧಿಸುವೆನೆಂದು ಹೇಳಿರುವೆ.

ಮಾನ್ಯ ಉಪಸಭಾಪತಿ : ಪ್ರಶ್ನೆ ಇರುವುದು:

"ವಿಧಿ ೫೦ರ ಕಲಮು (೪)ರಲ್ಲಿ 'ದಿನಾಂಕದಂದು', ಈ ಪದಗಳಿಗೆ 'ಸಮಯದಂದು' ಈ ಪದಗಳನ್ನು ಬದಲಿ ಇಡುವುದು."

---

* ಸಿ.ಎ.ಡಿ. ಸಂಪುಟ ೭, ೨೮ನೆಯ ಡಿಸೆಂಬರ್, ೧೯೪೮, ಪುಟ ೧೦೮೩

* ಸಿ.ಎ.ಡಿ. ಸಂಪುಟ ೭, ೨೮ನೆಯ ಡಿಸೆಂಬರ್, ೧೯೪೮, ಪುಟ ೧೦೮೪

ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.

(ತಿದ್ದುಪಡಿಯಾದಂತೆ ವಿಧಿ ೫೦ ಅಂಗೀಕರಿಸಲ್ಪಟ್ಟಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.)

* * * *

## ವಿಧಿ ೫೧

\+ **ಮಾನ್ಯ ಉಪಸಭಾಪತಿ :** ಮೌಖಿಕವಾಗಿರುವುದರಿಂದ ತಿದ್ದುಪಡಿ ಸಂ.ಗಳು ೧೧೯೫, ೧೧೯೬ ಮತ್ತು ೧೧೯೭ ಇವುಗಳನ್ನು ನಿರಾಕರಿಸಲಾಗುವುದು, ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಕ್ಷಮಿಸಿ. ಪ್ರೊ. ಕೆ.ಟಿ. ಶಾಹರವರು ಮಂಡಿಸಿರುವ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲಾರೆ. ಅವರ ತಿದ್ದುಪಡಿ ಒಟ್ಟಾರೆಯಾಗಿ ವಿಧಿ ೫೪ (೧)ರಲ್ಲಿ ಒಳಗೊಂಡಿದೆ. ಅವರು ಮಂಡಿಸಿರುವ ತಿದ್ದುಪಡಿ ಮತ್ತು ವಿಧಿ ೫೪ರ ಉಪಕಲಮು (೧) ಒಳಗೊಂಡಿರುವ ಉಪಬಂಧಗಳ ನಡುವೆ ಯಾವುದೇ ಅಂತರಗಳನ್ನು ಕಾಣುವಲ್ಲಿ ನಾನು ವಿಫಲನಾಗಿರುವೆ. ಅವರು ಈ ವಿಧಿಯನ್ನು ಪರಿಗಣಿಸಿದಲ್ಲಿ ಅವರು ಕಾಣುವುದು ಅವರ ತಿದ್ದುಪಡಿ ಅನಗತ್ಯ ಮತ್ತು ಅನಾವಶ್ಯಕ ಎನ್ನುವುದನ್ನು. ಮತ್ತೊಂದು ತಿದ್ದುಪಡಿಗೆ ಸಂಬಂಧಿಸಿದಂತೆ, ಅಂತರದ ಅಂಶವೆಂದರೆ, ರಾಜೀನಾಮೆ ಮತ್ತೆ ಮುಂತಾದ ಕಾರಣದಿಂದಾಗಿ ಯಾರೇ ಆಗಲಿ ಆಯ್ಕೆಗೊಂಡಲ್ಲಿ, ಅಧ್ಯಕ್ಷೀಯ ಹುದ್ದೆಯನ್ನು ಉಳಿದಿರುವ ಅವಧಿಗಾಗಿ ಮಾತ್ರ ಹೊಂದಿರಬೇಕು ಎನ್ನುವುದು.

ಆದರೆ ಸಂವಿಧಾನ ಒಳಗೊಂಡಿರುವ ಉಪಬಂಧವು ಹೇಳುವುದು ಯಾವುದೇ ವ್ಯಕ್ತಿಯು ರಾಜೀನಾಮೆ, ಮರಣ ಮುಂತಾದ ಪರಿಣಾಮಗಳಿಂದಾಗಿ ಆಯ್ಕೆಗೊಂಡಲ್ಲಿ ಆತನು ಸಂವಿಧಾನ ಒದಗಿಸಿರುವ ಪೂರ್ಣ ಅವಧಿಗಾಗಿ ಮುಂದುವರಿಯಬೇಕೆನ್ನುವುದು. ಈ ಹುದ್ದೆಗೆ ಚುನಾಯಿತಗೊಂಡ ವ್ಯಕ್ತಿಯ ಕಾರ್ಯಕಾಲ ಅವಧಿಯು ಸಂವಿಧಾನ ನಿಗದಿಪಡಿಸಿರುವ ಪೂರ್ಣ ಅವಧಿ ಆಗಿರದೆ ಉಳಿದಿರುವ ಅವಧಿಗೆ ಮಾತ್ರ ಸೀಮಿತವಾಗಿರಬೇಕೆನ್ನುವುದಕ್ಕೆ ಯಾವ ಕಾರಣವೂ ನನಗೆ ತಿಳಿಯದು. ಆದುದರಿಂದ ತಿದ್ದುಪಡಿಗೆ ಯಾವುದೇ ಸಮರ್ಥನೆ ಇರುವುದನ್ನು ನಾನು ಕಾಣೆನು.

(ಎಲ್ಲ ಮೂರು ತಿದ್ದುಪಡಿಗಳು ನಿರಾಕರಿಸಲ್ಪಟ್ಟವು. ವಿಧಿ ೫೧ನ್ನು ಸಂವಿಧಾನಕ್ಕೆ ಅಂಗೀಕರಿಸಲಾಯಿತು. ಸೂಚನೆಯನ್ನು ಅಂಗೀಕರಿಸಲಾಯಿತು. ವಿಧಿ ೫೧ ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.)

## ವಿಧಿ ೫೨

(ವಿಧಿ ೫೨ನ್ನು ಚರ್ಚೆಯಲ್ಲಿ ಅಂಗೀಕರಿಸಲಾಯಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.)

---

\+ ಸಿ.ಎ.ಡಿ. ಸಂಪುಟ ೭, ೨೮ನೆಯ ಡಿಸೆಂಬರ್, ೧೯೪೮, ಪುಟ ೧೦೮೭

## ವಿಧಿ ೫೩

* **ಮಾನ್ಯ ಉಪಸಭಾಪತಿ :** ಅನಂತರ ನಾವು ಬರುವುದು ವಿಧಿ ೫೩ಕ್ಕೆ, ನಕಾರಾತ್ಮಕ ಮತದ ಪರಿಣಾಮವಾಗಿ ತಿದ್ದುಪಡಿ ಸಂ.೧೨೦೧ನ್ನು ನಿರಾಕರಿಸಲಾಯಿತು. ತಿದ್ದುಪಡಿಗಳಾದ ಸಂ.೧೨೦೨ ಮತ್ತು ೧೨೦೩ ಏಕರೂಪದವುಗಳಂತೆ ಕಾಣುವುವು. ಆದುದರಿಂದ ನಾನು ತಿದ್ದುಪಡಿ ಸಂ.೧೨೦೨ನ್ನು ಮಂಡಿಸಲು ಅನುಮತಿಸುವೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ನಾನು ಮಂಡಿಸುವೆ:

"ವಿಧಿ ೫೩ರಲ್ಲಿ 'ಅಥವಾ ವರಮಾನದ ಸ್ಥಿತಿಯಲ್ಲಿ' ಈ ಪದಗಳಿಗೆ ಲಾಭದಾಯಕದ ಈ ಪದವನ್ನು ಇಡುವುದು."

**ಮಾನ್ಯ ಉಪಸಭಾಪತಿ :** ಆಮೇಲೆ ಶ್ರೀ ಮೊಹಮ್ಮದ ತಾಹಿರ ಅವರ ಹೆಸರಿನಲ್ಲಿರುವ ಸಂ.೧೨೦೪.

**ಶ್ರೀ ಮೊಹಮ್ಮದ ತಾಹಿರ** : ಮಾನ್ಯರೆ, ನಾನದನ್ನು ಮಂಡಿಸುತ್ತಿಲ್ಲ.

**ಮಾನ್ಯ ಉಪಸಭಾಪತಿ** : ಹಾಗಿದ್ದಲ್ಲಿ ಡಾ. ಅಂಬೇಡ್ಕರ್‌ರವರ ಹೆಸರಿನಲ್ಲಿರುವ ತಿದ್ದುಪಡಿ ಸಂ.೧೨೦೫

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ನಾನು ಮಂಡಿಸುವೆ:

"ವಿಧಿ ೫೩ರ ಉಪಬಂಧಕ್ಕೆ ಈ ಕೆಳಗಿನದನ್ನು ಸೇರಿಸುವುದು:–

"ಮತ್ತು ಈ ಸಂವಿಧಾನದ ವಿಧಿ ೭೯ರ ಅನ್ವಯ ರಾಜ್ಯಸಭೆಯ ಸಭಾಧ್ಯಕ್ಷರಿಗೆ ನೀಡಬೇಕಾಗುವ ಯಾವುದೇ ಸಂಬಳ ಅಥವಾ ಭತ್ತೆಗೆ ಅರ್ಹನಾಗಿರತಕ್ಕದ್ದಲ್ಲ."

ಈ ಉಪಬಂಧದ ಉದ್ದೇಶ ದುಬಾರಿ ಲಾಭ ಮಾಡುವುದರಿಂದ ತಡೆಯುವುದಾಗಿದೆ.

**ಮಾನ್ಯ ಉಪಸಭಾಪತಿ** : ಶ್ರೀ ನಜೀರುದ್ದೀನ ಅಹಮದರಿಂದ ಕಳುಹಿಸಿದ ತಿದ್ದುಪಡಿ ಇದೆ. ಅದು ತಿದ್ದುಪಡಿ ಸಂ ೩೩. ಇದು ಔಪಚಾರಿಕ ಹಾಗೂ ನಿರಾಕರಿಸಲಾಗಿದೆ.

ನಾನೀಗ ತಿದ್ದುಪಡಿಗಳನ್ನು ಮತಕ್ಕೆ ಹಾಕಲಿರುವೆ. ಈ ತಿದ್ದುಪಡಿಗಳ ಮೇಲೆ ಯಾರೇ ಸದಸ್ಯನಿಗೆ ಏನಾದರೂ ಹೇಳುವುದು ಇದೆಯೆ?

**ಶ್ರೀ ಹೆಚ್.ವಿ. ಕಾಮತ್** : ಮಾಹಿತಿಯ ಅಂಶವೊಂದರ ಮೇಲೆ, ಮಾನ್ಯರೆ, ತಿದ್ದುಪಡಿ ಸಂ ೧೨೦೫ಗೆ ಸಂಬಂಧಿಸಿದಂತೆ. ಉಪಾಧ್ಯಕ್ಷನು, ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುವಾಗ ಅವನು ಪಡೆಯುವ ಪಗಾರ ಮತ್ತು ಭತ್ತೆಗಳು ಅಧ್ಯಕ್ಷರದ್ದೋ ಅಥವಾ ಉಪಾಧ್ಯಕ್ಷರದ್ದೋ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಅಧ್ಯಕ್ಷನ ಪಗಾರ, ಆ ಹುದ್ದೆಯ ಪಗಾರ.

**ಮಾನ್ಯ ಉಪಸಭಾಪತಿ** : ಹಾಗಿದ್ದಲ್ಲಿ ನಾನು ಈ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತಿರುವೆ. ಡಾ. ಅಂಬೇಡ್ಕರರ ಹೆಸರಿನಲ್ಲಿರುವ ತಿದ್ದುಪಡಿ ಸಂ.೧೨೦೨ನ್ನು ಮತಕ್ಕಿಡುವೆ.

ಪ್ರಶ್ನೆ ಇರುವುದು:

"ವಿಧಿ ೫೩ರಲ್ಲಿ ಅಥವಾ ವರಮಾನದ ಸ್ಥಿತಿ 'ಈ ಪದಗಳಿಗೆ ಬದಲಾಗಿ' ಲಾಭದ ಈ ಪದಗಳನ್ನು ಇಡುವುದು."

---

* ಸಿ.ಎ.ಡಿ. ಸಂಪುಟ ೭, ೨೮ನೆಯ ನವೆಂಬರ್, ೧೯೪೮, ಪುಟ ೧೦೮೮–೮೯

ತಿದ್ದುಪಡಿಯನ್ನು ಒಪ್ಪಿಕೊಳ್ಳಲಾಯಿತು.

**ಮಾನ್ಯ ಉಪಸಭಾಪತಿ** : ಶ್ರೀ ನಜೀರುದ್ದೀನ ಅಹಮದರವರೇ, ಹಿಂದಿನದರಂತೆಯೇ ಇರುವ ನಿಮ್ಮ ತಿದ್ದುಪಡಿಯನ್ನು ನಾನು ಮತಕ್ಕೆ ಹಾಕುವುದನ್ನು ನೀವು ಬಯಸುವಿರಾ?

**ಶ್ರೀ ನಜೀರುದ್ದೀನ ಅಹಮದ** : ಇಲ್ಲ, ಮಾನ್ಯರೆ.

**ಮಾನ್ಯ ಉಪಸಭಾಪತಿ** : ಹಾಗಿದ್ದಲ್ಲಿ ತಿದ್ದುಪಡಿ ಸಂ.೧೨೦೫ನ್ನು ನಾನು ಮತಕ್ಕೆ ಇಡುವೆ.

ಪ್ರಶ್ನೆ ಇರುವುದು.

"ವಿಧಿ ೫೩ರ ಉಪಬಂಧಕ್ಕೆ ಈ ಕೆಳಗಿನದನ್ನು ಸೇರಿಸುವುದು :– ಮತ್ತು ರಾಜ್ಯಸಭೆಯ ಸಭಾಪತಿಗೆ ಈ ಸಂವಿಧಾನದ ೭೯ನೆಯ ವಿಧಿಯ ಮೇರೆಗೆ ಸಂದಾಯವಾಗಬೇಕಾದ ಯಾವುದೇ ವೇತನಕ್ಕಾಗಲಿ ಅಥವಾ ಭತ್ಯೆಕ್ಕಾಗಲಿ ಆತನಿಗೆ ಹಕ್ಕಿರತಕ್ಕದ್ದಲ್ಲ."

ತಿದ್ದುಪಡಿಯನ್ನು ಒಪ್ಪಿಕೊಳ್ಳಲಾಯಿತು.

ತಿದ್ದುಪಡಿಯಾದಂತೆ ವಿಧಿ ೫೩ ಅಂಗೀಕರಿಸಲಾಯಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

## ವಿಧಿ ೫೪

* **ಶ್ರೀ ನಜೀರುದ್ದೀನ ಅಹಮದ್** : ಮಾನ್ಯರೇ, ನಾನು ಈ ರೀತಿ ಮಂಡಿಸಲು ಕೋರುವೆ:

"ವಿಧಿ ೫೪ರ ಕಲಮು (೧)ರಲ್ಲಿ 'ದಿನಾಂಕದಂದು' ಈ ಪದಗಳನ್ನು 'ಸಮಯದಂದು' ಈ ಪದಗಳಿಗೆ ಬದಲಿಸುವುದು."

(ಎನ್.ಎ.ರವರ ಭಾಷಣ)

**ಮಾನ್ಯ ಉಪಸಭಾಪತಿ** : ತಿದ್ದುಪಡಿ ಸಂ.ಗಳಾದ ೧೨೧೧ ಮತ್ತು ೧೨೧೦ಗಳು ಒಂದೇ ತೆರನಾದ ಅರ್ಥದವು. ಆದರೆ ಮೊದಲಿನದು ಹೆಚ್ಚು ವ್ಯಾಪಕ ಮತ್ತು ಅದನ್ನು ಮಂಡಿಸಬಹುದಾಗಿದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ನಾನು ಹೀಗೆ ಮಂಡಿಸುವೆ.

"ವಿಧಿ ೫೪ರ ಕಲಮು (೩)ರಲ್ಲಿ ಈ ಕೆಳಗಿನದನ್ನು ಸೇರಿಸುವುದು:–

'ಮತ್ತು ಸಂಸತ್ತು ಕಾನೂನು ಮೂಲಕ ನಿರ್ಧರಿಸಬಹುದಾದಂತಹ ಉಪಲಬ್ಧಿಗಳಿಗೆ, ಭತ್ತೆಗಳಿಗೆ ಮತ್ತು ವಿಶೇಷಾಧಿಕಾರಗಳಿಗೂ ಸಹ ಹಕ್ಕುಳ್ಳವನಾಗಿರತಕ್ಕುದು ಮತ್ತು ಹಾಗೆ ಉಪಬಂಧಿಸುವವರೆಗೆ, ಅವನು ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂಥ ಉಪಲಬ್ಧಿಗಳಿಗೆ, ಭತ್ಯೆಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಹಕ್ಕುಳ್ಳವನಾಗಿರತಕ್ಕುದು."

ಕರಡು ಸಂವಿಧಾನದಲ್ಲಿ ತಪ್ಪಿಹೋದದ್ದನ್ನು ಇದು ಸರಿಪಡಿಸಲಿದೆ.

* * * *

---

* ಸಿ.ಎ.ಡಿ. ಸಂಪುಟ ೭, ೨೮ನೆಯ ಡಿಸೆಂಬರ್, ೧೯೪೮, ಪುಟ ೧೦೮೯–೯೨

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಉಪಸಭಾಪತಿಯವರೆ, ಮಂಡಿಸಲಾಗಿರುವ ತಿದ್ದುಪಡಿಗಳಲ್ಲಿ ನಿಜಕ್ಕೂ ಮೂರು ಅಂಶಗಳನ್ನು ಎತ್ತಲಾಗಿದೆ. ಒಂದು ಅಂಶ ಯಾವುದನ್ನು ನನ್ನ ಮಿತ್ರ ಶ್ರೀ ನಜೀರುದ್ದೀನ ಅಹಮದರವರು ಎತ್ತಿರುವರೋ ಅದು ಸಮಯಕ್ಕೆ ಸಂಬಂಧಿಸಿದೆ.

* ಈ ವೇಳೆಗಾಗಲೆ ನಾವೆಲ್ಲ ತಿಳಿದಿರುತ್ತೇವೆ ನನ್ನ ಮಿತ್ರ ಶ್ರೀ ನಜೀರುದ್ದೀನ ಅಹಮದರವರು ಸೂಕ್ಷ್ಮ ವಿಷಯಗಳಿಗೆ ಎಷ್ಟೊಂದು ಹೆಚ್ಚಿನ ಗಮನಕೊಡುವವರೆಂದು. ಅವರು ಅಧ್ಯಕ್ಷನು ತನ್ನ ಹುದ್ದೆಯಿಂದ ಯಾವಾಗ ಮುಕ್ತನಾಗುವನು ಮತ್ತು ಮತ್ತೊಬ್ಬ ವ್ಯಕ್ತಿಯು ಹುದ್ದೆಯನ್ನು ವಹಿಸಿಕೊಳ್ಳುವನು ಎನ್ನುವುದು ಸಂವಿಧಾನದಲ್ಲಿ ವಿಶೇಷವಾಗಿ ನಮೂದಿಸಬೇಕೆಂದು ಬಯಸುವರು. ಈ ಸಂವಿಧಾನದಲ್ಲಿ ಅಷ್ಟೊಂದು ಸೂಕ್ಷ್ಮ ವಿವರಣೆಯ ಅಗತ್ಯವಿದೆಯೆ ಎನ್ನುವುದು ನನಗೆ ತಿಳಿಯದು. ಆದಾಗ್ಯೂ, ಅವರು ಮಂಡಿಸಿರುವ ತಿದ್ದುಪಡಿಯಲ್ಲಿ ನನಗೆ ಒಪ್ಪಿಕೊಳ್ಳುವುದು ಕಷ್ಟಕರವಾದದ್ದು ಯಾವುದೆಂದರೆ ಅವರು ತಮ್ಮ ಮನಸ್ಸಿನಲ್ಲಿ ಹೊಳೆದ ಸಮಯದ ವ್ಯವಸ್ಥೆಯನ್ನು ಪ್ರತ್ಯೇಕಿಸದಿರುವುದು. ಅದು ಗ್ರೀನವಿಚ್ ಸಮಯವೆ, ಸ್ಟಾಂಡರ್ಡ್ ಸಮಯವೆ, ಬೊಂಬಾಯಿ ಅಥವಾ ಕಲಕತ್ತಾ ಸಮಯವೆ?............+

**ಶ್ರೀ ನಜೀರುದ್ದೀನ ಅಹಮದ್** : ನನ್ನ ಅರ್ಥ ನೇಮಕಾತಿಯ ನಿಜವಾದ ಸಮಯ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಸಮಯ ಭಿನ್ನವಾಗಿರಬಹುದು. ಅವರು ವ್ಯವಸ್ಥೆಯನ್ನು ನಿಗದಿಪಡಿಸುವವರೆಗೆ, 'ಸಮಯ' ಈ ಪದದ ಬಳಕೆ ಯಾವುದೇ ಹೆಚ್ಚಿನ ಸ್ಪಷ್ಟತೆ ಅಥವಾ ಖಚಿತತೆಯನ್ನು ತರುತ್ತದೆ ಎಂದು ನನಗೆ ಅನಿಸುವುದಿಲ್ಲ.

ಎರಡನೆಯದಾಗಿ, ಆ ಪ್ರತ್ಯೇಕ ಕಲಮಿಗೆ ಸಂಬಂಧಿಸಿದಂತೆ ನನಗೆ ತೋರುವುದು ಅವರ ತಿದ್ದುಪಡಿ ಅನಗತ್ಯ ಎನ್ನುವದು. ಏಕೆಂದರೆ ವಿಧಿ ೫೪ರ ಉಪಕಲಮು (೧)ನ್ನು ಓದಿದಲ್ಲಿ ಅವರು "ಅಂತಹ ಖಾಲಿ ಸ್ಥಾನವನ್ನು ತುಂಬಲು ಅವರ ಹುದ್ದೆಗೆ ಸೇರುವರು" ಎನ್ನುವುದನ್ನೂ ನೋಡಬಹುದು. ಖಚಿತವಾಗಿಯೂ ಹುದ್ದೆಗೆ ಸೇರುವುದು ಖಾಲಿ ಸ್ಥಾನವನ್ನು ತುಂಬಲು ಅವರ ಹುದ್ದೆಗೆ ಸೇರುವರು ಎನ್ನುವುದನ್ನೂ ಗಮನಿಸಬಹುದು. ಖಚಿತವಾಗಿಯೂ ಹುದ್ದೆಗೆ ಸೇರುವುದು ದಿನದ ಯಾವುದೋ ಒಂದು ಸಮಯದಲ್ಲಿ – ಅದು ಮಧ್ಯರಾತ್ರಿಯಾಗಿರಬಹುದು ಅಥವಾ ಅದು ಹಗಲಿನ ೧೨ ಗಂಟೆಯಾಗಿರಬಹುದು, ಆದುದರಿಂದ ಸಮಯವನ್ನು ವಿವರಿಸುವುದು ಊಹೆಗೆ ಬಿಟ್ಟಿದ್ದು. ಆದುದರಿಂದ ಈ ತಿದ್ದುಪಡಿ ಪೂರ್ಣವಾಗಿ ಅನಗತ್ಯ........

**ಶ್ರೀ ನಜೀರುದ್ದೀನ ಅಹಮದ್** : ಕಲಮು ಹೇಳುವುದೇನೆಂದರೆ ಉಪಸಭಾಧ್ಯಕ್ಷರು ಹೊಸ ಅಧ್ಯಕ್ಷರು ಹುದ್ದೆಗೆ ಸೇರುವ ದಿನಾಂಕದೊಂದಿಗೆ ಕಾರ್ಯನಿರ್ವಹಿಸಬೇಕು ಎನ್ನುವುದು. ಆದರೆ ಸಮಯ ನಿಗದಿಪಡಿಸಿರುವುದಿಲ್ಲ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಖಂಡಿತವಾಗಿಯೂ ಅದು ಅವರು ಹುದ್ದೆಗೆ ಸೇರುವ ಯಾವೊಂದು ದಿನದ ಒಂದು ಸಮಯವಾಗಿರಲಿದೆ. ಅವರು ಬಹುಶಃ ಜ್ಯೋತಿಷಿಯೋರ್ವನನ್ನು ಶುಭಕರ ಘಳಿಗೆ ಯಾವುದೆಂದು ತಿಳಿಯಲು ಪರಾಮರ್ಶಿಸಬಹುದು. ಆದಾಗ್ಯೂ ತಿದ್ದುಪಡಿಯು ಸಮಗ್ರವಾಗಿ ಅನಗತ್ಯ.

ಹಿಂದಿನ ವಿಧಿಯ ಚರ್ಚೆಗೆ ಉತ್ತರಿಸುವ ಸಂದರ್ಭದಲ್ಲಿ ನನ್ನ ಮಿತ್ರ ಶ್ರೀ ಕಾಮತರು ತಿದ್ದುಪಡಿ ಮಂಡಿಸುವಾಗ ಉಪಾಧ್ಯಕ್ಷರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವಾಗ ಅಧ್ಯಕ್ಷರು ಎಷ್ಟೊಂದು ಪಗಾರ

---

*+ ಮೂಲ ಚರ್ಚೆಯಲ್ಲಿ ಚುಕ್ಕೆಗಳು ಆದ ತಡೆಯನ್ನು ಸೂಚಿಸುತ್ತವೆ.

ಪಡೆಯುತ್ತಿದ್ದರೋ ಅಷ್ಟೇ ಪಡೆಯಬೇಕೆಂದು ನಾನು ಹೇಳಿದ್ದೆನೆಂದು ಹೇಳಿದ್ದರು. ನಾನು ಮಂಡಿಸಿರುವ ತಿದ್ದುಪಡಿ ಸಂಬಂಧದ ಹೇಳಿಕೆ ಬಗೆಗೆ, ಅವರು ಕೆಲ ಅಡಚಣೆಗಳನ್ನು ವ್ಯಕ್ತಪಡಿಸಿದ್ದರು. ಅದು ಪಾರ್ಲಿಮೆಂಟಿಗೆ ಉಪಾಧ್ಯಕ್ಷರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವಾಗ ಪಗಾರ ನಿಗದೀಕರಣದ ಅಧಿಕಾರ ನೀಡುವುದಕ್ಕೆ ಸಂಬಂಧಿಸಿದುದು.

ಒಂದು ವೇಳೆ ನನ್ನ ಮಿತ್ರ ಕಾಮತರವರು ಕರಡು ಸಂವಿಧಾನದ ೧೬೧ನೆಯ ಪುಟವನ್ನು ತಿರುವಿ ನೋಡಿದಲ್ಲಿ ಅವರು ಕಾಣುವುದು ಒಂದು ಅನುಸೂಚಿಯನ್ನು. ಯಾವುದು ಯಾವುದು ಅಧ್ಯಕ್ಷರ ಪಗಾರ ನಿಗದಿಪಡಿಸುತ್ತದೆ, ಅದರಲ್ಲಿಯ ಲೇಖಪರಿಚ್ಛೇದ ೫ ಅಧ್ಯಕ್ಷರ ಪಗಾರ ವಿವರಿಸುತ್ತದೆ, ಖಚಿತವಾಗಿ, ವ್ಯಕ್ತಿಯೋರ್ವನು ಕಾರ್ಯನಿರ್ವಾಹಕ ಅಧ್ಯಕ್ಷನಾಗಿ ಅಧಿಕಾರದಲ್ಲಿದ್ದಾಗ, ಜೀವನದ ಯಾವ ಹಂತದಲ್ಲಿ ಆ ಹುದ್ದೆಗೆ ಬಂದಿರುವನೆಂದು ಪರಿಗಣಿಸದೆ ಈ ಸಂವಿಧಾನಕ್ಕೆ ಅನುಗುಣವಾಗಿ ಪಗಾರಕ್ಕೆ ಅರ್ಹನಾಗಿರುತ್ತಾನೆ. ಆದರೆ, ಹೀಗೆ ಕಡಿಮೆ ಅವಧಿಗಾಗಿ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯ ಪಗಾರವನ್ನು ಬೇರೆ ಸ್ಕೇಲ್‌ವೊಂದಾಗಿ ನಿಗದಿಪಡಿಸುವ ಅಧಿಕಾರದ ವಿಷಯವನ್ನು ಪಾರ್ಲಿಮೆಂಟಿಗೆ ಬಿಡುವ ಅಗತ್ಯವಿರಬಹುದೆಂದೆನಿಸಿತ್ತು. ಪಾರ್ಲಿಮೆಂಟು ಆತನಿಗೆ ಅಧ್ಯಕ್ಷನಷ್ಟೇ ಪಗಾರ ಕೊಡಲು ಇಷ್ಟಪಡಲಿಕ್ಕಿಲ್ಲ, ಏಕೆಂದರೆ ಆತನ ಕಾರ್ಯದ ಅವಧಿ ಅಧ್ಯಕ್ಷನದ್ದಷ್ಟಾಗಿರುವುದಿಲ್ಲ. ತತ್ಪರಿಣಾಮವಾಗಿ, ಒಂದು ವೇಳೆ ಪಾರ್ಲಿಮೆಂಟು ಯಾವುದೇ ಪ್ರಾವಧಾನ ಮಾಡದೆ ಹೋದಲ್ಲಿ ಆತನು ಅಧ್ಯಕ್ಷನಾಗಿ ನಿಗದಿಪಡಿಸಿದ ಪಗಾರ ಪಡೆಯುತ್ತಾನೆ. ಆದರೆ, ಪಾರ್ಲಿಮೆಂಟ್ ಆತನಿಗೆ ಬೇರೆ ಪಗಾರ ಕೊಡುವ ಪ್ರಾವಧಾನ ಮಾಡಬಹುದು. ಆ ಉದ್ದೇಶಕ್ಕಾಗಿ ಈ ತಿದ್ದುಪಡಿಯನ್ನು ಮಂಡಿಸಲಾಗಿದೆ.

**ಶ್ರೀ ಹೆಚ್.ವಿ. ಕಾಮತ್** : ಮಾನ್ಯರೆ, ನನ್ನ ಮಿತ್ರ ಗೌರವಾನ್ವಿತ ಡಾ. ಅಂಬೇಡ್ಕರ್‌ರವರ ಗಮನವನ್ನು ವಿಧಿ ೪೮ರ ಕಲಮು (೪)ರತ್ತ ಸೆಳೆಯಬಹುದೆ ? ಅದು ಅಧ್ಯಕ್ಷರ ಪಗಾರ ಮತ್ತು ಭತ್ತೆಗಳನ್ನು ಅವರ ಕಾರ್ಯಕಾಲ ಅವಧಿಯಲ್ಲಿ ಕಡಿಮೆಗೊಳಿಸಲಾಗುವುದಿಲ್ಲವೆಂಬುದನ್ನು ವಿಧಿಸುತ್ತದೆ. ನೀವು ಉಪಾಧ್ಯಕ್ಷರು ಕಾರ್ಯನಿರ್ವಾಹಕ ಅಧ್ಯಕ್ಷರಾಗಿ ಕೆಲಸ ಮಾಡುವುದಕ್ಕು ಮತ್ತು ಅಧ್ಯಕ್ಷರು ಇವರ ನಡುವೆ ಅಂತರ ಮಾಡುವಿರೆಂದು ನಾನು ತಿಳಿದುಕೊಳ್ಳಬೇಕೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಹೌದು ಖಂಡಿತವಾಗಿ.

**ಶ್ರೀ ಹೆಚ್.ವಿ. ಕಾಮತ್** : ಮಾನ್ಯರೆ, ಇದೀಗ ನಾನು ಹಿಂದಿನ ಕೊನೆಯ ವಿಧಿಯ ತಿದ್ದುಪಡಿಯೊಂದಕ್ಕೆ ಆಕ್ಷೇಪಣೆ ಮಾಡಿದಾಗ, ಡಾ. ಅಂಬೇಡ್ಕರರು ಉಪಾಧ್ಯಕ್ಷರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವಾಗ ಅಧ್ಯಕ್ಷರ ಪಗಾರ ಮತ್ತು ಭತ್ತೆಗಳನ್ನು ಪಡೆಯುವರೆಂದು ಹೇಳಿದ್ದರು.

**ಗೌರವಾನ್ವಿತ ಡಾ. ಅಂಬೇಡ್ಕರ್** : ಪಾರ್ಲಿಮೆಂಟು ಒದಗಿಸದ ಹೊರತು, ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವವರೆಗೆ ಉಪಾಧ್ಯಕ್ಷರು ಪಡೆಯುವುದು ಅಧ್ಯಕ್ಷರ ಪಗಾರವನ್ನೆ. ಕಡಿಮೆ ಅವಧಿಗೆ ಇರುವ ಅಧ್ಯಕ್ಷನ ಪಗಾರದ ಸ್ಕೇಲನ್ನು ನಿಗದಿಪಡಿಸುವ ಅಧಿಕಾರ ಪಾರ್ಲಿಮೆಂಟಿಗೆ ಕೊಡಬಾರದೇಕೆ ಎನ್ನುವುದಕ್ಕೆ ಕಾರಣವೇ ಇಲ್ಲ.

ಪಂಡಿತ ಭಾರ್ಗವರವರು ಮತ್ತೊಂದು ಅಂಶವನ್ನು ಎತ್ತಿದ್ದಾರೆ. ಅದೆಂದರೆ ಉಪಾಧ್ಯಕ್ಷರು ಕಾರ್ಯನಿರ್ವಾಹಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವಾಗ ಮಹಾಅಭಿಯೋಗಕ್ಕೆ ಗುರಿಮಾಡಲು ಪ್ರಾವಧಾನ ಇಲ್ಲವೆಂಬುದು. ಸ್ಪಷ್ಟವಾಗಿ ಯಾವಾಗ ಉಪಾಧ್ಯಕ್ಷರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವರೋ, ಆಗ ಪ್ರತ್ಯೇಕವಾಗಿ ನಮೂದಿಸದೆ ಇದ್ದಾಗ್ಯೂ ಅಧ್ಯಕ್ಷನ ಎಲ್ಲ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ಆತನಿಗೆ

ಸೇರಿರುತ್ತವೆ. ಆತನ ಅಧ್ಯಕ್ಷನ ಹುದ್ದೆಯ ಅವಧಿಯಲ್ಲಿ, ಉಪಾಧ್ಯಕ್ಷ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುತ್ತಿದ್ದಾಗ್ಯೂ, ಕಾರ್ಯಾಕಾಲ ಅವಧಿಯಲ್ಲಿ ಮಹಾ ಅಭಿಯೋಗಕ್ಕೆ ಗುರಿಮಾಡಬಹುದಾದ ಯಾವುದೇ ಕೃತ್ಯ ಎಸಗಿದಲ್ಲಿ ಉಪಾಧ್ಯಕ್ಷನಿಗೆ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿರುವನೆಂಬ ಆಧಾರದ ಮೇಲೆ ಯಾವುದೇ ರಕ್ಷಣೆ ದೊರಕುವುದಿಲ್ಲ. ಆದುದರಿಂದ ಆ ಬಗೆಗೆ ಪ್ರತ್ಯೇಕ ಪ್ರಾವಧಾನ ಮಾಡುವ ಯಾವುದೇ ಅಗತ್ಯ ಇಲ್ಲ.

**ಶ್ರೀ ನಜೀರುದ್ದೀನ ಅಹಮದ** : ಉಪಸಭಾಪತಿ ಶ್ರೀಯವರೆ, ನಾನು ಕೇಳಬಹುದೆ.......

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಈ ಹಂತದಲ್ಲಿ ನಾನು ಯಾವುದೇ ವಿಚಾರಣೆಗೆ ಅವಕಾಶ ನೀಡುವುದಿಲ್ಲ.

**ಮಾನ್ಯ ಉಪಸಭಾಪತಿ** : ಶ್ರೀ ನಜೀರುದ್ದೀನ್ ಅಹಮದರವರು ಕುಳಿತುಕೊಳ್ಳಬಹುದು.

**ಶ್ರೀ ನಜೀರುದ್ದೀನ ಅಹಮದ್** : ಕಣ್ಣು ತಪ್ಪಿ ಹೋಗಿರುವ ವಿಷಯವೊಂದರತ್ತ ಗೌರವಾನ್ವಿತ ಡಾ. ಅಂಬೇಡ್ಕರ್‌ರವರ ಗಮನವನ್ನು ಸೆಳೆಯ ಬಯಸುತ್ತೇನೆ.

**ಮಾನ್ಯ ಉಪಸಭಾಪತಿ** : ಅವರು ಅದನ್ನು ಕೇಳಲು ನಿರಾಕರಿಸುತ್ತಿದ್ದಾರೆ. ನಾನೇನು ಮಾಡಬಹುದು? ಅವರು ಕೇಳುವಂತೆ ನಾನು ಒತ್ತಾಯಿಸಲಾರೆ.

**ಶ್ರೀ ನಜೀರುದ್ದೀನ ಅಹಮದ್** : ಯಾರೊಬ್ಬರಿಂದಲೂ ಅವರಿಗೆ ಒತ್ತಾಯಿಸಲಾಗದು. ಅಂಶವೆಂದರೆ ವಿಧಿ ೫೪ರ ಕಲಮು (೩)ರಲ್ಲಿ........

**ಮಾನ್ಯ ಉಪಸಭಾಪತಿ** : ನಾನು ತಿದ್ದುಪಡಿಯನ್ನು ಮತಕ್ಕೆ ಹಾಕಲು ಹೊರಟಿರುವೆ. ತಾವು ಯಾವುದೇ ಉತ್ತರ ನೀಡುವುದಿಲ್ಲವೆಂದು ಡಾ. ಅಂಬೇಡ್ಕರರು ಹೇಳಿರುತ್ತಾರೆ.

**ಶ್ರೀ ನಜೀರುದ್ದೀನ ಅಹಮದ್** : ಅವರು ವಿಷಯವನ್ನು ಪುನರ್ ಪರಿಶೀಲಿಸುವರೆಂದು ನಾನು ಆಶಿಸುತ್ತೇನೆ.

**ಮಾನ್ಯ ಉಪಸಭಾಪತಿ** : ಮೂರನೇ ರೀಡಿಂಗ್‌ನ ಹಂತದಲ್ಲಿ ಹಾಗೆ ಏಕೆ ಮಾಡಬಾರದು? ನಾನು ತಿದ್ದುಪಡಿಯನ್ನು ಮತಕ್ಕೆ ಹಾಕಲು ಹೊರಟಿರುವೆ.

**ಶ್ರೀ ನಿಜಾಮುದ್ದೀನ ಅಹಮದ್** : ಆದರೆ, ಮಾನ್ಯರೇ, ಇದೊಂದು ಅತಿ ಮಹತ್ವದ ವಿಷಯವಾಗಿದೆ.

**ಮಾನ್ಯ ಉಪಸಭಾಪತಿ** : ನೀವು ಹಾಗೆ ವಿಚಾರ ಮಾಡುವಿರಿ. ಗೌರವಯುತವಾಗಿ ನಾನು ನಿಮಗೆ ನಿಮ್ಮ ಸ್ಥಾನವನ್ನು ತೆಗೆದುಕೊಳ್ಳಿ ಎಂದು ಕೇಳಬಹುದೆ?

**ಶ್ರೀ ನಿಜಾಮುದ್ದೀನ ಅಹಮದ್** : ನಾನು ನಿಮ್ಮ ವಿನಂತಿಗೆ ಅನುಗುಣವಾಗಿ ನಡೆದುಕೊಳ್ಳುವೆ.

**ಮಾನ್ಯ ಉಪಸಭಾಪತಿ** : ಶ್ರೀ ನಜೀರುದ್ದೀನ ಅಹಮದರವರ ಹೆಸರಿನ ಮೇಲಿರುವ ೧೨೦೫ನೆಯ ಸಂಖ್ಯೆಯ ತಿದ್ದುಪಡಿ ತಿರಸ್ಕೃತಗೊಂಡಿತು.

(ಈ ಹಿಂದೆ ನಮೂದಿತ ಡಾ. ಅಂಬೇಡ್ಕರ್‌ರವರ ತಿದ್ದುಪಡಿ ಅಂಗೀಕೃತಗೊಂಡಿತು)

ವಿಧಿ ೫೪, ತಿದ್ದುಪಡಿಗೊಂಡಂತೆ, ಅಂಗೀಕರಿಸಲ್ಪಟ್ಟು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

* * * *

## ವಿಧಿ ೫೫

* **ಮಾನ್ಯ ಉಪಸಭಾಪತಿ** .....ಡಾ. ಅಂಬೇಡ್ಕರ, ತಿದ್ದುಪಡಿ ಸಂಖ್ಯೆ ೧೨೨೪.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ನಾನು ಮಂಡಿಸುವೆ.

"ವಿಧಿ ೫೫ರ ಕಲಮು (೨)ರಲ್ಲಿ 'ಪಾರ್ಲಿಮೆಂಟಿನ ಅಥವಾ' ಈ ಪದಗಳಿಗೆ 'ಪಾರ್ಲಿಮೆಂಟಿನ ಸಭೆಗಳಲ್ಲಿ ಒಂದು ಅಥವಾ ಸಭೆಯೊಂದರ' ಈ ಪದಗಳನ್ನು 'ಪಾರ್ಲಿಮೆಂಟಿನ ಸದಸ್ಯ ಅಥವಾ' ಈ ಪದಗಳಿಗೆ 'ಪಾರ್ಲಿಮೆಂಟಿನ ಯಾವೊಂದು ಸಭೆಯ ಸದಸ್ಯ ಅಥವಾ ಸಭೆಯೊಂದರ' ಈ ಪದಗಳನ್ನು ಮತ್ತು 'ಪಾರ್ಲಿಮೆಂಟಿನಲ್ಲಿ ಅಥವಾ ಕೇಸಿಗೆ ಅನುಗುಣವಾಗಿ ಅಂತಹ ಶಾಸಕಾಂಗ ಈ ಪದಗಳಿಗೆ 'ಆ ಸಭೆಯಲ್ಲಿ' ಕ್ರಮವಾಗಿ ಬದಲಿ ಇಡುವುದು."

ಇದು ಕೇವಲ ಭಾಷೆಯನ್ನು ಸುಧಾರಿಸಲು. ಇದರಲ್ಲಿ ಯಾವುದೇ ಮಹತ್ವದ ಸತ್ವ ಇಲ್ಲ.

* * * *

** **ಮಾನ್ಯ ಉಪಸಭಾಪತಿ** : ಮುಂದಿನ ತಿದ್ದುಪಡಿಗಳಾದ ಸಂ.೧೨೩೫ ಮತ್ತು ೧೨೩೩ ಈ ಎರಡೂ ಮೌಖಿಕವಾದವುಗಳಾದ್ದರಿಂದ ತಿರಸ್ಕರಿಸಲ್ಪಡುತ್ತವೆ.

ಅಂಬೇಡ್ಕರ್‌ರವರ ಹೆಸರಿನಲ್ಲಿರುವ ತಿದ್ದುಪಡಿ ಸಂ. ೧೨೩೪ ಮತ್ತು ಶ್ರೀ ನಜೀರುದ್ದೀನ ಅಹಮದ್‌ರವರ ಹೆಸರಿನಲ್ಲಿರುವ ತಿದ್ದುಪಡಿಗಳೆರಡೂ ಸಮಾನ ಅರ್ಥಕೊಡುವುವು. ಆದ್ದರಿಂದ, ನಾನು ಡಾ. ಅಂಬೇಡ್ಕರ್‌ರವರನ್ನು ಅವರದ್ದು ಹೆಚ್ಚು ಸಮಗ್ರವಾದದ್ದಾಗಿರುವುದರಿಂದ, ಅವರು ಮಂಡಿಸಲು ನಾನು ಕೇಳಿಕೊಳ್ಳುವೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ನಾನು ಮಂಡಿಸುವೆ.

"ವಿಧಿ ೫೫ರ ಕಲಮು (೪)ರಲ್ಲಿ 'ಅಥವಾ ವರಮಾನಗಳ ಸ್ಥಿತಿ' ಈ ಪದಗಳಿಗೆ ಬದಲಾಗಿ, ಅವು ಎಲ್ಲೆಲ್ಲಿ ಬರುತ್ತವೆಯೋ ಅಲ್ಲಲ್ಲಿ 'ಲಾಭದ' ಈ ಪದಗಳನ್ನು ಬದಲಿ ಇಡುವುದು."

**ಮಾನ್ಯ ಉಪಸಭಾಪತಿ** : ೧೨೩೫ ಸಂಖ್ಯೆಯ ತಿದ್ದುಪಡಿ ಶ್ರೀ ನಜೀರುದ್ದೀನ ಅಹಮದ್‌ರವರ ಹೆಸರಿನಲ್ಲಿದೆ. ಅವರು ಇದನ್ನು ನಾನು ಮತಕ್ಕೆ ಹಾಕಲು ಬಯಸುವರೆ?

**ಶ್ರೀ ನಜೀರುದ್ದೀನ್ ಅಹಮದ್** : ಇಲ್ಲ, ಮಾನ್ಯರೆ, ಹಿಂದಿನ ತಿದ್ದುಪಡಿ ಇದನ್ನು ಒಳಗೊಂಡಿರುತ್ತದೆ.

**ಮಾನ್ಯ ಉಪಸಭಾಪತಿ** : ತಿದ್ದುಪಡಿ ಸಂ.೧೨೩೯ ಇದರ ಬಗ್ಗೆ ಏನು?

**ಶ್ರೀ ನಜೀರುದ್ದೀನ್ ಅಹಮದ್ :** ಅದೇ ಪರಿಗಣನೆ ಅನ್ವಯಿಸುತ್ತದೆ.

(ತಿದ್ದುಪಡಿ ಸಂ೧೨೩೬ನ್ನು ಮಂಡಿಸಲಿಲ್ಲ)

**ಮಾನ್ಯ ಉಪಸಭಾಪತಿ** : ತಿದ್ದುಪಡಿ ಸಂಖ್ಯೆಗಳಾದ ೧೨೩೭ ಮತ್ತು ೧೨೩೮ ಮೌಖಿಕವಾದವುಗಳಾದ್ದರಿಂದ ತಿರಸ್ಕರಿಸಲಾಯಿತು.

ತಿದ್ದುಪಡಿ ಸಂಖ್ಯೆ ೧೨೪೦ ಡಾ. ಬಿ.ಆರ್. ಅಂಬೇಡ್ಕರರ ಹೆಸರಿನಲ್ಲಿದೆ. ಅವರು ಅದನ್ನು ಮಂಡಿಸಬಹುದು.

---

* ಸಿ.ಎ.ಡಿ. ಸಂಪುಟ ೭, ೨೮ನೆಯ ಡಿಸೆಂಬರ್, ೧೯೪೮, ಪುಟ ೧೧೯೫

** ಅದೇ ಪು. ೧೧೯೬

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ನಾನು ಹೀಗೆ ಮಂಡಿಸುವೆ.

"ವಿಧಿ ೫೫ರ ವಿವರಣೆ ಕಲಮು (೪)ರ ಉಪಕಲಮು (ಎ)ಗೆ ಮುಂದಿನದನ್ನು ಬದಲಿ ಇಡುವುದು:–

'(ಎ) ಮೊದಲನೆ ಅನುಸೂಚಿಯ ಭಾಗ ೧ರಲ್ಲಿ ವಿಶದಪಡಿಸಿರುವ ಆತನು ರಾಜ್ಯದ ತಾತ್ಪೂರ್ತಿಕ ರಾಜ್ಯಪಾಲನಾಗಿರಬಹುದು ಅಥವಾ ಭಾರತದ ಇಲ್ಲವೆ ಯಾವುದೇ ರಾಜ್ಯದ ಮಂತ್ರಿಯಾಗಿರಬಹುದು."

ಈ ವಿಷಯವನ್ನು ಈಗಾಗಲೇ ಕಳೆದ ಸಲ ಚರ್ಚಿಸಿಯಾಗಿದೆ.

* * * *

* **ಮಾನ್ಯ ಉಪಸಭಾಪತಿ** : ಡಾ. ಅಂಬೇಡ್ಕರ್.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** (ಬೊಂಬಾಯಿ: ಸಾಮಾನ್ಯ) : ಉಪಸಭಾಪತಿ ಶ್ರೀ, ಮಾನ್ಯರೆ, ಈ ವಿಧಿಗೆ ಸೂಚಿಸಲಾಗಿರುವ ಯಾವುದೇ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವುದಿಲ್ಲ ಅದಕ್ಕಾಗಿ ವಿಷಾದಿಸುವೆ. ಸಾಮಾನ್ಯ ಚರ್ಚೆಗೆ ಸಂಬಂಧಿಸಿದಂತೆ, ಉತ್ತರಿಸಬೇಕಾಗಿರುವಂತಹವುಗಳು ಕೇವಲ ಎರಡು ತಿದ್ದುಪಡಿಗಳು ಮಾತ್ರ. ಮೊದಲನೆಯದು ತಿದ್ದುಪಡಿ ಸಂ.೧೨೧೫ ಶ್ರೀ ತಾಹಿರ ಅವರಿಂದ ಮಂಡಿಸಲ್ಪಟ್ಟದ್ದು. ಶ್ರೀ ತಾಹಿರವರ ತಿದ್ದುಪಡಿ ಪ್ರಸ್ತಾವಿಸುವುದು ಅಧ್ಯಕ್ಷರಿಗಾಗಿ ನಿಗದಿ ಪಡಿಸಿರುವ ಚುನಾವಣಾ ವ್ಯವಸ್ಥೆಯನ್ನೆ ಉಪಾಧ್ಯಕ್ಷರಿಗೆ ಅನ್ವಯಿಸಬೇಕೆನ್ನುವುದು. ಮಾನ್ಯರೆ, ಕರಡು ಸಮಿತಿಯಲ್ಲಿ ಅವರವರುಗಳು ನಿರ್ವಹಿಸಬೇಕು ಎಂದುಕೊಂಡಿರುವ ಕಾರ್ಯಗಳನ್ನು ಆಧರಿಸಿ ಅಧ್ಯಕ್ಷ ಹಾಗು ಉಪಸಭಾಪತಿ ಇವರುಗಳು ಚುನಾವಣಾ ವ್ಯವಸ್ಥೆಗಳ ನಡುವೆ ವ್ಯತ್ಯಾಸ ಮಾಡಲಾಗಿದೆ. ಅಧ್ಯಕ್ಷರು ದೇಶದ ಮುಖ್ಯಸ್ಥರಾಗಿದ್ದು ಅವರ ಅಧಿಕಾರಗಳು ಕೇಂದ್ರದಿಂದ ಅಲ್ಲದೆ ರಾಜ್ಯಗಳಿಂದ ನಡೆಯುವ ಆಡಳಿತಕ್ಕೆ ವಿಸ್ತೃತಗೊಳ್ಳುತ್ತವೆ. ತತ್ಪರಿಣಾಮವಾಗಿ, ಅವರ ಚುನಾವಣೆಯಲ್ಲಿ ಪಾರ್ಲಿಮೆಂಟಿನ ಸದಸ್ಯರುಗಳದ್ದಷ್ಟೆ ಅಲ್ಲ ರಾಜ್ಯಗಳ ಶಾಸಕಾಂಗಗಳ ಸದಸ್ಯರುಗಳ ಧ್ವನಿ ಪ್ರಭಾವ ಕೂಡ ಇರಲೇಬೇಕು. ಆದರೆ ನಾವು ಉಪಾಧ್ಯಕ್ಷರಿಗೆ ಬರುತ್ತೇವೆಯೋ, ಅವರ ಸಾಮಾನ್ಯ ಕಾರ್ಯಗಳು ಕೇವಲ ರಾಜ್ಯ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಸಂಬಂಧಿಸಿದವುಗಳಾಗಿವೆ. ಬಹಳ ವಿಶೇಷ ಸಂದರ್ಭದಲ್ಲಿ, ಅದೂ ಕೂಡ ತಾತ್ಕಾಲಿಕ ಅವಧಿಗಾಗಿ, ಅವರನ್ನು ಅಧ್ಯಕ್ಷರ ಕರ್ತವ್ಯಗಳನ್ನು ನಿರ್ವಹಿಸಲು ಕರೆಯಲಾಗುತ್ತದೆ. ಅದು ಹಾಗೆ ಇರಲು, ಉಪಾಧ್ಯಕ್ಷರ ಹುದ್ದೆಗೆ ನಡೆಯುವ ಚುನಾವಣೆಯಲ್ಲಿ ರಾಜ್ಯಶಾಸಕಾಂಗಗಳ ಚುನಾವಣೆಯಲ್ಲಿ ಪಾಲ್ಗೊಳ್ಳಲು ಕರೆಯುವುದು ಅಗತ್ಯವೆನಿಸುವುದಿಲ್ಲ. ಕರಡು ಸಮಿತಿಯವರು ಈ ಎರಡೂ ಘನತೆವೆತ್ತ ಹುದ್ದೆಗಳ ನಡುವಣ ಚುನಾವಣಾ ವಿಧಾನಗಳ ನಡುವೆ ಅಂತರ ಮಾಡಿರುವುದಕ್ಕೆ ಇದೇ ಸಮರ್ಥನೆಯಾಗಿದೆ.

ಎರಡನೆಯ ತಿದ್ದುಪಡಿ ಯಾವುದಕ್ಕೆ ಉತ್ತರ ಅಗತ್ಯವೋ ಅದು ಶ್ರೀ ನಜೀರುದ್ದೀನ ಅಹಮದರವರಿಂದ ಮಂಡಿತ ತಿದ್ದುಪಡಿ ಸಂ.೧೨೧೯. ಅವರು "ಸಭೆ ಸೇರಿದ" ಈ ಪದಗಳನ್ನು ಕೈಬಿಡಬೇಕೆಂಬ ಸಲಹೆ ನೀಡಿರುತ್ತಾರೆ. ಈಗ ಅನುಚ್ಛೇದದಲ್ಲಿ "ಅಸೆಂಬಲ್ಡ್" ಈ ಪದವನ್ನು ಸೇರಿಸಲು ಕಾರಣವೆಂದರೆ ಅಂಚೆ ಮೂಲಕ ಮತ ಪತ್ರಗಳನ್ನು ಹಾಕಿ ಚುನಾವಣೆ ನಡೆಸುವುದನ್ನು ತಪ್ಪಿಸುವುದಾಗಿದೆ. ನಾವೆಲ್ಲ ತಿಳಿದಿರುವಂತೆ ಅಂಚೆ ಮೂಲಕ ಮತದಾನ ಮಾಡುವ ವ್ಯವಸ್ಥೆ ಬಳಸಿದಾಗ ಚುನಾವಣೆಯು ವಿಫಲವಾಗಿ ಪರಿಣಮಿಸುವುದು. ಅಂಚೆಗೆ ಹಾಕಿದ ಮತ ಪತ್ರಗಳು ನಿಗದಿತ ಸ್ಥಳಕ್ಕೆ ತಲುಪದೆ ಇರಬಹುದು, ಸಾಗಣೆಯಲ್ಲಿ ಕಳೆದು ಹೋಗಬಹುದು, ಅಥವಾ ಅಭ್ಯರ್ಥಿಯೋರ್ವನಿಗೆ ತನ್ನ ಏಜೆಂಟರುಗಳನ್ನು ತಾನು ಮತ ಪತ್ರಗಳನ್ನು

---

* ಸಿ.ಎ.ಡಿ. ಸಂಪುಟ ೭, ೨೯ನೆಯ ಡಿಸೆಂಬರ್, ೧೯೪೮, ಪುಟ ೧೧೦೦–೦೨

ಹೊಂದಲು ಸಂಗ್ರಹಿಸಲು ಕಳಿಸಲೂ ಸಾಧ್ಯವಾಗಬಹುದು, ಮತದಾರನಿಗೆ ಚುನಾವಣಾ ವಿಷಯದಲ್ಲಿ ಸ್ವತಂತ್ರ ಅವಕಾಶ ಸಿಗದಂತೆ ಅಭ್ಯರ್ಥಿಯೋರ್ವನು ತಾನೇ ಆ ಮತಗಳನ್ನು ಸಹಿಮಾಡಿ ಕಳುಹಿಸಲೂ ಬಹುದು. ಈ ಕಾರಣದಿಂದಾಗಿ ಅಂಚೆ ಮತದ ದುರುಪಯೋಗ ತಡೆಗಟ್ಟಲು ಎರಡೂ ಸಭೆಗಳು ಸಭೆ ಸೇರಿದಾಗ ಚುನಾವಣೆಗಳು ಜರುಗಬೇಕೆಂದು ನಿರ್ಧರಿಸಲಾಗಿದೆ. ಈಗ, ಈ ಉದ್ದೇಶಕ್ಕಾಗಿ ಪಾರ್ಲಿಮೆಂಟಿನ ಸದಸ್ಯರುಗಳನ್ನು ಕರೆದು ಸಭೆ ಸೇರಿಸುವುದು ಯಾವುದೇ ವ್ಯಾವಹಾರಿಕ ತೊಂದರೆ ಉಂಟುಮಾಡುವುದೆಂದು ಅಥವಾ ಅನಾನುಕೂಲಕ್ಕೆ ಕಾರಣವಾಗುವುದೆಂದು ನಾನು ಭಾವಿಸಲಾರೆ. ಹೇಗೂ ಪಾರ್ಲಿಮೆಂಟಿನ ಸದಸ್ಯರುಗಳು ಶಾಸನ ಮಾಡುವ ಕಾರ್ಯಕ್ಕಾಗಿ ಸೇರುವರು, ಮತ್ತು ಅಂತಹ ಒಂದು ಅಧಿವೇಶನದಲ್ಲಿ ಚುನಾವಣೆ ನಡೆಸುವುದು ಸಾಧ್ಯವಾಗಬಹುದು. ಆದುದರಿಂದ ನಾನು ಸಲ್ಲಿಸುವುದೇನೆಂದರೆ ವಿವರಿಸಲಾಗಿರುವ ಕಾರಣಗಳಿಂದಾಗಿ ಮೂಲ ಭಾಷೆಯು ಹೆಚ್ಚು ಸಮರ್ಥನೀಯವಾದದ್ದು ಎಂದು.

ಈಗ, ಮಾನ್ಯರೆ, ಪ್ರೊ.ಕೆ.ಟಿ. ಶಾಹರವರ ಉಪಾಧ್ಯಕ್ಷರಿಗೆ ಸಂಬಂಧಿಸಿದಂತೆ ಅನರ್ಹತೆಗಳನ್ನು ಸಂವಿಧಾನದಲ್ಲಿಯೇ ವಿಶದಪಡಿಸಬೇಕು ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ ನಾನೀಗಲೆ ಅಂತಹುದೇ ಅವರಿಂದಲೇ ಸೂಚಿಸಲ್ಪಟ್ಟಿದ್ದ ಅಧ್ಯಕ್ಷರಿಗೆ ಸಂಬಂಧಿಸಿದ ತಿದ್ದುಪಡಿಗೆ ಉತ್ತರಿಸುತ್ತ ಅಂತಹ ವಿಷಯ ಪಾರ್ಲಿಮೆಂಟು ಕಾನೂನು ಮಾಡಿ ಒದಗಿಸಲು ಬಿಡಬೇಕೆಂದು ಹೇಳಿರುವೆ.

ಶ್ರೀ ಭಾರತಿ ಮತ್ತು ಶ್ರೀ ನಜೀರುದ್ದೀನ್‌ರವರು 'ಪರ್ಯಾಯ ಮತ' ಈ ಪದಗಳ ಬಳಕೆ ಮಾಡಿರುವ ಸಲಹೆಗಳಿಗೆ ಸಂಬಂಧಿಸಿದಂತೆ ನಾನು ಹೇಳಬಹುದಾದದ್ದು ಹೀಗಿದೆ. ಅದು ಕೇವಲ ಭಾಷೆಯ ಬದಲಾವಣೆಗೆ ಸಂಬಂಧಿಸಿದುದಾದರೆ, ಕರಡು ಸಮಿತಿಗೆ ನಂತರದ ಹಂತದಲ್ಲಿ ವಿಷಯವನ್ನು ಪರಿಗಣಿಸಲು ಸಾಧ್ಯ. ಆದರೆ ಒಂದು ವೇಳೆ–ಒಂದು ರೀತಿಯಲ್ಲಿ ಅಥವಾ ಬೇರೆಯಾಗಿ ನಾನು ಬದ್ಧನಾಗಲು ಸಿದ್ಧನಿಲ್ಲ – ಪರ್ಯಾಯ ಮತ ವಿಷಯದ ತಿರುಳಿನಲ್ಲಿ ಯಾವುದೇ ಬದಲಾವಣೆ ಒಳಗೊಂಡಿರುವುದಿಲ್ಲವಾದ್ದರಿಂದ ನನಗೆ ಭಯವಿದೆ. ಯಾವುದೇ ಹಂತದಲ್ಲಿ ಈ ವಿಷಯವನ್ನು ಪರಿಗಣಿಸಲು ನಮಗೆ ಸಾಧ್ಯವಾಗುವುದೇ ಇಲ್ಲ.

**ಮಾನ್ಯ ಉಪಸಭಾಪತಿ** : ನಾನು ಈಗ ವಿವಿಧ ತಿದ್ದುಪಡಿಗಳನ್ನು ಒಂದಾದ ಮೇಲೆ ಒಂದರಂತೆ ಮತಕ್ಕೆ ಹಾಕಲು ಹೊರಟಿರುವೆ.

(ಡಾ. ಬಿ.ಆರ್. ಅಂಬೇಡ್ಕರ್‌ರವರು ಸೂಚಿಸಿದ ತಿದ್ದುಪಡಿಗಳ ಹೊರತಾಗಿ ಉಳಿದೆಲ್ಲ ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು. ಡಾ. ಅಂಬೇಡ್ಕರ್‌ರವರ ತಿದ್ದುಪಡಿಗಳನ್ನು ಈ ಹಿಂದೆ ಉಲ್ಲೇಖಿಸಲಾಗಿದೆ.)

ತಿದ್ದುಪಡಿಯಾದಂತೆ ವಿಧಿ ೫೫ನ್ನು ಒಪ್ಪಿಕೊಳ್ಳಲಾಯಿತು ಮತ್ತು ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

* * * *

## ವಿಧಿ ೫೬

* **ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಉಪಸಭಾಪತಿ ಶ್ರೀ, ಮಾನ್ಯರೆ, ವಿಧಿ ೫೦ಕ್ಕೆ ಸೂಚಿಸಲಾಗಿರುವ ಯಾವುದೇ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ನಾನು ಶಕ್ತನಾಗಿಲ್ಲದಿದ್ದುದಕ್ಕೆ ವಿಷಾದಿಸುತ್ತೇನೆ. ತಿದ್ದುಪಡಿಗಳನ್ನು ಯಾರು ಮಂಡಿಸಿರುವರೋ ಅವರುಗಳು ಎತ್ತಿರುವ ಕೆಲ ಅಂಶಗಳನ್ನು ಚರ್ಚಿಸಲಿಚ್ಛಿಸುವೆ.

---

* ಸಿ.ಎ.ಡಿ. ಸಂಪುಟ ೭, ೨೯ನೆಯ ಡಿಸೆಂಬರ್, ೧೯೪೮, ಪುಟ ೧೧೧೩–೧೫

ಮಾನ್ಯರೆ, ಮೊದಲನೆ ತಿದ್ದುಪಡಿ ಪ್ರೊ. ಶಾಹರವರದ್ದು. ಅದು ಉಪಾಧ್ಯಕ್ಷರ ಪಗಾರ ಮತ್ತು ಪಿಂಚಣಿಗಳಿಗೆ ಅವಕಾಶ ಮಾಡಿಕೊಡಬೇಕೆಂಬುದಕ್ಕೆ ಒದಗಿಸುತ್ತದೆ. ಇದೇ ವಿಷಯವನ್ನು ಪ್ರೊ. ಶಾಹರವರು ಅಧ್ಯಕ್ಷರ ಹುದ್ದೆಗೆ ಸಂಬಂಧಿಸಿದಂತೆ ಕೂಡ ಎತ್ತಿದ್ದರು. ಅದಕ್ಕೆ ನಾನು ಸಂವಿಧಾನದಲ್ಲಿಯೇ ಯಾವುದೇ ಉಪಬಂಧ ಮಾಡುವುದಕ್ಕೆ ನನ್ನ ಆಕ್ಷೇಪಣೆ ತಿಳಿಸಿದ್ದೆ.

**ಗೌರವಾನ್ವಿತ ಶ್ರೀ ಕೆ. ಸಂತಾನಮ್** (ಮದ್ರಾಸ : ಸಾಮಾನ್ಯ) : ಎರಡನೆ ಅನುಸೂಚಿಯಲ್ಲಿ ಅದನ್ನು ವ್ಯಕ್ತಪಡಿಸುವ ಉಪಬಂಧಗಳನ್ನು ಮಾಡಲಾಗಿದೆ ಎನ್ನುವುದನ್ನು ಎತ್ತಿ ತೋರಿಸಬಹುದೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಆ ಅಂಶದ ಬಗೆಗೆ ನನ್ನ ನಿಲುವನ್ನು ವಿವರಿಸಿಯಾದ ನಂತರ, ಆಗ ನಾನು ಹೇಳಿರುವುದನ್ನು ಪುನರುಚ್ಚರಿಸುವುದಿಲ್ಲ. ವಿಧಿ ೫೬ರ ಉಪಕಲಮು (ಬಿ)ಗೆ ಬರುವುದಾದರೆ, ಅನೇಕ ಅಂಶಗಳನ್ನು ಎತ್ತಲಾಗಿದೆ. ಮೊದಲನೆಯದಾಗಿ ಎತ್ತಲಾಗಿರುವ ಒಂದು ಅಂಶವೆಂದರೆ 'ಲಂಚಗುಳಿತನ, ಭ್ರಷ್ಟಾಚಾರ ಇತ್ಯಾದಿ'ಗಳನ್ನು ಸೇರಿಸಬೇಕು ಎನ್ನುವುದು. ವೈಯಕ್ತಿಕವಾಗಿ ಯಾವುದೇ ಅಂತಹ ವಿಶೇಷ ಶಬ್ದಾವಳಿಯ ಅಗತ್ಯವಿದೆಯೆಂದು ನಾನು ಬಗೆಯುವುದಿಲ್ಲ. ವಿಶ್ವಾಸ ಇಲ್ಲದಿರುವುದು ವಿಶಾಲ ಶಬ್ದಾವಳಿಯಾಗಿದೆ. ಅದು ಲಂಚಗುಳಿತನ, ಭ್ರಷ್ಟಾಚಾರ ಮುಂತಾದ ಆಧಾರಗಳನ್ನು ಒಳಗೊಂಡಿರುತ್ತದೆ.

ಆದುದರಿಂದ, ನನ್ನ ನಿರ್ಣಯದಲ್ಲಿ ಆ ತಿದ್ದುಪಡಿಯ ಅಗತ್ಯವಿಲ್ಲ. ಎತ್ತಲಾಗಿರುವ ಎರಡನೆ ಅಂಶವೆಂದರೆ ಉಪಾಧ್ಯಕ್ಷರನ್ನು ತೆಗೆದು ಹಾಕುವ ವಿಧವನ್ನು ಅಧ್ಯಕ್ಷರನ್ನು ತೆಗೆದುಹಾಕಲು ಇರುವ ನಿಯಮಾವಳಿಗಳಂತೆಯೇ ಇರಬೇಕು. ಅಂದರೆ ಅದಕ್ಕೂ ಕೂಡ ಎರಡು ಮೂರರಷ್ಟು ಬಹುಮತ ಅಗತ್ಯ ಎನ್ನುವುದು. ಈಗ, ಮಾನ್ಯರೆ, ಆ ಅಂಶಕ್ಕೆ ಸಂಬಂಧಿಸಿದಂತೆ, ಸಭೆಯ ಗಮನವನ್ನು ಸಂವಿಧಾನ ಉಪಾಧ್ಯಕ್ಷರ ಕುರಿತು ಹೇಳುವುದಾದರೆ ಅವರು ನಿಜಕ್ಕೂ ಇರುವುದು ರಾಜ್ಯಸಭೆಯ ಚೇರಮನರು ಎನ್ನುವ ಅಂಶದತ್ತ ಸೆಳೆಯ ಬಯಸುತ್ತೇನೆ. ಬೇರೆ ಪದಗಳಲ್ಲಿ, ಅವರ ಕಾರ್ಯಗಳು ಲೋಕಸಭೆಯ ಸ್ಪೀಕರ್‌ರವರ ಕೇವಲ ವಿರುದ್ಧ ಸಂಖ್ಯೆಯವು. ಪರಿಣಾಮವಾಗಿ, ವಿಧಿ ೫೬ರಲ್ಲಿ ಉಪಕಲಮು (ಬಿ)ಯು ಒಳಗೊಂಡಿರುವ ಉಪಬಂಧಗಳ ಬಗೆಗೆ ಹೋಲಿಕೆ ಅಥವಾ ಟಿಪ್ಪಣಿ ಮಾಡದೆ, ಆ ಉಪಬಂಧಗಳನ್ನು ವಿಧಿ ೭೭ (ಸಿ)ಯ ಸ್ಪೀಕರ್‌ರವರನ್ನು ತೆಗೆದು ಹಾಕುವುದಕ್ಕೆ ಸಂಬಂಧಿತ ಉಪಬಂಧಗಳೊಂದಿಗೆ ಹೋಲಿಸಬೇಕು. ಒಂದು ವೇಳೆ ವಿಧಿ ೫೬(ಬಿ)ಯನ್ನು ವಿಧಿ ೭೭(ಸಿ)ಗೆ ಹೋಲಿಸಿದಲ್ಲಿ ಸದಸ್ಯರುಗಳು ಎರಡೂ ಸ್ಥಾನಗಳು ಅದೇ ತೆರನಾಗಿರುವುದನ್ನು ಕಾಣಬಹುದು. ನಾನು ಹೇಳಿರುವಂತೆ, ಉಪಸಭಾಪತಿ ಇದು ರಾಜ್ಯ ಸಭೆಯ ಚೇರಮನ್‌ಗೆ ಮತ್ತೊಂದು ಹೆಸರಾಗಿದ್ದು ಉಪಾಧ್ಯಕ್ಷರನ್ನು ತೆಗೆಯಲು ಸ್ಪೀಕರ್‌ರವರನ್ನು ತೆಗೆಯಲು ಅನ್ವಯವಾಗುವ ನಿಯಮಗಳೇ ಅನ್ವಯಿಸುತ್ತವೆ. ತತ್ಪರಿಣಾಮವಾಗಿ ಎರಡು ಮೂರರಷ್ಟು ಬಹುಮತದ ಅಗತ್ಯತೆ ಅನಗತ್ಯ.

ನನ್ನ ಮಿತ್ರ ಕಾಮತ್‌ರವರು ನಾನು ಯಾವುದನ್ನು ಕ್ಲಿಷ್ಟವೆಂದು ಕರೆಯಬಹುದೋ ಅಂತಹ ಪ್ರಶ್ನೆಯನ್ನು ಎತ್ತಿದ್ದಾರೆ. ಈ ವಿಧಿಯ ಉಪಕಲಮು (ಬಿ) ಬಹುಮತದ ಬಗೆಗೆ ತಿಳಿಸುತ್ತದೆ. ಆದರೆ ಲೋಕಸಭೆಗೆ ಅಂತಹ ಯಾವುದೇ ಪದಗಳನ್ನು ಬಳಸಿಲ್ಲವೆಂದು ಅವರು ಹೇಳಿರುತ್ತಾರೆ. ಈಗ, ವಿಷಯವು ಬಹಳ ಸರಳವಾಗಿದೆ.

ಯಾವಾಗ ನಾವು ಯಾವೊಂದು ಗೊತ್ತುವಳಿ ಪಾಸು ಮಾಡಬೇಕಾಗಿದೆ ಎಂದು ಹೇಳುತ್ತೇವೆಯೋ, ಸಭೆಯ ಬಹುಮತದಿಂದ ಪಾಸು ಮಾಡಬೇಕಾಗುತ್ತದೆ ಎಂದು ತಿಳಿಯಬೇಕು. ವಿಶೇಷ ಬಹುಮತ ಎಂದು ಎಲ್ಲಿ ನಮೂದಿಸಲಾಗಿದೆಯೋ ಅಲ್ಲಿ ಮಾತ್ರ ಉಲ್ಲೇಖ ಮಾಡುವುದು ಇಲ್ಲದಿದ್ದಲ್ಲಿ ಇಲ್ಲ. ಈಗ

ನಾನು ಒಪ್ಪುವಂತೆ ಅವರ ವಾದವೇನಿದೆ ಎಂದರೆ ಯಾವುದೇ ಬಹುಮತದ ಬಗೆಗೆ ಉಲ್ಲೇಖಿಸದೇ ಇದ್ದಾಗ್ಯೂ ಅಥವಾ ರಾಜ್ಯಸಭೆಯ ಬಗೆಗೆ ಯಾವ ತರಹದ ಬಹುಮತ ಎಂದು ವಿಶೇಷವಾಗಿ ಹೇಳದೇ ಇದ್ದಾಗ್ಯೂ, ನಾವು ಬಳಸಿರುವುದು – ಬಹುಮತದಿಂದ ಪಾಸುಮಾಡಿದ ಈ ಪದಗಳನ್ನೇ ಎನ್ನುವುದು. ಈ ವ್ಯತ್ಯಾಸ ಮಾಡಿರುವುದೇಕೆ? ರಾಜ್ಯಸಭೆ ಮತ್ತು ಲೋಕಸಭೆಗಳ ಬಗೆಗೆ ಶಬ್ದಾವಳಿಗಳ ಬಳಕೆಯಲ್ಲಿ ಈ ಅಂತರವನ್ನು ಮಾಡಿರುವುದೇಕೆ? ಈಗ, ಈ ಅಂತರ ಮಾಡಿರುವುದು "ಆಗ" ಎನ್ನುವ ಪದ ಅಲ್ಲಿ ಬರುವುದರಿಂದ "ಆಗ" ಎನ್ನುವ ಪದ ಮಹತ್ವದ್ದು. ಆ ಪದ "ಆಗ" ಅರ್ಥಕೊಡುವುದೇನೆಂದರೆ ಎಲ್ಲ ಸದಸ್ಯರುಗಳು ಯಾರ ಸೀಟುಗಳು ಖಾಲಿ ಇವೆಯೋ ಅದು ಎಂದು. ಅದು ಕುಳಿತಿರುವ ಅಥವಾ ಹಾಜರಿರುವ ಮತ್ತು ಮತಹಾಕುವ ಸದಸ್ಯರುಗಳು ಎಂಬ ಅರ್ಥ ಕೊಡುವುದಿಲ್ಲ. ಈ ಉಪಬಂಧದಿಂದಲೇ ಪಾರ್ಲಿಮೆಂಟಿನ ಎಲ್ಲ ಸದಸ್ಯರುಗಳು ಯಾರ ಸೀಟುಗಳು ಖಾಲಿ ಇಲ್ಲವೋ, ಯಾರ ಮತಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆಯೋ, ಆಗಿರುವ ಸದಸ್ಯರುಗಳಲ್ಲಿ ಬಹುಮತದಿಂದ ಪಾಸು ಮಾಡಿರುವುದು ಎಂದು ನಾವು ಹೇಳಿದ್ದೇವೆ.

**ಶ್ರೀ ಹೆಚ್.ವಿ. ಕಾಮತ್** : ಅದು ರಾಜ್ಯಸಭೆಯ ಒಟ್ಟು ಸದಸ್ಯರುಗಳ ಸಂಖ್ಯೆ ಎಂದು ಅರ್ಥಕೊಡುವುದೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಹೌದು. 'ಆಗ' ಈ ಪದ ಅಗತ್ಯ.

**ಶ್ರೀ ಹೆಚ್.ವಿ. ಕಾಮತ್** : ಮಾನ್ಯರೆ, ಸ್ಪಷ್ಟನೆಯ ಅಂಶವೊಂದನ್ನು ಕುರಿತು, ನಿನ್ನೆ ವಿಧಿ ೫೦ರಲ್ಲಿ. ಎರಡು ಮೂರರಷ್ಟು ಬಹುಮತ ಈ ಜಾಗದಲ್ಲಿ ನಾವು 'ಬಹುಮತದಿಂದ ಪಾಸು ಮಾಡಿದೆ, ಈ ಪದಗಳ ಗುಂಪನ್ನು ನಾವು ಬಳಸಿದೆವು. ಅರ್ಥವನ್ನು ತಿಳಿಗೊಳಿಸಲು ನಾವು ಇಲ್ಲಿ ಅದನ್ನೇ ಏಕೆ ಮಾಡಬಾರದು?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ವರ್ತಮಾನದಲ್ಲಿ ನಾನದನ್ನು ವಿವರಿಸುವೆ. ನಾವು 'ಆಗ' ಎನ್ನುವ ಪದವನ್ನು ಬಳಸಬೇಕಾಗುವುದೇ ಕಾರಣದ ಅಂಶವಾಗಿದೆ. ಇದರ ಉದ್ದೇಶ, ಹಾಜರಿದ್ದು ಮತದಾನ ಮಾಡುವ ಸದಸ್ಯರುಗಳು ಮತ್ತು ಸದಸ್ಯರುಗಳು ಯಾರು ಸಭೆಯ ಸದಸ್ಯರುಗಳಾಗಿದ್ದು, ಯಾರ ಸೀಟುಗಳು ಖಾಲಿ ಇಲ್ಲದೆ ಮತ್ತು ಮತದಾನ ಮಾಡುವವರ ನಡುವೆ ವ್ಯತ್ಯಾಸ ಮಾಡುವುದಾಗಿದೆ.

**ಶ್ರೀ ಹೆಚ್.ವಿ. ಕಾಮತ್ :** ಎಲ್ಲಿಯವರೆಗೆ ವಿಶದಪಡಿಸಲಾಗುವುದಿಲ್ಲವೋ, ಗೊತ್ತುವಳಿಯೊಂದನ್ನು ಪಾಸುಮಾಡಿದ ಅಥವಾ ಒಪ್ಪಿಕೊಳ್ಳಲಾದ ಎಂದು ನೀವು ಹೇಳಿದಾಗ, ಅದರ ಅರ್ಥ ಸರಳ ಬಹುಮತ ಆಗುತ್ತದೆ ಎಂದು ನಾನು ತಿಳಿದುಕೊಳ್ಳಬಹುದೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಹೌದು ಈಗ, ನನ್ನ ಮಿತ್ರ ಶ್ರೀ ತಾಹಿರ ಅವರು ಎತ್ತಿರುವ ಪ್ರಶ್ನೆಗೆ ಬರುವುದಾದರೆ, ತಿದ್ದುಪಡಿ ಸಂ. ೧೨೬೬. ನಾನು ಅವರನ್ನು ಸರಿಯಾಗಿ ಅರಿತುಕೊಂಡದ್ದಾದರೆ, ಅವರು ಏನು ಹೇಳುವರೆಂದರೆ, ಅವಿಶ್ವಾಸ ಗೊತ್ತುವಳಿ ಪಾಸುಮಾಡಲು ಎರಡು–ಮೂರರಷ್ಟು ಬಹುಮತ ಬೇಕು ಎಂದು. ಇದು ಒಳ್ಳೆಯದಾಗಿರಬಹುದು ಅಥವಾ ಕೆಟ್ಟದಾಗಿರಬಹುದು. ನನಗೆ ಹೇಳಲಾಗುವುದಿಲ್ಲ. ಒಟ್ಟಿನಲ್ಲಿ ನಾನು ಹೇಳಬಹುದಾದದ್ದೆಂದರೆ ಈ ಉಪಬಂಧವು ಕೂಡ ಸ್ಪೀಕರ್‌ರವರಲ್ಲಿ ಅವಿಶ್ವಾಸಕ್ಕೆ ಸಂಬಂಧಿತ ಉಪಬಂಧಕ್ಕೆ ಇದು ಸಮನಾಗಿದೆ. ಅಲ್ಲಿಯೂ ಕೂಡ ಅದನ್ನು ಎರಡು ಮೂರರಷ್ಟು ಬಹುಮತ ಅಥವಾ ಸಭೆಯು ಎರಡು–ಮೂರರಷ್ಟು ಸದಸ್ಯರುಗಳ ಬಹುಮತದಿಂದ ಪಾಸುಮಾಡಬೇಕಾಗುತ್ತದೆ.

---

* ಸಿ.ಎ.ಡಿ. ಸಂಪುಟ ೭, ೨೮ನೆಯ ನವೆಂಬರ್, ೧೯೪೮, ಪುಟ ೧೦೮೮–೮೯

ಆಮೇಲೆ, ನನ್ನ ಮಿತ್ರ ಶ್ರೀ ನಜೀರುದ್ದೀನ್ ಅಹಮದ್ ಅವರ ತಿದ್ದುಪಡಿಯತ್ತ ಬರುವುದಾದರೆ, ತಿದ್ದುಪಡಿಯ ಮೂಲಕ ಅವರು ಬಯಸುವುದು ಕಲಮು (ಸಿ)ಯಲ್ಲಿ "ಅವಧಿ" ಈ ಪದದ ನಂತರ ರಾಜೀನಾಮೆ ಇತ್ಯಾದಿಯಂತಹ ಪದಗಳನ್ನು ಸೇರಿಸಬೇಕು ಎನ್ನುವುದು. ಈ ತಿದ್ದುಪಡಿಯು ಸಂಪೂರ್ಣವಾಗಿ ಅನಗತ್ಯ. ಏಕೆಂದರೆ ಈ ವಿಧಿಯು ಆಗಾಗ ಉಂಟಾಗುವ ರಿಕ್ತ ಸ್ಥಾನಗಳನ್ನು ತುಂಬಲು ಯಾವುದೇ ಉಪಬಂಧ ಮಾಡುವುದಿಲ್ಲ. ಸಾಂದರ್ಭಿಕವಾಗಿ ಖಾಲಿಗೊಳ್ಳುವ ಹುದ್ದೆಗಳಿಗೆ ಯಾವುದೇ ಉಪಬಂಧ ಮಾಡುವ ಅಗತ್ಯ ಇರುವುದಿಲ್ಲ. ಏಕೆಂದರೆ ವಿಧಿ ೭೫ರ ಉಪಕಲಮು(೧)ರ ಅಂತರ್ಗತ. ಯಾವಾಗಲೂ ಸ್ಥಳ ಖಾಲಿಯಾದಾಗಲೆಲ್ಲ ತುಂಬಲು ಉಪ ಚೇರ್‌ಮನ್ ಇದ್ದೇ ಇರುತ್ತಾರೆ. ಹೀಗಾಗಿ, ಅಂತಹ ತಿದ್ದುಪಡಿ ಅನಗತ್ಯ. ಮಾನ್ಯರೆ, ಈ ವಿವರಣೆಯೊಂದಿಗೆ ಸಭೆಯು ಈಗಿರುವಂತೆ ಅನುಚ್ಛೇದವನ್ನು ಒಪ್ಪಿಕೊಳ್ಳುವುದೆಂದು ನಾನು ಆಶಿಸುತ್ತೇನೆ.

**ಉಪಸಭಾಪತಿ :** ಈಗ ನಾನು ತಿದ್ದುಪಡಿಗಳನ್ನು ಒಂದಾದ ನಂತರ ಒಂದರಂತೆ ಮತಕ್ಕೆ ಹಾಕಬಹುದಾಗಿದೆ.

(ಎಲ್ಲ ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು. ವಿಧಿ ೫೬ನ್ನು ಅಂಗೀಕರಿಸಲಾಯಿತಲ್ಲದೆ ಸಂವಿಧಾನಕ್ಕೆ ಸೇರಿಸಲ್ಪಟ್ಟಿತು)

*****

## ವಿಧಿ ೫೭

* **ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಪ್ರೊ. ಕೆ.ಟಿ. ಶಾಹರವರು ತಿದ್ದುಪಡಿಯನ್ನು ಮಂಡಿಸುವ ಮುನ್ನ ವಿಷಯವನ್ನು ಎಷ್ಟೊಂದು ಪೂರ್ಣವಾಗಿ ಪರಿಗಣಿಸಬೇಕಿತ್ತೋ ಅಷ್ಟೊಂದು ಪರಿಗಣಿಸಿಲ್ಲವೆಂಬ ಭಯ ನನಗೆ. ವಿಧಿ ೫೭ರಿಂದ ಉಪಾಧ್ಯಕ್ಷರ ತೆಗೆದು ಹಾಕುವಿಕೆ. ಉದ್ದೇಶಪೂರ್ವಕವಾದದ್ದು, ಏಕೆಂದರೆ ನನ್ನ ಮಿತ್ರ ಶ್ರೀ ತಾಜಮುಲ ಹುಸೇನರು ಇದೇ ಈಗ ಎತ್ತಿ ತೋರಿಸಿರುವಂತೆ, ಆತನ ಮುಖ್ಯ ಕಾರ್ಯಗಳು ಎಂದರೆ ರಾಜ್ಯಸಭೆಯ ಸಭಾಧ್ಯಕ್ಷನವು. ಅವುಗಳನ್ನು ವಿಧಿ ೭೫ (೧) ಸಾಕಷ್ಟು ಒದಗಿಸಿಕೊಡುತ್ತದೆ. ಉಪ ಸಭಾಧ್ಯಕ್ಷನು ಆತನ ಅನುಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುವನು. ಹೀಗಾಗಿ ವಿಧಿ ೫೭ರಲ್ಲಿ ಅಂತಹ ಯಾವುದೇ ತಿದ್ದುಪಡಿ ಪರಿಚಯಿಸುವುದು ಅನಗತ್ಯ.

ಯಾವಾಗ ನಾನು ಕರಡಿನಲ್ಲಿ ಯಾವೊಂದು ರೀತಿಯಲ್ಲಿ ದೋಷಗಳನ್ನು ಕಂಡೆನೋ ನಾನು ನನ್ನ ಇತರ ಮಿತ್ರರುಗಳ ತಿದ್ದುಪಡಿಯಿಂದ ನಿಜಕ್ಕೂ ಬಹಳಷ್ಟು ಸ್ವಚ್ಛಂದವಾಗಿ ತೆಗೆದುಕೊಳ್ಳುತ್ತಿರುವೆನೆಂದು ನನ್ನ ಮಿತ್ರ ಪ್ರೊ. ಶಾಹರವರು ಹೇಳಿರುವರು. ನನಗೆ ಅನಿಸುತ್ತದೆ, ನಾನು ಹಾಗೆ ಹೇಳುವುದಾದರೆ, ಪ್ರೊ.ಕೆ.ಟಿ. ಶಾಹರವರು ಅಪ್ರತ್ಯಕ್ಷವಾಗಿ ನನಗೆ ಶ್ಲಾಘನೆ ಮಾಡಿರುತ್ತಾರೆ. ಏಕೆಂದರೆ ಇಮೆರಸನ್‌ರು ಹೇಳಿರುವಂತೆ, 'ಅಸಾಧಾರಣ ಪ್ರತಿಭೆಯುಳ್ಳ ವ್ಯಕ್ತಿಯು ಉಪಕೃತನಾದ ವ್ಯಕ್ತಿಯಾಗಿರುತ್ತಾನೆ,' ನಿಜಕ್ಕೂ ನಾನು ನನ್ನ ಮಿತ್ರರುಗಳಿಗೆ ಅತಿಯಾಗಿ ಋಣಿಯಾಗಿದ್ದೇನೆ.

---

* ಸಿ.ಎ.ಡಿ. ಸಂಪುಟ ೭, ೨೯ನೆಯ ಡಿಸೆಂಬರ್, ೧೯೪೮, ಪುಟ ೧೧೧೭.

**ಮಾನ್ಯ ಉಪಸಭಾಪತಿ :** ಈಗ ನಾನು ತಿದ್ದುಪಡಿಗಳನ್ನು ಮತಕ್ಕೆ ಇಡುತ್ತಿರುವೆ.

ಪ್ರಶ್ನೆ ಹೀಗಿದೆ : "ವಿಧಿ ೫೭ರಲ್ಲಿ 'ಅಧ್ಯಕ್ಷರ ಕಾರ್ಯಗಳು ಈ ಪದಗಳ ನಂತರ 'ಅಥವಾ ಉಪಾಧ್ಯಕ್ಷ' ಈ ಪದಗಳನ್ನು ಸೇರಿಸುವುದು."

ಆ ತಿದ್ದುಪಡಿ ತಿರಸ್ಕರಿಸಲ್ಪಟ್ಟಿತು.

**ಮಾನ್ಯ ಉಪಸಭಾಪತಿ :** ಬೇರಾವುದೇ ತಿದ್ದುಪಡಿಗಳಿಲ್ಲ.

ಪ್ರಶ್ನೆ ಇರುವುದು : "ವಿಧಿ ೫೭ ಸಂವಿಧಾನದ ಭಾಗವಾಗುತ್ತದೆ."

ಸೂಚನೆ ಅಂಗೀಕೃತಗೊಂಡಿತು.

ವಿಧಿ ೫೭ ಸಂವಿಧಾನಕ್ಕೆ ಸೇರಿಸಲ್ಪಟ್ಟಿತು.

## ವಿಧಿ ೫೯

**ಮಾನ್ಯ ಉಪ ಸಭಾಪತಿ :** ಶ್ರೀ ತಾಜಮಲ್ ಹುಸೇನ ಅವರು ತಂದ ಈ ತಿದ್ದುಪಡಿಯ ಮೇಲೆ ಡಾ. ಅಂಬೇಡ್ಕರ್ ಅವರಿಗೆ ಏನಾದರೂ ಹೇಳುವುದಿದೆಯೇ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅಹುದು, ಮಾನ್ಯರೇ ಕೆಲವು ಪದಗಳಲ್ಲಿ ವಿವರಿಸಿ ಪರಿಚ್ಛೇದ ೫೯ರಲ್ಲಿ ಒಳಗೊಂಡ ವ್ಯವಸ್ಥೆಯ ಸಾಮಾನ್ಯ ಮುಖ್ಯಾಂಶಗಳನ್ನು ನಾನು ಕೆಲವು ಪದಗಳಲ್ಲಿ ವಿವರಿಸುವುದು ಅಪೇಕ್ಷಣೀಯ. ಇದು ಫೆಡರಲ್ (ಸಂಯುಕ್ತ) ಕಾನೂನು ಅಪರಾಧಗಳಿಗಾಗಿ ಮಾಡಿದ ಶಿಕ್ಷೆಯನ್ನು ಕಡಿಮೆ ಮಾಡುವ ಅಧಿಕಾರವನ್ನು ಕೇಂದ್ರದ ರಾಷ್ಟ್ರಪತಿಗಳಲ್ಲಿ ನಿಹಿತಗೊಳಿಸಿದೆ. ರಾಜ್ಯ ಸರಕಾರಗಳು ಅಪರಾಧಗಳಿಗಾಗಿ ಗೊತ್ತು ಪಡಿಸಿದ ಶಿಕ್ಷೆಯನ್ನು ಕಡಿಮೆ ಮಾಡುವ ಅಧಿಕಾರವನ್ನು ಆ ರಾಜ್ಯದ ರಾಜ್ಯಪಾಲರಲ್ಲಿ ನಿಹಿತಗೊಳಿಸುತ್ತದೆ.

ಯಾವುದೇ ಕಾನೂನು ಸಂಸತ್ತಿನಲ್ಲಿ ಪಾಸಾಗಿರಲಿ ಇಲ್ಲವೆ ರಾಜ್ಯದಲ್ಲಿ ಪಾಸಾಗಿರಲಿ ಅದರ ಅನ್ವಯ ಮರಣ ಶಿಕ್ಷೆಯನ್ನು ವಿಧಿಸಿದರೆ ಆಗ ಕಡಿತ ಮಾಡುವ ಅಧಿಕಾರವು ಇಬ್ಬರಿಗೂ ಅಂದರೆ ರಾಷ್ಟ್ರಪತಿಗಳಲ್ಲಿ ಅದರಂತೆ ಸಂಬಂಧಿಸಿದ ರಾಜ್ಯಕ್ಕೂ ಈ ಅಧಿಕಾರವಿರುತ್ತದೆ. ಇದುವೇ ಆ ವ್ಯವಸ್ಥೆಯಾಗಿದೆ.

ನನ್ನ ಮಿತ್ರ ಶ್ರೀ ತೇಜಮಲ್ಲ ಹುಸೇನರು ತಂದ ತಿದ್ದುಪಡಿಯನ್ನು ಕುರಿತು ಅವರ ತಕರಾರು ಏನೆಂದರೆ ಮರಣದಂಡನೆಯನ್ನು ಬದಲಿಸುವ, ಕಡಿಮೆ ಮಾಡುವ ಅಧಿಕಾರವನ್ನು ರಾಜ್ಯಪಾಲರಿಂದ ತೆಗೆದುಕೊಳ್ಳಬೇಕು. ಈ ಉಪಖಂಡ (೩) ಸದ್ಯದ ಪದ್ಧತಿ ಚಾಲತಿಯಲ್ಲಿರುವುದು ಮರಣ ಶಿಕ್ಷೆಗೆ ಕಡಿತ ಮಾಡುವುದು, ಬದಲಿಸುವುದು. ರಾಜ್ಯಪಾಲರಲ್ಲಿ ಅದರಂತೆ ರಾಷ್ಟ್ರಪತಿಗಳಲ್ಲಿ ನಿಹಿತವಾಗಿದೆ. ಈ ಅಧಿಕಾರವನ್ನು ತೆಗೆದು ಹಾಕುವುದಕ್ಕೆ ಕರಡು ಸಮಿತಿಯು ಸಹ ಅಷ್ಟೊಂದು ಬಲವಾಗಿ ಪ್ರತಿಪಾದನೆ ಮಾಡಿಲ್ಲ. ಒಂದು ಅಪರಾಧವು ಒಂದು ನಿರ್ದಿಷ್ಟ ಸ್ಥಳದಲ್ಲಿ ಆಗುತ್ತದೆ.

ಮರಣಶಿಕ್ಷೆ ವಿಧಿಸಿದ್ದರೆ ಮೇಲೆ ದಯೆತೋರಿಸಬೇಕೆಂಬ ಅರ್ಜಿಯ ಮೇಲೆ ಗೃಹಮಂತ್ರಿಯು ರಾಜ್ಯಪಾಲರಿಗೆ ಸಲಹೆ ಕೊಡುತ್ತಾನೆ. ರಾಜ್ಯಪಾಲರಿಗೆ ಆ ಸಲಹೆ ಕೊಡಲು ಅವನು ಉತ್ತಮ ಸ್ಥಾನದಲ್ಲಿರುವನು. ಯಾಕೆಂದರೆ ಅವನಿಗೆ ಈ ಪ್ರಕರಣ ಸಂಬಂಧಿಸಿದ ಸಂದರ್ಭಗಳ ಅತಿ ನಿಕಟ ಸಂಗತಿಗಳು ಗೊತ್ತಿರುತ್ತವೆ. ಮತ್ತು ಆ ಕ್ಷೇತ್ರದಲ್ಲಿರುವ ವಸ್ತುಸ್ಥಿತಿಯು ಅವನಿಗೆ ಗೊತ್ತಿರುತ್ತದೆ. ಆದ್ದರಿಂದ ಈಗ ರಾಜ್ಯಪಾಲರಿಗೆ ಇರುವ ಅಧಿಕಾರದಿಂದ ಯಾರಿಗೂ ಹಾನಿಯಾಗುವುದಿಲ್ಲವೆಂದು ಅದನ್ನು ಹಾಗೇ ಬಿಡುವುದು ಅಪೇಕ್ಷಣೀಯವೆಂದು

ಅನಿಸಿತು. ಆದಾಗ್ಯೂ ಅದಕ್ಕೊಂದು ಷರತ್ತನ್ನು ಹಾಕಲಾಗಿದೆ. ಒಂದು ಮರಣ ಶಿಕ್ಷೆಯ ಪ್ರಕರಣದಲ್ಲಿ ದಯೆ ತೋರಿಸಬೇಕೆಂಬ ಅರ್ಜಿಯು ತಿರಸ್ಕೃತವಾಗಿದೆಯೆಂದು ತಿಳಿಯೋಣ. ಈ ವಿಧಿಯ ಅಡಿಯಲ್ಲಿ ಅಪರಾಧಿಯು ರಾಷ್ಟ್ರಪತಿಗಳಿಗೆ ದಯೆ ತೋರಬೇಕೆಂದು ಮತ್ತೊಂದು ಅರ್ಜಿ ಕೊಡಲು ಯಾವಾಗಲೂ ಅವಕಾಶ ಮುಕ್ತವಾಗಿದೆ. ಮತ್ತು ಅವನು ತನ್ನ ಅದೃಷ್ಟವನ್ನು ಪರೀಕ್ಷಿಸಬಹುದು. ಯಾವುದೇ ಮೂಲಭೂತ ತತ್ವದ ಬಹು ದೊಡ್ಡ ಭಂಗ ಬರುವಂತಹದ್ದು ಆಗಿದೆಯೆಂದು ನನಗೆ ಅನಿಸುವುದಿಲ್ಲ. ಇಲ್ಲವೆ ಈಗ ಇರುವ ಕರಡು ವಿಧಿ ವ್ಯವಸ್ಥೆಗಳನ್ನು ಹಾಗೆಯೇ ಉಳಿಸಿಕೊಂಡರೆ ಯಾವುದೇ ಅನಾನುಕೂಲತೆಯು ಸಂಭವಿಸುವುದೆಂದು ನನಗೆ ಅನಿಸುವುದಿಲ್ಲ.

**ಮಾನ್ಯ ಉಪಸಭಾಪತಿ :** ನಾನು ಈಗ ತಾಜಮಲ್ಲ ಹಸನ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. ಇರುವ ಪ್ರಶ್ನೆ ಏನೆಂದರೆ : 'ವಿಧಿ ೫೯ರ ಖಂಡ (೩) ಇದನ್ನು ಬಿಟ್ಟುಬಿಡುವುದು.'

ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.

**ಸನ್ಮಾನ್ಯ ಉಪ ಸಭಾಪತಿ:** ಈಗ ನಾನು ವಿಧಿ ೫೯ನ್ನು ಮತಕ್ಕೆ ಹಾಕುತ್ತೇನೆ. ಪ್ರಶ್ನೆ ಹೀಗೆ ಇರುತ್ತದೆ–

"ವಿಧಿ ೫೯ನೆಯದನ್ನು ಅಂಗೀಕರಿಸಲಾಗಿದೆ ಮತ್ತು ಅದನ್ನು ಸಂವಿಧಾನದಲ್ಲಿ ಸೇರ್ಪಡಿಸಲಾಗಿದೆ."

## ವಿಧಿ ೬೦

* **ಸನ್ಮಾನ್ಯ ಡಾ। ಬಿ.ಆರ್. ಅಂಬೇಡ್ಕರ್** (ಬಾಂಬೆ : ಜನರಲ್) : ಸನ್ಮಾನ್ಯರಾದ ಉಪಸಭಾಪತಿಗಳೆ, ನನ್ನನ್ನು ಕ್ಷಮಿಸಿರಿ. ಈ ಪರಂತುಕಕ್ಕೆ ತಂದ ಎರಡು ತಿದ್ದುಪಡಿಗಳನ್ನು ನಾನು ಒಪ್ಪುವುದಿಲ್ಲ. ಈ ತಿದ್ದುಪಡಿಗಳನ್ನು ನಾನು ಒಪ್ಪುವುದಿಲ್ಲ. ಈ ತಿದ್ದುಪಡಿಗಳನ್ನು ನಾನು ಯಾಕೆ ಒಪ್ಪುವುದಿಲ್ಲವೆಂಬುದರ ಬಗೆಗೆ ಸ್ವಲ್ಪದರಲ್ಲಿ ಸದನಕ್ಕೆ ತಿಳಿಯಬಯಸುತ್ತೇನೆ. ಹಾಗೆ ಮಾಡುವ ಮೊದಲು ಈ ಪರಂತುಕದಲ್ಲಿ ಹಾಗೂ ಎರಡು ತಿದ್ದುಪಡಿಗಳಲ್ಲಿ ಯಾವ ಅಂತರವಿದೆಯೆಂಬುದನ್ನು ಸದನವು ತಿಳಿಯತಕ್ಕದ್ದು. ಈಗ ಇದ್ದಂತೆ ಈ ಪರಂತುಕವನ್ನು ತೆಗೆದುಕೊಂಡು ಅದು ಎರಡು ಪ್ರಸ್ತಾಪಗಳನ್ನು ಮುಂದಿಡುತ್ತದೆ. ಮೊದಲನೆಯ ಪ್ರಸ್ತಾಪವೆಂದರೆ ಸಮವರ್ತಿಸೂಚಿಯ ಕಾನೂನುಗಳನ್ನು ಜಾರಿಗೊಳಿಸುವುದು. ಆ ಕಾನೂನು ಕೇಂದ್ರ ಸರಕಾರದಿಂದ ಇಲ್ಲವೆ ರಾಜ್ಯ ಸರಕಾರದಿಂದ ಪಾಸಾದದ್ದು ಇರಬಹುದು. ಸಾಮಾನ್ಯವಾಗಿ ಅದು ಪ್ರಾಂತಗಳಿಗೆ ಇಲ್ಲವೆ ರಾಜ್ಯಕ್ಕೆ ಅನ್ವಯಿಸುತ್ತದೆ. ಇದನ್ನು ಮೊದಲನೆಯ ಪರಂತುಕದಲ್ಲಿ ಹೇಳಲಾಗಿದೆ. ಪರಂತುಕದ ಎರಡನೆಯ ಪ್ರಸ್ತಾವನೆಯು ಹೇಳುವುದೇನೆಂದರೆ ಯಾವುದೇ ಒಂದು ನಿರ್ದಿಷ್ಟ ಪ್ರಕರಣದಲ್ಲಿ, ಸಮವರ್ತಿ ಸೂಚಿಯ ವಿಷಯದ ಮೇಲೆ ಸಂಸತ್ತು ಕಾನೂನು ಮಾಡಬಯಸಿದರೆ ಆಗ ಅದನ್ನು ಜಾರಿ ಮಾಡುವ ಅಧಿಕಾರವನ್ನು ಕೇಂದ್ರ ಸರಕಾರವೇ ಇಟ್ಟುಕೊಳ್ಳಬೇಕು. ಹೀಗೆ ಮಾಡಲು ಸಂಸತ್ತಿಗೆ ಅಧಿಕಾರವಿದೆ. ಆದ್ದರಿಂದ ಸಮವರ್ತಿಸೂಚಿಯನ್ನು ಕುರಿತು ಜಾರಿಗೊಳಿಸುವ ಅಧಿಕಾರವು ಇಬ್ಬರಿಗೂ ಅಂದರೆ ಪ್ರಾಂತಗಳಿಗೆ ಹಾಗೂ ರಾಜ್ಯಗಳಿಗೆ ಇರುತ್ತದೆ.

ಅಪವಾದಾತ್ಮಕವಾದ ಪ್ರಕರಣಗಳಲ್ಲಿ ಕೇಂದ್ರವು ಸಮವರ್ತಿಸೂಚಿ ಕಾನೂನನ್ನು ಜಾರಿಗೊಳಿಸುವ ಅಧಿಕಾರವನ್ನು ಕೇಂದ್ರದಲ್ಲಿ ನಿಹಿತಗೊಳಿಸತಕ್ಕದ್ದು. ಈಗ ತಂದ ತಿದ್ದುಪಡಿಗಳ ಗರ್ಭಿತಾರ್ಥವು ಬೇರೆಯಾಗಿದೆ.

---

* ಸಿ.ಎ.ಡಿ. ಸಂಪುಟ ೭, ಡಿಸೆಂಬರ್, ೧೯೪೮

ಮೊದಲನೆಯ ತಿದ್ದುಪಡಿಯೆಂದರೆ ಸಮವರ್ತಿಸೂಚಿ ಕಾನೂನು ಆಡಳಿತ ಬಗ್ಗೆ ಕೇಂದ್ರಕ್ಕೆ ಯಾವ ಅಧಿಕಾರವೂ ಇಲ್ಲ. ನನ್ನ ಸನ್ಮಾನ್ಯ ಮಿತ್ರರಾದ ಪಂಡಿತ ಕುಂಜ್ರು ಅವರು ತಂದ ಎರಡನೆಯ ತಿದ್ದುಪಡಿಯು, ಕೇಂದ್ರ ಸರಕಾರವು ತನ್ನಷ್ಟಕ್ಕೆ ತಾನೇ ಸಮವರ್ತಿಸೂಚಿಯ ಬಗೆಗಿನ ಕಾನೂನುಗಳನ್ನು ಜಾರಿಗೊಳಿಸುವ ಅಧಿಕಾರವನ್ನು ತೆಗೆದುಕೊಳ್ಳಲು ಬರುವುದಿಲ್ಲ. ಆದರೆ ಪ್ರಾಂತೀಯ ಸರಕಾರಗಳಿಗೆ ವಿಷಯ ೨೫ ಹಾಗೂ ೩೦ರಲ್ಲಿ ಬರುವ ವಿಷಯಗಳನ್ನು ಕುರಿತು ಕೇಂದ್ರವು ಪ್ರಾಂತಗಳಿಗೆ ನಿರ್ದೇಶನವನ್ನು ಕೊಡಲು ಪರವಾನಗಿ ಕೊಡುತ್ತದೆ. ಈ ಎರಡು ತಿದ್ದುಪಡಿಗಳಲ್ಲಿ ಇರುವ ವೈರಾದ್ಯ ಇದೇ ಆಗಿದೆ.

ಮೊದಲನೆಯ ತಿದ್ದುಪಡಿಯು ಸದ್ಯದ ಪರಿಸ್ಥಿತಿಯಲ್ಲಿ ಭಾರತ ಸರಕಾರದ ೧೯೩೫ನೆಯ ಕಾಯ್ದೆಗಿಂತ ಬಹುದೂರ ಹೋಗುತ್ತದೆ. ಸನ್ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಈಗಿನ ಭಾರತ ಸರಕಾರದ ೧೯೩೫ರ ಅಧಿನಿಯಮದಲ್ಲಿ ಕೇಂದ್ರ ಸರಕಾರ ಪ್ರಾಂತಗಳಿಗೆ ಒಂದು ನಿರ್ದಿಷ್ಟ ಕಾನೂನು ಯಾವ ರೀತಿಯಲ್ಲಿ ಹೇಗೆ ಜಾರಿಗೊಳಿಸಬೇಕೆಂಬುದರ ಬಗ್ಗೆ ಕನಿಷ್ಟ ನಿರ್ದೇಶನಗಳನ್ನು ಕೊಡಲು ಅವಕಾಶವಿದೆ. ಮೊದಲನೆಯ ತಿದ್ದುಪಡಿಯು ೧೯೩೫ರ ಭಾರತ ಸರಕಾರದ ಅಧಿನಿಯಮದಲ್ಲಿ ಕೇಂದ್ರಕ್ಕೆ ಕೊಟ್ಟ ಅಧಿಕಾರವನ್ನು ತೆಗೆದುಹಾಕುತ್ತದೆ.

ಮುಸಲ್ಮಾನ ಸದಸ್ಯರಿಗೆ ಈ ನಿರ್ದಿಷ್ಟ ಪರಂತುಕದ ಬಗ್ಗೆ ನಾನು ಹೇಳಿದಂತೆ ಅದಕ್ಕೆ ಒಂದು ಇತಿಹಾಸ ಇದೆಯೆಂದು ಹೇಳಲು ನಾನು ವಿಷಾದಿಸುತ್ತೇನೆ. ನನ್ನ ಸನ್ಮಿತ್ರರಾದ ಪಂಡಿತ ಕುಂಜ್ರು ಅವರು ಈ ಇತಿಹಾಸವನ್ನು ಸಂಪೂರ್ಣವಾಗಿ ಮರೆತಿರುತ್ತಾರೆ. ಇತಿಹಾಸದೊಂದಿಗೆ ಅವರು ನನ್ನಂತೆಯೇ ನಿಕಟ ಸಂಬಂಧ ಹೊಂದಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಈ ವಿಷಯವು ೧೯೩೦ರಲ್ಲಿ ನಡೆದ ದುಂಡು ಮೇಜು ಪರಿಷತ್ತಿಗೆ ತೆಗೆದುಕೊಂಡು ಹೋಗುತ್ತದೆ. ೧೯೩೦ರಲ್ಲಿ ನಡೆದ ಆ ದುಂಡು ಮೇಜಿನ ಪರಿಷತ್ತಿನಲ್ಲಿ ಏನಾಯಿತು ಎಂದರೆ ಎರಡು ಮುಖ್ಯ ಪಕ್ಷಗಳು ಅದರಲ್ಲಿ ಪ್ರತಿನಿಧಿಸಿದ್ದವು. ಅವು ಯಾವುವೆಂದರೆ (೧) ಮುಸ್ಲಿಂ ಲೀಗ್ ಮತ್ತು (೨) ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ (ಭಾರತೀಯ ರಾಷ್ಟ್ರೀಯ ಕಾಂಗ್ರೆಸ್). ಅವು ಸಂವಿಧಾನದ ಮಹತ್ವದ ಅನೇಕ ವಿಷಯಗಳ ಮೇಲೆ ತದ್ವಿರುದ್ಧ ಅಭಿಪ್ರಾಯ ಹೊಂದಿದ್ದವು. ಅವುಗಳಲ್ಲಿ ಒಂದಾದ ಪ್ರಾಂತದ ಸ್ವಾಯತ್ತತೆ ಬಗೆಗೆ ಪ್ರತಿರೋಧ ಕಂಡು ಬಂದಿತು. ನಿಜವಾಗಿಯೂ ಭಾರತದಲ್ಲಿ ಒಕ್ಕೂಟವನ್ನು ಕಾಯ್ದುಕೊಂಡು ಪ್ರಾಂತದ ಸ್ವಾಯತ್ತತೆಯನ್ನು ಅಂದರೆ ಶಾಸನ ಮಾಡುವುದು ಹಾಗೂ ಅಡಳಿತದಲ್ಲೇ ನಡೆಯಿಸುವುದು ಸಂವಿಧಾನದಲ್ಲಿ ಸಾಧ್ಯವಿಲ್ಲವೆಂದು ಮನವರಿಕೆಯಾಯಿತು. ಆದರೆ ಮುಸ್ಲಿಂ ಲೀಗ್ ಈ ವಿಷಯದ ಬಗ್ಗೆ ಮೊಂಡುತನದ ನಿಲುವು ತಳೆಯಿತು. ಆದರೆ ಕೇಂದ್ರದಲ್ಲಿ ಜವಾಬ್ದಾರಿ ಸರಕಾರವನ್ನು ಸ್ವೀಕರಿಸಲು ಸೆಕ್ರೆಟರಿ ಆಫ್ ಸ್ಟೇಟ್ ಅವರು ಮುಸ್ಲಿಂ ಲೀಗಿನವರನ್ನು ಸಮಾಧಾನಪಡಿಸುವುದಕ್ಕಾಗಿ ಅವರಿಗೆ ಅನೇಕ ಸವಲತ್ತುಗಳನ್ನು ಕೊಟ್ಟರು. ಭಾರತ ಸರಕಾರದ ಅಧಿನಿಯಮದ ಕಲಂ ೧೨೬ರಲ್ಲಿ ಈ ಪರಂತುಕವು ಇದೆ. ಇದು ಹೇಳುವುದೇನೆಂದರೆ ಕೇಂದ್ರ ಸರಕಾರದ ಈ ಅಧಿಕಾರಿಯು ಸಮವರ್ತಿಸೂಚಿ ಕಾನೂನಿನ ವಿಷಯಕ್ಕೆ ಸಂಬಂಧಿಸಿದಂತೆ ಕೇವಲ ನಿರ್ದೇಶನಗಳನ್ನು ಕೊಡುವಲ್ಲಿ ಮಾತ್ರ ಸೀಮಿತವಾಗಿತ್ತು. ಆ ವಿಷಯದ ಸಂಪೂರ್ಣ ವಾಸ್ತವಿಕ ಆಡಳಿತಕ್ಕೆ ವಿಸ್ತರಿಸತಕ್ಕದ್ದಲ್ಲ. ಮುಸ್ಲಿಂ ಲೀಗಿನವರು ಈ ಬಗ್ಗೆ ಯಾವುದೇ ತಕರಾರು ಮಾಡಬಾರದೆಂದು ವಾದ ಮಾಡಲಾಯಿತು. ಸಮವರ್ತಿಸೂಚಿಯ ಒಂದು ನಿರ್ದಿಷ್ಟ ಕಾನೂನು ಕುರಿತು ಹಿಂದೂಗಳು ಪ್ರಧಾನವಾಗಿರದಿದ್ದಲ್ಲಿ ಆಗ ಕೇಂದ್ರ ಸರಕಾರವು ಆಡಳಿತ ನಡೆಯಿಸುವುದಕ್ಕೆ ಮುಸ್ಲಿಂ ಲೀಗಿನ ತಕರಾರು ಇರಬಾರದಾಗಿತ್ತು ಎಂದು ವಾದಿಸಲಾಯಿತು. ಇದನ್ನು ಸುಸ್ಪಷ್ಟವಾಗಿ ದುಂಡು ಮೇಜಿನ ಪರಿಷತ್ತಿನ ಚರ್ಚೆಯಲ್ಲಿ ಹೇಳಿದುದನ್ನು ನಾನು ನೆನಪಿಸುತ್ತೇನೆ. ಮುಸ್ಲಿಮರು ಬಹು ಸಂಖ್ಯೆಯಲ್ಲಿದ್ದ

ಪ್ರಾಂತಗಳಲ್ಲಿ ಮುಸ್ಲಿಂ ಲೀಗಿನ ಸರಕಾರಗಳು ಆಸ್ತಿತ್ವದಲ್ಲಿ ಬಂದವು. ಉದಾಹರಣೆಗಾಗಿ ವಾಯವ್ಯ ಸರಹದ್ದು ಪ್ರಾಂತ, ಪಂಜಾಬ, ಬಂಗಾಳ, ಅಸಾಮದ ಕೆಲವು ಭಾಗಗಳಲ್ಲಿ ತಾವು ಬಹು ಸಂಖ್ಯೆಯಲ್ಲಿ ಇರುವುದಾದರೂ, ಪ್ರತ್ಯೇಕವಾಗಿದ್ದರೂ ಹಿಂದೂ ಎಂದು ಭಾವಿಸಿ ಸಕ್ರೆಟರಿ ಆಫ್ ಸ್ಟೇಟ್ ಅವರು ಈ ಸವಲತ್ತು ಕೊಟ್ಟರೂ ಅದನ್ನು ಕೇಂದ್ರಕ್ಕೆ ಸಮವರ್ತಿಸೂಚಿ ವಿಷಯದಲ್ಲಿ ಅಧಿಕಾರವಿಲ್ಲವೆಂಬ ತತ್ವದ ಮೇಲೆ ಇದನ್ನು ಸ್ವೀಕರಿಸಲಾಗಲಿಲ್ಲ. ಆದ್ದರಿಂದ ನಾನು ತಿಳಿಯಬಯಸುವುದೇನೆಂದರೆ ಭಾರತ ಸರಕಾರದ ಅಧಿನಿಯಮ ೧೯೩೫ ಕಲಂ ೧೨೬ರಲ್ಲೇ ಸೇರಿಸಿದುದು ತತ್ವಶಃ ನ್ಯಾಯಸಮ್ಮತವಲ್ಲ. ಅದು ನ್ಯಾಯ ಸಮ್ಮತವಾದುದು ಯಾಕೆಂದರೆ – ಇದು ಮುಸಲ್ಮಾನರಿಗೆ ಕೊಟ್ಟ ಸವಲತ್ತಾಗಿದೆ. ಆದ್ದರಿಂದ ವಾದಕ್ಕಾಗಿ ಕಲಂ ೧೨೬ ಇದರ ಸಮರ್ಥನೆಯನ್ನು ಕುರಿತು ವಾದ ಮಾಡುವುದು ಯೋಗ್ಯವಲ್ಲ.

ಮಾನ್ಯರೇ, ಭಾರತ ಸರಕಾರದ ಅಧಿನಿಯಮ ಕಲಂ ೧೨೬ರಲ್ಲಿ ಹೇಳಿದ ಸ್ಥಿತಿಯನ್ನು ಸೆಕ್ರೆಟರಿ ಆಫ್ ಸ್ಟೇಟ್ ಅವರಿಂದ ಮೂಲಭೂತವಾಗಿ ತಪ್ಪಾಗಿ ಒಪ್ಪಿಕೊಳ್ಳಲಾಯಿತು. ತದನಂತರ ಯುದ್ಧವನ್ನು ಘೋಷಿಸಲಾಯಿತು. ಆಗ ಸಂಪತ್ತು ಈ ಕಾನೂನನ್ನು ಮಾಡಿತು. ಸನ್ಮಾನ್ಯ ಸದಸ್ಯರಿಗೆ ನೆನಪಿರುವಂತೆ ಕಲಂ ೧೨೬ ಇದನ್ನು ಯುದ್ಧದ ಘೋಷಣೆಯ ಮೊದಲು ಸಂಸತ್ತು ಪುರವಣಿಯಾಗಿ ಕಲಂ ೧೨೬–ಎ ಇದನ್ನು ಕಾನೂನಿನಲ್ಲಿ ಸೇರಿಸಿತು. ಇದನ್ನು ಸಂಸತ್ತು ಕಲಂ ೧೨೬–ಎ ಇದನ್ನು ಘೋಷಿಸುವ ಅವಶ್ಯಕತೆಯು ಏನಿತ್ತು? ನಿಮ್ಮೆಲ್ಲರಿಗೂ ನೆನಪಿರುವಂತೆ ಕಲಂ ೧೨೬–ಎ ಇದು ಬಹಳ ಕಠಿಣ. ಇದು ಭಾರತ ಸರಕಾರದ ಅನೇಕ ಸಮವರ್ತಿಸೂಚಿ ವಿಷಯದಲ್ಲಿ ಭಾರತ ಸರಕಾರವು ಕೈಗೊಂಡು ಪಾಸು ಮಾಡಿದ ಕಾನೂನುಗಳಲ್ಲಿ ಇದು ಒಂದಾಗಿದೆ. ಇದು ಕೇಂದ್ರ ಸರಕಾರವು ಕೇವಲ ಪ್ರಾಂತೀಯ ವಿಷಯಗಳನ್ನು ಕುರಿತು ಕಾನೂನು ಮಾಡಲು ಮಾತ್ರವಲ್ಲ ಅದಕ್ಕೆ ಪರವಾನಗಿ ಕೊಡುವುದಿಲ್ಲ. ಆದರೆ ಅದು ಕೇಂದ್ರ ಸರಕಾರವು ಪ್ರಾಂತೀಯ ವಿಷಯಗಳು ಅದರಂತೆ ಸಮವರ್ತಿಸೂಚಿ ವಿಷಯಗಳ ಆಡಳಿತವನ್ನು ತೆಗೆದುಕೊಳ್ಳಲು ಅಧಿಕಾರ ಕೊಡುತ್ತದೆ. ಸಕ್ರೆಟರಿ ಆಫ್ ಸ್ಟೇಟ್ ಅವರು ಹೀಗೆ ಯಾಕೆ ಮಾಡಿದರೆಂದರೆ ಕನಿಷ್ಠ ಯುದ್ಧದ ವೇಳೆಯಲ್ಲಿ ಇರಲೆಂದು ಭಾವಿಸಿದರು.

ರಾಜ್ಯದ ಆಡಳಿತವನ್ನು ನೋಡಿಕೊಳ್ಳುವುದು ಮರಣಾಂತಿಕವೆಂದು ಕಲಂ ೧೨೬ ಸಿದ್ಧಮಾಡಿಕೊಡುತ್ತದೆ. ಆದುದರಿಂದ ನನ್ನ ವಿನಂತಿ ಏನೆಂದರೆ ಕಲಂ ೧೨೬–ಎ ಇದನ್ನು ತುರ್ತು ಪರಿಸ್ಥಿತಿಯ ಉದ್ದೇಶಕ್ಕಾಗಿ ಕಾಯಿದೆ ಮಾಡಲಾಗಿದೆ. ಆದರೆ ಸಾಮಾನ್ಯ ಉದ್ದೇಶಕ್ಕಲ್ಲ ಮತ್ತು ಸಾಮಾನ್ಯ ಕಾಲಕ್ಕೆ ಮಾಡಿದ್ದಲ್ಲ. ಈ ಸದನಕ್ಕೆ ನನ್ನ ವಿನಂತಿಪೂರ್ವಕ ಹೇಳಿಕೆ ಏನೆಂದರೆ ಕಲಂ ೧೨೬ರ ತತ್ವದ ಮೇಲೆ ಯಾವ ವಾದವನ್ನು ಕೇಳುವುದಿಲ್ಲ. ಅದು ಈಗಿನ ಕಾಲದಲ್ಲಿ ಈ ಪರಂತುಕ ಕಾನೂನುಬದ್ಧವೂ ಅಲ್ಲ.........

**ಬಿ. ಪೋಕರ ಸಾಹಿಬ ಬಹದ್ದೂರ್ :** ಮಾನ್ಯರೆ, ತಮ್ಮ ಪರವಾನಗಿಯಿಂದ ನನ್ನ ವಿದ್ವಾನ್ ಗೆಳೆಯರ ಹೇಳಿಕೆಯನ್ನು ನಾನು ಸರಿಪಡಿಸಬಹುದೆ? ಈ ಸಂವಿಧಾನವನ್ನು ಈಗಿನ ಭಾರತ ಸರಕಾರಕ್ಕಾಗಿ ಮಾಡುತ್ತಿದ್ದೇವೆ. ಇದರಲ್ಲಿ ಬಹುಸಂಖ್ಯೆಯ ಮುಸಲ್ಮಾನರಿರುವ ಒಂದು ಪ್ರಾಂತವೂ ಇರುವುದಿಲ್ಲ. ಆದ್ದರಿಂದ ಮುಸ್ಲಿಂ ಲೀಗಿಗೆ ಮುಸಲ್ಮಾನರೇ ಈ ತಿದ್ದುಪಡಿಯನ್ನು ತಂದಿರುವರೆಂದು ಹೇಳುವಲ್ಲಿ ಯಾವ ಪುರುಷಾರ್ಥವೂ ಇಲ್ಲ. ಸಂಪೂರ್ಣವಾಗಿ ಇದರಲ್ಲಿ ಯಾವ ಹುರುಳೂ ಇರುವುದಿಲ್ಲ. ಮುಸ್ಲಿಂ ಲೀಗಿನ ಸದಸ್ಯರು ತಮ್ಮ ಹಿತಾಸಕ್ತಿ ಕಾಯ್ದುಕೊಳ್ಳಲು ಈ ತಿದ್ದುಪಡಿ ತಂದಿರುವರೆಂದು ಹೇಳುವುದು ಮುಸ್ಲಿಂ ಲೀಗಿನ ಹಿತಾಸಕ್ತಿಯನ್ನು ಕಾಯಲು ಈ ತಿದ್ದುಪಡಿಯನ್ನು ತಂದಿರುವರೆಂದು ಹೇಳುವುದು ಮುಸ್ಲಿಂ ಲೀಗಿನ ಹಿತಾಸಕ್ತಿಯನ್ನು ಕಾಯಲು ಈ ತಿದ್ದುಪಡಿಯನ್ನು ತರಲಾಗಿದೆ ಎಂಬ ಸಂಗತಿಯನ್ನು ಅಪಾರ್ಥ ಮಾಡಿಕೊಂಡು ತಪ್ಪುದಾರಿಗೆ

ಎಳೆಸುವ ವಾದ ಮಾಡುತ್ತದೆ. ಸನ್ಮಾನ್ಯರಾದ ಕಾನೂನು ಮಂತ್ರಿಗಳು ಈ ಸಂಗತಿಯನ್ನು ಮರೆತಿದ್ದಾರೆ. ನಾವು ಈಗ ಭಾರತದ ಒಕ್ಕೂಟದಲ್ಲಿದ್ದೇವೆ. ನಿರ್ದಿಷ್ಟವಾಗಿ ಮುಸಲ್ಮಾನರು ಈ ತಿದ್ದುಪಡಿಯಿಂದ ಯಾವ ಲಾಭವನ್ನೂ ಪಡೆಯುವುದಿಲ್ಲ.

**ಸನ್ಮಾನ್ಯರಾದ ಡಾ|| ಬಿ.ಆರ್. ಅಂಬೇಡ್ಕರ್ :** ನಾನು ಇದೀಗ ಹೇಳುವುದೇನೆಂದರೆ ಇದು ವಾಸ್ತವ ಸಂಗತಿಯ ಹೇಳಿಕೆಯು ಆದಾಗ್ಯೂ ನಾನು ಆ ಫಿರ್ಯಾಧಿಯನ್ನು ಒಪ್ಪುತ್ತೇನೆ. ಮುಸ್ಲಿಂ ಸದಸ್ಯರು ಮುಸ್ಲಿಂ ಲೀಗಿನ ತತ್ವಜ್ಞಾನವನ್ನು ಬಿಟ್ಟುಬಿಡಬೇಕಾದುದನ್ನು ಅವರು ಇನ್ನೂ ಬಿಟ್ಟುಕೊಟ್ಟಿಲ್ಲ. ಮುಸ್ಲಿಂ ಲೀಗ್ ಇರುವಾಗ ಕಾನೂನು ಪ್ರಕಾರವಾಗಬಹುದಾದ ವಾದವನ್ನೇ ಅವರು ಪುನಃ ಪುನಃ ಮುಸ್ಲಿಂ ಪ್ರಾಂತಗಳಿದ್ದರೆ ಎಂಬಂತೆ ವಾದ ಮಾಡುತ್ತಾರೆ. ಈಗ ಅವುಗಳಿಗೆ ಕಾನೂನಿನ ಬಾಧ್ಯತೆಯು ಇರುವುದಿಲ್ಲ. ಈಗ ಮುಸಲ್ಮಾನರು ಯಾಕೆ ಪುನಃ ಪುನಃ ಅವುಗಳನ್ನು ಉಚ್ಚರಿಸುತ್ತಾರೆಂಬುದು ನನಗೆ ತಿಳಿಯದಾಗಿದೆ (ತಡೆ).

**ಸನ್ಮಾನ್ಯ ಉಪಸಭಾಪತಿ :** ಶಾಂತರಾಗಿರಿ. ಶಾಂತರಾಗಿರಿ.

**ಸನ್ಮಾನ್ಯ ಡಾ| ಬಿ.ಆರ್. ಅಂಬೇಡ್ಕರ್ :** ಭಾರತ ಸರಕಾರದ ಅಧಿನಿಯಮದ ಕಲಂ ೧೨೬ ಪರಂತುಕದಿಂದ ನಾವು ದೂರ ಸರಿಯುತ್ತೇವೆಂಬ ವಾದದಲ್ಲಿ ಯಾವ ಹುರುಳೂ ಇಲ್ಲ. ಆ ಕಲಮು ಯಾವುದೇ ತತ್ವದ ಮೇಲೆ ನಿಂತಿಲ್ಲ.

ಈ ಪರಂತುಕದ ಪರವಾಗಿ ಎರಡು ಸಂಗತಿಗಳನ್ನು ನಾನು ಹೇಳಬಯಸುತ್ತೇನೆ. ಮೊದಲನೆಯದಾಗಿ ಈ ಪರಂತುಕಕ್ಕೆ ಪ್ರಸ್ತಾವನೆಯನ್ನು ಮಾಡುವ ಅನೇಕ ಹಿಂದಿನ ದೃಷ್ಟಾಂತಗಳಿವೆ. ನನ್ನ ಸನ್ಮಾನ್ಯ ಮಿತ್ರರಾದ ಶ್ರೀ ಟಿ.ಟಿ. ಕೃಷ್ಣಮಾಚಾರಿ ಈ ವಿಷಯ ಕುರಿತು, ಅದರ ಸ್ಥಾನ ಕುರಿತು ಕೆಲವು ಮಾತುಗಳನ್ನು ಹೇಳಿದ್ದಾರೆ. ಸಂಯುಕ್ತ ರಾಜ್ಯಗಳ ಸಂವಿಧಾನಗಳಿರುವ ಅನೇಕ ದೇಶಗಳಲ್ಲಿ ಇದು ಕಂಡುಬರುತ್ತದೆ. ಆದ್ದರಿಂದ ನಾನು ಆ ವಿಷಯದ ಬಗ್ಗೆ ಹೇಳಲು ಪುನಃ ತೊಂದರೆ ತೆಗೆದುಕೊಳ್ಳಲು ಹೋಗುವುದಿಲ್ಲ. ಆದರೆ ನಾನು ಒಂದು ಉಲ್ಲೇಖವನ್ನು ಆಸ್ಟ್ರೇಲಿಯಾ ಸಂವಿಧಾನದ ಬಗ್ಗೆ ಮಾಡಬಯಸುತ್ತೇನೆ. ಆಸ್ಟ್ರೇಲಿಯಾ ಸಂವಿಧಾನದಲ್ಲಿಯೂ ನಮ್ಮ ಸಂವಿಧಾನದಲ್ಲಿರುವಂತೆ ಸಮವರ್ತಿಸುವ ಕಾನೂನುಗಳಿವೆ. ಆಸ್ಟ್ರೇಲಿಯಾ ಸಂವಿಧಾನದಲ್ಲಿ ಕಾಮನ್‌ವೆಲ್ತ್ ಸಂಸತ್ತಿಗೆ ಸಮವರ್ತಿಸೂಚಿಯಲ್ಲಿ ಬೇಕಾದ ಕಾನೂನು ಮಾಡುವ ಅಧಿಕಾರ ಇರುತ್ತದೆ. ಅದು ತನ್ನಷ್ಟಕ್ಕೆ ತಾನೇ ಆಡಳಿತವನ್ನು ವಹಿಸಿಕೊಳ್ಳುತ್ತದೆ. ಒಂದು ಪ್ರಸಿದ್ಧ ಪುಸ್ತಕದಿಂದ ಒಂದು ಸಣ್ಣ ಪ್ಯಾರಾಗ್ರಾಫನ್ನು ಉಲ್ಲೇಖಿಸುತ್ತೇನೆ. 'ಶಾಸನ ಮಾಡುವ ಹಾಗೂ ಅದನ್ನು ಜಾರಿ ಮಾಡುವ ಅಧಿಕಾರವು' ಇದನ್ನು ಬರೆದ ಆಸ್ಟ್ರೇಲಿಯಾದಲ್ಲಿ ದೊಡ್ಡ ವಕೀಲ ಶ್ರೀ ವೈನ್ಸ್ ಅವರು ಹೇಳುವುದು ಹೀಗೆ:

"ಕೊನೆಯದಾಗಿ ಕಾಮನ್‌ವೆಲ್ತ್ ಶಾಸನಗಳಿವೆ. ಲೆಫ್ರಾಯರವರು ರಾಜ್ಯಗಳು ನಿಗ್ರಹಿಸುವ ಕಾನೂನು ಇರದಿದ್ದರೆ ಅವು ಕಾನೂನುಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಕಾನೂನಿನ ಮೂಲಕ ಪಡೆಯುತ್ತವೆ ಎಂದು ಹೇಳಿದರು. ಈ ಪ್ರಸ್ತಾವನೆಯು ಕೆನಡಾದಲ್ಲಿ ನಿಜವಿರುತ್ತದೆ. ಕೆನಡಾದಲ್ಲಿ ಎರಡು ನಮೂನೆಯ ಸರಕಾರಗಳು ಸಂಪೂರ್ಣವಾಗಿ ಕಾಮನ್‌ವೆಲ್ತ್ ರಾಜ್ಯಗಳಿಗೆ ಕಾನೂನು ಮಾಡುವ ಸಂಪೂರ್ಣ ಅಧಿಕಾರ ಇರುತ್ತದೆ. ಆದರೆ ಇದು ಆಸ್ಟ್ರೇಲಿಯಾದಲ್ಲಿ ಅನ್ವಯಿಸುವುದಿಲ್ಲ. ಇಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಶಾಸಕಾಂಗದ ಕಾಮನ್‌ವೆಲ್ತ್‌ದ ಅಧಿಕಾರವು ಪ್ರತ್ಯೇಕವಾಗಿರುತ್ತದೆ. ಉದಾ: ರಕ್ಷಣೆಯ ವಿಷಯದಲ್ಲಿ ಅನುದಾನ ಮಂಜೂರ ಮಾಡುವ ಹಕ್ಕು ಕಾಮನ್‌ವೆಲ್ತ್‌ಗೆ ಇರುತ್ತದೆ. ಆದರೆ ಸಮವರ್ತಿ ಅಧಿಕಾರಗಳಿಗೆ ಸಂಬಂಧಿಸಿದಂತೆ ಅದರ ಕಾರ್ಯವಾಹಕ ಅಧಿಕಾರವು ರಾಜ್ಯಗಳಿಗೆ, ಕಾಮನ್‌ವೆಲ್ತ್‌ದ ಕಾನೂನು ಮಾಡುವ ಅಧಿಕಾರವನ್ನು ಚಲಾಯಿಸುತ್ತವೆ. ಅಂದರೆ ಸಮವರ್ತಿ ಸೂಚಿ ವಿಷಯದಲ್ಲಿ ಎಲ್ಲಿಯವರೆಗೆ ಕಾಮನ್‌ವೆಲ್ತ್‌ವು ಕಾನೂನು

ಮಾಡುವ ಅಧಿಕಾರವನ್ನು ಚಲಾಯಿಸದಿದ್ದರೆ ಅದನ್ನು ಜಾರಿ ಮಾಡುವ ಅಧಿಕಾರವು ರಾಜ್ಯಗಳಿಗೆ ಇರುತ್ತದೆ. ಅದು ಮಾಡಿದ ತಕ್ಷಣ ಆ ಕಾನೂನನ್ನು ಜಾರಿಗೊಳಿಸುವ ಅಧಿಕಾರ ತನ್ನಷ್ಟಕ್ಕೆ ತಾನೇ ಕಾಮನ್‌ವೆಲ್ತಿಗೆ ವರ್ಗಾಯಿಸಲ್ಪಡುತ್ತದೆ. ಆದ್ದರಿಂದ ಉಪಬಂಧದಲ್ಲಿ ಕಾಣಿಸಿದಂತೆ ಅದರ ಸ್ಥಿತಿಯನ್ನು ಆಸ್ಟ್ರೇಲಿಯಾದಲ್ಲಿ ಇದ್ದಂತೆ ಹೋಲಿಸಿದರೆ ಸಂಯುಕ್ತ ತತ್ವದಿಂದ ದೂರ ಸರಿಯುವುದಿಲ್ಲ. ಮಾನ್ಯರೆ, ಈಗ ನಾನು ಹೇಳುವ ಎರಡನೆಯ ವಿಷಯವೇನೆಂದರೆ ಈ ರೀತಿಯ ಪರಂತುಕಕ್ಕೆ ಸಾಕಷ್ಟು ಸಮರ್ಥನೆಯು ಇದೆ. ಒಂದು ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಸಮವರ್ತಿಸೂಚಿಯಲ್ಲಿ ಕೇಂದ್ರವು ಕೆಲವು ಕಾನೂನುಗಳಲ್ಲಿ ಆಡಳಿತವನ್ನು ತಾನೇ ವಹಿಸಿಕೊಳ್ಳಲು ಅನುಮತಿ ಇದೆ. ನಾನು ಒಂದು ಇಲ್ಲವೆ ಎರಡು ಉದಾಹರಣೆಗಳನ್ನು ಕೊಡುತ್ತೇನೆ. ಭಾರತದ ಸಂವಿಧಾನ ಸಭೆಯು ೧೧ನೆಯ ವಿಧಿಯನ್ನು ಪಾಸು ಮಾಡಿದೆ. ಅದು ನಿಜವಾಗಿ ಅಸ್ಪೃಶ್ಯತೆಯನ್ನು ತೆಗೆದುಹಾಕುತ್ತದೆ. ಅಸ್ಪೃಶ್ಯತೆಯನ್ನು ನಿವಾರಿಸಲು ಅವರ ನಾಗರಿಕ ಹಕ್ಕುಗಳನ್ನು ದಯಪಾಲಿಸಲು ಅವಶ್ಯವಿರುವ ಎಲ್ಲಾ ಕಾನೂನುಗಳನ್ನು ಮಾಡಲು ಸಂಸತ್ತಿಗೆ ಪರವಾನಗಿಯನ್ನು ಸಹ ಕೊಟ್ಟಿದೆ. ಕೆಲವು ದಂಡ ವಿಧಿಸಲು ಕೇಂದ್ರವು ಗೊತ್ತುಪಡಿಸುತ್ತದೆಂದು ತಿಳಿಯೋಣ. ಅಸ್ಪೃಶ್ಯತೆ ನಿವಾರಣೆಯ ಕೆಲವು ಅಭಿಯೋಜನೆಗಳಿಗೆ ಅಡ್ಡಿ ಮಾಡಲಾಯಿತು. ಇಂತಹ ಒಂದು ಕಾನೂನನ್ನು ಕೇಂದ್ರವು ಪಾಸುಮಾಡಿದೆಯೆಂದು ತಿಳಿಯಿರಿ. ಒಂದು ಪ್ರಾಂತದಲ್ಲೆ ಅಸ್ಪೃಶ್ಯತೆಯನ್ನು ನಿಜವಾಗಿಯೂ ನಿವಾರಿಸುವ ನೈಜಭಾವನೆ ಇರದಿದ್ದರೆ ಮತ್ತು ಅದು ತೀವ್ರತಮವಾಗಿರದಿದ್ದರೆ ಸರಕಾರವು ಅವರಿಗೆ ನಾಗರಿಕ ಹಕ್ಕುಗಳನ್ನು ದಯಪಾಲಿಸಲು ಆಸಕ್ತಿಯನ್ನು ಹೊಂದಿ ಅವರಿಗೆ ತರ್ಕಬದ್ಧ ಸಂವಿಧಾನದ ಭರವಸೆಯನ್ನು ಕೊಡುತ್ತದೆ. ಸಂವಿಧಾನವು ಕೇಂದ್ರದ ಮೇಲೆ ಇಷ್ಟೊಂದು ಜವಾಬ್ದಾರಿಯನ್ನು ಹೊರಿಸುವುದು ನ್ಯಾಯಯುತವಾದುದೇ?

ಅಸ್ಪೃಶ್ಯತೆಯ ವಿಷಯದಲ್ಲಿ ಸಂವಿಧಾನವು ಕೇಂದ್ರದ ಮೇಲೆ ಇಷ್ಟೊಂದು ಹೊಣೆ ಹೇರುವುದು ನ್ಯಾಯಯುತವಾದುದು. ಕೇವಲ ಕಾನೂನು ಪಾಸುಮಾಡಿ ಕಣ್ಣು ಮುಚ್ಚಿಕೂಡಬಾರದು. ಈ ನಿರ್ದಿಷ್ಟ ಕಾನೂನುಗಳನ್ನು ಜಾರಿಗೊಳಿಸಲು ಪ್ರಾಂತೀಯ ಸರಕಾರಗಳು ಈ ವಿಷಯದಲ್ಲಿ ಏನು ಮಾಡುತ್ತವೆಂದು ಕಾದು ನೋಡಬೇಕು. ಪ್ರತಿಯೊಬ್ಬರ ನೆನಪಿನಲ್ಲಿರುವಂತೆ ಇಂತಹ ಒಂದು ಕಾನೂನನ್ನು ಜಾರಿಗೊಳಿಸುವಾಗ ಹೆಚ್ಚುವರಿ ಪೋಲಿಸರನ್ನು ನೇಮಿಸುವ ಅವಶ್ಯಕತೆಯು ಬೀಳುತ್ತದೆ. ಈ ಅಪರಾಧ ಸಂಜ್ಞೇಯ ಅಪರಾಧವನ್ನಾಗಿ ಮಾಡಿದರೆ ಅದಕ್ಕಾಗಿ ವಿಶೇಷ ಸಮುದಾಯವನ್ನು ನೇಮಿಸಬೇಕಾಗುತ್ತದೆ. ಅಭಿಯೋಜನೆಗಾಗಿ ಮತ್ತು ಕೇಂದ್ರದ ಆಡಳಿತಾತ್ಮಕ ವಿಷಯದ ಎಲ್ಲ ಸ್ವರೂಪದ ಕಾನೂನುಗಳನ್ನು ಪಾಸುಮಾಡಿದರೆ ಅದನ್ನು ಜಾರಿಗೊಳಿಸುವ ಅಧಿಕಾರಿಯನ್ನು ನೇಮಿಸಬೇಕೆ? ಇಂತಹ ಮಹತ್ವದ ವಿಷಯದ ಬಗೆಗೆ ಕೇಂದ್ರವು ಕಾನೂನು ಪಾಸುಮಾಡಿ ಸುಮ್ಮನೆ ಇರಬೇಕೆಂದು ಯಾರಾದರೂ ಹೇಳುವಿರಾ?

ನಾನು ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ದೇಶದಲ್ಲಿ ಬಾಲ್ಯವಿವಾಹ ಪದ್ಧತಿಯು ಇದೆ. ಅದರ ಬಗೆಗೆ ಸಾಕಷ್ಟು ವಿರೋಧಿ ಭಾವನೆ ಇದ್ದು ಕೇಂದ್ರವು ಕಾನೂನುಗಳನ್ನು ಪಾಸುಮಾಡಿದೆ. ಅವುಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಪ್ರಾಂತಗಳಿಗೆ ಕೊಡಲಾಗಿದೆ. ಅದರ ಪರಿಣಾಮವೇನಾಗಿದೆಯೆಂಬುದು ನಮಗೆ ಗೊತ್ತಿದೆ. ಅಧಿಕಾರಿಗಳ ದ್ವಿವಿಭಜನೆಯ ಪರಿಣಾಮದಿಂದ ಶಾಸಕಾಂಗದ ಅಧಿಕಾರವು ಸರಕಾರದಲ್ಲಿದೆ ಮತ್ತು ಜಾರಿಗೊಳಿಸುವ ಅಧಿಕಾರವು ಮತ್ತೊಬ್ಬರಿಗೆ ಇದೆ. ನನಗೆ ತಿಳಿದಂತೆ ಮತ್ತು ನನ್ನ ಮಿತ್ರರಾದ ಪಂಡಿತ ಭಾರ್ಗವ ಅವರು ಇಂತಹ ಸಂಗತಿಗಳಿಗೆ ಪ್ರೋತ್ಸಾಹ ನೀಡುತ್ತಾರೆಂದು ನಾನು ಭಾವಿಸುವೆನು ಮತ್ತು ಹಾಗೆ ಯಾವಾಗಲೂ ಈ ಸಂಸತ್ತಿನಲ್ಲಿ ಹೇಳುತ್ತಿರುತ್ತಾರೆ. ಈ ಕಾನೂನಿನಲ್ಲಿ ಏನೇ ಹೇಳಿದ್ದರೂ ಬಾಲ್ಯ ವಿವಾಹಗಳು ಹಿಂದಕ್ಕೆ ಇದ್ದಂತೆ ಈಗಲೂ ಬಹುಸಂಖ್ಯೆಯಲ್ಲಿಯೇ

ಆಗುತ್ತಿವೆ. ಇಷ್ಟು ಆಸಕ್ತಿ ಇರುವ ಕೇಂದ್ರ ಸರಕಾರವು ಈ ಕೆಡಕುಗಳನ್ನು ಹೋಗಲಾಡಿಸಬೇಕು. ಈ ಸ್ವರೂಪದ ಕಾನೂನುಗಳನ್ನು ಜಾರಿಗೊಳಿಸಲು ಒಂದು ಅಧಿಕಾರವು ಬೇಕೋ ಬೇಡವೋ? ಪ್ರಾಂತಗಳು ಕೇವಲ ತಮಗೆ ಸ್ವಾತಂತ್ರ್ಯವಿದೆಯೆಂದು. ತಮಗೆ ಇಷ್ಟ ಬಂದಂತೆ ಮಾಡಬಹುದೆ? ಸಂಪತ್ತು ಇಂತಹ ಭಾವನೆಯಿಂದ ಒಳ್ಳೇ ಅಪೇಕ್ಷೆಯಿಂದ ಇಂತಹ ಕೆಡಕನ್ನು ಹೋಗಲಾಡಿಸಲು ಪರಿಣಾಮಕಾರಿಯಾಗಿ ಮಾಡಲಾರದೆ? ಉದಾಹರಣೆಗೆ ಮತ್ತೊಂದು ಪ್ರಕರಣವನ್ನು ತೆಗೆದುಕೊಳ್ಳಿರಿ. ಕಾರಖಾನೆ ಕಾನೂನು ಆಗಿದ್ದಾಗ ನಾನು ಭಾರತ ಸರಕಾರದ ಕಾರ್ಮಿಕ ಮಂತ್ರಿಯಾಗಿದ್ದೆ. ಅನೇಕ ಪ್ರಕರಣಗಳು ಒಂದರ ನಂತರ ಮತ್ತೊಂದು ಬರುತ್ತಿದ್ದವು. ಅವುಗಳಲ್ಲಿ ಪ್ರಾಂತೀಯ ಸರಕಾರಗಳು ಅನೇಕ ಪ್ರಕರಣಗಳಲ್ಲಿ ಕಾರಖಾನೆಯ ನಿರೀಕ್ಷಕರನ್ನು ನೇಮಿಸುತ್ತಿದ್ದಿಲ್ಲ. ಮತ್ತು ಕಾರಖಾನೆಗಳ ಕಾನೂನುಗಳು ಯೋಗ್ಯರೀತಿಯಿಂದ ಜಾರಿಗೊಳಿಸುವುದನ್ನು ಮಾಡುತ್ತಿದ್ದಿಲ್ಲವೆಂಬುದು ನನಗೆ ನೆನಪಿದೆ. ಕೇಂದ್ರ ಸರಕಾರದ ಕಾರ್ಮಿಕ ಕಾನೂನುಗಳು ಕೇವಲ ಕಾಗದಗಳ ಮೇಲಿನವಾಗಿ ಯಾವ ಪರಿಣಾಮವೂ ಆಗದೆ ಇರುವುದು ಯೋಗ್ಯವೇ? ಕೇಂದ್ರ ಸರಕಾರವು ತಾನು ಮಾಡಿದ ಕಾನೂನುಗಳನ್ನು ಜಾರಿಗೊಳಿಸುವ ಅಧಿಕಾರವು ಕೇಂದ್ರಕ್ಕೆ ಇರದಿದ್ದರೆ ಅಂತಹ ಕಾನೂನಿಗೆ ಪರಿಣಾಮವನ್ನುಂಟುಮಾಡಲು ಬರುವುದಿಲ್ಲ. ಆದ್ದರಿಂದ ನಾನು ವಿವರಿಸಿದ ಪ್ರಕರಣಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡು ಇಂತಹ ಅನೇಕ ಪ್ರಕರಣಗಳನ್ನು ಜ್ಞಾಪಿಸಿಕೊಳ್ಳಬೇಕು. ಸಮವರ್ತಿಸೂಚಿಯಲ್ಲಿಯ ಅನೇಕ ಕಾನೂನುಗಳು ಹೆಚ್ಚಾಗಿ ಕಾಗದದ ಮೇಲಿನ ಕಾನೂನುಗಳಾಗಿ ಉಳಿದಿವೆ. ಇದಕ್ಕೆ ಕಾರಣವೇನೆಂದರೆ ಕೇಂದ್ರ ಸರಕಾರವು ತಾನು ಮಾಡಿದ ಕಾನೂನುಗಳನ್ನು ತಾನೇ ಜಾರಿಗೊಳಿಸಲಾಗುವುದಿಲ್ಲ. ಇದು ಶೋಚನೀಯ ಸ್ಥಿತಿ. ಇದನ್ನು ಈ ಪರಂತುಕವು ಸರಿಪಡಿಸಲು ಯತ್ನಿಸುತ್ತದೆ.

ನಾನು ಇನ್ನೊಂದು ಅಂಶವನ್ನು ಹೇಳಬಯಸುತ್ತೇನೆ. ನಿಜವಾಗಿ ಹೇಳಬೇಕೆಂದರೆ ಪ್ರಾಂತೀಯ ಸರಕಾರಗಳು ಈ ಪರಂತುಕವನ್ನು ಸ್ವಾಗತಿಸಬೇಕು. ಯಾಕೆಂದರೆ ಈಗಿದ್ದ ಸ್ಥಿತಿಯಲ್ಲಿ ಅನೇಕ ಆರ್ಥಿಕ ವಿಷಯದಲ್ಲಿ ನ್ಯೂನತೆಗಳಿರುತ್ತವೆ. ಕೇಂದ್ರ ಸರಕಾರವು ಕಾನೂನು ಮಾಡುವುದು ಮತ್ತು ಅದರ ಆಡಳಿತವನ್ನು ಪ್ರಾಂತಗಳಿಗೆ ಬಿಟ್ಟುಕೊಡುವುದು. ಅಂದರೆ ಪ್ರಾಂತಗಳಿಗೆ ಆರ್ಥಿಕ ಹೊರೆ ಹೊರಿಸಿದಂತೆ ಆಗುತ್ತದೆ. ಅಂದರೆ ಕಾನೂನು ಜಾರಿಗೊಳಿಸಲು ಪ್ರಾಂತಗಳು ಆಡಳಿತ ಯಂತ್ರವನ್ನು ನೇಮಿಸಬೇಕಾಗುತ್ತದೆ. ಕೇಂದ್ರ ಸರಕಾರವೇ ಈ ಕಾನೂನುಗಳನ್ನು ಜಾರಿಗೊಳಿಸುವ ಹೊಣೆಯನ್ನು ತಾನೇ ತೆಗೆದುಕೊಂಡರೆ ಅಷ್ಟರ ಮಟ್ಟಿಗೆ ಪ್ರಾಂತಗಳು ಆರ್ಥಿಕ ಹೊಣೆಯಿಂದ ಮುಕ್ತವಾಗುತ್ತದೆ. ಆ ಉದ್ದೇಶ ಕುರಿತು ಈ ಪರಂತುಕವನ್ನು ಸ್ವಾಗತಿಸಿದರೆ ಪ್ರಾಂತಗಳಿಗೆ ಭಾರವು ಕಡಿಮೆಯಾಗುತ್ತದೆ. ಇದೇ ಅದರ ಕನಿಷ್ಠ ಬೇಡಿಕೆ ಆದ್ದರಿಂದ ನಾನು ಈ ಸದನಕ್ಕೆ ಹೇಳುವುದೇನೆಂದರೆ ನಾನು ಮಾಡಿದ ಈ ಪರಂತುಕವನ್ನು ಈ ಸಭೆಯು ಅನುಮೋದಿಸಬೇಕು.

(ಎಲ್ಲಾ ನಾಲ್ಕು ತಿದ್ದುಪಡಿಗಳು ತಿರಸ್ಕೃತವಾದವು, ವಿಧಿ ೬೦ ಇದು ಯಾವ ತಿದ್ದುಪಡಿಯು ಇಲ್ಲದೆ ಸ್ವೀಕರಿಸಲಾಯಿತು ಮತ್ತು ಸಂವಿಧಾನದಲ್ಲಿ ಅಳವಡಿಸಲಾಯಿತು).

* * * * *

# ವಿಧಿ ೬೧

**ಸನ್ಮಾನ್ಯ ಉಪಸಭಾಪತಿ :** ಡಾ॥ ಅಂಬೇಡ್ಕರ್.

**ಶ್ರೀ ಲಕ್ಷ್ಮೀನಾರಾಯಣ ಸಾಹು (ಒರಿಸ್ಸಾ : ಸಾಮಾನ್ಯ) :** ಮಾನ್ಯರೆ, ಇದು ಅತಿ ಮಹತ್ವದ ವಿಧಿಯಾಗಿದ್ದು ಇದರ ಮೇಲೆ ನಾನು ಮಾತನಾಡಲು ಇಚ್ಛಿಸುತ್ತೇನೆ..........

**ಸನ್ಮಾನ್ಯ ಉಪಸಭಾಪತಿ :** ಈ ವಿಷಯ ಕುರಿತು ಬಹಳ ಜನ ಸದಸ್ಯರು ಮಾತನಾಡಲಿದ್ದಾರೆಂಬುದು ನನಗೆ ಗೊತ್ತು. ಆದರೆ ಸದನಕ್ಕೆ ಇರುವ ಅವಧಿ ಕಡಿಮೆ ಮತ್ತು ಇದರ ಮೇಲೆ ಸಾಕಷ್ಟು ಚರ್ಚೆಯಾಗಿದೆಯೆಂದು ನಾನು ಭಾವಿಸುತ್ತೇನೆ.

**ಶ್ರೀ ಲಕ್ಷ್ಮೀನಾರಾಯಣ ಸಾಹು :** ಮಾನ್ಯರೆ .........

**ಮಾನ್ಯ ಉಪಸಭಾಪತಿ :** ದಯವಿಟ್ಟು ಅಧ್ಯಕ್ಷರ, ಈ ಕೋರಿಕೆಯನ್ನು ಮೀರುವ ಪ್ರಯತ್ನ ಮಾಡಬೇಡಿರಿ. ಡಾ. ಅಂಬೇಡ್ಕರ್.

**ಸನ್ಮಾನ್ಯ ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಸನ್ಮಾನ್ಯ ಉಪಸಭಾಪತಿಗಳೆ, ಬೇಗ್ ಇಲ್ಲವೆ ತಾಹಿರ್ ಅಥವಾ ಪ್ರೊ.ಕೆ.ಟಿ. ಶಹಾ ಅವರು ತಂದ ಯಾವುದೇ ತಿದ್ದುಪಡಿಯನ್ನು ನಾನು ಸ್ವೀಕರಿಸಲಾರೆನು, ದಯವಿಟ್ಟು ಕ್ಷಮಿಸಿರಿ. ಅವರು ಉತ್ತರ ಕೊಡುವಾಗ ತಮ್ಮ ತಿದ್ದುಪಡಿಯನ್ನು ಸಮರ್ಥಿಸುವುದಿಲ್ಲ. ದಯವಿಟ್ಟು ಕ್ಷಮಿಸಿರಿ. ನಾನು ನನ್ನ ನಿಲುವನ್ನು ಸಾಧ್ಯವಾದಷ್ಟು ಸ್ವಲ್ಪದರಲ್ಲಿ ಹೇಳಬಯಸುತ್ತೇನೆ.

ಸನ್ಮಾನ್ಯ ಮಹಬೂಬ ಆಲಿ ಬೇಗ್ ಅವರ ತಿದ್ದುಪಡಿಯು ಎರಡು ಭಾಗಗಳಲ್ಲಿ ಬರುತ್ತದೆ. ತಿದ್ದುಪಡಿಯ ೧ನೆಯ ಭಾಗವು ಸಚಿವ ಸಂಪುಟದ ಸಂಖ್ಯೆಯನ್ನು ನಿಗದಿಪಡಿಸುತ್ತದೆ. ಅವರ ಪ್ರಕಾರ ಅದು ೧೫ ಇರುತ್ತದೆ. ೨ನೆಯ ಭಾಗದ ಅವರ ಪ್ರಸ್ತಾಪವೇನೆಂದರೆ ಸಚಿವರನ್ನು ಪ್ರಧಾನಮಂತ್ರಿಗಳು ನೇಮಿಸಬಾರದು ಇಲ್ಲವೆ ರಾಷ್ಟ್ರಾಧ್ಯಕ್ಷರು ಪ್ರಧಾನಮಂತ್ರಿ ಸಲಹೆ ಮೇರೆಗೂ ನೇಮಿಸಬಾರದು. ಆದರೆ ಅವರು ಸದನದಿಂದ ಪ್ರಮಾಣಾನುಸಾರ ಪ್ರಾತಿನಿಧ್ಯದಿಂದ ಆಯ್ಕೆಯಾಗಬೇಕು.

ಮಾನ್ಯರೆ, ಮೊದಲನೆಯ ಭಾಗದ ತಿದ್ದುಪಡಿಯು ಸ್ಪಷ್ಟವಾಗಿ ಆಚರಣೆಯಲ್ಲಿ ತರುವುದು ಸಾಧ್ಯವಿಲ್ಲ. ಮೇಲುನೋಟಕ್ಕೆ ಸಹ ಸಚಿವ ಸಂಪುಟದ ಸಂಖ್ಯೆಯನ್ನು ನಿಗದಿತಗೊಳಿಸುವುದು ಸಾಧ್ಯವಿಲ್ಲ. ಪ್ರಧಾನಮಂತ್ರಿಗಳು ಸಂವಿಧಾನವು ನಿಗದಿಪಡಿಸಿದ ೧೫ ಜನ ಸಚಿವ ಸಂಪುಟದ ಕಡಿಮೆ ಸಂಖ್ಯೆಯ ಸಚಿವರೊಂದಿಗೆ ರಾಷ್ಟ್ರದ ಆಡಳಿತವನ್ನು ನಡೆಯಿಸುವುದು ಸಾಧ್ಯವಾದರೆ ನಡೆಯಿಸಿಕೊಂಡು ಹೋಗಬಹುದು. ಅದಕ್ಕಾಗಿ ಪ್ರಧಾನಮಂತ್ರಿಗಳು ಕಡಿಮೆ ಸಂಖ್ಯೆಯ ೧೫ ಸಚಿವ ಸಂಖ್ಯೆಯ ಸಚಿವರೊಂದಿಗೆ ಆಡಳಿತ ನಡೆಯಿಸಿಕೊಂಡು ಹೋಗಲು ಸಾಧ್ಯವಾದರೆ ಸಂವಿಧಾನವು ಯಾಕೆ ಅವರಿಗೆ ಹೊರೆ ಹಾಕಬೇಕು. ಅದಕ್ಕೆ ಕಾರಣವಿಲ್ಲ. ಅದಕ್ಕೆ ಕಾರಣವು ಇರಬಹುದು. ಅಂದರೆ ಸರಕಾರದ ವ್ಯವಹಾರವು ಅತಿ ಹೆಚ್ಚಾದಾಗ ೧೫ ಜನ ಸಚಿವರ ಸಂಖ್ಯೆ ಅತಿ ಕಡಿಮೆ ಅನಿಸಬಹುದು. ಇದು ಆ ಕಾರಣ ಇರಬಹುದು. ಆಗ ಸಹ ಸಂವಿಧಾನದಲ್ಲಿ ಸಚಿವರ ಸಂಖ್ಯೆ ಕಾಣಿಸುವುದು ತಪ್ಪಾಗುತ್ತದೆ ಮತ್ತು ಅವಶ್ಯಕವಾದ ಸಂಖ್ಯೆಯಲ್ಲಿ ಸಚಿವರನ್ನು ನೇಮಿಸಿಕೊಳ್ಳಲು ಸಂದರ್ಭ ಒದಗಿದರೆ ಅವರನ್ನು ತಡೆದಂತಾಗುತ್ತದೆ.

ಎರಡನೆಯ ತಿದ್ದುಪಡಿಯನ್ನು ಕುರಿತು, ಅಂದರೆ ಸಚಿವರನ್ನು ಪ್ರಧಾನಮಂತ್ರಿಗಳ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ನೇಮಕ ಮಾಡತಕ್ಕದ್ದಲ್ಲ ಆದರೆ ಅವರನ್ನು ಅನುಪಾತ ಪ್ರಾತಿನಿಧ್ಯದ ಮೂಲಕ

ಆರಿಸತಕ್ಕದ್ದು. ಈ ಉದ್ದೇಶಕ್ಕಾಗಿ ಅವರ ಮನಸ್ಸಿನಲ್ಲಿ ನಿಖರವಾಗಿ ಏನಿದೆಯೆಂಬುದನ್ನು ತಿಳಿದುಕೊಳ್ಳಲು ನನಗೆ ಸಾಧ್ಯವಾಗಿಲ್ಲ. ಅವರ ವಾದವನ್ನು ನಾನು ಕೇಳಿದ್ದೇನೆ. ಸಂವಿಧಾನ ಕರಡಿನಲ್ಲಿ ಮಾಡಲಾದ ಸೂಚನೆ ಪ್ರಜಾಸತ್ತಾತ್ಮಕವಾಗಿಲ್ಲ.

ಒಳ್ಳೆಯದು, ಜನರಿಂದ ಆರಿಸಲ್ಪಟ್ಟ ಒಬ್ಬ ಪ್ರಧಾನಮಂತ್ರಿಗೆ ವಯಸ್ಕ ಮತದಾನದಿಂದ ಆರಿಸಲ್ಪಟ್ಟ ಸಂಸತ್ತು ಸದಸ್ಯರನ್ನು ಮಂತ್ರಿಗಳನ್ನಾಗಿ ನೇಮಿಸಿದರೆ ಅದು ಹೇಗೆ ಪ್ರಜಾಸತ್ತಾತ್ಮಕವಾಗುವುದಿಲ್ಲ ಎಂಬುದು ನನಗೆ ತಿಳಿಯದಾಗಿದೆ ಅಥವಾ ವಯಸ್ಕ ಮತದಾನದ ಪ್ರಕಾರ ಜನರಿಂದ ಆರಿಸಲ್ಪಟ್ಟ ಇಂತಹ ವ್ಯವಸ್ಥೆ ಹೇಗೆ ಪ್ರಜಾಸತ್ತಾತ್ಮಕವಾಗುವುದಿಲ್ಲವೆಂಬುದು ನನಗೆ ತಿಳಿಯದಾಗಿದೆ. ಈ ತಿದ್ದುಪಡಿಯು ಅಲ್ಪಸಂಖ್ಯಾತರನ್ನು ಕ್ಯಾಬಿನೆಟ್‌ನಲ್ಲಿ ಪ್ರತಿನಿಧಿಸಬೇಕೆಂಬ ಉದ್ದೇಶದಿಂದ ಮಾಡಿರಬೇಕೆಂದು ನಾನು ಸಂಶಯಪಡುತ್ತೇನೆ. ಅದು ಹಾಗಿದ್ದರೆ ಅವರ ಉದ್ದೇಶಕ್ಕೆ ನನ್ನ ಸಹಾನುಭೂತಿ ಇದೆ. ಯಾಕೆಂದರೆ ಒಂದು ಒಳ್ಳೆಯ ಆಡಳಿತವು ಅವಶ್ಯಕವೆಂದು ಭಾವಿಸಲಿದ್ದಾಗ ಆಡಳಿತವು ಯಾರ ಕೈಯಲ್ಲಿ ಇದೆ ಎಂಬುದರ ಮೇಲೆ ಅವಲಂಬಿಸಿದೆ. ಒಂದು ನಿಶ್ಚಿತ ಸಮೂಹವು ಅದನ್ನು ನಿಯಂತ್ರಿಸುತ್ತಿದ್ದರೆ, ಆ ಸಮೂಹದ ಜನರ ಹಿತಾಸಕ್ತಿಯನ್ನು ಕಾಪಾಡುತ್ತದೆಯೆಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ಅಲ್ಪಸಂಖ್ಯಾತರನ್ನು ಕ್ಯಾಬಿನೆಟ್‌ದಲ್ಲಿ ಆಯ್ಕೆ ಮಾಡುವ ಪದ್ಧತಿಯು ಹೇಗಿರಬೇಕೆಂದರೆ ಅದರಲ್ಲಿ ಅಲ್ಪ ಸಂಖ್ಯಾತರಿಗೆ ಪ್ರತಿನಿಧಿಸುವ ಅವಕಾಶವಿರಬೇಕು. ಈ ಉದ್ದೇಶವು ಅಯೋಗ್ಯವೂ ಇಲ್ಲವೆ ಅದು ನಾಚಿಕೆ ಪಡುವಂತಹದ್ದು ಎಂದು ನಾನು ಭಾವಿಸುವುದಿಲ್ಲ. ಆದರೆ ನಾನು ನನ್ನ ಮಿತ್ರರಾದ ಶ್ರೀ ಮಹಬೂಬ ಅಲಿ ಬೇಗ್ ಅವರ ಗಮನವನ್ನು ಒಂದು ವಿಷಯಕ್ಕೆ ಸೆಳೆಯಬಯಸುತ್ತೇನೆ. ಅವರ ಉದ್ದೇಶವು ಸಂವಿಧಾನ ಕರಡು ಸಮಿತಿಯು ಕೊಟ್ಟ ಹೆಚ್ಚಿನ ಪರಿಶಿಷ್ಟ ಅಂದರೆ ೩–ಎ ಈ ಕರಡು ಪ್ರತಿಯಲ್ಲಿ ೪ನೆಯ ಪರಿಶಿಷ್ಟವೆಂದು ಕರೆಯಲ್ಪಡುವುದರಲ್ಲಿ ರಾಜ್ಯಪಾಲರು ಹೇಗೆ ವಿವೇಚನಾ ಅಧಿಕಾರವನ್ನು ಆಡಳಿತದಲ್ಲಿ ಉಪಯೋಗಿಸಬೇಕೆಂಬುದರ ಬಗೆಗೆ ಸೂಚನೆಗಳ ದಾಖಲೆಯನ್ನು ಕೊಟ್ಟಿದೆ. ಇದರಿಂದ ಅವರ ಉದ್ದೇಶವು ಪೂರ್ತಿಯಾಗುತ್ತದೆ. ನಾವು ಇದೇ ರೀತಿಯ ತಿದ್ದುಪಡಿಯನ್ನು ತರಲು ನಿರ್ಧರಿಸಿದ್ದೇವೆ. ಯಾಕೆಂದರೆ ಮತ್ತೊಂದು ಪರಿಶಿಷ್ಟವನ್ನು ಮಂಡಿಸಬೇಕೆಂದಿದ್ದೇವೆ. ಅದು ರಾಷ್ಟ್ರಪತಿಗಳಿಗೆ ಇಂತಹ ಸೂಚನೆಗಳ ದಾಖಲೆಯನ್ನೊಳಗೊಂಡಿದ್ದು ಪ್ರಸ್ತಾವಿತ ಸೂಚನೆಗಳ ದಾಖಲೆಯಲ್ಲಿ ಒಂದು ಖಂಡವು ಕೆಳಗಿನಂತೆ ಇರುತ್ತದೆ. ಮಂತ್ರಿಮಂಡಳದ ಮಂತ್ರಿಗಳನ್ನು ನೇಮಿಸುವಾಗ ರಾಷ್ಟ್ರಪತಿಗಳು ತಮಗೆ ಸಾಧ್ಯವಾದಷ್ಟು ಪ್ರಯತ್ನ ಮಾಡಿ ಈ ಕೆಳಗಿನಂತೆ ಅವರು ತನ್ನ ಮಂತ್ರಿಗಳನ್ನು ನೇಮಿಸಬೇಕು. ಅದೆಂದರೆ ಯಾರು ಸಂಸತ್ತಿನಲ್ಲಿ ಒಂದು ಬಹುಮತದ ಸ್ಥಿರ ಸರಕಾರವನ್ನು ರಚಿಸಲು ಸಾಧ್ಯವಿದೆಯೆಂದು ಅವರಿಗೆ ಕಂಡುಬರುತ್ತದೆಯೋ ಅಂಥವರನ್ನು ಪ್ರಧಾನಮಂತ್ರಿಯಾಗಿ ನೇಮಿಸತಕ್ಕದ್ದು ಮತ್ತು ಆ ಮೇಲೆ ಪ್ರಧಾನ ಮಂತ್ರಿಗಳ ಸಲಹೆಯ ಮೇರೆಗೆ ಸಾಧ್ಯವಾಗಬಹುದಾದಷ್ಟು ಅಲ್ಪ ಸಂಖ್ಯಾತರ ಸಮಾಜದ ಸದಸ್ಯರನ್ನು ಯಾರು ಸಂಸತ್ತಿನಲ್ಲಿ ಸಾಮೂಹಿಕವಾಗಿ ವಿಶ್ವಾಸವನ್ನು ಪಡೆಯುವವರೋ ಅಂತಹ ಜನರನ್ನು ನೇಮಿಸತಕ್ಕದ್ದು.

ಸೂಚನೆಗಳ ದಾಖಲೆಯು ಈ ಉದ್ದೇಶವನ್ನು ಸಾಧಿಸುತ್ತದೆಂದು ನಾನು ಭಾವಿಸುತ್ತೇನೆ. ಒಂದು ನಿರ್ದಿಷ್ಟ ಸಮಾಜದ ಸದಸ್ಯರು ಕ್ಯಾಬಿನೆಟ್ಟಿನಲ್ಲಿರಬೇಕೆಂಬ ಉದ್ದೇಶದಿಂದ ಶ್ರೀ ಮೆಹಬೂಬ ಅಲಿ ಬೇಗ ಅವರು ಈ ತಿದ್ದುಪಡಿಯನ್ನು ತಂದಿದ್ದರೆ, ಅದಕ್ಕೆ ಈಗ ಪ್ರಸ್ತಾಪಿಸಿದಂತೆ ಸಾಮೂಹಿಕ ಜವಾಬ್ದಾರಿಯ ತತ್ವದ ಸಂವಿಧಾನದಲ್ಲಿ ಯಾವುದೇ ಕಾನೂನು ಮಾಡಲು ಸಾಧ್ಯವಿಲ್ಲವೆಂದು ನನಗೆ ಅನಿಸುತ್ತದೆ. ಪ್ರಧಾನಮಂತ್ರಿಯೂ ಕೇವಲ ಒಬ್ಬ ಜೊತೆ ಕೆಲಸಮಾಡುವವನು. ಯಾಕೆಂದರೆ ನಿರ್ದಿಷ್ಟ ಅಲ್ಪಸಂಖ್ಯಾತರ

ಸಮಾಜಕ್ಕೆ ಸೇರಿದ ಮೂಲಭೂತ ತತ್ವದ ಬಗೆಗೆ ಯಾರೂ ವಾದ ಮಾಡುವುದಿಲ್ಲ. ಪ್ರಧಾನಮಂತ್ರಿ ಹಾಗೂ ಆತನ ಸಹೋದ್ಯೋಗಿಗಳೆಲ್ಲರೂ ಸಂಸತ್ತಿಗೆ ವಚನ ಬದ್ಧರಾಗಿರುತ್ತಾರೆ.

ನನ್ನ ಮಿತ್ರರಾದ ಶ್ರೀ ತಹೀರ್ ಅವರು ತಂದ ತಿದ್ದುಪಡಿಯ ಬಗೆಗೆ ರಾಷ್ಟ್ರಪತಿಗಳು ತಮ್ಮ ವಿವೇಚನಾತ್ಮಕ ಕಾರ್ಯಗಳನ್ನು ಮಾಡುವಾಗ ಮಂತ್ರಿಗಳು ಕೊಟ್ಟ ಸಲಹೆಯನ್ನು ಸ್ವೀಕರಿಸಬೇಕಾಗಿಲ್ಲ. ಶ್ರೀ ತಹೀರ ಅವರು ಭಾರತ ಸರಕಾರದ ಅಧಿನಿಯಮದ ಕಲಂ ೫೦ ಅನ್ನು ಸ್ವೀಕರಿಸುವ ಮೊದಲು ಇದ್ದುದ್ದನ್ನು ಇದ್ದಂತೆಯೇ ನಕಲು ಮಾಡಿದ್ದಾರೆಂದು ನನಗೆ ಅನಿಸುತ್ತದೆ. ಈ ಭಾರತ ಸರಕಾರದ ಅಧಿನಿಯಮದ ಕಲಂ ೫೦ರಲ್ಲಿಯ ಪರಂತುಕವು ಮೂಲತಃ ಇದ್ದಂತೆ ಸಂಪೂರ್ಣವಾಗಿ ಕಾನೂನು ಬದ್ಧವಾಗಿತ್ತು. ಯಾಕೆಂದರೆ ಆ ಅಧಿನಿಯಮದ ಅನ್ವಯ ಗವರ್ನರ ಜನರಲ್‌ರವರಿಗೆ ಕಾನೂನು ಬದ್ಧವಾಗಿ ಕೆಲವು ವಿವೇಚನಾತ್ಮಕ ಕೆಲವು ಕಾರ್ಯಗಳನ್ನು ವಹಿಸಿತ್ತು ಮತ್ತು ಅವುಗಳನ್ನು ಕಲಂ ೧೧, ೧೨, ೧೯ ಮತ್ತು ಸಂವಿಧಾನದ ಅನೇಕ ಭಾಗಗಳಲ್ಲಿ ಕಾಣಿಸಲಾಗಿದೆ. ಇಲ್ಲಿ ಗವರ್ನರ ಜನರಲ್ ಅವರಿಗೆ ಸಂಬಂಧಿಸಿದಂತೆ ಅವರ ವಿವೇಚನೆಗೆ ಬಿಟ್ಟ ಸಂಗತಿಗಳೇನೂ ಇರುವುದೇ ಇಲ್ಲ. ಆದ್ದರಿಂದ ಅಲ್ಲಿ ಉದ್ಭವಿಸುವ ಪ್ರಕರಣವೇ ಉಂಟಾಗುವುದಿಲ್ಲ. ಆದರೆ ರಾಷ್ಟ್ರಪತಿ, ಪ್ರಧಾನಮಂತ್ರಿಗಳ ಇಲ್ಲವೆ ಆತನ ಕ್ಯಾಬಿನೆಟ್ ಸಲಹೆ ಇಲ್ಲದೆ ಅನೇಕ ವಿವೇಚನಾತ್ಮಕ ಕಾರ್ಯಗಳನ್ನು ಮಾಡಲು ಕೋರಬೇಕಾಗುತ್ತದೆ. ಈ ದೃಷ್ಟಿಯಿಂದ ತಿದ್ದುಪಡಿಯು ಅನವಶ್ಯಕವಾಗಿರುತ್ತದೆ. ಹೊಸ ಸಂವಿಧಾನದ ಅಡಿಯಲ್ಲಿ ರಾಷ್ಟ್ರಪತಿಗಳಿಗೆ ಅವರ ಕಾರ್ಯಗಳಲ್ಲಿ ಕೆಲವು ವಿಶಿಷ್ಟ ಅಧಿಕಾರಗಳಿರುತ್ತವೆ. ಈ ವಿಷಯವನ್ನು ಶ್ರೀ ತಹೀರ ಅವರು ತಿಳಿದುಕೊಳ್ಳಲು ತಪ್ಪಿದ್ದಾರೆ ಮತ್ತು ಕರ್ತವ್ಯ ಹಾಗೂ ವಿಶೇಷ ಅಧಿಕಾರಗಳಲ್ಲಿ ಬಹಳ ಅಂತರವಿದೆ. ಸಂಸದೀಯ ಪದ್ಧತಿಯ ಸರಕಾರದಲ್ಲಿ ಎರಡೇ ವಿಶೇಷ ಅಧಿಕಾರಗಳಿರುತ್ತವೆ. ಅವುಗಳನ್ನು ಅರಸನಾಗಲಿ ಇಲ್ಲವೆ ರಾಜ್ಯದ ಮುಖ್ಯಸ್ಥನಾಗಲೀ ಚಲಾಯಿಸಬಹುದು. ಒಂದನೆಯದು, ಪ್ರಧಾನಮಂತ್ರಿಗಳನ್ನು ನೇಮಿಸುವುದು, ಎರಡನೆಯದು ಸಂಸತ್ತನ್ನು ವಿಸರ್ಜಿಸುವುದು. ಪ್ರಧಾನಮಂತ್ರಿ ಹಾಗೂ ಉಳಿದವರು ಸಂಬಂಧಿಸಿದಂತೆ ಕಾನೂನು ಪ್ರಕಾರ ಅವನಲ್ಲಿ ವಿಹಿತವಾದ ಈ ವಿವೇಚನಾ ಅಧಿಕಾರವನ್ನು ರಾಷ್ಟ್ರಪತಿಗಳಿಂದ ತಪ್ಪಿಸಲು ಸಾಧ್ಯವಿಲ್ಲ. ಇನ್ನೊಂದು ರೀತಿಯಿಂದ ನಾವು ಇದನ್ನು ಪೂರೈಸಬಹುದೆಂದರೆ, ಅಧಿಕಾರವನ್ನು ಸಹಿತಗೊಳಿಸದೆ ಪ್ರಧಾನ ಮಂತ್ರಿಯನ್ನು ನೇಮಿಸುವುದು ಇಲ್ಲವೆ ರಾಷ್ಟ್ರಪತಿಗಳಲ್ಲಿ ವಿವೇಚನೆಯ ಅಧಿಕಾರವನ್ನು ಕೊಡದೆ ಇರುವುದು. ಸಂಸತ್ತು ಮೊದಲು ಕೂಡಿದೊಡನೆ ಒಂದು ಸೂಚನೆಯ ಇಲ್ಲವೆ ಠರಾವಿನ ಮೂಲಕ ತನ್ನ ನಾಯಕನನ್ನು ಆರಿಸಬೇಕಾಗುತ್ತದೆ. ಆಮೇಲೆ ರಾಷ್ಟ್ರಪತಿಗಳು ಪ್ರಧಾನಮಂತ್ರಿಗಳ ನೇಮಕ ಮಾಡಲು ಮುಂದುವರಿಯತಕ್ಕದ್ದು.

**ಸನ್ಮಾನ್ಯ ಮಹಮ್ಮದ್ ತಹೀರ :** ವಿಧಿ ಬಿಂದು ಎತ್ತಬಯುಸುತ್ತೇನೆ; ರಾಜ್ಯಪಾಲರಿಗೆ ವಿವೇಚನೆಗೆ ಅಧಿಕಾರ ಕೊಟ್ಟರೆ ರಾಜ್ಯಪಾಲರ ಮತ್ತು ರಾಜ್ಯಮಂತ್ರಿಗಳ ಸ್ಥಾನದ ಬಗೆಗೆ ಅದು ಹೇಗೆ ವಿವರಿಸುತ್ತದೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ರಾಜ್ಯಪಾಲರ ಸ್ಥಾನವು ರಾಷ್ಟ್ರಪತಿಗಳ ಸ್ಥಾನದಂತೆ ಅದೇ ಸ್ಥಿತಿಯಲ್ಲಿರುತ್ತದೆ ಮತ್ತು ಅದನ್ನು ಹೆಚ್ಚಿನ ವಿವರಣೆ ಕೊಡುವುದು ಈಗಿನ ಸಂದರ್ಭದಲ್ಲಿ ಅವಶ್ಯವೆಂದು ನನಗೆ ಅನ್ನಿಸುವುದಿಲ್ಲ. ಯಾಕೆಂದರೆ ರಾಜ್ಯಗಳ ವಿಧಾನಮಂಡಲಗಳ ಮತ್ತು ರಾಜ್ಯಪಾಲರುಗಳ ಬಗ್ಗೆ ಚರ್ಚಿಸುವಾಗ ಈ ಸಂಪೂರ್ಣ ವಿಷಯವನ್ನು ಚರ್ಚಿಸೋಣ. ಆದ್ದರಿಂದ ಪ್ರಧಾನಮಂತ್ರಿಗಳನ್ನು ಕುರಿತು ಸದನದ ಇನ್ನೊಂದು ವಿಷಯವೆಂದರೆ ತನ್ನ ನಾಯಕನನ್ನು ತಾನೇ ಆರಿಸುವುದು, ಆದರೆ ಇದು ಅನವಶ್ಯಕವೆಂದು ಕಾಣುತ್ತದೆ. ಪ್ರಧಾನಮಂತ್ರಿಯು ತನಗೆ ಅವಶ್ಯವಿಲ್ಲವೆಂದು ತಪ್ಪು ಆಯ್ಕೆ ಮಾಡಿದರೆ ಅಂದರೆ ಸಂಸತ್ತಿನಲ್ಲಿ

ಸ್ಥಿರವಾದ ಬಹುಮತ ಇಲ್ಲವೆ ಅವನು ಸಂಸತ್ತಿಗೆ ಅಂಗೀಕಾರ ಅರ್ಹನಲ್ಲದ ವ್ಯಕ್ತಿಯಾಗಿದ್ದರೆ ಇದಕ್ಕೆ ಪರಿಹಾರವು ಸಂಸತ್ತಿಗೇ ಇರುತ್ತದೆ. ಯಾಕೆಂದರೆ ರಾಷ್ಟ್ರಪತಿಗಳು ಪ್ರಧಾನಿಯನ್ನು ನೇಮಿಸಿದ ಕ್ಷಣವೇ ಸಂಸತ್ತಿಗೆ ಇಲ್ಲವೆ ಸಂಸತ್ತಿನ ಯಾವುದೇ ಸದಸ್ಯ ಇಲ್ಲವೆ ಯಾವುದೇ ಪಕ್ಷವು ಇಂತಹ ನೇಮಕಕ್ಕೆ ವಿರೋಧಿಸುವ ನಿರ್ದಿಷ್ಟ ವ್ಯಕ್ತಿಯು ಅವಿಶ್ವಾಸ ಗೊತ್ತುವಳಿಯ ಸೂಚನೆಯನ್ನು ಮಂಡಿಸುವ ಸಾಧ್ಯತೆಯು ಇದೆ ಮತ್ತು ಸದನದ ಇಚ್ಛೆಯು ಅದು ಆಗಿದ್ದರೆ ಅದು ಅವನಿಂದ ಸಂಪೂರ್ಣವಾಗಿ ದೂರವಾಗಬಹುದು. ಒಂದು ದಾರಿಯು ಮತ್ತೊಂದರಷ್ಟೇ ಚೆನ್ನಾಗಿದೆ. ಆದುದರಿಂದ ಈ ವಿಷಯವನ್ನು ರಾಷ್ಟ್ರಪತಿಗಳ ವಿವೇಚನೆಗೆ ಬಿಡುವುದು ಅಪೇಕ್ಷಣೀಯವಾದುದು. ಬ್ರಿಟಿಷ್ ಸಂವಿಧಾನದ ವಕೀಲರಲ್ಲೇ ಸಂಸತ್ತನ್ನು ವಿಸರ್ಜಿಸುವ ಕುರಿತು ಯಾವುದೇ ನಿಶ್ಚಿತ ಅಭಿಪ್ರಾಯವಿಲ್ಲ.

ರಾಷ್ಟ್ರಾಧ್ಯಕ್ಷ ಇಲ್ಲವೆ ಅರಸನು ಪ್ರಧಾನಿಯು ಸಂಸತ್ತನ್ನು ವಿಸರ್ಜಿಸಬೇಕೆಂದು ಸಲಹೆ ಮಾಡಿದರೆ ಅವನಿಗೆ ಸಂಸತ್ತು ಅವಿಧೇಯಕವಾಗಿದೆಯೆಂದು ಅನಿಸಿದರೆ ಇಲ್ಲವೆ ಸಂಸತ್ತು ಜನರ ಆಶೆಗಳನ್ನು ಪ್ರತಿನಿಧಿಸುವುದಿಲ್ಲವೆಂದು ಕಂಡು ಬಂದರೆ ಆಗ ಅವನು ಒಪ್ಪಬೇಕೆಂಬ ಒಂದು ಅಭಿಪ್ರಾಯವೂ ಇರುತ್ತದೆ.

ಇನ್ನೊಂದು ಅಭಿಪ್ರಾಯವೂ ಸಹಾ ಇದೆ. ಅದೆಂದರೆ, ಪ್ರಧಾನಮಂತ್ರಿಗಳು ಹಾಗೂ ಅವರ ಕ್ಯಾಬಿನೆಟ್ ಇವರ ಸಲಹೆಯು ಏನೇ ಇದ್ದರೂ ರಾಷ್ಟ್ರಪತಿಗಳಿಗೆ ಸಂಸತ್ತು ಜನರ ಆಶೆ ಆಕಾಂಕ್ಷೆಗಳಿಗೆ ಸ್ಪಂದಿಸುವುದಿಲ್ಲ ಹಾಗೂ ಪ್ರತಿನಿಧಿಸುವುದಿಲ್ಲವೆಂದು ರಾಷ್ಟ್ರಪತಿಗಳಿಗೆ ಅನಿಸಿದರೆ ಅವನು ಸ್ವಇಚ್ಛೆಯಿಂದ ಸಂಸತ್ತನ್ನು ವಿಸರ್ಜಿಸಬಹುದು.

ಇವೆರಡೂ ವಿಶೇಷ ಅಧಿಕಾರಗಳೆಂದು ನಾನು ಭಾವಿಸುತ್ತೇನೆ ಮತ್ತು ಅವು ದೇಶದ ಆಡಳಿತದಲ್ಲಿ ಬರುವುದಿಲ್ಲ. ಆದುದರಿಂದ ಶ್ರೀ ತಹೀರ ಅವರು ತಂದ ತಿದ್ದುಪಡಿಯಲ್ಲಿ ಸೂಚಿಸಿದಂತೆ ದೇಶವನ್ನು ಆಳುವವನು ತನ್ನ ವಿಶೇಷ ಅಧಿಕಾರ ಚಲಾಯಿಸಲು ಅಂತಹ ಉಪಬಂಧ ಕಲ್ಪಿಸುವ ಅವಶ್ಯಕತೆಯು ಇರುವುದಿಲ್ಲ. ಮಾನ್ಯರೇ ಈಗ ನಾನು ಪ್ರೊ. ಕೆ.ಟಿ. ಶಹಾ ಅವರು ತಂದ ತಿದ್ದುಪಡಿಗೆ ಬರುತ್ತೇನೆ. ಅವರ ದೀರ್ಘವಾದ ತಿದ್ದುಪಡಿಯನ್ನು ಓದುವುದು ನನಗೆ ತುಂಬಾ ಕಠಿಣವಾಯಿತು ಮತ್ತು ಉದ್ದವಾದ ಪ್ಯಾರಾಗಳ ನಿಜವಾದ ಮೂಲ ಸಾರಾಂಶವನ್ನು ಕೊಡುತ್ತೇನೆ. ನಾನು ಅವುಗಳನ್ನು ಓದಿದ್ದೇನೆ. ಶ್ರೀ ಕೆ.ಟಿ. ಶಹಾ ಅವರು ನಾಲ್ಕು ಸಂಗತಿಗಳ ಪ್ರಸ್ತಾವನೆಯನ್ನು ಮಾಡಬಯಸುತ್ತಾರೆಂದು ನನಗೆ ಕಂಡುಬರುತ್ತದೆ. ಮೊದಲನೆಯದೆಂದರೆ ಅವರಿಗೆ ಪ್ರಧಾನಮಂತ್ರಿಗಳು ಕಾನೂನಿನ ಮೂಲಕ ಬೇಡವಾಗಿದೆ. ಎರಡನೆಯದೆಂದರೆ ಪ್ರತಿಯೊಬ್ಬ ಮಂತ್ರಿಯು ಮಂತ್ರಿಯೆಂದು ನೇಮಕ ಆದನಂತರ ಅವನು ಮುಂದೆ ಬಂದು ವಿಧಾನ ಸಭೆಯ ವಿಶ್ವಾಸವನ್ನು ಪಡೆಯಬೇಕು. ಅವರ ಮೂರನೆಯ ಪ್ರಸ್ತಾವನೆಯು ಏನೆಂದರೆ ಯಾರನ್ನು ಮಂತ್ರಿಯನ್ನಾಗಿ ನೇಮಿಸುತ್ತಾರೆಯೋ ಅವನು ಆ ಕಾಲಕ್ಕೆ ಸದನದ ಚುನಾಯಿತ ಸದಸ್ಯನಾಗಿರದಿದ್ದರೆ, ಅವನು ಚುನಾವಣೆಗೆ ನಿಲ್ಲಲೇ ಬೇಕು ಮತ್ತು ಆರು ತಿಂಗಳಲ್ಲಿ ಅವನು ಚುನಾಯಿತ ಸದಸ್ಯನಾಗಿರತಕ್ಕದ್ದು. ನಾಲ್ಕನೆಯ ಪ್ರಸ್ತಾವನೆಯೇನೆಂದರೆ, ಯಾವನೊಬ್ಬನು ಲಂಚ ಸ್ವೀಕರಿಸಿದ್ದಕ್ಕೆ ಮತ್ತು ಲಂಚ ಕೊಡುವ ಮುಂತಾದವುಗಳಿಗೆ ಶಿಕ್ಷೆಯಾಗಿದ್ದು ಅಂಥವನನ್ನು ಮಂತ್ರಿಯಾಗಿ ನೇಮಿಸತಕ್ಕದ್ದಲ್ಲ.

ಮಾನ್ಯರೇ, ಈಗ ಈ ಪ್ರಸ್ತಾವನೆಗಳನ್ನು ಒಂದೊಂದಾಗಿ ತೆಗೆದುಕೊಳ್ಳುತ್ತೇನೆ. ಮೊದಲನೆಯದು ಪ್ರಧಾನಮಂತ್ರಿಗಳನ್ನು ಕುರಿತು. ಉದಾಹರಣಾರ್ಥವಾಗಿ ಪ್ರಧಾನಮಂತ್ರಿಗಳನ್ನು ತೆಗೆದುಹಾಕುವ ಕುರಿತು ಪ್ರೊ. ಕೆ.ಟಿ. ಶಹಾ ಅವರು ಯಾಕೆ ಬೇಡವೆನ್ನುತ್ತಾರೆ ನನಗೆ ತಿಳಿಯದಾಗಿದೆ. ನಾನು ಅವರನ್ನು ಸರಿಯಾಗಿ ತಿಳಿದುಕೊಂಡಿದ್ದರೆ ಪ್ರಧಾನಮಂತ್ರಿಗಳನ್ನು ರೂಢಿ ಸಂಪ್ರದಾಯದ ಪ್ರಕಾರ ಕಾರ್ಯಾಂಗದ ಒಂದು

ಭಾಗವಾಗಿ ಇಟ್ಟುಕೊಂಡಿದ್ದರೆ ಅವರ ತಕರಾರು ಇಲ್ಲ. ಪ್ರೊ. ಕೆ.ಟಿ.ಶಹಾ ಅವರ ಪ್ರಕಾರ ರೂಢಿ ಸಂಪ್ರದಾಯದ ಪ್ರಕಾರ ಪ್ರಧಾನಮಂತ್ರಿಯನ್ನು ನೇಮಿಸಲು ಅವರ ತಕರಾರು ಇರುವುದಿಲ್ಲ. ಪ್ರಧಾನ ಮಂತ್ರಿಯ ಆ ಸ್ಥಾನಕ್ಕೆ ಕಾನೂನಿನ ಮಾನ್ಯತೆಯನ್ನು ಕೊಟ್ಟರೆ ಯಾವ ತಕರಾರು ಇಲ್ಲವೆಂದು ನಾನು ಭಾವಿಸುತ್ತೇನೆ. ಇಂಗ್ಲೆಂಡಿನಲ್ಲಿಯೂ ಸಹ ಸಂಸತ್ತಿನ ಬಹು ಸಂಖ್ಯಾ ಕಾನೂನಿನ ವಿದ್ಯಾರ್ಥಿಗಳು ಪ್ರಧಾನಮಂತ್ರಿಗಳ ಕಚೇರಿಯ ರೂಢಿ ಸಂಪ್ರದಾಯವಾಗಿ ಮಾನ್ಯವಾದುದೆಂದು ತಿಳಿದಿರುತ್ತಾರೆ. ನಂತರದ ಬೆಳವಣಿಗೆಯಲ್ಲಿ ಕ್ಯಾಬಿನೆಟ್ ಮಂತ್ರಿಗಳ ಸಂಬಳವನ್ನು ವಿಧಿಬದ್ಧ ಮಾಡುವ ಕಾಲಕ್ಕೆ ಅದು ೧೯೩೭ ಎಂದು ನಾನು ಭಾವಿಸುತ್ತೇನೆ. ಇಲ್ಲವೆ ಯಾವ ಕಾಲಕ್ಕೆ ಪ್ರಧಾನಮಂತ್ರಿಗಳ ಸ್ಥಾನಕ್ಕೆ ಕಾನೂನಿನ ಮಾನ್ಯತೆಯನ್ನು ಕೊಡಲಾಯಿತು ಅಲ್ಲಿಯವರೆಗೆ ಪ್ರಧಾನ ಮಂತ್ರಿಯ ಸ್ಥಾನವು ಇರಲೇ ಇಲ್ಲ.

ನಾನು ನನ್ನ ಮಿತ್ರರಾದ ಪ್ರೊ.ಕೆ.ಟಿ. ಶಹಾ ಅವರಿಗೆ ಹೇಳಬಯಸುವುದೇನೆಂದರೆ ನಾವು ಪಾಸು ಮಾಡಬೇಕೆಂದಿರುವ ತತ್ವಗಳ ಕಾನೂನುಗಳಿಗೆ ಅವರು ತಂದ ತಿದ್ದುಪಡಿಯು ಸಂಪೂರ್ಣವಾಗಿ ಅಪಾಯಕರವಾದವು. ಅವೆಂದರೆ ಸಾಮೂಹಿಕ ಹೊಣೆಗಾರಿಕೆ. ಕ್ಯಾಬಿನೆಟ್ ಸಾಮೂಹಿಕ ಹೊಣೆಯಿಂದ ಕೆಲಸಮಾಡಬೇಕೆಂದು ಸಂಸತ್ತಿನ ಎಲ್ಲ ಸದಸ್ಯರು ಬಹಳ ಕಾತರರಾಗಿರುವುದು ಮತ್ತು ಅದು ಉತ್ತಮ ತತ್ವವೆಂದು ಎಲ್ಲರೂ ಒಪ್ಪುತ್ತಾರೆ. ಸಂಸತ್ತಿನ ಎಷ್ಟು ಜನ ಸದಸ್ಯರು ಸಾಮೂಹಿಕ ಜವಾಬ್ದಾರಿಯನ್ನು ಜಾರಿ ಮಾಡಲು ಯಾವ ವ್ಯವಸ್ಥೆಯನ್ನು ಮಾಡಿರುವರೆಂದು ಮನಗಂಡಿರುವರು ಸ್ಪಷ್ಟವಾಗಿ ಅಲ್ಲಿ ಕಾನೂನಿನ ಪರಿಹಾರ ಇರುವುದಿಲ್ಲ. ಒಬ್ಬ ಮಂತ್ರಿಯು ಕ್ಯಾಬಿನೆಟ್ಟಿನ ಇತರ ಮಂತ್ರಿಗಳೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆ ಅಭಿಪ್ರಾಯವು ಕ್ಯಾಬಿನೆಟ್ ಅಭಿಪ್ರಾಯಕ್ಕೆ ವಿರುದ್ಧವಾಗಿತ್ತು. ಆಗ ಕಾನೂನು ಕ್ವಚಿತ್ತವಾಗಿ ಅಲ್ಲಿ ಪ್ರವೇಶಿಸುತ್ತದೆ. ಅವನು ಸಾಮೂಹಿಕ ಹೊಣೆಗಾರಿಕೆ ಎಂದು ಕರೆಯಲಾಗುವುದನ್ನು ಮುರಿದುದರಿಂದ ಅವನನ್ನು ಅಭಿಯೋಜನೆಗೆ ಗುರಿಪಡಿಸಲಾಗುವುದಿಲ್ಲ. ಸ್ಪಷ್ಟವಾಗಿ, ಸಾಮೂಹಿಕ ಜವಾಬ್ದಾರಿಗೆ ಕಾನೂನಿನ ಮನ್ನಣೆಯು ಇರುವುದಿಲ್ಲ. ಯಾವ ಮನ್ನಣೆಯ ಮೂಲಕ ಈ ಸಾಮೂಹಿಕ ಜವಾಬ್ದಾರಿಯನ್ನು ಜಾರಿ ಮಾಡಬಲ್ಲದು ಎಂದರೆ ಅದು ಪ್ರಧಾನಮಂತ್ರಿಗಳ ಮುಖಾಂತರವೇ ಆಗಿದೆ. ನನ್ನ ವಿವೇಚನೆಯಲ್ಲಿ ಸಾಮೂಹಿಕ ಹೊಣೆಗಾರಿಕೆಯನ್ನು ಎರಡು ತತ್ವಗಳ ಮೇಲೆ ಜಾರಿಗೊಳಿಸಲಾಗಿದೆ. ಒಂದನೆಯ ತತ್ವವೆಂದರೆ, ಪ್ರಧಾನಮಂತ್ರಿಯ ಸಲಹೆ ಇಲ್ಲದ ಯಾರನ್ನೂ ಕ್ಯಾಬಿನೆಟ್ಟಿಗೆ ನಾಮಕರಣ ಮಾಡತಕ್ಕದ್ದಲ್ಲ. ಎರಡನೆಯದು, ಪ್ರಧಾನಮಂತ್ರಿಯು ಒಬ್ಬ ಮಂತ್ರಿಯನ್ನು ಕ್ಯಾಬಿನೆಟ್ಟಿನಿಂದ ವಜಾ ಮಾಡಬೇಕೆಂದು ಹೇಳಿದರೆ ಅವನನ್ನು ಕ್ಯಾಬಿನೆಟ್ ಸದಸ್ಯನೆಂದು ಇಟ್ಟುಕೊಳ್ಳಲು ಬರುವುದಿಲ್ಲ. ಯಾವಾಗ ಕ್ಯಾಬಿನೆಟ್ ಸದಸ್ಯರು ನೇಮಕ ಪ್ರಕರಣದಲ್ಲಿ ಅದರಂತೆ ಅವರನ್ನು ವಜಾ ಮಾಡುವ ವಿಷಯದಲ್ಲಿ ಅವರನ್ನು ಪ್ರಧಾನ ಮಂತ್ರಿಗಳ ಅಧೀನದಲ್ಲಿ ಇಡಲಾಗಿದೆ. ಇದರಿಂದ ಸಾಮೂಹಿಕ ಜವಾಬ್ದಾರಿಯೇನೆಂಬುದು ಈಗ ನಮಗೆ ಮನವರಿಕೆಯಾಗುತ್ತದೆ. ಬೇರೆ ಯಾವುದೇ ಸಾಧನೆ ಇಲ್ಲವೆ ಬೇರೆ ದಾರಿ ಆ ತತ್ವಕ್ಕೆ ಪರಿಣಾಮವನ್ನು ಕೊಡುವುದಿದೆಯೆಂದು ನನಗೆ ಅನಿಸುವುದಿಲ್ಲ.

ಪ್ರಧಾನಮಂತ್ರಿಯು ಇಲ್ಲವೆಂದು ತಿಳಿಯಿರಿ. ಆಗ ನಿಜವಾಗಿಯೂ ಏನಾಗುತ್ತದೆ? ಏನು ಆಗುತ್ತದೆಂದರೆ ಪ್ರತಿಯೊಬ್ಬ ಮಂತ್ರಿಯು ರಾಷ್ಟ್ರಪತಿಗಳ ನಿಯಂತ್ರಣ ಇಲ್ಲವೆ ಪ್ರಭಾವದಲ್ಲಿರುತ್ತಾನೆ. ಒಂದು ನಿರ್ದಿಷ್ಟ ಕ್ಯಾಬಿನೆಟ್‌ನೊಂದಿಗೆ, ಅಧ್ಯಕ್ಷನು ಪ್ರತಿಯೊಬ್ಬ ಮಂತ್ರಿಯೊಂದಿಗೆ ಪ್ರತ್ಯೇಕವಾಗಿ ಏಕಾಂಗಿಯಾಗಿ ವ್ಯವಹರಿಸಬೇಕು. ಆಗ ಅಧ್ಯಕ್ಷನು ಅವರ ಮೇಲೆ ಪರಿಣಾಮ ಬೀರುತ್ತಾನೆ, ಮತ್ತು ಅದರಿಂದ ಕ್ಯಾಬಿನೆಟ್‌ದಲ್ಲೆ ಒಡಕುಂಟಾಗುತ್ತದೆ. ನಮ್ಮ ಸಂವಿಧಾನದಲ್ಲಿ ಇಂತಹ ಸಂಗತಿಯು ಕಲ್ಪನಾತೀತವಾದದ್ದು. ಬ್ರಿಟಿಷ್ ಸಂಸತ್ತಿನಲ್ಲಿ ಸಾಮೂಹಿಕ

ಹೊಣೆಗಾರಿಕೆಯನ್ನು ಜಾರಿಗೊಳಿಸುವ ಮೊದಲು ಬ್ರಿಟಿಷ್ ಕ್ಯಾಬಿನೆಟ್‌ನಲ್ಲಿ ಇಂಗ್ಲೆಂಡ್ ಅರಸನು ಹೇಗೆ ಒಡಕುಂಟುಮಾಡುತ್ತಿದ್ದನೆಂಬುದನ್ನು ನೀವೆಲ್ಲ ನೆನಪಿನಲ್ಲಿಟ್ಟುಕೊಂಡಿರುವಿರಿ. ಅದನ್ನು ಕ್ಯಾಬಿನೆಟ್‌ನಲ್ಲಿ ಅದರಂತೆ ಸಂಸತ್ತಿನಲ್ಲಿ ಅರಸನ ಗೆಳೆಯರ ಪಕ್ಷವೆಂದು ಕರೆಯುತ್ತಿದ್ದರು. ಈ ಸಂಗತಿಯು ಸಾಮೂಹಿಕ ಹೊಣೆಗಾರಿಕೆಯನ್ನು ಮಂಡಿಸಿದ ನಂತರ ಬ್ರಿಟಿಷ್ ಸಂಸತ್ತಿನಲ್ಲಿ ನಿಂತು ಹೋಯಿತು. ನಾನು ಹೇಳಿದಂತೆ ಸಾಮೂಹಿಕ ಹೊಣೆಗಾರಿಕೆಯನ್ನು ಪ್ರಧಾನಮಂತ್ರಿಯೆಂಬ ಸಾಧನದ ಮೂಲಕವೇ ಅದನ್ನು ಸಾಧಿಸಬಹುದು, ಆದ್ದರಿಂದ ಪ್ರಧಾನಮಂತ್ರಿಯು ನಿಜವಾಗಿಯೂ ಕ್ಯಾಬಿನೆಟ್ ಎಂಬ ಕಮಾನಿಗೆ ಅಡಿಗಲ್ಲಾಗಿದ್ದಾನೆ. ನಾವು ಆ ಅಧಿಕಾರ ಸ್ಥಾನವನ್ನು ಸೃಷ್ಟಿಸುವವರೆಗೆ ಮತ್ತು ಆ ಸ್ಥಾನಕ್ಕೆ ಎಲ್ಲಿಯವರೆಗೆ ಕಾನೂನಿನ ಅಧಿಕಾರ ಮತ್ತು ಮಂತ್ರಿಗಳನ್ನು ನೇಮಿಸುವುದು ಮತ್ತು ಅವರನ್ನು ಕೈಬಿಡುವ ಅಧಿಕಾರವನ್ನು ಕೊಡುವುದಿಲ್ಲವೋ ಅಲ್ಲಿಯವರೆಗೆ ಸಾಮೂಹಿಕ ಹೊಣೆಗಾರಿಕೆಯು ಇರುವುದಿಲ್ಲ.

ಮಾನ್ಯರೆ, ಈಗ ನನ್ನ ಮಿತ್ರರಾದ ಪ್ರೊ. ಕೆ.ಟಿ. ಶಹಾ ಅವರ ಎರಡನೆಯ ಪ್ರಸ್ತಾವನೆ ಅಂದರೆ ಮಂತ್ರಿಯಾಗಿ ನೇಮಕ ಆದವನು ಸಭೆಯ ವಿಶ್ವಾಸ ಪಡೆಯತಕ್ಕದ್ದು. ಇಂತಹ ಉಪಬಂಧವನ್ನು ಮಾಡುವ ಅವಶ್ಯಕತೆಯು ಇರುವುದಿಲ್ಲವೆಂಬುದು ಪ್ರೊ.ಕೆ.ಟಿ. ಶಹಾ ಅವರಿಗೆ ಈಗ ಮನವರಿಕೆಯಾಗಿರಬಹುದು.

ಬ್ರಿಟಿಷ್ ಕ್ಯಾಬಿನೆಟ್ ಮೊದಲಿನ ಇತಿಹಾಸದಲ್ಲೇ ಅವನು ಸಂಸತ್ತಿನ ಸದಸ್ಯನು ಇದ್ದು ಒಬ್ಬ ಮಂತ್ರಿಯೆಂದು ನೇಮಕಗೊಂಡರೆ, ಅವನು ಸಂಸತ್ತಿನ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕಾಗಿತ್ತು ಮತ್ತು ಪುನಃ ಚುನಾವಣೆಗೆ ನಿಲ್ಲಬೇಕಾಗಿತ್ತು. ಯಾಕೆಂದರೆ ಒಬ್ಬ ಸದಸ್ಯನು ಒಬ್ಬ ಮಂತ್ರಿಯೆಂದು ನೇಮಕವಾದರೆ, ಅವನು ಅರಸನ ಪ್ರಭಾವದಲ್ಲಿರುವನೆಂದೂ ಮತ್ತು ಸಾರ್ವಜನಿಕ ಹಿತಕ್ಕೆ ನ್ಯಾಯಯುತವಾಗಿ ಕಾರ್ಯಮಾಡುವುದಿಲ್ಲವೆಂದು ತಿಳಿಯಲಾಗುತ್ತಿತ್ತು.

ಬ್ರಿಟಿಷರು ಸ್ವತಃ ಈಗ ಈ ಪದ್ಧತಿಯನ್ನು ಒಂದು ಕಾನೂನಿನ ಮೂಲಕ ಕಿತ್ತುಹಾಕಿದ್ದಾರೆ. ಯಾವುದೋ ಒಬ್ಬ ವ್ಯಕ್ತಿ ಅಥವಾ ಸಂಸತ್ತಿನ ಸದಸ್ಯರು ಈಗ ಮಂತ್ರಿಯಾಗಿ ನಿಯಮಿಸಲ್ಪಟ್ಟರೆ ಅವನು ಪುನಃ ಚುನಾವಣೆಗೆ ನಿಲ್ಲಬೇಕಾಗುತ್ತದೆ. ಆದ್ದರಿಂದ ಈ ಉಪಬಂಧವು ಈಗ ಅನವಶ್ಯಕವಾಗಿರುತ್ತದೆ. ನಾನು ಈ ಬಗ್ಗೆ ಸ್ವಲ್ಪ ವೇಳೆಯ ಹಿಂದೆ ವಿವರಿಸಿದೆ. ಪ್ರಧಾನಮಂತ್ರಿ ಯೋಗ್ಯನಲ್ಲದ ಒಬ್ಬ ವ್ಯಕ್ತಿಯನ್ನು ಆ ಸ್ಥಾನಕ್ಕೆ ಮಂತ್ರಿಯೆಂದು ನೇಮಿಸಿದರೆ ಆಗ ಸಂಸತ್ತು ಅವನ ಬಗ್ಗೆ ಅವಿಶ್ವಾಸ ನಿರ್ಣಯ ಮಂಡಿಸುವುದು ಸಂಪೂರ್ಣವಾಗಿ ಸಾಧ್ಯವಾಗುವುದು. ಆ ವ್ಯಕ್ತಿಯ ನಿರ್ದಿಷ್ಟ ಪದವಿಗಾಗಲೀ ಇಲ್ಲವೇ ಸಂಪೂರ್ಣ ಮಂತ್ರಿಮಂಡಲದ ಬಗ್ಗೆಯೆ ಆಗಲಿ ಅವಿಶ್ವಾಸ ಮಂಡಿಸಿ ಪ್ರಧಾನಮಂತ್ರಿಯಿಂದ ಮುಕ್ತರಾಗುತ್ತಾರೆ. ಇಲ್ಲವೆ ಆ ಮಂತ್ರಿಯನ್ನು ಪ್ರಧಾನಮಂತ್ರಿಯು ಕ್ಯಾಬಿನೆಟ್‌ದಿಂದ ಕೈಬಿಡದಿದ್ದರೆ ಆಗ ಸಂಸದರು ಅವನನ್ನು ತಿರುಗಿ ಕರೆಸಿಕೊಳ್ಳುತ್ತಾರೆ. ಆದ್ದರಿಂದ ನನ್ನ ಹೇಳಿಕೆಯೇನೆಂದರೆ ಪ್ರೊ. ಕೆ.ಟಿ. ಶಹಾರವರ ಎರಡನೆಯ ಪ್ರಸ್ತಾವನೆಯೂ ಸಹ ಅನವಶ್ಯಕವಾಗಿರುತ್ತದೆ.

ಅವರ ಮೂರನೆಯ ಪ್ರಸ್ತಾವನೆಯನ್ನು ಕುರಿತು ಎಂದರೆ ಸಂಸದನಲ್ಲದ ಒಬ್ಬ ವ್ಯಕ್ತಿಯನ್ನು ಮಂತ್ರಿಯಾಗಿ ನೇಮಿಸಿದರೆ ಅವನು ೬(ಆರು) ತಿಂಗಳ ಒಳಗೆ ಸಂಸತ್ತಿನ ಸದಸ್ಯನಾಗಬೇಕು. ನಾನು ಈ ವಿಷಯವಾಗಿ ತೋರಿಸಬಯಸುವುದೇನೆಂದರೆ ವಿಧಿ ೬೨(೫) ಇದರಲ್ಲಿ ಈ ಬಗ್ಗೆ ಉಪಬಂಧವನ್ನು ಕಲ್ಪಿಸಲಾಗಿದೆ. ಆದ್ದರಿಂದ ಈ ತಿದ್ದುಪಡಿಯು ಅನವಶ್ಯಕವಾಗಿರುತ್ತದೆ.

ಅವರ ಕೊನೆಯ ಪ್ರಸ್ತಾವನೆಯು ಏನೆಂದರೆ ಶಿಕ್ಷೆಯಾದ ಯಾವನೊಬ್ಬ ವ್ಯಕ್ತಿಯನ್ನು ರಾಜ್ಯದ ಮಂತ್ರಿಯಾಗಿ ನೇಮಿಸಕೂಡದು. ಒಳ್ಳೆಯದು ಅವರ ಉದ್ದೇಶವನ್ನು ಕುರಿತು ಹೇಳುವುದಾದರೆ ಈ

ಪ್ರಸ್ತಾವನೆಯ ಕುರಿತು ಈ ಸಂಸತ್ತಿನ ಯಾವುದೇ ಸದಸ್ಯನು ಭಿನ್ನಾಭಿಪ್ರಾಯ ಪಡುತ್ತಾನೆಂದು ನನಗೆ ಅನ್ನಿಸುವುದಿಲ್ಲ. ಆದರೆ ಪ್ರಶ್ನೆ ಹೀಗಿದೆ – ನಾವು ಇವೆಲ್ಲ ಅರ್ಹತೆಗಳನ್ನು ಮತ್ತು ಅನರ್ಹತೆಗಳನ್ನು ನಮ್ಮ ಸಂವಿಧಾನದಲ್ಲಿ ಮಂಡಿಸತಕ್ಕದ್ದೇ? ನಾವು ಪ್ರಧಾನಮಂತ್ರಿಗಳನ್ನು ನಂಬಿ ಅವರ ವಿವೇಚನೆಗೆ ಬಿಡುವುದು ಅಪೇಕ್ಷಣೀಯ ಆಗುವುದೆಂದು ಅನಿಸುತ್ತದೆ. ಸಂಸದರು ಮತ್ತು ಯಾವತ್ತೂ ಸಾರ್ವಜನಿಕರು ಮಂತ್ರಿಗಳ ಕಾರ್ಯಗಳನ್ನು ವೀಕ್ಷಿಸುತ್ತಾರೆ. ಸಂಸದರ ಕಾರ್ಯಗಳು ಅಪಕೀರ್ತಿಗೆ ಗುರಿಯಾಗದಂತೆ ನೋಡಿಕೊಳ್ಳಬೇಕು. ಈ ವಿಷಯವನ್ನು ಪ್ರಧಾನಮಂತ್ರಿಯವರ ವಿವೇಚನೆಗೆ ಬಿಡಬಹುದು. ಆದ್ದರಿಂದ ಈ ತಿದ್ದುಪಡಿಗಳು ಅನವಶ್ಯಕವೆಂದು ನಾನು ಭಾವಿಸುತ್ತೇನೆ.

**ಶ್ರೀ ಎಚ್.ವಿ. ಕಾಮತ್ :** ಐದನೆಯ ವಾರದ ಲಿಸ್ಟ್ IVರ ತಿದ್ದುಪಡಿ ನಂ. ೪೭ ಇದನ್ನು ಡಾ. ಅಂಬೇಡ್ಕರ್ ಅವರು ಮರೆತಿದ್ದಾರೆಂದು ಅನಿಸುತ್ತದೆ.

**ಸನ್ಮಾನ್ಯರಾದ ಉಪಸಭಾಪತಿ :** ಅವರು ಪ್ರತಿಯೊಂದಕ್ಕೆ ಉತ್ತರಿಸುವ ಅವಶ್ಯಕತೆ ಇರುವುದಿಲ್ಲ. ಶ್ರೀ ತೇಜಮಲ್ ಹುಸೇನರಿಗೆ ಕೊಟ್ಟ ಉತ್ತರವೇ ಈ ತಿದ್ದುಪಡಿಗೆ ಉತ್ತರವಾಗಿದೆ.

**ಸನ್ಮಾನ್ಯರಾದ ಡಾ. ಬಿ.ಆರ್. ಅಂಬೇಡ್ಕರ್ :** ಅದಕ್ಕೆ ಯಾವ ಉತ್ತರವೂ ಬೇಕಾಗಿಲ್ಲ. ಪ್ರಧಾನಮಂತ್ರಿಗಳಿಗೆ ಎಲ್ಲವನ್ನೂ ಬಿಟ್ಟುಬಿಡತಕ್ಕದ್ದು.

**ಸನ್ಮಾನ್ಯ ಉಪಸಭಾಪತಿ :** ನಾನು ಮೊದಲನೆಯ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

(ಎಲ್ಲಾ ೫ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು. ವಿಧಿ ೬೧ ಇದನ್ನು ಸ್ವೀಕರಿಸಲಾಯಿತು ಮತ್ತು ಸಂವಿಧಾನದಲ್ಲಿ ಸೇರಿಸಲಾಯಿತು)

## ವಿಧಿ ೬೨

**ಸನ್ಮಾನ್ಯ ಉಪಸಭಾಪತಿ :** (ಡಾ. ಎಸ್.ಸಿ. ಮುಖರ್ಜಿ) : ನಾವು ಈಗ ವಿಧಿ ೬೨ರ ಚರ್ಚೆಯನ್ನು ಪುನಃ ಪ್ರಾರಂಭಿಸೋಣ.

(ತಿದ್ದುಪಡಿಗಳ ನಂ.೧೩೧೦ ಮತ್ತು ೧೩೧೧ ಇವುಗಳನ್ನು ಮಂಡಿಸಲಿಲ್ಲ.)

ನಂ. ೧೩೧೨ ಮತ್ತು ೧೩೨೯ ಇವು ಸಮರೂಪದ ಅರ್ಥ ಕೊಡುತ್ತವೆ. ನಂ ೧೩೨೯ವನ್ನು ಮಂಡಿಸಬಹುದು.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** (ಬಾಂಬೆ: ಜನರಲ್) : ಮಾನ್ಯರೇ ನಾನು ಮಂಡಿಸುತ್ತೇನೆ. "ವಿಧಿ ೬೨ ಖಂಡ ೫ರ ನಂತರ ಈ ಕೆಳಗಣ ಹೊಸ ಖಂಡವನ್ನು ಸೇರಿಸತಕ್ಕದ್ದು. ಖಂಡ ೫ (ಅ) ರಾಷ್ಟ್ರಾಧ್ಯಕ್ಷನು ತನ್ನ ಮಂತ್ರಿಗಳ ಆಯ್ಕೆಯಲ್ಲಿ ಮತ್ತು ಸಂವಿಧಾನದಲ್ಲಿ ಚಲಾಯಿಸುವ ಕರ್ತವ್ಯಗಳಲ್ಲಿ ರಾಷ್ಟ್ರಾಧ್ಯಕ್ಷನು ಸಾಮಾನ್ಯವಾಗಿ ಪರಿಶಿಷ್ಟ ೩(ಅ) ದಲ್ಲಿ ಕಾಣಿಸಿದಂತಹ ಸೂಚನೆಗಳಿಂದ ಮಾರ್ಗದರ್ಶಿತನಾಗಿರಬೇಕು. ಆದರೆ ಈ ರೀತಿ ಅಧ್ಯಕ್ಷರು ಮಾಡಿದ್ದನ್ನು ಅಂತಹ ಸೂಚನೆಗಳನ್ನು ಹೊರತುಪಡಿಸಿ ಮಾಡಿದ್ದಾನೆಂಬ ಕಾರಣದಿಂದ ಅದನ್ನು ಪ್ರಶ್ನಿಸಲು ಬರಬಾರದು."

*****

**ಶ್ರೀ ಮಹಾವೀರ ತ್ಯಾಗಿ :** ನಂತರ ಪ್ರೊ. ಶಹಾ ಅವರ ಒಂದು ತಿದ್ದುಪಡಿಯು ಇದ್ದು ಅದರಲ್ಲಿ ಅವರು ಹೀಗೆ ಹೇಳುತ್ತಾರೆ. ಅದೇನೆಂದರೆ ಮಂತ್ರಿಗಳು ಮುಂದಿನ ಹತ್ತು ವರ್ಷಗಳಲ್ಲಿ ಇಂಗ್ಲೀಷನ್ನು

ತಿಳಿದುಕೊಳ್ಳಬೇಕು ಮತ್ತು ಆಮೇಲೆ ೧೦ ವರ್ಷಗಳಲ್ಲಿ ಹಿಂದಿ ಭಾಷೆಯನ್ನು ತಿಳಿದುಕೊಳ್ಳಬೇಕು. ನಾನು ಇದುವರೆಗೆ ಅಕ್ಷರಜ್ಞಾನ ಸಂಬಂಧಿಸಿದಂತೆ ಅರಾಜಕತೆಯಲ್ಲಿದ್ದೆನು. ನನಗೆ ಇಂದಿನ ದಿನಗಳ ಶಿಕ್ಷಣದಲ್ಲಿ ನಂಬುಗೆ ಇಲ್ಲ. ನಾನು ಸಾಕ್ಷರತೆಯ ಕಲ್ಪನೆಯ ಬಗೆಗೂ ವಿರುದ್ಧವಾಗಿದ್ದೇನೆ. ಅದಕ್ಕೆ ತನ್ನದೇ ಆದ ಬೆಲೆಯು ಇದ್ದಾಗ್ಯೂ ಸಹ ನಾನು ಅದಕ್ಕೆ ವಿರುದ್ಧವಾಗಿದ್ದೇನೆ. ನಾನು ವಾಸ್ತವಿಕವಾಗಿ ಓದುವುದನ್ನು ಹಾಗೂ ಬರೆಯುವುದನ್ನು ತಿರಸ್ಕರಿಸುತ್ತಿದ್ದೆನು ಮತ್ತು ಆ ಕಾರಣದಿಂದ ಅರೆ ಸಾಕ್ಷರತೆಯುಳ್ಳವನಾಗಿದ್ದೇನೆ. ಭಾರತದಲ್ಲಿ ಬಹುತೇಕ ಜನರು ಅಶಿಕ್ಷಿತರು ಇರುತ್ತಾರೆ, ದೇಶದ ಆಡಳಿತದಲ್ಲಿ ಅವರ ಪಾಲನ್ನು ಯಾಕೆ ನಿರಾಕರಿಸಬೇಕು. ಸಾಕ್ಷರತೆಯು ಮನುಷ್ಯನ ಹೆಚ್ಚಿನ ಸಾಧನೆಯೆಂದು ಯಾಕೆ ತಿಳಿಯುತ್ತಾರೆ ಅನ್ನುವುದು ನನಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಸರಕಾರದ ಆಡಳಿತವನ್ನು ಕೇವಲ ಅವರ ಕೈಯಲ್ಲಿ ಕೊಡುವುದು ಯಾಕೆ? ಮತ್ತು ಕಲೆ, ಉದ್ದಿಮೆ, ತಂತ್ರಜ್ಞಾನ, ದೈಹಿಕ ಹಾಗೂ ಸುಂದರವಾದವರನ್ನು ಅದಕ್ಕಿಂತ ಉತ್ತಮ ವಿಶೇಷತೆಯೆಂದು ಯಾಕೆ ಆಯ್ಕೆ ಮಾಡಬಾರದು. ರಣಜಿತ ಸಿಂಗನು ಅಕ್ಷರಜ್ಞಾನವಿದ್ದವನಾಗಿರಲಿಲ್ಲ, ಶಿವಾಜಿಗೆ ಅಕ್ಷರಜ್ಞಾನವಿರಲಿಲ್ಲ. ಅಕಬರನಿಗೂ ಅಷ್ಟು ಅಕ್ಷರಜ್ಞಾನ ಇರಲಿಲ್ಲ. ಆದರೆ ಅವರೆಲ್ಲರೂ ತಮ್ಮ ರಾಜ್ಯದ ಆಡಳಿತವನ್ನು ಒಳ್ಳೇ ರೀತಿಯಿಂದ ನಡೆಸುತ್ತಿದ್ದರು. ನಾನು ವಿನಯದಿಂದ ಹೇಳುವುದೇನೆಂದರೆ, ಮಾನ್ಯರೇ ನಾವು ಸಾಕ್ಷರತೆಗೆ ಬಹಳ ಮಹತ್ವ ಕೊಡಬಾರದು. ನಾನು ಡಾ. ಅಂಬೇಡ್ಕರವರನ್ನು ಕೇಳುತ್ತೇನೆ. ಅವರು ಯಾವಾಗಲಾದರೂ ತಾವೇ ಬರೆದಿದ್ದಾರೆಯೇ? ಬಹುತರವಾಗಿ ತಮಗಾಗಿ ಬರೆಯುವವರನ್ನು ಹಾಗೂ ಓದುವವರನ್ನು ಇಟ್ಟುಕೊಂಡಿರುತ್ತಾರೆ. ಅವರಿಗೆ ಏನಾದರೂ ಬರೆಯಬೇಕೆನಿಸಿದರೆ ಬೆರಳಚ್ಚುಗಾರರನ್ನು ಉಪಯೋಗಿಸುತ್ತಾರೆ. ಅವರಿಗೆ ಓದುವುದಾಗಲಿ ಇಲ್ಲವೆ ಬರೆಯುವುದಾಗಲಿ ಅವಶ್ಯವಿರುವುದಿಲ್ಲ. ಅವರಿಗೆ ಅವಶ್ಯವಿರುವುದೆಂದರೆ ಕಾರ್ಯತತ್ಪರರಾಗುವುದು, ಪ್ರಾಮಾಣಿಕರಾಗಿರುವುದು, ವ್ಯಕ್ತಿತ್ವವನ್ನು ಬೆಳೆಯಿಸುವುದು, ಅಂತಃಸತ್ವವನ್ನು ಬೆಳೆಯಿಸುವುದು, ಈ ಎಲ್ಲಾ ಅರ್ಹತೆಗಳು ಮಂತ್ರಿಗಳಾಗಬೇಕೆನ್ನುವವರಿಗೆ ಇರಬೇಕು. ಸಾಕ್ಷರತೆಗೆ ಮಹತ್ವ ಇರುವುದಿಲ್ಲ.

**ಶ್ರೀ ಎಚ್.ವಿ. ಕಾಮತ್ :** ನನ್ನ ಸಂಶಯಾತೀತ ಮಿತ್ರರು ಭಾರತಮಾತೆಯನ್ನು ಈಗಿನಂತೆ ಅಶಿಕ್ಷಿತ ಸ್ವರೂಪದಲ್ಲಿ ಹಾಗೆಯೇ ಇಡಲು ಬಯಸುತ್ತಾರೋ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಿಮಗೆ ಸಾಕ್ಷರತೆಯ ಬಗ್ಗೆ/ವಿರುದ್ಧ ಏನಾದರೂ ತಿಳಿವಳಿಕೆಯ ತಕರಾರುಗಳಿರುತ್ತವೆಯಾ?

**ಶ್ರೀ ಮಹಾವೀರ ತ್ಯಾಗಿ :** ಮಾನ್ಯರೇ ಇರುವುದಿಲ್ಲ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಮಂಡಿಸಿದ ತಿದ್ದುಪಡಿಗಳಲ್ಲಿ, ನಾನು ತಿದ್ದುಪಡಿ ನಂ. ೧೩೨೨ ಮತ್ತು ೧೩೨೬ ಇವುಗಳನ್ನು ಐದನೆಯ ಪಟ್ಟಿಯ ೭೧ನೆಯ ತಿದ್ದುಪಡಿಯೆಂದು ಸ್ವೀಕರಿಸಲು ಸಿದ್ಧನಿರುತ್ತೇನೆ. ಉಳಿದ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ನಾನು ಚಿಕ್ಕ ವಿಮರ್ಶೆ ಮಾಡಲು ಬಯಸುತ್ತೇನೆ.

ಈ ತಿದ್ದುಪಡಿಗಳು ಮೂರು ಮುಖ್ಯ ಪ್ರಶ್ನೆಗಳನ್ನು ಎತ್ತುತ್ತವೆ. ಮೊದಲನೆಯ ವಿಷಯ ಮಂತ್ರಿಗಳಿಗೆ ಸಂಬಂಧಿಸಿದ್ದು ಇರುತ್ತದೆ. ಎರಡನೆಯ ಪ್ರಶ್ನೆ ಮಂತ್ರಿಗಳ ಅರ್ಹತೆಗೆ ಸಂಬಂಧಿಸಿದ್ದು ಮತ್ತು ೩ನೆಯದ್ದು ಸಂಪುಟ ಸದಸ್ಯತ್ವ ಕುರಿತ ಕರಾರು ಇರುತ್ತದೆ. ನಾನು ಮೊದಲನೆಯ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಅದೇನೆಂದರೆ ಮಂತ್ರಿಗಳ ಅವಧಿಯನ್ನು ಕುರಿತು ಎರಡು ತಿದ್ದುಪಡಿಗಳಿರುತ್ತವೆ, ಒಂದು ಶ್ರೀ ಪೋಕರ ಅವರಿಂದ ಮತ್ತು ಮತ್ತೊಂದು ಶ್ರೀ ಕರೀಮುದ್ದೀನ್ ಇವರಿಂದ. ಶ್ರೀ ಪೋಕರ ಅವರ ತಿದ್ದುಪಡಿಯ

ಪ್ರಕಾರ ಮಂತ್ರಿಗಳು ಸಂಸತ್ತಿನ ವಿಶ್ವಾಸವನ್ನು ಎಲ್ಲಿಯವರೆಗೆ ಇಟ್ಟುಕೊಳ್ಳುತ್ತಾರೆಯೋ ಅಲ್ಲಿಯವರೆಗೆ ಉಳಿದ ವಿಷಯ ಏನೇ ಇದ್ದರೂ ತಮ್ಮ ಹುದ್ದೆಯಲ್ಲಿ ಮುಂದುವರೆಯುತ್ತಾರೆ. ಆ ಮಂತ್ರಿಯು ಲಂಚಬಡುಕನಿರಬಹುದು, ಕೆಟ್ಟವನಾಗಿರಬಹುದು ಮತ್ತು ಅವನು ತುಂಬಾ ಅಯೋಗ್ಯನಿರಬಹುದು. ಆದರೆ ಸಂಸತ್ತನ್ನು ವಿಶ್ವಾಸದಲ್ಲಿಟ್ಟುಕೊಂಡಿದ್ದರೆ ಅವನನ್ನು ಹುದ್ದೆಯಿಂದ ತೆಗೆಯಲು ಯಾರಿಗೂ ಹಕ್ಕು ಇರುವುದಿಲ್ಲ. ಶ್ರೀ ಕರೀಮುದ್ದೀನರ ಪ್ರಕಾರ ವಸ್ತುಸ್ಥಿತಿ ಅವರು ತಿಳಿದಂತೆ ನಾನು ಅವರನ್ನು ಸರಿಯಾಗಿ ತಿಳಿದುಕೊಂಡಿದ್ದರೆ ಅವರು ಮಂತ್ರಿಗಳನ್ನು ಕೆಲವು ವಿಶೇಷ ಅಪರಾಧಗಳೆಂದರೆ, ಲಂಚಕೋರ, ಭ್ರಷ್ಟ, ದೇಶದ್ರೋಹ ಈ ಅಪರಾಧಗಳಿದ್ದರೆ ಅಂತಹ ಅಪರಾಧದ ಆಧಾರದ ಮೇಲೆ ಸಂಸತ್ತಿನಲ್ಲೆ ಖಂಡಿಸಿ ಅವರನ್ನು ಆ ಹುದ್ದೆಯಿಂದ ತೆಗೆಯಬಹುದು. ಅವನು ಸಂಸತ್ತಿನಲ್ಲೆ ವಿಶ್ವಾಸವನ್ನು ಹೊಂದಿರಬಹುದು ಇಲ್ಲವೆ ಹೊಂದಿರಲಿಕ್ಕಿಲ್ಲ. ಒಂದು ವೇಳೆ ಮಂತ್ರಿಗಳು ಸಂಸತ್ತಿನ ವಿಶ್ವಾಸ ಕಳೆದುಕೊಂಡಿದ್ದರೂ ಈ ಮೇಲಿನ ವಿಶೇಷ ಕಾರಣಗಳಿಂದ ಸಂಸತ್ತು ಅವರನ್ನು ಖಂಡಿಸದಿದ್ದರೆ, ತೆಗೆಯದಿದ್ದರೆ, ಪ್ರಧಾನಮಂತ್ರಿಯವರಾಗಲಿ ಇಲ್ಲವೆ ರಾಷ್ಟ್ರಪತಿಗಳಾಗಲಿ ಅವರನ್ನು ಆ ಹುದ್ದೆಯಿಂದ ತೆಗೆಯಲು ಬರುವುದಿಲ್ಲ. ಯಾಕೆಂದರೆ ಈ ಎರಡೂ ತಿದ್ದುಪಡಿಗಳು ಒಂದಕ್ಕೊಂದು ತದ್ವಿರುದ್ಧ ಇರದಿದ್ದರೆ ಒಂದೇ ರೀತಿಯಾಗಿರುವುದಿಲ್ಲ. ಇದನ್ನು ಸಂಸತ್ತು ನೋಡಬಹುದು. ನನ್ನ ವಿನಂತಿ ಏನೆಂದರೆ ವಿಧಿ ೬೨ ಉಪಖಂಡ ೨ ಇದರಲ್ಲಿ ಹೇಳಿದಂತೆ, ಇದು ಉತ್ತಮ ಉಪಬಂಧ ಮತ್ತು ಇದು ಎರಡು ಅಂಶಗಳನ್ನು ಒಳಗೊಂಡಿರುತ್ತದೆ. ವಿಧಿ ೬೨(೨) ಮಂತ್ರಿಗಳು ರಾಷ್ಟ್ರಪತಿಗಳು ಸಂತುಷ್ಟರಾಗಿರುವವರೆಗೆ ಈ ಹುದ್ದೆಯಲ್ಲಿರುತ್ತಾರೆ. ಅದೆಂದರೆ ಮಂತ್ರಿಗಳನ್ನು ಎರಡು ಕಾರಣಗಳಿಂದ ತೆಗೆಯಬಹುದು. ಒಂದು ಕಾರಣವೆಂದರೆ ವಿಧಿ ೬೨ ಉಪಖಂಡ ೨ ಪ್ರಕಾರ ತೆಗೆದುಹಾಕುವುದೆಂದರೆ ಅವನು ಸಂಸತ್ತಿನ ವಿಶ್ವಾಸವನ್ನು ಕಳೆದುಕೊಂಡಿದ್ದಾನೆ. ಎರಡನೆಯದಾಗಿ ಅವನ ಆಡಳಿತವು ಸ್ವಚ್ಛವಾಗಿರುವುದಿಲ್ಲ. ಇಲ್ಲಿ ಉಪಯೋಗಿಸಿದ ಪದ ಸಂತುಷ್ಟ. ಆದ್ದರಿಂದ ವಿಧಿ ೬೨ರ ಪ್ರಕಾರ ರಾಷ್ಟ್ರಪತಿಗಳು, ಮಂತ್ರಿಗಳು ಭ್ರಷ್ಟರಾಗಿದ್ದರೆ ಮತ್ತು ಲಂಚ ಸ್ವೀಕರಿಸಿದ್ದರೆ ಮತ್ತು ಕೆಟ್ಟ ಆಡಳಿತ ನಡೆಯಿಸುವ ಕಾರಣದಿಂದ ಸಂಸತ್ತಿನ ವಿಶ್ವಾಸ ಇಟ್ಟುಕೊಂಡಿದ್ದರೂ ಈ ವಿಶೇಷ ಕಾರಣದಿಂದ ರಾಷ್ಟ್ರಪತಿಗಳು ಮಂತ್ರಿಗಳನ್ನು ತೆಗೆದುಹಾಕುವುದಕ್ಕೆ ಆಸ್ಪದ ಇದೆ. ಆದ್ದರಿಂದ ಸಂಸತ್ತು ಸದಸ್ಯರಿಗೆ ಈಗ ಮನವರಿಕೆಯಾಗಿರಬಹುದೆಂದು ಭಾವಿಸುತ್ತೇನೆ. ಅಂದರೆ ಮಂತ್ರಿಗಳ ಅವಧಿಯು ಕೇವಲ ಒಂದು ಕರಾರಿಗೆ ಮಾತ್ರ ಒಳಪಟ್ಟಿರುವುದಲ್ಲ. ಎರಡು ಕರಾರುಗಳಿಗೆ ಒಳಪಡುತ್ತವೆ. ಎರಡು ಕರಾರುಗಳು ಏನೆಂದರೆ, ಪಾರದರ್ಶಕ ಆಡಳಿತ ಮತ್ತು ಸಂಸತ್ತಿನ ವಿಶ್ವಾಸ. ಈ ವಿಧಿಯು ಎರಡಕ್ಕೂ ಅವಕಾಶ ಒದಗಿಸುತ್ತದೆ. ಆದ ಕಾರಣ ನನ್ನ ಗೌರವಾನ್ವಿತ ಮಿತ್ರರಾದ ಪೋಕರ ಮತ್ತು ಕರೀಮುದ್ದೀನ ಅವರು ಮಂಡಿಸಿದ ತಿದ್ದುಪಡಿಗಳು ಅನಾವಶ್ಯಕ. ಎರಡನೆಯ ಅಂಶ ಕುರಿತು, ಎಂದರೆ ಮಂತ್ರಿಗಳ ಅರ್ಹತೆಗೆ ಸಂಬಂಧಿಸಿದಂತೆ ನಮ್ಮಲ್ಲಿ ಮೂರು ತಿದ್ದುಪಡಿಗಳಿರುತ್ತವೆ. ಮೊದಲನೆಯ ತಿದ್ದುಪಡಿಯು ಶ್ರೀ ಮಹಮ್ಮದ ತಾಹೀರ ಅವರಿಂದ. ಅವರ ಸೂಚನೆಯೇನೆಂದರೆ ಯಾವುದೇ ಒಬ್ಬ ವ್ಯಕ್ತಿಯನ್ನು ಮಂತ್ರಿಯನ್ನಾಗಿ ನೇಮಕ ಮಾಡುವಾಗ ಆ ವ್ಯಕ್ತಿಯು ಆ ವೇಳೆಯಲ್ಲಿ ಸಂಸತ್ತಿನಲ್ಲಿ ಆಯ್ಕೆಯಾದ ಸದಸ್ಯನಾಗದ ಹೊರತು ಮಂತ್ರಿ ಎಂದು ನೇಮಕಮಾಡಬಾರದು.

ಅವರ ಉಪಬಂಧದಲ್ಲಿ ಹೇಳಿದಂತೆ ಪ್ರಕರಣಗಳ ಸಾಧ್ಯತೆಯನ್ನು ಒಪ್ಪಿಕೊಳ್ಳುವುದಿಲ್ಲ. ಅಂದರೆ ಯಾವುದೇ ವ್ಯಕ್ತಿ ಮಂತ್ರಿ ಎಂದು ನೇಮಕವಾದಾಗ ಸಂಸತ್ತಿನ ಸದಸ್ಯನಿರುವುದಿಲ್ಲ. ಆದರೆ ಅವನನ್ನು ನೇಮಕಮಾಡಿದ ಆರು ತಿಂಗಳ ಒಳಗಾಗಿ ಸಂಸತ್ತಿಗೆ ಆರಿಸಿ ಬರಬೇಕೆಂಬ ಕರಾರಿಗೆ ಒಳಪಟ್ಟು ಮಂತ್ರಿಯನ್ನಾಗಿ

ಮಾಡುವುದು. ಪ್ರೊ.ಕೆ.ಟಿ. ಶಹಾ ಅವರ ಪ್ರಕಾರ ಎರಡನೆಯ ಅರ್ಹತೆಯು ಅವರು ಹೇಳಿದ್ದೇನೆಂದರೆ ಮಂತ್ರಿಯು ಬಹುಮತ ಪಕ್ಷಕ್ಕೆ ಸೇರಿದವನಾಗಿರಬೇಕು ಮತ್ತು ಮೂರನೆಯ ಅರ್ಹತೆಯು ಅಂದರೆ ಅವನಿಗೆ ಕೆಲವು ಶೈಕ್ಷಣಿಕ ಅರ್ಹತೆಯು ಇರಬೇಕು. ಈಗ ಮೊದಲನೆಯ ಅಂಶ ಕುರಿತು ಅಂದರೆ ಯಾವ ವ್ಯಕ್ತಿಯು ಆತನನ್ನು ಮಂತ್ರಿಯೆಂದು ನೇಮಿಸುವ ಕಾಲಕ್ಕೆ ಆತನು ಸಂಸತ್ತಿಗೆ ಆಯ್ಕೆಯಾದ ಸದಸ್ಯನಿರದಿದ್ದರೆ ಆತನನ್ನು ಮಂತ್ರಿಯನ್ನಾಗಿ ನೇಮಕ ಮಾಡಲು ಬರುವುದಿಲ್ಲ. ಕೆಲವು ಮಹತ್ವದ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳದೆ ಅವುಗಳನ್ನು ಮರೆತಂತೆ ಕಾಣುತ್ತದೆ. ಮೊದಲನೆಯದು, ಇದು ಒಬ್ಬ ಮನುಷ್ಯನು ಉಳಿದೆಲ್ಲ ದೃಷ್ಟಿಯಿಂದ ಅರ್ಹ ಕಾರ್ಯಕ್ಷಮತೆಯುಳ್ಳವನು, ಮಂತ್ರಿಪದವಿಯನ್ನು ಪಡೆಯಲು ಯೋಗ್ಯನಾದವನು, ಒಂದು ಮತಕ್ಷೇತ್ರದಿಂದ ಕೆಲವು ಕಾರಣಗಳಿಗಾಗಿ, ಅವು ನಿಜವಾಗಿಯೂ ಒಳ್ಳೆಯ ಕಾರಣಗಳಾಗಿರಬಹುದು. ಆದರೆ ಆ ನಿರ್ದಿಷ್ಟ ಮತ ಕ್ಷೇತ್ರವನ್ನು ಕೆರಳಿಸಿರಬೇಕು ಮತ್ತು ಆ ನಿರ್ದಿಷ್ಟ ಮತಕ್ಷೇತ್ರದ ಜನರ ಅಸಂತೋಷಕ್ಕೆ ಅವನು ಕಾರಣನಾಗಿರಬಹುದು. ಇಂತಹ ಒಂದು ಪ್ರಕರಣವನ್ನು ಭಾವಿಸಿರಿ. ಇಷ್ಟೊಂದು ಅರ್ಹತೆಯುಳ್ಳ ಮನುಷ್ಯನು ಕ್ಯಾಬಿನೆಟ್ ಮಂತ್ರಿಯೆಂದು ನೇಮಿಸಲು ಪರವಾನಗಿ ಕೊಡಬಾರದೇ. ಹಾಗೆ ಅಧಿಕಾರ ವಹಿಸಿಕೊಂಡ ಅದೇ ಮತಕ್ಷೇತ್ರದಿಂದ ಇಲ್ಲವೆ ಮತ್ತೊಂದು ಮತಕ್ಷೇತ್ರದಿಂದ ಆರಿಸಿಬರಲು ಸಾಧ್ಯವಾಗುತ್ತದೆ. ಒಟ್ಟಾರೆ ವಿಶೇಷ ಅಧಿಕಾರಕ್ಕೆ ಪರವಾನಗಿ ಕೊಟ್ಟದ್ದೇನೆಂದರೆ ಆರು ತಿಂಗಳವರೆಗೆ ಮುಂದುವರೆಯಿಸಿದ ವಿಶೇಷ ಅಧಿಕಾರವಾಗಿರುತ್ತದೆ. ಇದು ಯಾವನೊಬ್ಬ ವ್ಯಕ್ತಿಗೆ ಆತನು ಚುನಾಯಿತನಾಗದೆ ಸಂಸತ್ತಿನಲ್ಲಿ ಕೂಡ್ರುವ ಅಧಿಕಾರವನ್ನು ದಯಪಾಲಿಸುವುದಿಲ್ಲ. ನನ್ನ ಎರಡನೆಯ ವಿನಂತಿ ಏನೆಂದರೆ ಒಬ್ಬ ನಾಮಕರಣ ಮಾಡಿದ ಮಂತ್ರಿಯು ಕ್ಯಾಬಿನೆಟ್ ಸದಸ್ಯನು. ಅವನು ಸಾಮೂಹಿಕ ಹೊಣೆಗಾರಿಕೆಯ ತತ್ವವನ್ನಾಗಲಿ ಇಲ್ಲವೆ ವಿಶ್ವಾಸ ಮತದ ತತ್ವವನ್ನಾಗಲೀ ಉಲ್ಲಂಘಿಸುವುದಿಲ್ಲ. ಯಾಕೆಂದರೆ ಅವನು ಕ್ಯಾಬಿನೆಟ್ ಸದಸ್ಯನಾದರೆ ಅವನು ಕ್ಯಾಬಿನೆಟ್ ಧೋರಣೆಯನ್ನು ಸ್ವೀಕರಿಸಲು ಸಿದ್ಧನಿದ್ದರೆ ಅವನು ಕ್ಯಾಬಿನೆಟ್‌ನ ಒಂದು ಭಾಗವಾಗಿರುತ್ತಾನೆ ಮತ್ತು ಸಂಸತ್ತಿನ ವಿಶ್ವಾಸವನ್ನು ಕಳೆದುಕೊಂಡನಂತರ ಅವನು ಕ್ಯಾಬಿನೆಟ್ಟಿಗೆ ರಾಜಿನಾಮೆ ಕೊಡುತ್ತಾನೆ. ಆತನ ಕ್ಯಾಬಿನೆಟ್ ಸದಸ್ಯತ್ವವು ಯಾವುದೇ ದೃಷ್ಟಿಯಿಂದ ಮೂಲಭೂತ ತತ್ವಗಳಿಗೆ ಯಾವ ತತ್ವದ ಮೇಲೆ ಸಂಸದೀಯ ಸರಕಾರ ನಿಂತಿರುತ್ತದೆಯೋ ಆ ತತ್ವಕ್ಕೇ ಯಾವುದೇ ರೀತಿಯಿಂದ ಅನಾನುಕೂಲತೆಯನ್ನುಂಟು ಮಾಡುವುದಿಲ್ಲ. ಆದ್ದರಿಂದ ಈ ಅರ್ಹತೆಯು ನನ್ನ ದೃಷ್ಟಿಯಲ್ಲಿ ಅನವಶ್ಯಕವಾಗಿದೆ. ಎರಡನೆಯ ಅರ್ಹತೆಯನ್ನು ಕುರಿತು ಉದಾ: ಒಬ್ಬ ಸದಸ್ಯನು ಬಹು ಸಂಖ್ಯೆಯ ಪಕ್ಷದ ಸದಸ್ಯನಾಗಿರತಕ್ಕದ್ದು, ಪ್ರೊ. ಕೆ.ಟಿ.ಶಹಾ ಅವರ ಆಲೋಚನೆಯಲ್ಲಿ ಇಲ್ಲವೆ ನಂಬಿಕೆಯಲ್ಲಿ ಮತದಾರರು ಯಾವಾಗಲೂ ಒಂದು ಪಕ್ಷದ ಉಮೇದುವಾರನನ್ನೇ ಆರಿಸುತ್ತಾರೆ. ಯಾವ ಆ ಪಕ್ಷವು ಯಾವಾಗಲೂ ಬಹುಮತ ಹೊಂದಿರುತ್ತದೆಂದು ಅವರು ಭಾವಿಸಿದ್ದಾರೆಂದು ನನಗೆ ಅನಿಸುತ್ತದೆ. ಮತ್ತು ಇನ್ನೊಂದು ಪಕ್ಷವು ಅಲ್ಪಮತ ಹೊಂದಿದ್ದು ಅದು ವಿರೋಧಿ ಪಕ್ಷವಾಗಿರುತ್ತದೆಂದು ಅವರು ಭಾವಿಸುತ್ತಾರೆ. ಈಗ ಇಂತಹ ಭಾವನೆಗೆ ಎಡೆಕೊಡಲು ಸಾಧ್ಯವಿಲ್ಲ. ಇದು ಸಂಪೂರ್ಣವಾಗಿ ಸಾಧ್ಯವಾಗಬಹುದು ಮತ್ತ ಇದು ಸ್ವಾಭಾವಿಕವಾದುದು. ಯಾಕೆಂದರೆ ಒಂದು ಸಂಸತ್ತಿನ ಚುನಾವಣೆಯಲ್ಲಿ ಅನೇಕ ಪಕ್ಷಗಳು ಇರಬಹುದು. ಯಾವುದಕ್ಕೂ ಬಹುಮತ ಇಲ್ಲ. ಇಂತಹ ಸಂದರ್ಭದಲ್ಲಿ ಈ ತತ್ವವನ್ನು ಹೇಗೆ ಅಳವಡಿಸಬೇಕು ಹಾಗೂ ಅದನ್ನು ಹೇಗೆ ಕಾರ್ಯಾಚರಣೆಗೆ ಕೊಡಬೇಕು ಮತ್ತು ಎಲ್ಲ ಮೂರು ಪಕ್ಷಗಳು ಇದ್ದು ಯಾವ ಪಕ್ಷಕ್ಕೂ ಬಹುಮತ ಇರುವುದಿಲ್ಲ. ಆದ್ದರಿಂದ ಈ ರೀತಿಯ ಆಕಸ್ಮಿಕ ಸಂದರ್ಭದಲ್ಲಿ ಪ್ರೊ.ಕೆ.ಟಿ. ಶಹಾ ಅವರು ಹೇಳಿದ ಅರ್ಹತೆಗಳು ಸರಕಾರವನ್ನು ರಚಿಸಲು ಅಸಾಧ್ಯವಾಗಿರುತ್ತದೆ. ಎರಡನೆಯ ತಿಳಿವಳಿಕೆ ಏನೆಂದರೆ ಸಂಸತ್ತಿನಲ್ಲೆ ಬಹುಮತವಿದ್ದ ಪಕ್ಷವಿದೆ. ಆದರೆ ಆಗ ತುರ್ತು ಪರಿಸ್ಥಿತಿಯು

ಘೋಷಣೆಯಾಗಿದೆ. ಅಂತಹ ಸಂದರ್ಭದಲ್ಲಿ ಬಹುಮತ ಪಕ್ಷ ಮತ್ತು ಅದರಂತೆ ಅಲ್ಪಮತದ ಪಕ್ಷ ತುರ್ತು ಪರಿಸ್ಥಿತಿಯ ಈ ಅವಧಿಯಲ್ಲಿ ಪಕ್ಷಗಳ ನಡುವೆ ಜಗಳಗಳನ್ನು ನಿಲ್ಲಿಸುವುದು ಅಪೇಕ್ಷಣೀಯವೆಂದು ಒಪ್ಪಿದೆವು. ಅಲ್ಲಿ ಯಾವ ಪಕ್ಷದ ಸರಕಾರವೂ ಇರುವುದಿಲ್ಲ. ಆ ತುರ್ತು ಪರಿಸ್ಥಿತಿಯ ಪ್ರಸಂಗದಲ್ಲಿ ಆ ಪ್ರಸಂಗವನ್ನು ಪುನಃ ಎದುರಿಸಲು ಸಮ್ಮಿಶ್ರ ಸರಕಾರವನ್ನು ಹೊರತು ಪಡಿಸಿ ಬೇರೆ ಯಾವ ಸರಕಾರವೂ ಆ ತುರ್ತು ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಿಲ್ಲವೆಂಬ ಸ್ಥಿತಿಗೆ ಬಂದಿದೆಯೆಂದು ಒಂದು ಕಲ್ಪನೆಯನ್ನು ಮಾಡಿರಿ. ಆಗ ಅಲ್ಪಸಂಖ್ಯಾತ ಪಕ್ಷದ ಸದಸ್ಯರು ಕ್ಯಾಬಿನೆಟ್ ಸದಸ್ಯರಾಗಲು ಹಕ್ಕುಳ್ಳವರು ಆಗಿರುತ್ತಾರೆ. ಆದ್ದರಿಂದ ನಾನು ವಿನಯಪೂರ್ವಕ ಹೇಳುವುದೇನೆಂದರೆ ಇವೆರಡು ಕಾರಣಗಳಿಂದ ಈ ತಿದ್ದುಪಡಿಯ ಕಾರ್ಯಾಚರಣೆ ಸಾಧ್ಯವಿಲ್ಲ. ಇನ್ನು ವಿದ್ಯೆಯ ಅರ್ಹತೆಯನ್ನು ಕುರಿತು ನನ್ನ ಮಿತ್ರರಾದ ಶ್ರೀ ಮಹಾವೀರ ತ್ಯಾಗಿಯವರು ಅಕ್ಷರಜ್ಞಾನ ವಿದ್ಯೆಯ ಬಗೆಗೆ ಏನೇ ಹೇಳಿರಲಿ ಒಂದು ಸತ್ಯ ಸಂಗತಿಯ ಬಗೆಗೆ ನಾನು ಅವರನ್ನು ಪ್ರಶ್ನಿಸಿದಾಗ ಅವರು ಅಷ್ಟೊಂದು ಆವೇಶಪೂರ್ವಕವಾಗಿ ತಮ್ಮಷ್ಟಕ್ಕೆ ತಾವೇ ಅಕ್ಷರ ಜ್ಞಾನದ ಅರ್ಹತೆಯ ವಿರುದ್ಧ ತಮ್ಮ ಅಭಿಪ್ರಾಯ ವ್ಯಕ್ತಮಾಡಿದರು. ಅವರಿಗೆ ಮನಸಾಕ್ಷಿಯಾಗಿ ಅಕ್ಷರಜ್ಞಾನದ ವಿದ್ಯೆಯ ಬಗೆಗೆ ಅವರಿಗೆ ಯಾವುದೇ ತಕರಾರು ಇದೆಯೇ ಎಂದು ಕೇಳಿದೆನು, ಅವರು ನನಗೆ ಯಾವ ತಕರಾರು ಇಲ್ಲವೆಂದು ಭರವಸೆಯನ್ನು ಕೊಟ್ಟರೆಂದು ತಿಳಿಸಲು ಸಂತೋಷವಾಗುತ್ತದೆ. ಅದರಂತೆಯೇ ಯಾವನೊಬ್ಬ ಪ್ರಧಾನಮಂತ್ರಿ ಇಲ್ಲವೆ ರಾಷ್ಟ್ರಪತಿ ಇಂಗ್ಲೀಷ್ ಗೊತ್ತಿಲ್ಲದ ಒಬ್ಬನನ್ನು ನೇಮಿಸುವುದು ಅಪೇಕ್ಷಣೀಯವೆಂದು ತಿಳಿಯುತ್ತಾನೆಯೆ ಎಂಬುದು ನನಗೆ ಅಶ್ಚರ್ಯವಾಗುತ್ತದೆ. ಇಂಗ್ಲೀಷ್ ಭಾಷೆಯು ಸರಕಾರದ ಅಧಿಕೃತ ಭಾಷೆಯಾಗಿ ಸಂಸತ್ತಿನ ವ್ಯವಹಾರಗಳ ಭಾಷೆಯನ್ನಾಗಿ ಇಟ್ಟುಕೊಂಡರೆ: ಆಗ ನಾನು ಮನಸ್ಸಿನಲ್ಲಿ ಎಣಿಸಲಾರದಂತಹ ಪರಿಸ್ಥಿತಿಯು ಉಂಟಾಗುತ್ತದೆ. ಹಿಂದಿಯು ರಾಜ್ಯ ಭಾಷೆಯಾಗಿ ಮುಂದುವರೆಯುತ್ತದೆಂದು ಭಾವಿಸೋಣ. ಹಿಂದೂಸ್ಥಾನಿ ಇಲ್ಲವೆ ಉರ್ದು ಯಾವುದೇ ಇರಲಿ ಅಂತಹ ಸಂದರ್ಭದಲ್ಲಿ ಆಗ ಸಹ ನನಗೆ ಪುನಃ ಊಹಿಸಲು ಅಸಾಧ್ಯವಾದ ಸ್ಥಿತಿಯು ಅಂದರೆ ರಾಜ್ಯಭಾಷೆಯನ್ನು ತಿಳಿಯದವನೊಬ್ಬನನ್ನು ಪ್ರಧಾನಿಯನ್ನಾಗಿ ನೇಮಿಸುವುದು ರಾಜ್ಯದ ಆಡಳಿತವನ್ನು ನಡೆಯಿಸುವುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಯಾವನು ಸರಕಾರದಲ್ಲಿ ಒಂದು ಖಾತೆಯನ್ನು ವಹಿಸಿಕೊಡುವುದು ಅಷ್ಟೊಂದು ಅಪೇಕ್ಷಣೀಯವಲ್ಲವೆಂಬುದರಲ್ಲಿ ಸಂಶಯವಿಲ್ಲ. ಯೋಗ್ಯ ಶಿಕ್ಷಣ ಅರ್ಹತೆಯುಳ್ಳವರು ಸರಕಾರದ ಖಾತೆಗಳನ್ನು ಹೊಂದಬೇಕು. ಆದ್ದರಿಂದ ಈ ತತ್ವವನ್ನು ಸಂವಿಧಾನದಲ್ಲಿ ಅಳವಡಿಸುವುದು ಅನಾವಶ್ಯಕವೆಂದು ನಾನು ಭಾವಿಸುತ್ತೇನೆ.

ಈಗ ನಾನು ಕ್ಯಾಬಿನೆಟ್ಟಿನ ಸದಸ್ಯನಾಗಲು ಇರುವ ಮೂರನೆಯ ಕರಾರಿಗೆ ಬರುತ್ತೇನೆ. ಅದೆಂದರೆ ಮಂತ್ರಿಯಾಗುವವನು ಅವನ ಹಿತಾಸಕ್ತಿ, ಹಕ್ಕುಗಳ ಹಾಗೂ ಆಸ್ತಿಗಳ ಬಗೆಗೆ ಆತನು ವಾಸ್ತವಿಕವಾಗಿ ತನ್ನ ಕಛೇರಿಯ ಅಧಿಕಾರವನ್ನು ವಹಿಸಿಕೊಳ್ಳುವ ಪೂರ್ವದಲ್ಲಿಯೇ ಘೋಷಣೆಯನ್ನು ಮಾಡಬೇಕು. ಈ ತಿದ್ದುಪಡಿಯನ್ನು ತಂದ ಪ್ರೊ. ಕೆ.ಟಿ. ಶಹಾ ಅವರು ಶ್ರೀ ಕಾಮತ್ ಅವರೊಂದಿಗೆ ಕೆಲವು ಮಟ್ಟಿಗೆ ಯೋಗ್ಯ ತಿದ್ದುಪಡಿಯನ್ನು ತಂದಿದ್ದಾರೆ. ಸಂಸತ್ತಿನಲ್ಲಿ ಈ ವಿಷಯ ಚರ್ಚೆಗೆ ಬರುವುದು ಇದೇ ಮೊದಲನೆಯಸಲವಾಗಿರುವುದಿಲ್ಲ. ರಾಷ್ಟ್ರಪತಿಯ ನೇಮಕ ಹಾಗೂ ಪ್ರಮಾಣ ಸ್ವೀಕರಿಸುವ ವಿಧಿ ಕುರಿತು ಚರ್ಚಿಸುವಾಗ ಇಂತಹ ವಿಧಿಯ ತಿದ್ದುಪಡಿಯ ಈ ವಿಷಯ ಕುರಿತ ನಾನು ರಾಷ್ಟ್ರಪತಿ ನೇಮಕ ಮತ್ತು ಪ್ರಮಾಣವಚನ ಕುರಿತು ಆ ನಿರ್ದಿಷ್ಟವಾದ ಆ ಕಾಲಕ್ಕೆ ನನಗೆ ಬಹಳ ಹೇಳುವುದಿತ್ತು. ನಾನು ಆಗ ಹೇಳಿದ್ದನ್ನು ಪುನಃ ಹೇಳಲು ಈಗ ಇಚ್ಛಿಸುವುದಿಲ್ಲ. ಆ ಕಾಲಕ್ಕೆ ನಾನು ಹೇಳಿದ್ದನ್ನು ನನ್ನ ಮಿತ್ರರಾದ

ಕಾಮತ್ ಅವರು ನನ್ನ ಗಮನಕ್ಕೆ ತಂದರು. ಆ ಕಾಲಕ್ಕೆ ರಾಷ್ಟ್ರಪತಿ ಕುರಿತು ವಿಧಿಯ ಮೇಲೆ ಸಂಸತ್ತಿನಲ್ಲಿ ಚರ್ಚೆ ನಡೆದಿತ್ತು. ಇಂತಹ ಒಂದು ಉಪಬಂಧ ಅವಶ್ಯಕತೆಯುಂಟೆಂದು ನಾನು ಹೇಳಿದುದು ನನಗೆ ನೆನೆಪಿದೆ.

**ಶ್ರೀ. ಎಚ್.ವಿ. ಕಾಮತ್ :** ನಾನು ಸನ್ಮಾನ್ಯರಾದ ಶ್ರೀ ಅಂಬೇಡ್ಕರ್ ಅವರಿಗೆ ನಾನು ನಿಖರವಾಗಿ ಏನು ಹೇಳಿದರೆಂಬುದನ್ನು ನಾನು ನೆನಪುಮಾಡಿಕೊಡಲೆ? ನಾನು ಸಂಸತ್ತಿನ ಸಚಿವಾಲಯದ ಕಛೇರಿಯ ಟೈಪ್ ಮಾಡಿದ ಲಿಪಿಯಿಂದ ನಾನು ಓದುತ್ತಿದ್ದೇನೆ. ಇವು ಅವರು ಹೇಳಿದ ಮಾತುಗಳಾಗಿವೆ.

"ಯಾವನೊಬ್ಬ ಮನುಷ್ಯನು ಭಾರತ ಸರಕಾರದಲ್ಲಿದ್ದರೆ ಮತ್ತು ಅವನಿಗೆ ತನ್ನ ಐಶ್ವರ್ಯವನ್ನು ಹೆಚ್ಚಿಸಿಕೊಳ್ಳುವ ಸದಾವಕಾಶ ದೊರೆತರೆ, ಅವನು ಪ್ರಧಾನಮಂತ್ರಿಯಾಗಿರಬೇಕು, ಇಲ್ಲವೆ ರಾಜ್ಯ ಸಚಿವನಾಗಿರಬೇಕು, ಮತ್ತು ಇಂತಹ ಉಪಬಂಧವನ್ನು ಅವರ ಮೇಲೆ ಆ ಅವಧಿಗೆ ವಿಧಿಸತಕ್ಕದ್ದು ಆದರೆ ರಾಷ್ಟ್ರಪತಿಗಳ ಮೇಲೆ ಅಲ್ಲ".

**ಸನ್ಮಾನ್ಯರಾದ ಡಾ॥ ಬಿ.ಆರ್. ಅಂಬೇಡ್ಕರ್:** ನಾನು ಈಗ ಹೇಳುತ್ತಿರುವುದು ಅದನ್ನೇ. ನಾನು ಹೇಳಿದುದು ಏನೆಂದರೆ, ಇಂತಹ ಉಪಬಂಧವು ಮಂತ್ರಿಗಳ ಬಗೆಗೆ ಅವಶ್ಯವಾಗಿರತಕ್ಕದ್ದು. ಅದರೆ ನನ್ನ ಗೆಳೆಯರಾದ ಶ್ರೀ ಕಾಮತ್ ಅವರು ಸಹ ಕಾರಖಾನೆಯ ಅಧಿನಿಯಮದಿಂದ ಕೆಲವು ಕಲಮು ಓದಿದರು. ಅಲ್ಲಿ ಮಂತ್ರಿಗಳಿಗೆ ಇಂತಹ ಅರ್ಹತೆಗಳು ಕಾರಖಾನೆಯ ನಿರೀಕ್ಷಕರಿಗೆ ಅವಶ್ಯವಿದೆ. ಈಗ ಮಾನ್ಯರೆ, ಈಗ ಪರಿಶೀಲಿಸುತ್ತಿರುವ ಉಪಬಂಧವು ಹೀಗಿದೆ : ನಿಸ್ಸಂಶಯವಾಗಿ ಇದು ನಿಜವಾಗಿಯೂ ಮೆಚ್ಚತಕ್ಕ ವಿಷಯವಾಗಿದೆ. ಅಂದರೆ ಮಂತ್ರಿಪದ ಹೊಂದಿದ ಮಂತ್ರಿಯು ಶುದ್ಧವಾದ ಆಡಳಿತವನ್ನು ನಡೆಯಿಸತಕ್ಕದ್ದು. ಈ ಸಂಸತ್ತಿನಲ್ಲಿಯ ಯಾವ ಸದಸ್ಯರಿಗೂ ಈ ಬಗ್ಗೆ ತಕರಾರು ಇದೆಯೆಂದು ನಾನು ಭಾವಿಸುವುದಿಲ್ಲ. ಆಡಳಿತವು ಕೇವಲ ಮೇಲುದರ್ಜೆಯ ದಕ್ಷತೆಯನ್ನು ಹೊಂದಿರಬೇಕಲ್ಲದೆ, ಶುದ್ಧ ಆಡಳಿತವೂ ಆಗಿರಬೇಕೆಂದು ನಾವೆಲ್ಲರೂ ಆಶಿಸುತ್ತೇವೆ. ನಿಜವಾದ ಅಂದರೆ ಇದು ಈ ಶುದ್ಧತೆಯನ್ನು ಕಾಯ್ದುಕೊಂಡು ಹೋಗಲು ಮಂಜೂರಾತಿಗಳು ಏನು ಇರತಕ್ಕದ್ದು? ನನಗೆ ಅನಿಸುವುದೇನೆಂದರೆ ಎರಡು ರೀತಿಯ ಮಂಜೂರಾತಿಗಳು ಇರುತ್ತವೆ. ಮೊದಲನೆಯದೆಂದರೆ ಕಾನೂನಿನ ಮೂಲಕ ಮತ್ತು ಸಂವಿಧಾನದ ಮೂಲಕ ಈ ಉಪಬಂಧವು ಪರಿಣಾಮಕಾರಿಯಾಗಬೇಕಾದುದು ಮಂತ್ರಿಗಳು ತಮ್ಮ ಆಸ್ತಿಗಳ ಘೋಷಣೆಯನ್ನು ಕೊಡತಕ್ಕದ್ದಲ್ಲದೆ ಅವರು ಆ ಅಧಿಕಾರವನ್ನು ವಹಿಸಿಕೊಳ್ಳುವ ಅವರ ಹೊಣೆಗಾರಿಕೆಗಳನ್ನು ಸಹ ಘೋಷಿಸತಕ್ಕದ್ದು ಮತ್ತು ನಮಗೆ ಎರಡು ಪೂರಕ ಉಪಬಂಧಗಳ ಅವಶ್ಯಕತೆಯು ಇದೆ. ಒಂದು ಅಂದರೆ ಪ್ರತಿಯೊಬ್ಬ ಮಂತ್ರಿ ತನ್ನ ಪದವಿ ಬಿಡುವ ಕಾಲಕ್ಕೆ ಸಹ ತನ್ನ ಆಸ್ತಿ ಕುರಿತು ಹಾಗೂ ರಾಜೀನಾಮೆ ಕೊಡುವ ಕಾಲಕ್ಕೆ ಒಂದು ಘೋಷಣೆ ಮಾಡಬೇಕಾಗುತ್ತದೆ. ಆದ್ದರಿಂದ ಆತನ ಆಳಿಕೆಯು ಲಂಚಕೋರತನದಿಂದ ಕೂಡಿತ್ತೋ ಅಥವಾ ಇಲ್ಲವೋ ಅನ್ನುವುದಕ್ಕೆ ತಿಳಿದುಕೊಳ್ಳಬೇಕಾದವರಿಗೆ ಅನುಕೂಲವಾಗುತ್ತದೆ. ಆತನ ಆಳ್ವಿಕೆಯಲ್ಲಿ ಆತನ ಆಸ್ತಿಯಲ್ಲಿ ಯಾವುದು ಹೆಚ್ಚಿಗೆ ಆಗಿದೆ ಎಂಬುದು ಕಂಡು ಬರತಕ್ಕದ್ದು. ಆ ಹೆಚ್ಚಾದ ಆಸ್ತಿಯು ಆತನ ಅಧಿಕಾರದ ಅವಧಿಯಲ್ಲಿ ಆತನ ಪಗಾರದಿಂದ ಉಳಿತಾಯ ಮಾಡಿ ಆಸ್ತಿ ಮಾಡಿರುವನೇ ಎಂಬುದರ ಲೆಕ್ಕವನ್ನು ಕೊಡಬೇಕಾಗುತ್ತದೆ. ಇನ್ನೊಂದು ಉಪಬಂಧವೆಂದರೆ ಮಂತ್ರಿಯ ಆಸ್ತಿಯಲ್ಲಿ ಆತನು ರಾಜೀನಾಮೆ ಕೊಟ್ಟ ದಿನ ಆಸ್ತಿಯಲ್ಲಿ ಸಾಮಾನ್ಯವಾಗಿ ಹೆಚ್ಚಿಗೆ ಅದು ಕಂಡುಬಂದರೆ ಅದು ಆತನ ಪಗಾರದ ಉಳಿತಾಯದಿಂದ ಕಂಡು ಬಂದರೆ ಆತನು ವಿವರಣೆ ಕೊಡುವ ಅವಶ್ಯಕತೆಯು ಇಲ್ಲ. ಆಗ ಮೂರನೆಯ ಉಪಬಂಧವು ಮಂತ್ರಿಯನ್ನು ಆರೋಪಕ್ಕೆ ಗುರಿಮಾಡಿ ಅವನು ತನ್ನ ಅಧಿಕಾರ ಅವಧಿಯಲ್ಲಿ ಪ್ರಮಾಣ ಮೀರಿ ತನ್ನ

ಆಸ್ತಿಯನ್ನು ಹೇಗೆ ಹೆಚ್ಚಿಸಿದನೆಂದು ವಿವರಿಸತಕ್ಕದ್ದು. ನನ್ನ ಅಭಿಪ್ರಾಯದಂತೆ ಈ ಖಂಡವನ್ನು ಪರಿಣಾಮಕಾರಿಯಾಗಿ ಮಾಡಬೇಕಾದರೆ ಅಲ್ಲಿ ಮೂರು ಉಪಬಂಧಗಳು ನಾನು ಹೇಳಿದಂತೆ ಇರತಕ್ಕದ್ದು. ಒಂದನೆಯದು ಮೊಟ್ಟ ಮೊದಲಿಗೆ ಘೋಷಣೆಯನ್ನು ಮಾಡುವುದು. ಮೂರನೆಯದಾಗಿ ಆ ಆಸ್ತಿಗಳು ಮಿತಿ ಮೀರಿ ಹೇಗೆ ಹೆಚ್ಚಿಗೆ ಆದವು ಅನ್ನುವುದರ ಬಗೆಗೆ ವಿವರಣೆಯನ್ನು ಕೊಡುವ ಜವಾಬ್ದಾರಿಯು ಇರುತ್ತದೆ. ನಾಲ್ಕನೆಯದು ಅದು ಗುನ್ಹೆಯಾಗುತ್ತದೆಂದು ಘೋಷಿಸಿ ದಂಡ ಇಲ್ಲವೆ ಜುಲ್ಮಾನೆಗಳನ್ನು ವಿಧಿಸುವುದು. ಪ್ರಾರಂಭದ ಕಾಲದಲ್ಲಿ ಘೋಷಣೆಯು * ಶ್ರೀ. ನಜೀರುದ್ದೀನ ಮಹಮ್ಮದ್ ಕಾಣದೆ ಇರುವ ಆಸ್ತಿಗಳನ್ನು ಇಲ್ಲವೆ ಗುಪ್ತ ಆಸ್ತಿಗಳನ್ನು ನೀವು ಗುರುತಿಸುತ್ತೀರಿ ಅಥವಾ ತನಿಖೆ ಮಾಡುತ್ತೀರಿ.

**ಸನ್ಮಾನ್ಯರಾದ ಡಾ|| ಬಿ.ಆರ್. ಅಂಬೇಡ್ಕರ್:** ಹೇಳಬೇಕೆಂದರೆ, ಈ ಪೂರ್ಣ ವಿಷಯವು ಉಪಯೋಗವಿಲ್ಲದ್ದು. ಇಂತಹ ತಿದ್ದುಪಡಿಯು ಏನೇ ಇದ್ದರೂ ಮಂತ್ರಿಯು ತನ್ನ ಆಸ್ತಿಯನ್ನು ತನ್ನ ಅಧಿಕಾರ ಅವಧಿಯಲ್ಲೆ ಯಾರಿಗೂ ತಿಳಿಯದಂತೆ ವರ್ಗಾಯಿಸುವ ವ್ಯವಸ್ಥೆ ಮಾಡಬಹುದು. ಆದ್ದರಿಂದ ಈ ಉದ್ದೇಶವು ಮೆಚ್ಚ ತಕ್ಕಂತಹದ್ದು ಇದ್ದರೂ, ಇದಕ್ಕಾಗಿ ಇರುವ ವ್ಯವಸ್ಥೆಯ ಯಂತ್ರವು ಅಸಮರ್ಪಕವಾಗಿದೆ ಮತ್ತು ಉಪಾಯವು ರೋಗಕ್ಕಿಂತ ಕೆಟ್ಟದೆಂದು ನನಗೆ ಅನಿಸುತ್ತದೆ.

**ಶ್ರೀ ಎಚ್.ವಿ. ಕಾಮತ್:** ಮಾನ್ಯರೇ, ಡಾ|| ಅಂಬೇಡ್ಕರರು ತಿದ್ದುಪಡಿಯ ತತ್ವಗಳನ್ನು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಮತ್ತು ಮೊನ್ನೆಯ ದಿನ ಅವರು ಪ್ರತಿಪಾದಿಸಿದ ತತ್ವಗಳನ್ನು ತಪ್ಪೆಂದು ಹಿಂದಕ್ಕೆ ತೆಗೆದುಕೊಳ್ಳುವರೆಂದು ಭಾವಿಸುತ್ತೇನೆ.

**ಸನ್ಮಾನ್ಯ ಡಾ|| ಬಿ.ಆರ್. ಅಂಬೇಡ್ಕರ್:** ನಾನು ವಿಚಾರದಿಂದ ಸರಿಯುವುದೇ ಇಲ್ಲ. ನಾನು ಒಟ್ಟಾರೆ ಹೇಳುವುದೇನೆಂದರೆ ಇದಕ್ಕು ಉಪಾಯ ಸಾಕಷ್ಟು ಯೋಗ್ಯವಾಗಿರುವುದಿಲ್ಲ. ಅದು ಪರಿಣಾಮಕಾರಿಯಾಗಿರುವುದಿಲ್ಲ. ಆದ್ದರಿಂದ ಅದನ್ನು ನಾನು ಸ್ವೀಕರಿಸಲು ಸಿದ್ಧನಿಲ್ಲ.

**ಪ್ರೊ.ಸಿಬ್ಬನ್ ಲಾಲ್ ಸಕ್ಸೇನಾ:** ಅದನ್ನು ವ್ಯಾಪಕವಾಗಿ ಅನ್ವಯಿಸುವಂತೆ ಮಾಡಿರಿ.

**ಸನ್ಮಾನ್ಯ ಡಾ|| ಬಿ.ಆರ್. ಅಂಬೇಡ್ಕರ್:** ಈಗ ನಾನು ಅದನ್ನು ಮಾಡಲು ಸಾಧ್ಯವಿಲ್ಲ. ಯಾರು ಈ ತಿದ್ದುಪಡಿಯನ್ನು ತಂದಿರುವರೋ ಅವರು ಅದನ್ನು ಪೂರ್ಣ ಪ್ರಮಾಣದ ಮತ್ತು ನೀತಿ ನೇಮಗಳಿಂದ ಸಿದ್ಧಮಾಡಬೇಕಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಮಾನ್ಯರೆ– ಈಗ ನಾನು ಹೇಳುತ್ತಿರುವುದೇನೆಂದರೆ ಈ ತಿದ್ದುಪಡಿಯ ಹಿಂದಿನ ಉದ್ದೇಶದ ಸಲುವಾಗಿ ಯಾರ ತಕರಾರು ಇಲ್ಲ ಮತ್ತು ಯಾರ ಜಗಳವು ಇರುವುದಿಲ್ಲ. ಆದರೆ ಪ್ರಶ್ನೆಯೇನೆಂದರೆ ಯಾವ ರೀತಿ ಕಮ್ಮಾರನ ಕುಲುಮೆಯಲ್ಲಿ ಅದನ್ನು ತಿದ್ದಬೇಕು ನಾನು ಹೇಳಿದಂತೆ, ಇದಕ್ಕೆ ಕಾನೂನಿನ ಸಮ್ಮತಿ ಸಾಕಷ್ಟು ಇರುವುದಿಲ್ಲ. ಇದರ ಹೊರತಾಗಿ ನಮಗೆ ಬೇರೆ ಸಮ್ಮತಿ ಇರುವುದೇ ಇಲ್ಲವೇ? ನನ್ನ ಅಭಿಪ್ರಾಯದಲ್ಲಿ ಪರಿಶುದ್ಧ ಆಡಳಿತವನ್ನು ಜಾರಿಗೆ ತರಲು ನಮಗೆ ಇದಕ್ಕಿಂತಲೂ ಉತ್ತಮ ರೀತಿಯಲ್ಲಿ ಜಾರಿಗೊಳಿಸುವುದೇನೆಂದರೆ ಸಾರ್ವಜನಿಕ ಅಭಿಪ್ರಾಯವನ್ನು ಶೇಖರಿಸುವುದು ಮತ್ತು ಅದನ್ನು ವಿಧಾನಸಭೆಯಲ್ಲಿ ತೋರಿಸುವುದಾಗಿದೆ. ನನ್ನ ಗೌರವಾನ್ವಿತ ಗೆಳೆಯರಾದ ಶ್ರೀ ಹೆಚ್.ವಿ.ಕಾಮತ್ ಅವರು ಕಾರಖಾನೆ ಅಧಿನಿಯಮದಿಂದ ಉದಾಹರಣೆಯನ್ನು ಮಂಡಿಸಿದರು. ಕಾರಖಾನೆಯ ನಿರೀಕ್ಷಕರ ಅನರ್ಹತೆಗಳನ್ನು ಮಂಡಿಸಲಾಗಿದೆ. ಇದರ ಕಾರಣವೇನೆಂದರೆ ಅವನಿಗೆ ಸಾರ್ವಜನಿಕ ಅಭಿಪ್ರಾಯವು ಮುಟ್ಟುವುದಿಲ್ಲ. ಆದರೆ ಸಾರ್ವಜನಿಕ ಅಭಿಪ್ರಾಯವು ಪ್ರತಿಯೊಂದು ಅತಿಸೂಕ್ಷ್ಮ ನಿಷ್ಕರ್ಷವಾದದು ಪ್ರಕಾಶಿಸುವಂತಹದು. ಹೇಳಬೇಕೆಂದರೆ ಮಂತ್ರಿಮಂಡಲದ ವಿರುದ್ಧ ಮತ್ತು ಸಂಸತ್ತು ಅಪೇಕ್ಷಿಸಿದರೆ ಯಾವುದೇ ವೇಳೆಯಲ್ಲಿ ಯಾವುದೇ ನಿರ್ದಿಷ್ಟ ದುರಾಡಳಿತ ವಿಷಯದ ಮೇಲೆ ಅದು ಅದರ

ಮನೋಭಾವವನ್ನು ತಿಳಿಯುವಂತೆ ಮಾಡಬಲ್ಲದು ಮತ್ತು ಆ ಮಂತ್ರಿಮಂಡಲವನ್ನು ತೆಗೆದುಹಾಕಬಲ್ಲದು. ನಾನು ವಿನಯಪೂರ್ವಕ ಹೇಳುವುದೇನೆಂದರೆ ಸಾರ್ವಜನಿಕ ಅಭಿಪ್ರಾಯದಲ್ಲಿ ಹೆಚ್ಚಿನ ಮಂಜೂರಾತಿಯೂ ಇದೆ ಮತ್ತು ಸಂಸತ್ತಿನ ಅಧಿಕಾರವು ಶುದ್ಧ ಆಡಳಿತವನ್ನು ಜಾರಿಗೆ ತರುತ್ತದೆ. ಆದ್ದರಿಂದ ಕಾನೂನಿನ ಹೊರಗಡೆಯ ಮಂಜೂರಾತಿಗಳನ್ನು ಹಾಕುವ ಅವಶ್ಯಕತೆಯನ್ನೆಲ್ಲ ಶೂನ್ಯೀಕರಿಸುತ್ತದೆ.

**ಶ್ರೀ ಲೋಕನಾಥ ಮಿಶ್ರಾ** (ಒರಿಸ್ಸಾ: ಸಾಮಾನ್ಯ) : ಇದು ಅದಕ್ಕಿಂತ ಹೆಚ್ಚು ಅಸಾಧ್ಯ ಕೆಲಸವಲ್ಲವೆ?

**ಸನ್ಮಾನ್ಯರಾದ ಡಾ॥ ಬಿ.ಆರ್. ಅಂಬೇಡ್ಕರ್:** ಪ್ರಜಾಪ್ರಭುತ್ವವು ಅನೇಕ ಅಸಾಧ್ಯ ಕಾರ್ಯಗಳನ್ನು ನೆರವೇರಿಸಬೇಕಾಗುತ್ತದೆ. ನಿಮಗೆ ಪ್ರಜಾಪ್ರಭುತ್ವ ಬೇಕಾದರೆ, ನೀವು ಅವುಗಳನ್ನು ಎದುರಿಸಲೇಬೇಕಾಗುತ್ತದೆ.

ಮಾನ್ಯರೆ, ಈಗ ನಾನು ನನ್ನ ಸನ್ಮಿತ್ರರಾದ ಶ್ರೀ ನಜೀರುದ್ದೀನ್ ಅಹ್ಮದ್ ಅವರು ತಂದ ತಿದ್ದುಪಡಿಗೆ ಬರುತ್ತೇನೆ. ಅವರು ನಾನು ತಂದ ತಿದ್ದುಪಡಿಯ ನಂತರದ ಭಾಗವನ್ನು ತೆಗೆದುಹಾಕಬೇಕೆಂದು ಇಚ್ಛಿಸುತ್ತಾರೆ. ಅವರ ತಕರಾರು ಏನೆಂದರೆ ತಿದ್ದುಪಡಿಯ ನಂತರದ ಭಾಗವನ್ನು ಇಟ್ಟುಕೊಂಡರೆ ಅದು ಮೊದಲಿನ ತಿದ್ದುಪಡಿಯ ಭಾಗವನ್ನು ನಿರಾಕರಿಸುತ್ತಾರೆ. ಉದಾ: ಮಂತ್ರಿಗಳ ಆದ್ಯಕರ್ತವ್ಯವೆಂದರೆ ಲಿಖಿತಸೂಚನೆಗಳ ನಿರ್ದೇಶನಗಳನ್ನು ಪಾಲಿಸಬೇಕಾಗುತ್ತದೆ.

ಹೌದು, ತಾತ್ವಿಕವಾಗಿ ಅದು ಹಾಗಿರುತ್ತದೆ, ಅಲ್ಲಿ ಪುನಃ ಉದ್ಭವಿಸುವ ಪ್ರಶ್ನೆಯೆಂದರೆ ಲಿಖಿತ ಸೂಚನೆಗಳಲ್ಲಿ ಒಳಗೊಂಡ ತಾಕೀದಿಗಳ ಸೂಚನೆಗಳನ್ನು ಕಾರ್ಯಾಚರಣೆಯಲ್ಲಿ ತರುವುದು ಹೇಗೆ? ಅಲ್ಲಿ ಎರಡು ಮಾರ್ಗಗಳು ತೆರೆದಿರುತ್ತವೆ. ಒಂದು ಮಾರ್ಗವೆಂದರೆ ನ್ಯಾಯಾಲಯವು ವಿಚಾರಣೆ ಮಾಡುವುದು ಮತ್ತು ಆ ವಿಷಯದ ಮೇಲೆ ಅದು ಕಾನೂನು ಬದ್ಧ ಅಹುದೋ ಅಲ್ಲವೋ ಎಂದು ನಿರ್ಧರಿಸಲು ಪರವಾನಗಿ ಕೊಡುವುದು. ಇನ್ನೊಂದು ದಾರಿಯೆಂದರೆ ಅದನ್ನು ಶಾಸಕಾಂಗಕ್ಕೇ ಬಿಡುವುದು ಮತ್ತು ನಿಂದನಾನಿರ್ಣಯ ಇಲ್ಲವೆ ಅವಿಶ್ವಾಸ ಸೂಚನೆ. ಮಂತ್ರಿಮಂಡಲವು ರಾಷ್ಟ್ರಪತಿಗಳಿಗೆ ಯೋಗ್ಯ ಸಲಹೆ ಉಪದೇಶ ಕೊಡಲು ಒತ್ತಾಯಿಸಲಿಕ್ಕೆ ಬರುವುದಿಲ್ಲ. ಮತ್ತು ಮಂತ್ರಿಮಂಡಲವು ಕೊಟ್ಟ ಅಧಿಕ್ಷೇಪದ ಸಲಹೆಯನ್ನು ರಾಷ್ಟ್ರಪತಿಗಳು ಅನುಸರಿಸುತ್ತಾರೆ. ನನ್ನ ದೃಷ್ಟಿಯಲ್ಲಿ ಎರಡನೆ ಭಾಗವು ಒಳ್ಳೆಯ ರೀತಿಯಿಂದ ನಮ್ಮ ಉದ್ದೇಶವನ್ನು ಪರಿಣಾಮಕಾರಿಯಾಗಿ ಮಾಡಬಲ್ಲದು. ಸಂಸತ್ತಿನ ಪ್ರತಿಯೊಂದು ಅಧಿಕಾರವನ್ನು ನ್ಯಾಯಾಲಯದ ಅಧಿಕಾರ ಕ್ಷೇತ್ರಕ್ಕೆ ಒಳಪಟ್ಟು ಎಂದು ಮಾಡಿದರೆ ಅದು ಅನ್ಯಾಯದ್ದು ಮತ್ತು ಅನಾನುಕೂಲವಾಗುತ್ತದೆ. ಯಾವುದೇ ನಿಯಮಗಳನ್ನು ತಿರಸ್ಕರಿಸಿ, ಸದಸ್ಯನು ಸುಪ್ರೀಂ ಕೋರ್ಟಿಗೆ ಓಡಿ ಹೋಗಬಹುದು ಮತ್ತು ಒಂದು ತಾಕೀದಿ ರಿಟ್‌ನ್ನು ಮಾನ್ಯ ಸಭಾಧ್ಯಕ್ಷರು ಸಂಸತ್ತಿನ ಕಾರ್ಯಕಲಾಪಗಳನ್ನು ನಡೆಯಿಸುವುದಕ್ಕೆ ತಡೆಯುಂಟುಮಾಡಬಹುದು. ಆ ನಿರ್ದಿಷ್ಟ ವಿಷಯವು ಸುಪ್ರೀಂ ಕೋರ್ಟ್ ಇಲ್ಲವೆ ಹೈ ಕೋರ್ಟಿನಿಂದ ಯಾವುದೇ ಇರಲಿ ನನಗೆ ಅನಿಸಿದಂತೆ ಅದು ಸಂಸತ್ತಿನ ಕಾರ್ಯಕಲಾಪಗಳಲ್ಲಿ ಹಸ್ತಕ್ಷೇಪವಾಗುತ್ತದೆ. ಇಂಗ್ಲೆಂಡಿನಲ್ಲಿಯೂ ಸಹ ಪ್ರಕ್ರಿಯೆಯಲ್ಲಿಯೂ ಮತ್ತು ತನ್ನ ಕಾರ್ಯಕಲಾಪಗಳನ್ನು ನಡೆಯಿಸುವಲ್ಲಿ ಸಂಸತ್ತು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಒಳಗಾಗಿರುವುದಿಲ್ಲ. ಇದು ಉತ್ತಮ ನಿಯಮವೆಂದು ನಾನು ಭಾವಿಸುತ್ತೇನೆ, ಅದನ್ನು ನಾನು ಪಾಲಿಸತಕ್ಕದ್ದು ವಿಶೇಷವಾಗಿ ಲಿಖಿತ ಸೂಚನೆಗಳನ್ನು ರಾಷ್ಟ್ರಪತಿಗಳು ಯಾವ ಉದ್ದೇಶದಿಂದ ಮಂತ್ರಿ ಮಂಡಲಕ್ಕೆ ಕೊಟ್ಟಿರುವರೋ ಅದನ್ನು ಸಂಪೂರ್ಣವಾಗಿ ಸಂಸತ್ತಿನ ಅಧಿಕಾರಕ್ಕೆ ಕೊಡುವುದು ಯೋಗ್ಯವಾದುದು. ಮಾನ್ಯರೆ, ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

**ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ:–** ಕ್ಯಾಬಿನೆಟ್‌ಗೆ ನಾಮಕರಣ ಮಾಡಿದ ಸದಸ್ಯರ ಬಗೆಗೆ ಏನು?

**ಸನ್ಮಾನ್ಯರಾದ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಆ ಬಗೆಗೆ ಹೇಳಿದ್ದೇನೆ.

**ಮಾನ್ಯ ಉಪಸಭಾಪತಿ :** ನಾನು ಈಗ ತಿದ್ದುಪಡಿಗಳನ್ನು ಒಂದೊಂದರಂತೆ ಮತಕ್ಕೆ ಹಾಕುತ್ತೇನೆ.

**ಸ್ವೀಕೃತವಾದ ತಿದ್ದುಪಡಿಗಳನ್ನು ಕೆಳಗೆ ಕೊಡಲಾಗಿದೆ.**

೧. ವಿಧಿ ೬೨ ಖಂಡ (೫) ರ ನಂತರ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು ೫ ಈ ಸಂವಿಧಾನದ ಅಡಿಯಲ್ಲಿ ಆಯ್ಕೆಮಾಡುವುದು ಮತ್ತು ಅನುಸೂಚಿ ೧೧೧ ಎ ಕಾಣಿಸಿದ ಕಾರ್ಯಗಳನ್ನು ಸಾಮಾನ್ಯವಾಗಿ ರಾಷ್ಟ್ರಪತಿಗಳ ಮಾರ್ಗದರ್ಶನದಲ್ಲಿ ನಡೆಯತಕ್ಕದ್ದು, ಆದರೆ ರಾಷ್ಟ್ರಪತಿಗಳು ಮಾಡಿದ ಯಾವುದೇ ಕೃತಿಯನ್ನು ನಿಯಮಗಳನ್ನು ಬಿಟ್ಟು ಮಾಡಿದ ಕೃತಿಗಳನ್ನು ಪ್ರಶ್ನಿಸತಕ್ಕದ್ದಲ್ಲ.

೨. ವಿಧಿ ೬೨ರ ಖಂಡ (೩) ಕೌನ್ಸಿಲ್, ಮಂತ್ರಿಗಳ ಪದವನ್ನು ಕೊಡಿಸತಕ್ಕದ್ದು ತಿದ್ದುಪಡಿ ಸಂ ೧೩೨೬ ಇದು ತಿದ್ದುಪಡಿ ಲಿಸ್ಟ್ ಸಂ ೫ ಇದರ ತಿದ್ದುಪಡಿ ಸಂ ೭೧ ಇದು ಮುಂದಿನ ತಿದ್ದುಪಡಿಯು ಶ್ರೀ ಕೃಷ್ಣಮಾಚಾರಿ ಹಾಗೂ ಶ್ರೀ ಕಾಮತ ಅವರ ತಿದ್ದುಪಡಿಯ ನಂತರ.

ವಿಧಿ ೬೨ ಖಂಡ (೩)ರಲ್ಲಿ 'ಒಂದರಮೇಲೊಂದರಂತೆ ಬರುವ ಯಾವುದೇ ಆರು ತಿಂಗಳ ಅವಧಿಗೆ, ಈ ಪದಗಳ ಬದಲಿಗೆ' ನೇಮಕವಾದ ದಿನಾಂಕದಿಂದ 'ಒಂದರ ಮೇಲೊಂದರಂತೆ ಬರುವ ಆರು ತಿಂಗಳ ಅವಧಿಯಲ್ಲಿ' ಈ ಪದಗಳನ್ನು ಸೇರಿಸತಕ್ಕದ್ದು.

(ವಿಧಿ ೬೨ ತಿದ್ದುಪಡಿಯ ನಂತರ ಸ್ವೀಕರಿಸಲ್ಪಟ್ಟಿತು ಮತ್ತು ಸಂವಿಧಾನದಲ್ಲಿ ಸೇರಿಸಲಾಯಿತು)

*****

## ವಿಧಿ ೬೬

**ಸನ್ಮಾನ್ಯರಾದ ಡಾ॥ ಬಿ.ಆರ್. ಅಂಬೇಡ್ಕರ್** (ಬಾಂಬೆ : ಸಾಮಾನ್ಯ) : ನಾನು ಯಾವುದೇ ತಿದ್ದುಪಡಿಗಳನ್ನು ಸ್ವೀಕರಿಸುವುದಿಲ್ಲ ಮತ್ತು ಯಾವುದೇ ಉತ್ತರ ಕೊಡುವುದು ಅವಶ್ಯವಿದೆಯೆಂದು ನನಗೆ ಅನಿಸುವುದಿಲ್ಲ.

**ಮಾನ್ಯ ಉಪಸಭಾಪತಿ:** ಈಗ ನಾನು ಒಂದರ ನಂತರ ಇನ್ನೊಂದು ಹೀಗೆ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ತಿದ್ದುಪಡಿ ಸಂ ೧೩೫೮ ಪ್ರಶ್ನೆಯು "ವಿಧಿ ೬೬ ರಲ್ಲಿಯ ಪದಗಳು ಮತ್ತು ಸದನದ ಎರಡೂ ಮನೆಗಳಿಗೆ ಅನುಕ್ರಮವಾಗಿ ಗೊತ್ತಿರಬೇಕು." ರಾಜ್ಯ ಸಭೆಯು ಈ ಪದಗಳನ್ನು ತೆಗೆದುಹಾಕಬೇಕು. ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಪತಿ:** ತಿದ್ದುಪಡಿ ಸಂ ೧೩೫೮, ಪ್ರಶ್ನೆಯು ಹೀಗೆ ಇದೆ.

"ವಿಧಿ ೬೬ ರಲ್ಲಿಯ ಪದಗಳು : ಒಕ್ಕೂಟಕ್ಕೆ ಒಂದು ಸಂಸತ್ತು ಇರತಕ್ಕದ್ದು" ಈ ಪದಗಳ ಬದಲು ಒಕ್ಕೂಟದ ವಿಧಾನಮಂಡಲಕ್ಕೆ ಇದನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು ಮತ್ತು ಈ ಪದಗಳನ್ನು ಸೇರಿಸತಕ್ಕದ್ದು.

ಈ ತಿದ್ದುಪಡಿಯು ತಿರಸ್ಕರಿಸಲ್ಪಟ್ಟಿತು.

**ಮಾನ್ಯ ಉಪಸಭಾಪತಿ:** ತಿದ್ದುಪಡಿ ಸಂ **೧೩೫೭** ರ ಪ್ರಶ್ನೆಯು ಹೀಗೆ ಇದೆ. 'ವಿಧಿ **೬೬** ರಲ್ಲಿ ರಾಷ್ಟ್ರಪತಿಗಳು ಮತ್ತು ಈ ಪದಗಳನ್ನು ತೆಗೆದುಹಾಕಬೇಕು.

ಈ ತಿದ್ದುಪಡಿಯು ತಿರಸ್ಕರಿಸಲ್ಪಟ್ಟಿತು.

**ಮಾನ್ಯ ಉಪಸಭಾಪತಿ:** ಪ್ರಶ್ನೆಯು ಹೀಗಿದೆ– 'ವಿಧಿ **೬೬** ಇದು ಸಂವಿಧಾನದ ಭಾಗವಾಗಿದೆ.

ಈ ತಿದ್ದುಪಡಿಯು ಸ್ವೀಕರಿಸಲ್ಪಟ್ಟಿತು. ವಿಧಿ **೬೬** ಇದನ್ನು ಸಂವಿಧಾನದಲ್ಲಿ ಸೇರಿಸಲಾಗಿದೆ.

*****

## ವಿಧಿ ೬೭

**ಮಾನ್ಯ ಸಭಾಪತಿಗಳು:** ಮುಂದೆ ನಾವು ಈಗ ವಿಧಿ **೬೭** ಕ್ಕೆ ಬರುತ್ತೇವೆ. ಪ್ರಾಸ್ತಾವನೆ: ಸೂಚನೆ ಹೀಗಿದೆ.

'ವಿಧಿ **೬೭** ಇದು ಸಂವಿಧಾನದ ಭಾಗವಾಗಿರುತ್ತದೆ.'

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ– ಸಾಮಾನ್ಯ) **:** ಸನ್ಮಾನ್ಯ ಸಭಾಪತಿಗಳೇ, ನನ್ನದೊಂದು ಪ್ರಕ್ರಿಯೆಯನ್ನು ಕುರಿತು ನಮ್ರಸೂಚನೆ ಮಾಡುವುದು ಇದೆ. ಈ ವಿಧಿಯು ಸಂಸತ್ತಿನ ಎರಡು ಸದನಗಳಿಗೆ ಸಂಬಂಧಿಸಿದ್ದು ಇದೆಯೆಂಬುದು ತಮ್ಮ ಗಮನಕ್ಕೆ ಬಂದಿದೆ. ಉದಾ: ರಾಜ್ಯ ಸಭೆ ಮತ್ತು ಲೋಕಸಭೆ– ಇದು ಒಂಬತ್ತು ಖಂಡಗಳನ್ನು ಒಳಗೊಂಡಿವೆ ಮತ್ತು ನಾನು ಸೂಚಿಸಬಯಸುವುದೇನೆಂದರೆ ಚರ್ಚೆಯ ಸ್ಪಷ್ಟತೆಯ ದೃಷ್ಟಿಯಿಂದ ಈ ವಿಧಿಯನ್ನು ಮೂರು ಭಾಗಗಳನ್ನಾಗಿ ಭೇದಿಸಬಹುದು. ಒಂದು ರಾಜ್ಯಸಭೆಯನ್ನು ರಚಿಸುವ ಕುರಿತು–ಖಂಡಗಳು (೧) ರಿಂದ (೪) ಖಂಡಗಳು, (೫) ರಿಂದ (೭)ಇವು ಲೋಕಸಭೆಯನ್ನು ರಚಿಸುವ ಕುರಿತು ಇವೆ. ಖಂಡಗಳು (೮) ಮತ್ತು (೯) ಇವು ತತ್ಪರಿಣಾಮ ಕುರಿತು ಇವೆ. ಎರಡೂ ಸದನಗಳು ಗಣತಿ ಮತು ಗಣತಿಯ ಕಾರ್ಯ ಹಾಗೂ ಅದರ ಲೆಕ್ಕ ಮಾಡುವುದರ ಪರಿಣಾಮ ಕುರಿತು ಇರುತ್ತವೆ.

ನಾನು ಈ ವಿಷಯವನ್ನು ಕುರಿತು ಡಾ॥ ಅಂಬೇಡ್ಕರ್ ಅವರೊಂದಿಗೆ ಮಾತನಾಡಿದೆ ಮತ್ತು ಅವರು ಹಾಗೆ ತಮ್ಮಷ್ಟಕ್ಕೆ ತಾವೇ ತಮ್ಮ ಪುಸ್ತಕದಲ್ಲಿ ಗುರ್ತು ಹಾಕಿಕೊಂಡಿರುವುದಾಗಿ ಹೇಳಿದರು ಮತ್ತು ಮಾಡುವುದಾಗಿ ಮೂರನೆಯ ಸಲ ಓದುವ ಕಾಲಕ್ಕೆ ಅವರು ಕೆಲವು ಬದಲಾವಣೆಗಳಿಗೆ ಎಡೆಮಾಡಿಕೊಡುವುದಾಗಿ ಹೇಳಿದ್ದರು. ಆದ್ದರಿಂದ ಈಗ ನೇರವಾಗಿ ಅದನ್ನು ಬಿಟ್ಟು ಬಿಡುವುದು ಅಷ್ಟು ಯೋಗ್ಯವಲ್ಲ. ಆದರೆ ಈ ಎಲ್ಲಾ ತಿದ್ದುಪಡಿಗಳನ್ನು ರಾಜ್ಯಸಭೆಗೆ ಕಳುಹಿಸಬೇಕೆಂದು ವಿನಂತಿಸುತ್ತೇನೆ.

ಖಂಡ (೧) ರಿಂದ (೪) ಇವುಗಳನ್ನು ಒಟ್ಟಾರೆ ತೆಗೆದುಕೊಂಡು ಅವುಗಳ ಬಗೆಗೆ ಚರ್ಚೆಯನ್ನು ಮೊದಲು ಕೇಂದ್ರಿಕರೀಸಬೇಕೆಂದು ನಾನು ವಿನಂತಿಸುತ್ತೇನೆ. ಮತ್ತು ಈ ವಿಧಿಯು ತಿದ್ದುಪಡಿಗಳಿಗೆ ಮುಕ್ತವಾಗಿರಬೇಕು. ಚರ್ಚೆಯ ಮುಗಿದನಂತರ ತಾವೂ ಪೂರ್ಣ ಖಂಡ ಒಟ್ಟಾಗಿ ಮತಕ್ಕೆ ಹಾಕಬಹುದು. ಒಟ್ಟಾರೆ ನಾನು ಇದನ್ನು ಸೂಚಿಸುವುದೆಂದರೆ ಸ್ಪಷ್ಟತೆಯ ದೃಷ್ಟಿಯಿಂದ, ಯಾಕೆಂದರೆ, ರಾಜ್ಯಸಭೆಯ ಸನ್ಮಾನ್ಯ ಸದಸ್ಯರು ಈ ವಿಷಯ ಕುರಿತು ತುಂಬಾ ಸೀಮಿತ ಪ್ರದೇಶದಲ್ಲಿ ಅದರ ಮೇಲೆ ಚರ್ಚಿಸುತ್ತಾರೆ ಮತ್ತು ನಂತರ ವಿಧಿಯ ಭಾಗ ಕುರಿತು ರಾಜ್ಯಸಭೆಯು ಚರ್ಚಿಸಬಹುದು.

**ಸನ್ಮಾನ್ಯ ಉಪಸಭಾಪತಿಗಳು:** ಡಾ॥ ಅಂಬೇಡ್ಕರ್ ನಿಮಗೆ ಈ ವಿಷಯದಲ್ಲಿ ಎಂದರೆ ಶ್ರೀ ಭಾರತಿ ಅವರ ಸೂಚನೆಯನ್ನು ಕುರಿತು ಏನಾದರೂ ಹೇಳುವುದಿದೆಯೆ ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್:** ಅವರ ಸೂಚನೆಯನ್ನು ಕುರಿತು ಚರ್ಚೆ ಉದ್ದೇಶಕ್ಕಾಗಿ ಅನುಕೂಲ ಮಾಡಿಕೊಡಲು ನಾನು ಸಮ್ಮತಿಸುವೆನು.

**ಮಾನ್ಯ ಉಪಸಭಾಪತಿಗಳು:–** ಈ ಮೇಲೆ ನಾವು ಈ ತಿದ್ದುಪಡಿಗಳನ್ನು ಅವುಗಳ ನಿರ್ದಿಷ್ಟ ಕ್ರಮದಲ್ಲಿ ತೆಗೆದುಕೊಳ್ಳಬಹುದು

********

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತೇನೆ.

ವಿಧಿ **೬೭** ರ ಖಂಡ (೧) ಕೆಳಗಿನ ವಿಷಯವನ್ನು ಬದಲಾಗಿ ಸೇರಿಸತಕ್ಕದ್ದು.

(೧) ರಾಜ್ಯಸಭೆಯು ಎರಡು ನೂರ ಐವತ್ತು ಸದಸ್ಯರಿಗಿಂತ ಹೆಚ್ಚಿನ ಸದಸ್ಯರನ್ನು ಹೊಂದಿರತಕ್ಕದ್ದಲ್ಲ. ಅವರೆಂದರೆ

ಎ) ೧೨ ಜನ ಸದಸ್ಯರನ್ನು ವಿಧಿ ಖಂಡ (೨) ರಲ್ಲಿ ಕಾಣಿಸಿದಂತೆ ನಾಮಕರಣ ಮಾಡತಕ್ಕದ್ದು.

ಬಿ) ಉಳಿದವರು ರಾಜ್ಯಗಳ ಪ್ರತಿನಿಧಿಗಳಾಗಿರತಕ್ಕದ್ದು, ಇದರಲ್ಲಿ ಮಹತ್ವದ ಒಂದೇ ಸಂಗತಿಯೆಂದರೆ ಸಂಖ್ಯೆ ೧೫ ಇದನ್ನು ೧೨ಕ್ಕೆ ಇಳಿಸಲಾಗಿದೆ.

(ತಿದ್ದುಪಡಿ ಸಂ ೧೩೭೧, ೧೩೭೩ ಮತ್ತು ೧೩೭೪ ಇವುಗಳನ್ನು ಮಂಡಿಸಿಲ್ಲ.)

******

**ಮಾನ್ಯ ಉಪಸಭಾಪತಿಗಳು:–** ಮೂರು ತಿದ್ದುಪಡಿಗಳನ್ನು ಒಟ್ಟಾರೆ ವಿಚಾರಿಸೋಣ. ತಿದ್ದುಪಡಿ ಸಂಖ್ಯೆ ೧೩೭೧, ೧೩೭೩ ಮತ್ತು ೧೩೭೪ ಇವು ಮೊದಲಿಗೆ ಬಹಳ ವ್ಯಾಪಕವಾಗಿದೆ ಎಂದು ಕಂಡುಬರುತ್ತದೆ. ಮತ್ತು ಹೀಗೆ ಮಂಡಿಸಲಾಗುತ್ತದೆ.

ತಿದ್ದುಪಡಿಗಳ ಸಂಖ್ಯೆ ೧೩೭೧, ೧೩೭೩ ಮತ್ತು ೧೩೭೪ ಇವುಗಳನ್ನು ಮಂಡಿಸಿಲ್ಲ.

ತಿದ್ದುಪಡಿಗಳ ಸಂಖ್ಯೆ ೧೩೭೫, ಮತ್ತು ೧೩೭೬

ತಿದ್ದುಪಡಿ ಸಂಖ್ಯೆ ೧೩೭೫ ಇದನ್ನು ಮಂಡಿಸಬಹುದು. ತಿದ್ದುಪಡಿ ಸಂಖ್ಯೆ ೧೩೭೬ ಇದು ತಿದ್ದುಪಡಿ ಸಂಖ್ಯೆ ೧೩೭೫ರ ತದ್ರೂಪವಿದೆ. ಆದ್ದರಿಂದ ತಿದ್ದುಪಡಿ ಸಂಖ್ಯೆ ೧೩೭೫ ಇದನ್ನು ನಾನು ಮತಕ್ಕೆ ಹಾಕುವುದಿಲ್ಲ, ಡಾ. ಬಿ.ಆರ್. ಅಂಬೇಡ್ಕರ್

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿಗಳೆ, ನಾನು ಈಗ ವಿನಯದಿಂದ ಮಂಡಿಸುತ್ತೇನೆ. ವಿಧಿ ೬೭ ಇದರ ಖಂಡ (೧) ಕೆಳಗಿನ ಹೊಸ ಖಂಡವನ್ನು ಸೇರಿಸತಕ್ಕದ್ದು.

(೧ಎ) ರಾಜ್ಯಸಭೆಯ ಪ್ರತಿನಿಧಿಗಳ ಸ್ಥಳಗಳ ಹಂಚುವಿಕೆಯು ಅನುಸೂಚಿ ೧೧೧ ಒಳಗೊಂಡ ಉಪಬಂಧದ ಪ್ರಕಾರ ಇರತಕ್ಕದ್ದು.

* * * * *

**ಮಾನ್ಯ ಉಪಸಭಾಪತಿಗಳು :** ತಿದ್ದುಪಡಿ ಸಂಖ್ಯೆ ೧೩೮೦ ಇದು ಡಾ. ಅಂಬೇಡ್ಕರ ಅವರ ಹೆಸರಿನಲ್ಲಿ ಇದೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿಗಳೆ ನಾನು ಮಂಡಿಸುತ್ತೇನೆ.

ವಿಧಿ ೬೭, ಖಂಡ (೨)ಕ್ಕೆ ಕೆಳಗಿನಂತೆ ಬದಲಾಯಿಸಬೇಕು.

(೨) ಈ ವಿಧಿಯ ಖಂಡ (೧) ಇದು ಉಪಖಂಡ (ಎ) ಅಡಿಯಲ್ಲಿ ರಾಷ್ಟ್ರಪತಿಗಳು ನಾಮಕರಣ ಮಾಡತಕ್ಕ ಸದಸ್ಯರಿಗೆ ವಿಶೇಷ ಜ್ಞಾನ ಇಲ್ಲವೆ ಕೆಳಗೆ ಕಾಣಿಸಿದ ಯಾವುದೇ ವಿಷಯದಲ್ಲಿ ಸ್ವಂತ ಅನುಭವ ಹೊಂದಿರಬೇಕು.

ಉದಾ : ವಿದ್ಯೆ, ಕಲೆ, ವಿಜ್ಞಾನ ಮತ್ತು ಸಾಮಾಜಿಕ ಸೇವೆ.

**ಸನ್ಮಾನ್ಯ ಉಪ ಸಭಾಪತಿಗಳು :** ಡಾ. ಅಂಬೇಡ್ಕರ

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿಗಳೇ ತಿದ್ದುಪಡಿ ಸಂಖ್ಯೆ ೧೩೬೯, ೧೩೭೫, ೧೩೭೮, ೧೩೮೦, ೧೪೦೦ ಮತ್ತು ೧೪೦೩, ೯೪೯, ಪು ೧೨೨೫ ರಿಂದ ೧೨೨೮ ಮತ್ತು ೧೪೦೩ ಇವು ಶ್ರೀ ಮಹಬೂಬ ಅಲಿ ಬೇಗ್ ಅವರು ಮಂಡಿಸಿದ ಕಳೆದ ಎರಡು ತಿದ್ದುಪಡಿಗಳು (೧೪೦೦ ಮತ್ತು ೧೪೦೩) ಇವು ಸಹ ಅದೇ ವಿಷಯವನ್ನು ಒಳಗೊಂಡಿದ್ದರಿಂದ ಈ ತಿದ್ದುಪಡಿಗಳಿಗೆ ನಾನು ಒಪ್ಪುತ್ತೇನೆ. ತಿದ್ದುಪಡಿ ಸಂಖ್ಯೆ ೧೪೦೭ ಇದನ್ನು ನಾನು ಸಂತೋಷದಿಂದ ಒಪ್ಪಿಕೊಳ್ಳಬಹುದಾಗಿತ್ತು. ಆದರೆ ದುರ್ದೈವದಿಂದ ತಿದ್ದುಪಡಿಯ ಮೂಲ ಪಾಠ ಓದುವುದರಿಂದ ಅನ್ನಿಸುವುದು ಏನೆಂದರೆ ವಿಧಿ ೬೭ ರಲ್ಲಿ ಖಂಡ (೩)ರಲ್ಲಿ ಉಪಯೋಗಿಸಿದ ಸಾಮಾನ್ಯ ಭಾಷೆಯಲ್ಲಿ ಇದು ಸೂಕ್ತವಾಗುವುದಿಲ್ಲ. ಆ ಒಂದು ಕಾರಣದಿಂದ ನಾನು ತಿದ್ದುಪಡಿ ಸಂಖ್ಯೆ ೧೪೦೩ಕ್ಕೆ ಪ್ರಾಶಸ್ತ್ಯ ಕೊಡುತ್ತೇನೆ. ಯಾಕೆಂದರೆ ಅದು ವಿಧಿಯ ಭಾಷೆಯಲ್ಲಿ ಯೋಗ್ಯವಾಗಿ ಹೊಂದಿಕೊಳ್ಳುತ್ತದೆ. ಉಳಿದ ತಿದ್ದುಪಡಿಗಳಲ್ಲಿ ಮೂರಕ್ಕೆ ಮಾತ್ರ ವಿಶೇಷ ಪರಿಶೀಲನೆಯ ಅವಶ್ಯಕತೆಯು ಇದೆಯೆಂದು ನಾನು ಭಾವಿಸುತ್ತೇನೆ. ಅದರಲ್ಲಿಯ ಒಂದು ತಿದ್ದುಪಡಿಯು ಶ್ರೀ ಕುನಿರಾಮನ್ ಅವರು ತಂದ ತಿದ್ದುಪಡಿಯಾಗಿದೆ. ಅದರ ಉದ್ದೇಶ ಮತ್ತು ....

**ಮಾನ್ಯ ಉಪ ಸಭಾಪತಿಗಳು :** ಇದನ್ನು ಮಂಡಿಸಲಿಲ್ಲ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಹಾಗಾದರೆ ನಾನು ಏನಾದರೂ ಹೇಳುವುದರ ಅವಶ್ಯಕತೆಯು ಇದೆಯೆಂದು ನನಗೆ ಅನಿಸುವುದಿಲ್ಲ. ಈಗ ಅಲ್ಲಿ ಎರಡೇ ಉಳಿದಿರುತ್ತವೆ.

ಒಂದು ತಿದ್ದುಪಡಿಯು ಶ್ರೀ ಕುಂಜ್ರು ಅವರದು. ಅವರು ಸ್ವಾಭಾವಿಕವಾಗಿ ಗಣನೀಯವಾಗಿ ಸಂವಿಧಾನದ ಕರಡಿನಲ್ಲಿಯ ಬಂಧದ ಬಗೆಗೆ ಆಂದೋಲನ ಮಾಡಿದರು ಮತ್ತು ಯಾವುದು ನೂರಕ್ಕೆ ನಾಲ್ವತ್ತರಂತೆ ರಾಜ್ಯಗಳ ಪ್ರತಿನಿಧಿಗಳನ್ನು ಕಳುಹಿಸಲು ವ್ಯವಸ್ಥೆ ಮಾಡಿದೆಯೋ ಮತ್ತು ಯಾವ ಕಾರಣಕ್ಕಾಗಿ ಈ ಉಪಬಂಧವನ್ನು ಸೇರಿಸಲಾಗಿದೆಯೆಂಬುದರ ಬಗೆಗೆ ಹಾಗೂ ಯಾವ ಕಾರಣಕ್ಕಾಗಿ ಎಂಬುದರ ಬಗೆಗೆ ಮತ್ತು ಸದ್ಯದ ಸ್ಥಿತಿಯೇನು ಎಂಬುದರ ಬಗೆಗೆ ನಾನು ವಿವರಣೆ ಕೊಡುವುದು ಸೂಕ್ತವೆಂದು ನನಗೆ ಅನಿಸುತ್ತದೆ. ಭಾರತ ಸರಕಾರದ ಅಧಿನಿಯಮದಲ್ಲಿ ವ್ಯವಸ್ಥೆ ಮಾಡಿದ್ದೇನೆಂದರೆ ರಾಜ್ಯಗಳ ಜನಸಂಖ್ಯೆಯು ಭಾರತದ ಒಟ್ಟು ಜನಸಂಖ್ಯೆಯ ನಾಲ್ಕನೇ–ಒಂದರಷ್ಟು ಕೆಳಗಿನ ಮನೆಯಲ್ಲಿ ಇದ್ದಂತೆ ಆ ರಾಜ್ಯಗಳು ಜನಸಂಖ್ಯೆಯ ಮೂರನೇ–ಒಂದು ಅಂಶದಷ್ಟು ಇದೆ. ಅಂತಹ ಐದನೆಯ ಎರಡು ಅಂಶದಷ್ಟು ಪ್ರಾತಿನಿಧ್ಯವನ್ನು ಪಡೆಯುತ್ತವೆ. ಅಂದರೆ ಪ್ರತಿಶತ ೪೦ರಷ್ಟು ಪಡೆಯುತ್ತವೆ. ಈ ಉಪಬಂಧಕ್ಕೆ ಇದುವೇ ಮೂಲವಲ್ಲ ಮತ್ತು ಯಾಕೆ ಭಾರತ ಸಂವಿಧಾನದ ಕರಡಿನಲ್ಲೆ ಈ ಉಪಬಂಧವನ್ನು ಮಂಡಿಸಲಾಯಿತೆಂಬುದರ ಬಗೆಗೆ ನಾನು ಹಿಂದಕ್ಕೆ ಹೋಗಬೇಕೆಂದು ಮಾಡಿದ್ದೇನೆ. ಮತ್ತು ಈ ಖಂಡದ ಇತಿಹಾಸವನ್ನು ಕೊಡುತ್ತೇನೆ.

ಈ ಸದನವು ಒಕ್ಕೂಟದ ಅಧಿಕಾರಗಳ ಸಮಿತಿ ಎಂಬ ಒಂದು ಸಮಿತಿಯನ್ನು ನೇಮಿಸಿದುದನ್ನು

ಈ ಸದನದ ಸದಸ್ಯರು ನೆನಪು ಮಾಡಿಕೊಳ್ಳಲಿ. ಈ ಸಮಿತಿಯು ಪ್ರಾತಿನಿಧ್ಯದ ಸಾಮಾನ್ಯ ನಿಯಮಗಳನ್ನು ಬ್ರಿಟಿಷ್ ಭಾರತದಲ್ಲಿ ಜನರಿಗೆ, ಅದರಂತೆ ಭಾರತದ ಸಂಸ್ಥಾನಗಳಲ್ಲಿ ಇರುವ ಜನರಿಗೆ ಶಿಫಾರಸು ಮಾಡಿತು ಮತ್ತು ಆ ನಿಯಮವು ಹೇಗಿದ್ದಿತೆಂದರೆ ಪ್ರತಿ ಹತ್ತು ಲಕ್ಷದಿಂದ ಐವತ್ತು ಲಕ್ಷದ ಜನಸಂಖ್ಯೆಗೆ ಒಂದು ಸ್ಥಾನ ಮತ್ತು ಪ್ರತಿ ಹೆಚ್ಚಿನ ಇಪ್ಪತ್ತು ಲಕ್ಷಕ್ಕೆ ಒಂದು ಸ್ಥಾನ. ನಾನು ಹೇಳಿದಂತೆ ಇದು ಒಂದು ನಿಯಮ. ಇದನ್ನು ಪ್ರಾಂತಗಳಿಗೂ ಅದರಂತೆ (ಸಂಸ್ಥಾನ) ರಾಜ್ಯಗಳಿಗೂ ಅನ್ವಯಿಸಬೇಕು. ಆದರೆ ಒಕ್ಕೂಟ ಅಧಿಕಾರಿಗಳ ಸಮಿತಿಯು ತನ್ನ ವರದಿಯನ್ನು ಸಂವಿಧಾನದ ಸಭೆ ಮುಂದೆ ವಿಚಾರಣೆಗೆ ತಂದಿತು. ರಾಜ್ಯಗಳ ಪ್ರತಿನಿಧಿಗಳು ಒಕ್ಕೂಟ ಅಧಿಕಾರಗಳ ಸಮಿತಿಯ ಈ ವರದಿಗೆ ಬಹು ಸಂಖ್ಯೆಯಲ್ಲಿ ತಿದ್ದುಪಡಿಗಳನ್ನು ತಂದುದು ಕಂಡುಬರುತ್ತದೆ. ಭಾರತದ ಪ್ರಾಂತಗಳ ಪ್ರತಿನಿಧಿಗಳ ಹಾಗೂ ಸಂಸ್ಥಾನಗಳ ಪ್ರತಿನಿಧಿಗಳ ಮಧ್ಯೆ ಅನೇಕ ಒಪ್ಪಂದಗಳಾದವು. ಇದರ ಪರಿಣಾಮವಾಗಿ ಸನ್ಮಾನ್ಯ ಸದಸ್ಯರು ಸಂವಿಧಾನದ ಸಭೆಯ ಚರ್ಚೆ ದಿನಾಂಕ ೩೧ನೆಯ ಜುಲೈ ೧೯೪೭ರದವುಗಳನ್ನು ಉಲ್ಲೇಖಿಸಬಯಸಿದರೆ, ನನ್ನ ಮಿತ್ರರು ಮತ್ತು ಸಹೋದ್ಯೋಗಿಗಳು ಆದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಒಕ್ಕೂಟ ಅಧಿಕಾರಿಗಳ ಸಮಿತಿಯ ವರದಿಯನ್ನು ಸ್ವೀಕರಿಸಬೇಕೆಂದು ಸೂಚನೆ ಮಂಡಿಸಿದರು. ರಾಜ್ಯಗಳ ಪ್ರಾತಿನಿಧ್ಯವು ಪ್ರತಿಶತಕಕ್ಕಿಂತ ಮಿಕ್ಕಬಾರದೆಂಬ ತಿದ್ದುಪಡಿಯನ್ನು ಮಂಡಿಸಿದರು. ಈಗ ನಾವು ಈ ನಿಯಮವನ್ನು ಸ್ವೀಕರಿಸಬೇಕೆ? ಇಲ್ಲವೆ ಸಂವಿಧಾನದ ಕರಡಿನಲ್ಲಿ ಮಂಡಿಸಬೇಕೆ? ಈ ಕಲಾಪಗಳು ನಾನು ಭಾವಿಸಿದಂತೆ ಈ ಉಪಬಂಧ ರಾಜ್ಯಗಳಿಗೆ ಪ್ರತಿಶತ ೪೦ರಂತೆ ಪ್ರಾತಿನಿಧ್ಯ ಕೊಡುವಂತೆ ಮಂಡಿಸಿದ್ದು. ಅವರಿಗೆ ಮಾನ್ಯತೆ ಕೊಡುವ ಉದ್ದೇಶದಿಂದಲ್ಲ. ಆದರೆ ಅನೇಕ ರಾಜ್ಯಗಳು ಇರುವುದರಿಂದ ಭಾರತದ ಒಕ್ಕೂಟವನ್ನು ಸೇರಬಯಸಿದ ಪ್ರತಿಯೊಂದು ರಾಜ್ಯಕ್ಕೂ ಪ್ರಾತಿನಿಧ್ಯವನ್ನು ಕೊಡಲು ಸಾಧ್ಯವಾಗಲಿಕ್ಕಿಲ್ಲ. ಏಕೆಂದರೆ, ಅದು ರಾಜ್ಯಗಳ ಒಟ್ಟು ಪ್ರಾತಿನಿಧ್ಯದ ಸಂಖ್ಯೆಯನ್ನು ಬಹುದೊಡ್ಡದಾಗಿ ಹೆಚ್ಚಿಸದ ಹೊರತು ಸಾಧ್ಯವಿಲ್ಲ. ಅವರನ್ನು ಭಾರತದ ಒಕ್ಕೂಟದಲ್ಲಿ ತರುವ ಉದ್ದೇಶದಿಂದ ಈ ಉಪಬಂಧವನ್ನು ಸೇರಿಸಲಾಗಿದೆ. ಈಗ ಪರಿಸ್ಥಿತಿಯು ಸಂಪೂರ್ಣ ಬದಲಾಗಿದೆಯೆಂಬುದನ್ನು ನಾವು ಕಾಣುತ್ತೇವೆ. ಕೆಲವು ರಾಜ್ಯಗಳು ತಮ್ಮಷ್ಟಕ್ಕೆ ತಾವೇ ಭಾರತದ ಒಕ್ಕೂಟದಲ್ಲಿ ವಿಲೀನವಾಗಿವೆ ಮತ್ತು ದೊಡ್ಡ ಒಕ್ಕೂಟವನ್ನು ಸ್ಥಾಪಿಸಿವೆ. ಕೆಲವು ರಾಜ್ಯಗಳು ಬ್ರಿಟಿಷರ ಪ್ರಾಂತದಲ್ಲಿ ವಿಲೀನವಾಗಿವೆ. ಮತ್ತು ಕೆಲವು ರಾಜ್ಯಗಳು ಮಾತ್ರ ವೈಯಕ್ತಿಕವಾಗಿ ಇದ್ದ ಹಾಗೆಯೇ ಇವೆ. ಈ ಬದಲಾವಣೆಯಿಂದ ಮೊದಲಿನ ರಾಜ್ಯಗಳ ವ್ಯವಹಾರಗಳ ಕುರಿತು ಇದನ್ನು ಮಾಡುವ ಅವಶ್ಯಕತೆ ಇರುವುದಿಲ್ಲ. ಅವು ಈಗ ಬ್ರಿಟಿಷರ ಭಾರತದ ಪ್ರಾಂತಗಳಲ್ಲಿ ವಿಲೀನವಾಗಿದೆ. ಈಗ ಅವುಗಳಿಗೆ ಪ್ರತ್ಯೇಕ ಪ್ರಾತಿನಿಧ್ಯದ ಅವಶ್ಯಕತೆಯು ಇರುವುದಿಲ್ಲ. ಅವು ಪ್ರಾಂತಗಳ ಮೂಲಕ ಪ್ರಾತಿನಿಧ್ಯ ಪಡೆಯುತ್ತವೆ. ಅದರಂತೆ ಭಾರತ ಒಕ್ಕೂಟದಲ್ಲಿ ಒಂದಾದ ರಾಜ್ಯಗಳು, ಅವುಗಳಿಗೆ ಪ್ರತ್ಯೇಕ ಪ್ರಾತಿನಿಧ್ಯ ಬೇಡ. ಹೀಗೆ ವಿಲೀನವಾದ ರಾಜ್ಯಗಳಿಗೆ ಪ್ರತ್ಯೇಕ ಪ್ರಾತಿನಿಧ್ಯದ ಅವಶ್ಯಕತೆಯೂ ಇರುವುದಿಲ್ಲ. ವಿಲೀನವಾದ ಪ್ರತಿಯೊಂದು ರಾಜ್ಯಕ್ಕೆ ಪ್ರತ್ಯೇಕ ಪ್ರಾತಿನಿಧ್ಯದ ಅವಶ್ಯಕತೆಯೂ ಇರುವುದಿಲ್ಲ. ಒಟ್ಟಾರೆ ಪ್ರಾತಿನಿಧ್ಯವನ್ನು ಪ್ರತಿಯೊಂದು ಹಿಂದಕ್ಕೆ ಒಂಟಿಯಾಗಿದ್ದ ಘಟಕವು ಇಂದು ಹಂಚಿಕೊಳ್ಳುತ್ತದೆ. ಅದರ ಪರಿಣಾಮವಾಗಿ ನಾನು ಮಂಡಿಸಿದ ತಿದ್ದುಪಡಿಯು, ಅದು ಪರಿಶಿಷ್ಟ ೩–ಎ ದ ಬಗೆಗೆ ಹೇಳುತ್ತದೆ. ಯಾವುದೋ ದುರ್ದೈದಿಂದ ಸದನದ ಮುಂದಿಲ್ಲ. ಆದರೆ ಒಂದು ತಿದ್ದುಪಡಿಯನ್ನಾಗಿ ಪರಿಶಿಷ್ಟಗಳಿಗೆ ಬಂದಾಗ ಮಂಡಿಸಲಾಗುವುದು. ನಾವು ಮಾಡಲು ಉದ್ದೇಶಿಸಿರುವುದು ಈ ಪ್ರಕಾರ ಇದೆ.

ರಾಜ್ಯಗಳಿಗೆ ಪ್ರತಿಶತ ೪೦ರ ಪ್ರಮಾಣದಲ್ಲೇ ಕೊಟ್ಟಿದ್ದನ್ನು ನಾವು ತೆಗೆದುಹಾಕಿದ್ದೇವೆ. ಅದನ್ನು ಮೇಲ್ಮನೆಯಲ್ಲಿ ಕೊಡಲಾಗುವುದು. ಭಾರತದ ರಾಜ್ಯಗಳಿಗೆ ಅದರಂತೆ ಪ್ರಾಂತಗಳಿಗೆ ಸಮಾನ ಪ್ರಾತಿನಿಧ್ಯವನ್ನು

ಕೊಡಲಾಗುವುದು. ಈ ಕ್ಷಣಕ್ಕೆ ಅವು ನಿಷ್ಕೃಷ್ಟವಾದ ಸಂಖ್ಯೆಗಳಾಗಿರದಿದ್ದರೂ ನಾನು ಕೆಲವನ್ನು ಉದಾಹರಿಸುವ ಸ್ಥಿತಿಯಲ್ಲಿದ್ದೇನೆ. ಅವು ನಿಮಗೆ ಪರಿಶಿಷ್ಟ ೩–ಎ ದ ವಿವರಗಳ ಚಿತ್ರವನ್ನು ಕೊಡುತ್ತದೆ.

ಪರಿಶಿಷ್ಟ ೩–ಎ ದ ಪ್ರಕಾರ ಪ್ರಾಂತಗಳಿಗೆ ೧೪೧ ಸ್ಥಾನಗಳಿವೆ. ಪ್ರಾಂತಗಳ ಮುಖ್ಯ ಆಯುಕ್ತರ ಪ್ರಾಂತಗಳಿಗೆ ೨ ಸ್ಥಾನಗಳು ಮತ್ತು ರಾಜ್ಯಗಳಿಗೆ ೭೦ ಸ್ಥಾನಗಳು ಇರುವುವು. ಇದರ ಪರಿಣಾಮವಾಗಿ ಮೇಲ್ಮನೆಗೆ ಒಟ್ಟು ಚುನಾಯಿತ ಸಂಖ್ಯೆಯು ೨೧೩. ಇದಕ್ಕೆ ೧೨ ನಾಮಕರಣ ಮಾಡಿದ ಸದಸ್ಯರನ್ನು ಕೂಡಿಸಬೇಕು. ಇದರಿಂದ ಒಟ್ಟು ಸಂಖ್ಯೆಯು ೨೨೫ ಆಗುತ್ತದೆ. ನಮ್ಮ ಖಂಡ, ತಿದ್ದುಪಡಿಯ ನಂತರ ಹೇಳುವುದೇನೆಂದರೆ ರಾಜ್ಯ ಸಭೆಯ ಒಟ್ಟು ಸಂಖ್ಯೆಯು ೨೫೦ ಸ್ಥಾನಗಳನ್ನು ಮೀರುವುದಿಲ್ಲ. ಪರಿಶಿಷ್ಟ ೩ ರ ಸ್ಥಾನಗಳ ಹಂಚುವಿಕೆಯ ಪ್ರಸ್ತಾಪವು ಎರಡು ಕರಾರುಗಳನ್ನು ಪೂರೈಸುತ್ತದೆ. ಮೊದಲನೆಯದಾಗಿ ಅದು ಮನ್ನಣೆಯನ್ನು ಮತ್ತು ಎರಡನೆಯದಾಗಿ ಸಂಸತ್ತಿನ ಅತಿ ಹೆಚ್ಚಿನ ಸಂಖ್ಯೆಯನ್ನು ನಾನು ತಂದ ತಿದ್ದುಪಡಿಯ ಮೂಲಕ ಗೊತ್ತುಪಡಿಸಿದ ಸಂಖ್ಯೆಗೆ ಕಡಿಮೆಗೊಳಿಸುತ್ತದೆ. ಸಂಸತ್ತಿಗೆ ಇದು ಒಳ್ಳೇ ಸಮಾಧಾನಕರವಾದ ಸ್ಥಿತಿಯೆಂದು ನಾನು ಭಾವಿಸುವೆನು.

**ಪಂಡಿತ ಹೃದಯನಾಥ ಕುಂಜ್ರು :** ನಾನು ನನ್ನ ಸನ್ಮಾನ್ಯ ಮಿತ್ರರಿಗೆ ಒಂದು ಪ್ರಶ್ನೆಯನ್ನು ಕೇಳಬಹುದೆ? ಮೊದಲನೆಯ ಪರಿಶಿಷ್ಟದಲ್ಲಿಯ ಭಾಗ ೧೧೧ರಲ್ಲಿ ಕಾಣಿಸಿದ ರಾಜ್ಯಗಳು ಜನಸಂಖ್ಯೆಯ ಆಧಾರದ ಮೇಲೆ ಪ್ರತಿನಿಧಿಸಲ್ಪಡುವವೆ?

**ಸನ್ಮಾನ್ಯರಾದ ಡಾ. ಬಿ.ಆರ್. ಅಂಬೇಡ್ಕರ್ :** ಅಹುದು, ಈಗ ಜನಸಂಖ್ಯೆಯ ಪ್ರಮಾಣದ ಮೇಲೆ ಪಡೆಯುತ್ತದೆ.

ನಾನು ಈಗ ಎರಡನೆಯ ತಿದ್ದುಪಡಿ ಸಂಖ್ಯೆ ೧೩೭೭ ಪ್ರೊ. ಕೆ.ಟಿ. ಶಹಾರವರ ತಿದ್ದುಪಡಿಗೆ ಬರುತ್ತೇನೆ. ಪ್ರೊ.ಕೆ.ಟಿ. ಶಹಾ ಅವರು ಪ್ರಸ್ತಾಪಿಸುವುದೇನೆಂದರೆ ಒಕ್ಕಲುತನ, ಉದ್ದಿಮೆ, ವಾಣಿಜ್ಯ ಮತ್ತು ಉಳಿದ ವಿಶೇಷ ಆಸಕ್ತಿಯ ವರ್ಗದ ಪ್ರತಿನಿಧಿಗಳ ಪರಿಷತ್ತನ್ನು ಶಾಸನದ ಮೂಲಕ ಸೃಷ್ಟಿಸಬೇಕೆಂದು ಹೇಳುತ್ತಾರೆ. ಇದು ಒಂದು ಜನರಿಂದ ಕೂಡಿದ ಶಾಶ್ವತ ನಿಕಾಯ, ರಾಜ್ಯಗಳು ಅವರ ಪಗಾರ ಮತ್ತು ಭತ್ಯಗಳನ್ನು ಕೊಡಬೇಕಾಗುವುದು. ಈ ಪರಿಷತ್ತಿನ ಕರ್ತವ್ಯವೆಂದರೆ– ಪ್ರೊ.ಕೆ.ಟಿ. ಶಹಾ ಅವರು ಪ್ರಸ್ತಾಪಿಸಿದಂತೆ ಸರಕಾರಕ್ಕೆ ಶಾಸನಬದ್ಧವಾದ ಸಲಹೆ ಸೂಚನೆ ಕೊಡುವುದು ಮತ್ತು ಈ ನಿಕಾಯದೊಂದಿಗೆ ಸರಕಾರಕ್ಕೆ ಶಾಸನಬದ್ಧವಾದ ಸಮಾಲೋಚಿಸುವ ಅಧಿಕಾರ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಕ್ಕಿಲ್ಲ. ಇದಕ್ಕೆ ಯಾವುದೇ ವಿಧಾನ ಕಾರ್ಯ ಪ್ರಸ್ತಾಪಿಸಿದರೆ ಮೇಲ್ನೋಟಕ್ಕೆ ಅದು ಯಾರ ಸಮ್ಮತಿಯನ್ನು ಪಡೆಯದಿದ್ದರೆ ಮತ್ತು ಈ ಶಾಸನ ನಿಕಾಯವನ್ನು ಮಸೂದೆಯ ವಿವರಗಳ ಬಗೆಗೆ ಸಮಾಲೋಚಿಸಿದರೆ ಏನು ಪ್ರಯೋಜನ. ಪ್ರೊ.ಕೆ.ಟಿ.ಶಹಾ ಅವರದು ಇದೇ ಉದ್ದೇಶವಾಗಿದ್ದು ಈ ತಿದ್ದುಪಡಿ ತಂದಿದ್ದಾರೆ ಎಂಬುದು ನನ್ನ ನಂಬುಗೆ.

ಇದಕ್ಕೆ ಅನೇಕ ಅಭ್ಯಂತರಗಳಿವೆ. ಮೊದಲನೆಯದಾಗಿ ಭಾರತ ಸರಕಾರದಲ್ಲಿ ಇಲ್ಲವೆ ಪ್ರಾಂತೀಯ ಸರಕಾರಗಳಲ್ಲಿ ಯಾವುದೇ ಖಾತೆಯನ್ನು ಹೊಂದಿದ್ದವರಿಗೆ ಇದು ಭಾರತ ಸರಕಾರದಲ್ಲಿ ಇಲ್ಲವೆ ಪ್ರಾಂತೀಯ ಸರಕಾರಗಳಲ್ಲಿ ಸಾಮಾನ್ಯ ರೀತಿಯೆಂದು ತಿಳಿದುಕೊಳ್ಳುತ್ತಾರೆ ಮತ್ತು ಅವು ಕಾನೂನಿನ ಅಂತಿಮ ಸ್ವರೂಪ ಪಡೆಯುವ ಪೂರ್ವದಲ್ಲಿಯೇ ಅವುಗಳನ್ನು ಅಳವಡಿಸಿಕೊಳ್ಳುತ್ತಾರೆ. ಭಾರತ ಸರಕಾರವು ಒಂದು ನಿರ್ದಿಷ್ಟ ವಿಷಯ ಕುರಿತು ವ್ಯವಸ್ಥಿತ ಅಭಿಪ್ರಾಯಗಳನ್ನು ಕಾರ್ಯರೂಪಕ್ಕೆ ತರಲು ಸಾಕಷ್ಟು ಕ್ರಮಗಳನ್ನು ಭಾರತ ಸರಕಾರವು ಕೈಗೊಂಡಿಲ್ಲ. ನನಗೆ ಅನಿಸಿದಂತೆ ಈ ಉಪಬಂಧವು ಸಾಮಾನ್ಯ ಕ್ರಮ ಇದನ್ನು ಸಂವಿಧಾನದಲ್ಲಿ ಕಾಣಿಸುವ ಅವಶ್ಯಕತೆ ಏನೂ ಇರುವುದಿಲ್ಲ. ಆದ್ದರಿಂದ ನಾನು ಭಾವಿಸಿದಂತೆ ಆ ದೃಷ್ಟಿಯಿಂದ ಇದು

ಅನವಶ್ಯಕವಾಗಿದೆ.

ನಾನು ಸಂಸತ್ತಿಗೆ ಹೇಳಬಯಸುವುದೇನೆಂದರೆ ತದನಂತರದ ಹಂತದಲ್ಲಿ ನಾನು ಒಂದು ತಿದ್ದುಪಡಿಯನ್ನು ತರುತ್ತೇನೆ. ಅದೆಂದರೆ ರಾಷ್ಟ್ರಪತಿಗಳಿಗೆ ಮೂರು ಜನರನ್ನು ರಾಜ್ಯಸಭೆಗೆ ಇಲ್ಲವೆ ಲೋಕಸಭೆಗೆ ನಾಮಕರಣ ಮಾಡುವ ಅಧಿಕಾರವನ್ನು ಕೊಡಲಾಗುತ್ತದೆ. ಆ ನಾಮಕರಣ ಹೊಂದಿದವರು ಸರಕಾರವು ತೆಗೆದುಕೊಂಡ ಕ್ರಮಗಳಲ್ಲಿ ಒಬ್ಬನಿಗೆ ಸಾಕಷ್ಟು ವಾಣಿಜ್ಯ ಅನುಭವ ಹಾಗೂ ಮಾಹಿತಿ ಇರುವವನು, ಆ ವಿಷಯದಲ್ಲಿ ನಿಷ್ಣಾತರಾದವರನ್ನು ರಾಷ್ಟ್ರಪತಿಗಳು ರಾಜ್ಯಸಭೆಗೆ ಇಲ್ಲವೆ ಲೋಕಸಭೆಗೆ ನಾಮಕರಣ ಮಾಡಬಹುದು. ಅವರು ವಿಧಾನಸಭೆಯ ಸದಸ್ಯನಾಗಿ ಈ ಕರಡು ಮಸೂದೆ ಪಾಸಾಗುವವರೆಗೆ ಮುಂದುವರಿಯುತ್ತಾರೆ. ಅವರಿಗೆ ಸಂಸತ್ತನ್ನು ಉದ್ದೇಶಿಸಿ ಭಾಷಣ ಮಾಡುವ ಹಕ್ಕು ಇದೆ. ಆದರೆ ಅವರಿಗೆ ಮತದಾನದ ಹಕ್ಕು ಇರುವುದಿಲ್ಲ. ಈ ತಿದ್ದುಪಡಿಯು ಮೂಲಕ ಕರಡು ಪ್ರತಿ ಸಮಿತಿ ಈ ಸಂಸತ್ತಿನಲ್ಲಿ ತಜ್ಞಜ್ಞಾನವನ್ನು ಯಾವುದೇ ನಿರ್ದಿಷ್ಟವೇಳೆಯಲ್ಲಿ ವಿಧಾನಸಭೆಯ ಸದಸ್ಯನನ್ನಾಗಿ (ಶಾಸಕನನ್ನಾಗಿ) ಅವಶ್ಯಗೊಳಿಸುತ್ತದೆ.

ಈ ಸಮರ್ಥನೆಯಿಂದ ನಾನು ಹೇಳಿದಂತೆ ಪ್ರೊ. ಶಹಾ ಅವರ ತಿದ್ದುಪಡಿಯನ್ನು ತಿರಸ್ಕರಿಸುತ್ತೇನೆ ಮತ್ತು ಹಾಗೆಯೆ ಉಳಿದ ತಿದ್ದುಪಡಿಗಳು ಈ ವಿಧಿಯ ಅನೇಕ ಖಂಡಗಳು ಈ ವಿಧಿಗೆ ಅವಶ್ಯವೆಂದರೆ ಒಕ್ಕಲುತನ, ಉದ್ಯೋಗ ಮತ್ತು ಇತ್ಯಾದಿ ಇವುಗಳನ್ನು ಪ್ರತಿನಿಧಿಸುವುದು, ಅನವಶ್ಯಕವಾಗಬಹುದು. ಯಾಕೆಂದರೆ, ಎಲ್ಲಿ ಯಾವುದೇ ತಜ್ಞ ಸಹಾಯವು ಅವಶ್ಯವಿದೆಯೋ ಅಲ್ಲಿ ಈ ಉಪಬಂಧವು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಸಾಕಷ್ಟು ಉಪಯೋಗ ಬೀಳುತ್ತದೆ. ಸನ್ಮಾನ್ಯ ಸದಸ್ಯರು ೧೯೧೯ರ ಅಧಿನಿಯಮವನ್ನು ನೆನಪಿಗೆ ತಂದುಕೊಳ್ಳಬಹುದು. ಆಗ ದ್ವಿ-ಪ್ರಭುತ್ವವನ್ನು ಪ್ರಾಂತಗಳಲ್ಲಿ ಪ್ರಸ್ತಾಪಿಸಲಾಯಿತು. ಅದರಂತೆಯೆ ವ್ಯವಸ್ಥೆಯನ್ನು ಭಾರತ ಸರಕಾರದ ಅಧಿನಿಯಮದಲ್ಲಿ ಸೇರಿಸಲಾಗಿದೆ. ಒಂದು ನಿರ್ದಿಷ್ಟ ವ್ಯವಸ್ಥೆಗಾಗಿ ಪ್ರಾಂತೀಯ ಸರಕಾರಗಳು ಸಹ ತಜ್ಞರನ್ನು ಸಂಸತ್ತಿಗೆ ನಾಮಕರಣ ಮಾಡಲು ಅನುಮತಿ ಕೊಡಲಾಗಿದೆ.

ಮಾನ್ಯರೆ, ನನ್ನ ತಿಳಿವಳಿಕೆ ಮತ್ತು ನಂಬುಗೆ ಏನೆಂದರೆ ಇಂತಹ ಒಂದು ನಿರ್ದಿಷ್ಟ ಪ್ರಸ್ತಾವನೆಯನ್ನು ಒಂದು ತಿದ್ದುಪಡಿಯ ಮೂಲಕ ಸಂಸತ್ತಿನ ಮುಂದೆ ತಂದಾಗ ಈ ಪ್ರಕರಣಕ್ಕೆ ಈ ತಿದ್ದುಪಡಿಯು ಸಾಕೆನಿಸುವುದು.

**ಶ್ರೀ ಆರ್.ಕೆ. ಸಿಧ್ವಾ :** ನಾಮಕರಣ ಮಾಡುವ ಖಂಡವು ಹಾಗೆಯೇ ಉಳಿದಿದೆಯೇ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅಹುದು

**ಮಾನ್ಯ ಉಪಸಭಾಪತಿಗಳು :** ನಾನು ಈಗ ತಿದ್ದುಪಡಿ ಸಂ ೧೩೭೬, ಇದನ್ನು ಮತಕ್ಕೆ ಹಾಕುತ್ತೇನೆ. ವಿಧಿ ೬೭ರ ಖಂಡ (೧)ರಲ್ಲಿ ಕೆಳಗಿನದನ್ನು ಬದಲಿಸಬೇಕು.

(೧) ರಾಜ್ಯಸಭೆಯು ಎರಡು ನೂರಾ ಐವತ್ತು ಸದಸ್ಯರಿಗಿಂತ ಹೆಚ್ಚಿನ ಸದಸ್ಯರನ್ನು ಹೊಂದಿರತಕ್ಕದ್ದಲ್ಲ.

(ಎ) ಅವರಲ್ಲಿ ಹನ್ನೆರಡು ಸದಸ್ಯರನ್ನು ಈ ವಿಧಿಯ ಖಂಡ (೨) ರಲ್ಲಿ ವ್ಯವಸ್ಥೆ ಮಾಡಿದ ರೀತಿಯಲ್ಲಿ ರಾಷ್ಟ್ರಪತಿಗಳು ನಾಮಕರಣ ಮಾಡತಕ್ಕದ್ದು.

(ಬಿ) ಉಳಿದವರು ರಾಜ್ಯಗಳ ಪ್ರತಿನಿಧಿಗಳಾಗಿರುತ್ತಾರೆ. ಈ ತಿದ್ದುಪಡಿಯು ಸ್ವೀಕರಿಸಲ್ಪಟ್ಟಿತು.

*****

ಮಾನ್ಯ ಉಪಸಭಾಪತಿಗಳು : ತಿದ್ದುಪಡಿ ಸಂಖ್ಯೆ ೧೩೭೫ ಇದು ಡಾ. ಅಂಬೇಡ್ಕರ್ ಅವರ ಹೆಸರಿನಲ್ಲಿದೆ. ನಾನು ಇದನ್ನು ಮತಕ್ಕೆ ಹಾಕುತ್ತೇನೆ, ಅದು ಹೀಗಿದೆ:

"ವಿಧಿ ೬೭ರ (೧)ನೆಯ ಖಂಡದ ಉಪಬಂಧವನ್ನು ಬಿಟ್ಟುಬಿಡತಕ್ಕದ್ದು."

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಕ್ರಿಯಾಲೋಪದ ಆಧಾರದ ಮೇಲೆ, ಮಾನ್ಯರೆ, ತಿದ್ದುಪಡಿ ಸಂಖ್ಯೆ ೧೩೭೫ ಇದು ನಿಯಮದ ವಿರುದ್ಧವಾಗಿದೆ. ಅನುಬಂಧವನ್ನೊಳಗೊಂಡ ಖಂಡವನ್ನು ಬದಲಾಗಿ ಸೇರಿಸಿದ್ದು ಇದೆ. ಈಗ ಹೊಸ ಖಂಡವನ್ನು ಸ್ವೀಕರಿಸಿದುದರಿಂದ ಉಪಬಂಧವನ್ನು ತೆಗೆದುಹಾಕಲಾಗಿದೆ. ಅಸ್ತಿತ್ವದಲ್ಲಿ ಇರದಿದ್ದುದರ ಬಗೆಗೆ ತಿದ್ದುಪಡಿಯನ್ನು ತರುವುದರಲ್ಲಿ ಯಾವ ಅರ್ಥವೂ ಇಲ್ಲ.

**ಮಾನ್ಯ ಉಪಸಭಾಪತಿಗಳು :** ಹಾಗಾದಲ್ಲಿ ನಾನು ಇದನ್ನು ಮತಕ್ಕೆ ಹಾಕುವುದಿಲ್ಲ.

(ಕೆಳಗೆ ಕಾಣಿಸಿದಂತೆ ಐದು ತಿದ್ದುಪಡಿಗಳನ್ನು ಸ್ವೀಕರಿಸಲಾಗಿದೆ, ೨೩ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು. ತಿದ್ದುಪಡಿ ಸಂಖ್ಯೆ ೧೩೭೮)

"ಕೆಳಗಿನ ಹೊಸಖಂಡವನ್ನು ಖಂಡ (೧)ರ ನಂತರ ಸೇರಿಸತಕ್ಕದ್ದು (೧ಎ) ರಾಜ್ಯಗಳಿಗೆ ಪ್ರತಿನಿಧಿ ಸ್ಥಾನಗಳನ್ನು ವಿಭಜನೆ ಮಾಡುವಾಗ ಪರಿಶಿಷ್ಟ III ಬ ಉಪಬಂಧದ ಅನ್ವಯ ಇರತಕ್ಕದ್ದು")

ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

ತಿದ್ದುಪಡಿ ಸಂಖ್ಯೆ ೧೩೮೦ (ಡಾ. ಬಿ.ಆರ್. ಅಂಬೇಡ್ಕರ್)

'ವಿಧಿ ೬೭ರ ಖಂಡ (೨) ಇದರ ಬದಲು ಕೆಳಗಣ ವಿಷಯವನ್ನು ಸೇರಿಸತಕ್ಕದ್ದು. (೨) ಈ ವಿಧಿಯ ಖಂಡ (೧) ಉಪಖಂಡ (ಎ)ದ ಅನ್ವಯ ರಾಷ್ಟ್ರಪತಿಗಳು ನಾಮಕರಣ ಮಾಡುವ ಜನರು ವಿಶೇಷವಾಗಿ ಜ್ಞಾನ ಇಲ್ಲವೆ ಕೆಳಗಣ ವಿಷಯಗಳಲ್ಲಿ ಪ್ರಾಯೋಗಿಕ ಅನುಭವ ಹೊಂದಿರಬೇಕು'. ಉದಾ: ಸಾಹಿತ್ಯ, ಕಲೆ, ವಿಜ್ಞಾನ, ಸಾಮಾಜಿಕ ಸೇವೆಗಳಲ್ಲಿ ಅನುಭವ ಹೊಂದಿದವರಿರಬೇಕು. ತಜ್ಞಜ್ಞಾನ ಪಡೆದವರಿರಬೇಕು.

ತಿದ್ದುಪಡಿಯು ಸ್ವೀಕೃತವಾಯಿತು.

ತಿದ್ದುಪಡಿ ಸಂಖ್ಯೆ ೧೪೦೦

"ವಿಧಿ ೬೭ ಖಂಡ (೩) ಉಪಖಂಡ (ಎ)ದ ಕೊನೆಗೆ ಕೆಳಗಣ ಏಕಮತ ರೀತಿ ಅನುಪಾತ ಪ್ರಮಾಣಾನುಸಾರ ಪ್ರಾತಿನಿಧ್ಯದ ಅನುಸಾರ ವರ್ಗಾಯಿತ" ತಿದ್ದುಪಡಿಯು ಸ್ವೀಕೃತವಾಯಿತು.

ತಿದ್ದುಪಡಿ ಸಂಖ್ಯೆ ೧೪೦೩

"ವಿಧಿ ೬೭ ಖಂಡ (೩) ಉಪಖಂಡ (ಬಿ)ದ ನಂತರ ಆ ಸದನದ ನಂತರ 'ಅನುಪಾತ ಪ್ರಾತಿನಿಧ್ಯ ಪದ್ಧತಿಯ ಪ್ರಕಾರ ಏಕಮತ ವರ್ಗಾಯಿತ ರೀತಿಯಲ್ಲಿ' ಈ ಪದಗಳನ್ನು ಸೇರಿಸತಕ್ಕದ್ದು."

ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

*****

**ಮಾನ್ಯ ಉಪಸಭಾಪತಿಗಳು :** ತಿದ್ದುಪಡಿ ಸಂಖ್ಯೆ ೧೪೨೫ ಇದರ ಮೊದಲ ಭಾಗ ಮತ್ತು ತಿದ್ದುಪಡಿ ಸಂಖ್ಯೆ ೧೪೨೬. ಇದು ಶ್ರೀ ಕಾಮತ್ ಅವರ ಹೆಸರಿನಲ್ಲಿದ್ದು ಇವೆರಡೂ ತದ್ರೂಪವಾಗಿದೆ. ನಾನು ತಿದ್ದುಪಡಿ ಸಂಖ್ಯೆಯ ೧೪೨೫ ಇದನ್ನು ಪ್ರಸ್ತಾಪಿಸುತ್ತೇನೆ. ನಾನು ಮಂಡಿಸುವೆನು. ಮೊದಲನೆಯ ಹಾಗೂ ಎರಡನೆಯ ಭಾಗವು. ಶ್ರೀ ಕಾಮತರವರೇ, ನಿಮ್ಮ ತಿದ್ದುಪಡಿ ಸಂಖ್ಯೆ ೧೪೨೬ ಇದನ್ನು ಮತಕ್ಕೆ ಹಾಕಬಹುದೇ.

**ಶ್ರೀ ಎಚ್.ವಿ. ಕಾಮತ್ :** ಡಾ. ಅಂಬೇಡ್ಕರ್ ಅವರು ನನಗಿಂತ ಬುದ್ಧಿಯನ್ನು ಮುಂದೆ ಸಾಗಿಸಿ ನಾನು ಹೇಳಿದುದನ್ನೇ ಹೇಳಿದ್ದಾರೆ. ಆದ್ದರಿಂದ ನಾನು ನನ್ನ ತಿದ್ದುಪಡಿಯನ್ನು ಮಂಡಿಸುವುದಿಲ್ಲ.

**ಮಾನ್ಯ ಉಪಸಭಾಪತಿಗಳು :** ಡಾ. ಅಂಬೇಡ್ಕರ್

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** (ಬಾಂಬೆ : ಸಾಮಾನ್ಯ) ನಾನು ಈಗ ಅದನ್ನು ಮಂಡಿಸುತ್ತಿಲ್ಲ.

*****

**ಪಂಡಿತ ಠಾಕೂರದಾಸ ಭಾರ್ಗವ :** ಹೆಸರಿನ ಸಹಿ ಮಾಡುವುದನ್ನು ಎರಡು ತಿಂಗಳುಗಳಲ್ಲಿ ಕಲಿಯಬಹುದು.

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ :** ಯಾವ ಪರಿಣಾಮದಿಂದ ಒಬ್ಬ ಮನುಷ್ಯನು ಕೇವಲ ತನ್ನ ಹೆಸರು ಬರೆಯಲು ಕಲಿತರೆ ಆ ಕೂಡಲೆ ಅವನು ಅಂತಹ ಓದು ಬರಹ ಬಲ್ಲವನಾಗುತ್ತಾನೆ. ಮತ್ತು ತನ್ನ ಮತವನ್ನು ಯೋಗ್ಯ ರೀತಿಯಿಂದ ಚಲಾಯಿಸುವ ವಿದ್ಯಾವಂತನಾಗುತ್ತಾನೆ. ನಾನು ಹೇಳುವುದೇನೆಂದರೆ ಅಂತಹ ಅರ್ಹತೆಯು ಅನವಶ್ಯಕವಾಗಿರುತ್ತದೆ. ನನ್ನ ಗೆಳೆಯರಾದ ಡಾ. ಅಂಬೇಡ್ಕರ್ ಅವರು ತಂದ ಔಪಚಾರಿಕ ತಿದ್ದುಪಡಿಗಳನ್ನು ನಾನು ಸಮರ್ಥಿಸುತ್ತೇನೆ. ಮತ್ತು ಶ್ರೀ ಕರೀಮುದ್ದೀನ್ ಮತ್ತು ಶ್ರೀ ಬೇಗ ಮತ್ತು ಪ್ರೊ. ಶಹಾ ಅವರು ತಂದ ತಿದ್ದುಪಡಿಗಳನ್ನು ನಾನು ವಿರೋಧಿಸುತ್ತೇನೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಸಭಾಪತಿಗಳೇ, ಮಾನ್ಯರೇ ನಾನು ಪ್ರೊ. ಶಹಾ ಅವರ ತಿದ್ದುಪಡಿ ಸಂಖ್ಯೆ ೧೪೧೭, ೧೪೨೬, ೧೪೩೧ ತಿದ್ದುಪಡಿ ಸಂಖ್ಯೆ ೧೪೩೪ ಆ ತಿದ್ದುಪಡಿ ತಂದು ತಿದ್ದಿದ, ಆ ತಿದ್ದುಪಡಿ ಮಂಡಿಸಿದ ಲಿಸ್ಟು ೧೧ರ ತಿದ್ದುಪಡಿ ಸಹ ೪೨ ಮತ್ತು ೪೩ ರಿಂದ ತಿದ್ದುಪಡಿಯಾದದ್ದು. ಉಳಿದ ತಿದ್ದುಪಡಿಗಳನ್ನು ಕೂಲಂಕಷವಾಗಿ ಪರೀಕ್ಷಿಸಿದರೆ, ನಮಗೆ ಕಂಡು ಬರುವುದೇನೆಂದರೆ, ಅಲ್ಲಿ ಒಂದೇ ಒಂದು ತಿದ್ದುಪಡಿಗೆ ನಾನು ಉತ್ತರಿಸುವುದು ಅವಶ್ಯವಿದೆ. ಆ ತಿದ್ದುಪಡಿ ಸಂಖ್ಯೆ ೧೪೧೫, ಇದನ್ನು ನನ್ನ ಗೆಳೆಯರಾದ ಶ್ರೀ ಕರೀಮುದ್ದೀನ್ ತಂದಿದ್ದಾರೆ. ಅವರ ತಿದ್ದುಪಡಿಯ ಉದ್ದೇಶವು ಲೋಕಸಭೆಗೆ ಅನೇಕ ರಾಜ್ಯಗಳಲ್ಲಿ ಚುನಾವಣೆಯಲ್ಲಿ ಪ್ರಮಾಣಾನುಸಾರ ಪ್ರಾತಿನಿಧ್ಯದ ಮೂಲಕ ಏಕವರ್ಗಾವಣೆಯ ಮತದಂತೆ ನಡೆಯತಕ್ಕದ್ದು. ಈಗ ಈ ತಿದ್ದುಪಡಿಯನ್ನು ಸ್ವೀಕರಿಸುವುದು ಸಾಧ್ಯವಿದೆಯೆಂದು ನನಗೆ ಅನಿಸುವುದಿಲ್ಲ. ಯಾಕೆಂದರೆ ನಾನು ನಿರ್ಣಯಿಸಿದ ಮಟ್ಟಿಗೆ ಪ್ರಮಾಣಾನುಸಾರ ಪ್ರಾತಿನಿಧ್ಯಪದ್ಧತಿಯ ಗುಣಾವಗುಣಗಳು ದೇಶದಲ್ಲಿ ಈಗ ಇರುವ ಪರಿಸ್ಥಿತಿಯ ಬೆಳಕಿನಲ್ಲಿ ಈ ತಿದ್ದುಪಡಿಯನ್ನು ಸ್ವೀಕರಿಸಲಿಕ್ಕಾಗುವುದಿಲ್ಲ. ನನ್ನ ಗೆಳೆಯರಾದ ಶ್ರೀ ಕರೀಮುದ್ದೀನ್ ಅವರು ಪ್ರಮಾಣಾನುಸಾರ ಪ್ರಾತಿನಿಧ್ಯ ಪ್ರಸ್ತಾವನೆ ನಿರೂಪಣೆಯು ದೊಡ್ಡ ಪ್ರಮಾಣದಲ್ಲಿ ವಿದ್ಯಾವಂತರಿರುವರೆಂಬುದನ್ನು ಸೂಚಿಸುತ್ತದೆ. ನಿಜವಾಗಿಯೂ ಪ್ರತಿಯೊಬ್ಬ ಮತದಾರನು ಕನಿಷ್ಠಪಕ್ಷ ಅಂಕಿ ಸಂಖ್ಯೆಗಳನ್ನು ಬಲ್ಲವನಾಗಿದ್ದಾನೆ ಮತ್ತು ಅವುಗಳನ್ನು ಮತದಾನದ ಕಾಲಕ್ಕೆ ಮತ ಪತ್ರಿಕೆಯಲ್ಲೆ ಗುರ್ತುಮಾಡಬಲ್ಲವನಾಗಿದ್ದನೆಂಬುವಷ್ಟರಮಟ್ಟಿಗೆ ದೇಶದಲ್ಲಿ ವಿದ್ಯಾವಂತರು ಇದ್ದಾರೆಂದು ಅದು ಪೂರ್ವಭಾವಿಯಾಗಿ ತಿಳಿದುಕೊಳ್ಳುತ್ತದೆ. ನಮ್ಮ ದೇಶದಲ್ಲಿ ವಿದ್ಯಾವಂತರ ಪ್ರಮಾಣವನ್ನು ನೋಡಿದರೆ ಸಂಪೂರ್ಣ ಮಿತಿಮೀರಿದ ಇಂತಹ ಪೂರ್ವಭಾವಿ ಅನಿಸಿಕೆಯು, ಆ ವಿಷಯ ಕುರಿತು ಸಂಶಯವೇ ಇಲ್ಲ. ನಮ್ಮ ವಿದ್ಯಾವಂತರ ಸಂಖ್ಯೆಯು ಜಗತ್ತಿನಲ್ಲಿಯೇ ಅತ್ಯಲ್ಪವಾಗಿದೆ. ಆದ್ದರಿಂದ ಈ ರೀತಿಯ ಚುನಾವಣೆಯ ಪದ್ಧತಿ ಮತಪತ್ರಿಕೆಯಲ್ಲಿ ಗುರ್ತು ಮಾಡುವ ಈ ಪದ್ಧತಿಯನ್ನು ಬಹುಜನ ಅಶಿಕ್ಷಿತ ಮತದಾರರ ಮೇಲೆ ಹೇರುವುದು ತುಂಬಾ ಅಸಾಧ್ಯವಾದ ಕಾರ್ಯವಾಗಿದೆ. ಅದು ತನ್ನಷ್ಟಕ್ಕೆ ತಾನೇ ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಯನ್ನು ಹೊರಗಿಡುತ್ತದೆಂದು ನನಗೆ ಅನಿಸುತ್ತದೆ.

ಎರಡನೆಯ ವಿಷಯ ಕುರಿತು ನಾನು ಈ ಸದನದ ಗಮನ ಸೆಳೆಯಬಯಸುವುದೇನೆಂದರೆ ನನ್ನ

ಅಭಿಪ್ರಾಯದಲ್ಲಿ ಯಾವುದೇ ರೀತಿಯಲ್ಲಿ ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಯು ನಮ್ಮ ಸಂವಿಧಾನದಲ್ಲಿ ಕಾಣಿಸಿದ ರೀತಿಯ ಸರಕಾರಕ್ಕೆ ಯಥೋಚಿತವಾಗುವುದಿಲ್ಲ. ಸರಕಾರವನ್ನು ರಚಿಸುವ ಈ ಸಂವಿಧಾನದಲ್ಲಿ ಹೇಳುವುದೇನೆಂದರೆ – ನಾವು ಇದನ್ನು ಸಂಸದೀಯ ಪದ್ಧತಿಯ ಸರಕಾರವೆಂದು ಕರೆಯುತ್ತೇವೆ. ಇದರಿಂದ ನಾವು ತಿಳಿಯುವುದೇನೆಂದರೆ ಒಂದು ಸರಕಾರವು ಕಾನೂನಿನ ಪ್ರಕಾರ ಪೂರ್ಣ ಅವಧಿಯವರೆಗೆ ಅದರ ಅವಶ್ಯಕತೆಯು ಇದೆಯೆಂದು ಮುಂದುವರಿಯತಕ್ಕದ್ದಲ್ಲ. ಅಂದರೆ ಐದು ವರ್ಷಗಳವರೆಗೆ, ಆದರೆ ಎಲ್ಲಿಯವರೆಗೆ ಸಂಸತ್ತಿನಲ್ಲಿ ಬಹುಮತದ ವಿಶ್ವಾಸ ಹೊಂದಿರುತ್ತದೆಯೋ ಅಲ್ಲಿಯವರೆಗೆ ಮುಂದುವರೆಯುತ್ತದೆ. ಸ್ಪಷ್ಟವಾಗಿ ಅದೆಂದರೆ ಸಂಸತ್ತಿನಲ್ಲಿ ಸಂಸದೀಯ ಪದ್ಧತಿಯ ಸರಕಾರವಿರಬೇಕು. ನಿಮಗೆ ಅವಶ್ಯವಾಗಿ ಬಹುಮತ ಹೊಂದಿದ ಒಂದು ಪಕ್ಷವು ಇರಲಿಕ್ಕೆ ಬೇಕು ಮತ್ತು ಅದು ಸರಕಾರವನ್ನು ಬೆಂಬಲಿಸಲು ಸಿದ್ಧವಿರಬೇಕು. ನಾನು ಅಭ್ಯಾಸಮಾಡಿದ ಮೇರೆಗೆ ಸಂಸದೀಯ ಪದ್ಧತಿಗಳು ಮತ್ತು ಇಲ್ಲವೆ ಪ್ರಮಾಣಾನುಸಾರ ಪ್ರಾತಿನಿಧ್ಯವು ನಾನು ಭಾವಿಸಿದಂತೆ ಪ್ರಮಾಣಾನುಸಾರ ಪ್ರಾತಿನಿಧ್ಯವು ವಿಧಾನಮಂಡಲವನ್ನು ಅನೇಕ ಪಡೆ ಗುಂಪುಗಳಾಗಿ ತುಂಡುವರೆಯಿಸುತ್ತದೆ. ನನಗೆ ಅನಿಸಿದಂತೆ, ಬ್ರಿಟಿಷ್ ಸಂಸತ್ತನ್ನು ರಾಯಲ್ ಕಮೀಶನದ ಮೂಲಕ ೧೯೧೦ನೆಯ ಇಸ್ವಿಯಲ್ಲಿ ನೇಮಿಸಲ್ಪಟ್ಟರೂ ಏಕಸದಸ್ಯ ಚುನಾವಣೆಯ ಕ್ಷೇತ್ರ ಒಬ್ಬನಿಗೆ ಒಂದೇ ಮತ ಇದು ಯೋಗ್ಯವೋ ಇಲ್ಲವೆ ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಯು ಯೋಗ್ಯವೋ ಎಂಬುದನ್ನು ವಿಚಾರಿಸುವ ಉದ್ದೇಶದಿಂದ ಅದರಲ್ಲಿಯೂ ನಿರ್ದಿಷ್ಟವಾಗಿ ಈ ವಿಷಯದ ಬಗೆಗೆ ರಾಯಲ್ ಕಮೀಷನ್ನು ಈ ಶಿಫಾರಸ್ಸನ್ನು ಸ್ವೀಕರಿಸಲು ಸಿದ್ಧವಿರಲಿಲ್ಲ. ಅದನ್ನು ಸ್ವೀಕರಿಸದಿದ್ದುದಕ್ಕೆ ಕೊಟ್ಟ ಕಾರಣವೇನೆಂದರೆ, ನನ್ನ ದೃಷ್ಟಿಯಲ್ಲಿ ಒಳ್ಳೇ ಉತ್ತಮ ಕಾರಣ, ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಯು ಒಂದು ಸ್ಥಿರಸರಕಾರವು ಅಧಿಕಾರದಲ್ಲಿ ಉಳಿಯಲು ಪರವಾನಗಿ ಕೊಡುವುದಿಲ್ಲ. ಯಾಕೆಂದರೆ ಅದು ವಿಭಾಗಿಸಲ್ಪಡುತ್ತದೆ. ಯಾವುದೇ ಹೊತ್ತಿಗೆ ಏನಾದರೂ ಸಂಭವಿಸಿದರೆ ಅದರಲ್ಲಿ ಸಂಸತ್ತಿನ ಕೆಲವು ಗುಂಪುಗಳು ಅಸಂತುಷ್ಟಗೊಂಡು ಆಗ ಸಂಸತ್ತಿನಲ್ಲಿ ಅನೇಕ ಸಣ್ಣ ಸಣ್ಣ ಗುಂಪುಗಳಾಗಿ ವಿಭಾಗಿಸಲ್ಪಡುತ್ತದೆ. ಆ ಸಂದರ್ಭದ ಮೇಲೆ ಸರಕಾರಕ್ಕೆ ತಾವು ಕೊಟ್ಟ ಬೆಂಬಲವನ್ನು ತಿರುಗಿ ಪಡೆಯುತ್ತಾರೆ. ಈ ಪರಿಣಾಮವಾಗಿ ಸರಕಾರವು ತನ್ನ ಕೆಲವು ಗುಂಪುಗಳ ಹಾಗೂ ಘಟಕಗಳ ಸಹಕಾರವನ್ನು ಕಳೆದುಕೊಳ್ಳುತ್ತದೆ ಮತ್ತು ಸರಕಾರವು ಬಿದ್ದುಹೋಗುತ್ತದೆ.

ಈಗ ನನ್ನ ಮನಸ್ಸಿನಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಮುಂದಿನ ಸರಕಾರವು ಈಗ ಜನರು ಬಳಲುತ್ತಿರುವುದನ್ನು ಬಿಡಿಸುವರೋ ಇಲ್ಲವೋ ನನಗೆ ಗೊತ್ತಿಲ್ಲ. ಅವರು ಒಂದು ಸಂಗತಿಯನ್ನು ಮಾಡಲಿಕ್ಕೆ ಬೇಕು. ಅದೆಂದರೆ, ಒಂದು ಸ್ಥಿರವಾದ ಸುಭದ್ರ ಸರಕಾರವನ್ನು ಕಾಯ್ದುಕೊಳ್ಳಲೇಬೇಕು ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲಿಕ್ಕೆ ಬೇಕು (ಕೇಳಿರಿ, ಕೇಳಿರಿ). ಆದ್ದರಿಂದ ಸರಕಾರದ ಸ್ಥಿರತೆಯನ್ನು ಅಭದ್ರಗೊಳಿಸುವ ಯಾವುದೇ ಚುನಾವಣೆಯ ಪದ್ಧತಿಯನ್ನು ಸ್ವೀಕರಿಸಲು ನಾನು ಹಿಂಜರಿಯುತ್ತೇನೆ. ಆದ್ದರಿಂದ ಈ ಕಾರಣಕ್ಕಾಗಿ ನಾನು ಈ ವ್ಯವಸ್ಥೆಯನ್ನು ಸ್ವೀಕರಿಸಲು ಸಿದ್ಧನಿರುವುದಿಲ್ಲ. ಮೂರನೆಯ ವಿಚಾರ ಒಂದು ಇರುತ್ತದೆ. ನನಗೆ ಅನಿಸಿದಂತೆ ಅದನ್ನು ಲಕ್ಷ್ಯದಲ್ಲಿ ಇಟ್ಟುಕೊಳ್ಳುವುದು ಅವಶ್ಯವಿದೆ. ಈ ದೇಶದಲ್ಲಿ ಕಳೆದ ಅನೇಕ ವರ್ಷಗಳಿಂದ ಜನರು ಬಹು ಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಎಂದು ವಿಭಜಿಸಲ್ಪಟ್ಟಿದ್ದಾರೆ. ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಎಂಬ ವಿಭಜನೆಯು ಸ್ವಾಭಾವಿಕವಾದುದೇ. ಈ ಪ್ರಶ್ನೆಯನ್ನು ನಾನು ವಿಚಾರ ಮಾಡಲು ಹೋಗುವುದಿಲ್ಲ. ಇಲ್ಲವೆ ಅದು ಕೃತ್ರಿಮವಾದುದೇ? ಅಥವಾ ಪ್ರಸ್ತುತದಲ್ಲಿ ಇದನ್ನು ಸೃಷ್ಟಿಸಿದರೆ, ಅಥವಾ ಯಾರಾದರೂ ಈ ದೇಶದ ಅಭ್ಯುದಯದಲ್ಲಿ ಆಸಕ್ತಿ ಇಲ್ಲದವರು ಇದನ್ನು ಅಸ್ತಿತ್ವದಲ್ಲಿ ತಂದರೆ? ಅದು ಏನೇ ಇರಲಿ ನಿಜ ಸಂಗತಿ ಏನೆಂದರೆ ಬಹುಸಂಖ್ಯಾತರು ಮತ್ತು

ಅಲ್ಪಸಂಖ್ಯಾತರು ನಮ್ಮ ದೇಶದಲ್ಲಿ ಇದ್ದಾರೆ. ಮತ್ತು ಈ ಸಂವಿಧಾನ ಕರಡು ಸಮಿತಿಯು ಭವಿಷ್ಯದಲ್ಲಿ ದೇಶದ ಸಂವಿಧಾನವು ಯಾವ ತತ್ವಗಳ ಮೇಲೆ ಆಧರಿಸಿರಬೇಕು ಎಂಬುದರ ಬಗ್ಗೆ ಪ್ರಾರಂಭದಲ್ಲಿಯೇ ಚರ್ಚೆಯನ್ನು ಪ್ರಾರಂಭಿಸಿತು. ಅನೇಕ ಅಲ್ಪ ಸಂಖ್ಯಾತ ಜಾತಿಯವರೊಂದಿಗೆ ಮತ್ತು ಬಹು ಸಂಖ್ಯಾತ ಜಾತಿಯವರೊಂದಿಗೆ ಪ್ರಾತಿನಿಧಿಕ ವ್ಯವಸ್ಥೆಗೆ ಸಂಬಂಧಿಸಿದ ಅನೇಕ ಒಪ್ಪಂದಗಳು ಆದವು. ಆ ಒಪ್ಪಂದದಲ್ಲಿ ಕೊಡುವ ಹಾಗೂ ತೆಗೆದುಕೊಳ್ಳುವ ವಿಷಯವಾಗಿತ್ತು. ಸಂವಿಧಾನ ಕರಡು ಸಮಿತಿಯು ಕೊಡುವ ಮೊದಲೇ ಕೆಲವು ಅಲ್ಪಸಂಖ್ಯಾತರು ತಮ್ಮ ಪ್ರತ್ಯೇಕ ಮತಕ್ಷೇತ್ರಬೇಕೆಂದು ಅತಿಕ್ರಮಣ ಪ್ರವೇಶ ಮಾಡಿದರೂ ಅಕ್ರಮಕ್ಕೆ ತಯಾರಾದರು ಇಲ್ಲವೆ ಆ ಪದ್ಧತಿಯನ್ನು ಕೈಬಿಡಲು ಸಿದ್ಧರಾದರು. ಬಹುಸಂಖ್ಯಾತರು ನಂಬಿದ್ದೇನೆಂದರೆ ಯಾವ ಜಾತಿಯವರಿಗೇ ಯಾವುದೇ ರೀತಿಯ ವಿಶೇಷ ಮೀಸಲಾತಿ ಇಡುವುದು ಕಾನೂನಿನ ಮೂಲಕ ಸಾಧ್ಯವಿಲ್ಲವೆಂದು ನಂಬಿದ್ದರು ಅವರು ಪ್ರತ್ಯೇಕ ಮತಕ್ಷೇತ್ರಕ್ಕೆ ಒಪ್ಪಲಿಲ್ಲ. ಆದರೆ ಅವರು ಜಂಟೀ ಮತಕ್ಷೇತ್ರದಲ್ಲಿಯೇ ಮೀಸಲಾತಿ ವ್ಯವಸ್ಥೆಗೆ ಒಪ್ಪಿಕೊಳ್ಳುತ್ತಾರೆ. ಈ ಒಪ್ಪಂದವು ಎರಡು ವಿಷಯಗಳಿಗೆ ಆಸ್ಪದ ಕೊಡುತ್ತದೆ. ಅನೇಕ ಅಲ್ಪಸಂಖ್ಯಾತರಿಗೆ ನಿರ್ದಿಷ್ಟವಾದ ಪ್ರಾತಿನಿಧ್ಯದ ಕೋಟಾ ಸ್ಥಳಗಳನ್ನು ಕಾಯ್ದಿರಿಸುವಿಕೆ ಮತ್ತು ಕೋಟಾ ಪದ್ಧತಿಯನ್ನು ಜಂಟಿ ಮತಕ್ಷೇತ್ರದಿಂದ ಆರಿಸತಕ್ಕದ್ದು. ನನ್ನ ವಿನಂತಿ ಏನೆಂದರೆ ಈ ಸಂಸತ್ತಿಗೆ ಈ ಸಂವಿಧಾನದ ಕರಡು ಪ್ರತಿಯಲ್ಲಿರುವ ಅನೇಕ ಖಂಡಗಳನ್ನು ಪುನರ್ ವಿವರಿಸಬಹುದು ಮತ್ತು ಬಹುಸಂಖ್ಯಾತರ ಹಾಗೂ ಅಲ್ಪಸಂಖ್ಯಾತರ ನಡುವೆ ಆದ ಒಪ್ಪಂದಗಳ ಪುನರ್ ವಿಮರ್ಶೆ ಮಾಡಬಹುದು. ಇದರ ಪರಿಣಾಮವನ್ನು ಆಶ್ಚರ್ಯಕರ ರೀತಿಯಲ್ಲಿ ಇಲ್ಲವೆ ಒಂದೇ ಪಕ್ಷದಿಂದ ತರತಕ್ಕದ್ದಲ್ಲ. ಆದರೆ ನಾನು ಕರೆಯತಕ್ಕಂತಹ ಒಂದು ಬಿರುಗಾಳಿಯ ಮೂಲಕ ಅಲ್ಲ ಅದನ್ನು ನೇರವಾಗಿ ಮಾಡತಕ್ಕದ್ದು ಒಳಿತು. ನನಗೆ ತಿಳಿದ ಮಟ್ಟಿಗೆ ಅದನ್ನು ಬದಲಾಯಿಸಲು ವಿಧಿ ಸಂಖ್ಯೆ ೨೯೨ ಮತ್ತು ೨೯೩. ಇವುಗಳನ್ನು ಬೇರೆ ಬೇರೆ ಅಲ್ಪಸಂಖ್ಯಾತರ ಇಚ್ಛೆಗೆ ಬಿಟ್ಟುಬಿಡೋಣ, ಯಾವುದೇ ನಿರ್ದಿಷ್ಟ ಅಲ್ಪಸಂಖ್ಯಾತರ ಪ್ರತಿನಿಧಿಯು ಈ ಸಂಸತ್ತಿನಲ್ಲಿ ತನಗೆ ಯಾವುದೇ ಪ್ರಾತಿನಿಧ್ಯ ಬೇಡವೆಂದು ಹೇಳಿದರೆ ಆಗ ವಿಧಿ ೨೯೨ರಲ್ಲಿ ಆ ಜಾತಿಯ ಹೆಸರನ್ನು ಕಿತ್ತುಹಾಕಬಹುದು. ಯಾವುದೇ ನಿರ್ದಿಷ್ಟ ಅಲ್ಪಸಂಖ್ಯಾತ ಸಮುದಾಯ ತನಗೆ ಕೇಳಿದ ನೂರಕ್ಕೆ ನೂರರಷ್ಟು ಸಿಗದಿದ್ದರೂ ಉದಾ: ಅದಕ್ಕೆ ಪ್ರತ್ಯೇಕ ಮತಕ್ಷೇತ್ರ ದೊರೆಯದಿದ್ದರೂ, ಆದರೆ ಏನೂ ಇಲ್ಲದೆ ಅದು ಮೀಸಲಾತಿಯ ರೀತಿಯಲ್ಲಿ ದೊರೆತ ಸ್ಥಾನಗಳೇ ಉತ್ತಮವಾದುದು. ಆದ್ದರಿಂದ ಇದು ನ್ಯಾಯ ಸಮ್ಮತ ಹಾಗೂ ಯೋಗ್ಯವೆಂದು ನಾನು ಭಾವಿಸುತ್ತೇನೆ. ಅಲ್ಪಸಂಖ್ಯಾತರು ತಮಗೆ ಕೊಟ್ಟ ಮತದಾರ ಕ್ಷೇತ್ರವನ್ನು ಇಟ್ಟುಕೊಳ್ಳಲು ಪರವಾನಗಿ ಕೊಡಬೇಕು.

**ಪಂಡಿತ ಠಾಕೂರದಾಸ ಭಾರ್ಗವ :** ಆದರೆ ಜಾತಿಗಳಲ್ಲಿ ಸ್ಥಳಗಳಲ್ಲಿ ಕಾಯ್ದಿರಿಸುವಿಕೆಯ ಬಗೆಗೆ ಒಪ್ಪಂದವಾಗಿರಲಿಲ್ಲ ಮತ್ತು ಪ್ರತ್ಯೇಕ ಮತಕ್ಷೇತ್ರ ಇತ್ಯಾದಿ ಬಗೆಗೆ ಅನೇಕ ಸದಸ್ಯರು ತಿದ್ದುಪಡಿಗಳನ್ನು ಮಂಡಿಸಿದ್ದಾರೆ. ನಾವು ಅವೆಲ್ಲವುಗಳನ್ನು ತಿರಸ್ಕರಿಸಿದ್ದೇವೆ. ಈ ವಿಷಯಗಳ ಬಗೆಗೆ ಒಪ್ಪಂದವು ಆಗಿಯೇ ಇಲ್ಲ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಹೇಳುತ್ತಿರುವುದು ಇಷ್ಟೇ. ಅಂದರೆ ಅದನ್ನು ಸಮ್ಮತಿಯ ಮೂಲಕ ತೆಗೆದುಕೊಂಡು ಹೋಗಬಹುದು, ಆದರೆ ಒತ್ತಾಯದಿಂದಲ್ಲ. ಅದುವೇ ನನ್ನ ಪ್ರಸ್ತಾವನೆ. ಆದ್ದರಿಂದ ವಿನಯದಿಂದ ಹೇಳುವುದೇನೆಂದರೆ ಅಲ್ಪಸಂಖ್ಯಾತರಿಗೆ ಒಪ್ಪಂದದ ಮೂಲಕ ಕೊಟ್ಟದ್ದನ್ನು ಹಿಂದಿನ ಬಾಗಿಲಿನಿಂದ ತೆಗೆದುಕೊಂಡು ಹೋಗುತ್ತದೆ. ಯಾಕೆಂದರೆ ಪ್ರಮಾಣಾನುಸಾರ ಪ್ರಾತಿನಿಧ್ಯ ಅಲ್ಪಸಂಖ್ಯಾತರಿಗೆ ಬೇಕಾದುದನ್ನು ಕೊಡುವುದಿಲ್ಲ. ಉದಾ : ನಿಶ್ಚಿತ ಕೋಟಾ ತಮ್ಮ ಪ್ರತಿನಿಧಿಗಳ

ಚುನಾವಣೆಯಲ್ಲಿ ಅವರಿಗೆ ಧ್ವನಿ ಎತ್ತಲು ಅವಕಾಶ ಕೊಡಬಹುದು. ಆದರೆ ಅಲ್ಪಸಂಖ್ಯಾತರು ತಮಗೆ ಕೊಟ್ಟ ಕೋಟಾ ಪದ್ಧತಿ ಬಿಟ್ಟುಕೊಡಲು ಸಿದ್ಧರಿರುವರೆ? ಮತ್ತು ತಮ್ಮ ಪ್ರತಿನಿಧಿಗಳ ಚುನಾವಣೆಯಲ್ಲಿ ಕೇವಲ ತಮ್ಮ ಧ್ವನಿ ಇದ್ದರೆ ಸಾಕೆ? ನಾನು ವಿನಯದಿಂದ ಹೇಳುವುದೇನೆಂದರೆ ನ್ಯಾಯದಾನ ದೃಷ್ಟಿಯಿಂದ ಈ ವಿಷಯವನ್ನು ಅವರಿಗೆ ಬಿಟ್ಟುಬಿಡತಕ್ಕದ್ದು ಈ ಕಾರಣಗಳಿಗಾಗಿ, ಮಾನ್ಯರೇ, ಶ್ರೀ ಕರೀಮುದ್ದೀನ ಅವರು ತಂದ ತಿದ್ದುಪಡಿಯನ್ನು ಸ್ವೀಕರಿಸಲು ನಾನು ಸಿದ್ಧನಿಲ್ಲ.

**ಮಾನ್ಯ ಉಪಸಭಾಪತಿ :** ನಾನು ಈಗ ತಿದ್ದುಪಡಿಯನ್ನು ಒಂದೊಂದಾಗಿ ಸದನದ ಮತದಾನಕ್ಕೆ ಹಾಕುತ್ತೇನೆ.

**ಶ್ರೀ ಎಚ್.ಜಿ. ಖಾಂಡೇಕರ್ :** ಮಾನ್ಯರೆ, ದೊರೆತ ಮಾಹಿತಿಯ ಮೇಲೆ ನಾನು ಡಾ॥ ಅಂಬೇಡ್ಕರ್ ಅವರನ್ನು ಒಂದು ಪ್ರಶ್ನೆಯನ್ನು ಕೇಳಬಹುದೆ. ಈ ಹಿಂದಿನ ಜನಗಣತಿಯ ಬಗೆಗೆ ಏನಾಯಿತು? ಅವರು ವಿಧಿ ೩೫ ಇದರ ತಿದ್ದುಪಡಿಯನ್ನು ನಿನ್ನೆಯದಿನ ಮಾಡಿದಾಗ ಹಿಂದಿನ ಜನಗಣತಿಯ ಬಗೆಗೆ ಏನನ್ನೂ ಹೇಳಲಿಲ್ಲ. ಇತ್ತೀಚಿನ ಜನಗಣತಿಯ ಬಗೆಗೆ ಹೇಳಿ ಅವರು ತಿದ್ದುಪಡಿಗೆ ಸಿದ್ಧರಿರುವರೆ?

**ಸನ್ಮಾನ್ಯ ಉಪಸಭಾಪತಿಗಳು** : ಶ್ರೀ ಖಾಂಡೇಕರ ಅವರು ಭಾಷಣ ವೇದಿಕೆಗೆ ಬರಬಹುದು ಹಾಗೂ ಮಾತನಾಡಬಹುದು.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ನಾನು ಶ್ರೀ ನಜೀರುದ್ದೀನ್ ಅಹ್ಮದ್ ಹಾಗೂ ಶ್ರೀ ಭಾರ್ಗವ ಅವರು ತಂದ ತಿದ್ದುಪಡಿಯನ್ನು ಹಾಗೂ ಅವರು ಮಾಡಿದ ತಿದ್ದುಪಡಿಯನ್ನು ಒಪ್ಪುತ್ತೇನೆ.

(ಒಟ್ಟು ಎಂಟು ತಿದ್ದುಪಡಿಗಳು ತಿರಸ್ಕೃತವಾದವು, ಕೆಳಗಿನ ತಿದ್ದುಪಡಿಗಳನ್ನು ಸ್ವೀಕರಿಸಲಾಗಿದೆ)

೧. 'ವಿಧಿ ೬೭ ಖಂಡ (೫)ರ ಉಪಖಂಡ (ಎ)ದಲ್ಲಿ' ರಾಜ್ಯಗಳ ಕ್ಷೇತ್ರಗಳಿಂದ ನೇರವಾಗಿ ಜನಪ್ರತಿನಿಧಿಗಳನ್ನು ಜನರು ಮತಗಳಿಂದ ಆರಿಸತಕ್ಕದ್ದು. ಈ ಪದಗಳನ್ನು ಬದಲಾಯಿಸಿ 'ಸದಸ್ಯರು ನೇರವಾಗಿ ರಾಜ್ಯದಲ್ಲಿಯ ಮತದಾರರಿಂದ ಆರಿಸಲ್ಪಡುತ್ತಾರೆ. ಈ ಪದಗಳನ್ನು ಅಲ್ಲಿ ಸೇರಿಸಬೇಕು.'

೨. ವಿಧಿ ೬೭, ಖಂಡ (೫)ರ (ಬ) ಉಪಖಂಡದಲ್ಲಿ 'ಭಾರತದ' ಇದನ್ನು ತೆಗೆದುಹಾಕಬೇಕು.

೩. ವಿಧಿ ೬೭ ಖಂಡ (೫)ರ ಉಪಖಂಡ (ಬ)ದ ಉಪಬಂಧವನ್ನು ತೆಗೆದುಹಾಕಬೇಕು.

೪. ತಿದ್ದುಪಡಿ ಸಂಖ್ಯೆ ೧೪೩೪, ತಿದ್ದುಪಡಿಯ ಲಿಸ್ಟು ಕುರಿತು ವಿಧಿ ೬೭ ಖಂಡ(೫)ರ ಉಪಖಂಡ (ಸಿ)ಯಲ್ಲಿ ಸದಸ್ಯರನ್ನು ಯಾವುದೇ ಸಮಯದಲ್ಲಿ ಚುನಾಯಿಸತಕ್ಕದ್ದು. ಈ ಪದಗಳ ಬದಲಿಗೆ 'ವಿಧಿಸುವ ಪ್ರತಿನಿಧಿಗಳು' ಈ ಪದಗಳನ್ನು ಸೇರಿಸತಕ್ಕದ್ದು.

೫. ವಿಧಿ ೬೭ ಖಂಡ (೫)ರ ಉಪಖಂಡ (ಸಿ)ದಲ್ಲಿ 'ಹಿಂದಿನ ಜನಗಣತಿ' ಪದಗಳ ಬದಲು 'ಸಂಖ್ಯೆಗಳನ್ನು ಸುಸಂಗತ ಪ್ರಸಿದ್ಧಿಸಲಾಗಿದೆ' ಈ ಪದಗಳನ್ನು ಸೇರಿಸತಕ್ಕದ್ದು.

೬. ವಿಧಿ ೬೭ರ ಖಂಡ (೭)ರಲ್ಲಿ 'ಬಹುದು' ಈ ಪದದ ಬದಲು 'ತಕ್ಕದ್ದು' ಮತ್ತು 'ಪ್ರದೇಶಗಳು' ಈ ಪದದ ಬದಲು 'ಆ ಪ್ರದೇಶಗಳು' ಮತ್ತು ರಾಜ್ಯಗಳ ಹೊರತಾಗಿ 'ಈ ಪ್ರದೇಶಗಳಿಗೆ ನೇರವಾಗಿ ಕೇಂದ್ರಾಡಳಿತದಲ್ಲಿರುವ ಕೇಂದ್ರದಿಂದ ಅದೇ ಆಧಾರದ ಮೇಲೆ ರಾಜ್ಯಗಳ ಆಡಳಿತದಂತೆ ಯಾವುವು ಕೇಂದ್ರ ಘಟಕಗಳಾಗಿ ಈ ಪದಗಳನ್ನು ಅನುಕ್ರಮವಾಗಿ ಸೇರಿಸತಕ್ಕದ್ದು.

೭ ತಿದ್ದುಪಡಿ ಸಂಖ್ಯೆ ೧೪೫೦ ತಿದ್ದುಪಡಿ ಲಿಸ್ಟಿನ ಕುರಿತ ತಿದ್ದುಪಡಿಗಳು.

ವಿಧಿ ೬೭ ಖಂಡ (೮)ರಲ್ಲಿ ಕೆಳಗಿನ ಉಪಬಂಧವನ್ನು ಸೇರಿಸತಕ್ಕದ್ದು. "ಪರಂತು ಅಂತಹ ಮರು ಹೊಂದಾಣಿಕೆಗಳು ಲೋಕಸಭೆಯ ಪ್ರಾತಿನಿಧ್ಯಕ್ಕೆ ಅದು ಅಸ್ತಿತ್ವದಲ್ಲಿರುವ ಲೋಕಸಭೆಯ ವಿಸರ್ಜನೆಯವರೆಗೆ ಯಾವುದೇ ಪರಿಣಾಮ ಮಾಡತಕ್ಕದ್ದಲ್ಲ." 'ವಿಧಿ ೬೭ಕ್ಕೆ ಕೆಳಗಿನ ಹೊಸ ಖಂಡ(೧೦) ಇದನ್ನು ಕೂಡಿಸತಕ್ಕದ್ದು.'

'(೧೦) ಲೋಕಸಭೆಯ ಚುನಾವಣೆಯು ಪ್ರಮಾಣಾನುಸಾರ ಪ್ರಾತಿನಿಧ್ಯದ ಮೂಲಕ ಏಕವರ್ಗಾವಣೆಯ ಮತದ ಮೂಲಕ.'

ವಿಧಿ ೬೭, ತಿದ್ದುಪಡಿಯಾದಂತೆ ಸಂವಿಧಾನದಲ್ಲಿ ಸೇರಿಸಲಾಗಿದೆ.

## ವಿಧಿ ೧೪೭ (ಎ)

**ಮಾನ್ಯ ಉಪ ಸಭಾಪತಿ** : ಈ ತಿದ್ದುಪಡಿಯ ಬಗೆಗೆ ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ ಅವರು ಉತ್ತರ ಕೊಡುವರು.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** (ಬಾಂಬೆ : ಸಾಮಾನ್ಯ) : ಮಾನ್ಯರೆ, ನಾನು ತಿದ್ದುಪಡಿಯನ್ನು ವಿರೋಧಿಸುತ್ತೇನೆ. ನಾನು ಹೇಳಬೇಕೆಂದಿರುವುದು ಏನೆಂದರೆ ಇದು ಮೂಲ ತಿದ್ದುಪಡಿಗಳ ತತ್ವಗಳು. ಮೂಲಭೂತವಾಗಿ ಸಂವಿಧಾನದ ಕರಡು ಯಾವುದರ ಮೇಲೆ ಆಧರಿಸಿದೆಯೋ ಅದಕ್ಕೆ ಈ ತಿದ್ದುಪಡಿಯು ವಿರೋಧವಾಗಿದೆ. ಈಗ ಬಹುತೇಕ ಇಂತಹ ಪ್ರಸ್ತಾವನೆಯನ್ನು ಸ್ವೀಕರಿಸುವುದು ಅಸಾಧ್ಯ.

**ಮಾನ್ಯ ಉಪಸಭಾಪತಿ** : ನಾನು ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. ಪ್ರಶ್ನೆಯು ಹೀಗಿದೆ: "ವಿಧಿ ೧೪೮ರ ಮೊದಲು ಕೆಳಗಿನ ಹೊಸ ವಿಧಿ ೧೪೭ನ್ನು ಸೇರಿಸತಕ್ಕದ್ದು. ೧೪೭ ಎ ಪ್ರತಿಯೊಂದು ರಾಜ್ಯದ ವಿಧಾನಮಂಡಲವು ಆ ರಾಜ್ಯದಲ್ಲಿ ಸಂಪೂರ್ಣವಾಗಿ ಕಾರ್ಯಾಂಗದಿಂದ ಇಲ್ಲವೆ ನ್ಯಾಯಾಂಗದಿಂದ ಸ್ವತಂತ್ರವೂ ಹಾಗೂ ಪ್ರತ್ಯೇಕವಾಗಿರುತ್ತದೆ."

(ಪ್ರೊ. ಕೆ.ಟಿ. ಶಹಾ ಅವರ ಈ ತಿದ್ದುಪಡಿಯು ತಿರಸ್ಕರಿಸಲ್ಪಟ್ಟಿತು)

## ವಿಧಿ – ೧೪೮

**ಮಾನ್ಯ ಉಪಸಭಾಪತಿ** : ಈ ತಿದ್ದುಪಡಿ ಸಂಖ್ಯೆ ೪೬ ಲಿಸ್ಟ್ ೧೧ ಇದಕ್ಕೆ ಮತ್ತೊಂದು ತಿದ್ದುಪಡಿಯು ಡಾ॥ ಅಂಬೇಡ್ಕರ್ ಅವರ ಹೆಸರಿನಲ್ಲಿದೆ. ಸನ್ಮಾನ್ಯ ಸದಸ್ಯರು ಅದನ್ನು ಮಂಡಿಸುತ್ತಾರೆಯೋ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಮಾನ್ಯರೆ ನಾನು ಮಂಡಿಸುವೆನು.

ತಿದ್ದುಪಡಿ ಲಿಸ್ಟಿನ ಸಂಖ್ಯೆ ೨೨೩೧ಕ್ಕೆ ಕೆಳಗಿನದನ್ನು ಬದಲಿಯಾಗಿ ಸೇರಿಸತಕ್ಕದ್ದು. 'ವಿಧಿ ೧೪೮ ಖಂಡ (೧)ರ ಉಪಖಂಡ (ಎ) ದಲ್ಲಿ 'ರಾಜ್ಯಗಳ' ಈ ಪದದ ನಂತರ ಮದ್ರಾಸ್, ಬಾಂಬೆ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಬಿಹಾರ ಮತ್ತು ಪೂರ್ವ ಪಂಜಾಬ ಇವುಗಳನ್ನು ಸೇರಿಸತಕ್ಕದ್ದು'. ಮಾನ್ಯರೆ, ನಾನು ಸದನಕ್ಕೆ ತಿಳಿಯಪಡಿಸುವುದೇನೆಂದರೆ ಪ್ರಾಂತಗಳಲ್ಲಿ ಎರಡನೆಯ ಸದನ ವಿಧಾನಪರಿಷತ್ತು ಇರಬೇಕೇ?

ಅಥವಾ ಬೇಡವೋ? ಎಂಬುದನ್ನು ಚರ್ಚಿಸಲು ಈ ಸದನವು ಪ್ರಾಂತೀಯ ಸಂವಿಧಾನ ಸಮಿತಿಯನ್ನು ನೇಮಿಸಿತ್ತು. ಆ ಸಮಿತಿಯ ನಿರ್ಣಯವೇನೆಂದರೆ ಈ ವಿಷಯವನ್ನು ಸಂಬಂಧಿಸಿದ ಪ್ರಾಂತಗಳ ನಿರ್ಣಯಕ್ಕೆ ಬಿಡತಕ್ಕದ್ದು. ಯಾವುದೊಂದು ನಿರ್ದಿಷ್ಟ ಪ್ರಾಂತವು ಎರಡನೆಯ ಸದನ–ವಿಧಾನ ಪರಿಷತ್ತು ಬೇಕೆಂದು ನಿರ್ಧರಿಸಿದರೆ, ಅದಕ್ಕೆ ಎರಡನೆಯ ಸದನ (ವಿಧಾನ ಪರಿಷತ್ತನ್ನು) ಹೊಂದಲು ಪರವಾನಗಿ ಕೊಡಬೇಕು. ಯಾವುದೊಂದು ನಿರ್ದಿಷ್ಟ ಪ್ರಾಂತವು ತನಗೆ ಎರಡನೆಯ ಸದನ (ವಿಧಾನ ಪರಿಷತ್ತು) ಬೇಡವೆಂದು ನಿರ್ಧರಿಸಿದರೆ ಅದರ ಮೇಲೆ ಒತ್ತಾಯದಿಂದ ಅದನ್ನು ಹೇರಬಾರದು. ಪ್ರಾಂತೀಯ ಸಂವಿಧಾನ ಸಮಿತಿಯ ಈ ಶಿಫಾರಸ್ಸನ್ನು ಕಾರ್ಯಗತಗೊಳಿಸಲು ಭಾರತೀಯ ಸಂವಿಧಾನ ಸಭೆಯ ಸದಸ್ಯರು ಬೇರೆ ಬೇರೆ ಪ್ರಾಂತಗಳ ಪ್ರತಿನಿಧಿಗಳು ಒಂದೆಡೆ ಕೂಡಿ ಈ ವಿವಾದಾಂಶದ ಬಗೆಗೆ ಒಂದು ನಿರ್ಣಯಕ್ಕೆ ಬರಬೇಕು.

ಬೇರೆ ಬೇರೆ ಪ್ರಾಂತಗಳ ಪ್ರತಿನಿಧಿಗಳು ಈ ಸದನದಲ್ಲಿರುವವರು ತಮ್ಮದೇ ಗುಂಪಿನಲ್ಲಿ ಭೇಟಿಯಾಗಿ ಈ ಪ್ರಶ್ನೆಯನ್ನು ನಿರ್ಧರಿಸಬೇಕು. ಈ ಸದನದಲ್ಲಿ ಸದಸ್ಯರು ನಡೆಸಿದ ಚರ್ಚೆಯ ಪರಿಣಾಮವಾಗಿ ಈ ಕಛೇರಿಗೆ ವರದಿಯನ್ನು ನನ್ನ ತಿದ್ದುಪಡಿಯಲ್ಲಿ ಕಾಣಿಸಿದ ಪ್ರಾಂತಗಳು ಎರಡನೆಯ ಸದನ ತಮ್ಮ ಪ್ರಾಂತಗಳಲ್ಲಿ ಇರಲು ಒಪ್ಪಿಕೊಂಡಿವೆ. ಎರಡನೆಯ ಸದನ ಬೇಡವೆಂದು ನಿರ್ಧರಿಸಿದ ಪ್ರಾಂತಗಳು ಸಿ.ಪಿ. ಮತ್ತು ಬಿಹಾರ, ಅಸ್ಸಾಮ ಮತ್ತು ಒರಿಸ್ಸಾ ಪ್ರಾಂತಗಳು. ನನ್ನ ತಿದ್ದುಪಡಿ ಈ ಸದನದಲ್ಲಿ ಬೇರೆ ಬೇರೆ ಪ್ರಾಂತಗಳ ಪ್ರತಿನಿಧಿಗಳು ನಡೆಯಿಸಿದ ಚರ್ಚೆಯ ಪರಿಣಾಮವನ್ನು ಅನುಕೂಲವಾಗುವ ಹಾಗೂ ಪ್ರಾಂತೀಯ ಸಂವಿಧಾನ ಸಮಿತಿ ಶಿಫಾರಸ್ಸಿನ ಅನ್ವಯ ಕಾರ್ಯಾಚರಣೆಯಲ್ಲಿ ತರಲು ಅನುಕೂಲವಾಗುತ್ತದೆ.

ಮಾನ್ಯರೆ ನಾನು ಮಂಡಿಸುತ್ತೇನೆ.

* * * *

**ಮಾನ್ಯ ಉಪಸಭಾಪತಿ** : ಡಾ॥ ಅಂಬೇಡ್ಕರ್

**ಶ್ರೀ ಎಚ್.ವಿ. ಕಾಮತ್** : (ಸಿ.ಪಿ ಮತ್ತು ಬಿರಾರ : ಸಾಮಾನ್ಯ) : ಮಾನ್ಯ ಉಪಸಭಾಪತಿಗಳೆ–

**ಮಾನ್ಯ ಉಪಸಭಾಪತಿ** : ಶ್ರೀ ಕಾಮತ ಅವರು ಸಿ.ಪಿ.ಯಿಂದ ಬಂದವರು ಅದಕ್ಕೆ ಮೇಲ್ಮನೆ ಇಲ್ಲ (ನಗು)

**ಶ್ರೀ ಎಚ್.ವಿ. ಕಾಮತ್** : ಅದೇ ಕಾರಣಕ್ಕಾಗಿ ಮಾನ್ಯರೇ ನಾನು ಮಾತನಾಡಬಯಸುತ್ತೇನೆ.

**ಮಾನ್ಯ ಉಪಸಭಾಪತಿ** : ಈ ವಿಷಯವನ್ನು ಸಾಕಷ್ಟು ಚರ್ಚಿಸಲಾಗಿದೆಯೆಂದು ನಾನು ಭಾವಿಸುತ್ತೇನೆ. ನಾಲ್ಕು ಜನ ಈ ಸದನದ ಸನ್ಮಾನ್ಯ ಸದಸ್ಯರು, ಮಾತನಾಡಲು ಇಚ್ಛಿಸಿದ್ದಾರೆ. ಆದರೆ ನಾವು ಈಗಾಗಲೇ ಒಂದೂವರೆ ಗಂಟೆಯನ್ನು ಈ ವಿಷಯಕ್ಕಾಗಿ ಕಳೆದಿದ್ದೇವೆ. ನಾವು ಪ್ರತಿದಿನ ನಿಶ್ಚಿತ ಪ್ರಗತಿಯನ್ನು ಸಾಧಿಸಬೇಕು. ಅಸಮಾಧಾನಗೊಂಡ ಸಭ್ಯಗೃಹಸ್ಥರಲ್ಲಿ ನಾನು ಕ್ಷಮೆಯಾಚಿಸುವೆನು. ಈಗಿನ ಈ ಸಂದರ್ಭಗಳಲ್ಲಿ ನಾನು ವಿನಂತಿಸಿಕೊಳ್ಳುವುದು ಇಷ್ಟು ಮಾತ್ರ. ಡಾ॥ ಅಂಬೇಡ್ಕರ್ –

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಮಾನ್ಯ ಉಪಸಭಾಪತಿಗಳೆ, ನಾನು ವಿಷಾದಿಸುತ್ತೇನೆ. ಈ ನಿರ್ದಿಷ್ಟ ವಿಧಿಗೆ ಮಂಡಿಸಿದ ಯಾವ ತಿದ್ದುಪಡಿಯನ್ನೂ ನಾನು ಒಪ್ಪಲಾರೆನು. ನೀವು ಮಾಡಿದ ಭಾಷಣಗಳ ಮೇಲಿಂದ ಬೇರೆ ಬೇರೆ ಪ್ರಾಂತಗಳಲ್ಲಿ ಎರಡನೆಯ ಸದನ ಇರಬೇಕೆಂಬ ತತ್ವದ ಬಗೆಗೆ ಸದಸ್ಯರಲ್ಲಿ ಒಮ್ಮತ ಒಪ್ಪುವುದಿಲ್ಲ. ಇದು ಸದನದಲ್ಲಿ ಎರಡನೆಯ ಸದನದ ಬಗ್ಗೆ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ನನಗೆ ಆಶ್ಚರ್ಯವಾಗಿಲ್ಲ. ಫ್ರೆಂಚ್ ಸಂವಿಧಾನ ವಿಧಾನ ಸಭೆಯಲ್ಲಿ ಮೊದಲಿನಿಂದಲೂ ಸುಸಂಗತವಾಗಿ

ಒಂದು ಅಭಿಪ್ರಾಯವಿದೆ. ಅದು ಅವರು ಎರಡನೆಯ ಸದನಕ್ಕೆ ವಿರೋಧವಾಗಿದ್ದಾರೆ. ಯಾರು ಎರಡನೆಯ ಸದನ ವಿರೋಧಿಸುವ ಅಭಿಪ್ರಾಯ ಹೊಂದಿರುವರೋ ಅವರ ಅಭಿಪ್ರಾಯವನ್ನು ಅಬ್ಬೆ ಸಯಾಸನ ಮಾತುಗಳಲ್ಲಿ ಚೆನ್ನಾಗಿ ಹೇಳಬಹುದು. ಅವನ ವಿಮರ್ಶೆ ಎರಡು ರೀತಿಯದಾಗಿದೆ. ಅವನು ಹೇಳಿದ್ದೇನೆಂದರೆ ಲೋಕಸಭೆಯಂತೆ ಮೇಲಿನ ಮನೆಗೆ ಒಪ್ಪಿದರೆ ಆಗ ಅದು ಅನವಶ್ಯಕವಾಗಿರುತ್ತದೆ. ಕೆಳಗಿನ ಮನೆ ಅದನ್ನು ಒಪ್ಪದಿದ್ದರೆ ಅದು ನಿಕಾಯದ ಕಿಡಿಗೇಡಿತನವಾಗಿದೆ. ಅದನ್ನು ನಾವು ಪುರಸ್ಕರಿಸಬೇಕೆ? (ನಗು) ಅಬ್ಬೆ ಸಯಾಸನ ಈ ವಿಮರ್ಶೆಯ ಮೊದಲಿನ ಭಾಗವು ನಿಃಸಂಶಯವಾಗಿ ಕಾನೂನು ಬದ್ಧವಾದುದು, ಯಾಕೆಂದರೆ ಅದು ಮೇಲುನೋಟಕ್ಕೆ ಸ್ಪಷ್ಟವಾಗಿದೆ. ಆದರೆ ಇದುವರೆಗೆ ಯಾರೂ ಅಬ್ಬಿ ಸಯಾಸನ ಎರಡನೆಯ ಭಾಗದ ವಿಮರ್ಶೆಗೆ ಒಪ್ಪಿಲ್ಲ. ಫ್ರಾನ್ಸ್ ದೇಶವು ಸಹ ಆ ದೃಷ್ಟಿಯನ್ನು ಒಪ್ಪಿಕೊಂಡಿಲ್ಲ. ಅವರೂ ಸಹ ಸುಸಂಗತವಾಗಿ ಎರಡನೆಯ ಸದನ ಇರುವ ತತ್ವವನ್ನು ಕಾಯ್ದುಕೊಂಡು ಬಂದಿದ್ದಾರೆ.

ಈಗ, ನನ್ನ ಪ್ರಕಾರ ನಾನು ಎರಡನೆಯ ಸದನದ ಪರವಾಗಿ ಬಹುವಾಗಿ ಸ್ಫೂರ್ತಿಗೊಂಡಿದ್ದೇನೆಂದು ಹೇಳಲಾರೆನು. ನನಗೆ ಇದು ಬಿಸಿ ತುಪ್ಪ ಇದ್ದಂತೆ. ಉಗಳಲೂಬಾರದು, ನುಂಗಲೂ ಬಾರದು (ನಗು). ಈ ಸಂವಿಧಾನದಿಂದ ನಾವು ಮಾಡುವುದೇನೆಂದರೆ ನಾವು ಎರಡನೆಯ ಸದನವನ್ನು ಒಂದು ಪ್ರಾಯೋಜಿಕ ವ್ಯವಸ್ಥೆಯಾಗಿದೆ. ಈ ಕರಡು ಸಂವಿಧಾನದಿಂದ ನಮಗೆ ಎರಡನೆಯ ಸದನ ಆಗಿ ಸಂವಿಧಾನದ ಖಾಯಂ ಭಾಗವಾಗಿ ಕೊಟ್ಟಿಲ್ಲ. ಇದು ಕೇವಲ ಪ್ರಾಯೋಗಿಕ ವ್ಯವಸ್ಥೆಯಾಗಿದೆಯೆಂದು ನಾನು ಹೇಳಿದ್ದೇನೆ. ವಿಧಿ ೩೦೪ರಲ್ಲಿ ಇದಕ್ಕೆ ಸಾಕಷ್ಟು ವ್ಯವಸ್ಥೆ ಇದ್ದು ಅದರಿಂದ ಎರಡನೆಯ ಸದನದಿಂದ ಮುಕ್ತವಾಗಬಹುದು. ಬಂದಾಗ ವಿಧಿ ೩೦೪ ಗುಣಾವಗುಣಗಳ ಬಗೆಗೆ ನಾವು ಚರ್ಚೆಗೆ ಬಂದಾಗ, ಇದು ಎರಡನೆಯ ಸದನವನ್ನು ರದ್ದು ಮಾಡುವುದನ್ನು ಕುರಿತು ಹೇಳುತ್ತದೆ. ಈ ಸದನದ ಸನ್ಮಾನ್ಯ ಸದಸ್ಯರು ವಿಧಿ ೩೦೪ರ ಕೆಲವು ವ್ಯವಸ್ಥೆಗಳನ್ನು ಇನ್ನೂ ಸಡಿಲಗೊಳಿಸತಕ್ಕದ್ದು. ಯಾಕೆಂದರೆ – ಎರಡನೆಯ ಸದನದಿಂದ ಮುಕ್ತರಾಗುವ ಪ್ರಕ್ರಿಯೆಯನ್ನು ಅನುಕೂಲ ಮಾಡಿಕೊಡಬೇಕು. ನನ್ನ ಮಟ್ಟಿಗೆ ಹೇಳುವುದಾದರೆ ನಾನು ಆವ ವಿಕೋಪವನ್ನೂ ಎತ್ತುವುದಿಲ್ಲ (ಕೇಳಿರಿ). ಆದ್ದರಿಂದ ನಾನು ಈ ಸದನಕ್ಕೆ ಸೂಚಿಸುವುದೇನೆಂದರೆ ಒಂದು ರೀತಿಯ ಒಪ್ಪಂದದಂತೆ, ಈ ವಿಧಿಯು ಸಂವಿಧಾನದಲ್ಲಿ ಉಳಿಯಲು ಪರವಾನಗಿ ಕೊಡಿರಿ.

**ಮಾನ್ಯ ಉಪಸಭಾಪತಿ** : ನಾನು ಈಗ ಒಂದರ ನಂತರ ಒಂದರಂತೆ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಪ್ರಶ್ನೆಯು ಹೀಗೆ ಇದೆ–

"ಲಿಸ್ಟಿನ ತಿದ್ದುಪಡಿಯ ಸಂಖ್ಯೆ ೨೨೩೧ಕ್ಕೆ ಕೆಳಗಿನವನ್ನು ಕೂಡಿಸತಕ್ಕದ್ದು."

"ವಿಧಿ ೧೪೮ ಖಂಡ (೧) ಉಪಖಂಡ (ಎ)ದ ನಂತರ ರಾಜ್ಯದಲ್ಲಿ ಮದ್ರಾಸ, ಬಾಂಬೆ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಬಿಹಾರ, ಪೂರ್ವ ಪಂಜಾಬ, ಈ ಪದಗಳನ್ನು ಸೇರಿಸತಕ್ಕದ್ದು."

ಡಾ॥ ಅಂಬೇಡ್ಕರ ಅವರ ತಿದ್ದುಪಡಿಯು ಸ್ವೀಕೃತವಾಯಿತು. ಉಳಿದ ಎರಡು ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು. ವಿಧಿ ೧೪೮, ತಿದ್ದುಪಡಿಯಾದಂತೆ ಸ್ವೀಕೃತವಾಯಿತು ಮತ್ತು ಸಂವಿಧಾನದಲ್ಲಿ ಕೊಡಿಸಲಾಯಿತು.

## ವಿಧಿ ೧೪೯

**ಮಾನ್ಯ ಉಪಸಭಾಪತಿ** : ನಾವು ಈಗ ವಿಧಿ ೧೪೯ಕ್ಕೆ ಬರುತ್ತೇವೆ. ತಿದ್ದುಪಡಿ ಸಂಖ್ಯೆ ೨೨೪೧ ಇದನ್ನು ಮಂಡಿಸಬಹುದು. ಅದು ಡಾ॥ ಅಂಬೇಡ್ಕರ್ ಅವರ ಹೆಸರಿನಲ್ಲಿದೆ.

**ಒಬ್ಬ ಸನ್ಮಾನ್ಯ ಸದಸ್ಯರು :** ಅದನ್ನು ಮಂಡಿಸಿಯೇ ಇರುವುದಿಲ್ಲ. ಧ್ವನಿಗಳು : ಸಂಸತ್ತಿನಲ್ಲಿ ಇರದ

ಒಬ್ಬ ಸದಸ್ಯನು (ನಗು)

**ಮಾನ್ಯ ಉಪಸಭಾಪತಿ** (ಸನ್ಮಾನ್ಯ ಡಾ॥ ಅಂಬೇಡ್ಕರ್ ಅವರು ಚೇಂಬರದ ಕಡೆಗೆ ಬರುತ್ತಿರುವುದನ್ನು ನೋಡಿ) ಸನ್ಮಾನ್ಯ ಸದಸ್ಯರಿಗೆ ಹೊರಗೆ ಹೋಗಿ ಬಂದು ಕಪ್ ಚಹಾ ಇಲ್ಲವೆ ಸಿಗರೇಟು ಸೇದಿ ಬರಲು ಸಂಪೂರ್ಣ ಸ್ವಾತಂತ್ರ್ಯವಿದೆ. ಈ ಎರಡು ರೀತಿಯ ಸಂಬಂಧಕ್ಕೆ ರೂಢಿ ಇರುವವರಿಗೆ ಎಷ್ಟು ತಾಪತ್ರಯವೆಂಬುದನ್ನು ಅವರು ದಯವಿಟ್ಟು ಮನಗಾಣಬೇಕು. ಡಾ॥ ಅಂಬೇಡ್ಕರ್ ಅವರು ಆ ರೀತಿಯಾಗಿ ವಿಶ್ರಮಿಸಲು ಹಕ್ಕುಳ್ಳವರಾಗಿದ್ದಾರೆಂಬುದನ್ನು ಸನ್ಮಾನ್ಯ ಸದಸ್ಯರು ಒಪ್ಪುತ್ತಾರೆ. ಅಧ್ಯಕ್ಷರು ಮಾಡುವುದು ಏನೂ ಇಲ್ಲ. ಆದರೆ ಚರ್ಚೆಗಳನ್ನು ಕೇಳುವುದು. ಆದರೆ ಡಾ॥ ಅಂಬೇಡ್ಕರ್ ಅವರು ಚರ್ಚೆಗಳನ್ನು ಕೇಳಿ ಉತ್ತರಿಸಬೇಕು. (ನಗು)

**ಮಾನ್ಯ ಉಪಸಭಾಪತಿ** : ನಾವು ಈಗ ತಿದ್ದುಪಡಿ ಸಂಖ್ಯೆ ೨೨೫ಕ್ಕೆ ಹೋಗೋಣವೆ?

ಇದು ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರವರ ಹೆಸರಿನಲ್ಲಿದೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ** : ನಾನು ಮಂಡಿಸುತ್ತಿಲ್ಲ.....

**ಮಾನ್ಯ ಉಪಸಭಾಪತಿ** : ಹಾಗಿದ್ದಲ್ಲಿ ಲಿಸ್ಟ್ ೧೧೧ ತಿದ್ದುಪಡಿ ಸಂಖ್ಯೆ ೫೯ ಇದು ನಿಷ್ಫಲವಾಗುತ್ತದೆ.

* * * *

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ ನಾನು ಮಂಡಿಸಲು ವಿನಂತಿಸಿಕೊಳ್ಳುವೆನು. 'ವಿಧಿ ೧೪೯ ಖಂಡ (೩)ರ ಉಪಬಂಧಕ್ಕೆ ಕೆಳಗಿನವುಗಳನ್ನು ಸೇರಿಸತಕ್ಕದ್ದು'. ಪರಂತು "ಕಳೆದ ಜನಗಣತಿಯ ರಾಜ್ಯದ ಜನಸಂಖ್ಯೆಯು ಮುನ್ನೂರು ಲಕ್ಷಕ್ಕೆ ಹೆಚ್ಚಾದರೆ ಆ ರಾಜ್ಯದ ವಿಧಾನಸಭೆಯ ಸದಸ್ಯರ ಸಂಖ್ಯೆಯು ಪ್ರತಿಯೊಂದು ಲಕ್ಷ ಜನಸಂಖ್ಯೆಗೆ ಒಬ್ಬ ಪ್ರತಿನಿಧಿಗಿಂತ ಹೆಚ್ಚಾಗದ ಪ್ರಮಾಣದಂತೆ ಮುನ್ನೂರು ಲಕ್ಷ ಜನಸಂಖ್ಯೆಯವರೆಗೆ ಆಮೇಲೆ ಮುನ್ನೂರ ಲಕ್ಷಕ್ಕಿಂತ ಹೆಚ್ಚಾದ ಜನಸಂಖ್ಯೆಗೆ ಪ್ರತಿ ಹತ್ತು ಲಕ್ಷ ಜನಸಂಖ್ಯೆಗೆ ಐದು ಜನ ಪ್ರತಿನಿಧಿಗಳನ್ನು ಆರಿಸತಕ್ಕದ್ದು"" ಪರಂತು ಇನ್ನೂ ಹೆಚ್ಚಿಗೆ ಏನೆಂದರೆ ರಾಜ್ಯದ ವಿಧಾನ ಸಭೆಯ ಒಟ್ಟಾರೆ ಸದಸ್ಯರ ಸಂಖ್ಯೆಯು ಯಾವುದೇ ಕಾರಣದಿಂದ ಕಡಿಮೆ ನಾಲ್ಕನೂರ ಐವತ್ತಕ್ಕಿಂತ ಹೆಚ್ಚಾಗಬಾರದು. ಇಲ್ಲವೆ ಅರವತ್ತಕ್ಕಿಂತ ಕಡಿಮೆಯಾಗಬಾರದು.

**ಮಾನ್ಯ ಉಪಸಭಾಪತಿಗಳು** : ಸಂಸತ್ತು ನನಗೆ ಇಷ್ಟು ಸದ್ಭಾವನೆಯನ್ನು ತೋರಿಸಿದ ಮೇಲೆ ನಾನು ಸೂಚಿಸುವುದೇನೆಂದರೆ: ನಾನು ಇಂದು ಡಾ॥ ಅಂಬೇಡ್ಕರ್ ಅವರನ್ನು ಉತ್ತರ ಕೊಡಲು ಕರೆಯುವುದಿಲ್ಲ. ಆದರೆ ನಾವು ಇಂದು ಬೇರೆ ಕಲಾಪಗಳಿಗೆ ಹೋಗೋಣ, ಯಾಕೆಂದರೆ ಸಂಬಂಧಿಸಿದ ಎಲ್ಲ ಪಕ್ಷಗಳು, ಕೂಡಿ ವಿಚಾರಮಾಡುವ ಅವಕಾಶವನ್ನು ಕಲ್ಪಿಸೋಣ ಮತ್ತು ಒಂದು ಒಪ್ಪಂದಕ್ಕೆ ಬಂದು ಅದಕ್ಕೆ ಪರಿಹಾರವನ್ನು ಕಂಡುಕೊಳ್ಳೋಣ. ಒಟ್ಟಾರೆ ಸಹಕಾರದ ಪ್ರಯತ್ನದಿಂದಲೇ ಸಂವಿಧಾನವನ್ನು ರೂಪಿಸುವುದು ಮತ್ತು ನಾವು ಮಾಡಬೇಕಾದ ಎಲ್ಲವನ್ನೂ ಮಾಡಿ ಅದು ಯಶಸ್ವಿಯಾಗಲು ನಾವು ಪ್ರಯತ್ನಿಸಬೇಕು.

**ಕೆಲವು ಸನ್ಮಾನ್ಯ ಸದಸ್ಯರು** : ಮಾನ್ಯರೇ, ಧನ್ಯವಾದಗಳು.

* * * *

## ವಿಧಿ ೬೩

**ಮಾನ್ಯ ಉಪಸಭಾಪತಿ** : ಆ ತಿದ್ದುಪಡಿಗೆ ಅನೇಕ ತಿದ್ದುಪಡಿಗಳು ಇರುತ್ತವೆ.

**ಶ್ರೀ ಪ್ರಭುದಯಾಲ ಹಿಮತ್‌ಸಿಂಗ್** : (ಪಶ್ಚಿಮ ಬಂಗಾಳ ಸಾಮಾನ್ಯ) ಮಾನ್ಯರೇ (ಶ್ರೀ ಕೆ.ಟಿ. ಶಹಾ ಹಾಗೂ ಶ್ರೀ ನಜೀರುದ್ದೀನ ಅಹಮ್ಮದ್ ಅವರು ತಂದ ತಿದ್ದುಪಡಿಯನ್ನು ನಾನು ವಿನಯದಿಂದ ವಿರೋಧಿಸುವೆನು. ಈ ವಿಧಿಯು ಈಗ ಇದ್ದಂತೆ ಸಂಸತ್ತು ಇದನ್ನು ಸ್ವೀಕರಿಸಬೇಕು. ಪ್ರಾಂತದ ಅಡ್ವೋಕೇಟ್ ಜನರಲ್ ಮತ್ತು ಭಾರತದ ಅಟಾರ್ನಿ ಜನರಲ್ ಅವರ ಅಭಿಪ್ರಾಯದಲ್ಲಿ ನಿಜವಾಗಿಯೂ ಭಿನ್ನಾಭಿಪ್ರಾಯವಿದೆ. ಉಪಕಲಮ(೪) ಅವಕಾಶಕೊಡುವುದೇನೆಂದರೆ ಅಟಾರ್ನಿ ಜನರಲ್ ಅವರು ರಾಷ್ಟ್ರಪತಿಗಳ ಇಷ್ಟಾನುಸಾರ ಆ ಪದದಲ್ಲಿರುತ್ತಾರೆ. ಮತ್ತು ನನಗೆ ತಿಳಿದಂತೆ ಅದು ಆ ಉದ್ದೇಶವನ್ನು ಪೂರೈಸುತ್ತದೆ. ಮಂತ್ರಿಮಂಡಲದಲ್ಲಿ ಬದಲಾವಣೆಯಾದರೆ ಅದು ಅವಶ್ಯಕವಾಗಿ ಅಟಾರ್ನಿ ಜನರಲ್ ಸಹ ತನ್ನ ಪದದಿಂದ ಹೊರಗೆ ಹೋಗಬೇಕಾದ ಅವಶ್ಯಕತೆ ಇದೆಯೆಂದು ಅರ್ಥವಾಗುವುದಿಲ್ಲ.

ಆದರೆ ಪ್ರಾಂತಗಳಲ್ಲಿ ಮಂತ್ರಿಮಂಡಲದಲ್ಲಿ ಬದಲಾವಣೆಯಾಗಿ ಅಡ್ವೋಕೇಟ್ ಜನರಲ್ ಅವರನ್ನು ಪುನಃ ನೇಮಿಸದಿದ್ದರೆ ಅವರು ನಿವೃತ್ತರಾಗುವ ಅವಶ್ಯಕತೆಯು ಇರುತ್ತದೆ. ಆದ್ದರಿಂದ ಈಗ ಮಂಡಿಸಿದ ತಿದ್ದುಪಡಿಗಳನ್ನು ನಾನು ವಿರೋಧಿಸುತ್ತೇನೆ. ಈ ವಿಧಿಯು ಈಗ ಇದ್ದಂತೆ ಇರಲೆಂದು ನಾನು ಸಮರ್ಥಿಸುತ್ತೇನೆ.

**ಮಾನ್ಯ ಉಪಸಭಾಪತಿ** : ಡಾ॥ ಅಂಬೇಡ್ಕರ್

**ಶ್ರೀ ನಜೀರುದ್ದೀನ ಅಹಮ್ಮದ್** : ಮಾನ್ಯರೇ, ಅವರು ಕೇಳಿಸಿಕೊಂಡಿಲ್ಲ. ಅವರು ತಮ್ಮ ಸೂಚನೆಗಳನ್ನು ಪಡೆಯುತ್ತಿದ್ದಾರೆ.

**ಮಾನ್ಯ ಉಪಸಭಾಪತಿ** : ಹಾಗೆ ಹೇಳುವುದು ಸೌಜನ್ಯಯುತವಲ್ಲ.

**ಶ್ರೀ ನಜೀರುದ್ದೀನ ಅಹಮ್ಮದ್** : ಮಾನ್ಯರೇ, ಅದು ಹಾಗಲ್ಲ. ನಾನು ಹಾಗೆ ಹೇಳುವ ಒತ್ತಾಯದಲ್ಲಿ ಇದ್ದೇನೆ.

**ಮಾನ್ಯ ಉಪಸಭಾಪತಿ** : ಸನ್ಮಾನ್ಯ ಸದಸ್ಯರು ದಯವಿಟ್ಟು ನಿಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುವಿರಾ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** (ಬಾಂಬೆ, ಸಾಮಾನ್ಯ) ಮಾನ್ಯರೇ, ಯಾವುದೇ ಉತ್ತರದ ಅವಶ್ಯಕತೆಯು ಇದೆಯೆಂದು ನನಗೆ ಅನಿಸುವುದಿಲ್ಲ.

(ಎಲ್ಲ ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು. ವಿಧಿ ೬೩ ಇದನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೬೪

**ಶ್ರೀ ರಾಜ ಬಹಾದೂರ್** (ಮತ್ಸ್ಯ ಸಂಯುಕ್ತ ರಾಜ್ಯ) ಮಾನ್ಯ ಉಪಸಭಾಪತಿಗಳೇ ನಾನು ಪ್ರೊ. ಕೆ.ಟಿ. ಶಹಾ ಅವರು ತಂದ ತಿದ್ದುಪಡಿಯನ್ನು ವಿರೋಧಿಸಲು ಇಲ್ಲಿ ಬಂದಿದ್ದೇನೆ. ಕಾಲಕಾಲಕ್ಕೆ ಅನೇಕ ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಇದರಿಂದ ನನಗೆ ಒಂದು ವಿಚಾರ ಹೊಳೆದಿದೆ. ಅದೇಂದರೆ ಅವರು ನಿರ್ದಿಷ್ಟ ವಿಚಾರ ಇಟ್ಟುಕೊಂಡು ಅಂದರೆ ರಾಷ್ಟ್ರಪತಿಯ ಪದ್ಧತಿಯ ಸಂವಿಧಾನವನ್ನು ಸಂಸದೀಯ ಪದ್ಧತಿಯನ್ನು ದೇಶದಲ್ಲಿ ತರಲು ಯತ್ನಿಸುತ್ತಿದ್ದಾರೆ. ಆದರೆ ಅವರ ಪ್ರೌಢ ಪಾಂಡಿತ್ಯ ಮತ್ತು ಅನುಭವ ಕುರಿತು ನಾನು ನೋಡುತ್ತಿದ್ದಂತೆ ಅವರು ಇನ್ನೂ ಆ ವಿಷಯದಲ್ಲಿ ಸುಸಂಗತವಾಗಿಲ್ಲ. ನಾವು ವಿಧಿ

೪೨ನ್ನು ಚರ್ಚಿಸಿದಾಗ, ಸಂಪೂರ್ಣ ಕೇಂದ್ರದ ಯಾವತ್ತೂ ಕಾರ್ಯಕಾರಿ ಅಧಿಕಾರಿಗಳನ್ನು ರಾಷ್ಟ್ರಪತಿಗಳಿಗೆ ವಹಿಸಿದೆ. ಅವರು ಆ ವಿಧಿಗೆ ತಾವೇ ಎರಡು ತಿದ್ದುಪಡಿಗಳನ್ನು ಸಂಖ್ಯೆ ೧೦೪೦ ಮತ್ತು ೧೦೪೫ ಮಂಡಿಸಿದ್ದಾರೆ. ಅದರಲ್ಲಿಯ ಒಂದು ತಿದ್ದುಪಡಿಯು ಕೆಳಗಿನಂತಿದೆ. 'ಕೇಂದ್ರ ಸಾರ್ವಭೌಮ ಕಾರ್ಯನಿರ್ವಾಹಕ ಅಧಿಕಾರ ಮತ್ತು ಪ್ರಾಧಿಕಾರಗಳು ರಾಷ್ಟ್ರಪತಿಗಳಲ್ಲಿ ಇರತಕ್ಕದ್ದು ಮತ್ತು ಅವುಗಳನ್ನು ಸಂವಿಧಾನದಲ್ಲಿ ಕಾಣಿಸಿದಂತೆ ಮತ್ತು ಅದರ ಅಡಿ ಮಾಡಿದ ಕಾನೂನುಗಳ ಪ್ರಕಾರ ಮತ್ತು ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಕಾನೂನಿನ ಪ್ರಕಾರ ಚಲಾಯಿಸತಕ್ಕದ್ದು.' ಈ ಇಂಗಿತದಿಂದ ಮೇಲುನೋಟಕ್ಕೆ ಸ್ಪಷ್ಟವಾಗುವುದೇನೆಂದರೆ ಎಲ್ಲ ಕಾರ್ಯನಿರ್ವಾಹಕ ನಿರ್ಣಯಗಳನ್ನು ರಾಷ್ಟ್ರಪತಿಗಳಿಂದ ಹಾಗೂ ಅವರ ಹೆಸರಿನಿಂದ ನಡೆಸತಕ್ಕದ್ದು. ಇದು ಯಥಾರ್ಥವಾಗಿ ವಿಧಿ ೬೪ರ ಇಂಗಿತದ ಚರ್ಚೆಯ ಕಾಲಕ್ಕೆ ಇದೇ ಅರ್ಥ ಕೊಡುತ್ತದೆ. ಆದ್ದರಿಂದ ಪ್ರೊ.ಕೆ.ಟಿ. ಶಹಾ ಅವರು ತಮ್ಮ ತಿದ್ದುಪಡಿಯ ಪದಗಳ ಯಾವ ಅರ್ಥವನ್ನು ಅವರು ವಿಧಿ ೪೨ಕ್ಕೆ ತಿದ್ದುಪಡಿಯನ್ನು ಮಂಡಿಸಿದರು ಎಂಬುದಕ್ಕೆ ನನಗೆ ಯಾವುದೇ ಕಾರಣ ತಿಳಿಯದಾಗಿದೆ. ನಾನು ಹೇಳುವುದೇನೆಂದರೆ ಸಾಕಷ್ಟು ಸ್ಪಷ್ಟವಾಗಿ ಕೇಂದ್ರದ ಸಂಪೂರ್ಣ ಕಾರ್ಯಾಂಗದ ಅಧಿಕಾರವು ರಾಷ್ಟ್ರಪತಿಗಳಲ್ಲಿ ಸನ್ನಿಹಿತವಾಗಿದೆ ಮತ್ತು ಸರಕಾರದ ಎಲ್ಲ ಆದೇಶಗಳು ದಾಖಲು ದಸ್ತಾವೇಜುಗಳನ್ನು ರಾಷ್ಟ್ರಪತಿಗಳ ಹೆಸರಿನಲ್ಲಿ ಮಾಡತಕ್ಕದ್ದು. ಗೊತ್ತಿದ್ದ ಯಾವುದೇ ಪ್ರಜಾಪ್ರಭುತ್ವದಲ್ಲಿ ಇದು ಅಸಂಗತವೂ ಆಗಿಲ್ಲ ಮತ್ತು ಅಸಮಂಜಸವೂ ಆಗಿರುವುದಿಲ್ಲ ಮತ್ತು ಆದೇಶವನ್ನು ರಾಷ್ಟ್ರಪತಿಗಳ ಹೆಸರಿನಲ್ಲಿ ಹೊರಡಿಸುವುದು ಮತ್ತು ನಾನು ವಿನಯದಿಂದ ಹೇಳಬಯಸುವುದೇನೆಂದರೆ ಈ ಸದನಕ್ಕೆ ಪ್ರೊ. ಶಹಾ ಅವರು ಮಂಡಿಸಿದ ಈ ತಿದ್ದುಪಡಿಯನ್ನು ಸ್ವೀಕರಿಸಲು ಯಾವ ಕಾರಣವೂ ಇಲ್ಲ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಮಾನ್ಯ ಉಪಸಭಾಪತಿಗಳೇ, ಇದಕ್ಕೆ ಯಾವುದೇ ಉತ್ತರ ಕೊಡುವ ಅವಶ್ಯಕತೆಯು ಇದೆಯೆಂದು ನನಗೆ ಅನಿಸುವುದಿಲ್ಲ.

(ಎರಡು ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು. ಯಾವುದೂ ಸ್ವೀಕಾರವಾಗಲಿಲ್ಲ. ವಿಧಿ ೬೪ ಇದನ್ನು ಸ್ವೀಕರಿಸಲಾಯಿತು ಮತ್ತು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ – ೬೫

**ಮಾನ್ಯ ಉಪಸಭಾಪತಿ** : ಈ ಸಂಸತ್ತಿನ ಮುಂದೆ ಒಂದೇ ಒಂದು ತಿದ್ದುಪಡಿಯು ಇರುತ್ತದೆ. ಮತ್ತು ಆ ಖಂಡವು ಸಾಮಾನ್ಯ ಚರ್ಚೆಗೆ ಮುಕ್ತವಾಗಿದೆ. ಡಾ॥ ಅಂಬೇಡ್ಕರ್, ನೀವು ಏನಾದರೂ ಹೇಳಬಯಸುವಿರಾ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಮಾನ್ಯರೇ, ಏನೂ ಇಲ್ಲ. ನಾನು ಶ್ರೀ ಕಾಮತ್ ಅವರ ತಿದ್ದುಪಡಿಯನ್ನು ಒಪ್ಪುವುದಿಲ್ಲ. ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.

ವಿಧಿ ೬೫, ಇದನ್ನು ಸಂವಿಧಾನಕ್ಕೆ ಸೇರಿಸಲಾಯಿತು. ಪುನಃ ಮತದಾರರ ಪಟ್ಟಿ ತಯಾರಿಸುವುದು.

**ಮಾನ್ಯ ಉಪಸಭಾಪತಿ** : ಡಾ॥ ಅಂಬೇಡ್ಕರ್ : ನೀವು ಠರಾವನ್ನು ಸ್ವೀಕರಿಸುವ ರೀತಿಯಲ್ಲಿ ಓದಬೇಕು. ನಾನು ನೀವು ಉತ್ತರಿಸುವ ಮುನ್ನ ಸೂಚಿಸಬಹುದೆ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಅಹುದು. ನಾನು ಸ್ವೀಕರಿಸುವ ಬದಲಾವಣೆಗಳನ್ನು ಸೂಚಿಸುತ್ತೇನೆ.

**ಶ್ರೀ ದೇಶಬಂಧು ಗುಪ್ತಾ** : ಮಾನ್ಯರೇ ಡಾ॥ ಅಂಬೇಡ್ಕರ್ ಅವರು ಉತ್ತರಕೊಡುವ ಮೊದಲೇ ನಾನು ಎತ್ತಿದ ವಿಷಯದ ಮೇಲೆ ತಾವು ಯಾವುದೇ ನಿರ್ಣಯ ಕೊಟ್ಟಿರುವಿರೋ ಹೇಗೆ ಎಂಬುದನ್ನು

ಈಗಾಗಲೇ ತಿಳಿಯಬಯಸುತ್ತೇನೆ. ಅದಕ್ಕೆ ನಾನು ಕ್ರಿಯಾಲೋಪಾವೆತ್ತಿದ್ದೇನೆಂದರೆ –

'ಮೊದಲೆ', 'ಈಗಾಗಲೇ' ಎಂಬ ಪದವು ಠರಾವಿನಲ್ಲಿರುವವರೆಗೆ ಅದು ಯಾವುದಕ್ಕೂ ಉಪಯೋಗವಿಲ್ಲ. ಯಾಕೆಂದರೆ –

**ಮಾನ್ಯ ಉಪಸಭಾಪತಿ** : ಈಗಾಗಲೇ ಈ ಪದವನ್ನು ತೆಗೆದು ಹಾಕಲಾಗಿದೆ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಮಾನ್ಯ ಉಪಸಭಾಪತಿಗಳೇ, ತಮ್ಮ ಪರವಾನಗಿಯಿಂದ ಈ ಠರಾವನ್ನು ಮಂಡಿಸಿದ ಠರಾವಿನ ಚರ್ಚೆಗೆ ನಾನು ಉತ್ತರಿಸಬಯಸುತ್ತೇನೆ. ನಾನು ವಿವರವಾದ ತಿದ್ದುಪಡಿಗಳನ್ನು ಕುರಿತು ಪ್ರಸ್ತಾಪಿಸುವ ಮೊದಲು ಕೆಲವು ತಿದ್ದುಪಡಿಗಳನ್ನು ಈ ಠರಾವು ಮಂಡಿಸುವಾಗ ತರಬಯಸುತ್ತೇನೆ. ಮೊದಲನೆಯ ತಿದ್ದುಪಡಿ ನಾನು ಪ್ರಸ್ತಾಪಿಸ ಬಯಸುವುದು ಎರಡನೆಯ ಪ್ಯಾರಾದಲ್ಲಿನ ಮೊದಲಿನ "ಈಗಾಗಲೇ" ಎಂಬ ಈ ಪದವನ್ನು ತೆಗೆದುಹಾಕತಕ್ಕದ್ದು.

ನನ್ನ ಎರಡನೆಯ ತಿದ್ದುಪಡಿಯು ಉಪಖಂಡ (೧)ರಲ್ಲಿ ಖಂಡ (ಎ) ಮತ್ತು ನಂತರದ ಅಕ್ಷರ ಮತ್ತು ಬ್ರಾಕೇಟುಗಳು 'ಬಿ' ಪ್ರಾರಂಭದಲ್ಲಿ ಎರಡನೆಯ ಉಪಖಂಡ ತೆಗೆದುಹಾಕತಕ್ಕದ್ದು. ಇದರಿಂದ ಉಪಖಂಡ(೧) ಕೆಳಗಿನಂತೆ ಇರುತ್ತದೆ: "ಯಾವುದೇ ಚುನಾವಣಾ ಕ್ಷೇತ್ರ ಮತಕ್ಷೇತ್ರದಲ್ಲಿ ಮತದಾರರ ಪಟ್ಟಿಯಲ್ಲಿ ಮನಸ್ಸಿನ ಅಸ್ವಸ್ಥತೆಯುಳ್ಳವನ ಹೆಸರನ್ನು ಮತ್ತು ಯೋಗ್ಯ ಅಧಿಕಾರವುಳ್ಳ ನ್ಯಾಯಾಲಯದಿಂದ ತೆಗೆದು ಹಾಕಲ್ಪಟ್ಟಿದ್ದರೆ ಅಂತಹ ಅಸ್ವಸ್ಥ ಮನಸ್ಸಿನವನ ಹೆಸರನ್ನು ಸೇರಿಸತಕ್ಕದಲ್ಲ."

ಆಮೇಲೆ ಠರಾವಿನ ಪ್ಯಾರಾ (೪)ರಲ್ಲಿ ನಾನು ಕೆಳಗಣ ತಿದ್ದುಪಡಿಗಳನ್ನು ಪ್ರಸ್ತಾಪ ಮಾಡುತ್ತೇನೆ. "ಯೋಗ್ಯ ಶಾಸನಕ್ಕೆ ಒಳಪಟ್ಟು ಪದಗಳನ್ನು ಆ ಪ್ಯಾರಾಗ್ರಾಫ್‌ದಲ್ಲಿ ಇದ್ದವುಗಳನ್ನು ನನ್ನ ತಿದ್ದುಪಡಿಯಿಂದ 'ಮೇಲಣ ಪ್ಯಾರಾ (೩)ರಲ್ಲಿ' ಏನೇ ಹೇಳಿದ್ದರೂ ಪ್ಯಾರಾದಲ್ಲಿಯೇ ಐದನೆಯ ಸಾಲು ಒಂದು ಮತಕ್ಷೇತ್ರ ಪದಗಳ ಬದಲು 'ಒಂದು ಕ್ಷೇತ್ರ' ಸೇರಿಸತಕ್ಕದ್ದು."

ಇವು ನನ್ನ ತಿದ್ದುಪಡಿಗಳು, ನಾನು ನನ್ನ ತಿದ್ದುಪಡಿಗಳ ಬಗ್ಗೆ ಸ್ವಲ್ಪದರಲ್ಲಿ ವಿವರಿಸುತ್ತೇನೆ. ನಾನು ಮಂಡಿಸಿದ ತಿದ್ದುಪಡಿಯಲ್ಲಿ 'ಈಗಾಗಲೇ' ಎಂಬುದನ್ನು ಕೈಬಿಟ್ಟಿದ್ದು. ಕ್ರಿಯಾಲೋಪಕ್ಕೆ ದೇಶಬಂಧು ಗುಪ್ತಾ ಅವರು ಎತ್ತಿದ್ದ ವಿಧಿಬಿಂದುವಿಗೆ ಉತ್ತರವಾಗಿದೆ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಮಾನ್ಯರೆ ನಾನು ಹೇಳಿದಂತೆ ಮೊದಲು ಈ ಪದವು ಕ್ಲಿಷ್ಟತೆಯನ್ನು ಉಂಟುಮಾಡುತ್ತದೆಂಬುದು ಶ್ರೀ ದೇಶಬಂಧು ಗುಪ್ತಾ ಅವರು ಹೇಳಿದ್ದು ನಿಜವಾದದ್ದು. ಅವರ ತಕರಾರನ್ನು ಈಗಾಗಲೇ ಎಂಬ ಪದವನ್ನು ತೆಗೆದು ಹಾಕುವುದರ ಮೂಲಕ ಇಲ್ಲದಂತೆ ಮಾಡಲಾಗಿದೆ.

ಎರಡನೆಯ ತಿದ್ದುಪಡಿಯನ್ನು ಕುರಿತು ಖಂಡ (೧) ಇದನ್ನು ಕೈಬಿಟ್ಟಿದ್ದು ಇದು ತುಂಬಾ ಅನವಶ್ಯಕವೆಂದು ತೋರುತ್ತದೆ. ಯಾಕೆಂದರೆ ಪ್ಯಾರಾ (೩) ಮತ್ತು (೪)ರಲ್ಲಿ ಇದರ ಉದ್ದೇಶವನ್ನು ಖಂಡದಲ್ಲಿ ಸೇರಿಸಲಾಗಿದೆ.

ಮುಂದಿನ ನನ್ನ ತಿದ್ದುಪಡಿಯನ್ನು ಕುರಿತು ನಾನು ವಿನಯಪೂರ್ವಕ ತಿಳಿಯಪಡಿಸುವುದೇನೆಂದರೆ, ಮೇಲಿನ ಪ್ಯಾರಾ (೩)ರಲ್ಲಿ ಏನೇ ಹೇಳಿದ್ದರೂ ಈ ಪದಗಳ ಬದಲು ಯೋಗ್ಯ ಅಧಿಕಾರವುಳ್ಳ ಶಾಸನಕ್ಕೊಳಪಟ್ಟು ನನ್ನ ವಿನಂತಿ ಏನೆಂದರೆ ಖಂಡದಲ್ಲಿ ಅನವಶ್ಯಕವಾಗಿದ್ದವು ಮತ್ತು ಅಸಮುಚಿತವಾಗಿದ್ದವು.

ಮೂಲ ಖಂಡದಲ್ಲಿ ಆ ರೀತಿಯ ಪದಗಳು ನಿಜವಾಗಿಯೂ ಅನವಶ್ಯಕ ಮತ್ತು ಅಸಮುಚಿತವಾಗಿದ್ದವು, ಉಪಖಂಡ (೪) ಇದು ನಿಜವಾಗಿಯೂ ಖಂಡ (೩)ಕ್ಕೆ ಒಂದು ಅಪವಾದವಾಗಿದೆ. ಆ ವಿಷಯವನ್ನು ತಿದ್ದುಪಡಿಯ ಮೂಲಕ ಸ್ವಚ್ಛಮಾಡಲಾಗಿದೆ.

ಮತಕ್ಷೇತ್ರ ಈ ಪದ ಕುರಿತು ನಾನು ಅದರ ಬದಲು 'ಕ್ಷೇತ್ರ' ಎಂಬ ಪದವನ್ನು ಈ ವಿಮರ್ಶೆಗೆ ಅನುಗುಣವಾಗಿ ಯಾವ ಹಂತದಲ್ಲಿ ಮತದಾರರ ಪಟ್ಟಿಗಳು ತಯಾರಾಗುತ್ತವೆಯೋ ಆಗ ಮತಕ್ಷೇತ್ರ ಇರುವುದಿಲ್ಲ. ಒಬ್ಬ ಮನುಷ್ಯನು ಒಟ್ಟಾರೆ ಸೂಚಿಸಬಲ್ಲವುದೇನೆಂದರೆ ಒಂದು ಕ್ಷೇತ್ರ. ಆದರೆ ಒಂದು ಮತಕ್ಷೇತ್ರವಲ್ಲ. ಯಾಕೆಂದರೆ ಆಗ ಇನ್ನೂ ಮತಕ್ಷೇತ್ರಗಳು ಅಸ್ತಿತ್ವದಲ್ಲಿ ಇರುವುದಿಲ್ಲ.

ನನ್ನ ತಿದ್ದುಪಡಿ: 'ಅಥವಾ ಮಾಡುತ್ತಾನೆ.' ಎಂಬ ಈ ಹೆಚ್ಚಿನ ಪದವನ್ನು ಸೇರಿಸುವ ಕುರಿತು ಬಹಳ ಜನರು ಅಶಿಕ್ಷಿತರು ಇರುತ್ತಾರೆಂಬ ಮತ್ತು ಅವರು ಒಂದು ಅರ್ಜಿಯ ಮೂಲಕ ಒಬ್ಬ ನಿರ್ದಿಷ್ಟ ಅಧಿಕಾರಿಯ ಮುಂದೆ ಕೊಡಲು ಬರುವುದಿಲ್ಲವೆಂದು ಮಾಡಿದ ಟೀಕೆಗೆ ಕುರಿತು ಕೂಡಿಸಿದ್ದು ಇದೆ. ಅಥವಾ 'ಮಾಡುತ್ತಾನೆ' ಎಂಬ ಈ ಪದಗಳನ್ನು ಕೂಡಿಸುವುದರಿಂದ ಮೌಖಿಕ ಘೋಷಣೆಯನ್ನು ಜಿಲ್ಲಾ ದಂಡನಾಯಕರ ಮುಂದೆ ಇಲ್ಲವೆ ಮತದಾರರ ಯಾದಿಯನ್ನು ಸಿದ್ಧಪಡಿಸುವ ಅಧಿಕಾರಿಯ ಮುಂದೆ ಮಾಡಲು ಅನುಮತಿಯನ್ನು ಕೊಡುತ್ತದೆ. ಆ ತಕರಾರನ್ನು ಯುಕ್ತವಾಗಿ ಎದುರಿಸಲಾಗಿದೆ. ಈ ಠರಾವಿಗೆ ತಂದ ಉಳಿದ ತಿದ್ದುಪಡಿಗಳ ಕುರಿತ ಚರ್ಚೆಗೆ ನಾನು ಬರುತ್ತೇನೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಇದನ್ನು ಮಂಡಿಸುವವರಿಗೆ ನಾನು ಒಂದು ತಿದ್ದುಪಡಿಯನ್ನು ಸೂಚಿಸ ಬಯಸುತ್ತೇನೆ. ಅದೆಂದರೆ 'ತಿದ್ದುಪಡಿಗೆ ಕಾರಣ ಮತಕ್ಷೇತ್ರ' (೪)ನೆಯ ಭಾಗದಲ್ಲಿ..........

**ಮಾನ್ಯ ಉಪಸಭಾಪತಿ :** ನೀವು ಇದನ್ನು ಸದನಕ್ಕೆ ಕೇಳತಕ್ಕದ್ದಲ್ಲ. ನೀವು ಇದನ್ನು ಡಾ. ಅಂಬೇಡ್ಕರರಿಗೆ ಹೇಳಬಲ್ಲಿರಿ.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಅವಶ್ಯವಾದ ಮತ್ತು ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಲು ನಾನು ಸಿದ್ಧನಿದ್ದೇನೆ. ನಾನು ಹೇಳಿದಂತೆ ಉಳಿದ ತಿದ್ದುಪಡಿಗಳತ್ತ ಈಗ ಬರುತ್ತೇನೆ. ನಾನು ನನ್ನ ಗೆಳೆಯರಾದ ಶ್ರೀ ತ್ಯಾಗಿ ಅವರ ತಿದ್ದುಪಡಿ ತೆಗೆದುಕೊಳ್ಳುತ್ತೇನೆ. ನಾನು ಅವರನ್ನು ಸರಿಯಾಗಿ ತಿಳಿದುಕೊಂಡಿದ್ದರೆ ಈ ಠರಾವು ಸಾಮಾನ್ಯ ಪದಗಳಲ್ಲಿದ್ದರೆ ಅವರದು ತಕರಾರು ಇರಲಿಲ್ಲ. ಅವರಿಗೆ ಏನು ಮಾಡುವುದಿತ್ತು ಅಂದರೆ ಅದರಲ್ಲಿಯ ವಿವರಗಳನ್ನು ತೆಗೆದುಹಾಕುವುದಾಗಿತ್ತು. ಠರಾವಿನ ವಸ್ತುನಿಷ್ಠತೆ ಇಲ್ಲವೆ ಉದ್ದೇಶಕ್ಕಾಗಿ ಅವರ ಮನಸ್ಸಿನಲ್ಲಿ ಗೊಂದಲವಿದೆ. ಆ ಠರಾವಿನ ಮುಖ್ಯ ಉದ್ದೇಶವು ಒಂದು ಘೋಷಣೆಯನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಮಾಡುವುದು. ವಿಧಾನಸಭೆಗೆ ಚುನಾವಣೆಯು ೧೯೫೦ರ ಸುಮಾರು ನಡೆಯಬಹುದು. ಆದರೆ ಠರಾವಿನ ಉದ್ದೇಶವು ಕೆಲವು ಸಕಾರಾತ್ಮಕ ನಿರ್ದೇಶನಗಳನ್ನು ಚುನಾವಣೆಯ ಮತದಾರರ ಪಟ್ಟಿಯನ್ನು ತಯಾರಿಸುವ ಅಧಿಕಾರಿಗೆ ಹಿಂದಿನ ಎಲ್ಲಾ ಚುನಾವಣೆಗಳ ಆಧಾರದ ಮೇಲೆ ವಹಿಸಿಕೊಡುವುದಾಗಿದೆ. ಈ ಸಂವಿಧಾನ ಸಭೆಯು ಚುನಾವಣೆಯು ೧೯೫೦ರಲ್ಲಿ ನಡೆಯಬೇಕೆಂದು ಇಚ್ಛಿಸುತ್ತದೆ. ಆದರೆ ಸಂಬಂಧಿಸಿದ ಅಧಿಕಾರಿಗೆ ಸಂಬಂಧಿಸಿದ ಮತಕ್ಷೇತ್ರಗಳ ಮತದಾರರ ಯಾದಿಯನ್ನು ತಯಾರಿಸಲು ಯಾವುದೇ ನಿರ್ದೇಶನವನ್ನು ಕೊಡದೆ ಘೋಷಣೆ ಇಲ್ಲದೆ ಹೀಗೆ ಮಾಡಿದರೆ ಅದು ವ್ಯರ್ಥ ಮತ್ತು ಉದ್ದೇಶರಹಿತವಾಗುತ್ತದೆ. ಯಾಕೆಂದರೆ ಮತದಾರರ ಪಟ್ಟಿಯನ್ನು ಸಾಕಷ್ಟು ಮುಂಚಿತವಾಗಿ ತಯಾರಿಸಬೇಕು. ಹಾಗಿಲ್ಲದಿದ್ದರೆ ಚುನಾವಣೆಯೇ ನಡೆಯುವುದಿಲ್ಲ. ಠರಾವಿನ ಎರಡನೆಯ ಭಾಗವು ಅನೇಕ ಅಧಿಕಾರಿಗಳಿಗೆ ನಿರ್ದೇಶನಗಳನ್ನು ಕೊಡುವುದನ್ನು ಒಳಗೊಂಡಿದೆ. ನಿರ್ದೇಶನಗಳನ್ನು ಒಳಗೊಳ್ಳುವ ಹೊರತು ಆ ಠರಾವು ಕೇವಲ ಒಂದು ಪವಿತ್ರ ಘೋಷಣೆಯಾಗುತ್ತದೆ. ಅದಕ್ಕೆ ಏನೂ ಅರ್ಥವಿರುವುದಿಲ್ಲ. ಅದು ಕೇವಲ ಉದ್ದೇಶಗಳನ್ನು ನಿರೂಪಿಸಿದೆ ಮತ್ತು ಯಾವ ದಾಸ್ತಾವೇಜು ದಾಖಲೆಗಳ ಮೂಲಕ ಆ ಉದ್ದೇಶವನ್ನು ನೆರವೇರಿಸಬಹುದು ಎಂದು ಹೇಳಿದೆ. ನನ್ನ ಗೆಳೆಯ ತ್ಯಾಗಿ ಅವರು ನಿಜ ಹೇಳಬೇಕೆಂದರೆ,

ಠರಾವಿನ ಯಾವ ಭಾಗವನ್ನು ಕಿತ್ತು ಹಾಕಬೇಕೆಂದು ಹೇಳುವರೋ, ಅದು ನಿಜವಾಗಿ ಅವರು ಯಾವ ಭಾಗವನ್ನು ಇಟ್ಟುಕೊಳ್ಳಬಯಸುವ ಠರಾವಿನ ಉಳಿದ ಆ ಭಾಗಕ್ಕಿಂತ ಹೆಚ್ಚು ಮಹತ್ವವಾದದ್ದು ಇದೆಯೆಂದು ನಾನು ಭಾವಿಸುತ್ತೇನೆ. ಈಗ ನಾನು ನನ್ನ ಗೆಳೆಯರಾದ ಶ್ರೀ ಹನುಮಂತಯ್ಯ ಅವರ ತಿದ್ದುಪಡಿಗೆ ಬರುತ್ತೇನೆ.

**ಶ್ರೀ ಮಹಾವೀರ ತ್ಯಾಗಿ** : ಮೊದಲು ಈ ಪದದ ಬಗೆಗೆ ನಿಮ್ಮ ಅಭಿಪ್ರಾಯವೇನು?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ನಾನು ಅದನ್ನು ಕೈಬಿಡುತ್ತೇನೆಂದು ಈಗಾಗಲೇ ಹೇಳಿದ್ದೇನೆ. ಹನುಮಂತಯ್ಯನವರ ತಿದ್ದುಪಡಿಗೆ ಬರೋಣ. ಅವರು '೧೯೫೦ನೇ ಇಸ್ವಿಯಲ್ಲಿ' ಈ ಪದಗಳನ್ನು ಕಿತ್ತುಹಾಕಬೇಕೆನ್ನುತ್ತಾರೆ. ಅವರ ವಾದದ ಹಿಂದೆ ಬಹಳ ಒಳ್ಳೇ ಭಾವನೆ ಇದೆ. ಯಾಕೆಂದರೆ ಅವರ ಪ್ರಕಾರ ಈ ಸಂವಿಧಾನ ವಿಧಾನ ಸಭೆಗಳು ಈ ಠರಾವಿನ ಮೂಲಕ ೧೯೫೦ ಇದನ್ನು ಗೊತ್ತುಪಡಿಸಿ ಘೋಷಣೆಯನ್ನು ಮತ್ತು ಬೇರೆ ಯಾವುದೇ ಕಾರಣಕ್ಕಾಗಿ ಮತದಾರರ ಪಟ್ಟಿಯನ್ನು ತಯಾರಿಸುವುದು ಇಲ್ಲವೆ ಬೇರೆ ಯಾವುದೇ ಸಂದರ್ಭದಲ್ಲಿ ೧೯೫೦ರಲ್ಲಿ ಚುನಾವಣೆಯನ್ನು ನಡೆಯಿಸುವುದು ಅಸಾಧ್ಯವಾದಲ್ಲಿ ವಿಧಾನ ಸಭೆಯು ಸ್ವಲ್ಪ ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ವಿಧಾನಸಭೆಯು ಇದನ್ನು ಕ್ಷುಲ್ಲಕ ವಿಷಯವೆಂದು ಭಾವಿಸಿ ಆಪಾದಿಸಬಹುದು. ಯಾವಾಗ ಇದು ನಿಜವಾಗಿಯೂ ಒಳ್ಳೇ ಮಹತ್ವದ ವಿಷಯವಾಗಿರುತ್ತದೆ, ಆದರೆ ಅದೇ ಸಮಯಕ್ಕೆ ಈ ಠರಾವನ್ನು ಮಂಡಿಸಿದವರ ದೃಷ್ಟಿಯಲ್ಲಿ ದೇಶದಲ್ಲಿ ಒಂದು ದೃಷ್ಟಿಯ ಕೆಲವು ಮಟ್ಟಿಗೆ ದೇಶದಲ್ಲಿಟ್ಟ ಸಂವೇದನೆಯು ಈ ಸಂವಿಧಾನವನ್ನು ಪಾಸುಮಾಡುವಲ್ಲಿ ನಾವು ಎಷ್ಟು ತರ್‍ವಿತಗತಿಯಿಂದ ಹೋಗತಕ್ಕದ್ದಿತ್ತೋ ಅಷ್ಟು ಗತಿಯಿಂದ ಹೋಗುತ್ತಿಲ್ಲ. ನಮ್ಮ ಪ್ರಕ್ರಿಯೆಯು ಬಹಳಷ್ಟು ಸಾವಧಾನಕರ, ಬಹಳಷ್ಟು ವಿಳಂಬಕರವಾದುದು. ಇದು ಏಕೆ ಹೀಗಾಯಿತೆಂದರೆ ಬೇಗನೆ ಚುನಾವಣೆಯು ಆಗಬೇಕೆಂಬುದರ ಬಗೆಗೆ ನಮಗೆ ಗಂಭೀರ ಆಲೋಚನೆಯು ಇಲ್ಲ. ದೇಶದಲ್ಲಿರುವ ಜನರ ಈ ಭಾವನೆಯನ್ನು ಇಲ್ಲದಂತೆ ಮಾಡಲು ಯಾವುದೊಂದು ನಿಶ್ಚಿತ ದಿನಾಂಕವನ್ನು ಗುರಿಯಾಗಿಟ್ಟುಕೊಳ್ಳುವುದು ಅವಶ್ಯವಿದೆ. ಈ ದೃಷ್ಟಿಯಿಂದ "೧೯೫೦ನೆಯ ಇಸ್ವಿ" ಈ ಪದಗಳನ್ನು ಇಟ್ಟುಕೊಳ್ಳುವುದು ಅವಶ್ಯವಿದೆ. ನಿಜವಾಗಿ ಕೆಲ ಸೂಕ್ತ ಕಾರಣಗಳಿಂದ ದಿನಾಂಕವನ್ನು ಮುಂದೆ ಹಾಕಬಹುದು. ಮತ್ತು ವಿಧಾನ ಸಭೆಯ ಚುನಾವಣೆಯನ್ನು ಸಹ ಅವಶ್ಯವೆನಿಸಿದರೆ ಮುಂದೆ ಹಾಕಬಹುದು. ನನಗೆ ತಿಳಿದಂತೆ ವಿಧಾನ ಸಭೆಯು ದೇಶದ ಮುಂದೆ ಇರುವ ಚುನಾವಣೆಯ ಬಗೆಗೆ ಮಹತ್ವದ ಕಾರಣಗಳನ್ನು ಮುಂದಿಡಬಹುದು. ಆದರೆ ಬರಿಯ ಕಾರಣಗಳನ್ನು ಮುಂದಿಡುವುದರಿಂದ ದೇಶವು ಚುನಾವಣೆಯನ್ನು ಮುಂದು ಹಾಕಿದ ದಿನಾಂಕವನ್ನು ತಿಳಿದುಕೊಳ್ಳುವಲ್ಲಿ ಸಂಶಯವೇ ಇಲ್ಲ.

ಈಗ ನನ್ನ ಗೆಳೆಯರಾದ ಸಕ್ಸೇನಾ ಅವರು ದಿನಾಂಕ ೧ನೆಯ ಜನವರಿ ೧೯೪೯ರ ಬದಲು ದಿನಾಂಕ ೧ನೆಯ ಜನವರಿ ೧೯೫೦ಅನ್ನು ಬದಲಾಗಿ ಸೇರಿಸಬೇಕೆನ್ನುತ್ತಾರೆ. ಶ್ರೀ ಭಾರ್ಗವ ಅವರು ದಿನಾಂಕ ೩೧ನೆಯ ಮಾರ್ಚ್ ೧೯೪೮ರ ಬದಲು ದಿನಾಂಕ ೩೧ನೆಯ ಮಾರ್ಚ್ ೧೯೪೯ಕ್ಕೆ ಬದಲಿಸಬೇಕೆನ್ನುತ್ತಾರೆ. ಇದುವರೆಗೆ ಆದುದನ್ನು ಲಕ್ಷ್ಯಕ್ಕೆ ತೆಗೆದುಕೊಂಡರೆ ಇವೆರಡೂ ದಿನಾಂಕಗಳ ತಿದ್ದುಪಡಿಗಳನ್ನು ಸ್ವೀಕರಿಸಲು ಸಾಧ್ಯವಿಲ್ಲ. ನಾನು ಅವರನ್ನು ಸರಿಯಾಗಿ ತಿಳಿದುಕೊಂಡಿದ್ದರೆ, ಅವರ ಉದ್ದೇಶವು ಮತದಾರಯಾದಿ ಪ್ರಕಟಿಸಿದ ದಿನಾಂಕ ಮತ್ತು ಚುನಾವಣೆಯು ನಡೆಯುವ ದಿನಾಂಕ ಇವುಗಳ ಮಧ್ಯೆ ಬಹಳಷ್ಟು ನಿಧಾನವಾಗಿರಬಾರದು. ಬೇರೆ ಪದಗಳಲ್ಲಿ ಮತದಾರರ ಪಟ್ಟಿಯು ಬಹಳಷ್ಟು ಹಳೆಯದಾಗಿರಬಾರದು ಮತ್ತು ದಿನಾಂಕ ಮೀರಿದುದಾಗಿ ಇರಬಾರದು. ನನಗೆ ಈಗ ಅನಿಸಿದ ಮಟ್ಟಿಗೆ ನಮ್ಮ ಚುನಾವಣೆಯು ೧೯೫೦ರಲ್ಲಿ ನಡೆಯುವುದಾದರೆ, ಮತದಾರರ ಯಾದಿಯನ್ನು ಮತದಾರರ

ಅರ್ಹತೆ ಹಾಗೂ ಅವನು ೧ನೆಯ ಜನವರಿ ೧೯೪೯ಕ್ಕೆ ವಯಸ್ಕನಾಗುವನು ಮತ್ತು ಯಾವುದೇ ಕಲ್ಪನೆ ಮೀರಿ ಅದು ಹಳೆಯ ಮತದಾರರ ಪಟ್ಟಿಯಾಗಿರಲಿಕ್ಕಿಲ್ಲ. ನನ್ನ ಗೆಳೆಯರಾದ ಶ್ರೀ ಸಕ್ಸೇನಾ ಅವರು ಎಚ್ಚರವಹಿಸಿಕೊಳ್ಳಬೇಕಾಗುವುದು ಏನೆಂದರೆ ಎಲ್ಲ ಮತದಾರರ ಯಾದಿಗಳು ಸಾಮಾನ್ಯವಾಗಿ ಚುನಾವಣೆಗಿಂತ ಒಂದು ವರ್ಷ ಹಿಂದಿನವುಗಳಾಗಿರುತ್ತವೆ.

**ಪ್ರೊ. ಶಿಬ್ಬನ್ ಲಾಲ ಸಕ್ಸೇನಾ** : ಅದು ಎರಡು ವರ್ಷಗಳ ಹಳೆಯದು ಆಗುತ್ತದೆ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಆದ್ದರಿಂದ ಚುನಾವಣೆಯಲ್ಲಿ ಮತ ಹಾಕಲು ಅಧಿಕಾರವುಳ್ಳವರ ಹೆಸರುಗಳು ಮತದಾರರ ಯಾದಿಯಲ್ಲಿ ಅವರ ಒಂದೇ ಅರ್ಹತೆ, ನಮ್ಮೆಲ್ಲರಿಗೂ ಇರುವುದು. ಅವನಿಗೆ ೨೧ ವರ್ಷಗಳು ೧ನೆಯ ಜನವರಿ ೧೯೪೯ ಆಗುತ್ತದೆ. ಮತ್ತು ಚುನಾವಣೆಯು ೧೯೫೦ರಲ್ಲಿ ನಿರ್ಧಾರಮಾಡಲು ಸಾಧ್ಯವಿಲ್ಲದ ದಿನಾಂಕಕ್ಕೆ ಮುಂದೆ ಬಿದ್ದರೆ, ಆಗ ಮತದಾರರ ಯಾದಿಯು ಹಳೆಯದಾಗುವುದೆಂದು ಅನ್ನಲಾಗುತ್ತದೆ. ನನಗೆ ಹಾಗೆ ಅನಿಸುವುದಿಲ್ಲ. ನಾನು ಈಗ ಪಂಡಿತ ಭಾರ್ಗವ ಅವರ ತಿದ್ದುಪಡಿಗೆ ಬರುತ್ತೇನೆ. ಅವರಿಗೆ ದಿನಾಂಕ ೩೧ನೆಯ ಮಾರ್ಚ ೧೯೪೯ನೇದ್ದನ್ನು ಬದಲಿಸಬೇಕಾಗಿದೆ. ಈ ತಿದ್ದುಪಡಿಯನ್ನು ಸ್ವೀಕರಿಸಲು ಸಾಧ್ಯವಿಲ್ಲ. ಯಾಕೆಂದರೆ ೧೯೫೦ರಲ್ಲಿ ಚುನಾವಣೆಯು ನಡೆಯುವುದೆಂಬ ಆಶೆಯಿಂದ ಎಲ್ಲ ಪ್ರಾಂತೀಯ ಸರಕಾರಗಳಿಗೆ ಈಗಾಗಲೇ ದಿನಾಂಕ ೧ನೆಯ ಮಾರ್ಚ ೧೯೪೮ರಂದು ಸೂಚನೆಯನ್ನು ಕಳುಹಿಸಿ, ಮತದಾರರ ಯಾದಿಗಳನ್ನು ವಯಸ್ಕರ ಮತದಾನದ ಆಧಾರದ ಮೇಲೆ ತಯಾರಿಸಲು ತಿಳಿಸಲಾಗಿದೆ.

ನನಗೆ ಅನಿಸುವ ಮಟ್ಟಿಗೆ, ಪಂಡಿತ ಭಾರ್ಗವ ಅವರ ತಿದ್ದುಪಡಿಯನ್ನು ನಾವು ಸ್ವೀಕರಿಸಿದರೆ ಈಗಾಗಲೇ ಪ್ರಾಂತೀಯ ಸರಕಾರಗಳು ಮಾಡಿದ ಎಲ್ಲಾ ಕೆಲಸಗಳು ಉಪಯೋಗ ಇಲ್ಲದಂತಾಗುತ್ತವೆ. ಯಾಕೆಂದರೆ ದಿನಾಂಕ ೧ನೆಯ ಜನವರಿ ೧೯೪೮ರಂದು ಯಾರು ವಯಸ್ಕರಾಗುವರೋ ಅವರ ಹೆಸರುಗಳನ್ನು ಮತದಾರರ ಯಾದಿಯಲ್ಲಿ ಸೇರಿಸಲಾಗಿದೆ. ಆ ಮತದಾರರ ಯಾದಿಯನ್ನು ತಯಾರಿಸಿದ್ದಾರೆ.

**ಸನ್ಮಾನ್ಯ ಶ್ರೀ ಸಂತಾನಂ** : ದಿನಾಂಕ ೩೧ ಮಾರ್ಚ್ ೧೯೪೮ರಿಂದ ದಿನಾಂಕ ೧ನೆಯ ಜನವರಿ ೧೯೪೯ಕ್ಕೆ ಉಪ ಪ್ಯಾರಾ (೨)ರಲ್ಲಿ ಬದಲಾಯಿಸುವ ಅವಶ್ಯಕತೆಯು ಇಲ್ಲವಾ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಇಲ್ಲ, ನಾನು ಹಾಗೆ ಭಾವಿಸುವುದಿಲ್ಲ. ಈಗ ನಾನು ನನ್ನ ಗೆಳೆಯರಾದ ಶ್ರೀ ಚೌಧುರಿ ಅವರ ತಿದ್ದುಪಡಿಗೆ ಬರುತ್ತೇನೆ. ನನಗೆ ಅನಿಸಿದಂತೆ ಅವರು ಹೇಳುವುದು ಅಸಾಧ್ಯವಾದುದು ಮತ್ತು ಹಾಸ್ಯಾಸ್ಪದವಾದುದು. ಅವರು ಹೇಳುವುದೇನೆಂದರೆ ಅಸ್ವಸ್ಥ ಮನಸ್ಸಿನ ಪ್ರತಿಯೊಬ್ಬ ಮನುಷ್ಯನು ಮತ ಚಲಾಯಿಸುವುದನ್ನು ನಿರಾಕರಿಸಬೇಕು. ಅಸ್ವಸ್ಥ ಮನಸ್ಸಿನವರ ಹೆಸರನ್ನು ಮತದಾರರ ಯಾದಿಯಲ್ಲಿ ಸೇರಿಸಬಾರದೆಂದು ನಾವೆಲ್ಲರೂ ಒಪ್ಪುತ್ತೇವೆಯಾದರೆ ಒಬ್ಬನು ಅಸ್ವಸ್ಥ ಮನಸ್ಸಿನವ ಇರುವನೋ ಇಲ್ಲವೋ ಎಂದು ಯಾರು ನಿರ್ಧರಿಸಬೇಕು ಎಂಬ ಪ್ರಶ್ನೆಯು ಉಳಿಯುತ್ತದೆ. ನನಗೆ ಅನಿಸಿದ ಮಟ್ಟಿಗೆ ಈ ಪ್ರಸ್ತಾವನೆಯಲ್ಲಿ ಮಂಡಿಸಿದ ಅರ್ಹತೆ ಒಬ್ಬ ನಿಷ್ಪಕ್ಷಪಾತ ನ್ಯಾಯಾಧೀಶನು ಅಧಿಕಾರಿಯು ವಿಚಾರಣೆ ಮಾಡಿ ಅವನು ಅಸ್ವಸ್ಥ ಮನಸ್ಸಿನವನು ಇರುವನೆಂದು ನಿರ್ಧರಿಸಿದರೆ ಅಂಥವನನ್ನು ಮತದಾರರ ಯಾದಿಯಲ್ಲಿ ಸೇರಿಸದಂತೆ ಮಾಡುವುದು ಅತ್ಯುತ್ತಮ ಪ್ರಸ್ತಾವನೆಯಾಗುತ್ತದೆ. ಇದಕ್ಕೆ ವಿರುದ್ಧವಾಗಿ ಹಳ್ಳಿಯ ಪಟವಾರಿಗೆ ಹಳ್ಳಿಯಲ್ಲಿಯ ಕೆಲವು ಜನರ ಹೆಸರನ್ನು ಮತದಾರರ ಯಾದಿಯಲ್ಲಿ ಸೇರಿಸಬೇಡವೆಂದು ಅಧಿಕಾರ ಕೊಟ್ಟರೆ ಆಗ ಅವನು ಒಬ್ಬನು ಅಸ್ವಸ್ಥ ಮನಸ್ಸಿನವನೆಂದು ತಿಳಿಯುತ್ತಾನೆ ಮತ್ತು ನಿಜವಾಗಿಯೂ ಪ್ರಯಾಣಿಕರ ಹಡಗಿನ ಚಾಲಕರನ್ನು ಹಡಗಿನ ಕಪ್ತಾನನ ಸ್ಥಿತಿಗೆ ತಂದಂತೆ ಆಗುತ್ತದೆ. ಇಂತಹ ತಿದ್ದುಪಡಿಯನ್ನು

ಸ್ವೀಕರಿಸಲು ನನಗೆ ಸಾಧ್ಯವಾಗುತ್ತಿಲ್ಲ.

ನನ್ನ ಗೆಳೆಯರಾದ ಶ್ರೀ ಕಾಮತ್ ಅವರು ಮೊನ್ನೆಯ ದಿನ ಪಾಸಾದ ಕೆಲವು ಖಂಡಗಳ ಬಗೆಗೆ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಅದರಲ್ಲಿ 'ಅಸ್ವಸ್ಥ ಮನಸ್ಸಿನ ಹಾಗೂ ಇತರ ಕೆಲವು ಅನರ್ಹತೆಗಳನ್ನು' ಕಾಣಿಸಲಾಗಿದೆ. ಅದರಲ್ಲಿಯೂ ನಿರ್ದಿಷ್ಟವಾಗಿ ಅಪರಾಧಗಳಿಗೆ ಸಂಬಂಧಿಸಿದ್ದು.

**ಶ್ರೀ ದೇಶಬಂಧು ಗುಪ್ತಾ** : ಮೊದಲಿಗೆ ಮಾನಸಿಕ ಆಸ್ಪತ್ರೆಯಲ್ಲಿರುವ ಎಲ್ಲರ ಹೆಸರುಗಳನ್ನು ಮತದಾರಯಾದಿಯಲ್ಲಿ ಸೇರಿಸಬೇಕೆ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ಆದರೆ ಮುಂಬೈ ಪ್ರಾಂತಕ್ಕೆ ಸಂಬಂಧಿಸಿದಂತೆ ಮುಖ್ಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಒಬ್ಬ ಮನುಷ್ಯನು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವನೆಂದು ಘೋಷಿಸಿದವನ ಹೆಸರನ್ನು ಮಾತ್ರ ಸೇರಿಸುವುದಿಲ್ಲ. ಉಳಿದ ಪ್ರಾಂತಗಳ ಪ್ರಕರಣದ ಬಗೆಗೆ ನನಗೆ ಗೊತ್ತಿರುವುದು.

**ಮಾನ್ಯ ಉಪ ಸಭಾಪತಿ** : ಹೌದು, ಬಂಗಾಳದಲ್ಲಿಯೂ ಅದೇ ರೀತಿಯಾಗಿದೆ.

**ಸನ್ಮಾನ್ಯ ಡಾ|| ಬಿ.ಆರ್. ಅಂಬೇಡ್ಕರ್** : ನನಗೆ ತಿಳಿದಂತೆ ಬಂಗಾಳದಲ್ಲಿಯೂ ಅದೇ ರೀತಿಯಾಗಿದೆ. ಮನೋವಿಕಲ ಅಧಿನಿಯಮದಲ್ಲಿ ಸಹ ಹಾಗೆ ಇದೆ. ಈಗ ಅಪರಾಧದ ಪ್ರಶ್ನೆಗೆ ಒಟ್ಟು ನನಗೆ ಅನಿಸಿದ್ದು ಹೇಳಬೇಕೆಂದರೆ, ಸಂವಿಧಾನದ ಕರಡು ಪ್ರತಿಯಲ್ಲಿ ಅಪರಾಧ ಈ ಪದವನ್ನು ನಿರ್ದಿಷ್ಟ ವಿಧಿಯಲ್ಲಿ ಕೇವಲ ಯಥಾವತ್ತಾಗಿ ನಿರೂಪಿಸಲಾಗಿದೆ. ಭಾರತ ಸರಕಾರದ ಅಧಿನಿಯಮದಲ್ಲಿ ಆರನೆಯ ಪರಿಶಿಷ್ಟ ಉಪಬಂಧವನ್ನು ಕಲ್ಪಿಸಲಾಗಿದೆ. ಕರಡು ಸಮಿತಿಯವರ ಮನಸ್ಸಿನಲ್ಲಿ ವಿಧಿಯಲ್ಲಿ ಹೇಳಿದ್ದಕ್ಕಿಂತ ಹೆಚ್ಚಿಗೆ ಏನಾದರೂ ಹೇಳುವುದಿತ್ತೆಂದು ನನಗೆ ಅನಿಸುವುದಿಲ್ಲ. ಒಂದು ಅಪರಾಧ ಮಾಡುವುದೇ ಅನರ್ಹತೆಯಾಗುವುದಿಲ್ಲ. ಯಾವಾಗ ಒಬ್ಬ ಮನುಷ್ಯನಿಗೆ ಶಿಕ್ಷೆಯಾಗುತ್ತದೆ. ಮತ್ತು ಅವನನ್ನು ಜೇಲಿನಲ್ಲಿ ಇಡುತ್ತಾರೆ. ಆಗ ಅವನಿಗೆ ಅನರ್ಹತೆಯು ಉಂಟಾಗುತ್ತದೆ. ಅವನು ಜೇಲುವಾಸವನ್ನು ಅನುಭವಿಸುತ್ತಿರುವಾಗ ಅವನು ಮತ ಹಾಕುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಈ ವಿಷಯವನ್ನು ಇನ್ನೂ ನಾವು ಶ್ರೀ ಕಾಮತರವರು ವಿಧಿಯಲ್ಲಿ ಹೆಚ್ಚಿನ ಅನರ್ಹತೆಗಳಿಗೆ ತಂದ ತಿದ್ದುಪಡಿಯ ಚರ್ಚೆಯ ಕಾಲಕ್ಕೆ ಇನ್ನೂ ಹೆಚ್ಚಿಗೆ ಅನುಕೂಲವಾಗುವಂತೆ ಮಾಡಬಹುದು.

**ಶ್ರೀ ಎಚ್.ವಿ. ಕಾಮತ್** : ಒಬ್ಬನು ಹಿಂದಕ್ಕೆ ಮಾಡಿದ ಅಪರಾಧಗಳಿಗೆ, ಲಂಚಕೋರತನಕ್ಕೆ ಇಲ್ಲವೆ ಕಾನೂನುಬಾಹಿರ ಆಚರಣೆಗಾಗಿ ಶಿಕ್ಷೆಗೆ ಒಳಗಾದರೆ ಅವನು ತನ್ನ ಹೆಸರನ್ನು ಮತದಾರರ ಯಾದಿಯಲ್ಲಿ ಮತದಾರ ಎಂದು ಹಚ್ಚಿಕೊಳ್ಳಲು ಅನರ್ಹನೇ ಇಲ್ಲವೆ ತನ್ನ ಹೆಸರು ನೊಂದಾಯಿಸಲು ಪ್ರತಿಷೇಧಿಸುತ್ತದೆಂದು ನಾನು ತಿಳಿದುಕೊಳ್ಳಬಹುದೆ?

**ಸನ್ಮಾನ್ಯ ಡಾ|| ಬಿ.ಆರ್. ಅಂಬೇಡ್ಕರ್** : ಹೌದು ಮತ್ತು ಅವುಗಳನ್ನು ಸಂಸತ್ತು ಗೊತ್ತುಪಡಿಸುತ್ತದೆ.

**ಮಾನ್ಯ ಉಪ ಸಭಾಪತಿ** : ಶಾಲೆಯ ಮಕ್ಕಳು ಬಿಡುವಿನ ದಿನಗಳಲ್ಲಿ ಯೋಗ್ಯ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲವೆಂದು ನನಗೆ ಗೊತ್ತಿದೆ. ಮುಂದಿನ ತಿದ್ದುಪಡಿಯು ಪಂಡಿತ ಠಾಕೂರದಾಸ ಭಾರ್ಗವ ಅವರದು, ಪ್ರಶ್ನೆಯು ಹೀಗಿದೆ – "ಘೋಷಣೆಯನ್ನು ದಾಖಲು ಮಾಡುತ್ತಾನೆ" ಈ ಪದಗಳ ಬದಲು "ತನ್ನ ಉದ್ದೇಶವನ್ನು ಸ್ಪಷ್ಟಪಡಿಸುತ್ತಾನೆ" ಈ ಪದಗಳನ್ನು ಸೇರಿಸತಕ್ಕದ್ದು.

ಡಾ|| ಅಂಬೇಡ್ಕರ್ ಅವರು ಸ್ವೀಕರಿಸುವುದರಲ್ಲಿ ಇದು ಅಡಕವಾಗಿದೆ. ಅವರ ಎರಡನೆಯ ತಿದ್ದುಪಡಿಯೆಂದರೆ ಪ್ಯಾರಾ ೩ರಲ್ಲಿ '೩೧ನೆಯ ಮಾರ್ಚ್ ೧೯೪೮' ಈ ಪದಗಳ ಬದಲು '೩೧ ಮಾರ್ಚ್ ೧೯೪೯' ಈ ಪದಗಳನ್ನು ಸೇರಿಸತಕ್ಕದ್ದು.

ತಿದ್ದುಪಡಿಯು ತಿರಸ್ಕರಿಸಲ್ಪಟ್ಟಿತು.

**ಮಾನ್ಯ ಉಪಸಭಾಪತಿ** : ಈಗ ನಾವು ಶ್ರೀ ನಾಗಪ್ಪನವರ ತಿದ್ದುಪಡಿಗೆ ಬರೋಣ. ಆದರೆ ಅದು ಡಾ॥ ಬಿ.ಆರ್. ಅಂಬೇಡ್ಕರ್ ಅವರ ತಿದ್ದುಪಡಿಯಲ್ಲಿ ಸೇರಿದೆ. ಆದ್ದರಿಂದ ನಾನು ಅದನ್ನು ಮತಕ್ಕೆ ಹಾಕುವುದಿಲ್ಲ.

* * * *

**ಮಾನ್ಯ ಉಪಸಭಾಪತಿ** : ಎರಡನೆಯ ಭಾಗವನ್ನು ಡಾ॥ ಬಿ.ಆರ್. ಅಂಬೇಡ್ಕರ್‌ರವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಮತಕ್ಕೆ ಹಾಕುವ ಅವಶ್ಯಕತೆಯು ಇರುವುದಿಲ್ಲ. ಈಗ ನಾವು ಮೂರನೆಯ ಭಾಗಕ್ಕೆ ಬರೋಣ. ಅದೂ ಸಹ ಡಾ॥ ಅಂಬೇಡ್ಕರ್ ಅವರ ತಿದ್ದುಪಡಿಯಲ್ಲಿ ಒಳಗೊಂಡಿದೆ. ಆದರೆ ಅವರಿಗೆ ಆ ಬಗೆಗೆ ಇನ್ನೂ ಹೆಚ್ಚಿನ ತಿದ್ದುಪಡಿ ಇದೆ. ಪ್ರಶ್ನೆಯು ಹೀಗೆ ಇದೆ.

"ಉಪಪ್ಯಾರಾ (೪)ರಲ್ಲಿ ಕೊನೆಯ ಸಾಲಿನಲ್ಲಿ 'ಖಾಯಂ' ಈ ಪದವನ್ನು ತೆಗೆದುಹಾಕತಕ್ಕದ್ದು."

ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಪತಿ** : ಈಗ ನಾನು ಡಾ॥ ಅಂಬೇಡ್ಕರ್ ಅವರ ತಿದ್ದುಪಡಿಯ ಠರಾವಿನ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. ಸದನವು ನಾನು ಇದನ್ನು 'ಓದಬೇಕೆಂದು ಇಚ್ಛಿಸುತ್ತದೆಯೋ?

**ಸನ್ಮಾನ್ಯ ಸದಸ್ಯರು** : ಬೇಡ ಬೇಡ

**ಮಾನ್ಯ ಉಪಸಭಾಪತಿ** : ಆ ಪ್ರಶ್ನೆಯು ಹೀಗಿದೆ – "ತಿದ್ದುಪಡಿಯಾದ ಠರಾವನ್ನು ಸ್ವೀಕರಿಸತಕ್ಕದ್ದು."

ಈ ಕೂಡಲೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮತದಾರರ ಯಾದಿಯನ್ನು ತಯಾರಿಸಲು ಮತ್ತು ಎಲ್ಲ ಅವಶ್ಯಕ ಕ್ರಮಗಳನ್ನು ವಿಧಾನಸಭೆಗೆ ಹೊಸ ಸಂವಿಧಾನದ ಅಡಿಯಲ್ಲಿ ಎಷ್ಟು ಬೇಗನೆ ಸಾಧ್ಯವೋ ಅಷ್ಟು ಬೇಗನೆ ೧೯೫೦ರಲ್ಲಿ ನಡೆಯಿಸಲು ಸೂಚನೆಗಳನ್ನು ಹೊರಡಿಸಲು ಠರಾವು ಪಾಸಾಗಿದೆ.

ಇನ್ನೂ ಠರಾಯಿಸಿದ್ದೇನೆಂದರೆ ರಾಜ್ಯಗಳ ಮತದಾರರ ಯಾದಿಗಳನ್ನು ಹೊಸ ಸಂವಿಧಾನದ ವ್ಯವಸ್ಥೆಯಲ್ಲಿ ಶಾಸನ ಸಭೆ ಒಪ್ಪಿದಂತೆ, ಕೆಳಗೆ ಕಾಣಿಸಿದ ತತ್ವಗಳಿಗನುಗುಣವಾಗಿ–

(೧) ಯಾವನೊಬ್ಬನು ಅಸ್ವಸ್ಥ ಮನಸ್ಸಿನವನೆಂದು ಯೋಗ್ಯ ನ್ಯಾಯಾಲಯವು ಘೋಷಿಸಿದ್ದರೆ ಅಂತಹ ವ್ಯಕ್ತಿಯ ಹೆಸರನ್ನು ಮತದಾರರ ಯಾದಿಯಲ್ಲಿ ಸೇರಿಸತಕ್ಕದ್ದಲ್ಲ.

(೨) ೧೯೪೯ನೆಯ ಜನವರಿ ೧ನೆಯ ದಿನಾಂಕವನ್ನು ಚುನಾವಣೆಯು ನಡೆಯುವ ದಿನಾಂಕವೆಂದು ಗೊತ್ತುಪಡಿಸತಕ್ಕದ್ದು.

(೩) ಒಬ್ಬ ವ್ಯಕ್ತಿಯು ದಿನಾಂಕ ೩೧–೩–೧೯೪೮ರ ವರ್ಷದ ಕೊನೆಯವರೆಗೆ ೧೮೦ ದಿನಗಳವರೆಗೆ ಯಾವುದೇ ಕ್ಷೇತ್ರದಲ್ಲಿ ವಾಸಿಸದ ಹೊರತು ಆ ಮತದಾರರ ಯಾದಿಯಲ್ಲಿ ಅವನ ಹೆಸರು ಸೇರಿಸಲು ಅನರ್ಹನಾಗುವುದಿಲ್ಲ. ಈ ಪ್ಯಾರಾಗ್ರಾಫ್‌ದ ಉದ್ದೇಶಕ್ಕಾಗಿ ಒಬ್ಬ ಮನುಷ್ಯನು ಒಂದು ಸ್ಥಳದಲ್ಲಿ ಸಾಮಾನ್ಯವಾಗಿ ವಾಸಿಸದ ಹೊರತು ಮತ್ತು ಖಾಯಂ ಆಗಿ ಒಂದು ವಾಸಸ್ಥಾನವಿರದ ಹೊರತು ಎಂದು ಅರ್ಥೈಸಬೇಕು.

(೪) ಮೇಲೆ ಪ್ಯಾರಾಗ್ರಾಫ್ (೩)ರಲ್ಲಿ ಏನೇ ಹೇಳಿದ್ದರೂ, ಒಬ್ಬ ಮನುಷ್ಯನು ಒಂದು ಸ್ಥಳದಿಂದ ಮತ್ತೊಂದು ಪ್ರಾಂತಕ್ಕೆ ಇಲ್ಲವೆ ತನ್ನ ಮೊದಲಿನ ಖಾಯಂ ವಾಸಸ್ಥಾನದಲ್ಲಿ ಶಾಂತಿಭಂಗದ ದಸೆಯಿಂದ ಇಲ್ಲವೆ ಶಾಂತಿ ಭಂಗವಾಗಬಹುದೆಂಬ ಅಂಜಿಕೆಯಿಂದ ಅಂತಹ ಸ್ಥಳವನ್ನು ಬಿಟ್ಟು ಬಂದಿದ್ದರೆ, ಅಂತಹ ಮನುಷ್ಯನು ದಾಖಲೆಗಳನ್ನು ಹಾಜರ ಮಾಡಿ, ಇಲ್ಲವೆ ಒಂದು

ನಿರ್ದಿಷ್ಟ ಸ್ಥಳದಲ್ಲಿ ಖಾಯಂ ಆಗಿ ವಾಸಿಸುವ ತನ್ನ ಇಚ್ಛೆಯನ್ನು ಘೋಷಣೆ ಮೂಲಕ ಮಾಡಿ ಆ ಕ್ಷೇತ್ರದ ಮತದಾರರ ಯಾದಿಯಲ್ಲಿ ತನ್ನ ಹೆಸರನ್ನು ದಾಖಲು ಮಾಡಿಸಿಕೊಳ್ಳಬೇಕು.

ತಿದ್ದುಪಡಿಯಾದ ಪ್ರಸ್ತಾವನೆಯು ಸ್ವೀಕರಿಸಲ್ಪಟ್ಟಿತು.

೫ ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು.

* * * *

## ವಿಧಿ ೧೪೯ (ಮುಂದುವರಿದಿದೆ)

**ಮಾನ್ಯ ಉಪಸಭಾಪತಿ** : ಈಗ ನಾವು ವಿಧಿ ೧೪೯ಕ್ಕೆ ಬರೋಣ. ಈ ವಿಧಿಯ ಬಗೆಗೆ ಸಾಕಷ್ಟು ಚರ್ಚೆಯಾಗಿದೆಯೆಂದು ನಾನು ಭಾವಿಸುತ್ತೇನೆ. (ಮತ್ತು ಈಗ ಡಾ॥ ಅಂಬೇಡ್ಕರ್ ಅವರು ಉತ್ತರಿಸುತ್ತಾರೆ.)

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಮಾನ್ಯ ಉಪ ಸಭಾಪತಿಗಳೇ, ವಿಧಿ ೧೪೯ರ ಚರ್ಚೆಗೆ ಉತ್ತರಿಸುವ ಮೊದಲು ನಾನು ನನ್ನ ತಿದ್ದುಪಡಿಯ ಸಂಖ್ಯೆ ೨೨೫೫ನ್ನು ಕುರಿತು ನನ್ನ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸುತ್ತೇನೆ. ನನ್ನ ಈ ತಿದ್ದುಪಡಿಯನ್ನು ವಾಪಸ್ ಪಡೆಯಲು ಸಂಸತ್ತು ನನಗೆ ಪರವಾನಗಿ ಕೊಡಬೇಕು ಮತ್ತು ಅದರ ಬದಲಿಗೆ ಇದು ಯಾವ ತಿದ್ದುಪಡಿ ಸಂಖ್ಯೆ ೪೮, ಲಿಸ್ಟ್ ೧೧ ಈ ತಿದ್ದುಪಡಿ ನಜೀರುದ್ದೀನ್ ಅಹ್ಮದ್ ಅವರು ತಂದಿದ್ದ ತಿದ್ದುಪಡಿ ಅನ್ವಯ ತಿದ್ದುಪಡಿಯಾದ ಸಂಖ್ಯೆ ೨೨೪೯ಯನ್ನು ಸ್ವೀಕರಿಸುತ್ತೇನೆ. ನಾನು ಶ್ರೀ ಟಿ.ಟಿ. ಕೃಷ್ಣಮಾಚಾರಿಯವರ ತಿದ್ದುಪಡಿ ಸಂಖ್ಯೆ ೨೨೫೨ಯನ್ನು ಶ್ರೀ ಭಾರ್ಗವರವರ ತಿದ್ದುಪಡಿಯೊಂದಿಗೆ ಮತ್ತು ತಿದ್ದುಪಡಿ ಸಂಖ್ಯೆ ೨೨೬೩ನ್ನು ಶ್ರೀ ಶಿಬ್ಬನ್‌ಲಾಲ್ ಸಕ್ಸೇನಾರವರ ತಿದ್ದುಪಡಿ ಸಂಖ್ಯೆ ೬೭ರಂತೆ ತಿದ್ದುಪಡಿಯಾದಂತೆ ಒಪ್ಪಿಕೊಳ್ಳುತ್ತೇನೆ.

ಮಾನ್ಯರೇ, ಈಗ ವಿಧಿಯ ಮೇಲಣ ಸಾಮಾನ್ಯ ಚರ್ಚೆಯನ್ನು ಕುರಿತು ಅಲ್ಲಿ ಎರಡು ಸಂಗತಿಗಳನ್ನು ಮಾತ್ರ ನಾನು ಉತ್ತರಿಸಬೇಕಾಗುತ್ತದೆಂದು ನನಗೆ ಅನಿಸುತ್ತದೆ. ಮೊದಲನೆಯದೆಂದರೆ ಜನಗಣತಿಯ ಸಂಖ್ಯೆಗಳನ್ನು ಹೊಸ ಚುನಾವಣೆಗಳಿಗಾಗಿ ಕೈಬಿಡಬೇಕು. ಬಹಳಷ್ಟು ವಾದ ವಿವಾದಗಳನ್ನು ಮಾಡುವವರು ಅನೇಕ ಪ್ರಾಂತಗಳಲ್ಲಿಯ ಜನಗಣತಿಯ ಅಂಕಿ ಸಂಖ್ಯೆಗಳು ಸರಿಯಾಗಿರುವುದಿಲ್ಲ. ಬೇರೆ ಬೇರೆ ಸಮಿತಿಗಳಿಗೆ ಸಂಬಂಧಿಸಿದಂತೆ ಪ್ರಮಾಣಕ್ಕೆ ಸಂಬಂಧಿಸಿದಂತೆ ಅದು ನಿಜಸಂಗತಿಯನ್ನು ಹೇಳುವುದಿಲ್ಲ. ಇಂತಹ ವಾದದಲ್ಲಿ ಸತ್ಯವಿದೆ. ನಾನು ಹೇಳಬೇಕೆಂದರೆ ಅದಕ್ಕೆ ಸಾಕಷ್ಟು ಪ್ರಮಾಣಪತ್ರಗಳಿವೆ ಮತ್ತು ಗಣತಿಯ ಆಯುಕ್ತರ ವರದಿಗಳೇ ಟೀಕೆಗೆ ಸಮರ್ಥನೆ ನೀಡುತ್ತದೆ.

ಈ ಮುದ್ದೆಯ ಬಗೆಗೆ ಗಣತಿಯ ಆಯುಕ್ತರು ಮಾಡಿದ ವರದಿಯ ಮೇಲೆ ಅವರು ಮಾಡಿದ ಹೇಳಿಕೆಗಳನ್ನು ಓದಲು ಇಚ್ಛಿಸಿದ್ದೆನು. ಆದರೆ ಈಗ ವೇಳೆಯು ಇಲ್ಲ. ಆದ್ದರಿಂದ ಅವುಗಳನ್ನು ಉಲ್ಲೇಖಿಸದಿರುವುದೇ ಲೇಸೆಂದು ನಾನು ಭಾವಿಸುತ್ತೇನೆ. ಇನ್ನು ಬಹುಸಂಖ್ಯೆಯ ಸದನದ ಸದಸ್ಯರು ಯಾರು ಈ ವಿಷಯದ ಮೇಲೆ ಮಾತನಾಡಿದರೋ ಅವರಿಗೆ ಸತ್ಯ ಸಂಗತಿಯು ನನಗಿಂತ ಚೆನ್ನಾಗಿ ಗೊತ್ತಿದೆ. ನಾನು ಒಂದು ಸಂಗತಿಯನ್ನು ಸೇರಿಸಬಯಸುತ್ತೇನೆ. ಅದೆಂದರೆ ಯಾವುದೇ ಜನಾಂಗ–ಜನರಿಗೆ ಬಹಳಷ್ಟು ಜನಗಣತಿಯ ಲೆಕ್ಕ ಪತ್ರಗಳ ಕೈಚಳಕದಲ್ಲಿ ಅನ್ಯಾಯವಾಗಿದ್ದರೆ ಈ ವಿಷಯದಲ್ಲಿ ರಾಜಕೀಯವಾಗಿ ಬಾಧಿತರಾದ ಜನರು ಅವರೆಂದರೆ ಪರಿಶಿಷ್ಟ ಜಾತಿಗಳು (ಕೇಳಿರಿ, ಕೇಳಿರಿ) ಉದಾ:

ಪಂಜಾಬದಲ್ಲಿ ಉಳಿದ ಜಾತಿಯವರು ಪರಿಶಿಷ್ಟ ಜನಾಂಗದವರನ್ನು ಈ ಪರಿಶಿಷ್ಟ ಜನಾಂಗವನ್ನು ಶೋಷಿಸಲು ಪ್ರಾರಂಭಿಸಿದರು. ತನ್ನ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಮತ್ತು ತಮಗೆ ಶಾಸನ ಸಭೆಯಲ್ಲಿ ಹೆಚ್ಚಿನ ಪ್ರಾತಿನಿಧ್ಯ ಪಡೆಯಲು ಪ್ರಯತ್ನಿಸಬೇಕು. ಈ ಬಡಜನರು ಬಹಳಷ್ಟು ಹಳ್ಳಿಯ ಜನರು, ಭೂಮಿ ಇಲ್ಲದವರು, ಕೂಲಿಕಾರರು, ಅವರು ಅಸಂಘಟಿತರು. ಅಲ್ಲಲ್ಲಿ ವಾಸ ಮಾಡಿಕೊಂಡಿರುವವರು. ಅವರಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲ, ಅಧಿಕಾರಿಗಳ ಸಹಾಯವೂ ಇಲ್ಲ. ಪೋಲಿಸರು ಮತ್ತು ಮ್ಯಾಜಿಸ್ಟ್ರೇಟ ಅವರಿಂದ ಕೆಲವು ಜಾತಿಗಳು ತುಂಬಾ ಪ್ರಭಾವಿಯಾಗಿದೆ. ಆ ನಿರ್ದಿಷ್ಟ ಸಮಾಜದ ಸದಸ್ಯರೆಂದು ಆರಿಸಿ ಬರಲಿಕ್ಕೆ ಬೇಕು. ಇಲ್ಲವೆ ಚುನಾವಣೆಯಲ್ಲಿ ಅವರನ್ನು ಪರಿಗಣಿಸುವಂತಿಲ್ಲ. ಇಂತಹದು ಬಹಳಷ್ಟು ಜನ ಇರುವರು. ಬಂಗಾಳದಲ್ಲಿ ಕೆಲವು ಕಾರಣಗಳಿಗಾಗಿ ತಿಳಿದುಕೊಳ್ಳಲು ಸಾಧ್ಯವಾಗಿದೆಯೆಂಬುದು ನನಗೆ ತಿಳಿದಿಲ್ಲ. ಬಹಳಷ್ಟು ಸಂಖ್ಯೆಯ ಪರಿಶಿಷ್ಟ ಜನಾಂಗದ ಜನರು ಪರಿಶಿಷ್ಟ ಜನಾಂಗದವರೆಂದು ಹೇಳಿಕೊಳ್ಳಲು ನಿರಾಕರಿಸುತ್ತಾರೆ. ಈ ಸಂಗತಿಯನ್ನು ಜನಗಣತಿ ಆಯುಕ್ತರು ಅರಿತುಕೊಂಡಿದ್ದಾರೆ. ಈ ವಿಷಯದ ಮೇಲೆ ಅನೇಕ ಸದಸ್ಯರು ಮಾತನಾಡಿದರು. ಜನಗಣತಿ ಸಂಖ್ಯೆಗಳನ್ನು ತೆಗೆದುಕೊಳ್ಳಬಾರದೆಂಬ ವಾದವು ಸರಿಯಾದುದಲ್ಲ. ಮತ್ತು ಅವುಗಳನ್ನು ತೆಗೆದುಕೊಳ್ಳಬಾರದೆಂಬ ವಾದ ಸರಿಯಾದುದಲ್ಲ.

**ಒಬ್ಬ ಸಾಮಾನ್ಯ ಸದಸ್ಯ** : ಅಸ್ಸಾಮದ ಬಗೆಗೆ ಏನು?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಅಸ್ಸಾಮದ ಬಗೆಗೂ ಸಹ ಅದು ಸರಿ ಇರಬಹುದು. ನನಗೆ ಅದರ ಜೊತೆ ಅಷ್ಟೊಂದು ಸಂಬಂಧವಿಲ್ಲ. ನಾನು ಜನಗಣತಿಯ ಅಂಕಿಗಳನ್ನು ಮತದಾರ ಕ್ಷೇತ್ರಗಳನ್ನು ಸೀಮೆಯನ್ನು ಗೊತ್ತುಪಡಿಸಲು ಇಲ್ಲವೆ ಸದಸ್ಯರ ಸಂಖ್ಯೆಯನ್ನು ಬೇರೆ ಬೇರೆ ಕ್ಷೇತ್ರಗಳಿಗೆ ಹಂಚುವಾಗ ಮತ್ತು ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರ ಸಮಿತಿ ನಡುವೆ ಹಂಚಲು ಮುಂದಿನ ಚುನಾವಣೆಯು ಯೋಗ್ಯರೀತಿಯಿಂದ ಸಂಬಂಧ ಕಲ್ಪಿಸಿ ಆ ಪ್ರಾಂತಗಳ ಹಾಗೂ ಅದರಂತೆ ಸಮಿತಿಗಳಿಗೆ ಜನಗಣತಿಯ ಸಂಖ್ಯೆಯನ್ನು ತೆಗೆದುಕೊಳ್ಳುವುದು ಯೋಗ್ಯವಾದುದು. ಈ ಹಂತದಲ್ಲಿ ನಾನು ಏನು ಮಾಡಬಲ್ಲನೆಂದರೆ ನಿಮ್ಮ ಭಾವನೆಗಳನ್ನು ಈ ವಿಷಯಕ್ಕೆ ಸಂಬಂಧಿಸಿದವರಿಗೆ ತಿಳಿಸುತ್ತೇನೆಂದು ಭರವಸೆಯನ್ನು ಕೊಡುತ್ತೇನೆ. ಈ ವಿಷಯವು ಯೋಗ್ಯ ರೀತಿಯಲ್ಲಿ ನೆರವೇರುತ್ತದೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ.

ಮಾನ್ಯರೇ, ಈ ವಿಷಯದಲ್ಲಿ ಆಸಕ್ತಿ ಇದ್ದ ಸದಸ್ಯರು, ನಾನು ಈಗ ಕೊಟ್ಟ ಭರವಸೆಯಿಂದ ತೃಪ್ತರಾಗದ ಸದಸ್ಯರು, ಈಗ ಅದನ್ನು ಮಾಡುವುದು ಸಾಧ್ಯವಿಲ್ಲ. ಪರಿಚ್ಛೇದ ೧೪೯ಕ್ಕೆ ಒಂದು ತಿದ್ದುಪಡಿಯನ್ನು ತಂದು ರಾಷ್ಟ್ರಪತಿಗಳು ಒಂದು ಮಧ್ಯಂತರ ಜನಗಣತಿ ಮಾಡಲು ಕೇಳಬೇಕು. ಈ ಉದ್ದೇಶಕ್ಕೆ ಅವರು ಜನರ ತೊಂದರೆಗಳನ್ನು ನಿವಾರಿಸುವ ಉದ್ದೇಶದಿಂದ ಅವರು ಉಲ್ಲೇಖಿಸಿದ್ದನ್ನು ಗಮನಿಸಿ ರಾಷ್ಟ್ರಪತಿಗಳು ಮಧ್ಯಂತರ ಜನಗಣತಿಗೆ ಆದೇಶಿಸಬಹುದು. ನಿಜವಾಗಿ ನನ್ನ ಹತ್ತಿರ ಒಂದು ಕರಡು ಪ್ರತಿ ಇದೆ, ಅದನ್ನು ನಂತರದ ಹಂತದಲ್ಲಿ ಇಂತಹ ಒಂದು ಕರಡು ಕುರಿತು ವಿಚಾರಿಸಬಹುದು. "ಪರಂತು, ಇನ್ನು ಮುಂದೆ ಪ್ರಾರಂಭದ ರಾಜ್ಯದ ಶಾಸ ಸಭೆಯ ಅನೇಕ ಮತಕ್ಷೇತ್ರಗಳ, ಸೀಮಾ ಕ್ಷೇತ್ರಗಳನ್ನು ರಾಜ್ಯದ ಶಾಸನಸಭೆಯನ್ನು ಗೊತ್ತುಪಡಿಸಬಹುದು. ಇಂತಹ ಪ್ರಸಂಗದಲ್ಲಿ ರಾಷ್ಟ್ರಪತಿಯು ಒಂದು ಆದೇಶದ ಮೂಲಕ ನಿರ್ದೇಶಿಸಬಹುದು." ಅದು ಸಾಮಾನ್ಯವಾಗಿ ಎತ್ತಲಾದ ತೊಂದರೆಯನ್ನು ನಿವಾರಿಸಬಹುದು.

**ಒಬ್ಬ ಸನ್ಮಾನ್ಯ ಸದಸ್ಯರು:** ನೀವು ಈಗ ಏಕೆ ಮಂಡಿಸಬಾರದು?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್:** ಈಗ ಅದಕ್ಕೆ ವೇಳೆ ಇರುವುದಿಲ್ಲ. ಸದಸ್ಯರು ನಾನು ಕೊಟ್ಟ ಭರವಸೆಯನ್ನು ನಂಬಲು ಸಾಧ್ಯವಿಲ್ಲದಿದ್ದರೆ ಇಂತಹ ಒಂದು ತಿದ್ದುಪಡಿಯನ್ನು ಯೋಗ್ಯ ಹಂತದಲ್ಲಿ

ಮಂಡಿಸಬಹುದು.

ನನ್ನ ಗೆಳೆಯರಾದ ಸನ್ಮಾನ್ಯ ಶ್ರೀ ಸಕ್ಸೇನಾ ಅವರು ಎತ್ತಿದ ವಿಷಯ – ತಿದ್ದುಪಡಿ ಸಂಖ್ಯೆ ೭೪ನ್ನು ನಾನು ತುಂಬು ಹೃದಯದಿಂದ ಅದನ್ನು ಸಮರ್ಥಿಸುತ್ತೇನೆ. ಅವರು ಮಂಡಿಸಿದ ಉಪಬಂಧ ಅತ್ಯವಶ್ಯವಾದುದೆಂದು ನಾನು ಭಾವಿಸುವೆನು. ಇದು ಯಾರು ಅದನ್ನು ಪ್ರತಿನಿಧಿಸುವರೋ ಅವರ ಪ್ರಭಾವದ ಮೇಲೆ ಅವಲಂಬಿಸಿದೆ. ನಾವು ನಮ್ಮ ಸಂವಿಧಾನದಲ್ಲಿ ಎಲ್ಲಾ ರೀತಿಯ ಪ್ರಭಾವಗಳನ್ನು ತೆಗೆದುಹಾಕಿದ್ದೇವೆ. ಅಲ್ಪಸಂಖ್ಯಾತರ ಪ್ರಭಾವವನ್ನು ತೆಗೆದುಹಾಕಿದ್ದೇವೆ. ಕೇಂದ್ರ ವಿಧಾನ ಮಂಡಲದಲ್ಲೇ ತೆಗೆದುಹಾಕಿದ್ದೇವೆ. ಆದ್ದರಿಂದ ನನಗೆ ಅನಿಸಿದಂತೆ ಆ ಹಕ್ಕು ಮಾತ್ರ ಈ ತತ್ವದ ಮೇಲೆ ವಿಧಾನ ಸಭೆ ಪ್ರಾತಿನಿಧ್ಯಕ್ಕೆ ಅನ್ವಯಿಸತಕ್ಕದ್ದು. ಆದ್ದರಿಂದ ನಾನು ಈ ತಿದ್ದುಪಡಿಯನ್ನು ಒಪ್ಪುತ್ತೇನೆ.

ಮಾನ್ಯರೆ, ವಿಚಾರಿಸಬೇಕಾದ ಬೇರೆ ಯಾವುದೇ ಅಂಶ ಉಳಿದಿದೆಯೆಂದು ನನಗೆ ಅನಿಸುವುದಿಲ್ಲ. ಆದ್ದರಿಂದ ಈ ಸಂಸತ್ತಿಗೆ ತಿದ್ದುಪಡಿಯಾದ ವಿಧಿ ೧೪೯ನ್ನು ಸ್ವೀಕರಿಸಲು ಶಿಫಾರಸ್ಸು ಮಾಡುತ್ತೇನೆ.

**ಮಾನ್ಯ ಉಪಭಾಪತಿ :** ನಾನು ಈಗ ತಿದ್ದುಪಡಿಗಳನ್ನು ಒಂದರ ನಂತರ ಒಂದರಂತೆ ಮತಕ್ಕೆ ಹಾಕುತ್ತೇನೆ.

* * * * * * *

**ಮಾನ್ಯ ಉಪಭಾಪತಿ:** ತಿದ್ದುಪಡಿ ಸಂಖ್ಯೆ ೪೮, ಲಿಸ್ಟ್ ೧೧ರ ಪ್ರಶ್ನೆ ಹೀಗಿದೆ.

ತಿದ್ದುಪಡಿ ಸಂಖ್ಯೆ ೨೨೪೯ ತಿದ್ದುಪಡಿ ಲಿಸ್ಟಿಗಾಗಿ ಕೆಳಗಿನದನ್ನು ಬದಲಾಯಿಸತಕ್ಕದ್ದು.

'ವಿಧಿ ೧೪೯ರಲ್ಲಿಯ ಖಂಡ (೩)ದಲ್ಲಿ ನಿಕಟಪೂರ್ವದ 'ಜನಗಣತಿ' ಬದಲು ನಿಕಟ ಹಿಂದಿನ ಜನಗಣತಿಯ ಸಂಖ್ಯೆಗಳು ಸುಸಂಬದ್ಧವಾದವುಗಳನ್ನು ಪ್ರಸಿದ್ಧಿಸಿ.'

ಈ ಪದಗಳನ್ನು ಸೇರಿಸತಕ್ಕದ್ದು.

**ಕೆಳಗಿನ ತಿದ್ದುಪಡಿಗಳನ್ನು ಸಂಪತ್ತು ಸ್ವೀಕರಿಸಿದೆ.**

೧. ತಿದ್ದುಪಡಿ ಸಂಖ್ಯೆ ೨೨೪೯ ಹಾಗೂ ೨೨೫೦ಯನ್ನು ಕುರಿತು ವಿಧಿ ೧೪೯ರ ಖಂಡ (೩) ರಲ್ಲಿಯ "ಪ್ರತಿ ಲಕ್ಷ" ಪದಗಳ ಬದಲು "ಪ್ರತಿ ಎಪ್ಪತ್ತೈದು ಸಾವಿರ" ಬದಲಿ ಪದಗಳನ್ನು ಸೇರಿಸತಕ್ಕದ್ದು.

೨. ತಿದ್ದುಪಡಿ ಸಂಖ್ಯೆ ೨೨೫೨ ಯಾದಿಯಲ್ಲಿಯವು 'ಅಸ್ಸಾಮಿನಲ್ಲಿಯ ಸ್ವಾಯತ್ತ ಜಿಲ್ಲೆಗಳು' ಈ ಪದಗಳ ಬದಲು ಮತ್ತು 'ಕ್ಯಾಂಟೋನ್‌ಮೆಂಟ್ ಮತ್ತು ಶಿಲ್ಲಾಂಗ ಮುನ್ಸಿಪಾಲಿಟಿಯನ್ನೊಳಗೊಂಡ ಮತಕ್ಷೇತ್ರ' ಈ ಪದಗಳನ್ನು ಸೇರಿಸತಕ್ಕದ್ದು.

೩. ತಿದ್ದುಪಡಿಗಳ ಯಾದಿಯಲ್ಲಿಯ, ತಿದ್ದುಪಡಿ ಸಂಖ್ಯೆ ೨೨೫೬, ೨೨೫೭ ಮತ್ತು ೨೨೫೮ರಲ್ಲಿ ವಿಧಿ ೧೪೯ರ ಖಂಡ (೩)ರ ಪರಂತುದಲ್ಲಿಯ 'ಮೂರು ನೂರು' ಎಂಬ ಪದಗಳ ಬದಲು 'ಐದು ನೂರು' ಈ ಪದಗಳನ್ನು ಸೇರಿಸತಕ್ಕದ್ದು.

೪. ವಿಧಿ ೧೪೯ರ ಖಂಡ (೩) ಹೊಸ ಖಂಡವನ್ನು ಸೇರಿಸತಕ್ಕದ್ದು (೩.ಎ) ಒಂದು ರಾಜ್ಯದ ಪ್ರತಿಯೊಂದು ಮತಕ್ಷೇತ್ರದ ಸೀಮೆಗೆ ಸದಸ್ಯರ ಸಂಖ್ಯೆಯ ಪ್ರಮಾಣಕ್ಕೂ ಹಾಗೂ ಆ ಮತಕ್ಷೇತ್ರದ ಜನಸಂಖ್ಯೆಯನ್ನು ನಿಕಟ ಹಿಂದಿನ ಜನಗಣತಿಯ ಸಂಖ್ಯೆಯು

ಸುಸಂಬದ್ಧವಾಗಿದ್ದು ಮತ್ತು ಪ್ರಕಟಿಸಲ್ಪಟ್ಟವು ಎಷ್ಟರಮಟ್ಟಿಗೆ ಪ್ರಯೋಗಕ್ಕೆ ಸಾಧ್ಯವೋ ಅಷ್ಟರ ಮಟ್ಟಿಗೆ ರಾಜ್ಯದಲ್ಲಿ ಪ್ರಮಾಣವನ್ನು ಕಾಯ್ದುಕೊಳ್ಳಲು ಅನುಮತಿ ಕೊಡಬೇಕು. ತಿದ್ದುಪಡಿಯು ಸ್ವೀಕೃತವಾಯಿತು.

ವಿಧಿ ೧೪೯ ತಿದ್ದುಪಡಿಯ ಪ್ರಕಾರ ಇದನ್ನು ಸಂವಿಧಾನದಲ್ಲಿ ಸೇರಿಸಲಾಗಿದೆ.

ವಿಧಾನಸಭೆಯನ್ನು ಆ ಮೇಲೆ ಸೋಮವಾರ ದಿನಾಂಕ ೧೬ನೆಯ ಮೇ ೧೯೪೯ರ ವರೆಗೆ ಮುಂದೂಡಲಾಗಿದೆ.

* * * * *

# ವಿಭಾಗ – ೫

# ಖಂಡವಾರು ಚರ್ಚೆ

## (೧೬ನೆಯ ಮಾರ್ಚ್ ೧೯೪೯ರಿಂದ
## ೧೬ನೆಯ ಜೂನ್ ೧೯೪೯ರವರೆಗೆ)

೫ನೆಯ ವಿಭಾಗ
**ಖಂಡವಾರು ಚರ್ಚೆ**

**೧೬ನೆಯ ಮಾರ್ಚ್ ೧೯೪೯ರಿಂದ ೧೬ನೆಯ ಜೂನ್ ೧೯೪೯ರವರೆಗೆ**

# ಸಂವಿಧಾನದ ಕರಡು

## ವಿಧಿ ೬೭ ಎ

**ಮಾನ್ಯ ಅಧ್ಯಕ್ಷರು :** ಈ ನಾವು ಸಂವಿಧಾನದ ಕರಡನ್ನು ಪರಿಗಣಿಸೋಣ. ಈ ಸದನವು ಇದುವರೆಗೆ ೬೭ ವಿಧಿಗಳನ್ನು ಚರ್ಚಿಸಿದೆ. ಈಗ ನಾವು ಮುಂದೆ ಸಾಗೋಣ. ನಾವು ಚುನಾವಣೆಯನ್ನು ಕುರಿತು ಇರುವ ವಿಷಯಗಳನ್ನು ಅತಿ ಶೀಘ್ರದಲ್ಲಿಯೇ ಮುಗಿಸತಕ್ಕದ್ದೆಂದು ಚಾಲನಾ ಸಮಿತಿಯ ಅಭಿಪ್ರಾಯಪಟ್ಟಿದೆ. ಅದೇನೆಂದರೆ, ನನಗೆ ಅನಿಸಿದಂತೆ ಅನುಸದನದ ಇಚ್ಛೆಯೂ ಸಹ ಆಗಿದೆ. ಆದರೆ ನಾನು ತಿಳಿದುಕೊಂಡಂತೆ ಆ ವಿಧಿಗಳೊಂದಿಗೆ ಇಂದು ಮುಂದೆ ಹೋಗಲು ಸಾಧ್ಯವಿಲ್ಲ. ಮತ್ತು ನಾವು ಅವುಗಳನ್ನು ನಾಳೆಯಿಂದ ತೆಗೆದುಕೊಳ್ಳೋಣ. ಇಂದು ನಾವು ವಿಧಿ ೬೮ರಿಂದ ಪ್ರಾರಂಭಿಸೋಣ. ಇಂತಹ ವಿಧಿಗಳು ಚುನಾವಣೆಗಳ ವಿಷಯ ಕುರಿತು ಇರುತ್ತವೆ. ಅವು ಇಂದಿನ ಚರ್ಚೆಯ ವಿಷಯವಾಗಿರುತ್ತದೆ. ನಂತರ ಬರುವವುಗಳನ್ನು ನಾಳೆಗೆ ತೆಗೆದುಕೊಳ್ಳೋಣ. ಒಂದು ವಿಧಿಯ ಬಗೆಗೆ ತಿದ್ದುಪಡಿಯ ರೀತಿಯಲ್ಲಿ ನೋಟಿಸು ಕೊಡಲಾಗಿದೆ. ಉದಾ: ೬೭–ಎ ಇದನ್ನು ಮೊದಲಿಗೆ ತೆಗೆದುಕೊಳ್ಳಬಹುದು.

## ಹೊಸ ವಿಧಿ ೬೭ ಎ

**ಸನ್ಮಾನ್ಯ ಡಾ। ಬಿ.ಆರ್. ಅಂಬೇಡ್ಕರ್ (ಬಾಂಬೆ ಸಾಮಾನ್ಯ):** ಮಾನ್ಯ ಉಪ ಸಭಾಪತಿಗಳೇ, ನಾನು ಮಂಡಿಸುತ್ತೇನೆ.

ವಿಧಿ ೬೭ರ ನಂತರ ಕೆಳಗಣ ಹೊಸ ವಿಧಿಯನ್ನು ಸೇರಿಸತಕ್ಕದ್ದು.

೬೭ ಎ(೧) ರಾಷ್ಟ್ರಪತಿಗಳು ಸಂಸತ್ತಿನ ಯಾವುದೇ ಸದನದ ಯಾವುದೇ ನಿರ್ದಿಷ್ಟ ಮಸೂದೆ ಮಂಡಿಸಲ್ಪಟ್ಟರೆ, ಇಲ್ಲವೆ ಮಂಡಿಸುವುದಿದ್ದರೆ, ಅವುಗಳ ಬಗೆಗೆ ಸಹಾಯ ಮಾಡಲು ಮತ್ತು ಸಲಹೆ ನೀಡಲು ಮೂರು ಜನ ಸದಸ್ಯರಿಗೆ ಮಿಕ್ಕದಂತೆ ನಾಮಕರಣ ಮಾಡಬಹುದು.

(೨) ಹೀಗೆ ಯಾವುದೇ ನಿರ್ದಿಷ್ಟ ಮಸೂದೆಯನ್ನು ಕುರಿತು ನಾಮಕರಣ ಹೊಂದಿದ ಸದಸ್ಯನು ಆ ಮಸೂದೆಯನ್ನು ಕುರಿತು ಎರಡು ಸದನದಲ್ಲಿ ಮಾತನಾಡುವ ಹಕ್ಕು, ಇಲ್ಲವೆ ಚರ್ಚೆಯಲ್ಲಿನ ವ್ಯವಹರಣೆಗಳಲ್ಲಿ ಭಾಗವಹಿಸುವ, ಇಲ್ಲವೆ ಸಂಸತ್ತಿನ ಎರಡೂ ಸದನಗಳ ಜಂಟಿ ಸಭೆಯಲ್ಲಿ ಇಲ್ಲವೆ ಸಂಸತ್ತಿನ ಯಾವುದೇ

ಸಮಿತಿಯಲ್ಲಿ ಅಂತಹ ಒಬ್ಬ ಸದಸ್ಯನ ಹೆಸರಿನಿಂದ ಭಾಗವಹಿಸಬಹುದು. ಆದರೆ ಅಂತಹ ನಾಗರೀಕರಣ ಹೊಂದಿದವನು ಯಾವುದೇ ಸಮಿತಿಯಲ್ಲಿ ಮತ ಹಾಕುವ ಹಕ್ಕು ಇಲ್ಲವೆ ಎರಡೂ ಸದನಗಳ ಯಾವುದೇ ಸಮಿತಿಯಲ್ಲಿ ಇಲ್ಲವೆ ಅವರ ವ್ಯವಹರಣೆಗಳಲ್ಲಿ ಇಲ್ಲವೆ ಯಾವುದೇ ಜಂಟಿ ಸದನಗಳ ಯಾವುದೇ ಸಮಿತಿಯಲ್ಲಿ ಇಲ್ಲವೆ ಸಂಸತ್ತಿನ ಯಾವುದೇ ವಿಷಯದಲ್ಲಿ ಅಂತಹ ನಾಮಕರಣಗೊಂಡ ಸದಸ್ಯನು ಭಾಗವಹಿಸುವಂತಿಲ್ಲ, ಮತ ಚಲಾಯಿಸುವಂತಿಲ್ಲ ಮಾತನಾಡುವ ಹಕ್ಕು ಇರುವುದಿಲ್ಲ.

ಮಾನ್ಯರೆ, ಈ ವಿಧಿಯನ್ನು ಸಂವಿಧಾನದಲ್ಲಿ ಸೇರಿಸುವ ಅವಶ್ಯಕತೆಯು ಏನೆಂದರೆ ಸಂಸತ್ತು ನೆನಪುಮಾಡಿಕೊಳ್ಳಬಹುದೆಂದರೆ ಕೇಂದ್ರ ಸಂವಿಧಾನ ಸಮಿತಿ ತನ್ನ ವರದಿಯಲ್ಲಿ ೧೪ನೆಯ ಪ್ಯಾರಾದಲ್ಲಿ ಮೂಲತಃ ಮೇಲ್ಮನೆಯನ್ನು ಕಾಣಿಸಲಾಗಿದೆ. ಅದರಲ್ಲಿ ಕಾಣಿಸಿದ್ದೇನೆಂದರೆ ಸಂವಿಧಾನ ಕರಡು ಅದನ್ನು ಆದೇಶವಾಗಿ ಐರಿಷ್ ಪದ್ಧತಿಯಂತೆ ಇರುವಂತೆ ಹದಿನೈದು ಜನರನ್ನು ಮೇಲ್ಮನೆಗೆ ನಾಮಕರಣ ಮಾಡತಕ್ಕದ್ದು. ಆ ಪಟ್ಟಿಯಲ್ಲಿ ಅನೇಕ ವಿಷಯಗಳಲ್ಲಿ ಅಂದರೆ ವಿಜ್ಞಾನ, ಸಾಹಿತ್ಯ, ಒಕ್ಕಲುತನ, ಇಂಜಿನಿಯರಿಂಗ್ ಮುಂತಾದ ವಿಷಯಗಳಲ್ಲಿ ಆಸಕ್ತಿ ಹೊಂದಿರತಕ್ಕದ್ದು. ಕರಡು ಸಮಿತಿಯು ಈ ವಿಷಯವನ್ನು ತೆಗೆದುಕೊಂಡಾಗ ಶ್ರೀ ಬಿ.ಎನ್. ರಾವ್ ಅವರು ಅಪ್ಪರಲ್ಲಿ ಪ್ರವಾಸಕ್ಕೆ ಹೋಗಿದ್ದರು. ಅವರು ಶ್ರೀ ಡಿ. ವೇಲೇರಾ ಮತ್ತು ಉಳಿದ ಐರಿಷ್ ಸರಕಾರದ ಅಧಿಕಾರಿಗಳೊಂದಿಗೆ ಈ ಪದ್ಧತಿಯು ನಿಮ್ಮ ದೇಶದಲ್ಲಿ ಬಳಕೆಯಲ್ಲಿದ್ದು ಅದು ಯಶಸ್ವಿಯಾಗಿದೆಯೇ ಎಂದು ಕೇಳಿದಾಗ ಅವರು ಹೇಳಿದ್ದೇನೆಂದರೆ ಪ್ಯಾನಲ್ ಪದ್ಧತಿಯು ಅಲ್ಲಿ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಅದರ ಪರಿಣಾಮವಾಗಿ ಕರಡು ಸಮಿತಿ ಉಪಬಂಧ ಕಲ್ಪಿಸುವ ವ್ಯವಸ್ಥೆಯನ್ನು ಕೈ ಬಿಟ್ಟಿತು. ೧೪ನೆಯ ಪ್ಯಾರಾ ಕೂಡಿಸಲು ಸಂವಿಧಾನ ಒಕ್ಕೂಟ ಸಮಿತಿಯು ಸೂಚಿಸಿತು. ಮತ್ತು ಕೆಲವು ಸುಲಭ ಉಪಾಯಗಳನ್ನು ಸೂಚಿಸಿತು. ಉದಾ: ಮೇಲ್ಮನೆಗೆ ಹದಿನೈದು ಜನ ಪ್ರತಿನಿಧಿಗಳನ್ನು ನಾಮಕರಣಮಾಡುವ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ಕೊಡಲಾಗಿದೆ. ಆ ಪ್ರತಿನಿಧಿಗಳಿಗೆ ವಿಶೇಷಜ್ಞಾನ ಇಲ್ಲವೆ ಸ್ವಪ್ರಾಯೋಗಿಕ ಅನುಭವ ವಿಜ್ಞಾನ, ಸಾಹಿತ್ಯ, ಸಮಾಜ ಸೇವೆ, ಹೊಂದಿದವರು ಆಗಬೇಕು. ಸಂವಿಧಾನ ಕರಡು ಸಮಿತಿಯು ಈ ಕರಡನ್ನು ಸಿದ್ಧಪಡಿಸಿದ ನಂತರ ಈ ವಿಷಯವನ್ನು ಪುನಃ ಒಕ್ಕೂಟ ಸಂವಿಧಾನದ ಸಮಿತಿಯಲ್ಲಿ ಚರ್ಚೆಗೆ ಬಂದಿತ್ತು. ಒಕ್ಕೂಟ ಸಂವಿಧಾನ ಸಮಿತಿಯು ಪ್ರಸ್ತಾಪಿಸಿದುದೇನೆಂದರೆ ಮೊದಲಿಗೆ ನಾಮಕರಣ ಮಾಡಲು ಕೊಟ್ಟ ಒಟ್ಟು ಸಂಖ್ಯೆಯು ಹದಿನೈದು. ಈ ಖಂಡವನ್ನು ಎರಡು ವಿಭಾಗಗಳನ್ನಾಗಿ ವಿಭಾಗಿಸಬಹುದು. ಒಂದು ವರ್ಗದ ಜನರು ಸಂಸತ್ತಿನ ಸಂಪೂರ್ಣ ಸದಸ್ಯರು ಮತ್ತು ಅವರೆಲ್ಲ ಮೂವರಿಗೆ ವಿಶೇಷ ಜ್ಞಾನ ಮತ್ತು ಸ್ವಂತ ಪ್ರಾಯೋಗಿಕ ಅನುಭವ ಕಲೆ, ವಿಜ್ಞಾನ, ಸಾಹಿತ್ಯ ಮತ್ತು ಸಮಾಜ ಸೇವೆಗಳಲ್ಲಿ ಮತ್ತು ಉಳಿದ ಮೂವರು ಸಂಸತ್ತಿಗೆ ನಿರ್ದಿಷ್ಟ ವಿಷಯದಲ್ಲಿ ಸಹಾಯ ಮಾಡುವುದು ಮತ್ತು ಯಾವಾಗ ಸಂಸತ್ತು ವಿಚಾರಿಸುತ್ತದೆಯೋ ಆ ಕ್ಷಣದಲ್ಲಿ ಸಲಹೆ ಕೊಡುವುದು.

ಎರಡನೆಯ ಶಿಫಾರಸು ಮಾಡಿದ ಮೊದಲನೆಯ ಭಾಗವು ನಾನು ಹೇಳಬಹುದಾದರೆ ಒಕ್ಕೂಟ ಸಂವಿಧಾನ ಸಮಿತಿಯು ವಿಧಿ ೬೭ರಲ್ಲಿ ಈಗಾಗಲೇ ನಿಗಮಿತಗೊಳಿಸಿದೆ. ಅದು ಸಂಸತ್ತಿನಲ್ಲಿ ಪಾಸಾಗಿದೆ. ಅದು ಶಿಫಾರಸ್ಸಿನ ಎರಡನೆಯ ಭಾಗಕ್ಕೆ ಒಕ್ಕೂಟ ಸಂವಿಧಾನ ಸಮಿತಿಯು ಈ ವಿಧಿಯನ್ನು ಪ್ರಸ್ತಾಪಿಸಿದ್ದು ಸನ್ಮಾನ್ಯ ಸದಸ್ಯರು ಈ ವಿಧಿಯು ಸದಸ್ಯರ ಕಾರ್ಯಗಳನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ನಾಮಕರಣ ಕುರಿತು ಇರುವ ಬಗ್ಗೆ. ಇದು ಎರಡನೆಯ ಭಾಗಕ್ಕೆ ಚಾಲನೆ ಕೊಡುವುದಾಗಿದೆ. ಕಾರ್ಯಗಳೆಂದರೆ ಯಾವ ವಿಷಯ ಸದನದ ಮುಂದೆ ಇದೆಯೋ ಅಂಥ ನಿರ್ದಿಷ್ಟ ವಿಷಯದ ಬಗೆಗೆ ಸಹಾಯ ಮತ್ತು ಸಲಹೆ ಕೊಡುವುದು. ಬೇರೆ ಪದಗಳಲ್ಲಿ ಹೇಳಬೇಕೆಂದರೆ ಈ ವಿಧಿ ೬೭ ಎ ದ ಅಡಿಯಲ್ಲಿ ನಾಮಕರಣ

ಮಾಡಲ್ಪಡುವ ಸದಸ್ಯರೆಂದರೆ ಅವರ ಸದಸ್ಯತ್ವದ ಅವಧಿಯು ಸಹ ಮುಗಿಯುವುದು. ನಿರ್ದಿಷ್ಟವಾದ ಒಂದು ಮಸೂದೆಯ ಯಾವುದೇ ವ್ಯವಹರಣೆಗಳಲ್ಲಿ ರಾಷ್ಟ್ರಪತಿಗಳು ನಾಮಕರಣ ಮಾಡಿದ ಸದಸ್ಯರು ಸದನಕ್ಕೆ ಸಲಹೆ ಮಾಡುವುದು ಮತ್ತು ಸಹಾಯ ಮಾಡುವುದು.

ವಿಧಿ ೬೭ ಎ ಎರಡನೆಯ ಭಾಗದಲ್ಲಿ ಅವರು ಕೇವಲ ಚರ್ಚೆಯಲ್ಲಿ ಭಾಗವಹಿಸಬಹುದು. ಅದು ಸಂಪೂರ್ಣ ಸದನವಾಗಿರಬಹುದು. ಇಲ್ಲವೆ ಸದನದ ನಿರ್ದಿಷ್ಟ ಸಮಿತಿಯಾಗಿದ್ದು ಅದಕ್ಕೆ ಅವರನ್ನು ನಾಮಕರಣ ಮಾಡಿದ್ದರೆ, ಅವರಿಗೆ ತಮ್ಮ ಮತ ಚಲಾಯಿಸುವ ಅಧಿಕಾರ ಇರುವುದಿಲ್ಲ. ಈ ಮೂವರನ್ನು ಕೂಡಿಸುವುದರಿಂದ ನಿಜವಾಗಿಯೂ ಮತ ಹಾಕುವವರ ಸಂಖ್ಯೆ ಹೆಚ್ಚಾಗುವುದಿಲ್ಲ ಈ ಸದನವು ವಿಧಿ ೬೭ಎ ದ ಖಂಡವನ್ನು ಸ್ವೀಕರಿಸುವುದರಲ್ಲಿ ಸಂಶಯವಿಲ್ಲವೆಂದು ನಾನು ಭಾವಿಸುತ್ತೇನೆ. ಈ ಉಪಬಂಧದಲ್ಲಿ ಕಾಣಿಸಿದುದು ವಿಧಿ ೬೭ಎ ದಲ್ಲಿ ಒಳಗೊಂಡುದರಲ್ಲಿ ನಾಮಕರಣ ಮಾಡುವ ಸದಸ್ಯರು ತಜ್ಞರು, ಇದು ಸದನಕ್ಕೆ ಹೊಸ ಸೂಚನೆಯಲ್ಲಿ ಇವರು ಸದನದ ಸದಸ್ಯರು. ಅವರಿಗೆ ಭಾರತ ಸರಕಾರದ ಅಧಿನಿಯಮ ೧೯ರ ಬಗೆಗೆ ಸಾಕಷ್ಟು ಪರಿಚಯವಿದೆ. ಬಹುಜನರ ಬೇಕಾದ ವಿಷಯವನ್ನು ಸಂಸತ್ತಿನಲ್ಲಿ ಮಂಡಿಸಿದಾಗ ಅದು ಒಂದು ಉಪಬಂಧವನ್ನು ಒಳಗೊಂಡಿತ್ತು. ಅಲ್ಲಿ ಬೇರೆ ಬೇರೆ ಪ್ರಾಂತಗಳ ರಾಜ್ಯಪಾಲರು ತಜ್ಞರನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಸಂಸತ್ತು ಒಂದು ವಿಷಯವನ್ನು ಚರ್ಚಿಸುವಾಗ ಯಾವುದೇ ಕ್ಷಣದಲ್ಲಿ ಸಂಸತ್ತು ವಿಚಾರಿಸಿದರೆ ಆಗ ಆ ಉಪಬಂಧವು ಉಪಯೋಗ ಬೀಳುತ್ತದೆಂದು ನನಗೆ ಅನಿಸುತ್ತದೆ. ಇದು ಉತ್ತಮವಾದುದನ್ನು ಮಾಡುತ್ತದೆ. ಇಂತಹ ಉಪಬಂಧವು ಸಂವಿಧಾನದಲ್ಲಿದ್ದರೆ ಒಳ್ಳೆಯದಾಗುತ್ತದೆ. ನಾನು ಈ ಉಪಬಂಧವನ್ನು ಮಂಡಿಸುತ್ತೇನೆ.

******

**ಮಾನ್ಯ ಅಧ್ಯಕ್ಷರು :** ಈ ಸೂಚನೆ ಏನೆಂದರೆ ಈ ವಿಷಯವನ್ನು ಈ ಮೊದಲು ಸದಸ್ಯರಿಗೆ ತಿಳಿಯಪಡಿಸಿಲ್ಲ. ಆದ್ದರಿಂದ ಸದಸ್ಯರಿಗೆ ಕಾಲಾವಕಾಶಬೇಕು.

**ಸನ್ಮಾನ್ಯ ಡಾ। ಬಿ.ಆರ್. ಅಂಬೇಡ್ಕರ್:** ಈ ವಿಷಯದ ವಿಚಾರಣೆಗೆ, ಚರ್ಚೆಗೆ ಸಂಸತ್ತಿಗೆ ಕಾಲಾವಕಾಶ ಬೇಕಾದಲ್ಲಿ ನನ್ನದು ತಕರಾರು ಇರುವುದಿಲ್ಲ. ಈ ವಿಷಯವನ್ನು ಮುಂದೂಡೋಣ.

**ಮಾನ್ಯ ಅಧ್ಯಕ್ಷರು :** ಈ ವಿಷಯವನ್ನು ಇಂದು ಮುಂದೂಡೋಣ ಮತ್ತು ಇದನ್ನು ನಂತರ ತೆಗೆದುಕೊಳ್ಳೋಣ.

## ವಿಧಿ ೬೮

**ಮಾನ್ಯ ಅಧ್ಯಕ್ಷರು:** ಇನ್ನು ಈಗಿನ ವಿಷಯ .......................

"ವಿಧಿ ೬೮ ಇದು ಸಂವಿಧಾನದ ಒಂದು ಭಾಗವಾಗಿದೆ" ಈಗ ನಾವು ಈ ವಿಧಿಯ ತಿದ್ದುಪಡಿಗಳನ್ನು ತೆಗೆದುಕೊಳ್ಳೋಣ (ತಿದ್ದುಪಡಿಗಳ ಸಂಖ್ಯೆ ೧೪೫೩ ಮತ್ತು ೧೪೫೪ ಮಂಡಿಸಿಲ್ಲ). ತಿದ್ದುಪಡಿ ಸಂಖ್ಯೆ ೧೪೫೫ ಶ್ರೀ ನಜೀರುದ್ದೀನ್ ಅಹ್ಮದ್ ಅವರ ಮೌಖಿಕ ತಿದ್ದುಪಡಿಯೆಂದು ನಾನು ಭಾವಿಸುತ್ತೇನೆ. ನೀವು ಈ ತಿದ್ದುಪಡಿಯನ್ನು ಮಂಡಿಸಲು ಇಚ್ಛಿಸುತ್ತೀರಾ? ಈ ಮೌಖಿಕ ತಿದ್ದುಪಡಿಗಳನ್ನು ಮಂಡಿಸಲು ನಾನು ಒಂದು ಸೂಚನೆಯನ್ನು ಮಂಡಿಸುತ್ತೇನೆ. ನಾನು ಸನ್ಮಾನ್ಯ ಡಾ॥ ಅಂಬೇಡ್ಕರ ಅವರಿಗೆ ಒಂದು ಸೂಚನೆಯನ್ನು

ಕೊಡಬಯಸುತ್ತೇನೆ. ಅವರು ಇಂತಹ ಮೌಖಿಕ ನೋಟಿಸು ಕೊಟ್ಟ ಮಾನ್ಯ ಸದಸ್ಯರೂ ವಿಚಾರಿಸಬೇಕು ಮತ್ತು ಅಂಥವರಲ್ಲಿ ಯಾರು ಒಪ್ಪಿಕೊಳ್ಳುತ್ತಾರೆ. ಅಂತಹವುಗಳನ್ನು ಸಂಸತ್ತಿನಲ್ಲಿ ಈ ಗೊತ್ತುವಳಿಯನ್ನು ಮತಕ್ಕೆ ಹಾಕುವಾಗ ತೆಗೆದುಕೊಳ್ಳೋಣ. ಆಗ ಸದನವು ಬೇಕಾದವುಗಳನ್ನು ಸ್ವೀಕರಿಸಬಹುದು ಆದ್ದರಿಂದ ನಾವು ವೇಳೆಯನ್ನು ಉಳಿಸಬಹುದು. ಆ ರೀತಿಯಾಗಿ ಸ್ವೀಕೃತವಾಗಿರುವ ತಿದ್ದುಪಡಿಗಳನ್ನು ಕುರಿತು ನಿಜವಾಗಿಯೂ ನಾವು ಏನು ಮಾಡತಕ್ಕದ್ದೆಂಬುದನ್ನು ವಿಚಾರಿಸಬೇಕು.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಕರಡು ಸಮಿತಿಯು ಈ ಪ್ರಕ್ರಿಯೆಯನ್ನು ಅನುಸರಿಸಲು ತುಂಬಾ ಸಂತೋಷ ಪಡಬಹುದು.

*****

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಈ ಮಂಡಿಸುತ್ತೇನೆ.

"ವಿಧಿ ೯೮ ಖಂಡ (೨) ರ ಉಪಬಂಧದಲ್ಲಿ 'ರಾಷ್ಟ್ರಪತಿಯಿಂದ' ಪದದ ಬದಲು ಕಾನೂನು ಪ್ರಕಾರ ಸಂಸತ್ತು ಈ ಪದಗಳನ್ನು ಸೇರಿಸಬೇಕು. ನಾನು ಮಂಡಿಸಿದ ಈ ತಿದ್ದುಪಡಿಗೆ ಯಾವುದೇ ವಿವರಣೆ ಕೊಡುವ ಅವಶ್ಯಕತೆ ಇರುವುದಿಲ್ಲ. ಈಗಿದ್ದಂತೆ ಸಂಸತ್ತಿಗೆ ಅದರ ಅಧಿಕಾರ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ರಾಷ್ಟ್ರಪತಿಗಳಲ್ಲಿಯೆ ಉಳಿಯುವಂತೆ ಮಾಡಿದುದನ್ನು ನೀವು ನೋಡುತ್ತೀರಿ.

ಸಂವಿಧಾನದ ಸಾಮಾನ್ಯ ಅಧಿಕಾರಗಳ ಮೇಲೆ ಇದು ಬಹಳಷ್ಟು ದಾಳಿ ಮಾಡುತ್ತದೆಂದು ಭಾವಿಸಲಾಗಿದೆ. ಇಂತಹ ವಿಷಯದ ಅಧಿಕಾರವು ನಿಜವಾಗಿ ಸಂಸತ್ತಿಗೆ ಇರತಕ್ಕದ್ದು. ಸಂಸತ್ತು ಇಂತಹ ಒಂದು ವ್ಯವಸ್ಥೆಯನ್ನು ಮಾಡಿ ತನ್ನ ಅಧಿಕಾರವನ್ನು ಕಾನೂನಿನ ಪ್ರಕಾರ ವಿಸ್ತರಿಸಬಹುದು. ಆದರೆ ಬೇರೆ ಯಾವುದೇ ರೀತಿಯಲ್ಲಿ ಠರಾವಿನಂತಹ ಇಲ್ಲವೆ ನಿಲುವಳಿ ಸೂಚನೆಯ ಮೂಲಕವಲ್ಲ.

**ಮಾನ್ಯ ಅಧ್ಯಕ್ಷರು :** ತಿದ್ದುಪಡಿ ಸಂಖ್ಯೆ ೧೪೬೫, ಇದು ಡಾ॥ ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಒಳಗೊಂಡಿದ್ದು ಇರುತ್ತದೆ. ಅದನ್ನು ತೆಗೆದುಕೊಳ್ಳುವ ಅವಶ್ಯಕತೆಯು ಇರುವುದಿಲ್ಲ.

*****

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರು ನನ್ನ ತಿದ್ದುಪಡಿ ಸಂಖ್ಯೆ ೧೪೬೪ರ ಬಗೆಗೆ ಚರ್ಚೆಯ ಕಾಲಕ್ಕೆ ಏನೂ ಹೇಳಿಲ್ಲವೆಂದು ನಾನು ಭಾವಿಸುತ್ತೇನೆ. ಆದುದರಿಂದ ನಾನು ಉತ್ತರ ಕೊಡಬೇಕಾಗಿಲ್ಲ. ಈ ತಿದ್ದುಪಡಿಯು ಒಂದು ಒಳ್ಳೆಯ ತರ್ಕಬದ್ಧವಾದ ತತ್ವವಾಗಿದೆ ಮತ್ತು ಸಂಸತ್ತು ಇದನ್ನು ಸ್ವೀಕರಿಸುತ್ತದೆಂದು ನಾನು ಭಾವಿಸುವೆನು.

ನನ್ನ ಮಿತ್ರರಾದ ಪ್ರೊ. ಶಹಾ ಅವರು ತಂದ ತಿದ್ದುಪಡಿಯಿಂದ ನನಗೆ ಅನಿಸಿದಂತೆ ಅದರಿಂದ ಕೆಲವು ತೊಂದರೆ ತಾಪತ್ರಯಗಳು ಉದ್ಭವಿಸುತ್ತವೆ. ಅವುಗಳನ್ನು ನನ್ನ ಸ್ನೇಹಿತರಾದ ಶ್ರೀ ಟಿ.ಟಿ. ಕೃಷ್ಣಮಾಚಾರಿ ಅವರು ಈಗಾಗಲೇ ಎತ್ತಿ ತೋರಿಸಿದ್ದಾರೆ. ಚುನಾವಣೆಯು ಒಟ್ಟಾರೆ ಸಾಮಾನ್ಯ ವಿಷಯವಾಗಿರುವುದಿಲ್ಲ. ಅದು ಬಹಳಷ್ಟು ಖರ್ಚನ್ನು ಒಳಗೊಂಡಿದ್ದು ಮತ್ತು ಸರಕಾರದ ಮೇಲೆ ಸ್ವಲ್ಪ ಅವಧಿಯಲ್ಲಿ ಹೇರುವುದು ಯೋಗ್ಯವಲ್ಲವೆಂದು ನಾನು ಭಾವಿಸುತ್ತೇನೆ. ಪ್ರೊ. ಶಹಾ ಅವರು ಎತ್ತಿದ ವಿಧಿ ಬಿಂದುವಿನ ಬಗ್ಗೆ ನನಗೆ ಸಹಾನುಭೂತಿ ಇದೆ. ಇದುವರೆಗಿನ ನಮ್ಮ ಅನುಭವವೇನೆಂದರೆ ಯುದ್ಧದ ನಂತರ ಯಾವಾಗ ಚುನಾವಣೆಯು ನಡೆಯುತ್ತದೆಯೋ, ಆ ಕೂಡಲೆ ಜನರ ಆದಾಯ, ಉತ್ಪನ್ನದಲ್ಲಿ ಅಸಮತೋಲನವಾಗುತ್ತದೆ. ಚುನಾವಣೆಯು ನಿಜವಾಗಿ ಜನರ ಮನಸ್ಸನ್ನು ಪ್ರತಿಬಿಂಬಿಸುತ್ತದೆಂದು ಹೇಳಲಿಕ್ಕೆ ಆಗುವುದಿಲ್ಲ. ಅದೇ ಕಾಲಕ್ಕೆ ನನಗೆ ಅನಿಸಿದಂತೆ ಯುದ್ಧವು ಒಂದೇ ಕಾರಣವಲ್ಲ, ಇಲ್ಲವೆ ಸಂದರ್ಭವಲ್ಲ.

ಹೇಳಬೇಕೆಂದರೆ ಜನರ ಮನಸ್ಸು ಅವರ ಸ್ವಾಭಾವಿಕ ರೂಪದಿಂದ ಲಂಗರು ಹಾಕುವುದರತ್ತ ಸಾಗುತ್ತದೆ. ಅಲ್ಲಿ ಅನೇಕ ಸಂದರ್ಭಗಳಿರುತ್ತವೆ ಮತ್ತು ಘಟನೆಗಳೂ ಇರುತ್ತವೆ. ಆದರೆ ಯಾವುದು ಅಂತಹದ್ದು ಜನರ ಮನಸ್ಸನ್ನು ಕೆಡಿಸುವವು. ವಾಸ್ತವವಾಗಿ, ಯುದ್ಧಗಳಲ್ಲಿ ಆದರೆ ಯಾವ ಅಂತಹ ಮನಸ್ಸಿನ ಅಸಮತೋಲನವನ್ನುಂಟು ಮಾಡುತ್ತದೆ. ಇದು ಉಪಯೋಗವಿಲ್ಲ. ಆದ್ದರಿಂದ ಒಂದು ಆಕಸ್ಮಿಕತೆಯ ಬಗೆಗೆ ವ್ಯವಸ್ಥೆ ಮಾಡಿ ಮತ್ತು ಉಳಿದ ಆಕಸ್ಮಿಕತೆಗಳ ಬಗೆಗೆ ಪ್ರೊ ಶಹಾ ಅವರು ತಂದ ತಿದ್ದುಪಡಿಯು ಮುಟ್ಟುವುದಿಲ್ಲ. ಆದ್ದರಿಂದ ನನಗೆ ಅನಿಸಿದಂತೆ ಒಟ್ಟಾರೆ ಈ ಸಂದರ್ಭವನ್ನು ಸಂವಿಧಾನದ ಕರಡಿನಲ್ಲಿ ಕಾಣಿಸಿದಂತೆ ಹಾಗೆಯೇ ಬಿಡುವುದು ಒಳಿತು.

**ಸನ್ಮಾನ್ಯ ಅಧ್ಯಕ್ಷರು :** ನಾನು ಸಂಪೂರ್ಣ ವಿಧಿಯನ್ನು ಡಾ॥ ಅಂಬೇಡ್ಕರ್ ಅವರ ತಿದ್ದುಪಡಿಯೊಂದಿಗೆ ಈಗ ಇಡುತ್ತೇನೆ.

**ಪ್ರಶ್ನೆಯು ಹೀಗಿದೆ :** "ವಿಧಿ ೬೮, ತಿದ್ದುಪಡಿಯಾದಂತೆ ಸಂವಿಧಾನದ ಒಂದು ಭಾಗವಾಗುತ್ತದೆ." ಪ್ರಸ್ತಾವನೆಯನ್ನು ಸ್ವೀಕರಿಸಲಾಯಿತು.

**ವಿಧಿ ೬೮ :** ಇದನ್ನು ತಿದ್ದುಪಡಿಯಾದಂತೆ ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ ೬೮ ಎ

**ಮಾನ್ಯ ಅಧ್ಯಕ್ಷರು :** ಈಗ ವಿಧಿ ೬೮ ಎ ಎಂದು ಕರೆಯಲಾದ ಡಾ॥ ಅಂಬೇಡ್ಕರ್ ತಂದ ಹೊಸ ವಿಭಾಗ ಬರುತ್ತೇನೆ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೇ, ನಾನು ಮಂಡಿಸುತ್ತೇನೆ.

(ಅ) ಕೆಳಗಣ ಹೊಸ ವಿಧಿಯನ್ನು ವಿಧಿ ೬೮ರ ನಂತರ "೬೮ ಎ. ಒಬ್ಬ ಮನುಷ್ಯನನ್ನು ಸಂಸತ್ತಿನ ಸದಸ್ಯ ಒಂದು ಸ್ಥಳವನ್ನು ತುಂಬಲು ಅವನು ಭಾರತೀಯ ನಾಗರಿಕನಾಗಿರದ ಹೊರತು ಅರ್ಹನಾಗುವುದಿಲ್ಲ.

(ಬ) ರಾಜ್ಯಗಳ ವಿಧಾನ ರಾಜ್ಯಸಭೆಯಲ್ಲಿಯ ಒಂದು ಸ್ಥಾನಕ್ಕೆ ಮೂವತ್ತೈದು ವರ್ಷಗಳಿಗಿಂತ ಕಡಿಮೆ ಮತ್ತು ಲೋಕಸಭೆಯ ಸ್ಥಾನಕ್ಕೆ ಇಪ್ಪತ್ತೈದು ವರ್ಷಗಳಿಗಿಂತ ಕಡಿಮೆ ಇಲ್ಲದಷ್ಟು ಇರಬೇಕು ಮತ್ತು ಕಾನೂನಿನ ಮೂಲಕ ನಿರ್ದಿಷ್ಟವಾಗಿರಬೇಕು.

(ಕ) ಈ ಬಗೆಗೆ ನಿರ್ದಿಷ್ಟಪಡಿಸಬಹುದಾದ ಅಂತಹ ಅರ್ಹತೆಗಳನ್ನು ಇಲ್ಲವೆ ಸಂಸತ್ತು ಯಾವುದೇ ಕಾನೂನಿನ ಅಡಿಯಲ್ಲಿ ಮಾಡಿದ ಅರ್ಹತೆಗಳನ್ನು ಹೊಂದಿರತಕ್ಕದ್ದು."

ಮಾನ್ಯರೇ, ಈ ವಿಧಿಯ ಉದ್ದೇಶವೇನೆಂದರೆ, ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಅರ್ಹತೆಗಳನ್ನು ಕುರಿತು ಹೇಳುವುದು. ಸಾಮಾನ್ಯವಾಗಿ ನಿಯಮವೇನೆಂದರೆ ಯಾವನೊಬ್ಬನು ಮತದಾರನಿದ್ದರೆ, ಆ ಒಂದೇ ಕಾರಣದಿಂದ ಅವನು ಮತದಾರನಿರುತ್ತಾನೆ. ಅವನು ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲಲು ಅರ್ಹತೆಯನ್ನು ಪಡೆಯುತ್ತಾನೆ. ಈ ವಿಧಿಯಲ್ಲಿ ಒಂದು ಚುನಾವಣೆಯಲ್ಲಿ ಮತದಾರನಾಗುವುದು ಒಂದು ಅವಶ್ಯವಾದ ಅರ್ಹತೆ ಹಾಗೂ ಹೆಚ್ಚಿನ ಕೆಲವು ಅರ್ಹತೆಗಳನ್ನು ತೃಪ್ತಿಗೊಳಿಸಬೇಕೆಂದು ಈ ವಿಧಿಯಲ್ಲಿ ಮಂಡಿಸಲಾಗಿದೆ. ಈ ಹೆಚ್ಚಿನ ಅರ್ಹತೆಗಳನ್ನು ಈ ಹೊಸ ವಿಧಿಯ ೬೮ ಎ ದಲ್ಲಿ ಕಾಣಿಸಲಾಗಿದೆ.

ಒಬ್ಬ ಅಭ್ಯರ್ಥಿಯು ವಾಸ್ತವವಾಗಿ ಒಂದು ವಿಧಾನ ಸಭೆಯ ಸದಸ್ಯನಾಗಿ ಸೇವೆ ಸಲ್ಲಿಸಲು ಇಚ್ಛೆ ಪಟ್ಟರೆ ಅವನಿಗೆ ಕೇವಲ ಮತದಾನದ ಹಕ್ಕಿಗಿಂತ ಹೆಚ್ಚಿನ ಅರ್ಹತೆಗಳು ಬೇಕು. ಅವನು ಸಂಸತ್ತಿನಲ್ಲಿ

ನಿರ್ವಹಿಸಬೇಕಾದ ಕರ್ತವ್ಯಗಳು ಅವನಿಗೆ ಕೆಲವು ಮಟ್ಟಿನ ಅನುಭವ ಜ್ಞಾನ ಮತ್ತು ಜಗತ್ತಿನ ವ್ಯವಹಾರಗಳ ಬಗೆಗೆ ಅನುಭವವಿರುವುದು ಅವಶ್ಯವಿದೆ. ಈ ಅರ್ಹತೆಗಳನ್ನು ಈ ಸಂಸತ್ತು ಒಪ್ಪುತ್ತದೆ ಹಾಗೂ ಈ ಅರ್ಹತೆಗಳು ಅಪೇಕ್ಷಣಿಯವೆಂದು ನಾನು ಭಾವಿಸುತ್ತೇನೆ. ಈ ಹೆಚ್ಚಿನ ಅರ್ಹತೆಗಳನ್ನು ಈ ಸದನವು ಒಪ್ಪಿಕೊಳ್ಳುತ್ತದೆಂದು ನಾನು ಭಾವಿಸುವೆನು ಮತ್ತು ನಮಗೆ ಯೋಗ್ಯ ರೀತಿಯ ಅಭ್ಯರ್ಥಿಯು ದೊರೆಯುತ್ತಾನೆ. ಅವನು ಸಂಸತ್ತಿನಲ್ಲಿ ಒಬ್ಬ ಸಾಮಾನ್ಯ ಮತದಾರನಿಗಿಂತಲೂ ಹೆಚ್ಚಿನ ರೀತಿಯಲ್ಲಿ ಸಂಸತ್ತಿನಲ್ಲಿ ಸೇವೆ ಸಲ್ಲಿಸುತ್ತಾನೆ.

*****

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಈ ಕ್ಷುಲ್ಲಕ ವಿಷಯವನ್ನು ಕುರಿತ ಡಾ|| ಅಂಬೇಡ್ಕರ್ ಅವರು ತಿದ್ದುಪಡಿಯು ಕುಚೇಷ್ಟೆಯದು ಮತ್ತು ಅಧರ್ಮಯುತವಾದದು ಆಗಿದೆ. ಈ ಸದನವು ಈ ಶರಾಗಳು ನಿಜವಾಗಿಯೂ ಉತ್ಪ್ರೇಕ್ಷಣೀಯ ಸ್ಥಿತಿಯವಾಗಿವೆಯೆಂದು ಮನಗಾಣಬೇಕು ಮತ್ತು ನಿಜವಾಗಿ ಆ ಪ್ರಶ್ನೆಗೆ ಏನೂ ಸಂಬಂಧವಿಲ್ಲವೆಂದು ನಾನು ತಿಳಿಯುತ್ತೇನೆ. ಡಾ|| ಅಂಬೇಡ್ಕರ್ ಅವರ ತಿದ್ದುಪಡಿಯು ಶ್ರೀಮತಿ ದುರ್ಗಾಬಾಯಿ ಅವರು ತಂದ ತಿದ್ದುಪಡಿಯಂತಿದೆ.

**ಸನ್ಮಾನ್ಯ ಡಾ|| ಬಿ.ಆರ್. ಅಂಬೇಡ್ಕರ್ :** ನಾನು ಶ್ರೀಮತಿ ದುರ್ಗಾಬಾಯಿ ಅವರು ತಂದ ತಿದ್ದುಪಡಿಯನ್ನು ಸ್ವೀಕರಿಸಲು ಸಿದ್ಧನಿದ್ದೇನೆ. ನಾನು ಉಳಿದ ಯಾವ ತಿದ್ದುಪಡಿಯನ್ನು ಸ್ವೀಕರಿಸಲಾರೆನು.

**ಮಾನ್ಯ ಅಧ್ಯಕ್ಷರು :** ನೀವು ಉತ್ತರ ಕೊಡಲು ಇಚ್ಛಿಸುತ್ತೀರಾ?

**ಸನ್ಮಾನ್ಯ ಡಾ|| ಬಿ.ಆರ್. ಅಂಬೇಡ್ಕರ್ :** ಇದಕ್ಕೆ ಉತ್ತರಿಸುವ ಅವಶ್ಯಕತೆಯು ಇರುವುದಿಲ್ಲ. ಶ್ರೀಮತಿ ದುರ್ಗಾಬಾಯಿ ಅವರು ತಂದ ತದ್ದುಪಡಿಯನ್ನು ನಾನು ಸ್ವೀಕರಿಸುತ್ತೇನೆಂದು ಹೇಳುವುದರ ಹೊರತಾಗಿ ನನಗೆ ಉತ್ತರಿಸಲು ಏನೂ ಇಲ್ಲವೆಂದು ನಾನು ಭಾವಿಸುವೆನು. ಕೆಲವು ದೃಷ್ಟಿಯಿಂದ ವಿಧಿ ೧೫೨ ಮತ್ತು ೫೫ಕ್ಕೆ ಸಂಬಂಧಿದಂತೆ ಅನುಸಂಗತವಾದುದು ಆಗುತ್ತದೆ. ಯಾಕೆಂದರೆ ರಾಜ್ಯಗಳ ವಿಧಾನ ಪರಿಷತ್ತಿನಲ್ಲಿ (ಮೇಲ್ಮನೆಯಲ್ಲಿ) ನಾವು ಮಿತಿಯನ್ನು ಮೂವತ್ತೈದಕ್ಕೆ ನಿರ್ಧರಿಸಿದ್ದೇವೆ ಮತ್ತು ಉಪರಾಷ್ಟ್ರಪತಿಯನ್ನು ಕುರಿತು ನಮಗೆ ಮೂವತ್ತೈದು ವಯೋಮಿತಿಯನ್ನು ಪರಿಮಿತಿಗೊಳಿಸುತ್ತದೆ. ನನಗೆ ಅನಿಸಿದಂತೆ ಈ ಭಿನ್ನತೆ ಉಳಿದಾಗ್ಯೂ ಅದರಿಂದ ಯಾವ ಪರಿಣಾಮವೂ ಆಗುವುದಿಲ್ಲ. ಇನ್ನು ಮುಂದೆ ಈ ಸದನಕ್ಕೆ ಇದು ಮುಕ್ತ ಸದನ ಇಚ್ಛಿಸಿದರೆ ಏಕರೂಪ ವಯಸ್ಸಿನ ಮಿತಿಯನ್ನು ಗೊತ್ತುಪಡಿಸಿ ನಿರ್ಧರಿಸಬಹುದು.

**ಮಾನ್ಯ ಅಧ್ಯಕ್ಷರು :** ನಾನು ಈ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

(ಶ್ರೀಮತಿ ದುರ್ಗಾಬಾಯಿಯವರ ತಿದ್ದುಪಡಿಯನ್ನೊಳಗೊಂಡು ಪ್ರಸ್ತಾವನೆಯನ್ನು ಸ್ವೀಕರಿಸಲಾಯಿತು.'ಹೊಸ ವಿಧಿಯಲ್ಲಿ ೬೮ ಎ ದಲ್ಲಿ ವಿಧಿ ೬೮ರ ನಂತರ ಖಂಡ (ಬ) ದಲ್ಲಿಯ ಪದಗಳು, 'ಮೂವತ್ತೈದು' ಈ ಪದಗಳ ಬದಲು ವಿಧಿ ೬೮ಎ ತಿದ್ದುಪಡಿಯಾದಂತೆ ಸಂವಿಧಾನದಲ್ಲಿ ಸೇರಿಸಲಾಗಿದೆ.)

* * * * *

## ವಿಧಿ ೬೯

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ಈ ವಿಧಿಗೆ ಮಂಡಿಸಿದ ಯಾವ ತಿದ್ದುಪಡಿಯನ್ನು ನಾನು ಸ್ವೀಕರಿಸಲಾರೆನೆಂದು ತಿಳಿಸಲು ನಾನು ವಿಷಾದಿಸುತ್ತೇನೆ. ನಾನು ಉತ್ತರಿಸಬೇಕೆಂದು ಆರಿಸಿದ ಒಂದು ತಿದ್ದುಪಡಿಯನ್ನು ಹೊರತುಪಡಿಸಿ ಉಳಿದ ಯಾವುದಕ್ಕೂ ನಾನು ವಿವರಣೆಯನ್ನು ಕೊಡುವ ಅವಶ್ಯಕತೆಯು ಇರುವುದಿಲ್ಲ. ಪ್ರೊ. ಶಹಾ ಅವರು ಮಂಡಿಸಿದ ತಿದ್ದುಪಡಿಗಳು ಕೆಲವು ವಿಷಯಗಳನ್ನು ಇತ್ತಿವೆ. ಅವರ ಮೊದಲನೆಯ ತಿದ್ದುಪಡಿ (ಸಂಖ್ಯೆ ೧೪೭೦) ಇವು ಅದೇ ಒಂದೇ ವಿಷಯ ಕುರಿತು ಉಲ್ಲೇಖಿಸುತ್ತವೆ ಮತ್ತು ಅದರ ಪರಿಣಾಮವಾಗಿ ಆದ್ದರಿಂದ ನಾನು ಅವೆರಡನ್ನು ಕೂಡಿಯೇ ಈ ವಾದಕ್ಕೆ ಪ್ರತಿವಾದದ ರೂಪದಲ್ಲಿ ನಿಖಾಲೆ ಮಾಡಲು, ಅವರು ವಾದ ಮಾಡಿದಂತೆ ಈ ಎರಡು ತಿದ್ದುಪಡಿಗಳಲ್ಲಿ ಅವರು ಒತ್ತಾಯಿಸುವುದೇನೆಂದರೆ ಎರಡು ಸಂಸತ್ತಿನ ಅಧಿವೇಶನಗಳ ನಡುವಿನ ಅವಧಿಯು ಮೂರು ತಿಂಗಳಿಗಂತೂ ಹೆಚ್ಚಿರಕೂಡದು. ಇದೇ ಇವೆರಡೂ ತಿದ್ದುಪಡಿಗಳ ಒಟ್ಟಾರೆ ಅಭಿಪ್ರಾಯವಾಗಿರುತ್ತದೆ.

ಪ್ರೊ. ಶಹಾ ಅವರ ಎರಡು ತಿದ್ದುಪಡಿಗಳೊಂದಿಗೆ ನಾನು ಶ್ರೀ ಕಾಮತ್ ಅವರ ತಿದ್ದುಪಡಿ ಸಂಖ್ಯೆ (೧೪೭೧)ನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಯಾಕೆಂದರೆ ಅದೂ ಸಹ ಅದೇ ಪ್ರಶ್ನೆಯನ್ನು ಎತ್ತುತ್ತದೆ. ನನಗೆ ಅನಿಸುವಂತೆ ಪ್ರೊ. ಶಹಾ ಅವರಾಗಲೀ ಇಲ್ಲವೆ ಶ್ರೀ ಕಾಮತ್ ಅವರಾಗಲೀ ಮೂಲತಃ ಯಾಕೆ ಭಾರತ ಸರಕಾರದ ಅಧಿನಿಯಮ ೧೯೩೫ರಲ್ಲಿ ಮಂಡಿಸಿದರೆಂಬುದರ ಕಾರಣವನ್ನು ಅವರು ತಿಳಿದಿಲ್ಲ. ಪ್ರೊ. ಶಹಾ ಮತ್ತು ಶ್ರೀ ಕಾಮತ್ ಅವರು ಆಗಿನ ಆ ಅಧಿನಿಯಮ ಪಾಸಾಗುವ ಕಾಲಕ್ಕೆ ಇದ್ದ ರಾಜಕೀಯ ಪರಿಸ್ಥಿತಿಯನ್ನು ಈಗ ಅವರು ಮನಗಾಣುತ್ತಾರೆಂದು ನಾನು ಭಾವಿಸುತ್ತೇನೆ. ಆಗಿನ ಕಾಲದ ಪರಿಸರಕ್ಕೂ ೧೯೩೫ರ ಪರಿಸರಕ್ಕೂ ಈಗಿನ ಪರಿಸ್ಥಿತಿ ತುಂಬಾ ಬದಲಾಗಿದೆ. ೧೯೩೫ರಲ್ಲಿದ್ದ ಪರಿಸ್ಥಿತಿ ಮೇಲುಗೈಯಾದುದು. ಕಾರ್ಯಾಂಗವು ಶಾಸಕಾಂಗವನ್ನು ದೂರ ಇಡುವುದು ನಿಜವಾಗಿಯೂ ಆ ವೇಳೆಯ ಒಳಗೆ ಶಾಸಕಾಂಗವನ್ನು ಪ್ರಾಥಮಿಕವಾಗಿ ಕಂದಾಯ ಕೂಡಿಸುವುದರ ಸಲುವಾಗಿ ಮಾತ್ರ. ಅದನ್ನು ಕರೆಯಲಾಗುತ್ತಿತ್ತು. ಅದು ಕೇವಲ ಆಯವ್ಯಯ ಪತ್ರ: ಮುಂಗಡ ಪತ್ರದ ಉದ್ದೇಶಕ್ಕಾಗಿ ಕೂಡಿತು ಮತ್ತು ಕಾರ್ಯಾಂಗವು ಆ ಮನ್ನಣೆಯನ್ನು ಶಾಸಕಾಂಗದಿಂದ ಪಡೆಯುವಲ್ಲಿ ಯಶಸ್ವಿಯಾದರೂ ಕಾರ್ಯಾಂಗವು ಶಾಸಕಾಂಗವು ಬಹಳಷ್ಟು ಉತ್ಸುಕವಾಗಿರಲಿಲ್ಲ. ಯಾಕೆಂದರೆ ಶಾಸಕಾಂಗವು ಪ್ರತಿ ದಿನದ ಆಡಳಿತದ ಬಗೆಗೆ ಪ್ರಶ್ನೆ ಕೇಳುವ ತನ್ನ ಹಕ್ಕನ್ನು ಚಲಾಯಿಸುವುದು ಮತ್ತು ಶಾಸನ ಸಭೆಯಲ್ಲಿ ಆ ವಿಷಯಕ್ಕೆ ಸಂಬಂಧಿಸಿದ ಮಂತ್ರಿಯನ್ನು ಸಮಾಧಾನ ಪಡಿಸಲು ಅಡ್ಡ ಪ್ರಶ್ನೆಗಳನ್ನು ಶಾಸನ ಸಭೆಯಲ್ಲಿ ಪ್ರಸ್ತಾಪಿಸುವುದು, ಸಾಮಾಜಿಕ ತೊಂದರೆಗಳನ್ನು ನಿವಾರಿಸುವುದು ಅವರ ಉದ್ದೇಶವಾಗಿರಲಿಲ್ಲ. ನಿಜವಾಗಿ ನಾನೇ ಕೆಲವು ಪ್ರಾಂತಗಳ ಶಾಸನ ಸಭೆಗಳನ್ನು ಭಾರತ ಸರಕಾರದ ಅಧಿನಿಯಮ ೧೯೩೫ರ ಅಡಿಯಲ್ಲಿ ಅವುಗಳ ಕಾರ್ಯವೈಖರಿಯನ್ನು ಬಹಳ ಕುತೂಹಲದಿಂದ ನೋಡುತ್ತಿದ್ದೇನೆ. ನನಗೆ ಒಂದು ನಿರ್ದಿಷ್ಟ ಪ್ರಾಂತದ, ಅದರ ಹೆಸರನ್ನು ಹೇಳಲು ಇಚ್ಛೆಪಡಿಸುವುದಿಲ್ಲ. ಅದರ ಶಾಸನ ಸಭೆಯು ಒಂದು ಇಡೀ ವರ್ಷದಲ್ಲಿ ೧೮ದಿನಗಳಿಗಿಂತ ಹೆಚ್ಚಿಗೆ ಎಂದಿಗೂ ಕೂಡಿಲ್ಲ. ಅದೂ ಸಹ ಕಂದಾಯವನ್ನು ಸಂಗ್ರಹಿಸುವ ಶಾಸನ ಸಭೆಯಲ್ಲಿ ಮನ್ನಣೆಯನ್ನು ಪಡೆಯುವುದರ ಸಲುವಾಗಿ ಇದ್ದಿತು.

**ಶ್ರೀ ತಾಜ ಬಹದ್ದೂರು ಹುಸೇನ್ :** ಅದಕ್ಕೆ ಯಾರು ಹೊಣೆಗಾರರು?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್:** ನಾನು ಅದಕ್ಕೆ ವಿವರಣೆ ಕೊಡುವುದಾದರೆ ಹೋದಂತೆ

ಕಾರ್ಯಾಂಗದ ಹಿಂದಿನ ಮನೋವೃತ್ತಿಯು ಶಾಸಕಾಂಗವು ಕೂಡಲೇ ಬಾರದೆಂಬುದಾಗಿತ್ತು ಮತ್ತು ಅದಕ್ಕೆ ಅಧೀನವಾಗಿರಬಾರದೆಂಬುದಾಗಿತ್ತು ಮತ್ತು ಅದರ ಆಡಳಿತವು ಶಾಸಕಾಂಗದ ಭದ್ರತೆಯನ್ನು ತನ್ನ ಒಂದು ರೀತಿಯ ನಡತೆಗಾಗಿ ಇಟ್ಟುಕೊಂಡಿತ್ತು.

**ಪಂಡಿತ ಹೃದಯನಾಥ ಕುಂಜ್ರು :** ಅದು ಯಾವ ಪ್ರಾಂತ್ಯ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್:** ಅದನ್ನು ಅಲ್ಲಿಯೇ ಬಿಡುವುದು ಒಳಿತು. ನಾನು ನನ್ನ ಸನ್ಮಿತ್ರರಿಗೆ ವೈಯಕ್ತಿಕವಾಗಿ ಅದು ಯಾವ ಪ್ರಾಂತವೆಂದು ಹೇಳುತ್ತೇನೆ ಇಂತಹ ಸಂದರ್ಭ ೧೯೩೫ರ ಮೊದಲು ಒದಗಿದಂತೆ ಅದರ ಜನಪ್ರಿಯ ಸರಕಾರ ಹಾಸ್ಯಾಸ್ಪದ ಆಗುತ್ತದೆ. ಶಾಸಕಾಂಗವನ್ನು ಕರೆಯುವುದು ಕೇವಲ ಕಂದಾಯವನ್ನು ಪಡೆಯುವುದರ ಸಲುವಾಗಿ. ಆಮೇಲೆ ಶೀಘ್ರವಾಗಿ ಅದನ್ನು ಪದಚ್ಯುತಿಗೊಳಿಸುವುದು. ಕಾನೂನಿನಿಂದ ಅದಕ್ಕೆ ಆಡಳಿತವನ್ನು ಪ್ರಶ್ನೆಗಳನ್ನು ಕೇಳುವುದರಿಂದ ಇಲ್ಲವೆ ಕಾನೂನುಗಳನ್ನು ಮಾಡುವುದರಿಂದ ಅದಕ್ಕಿದ್ದ ಶಾಸನ ಮಾಡುವ ಅವಕಾಶವನ್ನು ಕಿತ್ತುಕೊಳ್ಳುವುದು. ನಾನು ಹೇಳಿದಂತೆ ಅದು ಪ್ರಜಾಪ್ರಭುತ್ವದ ಹಾಸ್ಯಾಸ್ಪದವಾದುದು ಇಂತಹ ಸಂಗತಿಯನ್ನು ನಿವಾರಿಸಲು ಇಂತಹ ಖಂಡವನ್ನು ಭಾರತ ಸರಕಾರದ ಅಧಿನಿಯಮ ೧೯೩೫ರಲ್ಲಿ ಪ್ರಸ್ತಾಪಿಸಲಾಗಿದೆ. ನಾವು ಈ ಬಗೆಗೆ ವಿಚಾರಿಸಿದೆವು ಮತ್ತು ನಾನು ವೈಯಕ್ತಿಕವಾಗಿ ತಿಳಿಯುವುದು ಏನೆಂದರೆ ವಾತಾವರಣವು ಸಂಪೂರ್ಣವಾಗಿ ಬದಲಾಗಿದೆ. ಈಗ ಯಾವುದೇ ಕಾರ್ಯಾಂಗವು ಇನ್ನು ಮುಂದೆ ಈ ರೀತಿಯ ಜಿಡ್ಡುಗಟ್ಟಿದ ನಡತೆಯನ್ನು ಶಾಸಕಾಂಗಕ್ಕೆ ತೋರಿಸುತ್ತದೆಂದು ನನಗೆ ಅನಿಸುವುದಿಲ್ಲ. ಆದ್ದರಿಂದ ನಾವು ವಿಚಾರಿಸಿದ್ದೇನೆಂದರೆ ವಿಶೇಷ ಎಚ್ಚರಿಕೆಯ ವ್ಯವಸ್ಥೆಯೂ ಆ ಖಂಡವನ್ನು ನಮ್ಮ ಸಂವಿಧಾನದಲ್ಲಿ ಮುಂದುವರೆಯಿಸಿಕೊಂಡು ಹೋಗುವುದು ಅಪೇಕ್ಷಣೀಯವೆಂದು ಭಾವಿಸಿದ್ದೇವೆ. ನನ್ನ ಸ್ನೇಹಿತರಾದ ಶ್ರೀ ಕಾಮತ್ ಮತ್ತು ಪ್ರೊ. ಶಹಾ ಅವರು ಅಷ್ಟೇ ಸಾಕಾಗುವುದಿಲ್ಲವೆಂದು ತಿಳಿಯುತ್ತಾರೆ. ಅವರು ಬಹಳಷ್ಟು ಅಧಿವೇಶನಗಳು ಮೇಲಿಂದ ಮೇಲೆ ಇರಬೇಕೆನ್ನುತ್ತಾರೆ. ಈಗ ಇದ್ದಂತೆ ಆ ಕಟ್ಟುಪಾಡುಗಳು ಇರುವುದಿಲ್ಲ. ವಿಧಾನಸಭೆಗಳನ್ನು ಈಗ ಇದ್ದುದಕ್ಕಿಂತ ಹೆಚ್ಚಿಗೆ ಮೇಲಿಂದ ಮೇಲೆ ಅಧಿವೇಶನ ಕರೆಯಲು ಅದು ಅಡ್ಡ ಬರುವುದಿಲ್ಲ. ಇದನ್ನೇ ಈ ಖಂಡದಲ್ಲಿ ವ್ಯವಸ್ಥೆ ಮಾಡಲಾಗಿದೆ. ನಿಜವಾಗಿಯೂ ನನ್ನ ಹೆದರಿಕೆ ಏನೆಂದರೆ ನಾನು ಹಾಗೆ ಹೇಳಬೇಕೆಂದರೆ ಸಂಸತ್ತಿನ ಅಧಿವೇಶನಗಳು ಬಹು ಬೇಗನೆ ಮೇಲಿಂದ ಮೇಲೆ ಮತ್ತು ಅಷ್ಟು ದೀರ್ಘ ಕಾಲ ಅಧಿವೇಶನ ನಡೆದರೆ ವಿಧಾನಸಭೆಯ ಸದಸ್ಯರು ಬಹುತರವಾಗಿ ತಮ್ಮಷ್ಟಕ್ಕೆ ತಾವೇ ಆ ಅಧಿವೇಶನದಿಂದ ಬೇಸತ್ತು ಹೋಗುತ್ತಾರೆ. ಇದಕ್ಕೆ ಕಾರಣವೆಂದರೆ ಸರಕಾರವು ಜನರಿಗೆ ಹೊಣೆಯಾಗಿದೆ. ಕೇವಲ ಉತ್ತಮ ಆಡಳಿತವನ್ನು ಒದಗಿಸುವುದಿಲ್ಲ ಮತ್ತು ಮಾಡಿದ ಕಾನೂನುಗಳನ್ನು ಪರಿಣಾಮಕಾರಕವಾಗಿ ತಮ್ಮ ಪಕ್ಷದ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಅವಶ್ಯವಿರುವ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

ಅದರಂತೆ ಅನೇಕ ಖಾಸಗಿ ವಿಧಾನಸಭೆಯ ಸದಸ್ಯರು ತಮ್ಮ ಆತ್ಮಾಭಿಮಾನಕ್ಕೆ ಪರಿಣಾಮಕಾರಿ ಚಾಲನೆ ಕೊಡಲು ಇಲ್ಲವೆ ಚಿಕ್ಕಪುಟ್ಟ ವಿಚಿತ್ರ ಭಾವನೆಗೋಸ್ಕರ ಖಾಸಗಿ ಬಿಲ್ಲುಗಳನ್ನು ಪ್ರಸ್ತಾಪಿಸಬಹುದು.ಅಲ್ಲಿ ಹೆಚ್ಚಿನ ಕಾರಣವೆಂದರೆ ಕಾರ್ಯಾಂಗವು ಶಾಸಕಾಂಗವನ್ನು ಕರೆಯಲು ಮೇಲಿಂದ ಮೇಲೆ ಒತ್ತಾಯಿಸುತ್ತದೆ.ಕರದ ಪ್ರಕ್ರಿಯೆಯನ್ನು ಯೋಗ್ಯ ವೇಳೆಯಲ್ಲಿ ಮುಗಿಸಲು ಕ್ರಮಗಳನ್ನು ಮಾಗಣಿ ಅನುದಾನದ ಬೇಡಿಕೆ ಪುರವಣಿಯ ಅನುದಾನಗಳು ಇದು ಬಹು ಶಕ್ತಿಯುತವಾದ ಅಂಶವಾಗಿರುತ್ತದೆ. ಈ ವಿವಾದ ಅಂಶವನ್ನು ನಿರ್ಣಯಿಸಲು ಮತ್ತು ಎಷ್ಟು ಅಧಿವೇಶನಗಳನ್ನು ಕರೆಯಬೇಕೆಂಬುದನ್ನು ಕುರಿತು ಇದು ಬಹು ಮಹತ್ವದ ಪಾತ್ರವಾಗುತ್ತದೆ. ಆದ್ದರಿಂದ ನಾನು ವಿನಯಪೂರ್ವಕವಾಗಿ ಈ ಸದನಕ್ಕೆ ತಿಳಿಯಪಡಿಸುವುದೇನೆಂದರೆ ನಾವು ಈಗ

ಮಾಡಿದ ವ್ಯವಸ್ಥೆ ಸಾಕಾಗುತ್ತದೆ. ಅತ್ಯಧಿಕ ಸಂಖ್ಯೆಗೆ ಸಂಬಂಧಿಸಿದಂತೆ ಈ ವಿಷಯ ಮುಕ್ತವಾಗಿದೆ. ಆ ಕಾರಣಗಳನ್ನು ಕಾಣಿಸಿದ್ದರಿಂದ ಯಾವುದೇ ರೀತಿಯಿಂದ ಕಾರ್ಯಾಂಗವು ಉಳಿದ ಕನಿಷ್ಠ ಹೊಣೆಗಾರಿಕೆಯನ್ನು ಈ ನಿರ್ದಿಷ್ಟ ಖಂಡದಿಂದ ಹೇರಿದ್ದನ್ನು ನಿರ್ವಹಿಸಲು ಯಾವ ಅಂಜಿಕೆಯೂ ಇರುವುದಿಲ್ಲ. ನಾನು ಪ್ರೊ. ಶಹಾ ಅವರ ತಿದ್ದುಪಡಿ ಸಂಖ್ಯೆ ೧ (೧೪೭೭)ಕ್ಕೆ ಬರುತ್ತೇನೆ. ಈ ನಿರ್ದಿಷ್ಟ ತಿದ್ದುಪಡಿಯಿಂದ ಪ್ರೊ. ಶಹಾ ಅವರು ಎರಡರಲ್ಲಿ ಒಂದು ಸದನ ಈ ಪದಗಳನ್ನು ಖಂಡ (೭) (೨) (ಎ) ದಿಂದ ತೆಗೆದುಹಾಕಬೇಕೆಂಬುದಾಗಿದೆ. ಅವರ ವಾದವನ್ನು ನನಗೆ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ (ನನ್ನದು ತಪ್ಪು ಇದ್ದರೆ ಅವರು ನನ್ನನ್ನು ತಿದ್ದಬೇಕು) ಅದೇಕೆ ಎಂದರೆ ಮೇಲಿನ ಮನೆಯು ವಿಸರ್ಜಿತವಾಗುವುದಿಲ್ಲ. ಆದ್ದರಿಂದ ರಾಷ್ಟ್ರಪತಿಗಳ ಕಾರ್ಯನಿರ್ವಹಣೆಗಾಗಿ ಅಧಿವೇಶನ ಕರೆಯುವ ಅವಶ್ಯಕತೆ ಇರುವುದಿಲ್ಲ. ನನಗೆ ಅನಿಸಿದಂತೆ ಎರಡು ಸಂದರ್ಭಗಳಲ್ಲಿ ಸಂಪೂರ್ಣ ಅಂತರವಿದೆ. ಒಂದು ಸದನವನ್ನು ಒಂದು ನಿಗದಿತ ಅವಧಿಗೆ ಕೆಳಮನೆಯು ಐದು ವರ್ಷಗಳ ಅಂತ್ಯಕ್ಕೆ ವಿಸರ್ಜನೆಗೊಳ್ಳುತ್ತದೆ. ಆದರೆ ಆ ಸದನವನ್ನು ಕಾರ್ಯಕ್ರಮ ನಿರ್ವಹಣೆಗಳಿಗೆ ಕರೆಯಲಾಗುತ್ತದೆ. ಈ ವಿಷಯ ಇನ್ನೂ ಹಾಗೆಯೇ ಉಳಿದಿದೆ. ಸಂಸತ್ತು ದಿಲ್ಲಿಯಲ್ಲಿ ಪ್ರತಿದಿನ ೨೪ ತಾಸುಗಳವರೆಗೆ ವರ್ಷದ ಹನ್ನೆರಡು ತಿಂಗಳುಗಳವರೆಗೆ ಕುಳಿತುಕೊಳ್ಳುವುದಿಲ್ಲ. ಅದನ್ನು ಕರೆಯಲಾಗದು. ಅದರ ಸದಸ್ಯರು ಹಾಜರಾಗುತ್ತಾರೆ. ಆದ್ದರಿಂದ ನನಗೆ ಅನಿಸುವಂತೆ ಮೇಲ್ಮನೆಯನ್ನು (ಕರೆಯುವುದು) ಸಹ ಕೆಳಮನೆಯಯನ್ನು ಕರೆಯುವಂತೆ ಇದೆ.

ಆಮೇಲೆ ನಾನು ಪ್ರೊ. ಶಹಾರ (ಸಂಖ್ಯೆ ೧೪೭೫) ಮತ್ತು (೧೪೭೮) ಎರಡು ತಿದ್ದುಪಡಿಗಳನ್ನು ತೆಗೆದುಕೊಳ್ಳುತ್ತೇನೆ. ಈ ತಿದ್ದುಪಡಿಗಳು ಈ ಖಂಡದಲ್ಲಿ ರೂಪಿಸಿರುವಂತೆ ಅವು ಬಹುತೇಕವಾಗಿ ಸಮ್ಮಿಶ್ರವಾಗಿದೆ. ತಿದ್ದುಪಡಿಗಳ ಸಾರಾಂಶವು ಇಷ್ಟು– ಪ್ರೊ. ಶಹಾ ಅವರು ವಿಚಾರಿಸುತ್ತಿರುವುದೇನೆಂದರೆ ಸಾಮಾನ್ಯ ವೇಳೆಯಲ್ಲಿ ವಿಧಿಯಂತೆ ಇಲ್ಲವೆ ತುರ್ತು ಪರಿಸ್ಥಿತಿ ಇದ್ದಾಗ ಸಂಸತ್ತನ್ನು ಕರೆಯಲು ರಾಷ್ಟ್ರಪತಿಗಳು ಸಂಸತ್ತನ್ನು ಕರೆಯಲು (ಸಮನ್ಸು) ಮಾಡಲು ತಪ್ಪಿದರೆ ಆಗ ಈ ಕರ್ತವ್ಯವನ್ನು ಅಧ್ಯಕ್ಷರು ಲೋಕಸಭೆಗೆ ಈ ಅಧಿಕಾರವನ್ನು ಕೊಡಬೇಕು. ಇಲ್ಲವೆ ರಾಜ್ಯ ಸಭೆಯ ಅಧ್ಯಕ್ಷರು ಇಲ್ಲವೆ ಉಪಾಧ್ಯಕ್ಷರಿಗೆ ಈ ಅಧಿಕಾರವನ್ನು ಕೊಡಲಿಕ್ಕೆ ಬೇಕು. ಅದನ್ನು ಅವರು ಸರಿಯಾಗಿ ತಿಳಿದುಕೊಂಡಿದ್ದರೆ ಪ್ರೊ. ಕೆ.ಟಿ. ಶಹಾ ಅವರ ಪ್ರಸ್ತಾವನೆಯು ನನಗೆ ಕಾಣುವಂತೆ ಇಲ್ಲಿಯೂ ಪುನಃ ಪ್ರೊ. ಶಹಾ ಅವರು ಸಂಪೂರ್ಣವಾಗಿ ಈ ಪ್ರಸ್ತಾವನೆಯನ್ನು ತಪ್ಪು ತಿಳಿದುಕೊಂಡಿದ್ದಾರೆ. ರಾಷ್ಟ್ರಪತಿಯು ಯಾಕೆ ತಮ್ಮ ಹೊಣೆಗಾರಿಕೆಯನ್ನು ನೆರವೇರಿಸಲು ತಪ್ಪುತ್ತಾರೆ. ಅವರಿಗೆ ಕಾನೂನಿನಿಂದ ಈ ಅಧಿಕಾರವನ್ನು ಸೂಚಿಸಿದರೆ ಆಗ ರಾಷ್ಟ್ರಪತಿಗಳು ಯಾವುದೇ ಕಾರಣಕ್ಕೂ ಸ್ವೇಚ್ಛಾಚಾರದಿಂದ ಇಲ್ಲವೆ ಮೂರ್ಖತನದಿಂದ ಸಂಸತ್ತು ಕರೆಯಲು ನಿರಾಕರಿಸಿದರೆ ನಮಗೆ ನಮ್ಮ ಸಂವಿಧಾನದಲ್ಲಿ ರಾಷ್ಟ್ರಪತಿಗಳನ್ನು ಕಿತ್ತುಹಾಕುವ ಉತ್ತಮ ಉಪಾಯವಿದೆ. ಅವನನ್ನು ಮಹಾದೋಷಾರೋಪಣೆಗೆ ಗುರಿಪಡಿಸಬಹುದು. ಯಾಕೆಂದರೆ ಇಂತಹ ವಿಷಯದಲ್ಲಿ ರಾಷ್ಟ್ರಪತಿಗಳು ಇಂತಹ ಸಲಹೆ ನಿರಾಕರಿಸುವುದು ನಿಸ್ಸಂಶಯವಾಗಿಯೂ ಸಂವಿಧಾನವನ್ನು ಉಲ್ಲಂಘಿಸಿದಂತೆ ಆಗುತ್ತದೆ. ಆದ್ದರಿಂದ ಅಲ್ಲಿ ಸಾಕಷ್ಟು ಪರಿಹಾರ ನಿರ್ದಿಷ್ಟ ಖಂಡದಲ್ಲಿದೆ. ಆದರೆ ನಾವು ಪ್ರೊ. ಕೆ.ಟಿ. ಶಹಾ ಅವರ ಸೂಚನೆಯನ್ನು ಸ್ವೀಕರಿಸಿದರೆ. ಮತ್ತೊಂದು ಕಷ್ಟ ಉದ್ಭವಿಸುತ್ತದೆ. ಉದಾಹರಣೆಗಾಗಿ ರಾಷ್ಟ್ರಪತಿಗಳ ಯೋಗ್ಯಕಾರಣಕ್ಕಾಗಿ ಸಂಸತ್ತನ್ನು ಕರೆಯದಿದ್ದಲ್ಲಿ ಮತ್ತು (ಲೋಕಸಭೆ) ಅಧ್ಯಕ್ಷರು ಮತ್ತು ರಾಜ್ಯಸಭೆಯ ಅಧ್ಯಕ್ಷರು ಸಂಸತ್ತನ್ನು ಕರೆಯದಿದ್ದಲ್ಲಿ ಆಗ ಏನಾಗುತ್ತದೆ? ರಾಷ್ಟ್ರಪತಿಗಳು ಸಂಸತ್ತನ್ನು ಕರೆಯದಿದ್ದರೆ ಆಗ

ಕಾರ್ಯಾಂಗ ಸರಕಾರಕ್ಕೆ ಸಂಸತ್ತಿನ ಮುಂದೆ ಇಡಲು ಚರ್ಚಿಸಲು ಯಾವ ವಿಷಯಗಳು ಇರುವುದಿಲ್ಲ. ಯಾಕೆಂದರೆ ಅದೊಂದೇ ವಿಷಯದ ಮೇಲೆ ರಾಷ್ಟ್ರಪತಿ ಪ್ರಧಾನಮಂತ್ರಿಗಳ ಸೂಚನೆಯ ಮೇಲೆ ಸಂಸತ್ತನ್ನು ಅಧಿವೇಶನಕ್ಕಾಗಿ ಕರೆಯದಿದ್ದರೆ ಈಗ ಲೋಕಸಭೆಯ ಅಧ್ಯಕ್ಷರು ಸಂಸತ್ತಿನ ಮುಂದೆ ಇದನ್ನು ಕಾರ್ಯಕಲಾಪಗಳನ್ನು ಒದಗಿಸಲಾರರು. ಇಲ್ಲವೆ ಚೇರ್‌ಮೆನ್ನರು ಒದಗಿಸಲಾರರು. ಈ ಕಾರ್ಯಕಲಾಪಗಳನ್ನು ಕಾರ್ಯಾಂಗವು ಒದಗಿಸಬೇಕು ಅದೆಂದರೆ ಪ್ರಧಾನಮಂತ್ರಿಗಳಿಂದ ಅವನು ರಾಷ್ಟ್ರಪತಿಗಳಿಗೆ ಸಂಸತ್ತನ್ನು ಅಧಿವೇಶನಕ್ಕಾಗಿ ಕರೆಯಲು ಸೂಚಿಸುವುದು. ಆದ್ದರಿಂದ ಕೇವಲ ಅಧಿವೇಶನದಲ್ಲಿ ಚರ್ಚಿಸಲು ಸೂಚನೆಗಳನ್ನು ಮುಂತಾದವುಗಳನ್ನು ಸಂಸತ್ತಿನ ಕಲಾಪಗಳಲ್ಲಿ ಇಡಲು ವ್ಯವಸ್ಥೆ ಮಾಡದೆ ಕೇವಲ ಅಧ್ಯಕ್ಷರಿಗೆ ಇಲ್ಲವೆ, ಚೇರ್‌ಮೆನ್ನರಿಗೆ ಸಂಸತ್ತನ್ನು ಕರೆಯುವ ಅಧಿಕಾರ ಕೊಡುವುದು ಒಂದು ಉಪಯೋಗವಿಲ್ಲದ ಕ್ರಿಯೆಯಾಗುತ್ತದೆಂದು ನನಗೆ ಅನ್ನಿಸುತ್ತದೆ. ಆದ್ದರಿಂದ ಆ ತಿದ್ದುಪಡಿಯನ್ನು ಸ್ವೀಕರಿಸುವುದರಿಂದ ಯಾವ ಉದ್ದೇಶವು ಸಾಧಿಸುವುದಿಲ್ಲ.

ಪ್ರೊ. ಕೆ.ಟಿ. ಶಹಾ ಅವರು ಮಂಡಿಸಿದ ಕೊನೆಯ ತಿದ್ದುಪಡಿ (ಸಂಖ್ಯೆ ೧೪೮೨) ಅದರ ಉದ್ದೇಶವೇನೆಂದರೆ ಪ್ರಧಾನಮಂತ್ರಿಯು ಲಿಖಿತದಲ್ಲಿ ತನ್ನ ಕಾರಣಗಳನ್ನು ಕಾಣಿಸಿ ಸಂಸತ್ತನ್ನು ವಿಸರ್ಜಿಸಬೇಕೆಂದು ಕೇಳದ ಹೊರತು ರಾಷ್ಟ್ರಪತಿಗಳು ಸಂಸತ್ತನ್ನು ವಿಸರ್ಜಿಸತಕ್ಕದ್ದಲ್ಲ. ಒಳ್ಳೆಯದು, ಪ್ರಧಾನಮಂತ್ರಿಯು ರಾಷ್ಟ್ರಪತಿಗಳಲ್ಲಿ ಹೋಗುತ್ತಾನೆ ಮತ್ತು ಅವನಿಗೆ ತನ್ನ ವಿಚಾರದಲ್ಲಿ ಸಂಸತ್ತನ್ನು ವಿಸರ್ಜಿಸಬೇಕೆಂದು ಹೇಳುತ್ತಾನೆ. ಮತ್ತು ಇನ್ನೊಂದು ಪ್ರಸಂಗದಲ್ಲಿ ಪ್ರಧಾನ ಮಂತ್ರಿಯು ಒಂದು ಪತ್ರ ಬರೆದು ಸಂಸತ್ತನ್ನು ವಿಸರ್ಜಿಸತಕ್ಕದೆಂದು ತಿಳಿಸುತ್ತಾನೆ. ಇವೆರಡರಲ್ಲಿ ಯಾವ ಅಂತರವು ಇದೆಯೆಂಬುದು ನನಗೆ ತಿಳಿಯದಾಗಿದೆ. ಪ್ರೊ. ಶಹಾ ಅವರು ತಮ್ಮ ಭಾಷಣದಲ್ಲಿ ಪ್ರಧಾನಮಂತ್ರಿಗಳಿಂದ ಲಿಖಿತದಲ್ಲಿ ಈ ದಾಖಲೆಯನ್ನು ಸಂಸತ್ತನ್ನು ವಿಸರ್ಜಿಸುವ ಮೊದಲು ಪಡೆಯುವುದರ ಯಾವ ಉದೇಶ ಸಾಫಲ್ಯವಾಗುತ್ತದೆಂದು ಹೇಳಿಲ್ಲ. ಆದ್ದರಿಂದ ನಾನು ಇದರ ಮೇಲೆ ಯಾವುದೇ ಟೀಕೆ ಟಿಪ್ಪಣೆ ಮಾಡುವ ಅವಶ್ಯಕತೆ ಇಲ್ಲ. ಪ್ರೊ. ಕೆ.ಟಿ. ಶಹಾ ಅವರ ಉದ್ದೇಶವು ಪ್ರಧಾನಮಂತ್ರಿಗಳು ನಿರಂಕುಶವಾಗಿ ಮನಬಂದಂತೆ ವರ್ತಿಸಿ ಸಂಸತ್ತನ್ನು ವಿಸರ್ಜಿಸಬೇಕೆಂದು ಕೇಳಿದರೆ, ಆ ಉದ್ದೇಶವನ್ನು ಈಗಿರುವ ರೂಢಿಕ್ರಮಗಳಂತೆ ಕೈಗೊಳ್ಳಲಾಗುತ್ತದೆಂದು ಭಾವಿಸುತ್ತೇನೆ. ಅರಸನಿಗೆ ಸಂಸತ್ತನ್ನು ವಿಸರ್ಜಿಸುವ ಅಧಿಕಾರ ಇರುತ್ತದೆ. ಅವನು ಸಾಮಾನ್ಯವಾಗಿ ಪ್ರಧಾನಮಂತ್ರಿಗಳ ಸಲಹೆ ಮೇರೆಗೆ ವಿಸರ್ಜಿಸುತ್ತಾನೆ. ಆದರೆ ಒಂದು ಕಾಲಕ್ಕೆ, ನಿಶ್ಚಿತವಾಗಿ ಮಕಾಲೆ ಇಂಗ್ಲೀಷರ ಇತಿಹಾಸವನ್ನು ಬರೆಯುವಾಗ ಕಾಲಕ್ಕೆ ಅವನು ಸಂಸತ್ತನ್ನು ವಿಸರ್ಜಿಸುವ ಹಕ್ಕಿನ ತತ್ವವನ್ನು ಪ್ರತಿಪಾದಿಸಿದನು. ಅದರ ಸ್ಥಿತಿಯು ಹೀಗೆ ಇದ್ದಿತು. ಎಲ್ಲ ರಾಜಕಾರಣಿಗಳು ಇದಕ್ಕೆ ಒಪ್ಪಿದ್ದೇನೆಂದರೆ ರೂಢಿ, ಸಂಪ್ರದಾಯದ ಪ್ರಕಾರ ಅವರು ತಿಳಿದುಕೊಂಡಂತೆ ಒಪ್ಪಲೇಬೇಕಾಗಿಲ್ಲ. ಅರಸನಿಗೆ ಬೇಕಾದರೆ ವಿರೋಧಿ ಪಕ್ಷದ ಧುರೀಣರೊಂದಿಗೆ ಆಲೋಚಿಸಬಹುದು. ಮತ್ತು ಅವರು ಸರಕಾರವನ್ನು ರಚಿಸಲು ಸಿದ್ಧನಿದ್ದರೆ ಸಂಸತ್ತನ್ನು ವಿಸರ್ಜಿಸಬೇಕೆಂಬ ಪ್ರಧಾನಮಂತ್ರಿಗಳ ನೆಲೆಯನ್ನು ಕಿತ್ತುಹಾಕಬಹುದು. ವಿರೋಧಿ ಪಕ್ಷದ ಧುರೀಣರು ಸರಕಾರದ ಸ್ಥಾನವನ್ನು ವಹಿಸಿಕೊಳ್ಳಬಹುದು ಮತ್ತು ಅದೇ ಸಂಸತ್ತಿನ ಸಂಗಡ ತಮ್ಮ ಕಾರ್ಯಗಳನ್ನು ಸಂಸತ್ತನ್ನು ವಿಸರ್ಜಿಸದಂತೆ ನಡೆಯಿಸಿಕೊಂಡು ಹೋಗಬಹುದು.

ಅವನು ಸಂಸತ್ತನ್ನು ವಿಸರ್ಜಿಸದೆ ಮತ್ತೊಬ್ಬ ಸದಸ್ಯನನ್ನು ಸಹ ಅರಸನು ಆರಿಸಿಕೊಳ್ಳಬಹುದು ಆದರೆ ಅವನು ಸರಕಾರದ ಆಡಳಿತದ ಹೊಣೆಯನ್ನು ಹೊತ್ತುಕೊಂಡು ನಡೆಸಲು ಸಿದ್ಧನಿದ್ದರೆ ಅರಸನು ವಿರೋಧಿ ಪಕ್ಷದ ಧುರೀಣನು ಈ ಹೊಣೆ ಹೊರಲು ಆಡಳಿತ ನಡೆಯಿಸಿಕೊಂಡು ಹೋಗಲು ತಪ್ಪಿದರೆ

ಆಗ ಅವನು ಸಂಸತ್ತನ್ನು ವಿಸರ್ಜಿಸಲಿಕ್ಕೆ ಬೇಕು. ಅದೇ ರೀತಿ ಭಾರತದ ರಾಷ್ಟ್ರಪತಿಯು ಸಂಸತ್ತಿನ ಮನಸ್ಸನ್ನು ಪರೀಕ್ಷಿಸಬೇಕು, ಸಂಸತ್ತನ್ನು ವಿಸರ್ಜಿಸತಕ್ಕದ್ದು, ಇಲ್ಲವೆ ಸಂಸತ್ತಿನ ವ್ಯವಹರಣೆಗಳು ವಿಸರ್ಜಿಸದೇ ಹಾಗೆಯೇ ಮತ್ತೊಬ್ಬ ಮುಖಂಡನ ಮೂಲಕ ನಡೆಯಿಸಬೇಕೆಂದು ಕೇಳತಕ್ಕದ್ದು. ಬೇರೆ ಪರ್ಯಾಯ ಮಾರ್ಗವೇ ಇಲ್ಲವೆಂಬ ಭಾವನೆಯು ಬಂದರೆ ಸಂಸತ್ತನ್ನು ವಿಸರ್ಜಿಸದೆ ಬೇರೆ ಮಾರ್ಗವಿರದಿದ್ದರೆ ಅವನು ಸಂವಿಧಾನದ ಅಧ್ಯಕ್ಷನಾಗಿ ನಿಸ್ಸಂಶಯವಾಗಿ ಸಂಸತ್ತನ್ನು ವಿಸರ್ಜಿಸಬೇಕೆಂಬ ಪ್ರಧಾನಮಂತ್ರಿಗಳ ಸಲಹೆಯನ್ನು ಒಪ್ಪಿಕೊಳ್ಳುತ್ತಾನೆ. ಆದ್ದರಿಂದ ನನಗೆ ಕಂಡಂತೆ ಒಂದು ಲಿಖಿತ ದಾಖಲೆ ಸಂಸತ್ತನ್ನು ವಿಸರ್ಜಿಸುವ ಕಾರಣಗಳನ್ನು ಕಾಣಿಸಿ ಪ್ರಧಾನ ಮಂತ್ರಿಯು ಸಂಸತ್ತನ್ನು ವಿಸರ್ಜಿಸಬೇಕೆಂಬ ಲಿಖಿತ ಹೇಳಿಕೆ ಉಪಯೋಗವಿಲ್ಲದ್ದು ಮತ್ತು ಕಾಗದದಲ್ಲಿ ಕಾಣಿಸುವಷ್ಟು ಯೋಗ್ಯವಾಗಿಲ್ಲ. ರಾಷ್ಟ್ರಪತಿಗಳಿಗೆ ಸಂಸತ್ತಿನ ಭಾವನೆಯನ್ನು ಪರೀಕ್ಷಿಸಿ ತಿಳಿದುಕೊಳ್ಳಲು ಬೇರೆ ಮಾರ್ಗಗಳಿಗೆ ಮತ್ತು ಪ್ರಧಾನ ಮಂತ್ರಿಯು ಸಂಸತ್ತನ್ನು ವಿಸರ್ಜಿಸಬೇಕೆಂಬುದು ಸದ್ಭಾವನೆಯಿಂದ ಕೂಡಿದ ಕಾರಣಗಳಿವೆ ಇಲ್ಲವೆ ಕೇವಲ ಪಾರ್ಟಿಯ ಉದ್ದೇಶಕ್ಕಾಗಿ ಇದೆಯೇ ಎಂಬುದನ್ನು ತಿಳಿಯತಕ್ಕದ್ದು ನಾವು ರಾಷ್ಟ್ರಪತಿಗಳನ್ನು ನಂಬಬೇಕು ಅವರು ತೆಗೆದುಕೊಂಡ ನಿರ್ಣಯ ಪಕ್ಷದ್ದೋ ಇಲ್ಲವೇ ಸಂಸತ್ತಿನ ಮುಖಂಡರು ಒಟ್ಟಾರೆ ತೆಗೆದುಕೊಂಡಿದ್ದೋ ನಿರ್ಣಯಿಸಬೇಕು. ಆದ್ದರಿಂದ ಈ ತಿದ್ದುಪಡಿಯನ್ನು ಸ್ವೀಕರಿಸತಕ್ಕದ್ದಲ್ಲವೆಂದು ನನ್ನ ಅಭಿಮತ.

**ಮಾನ್ಯ ಅಧ್ಯಕ್ಷರು :** ನಾನು ಈಗ ತಿದ್ದುಪಡಿಯನ್ನು ಒಂದರ ನಂತರ ಒಂದರಂತೆ ಮತಕ್ಕೆ ಹಾಕುತ್ತೇನೆ (ಎಲ್ಲಾ ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟಿವೆ). ವಿಧಿ ೬೯ ಇದನ್ನು ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ ೭೧

**ಸನ್ಮಾನ್ಯ ಬಿ.ಆರ್. ಅಂಬೇಡ್ಕರ್ :** ಪ್ರೊ. ಕೆ.ಟಿ. ಶಹಾ ಅವರು ತಾವು ಬಳಸಿದ ಪದಗಳಲ್ಲಿ ತಾವು ಏನನ್ನು ಸ್ಪಷ್ಟವಾಗಿ ಕಾಣಿಸಬೇಕೆಂದಿದ್ದಾರೆ ಎಂದರೆ ನನ್ನ ವಿಚಾರದಲ್ಲಿ ಈ ಪದಸರಣಿ ಮಾತಿನ ಜೋಡಣೆ ಅದರ ಕಾರಣಗಳು 'ನನಗೆ ಅನಿಸಿದಂತೆ ಈ ಪದಗಳು ಸಾಕಷ್ಟು ವಿಶಾಲವಾಗಿದೆ ಇದು ಎಲ್ಲವನ್ನೂ ಒಳಗೊಳ್ಳುತ್ತದೆ. ಪ್ರೊ. ಕೆ.ಟಿ. ಶಹಾ ಅವರಿಗೆ ಏನು ಬೇಕಾಗಿದೆ ಎಂಬುದನ್ನು ನಾನು ಹೇಳಬೇಕೆಂದರೆ ಈ ಪದ ಜೋಡಣೆ ಉದಾಹರಣೆ ಮಾತಿನ ಜೋಡಣೆ' "ಭಾಷಣ ಮಾಡಿ" ಯಾವ ಕಾರಣಗಳಿಗಾಗಿ ಸಂಸತ್ತನ್ನು ಕರೆಯಲಾಗಿದೆ ಎಂಬ ಪದಗಳನ್ನು ಬ್ರಿಟಿಷ್ ಸಂಸತ್ತಿನಲ್ಲಿ ಉಪಯೋಗಿಸಲಾಗಿದೆ. ಪ್ರೊ. ಶಹಾ ಅವರಿಗೆ ಕ್ಯಾಂಪಿಯಾನ್ ಅವರ ಪುಸ್ತಕ 'ಹೌಸ್ ಆಫ್ ಕಾಮನ್ಸ್'ದ ನಿಯಮಗಳು, ಈ ಪುಸ್ತಕದಲ್ಲಿ ಸಿಗುವುದೇನೆಂದರೆ ಒಂದು ಯೋಗ್ಯ ಪದ ಜೋಡಣೆಗಳೊಂದಿಗೆ ಬಹಳಷ್ಟು ಹುಡುಕಿದ ನಂತರ ಯೋಗ್ಯ ಪದ ಜೋಡಣೆ. ನಾವು ಸುದೈವಿಗಳು. ಯಾಕೆಂದರೆ ನಮಗೆ ಈ ಪದ ಜೋಡಣೆ ಸಿಕ್ಕಿದೆ. ಈ ಪದ ಜೋಡಣೆಯಲ್ಲಿ ಕಾಂಪೇನಿಯನ್ ಹಾಗೆ ನಾನು ಇದು ಒಳ್ಳೆ ಪದ ಜೋಡಣೆಯೆಂದು ತಿಳಿಯುತ್ತೇನೆ. ಅವು ಇರಲಿಕ್ಕೆಬೇಕು. ಯಾಕೆಂದರೆ ಅವು ಪ್ರೊ. ಕೆ.ಟಿ. ಶಹಾ ಅವರು ಹೇಳುವುದೆಲ್ಲವೂ ಒಳಗೊಂಡಿದೆ.

ಪ್ರೊ. ಕೆ.ಟಿ. ಶಹಾ ಅವರು ಹೇಳುವುದೇನೆಂದರೆ ರಾಷ್ಟ್ರಪತಿಗಳಿಗೆ ಕೂಡಾ ಸಂದೇಶ ಕಳುಹಿಸುವ ವ್ಯವಸ್ಥೆಯು ಇರತಕ್ಕದ್ದು. ಇಲ್ಲವೆ ಸಂಸತ್ತನ್ನು ಉದ್ದೇಶಿಸಿ ಭಾಷಣ ಮಾಡುವುದು ನಾವು ವಿಚಾರಿಸಿದಂತೆ ಅಲ್ಲೇ ನಿಶ್ಚಿತ ವ್ಯವಸ್ಥೆ ವಿಧಿ ೭೦ರಲ್ಲಿದೆ. ನಾವು ಇದೀಗ ಅದನ್ನು ಪಾಸು ಮಾಡಿದ್ದೇವೆ. ಇದರಿಂದ ರಾಷ್ಟ್ರಪತಿಗಳು ಸಂಸತ್ತಿನ ಎರಡು ಸದನಗಳನ್ನು ಉದ್ದೇಶಿಸಿ ಭಾಷಣವನ್ನು ಮಾಡಬಹುದು ಮತ್ತು

ಸಂದೇಶಗಳನ್ನು ಸಹ ಕಳುಹಿಸಬಹುದು, ಈ ಸಂದೇಶವು ಯಾವದಾದರೊಂದು ನಿರ್ದಿಷ್ಟ ಮಸೂದೆಯನ್ನು ಕುರಿತು ಇಲ್ಲವೆ ಬೇರೆ ಯಾವುದೇ ವ್ಯವಹರಣೆಗಳು ಸಂಸತ್ತಿನ ಮುಂದೆ ಇರುವುದರ ಬಗ್ಗೆ ಸಂದೇಶ ಕಳುಹಿಸಬಹುದು, ವಿಧಿ ೭೦ರಲ್ಲಿ ಇರುವುದಕ್ಕಿಂತ ಹೆಚ್ಚಿನದೇನೂ ಅವಶ್ಯವಿಲ್ಲವೆಂದು ನಾನು ತಿಳಿಯುತ್ತೇನೆ, ರಾಷ್ಟ್ರಪತಿಗಳ ಸ್ವತಂತ್ರ್ಯ ಹಕ್ಕು ಸಂಸತ್ತನ್ನು ಉದ್ದೇಶಿಸಿ ಮಾತನಾಡುವುದನ್ನು ಕುರಿತು ಸಾಕಷ್ಟು ವ್ಯವಸ್ಥೆಯಲ್ಲಿ ವಿಧಿ ೭೦ರಲ್ಲಿ ಮಾಡಿಕೊಡಲಾಗಿದೆ. ಆದ್ದರಿಂದ ನಾನು ವಿಚಾರಿಸುವುದೇನೆಂದರೆ ಈ ತಿದ್ದುಪಡಿಯ ಅವಶ್ಯಕತೆ ಇಲ್ಲವೇ ಇಲ್ಲ.

(ಪ್ರೊ. ಕೆ.ಟಿ. ಶಹಾ ರವರ ಒಂದೇ ಒಂದು ತಿದ್ದುಪಡಿಯೂ ತಿರಸ್ಕರಿಸಲ್ಪಟ್ಟಿತು ವಿಧಿ ೭೧ ಇದನ್ನು ಸಂವಿಧಾನದಲ್ಲಿ ಸೇರಿಸಲಾಯಿತು)

## ವಿಧಿ ೭೨

**ಸನ್ಮಾನ್ಯ ಡಾ|| ಬಿ.ಆರ್. ಅಂಬೇಡ್ಕರ್ :** ಮಾನ್ಯರೆ. ವಿಧಿ ೭೨ರಲ್ಲಿ ಒಳಗೊಂಡ ಉದ್ದೇಶವನ್ನು ಪ್ರೊ. ಶಹಾ ಅವರು ಸರಿಯಾಗಿ ತಿಳಿದುಕೊಂಡಿಲ್ಲವೆಂದು ನಾನು ತಿಳಿಯುತ್ತೇನೆ. ಈ ವಿಷಯವು ಸುಸ್ಪಷ್ಟವಾಗಲು ನಾನು ಕೆಲವು ಸರಳ ಮೂಲಭೂತ ಪ್ರಸ್ತಾವನೆಗಳಿಂದ ಪ್ರಾರಂಭಿಸಬಹುದು. ಪ್ರತಿಯೊಂದು ಸದನ ಸ್ವತಂತ್ರ್ಯ ಸದನವಾಗಿದೆ. ಹಾಗೆಂದರೆ ಈ ಸದನದ ಸದಸ್ಯನನ್ನು ಆ ಸದನದ ಒಳಗಡೆ ಬಿಡುವುದಿಲ್ಲ. ಹಾಗೂ ಸದನದ ವ್ಯವಹರಣೆಯಲ್ಲಿ ಭಾಗವಹಿಸಲು ಇಲ್ಲವೆ ಅದರ ಚರ್ಚೆಯ ಕೊನೆಗೆ ವ್ಯವಹರಣೆಯ ಬಗ್ಗೆ ಮತ ಚಲಾಯಿಸಲು ಹಕ್ಕುಳ್ಳ ಜನರೆಂದರೆ ಆ ಸದನದ ಸದಸ್ಯರು ಮಾತ್ರ. ನಮಗೆ ಈಗ ಒಂದು ಅಸಂಗತ ಪ್ರಸಂಗವಿದೆ. ಅದೆಂದರೆ ಕೇಂದ್ರದಲ್ಲಿ ಎರಡು ಸದನಗಳಿವೆ. ಮೇಲಿನ ಮನೆ (ರಾಜ್ಯಸಭೆ) ಮತ್ತು ಕೆಳಗಿನ ಮನೆ (ಲೋಕಸಭೆ). ಯಾವ ಒಬ್ಬ ಸದಸ್ಯನ ಮಂತ್ರಿಯಾಗಿ ನೇಮಿಸಲ್ಪಟ್ಟಿರುವನೋ ಅವನು ಕೆಳಗಿನ ಮನೆಯ ಸದಸ್ಯನಾಗಿರುವನು. ಅವನು ಯಾವುದೊಂದು ನಿರ್ದಿಷ್ಟ ಮಸೂದೆಯ ಅಧಿಕಾರದಲ್ಲಿ ಇರುವ ಸಾಧ್ಯತೆ ಬಹಳಷ್ಟು ಇದೆ. ಇದು ಸ್ಪಷ್ಟವಾಗಿ ಕೆಳಗಿನ ಮನೆಯಲ್ಲಿಯೂ ಪಾಸಾಗುವಂತೆ ಅದು ಮೇಲಿನ ಮನೆಯಲ್ಲಿಯೂ ಪಾಸಾಗಬೇಕು. ಅದರ ಪರಿಣಾಮವಾಗಿ ಆ ಮಸೂದೆಯ ಅಧಿಕಾರದಲ್ಲಿರುವ ಸದಸ್ಯನು ಕೆಳಗಿನ ಸದನದ ಸದಸ್ಯನಾಗಿದ್ದರೆ ಅವನು ಸಾಮಾನ್ಯವಾಗಿ ಮೇಲಿನ ಮನೆಯಲ್ಲಿ ಕಾಣಿಸಿಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲ. ಮತ್ತು ಆ ಮಸೂದೆಯು ಪಾಸಾಗಲು ಕೆಲವು ವಿಶೇಷ ವ್ಯವಸ್ಥೆಯನ್ನು ಮಾಡಲಾಗಿದೆ. ಕೆಳಗಿನ ಸದನದ ಯಾವ ಸದಸ್ಯನು ಮಂತ್ರಿಯಾಗಿ ಆ ಮಸೂದೆಯನ್ನು ನಿರ್ವಹಿಸುವನೋ ಅಂತಹ ಸದಸ್ಯನು ಮೇಲಿನ ಸದನಕ್ಕೆ ಪ್ರವೇಶಿಸಲು ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಲು, ಸದನದ ಉದಾಹರಣೆಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ವಿಧಿ ೭೨ನ್ನು ಪಾಸುಮಾಡಲಾಗಿದೆ. ವಿಧಿ ೭೨ ನಿಜವಾಗಿಯೂ ಸಾಮಾನ್ಯ ನಿಯಮಕ್ಕೆ ಅಪವಾದವಾಗಿದೆಯೆಂದರೆ ಒಬ್ಬ ಸದಸ್ಯನು ಸಂಸತ್ತಿನ ಆ ಸದನದ ಸದಸ್ಯನಾಗಿರದ ಹೊರತು ಆ ಸದನದ ವ್ಯವಹರಣೆಗಳಲ್ಲಿ ಭಾಗವಹಿಸಲಾರನು. ಆ ಮಂತ್ರಿಯು ಮೇಲಿನ ಸದನದ ಸದಸ್ಯನಾಗಿದ್ದರೆ ಅವನಿಗೆ ಕೆಳಗಿನ ಸದನಕ್ಕೆ. ಹೋಗಲು, ಸದಸ್ಯರನ್ನು ಉದ್ದೇಶಿಸಿ ಮಾತನಾಡಲು ಮತ್ತು ಆ ಮಸೂದೆಯು ಪಾಸಾಗುವಂತೆ ಮಾಡಲು ಕ್ರಮ ಕೈಗೊಂಡಿದೆ. ಅದರಂತೆ ಒಬ್ಬ ಕೆಳಗಿನ ಸದನದ ಸದಸ್ಯನಿಗೂ ಮೇಲಿನ ಸದನಕ್ಕೆ ಹೋಗಲು ಅಧಿಕಾರವಿದೆ, ಸದಸ್ಯರನ್ನು ಉದ್ದೇಶಿಸಿ

ಮಾತನಾಡಲು ಮತ್ತು ಆ ಮಸೂದೆಯು ಪಾಸಾಗುವಂತೆ ಮಾಡಲು ಅಧಿಕಾರವಿದೆ. ಇಂತಹ ವಿಷಯಕ್ಕಾಗಿ ವಿಧಿ ೭೨ನ್ನು ಪಾಸುಮಾಡಲಾಗಿದೆ. ಇದು ಅಟಾರ್ನಿ ಜನರಲ್ ಅವರಿಗೂ ಅನ್ವಯಿಸುತ್ತದೆ. ಅಟಾರ್ನಿ ಜನರಲ್ ಅವರು ಕೆಳಗಿನ ಸದನದ ಸದಸ್ಯರಾಗಬಹುದು ಅವರು ಮೇಲಿನ ಸದನಕ್ಕೂ ಹೋಗಬಹುದು. ಆದರೆ ಕೆಳಗಿನ ಸದನದ ಸದಸ್ಯನಾಗಿದ್ದು ಅವರಿಗೆ ಕಾನೂನು ಬದ್ಧವಾದ ಮೇಲಿನ ಸದನಕ್ಕೆ ಹೋಗಲು ಹಕ್ಕಿಲ್ಲ. ಅದರ ಪರಿಣಾಮವಾಗಿ ಅವರಿಗೆ ಕಾನೂನು ಬದ್ಧವಾಗಿ ಹಕ್ಕು ಉಂಟಾಗಲು ಅವರು ಮೇಲಿನ ಸದನವನ್ನು ಪ್ರವೇಶಿಸಲು ಸದಸ್ಯರನ್ನು ಉದ್ದೇಶಿಸಿ ಮಾತನಾಡಲೆಂಬ ಉದ್ದೇಶದಿಂದ ಇದನ್ನು ಮಾಡಲಾಗಿದೆ. ನಾವು ಈ ಹಕ್ಕನ್ನು ಸದನದ ವ್ಯವಹರಣೆಗಳಲ್ಲಿ ಭಾಗವಹಿಸಲು ಮಾತ್ರ ಸೀಮಿತಗೊಳಿಸಲಾಗಿದೆ.

ಆದ್ದರಿಂದ ವ್ಯವಹರಣೆಗಳಲ್ಲಿ ಭಾಗವಹಿಸಿದ ಬೇರೆ ಸದನದ ಸದಸ್ಯರಿಗೆ ಮತ ಚಲಾಯಿಸಲು ಯಾವುದೇ ಮಂತ್ರಿಗೆ ಅಧಿಕಾರ ಕೊಟ್ಟಿಲ್ಲ, ಯಾಕೆಂದರೆ ಮತ ಚಲಾಯಿಸುವ ಅಧಿಕಾರವು ಅವನಿಗೆ ಸದನದಲ್ಲಿ ಹಾಜರಾಗಿ ವ್ಯವಹರಣೆಗಳಲ್ಲಿ ಭಾಗವಹಿಸಲು ಅವಶ್ಯವೆಂದು ನಾವು ಭಾವಿಸುವುದಿಲ್ಲ. ಒಂದು ನಿರ್ದಿಷ್ಟ ಮಸೂದೆಗೆ ಸಂಬಂಧಿಸಿ ಆ ಸದನವನ್ನು ಪ್ರವೇಶಿಸಿ ಅದರ ವ್ಯವಹರಣೆಗಳಲ್ಲಿ ಭಾಗವಹಿಸಲು ಮತ ಚಲಾಯಿಸುವ ಹಕ್ಕು ಅವಶ್ಯವೆಂದು ನಾವು ಭಾವಿಸುವುದಿಲ್ಲ. ನನ್ನ ಗೆಳೆಯರು ಸಹ ಅದನ್ನೇ ಹೇಳಿದ್ದೇನೆಂದರೆ 'ಮಂತ್ರಿ' ಎಂಬ ಈ ಪದವನ್ನು ಕೈಬಿಡಲಿಕ್ಕೇ ಬೇಕು ಮತ್ತು 'ಆರಿಸಿದ ಮನುಷ್ಯ' ಈ ಪದಗಳನ್ನು ಸೇರಿಸತಕ್ಕದ್ದು. ಆದರೆ ಇದು ಪುನಃ ತೊಂದರೆಯನ್ನುಂಟುಮಾಡುತ್ತದೆ. ಯಾಕೆಂದರೆ ನಮ್ಮ ಸಂವಿಧಾನದ ಕೆಲವು ಭಾಗದಲ್ಲಿ ಹೇಳಿದ್ದೇನೆಂದರೆ ಯಾವ ಒಬ್ಬ ಮನುಷ್ಯನು ಸದನದ ಚುನಾಯಿತ ಸದಸ್ಯನಿರುವುದಿಲ್ಲವೋ ಅವನನ್ನು ಸಹ ಮಂತ್ರಿಯಾಗಿ ಕೆಲವು ಅವಧಿಗೆ ನೇಮಿಸಬಹುದು. ಇಂತಹ ಮನುಷ್ಯನಿಗೂ ಅನುಕೂಲವಾಗಲು 'ಮಂತ್ರಿ' ಈ ಪದವನ್ನು ಬಳಸುವುದು ಅವಶ್ಯವಿದೆ. ಆದರೆ 'ವ್ಯಕ್ತಿ' ಎಂಬ ಈ ಪದವನ್ನಲ್ಲ. ಇದೇ ಕಾರಣಕ್ಕಾಗಿ 'ಮಂತ್ರಿ' ಎಂಬ ಈ ಪದದ ಅವಶ್ಯಕತೆಯು ಈ ಸಂದರ್ಭದಲ್ಲಿ ತುಂಬಾ ಅವಶ್ಯವಿದೆ. ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

(ಪ್ರೊ. ಕೆ.ಟಿ. ಶಹಾ ಅವರ ತಿದ್ದುಪಡಿಯು ತಿರಸ್ಕೃತವಾಯಿತು. ವಿಧಿ ೭೨ ಇದನ್ನು ಸಂವಿಧಾನದಲ್ಲಿ ಸೇರಿಸಲಾಗಿದೆ.)

*****

## ವಿಧಿ ೭೩

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** (ಬಾಂಬೆ: ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯರೆ, ಶ್ರೀ ನಜೀರುದ್ದೀನ ಅಹ್ಮದ್ ಅವರು ತಂದ ತಿದ್ದುಪಡಿಯು ಸಂಪೂರ್ಣವಾಗಿ ಅಸಂಬದ್ಧವಾದುದೆಂದು ಹೇಳದೇ ಬೇರೆ ಮಾರ್ಗವೇ ಇಲ್ಲ. ಇದು ಸಂಪೂರ್ಣವಾಗಿ ಏನು ಹೇಳುತ್ತದೆಂಬುದು ತಪ್ಪು ಕಲ್ಪನೆಯಿಂದ ಕೂಡಿದ್ದಾಗಿದೆ. ಒಬ್ಬ ಮನುಷ್ಯ ಒಂದೇ ಸ್ಥಾನಕ್ಕೆ ಮರು ಚುನಾವಣೆ ಮತ್ತು ಹೊಸ ಚುನಾವಣೆ ಇವುಗಳಲ್ಲಿ ಅಂತರವಿದೆ ಎಂಬುದು ತಪ್ಪು ತಿಳುವಳಿಕೆಯಿಂದ ಕೂಡಿದ್ದೆಂದು ನಾನು ಭಾವಿಸುತ್ತೇನೆ. ಈ ವಿಧಿ ೭೪ ರಲ್ಲಿ ನಾವು ವ್ಯವಹರಿಸುವುದೇನೆಂದರೆ ಅದು ಒಂದು ಹೊಸ ಚುನಾವಣೆಯ ಕುರಿತು ಇರುತ್ತದೆ. ಒಂದು ಸ್ಥಾನವು ಅನೇಕ ಸಂದರ್ಭಗಳ ವಿಧಿ ೭೪ರಲ್ಲಿ ಕಾಣಿಸಿದೆ. ಕಾರಣಗಳ ಪರಿಣಾಮವಾಗಿ ಹೊಸ ಚುನಾವಣೆಯು ನಡೆಯುತ್ತದೆ. ವಿಧಿ ೭೪ರ ಕಾರಣದಿಂದಾಗಿ ಅದೇ ಮನುಷ್ಯನ ಸದನದ ಸದಸ್ಯತ್ವವು ಮುಕ್ತಾಯವಾಗುತ್ತದೆ.

ಮತ್ತು ಸ್ಪಷ್ಟವಾಗಿ ಸದನದ ಸದಸ್ಯತ್ವ ಮುಕ್ತಾಯಗೊಂಡಂತಹ ಆ ಸದಸ್ಯನನ್ನು ಚುನಾಯಿಸಬಹುದೆಂದು ಹೇಳಲಿಕ್ಕಾಗದು. ಒಬ್ಬ ಸದಸ್ಯನೆಂದರೆ ಅದೇ ಮನುಷ್ಯ ಆ ಸ್ಥಾನವನ್ನು ಹೊಂದಿದ್ದನು. ಅದರ ಪರಿಣಾಮವಾಗಿ ಆ ಸಂದರ್ಭದಲ್ಲಿ ಯೋಗ್ಯ ಪದಗಳ ಜೋಡಣೆ ಎಂದರೆ "ಮತ್ತೊಬ್ಬ ಸದಸ್ಯ" ಎಂಬ ಪದ ಬಳಸಲಾಗಿದೆ. ವಿಧಿ ೭೪ರಲ್ಲಿ ಅವನು ಅನರ್ಹನಾಗುತ್ತಾನೆ. ಆದ್ದರಿಂದ ವಿಧಿ ೭೩ರಲ್ಲಿಯ ಪದಗಳು ಸಂಪೂರ್ಣವಾಗಿ ಯೋಗ್ಯವಾಗಿದೆ. ನಾನು ಇಲ್ಲಿ ಹೇಳುವುದೇನೆಂದರೆ ಒಬ್ಬ ಸದಸ್ಯನ ಸದಸ್ಯತ್ವದ ಅವಧಿ ಮುಗಿದುದರಿಂದ ಅವನನ್ನು ಪುನಃ ಚುನಾಯಿಸಬಹುದು. ಯಾಕೆಂದರೆ ಅವನು ಮತ್ತೊಬ್ಬ ವ್ಯಕ್ತಿಯಾಗುತ್ತಾನೆ.

(ಶ್ರೀ ನಜೀರುದ್ದೀನ ಅಹ್ಮದ್ ಅವರು ತಂದ ತಿದ್ದುಪಡಿಯು ತಿರಸ್ಕೃತವಾಯಿತು. ವಿಧಿ ೭೩ ಇದನ್ನು ಸಂವಿಧಾನದಲ್ಲಿ ಸೇರಿಸಲಾಯಿತು.)

## ವಿಧಿ ೭೫ ಎ

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ಸನ್ಮಾನ್ಯರೆ, ಶ್ರೀ ಕಾಮತ್ ಅವರು ಎತ್ತಿ ತೋರಿಸಿದಂತೆ ಅಲ್ಲಿ ಯಾವ ತೊಂದರೆಯೂ ಕಾಣುವ ಸಂಭವವೂ ಇಲ್ಲ. ಅಲ್ಲಿ ಯಾವ ರೀತಿಯ ಲೋಪ ದೋಷವೂ ಇಲ್ಲ. ಆ ಪರಿಸ್ಥಿತಿಯು ಹೀಗಿದೆ. ಅಧ್ಯಕ್ಷರು ಚೇರಮನ್ನರು ವಿಚಾರಣೆ ನಡೆಯಲ್ಪಟ್ಟರೆ ಹೇಳಬೇಕೆಂದರೆ – ನಾನು ಜನಪ್ರಿಯ ಪದಜೋಡಣೆಗಳನ್ನು ಉಪಯೋಗಿಸಿದ್ದೇನೆ– ಆಗ ಅವನು ಹಾಜರಿದ್ದಾಗ್ಯೂ ಉಪ ಸಭಾಪತಿ ಸಭೆಯ ಅಧ್ಯಕ್ಷತೆಯನ್ನು ವಹಿಸುವರು. ಉಪಾಧ್ಯಕ್ಷರನ್ನೂ ವಿಚಾರಣೆ ಗುಣಪಡಿಸಿದರೆ ಅಧ್ಯಕ್ಷರು ಸಭೆಯ ಅಧ್ಯಕ್ಷತೆಯನ್ನು ವಹಿಸಲು ಹಾಜರಿರದಿದ್ದರೆ ಆಗ ಹೊಸ ಖಂಡವು ಏನು ಹೇಳುತ್ತದೆಂದರೆ ವಿಧಿ ೭೫ರ ಖಂಡ(೨) ಇದು ಅನ್ವಯಿಸುತ್ತದೆ. ವಿಧಿ ೭೫ರ ಖಂಡ (೨) ಹೀಗೆ ಹೇಳುತ್ತದೆ. 'ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಇಲ್ಲವೆ ಉಪಾಧ್ಯಕ್ಷರ ರಾಜ್ಯಸಭೆಯಲ್ಲಿ ಅಂತಹ ಯಾವುದೇ ಮನುಷ್ಯನಿರದಿದ್ದರೆ ರಾಜ್ಯಸಭೆಯ ನಿಯಮಗಳ ಅನ್ವಯ ಗೊತ್ತುಪಡಿಸಬಹುದಾದ ರೀತಿಯಲ್ಲಿ ಇಲ್ಲವೆ ಅಂತಹ ಯಾವುದೇ ಮನುಷ್ಯನು ಹಾಜರಿರದಿದ್ದರೆ, ಆಗ ರಾಜ್ಯಸಭೆಯು ನಿರ್ಧರಿಸಿದ ಅಂತಹ ಮನುಷ್ಯನು ಅಧ್ಯಕ್ಷನಾಗತಕ್ಕದ್ದು. ಆದ್ದರಿಂದ ಆ ತೊಂದರೆಯನ್ನು ವಿಧಿ ೭೫ ಖಂಡ (೨)ರಿಂದ ಹೊಸ ವಿಧಿ ೭೫ ಎ ದ ವರೆಗೆ ವ್ಯವಹರಿಸುತ್ತದೆ.'

ಮಾನ್ಯ ಅಧ್ಯಕ್ಷರು : ಪ್ರಶ್ನೆಯು ಹೀಗಿದೆ – (ಪ್ರಸ್ತಾವನೆಯು ಶ್ರೀ ಟಿ.ಟಿ. ಕೃಷ್ಣಮಾಚಾರಿ ಅವರಿಂದ)

ವಿಧಿ ೭೫ರ ನಂತರ ಕೆಳಗಿನ ಹೊಸ ವಿಧಿಯನ್ನು ಸೇರಿಸತಕ್ಕದ್ದು– "೭೫ ಎ ರಾಜ್ಯಸಭೆಯು ನಡೆಯುವ ಯಾವುದೇ ಕಾಲಕ್ಕೆ ಅಧ್ಯಕ್ಷ ಇಲ್ಲವೆ ಉಪಾಧ್ಯಕ್ಷನನ್ನು ಆತನ ಸ್ಥಾನದಿಂದ ತೆಗೆದುಹಾಕಲು ಉಪರಾಷ್ಟ್ರಪತಿಯನ್ನು ಅವನ ಸ್ಥಾನದಿಂದ ತೆಗೆದುಹಾಕಲು ಯಾವುದೇ ಠರಾವು ವಿಚಾರಣೆಯಲ್ಲಿದ್ದರೆ ಉಪಾಧ್ಯಕ್ಷನು ಹಾಜರಿದ್ದರೂ ಅವನು ಸಭಾಧ್ಯಕ್ಷರಾಗಿರತಕ್ಕದ್ದಲ್ಲ ಮತ್ತು ಕೊನೆಯ ಹಿಂದಿನ ವಿಧಿಯ ಖಂಡ (೨) ವ್ಯವಸ್ಥೆಯು ಪ್ರತಿಯೊಂದು ಅಂತಹ ಸಭೆಗೂ ಅನ್ವಯಿಸುತ್ತದೆ. ಪ್ರಸಂಗಾನುಸಾರ ಉಪಾಧ್ಯಕ್ಷನೂ ಹಾಜರಿರದಿದ್ದರೆ."

ಪ್ರಸ್ತಾವನೆಯು ಸ್ವೀಕರಿಸಲ್ಪಟ್ಟಿತು.

ವಿಧಿ ೭೫ ಎ ಇದನ್ನು ಸಂವಿಧಾನದಲ್ಲಿ ಸೇರಿಸಲಾಯಿತು.

## ವಿಧಿ ೭೬

ಮಾನ್ಯ ಅಧ್ಯಕ್ಷರು : ಪ್ರಸ್ತಾವನೆಯು ಹೀಗಿದೆ.
"ವಿಧಿ ೭೬ ಇದು ಸಂವಿಧಾನದ ಒಂದು ಭಾಗವಾಗಿದೆ."

*****

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಕೇವಲ ಉಪಚಾರಕ್ಕಾಗಿ ಈ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ. ಆದರೆ ನಾನು ಕೆಲವು ಷರಾಗಳನ್ನು ಮಾಡುತ್ತೇನೆ. ಈ ನನ್ನ ಇಂತಹ ತಿದ್ದುಪಡಿಯನ್ನು ಡಾ. ಅಂಬೇಡ್ಕರ ಅವರು ಅದು ಅಸಂಬದ್ಧ ಎಂದರು. ನಾನು ವಿನಯದಿಂದ ತಿಳಿಸುವುದೇನೆಂದರೆ ಈ ತಿದ್ದುಪಡಿಯು ಅಸಂಬದ್ಧವಲ್ಲ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಾವು ಈಗಾಗಲೇ ಆ ತಿದ್ದುಪಡಿಯ ಬಗೆಗೆ ಚರ್ಚಿಸಿದ್ದೇವೆ ಮತ್ತು ಇಂತಹದೇ ತಿದ್ದುಪಡಿಯನ್ನು ನನ್ನ ಸನ್ಮಿತ್ರರು ವಿಧಿ ೭೩ಕ್ಕೆ ತಂದಿದ್ದಾರೆ.

* * * * *

## ವಿಧಿ ೭೭

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಸನ್ಮಾನ್ಯರೇ, ನನ್ನ ಸನ್ಮಿತ್ರರಾದ ಶ್ರೀ ಕಾಮತ್ ಅವರು ಪ್ರಸ್ತಾಪಿಸಿದ ತಿದ್ದುಪಡಿಯನ್ನು ನಾನು ಸ್ವೀಕರಿಸಲಾರೆನು. ದಯವಿಟ್ಟು ಕ್ಷಮಿಸಿರಿ. ಈಗ ಇರುವ ವಿಧಿಯು ಒಂದು ಸರಳ ತತ್ವದ ಮೇಲೆ ನಿಂತಿದೆ. ಅದು ಹೀಗೆ ಇದೆ. ಸಾಮಾನ್ಯವಾಗಿ ಒಬ್ಬ ಮನುಷ್ಯನು ತನ್ನ ರಾಜೀನಾಮೆಯನ್ನು ಆತನನ್ನು ನೇಮಕ ಮಾಡಿದವನಿಗೆ ಕೊಡುತ್ತಾನೆ. ಈಗ ಆಧ್ಯಕ್ಷರು ಮತ್ತು ಉಪಸಭಾಪತಿ, ಇವರನ್ನು ನೇಮಿಸಿದವರು ಇಲ್ಲವೆ ಆರಿಸಿದವರು ಇಲ್ಲವೆ ಸದನದಿಂದ ಆರಿಸಲ್ಪಟ್ಟಿದ್ದರೆ, ಈ ಪರಿಣಾಮವಾಗಿ ಈ ಇಬ್ಬರು ತಮ್ಮ ರಾಜೀನಾಮೆಯನ್ನು ಕೊಡಬೇಕಾದರೆ ತಮ್ಮ ರಾಜೀನಾಮೆ ಪತ್ರವನ್ನು ಯಾವ ಸದನವು ಆರಿಸಿದೆಯೋ ಆ ಸದನದ ಅಧಿಕಾರಿಗೆ ಕೊಡಲಿಕ್ಕೇ ಬೇಕು. ನಿಜವಾಗಿಯೂ ಈ ಸದನವು ಸದಸ್ಯರಿಂದ ಕೂಡಿದ ಸಮುದಾಯವಾಗಿದ್ದು ಈ ರಾಜೀನಾಮೆಯನ್ನು ಪ್ರತಿಯೊಬ್ಬ ಪ್ರತ್ಯೇಕವಾಗಿ ಸಂಸತ್ತಿನ ಸದಸ್ಯನಿಗೆ ಸಂಬೋಧಿಸತಕ್ಕದಲ್ಲ. ಆ ಪರಿಣಾಮವಾಗಿ ಯಾವ ವ್ಯವಸ್ಥೆಯನ್ನು ಮಾಡಲಾಗಿದೆಯೆಂದರೆ ರಾಜೀನಾಮೆಯನ್ನು ಅಧ್ಯಕ್ಷರಿಗಾಗಲಿ ಇಲ್ಲವೆ ಉಪಾಧ್ಯಕ್ಷರಿಗಾಗಲಿ ಕಳುಹಿಸತಕ್ಕದ್ದು. ಯಾಕೆಂದರೆ ಅವರು ಸದನವನ್ನು ಪ್ರತಿನಿಧಿಸುತ್ತಾರೆ. ನಿಜ ಹೇಳಬೇಕೆಂದರೆ ತತ್ವಶಃ ಈ ರಾಜೀನಾಮೆಯು ಸದನಕ್ಕೆ ಯಾಕೆಂದರೆ ಸದನವು ಅವರನ್ನು ನೇಮಕ ಮಾಡಿದೆ, ರಾಷ್ಟ್ರಪತಿಯು ಅವರನ್ನು ನೇಮಕ ಮಾಡಿಲ್ಲ. ಆ ಪರಿಣಾಮವಾಗಿ ಅದು ಬಹಳಷ್ಟು ಅಸಂಗತವಾಗಿದೆ. ಉಪ ಸಭಾಪತಿ ಇಲ್ಲವೆ ಅಧ್ಯಕ್ಷರು ತಮ್ಮ ರಾಜೀನಾಮೆಗಳನ್ನು ರಾಷ್ಟ್ರಪತಿಗಳಿಗೆ ಕಳಿಸುವರು. ರಾಷ್ಟ್ರಪತಿಯು ಸಂಸತ್ತನ್ನು ಕುರಿತು ಏನನ್ನೂ ಮಾಡಲಾರರು. ಸಂಸತ್ತು ಕಾರ್ಯಾಂಗದ ಅಧಿಕಾರದಿಂದ ಸ್ವತಂತ್ರವಾಗಿದೆ. ರಾಷ್ಟ್ರಪತಿಗಳು ತಮ್ಮ ಅಧಿಕಾರವನ್ನು ಚಲಾಯಿಸುವುದರಿಂದ ಇಲ್ಲವೆ ಅಂದಿನ ಸರಕಾರದ ಮುಖಾಂತರ ಸಂಸತ್ತನ್ನು ಕುರಿತು ಏನನ್ನೂ ಮಾಡಲು ಸಾಧ್ಯವಿಲ್ಲ.

**ಶ್ರೀ ಹೆಚ್.ವಿ. ಕಾಮತ್ :** ಮಾಹಿತಿ ಪಡೆಯುವ ವಿಷಯ ಕುರಿತು "ಇಂದು ಕೇಂದ್ರ ಶಾಸನ ಸಭೆಯಲ್ಲಿ ಇರುವ ವಿಧಾನವನ್ನು" ಎಂಬುದನ್ನು ಡಾ॥ ಅಂಬೇಡ್ಕರ್‌ರವರಿಂದ ತಿಳಿದುಕೊಳ್ಳಬಹುದೇ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಕ್ರಿಯೆಯು ಇಂದು ತುಂಬಾ ಭಿನ್ನವಾಗಿದೆ. ಅವರು ಇಂದಿನ ಸ್ಥಿತಿಯನ್ನು ಕುರಿತು ಕೇಳುತ್ತಿರುವರೋ?ಅವರು ತಾವು ನಿರ್ಮಿಸಬೇಕೆಂದಿರುವುದನ್ನು ಕುರಿತು ಕೇಳುವಿರೋ. ಭಾರತ ಸರಕಾರದ ಅಧಿನಿಯಮ ಸಂಸತ್ತು ಮತ್ತು ಅಧ್ಯಕ್ಷರು ಗವರ್ನರ್ ಜನರಲ್ ಅವರು ಸೃಷ್ಟಿಸಿದವು. ಅಂದರೆ ಅದರ ಪರಿಣಾಮವಾಗಿ ಅಧ್ಯಕ್ಷರು ತಮ್ಮ ರಾಜೀನಾಮೆಯನ್ನು ಗವರ್ನರ್ ಜನರಲ್ ಅವರಿಗೆ ಸಂಬೋಧಿಸಬೇಕಾಗುತ್ತದೆ. ನಮಗೆ ಅಂತಹ ಸಂದರ್ಭಗಳು ಮುಂದುವರಿಯುವುದು ಬೇಡವಾಗಿದೆ. ನಾವು ಅಧ್ಯಕ್ಷರಿಗೆ ಸಂಪೂರ್ಣ ಹಾಗೂ ಸ್ವತಂತ್ರವಾದ ಕಾರ್ಯಾಂಗದ ಅಧಿಕಾರಿಗಳನ್ನು ಎಷ್ಟು ಸಾಧ್ಯವೋ ಅಷ್ಟು ಕೊಡಬಯಸುತ್ತೇವೆ.

**ಶ್ರೀ ಎಚ್. ವಿ. ಕಾಮತ್ :** ಭಾರತ ಸರಕಾರದ ಅಧಿನಿಯಮದಲ್ಲಿಯೂ ಸಹ ಅಧ್ಯಕ್ಷರು ಸಂಸತ್ತಿನಿಂದ ಆರಿಸಲ್ಪಟ್ಟಿರುವರೋ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್:** ಅದು ತಪ್ಪು. ಅವರು ಚುನಾಯಿತರಾಗಿದ್ದಾರೆ. ಆದರೆ ಅವರ ಚುನಾವಣೆಯನ್ನು ಗವರ್ನರ್ ಜನರಲ್ ಅವರು ಅನುಮೋದಿಸಬೇಕಾಗುತ್ತದೆ.

**ಶ್ರೀ ಎಚ್.ವಿ. ಕಾಮತ್ :** ಮಾನ್ಯರೆ, ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ, ಅನುಮತಿ ಕೊಡಬೇಕು. ಈ ತಿದ್ದುಪಡಿಯು ಸಂಸತ್ತಿನ ಅನುಮತಿಯಿಂದ ತಿರುಗಿ ಪಡೆಯಲ್ಪಟ್ಟಿತು.

## ಹೊಸ ವಿಧಿ ೭೯ ಎ

**ಮಾನ್ಯ ಅಧ್ಯಕ್ಷರು :** ವಿಧಿ ೭೯–ಎ ದ ನೋಟಿಸನ್ನು ಡಾ॥ ಅಂಬೇಡ್ಕರ್ ಮತ್ತು ಶ್ರೀ ಘನಶ್ಯಾಮ ಸಿಂಗ ಗುಪ್ತಾ ಅವರು ಕೊಟ್ಟಿದ್ದಾರೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನನಗೆ ಇದನ್ನು ತಡೆಹಿಡಿಯಬೇಕೆಂದು ಅನಿಸುತ್ತದೆ.

**ಮಾನ್ಯ ಅಧ್ಯಕ್ಷರು :** ವಿಧಿ ೭೯ ಎ ಇದನ್ನು ಮುಂದಕ್ಕೆ ಹಾಕಲ್ಪಟ್ಟಿದೆ.

## ವಿಧಿ ೮೦

**ಮಾನ್ಯ ಅಧ್ಯಕ್ಷರು :** ನನಗೆ ನೆನಪಿದೆ, ಚರ್ಚಿಸಿದ್ದನ್ನು ಪುನಃ ಚರ್ಚಿಸುವ ಅವಶ್ಯಕತೆ ಇಲ್ಲ. ಈ ತಿದ್ದುಪಡಿಯನ್ನು ಮಂಡಿಸಿಲ್ಲವೆಂದು ಭಾವಿಸೋಣ. ನಾವು ಈಗ ವಿಧಿ ೮೦ಕ್ಕೆ ಹೋಗೋಣ. ಪ್ರಸ್ತಾವನೆಯು ಹೀಗಿದೆ – "ವಿಧಿ ೮೦ ಇದು ಸಂವಿಧಾನದ ಒಂದು ಭಾಗವಾಗಿದೆ."

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೇ, ನಾನು ಪ್ರಸ್ತಾಪಿಸುತ್ತೇನೆ. "ವಿಧಿ ೮೦ರ ಖಂಡ (೧) ರಲ್ಲಿಯ ಪದಗಳು 'ಈ ಸಂವಿಧಾನದಲ್ಲಿ ಉಪಬಂಧಿಸಿದುದನ್ನುಳಿದು' ಈ ಪದಗಳ ಬದಲು 'ಸಂವಿಧಾನದಲ್ಲಿ ಅನ್ಯಥಾ ನಿಯಮಿಸಿದುದನನುಳಿದು' ಈ ಪದಗಳನ್ನು ಕೂಡಿಸತಕ್ಕದ್ದು"

ಮಾನ್ಯರೆ, ಇದು ಕೇವಲ ಒಂದು ಜಾರಿಹೋದ ಸಂಗತಿಯಾಗಿದೆ. ಇದನ್ನು ಸರಿಪಡಿಸಲೇಬೇಕು.

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಸದನವು ಈಗಾಗಲೇ ವಿಧಿ ೬೮ ಎ ಇದನ್ನು ಸ್ವೀಕರಿಸಿದೆ. ಇದು ಈಗ ಶ್ರೀ ಕಾಮತ್ ಅವರು ತಂದ ತಿದ್ದುಪಡಿಯ ತದ್ರೂಪವಾಗಿದೆಯೆಂಬುದನ್ನು ನಾನು ಎತ್ತಿ ತೋರಿಸಲೇ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ನಿನ್ನೆಯದಿನ ನಾವು ೬೮ ಎ ಇದನ್ನು ಸ್ವೀಕರಿಸಿದ್ದೇವೆ. ಅದು ಇವೆಲ್ಲ ವಿಷಯಗಳನ್ನು ಒಳಗೊಂಡಿದೆ.

**ಮಾನ್ಯ ಅಧ್ಯಕ್ಷರು:** ಅವರು ತಿದ್ದುಪಡಿ ಸಂಖ್ಯೆ ೧೫೩೮ ಮತ್ತು ೧೫೪೧ರ ಮೊದಲಿನ ಭಾಗವನ್ನು ಕುರಿತು ವ್ಯವಹರಿಸುತ್ತಿದ್ದಾರೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ನಾನು ವಿಷಾದಿಸುತ್ತೇನೆ.

**ಸನ್ಮಾನ್ಯ ಶ್ರೀ ಸಂತಾನಂ :** ಶ್ರೀ ಕಾಮತ ಅವರು ಅವುಗಳನ್ನು ಪ್ರತ್ಯೇಕವಾಗಿ ಮಂಡಿಸಲೆಂದು ನಾನು ಸೂಚಿಸುತ್ತೇನೆ. ನಾವು ಒಂದನ್ನು ಸಮರ್ಥಿಸುತ್ತೇವೆ ಮತ್ತು ಇನ್ನೊಂದನ್ನು ವಿರೋಧಿಸುತ್ತೇವೆ.

**ಶ್ರೀ ಎಚ್.ವಿ. ಕಾಮತ್ :** ತಿದ್ದುಪಡಿ ೧೫೩೮ ಮತ್ತು ೧೫೪೧ ಇವೆರಡೂ ಕೂಡಿಯೇ ಹೋಗುತ್ತವೆ. ಇಲ್ಲವಾದರೆ ಆ ಚಿತ್ರವು ಪೂರ್ತಿಯಾಗುವುದಿಲ್ಲ. ನನ್ನ ತಿದ್ದುಪಡಿಗಳು ಸ್ವೀಕೃತವಾದರೆ ವಿಧಿಯು ಕೆಳಗಿನಂತೆ ಇರುತ್ತದೆ. 'ನಮ್ಮ ಸಂವಿಧಾನದಲ್ಲಿ ಅನ್ಯಥಾ ನಿಯಂತ್ರಿಸಿದುದನ್ನುಳಿದು ಎಲ್ಲ ಪ್ರಶ್ನೆಗಳನ್ನು ಯಾವುದೇ ಸದನದಲ್ಲಿ ಸಂಸತ್ತು ನಡೆದ ವೇಳೆಯಲ್ಲಿ ಇಲ್ಲವೆ ಎರಡೂ ಸದನಗಳ ಜಂಟೀ ಸದನಗಳಲ್ಲಿ ಅಧಿವೇಶನದಲ್ಲಿ ಹಾಜರಿದ್ದ ಸದಸ್ಯರು ಮತದಾನ ಮಾಡಿ, ಬಹುಮತದಿಂದ ನಿರ್ಧರಿಸಬೇಕು. ಪರಂತು ಚೇರಮನ್ ಇಲ್ಲವೆ ಅಧ್ಯಕ್ಷರು ಮುಂತಾದ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನಾನು ಶ್ರೀ ಕಾಮತ ಅವರ ತಿದ್ದುಪಡಿಯನ್ನು ಸ್ವೀಕರಿಸಲಾರೆನೆಂದು ತಿಳಿಸಲು ವಿಷಾದಿಸುತ್ತೇನೆ.

**ಶ್ರೀ ಎಚ್.ವಿ. ಕಾಮತ್:** ನನ್ನ ಯಾವ ತಿದ್ದುಪಡಿ? ನಾನು ಬೇರೆ ಬೇರೆ ಮೂರು ಮೂರು ತಿದ್ದುಪಡಿಗಳನ್ನು ಮಂಡಿಸಿದ್ದೇನೆ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಅವರು ಇದೀಗ ಮಂಡಿಸಿದ್ದು, ತಿದ್ದುಪಡಿಗಳನ್ನು ಒಂದುಗೂಡಿಸಿದಂತೆ ನನ್ನಲ್ಲಿರುವ ಪುಸ್ತಕ ತೋರಿಸುತ್ತದೆ.

ಅವರು ಬೇರೆ ಬೇರೆ ಭಾಗಗಳನ್ನು ಕುರಿತು ಮಾತನಾಡಿರಬಹುದು, ಆದರೆ ತಿದ್ದುಪಡಿಯು ಈಗ ಇದ್ದಂತೆ ಏಕಮಾತ್ರವಾಗಿದೆ.

**ಶ್ರೀ ಎಚ್.ವಿ. ಕಾಮತ್:** ಮಾನ್ಯರೆ, ನಾನು ಅವುಗಳನ್ನು ಬೇರೆ ಬೇರೆಯಾಗಿ ಕಳುಹಿಸಿದ್ದೇನೆ. ಮತ್ತು ನಾನು ಅವುಗಳ ಮೇಲೆ ಬೇರೆ ಬೇರೆಯಾಗಿ ಮಾತನಾಡಿದ್ದೆನು. ನಿಮ್ಮ ಪರವಾನಗಿಯಿಂದ, ಮಾನ್ಯರೆ, ನಾನು ಈಗ ಅವುಗಳನ್ನು ತೋರಿಸುತ್ತೇನೆ. ಮೊದಲನೆಯದಾಗಿ' ಎರಡು ಸದನಗಳಲ್ಲೊಂದು' ಈ ಪದಗಳ ನಂತರ ಯಾವುದೇ ಉಪವೇಶನ ಸೇರುವುದು. ಎರಡನೆಯದು ಈ ಪದಗಳನ್ನು ತೆಗೆದುಹಾಕುವುದು.'ಚೇರಮನ್‌ರ ಅಧ್ಯಕ್ಷರು,' ಇಲ್ಲವೆ ಸಭಾಪತಿ ಇಲ್ಲವೆ ಯಾವುದೇ ಮನುಷ್ಯನು ಹಾಗೆ ಕಾರ್ಯ ನಿರ್ವಹಿಸಸಿದಿದ್ದರೆ "ಮೂರನೆಯದಾಗಿ ಈ ಪದವನ್ನು ಸೇರಿಸುವುದು 'ಪರಂತು ಆ' ಇವುಗಳನ್ನು ಎರಡನೆಯ ಪ್ಯಾರಾದ 'ಪಾರಂ ಬದಲಿ' ಸೇರಿಸಬೇಕು. ಈ ಮೂರರಲ್ಲಿ ಯಾವುದನ್ನು ಸನ್ಮಾನ್ಯ ಸದಸ್ಯರು ಸ್ವೀಕರಿಸುತ್ತಿದ್ದೀರಿ? ಆ ಮೂರನ್ನೂ ಸನ್ಮಾನ್ಯ ಸದಸ್ಯರು ಇಲ್ಲವೆ ಎರಡನ್ನು ಇಲ್ಲವೆ ಒಂದನ್ನು ನವೀಕರಿಸುವಿರೆಂಬುದನ್ನು ನಾನು ತಿಳಿಯಬಯಸುತ್ತೇನೆ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಸನ್ಮಾನ್ಯ ಸದಸ್ಯರ ತಿದ್ದುಪಡಿ ಸಂಖ್ಯೆ ೧೫೩೮ನ್ನು

ಉಲ್ಲೇಖಿಸುತ್ತಿದ್ದೇನೆ. ಕಛೇರಿ ದಸ್ತಾವೇಜಿಗೆ ಸಂಬಂಧಿಸಿದಂತೆ ಅವೆಲ್ಲವೂ ಒಂದೇ ತಿದ್ದುಪಡಿಯಂತೆ ಕಾಣುತ್ತದೆ.

**ಶ್ರೀ ಎಚ್.ವಿ. ಕಾಮತ್ :** ಮಾನ್ಯರೆ, ನಾನು ಇವುಗಳನ್ನು ಬೇರೆಬೇರೆಯಾಗಿ ಮಂಡಿಸಲು ತಮ್ಮ ಪರವಾನಗಿಯನ್ನು ಬೇಡಿದೆನು.

**ಮಾನ್ಯ ಅಧ್ಯಕ್ಷರು :** ಶ್ರೀ ಕಾಮತ್ ಅವರು ಈ ಮೂರನ್ನು ಪ್ರತ್ಯೇಕವಾಗಿ ಮಂಡಿಸಿದ್ದಾರೆ. ಆದರೆ ಅವುಗಳನ್ನು ಬೇರೆ ಬೇರೆಯಾಗಿ ಸಹ ತೆಗೆದುಕೊಳ್ಳಬಹುದು. ತಿದ್ದುಪಡಿಯಾದಂತೆ ಆ ವಿಧಿಯು ಕೆಳಗಿನಂತೆ ಇರುತ್ತದೆ. ಈ ಸಂವಿಧಾನದಲ್ಲಿ ಅನ್ಯಥಾ ಉಪಬಂಧಿಸದ ಹೊರತು ಸಂಸತ್ತಿನ ಯಾವುದೇ ಸದನದ ಅಧಿವೇಶನದಲ್ಲಿ ಇಲ್ಲವೆ ಜಂಟಿ ಅಧಿವೇಶನದಲ್ಲಿ ಎಲ್ಲ ಪ್ರಶ್ನೆಗಳನ್ನು ತೆಗೆದುಕೊಳ್ಳತಕ್ಕದ್ದು.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್:** ತಿದ್ದುಪಡಿಗಳ ಸಂಚಿತ ಸೂಚಿಯಲ್ಲಿ ನಾನು ಸಂಖ್ಯೆ ೮೭ ಇದನ್ನು ಮಾತ್ರ ಸ್ವೀಕರಿಸುತ್ತೇನೆ. ಇದು ನನ್ನ ಉದ್ದೇಶವನ್ನು ಪೂರೈಸುತ್ತದೆ. ಮತ್ತು ನಾನು ಅದನ್ನು ಸ್ವೀಕರಿಸುತ್ತೇನೆ.

(ವಿಧಿ ೮೦ ತಿದ್ದುಪಡಿಯಾದಂತೆ ಸಂವಿಧಾನದಲ್ಲಿ ಸೇರಿಸಲಾಗಿದೆ.)

## ವಿಧಿ ೮೧

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಸನ್ಮಾನ್ಯರೇ, ನಾನು ಈಗ ಮಂಡಿಸುತ್ತೇನೆ. ವಿಧಿ ೮೧ ರಲ್ಲಿಯ ಪದಗಳು 'ಒಂದು ಘೋಷಣೆ' ಈ ಪದಗಳ ಜಾಗೆಯಲ್ಲಿ 'ಒಂದು ದೃಢೀಕರಿಸು: ಪ್ರತಿಜ್ಞೆ ಮಾಡು ಇಲ್ಲವೆ ಶಪಥ' ಈ ಪದಗಳನ್ನು ಸೇರಿಸತಕ್ಕದ್ದು.

*****

**ಶ್ರೀ ಎಚ್.ವಿ. ಕಾಮತ್ :** ಮಾನ್ಯ ಅಧ್ಯಕ್ಷರೆ, ನಾನು ಈಗ ನನ್ನ ಸನ್ಮಿತ್ರರಾದ ಡಾ॥ ಅಂಬೇಡ್ಕರ್ ಅವರು ಇದೀಗ ಮಂಡಿಸಿದ ತಿದ್ದುಪಡಿ ನಂ. ೧೫೫೪ನ್ನು ಕುರಿತು ಸ್ವಲ್ಪ ಸ್ಪಷ್ಟೀಕರಣ ಕೇಳಬಯಸುತ್ತೇನೆ. ಅದು 'ಘೋಷಣೆ' ಈ ಪದದ ಬದಲು 'ದೃಢೀಕರಿಸು ಇಲ್ಲವೆ ಶಪಥ' ಈ ಪದಗಳನ್ನು ಸೇರಿಸತಕ್ಕದ್ದು. ಮಾನ್ಯರೆ ಈ ಸದನವು ಈಗಾಗಲೇ ವಿಧಿ ೪೯ನ್ನು ಸ್ವೀಕರಿಸಿದ್ದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಯಾವುದೇ ಉಪಬಂಧಿಸುವುದೇನೆಂದರೆ ಒಂದು ದೃಢೀಕರಿಸುವುದು, ಇಲ್ಲವೆ ಶಪಥವನ್ನು ಅಧ್ಯಕ್ಷರಿಂದ ಇಲ್ಲವೆ ಆ ಹುದ್ದೆಯನ್ನು ನಿರ್ವಹಿಸುವ ಯಾವುದೇ ವ್ಯಕ್ತಿಯಿಂದ ಇಲ್ಲವೆ ಅಧ್ಯಕ್ಷರ ಕರ್ತವ್ಯಗಳನ್ನು ನಿರ್ವಹಿಸುತ್ತಿರುವವರು ಆ ಅಧಿಕಾರ ಸ್ವೀಕರಿಸುವ ಮೊದಲು ತೆಗೆದುಕೊಳ್ಳತಕ್ಕದ್ದು. ಈ ದೃಢೀಕರಣ ಇಲ್ಲವೆ ಶಪಥ ಅಲ್ಲೇ ಉಪಬಂಧಿಸಿರುವ ತಿದ್ದುಪಡಿಯ ಪರಿಣಾಮವಾಗಿ ಅಧ್ಯಕ್ಷನು ತನ್ನ ಹುದ್ದೆಯನ್ನು ಸ್ವೀಕರಿಸುವ ಮುನ್ನ ದೃಢೀಕರಣ ಇಲ್ಲವೆ ಪ್ರತಿಜ್ಞೆಯನ್ನು ಆ ತಿದ್ದುಪಡಿಯು ಒದಗಿಸಿದ್ದ ಪರಿಣಾಮವಾಗಿ ಅಧ್ಯಕ್ಷರು ಇಲ್ಲವೆ ಯಾವುದೇ ವ್ಯಕ್ತಿ ಆ ರೀತಿ ಅಧ್ಯಕ್ಷರ ಕಾರ್ಯ ನಿರ್ವಹಿಸುತ್ತಿರುವವನು ಆ ಹುದ್ದೆಯನ್ನು ಸ್ವೀಕರಿಸುವ ಮುನ್ನ ಶಪಥ ಇಲ್ಲವೆ ದೃಢೀಕರಣವನ್ನು ಕೆಳಗೆ ಕೊಟ್ಟ ನಮೂನೆಯಲ್ಲಿ.

'ನಾನು ಅ.ಬ. ದೇವರು ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ, ಅಥವಾ ನಾನು ಅ.ಬ. ಪ್ರಮಾಣಪೂರ್ವಕ ದೃಢೀಕರಿಸುವುದೇನೆಂದರೆ

ನನ್ನ ಸನ್ಮಿತ್ರರಾದ ಡಾ॥ ಅಂಬೇಡ್ಕರ್ ಅವರಿಂದ ಹಾಗೂ ಸಂಸತ್ತಿನಿಂದ ನನಗೆ ಭರವಸೆಯನ್ನು

ಕೊಡುವಿರಾ? ವಿಧಿ ೮೮ರಲ್ಲಿ ಉಲ್ಲೇಖಿಸಿದ ದೃಢೀಕರಣ ಇಲ್ಲವೆ ಶಪಥ ಇದು ಭಾರತ ಸಂವಿಧಾನ ೪೯ರ ತಿದ್ದುಪಡಿ ಒಂದೇ ತೆರನಾಗಿವೆಯೇ?

**ಮಾನ್ಯ ಅಧ್ಯಕ್ಷರು :** ಮೇಲುನೋಟಕ್ಕೆ ಸ್ಪಷ್ಟವಾದುದೆಂದರೆ ಪರಿಶಿಷ್ಟವು ತಿದ್ದುಪಡಿಯಾಗಬೇಕು. ಆ ಖಂಡಕ್ಕೆ ಹೊಂದುವಂತೆ ತಿದ್ದುಪಡಿ ಆಗಬೇಕು.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನನ್ನ ಗೆಳೆಯರಾದ ಪ್ರೊ. ಶಹಾ ಅವರು ಮಂಡಿಸಿದ ತಿದ್ದುಪಡಿಯನ್ನು ನಾನು ಸ್ವೀಕರಿಸಲಾರೆನೆಂದು ತಿಳಿಸಲು ವಿಷಾದಿಸುತ್ತೇನೆ. ಪ್ರೊ. ಶಹಾ ಅವರು ನಿಜವಾಗಿಯೂ ಸಂಗತಿಗಳ ಅನುಕ್ರಮಣಿಕೆಯನ್ನು ನಾನು ಹೇಳಬೇಕೆಂದರೆ ಒಬ್ಬ ಅಭ್ಯರ್ಥಿಯು ಯಾವನನ್ನು ಸದನದ ಸದಸ್ಯನನ್ನಾಗಿ ಸದ್ಯಕ್ಕೆ ಆರಿಸಲಾಗಿದೆಯೋ ಅಂಥವನ ಜೀವನದಲ್ಲಿ ಪ್ರೊ. ಶಹಾ ಅವರು ಉಲ್ಲೇಖಿಸಿರುವ ವಿಧಿ ೮೮ ಹಾಗೂ ಒಂದು ಟಿಪ್ಪಣಿ 'ಸದಸ್ಯರ ಅನರ್ಹತೆಗಳು' ಈ ತಲೆಬರಹ ಮೊದಲನೆಯ ಸಂಗತಿ ಏನೆಂದರೆ: ಒಬ್ಬ ಅಭ್ಯರ್ಥಿಯು ಸಂಸತ್ತಿಗೆ ಆಯ್ಕೆಯಾಗಿದ್ದಾನೆಂದ ಮಾತ್ರಕ್ಕೆ ಅವನು ಸಂಸತ್ತಿನ ಸದಸ್ಯನಾಗಲು ಅರ್ಹನಾಗುವುದಿಲ್ಲ. ಅಲ್ಲಿ ಕೆಲವು ಔಪಚಾರಿಕ ಕಾರ್ಯಗಳಿವೆ. ಅವುಗಳನ್ನು ಕಾನೂನುಬದ್ಧವಾಗಿ ಸಂಸತ್ತಿಗೆ ಆಯ್ಕೆಯಾದವನು ಪರಿಪಾಲಿಸಬೇಕಾಗುತ್ತದೆ. ಅವನು ಪರಿಪಾಲಿಸುವುದೆಂದರೆ ಪ್ರಮಾಣವಚನ ಸ್ವೀಕರಿಸುವುದು. ಸಂಸತ್ತಿನಲ್ಲಿ ಅವನು ತನ್ನ ಸ್ಥಾನವನ್ನು ಪಡೆಯುವ ಮೊದಲು ಅವನು ಪ್ರಮಾಣ ವಚನವನ್ನು ತೆಗೆದುಕೊಳ್ಳಲಿಕ್ಕೇಬೇಕು. ಅವನು ಪ್ರಮಾಣವಚನ ಸ್ವೀಕರಿಸದ ಹೊರತು ಅವನು ಸದಸ್ಯನಲ್ಲ ಮತ್ತು ಎಲ್ಲಿಯವರೆಗೆ ಅವನು ಸದಸ್ಯನಲ್ಲವೋ ಅಲ್ಲಿಯವರೆಗೆ ಸಂಸತ್ತಿನಲ್ಲಿ ಅವನು ಸ್ಥಾನವನ್ನು ಪಡೆಯಲಾರನು, ಅದುವೇ ಉಪಬಂಧವಾಗಿದೆ. ಸದಸ್ಯರು ತಮ್ಮ ಪ್ರಮಾಣವಚನ ತೆಗೆದುಕೊಳ್ಳದ ಹೊರತು ಅವರು ಸದಸ್ಯರಾಗುವುದಿಲ್ಲ. ಅವರು ಸಭಾಧ್ಯಕ್ಷನನ್ನು ಆರಿಸುವ ಹಕ್ಕು ಹೊಂದುವುದಿಲ್ಲ. ಇದುವೇ ಸಂಗತಿಗಳ ಅನುಕ್ರಮಣಿಕೆ – ಚುನಾವಣೆ ಪ್ರಮಾಣವಚನ ಸ್ವೀಕರಿಸುವವನು ಸದಸ್ಯನಾಗುವುದು ಮತ್ತು ಆಮೇಲೆ, ಸಭಾಧ್ಯಕ್ಷನನ್ನು ಆರಿಸುವ ಚುನಾವಣೆಯಲ್ಲಿ ಭಾಗವಹಿಸಲು ಅರ್ಹನಾಗುವುದು. ಆದ್ದರಿಂದ ಸಭಾಧ್ಯಕ್ಷರ ಚುನಾವಣೆಯು ಪ್ರಮಾಣವಚನ ಸ್ವೀಕರಿಸುವುದು, ಸಭಾಧ್ಯಕ್ಷರ ಚುನಾವಣೆಗೆ ಮೊದಲು ನಡೆಯಲಿಕ್ಕೇಬೇಕು.

ಈ ಸಂಗತಿಗಳ ಅನುಕ್ರಮಣಿಕೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ಪ್ರಮಾಣವಚನವು ಸಭಾಧ್ಯಕ್ಷರ ಸಮ್ಮುಖದಲ್ಲಿ ನಡೆಯತಕ್ಕದ್ದು ಅನ್ನುವುದು ಅಸಾಧ್ಯವಾದುದು. ಯಾಕೆಂದರೆ, ಸಭಾಧ್ಯಕ್ಷರು ಅಲ್ಲಿ ಇರುವುದಿಲ್ಲ. ಚುನಾಯಿತ ಅಭ್ಯರ್ಥಿಗಳು ಸದಸ್ಯರಾಗುವ ಮೊದಲು ಸಭಾಧ್ಯಕ್ಷರನ್ನು ಆರಿಸಲಿಕ್ಕೆ ಬರುವುದಿಲ್ಲ. ಸಭಾಧ್ಯಕ್ಷನ ಹೊರತುಪಡಿಸಿ ಮತ್ತೊಬ್ಬರಿಗೆ ವಹಿಸಿಕೊಡಲಿಕ್ಕೇ ಬೇಕು. ನಿಜಸ್ಥಿತಿಯು ಹೀಗೆ ಇದ್ದು ಇರುವ ಪ್ರಶ್ನೆಯೇನೆಂದರೆ ಈ ಪ್ರಮಾಣ ವಚನ ಬೋಧಿಸುವ ಅಧಿಕಾರವನ್ನು ಯಾರಿಗೆ ಕೊಡಲಾಗಿದೆ. ಸ್ಪಷ್ಟವಾಗಿ ಇದು ರಾಷ್ಟ್ರಪತಿಗಳಿಗೆ ಮಾತ್ರವೇ ನಿಹಿತವಾಗಿದೆ. ಇಲ್ಲವೆ ರಾಷ್ಟ್ರಪತಿಗಳು ತಮ್ಮ ವತಿಯಿಂದ ಈ ಅಧಿಕಾರವನ್ನು ಯಾರಿಗೆ ವರ್ಗಾಯಿಸುವರೋ ಅಂಥವರಲ್ಲಿ ಈ ಅಧಿಕಾರವಿದೆ. ಸಂಗತಿಗಳ ಈ ಅನುಕ್ರಮಣಿಕೆಯ ಪ್ರಕಾರ ನಾವು ಸ್ವೀಕರಿಸಬೇಕಾದ ಒಂದೇ ಮಾರ್ಗವೆಂದರೆ ಪ್ರಮಾಣವಚನ ಬೋಧಿಸುವ ಅಧಿಕಾರವು ರಾಷ್ಟ್ರಪತಿಗಳಲ್ಲಿ ಇಲ್ಲವೆ ಈ ಕುರಿತು ರಾಷ್ಟ್ರಾಧ್ಯಕ್ಷರು ಯಾರನ್ನು ನೇಮಿಸುವರೋ ಅವರಿಗೆ ಇದೆ. ಈ ಅಧಿಕಾರವನ್ನು ಸಭಾಧ್ಯಕ್ಷರಲ್ಲಿ ಇಡಲಿಕ್ಕೆ ಬರುವುದಿಲ್ಲ. ಯಾಕೆಂದರೆ ಆಗ ಸಭಾಧ್ಯಕ್ಷರ ಸ್ಥಾನವು ಆಸ್ತಿತ್ವದಲ್ಲಿಯೇ ಇರುವುದಿಲ್ಲ.

ಈಗ ನಾನು ನಮ್ಮ ಅಧ್ಯಕ್ಷರು ಎತ್ತಿದ ವಿಷಯಕ್ಕೆ ಬರುತ್ತೇನೆ: ಒಂದು ಉಪಚುನಾವಣೆಯಲ್ಲಿ ಒಬ್ಬನು ಹೊಸದಾಗಿ ಚುನಾಯಿತನಾದರೆ ಅವನ ಪ್ರಮಾಣವಚನ ಯಾರ ಸಮ್ಮುಖದಲ್ಲಿ ಜರುಗುವುದು.

ಅದು ರಾಷ್ಟ್ರಪತಿಗಳಿಗೆ ಹೋಗಬೇಕೆ ಇಲ್ಲ ಸಭಾಧ್ಯಕ್ಷರೆಂದು ಚುನಾಯಿತನಾದ ಅಧ್ಯಕ್ಷನ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸಬೇಕೆ? ಈ ಪ್ರಶ್ನೆಗೆ ಉತ್ತರವೆಂದರೆ ಸಭಾಧ್ಯಕ್ಷನನ್ನು ಚುನಾಯಿಸಿದ ನಂತರ ರಾಷ್ಟ್ರಪತಿಗಳು ಸಭಾಧ್ಯಕ್ಷರಿಗೆ ಒಂದು ಆದೇಶ ಮೂಲಕ ತಮ್ಮ ಅಧಿಕಾರ ಪ್ರದಾನ ಮಾಡುತ್ತಾರೆ. ಪ್ರಮಾಣವಚನ ಬೋಧಿಸುವ ಅಧಿಕಾರವನ್ನು ತನ್ನ ವತಿಯಿಂದ ಸಭಾಧ್ಯಕ್ಷರಿಗೆ ಪ್ರದಾನ ಮಾಡುತ್ತಾರೆ. ಅಂದರೆ ಹೊಸದಾಗಿ ಚುನಾಯಿತನಾದ ಅಭ್ಯರ್ಥಿಯು ಪ್ರಮಾಣವಚನಕ್ಕಾಗಿ ಸಂಸತ್ತಿನಲ್ಲಿ ಬಂದರೆ ಸಭಾಧ್ಯಕ್ಷರು ರಾಷ್ಟ್ರಪತಿಗಳಿಂದ ಅಧಿಕಾರ ಪಡೆದವರು, ಅವರು ಅವನಿಗೆ ಪ್ರಮಾಣವಚನ ಬೋಧಿಸುತ್ತಾರೆ. ಆ ಪರಿಣಾಮವಾಗಿ ಹೊಸದಾಗಿ ಚುನಾಯಿತನಾದ ಮನುಷ್ಯನ ಪ್ರಸಂಗದಲ್ಲಿ ಅವನು ರಾಷ್ಟ್ರಪತಿಗಳ ಮುಂದೆ ಇಲ್ಲವೆ ರಾಷ್ಟ್ರಪತಿಗಳಿಗೆ ಇಲ್ಲವೆ ರಾಷ್ಟ್ರಪತಿಗಳು ಯಾರೊಬ್ಬರನ್ನು ಆ ಕೆಲಸಕ್ಕೆ ನೇಮಿಸಿದ ಅಧಿಕಾರಿಯಲ್ಲಿ ಹೋಗುವ ಅವಶ್ಯಕತೆಯು ಇರುವುದಿಲ್ಲ.

ಹೀಗೆ ಸಂಗತಿಗಳ ಅನುಕ್ರಮಣಿಕೆಯು ಇದೆ. ವಿಧಿ ೮೧ ಇದನ್ನು ಹೀಗೆ ರಚಿಸಲಾಗಿದೆಯಲ್ಲ. ಅದು ಈ ರೀತಿ ಅನುಕ್ರಮಣಿಕೆಯಲ್ಲಿ ಸರಿಹೊಂದುವಂತೆ ಮಾಡಲಾಗಿದೆ. ಇಂದಿಗೂ ನಾನು ಹೇಳಬೇಕೆಂದರೆ ಇದೇ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತದೆ. ರಾಷ್ಟ್ರಪತಿಯಾಗಲೀ ಇಲ್ಲವೆ ಗವರ್ನರ್ ಜನರಲ್ ಅವರು ಸಂಸತ್ತನ್ನು ಮೊದಲ ಸಲ ಕರೆದಾಗ ಬೇರೊಬ್ಬರನ್ನು ಆ ಸಭೆ ನಡೆಯಲು ನೇಮಿಸುತ್ತಾರೆ. ಪ್ರತಿಯೊಬ್ಬ ಸದಸ್ಯನು ಅಂತಹ ನೇಮಿಸಿದ ವ್ಯಕ್ತಿಯ ಸಮ್ಮುಖದಲ್ಲಿ ಪ್ರಮಾಣವಚನ ಇಲ್ಲವೆ ದೃಢೀಕರಣ ಮಾಡಲುಬೇಕಾಗುತ್ತದೆ. ಪ್ರಮಾಣವಚನ ನಂತರ ಹಾಗೇ ಸಭೆಯನ್ನು ನಡೆಯಿಸಲು ಅಧಿಕಾರ ಕೊಟ್ಟ ಅಧಿಕಾರಿಯು ಸಭಾಧ್ಯಕ್ಷರನ್ನು ಆರಿಸುವ ಚುನಾವಣೆಯನ್ನು ನಡೆಯಿಸಿದ್ದನ್ನು ಪೂರ್ತಿಗೊಳಿಸುತ್ತಾನೆ. ಹೀಗೆ ಅಂದಿನ ಸಭೆಯ ನಂತರ ಆ ಅಧಿಕಾರಿಯು ನಿವೃತ್ತನಾಗುತ್ತಾನೆ. ಮತ್ತು ಸಭಾಧ್ಯಕ್ಷನು ಆ ಸ್ಥಾನವನ್ನು ಅಲಂಕರಿಸಿ ಸಭೆಯ ಸಭಾಧ್ಯಕ್ಷನೆಂದು ರಾಷ್ಟ್ರಪತಿಗಳು ಕೊಟ್ಟ ಅಧಿಕಾರದನ್ವಯ ನಂತರ ಬಂದ ಯಾವುದೇ ಸದಸ್ಯರಿಗೆ ಪ್ರಮಾಣವಚನ ಬೋಧಿಸುತ್ತಾನೆ. ಆದ್ದರಿಂದ ನಾನು ಹೇಳಿದಂತೆ ಮೂಲ ಕರಡಿನಲ್ಲಿ ಈ ಘಟನೆಗಳನ್ನು ಅನುಕ್ರಮವಾಗಿ ಮತ್ತು ಉಪಬಂಧ ವ್ಯವಸ್ಥೆಯನ್ನು ಸಾಮಾನ್ಯವಾಗಿ ರಾಷ್ಟ್ರಪತಿಗಳು ತಮ್ಮ ಅಧಿಕಾರವನ್ನು ಸಭಾಧ್ಯಕ್ಷರಿಗೆ ದಯಪಾಲಿಸುವಂತೆ ಮಾಡಿರುವುದು ಹೊಸದಾಗಿ ಚುನಾಯಿತನಾದ ವ್ಯಕ್ತಿಯು ಪ್ರಮಾಣವಚನ ಸ್ವೀಕರಿಸಲು ರಾಷ್ಟ್ರಪತಿಗಳಲ್ಲಿ ಹೋಗುವುದನ್ನು ತಡೆಯುವುದಾಗಿದೆ.

**ಮಾನ್ಯ ಅಧ್ಯಕ್ಷರು :** ಸಭಾಧ್ಯಕ್ಷರಿಗೆ ಪ್ರಮಾಣವಚನ ಬೋಧಿಸಲು ರಾಷ್ಟ್ರಪತಿಗಳಿಂದ ಅಧಿಕಾರ ಪಡೆಯುವುದು ಅವಶ್ಯವಿದೆಯೇ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಸಂವಿಧಾನಾತ್ಮಕವಾಗಿ ನಾನು ವಿನಯದಿಂದ ಹೇಳಬಯಸುವುದೇನೆಂದರೆ ಪ್ರಮಾಣವಚನ ಬೋಧಿಸುವ ಆಡಳಿತ ಅಧಿಕಾರವು ಸಂಸತ್ತಿನ ಅಧಿಕಾರವು ಸಂಸತ್ತಿನ ಸಂವಿಧಾನದಲ್ಲಿಯ ಒಂದು ಘಟನೆಯಾಗಿದೆ. ಯಾಕೆಂದರೆ ಅದರ ಮೇಲೆ ಸಭಾಧ್ಯಕ್ಷರ ಯಾವ ಅಧಿಕಾರವು ಇರುವುದಿಲ್ಲ.

**ಮಾನ್ಯ ಅಧ್ಯಕ್ಷರು :** ನಾನು ಆ ಹಂತವನ್ನು ವಿಚಾರಿಸುತ್ತಿಲ್ಲ. ನಾನು ನಂತರದ ಹಂತದ ಬಗೆಗೆ ಚಿಂತಿಸುತ್ತೇನೆ. ಸಭಾಧ್ಯಕ್ಷನನ್ನು ಆರಿಸಿದ ನಂತರ ಹಂತವನ್ನು ಕುರಿತು ನಾನು ಚಿಂತಿಸುತ್ತಿದ್ದೇನೆ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್:** ಅದರಲ್ಲಿ ಏನೂ ತಪ್ಪಿಲ್ಲ. ಇಲ್ಲವೆ ನ್ಯೂನತೆಯೂ ಇಲ್ಲ. ಯಾಕೆಂದರೆ, ಸಾಮಾನ್ಯ ಕಾರಣವೆಂದರೆ ಸಂಸತ್ತಿನ ಸಂವಿಧಾನ ಮತ್ತು ಅದು ಪ್ರಮಾಣವಚನ ನೆರವೇರಿಸುವುದು.

ಸಂಸತ್ತಿನ ಕಾನೂನಿನ ನಮೂನೆಯು ಸಭಾಧ್ಯಕ್ಷರ ಅಧಿಕಾರ ವ್ಯಾಪ್ತಿ ಮೀರಿದ್ದು ಇರುತ್ತದೆ. ಸಭಾಧ್ಯಕ್ಷರು ಸಂಸತ್ತಿನ ವ್ಯವಹರಣೆಗಳ ಪ್ರಭಾವದಲ್ಲಿರುತ್ತಾರೆ. ಸದಸ್ಯರು ಪ್ರಮಾಣವಚನ ಸ್ವೀಕರಿಸದ ಹೊರತು ಸಂಸತ್ತು ರಚನೆಯಾಗುವುದಿಲ್ಲ. ಆದ್ದರಿಂದ ಪ್ರಮಾಣವಚನ ಸ್ವೀಕರಿಸುವುದು ನಿಜವಾಗಿಯೂ ಸಂಸತ್ತಿನ ಒಂದು ಘಟಕದ ಭಾಗವಾಗಿರುತ್ತದೆ. ಅದರ ಅನ್ವಯ ವ್ಯವಸ್ಥೆಯು ಮತ್ತು ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಅದು ನನಗೆ ತಿಳಿದ ಮಟ್ಟಿಗೆ ಅಧಿಕಾರವು ಸಭಾಧ್ಯಕ್ಷರಿಗೆ ಸಂಬಂಧಿಸಿಲ್ಲ ಮತ್ತು ಅದು ಸಭಾಧ್ಯಕ್ಷರ ಅಧಿಕಾರದಲ್ಲಿ ಇರುವುದು ಅವಶ್ಯವೂ ಇರುವುದಿಲ್ಲ.

**ಮಾನ್ಯ ಅಧ್ಯಕ್ಷರು :** ಸದನವು ನಂತರ ಕೂಡಿದೆಯೆಂದು ಭಾವಿಸೋಣ. ಸಭಾಧ್ಯಕ್ಷರು ಅಂದು ಹಾಜರಿರುವುದಿಲ್ಲ. ಆದಿನ ಒಬ್ಬ ಹೊಸ ಸದಸ್ಯನು ಸಂಸತ್ತಿಗೆ ಬರುತ್ತಾನೆ. ಆಗ ಉಪ ಸಭಾಪತಿ ಇಲ್ಲವೆ ಮತ್ತೊಬ್ಬರು ಸಭಾಧ್ಯಕ್ಷರಿರುತ್ತಾರೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಸಭಾಧ್ಯಕ್ಷರಿಗೆ ಕೊಟ್ಟ ಅಧಿಕಾರವು ಕೇವಲ ಸಭಾಧ್ಯಕ್ಷರಿಗೆ ಮಾತ್ರವಲ್ಲ. ಅದು ಉಪಸಭಾಪತಿ ಇಲ್ಲವೆ ಆ ಕಾಲಕ್ಕೆ ಯಾರು ಆ ಸ್ಥಾನ ಅಲಂಕರಿಸಿರುವರೋ ಅವರಲ್ಲಿ ಸಹ ಆ ಅಧಿಕಾರವಿರುತ್ತದೆ.

**ಮಾನ್ಯ ಅಧ್ಯಕ್ಷರು :** ಸಭಾಧ್ಯಕ್ಷರು ಅಧಿಕಾರಿಗಳ ಪ್ರತ್ಯಾಯೋಜನೆಯ ಮೇಲೆ ಅವಲಂಬಿಸಿರುತ್ತಾರೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಸಂವಿಧಾನವು ಸೃಷ್ಟಿಸಿದ ಎಲ್ಲ ಕಾರ್ಯನಿರ್ವಾಹಕರ ಸದ್ಭಾವನೆಯ ಮೇಲೆ ನಾವು ಅವಲಂಬಿಸಬೇಕಾಗುತ್ತದೆ.

(ಡಾ. ಬಿ.ಆರ್. ಅಂಬೇಡ್ಕರ್ ಅವರ ತಿದ್ದುಪಡಿಯು ಮೇಲೆ ತೋರಿಸಿದಂತೆ ವಿಧಿ ೮೧ ಇದನ್ನು ಸ್ವೀಕರಿಸಲಾಯಿತು. ಅದನ್ನು ಸಂವಿಧಾನದಲ್ಲಿ ಸೇರಿಸಲಾಯಿತು.)

* * * * *

## ವಿಧಿ ೮೨

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ನಾನು ವಿನಯದಿಂದ ಪ್ರಸ್ತಾಪಿಸುವುದು ಹೀಗೆ ಇದೆ. ವಿಧಿ ೮೨ ಇದರ ಖಂಡ (೧)ರ ನಂತರ ಕೆಳಗಿನ ಹೊಸ ಖಂಡವನ್ನು ರೂಢಿಸತಕ್ಕದ್ದು "(೧ಎ) ಯಾವ ವ್ಯಕ್ತಿಯೂ ಒಂದೇ ಕಾಲಕ್ಕೆ ಸಂಸತ್ತಿನ ಸದಸ್ಯನು ಮತ್ತು ಒಂದು ರಾಜ್ಯದ ವಿಧಾನ ಸಭೆಯ ಸದಸ್ಯನಾಗಿ ಆರಿಸಿಬಂದರೆ, ರಾಷ್ಟ್ರಪತಿಗಳು ಮಾಡಿದ ನಿಯಮಗಳಲ್ಲಿ ಕಾಣಿಸಿದಂತೆ ಅಂತಹ ಆ ಅವಧಿಯು ಮುಗಿಯುವ ಪೂರ್ವದಲ್ಲಿ ಆ ಮನುಷ್ಯನು ತನ್ನ ವಿಧಾನಸಭೆಯ ಸ್ಥಾನಕ್ಕೆ ಮುಂಚಿತವಾಗಿಯೇ ರಾಜೀನಾಮೆಯನ್ನು ಕೊಡದಿದ್ದರೆ ಅಂಥವನ ಸಂಸತ್ತಿನ ಸ್ಥಾನವು ಖಾಲಿಯಾಗುತ್ತದೆ. ಮಾನ್ಯರೆ, ಇದರ ಮೇಲೆ ವ್ಯಾಖ್ಯಾನ ಮಾಡುವ ಅವಶ್ಯಕತೆಯು ಇರುವುದಿಲ್ಲ. ಇದು ಸಾಮಾನ್ಯ ನಿಯಮವಾಗಿದೆ.

* * * * *

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಾನು ಶ್ರೀ ನಜೀರುದ್ದೀನ ಅಹ್ಮದ್ ಮತ್ತು ಶ್ರೀ ಕಾಮತ್ ಇಬ್ಬರು ತಂದ ಯಾವ ತಿದ್ದುಪಡಿಯನ್ನು ಸ್ವೀಕರಿಸುವುದಿಲ್ಲ.

*ಮಾನ್ಯ ಅಧ್ಯಕ್ಷರು :* ನಾನು ಈಗ ಒಂದರ ನಂತರ ಒಂದರಂತೆ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

(ಡಾ. ಬಿ.ಆರ್. ಅಂಬೇಡ್ಕರ್ ಅವರ ಒಂದೇ ತಿದ್ದುಪಡಿಯು ಮೇಲೆ ಕಾಣಿಸಿದಂತೆ ಸ್ವೀಕರಿಸಲ್ಪಟ್ಟಿತು. ವಿಧಿ ೮೨ ಇದನ್ನು ತಿದ್ದುಪಡಿಯಾದಂತೆ ಸಂವಿಧಾನದಲ್ಲಿ ಕೂಡಿಸಲಾಯಿತು)

## ವಿಧಿ ೮೩

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ಈಗ ನಾನು ಪ್ರಸ್ತಾಪಿಸುವೆನು. ವಿಧಿ ೮೩ ಖಂಡ (೧)ರ ಉಪಖಂಡ (ಡ)ದಲ್ಲಿ ಕೆಳಗಿನವನ್ನು ಕೂಡಿಸಬೇಕು. "(ಡ) ಅವನು ಭಾರತದ ಪ್ರಜೆಯಾಗಿರುವುದು ಮುಕ್ತಾಯವಾದರೆ ಇಲ್ಲವೆ ಸ್ವಸಂತೋಷದಿಂದ ಪರದೇಶದ ಪೌರತ್ವವನ್ನು ಸಂಪಾದಿಸಿದ್ದರೆ ಇಲ್ಲವೆ ಪರರಾಷ್ಟ್ರದ ರಾಷ್ಟ್ರನಿಷ್ಠೆಯನ್ನು ಒಪ್ಪಿಕೊಂಡು ಸ್ವೀಕರಿಸಿದ್ದರೆ ಇಲ್ಲವೆ ಯಾವುದೇ ಪರದೇಶಕ್ಕೆ ಅಂಟಿಕೊಂಡಲ್ಲಿ"

* * * * *

**ಮಾನ್ಯ ಅಧ್ಯಕ್ಷರು :** ಈ ಪ್ರಕರಣದಲ್ಲಿ ಕರಡು ಸಮಿತಿಯ ಗಮನಕ್ಕೆ ನಾನು ಒಂದು ವಿಷಯವನ್ನು ತರಬಯಸುತ್ತೇನೆ. ನಾವು ವಿಧಿಯ ಖಂಡ (೨)ರಲ್ಲಿ ಉಲ್ಲೇಖಿಸಿದುದನ್ನು ಗಮನಿಸಿದರೆ ಅಲ್ಲಿ ಅಧ್ಯಕ್ಷ ಇಲ್ಲವೆ ಉಪಾಧ್ಯಕ್ಷ ಲೋಕಸಭೆಯ ಅಧ್ಯಕ್ಷ ಉಪಾಧ್ಯಕ್ಷ ಹೆಸರು ಕಾಣಿಸಿಲ್ಲ. ಅವರೂ ಸಹ ಲಾಭದ ಸ್ಥಾನ ಹೊಂದಿರುತ್ತಾರೆ. ಅವರೂ ಸಹ ವೇತನ ಪಡೆಯುವ ಅಧಿಕಾರಿಗಳು ಆಗಿರುವರು.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅವರು ಭಾರತ ಸರಕಾರದ ಅಧೀನದಲ್ಲಿ ಇರುವುದಿಲ್ಲ. ಹೀಗಾಗಿ ಅವರು ಇದರಡಿ ಬರುವುದಿಲ್ಲ.

**ಮಾನ್ಯ ಅಧ್ಯಕ್ಷರು :** ಒಳ್ಳೆಯದಾಯಿತು.

* * * * *

**ಮಾನ್ಯ ಅಧ್ಯಕ್ಷರು :** ಯಾರಿಗಾದರೂ ಮಾತಾಡುವ ಇಚ್ಛೆ ಇದೆಯೆ? ಡಾ. ಅಂಬೇಡ್ಕರ್ ಅವರಿಗೆ ಏನಾದರೂ ಹೇಳುವುದಿದೆಯೆ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಸನ್ಮಾನ್ಯರಾದ ಶ್ರಿ ಜಿ.ಎಸ್. ಗುಪ್ತಾ ಅವರ ಹೆಸರಿನಲ್ಲಿ ಇರುವ ತಿದ್ದುಪಡಿ ಸಂಖ್ಯೆ ೧೫೮೭ ಇದನ್ನು ಹೊರತುಪಡಿಸಿ ಉಳಿದ ಯಾವ ತಿದ್ದುಪಡಿಗಳನ್ನು ನಾನು ಸ್ವೀಕರಿಸುವುದಿಲ್ಲ.

(ಡಾ. ಅಂಬೇಡ್ಕರ್ ಅವರ ತಿದ್ದುಪಡಿಯು ಸ್ವೀಕೃತವಾಯಿತು)

* * * * *

**ಮಾನ್ಯ ಅಧ್ಯಕ್ಷರು :** ಇಲ್ಲಿ ಶ್ರೀ ಕಾಮತ್ ಅವರ ತಿದ್ದುಪಡಿ ಸಂಖ್ಯೆ ೧೫೮೫ ಇದೆ. ಆದರೆ ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಸ್ವೀಕರಿಸಿದ ನಂತರ ಇದು ಉದ್ಭವಿಸುವುದಿಲ್ಲ. ಶ್ರೀ ಗುಪ್ತಾ ಅವರ

ತಿದ್ದುಪಡಿ ಸಂಖ್ಯೆ ೧೫೮೭ ಏನೆಂದರೆ ಪದ "ಮತ್ತು" ಇದನ್ನು ತೆಗೆದುಹಾಕತಕ್ಕದ್ದು. ಇಲ್ಲವೆ ಅದರ ಬದಲು "ಅಥವಾ" ಎಂಬ ಪದವನ್ನು ಆ ಜಾಗೆಯಲ್ಲಿ ಸೇರಿಸತಕ್ಕದ್ದು.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** 'ಮತ್ತು' ಈ ಪದವನ್ನು ಕಿತ್ತು ಹಾಕುವುದು, ಕೂಡಿಸಬೇಕು ಇದನ್ನು ಅಥವಾ ಈ ಪದದಿಂದ ಇಲ್ಲವೆ ಇದರ ಜಾಗೆಯಲ್ಲಿ 'ಅಥವಾ' ಈ ಪದವನ್ನು ಮತ್ತು ಇದರ ಬದಲು ಕೂಡಿಸಬೇಕು.

**ಮಾನ್ಯ ಅಧ್ಯಕ್ಷರು :** ಪ್ರಶ್ನೆಯು ಹೀಗಿದೆ.

"ವಿಧಿ ೮೩ರ ಖಂಡ (೧)ರ ಉಪಖಂಡ (ಡ)ದಲ್ಲಿಯ ಕೊನೆಯಲ್ಲಿರುವ 'ಮತ್ತು' ಇದನ್ನು ಕಿತ್ತುಹಾಕತಕ್ಕದ್ದು.

ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

ವಿಧಿ ೮೩ನ್ನು ತಿದ್ದುಪಡಿಯಾದಂತೆ ಸಂವಿಧಾನದಲ್ಲಿ ಸೇರಿಸಲಾಯಿತು.

* * * * *

## ವಿಧಿ ೮೫

**ಮಾನ್ಯ ಅಧ್ಯಕ್ಷರು :** ಯಾವ ತಿದ್ದುಪಡಿಗೂ ಸಂಬಂಧಿಸಿದ ವಿಷಯ ಕುರಿತು ನಮ್ಮೆಲ್ಲರಿಗೆ ಒಳ್ಳೆ ಪ್ರಯೋಜನಕಾರಿಯಾದ ಚರ್ಚೆಯಾಯಿತು. ಈ ವಿಧಿಯನ್ನು ವ್ಯತ್ಯಾಸಗೊಳಿಸಲು ಇಲ್ಲವೆ ಮಾರ್ಪಾಡು ಮಾಡಲು ಯಾವುದೇ ನಿರ್ದಿಷ್ಟ ಖಂಡದ ಬಗೆಗೆ ಮೈತ್ರಾ ಅವರು ಮಾತಾನಾಡಿಲ್ಲ. ಆ ವಿಷಯದ ಮೇಲೆ ಯಾವುದೇ ತಿದ್ದುಪಡಿಯೂ ಇಲ್ಲ.

ನಾನು ಈಗ ಮತಗಳನ್ನು ತೆಗೆದುಕೊಳ್ಳುತ್ತೇನೆ.

ಡಾ. ಅಂಬೇಡ್ಕರ್ ಅವರು ಏನಾದರೂ ಹೇಳಬಯಸುತ್ತಾರೆಯೆ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಇಲ್ಲ, ಶ್ರೀ ಕಾಮತ್ ಅವರು ನಾನು ಉತ್ತರ ರೂಪವಾಗಿ ಅವರಿಗೆ ಏನಾದರೂ ಹೇಳಬೇಕೆಂದಿದ್ದರೆ ಮಾತ್ರ ನಾನು ಹೇಳುವೆನು. ಶ್ರೀ ಅಲ್ಲಾಡಿ ಹಾಗೂ ಇತರರು ಈಗಾಗಲೇ ತಮ್ಮ ಉತ್ತರವನ್ನು ಕೊಟ್ಟಿದ್ದಾರೆ. ನಾನು ಸಹ ಬಹಳಷ್ಟು ಬಹುತೇಕ ಅದನ್ನೇ ಬೇರೆ ರೀತಿಯಲ್ಲಿ ಹೇಳುತ್ತೇನೆ.

**ಮಾನ್ಯ ಅಧ್ಯಕ್ಷರು :** ಈಗ ಶ್ರೀ ಜಸಪತರಾಯ್ ಅವರ ತಿದ್ದುಪಡಿ ಸಂಖ್ಯೆ ೧೬೨೭ ಇದನ್ನು ಡಾ. ಅಂಬೇಡ್ಕರ್ ಅವರು ಸ್ವೀಕರಿಸಲು ಒಪ್ಪಿಕೊಂಡಿದ್ದಾರೆ. ಆ ಪ್ರಶ್ನೆಯು ಹೀಗಿದೆ.

"ವಿಧಿ ೮೫ ಖಂಡ (೪)ರಲ್ಲಿ 'ಸಂಸತ್ತಿನ ಒಂದು ಸದನ' ಆದ ನಂತರ 'ಇಲ್ಲವೆ ಅದರ ಯಾವುದೇ ಸಮಿತಿ' ಇವುಗಳನ್ನು ಸೇರಿಸತಕ್ಕದ್ದು.

ತಿದ್ದುಪಡಿಯು ಸ್ವೀಕೃತವಾಯಿತು.

ವಿಧಿ ೮೫ ಇದನ್ನು ಸಂವಿಧಾನದಲ್ಲಿ ಸೇರಿಸಲಾಯಿತು.

## ವಿಧಿ ೮೬

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** (ಮುಂಬಯಿ ಸಾಮಾನ್ಯ) : ಮಾನ್ಯರೆ, ನಾನು ನನ್ನ ಮಿತ್ರರಾದ ಶ್ರೀ ಲಾರಿ ಅವರು ತಂದ ತಿದ್ದುಪಡಿಯನ್ನು ಸ್ವೀಕರಿಸಲಾರೆನೆಂದು ತಿಳಿಸಲು ವಿಷಾದಿಸುತ್ತೇನೆ. ಈ ತಿದ್ದುಪಡಿ ಪ್ರಸ್ತಾಪಿಸಿದವರ ವಾದಕ್ಕೆ ದೀರ್ಘವಾದ ಉತ್ತರ ಕೊಡುವುದು ಅನವಶ್ಯಕವೆಂದು ನಾನು ಭಾವಿಸುತ್ತೇನೆ. ಇನ್ನೊಂದು ಕಡೆಯಿಂದ ಶ್ರೀ ಅನಂತಶಯನಂ ಅಯ್ಯಂಗಾರ್ ಮತ್ತು ಶ್ರೀ ಕೃಷ್ಣಮಾಚಾರಿ ಅವರು ಹೇಳಿದ್ದಕ್ಕೆ ಸಂಪೂರ್ಣ ಒಪ್ಪಿಗೆ ಕೊಟ್ಟರೂ ಈಗ ಅವರು ಹೇಳಿದ್ದರೆ ಹೆಚ್ಚಿಗೆ ಏನನ್ನೂ ಕೂಡಿಸುವುದು ಅಪೇಕ್ಷಣೀಯವಲ್ಲವೆಂದು ಹಾಗೂ ಸದನದ ವೇಳೆಯನ್ನು ವಿನಾಕಾರಣ ಹರಣಮಾಡುವುದು ಅಪೇಕ್ಷಣೀಯವಲ್ಲವೆಂದು ನಾನು ಭಾವಿಸುವೆನು. ಅವರು ಕೊಟ್ಟ ಉತ್ತರ ತುಂಬಾ ಸಮರ್ಪಕವೆಂದು ನನಗೆ ಅನಿಸುತ್ತದೆ.

ಆದಾಗ್ಯೂ ನಾನು ಶ್ರೀ ಸಂತಾನಂ ಅವರ ತಿದ್ದುಪಡಿ 'ಸಂವಿಧಾನ ಸಭೆ' ಈ ಪದಗಳನ್ನು 'ಭಾರತದ ಆಧಿಪತ್ಯವನ್ನು ಪಡೆದ ವಿಧಾನಸಭೆ' ಈ ಪದಗಳ ಬದಲಿಗೆ ಸೇರಿಸಲು ಒಪ್ಪಿಕೊಂಡಿದ್ದೇನೆ.

'ಶ್ರೀ ಸಂತಾನಂ ಅವರ ತಿದ್ದುಪಡಿಯ ಹೊರತಾಗಿ ಉಳಿದ ತಿದ್ದುಪಡಿಗಳು ತಿರಸ್ಕೃತವಾದವು. ವಿಧಿ ೮೬ ಇದನ್ನು ತಿದ್ದುಪಡಿಯಾದಂತೆ ಸಂವಿಧಾನದಲ್ಲಿ ಸೇರಿಸಲಾಯಿತು.

## ವಿಧಿ ೮೭

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ : ಮಾನ್ಯರೆ,** ನಾನು ಪ್ರಸ್ತಾಪಿಸುತ್ತೇನೆ. 'ವಿಧಿ ೮೮ರ ಖಂಡ (೨)ರಲ್ಲಿಯ 'ಎರಡು ಸದನಗಳು ಇರುತ್ತವೆ' ಎಂಬ ಪದಗಳಿಗೆ ಬದಲಾಗಿ ಸದನವು ಉಲ್ಲೇಖಿಸಿದ ಆ ಖಂಡದ ಉಪಖಂಡ (ಕ) ಈ ಪದಗಳನ್ನು ಸೇರಿಸತಕ್ಕದ್ದು.'

ಮಾನ್ಯರೆ, ಸ್ಪಷ್ಟೀಕರಣಕ್ಕಾಗಿ ಸದನಕ್ಕೆ ಉಲ್ಲೇಖಿಸಿ ಉಪಖಂಡ (ಕ) ಸೇರಿಸಲಾಗಿದೆ.

**ಮಾನ್ಯ ಅಧ್ಯಕ್ಷರು :** ತಿದ್ದುಪಡಿ ಸಂಖ್ಯೆ ೧೬೫೧ ಇದು ಇದರಲ್ಲಿ ಒಳಗೊಂಡಿದೆಯೆಂದು ನಾನು ಭಾವಿಸುತ್ತೇನೆ. (ತಿದ್ದುಪಡಿ ಸಂಖ್ಯೆ ೧೬೫೧ ಇದನ್ನು ಪ್ರಸ್ತಾಪಿಸಲಿಲ್ಲ.)

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ ನಾನು ಪ್ರಸ್ತಾಪಿಸುತ್ತೇನೆ.

"ವಿಧಿ ೮೮ರ ಉಪಖಂಡ (೨)ರಲ್ಲಿ ಕೊನೆಯ ಶಬ್ದದ ಮೊದಲು 'ದಿನಗಳು' ಪದ 'ಒಂದಾದ ಮೇಲೆ ಒಂದರಂತೆ' ಈ ಪದ ಸೇರಿಸತಕ್ಕದ್ದು.

(ತಿದ್ದುಪಡಿ ಸಂಖ್ಯೆ ೧೬೫೮ ಇದನ್ನು ಮಂಡಿಸಲಿಲ್ಲ)

ಸನ್ಮಾನ್ಯ ೮೮ರ ಖಂಡ (೪)ರಲ್ಲಿಯ ಪದಗಳು 'ಒಟ್ಟು ಸಂಖ್ಯೆಯ' ಇದನ್ನು ತೆಗೆದುಹಾಕಬೇಕು. ಮಾನ್ಯರೆ ನಾನು ಈ ಪರಂತುಕವನ್ನು ಕಿತ್ತುಹಾಕಲು ಒತ್ತಾಯಿಸುತ್ತಿಲ್ಲ. ನಾನು ಆ ತಿದ್ದುಪಡಿಯನ್ನು ಅಷ್ಟರಮಟ್ಟಿಗೆ ತಿದ್ದಬಯಸುವೆನು.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನನ್ನ ಸನ್ಮಿತ್ರರು ಈ ವಿಷಯವನ್ನು ಕರಡು ಸಮಿತಿಯ ವಿಚಾರಣೆಗೆ ಬಿಟ್ಟರೆ ನಾನು ಅವರಿಗೆ ತುಂಬಾ ಋಣಿಯಾಗುತ್ತೇನೆ. ಆ ಮೇಲೆ ನಾವು ಅದನ್ನು ತರಬಹುದು.

**ಸನ್ಮಾನ್ಯ ಶ್ರೀ ಕೆ. ಸಂತಾನಂ :** ಮಾನ್ಯರೆ, ನಾನು ಇದಕ್ಕೆ ಒಪ್ಪುತ್ತೇನೆ.

# ವಿಧಿ ೮೮

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನನ್ನ ಗೆಳೆಯರಾದ ಶ್ರೀ ಕಾಮತ್ ಅವರು ಇದಕ್ಕೆ ಮಂಡಿಸಿದ ಒಂದೇ ಒಂದು ತಿದ್ದುಪಡಿಯು ಇದ್ದು, ಇದಕ್ಕೆ ಉತ್ತರಿಸಬೇಕಾಗಿದೆ. ಅವರ ತಿದ್ದುಪಡಿ ಸಂಖ್ಯೆ ೧೬೫೬. ಆ ತಿದ್ದುಪಡಿಯ ಮೂಲಕ 'ಸಂವಿಧಾನದ ಉದ್ದೇಶಕ್ಕಾಗಿ' ಈ ಪದಗಳನ್ನು ಬಿಡಬೇಕೆಂದು ಕೇಳಿದ್ದಾರೆ. ನಾನು ವಿನಯಪೂರ್ವಕ ಹೇಳಬಯಸುವುದೇನೆಂದರೆ ಈ ಎಲ್ಲ ಪದಗಳು ತುಂಬಾ ಅವಶ್ಯಕವಿರುತ್ತದೆ. ಮತ್ತು ಅವುಗಳನ್ನು ಇಟ್ಟುಕೊಳ್ಳಲಿಕ್ಕೆ ಬೇಕು. ನಾನು ಹೀಗೆ ಹೇಳುವುದಕ್ಕೆ ಕಾರಣವೆಂದರೆ ವಿಧಿ ೮೭ ಖಂಡ (೨)ರ ಉಪಬಂಧ – ವ್ಯವಸ್ಥೆಯಲ್ಲಿ ಅದರಂತೆ ವಿಧಿ ೯೧ರಲ್ಲಿ ಇದನ್ನು ಕಾಣುತ್ತೇವೆ. ವಿಧಿ ೮೭ರ ಖಂಡ (೨)ರ ಮುಖ್ಯ ಉಪಬಂಧದಲ್ಲಿರುವುದೇನೆಂದರೆ ಪ್ರತಿಯೊಂದು ಮಸೂದೆಯು ಸ್ವತಂತ್ರವಾಗಿ ಪ್ರತಿಯೊಂದು ಸದನವು ಪ್ರತ್ಯೇಕವಾಗಿ ತನ್ನ ಸಭೆಯಲ್ಲಿ ತನ್ನ ಸದಸ್ಯರಿಂದ ಪಾಸಾಗತಕ್ಕದ್ದು. ಆಮೇಲೆ ಸಂವಿಧಾನದ ವಿಧಿ ೮೧ರ ಅನ್ವಯ ಈ ಮಸೂದೆಯನ್ನು ರಾಷ್ಟ್ರಪತಿಗಳ ಸಮ್ಮತಿಗಾಗಿ ಕಳುಹಿಸುವ ಅವಶ್ಯಕತೆಯು ಇರುತ್ತದೆ.

ನನ್ನ ಮಿತ್ರರಾದ ಶ್ರೀ ಕಾಮತರವರು ವಿಧಿ ೮೮ರಲ್ಲಿಯ ಉಪಬಂಧದ ವ್ಯವಸ್ಥೆಗಳು, ವಿಧಿ ೮೭ರ ಮುಖ್ಯ ಉಪಬಂಧಗಳಲ್ಲಿನ ವ್ಯವಸ್ಥೆಗಳಿಂದ ಅತಿಕ್ರಮಣ ವಿಷಯಾಂತರವಾದುದನ್ನು ಗಮನಿಸಬೇಕು. ಆದ್ದರಿಂದ ಯಾವುದೇ ಮಸೂದೆಯು ಎರಡೂ ಸದನಗಳು ಜಂಟಿಯಾಗಿ ಕುಳಿತು ಪಾಸುಮಾಡಿದೆವೆಂದು ವಿಧಿ ೮೭ರ ಖಂಡ (೨) ರ ಮುಖ್ಯ ಉಪಬಂಧಗಳಲ್ಲಿ ಏನೇ ಹೇಳಿದ್ದರೂ ಅದು ಅತಿಕ್ರಮಣ ಇಲ್ಲವೆ ವಿಷಯಾಂತರವಾದರೂ ಅದನ್ನು ಕಾಣಿಸುವುದು ಅವಶ್ಯವಿದೆ. ಆದ್ದರಿಂದ ನಾನು ವಿನಯಪೂರ್ವಕವಾಗಿ ಹೇಳುವುದೇನೆಂದರೆ 'ಈ ಸಂವಿಧಾನದ ಉದ್ದೇಶಗಳಿಗಾಗಿ' ಈ ಪದಗಳು ನನ್ನ ದೃಷ್ಟಿಯಲ್ಲಿ ಅವಶ್ಯವಿದ್ದು ಯಾವುದೇ ದೃಷ್ಟಿಯಿಂದ ಅನವಶ್ಯವಾಗುವುದಿಲ್ಲ.

ಮಾತನಾಡಿದ ಅನೇಕ ಜನರ ಅಭಿಪ್ರಾಯದಂತೆ ವಿಧಿ ೮೮ರ ಉಪಬಂಧಗಳಲ್ಲಿ ಒಳಗೊಂಡಿದ್ದರ ಬಗೆಗೆ, ಒಟ್ಟಾರೆ ನಾನು ಹೇಳಬಲ್ಲೆನೆಂದರೆ ಅವರು ವ್ಯಕ್ತಪಡಿಸಿದುದರಲ್ಲಿ ಕೆಲವು ಯೋಗ್ಯ ಕಾರಣಗಳಿವೆ. ಯಾಕೆಂದರೆ ಅಲ್ಲಿ ಒಂದು ರೀತಿಯ ಅಂಜಿಕೆಯು ಇದೆಯೆಂದು ಹೇಳಿದರು. ಆದರೆ ಉಳಿದ ಸದಸ್ಯರು ಎತ್ತಿ ತೋರಿಸಿದಂತೆ ಇದು ಯಾವುದೇ ರೀತಿ ಹೊಸ ಬಗೆಯ ಉಪಬಂಧವಲ್ಲ. ಇದು ಉಳಿದ ಬೇರೆ ಬೇರೆ ಸಂವಿಧಾನಗಳಲ್ಲಿಯೂ ಒಳಗೊಂಡಿದೆ ಹಾಗೂ ಆದ್ದರಿಂದ ಅವುಗಳಿಗೆ ನನ್ನ ಸೂಚನೆಯೇನೆಂದರೆ ಆ ವಿಧಿಯು ಈಗ ಇದ್ದಂತೆ ಇರಲು ಅನುಮತಿ ಕೊಡಲಿ. ಯಾವ ಸಂಶಯವೂ ಇರುವುದಿಲ್ಲ. ಸದನದ ಕೆಲವು ಸದಸ್ಯರು ಈ ವಿಧಿಯನ್ನು ಇನ್ನು ಮೇಲೆ ಸಂವಿಧಾನವು ಗೊತ್ತುಪಡಿಸಿದ ನಿರ್ದಿಷ್ಟ ಪ್ರಕ್ರಿಯೆಯ ಅನ್ವಯ ತಿದ್ದುಪಡಿಯನ್ನು ಮಾಡಿಕೊಳ್ಳಲಿ.

* * * * *

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ ಈ ವಿಧಿಯನ್ನು ಪರಿಶೀಲಿಸಲಾಗಿ ನನಗೆ ಅನಿಸುವುದೇನೆಂದರೆ, ಇದಕ್ಕೆ ಇನ್ನೂ ವಿಚಾರಿಸುವ ಅವಶ್ಯಕತೆಯು ಇದೆ. ಆದ್ದರಿಂದ ಇಂದು ಈ ವಿಧಿಯನ್ನು ಮತಕ್ಕೆ ಹಾಕಬೇಡಿರೆಂದು ವಿನಂತಿಸಿಕೊಳ್ಳುವೆನು.

**ಮಾನ್ಯ ಅಧ್ಯಕ್ಷರು :** ಈ ವಿಧಿಗೆ ನಾಲ್ಕು ತಿದ್ದುಪಡಿಗಳನ್ನು ಪ್ರಸ್ತಾಪಿಸಲಾಗಿದೆ. ಮೊದಲನೆಯ ತಿದ್ದುಪಡಿ ಸಂಖ್ಯೆ ೧೬೬೯ ಏನೆಂದರೆ ವಿಧಿ ೯೦ರ ಖಂಡ (೧)ರಲ್ಲಿ ಪದ 'ಒಂದೇ' ಇದನ್ನು ಕಿತ್ತುಹಾಕಬೇಕು.

ಶ್ರೀ ನಾಜಿರುದ್ದೀನ್ ಅಹ್ಮದ್ ಆಶಿಸುವುದೇನೆಂದರೆ ಆ ತಿದ್ದುಪಡಿಯ ಮಹತ್ವದ ಮೇಲೆ ಒತ್ತುಕೊಡುವುದು. ಅದನ್ನು ಕರಡು ಸಮಿತಿಯು ಅದರ ವಿಚಾರಣೆ ಮಾಡಬಹುದು. ಈ ಸಂಪೂರ್ಣ ವಿಧಿಯನ್ನು ಪುನಃ ವಿಚಾರಿಸಬಹುದು.

## ವಿಧಿ ೯೧

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಹೀಗೆ ಪ್ರಸ್ತಾಪಿಸುತ್ತೇನೆ. 'ವಿಧಿ ೯೧ಕ್ಕೆ ಉಪಬಂಧದಲ್ಲಿ' 'ಆರು ವಾರಗಳಿಗೆ ಮೀರದ' ಈ ಪದಗಳ ಬದಲಿಗೆ "ಎಷ್ಟು ಬೇಗನೆ ಸಾಧ್ಯವೋ" ಈ ಪದಗಳನ್ನು ಸೇರಿಸತಕ್ಕದ್ದು.

**ಶ್ರೀ ನಜೀರುದ್ದೀನ್ ಅಹ್ಮದ್ :** ಈ ತಿದ್ದುಪಡಿ ಸಂಖ್ಯೆ ೯೪ಕ್ಕೆ ನನ್ನದೊಂದು ತಿದ್ದುಪಡಿಯು ಇದೆ.

**ಮಾನ್ಯ ಅಧ್ಯಕ್ಷರು :** ಅದು ಒಂದು ಕರಡು ಸ್ವರೂಪದ್ದೆಂದು ನಾನು ಭಾವಿಸುತ್ತೇನೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ವಾಸ್ತವಿಕ ವ್ಯವಹಾರದಲ್ಲಿ ಅಂತರವಿರುತ್ತದೆ.

**ಮಾನ್ಯ ಅಧ್ಯಕ್ಷರು :** ಹಾಗೆ ನೀವು ಇದನ್ನು ಗಂಭೀರವಾದುದೆಂದು ಪರಿಗಣಿಸುವಿರಾ?

* * * * *

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಭಾಷೆಯಲ್ಲಿ ಸ್ವಲ್ಪ ಅಂತರವಿದೆ.

ಡಾ. ಅಂಬೇಡ್ಕರ್ ಅವರ ಪ್ರಸ್ತಾವನೆಯ ಭಾಷೆಯು ಉತ್ತಮವೆಂದು ನನಗೆ ಅನಿಸುತ್ತದೆ.

**ಮಾನ್ಯ ಅಧ್ಯಕ್ಷರು :** ನಾನು ಇದನ್ನು ಮತಕ್ಕೆ ಹಾಕುತ್ತೇನೆ. ಇದನ್ನು ಪ್ರಸ್ತಾಪಿಸುವ ಅವಶ್ಯಕತೆಯು ಇರುವುದಿಲ್ಲ. ತಿದ್ದುಪಡಿ ಸಂಖ್ಯೆ ೧೬೮೯ ಇದು ಸಹ ಡಾ. ಅಂಬೇಡ್ಕರ್ ಅವರು ತಂದ ಅದೇ ತಿದ್ದುಪಡಿ ಸಂಖ್ಯೆ ೧೬೮೮ರ ನಮೂನೆಯದು ಇದೆ. ನಾವು ಇದನ್ನು ಪ್ರಸ್ತಾಪಿಸಲಾಗಿದೆಯೆಂದು ತಿಳಿದುಕೊಂಡಿದ್ದೇವೆ. ಇದನ್ನು ಮಂಡಿಸುವ ಅವಶ್ಯಕತೆಯು ಇದೆಯೆ? ಅಲ್ಪ ಸ್ವಲ್ಪವಾದರೂ ಅಂತರವಿದ್ದರೆ ನೀವು ಅದನ್ನು ಮಂಡಿಸಬಲ್ಲಿರಿ.

* * * * *

**ಮಾನ್ಯ ಅಧ್ಯಕ್ಷರು :** ನಾನು ಈಗ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಡಾ. ಅಂಬೇಡ್ಕರ್ ಅವರೇ ನಿಮಗೆ ಏನಾದರೂ ಹೇಳುವುದಿದೆಯೇ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಇಲ್ಲಿ ಯಾವುದೇ ರೀತಿ ಉತ್ತರದ ಅವಶ್ಯಕತೆ ಇದೆಯೆಂದು ನನಗೆ ಅನಿಸುವುದಿಲ್ಲ.

ನಜೀರುದ್ದೀನ್ ಅಹ್ಮದ್ ಅವರ ತಿದ್ದುಪಡಿಯು ತಿರಸ್ಕೃತವಾಯಿತು.

* * * * *

**ಮಾನ್ಯ ಅಧ್ಯಕ್ಷರು :** ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

ಡಾ. ಅಂಬೇಡ್ಕರ್ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಡಾ. ಅಂಬೇಡ್ಕರ್ ಅವರ ತಿದ್ದುಪಡಿಗಳು ಸ್ವೀಕೃತವಾದವು. ಉಳಿದವುಗಳು ತಿರಸ್ಕೃತವಾದವು. ವಿಧಿ ೯೭ ತಿದ್ದುಪಡಿಯಾದಂತೆ ಸಂವಿಧಾನಕ್ಕೆ ಕೂಡಿಸಲಾಯಿತು

# ವಿಧಿ ೬೭ (ಅ)

**ಮಾನ್ಯ ಅಧ್ಯಕ್ಷರು :** ವಿಧಿ ೬೭(ಅ), ಇದನ್ನು ನಾವು ಬೇರೊಂದು ದಿನ ತೆಗೆದುಕೊಂಡು ಅದನ್ನು ಮುಂದಕ್ಕೆ ಹಾಕಿದ್ದನ್ನು ಈಗ ತೆಗೆದುಕೊಳ್ಳೋಣ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** (ಬಾಂಬೆ, ಸಾಮಾನ್ಯ) : ಮಾನ್ಯರೆ, ನಾನು ಈ ವಿಧಿಯನ್ನು ತಿರುಗಿ ತೆಗೆದುಕೊಳ್ಳಲು ಸಂಸತ್ತಿನ ಪರವಾನಗಿಯ ಸಲುವಾಗಿ ಈ ಪ್ರಸ್ತಾಪವನ್ನು ಮಂಡಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ಅವರು ಅದನ್ನು ಮಂಡಿಸಿಲ್ಲವೆಂದು ನಾನು ಭಾವಿಸುತ್ತೇನೆ ಮತ್ತು ಹಾಗೆಯೇ ಅದನ್ನು ತಿರುಗಿ ತೆಗೆದುಕೊಳ್ಳುವ ಪ್ರಶ್ನೆಯೇ ಇರುವುದಿಲ್ಲ.

**ಶ್ರೀ ಬಿ. ಪೊಕ್ಕರಸಾಹೀಬ** (ಮದ್ರಾಸು, ಮುಸ್ಲೀಮ್) : ಇಲ್ಲ, ಇದನ್ನು ತೆಗೆದುಕೊಂಡಿದ್ದೆವು ಮತ್ತು ಇದು ಈ ಸಂಸತ್ತಿನ ಒಡೆತನದಲ್ಲಿದೆ.

**ಸನ್ಮಾನ್ಯ ಸದಸ್ಯರು :** ಆದ್ದರಿಂದ ಅದನ್ನು ತಿರುಗಿ ತೆಗೆದುಕೊಳ್ಳುವುದಕ್ಕೆ ತಮ್ಮ ಕಾರಣಗಳನ್ನು ಕೊಡಲಿ.

**ಮಾನ್ಯ ಅಧ್ಯಕ್ಷರು :** ಅಹುದು, ನಾನು ಒಂದು ತಪ್ಪು ಮಾಡಿದೆ. ಅದಕ್ಕಾಗಿ ವಿಷಾದಿಸುತ್ತೇನೆ. ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್‌ರವರು ಈ ವಿಧಿಯನ್ನು ತಿರುಗಿ ತೆಗೆದುಕೊಳ್ಳುವುದಕ್ಕೆ ತಮ್ಮ ಕಾರಣಗಳನ್ನು ಕೊಡಲಿ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನನ್ನ ಕಾರಣ ಹೀಗಿದೆ. ಹಿಂದಿನ ಸಂದರ್ಭದಲ್ಲಿ ನಾನು ವಿವರಿಸಿದಂತೆ ಕೆಲವು ಜನರನ್ನು ಸಂಸತ್ತಿನ ಸದಸ್ಯರೆಂದು ನಾಮಕರಣ ಮಾಡಲು ನಾವು ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಮೂಲ ಪ್ರಸ್ತಾವನೆಯಲ್ಲಿ ಹದಿನೈದು ಜನರ ನಾಮಕರಣವಿತ್ತು. ನಂತರ ಈ ಹದಿನೈದು ಜನರನ್ನು ಎರಡು ವರ್ಗಗಳಾಗಿ ವಿಭಾಗಿಸಲ್ಪಟ್ಟಿತ್ತು. ಉದಾ: ಹನ್ನೆರಡು ಜನರು ಸಾಹಿತ್ಯ, ವಿಜ್ಞಾನ, ಕಲೆ, ಸಮಾಜಸೇವೆ ಮುಂತಾದವುಗಳು ಮತ್ತು ಇನ್ನೂ ಹೆಚ್ಚಿನ ಮೂರು ಜನರನ್ನು ನಾಮಕರಣ ಮಾಡಲು ಮತ್ತು ಯಾವುದೇ ನಿರ್ದಿಷ್ಟ ಸಂಸತ್ತಿಗೆ ಸಹಾಯ ಮಾಡಲು ಮತ್ತು ಉಪದೇಶ ಮಾಡಲು ವ್ಯವಸ್ಥೆ ಮಾಡಬೇಕಾಗಿದೆ. ಮಾನ್ಯರೆ, ನನಗೆ ಅನಿಸಿದಂತೆ ಈಗಾಗಲೇ ವ್ಯವಸ್ಥೆ ಮಾಡಿರುವ ವಿಧಿ ೬೭ ಇದು ರಾಷ್ಟ್ರಪತಿಗಳಿಗೆ ಸಂಸತ್ತಿನಲ್ಲಿ ಹನ್ನೆರಡು ಜನ ಸದಸ್ಯರನ್ನು ನಾಮಕರಣ ಮಾಡಲು ಅನುಮತಿ ಕೊಡುತ್ತದೆ. ಈಗ ಇರುವ ವ್ಯವಸ್ಥೆಯು ಹೊಸ ವಿಧಿಯಲ್ಲಿ ೬೭–ಅ ದಲ್ಲಿಯೇ ಇರುತ್ತದೆ. ಸೇವೆಯನ್ನು ಸಲ್ಲಿಸುವ ಜನರನ್ನು ನಾಮಕರಣ ಮಾಡಬಹುದು. ಒಂದು ವೇಳೆ ವಿಧಿ ೬೭, ಇದು ಪಾಸಾಗಿ, ಕಾನೂನು ಆದರೆ ಇದು ಸಹ ಸೇವೆಯನ್ನು ಸಲ್ಲಿಸಿದ ಜನರನ್ನು ವಿಧಿ ೬೭ರ ಅನ್ವಯ ನಾಮಕರಣ ಮಾಡಬಹುದು ಮತ್ತು ಆದ್ದರಿಂದ ನಾಮಕರಣ ವಿಧಿ ೬೭–ಅ ದ ಅನ್ವಯ ಕೇವಲ ನಾಮಕರಣ ಮಾಡುವ ಪದ್ಧತಿಯು ವಿಧಿ ೬೭ರ ಪ್ರತಿರೂಪವಾಗಿದೆ. ಇದಲ್ಲದೆ ಒಂದು ಸ್ವತಂತ್ರ ಸಂಸತ್ತು ಯಾವುದು ಸಂಪೂರ್ಣವಾಗಿ ಪರಮಾಧಿಕಾರ ಉಳ್ಳದ್ದು ಮತ್ತು ಅದು ಬಹಳಷ್ಟು ನಾಮಕರಣ ವಸ್ತುವಾಗಿರಬಾರದು. ನಮಗೆ ಈಗಾಗಲೇ ಹನ್ನೆರಡು ಇನ್ನೂ ಕೆಲವು ನಾಮಕರಣಗಳು ಸಹ ಆಂಗ್ಲೋ–ಇಂಡಿಯನ್ನರು ಮತ್ತು ಅದರ ಒಟ್ಟು ಸಂಖ್ಯೆಗೆ ಕೂಡಿಸಬೇಕೆಂದು ಅನಿಸಿದ್ದರಿಂದ ಜನಪ್ರಿಯ ಮತ್ತು ಪ್ರಾತಿನಿಧಿಕ ಸಂಸದೀಯ ಲಕ್ಷಣಕ್ಕೆ ಅಗೌರವವೆಂದು ಭಾವಿಸಲಾಗುವುದು. ಆ ಕಾರಣದಿಂದಲೇ ನಾನು ವಿಧಿ ೬೭–ಅ ಇದನ್ನು ತಿರುಗಿ ತೆಗೆದುಕೊಳ್ಳಲು ಇಚ್ಛಿಸುತ್ತೇನೆ.

ವಿಧಿ ೬೭–ಅ ಇದನ್ನು ಸಂಸತ್ತಿನ ಅನುಮತಿಯೊಂದಿಗೆ ತಿರುಗಿ ಪಡೆಯಲಾಯಿತು.

ವಿಧಿ ೯೨ ರಿಂದ ೯೯ರವರೆಗಿನ ವಿಷಯ ನಿರೂಪಣೆ

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನಾವು ಈಗ ವಿಧಿ ೧೦೦ ರಿಂದ ಪ್ರಾರಂಭಿಸೋಣ.

**ಮಾನ್ಯ ಅಧ್ಯಕ್ಷರು :** ಹಣಕಾಸು ಹಾಗೂ ಹಣಕಾಸಿನ ಮಸೂದೆಗೆ ಸಂಬಂಧಿಸಿದಂತೆ ಅವುಗಳನ್ನು ಇನ್ನೂ ಕ್ರೋಡೀಕರಿಸುವ ಚರ್ಚೆಗೆ ಅನುಕೂಲವಾಗುವಂತೆ ಮಾಡಲು ಈಗ ವಿಧಿ ೯೨ರಿಂದ ೯೯ರವರೆಗಿನ ಮೇಲಣ ಚರ್ಚೆಯನ್ನು ತಡೆಹಿಡಿಯಲಾಗಿದೆಯೆಂದು ನಾನು ಗ್ರಹಿಸುತ್ತೇನೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅಹುದು, ಅದರ ಸ್ಥಿತಿ ಹೀಗಿದೆ.

ವಿಧಿ ೯೦, ಇದರ ಚರ್ಚೆಯ ಕಾಲಕ್ಕೆ ನಾನು ಸೂಚಿಸಿದ್ದೇನೆಂದರೆ ಚರ್ಚೆಯನ್ನು ಮುಕ್ತಾಯಗೊಳಿಸಬೇಡಿರಿ ಮತ್ತು ವಿಧಿಯನ್ನು ಮತಕ್ಕೆ ಹಾಕಬೇಡಿರಿ ಎಂದು ಹೇಳಿದೆ. ಯಾಕೆಂದರೆ, ಕೊನೆಯ ಗಳಿಗೆಯಲ್ಲಿ ನನಗೆ ಕಂಡುಬಂದುದೇನೆಂದರೆ, ಯಾವುದನ್ನು ಸರಿಪಡಿಸಲು ಅವಶ್ಯವೆಂದು ನಾನು ಭಾವಿಸಿದ್ದೇನೋ ಆ ವಿಧಿಯಲ್ಲಿ ಒಂದು ನ್ಯೂನತೆಯು ಕಂಡುಬಂದಿತು. ಈಗ ನ್ಯೂನತೆಯನ್ನು ಸರಿಪಡಿಸಬೇಕಾದರೆ ವಿಧಿ ೯೬ ರಿಂದ ೯೯ ಇವುಗಳ ಪುನಃ ವಿಚಾರಣೆಯನ್ನು ಆ ವಿಧಿಯಲ್ಲಿ ಮಾಡಬೇಕು. ೯೨ ರಿಂದ ೯೯ ಇವುಗಳ ಇನ್ನೂ ವಿಚಾರಣೆ ಮಾಡುವುದಿದೆ. ಆದ್ದರಿಂದ ಈ ವಿಧಿಗಳನ್ನು ಸದ್ಯಕ್ಕೆ ತಡೆಹಿಡಿಯಬೇಕು. ಆದರೆ ನಾವು ಈಗ ವಿಧಿ ೧೦೦ ಇದನ್ನು ಪ್ರಾರಂಭಿಸೋಣ.

(ವಿಧಿ ೧೦೦ ಇದನ್ನು ಸ್ವೀಕರಿಸಲಾಯಿತು ಮತ್ತು ಡಾ. ಅಂಬೇಡ್ಕರ್ ಅವರ ಸೂಚನೆಯ ಮೇರೆಗೆ ಸಂವಿಧಾನಕ್ಕೆ ಕೂಡಿಸಲಾಯಿತು)

## ಅನುಚ್ಛೇದ ೧೦೧

**ಸನ್ಮಾನ್ಯ ಡಾ। ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ಶ್ರೀ ಕಾಮತ್ ಅವರು ತಂದ ತಿದ್ದುಪಡಿಯನ್ನು ಕುರಿತು ನನಗೆ ಅನಿಸುವಂತೆ ಇದು ಅವಶ್ಯವಿರುವುದಿಲ್ಲ. ಯಾಕೆಂದರೆ ಸಂಸತ್ತಿನ ವ್ಯವಹರಣೆಗಳನ್ನು ಕಾನೂನುಬದ್ಧವಾಗಿ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದೇ? ಆದ್ದರಿಂದ ಸಂಸತ್ತಿನ ವ್ಯವಹರಣೆಗಳನ್ನು ಕಾನೂನುಬದ್ದವಾಗಿ ನ್ಯಾಯಾಲಯದಲ್ಲಿ ಪ್ರಶ್ನಿಸಬಲ್ಲೆವು. ಮತ್ತು ಕಾನೂನಿನ ಮಾನ್ಯತೆಯನ್ನು ಕೊಡುವುದು ನ್ಯಾಯಾಲಯವು ಆದ್ದರಿಂದ ಶ್ರೀ ಕಾಮತ್ ಅವರು ತಿದ್ದುಪಡಿಯಲ್ಲಿ ಕಾಣಿಸಿದ ಪದಗಳು ಅನವಶ್ಯಕ.

ನಾನು ವಿವರಿಸಿದ ಕಾರಣಗಳಿಗಾಗಿ ಕಾನೂನು ಬದ್ಧವಾಗಿ ಕಾರ್ಯಕಲಾಪಗಳನ್ನು ಪ್ರಶ್ನಿಸಲು ಇರುವುದು ಎಂದರೆ ನ್ಯಾಯಾಲಯ. ಸಂಸತ್ತಿನ ವ್ಯವಹರಣೆಗಳನ್ನು ಕಾನೂನು ಬದ್ಧವಾಗಿ ಮತ್ತು ಕಾನೂನಿನ ಪರಿಹಾರಗಳನ್ನು ಪಡೆಯಬೇಕಾದರೆ ಅದು ರಾಷ್ಟ್ರಪತಿಗಳ ಇಲ್ಲವೆ ಸಭಾಧ್ಯಕ್ಷರ ವಿರುದ್ಧ ಇಲ್ಲವೆ ಯಾವುದೇ ಅಧಿಕಾರಿ ಇಲ್ಲವೆ ಸದಸ್ಯನ ವಿರುದ್ಧ ನ್ಯಾಯಾಲಯದಲ್ಲಿ ಮಾಡಬೇಕು. ಆದ್ದರಿಂದ ಸ್ಥಳಗಳನ್ನು ನಿರ್ದೇಶಿಸುವುದು ಈ ವಿಧಿಯ ಪಕ್ಕದ ಬದಿಯಲ್ಲಿ ಬರೆದ ಟಿಪ್ಪಣಿ ಇದನ್ನು ಸ್ಪಷ್ಟಪಡಿಸುತ್ತವೆಂಬುದನ್ನು ಶ್ರೀ ಕಾಮತರು ನೋಡಬಹುದು. ನನ್ನ ಗೆಳೆಯರಾದ ಶ್ರೀ ನಜೀರುದ್ದೀನ್ ಅಹ್ಮದ್ ಅವರ ತಿದ್ದುಪಡಿಯನ್ನು ಕುರಿತು ಇಂತಹ ಉಪಖಂಡ (೨) ರಲ್ಲಿಯ ಮಹತ್ವದ ಪದಗಳು ಯಾರಲ್ಲಿ ಅಧಿಕಾರಗಳು ನಿಹಿತವಾಗಿರುತ್ತವೆ. ಈ ಪದಗಳ ಅರ್ಥವು ಅವರಿಗೆ ಆಗಿಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್ :** ಆಜ್ಞೆಯನ್ನು ನಡೆಯಿಸಿಕೊಂಡು ಹೋಗುವುದಕ್ಕೆ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಇಲ್ಲ, ಅಧಿಕಾರಿ ಸಲುವಾಗಿ ಇಲ್ಲವೆ ಸಂಸತ್ತಿನ ಸದಸ್ಯ ಅಧಿಕಾರವನ್ನು ನಿಹಿತಗೊಳಿಸಲಾಗಿದೆ. ಅಂತಹ ಜನರ ಉಪಕುಲಮು (೨)ರಲ್ಲಿ ಸಂರಕ್ಷಿಸಲಾಗಿದೆ. ಸಭಾಧ್ಯಕ್ಷರು ಈಗಾಗಲೇ ಒಬ್ಬ ಅಧಿಕಾರಿ ಮತ್ತು ಒಬ್ಬ ಸದಸ್ಯನಾಗಿದ್ದಾರೆ. ಅವರಿಗೆ ಅಧಿಕಾರಗಳನ್ನು ಅನುಗ್ರಹಿಸಬೇಕಾಗಿಲ್ಲ. ಸಂವಿಧಾನವು ಅವನಿಗೆ ಅಧಿಕಾರವನ್ನು ಅನುಗ್ರಹಿಸಿದೆ. ಆದ್ದರಿಂದ ಈ ಸಂಗತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಇದು ಕೇವಲ ಉಳಿದ ಸದಸ್ಯ ಹೇಳಬೇಕೆಂದರೆ ಸಭಾಧ್ಯಕ್ಷನನ್ನು ಹೊರತುಪಡಿಸಿ ಇಲ್ಲವೆ ಉಪಾಧ್ಯಕ್ಷ ಯಾರೇ ಇರಲಿ ಯಾರನ್ನು ಸಂರಕ್ಷಿಸಬೇಕೋ ಅವರು, ಆದ್ದರಿಂದ ಪದ 'ಬೇರೆ' ಇದು ಬಹಳ ಮಹತ್ವದ್ದು ಇದೆ.

**ಮಾನ್ಯ ಅಧ್ಯಕ್ಷರು:** "ಇಲ್ಲವೆ ಆಜ್ಞೆ ಮಾಡುವುದರ ಸಲುವಾಗಿ" ಈ ಪದಗಳ ಪರಿಣಾಮವೇನು.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಸಂಸತ್ತಿನಲ್ಲಿ ಜಗಳ ನಡೆದಿದೆಯೆಂದು ತಿಳಿಯಿರಿ, ನಾನು ಆ ರೀತಿಯಲ್ಲಿ ಹೇಳುವುದಿಲ್ಲ. ಆದರೆ ಒಂದು ಜಗಳ ನಡೆದಿದೆಯೆಂದು ತಿಳಿಯಿರಿ. ಸಭಾಧ್ಯಕ್ಷರಿಗೆ ಕೆಲ ಸದಸ್ಯರನ್ನು ಜಗಳ ಬಿಡಿಸಲು ಯಾವ ಅಧಿಕಾರಿಯೂ ತತ್‌ಕ್ಷಣದಲ್ಲಿ ಸಿಗುತ್ತಿಲ್ಲ. ಬೇರೆ ಕೆಲವು ಸದಸ್ಯರು ಅಲ್ಲಿ ಇದ್ದವರಿಗೆ ಆ ಗುದ್ದಾಡುವ ಸದಸ್ಯರನ್ನು ಬಿಡಿಸಲು ಅಧ್ಯಕ್ಷನು ಹೇಳುತ್ತಾನೆ.

**ಮಾನ್ಯ ಅಧ್ಯಕ್ಷರು:** ಇಲ್ಲವೆ ಸದನದ ಸದಸ್ಯನಾಗಿದ್ದರಿಂದ ಯಾವುದೇ ಅಧಿಕಾರಿಯು ಇವರ ಅನ್ವಯ ಬರುವನೆ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** 'ಅಧಿಕಾರಿ' ಅಲ್ಲಿ ಇರುತ್ತಾರೆ.

**ಶ್ರೀ ಎಚ್.ವಿ. ಕಾಮತ್ :** ಇನ್ನಷ್ಟು ಸ್ಪಷ್ಟೀಕರಣಕ್ಕಾಗಿ ನಾನು ಕೇಳಬಹುದೇ? ಶ್ರೀ ಸಂತಾನಂ ಅವರು ನನ್ನ ತಿದ್ದುಪಡಿಯನ್ನು ಉಲ್ಲೇಖಿಸಿ ಯಾವುದೇ ತಿದ್ದುಪಡಿಯ ಸಿಂಧುತ್ವ ಇದನ್ನು ಕೇವಲ ಕಾನೂನಿನ ನ್ಯಾಯಾಲಯದಲ್ಲಿ ಮಾತ್ರ ಪ್ರಶ್ನಿಸಬಹುದೆಂದು ಹೇಳಿದರು. ಆದರೆ ಹಾಗೆಯೇ ವಿಧಾನ ಮಂಡಲವೂ ಸಹ. ಡಾ॥ ಬಿ.ಆರ್. ಅಂಬೇಡ್ಕರ್ ಅವರದು ಅವರೊಂದಿಗೆ ಸಹಮತವಿದೆಯೇ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಕೊಟ್ಟ ವಿವರಣೆಗೆ ನಾನು ಹೊಣೆಗಾರನಿದ್ದೇನೆ.

**ಶ್ರೀ ಎಚ್.ಬಿ. ಕಾಮತ್ :** ಡಾ॥ ಬಿ.ಆರ್. ಅಂಬೇಡ್ಕರ್ ಅವರು ಎತ್ತಿದ ಬೇರೆ ವಿಷಯ ಕುರಿತು ಉಪ ತಲೆಬರೆಹ ಸ್ಪಷ್ಟವಿದೆ ಎಂಬುದನ್ನು ಕುರಿತು ನಾನು ಮತ್ತೊಂದು ಸ್ಥಾನವನ್ನು ಎತ್ತಿ ತೋರಿಸಲೇಬೇಕಾಗಿದೆ.

ಉದಾ: ವಿಧಾನಸಭೆ ಹೇಳಿದ್ದೇನೆಂದರೆ ಪಕ್ಷದ ತಲೆಬರಹಗಳು ಕಾನೂನು ಕುರಿತು ಏನೂ ಸಂಬಂಧವಿಲ್ಲ. ಹೀಗಿರುವಾಗ ಆ ವಿಧಿಗಳು ಇಲ್ಲವೆ ಕಲಮುಗಳನ್ನು ಪಕ್ಷದ ತಲೆಬರಹ ಉಲ್ಲೇಖವಿಲ್ಲದೆ ತೆಗೆದುಕೊಳ್ಳಬೇಕು. ಇದು ಹೀಗೆ ಇರುವಾಗ ನೀವು, ಪಕ್ಕದ ತಲೆಬರಹ ಎಂದಿದ್ದರೆ ಆ ವಿಧಿ ಅರ್ಥವು ನನ್ನ ಮನಸ್ಸಿಗೆ ಸ್ಪಷ್ಟವಾಗುವುದಿಲ್ಲ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಷಯ ಕುರಿತು ಎರಡು ಅಭಿಪ್ರಾಯಗಳಿವೆ. ಒಂದು ಅಭಿಪ್ರಾಯದಂತೆ ಪಕ್ಕದ ಟಿಪ್ಪಣಿ ಕಲಮಿನ ಭಾಗವಲ್ಲ ಮತ್ತೊಂದು ಅಭಿಪ್ರಾಯದಂತೆ ಪಕ್ಕದ ಟಿಪ್ಪಣಿ ಉದಾಹರಣೆಗೆ ಶ್ರೀ ಮಾವಳಂಕರ್ ಅವರು ಮುಂಬೈಯಲ್ಲಿ ಅಧ್ಯಕ್ಷರಾಗಿದ್ದಾಗ ಪಕ್ಕದ ಟಿಪ್ಪಣಿಯು ಕಲಮಿನ ಭಾಗವಲ್ಲವೆಂದರು. ಆದರೆ ಮುಂಬೈ ಶಾಸನ ಸಭೆಯು ಇತ್ತಿತ್ತಲಾಗಿ ಹೇಳಿದ್ದೇನೆಂದರೆ ಪಕ್ಕದ ಟಿಪ್ಪಣಿಯು ಕಲಮಿನ ಭಾಗವೆಂದೇ ಹೇಳಿತು. ಯಾಕೆಂದರೆ ಇದು ಕಲಮಿನ ಅರ್ಥಕ್ಕೆ ಕೀಲಿಕೈ ಇದ್ದಂತೆ.

(ಇರಡೂ ತಿದ್ದುಪಡಿಗಳು ತಿರಸ್ಕೃತವಾದವು. ವಿಧಿ ೧೦೧ ಇದನ್ನು ಸಂವಿಧಾನದಲ್ಲಿ ಕೂಡಿಸಲಾಯಿತು)

## ವಿಧಿ ೧೦೨

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ನನ್ನ ಗೆಳೆಯರಾದ ಶ್ರೀ ಪಂಡಿತ ಕುಂಜ್ರು ಕೆಲವು ಮೂಲಭೂತ ತಕರಾರುಗಳನ್ನು ಈ ವಿಧಿ ೧೦೨ರ ಉಪಬಂಧಗಳಲ್ಲಿ ಒಳಗೊಂಡಿರುವುದನ್ನು ಎತ್ತಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಹೇಳಿದ್ದೇನೆಂದರೆ ನಿಜವಾಗಿಯೂ ನಾವು ಭಾರತ ಸರಕಾರದ ಅಧಿನಿಯಮ ೧೯೩೫ರಲ್ಲಿಯದನ್ನು ಈ ದೇಶದಲ್ಲಿರುವ ಎಲ್ಲಾ ಪಕ್ಷಗಳು ಸಂಕ್ಷಿಪ್ತಗೊಳಿಸಿ ಪ್ರತಿರೂಪ ಮಾಡಿದ್ದಾರೆ. ನನ್ನ ಮಿತ್ರರಾದ ಪಂಡಿತ ಕುಂಜ್ರು ಅವರು ಭಾರತ ಸರಕಾರದ ಅಧಿನಿಯಮ ೧೯೩೫ ರಲ್ಲಿ ಎರಡು ಭಿನ್ನ ಉಪಬಂಧಗಳಿವೆಯೆಂಬುದನ್ನು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ನನಗೆ ಅನಿಸುತ್ತದೆ. ಒಂದು ಸರಣಿಯ ಉಪಬಂಧಗಳು ಭಾರತ ಸರಕಾರದ ಅಧಿನಿಯಮ ಕಲಂ ೪೨ರ ಉಪಬಂಧಗಳು ಗವರ್ನರ್ ಜನರಲ್ ಅವರಿಗೆ ಅಧ್ಯಾದೇಶ ಹೊರಡಿಸುವ ಅಧಿಕಾರ. ಯಾವುದು ಅವರ ಕರ್ತವ್ಯ ನಿರ್ವಹಣೆಗೆ ಅವಶ್ಯವೆಂದು ತಿಳಿಯಲಾಗಿತ್ತು. ಅವುಗಳನ್ನು ಅವನ ಮೇಲೆ ಒತ್ತಾಯದಿಂದ ಸಂವಿಧಾನವು ಹೇರಿತು. ಯಾವುದನ್ನು ಅವನು ತನ್ನ ವಿವೇಚನೆಯಲ್ಲಿ ಮತ್ತು ತನ್ನ ವೈಯಕ್ತಿಕ ತೀರ್ಪಿನಂತೆ ನಡೆದುಕೊಳ್ಳಬಹುದು. ಅಧ್ಯಾದೇಶಗಳಲ್ಲಿ ಹೊರಡಿಸಲು ಗವರ್ನರ್ ಜನರಲ್ ಅವರಿಗೆ ಕಲಂ ೪೩ರಲ್ಲಿ ಅವರಿಗೆ ಅವಕಾಶ ಕೊಡಲಾಗಿದೆ. ಆಗ ವಿಧಾನ ಮಂಡಳವನ್ನು ಸಂಪೂರ್ಣವಾಗಿ ಹೊರಗಿಡಲಾಗಿದೆ. ಅವರು ಬೇಕಾದುದನ್ನು ಮಾಡಬಹುದು. ಅವರು ತನ್ನ ಮನಸ್ಸಿಗೆ ಬಂದಂತೆ ಮಾಡಬಹುದು. ಅವನಿಗೆ ತನ್ನ ವಿಶೇಷ ಕಾರ್ಯಗಳನ್ನು ಮಾಡಲು ಅವಶ್ಯವೆಂದು ಆಗ ವಿಧಾನಮಂಡಳವನ್ನು ಸಂಪೂರ್ಣವಾಗಿ ಹೊರಗಿಡಲಾಗಿದೆ. ಅವರು ಬೇಕಾದುದನ್ನು ಮಾಡಬಹುದು. ಅವರು ತನ್ನ ಮನಸ್ಸಿಗೆ ಬಂದಂತೆ ಮಾಡಬಹುದು. ವಿಷಯ ಹೀಗಿದೆ: ಕಲಂ ೪೩ ರಲ್ಲಿ ಗವರ್ನರ್ ಜನರಲ್ ಅವರು ಹೊರಡಿಸುವ ಅಧ್ಯಾದೇಶಗಳನ್ನು ಸಂಸತ್ತು ಅಧಿವೇಶನದಲ್ಲಿದ್ದರೂ ಸಹ ಹೊರಡಿಸಬಹುದು. ಅವರಿಗೆ ಶಾಸಕಾಂಗಕ್ಕೆ ಸಮಾನಾಂತರವಾದ ಕಾನೂನಾತ್ಮಕ ಅಧಿಕಾರ ಕಲಂ ೪೩ ಉಪಬಂಧಗಳಲ್ಲಿ ಇದ್ದೀತು. ಈಗಿನ ವಿಧಿ ೧೦೨ ರಲ್ಲಿಯ ಉಪಬಂಧಗಳು ಭಾರತ ಸರಕಾರದ ಅಧಿನಿಯಮದ ಕಲಂ ೪೩ರಲ್ಲಿ ಇದ್ದ ಉಪಬಂಧಗಳಂತೆ ಇರುವುದಿಲ್ಲವೆಂಬುದನ್ನು ನಾವು ಕಾಣಬಹುದು. ರಾಷ್ಟ್ರಪತಿ ಆದ್ದರಿಂದ ಗವರ್ನರ್ ಜನರಲ್‌ಗೆ ಕಲಂ ೪೩ ರ ಅನ್ವಯ ಇದ್ದ ಸ್ವತಂತ್ರವಾಗಿ ಕಾನೂನು ಮಾಡುವ ಅಧಿಕಾರ ಕೊಟ್ಟಿಲ್ಲ. ಅಧಿವೇಶನ ನಡೆದಿರುವಾಗ ಅವನಿಗೆ ಈ ಅನುಚ್ಛೇದದ ಅಡಿಯಲ್ಲಿ ಅಧ್ಯಾದೇಶ ಹೊರಡಿಸಲು ಅಧಿಕಾರವಿಲ್ಲ. ನಾವು ಒಟ್ಟು ಮಾಡುವುದೇನೆಂದರೆ ಈ ಅಧಿಕಾರಗಳನ್ನು ಕಲಂ ೪೨ ರ ಅಡಿಯಲ್ಲಿ ಗವರ್ನರ್ ಜನರಲ್ ಅವರಿಗೆ ಕೊಟ್ಟಂತೆ, ವಿಧಿ ೧೦೨ ಉಪಬಂಧಗಳ ಅನ್ವಯ ರಾಷ್ಟ್ರಪತಿಗಳಿಗೆ ಕೊಡಲಾಗಿದೆ. ಅಧಿವೇಶನವು ವಿರಾಮ ಕಾಲದಲ್ಲಿದ್ದಾಗ ಮಾತ್ರ ಆದರೆ ಅಧಿವೇಶನ ನಡೆದ ಕಾಲಕ್ಕೆ ಅಲ್ಲ. ಆಗ ಮಾತ್ರ ವಿಧಿ ೧೦೨ ರಲ್ಲಿ ಒಳಗೊಂಡ ಉಪಬಂಧಗಳನ್ನು ಉಪಯೋಗಿಸಬಹುದು. ವಿಧಿ ೧೦೨ರಲ್ಲಿ ಒಳಗೊಂಡ ಉಪಬಂಧಗಳ ಕೇಂದ್ರ ಶಾಸಕಾಂಗ ಯಾವುದೇ ಅಧಿಕಾರವನ್ನು ಅವರಿಗೆ ದಯಪಾಲಿಸಿಲ್ಲ. ಅವರಿಗೆ ಈ ಅಧಿಕಾರ ಇರುವುದಿಲ್ಲ. ಯಾಕೆಂದರೆ ಅವನಿಗೆ ವಿಶೇಷ ಹೊಣೆಗಾರಿಕೆಯು ಇರುವುದಿಲ್ಲ. ಅವರಿಗೆ ವಿವೇಚನೆ ಮತ್ತು ತನ್ನದೇ ಆದ ವೈಯಕ್ತಿಕ ತೀರ್ಪು ಇರುವುದಿಲ್ಲ. ಇದರ ಪರಿಣಾಮವಾಗಿ ನಾನು ವಿನಯಪೂರ್ವಕ ಹೇಳಬಯಸುವುದೇನೆಂದರೆ, ನನ್ನ ಮಿತ್ರರಾದ ಪಂಡಿತ ಕುಂಜ್ರು ಅವರು ಈ ವಿಧಿ ಕುರಿತು ಮಾಡಿದ ವಾದವೂ ೧೦೨ ರಲ್ಲಿ ಉಪಬಂಧಗಳಿಗೆ ಬಹುದೂರ ಹೋದವು. ನಾನು ಹೇಳಬೇಕೆಂದರೆ ಈ ವಿಧಿಯಲ್ಲಿ ಸ್ವಲ್ಪಮಟ್ಟಿಗೆ ಸದೃಶ್ಯವಾಗಿರುವ ಭಾಷೆಯನ್ನು

ಉಪಯೋಗಿಸುತ್ತಿದ್ದಾರೆ. ಬ್ರಿಟಿಷರ ತುರ್ತುಪರಿಸ್ಥಿತಿ ಅಧಿಕಾರ ಅಧಿನಿಯಮ ೧೯೨೦ ರಲ್ಲಿಯ ಉಪಬಂಧಗಳಿಗೆ ನಾನು ಬಹಳ ಎಚ್ಚರಿಕೆಯಿಂದ ಭಾಷೆ ಉಪಯೋಗಿಸುತ್ತಿದ್ದೇನೆ. ಈ ಅಧಿನಿಯಮದ ಅಡಿಯಲ್ಲಿ ಅರಸನು ಸಹ ಉದ್ಘೋಷಣೆಯನ್ನು ಹೊರಡಿಸುವ ಅಧಿಕಾರವನ್ನು ಹೊಂದಿರುತ್ತಾನೆ ಮತ್ತು ಯಾವಾಗ ಉದ್ಘೋಷಣೆಯೊಂದನ್ನು ಹೊರಡಿಸಿದನೋ ಆಗ ಕಾರ್ಯಾಂಗವು ವಿನಿಮಯಗಳನ್ನು ಅಂತಹ ಯಾವುದೇ ವಿಷಯ ಜಾರಿಗೊಳಿಸಲು ಹೊರಡಿಸಬೇಕಾಗುತ್ತದೆ. ಮತ್ತು ಸಂಸತ್ತು ಅಧಿವೇಶನ ಇಲ್ಲದಿದ್ದಾಗ ಈ ಪರವಾನಗಿ ಕೊಡಲಾಗಿದೆ. ಈ ಸಂಸತ್ತಿಗೆ ನನ್ನ ವಿನಂತಿ ಏನೆಂದರೆ ಒಂದು ಪ್ರಕರಣ ಕಲ್ಪಿಸುವುದು ಕಷ್ಟಕರವಲ್ಲ. ಯಾವುದೋ ಒಂದು ನಿರ್ದಿಷ್ಟ ಅವಧಿಯಲ್ಲಿ ಜಾರಿಯಲ್ಲಿರುವ ಸಾಮಾನ್ಯ ಕಾನೂನಿನ ಅನ್ವಯ ದಯಪಾಲಿಸಿದ ಅಧಿಕಾರಿಗಳು ಆ ವಿಷಯವನ್ನು ಸಮರ್ಪಕವಾಗಿ ಒಂದು ಸಂದರ್ಭ ಒಮ್ಮೆಲೇ ಮತ್ತು ತುರ್ತಾಗಿ ಉದ್ಭವಿಸಿದುದನ್ನು ನಿಭಾಯಿಸಲು ನ್ಯೂನತೆಗಳಿದ್ದರೆ ಕಾರ್ಯಾಂಗವು ಏನು ಮಾಡಬೇಕು? ಒಂದು ಹೊಸ ಪರಿಸ್ಥಿತಿಯು ಕಾರ್ಯಾಂಗಕ್ಕೆ ಉಂಟಾಗಿದೆ. ಅದನ್ನು ಸಮರ್ಥನೀಯವಾಗಿ ಇದ್ದ ಪರಿಸ್ಥಿತಿಯ ಕಾನೂನಿನಲ್ಲಿ ಅಧಿಕಾರವಿಲ್ಲ. ತುರ್ತು ಪರಿಸ್ಥಿತಿಯನ್ನು ಎದುರಿಸಲು ನನಗೆ ಅನಿಸಿದಂತೆ ಒಂದೇ ಪರಿಹಾರವೆಂದರೆ ರಾಷ್ಟ್ರಪತಿಗಳಿಗೆ ಕಾನೂನು ಮಾಡುವ ಅಧಿಕಾರವನ್ನು ದಯಪಾಲಿಸಬೇಕು. ಇದರಿಂದ ಕಾರ್ಯಾಂಗವು ಒಂದು ನಿರ್ದಿಷ್ಟವಾದ ಸಂದರ್ಭವನ್ನು ಎದುರಿಸಲು ಸಮರ್ಥವಾಗುತ್ತದೆ. ಯಾಕೆಂದರೆ ಅದು ಸಾಮಾನ್ಯ ಕಾನೂನಿನ ಕ್ರಮವನ್ನು ಆಶ್ರಯಿಸಲಾರದು. ಕಾಲ್ಪನಿಕ ಸ್ಥಿತಿಯಲ್ಲಿ ಸಂಸತ್ತು ಅಧಿವೇಶನ ನಡೆಯುತ್ತಿಲ್ಲ. ಆದ್ದರಿಂದ ನನಗೆ ಅನಿಸಿದಂತೆ ಮೂಲತಃ ವಿಧಿ ೧೦೨ ರಲ್ಲಿ ಒಳಗೊಂಡ ಉಪಬಂಧಗಳಿಗೆ ಯಾವ ತಕರಾರು ಇರುವುದಿಲ್ಲ. ನನ್ನ ಮಿತ್ರರಾದ ಶ್ರೀ ಪೋಕರ ಅವರು ತಮ್ಮ ತಿದ್ದುಪಡಿ ಸಂಖ್ಯೆ ೧೫೫೬ ರಲ್ಲಿ ಎತ್ತಿದ ವಿಷಯ ಕುರಿತಂತೆ ಇಂತಹ ಅಧ್ಯಾದೇಶವು ಯಾವುದೇ ನಾಗರಿಕನ ಅಥವಾ ಆತನ ಮೂಲಭೂತ ಹಕ್ಕು ಹಾಗೂ ಸ್ವಾತಂತ್ರ್ಯವನ್ನು ಯೋಗ್ಯ ಅಧಿಕಾರವುಳ್ಳ ನ್ಯಾಯಾಲಯವು ಆತನ ವಿಚಾರಣೆ ನಡೆಸಿ ಅವನಿಗೆ ಶಿಕ್ಷ ವಿಧಿಸಿದ ಹೊರತು ಅವುಗಳನ್ನು ಕಸಿದುಕೊಳ್ಳಬಾರದು ಎಂದು ಒತ್ತಾಯಿಸುತ್ತಿದ್ದಾರೆ. ಈಗ ಅವರ ತಿದ್ದುಪಡಿಗೆ ಸಂಬಂಧಿಸಿದಂತೆ ನನಗೆ ತಿಳಿದಂತೆ ವಿಧಿ ೧೦೨ ರ ಖಂಡ (೩) ಇದನ್ನು ಓದಿಲ್ಲವೆನಿಸುತ್ತದೆ. ವಿಧಿ ೧೦೨ ಖಂಡ (೩) ಹೇಳುವುದೇನೆಂದರೆ ರಾಷ್ಟ್ರಪತಿಗಳು ವಿಧಿ ೧೦೨ ಉಪಬಂಧಗಳ ಅಡಿಯಲ್ಲಿ ಮಾಡಿದ ಕಾನೂನುಗಳಿಗೆ ವಿಧಾನಮಂಡಲದಿಂದ ಮಾಡಿದ ಸಾಮಾನ್ಯ ಕಾನೂನುಗಳಿಗೆ ಇರುವ ಕಾಲಪರಿಮಿತಿಯು ಇರುತ್ತದೆ. ಸಾಮಾನ್ಯ ಪ್ರಕ್ರಿಯ ಅನುಸಾರವಾಗಿ ಈಗ ವಿಧಾನಸಭೆಯು ಮಾಡಿದ ಶಾಸನವನ್ನು ಮೂಲಭೂತ ಹಕ್ಕುಗಳು ಸಂವಿಧಾನ ಕರಡಿನಲ್ಲಿಯ ಪರಿಚ್ಛೇದಕ್ಕೆ ಒಳಪಟ್ಟು ಮಾಡಿದ್ದು ಇರುತ್ತದೆ. ಇದು ಹಾಗೆ ಇರುವುದರಿಂದ ವಿಧಿ ೧೦೨ರಲ್ಲಿ ಉಪಬಂಧಗಳ ಅಡಿಯಲ್ಲಿ ಮಾಡಿದ ಕಾನೂನುಗಳ ಸಹ ಸ್ವಯಂಚಾಲಿತವಾಗಿ ನಾಗರಿಕ ಮೂಲಭೂತ ಹಕ್ಕುಗಳಿಗೆ ಒಳಪಟ್ಟು ಮಾಡಿದ್ದು ಇರುತ್ತದೆ. ಆದ್ದರಿಂದ ಇದರ ಯಾವುದೇ ಕಾನೂನು ಆ ಉಪಬಂಧಗಳು ಅಧ್ಯಾರೋಪ ಮಾಡಲಾರವು. ಮತ್ತು ಅವರು ನನ್ನ ಗೆಳೆಯರಾದ ಶ್ರೀ ಪೋಕರ ಅವರು ತಮ್ಮ ತಿದ್ದುಪಡಿ ಸಂಖ್ಯೆ. ೧೫೫೯ ರಲ್ಲಿ ಸೂಚಿಸಿದಂತೆ ಯಾವುದೇ ಉಪಬಂಧದ ಅವಶ್ಯಕತೆಯು ಇರುವುದಿಲ್ಲ.

ನನ್ನ ಗಳೆಯರಾದ ಶ್ರೀ ಕಾಮತ್ ಅವರು ಸಂಖ್ಯೆ. ೧೫೫೩ರಲ್ಲಿ ಸೂಚಿಸಿದ್ದು ಉದ್ದೇಶ ರಹಿತವಾದುದೆಂದು ನನಗೆ ಅನಿಸುತ್ತದೆ. ಸದನದ ಒಂದು ಮನೆಯು ಅಧಿವೇಶನದಲ್ಲಿದೆಯೆಂದೂ ಇನ್ನೊಂದು ಅಧಿವೇಶನದಲ್ಲಿ ಇಲ್ಲವೆಂದೂ ತಿಳಿದುಕೊಳ್ಳೋಣ. ನಾನು ಹೇಳಿದಂತೆ ಇಂತಹ ಒಂದು ಸಂದರ್ಭವು ಉದ್ಭವಿಸುತ್ತದೆ. ಆಗ ವಿಧಿ ೧೦೨ ರ ಉಪಬಂಧಗಳು ಅವಶ್ಯವಿರುತ್ತದೆ. ಯಾಕೆಂದರೆ ಸಂವಿಧಾನದ

ಅನ್ವಯ ಯವುದೊಂದು ಶಾಸನವನ್ನು ಒಂದೇ ಮನೆಯು ಪಾಸುಮಾಡಲಾರದು. ಎರಡೂ ಸದನಗಳು ಈ ಶಾಸನಮಾಡುವ ಪ್ರಕ್ರಿಯೆಯಲ್ಲಿ ಭಾಗವಹಿಸಲಿಕ್ಕೇ ಬೇಕು. ಆದ್ದರಿಂದ ಒಂದು ಸದನವು ಅಸ್ತಿತ್ವದಲ್ಲಿದ್ದರೆ ನಿಜವಾಗಿಯೂ ಸಂದರ್ಭವು ಸಮಾಧಾನಕರವಾಗಿ ಇರುವುದೇ ಇಲ್ಲ.

**ಶ್ರೀ ಹೆಚ್.ವಿ. ಕಾಮತ್ :** ಸಂಸತ್ತಿನ ಒಂದು ಸದನವು ಮಾತ್ರ ಅಧಿವೇಶನದಲ್ಲಿದ್ದರೆ ಉದಾ: ಲೋಕಸಭೆಯು ಅಧಿವೇಶನದಲ್ಲಿದ್ದರೂ ರಾಷ್ಟ್ರಪತಿಗಳಿಗೆ ಆಗ ಸಹ ಇಂತಹ ಈ ಅಧಿಕಾರವಿರುತ್ತದೆಯೆ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಅಹುದು, ಈ ಅಧಿಕಾರವನ್ನು ಚಲಾಯಿಸಬಹುದು, ಯಾಕೆಂದರೆ ಶಾಸನವನ್ನು ಪಾಸುಮಾಡುವ ಸಾಮಾನ್ಯ ಪ್ರಕ್ರಿಯೆಯ ಚೌಕಟ್ಟು ಇನ್ನೂ ಅಸ್ತಿತ್ವದಲ್ಲಿರುವುದಿಲ್ಲ.

**ಶ್ರೀ ಹೆಚ್. ವಿ. ಕಾಮತ್ :** ಇದು ನಾಚಿಕೆಗೇಡು, ಎಂದು ನಾನು ಅನ್ನಲಿಕ್ಕೆಬೇಕು.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಈಗ ನಾನು ನನ್ನ ಗೆಳೆಯನಾದ ಶ್ರೀ ಕುಂಜ್ರು ಅವರ ತಿದ್ದುಪಡಿ ಸಂಖ್ಯೆ. ೧೮೦೨ ರಲ್ಲಿಯ ಬೇರೆ ಪ್ರಶ್ನೆಗೆ ಬರುತ್ತೇನೆ. ಅವರ ಸೂಚನೆಯೇನೆಂದರೆ, ರಾಷ್ಟ್ರಪತಿಗಳು ವಿಧಿ ೧೦೨ರ ಅಡಿಯಲ್ಲಿ ಮಾಡಿದ ಶಾಸನ ತನ್ನಷ್ಟಕ್ಕೆ ತಾನೇ ಆ ಕಾನೂನನ್ನು ಉದ್ಘೋಷಣೆ ಅಧ್ಯಾದೇಶ ಮಾಡಿದ ದಿನದಿಂದ ಮೂವತ್ತು ದಿನ ಎಂದರೆ ಅದು ಸಂಸತ್ತು ಕೂಡಿದ ಆರು ವಾರಗಳವರೆಗೆ ಅಸ್ತಿತ್ವದಲ್ಲಿರುತ್ತದೆ. ಆರು ವಾರಗಳ ನಂತರ ಅದು ಮುಕ್ತಾಯವಾಗುತ್ತದೆ. ಕರಡು ಅನುಚ್ಛೇದದ ಉಪಬಂಧದಲ್ಲಿ ಹೇಳಿರುವುದೇನೆಂದರೆ ಸಂಸತ್ತು ಸೇರಿದ ನಂತರ ಆರು ವಾರಗಳವರೆಗೆ ಅಸ್ತಿತ್ವದಲ್ಲಿರುತ್ತವೆ.

ಈಗ ನನ್ನ ಸ್ನೇಹಿತರಾದ ಪಂಡಿತ ಕುಂಜ್ರು ಅವರು ತಂದ ತಮ್ಮ ತಿದ್ದುಪಡಿಯಲ್ಲಿ ಕೊಡುವ ಕಾರಣವು ಹಾಗೆ ಇದೆ. ಅವರು ಹೇಳುವುದೇನೆಂದರೆ ಕರಡು ವಿಧಿಯ ಉಪಬಂಧಗಳಲ್ಲಿ ಆರು ವಾರಗಳಿಗಿಂತಲೂ ಹೆಚ್ಚು ದೀರ್ಘ ಅವಧಿಯು ಕಳೆದು ಹೋಗುವುದನ್ನು ಕಾಣಿಸಲಾಗಿದೆ. ಯಾಕೆಂದರೆ ಕಾರ್ಯಾಂಗವು ಅದನ್ನು ತೆಗೆದುಕೊಳ್ಳಲು ಒಂದು ಇಲ್ಲವೆ ಎರಡು ತಿಂಗಳ ಅವಧಿಯನ್ನು ಸಂಸತ್ತನ್ನು ಕರೆಯಲು ತೆಗೆದುಕೊಳ್ಳಬಹುದು. ಸಂಸತ್ತನ್ನು ಕರೆದರೆ ನಾಲ್ಕು ತಿಂಗಳಲ್ಲಿ ಆಗ ಆರು ವಾರಗಳ ಅವಧಿಯು ಸಹ ಅಲ್ಲಿ ಇರತಕ್ಕದ್ದು ಅದು ಅನುಕೂಲಕರವಾದುದು. ಇಲ್ಲವೆ ಸಂಸತ್ತನ್ನು ಕರೆಯಲು ಕಾರ್ಯಾಂಗವು ತಡಮಾಡಿದರೆ ಅದು ಇದಕ್ಕಿಂತಲೂ ದೀರ್ಘಕಾಲವಾಗಬಹುದು. ಆಗ ನನಗೆ ತಿಳಿಯದು, ನಿಜವಾಗಿ ಏನೂ ನಡೆಯುತ್ತದೆಂಬುದನ್ನು. ಆದರೆ ನನ್ನ ವಿಷಯ ನನ್ನ ಮಾನ್ಯ ಮಿತ್ರರಾದ ಪಂಡಿತ ಕುಂಜ್ರು ಅವರ ಅಂಜಿಕೆಗೆ ಯಾವುದೇ ಆಧಾರವಿರುವುದಿಲ್ಲ. ಯಾಕೆಂದರೆ ನಾವು ಮತ್ತೊಂದು ವಿಧಿ ೬೯ ನ್ನು ಉಪಬಂಧಿಸಿದ್ದೇವೆ ಮತ್ತು ಸಂಸತ್ತಿನ ಎರಡು ಅಧಿವೇಶನಗಳ ನಡುವಿನ ಅವಧಿಯು ಆರು ತಿಂಗಳು ಮೀರಬಾರದೆಂದು ಅದು ಹೇಳುತ್ತದೆ. ಮತ್ತು ಸಂಸತ್ತಿನ ಜರೂರ ವ್ಯವಹಾರಗಳಿಗಾಗಿ ಮೇಲಿಂದ ಮೇಲೆ ಅಧಿವೇಶನಗಳು ಅಂದರೆ ಈಗ ಸನ್ಮಾನ್ಯ ಸದಸ್ಯರು ತಿಳಿದಿರುವುದಕ್ಕಿಂತ ಹೆಚ್ಚು ಎಂದು ನಾನು ತಿಳಿದುಕೊಳ್ಳುತ್ತೇನೆ. ಆದ್ದರಿಂದ ನಾನು ಹೇಳುವುದೇನೆಂದರೆ, ವಿಧಿ ೬೯ ಕ್ಕೆ ಇದನ್ನು ಗಮನದಲ್ಲಿಟ್ಟುಕೊಂಡು ವ್ಯವಹರಣೆಗಳ ಜರೂರ ಅವಶ್ಯಕತೆಗಳನ್ನು ಮತ್ತು ಅಂದಿನ ಸರಕಾರದ ಅವಶ್ಯಕತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಸಂಸತ್ತಿನ ವಿಶ್ವಾಸವನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಹೀಗಿರುವಾಗ ನನಗೆ ಅನಿಸಿದಂತೆ ಯಾವುದೇ ಇಂತಹ ಕಾಲಹರಣವಾಗುವ ಪ್ರಕ್ರಿಯೆಗೆ ಆ ದಿನದ ಕಾರ್ಯಾಂಗವು ಯಾವುದೊಂದು ಅಧ್ಯಾದೇಶವನ್ನು ವಿಧಿ ೧೦೨ ರ ಅಡಿಯಲ್ಲಿರುವುದಕ್ಕಿಂತ ಅನವಶ್ಯಕವಾಗಿ ಹಾಗೂ ಅನುಚಿತವಾಗಿ ಹೆಚ್ಚಿನ ಕಾಲಾವಧಿಗೆ ಈ ಕಾನೂನು ಜಾರಿಯಲ್ಲಿರುವಂತೆ ಪರವಾನಗಿ ಕೊಡುವುದಿಲ್ಲ. ಆದ್ದರಿಂದ ಈಗ ಕರಡಿನಲ್ಲಿರುವ ವಿಧಿ ಉಪಬಂಧಗಳು ಈಗ ಇರುವಂತೆ ಇರಲು ಪರವಾನಗಿ ಕೊಡುವುದು ಯೋಗ್ಯವೆಂದು ನನಗೆ ಅನಿಸುತ್ತದೆ.

**ಶ್ರೀ ಹೆಚ್.ವಿ. ಕಾಮತ್ :** ಮಾನ್ಯ ಅಧ್ಯಕ್ಷರೇ, ನಾನೊಂದು ಕೊನೆಯ ಪ್ರಶ್ನೆಯನ್ನು ಕೇಳಲೇ? ಇದು ನಿಮ್ಮ ಸ್ವಾತಂತ್ರ್ಯದ ಕಲ್ಪನೆಗಳಿಗೆ ಅನುಗುಣವಾಗಿ ಇಲ್ಲದೆ ವಿಚಾರಗಳಿಗೆ ವಿರುದ್ಧವಾಗಿಲ್ಲವೋ ಮತ್ತು ನಮ್ಮ ಪ್ರಜಾಪ್ರಭುತ್ವಕ್ಕೆ ವಿರೋಧವಾಗಿಲ್ಲವೋ? ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ನಾನೂ ಸಹಾ ಈ ವಿಧಿಯ ಅಡಿಯಲ್ಲಿ ಹೊರಡಿಸಿದ ಅಧ್ಯಾದೇಶವು ಅತ್ಯಂತ ಹೆಚ್ಚಿನ ಅವಧಿಗೆ ಕೊಡುವುದು ವಿರೋಧವಾಗುತ್ತದೆಂದು ಭಾವಿಸುವೆವು.

**ಸನ್ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ನನ್ನ ಸ್ವಂತ ಅನಿಸಿಕೆಯು ಏನೆಂದರೆ ಒಂದು ಸಾಕಾರವಾದ ವಿರೋಧ ಭಾವಾತಿರೇಕಗಳನ್ನು ನನ್ನ ಸನ್ಮಿತ್ರರಾದ ಶ್ರೀ ಕಾಮತ್, ಅದರಂತೆ ನನ್ನ ಮಾನ್ಯ ಗೆಳೆಯರಾದ ಶ್ರೀ ಕುಂಜ್ರು ಅವರು ವ್ಯಕ್ತಪಡಿಸಿದ್ದಾರೆ. ನಿಜವಾಗಿ ದುರ್ದೈವದಿಂದ ಇದು ಉದ್ಭವಿಸುವ ಕಾರಣವೆಂದರೆ ಅಧ್ಯಾಯದ ತಲೆಬರಹ "ರಾಷ್ಟ್ರಾಧ್ಯಕ್ಷರ ಕಾನೂನಾತ್ಮಕ ಅಧಿಕಾರಗಳು" ಅದು ಹೀಗೆ ಇರತಕ್ಕದ್ದು. ಸಂಸತ್ತು ಅಧಿವೇಶನದಲ್ಲಿ ಇರದಿದ್ದಾಗ ಕಾನೂನು ಮಾಡುವ ರಾಷ್ಟಪತಿಯ ಅಧಿಕಾರಗಳು ಈ ರೀತಿಯ ಕೆಡಕುಮಾಡುವ ತಲೆಬರಹಗಳನ್ನು ಅಧ್ಯಾಯಗಳಿಗೆ ಕೊಡದಿದ್ದರೆ ಬಹಳಷ್ಟು ಅಸಮಾಧಾನ ಈ ಉಪಬಂಧಕ್ಕೆ ಶಮನವಾಗುತ್ತದೆ.

ಅಹುದು ಪದ 'ಅಧ್ಯಾದೇಶ ಇದು ದೋಷಯುಕ್ತ ಪದ. ಆದರೆ ಶ್ರೀ ಕಾಮತ್ ಇವರು ತಮ್ಮ ಫಲವತ್ತಾದ ಕಲ್ಪನೆಯಲ್ಲಿ ಇದಕ್ಕಿಂತ ಉತ್ತಮವಾದ ಪದವನ್ನು ಸೂಚಿಸಲಿ. ನಾನು ಎಲ್ಲರಿಗಿಂತಲೂ ಮೊದಲು ಅದನ್ನು ಸ್ವೀಕರಿಸುವೆನು. ನಾನು ಅಧ್ಯಾದೇಶ ಪದವನ್ನು ಮೆಚ್ಚುವುದಿಲ್ಲ. ಆದರೆ ಆ ಪದದ ಬದಲಾಗಿ ನನಗೆ ಬೇರೆ ಯಾವ ಪದವೂ ಸಿಗಲೊಲ್ಲದು.

**ಮಾನ್ಯ ಅಧ್ಯಕ್ಷರು :** ಸರದಾರ ಹುಕುಮಸಿಂಗ್ ಅವರು ಮಂಡಿಸಿದ ಮತ್ತೊಂದು ತಿದ್ದುಪಡಿಯು ಇದೆ. ಅದರಲ್ಲಿ ಅವರು ಹೇಳುವುದೇನೆಂದರೆ ರಾಷ್ಟ್ರಪತಿಗಳು ತಮ್ಮ ಮಂತ್ರಿಮಂಡಲದೊಂದಿಗೆ ಸಮಾಲೋಚಿಸಿ ನಂತರ ಅಧ್ಯಾದೇಶವನ್ನು ಉದ್ಘೋಷಿಸಬಹುದು.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಇದರ ಬಗೆಗೆ ನನಗೆ ನೆನಪು ಮಾಡಿಕೊಟ್ಟದ್ದಕ್ಕೆ ನಾನು ನಿಮಗೆ ತುಂಬಾ ಋಣಿ. ಆ ವಿಷಯವೇನೆಂದರೆ ತಿದ್ದುಪಡಿಯು ಅನವಶ್ಯಕವಾಗಿದೆ. ಯಾಕೆಂದರೆ ರಾಷ್ಟ್ರಪತಿಗಳು ಮಂತ್ರಿಗಳ ಸಲಹೆ ಇಲ್ಲದೆ ಯಾವ ಕ್ರಮವನ್ನೂ ಕೈಗೊಳ್ಳುವಂತಿಲ್ಲ ಮತ್ತು ಮುಂದೆಯೂ ಕೈಗೊಳ್ಳಲಾರರು.

**ಮಾನ್ಯ ಅಧ್ಯಕ್ಷರು :** ಕರಡು ಸಂವಿಧಾನದಲ್ಲಿ ರಾಷ್ಟ್ರಪತಿಗಳು ಮಂತ್ರಿಗಳ ಸಲಹೆಯ ಮೇರೆಗೆ ನಡೆಯಬೇಕೆಂಬ ಬಂಧನಕಾರಕ ಉಪಬಂಧ ವ್ಯವಸ್ಥೆಯು ಎಲ್ಲಿದೆ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ನಿಶ್ಚಿತವಾಗಿ ಅಲ್ಲಿ ಒಂದು ಉಪಬಂಧವಿದೆ ಮತ್ತು ಆ ಉಪಬಂಧ ರಾಷ್ಟ್ರಪತಿಗಳಿಗೆ ತನ್ನ ಕಾರ್ಯ ನಿರ್ವಹಿಸಲು ಸಹಾಯ ಮಾಡಿ ಸಲಹೆ ಕೊಡಲು ಒಂದು ಮಂತ್ರಿಮಂಡಲ ಇರುತ್ತದೆ.

**ಮಾನ್ಯ ಅಧ್ಯಕ್ಷರು :** ನಮ್ಮದು ಲಿಖಿತ ಸಂವಿಧಾನವು ಇರುವುದರಿಂದ ನಾವು ಸ್ಪಷ್ಟವಾಗಿ ಒಂದೆಡೆ ಅದನ್ನು ಕಾಣಿಸಲಿಕ್ಕೇ ಬೇಕು.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಇದೀಗ ಆ ವಿಷಯವನ್ನು ತೋರಿಸಲಾರೆನಾದರೂ ಆ ಬಗ್ಗೆ ಒಂದು ಉಪಬಂಧವಿದೆಯೆಂದು ನನಗೆ ಭರವಸೆಯು ಇದೆ. ಮಂತ್ರಿಗಳ ಸಲಹೆಯನ್ನು ರಾಷ್ಟ್ರಪತಿಗಳು ಸ್ವೀಕರಿಸಲೇಬೇಕಾಗುತ್ತದೆಂಬ ಉಪಬಂಧವಿದೆಯೆಂದು ನಾನು ಭಾವಿಸುವೆನು. ನಿಜವಾಗಿಯೂ

ಅವರು ಮಂತ್ರಿಗಳ ಸಲಹೆ ಇಲ್ಲದೆ ಕಾರ್ಯನಿರ್ವಹಿಸಲಾರರು.

**ಕೆಲವು ಸನ್ಮಾನ್ಯ ಸದಸ್ಯರು :** ವಿಧಿ ೬೧(೨)

**ಮಾನ್ಯ ಅಧ್ಯಕ್ಷರು :** ಅದು ಮಂತ್ರಿಗಳ ಕರ್ತವ್ಯವನ್ನು ಕುರಿತು ಹೇಳುತ್ತದೆ. ಅದರೆ ಅದು ರಾಷ್ಟ್ರಪತಿಗಳು ಮಂತ್ರಿಗಳ ಸಲಹೆಯ ಪ್ರಕಾರ ಕೆಲಸ ಮಾಡುವುದು ಅವರ ಕರ್ತವ್ಯವೆಂದು ಹೇಳುವುದಿಲ್ಲ. ರಾಷ್ಟ್ರಪತಿಗಳು ಸಲಹೆಯನ್ನು ಸ್ವೀಕರಿಸಲಿಕ್ಕೇ ಬೇಕೆಂದು ಅಲ್ಲಿ ಕಾಣಿಸಿಲ್ಲ. ಸಂವಿಧಾನದಲ್ಲಿ ಬೇರೆ ಯಾವುದೇ ಉಪಬಂಧವಿದೆಯೇ? ನಾವು ಅವನ ಮೇಲೆ ಮಹಾಭಿಯೋಗವನ್ನು ನಡೆಯಿಸಲಾರೆವು. ಯಾಕೆಂದರೆ ಅಲ್ಲಿ ಒಂದು ಉಪಬಂಧವಿದ್ದರೆ ಅವರು ಸಂವಿಧಾನಕ್ಕೆ ವಿರುದ್ಧವಾಗಿ ನಡೆಯುವುದಿಲ್ಲ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಾನು ತಮ್ಮ ಗಮನವನ್ನು ವಿಧಿ ೬೧ ಕ್ಕೆ ತರಬಯಸುತ್ತೇನೆ. ಇದು ರಾಷ್ಟ್ರಪತಿಗಳ ಕರ್ತವ್ಯವನ್ನು ಕುರಿತು ಅವರಿಗೆ ಮಂತ್ರಿಗಳು ಕೊಟ್ಟ ಸಲಹೆಯು ಅವರಿಗೆ ಬಂಧನಕಾರಿಯಾಗಿರುತ್ತದೆಂದು ಅವರ ಸಲಹೆಯನ್ವಯ ರಾಷ್ಟ್ರಪತಿಗಳು ತಮ್ಮ ಯಾವುದೇ ಕರ್ತವ್ಯ ನಿರ್ವಹಿಸಬೇಕೆಂದೂ ಹೇಳುತ್ತದೆ. ಅವರ ಸಲಹೆಯು ಇಲ್ಲದೆ ಅವರು ಯಾವುದೇ ಕರ್ತವ್ಯ ನಿರ್ವಹಿಸಲು ಸಾಧ್ಯವಿಲ್ಲ. ಇದು ಕೇವಲ ಸಹಾಯ ಮಾಡುವುದು ಮತ್ತು ಸಲಹೆ ಕೊಡುವುದೇ ಅಲ್ಲ, ತನ್ನ ಕರ್ತವ್ಯಗಳ ನಿರ್ವಹಣೆಯಲ್ಲಿ ಈ ಪದಗಳು ಬಹಳ ಮಹತ್ವದ ಪದಗಳು.

**ಮಾನ್ಯ ಅಧ್ಯಕ್ಷರು :** ಈ ಪದಗಳು ರಾಷ್ಟ್ರಪತಿಗಳಿಗೆ ಬಂಧನಕಾರವಾಗುತ್ತದೆಂಬುದಕ್ಕೆ ನನಗೆ ಸಂಶಯವಿದೆ. ಅದು ಹೇಳುವುದೇನೆಂದರೆ ಪ್ರಧಾನಮಂತ್ರಿಯ ಹಿರಿತನದಲ್ಲಿ ಒಂದು ಮಂತ್ರಿಮಂಡಲವು ಇರತಕ್ಕದ್ದು ಮತ್ತು ರಾಷ್ಟ್ರಪತಿಗಳಿಗೆ ಅವರ ಕರ್ತವ್ಯಗಳ ನಿರ್ವಹಣೆಯಲ್ಲಿ ಸಲಹೆ ಕೊಡುವುದು. ಅದು ರಾಷ್ಟ್ರಪತಿಗಳು ಆ ಸಲಹೆಯನ್ನು ಸ್ವೀಕರಿಸಲೇಬೇಕೆಂದು ಅರ್ಥವಾಗುವುದಿಲ್ಲ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಈಗ ಅಸ್ತಿತ್ವದಲ್ಲಿರುವ ಮಂತ್ರಿಗಳ ಸ್ಥಾನಗಳ ಹೊಂದಿರುವವರು ಸಲಹೆಯನ್ನು ಒಪ್ಪದಿದ್ದರೆ ಅವನು ಬೇರೆ ಮಂತ್ರಿಗಳನ್ನು ತನಗೆ ಸಲಹೆ ಕೊಡಲು ನೇಮಿಸತಕ್ಕದ್ದು. ಮಂತ್ರಿಗಳಿಲ್ಲದೆ ಸ್ವತಂತ್ರವಾಗಿ ಅವನು ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ.

**ಮಾನ್ಯ ಅಧ್ಯಕ್ಷರು :** ರಾಷ್ಟ್ರಪತಿಗಳು ಮಂತ್ರಿಮಂಡಲ ಸಲಹೆಯನ್ನು ಸ್ವೀಕರಿಸಲು ಬದ್ಧವಾಗಿದ್ದಾರೆಂದು ಎಲ್ಲಿಯಾದರೂ ಉಪಬಂಧ ಮಾಡಲು ನಿಜವಾಗಿಯೂ ಯಾವುದೇ ತೊಂದರೆಯು ಇದೆಯೇ?

**ಸನ್ಮಾನ್ಯ ಡಾ॥. ಬಿ.ಆರ್. ಅಂಬೇಡ್ಕರ್ :** ನಾವು ಅದನ್ನು ಮಾಡುತ್ತಿದ್ದೇವೆ. ನಾನು ಹೇಳಬೇಕೆಂದರೆ, ಸೂಚನೆಗಳ ಲಿಖಿತ ಪತ್ರದಲ್ಲಿ ಒಂದು ಉಪಬಂಧ ಇದೆ.

**ಮಾನ್ಯ ಅಧ್ಯಕ್ಷರು :** ನಾನು ಅದನ್ನು ಸಹ ವಿಚಾರಿಸಿದ್ದೇನೆ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ಯಾರಾ ೩ ಕೆಳಗಿನಂತಿದೆ. ಕೇಂದ್ರ ಸರಕಾರದ ಕಾರ್ಯಾಂಗದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿಷಯಗಳ ಮೇಲೆ ರಾಷ್ಟ್ರಪತಿಗಳು ತಮಗೆ ದಯಪಾಲಿಸಿದ ಅಧಿಕಾರಗಳನ್ನು ಚಲಾಯಿಸುವಾಗ ಮಂತ್ರಿಗಳು ಕೊಟ್ಟ ಸಲಹೆ ಮಾರ್ಗದರ್ಶಿಯಾಗತಕ್ಕದ್ದು. ನಾವು ಅದಕ್ಕೆ ಕೆಲವರ ತಿದ್ದುಪಡಿಯನ್ನು ಪ್ರಸ್ತಾಪಿಸುವವರಿದ್ದೇವೆ.

**ಮಾನ್ಯ ಅಧ್ಯಕ್ಷರು :** ನೀವು ಅದನ್ನು ಬದಲಿಸಲು ಇಚ್ಛಿಸುತ್ತೀರಿ. ಈಗ ಇದ್ದಂತೆ ಅದು ಹೇಳುವುದೇನೆಂದರೆ ರಾಷ್ಟ್ರಪತಿಗಳು ತಮ್ಮ ಕಾರ್ಯಾಂಗದ ಅಧಿಕಾರಗಳನ್ನು ಚಲಾಯಿಸುವಾಗ ಮಂತ್ರಿಗಳ ಸಲಹೆ, ಮಾರ್ಗದರ್ಶನದಂತೆ ನಡೆಯುತ್ತಾರೆ. ಆದರೆ ಶಾಸಕಾಂಗದ ಅಧಿಕಾರಗಳನ್ನಲ್ಲ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ವಿಧಿ ೬೧ ಬಹುತೇಕ ಅನೇಕ ಸಂವಿಧಾನಗಳನ್ನು ಅನುಸರಿಸುತ್ತದೆ ಮತ್ತು ಅಧ್ಯಕ್ಷರು ಆ ಭಾಷೆಯನ್ನು ತಿಳಿದುಕೊಂಡಿರುತ್ತಾರೆ. ಅಂದರೆ ಅವರು ಸಲಹೆಯನ್ನು ಸ್ವೀಕರಿಸಲೇಬೇಕು. ಅಲ್ಲಿ ಯಾವುದೇ ತೊಂದರೆ ಇದ್ದರೆ ನಿಶ್ಚಿತವಾಗಿ ಯೋಗ್ಯ ತಿದ್ದುಪಡಿಯೊಂದಿಗೆ ಅದಕ್ಕೆ ಪರಿಹಾರವನ್ನು ಕಂಡು ಹಿಡಿಯಲಾಗುವುದು.

**ಶ್ರೀ ಎಚ್.ವಿ. ಕಾಮತ್ :** ಅಧ್ಯಾದೇಶವು ಅತಿ ಹೆಚ್ಚಿನ ಜೀವಿತ ಅವಧಿಗೆ ಅಂದರೆ ಏಳೂವರೆ ತಿಂಗಳುಗಳವರೆಗೆ ಉಳಿಯುವಂತೆ ಮಾಡುವ ಈ ವಿಷಯದ ವಿಧಿಯನ್ನು ಬಿಟ್ಟಿದ್ದೀರಿ. ಇದು ಅಸಾಧ್ಯ.

**ಮಾನ್ಯ ಅಧ್ಯಕ್ಷರು :** ಶ್ರೀ ಕಾಮತ್ ಅವರು ತಮ್ಮ ತಿದ್ದುಪಡಿಯ ಮೇಲೆ ಎರಡನೆಯ ಭಾಷಣ ಮಾಡುತ್ತಿದ್ದಾರೆಯೇ?

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ನಮ್ಮ ರಾಷ್ಟ್ರಪತಿಗಳು, ಅಮೆರಿಕದ ಸಂಯುಕ್ತ ಸಂಸ್ಥಾನಗಳ ರಾಷ್ಟ್ರಪತಿಗಳಿಗಿಂತ ಭಿನ್ನವಾಗಿದ್ದಾರೆ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನಾನು ಮಂಡಿಸುತ್ತೇನೆ.

"ಅಧ್ಯಾಯ ೪ರ ಭಾಗ ೫ರ ತಲೆಬರಹದ ಸಂಯುಕ್ತನ್ಯಾಯಾಂಗ' ಈ ಪದಗಳ ಬದಲು ಕೇಂದ್ರ ನ್ಯಾಯಾಂಗ ಈ ಪದಗಳನ್ನು ಕೂಡಿಸಬೇಕು.

ಇದು ಕೇವಲ ಎಲ್ಲ ಭಾರತವನ್ನು ಒಕ್ಕೂಟವೆಂದು ಕರೆದ ಮೊದಲಿನ ವಿಧಿಯ ಪರಿಣಾಮವಾಗಿದೆ. ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

* * * * *

## ವಿಧಿ ೧೦೨–ಅ

**ಮಾನ್ಯ ಅಧ್ಯಕ್ಷರು :** ಈಗ ಎಂಟು ಗಂಟೆಯಾಗಿದೆ. ನಾವು ಈಗ ಚರ್ಚೆಯನ್ನು ನಿಲ್ಲಿಸುವುದು ಯೋಗ್ಯವೆಂದು ಕಾಣಿಸುತ್ತದೆ.

**ಶ್ರೀ ಬ್ರಜೇಶ್ವರ ಪ್ರಸಾದ** (ಬಿಹಾರ: ಸಮಾನ್ಯ) : ಈ ಪ್ರಸ್ತಾವನೆಯ ಮೇಲೆ ನಾನು ಈ ಸದನದಲ್ಲಿ ಒಂದು ನಿಮಿಷ ಮಾತನಾಡಬಹುದೆ?

**ಮಾನ್ಯ ಅಧ್ಯಕ್ಷರು :** ಈಗ ಸದನವು ಹೆಚ್ಚಿನ ಭಾಷಣ ಕೇಳುವ ಇಚ್ಛೆಯನ್ನು ಹೊಂದಿಲ್ಲ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಯಾವುದೇ ರೀತಿಯ ಉತ್ತರ ಕೊಡುವುದು ಅವಶ್ಯವೆಂದು ನನಗೆ ಅನಿಸುವುದಿಲ್ಲ. ನಾನು ಹೇಳಬೇಕೆಂದರೆ ಪ್ರೊಫೆಸರ್ ಶಹಾ ಅವರು ಈ ತಿದ್ದುಪಡಿಯನ್ನು ಮಂಡಿಸಿದುದು ಬಹಳ ದುರ್ದೈವದ ಸಂಗತಿ. ಈ ವಿಷಯವನ್ನು ಸುದೀರ್ಘವಾಗಿ ರಾಜ್ಯಗಳ ನಿರ್ದೇಶನ ತತ್ವಗಳ ಧೋರಣೆ ಕುರಿತು ಚರ್ಚಿಸುವಾಗ ಚರ್ಚಿಸಿದ್ದೇವೆ. ಆದ್ದರಿಂದ ಆ ವಿಷಯವನ್ನು ಪುನಃ ಎತ್ತುವುದು ಮತ್ತು ಅದರ ಮೇಲೆ ಮಾಡುವುದು ಬೇಡವೆಂದು ನನಗೆ ಅನಿಸುತ್ತದೆ. ಆ ವಿಷಯವು ವಿಧಿ ೩೯ ರಲ್ಲಿ ನಿರ್ದಿಷ್ಟವಾಗಿ ಮುಕ್ತಾಯಗೊಂಡಿದೆ.

**ಮಾನ್ಯ ಅಧ್ಯಕ್ಷರು :** ನಾನು ಈಗ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. (ತಿದ್ದುಪಡಿಯು ತಿರಸ್ಕೃತವಾಯಿತು)

## ವಿಧಿ ೧೦೩

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** (ಮುಂಬೈ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ ನಾನು ಮಂಡಿಸುತ್ತೇನೆ.

'ವಿಧಿ ೧೦೩ರ ಖಂಡ (೧) ರಲ್ಲಿಯ ಮತ್ತು ಅದೇ ಸಂಖ್ಯೆಯ ನ್ಯಾಯಾಧೀಶರು ಎಂದರೆ ಏಳು ಜನಕ್ಕಿಂತ ಕಡಿಮೆ ಇಲ್ಲದಷ್ಟು ರಾಷ್ಟ್ರಪತಿಗಳು ಕಾನೂನಿನ ಮೇರೆಗೆ ಗೊತ್ತುಪಡಿಸಲಾದ ಈ ಪದಗಳ ಬದಲು ಮತ್ತು ಸಂಸತ್ತು ಕಾನೂನಿನ ಪ್ರಕಾರ ಗೊತ್ತುಪಡಿಸಬಹುದಾದ ಹೆಚ್ಚಿನ ಸಂಖ್ಯೆಯ ಏಳು ಜನ ಉಳಿದ ನ್ಯಾಯಾಧೀಶರನ್ನು ಈ ಪದಗಳನ್ನು ಸೇರಿಸತಕ್ಕದ್ದು.

ಈ ತಿದ್ದುಪಡಿಯ ಉದ್ದೇಶವೇನೆಂದರೆ ಕೋರ್ಟಿನ ರಚನೆಯು ಕಾನೂನಿನ ಪ್ರಕಾರ ಸಂಸತ್ತು ನ್ಯಾಯಾಧೀಶರ ಸಂಖ್ಯೆಯನ್ನು ಗೊತ್ತು ಮಾಡುವವರೆಗೆ ಸುಪ್ರೀಮ್‌ಕೋರ್ಟಿನ ರಚನೆಯನ್ನು ತಡೆಹಿಡಿಯಬಾರದೆಂಬುದೇ ಆಗಿದೆ. ತಿದ್ದುಪಡಿಯು ಹೇಳುವುದೇನೆಂದರೆ ಏಳು ಜನ ನ್ಯಾಯಾಧೀಶರು ಸುಪ್ರೀಮ್ ಕೋರ್ಟಿನಲ್ಲಿರುತ್ತಾರೆ.

* * * * *

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುತ್ತೇನೆ.

ಖಂಡ (೩)ರ ವಿವರಣೆ – ೧೧ 'ನ್ಯಾಯಾಂಗ ಅಧಿಕಾರಿ' ಈ ಪದಗಳ ಬದಲು, ಜಿಲ್ಲಾನ್ಯಾಯಾಧೀಶ ಹುದ್ದೆಗಿಂತ ಕಡಿಮೆ ಇಲ್ಲದವರು. ಈ ಪದಗಳನ್ನು ಸೇರಿಸತಕ್ಕದ್ದು. ನಾನು ಇನ್ನೂ ಮಂಡಿಸುತ್ತೇನೆ.

"ವಿಧಿ ೧೦೩ರ ಖಂಡ (೪) ರಲ್ಲಿ ಸದನದಲ್ಲಿ ಹಾಜರಿದ್ದ ಒಟ್ಟು ಸದಸ್ಯರ ಪೈಕಿ ಎರಡು ಮೂರನೆಯ ಅಂಶದಷ್ಟು ಸದಸ್ಯರು ಮತ ಚಲಾಯಿಸಿ ಸಮರ್ಥಿಸಿ ಸಂಸತ್ತಿನ ಎರಡೂ ಸದನಗಳು ರಾಷ್ಟ್ರಪತಿಗಳಿಗೆ ಅರ್ಪಿಸಿದರೆ' ಈ ಪದಗಳ ಬದಲು "ಸಂಸತ್ತಿನ ಪ್ರತಿಯೊಂದು ಸದನವು ಹಾಜರಿದ್ದ ಸಂಸತ್ತಿನ ಸಂಖ್ಯೆಯ ಬಹುಮತದ ಅಂದರೆ ಆ ಸದನದ ಮೂರನೆಯ ಎರಡು ಅಂಶದಷ್ಟು ಕಡಿಮೆ ಇಲ್ಲದಷ್ಟು ಹಾಜರಿದ್ದ ಸದಸ್ಯರು ಮತ ಹಾಕಿ ರಾಷ್ಟ್ರಪತಿಗಳಿಗೆ ಅರ್ಪಿಸುವುದರಿಂದ" ಈ ಪದಗಳನ್ನು ಸೇರಿಸತಕ್ಕದು.

**ಮಾನ್ಯ ಅಧ್ಯಕ್ಷರು :** ಈ ತಿದ್ದುಪಡಿಗೆ ಇನ್ನೊಂದು ತಿದ್ದುಪಡಿಯನ್ನು ಡಾ. ಬಕ್ಷಿ ಟೇಕ ಚಂದ್ರ ಅವರು ತಂದದ್ದು ಆ ಬಗ್ಗೆ ಅವರು ನೋಟಿಸು ಕೊಟ್ಟಿದ್ದಾರೆ. ಅದರ ಸಂಖ್ಯೆಯು ೧೦೧ ಇದ್ದು ಮುದ್ರಿತ ಕರ ಪತ್ರಿಕೆಯಲ್ಲಿ ಕಾಣಿಸಲಾಗಿದ್ದು ಇದು ತಿದ್ದುಪಡಿಗೆ ತಿದ್ದುಪಡಿಯಾಗಿದೆ.

ತಿದ್ದುಪಡಿಯನ್ನು ಮಂಡಿಸಲಿಲ್ಲ.

* * * * *

**ಮಾನ್ಯ ಅಧ್ಯಕ್ಷರು :** ತಿದ್ದುಪಡಿ ಸಂಖ್ಯೆ ೧೮೫೩. ಇದು ಪದಾನುಪದ ತಿದ್ದುಪಡಿಯಲ್ಲ. ತಿದ್ದುಪಡಿ ಸಂಖ್ಯೆ ೧೮೫೮. ಇದ್ದು ಕೆ.ಟಿ ಶಹಾ ಅವರ ಹೆಸರಿನಲ್ಲಿದೆ. ಅದು : ಅಸಮರ್ಥತೆ, ಅನರ್ಹತೆ ಮತ್ತು ದುರ್ನಡತೆ ಈ ಪದಗಳನ್ನು ಅದು ಒಳಗೊಂಡಿಲ್ಲವೊ?

**ಪ್ರೊ. ಕೆ.ಟಿ. ಶಾಹಾ :** ನೀವು ಅದು ಒಳಗೊಂಡಿದೆ ಅಂದರೆ ನಾನು ಸ್ವೀಕರಿಸುವೆನು. ನಾನು ಅದನ್ನು ಮಂಡಿಸುವುದಿಲ್ಲ.

* * * * *

**ಮಾನ್ಯ ಅಧ್ಯಕ್ಷರು :** ತಿದ್ದುಪಡಿ ಸಂಖ್ಯೆ: ೧೮೬೨. ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ ಅವರ ಹೆಸರಿನಲ್ಲಿ ಅದು ಸಹ 'ಒಂದು ಘೋಷಣೆ ಈ ಪದದ ಬದಲಿಗೆ ವಿಧಿಯುಕ್ತವಾದ ತಿದ್ದುಪಡಿ ತಂದು ಅ ಪದಗಳ ಬದಲು 'ದೃಢೀಕರಣ ಇಲ್ಲವೆ ಶಪಥ ಈ ಪದಗಳನ್ನು ಸೇರಿಸಲು ಪದಾವಳಿಗಳು ಬಂದಿವೆ. ನಾವು ಕರಡು ಸಂವಿಧಾನದ ಉಳಿದ ಭಾಗಗಳಲ್ಲಿ ಎಲ್ಲಿ ಎಲ್ಲಿ ಇಂತಹ ಪದಾವಳಿಗಳು ಬಂದಿವೆಯೋ ಅಲ್ಲಿ ನಾವು ಇಂತಹ ಬದಲಾವಣೆಯನ್ನು ಮಾಡಿದ್ದೇವೆ. ಇದನ್ನು ಮಂಡಿಸಲಾಗಿದೆಯೆಂದು ನಾನು ಭಾವಿಸುವೆನು.

**ಸನ್ಮಾನ್ಯ ಡಾ.॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ವಿಧಿಯುಕ್ತವಾಗಿ ಮಂಡಿಸುತ್ತೇನೆ ವಿಧಿ ೧೦೩ರ ಖಂಡ (೪) ರಲ್ಲಿಯ ಪದಗಳು.

"ಘೋಷಣೆ" ಈ ಪದದ ಬದಲು 'ದೃಢೀಕರಣ ಇಲ್ಲವೆ ಶಪಥ" ಈ ಪದವನ್ನು ಸೇರಿಸತಕ್ಕದ್ದು.

* * * * *

**ಮಾನ್ಯ ಅಧ್ಯಕ್ಷರು :** ಡಾ॥ ಅಂಬೇಡ್ಕರ್ : ಈ ತಿದ್ದುಪಡಿಗಳನ್ನು ಕುರಿತು ನಿಮಗೆ ಏನಾದರೂ ಹೇಳುವುದಿದೆಯೆ?

**ಸನ್ಮಾನ್ಯ ಡಾ॥ ಬಿ.ಅರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ನಾನು ಎರಡು ತಿದ್ದುಪಡಿಗಳನ್ನು ಸ್ವೀಕರಿಸಲು ಸಿದ್ಧನಿದ್ದೇನೆ. ಅದರಲ್ಲಿ ಒಂದು ಶ್ರೀ ಸಂತಾನಮ್ ಮಂಡಿಸಿದ್ದು ಅದರ ಸಂಖ್ಯೆ ೧೮೨೯ ಇದೆ. ಮತ್ತು ಇನ್ನೊಂದು ಶ್ರೀ ಕಾಮತ್ ಅವರು ಮಂಡಿಸಿದ್ದ ಅದರ ಸಂಖ್ಯೆ ೧೮೪೫. ಅವರು ಇದರಿಂದ ಪ್ರಸ್ತಾಪಿಸುವುದೇನೆಂದರೆ ನ್ಯಾಯವೇತ್ತನನ್ನು ಸಹ ಸುಪ್ರೀಮ್ ಕೋರ್ಟಿನ ನ್ಯಾಯಾಧೀಶನನ್ನಾಗಿ ನೇಮಿಸಬಹುದೆಂದು ಹೇಳುತ್ತದೆ. ಅವರೆ ಶ್ರೀ ಕಾಮತ್ ಅವರ ತಿದ್ದುಪಡಿ ಸಂಖ್ಯೆ ೧೮೫೪ ಕುರಿತು, ನಾನು ಅದನ್ನು ತಡೆಹಿಡಿಯಬಯಸುತ್ತೇನೆ. ಈ ಸಂದರ್ಭದಲ್ಲಿ ಈ ಪದವು ಯೋಗ್ಯ ಅಹುದು ಇಲ್ಲವೋ ಎಂಬುದರ ಬಗ್ಗೆ ನಾನು ಇನ್ನೂ ನನ್ನ ಮನಸ್ಸಿನಲ್ಲಿ ನಿರ್ಧಾರ ಮಾಡಿಲ್ಲ. ನನಗೆ ಸೂಚಿಸಿರುವುದೇನೆಂದರೆ "ಶ್ರೇಷ್ಠ ಉನ್ನತ" ಈ ಪದವು ಹೆಚ್ಚು ಸೂಕ್ತವೆಂದು ಸೂಚಿಸಲಾಗಿತ್ತು. ಆದರೆ ನಾನು ಹೇಳಿದಂತೆ ನಾನು ನನ್ನ ಮನಸ್ಸಿನಲ್ಲಿ ಈ ವಿಷಯ ಕುರಿತು ನಿರ್ಧರಿಸಬೇಕಾಗಿದೆ. ಆದ್ದರಿಂದ ನಾನು ಈ ವಿಷಯವನ್ನು ಕರಡು ಸಮಿತಿಯ ನಿರ್ಣಯಕ್ಕೆ ಕಾಯ್ದಿರಿಸುವೆನು. ಆ ಕರಡು ಸಮಿತಿ ಸಂವಿಧಾನವನ್ನು ಪರಿಷ್ಕರಿಸುವ ಕಾಲಕ್ಕೆ 'ಗಣ್ಯ ಪ್ರಸಿದ್ಧ' ಈ ಪದವನ್ನು ಸ್ವೀಕರಿಸುತ್ತದೆಯೇ ಅಥವಾ ಅದರ ಪರಿಷ್ಕರಿಸುವ ಕಾಲಕ್ಕೆ 'ಗಣ್ಯ ಪ್ರಸಿದ್ಧ' ಈ ಪದವನ್ನು ಸ್ವೀಕರಿಸುತ್ತದೆಯೋ ಅಥವಾ ಅದರ ಬದಲು 'ಶ್ರೇಷ್ಠ ಉನ್ನತ ಇಲ್ಲವೆ ಇನ್ನಾವುದೋ ಯೋಗ್ಯ ಪದವನ್ನು ಸೂಚಿಸಬಹುದು.

ಮಾನ್ಯರೆ, ಈ ವಿಧಿಗೆ ಮಂಡಿಸಿದ ಅನೇಕ ತಿದ್ದುಪಡಿಗಳನ್ನು ಕುರಿತು, ಅಲ್ಲಿ ನಿಜವಾಗಿ ಮೂರು ವಿವಾದಾಂಶಗಳನ್ನು ಉತ್ತರಿಸಲಾಗಿದೆ. ಮೊದಲನೆಯದೆಂದರೆ ಸುಪ್ರೀಮ್ ಕೋರ್ಟಿನ ನ್ಯಾಯಾಧೀಶರನ್ನು ಹೇಗೆ ನೇಮಿಸುತ್ತಾರೆ? ಈಗ ಬೇರೆ ಬೇರೆ ತಿದ್ದುಪಡಿಗಳನ್ನು ಗುಂಪುಗಳನ್ನಾಗಿ ವಿಂಗಡಿಸಿ ನಿರ್ದಿಷ್ಟವಾಗಿ ಈ ವಿಷಯಕ್ಕೆ ಸಂಬಂಧಿಸಿದ ಬೇರೆ ಬೇರೆ ಪ್ರಸ್ತಾಪಗಳು ಇರುವುದು ನನಗೆ ಕಾಣುತ್ತದೆ. ಮೊದಲನೆಯ ಪ್ರಸ್ತಾವನೆಯು ಏನೆಂದರೆ ಸುಪ್ರೀಮ್ ಕೋರ್ಟಿನ ನ್ಯಾಯಾಧೀಶರನ್ನು ಮುಖ್ಯ ನ್ಯಾಯಮೂರ್ತಿಗಳ ಸಮ್ಮತಿಯೊಂದಿಗೆ ಮಾಡತಕ್ಕದ್ದು. ಅದು ಒಂದು ಅಭಿಪ್ರಾಯ. ಇನ್ನೊಂದು ಅಭಿಪ್ರಾಯವೆಂದರೆ ಈ ನೇಮಕಗಳನ್ನು ರಾಷ್ಟ್ರಪತಿಗಳು ಮಾಡತಕ್ಕದ್ದು ಮತ್ತು ಈ ನೇಮಕಗಳನ್ನು ಸಂಸತ್ತಿನಲ್ಲಿ ಎರಡು ಮೂರನೆಯ ಅಂಶಗಳಷ್ಟು ಸದಸ್ಯರಿಂದ ದೃಢೀಕರಿಸಬೇಕು. ಮತ್ತು ಮೂರನೆಯ ಸೂಚನೆ ಏನೆಂದರೆ ರಾಜ್ಯಸಭೆಯ ಪರ್ಯಾಲೋಚನೆಯೊಂದಿಗೆ ನೇಮಿಸತಕ್ಕದ್ದು.

ಈ ವಿಷಯ ಕುರಿತು, ನಾನು ಬಹುಮಟ್ಟಿಗೆ ಒಪ್ಪುತ್ತೇನೆ. ಆದರೆ ಅದು ಒಂದು ಪ್ರಧಾನ ವಿಷಯವನ್ನು ಎತ್ತುತ್ತದೆ. ಅದು ಅತ್ಯಂತ ಮಹತ್ವದ್ದು ಇದೆ. ನಮ್ಮ ನ್ಯಾಯಾಂಗ ಕಾರ್ಯಾಂಗದಿಂದ ಸ್ವತಂತ್ರವಾಗಿರಬೇಕು. ಮತ್ತು ಅದು ತನ್ನಷ್ಟಕ್ಕೆ ತಾವೇ ದಕ್ಷವಾಗಿರಬೇಕೆಂಬುದರ ಬಗೆಗೆ ಸಂಸತ್ತಿನಲ್ಲಿ ಭಿನ್ನಾಭಿಪ್ರಾಯವೇ ಇರುವುದಿಲ್ಲ. ಮತ್ತು ಪ್ರಶ್ನೆಯೆಂದರೆ ಎರಡೂ ಉದ್ದೇಶಗಳನ್ನು ಹೇಗೆ ಸಾಧಿಸುವುದು? ಇದಕ್ಕೆ ಎರಡು ಬೇರೆ ಬೇರೆ ಮಾರ್ಗಗಳಿವೆ. ಅದರಲ್ಲಿ ಈ ವಿಷಯವನ್ನು ಕುರಿತು ರಾಜ್ಯಭಾರ ಮಾಡುವ ಉಳಿದ ದೇಶಗಳಲ್ಲಿ ಗ್ರೇಟ್ ಬ್ರಿಟನ್‌ನಲ್ಲಿ ಅರಸನು ಯಾವುದೇ ರೀತಿಯ ನಿಬಂಧನೆಯು ಇಲ್ಲದೆ ನೇಮಕ ಮಾಡುತ್ತಾನೆ. ಅದೆಂದರೆ ಅಂದಿನ ಕಾರ್ಯಾಂಗದಿಂದ ಮುಕ್ತವಾಗಿ ಇದಕ್ಕೆ ವಿರುದ್ಧವಾದ ಪದ್ಧತಿಯು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಉದಾಹರಣೆಗಾಗಿ ಸುಪ್ರೀಮ್ ಕೋರ್ಟಿನ, ಅದರಂತೆ ರಾಜ್ಯದ ಉಳಿದ ಅಧಿಕಾರಿಗಳು, ಇವರ ನೇಮಕಗಳನ್ನು ಸೆನೇಟಿನ ಒಮ್ಮತದೊಂದಿಗೆ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಮಾಡುತ್ತಾರೆ. ನನಗೆ ಅನಿಸಿದಂತೆ, ಇಂದು ನಾವಿರುವ ಈ ಪರಿಸ್ಥಿತಿಗಳಲ್ಲಿ ಹೊಣೆಗಾರಿಕೆಯ ವಿವೇಚನೆ ತಿಳಿವಳಿಕೆಯು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಬೆಳೆದ ಮಟ್ಟಕ್ಕೆ ನಮ್ಮಲ್ಲಿ ಬೆಳೆದಿಲ್ಲವೆಂಬುದು ನಮಗೆ ಕಂಡುಬರುತ್ತದೆ. ಯಾವುದೇ ರೀತಿಯ ಮೀಸಲಾತಿಯು ಇಲ್ಲದೆ ಅಪಾಯಕಾರಕವಾದುದು. ಹೇಳಬೇಕೆಂದರೆ ಕೇವಲ ಕಾರ್ಯಾಂಗ ಸಲಹೆಯ ಮೇರೆಗೆ ಮಾಡುವುದು. ಅದರಂತೆ ನನಗೆ ಅನಿಸಿದಂತೆ ಕಾರ್ಯಾಂಗಕ್ಕೆ ಬೇಕಾದ ಪ್ರತಿಯೊಂದು ನೇಮಕವನ್ನು ಶಾಸಕಾಂಗದ ಏಕ ಅಭಿಪ್ರಾಯಕ್ಕೆ ಒಳಪಟ್ಟು ಮಾಡುವುದು ಅಷ್ಟೊಂದು ಸೂಕ್ತವಾದ ವ್ಯವಸ್ಥೆಯು ಆಗುವುದಿಲ್ಲ. ಇದು ತೊಂದರೆದಾಯಕವಾಗಿರುವುದಲ್ಲದೆ, ಆ ನೇಮಕಗಳು ರಾಜಕೀಯ ಒತ್ತಡ ಹಾಗೂ ಪ್ರಭಾವಕ್ಕೆ ಒಳಗಾಗುವ ಸಾಧ್ಯತೆಗಳೂ ಇವೆ. ಹಾಗೂ ರಾಜಕೀಯ ಪರಿಶೀಲನೆಗೆ ಒಳಗಾಗುತ್ತದೆ. ಆದುದರಿಂದ ಕರಡು ವಿಧಿಯ ಮಧ್ಯಂತರ ದಾರಿಗೆ ತಿರುಗಿಸಿದೆ. ಅದು ರಾಷ್ಟ್ರಪತಿಯನ್ನು ಸರ್ವೋಚ್ಚ ಮಾಡುವುದಿಲ್ಲ ಮತ್ತು ನೇಮಕಾತಿ ಮಾಡುವ ಸಂಪೂರ್ಣ ಅಧಿಕಾರವು ಅವರಿಗೆ ಇರುವುದಿಲ್ಲ. ಅದು ಶಾಸಕಾಂಗದ ಯಾವ ಪ್ರಭಾವ ಬೀರುವ ಅರ್ಥವೂ ಬರುವುದಿಲ್ಲ. ಆ ವಿಧಿಯ ವ್ಯವಸ್ಥೆ ಏನೆಂದರೆ ತಜ್ಞರೊಂದಿಗೆ ವಿಚಾರ ವಿನಿಮಯ ಮಾಡಿ ಉತ್ತಮ ಅರ್ಹತೆಯುಳ್ಳವರು ಮತ್ತು ಈ ವಿಷಯದಲ್ಲಿ ಒಂದು ರೀತಿ ಯೋಗ್ಯ ಸಲಹೆ ಕೊಡುವವರು ಮತ್ತು ನನ್ನ ದೃಷ್ಟಿಯಲ್ಲಿ ಈ ರೀತಿಯ ವ್ಯವಸ್ಥೆಯು ಈಗಿನ ಸಂದರ್ಭದಲ್ಲಿ ಯೋಗ್ಯವಾಗಿದೆಯೆಂದು ಹೇಳಬಹುದು.

ಮುಖ್ಯ ನ್ಯಾಯಮೂರ್ತಿಗಳು ಏಕಾಭಿಪ್ರಾಯವನ್ನು ಪಡೆಯುವ ಪ್ರಶ್ನೆಯನ್ನು ಕುರಿತು, ನನಗೆ ಅನಿಸಿದಂತೆ ಯಾರು ಈ ಪ್ರಸ್ತಾವನೆಯನ್ನು ಪ್ರತಿಪಾದಿಸುತ್ತಾರೆಯೋ ಅವರು ಸ್ವಲ್ಪವೂ ಸಂಶಯ ಪಡದ ಮುಖ್ಯ ನ್ಯಾಯಮೂರ್ತಿಗಳ ಪಕ್ಷಪಾತವಿಲ್ಲದೆ ಮತ್ತು ಆತನ ನಿರ್ಣಯದ ಬಂಧುರತೆ ಇವುಗಳ ಮೇಲೆ ಅವಲಂಬಿಸಿದೆ. ನನಗೆ ವೈಯಕ್ತಿಕವಾಗಿ ಇದರಲ್ಲಿ ಯಾವ ಸಂಶಯವೂ ಇಲ್ಲ. ಯಾಕೆಂದರೆ ಮುಖ್ಯ ನ್ಯಾಯಮೂರ್ತಿಗಳು ಬಹಳ ಉನ್ನತ ಉಚ್ಚ ಹುದ್ದೆಯ ವ್ಯಕ್ತಿಯಾಗಿರುವರು. ಆದರೆ, ಒಟ್ಟಾರೆ ಮುಖ್ಯ ನ್ಯಾಯಾಮೂರ್ತಿಗಳು ಒಬ್ಬ ಮನುಷ್ಯರಾಗಿದ್ದು ಅವರಿಗೂ ಎಲ್ಲಾ ರೀತಿಯ ಅನುಭವ, ಎಲ್ಲ ರೀತಿಯ ಭಾವಾತಿರೇಕಗಳು ಮತ್ತು ಎಲ್ಲ ಪಕ್ಷಪಾತ, ದುರಾಗ್ರಹಗಳು ನಾವು ಸಾಮಾನ್ಯ ಜನರಲ್ಲಿ ಕಾಣುವಂತಹವು ಅವರಲ್ಲಿಯೂ ಇವೆ ಮತ್ತು ನಾನು ವಿಚಾರಿಸಿದಂತೆ ಮುಖ್ಯ ನ್ಯಾಯಮೂರ್ತಿಗಳಿಗೆ ನ್ಯಾಯಾಧೀಶರ ಈ ನೇಮಕದಲ್ಲಿ ವಾಸ್ತವಿಕವಾಗಿ ನಿಷೇಧಾತ್ಮಕ ಅಧಿಕಾರ ಕೊಡುವುದೆಂದರೆ ನಿಜವಾಗಿಯೂ ಈ ಅಧಿಕಾರವನ್ನು ಮುಖ್ಯ ನ್ಯಾಯಮೂರ್ತಿಗಳಿಗೆ ವರ್ಗಾಯಿಸಲು ನಾವು ಸಿದ್ಧರಿಲ್ಲ. ಈ ನಿಷೇಧಾತ್ಮಕ ಅಧಿಕಾರವನ್ನು ರಾಷ್ಟ್ರಪತಿಗಳಲ್ಲಿ ಇಲ್ಲವೆ ಅಂದಿನ ಸರಕಾರದಲ್ಲಿ ನಿಹಿತಗೊಳಿಸಲು ಸಿದ್ಧರಿಲ್ಲ. ಆದ್ದರಿಂದ ನನಗೆ ಅನಿಸಿದಂತೆ

ಇಲ್ಲಿ ಒಂದು ಅಪಾಯಕಾರಕ ಪ್ರಸ್ತಾವನೆಯು ಇದೆ.

ಎರಡನೆಯ ವಿವಾದಾಂಶ ಬೇರೆ ಬೇರೆ ತಿದ್ದುಪಡಿಗಳಿಂದ ಎತ್ತಿದ್ದೇನೆಂದು ಈ ವಿಧಿಯು ವಯಸ್ಸಿಗೆ ಸಂಬಂಧಿಸಿದ್ದು ಇದ್ದು ವಯಸ್ಸಿನ ಬಗ್ಗೆ ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿದೆ. ಅವರಲ್ಲಿ ಕೆಲವರು ವಿಚಾರಿಸುವುದೇನೆಂದರೆ ನ್ಯಾಯಾಧೀಶರು ಅರವತ್ತು ವರ್ಷಗಳಾದ ನಂತರ ನಿವೃತ್ತರಾಗತಕ್ಕದ್ದು ಎಂದು ಅನ್ನುತ್ತಾರೆ. ಒಳ್ಳೆಯದು, ಉಚ್ಚ ನ್ಯಾಯಾಲಯಗಳನ್ನು ಕುರಿತು ಈಗ ಅದೇ ಸ್ಥಿತಿಯು ಇದೆ. ಇನ್ನು ಕೆಲವರು ಹೇಳುವಂತೆ ಸಂವಿಧಾನವು ವಯಸ್ಸಿನ ನಿರ್ಬಂಧನೆಯ ಬಗೆಗೆ ಏನೇ ಆದರೂ ಅದನ್ನು ಸಂಸತ್ತು ಕಾನೂನಿನ ಮೂಲಕ ಗೊತ್ತುಪಡಿಸತಕ್ಕದ್ದಲ್ಲ. ನನಗೆ ಅನಿಸಿದಂತೆ ಈ ಪ್ರಸ್ತಾವನೆಯನ್ನು ಸ್ವೀಕರಿಸಲಾರೆನು. ಯಾಕೆಂದರೆ ಈ ವಯಸ್ಸಿನ ವಿಷಯವನ್ನು ಸಂಸತ್ತಿಗೆ ಕಾಲಕಾಲಕ್ಕೆ ನಿರ್ಧರಿಸಲು ಬಿಟ್ಟರೆ ಯಾರೂ ನ್ಯಾಯಾಧೀಶರಾಗಿ ಬರಲು ಆಗಲಿಕ್ಕಿಲ್ಲ. ಯಾಕೆಂದರೆ ಆ ಕರ್ತವ್ಯದ ಮೇಲೆ ಇರುವವನಿಗೆ ತಾನು ನ್ಯಾಯಾಧೀಶ ಹುದ್ದೆಯನ್ನು ಸ್ವೀಕರಿಸುವ ಮೊದಲು ಸಾಮಾನ್ಯವಾಗಿ ಹಾಗೂ ಸ್ವಾಭಾವಿಕವಾಗಿ ತಾನು ಎಷ್ಟು ವರ್ಷಗಳ ಕಾಲ ಸೇವೆಯಲ್ಲಿರುತ್ತೇನೆ ಹಾಗೂ ತಾನು ಆ ಅಧಿಕಾರ ಹುದ್ದೆಯನ್ನು ಎಲ್ಲಿಯವರೆಗೆ ಹೊಂದಿರುತ್ತೇನೆ ಎಂದು ತಿಳಿದುಕೊಳ್ಳಬಯಸುತ್ತಾನೆ. ಮತ್ತು ಆದ್ದರಿಂದ ವಯಸ್ಸನ್ನು ಕುರಿತು ಒಂದು ಉಪಬಂಧ ಮಾಡುವ ಬಗ್ಗೆ ನನಗೆ ತುಂಬಾ ಸಮಾಧಾನವಿದೆ. ಆದರೆ ಸಂಸತ್ತು ಈ ವಯಸ್ಸನ್ನು ಕಾಲಕಾಲಕ್ಕೆ ನಿರ್ಧರಿಸಲಾರದು. ಆದರೆ ಇದನ್ನು ಸಂವಿಧಾನದಲ್ಲಿ ಗೊತ್ತುಪಡಿಸಲಿಕ್ಕೇ ಬೇಕು. ಮತ್ತೊಂದು ಅಭಿಪ್ರಾಯದಂತೆ ನೀವು ಯಾವುದೇ ವಯಸ್ಸಿನ ನಿರ್ಬಂಧವನ್ನು ಗೊತ್ತುಪಡಿಸಿದರೆ ನೀವು ವಾಸ್ತವಿಕವಾಗಿ ಮಾಡುತ್ತಿರುವಿರೆಂದರೆ ಅವನ ವಯಸ್ಸು ಏನೇ ಇದ್ದರೂ ನಾವು ವಯಸ್ಸನ್ನು ನಿರ್ಧರಿಸಿದರೆ ಉದಾ: ಅರವತ್ತೈದು ಇದು ತುಂಬಾ ಆರೋಗ್ಯಕರ, ಕೆಲವು ಉತ್ತಮ ಮಾನಸಿಕ ಆರೋಗ್ಯ ಮತ್ತು ದೃಢಕಾಯ ಹೊಂದಿದವನು ಇನ್ನೂ ವರ್ಷಗಳವರೆಗೆ ರಾಜ್ಯಕ್ಕೆ ತೃಪ್ತಿಕರವಾಗಿ ಸೇವೆಯನ್ನು ಮಾಡಬಲ್ಲನು. ನಾನು ಸಂಪೂರ್ಣ ಇದಕ್ಕೆ ಒಪ್ಪುತ್ತೇನೆ. ಅರವತ್ತೈದು ವರ್ಷ ಇದನ್ನು ಯಾವಾಗಲೂ ಒಬ್ಬ ಮನುಷ್ಯ ಬೌದ್ಧಿಕಶಕ್ತಿಯನ್ನು ಅಳೆಯುವ ಶೂನ್ಯ ಬಿಂದುವೆಂದು ಗ್ರಹಿಸಬಾರದು. ನನಗೆ ಅನಿಸುವುದೇನೆಂದರೆ ಸನ್ಮಾನ್ಯ ಸದಸ್ಯರು ಯಾರು ತಿದ್ದುಪಡಿಯನ್ನು ಈ ಬಗ್ಗೆ ಮಂಡಿಸಿರುವರೋ ಅವರು ವಿಧಿ ೧೦೭ರ ಉಪಬಂಧವನ್ನು ಮರೆತಂತೆ ಕಾಣುತ್ತದೆ. ನಾವು ಎಲ್ಲಿ ಆ ವ್ಯವಸ್ಥೆ ಮಾಡಿರುವೆವೋ ಅಲ್ಲಿ ಮುಖ್ಯ ನ್ಯಾಯಮೂರ್ತಿಗಳು ನಿವೃತ್ತ ನ್ಯಾಯಾಧೀಶರನ್ನು ಕರೆದು ಅವರು ಒಂದು ನಿರ್ದಿಷ್ಟ ಪ್ರಕರಣ ಇಲ್ಲವೆ ಪ್ರಕರಣಗಳನ್ನು ನಿರ್ಧರಿಸಲು ಕೇಳಬಹುದು. ಇದರ ಪರಿಣಾಮವಾಗಿ ಈ ೧೦೭ನೆಯ ವಿಧಿಯನ್ನು ಜಾರಿಯಲ್ಲಿ ತರುವುದರಿಂದ ಅಲ್ಲಿ ಕಡಿಮೆ ಸಾಧ್ಯತೆಯು ಇದೆ. ನಾನು ಅದನ್ನು ಹೇಳಬೇಕೆಂದರೆ ಬುದ್ಧಿಶಕ್ತಿಯನ್ನು ಕಳೆದುಕೊಂಡು ಒಬ್ಬ ವ್ಯಕ್ತಿಯು, ಈಗಾಗಲೇ ಸುಪ್ರೀಂ ಕೋರ್ಟಿನಲ್ಲಿ ಕೆಲಸ ಮಾಡಿದವರು. ಆದುದರಿಂದ ನಾನು ವಿನಯಪೂರ್ವಕ ಹೇಳಬಯಸುವುದೇನೆಂದರೆ ವಯಸ್ಸಿನ ಪ್ರಶ್ನೆ ಕುರಿತು ಹೇಳುವವರಿಗೆ ಅಂಜಿಕೆಯ ಯಾವ ಆಧಾರವೇ ಇಲ್ಲ. ಈಗ ನಾನು ಮೂರನೆಯ ವಿವಾದಾಂಶಕ್ಕೆ ಈ ತಿದ್ದುಪಡಿಯ ಮೇಲಿನ ಚರ್ಚೆಯು ಎತ್ತಿದ್ದು ಪ್ರಶ್ನೆಯೆಂದರೆ ನ್ಯಾಯಾಂಗದ ನ್ಯಾಯಾಧೀಶರು ತಮ್ಮ ನಿವೃತ್ತಿಯ ನಂತರ ಪುನಃ ಅಧಿಕಾರ ಸ್ಥಾನವನ್ನು ಸ್ವೀಕರಿಸುವ ಕುರಿತು ಇದೆ. ಈ ವಿಷಯದ ಬಗ್ಗೆ ಎರಡು ತಿದ್ದುಪಡಿಗಳಿವೆ. ಒಂದು ಪ್ರೊ. ಶಹಾ ಅವರದು, ಇನ್ನೊಂದು ಶ್ರೀ ಜಸಪಾಲ್ ರಾಯ್ ಕಪೂರ್ ಅವರದು. ವೈಯಕ್ತಿಕವಾಗಿ ನನ್ನ ವಿಚಾರದಲ್ಲಿ ಈ ತಿದ್ದುಪಡಿಗಳಲ್ಲಿ ಯಾವುದನ್ನು ಸ್ವೀಕರಿಸಲಾರೆನು. ಕರಡು ಸಂವಿಧಾನದಲ್ಲಿ ಲೋಕಸೇವಾ ಆಯೋಗದ ಸದಸ್ಯರಿಗೆ ಸಂಬಂಧಿಸಿದ ಅಂಶಗಳ ಆಧಾರದ ಮೇಲೆ ಈ ವಿಚಾರಗಳನ್ನು ವ್ಯಕ್ತಪಡಿಸಲಾಗಿದೆ.

ಒಬ್ಬನು ಲೋಕಸೇವಾ ಆಯೋಗದ ಸದಸ್ಯನಾಗಿ ನಿವೃತ್ತಿಯನ್ನು ಹೊಂದಿದ ನಂತರ, ಅರಸನ ಆಡಳಿತದಲ್ಲಿ ಕೆಲವು ಅವಧಿಯವರೆಗೆ ಅಧಿಕಾರವನ್ನು ಹೊಂದಬಹುದೆಂದು ಒಂದು ಉಪಬಂಧವಿದೆ. ಒಬ್ಬ ಸದಸ್ಯನು ಲೋಕಸೇವಾ ಆಯೋಗದಿಂದ ನಿವೃತ್ತಿಯ ನಂತರ ಹಾಗೆ ಮಾಡಬಹುದು. ಈ ತಿದ್ದುಪಡಿಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಮೇಲೆ ಕಾಣಿಸಿದ ಉಪಬಂಧದ ಆಧಾರದ ಮೇಲೆ ಮೇಲಿನ ಉಪಬಂಧದ ತಿದ್ದುಪಡಿಗಳನ್ನು ತರಲಾಗಿದೆ. ಆದರೆ ನನಗೆ ಅನಿಸುವಂತೆ ಅದರಲ್ಲಿ ಮೂಲಭೂತ ಅಂತರವಿದೆ. ನ್ಯಾಯಾಂಗ ಅಧಿಕಾರಿಗಳು ಮತ್ತು ಒಕ್ಕೂಟ ಲೋಕ ಆಯೋಗದ ಸದಸ್ಯರು ಸರಕಾರ ಸೇವೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ. ನಿರ್ಣಯಿಸುವ ವಿಷಯಗಳಲ್ಲಿ ಸರಕಾರವು ನೇರವಾಗಿ ಆಸಕ್ತಿ ಹೊಂದಿದೆ. ಉದಾ : ಜನರನ್ನು ಸಿವಿಲ್ ಸೇವೆ ಭರ್ತಿಗೆ ಮಾಡಿಕೊಳ್ಳುವುದು ಕೆಲವು ಖಾತೆಗಳನ್ನು ಹೊಂದಿದ ಮಂತ್ರಿಗಳು ತಮ್ಮ ಪ್ರಭಾವವನ್ನು ಬೀರಿ ಲೋಕಸೇವಾ ಆಯೋಗದ ಸದಸ್ಯನೊಬ್ಬನಿಗೆ ಕೆಲವು ಹುದ್ದೆಯನ್ನು ಅವನ ನಿವೃತ್ತಿಯ ನಂತರ ತಾನು ಶಿಫಾರಸು ಮಾಡುವ ವಚನ ಕೊಟ್ಟು ತಾನು ಆಸಕ್ತಿ ಹೊಂದಿದ ಅಭ್ಯರ್ಥಿ ಆಯ್ಕೆ ಮಾಡುವಂತೆ ಮಾಡಬಹುದು. ಒಕ್ಕೂಟ ಲೋಕಸೇವಾ ಆಯೋಗ ಮತ್ತು ಕಾರ್ಯಾಂಗಗಳ ನಡುವಿನ ಸಂಬಂಧವು ಬಹು ಸಾಮೀಪ್ಯ ಹೊಂದಿರುತ್ತದೆ. ಬೇರೆ ಶಬ್ದಗಳಲ್ಲಿ, ಹೇಳಬೇಕೆಂದರೆ ಲೋಕಸೇವಾ ಆಯೋಗವು ಎಲ್ಲ ಕಾಲಕ್ಕೂ ಕಾರ್ಯಾಂಗಕ್ಕೆ ಅತಿ ಮಹತ್ವದ ವಿಷಯಗಳನ್ನು ನಿರ್ಣಯಿಸುವಲ್ಲಿ ಆಸಕ್ತಿ ಹೊಂದಿರುತ್ತದೆ. ನ್ಯಾಯಾಂಗವು ಸರಕಾರ ಆಸಕ್ತಿ ಹೊಂದಿರುವ ಪ್ರಕರಣಗಳನ್ನು ನಿರ್ಣಯಿಸುತ್ತದೆ. ನ್ಯಾಯಾಂಗವು ನಾಗರಿಕರ ವಿವಾದಾಂಶಗಳನ್ನು ನಿರ್ಧರಿಸುವಲ್ಲಿ ನಿರತವಾಗಿರುತ್ತದೆ. ಮತ್ತು ಕ್ವಚಿತ್ತಾಗಿ ನಾಗರಿಕ ಮತ್ತು ಸರಕಾರದ ನಡುವಿನ ವಿವಾದಾಂಶಗಳನ್ನು ನಿರ್ಣಯಿಸುತ್ತದೆ. ಇದರ ಪರಿಣಾಮವಾಗಿ ನ್ಯಾಯಾಂಗದ ಒಬ್ಬ ಸದಸ್ಯನ ಮೇಲೆ ಸರಕಾರದ ಪ್ರಭಾವ ಬೀರುವುದು ವಿರಳ. ಮತ್ತು ನನ್ನ ವೈಯಕ್ತಿಕ ದೃಷ್ಟಿಯಲ್ಲಿ ಯಾವ ಉಪಬಂಧಗಳನ್ನು ಈ ಸಂಯುಕ್ತ ಉಪಯೋಗಕ್ಕೆ ಅನ್ವಯಿಸುತ್ತವೆಯೋ, ಅವು ನ್ಯಾಯಾಂಗದ ಸಾಮರ್ಥ್ಯಕ್ಕೆ ಅನ್ವಯಿಸುವುದಿಲ್ಲ.

ಒಂದು ವಿಶೇಷ ರೀತಿಯಲ್ಲಿ ಇದು ಕೆಲವು ಉದ್ದೇಶಗಳಿಗೆ ತುಂಬಾ ಅವಶ್ಯವಿದೆ.

ನಮ್ಮ ಮಿತ್ರರಾದ ಶ್ರೀ ವರದಾಚಾರಿಯವರ ಪ್ರಕರಣವನ್ನು ತೆಗೆದುಕೊಳ್ಳಿರಿ. ಅವರು ಈಗ ಆದಾಯಕರ ಪ್ರಶ್ನೆಗಳ ಆಯೋಗದ ಸದಸ್ಯರೆಂದು ನೇಮಕವಾಗಿದ್ದಾರೆ.

**ಶ್ರೀ ಜಸಪಾಲ್ ರಾಯ್ ಕಪೂರ್ :** ಅದು ಗೌರವಾರ್ಥದ ಸಂಬಳವಿಲ್ಲದ ಹುದ್ದೆಯೂ ಸಹ ಆಗಿದೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಇಲ್ಲಿ ಅವರಿಗೆ ಸಂಬಳ ಕೊಡಲಾಗುವುದು. ಆದ್ದರಿಂದ ಅದು ಸರಕಾರದ ಲಾಭದಾಯಕ ಪದಸ್ಥಾನ ನ್ಯಾಯಾಂಗದ ತಜ್ಞರನ್ನು ಹೊರತುಪಡಿಸಿ ಬೇರೆ ಯಾರನ್ನೂ ಇಂತಹ ಸ್ಥಾನಗಳಿಗೆ ನೇಮಿಸಲಿಕ್ಕೆ ಬರುತ್ತದೆ. ಯಾರಿಗೆ ಇಂತಹ ಕೆಲಸ ಮಾಡುವ ಬುದ್ಧಿಶಕ್ತಿ ಇರುತ್ತದೆಯೋ ಅಂಥವರಿಗೆ ಸಂಬಂಧಿಸಿ ಇಂತಹ ಉಪಬಂಧಗಳಿಂದ ಶ್ರೀ ಜಸಪತ್‌ರಾಯ್ ಕಪೂರ ಅವರು ಸೂಚಿಸಿದಂತೆ ಕಸಿದುಕೊಳ್ಳಲಾಗುತ್ತದೆ. ಮತ್ತು ಪ್ರತಿಬಂಧ ಕಲ್ಪಿಸಲಾಗುತ್ತದೆ. ಹಾಗೂ ನಾನು ಹೇಳುವುದೇನೆಂದರೆ ಕಾರ್ಯಾಂಗ ಮತ್ತು ನ್ಯಾಯಾಂಗಗಳ ನಡುವಿನ ಸಂಬಂಧ ಇಷ್ಟು ಪ್ರತ್ಯೇಕಿಸಲ್ಪಟ್ಟಿವೆ ಮತ್ತು ಭಿನ್ನವಾಗಿರುತ್ತವೆ. ಕಾರಣ ಕಾರ್ಯಾಂಗವು ನ್ಯಾಯಾಂಗದ ತೀರ್ಪಿನ ಮೇಲೆ ಯಾವುದೇ ಪರಿಣಾಮವನ್ನು ಬೀರಲು ಸಾಧ್ಯವೇ ಇಲ್ಲ. ಆದ್ದರಿಂದ ನಾನು ಸೂಚಿಸುವುದೇನೆಂದರೆ ಸೂಚಿಸಿದ ಉಪಬಂಧದ ಅವಶ್ಯಕತೆಯು ಇರುವುದಿಲ್ಲ. ಮತ್ತು ನಾನು ಅದನ್ನು ವಿರೋಧಿಸುತ್ತೇನೆ ಮತ್ತು ನಾನು ಎಲ್ಲ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ. ಕೆಳಗಿನ

ಎರಡು ತಿದ್ದುಪಡಿಗಳು ಸ್ವೀಕರಿಸಲ್ಪಟ್ಟವು.

೧) ಶ್ರೀ ಸಂತಾನಮ್ ಅವರು ತಂದ ತಿದ್ದುಪಡಿಯು "ವಿಧಿ ೧೦೩" ರ ಖಂಡ (೨) ರಲ್ಲಿಯು "ಯಾಗಬಹುದು" ಈ ಪದಗಳ ಬದಲು ರಾಷ್ಟ್ರಪತಿಗಳು ಸರಿಕಂಡಂತೆ ಈ ಪದಗಳನ್ನು ಸೇರಿಸತಕ್ಕದ್ದು.

೨) ಶ್ರೀ ಕಮತ್ ಅವರು ತಂದ ತಿದ್ದುಪಡಿ "ವಿಧಿ ೧೦೩ ಖಂಡ (೩) ರಲ್ಲಿ ಹೊಸ ಉಪಖಂಡ"

(ಕ) ಇಲ್ಲವೆ ಒಬ್ಬ ಘನ ಪ್ರಸಿದ್ಧ ನ್ಯಾಯಶಾಸ್ತ್ರಜ್ಞ.

ಮುಂಚೆ ತೋರಿಸಿದಂತೆ ಡಾ॥ ಅಂಬೇಡ್ಕರ್ ರವರ ಎಲ್ಲಾ ನಾಲ್ಕು ತಿದ್ದುಪಡಿಗಳನ್ನು ಸ್ವೀಕರಿಸಲಾಯಿತು. ಉಳಿದ ಸದಸ್ಯರು ಮಂಡಿಸಿದ ಎಲ್ಲ ೧೮ ತಿದ್ದುಪಡಿಗಳು ತಿರಸ್ಕೃತವಾದವು.

(ವಿಧಿ ೧೦೩ ತಿದ್ದುಪಡಿಯಾದಂತೆ ಸಂವಿಧಾನದಲ್ಲಿ ಸೇರಿಸಲಾಯಿತು)

## ವಿಧಿ ೧೦೩ ಅ

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಸಾಧ್ಯವಿದ್ದಷ್ಟು ಕೆಲವೇ ಮಾತುಗಳಲ್ಲಿ ಈ ವಿಷಯವನ್ನು ಮುಗಿಸಿ ಬಿಡುತ್ತೇನೆ. ಹಾಗೆ ಮಾಡುವ ಮೊದಲು ನಾನು ಹೇಳಬಯಸುವುದೇನೆಂದರೆ ಈ ನಿರ್ದಿಷ್ಟ ವಿಧಿಯ ಕೆಳಗೆ ನಾನು ತಿಳಿದುಕೊಂಡಂತೆ ಈ ತಿದ್ದುಪಡಿಯು ವಿಧಿಯ ಮುಖ್ಯ ವಿಚಾರವನ್ನು ತಿಳಿದುಕೊಳ್ಳುವ ಉದ್ದೇಶಕ್ಕಾಗಿ ನನಗೆ ಅನಿಸಿದಂತೆ, ಮೂರು ಬೇರೆ ಬೇರೆ ಪ್ರಕರಣಗಳನ್ನು ನಾವು ತೆಗೆದುಕೊಳ್ಳಬೇಕು. ಒಂದು ಪ್ರಕರಣ ಸುಪ್ರೀಮ್ ಕೋರ್ಟಿನ ನ್ಯಾಯಮೂರ್ತಿ ಇವರನ್ನು ಸುಪ್ರೀಮ್ ಕೋರ್ಟಿನ ಯಾವುದೇ ಸ್ಥಳ ಕಾಯ್ದಿರಿಸದೆ ನೇಮಕ ಮಾಡುವುದು. ಎರಡನೆಯ ಪ್ರಕರಣವೆಂದರೆ ಸುಪ್ರೀಮ್ ಕೋರ್ಟಿನ ನ್ಯಾಯಮೂರ್ತಿಗಳು ನಿವೃತ್ತರಾದ ನಂತರ ನ್ಯಾಯಾಂಗವಲ್ಲದ ಇತರ ರೀತಿಯ ಕಾರ್ಯಾಂಗದ ಅಧಿಕಾರಿಯಾಗಿ ನಿವೃತ್ತನಾದ ನಂತರ ಪುನಃ ನೇಮಕ ಮಾಡುವುದು. ಮೂರನೆಯ ಪ್ರಕರಣವೆಂದರೆ ಸುಪ್ರೀಮ್ ಕೋರ್ಟಿನ ನ್ಯಾಯಾಧೀಶ ಅವರಿಗೆ ನ್ಯಾಯಾಂಗವಲ್ಲದ ಕರ್ತವ್ಯವನ್ನು ಕೊಡುವುದು ಇಲ್ಲವೆ ವಹಿಸಿಕೊಡುವುದು ಮತ್ತು ನಂತರ ಸುಪ್ರೀಮ್ ಕೋರ್ಟಿಗೆ ಹಿಂಬಡತಿ ಅಧಿಕಾರವು ನನಗೆ ತಿಳಿದಂತೆ ನನ್ನ ಗೆಳೆಯರಾದ ಶ್ರೀ ಸೇನ ಅವರು, ನಾನು ತಪ್ಪಿದರೆ ಅದನ್ನು ಸರಿಪಡಿಸಬೇಕು. ಈ ತಿದ್ದುಪಡಿಯು ಮೂರನೆಯ ಪ್ರಸ್ತಾವನೆಗೆ ಸಂಬಂಧಿಸಿದ್ದು ಉದಾ: ಸುಪ್ರೀಮ್ ಕೋರ್ಟಿನ ನ್ಯಾಯಾಧೀಶನಿಗೆ ನ್ಯಾಯಾಂಗವಲ್ಲದ ಕರ್ತವ್ಯಗಳನ್ನು ಸ್ವಲ್ಪ ಅವಧಿಗೆ ನೇಮಿಸಿ, ಪುನಃ ಅವನು ಸುಪ್ರೀಮ್ ಕೋರ್ಟಿಗೆ ಹಿಂದಕ್ಕೆ ಬರುವ ಅಧಿಕಾರವನ್ನು ಇಡಲಾಗಿದೆ.

ಮೊದಲನೆಯ ಪ್ರಕರಣಕ್ಕೆ ಕುರಿತು ಹೇಳಿದ್ದೇನೆಂದರೆ ಉದಾ: ಸುಪ್ರೀಮ್ ಕೋರ್ಟಿನ ನ್ಯಾಯಾಧೀಶನನ್ನು ಒಂದು ಕಾರ್ಯಾಂಗದ ಕಚೇರಿಗೆ ನೇಮಕ ಮಾಡಿ, ಅವನು ತನ್ನ ಸುಪ್ರೀಮ್ ಕೋರ್ಟಿನ ನ್ಯಾಯಮೂರ್ತಿಯ ಸ್ಥಾನಕ್ಕೆ ರಾಜೀನಾಮೆ ಕೊಟ್ಟರೆ ಎಂದು ಕಾಣಿಸಿದ್ದಾರೆ. ಇದರಲ್ಲಿ ಯಾವ ತಪ್ಪೂ ನನಗೆ ಕಾಣುವುದೇ ಇಲ್ಲ. ಯಾಕೆಂದರೆ ಒಟ್ಟಾರೆ ಅವನು ಸುಪ್ರೀಮ್ ಕೋರ್ಟಿನಿಂದ ಹೊರಗೆ ಹೋಗುತ್ತಾನೆ.

ಎರಡನೆಯ ಪ್ರಕರಣ ಕುರಿತು ಉದಾ: ಇದೀಗ ನಿವೃತ್ತಿಯಾದ ಸುಪ್ರೀಮ್ ಕೋರ್ಟಿನ ನ್ಯಾಯಮೂರ್ತಿಗಳು ಅವರು ಇದೀಗ ಆ ಕೆಲಸವನ್ನು ಮಾಡುವುದನ್ನು ಬಿಟ್ಟಿದ್ದಾರೆ. ಅಲ್ಲಿ ಯಾವ

ತರಹದ ನಿರ್ಬಂಧನೆಗಳೂ ಇರುವುದಿಲ್ಲ. ಮೂರನೆಯ ಪ್ರಕರಣವನ್ನು ಕುರಿತು ಒಂದು ಅಂಶವು ವಿಚಾರಿಸಬೇಕಾದುದು ಅವಶ್ಯವಿದೆ. ಈ ದೇಶದಲ್ಲಿ ನಮಗೆ ಎರಡು ರೀತಿಯ ಪ್ರಕರಣಗಳಿವೆ. ಒಂದು ಪ್ರಕರಣ, ಯುದ್ಧ ನಡೆದ ಕಾಲಕ್ಕೆ ಫೆಡರಲ್ ಕೋರ್ಟಿನ ನ್ಯಾಯಮೂರ್ತಿಗಳನ್ನು ಭಾರತ ಸರಕಾರವು ರಾಯಭಾರಿ, ರಾಜತಾಂತ್ರಿಕ ಸಂಬಂಧಗಳಿಗಾಗಿ ಸುತ್ತಲಿನ ದೇಶಗಳಿಗೆ ಕೊಡಲಾಯಿತು. ಸರಕಾರದ ಆ ಆಡಳಿತದಲ್ಲಿ ಸರಕಾರ ಮುಖ್ಯ ನ್ಯಾಯಮೂರ್ತಿಗಳು ಇಲ್ಲವೆ ನ್ಯಾಯಮೂರ್ತಿ ಈಗ ನನಗೆ ನೆನಪು ಹಾರಿದೆ. ಅನೇಕ ಉಚ್ಚ ನ್ಯಾಯಾಲಯಗಳಲ್ಲಿ ಒಂದು ರಾಯಭಾರಿ ರಾಜತಾಂತ್ರಿಕ ಕಾರ್ಯಗಳಿಗಾಗಿ ಕಳುಹಿಸಿತ್ತು. ಈ ಎರಡೂ ಸಂದರ್ಭಗಳಲ್ಲಿ ಇಂತಹ ಕೃತಿಗಳಿಗಾಗಿ ಬಹಳಷ್ಟು ಟೀಕೆಗಳು ಬಂದವು. ನನ್ನ ಸ್ನೇಹಿತರಾದ ಶ್ರೀ ಚಿಮನಲಾಲ ಸೆಟಿಲವಾಡ ಅವರು ಟೈಮ್ಸ್ ಆಫ್ ಇಂಡಿಯಾದಲ್ಲಿ ಒಂದು ಲೇಖನವನ್ನು ಬರೆದು ಸರಕಾರದ ಈ ಕ್ರಮವನ್ನು ಟೀಕಿಸಿದರು. ಅವರ ಭಾವನೆಗಳನ್ನು ನಾನು ಹಂಚಿಕೊಳ್ಳುತೇನೆ. ಆದಾಗ್ಯೂ ಸದ್ಯಕ್ಕೆ ಡಾ. ಕೆ.ಪಿ. ಸೇನ ಅವರ ತಿದ್ದುಪಡಿ ಈಗಿದ್ದ ಪದಗಳಲ್ಲಿ ನಾನು ಸ್ವೀಕರಿಸಲು ಸಾಧ್ಯವಿಲ್ಲ. ಯಾಕೆಂದರೆ ಈ ಪದಗಳು ಬಹಳ ವಿಶಾಲವಾಗಿ ಇಲ್ಲವೆ, ಇನ್ನೂ ಕೆಲವು ಪ್ರಕರಣಗಳಲ್ಲಿ ಬಹು ಸಂಕುಚಿತವೂ ಆಗಿದೆ. ನಾನು ಕರಡು ಸಮಿತಿಗೆ ಈ ವಿಷಯವನ್ನು ವಿಚಾರಣೆಗೆ ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಲು ಸಿದ್ಧನಿದ್ದೇನೆ. ಈ ಭರವಸೆಯ ಮೇಲೆ, ನಾನು ಅವರಿಗೆ ತಮ್ಮ ತಮ್ಮ ತಿದ್ದುಪಡಿಯನ್ನು ತಿರುಗಿ ಪಡೆಯಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಜಸಪತ್‌ರಾಯ್ ಕಪೂರ್ :** ಈ ಖಂಡದ ಮೇಲೆ ನಾಳೆಯ ದಿನ ಒಂದು ನಿರ್ಣಯವಾಗುವವರೆಗೆ ತಡೆಹಿಡಿಯೋಣ. ಯಾಕೆಂದರೆ ನಮ್ಮ ಬಹಳಷ್ಟು ಜನರು ಅದನ್ನು ಕಾಳಜಿಪೂರ್ವಕ ಅಭ್ಯಾಸ ಮಾಡಬೇಕಾಗಿದೆ.

**ಮಾನ್ಯ ಅಧ್ಯಕ್ಷರು :** ಡಾ. ಅಂಬೇಡ್ಕರ್ ಅವರು ಕರಡು ಸಮಿತಿಯ ವಿಚಾರಣೆಗೆ ಇದನ್ನು ಕಳುಹಿಸಲು ಸಿದ್ಧರಿದ್ದಾರೆ.

**ಶ್ರೀ ಜಸಪತ್‌ರಾಯ್ ಕಪೂರ್ :** ಅದನ್ನು ತಡೆಹಿಡಿಯಬಹುದು.

**ಮಾನ್ಯ ಅಧ್ಯಕ್ಷರು :** ಅದನ್ನು ಕರಡು ಸಮಿತಿಗೆ ಒಪ್ಪಿಸಿರುವಾಗ ಅದನ್ನು ತಡೆಹಿಡಿಯಲಾಗಿದೆ ಎಂದು ಅರ್ಥವಾಗುತ್ತದೆ. ಯಾಕೆಂದರೆ ಅದು ತಿರುಗಿ ಬಂದ ನಂತರ ಕರಡು ಸಮಿತಿಯಿಂದ ಒಂದು ವಿಶಿಷ್ಟ ನಮೂನೆಯ ರೂಪದಲ್ಲಿ ಬರುತ್ತದೆ.

* * * * *

## ವಿಧಿ ೧೦೪

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** (ಮುಂಬೈ : ಸಾಮಾನ್ಯ) : ಮಾನ್ಯರೆ, ವಿಧಿ ೧೦೪ ಇದನ್ನು ಮುಂದಕ್ಕೆ ಹಾಕಬೇಕೆಂದು ವಿನಂತಿಸಿಕೊಳ್ಳುತ್ತೇನೆ.

## ವಿಧಿ ೧೦೬

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ತಿದ್ದುಪಡಿ ಸಂಖ್ಯೆ ೧೨೪ ಪಟ್ಟಿ ಸೂಚಿ ೪ ಮತ್ತು ತಿದ್ದುಪಡಿ ಸಂಖ್ಯೆ ೧೮೮೩ ಇವೆರಡನ್ನೂ ನಾನು ಸ್ವೀಕರಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಎರಡು ತಿದ್ದುಪಡಿಗಳನ್ನು ಮಂಡಿಸಬಹುದಾಗಿತ್ತು. ಅವೆರಡನ್ನೂ ಡಾ. ಅಂಬೇಡ್ಕರ್ ಅವರು ಒಪ್ಪಿಕೊಂಡಿದ್ದಾರೆ. ಅವುಗಳನ್ನು ನಾನು ಈಗ ಮತಕ್ಕೆ ಹಾಕುತ್ತೇನೆ. ತಿದ್ದುಪಡಿಗಳ ಪಟ್ಟಿಯಲ್ಲಿಯ ತಿದ್ದುಪಡಿ ಸಂಖ್ಯೆ ೧೮೮೩. ಪಟ್ಟಿ ಸೂಚಿಯ ತಿದ್ದುಪಡಿಗಳು ವಿಧಿ ೧೦೬ರ ಖಂಡ (೧)ರಲ್ಲಿ ನಂತರದ ಪದಗಳು 'ಮುಖ್ಯ ನ್ಯಾಯಮೂರ್ತಿಗಳು' ಬಹುಶಃ ಉಪಬಂಧದಲ್ಲಿ "ತತ್ಪೂರ್ವದ ರಾಷ್ಟ್ರಪತಿಗಳ ಸಮ್ಮತಿಯೊಂದಿಗೆ ಮತ್ತು" ಈ ಪದಗಳನ್ನು ಸೇರಿಸತಕ್ಕದ್ದು. "ವಿಧಿ ೧೦೬ರ ಖಂಡ (೧)ರಲ್ಲಿ 'ಉಚ್ಚ ನ್ಯಾಯಾಲಯ' ಎರಡನೆಯ ಸಲ ಎಲ್ಲಿ ಬರುತ್ತದೆಯೋ ಅಲ್ಲಿ ಸುಪ್ರೀಮ್ ಕೋರ್ಟಿನ ನ್ಯಾಯಾಧೀಶನಾಗಲು ಯೋಗ್ಯರೀತಿಯಲ್ಲಿ ಅರ್ಹತೆಗಳನ್ನು ಹೊಂದಿದ" ಈ ಪದಗಳನ್ನು ಸೇರಿಸತಕ್ಕದ್ದು.

ಕೆಳಗಿನ ತಿದ್ದುಪಡಿಗಳನ್ನು ಸ್ವೀಕರಿಸಲ್ಪಟ್ಟವು.

ಎರಡೂ ತಿದ್ದುಪಡಿಗಳು ಸ್ವೀಕೃತವಾದವು. ವಿಧಿ ೧೦೬ ತಿದ್ದುಪಡಿಯಾದಂತೆ ಸಂವಿಧಾನಕ್ಕೆ ಸೇರಿಸಲಾಯಿತು.

* * * * *

## ವಿಧಿ ೧೦೭

**ಮಾನ್ಯ ಅಧ್ಯಕ್ಷರು :** ತಿದ್ದುಪಡಿ ಸಂಖ್ಯೆ ೧೮೮೪ ಇದು ತಿರಸ್ಕೃತವಾದ ತಿದ್ದುಪಡಿಯಾಗಿದೆ. ಆದ್ದರಿಂದ ನಾನು ಅದನ್ನು ತಳ್ಳಿಹಾಕುತ್ತೇನೆ.

ತಿದ್ದುಪಡಿ ಸಂಖ್ಯೆ : ೧೮೮೫, ಆ ಪ್ರಶ್ನೆಯನ್ನು ನಿರ್ಣಯಿಸಲಾಗಿದೆ. ಹೀಗಾಗಿ ಇದನ್ನು ಮಂಡಿಸುವ ಅವಶ್ಯಕತೆಯು ಇರುವುದಿಲ್ಲ.

**ಶ್ರೀ ಜಸಪತ್‌ರಾಯ ಕಪೂರ್ :** ನಾನು ಈಗ ತಿದ್ದುಪಡಿ ಸಂಖ್ಯೆ ೧೮೮೬ ಇದನ್ನು ಮಂಡಿಸುತ್ತಿಲ್ಲ. ಇದೇ ಶ್ರೇಣಿಗೆ ಸೇರಿದ ಇನ್ನೊಂದು ತಿದ್ದುಪಡಿಯು ಇದೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನಾನು ವಿನಯಪೂರ್ವಕ ಮಂಡಿಸುತ್ತೇನೆ. "ವಿಧಿ ೧೦೭ರಲ್ಲಿಯ ಪದಗಳು" ಈ ವಿಧಿಯ ಉಪಬಂಧಗಳಿಗೆ ಒಳಪಟ್ಟು ಈ ಪದಗಳನ್ನು ಕೈಬಿಡತಕ್ಕದ್ದು.

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ವಿಧಿ ೧೦೭ರ ೩ನೆಯ ಪಂಕ್ತಿಯಲ್ಲಿ ಯಾವುದೇ ಕಾಲದಲ್ಲಿ ಎಂಬುದರ ನಂತರ 'ರಾಷ್ಟ್ರಪತಿಗಳ ಪೂರ್ವಭಾವಿ ಸಮ್ಮತಿ' ಎಂಬ ಪದಗಳನ್ನು ಸೇರಿಸತಕ್ಕದ್ದು.

ತಿದ್ದುಪಡಿ ಸಂಖ್ಯೆ ೧೮೮೯ ಮತ್ತು ೧೮೯೦ ಇವುಗಳನ್ನು ಮಂಡಿಸಲಿಲ್ಲ.

**ಮಾನ್ಯ ಅಧ್ಯಕ್ಷರು :** ಈಗ ನಮಗೆ ಚರ್ಚೆಗೆ ತಿದ್ದುಪಡಿಗಳು ಮತ್ತು ವಿಧಿಯಿದೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ತಿದ್ದುಪಡಿ ೧೨೫ ಶ್ರೀ ಟಿ.ಟಿ. ಕೃಷ್ಣಮಾಚಾರಿ ಅವರು ಮಂಡಿಸಿದ್ದನ್ನು ನಾನು ಸ್ವೀಕರಿಸುತ್ತೇನೆ.

ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

* * * * *

## ವಿಧಿ ೧೦೮

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೇ, ನಾನು ಮಂಡಿಸುತ್ತೇನೆ. ತಿದ್ದುಪಡಿ ಪಟ್ಟಿಗಳ ಸಂಖ್ಯೆ ೧೮೯೧ ಕ್ಕೆ ಕೆಳಗಿನವುಗಳನ್ನು ಕೂಡಿಸತಕ್ಕದ್ದು. ವಿಧಿ ೧೦೮ಕ್ಕೆ ಕೆಳಗಿನ ವಿಧಿಯನ್ನು ಸೇರಿಸತಕ್ಕದ್ದು. "೧೦೮–ಅ ಸುಪ್ರೀಮ್ ಕೋರ್ಟ್ ಅಭಿಲೇಖ ನ್ಯಾಯಾಲಯವಾಗಿರತಕ್ಕದ್ದು. ಮತ್ತು ಅದು ಅಂತಹ ನ್ಯಾಯಾಲಯದ ಎಲ್ಲ ಅಧಿಕಾರಗಳೂ ಹಾಗೂ ತನ್ನ ನ್ಯಾಯಾಲಯದ ನಿಂದನೆಗಾಗಿ ಸಹ ಶಿಕ್ಷೆಯನ್ನು ವಿಧಿಸುವಂತಹ ಅಧಿಕಾರ ಇರತಕ್ಕದ್ದು."

೧೦೮ – ಅ ಸುಪ್ರೀಮ್ ಕೋರ್ಟ್ ದಿಲ್ಲಿಯಲ್ಲಿ ಇಲ್ಲವೆ ಸುಪ್ರೀಮ್ ಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳು ರಾಷ್ಟ್ರಪತಿಗಳ ಅನುಮತಿಯೊಂದಿಗೆ ಕಾಲಕಾಲಕ್ಕೆ ಗೊತ್ತುಪಡಿಸಿದ ಸ್ಥಾನ ಇಲ್ಲವೆ ಸ್ಥಾನಗಳಲ್ಲಿ ಇರತಕ್ಕದ್ದು. ಮಾನ್ಯರೇ ಸಾಮಾನ್ಯ ಚರ್ಚೆಯ ನಂತರ, ನಾನು ಯಾಕೆ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆಂಬುದರ ಬಗೆಗೆ ಹೇಳುವೆನು.

* * * * *

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೇ, ನಾನು ಮಂಡಿಸಿದ ತಿದ್ದುಪಡಿಯು ವಾಸ್ತವಿಕವಾಗಿ ಶ್ರೀ ಕಾಮತ್, ಅವರಂತೆ ಶ್ರೀ ಜಸಪತ್‌ರಾವ್ ಕಪೂರ್ ಅವರು ಎತ್ತಿದ ಎಲ್ಲ ವಿಷಯಗಳನ್ನು ಒಳಗೊಂಡಿದೆ. ಮಾನ್ಯರೇ, ಹೊಸ ವಿಧಿ ೧೦೮ ಅವಶ್ಯವಿದೆ. ಯಾಕೆಂದರೆ ಕರಡು ಸಂವಿಧಾನದಲ್ಲಿ ಸುಪ್ರೀಮ್ ಕೋರ್ಟಿನ ಸ್ಥಾನಮಾನ ವ್ಯಾಖ್ಯಾಯಿಸಲು ನಾವು ಸಂವಿಧಾನದ ಕರಡಿನಲ್ಲಿ ಯಾವುದೇ ಉಪಬಂಧವನ್ನು ಮಾಡಿಲ್ಲ. ಮಾನ್ಯ ಸದನವು ವಿಧಿ ೧೯೨ ಕ್ಕೆ ಗಮನ ಹರಿಸಿದರೆ ಕಂಡು ಬರುವುದೇನೆಂದರೆ ಇಂತಹುದೇ ವಿಧಿ ಭಾರತದಲ್ಲಿಯ ಉಚ್ಚ ನ್ಯಾಯಾಲಯಗಳನ್ನು ಕುರಿತು ಇರುತ್ತದೆ. ಆದ್ದರಿಂದ ಸುಪ್ರೀಮ್ ಕೋರ್ಟಿನ ಸ್ಥಾನವನ್ನು ಕುರಿತು ವ್ಯಾಖ್ಯಾನಿಸುವುದು ಅವಶ್ಯವಿದೆಯೆಂದು ಕಂಡು ಬರುತ್ತದೆ. ನಾನು ಈ ಸದನದ ಬಹಳ ವೇಳೆಯನ್ನು ಒಂದು ಅಭಿಲೇಖ ನ್ಯಾಯಾಲಯವೆಂದರೇನು ಹೇಳಲು ತೆಗೆದುಕೊಳ್ಳುವುದಿಲ್ಲ. ಸಂಕ್ಷಿಪ್ತದಲ್ಲಿ ನಾನು ಒಂದು ಅಭಿಲೇಖ ನ್ಯಾಯಾಲಯವೆಂದು ಯಾವ ನ್ಯಾಯಾಲಯಗಳ ದಾಖಲೆಗಳನ್ನು ಸಾಕ್ಷ್ಯದ ಮೌಲ್ಯ; ಯೋಗ್ಯತೆಗೆ ಒಳಪಟ್ಟು ಇರುತ್ತವೆ, ಅವುಗಳನ್ನು ಯಾವುದೇ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಅವುಗಳನ್ನು ಪ್ರಶ್ನಿಸುವಂತಿಲ್ಲ. ಅಭಿಲೇಖ ನ್ಯಾಯಾಲಯವೆಂದರೆ ಈ ಪದಗಳ ಅರ್ಥವು ಇದಾಗಿದೆ. ಆಮೇಲೆ ವಿಧಿ ೧೦೮ ರ ಎರಡನೆಯ ಭಾಗವು ಹೇಳುವುದೇನೆಂದರೆ, ನ್ಯಾಯಾಲಯಕ್ಕೆ ಅದರ ನಿಂದನೆ ಮಾಡಿದರೆ ಶಿಕ್ಷಿಸುವ ಅಧಿಕಾರ ಅದಕ್ಕೆ ಇರತಕ್ಕದ್ದು. ನಿಜವಾಗಿಯೂ ಒಮ್ಮೆ ನ್ಯಾಯಾಲಯ ಒಂದನ್ನು ಅಭಿಲೇಖ ನ್ಯಾಯಾಲಯ ಎಂದು ಮಾನ್ಯಮಾಡಿದರೆ, ರಾಜ್ಯ ಸರಕಾರವು ಅದನ್ನು ಶಾಸನದ ಮೂಲಕ ಮಾಡಲಾಗುತ್ತದೆ. ನ್ಯಾಯಾಲಯ ನಿಂದನೆಗೆ ಶಿಕ್ಷಿಸುವ ಅಧಿಕಾರವನ್ನು ಕೊಡುವುದು ಅವಶ್ಯ ಇರುವುದು. ಆದರೆ ಈ ಸಂಗತಿಯ ಮೇಲಿಂದ ಇಂಗ್ಲೆಂಡ್ ಸಾಮಾನ್ಯ ಕಾನೂನಿನಿಂದ ಬಹಳಷ್ಟು ಅಧಿಕಾರವನ್ನು ಪಡೆದುಕೊಂಡಿರುವ ದೃಷ್ಟಿಯಿಂದ ನಮ್ಮಲ್ಲಿ ದೇಶದಲ್ಲಿ ಅಂತಹ ಸಾಮಾನ್ಯ ಕಾನೂನು ಇರುವುದಿಲ್ಲ. ಎಲ್ಲ ಸ್ಥಿತಿಯನ್ನು ಶಾಸನದ ಮುಖಾಂತರವೇ ಮಾಡಿದುವು ಉತ್ತಮವಾಗಿರುತ್ತದೆ ಎಂದು ನಮಗೆ ಅನಿಸುತ್ತದೆ. ಆದ್ದರಿಂದ ವಿಧಿ ೧೦೮ ಇದನ್ನು ಪ್ರಸ್ತಾಪಿಸಲಾಗಿದೆ. ವಿಧಿ ೧೦೮ ಕುರಿತು ಶ್ರೀ ಕಾಮತ್ ಅವರು ಎತ್ತಿದ ಪ್ರಶ್ನೆ ದಿಲ್ಲಿ ಎಂಬ ಪದವು ಯಾಕೆ ಅಲ್ಲಿ ಬರಬೇಕು. ಅದರ ಉತ್ತರವು ಬಹಳ ಸರಳವಾಗಿರುತ್ತದೆ. ಒಂದು ನ್ಯಾಯಾಲಯಕ್ಕೆ ಅದನ್ನು ವ್ಯಾಖ್ಯಾಯಿಸಿದಂತೆ ಒಂದು ಸ್ಥಳದಲ್ಲಿ ಕುಳಿತು

ಮತ್ತು ವ್ಯಾಜ್ಯಗಳನ್ನು ಮಾಡುವವರಿಗೆ ಎಲ್ಲಿ ಹೋಗಬೇಕೆಂದು ಹಾಗೂ ಯಾರನ್ನು ಸಂಪರ್ಕಿಸಬೇಕೆಂದು ತಿಳಿದಿರಲಿಕ್ಕೇಬೇಕು. ಇದರ ಪರಿಣಾಮವಾಗಿ ಶಾಸನದಲ್ಲಿಯೇ ನ್ಯಾಯಲಯವು ಎಲ್ಲಿ ಆ ನ್ಯಾಯಾಲಯವು ಕೂಡತಕ್ಕದ್ದು ಅನ್ನುವುದನ್ನು ಕಾಣಿಸುವುದು ಅವಶ್ಯವಿದೆ. ಆದ್ದರಿಂದಲೇ 'ದಿಲ್ಲಿ' ಪದವು ಅವಶ್ಯವಿದೆ. ಆ ಉದ್ದೇಶಕ್ಕಾಗಿ ಅದನ್ನು ಪ್ರಸ್ತಾಪಿಸಲಾಗಿದೆ. ವಿಧಿ ೧೦೮ –ಅ ದಿಲ್ಲಿಯ ಉಳಿದ ಪದಗಳನ್ನು ಪ್ರಸ್ತಾಪಿಸಲಾಗಿದೆ ಯಾಕೆಂದರೆ ಅದನ್ನು ಇನ್ನೂ ವ್ಯಾಖ್ಯಾನಿಸಿಲ್ಲ. ಭಾರತದ ರಾಜಧಾನಿಯನ್ನು ದಿಲ್ಲಿಯಲ್ಲಿ ಮಾಡುವರೋ? ಅಲ್ಲಿ ಪದಗಳು ಇಲ್ಲವೆ ಯಾವುದೇ ಅಂತಹ ಉಳಿದ ಜಾಗ ಇಲ್ಲವೆ ಜಾಗಗಳಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿಗಳು ರಾಷ್ಟ್ರಪತಿಗಳು ಪೂರ್ವಾನುಮತಿಯನ್ನು ಕಾಲಕಾಲಕ್ಕೆ ಗೊತ್ತುಮಾಡಿದ ಸ್ಥಳಗಳಲ್ಲಿ ಕೂಡ್ರತಕ್ಕದ್ದು. ಆಗ ಏನಾಗುತ್ತದೆಂದರೆ ಇದು ಭಾರತದ ರಾಜಧಾನಿಯು ಬದಲಾದರೆ ಸುಪ್ರೀಮ್ ಕೋರ್ಟ್ ಯಾವುದೇ ಜಾಗದಲ್ಲಿ ಕುಳಿತುಕೊಳ್ಳಲು ಸಂಸತ್ತು ನಿರ್ಧರಿಸಿದ ರಾಜಧಾನಿಯಂದು ಸಂವಿಧಾನದಲ್ಲಿ ತಿದ್ದುಪಡಿ ಮಾಡಬೇಕಾಗುತ್ತದೆ. ಆದ್ದರಿಂದ ನಂತರದ ಪ್ರತಿಪಾದನೆಗಳು ಅವಶ್ಯವಾಗಿದೆ.

ನನ್ನ ಸನ್ಮಿತ್ರರಾದ ಶ್ರೀ ಕಪೂರ್ ಅವರು ಎತ್ತಿದ ಪ್ರಶ್ನೆಯನ್ನು ಕುರಿತು ಶ್ರೀ ಟಿ.ಟಿ. ಕೃಷ್ಣಮಾಚಾರಿ ಅವರು ಕೊಟ್ಟ ಉತ್ತರ ತೃಪ್ತಿಕರವಾಗಿದೆ ಮತ್ತು ನಾನು ಹೆಚ್ಚಿಗೆ ಏನನ್ನೂ ಹೇಳಲು ಇಚ್ಛಿಸುವುದಿಲ್ಲ.

**ಶ್ರೀ ಜಸಪರ್ ರಾಯ್ ಕಪೂರ್** : ಡಾ॥ ಅಂಬೇಡ್ಕರ್ ಅವರಿಂದ ನಾನೊಂದು ಸಣ್ಣ ಸ್ಪಷ್ಟನೆಯನ್ನು ಕೇಳಬಹುದೇ? ಸುಪ್ರೀಮ್ ಕೋರ್ಟ್ ಎಲ್ಲಿಯವರೆಗೆ ದಿಲ್ಲಿಯಲ್ಲಿ ಕುಳಿತುಕೊಳ್ಳುತ್ತದೆಯೋ ಅಲ್ಲಿಯವರೆಗೆ ದೇಶದಲ್ಲಿ ಬೇರೆ ಕಡೆಗೆ ಅದರ ಸಂಚಾರಿ ನ್ಯಾಯಾಲಯವು ಏಕಕಾಲಕ್ಕೆ ಇರುತ್ತದೆಯೆ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅಹುದು, ನಿಶ್ಚಿತವಾಗಿಯೂ ಸಂಚಾರಿ ನ್ಯಾಯಾಲಯವು ಕೇವಲ ಒಂದು ನ್ಯಾಯಪೀಠವಾಗಿರುತ್ತದೆ.

(ಡಾ.ಬಿ.ಆರ್. ಅಂಬೇಡ್ಕರ್ ಅವರ ತಿದ್ದುಪಡಿಗಳು ಸ್ವೀಕೃತವಾದವು. ಉಳಿದವು ತಿರಸ್ಕೃತವಾದವು. ವಿಧಿ ೧೦೮ ಮತ್ತು ೧೦೮–ಅ ತಿದ್ದುಪಡಿಯಾದಂತೆ ಸಂವಿಧಾನದಲ್ಲಿ ಕೂಡಿಸಲಾಯಿತು.)

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ವಿಧಿ ೧೦೯ ರಿಂದು ೧೧೪ರ ವರೆಗಿನವುಗಳನ್ನು ಮುಂದಕ್ಕೆ ಹಾಕಬೇಕೆಂದು ಇಚ್ಛಿಸುತ್ತೇನೆ. ಇವುಗಳನ್ನು ಯಾಕೆ ಮುಂದಕ್ಕೆ ಹಾಕಬೇಕೆಂಬುದಕ್ಕೆ ಕಾರಣವೆಂದರೆ ಈ ವಿಧಿಗಳು ಸಾಮಾನ್ಯ ನಿಯಮಗಳನ್ನು ಹೇಳುವಾಗ ಕೆಲವು ಪರಿಶಿಷ್ಟ ೧ ಭಾಗ ೩ರಲ್ಲಿ ಕೆಲವು ರಾಜ್ಯಗಳ ಬಗ್ಗೆ ಕೆಲವು ವಿಷಯಗಳನ್ನು ಕಾಯ್ದಿರಿಸಲಾಗಿದೆ. ೩ರ ಭಾಗದಲ್ಲಿ ಕಾಣಿಸಿದ ರಾಜ್ಯಗಳ ಸ್ಥಾನಗಳ ಬಗೆಗೆ ಪುನಃ ವಿಚಾರಣೆ ಮಾಡುವುದಿದೆಯೆಂದು ತಿಳಿಯಲಾಗಿದೆ. ಯಾಕೆಂದರೆ ಭಾಗ ೩ರಲ್ಲಿ ಕಾಣಿಸಿದ ರಾಜ್ಯಗಳನ್ನು ಭಾಗ ೧ರಲ್ಲಿ ಕಾಣಿಸಿದ ರಾಜ್ಯಸಭೆಗಳ ಸಮಾನ ಸ್ಥಾನಮಾನಕ್ಕೆ ಸರಿಯಾಗುವಂತೆ ಹಾಗೆ ಮಾಡಿದರೆ ಈ ವಿಧಿ ೧೦೯–೧೧೪ ಇವುಗಳನ್ನು ಪ್ರಸ್ತಾಪಿಸುವ ಅವಶ್ಯಕತೆಯು ಇರುವುದಿಲ್ಲ. ನಾನು ಸೂಚಿಸುವುದೇನೆಂದರೆ ಇವುಗಳನ್ನು ತಡೆಹಿಡಿಯಬಹುದು.

**ಮಾನ್ಯ ಅಧ್ಯಕ್ಷರು :** ಸದ್ಯಕ್ಕೆ ಇವುಗಳನ್ನು ತಡೆಹಿಡಿಯೋಣ. ಮುಂದೂಡೋಣ.

**ಮಾನ್ಯ ಅಧ್ಯಕ್ಷರು :** ಡಾ. ಬಿ.ಆರ್. ಅಂಬೇಡ್ಕರ್ ಅವರ ಹೆಸರಿನಲ್ಲಿರುವ ತಿದ್ದುಪಡಿ ಸಂಖ್ಯೆ ೧೯೩೯.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುತ್ತೇನೆ. ವಿಧಿ ೧೧೫ರಲ್ಲಿಯ ಪದಗಳು ಮತ್ತು ಕಂಸಗಳು 'ಯಾವುಗಳು ಮೂಲಭೂತ ಹಕ್ಕುಗಳನ್ನು ಕುರಿತು ಜಾರಿಗೊಳಿಸುವ ಕುರಿತು' ಇರುವುದನ್ನು ತೆಗೆದುಹಾಕತಕ್ಕದ್ದು.

ಈ ಪದಗಳು ಬೇಕಾದಷ್ಟಕ್ಕಿಂತ ಹೆಚ್ಚಾಗಿವೆ.

**ಮಾನ್ಯ ಅಧ್ಯಕ್ಷರು :** ಇಲ್ಲಿ ಸಂಖ್ಯೆ ೧೯೪೦. ಇದು ನಾವು ಇದೀಗ ಪ್ರಸ್ತಾಪಿಸಿದ ಹಾಗೆಯೇ ಇದೆ. ಮತ್ತು ಹೀಗಾಗಿ ಅದನ್ನು ಮಂಡಿಸುವ ಅವಶ್ಯಕತೆಯು ಇರುವುದಿಲ್ಲ. ಸಂಖ್ಯೆ ೧೯೪೧. ಇದು ಶ್ರೀ ನಜೀರುದ್ದೀನ ಅಹಮದ್ ಅವರ ಹೆಸರಿನಲ್ಲಿದೆ ಮತ್ತು ಇದು ಕರಡು ರೀತಿಯಲ್ಲಿದೆ ಮತ್ತು ಅದನ್ನು ಮಂಡಿಸುವ ಅವಶ್ಯಕತೆಯು ಇರುವುದಿಲ್ಲ. ಸಂಖ್ಯೆ ೧೯೪೨ ಇದನ್ನು ಮಂಡಿಸಲಿಲ್ಲ.

ನಮಗೆ ಈಗ ಇರುವ ತಿದ್ದುಪಡಿಗಳು ಇಷ್ಟೆಯೆಂದು ನಾನು ಭಾವಿಸುವೆನು. ಯಾವುದೇ ಸದಸ್ಯರು ಏನಾದರೂ ಹೇಳಬಯಸುವಿರಾ? ನಾವು ಈಗ ತಿದ್ದುಪಡಿಗಳನ್ನು ಮಂಡಿಸುತ್ತೇನೆ. ನಾನು ಮೊದಲು ಡಾ. ಬಿ.ಆರ್. ಅಂಬೇಡ್ಕರ್ ಅವರ ತಿದ್ದುಪಡಿ ಸಂಖ್ಯೆ ೧೯೩೯ (ಮೇಲೆ ಕಾಣಿಸಿದ್ದು) ತೆಗೆದುಕೊಳ್ಳುತ್ತೇನೆ. ಈ ತಿದ್ದುಪಡಿಯನ್ನು ಸ್ವೀಕರಿಸಲಾಯಿತು.

ಡಾ. ಬಕ್ಷಿ ಟೇಕ ಚಂದಾ ಅವರ ತಿದ್ದುಪಡಿ ಸಂಖ್ಯೆ ೧೯೩೮ ಕೆಳಗೆ ಕಾಣಿಸಿದಂತೆ ಅದೂ ಸಹ ಸ್ವೀಕೃತವಾಯಿತು. "ವಿಧಿ ೧೧೫ರಲ್ಲಿಯ ಪದಗಳು" ಇಲ್ಲವೆ 'ರಿಟ್‌ದ ಸ್ವರೂಪ ಹೊಂದಿರುವ ಆದೇಶಗಳು', ಈ ಪದಗಳ ಬದಲಾಗಿ 'ಆದೇಶಗಳು ಇಲ್ಲವೆ ರಿಟ್ ಇಲ್ಲವೆ ಲೇಖಸ್ವರೂಪದ ರಿಟ್‌ನ್ನು ಒಳಗೊಂಡು' ಈ ಪದಗಳನ್ನು ಸೇರಿಸತಕ್ಕದ್ದು.

ವಿಧಿ ೧೧೫ ಇದನ್ನು ತಿದ್ದುಪಡಿಯಾದಂತೆ ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ ೧೧೭

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಇಲ್ಲಿ ಒಂದು ವಿಷಯವನ್ನು ಕಾಣಿಸಲು ನಾನು ಇಚ್ಛಿಸುತ್ತೇನೆ. ಈಗ ಪ್ರಸ್ತಾಪಿಸಿದ ವಿಧಿಯಲ್ಲಿ ನಿಶ್ಚಿತವಾಗಿಯೂ ಅದರಲ್ಲಿ ಕಾಣಿಸಿದ ಉದ್ದೇಶವು ಮಹತ್ವದ್ದಲ್ಲ. ಹೌಸ್ ಆಫ್ ಲಾರ್ಡ್ಸ್ ಅವರು ತಮ್ಮ ನಿರ್ಣಯಕ್ಕೆ ತಾವೇ ಬದ್ಧರಾಗಿರುವಂತೆ ಸುಪ್ರೀಮ್ ಕೋರ್ಟ್ ಸಹ ತನ್ನ ನಿರ್ಣಯಕ್ಕೆ ತಾನೇ ಬದ್ಧವಾಗಿರತಕ್ಕದ್ದು. ಸುಪ್ರೀಮ್ ಕೋರ್ಟ್ ತನ್ನ ನಿರ್ಣಯವನ್ನು ಬದಲಿಸಲು ಸ್ವತಂತ್ರವಿರುತ್ತದೆ. ಮತ್ತು ಅದು ಮೊದಲು ತೆಗೆದುಕೊಂಡ ನಿರ್ಣಯಕ್ಕಿಂತ ಬೇರೊಂದು ನಿರ್ಣಯ ಕೊಡಬಹುದು ಎಂಬ ಭಾಷೆಯನ್ನು ಕುರಿತು ನನಗೆ ಸಮಾಧಾನವಾಗಿದೆ. ಎಲ್ಲರ ಉದ್ದೇಶವನ್ನು ಪಾಲಿಸಲಾಗಿದೆ.

**ಶ್ರೀ ಎಚ್.ವಿ. ಕಾಮತ್ :** "ಎಲ್ಲ ಉಳಿದ ನ್ಯಾಯಾಲಯಗಳು" ಎಂದು ಹೇಳಬಾರದೇಕೆ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** "ಎಲ್ಲ ನ್ಯಾಯಾಲಯಗಳು" ಅಂದರೆ "ಎಲ್ಲ ಉಳಿದ ನ್ಯಾಯಾಲಯಗಳು" (ವಿಧಿ ೧೧೭ ಇದನ್ನು ಯಾವುದೇ ತಿದ್ದುಪಡಿಯು ಇಲ್ಲದೆ ಸ್ವೀಕರಿಸಲಾಯಿತು. ಮತ್ತು ಸಂವಿಧಾನಕ್ಕೆ ಸೇರಿಸಲಾಯಿತು.)

* * * * *

## ವಿಧಿ ೧೧೯

**ಮಾನ್ಯ ಅಧ್ಯಕ್ಷರು :** ತಿದ್ದುಪಡಿ ಸಂಖ್ಯೆ ೧೯೫೧ ಇದಕ್ಕೆ ಸಮ್ಮತಿ ಕೊಟ್ಟಿಲ್ಲ.

**ಶ್ರೀ ಎಚ್.ವಿ. ಕಾಮತ್ :** ಮಾನ್ಯರೆ, ನನ್ನ ತಿದ್ದುಪಡಿ ಸಂಖ್ಯೆ ೧೯೫೨ ರಲ್ಲಿ ನಾನು ಎತ್ತಬೇಕೆಂದ ವಿಷಯ ಬಹಳ ಸರಳವಾಗಿದೆ. ಈ ವಿಧಿಯು ಉದ್ದೇಶಿಸಿರುವುದೇನೆಂದರೆ ಸುಪ್ರೀಮ್ ಕೋರ್ಟ್ ರಾಷ್ಟ್ರಪತಿಗಳಿಗೆ ತನ್ನ ಅಭಿಪ್ರಾಯದ ವರದಿ ಇಲ್ಲವೆ ಅದರ ವಿವೇಚನೆಗೆ ಯಾವುದೇ ವಿಷಯದ ಅಭಿಪ್ರಾಯವನ್ನು ತಡೆಹಿಡಿಯುವುದನ್ನು ರಾಷ್ಟ್ರಪತಿಗಳಿಗೆ ವರದಿ ಮಾಡಲಿಕ್ಕಲ್ಲ. ಇದರ ಅರ್ಥವೇನೆಂದರೆ ಒಮ್ಮೆ ರಾಷ್ಟ್ರಪತಿಗಳು ಒಂದು ವಿಷಯದ ಬಗೆಗೆ ಸುಪ್ರೀಮ್ ಕೋರ್ಟ್‌ಗೆ ಅದರ ಅಭಿಪ್ರಾಯಕ್ಕೆ ಒಪ್ಪಿಸಿದರೆ ಹಾಗೆ ಅದರ ಅರ್ಥವಲ್ಲದಿದ್ದರೆ ಆ ಭಾಷೆಯು ಸರಿ ಇದೆ. ಆದರೆ ಇದರ ಅರ್ಥವು ರಾಷ್ಟ್ರಪತಿಗಳು ಒಂದು ವಿಷಯವನ್ನು ಸುಪ್ರೀಮ್ ಕೋರ್ಟಿಗೆ ಒಪ್ಪಿಸಿದರೆ ಆಗ ಅದು ತನ್ನ ಅಭಿಪ್ರಾಯವನ್ನು ಅದರ ರಾಷ್ಟ್ರಪತಿಗಳಿಗೆ ವರದಿ ಮಾಡಲಿಕ್ಕೆ ಬೇಕು, ಆಗ ಈ 'ತಕ್ಕದ್ದು' ಎಂಬ ಪದ ಅಲ್ಲಿ ಬರಲಿಕ್ಕೆ ಬೇಕು. ನಾನು ಅ ವಿಷಯದ ಮೇಲೆ ಒಂದು ಸ್ಪಷ್ಟನೆಯನ್ನು ಕೊಡಬೇಕಾಗಿತ್ತು.

**ಸನ್ಮಾನ್ಯ ಡಾ॥ ಬಿ.ಆರ್ ಅಂಬೇಡ್ಕರ್ :** ಸುಪ್ರೀಮ್‌ಕೋರ್ಟ್ ಬಂಧನಕಾರಕವಲ್ಲ.

**ಶ್ರೀ ಎಚ್.ವಿ. ಕಾಮತ್ :** ಈಗ ನಾನು ನನ್ನ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ.

* * * * *

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ವಿಧಿ ೧೧೯ ಇದನ್ನು ದಯವಿಟ್ಟು ತಡೆ ಹಿಡಿಯಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಯಾಕೆಂದರೆ ಇದರ ಉಲ್ಲೇಖವು ವಿಧಿ ೧೦೯ರಿಂದ ೧೧೪ ಇದೆ. ಇವುಗಳನ್ನು ನಾವು ತಡೆಹಿಡಿದಿದ್ದೇವೆ.

**ಶ್ರೀ ಎಚ್.ವಿ. ಕಾಮತ :** ಮಾನ್ಯರೆ ನಾನು ನನ್ನ ತಿದ್ದುಪಡಿಯನ್ನು ನಂತರ ಮಂಡಿಸುವ ಹಕ್ಕನ್ನು ಕಾಯ್ದಿರಿಸುವೆನು.

## ವಿಧಿ ೧೨೧

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಈ ವಿಧಿಯು ಹಾಗೆಯೇ ಇರಲೆಂದು ನಾನು ವಿನಂತಿಸಿಕೊಳ್ಳುವೆನು.

## ವಿಧಿ ೧೨೨

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ ನಾನು ಮಂಡಿಸುತ್ತೇನೆ. ಈಗ ಇರುವ ವಿಧಿ ೧೨೨ ಕ್ಕೆ ಕೆಳಗಿನದನ್ನು ಬದಲಾಯಿಸತಕ್ಕದ್ದು.

೧೨೨ ಸುಪ್ರೀಂ ಕೊರ್ಟಿನ ಅಧಿಕಾರಿಗಳು ಮತ್ತು ನೌಕರರು ಮತ್ತು ಸುಪ್ರೀಮ್ ಕೋರ್ಟ್‌ನ ಖರ್ಚುಗಳು' (೧) ಸುಪ್ರೀಮ್ ಕೋರ್ಟಿನ ಅಧಿಕಾರಿಗಳು ಮತ್ತು ನೌಕರರ ನೇಮಕಗಳನ್ನು ಭಾರತದ ಮುಖ್ಯ ನ್ಯಾಯಮೂರ್ತಿಗಳು ಇಲ್ಲವೆ ಅಂತಹ ನ್ಯಾಯಮೂರ್ತಿಗಳು ಇಲ್ಲವೆ, ಅಧಿಕಾರಿಗಳು ನಿರ್ದೇಶಿಸಿದಂತೆ ಮಾಡತಕ್ಕದ್ದು.

ಪರಂತು, ಇಂತಹ ಪ್ರಕರಣಗಳಲ್ಲಿ ನಿಯಮಗಳನ್ನು ಮಾಡಿ, ಅದರಲ್ಲಿ ನ್ಯಾಯಾಲಯಕ್ಕೆ ಈಗಾಗಲೇ ಸಂಬಂಧವಿರದ ವ್ಯಕ್ತಿಗಳನ್ನು ಸಂಬಂಧಿಸಿದ ಯಾವುದೇ ಕಾರ್ಯಾಲಯದ ಪದಕ್ಕೆ ಕೇಂದ್ರ ಲೋಕಸೇವಾ

ಆಯೋಗದೊಂದಿಗೆ ಸಮಾಲೋಚನೆ ನಡೆಯಿಸಿ ನೇಮಕ ಮಾಡತಕ್ಕದ್ದು (೨) ಸಂಸತ್ತು ಮಾಡಿದ ಯಾವುದೇ ಕಾನೂನಿಗೆ ಒಳಪಟ್ಟು ಅಧಿಕಾರ ಸೇವಾ ನಿಯಮದ ಕರಾರುಗಳು ಮತ್ತು ಸುಪ್ರೀಮ್ ಕೋರ್ಟಿನ ನೌಕರರ ಕರಾರುಗಳು ಮುಖ್ಯ ನ್ಯಾಯಮೂರ್ತಿಗಳು ಮಾಡಿದ ನಿಯಮಗಳು ನಿರ್ದಿಷ್ಟಪಡಿಸಿದವು. ಇಲ್ಲವೆ ಕೆಲವು ನ್ಯಾಯಾಧೀಶರು ಇಲ್ಲವೆ ಭಾರತದ ಮುಖ್ಯ ನ್ಯಾಯಮೂರ್ತಿಗಳು ಅಧಿಕಾರ ವಹಿಸಿಕೊಟ್ಟ ಅಧಿಕಾರಿಗಳು ಈ ಉದ್ದೇಶಕ್ಕಾಗಿ ಮಾಡಿದ ನಿಯಮಗಳಿಗೆ ಒಳಪಡುತ್ತಾರೆ. ಪರಂತು ಇಂತಹ ಅಧಿಕಾರಿಗಳಿಗೆ ಕೊಡಬೇಕಾದ ಪಗಾರಗಳು, ಭತ್ತೆಗಳು ಮತ್ತು ಪೆನ್‌ಶನ್ (ವಿಶ್ರಾಂತಿ ವೇತನ) ಇವುಗಳನ್ನು ಭಾರತದ ಮುಖ್ಯ ನ್ಯಾಯಮೂರ್ತಿಗಳು ರಾಷ್ಟ್ರಪತಿಗಳೊಂದಿಗೆ ಸಮಾಲೋಚನೆಮಾಡಿ ಗೊತ್ತುಪಡಿಸತಕ್ಕದ್ದು.

(೩) ಸುಪ್ರೀಮ್ ಕೋರ್ಟ್‌ನ ಆಡಳಿತಾತ್ಮಕ ಖರ್ಚು ಹಾಗೂ ಎಲ್ಲ ಅಧಿಕಾರಿಗಳ ಮತ್ತು ನೌಕರರ ಪಗಾರಗಳು ಭತ್ಯೆಗಳು ಮತ್ತು (ಪೆನ್‌ಶನ್) ವಿಶ್ರಾಂತಿ ವೇತನಗಳನ್ನು ಒಳಗೊಂಡು ಇವುಗಳನ್ನು ಭಾರತದ ರಾಜ್ಯಸ್ವಕ್ಕೆ ಖರ್ಚುಹಾಕತಕ್ಕದ್ದು ಮತ್ತು ಯಾವುದೆ ಫೀಜು ಇಲ್ಲವೆ ಯಾವುದೇ ಹಣ ನ್ಯಾಯಾಲಯವು ತೆಗೆದುಕೊಂಡದ್ದು ಆ ರಾಜ್ಯಸ್ವದ ಭಾಗಗಳಾಗತಕ್ಕದ್ದು.

ಪುನಃ ತಯಾರಿಸಿದ ಕರಡಿನ ಉದ್ದೇಶವು ಸುಪ್ರೀಮ್ ಕೋರ್ಟ್‌ನ್ನು ಸ್ವತಂತ್ರವಾಗಿ ಇಡಲು ಉತ್ತಮ ವ್ಯವಸ್ಥೆ ಮಾಡುವುದೇ ಆಗಿದೆ. ಮತ್ತು ಸುಪ್ರೀಮ್ ಕೋರ್ಟಿನ ಆಡಳಿತಾತ್ಮಕ ಖರ್ಚುಗಳ ಬಗ್ಗೆ ಉತ್ತಮ ವ್ಯವಸ್ಥೆ ಮಾಡುವುದು. ಅದನ್ನು ಭಾರತದ ರಾಜಸ್ವದ ಲೆಕ್ಕಕ್ಕೆ ಚಾರ್ಜು ಮಾಡತಕ್ಕದ್ದು.

ಮಾನ್ಯರೆ, ಈ ತಿದ್ದುಪಡಿಗೆ ಈ ಒಂದು ತಿದ್ದುಪಡಿಯು ಇದೆ. ಇದನ್ನು ನಾನು ಈ ಹಂತದಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

"ತಿದ್ದುಪಡಿ ಸಂಖ್ಯೆ ೧೯೬೭ರಲ್ಲಿ ಖಂಡ (೨) ಪರಂತುಕದಲ್ಲಿ ಪ್ರಸ್ತಾಪಿಸಿದ ವಿಧಿ ೧೨೨ ಕೆಳಗಣ ಪರಂತುಕವನ್ನು ಸೇರಿಸತಕ್ಕದ್ದು."

"ಪರಂತು ಆ ಖಂಡದ ಕೆಳಗೆ ಮಾಡಿದ ನಿಯಮಗಳು, ಪಗಾರಗಳಿಗೆ, ಭತ್ಯೆಗಳಿಗೆ ರಜೆಗೆ, ವಿಶ್ರಾಂತಿ ವೇತನ : ಪೆನ್‌ಷನ್‌ಗೆ ಸಂಬಂಧಿಸಿದಂತೆ ಮಾಡಿದ ನಿಯಮಗಳಿಗೆ ರಾಷ್ಟ್ರಪತಿಗಳ ಸಮ್ಮತಿ ಪಡೆಯತಕ್ಕದ್ದು."

**ಮಾನ್ಯ ಅಧ್ಯಕ್ಷರು :** ಈ ತಿದ್ದುಪಡಿಗೆ ಶ್ರೀ ಕಪೂರ್ ಅವರ ಒಂದು ತಿದ್ದುಪಡಿಯು ಇರುತ್ತದೆ.

**ಶ್ರೀ ಜಸಪತ್‌ರಾಯ್ ಕಪೂರ್ :** ಡಾ. ಬಿ.ಆರ್. ಅಂಬೇಡ್ಕರ್‌ರವರು ಈಗ ತಾನೇ ಮಂಡಿಸಿದ ತಿದ್ದುಪಡಿ ಇದನ್ನು ಒಳಗೊಂಡಿದೆ. ಆದ್ದರಿಂದ ಇದನ್ನು ಮಂಡಿಸುವುದು ಬೇಡ.

(ತಿದ್ದುಪಡಿ ಸಂಖ್ಯೆ ೧೯೬೮ ಮತ್ತು ೧೯೬೯ ಇವುಗಳನ್ನು ಮಂಡಿಸಲಿಲ್ಲ.)

**ಮಾನ್ಯ ಅಧ್ಯಕ್ಷರು :** ಆದ್ದರಿಂದ ಈಗ ಡಾ. ಬಿ.ಆರ್. ಅಂಬೇಡ್ಕರ್ ಅವರ ಒಂದು ತಿದ್ದುಪಡಿಯು ಇರುತ್ತದೆ. ಅವರು ತಮ್ಮ ತಿದ್ದುಪಡಿಗೆ ತಂದ ತಿದ್ದುಪಡಿಯನ್ನು ಅವರೇ ತಂದು ಮಂಡಿಸಿದ್ದನ್ನು ಮೊದಲು ತೆಗೆದುಕೊಳ್ಳೋಣ.

* * * * *

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ನಾನು ಇದೀಗ ಈ ಸ್ಥಿತಿಯನ್ನು ಸ್ಪಷ್ಟಮಾಡುವುದಕ್ಕಾಗಿ ಕೆಲವು ಪರಿವೀಕ್ಷಣೆ ಮಾಡಬಯಸುತ್ತೇನೆ. ಮಾನ್ಯರೆ, ಸಾಮಾನ್ಯವಾಗಿ ಸಂಸತ್ತು ಒಪ್ಪಿರುವುದೇನೆಂದರೆ ಕಾರ್ಯಾಂಗದಿಂದ ನ್ಯಾಯಾಂಗವನ್ನು ಸ್ವತಂತ್ರಮಾಡುವ ಬಗ್ಗೆ ಸಂಶಯವೇ ಇಲ್ಲ. ಅದು ಸ್ಪಷ್ಟವಾಗಿ ಮತ್ತು ಕಾನೂನಿನ ಪ್ರಕಾರ ನಿಶ್ಚಿತವಾಗಿರತಕ್ಕದ್ದು. ಅದೇ ಕಾಲಕ್ಕೆ ಸ್ವತಂತ್ರ ನ್ಯಾಯಾಂಗದ

ಹೆಸರಿನಲ್ಲಿ ನನ್ನ ಗೆಳೆಯರಾದ ಶ್ರೀ ಟಿ.ಟಿ. ಕೃಷ್ಣಮಾಚಾರಿ ಅವರು ಹೇಳಿದಂತೆ ಅದನ್ನು ಒಂದು ಒಳ ಪ್ರಭುತ್ವವಾಗಿ ಸೃಷ್ಟಿಸಬಯಸುವುದಿಲ್ಲ. ಆದ್ದರಿಂದ ಈ ಹೊಸ ವಿಧಿ ೧೨೨ರಲ್ಲಿರುವ ಎಲ್ಲ ಉಪಬಂಧಗಳನ್ನು ವಿವರಿಸುವ ಅವಶ್ಯಕತೆಯು ಇರುವುದಿಲ್ಲ. ಯಾಕೆಂದರೆ ಈ ವಿಧಿಯ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಬಹಳ ಜನ ಸದಸ್ಯರಲ್ಲಿ ಒಂದು ಸಾಮಾನ್ಯ ಒಪ್ಪಿಗೆ ಕಂಡುಬರುವುದೇನೆಂದರೆ ಹೊಸ ವಿಧಿ ೧೨೨ರ ಕೆಲವು ಖಂಡಗಳನ್ನು ಸ್ವೀಕರಿಸಲು ಅಭ್ಯಂತರವಿಲ್ಲ. ಹೇಳಬೇಕೆಂದರೆ ಖಂಡ (೧) ಮತ್ತು ಖಂಡ (೩) ಮತ್ತು ಖಂಡ (೨) ಸಹ ಇವುಗಳಲ್ಲಿಯ ಒಂದೇ ಅಂತರ ಕಂಡುಬರುವುದೇನೆಂದರೆ ಖಂಡ (೨)ರ ಉಪಬಂಧ ಮಾತ್ರ ಮೂಲ ಪರಂತಕ ಖಂಡದಲ್ಲಿದ್ದ ವ್ಯವಸ್ಥೆಯೇನಿದ್ದಿತೆಂದರೆ ಪಗಾರ ಭತ್ತೆಗಳು ಮುಂತಾದವುಗಳನ್ನು ಮುಖ್ಯ ನ್ಯಾಯಮೂರ್ತಿಗಳು ರಾಷ್ಟ್ರಪತಿಗಳೊಂದಿಗೆ ಸಮಾಲೋಚನೆ ಮಾಡತಕ್ಕದೆಂಬುದೇ ಅಂತರವಾಗಿದೆ. ತಿದ್ದುಪಡಿಯ ಪರಂತುಕದಲ್ಲಿ ವ್ಯವಸ್ಥೆ ಮಾಡಿದುದೇನೆಂದರೆ ಮುಖ್ಯ ನ್ಯಾಯಮೂರ್ತಿಗಳು ಅದನ್ನು ರಾಷ್ಟ್ರಪತಿಗಳ ಅನುಮೋದನೆಯೊಂದಿಗೆ ಮಾಡತಕ್ಕದ್ದು. ಮತ್ತು ನಿಜವಾದ ಪ್ರಶ್ನೆಯೇನೆಂದರೆ ಮೊದಲಿನ ವ್ಯವಸ್ಥೆಯ ಉಪಬಂಧವು ಇದನ್ನು ರಾಷ್ಟ್ರಪತಿಗಳೊಂದಿಗೆ ಸಮಾಲೋಚನೆ ಮಾಡತಕ್ಕದ್ದು ಇಲ್ಲವೆ ಇದು ರಾಷ್ಟ್ರಪತಿಗಳ ಅನುಮೋದನೆ ಇರತಕ್ಕದ್ದು. ಪರ್ಯಾಯವಾಗಿ ನಾವು ಇವೆರಡರಲ್ಲಿ ಯಾವುದನ್ನು ಆರಿಸಿಕೊಳ್ಳೋಣ. ಮೊದಲಿನ ಕರಡು ಸಂವಿಧಾನದಲ್ಲಿ 'ಬಿಟ್ಟು ಬಿಡು' ಇಲ್ಲವೆ ಅಂತಿಮ ನಿರ್ಣಯವನ್ನು ಮುಖ್ಯ ನ್ಯಾಯಮೂರ್ತಿಗಳ ನಿರ್ಣಯಕ್ಕೆ ಬಿಟ್ಟ ಹಾಗೆ ಇದೆ. ಆದರೆ ಈಗ ಉಪಬಂಧ ಶಬ್ದಗಳು ರಾಷ್ಟ್ರಪತಿಗಳ ಅನುಮೋದನೆ ಬಿಟ್ಟಿರುವುದು ಕಂಡುಬರುತ್ತದೆ. ಮತ್ತು ನಿಜವಾಗಿ ಮತ್ತು ಅಂತಿಮ ನಿರ್ಣಯವನ್ನು ರಾಷ್ಟ್ರಪತಿಗಳ ಕೈಯಲ್ಲಿ ಕೊಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದು ವಾಸ್ತವ. ಮಾನ್ಯರೆ, ಈಗ ಈ ವಿಷಯವನ್ನು ನಿರ್ಧರಿಸುವಾಗ ಎರಡು ವಿಷಯಗಳನ್ನು ಪರಿಶೀಲನೆಗೆ ತೆಗೆದುಕೊಳ್ಳತಕ್ಕದ್ದು.

ಒಂದು, ಅಂದರೆ, ಈಗ ಫೆಡರಲ್ (ಸಂಯುಕ್ತ) ಕೋರ್ಟ್ ಉಪಬಂಧವೇನಿದೆ? ಸದನದ ಸನ್ಮಾನ್ಯ ಸದಸ್ಯರು ಕಲಂ ೨೧೬ ಇದರ ಉಪಕಲಂ (೨) ಇದನ್ನು ಉಲ್ಲೇಖಿಸಬಹುದು. ಭಾರತ ಸರಕಾರದ ಅಧಿನಿಯಮ ೧೯೩೫ ಸ್ವೀಕರಿಸಿಲ್ಲ. ಅದರಲ್ಲಿಯ ಉಪಬಂಧಗಳು ಆ ವಿಷಯವನ್ನು ಗವರ್ನರ್ ಜನರಲ್ ಅವರ ಅನುಮೋದನೆಗೆ ಬಿಟ್ಟಿರುವುದನ್ನು ನಾವು ನೋಡುತ್ತೇವೆ. ಇದು ಇರುವ ಸ್ಥಿತಿ ಎಂದು ತಿಳಿಸಲು ವಿಷಾದಿಸುತ್ತೇವೆ. ಗವರ್ನರ್ ಜನರಲ್ ಅವರ ಅನುಮೋದನೆಗೆ ಬಿಡುವುದು. ಆದರೆ ಈ ದೃಷ್ಟಿಯಿಂದ ನಾವು ನಿಜವಾಗಿ ಈಗ ಇರುವ ಸ್ಥಿತಿಯನ್ನು ಮುಂದುವರೆಯಿಸುತ್ತಿದ್ದೇವೆ. ಆದರೆ ನನಗೆ ಮತ್ತೊಂದು ವಿಚಾರ ಯೋಗ್ಯವಾದ ವಿಷಯ ಕಂಡುಬರುತ್ತದೆ. ನಾವು 'ಪದಗಳ ಗುಂಪು' ರಾಷ್ಟ್ರಪತಿಗಳ ಅನುಮೋದನೆಯಿಂದ ಎಂದುಕೊಳ್ಳಲು ಅದು ಸಹಾಯಕವಾಗುತ್ತೆ ಮತ್ತು ಪಗಾರಗಳು, ಭತ್ತೆಗಳು ಮತ್ತು ಪೆನ್‌ಶನ್ – ವಿಶ್ರಾಂತಿವೇತನಗಳನ್ನು ರಾಜ್ಯಸರಕಾರದ ನೌಕರರಿಗೆ ಕೊಡುವುದು ಏಕರೂಪದ್ದು ಇರಬೇಕು ಮತ್ತು ಸರಕಾರದ ನೌಕರರಿಗೆ ಸಂಬಂಧಿಸಿ ಆ ವಿಷಯದಲ್ಲಿ ಯಾವುದೇ ಹೇಳಿಕೊಳ್ಳುವ ವ್ಯತ್ಯಾಸ ಇರತಕ್ಕದ್ದಲ್ಲವೆಂಬುದು ನಿಸ್ಸಂಶಯವಾಗಿಯೂ ಅಪೇಕ್ಷಣೀಯವಾದದ್ದು. ಇದು ಬಹಳಷ್ಟು ಹೊಟ್ಟೆ ಉರಿಯುವಂತೆ ಮಾಡುತ್ತದೆ. ಮತ್ತು ಸರಕಾರದ ಖಜಾನೆಗೆ ವಿನಾಕಾರಣ ಹೆಚ್ಚಿನ ಭಾರ ಹೊರಿಸುವ ಸಾಧ್ಯತೆಯು ಇದೆ. ಈಗ ನೀವು ಈ ವಿಷಯವನ್ನು ಮುಖ್ಯ ನ್ಯಾಯಮೂರ್ತಿಗಳಿಗೆ ನಿರ್ಣಯಿಸಲು ಬಿಟ್ಟರೆ, ಇದು ಬಹಳ ಕಲ್ಪನೀಯವಾಗುತ್ತದೆ. ಹಾಗೆ ಸಂಭವಿಸುವುದೆಂದು ನಾನು ಹೇಳಲಾರೆನು, ಬಹು ಕಲ್ಪನಾತೀತವೆಂದರೆ ಮುಖ್ಯ ನ್ಯಾಯಮೂರ್ತಿಗಳು ಸರಕಾರಿ ನೌಕರಿಗೆ ಕೊಟ್ಟ ಈಗಿನ ಭತ್ತೆಗಳನ್ನು ಮತ್ತು ಪಗಾರಗಳ ಶ್ರೇಣಿಗಳನ್ನು ತಮ್ಮ ವಿಭಾಗದಲ್ಲಿ ಕೆಲಸ ಮಾಡುವವರಿಗೆ ಉಳಿದ ವಿಭಾಗದಲ್ಲಿ ಕೆಲಸ

ಮಾಡುವ ನೌಕರರಿಗಿಂತ ಬಹು ಭಿನ್ನವಾಗಿ ಗೊತ್ತುಪಡಿಸಬಹುದು. ಇದಲ್ಲದೆ ನ್ಯಾಯಾಂಗಕ್ಕೆ ಇಂತಹ ಪರಿಸ್ಥಿತಿಯು ಅಪೇಕ್ಷಣೀಯವಲ್ಲ. ನನಗೆ ಅನಿಸುತ್ತದೆ ಮತ್ತು ಅದರ ಪರಿಣಾಮವಾಗಿ ನನ್ನ ವಿಚಾರದಲ್ಲಿ ಹೊಸ ಕರಡು ಹೊಸ ತಿದ್ದುಪಡಿಯು ನಾನು ಸದನದ ಮುಂದೆ ಇಟ್ಟವುಗಳಿಗೆ ಯೋಗ್ಯ ಪರಿಹಾರಗಳಿವೆ ಮತ್ತು ಈ ಸದನವು ಹಳೆಯ ಮೂಲ ಉಪಬಂಧದ ಬದಲು ಈ ಹೊಸತನ ಸ್ವೀಕರಿಸುತ್ತದೆಂದು ನಾನು ಆಶಿಸುತ್ತೇನೆ. ನಾನು ಇನ್ನೊಂದು ವಿಷಯವನ್ನು ಇಲ್ಲಿ ಕಾಣಿಸಲಿಕ್ಕೇ ಬೇಕು ಅದನ್ನು ನಾನು ಇಲ್ಲಿ ಕಾಣಿಸಿಲ್ಲ. ಇಲ್ಲವೆ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರು ಈ ಬಗ್ಗೆ ಉಲ್ಲೇಖ ಮಾಡಿಲ್ಲವೆಂದರೆ ನಿಸ್ಸಂಶಯವಾಗಿ ನನ್ನ ಹೊಸ ವಿಧಿ ೧೨೨ ಖಂಡ (೩) ಇವು ಸುಪ್ರೀಂ ಕೋರ್ಟಿನ ನ್ಯಾಯಾಂಗದ ಆಡಳಿತ ವೆಚ್ಚ ಇದನ್ನು ಭಾರತದ ಕಂದಾಯದ ಮೇಲೆ ಚಾರ್ಜು ಮಾಡಲಾಗಿದೆ. ಆದರೆ ಪ್ರಶ್ನೆಯೇನೆಂದರೆ ಈ ಉಪಬಂಧದ ಖಂಡ (೩) ಇದು ನ್ಯಾಯಾಂಗದ ಸ್ವತಂತ್ರವಾಗಿರುವ ಉದ್ದೇಶವು ಇದರಿಂದ ಸಫಲವಾಗುವುದೇ?

ನನ್ನ ಮಟ್ಟಿಗೆ ಹೇಳಬೇಕೆಂದರೆ ಈ ಖಂಡವು ನ್ಯಾಯಾಂಗದ ಸ್ವಾತಂತ್ರ್ಯವನ್ನು ಕೊಡಮಾಡಲು ಸಹಕಾರಿಯಾಗಿದೆ. ನನಗೆ ಅನಿಸಿದಂತೆ ಅದು ಖಂಡನೀಯವಾದ ಸ್ಥಿತಿಯು ಮತ್ತು ಅದನ್ನು ಸರಿಪಡಿಸಬೇಕು. ಈ ಹಂತದಲ್ಲಿ ಭಾರತ ಸರಕಾರದ ಅಧಿನಿಯಮ ೧೯೩೫ ಇದರ ಕಲಂ ೨೧೬ ಇದರ ಉಪಬಂಧದಲ್ಲಿರುವುದನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಅದು ಹೇಳುವುದೇನೆಂದರೆ ಗವರ್ನರ್ ಜನರಲ್ ಅವರು ತಮ್ಮ ವೈಯಕ್ತಿಕ ತೀರ್ಮಾನದಲ್ಲಿ ಸಂಯುಕ್ತ ನ್ಯಾಯಾಲಯದ ಆಡಳಿತದ ಖರ್ಚು ಕುರಿತು ಎಷ್ಟು ಹಣ ಬೇಕೆಂದು ನಿರ್ಧರಿಸಿ ಅದನ್ನು ಕೂಡಿಸತಕ್ಕದ್ದು. ಯಾವುದೇ ಖರ್ಚಿನಲ್ಲಿ ಅವರು ಅದನ್ನು ಸೇರಿಸಿ ಸಂಯುಕ್ತ ಸದನದ ಮುಂದೆ ಇಡತಕ್ಕದ್ದು. ಮುಖ್ಯ ನ್ಯಾಯಮೂರ್ತಿಗಳು ಮತ್ತು ಸಂಯುಕ್ತ ನ್ಯಾಯಾಲಯವು ಯೋಗ್ಯರೀತಿಯಿಂದ ನಡೆಯಲು ಬೇಕಾಗುವಷ್ಟು ಅವಶ್ಯ ಇರುವ ಹಣ ಕೇಳಿದ್ದಕ್ಕೆ ಕಾರ್ಯಾಂಗವು ಒಪ್ಪದಿದ್ದರೆ, ಆಗ ಗವರ್ನರ್ ಜನರಲ್ ಅವರು ಮಧ್ಯ ಪ್ರವೇಶಿಸಿ, ಎಷ್ಟು ಹಣ ಬೇಕೆಂಬುದನ್ನು ನಿರ್ಧರಿಸಬಹುದು. ನಿಜವಾಗಿ ನಾವು ಸ್ವೀಕರಿಸುವ ಸಂವಿಧಾನದ ಈ ಉಪಬಂಧವು ಈಗ ಅಸಮಂಜಸವಾಗಿರುತ್ತದೆ. ಮತ್ತು ಆದ್ದರಿಂದ ನನ್ನ ವಿಚಾರದಲ್ಲಿ ಮುಖ್ಯ ನ್ಯಾಯಮೂರ್ತಿಗಳಿಗೆ ತಮ್ಮ ಆಡಳಿತ ನಡೆಯಿಸಲು ಬೇಕಾಗುವಷ್ಟು ಹಣವನ್ನು ದೊರಕಿಸಲು ನಾವು ಬೇರೊಂದು ಮಾರ್ಗವನ್ನು ಕಂಡಿಹಿಡಿಯಬೇಕು.

ನ್ಯಾಯಾಂಗವನ್ನು ಸ್ವತಂತ್ರವಾಗಿ ಮಾಡುವ ವ್ಯವಸ್ಥೆಯನ್ನು ಹೊಂದಿಲ್ಲ. ಒಟ್ಟಾರೆ ಅದು ಅಂದರೇನು? ಅದೆಂದರೆ ನಾವು ಯಾವಾಗ ಒಂದು ನಿರ್ದಿಷ್ಟ ಬದಲಾವಣೆಯು ರಾಜ್ಯ ಸಂಚಿತ ನಿಧಿಗೆ ಚರ್ಚೆ ಮಾಡುವುದೇ? ಇದೆಲ್ಲದರ ಅರ್ಥವು ಇಷ್ಟೆ. ಅಂದರೆ ಸಂಸತ್ತಿನಲ್ಲಿ ಈ ಬಗ್ಗೆ ಮತಕ್ಕೆ ಹಾಕುವ ಅವಶ್ಯಕತೆಯು ಇರುವುದಿಲ್ಲ. ಇದಕ್ಕಿಂತ ಹೆಚ್ಚಿನ ಅರ್ಥವು ಏನೂ ಇರುವುದಿಲ್ಲ. ನಾವು ನಮ್ಮಷ್ಟಕ್ಕೆ ಹೇಳಿದ್ದೇನೆಂದರೆ ಯಾವುದೇ ಒಂದು ನಿರ್ದಿಷ್ಟ ಚಾರ್ಜನ್ನು ಭಾರತದ ಕಂದಾಯಕ್ಕೆ ಚಾರ್ಜು ಮಾಡಿದರೂ ಆಗ ಒಟ್ಟಾರೆ ಏನಾಗುತ್ತದೆಂದರೆ ಸಂಸತ್ತಿನಲ್ಲಿ ಚರ್ಚೆಗೆ ಅವಕಾಶವಿದ್ದರೂ ಆಗ ಅದೊಂದು ರೀತಿಯ ಮತಕ್ಕೆ ಹಾಕಲಾರದ ಸಂಗತಿಯಾಗುತ್ತದೆ. ಆದ್ದರಿಂದ ನಾವು ಮಾಡಿದ ಈ ೧೨೨ ಖಂಡ (೩) ಇವುಗಳನ್ನು ಓದುವುದರಿಂದ ಹಾಗೂ ಉಪಬಂಧದ ಬೆಳಕಿನಲ್ಲಿ ಇದರ ಅರ್ಥವು ಇಷ್ಟಾಗುತ್ತದೆ. ಅದೆಂದರೆ ಪ್ರತಿವರ್ಷವೂ ನ್ಯಾಯಾಂಗಕ್ಕೆ ಸೇರಿದ ಆಯವ್ಯಯದ ಭಾಗವನ್ನು ಸಂಸತ್ತಿನಲ್ಲಿ ಮತಕ್ಕೆ ಹಾಕುವ ಅವಶ್ಯಕತೆಯು ಇರುವುದಿಲ್ಲ. ಆದರೆ ಅಲ್ಲಿ ಒಂದು ಪ್ರಶ್ನೆಯು ಆ ವಿಷಯದ ಮೂಲಕ್ಕೆ ಹೋಗುತ್ತದೆಂದು ನನಗೆ ಅನಿಸುತ್ತದೆ. ಮತ್ತು ಅದು ಆಗ ಸ್ಥಾನವನ್ನು ಪಡೆಯುತ್ತದೆ. ಸುಪ್ರೀಮ್ ಕೋರ್ಟಿನ ಅವಶ್ಯಕತೆಗಳೇನು ಎಂಬುದನ್ನು ಗೊತ್ತುಮಾಡುವವರು

ಯಾರು? ನಾವು ಅಂತಹ ಉಪಬಂಧವನ್ನು ಮಾಡಿಯೇ ಇಲ್ಲ. ಅದನ್ನು ನಾವು ನ್ಯಾಯಾಂಗಕ್ಕೆ ಪ್ರತಿವರ್ಷ ಎಷ್ಟು ಹಣ ಬಿಡುಗಡೆ ಮಾಡಬೇಕೆಂದು ನಿರ್ಧರಿಸುವುದನ್ನು ಸದ್ಯಕ್ಕೆ ಅದಕ್ಕಾಗಿ ಈ ವಿಧಿಯನ್ನು ತಡಮಾಡಲು ನಾನು ಇಚ್ಛಿಸುವುದಿಲ್ಲ. ನಾನು ಸದನಕ್ಕೆ ಅದನ್ನು ತಿಳಿಸಿದೆನು. ಯಾಕೆಂದರೆ ಅದಕ್ಕೆ ಅಪೇಕ್ಷಣೀಯವೆನಿಸಿದರೆ ನಂತರದ ಹಂತದಲ್ಲಿ ಈ ವಿಷಯವನ್ನೊಳಗೊಂಡ ಯಾವುದೇ ಯೋಗ್ಯ ತಿದ್ದುಪಡಿಯನ್ನು ತರಬಹುದೆಂಬ ಆಶಯದಿಂದ ಹಾಗೆ ಮಾಡಿದೆನು.

(ಡಾ. ಅಂಬೇಡ್ಕರರ ಎರಡು ತಿದ್ದುಪಡಿಗಳೂ ಸ್ವೀಕೃತವಾದವು. ತಿದ್ದುಪಡಿಗೊಂಡ ವಿಧಿ ೧೨೨ನ್ನು ಸಂವಿಧಾನಕ್ಕೆ ಸೇರಿಸಲಾಯಿತು).

* * * * *

## ವಿಧಿ ೧೨೪

* **ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್** (ಮುಂಬಯಿ:ಸಾಮಾನ್ಯ) ಅಧ್ಯಕ್ಷರೆ, ವಿವಿಧ ವಿಧಿಗಳಿಗೆ ಸೂಚಿತವಾಗಿರುವ ತಿದ್ದುಪಡಿಗಳೂ ಸೇರಿದಂತೆ ಕರಡು ಸಂವಿಧಾನವು ಇರುವ ಪರಿಸ್ಥಿತಿಯಿಂದ ನನಗೆ ತುಂಬಾ ಸಂತೋಷವಾಗಿದೆ ಎಂದು ಹೇಳಲಾರೆ. ನನ್ನ ಮಟ್ಟಿಗೆ ಹೇಳುವುದಾದರೆ, ಈ ಅಧಿಕಾರಿಯು ಭಾರತದ ಸಂವಿಧಾನದಲ್ಲಿ ಅತ್ಯಂತ ಮುಖ್ಯನಾದವರು ಎಂದು ನನ್ನ ಅಭಿಪ್ರಾಯ. ಪಾರ್ಲಿಮೆಂಟ್ ಅಂಗೀಕರಿಸಿದ ವೆಚ್ಚಗಳನ್ನು ಮೀರದ ಹಾಗೆ ಅಥವಾ ವಿನಿಯೋಗ ಶಾಸನದಲ್ಲಿ (Appropriation Act) ಪಾರ್ಲಿಮೆಂಟ್ ನಿಗದಿಪಡಿಸಿದ ಕ್ರಮವನ್ನು ಬದಲಾಯಿಸದ ಹಾಗೆ ನೋಡಿಕೊಳ್ಳುವ ವ್ಯಕ್ತಿ ಅವರು ತನ್ನ ಕರ್ತವ್ಯಗಳನ್ನು ಅವರು ಆ ಕರ್ತವ್ಯಗಳು ನ್ಯಾಯಾಂಗದ ಕರ್ತವ್ಯಗಳಿಗಿಂತ ತುಂಬಾ ಮುಖ್ಯವಾದವು ಎಂದು ನನ್ನ ಅಭಿಪ್ರಾಯ – ನಿರ್ವಹಿಸಬೇಕಾದರೆ, ಅವರು ನ್ಯಾಯಾಂಗದಷ್ಟೆ ಸ್ವತಂತ್ರನಾಗಿರಬೇಕು. ಆದರೆ ಸುಪ್ರೀಂ ಕೋರ್ಟಿಗೆ ಮತ್ತು ಆಡಿಟರ್ ಜನರಲ್ ಅವರಿಗೆ ಸಂಬಂಧಿಸಿದ ವಿಧಿಗಳಿಗೆ ಹೋಲಿಸಿ ನೋಡಿದರೆ ನಾವು ನ್ಯಾಯಾಂಗಕ್ಕೆ ನೀಡಿರುವಂಥದೇ ಸ್ವಾತಂತ್ರ್ಯವನ್ನು ಈ ಅಧಿಕಾರಿಗೆ ನೀಡಿಲ್ಲ ಎಂದು ಹೇಳದೆ ಇರಲಾರೆ. ವಾಸ್ತವವಾಗಿ ನನ್ನ ವೈಯುಕ್ತಿಕ ಅಭಿಪ್ರಾಯದಲ್ಲಿ ಈ ಅಧಿಕಾರಿಗೆ ನ್ಯಾಯಾಂಗಕ್ಕಿರುವುದಕ್ಕಿಂತಲೂ ಹೆಚ್ಚಿನ ಸ್ವಾತಂತ್ರ್ಯ ಇರಬೇಕು.

ನ್ಯಾಯಾಂಗಕ್ಕೆ ನಾವು ಕೊಟ್ಟಿರುವ ಸ್ಥಾನ ಮತ್ತು ಆಡಿಟರ್ ಜನರಲ್ಲರಿಗೆ ಕೊಡಲಿರುವ ಸ್ಥಾನಗಳ ನಡುವೆ ಇರುವ ಒಂದು ವ್ಯತ್ಯಾಸ ಇದು. ಕಳೆದ ವಾರವಷ್ಟೇ ನಾನು, ಸರ್ವೋನ್ನತ ನ್ಯಾಯಾಲಯವು ಅಧಿಕಾರಿಗಳನ್ನು ಇತರ ನೌಕರರನ್ನು ನೇಮಿಸಿಕೊಳ್ಳಲು ಅಧಿಕಾರ ನೀಡುವ ೧೨೨ನೆಯ ವಿಧಿಗೆ ಒಂದು ತಿದ್ದುಪಡಿಯನ್ನು ಮಂಡಿಸಿದೆ. ಮೊದಲಿನ ಕರಡು ಹಾಗೂ ಅದಕ್ಕೆ ಸೂಚಿತವಾದ ತಿದ್ದುಪಡಿಗಳಿಂದ ಆಡಿಟರ್ ಜನರಲ್ಲರಿಗೆ ಅಂತಹ ಯಾವ ಅಧಿಕಾರವೂ ಇರುವ ಹಾಗಿಲ್ಲ ಎಂದು ನನಗೆ ಕಂಡುಬರುತ್ತಿದೆ. ಆ ಅಧಿಕಾರವು ಅವರಿಗಿಲ್ಲ ಎಂದರೆ, ಆಡಿಟರ್ — ಜನರಲ್ಲರ ಸಿಬ್ಬಂದಿಯನ್ನು ಕಾರ್ಯಾಂಗವು ನೇಮಕ ಮಾಡುತ್ತದೆ ಎಂದರ್ಥ. ಕಾರ್ಯಂಗವು ನೇಮಕ ಮಾಡುವುದರಿಂದ, ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಅಧಿಕಾರ ಕಾರ್ಯಾಂಗಕ್ಕೆ ಬರುತ್ತದೆ. ಅಂದರೆ ತನ್ನ ಅಧೀನ ನೌಕರರ ಅಧಿಕಾರವಿಲ್ಲದ ಯಾವನೇ

---

* ಸಿ.ಎ.ಡಿ. ಸಂ. ೮, ೩೦ನೇ ಮೇ ೧೯೪೯, ಪುಟ ೪೦೭–೪೦೮.

ಅಧಿಕಾರಿಯು ಆಡಳಿತವು ಹಾಳಾಗುತ್ತದೆ ಎನ್ನವುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಈ ದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ಇಂತಹ ಅಧಿಕಾರವು ಆಡಿಟರ್ ಜನರಲ್ಲರಿಗಿರಬೇಕು ಎಂದು ನಾನು ಆಲೋಚಿಸಿದೆ. ಆದರೆ ಸದನದ ಭಾವನೆಯು ಅದಕ್ಕೆ ವಿರುದ್ಧವಾಗಿರುವಂತೆ ತೋರುತ್ತದೆ. ಈಗ ಸದ್ಯಕ್ಕೆ ಆ ಭಾವನೆಯು ಹೇಗಿದೆಯೋ ಹಾಗೆ ಒಪ್ಪಿಕೊಂಡು ಸುಮ್ಮನಿರುವುದಕ್ಕಿಂತ ಬೇರೆ ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ನನಗೆ ತೋರುತ್ತದೆ. ಇದು ನನ್ನ ಸಾಮಾನ್ಯ ಅಭಿಪ್ರಾಯ.

ಇನ್ನು ತಿದ್ದುಪಡಿಗಳಿಗೆ ಬರುವುದಾದರೆ ಶ್ರೀ ಟಿ.ಟಿ. ಕೃಷ್ಣಮಾಚಾರಿ ಮತ್ತು ಶ್ರೀ ಬಿ. ದಾಸ್ ಮಂಡಿಸಿದ ೧೯೭೫ ನೆಯ ಸಂಖ್ಯೆಯ ಒಂದು ತಿದ್ದುಪಡಿ ಇವುಗಳನ್ನು ಒಪ್ಪುತ್ತೇನೆ. ಇವು ಆಡಿಟರ್ ಜನರಲ್ಲರಿಗೆ ಕರಡು ಸಂವಿಧಾನದಲ್ಲಿ ಅಥವಾ ವಿವಿಧ ತಿದ್ದುಪಡಿಗಳಲ್ಲಿ ನೀಡಿರುವ ಸ್ಥಾನವನ್ನು ಬಹುಮಟ್ಟಿಗೆ ಉತ್ತಮಪಡಿಸುತ್ತವೆ. ಆದರೆ ಈ ತಿದ್ದುಪಡಿಗಳಿಂದ ಪರಿಷ್ಕೃತವಾದ ವಿಧಿಯನ್ನು ಕುರಿತು ಮಿ॥ ಸಿಧ್ವಾ ಅವರಿಗೆ ಆಕ್ಷೇಪಣೆಯಿರುವಂತೆ ತೋರುತ್ತದೆ. ನಾನು ಅವರನ್ನು ಸರಿಯಾಗಿ ಅರ್ಥ ಮಾಡಿಕೊಂಡಿರುವುದಾದರೆ ಅವರ ಆಕ್ಷೇಪಣೆ ಇದು: ಆಡಿಟರ್ ಜನರಲ್ಲರ ವೆಚ್ಚಗಳನ್ನು ಸಂಚಿತ ನಿಧಿಯಿಂದ ನಿರ್ವಹಿಸದೆ, ಸಾಮಾನ್ಯ ಪೂರೈಕೆ ಮತ್ತು ಸೇವೆಗಳೆಂದು ಪರಿಗಣಿಸಿ ಪಾರ್ಲಿಮೆಂಟ್ ಅವುಗಳ ಮೇಲೆ ವೋಟು ಮಾಡುವಂತೆ ಇರಬೇಕು ಎನ್ನುವುದು. ಆಡಿಟರ್ ಜನರಲ್ಲರ ಶುಲ್ಕವನ್ನು ಆಡಳಿತೀಯ ವೆಚ್ಚಗಳನ್ನೂ ಕುರಿತು ಚರ್ಚಿಸಲು ಪಾರ್ಲಿಮೆಂಟಿಗೆ ಅಧಿಕಾರವನ್ನೇಕೆ ವಂಚಿಸಬೇಕು? ಎನ್ನುವುದು. ನನ್ನ ಮಾನ್ಯ ಮಿತ್ರರಾದ ಶ್ರೀ ಸಿಧ್ವಾ ಅವರು, ಕೆಲವು ವೆಚ್ಚಗಳನ್ನು ಭಾರತ ಸರಕಾರದ ವರಮಾನದಿಂದ ನಿರ್ವಹಿಸುವುದು ಎಂದರೆ ಅರ್ಥವೇನು ಎಂಬುದನ್ನು ಪೂರ್ತಿಯಾಗಿ ತಪ್ಪು ತಿಳಿದುಕೊಂಡಿದ್ದಾರೆ ಎಂದು ಕಾಣುತ್ತದೆ. ಮಾನ್ಯ ಮಿತ್ರರು ೯೩ ನೆಯ ವಿಧಿಯನ್ನು ದಯವಿಟ್ಟು ನೋಡಬೇಕು. ಅದು ಈ ವಿಷಯವನ್ನೇ ಕುರಿತಾಗಿದೆ. ಕೆಲವು ವೆಚ್ಚಗಳನ್ನು ಭಾರತದ ಒಟ್ಟು ವರಮಾನದಿಂದ ನಿರ್ವಹಿಸಿದ ಮಾತ್ರಕ್ಕೆ ಆ ವೆಚ್ಚವನ್ನು ಕುರಿತು ಚರ್ಚಿಸುವ ಹಕ್ಕನ್ನು ಪಾರ್ಲಿಮೆಂಟಿಗೆ ವಂಚಿಸಲಾಗಿಲ್ಲ. ಚರ್ಚಿಸುವ ಹಕ್ಕು ಇದ್ದೇ ಇದೆ. ಅದರ ಮೇಲೆ ವೋಟುಮಾಡುವ ಹಕ್ಕನ್ನು ಮಾತ್ರ ನೀಡಿಲ್ಲ. ಅದು ಮತನೀಡಿಕೆಯಿಲ್ಲದ ಅಂಶ. ಏಕೆ ಹಾಗೆ ಮತ ನೀಡಿಕೆ ಇಲ್ಲದಂತೆ ಮಾಡಲಾಗಿದೆ ಎನ್ನುವುದಕ್ಕೂ ಒಳ್ಳೆಯ ಕಾರಣವಿದೆ. ಆಡಿಟರ್ ಜನರಲ್ಲರು ತಮ್ಮ ಅಗತ್ಯಗಳ ಸಂಬಂಧವಾಗಿ ನಿರ್ಧರಿಸಿರುವುದನ್ನು ಕುರಿತು ಕಾರ್ಯಾಂಗವು ಅತಿಯಾಗಿ ಮಧ್ಯಪ್ರವೇಶ ಮಾಡಬಾರದು ಎಂದು ನಾವು ಬಯಸುತ್ತೇವೆ. ಒಂದಲ್ಲ ಒಂದು ಕಾರಣಕ್ಕೆ ಅತೃಪ್ತಿಗೊಂಡ ಶಾಸಕರು ಅಥವಾ ಮಿತವ್ಯಯದ ಗೀಳು ಅತಿರೇಕಕ್ಕೆ ಹೋದ ಶಾಸಕರು ಆಡಿಟರ್ ಜನರಲ್ಲರ ಉತ್ತಮವೂ ದಕ್ಷವೂ ಆದ ಆಡಳಿತದಲ್ಲಿ ಮೂಗು ಹಾಯಿಸಿ ತೊಂದರೆಯನ್ನುಂಟು ಮಾಡಬಾರದು. ಆದ್ದರಿಂದಲೇ ಈ ಅವಕಾಶವನ್ನು ಕಲ್ಪಿಸಲಾಗಿದೆ. ಮಿತ್ರ ಸಿಧ್ವಾ ಅವರು, ಈ ಅವಕಾಶವೇನೂ ಅಸಾಧಾರಣವಾದುದಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ನಾವು ಸುಪ್ರೀಂ ಕೋರ್ಟಿಗೆ ಸಂಬಂಧಿಸಿದಂತೆ ಮಾಡಿರುವ ಅವಕಾಶಗಳಿಗೆ ಇದು ಸರಿಸಮಾನಾಗಿದೆ. ಆದ್ದರಿಂದ ಮಿ॥ ಸಿಧ್ವಾ ಅವರು ಮಾಡಿರುವ ಆಕ್ಷೇಪಣೆಯನ್ನು ಒಪ್ಪಿಕೊಳ್ಳಲು ಸರಿಯಾದ ಆಧಾರ ಯಾವುದು ಇಲ್ಲವೆಂದು ನಾನು ಭಾವಿಸುತ್ತೇನೆ.

ಮಾನ್ಯರೆ, ತಿದ್ದುಪಡಿಯಾಗಿರುವಂತೆ ವಿಧಿಯನ್ನು ಅಂಗೀಕರಿಸಬೇಕೆಂದು ಸೂಚಿಸಿ ಮಂಡಿಸುತ್ತೇನೆ. ಮೊದಲನೆಯ ಪಟ್ಟಿಯಲ್ಲಿರುವ ಶ್ರೀ ಬಿ. ದಾಸ್ ಅವರ ೨೫ನೆಯ ಸಂಖ್ಯೆಯ ತಿದ್ದುಪಡಿಯನ್ನು ಶ್ರೀ ಟಿ.ಟಿ. ಕೃಷ್ಣಮಾಚಾರಿಯವರ ೧೩೦ನೆಯ ತಿದ್ದಪಡಿಯನ್ನು ಟಿ. ಕೃಷ್ಣಮಾಚಾರಿಯವರ ೧೩೧ ನೆಯ ತಿದ್ದುಪಡಿಯನ್ನೂ ಕೇವಲ ೨೫–ಸಿ ಸಂಖ್ಯೆಯದ್ದು ಕೃಷ್ಣಮಾಚಾರಿಯವರದೇ ತಿದ್ದುಪಡಿಯನ್ನು ನಾನು

ಒಪ್ಪುತ್ತೇನೆ.

**ಅಧ್ಯಕ್ಷರು :** ಈಗ ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

**(ಕೆಳಕಂಡ ತಿದ್ದುಪಡಿಗಳು ಅಂಗೀಕೃತವಾದುವು)**

೧. "೫ನೆಯ ಭಾಗದ ೫ನೆಯ ಅಧ್ಯಾಯಕ್ಕೆ ತಿದ್ದುಪಡಿಗಳ ೧೯೭೫ನೆಯ ತಿದ್ದುಪಡಿಗೆ ಸಂಬಂಧಿಸಿದಂತೆ "ಆಡಿಟರ್ ಜನರಲ್' ಎಂಬ ಪದವು ಎಲ್ಲೆಲ್ಲಿ ಬರುತ್ತದೋ ಅಲ್ಲೆಲ್ಲಾ ಅದರ ಬದಲಿಗೆ (ಶೀರ್ಷಿಕೆಯು ಸೇರಿದಂತೆ) 'ಕಂಟ್ರೋಲರ್ ಮತ್ತು ಆಡಿಟರ್ ಜನರಲ್' ಎಂಬ ಪದವನ್ನು ಇರಿಸತಕ್ಕದ್ದು"

೨. "೧೨೪ನೆಯ ವಿಧಿಯ (೧) ನೆಯ ಉಪವಾಕ್ಯದಲ್ಲಿ 'ರಾಷ್ಟ್ರಪತಿಗಳು ಎಂಬ ಪದವಾದ ಮೇಲೆ, 'ಸಹಿ ಮಾಡಿ ಮೊಹರು ಹಾಕಿದ ಆದೇಶದಿಂದ ಎಂಬ ಪದಗಳನ್ನು ಸೇರಿಸತಕ್ಕದ್ದು"

೩. ತಿದ್ದುಪಡಿಗಳ ಪಟ್ಟಿಯ ೧೯೭೫ನೆಯ ತಿದ್ದುಪಡಿಗೆ ಸಂಬಂಧಿಸಿದಂತೆ ೧೨೪ನೆಯ ವಿಧಿಯ (೧) ನೆಯ ಉಪವಾಕ್ಯವಾದ ಮೇಲೆ ಈ ಹೊಸ ಉಪವಾಕ್ಯವನ್ನು ಸೇರಿಸತಕ್ಕದ್ದು.
(೧–ಎ) "ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಗಿ ನೇಮಿತವಾಗುವ ಪ್ರತಿಯೊಬ್ಬ ವ್ಯಕ್ತಿಯೂ, ಅಧಿಕಾರವನ್ನು ಸ್ವೀಕರಿಸುವುದಕ್ಕೆ ಸ್ವೀಕರಿಸುವುದಕ್ಕೆ ಮುಂಚೆ ರಾಷ್ಟ್ರಪತಿಗಳ ಅಥವಾ ಅದರಿಂದ ಆ ಉದ್ದೇಶಕ್ಕಾಗಿ ನೇಮಿತರಾದವರ ಎದುರಿಗೆ, ಮೂರನೆಯ ಷೆಡ್ಯೂಲಿನಲ್ಲಿ ಅದಕ್ಕಾಗಿ ರಚಿಸಿರುವ ರೂಪದಲ್ಲಿ ಒಂದು ಸ್ಥಿರೀಕರಣವನ್ನು ಅಥವಾ ಪ್ರಮಾಣ ವಚನವನ್ನು ಸ್ವೀಕರಿಸತಕ್ಕದ್ದು':

೪. ತಿದ್ದುಪಡಿಗಳಿಗೆ ತಿದ್ದುಪಡಿಗಳ (ಮೂರನೆಯ ವಾದ) ಮೊದಲನೆಯ ಪಟ್ಟಿಯ ೨೫–ಎ ಸಂಖ್ಯೆಯು ೧೯೪೯ ಮೇ ೨೮ ರ ತಿದ್ದುಪಡಿಗೆ ಬದಲಾಗಿ ಈ ಕೆಳಗಿನದನ್ನು ಇರಿಸತಕ್ಕದ್ದು:–
ತಿದ್ದುಪಡಿಗಳ ಪಟ್ಟಿಯ ೧೯೮೦ನೆಯ ತಿದ್ದುಪಡಿಗೆ ಸಂಬಂಧಿಸಿದಂತೆ, ೧೨೪ನೆಯ ವಿಧಿಯ (೪) ನೆಯ ಉಪವಾಕ್ಯದ ಬದಲಿಗೆ ಈ ಕೆಳಗಿನದನ್ನು ಅಳವಡಿಸಬೇಕು.–
"ಪಾರ್ಲಿಮೆಂಟು ಅಂಗೀಕರಿಸುವ ಯಾವುದೇ ಕಾನೂನುಗಳಿಗೆ ಒಳಪಟ್ಟು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರ ಸಿಬ್ಬಂದಿ ವರ್ಗದ ಸೇವಾನಿಯಮಗಳು, ಮತ್ತು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರು ವಿಧಿಸಿದಂಥವಾಗಿರುತ್ತದೆ.
ಈ ಉಪವಾಕ್ಯದನ್ವಯ ವಿಧಿಸಿರುವ ನಿಯಮಗಳು, ಅವರ ವೇತನ, ಭತ್ಯ, ರಜೆ ಹಾಗೂ ನಿವೃತ್ತಿ ವೇತನಗಳಿಗೆ ಸಂಬಂಧಿಸಿದಷ್ಟು ಮಟ್ಟಿಗೆ ರಾಷ್ಟ್ರಪತಿಯವರ ಸಮ್ಮತಿಯನ್ನು ಪಡೆಯಬೇಕಾಗಿರುತ್ತದೆ.

೫. 'ತಿದ್ದುಪಡಿಗಳ ಪಟ್ಟಿಯ ೧೯೮೧ನೆಯ ತಿದ್ದುಪಡಿಗೆ ಸಂಬಂಧಿಸಿದಂತೆ, ೧೨೪ನೆಯ ವಿಧಿಯ (೫)ನೆಯ ಉಪವಾಕ್ಯದ ಬದಲಿಗೆ, ಈ ಕೆಳಗಿನ ಉಪವಾಕ್ಯವನ್ನು ಅಳವಡಿಸಬೇಕು.
'(೫) ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರ ಕಛೇರಿಯ ಆಡಳಿತದ ವೆಚ್ಚಗಳನ್ನು. ಎಲ್ಲಾ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನಗಳನ್ನು, ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರ ಸಿಬ್ಬಂದಿ ವರ್ಗದವರಿಗೆ ಕೊಡಬೇಕಾದುವನ್ನು ಕೊಟ್ಟ ಭಾರತದ

ಸಂಚಿತ ನಿಧಿಯಿಂದ ನಿರ್ವಹಿಸತಕ್ಕದ್ದು.'

೧೨೪ನೆಯ ವಿಧಿಯನ್ನು ತಿದ್ದುಪಡಿಗೊಂಡ ರೂಪದಲ್ಲಿ ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ ೧೨೫

* **ಅಧ್ಯಕ್ಷರು :** ೧೯೮೬ನೆಯ ತಿದ್ದುಪಡಿ, ಡಾ. ಅಂಬೇಡ್ಕರ್ ಅವರಿಂದ.

**ಮಾನ್ಯ ಡಾ. ಬಿ.ಆರ್ ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ನಾನು ಗೊತ್ತುವಳಿಯನ್ನು ಮಂಡಿಸುತ್ತೇನೆ–

"೧೨೫ನೆಯ ವಿಧಿಯ ವಿವರಣೆಗೆ ಸಂಬಂಧಿಸಿದಂತೆ, ಅದರ ಬದಲಾಗಿ ಈ ಕೆಳಗಿನ ವಿವರಣೆಯನ್ನು ಅಳವಡಿಸಬೇಕು:

"ವಿವರಣೆ:ಈ ವಿಧಿಯಲ್ಲಿ, 'ಪಾರ್ಲಿಮೆಂಟು ಅಂಗೀಕರಿಸಿದ ಕಾನೂನು'ಎಂಬ ಉಕ್ತಿಯು, ಈ ಸಂವಿಧಾನವು ಜಾರಿಗೆ ಬರುವುದಕ್ಕಿಂತ ಮುಂಚಿತವಾಗಿ ಅಥವಾ ಭಾರತ ಭೂಪ್ರದೇಶದಲ್ಲಿ ತತ್ಕಾಲಕ್ಕೆ ಜಾರಿಯಲ್ಲಿರುವ ಯಾವುದೇ ಕಾನೂನು, ಸುಗ್ರೀವಾಜ್ಞೆ ಆದೇಶ, ಬೈ–ಲಾ, ನಿಯಮ ಅಥವಾ ನಿಬಂಧನೆಗಳನ್ನು ಒಳಗೊಳ್ಳುತ್ತದೆ."

ಸದನವು ಬಹಶಃ ನೆನಪು ಮಾಡಿಕೊಳ್ಳಬಹುದು– ಆಡಿಟರ್ ಜನರಲ್ ಅವರ ಕರ್ತವ್ಯಗಳನ್ನು ಪಾರ್ಲಿಮೆಂಟು ವಿಧಿಸುವ ಯಾವುದೇ ಕಾನೂನು ನಿಯಂತ್ರಿಸುವುದಿಲ್ಲ. ಅವು ಒಳಪಡುವುದು ೧೯೩೫ರ ಭಾರತ ಸರಕಾರ ಶಾಸನದನ್ವಯ ತನಗೆ ದತ್ತವಾದ ಅಧಿಕಾರದಂತೆ ಗವರ್ನರ್ ಜನರಲ್ ಅವರು ವಿಧಿಸುವ ಸುಗ್ರೀವಾಜ್ಞೆ, ಆದೇಶ ಬೈ–ಲಾ, ನಿಯಮ ಅಥವಾ ನಿಬಂಧನೆ ಮೊದಲಾದುವುಗಳಿಗೆ ಒಳಪಡುತ್ತವೆ. ಆದ್ದರಿಂದ ಗವರ್ನರ್ ಜನರಲ್ ಅವರು ವಿಧಿಸಿದ ಸುಗ್ರೀವಾಜ್ಞೆಗಳು, ಆದೇಶಗಳು ಬೈ–ಲಾಗಳು ನಿಯಮ –ನಿಬಂಧನೆಗಳನ್ನು ಚಾಲ್ತಿಯಲ್ಲಿ ಉಳಿಸಬೇಕಾದರೆ ಈ ಆದೇಶಗಳನ್ನು ಒಳಗೊಳ್ಳುವಂತೆ ವಿವರಣೆಯನ್ನು ವಿಸ್ತರಿಸುವುದು ಅಗತ್ಯವಾಗಿದೆ.

* * * * *

** **ಮಾನ್ಯ ಡಾ॥ ಬಿ.ಆರ್ ಅಂಬೇಡ್ಕರ್ :** ನನ್ನ ಮಿತ್ರರಾದ ಶ್ರೀ ಕುಂಜ್ರು ಅವರು ಸೂಚಿಸಿರುವ ತಿದ್ದುಪಡಿಯಲ್ಲಿ" ಅಥವಾ ಯಾವುದೇ ಸ್ಥಳೀಯ......+ ಎಂಬ ಪದಗಳನ್ನು ಕೈಬಿಡಲು ಸಿದ್ಧ ವಾಗಿದ್ದರೆ ನಾನು ಆ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ.

**ಪಂಡಿತ ಹೃದಯನಾಥ ಕುಂಜ್ರು :** ನಾನು ಅವುಗಳನ್ನು ಕೈ ಬಿಟ್ಟಿದ್ದೇನೆ.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಏಕೆಂದರೆ ಸ್ಥಳೀಯ ಆಡಿಟ್ ಎನ್ನುವುದು ಪ್ರಾಂತೀಯ ಸರಕಾರಗಳ, ಹತೋಟಿಯಲ್ಲಿರುವಂಥದು. 'ಇತರ ಪ್ರಾಧಿಕಾರಿಗಳು' ಎಂಬ ಪದಗಳನ್ನು ಸೇರಿಸುವುದು ಅಗತ್ಯವಾಗಬಹುದು ಅಥವಾ ಪ್ರಯೋಜನಕರವು ಆಗುತ್ತದೆ ಎಂದು ನಾನು ಭಾವಿಸುತ್ತೇನೆ. ಅವರೇ

---

* ಸಿ.ಎ.ಡಿ. ಸಂ.೮, ३೦ನೇ ಮೇ ೧೯೪೯, ಪುಟ ४೧೨

** ಸಿ.ಎ.ಡಿ. ಸಂ. ೮,३೦ನೇ ಮೇ ೧೯४೯, ಪುಟ ४೧४–೧೫

\+ ... ಚುಕ್ಕೆಗಳು ನಡುವೆ ತಡೆಯುಂಟಾದುದನ್ನು ಸೂಚಿಸುತ್ತದೆ.

ಹೇಳಿದಂತೆ, ಇಂದು ಭಾರತ ಸರಕಾರದ ನೀತಿಯು, ಇಲಾಖೆಗಳಿಂದ ನಿರ್ವಹಿಸಲು ಸಾಧ್ಯವಿಲ್ಲದ ಅನೇಕ ಉದ್ಯಮಗಳನ್ನು ನಿರ್ವಹಿಸಲು ಹಲವು ಸಂಖ್ಯೆಯಲ್ಲಿ ಕಾರ್ಪೋರೇಷನ್ನುಗಳನ್ನು ರಚಿಸುವುದಾಗಿದೆ. ಆದ್ದರಿಂದ, ಈ ಕಾರ್ಪೋರೇಷನ್ನುಗಳ ಲೆಕ್ಕ ತಪಾಸಣೆ ಮಾಡಲು ತಕ್ಕ ಅವಕಾಶವನ್ನು ಭಾರತ ಸರಕಾರವು ಮಾಡಬೇಕು. ಆದ್ದರಿಂದ ಕೇಂದ್ರ ಸರಕಾರಕ್ಕೆ, ಅಂತಹ ಪ್ರಾಧಿಕಾರಿಗಳ ಲೆಕ್ಕ ಪತ್ರಗಳನ್ನು ತಪಾಸಣೆ ಮಾಡುವ ಕೆಲಸವನ್ನು ಆಡಿಟರ್ ಜನರಲ್ ಅವರಿಗೆ ವಹಿಸುವ ಅಧಿಕಾರವನ್ನು ಕೊಡುವುದು ಆಕ್ಷೇಪಣೀಯವಾಗಿದೆ. ನಾನು ಸೂಚಿಸಿರುವ ಬದಲಾವಣೆಯೊಂದಿಗೆ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ನಾನು ಸಿದ್ಧವಾಗಿದ್ದೇನೆ.

ಇನ್ನೂ ಶ್ರೀ ಸಿಧ್ವಾ ಅವರು ಎತ್ತಿರುವ ವಿಚಾರವನ್ನು ಕುರಿತು ಆಡಿಟರ್ ಜನರಲ್ ಅವರು ಕರ್ತವ್ಯಗಳನ್ನು ಕುರಿತು ಹಲವು ನಿಯಮಗಳು ಕಾರ್ಯಾಂಗವು ವಿಧಿಸಿದಂಥವು. ಆದ್ದರಿಂದ ಈಗ ನಾನು ಸೂಚಿಸಿರುವ ತಿದ್ದುಪಡಿಯಿಂದ, ಅವರಿಗೆ ಮೊದಲೇ ನೀಡಿದ್ದ ಅಧಿಕಾರಿಗಳಿಗೆ ಮೊದಲೇ ಇದ್ದು ಕಾರ್ಯಾಚರಣೆಗಳನ್ನೆ ಮತ್ತೇ ನೀಡಿದಂತಾಗುತ್ತದೆ. ಈ ನಿಲುವಿನಲ್ಲಿ ಅಸಂಗತತೆಯಿರುವುದು ಸ್ಪಷ್ಟವಾಗಿದೆ. ಹಣಕಾಸಿನ ಆಡಳಿತಕ್ಕೆ ಸಂಬಂಧಿಸಿದಂತೆ ಕಾರ್ಯಾಂಗದ ಸರಕಾರವನ್ನು ನಿಯಂತ್ರಿಸಬೇಕಾಗಿರುವ ಒಬ್ಬ ಅಧಿಕಾರಿಯ ಕರ್ತವ್ಯಗಳೇನೆಂಬುದನ್ನು ಕಾರ್ಯಾಂಗವೇ ಹಾಕಿದ ನಿಯಮಗಳು ವಿಧಿಸುತ್ತವೆ. ಇದು ಅವರ ವಿಚಾರ. ನನ್ನ ಮಾನ್ಯ ಮಿತ್ರ ಸಿಧ್ವಾ ಅವರಿಗೆ ನಾನು ಕೊಡಬಹುದಾದ ಒಂದೇ ಒಂದು ಉತ್ತರ ಇದು. ಈ ಅವಕಾಶಗಳನ್ನು ಬಹುಮಟ್ಟಿಗೆ, ಪ್ರಸುತ್ತ ೧೯೨೫ರ ಭಾರತೀಯ ಸರಕಾರ ಶಾಸನದ ೧೫೧ನೆಯ ಪ್ರಕರಣದಲ್ಲಿರುವ ಅವಕಾಶಗಳಿಂದ ತೆಗೆದುಕೊಂಡದ್ದಾಗಿದೆ. ಅವು ಸಾರ್ವಜನಿಕ ಹಣದ ರಕ್ಷಣೆಯನ್ನು ಕುರಿತಾಗಿವೆ ಮತ್ತು ೧೬೬ನೆಯ ಪ್ರಕರಣದಿಂದ ತೆಗೆದುಕೊಳ್ಳಲಾಗಿದೆ. ಅವು ಆಡಿಟರ್ ಜನರಲ್ಲರ ಕರ್ತವ್ಯಗಳನ್ನು ಕುರಿತು ಗವರ್ನರ್ ಜನರಲ್ಲರು ವಿಧಿಸಿದ ನಿಯಮಗಳನ್ನು ಹೇಳುತ್ತವೆ. ಆ ಶಾಸನದ ಯೋಚನೆಯಂತೆ ಗವರ್ನರ್ ಜನರಲ್ ಅವರು ನಿಯಮಾವಳಿಯನ್ನು ರಚಿಸಬೇಕಾಗಿತ್ತು. ಅದು ಅವರ ವೈಯಕ್ತಿಕ ವಿವೇಚನೆಯನ್ನು ಉಪಯೋಗಿಸಿ, ಅಂದರೆ, ಈ ನಿಯಮಗಳನ್ನು ರಚಿಸುವಾಗ ಅವರು ತಮ್ಮ ಸಚಿವ ಸಂಪುಟದ ಸಲಹೆಯನ್ನು ಪಡೆದುಕೊಳ್ಳಬೇಕಾಗಿರಲಿಲ್ಲ, ಆಡಿಟರ್ ಜನರಲ್ ಅವರ ಕರ್ತವ್ಯಗಳನ್ನು ವಿಧಿಸಲು.

ಗವರ್ನರ್ ಜನರಲ್ ರಚಿಸಿದ ನಿಯಮಗಳು ಅಷ್ಟುಮಟ್ಟಿಗೆ ಕಾರ್ಯಾಂಗದಿಂದ ಸ್ವತಂತ್ರವಾಗಿದ್ದುದರಲ್ಲಿ ಸಂದೇಹವಿಲ್ಲ. ಇಂದು ನಾವು ರಾಷ್ಟ್ರಪತಿಯವರಿಗೆ ಆ ರೀತಿಯಾಗಿ ಸ್ವತಂತ್ರ ನಿರ್ಣಯದ ಅಧಿಕಾರವನ್ನು ನೀಡುತ್ತಿಲ್ಲ. ಈ ನಿಯಮಗಳಲ್ಲಿ ರಾಷ್ಟ್ರಪತಿಯವರು ಯಾವುದಾದರು ಬದಲಾವಣೆಯನ್ನು ಮಾಡಬೇಕಾದ ಪಕ್ಷದಲ್ಲಿ ಅಂದು ಅಧಿಕಾರದಲ್ಲಿರುವ ಸಚಿವ ಸಂಪುಟದ ಸಲಹೆಯ ಪ್ರಕಾರವೇ ಮಾಡಬೇಕಾಗಿರುತ್ತದೆ. ಇದರಲ್ಲೂ ಸಂದೇಹವಿಲ್ಲ. ಇಲ್ಲಿ ಸ್ವಲ್ಪಮಟ್ಟಿನ ಅಸಂಗತತೆಯಿಂದ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಮಾನ್ಯ ಮಿತ್ರರಾದ ಶ್ರೀ ಸಿಧ್ವಾ ಅವರು ನೂತನ ಪಾರ್ಲಿಮೆಂಟ್ ರಚಿತವಾಗುವ ಸಮಯದಲ್ಲಿಯೂ ಸದಸ್ಯರಾಗಿ ಮುಂದುವರೆದಿದ್ದು ತಾವೇ ಜವಾಬ್ದಾರಿಯನ್ನು ಹೊತ್ತು ದೊರೆತ ಮೊದಲ ಅವಕಾಶದಲ್ಲಿ ಈ ಪರಿಸ್ಥಿತಿಯನ್ನು ಬದಲಾಯಿಸಬೇಕೆಂದು ಪಾರ್ಲಿಮೆಂಟ್‌ನ್ನು ಒತ್ತಾಯಿಸಿ, ನಿಯಮಗಳನ್ನು ಸಂಸತ್ತು ಅಂಗೀಕರಿಸುವ ಕಾನೂನುಗಳನ್ನಾಗಿ ಬದಲಾಯಿಸಿರುತ್ತಾರೆ ಎಂದು ಆಶಿಸುತ್ತೇನೆ.

(ಡಾ॥ ಅಂಬೇಡ್ಕರ್ ಅವರು ಮಂಡಿಸಿದ್ದ ಸೂಚನೆಯೂ ಪಂಡಿತ ಹೃದಯನಾಥ ಕುಂಜ್ರು ಅವರು ಈ ತಿದ್ದುಪಡಿಯೊಂದಿಗೆ ಅಂಗೀಕೃತವಾಯಿತು.) "೧೩೦ ನೆಯ ವಿಧಿಯ (೧) ನೆಯ ಉಪವಾಕ್ಯದಲ್ಲಿ 'ಬಹುದು' ಎಂಬ ಪದವಾದ ಮೇಲೆ 'ರಾಜ್ಯದ ಜನತೆಯ ಪರವಾಗಿ' ಎಂಬ ಪದಗಳನ್ನು ಸೇರಿಸತಕ್ಕದ್ದು".

(ತಿದ್ದುಪಡಿಯಾದ ೧೨೫ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೧೨೭

* **ಮಾನ್ಯ ಡಾ॥ ಬಿ.ಆರ್ ಅಂಬೇಡ್ಕರ್:** ಮಾನ್ಯರೆ. ಹೀಗೆ ಮಂಡಿಸುತ್ತೇನೆ :

"೧೨೭ನೆಯ ವಿಧಿಯಲ್ಲಿ 'ಪಾರ್ಲಿಮೆಂಟ್' ಎಂಬ ಪದದ ಬದಲಿಗೆ ಪಾರ್ಲಿಮೆಂಟಿನ 'ಪ್ರತಿಯೊಂದು ಸದನವೂ' ಎಂಬ ಪದಗಳನ್ನು ಅಳವಡಿಸತಕ್ಕದ್ದು'

ಇದೊಂದು ಔಪಚಾರಿಕ ತಿದ್ದುಪಡಿ.

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

## ವಿಧಿ ೧೩೦

* **ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ಈ ವಿಧಿಯು ಕೆಂದ್ರ ಸರಕಾರದ ಕಾರ್ಯಾಂಗಾಧಿಕಾರವನ್ನು ಕುರಿತಾದ ೪೨ನೆಯ ವಿಧಿಯ ನಕಲು, ಯಾವ ವ್ಯತ್ಯಾಸವನ್ನೂ ಮಾಡಿಲ್ಲ. ಪದಕ್ಕೆ ಪದ. ಇದು ಆ ವಿಧಿಯ ಯಥಾವತ್ ಪ್ರತಿರೂಪವಾಗಿದೆ. ತಿದ್ದುಪಡಿಗಳ ಪುಸ್ತಕವನ್ನು ನೋಡಿದಾಗ ೪೨ನೆಯ ವಿಧಿಯನ್ನು ಕುರಿತಂತೆಯೂ ೨ನೇ ತಿದ್ದುಪಡಿಗಳನ್ನು ತರಲಾಗಿತ್ತು, ಅವುಗಳನ್ನು ಕುರಿತು ವಿಸ್ತಾರವಾಗಿ ಚರ್ಚೆಗಳು ನಡೆದುವು ಎಂಬುದಾಗಿ, ನಮಗೆ ಕಂಡುಬಂದಿತು. ೪೨ನೇ ವಿಧಿಯನ್ನೂ ಅದರ ಮೇಲಿನ ತಿದ್ದುಪಡಿಗಳನ್ನು ಕುರಿತು ಚರ್ಚೆಯಲ್ಲಿ ನಾನು ಏನು ಹೇಳಿದೆನೊ ಅದಕ್ಕಿಂತ ಹೆಚ್ಚಿನದೇನನ್ನೂ ಉಪಯುಕ್ತವಾಗಿ ಈಗ ಸೇರಿಸಲಾರೆ.

ಅದ್ದರಿಂದ ಇಲ್ಲಿ ಮಂಡಿಸಲಾಗಿರುವ ಯಾವುದೇ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ನಾನು ಸಿದ್ಧವಾಗಿಲ್ಲ ಎಂದು ತಿಳಿಸಬಯಸುತ್ತೇನೆ.

(ಪ್ರೊ.ಕೆ.ಟಿ. ಶಹಾ, ಮಿ. ಮಹಮದ್ ತಾಹಿ ಮತ್ತು ಮಿ॥ ನಜೀರುದ್ದೀನ್ ಅಹಮದ್ ಅವರುಗಳು ಮಂಡಿಸಿದ್ದ ಮೂರು ತಿದ್ದುಪಡಿಗಳನ್ನೂ ಸದನವು ತಿರಸ್ಕರಿಸಿತು.)

## ವಿಧಿ-೧೩೧

** **ಮಾನ್ಯ ಅಧ್ಯಕ್ಷರು :** ಇದು ತಿದ್ದುಪಡಿಗಳನ್ನು ಪರಿಶೀಲನೆಗೆ ಎತ್ತಿಕೊಳ್ಳಬೇಕಾದ ಕ್ರಮವನ್ನು ಕುರಿತ ಪ್ರಶ್ನೆ ಮಾತ್ರ. ಚುನಾವಣೆಗೆ ಸಂಬಂಧಿಸಿದ ಪ್ರಶ್ನೆಯನ್ನು ಮೊದಲು ಮುಗಿಸಬೇಕೆಂಬುದು ನನ್ನ ಅಪೇಕ್ಷೆ.

---

* ಸಿ.ಎ.ಡಿ. ಸಂ. ೮.೩೦ನೇ ಮೇ ೧೯೪೯, ಪುಟ. ೪೧೫

* ಅದೆ, ಪುಟ. ೪೨೩

** ಸಿ.ಎ.ಡಿ. ಸಂ.೮,೩೦ನೇ ಮೇ ೧೯೪೯,ಪುಟ. ೪೨೫

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಬದಲಿಯ ಆಯ್ಕೆಯನ್ನು ಸೂಚಿಸಿದವರಿಗೇ ಬಿಡಬಹುದು. ಯಾವುದನ್ನು ಮೊದಲು ಮಂಡಿಸಬಯಸುವರೆಂಬುದನ್ನು ಡಾ॥ ಅಂಬೇಡ್ಕರರೇ ಹೇಳಲಿ. ಸಾಮಾನ್ಯವಾಗಿ ಒಂದು ನಿರ್ದಿಷ್ಟ ವಿಧಿಯನ್ನು ಮಂಡಿಸುವುದು ಪದ್ಧತಿ. ಕರಡು ರಚನಾಸಮಿತಿಯ ಅಧ್ಯಕ್ಷರೇ ಆಯ್ಕೆ ಮಾಡಲು ಸರಿಯಾದ ವ್ಯಕ್ತಿ. ತಾವು ಅದನ್ನು ಅವರಿಗೆ ಬಿಟ್ಟುಕೊಟ್ಟರೆ ಸಮಸ್ಯೆ ಪರಿಹಾರವಾಗುತ್ತದೆ. ಯಾವುದಾದರೂ ಒಂದನ್ನು ಅವರು ಮಂಡಿಸಬಹುದು. ಈ ವಿಧಾನವು ಮುಂದೆ ಸಾಮಾನ್ಯ ಕಾರ್ಯವಿಧಾನಕ್ಕೆ ಅಡ್ಡವಾಗಬಹುದು. ಆದ್ದರಿಂದ ವಿವೇಚನೆಯನ್ನು ಸೂಚಕರಿಗೆ ಬಿಡುವುದೇ ಅತ್ಯುತ್ತಮ, ತಾನು ಡಾ. ಅಂಬೇಡ್ಕರರನ್ನು ಸೂಚಕರೆಂದು ಪರಿಗಣಿಸುವುದಾದ ಪಕ್ಷದಲ್ಲಿ ಇವುಗಳಲ್ಲಿ ಒಂದಲ್ಲ ಒಂದು ಸೂಚನೆಯನ್ನು ಮಂಡಿಸುವಂತೆ ಅವರನ್ನು ಕೇಳಬಹುದು.

**ಮಾನ್ಯ ಅಧ್ಯಕ್ಷರು:** ಡಾ॥ ಅಂಬೇಡ್ಕರರು ಬದಲಿಗಳಲ್ಲಿ ಒಂದನ್ನು ಒಪ್ಪಿಕೊಳ್ಳಲು ಸಿದ್ಧರಾಗಿದ್ದಾರೆಯೆ?

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಅನುಸರಿಸಬೇಕಾದ ಕಾರ್ಯವಿಧಾನವನ್ನು ಕುರಿತು ಒಂದು ಮಾತು ಹೇಳಬಯಸುತ್ತೇನೆ. ೧೩೧ನೆಯ ವಿಧಿಯನ್ನು ಅದು ಇರುವಂತೆ ತೆಗೆದುಕೊಂಡರೆ, ಅದನ್ನು ಒಂದು ಬದಲಿ ರೂಪದಲ್ಲಿ ಇಡಲಾಗಿದೆ ಎಂಬುದು ನಿಸ್ಸಂದೇಹ. ಎರಡೂ ಬದಲಿಗಳಲ್ಲಿ ಒಂದು ಸಮಾನ ಅಂಶವಿದೆ. ಅದು ಗವರ್ನರ್‌ರನ್ನು ಚುನಾಯಿಸಬೇಕು ಎಂದು ಅವು ಹೇಳುತ್ತವೆ. ಚುನಾವಣೆಯ ಸ್ವರೂಪ ಈ ಕ್ಷಣಕ್ಕೆ ಒಂದು ಉಪ ಪ್ರಶ್ನೆ. ಇದಕ್ಕೆ ವ್ಯತಿರಿಕ್ತವಾಗಿ ಮೂರು ಅಥವಾ ನಾಲ್ಕು ತಿದ್ದುಪಡಿಗಳು ಇಲ್ಲಿವೆ. ಇವು ೧೩೧ನೆಯ ಬದಲಿ ಕರಡುಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದ್ದು, ಗವರ್ನರ್‌ರನ್ನು ನಾಮಕರಣ ಮಾಡಬೇಕು ಎಂದು ಸೂಚಿಸುತ್ತವೆ. ಹೀಗೆ ಗವರ್ನರ್‌ರನ್ನು ನಾಮಕರಣ ಮಾಡಬೇಕೆಂದು ಸೂಚಿಸುವ ತಿದ್ದುಪಡಿಯನ್ನು ಸದನವು ಒಪ್ಪಿಕೊಂಡ ಪಕ್ಷದಲ್ಲಿ ಮೇಲಿನ ಎರಡು ಬದಲಿಗಳೂ ಬಿದ್ದು ಹೋಗುತ್ತವೆ. ಸದನವು ಅವುಗಳನ್ನು ಪರಿಶೀಲಿಸಬೇಕಾದ ಅಗತ್ಯವೇ ಇರುವುದಿಲ್ಲ. ಆದ್ದರಿಂದ ನನ್ನ ಸಲಹೆಯೇನೆಂದರೆ, ಮೊದಲ ಮಿ. ಗುಪ್ತೆಯವರ, ಆಮೇಲೆ ಮಿ. ಕಾಮತ್ ಅವರ ೨೦೧೦ನೆಯ ತಿದ್ದುಪಡಿಯನ್ನು ಅನಂತರ ೨೦೧೫ನೆಯದನ್ನು ಎತ್ತಿಕೊಳ್ಳಬಹುದು ಎಂಬುದು. ಮೊದಲು ಈ ವಿಷಯವನ್ನು ತೆಗೆದುಕೊಂಡು ಸದನವು ಗವರ್ನರ್‌ರನ್ನು ರಾಷ್ಟ್ರಪತಿಯವರು ನೇಮಕ ಮಾಡಬೇಕು ಎಂದು ನಿರ್ಣಯಕ್ಕೆ ಬಂದ ಪಕ್ಷದಲ್ಲಿ, ಆಗ ೧೩೧ನೆಯ ವಿಧಿಯನ್ನು ಅದರ ಎರಡೂ ಬದಲಿಗಳಲ್ಲಿ ಚರ್ಚಿಸಿದ್ದರಿಂದ ಯಾವ ಉದ್ದೇಶವೂ ನೆರವೇರಿದಂತಾಗುವುದಿಲ್ಲ. ಇದು ನನ್ನ ಸಲಹೆ, ತಮ್ಮ ಆದೇಶಕ್ಕೆ ಒಳಪಟ್ಟಿದೆ.

**ಮಾನ್ಯ ಅಧ್ಯಕ್ಷರು:** ಚುನಾವಣೆ ಅಥವಾ ರಾಷ್ಟ್ರಪತಿಯವರಿಂದ ನೇಮಕ ಇವುಗಳನ್ನು ಬೆಂಬಲಿಸುವ ಹಲವು ತಿದ್ದುಪಡಿಗಳು ಬಂದಿವೆ. ಮಿಕ್ಕ ಕೆಲವು ತಿದ್ದುಪಡಿಗಳು ಚುನಾವಣೆಯ ವಿಧಾನವನ್ನು ಕುರಿತವು. ಮೊದಲು ನಾನು ಚುನಾವಣೆಯ ಪ್ರಶ್ನೆಯನ್ನು ಮುಗಿಸಲು ಬಯಸುತ್ತೇನೆ. ಆಗ ಚುನಾವಣೆಗೆ ಸಂಬಂಧಿಸಿದ ಎಲ್ಲಾ ತಿದ್ದುಪಡಿಗಳೂ ತಾನಾಗಿ ಬಿದ್ದು ಹೋಗುತ್ತವೆ. ಆಮೇಲೆ ನಾನು ನೇಮಕಾತಿಯ ಪ್ರಶ್ನೆಯನ್ನು ಎತ್ತಿಕೊಳ್ಳಬಹುದು. ಆಗ ನೇಮಕವು ರಾಷ್ಟ್ರಪತಿಯವರಿಂದಲೇ ಆಗಬೇಕಾಗುತ್ತದೆ.

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸು:ಸಾಮಾನ್ಯ): ನೇಮಕಾತಿಯೋ ಅಲ್ಲವೋ ಎಂಬ ಪ್ರಶ್ನೆಯನ್ನು ಮೊದಲು ಎತ್ತಿಕೊಂಡರೆ, ಚುನಾವಣೆಯ ಪ್ರಶ್ನೆಯು ತಾನಾಗಿಯೇ ನಿವಾರಣೆಯಾಗುತ್ತದೆ. ಈ ವಿಚಾರದಲ್ಲಿ ನಾನು ಡಾ. ಅಂಬೇಡ್ಕರರ ನಿಲುವನ್ನು ಒಪ್ಪುತ್ತೇನೆ.

***ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್:** (ಮುಂಬಯಿ:ಸಾಮಾನ್ಯ) ಮಾನ್ಯ ಅಧ್ಯಕ್ಷರೆ, ತಿದ್ದುಪಡಿಯನ್ನು

* ಸಿ.ಎ.ಡಿ. ಸಂ.೮,೩೦ನೇ ಮೇ ೧೯೪೯,ಪುಟ. ೪೨೫

ಕುರಿತು ಇಷ್ಟು ದೀರ್ಘವಾದ ಚರ್ಚೆನಡೆದ ನಂತರ, ಮತ್ತೆ ಉದ್ದನೆಯ ಭಾಷಣ ಮಾಡಿ ಸದನದ ಸಮಯವನ್ನು ವ್ಯರ್ಥಮಾಡಲು ನನಗೆ ಅಪೇಕ್ಷಯಿಲ್ಲ. ಎರಡು ವಿಚಾರಗಳನ್ನು ಸ್ಪಷ್ಟಪಡಿಸುವುದಕ್ಕಾಗಿ ಮಾತ್ರ ಎದ್ದು ನಿಂತಿದ್ದೇನೆ. ಮೊದಲನೆಯದು, ಈಗ ಕರಡು ರಚನಾ ಸಮಿತಿಯು ಸದನದ ಮುಂದೆ ಇರಿಸಿರುವ ಎರಡು ಬದಲಿ ವಿಧಾನಗಳು ಹಾಗೂ ೨೦೧೫ನೆಯ ಸಂಖ್ಯೆಯ ತಿದ್ದುಪಡಿ ಇವುಗಳ ನಡುವೆ ಪರಸ್ಪರ ಸಂಬಂಧವಿದೆ ಎಂಬುದನ್ನು ಸದನಕ್ಕೆ ತಿಳಿಸಿಕೊಡುವುದು ಮತ್ತು ಎರಡನೆಯದು, ಖಚಿತವಾಗಿ ವಿಷಯವೇನೆಂಬುದನ್ನು ಸದನದ ಮುಂದೆ ಸ್ಪಷ್ಟಪಡಿಸುವುದು. ಆಗ ಕರಡು ರಚನಾ ಸಮಿತಿಯು ಮಂಡಿಸಿರುವ ಎರಡು ಬದಲಿ ಮಾರ್ಗಗಳು ಮತ್ತು ಹೊಸ ತಿದ್ದುಪಡಿ ಇವುಗಳಲ್ಲಿ ಯಾವುದು ಸೂಕ್ತವೆಂದು ನಿರ್ಧರಿಸುವಾಗ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದುದು ಏನು ಎಂಬುದು ಖಚಿತವಾಗುತ್ತದೆ.

ಮಾನ್ಯರೆ, ಕರಡು ರಚನಾ ಸಮಿತಿಯು ಈಗ ಮಂಡಿಸಿರುವ ಮೊದಲನೆಯ ಬದಲಿಯು, ಈಗಾಗಲೆ ಪ್ರಾಂತೀಯ ಸಂವಿಧಾನದ ತತ್ವಗಳನ್ನು ಕುರಿತು ನಿರ್ಧರಿಸಲು ನೇಮಕಮಾಡಲಾಗಿದ್ದ ಒಂದು ಸಮಿತಿಯ ಶಿಫಾರಸುಗಳಿಗನುಗುಣವಾಗಿ ಈ ಸದನವು ಕೆಲ ಕಾಲದ ಹಿಂದೆ ಕೈಗೊಂಡ ನಿರ್ಧಾರದಂತೆಯೇ ಇದೆ. ವಾಸ್ತವವಾಗಿ ಈ ವಿಷಯದಲ್ಲಿ ಕರಡು ರಚನಾ ಸಮಿತಿಗೆ ಆಯ್ಕೆಯೇ ಇರಲಿಲ್ಲ. ಏಕೆಂದರೆ ಸಮಿತಿಗೆ ನೀಡಲಾಗಿದ್ದ ನಿರ್ದೇಶನಗಳ ಪ್ರಕಾರ, ಸದನವೇ ಅನುಮತಿಸಿದ್ಧ ತತ್ವಗಳನ್ನು ಅದು ಒಪ್ಪಿಕೊಳ್ಳಲೇ ಬೇಕಾಗಿತ್ತು. ಆದ್ದರಿಂದ ಪ್ರಶ್ನೆ ಏಳುತ್ತದೆ: ಕರಡು ರಚನಾ ಸಮಿತಿಯು ಒಂದು ಬದಲಿಯನ್ನು ಮಂಡಿಸುವುದು ಸೂಕ್ತವೆಂದು ಏಕೆ ಭಾವಿಸಿತು? ಅದಕ್ಕೆ ಕಾರಣ ಹೀಗಿದೆ. ಈ ಸದನದ ಎಲ್ಲರಂತೆಯೇ ಕರಡು ರಚನಾ ಸಮಿತಿಯೂ, ಗವರ್ನರರಿಗೆ ಯಾವುದೇ ಬಗೆಯ ಕರ್ತವ್ಯವಿರಬಾರದು– ಎಲ್ಲರಿಗೂ ಪರಿಚಿತವಾಗಿರುವ. ಪದಗುಚ್ಛವನ್ನು ಉಪಯೋಗಿಸುವುದಾದರೆ, "ತಮ್ಮ ವಿವೇಚನೆಯನ್ನು ಅಥವಾ ವೈಯಕ್ತಿಕ ನಿರ್ಧಾರವನ್ನು ಬಿಡಿಸಿ ಮಾಡಬೇಕಾದ ಯಾವ ಕರ್ತವ್ಯವನ್ನು ನಿರ್ವಹಿಸಬೇಕಾಗಿಲ್ಲ". ನೂತನ ಸಂವಿಧಾನದ ತತ್ವಗಳ ಪ್ರಕಾರ ಅವರು ಎಲ್ಲಾ ವಿಚಾರಗಳಲ್ಲೂ ತಮ್ಮ ಸಚಿವ ಸಂಪುಟದ ಸಲಹೆಯಂತೆಯೆ ನಡೆಯಬೇಕು. ಈ ಅಂಶವನ್ನು ಪುರಸ್ಕರಿಸಿ, ತುಂಬಾ ಸಮಯ, ಶ್ರಮ ಮತ್ತು ಹಣ ವೆಚ್ಚವಾಗುವ ಒಂದು ಪ್ರಕ್ರಿಯೆಯನ್ನು ಮತದಾರ ವರ್ಗದ ಮೇಲೆ ಹೇರುವುದು ಅಪೇಕ್ಷಣೀಯವೆ ಎಂಬುದನ್ನು ಸಮಿತಿಯು ಆಲೋಚಿಸಿತು. ಸಂವಿಧಾನದ ಪ್ರಕಾರ ತನಗಿರಬಹುದಾದ ಅಧಿಕಾರಗಳೇನೆಂದು ಚೆನ್ನಾಗಿ ತಿಳಿದುಕೊಂಡವರೂ ಅಂಥದೊಂದು ಚುನಾವಣೆಯಲ್ಲಿ ಅಭ್ಯರ್ಥಿಯಾಗಲು ಮುಂದೆ ಬರಲಾರರು ಎಂದೂ ಆಲೋಚಿಸಲಾಯಿತು. ಗವರ್ನರರ ಅಧಿಕಾರಗಳು ಎಷ್ಟು ಸೀಮಿತವಾಗಿವೆ ಎಷ್ಟುಮಟ್ಟಿಗೆ ನಾಮ ಮಾತ್ರವಾಗಿವೆ ಅವರ ಸ್ಥಾನ ಎಷ್ಟು ಅಲಂಕಾರಿಕವಾದದ್ದು ಎಂದು ತಿಳಿದ ಯಾರೂ ಚುನಾವಣೆಯಲ್ಲಿ ನಿಲ್ಲುವುದಿಲ್ಲ ಎಂದೂ ನಾವು ಅಲೋಚಿಸಿದೆವು. ಆದ್ದರಿಂದ ಅದಕ್ಕೆ ಬೇರೊಂದು ಬದಲಿಯನ್ನು ಸೂಚಿಸುವುದು ಮೇಲು ಎಂದು ಕರಡು ರಚನಾ ಸಮಿತಿಯು ನಿರ್ಧರಿಸಿತು.

ಚುನಾವಣೆಯು ವಿರುದ್ಧವಾದ ವಾದವು ಹೀಗಿರುವುದಾಗಿ ಚರ್ಚೆಯ ನಡುವೆ ವ್ಯಕ್ತವಾಯಿತು: ಆದರಿಂದ ಪ್ರಧಾನ ಮಂತ್ರಿಯವರಿಗೂ ಗವರ್ನರರಿಗೂ ನಡುವೆ ವೈರತ್ವ ಮೂಡಬಹುದು. ಇಬ್ಬರಿಗೂ ಜನತೆಯಿಂದಲೇ ಆದೇಶವು ದೊರಕಿರುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ ಪ್ರಭಾವ ಬೀರಿದುದು ಆ ವಾದವಲ್ಲ. ಏಕೆಂದರೆ ಚುನಾವಣೆಯಿರುವಾಗಲೂ ಪ್ರಧಾನ ಮಂತ್ರಿಗೂ ಗವರ್ನರರಿಗೂ ನಡುವೆ ಯಾವುದೇ ಬಗೆಯ ವೈರವಿರುತ್ತದೆಂದು ನನಗೆನ್ನಿಸಲಿಲ್ಲ. ಏಕಂದರೆ ಪ್ರಧಾನಮಂತ್ರಿಯನ್ನು ಒಂದು ನೀತಿಯ ಆಧಾರದ ಮೇಲೆ ಚುನಾಯಿಸಲಾಗಿರುತ್ತದೆ. ಗವರ್ನರ್‌ನನ್ನ ಆ ರೀತಿ ಒಂದು ನೀತಿಯ ಆಧಾರದಿಂದ ಚುನಾಯಿಸುವುದಿಲ್ಲ.

ಏಕೆಂದರೆ ಅತನಿಗೆ ಯಾವುದೇ ಒಂದು ನೀತಿಯ ಆಧಾರವಿರುವುದಿಲ್ಲ, ಅಧಿಕಾರವೂ ಇರುವುದಿಲ್ಲ. ನಾನು ತಿಳಿದುಕೊಂಡಿರುವ ಮಟ್ಟಿಗೆ ಗವರ್ನರ್‌ನ ಆಯ್ಕೆಯು ವ್ಯಕ್ತಿತ್ವದ ಆಧಾರದ ಮೇಲಿರುತ್ತದೆ. ತನ್ನ ಸ್ಥಾನಮಾನ, ವ್ಯಕ್ತಿತ್ವ, ಚಾರಿತ್ರ್ಯ, ಶಿಕ್ಷಣ, ಗವರ್ನರ್ ಸ್ಥಾನವನ್ನು ತುಂಬಲು ತಕ್ಕ ಸಾರ್ವಜನಿಕ ಸ್ಥಾನ ಆತನಿಗಿದೆಯೆ ಎಂಬುದು ಮುಖ್ಯವಾಗುತ್ತವೆ. ಪ್ರಧಾನಮಂತ್ರಿಯ ವಿಚಾರ ಬೇರೆ. ಆತನ ಕಾರ್ಯಕ್ರಮ ಸೂಕ್ತವಾದದ್ದೇ? ಆತನ ಕಾರ್ಯಕ್ರಮ ನ್ಯಾಯಯುತವಾಗಿದೆಯೆ? ಎನ್ನುವುದು. ಆದ್ದರಿಂದ ಚುನಾವಣೆಯ ತತ್ವವನ್ನು ನಾವು ಅಂಗೀಕರಿಸಿದರೂ ಅವರ ನಡುವೆ ಯಾವುದೇ ಸಂಘರ್ಷ ಇರುವುದು ಸಾಧ್ಯವಿಲ್ಲ.

ಇನ್ನೊಂದು ವಾದ ಹೀಗಿದೆ : ಶುದ್ಧಾಂಗವಾಗಿ ಆಲಂಕಾರಿಕವಾಗಿರುವ ಗವರ್ನರರೊಬ್ಬರನ್ನು ಇಟ್ಟುಕೊಳ್ಳಬೇಕೆಂದಾದರೆ, ಅಷ್ಟೊಂದು ಸಮಯ, ಹಣ, ಶ್ರಮಗಳನ್ನು ವೆಚ್ಚಮಾಡಿ ಚುನಾಯಿಸಬೇಕೆ? ಈ ಭಾವನೆಯಿಂದ ಕರಡು ರಚನಾಸಮಿತಿಯು ಎರಡನೆಯ ಬದಲಿ ಕ್ರಮವನ್ನು ಸೂಚಿಸುವುದು ಸೂಕ್ತವೆಂದು ನಿರ್ಧರಿಸಿತು. ಈ ಸಾಧನದಲ್ಲಿ ಈ ವಿಷಯದ ಮೇಲೆ ನಡೆದಿರುವ ಚರ್ಚೆಯಲ್ಲಿ ನನಗನ್ನಿಸಿರುವುದು, ಅನೇಕ ಭಾಷಣಕಾರರಿಗೆ ಈ ನಿರ್ದಿಷ್ಟ ತಿದ್ದುಪಡಿಗೂ ನಡುವೆ ಮೂಲಭೂತವೂ ವೈಚಾರಿಕವೂ ಆದ ವ್ಯತ್ಯಾಸವಿದೆ ಎಂದು, ಎರಡನೆಯ ಬದಲಿಗೂ ತಿದ್ದುಪಡಿಗೂ ನಡುವೆ ಮೂಲಭೂತ ವ್ಯತ್ಯಾಸವೇನೂ ಇಲ್ಲ ಎಂದು ನನ್ನ ಅಭಿಪ್ರಾಯ. ಸಮಿತಿಯು ಸೂಚಿಸಿರುವ ಎರಡನೇ ಬದಲಿ ಮಾರ್ಗವೂ ನಾಮಕರಣದ ಸಲಹೆಯಾಗಿದೆ. ಅದರಲ್ಲಿ ಕೆಲವು ಅರ್ಹತೆಗಳನ್ನು ಸೂಚಿಸಿದೆ ಅಷ್ಟೆ, ಪ್ರಾಂತೀಯ ಶಾಸನಸಭೆಯು ಆರಿಸಿದ ಪಟ್ಟಿಯಿಂದ ರಾಷ್ಟ್ರಪತಿಯವರು ಒಬ್ಬರನ್ನು ನಾಮಕರಣ ಮಾಡಬೇಕು. ಆದರೆ ಮೂಲತಃ ಅದು ನಾಮಕರಣದ ಸಲಹೆಯೇ. ಆ ಅರ್ಥದಲ್ಲಿ ಕರಡು ರಚನಾ ಸಮಿತಿಯು ಸಲಹೆ ಮಾಡಿರುವ ಎರಡನೆಯ ಬದಲಿ ಮಾರ್ಗಕ್ಕೂ ಶ್ರೀಬ್ರಜೇಶ್ವರ ಪ್ರಸಾದ್ ಅವರು ಮಂಡಿಸಿರುವ ತಿದ್ದುಪಡಿಗೂ ನಡುವೆ ಮಹತ್ವಪೂರ್ಣವಾದ ಮತ್ತು ಮೂಲಭೂತವಾದ ವ್ಯತ್ಯಾಸವೇನೂ ಇಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸದನದ ಮುಂದಿರುವುದು, ನಾನು ಹಾಗೆ ಹೇಳಬೇಕೆಂದರೆ, ಎರಡನೆಯ ಬದಲಿ ಮಾರ್ಗ ಮತ್ತು ತಿದ್ದುಪಡಿ ಇವುಗಳ ನಡುವೆ ಆಯ್ಕೆ. ನಾಮಕರಣವು ನಿರುಪಾಧಿಕವಾಗಿರಬೇಕು ಎಂದು ತಿದ್ದುಪಡಿಯು ಹೇಳುತ್ತದೆ. ಕ.ರ.ಸಮಿತಿಯು ನಾಮಕರಣವು ಕೆಲವು ಷರತ್ತುಗಳಿಗೆ ಒಳಪಟ್ಟು ಸೋಪಾಧಿಕ ನಾಮಕರಣವಾಗಿರಬೇಕು ಎಂದು ಹೇಳುತ್ತದೆ. ಒಂದು ದೃಷ್ಟಿಯಿಂದ ಕ.ರ.ಸಮಿತಿಯು ಸಲಹೆ ಮಾಡಿರುವ ಸೋಪಾಧಿಕ ನಾಮಕರಣ ವಿಧಾನವು ಸರಳ ನಾಮಕರಣಕ್ಕಿಂತ ಉತ್ತಮವಾದುದು ಎಂದು ನಾನು ಹೇಳದೆ ಇರಲಾರೆ. ಅದೇ ಸಮಯಕ್ಕೆ ಸದನವನ್ನು ಇನ್ನು ಒಂದು ವಿಚಾರದಲ್ಲಿ ಎಚ್ಚರಿಸಬೇಕಾಗಿದೆ. ಇಲ್ಲಿ ನಿಜವಾದ ಪ್ರಶ್ನೆಯಿರುವುದು ನಾಮಕರಣವೂ ಅಲ್ಲ. ಚುನಾವಣೆಯೂ ಅಲ್ಲ. ಏಕೆಂದರೆ, ನಾನು ಆಗಲೇ ಹೇಳಿದಂತೆ ಗವರ್ನರ್‌ರು ಶುದ್ಧಾಂಗವಾಗಿ ಅಲಂಕಾರಿಕ ಕಾರ್ಯನಿರ್ವಾಹಕನಾಗಿರುತ್ತಾನೆ. ಹೇಗೆ ಅವನು ಅಸ್ತಿತ್ವಕ್ಕೆ ಬರುತ್ತಾನೆ, ನಾಮಕರಣದಿಂದಲೇ ಬೇರೆ ಯಾವುದೇ ಕಾರ್ಯವಿಧಾನದಿಂದಲೇ ಎನ್ನುವುದು ಕೇವಲ ಮನೋವೈಜ್ಞಾನಿಕವಾದ ಪ್ರಶ್ನೆ. ಯಾವುದು ಜನರಿಗೆ ಅತ್ಯಂತ ಹೆಚ್ಚು ಪ್ರಿಯವಾಗುವುದೊ ಅದು, ನಾಮಕರಣಗೊಂಡ ವ್ಯಕ್ತಿ ಅಥವಾ ಯಾರ ನಾಮಕರಣದಲ್ಲಿ ಶಾಸನ ಸಭೆಯು ಯಾವುದಾದರೂ ರೀತಿಯಲ್ಲಿ ಭಾಗವಹಿಸಬೇಕಾಗಿ ಬಂದಿತೋ ಆ ವ್ಯಕ್ತಿ ಅಷ್ಟು ಬಿಟ್ಟರೆ ಅದರಿಂದ ಬೇರೆ ಯಾವ ಪರಿಣಾಮವೂ ಇರುವಂತೆ ನನಗೆ ತೋರುವುದಿಲ್ಲ. ಆದ್ದರಿಂದ ನಾನು ಈ ಸಭೆ ತಿಳಿಸಬೇಕಾಗಿರುವುದು ಇದು. ಸದನದ ಮುಂದೆ ಇತ್ಯರ್ಥಕ್ಕಾಗಿ ವಿಚಾರ ನಾಮಕರಣವಾಗಲಿ ಚುನಾವಣೆಯಾಗಲಿ ಅಲ್ಲ. ನೀವು ನಿಮ್ಮ ಗವರ್ನರರಿಗೆ ಯಾವ ಅಧಿಕಾರವನ್ನು ಕೊಡಲು ಬಯಸುವಿರಿ ಎನ್ನುವುದು. ಗವರ್ನರನು ಶುದ್ಧವಾಗಿ ಸಂವಿಧಾನಿಕ

ಗವರ್ನರನಾಗಿ ಶಾಸನದ ಪ್ರಕಾರ ನಾವು ಕೊಡಬೇಕೆಂದು ಆಲೋಚಿಸುವ ಅಧಿಕಾರಗಳಿಗಿಂತ ಹೆಚ್ಚಿನದಲ್ಲದೆ ಒಂದು ಪ್ರಾಂತೀಯ ಆಂತರಿಕ ಆಡಳಿತದಲ್ಲಿ ಮಧ್ಯ ಪ್ರದೇಶ ಮಾಡುವ ಅಧಿಕಾರವಿಲ್ಲದೆ ಇರುವುದಾದರೆ, ನಾಮಕರಣ ತತ್ವವನ್ನು ಕುರಿತು ನನಗೆ ವೈಯಕ್ತಿಕವಾಗಿ ಮೂಲಭೂತ ಆಕ್ಷೇಪಣೆಯೂ ಕಾಣಿಸುವುದಿಲ್ಲ. ಆದ್ದರಿಂದ ನಾನು ವಿನಂತಿಸುವುದು.....

**ಶ್ರೀ ರೋಹಿಣಿ ಕುಮಾರ ಚೌಧರಿ :** ಒಬ್ಬ ಗವರ್ನರನು ಕೇವಲ ಸಾಂಕೇತಿಕ ವ್ಯಕ್ತಿಯೆಂದೋ ಅಲ್ಲವೆಂದೋ ಏನಾದರೂ ಕರೆಯಿರಿ. ಮೊದಲನೆಯ ಸಚಿವ ಸಂಪುಟವನ್ನು ರಚಿಸುವ ಅಧಿಕಾರವನ್ನು ಹೊಂದಿರದ ಒಂದು ಪರಿಸ್ಥಿತಿಯನ್ನು ಅವರು ಕಲ್ಪಿಸಿಕೊಡಬಲ್ಲರೆ ! ಯಾರನ್ನೇ ಆಗಲಿ; ಭಾರೀ ಬಹುಮತವಿರುವವನೋ ಗಣನೀಯ ಅಲ್ಪಮತವಿರುವವನೋ, ಯಾವನನ್ನೇ ಆಗಲಿ ಮಂತ್ರಿಸ್ಥಾನಕ್ಕೆ ಆಹ್ವಾನಿಸುವ ಅಧಿಕಾರ ಅವನಿಗಿರುವುದಿಲ್ಲವೆ? ಅದು ನಿಜವಾಗಿ ತುಂಬ ಮುಖ್ಯವಾದ ಅಧಿಕಾರ, ಎಂಥದೇ ಸನ್ನಿವೇಶದಲ್ಲೂ ಅದನ್ನು ಗವರ್ನರ್‌ರವರಿಗೆ ವಂಚಿಸಕೂಡದು.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಅಧಿಕಾರವು ಚುನಾಯಿತ ಅಥವಾ ನಾಮಕೃತ ಗವರ್ನರ್‌ರಿಗೆ ಇದ್ದೇ ಇರುತ್ತದೆ. ಸಂಪುಟ ರಚಿಸುವಂತೆ ತಪ್ಪು ವ್ಯಕ್ತಿಗೆ ಕರೆಕೊಟ್ಟ ಪಕ್ಷದಲ್ಲಿ, ತಾನು ತಪ್ಪಾದ ಆಯ್ಕೆ ಮಾಡಿರುವುದು ಅವನಿಗೆ ಬೇಗನೆಯೇ ತಿಳಿಯುತ್ತದೆ. ಚುನಾಯಿತ ಗವರ್ನರ್‌ನಾದ ಮಾತ್ರಕ್ಕೆ ಅದು ತಪ್ಪಿಸುವಂತಹ ವಿಷಯವಲ್ಲ. ಅಂತಹ ಗವರ್ನರನಿಗೆ ತನ್ನ ಆಯ್ಕೆಯು ಒಬ್ಬ ಮಿತ್ರನಿರಬಹುದು, ಆತನನ್ನು ಸಚಿವ ಸಂಪುಟ ರಚಿಸುವಂತೆ ಆಹ್ವಾನಿಸಬಹುದು. ಅದನ್ನು ಸದನವೇ ಅವಿಶ್ವಾಸ ಗೊತ್ತುವಳಿ ಅಥವಾ ವಿಶ್ವಾಸ ಗೊತ್ತುವಳಿಯ ಮೂಲಕ ಪರಿಹರಿಸಿಕೊಡಬಹುದು. ಈಗ ಮುಖ್ಯವಾಗಿರುವುದು ಅದಲ್ಲ. ಮುಖ್ಯವಾದ ಪ್ರಶ್ನೆ ಇದು : ಸ್ಥಳೀಯ ಶಾಸನ ಸಭೆಯಲ್ಲಿ ಬಹುಮತವಿರುವ ಒಂದು ಸಚಿವ ಸಂಪುಟದ ಕಾರ್ಯಭಾರದ ನಡುವೆ ಮಧ್ಯೆ ಪ್ರವೇಶ ಮಾಡುವ ಅಧಿಕಾರ ಗವರ್ನರನಿಗಿದೆಯೇ? ಬಹುಮತವಿರುವ ಸಚಿವ ಸಂಪುಟದ ಒಳಾಡಳಿತದಲ್ಲಿ ಮಧ್ಯಪ್ರವೇಶ ಮಾಡುವ ಅಧಿಕಾರ ಆ ಗವರ್ನರನಿಗಿಲ್ಲವಾದರೆ, ಅವನು ನಾಮಕೃತನೋ ಚುನಾಯಿತನೋ ಎನ್ನುವ ಪ್ರಶ್ನೆ ಸಂಪೂರ್ಣವಾಗಿ ಅಪ್ರಕೃತ ಎಂದು ನನಗೆ ತೋರುತ್ತದೆ. ಈ ವಿಚಾರದಲ್ಲಿ ನನ್ನ ದೃಷ್ಟಿ ಹೀಗಿದೆ. ಸದನವು ನಿರ್ಧಾರ ಕೈಗೊಳ್ಳುವಾಗ ಹೆಚ್ಚು ಕಡಿಮೆ ಶೈಕ್ಷಣಿಕವಾದ ಗವರ್ನರನು ನಾಮಾಕೃತನಾಗಬೇಕೆ ಚುನಾಯಿತನಾಗಬೇಕೆ ಎಂಬ ಪ್ರಶ್ನೆಯಿಂದ ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಆದರೂ ಗಮನದಲ್ಲಿಡಬೇಕಾದದ್ದು ಈ ಪ್ರಶ್ನೆ : ಗವರ್ನರನಿಗೆ ಕೊಡಬೇಕಾದ ಅಧಿಕಾರಗಳು ಯಾವುವು? ಈ ವಿಚಾರ ಇಂದು ನಮ್ಮ ಮುಂದೆ ಬಂದಿಲ್ಲ ಎಂದು ತಿಳಿಸಬಯಸುತ್ತೇನೆ. ಮುಂದೆ, ೧೭೫ ಮತ್ತು ೧೮೮ ನೆಯ ವಿಧಿಗಳ ಪ್ರಶ್ನೆ ಬಂದಾಗ ಅದನ್ನು ನೋಡೋಣ, ಆಗ ತಿದ್ದುಪಡಿಯಿಂದಲೋ. ಅಥವಾ ಹೆಚ್ಚಿನ ಉಪವಾಕ್ಯಗಳ ಸೇರ್ಪಡೆಯಿಂದಲೋ ಅಥವಾ ಹೆಚ್ಚಿನ ಉಪವಾಕ್ಯಗಳ ಸೇರ್ಪಡೆಯಿಂದಲೋ ಆ ಕೆಲಸ ಮಾಡಿಕೊಳ್ಳಬಹುದು. ಮುಂದೆ ತಮ್ಮೆದುರಿಗೆ ಮಂಡಿಸಲಿರುವ ಈ ಹೊಸ ಪ್ರಕರಣಗಳನ್ನು ಸದಸ್ಯರು ಜಾಗರೂಕತೆಯಿಂದ ಗಮನಿಸುತ್ತಿರಬೇಕು. ಆದರೆ ಇಂದು, ನಮ್ಮ ಸಂವಿಧಾನವು ಹೇಗಿರಬೇಕೆಂದು ನಾವು ಉದ್ದೇಶಿಸಿದ್ದೇವೆಯೋ ಹಾಗೆ ತತ್ವತಃ ಉಳಿದ ಪಕ್ಷದಲ್ಲಿ ಗವರ್ನರ್‌ನು ಶುದ್ಧಾಂಗವಾಗಿ ಸಾಂವಿಧಾನಿಕ ಗವರ್ನರನಾಗಿದ್ದು ಪ್ರಾಂತದ ಆಡಳಿತದಲ್ಲಿ ಮಧ್ಯ ಪ್ರವೇಶ ಮಾಡುವ ಅಧಿಕಾರ ಹೊಂದಿರದಿದ್ದರೆ, ಅವನು ನಾಮಕೃತನೋ ಚುನಾಯಿತನೋ ಎಂಬುದು ಅಪ್ರಕೃತ ಎಂದು ನನಗೆ ತೋರುತ್ತದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಮಾನ್ಯ ಸದಸ್ಯರು ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತಿದ್ದಾರೆಯೇ?

**ಡಾ॥ ಬಿ.ಆರ್. ಅಂಬೇಡ್ಕರ್ :** ಅದನ್ನು ಸದನಕ್ಕೆ ಬಿಡುತ್ತೇನೆ.

**ಅಧ್ಯಕ್ಷರು :** ಹಾಗಾದರೆ ಶ್ರೀ ಬ್ರಜೇಶ್ವರ ಪ್ರಸಾದ್ ಅವರು ಮಂಡಿಸಿದ ೨೦೧೫ನೇ ಸಂಖ್ಯೆ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತಿದ್ದೇನೆ. ಪ್ರಶ್ನೆ ಹೀಗಿದೆ.

"೧೩೧ ನೆಯ ವಿಧಿಯ ಬದಲು ಈ ಕೆಳಗಿನದನ್ನು ಅಳವಡಿಸಬಹುದು"

"೧೩೧ ರಾಷ್ಟ್ರಪತಿಯವರು ಒಂದು ರಾಜ್ಯದ ಗವರ್ನರನನ್ನು ತಮ್ಮ ಸಹಿ ಮತ್ತು ಮೊಹರಿನಿಂದ ಕೂಡಿದ ಆದೇಶದಿಂದ ನೇಮಿಸತಕ್ಕದ್ದು" ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಅಧ್ಯಕ್ಷರು :** ಇದಾದ ಮೇಲೆ ಈ ವಿಧಿಯ ಮೇಲೆ ಬಂದಿರುವ ಇತರ ಎಲ್ಲಾ ತಿದ್ದುಪಡಿಗಳೂ ಬಿದ್ದುಹೋಗುತ್ತವೆ. ಆದ್ದರಿಂದ ತಿದ್ದುಪಡಿಗೊಂಡ ವಿಧಿಯನ್ನು ಮತಕ್ಕೆ ಹಾಕುತ್ತಿದ್ದೇನೆ.

೧೩೧ನೆಯ ವಿಧಿಯನ್ನು ತಿದ್ದುಪಡಿಗೊಂಡಂತೆ, ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ ೧೩೨

* **ಮಾನ್ಯ ಅಧ್ಯಕ್ಷರು :** ಡಾ. ಅಂಬೇಡ್ಕರ್ ಅವರು ತಿದ್ದುಪಡಿಯನ್ನು ಈಗ ಮಂಡಿಸುತ್ತಾರೆ,

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ

"ತಿದ್ದುಪಡಿಗಳ ಪಟ್ಟಿಯ ೨೦೩೩ ಮತ್ತು ೨೦೪೧ನೆಯ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ೧೩೨ನೆಯ ವಿಧಿಗೆ ಬದಲಿಯಾಗಿ ಈ ಕೆಳಗಿನ ವಿಧಿಯನ್ನು ಅಳವಡಿಸಬೇಕು.

೧೩೨ : ಗವರ್ನರ್‌ರನ ಅಧಿಕಾರಾವಧಿ

೧. ಗವರ್ನರನು ರಾಷ್ಟ್ರಪತಿಯವರ ಇಚ್ಛೆಯಿರುವ ಅವಧಿಗೆ ಅಧಿಕಾರದಲ್ಲಿರುತ್ತಾನೆ.

೨. ಗವರ್ನರನು ಬರೆಹದ ಮೂಲಕ ರಾಷ್ಟ್ರಪತಿಯವರಿಗೆ ತಿಳಿಸಿ ತನ್ನ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬಹುದು.

೩. ಈ ವಿಧಿಯ ಮೇಲೆ ಹೇಳಿದ ಅವಕಾಶಗಳಿಗೆ ಒಳಪಟ್ಟು ಒಬ್ಬ ಗವರ್ನರನ್ನು, ಅಧಿಕಾರ ಸ್ವೀಕರಿಸಿದ ದಿನದಿಂದ ಏಳು ವರ್ಷಗಳ ಅವಧಿಗೆ ಅಧಿಕಾರದಲ್ಲಿರುತ್ತಾನೆ"

ಈಗ ಮಾನ್ಯರೆ,. ಈ ವಿಧಿಯು..*

**ಪ್ರೊ ಶಿಬ್ಬನ್‌ಲಾಲ್ ಸಕ್ಸೇನಾ :** ಇಲ್ಲೊಂದು ಕ್ರಮ ವಿಚಾರವಿದೆ. ಇನ್ನೂ ೨೦೩೩ನೆಯ ತಿದ್ದುಪಡಿಯನ್ನು ಮಂಡಿಸಿಲ್ಲ. ೨೦೪೧ನೆಯ ಇನ್ನೊಂದು ತಿದ್ದುಪಡಿಯಿದೆ. ಅದಕ್ಕೆ ಇದು ಒಂದು ತಿದ್ದುಪಡಿ, ಆದರೆ ಅದನ್ನು ಇನ್ನೂ ಮಂಡಿಸಿಲ್ಲ.

**ಅಧ್ಯಕ್ಷರು :** ಅದನ್ನು ಇನ್ನೂ ಮಂಡಿಸಿಲ್ಲ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ೨೦೪೧ನೆಯ ತಿದ್ದುಪಡಿಯು ಡಾ. ಅಂಬೇಡ್ಕರ್ ಅವರ ಹೆಸರಿನಲ್ಲಿದೆ.

**ಅಧ್ಯಕ್ಷರು :** ಒಳ್ಳೆಯದು, ಅವರು ಅದನ್ನು ಔಪಚಾರಿಕವಾಗಿ ಮಂಡಿಸಬಹುದು,

---

* ಸಿ.ಎ.ಡಿ. ಸಂಪುಟ ೮, ೩೧ನೇ ಮೇ, ೧೯೪೯, ಪುಟ ೪೭೦
* ಚುಕ್ಕೆಗಳು ತಡೆಯನ್ನು ಸೂಚಿಸುತ್ತವೆ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಇದನ್ನು ಆ ತಿದ್ದುಪಡಿಯ ಸ್ಥಾನದಲ್ಲಿ ಮಂಡಿಸುತ್ತೇನೆ ಎಂದು ನಾನಾಗಲೇ ಹೇಳಿದ್ದೇನೆ.

**ಅಧ್ಯಕ್ಷರು :** ಡಾ. ಅಂಬೇಡ್ಕರ್ ಅವರು ೨೦೪೧ನೆಯ ತಿದ್ದುಪಡಿಯನ್ನು ಮಂಡಿಸುತ್ತಿದ್ದಾರೆ.

* * * * *

** **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಪರಿಸ್ಥಿತಿ ಹೀಗಿದೆ .. ವಜಾ ಮಾಡುವ ಈ ಅಧಿಕಾರವನ್ನು ಸ್ಥೂಲವಾಗಿ ರಾಷ್ಟ್ರಪತಿಯವರಿಗೆ ನೀಡಲಾಗಿದೆ.

ಪ್ರೊಫೆಸರ್ ಶಹಾ ಹೇಳುತ್ತಿರುವುದು, ಗವರ್ನರನನ್ನು ವಜಾಮಾಡಲು ಕೆಲವು ನಿರ್ದಿಷ್ಟ ಅಧಾರಗಳನ್ನು ಸಂವಿಧಾನದಲ್ಲಿಯೇ ಹೇಳಬೇಕು ಎಂಬುದಾಗಿ. ಸಾಮಾನ್ಯ ಅಧಿಕಾರವನ್ನು ಕೊಟ್ಟಿರುವಾಗಲೇ ಒಬ್ಬ ಗವರ್ನರ್‌ನನ್ನು ಭ್ರಷ್ಟಾಚಾರ, ಲಂಚಗುಳಿತನ, ಸಂವಿಧಾನದ ಉಲ್ಲಂಘನೆ, ಅಥವಾ ಪದವಿಯಿಂದ ವಜಾ ಮಾಡಲು ಸೂಕ್ತವಾದುದೆಂದು ರಾಷ್ಟ್ರಪತಿಯವರು ಭಾವಿಸುವ ಬೇರೆ ಯಾವುದೇ ಕಾರಣ ಇವುಗಳಿಂದ ವಜಾ ಮಾಡುವ ಅಧಿಕಾರವನ್ನು ರಾಷ್ಟ್ರಪತಿಯವರಿಗೆ ನೀಡಿರುತ್ತೀರಿ. ಆದ್ದರಿಂದ ಗವರ್ನರನು ರಾಷ್ಟ್ರಪತಿಯವರ ಇಚ್ಛೆಯ ಅವಧಿಗೆ ಅಧಿಕಾರದಲ್ಲಿರುತ್ತಾನೆ ಎಂಬ ಒಂದು ಸೂತ್ರದಲ್ಲಿಯೇ ಎಲ್ಲವೂ ಅಡಕವಾಗಿರುವಾಗ, ರಾಷ್ಟ್ರಪತಿಯವರು ಕಾರ್ಯೋನ್ಮುಖರಾಗಲು ಅವಕಾಶವಾಗಿರುವಾಗ, ಈ ಎಲ್ಲಾ ಮಿತಿಗಳನ್ನು ಸ್ಪಷ್ಟವಾದ ಪದಗಳಲ್ಲಿ ಮತ್ತೆ ಹೇಳಿ ಸಂವಿಧಾನದ ಮೇಲೆ ಹೊರೆಯನ್ನು ಹೇರುವುದು ಅನಗತ್ಯವಾಗಿದೆ ಎಂದು ತೋರುತ್ತದೆ. ಅದ್ದರಿಂದ ಯಾವ ಸಂದರ್ಭಗಳಲ್ಲಿ ರಾಷ್ಟ್ರಪತಿಯವರು ಗವರ್ನರನನ್ನು ಪದವಿಯಿಂದ ವಜಾಮಾಡಬಹುದು ಎಂದು ವರ್ಗೀಕರಿಸಿ ಹೇಳುವುದು ಅಗತ್ಯವಿಲ್ಲ ಎಂದು ನನ್ನ ಭಾವನೆ.

(ಮೇಲೆ ಹೇಳಿದಂತೆ ಡಾ. ಅಂಬೇಡ್ಕರ್ ಅವರು ಮಂಡಿಸಿದ ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ತಿದ್ದುಪಡಿಗೊಂಡ ೧೩೨ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು)

## ವಿಧಿ ೧೩೪

* **ಮಾನ್ಯ ಅಧ್ಯಕ್ಷರು :** ಮೊದಲನೆಯ ಬದಲಿಯನ್ನು, ನಾವು ಕೈಬಿಟ್ಟಿದ್ದೇವೆ ಎರಡನೆಯ ಬದಲಿಗೆ ಬಂದಿರುವ ತಿದ್ದುಪಡಿಗಳನ್ನು ಮಾತ್ರ ತೆಗೆದುಕೊಳ್ಳಬೇಕಾಗಿದೆ. ಡಾ. ಅಂಬೇಡ್ಕರ್ ಅವರ ಹೆಸರಿನಲ್ಲಿ ಅವರ ಹೆಸರಿನಲ್ಲಿ ಇರುವ ೧೬೪ನೆಯ ತಿದ್ದುಪಡಿಯು ಅದನ್ನು ಒಳಗೊಳ್ಳುತ್ತದೆ ಎಂದು ಭಾವಿಸುತ್ತೇನೆ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಹೀಗೆ ಮಂಡಿಸುತ್ತಿದ್ದೇನೆ.

೧೩೪ನೆಯ ವಿಧಿಗೆ ಬಂದಿರುವ, ತಿದ್ದುಪಡಿಗಳ ಪಟ್ಟಿಯ ೨೦೬೧ನೆಯ ತಿದ್ದುಪಡಿಗೆ ಸಂಬಂಧಿಸಿದಂತೆ ಈ ಕೆಳಗಿನವನ್ನು ಅಳವಡಿಸಬಹುದು:

"ಗವರ್ನರ್ ಆಗಿ ನೇಮಕಗೊಳ್ಳಲು ಅರ್ಹತೆಗಳು: ಭಾರತದ ಪ್ರಜೆಯಾಗಿರದ, ಮೂವತ್ತೈದು ವರ್ಷ ವಯಸ್ಸು ತುಂಬಿರದ ಯಾವ ವ್ಯಕ್ತಿಯೂ ಗವರ್ನರ್ ಆಗಿ ನೇಮಿತನಾಗಲು ಅರ್ಹನಲ್ಲ!"

---

** ಸಿ.ಎ.ಡಿ. ಸಂಪುಟ ೮, ३೧ನೇ ಮೇ ೧೯೪೯, ಪುಟ ೪೭೪

* ಸಿ.ಎ.ಡಿ. ಸಂಪುಟ ೮, ३೧ನೇ ಮೇ ೧೯೪೯, ಪುಟ ೪೭೬

ಮಾನ್ಯರೆ, ತಿದ್ದುಪಡಿಯು ಮಂಡಿತವಾಗಿದೆ ಎಂದು ನಾನು ಭಾವಿಸಬಹುದೆ?

**ಶ್ರೀ ಟಿ.ಟಿ.ಕೃಷ್ಣಮಾಚಾರಿ:** ಮಾನ್ಯ ಅಧ್ಯಕ್ಷರೆ, ಅಧ್ಯಕ್ಷರು ಮತ್ತು ಸದನವು ತಿದ್ದುಪಡಿಯ ಬದಲಿಯನ್ನು ಅನುಮತಿಸಬಹುದು.

**ಮಾನ್ಯ ಅಧ್ಯಕ್ಷರು :** ನೀವು ತಿದ್ದುಪಡಿಯನ್ನು ಪೂರ್ತಿಯಾಗಿ ಓದಬೇಕಾಗಿಲ್ಲ.

**ಮಾನ್ಯ ಡಾ॥ಬಿ.ಆರ್. ಅಂಬೇಡ್ಕರ್ :** ೨೦೬೧ನೆಯ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ಮಾನ್ಯರೆ ೨೦೬೧ನೆಯ ತಿದ್ದುಪಡಿಯ ಸ್ಥಾನದಲ್ಲಿ ಈ ಕೆಳಗಿನಂತೆ ಬದಲಿಯನ್ನು ಇಡಬಹುದು ಎಂದೂ ಮಂಡಿಸುತ್ತೇನೆ:

"ಗವರ್ನರ್ ಆಗಿ ನೇಮಕಗೊಳ್ಳಲು ಅರ್ಹತೆಗಳು: ಯಾವ ವ್ಯಕ್ತಿಯೂ ಭಾರತದ ಒಬ್ಬ ಪ್ರಜೆಯಾಗಿರದಿದ್ದರೆ, ಮೂವತ್ತೈದು ವರ್ಷ ತುಂಬಿರದಿದ್ದರೆ ಗವರ್ನರ್ ಆಗಿ ನೇಮಿತನಾಗಲು ಅರ್ಹನಾಗುವುದಿಲ್ಲ."

(ಗೊತ್ತುವಳಿಯು ಅಂಗೀಕೃತವಾಯಿತು. ೧೩೪ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು)

## ವಿಧಿ ೧೩೫

* **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ:

೧೩೫ನೆಯ ವಿಧಿಯ (೧)ನೆಯ ಉಪವಾಕ್ಯದಲ್ಲಿ"

ಪಾರ್ಲಿಮೆಂಟಿನ ಅಥವಾ' ಎಂಬ ಪದಗಳ ಬದಲಿಗೆ, "ಪಾರ್ಲಿಮೆಂಟಿನ ಉಭಯ ಸದನಗಳ ಅಥವಾ ಒಂದು ಸದನದ" ಎಂಬ ಪದಗಳನ್ನು ಅಳವಡಿಸಬಹುದು.

ಇದೊಂದು ಔಪಚಾರಿಕ ತಿದ್ದುಪಡಿಯಾಗಿದೆ.

ಮಾನ್ಯರೆ, ಇದನ್ನು ಮಂಡಿಸುತ್ತಿದ್ದೇನೆ.

"೧೩೫ನೆಯ ವಿಧಿಯ (೧)ನೆಯ ಉಪವಾಕ್ಯದಲ್ಲಿ

(ಅ) "ಪಾರ್ಲಿಮೆಂಟಿನ ಸದಸ್ಯ ಅಥವಾ' ಎಂಬ ಪದಗಳ ಬದಲಿಗೆ 'ಉಭಯ ಸದನಗಳಲ್ಲಿ ಅಥವಾ ಆ ಒಂದು ಸದನದಲ್ಲಿ' ಎಂಬ ಪದಗಳನ್ನು ಅಳವಡಿಸಬಹುದು."

(ಆ) "ಪಾರ್ಲಿಮೆಂಟಿನಲ್ಲಿ ಅಥವಾ ಸಂದರ್ಭ ಹೇಗಿದೆಯೋ ಅದಕ್ಕೆ ತಕ್ಕ ಶಾಸನ ಸಭೆಯಲ್ಲಿ; ಎಂಬ ಪದಗಳಿಗೆ ಬದಲಾಗಿ 'ಆ ಸದನದಲ್ಲಿ' ಎಂಬ ಪದಗಳನ್ನು ಅಳವಡಿಸಬಹುದು."

ಮಾನ್ಯರೆ, ಹೀಗೆ ಮಂಡಿಸುತ್ತಿದ್ದೇನೆ.

"೧೩೫ನೆಯ ವಿಧಿಯ (೨)ನೆಯ ಉಪವಾಕ್ಯದಲ್ಲಿ 'ಅಥವಾ ವೇತನದ ಪರಿಸ್ಥಿತಿ' ಎಂಬ ಪದಗಳ ಬದಲಾಗಿ 'ಲಾಭದ' ಎಂಬ ಪದವನ್ನು ಇಡಬಹುದು."

**ಶ್ರೀ ಎಚ್.ವಿ. ಕಾಮತ್** (ಸಿ.ಪಿ.ಬೀರಾರ್: ಸಾಮಾನ್ಯ) ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ:

"೧೩೫ನೆಯ ವಿಧಿಯ (೩)ನೆಯ ಉಪವಾಕ್ಯದಲ್ಲಿ ಒಂದು ಅಧಿಕೃತ ನಿವಾಸವಿರುತ್ತದೆ ಮತ್ತು ಗವರ್ನರನಿಗೆ ಎಂಬ ಪದಗಳನ್ನು ಅಳಿಸಬಹುದು."

**ಅಧ್ಯಕ್ಷರು :** "ಅಲ್ಲಿ" ಎಂಬ ಪದವನ್ನು ಅಳಿಸಬಹುದು.

---

* ಅದೇ ಪು. ೪೭೬

**ಶ್ರೀ ಎಚ್. ವಿ. ಕಾಮತ್ :** 'ಅಲ್ಲಿ' ಎಂಬ ಪದ ಉಳಿಯುತ್ತದೆ

ಡಾ ಅಂಬೇಡ್ಕರ್ ಅವರಿಗೂ ಕರಡು ರಚನಾ ಸಮಿತಿಯ ಅವರ ಸಹೋದ್ಯೋಗಿಗಳಿಗೂ ಯಾವ ಸಂವಿಧಾನವು ಸ್ಫೂರ್ತಿ ನೀಡಿತೋ ನನಗೆ ತಿಳಿದಿಲ್ಲ.

**ಒಬ್ಬ ಸದಸ್ಯರು :** ಐರಿಷ್ ಸಂವಿಧಾನ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ರಾಷ್ಟ್ರಪತಿಯವರಿಗೆ ಸಂಬಂಧಿಸಿದಂತೆ ೨ನೇ ನಿಯಮಗಳ ಮೇಲೆ ೪೮ನೆಯ ವಿಧಿಯನ್ನು ನಾವು ಅಂಗೀಕರಿಸಿದ್ದೇವೆ. ಇಲ್ಲಿ ಈಗ ೪೮ನೆಯ ವಿಧಿಯನ್ನು ಅನುಸರಿಸುತ್ತಿದ್ದೇವೆ ಅಷ್ಟೆ.

* * * * *

(ಡಾ. ಅಂಬೇಡ್ಕರ್ ಅವರ ಎಲ್ಲಾ ತಿದ್ದುಪಡಿಗಳೂ ಅಂಗೀಕೃತವಾದವು. ಬೇರೆಯ ಇನ್ನೊಂದು ತಿರಸ್ಕೃತವಾಯಿತು)

* * * * *

(ತಿದ್ದುಪಡಿಗೊಂಡಂತೆ ೧೩೫ನೆಯ ವಿಧಿಯಲ್ಲಿ ಸಂವಿಧಾನಕ್ಕೆ ಸೇರಿಸಲಾಯಿತು)

*__ಮಾನ್ಯ ಅಧ್ಯಕ್ಷರು :__ ಪ್ರೊಫೆಸರ್ ಶಹಾ ಅವರು ೧೩೫ನೆಯ ವಿಧಿಯ ನಂತರ ಒಂದು ಹೊಸ ವಿಧಿಯನ್ನು ಸೇರಿಸಬೇಕೆಂದು ಸೂಚಿಸಿ ಒಂದು ತಿದ್ದುಪಡಿಯ ನೋಟೀಸು ಕಳಿಸಿದ್ದಾರೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮುಂದಿನ ತಿದ್ದುಪಡಿಗೆ ಹೋಗುವುದಕ್ಕಿಂತ ಮುಂಚೆ, ೧೩೫ನೆಯ ವಿಧಿಯಲ್ಲಿ 'ಚುನಾಯಿತ' ಎಂಬ ಪದವನ್ನು ಕೈಬಿಡಬೇಕೆಂದು ಸೂಚಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಅದು ತಿಳಿದದ್ದೇ ಆಗಿದೆ.

## ವಿಧಿ ೧೩೫

* **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ: ೧೩೬ ನೆಯ ವಿಧಿಯಲ್ಲಿ 'ರಾಜ್ಯದ ಶಾಸನ ಸಭಾಸದಸ್ಯರ ಸಮ್ಮುಖದಲ್ಲಿ ಎಂಬ ಪದಗಳಿಗೆ ಬದಲಾಗಿ, 'ಮುಖ್ಯ ನ್ಯಾಯಾಧೀಶರು ಅಥವಾ ಅವರ ಅನುಪಸ್ಥಿತಿಯಲ್ಲಿ ರಾಜ್ಯಕ್ಕೆ ಸಂಬಂಧಿಸಿದಂತೆ' ನ್ಯಾಯಾಧಿಕಾರವನ್ನು ಹೊಂದಿರುವ ಉಚ್ಚನ್ಯಾಯಾಲಯದ ಬೇರೆ ಯಾರಾದರೂ ಒಬ್ಬ ನ್ಯಾಯಾಧೀಶರ ಉಪಸ್ಥಿತಿಯಲ್ಲಿ 'ಎಂಬ ಪದಗಳನ್ನು ಇರಿಸಬಹುದು'

*****

**ಮಾನ್ಯ ಅಧ್ಯಕ್ಷರು :** ೨೧೦೭, ೨೧೦೮ ಮತ್ತು ೨೧೯ನೆಯ ತಿದ್ದುಪಡಿಗಳು, ನನಗೆ ತಿಳಿದಂತೆ ಇನ್ನೂ ಮಂಡನೆಯಾಗಿಲ್ಲ, ಆದ್ದರಿಂದ ಡಾ. ಅಂಬೇಡ್ಕರ್ ಅವರು ಮಂಡಿತ ತಿದ್ದುಪಡಿಗಳ ಬಗೆಗೆ ಏನಾದರೂ ಉತ್ತರ ಕೊಡಬಯಸುವರೇನು?

---

* ಸಿ.ಎ.ಡಿ. ಸಂಪುಟ ೮, ೩೧ನೇ ಮೇ ೧೯೪೯, ಪುಟ ೪೮೨

* ಅದೇ ಪುಟ ೪೮೪

**ಮಾನ್ಯ ಡಾ. ಬಿ.ಆರ್ ಅಂಬೇಡ್ಕರ್ :** ಮಾನ್ಯರೆ, ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಮಂಡಿಸಿದ ತಿದ್ದುಪಡಿಯನ್ನು ನನ್ನ ಮಿತ್ರರಾದ ಶ್ರೀ ಕಾಮತ್ ಅವರು ಮಂಡಿಸಿದುದನ್ನು ನಾನು ಒಪ್ಪುತ್ತೇನೆ.

(ಡಾ. ಬಿ.ಆರ್. ಅಂಬೇಡ್ಕರ್ ಅವರು ಒಪ್ಪಿಕೊಂಡ ತಿದ್ದಪಡಿಗಳು ಹೀಗಿದ್ದವು)

'ತಿದ್ದುಪಡಿಗಳ ಪಟ್ಟಿಯ ೨೧೦೪ನೆಯ ತಿದ್ದುಪಡಿಗೆ ಬದಲಿಗೆ ಈ ಕೆಳಗಿನಂತೆ ಸೇರಿಸಬಹುದು:

'೧೩೬ ನೆಯ ವಿಧಿಯಲ್ಲಿ 'ರಾಜ್ಯದ ಶಾಸನ ಸಭಾ ಸದಸ್ಯರುಗಳ ಉಪಸ್ಥಿತಿಯಲ್ಲಿ' ಎಂಬ ಪದಗಳಿಗೆ ಬದಲಾಗಿ. 'ರಾಜ್ಯಕ್ಕೆ ಸಂಬಂಧಿಸಿದ ನ್ಯಾಯಾಧಿಕಾರ ವ್ಯಾಪ್ತಿಯುಳ್ಳ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಅಥವಾ ಅವರ ಅನುಪಸ್ಥಿತಿಯಲ್ಲಿ ಆ ನ್ಯಾಯಾಲಯದ ಅತ್ಯಂತ ಹಿರಿಯ ನ್ಯಾಯಾಧೀಶರ ಉಪಸ್ಥಿತಿಯಲ್ಲಿ' ಎಂಬ ಪದಗಳನ್ನು ಅಳವಡಿಸಬೇಕು.'

'ತಿದ್ದುಪಡಿಗಳ ಪಟ್ಟಿಯ ೨೧೦೬ನೆಯ ತಿದ್ದುಪಡಿಗೆ ಬದಲಾಗಿ ಈ ಕೆಳಗಿನ ಪದಗಳನ್ನು ಇಡಬಹುದು." ೧೩೬ನೆಯ ವಿಧಿಯಲ್ಲಿ'ನಾನು ಅ.ಬ. ವಿಧಿವಿಹಿತವಾಗಿ ಸ್ಥಿರೀಕರಿಸುತ್ತೇನೆ (ಅಥವಾ ಪ್ರಮಾಣ ಮಾಡುತ್ತೇನೆ) ಎಂಬ ಪದಗಳಿಗೆ ಬದಲಾಗಿ

"ನಾನು ಅ.ಬ. ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ, ವಿಧಿವಿಹಿತವಾಗಿ ಸ್ಥಿರೀಕರಿಸುತ್ತೇನೆ".

**ಪಂಡಿತ ಹೃದಯನಾಥ ಕುಂಜ್ರು :** (ಯು.ಪಿ. ಸಾಮಾನ್ಯ) : ಪ್ರಮಾಣವಚನದ ಪಠ್ಯ ಹೇಗಿದೆ? ಅದು "ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ ಅಥವಾ ವಿಧಿವಿಹಿತವಾಗಿ ಸ್ಥಿರೀಕರಿಸುತ್ತೇನೆ" ಎಂದಿರುತ್ತದೆಯೋ ಇಲ್ಲವೋ? ಪ್ರಶ್ನೆ ಇದು ಗವರ್ನರ್ ಅವರು ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಬೇಕು ಎಂದು ಕೆಲವರು ಭಾವಿಸಬಹುದು. ಆದರೆ ಈ ದೇಶದಲ್ಲಿ ನಾಸ್ತಿಕರಾದವರೂ ಕೆಲವರಿರಬಹುದು. (ತಡೆ) (ಮಾನ್ಯ ಅಧ್ಯಕ್ಷರು ಆ ಪ್ರಮಾಣವಚನದ ಪಠ್ಯವನ್ನು ಓದುವರು) ಇಲ್ಲಿ ಬದಲಿ ಇರುವುದು ಕಂಡುಬರುತ್ತದೆ. ನನಗೆ ತಿಳಿಯಬೇಕಾಗಿದ್ದದ್ದು ಅಷ್ಟೆ. ಅಪೇಕ್ಷಿಯಿಲ್ಲದ ಯಾರನ್ನೂ ದೇವರ ಹೆಸರಿನಲ್ಲಿ ಪ್ರಮಾಣ ಮಾಡಬೇಕೆಂದು ಬಲಾತ್ಕರಿಸಕೂಡದು.

**ಮಾನ್ಯ ಅಧ್ಯಕ್ಷರು :** ಇಲ್ಲ ಇಲ್ಲ.

"ತಿದ್ದುಪಡಿಯಾಗಿರುವಂತೆ ೧೩೬ನೆಯ ವಿಧಿಯು ಸಂವಿಧಾನದ ಭಾಗವಾಗುತ್ತದೆ." (ಗೊತ್ತುವಳಿಯು ಅಂಗೀಕೃತವಾಯಿತು)

ತಿದ್ದುಪಡಿಯಾದ ರೂಪದಲ್ಲಿ ೧೩೬ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು ಅಮೇಲೆ ಸದನವನ್ನು ಜೂನ್ ೧, ೧೯೪೯ ಬುಧವಾರ ಬೆಳಿಗ್ಗೆ ಎಂಟು ಗಂಟೆಯವರೆಗೆ ಮುಂದಕ್ಕೆ ಹಾಕಲಾಯಿತು.

## ವಿಧಿ ೧೩೭

*__ಮಾನ್ಯ ಅಧ್ಯಕ್ಷರು :__ ಈ ದಿನ ೧೩೭ನೆಯ ವಿಧಿಯಿಂದ ಪ್ರಾರಂಭ ಮಾಡೋಣ, ಇದಕ್ಕೆ ತಿದ್ದುಪಡಿಬಂದಿದೆ. ಶ್ರೀ ಬ್ರಜೇಶ್ವರ ಪ್ರಸಾದ್ ಅವರು ಅದನ್ನು ಕುರಿತಾದ ನೋಟೀಸು ಕಳಿಸಿದ್ದಾರೆ. ಆದರೆ ಅದು ನೇತ್ಯಾತ್ಮಕವಾದದ್ದು.

(೨೧೧೧ನೆಯ ತಿದ್ದುಪಡಿಯನ್ನು ಮಂಡಿಸಲಿಲ್ಲ)

---

* ಸಿ.ಎ.ಡಿ. ಸಂಪುಟ ೮, ೧ನೇ ಜೂನ್ ೧೯೪೯, ಪುಟ ೪೮೭.

**ಶ್ರೀ ಟಿ.ಟಿ. ಕೃಷ್ಣಮಾಚಾರಿ** (ಮದರಾಸು : ಸಾಮಾನ್ಯ) ಮೊದಲೇ ಕೈಗೊಂಡಿರುವ ನಿರ್ಧಾರದ ದೃಷ್ಟಿಯಿಂದ ಈ ವಿಧಿಯನ್ನು ಮಂಡಿಸಲು ಸಾಧ್ಯವಿಲ್ಲ.

**ಶ್ರೀ ಬ್ರಜೇಶ್ವರ ಪ್ರಸಾದ್ :** (ಬಿಹಾರ : ಸಾಮಾನ್ಯ) : ಇದನ್ನು ಸದನದ ಮತಕ್ಕೆ ಹಾಕಲೇ ಬೇಕು.

**ಮಾನ್ಯ ಡಾ. ಬಿ.ಆರ್ ಅಂಬೇಡ್ಕರ್** : ಅದನ್ನು ಮತಕ್ಕೆ ಹಾಕಬಹುದು.

**ಮಾನ್ಯ ಅಧ್ಯಕ್ಷರು :** ತಿದ್ದಪಡಿಗಳಲ್ಲಿ ಯಾವುದೇ ಬೇರೆಯದನ್ನು ಮಂಡಿಸಲಾಗುವುದಿಲ್ಲ.

(೧೩೭ನೆಯ ವಿಧಿಯನ್ನು ಸಂವಿಧಾನದಿಂದ ತೆಗೆದು ಹಾಕಲಾಯಿತು)

*****

## ವಿಧಿ ೧೪೩

***ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ಶ್ರೀ ಕಾಮತ್ ಅವರ ಈ ತಿದ್ದುಪಡಿಯ ಮೇಲೆ ನನ್ನ ಮಿತ್ರರಾದ ಶ್ರೀ ಟಿ.ಟಿ. ಕೃಷ್ಣಮಾಚಾರಿ ಅವರು ಹೇಳಿದ ಮಾತುಗಳನ್ನು ಕೇಳಿದ ಮೇಲೆ, ನಾನು ಮಾತನಾಡಿ ಈ ಚರ್ಚೆಯಲ್ಲಿ ಪಾಲುಗೊಳ್ಳುವುದು ಅಗತ್ಯ ಎಂದು ನನಗನಿಸಿರಲಿಲ್ಲ. ಆದರೆ ನನ್ನ ಮಿತ್ರರಾದ ಪಂಡಿತ ಕುಂಜ್ರು ಅವರು ನನ್ನನ್ನೇ ಪ್ರಶ್ನೆ ಕೇಳಿ ಉತ್ತರವನ್ನು ಬಯಸಿದುದರಿಂದಾಗಿ, ಸೌಜನ್ಯಕ್ಕಾಗಿಯಾದರೂ ನಾನು ಕೆಲವು ಮಾತುಗಳನ್ನು ಆಡಬೇಕು ಎನಿಸಿತು. ಮಾನ್ಯರೆ, ಇಲ್ಲಿ ಮುಖ್ಯವಾದ ಮತ್ತು ಕಷ್ಟಕರವಾದ ಪ್ರಶ್ನೆ, ಗವರ್ನನರರಿಗೆ ವಿವೇಚನಾಧಿಕಾರಗಳು ಇರಬೇಕೆ? ಎನ್ನುವುದು. ಇದೇ ತುಂಬಾ ಮುಖ್ಯವಾದ ಪ್ರಶ್ನೆ. ಈ ಪ್ರಶ್ನೆಯನ್ನು ಕುರಿತು ನಾವು ಯಾವುದಾದರೂ ಒಂದು ನಿರ್ಣಯಕ್ಕೆ ಬಂದಮೇಲೆ, ೧೪೩ನೆಯ ವಿಧಿಯ (೧) ನೆಯ ಉಪವಾಕ್ಯದ ಕೊನೆಯ ಭಾಗದಲ್ಲಿ ಉಪಯೋಗಿಸಿರುವ ಪದಗಳನ್ನು ಆ ಪ್ರಕರಣದಲ್ಲಿಯೇ ಉಳಿಸಿಕೊಳ್ಳಬೇಕೆ ಅಥವಾ ಬೇರೆ ಎಲ್ಲಿಗಾದರೂ ವರ್ಗಾಯಿಸಬೇಕೆ ಎಂಬ ಇನ್ನೊಂದು ಪ್ರಶ್ನೆಯನ್ನು ಉಪಯುಕ್ತ ರೀತಿಯಲ್ಲಿ ಪರಿಶೀಲಿಸಬಹುದು. ಆದ್ದರಿಂದ ನಾನು ಈಗ ಮೊದಲು ಅತ್ಯಂತ ಮಹತ್ವದ ಪ್ರಶ್ನೆಯ ಬಗೆಗೆ ಗಮನ ಕೊಡಲು ಬಯಸುತ್ತೇನೆ. ಚರ್ಚೆಯ ಮಧ್ಯೆ ಗವರ್ನರರಿಗೆ ವಿವೇಚನಾಧಿಕಾರವಿರುವುದು ಪ್ರಾಂತಗಳಲ್ಲಿ ಜವಾಬ್ದಾರಿ ಸರಕಾರವಿರುವುದಕ್ಕೆ ವಿರುದ್ಧವಾಗುತ್ತದೆ ಎಂದು ಹೇಳಲಾಯಿತು. ಅಲ್ಲದೆ ಗವರ್ನರರಿಗೆ ವಿವೇಚನಾಧಿಕಾರವಿರುವುದು ೧೯೩೫ರ ಭಾರತ ಸರಕಾರ ಶಾಸನದ ವಾಸನೆ ಹೊಡೆಯುವಂತೆ ಮಾಡುತ್ತದೆ ಎಂದೂ ಹೇಳಲಾಯಿತು. ಆ ಶಾಸನವು ಮುಖ್ಯವಾಗಿ ಪ್ರಜಾಪ್ರಭುತ್ವೀಯವಾಗಿರಲಿಲ್ಲ. ಈಗ ನನ್ನಷ್ಟಕ್ಕೆ ಹೇಳುವುದಾದರೆ, ಗವರ್ನರರಿಗೆ ಕೆಲವು ವಿವೇಚನಾಧಿಕಾರಗಳನ್ನು ನೀಡುವುದು ಯಾವ ರೀತಿಯಲ್ಲಿಯೂ ಅರ್ಥದಲ್ಲಿಯೂ ಜವಾಬ್ದಾರಿ ಸರಕಾರಕ್ಕೆ ವಿರೋಧಿಯಾಗುವುದಿಲ್ಲ. ಈಗ ಈ ವಿಷಯವನ್ನು ವಿವರವಾಗಿ ಕೈಗೆತ್ತಿಕೊಳ್ಳಲು ನನಗೆ ಅಪೇಕ್ಷೆಯಿಲ್ಲ. ಏಕೆಂದರೆ ಹಾಗೆ ವಿವರಿಸುವುದಾದರೆ ಕೆನಡಾದ ಸಂವಿಧಾನ ಮತ್ತು ಆಸ್ಟ್ರೇಲಿಯದ ಸಂವಿಧಾನಗಳಲ್ಲಿರುವ ಈ ಬಗೆಯ ಅವಕಾಶಗಳನ್ನು ಉಲ್ಲೇಖಿಸಿ ಸದನಕ್ಕೆ ತೃಪ್ತಿಕರವಾಗಿ ಮನವರಿಕೆ ಮಾಡಿಕೊಡಬಲ್ಲೆ. ಕೆನಡಾದ ಸರಕಾರದ ವ್ಯವಸ್ಥೆಯೂ ಜವಾಬ್ದಾರಿ ಸರಕಾರ ವ್ಯವಸ್ಥೆಯಲ್ಲ ಎಂದು ಈ ಸದನದಲ್ಲಿ ಯಾರೂ ಹೇಳಲಾರರು ಎಂದು ಭಾವಿಸುತ್ತೇನೆ, ಹಾಗೆಯೇ ಆಸ್ಟ್ರೇಲಿಯಾ ಸರಕಾರವು ಜವಾಬ್ದಾರಿ ಸರಕಾರವಲ್ಲ ಎಂದು ಯಾರು ಸವಾಲು ಹಾಕಲಾರರು.

---

* ಅದೇ ಪು ೫೦೦–೦೨

ಕೆನಡಾ ಸಂವಿಧಾನದ ೫೫ನೆಯ ಪ್ರಕರಣವನ್ನು ಓದಬಯಸುತ್ತೇನೆ.

"ಪ್ರಕರಣ – ೫೫ ಪಾರ್ಲಿಮೆಂಟಿನ ಸದನವು ಒಂದು ಮಸೂದೆಯನ್ನು ಅಂಗೀಕರಿಸಿದ ಮೇಲೆ ಚಕ್ರವರ್ತಿನಿಯವರ ಅನುಮೋದನೆಗಾಗಿ ಗವರ್ನರ್ ಜನರಲ್ ಅವರಿಗೆ ಒಪ್ಪಿಸಲಾಗುತ್ತದೆ. ಅವರು ತಮ್ಮ ವಿವೇಚನೆಯನ್ನು ಉಪಯೋಗಿಸಿ ಶಾಸನದ ಅವಕಾಶಗಳಿಗೆ ಒಳಪಟ್ಟು ಚಕ್ರವರ್ತಿನಿಯವರ ಹೆಸರಿನಲ್ಲಿ ಅನುಮೋದನೆಯನ್ನು ನಮೂದಿಸುತ್ತಾರೆ ಅಥವಾ ಅನುಮೋದನೆಯನ್ನು ತಡೆಹಿಡಿಯುತ್ತಾರೆ ಅಥವಾ ಚಕ್ರವರ್ತಿನಿಯವರ ಮನೋಭಾವವನ್ನು ಸೂಚಿಸಲು ಮಸೂದೆಯನ್ನು ಕಾದಿರಿಸುತ್ತಾರೆ.

**ಪಂಡಿತ ಹೃದಯನಾಥ ಕುಂಜ್ರು** : ಬ್ರಿಟಿಷ್ ಉತ್ತರ ಅಮೇರಿಕಾ ಶಾಸನವು ಯಾವಾಗ ಅಂಗೀಕೃತವಾಯಿತು ಎಂದು ಡಾ. ಅಂಬೇಡ್ಕರರನ್ನು ನಾನು ಕೇಳಬಯಸುತ್ತೇನೆ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್** : ಅದು ಮುಖ್ಯವಲ್ಲ. ಶಾಸನದ ತಾರೀಕು ಇಲ್ಲಿ ಗಣನೆಗೆ ಬರುವುದಿಲ್ಲ.

**ಶ್ರೀ ಎಚ್.ವಿ. ಕಾಮತ್** : ಸುಮಾರು ಒಂದು ಶತಮಾನದ ಹಿಂದೆ!

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ನನ್ನ ಉತ್ತರ ಇದು, ಕೆನಡಿಯನ್ನರಿಗಾಗಲಿ ಆಸ್ಟ್ರೇಲಿಯನ್ನರಿಗಾಗಲಿ ಈ ಅವಕಾಶವನ್ನು ಈ ಹಂತದಲ್ಲೂ ತೆಗೆದುಹಾಕುವ ಅಗತ್ಯ ಕಂಡುಬಂದಿಲ್ಲ. ಕೆನಡಿಯನ್ ಶಾಸನದ ೫೫ನೆಯ ಪ್ರಕರಣದಲ್ಲಿ ಈ ಅವಕಾಶವನ್ನು ಉಳಿಸಿಕೊಳ್ಳುವುದು ಜವಾಬ್ದಾರಿ ಸರಕಾರಕ್ಕೆ ಸಂಗತವಾಗಿದೆಯೆಂಬ ತೃಪ್ತಿ ಅವರಿಗಿದೆ. ಅವಕಾಶವು ಜವಾಬ್ದಾರಿ ಸರಕಾರದೊಂದಿಗೆ ಸಂಕೇತವಾಗಿಲ್ಲ ಎಂದು ಭಾವನೆ ಅವರಿಗೆ ಬಂದಿದ್ದರೆ, ಇಂದೂ ಕೂಡ, ಡೊಮಿನಿಯನ್ನುಗಳಾಗಿ ಈ ಅವಕಾಶವನ್ನು ಕಿತ್ತುಹಾಕಲು ಪೂರ್ಣವಾದ ಹಕ್ಕು ಪಡೆದಿದ್ದಾರೆ. ಆದರೆ ಅವರು ಹಾಗೆ ಮಾಡಿಲ್ಲ. ಆದ್ದರಿಂದ ಪಂಡಿತ ಕುಂಜ್ರು ಅವರಿಗೆ ಉತ್ತರವಾಗಿ, ಕೆನಡಿಯನ್ನರು ಮತ್ತು ಆಸ್ಟ್ರೇಲಿಯನ್ನರು ಇಂಥದೊಂದು ಅವಕಾಶವು ಜವಾಬ್ದಾರಿ ಸರಕಾರದ ಅತಿಕ್ರಮಣ, ಉಲ್ಲಂಘನೆ ಎಂದು ಭಾವಿಸುವುದಿಲ್ಲ ಎಂದಷ್ಟು ಹೇಳಬಲ್ಲೆ.

**ಶ್ರೀ ಲೋಕನಾಥ ಮಿಶ್ರಾ** (ಒರಿಸ್ಸಾ:ಸಾಮಾನ್ಯ) : ಇಲ್ಲೊಂದು ವಿಧಿ ಬಿಂದುವಿದೆ ಸ್ವಾಮಿ. ನಾವು ಕೆನಡಾ ಅಥವಾ ಆಸ್ಟ್ರೇಲಿಯದ ಸ್ಥಾನಮಾನವನ್ನು ಪಡೆಯಲಿದ್ದೇವೆಯೋ? ಅಥವಾ ಒಂದು ಪ್ರಜಾಪ್ರಭುತ್ವೀಯ ಸಂವಿಧಾನವನ್ನು ಪಡೆಯುತ್ತೇವೆಯೊ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ಅವರು ಹೇಳಿದ್ದು ನನಗೆ ಅರ್ಥವಾಗಲಿಲ್ಲ. ಗವರ್ನರರಿಗೆ ಸ್ವಲ್ಪ ಮಟ್ಟಿನ ವಿವೇಚನಾಧಿಕಾರವನ್ನು ಕೊಡುವ ಅವಕಾಶವಿರುವುದು ಜವಾಬ್ದಾರಿ ಸರಕಾರಕ್ಕೆ ಅಸಂಗತವಾಗುವುದಿಲ್ಲ, ಹೊಂದಿಕೆಯಾಗುವುದಿಲ್ಲ ಎಂದು ಸದನಕ್ಕೆ ತೃಪ್ತಿಯಾಗಿದ್ದರೆ ಈ ಉಪವಾಕ್ಯವನ್ನು ಉಳಿಸಿಕೊಳ್ಳುವುದು ಅಪೇಕ್ಷಣೀಯ ಎನ್ನುವುದರಲ್ಲಿ ವಿವಾದವಿಲ್ಲ. ನನ್ನ ಅಭಿಪ್ರಾಯದಲ್ಲಿ ಅದು ಅಗತ್ಯ ಕೂಡ. ಇಲ್ಲಿ ಏಳುವ, ಒಂದೇ ಪ್ರಶ್ನೆ.........

**ಪಂಡಿತ ಹೃದಯನಾಥ ಕುಂಜ್ರು** : ಒಳ್ಳೆಯದು, ಡಾ. ಅಂಬೇಡ್ಕರ್ ಅವರು ಆಕ್ಷೇಪಣೀಯ ಮೂಲವನ್ನು ಅರ್ಥಮಾಡಿಕೊಂಡಿಲ್ಲ. ೧೭೫ನೆಯ ವಿಧಿಯಲ್ಲಿ ಗವರ್ನರರಿಗೆ ಕೆಲವು ಅಧಿಕಾರಗಳನ್ನು ಕೊಡಬೇಕಾಗಿಲ್ಲ ಎನ್ನುವುದಲ್ಲ. ಆಕ್ಷೇಪಣೆ ಅದು ಈಗ ಚರ್ಚೆಯಲ್ಲಿರುವ ವಿಧಿಯಲ್ಲಿ ಗವರ್ನರರಿಗೆ ಸಾಮಾನ್ಯ ರೂಪದ ವಿವೇಚನಾಧಿಕಾರಗಳನ್ನು ಕೊಡುವುದರ ವಿರುದ್ಧವಾಗಿ.

**ಮಾನ್ಯ ಡಾ. ಅಂಬೇಡ್ಕರ್** : ಇವರು ವಿಧಿಯನ್ನು ತಪ್ಪಾಗಿ ಓದಿದ್ದಾರೆ ಎನಿಸುತ್ತದೆ. ಕ್ಷಮಿಸಬೇಕು, ಕರಡು ಸಂವಿಧಾನದ ಪ್ರತಿ ಈಗ ನನ್ನ ಬಳಿ ಇಲ್ಲ. "ಅವರು ಈ ಸಂವಿಧಾನದಂತೆ ಅಥವಾ ಅದರ ಅನ್ವಯ

ಇರುವವರೆಗೆ ಹೊರತು" ಎನ್ನುವುದು ಅಲ್ಲಿ ಬಳಸಿರುವ ಪದಗಳು. ಒಂದು ವೇಳೆ ಅದು "ಅವರು ಈ ವಿವೇಚಾನಾಧಿಕಾರವನ್ನು ಸಚಿವರ ಅಪೇಕ್ಷೆ ಅಥವಾ ಸಲಹೆಗೆ ವಿರುದ್ಧವಾಗಿ ಚಲಾಯಿಸಬೇಕೆಂದು ಭಾವಿಸಿದಾಗ ಹೊರತು" ಎಂದಿದ್ದಿದ್ದರೆ ನನ್ನ ಮಾನ್ಯ ಮಿತ್ರ ಪಂಡಿತ ಕುಂಜ್ರು ಮಾಡಿದ ಆಕ್ಷೇಪಣೆ ನಿಲ್ಲುವಂಥದಾಗಿರುತ್ತಿತ್ತು. ಉಪವಾಕ್ಯ ತುಂಬ ಚಿಕ್ಕದು. "ಅವರು ಈ ಸಂವಿಧಾನದ ಪ್ರಕಾರವಾಗಿ ಅಥವಾ ಅನ್ವಯ ಇರುವವರೆಗೆ ಹೊರತು" ಎಂದು ಹೇಳುತ್ತದೆ. ಆದ್ದರಿಂದ ೧೪೩ನೆಯ ವಿಧಿಯನ್ನು ಗವರ್ನರರಿಗೆ ಅಧಿಕಾರವನ್ನು ನಿರ್ದಿಷ್ಟವಾಗಿ ಕಾದಿರಿಸುವ ಇತರ ವಿಧಿಗಳೊಂದಿಗೆಯೇ ಓದಬೇಕು. ಅಮಾನ್ಯ ಮಾಡಬೇಕು ಎಂದು ತಾವು ಭಾವಿಸುವ ಯಾವುದೇ ವಿಚಾರದಲ್ಲಿ ಮಂತ್ರಿಗಳ ಸಲಹೆಯನ್ನು ಅಮಾನ್ಯ ಮಾಡುವ ಅಧಿಕಾರವನ್ನು ನೋಡುವ ಸಾಮಾನ್ಯವಾದ ಉಪವಾಕ್ಯವಲ್ಲ ಅದು. ನನ್ನ ಮಾನ್ಯ ಮಿತ್ರ ಪಂಡಿತ ಕುಂಜ್ರು ಅವರ ವಾದ ದೋಷ ಇಲ್ಲಿದೆ ಎಂದು ನನ್ನ ಭಾವನೆ.

ಆದ್ದರಿಂದ ನಾನು ಹೇಳಿದಂತೆ, ಗವರ್ನರರಿಗೆ ನಿರ್ದಿಷ್ಟ ಸಂದರ್ಭಗಳಲ್ಲಿ ವಿವೇಚನಾಧಿಕಾರವನ್ನು ಉಳಿಸಿಕೊಳ್ಳುವುದು ಜವಾಬ್ದಾರಿ ಸರಕಾರದೊಂದಿಗೆ ಯಾವ ರೀತಿಯಲ್ಲೂ ಅಸಂಗತವಾಗುವುದಿಲ್ಲ. ಇಲ್ಲಿ ಏಳುವ ಪ್ರಶ್ನೆ ಈ ವಿವೇಚನಾಧಿಕಾರವನ್ನು ಹೇಳಲು ಹೇಗೆ ಅವಕಾಶ ಕಲ್ಪಿಸಬೇಕು ಎನ್ನುವುದು. ಇದನ್ನು ಮೂರು ರೀತಿಯಾಗಿ ಮಾಡಬಹುದು ಎಂದು ತೋರುತ್ತದೆ. ಮೊದಲನೆಯದು, ನನ್ನ ಮಿತ್ರರಾದ ಪಂಡಿತ ಕುಂಜ್ರು ಹಾಗೂ ಇತರರು ಬಯಸುವಂತೆ ೧೪೩ನೆಯ ವಿಧಿಯಿಂದ ಆ ಪದಗಳನ್ನು ತೆಗೆದು, ೧೭೫ ಅಥವಾ ೧೮೮ರಂತಹ ವಿಧಿಗಳಿಗೆ ಅಥವಾ ಸದನವು ಇನ್ನು ಮುಂದೆ ಸೇರಿಸಬಹುದಾದ ಅವಕಾಶಗಳಿಗೆ ವಿವೇಚನಾಧಿಕಾರವನ್ನು ಗವರ್ನರರಿಗೆ ನೀಡುವುದನ್ನು ಕೂಡಿಸಬಹುದು. ೧೪೩ನೆಯ ವಿಧಿ ಏನೇ ಇರಲಿ, ಗವರ್ನರರಿಗೆ ಇದೋ ಈ ಅಥವಾ ಅದೋ ಅಧಿಕಾರವಿರುತ್ತದೆ ಎಂದು ಹೇಳುವುದು. ಇನ್ನೊಂದು ದಾರಿ ೧೪೩ನೆಯ ವಿಧಿಯಲ್ಲಿ "ಇಂತಿಂಥ ವಿಧಿಗಳಲ್ಲಿ–ನಿರ್ದಿಷ್ಟವಾಗಿ ಸ್ಪಷ್ಟವಾಗಿ ಸ್ಪಷ್ಟಪಡಿಸಿದ ೧೭೫, ೧೮೮, ೨೦೦ ಅಥವಾ ಯಾವುದೇ ಇರಲಿ, ಆ ವಿಧಿಗಳಲ್ಲಿನ ಅವಕಾಶಗಳು ಒದಗಿಸಿರುವುದರ ಹೊರತು" ಎಂದು ಸೇರಿಸುವುದು. ನಾನು ಸದನಕ್ಕೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಿರುವುದೇನೆಂದರೆ, ಯಾವುದಾದರೂ ಒಂದು ವಿಧಾನದಿಂದ ಗವರ್ನರಿಗೆ ವಿವೇಚನಾಧಿಕಾರವಿದೆ ಎಂದು ಹೇಳುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವ ಅಂಶ.

ಮಿತ್ರ ಪಂಡಿತ ಕುಂಜ್ರು ಮತ್ತು ಅದೇ ರೀತಿಯಾಗಿ ಮಾತನಾಡಿರುವ ಇತರ ಮಿತ್ರರು ಒಪ್ಪಿಕೊಂಡಿರುವಂತೆ ತೋರುವ ವಿಚಾರ, ಆ ಪದಗಳನ್ನು ಇಲ್ಲಿಂದ ತೆಗೆದು ಬೇರೆಲ್ಲಿಗಾದರೂ ವರ್ಗಾಯಿಸಬೇಕು. ಆ ನಿರ್ದಿಷ್ಟ ವಿಧಿಗಳನ್ನು ೧೪೩ನೆಯ ವಿಧಿಯಲ್ಲಿ ನಮೂದಿಸಬೇಕು ಎನ್ನುವುದು. ಇದು ಕಲಮು ಬರೆಯುವುದಕ್ಕೆ ಸಂಬಂಧಿಸಿದ್ದು. ವಸ್ತುವನ್ನಾಗಲಿ ತತ್ವವನ್ನಾಗಲಿ ಕುರಿತ ಪ್ರಶ್ನೆ ಇಲ್ಲಿಲ್ಲ. ೧೪೩ನೆಯ ವಿಧಿಯ (೧)ನೆಯ ಉಪವಾಕ್ಯದ ಕೊನೆಯ ಭಾಗವನ್ನು ತಿದ್ದಲು ನಾನೇ ಇಚ್ಛಿಸುತ್ತೇನೆ. ಗವರ್ನರರಿಗೆ ವಿವೇಚನಾಧಿಕಾರವನ್ನು ನೀಡುವುದನ್ನು ಕುರಿತು ಈ ಸಂವಿಧಾನ ಸಭೆಯು ಯಾವ ಅವಕಾಶಗಳನ್ನು ಮಾಡುತ್ತದೆ ಎಂಬುದು ಈ ಹಂತದಲ್ಲೇ ತಿಳಿದಿದ್ದರೆ, ನನಗಿರುವ ಕಷ್ಟ ಏನೆಂದರೆ, ನಾನಿನ್ನೂ ೧೭೫ ಅಥವಾ ೧೮೮ನೆಯ ವಿಧಿಗಳಿಗೆ ಬಂದಿಲ್ಲ ಅಥವಾ ಗವರ್ನರರಿಗೆ ವಿವೇಚನಾಧಿಕಾರವನ್ನು ನೀಡುವುದನ್ನು ಕುರಿತು ಇತರ ಅವಕಾಶಗಳನ್ನು ಸೃಷ್ಟಿಸುವ ಸಾಧ್ಯತೆಗಳನ್ನು ನಾನಿನ್ನೂ ಪೂರ್ತಿಯಾಗಿ ಮುಗಿಸಿಲ್ಲ. ಅದು ತಿಳಿದರೆ ೧೪೩ನೆಯ ವಿಧಿಯನ್ನು ತಿದ್ದಲು, ನಿರ್ದಿಷ್ಟ ವಿಧಿಯನ್ನು ನಮೂದಿಸಲು ನಾನು ಒಡನೆಯೇ ಸಮ್ಮತಿಸುತ್ತೇನೆ. ಆದರೆ ಅದನ್ನು ಈಗ

ಮಾಡುವ ಹಾಗಿಲ್ಲ. ಆದ್ದರಿಂದ ನನ್ನ ವಿನಂತಿಯೇನೆಂದರೆ ೧೪೩ನೆಯ ವಿಧಿಯಲ್ಲಿ ಹಾಗೆಯೇ ಉಳಿದಿದ್ದರೆ ಆದರಿಂದ ಏನೂ ತಪ್ಪಾಗುವುದಿಲ್ಲ, ಹಾನಿಯಾಗುವುದಿಲ್ಲ. ಅವು ಖಂಡಿತವಾಗಿಯೂ ಅಸಂಗತವಾಗಿಲ್ಲ.

**ಶ್ರೀ ಎಚ್.ವಿ. ಕಾಮತ್ :** ರಾಷ್ಟ್ರಪತಿಯವರಿಗೆದುರಾಗಿ ಅವರ ಸಚಿವರಿಗೆ ಸಂಬಂಧಿಸಿದಂತೆ ಇರುವ ೬೧ (೧)ನೆಯ ವಿಧಿಗೂ ಈ ವಿಧಿಗೂ ಮೂಲಭೂತ ವ್ಯತ್ಯಾಸವಿಲ್ಲವೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಇದೆ, ಏಕೆಂದರೆ ರಾಷ್ಟ್ರಪತಿಯವರಿಗೆ ಯಾವುದೇ ವಿವೇಚನಾಧಿಕಾರವನ್ನು ನೀಡಲು ನಾವು ಇಚ್ಛಿಸುವುದಿಲ್ಲ. ಪ್ರಾಂತೀಯ ಸರಕಾರಗಳು ಕೇಂದ್ರ ಸರಕಾರದ ಅಧೀನತೆಗೆ ಒಳಪಟ್ಟು ಕೆಲಸಮಾಡಬೇಕು. ಆದ್ದರಿಂದ ಅವರು ಕೇಂದ್ರ ಸರಕಾರದ ಅಧೀನರಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಲು ಗವರ್ನರರು ಕೆಲವು ಅಂಶಗಳನ್ನು ಕಾದಿರಿಸಿಕೊಳ್ಳುತ್ತಾರೆ. ಪ್ರಾಂತೀಯ ಸರಕಾರಗಳು ಸಂವಿಧಾನದ ಪ್ರಕಾರ ಅಥವಾ ಕೇಂದ್ರ ಸರ್ಕಾರದ ಅಧೀನದಲ್ಲಿ ಕೆಲಸ ಮಾಡಲು ಇರುವ ನಿಯಮಗಳನ್ನು ಪಾಲಿಸಲಾಗುತ್ತದೆಯೆ ಎಂದು ಗಮನಿಸಲು ರಾಷ್ಟ್ರಪತಿಯವರಿಗೆ ಅವಕಾಶ ಕೊಡಬೇಕು. ಅದಕ್ಕಾಗಿ ಗವರ್ನರರಿಗೆ ವಿವೇಚನಾಧಿಕಾರವಿರಬೇಕು.

**ಶ್ರೀ ಎಚ್.ವಿ. ಕಾಮತ್ :** ಹೀಗೆ ಸಾಮಾನ್ಯ ವಿವೇಚಾನಾಧಿಕಾರಗಳನ್ನು ನೀಡುವುದಕ್ಕೆ ಬದಲಾಗಿ, ಅವಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಕೆಲವು ವಿಧಿಗಳನ್ನು ನಿರ್ದಿಷ್ಟ ಪಡಿಸುವುದು ಉತ್ತಮವಲ್ಲವೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಾನು ಹಾಗೆಯೇ ಹೇಳಿದೆ, ನಾನದಕ್ಕೆ ಸಂತೋಷವಾಗಿ ಸಿದ್ಧನಾಗಿದ್ದೇನೆ. ನಿರ್ದಿಷ್ಟ ವಿಧಿಗಳನ್ನು ಸೇರಿಸಲು ನಾನು ಸಿದ್ಧ. ಆದರೆ, ಗವರ್ನರರಿಗೆ ವಿವೇಚನಾಧಿಕಾರವನ್ನು ನೀಡುವ ವಿಚಾರದಲ್ಲಿ ಸದನವು ಯಾವ ವಿಧಿಗಳನ್ನು ಸಂವಿಧಾನದಲ್ಲಿ ಅಳವಡಿಸಲು ಬಯಸುತ್ತದೆ ಎನ್ನುವುದು ನನಗೆ ತಿಳಿಯಬೇಕು.

**ಶ್ರೀ ಎಚ್.ವಿ.ಕಾಮತ್ :** ಅಲ್ಲಿಯವರೆಗೆ ತಡೆಹಿಡಿದಿರಬಾರದೇಕೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ನಾವು ಪರಿಷ್ಕರಿಸಬಹುದು. ೧೪೩ನೆಯ ವಿಧಿಯನ್ನು ಪರಿಷ್ಕರಿಸಲು ಈ ಸದನವು ಖಂಡಿತ ಸಮರ್ಥವಾಗಿದೆ. ಎಲ್ಲವನ್ನೂ ಪರಿಶೀಲಿಸಿಯಾದ ನಂತರ, ಸದನವು ವಿಧಿಗಳನ್ನು ನಿರ್ದಿಷ್ಟವಾಗಿ ನಮೂದಿಸುವುದು ಉತ್ತಮ ಎಂದು ಭಾವಿಸಿದ ಪಕ್ಷದಲ್ಲಿ ಹಾಗೆ ಮಾಡಬಹುದು. ಇದು ಶುದ್ಧಾಂಗವಾಗಿ ಒಂದು ಪದ ಕಲಹ(logomachy)

(ಎರಡು ತಿದ್ದುಪಡಿಗಳೂ ತಿರಸ್ಕೃತವಾದುವು. ೧೪೩ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

* * * * *

## ವಿಧಿ ೧೪೪

* **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ಹೀಗೆ ಮಂಡಿಸುತ್ತೇನೆ. ೧೪೪ನೆಯ ವಿಧಿಯ (೧)ನೆಯ ಉಪವಾಕ್ಯದ ಬದಲಿಗೆ ಈ ಕೆಳಗಿನಂತೆ ಇಡಬಹುದು.

'೧೪೪(೧) ಮುಖ್ಯಮಂತ್ರಿಯನ್ನು ಗವರ್ನರರು ನೇಮಿಸುತ್ತಾರೆ. ಇತರ ಸಚಿವರನ್ನು ಮುಖ್ಯಮಂತ್ರಿಯವರ ಸಲಹೆಯ ಮೇರೆಗೆ ಗವರ್ನರರು ನೇಮಿಸುತ್ತಾರೆ, ಸಚಿವರು ಗವರ್ನರ ಇಚ್ಛಾವಧಿಯಲ್ಲಿ ಪದವಿಯಲ್ಲಿರುತ್ತಾರೆ.

---

* ಸಿ.ಎ.ಡಿ. ಸಂಪುಟ ೮, ೧ನೇ ಜೂನ್ ೧೯೪೯, ಪುಟ ೫೦೩

ಬಿಹಾರ ಮಧ್ಯಪ್ರಾಂತ್ಯಗಳು ಮತ್ತು ಬೀರಾರ್ ಹಾಗೂ ಒರಿಸ್ಸಾ ರಾಜ್ಯಗಳಲ್ಲಿ ಆದಿವಾಸಿ ಜನರ ಕಲ್ಯಾಣ ಖಾತೆಯನ್ನು ವಹಿಸಿಕೊಂಡ ಒಬ್ಬ ಸಚಿವರಿರುತ್ತಾರೆ. ಅವರು ಅದರ ಜೊತೆಗೆ ಪರಿಶಿಷ್ಟ ಜಾತಿಗಳು ಮತ್ತು ಹಿಂದುಳಿದ ಜಾತಿಗಳ ಕಲ್ಯಾಣ ಹಾಗೂ ಇತರ ಯಾವುದೇ ಕೆಲಸದ ಜವಾಬ್ದಾರಿ ಹೊತ್ತಿರುತ್ತಾರೆ.

(೧–ಎ) ಸಂಪುಟವು ರಾಜ್ಯದ ವಿಧಾನಸಭೆಗೆ ಸಾಮೂಹಿಕ ಉತ್ತರದಾಯಿತ್ವವನ್ನು ಹೊಂದಿರುತ್ತದೆ.'

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಮಾನ್ಯ ಅಂಬೇಡ್ಕರ್ ಅವರು, ೧೪೪ನೇ ವಿಧಿ (೧–ಎ) ಉಪವಾಕ್ಯದ ಪದಗಳಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿ, "ಸಂಪುಟವು" ಎಂಬ ಪದಕ್ಕೆ "ಸಚಿವರ" ಎಂಬುದನ್ನು ಸೇರಿಸಬಹುದು ಎಂದು ಸೂಚಿಸಬಹುದೆ?

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಆಗಬಹುದು, ಅದರಿಂದ ವಿಧಿಯು ೬೨ನೆಯ ವಿಧಿಯ ಸಮಕ್ಕೆ ಬಂದಂತಾಗುತ್ತದೆ. ಈ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಮಹಾವೀರ ತ್ಯಾಗಿ :** ಬಿಹಾರ ಮತ್ತಿತರ ಸ್ಥಳಗಳಿಗೆ ಆ ನಿರ್ದಿಷ್ಟ ಮಂತ್ರಿಯನ್ನು ನೇಮಿಸಲು ವಿಧಾನ ಯಾವುದು? ಅವನನ್ನು ಮುಖ್ಯಮಂತ್ರಿಯ ಸಲಹೆಯಂತೆ ಗವರ್ನರರು ನೇಮಿಸುತ್ತಾರೆಯೇ ಹೇಗೆ– "ಆದರೆ" ಎಂದು ನೀವು ಹೇಳಿರುವುದರಿಂದ ಮೊದಲು ನಾವು ಹೇಳಿರುವ ಮಾತುಗಳು ಏನೇನಿದ್ದರೂ ಅವು ಈ ಮಂತ್ರಿಗಳಿಗೆ ಅನ್ವಯಿಸುವುದಿಲ್ಲ ಎಂದರ್ಥವಾಗುತ್ತದೆ.

**ಡಾ. ಬಿ.ಆರ್. ಅಂಬೇಡ್ಕರ್:** ಅದು ಹೇಳುವುದು (೧)ನೇ ಉಪವಾಕ್ಯದಂತೆ ನೇಮಿತವಾದ ಮಂತ್ರಿಗಳ ಪೈಕಿ ಎಂದು. ಅಂದರೆ, ಅವರನ್ನು ಗವರ್ನರರು ಮುಖ್ಯಮಂತ್ರಿಯ ಸಲಹೆಯ ಮೇರೆಗೆ ನೇಮಕ ಮಾಡುತ್ತಾರೆ. ಒಬ್ಬ ಸಚಿವರು ಈ ಖಾತೆಯನ್ನು ವಹಿಸಿಕೊಳ್ಳುತ್ತಾರೆ ಎಂದರ್ಥ.

* * * * *

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ಹೀಗೆ ಮಂಡಿಸಬಯಸುತ್ತೇನೆ:

"೧೪೪ನೆಯ ವಿಧಿಯ (೪)ನೆಯ ಉಪವಾಕ್ಯದಲ್ಲಿ ತನ್ನ ಸಚಿವರನ್ನು ಆರಿಸಿಕೊಳ್ಳುವುದರಲ್ಲಿ ಮತ್ತು ಅವರೊಂದಿಗೆ ತನ್ನ ಸಂಬಂಧಗಳಲ್ಲಿ" ಎಂಬ ಪದಗಳಿಗೆ ಬದಲಾಗಿ "ತನ್ನ ಸಚಿವರ ಆಯ್ಕೆಯಲ್ಲಿ ಮತ್ತು ಸಂವಿಧಾನದ ಪ್ರಕಾರ ತನ್ನ ಇತರ ಕರ್ತವ್ಯಗಳ ನಿರ್ವಹಣೆಯಲ್ಲಿ" ಎಂಬ ಪದಗಳನ್ನು ಇಟ್ಟುಕೊಳ್ಳಬಹುದು."

ಮಾನ್ಯರೆ, ಇದು ಒಂದು ಶಾಬ್ದಿಕ ತಿದ್ದುಪಡಿಯಲ್ಲದೆ ಬೇರೆಯೇನೂ ಅಲ್ಲ.

* * * * *

*__ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :__ ಮಾನ್ಯರೆ, ಹೀಗೆ ಮಂಡಿಸುತ್ತೇನೆ. ೧೪೪ನೆಯ ವಿಧಿ (೬)ನೆಯ ಉಪವಾಕ್ಯವನ್ನು ಕೈಬಿಡಬಹುದು."

**ಶ್ರೀ ಬ್ರಜೇಶ್ವರ ಪ್ರಸಾದ್ :** ಏಕೆ?

**ಡಾ.ಬಿ.ಆರ್. ಅಂಬೇಡ್ಕರ್ :** ತಮ್ಮ ಮುಂದಿಡುತ್ತಿರುವ ಕೆಲವು ವಿಧಿಗಳಲ್ಲಿ ವಿವರಿಸುವುದಕ್ಕಿಂತ ಹೆಚ್ಚಿನ ವಿವೇಚನಾಧಿಕಾರವನ್ನು ಕೊಡಲು ಬಯಸುವುದಿಲ್ಲವಾದ್ದರಿಂದ.

* * * * *

---

* ಅದೇ ಪು. ೫೦೭

****ಶ್ರೀ ಜಸಪತರಾಯ್ ಕಪೂರ್ :** ಯಾರಾದರೂ ಸದಸ್ಯರಿಗೆ ಯಾವುದಾದರೂ ತಾಂತ್ರಿಕ ಆಕ್ಷೇಪಣೆಯಿದ್ದರೆ ಅದು ಬೇರೆ ವಿಚಾರ, ಆದರೆ ಈ ತಿದ್ದುಪಡಿಯು ಡಾ. ಅಂಬೇಡ್ಕರ್ ರವರಿಗೆ ಸಮ್ಮತವಾಗಿದೆ. ಹಾಗೆಯೇ ನಾನು ಮಾತನಾಡಿರುವ ಇತರೆ ಹಲವು ಸದಸ್ಯರಿಗೂ ಒಪ್ಪಿಗೆಯಾಗಿದೆ. ಇದಕ್ಕೆ ಅನುಮತಿ ನೀಡುವುದರಲ್ಲಿ ಯಾವ ಹಾನಿಯೂ ಇಲ್ಲವೆಂದು ತೋರುತ್ತದೆ. ಡಾ. ದೇಶಮುಖ್ ಅವರು ಈ ತಿದ್ದುಪಡಿಯನ್ನು ವಿರೋಧಿಸುತ್ತಿದ್ದರೆ ಅವರು ಹೇಳಬೇಕು. ಸದನವು ತಿದ್ದುಪಡಿಯನ್ನು ತಿರಸ್ಕರಿಸುವಂತೆ ಒಪ್ಪಿಸಲು ಅವರಿಗೆ ಅವಕಾಶವಿರುತ್ತದೆ.

**ಅಧ್ಯಕ್ಷರು :** ಆಗ ಮತ್ತೆ ಚರ್ಚೆ ಪ್ರಾರಂಭವಾಗುವುದಿಲ್ಲವೆ?

**ಡಾ.ಪಿ.ಎಸ್.ದೇಶಮುಖ್ :** ಹೌದು. ಡಾ.ಅಂಬೇಡ್ಕರ್ ಅವರು ಒಪ್ಪುವುದಾದರೆ ಇನ್ನೊಂದು ದಾರಿಯೂ ಇದೆ. ಅವಕಾಶವನ್ನು ಪ್ರತ್ಯೇಕವಾಗಿ ಮತಕ್ಕೆ ಹಾಕಬಹುದು. ಅದು ತಿರಸ್ಕೃತವಾದರೆ ಅದನ್ನು ತೆಗೆದುಹಾಕಬಹುದು.

**ಅಧ್ಯಕ್ಷರು :** ಹೌದು, ಅದೊಂದು ದಾರಿಯಿದೆ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಅವಕಾಶವನ್ನು ತೆಗೆದುಹಾಕುವುದಕ್ಕೆ ನಾನು ಒಪ್ಪುವುದಿಲ್ಲ, ಆದರೆ ಅದನ್ನು ಈ ವಿಧಿಯಿಂದ ತೆಗೆದು ಆದೇಶಗಳ ದಸ್ತಾವೇಜಿಗೆ (Instrument of instruction) ವರ್ಗಾಯಿಸಲು ಸಿದ್ಧನಾಗಿದ್ದೇನೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಈ ವಿಧಿಯನ್ನು ಹಾಗೆಯೇ ತಡೆಹಿಡಿದಿರಬಹುದೆಂದು ನಾನು ಸೂಚಿಸಬಹುದೆ?

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಏಕೆ? ಇಷ್ಟು ದೀರ್ಘವಾದ ಚರ್ಚೆ ನಡೆಸಿದ ಮೇಲೆ?

**ಅಧ್ಯಕ್ಷರು :** ಈಗ ಪ್ರಶ್ನೆ ಇದು ಇಲ್ಲಿರಬೇಕೆ ಅಥವಾ ಆದೇಶಗಳ ದಸ್ತಾವೇಜಿಗೆ ವರ್ಗಾಯಿಸಬೇಕೆ ಎನ್ನುವುದು.....

* **ಅಧ್ಯಕ್ಷರು :** ಡಾ.ಅಂಬೇಡ್ಕರ್

* **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ನಾನು ಮಂಡಿಸಿದ ಅನೇಕ ತಿದ್ದುಪಡಿಗಳ ಮೇಲೆ ನಡೆದ ಚರ್ಚೆಯಿಂದ ನಾನು ಗಮನಿಸಿರುವುದು ಉತ್ತರ ಕೊಡಬೇಕಾದ ನಾಲ್ಕು ಅಂಶಗಳನ್ನು ಮಾತ್ರ. ಮೊದಲನೆಯ ಅಂಶ ಇದು ಸಚಿವರು ಇಚ್ಛಾವಧಿಯಲ್ಲಿ ಅಧಿಕಾರದಲ್ಲಿತ್ತಾರೆ ಎಂಬ ಅವಕಾಶಕ್ಕೆ ಬದಲಾಗಿ, ಸದನದ ಬಹುಮತದ ವಿಶ್ವಾಸವಿರುವವರೆಗೆ ಮಾತ್ರ ಅಧಿಕಾರದಲ್ಲಿರುತ್ತಾರೆ ಎಂಬ ಅವಕಾಶವನ್ನು ರಚಿಸಬೇಕು ಎನ್ನಿಸುವುದು. ಸಂವಿಧಾನದ ಉದ್ದೇಶವೂ ಕೂಡ, ಸಚಿವ ಸಂಪುಟವು ಬಹುಮತ ವಿಶ್ವಾಸವನ್ನು ಹೊಂದಿರುವವರೆಗೆ ಮಾತ್ರ ಅಧಿಕಾರದಲ್ಲಿರುತ್ತದೆ ಎನ್ನುವುದೇ ಆಗಿದೆ ಎಂಬುದರಲ್ಲಿ ನನಗೆ ಸಂದೇಹವಿಲ್ಲ. ಆ ತತ್ವದ ಮೇಲೆಯೇ ಸಂವಿಧಾನವು ವರ್ತಿಸುವುದು. ಅದನ್ನು ಅಷ್ಟು ಸ್ಪಷ್ಟವಾದ ಮಾತುಗಳಲ್ಲಿ ನಾವು ಏಕೆ ನಿರೂಪಿಸಿಲ್ಲವೆಂದರೆ, ಪಾರ್ಲಿಮೆಂಟರಿ ಸರಕಾರ ಪದ್ಧತಿಯನ್ನು ಹೇಳುವ ಯಾವ ಸಂವಿಧಾನದಲ್ಲಿಯೂ ಆ ರೀತಿಯಾಗಿ, ಆ ಪದಗಳಲ್ಲಿ ಅದನ್ನು ಹೇಳಿಲ್ಲವಾದ್ದರಿಂದ "ಇಚ್ಛಾವಧಿಯಲ್ಲಿ" ಎಂದರೆ ಯಾವಾಗಲೂ ಸಚಿವ ಸಂಪುಟವು ಬಹುಮತ ವಿಶ್ವಾಸವನ್ನು ಕಳೆದುಕೊಂಡಾಗ "ಇಚ್ಛಾ" ಮುಂದುವರಿಯುವುದಿಲ್ಲ

---

* ಅದೇ ಪು. ೫೧೯

* ಅದೇ, ಪು. ೫೨೦–೨೧

ಎಂದು ಅರ್ಥಕೊಡುತ್ತದೆ. ಬಹುಮತದ ವಿಶ್ವಾಸವನ್ನು ಕಳೆದುಕೊಂಡ ಘಳಿಗೆಯೇ ರಾಷ್ಟ್ರಪತಿಯವರು ತಮ್ಮ 'ಇಚ್ಚೆ'ಯನ್ನು ಚಲಾಯಿಸಿ ಸಚಿವ ಸಂಪುಟವನ್ನು ವಜಾಮಾಡುತ್ತಾರೆ ಎಂದು ಭಾವಿಸಲಾಗುತ್ತದೆ. ಆದ್ದರಿಂದ ಎಲ್ಲಾ ಜವಾಬ್ದಾರಿ ಸರಕಾರಗಳಿಗೂ ಸಂಬಂಧಿಸಿದಂತೆ ಉಪಯೋಗಿಸುವ ಅದೇ ಬಗೆಯ ಪದಗುಚ್ಛವನ್ನು ಬಿಟ್ಟು ಬೇರೆ ರೀತಿಯಲ್ಲಿ ಬರೆಯುವುದು ಅನಗತ್ಯವಾಗುತ್ತದೆ. ಇನ್ನು ನನ್ನ ಮಿತ್ರರಾದ ಪ್ರೊ. ಸಕ್ಸೇನಾ ಅವರ "ಕೆಳಮನೆಯ" ಎಂಬ ಪದಗಳನ್ನು ಬದಲಾಯಿಸಬೇಕೆಂದು ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ತೋರುತ್ತದೆ. ಏಕೆಂದರೆ, ಸಂವಿಧಾನದ ಅವಕಾಶಗಳ ಪ್ರಕಾರ, ಪ್ರಧಾನಮಂತ್ರಿಯು ಕೆಳಮನೆಯಿಂದ ಮಾತ್ರವಲ್ಲ, ಮೇಲ್ಮನೆಯಿಂದಲೂ ತನ್ನ ಸಚಿವರನ್ನು ಆಯ್ಕೆ ಮಾಡಿಕೊಳ್ಳಬಹುದು. ಸಚಿವರನ್ನು ಕೆಳಮನೆಯಿಂದ ಮಾತ್ರವೇ ತೆಗೆದುಕೊಳ್ಳಬೇಕು ಮೇಲ್ಮನೆಯಿಂದ ಅಲ್ಲ ಎಂಬುದು ಯೋಚನೆಯಲ್ಲ. ಆದ್ದರಿಂದ ಒಬ್ಬ ಮಂತ್ರಿಯನ್ನು, ಆತನು ಚುನಾಯಿತನಲ್ಲವಾಗಿದ್ದರೆ ಆರು ತಿಂಗಳ ಅವಧಿಗೆ ನೇಮಿಸಿಕೊಳ್ಳಬಹುದು ಎಂದು ಅವಕಾಶವನ್ನು ಎರಡು ಸಂದರ್ಭಗಳನ್ನು ವ್ಯಾಪಿಸುವಂತೆ ಇರಬೇಕು. ಈ ಕಾರಣದಿಂದಾಗಿ ನಾನು, ಅವರು ಸೂಚಿಸಿರುವ ತಿದ್ದುಪಡಿಯನ್ನು ಒಪ್ಪುವುದಿಲ್ಲ.

ಸಾಕಷ್ಟು ಚರ್ಚೆಯಾಗಿರುವ ಮೂರನೆಯ ತಿದ್ದುಪಡಿಯನ್ನು ಮಿತ್ರರಾದ ಶ್ರೀ ಕಾಮತ್ ಹಾಗೂ ಪ್ರೊ. ಶಹಾ ಮಂಡಿಸಿದ್ದಾರೆ. ಸಣ್ಣಪುಟ್ಟ ಹೊಂದಾಣಿಕೆಗಳಿಂದ ಅವು ಒಂದೇ ಅರ್ಥವನ್ನು ಕೊಡುತ್ತವೆ. ಈ ಸಂಬಂಧವಾಗಿ ನಾನು ಹೇಳಬಯಸುವುದು ಇಷ್ಟು ಸದನವು ೬೨ನೇ ವಿಧಿಯ ೧೩೩೨ನೆಯ ಸಂಖ್ಯೆಯ ತಿದ್ದುಪಡಿಯನ್ನು ನೆನಪು ಮಾಡಿಕೊಳ್ಳಬೇಕು. ಅದು ೧೪೪ನೆಯ ವಿಧಿಯ ಅವಕಾಶಕ್ಕೆ ಸದೃಶವಾದುದು. ಅದನ್ನು ಪ್ರೊ. ಶಹಾ ಮಂಡಿಸಿದ್ದರು, ಗಣನೀಯವಾದಷ್ಟು ದೀರ್ಘಸಮಯ ಅದರ ಮೇಲೆ ಚರ್ಚೆ ನಡೆಯಿತು. ಆ ಸಂದರ್ಭದಲ್ಲಿ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು. ಆದ್ದರಿಂದ ಈಗ ಅದಕ್ಕಿಂತ ಬೇರೆಯಾಗಿ ಹೆಚ್ಚಾಗಿ ಕೂಡಿಸಬೇಕಾದುದು ಅನಗತ್ಯ ಎಂದು ನನಗೆ ತೋರುತ್ತದೆ.

**ಶ್ರೀ ಎಚ್.ವಿ.ಕಾಮತ್ :** ನನ್ನ ಮಾನ್ಯ ಮಿತ್ರ ಡಾ.ಅಂಬೇಡ್ಕರ್ ಅವರು ಆಗ ತಿದ್ದುಪಡಿಯು ಅವರ ದೃಷ್ಟಿಯಲ್ಲಿ ಸಮಗ್ರವಾಗಿರಲಿಲ್ಲ ಎಂಬ ಕಾರಣದಿಂದ ಒಪ್ಪಿಕೊಳ್ಳಲಿಲ್ಲ. ಈಗ ಅದು ಹೆಚ್ಚು ಸಮಗ್ರವಾಗಿದೆ.

**ಅಧ್ಯಕ್ಷರು :** ನೀವು ಈಗಾಗಲೇ ಅದನ್ನೆಲ್ಲಾ ಹೇಳಿದ್ದೀರಿ.

**ಡಾ.ಬಿ.ಆರ್. ಅಂಬೇಡ್ಕರ್ :** ನಾಲ್ಕನೆಯ ಅಂಶ ನನ್ನ ಮಿತ್ರರಾದ ಶ್ರೀ ಜೈಪಾಲ್ ಸಿಂಗ್ ಎತ್ತಿರುವುದು, ಸ್ವಲ್ಪ ಮಟ್ಟಿಗೆ ಶ್ರೀ ರೋಹಿಣಿ ಕುಮಾರ ಚೌಧರಿಯವರು ಹೇಳಿರುವುದು. ಈ ನಿರ್ದಿಷ್ಟ ಉಪವಾಕ್ಯವನ್ನು ಕರಡು ಸಂವಿಧಾನದಲ್ಲಿ ಸೇರಿಸಿರುವುದಕ್ಕೆ ಕಾರಣವನ್ನು ಸಂವಿಧಾನ ಸಭೆಯ ಅಲ್ಪಸಂಖ್ಯಾತ ವರ್ಗಗಳ ಸಮಿತಿಯು ಬುಡಕಟ್ಟು ಜನರನ್ನು ಕುರಿತಾಗಿ ರಚಿಸಿದ ಉಪಸಮಿತಿಯ ಶಿಫಾರಸುಗಳಲ್ಲಿ ನೋಡಬಹುದು. ಆ ಸಮಿತಿಯು ನೀಡಿದ ವರದಿಯಲ್ಲಿ "ಶಾಸನಬದ್ಧ ಶಿಫಾರಸುಗಳು" ಎಂಬ ಹೆಸರಿನ ಒಂದು ಅನುಬಂಧವಿದೆ. ಪ್ರಸ್ತುತ ವಿಧಿಯಲ್ಲಿ ಅಳವಡಿಸಿರುವ ಅವಕಾಶವು ಆ ಸಮಿತಿಯು ಮಾಡಿದ ಸಲಹೆ ಮತ್ತು ಶಿಫಾರಸುಗಳ ಮತ್ತು ಬಿರಾರ್ ಹಾಗೂ ಒರಿಸ್ಸಾ ಪ್ರಾಂತಗಳಲ್ಲಿ ಬುಡಕಟ್ಟುಗಳ ಕಲ್ಯಾಣಕ್ಕಾಗಿಯೇ ಪ್ರತ್ಯೇಕವಾಗಿ ಒಬ್ಬ ಸಚಿವರು ಇರತಕ್ಕದ್ದು ಎಂದು. ಆ ಸಚಿವರು ಅದರ ಜೊತೆಗೇ, ಪರಿಶಿಷ್ಟ ಜಾತಿಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕಾರ್ಯಗಳು ಮತ್ತು ಇತರ ಹೊಣೆಗಾರಿಕೆಗಳನ್ನು "ಶಾಸನಬದ್ಧ ಶಿಫಾರಸು" ಎಂಬ ಹೆಸರಿನಲ್ಲಿ ವರದಿಯ ಭಾಗವಾಗಿದ್ದುದರಿಂದ ಈ ಅವಕಾಶವನ್ನು ಪ್ರಕಟಿಸದೆ ಬೇರೆ ದಾರಿ ಉಳಿದಿರಲಿಲ್ಲ. ಆ ಸಮಿತಿಯ ಉದ್ದೇಶವೇ ಈ ಅವಕಾಶವನ್ನು ಸಂವಿಧಾನದಲ್ಲೇ ಸೇರಿಸಬೇಕು ಎಂಬುದಾಗಿತ್ತು. ಅದರ

ಬೇರೆ ಯಾವ ಭಾಗಕ್ಕೂ ವರ್ಗಾಯಿಸಬಾರದೆಂದಿತ್ತು. ಆದ್ದರಿಂದಲೇ ಕ.ರ.ಸಮಿತಿಯು ಆ ಸಮಿತಿಯ ಶಿಫಾರಸನ್ನು ಅನುಸರಿಸಿದೆ ಅಷ್ಟೆ.

ನನ್ನ ಮಿತ್ರರಾದ ಶ್ರೀ ಜೈಪಾಲ್‌ಸಿಂಗ್ ಒಂದು ಸೂಚನೆ ಕೊಟ್ಟಿದ್ದಾರೆ. ಮುಂಬಯಿಯನ್ನು ಇಲ್ಲಿ ಸೇರಿಸಬೇಕು. ಮುಂಬೈ ಪ್ರೆಸಿಡೆನ್ಸಿಗೆ ಹಲವು ಪ್ರದೇಶಗಳನ್ನು ವಿಲೀನಗೊಳಿಸಿದುದರ ಫಲವಾಗಿ ಬುಡಕಟ್ಟು ಜನರ ಸಂಖ್ಯೆಯೂ ಅಧಿಕವಾಗಿರುವುದರಿಂದ ಇದು ಅಗತ್ಯ ಎಂದು ಅವರು ಹೇಳಿದ್ದಾರೆ. ಆದರೆ ಈ ಹಂತದಲ್ಲಿ ಅದನ್ನು ಒಪ್ಪಲು ಸಾಧ್ಯವಿಲ್ಲ ಎಂದು ತಿಳಿಸಲು ವಿಷಾದಿಸುತ್ತೇನೆ. ಏಕೆಂದರೆ ಮುಂಬಯಿಯ ಸಚಿವ ಸಂಪುಟದ ಸಲಹೆಯನ್ನು ಈ ವಿಷಯದಲ್ಲಿ ಪಡೆಯುವುದು ಅಗತ್ಯವಾಗಿದೆ. ಕಳೆದ ಕೆಲವು ದಿನಗಳಿಂದ ಸಂವಿಧಾನ ಸಭೆಯಲ್ಲಿ ಉಪಸ್ಥಿತರಾಗಿದ್ದ ನನ್ನ ಮಿತ್ರರಾದ ಮಾನ್ಯ ಶ್ರೀ ಖೇರ್ ಅವರು ದುರದೃಷ್ಟವಶಾತ್ ಈಗ ಇಲ್ಲಿ ಇಲ್ಲ. ಆದ್ದರಿಂದ ಈ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲಾರೆ.

**ಶ್ರೀ ಎಚ್.ವಿ. ಕಾಮತ್ :** ನನ್ನ ತಿದ್ದುಪಡಿಗೆ ಸಂಬಂಧಿಸಿದಂತೆ, ಡಾ. ಬಿ.ಆರ್. ಅಂಬೇಡ್ಕರ್‌ರವರು ಹಿಂದೆ ವ್ಯಕ್ತಪಡಿಸಿದ ದೃಷ್ಟಿಯಿಂದ ಅರ್ಥಮಾಡಿಕೊಂಡಿದ್ದಾರೆಯೆ – ಅದನ್ನು ಬಿಟ್ಟಿದ್ದಾರೆಯೇ!

**ಮಾನ್ಯ ಅಧ್ಯಕ್ಷರು :** ಈ ಬಗೆಯ ಪಾಟೀ ಸವಾಲಿಗೆ ಅನುಮತಿ ಕೊಡಲು ಸಾಧ್ಯವಿಲ್ಲ. ಈಗ ನಾನು ತಿದ್ದುಪಡಿಗಳನ್ನು ಪರಿಶೀಲನೆಗೆ ಎತ್ತಿಕೊಳ್ಳುತ್ತೇನೆ.

ಈ ೧೪೪ನೆಯ ವಿಧಿಯ (೧)ನೆಯ ಉಪವಾಕ್ಯಕ್ಕೆ ಸಂಬಂಧಪಡುವಂತಹ ೨೧೭೪ ಮತ್ತು ೨೧೭೫ನೆಯ ಎರಡು ತಿದ್ದುಪಡಿಗಳಿವೆ. ಮಿ. ತಾಹಿರ್ ಹಾಗೂ ಮಿ. ಮಹಮದ್ ಇಸ್ಮೈಲ್ ಅವರು ಮಂಡಿಸಿದ್ದಾರೆ.

ಡಾ. ಅಂಬೇಡ್ಕರ್ ಅವರ ೨೧೬೫ನೆಯ ತಿದ್ದುಪಡಿಯು ಅಂಗೀಕೃತವಾದ ಪಕ್ಷದಲ್ಲಿ ಬಹುಶಃ ಅವರೆಡೂ ತಮಗೆ ತಾವೇ ಬಿದ್ದುಹೋಗುತ್ತವೆ. ಆದ್ದರಿಂದ ಈಗ ನಾನು ಡಾ. ಅಂಬೇಡ್ಕರ್ ಅವರು ಮಂಡಿಸಿರುವ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತಿದ್ದೇನೆ. (ಈ ಮೊದಲು ನಿರೂಪಿಸಿದ ಡಾ. ಅಂಬೇಡ್ಕರ್ ಅವರ ಎಲ್ಲಾ ತಿದ್ದುಪಡಿಗಳೂ ಅಂಗೀಕೃತವಾದುವು, ಮಿಕ್ಕವು ತಿರಸ್ಕೃತವಾದವು. ತಿದ್ದುಪಡಿಗೊಂಡಂತೆ ೧೪೪ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

* * * * *

## ವಿಧಿ ೧೪೫

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಈಗ ನಡೆದಿರುವ ಚರ್ಚೆಗೆ ನಾನು ಹೆಚ್ಚಿಗೆ ಏನನ್ನಾದರೂ ಕೂಡಿಸಬೇಕಾದ ಅಗತ್ಯ ಕಾಣುತ್ತಿಲ್ಲ. ನಾನು ಹೇಳಬಹುದಾದುದೆಲ್ಲ ಇಷ್ಟೆ. ಶ್ರೀ ನಜೀರುದ್ದೀನ್ ಅಹಮದ್‌ರವರ ೨೨೧೦ನೆಯ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ನಾನು ಸಿದ್ಧನಾಗಿದ್ದೇನೆ.

* **ಮಾನ್ಯ ಅಧ್ಯಕ್ಷರು :** ಹಾಗಾದರೆ ೨೨೧೧ನೆಯದನ್ನು ತನ್ನಲ್ಲಿಯೇ ಒಳಗೊಂಡಿರುವ ೨೨೧೦ನೆಯ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ, (ಶ್ರೀ ನಜೀರುದ್ದೀನ್ ಅಹಮದ್ ಅವರ ಈ ಕೆಳಗಿನ ತಿದ್ದುಪಡಿಯನ್ನು

---

* ಸಿ.ಎ.ಡಿ. ಸಂಪುಟ ೮, ೧ನೇ ಜೂನ್ ೧೯೪೯, ಪುಟ ೫೨೮.

ಡಾ. ಅಂಬೇಡ್ಕರ್ ಅವರೂ ಸದನವೂ ಅಂಗೀಕರಿಸಿದರು.)

"೧೪೫ನೆಯ ವಿಧಿಯ (೨) ಮತ್ತು (೪)ನೆಯ ಉಪವಾಕ್ಯಗಳ ಬದಲಿಗೆ ಈ ಕೆಳಗಿನವುಗಳನ್ನು ಇರಿಸಬಹುದು:–

"(೩) ಅಡ್ವೊಕೇಟ್–ಜನರಲ್ ಗವರ್ನರರ ಇಚ್ಛಾವಧಿಯಲ್ಲಿ ಅಧಿಕಾರದಲ್ಲಿರುತ್ತಾರೆ. ಮತ್ತು ಗವರ್ನರರು ನಿಗದಿಪಡಿಸುವ ಸಂಭಾವನೆಯನ್ನು ಪಡೆಯುತ್ತಾರೆ."

(ತಿದ್ದುಪಡಿಗೊಂಡ ೧೪೫ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ – ೧೪೬

* **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ತಿದ್ದುಪಡಿಯನ್ನು ಒಪ್ಪುವುದಿಲ್ಲ. ೧೪೬ನೆಯ ವಿಧಿಯು ೧೩೦ನೆಯ ವಿಧಿಯ ತಾರ್ಕಿಕ ಪರಿಣಾಮ ಮಾತ್ರವಾಗಿವೆ. ೧೩೦ನೆಯ ವಿಧಿಯು, ರಾಜ್ಯದ ಕಾರ್ಯಾಂಗಾಧಿಕಾರವು ಗವರ್ನರಲ್ಲಿದೆ ಎಂದು ಹೇಳುತ್ತದೆ. ಹಾಗಿರುವಾಗ ಅದರ ಏಕೈಕ ತಾರ್ಕಿಕ ತೀರ್ಮಾನವೆಂದರೆ, ಕಾರ್ಯಾಂಗದ ಕಾರ್ಯಪ್ರವರ್ತನೆಯೆಲ್ಲವೂ ೧೪೬ನೆಯ ವಿಧಿಯಲ್ಲಿ ನಿರೂಪಿಸಿರುವಂತೆ ಗವರ್ನರರ ಹೆಸರಿನಲ್ಲಿಯೇ ನಡೆಯತಕ್ಕದ್ದು.

ನನ್ನ ಮಾನ್ಯ ಮಿತ್ರರಾದ ಪ್ರೊ. ಶಹಾ ಅವರ ಅಭಿಪ್ರಾಯಗಳಿಗೆ ಸಂಬಂಧಿಸಿದಂತೆ, ಹಿಂದಿನ ಆಳ್ವಿಕೆಯಲ್ಲಿ ಕಾರ್ಯಾಂಗದ ಸಮಸ್ತ ಕಾರ್ಯಚಟುವಟಿಕೆಗಳು ಭಾರತ ಸರಕಾರದ ಹೆಸರಿನಲ್ಲಿ ನಡೆಯುತ್ತಿದ್ದುವು ಎಂದು ಅವರು ಹೇಳುತ್ತಾರೆ. ಇದಕ್ಕೆ ನನ್ನ ಉತ್ತರ ಹೀಗಿದೆ : ಹಿಂದಿನ ಆಡಳಿತ ವ್ಯವಸ್ಥೆಯಲ್ಲಿ ಭಾರತದ ಸಿವಿಲ್ ಮತ್ತು ಮಿಲಿಟರಿ ಆಡಳಿತವು ಗವರ್ನರ್ ಜನರಲ್ಲರಿಗಿರಲಿಲ್ಲ, ಸಚಿವ ಮಂಡಳಿಯ ಸಲಹೆಯ ಮೇರೆಗೆ ಗವರ್ನರ್ ಜನರಲ್ಲರಿಗಿತ್ತು (ಗವರ್ನರ್ ಜನರಲ್ ಇನ್ ಕೌನ್ಸಿಲ್). ಆದ್ದರಿಂದ ಕಾರ್ಯಸಮಸ್ತವೂ ಭಾರತ ಸರ್ಕಾರದ ಹೆಸರಿನಲ್ಲಿ ನಡೆಯುತ್ತಿದ್ದಿತು. ಆದರೆ ಇಂದು ಪರಿಸ್ಥಿತಿಯು ೧೩೦ನೆಯ ವಿಧಿಗೆ ಸಂಬಂಧಿಸಿದಂತೆ ಪೂರ್ತಿ ಬದಲಾಗಿದೆ.

(ಯಾವ ತಿದ್ದುಪಡಿಯೂ ಅಂಗೀಕೃತವಾಗಲಿಲ್ಲ. ೧೪೬ನೆಯ ತಿದ್ದುಪಡಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ – ೧೪೭

** **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ಈ ೧೪೭ನೇ ವಿಧಿಯ ವಿಷಯವಾಗಿ ಇಷ್ಟು ಉದ್ವೇಗಪೂರ್ಣವಾದ ಚರ್ಚೆ ನಡೆದಿರುವುದನ್ನು ನೋಡಿ ನನಗೆ ತುಂಬಾ ಆಶ್ಚರ್ಯವಾಗಿದೆ. ಈ ೧೪೭ನೆಯ ವಿಧಿಯು ಈಗಾಗಲೇ ಸದನವು ಅಂಗೀಕರಿಸಿರುವ ೬೫ನೆಯ ವಿಧಿಯ ತದ್ವತ್ ನಕಲಾಗಿದೆ ಎಂಬುದನ್ನು ಸದನಕ್ಕೆ ನೆನಪು ಕೊಡಬಯಸುತ್ತೇನೆ. ೧೪೭ನೆಯ ವಿಧಿಯು ಗವರ್ನರರಿಗೆ ಯಾವ

---

* ಅದೇ, ೨ ಜೂನ್ ೧೯೪೯, ಪು. ೫೩೨

** ಸಿ.ಎ.ಡಿ. ಸಂ. ೮, ೨ನೇ ಜೂನ್ ೧೯೪೯, ಪುಟ. ೫೪೫–೪೭

ಅಧಿಕಾರವನ್ನು ಕೊಡಲು ಉದ್ದೇಶಿಸಿದೆಯೋ ಅದೇ ಅಧಿಕಾರವನ್ನು ೬೫ನೆಯ ವಿಧಿಯು ರಾಷ್ಟ್ರಪತಿಯವರಿಗೆ ನೀಡಿದೆ. ಆದ್ದರಿಂದ ೬೫ನೆಯ ವಿಧಿಯು ಸದನದ ಮುಂದಿದ್ದಾಗ ನಡೆದ ಚರ್ಚೆಯೇ ೧೪೪ನೆಯ ವಿಧಿಗೂ ಸಾಕಾಗುತ್ತದೆ ಎಂದು ನಾನು ಯೋಚಿಸಬೇಕಾಗಿತ್ತು.

**ಶ್ರೀ ಎಚ್.ವಿ. ಕಾಮತ್ :** ರಾಷ್ಟ್ರಪತಿಯವರು ಚುನಾಯಿತರಾಗುತ್ತಾರೆ, ಗವರ್ನರರು ನಾಮಕೃತರಾಗುತ್ತಾರೆ ಎಂಬುದನ್ನು ಮಾನ್ಯ ಡಾ. ಅಂಬೇಡ್ಕರ್ ಅವರಿಗೆ ನೆನಪು ಮಾಡಿಕೊಡಲೆ?..... (ತಡೆ)

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಚರ್ಚೆ ನಡೆದಿದೆ. ಹಲವು ಸದಸ್ಯರಿಗೆ ಈ ೧೪೭ನೆಯ ವಿಧಿಯ ಹಿಂದೆ, ಪ್ರಾಂತಗಳಲ್ಲಿನ ಸಚಿವರನ್ನು ಸಂಪುಟಗಳನ್ನು ಗಂಡಾಂತರಕ್ಕೆ ಒಳಪಡಿಸುವಂತಹ ಏನೋ ಇದೆ ಎಂದು ಆಲೋಚಿಸುತ್ತಿರುವಂತೆ ತೋರುತ್ತಿದೆ. ಆದ್ದರಿಂದ ನಾನು ಅದಕ್ಕೆ ಸ್ವಲ್ಪ ವಿವರಣೆ ಕೊಡಬಯಸುತ್ತೇನೆ.

ಸದನವು ಗಮನದಲ್ಲಿಟ್ಟುಕೊಳ್ಳಬೇಕಾದ ಮೊದಲನೆಯ ಅಂಶ ಇದು. ಸಂವಿಧಾನದ ಪ್ರಕಾರ ಗವರ್ನರರು ತಾನಾಗಿ ನಿರ್ವಹಿಸಬಹುದಾದ ಯಾವ ಕರ್ತವ್ಯವೂ ಇಲ್ಲ; ಯಾವುದೇ ಕೆಲಸವಿಲ್ಲ. ಆದರೆ ಅವರು ನಿರ್ವಹಿಸಬೇಕಾದ ಕೆಲವು ಕರ್ತವ್ಯಗಳಿವೆ. ಸದನವು ಈ ವ್ಯತ್ಯಾಸವನ್ನು ಮನಸ್ಸಿನಲ್ಲಿಟ್ಟುಕೊಂಡರೆ ಮೇಲು ಎಂದು ತನ್ನ ಭಾವನೆ. ಈ ವಿಧಿಯು ಯಾವುದೇ ವಿಷಯದ ಮೇಲೆ ಸಚಿವ ಸಂಪುಟವನ್ನು ಮೀರಿ ನಡೆದುಕೊಳ್ಳುವ ಅಧಿಕಾರವನ್ನು ಗವರ್ನರರಿಗೆ ಕೊಡುವುದಿಲ್ಲ. ಈ ವಿಧಿಯ ಪ್ರಕಾರವೂ ಗವರ್ನರು ಸಚಿವ ಸಂಪುಟದ ಸಲಹೆಯನ್ನು ಒಪ್ಪಿಕೊಳ್ಳಲೇಬೇಕು. ಅದನ್ನು ಮರೆಯಬಾರದು ಎಂದು ನನ್ನ ಅಭಿಪ್ರಾಯ. ಈ ವಿಧಿಯು ಎಲ್ಲೂ (ಎ) ಉಪವಾಕ್ಯದಲ್ಲಾಗಲಿ, (ಬಿ) ಅಥವಾ (ಸಿ) ಉಪವಾಕ್ಯಗಳಲ್ಲಾಗಲಿ ಯಾವುದೇ ನಿರ್ದಿಷ್ಟ ಸನ್ನಿವೇಶಗಳಲ್ಲಿಯೂ ಗವರ್ನರರು ಸಚಿವ ಸಂಪುಟದ ನಿರ್ಧಾರವನ್ನು ಅತಿಕ್ರಮಿಸಬಹುದು ಎಂದು ಹೇಳುವುದಿಲ್ಲ. ಆದ್ದರಿಂದ ಈ ವಿಧಿಯು, ಹೇಗೂ ಗವರ್ನರರು ಸಚಿವ ಸಂಪುಟದ ಕೆಲಸದಲ್ಲಿ ಮಧ್ಯ ಪ್ರವೇಶಮಾಡಲು, ಅಥವಾ ಅದರ ನಿರ್ಧಾರವನ್ನು ತಲೆಕೆಳಗು ಮಾಡಲು ಅವಕಾಶವಿರುತ್ತದೆ ಎಂದು ಆಕ್ಷೇಪಿಸಿರುವುದು ಸಂಪೂರ್ಣವಾಗಿ ವಿಷಯ ದೂರವಾಗಿದೆ, ಸಂಪೂರ್ಣವಾಗಿ ತಪ್ಪು ಕಲ್ಪನೆಯಾಗಿದೆ.

**ಶ್ರೀ ಎಚ್.ವಿ. ಕಾಮತ್ :** ಅವರು ವಿಳಂಬಗೊಳಿಸಬಹುದಲ್ಲವೆ ಅಥವಾ ತಡೆಯೊಡ್ಡಬಹುದಲ್ಲವೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಾನು ಇನ್ನೂ ಮಾತನಾಡುತ್ತಿರುವಾಗ ನನ್ನ ಮಿತ್ರರು ಅಡ್ಡಿಪಡಿಸಬಾರದು. ಕೊನೆಯಲ್ಲಿ ಅವರು ಯಾವ ಪ್ರಶ್ನೆಯನ್ನು ಬೇಕಾದರೂ ಕೇಳಬಹುದು, ನಾನು ಉತ್ತರ ಕೊಡುವ ಸ್ಥಿತಿಯಿದ್ದರೆ ಖಂಡಿತವಾಗಿಯೂ ಕೊಡುತ್ತೇವೆ.

ಗವರ್ನರರ ಕೆಲಸಗಳಿಗೂ, ಗವರ್ನರ್ ನೆರವೇರಿಸಬೇಕಾದ ಕರ್ತವ್ಯಗಳಿಗೂ ನಡುವೆ ವ್ಯತ್ಯಾಸವಿದೆ. ಗವರ್ನರನಿಗೆ ಕಾರ್ಯಗಳಾವುವೂ ಇರದಿದ್ದರೂ, ಸಂವಿಧಾನಿಕ ಗವರ್ನರರಾಗಿ ಆತನು ಕೆಲವು ಕರ್ತವ್ಯಗಳನ್ನು ನಿರ್ವಹಿಸಲೇ ಬೇಕಾಗಿರುತ್ತದೆ. ಅವನ ಕರ್ತವ್ಯಗಳು ನನ್ನ ಪ್ರಕಾರ ಎರಡು ಭಾಗವಾಗಿ ವರ್ಗೀಕೃತವಾಗುತ್ತವೆ. ಒಂದು, ಸಚಿವ ಸಂಪುಟವನ್ನು ಅಧಿಕಾರದಲ್ಲಿ ಉಳಿಸಿರಬೇಕು. ಏಕೆಂದರೆ ಸಚಿವ ಸಂಪುಟವು ಆತನ ಇಚ್ಛಾನುಸಾರವಾಗಿಯೇ ಅಧಿಕಾರದಲ್ಲಿರುತ್ತದೆ. ಅದರ ವಿರುದ್ಧವಾಗಿ ತನ್ನ ಇಚ್ಛೆಯನ್ನು ಚಲಾಯಿಸಬೇಕೆ ಮತ್ತು ಯಾವಾಗ ಎಂಬುದನ್ನು ಆತನು ವಿಚಾರ ಮಾಡಬೇಕು. ಗವರ್ನರರಿಗಿರುವ ಎರಡನೆಯ ಕರ್ತವ್ಯ

---

* ಸಿ.ಎ.ಡಿ.ಸಂ. ೮, ನೇ ಜೂನ್ ೧೯೪೮, ಪುಟ. ೫೫೦

** ಅದೇ, ಪು. ೫೫೩–೫೫೪

ಸಚಿವ ಸಂಪುಟಕ್ಕೆ ಸಲಹೆ ಕೊಡುವುದು ಎಚ್ಚರಿಸುವುದು, ಸಚಿವ ಸಂಪುಟಕ್ಕೆ ಅವರ ನಿರ್ಧಾರಕ್ಕೆ ಬದಲಿಯೊಂದನ್ನು ಸೂಚಿಸಿ ಮರುಪರಿಶೀಲನೆ ಮಾಡಬೇಕೆಂದು ಕೇಳುವುದು, ಗವರ್ನರರಿಗೆ ಈ ಕರ್ತವ್ಯ ಇರಬೇಕೆಂಬುದನ್ನು ಈ ಸದನದ ಯಾರೂ ಪ್ರಶ್ನಿಸುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಹಾಗಿಲ್ಲದೆ ಹೋದರೆ ಅವನು ಸಂಪೂರ್ಣವಾಗಿ ಅನಗತ್ಯವಾದ ಕಾರ್ಯಕರ್ತನಾಗುತ್ತಾನೆ. ಏನೂ ಪ್ರಯೋಜನವಿಲ್ಲದವನಾಗುತ್ತಾನೆ. ಗವರ್ನರರು ಒಂದು ಪಕ್ಷದ ಪ್ರತಿನಿಧಿಯಲ್ಲ; ರಾಜ್ಯದ ಸಮಸ್ತ ಜನತೆಯ ಪ್ರತಿನಿಧಿ. ಜನದ ಹೆಸರಿನಲ್ಲಿ ಅವನು ಆಡಳಿತವನ್ನು ನಿರ್ವಹಿಸುತ್ತಾನೆ. ಆಡಳಿತವು ಉತ್ತಮವಾಗಿದೆ, ದಕ್ಷವಾಗಿದೆ, ಪ್ರಾಮಾಣಿಕವಾಗಿದೆ ಎಂದು ಪರಿಗಣಿಸಬಹುದಾದ ಮಟ್ಟದಲ್ಲಿ ನಡೆಯುವಂತೆ ಅವನು ನೋಡಿಕೊಳ್ಳಬೇಕು. ಆದ್ದರಿಂದ ಗವರ್ನರರಿಗಿರುವ ಈ ಎರಡು ಕರ್ತವ್ಯಗಳನ್ನು ಪರಿಗಣಿಸಿದ ಮೇಲೆ, ಅಂದರೆ ಆಡಳಿತವು ಶುದ್ಧವಾಗಿ, ಭ್ರಷ್ಟಾಚಾರ ರಹಿತವಾಗಿ, ನಿಷ್ಪಕ್ಷಪಾತವಾಗಿ ನಡೆಯುವಂತೆ ನೋಡಿಕೊಳ್ಳುವುದು; ಹಾಗೂ ಸಚಿವ ಸಂಪುಟವು ರೂಪಿಸಿದ ಸಲಹೆಗಳು ಜನತೆಯ ಇಚ್ಛೆಗೆ ವಿರುದ್ಧವಾಗಿಲ್ಲದಂತೆ ನೋಡಿಕೊಂಡು ಸರಕಾರಕ್ಕೆ ಸಲಹೆಕೊಡುವುದು, ಎಚ್ಚರಿಸುವುದು, ಮರು ಪರಿಶೀಲನೆ ಮಾಡಬೇಕೆಂದು ಕೇಳುವುದು. ಈ ಕರ್ತವ್ಯಗಳನ್ನು ಗಮನಿಸಿದಾಗ ನಾನು ಈಗ ಸದನವನ್ನು ಕೇಳುತ್ತೇನೆ–ಗವರ್ನರರು ನಿರ್ದಿಷ್ಟ ಮಾಹಿತಿಗಳು ತನ್ನೆದುರಿಗಿಲ್ಲದೆ ಹೋದರೆ ತನ್ನ ಕರ್ತವ್ಯಗಳನ್ನು ಹೇಗೆ ತಾನೆ ನಿರ್ವಹಿಸುವುದು ಸಾಧ್ಯ!

ಗವರ್ನರನಿಗಿರುವ ಸಂವಿಧಾನಿಕ ಕರ್ತವ್ಯಗಳನ್ನು, ಈಗಷ್ಟೇ ನಾನು ಉಲ್ಲೇಖಿಸಿರುವವುಗಳನ್ನು ಮಾಹಿತಿ ಪಡೆದುಕೊಳ್ಳುವ ಸ್ಥಿತಿಯಲ್ಲಿರದೆ ಹೋದರೆ ನಿರ್ವಹಿಸುವುದು ಸಾಧ್ಯವೇ ಇಲ್ಲವಾಗುತ್ತದೆ ಎಂದು ನನ್ನ ಅಭಿಪ್ರಾಯ. ಉದಾಹರಣೆಗೆ, ಸಚಿವರು ಒಂದು ನಿರ್ಣಯವನ್ನು ಅಂಗೀಕರಿಸುತ್ತಾರೆ ಎಂದಿಟ್ಟುಕೊಳ್ಳೋಣ – ಇದು ಇಂದು ಅನೇಕ ಪ್ರಾಂತಗಳಲ್ಲಿ ನಡೆದಿದೆ, ನಡೆಯುತ್ತಿದೆ–ಸಂಬಂಧಿತ ಕಾಗದ ಪತ್ರಗಳನ್ನು ಗವರ್ನರರಿಗೆ ಕಳುಹಿಸುವುದು ಅಗತ್ಯವಿಲ್ಲವೆಂದಾದರೆ ಗವರ್ನರರು ತನ್ನ ಕೆಲಸವನ್ನು ನಿರ್ವಹಿಸುವುದು ಹೇಗೆ? ಗವರ್ನರರು ಒಂದು ಉತ್ತಮವಾದ, ಪರಿಶುದ್ಧವಾದ ಆಡಳಿತಕ್ಕೆ ಸಂಬಂಧಿಸಿದಂತೆ ತನ್ನ ಕಾರ್ಯಭಾರವನ್ನು ನೆರವೇರಿಸಲು ಶಕ್ತನಾಗಬೇಕೆಂಬ ಉದ್ದೇಶದಿಂದಲೇ ಕೇಳುವ ಅಧಿಕಾರವನ್ನು ಕೊಡಲು ಉದ್ದೇಶಿಸಿರುವುದು. ಕೇಂದ್ರದಲ್ಲಿ ಇದು ಹೇಗೆ ನಡೆಯುತ್ತದೆ ಎಂಬುದನ್ನು ನಾನು ಸದನಕ್ಕೆ ಹೇಳಬಹುದು ಎಂದು ತೋರುತ್ತದೆ. ನನಗೆ ತಿಳಿದಿರುವಂತೆ ಸಚಿವ ಸಂಪುಟದ ಎಲ್ಲಾ ಪತ್ರಗಳು, ದಾಖಲೆಗಳು ಗವರ್ನರ್ ಜನರಲ್ ಅವರಿಗೆ ಹೋಗುತ್ತವೆ. ಹಾಗೆಯೇ ಸಾಪ್ತಾಹಿಕ ಸಂಕ್ಷೇಪಗಳು ಎಂದು ಕರೆಯುವ ವರ್ಗಗಳಿರುತ್ತವೆ. ಇವುಗಳನ್ನು ಪ್ರತಿಯೊಂದು ಸಚಿವ ಖಾತೆಯೂ ಸಿದ್ಧಪಡಿಸುತ್ತವೆ. ಸಾರ್ವಜನಿಕ ವ್ಯವಹಾರಗಳಿಗೆ ಸಂಬಂಧಿಸಿದ ಮುಖ್ಯವಾದ ಎಲ್ಲಾ ವಿಷಯಗಳ ಮೇಲೆ ಸಚಿವ ಶಾಖೆಯೂ ಕೈಗೊಂಡ ನಿರ್ಧಾರಗಳು ಈ ಸಾಪ್ತಾಹಿಕ ಸಂಕ್ಷೇಪಗಳಲ್ಲಿರುತ್ತವೆ. ಇವು ಸಚಿವ ಸಂಪುಟದ ಮುಂದೆ ಬರುವಾಗಲೇ ಗವರ್ನರ್ ಜನರಲ್ ಅವರಿಗೂ ಹೋಗುತ್ತವೆ. ಹಾಗೆ ಬಂದಾಗ, ಒಬ್ಬ ಮಂತ್ರಿಯೂ, ಸಂಪುಟದ ಗಮನಕ್ಕೇ ಬರದಂತೆ ತನಗೆ ಸರಿಯಲ್ಲವೆಂದು ಅನ್ನಿಸಿದ ಒಂದು ನಿರ್ದಿಷ್ಟ ವಿಷಯದ ಮೇಲೆ ನಿರ್ಧಾರ ಕೈಗೊಂಡಿದ್ದರೆ, ಗವರ್ನರ್ ಜನರಲ್ಲರು, ಆ ಬಿಡಿ ಸಚಿವರು ಇತರ ಸಚಿವರ ಸಲಹೆ ಪಡೆಯದೆ ಕೈಗೊಂಡಿರುವ ನಿರ್ಧಾರವನ್ನು ಸಂಪುಟವು ಮರುಪರಿಶೀಲನೆ ಮಾಡತಕ್ಕದ್ದಲ್ಲ ಎಂದು ಹೇಳುವ ಅಧಿಕಾರವನ್ನು ಪಡೆದರೆ ಅದರಲ್ಲಿ ತಪ್ಪೇನಿದೆ? ಅದರಲ್ಲಿ ಯಾವ ಹಾನಿಯಿದೆಯೋ, ಸರಕಾರದ ಆಡಳಿತದಲ್ಲಿ ವ್ಯವಹಾರದಲ್ಲಿ ಅದರಿಂದ ಹೇಗೆ ಮಧ್ಯ ಪ್ರವೇಶವಾಗುತ್ತದೆಯೋ ನನಗೆ ತಿಳಿಯದು. ಆದ್ದರಿಂದ ಈ ವಿಧಿಯ ವಿರುದ್ಧವಾಗಿ ಮಾಡಿರುವ ಆಕ್ಷೇಪಣೆಗಳು, ಒಂದೇ ವಿಧಿಯನ್ನು ತಪ್ಪಾಗಿ ಓದುವುದರಿಂದ ಬಂದಂಥವು. ಇಲ್ಲವೆ, ಗವರ್ನರರಿಗೆ ಸರಕಾರದ ಆಡಳಿತದಲ್ಲಿ ಮಧ್ಯ ಪ್ರವೇಶ

ಮಾಡುವ ಅಧಿಕಾರವನ್ನು ನೀಡುತ್ತವೆ ಎಂಬ ತಪ್ಪು ಗ್ರಹಿಕೆಯು ಜನರ ಮನಸ್ಸಿನಲ್ಲಿ ಇರುವುದರಿಂದ ಹುಟ್ಟಿದಂಥವು. ಅಂತಹ ಯಾವ ಉದ್ದೇಶವೂ ಇಲ್ಲ. ಅಂತಹ ಫಲವು ೧೪೭ನೆ ವಿಧಿಯ ಭಾಷೆಯಿಂದ ಮೂಡಿಬರುವುದಿಲ್ಲ ಇದು ಖಂಡಿತ. ಈ ವಿಧಿಯು ಮಾಡುವ ಕೆಲಸ ಇಷ್ಟೆ: ಗವರ್ನರರು ಕೆಲಸಗಳನ್ನಲ್ಲ, ಏಕೆಂದರೆ ಯಾವುವೂ ಇಲ್ಲ. ಆದರೆ ಕರ್ತವ್ಯಗಳನ್ನು ನೆರವೇರಿಸಲು, ಪ್ರತಿಯೊಬ್ಬ ಒಳ್ಳೆಯ ಗವರ್ನರನೂ ನಿರ್ವಹಿಸಬೇಕಾದ ರೀತಿಯಲ್ಲಿ ನೆರವೇರಿಸಲು ತಕ್ಕ ಸ್ಥಿತಿಯಲ್ಲಿ ಅವನನ್ನು ಇರಿಸುವುದು (ಹರ್ಷೋದ್ಗಾರಗಳು)

**ಶ್ರೀ ಎಚ್.ವಿ. ಕಾಮತ್ :** ನಾನು ಡಾ. ಅಂಬೇಡ್ಕರ್ ಅವರನ್ನು ಕೆಲವು ಪ್ರಶ್ನೆಗಳನ್ನು ಕೇಳಬಹುದೆ?

**ಮಾನ್ಯ ಅಧ್ಯಕ್ಷರು :** ಈಗ ಪ್ರಶ್ನೆ ಕೇಳುವುದರಿಂದ ಪ್ರಯೋಜನವೇನು? ನಿಮಗೆ ಅವಕಾಶ ದೊರಕಿದ್ದಿತಲ್ಲ.

**ಶ್ರೀ ಎಚ್.ವಿ. ಕಾಮತ್ :** ತಮ್ಮ ಭಾಷಣದ ಕೊನೆಯಲ್ಲಿ ಪ್ರಶ್ನೆಗಳನ್ನು ಕೇಳಬಹುದೆಂದು ಡಾ. ಅಂಬೇಡ್ಕರ್‌ರೇ ಹೇಳಿದರು.

**ಮಾನ್ಯ ಅಧ್ಯಕ್ಷರು :** ಚರ್ಚೆಗಳ ಕೊನೆಯಲ್ಲಿ ಪ್ರಶ್ನೆಗಳನ್ನು ಕೇಳುವ ಈ ಪದ್ಧತಿ ನನಗೆ ಹಿಡಿಸುವುದಿಲ್ಲ. ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಟ್ಟಾಗಿದೆ. ಈ ವಿಧಿಗೆ ಯಾವ ತಿದ್ದುಪಡಿಯೂ ಇಲ್ಲವಾದ್ದರಿಂದ ಅದನ್ನು ಈಗ ಮತಕ್ಕೆ ಹಾಕುತ್ತಿದೇವೆ.

ಪ್ರಶ್ನೆ ಹೀಗಿದೆ :

"ವಿಧಿ ೧೪೭ ಸಂವಿಧಾನದ ಭಾಗವಾಗುತ್ತದೆ."

(ಗೊತ್ತುವಳಿಯು ಅಂಗೀಕೃತವಾಯಿತು. ೧೪೭ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೧೫೧

* **೨೩೦೮ – ಮಾನ್ಯ ಅಧ್ಯಕ್ಷರು :** ಡಾ. ಅಂಬೇಡ್ಕರ್.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಹೀಗೆ ಮಂಡಿಸುತ್ತಿದ್ದೇನೆ:

"೧೫೧ನೆಯ ವಿಧಿಯ (೨)ನೆಯ ಉಪವಾಕ್ಯದಲ್ಲಿ 'ಮೂರನೆಯ ವರ್ಷ' ಎಂಬ ಪದಗಳಿಗೆ ಬದಲಾಗಿ 'ಎರಡನೆಯ ವರ್ಷ' ಎಂಬ ಪದಗಳನ್ನು ಇರಿಸಬೇಕು."

* * * * *

** **ಡಾ. ಬಿ.ಆರ್. ಅಂಬೇಡ್ಕರ್ :** ಎರಡನೆಯ ಸದನವು ಇರುತ್ತದೆ ಎಂಬುದಾಗಿ ವಿಧಿಯನ್ನು ಅಂಗೀಕರಿಸಲಾಗಿದೆ. ಪ್ರಸ್ತುತ ವಿಧಿಯು ಸದಸ್ಯರು ತಮ್ಮನ್ನು ಹೇಗೆ ಪುನರಾಯ್ಕೆಗೊಳಿಸಿಕೊಳ್ಳುತ್ತಾರೆ ಎಂಬುದನ್ನು ಕುರಿತಿದೆ.

**ಪ್ರೊ. ಶಿಬ್ಬನ್ ಲಾಲ್ ಸೆಕ್ಸೇನಾ :** ಒಂದು ಪರಿಷತ್ತು (ಕೌನ್ಸಿಲ್) ಒಂಭತ್ತು ವರ್ಷ ಇರಬೇಕೆ, ಅಥವಾ ಆರು ವರ್ಷ ಇರಬೇಕೆ ಎಂಬುದನ್ನು ನಾವು ನಿರ್ಧರಿಸಬೇಕು. ಅದು ಪರಿಷತ್ತಿನ ರಚನೆಯನ್ನು ಅವಲಂಬಿಸಿರುತ್ತದೆ. ಸದಸ್ಯರಲ್ಲಿ ಮೂರನೆ ಒಂದು ಭಾಗವು ನಿವೃತ್ತರಾಗಬೇಕಾದ ಅವಧಿಯನ್ನು ಆ ರಚನೆಯು ನಿರ್ಧರಿಸುತ್ತದೆ.

---

* ಸಿ.ಎ.ಡಿ. ಸಂಪುಟ ೮, ೨ನೇ ಜೂನ್ ೧೯೪೯, ಪುಟ ೫೪೮

** ಅದೇ, ಪು. ೫೪೯–೫೦

**ಮಾನ್ಯ ಅಧ್ಯಕ್ಷರು :** ಅದು ಪರಿಷತ್ತಿನ ರಚನೆಯನ್ನು ಅವಲಂಬಿಸುವುದಿಲ್ಲ. ಸದನದ ಆಯುಷ್ಯ ಎಷ್ಟೇ ಇರಲಿ, ರಚನೆಯು ನಾವು ೧೫೦ನೆಯ ವಿಧಿಯ ಮೇಲೆ ತೆಗೆದುಕೊಳ್ಳುವ ತೀರ್ಮಾನದ ಪ್ರಕಾರವಾಗಿರುತ್ತದೆ.

**ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ :** ಒಳ್ಳೆಯದು, ತಮ್ಮ ಆದೇಶವನ್ನು ನಾನು ಒಪ್ಪಿಕೊಳ್ಳುತ್ತೇನೆ.

ಪ್ರತಿ ಮೂರನೆಯ ವರ್ಷ ಕೌನ್ಸಿಲಿನ ಮೂರನೇ ಒಂದು ಭಾಗದಷ್ಟು ಸದಸ್ಯರು ನಿವೃತ್ತರಾಗುತ್ತಾರೆ ಎಂದು ಹೇಳಲಾಗಿದೆ. ಡಾ. ಅಂಬೇಡ್ಕರ್ ಅವರು ಈಗ ಆ ಅವಧಿಯು ಮೂರಕ್ಕೆ ಬದಲು ಎರಡು ವರ್ಷ ಎಂದು ಸಲಹೆ ನೀಡಿರುವುದು ಸಂತೋಷ. ಅದು ಕೌನ್ಸಿಲಿನ ಆಯುಷ್ಯವನ್ನು ಆರು ವರ್ಷಗಳನ್ನಾಗಿ ಮಾಡುತ್ತದೆ. ಇದು ಹೆಚ್ಚುಕಡಿಮೆ ವಿಧಾನಸಭೆಯ ಜೀವಿತಾವಧಿಗೆ ಸಮಾನವಾಗುತ್ತದೆ. ಅಲ್ಲದೆ ಕೌನ್ಸಿಲಿಗೆ ಹೆಚ್ಚು ಹೊಸತನವನ್ನು ಕೊಡುತ್ತದೆ. ಆದ್ದರಿಂದ ನಾನು ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಡಾ. ಅಂಬೇಡ್ಕರ್, ನೀವು ಏನಾದರೂ ಹೇಳಬಯಸುವಿರಾ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಾನು ಶ್ರೀ ಗುಪ್ತೆಯವರ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ.

**ಮಾನ್ಯ ಅಧ್ಯಕ್ಷರು :** ಈಗ ನಾನು ಡಾ. ಅಂಬೇಡ್ಕರ್ ಅವರು ಒಪ್ಪಿಕೊಂಡಿರುವ ಶ್ರೀ ಗುಪ್ತೆಯವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. ಅದು ಮೂಲ ತಿದ್ದುಪಡಿಯಾಗುತ್ತದೆ.

ಪ್ರಶ್ನೆ ಇದು :

"ತಿದ್ದುಪಡಿಗಳ ಪಟ್ಟಿಯ ೨೩೦೪ನೆಯ ತಿದ್ದುಪಡಿಗೆ ಸಂಬಂಧಿಸಿದಂತೆ, ೧೫೧ನೆಯ ವಿಧಿಯ (೧)ನೆಯ ಉಪವಾಕ್ಯವಾದ ಮೇಲೆ ಈ ಕೆಳಗಿನ ಅವಕಾಶವನ್ನು ಸೇರಿಸಬೇಕು."

"ತುರ್ತು ಪರಿಸ್ಥಿತಿಯು ಜಾರಿಯಲ್ಲಿರುವಾಗ, ಇಲ್ಲಿ ಹೇಳಿರುವ ಅವಧಿಯನ್ನು ಪಾರ್ಲಿಮೆಂಟು, ಕಾನೂನು ಮಾಡಿ ಒಂದು ಸಾರಿಗೆ ಒಂದು ವರ್ಷಕ್ಕಿಂತ ಹೆಚ್ಚಾಗದ ಅವಧಿಗೆ ವಿಸ್ತರಿಸಬಹುದು. ಯಾವುದೇ ಸಂದರ್ಭದಲ್ಲೂ ತುರ್ತುಪರಿಸ್ಥಿತಿಯು ಮುಗಿದ ನಂತರ ಆರು ತಿಂಗಳಿಗಿಂತ ಹೆಚ್ಚು ಕಾಲಕ್ಕೆ ವಿಸ್ತರಿಸುವಂತಿಲ್ಲ."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಅಧ್ಯಕ್ಷರು :** ಶ್ರೀ ಬ್ರಜೇಶ್ವರ ಪ್ರಸಾದ್ ಅವರ ತಿದ್ದುಪಡಿ. ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲಾಯಿತು.

**ಮಾನ್ಯ ಅಧ್ಯಕ್ಷರು :** ಹಾಗಾದರೆ ಈಗ ನಾನು ಡಾ. ಅಂಬೇಡ್ಕರ್ ಅವರ ೨೩೦೮ನೇ ಸಂಖ್ಯೆ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. (ಆಗಲೇ ಉಲ್ಲೇಖಿಸಿದೆ)

ತಿದ್ದುಪಡಿಯು ಅಂಗೀಕೃತವಾಯಿತು.

ತಿದ್ದುಪಡಿಗೊಂಡ ೧೫೧ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

# ವಿಧಿ ೧೫೨

* **ಮಾನ್ಯ ಅಧ್ಯಕ್ಷರು :** ನಾವೀಗ ೧೫೨ನೆಯ ವಿಧಿಗೆ ಬರುತ್ತೇವೆ. ಡಾ. ಅಂಬೇಡ್ಕರ್ ಅವರಿಂದ ಒಂದು ತಿದ್ದುಪಡಿಯಿದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ : :೧೫೨ನೆಯ ವಿಧಿಗೆ ಬದಲಾಗಿ ಈ ಕೆಳಗಿನಂತೆ ಅಳವಡಿಸಬಹುದು :

'೧೫೨, ರಾಜ್ಯ ಶಾಸನ ಸಭೆಯ ಸದಸ್ಯತ್ವಕ್ಕೆ ಅರ್ಹತೆಗಳು:

ಒಬ್ಬ ವ್ಯಕ್ತಿಯು ಒಂದು ರಾಜ್ಯದ ಶಾಸನ ಸಭೆಯ ಸದಸ್ಯ ಸ್ಥಾನಕ್ಕೆ ಆರಿಸಲ್ಪಡಬೇಕಾದರೆ ಈ ಕೆಳಗಿನ ಅರ್ಹತೆಗಳನ್ನು ಪಡೆದಿರತಕ್ಕದ್ದು:

(ಅ) ಅವನು ಭಾರತದ ಪ್ರಜೆಯಾಗಿರಬೇಕು.

(ಆ) ವಿಧಾನ ಸಭಾ ಸದಸ್ಯನಾಗಲು ಅವನ ವಯಸ್ಸು ಇಪ್ಪತ್ತೈದು ವರ್ಷ ತುಂಬಿರಬೇಕು: ವಿಧಾನ ಪರಿಷತ್ತಿನ ಸದಸ್ಯನಾಗಲು ವಯಸ್ಸು ಮೂವತ್ತೈದು ವರ್ಷ ತುಂಬಿರಬೇಕು.

(ಇ) ರಾಜ್ಯದ ಶಾಸನ ಸಭೆಯು ಕಾನೂನು ಪ್ರಕಾರ ಈ ಸಂಬಂಧವಾಗಿ ವಿಧಿಸುವ ಬೇರಾವುದೇ ಅರ್ಹತೆಯನ್ನು ಪಡೆದಿರಬೇಕು."

* * * * *

* **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿ ಅವರು ಸೂಚಿಸಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ. (ಸಿ) ಖಂಡವನ್ನು ಕುರಿತು ಅವರ ಒಂದು ಭೀತಿಯನ್ನು ವ್ಯಕ್ತಪಡಿಸಿದ್ದಾರೆ. ಈ ಖಂಡವು ಅಭ್ಯರ್ಥಿಗಳಿಗೆ ಆಸ್ತಿ ಅರ್ಹತೆಗಳನ್ನು ವಿಧಿಸಲು ಪಾರ್ಲಿಮೆಂಟಿಗೆ ಅವಕಾಶ ಕೊಡಬಹುದು ಎಂದು ಅವರ ಆತಂಕ. (ಇ) ಖಂಡದ ಉದ್ದೇಶ ಖಂಡಿತವಾಗಿಯೂ ಹಾಗಲ್ಲ ಎಂದು ಅವರಿಗೆ ನಾನು ಆಶ್ವಾಸನೆ ಕೊಡುತ್ತೇನೆ. ಈ ಖಂಡದ ಹಿಂದಿರುವುದು ದಿವಾಳಿತನ, ಬುದ್ಧಿಭ್ರಮಣೆ, ನಿರ್ದಿಷ್ಟ ಮತಕ್ಷೇತ್ರದಲ್ಲಿ ವಾಸ ಮೊದಲಾದ ವಿಚಾರಗಳು, ಅಭ್ಯರ್ಥಿಗಳಿಗೆ ಅಗತ್ಯ ಅರ್ಹತೆಯಾಗಿ ಆಸ್ತಿ ಅರ್ಹತೆಯನ್ನು ಸೇರಿಸುವ ಉದ್ದೇಶ ಖಂಡಿತವಾಗಿಯೂ ಇಲ್ಲ.

ಪ್ರೊ. ಕೆ.ಟಿ.ಶಹಾ ಅವರ, ಸಾಕ್ಷರತೆಯನ್ನು ಕುರಿತ ತಿದ್ದುಪಡಿ ಇದು. ಶಾಸನಸಭೆಗಳಿಗೇ ಬಿಟ್ಟುಬಿಡಬೇಕಾದ ವಿಚಾರ ಎಂಬುದು ನನ್ನ ಆಲೋಚನೆ. ಅರ್ಹತೆಗಳನ್ನು ನಿಗದಿಪಡಿಸುವಾಗ ಶಾಸನ ಸಭೆಯ ಸಾಕ್ಷರತೆಯ ಅರ್ಹತೆಯ ಅಗತ್ಯವಾದ ಒಂದು ಎಂಬುದಾಗಿ ಭಾವಿಸಿದರೆ, ಅವರು ಅದನ್ನು ನಿಸ್ಸಂದೇಹವಾಗಿ ಸೇರಿಸಿಯೇ ತೀರುತ್ತಾರೆ.

ಮಾನ್ಯರೆ, ನಾನು ನಿರ್ದಿಷ್ಟವಾಗಿ ಉಲ್ಲೇಖಿಸಬೇಕಾದ ಒಂದೇ ಒಂದು ವಿಚಾರವಿದೆ. (ಇ) ಖಂಡವು ಒಂದು ರೀತಿಯಲ್ಲಿ ಮತದಾನ ವಿಚಾರಗಳನ್ನು ಕುರಿತ ೨೯೦ ಮತ್ತು ೨೯೧ನೆಯ ವಿಧಿಗಳಿಗೆ ಸಂಬಂಧಪಟ್ಟಿವೆ. ಆ ವಿಧಿಗಳನ್ನು ನಾವಿನ್ನು ಅಂಗೀಕರಿಸಿಲ್ಲ.

---

* ಸಿ.ಎ.ಡಿ. ಸಂ. ೮, ೧ನೇ ಜೂನ್ ೧೯೪೮, ಪುಟ. ೫೫೦

* ಅದೇ ಪು. ೫೫೩–೫೫೪

೨೯೦ ಮತ್ತು ೨೯೧ನೆಯ ವಿಧಿಗಳನ್ನು ಪರಿಶೀಲಿಸುವಾಗ ಸದನವು (ಇ) ಖಂಡದಲ್ಲಿರುವ ಅವಕಾಶವನ್ನು ಪಾರ್ಲಿಮೆಂಟು ಮಾಡಿದ ಕಾನೂನಿನಂತೆ ವಿಧಿಸತಕ್ಕದ್ದು ಎಂದು ನಿರ್ಣಯಿಸಿದ ಪಕ್ಷದಲ್ಲಿ, ಆಗ ಕರಡು ರಚನಾಸಮಿತಿಯು (ಇ) ಖಂಡದ ಕೊನೆಯ ಪ್ಯಾರಾವನ್ನು ಮರುಪರಿಶೀಲಿಸಲು ಅವಕಾಶವನ್ನು ಕಾದಿರಿಸಲು ಬಯಸುತ್ತೇನೆ. ಅದೊಂದನ್ನು ಬಿಟ್ಟರೆ, ತಿದ್ದುಪಡಿಯಾದ ಈ ವಿಧಿಯನ್ನು ಅಂಗೀಕರಿಸಬಹುದು.

(ತಿದ್ದುಪಡಿಯಾದ ೧೫೨ನೆಯ ವಿಧಿಯನ್ನು ಸಂವಿಧಾನಗಳಲ್ಲಿ ಸೇರಿಸಲಾಯಿತು)

* * * * *

## ವಿಧಿ ೧೫೩

* **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ :

"೧೫೩ನೆಯ ವಿಧಿಯ (೩)ನೆಯ ಖಂಡವನ್ನು ಕೈಬಿಡತಕ್ಕದ್ದು"

ಈ ಖಂಡವು ಸಂವಿಧಾನಿಕ ಗವರ್ನರರ ಯೋಜನೆಗೆ ಅಸಂಗತವಾಗಿದೆ.

* * * * *

* **ಶ್ರೀ. ಗೋಪಾಲನಾರಾಯಣ್** (ಸಂಯುಕ್ತ ಪ್ರಾಂತಗಳು : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಈ ವಿಧಿಯ ವಿಷಯವಾಗಿ ಮಾತನಾಡುವುದಕ್ಕೆ ಮುಂಚೆ ನಾನು ಒಂದು ದೂರನ್ನು ದಾಖಲಿಸಬಯಸುತ್ತೇನೆ. ತಮ್ಮಿಂದ ಅದಕ್ಕೆ ಪರಿಹಾರವನ್ನು ಕೋರುತ್ತೇನೆ. ಈ ಆಸೆಯಲ್ಲಿಯೇ ಎಲ್ಲಾ ಸಭೆಗಳಿಗೂ ಬಂದಿರುವವರಲ್ಲಿ ನಾನೂ ಒಬ್ಬ. ಮೊದಲಿನಿಂದ ಕೊನೆಯವರೆಗೆ ಕುಳಿತಿರುತ್ತೇನೆ. ಆದರೆ ಈಗ ನನ್ನ ತಾಳ್ಮೆ ಮುಗಿದು ಹೋಗಿದೆ. ಈ ಸದನದ ಕೆಲವು ಸದಸ್ಯರು ಎಲ್ಲಾ ಚರ್ಚೆಗಳನ್ನು ಏಕಸ್ವಾಮ್ಯ ಮಾಡಿಕೊಂಡಿದ್ದಾರೆ, ಅವರು ಪ್ರತಿಯೊಂದು ವಿಧಿ, ಪ್ರತಿ ತಿದ್ದುಪಡಿ, ಮೇಲಿನ ತಿದ್ದುಪಡಿ ಎಲ್ಲದರ ಮೇಲೂ ಮಾತನಾಡಲೇಬೇಕು. ಮಾನ್ಯರೆ, ತಮಗೆ ಇರುವ ಮಿತಿಗಳು ನಮಗೂ ಗೊತ್ತು. ಕಾನೂನು ಪ್ರಕಾರ ತಾವು ಅವರನ್ನು ತಡೆಯುವಂತಿಲ್ಲ. ಎಷ್ಟೋಸಾರಿ ತಮಗೇ ತುಂಬಾ ಬೇಸರವಾಗುವುದು ತಮ್ಮ ಮುಖದಿಂದಲೇ ತಿಳಿಯುತ್ತದೆ. ಆದರೂ ಅವರನ್ನು ನೀವು ತಡೆಯುವ ಹಾಗಿಲ್ಲ. ಆದ್ದರಿಂದ ಕೆಲವು ಸದಸ್ಯರಿಗೆ ಮಾತನಾಡಲು ಸಮಯ ಮಿತಿಯನ್ನು ನಿಗದಿಪಡಿಸಬಹುದೆಂದು ನಾನು ಸೂಚಿಸುತ್ತೇನೆ. ಅವರು ಎರಡು ಅಥವಾ ಮೂರು ನಿಮಿಷಗಳಿಗಿಂತ ಹೆಚ್ಚಾಗಿ ಮಾತನಾಡಲು ಸಮಯ ಮಿತಿಯನ್ನು ನಿಗದಿಪಡಿಸಬಹುದೆಂದು ನಾನು ಸೂಚಿಸುತ್ತೇನೆ. ಅವರು ಎರಡು ಅಥವಾ ಮೂರು ನಿಮಿಷಗಳಿಗಿಂತ ಹೆಚ್ಚಾಗಿ ಮಾತನಾಡಲು ಅನುಮತಿಸಬಾರದು. ಈ ವಿಧಿಗೆ ಸಂಬಂಧಿಸಿದಂತೆ ಆಗಲೇ ೧೫ ನಿಮಿಷಗಳಾಗಿವೆ. ಅದರಲ್ಲಿ ಹೊಸದೇನೂ ಇಲ್ಲ. ಗವರ್ನರರಿಗೆ ವಿವೇಚನಾಧಿಕಾರ ಕೊಡುವ ವಿಷಯ ಅಷ್ಟೆ. ಆದರೂ ಒಬ್ಬ ಸದಸ್ಯರು ಎದ್ದು ನಿಂತು ಅದನ್ನು ವಿರೋಧಿಸಿರುತ್ತಾರೆ. ಇದಕ್ಕೆ ತಮ್ಮಿಂದ ನಾವು ಪರಿಹಾರವನ್ನು ಕೋರುತ್ತೇವೆ. ಹಾಗೆ ಮಾಡಲು ತಮಗೆ

---

* ಸಿ.ಎ.ಡಿ. ಸಂ. ೮೧ನೇ ಜೂನ್ ೧೯೪೯, ಪುಟ, ೫೫೫

* ಅದೇ, ಪು. ೫೫೭

ಸಾಧ್ಯವಿಲ್ಲದಿದ್ದರೆ, ಕೊನೆಯ ಪಕ್ಷ ನಮ್ಮ ನಮ್ಮ ಆಸನಗಳಲ್ಲಿ ಕುಳಿತು ನಿದ್ದೆ ಮಾಡಲು, ಅಥವಾ ಈ ಸದನದಲ್ಲಿ ಕುಳಿತಿರದ ಬೇರೇನನ್ನಾದರೂ ಮಾಡುತ್ತಿರಲು ನಮಗೆ ತಾವು ಅನುಮತಿ ಕೊಡಬೇಕು. ಮಾನ್ಯರೆ ನಾನು ಈ ವಿಧಿಯನ್ನು ಬೆಂಬಲಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ನಾನು ಈ ವಿಷಯದಲ್ಲಿ ಅಸಹಾಯಕನಾಗಿದ್ದೇನೆ. ಮಾನ್ಯ ಸದಸ್ಯರ ವಿವೇಕಕ್ಕೆ ಇದನ್ನು ಬಿಟ್ಟುಬಿಡುತ್ತೇನೆ.

**ಶ್ರೀ ಬ್ರಜೇಶ್ವರ ಪ್ರಸಾದ್ :** (ಮಾತನಾಡಲು ಮೇಲೆದ್ದರು)

**ಮಾನ್ಯ ಅಧ್ಯಕ್ಷರು :** ಇಷ್ಟಾದ ಮೇಲೆಯೂ ನೀವು ಮಾತನಾಡಬೇಕೆ?

(ನಗು)

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನನಗೆ ಉತ್ತರವೇನೂ ಬೇಕಾಗಿಲ್ಲ. ಈ ವಿಚಾರವಾಗಿ ಬೇಕಾದಷ್ಟು ಚರ್ಚೆಯಾಗಿದೆ. (ಡಾ. ಅಂಬೇಡ್ಕರ್‌ರ ತಿದ್ದುಪಡಿಯ ಹೊರತು ಬೇರೆ ಯಾವುದೂ ಅಂಗೀಕೃತವಾಗಲಿಲ್ಲ. ೧೫೩ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು)

* * * * *

## ವಿಧಿ ೧೫೩–ಅ

* **ಮಾನ್ಯ ಅಧ್ಯಕ್ಷರು :** ಈ ತಿದ್ದುಪಡಿಯನ್ನು ಕುರಿತು ಯಾರಾದರೂ ಏನನ್ನಾದರೂ ಹೇಳಬಯಸುವರೇನು?

**ಮಾನ್ಯ ಡಾ. ಬಿ. ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಿಲ್ಲ.

(ಪ್ರೊ. ಕೆ.ಟಿ. ಶಹಾ ಅವರು ತಿದ್ದುಪಡಿ ತಿರಸ್ಕೃತವಾಯಿತು ಮತ್ತು ೧೫೪ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು).

## ವಿಧಿ ೧೬೦

** **ಮಾನ್ಯ ಅಧ್ಯಕ್ಷರು :** ಡಾ. ಅಂಬೇಡ್ಕರ್

**ಮಾನ್ಯ ಡಾ. ಬಿ. ಆರ್. ಅಂಬೇಡ್ಕರ್ :** ನಾನು ಹೇಳುವುದೇನೂ ಇಲ್ಲ.

೧೬೦ನೆಯ ವಿಧಿಯನ್ನು ಅಂಗೀಕರಿಸಿ ಸಂವಿಧಾನಕ್ಕೆ ಸೇರಿಸಲಾಯಿತು.

## ಹೊಸ ವಿಧಿ ೧೬೩–ಅ

\+ **ಮಾನ್ಯ ಅಧ್ಯಕ್ಷರು :** ಈಗ ೧೬೩–ಅ ಹೊಸ ವಿಧಿಯನ್ನು ಅಂಗೀಕರಿಸಬೇಕಾಗಿದೆ. ಇದು ೧ನೆಯ ಪಟ್ಟಿಯ ೯ನೆಯ ತಿದ್ದುಪಡಿ.

---

* ಸಿ.ಎ.ಡಿ. ಸಂ. ೮, ೧ನೇ ಜೂನ್ ೧೯೪೮, ಪುಟ. ೫೫೮

** ಅದೇ ಪು. ೫೬೪

\+ ಅದೇ ಪುಟ. ೫೬೬.

**ಮಾನ್ಯ ಡಾ. ಬಿ. ಆರ್. ಅಂಬೇಡ್ಕರ್ :** ಮಾನ್ಯರೆ, ಇದನ್ನು ತಡೆ ಹಿಡಿದಿಡಬೇಕಾಗಿದೆ.

## ವಿಧಿ – ೧೬೫

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಹಿಂದಿನ ಅನೇಕ ಸಂದರ್ಭಗಳಲ್ಲಿ ಅಧ್ಯಕ್ಷರು ಇಂತಹ ತಿದ್ದುಪಡಿಗಳನ್ನು ಮಂಡಿಸಲು ಡಾ. ಅಂಬೇಡ್ಕರರಿಗೆ ಅವಕಾಶ ಕೊಟ್ಟಿದ್ದಾರೆ. ಅದೇ ರೂಢಿಯನ್ನು ಮುಂದುವರಿಸಿ ಈಗಲೂ ಮಂಡಿಸಬಹುದು ಎನಿಸುತ್ತದೆ.

**ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಈಗ ಮಂಡಿಸುತ್ತೇನೆ "೧೬೫ನೆಯ ವಿಧಿಯಲ್ಲಿ 'ಒಂದು ಘೋಷಣೆ' ಎಂದು ಪದಗಳಿಗೆ ಬದಲಾಗಿ 'ಸ್ಥಿರೀಕರಣ ಅಥವಾ ಪ್ರಮಾಣವಚನ' ಎಂಬ ಪದಗಳನ್ನು ಇಡಬೇಕು."

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

## ವಿಧಿ – ೧೬೬

* **ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ : "೧೬೬ನೆಯ ವಿಧಿಯ (೧)ನೆಯ ಖಂಡದ ಮೇಲೆ ಈ ಕೆಳಗಿನಂತೆ ಹೊಸ ಖಂಡವನ್ನು ಸೇರಿಸತಕ್ಕದ್ದು :–

'(೧a) ಯಾವ ವ್ಯಕ್ತಿಯೂ ಎರಡು ಅಥವಾ ಹೆಚ್ಚು ರಾಜ್ಯಗಳ ಶಾಸನಸಭಾ ಸದಸ್ಯನಾಗಿರುವಂತಿಲ್ಲ. ಒಬ್ಬ ವ್ಯಕ್ತಿಯನ್ನು ಎರಡು ಅಥವಾ ಹೆಚ್ಚು ರಾಜ್ಯಗಳ ಶಾಸನ ಸಭೆಗಳ ಸದಸ್ಯನನ್ನಾಗಿ ಆರಿಸಿದ ಪಕ್ಷದಲ್ಲಿ, ರಾಷ್ಟ್ರಪತಿಯವರು ಕಾನೂನಿನಲ್ಲಿ ವಿಧಿಸುವ ಅವಧಿಯು ಮುಗಿದ ಮೇಲೆ, ಒಂದು ರಾಜ್ಯದ್ದು ಹೊರತು ಮಿಕ್ಕ ಎಲ್ಲಾ ರಾಜ್ಯ ಶಾಸನಸಭೆಗಳಲ್ಲಿನ ತನ್ನ ಸ್ಥಾನಕ್ಕೆ ಅವನು ಇನ್ನೂ ರಾಜೀನಾಮೆ ಕೊಟ್ಟಿರದಿದ್ದರೆ, ಎಲ್ಲಾ ರಾಜ್ಯಗಳ ಶಾಸನಸಭೆಗಳಲ್ಲಿನ ಅವನ ಸ್ಥಾನವು ತೆರವಾಗುತ್ತದೆ."

ಇದು ಒಬ್ಬನೇ ವ್ಯಕ್ತಿಯು ಎರಡು ರಾಜ್ಯಗಳ ಶಾಸನಸಭೆಗಳ ಸದಸ್ಯನಾಗಿರುವ ಸಂದರ್ಭವನ್ನು ಕುರಿತ ಖಂಡವಾಗಿದೆ. ಹಿಂದಿನ ಖಂಡವು, ಒಂದು ರಾಜ್ಯದ ಶಾಸನಸಭಾ ಸದಸ್ಯನಾದ ವ್ಯಕ್ತಿಯು ಪಾರ್ಲಿಮೆಂಟಿನ ಸದಸ್ಯನೂ ಆಗಿರುವ ಸಂದರ್ಭವನ್ನು ಕುರಿತುದಾಗಿತ್ತು.

**ಮಾನ್ಯ ಅಧ್ಯಕ್ಷರು :** ಮಿ. ನಜೀರುದ್ದೀನ್ ಅಹಮದ್ ಅವರ ೨೪೦೩ನೆಯ ಸಂಖ್ಯೆ ತಿದ್ದುಪಡಿಯಿದೆ. ಆದರೆ ಈಗ ಮಂಡಿಸಿದ ೨೪೦೪ನೆಯ ತಿದ್ದುಪಡಿಯಲ್ಲಿ ಸೇರಿದೆ.

**ಡಾ. ಬಿ.ಆರ್. ಅಂಬೇಡ್ಕರ್ :** ಹೀಗೆ ಮಂಡಿಸುತ್ತೇನೆ :

"೧೬೬ನೆಯ ವಿಧಿಯ (೨)ನೆಯ ಖಂಡವನ್ನು ತೆಗೆದುಹಾಕಬೇಕು."

** **ಮಾನ್ಯ ಅಧ್ಯಕ್ಷರು :** ಡಾ. ಬಿ.ಆರ್. ಅಂಬೇಡ್ಕರ್ ಅವರು ಮಂಡಿಸಿರುವ ತಿದ್ದುಪಡಿಗಳನ್ನು ಒಂದೊಂದಾಗಿ ಮತಕ್ಕೆ ಹಾಕುತ್ತೇನೆ.

---

* ಅದೇ ಪುಟ. ೫೬೭.

* ಸಿ.ಎ.ಡಿ. ಸಂ. ೮, ೨ನೇ ಜೂನ್ ೧೯೪೬, ಪುಟ. ೫೬೮

**ಶ್ರೀ ಎಚ್.ವಿ.ಕಾಮತ್ :** ನಾನು ಎತ್ತಿರುವ ಆಕ್ಷೇಪಣೆಗೆ ಡಾ. ಅಂಬೇಡ್ಕರರು ಉತ್ತರಕೊಡುವುದಿಲ್ಲವೆ?

**ಮಾನ್ಯ ಡಾ. ಬಿ. ಆರ್. ಅಂಬೇಡ್ಕರ್ :** ಅದು ಅಗತ್ಯವೆಂದು ನಾನು ಪರಿಗಣಿಸುವುದಿಲ್ಲ.

(ಈ ಮೊದಲು ಉಲ್ಲೇಖಿಸಿದ ಡಾ. ಅಂಬೇಡ್ಕರರು ಮಂಡಿಸಿದ ಎಲ್ಲಾ ತಿದ್ದುಪಡಿಗಳೂ ಅಂಗೀಕೃತವಾದವು. ೧೬೬ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

* * * * *

## ವಿಧಿ ೧೬೭

\+ **ಮಾನ್ಯ ಡಾ. ಬಿ. ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ:

"೧೬೭ನೆಯ ವಿಧಿಯ (೧)ನೆಯ ಖಂಡದ (ಡಿ) ಉಪಖಂಡದ ವ್ಯಾಕ್ಯಕ್ಕೆ ಬದಲಾಗಿ ಈ ಕೆಳಗಿನದನ್ನು ಇಡಬೇಕು. "ಅವನು ಭಾರತದ ಪ್ರಜೆಯಾಗಿ ಉಳಿಯದಿದ್ದರೆ ಅಥವಾ ವಿದೇಶವೊಂದರ ಪೌರತ್ವವನ್ನು ಸ್ವಯಂಪ್ರೇರಿತವಾಗಿ ಪಡೆದುಕೊಂಡಿದ್ದರೆ ಅಥವಾ ವಿದೇಶವೊಂದರ ಆಡಳಿತಕ್ಕೆ ನಿಷ್ಠೆ ಅಥವಾ ಅಂಟಿಕೊಂಡಿರುವಿಕೆಯನ್ನು ವ್ಯಕ್ತಪಡಿಸುತ್ತಿದ್ದರೆ."

**ಶ್ರೀ ಮಹಾವೀರ ತ್ಯಾಗಿ :** ನಾನು ಈಗ ಕಾಮನ್‌ವೆಲ್ತ್‌ನಲ್ಲಿರುವುದರಿಂದ, ಇಂಗ್ಲೆಂಡಿಗೆ ಸಂಬಂಧಿಸಿದಂತೆ ನಮ್ಮ ಸ್ಥಾನವು ಏನಾಗುತ್ತದೆ?

ಚಕ್ರವರ್ತಿಗೆ ನಾವು ನಿಷ್ಠರಾಗಿರುವುದು ಕೂಡ ಅನರ್ಹತೆಯಾಗುತ್ತದೆಯೇ?

**ಮಾನ್ಯ ಅಧ್ಯಕ್ಷರು :** ಅದು ಸಂವಿಧಾನಕ್ಕೆ ವ್ಯಾಖ್ಯಾನ ಮಾಡುವ ರೀತಿಯಲ್ಲಿದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅದನ್ನು ರಾಷ್ಟ್ರೀಯತೆಯ ಶಾಸನವು ನೋಡಿಕೊಳ್ಳುತ್ತದೆ.

(೨೪೨೦ ಮತ್ತು ೨೪೨೩ನೆಯ ತಿದ್ದುಪಡಿಗಳನ್ನು ಮಂಡಿಸಲಿಲ್ಲ).

**ಶ್ರೀ. ಎಚ್.ವಿ. ಕಾಮತ್ :** ೨೪೨೪ನೆಯ ನನ್ನ ತಿದ್ದುಪಡಿಯು ಕೇವಲ ಶಾಬ್ದಿಕವಾದ ತಿದ್ದುಪಡಿ ಎಂದು ನನ್ನ ಭಾವನೆ. ಅದನ್ನು ಕ.ರ.ಸಮಿತಿಗೆ ಬಿಟ್ಟುಬಿಡುತ್ತೇನೆ.

**ಮಾನ್ಯ ಅಧ್ಯಕ್ಷರು :** ಅದು ಮೂಲಭೂತ ಸ್ವರೂಪವಾಗಿದ್ದರೆ ಎಂದು ನನಗನ್ನಿಸುತ್ತದೆ.

**ಶ್ರೀ ಎಚ್.ವಿ. ಕಾಮತ್ :** ಹಾಗಿದ್ದರೆ ಅದನ್ನು ನಾನು ಮಂಡಿಸುತ್ತೇನೆ.

ಮಾನ್ಯರೆ ನಾನು ಹೀಗೆ ಮಂಡಿಸುತ್ತಿದ್ದೇನೆ:

"೧೬೭ನೆಯ ವಿಧಿಯ (೧)ನೇ ಖಂಡದ (ಡಿ) ಉಪಖಂಡದಲ್ಲಿ ಕೊನೆಯಲ್ಲಿರುವ ಸೆಮಿಕೋಲನ್‌ಗೆ ಬದಲಾಗಿ 'ಅಥವಾ' ಎಂಬ ಪದವನ್ನು ಕೂಡಿಸಬೇಕು."

'ಮತ್ತು' ಎಂಬ ಪದವನ್ನು ತೆಗೆದರೆ ಅಥವಾ ಅದರ ಸ್ಥಾನದಲ್ಲಿ 'ಅಥವಾ' ಎಂಬುದನ್ನು ಇಟ್ಟರೆ, ಅದು ಹೆಚ್ಚು ಕಡಿಮೆ ಒಂದೇ ಆಗುತ್ತದೆ ಎಂದು ನನ್ನ ಅಲ್ಪಬುದ್ಧಿಗೆ ಅನಿಸುತ್ತದೆ. ಆದ್ದರಿಂದಲೇ ಅದನ್ನು ನಾನು ಕರಡು ರಚನಾ ಸಮಿತಿಯ ಜ್ಞಾನಿಗಳಿಗೆ ಬಿಟ್ಟುಬಿಡುತ್ತೇನೆ ಎಂದು ಹೇಳಿದ್ದು. ಈ ವಿಷಯಗಳಿಗೆ ನಾನು ಹೊಸಬ. 'ಅಥವಾ' ಎಂಬ ಪದ ಹೆಚ್ಚು ಸೂಕ್ತವಾಗುತ್ತದೆ ಎನಿಸಿತು. ಏಕೆಂದರೆ ಈ ಯಾವುದಾದರೂ ಅನರ್ಹತೆಯಿದ್ದರೆ – ಈ ಯಾವುದಾದರೂ ಕಾರಣಗಳಿಂದ ವ್ಯಕ್ತಿಯನ್ನು ಅನರ್ಹಗೊಳಿಸಿದ್ದರೆ – ಆಗ

\+ ಅದೇ ಪು. ೫೭೦–೭೧

ವಿಧಿಯು ಅನ್ವಯಿಸುತ್ತದೆ.'

**ಮಾನ್ಯ ಅಧ್ಯಕ್ಷರು :** ಡಾ. ಅಂಬೇಡ್ಕರ್ ಅವರು ಅದನ್ನು ಪರಿಶೀಲಿಸಬಹುದು.

**ಎಚ್.ವಿ. ಕಾಮತ್ :** ನಾನು ಹೇಳಿದಂತೆ, ತೀರ್ಮಾನವನ್ನು ಕರಡು ರಚನಾ ಸಮಿತಿಯ ಜ್ಞಾನಿಗಳಿಗೆ ಬಿಟ್ಟು ಬಿಡುತ್ತೇನೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಅದು ಆಗಬಹುದು ಎಂದು ನನಗೆ ಅನ್ನಿಸುತ್ತದೆ.

**ಮಾನ್ಯ ಅಧ್ಯಕ್ಷರು :** ಅವು ಜಂಟಿಯಾಗಿ ಓದಿಕೆಯಾಗುವುದಿಲ್ಲವೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಇಲ್ಲ ಸ್ವಾಮಿ, ಅವು ಜಂಟಿಯಾಗಿ ಓದಿಸಿಕೊಳ್ಳುವುದಿಲ್ಲ.

**ಮಾನ್ಯ ಅಧ್ಯಕ್ಷರು :** 'ಅಥವಾ' ಎಂಬ ಪದವನ್ನು ಸೇರಿಸಿದರೆ ಯಾವುದೇ ಸಂದೇಹಕ್ಕೆಡೆಯಿಲ್ಲದಂತಾಗುತ್ತದೆ.

**ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್ :** ಅದು ಅಗತ್ಯವೆಂದು ನನಗನ್ನಿಸುವುದಿಲ್ಲ. (೨೪೨೫, ೨೪೨೬ ಮತ್ತು ೨೪೨೭ನೆಯ ತಿದ್ದುಪಡಿಗಳು ಮಂಡನೆಯಾಗಲಿಲ್ಲ.)

* **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನನ್ನ ಮಿತ್ರರಾದ ಶ್ರೀ ತ್ಯಾಗಿ ಅವರಿಗೋಸ್ಕರವಾಗಿ ನಾನೀಗ ಎದ್ದು ನಿಂತಿದ್ದೇನೆ. ಅವರು ನನ್ನನ್ನು ನೇರವಾದ ಒಂದೆರಡು ಪ್ರಶ್ನೆ ಕೇಳಿದ್ದಾರೆ. ತಾವು ಅನಕ್ಷರಸ್ಥರೆಂದು ಅವರೇ ಹೇಳಿಕೊಂಡಿರುವುದರಿಂದ 'ಅಂಟಿಕೊಂಡಿರುವಿಕೆ' ಎಂಬ ಪದವನ್ನು ಅರ್ಥಮಾಡಿಕೊಳ್ಳಲು ಅವರಿಗಿರುವ ಕಷ್ಟ ನನಗೆ ತಿಳಿಯುತ್ತದೆ. 'ಅಂಟಿಕೊಂಡಿರುವಿಕೆ' ಎಂದರೇನೆಂಬುದನ್ನು ಅವರಿಗೆ ವಿವರಿಸುತ್ತೇನೆ. ಒಂದು ದೇಶದ ಮೇಲೆ ಇನ್ನೊಂದು ದೇಶವು ದಾಳಿ ಮಾಡಿದರೆ ಆಗ ಹೀಗಾಗುತ್ತದೆ. ಸ್ಥಳೀಯ ಜನರು ಹೆದರಿಕೆಯಿಂದಲೋ ಅಥವಾ ಮಾರ್ಷಲ್ ಲಾ ಇರುವುದರಿಂದಲೋ ಕೆಲವೊಮ್ಮೆ ದಾಳಿ ಮಾಡಿದ ದೇಶದ ಹೆಸರಿನಲ್ಲಿ ವರ್ತಿಸುವ ಮಿಲಿಟರಿ ಗವರ್ನರನು ವಿಧಿಸಿದ ಕಾನೂನುಗಳಿಗೆ ವಿಧೇಯರಾಗುತ್ತಾರೆ. ದಾಳಿ ಮುಂದುವರಿದಿದ್ದಾಗ, ಸೈನ್ಯ ಇನ್ನೂ ಆಕ್ರಮಿಸಿಕೊಂಡೇ ಇದ್ದಾಗ ಅಂತಹ ವಿಧೇಯ ವರ್ತನೆಯು ಅನೇಕ ವೇಳೆ ಕ್ಷಮ್ಯವಾಗುತ್ತದೆ. ಎಷ್ಟೋ ಸಾರಿ ದಾಳಿಕೋರನಿಗೆ ಅಥವಾ ಮಿಲಿಟರಿ ಗವರ್ನರನಿಗೆ ಅಥವಾ ವಿಧೇಯವಾಗಿರುವ ನಿಜವಾದ ಅಗತ್ಯವಿರುವುದಿಲ್ಲ. ಹತೋಟಿ ಸಡಿಲವಾಗಿರಬಹುದು ಅಥವಾ ಯುದ್ಧ ನಿಂತಿರಬಹುದು. ಆದರೂ ಕೆಲವು ಜನರು ಮಿಲಿಟರಿ ಗವರ್ನರನಿಗೆ ಅಥವಾ ದಾಳಿಕೋರನಿಗೇ ವಿಧೇಯರಾಗಿರುತ್ತಾರೆ. ಅದೇ ನಿಲುವನ್ನೇ ಮುಂದುವರಿಸುತ್ತಾರೆ. ಅವರ ನಡವಳಿಕೆಯನ್ನು ಕಾನೂನಿನಂತೆ 'ಅಂಟಿಕೊಂಡಿರುವಿಕೆ' (adherence) ಎಂದು ಕರೆಯಲಾಗುತ್ತದೆ. ಅದು ಕೇವಲ ಒಪ್ಪಿಕೊಳ್ಳುವುದಕ್ಕಿಂತ ಬೇರೆಯಾದದ್ದು. ಈ ಬಗೆಯ ಸಂದರ್ಭದಿಂದ ರಕ್ಷಿಸುವ ಸಲುವಾಗಿ 'ಅಂಟಿಕೊಳ್ಳುವುದು' ಎಂಬ ಪದವನ್ನು ಬಳಸಲಾಗಿದೆ.

ನನ್ನ ಮಿತ್ರ ಶ್ರೀ ತ್ಯಾಗಿಯವರಿಗೆ ಅನ್ಯದೇಶಗಳು ಎಂದು ಯಾವುದನ್ನು ಪರಿಗಣಿಸಬೇಕೆಂಬ ವಿಷಯದಲ್ಲಿ ತುಸು ಕಳವಳವಾಗಿತ್ತು. ಕಾಮನ್‌ವೆಲ್ತ್ ಸಂಬಂಧಗಳನ್ನು ಕುರಿತು ಯಾವುದೇ ಚರ್ಚೆಯಲ್ಲಿ ನನ್ನನ್ನು ತೊಡಗಿಸುವುದು ಶ್ರೀ ತ್ಯಾಗಿಯವರ ಉದ್ದೇಶವಾಗಿರಲಿಲ್ಲ ಎಂದು ನಾನು ಬಲ್ಲೆ. ಅದು ಈಗಾಗಲೇ ಚರ್ಚೆಯಾಗಿ ಸದನವು ವಿಲೇವಾರಿ ಮಾಡಿಯಾಗಿರುವ ವಿಷಯ. ಅವರಿಗೆ ಒಂದು ಮಾತು ಹೇಳಬಯಸುತ್ತೇನೆ. ಮುಂದೆ, ೩೦೩ನೆಯ ವಿಧಿಯ (೧)ನೆಯ ಉಪವಾಕ್ಯಕ್ಕೆ ಒಂದು ತಿದ್ದುಪಡಿಯನ್ನು ಸೂಚಿಸಲಿದ್ದೇನೆ.

---

* ಸಿ.ಎ.ಡಿ.ಸಂ.೮. ೨ನೇ ಜೂನ್ ೧೯೪೯, ಪುಟ. ೫೭೩–೭೪

ಅದರಲ್ಲಿ ಪರದೇಶವೆಂದರೇನು, ಯಾವುದನ್ನು ಹಾಗೆ ಪರಿಗಣಿಸಲಾಗುತ್ತದೆ ಎಂಬುದನ್ನು ವಿವರಿಸಲಾಗುತ್ತದೆ. ನನ್ನ ಮಿತ್ರ ಶ್ರೀ ತ್ಯಾಗಿ ಅವರ ಬಳಿ ತಿದ್ದುಪಡಿಗಳ ಮುದ್ರಿತ ಪಟ್ಟಿಯ ಎರಡನೆಯ ಸಂಪುಟ ಇದ್ದರೆ, ಅದರಲ್ಲಿ ಆ ಉದ್ದೇಶಿತ ತಿದ್ದುಪಡಿಯನ್ನು ಅವರು ನೋಡಬಹುದು. ಯಾವುವು ಹೊರದೇಶಗಳಲ್ಲಿ ಎಂದು ಘೋಷಿಸುವ ಅಧಿಕಾರವನ್ನು ಅದು ರಾಷ್ಟ್ರಪತಿಯವರಿಗೆ ಕೊಡುತ್ತದೆ. ಒಂದು ದೇಶವು ವಿದೇಶವೋ ಅಲ್ಲವೋ ಎಂದು ಹೇಳುವುದೂ ಅದರಲ್ಲಿ ಸೇರಿಸುತ್ತದೆ. ನನ್ನ ಮಿತ್ರ ಶ್ರೀ ತ್ಯಾಗಿ ಅವರಿಗಾಗಿ ಒಂದು ವಿವರಣೆಯ ಮಾತನ್ನೂ ಇಲ್ಲಿ ಹೇಳಬಯಸುತ್ತೇನೆ. ಉದ್ದೇಶಿತ ತಿದ್ದುಪಡಿಯ ಪ್ರಕಾರ ಅಥವಾ ಕಾಮನ್‌ವೆಲ್ತ್ ಒಪ್ಪಂದದ ಪ್ರಕಾರ ಒಂದು ದೇಶವನ್ನು ವಿದೇಶವಲ್ಲವೆಂದು ಘೋಷಿಸಿದಾಗ, ಅಂತಹ ದೇಶಗಳಲ್ಲಿ ವಾಸಮಾಡುತ್ತಿರುವ ಜನರೆಲ್ಲರೂ, ಆ ಕಾರಣದಿಂದಲೇ, ಈ ದೇಶದ ಜನರಿಗೆ ಸಂವಿಧಾನವು ನೀಡಿರುವ ಪೌರತ್ವದ ಹಕ್ಕುಗಳೆಲ್ಲವನ್ನೂ ಪಡೆಯುತ್ತಾರೆಯೆ ಎಂದು ಅನೇಕರಿಗೆ ಕಳವಳ ಉಂಟಾಗಿರುವಂತೆ ತೋರುತ್ತದೆ. ಹಾಗಾಗುವುದು ಅನಗತ್ಯ ಎಂದು ನನ್ನ ಮಿತ್ರರಿಗೆ ನಾನು ಹೇಳಬೇಕು. ಕಾಮನ್‌ವೆಲ್ತ್ ಸಂಬಂಧದ ಪ್ರಕಾರ ನಿಲುವು ಹೀಗಿರುತ್ತದೆ. ಎಲ್ಲಾ ಡೊಮಿನಿಯನ್ ದೇಶಗಳಲ್ಲಿಯೂ ನಿವಾಸಿಗಳನ್ನು ಮೂರು ವರ್ಗವಾಗಿ ವಿಭಾಗಿಸಲಾಗುತ್ತದೆ. ಪೌರರು, ಹೊರದೇಶದವರು ಮತ್ತು ಮೂರನೆಯ ಇನ್ನೊಂದು ವರ್ಗವನ್ನು ನಿರ್ದಿಷ್ಟ ದೇಶದಲ್ಲಿ ವಾಸಮಾಡುತ್ತಿರುವ ಡೊಮಿನಿಯನ್ ನಿವಾಸಿಗಳು ಇದೆಲ್ಲದರ ಅರ್ಥ, ಭಾರತದಲ್ಲಿ ವಾಸಮಾಡುತ್ತಿರುವ ಡೋಮಿನಿಯನ್ನುಗಳ ಪ್ರಶ್ನೆಗಳನ್ನು ಅನ್ಯದೇಶೀಯರೆಂದು ಪರಿಗಣಿಸುವುದಿಲ್ಲ. ಅನ್ಯದೇಶಿಯರಿಗಲ್ಲದ ಕೆಲವು ಹಕ್ಕುಗಳು ಅವರಿಗಿರುತ್ತವೆ. ಆದರೆ ನಮ್ಮ ದೇಶದ ಜನರಿಗೆ ನೀಡುತ್ತಿರುವ ಪೂರ್ಣ ಪೌರತ್ವದ ಹಕ್ಕುಗಳನ್ನು ಅವರು ಖಂಡಿತವಾಗಿಯೂ ಪಡೆಯುವುದಿಲ್ಲ. ಈಗ ಮಿತ್ರ ಶ್ರೀ ತ್ಯಾಗಿಯವರು ಮನಸ್ಸಿನಲ್ಲಿರುವ ಸಂದೇಹಗಳನ್ನು ತೆಗೆದು ಹಾಕಬಹುದು ಎಂದು ಆಶಿಸುತ್ತೇನೆ.

**ಶ್ರೀ ಮಹಾವೀರ ತ್ಯಾಗಿ :** ಸ್ವಾರಸ್ಯವಾದ ಭಾಷಣ ಮಾಡಿದುದಕ್ಕಾಗಿ ನಿಮ್ಮನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ.

(ಡಾ. ಅಂಬೇಡ್ಕರ್ ಮತ್ತು ಶ್ರೀ ಟಿ.ಟಿ. ಕೃಷ್ಣಮಾಚಾರಿ ಅವರು ಮಂಡಿಸಿದ ತಿದ್ದುಪಡಿಗಳು ಅಂಗೀಕೃತವಾದುವು. ೧೬೭ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

* * * * *

## ವಿಧಿ ೧೬೯

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** (ಮುಂಬಯಿ: ಸಾಮಾನ್ಯ): ಮಾನ್ಯರೆ, ಬಹಳ ಹಿಂದೆ ಅಲ್ಲ, ಈಚೆಗೆ ಈ ವಿಚಾರವನ್ನು ಈ ಸದನದಲ್ಲಿ ಚರ್ಚಿಸಲಾಯಿತು. ಪಾರ್ಲಿಮೆಂಟಿನ ಸೌಲಭ್ಯಗಳನ್ನು ಕುರಿತು ಪರಿಶೀಲಿಸುತ್ತಿದ್ದಾಗ, ಸದನವು ಪಾರ್ಲಿಮೆಂಟಿನ ಸೌಲಭ್ಯಗಳನ್ನು ರಕ್ಷಣೆಗಳನ್ನು ಕುರಿತಾದ ವಿಧಿಯನ್ನು ಸದನವು ಒಪ್ಪಿಕೊಂಡಾಗ, ನಾವು ಮುಂದೆ ಅದನ್ನೇ ರಾಜ್ಯ ಶಾಸನಸಭೆಗೆ ಸಂಬಂಧಿಸಿದಂತೆ ಅದೇ ಅವಕಾಶವನ್ನು ಮತ್ತೆ ಮಂಡಿಸುವಾಗ ಇನ್ನಷ್ಟು ಚರ್ಚೆಯಾಗುವುದಿಲ್ಲ ಎಂದು ನಾನು ಆಲೋಚಿಸಿದ್ದೆ. ಆದರೆ ಚರ್ಚೆ ನಡೆದಿದೆ. ಪತ್ರಿಕೆಗಳೂ ಕಳವಳಗೊಂಡಿವೆ ಎಂದು ನನ್ನ ಮಿತ್ರರಾದ ಶ್ರೀ ಕಾಮತ್ ತಿಳಿಸುತ್ತಾರೆ. ಆದ್ದರಿಂದ ಕರಡು ರಚನಾ ಸಮಿತಿಯು ಈ ಕ್ರಮವನ್ನು ಕೈಗೊಂಡದ್ದಕ್ಕೆ ಉಚಿತವಾದ ಕಾರಣವೇನೆಂಬುದನ್ನು ನಾನು ತಿಳಿಸಬೇಕಾದುದು ಅಪೇಕ್ಷಣೀಯ.

ಎಷ್ಟು ಜನ ಸದಸ್ಯರಿಗೆ ಸೌಲಭ್ಯ ಎಂಬ ಅರ್ಥದ ಪರಿಕಲ್ಪನೆಯಿದೆಯೋ ನನಗೆ ತಿಳಿಯದು, ನಾನು ಯೋಚಿಸುವ ಸೌಲಭ್ಯಗಳು ಎರಡು ವರ್ಗಕ್ಕೆ ಸೇರುತ್ತವೆ. ಮೊದಲನೆಯದಾಗಿ, ಬಿಡಿವ್ಯಕ್ತಿಗಳಿಗೆ ಸಂಬಂಧಿಸಿದ ಸೌಲಭ್ಯಗಳಿರುತ್ತವೆ. ಉದಾಹರಣೆಗೆ ವಾಕ್ ಸ್ವಾತಂತ್ರ್ಯ, ಕರ್ತವ್ಯ ನಿರ್ವಹಣೆಯಲ್ಲಿರುವಾಗ ಬಂಧಿತನಾಗಿರುವುದರಿಂದ ರಕ್ಷಣೆ ಇತ್ಯಾದಿ. ಆದರೆ ಸೌಲಭ್ಯ ಎಂಬ ಪದವು ಅದಷ್ಟನ್ನೇ ಅಲ್ಲ ಒಳಗೊಳ್ಳುವುದು.

**ಡಾ. ಪಿ.ಎಸ್. ದೇಶಮುಖ್ :** ಸೌಲಭ್ಯಗಳ ಪಟ್ಟಿಯಾಗಲೀ, ಅವುಗಳನ್ನು ಹೇಗೆ ಚಲಾಯಿಸಲಾಗುತ್ತದೆ ಎಂಬುದನ್ನು ಕುರಿತ ಉಪನ್ಯಾಸವಾಗಲಿ ನಮಗೆ ಬೇಕಾಗಿಲ್ಲ. ಅವುಗಳನ್ನು ಸಂವಿಧಾನದಲ್ಲಿ ಸೇರಿಸುವುದು ಸಾಧ್ಯವೋ ಇಲ್ಲವೋ ಎನ್ನುವುದಷ್ಟೆ ಈಗ ನಮಗೆ ತಿಳಿಯಬೇಕಾಗಿರುವುದು, ಅದೇ ನಿಜವಾದ ಪ್ರಶ್ನೆ.

**ಮಾನ್ಯ ಅಧ್ಯಕ್ಷರು :** ಅದನ್ನು ಕುರಿತೇ ಅವರು ಹೇಳುತ್ತಿದ್ದಾರೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಇರುವ ಕಷ್ಟವನ್ನು ಹೇಳುತ್ತಿದ್ದೇನೆ. ವಾಕ್ ಸ್ವಾತಂತ್ರ್ಯ, ಬಂಧನಗೊಳ್ಳುವುದರಿಂದ ರಕ್ಷಣೆ ಎಂಬ ಈ ಎರಡು ವಿಷಯಗಳಿಗೆ ಮಾತ್ರ ಸಂಬಂಧಪಟ್ಟಿದ್ದರೆ, ಅವನ್ನು ವಿಧಿಯಲ್ಲೇ, ಸುಲಭವಾಗಿ ಸೇರಿಸಬಿಡಬಹುದಾಗಿದ್ದಿತು. ಕಾಮನ್ಸ್ ಸಭೆಗೆ ಅದನ್ನು ಉಲ್ಲೇಖಿಸುವ ಸಂದರ್ಭ ಬರುತ್ತಿರಲಿಲ್ಲ. ಆದರೆ ಪಾರ್ಲಿಮೆಂಟಿಗೆ ಸಂಬಂಧಿಸಿದಂತೆ ನಾನು ಹೇಳುವ ವಿಶೇಷ ಹಕ್ಕುಗಳು, ಮೇಲೆ ಹೇಳಿದ, ಬಿಡಿ ವ್ಯಕ್ತಿಗಳಿಗೆ ಸಂಬಂಧಪಟ್ಟ ಎರಡು ಸವಲತ್ತುಗಳಿಗಿಂತ ಹೆಚ್ಚು ವ್ಯಾಪಕವಾದವು. ನಿದರ್ಶನಕ್ಕೆ, ಪಾರ್ಲಿಮೆಂಟಿನ ವಿಶೇಷ ಹಕ್ಕುಗಳು ಜನತೆಗೆ ಎದುರಾಗಿ ಪಾರ್ಲಿಮೆಂಟಿಗಿರುವ ಹಕ್ಕುಗಳಿಗೂ ವಿಸ್ತರಿಸುತ್ತವೆ. ಎರಡನೆಯದಾಗಿ, ಅವು ಬಿಡಿ ವ್ಯಕ್ತಿಗೆದುರಾಗಿ ಇರುವ ಹಕ್ಕಿಗೂ ವಿಸ್ತರಿಸುತ್ತವೆ. ಉದಾಹರಣೆಗೆ, ಹೌಸ್ ಆಫ್ ಕಾಮನ್ಸ್ ಸಭೆಯ ಅಧಿಕಾರಗಳು ಮತ್ತು ಸೌಲಭ್ಯಗಳ ಪ್ರಕಾರ, ಪಾರ್ಲಿಮೆಂಟನ್ನು ತಿರಸ್ಕರಿಸಿದ ಅಪರಾಧಕ್ಕಾಗಿ ಯಾವನೇ ವ್ಯಕ್ತಿಗೆ ಶಿಕ್ಷೆ ವಿಧಿಸಲು ಪಾರ್ಲಿಮೆಂಟಿಗೆ ಅವಕಾಶವಿದೆ. ಆ ಸೌಲಭ್ಯವನ್ನು ಅದು ಚಲಾಯಿಸಿದಾಗ, ನ್ಯಾಯಾಲಯದ ನ್ಯಾಯಾಧಿಕಾರವನ್ನು ಕಿತ್ತುಕೊಂಡಂತಾಗುತ್ತದೆ. ಅದೊಂದು ಮುಖ್ಯವಾದ ಹಕ್ಕು. ಪಾರ್ಲಿಮೆಂಟಿಗೆ ಅಪಮಾನವಾಗುವಂತಹ ಏನನ್ನಾದರೂ ಮಾಡಿದ ಪಾರ್ಲಿಮೆಂಟ್ ಸದಸ್ಯನ ಮೇಲೆ ಸೂಕ್ತ ಕ್ರಮವನ್ನು ಕೈಗೊಳ್ಳುವುದು ಪಾರ್ಲಿಮೆಂಟಿಗೆ ಬಿಟ್ಟಿದ್ದು. ಸೆರೆಮನೆಗೆ ದೂಡುವಂತಹ ಗುರುತರವಾದ ವಿಚಾರಗಳು ಇಲ್ಲಿವೆ. ಪಾರ್ಲಿಮೆಂಟು ತನ್ನನ್ನು ತಿರಸ್ಕಾರ ಮಾಡಿದಂತಾಗಿದೆ ಎಂದು ಒಬ್ಬ ಪ್ರಜೆಯನ್ನು ಕಾರಾಗೃಹದಲ್ಲಿಡುವುದು, ವಿವರಿಸಲು ಸುಲಭವಾದ ವಿಚಾರವಲ್ಲ, ಹಾಗೆಯೇ ಬಿಡಿ ಸದಸ್ಯರ ಯಾವ ಕಾರ್ಯಗಳು, ವರ್ತನೆಗಳು ಪಾರ್ಲಿಮೆಂಟಿಗೆ ಅಗೌರವವನ್ನು ಉಂಟುಮಾಡುತ್ತವೆ ಎಂದು ಹೇಳುವುದೂ ಸುಲಭವಲ್ಲ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನಮಗೆ ಸದಸ್ಯರ ಹಕ್ಕು ಸೌಲಭ್ಯಗಳನ್ನು ಕುರಿತು ಕಾಳಜಿಯಿದೆಯೇ ಹೊರತು ಪಾರ್ಲಿಮೆಂಟಿನ ವಿಶೇಷ ಸವಲತ್ತುಗಳನ್ನು ಕುರಿತಲ್ಲ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ದಯವಿಟ್ಟು ನಾನು ಮುಂದುವರಿಸಲು ಬಿಡಿ. ಪಾರ್ಲಿಮೆಂಟನ್ನು ಅಪಮಾನಿಸಿವೆ ಎಂದು ಭಾವಿಸಲಾಗುವ ಕಾರ್ಯಗಳನ್ನು, ನಡವಳಿಕೆಗಳನ್ನು, ನಾನು ಹೇಳಿದಂತೆ, ವಿವರಿಸುವುದು ಸುಲಭವಲ್ಲ. ಅದಕ್ಕೆ ಗಣನೀಯ ಪ್ರಮಾಣದ ಚರ್ಚೆ, ಪರೀಕ್ಷೆಗಳು ನಡೆಯಬೇಕು. ಸೌಲಭ್ಯಗಳನ್ನು ರಕ್ಷಣೆಗಳನ್ನು ಪಟ್ಟಿಮಾಡಲು ನಾವು ಯೋಚಿಸಲಿಲ್ಲವಾದುದಕ್ಕೆ ಅದು ಒಂದು ಕಾರಣ.

ಆದರೆ ನನ್ನ ಮನಸ್ಸಿನಲ್ಲಾಗಲೀ ಕರಡು ರಚನಾ ಸಮಿತಿಯ ಮನಸ್ಸಿನಲ್ಲಾಗಲಿ, ಪಾರ್ಲಿಮೆಂಟಿನ ಕೆಲವು ವಿಶೇಷ ಹಕ್ಕುಗಳಿರಬೇಕೆಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ, ಪಾರ್ಲಿಮೆಂಟು ಮಿಥ್ಯಾಪವಾದಕ್ಕೆ ಗುರಿಯಾದಾಗ, ಈ ದೇಶದ ಪಾರ್ಲಿಮೆಂಟರಿ ವ್ಯವಸ್ಥೆಯನ್ನು ಅವಹೇಳನಕ್ಕೆ ಗುರಿಮಾಡಬಹುದು,

ಯಾರ ಪ್ರಯೋಜನಕ್ಕಾಗಿ ವರ್ತಿಸುತ್ತಿದೆಯೋ ಆ ಪ್ರಜೆಗಳೇ ಪಾರ್ಲಿಮೆಂಟರಿ ಸಂಸ್ಥೆಗಳನ್ನು ಕುರಿತು ಎಲ್ಲಾ ಗೌರವಗಳನ್ನು ಕಳೆದುಕೊಳ್ಳುವಂತೆ ಮಾಡಬಹುದು ಎಂದು ಅನ್ಯಾಯವಾದ ಟೀಕೆ ಮಾಡಿದಾಗ ಆ ಹಕ್ಕುಗಳ ಚಲಾವಣೆ ಅಗತ್ಯವಾಗುತ್ತದೆ.

ವರ್ಗೀಕರಿಸುವುದು ಏಕೆ ಸಾಧ್ಯವಾಗಿಲ್ಲ ಎನ್ನುವುದಕ್ಕೆ ಒಂದು ಕಾರಣವನ್ನು ಈಗ ಕೊಟ್ಟಿದ್ದೇನೆ. ನಮ್ಮ ಅನುಭವಕ್ಕೆ ಬಂದಿರುವ ಇನ್ನು ಕೆಲವು ಕಷ್ಟಗಳನ್ನು ಈಗ ಹೇಳಬೇಕು. ಪಾರ್ಲಿಮೆಂಟಿನ ಹಕ್ಕು ಸೌಲಭ್ಯಗಳನ್ನು ಶಾಸನದಲ್ಲೇ ಪಟ್ಟಿಮಾಡಬೇಕೆಂಬ ಸಲಹೆಯನ್ನು ಒಪ್ಪಿದರೆ, ನಾವು ಮೂರು ದಾರಿಗಳನ್ನು ಹಿಡಿಯಬೇಕಾಗುತ್ತಿತ್ತು. ಒಂದು ಅವುಗಳನ್ನು ಸಂವಿಧಾನದಲ್ಲಿ ಅಳವಡಿಸುವುದು, ಅಂದರೆ ಪಾರ್ಲಿಮೆಂಟ್ ಹಾಗೂ ಅದರ ಸದಸ್ಯರ ಹಕ್ಕುಗಳನ್ನು ರಕ್ಷಣೆಗಳನ್ನು ವಿವರವಾಗಿ ಅಲ್ಲಿ ನಿರೂಪಿಸುವುದು. ಮೇ (May) ಅವರು ಬರೆದ 'ಪಾರ್ಲಿಮೆಂಟರಿ ಪ್ರಾಕ್ಟೀಸ್' ಕೃತಿಯನ್ನು ನಾನು ಬಹು ಜಾಗರೂಕತೆಯಿಂದ ಓದಿದ್ದೇನೆ. ಪಾರ್ಲಿಮೆಂಟಿನ ಹಕ್ಕುಗಳು ಮತ್ತು ರಕ್ಷಣೆಗಳನ್ನು ಕುರಿತು ತಿಳಿವಳಿಕೆಗೆ ಅದು ಸಮರ್ಥವಾದ ಮೂಲವಾಗಿದೆ. ಮೇ ಅವರ ಕೃತಿಯ ಸೂಚಿಯನ್ನು ಗಮನಿಸಿದ್ದೇನೆ. ವಾಸ್ತವವಾಗಿ ಅದರ ೮ ಅಥವಾ ೯ ಅಂಕಣಗಳು ಪಾರ್ಲಿಮೆಂಟಿನ ವಿಶೇಷ ಹಕ್ಕುಗಳು ಮತ್ತು ರಕ್ಷಣೆಗಳ ಸಲುವಾಗಿಯೇ ಮೀಸಲಾಗಿವೆ. ಆದ್ದರಿಂದ ಈ ವಿಷಯದಲ್ಲಿ ಮೇ ಏನು ಹೇಳುತ್ತಾರೋ ಅದರ ಆಧಾರದಿಂದ ಸಂಸತ್ತಿಗಿರುವ ವಿಶೇಷ ಹಕ್ಕುಗಳು ಮತ್ತು ರಕ್ಷಣೆಗಳನ್ನು ಸಂಪೂರ್ಣವಾಗಿ ನಿರೂಪಿಸಿ ಆ ಸಂಹಿತೆಯನ್ನು ಶಾಸನಗೊಳಿಸಬೇಕಾದರೆ ನಾನು ಸಂಸತ್ತಿನ ಹಕ್ಕುಗಳು ಮತ್ತು ರಕ್ಷಣೆಗಳು ಎಂದೇ ಇಪ್ಪತ್ತು ಇಪ್ಪತ್ತೈದು ಪುಟಗಳನ್ನು ಕೂಡಿಸಬೇಕಾಗಿತ್ತೆನ್ನುವುದರಲ್ಲಿ ನನಗೆ ಸಂದೇಹವೇ ಇಲ್ಲ. ೨೦–೨೫ ಪುಟಗಳಿಗೆ ವ್ಯಾಪಿಸುವ, ಸ್ಪಷ್ಟವಾಗಿ ನಿರೂಪಿಸಿದ ಪಾರ್ಲಿಮೆಂಟಿನ ಹಕ್ಕುಗಳು ಮತ್ತು ರಕ್ಷಣೆಗಳ ಪಟ್ಟಿಯನ್ನು ಇಟ್ಟುಕೊಳ್ಳಲು ಈ ಸದನದ ಮಾನ್ಯ ಸದಸ್ಯರು ಬಯಸುತ್ತಾರೆಯೋ ಹೇಗೋ ನನಗೆ ಗೊತ್ತಿಲ್ಲ. ಆ ದಾರಿಯನ್ನು ನಾವು ಹಿಡಿಯದೆ ಹೋದುದಕ್ಕೆ ಇದೂ ಒಂದು ಕಾರಣ.

ಇನ್ನೊಂದು ದಾರಿ, ಸಂವಿಧಾನದಲ್ಲಿ ಈಗಾಗಲೇ ಅನೇಕ ಕಡೆ ಹೇಳಿರುವಂತೆ, ನಿರ್ದಿಷ್ಟ ವಿಷಯವನ್ನು ಕುರಿತು ಸಂಸತ್ತು ಅವಕಾಶವನ್ನು ನಿಗದಿಗೊಳಿಸಬಹುದು, ಪಾರ್ಲಿಮೆಂಟು ಹಾಗೆ ಅವಕಾಶ ಮಾಡುವವರೆಗೆ ಇರುವ ಪರಿಸ್ಥಿತಿಯೇ ಮುಂದುವರಿದಿರುತ್ತದೆ ಎಂದು ಹೇಳುವುದು. ಇದು ನಾವು ಅನುಸರಿಸಬಹುದಾಗಿದ್ದ ಎರಡನೆಯ ದಾರಿ. ಪಾರ್ಲಿಮೆಂಟು ತನ್ನ ಸದಸ್ಯರ ಮತ್ತು ತನ್ನ ಹಕ್ಕುಗಳನ್ನು ರಕ್ಷಣೆಗಳನ್ನು ವಿವರವಾಗಿ ನಿರೂಪಿಸಬಹುದು. ಅದು ನಡೆಯುವವರೆಗೆ, ಸಂವಿಧಾನವು ಎಂದಿನಿಂದ ಅಸ್ತಿತ್ವಕ್ಕೆ ಬರುತ್ತದೋ ಅಂದು ಯಾವ ಹಕ್ಕು–ಸೌಲಭ್ಯಗಳು ಇದ್ದವೋ ಅವೇ ಮುಂದುವರೆದಿರುತ್ತವೆ ಎಂದು ನಾವು ಹೇಳಬಹುದಾಗಿತ್ತು. ಆದರೆ ದುರದೃಷ್ಟವಶಾತ್, ಸಾಮಾನ್ಯ ಸದಸ್ಯರು ತಿಳಿಯುವಂತೆ, ೧೯೩೫ರ ಶಾಸನವು ಪಾರ್ಲಿಮೆಂಟಿಗೂ ಅದರ ಸದಸ್ಯರಿಗೂ ಯಾವ ಹಕ್ಕುಗಳನ್ನಾಗಲಿ, ರಕ್ಷಣೆಗಳನ್ನಾಗಲಿ ಕೊಟ್ಟಿಲ್ಲ. ಅದು ಒದಗಿಸಿರುವುದು ಒಂದೇ ಒಂದು ಅವಕಾಶ, ವಾಕ್‌ಸ್ವಾತಂತ್ರ್ಯವಿರುತ್ತದೆ ಎನ್ನುವುದು, ಪಾರ್ಲಿಮೆಂಟಿನಲ್ಲಿ ನಡೆಯುವ ಚರ್ಚೆಗಳಲ್ಲಿ ಏನನ್ನೇ ಮಾತನಾಡಿದರೂ ಆ ಸದಸ್ಯನನ್ನು ಶಿಕ್ಷೆಗೊಳಪಡಿಸುವಂತಿಲ್ಲ ಎಂಬುದು. ಆದ್ದರಿಂದ ಆ ದಾರಿಯೂ ತೆರೆದಿರಲಿಲ್ಲ. ಏಕೆಂದರೆ ಈಗಿರುವಂತೆ, ಪಾರ್ಲಿಮೆಂಟಿಗಾಗಲಿ ವಿಧಾನಸಭೆಗಾಗಲಿ ಯಾವ ವಿಶೇಷ ಹಕ್ಕಾಗಲಿ ರಕ್ಷಣೆಯಾಗಲಿ ಇಲ್ಲ. ಆದ್ದರಿಂದ ಈ ದಾರಿಯನ್ನು ಹಿಡಿಯುವಂತಿರಲಿಲ್ಲ.

ಮೂರನೆಯ ದಾರಿ ನಮಗೆ ತೆರೆದಿದೆ, ಅದನ್ನು ನಾವು ಅನುಸರಿಸಿದ್ದೇವೆ. ಪಾರ್ಲಿಮೆಂಟಿನ ವಿಶೇಷ ಹಕ್ಕುಗಳು ಹೌಸ್ ಆಫ್ ಕಾಮನ್ಸ್ ಸಭೆಗಿರುವ ಹಕ್ಕುಗಳೇ ಆಗಿರುತ್ತದೆ ಎಂದು ಹೇಳುವುದು. ಹೌಸ್ ಆಫ್ ಕಾಮನ್ಸ್ ಸಭೆಯನ್ನು ಉಲ್ಲೇಖಿಸಬಾರದೆನ್ನುವುದು ಭಾವುಕತೆಯಿಂದ ಕೂಡಿದ ಆಕ್ಷೇಪಣೆ. ಕರಡು

ರಚನಾ ಸಮಿತಿಯು ಅಳವಡಿಸಿಕೊಂಡ ಮಾರ್ಗದ ವಿರುದ್ಧವಾಗಿ ಮಂಡಿಸಿರುವ ವಾದಕ್ಕೆ ಈ ಭಾವನಾತ್ಮಕತೆಯಲ್ಲದೆ ಬೇರೆ ಯಾವ ಮಾರ್ಗವೂ ಇದ್ದಂತೆ ತೋರುವುದಿಲ್ಲ. ಆದ್ದರಿಂದ ಈ ವಿಧಿಯು ಸಾಧ್ಯವಿದ್ದ ಏಕೈಕ ಮಾರ್ಗವನ್ನು ಅನುಸರಿಸಿ ರೂಪಿತವಾಗಿದೆ. ಅದಕ್ಕೆ ಬದಲಿಯಾದ ಮಾರ್ಗ ಯಾವುದೂ ನಮಗೆ ಸಾಧ್ಯವಿರಲಿಲ್ಲ. ಪರಿಸ್ಥಿತಿ ಹೀಗಿರುವುದರಿಂದ, ಈ ವಿಧಿಯನ್ನು ನಾವು ರಚಿಸಿರುವ ರೀತಿಯಲ್ಲಿಯೇ ಅಂಗೀಕರಿಸಬಹುದೆಂದು ಸೂಚಿಸಬಯಸುತ್ತೇನೆ.

**ಡಾ. ಪಿ.ಎಸ್. ದೇಶಮುಖ್:** ಮಾನ್ಯ ಸದಸ್ಯರು ನನ್ನ ಇನ್ನೊಂದು ಸೂಚನೆಯನ್ನು ಕುರಿತು ಏನನ್ನೂ ಹೇಳಿಲ್ಲ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ನಾನಾಗಲೇ ಹೇಳಿದಂತೆ, ಎಲ್ಲಾ ವಿಶೇಷ ಹಕ್ಕುಗಳನ್ನು ರಕ್ಷಣೆಗಳನ್ನು ವರ್ಗೀಕರಿಸಿ ವಿವರವಾಗಿ ನಿರೂಪಿಸಬೇಕಾದರೆ ಅದು ಕೊನೆಯ ಪಕ್ಷ ಇಪ್ಪತ್ತೈದು ಪುಟಗಳನ್ನಾದರೂ ತೆಗೆದುಕೊಳ್ಳುತ್ತದೆ..........*

* * * * *

**ಮಾನ್ಯ ಅಧ್ಯಕ್ಷರು:** ಡಾ. ದೇಶ್‌ಮುಖ್ ಅವರ ಸಲಹೆಯೇನಿತ್ತೆಂದರೆ, ರಾಜ್ಯ ಶಾಸನ ಸಭೆಗಳನ್ನು ಕುರಿತು ಹೇಳುವ ಈ ವಿಧಿಯಲ್ಲಿ, ಒಂದು ರಾಜ್ಯಶಾಸನ ಸಭೆಯ ಸದಸ್ಯರು, ಪಾರ್ಲಿಮೆಂಟಿನ ಸದಸ್ಯರಿಗಿರುವ ವಿಶೇಷ ಹಕ್ಕುಗಳನ್ನೇ ಹೊಂದಿರುತ್ತಾರೆ ಎಂದು ಮಾತ್ರ ಹೇಳಬಹುದು ಎಂಬುದು.

**ಡಾ.ಬಿ.ಆರ್. ಅಂಬೇಡ್ಕರ್ :** ಅದು ಕೇವಲ ಬರವಣಿಗೆಯ ವಿಷಯವಾಯಿತು. ಉದಾಹರಣೆಗೆ, ರಾಜ್ಯ ಶಾಸನಸಭೆಗಳಿಗಾಗಿ ನಾವು ಅಂಗೀಕರಿಸುತ್ತಿರುವ ಬಹುತೇಕ ವಿಧಿಗಳು ಹೆಚ್ಚು ಕಡಿಮೆ, ನಾನು ಪಾರ್ಲಿಮೆಂಟಿಗಾಗಿ ಅಂಗೀಕರಿಸಿರುವವೇ ಆಗಿವೆ. ಆ ಬಹುತೇಕ ಸಂದರ್ಭಗಳಲ್ಲಿ ಅವೇ ಅವಕಾಶಗಳು ರಾಜ್ಯ ಶಾಸನಸಭೆಗಳಿಗೂ ಅನ್ವಯವಾಗುತ್ತವೆ ಎಂದಷ್ಟೇ ಹೇಳಿಬಿಡಬಹುದಾಗಿತ್ತು. ಆದರೆ ನಾನು ಆ ಕ್ರಮವನ್ನು ಅನುಸರಿಸಲಿಲ್ಲವಾದ್ದರಿಂದ ಈಗ ಈ ಸಂದರ್ಭಕ್ಕೆ ಅದನ್ನು ಹೊಂದಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ತೋರುತ್ತದೆ.

**ಮಾನ್ಯ ಅಧ್ಯಕ್ಷರು :** ನಾನು ಮೊದಲು, ಶ್ರೀ ಜಪತ್ ರಾಯ್‌ತ ಕಪೂರ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ;

"೧೮೯ನೆಯ ವಿಧಿ (೪)ನೆಯ ಖಂಡದಲ್ಲಿ, ಒಂದು ರಾಜ್ಯ ಶಾಸನಸಭೆಯ ಒಂದು ಸದನವು' ಎಂದಿರುವ ಪದಗಳಿಗೆ ಬದಲಾಗಿ 'ಅಥವಾ ಅದರ ಯಾವುದೇ ಸಮಿತಿ' ಎಂಬ ಪದಗಳನ್ನು ಅಳವಡಿಸಬೇಕು."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ತಿದ್ದುಪಡಿಯಂತೆ ೧೮೯ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

---

* ಚುಕ್ಕೆಗಳು ತಡೆಯನ್ನು ಸೂಚಿಸುತ್ತವೆ.

## ವಿಧಿ ೧೭೦

* **ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದರಾಸು: ಸಾಮಾನ್ಯ) ಮಾನ್ಯರೆ, ನಾನು ಹೀಗೆ ಮಂಡಿಸಬಯಸುತ್ತೇನೆ.

"೧೭೦ ನೆಯ ವಿಧಿಯಲ್ಲಿ, 'ಹಾಗೆ ಮಾಡಿದ' ಎಂಬ ಪದಗಳ ಬದಲಾಗಿ 'ವೇತನಗಳು ಮತ್ತು' ಪದಗಳನ್ನು ಅಳವಡಿಸಬೇಕು."

** **ಶ್ರೀ ನಜೀರುದ್ದೀನ್ ಅಹಮದ್** : ಇಂದು ೧೭೯ನೆಯ ವಿಧಿಯನ್ನು ಪರಿಶೀಲನೆಗೆತ್ತಿಕೊಳ್ಳಲಾಗುತ್ತದೆ ಎಂದು ನೋಟೀಸು ನಮಗೆ ಬಂದಿಲ್ಲ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಅದರಿಂದೇನಾಗುತ್ತದೆ

## ವಿಧಿ ೧೭೯

\+ **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೆ, ಹೀಗೆ ಮಂಡಿಸುತ್ತೇನೆ; " ೧೭೯ನೆಯ ವಿಧಿಯಲ್ಲಿ 'ಅಷ್ಟರಮಟ್ಟಿಗಾದರೆ' ಎಂಬ ಪದಕ್ಕೆ ಬದಲಾಗಿ 'ಅಷ್ಟರಮಟ್ಟಿಗೆ ಮತ್ತು ಆದರೆ' ಎಂಬ ಪದಗಳನ್ನು ಇರಿಸಬೇಕು."

(೧೮೯೬ ಮತ್ತು ೧೮೯೭ನೆಯ ತಿದ್ದುಪಡಿಗಳನ್ನು ಮಂಡಿಸಲಿಲ್ಲ)

* * * * *

++ **ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ಏನನ್ನಾದರೂ ಹೇಳುವ ಅಗತ್ಯವಿದೆ ಎಂದು ನನಗೆ ತೋರುವುದಿಲ್ಲ. ಶ್ರೀ.ಟಿ.ಟಿ. ಕೃಷ್ಣಮಾಚಾರಿಯವರ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುತ್ತೇನೆ.

(ಆ ತಿದ್ದುಪಡಿ ಹೀಗಿತ್ತು:)

"೧೭೯ನೆಯ ವಿಧಿಯ ಅವಕಾಶಕ್ಕಾಗಿ ಈ ಕೆಳಗಿನವನ್ನು ಇರಿಸಬೇಕು;–

"ಯಾವುದೇ ಒಂದು ರಾಜ್ಯವು ಒಂದು ಪಕ್ಷವಾಗಿರುವ ಯಾವುದೇ ದಾವೆಗೆ ಈ ನ್ಯಾಯಾಧಿಕಾರವು ವಿಸ್ತರಿಸುವುದಿಲ್ಲ. ಆ ವಿವಾದವು ಒಂದು ಕರಾರು, ಒಪ್ಪಂದ, ವಾಕ್ ನಿಶ್ಚಯ, ಸನ್ನದು ಅಥವಾ ನ್ಯಾಯಾಧಿಕಾರವು ಇಂಥವುಗಳ ವ್ಯಾಜ್ಯವನ್ನು ಕುರಿತ ಯಾವುದೇ ಅವಕಾಶದಲ್ಲಿ ರಾಜ್ಯ ಸರಕಾರವು ಭಾಗಿಯಾಗಿದ್ದಲ್ಲಿ ನ್ಯಾಯಾಧಿಕಾರವು ಅದಕ್ಕೆ ಅನ್ವಯಿಸುವಷ್ಟು ವಿಸ್ತರಿಸುವುದಿಲ್ಲ." (ಈ ತಿದ್ದುಪಡಿಯನ್ನು, ಮೇಲೆ ಹೇಳಿದ ಡಾ. ಅಂಬೇಡ್ಕರ್ ಅವರ ತಿದ್ದುಪಡಿಗಳೊಂದಿಗೆ ಅಂಗೀಕರಿಸಲಾಯಿತು.)

ತಿದ್ದುಪಡಿಗೊಂಡ ೧೭೯ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

---

* ಸಿ.ಎ.ಡಿ. ಸಂಪುಟ ೮, ೩ನೇ ಜೂನ್ ೧೯೪೯, ಪುಟ ೫೮೪

** ಅದೇ, ಪು. ೫೮೮;

\+ ಅದೇ ಪುಟ ೫೮೮

++ ಅದೇ ಪುಟ ೫೯೦

## ವಿಧಿ ೧೧೦

***ಮಾನ್ಯ ಅಧ್ಯಕ್ಷರು:** ೧೧೧ನೆಯದು ಅಪರಾಧ ಸ್ವರೂಪದ ಮೊಕದ್ದಮೆಗಳನ್ನೂ ಒಳಗೊಳ್ಳುತ್ತದೆಯೆ?

**ಶ್ರೀ ನಜೀರುದ್ದೀನ್ ಅಹಮದ್ :** ಇಲ್ಲ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಬೇರೊಂದು ವಿಧಿಯಿಂದ ಅದಕ್ಕೆ ಅವಕಾಶ ಮಾಡುತ್ತಿದ್ದೇವೆ.

**ಶ್ರೀ ನಜಿರುದ್ದೀನ್ ಅಹಮದ್ :** ೧೧೧ನೆಯ ವಿಧಿಯು ಕ್ರಿಮಿನಲ್ (ಅಪರಾಧ) ಸ್ವರೂಪದ ಮೊಕದ್ದಮೆಗಳಿಗೆ ಅವಕಾಶ ಕಲ್ಪಿಸುವುದಿಲ್ಲ ಎಂದು ಹೇಳಿದುದಕ್ಕಾಗಿ ತಮಗೆ ತುಂಬಾ ಕೃತಜ್ಞನಾಗಿದ್ದೇನೆ...

** **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ; "೧೧೦ ನೆಯ ವಿಧಿಯ (೩) ನೆಯ ಖಂಡದಲ್ಲಿ, 'ಮೇಲೆ ಹೇಳಿದಂತೆ ಯಾವುದಾದರೂ ಅಂತಹ ಪ್ರಶ್ನೆಯನ್ನು ತಪ್ಪಾಗಿ ತೀರ್ಮಾನ ಮಾಡಲಾಗಿದೆ ಎಂಬ ಆಧಾರದಿಂದ ಮಾತ್ರವಲ್ಲದೆ' ಎಂಬ ಪದಗಳಿಗೆ ಬದಲಾಗಿ 'ಮೇಲೆ ಹೇಳಿದಂತಹ ಯಾವುದೇ ಪ್ರಶ್ನೆಯನ್ನು ತಪ್ಪಾಗಿ ತೀರ್ಮಾನಿಸಲಾಗಿದೆ ಎಂಬ ಆಧಾರದಿಂದ ಮತ್ತು ಸುಪ್ರೀಂ ಕೋರ್ಟಿನ ಅನುಮತಿಯನ್ನು ಪಡೆದು' ಎಂಬ ಪದಗಳನ್ನು ಇರಿಸತಕ್ಕದ್ದು" ಈಗಿರುವಂತೆ ಭಾಷೆ ಸರಿಯಾಗಿಲ್ಲ. ಅದನ್ನೇ ಸ್ವಲ್ಪ ಬೇರೆ ರೀತಿಯಾಗಿ ಈಗ ಹೀಗೆ ಹೇಳುತ್ತಿರುವುದಕ್ಕೆ ಅದೇ ಕಾರಣ. ಆಗ ಯಾವುದೇ ಕಷ್ಟವಿಲ್ಲದೆ ಅದನ್ನು ಓದಬಹುದು. ಖಂಡವು ಈಗ ಹೀಗಿರುತ್ತದೆ.

"ಅಂತಹ ಪ್ರಮಾಣ ಪತ್ರವನ್ನು ಕೊಟ್ಟಾಗ ಅಥವಾ ಅಂತಹ ಅನುಮತಿಯ ದೊರೆತಾಗ ಮೊಕದ್ದಮೆಯ ಯಾವುದೇ ಪಕ್ಷವು, ಮೇಲೆ ಹೇಳಿದ ಪ್ರಶ್ನೆಯನ್ನು ಕುರಿತು ತಪ್ಪಾಗಿ ತೀರ್ಪು ಕೊಡಲಾಗಿದೆ ಎಂಬ ಆಧಾರದ ಮೇಲೆ ಸುಪ್ರೀಂ ಕೋರ್ಟಿನ ಅನುಮತಿಯನ್ನು ಪಡೆದು ಬೇರೆ ಯಾವುದೇ ಆಧಾರದ ಮೇಲೆ", ಸುಪ್ರೀಂ ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಬಹುದು.

*****

+ **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ಚರ್ಚೆಯು ನಿಜವಾಗಿಯೂ ಹಳಿತಪ್ಪಿಹೋಗಿದೆ ಎಂದು ಹೇಳದೆ ನನಗೆ ಬೇರೆ ದಾರಿಯಿಲ್ಲ. ಮಾನ್ಯ ನಜೀರುದ್ದೀನ್ ಅಹಮದ್ ಅವರು ತಮ್ಮ ೧೯೦೪ ಮತ್ತು ೧೯೦೭ನೆಯ ತಿದ್ದುಪಡಿಗಳಲ್ಲಿ ಎತ್ತಿದ ವಿಚಾರಗಳಿಂದ ಸದಸ್ಯರು ಬಹುದೂರ ಹೋಗಿ ತೊಳಲಾಡುತ್ತಿದ್ದಾರೆ. ನಮ್ಮ ಮುಂದಿರುವುದು ಈಗ ೧೯೦೪ನೆಯ ತಿದ್ದುಪಡಿ ಮಾತ್ರ. ಅದರ ಪ್ರಕಾರ ಮಿತ್ರರಾದ ನಜೀರುದ್ದೀನ್ ಅಹಮದ್ ಅವರು ಬಯಸುವುದು,೧೧೦ನೆಯ ವಿಧಿಯ (೧) ನೇ ಖಂಡದ ಕೊನೆಯ ಕೆಲವು ಪದಗಳನ್ನು, ಅಂದರೆ, ಈ ಸಂವಿಧಾನದ ವ್ಯಾಖ್ಯಾನವನ್ನು ಕುರಿತಂತಹ ಪದಗಳನ್ನು ಅಳಿಸಬೇಕು ಎಂದಷ್ಟೇ. ಅವರು, "ಈ ಸಂವಿಧಾನದ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ" ಎಂಬ ಪದಗಳನ್ನು ಏಕೆ ತೆಗೆದು ಹಾಕಬೇಕೆನ್ನುವುದಕ್ಕೆ ಅವರು ನೀಡಿದ ಕಾರಣಗಳು ನನಗೆ ಸ್ಪಷ್ಟವಾಗಿ ಕೇಳಿಸಲಿಲ್ಲ, ಕ್ಷಮಿಸಬೇಕು, ಅವರ ಮಾತುಗಳನ್ನು ಗ್ರಹಿಸಲು ತುಂಬಾ ಪ್ರಯತ್ನಿಸಿದೆನಾದರೂ, ನನಗೆ ಕೇಳಿಸಿದುದು ಇಷ್ಟೇ; ೧೯೦೪ನೆಯ ತಿದ್ದುಪಡಿಯನ್ನು ಮಂಡಿಸಲು ಕಾರಣ, ಆ ಪದಗಳು ಮಿತಿಯುಳ್ಳ ಪದಗಳು. ಅವು ಅಲ್ಲೇ ಉಳಿದರೆ,

---

* ಅದೇ ಪು. ೫೯೩–೯೪

** ಸಿ.ಎ.ಡಿ. ಸಂ. ೮, ೩ನೇ ಜೂನ್ ೧೯೪೯, ಪುಟ ೫೯೫

\+ ಅದೇ ಪುಟ ೬೧೨–೧೪

ಸಾಂವಿಧಾನಿಕ ಕಾನೂನು ಅಗತ್ಯವಾಗದಂತಹ ಮೊಕದ್ದಮೆಗಳಲ್ಲಿ ಸುಪ್ರೀಂ ಕೋರ್ಟಿಗೆ ಅಪೀಲು (ಮೇಲ್ಮನವಿ) ಸಲ್ಲಿಸಲು ಅವಕಾಶವಿರುವುದಿಲ್ಲ ಎಂದು ಅವರು ಭಾವಿಸಿದುದು.

**ಶ್ರೀ ನಜೀರುದ್ದೀನ್ ಅಹಮದ್ :** ಹೌದು, ಅದೇ ನನ್ನ ಅಭಿಪ್ರಾಯ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಪ್ರಮಾಣ ಪತ್ರದ ಪ್ರಶ್ನೆ ಹುಟ್ಟುವುದಿಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ನಿನ್ನೆ ಅದನ್ನು ಅಳಿಸಿಹಾಕಬೇಕೆಂದು ತಾವು ಬಯಸಿದಿರಿ.

**ಡಾ. ಬಿ.ಆರ್ ಅಂಬೇಡ್ಕರ್ :** ನನ್ನ ಮಾನ್ಯ ಮಿತ್ರರಾದ ನಜೀರುದ್ದೀನ್ ಅಹಮದ್ ಅವರು ಸುಪ್ರೀಂಕೋರ್ಟ್ ಪರವಾಗಿ ಹೇಳುವ ವಿಧಿ ಯೋಜನೆಯನ್ನು ಬಹುಶ: ಗ್ರಹಿಸಿಲ್ಲ ಎಂದು ನನ್ನ ಭಾವನೆ.

**ಶ್ರೀ ನಜೀರುದ್ದೀನ್ ಅಹಮದ್:** ಅದು ನೀವು ಸದಾ ದಾಸ್ತಾನಿನಲ್ಲಿಟ್ಟಿರುವ ವಾದ.

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ಈ ಕರಡು ಸಂವಿಧಾನದಲ್ಲಿ ನಾವು ಸಾಂವಿಧಾನಿಕ ಕಾನೂನಿನ ಪ್ರಶ್ನೆಗಳು ಹುಟ್ಟುವ ಮೊಕದ್ದಮೆಗಳಿಗೂ ಪ್ರತ್ಯೇಕವಾಗಿ ಮೇಲ್ಮನವಿಗೆ ಅವಕಾಶಗಳನ್ನು ಕಲ್ಪಿಸಲಾಗಿದೆ. ಸಾಂವಿಧಾನಿಕ ಅಂಶಗಳು ತಲೆಯೆತ್ತುವ ಮೊಕದ್ದಮೆಗಳಲ್ಲಿ ಮೇಲ್ಮನವಿಗೆ ೧೧೦ನೆಯ ವಿಧಿಯಲ್ಲಿ ಅವಕಾಶವನ್ನು ಒದಗಿಸಿದೆ; ಸಾಂವಿಧಾನಿಕ ಕಾನೂನು ಸಂಬಂಧ ಪಡೆದಿರುವ ದಾವೆಗಳಲ್ಲಿ ಮೇಲ್ಮನವಿಗೆ ೧೧೧ನೆಯ ವಿಧಿಯಲ್ಲಿ ಅವಕಾಶವಿದೆ. ಎರಡೂ ಬಗೆಯ ದಾವೆಗಳ ಅಪೀಲುಗಳ ನಡುವೆ ಹೀಗೆ ಏಕೆ ಪ್ರತ್ಯೇಕ ಅವಕಾಶಗಳನ್ನು ಕಲ್ಪಿಸಲಾಗಿದೆ ಎಂಬುದನ್ನು ನನ್ನ ಮಿತ್ರರು ಅರ್ಥಮಾಡಿಕೊಂಡಿರಲಾರರು. ಆದ್ದರಿಂದ ಇಲ್ಲಿ ಅದನ್ನು ಸ್ಪಷ್ಟಪಡಿಸಬಯಸುತ್ತೇನೆ. ಮುಂದೆ ೧೨೧ನೆಯ ವಿಧಿಯು ಬರಲಿದೆ. ಅದರ ತಿದ್ದುಪಡಿಯು ಸರ್ವೋನ್ನತ ನ್ಯಾಯಾಲಯವು (ಸುಪ್ರೀಂ ಕೋರ್ಟು) ವಿಧಿಸಬೇಕಾದ ನಿಯಮಗಳನ್ನು ಕುರಿತುದಾಗಿದೆ. ೧೨೧ನೆಯ ವಿಧಿಯ (೨)ನೆಯ ಖಂಡಕ್ಕೆ ನಾನೊಂದು ತಿದ್ದುಪಡಿಯನ್ನು ಮಂಡಿಸಿದ್ದೇನೆ. ಸುಪ್ರೀಂ ಕೋರ್ಟಿನ ಮುಂದೆ ಯಾವುದೇ ಒಂದು ಮೇಲ್ಮನವಿಯು ಬಂದಾಗಲೆಲ್ಲಾ, ಸಾಂವಿಧಾನಿಕ ಕಾನೂನಿನ ಪ್ರಶ್ನೆಗಳು ತೊಡರಿಕೊಳ್ಳುವಂತಿದ್ದ ಪಕ್ಷದಲ್ಲಿ ಅಂತಹ ಮೊಕದ್ದಮೆಯನ್ನು ಆಲಿಸಲು ಒಂದು ಪೀಠವನ್ನು ರಚಿಸುವುದನ್ನು ಸುಪ್ರೀಂ ಕೋರ್ಟಿಗೆ ಬಿಟ್ಟು ಬಿಡುತ್ತಿದ್ದೇವೆ. ಪೀಠದಲ್ಲಿ ಕುಳಿತುಕೊಳ್ಳುವ ನ್ಯಾಯ ಮೂರ್ತಿಗಳ ಕನಿಷ್ಠ ಸಂಖ್ಯೆ ಐದು ಆಗಿರಬೇಕು; ಬೇರೆ ಸಾಂವಿಧಾನಿಕ ಕಾನೂನಿನ ಪ್ರಶ್ನೆಗಳು ಉದ್ಭವಿಸದಿರುವ ಅಪೀಲು ಮೊಕದ್ದಮೆಗಳಲ್ಲಿ, ನಿಯಮವು ವಿಧಿಸುವಷ್ಟು ಸಂಖ್ಯೆ ನ್ಯಾಯಮೂರ್ತಿಗಳು ಆಲಿಸಿ ತೀರ್ಪುಕೊಡತಕ್ಕದ್ದು. ಆದ್ದರಿಂದ ನನ್ನ ಮಿತ್ರರಿಗೆ ಅರ್ಥವಾದೀತು, 'ಈ ಸಂವಿಧಾನದ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ' ಎಂಬ ಪದಗಳು ಇರುವುದರಿಂದ, ಸಂವಿಧಾನಿಕ ನಿಯಮಗಳು ಸೇರಿಕೊಂಡಿರುವವುಗಳಲ್ಲದ ಇತರ ಅಪೀಲುಗಳನ್ನು ಯಾವ ರೀತಿಯಲ್ಲಿಯೂ ತಡೆಯುವಂತಾಗುವುದಿಲ್ಲ. ಎರಡೂ ಬಗೆಯ ಅಪೀಲುಗಳನ್ನು ನಾವು ಏಕೆ ಎರಡು ಪ್ರತ್ಯೇಕ ವಿಧಿಗಳಲ್ಲಿ ಸೇರಿಸಲು ಇಚ್ಛಿಸಿದ್ದೇವೆ ಎನ್ನುವುದೂ ಈಗ ಅವರಿಗೆ ಅರ್ಥವಾಗಬಹುದು. ಎರಡೂ ಬಗೆಯ ಮೊಕದ್ದಮೆಗಳಲ್ಲಿ ಆಲಿಸುವ ನ್ಯಾಯಾಧೀಶರ ಸಂಖ್ಯೆ ಬೇರೆ ಬೇರೆ.

ಈಗ ನಾನು, ಸುದೀರ್ಘವಾಗಿ ಚರ್ಚೆ ನಡೆದಿರುವ ಇನ್ನೊಂದು ವಿಷಯಕ್ಕೆ ಬರುತ್ತೇನೆ. ಸುಪ್ರೀಂ ಕೋರ್ಟಿಗೆ ಕ್ರಿಮಿನಲ್ (ಅಪರಾಧ) ನ್ಯಾಯಾಧಿಕಾರವಿರಬೇಕೆ ಬೇಡವೆ ಎನ್ನುವುದು ಪ್ರಶ್ನೆ. ನಾನು ಹೇಳಿದಂತೆ, ೧೧೦ನೆಯ ವಿಧಿಗೆ ಹಾಗೂ ನನ್ನ ಮಿತ್ರರಾದ ಶ್ರೀ ನಜೀರುದ್ದೀನ್ ಅಹಮದ್ ಅವರು ಸೂಚಿಸಿದ ತಿದ್ದುಪಡಿಗೆ ಸಂಬಂಧಿಸಿದಂತೆ ಈ ಎಲ್ಲಾ ಚರ್ಚೆ ಶುದ್ಧಾಂಗವಾಗಿ ಅಪ್ರಕೃತವಾಗಿತ್ತು, ಅಲ್ಲದೆ ಅದು ೧೧೦ನೆಯ ವಿಧಿಯ ಮೇಲೆ ತೆಗೆದುಕೊಳ್ಳುವ ನಿರ್ಣಯದ ಮೇಲೆ ಪ್ರಭಾವ ಬೀರಬಾರದಾಗಿತ್ತು. ಆದರೆ

ಈಗಾಗಲೆ ಬೇಕಾದಷ್ಟು ಚರ್ಚೆ ನಡೆದು ಹೋಗಿದೆ. ಈಗ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ೧೧೦ನೆಯ ವಿಧಿಯಲ್ಲಿ ಸಾಂವಿಧಾನಿಕ ಕಾನೂನು ಸೇರಿಕೊಂಡಿರುವ ಅಪರಾಧದ ವಿಷಯವಾಗಿದ್ದರೆ ಅಂತಹ ಮೊಕದ್ದಮೆಯ ಅಪೀಲು ಸುಪ್ರೀಂ ಕೋರ್ಟಿಗೆ ಬರಲು ಅವಕಾಶ ಮಾಡಲಾಗಿದೆ ಎಂಬುದನ್ನು ಮಾನ್ಯ ಸದಸ್ಯರು ಬಲ್ಲರು. ಆದ್ದರಿಂದ ಅಪರಾಧ ವಿಚಾರಗಳು ತೀರ್ಪಿಗಾಗಿ ಅಲ್ಲಿಗೆ ಬರುವ ದಾರಿಗಳಲ್ಲಿ ಅದು ಒಂದು ಮತ್ತು ಹಾಗೆ ೧೧೦ನೆಯ ವಿಧಿಯ ಪ್ರಕಾರ ಅಪೀಲು ಬರುವ ಅಪರಾಧ ವಿಷಯಗಳು ಸಣ್ಣಪುಟ್ಟವೇ ಆಗಿರಬಹುದು.

ಮತ್ತೆ ೧೧೨ನೆಯ ವಿಧಿಯಲ್ಲಿ, ಪ್ರೀವೀಕೌನ್ಸಿಲಿನ ನ್ಯಾಯಾಧಿಕಾರ ವ್ಯಾಪ್ತಿಯನ್ನು ಸುಪ್ರೀಂ ಕೋರ್ಟ್‌ಗೆ ನೀಡಲಾಗಿದೆ. "ಸಿವಿಲ್ ಆಗಲಿ ಕ್ರಿಮಿನಲ್ ಆಗಲಿ ಯಾವುದೇ ದಾವೆ ಅಥವಾ ವಿಷಯದ ಡಿಕ್ರಿ ಅಥವಾ ಅಂತಿಮ ಆದೇಶ" ಎಂಬ ಪದಗಳ ಕಡೆಗೆ ಗಮನ ಸೆಳೆಯುತ್ತೇನೆ. ವಿಶೇಷಾನುಮತಿಯಿಂದ ಸುಪ್ರೀಂ ಕೋರ್ಟಿನ ೧೧೨ನೆಯ ವಿಧಿಯ ಪ್ರಕಾರ ಕ್ರಿಮಿನಲ್ ವಿಷಯದಲ್ಲಿ ಪಡೆದುಕೊಳ್ಳಬಹುದು... ಕ್ರಿಮಿನಲ್ ವಕೀಲರನೇಕರು ಅಂಥದೊಂದು ಅವಕಾಶವು ಇರಬೇಕಾಗಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ ಎಂಬುದನ್ನು ನಾನು ಗಮನಿಸಿದ್ದೇನೆ...

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ವೃತ್ತಿಪರನಾದ ಅಪರಾಧ ಕಾನೂನು.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಕ್ಷಮಿಸಬೇಕು, ಅಪರಾಧ ಶಾಸನವನ್ನು ಅನುಸರಿಸುತ್ತಿರುವ ೧೧೧ನೆಯ ವಿಧಿಯು ಸಿವಿಲ್ ಅಪೀಲುಗಳನ್ನು–ಸಿವಿಲ್ ಮಾತ್ರ–ಕೇಳಿ ತೀರ್ಪುಕೊಡುವ ಅಧಿಕಾರವನ್ನು ಸುಪ್ರೀಂ ಕೋರ್ಟಿಗೆ ನೀಡುವ ಹಾಗೆಯೇ, ಕ್ರಿಮಿನಲ್ ಅಪೀಲುಗಳನ್ನೂ ಎಲ್ಲಾ ಅಲ್ಲದಿದ್ದರೂ ಕೊನೆಯ ಪಕ್ಷ ಮರಣದಂಡನೆ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟಿಗೆ ಅಧಿಕಾರವನ್ನು ಕೊಡಬೇಕಾಗಿತ್ತು ಎಂದು ಹೇಳಿದ್ದಾರೆ. ಸುಪ್ರೀಂ ಕೋರ್ಟಿಗೆ ಕ್ರಿಮಿನಲ್ ನ್ಯಾಯಾಧಿಕಾರವಿರಬೇಕು ಎಂಬುದರ ಪರವಾಗಿ ಬಂದಿರುವ ವಾದಗಳಲ್ಲಿ ಶಕ್ತಿ, ಸತ್ವ ಇಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಅದನ್ನು ಹೇಗೆ ಮಾಡಬೇಕು ಎನ್ನುವುದು ಪ್ರಶ್ನೆ–ಸಂವಿಧಾನದಲ್ಲಿಯೇ ಒಂದು ನಿರ್ದಿಷ್ಟ ಅವಕಾಶವನ್ನು ರಚಿಸಿ, ಈ ಕೆಳಗಿನ ವಿಷಯದಲ್ಲಿ ಸುಪ್ರೀಂ ಕೋರ್ಟಿಗೆ ಅಪೀಲು ಮಾಡಲು ಹಕ್ಕಿರುತ್ತದೆ ಎಂದು ಹೇಳೋಣವೆ? ಅಥವಾ ಮೇಲ್ಮನವಿ ಸ್ವರೂಪದ ಅಪರಾಧ ನ್ಯಾಯ ವಿಚಾರಣಾ ಅಧಿಕಾರವನ್ನು ಸುಪ್ರೀಂ ಕೋರ್ಟಿಗೆ ನೀಡಲು ನಾವು ಪಾರ್ಲಿಮೆಂಟಿಗೆ ಅನುಮತಿ ಕೊಡೋಣವೆ? ಈಗ ಸದ್ಯಕ್ಕೆ ನನಗನ್ನಿಸುತ್ತಿರುವುದು– ನಾವಿದನ್ನು ತೃಪ್ತೀಕರಿಸುತ್ತಿಲ್ಲ ಅಥವಾ ಈ ಹಂತದಲ್ಲಿ ಇತ್ಯಾತ್ಮಕವಾದ ಏನನ್ನೂ ಹೇಳಲು ಬಯಸುವುದಿಲ್ಲ. ಖಾಲಿಯಿಲ್ಲದಿದ್ದರೂ ಹಾಗೆ ಹೇಳುವುದಾದರೆ ತೆರೆದ ಮನಸ್ಸನ್ನು ಹೊಂದಿದ್ದೇನೆ. ಈಗ ಈ ಹಂತದಲ್ಲಿ ಅಪರಾಧ ಸಂಬಂಧದ ಅಪೀಲುಗಳ ನ್ಯಾಯ ವಿಚಾರಣಾಧಿಕಾರವನ್ನು ಸುಪ್ರೀಂ ಕೋರ್ಟಿಗೆ ಕೊಡುವ ಅಧಿಕಾರವನ್ನು ಪಾರ್ಲಿಮೆಂಟಿಗೆ ನೀಡಿದರೆ ಸಾಕು. ಸುಪ್ರೀಂ ಕೋರ್ಟಿಗೆ ಅಪರಾಧ ವಿಷಯಗಳ ವಿಚಾರಣೆಯ ಅಧಿಕಾರ ವಹಿಸಿದರೆ ಎಷ್ಟು ಕೆಲಸ ಬೀಳುತ್ತದೆ. ಇರುವ ನ್ಯಾಯಮೂರ್ತಿಗಳ ಸಂಖ್ಯೆ ಮತ್ತು ಈ ದೇಶವು ಒದಗಿಸಬಹುದಾದ ಹಣ ಇವುಗಳ ದೃಷ್ಟಿಯಿಂದ ಅದು ಎಷ್ಟು ಕೆಲಸವನ್ನು ನಿರ್ವಹಿಸಬಹುದು ಎಂಬುದನ್ನು ಸ್ವಲ್ಪ ಪರೀಕ್ಷಿಸಿ, ಸಾಕಷ್ಟು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬಹುದು. ಇದನ್ನು ಪಾರ್ಲಿಮೆಂಟಿಗೇ ಬಿಡುವುದು ಏಕೆ ಉತ್ತಮವೆಂದರೆ, ಇದಕ್ಕೆ ಸ್ವಲ್ಪ ಅಂಕಿಸಂಖ್ಯೆಗಳ ಸಂಶೋಧನೆ ಖಂಡಿತವಾಗಿಯೂ ಅಗತ್ಯ. ನನಗಿರುವ ಇನ್ನೊಂದು ಅಭಿಪ್ರಾಯ ಹೀಗಿದೆ. ಸುಪ್ರೀಂ ಕೋರ್ಟಿಗೆ, ಮರಣದಂಡನೆಯನ್ನು ಒಳಗೊಂಡಂತಹ ಅಪೀಲುಗಳನ್ನು ವಿಚಾರಿಸುವ ಮೇಲ್ಮನವಿ ಅಧಿಕಾರವನ್ನು ಕೊಡುವುದಕ್ಕೆ ಬದಲಾಗಿ ನಾವು

ಮರಣದಂಡನೆಯನ್ನೇ ರದ್ದುಪಡಿಸಬಹುದು (ಕೇಳಿ! ಕೇಳಿ!), ಈ ಭಿನ್ನಾಭಿಪ್ರಾಯವನ್ನು ಕೊನೆಗೊಳಿಸಲು ಅನುಸರಿಸಬಹುದಾದ ಮಾರ್ಗ ಇದು ಎಂದು ನನಗನ್ನಿಸುತ್ತದೆ. ಈ ದೇಶವು ಒಟ್ಟಾರೆಯಾಗಿ ಅಹಿಂಸಾತತ್ವವನ್ನು ನಂಬುತ್ತದೆ. ಅಹಿಂಸೆಯು ಅದರ ಪ್ರಾಚೀನ ಪರಂಪರೆಯಾಗಿದೆ. ಜನರು ವಸ್ತುತಃ ಅದನ್ನು ಆಚರಿಸುತ್ತಿಲ್ಲವಾದರೂ ಒಂದು ನೈತಿಕ ಕಟ್ಟಳೆಯಾಗಿ ಅವರು ಅಹಿಂಸಾತತ್ವಕ್ಕೆ ಅಂಟಿಕೊಂಡಿರುತ್ತಾರೆ. ತಮಗೆ ಸಾಧ್ಯವಾದಷ್ಟು ಮಟ್ಟಿಗೆ ಅದನ್ನು ಅವರು ಕಾರ್ಯರೂಪದಲ್ಲಿ ಆಚರಿಸಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ಮರಣದಂಡನೆಯನ್ನು ರದ್ದುಪಡಿಸುವುದು ಈ ದೇಶಕ್ಕೆ ಸೂಕ್ತವಾದದ್ದು ಎಂದು ನನಗನ್ನಿಸುತ್ತದೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ಎಲ್ಲಾ ಅಪರಾಧ ನ್ಯಾಯಾಲಯಗಳನ್ನೂ ಸಹ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಈಗ ನಾವು ೧೧೦ನೆಯ ವಿಧಿಯ ತಿದ್ದುಪಡಿಗೂ, ನನ್ನ ಮಿತ್ರ ನಜೀರುದ್ದೀನ್ ಅಹಮದ್ ಅವರು ಮಂಡಿಸಿದ ತಿದ್ದುಪಡಿಗಳಿಗೂ ಸೀಮಿತಗೊಳಿಸಿಕೊಳ್ಳಬೇಕು ಎಂಬುದು ನನ್ನ ಅಭಿಮತ.

* * * * *

(ಕೆಳಗಿನ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು)

(೧) "೧೧೦ನೆಯ ವಿಧಿ (೧)ನೆಯ ಖಂಡದಲ್ಲಿ 'ರಾಜ್ಯ' ಎಂಬ ಪದಕ್ಕೆ ಬದಲಾಗಿ 'ಭಾರತ ಭೂಪ್ರದೇಶ' ಎಂಬ ಪದಗಳನ್ನು ಅಳವಡಿಸಬೇಕು."

(೨)"೧೧೦ ನೆಯ ವಿಧಿಯ (೩)ನೆಯ ಉಪವಾಕ್ಯದಲ್ಲಿ, 'ಮೇಲೆ ಹೇಳಿದಂತಹ ಯಾವುದೇ ಪ್ರಶ್ನೆಯನ್ನು ತಪ್ಪಾಗಿ ತೀರ್ಮಾನಿಸಲಾಗಿದೆ ಎಂಬ ಕಾರಣದಿಂದ ಮಾತ್ರವಲ್ಲ' ಎಂಬ ಪದಗಳಿಗೆ ಬದಲಾಗಿ, 'ಮೇಲೆ ಹೇಳಿದಂತಹ ಯಾವುದೇ ಪ್ರಶ್ನೆಯನ್ನು ತಪ್ಪಾಗಿ ತೀರ್ಮಾನಿಸಲಾಗಿದೆ ಎಂಬ ಆಧಾರದ ಮೇಲೆ ಮತ್ತು ಸುಪ್ರೀಂ ಕೋರ್ಟಿನ ಅನುಮತಿಯನ್ನು ಪಡೆದು' ಎಂಬ ಪದಗಳನ್ನು ಇರಿಸಬೇಕು." (ತಿದ್ದುಪಡಿಗೊಂಡಂತೆ ೧೧೦ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ–೧೧೧

*ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ಹೀಗೆ ಮಂಡಿಸುತ್ತಿದ್ದೇನೆ. "ತಿದ್ದುಪಡಿಗಳ ಪಟ್ಟಿಯ ೧೯೧೬ರಿಂದ ೧೯೧೯ರವರೆಗಿನ ತಿದ್ದುಪಡಿಗಳಿಗೆ ಸಂಬಂಧಿಸಿ, ೧೧೧ನೆಯ ವಿಧಿಯ (೧)ನೇ ಖಂಡದ (ಎ) ಉಪಖಂಡದಲ್ಲಿ 'ಇಪ್ಪತ್ತು ಸಾವಿರ ರೂಪಾಯಿ" ಎಂಬ ಪದಗಳಿಗೆ ಬದಲಾಗಿ, 'ಈ ಸಂಬಂಧವಾಗಿ ಪಾರ್ಲಿಮೆಂಟು ನಿರ್ದಿಷ್ಟಪಡಿಸುವ ಯಾವುದೇ ಬೇರೆ ಮೊತ್ತ' ಎಂಬ ಪದಗಳಲ್ಲಿ ಅಳವಡಿಸತಕ್ಕದ್ದು"

*****

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಮಾನ್ಯರೆ ನಾನು ಹೀಗೆ ಮಂಡಿಸಲು ಅನುಮತಿ ಕೋರುತ್ತೇನೆ.

"೧೧೧ನೆಯ ವಿಧಿಯ (೧)ನೆಯ ಖಂಡಕ್ಕೆ ಈ ಕೆಳಗಿನ ಅವಕಾಶವನ್ನು ಕೂಡಿಸತಕ್ಕದ್ದು;

'ಹೈಕೋರ್ಟಿನ ಒಬ್ಬ ನ್ಯಾಯಾಧೀಶರು ಅಥವಾ ಅದರ ವಿಭಾಗೀಯ ಕೋರ್ಟಿನ ಒಬ್ಬ ನ್ಯಾಯಾಧೀಶರು, ಹೈಕೋರ್ಟಿನ ಇಬ್ಬರು ಅಥವಾ ಹೆಚ್ಚು ಜನ ನ್ಯಾಯಾಧೀಶರು, ಅಥವಾ ಹೈಕೋರ್ಟಿನ ಇಬ್ಬರು ಅಥವಾ ಹೆಚ್ಚು ಜನ ನ್ಯಾಯಾಧೀಶರನ್ನೊಳಗೊಳ್ಳುವಂತೆ ರಚಿಸಿದ ವಿಭಾಗೀಯ ನ್ಯಾಯಾಲಯವು–ನೀಡಿದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದ ಮೇಲೆ, ಅದರ ವಿಷಯದಲ್ಲಿ ನ್ಯಾಯಾಧೀಶರಲ್ಲಿ ಸಮಾನವಾಗಿ ಭಿನ್ನಮತವಿದ್ದರೆ ಅಥವಾ ಆ ಸಮಯದಲ್ಲಿ ಹೈಕೋರ್ಟಿನಲ್ಲಿರುವ ನ್ಯಾಯಾಧೀಶರ ಒಟ್ಟು ಸಂಖ್ಯೆಯ ಬಹುಮತಕ್ಕೆ ಸಮನಾಗುವಷ್ಟು ಜನ ಅದರ ಪರವಾಗಿಲ್ಲದಿದ್ದರೆ ಅಂತಹ ಅಪೀಲು ಸುಪ್ರೀಂ ಕೋರ್ಟಿಗೆ ಬರುವಂತಿಲ್ಲ."

* * * * *

** **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ. "೧೧೧ನೆಯ ವಿಧಿಯ (೨)ನೆಯ ಖಂಡದಲ್ಲಿ ಈ ಸಂವಿಧಾನದ ವ್ಯಾಖ್ಯಾನಕ್ಕೆ" ಸಂಬಂಧಿಸಿದಂತೆ ಕಾನೂನಿನ ಮೂಲಭೂತ ಪ್ರಶ್ನೆಯು ಮೊಕದ್ದಮೆಯಲ್ಲಿ ತೊಡಗಿಕೊಂಡಿರುವ ಸಂದರ್ಭದಲ್ಲಿ ಅದರ ಮೇಲೆ ತಪ್ಪಾಗಿ ತೀರ್ಪು ನೀಡಿದ್ದಾರೆ' ಎಂಬ ವಾಕ್ಯಗಳಿಗೆ ಬದಲಾಗಿ, 'ಸಂವಿಧಾನದ ವ್ಯಾಖ್ಯಾನಕ್ಕೆ ಸಂಬಂಧಿಸಿದ ಒಂದು ಮೂಲಭೂತ ಕಾನೂನು ಪ್ರಶ್ನೆಯನ್ನು ತಪ್ಪಾಗಿ ತಿರ್ಮಾನಿಸಿದ್ದರೆ' ಎಂಬ ವಾಕ್ಯಗಳನ್ನು ಅಳವಡಿಸತಕ್ಕದ್ದು."

*****

+ **ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಮಾನ್ಯರೆ, ಸದನವು ಅತ್ಯಗತ್ಯವಾಗಿ ಪರಿಶೀಲಿಸಿ ನಿರ್ಧರಿಸಬೇಕಾದ ಖಚಿತವಾದ ಅಂಶವನ್ನು ಕುರಿತು ನೆನಪುಕೊಡುತ್ತಾ ನನ್ನ ಮಾತುಗಳನ್ನು ಪ್ರಾರಂಭಿಸುತ್ತೇನೆ. ವಿಷಯವು ಎರಡು ತಿದ್ದುಪಡಿಗಳ ನಡುವೆ ಸಿಕ್ಕಿಕೊಂಡಿದೆ. ಮೊದಲನೆಯದು ನನ್ನ ಮಾನ್ಯ ಮಿತ್ರರಾದ ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ ಅವರು ಮಂಡಿಸಿರುವುದು, ಅದು ಒಂದು ಅರ್ಥದಲ್ಲಿ ೧೯೧೧ನೆಯ ತಿದ್ದುಪಡಿಯಿಂದಲೂ, ನಾಲ್ಕನೆಯವಾರದ ೧ನೇ ಪಟ್ಟಿಯ ೨೫ನೇ ಸಂಖ್ಯೆ ನನ್ನದೇ ತಿದ್ದುಪಡಿಯಿಂದಲೂ ಒಡಮೂಡಿರುವುದು. ಈ ಎರಡು ತಿದ್ದುಪಡಿಗಳು ಎತ್ತಿರುವ ವಿಷಯಕ್ಕೆ ಬರುವ ಮೊದಲು ಒಂದೆರಡು ಸಾಮಾನ್ಯ ವಿಚಾರಗಳನ್ನು ಹೇಳಬಯಸುತ್ತೇನೆ.

---

* ಸಿ.ಎ.ಡಿ. ಸಂಪುಟ ೮, ೩ನೇ ಜೂನ್ ೧೯೪೯, ಪುಟ ೬೧೩

** ಅದೇ, ೬ನೇ ಜೂನ್ ೧೯೪೯, ಪುಟ ೬೨೦

\+ ಸಿ.ಎ.ಡಿ. ಸಂ. ೮, ೬ನೇ ಜೂನ್ ೧೯೪೯, ಪುಟ ೬೩೧

ನನ್ನ ಮೊದಲನೆಯ ಭಾವನೆ ಇದು : ೧೧೧ನೆಯ ವಿಧಿಯು ಸಿವಿಲ್ ಪ್ರೊಸೀಜರ್ ಕೋಡ್ (ವ್ಯವಹಾರ ಪ್ರಕ್ರಿಯಾ ಸಂಹಿತೆ)ಯ ೧೦೯ ಮತ್ತು ೧೧೦ನೆಯ ಪ್ರಕರಣಗಳ ತದ್ವತ್ ಪ್ರತಿಯಾಗಿದೆ. ನಾನು ಈಗ ಮಂಡಿಸುತ್ತಿರುವ ತಿದ್ದುಪಡಿಗಳ ಹೊರತಾಗಿ, ೧೧೧ನೆಯ ವಿಧಿಗೂ ವ್ಯವಹಾರ ಪ್ರಕ್ರಿಯಾ ಸಂಹಿತೆಯ ಎರಡು ಪ್ರಕರಣಗಳಿಗೂ ನಡುವೆ ಯಾವ ವ್ಯತ್ಯಾಸವೂ ಇಲ್ಲ. ಆದ್ದರಿಂದ, ೧೧೧ನೆಯ ವಿಧಿಗೂ ಸಂಬಂಧಿಸಿದಂತೆ, ಹೈಕೋರ್ಟಿನ ತೀರ್ಪಿನ ಮೇಲೆ ಅಪೀಲು ಹೋಗುವ ವಿಷಯದ ನಿಲುವಿನಲ್ಲಿ ಯಾವ ಮಹತ್ವದ ಮೂಲಭೂತ ವ್ಯತ್ಯಾಸವೂ ಆಗುವುದಿಲ್ಲ. ಪರಿಸ್ಥಿತಿಯು ವ್ಯವಹಾರ ಪ್ರಕ್ರಿಯಾ ಸಂಹಿತೆಯ, ಸೂಚಿತವಾದ ಎರಡು ಪ್ರಕರಣಗಳಲ್ಲಿ ಹೇಳಿರುವುದೇ ಆಗಿರುತ್ತದೆ.

ನನ್ನ ಎರಡನೆಯ ವಿಚಾರ ಇದು. ವ್ಯವಹಾರ ಪ್ರಕ್ರಿಯಾ ಸಂಹಿತೆಯ ೧೦೯ ಮತ್ತು ೧೧೦ನೆಯ ಪ್ರಕರಣಗಳೂ ಕೂಡ, ಚಕ್ರವರ್ತಿಯು (ರೆಸಿಡೆನ್ಸಿ ನಗರಗಳಲ್ಲಿನ ಬೇರೆ ಬೇರೆ ಹೈಕೋರ್ಟುಗಳನ್ನು ಯಾವುದರ ಆಧಾರದಿಂದ ರಚಿಸಿದರೋ ಆ ಲೆಟರ್ಸ್ ಪೇಟೆಂಟ್‌ನ (Letters) ೩೯ನೆಯ ಪ್ಯಾರಾ ನೀಡಿದ ಅಧಿಕಾರಿಗಳ ಪ್ರತಿರೂಪವಾಗಿವೆ. ಅಲ್ಲೂ ಕೂಡ ೧೦೯ ಮತ್ತು ೧೧೦ನೆಯ ಪ್ರಕರಣಗಳು ೩೯ನೆಯ ಪ್ಯಾರಾದಲ್ಲಿರುವುದರ ಕೇವಲ ನಕಲು ಅಷ್ಟೆ.

ಮೂರನೆಯ ಅಂಶ ಅದು. ಈ ಲೆಟರ್ಸ್ ಪೇಟೆಂಟ್ ಅನ್ನು ಹೊರಡಿಸಿದ್ದು ೧೮೬೨ನೆಯ ಇಸವಿಯಲ್ಲಿ. ಇವುಗಳಲ್ಲಿ ಲೆಟರ್ಸ್ ಪೇಟೆಂಟ್ ಕೊಟ್ಟ ಅಧಿಕಾರಿಗಳನ್ನು ಬದಲಾಯಿಸಲು ಶಾಸನಸಭೆಗೆ ವಿಶೇಷಾಧಿಕಾರವನ್ನೂ ಕೊಡಲಾಗಿದೆ. ಈ ಅಧಿಕಾರವು ಬಹಳ ಹಿಂದಿನಿಂದಲೂ ೧೮೬೫ರಲ್ಲಿ ಲೆಟರ್ಸ್ ಪೇಟೆಂಟ್ ಸ್ಥಾಪನೆಗೊಂಡಾಗಿನಿಂದಲೇ ಇದ್ದಿತಾದರೂ, ಕೇಂದ್ರ ಶಾಸನ ಸಭೆಯಾಗಲಿ ಪ್ರಾಂತೀಯ ಶಾಸನ ಸಭೆಗಳಾಗಲಿ, ಹೈಕೋರ್ಟಿನ ಡಿಕ್ರಿ, ಅಂತಿಮ ಆದೇಶ ಅಥವಾ ತೀರ್ಪಿನ ಮೇಲೆ ಅಪೀಲಿಗೆ ಸಂಬಂಧಿಸಿ ಯಾವ ರೀತಿಯಲ್ಲೂ ಬದಲಾವಣೆ ಮಾಡುವುದು ಸೂಕ್ತವೆಂದು ಭಾವಿಸಿಲ್ಲ. ಆದ್ದರಿಂದ ಹೈಕೋರ್ಟಿನ ಡಿಕ್ರಿ, ಆದೇಶ ಅಥವಾ ತೀರ್ಪಿನ ಮೇಲೆ ಅಪೀಲು ಮಾಡುವ ಹಕ್ಕನ್ನು ಕುರಿತ ಈ ಪ್ರಕರಣಗಳಿಗೆ ವಾಸ್ತವವಾಗಿ ೭೫–೮೦ ವರ್ಷಗಳವರೆಗೆ ವ್ಯಾಪಿಸುವ ಇತಿಹಾಸವಿದೆ ಎಂಬುದನ್ನು ಸದನವು ಗಮನಿಸಬೇಕು. ಸ್ವಲ್ಪವೂ ಏರುಪೇರಾಗದೆ ಅವು ಹಾಗೆಯೇ ಉಳಿದುಕೊಂಡು ಬಂದಿವೆ. ಆದ್ದರಿಂದ ಸುಪ್ರೀಂ ಕೋರ್ಟಿನ ರಚನೆಯ ಸಂಬಂಧವಾಗಿ ಒಂದು ಅವಕಾಶವನ್ನು ಅಂಗೀಕರಿಸುವಾಗ, ಅವು ದೀರ್ಘಕಾಲದ ಪರೀಕ್ಷೆಗಳನ್ನು ಗೆದ್ದು ನಿಂತಿರುವ ಒಂದು ಪರಿಸ್ಥಿತಿಯನ್ನು ಬದಲಾಯಿಸುವ ನಿರ್ಧಾರ ಕೈಗೊಂಡಿದೆ. ಅದರ ಪರವಾಗಿ ಬಹಳ ಶಕ್ತಿಯುತ ಸಮರ್ಥನೆ ಅಗತ್ಯವಾಗುತ್ತದೆ.

ಈ ಹಿಂದೆ, ಬಹಳ ಹಿಂದೇನಲ್ಲ, ಈ ಸದನವು ಒಂದು ಶಾಸನ ಸಭೆಯಾಗಿ ಅಧಿವೇಶನ ಸೇರಿದ್ದಾಗ, ಪ್ರೀವೀ ಕೌನ್ಸಿಲ್ ಚಲಾಯಿಸುತ್ತಿದ್ದ ಭಾರತ ಸರಕಾರದ ಶಾಸನದಲ್ಲಿನ ಈ ಅಧಿಕಾರಗಳನ್ನು ಆಗಿಂದಾಗಲೇ ಒಡನೆಯೇ ಏನನ್ನೂ ಕೈಬಿಡದೆ, ಸ್ವಲ್ಪವೂ ಲೋಪಮಾಡದೆ ಫೆಡರಲ್ ಕೋರ್ಟಿಗೆ ನೀಡತಕ್ಕದ್ದು ಎಂಬುದಾಗಿ ಒತ್ತಾಯಪಡಿಸಿದ್ದಿತು. ಆದ್ದರಿಂದ ನನಗೆ ಈ ಪರಿಸ್ಥಿತಿ ವಿಚಿತ್ರವಾಗಿ ಕಾಣಿಸುತ್ತಿದೆ. ನಾವು ಒಂದು ಸರ್ವೋನ್ನತ ನ್ಯಾಯಾಲಯ (ಸುಪ್ರೀಂ ಕೋರ್ಟು)ವನ್ನು ರಚಿಸಿದ್ದೇವೆ. ಅದು ಫೆಡರಲ್ ಕೋರ್ಟಿನ ಸ್ಥಾನವನ್ನು ಪಡೆಯಲಿದೆ. ಪ್ರೀವೀ ಕೌನ್ಸಿಲಿನ ಅಧಿಕಾರಗಳನ್ನು ಸುಪ್ರೀಂ ಕೋರ್ಟಿಗೆ ವರ್ಗಾಯಿಸುವ ಒಂದು ಅವಕಾಶ ದೊರೆತಿದೆ. ಈಗ ಈ ಅವಕಾಶಗಳನ್ನು, ಅವು ಇಂದು ಹೇಗಿವೆಯೋ ಹಾಗೆ ತೆಗೆದುಕೊಳ್ಳಕೂಡದು ಎಂಬ ನಿಲುವನ್ನು ಹಿಡಿಯುತ್ತಿರುವುದು ನನಗೆ ವಿಚಿತ್ರವಾಗಿ ತೋರುತ್ತದೆ. ಆದ್ದರಿಂದ ನನ್ನ ಮೊದಲನೆಯ ವಿಚಾರ ಇದು; ಮೂಲಭೂತವಾದ, ಮುಖ್ಯವಾದ ವ್ಯತ್ಯಾಸ ಇಲ್ಲ ಯಾವುದೂ ಇರುವುದಿಲ್ಲ, ಹೈಕೋರ್ಟಿಗೂ

ಪ್ರೀವೀ ಕೌನ್ಸಿಲಿಗೂ ನಡುವೆ ಇರುವ ನಿಲುವನ್ನೇ ನಿಷ್ಕೃಷ್ಟವಾಗಿ ಹೈಕೋರ್ಟಿಗೂ ಸುಪ್ರೀಂ ಕೋರ್ಟಿಗೂ ನಡುವೆ ನಾವು ಇಟ್ಟುಕೊಳ್ಳುತ್ತಿದ್ದೇವೆ.

ಮಾನ್ಯರೆ, ಈಗ ನಾನು ಉಲ್ಲೇಖಿಸಿದ ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ ಅವರ ತಿದ್ದುಪಡಿ ಮತ್ತು ೨೫ನೆಯ ಸಂಖ್ಯೆಯ ತಿದ್ದುಪಡಿಗಳ ವಿಷಯಕ್ಕೆ ಬರುತ್ತೇನೆ. ತಿದ್ದುಪಡಿಯು ಅಂಗೀಕೃತವಾದರೆ, ಫಲವು ಹೀಗಿರುತ್ತದೆ. ಸುಪ್ರೀಂ ಕೋರ್ಟಿನ ಒಂದು ಮೇಲ್ಮನವಿಗೆ ನ್ಯಾಯಾಲಯ ಉಳಿಯುತ್ತದೆ. ಪಾರ್ಲಿಮೆಂಟು ಅದರ ಆ ನೆಲೆಯನ್ನು ತಗ್ಗಿಸಲು ಸಾಧ್ಯವಾಗುವುದಿಲ್ಲ. ಬೇಕಾದರೆ ಈ ಅಪೀಲುಗಳ ಸಂಖ್ಯೆ, ಸ್ವರೂಪ ಇವುಗಳ ಮೇಲೆ ನಿಯಂತ್ರಣಾಧಿಕಾರವಿರಬಹುದು. ಹೇಗೂ ೧೧೦ನೆಯ ವಿಧಿಯ (ಸಿ) ಖಂಡವು ಸುಭದ್ರವಾಗಿ ಉಳಿದು ಪಾರ್ಲಿಮೆಂಟಿನ ಅಧಿಕಾರದಿಂದಾಚೆಗಿರುತ್ತದೆ. ಪ್ರೀವೀ ಕೌನ್ಸಿಲಿಗೆ ಹೋಗುವ ಮೊಕದ್ದಮೆಗಳ ಹಣದ ಮೌಲ್ಯ ಎಷ್ಟಿರಬೇಕೆಂದು ನಿರ್ಧರಿಸುವುದನ್ನು ನಾವು ಪಾರ್ಲಿಮೆಂಟಿಗೆ ಬಿಟ್ಟರೂ ೧೧೧ನೆಯ ವಿಧಿಯ (೧)ನೆಯ ಅಥವಾ (ಸಿ) ಖಂಡದ ಕೊನೆಯ ಭಾಗವು ಇರುವಂತೆಯೇ ಉಳಿಯಬೇಕು. ಅದನ್ನು ಏರುಪೇರುಗೊಳಿಸುವ ಅಧಿಕಾರವು ಪಾರ್ಲಿಮೆಂಟಿಗಿರಬಾರದು. ಏಕೆಂದರೆ ಅದು ಆಂತರಿಕವಾಗಿ ನ್ಯಾಯಾಧಿಕಾರದ ವಿಷಯವಾಗಿರುವಷ್ಟು ಮಟ್ಟಿಗೆ ಕಾನೂನಿನ ವಿಷಯವಲ್ಲ. ಯಾವನೇ ವಕೀಲನಿಗೆ ಸ್ಪಷ್ಟವಾಗುವ ಕಾರಣಗಳಿಗಾಗಿ ಹೈಕೋರ್ಟು, ನಿರ್ದಿಷ್ಟ ಮೊಕದ್ದಮೆಯ ಉದ್ದೇಶವು (ಎ) ಮತ್ತು (ಬಿ)ಗಳ ವ್ಯಾಪ್ತಿಗೆ ಬರುವುದಿಲ್ಲ. ಆಸ್ತಿ ಅರ್ಹತೆಯು ಅಲ್ಲಿ ನಿಗದಿಯಾಗಿರುವುದಕ್ಕಿಂತ ಕಡಿಮೆಯಾಗಿದೆ ಎಂದು ಪ್ರಮಾಣಿಸಿದ ಪಕ್ಷದಲ್ಲಿ, ಅದು ಸುಪ್ರೀಂ ಕೋರ್ಟಿಗೆ ಹೋಗಬೇಕಾದ ವಿಷಯವಾಗುತ್ತದೆ. ಅದರ ಮೂಲ ವಸ್ತುವು ಸುಪ್ರೀಂ ಕೋರ್ಟಿನೆದುರು ಮೂಲ ಹಾಜರಾಗುವ ನಿರ್ದಿಷ್ಟ ಕಕ್ಷಿಗಾರರ ಮೇಲೆ ಮಾತ್ರವಲ್ಲದೆ, ಸಾರ್ವಜನಿಕರಿಗೂ ಹಾನಿಯುಂಟುಮಾಡುವಂಥದ್ದಾಗಿದೆ ಎಂದು ಆಧಾರದಿಂದ ಅಲ್ಲಿಗೆ ಅಪೀಲು ಹೋಗಬೇಕಾಗುತ್ತದೆ. ವಾಸ್ತವವಾಗಿ ಅದು ಹೈಕೋರ್ಟಿನಲ್ಲೇ ಅಂತರ್ಗತವಾಗಬೇಕಾಗಿರುವ ನ್ಯಾಯಾಧಿಕಾರ. ಆದ್ದರಿಂದ, (ಸಿ) ಖಂಡವನ್ನು ಪಾರ್ಲಿಮೆಂಟಿನ ಅಧಿಕಾರ ವ್ಯಾಪ್ತಿಯೊಳಗೆ ಇರಿಸಬಾರದೆಂಬುದು ನನ್ನ ಅಭಿಪ್ರಾಯವಾಗಿದೆ.

ಇದಕ್ಕೆ ವ್ಯತಿರಿಕ್ತವಾಗಿ, ನನ್ನ ಮಿತ್ರರಾದ ಪ್ರೊ. ಸಕ್ಸೇನಾ ಅವರು ಮಂಡಿಸಿದ ತಿದ್ದುಪಡಿಯು ಸ್ವೀಕೃತವಾದರೆ ಎರಡು ಘಟನೆಗಳು ಸಂಭವಿಸಬಹುದು. ಮೊದಲನೆಯದನ್ನು ಈಗಾಗಲೇ ನನ್ನ ಮಿತ್ರ ಭಕ್ಷಿ ಟೇಕ್ ಚಂದ್ ಉಲ್ಲೇಖಿಸಿದ್ದಾರೆ. ಪಾರ್ಲಿಮೆಂಟು ಸುಪ್ರೀಂ ಕೋರ್ಟಿಗೆ ಸಿವಿಲ್ ವಿಚಾರಗಳಲ್ಲಿರುವ ಅಪೀಲು ನ್ಯಾಯಾಧಿಕಾರವನ್ನು ಕಿತ್ತುಕೊಂಡು ಬಿಡಬಹುದು. ಅದು ಗಂಡಾಂತರಕಾರಿಯಾದ ಪರಿಣಾಮವಾಗುತ್ತದೆ ಎಂದು ನನಗೆ ತೋರುತ್ತದೆ. ದೇಶದಲ್ಲಿ ಒಂದು ಸುಪ್ರೀಂ ಕೋರ್ಟನ್ನು (ಸರ್ವೋನ್ನತ ನ್ಯಾಯಾಲಯವನ್ನು) ಸ್ಥಾಪಿಸುವುದು, ಮತ್ತು ಪಾರ್ಲಿಮೆಂಟು ಆ ಸುಪ್ರೀಂ ಕೋರ್ಟಿಗಿರುವ ಮೇಲ್ಮನವಿ ನ್ಯಾಯಾಧಿಕಾರವನ್ನೆಲ್ಲಾ ಸಂಪೂರ್ಣವಾಗಿ ಅದರಿಂದ ಕಳಚಿ ತಾನು ಕಿತ್ತುಕೊಂಡು ಬಿಡುವುದು. ಇದು ನನ್ನ ಮನಸ್ಸಿಗೆ ಒಂದು ದೊಡ್ಡ ಮೋಸವಾಗಿ ತೋರುತ್ತದೆ. ಆದ್ದರಿಂದ ನಾವೇ ಧೈರ್ಯವಹಿಸಿ, ಸುಪ್ರೀಂ ಕೋರ್ಟು ಸಿವಿಲ್ ವಿಚಾರಗಳಲ್ಲಿ ಮೇಲ್ಮನವಿ ನ್ಯಾಯವಾಗಿ ವರ್ತಿಸುವುದಿಲ್ಲ ಎಂದು ಹೇಳಿ, ಅದನ್ನು ಫೆಡರಲ್ ನ್ಯಾಯಾಲಯಕ್ಕೆ ಕೊಟ್ಟಿರುವ ಸ್ಥಾನಕ್ಕೆ ಸೀಮಿತಗೊಳಿಸಬಹುದು.

ಇನ್ನೊಂದು ವಿಷಯ ಹೀಗಿದೆ. ಪಾರ್ಲಿಮೆಂಟು (ಸಿ) ಉಪಖಂಡವನ್ನು ತೆಗೆದುಹಾಕುವ ಸ್ಥಿತಿಯಲ್ಲಿರುತ್ತದೆ. ನಾನು ಆಗಲೇ ಹೇಳಿದಂತೆ ಆ ಖಂಡವು ನಿಜದಲ್ಲಿ ಅಂತರ್ಗತ ನ್ಯಾಯಾಧಿಕಾರ ಮಟ್ಟ

ವಿಷಯವಾದ್ದರಿಂದ ಖಾಯಂ ಆಗಿ ಉಳಿದಿರಬೇಕು. ಆದ್ದರಿಂದ ಸುಪ್ರೀಂ ಕೋರ್ಟಿಗಿರುವ ಅಪೀಲು ಅಧಿಕಾರವು ನಮ್ಯವಾಗಬೇಕು (ಸ್ಥಿತಿಸ್ಥಾಪಕವಾಗಬೇಕು) ಎಂಬ ವಾದವನ್ನು ನನ್ನ ೨೫ನೆಯ ಸಂಖ್ಯೆಯ ತಿದ್ದುಪಡಿಯು ಸಂಪೂರ್ಣವಾಗಿ ಪೂರೈಸುತ್ತದೆ. ಏಕೆಂದರೆ ನನ್ನ ಈ ತಿದ್ದುಪಡಿಯಂತೆ, ಸುಪ್ರೀಂ ಕೋರ್ಟಿನ ಅಪೀಲು ನ್ಯಾಯಾಧಿಕಾರಕ್ಕೆ ಯಾವುದೇ ಊನಬಾರದಂತೆ (ಎ) ಮತ್ತು (ಬಿ)ಗಳಲ್ಲಿರುವ ಅವಕಾಶಗಳನ್ನು ಹಾಗೆಯೇ (ಸಿ)ಯಲ್ಲಿರುವ ಅವಕಾಶಗಳಿಗೆ ಹಾನಿಯಾಗದಂತೆ ನಿಯಂತ್ರಿಸುವ ಹಕ್ಕು ಪಾರ್ಲಿಮೆಂಟಿಗೆ ಇರುತ್ತದೆ. ಆದ್ದರಿಂದ ನಾನು ಶ್ರೀ ಸಕ್ಸೇನಾ ಅವರು ಸೂಚಿಸಿರುವ ತಿದ್ದುಪಡಿಯನ್ನು ವಿರೋಧಿಸುತ್ತೇನೆ– ಒಟ್ಟಿನಲ್ಲಿ ೪ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ.

ತಿದ್ದುಪಡಿಗೊಂಡಂತೆ ೧೧೧ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೧೧೨

*ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ : ನಾನು ಹೇಳಬೇಕಾದುದು ಏನಾದರೂ ಇದೆ ಎಂದು ನನಗೆ ತೋರುವುದಿಲ್ಲ.

**ಅಧ್ಯಕ್ಷರು :** ಪ್ರಶ್ನೆ ಹೀಗಿದೆ;

"೧೧೨ನೆಯ ವಿಧಿಯಲ್ಲಿ 'ಮೊದಲನೆಯ ಷೆಡ್ಯೂಲಿನ ಮೂರನೆಯ ಭಾಗದಲ್ಲಿ ತತ್ಕಾಲಕ್ಕೆ ನಿರ್ದಿಷ್ಟಪಡಿಸಿರುವ ರಾಜ್ಯಗಳ ಹೊರತು, ಈ ಸಂವಿಧಾನದ ೧೧೦ನೆಯ ಅಥವಾ ೧೧೧ನೆಯ ವಿಧಿಯ ಅವಕಾಶಗಳು ಅನ್ವಯವಾಗದಿರುವ ಸಂದರ್ಭಗಳಲ್ಲಿ ಎಂಬ ಪದಗಳನ್ನು ತೆಗೆದುಹಾಕಬಹುದು.

ತಿದ್ದುಪಡಿಯನ್ನು ಅಂಗಿಕರಿಸಲಾಯಿತು.

ತಿದ್ದುಪಡಿಯಾದಂತೆ ೧೧೨ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

## ಹೊಸ ವಿಧಿ ೧೧೨–ಎ

** **ಮಾನ್ಯ ಅಧ್ಯಕ್ಷರು :** ಒಂದು ಹೊಸ ವಿಧಿಯನ್ನು ಡಾ.ಅಂಬೇಡ್ಕರ್ ಅವರು ಮಂಡಿಸುವ ನೋಟೀಸು ಬಂದಿದೆ. ೧೯೧ನೆಯ ತಿದ್ದುಪಡಿಯಾಗುತ್ತದೆ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ಹೀಗೆ ಮಂಡಿಸಬಯಸುತ್ತೇನೆ.

"ತಿದ್ದುಪಡಿಗಳ ಪಟ್ಟಿಯ ೧೯೩೨ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ ೧೧೨ನೆಯ ವಿಧಿಯಾದ ನಂತರ ಈ ಕೆಳಗಿನ ನೂತನ ವಿಧಿಯನ್ನು ಅಳವಡಿಸಬಹುದು.

ಸುಪ್ರೀಂ ಕೋರ್ಟು ನೀಡಿದ ತೀರ್ಪುಗಳನ್ನು ಆದೇಶಗಳನ್ನು ವಿಮರ್ಶಿಸುವುದು. ೧೧೨–ಎ ಪಾರ್ಲಿಮೆಂಟು ರಚಿಸಿದ ಯಾವುದೇ ಕಾನೂನಿನ ಅವಕಾಶಗಳಿಗೆ ಒಳಪಟ್ಟು ಅಥವಾ ಈ ಸಂವಿಧಾನದ ೧೨೧ನೆಯ ವಿಧಿಯನ್ವಯ ಅಂಗೀಕರಿಸಿದ ಯಾವುದೇ ಕಾನೂನಿಗೆ ಒಳಪಟ್ಟು ತಾನು ನೀಡಿದ ಯಾವುದೇ

---

* ಸಿ.ಎ.ಡಿ. ಸಂ. ೮, ೬ನೇ ಜೂನ್ ೧೯೪೯, ಪುಟ ೬೪೦

** ಅದೇ, ೬ನೇ ಜೂನ್ ೧೯೪೯, ಪುಟ. ೬೪೦–೪೧

ತೀರ್ಪನ್ನು ಅಥವಾ ಆದೇಶವನ್ನು ವಿಮರ್ಶಿಸುವ ಅಧಿಕಾರವನ್ನು ಸುಪ್ರೀಂ ಕೋರ್ಟು ಹೊಂದಿರುತ್ತದೆ."

ಮಾನ್ಯರೆ, ಕರಡು ಸಂವಿಧಾನವು ಈಗಿರುವಂತೆ.....*

**ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ :** ಇಲ್ಲೊಂದು ಕ್ರಮಲೋಪವಿದೆ. ಮಾನ್ಯರೆ ೧೯೩೨ನೆಯ ತಿದ್ದುಪಡಿಯನ್ನು ಇನ್ನು ಮಂಡಿಸಿಲ್ಲ.

**ಮಾನ್ಯ ಅಧ್ಯಕ್ಷರು :** ಅದನ್ನು ಮಂಡಿಸಿಲ್ಲ. ಇದನ್ನು ನಾನು ಹೊಸ ವಿಧಿಯಾಗಿ ತೆಗೆದುಕೊಳ್ಳುತ್ತಿದ್ದೇನೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ಮಾನ್ಯರೆ, ೧೯೩೨ನೆಯ ತಿದ್ದುಪಡಿಯು ೧೯೨೮ನೆಯ ಸಂಖ್ಯೆಯ ತಿದ್ದುಪಡಿಯ ತದ್ವತ್ ಪ್ರತಿಯೇ ಆಗಿದೆ ಎಂದು ತಿಳಿಸಬಯಸುತ್ತೇನೆ. ವಾಸ್ತವವಾಗಿ ೧೯೨೮ನೆಯದನ್ನು ಮಂಡಿಸಿದರೆ ೧೯೩೨ನೆಯದನ್ನು ಮಂಡಿಸುವಂತಿಲ್ಲ.

**ಮಾನ್ಯ ಅಧ್ಯಕ್ಷರು :** ನಾನದನ್ನು ಒಂದು ಹೊಸ ವಿಧಿಯನ್ನಾಗಿ ತೆಗೆದುಕೊಂಡಿದ್ದೇನೆಂದು ಆಗಲೆ ಹೇಳಿದ್ದೇನೆ.

**ಮಾನ್ಯ ಅಧ್ಯಕ್ಷರು ಅಂಬೇಡ್ಕರ್:** ಕರಡು ಸಂವಿಧಾನದಲ್ಲಿ, ತೀರ್ಪುಗಳನ್ನು ಮರುವಿಮರ್ಶೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಅದು ಒಂದು ದೊಡ್ಡ ಕೊರತೆ ಎಂದು ಭಾವಿಸಲಾಯಿತು. ಈ ನೂತನ ವಿಧಿಯು ಈ ಅಧಿಕಾರವನ್ನು ಸುಪ್ರೀಂ ಕೋರ್ಟಿಗೆ ನೀಡುತ್ತದೆ.

**ಶ್ರೀ ಕೆ. ಸಂತಾನಂ** (ಮದರಾಸು: ಸಾಮಾನ್ಯ) ಮಾನ್ಯರೆ, ಇದರ ಬರೆವಣಿಗೆ ಎಷ್ಟು ಸಂತೋಷವನ್ನುಂಟುಮಾಡಬೇಕೋ ಅಷ್ಟು ಮಾಡುತ್ತಿಲ್ಲ. ಸುಪ್ರೀಂಕೋರ್ಟಿಗೆ ಕೊಡುವ ವಿಧಿಯೊಂದನ್ನು ಸಂವಿಧಾನಕ್ಕೆ ಸೇರಿಸಿ, ಆ ಅಧಿಕಾರವು ಸುಪ್ರೀಂಕೋರ್ಟು ರಚಿಸುವ ನಿಯಮಗಳಿಗೆ ಒಳಪಟ್ಟಿರುತ್ತದೆ ಎಂದು ಹೇಳುವುದು ಸರಿಯಾಗಿದೆ ಎಂದು ನನಗೆ ತೋರುವುದಿಲ್ಲ, ಅದು ಒಂದು ಕೆಟ್ಟ ಕಾನೂನು. ವಿಮರ್ಶೆಯ ಸಾಮಾನ್ಯ ಅಧಿಕಾರದ ಮಧ್ಯೆ ಪ್ರವೇಶಿಸುವುದಕ್ಕೂ ಪಾರ್ಲಿಮೆಂಟಿಗೆ ಹಕ್ಕಿಲ್ಲ.

**ಅಧ್ಯಕ್ಷರು :** ಇದು ಅದರದೇ ನಿರ್ಧಾರಗಳನ್ನು ಉಲ್ಲೇಖಿಸುತ್ತದೆ.

**ಮಾನ್ಯ ಶ್ರೀ ಕೆ ಸಂತಾನಂ:** ನಾನದಕ್ಕೆ ಬರುತ್ತಿದ್ದೇನೆ. ತನ್ನ ತೀರ್ಪನ್ನು ತಾನೇ ವಿಮರ್ಶಿಸಿಲು ಸುಪ್ರೀಂ ಕೋರ್ಟಿಗೆ ಅನಿರ್ಬಂಧಿತ ಅವಕಾಶ ಏಕೆ ಇರಬೇಕು ಎಂಬುದಕ್ಕೆ ಹೆಚ್ಚಿನ ಕಾರಣವಿದೆ. ಈ ಎರಡೂ ಅಂಶಗಳಲ್ಲಿ ವಿಷಯವು ದೋಷಯುಕ್ತವಾಗಿದೆ. ಅದನ್ನು ಈ ರೂಪದಲ್ಲಿಯೇ ಇಡಬೇಕೆ ಅಥವಾ ರೂಪವನ್ನು ಮರುಪರಿಶೀಲನೆಮಾಡಬಹುದೆ ಎಂದು ನೋಡಬೇಕೆಂದು ಡಾ.ಅಂಬೇಡ್ಕರ್ ಅವರಿಗೆ ಸೂಚಿಸಬಯಸುತ್ತೇನೆ.

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ನನ್ನ ಮಿತ್ರರಾದ ಶ್ರೀ ಸಂತಾನಂ ಅವರು ಸಂಪೂರ್ಣವಾಗಿ ತಪ್ಪು ತಿಳಿದುಕೊಂಡಿದ್ದಾರೆ ಎಂದು ನನಗನ್ನಿಸುತ್ತದೆ. ಮೊದಲನೆಯದಾಗಿ, ನಾವು ಯಾವುದೇ ನಿಯಮವನ್ನು ರಚಿಸಲು ಸುಪ್ರೀಂ ಕೋರ್ಟಿಗೆ ಯಾವುದೇ ಅಧಿಕಾರವನ್ನು ನೀಡುತ್ತಿಲ್ಲ. ೧೨೧ನೆಯ ವಿಧಿಯಿಂದ ಆ ಅಧಿಕಾರವನ್ನು ನೀಡಲಾಗುತ್ತದೆ. ಆ ವಿಧಿಯನ್ನು ನನ್ನ ಮಿತ್ರರು ಓದಬೇಕು ಅದು ಹೀಗಿದೆ.

"ಪಾರ್ಲಿಮೆಂಟು ರಚಿಸುವ ಯಾವುದೇ ಕಾನೂನಿನ ಅವಕಾಶಗಳಿಗೆ ಒಳಪಟ್ಟು ಸುಪ್ರೀಂ ಕೋರ್ಟು, ಕಾಲಕಾಲಕ್ಕೆ, ರಾಷ್ಟ್ರಪತಿಯವರ ಅನುಮೋದನೆಯನ್ನು ಪಡೆದು ಕೋರ್ಟಿನ ಕಾರ್ಯರೀತಿ, ವ್ಯವಹರಣೆಗಳನ್ನು ಸಾಮಾನ್ಯವಾಗಿ ನಿಯಂತ್ರಿಸಲು ತಕ್ಕ ನಿಯಮಗಳನ್ನು ಮಾಡುತ್ತದೆ. ಇತ್ಯಾದಿ, ಇತ್ಯಾದಿ." ಆದ್ದರಿಂದ ನಾವು ಸುಪ್ರೀಂ ಕೋರ್ಟಿಗೆ ಅಧಿಕಾರವನ್ನು ನೀಡುತ್ತಿದ್ದೇವೆ ಎಂದು ಹೇಳುವುದು ಸರಿಯಲ್ಲ. ಅಧಿಕಾರವು

---

* ಚುಕ್ಕೆಗಳು ತಡೆಯನ್ನು ಸೂಚಿಸುತ್ತವೆ.

ಸುಪ್ರೀಂ ಕೋರ್ಟಿಗಿದೆ. ಅದನ್ನು ರಾಷ್ಟ್ರಪತಿಯವರ ಸಮ್ಮತಿಯಿಂದ ಚಲಾಯಿಸಬೇಕಾಗಿರುತ್ತದೆ. ಶ್ರೀ ಸಂತಾನಂ ಅವರನ್ನು ತಪ್ಪುದಾರಿಗೆಳೆದಿರುವ ಇನ್ನೊಂದು ವಿಷಯ. ಇದು ನಾನು ೧ನೇ ಪಟ್ಟಿಯ ೪೨ನೆಯ ತಿದ್ದುಪಡಿಯನ್ನು ಸೂಚಿಸಿ ೧೨೧ನೆಯ ವಿಧಿಗೆ ಇನ್ನೊಂದು ಖಂಡವನ್ನು ಸೇರಿಸುವ ಸಲಹೆಮಾಡಿದೆ. (bb) ಎನಿಸಿರುವ ಅದು ವಿಮರ್ಶೆಗೆ ಸಂಬಂಧಿಸಿದ ನಿಯಮಗಳ ರಚನೆಯನ್ನು ಕುರಿತಿದೆ. ಆದ್ದರಿಂದ ಈ ಎರಡೂ ಪರಿಸ್ಥಿತಿಗಳನ್ನು ಗಮನಿಸಿ, ಸುಪ್ರೀಂ ಕೋರ್ಟಿಗಿರುವ ವಿಮರ್ಶನಾಧಿಕಾರವನ್ನು ೧೨೧ನೆಯ ವಿಧಿಗೂ ೪೨ನೆಯ ತಿದ್ದುಪಡಿಗೂ ಒಳಪಟ್ಟಿರುವಂತೆ ಮಾಡಬೇಕು.

(೧೧೨–ಅ ವಿಧಿಯನ್ನು ಅಂಗೀಕರಿಸಿ ಸಂವಿಧಾನಕ್ಕೆ ಸೇರಿಸಲಾಯಿತು)

## ವಿಧಿ ೧೧೩

**ಮಾನ್ಯ ಅಧ್ಯಕ್ಷರು :** ಸಂಖ್ಯೆ ೧೧೩.

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಉದ್ದಕ್ಕೂ ಮೊದಲನೆಯ ಷೆಡ್ಯೂಲಿನ ૩ನೆಯ ಭಾಗದಲ್ಲಿ ರಾಜ್ಯದ ಉಲ್ಲೇಖವನ್ನು ಸದನವು ಸ್ಪಷ್ಟವಾಗಿ ಹೊರತುಪಡಿಸಿದೆ. ಆದ್ದರಿಂದ ಈ ವಿಧಿಯು ಅಗತ್ಯವಾಗಿರಲಾರದು. ಇದನ್ನು ಔಪಚಾರಿಕವಾಗಿ ಸದನದ ಮುಂದೆ ಮತಕ್ಕೆ ಹಾಕಿ, ಸದನವು ಅದನ್ನು ತಿರಸ್ಕರಿಸಬಹುದು.

**ಡಾ. ಬಿ.ಆರ್.ಅಂಬೇಡ್ಕರ್ :** ಹಾಗೆಯೇ ಆಗಬಹುದು.

(೧೧೩ನೆಯ ವಿಧಿಯನ್ನು ಸಂವಿಧಾನದಿಂದ ಕೈಬಿಡಲಾಯಿತು)

## ವಿಧಿ ೧೧೪

**ಮಾನ್ಯ ಅಧ್ಯಕ್ಷರು:** ೧೧೪ನೆಯ ವಿಧಿ ಶ್ರೀ ಗುಪ್ತ ಅವರದೊಂದು ತಿದ್ದುಪಡಿಯಿದೆ.

(ತಿದ್ದುಪಡಿಯನ್ನು ಮಂಡಿಸಲಿಲ್ಲ)

ಯಾರಾದರೂ ಮಾತನಾಡಲು ಬಯಸುವರೇನು?

* **ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ನನ್ನ ಮಿತ್ರರಾದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಒಂದು ವಿಷಯದ ಕಡೆಗೆ ನನ್ನ ಗಮನ ಸೆಳೆದಿದ್ದಾರೆ. ಈ ಕರಡು ಸಂವಿಧಾನದಲ್ಲಿ ಸುಪ್ರೀಂ ಕೋರ್ಟಿಗಿರುವ ಅಧಿಕಾರಗಳನ್ನು ಕುರಿತಾದ ವಿಧಿಗಳು ವರಮಾನ ತೆರಿಗೆ ಮೊಕದ್ದಮೆಗಳ ಅಪೀಲಿಗೆ ಸಂಬಂಧಿಸಿದಂತೆ ಸ್ಪಷ್ಟವಾಗಿ ಅವಕಾಶ ಮಾಡಿಲ್ಲ–ಎಂಬುದಾಗಿ. ನಾನು ಈ ಅಂಶವನ್ನು ಪರಿಶೀಲಿಸುತ್ತಿದ್ದೇನೆ. ಸುಪ್ರೀಂ ಕೋರ್ಟಿಗೆ ಆ ಅಧಿಕಾರವನ್ನು ನೀಡಲು ಆ ಯಾವ ವಿಧಿಗಳನ್ನು ಉಪಯೋಗಿಸಲು ಸಾಧ್ಯವಿಲ್ಲವೆಂದು ಕಂಡುಬಂದಿದೆ. ಅದನ್ನು ಕುರಿತೇ ಒಂದು ವಿಶೇಷ ವಿಧಿಯನ್ನು ಸೇರಿಸಬಯಸುತ್ತೇನೆ. ಈಗ ಈ ವಿಧಿಯನ್ನು ಅಂಗೀಕರಿಸಬಹುದು.

(೧೧೪ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

* * * * *

---

* ಸಿ.ಎ.ಡಿ. ಸಂ. ೮, ೬ನೇ ಜೂನ್ ೧೯೪೯, ಪುಟ ೬೪೨

## ವಿಧಿ–೧೨೧

** **ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ: "೧೨೧ನೆಯ ವಿಧಿಯ (೩) ನೆಯ ಖಂಡದ ಬದಲಿಗೆ ಈ ಕೆಳಗಿನದನ್ನು ಇಟ್ಟುಕೊಳ್ಳಬೇಕು.

'(೩) ಸುಪ್ರೀಂ ಕೋರ್ಟು, ತೆರೆದ ನ್ಯಾಯಾಲಯದಲ್ಲಿ ಹೊರತು ಯಾವ ತೀರ್ಪನ್ನೂ ನೀಡುವಂತಿಲ್ಲ. ತೆರೆದ ನ್ಯಾಯಾಲಯದಲ್ಲಿ ಕೊಟ್ಟ ಅಭಿಪ್ರಾಯದ ಪ್ರಕಾರವಾಗಿ ಹೊರತು, ಈ ಸಂವಿಧಾನದ ೧೧೯ನೆಯ ವಿಧಿಯನ್ವಯ ಯಾವುದೇ ವರದಿ ಮಾಡುವ ಹಾಗಿಲ್ಲ."

ಮಾನ್ಯರೆ, ೧೯೬೬ನೆಯ ತಿದ್ದುಪಡಿಯನ್ನು ಮಂಡಿಸುತ್ತೇನೆ.

"೧೨೧ನೆಯ ವಿಧಿಯ (೪)ನೆಯ ಖಂಡದ ಬದಲಾಗಿ ಈ ಕೆಳಗಿನಂತೆ ಅಳವಡಿಸಬಹುದು:

'(೪) ಮೊಕದ್ದಮೆಯ ವಿಚಾರಣೆಯಲ್ಲಿ ಹಾಜರಿದ್ದ ನ್ಯಾಯಾಧೀಶರ ಪೈಕಿ ಬಹುಮತದ ಒಪ್ಪಿಗೆಯಿಲ್ಲದೆ, ಸುಪ್ರೀಂ ಕೋರ್ಟಿನ ಯಾವುದೇ ತೀರ್ಪನ್ನಾಗಲಿ, ಅಂತಹ ಅಭಿಪ್ರಾಯವನ್ನಾಗಲಿ ನೀಡುವಂತಿಲ್ಲ. ಅದಕ್ಕೆ ಈ ಖಂಡದ ಏನೊಂದೂ, ತೀರ್ಪನ್ನು ಒಪ್ಪದ ನ್ಯಾಯಾಧೀಶನು ಭಿನ್ನಮತದ ತೀರ್ಪನ್ನು ಅಥವಾ ಅಭಿಪ್ರಾಯವನ್ನು ನೀಡಲು ಅಡ್ಡಿಪಡಿಸುವುದಿಲ್ಲ."

* * * * *

+ **ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ಮಾನ್ಯರೆ, ನನ್ನ ಮಿತ್ರರಾದ ಮಿ.ಲ್ಯಾರಿ ಅವರು ಮಂಡಿಸಿದ ತಿದ್ದುಪಡಿಯನ್ನು ನಾನು ಒಪ್ಪುವುದಿಲ್ಲ ಎಂದು ತಿಳಿಸಲು ವಿಷಾದಿಸುತ್ತೇನೆ. ತಮ್ಮ ತಿದ್ದುಪಡಿಯಲ್ಲಿ ಏನು ಅಡಗಿದೆ ಎಂಬುದನ್ನು ಅವರು ಸಂಪೂರ್ಣವಾಗಿ ತಪ್ಪಾಗಿ ಗ್ರಹಿಸಿರುವಂತೆ ತೋರುತ್ತದೆ.

ಸುಪ್ರೀಂ ಕೋರ್ಟಿನ ನಿಯಮ ರಚನಾಧಿಕಾರವನ್ನು ರಾಷ್ಟ್ರಪತಿಯವರ ಅನುಮೋದನೆಗೆ ಒಳಪಡಿಸುವುದು ಅಗತ್ಯವಾಗಿದೆ. ಅದಕ್ಕೆ ಕಾರಣ ಹೀಗಿದೆ: ಕಾನೂನುಗಳು, ಸಂಪೂರ್ಣವಾಗಿ ಸುಪ್ರೀಂ ಕೋರ್ಟಿನ ವಶದಲ್ಲೇ ಇದ್ದುಬಿಟ್ಟರೆ, ದೇಶದ ವರಮಾನದ ಮೇಲೆ ಗಣನೀಯ ಪ್ರಮಾಣದ ಹೊರೆಯು ಬೀಳಬಹುದು. ಉದಾಹರಣೆಗೆ, ಯಾವುದೋ ಒಂದು ಸಾವಿರದ ಮೊಕದ್ದಮೆಯನ್ನು ಇಬ್ಬರು ನ್ಯಾಯಮೂರ್ತಿಗಳು ಆಲಿಸತಕ್ಕದ್ದು ಎಂಬುದಾಗಿ ಸುಪ್ರೀಂ ಕೋರ್ಟು ಆಜ್ಞೆ ಮಾಡಿತು ಎನ್ನೋಣ. ಇದು ಆ ನ್ಯಾಯಾಲಯವು ಮಾಡಿದ ಅತ್ಯಂತ ಸರಳವಾದ ಒಂದು ಕಟ್ಟಳೆಯಾಗಿರಬಹುದು. ಆದರೆ ಅದರಿಂದ ಸಾರ್ವಜನಿಕ ವರಮಾನದ ಮೇಲೆ ಹೊರೆ ಬಿದ್ದೇ ಬೀಳುತ್ತದೆ. ಹಾಗೆಯೇ ನಿಯಮಗಳಲ್ಲಿ ಶುಲ್ಕವನ್ನು ಕುರಿತಾದ ಅವಕಾಶಗಳಿರಬಹುದು. ಅದೂ ಸಾರ್ವಜನಿಕ ವರಮಾನಕ್ಕೆ ಸಂಬಂಧಿಸಿದ ವಿಚಾರ. ಅದನ್ನು ಸುಪ್ರೀಂ ಕೋರ್ಟಿಗೆ ಬಿಟ್ಟುಬಿಡಲು ಸಾಧ್ಯವಿಲ್ಲ. ಆದ್ದರಿಂದ ನನ್ನ ವಿನಂತಿಯೇನೆಂದರೆ, ೧೨೧ನೆಯ ವಿಧಿಯಲ್ಲಿರುವ ಅವಕಾಶಗಳು ಕೋರ್ಟು ಮಾಡುವ ನಿಯಮಗಳು ರಾಷ್ಟ್ರಪತಿಯವರ ಅನುಮೋದನೆಗೆ ಒಳಪಟ್ಟಿರತಕ್ಕದ್ದು ಎಂಬ ಅವಕಾಶಗಳು ಅನುಸರಿಸಲು ಸರಿಯಾದ ಕಾರ್ಯವಿಧಾನವಾಗಿವೆ. ಸಾರ್ವಜನಿಕ ಹಣದ ಮೇಲೆ ಇಂತಹ ವಿಚಾರವು ಭಾರವನ್ನು ಹೇರುತ್ತದೆ. ತೆರಿಗೆಯನ್ನು ಹಾಕುವುದರ ಮೂಲಕ

---

** ಅದೇ, ಪು. ೬೪೫

\+ ಅದೇ ಪು. ೬೪೯ – ೫೦

ಶಾಸಕಾಂಗ ಮತ್ತು ಕಾರ್ಯಾಂಗಗಳು ಆ ಹಣವನ್ನು ಪೂರೈಸಬೇಕು. ಆದ್ದರಿಂದ ಈ ಬಗೆಯ ನಿಯಮ ರಚನೆಯನ್ನು ಕಾರ್ಯಾಂಗದ ವ್ಯಾಪ್ತಿಯಿಂದ ಕಿತ್ತುಕೊಳ್ಳುವುದು ಸಾಧ್ಯವಿಲ್ಲ.

ಇನ್ನೂ ಒಂದು ವಿಚಾರವಿದೆ. ೧೨೧ನೆಯ ವಿಧಿಯಲ್ಲಿರುವ ಅವಕಾಶಗಳು ೧೯೩೫ರ ಭಾರತ ಸರಕಾರ ಶಾಸನದಲ್ಲಿ ಫೆಡರಲ್ ಕೋರ್ಟಿಗೆ ಸಂಬಂಧಿಸಿದ ೨೧೪ನೆಯ ಪ್ರಕರಣದಲ್ಲೂ, ಹೈಕೋರ್ಟುಗಳಿಗೆ ಸಂಬಂಧಿಸಿದ ೨೨೪ ನೆಯ ಪ್ರಕರಣದಲ್ಲೂ ಇರುವವೇ ಆಗಿವೆ. ಆದ್ದರಿಂದ ಈಗಿರುವಂತೆ ಇವುಗಳಲ್ಲಿ ಯಾವ ವ್ಯತ್ಯಾಸವನ್ನೂ ಮಾಡಿಲ್ಲ. ಮಿತ್ರ ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಮಂಡಿಸಿದ ೪೨ನೆಯ ತಿದ್ದುಪಡಿಯನ್ನು ಕುರಿತು ನನ್ನ ಮಾನ್ಯ ಮಿತ್ರ ಸಂತಾನಂ ಅವರು ಮಾಡಿದ ಟೀಕೆಯಲ್ಲಿ, ಅವರು ಏನನ್ನು ಹೇಳಲು ಹೊರಟಿದ್ದಾರೆ ಎಂದು ಗ್ರಹಿಸಲು ನನಗೆ ಸಾಧ್ಯವಾಗಿಲ್ಲ, ಕ್ಷಮಿಸಬೇಕು. ಆದ್ದರಿಂದ ಇಲ್ಲಿ ನಾನು ಹೇಳಬಹುದಾದುದೆಲ್ಲ ಇಷ್ಟೆ; ಕರಡು ರಚನಾಸಮಿತಿಯು ಸಂವಿಧಾನವನ್ನು ಪರಿಷ್ಕರಿಸಲು ಕುಳಿತಾಗ ಈ ವಿಚಾರವನ್ನು ಗಮನಿಸಲಾಗುತ್ತದೆ. ಸುಪ್ರೀಂ ಕೋರ್ಟಿಗೆ ವಿಮರ್ಶನಾಧಿಕಾರವನ್ನು ನೀಡುವ, ನಾವು ಅಂಗೀಕರಿಸಿರುವ ವಿಧಿಯ ಅವಕಾಶಗಳಿಗೆ ಸಂಗತವಾಗುವಂತೆ ಹೊಸ ಪದಗುಚ್ಛವನ್ನು ಸೂಚಿಸಿದ ಪಕ್ಷದಲ್ಲಿ ನಿಸ್ಸಂದೇಹವಾಗಿ ಅದನ್ನು ಪರಿಶೀಲಿಸಲಾಗುವುದು.

ಇಲ್ಲಿ ನಾನು ಉಲ್ಲೇಖಿಸಬೇಕಾದ ಇನ್ನೊಂದು ವಿಚಾರವಿದೆ. ಅದು ೪೩ನೆಯ ತಿದ್ದುಪಡಿ. ನನ್ನ ಮಾನ್ಯ ಮಿತ್ರರಾದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಮಂಡಿಸಿದ ೪೩ನೆಯ ತಿದ್ದುಪಡಿಯಲ್ಲಿ ಒಂದು ಅವಕಾಶವಿದೆ. ಅದನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ೧೧೦ನೆಯ ವಿಧಿಯಲ್ಲಿ ಅವಕಾಶ ಕೊಟ್ಟಿರದ ಬೇರೊಂದು ವಿಚಾರದಲ್ಲಿ, ಸಂವಿಧಾನದ ವ್ಯಾಖ್ಯಾನವನ್ನು ಕುರಿತ ಪ್ರಶ್ನೆ ಮೇಲೆದ್ದಾಗ, ಅದರ ಮೇಲೆ ಆ ಸೀಲನ್ನು ಐವರು ನ್ಯಾಯಮೂರ್ತಿಗಳ ಪೀಠಕ್ಕೆ ಒಪ್ಪಿಸಬೇಕು. ಪ್ರಶ್ನೆಯನ್ನು ತೀರ್ಮಾನ ಮಾಡಿ ಮುಗಿಸಿದ ನಂತರ ಅದನ್ನು ಮತ್ತೆ ಮೂಲಪೀಠಕ್ಕೆ ಒಪ್ಪಿಸಬೇಕು. ಈಗ ಶಾಸನವಾಗಿರುವ ಅವಕಾಶದಲ್ಲಿ ೧೧೧ನೆಯ ವಿಧಿಯ ಉಲ್ಲೇಖವಿದೆ. ಸದನವು ಮುಂದೆ ಯಾವುದೇ ಹಂತದಲ್ಲಿ, ಕ್ರಿಮಿನಲ್ ಅಪೀಲುಗಳನ್ನೂ ವಿಚಾರಣೆಮಾಡುವ ನ್ಯಾಯಾಧಿಕಾರವನ್ನು ನೀಡಲು ನಿರ್ಧರಿಸಿದ ಪಕ್ಷದಲ್ಲಿ, ಈ ಅವಕಾಶವನ್ನೂ ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಉದ್ಭವಿಸುವ ಈ ಬಗೆಯ ವಿಚಾರದ ಪರಿಶೀಲನೆಗೆ ಸುಪ್ರೀಂ ಕೋರ್ಟಿಗೆ ಅನುಮತಿಯಿರುವಂತೆ ವಿಸ್ತರಿಸಬೇಕಾಗುತ್ತದೆ. ಆದ್ದರಿಂದ, ಸದನದ ವಿವಿಧ ವಲಯಗಳಲ್ಲಿ ಸುಪ್ರೀಂ ಕೋರ್ಟಿಗೆ ಕ್ರಿಮಿನಲ್ ನ್ಯಾಯಾಧಿಕಾರವೂ ಇರಬೇಕು ಎಂದು ಮಾಡಿರುವ ಸೂಚನೆಗಳನ್ನು ಅನುಸರಿಸಿದರೆ, ಈ ಅವಕಾಶವನ್ನೂ ಸೂಕ್ತವಾಗಿ ವಿಸ್ತರಿಸಬೇಕಾಗುತ್ತದೆ.

(ಡಾ.ಅಂಬೇಡ್ಕರರ ೨ ಸೇರಿದಂತೆ ೫ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು. ಒಂದು ತಿರಸ್ಕೃತವಾಯಿತು. ೧೨೧ನೆಯ ವಿಧಿಯನ್ನು ತಿದ್ದುಪಡಿಯಾದಂತೆ ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೧೯೧

* **ಮಾನ್ಯ ಡಾ. ಬಿ.ಆರ್ ಅಂಬೇಡ್ಕರ್** : ಮಾನ್ಯರೆ ಹೀಗೆ ಮಂಡಿಸುತ್ತೇನೆ: "೧೯೧ನೆಯ ವಿಧಿಯ (೧)ನೆಯ ಖಂಡದ (ಅ) ಉಪಖಂಡದಲ್ಲಿ, 'ಪೂರ್ವ ಪಂಜಾಬಿನ ಹೈಕೋರ್ಟು ಮತ್ತು ಅವಧದ

---

* ಸಿ.ಎ.ಡಿ. ಸಂ. ೮, ೬ನೇ ಜೂನ್ ೧೯೪೯, ಪುಟ ೬೫೬

ಚೀಫ್‌ಕೋರ್ಟು' ಎಂಬ ಪದಗಳಿಗೆ ಬದಲಾಗಿ, 'ಮತ್ತು ಪೂರ್ವ ಪಂಜಾಬ್, ಅಸ್ಸಾಂ ಮತ್ತು ಒರಿಸ್ಸಾಗಳ ಹೈಕೋರ್ಟುಗಳು' ಎಂಬ ಪದಗಳನ್ನು ಇಟ್ಟುಕೊಳ್ಳತಕ್ಕದ್ದು." ಮಾನ್ಯರೆ ಹೀಗೆ ಮಂಡಿಸುತ್ತೇನೆ.

"ತಿದ್ದುಪಡಿಗಳ ಪಟ್ಟಿಯ ೨೫೬೭ ಮತ್ತು ೨೫೭೦ನೆಯ ತಿದ್ದುಪಡಿಗಳನ್ನು ಉಲ್ಲೇಖಿಸುತ್ತಾ ೧೯೧ನೆಯ ವಿಧಿಯ ಬದಲಿಗೆ ಈ ಕೆಳಗಿನ ವಿಧಿಯನ್ನು ಇಟ್ಟುಕೊಳ್ಳತಕ್ಕದ್ದು.

'೧೯೧ (೧) ಪ್ರತಿಯೊಂದು ರಾಜ್ಯದಲ್ಲೂ ಒಂದು ಉಚ್ಚ ನ್ಯಾಯಾಲಯ (ಹೈಕೋರ್ಟು)ವಿರುತ್ತದೆ.

(೨) ಈ ಸಂವಿಧಾನದ ಉದ್ದೇಶಕ್ಕಾಗಿ ಈ ಸಂವಿಧಾನವು ಜಾರಿಗೊಳ್ಳುವುದಕ್ಕೆ ಮೊದಲು ಯಾವುದಾದರೂ ಪ್ರಾಂತ್ಯದಲ್ಲಿ ಹೈಕೋರ್ಟು ಇದ್ದ ಪಕ್ಷದಲ್ಲಿ, ಅದನ್ನೇ ಆ ರಾಜ್ಯದ ಹೈಕೋರ್ಟು ಎಂದು ಪರಿಗಣಿಸಲಾಗುವುದು.

(೩) ರಾಜ್ಯಗಳಿಗೆ ಹೈಕೋರ್ಟುಗಳು: ಈ ಅಧ್ಯಾಯದ ಅವಕಾಶಗಳು, ಈ ವಿಧಿಯಲ್ಲಿ ಉಲ್ಲೇಖಿಸಿರುವ ಪ್ರತಿಯೊಂದು ಹೈಕೋರ್ಟಿಗೂ ಅನ್ವಯವಾಗುವುದು."

**ಶ್ರೀ ಟಿ.ಟಿ.ಕೃಷ್ಣಮಾಚಾರಿ :** ನಾವು ಈ ತಿದ್ದುಪಡಿಯ ಚರ್ಚೆಯನ್ನು ಮೊದಲು ಕೈಗೆತ್ತಿಕೊಳ್ಳಬಹುದು. ಏಕೆಂದರೆ ಸದನವು ಇದನ್ನು ಅಂಗೀಕರಿಸಿದ ಪಕ್ಷದಲ್ಲಿ, ಇತರ ಎಲ್ಲಾ ತಿದ್ದುಪಡಿಗಳೂ ಅನಗತ್ಯವಾಗುತ್ತವೆ. ಇದು ವಿಧಿಯ ಸ್ವರೂಪವನ್ನೇ ಬದಲಾಯಿಸಿ ಅದನ್ನು ಸರಳಗೊಳಿಸುತ್ತದೆ.

**ಮಾನ್ಯ ಅಧ್ಯಕ್ಷರು :** ನನಗೆ ನೋಟೀಸು ಬಂದಿರುವ ಕೆಲವು ತಿದ್ದುಪಡಿಗಳಿವೆ. ಅವುಗಳನ್ನೊಮ್ಮೆ ಓದಿನೋಡುತ್ತೇನೆ.

(೨೫೬೮ ಮತ್ತು ೨೫೭೭ನೆಯ ತಿದ್ದುಪಡಿಗಳನ್ನು ಮಂಡಿಸಲಿಲ್ಲ)

**ಮಾನ್ಯ ಅಧ್ಯಕ್ಷರು :** ಈಗ ಡಾ.ಅಂಬೇಡ್ಕರ್ ಅವರು ಮಂಡಿಸಿರುವುದೊಂದನ್ನು ಬಿಟ್ಟರೆ ಬೇರೆಯಾವ ತಿದ್ದುಪಡಿಯೂ ಇಲ್ಲ. ಈ ತಿದ್ದುಪಡಿಯ ವಿಷಯವಾಗಿಯೋ ವಿಧಿಯ ವಿಷಯವಾಗಿಯೋ ಯಾರಾದರೂ ಏನನ್ನಾದರೂ ಹೇಳಬಯಸುವರೇನು?

ತಿದ್ದುಪಡಿಯು ಅಂಗೀಕೃತವಾಯಿತು.

(ತಿದ್ದುಪಡಿಯಾದ ೧೯೧ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೧೯೨

(೨೫೭೮ರಿಂದ ೨೫೮೦ ವರೆಗಿನ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

* **ಮಾನ್ಯ ಅಧ್ಯಕ್ಷರು:** ೨೫೮೧ನೆಯ ತಿದ್ದುಪಡಿಯು ಡಾ.ಅಂಬೇಡ್ಕರ್ ಅವರ ಹೆಸರಿನಲ್ಲಿದೆ. ಅದನ್ನು ಔಪಚಾರಿಕವಾಗಿ ಮಂಡಿಸಬೇಕು.

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ. ೧೯೨ನೆಯ ವಿಧಿಯ ಅವಕಾಶದಲ್ಲಿ, 'ಯಾವುದೇ ಒಂದರೊಂದಿಗೆ' ಎಂದು ಪ್ರಾರಂಭವಾಗಿ 'ಈ ಅಧ್ಯಾಯದ' ಎಂದು ಮುಗಿಯುವ ಪದಗಳನ್ನು ತೆಗೆದುಹಾಕಿ, 'ಆರು' ಎಂಬ ಪದವಾದ ನಂತರ 'ಕಾಲಕಾಲಕ್ಕೆ' ಎಂಬ ಪದಗಳನ್ನು ಅಳವಡಿಸಬಹುದು.

---

* ಸಿ.ಎ.ಡಿ. ಸಂ. ೮, ೬ನೇ ಜೂನ್ ೧೯೪೯, ಪುಟ ೬೫೭

ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ.

"ತಿದ್ದುಪಡಿಗಳ ಪಟ್ಟಿಯ ೨೫೮ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ ೧೯೨ನೆಯ ವಿಧಿಗೆ ಬದಲಾಗಿ

ಈ ಕೆಳಗಿನ ನೂತನ ವಿಧಿಗಳನ್ನು ಇರಿಸತಕ್ಕದ್ದು;–

ದಾಖಲೆಗಳ ಹೈಕೋರ್ಟುಗಳು : '೧೯೨' ಪ್ರತಿಯೊಂದು ಉಚ್ಚನ್ಯಾಯಾಲಯವೂ ಒಂದು ದಾಖಲೆಗಳ ನ್ಯಾಯಾಲಯವಾಗಿರುತ್ತದೆ. ತನ್ನ ನಿಂದನೆಗಾಗಿ ಶಿಕ್ಷೆ ವಿಧಿಸುವುದನ್ನೂ ಸೇರಿಸಿದಂತೆ ಅಂತಹ ನ್ಯಾಯಾಲಯದ ಎಲ್ಲಾ ಅಧಿಕಾರಿಗಳೂ ಇವುಗಳಿರುತ್ತವೆ.

ಹೈಕೋರ್ಟಿನ ರಚನೆ : '೧೯೨–ಎ ಪ್ರತಿಯೊಂದು ಉಚ್ಚನ್ಯಾಯಾಲಯದಲ್ಲಿಯೂ ಒಬ್ಬ ಮುಖ್ಯನ್ಯಾಯಾಧೀಶರೂ (ಚೀಫ್ ಜಸ್ಟಿಸ್), ಆಗಿಂದಾಗ ರಾಷ್ಟ್ರಪತಿಯವರು ನೇಮಿಸುವುದು ಸೂಕ್ತವೆಂದು ಭಾವಿಸುವ ಇತರ ನ್ಯಾಯಾಧೀಶರೂ ಇರುತ್ತಾರೆ. ಹಾಗೆ ನೇಮಿತರಾದ ನ್ಯಾಯಮೂರ್ತಿಗಳ ಸಂಖ್ಯೆ ರಾಷ್ಟ್ರಪತಿಯವರು ಆಗಿಂದಾಗ ಆದೇಶದ ಮೂಲಕ ಆ ನ್ಯಾಯಾಲಯಕ್ಕೆ ಸಂಬಂಧಸಿದಂತೆ ನಿಗದಿಪಡಿಸುವ ಗರಿಷ್ಠ ಸಂಖ್ಯೆಯನ್ನು ಮೀರಕೂಡದು."

*****

## ವಿಧಿ–೧೯೩

* **ಮಾನ್ಯ ಅಧ್ಯಕ್ಷರು :** ನೆನ್ನೆ ನಾವು ೧೯೩ನೆಯ ವಿಧಿಯನ್ನು ಪರಿಶೀಲಿಸುತ್ತಿದ್ದೆವು. ಈಗ ಅದನ್ನು ಮತ್ತೆ ಕೈಗೆತ್ತಿಕೊಳ್ಳೋಣ. ಒಂದು ತಿದ್ದುಪಡಿಯನ್ನು ಮಂಡಿಸಲಾಗಿತ್ತು. ಆದರೆ ಇನ್ನೂ ಹಲವು ತಿದ್ದುಪಡಿಗಳಿವೆ. ೨೬೨ನೆಯ ಸಂಖ್ಯೆಯ ಡಾ. ಅಂಬೇಡ್ಕರ್ ಅವರ ಒಂದು ತಿದ್ದುಪಡಿಯು ಇದ್ದು, ಅದು ಇವೆಲ್ಲವನ್ನೂ ಒಳಗೊಳ್ಳುತ್ತದೆ, ವಯಸ್ಸಿನ ಪ್ರಶ್ನೆಯೊಂದನ್ನು ಹೊರತುಪಡಿಸಿ ಆದ್ದರಿಂದ ಡಾ. ಅಂಬೇಡ್ಕರರು ಮೊದಲು ತಮ್ಮ ತಿದ್ದುಪಡಿಯನ್ನು ಮಂಡಿಸಿದರೆ ವಯಸ್ಸು ಬಿಟ್ಟು ಮಿಕ್ಕ ವಿಚಾರಗಳಿಗೆ ಸಂಬಂಧಿಸಿದ ಇತರ ತಿದ್ದುಪಡಿಗಳನ್ನೂ ಪರಿಶೀಲಿಸುವುದೇ ಅನಗತ್ಯವಾಗುತ್ತದೆ ಎಂದು ನನ್ನ ಭಾವನೆ. ವಯಸ್ಸಿಗೆ ಸಂಬಂಧಿಸಿದಂತೆ ಆ ಪ್ರಶ್ನೆಯನ್ನು ಪ್ರತ್ಯೇಕವಾಗಿ ನೋಡಬಹುದು.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಾನು ಆ ತಿದ್ದುಪಡಿಯನ್ನು ಮಂಡಿಸುವುದಿಲ್ಲ.

**ಅಧ್ಯಕ್ಷರು :** ಹಾಗಾದರೆ ನಾವು ಇತರ ತಿದ್ದುಪಡಿಗಳನ್ನು ಪರಿಶೀಲಿಸಬೇಕಾಗುತ್ತದೆ.

*****

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ಹೀಗೆ ಮಂಡಿಸುತ್ತಿದ್ದೇನೆ:

"ತಿದ್ದುಪಡಿಗಳ ಪಟ್ಟಿಯ ೨೬೧೦ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ, ೧೯೩ನೆಯ ವಿಧಿಯ (೧)ನೇ ಖಂಡದ ಅವಕಾಶದಲ್ಲಿನ (ಇ) ಖಂಡದಲ್ಲಿ. 'ಹೈಕೋರ್ಟು' ಎಂಬ ಪದವಾದನಂತರ, 'ಸದ್ಯಕ್ಕೆ ಮೊದಲನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ರಾಜ್ಯದಲ್ಲಿ' ಎಂಬ ಪದಗಳನ್ನು ಅಳವಡಿಸಬಹುದು."

---

* ಸಿ.ಎ.ಡಿ. ಸಂ. ೮, ೭ನೇ ಜೂನ್ ೧೯೪೯, ಪುಟ ೬೬೧

** ಅದೇ, ಪು. ೬೬೪–೬೪

ಮಾನ್ಯರೆ, ಈ ತಿದ್ದುಪಡಿಯ ಉದ್ದೇಶ, ಪ್ರಾಂತಗಳಿಗೂ ಭಾರತೀಯ ರಾಜ್ಯಗಳಿಗೂ ಇರುವ ಎಲ್ಲಾ ಭಿನ್ನತೆಗಳನ್ನು ತೆಗೆದುಹಾಕುವುದು. ಆದ್ದರಿಂದ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಅಧಿಕಾರದಲ್ಲಿರುವವರನ್ನು ಆಂತರಿಕವಾಗಿ ವರ್ಗಾವಣೆ, ಬದಲಾವಣೆ ಮಾಡಲು ಸಂಪೂರ್ಣವಾಗಿ ಸಾಧ್ಯವಾಗುತ್ತದೆ.

ಮಾನ್ಯರೆ, ತಿದ್ದುಪಡಿಗಳ ಪಟ್ಟಿಯ ೨೬೧೪ ನೆಯ ತಿದ್ದುಪಡಿಯನ್ನು ಔಪಚಾರಿಕವಾಗಿ ಮಂಡಿಸುತ್ತೇನೆ.

"೧೯೩ನೆಯ ವಿಧಿಯ (೨)ನೆಯ ಖಂಡದ

(ಅ) ಉಪ–ಖಂಡದಲ್ಲಿ 'ರಾಜ್ಯ' ಎಂಬ ಪದಕ್ಕೆ ಬದಲಾಗಿ, ಸದ್ಯಕ್ಕೆ ಮೊದಲನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟ ಪಡಿಸಿರುವ 'ರಾಜ್ಯ' ಎಂಬ ಪದಗಳನ್ನು ಅಳವಡಿಸತಕ್ಕದ್ದು.

ಮಾನ್ಯರೆ, ಹೀಗೆ ಮಂಡಿಸುತ್ತೇವೆ.

"ತಿದ್ದುಪಡಿಗಳ ಪಟ್ಟಿಯ ೨೬೧೪ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ ;೧೯೩ನೆಯ ವಿಧಿಯ (೨)ನೆಯ ಖಂಡದ (ಅ) ಉಪ–ಖಂಡದಲ್ಲಿ 'ಒಂದು ಹೈಕೋರ್ಟು ಎಲ್ಲಿಗಾಗಿ ಇದೆಯೋ, ಎಲ್ಲಿ ಒಂದು ಹೈಕೋರ್ಟು ಇದೆಯೋ ಆ ರಾಜ್ಯದಲ್ಲಿ ಎಂಬ ಪದಗಳಿಗೆ ಬದಲಾಗಿ 'ಭಾರತೀಯ ಭೂ ಪ್ರದೇಶದಲ್ಲಿ' ಎಂಬ ಪದಗಳನ್ನು ಇರಿಸತಕ್ಕದ್ದು."

"೨೬೧೪ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ ೧೯೩ನೆಯ ವಿಧಿಯ (೨)ನೆಯ ಖಂಡದ (ಬ) ಉಪ–ಖಂಡದಲ್ಲಿ, 'ಹೈಕೋರ್ಟು' ಎಂಬ ಪದಗಳಿಗೆ ಬದಲಾಗಿ, ಮೊದಲನೆಯ ಷೆಡ್ಯೂಲಿನಲ್ಲಿ, ಸದ್ಯಕ್ಕೆ ನಿರ್ದಿಷ್ಟಪಡಿಸಿದ ಯಾವುದೇ ರಾಜ್ಯದಲ್ಲಿ' ಎಂಬ ಪದಗಳನ್ನು ಇರಿಸತಕ್ಕದ್ದು."

ತಿದ್ದುಪಡಿಗಳ ಪಟ್ಟಿಯ ೨೬೧೪ನೆಂದು ತಿದ್ದುಪಡಿಯನ್ನು ಉಲ್ಲೇಖಿಸುತ್ತಾ ೧೯೩ನೆಯ ಅನುಚ್ಛೇದದ (೨)ನೆಯ ಖಂಡದ ೧ನೆಯ ವಿವರಣೆಯ (ಬಿ) ಉಪ–ಖಂಡದಲ್ಲಿ 'ಸದ್ಯದಲ್ಲಿ ಮೊದಲನೆಯ ಷೆಡ್ಯೂಲಿನ ಮೊದಲನೆಯ ಅಥವಾ ಎರಡನೆಯ ಭಾಗದಲ್ಲಿ ನಿರ್ದಿಷ್ಟಪಡಿಸಿದ ಒಂದು ರಾಜ್ಯದಲ್ಲಿ' ಎಂಬ ಪದಗಳಿಗೆ ಬದಲಾಗಿ, 'ಭಾರತ' ಎಂಬ ಪದವನ್ನು ಇರಿಸತಕ್ಕದ್ದು.

"ತಿದ್ದುಪಡಿಗಳ ಪಟ್ಟಿಯ ೨೬೧೪ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ, ೧೯೩ನೆಯ ವಿಧಿಯ (೨)ನೆಯ ಖಂಡದ ವಿವರಣೆಯ (ಬ) ಖಂಡದಲ್ಲಿನ 'ಬ್ರಿಟಿಷ್ ಇಂಡಿಯಾ' ಎಂಬ ಪದಗಳಿಗೆ ಬದಲಾಗಿ 'ಭಾರತ' ಎಂಬ ಪದವನ್ನು ಇರಿಸತಕ್ಕದ್ದು."

"೨೬೨೨ನೆಯ ತಿದ್ದುಪಡಿಯನ್ನು....

**ಮಾನ್ಯ ಅಧ್ಯಕ್ಷರು :** ಅದನ್ನು ಮಂಡಿಸುವುದಕ್ಕೆ ಮೊದಲು ನೀವು ೨೬೨೨ನೆಯ ತಿದ್ದುಪಡಿಯನ್ನು ಔಪಚಾರಿಕವಾಗಿ ಮಂಡಿಸಬಹುದು.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ಔಪಚಾರಿಕವಾಗಿ ಹೀಗೆ ಮಂಡಿಸುತ್ತಿದ್ದೇನೆ.

'೧೯೩ನೆಯ ವಿಧಿಯ ೨ನೆಯ ಖಂಡದ (I)ನೆಯ ವಿವರಣೆಗೆ ಬದಲಾಗಿ ಈ ಕೆಳಗಿನದನ್ನು ಇರಿಸಬಹುದು.' 'ವಿವರಣೆ– ಈ ಖಂಡದ (ಅ) ಮತ್ತು (ಬ) ಉಪ ಖಂಡದ 'ಹೈಕೋರ್ಟು' ಎಂಬ ಉಕ್ತಿಯು, ಮೊದಲನೆಯ ಷೆಡ್ಯೂಲಿನ (III) ನೆಯ ಭಾಗದಲ್ಲಿ ತತ್ಕಾಲಕ್ಕೆ ನಿರ್ದಿಷ್ಟಪಡಿಸಿದ ಒಂದು ರಾಜ್ಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರಪತಿಯವರು ೧೨೩ನೆಯ ವಿಧಿಯ ಪ್ರಕಾರ, ಈ ಸಂವಿಧಾನದ ೧೦೩ ಮತ್ತು ೧೦೬ನೆಯ ವಿಧಿಗಳಿಗಾಗಿ ಹೈಕೋರ್ಟು ಎಂದು ಘೋಷಿಸಿರುವ ನ್ಯಾಯಾಲಯವಾಗಿರುತ್ತದೆ."

ಮಾನ್ಯರೆ, ಹೀಗೆ ಮಂಡಿಸುತ್ತೇನೆ;

"ತಿದ್ದುಪಡಿಗಳ ಪಟ್ಟಿಯ ೨೬೨೨ ನೆಯ ತಿದ್ದುಪಡಿಗೆ ಸಂಬಂಧಿಸಿದಂತೆ, ೧೯೩ನೆಯ ವಿಧಿಯ

(೨)ನೆಯ ಖಂಡದ ೨ನೆಯ ವಿವರಣೆಯನ್ನು ಕೈಬಿಡಬಹುದು.' "೧೯೬ ರಿಂದ ೨೦೦ ವರೆಗಿನ ಈ ಎಲ್ಲಾ ತಿದ್ದುಪಡಿಗಳ ಉದ್ದೇಶ ಬ್ರಿಟಿಷ್ ಇಂಡಿಯಕ್ಕೂ ಭಾರತೀಯ ರಾಜ್ಯಗಳಿಗೂ ಇರುವ ಎಲ್ಲಾ ವ್ಯತ್ಯಾಸಗಳನ್ನು ತೆಗೆದುಹಾಕುವುದು. ಕೆಲವು ತಿದ್ದುಪಡಿಗಳು, ವಿಶೇಷವಾಗಿ ೧೯೯ಮತ್ತು ೨೦೦ನೆಯವು ಮುಖ್ಯ ತಿದ್ದುಪಡಿಯ ಪರಿಣಾಮವಾಗಿರುವಂಥವು.

* * * * *

* **ಮಾನ್ಯ ಅಧಕ್ಷರು :** ಡಾ.ಅಂಬೇಡ್ಕರ್, ಇದರ ವಿಷಯವಾಗಿ ನೀವು ಮಾತನಾಡಲು ಬಯಸುವಿರಾ?

**ಮಾನ್ಯ ಡಾ.ಬಿ.ಆರ್ ಅಂಬೇಡ್ಕರ್ :** ಇಲ್ಲ ಸ್ವಾಮಿ. ಇದಕ್ಕೆ ಯಾವುದೇ ಉತ್ತರ ಅಗತ್ಯವಾಗಿರುವಂತೆ ತೋರುವುದಿಲ್ಲ.

(೪ ತಿದ್ದುಪಡಿಗಳು ಮಾತ್ರ ಸ್ವೀಕೃತವಾದುವು, ಮಿಕ್ಕವು ತಿರಸ್ಕೃತವಾದುವು. ತಿದ್ದುಪಡಿಗೊಂಡಂತೆ ೧೯೩ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೧೯೩–ಎ

** **ಮಾನ್ಯ ಅಧ್ಯಕ್ಷರು :** ಡಾ.ಅಂಬೇಡ್ಕರ್, ಪ್ರೊ. ಶಹಾ ಅವರು ಗೊತ್ತುವಳಿಯ ಮೇಲೆ ನೀವು ಏನಾದರೂ ಹೇಳಬಯಸುವಿರೇನು?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಮಾನ್ಯ ಅಧ್ಯಕ್ಷರೆ, ಪ್ರೊ ಶಹಾ ಅವರು ಸೂಚಿಸಿರುವ ಈ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲಾರೆ ಎಂದು ತಿಳಿಸಲು ವಿಷಾದಿಸುತ್ತೇನೆ. ನಾನು ಪ್ರೊ. ಶಹಾ ಅವರ ನಿಲುವನ್ನು ಸರಿಯಾಗಿ ಗ್ರಹಿಸಿರುವುದಾದರೆ, ನ್ಯಾಯಾಂಗಕ್ಕೂ ಕಾರ್ಯಾಂಗಕ್ಕೂ ನಡುವೆ ಪ್ರತ್ಯೇಕತೆಯ ತತ್ವವನ್ನು ಜಾರಿಗೆ ತರಬೇಕು. ಅಥವಾ ಅವುಗಳ ನಡುವೆ ಪ್ರತ್ಯೇಕತೆ ಇರುವಂತೆ ಮಾಡಬೇಕು ಎಂದು ಅವರು ಹೇಳಿದ್ದಾರೆ. ಕಾರ್ಯಾಂಗ ಮತ್ತು ನ್ಯಾಯಾಂಗಗಳ ನಡುವೆ ಪ್ರತ್ಯೇಕತೆಯಿರಬೇಕೆನ್ನುವುದರಲ್ಲಿ ಯಾವುದೇ ವಿವಾದವಿರುವಂತೆ ತೋರುವುದಿಲ್ಲ. ವಾಸ್ತವವಾಗಿ ಹೈಕೋರ್ಟು ಮತ್ತು ಸುಪ್ರೀಂ ಕೋರ್ಟುಗಳಿಗೆ ಸಂಬಂಧಪಟ್ಟ ವಿಧಿಗಳು ಆ ಉದ್ದೇಶವನ್ನೇ ಗಮನದಲ್ಲಿಟ್ಟುಕೊಂಡಿವೆ. ಆದರೆ ಇಲ್ಲಿ ಉದ್ಭವಿಸುವ ಪ್ರಶ್ನೆ ಎಂದರೆ ಈ ತಿದ್ದುಪಡಿ ನ್ಯಾಯಾಂಗ ಮತ್ತು ಕಾರ್ಯಾಂಗಗಳ ನಡುವೆ ಒಂದು ಬೇರ್ಪಡಿಕೆಯನ್ನು ಇದು ಹೇಗೆ ಉಂಟುಮಾಡುತ್ತದೆ? ನಾನು ಈ ಸಿದ್ಧಾಂತವನ್ನು ಅರ್ಥಮಾಡಿಕೊಂಡಿರುವ ಹಾಗೆ, ಒಬ್ಬ ವ್ಯಕ್ತಿಯು ಒಂದು ನ್ಯಾಯಿಕ ಅಧಿಕಾರಸ್ಥಾನದಲ್ಲಿರುವಾಗ ಕಾರ್ಯ್ಯಾಂಗಾಧಿಕಾರವನ್ನು ಒಳಗೊಳ್ಳುವಂತಹ ಯಾವ ಹುದ್ದೆಯಲ್ಲೂ ಇರುವಂತಿಲ್ಲ. ಹಾಗೆಯೇ ಕಾರ್ಯಾಂಗದ ಒಂದು ಹುದ್ದೆಯಲ್ಲಿರುವ ವ್ಯಕ್ತಿಯು ಏಕಕಾಲಕ್ಕೆ ಒಂದು ನ್ಯಾಯಿಕ ಹುದ್ದೆಯಲ್ಲೂ ಇರುವ ಹಾಗಿಲ್ಲ. ಆದರೆ ಈ ತಿದ್ದುಪಡಿಯು ಬೇರೆಯೇ ಸಲಹೆಗೆ ಸಂಬಂಧಪಟ್ಟಿರುವಂತೆ ನನಗೆ ಕಾಣುತ್ತಿದೆ. ನ್ಯಾಯಾಂಗದ ಸದಸ್ಯನಾಗಿರುವ ಒಬ್ಬ ವ್ಯಕ್ತಿಯು ನಿರ್ದಿಷ್ಟ ಸಂಖ್ಯೆಯ ವರ್ಷಗಳ ಕಾಲ ನ್ಯಾಯಾಂಗ ಸೇವೆಯಲ್ಲಿದ್ದ ಮೇಲೆ, ಯಾವ ಹುದ್ದೆಯನ್ನು ಅಲಂಕರಿಸಬಹುದು ಎಂಬುದನ್ನು ಅದು ಹೇಳುತ್ತದೆ. ಇದು ಬೇರೆಯೇ

---

* ಸಿ.ಎ.ಡಿ. ಸಂ. ೮, ೭ನೇ ಜೂನ್ ೧೯೪೯, ಪುಟ ೬೭೪

* ಅದೇ ಪು. ೬೭೮–೭೯

ಆದ ಒಂದು ಸಮಸ್ಯೆಯನ್ನು ಎಬ್ಬಿಸುತ್ತದೆ ಎಂದು ನನ್ನ ಭಾವನೆ. ನಾವು ಲೋಕಸೇವಾ ಆಯೋಗ (ಪಬ್ಲಿಕ್ ಸರ್ವಿಸ್ ಕಮೀಷನ್) ದ ಸಂಬಂಧವಾಗಿ ಪರಿಶೀಲಿಸಬೇಕಾದಂಥದೇ ಸಮಸ್ಯೆಯನ್ನು ಇದೂ ಒಡ್ಡುತ್ತದೆ. ಲೋಕಸೇವಾ ಆಯೋಗದ ಒಬ್ಬ ಸದಸ್ಯನು ಅಲ್ಲಿ ತನ್ನ ಅಧಿಕಾರಾವಧಿಯನ್ನು ಮುಗಿಸಿದ ನಂತರ ಬೇರೆ ಯಾವುದಾದರೂ ಹುದ್ದೆಯನ್ನು ವಹಿಸಿಕೊಳ್ಳಲು ಅವನಿಗೆ ಅರ್ಹತೆಯಿರುತ್ತದೆಯೋ ಇಲ್ಲವೋ ಎನ್ನುವುದು ಪ್ರಶ್ನೆ. ನನಗೆ ತೋರುವುದು ನ್ಯಾಯಾಂಗದ ಸದಸ್ಯರ ಪರಿಸ್ಥಿತಿಯು ಲೋಕಸೇವಾ ಆಯೋಗದ ಸದಸ್ಯರ ಪರಿಸ್ಥಿತಿಗಿಂತ ಬೇರೆಯೇ ಆದ ನೆಲೆಯಲ್ಲಿದೆ ಎಂದು ನನಗೆ ತೋರುತ್ತದೆ. ಲೋಕಸೇವಾ ಆಯೋಗದ ಸದಸ್ಯರಿಗೆ ಆಡಳಿತ ಸೇವಾ ಕ್ಷೇತ್ರಗಳ ನೇಮಕಾತಿಗೆ ಸಂಬಂಧಿಸಿದಂತೆ ಕಾರ್ಯಾಂಗದೊಂದಿಗೆ ನಿಕಟವಾದ ಸಂಬಂಧವಿರುತ್ತದೆ ಎಂದು ಈ ಮುಂಚೆಯೇ ಒಮ್ಮೆ ನಾನು ಹೇಳಿದ್ದೇನೆ. ನ್ಯಾಯಾಂಗವಾದರೋ ಬಹುಮಟ್ಟಿಗೆ, ಕಾರ್ಯಾಂಗದೊಂದಿಗೆ ಸ್ವಲ್ಪವೂ ಸಂಬಂಧಪಡುವುದಿಲ್ಲ. ಅದು ಜನತೆಯ ಹಕ್ಕುಗಳ ಹಾಗೂ ಸ್ವಲ್ಪಮಟ್ಟಿಗೆ ಭಾರತ ಸರಕಾರದ ಹಾಗೂ ಘಟಕಗಳ ಹಕ್ಕುಗಳ ಬಗೆಗೆ ತೀರ್ಪುಕೊಡುವ ಕೆಲಸಮಾಡುತ್ತದೆ. ಬಹುಮಟ್ಟಿಗೆ, ಅಂದಂದಿನ ಸರಕಾರಕ್ಕೆ ಯಾವ ಕಾಳಜಿಯೂ ಇದ್ದಿರದ ಜನಸಾಮಾನ್ಯರ ಹಕ್ಕುಗಳ ತೀರ್ಮಾನವನ್ನು ಕುರಿತು ಅದು ಸಂಬಂಧಪಡುತ್ತದೆ. ಇದರ ಪರಿಣಾಮವಾಗಿ ಕಾರ್ಯಾಂಗವು ನ್ಯಾಯಾಂಗದ ಮೇಲೆ ಪ್ರಭಾವ ಬೀರುವ ಅವಕಾಶ ತುಂಬಾ ಕಡಿಮೆ. ಕೇವಲ ತಾತ್ವಿಕವಾದ ಕಾರಣಕ್ಕಾಗಿ ಇತರ ಹುದ್ದೆಗಳನ್ನು ವಹಿಸಿಕೊಳ್ಳಲು ಅವರು ಅನರ್ಹರೆಂದು ಸಾರುವುದು ವಿಷಯವನ್ನು ಅನಗತ್ಯವಾದಷ್ಟು ದೂರಕ್ಕೆ ಎಳೆದುಕೊಂಡು ಹೋದಂತಾಗುತ್ತದೆ ಎಂದು ನನಗೆ ತೋರುತ್ತದೆ. ನಾನು ನ್ಯಾಯಾಂಗಕ್ಕಾಗಿ ಮಾಡುತ್ತಿರುವ ಅವಕಾಶಗಳು, ಅಧಿಕಾರದಲ್ಲಿರುವ ವ್ಯಕ್ತಿಗಳ ದೃಷ್ಟಿಯಲ್ಲಿ ತೃಪ್ತಿಕರವಾಗಿಲ್ಲ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಅರವತ್ತು ವರ್ಷವಾದ ಕೂಡಲೆ ಹುದ್ದೆಯಿಂದ ಇಳಿದು ಹೋಗು ಎಂದು ನಾವು ಹೇಳುತ್ತೇವೆ. ಇಂಗ್ಲೆಂಡಿನಲ್ಲಾದರೆ ಈಗ ನ್ಯಾಯಾಂಗಗಳಲ್ಲಿ ಒಬ್ಬ ವ್ಯಕ್ತಿಯು ಎಪ್ಪತ್ತು ವರ್ಷಗಳವರೆಗೆ ಅಧಿಕಾರದಲ್ಲಿರಬಹುದು. ಅಮೇರಿಕಾದಲ್ಲಿ ಸುಪ್ರೀಂ ಕೋರ್ಟಿನ ಹುದ್ದೆಯು ಆಜೀವಪರ್ಯಂತವಾಗಿರುತ್ತದೆ. ಆದ್ದರಿಂದ ಅಮೇರಿಕದಲ್ಲಾಗಲಿ, ಗ್ರೇಟ್ ಬ್ರಿಟನ್ನಿನಲ್ಲಾಗಲಿ, ನಿವೃತ್ತನಾದ ಮೇಲೆ ನ್ಯಾಯಾಂಗದ ಒಬ್ಬ ವ್ಯಕ್ತಿಯು ಬೇರೊಂದು ಹುದ್ದೆಯನ್ನು ಹುಡುಕುವ ಸಂದರ್ಭವೇ ಇಲ್ಲ.

ಹಾಗೆಯೇ ಅಮೇರಿಕದಲ್ಲಿ, ನಿವೃತ್ತಿ ವೇತನಕ್ಕೆ ಸಂಬಂಧಿಸಿದಂತೆ, ಸುಪ್ರೀಂ ಕೋರ್ಟಿನ ನ್ಯಾಯಾಧೀಶನೊಬ್ಬನ ನಿವೃತ್ತಿ ವೇತನವು ಆತನು ಪಡೆಯುತ್ತಿದ್ದ ವೇತನಕ್ಕೆ ಸಮಾನವಾಗಿರುತ್ತದೆ. ವೇತನಕ್ಕೂ ನಿವೃತ್ತಿ ವೇತನಕ್ಕೂ ಅಲ್ಲಿ ವ್ಯತ್ಯಾಸವೇ ಇಲ್ಲ. ಇಂಗ್ಲೆಂಡಿನಲ್ಲಿ ಕೂಡ. ನಿವೃತ್ತಿ ವೇತನವು, ನನಗೆ ತಿಳಿದಿರುವಂತೆ ನ್ಯಾಯಾಧೀಶರು ಪಡೆಯುವ ವೇತನದ ಶೇ.ಎಪ್ಪತ್ತು ಅಥವಾ ಎಂಬತ್ತು ಆಗಿರುತ್ತದೆ. ಸೇವಾ ನಿವೃತ್ತಿಯನ್ನು ಕುರಿತ ನಮ್ಮ ನಿಯಮಗಳು ಒಬ್ಬ ವ್ಯಕ್ತಿಯ ಮೇಲೆ ಎಷ್ಟು ಭಾರವಾಗಿರುತ್ತವೆಯೆಂದರೆ, ಅವನು ಅರವತ್ತು ತುಂಬಿದೊಡನೆ ನಿವೃತ್ತನಾಗಬೇಕು. ನಿವೃತ್ತಿ ವೇತನದಲ್ಲೂ ನಾವು ಬಹಳ ಬಿಗಿ, ತುಸು ಅಲ್ಪವೆನಿಸುವ ಮೊತ್ತವನ್ನು ಅವರಿಗೆ ನಿವೃತ್ತಿ ವೇತನವಾಗಿ ನೀಡುತ್ತೇವೆ. ಪರಿಸ್ಥಿತಿ ಹೀಗಿರುವಾಗ ಪ್ರೊ. ಕೆ.ಟಿ.ಶಹಾ ಅವರು ಸೂಚಿಸಿರುವ ತಿದ್ದುಪಡಿಯು, ಅವರು ಮನಸ್ಸಿನಲ್ಲಿಟ್ಟುಕೊಂಡಿರುವ ಉದ್ದೇಶದಿಂದ ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಗೊಳಿಸುವ ಉದ್ದೇಶದಿಂದ ಹಾಗೂ ಅದು ನ್ಯಾಯಾಂಗದಲ್ಲಿ ಒಂದು ಹುದ್ದೆಯನ್ನು ಸ್ವೀಕರಿಸುವ ವ್ಯಕ್ತಿಯ ಮೇಲೆ ಅದು ವಿಪರೀತ ಹೊರೆಯನ್ನು ಹೊರಿಸುತ್ತದೆ ಎಂಬ ದೃಷ್ಟಿಯಿಂದ ಅನಗತ್ಯವಾಗಿದೆ.

**ಶ್ರೀ ಎಚ್.ವಿ. ಕಾಮತ್ :** ಈ ತಿದ್ದುಪಡಿಯು ನಿವೃತ್ತರಾದ ನ್ಯಾಯಾಧೀಶರಿಗೆ ಅನ್ವಯಿಸುವುದಿಲ್ಲ. ಹಾಲಿ ನ್ಯಾಯಪೀಠದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಅನ್ವಯಿಸುತ್ತದೆ ಎಂದು ಹೇಳಬಹುದೆ?

**ಮಾನ್ಯ ಡಾ. ಬಿ.ಆರ್ ಅಂಬೇಡ್ಕರ್ :** ಹಾಗೆ ಹೇಳಿದರೂ ತಿದ್ದುಪಡಿಯೇ ಗೊಂದಲವಾಗಿರುವಂತಿದೆ." ಒಂದೇ ಸಮನೆ ಐದು ವರ್ಷಗಳ ಕಾಲ" ಸೇವೆಸಲ್ಲಿಸಿರುವ ವ್ಯಕ್ತಿಗೆ ಅದು ಅನ್ವಯವಾಗುತ್ತದೆಂದು ಹೇಳಲಾಗಿದೆ. ಅಂದರೆ ರಾಷ್ಟ್ರಪತಿಗಳು ಒಬ್ಬ ನ್ಯಾಯಾಧೀಶರನ್ನು ನಾಲ್ಕು ವರ್ಷಗಳ ಅವಧಿಗೆ ನೇಮಿಸಿದರೆ ಅವರು ಇದಕ್ಕೆ ಒಳಪಡುವುದಿಲ್ಲ. ಅದು ಪ್ರೊ. ಶಹಾ ಅವರ ಮನಸ್ಸಿನಲ್ಲಿ ಏನಿದೆಯೋ ಅದನ್ನೇ ವಿಫಲಗೊಳಿಸುತ್ತದೆ. ಒಂದು ನಿರ್ದಿಷ್ಟ ಸಂದರ್ಭದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಾದ ಅವಧಿಗೆ ಒಬ್ಬ ನ್ಯಾಯಮೂರ್ತಿಯನ್ನು ನೇಮಕಮಾಡಿ, ಆಮೇಲೆ ರಾಯಭಾರಿ ಅಥವಾ ಕಾನ್ಸುಲ್ ಅಥವಾ ವಾಣಿಜ್ಯ ಕಮೀಶನರ್ ಇಂತಹ ಒಂದು ಹುದ್ದೆಯನ್ನು ಅವನಿಗೆ ನೀಡಿ ಪುರಸ್ಕರಿಸಬಹುದು. ಆದ್ದರಿಂದ ಇಡೀ ವಿಷಯವನ್ನೇ ಸರಿಯಾಗಿ ಕಲ್ಪಿಸಿಕೊಂಡಂತಿಲ್ಲ ಎಂದು ನನಗೆ ತೋರುತ್ತದೆ.

**ಮಾನ್ಯ ಅಧ್ಯಕ್ಷರು :** ಪ್ರಶ್ನೆ ಹೀಗಿದೆ: "೧೯೩ನೆಯ ವಿಧಿಯಾದ ಮೇಲೆ ಈ ಕೆಳಗಿನಂತೆ ಹೊಸದಾಗಿ ೧೯೩–ಎ ವಿಧಿಯನ್ನು ಸೇರಿಸತಕ್ಕದ್ದು' ೧೯೩–ಎ ಸುಪ್ರೀಂ ಕೋರ್ಟಿನ, ಫೆಡರಲ್ ಕೋರ್ಟಿನ ಅಥವಾ ಯಾವುದೇ ಹೈಕೋರ್ಟಿನ ನ್ಯಾಯಾಧೀಶನಾಗಿ ಒಂದೇ ಸಮನೆ ಐದು ವರ್ಷಕಾಲ ಕೆಲಸಮಾಡಿರುವ ಯಾವ ವ್ಯಕ್ತಿಯನ್ನೂ ಭಾರತ ಸರಕಾರದ ಅಥವಾ ಯೂನಿಯನ್ನಿನ ಯಾವುದೇ ರಾಜ್ಯ ಸರಕಾರದ ಯಾವುದೇ ಕಾರ್ಯಾಂಗ ಹುದ್ದೆಗೆ; ರಾಯಭಾರಿ, ಸಚಿವ, ಪೂರ್ಣಾಧಿಕಾರಮಟ್ಟ ರಾಯಭಾರಿ ಹೈಕಮೀಶನರ್, ವ್ಯಾಪಾರ ಕಮೀಶನರ್, ಕಾನ್ಸುಲ್ ಮೊದಲಾದ ಹುದ್ದೆಗಳಿಗೆ; ಭಾರತ ಸರಕಾರದಲ್ಲಿ ಅಥವಾ ಯೂನಿಯನ್ನಿನ ಯಾವುದೇ ರಾಜ್ಯ ಸರಕಾರದಲ್ಲಿ ಸಚಿವನನ್ನಾಗಿ ನೇಮಿಸುವಂತಿಲ್ಲ."

(ಪ್ರೊ.ಕೆ.ಟಿ. ಶಹಾ ಅವರ ಈ ತಿದ್ದುಪಡಿಯನ್ನು ತಿರಸ್ಕರಿಸಲಾಯಿತು)

*****

## ವಿಧಿ ೧೯೫

* **ಮಾನ್ಯ ಡಾ.ಬಿ.ಆರ್ ಅಂಬೇಡ್ಕರ್:** ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ; "೧೯೫ನೆಯ ವಿಧಿಯಲ್ಲಿ 'ಒಂದು ಘೋಷಣೆ' ಎಂಬ ಪದಗಳಿಗೆ ಬದಲಾಗಿ 'ಒಂದು ಸ್ಥಿರೀಕರಣ ಅಥವಾ ಪ್ರಮಾಣವಚನ' ಎಂಬ ಪದಗಳನ್ನು ಅಳವಡಿಸಬೇಕು."

ಇದೊಂದು ತುಂಬಾ ಔಪಚಾರಿಕವಾದ ತಿದ್ದುಪಡಿ.

ತಿದ್ದುಪಡಿಯು ಅಂಗೀಕೃತವಾಯಿತು. ತಿದ್ದುಪಡಿಗೊಂಡಂತೆ ೧೯೫ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

---

* ಸಿ.ಎ.ಡಿ. ಸಂ. ೮, ೭ನೇ ಜೂನ್ ೧೯೪೯, ಪುಟ ೬೮೦

## ವಿಧಿ ೧೯೬

* **ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್:** ಮಾನ್ಯರೆ, ನಾನು ಹೀಗೆ ಮಂಡಿಸುತ್ತಿದ್ದೇನೆ:

"೧೯೬ನೆಯ ವಿಧಿಯ ಬದಲಾಗಿ ಈ ಕೆಳಗಿನಂತೆ ಇಡಬಹುದು.

| | |
|---|---|
| **ಒಂದು ಹೈಕೋರ್ಟಿನ ನ್ಯಾಯಾಧೀಶನಾಗಿ ಸೇವೆ ಸಲ್ಲಿಸಿದ ವ್ಯಕ್ತಿಯು ಬೇರೆ ಯಾವುದೇ ನ್ಯಾಯಾಲಯದಲ್ಲಿ ಅಥವಾ ಪ್ರಾಧಿಕಾರ ಮುಂದೆ ವೃತ್ತಿಯನ್ನು ನಿರ್ವಹಿಸುವುದನ್ನು ನಿಷೇಧಿಸುವುದು.** | '೧೯೬ ಒಂದು ಹೈಕೋರ್ಟಿನ ನ್ಯಾಯಾಧೀಶನಾಗಿ ಸೇವೆ ಸಲ್ಲಿಸಿದ್ದ ಯಾವ ವ್ಯಕ್ತಿಗೂ, ಈ ಸಂವಿಧಾನವು ಜಾರಿಗೆ ಬಂದ ಮುಂದೆ ವ್ಯಕ್ತಿಯನ್ನು ನಂತರ, ಯಾವುದೇ ಕೋರ್ಟಿನಲ್ಲಿ ಅಥವಾ ಭಾರತ ಭೂ ಪ್ರದೇಶದೊಳಗೆ ಯಾವುದೇ ಪ್ರಾಧಿಕಾರದೆದುರಿಗೆ ವಕೀಲಿ ನಡೆಸಲು ಅವಕಾಶವಿರುವುದಿಲ್ಲ. |

ಇದು ಹಿಂದೆ ಇದ್ದದ್ದರ ಮರು ಪದ ಜೋಡಣೆಯಾಗಿದೆ ಅಷ್ಟೆ.

**ಶ್ರೀ ಪ್ರಭುದಯಾಳ್ ಹಿಮತ್‌ಸಿಂಗ್ ಕಾ :** ಡಾ. ಅಂಬೇಡ್ಕರ್ ಅವರು ಈಗ ಮಂಡಿಸಿರುವ ತಿದ್ದುಪಡಿಯ ದೃಷ್ಟಿಯಿಂದ ನನ್ನ ತಿದ್ದುಪಡಿಯು (ಸಂಖ್ಯೆ ೨೬೩೨) ಅನಗತ್ಯವಾಗುತ್ತದೆ.

*****

** **ಮಾನ್ಯ ಅಧ್ಯಕ್ಷರು:** ಡಾ. ಅಂಬೇಡ್ಕರ್, ನೀವು ಏನನ್ನಾದರೂ ಹೇಳಬಯಸುವಿರಾ?

**ಮಾನ್ಯ ಡಾ.ಬಿ.ಆರ್ ಅಂಬೇಡ್ಕರ್:** ಏನೂ ಅಗತ್ಯವಿಲ್ಲವೆಂದು ತೋರುತ್ತದೆ.

**ಮಾನ್ಯ ಅಧ್ಯಕ್ಷರು :** ಮೊದಲು ನಾನು ಸರ್ದಾರ್ ಹುಕಂ ಸಿಂಗ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. ಅದು ಅಂಗೀಕೃತವಾದರೆ ಅದರಿಂದ ಡಾ.ಅಂಬೇಡ್ಕರ್ ಅವರ ತಿದ್ದುಪಡಿಯು ನಿಲ್ಲುತ್ತದೆ. (ತಿದ್ದುಪಡಿಯ ತಿರಸ್ಕೃತವಾಯಿತು. ಡಾ. ಅಂಬೇಡ್ಕರ್ ಅವರ ತಿದ್ದುಪಡಿಯು ಸ್ವೀಕೃತವಾಯಿತು. ೧೯೬ ನೆಯ ವಿಧಿಯನ್ನು ತಿದ್ದುಪಡಿಗೊಂಡ ರೀತಿಯಲ್ಲಿ ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೧೯೬–ಎ

(೨೬೩೯ನೆಯ ತಿದ್ದುಪಡಿಯನ್ನು ಮಂಡಿಸಲಿಲ್ಲ)

**ಮಾನ್ಯ ಅಧ್ಯಕ್ಷರು:** ಇಂಥದೇ, ೧೮೭೦ನೆಯ ತಿದ್ದುಪಡಿಯನ್ನು ಮಂಡಿಸಿ, ವಿಸ್ತಾರವಾಗಿ ಚರ್ಚಿಸಿ ಆಮೇಲೆ ಕಾದಿರಿಸಲಾಯಿತು.

**ಮಾನ್ಯ ಡಾ.ಬಿ.ಆರ್ ಅಂಬೇಡ್ಕರ್:** ೧೯೬–ಎ ವಿಧಿಯನ್ನೂ ತಡೆಹಿಡಿದಿರಬೇಕೆಂದು ಸೂಚಿಸುತ್ತೇನೆ. ಇಂತಹುದೇ(೧೦೩–ಎ) ಒಂದು ವಿಧಿಯನ್ನು ತಡೆಹಿಡಿಯಲಾಗಿದೆ.

**ಮಾನ್ಯ ಅಧ್ಯಕ್ಷರು :** ನಾವಿದನ್ನು ಒಪ್ಪುತ್ತೇನೆ. ಈ ವಿಧಿಯನ್ನು ತಡೆಹಿಡಿಯಲಾಗಿದೆ.

---

* ಅದೇ ಪುಟ ೬೮೫

* ಅದೇ, ಪು. ೬೮೫

## ವಿಧಿ ೧೯೭

**ಮಾನ್ಯ ಡಾ. ಬಿ.ಆರ್ ಅಂಬೇಡ್ಕರ್** : ೧೯೭ನೆಯ ವಿಧಿಯನ್ನೂ ತಡೆಹಿಡಿಯಬಹುದು.

**ಮಾನ್ಯ ಅಧ್ಯಕ್ಷರು :** ಆಗಬಹುದು. ಈ ವಿಧಿಯನ್ನೂ ತಡೆಹಿಡಿಯಲಾಗಿದೆ.

## ವಿಧಿ ೧೯೮

* **ಡಾ.ಬಿ.ಆರ್ ಅಂಬೇಡ್ಕರ್:** ಮಾನ್ಯರೆ, ಹೀಗೆ ಮಂಡಿಸುತ್ತೇನೆ: "೧೯೮ನೆಯ ವಿಧಿಯ ಬದಲಾಗಿ ಈ ಕೆಳಗಿನ ವಿಧಿಯನ್ನು ಇರಿಸಬಹುದು;-

| | |
|---|---|
| **ಹಂಗಾಮಿ ಮುಖ್ಯನ್ಯಾಯಾಧೀಶರ ತಾತ್ಕಾಲಿಕ ನೇಮಕಾತಿ** | '೧೯೮' ಯವುದಾದರೂ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳ ಹುದ್ದೆಯ ತೆರವಾಗಿದ್ದರೆ ರಜೆಯಿಂದಾಗಿಯೋ, ಬೇರೆ ಯಾವುದಾದರೂ ಕಾರಣದಿಂದಲೋ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥರಾಗಿದ್ದರೆ, ನ್ಯಾಯಾಲಯದಲ್ಲಿರುವ ಇತರ ನ್ಯಾಯಮೂರ್ತಿಗಳಲ್ಲಿ ಯಾರಾದರೂ ಒಬ್ಬರನ್ನು ಆ ಉದ್ದೇಶಕ್ಕಾಗಿ ರಾಷ್ಟ್ರಪತಿಗಳು ನೇಮಿಸುತ್ತಾರೆ. ಅವರು ಆ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. |

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಮಾನ್ಯರೆ, ೨೬೫೦ ನೆಯ ತಿದ್ದುಪಡಿಯನ್ನು ಡಾ.ಅಂಬೇಡ್ಕರ್ ಅವರ ತಿದ್ದುಪಡಿಯು ಒಳಗೊಳ್ಳುತ್ತದೆ. ಏಕೆಂದರೆ ಅದೂ (೨)ನೆಯ ಖಂಡಕ್ಕೆ ಸಂಬಂಧಿಸಿದೆ.

*****

## ವಿಧಿ ೨೦೦

ಡಾ. ಅಂಬೇಡ್ಕರ್ ಅವರ ತಿದ್ದುಪಡಿಯು ಮೂಲತಃ ಅದೇ ಆಗಿದೆ: ಅದು (೨)ನೆಯ ಖಂಡವನ್ನು ಅಳಿಸಿ, (೧)ನೆಯ ಖಂಡವನ್ನು ಉಳಿಸಿಕೊಳ್ಳುತ್ತದೆ.

**ಡಾ. ಪಿ.ಕೆ. ಸೇನ್ :** ಆ ತಿದ್ದುಪಡಿಯನ್ನು ನಾನು ಮಂಡಿಸಬಯಸುವುದಿಲ್ಲ (೨೬೫೧, ೨೬೫೨, ೨೬೫೩ ನೆಯ ತಿದ್ದುಪಡಿಗಳನ್ನು ಮಂಡಿಸಲಿಲ್ಲ)

(ಡಾ. ಅಂಬೇಡ್ಕರರ ಗೊತ್ತುವಳಿಯು ಸ್ವೀಕೃತವಾಯಿತು. ತಿದ್ದುಪಡಿಗೊಂಡಂತೆ ೧೯೮ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

---

** ಅದೇ, ಪು. ೬೮೫

* **ಮಾನ್ಯ ಅಧ್ಯಕ್ಷರು:** ೨೦೧ನೆಯ ಸಂಖ್ಯೆಯ ತಿದ್ದುಪಡಿಯಿದೆ. ಅದನ್ನು ಕುರಿತು ಡಾ. ಅಂಬೇಡ್ಕರ್ ಅವರು ನೋಟೀಸು ಕೊಟ್ಟಿದ್ದಾರೆ. ಇದು ಜನಪತರಾಯ್ ಕಪೂರ್ ಅವರು ಮಂಡಿಸಿದ ತಿದ್ದುಪಡಿಯಂಥದೇ ಆಗಿದೆ. ಆದ್ದರಿಂದ ಇದನ್ನು ಮಂಡಿಸುವ ಅಗತ್ಯವಿಲ್ಲ.

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್** : ಮಾನ್ಯರೆ ಹೀಗೆ ಮಂಡಿಸುತ್ತಿದ್ದೇನೆ "೨೦೦ನೆಯ ವಿಧಿಯಲ್ಲಿ,' ಈ ವಿಧಿಯ ಅವಕಾಶಗಳಿಗೆ ಒಳಪಟ್ಟು' ಎಂಬ ಪದಗಳನ್ನು ಕೈಬಿಡಬಹುದು."

*****

** **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ಈ ವಿಧಿಯು ಇಷ್ಟು ದೀರ್ಘವಾದ ಚರ್ಚೆಗೆ ಎಡಗೊಡುತ್ತದೆಂದು ನಾನು ಭಾವಿಸಿರಲಿಲ್ಲ. ಸುಪ್ರೀಂ ಕೋರ್ಟಿಗೆ ಸಂಬಂಧಿಸಿದಂತೆ ಈಗಾಗಲೆ ಇಂಥದೇ ವಿಧಿಯನ್ನು ಅಂಗೀಕರಿಸಲಾಗಿತ್ತು. ಆದರೂ ಚರ್ಚೆ ನಡೆದಿದೆ. ಕೆಲವು ಸದ್ಯಸರು ನನ್ನನ್ನು ಖಚಿತವಾದ ಕೆಲವು ಪ್ರಶ್ನೆ ಕೇಳಿದ್ದಾರೆ. ಅವುಗಳಿಗೆ ಈಗ ಉತ್ತರ ಕೊಡಬಯಸುತ್ತೇನೆ.

ಮಾನ್ಯ ಮಿತ್ರರಾದ ಶ್ರೀ ಕಾಮತ್ ಅವರು, ೨೦೦ನೆಯ ವಿಧಿಗೆ ಬೇರೆ ಯಾವುದಾದರೂ ದೇಶದಲ್ಲಿ ಯಾವುದೇ ಪೂರ್ವನಿದರ್ಶನವಿರುವುದು ತಮಗೆ ಗೊತ್ತಿಲ್ಲ ಎಂದು ಹೇಳಿದರು. ಅವರು ಕರಡು ಸಂವಿಧಾನವನ್ನು ಓದಿಲ್ಲ. ಏಕೆಂದರೆ, ಅಲ್ಲೇ ಅಡಿಟಿಪ್ಪಣಿಯಲ್ಲಿ, ಇಂಥದೇ ಅವಕಾಶವೊಂದು ಅಮೆರಿಕದಲ್ಲೂ ಗ್ರೇಟ್ ಬ್ರಿಟನ್ನಿನಲ್ಲೂ ಇದೆ ಎಂದು ಹೇಳಲಾಗಿದೆ (ಶ್ರೀ ಕಾಮತ್ ಅವರಿಂದ, ಸರಿಯಾಗಿ ಕೇಳಿಸದೆ ಅಡ್ಡಿ) ವಾಸ್ತವವಾಗಿ ೨೦೦ನೆಯ ವಿಧಿಯನ್ನು ಇಂಗ್ಲೆಂಡಿನ ಸುಪ್ರೀಂ ಕೋರ್ಟ್ ಆಫ್ ಜ್ಯೂಡಿಕೇಚರ್ ಆಕ್ಟ್‌ನ ೮ನೆಯ ಪ್ರಕರಣದಿಂದ ಪದಶಃ ತೆಗೆದುಕೊಳ್ಳಲಾಗಿದೆ. ಭಾಷೆಯಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಪೂರ್ವನಿದರ್ಶನವನ್ನು ಕುರಿತು ನನ್ನ ಉತ್ತರ ಇದಿಷ್ಟೆ.

ಆದರೆ ಮಾನ್ಯರೆ, ಪೂರ್ವನಿದರ್ಶನಕ್ಕಿಂತ ಬೇರೆಯಾಗಿ ೨೦೦ನೆಯ ವಿಧಿಗೆ ಸಮನಾದ ಅವಕಾಶಕ್ಕೆ ಎಲ್ಲಾ ಆಧಾರವೂ ಇದೆ. ಸದನಕ್ಕೆ ತಿಳಿದಿರುವಂತೆ, ತಾತ್ಕಾಲಿಕ ಅಥವಾ ಹೆಚ್ಚು ನ್ಯಾಯಾಧೀಶರ ನೇಮಕಾತಿಯ ಅವಕಾಶಗಳನ್ನು ನಿವಾರಿಸಿದ್ದೇನೆ ತಾತ್ಕಾಲಿಕ ಅಥವಾ ನ್ಯಾಯಾಧೀಶರನ್ನು ಉಲ್ಲೇಖಿಸುವ ಖಂಡಗಳನ್ನು ಸಂವಿಧಾನದಿಂದ ತೆಗೆದುಹಾಕಲಾಗಿದೆ. ಹೈಕೋರ್ಟಿನ ಎಲ್ಲಾ ನ್ಯಾಯಾಧೀಶರೂ ಖಾಯಂ ಆಗಿ ನೇಮಿತರಾಗಿರಲೇಬೇಕು. ತಾತ್ಕಾಲಿಕ ಅಥವಾ ಹೆಚ್ಚುವರಿ ನ್ಯಾಯಾಧೀಶರು ಇರಬೇಕಾಗಿಲ್ಲವೆನ್ನುವುದಾದರೆ, ಆಗ ಕೆಲವು ವಿಚಾರಗಳನ್ನು ವಿಲೇವಾರಿ ಮಾಡಲು ಸಕಾಲಕ್ಕೆ ತಾತ್ಕಾಲಿಕವಾಗಿ ನ್ಯಾಯಾಧೀಶರೊಬ್ಬರನ್ನು ನೇಮಕ ಮಾಡಲು ಸಾಧ್ಯವಿಲ್ಲದ ಸಂದರ್ಭದಲ್ಲಿ ಹೈಕೋರ್ಟು ನ್ಯಾಯಾಧೀಶರ ಕಾರ್ಯನಿರ್ವಾಹ ಮಾಡುತ್ತಾ ಆ ವಿಚಾರಗಳನ್ನು ಫೈಸಲು ಮಾಡಲು ಬೇರೆ ಯಾವುದಾದರೂ ಅವಕಾಶವನ್ನು ರೂಪಿಸಬೇಕು. ಆದ್ದರಿಂದ ೧೯೬ನೆಯ ವಿಧಿಗೆ ಹೊಂದಿಕೆಯಾಗುವಂತಹ (ನಿವೃತ್ತರಾದ ಮೇಲೆ ಯಾವ ನ್ಯಾಯಾಧೀಶನೂ ವೃತ್ತಿ ನಡೆಸುವಂತಿಲ್ಲ ಎಂದು ಹೇಳುವ) ಅವಕಾಶವು ಈ ೨೦೦ನೆಯ ವಿಧಿಯಲ್ಲಿದೆ. ನನ್ನ ಮಿತ್ರರಾದ ಡಾ. ಟೇಕ್‌ಚಂದ್ ಅವರು ಹೇಳಿದಂತೆ ಈ ವಿಧಿಯ ಧ್ಯೇಯ ಅಥವಾ ಉದ್ದೇಶಕ್ಕೆ ಸಂಬಂಧಿಸಿದಂತೆ ಬೇಕಾದಷ್ಟು ತಪ್ಪು ಗ್ರಹಿಕೆಗಳುಂಟಾಗಿವೆ. ಹೈಕೋರ್ಟಿನಿಂದ ನಿವೃತ್ತರಾದ ವ್ಯಕ್ತಿಗಳನ್ನು ಯಾವುದೇ ಕಾಲಾವಧಿಗೆ ಹಿತ್ತಲ

---

* ಸಿ.ಎ.ಡಿ. ಸಂ. ೮, ೭ನೇ ಜೂನ್ ೧೯೪೯, ಪುಟ ೯೮೮

** ಅದೇ ಪು. ೬೯೩–೯೫.

ಬಾಗಿಲ ಮೂಲಕ ತೂರಿಸಿ ತರುವ ಉದ್ದೇಶ ಖಂಡಿತವಾಗಿಯೂ ಈ ವಿಧಿಗಿಲ್ಲ. ಆದ್ದರಿಂದ ಯಾರೂ ಈ ಬಗೆಗೆ ತಪ್ಪು ಕಲ್ಪನೆ ಇರಿಸಿಕೊಳ್ಳಬೇಕಾಗಿಲ್ಲ.

ಇನ್ನೊಂದು ಪ್ರಶ್ನೆ, ಅವಕಾಶವನ್ನು ಕುರಿತದ್ದು. ಈ ಅವಕಾಶವು ತಮಗೆ ಉದ್ದೇಶರಹಿತ, ಅರ್ಥರಹಿತ ಆಗಿ ಕಂಡಿದೆಯೆಂದು ಅನೇಕರು ಹೇಳಿದ್ದಾರೆ. ಅವರ ಮಾತನ್ನು ನಾನು ಒಪ್ಪುವುದಿಲ್ಲ. ಈ ಅವಕಾಶವು ಅತ್ಯಗತ್ಯವಾಗಿ ಇರಬೇಕು ಎಂದು ನಾನು ಭಾವಿಸುತ್ತೇನೆ. ಇರದೆ ಹೋದರೆ, ಆಹ್ವಾನವನ್ನು ಒಪ್ಪದೆ ನಿರಾಕರಿಸುವ ಒಬ್ಬ ನ್ಯಾಯಾಧೀಶರಿಗೆ, ಸಂಬಂಧಿತ ಪ್ರಾಧಿಕಾರವು ಒಂದು ಬಗೆಯ ದಂಡ ವಿಧಿಸುವುದಕ್ಕೆ ದಾರಿಯಾಗುತ್ತದೆ. ಆಹ್ವಾನವನ್ನು ಒಪ್ಪಿಕೊಳ್ಳಲು ನಿರಾಕರಿಸಿದ ವ್ಯಕ್ತಿಯ ಮೇಲೆ ನ್ಯಾಯಾಲಯ ನಿಂದನೆಯ ಆರೋಪ ಹೊರಿಸುವ ಸಾಧ್ಯತೆಯೂ ಇರುತ್ತದೆ. ಅನಾರೋಗ್ಯ ಕಾರಣವಾಗಿಯೋ, ಅಸಾಮರ್ಥ್ಯದಿಂದಲೋ ಬೇರಾವುವೋ ಸ್ವಂತ ವ್ಯವಹಾರದಲ್ಲಿ ನಿರತನಾಗಿರುವುದರಿಂದಲೋ ಚೀಫ್ ಜಸ್ಟಿಸ್ ಅವರು ನೀಡಿದ ಆಹ್ವಾನವನ್ನು ಅಂಗೀಕರಿಸುವುದು ತನಗೆ ಸಾಧ್ಯವಿಲ್ಲವೆಂದು ಭಾವಿಸುವ ಒಬ್ಬ ನಿವೃತ್ತ ಹೈಕೋರ್ಟು ನ್ಯಾಯಾಧೀಶರ ಮೇಲೆ ಈ ಬಗೆಯ ದಂಡನೆಯನ್ನು ವಿಧಿಸುವ ಪರಿಸ್ಥಿತಿ ನಮಗೆ ಬೇಕಾಗಿಲ್ಲ. ಈ ಅವಕಾಶವು ಇರಬೇಕು ಎನ್ನುವುದಕ್ಕೆ ನಾನು ಕೊಡುತ್ತಿರುವ ಸಮರ್ಥನೆ ಇದೇಯೇ. ಇನ್ನೊಂದು ಪ್ರಶ್ನೆ ಇದು: ೨೦೦ನೆಯ ವಿಧಿಯಲ್ಲಿ "ವಿಶೇಷ ಹಕ್ಕು (Privilege) ಎಂಬ ಪದವು ಒಬ್ಬ ನಿವೃತ್ತ ನ್ಯಾಯಾಧೀಶರು, ಒಬ್ಬ ಹೈಕೋರ್ಟು ನ್ಯಾಯಾಧೀಶರಿಗೆ ಕೊಡುವ ಪೂರ್ಣವೇತನವನ್ನೇ ತನಗೂ ಕೊಡಬೇಕೆಂದು ಒತ್ತಾಯಪಡಿಸಲು ಹಕ್ಕನ್ನು ಕೊಡುತ್ತದೆಯೆ? ಇದಕ್ಕೆ ನನ್ನ ಉತ್ತರ, ಇದು ನಿವೃತ್ತಿ ವೇತನ ಸಂಬಂಧವಾದ ನಿಯಮಗಳು ಅನ್ವಯಿಸುವ ವಿಚಾರ ಎನ್ನುವುದು. ಈಗ ಇರುವ ನಿಯಮದಂತೆ, ಒಬ್ಬ ನಿವೃತ್ತ ವ್ಯಕ್ತಿಯನ್ನು ಯಾವುದೋ ಒಂದು ಸರಕಾರೀ ಹುದ್ದೆಯಲ್ಲಿ ಕೆಲಸ ಮಾಡಲು ಆಹ್ವಾನಿಸಿದಾಗ, ಅವನಿಗೆ ಆ ಹುದ್ದೆಯ ವೇತನದಲ್ಲಿ ಈಗಾಗಲೇ ಬರುತ್ತಿರುವ ನಿವೃತ್ತಿ ವೇತನವನ್ನು ಕಳೆದು ಮಿಕ್ಕ ಮೊಬಲಗನ್ನು ನೀಡಲಾಗುತ್ತದೆ. ಇದು ಸಾಮಾನ್ಯವಾದ ನಿಯಮವಾಗಿದೆ ಎಂದು ನನ್ನ ನಂಬಿಕೆ. ನನ್ನ ಭಾವನೆ ತಪ್ಪು ಆಗಿರಬಹುದು. ಏನೇ ಇರಲಿ, ಇದು ನಿವೃತ್ತಿ ವೇತನ ನಿಯಮಗಳಿಗೆ ಸಂಬಂಧಪಟ್ಟ ವಿಚಾರ. ಆದ್ದರಿಂದ ಈ ವಿಧಿಯಲ್ಲಿ ಈ ವಿಚಾರಕ್ಕೆ ಸಂಬಂಧಿಸಿದಂತೆ ಏನನ್ನೂ ನಿರ್ದಿಷ್ಟವಾಗಿ ಹೇಳಬೇಕಾಗಿಲ್ಲ. ಪ್ರಸ್ತುತ ಚರ್ಚೆಯಲ್ಲಿ ಎತ್ತಿದ ಆಕ್ಷೇಪಗಳಿಗೆ ಉತ್ತರ ರೂಪವಾಗಿ ನಾನು ಹೇಳಬೇಕಾಗಿರುವುದು ಇಷ್ಟು ಮಾತ್ರ.

**ಶ್ರೀ ಎಚ್.ವಿ. ಕಾಮತ್ :** ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂವಿಧಾನದಲ್ಲಿ ಇಂಥದೊಂದು ಅವಕಾಶವಿದೆಯೆ?

**ಮಾನ್ಯ ಡಾ. ಬಿ.ಆರ್ ಅಂಬೇಡ್ಕರ್ :** ಇಲ್ಲಿ ನನ್ನೆದುರಿಗೆ ಅದರ ಪಠ್ಯವಿಲ್ಲ. ಅಮೆರಿಕದಲ್ಲಿ ಈ ಪ್ರಶ್ನೆ ಏಳುವುದೇ ಇಲ್ಲ. ಏಕೆಂದರೆ ವೇತನ ಮತ್ತು ನಿವೃತ್ತಿ ವೇತನಗಳು ಹೆಚ್ಚುಕಡಿಮೆ ಸಮಾನವಾಗಿರುತ್ತವೆ.

ನಾನು ಶ್ರೀ ಕಪೂರ್ ಅವರ ೮೯ನೆಯ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಿದ್ಧನಾಗಿದ್ದೇನೆ. ಏಕೆಂದರೆ ಕೆಲವರಿಗೆ ಒಂದು ಭಾವನೆಯಿದೆ.

೨೦೦ನೆಯ ವಿಧಿಯನ್ನು ದುರುಪಯೋಗಪಡಿಸಿಕೊಂಡು ಮುಖ್ಯ ನ್ಯಾಯಮೂರ್ತಿಯವರು ತಮ್ಮ ಮಿತ್ರನಾಗಿರುವ ನಿವೃತ್ತ ನ್ಯಾಯಾಧೀಶನಾದ ಒಬ್ಬ ವ್ಯಕ್ತಿಯನ್ನು ಒದಕ್ಕಿಂತ ಹೆಚ್ಚು ಸಾರಿ ಆಹ್ವಾನಿಸಲು ಅವಕಾಶವಾಗಬಹುದು ಎಂಬುದು ಅವರ ಯೋಚನೆ. ಆದ್ದರಿಂದ, ರಾಷ್ಟ್ರಪತಿಗಳ ಅನುಮೋದನೆಯನ್ನು ಪಡೆದ ಮೇಲೆ ಮಾತ್ರವೇ ಹಾಗೆ ಆಹ್ವಾನ ನೀಡಬೇಕು ಎಂದು ಸಲಹೆ ಮಾಡಿರುವ ಶ್ರೀ ಕಪೂರ್ ಅವರ ಸೂಚನೆಯನ್ನು ನಾನು ಒಪ್ಪುತ್ತೇನೆ.

**ಶ್ರೀ ಜಸಪತರಾಯ್ ಕಪೂರ್ :** 'ವಿಶೇಷಹಕ್ಕುಗಳು' ಎಂಬ ಪದದ ವಿವರಣೆಯನ್ನು ಪಾರ್ಲಿಮೆಂಟಿಗೆ ಬಿಡುವುದು ಉದ್ದೇಶವಾಗಿದೆ ಎಂದು ತಿಳಿಯಬೇಕೆ?

**ಮಾನ್ಯ ಡಾ.ಬಿ.ಆರ್ ಅಂಬೇಡ್ಕರ್ :** ಅದನ್ನು ವಿವರಿಸಬೇಕಾಗಬಹುದು. ಪಾರ್ಲಿಮೆಂಟು, ಸುಪ್ರೀಂ ಕೋರ್ಟು, ಹಾಗೂ ಹೈಕೋರ್ಟುಗಳಿಗೆ ಅನ್ವಯಿಸುವ ಒಂದು ಜ್ಯುಡಿಷಿಯರಿ ಆಕ್ಟ್ ಅನ್ನು ಅಂಗೀಕರಿಸಬೇಕಾಗಬಹುದು. ಅದರಲ್ಲಿ 'ವಿಶೇಷ ಹಕ್ಕುಗಳು' ಎಂಬ ಪದವನ್ನು ನಿರ್ಧರಿಸಿ ವಿವರಿಸಬಹುದು.

**ಶ್ರೀ ಜಸಪತರಾಯ್ ಕಪೂರ್ :** ಆದರೆ ಈ ವಿಶೇಷ ಹಕ್ಕು–ಸೌಲಭ್ಯಗಳು ಮತ್ತೆ ಕರೆಸಿಕೊಂಡಿರುವ ನ್ಯಾಯಾಧೀಶನಿಗೂ ಖಾಯಂ ನ್ಯಾಯಾಧೀಶರಿಗೂ ಸಮಾನವೇ ಆಗಿರುತ್ತವೆ ತಾನೆ. ೨೦೦ನೆಯ ವಿಧಿಯು ಅದನ್ನೇ ನಿರೂಪಿಸುತ್ತದೆ.

**ಮಾನ್ಯ ಡಾ.ಬಿ.ಆರ್ ಅಂಬೇಡ್ಕರ್ :** ಹೌದು, ಆದರೆ ವಿಶೇಷ ಹಕ್ಕು ಎಂದರೆ ಪೂರ್ಣ ವೇತನ ಎಂದೇನೂ ಅರ್ಥವಲ್ಲ.

**ಮಾನ್ಯ ಅಧ್ಯಕ್ಷರು :** ಶ್ರೀ ಜಸಪತ್‌ರಾಯ್ ಅವರು ಮಂಡಿಸಿದ ೮೯ನೆಯ ತಿದ್ದುಪಡಿಯನ್ನು ಡಾ. ಅಂಬೇಡ್ಕರ್ ಅವರು ಒಪ್ಪಿಕೊಂಡಿದ್ದಾರೆ. ಈಗ ಅದನ್ನು ಮತಕ್ಕೆ ಹಾಕುತ್ತೇನೆ.

"೨೦೦ನೆಯ ವಿಧಿಯಲ್ಲಿ 'ಯಾವುದೇ ಸಮಯದಲ್ಲಿ' ಎಂಬ ಪದಗಳ ನಂತರ 'ರಾಷ್ಟ್ರಪತಿಯವರ ಪೂರ್ವ ಸಮ್ಮತಿಯೊಂದಿಗೆ' ಎಂಬ ಪದಗಳನ್ನು ಸೇರಿಸಬೇಕು."

ತಿದ್ದುಪಡಿಯು ಅಂಗೀಕೃತವಾಯಿತು.

(ಡಾ. ಅಂಬೇಡ್ಕರರ ಮೂಲ ತಿದ್ದುಪಡಿಯೂ ಅಂಗೀಕೃತವಾಯಿತು. ತಿದ್ದುಪಡಿಯಾದಂತೆ ೨೦೦ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೨೦೨

* **ಡಾ.ಬಕ್ಷಿ ತೇಕ್ ಚಂದ್ :** .... ನಾನು ಮಂಡಿಸಿರುವ ತಿದ್ದುಪಡಿಯು ಡಾ.ಅಂಬೇಡ್ಕರ್ ಅವರಿಗೆ ಒಪ್ಪಿಗೆಯಾಗುತ್ತದೆಂದೂ ತಿದ್ದುಪಡಿಯಾದ ವಿಧಿಯನ್ನು ಸದನವು ಅಂಗೀಕರಿಸುವುದೆಂದೂ ನಾನು ಆಶಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಡಾ.ಅಂಬೇಡ್ಕರ್, ೨೬೬೩ನೆಯ ತಿದ್ದುಪಡಿಯನ್ನು ಮಂಡಿಸಲು ಬಯಸುವಿರಾ?

**ಮಾನ್ಯ ಡಾ. ಬಿ.ಆರ್ ಅಂಬೇಡ್ಕರ್ :** ಇಲ್ಲ ಸ್ವಾಮಿ, ನಾನು ಬಕ್ಷಿ ತೇಕ್ ಚಂದ್ ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಬೇರೆ ಯಾವ ಉತ್ತರವೂ ಅಗತ್ಯವೆಂದು ತೋರುವುದಿಲ್ಲ.

**ಶ್ರೀ ಎಚ್.ವಿ. ಕಾಮತ್ :** 'ಮತ್ತು' ಎಂಬ ಪದಕ್ಕೆ 'ಅಥವಾ' ಎಂಬ ಪದವನ್ನು ಬದಲಾಯಿಸಿಡುವ ಒಂದು ತಿದ್ದುಪಡಿಯಿದೆ.

**ಡಾ. ಬಿ.ಆರ್.ಅಂಬೇಡ್ಕರ್ :** ಅದರಿಂದ ವಿಧಿಯ ಮೂಲವಸ್ತುವಿನಲ್ಲೇನೂ ವ್ಯತ್ಯಾಸವಾಗುವುದಿಲ್ಲ.

**ಶ್ರೀ ಎಚ್.ವಿ. ಕಾಮತ್ :** ಅದರಿಂದ ಅರ್ಥದಲ್ಲಿ ವ್ಯತ್ಯಾಸವಾಗುತ್ತದೆ. (ಡಾ.ಬಕ್ಷಿ ತೇಕ್ ಚಂದ್ ಅವರ ತಿದ್ದುಪಡಿ)

"ತಿದ್ದುಪಡಿಗಳ ಪಟ್ಟಿಯು ೨೬೬೧ ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ, ೨೦೨ನೆಯ ವಿಧಿಯ

---

* ಸಿ.ಎ.ಡಿ. ಸಂಪುಟ ೮, ೭ನೇ ಜೂನ್ ೧೯೪೯, ಪುಟ ೬೯೭

(೧)ನೆಯ ಖಂಡದಲ್ಲಿ 'ಅಥವಾ ರಿಟ್‌ಗಳ ಸ್ವರೂಪದ ಆದೇಶಗಳು' ಎಂಬ ಪದಗಳಿಗೆ ಬದಲಾಗಿ 'ಆದೇಶಗಳು ಅಥವಾ ರಿಟ್‌ಗಳು, ಸ್ವರೂಪದಲ್ಲಿ ರಿಟ್‌ಗಳು, ಸ್ವರೂಪದಲ್ಲಿ ರಿಟ್‌ಗಳಂತಿರುವ ಎಂಬ ಪದಗಳನ್ನು ಇರಿಸಬೇಕು."

ತಿದ್ದುಪಡಿಯು ಅಂಗೀಕೃತವಾಯಿತು.

(ತಿದ್ದುಪಡಿಯಾದ ೨೦೨ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

*****

## ವಿಧಿ ೨೦೩

* **ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ೨೦೩ನೆಯ ವಿಧಿಯನ್ನು ತಡೆಹಿಡಿಯಬಹುದು ಎಂದು ಅಪೇಕ್ಷಿಸುತ್ತೇನೆ.

**ಅಧ್ಯಕ್ಷರು** : ೨೦೩ನೆಯ ವಿಧಿಯನ್ನು ತಡೆಹಿಡಿಯಲಾಗಿದೆ.

## ವಿಧಿ ೨೦೪

** **ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ. "೨೦೪ನೆಯ ವಿಧಿಗೆ ಕೊಟ್ಟಿರುವ ವಿವರಣೆಯನ್ನು ಕೈಬಿಡಬಹುದು."

ಮಾನ್ಯರೆ, ಅದು ಅನಗತ್ಯವಾಗಿದೆ.

\+ **ಮಿ. ತಾಜ್‌ಮಲ್ ಹುಸೇನ್ :** ಡಾ.ಅಂಬೇಡ್ಕರ್ ಅವರು ಸೂಚಿಸಿರುವ ತಿದ್ದುಪಡಿ ಸಮರ್ಪಕವಾಗಿದೆ. ನಾನು ಅದನ್ನು ಬೆಂಬಲಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ನಾವೀಗ ಸಭೆ ಮುಗಿಸುವುದಕ್ಕೆ ಮುಂಚೆ ಈ ವಿಧಿಯನ್ನು ವಿಲೇವಾರಿ ಮಾಡಬಯಸುತ್ತೇನೆ. ಆಗಲೆ ಹನ್ನೆರಡು ಗಂಟೆಯಾಗಿದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೇ ನಾನು ೧೨ ಗಂಟೆಗೆ ಒಂದು ಕ್ಯಾಬಿನೆಟ್ ಸಭೆಗೆ ಹೋಗಬೇಕಾಗಿದೆ.

**ಮಾನ್ಯ ಅಧ್ಯಕ್ಷರು :** ಹಾಗಿದ್ದರೆ ತಿದ್ದುಪಡಿಯ ಪರವಾಗಿಯಾಗಲಿ ವಿರೋಧವಾಗಿಯಾಗಲಿ ಹೆಚ್ಚೇನೂ ಹೇಳಲು ಉಳಿದಿಲ್ಲ. ಹೇಳಬಹುದಾದುದನ್ನೆಲ್ಲ ಹೇಳಿಯಾಗಿದೆ. ಭಾಷಣಗಳು ಸಾಕು.

**ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್ :** ನನ್ನ ಮಿತ್ರ ಭಾರತಿಯವರು ಆಡಿರುವ ಮಾತುಗಳನ್ನು ಕುರಿತು.

---

* ಅದೇ. ಪು. ೬೭೮

** ಸಿ.ಎ.ಡಿ. ಸಂಪುಟ ೮, ೭ನೇ ಜೂನ್ ೧೯೪೯, ಪುಟ ೬೯೯

\+ ಅದೇ ಪು. ೭೦೧,

**ಶ್ರೀ ಎಚ್.ವಿ. ಕಾಮತ್ :** ಮಾನ್ಯರೆ, ನನ್ನನ್ನು ಮಾತನಾಡಲು ಹೇಳಿದ್ದೀರಿ ೨ ಅಥವಾ ೩ ನಿಮಿಷಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಈಗ ಮಾತನಾಡಲೋ ನಾಳೆಯೋ?

**ಮಾನ್ಯ ಅಧ್ಯಕ್ಷರು :** ನಾಳೆ.

*****

+ **ಮಾನ್ಯ ಅಧ್ಯಕ್ಷರು :** ಈಗ ನಾವು ೨೦೪ನೆಯ ವಿಧಿಯ ಮೇಲೆ ಚರ್ಚೆಯನ್ನು ಕೈಗೊಳ್ಳುತ್ತಿದ್ದೇನೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ೨೦೪ನೆಯ ವಿಧಿಗೆ ಒಂದು ತಿದ್ದುಪಡಿಯನ್ನು ಮಂಡಿಸಬಯಸುತ್ತೇನೆ. ಪರಿಸ್ಥಿತಿಯನ್ನು ಪರಿಶೀಲಿಸಬೇಕಾಗಿದೆಯೆಂದು ನಾನು ಹೇಳಿದೆ. ಈಗ ಪರಿಶೀಲಿಸಿದ್ದಾಗಿದೆ. ಮಂಡಿಸುತ್ತಿದ್ದೇನೆ, ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯಂತೆ ಹೀಗೆ ಮಂಡಿಸುತ್ತೇನೆ:

"ತಿದ್ದುಪಡಿಗಳ ಪಟ್ಟಿಯ ೨೬೭೪ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ, ೨೦೪ನೆಯ ವಿಧಿಗೆ ಬದಲಾಗಿ ಈ ಕೆಳಗಿನ ವಿಧಿಯನ್ನು ಅಳವಡಿಸಬಹುದು.

**ಕೆಲವು ಮೊಕದ್ದಮೆಗಳನ್ನು ಹೈಕೋರ್ಟಿಗೆ ವರ್ಗಾಯಿಸುವುದು.**

'೨೦೪ ತನ್ನ ಅಧೀನದಲ್ಲಿರುವ ನ್ಯಾಯಾಲಯ ವೊಂದರಲ್ಲಿ ಇನ್ನೂ ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಯೊಂದು ಈ ಸಂವಿಧಾನದ ವ್ಯಾಖ್ಯಾನವನ್ನು ಕುರಿತಂತೆ ಮೂಲಭೂತ ಕಾನೂನಿನ ಪ್ರಶ್ನೆಯೊಂದನ್ನು ಒಳಗೊಂಡಿದೆ ಎಂದು ಹೈಕೋರ್ಟಿಗೆ ಮನವರಿಕೆಯಾದ ಪಕ್ಷದಲ್ಲಿ, ಮೊದಲು ಆ ನಿರ್ಧಾರ ವಾಗುವುದು. ಮೊಕದ್ದಮೆಯ ಫೈಸಲಾತಿಗೆ ಅಗತ್ಯವೆಂದು ಮನವರಿಕೆಯಾದಲ್ಲಿ ಆ ಮೊಕದ್ದಮೆಯನ್ನು ಆ ನ್ಯಾಯಾಲಯದಿಂದ ಹಿಂದಕ್ಕೆ ಪಡೆದು–

(ಅ) ತಾನೇ ಅದನ್ನು ತೀರ್ಮಾನಿಸಬಹುದು, ಅಥವಾ

(ಬ) ಸೂಚಿತ ಕಾನೂನಿನ ಪ್ರಶ್ನೆಯನ್ನು ವಿವರಿಸಿ, ಹಿಂತೆಗೆದುಕೊಂಡಿದ್ದ ಮೊಕದ್ದಮೆಯನ್ನು ತನ್ನ ನಿರ್ಧಾರದ ಒಂದು ಪ್ರತಿಯ ಸಮೇತ ಮತ್ತೆ ಅದೇ ನ್ಯಾಯಾಲಯಕ್ಕೆ ಕಳಿಸಿಕೊಡಬಹುದು. ಆ ನ್ಯಾಯಾಲಯವೇ ಹೈಕೋರ್ಟಿನ ಆ ಕಾನೂನು ವಿವರಣೆಗೆ ಸಂಗತವಾಗುವ ರೀತಿಯಲ್ಲಿ ಮೊಕದ್ದಮೆಯನ್ನು ಇತ್ಯರ್ಥ ಮಾಡಬಹುದು." ತಿದ್ದುಪಡಿ ಇದು: ಮಾನ್ಯರೆ, ತಾವು ಅಪೇಕ್ಷಿಸುವುದಾದರೆ ಇದರ ಬಗೆಗೆ ನಾಲ್ಕು ಮಾತುಗಳನ್ನಾಡುತ್ತೇನೆ. ಆದರೆ ನನ್ನದೇ ಅಭಿಪ್ರಾಯಗಳನ್ನು ಕೊನೆಗೆ ಉಳಿಸಿಕೊಳ್ಳುತ್ತೇನೆ. ಎರಡು ಸಾರಿ ಮಾತನಾಡುವ ಬದಲು ಅಷ್ಟು ಸಮಯವನ್ನು ಉಳಿಸಬಹುದು.

**ಮಾನ್ಯ ಅಧ್ಯಕ್ಷರು :** ನಿಮ್ಮ ಇಷ್ಟ

*****

* **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸಿರುವ ತಿದ್ದುಪಡಿಯ ಮೇಲೆ

---

+ ಅದೇ ಜೂನ್ ೮, ೧೯೪೯, ಪು. ೭೦೩–೪

* ಸಿ.ಎ.ಡಿ. ಸಂಪುಟ ೮, ೮ನೇ ಜೂನ್ ೧೯೪೯, ಪುಟ ೭೧೬–೧೯

ಒಂದು ನಿರ್ಧಾರಕ್ಕೆ ಬರಲು ಬಹಳ ದೀರ್ಘವಾದ ಚರ್ಚೆಯು ಅಗತ್ಯವಾಗಿದೆಯೆಂದೇನೂ ನನಗೆ ಅನ್ನಿಸುವುದಿಲ್ಲ. ನೆನ್ನೆ ನಾವು ೨೦೪ನೆಯ ವಿಧಿಯನ್ನು ಪರಿಶೀಲಿಸುತ್ತಿದ್ದಾಗ, ನನ್ನ ಮಿತ್ರರಾದ ಶ್ರೀ ಭಾರತಿ ಅವರು ೨೦೪ನೇ ವಿಧಿಯ ಕೊನೆಯ ವಾಕ್ಯಕ್ಕೆ ಸಂಬಂಧಿಸಿದಂತೆ ಒಂದು ಪ್ರಶ್ನೆಯನ್ನು ಎತ್ತಿದರು. ಹೈಕೋರ್ಟು ಮೊಕದ್ದಮೆಯನ್ನು ಹಿಂತೆಗೆದುಕೊಂಡು ತಾನೇ ಅದನ್ನು ಫೈಸಲು ಮಾಡಬಹುದು ಎಂಬುದು ಅದು. ಭಾರತಿಯವರು ಹಾಕಿದ ಪ್ರಶ್ನೆ ಸುಸಂಗತವಾಗಿದೆ ಎನಿಸಿತು.

೨೦೪ನೇ ವಿಧಿಯ ಮುಖ್ಯ ಭಾಗವು, ಸಂವಿಧಾನದ ವ್ಯಾಖ್ಯಾನವನ್ನು ಕುರಿತ ಮೂಲಭೂತ ಪ್ರಶ್ನೆಯೊಂದನ್ನು ಕುರಿತು ವ್ಯವಹರಿಸಬೇಕೆಂದಿರುವಾಗ, ಹೈಕೋರ್ಟು ಇಡೀ ಮೊಕದ್ದಮೆಯನ್ನು ಏಕೆ ಹಿಂತೆಗೆದುಕೊಂಡು ತಾನೇ ಫೈಸಲು ಮಾಡಬೇಕು? ಒಂದು ಮೊಕದ್ದಮೆಯಲ್ಲಿ ಅನೇಕ ಪ್ರಶ್ನೆಗಳು ತೊಡರಿಕೊಂಡಿರುತ್ತವೆ. ಒಂದು, ಈ ಸಂವಿಧಾನದ ವ್ಯಾಖ್ಯಾನಕ್ಕೆ ಸಂಬಂಧಿಸಿದ ಮೂಲಭೂತ ಕಾನೂನಿನ ಪ್ರಶ್ನೆಯಾಗಿರಬಹುದು. ಮಿಕ್ಕಂತೆ ಇನ್ನೂ ಹಲವು, ಪಾರ್ಲಿಮೆಂಟು ರಚಿಸಿದ ಸಾಮಾನ್ಯ ಕಾನೂನುಗಳ ವ್ಯಾಖ್ಯಾನವನ್ನು ಕುರಿತಾದ ಪ್ರಶ್ನೆಗಳಾಗಿರಬಹುದು. ಮಿಶ್ರ ಸ್ವರೂಪದ ಈ ಬಗೆಯ ಮೊಕದ್ದಮೆಯೊಂದು ಇದ್ದಾಗ ಸಂವಿಧಾನದ ವ್ಯಾಖ್ಯಾನಕ್ಕೆ ಸಂಬಂಧಿಸಿದ ಒಂದು ಪ್ರಶ್ನೆಯೂ ಸಾಮಾನ್ಯ. ಕಾನೂನಿನ ವ್ಯಾಖ್ಯಾನಕ್ಕೆ ಸಂಬಂಧಿಸಿದ ಹಲವು ವಿಚಾರಗಳೂ ಇದ್ದಾಗ, ಕಾನೂನಿನ ವ್ಯಾಖ್ಯಾನವನ್ನು ಕುರಿತ ಪ್ರಶ್ನೆಯ ಮೇಲೆ ತೀರ್ಪುಕೊಡುವ ಅಧಿಕಾರ ಹೈಕೋರ್ಟಿಗೆ ಇರುವುದು ಯುಕ್ತವಾದರೂ, ಇಡೀ ಮೊಕದ್ದಮೆಯನ್ನೇ ಅದು ಹಿಂತೆಗೆದುಕೊಂಡು, ಸಂವಿಧಾನದ ವ್ಯಾಖ್ಯಾನಕ್ಕೆ ಸಂಬಂಧಪಟ್ಟ ವಿಚಾರದ ಮೇಲೆ ಮಾತ್ರವಲ್ಲದೆ, ಸಾಮಾನ್ಯ ಕಾನೂನಿನ ವಿವರಣೆಗೆ ಸಂಬಂಧಿಸಿದ ಇತರ ವಿಚಾರಗಳ ಮೇಲೆಯೂ ತೀರ್ಪುಕೊಡಬೇಕಾದ ಅಗತ್ಯವೇನಿದೆ? ಆಗಲೆ ಹೇಳಿದಂತೆ ಇದು ತುಂಬಾ ಸುಸಂಗತವಾದ ಪ್ರಶ್ನೆಯಾಗಿತ್ತು. ಅವರ ವಾದವನ್ನು ಕೇಳಿದಾಗ ಅದರ ವೇಗ ನನಗೆ ಅನುಭವಕ್ಕೆ ಬಂದಿತು. ಆದ್ದರಿಂದ ಈ ವಿಧಿಯನ್ನು ತಡೆಹಿಡಿದಿಡಲು ತಮ್ಮ ಅನುಮತಿಯನ್ನು ಕೋರಿದೆ.

ಈಗ, ಹೇಳಬೇಕೆಂದರೆ, ೧೨೧ನೆಯ ವಿಧಿಯನ್ನು ಪರಿಶೀಲಿಸುತ್ತಿರುವಾಗ ಇಂಥದೇ ಪ್ರಶ್ನೆಯನ್ನು ನನ್ನ ಮಿತ್ರರಾದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಎತ್ತಿದರು. ಅದೂ ಮಿಶ್ರ ಸ್ವರೂಪದ ಮೊಕದ್ದಮೆಗಳಲ್ಲಿ ಸುಪ್ರೀಂಕೋರ್ಟಿಗೆ ಅಪೀಲು ಸಲ್ಲಿಸುವ ವಿಚಾರವೇ ಆಗಿದೆ. ಸಂವಿಧಾನಿಕ ಕಾನೂನು ಸಂಬಂಧವಾದ ಪ್ರಶ್ನೆಗಳೂ ಪಾರ್ಲಿಮೆಂಟು ಮಾಡಿದ ಸಾಮಾನ್ಯ ಕಾನೂನುಗಳ ಸಂಬಂಧದ ಪ್ರಶ್ನೆಗಳು ಬೆರೆತ ಮೊಕದ್ದಮೆಗಳು ಮೊದಲ ಕರಡಿನ ಪ್ರಕಾರ ಸಾಂವಿಧಾನಿಕ ಕಾನೂನಿನ ವಿವರಣೆಗೆ ಸಂಬಂಧಿಸಿದ ಒಂದು ವಿಚಾರವಿರುವಾಗ ಅಂತಹ ಮೊಕದ್ದಮೆಯ ಮೇಲೆ ಬರುವ ಮೇಲ್ಮನವಿಯ ಮೇಲೆ ಅವರು ನ್ಯಾಯಾಧೀಶರ ಒಂದು ಪೀಠವು ತೀರ್ಪುಕೊಡಬೇಕು ಎಂದಿತ್ತು. ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಎತ್ತಿದ ಪ್ರಶ್ನೆ ಇದು. ಒಬ್ಬ ವ್ಯಕ್ತಿಯು, ಕುಟಿಲತೆಯಿಂದಲೇ ಎಂದಿಟ್ಟುಕೊಳ್ಳೋಣ. ಬೇಕಾದರೆ ಅವರು ನ್ಯಾಯಾಧೀಶರ ಪೀಠದ ಪ್ರಯೋಜನವನ್ನು ಪಡೆಯಬೇಕೆಂಬ ಉದ್ದೇಶದಿಂದ ತನ್ನ ಅಪೀಲಿನಲ್ಲಿ ಸಾಂವಿಧಾನಿಕ ಕಾನೂನಿನ ವ್ಯಾಖ್ಯಾನಕ್ಕೆ ಸಂಬಂಧಿಸಿದೆಯೆಂಬ ಆಧಾರದಿಂದ ಅಂಥದೊಂದು ಪ್ರಶ್ನೆಯನ್ನು ಎತ್ತಬಹುದು. ಅಂತಿಮವಾಗಿ ಅದು ಮೋಸವೆಂದೂ, ಹುರುಳಿಲ್ಲವೆಂದೂ ಗೊತ್ತಾಗಬಹುದು. ಸಾಂವಿಧಾನಿಕ ಕಾನೂನಿನ ವ್ಯಾಖ್ಯಾನದ ಪ್ರಶ್ನೆಯೇ ನಿಜವಾಗಿ ಇದ್ದಿರದ ಒಂದು ಅಪೀಲಿನ ಮೇಲೆ ಸುಪ್ರೀಂಕೋರ್ಟಿನ ಐವರು ನ್ಯಾಯಮೂರ್ತಿಗಳು ತಮ್ಮ ಸಮಯವನ್ನು ಏಕೆ ಪೋಲು ಮಾಡಬೇಕು? ಅಲ್ಲಾಡಿಯವರ ವಾದವು ಸ್ವೀಕೃತವಾಯಿತು. ಸದನದಲ್ಲಿ ನಾಲ್ಕನೆಯ ವಾರದ ತಿದ್ದುಪಡಿಗಳ ಮೊದಲನೆ ಪಟ್ಟಿಯಿದ್ದರೆ,

ಅದರ ೪೩ನೆಯ ತಿದ್ದುಪಡಿಯನ್ನು ನೋಡಬಹುದು. ಆಗ ನಾನು ಒಂದು ಅವಕಾಶವನ್ನು ಕಲ್ಪಿಸಿದೆವು. ಹೀಗೆ, ಕಾನೂನಿನ ವಿವರಣೆಯ ಪ್ರಶ್ನೆಯೊಂದೇ ಅಲ್ಲದೆ ಇತರ ವಿಚಾರ ಹಾಗೂ ಇರುವ ಮೊಕದ್ದಮೆಯ ಅಪೀಲು ಹೈಕೋರ್ಟಿನಿಂದ ಬಂದಾಗ, ಆ ಅಪೀಲನ್ನು ಸುಪ್ರೀಂ ಕೋರ್ಟು ನಿಯಮ ಪ್ರಕಾರ ರಚಿಸಿದ ಇಬ್ಬರು ಅಥವಾ ಮೂವರು ನ್ಯಾಯಮೂರ್ತಿಗಳ ಪೀಠದ ಮುಂದೆ ಮಂಡಿಸಬೇಕು. ವಿಚಾರಣೆಯನ್ನು ಆಲಿಸಿದ ಮೇಲೆ, ಅದರಲ್ಲಿ ಸಂವಿಧಾನದ ವ್ಯಾಖ್ಯಾನವನ್ನು ಒಳಗೊಂಡಿರುವ ಮಹತ್ವದ ಪ್ರಶ್ನೆಯಿದೆ ಎಂದು ಆ ದ್ವಿ/ತ್ರಿ, ಸದಸ್ಯ ಪೀಠವು ಪ್ರಮಾಣಿಸಿದರೆ, ಆಗ, ಆಗ ಮಾತ್ರವೇ ಆ ಅಪೀಲನ್ನು ಐವರು ನ್ಯಾಯಾಧೀಶರ ಪೂರ್ಣಪೀಠಕ್ಕೆ ಒಪ್ಪಿಸಬೇಕು. ಆಗಲೂ ಆ ಸದಸ್ಯ ಪೀಠವು, ಮೊಕದ್ದಮೆಯಲ್ಲಿರುವ ಸಾಂವಿಧಾನಿಕ ವಿಷಯದ ಮೇಲೆ ಮಾತ್ರ ತೀರ್ಪು ನೀಡಬೇಕೇ ಹೊರತು ಇತರ ಅಂಶಗಳ ಮೇಲಲ್ಲ. ಸಾಂವಿಧಾನಿಕ ವಿಚಾರಗಳನ್ನು ತೀರ್ಪು ಕೊಟ್ಟಾದ ನಂತರ ನ್ಯಾಯಾಧೀಶರು, ಮೊಕದ್ದಮೆಯನ್ನು ಮೊದಲಿನ ದ್ವಿ/ತ್ರಿ ನ್ಯಾಯಾಧೀಶರ ಮೂಲ ಪೀಠಕ್ಕೆ ಫೈಸಲಾತಿಗಾಗಿ ಹಿಂದಕ್ಕೆ ಕಳಿಸಬೇಕು–ಎಂದು ಅವಕಾಶವು ಹೇಳಿತು.

ನನ್ನ ಮೊದಲನೆಯ ವಿನಂತಿ ಇದು. ೨೦೪ನೆಯ ವಿಧಿಗೆ ಈ ಬೆಳಿಗ್ಗೆ ನಾನು ತಿದ್ದುಪಡಿಯನ್ನು ಮಂಡಿಸುತ್ತಾ ೪೨ನೆಯ ತಿದ್ದುಪಡಿಯಲ್ಲಿ ಅಡಕವಾಗಿರುವಂತೆ ೧೨೧ನೆಯ ವಿಧಿಯ (೨–ಎ) ಖಂಡದ ಅವಕಾಶವನ್ನು ಕಾರ್ಯಗತಗೊಳಿಸುತ್ತಿದ್ದೇವೆ ಅಷ್ಟೆ. ಬೇರೇನೂ ಇಲ್ಲ. ಇಲ್ಲೂ ನಾವು ಹೇಳುವುದು ಹೀಗೆ: ಹೈಕೋರ್ಟು, ತನಗೆ ಮನವರಿಕೆಯಾಗಿದ್ದರೆ, ಮೊಕದ್ದಮೆಯನ್ನು ತಾನೇ ತೆಗೆದುಕೊಂಡು ಸಾಂವಿಧಾನಿಕ ಕಾನೂನಿನ ವಿಚಾರವನ್ನು ಕುರಿತು ನಿರ್ಧರಿಸಿ, ಮಿಕ್ಕಂತೆ ಪಾರ್ಲಿಮೆಂಟು ಮಾಡಿದ ಸಾಮಾನ್ಯ ನಿಯಮಗಳ ವಿವರಣೆಯನ್ನು ಕುರಿತ ವಿಚಾರಗಳ ಫೈಸಲಾತಿಗಾಗಿ ಮೊಕದ್ದಮೆಯನ್ನು ಅಧೀನ ನ್ಯಾಯಾಲಯಕ್ಕೆ ಹಿಂದಿರುಗಿಸಬಹುದು. ನಾವು ಹೊಸದಾಗಿ, ವಿಚಿತ್ರವಾಗಿ, ಅಸಾಧಾರಣವಾಗಿ ಏನನ್ನೂ ಮಾಡುತ್ತಿಲ್ಲ. ಸುಪ್ರೀಂ ಕೋರ್ಟಿಗೆ ಸಂಬಂಧಿಸಿದಂತೆ ಏನು ಮಾಡಿದೆವೋ ಅದಕ್ಕಿಂತ ಬೇರೆಯದಾದ ಏನನ್ನೂ ಮಾಡುತ್ತಿಲ್ಲ. ೧೨೧ನೆಯ ವಿಧಿಯ (೨–ಎ) ಖಂಡಕ್ಕೆ ಮಾಡಿರುವ ಅವಕಾಶವನ್ನು ನಾವು ಒಪ್ಪಿಕೊಂಡರೆ, ಒಪ್ಪಿಕೊಂಡಾಗಿರುವಂತೆ, ಸದನವು ಯಾವುದೇ ಗುರುತರವಾದ ತಪ್ಪು ಮಾಡುತ್ತಿಲ್ಲ. ಅಥವಾ ಗಂಭೀರವಾದ ವ್ಯತ್ಯಾಸವನ್ನು ಮಾಡುತ್ತಿಲ್ಲ.

**ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ :** ವಿವರಣೆಗಾಗಿ ಕೇಳುತ್ತಿದ್ದೇನೆ, ಅಪೀಲು ಹಂತದಲ್ಲಿ ಒಂದು ವಿಚಾರವು ಉದ್ಭವವಾಗುವುದಕ್ಕೂ, ಮೊದಲ ಸಾರಿಗೆ ಮೊಕದ್ದಮೆಯು ವಿಚಾರಣೆಯಲ್ಲಿರುವಾಗ, ಮೂಡುವುದಕ್ಕೂ ನಡುವೆ ಯಾವ ವ್ಯತ್ಯಾಸವು ಇಲ್ಲ. ಎನ್ನುವುದು ನಿಮ್ಮ ಅಭಿಪ್ರಾಯವೆ ಎಂದು ತಿಳಿದುಕೊಳ್ಳಲು ಬಯಸುತ್ತೇನೆ.

**ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್ :** ನಾನು ತಿದ್ದುಪಡಿಯ ಸಾಮಾನ್ಯ ಚೌಕಟ್ಟನ್ನು ಕುರಿತು ಮಾತ್ರ ಈಗ ವಿಚಾರ ಮಾಡುತ್ತಿದ್ದೇನೆ, ನಾನು ಮಂಡಿಸಿರುವ ತಿದ್ದುಪಡಿಯು ೧೨೧ ನೆಯ ವಿಧಿಯ (೨–ಎ) ಖಂಡಕ್ಕೆ ನಾವು ಸೇರಿಸಿರುವ ಅವಕಾಶಕ್ಕೆ ಸಮನಾದುದೇ ಆಗಿದೆ. ಆದ್ದರಿಂದ ಇಲ್ಲಿ ನಾವು ಯಾವುದೇ ವ್ಯತ್ಯಾಸವನ್ನು ಮಾಡುತ್ತಿಲ್ಲ ಎಂದು ನನ್ನ ವಿನಂತಿ.

ಎರಡು ಪ್ರಶ್ನೆಗಳನ್ನು ಎತ್ತಲಾಗಿದೆ. ಒಂದು 'ತೀರ್ಪು' ಎಂಬ ಪದದ ಬಳಕೆಯನ್ನು ಕುರಿತದ್ದು. 'ತೀರ್ಪು' (Judgement) ಎಂಬ ಪದವನ್ನು ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ ಎಂದು ಹೇಳಲಾಗಿದೆ. ಯಾರ ಮೊಕದ್ದಮೆಯನ್ನು, ಸಾಂವಿಧಾನಿಕ ವಿಚಾರಗಳ ತೀರ್ಮಾನಕ್ಕಾಗಿ ಹೈಕೋರ್ಟು

ಹಿಂದಕ್ಕೆ ಪಡೆದುಕೊಂಡಿದೆಯೋ ಆ ಕಕ್ಷಿದಾರನು ಸುಪ್ರೀಂ ಕೋರ್ಟಿಗೆ ಹೋಗುವ ಸ್ಥಿತಿಯಲ್ಲಿ ಇಲ್ಲದಿರಬಹುದು. ಏಕೆಂದರೆ ೧೧೧ನೆಯ ವಿಧಿಯಲ್ಲಿ ನಾವು ಹೇಳಿರುವಂತೆ, ಹೈಕೋರ್ಟು ಕೊಡುವ ತೀರ್ಪು ಅಥವಾ ಅಂತಿಮ ಆದೇಶದ ಮೇಲೆ ಮಾತ್ರವೇ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಬಹುದು. ಕೋರ್ಟು ಕೊಟ್ಟಿರುವ ತೀರ್ಪನ್ನು, ೧೧೧ನೆಯ ವಿಧಿಯ ಅರ್ಥದಲ್ಲಿ ತೀರ್ಪು ಎಂದಾಗಲಿ, ಅಂತಿಮ ಆದೇಶವೆಂದಾಗಲಿ ಪರಿಗಣಿಸದೆ ಹೋಗಬಹುದು. ೧೧೧ನೆಯ ವಿಧಿಯಲ್ಲಿ 'ತೀರ್ಪು' ಎಂಬ ಪದವನ್ನು ಸುಪ್ರೀಂಕೋರ್ಟಿಗೆ ಅಪೀಲು ಸಲ್ಲಿಸಬಹುದಾದ ತೀರ್ಮಾನ ಎಂಬ ನಿರ್ದಿಷ್ಟ ಅರ್ಥದಲ್ಲಿ ಉಪಯೋಗಿಸಿರುವುದರಿಂದ, ಪ್ರಸ್ತುತ ತಿದ್ದುಪಡಿಯಲ್ಲಿ ತೀರ್ಪು (Judgement) ಎಂಬ ಪದವನ್ನು ಅದೇ ಅರ್ಥಕೊಡುವಂತೆ ಏಕೆ ಬಳಸಲು ಸಾಧ್ಯವಿಲ್ಲವೋ ನನಗೆ ಅರ್ಥವಾಗುತ್ತಿಲ್ಲ. ಆ ವಾದವು ಸರಿಯಾಗಿರುವುದಾದರೂ, ಸುಲಭವಾಗಿ ಸಮಸ್ಯೆಯನ್ನು ಪರಿಹರಿಸಬಹುದು. 'ತೀರ್ಪು' ಎಂಬ ಪದಕ್ಕೆ ಬದಲಾಗಿ 'ನಿರ್ಣಯ' (Decision) ಎಂಬ ಪದವನ್ನು ಉಪಯೋಗಿಸಿ "೧೧೧ನೆಯ ವಿಧಿಯ ಉದ್ದೇಶಕ್ಕಾಗಿ 'ನಿರ್ಣಯ' ಎಂಬ ಪದವನ್ನು ಅಂತಿಮ ಆದೇಶವೆಂದು ಪರಿಗಣಿಸಲಾಗುತ್ತದೆ' ಎಂಬ ವಿವರಣೆಯನ್ನು ಸೇರಿಸಿದರೆ ಸಾಕು, ಇದೇನೂ ಪರಿಹರಿಸಲಾಗದ ಸಮಸ್ಯೆಯೆಂದು ನನಗೆ ಅನ್ನಿಸುತ್ತಿಲ್ಲ.

ಇನ್ನು ಅಪೀಲಿನ ಪ್ರಶ್ನೆಗೆ ಸಂಬಂಧಿಸಿದಂತೆ, ಅದು ಖಂಡಿತವಾಗಿಯೂ ಯಾರ ಮೊಕದ್ದಮೆಯನ್ನು ತನಗೆ ಸರಿಯೆನಿಸಿದ ರೀತಿಯಲ್ಲಿ ನಿರ್ವಹಿಸಲು ಹಿಂತೆಗೆದುಕೊಳ್ಳಲಾಗಿದೆಯೊ ಆ ಕಕ್ಷಿದಾರನಿಗೆ ಬಿಟ್ಟ ವಿಚಾರ. ಸಂವಿಧಾನದ ವ್ಯಾಖ್ಯಾನ ಸಂಬಂಧವಾಗಿ ನಿರ್ಣಯ ಕೊಡುವ ಸಲುವಾಗಿ ಹಿಂತೆಗೆದುಕೊಂಡಿರುವ ಮೊಕದ್ದಮೆಯ ಮೇಲೆ ಹೈಕೋರ್ಟು ತೀರ್ಪುನೀಡಿದ್ದಾಯಿತೆಂದ ಮೇಲೆ ಕಕ್ಷಿದಾರನು ನೇರವಾಗಿ ಅದನ್ನು ಸುಪ್ರೀಂ ಕೋರ್ಟಿಗೆ ಒಯ್ದು ಅಂತಿಮವಾಗಿ ತೀರ್ಪು ಪಡೆಯಬಹುದು, ಅಥವಾ ಎಲ್ಲಾ ವಿಚಾರಗಳನ್ನು ಅಧೀನ ನ್ಯಾಯಾಧೀಶನು ತೀರ್ಮಾನಿಸಲು ಕಾದು ನಂತರ ಹೈಕೋರ್ಟಿಗೆ ಅಪೀಲು ಸಲ್ಲಿಸಿ, ಆ ನಿರ್ದಿಷ್ಟ ವಿಚಾರಗಳ ಸಂಬಂಧವಾಗಿ ವಿಚಾರಣೆ ಮಾಡಿಸಬಹುದು. ಅದಾದನಂತರ ಮೊಕದ್ದಮೆಯನ್ನು ಸುಪ್ರೀಂ ಕೋರ್ಟಿಗೆ ಒಯ್ಯಬಹುದು. ಸಂವಿಧಾನದ ವ್ಯಾಖ್ಯಾನವನ್ನು ಕುರಿತ ವಿಚಾರವು ಒಂದು ಪೀಠಿಕಾ ವಿಚಾರದ ನೆಲೆಯಲ್ಲಿದ್ದು ಅದರ ಮೇಲೆ ಕೈಗೊಂಡ ನಿರ್ಣಯವು ಇಡೀ ಮೊಕದ್ದಮೆಯ ಮೇಲಿನ ನಿರ್ಣಯವಾಗುವ ಹಾಗಿದ್ದರೆ ಮೇಲೆ ಹೇಳಿದ ಎರಡು ಮಾರ್ಗಗಳಲ್ಲಿ ಯಾವುದೇ ಒಂದಕ್ಕೆ ನಾವು ಕಕ್ಷಿದಾರನನ್ನು ಕಟ್ಟುಪಡಿಸುವುದಿಲ್ಲ. ನೊಂದಿರುವ ಕಕ್ಷಿದಾರನು ಮತ್ತೆ ಅಧೀನ ನ್ಯಾಯಾಧೀಶನಿಂದ ತೊಡಗಿ ಎಲ್ಲಾ ಪ್ರಕ್ರಿಯೆಗಳನ್ನು ಹಾದು ಬರುವುದಕ್ಕೆ ಬದಲು, ಒಡನೆಯೇ ಸುಪ್ರೀಂಕೋರ್ಟಿಗೆ ಹೋಗಿ, ಸಂವಿಧಾನದ ವ್ಯಾಖ್ಯಾನವನ್ನು ಪಡೆಯುತ್ತಾನೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ. ಇದರಲ್ಲಿ ನನಗೆ ಕಷ್ಟವೇನೂ ಕಾಣಿಸುತ್ತಿಲ್ಲ.

ಇನ್ನು, ಎರಡನೆಯ ಪ್ರಶ್ನೆ ಹೀಗಿತ್ತು: ನನ್ನ ಮಿತ್ರರಾದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅಲ್ಲಿ ಕುಳಿತು ಏನೋ ಹೇಳಿದರು. ಅದು ನನಗೆ ಸರಿಯಾಗಿ ಕೇಳಿಸಲಿಲ್ಲ. ಆದರೆ ಖಾಸಗಿ ಮಾತುಕತೆಯಲ್ಲಿ, ಸಂವಿಧಾನದ ವಿವರಣೆಗೆ ಸಂಬಂಧಿಸಿದ ವಿಷಯವನ್ನು ಇತರ ವಿಚಾರಗಳಿಂದ ಬೇರ್ಪಡಿಸುವುದು ಹೈಕೋರ್ಟಿಗೆ ತುಂಬಾ ಕಷ್ಟವಾಗಬಹುದು ಎಂದು ಅವರು ಹೇಳಿದರು. ಇತರ ವಿಚಾರಗಳ ವಿವರಣೆಗೆ ಮತ್ತು ಸಂವಿಧಾನ ವಿವರಣೆಗೆ ಸಂವಿಧಾನಪರ ಅಂಶದ ವಿವರಣೆಗೆ ಹೈಕೋರ್ಟು ಆ ಇತರ ಅಂಶಗಳನ್ನು ಪರಿಶೀಲಿಸಲೇಬೇಕಾಗುತ್ತದೆ. ಮೊಕದ್ದಮೆ ಸಣ್ಣದೆಂದಿಟ್ಟುಕೊಳ್ಳೋಣ. ಆದರೆ ಕಾನೂನು ವಿವರಣೆಯ ಪ್ರಶ್ನೆ ಅದರಲ್ಲಿ ಸೇರಿದ್ದರೆ, ಹೈಕೋರ್ಟು ಅದನ್ನು ಫೈಸಲು ಮಾಡಿಬಿಡಲು ಏಕೆ ಅನುಮತಿ ಕೊಡಬಾರದು, ಮತ್ತೆ

ಅದನ್ನು ಏಕೆ ಕಳುಹಿಸಬೇಕು? ಈ ಎರಡೂ ಸಂದರ್ಭಗಳನ್ನು ಸರಿಯಾಗಿ ಪರಿಹರಿಸುವ ಸಲುವಾಗಿ, ತಿದ್ದುಪಡಿಯು ಮೊಕದ್ದಮೆಯನ್ನು ವಿಲೇವಾರಿ ಮಾಡುವ ಅಧಿಕಾರವನ್ನೇ ಹೈಕೋರ್ಟಿಗೆ ನೀಡುತ್ತದೆ. ಈ ಅಕ್ಷೇಪಣೆಗಳಲ್ಲಿ ಎತ್ತಿ ತೋರಿಸಿರುವ ಕಷ್ಟಗಳಿಗೆ ಇದು ಸಾಕಷ್ಟುಮಟ್ಟಿನ ಪರಿಹಾರವಾಗುತ್ತದೆ. ಆದ್ದರಿಂದ ಈ ತಿದ್ದುಪಡಿಯಲ್ಲಿ ನಮ್ಮ ಉದ್ದೇಶಗಳು ಈಡೇರುತ್ತವೆ. ಇಡೀ ಮೊಕದ್ದಮೆಯನ್ನು ವಿಚಾರಣೆ ಮಾಡಿದಾಗ ಹೈಕೋರ್ಟಿಗೆ, ಹಲವು ಅಂಶಗಳ ಮೇಲಿನ ನಿರ್ಣಯದ ನಿರ್ಬಂಧವಿರಬಾರದು. ಸಂವಿಧಾನದ ವಿಚಾರಣೆಯ ನಿರ್ದಿಷ್ಟ ಪ್ರಶ್ನೆಗೆ ಸಂಬಂಧಿಸಿದಂತೆ ಒಂದು ಮೊಕದ್ದಮೆಯ ಮೇಲೆ ತೀರ್ಪುಕೊಡಲು ಅದಕ್ಕೆ ಸ್ವಾತಂತ್ರ್ಯವಿರಬೇಕು.

ಇನ್ನೊಂದು ವಿಷಯವನ್ನು ನಾನು ಹೇಳಬಹುದೇ? ವ್ಯವಹಾರ ಪ್ರಕ್ರಿಯಾ ಸಂಹಿತೆಯ (ಸಿವಿಲ್ ಪ್ರೊಸಿಜರ್ ಕೋಡ್) ೨೪ನೇ ಕಲಂನಲ್ಲಿ ಹೈಕೋರ್ಟಿಗೆ ಯಾವುದೇ ಮೊಕದ್ದಮೆಯನ್ನೇ ಹಿಂದಕ್ಕೆ ತರಿಸಿಕೊಂಡು ತಾನೇ ತೀರ್ಮಾನಿಸುವ ಅಧಿಕಾರ ಇದೆ. ಆದರೆ ೨೪ನೆಯ ಕಲಂನ ಕಷ್ಟವೇನೆಂದರೆ, ಹೈಕೋರ್ಟು ಹಿಂತೆಗೆದುಕೊಳ್ಳಲು ನಿರ್ಧರಿಸಿದ್ದರೆ, ಇಡೀ ಮೊಕದ್ದಮೆಯನ್ನೇ ಹಿಂತೆಗೆದುಕೊಳ್ಳಬೇಕಾಗುತ್ತದೆ. ಭಾಗಶಃ ಹಿಂದಕ್ಕೆ ಪಡೆಯಲು ಅದಕ್ಕೆ ಅಧಿಕಾರವಿಲ್ಲ. ಆದರೆ ನಮ್ಮ ಉದ್ದೇಶವಿದ್ದುದು ಮೊಕದ್ದಮೆಯ ಯಾವ ಭಾಗವು ಸಂವಿಧಾನದ ವ್ಯಾಖ್ಯಾನವನ್ನು ಉಲ್ಲೇಖಿಸುತ್ತದೆಯೊ ಆ ಭಾಗವನ್ನು ಹಿಂದಕ್ಕೆ ಪಡೆಯಲು ಹೈಕೋರ್ಟಿಗೆ ಅನುಮತಿ ನಿಡಬೇಕು ಎಂಬುದು, ಆದ್ದರಿಂದ ನನ್ನ ವಿನಂತಿ ಇದು. ಈಗ ನಾವು ೨೦೪ನೆಯ ವಿಧಿಯಲ್ಲಿ ಮಾಡುತ್ತಿರುವಂತೆ ನಿರ್ದಿಷ್ಟವಾಗಿ ಅವಕಾಶವನ್ನು ಒದಗಿಸಿದ ಹೊರತು, ಹೈಕೋರ್ಟು ಸಂವಿಧಾನ ವ್ಯಾಖ್ಯಾನದ ಪ್ರಶ್ನೆಯ ಮೇಲೆ ತೀರ್ಮಾನ ಕೈಗೊಳ್ಳಲು ಇಡೀ ಮೊಕದ್ದಮೆಯನ್ನೇ ಹಿಂತೆಗೆದುಕೊಳ್ಳಬೇಕಾಗುತ್ತದೆ.

ಇನ್ನೊಂದು ಮಾತಿದೆ. ನಿಮಗೆ ನೆನಪಿರುವಂತೆ, ನಾನು ಮಂಡಿಸಿರುವ ಈ ನಿರ್ದಿಷ್ಟ ತಿದ್ದುಪಡಿಯ ಪದ ಜೋಡಣೆಯ ಬಗೆಗೆ ಆಳವಾದ ಗಮನಕೊಡಲು ನೆನ್ನೆಯಿಂದ ಇಂದು ಬೆಳಗಿನವರೆಗೂ ಕಾಲಾವಕಾಶವಿರಲಿಲ್ಲ. ಆದ್ದರಿಂದ ತಿದ್ದುಪಡಿಯನ್ನು ನಾನು ಈಗ ಮಂಡಿಸುತ್ತಿದ್ದೇನೆ. ಏಕೆಂದರೆ, ಸಣ್ಣಮಟ್ಟ ದೋಷಗಳು ಮತ್ತು ವ್ಯತ್ಯಾಸಗಳು ಇವೆಯೆಂದು ಮೇಲಿಂದ ಮೇಲೆ ವಿಧಿಗಳನ್ನು ತಡೆಹಿಡಿದಿಡುವುದು ತಪ್ಪಾಗುತ್ತದೆ. ಈ ತಿದ್ದುಪಡಿಯನ್ನು ಮಂಡಿಸುತ್ತಾ ಕರಡು ರಚನಾ ಸಮಿತಿಗೆ ಈಗ ಸೂಚಿಸಲಾಗಿರುವ ದೋಷಗಳನ್ನು ಅವು ಇದ್ದರೆ, ಸರಿಪಡಿಸಲು ಅಗತ್ಯವಾದ ಬದಲಾವಣೆಗಳನ್ನು ಮಾಡಿ ಸಭೆಯು ಅಂಗೀಕರಿಸಿರುವ ಇತರ ವಿಧಿಗಳ ಹಂತಕ್ಕೆ ಅದನ್ನು ತರಲು ಒಂದು ಅವಕಾಶವನ್ನು ಕೊಡಬೇಕು ಎಂದು ನಾನು ಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಈಗ ನಾನು ಪ್ರೊ. ಶಹಾ ಅವರ, ೨೬೭೪ನೆಯ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

**ಶ್ರೀ ಹೆಚ್.ವಿ. ಕಾಮತ್ :** ಡಾ.ಅಂಬೇಡ್ಕರರ ತಿದ್ದುಪಡಿಯು ಈ ತಿದ್ದುಪಡಿಯನ್ನು ಮೀರಿಸಿದೆಯೆಂದು ಭಾವಿಸುತ್ತೇನೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಾನು ಇಡೀ ವಿಧಿಯನ್ನೇ ಬದಲಾಯಿಸುತ್ತೇನೆ. ನೀವು ೨೬೭೪ನೆಯ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಬಹುದು.

**ಮಾನ್ಯ ಅಧ್ಯಕ್ಷರು :** ನಿಮ್ಮ ತಿದ್ದುಪಡಿಯು ಇಡೀ ವಿಧಿಯ ಬದಲಿಗಾಗಿ ಇದ್ದರೆ, ನಿಮ್ಮ ತಿದ್ದುಪಡಿಯನ್ನು ಈಗ ಮತಕ್ಕೆ ಹಾಕುತ್ತೇನೆ.

ಪ್ರಶ್ನೆ ಹೀಗಿದೆ.

"೨೦೪ನೆಯ ವಿಧಿಯ ಬದಲಿಗೆ ಈ ಕೆಳಗಿನ ವಿಧಿಯನ್ನು ಇಟ್ಟುಕೊಳ್ಳಬಹುದು:

**ಕೆಲವು ಮೊಕದ್ದಮೆಗಳನ್ನು ಹೈಕೋರ್ಟಿಗೆ ವರ್ಗಾಯಿಸುವಿಕೆ**

'೨೦೪'ತನ್ನ ಅಧೀನ ನ್ಯಾಯಾಲಯವೊಂದರಲ್ಲಿ ಕಾದು ನಿಂತಿರುವ ಒಂದು ಮೊಕದ್ದಮೆಯಲ್ಲಿ ಸಂವಿಧಾನದ ವ್ಯಾಖ್ಯಾನವನ್ನು ಕುರಿತಂತೆ ಕಾನೂನಿನ ಮೂಲ ಪ್ರಶ್ನೆಯೊಂದು ಇತ್ಯರ್ಥವಾಗಲೇಬೇಕಾದ ಅಗತ್ಯವಿದೆಯೆಂದು ಮನವರಿಕೆಯಾದಾಗ, ಹೈಕೋರ್ಟ್ ಆ ಮೊಕದ್ದಮೆಯನ್ನು ಹಿಂದಕ್ಕೆ ಪಡೆದುಕೊಂಡು–

(ಅ) ತಾನೇ ಮೊಕದ್ದಮೆಯ ವಿಚಾರಣೆ ನಡೆಸಿ ಫೈಸಲು ಮಾಡಬಹುದು.

(ಬ) ಮೇಲೆ ಹೇಳಿದ ಕಾನೂನು ಪ್ರಶ್ನೆಯನ್ನು ಇತ್ಯರ್ಥಗೊಳಿಸಿ, ಎಲ್ಲಿಂದ ಹಿಂದಕ್ಕೆ ತರಿಸಿಕೊಳ್ಳಲಾಗಿತ್ತೋ ಅಲ್ಲಿಗೇ ಮೊಕದ್ದಮೆಯನ್ನು ಕಳುಹಿಸಬಹುದು. ಹಾಗೆ ಮತ್ತೆ ಪಡೆದುಕೊಂಡ ಮೊಕದ್ದಮೆಯ ವಿಚಾರಣೆಯನ್ನು ಆ ಅಧೀನ ನ್ಯಾಯಾಲಯವು, ಆ ನಿರ್ಣಯಕ್ಕೆ ಸಂಗತವಾಗುವಂತೆ ಫೈಸಲು ಮಾಡಬಹುದು."

ತಿದ್ದುಪಡಿಯು ಅಂಗೀಕೃತವಾಯಿತು.

**ಮಾನ್ಯ ಅಧ್ಯಕ್ಷರು :** ಈಗ ಇದು ಮೂಲ ವಿಧಿಯಾಗುತ್ತದೆ. ಅಂಗೀಕೃತವಾಗಿದ್ದ ತಿದ್ದುಪಡಿಗಳನ್ನು ಇದು ತಳ್ಳಿಹಾಕುತ್ತದೆ.

ಪ್ರಶ್ನೆ ಇದು–

"ತಿದ್ದುಪಡಿಯಾದಂತೆ, ೨೦೪ನೆಯ ವಿಧಿಯು ಸಂವಿಧಾನದ ಭಾಗವಾಗುವುದು" ಗೊತ್ತುವಳಿಯು ಸ್ವೀಕೃತವಾಯಿತು.

೨೦೪ನೆಯ ವಿಧಿಯನ್ನು ತಿದ್ದುಪಡಿಯಾದಂತೆ, ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ ೨೦೫

* **ಮಾನ್ಯ ಅಧ್ಯಕ್ಷರು :** ಈಗ ಸದನವು ೨೦೫ನೆಯ ವಿಧಿಯನ್ನು ಪರಿಶೀಲಿಸುತ್ತದೆ. ಇದಕ್ಕೆ ಡಾ.ಅಂಬೇಡ್ಕರರ, ೨೬೭೬ನೆಯ ಸಂಖ್ಯೆಯ ಒಂದು ತಿದ್ದುಪಡಿಯಿದೆ.

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಮಾನ್ಯರೆ ಹೀಗೆ ಮಂಡಿಸುತ್ತೇನೆ.

'೨೦೫ನೆಯ ವಿಧಿಗೆ ಬದಲಾಗಿ ಈ ಕೆಳಗಿನಂತೆ ಇಡಬಹುದು:–

**ಹೈಕೋರ್ಟುಗಳ ನೌಕರರು ಅಧಿಕಾರಿಗಳು ಮತ್ತು ವೆಚ್ಚಗಳು,**

'೨೦೫(೧) ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ಅವರು ಅಥವಾ ಅವರು ಆದೇಶಿಸುವ, ನ್ಯಾಯಾಲಯದ ಬೇರೊಬ್ಬ ನ್ಯಾಯಾಧೀಶರು ಅಥವಾ ಅಧಿಕಾರಿ, ಹೈಕೋರ್ಟಿನ ಅಧಿಕಾರಿಗಳನ್ನು ಇತರ ನೌಕರರನ್ನು ನೇಮಿಸುತ್ತಾರೆ.

---

* ಸಿ.ಎ.ಡಿ. ಸಂಪುಟ ೮, ೮ನೇ ಜೂನ್ ೧೯೪೯, ಪುಟ ೭೧೯–೭೨೦

ಹೈಕೋರ್ಟಿನ ಪ್ರಧಾನ ಪೀಠವಿರುವ ರಾಜ್ಯದ ಗವರ್ನರರು, ನಿಯಮದಲ್ಲಿ ನಿರ್ದಿಷ್ಟಪಡಿಸುವಂತೆ, ನ್ಯಾಯಾಲಯಕ್ಕೆ ಈಗಾಗಲೆ ಸಂಬಂಧಪಟ್ಟಿರುವ ಯಾವನೇ ವ್ಯಕ್ತಿಯನ್ನು ಕೋರ್ಟಿನ ಯಾವುದೇ ಸ್ಥಾನಕ್ಕೆ ನೇಮಿಸುವಂತಿಲ್ಲ. ಹಾಗೆ ಮಾಡಿದರೂ ಅದು ರಾಜ್ಯ ಲೋಕಸೇವಾ ಆಯೋಗದ ಸಲಹೆಯನ್ನು ಪಡೆದ ನಂತರವೇ ನಡೆಯಬೇಕು ಎಂಬುದಾಗಿ ಗವರ್ನರರು ಆದೇಶಿಸಿರಬೇಕು.

(೨) ರಾಜ್ಯ ಶಾಸನ ಸಭೆಯು ರಚಿಸಿದ ಯಾವುದೇ ಕಾನೂನಿನ ಅವಕಾಶಗಳಿಗೆ ಒಳಪಟ್ಟು, ಒಂದು ಹೈಕೋರ್ಟಿನ ಅಧಿಕಾರಿಗಳು ಮತ್ತು ಇತರ ನೌಕರರ ಸೇವಾನಿಯಮಗಳು, ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಅವರಾಗಲಿ ಅವರು ಈ ಉದ್ದೇಶದಿಂದ ನಿಯಮಗಳನ್ನು ರಚಿಸಲು ಅಧಿಕಾರಕೊಟ್ಟು ಆದೇಶಿಸಿದ ಬೇರೊಬ್ಬ, ನ್ಯಾಯಾಧೀಶರಾಗಲಿ ಅಥವಾ ಅಧಿಕಾರಿಯಾಗಲಿ ರಚಿಸಿದವಾಗಿರುತ್ತವೆ.

ಅಂತಹ ಅಧಿಕಾರಿಗಳು ಮತ್ತು ನೌಕರರಿಗೆ ಕೊಡಬೇಕಾದ ವೇತನ, ಭತ್ಯ, ಮತ್ತು ನಿವೃತ್ತಿ ವೇತನ ಮೊದಲಾದವನ್ನು ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಅವರು, ಹೈಕೋರ್ಟಿನ ಪ್ರಧಾನ ಪೀಠವಿರುವ ರಾಜ್ಯದ ಗವರ್ನರರೊಂದಿಗೆ ಸಮಾಲೋಚಿಸಿ, ನಿಗದಿಪಡಿಸುತ್ತಾರೆ.

(೩) ಒಂದು ಹೈಕೋರ್ಟಿನ ಆಡಳಿತಾತ್ಮಕ ವೆಚ್ಚಗಳು, ನ್ಯಾಯಾಲಯದ ಅಧಿಕಾರಿಗಳು ಮತ್ತು ನೌಕರರಿಗೆ ಕೊಡುವ ವೇತನ, ಭತ್ಯೆಗಳು, ವಿಶ್ರಾಂತಿ ವೇತನಗಳು ಮತ್ತು ಕೋರ್ಟಿನ ನ್ಯಾಯಾಧೀಶರ ವೇತನಗಳು, ಭತ್ಯೆಗಳು ಇವೆಲ್ಲವನ್ನೂ ರಾಜ್ಯ ವರಮಾನದಿಂದ ನಿರ್ವಹಿಸಲಾಗುತ್ತದೆ, ಮತ್ತು ಶುಲ್ಕಗಳು ಮತ್ತು ಇತರ ರೂಪಗಳಲ್ಲಿ ನ್ಯಾಯಾಲಯವು ಪಡೆಯುವ ಹಣವು ಆ ರಾಜ್ಯ ವರಮಾನದ ಭಾಗವಾಗುತ್ತದೆ."

**ಮಾನ್ಯ ಅಧ್ಯಕ್ಷರು :** ಶ್ರೀ ಕಪೂರ್ ಅವರಿಂದ ಒಂದು ತಿದ್ದುಪಡಿಯಿದೆ.

**ಮಾನ್ಯ ಡಾ. ಬಿ.ಅರ್ ಅಂಬೇಡ್ಕರ್ :** ಮಾನ್ಯರೆ, ಈ ತಿದ್ದುಪಡಿಗೆ ನನ್ನದೊಂದು ತಿದ್ದುಪಡಿಯಿದೆ. ತಾವು ಅನುಮತಿಕೊಟ್ಟರೆ ಅದನ್ನು ಮಂಡಿಸುತ್ತೇನೆ. ಅದು ೨ನೆಯ ಪಟ್ಟಿಯ ೩ನೆಯ ಪುಟದಲ್ಲಿದೆ.

**ಮಾನ್ಯ ಅಧ್ಯಕ್ಷರು :** ನೀವು ಅದನ್ನು ಮಂಡಿಸಬಹುದು.

**ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ. "ತಿದ್ದುಪಡಿಗಳ ಪಟ್ಟಿಯ ೨೬೭೬ನೆಯ ಸಂಖ್ಯೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ, ಉದ್ದೇಶಿತ ೨೦೫ನೆಯ ವಿಧಿಯ (೨)ನೆಯ ಖಂಡದ ಅವಕಾಶಕ್ಕೆ ಬದಲಾಗಿ ಈ ಕೆಳಗಿನಂತೆ ಅವಕಾಶವನ್ನು ಅಳವಡಿಸಬಹುದು.

'ಈ ಖಂಡದನ್ವಯ ರಚಿಸುವ ನಿಯಮಗಳು ವೇತನಗಳು, ಭತ್ಯೆಗಳು, ರಜೆ ಅಥವಾ ನಿವೃತ್ತಿ ವೇತನ ಇವುಗಳಿಗೆ ಸಂಬಂಧಿಸಿದಂತೆ, ಹೈಕೋರ್ಟಿನ ಪ್ರಧಾನ ಪೀಠವಿರುವ ರಾಜ್ಯದ ಗವರ್ನರರ ಅನುಮತಿಯನ್ನು ಪಡೆದಿರತಕ್ಕದ್ದು."

ಮಾನ್ಯರೆ, ಈ ಅವಕಾಶಗಳು ಸುಪ್ರೀಂ ಕೋರ್ಟಿಗಾಗಿ ಮಾಡಿದ ಅವಕಾಶಗಳೇ ಆಗಿವೆ.

**ಮಾನ್ಯ ಅಧ್ಯಕ್ಷರು :** ಮಿ.ಕಪೂರ್, ಇದು ನಿಮ್ಮ ತಿದ್ದುಪಡಿಯನ್ನು ಒಳಗೊಳ್ಳುತ್ತದೆ.

**ಶ್ರೀ ಜಸಪತರಾಯ್ ಕಪೂರ್ :** (ಯು.ಪಿ: ಸಾಮಾನ್ಯ): ಹೌದು ಸ್ವಾಮಿ, ನನ್ನ ತಿದ್ದುಪಡಿಯನ್ನು ಮಂಡಿಸಬೇಕಾದ ಅಗತ್ಯವನ್ನು ಇದು ತಳ್ಳಿಹಾಕಿದೆ.

(ಡಾ. ಅಂಬೇಡ್ಕರ್ ಅವರ ತಿದ್ದುಪಡಿಯು ಅಂಗೀಕೃತವಾಯಿತು, ತಿದ್ದುಪಡಿಗೊಂಡಂತೆ, ೨೦೫ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ–೨೦೬

*ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ : ಮಾನ್ಯರೆ, ಈ ವಿಧಿಯನ್ನು ತೆಗೆದು ಹಾಕಬೇಕೆಂದು ಗೊತ್ತುವಳಿ ಮಂಡಿಸುತ್ತೇನೆ.

ಸಂವಿಧಾನದಿಂದ ೨೦೬ನೆಯ ವಿಧಿಯನ್ನು ತೆಗೆದುಹಾಕಲಾಯಿತು.

## ವಿಧಿ–೯೦ (ಮುಂದುವರಿದುದು)

**ಮಾನ್ಯ ಡಾ. ಬಿ.ಆರ್ ಅಂಬೇಡ್ಕರ್ :** ಮಾನ್ಯರೆ, ಈಗ ಹಣಕಾಸು ವಿಧಿಯನ್ನು ಕೈಗೆತ್ತಿಕೊಳ್ಳಬೇಕೆಂದು ಕೋರುತ್ತೇನೆ.

ಚರ್ಚೆ ನಡೆಯುತ್ತಿದ್ದ ೯೦ನೆಯ ವಿಧಿಗೆ ಈಗ ಹಿಂದಕ್ಕೆ ಹೋಗಬಹುದು.

**ಮಾನ್ಯ ಅಧ್ಯಕ್ಷರು :** ನಾವು ಚರ್ಚೆಯನ್ನು ಮುಂದೂಡಿದ ದಿನದ ಹಿಂದಿನ ದಿನ ಈ ವಿಧಿಯ ಮೇಲೆ ಅನೇಕ ತಿದ್ದುಪಡಿಗಳಿದ್ದವು. ಅವು ಡಾ.ಅಂಬೇಡ್ಕರರ ಹೆಸರಿನಲ್ಲಿರುವ ೩,೪ನೆಯ ತಿದ್ದುಪಡಿಗಳು.

**ಮಾನ್ಯ ಡಾ. ಬಿ.ಆರ್ ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ:

"೯೦ನೆಯ ವಿಧಿಯ (೧) ನೆಯ ಖಂಡದ (ಸಿ) ಮತ್ತು (ಡಿ) ಉಪಖಂಡಗಳಿಗೆ ಬದಲಾಗಿ ಈ ಖಂಡಗಳನ್ನು ಅಳವಡಿಸಬೇಕು.

(ಸಿ) ಸಂಚಿತ ನಿಧಿ ಅಥವಾ ಭಾರತದ ಸಾದಿಲ್ವಾರು ನಿಧಿಯ ಪಾಲನೆ, ಅಂತಹ ಯಾವುದೇ ನಿಧಿಗೆ ಪಾವತಿಮಾಡುವುದು ಅಥವಾ ಅದರಿಂದ ಹಣವನ್ನು ತೆಗೆಯುವುದು.

(ಡಿ) ಭಾರತದ ಸಂಚಿತ ನಿಧಿಯಿಂದ ಧನವಿನಿಯೋಗ.

ಮಾನ್ಯರೆ, ೪ ನೆಯ ತಿದ್ದುಪಡಿಯನ್ನು ೩ನೆಯ ತಿದ್ದುಪಡಿಯೇ ಒಳಗೊಳ್ಳುತ್ತದೆ. ಆದ್ದರಿಂದ ಅದನ್ನು ಮಂಡಿಸುತ್ತೇನೆ.

ಮಾನ್ಯರೆ, ಇದನ್ನು ಮಂಡಿಸುತ್ತೇನೆ:

"೯೦ನೆಯ ವಿಧಿಯ (೧)ನೆಯ ಖಂಡದ (ಇ) ಮತ್ತು (ಎಫ್) ಉಪ–ಖಂಡಗಳಲ್ಲಿ 'ಭಾರತದ ಸಂಚಿತನಿಧಿ' ಎಂದು ಪದಗಳಿಗೆ ಬದಲಾಗಿ 'ಭಾರತದ ವರಮಾನಗಳು' ಎಂಬ ಪದಗಳನ್ನು ಅಳವಡಿಸಬೇಕು."

ಮಾನ್ಯರೆ, ಪಂಡಿತ್ ಕುಂಜ್ರು ಅವರ ಹೆಸರಿನಲ್ಲಿರುವ ೫ನೆಯ ತಿದ್ದುಪಡಿಯೂ ಇಲ್ಲಿ ಸೇರಿದೆ. ಆದ್ದರಿಂದ ಇದು ಅಗತ್ಯವಾಗಿದೆ.

ಮಾನ್ಯರೆ, ತಮ್ಮ ಅನುಮತಿಯಿಂದ ಈ ಹಂತದಲ್ಲಿ ಒಂದು ಸಣ್ಣ ಪ್ರಾಸ್ತಾವಿಕ ಭಾಷಣ ಮಾಡಲು ಬಯಸುತ್ತೇನೆ. ಆ ಮೂಲಕ, ಈಗಷ್ಟೇ ನಾನು ಮಂಡಿಸಿರುವ ತಿದ್ದುಪಡಿಗಳ ವ್ಯಾಪ್ತಿಗೆ ಅಳವಡದ, ಆದರೆ ಹಣಕಾಸು ವಿಚಾರಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನದಲ್ಲಿ ಮಾಡಿರುವ ಬದಲಾವಣೆಗಳಿಗೆ ಸಂಬಂಧಿಸಿದ ಕೆಲವು ಬದಲಾವಣೆಗಳ ಬಗೆಗೆ ಸದನಕ್ಕೆ ಪರಿಚಯ ಮಾಡಿಕೊಡಬಯಸುತ್ತೇನೆ.

---

* ಸಿ.ಎ.ಡಿ. ಸಂಪುಟ ೮, ೮ನೇ ಜೂನ್ ೧೯೪೯, ಪುಟ ೭೨೩–೭೨೬

ಈ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಮಂಡಿಸಲು ಬಯಸಿರುವ ವಿವಿಧ ತಿದ್ದುಪಡಿಗಳಿಂದ ನಾವು ಮಾಡಿರುವ ಬದಲಾವಣೆಗಳು ಹೀಗಿವೆ. ಮೊದಲನೆಯ ಬದಲಾವಣೆ, ಕಾನೂನಿಗೆ ಹೊರತಾದ ತೆರಿಗೆ ಯಾವುದೂ ಇರುವುದಿಲ್ಲ. ಜನರ ಮೇಲೆ ಯಾವುದಾದರೂ ತೆರಿಗೆ ವಿಧಿಸಬೇಕಾದ ಪಕ್ಷದಲ್ಲಿ, ಕಾನೂನು ಅದನ್ನು ಅನುಮತಿಸಬೇಕು. ಇದನ್ನು ಮುಂದೆ ಬರುವ ೨೪೮ನೆಯ ವಿಧಿಯಲ್ಲಿ ಅಳವಡಿಸಲಾಗಿದೆ. ನಾವು ಏನು ಮಾಡುತ್ತಿದ್ದೇವೆ ಎಂಬುದರ ಒಂದು ಪೂರ್ಣ ಚಿತ್ರ ಸದನಕ್ಕೆ ಬರಬೇಕೆಂಬ ಉದ್ದೇಶದಿಂದ ಈಗ ಈ ವಿಷಯವನ್ನು ಹೇಳುತ್ತಿದ್ದೇನೆ, ಈಗಿರುವ ಕರಡು ಸಂವಿಧಾನದಲ್ಲಿ ಅಂಥದೊಂದು ಅವಕಾಶ ಇರಲಿಲ್ಲ. ಉದ್ದೇಶಿಸಿರುವ ಎರಡನೆಯ ವಿಚಾರ ಇದು. ಸಂಚಿತ ನಿಧಿ (Consolidated Fund) ಎಂಬ ಹೆಸರಿನ ಒಂದು ವಿಚಾರವನ್ನು ಪರಿಚಯಿಸುವುದು, ಮುಂದೆ ಒಂದು ಹಂತದಲ್ಲಿ ಸದನದ ಮುಂದೆ ಬರುವ ೨೪೮–ಎ ವಿಧಿಯಲ್ಲಿ ಇದನ್ನು ರಚಿಸಲಾಗುತ್ತದೆ. ಹಾಗೆಯೇ ಪಾರ್ಲಿಮೆಂಟು ಸ್ಥಾಪಿಸಬೇಕೆಂದು ಬಯಸುವ ಒಂದು ಸಾದಿಲ್ವಾರು ನಿಧಿಯ ಸ್ಥಾಪನೆಗೂ ಅವಕಾಶವನ್ನು ಒದಗಿಸಬೇಕೆಂದು ಅಪೇಕ್ಷಿಸುತ್ತೇವೆ. ೨೪೮–ಬಿ ನೂತನ ವಿಧಿಯು ಅದನ್ನು ಈಡೇರಿಸುತ್ತದೆ.

ಮೊದಲನೆಯದು, ಕಾನೂನಿನ ಅನುಮತಿಯಿಲ್ಲದೆ ಯಾವ ತೆರಿಗೆಯನ್ನೂ ವಿಧಿಸುವಂತಿಲ್ಲ ಎಂಬ ಅವಕಾಶಕ್ಕೆ ಯಾವುದೇ ವಿವರಣೆಗೆ ಅಗತ್ಯವಾಗಿರುವಂತೆ ನನಗೆ ತೋರುವುದಿಲ್ಲ. ಇದು ಪ್ರಶಂಸನೀಯವಾದ ಅವಕಾಶ. ಪಾರ್ಲಿಮೆಂಟಿನ ಮಂಜೂರಾತಿಯನ್ನು ಪಡೆಯದೆ ಜನರ ಮೇಲೆ ತೆರಿಗೆ ಹೊರಿಸುವ ಅಧಿಕಾರ ಕಾರ್ಯಾಂಗಕ್ಕಿರಬಾರದು. ಸಂಚಿತ ನಿಧಿಗೆ ಸಂಬಂಧಿಸಿದಂತೆ ಒಂದು ಅರ್ಥದಲ್ಲಿ ಅದು ಹೊಸ ವಿಚಾರವೇನಲ್ಲ, ಹೊಸ ಪದಗುಚ್ಛ ಅಷ್ಟೆ. ಈಗಿರುವ ಹೆಸರು "ಭಾರತದ ಗವರ್ನರ್ ಜನರಲ್ ಅವರ ಸಾರ್ವಜನಿಕ ಖಾತೆ" ಎಂದು ಬೊಕ್ಕಸದ ನಿಯಮಗಳ ಸಂಕಲನ (Compilation of Treasury Rules) ಎಂಬ ಕೃತಿಯ ಮೊದಲನೆಯ ಸಂಪುಟವನ್ನು ನೋಡಿದರೆ, ಅದರಲ್ಲಿ ಸಾರ್ವಜನಿಕ ಹಣಕಾಸು ಖಾತೆಯನ್ನು 'ಸಂಚಿತ ನಿಧಿ' ಎಂದು ಕರೆದಿರುವುದೂ ಗೊತ್ತಾಗುತ್ತದೆ. ಅಲ್ಲಿ ಕೊಟ್ಟಿರುವ ವಿವರಣೆಯನ್ನು ಓದುತ್ತೇನೆ "ಕೇಂದ್ರ ಸರಕಾರದ ಪಬ್ಲಿಕ್ ಅಕೌಂಟ್ ಎಂದರೆ, ಗವರ್ನರ್ ಜನರಲ್ಲರ ತೆರಿಗೆಗಳಿಂದಾಗಿ ಬರುವ, ಶಾಸನದ ೧೩೬ನೆಯ ಪ್ರಕರಣದಲ್ಲಿ ವಿವರಿಸಿರುವ ಹಣವನ್ನು ತುಂಬುವ ಸಂಚಿತನಿಧಿ, ಸರಕಾರದ ಪರವಾಗಿ ಸರಕಾರದಿಂದ ಮಾಡುವ ಎಲ್ಲಾ ವೆಚ್ಚಗಳನ್ನು ಇದರಿಂದ ನಿರ್ವಹಿಸಲಾಗುತ್ತದೆ."

ಆದ್ದರಿಂದ "ಸಂಚಿತ ನಿಧಿ" ಎಂಬುದಾಗಿ ಸದನವನ್ನು ಉಪಯೋಗಿಸಿರುವುದು. ಹೆಸರಿನ ಬದಲಾವಣೆ ಅಷ್ಟೆ. ಏಕೆಂದರೆ ಈಗಾಗಲೇ ಆ ಪದವನ್ನು ಕೇಂದ್ರ ಸರಕಾರದ ಸಾರ್ವಜನಿಕ ಖಾತೆಗೆ ಸಂವಾದಿಯಾಗಿ ಉಪಯೋಗಿಸಲಾಗಿದೆ.

ಜೊತೆಗೆ ಒಂದು ಸಂಚಿತ ನಿಧಿ ಎಂಬ ಪರಿಕಲ್ಪನೆಯ ಹಿಂದೆ ಇನ್ನು ಒಂದು ಮುಖ್ಯವಾದ ವಿಚಾರವಿದೆ. ಸದಸ್ಯರಿಗೆ ತಿಳಿದಿರುವಂತೆ ಸಂಚಿತ ನಿಧಿಯ ಕಲ್ಪನೆಯು ಹುಟ್ಟಿದ್ದು ಸುಮಾರು ೧೭೮೭ರಲ್ಲಿ, ಇಂಗ್ಲೆಂಡಿನಲ್ಲಿ, ಅಲ್ಲಿ ಅದನ್ನು ಸೃಷ್ಟಿಸಿದ್ದಕ್ಕೆ ಒಂದು ಕಾರಣವಿತ್ತು. ಮೊದಲು ತೆರಿಗೆಗಳ ಹೊಣೆ ರಾಜನಿಗಿತ್ತು. ಪಾರ್ಲಿಮೆಂಟು ತೆರಿಗೆಗಳನ್ನು ವಸೂಲು ಮಾಡುವ ಮತ್ತು ತನಗೆ ಸರಿತೋರಿದ ಉದ್ದೇಶಗಳಿಗಾಗಿ ಅದನ್ನು ವಿನಿಯೋಗ ಮಾಡುವ ಅಧಿಕಾರವನ್ನು ರಾಜನಿಗೆ ಬಿಟ್ಟಿತ್ತು. ಅನೇಕ ವೇಳೆ ರಾಜನು ಯಾವ ಉದ್ದೇಶಕ್ಕಾಗಿ ಆ ಹಣವನ್ನು ಕೇಳಿದ್ದನೋ, ಅದಕ್ಕಿಂತ ಬೇರೆಯಾದ ಉದ್ದೇಶಗಳಿಗಾಗಿ ವೆಚ್ಚ ಮಾಡುತ್ತಿದ್ದನು. ಒಮ್ಮೆ ತೆರಿಗೆಗಳ ಮೇಲೆ ವೋಟು ಮಾಡಿ ಅಂಗೀಕರಿಸಿದ ಮೇಲೆ ಪಾರ್ಲಿಮೆಂಟಿಗೆ ಅದರ ಮೇಲೆ ಯಾವ ಹತೋಟಿಯೂ ಇರಲಿಲ್ಲ. ಆ ಮೇಲಿನ ಒಂದು ಹಂತದಲ್ಲಿ ಪಾರ್ಲಿಮೆಂಟು ಇನ್ನೊಂದು ಮಾರ್ಗವನ್ನು

ಅನುಸರಿಸಿತು. ಒಂದು ತೆರಿಗೆಯನ್ನು ವಿಧಿಸುವುದು, ಮತ್ತು ವಸೂಲಾದ ಹಣವನ್ನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ವಿನಿಯೋಗಿಸುವುದು. ಹಾಗಾಗಿ, ಆಯವ್ಯಯವನ್ನು ಅನುಮೋದಿಸುವ ಸಂದರ್ಭ ಬಂದಾಗ ಹಣವೇ ಉಳಿದಿರುತ್ತಿರಲಿಲ್ಲ. ತೆರಿಗೆಗಳೆಲ್ಲವನ್ನೂ ಬೇರೆ ಬೇರೆ ನಿರ್ದಿಷ್ಟ ಉದ್ದೇಶಗಳಿಗಾಗಿ ವಿನಿಯೋಗಿಸಿಬಿಟ್ಟಿರಲಾಗುತ್ತಿತ್ತು. ಬಜೆಟ್ಟಿನ ಸಾಮಾನ್ಯ ಉದ್ದೇಶಗಳಿಗೆ ಹಣವೇ ಇರುತ್ತಿರಲಿಲ್ಲ. ರಾಜನು ಹಣವನ್ನು ದುಂದುವೆಚ್ಚಮಾಡಿ ಪೋಲು ಮಾಡುವುದನ್ನು ನಿವಾರಿಸುವ ಸಲುವಾಗಿ, ಅಂದರೆ ಬಿಡಿ ತೆರಿಗೆಗಳನ್ನು ನಿರ್ದಿಷ್ಟ ಉದ್ದೇಶಗಳಿಗೆ ವಿನಿಯೋಗಿಸಿಕೊಳ್ಳುವುದರಿಂದ ಆಗುತ್ತಿದ್ದ ನಷ್ಟವನ್ನು ತಪ್ಪಿಸುವ ಸಲುವಾಗಿ, ತೆರಿಗೆಗಳಿಂದಲೋ ಬೇರೆ ರೀತಿಗಳಿಂದಲೋ ಸಂಗ್ರಹಿಸಿದ ಹಣವೆಲ್ಲವನ್ನೂ ಯಾವುದೋ ಒಂದು ನಿರ್ದಿಷ್ಟ ಉದ್ದೇಶಕ್ಕೆ ವೆಚ್ಚ ಮಾಡದೆ, ಅದನ್ನೊಂದು ನಿಧಿಯನ್ನಾಗಿ ಸಂಗ್ರಹಿಸಿಡುವುದು: ಪಾರ್ಲಿಮೆಂಟು ಆಯವ್ಯಯ ಪತ್ರವನ್ನು ಕುರಿತು ನಿರ್ಧರಿಸುವಾಗ, ತಾನು ವಿನಿಯೋಗ ತೋರಿಸಬಲ್ಲ ಒಂದು ನಿಧಿ ಅವರ ವಶದಲ್ಲಿ ಉಳಿದಿರಬೇಕು ಎಂಬುದಕ್ಕಾಗಿ ಹುಟ್ಟಿತು. ಇದರಿಂದಾಗಿ ಜನತೆಯ ಸಾಮಾನ್ಯ ಅಗತ್ಯಗಳಿಗೆ ಗಮನಕೊಡದೆ ಬಿಡಿಬಿಡಿ ವೆಚ್ಚಗಳಿಗಾಗಿ ಪಾರ್ಲಿಮೆಂಟು ಕಾನೂನು ಮಾಡಿ ಹಣವನ್ನು ಪೋಲುಮಾಡುವುದು ತಪ್ಪಿತು. ಆದ್ದರಿಂದ ಸಂಚಿತ ನಿಧಿಗಾಗಿ ರಚಿಸಿರುವ ಅವಕಾಶವನ್ನು ಸದನವು ಒಪ್ಪಿಕೊಳ್ಳುವುದರಲ್ಲಿ ಏನೂ ಕಷ್ಟವಿರುವುದಿಲ್ಲ ಎಂದು ಭಾವಿಸುತ್ತೇನೆ. ಏಕೆಂದರೆ ಇದೊಂದು ಅತ್ಯಗತ್ಯವಾದ ವಿಚಾರವಾಗಿದೆ. ಹಾಗೂ ಹೇಳಬೇಕೆಂದರೆ, ಒಂದು ಸಂಚಿತ ನಿಧಿಯನ್ನು ರಚಿಸುವ ಸಂವಿಧಾನ ಯಾವುದೂ ಇಲ್ಲ. ಆಸ್ಟ್ರೇಲಿಯ, ಕೆನಡಾ, ದಕ್ಷಿಣ ಆಫ್ರಿಕಾ, ಅಥವಾ ಐರ್ಲೆಂಡ್ ಅಥವಾ ಬೇರೆ ಯಾವುದೇ ದೇಶದ ಸಂವಿಧಾನವನ್ನು ಹೋಲಿಸಿ ನೋಡಿದರೆ, ಎಲ್ಲ ಕಡೆಯೂ ಅವಕಾಶವು ಹೇಳುವುದು ತೆರಿಗೆಗಳಿಂದ ಮತ್ತು ಬೇರೆ ವಿಧಾನಗಳಿಂದ ಬರುವ ಹಣವೆಲ್ಲವನ್ನೂ ಒಂದು ನಿಧಿಯಾಗಿ ಕೂಡಿಸಿ ಸಂಚಿತ ನಿಧಿಯನ್ನು ಸ್ಥಾಪಿಸಬೇಕು, ಎಂದೇ. ಆದ್ದರಿಂದ ನಾವು ಇಲ್ಲಿ ಹೊಸದಾಗಿ ವ್ಯತ್ಯಾಸವೇನನ್ನೂ ಮಾಡಿಲ್ಲ.

ಆಮೇಲೆ, ನಾನು ಅವಕಾಶವನ್ನು ಒದಗಿಸಬೇಕಾದ ಇನ್ನೊಂದು ವಿಚಾರ, ರಾಷ್ಟ್ರಪತಿಯವರ ಪ್ರಮಾಣಿತ ಷೆಡ್ಯೂಲಿನ ಬದಲಿಗೆ ಒಂದು ಧನ ವಿನಿಯೋಗ ಕಾಯ್ದೆ (Appropriation Act)ಯನ್ನು ರಚಿಸುವುದು. ಮಾನ್ಯ ಸದಸ್ಯರು ಕರಡು ಸಂವಿಧಾನದ ೯೪ನೆಯ ವಿಧಿಯನ್ನು ನೋಡಬೇಕು. ಈಗ ಇರುವ ಕಾರ್ಯವಿಧಾನ ಏನೆಂಬುದು ಅದರಿಂದ ತಿಳಿಯುತ್ತದೆ. ಎಲ್ಲಕ್ಕಿಂತ ಮೊದಲು ನಡೆಯುವುದು ಹೀಗೆ: ೯೨ನೆಯ ವಿಧಿಯ ಪ್ರಕಾರ ರಾಷ್ಟ್ರಪತಿಯವರು, ಅಂದರೆ, ಅಂದು ಇರುವ ಸರಕಾರವು ಪಾರ್ಲಿಮೆಂಟಿಗೆ ಒಂದು ನಿಶ್ಚಿತರೂಪದಲ್ಲಿ ಒಂದು ಹಣಕಾಸು ಸಂಬಂಧದ ವರದಿಯನ್ನು ಸಲ್ಲಿಸಬೇಕು. ಆ ರೂಪವನ್ನು ೯೪ನೆಯ ವಿಧಿಯ (೨)ನೆಯ ಖಂಡವು ಹೇಳುತ್ತದೆ. ವೆಚ್ಚವನ್ನು ಎರಡು ವರ್ಗವಾಗಿ ವಿಭಾಗಿಸಲಾಗುತ್ತದೆ. ಒಂದು ವರ್ಗದಲ್ಲಿ ಭಾರತದ ರಾಜ್ಯಾದಾಯ (ಹುಟ್ಟುವಳಿ)ದಿಂದ ನಿರ್ವಹಿಸಬೇಕಾದ ವೆಚ್ಚಗಳು ಸೇರುತ್ತವೆ. ಇನ್ನೊಂದು ವರ್ಗದಲ್ಲಿ ಭಾರತದ ರಾಜ್ಯಾದಾಯದಿಂದ ನಿರ್ವಹಿಸಿಕೊಡದಂತಹ ವೆಚ್ಚಗಳು ಸೇರುತ್ತವೆ. ಅಂದರೆ ಸಂಚಿತ ನಿಧಿಯಿಂದ ನಿರ್ವಹಿಸಬಾರದಂಥವು. ಈ ವರದಿಯನ್ನು ಸಲ್ಲಿಸಿದ ನಂತರದ ಹಂತವನ್ನು ೯೩ನೆಯ ವಿಧಿಯು ಹೇಳುತ್ತದೆ. ಅದರ ಪ್ರಕಾರ ನಡೆಯುವುದು ಇದು: ಪಾರ್ಲಿಮೆಂಟು ತನ್ನ ಮುಂದೆ ಬಂದ ಹಣಕಾಸು ತಃಖ್ತೆಯನ್ನು ಒಂದೊಂದೇ ಶೀರ್ಷಿಕೆಯಾಗಿ, ಉಪಶೀರ್ಷಿಕೆಯಾಗಿ, ಒಂದೊಂದೇ ಬಿಡಿ ಅಂಶವನ್ನಾಗಿ ತೆಗೆದುಕೊಂಡು ಪರಿಶೀಲಿಸಿ, ಕಾರ್ಯಾಂಗವು ಅಲ್ಲಿ ನಮೂದಿಸಿರುವ ಮೊತ್ತವನ್ನು ಒಪ್ಪುತ್ತದೆ ಅಥವಾ ಅದನ್ನು ತಗ್ಗಿಸುತ್ತದೆ. ಇದನ್ನು ಕಡಿತ ಸೂಚನೆ (Cut motion)ಯ ಮೇಲೆ ಸದನವು ಅಂಗೀಕರಿಸುವ ನಿರ್ಣಯಗಳಿಂದ ನಡೆಸಲಾಗುತ್ತದೆ. ಅಷ್ಟು ಮಾಡಿದ ನಂತರ, ಈಗಿರುವ ಪದ್ಧತಿಯಂತೆ,

೯೪ನೆಯ ವಿಧಿಯ ಅವಕಾಶಗಳು ಅನ್ವಯಿಸುತ್ತವೆ. ಅಂದರೆ, ಪಾರ್ಲಿಮೆಂಟು ಮಂಡಿಸಿದ ವೆಚ್ಚದ ವಿವಿಧ ಶೀರ್ಷಿಕೆಗಳಿಗೆ ಅವಕಾಶಗಳನ್ನು ಮಾಡುವುದರಲ್ಲಿ ಅಸೆಂಬ್ಲಿಯು ಏನು ಮಾಡಿದೆಯೊ ಅದನ್ನು ಪ್ರಮಾಣಿಸುತ್ತಾರೆ. ಈಗ ಹೊಸಪದ್ಧತಿಯಂತೆ ರಾಷ್ಟ್ರಪತಿಯವರು ಪ್ರಮಾಣಿಸುವುದಕ್ಕೆ ಪ್ರತಿಯಾಗಿ ಶಾಸನ ಸಭೆಯು ಸೂಕ್ತವಾದ ಒಂದು ಧನ ವಿನಿಯೋಗ ಮಸೂದೆಯನ್ನು ಅಂಗೀಕರಿಸುವುದನ್ನು ಹೇಳುತ್ತದೆ.

ಪ್ರಸ್ತುತ ಚಾಲ್ತಿಯಲ್ಲಿರುವ ವಿಧಾನಕ್ಕೆ ಬದಲಾಗಿ ಧನ ವಿನಿಯೋಗ ಮಸೂದೆಯನ್ನು ರಚಿಸುವುದನ್ನು ಕುರಿತು ಕರಡು ಸಂವಿಧಾನದ ೯೪ನೆಯ ವಿಧಿಯ ಅವಕಾಶದ ಪರವಾದ ವಾದವು ಹೀಗಿದೆ. ಶಾಸನ ಸಭೆಯು ಪೂರೈಕೆಯನ್ನು ಅನುಮೋದಿಸುತ್ತದೆ. ಆದ್ದರಿಂದ ಶಾಸನ ಸಭೆಯೇ ತಾನು ಮಾಡಿದುದನ್ನು ಒಂದು ಶಾಸನದ ರೂಪದಲ್ಲಿ ಅಂಗೀಕರಿಸುವುದು ಸೂಕ್ತ. ಶಾಸನ ಸಭೆಯು ಪೂರೈಕೆಯನ್ನು ಅನುಮೋದಿಸುವ ವಿಷಯದಲ್ಲಿ ಮಾಡಿದ ಕೆಲಸವನ್ನು ರಾಷ್ಟ್ರಪತಿಯವರು ಒಂದು ಕಾರ್ಯಾಂಗ ಶಾಸನದನ್ವಯ ಪ್ರಮಾಣಿಸಲು ಬಿಡಬೇಕಾದ ಅಗತ್ಯವಾದರೂ ಏನು? ನಾವು ಪರಿಶೀಲಿಸಬೇಕಾದ ಮುಖ್ಯವಾದ ವಿಚಾರ ಇದು. ಹಣಕಾಸಿನ ವಿಷಯದಲ್ಲಿ ಪಾರ್ಲಿಮೆಂಟು ಸರ್ವೋನ್ನತ. ಏಕೆಂದರೆ, ೯೩ನೆಯ ವಿಧಿಯ ಅವಕಾಶಗಳ ಪ್ರಕಾರ ಪಾರ್ಲಿಮೆಂಟು ಮಂಜೂರು ಮಾಡದೆ ಯಾವುದೇ ವೆಚ್ಚವನ್ನೂ ಮಾಡುವಂತಿಲ್ಲ. ನಿರ್ದಿಷ್ಟ ಶೀರ್ಷಿಕೆಯ ನಿರ್ದಿಷ್ಟ ವೆಚ್ಚವನ್ನು ಪಾರ್ಲಿಮೆಂಟು ಮಂಜೂರು ಮಾಡುವುದಾದರೆ ನಿರ್ದಿಷ್ಟ ಶೀರ್ಷಿಕೆಯ ವೆಚ್ಚಕ್ಕೆ ಸಂಬಂಧಿಸಿದಂತೆ ಅದು ಮಾಡಿರುವುದನ್ನು ಪ್ರಮಾಣಿಸಲು ಸೂಕ್ತ ಪ್ರಾಧಿಕಾರವು ಪಾರ್ಲಿಮೆಂಟೇ ಹೊರತು ರಾಷ್ಟ್ರಪತಿಯವರಲ್ಲ. ಆದ್ದರಿಂದಲೇ, ಈ ಕರಡು ಸಂವಿಧಾನದ ೯೪ನೆಯ ವಿಧಿಯಲ್ಲಿರುವ ವಿಧಾನಕ್ಕೆ ಬದಲಾಗಿ ಒಂದು ಧನ ವಿನಿಯೋಗ ಮಸೂದೆಯ ವಿಧಾನವನ್ನು ಸೂಚಿಸಲಾಗಿದೆ.

ಅಷ್ಟೇ ಅಲ್ಲ, ೯೪ನೆಯ ವಿಧಿಯು ೧೯೩೫ರ ಭಾರತ ಸರಕಾರ ಶಾಸನದ ಪ್ರಕಾರ ಸೂಕ್ತವಾಗಿತ್ತು. ಏಕೆಂದರೆ ಅಲ್ಲಿ, ತನ್ನ ವಿವೇಚನೆ ಹಾಗೂ ವೈಯಕ್ತಿಕ ನಿರ್ಧಾರಗಳ ಪ್ರಕಾರ ಕರ್ತವ್ಯಗಳನ್ನು ನಿರ್ವಹಿಸುವುದರಲ್ಲಿ ಯಾವ ವೆಚ್ಚಗಳು ಅಗತ್ಯವಾಗಿದ್ದುವೋ ಅವುಗಳನ್ನು ಪ್ರಮಾಣಿಸುವ ಹಕ್ಕು ಗವರ್ನರ್ ಜನರಲ್ಲರಿಗಿದ್ದಿತು. ತನ್ನ ವಿವೇಚನೆ ಮತ್ತು ವ್ಯಕ್ತಿಗತ ನಿರ್ಧಾರಗಳಿಗೆ ಅನುಗುಣವಾಗಿ ಗವರ್ನರ್ ಜನರಲ್ ನಿರ್ವಹಿಸಬೇಕಾಗಿದ್ದ ಕೆಲಸಗಳಿಗೆ ಬೇಕಾಗಿದ್ದ ಹಣ ಪಾರ್ಲಿಮೆಂಟಿನ ವ್ಯಾಪ್ತಿ ಮತ್ತು ಅಧಿಕಾರಗಳಿಂದ ಆಚೆನದಾಗಿದ್ದಿತು. ಅವನಿಗೆ ಆ ಮೊತ್ತವನ್ನು ಬದಲಾಯಿಸಲು, ವ್ಯತ್ಯಾಸಗೊಳಿಸಲು, ಕೂಡಿಸಲು ಅಧಿಕಾರವಿದ್ದಿತು.

ಆದ್ದರಿಂದ ಗವರ್ನರ್ ಜನರಲ್ಲನೇ ಪ್ರಮಾಣಿಸಲು ಅಂತಿಮ ಅಧಿಕಾರಿಯಾಗಿರುವುದು ಅಗತ್ಯವಾಗಿದ್ದಿತು. ಏಕೆಂದರೆ ತನ್ನ ವಿಶೇಷ ಕರ್ತವ್ಯಗಳ ನಿರ್ವಹಣೆಗೆ ಬೇಕಾದ ಬಜೆಟ್ ಅವಕಾಶವನ್ನು ಮಾಡಿಕೊಳ್ಳುವ ಸ್ವತಂತ್ರ ಅಧಿಕಾರ ಅವನಿಗಿದ್ದಿತು. ಆದರೆ ನಮ್ಮ ನೂತನ ಸಂವಿಧಾನದಲ್ಲಿ ರಾಷ್ಟ್ರಪತಿಯವರಿಗೆ ತಮ್ಮ ವಿವೇಚನೆಯಂತೆ ಅಥವಾ ವ್ಯಕ್ತಿಗತ ನಿರ್ಧಾರದಂತೆ ನಿರ್ವಹಿಸಬೇಕಾದ ಕೆಲಸ ಯಾವುದೂ ಇಲ್ಲ. ಆದ್ದರಿಂದ ಪ್ರಮಾಣಿಸುವ ಕಾರ್ಯವಿಧಾನವೇ ಸಂಪೂರ್ಣವಾಗಿ, ನೂತನ ಸಂವಿಧಾನದ ಪ್ರಕಾರ ಅಸಂಗತವಾಗುತ್ತದೆ. ಅಲ್ಲದೆ, ವಿನಿಯೋಗ ಶಾಸನದ ಕಾರ್ಯವಿಧಾನವು ಕೆನಡಾ, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕಾ ಮತ್ತು ಗ್ರೇಟ್ ಬ್ರಿಟನ್‌ಗಳ ಪಾರ್ಲಿಮೆಂಟರಿ ಸರಕಾರಗಳಲ್ಲಿ ಜಾರಿಯಲ್ಲಿರುವ ವಿಧಾನವಾಗಿದೆ. ಇನ್ನು ಒಂದು ವಿಷಯವನ್ನು ಪ್ರಸ್ತಾಪಿಸಬೇಕು. ೧೯೩೫ರಲ್ಲಿ ಭಾರತ ಸರಕಾರ ಶಾಸನವು ಪರಿಶೀಲನೆಯಲ್ಲಿದ್ದಾಗ, ಈ ವಿಚಾರವನ್ನು ಚರ್ಚಿಸಲಾಯಿತು. ಸೆಕ್ರೆಟರಿ ಆಫ್ ಸ್ಟೇಟ್ ಅವರೇ ಸಲಹೆಯನ್ನು ಮಂಡಿಸಿದರು. ಅಸೆಂಬ್ಲಿಯು ಮಂಜೂರುಮಾಡಿದ ವೆಚ್ಚದ ದೃಢೀಕರಣವನ್ನು ಒಂದು ಸೂಕ್ತವಾದ ವಿನಿಯೋಗ ಶಾಸನವು ಮಾಡಬೇಕೆ ಹೊರತು ಪ್ರಮಾಣೀಕರಣದಿಂದಲ್ಲ.

ಆದರೆ ಅಂದಿನ ಭಾರತ ಸರಕಾರವು ವಿನಿಯೋಗ ಶಾಸನದ ಪರಿಕಲ್ಪನೆಯನ್ನು ಒಪ್ಪಲಿಲ್ಲ. ಏಕೆಂದರೆ ತನ್ನದೇ ಕರ್ತವ್ಯಗಳ ನಿರ್ವಹಣೆಗೆ ಬಜೆಟ್ಟಿನಲ್ಲಿ ನಿರ್ದಿಷ್ಟ ಮೊತ್ತವನ್ನು ನಿಗದಿಪಡಿಸಲು ಗವರ್ನರ್ ಜನರಲ್ಲನಿಗೆ ಅಧಿಕಾರವಿದ್ದಿತು. ಇಲ್ಲದೆ ಹೋಗಿದ್ದರೆ ಸೆಕ್ರೆಟರಿ ಆಫ್ ಸ್ಟೇಟ್ ಅವರೇ ಈ ಸಲಹೆಯ ಪರವಾಗಿದ್ದರು. ಆದರೆ ೧೯೩೫ರಲ್ಲಿ ಅವರ ಈ ಸಲಹೆಯನ್ನು ಭಾರತ ಸರಕಾರವು ತಳ್ಳಿಹಾಕಿತು. ಆದರೆ ಈಗ ಮೊತ್ತವನ್ನು ನಿಗದಿಗೊಳಿಸುವ ಮತ್ತು ಹಣವನ್ನು ವೆಚ್ಚ ಮಾಡುವ ಅಧಿಕಾರವನ್ನು ಕಾರ್ಯಾಂಗಕ್ಕೆ ಕೊಡುವ ಈ ಕೆಲಸವನ್ನೇ ಈಗ ಉಳಿಸಿಕೊಳ್ಳುವ ಅಗತ್ಯವಿಲ್ಲ. ವೆಚ್ಚಕ್ಕೆ ಹಣವನ್ನು ಮಂಜೂರು ಮಾಡುವ ವಿಷಯದಲ್ಲಿ ಪಾರ್ಲಿಮೆಂಟು ಎಲ್ಲಿ ಸರ್ವೋನ್ನತವಾಗಿದೆಯೋ ಆ ದೇಶಗಳಲ್ಲಿ ಪ್ರಚಲಿತವಾಗಿರುವ ವಿಧಾನಕ್ಕೆ ಸರಿಸಮವಾಗಿ ನಮ್ಮ ಕಾರ್ಯವಿಧಾನವನ್ನು ರೂಪಿಸುವುದು ಅಪೇಕ್ಷಣೀಯವಾಗಿದೆ.

ನಾವು ಈಗ ಹೊಸದಾಗಿ ಆಳವಡಿಸಿರುವ ಇನ್ನೊಂದು ಅವಕಾಶ ವೋಟ್ ಆನ್ ಎಕೌಂಟ್ ಲೇಖಾನುದಾನ (Vote on Account) ಎನ್ನುವುದು. ಅದನ್ನು ಏಕೆ ಅಳವಡಿಸಿದ್ದೇವೆ ಎನ್ನುವುದನ್ನು ವಿವರಿಸುವುದು ಅಗತ್ಯ. ಅದಕ್ಕಾಗಿ ಮತ್ತೆ ನಾನು ೯೩ನೆಯ ವಿಧಿಯನ್ನು, ಅದೀಗ ಇರುವಂತೆ ನೋಡಬೇಕೆಂದು ಸದನವನ್ನು ಕೇಳಬೇಕಾಗಿದೆ. ೯೩ನೆಯ ವಿಧಿಯ ಪ್ರಕಾರ ಯಾವುದೇ ಕೆಲಸಕ್ಕೆ ಯಾವುದೇ ಮೊತ್ತದ ಹಣವನ್ನು, ಪಾರ್ಲಿಮೆಂಟು ಇಡೀ ಬಜೆಟ್ಟಿನಲ್ಲಿ ವಿವರವಾಗಿ ಅಂಗೀಕರಿಸಿದ ಹೊರತು ನೀಡುವಂತಿಲ್ಲ– ೯೩ನೆಯ ವಿಧಿಯ ಸಾರಾಂಶ ಅದು. ಬಜೆಟ್ಟನ್ನು ಶೀರ್ಷಿಕೆ, ಉಪಶೀರ್ಷಿಕೆ ಮತ್ತು ಅಂಶಗಳಾಗಿ ಮಂಡಿಸಬೇಕು. ಪಾರ್ಲಿಮೆಂಟು ಆ ಶೀರ್ಷಿಕೆಗಳು, ಉಪಶೀರ್ಷಿಕೆಗಳು ಮತ್ತು ಅಂಶಗಳನ್ನು ವಿವರವಾಗಿ ಪರಿಶೀಲಿಸಿ ಅಂಗೀಕರಿಸಬೇಕು. ಬಜೆಟ್ ಅಂಗೀಕಾರವೆಂದರೆ ಅದೇ ಅರ್ಥ. ತಮಗೆಲ್ಲ ತಿಳಿದಿರುವಂತೆ ನಮ್ಮ ಬಜೆಟ್ ಅಗಾಧವಾದದ್ದು, ಸುಮಾರು ೨೫೦ ಕೋಟಿ ರೂಪಾಯಿಗಳನ್ನು ವಿಧವಿಧವಾದ ಅಂಶಗಳ ಮೇಲೆ ವೆಚ್ಚಮಾಡುವುದನ್ನು ಅದು ಒಳಗೊಂಡಿದೆ. ೯೩ನೆಯ ವಿಧಿಯ ಅವಕಾಶವು, ಎಲ್ಲಾ ವಿವರಗಳನ್ನು ಪಾರ್ಲಿಮೆಂಟು ಅಂಗೀಕರಿಸದೆಯೇ ಹಣವನ್ನು ವೆಚ್ಚ ಮಾಡುವಂತಿಲ್ಲ ಎಂಬ ಅವಕಾಶವು ಕಟ್ಟುನಿಟ್ಟಾಗಿ ಉಳಿದರೆ, ಅಧಿಕೃತ ವರ್ಷವು ಮುಗಿಯುವುದರೊಳಗಾಗಿ ಬಜೆಟ್ಟನ್ನು ಅಂಗೀಕರಿಸತಕ್ಕದ್ದು ಎಂಬ ಅವಕಾಶವನ್ನು ಉಳಿಸಿಕೊಂಡರೆ ಆಗ ಬಜೆಟ್ಟನ್ನು ಚರ್ಚೆ ಮಾಡುವುದಕ್ಕೆ ತುಂಬಾ ಕಡಿಮೆ ಸಮಯ ಉಳಿಯುತ್ತದೆ. ಏಕೆಂದರೆ ಬಜೆಟ್ಟನ್ನು ಎಲ್ಲಾ ವಿವರಗಳಲ್ಲಿ ಪಾರ್ಲಿಮೆಂಟು ಅಂಗೀಕರಿಸದೆ ಒಂದು ರೂಪಾಯಿಯನ್ನು ವೆಚ್ಚ ಮಾಡುವಂತಿಲ್ಲ ಎಂದು ೯೩ನೆಯ ವಿಧಿಯ ಉಪಬಂಧಗಳು ಕಟ್ಟಿಹಾಕುತ್ತವೆ. ಆಗ ಬಜೆಟ್ಟನ್ನು ವಿವರವಾಗಿ ಚರ್ಚಿಸುವ ನಿಮ್ಮ ಹಕ್ಕನ್ನು ಬಿಟ್ಟುಕೊಡಬೇಕು. ಇಲ್ಲವೆ ೯೩ನೆಯ ವಿಧಿಗೆ ಅಪವಾದವನ್ನು ಹೇಳುವ ಇನ್ನೊಂದು ಅವಕಾಶವನ್ನು ರಚಿಸಬೇಕು. ನಾನೀಗ ತಿದ್ದುಪಡಿಯ ಮೂಲಕ ಮಂಡಿಸಲು ಬಯಸುವ ಲೇಖಾನುದಾನ ವಿಧಾನವು, ಪಾರ್ಲಿಮೆಂಟು ಕಾರ್ಯಾಂಗಕ್ಕೆ ಒಂದು ಒಟ್ಟು ಮೊತ್ತವನ್ನು ಮಂಜೂರು ಮಾಡಿ, ವರ್ಷದ ಎರಡು ಎಂದಿಟ್ಟುಕೊಳ್ಳೋಣ, ಎರಡು ತಿಂಗಳವರೆಗೆ ಸೇವೆಗಳ ಮೇಲೆ ವೆಚ್ಚಮಾಡಲು ಕಾರ್ಯಾಂಗಕ್ಕೆ ಅವಕಾಶ ಕೊಡುತ್ತದೆ. ಅದೇ ಸಮಯಕ್ಕೆ ಪಾರ್ಲಿಮೆಂಟಿಗೆ ಸರಕಾರದ ಬಜೆಟ್ ಅವಕಾಶಗಳನ್ನು ಹಣಕಾಸು ಅವಕಾಶಗಳನ್ನು ಹೆಚ್ಚು ವಿವರವಾಗಿ ಪೂರ್ತಿ ಅಲ್ಲದಿದ್ದರೂ– ಚರ್ಚಿಸಲು ಆ ಎರಡು ತಿಂಗಳ ಕಾಲಾವಕಾಶವು ದೊರಕುತ್ತದೆ. ಆದ್ದರಿಂದ ಲೇಖಾನುದಾನ (Vote on Account) ಸಂಬಂಧವಾದ ಅವಕಾಶವನ್ನು ಸಮ್ಮತಿಸಿದೆ. ಅದು ಸುಮಾರು ಎರಡು ತಿಂಗಳ ಕಾಲ, ಅದನ್ನು ಸರ್ಕಾರವು ವಿರೋಧ ಪಕ್ಷಗಳ ನಾಯಕರೊಂದಿಗೆ ಚರ್ಚಿಸಿ ಒಂದು ಒಪ್ಪಂದಕ್ಕೆ ಬಂದು ನಿರ್ಧರಿಸಬಹುದು. ವೆಚ್ಚಮಾಡಲು ಕಾರ್ಯಾಂಗಕ್ಕೆ ನಿರ್ದಿಷ್ಟವಾದ ಒಟ್ಟು ಮೊತ್ತವನ್ನು ಮಂಜೂರುಮಾಡುತ್ತದೆ.

ಲೇಖಾನುದಾನ ನೀಡಲು ಅವಕಾಶವನ್ನು ಅಂಗೀಕರಿಸದೆ ಹೋದ ಪಕ್ಷದಲ್ಲಿ ಬಜೆಟ್ಟನ್ನು ವಿವರವಾಗಿ ಚರ್ಚಿಸಲು ಈಗಿರುವುದಕ್ಕಿಂತ ಹೆಚ್ಚಿನ ಸಮಯವು ದೊರಕುವುದಿಲ್ಲ. ಕಳೆದಸಾರಿ ಸದನದಲ್ಲಿ ಬಜೆಟ್ಟನ್ನು ತುಂಬಾ ಅವಸರದಲ್ಲಿ ತೋರಿಸಲಾಯಿತೆಂಬ ಭಾವನೆ ಬಂದಿತು. ಬೇರೆ ಬೇರೆ ಅಂಶಗಳನ್ನು ಕುರಿತು ಚರ್ಚಿಸಲು ಏಳು ಅಥವಾ ಎಂಟು ದಿನಗಳಿಗಿಂತ ಹೆಚ್ಚು ಸಮಯ ಸಿಕ್ಕಲಿಲ್ಲ. ಗಿಲೋಟಿನ್ ಅನ್ವಯಿಸಬೇಕಾಯಿತು ಎಂಬ ದೂರುಗಳು ಬಂದುವು. ಆದ್ದರಿಂದ ಬಜೆಟ್ಟಿನ ವಿವರಗಳನ್ನು ಚರ್ಚಿಸಲು ಹೆಚ್ಚಿನ ಕಾಲಾವಕಾಶ ಬೇಕು ಎಂದು ಸದನವು ಇಚ್ಛಿಸಿದ ಪಕ್ಷದಲ್ಲಿ, ಸಂವಿಧಾನದಲ್ಲಿ ಯಾವುದಾದರೂ ಒಂದು ಅವಕಾಶವನ್ನು ಮಾಡಿ, ಕಾರ್ಯಾಂಗವು ಸಂಚಿತ ನಿಧಿಯಿಂದ ಗೊತ್ತಾದ ಒಟ್ಟು ಮೊತ್ತವೊಂದನ್ನು ಪಡೆದು ಎರಡು ತಿಂಗಳ ವೆಚ್ಚವನ್ನು, ಸದನವು ಚರ್ಚೆಗೆ ಎರಡು ತಿಂಗಳು ಬೇಕು ಎಂದು ಭಾವಿಸಿದರೆ, ನಿರ್ವಹಿಸಲು ಅನುಮತಿ ನೀಡಬೇಕು. ೯೩ನೆಯ ವಿಧಿಯ ಉಪಬಂಧಗಳು ತುಂಬಾ ಕಟ್ಟುನಿಟ್ಟಾಗಿವೆ. ಸಮಗ್ರ ಬಜೆಟ್ಟನ್ನು ಎಲ್ಲಾ ವಿವರಗಳಲ್ಲೂ ಅಂಗೀಕರಿಸದೆ ಹಣವನ್ನು ವೆಚ್ಚ ಮಾಡುವಂತಿಲ್ಲ, ಆದ್ದರಿಂದ ೯೩ನೆಯ ವಿಧಿಯ ಉಪಬಂಧಗಳಿಗೆ ಒಂದು ಅಪವಾದವನ್ನು ಮಾಡಲೇಬೇಕು. 'ಲೇಖಾನುದಾನಕ್ಕೆ ಅವಕಾಶ' ಎಂದು ಕರೆಯುವ ಉಪಬಂಧದಿಂದ ಆ ಬಗೆಯ ಅಪವಾದವನ್ನು ಕಲ್ಪಿಸಲಾಗಿದೆ.

ಇವು ನಾವು ಕರಡು ಸಂವಿಧಾನದಲ್ಲಿ ಮಾಡಿರುವ ಮೂರು ಮುಖ್ಯವಾದ ಬದಲಾವಣೆಗಳು. ಮಾನ್ಯರೆ, ಈ ಮಾತುಗಳೊಂದಿಗೆ ನಾನು ಸೂಚಿಸಿರುವ ತಿದ್ದುಪಡಿಗಳನ್ನು ಈಗ ಮಂಡಿಸುತ್ತೇನೆ.

***ಶ್ರೀ ಬಿ. ದಾಸ್ :** ......ಈಗ ತಿದ್ದುಪಡಿಯಾಗಲಿರುವಂತೆ ಈ ವಿಧಿಗಳು ತಪ್ಪಾಗಲು ಆಸ್ಪದವೇ ಇಲ್ಲದಂತಾಗುತ್ತವೆ. ಇದು ನನಗೆ ತುಂಬಾ ಸಂತೋಷವನ್ನುಂಟುಮಾಡಿದೆ. ಸಚಿವರು ಆಲಸಿಗಳಾಗಲು ಅವಕಾಶವಿಲ್ಲ, ಹಾಗೆಯೇ ದುಂದುವೆಚ್ಚಮಾಡಲೂ ಅವಕಾಶವಿಲ್ಲ. ಮತ್ತೊಮ್ಮೆ ನಾನು ಡಾ.ಅಂಬೇಡ್ಕರ್ ಅವರನ್ನು ಅಭಿನಂದಿಸುತ್ತೇನೆ.

**ಮಾನ್ಯ ರೆ. ಜೆ.ಜೆ.ಎಂ ನಿಕೋಲ್ಸ್ ರಾಯ್ :** (ಅಸ್ಸಾಂ: ಸಾಮಾನ್ಯ) ನಾನು ಮಾತನಾಡುವ ಮುಂಚೆ ಕೆಲವು ಅಂಶಗಳ ಮೇಲೆ ಡಾ.ಅಂಬೇಡ್ಕರ್ ಅವರಿಂದ ಸ್ಪಷ್ಟೀಕರಣ ಪಡೆಯಬೇಕಾಗಿದೆ. ಭಾರತ ಸರಕಾರವು 'ಸಂಚಿತ ನಿಧಿ' ಎಂದು ಕರೆಯಬೇಕಾದ ಒಂದು ನಿಧಿಯನ್ನು ಹೊಂದಿರಲು ಈ ತಿದ್ದುಪಡಿಯು ಬಲಾತ್ಕರಿಸುತ್ತದೆಯೆ? ಅಥವಾ ಸರಕಾರಕ್ಕೆ ಅನುಕೂಲ ಕಲ್ಪಿಸುವಂತಹ ತಿದ್ದುಪಡಿಯೋ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅದು ಈಗಾಗಲೇ ಇದೆ. ಕೇವಲ ಹೆಸರಿನ ಬದಲಾವಣೆ ಅಷ್ಟೆ.

**ಮಾನ್ಯ ರೆ. ಜೆ.ಜೆ.ಎಂ. ನಿಕೋಲ್ಸ್ ರಾಯ್ :** ಹಾಗಾದರೆ ಶಾಸನ ಸಭೆಯಲ್ಲಿ ಒಂದು ವಿನಿಯೋಗ ಶಾಸನವು ಅಂಗೀಕಾರವಾಗಬೇಕು, ಮತ್ತು ಅದು ಅಧಿವೇಶನದಲ್ಲೇ ಅಂಗೀಕಾರವಾಗಬೇಕು ಅಲ್ಲವೆ?

**ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್ :** ಹೌದು.

**ಮಾನ್ಯ ರೆ. ಜೆ.ಜೆ.ಎಂ ನಿಕೋಲ್ಸ್ ರಾಯ್ :** ಅದಕ್ಕೆ ಸಮಯ ಹಿಡಿಯುತ್ತದೆ, ಸಂದೇಹವಿಲ್ಲ. ಮಾನ್ಯರೆ, ಇದನ್ನು ದೃಷ್ಟಿಯಲ್ಲಿರಿಸಿಕೊಂಡು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಭಾರತ ಸರಕಾರದ ಸಚಿವರು ಹಣವನ್ನು ವೆಚ್ಚಮಾಡುವುದನ್ನೂ ಹಣದ ಪೋಲಾಗುವುದನ್ನು ಕುರಿತು ಬೇಕಾದಷ್ಟು ಟೀಕೆಗಳು ಬಂದಿವೆ. ಪ್ರಾಂತೀಯ ಸರಕಾರಗಳ ವಿಷಯದಲ್ಲೂ ಹಾಗೆಯೇ ಇರಬಹುದು. ಈ ೯೦ ನೆಯ

---

* ಸಿ.ಎ.ಡಿ. ಸಂಪುಟ ೮, ೮ನೇ ಜೂನ್ ೧೯೪೯, ಪುಟ ೭೩೭

ವಿಧಿಯ ನಿಯಮಗಳು ಪ್ರಾಂತೀಯ ಸರಕಾರಗಳಿಗೂ ಅನ್ವಯವಾಗುವುದಾದ ಪಕ್ಷದಲ್ಲಿ ಉತ್ತಮವಲ್ಲವೆ? ಅವೇ ೧೭೪ನೆಯ ವಿಧಿಯಲ್ಲೂ ಇವೆ.

**ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್** : ಹೌದು.

*****

* **ಮಾನ್ಯ ರೆ. ಜೆ.ಜೆ.ಎಂ. ನಿಕೋಲ್ಸ್ ರಾಯ್ :** ಪರಿಸ್ಥಿತಿ ಅದೇಯೋ ಅಥವಾ ಪ್ರತಿಯೊಂದು ಪ್ರಾಂತವೂ ವಿನಿಯೋಗ ಶಾಸನವನ್ನು ಅಂಗೀಕರಿಸಿದ ನಂತರವೇ ವೆಚ್ಚಕ್ಕೆ ಹಣವನ್ನು ಒದಗಿಸಿಕೊಳ್ಳಬೇಕೆಂದು ಕಡ್ಡಾಯ ಮಾಡಲಾಗುತ್ತದೋ?

**ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್ :** ವಿನಿಯೋಗ ಶಾಸನವು ಕಡ್ಡಾಯವಾಗುತ್ತದೆ. ಆದರೆ ಲೇಖಾನುದಾನವು ಪ್ರತಿಯೊಂದು ಸಚಿವ ಖಾತೆಗೂ ಐಚ್ಛಿಕವಾಗಿರುತ್ತದೆ. ಯಾವುದೇ ಸಚಿವ ಖಾತೆಯು, ಲೇಖಾನುದಾನದ ಮೇಲೆ ಹಣವು ಬೇಕಾಗಿದ್ದರೆ, ಶಾಸನ ಸಭೆಯನ್ನು ಕೇಳಬಹುದು.

**ಮಾನ್ಯ ರೆ. ಜೆ.ಜೆ.ಎಂ ನಿಕೋಲ್ಸ್ ರಾಯ್ :** ಅಸ್ಸಾಮಿನ ಅಥವಾ ಬೇರಾವುದೋ ಪ್ರಾಂತದ ಸಚಿವ ಸಂಪುಟವು ಈಗ ನಾವು ಬಿಟ್ಟುಕೊಂಡಿರುವ ಕಾರ್ಯವಿಧಾನವನ್ನೇ ಅನುಸರಿಸಲು ಬಯಸಿದ ಪಕ್ಷದಲ್ಲಿ, ಗವರ್ನರರ ಪ್ರಮಾಣಪತ್ರ ಪಡೆದು ಹಾಗೆ ಮಾಡಲು ಅವಕಾಶವಿದೆಯೆ?

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಈಗ ಗವರ್ನರರ ಪ್ರಮಾಣಪತ್ರ ಎಂಬುದೇ ಇಲ್ಲವಲ್ಲ.

*****

** **ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್ :** ಶ್ರೀ ಟಿ.ಟಿ. ಕೃಷ್ಣಮಾಚಾರಿ ಅವರು ಹೇಳಿರುವುದಕ್ಕಿಂತ ಹೆಚ್ಚು ಉಪಯುಕ್ತವಾದ ಏನನ್ನೂ ನಾನು ಕೂಡಿಸಬಲ್ಲೆ ಎನಿಸುವುದಿಲ್ಲ. ವಿವಿಧ ತಿದ್ದುಪಡಿಗಳ ಮೇಲಿನ ನನ್ನ ಹೇಳಿಕೆಗಳನ್ನು ಮುಂದಕ್ಕೆ ಇಟ್ಟುಕೊಳ್ಳುತ್ತೇನೆ.

(ಮೊದಲೇ ಸೂಚಿಸಿದ ಡಾ.ಅಂಬೇಡ್ಕರ ಅವರ ತಿದ್ದುಪಡಿಗಳು ಅಂಗೀಕೃತವಾದವು, ಮಿಕ್ಕವು ತಿರಸ್ಕೃತವಾದವು. ತಿದ್ದುಪಡಿಯಾದಂತೆ ೯೦ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು)

*****

**ಕಾರುಗಳ ಸಂಖ್ಯಾಫಲಕಗಳ ಮೇಲೆ ಹಿಂದೀ ಸಂಖ್ಯೆಗಳ ನಮೂದು:**

\+ **ಪಂಡಿತ ಬಾಲಕೃಷ್ಣ ಶರ್ಮ :** ಅವರಲ್ಲಿ ನನ್ನ ವಿನಂತಿ ಯಾವಾಗಲೂ ಹೀಗಿದೆ. ಒಂದು ಪ್ರಾಂತವಾಗಿ ದೆಹಲಿಯ ಸುತ್ತ ಹಿಂದಿಯನ್ನು ಸರ್ಕಾರದ ಭಾಷೆಯೆಂದೂ ದೇವನಾಗರಿಯನ್ನು ಸರ್ಕಾರದ ಲಿಪಿಯೆಂದೂ ಘೋಷಿಸಿಕೊಂಡಿರುವ ಪ್ರಾಂತಗಳಿವೆ.

**ಮಾನ್ಯ ಅಧ್ಯಕ್ಷರು :** ಸದ್ದು, ಸದ್ದು, ನೀವು ಕೊಡಬೇಕೆಂದು ಬಯಸಿದ ಮಾಹಿತಿ ನನ್ನ ಬಳಿ ಇದೆ. ನಾನು ಹೇಳಿದಂತೆ, ಸನ್ಮಾನ್ಯ ಸದಸ್ಯರು ವಿಶೇಷ ಹಕ್ಕನ್ನು ಕುರಿತು ನಾನು ರೂಲಿಂಗ್ ಕೊಡುವಂತೆ

---

* ಅದೇ ಪು. ೭೩೮

** ಅದೇ ಪು. ೭೪೧

* ಸಿ.ಎ.ಡಿ. ಸಂಪುಟ ೮, ೧೦ನೇ ಜೂನ್ ೧೯೪೯, ಪುಟ ೭೪೬ – ೭೪೮

** ಅದೇ ಪು. ೭೫೦

\+ ಅದೇ ಪು. ೭೫೪

ಒತ್ತಾಯಪಡಿಸಬಾರದು. ಅದು ಅವರ ಪರವಾಗಿ ಇರದೆ ಹೋಗಬಹುದು. ನಾನು ಆಗಲೆ ಹೇಳಿದಂತೆ ಈ ವಿಷಯವನ್ನು ಸರಕಾರದೊಂದಿಗೆ ವ್ಯವಹರಿಸುತ್ತೇನೆ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಕಾನೂನನ್ನು ಮುರಿಯಲು ಯಾವ ವಿಶೇಷ ಹಕ್ಕೂ ಇಲ್ಲ.

## ವಿಧಿ ೯೨

* **ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ. ೧."೯೨ನೆಯ ವಿಧಿ (೩)ನೆಯ ಖಂಡದ (ಬಿ) ಉಪಖಂಡದಲ್ಲಿ 'ವರಮಾನಗಳು' ಎಂಬ ಪದಕ್ಕೆ ಬದಲಾಗಿ 'ವೇತನಗಳು' ಎಂಬ ಪದವನ್ನು ಇಟ್ಟುಕೊಳ್ಳಬಹುದು."

ಅದು ಸಾಮಾನ್ಯವಾಗಿ ನಾವು ಉಪಯೋಗಿಸುತ್ತಿರುವ ಪದ.

*****

+ **ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ ೨"೯೨ನೆಯ ವಿಧಿಯ (೨)ನೆಯ ಖಂಡದ (ಎ) ಮತ್ತು (ಬಿ) ಉಪ–ಖಂಡದಲ್ಲಿ' ಭಾರತದ ಆದಾಯಗಳು' ಎಂಬ ಪದಗಳಿಗೆ 'ಭಾರತದ ಸಂಚಿತ ನಿಧಿ' ಎಂಬ ಪದಗಳನ್ನು ಇಟ್ಟುಕೊಳ್ಳಬಹುದು."

೩. "೯೨ನೆಯ ವಿಧಿಯ (೩)ನೆಯ ಖಂಡದಲ್ಲಿ 'ಭಾರತದ ವರಮಾನಗಳು' ಎಂಬ ಪದಗಳಿಗೆ 'ಭಾರತ ಸಂಚಿತ ನಿಧಿ ಎಂಬ ಪದಗಳನ್ನು ಇರಿಸಬಹುದು'

೪. "೯೨ನೆಯ ವಿಧಿಯ (೩)ನೆಯ ಖಂಡದ (ಡಿ) ಉಪ–ಖಂಡವಾದ ಮೇಲೆ ಈ ಕೆಳಗಿನ ಖಂಡವನ್ನು ಅಳವಡಿಸಬೇಕು.

"(dd) "ಕಂಟ್ರೋಲರ್" ಮತ್ತು "ಭಾರತದ ಆಡಿಟರ್ ಜನರಲ್" ಅವರಿಗೆ ಕೊಡುವ ವೇತನ, ಭತ್ಯಗಳು ಮತ್ತು ನಿವೃತ್ತಿ ವೇತನಗಳು"

೯ನೆಯದನ್ನು ಕುರಿತು ನಾನು ಹೇಳಬೇಕಾದುದಿಷ್ಟೆ, ಸದನವು ೧೨೪ನೆಯ ವಿಧಿಯ (೫)ನೆಯ ಖಂಡವನ್ನು ಈಗಾಗಲೇ ಅಂಗೀಕರಿಸಿದೆ. ಅದರಲ್ಲಿಯೇ ಈ ತಿದ್ದುಪಡಿ ಇದೆ. ಭಾರತದ ಸಂಚಿತ ನಿಧಿಯಿಂದ ನಿರ್ವಹಿಸಬೇಕಾದ ವೆಚ್ಚದ ಬಾಬ್ತುಗಳೆಲ್ಲವನ್ನು ಸಂವಿಧಾನದ ಬೇರೆ ಬೇರೆ ಕಡೆ ಚದುರಿಕೊಂಡಿರಲು ಬಿಡದೆ ಒತ್ತಟ್ಟಿಗೆ ತರುವುದು ಉತ್ತಮವೆಂದು ಭಾವಿಸಲಾಯಿತು. ಆದ್ದರಿಂದ ಇಲ್ಲಿ ಮಂಡಿಸಲಾಗಿದೆ.

(ಡಾ.ಅಂಬೇಡ್ಕರರ ಮೇಲೆ ನಿರೂಪಿಸಿದ ಎಲ್ಲಾ ನಾಲ್ಕು ತಿದ್ದುಪಡಿಗಳು ಅಂಗೀಕೃತವಾದವು. ಮಿಕ್ಕವು ತಿರಸ್ಕೃತವಾದವು. ತಿದ್ದುಪಡಿಗೊಂಡಂತೆ ೯೨ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

** ಅದೇ ಪು. ೭೫೦

\+ ಅದೇ ಪು. ೭೫೪

## ವಿಧಿ ೯೩

* **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ. "೯೩ನೆಯ ವಿಧಿಯ (೧)ನೆಯ ಖಂಡದಲ್ಲಿ 'ಭಾರತದ ವರಮಾನಗಳು' ಎಂಬ ಪದಗಳಿಗೆ ಬದಲಾಗಿ 'ಭಾರತದ ಸಂಚಿತ ನಿಧಿ' ಎಂಬ ಪದಗಳನ್ನು ಇಟ್ಟುಕೊಳ್ಳಬಹುದು."

(ತಿದ್ದುಪಡಿಯು ಸ್ವೀಕೃತವಾಯಿತು. ತಿದ್ದುಪಡಿಗೊಂಡಂತೆ ೯೩ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೯೪

** **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ: "೯೪ನೆಯ ವಿಧಿಯ ಬದಲಾಗಿ, ಈ ಕೆಳಗಿನ ವಿಧಿಯನ್ನು ಇರಿಸಬಹುದು.

ವಿನಿಯೋಗ, ಮಸೂದೆಗಳು '೯೪(೧) ಹಿಂದಿನ ವಿಧಿಯ ಅನ್ವಯ ಮಂಜೂರಾತಿಗಳನ್ನು ಲೋಕಸಭೆಯು ಅಂಗೀಕರಿಸಿದೊಡನೆ, ಈ ಕೆಳಗಿನ ವೆಚ್ಚಗಳನ್ನು ನಿರ್ವಹಿಸುವುದಕ್ಕಾಗಿ ಭಾರತದ ಸಂಚಿತ ನಿಧಿಯಿಂದ ಅಗತ್ಯವಾದ ಹಣವನ್ನು ವಿನಿಯೋಗಪಡಿಸಿಕೊಳ್ಳಲು ಒಂದು ಮಸೂದೆಯನ್ನು ಮಂಡಿಸಲಾಗುತ್ತದೆ.

(ಎ) ಲೋಕಸಭೆಯು ಮಾಡಿದ ಮಂಜೂರಾತಿ : ಮತ್ತು (ಬಿ) ಭಾರತದ ಸಂಚಿತ ನಿಧಿಯಿಂದ ಮಾಡಬೇಕೆಂದು ಕೇಳಿರುವ ವೆಚ್ಚ. ಆದರೆ ಅದು ಯಾವುದೇ ಸಂದರ್ಭದಲ್ಲೂ ಮುಂಚೆ ಪಾರ್ಲಿಮೆಂಟಿನ ಮುಂದೆ ಮಂಡಿಸಿದ ಪಟ್ಟಿಯಲ್ಲಿ ತೋರಿಸಿರುವ ಮೊತ್ತವನ್ನು ಮೀರಕೂಡದು.

(೨) ಪಾರ್ಲಿಮೆಂಟಿನ ಯಾವುದೇ ಸದನದಲ್ಲಿಯೂ ಮೊತ್ತವನ್ನು ವ್ಯತ್ಯಾಸಗೊಳಿಸುವಂತಹ, ಅಥವಾ ಯಾವುದೇ ಮಂಜೂರಾತಿಯ ಗಮ್ಯವನ್ನು ಬದಲಾಯಿಸುವಂತಹ, ಭಾರತ ಸಂಚಿತ ನಿಧಿಯಿಂದ ಮಾಡುವ ವೆಚ್ಚವನ್ನು ವ್ಯತ್ಯಾಸಗೊಳಿಸುವಂತಹ ಪರಿಣಾಮವನ್ನುಂಟುಮಾಡುವ ಯಾವುದೇ ತಿದ್ದುಪಡಿಯನ್ನು ಆ ಮಸೂದೆಗೆ ತರಕೂಡದು. ಸ್ವೀಕೃತವಾದ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಅಧ್ಯಕ್ಷನಾಗಿದ್ದ ವ್ಯಕ್ತಿಯ ನಿರ್ಣಯವೇ ಈ ಖಂಡದನ್ವಯ ಅಂತಿಮವಾಗಿರುತ್ತದೆ.

(೩) ಮುಂದಿನೆರಡು ವಿಧಿಗಳಲ್ಲಿನ ಅವಕಾಶಗಳಿಗೆ ಒಳಪಟ್ಟು, ಈ ವಿಧಿಯ ಅವಕಾಶಗಳಿಗೆ ಅನುಗುಣವಾಗಿ ಅಂಗೀಕರಿಸಿದ ಕಾನೂನುಗಳಿಂದ ಸೂಕ್ತವಾಗಿ ವಿನಿಯೋಗ ಮಾಡಿಕೊಂಡ ಹೊರತು ಸಂಚಿತ ನಿಧಿಯಿಂದ ಯಾವುದೇ ಹಣವನ್ನು ಪಡೆದುಕೊಳ್ಳುವಂತಿಲ್ಲ."

ನಾನು ನೆನ್ನೆ ವಿವರಿಸಿದಂತೆ ಹೊಸದಾದ ಈ ೯೪ನೆಯ ವಿಧಿಯು ಗವರ್ನರ್ ಜನರಲ್ಲನು ಒಂದು ಷೆಡ್ಯೂಲನ್ನು ಪ್ರಮಾಣಿಸುವುದಕ್ಕೆ ಸಂಬಂಧಿಸಿದಂತೆ ಹಳೆಯ ವಿಧಿಯಲ್ಲಿರುವ ಉಪಬಂಧಗಳ ಬದಲಿಗೆ ಬರುತ್ತದೆ.

*****

---

* ಅದೇ. ಪು. ೭೫೪

** ಸಿ.ಎ.ಡಿ. ಸಂ.೮, ೧೦ನೇ ಜೂನ್ ೧೯೪೯, ಪುಟ ೭೫೪ – ೭೫೫

* **ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ನನ್ನ ಮಿತ್ರರಾದ ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಆಡಿದ ಮಾತುಗಳೇ, ಶ್ರೀ ಸಂತಾನಂ ಅವರು ಎತ್ತಿದ ಆಕ್ಷೇಪಣೆಗಳಿಗೆ ಉತ್ತರಕೊಡಲು ಸಾಕಾಗುತ್ತವೆ ಎಂದು ನಾನು ಭಾವಿಸಿದ್ದೆ. ಆದರೆ ಮಿತ್ರ ಶ್ರೀ ಭಾರತಿ ಅವರು ತಮ್ಮ ಸಂದೇಹಗಳಿಗೆ ಇನ್ನೂ ಪರಿಹಾರ ದೊರಕಿಲ್ಲವೆಂದು ಸೂಚಿಸಿದುದರಿಂದ, ಒಂದೆರೆಡು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ಈಗಿರುವ ದೃಢೀಕೃತ ಷೆಡ್ಯೂಲು ಪಡೆಯುವ ಪದ್ಧತಿಯೇ ಸಾಕಾಗಿರುವಾಗ, ಅನಾವಶ್ಯಕವಾಗಿ ವಿನಿಯೋಗ ಮಸೂದೆ ಪದ್ಧತಿಯನ್ನು ಎರವಲು ಪಡೆಯುತ್ತಿದ್ದೇವೆ ಎಂಬುದಾಗಿ ಶ್ರೀ ಸಂತಾನಂ ಹೇಳಿದರು. ಅವರ ವಾದವನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ, ಅದು ಹೀಗಿದೆ: ಹೌಸ್ ಆಫ್ ಕಾಮನ್ಸ್‌ನಲ್ಲಿ ವಿನಿಯೋಗ ಮಸೂದೆಯೊಂದು ಅಗತ್ಯವಾಗಿದೆ. ಏಕೆಂದರೆ, ಪೂರೈಕೆಯ ಅಂದಾಜುಗಳನ್ನು ಅಲ್ಲಿ ಒಂದು ಸಮಿತಿಯು ಮಾಡುತ್ತದೆಯೇ ಹೊರತು ಸದನವೇ ಮಾಡುವುದಿಲ್ಲ. ಆದ್ದರಿಂದ ಅಲ್ಲಿ ವಿನಿಯೋಗ ಮಸೂದೆಯು ಅಗತ್ಯವಾಗುತ್ತದೆ. ವೈಯಕ್ತಿಕವಾಗಿ ಹೌಸ್ ಆಫ್ ಕಾಮನ್ಸ್ ಸಭೆಯ ಸಮಿತಿ ಕಾರ್ಯಪದ್ಧತಿಗೂ ಒಂದು ವಿನಿಯೋಗ ಮಸೂದೆಯ ಅಗತ್ಯಕ್ಕೂ ಯಾವುದೇ ಸಂಬಂಧವಿಲ್ಲ ಎಂದು ನನಗೆ ತೋರುತ್ತದೆ. ಅಲ್ಲಿ ಈ ಪದ್ಧತಿಯು ಹೇಗೆ ಅಸ್ತಿತ್ವಕ್ಕೆ ಬಂದಿತು ಎಂಬುದನ್ನು ಹೇಳಬಹುದು. ಇಂಗ್ಲೀಷ್ ರಾಜಕೀಯ ಇತಿಹಾಸದಲ್ಲಿ, ರಾಜನೂ ಕಾಮನ್ಸ್ ಸಭೆಯೂ ಒಬ್ಬರ ಮಾತನ್ನು ಇನ್ನೊಬ್ಬರು ಒಪ್ಪದೆ ಜಗಳವಾಡುತ್ತಿದ್ದ ಕಾಲವೊಂದಿತ್ತು. ಇಂದು ಹೌಸ್ ಆಫ್ ಕಾಮನ್ಸ್ ಹಾಗೂ ರಾಜ ಇವರ ನಡುವೆ ಕಂಡುಬರುವ ವಿಶ್ವಾಸ, ನಂಬಿಕೆಗಳ ಮಧುರ ಭಾವನೆ ಆಗ ಇರಲಿಲ್ಲ. ರಾಜ ಒಬ್ಬ ನಿರಂಕುಶ ವ್ಯಕ್ತಿ. ಎಲ್ಲರನ್ನು ದಮನ ಮಾಡುವವನು, ತೆರಿಗೆಗಳನ್ನು ಮನಸೋ ಇಚ್ಛೆ ಹೇರುವುದು, ತನಗಿಷ್ಟ ಬಂದಂತೆ ಅದನ್ನು ವೆಚ್ಚಮಾಡುವುದು ಇದರಲ್ಲೇ ಆಸಕ್ತನಾದವನು ಎಂದು ಪರಿಗಣಿಸಲಾಗುತ್ತಿತ್ತು. ಕಾಮನ್ಸ್ ಸಭೆಯ ಸ್ಪೀಕರನನ್ನು ಆ ಸದನದ ವಿಶ್ವಾಸಕ್ಕೆ ಪಾತ್ರನಾದ, ಸದನವು ಆರಿಸಿದ ವ್ಯಕ್ತಿ ಎಂಬುದರ ಬದಲಾಗಿ ರಾಜನ ಗೂಢಚಾರ ಎಂಬಂತೆ ಪರಿಗಣಿಸುತ್ತಿದ್ದರು. ಈ ಪರಿಸ್ಥಿತಿಯ ಪರಿಣಾಮವಾಗಿ, ಕಾಮನ್ಸ್ ಸಭೆಯ ಸದಸ್ಯರು, ಅಂದಾಜುಗಳನ್ನು ಇಡೀ ಸದನವು ಚರ್ಚಿಸಿದ ಪಕ್ಷದಲ್ಲಿ, ಸದನವು ಒಟ್ಟಾಗಿ ಅಧಿವೇಶನ ಕೂಡಿದಾಗ ಅಧ್ಯಕ್ಷತೆ ವಹಿಸುವ ಹಕ್ಕನ್ನುಳ್ಳ ಸ್ಪೀಕರನು, ಬಹುಮಟ್ಟಿಗೆ, ರಾಜನ ಒಲವನ್ನು ಗಳಿಸಬೇಕೆಂಬ ಆಸೆಯಿಂದ, ರಾಜನ ನಡವಳಿಕೆಯನ್ನು ದುಂದುವೆಚ್ಚವನ್ನು ದೌರ್ಜನ್ಯಯುತ ವರ್ತನೆಗಳನ್ನು ಟೀಕಿಸಿದವರು ಯಾರು ಯಾರು ಎಂಬುದನ್ನು ರಹಸ್ಯವಾಗಿ ಅವನಿಗೆ ವರದಿ ಮಾಡುತ್ತಾನೆ ಎಂದು ಹೆದರುತ್ತಿದ್ದರು. ರಾಜನ ಬೇಹುಗಾರನೆಂದು ತಾನು ಭಾವಿಸಿದ ಸ್ಪೀಕರನ ಸೇವೆಯೇ ಇಲ್ಲದಂತೆ ಮಾಡಿಕೊಳ್ಳಲು ಅವರು ಒಂದು ಉಪಾಯ ಮಾಡಿದರು. ಕಾಮನ್ಸ್ ಸಭೆಯಲ್ಲಿ ಏನು ನಡೆಯಿತೆಂದು ಸ್ಪೀಕರನು ರಾಜನಿಗೆ ಚಾಡಿ ಹೇಳುವುದನ್ನೇ ನಿವಾರಿಸಲು ಅವರು ಸಮಿತಿಯ ಪದ್ಧತಿಯನ್ನು ರೂಪಿಸಿಕೊಂಡರು. ಸದನವು ಒಂದು ಸಮಿತಿಯಾಗಿ ಸಭೆ ಸೇರಿದಾಗ ಅಧ್ಯಕ್ಷತೆ ವಹಿಸಲು ಸ್ಪೀಕರನಿಗೆ ಹಕ್ಕಿರಲಿಲ್ಲ. ಹೌಸ್ ಆಫ್ ಕಾಮನ್ಸ್, ಪೂರೈಕೆ ಸಮಿತಿಯಾಗಿ ಸೇರುತ್ತಿದುದ್ದರ ಮುಖ್ಯವಾದ ಉದ್ದೇಶವೇ ಇದು. ನಾನಾಗಲೇ ಹೇಳಿದಂತೆ, ಸದನವು ಪೂರೈಕೆ ಸಮಿತಿಯಾಗಿ ಸೇರಿರದಿದ್ದರೂ, ಅದು ಒಂದು ವಿನಿಯೋಗ ಮಸೂದೆಯನ್ನು ಅಂಗೀಕರಿಸಲೇ ಬೇಕಾಗುತ್ತಿತ್ತು. ನನ್ನ ಮಿತ್ರರು ಕೊನೆಯ ಪಕ್ಷ ವಕೀಲ ಮಿತ್ರರು ತಿಳಿದುಕೊಂಡಿರುವಂತೆ, ಒಂದು ಕಾಲ ಘಟ್ಟದಲ್ಲಿ ಕಾಮನ್ಸ್ ಸಭೆಯು ಸಮಿತಿಯಲ್ಲಿ ವಿಧಿಸಬಹುದಾದ ತೆರಿಗೆಗಳನ್ನು ಕುರಿತು

---

* ಅದೇ ಪು. ೭೬೨–೬೪

ನಿರ್ಣಯಗಳನ್ನು ಮಾತ್ರ ಅಂಗೀಕರಿಸುತ್ತಿತ್ತು. ಇದರ ಫಲವಾಗಿ ಬಹಳ ಕಾಲ, ಸುಮಾರು ೧೯೧೩ರವರೆಗೆ ಎಂದು ನನ್ನ ಭಾವನೆ. ತೆರಿಗೆ ಹಾಕುವ ವಿಧಿ ವಿಧಾನಗಳನ್ನು ಕುರಿತು ಕಾಮನ್ಸ್ ಸಭೆಯು ಸಮಿತಿಯು ಅಂಗೀಕರಿಸಿದ ನಿರ್ಣಯಗಳ ಆಧಾರದ ಮೇಲೆ ಮಾತ್ರವೇ ತೆರಿಗೆಗಳನ್ನು ವಿಧಿಸಲಾಗುತ್ತಿದ್ದಿತು. ೧೯೧೩ರಲ್ಲಿ ಈ ಪ್ರಶ್ನೆಯನ್ನು ನ್ಯಾಯಾಲಯಕ್ಕೆ ಒಯ್ಯಲಾಯಿತು. ಹೌಸ್ ಆಫ್ ಕಾಮನ್ಸ್ ಕಾರ್ಯ ವಿಧಿವಿಧಾನಗಳ ಸಮಿತಿಯಲ್ಲಿ ಕೈಗೊಂಡ ನಿರ್ಣಯಗಳ ಆಧಾರದ ಮೇಲೆ ತೆರಿಗೆಗಳನ್ನು ವಿಧಿಸಬಹುದೆ ಎಂಬ ಪ್ರಶ್ನೆಗೆ, ನ್ಯಾಯಾಲಯವು, ಕೇವಲ ನಿರ್ಣಯಗಳ ಆಧಾರದ ಮೇಲೆ ತೆರಿಗೆಗಳನ್ನು ವಿಧಿಸಲು ಕಾಮನ್ಸ್ ಸಭೆಗೆ ಹಕ್ಕಿಲ್ಲ ಎಂದು ತೀರ್ಪುಕೊಟ್ಟಿತು. ಅದಕ್ಕಾಗಿ ಪಾರ್ಲಿಮೆಂಟು ಒಂದು ಕಾನೂನನ್ನು ಅಂಗೀಕರಿಸಬೇಕು, ಆಗ ಮಾತ್ರವೇ ಪಾರ್ಲಿಮೆಂಟಿಗೆ ತೆರಿಗೆ ವಿಧಿಸುವ ಹಕ್ಕು ಬರುತ್ತದೆ. ಇದರಿಂದಾಗಿ ಬ್ರಿಟಿಷ್ ಪಾರ್ಲಿಮೆಂಟು, ಪ್ರಾಂತೀಯ ತೆರಿಗೆಗಳ ವಸೂಲಾತಿ ಕಾಯ್ದೆ(Provincial collection of Taxes Act) ಎಂಬ ಕಾಯ್ದೆಯನ್ನು ಅಂಗೀಕರಿಸಿತು. ಒಂದು ವೇಳೆ ವೆಚ್ಚವನ್ನು ಪೂರೈಕೆ ಸಮಿತಿಯು ಅನುಮೋದಿಸಿದ್ದರೆ, ಕಾಮನ್ಸ್ ಸಭೆಯ ನಿರ್ಣಯಗಳನ್ನು ಅಂತಿಮ ಅಧಿಕಾರವೆಂದು ಭಾವಿಸಿದ್ದರೆ, ನ್ಯಾಯಾಲಯವು ಅವುಗಳನ್ನು ಖಂಡಿಸುತ್ತಿತ್ತು. ಏಕೆಂದರೆ, ವರ್ತಿಸುವುದು ಕಾನೂನೇ ಹೊರತು ನಿರ್ಣಯವಲ್ಲ ಎನ್ನುವುದು ಎಲ್ಲರಿಗೂ ಚೆನ್ನಾಗಿ ತಿಳಿದಿರುವ, ಸಿದ್ಧವಾದ ವಿಚಾರ. ಆದ್ದರಿಂದ ನನ್ನ ಮೊದಲನೆಯ ವಿನಂತಿ ಇದು: ಮಿತ್ರ ಶ್ರೀ ಸಂತಾನಂ ಹೇಳಿದ, ವಿನಿಯೋಗ ಮಸೂದೆ ಪದ್ಧತಿಯು ಹೌಸ್ ಆಫ್ ಕಾಮನ್ಸಿನ ಸಮಿತಿ ಪದ್ಧತಿಯ ಅಂತರ್ಗತ ಭಾಗವೇ ಆಗಿದೆ ಎಂಬ ಟೀಕೆಯು ನಿರಾಧಾರವಾದದ್ದು. ಗವರ್ನರ್ ಜನರಲ್ ಅವರು ಪ್ರಮಾಣಿಸಿದ ಷೆಡ್ಯೂಲಿನ ಪದ್ಧತಿಯು ಅನಗತ್ಯ. ಏಕೆಂದರೆ ರಾಷ್ಟ್ರಪತಿಯವರಿಗೆ ತಮ್ಮ ವಿವೇಚನೆ ಅಥವಾ ವ್ಯಕ್ತಿಗತ ತೀರ್ಮಾನವನ್ನು ಬಳಸಿ ನಿರ್ವಹಿಸಬೇಕಾದ ಕಾರ್ಯ ಯಾವುದೂ ಇಲ್ಲ. ಹಣದ ವಿಷಯದಲ್ಲಿ ಪಾರ್ಲಿಮೆಂಟಿನ ಅಧಿಕಾರವೇ ಸರ್ವೋನ್ನತವಾದದ್ದು; ರಾಷ್ಟ್ರಪತಿಯವರು ಪ್ರತಿನಿಧಿಸುವ ಕಾರ್ಯಾಂಗದ ಅಧಿಕಾರವಲ್ಲ. ಆದ್ದರಿಂದ ಈ ಸಂಬಂಧವಾಗಿ ನಾನು ಹೆಚ್ಚಿನದೇನನ್ನು ಹೇಳುವ ಅಗತ್ಯವಿಲ್ಲ.

ಆಮೇಲೆ ಮಿತ್ರ ಶ್ರೀ ಸಂತಾನಂ, ನಾನು ಗ್ರಹಿಸಿದ್ದು ಸರಿಯಾಗಿದ್ದರೆ, ಹೇಳಿದರು, ೧೧೫ನೆಯ ವಿಧಿಯು –ಅವರು ೧೧೬ನೆಯ ವಿಧಿಯನ್ನೂ ಉಲ್ಲೇಖಿಸಿದರೊ ಏನೋ ತಿಳಿಯದು; ಆದರೆ ಖಂಡಿತವಾಗಿ ೧೧೫ ನೆಯದನ್ನು ಹೇಳಿದರು – ಅದು ಹೊಸ ೧೧೪ನೆಯ ವಿಧಿಯ (೩)ನೆಯ ಖಂಡವನ್ನು ರದ್ದುಪಡಿಸುತ್ತದೆ ಎಂದು, ಕಾನೂನು ಪ್ರಕಾರ ವಿನಿಯೋಗಿಸಿಕೊಂಡ ಹೊರತು ಯಾವುದೇ ಹಣವನ್ನು ವೆಚ್ಚ ಮಾಡುವಂತಿಲ್ಲವೆಂದು, (೩)ನೆಯ ಖಂಡವು ಹೇಳುತ್ತದೆ. ೧೧೫ನೆಯ ವಿಧಿಯಲ್ಲಿ ಹೇಳಿದ ಪೂರಕ ಹಣ, ಹೆಚ್ಚಿನ ಮಂಜೂರಾತಿ, ಲೇಖಾನುದಾನ, ಸಾಲ ಅಥವಾ ಅಸಾಧಾರಣ ಮಂಜೂರಾತಿ ಇವುಗಳನ್ನು ವಿನಿಯೋಗ ಶಾಸನವಿಲ್ಲದೆ ಬಳಸಬಹುದು ಎಂದು, ನನ್ನ ಮಿತ್ರರು ಭಾವಿಸಿದಂತೆ ತೋರುತ್ತದೆ. ಅವರು ವಿಧಿಯನ್ನು ಪೂರ್ತಿಯಾಗಿ ಓದಿಲ್ಲ ಎಂದು ನನ್ನ ಭಾವನೆ. ಹೊಸ ೧೧೫ನೆಯ ವಿಧಿಯ (೨)ನೆಯ ಉಪ–ಖಂಡವನ್ನು ಹಾಗೂ ಹೊಸ ೧೧೬ನೆಯ ವಿಧಿಯ ಕೊನೆಯ ಪ್ಯಾರಾವನ್ನೂ ಓದಿದರೆ,– ಇದು ಮುಂದೆ ೨೪೮–ಎ ವಿಧಿಯಾಗಿ ಮಂಡಿತವಾಗುತ್ತದೆ – ಅವರಿಗೆ ತಿಳಿಯುತ್ತದೆ, ಪೂರಕ ಅಥವಾ ಹೆಚ್ಚಿನ ಮಂಜೂರಾತಿಗಾಗಲಿ, ಲೇಖಾನುದಾನಕ್ಕಾಗಲಿ, ಬೇರೆ ಯಾವುದೇ ಉದ್ದೇಶಕ್ಕಾಗಲಿ, ಸಂಚಿತ ನಿಧಿಯಿಂದ ಕಾನೂನು ಪ್ರಕಾರ ಒಂದು ಉಪಬಂಧವನ್ನು ಅಂಗೀಕರಿಸದೆ ಪಡೆದುಕೊಳ್ಳುವ ಹಾಗಿಲ್ಲ. ಬಹುಶಃ ಅನೇಕ ಸದಸ್ಯರ ಮನಸ್ಸುಗಳಲ್ಲಿ ಉಂಟಾಗಿರುವ ಗೊಂದಲವು ನನಗೆ ಚೆನ್ನಾಗಿ ಅರ್ಥವಾಗುತ್ತದೆ. ಕೆಲವು ಕಡೆ ನಾವು ಸಂಚಿತ ನಿಧಿ ಶಾಸನ ಎನ್ನುತ್ತೇವೆ. ಇನ್ನೊಂದು ಕಡೆ ಧನ ವಿನಿಯೋಗ ಶಾಸನದ ವಿಷಯ

ಹೇಳುತ್ತೇನೆ. ಇದು ಹೇಗೆ? ವಿಷಯ ಇಷ್ಟೆ: ಮೂಲತಃ ಒಂದು ಸಂಚಿತ ನಿಧಿ ಶಾಸನಕ್ಕೂ ಧನ ವಿನಿಯೋಗ ಶಾಸನಕ್ಕೂ ಯಾವ ವ್ಯತ್ಯಾಸವು ಇಲ್ಲ. ಎರಡರ ಉದ್ದೇಶವೂ ಒಂದೇ. ಅಂದರೆ, ಸಂಚಿತ ನಿಧಿಯಿಂದ ಹಣವನ್ನು ಪಡೆಯಲು ರಚಿತವಾಗಿರುವ ಒಂದು ಪ್ರಾಧಿಕಾರಕ್ಕೆ ಅಧಿಕಾರ ನೀಡುವುದು. ಸಂಚಿತ ನಿಧಿ ಶಾಸನಕ್ಕೂ ಧನ ವಿನಿಯೋಗ ಶಾಸನಕ್ಕೂ ನಡುವೆ ಇರುವ ವ್ಯತ್ಯಾಸ ಇದು: ಸಂಚಿತ ನಿಧಿ ಶಾಸನದಲ್ಲಿ ಒಂದು ಒಟ್ಟು ಮೊತ್ತವನ್ನು ಹೇಳಲಾಗುತ್ತದೆ; ಧನ ವಿನಿಯೋಗ ಶಾಸನದಲ್ಲಾದರೆ ಮುಖ್ಯ ಶೀರ್ಷಿಕೆ, ಉಪಶೀರ್ಷಿಕೆಗಳು, ಅಂಶಗಳು ಹೀಗೆ ಎಲ್ಲಾ ವಿವರಗಳನ್ನು ನಿರೂಪಿಸಲಾಗುತ್ತದೆ. ಸ್ಪಷ್ಟವೇ ಆಗಿರುವಂತೆ, ಧನವಿನಿಯೋಗ ಮಸೂದೆಯ ಪ್ರಕ್ರಿಯೆಯನ್ನು ಸಂಚಿತ ನಿಧಿ ಮಸೂದೆಯ ಹಂತದಲ್ಲಿ ಜಾರಿಗೆ ತರುವಂತಿಲ್ಲ. ಏಕೆಂದರೆ, ಪಾರ್ಲಿಮೆಂಟು ಆಗಿನ್ನೂ ವಿವಿಧ ಶೀರ್ಷಿಕೆಗಳು, ಉಪಶೀರ್ಷಿಕೆಗಳು ಮತ್ತು ಅಂಶಗಳಿಗೆ ಹಣವನ್ನು ವಿನಿಯೋಗಿಸುವ ಪ್ರಕ್ರಿಯೆಯನ್ನು ನಡೆಸಿರುವುದಿಲ್ಲ. ಆದ್ದರಿಂದ ಒಂದು ಸಂಚಿತ ನಿಧಿ ಶಾಸನದನ್ವಯ ಹಣವನ್ನು ಮಂಜೂರು ಮಾಡಲಾಗಿದೆ ಎಂದರೆ ಅರ್ಥ, ಸಂಚಿತ ನಿಧಿಯಿಂದ ಕಾರ್ಯಾಂಗವು ಅಷ್ಟು ಮೊತ್ತದ ಹಣವನ್ನು ಪಡೆದುಕೊಳ್ಳಬಹುದು, ಮುಂದಿನ ಒಂದು ಹಂತದಲ್ಲಿ ಅಂತಿಮ ಧನ ವಿನಿಯೋಗ ಶಾಸನದಲ್ಲಿ ಅದನ್ನು ತೋರಿಸಬಹುದು–ಎಂಬುದು. ಸಂಚಿತ ನಿಧಿ ಶಾಸನ ಅಥವಾ ಧನ ವಿನಿಯೋಗ ಶಾಸನ ಇವುಗಳ ಪ್ರಕಾರ ಅಧಿಕಾರವನ್ನು ಪಡೆದ ಹೊರತು, ಕಾರ್ಯಾಂಗವು ಹಣವನ್ನು ಪಡೆಯುವಂತಿಲ್ಲ ಎಂಬುದನ್ನು ಮಾನ್ಯ ಮಿತ್ರರು ನೆನಪಿನಲ್ಲಿಟ್ಟುಕೊಂಡರೆ ಸಾಧ್ಯವಾದಷ್ಟು ಮಟ್ಟಿಗೆ ಈ ಉಪಬಂಧವನ್ನು ನಿರ್ದಿಷ್ಟವಾಗುವಂತೆ, ಯಾರು ಮೋಸ ಮಾಡಲು ಸಾಧ್ಯವಿಲ್ಲದಂತೆ ರೂಪಿಸಲು ಪ್ರಯತ್ನಿಸಲಾಗಿದೆ ಎಂಬುದು ಅರ್ಥವಾದೀತು.

(ಡಾ. ಅಂಬೇಡ್ಕರ್ ಗೊತ್ತುವಳಿಯು ಸ್ವೀಕೃತವಾಯಿತು. ತಿದ್ದುಪಡಿಯಾದಂತೆ ೯೪ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ – ೯೫

* **ಮಾನ್ಯ ಡಾ.ಬಿ.ಆರ್ ಅಂಬೇಡ್ಕರ್ :** ಮಾನ್ಯರೆ. ಹೀಗೆ ಮಂಡಿಸುತ್ತಿದ್ದೇನೆ. "೯೫ನೆಯ ವಿಧಿಗೆ ಬದಲಾಗಿ ಈ ಕೆಳಗಿನ ವಿಧಿಯನ್ನು ಇರಿಸಬಹುದು."

** ಪೂರಕವಾದ, ಅಧಿಕ ಅಥವಾ ಹೆಚ್ಚುವರಿಯಾದ ಮಂಜೂರಾತಿ '೯೫ (ಅ) (೧) : ರಾಷ್ಟ್ರಪತಿಯವರು– ಈ ಸಂವಿಧಾನದ ೯೪ನೆಯ ವಿಧಿಯ ಉಪಬಂಧಗಳ ಪ್ರಕಾರ, ಚಾಲ್ತಿ ಆರ್ಥಿಕ ವರ್ಷದಲ್ಲಿ ನಿರ್ದಿಷ್ಟ ಸೇವೆಗಾಗಿ ವೆಚ್ಚ ಮಾಡಬೇಕೆಂದು, ಯಾವುದೇ ಕಾನೂನಿನಿಂದ ಅಧಿಕಾರ ಕೊಟ್ಟಿರುವಾಗ, ಆ ಮೊತ್ತವು ಆ ವರ್ಷಕ್ಕೆ ಸಾಲವಾಗಿ ಬಂದರೆ; ಅಥವಾ ಆ ವರ್ಷದ ವಾರ್ಷಿಕ ಆರ್ಥಿಕ ತಃಖ್ತೆಯಲ್ಲಿ ನಮೂದಿಸಿರದ ನೂತನವಾದೊಂದು ಸೇವೆಗಾಗಿ ಪೂರಕ ಅಥವಾ ಅಧಿಕ ವೆಚ್ಚವು, ಪ್ರಸ್ತುತ ಆರ್ಥಿಕ ವೆಚ್ಚದಲ್ಲಿ ಕಾಣಿಸಿಕೊಂಡರೆ; ಅಥವಾ

(೨) ಯಾವುದೇ ಒಂದು ಸೇವೆಗಾಗಿ, ಒಂದು ಆರ್ಥಿಕ ವರ್ಷದಲ್ಲಿ ಅ ವರ್ಷಕ್ಕೆ ಮಂಜೂರಾದ

---

* ಸಿ.ಎ.ಡಿ. ಸಂಪುಟ ೮, ೧೦ನೇ ಜೂನ್ ೧೯೪೯, ಪುಟ ೭೬೫

** ಸಿ.ಎ.ಡಿ. ಸಂಪುಟ ೮, ೧೦ನೇ ಜೂನ್ ೧೯೪೯, ಪುಟ ೭೬೮ – ೭೭೦

ಹಣಕ್ಕಿಂತ ಅಧಿಕವಾಗಿ ವೆಚ್ಚ ಮಾಡಿದ್ದಾಗ, ಪಾರ್ಲಿಮೆಂಟಿನ ಉಭಯ ಸದನಗಳಲ್ಲಿ, ಆ ವೆಚ್ಚದ ಮೊತ್ತವನ್ನು ತೋರಿಸುವ ಬೇರೆಯ ಸಕಾರಣ ತಃಖ್ತೆಯನ್ನು ಮಂಡಿಸತಕ್ಕದ್ದು. ಅದನ್ನು ಲೋಕ ಸಭೆಯ ಮುಂದೆ ತಂದು ಆ ಹೆಚ್ಚುವರಿಗಾಗಿ ಬೇಡಿಕೆ ಸಲ್ಲಿಸತಕ್ಕದ್ದು.

(೩) ಈ ಹಿಂದಿನ ಮೂರು ವಿಧಿಗಳ ಉಪಬಂಧವು ಅಂತಹ ಯಾವುದೇ ತಃಖ್ತೆಯ ಮೇಲೆ ಪರಿಣಾಮವನ್ನುಂಟುಮಾಡುತ್ತದೆ.

ಭಾರತದ ಸಂಚಿತ ನಿಧಿಯಿಂದ ಅಂತಹ ವೆಚ್ಚವನ್ನು ನಿರ್ವಹಿಸಲು ತಕ್ಕ ಹಣವನ್ನು ವಿನಿಯೋಗ ಮಾಡಿಕೊಳ್ಳಲು ಅಧಿಕಾರ ಕೊಡುವ ಯಾವುದೇ ಕಾನೂನಿನ ಮೇಲೆ ಪರಿಣಾಮವನ್ನುಂಟುಮಾಡುತ್ತದೆ. ವಾರ್ಷಿಕ ಹಣಕಾಸು ತಃಖ್ತೆ ಮತ್ತು ಅದರಲ್ಲಿ ನಮೂದಿಸಿದ ವೆಚ್ಚ ಇವುಗಳಿಗೆ ಸಂಬಂಧಿಸಿದಂತೆ ಮತ್ತು ಅಂತಹ ವೆಚ್ಚಗಳ ನಿರ್ವಹಣೆಗಾಗಿ ಅಥವಾ ಮಂಜೂರಾತಿಗಾಗಿ ಭಾರತದ ಸಂಚಿತ ನಿಧಿಯಿಂದ ಹಣವನ್ನು ವಿನಿಯೋಗ ಮಾಡಿಕೊಳ್ಳಲು ಅಧಿಕಾರ ಕೊಡುವ ಕಾನೂನಿನ ಮೇಲೆ ಪ್ರಭಾವ ಹೊಂದಿರುತ್ತದೆ.'

* **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದೆ ಮಂಡಿಸಿದ ಹಣಕಾಸು ಉಪಬಂಧಗಳು ಸದಸ್ಯರಿಗೆ ಗಣನೀಯ ಪ್ರಮಾಣದ ಚಿಂತೆಯನ್ನು ಉಂಟುಮಾಡಿವೆಯೆಂಬುದು ಕಾಣಿಸುತ್ತದೆ. ನಾನದನ್ನು ಅರ್ಥಮಾಡಿಕೊಳ್ಳಬಲ್ಲೆ. ಏಕೆಂದರೆ ಒಂದು ಸಂಗತಿ ನೆನಪಾಗುತ್ತಿದೆ. ಮಾನ್ಯ ಚರ್ಚಿಲ್ ಅವರ ತಂದೆಯು ಲಾರ್ಡ್ ಚಾನ್ಸಲರ್ ಆದಾಗ, ಅವರೆದುರಿಗೆ ದಶಾಂಶಗಳು ಮತ್ತು ಚುಕ್ಕೆಗಳಿಂದ ಇಡಿಕಿರಿದಿದ್ದ ಒಂದು ಬಜೆಟ್ಟನ್ನು ಇರಿಸಲಾಯಿತು. ಅವರು ಗಣಿತಶಾಸ್ತ್ರದ ವಿದ್ಯಾರ್ಥಿಯಲ್ಲ. ಆದ್ದರಿಂದ ಒಂದು ಚುಕ್ಕೆಯನ್ನು ಹೊಂದಿರುವ ಸಂಖ್ಯೆಯ ಅರ್ಥ ಏನೆಂದು ಅವರಿಗೆ ತಿಳಿಯಲಿಲ್ಲ. ಆದ್ದರಿಂದ ಫೈಲಿನ ಮೇಲೆ ಅವರು ಬರೆದರು. "ಈ ಹಾಳು ಚುಕ್ಕೆಗಳ ಅರ್ಥವಾದರೂ ಏನು?" ಹಾಗೆಂದು ಹಣಕಾಸು ಖಾತೆಯ ಕಾರ್ಯದರ್ಶಿಯವರಿಂದ ಅವರು ವಿವರಣೆಯನ್ನು ಕೇಳಿದರು. ಮಿ. ಚರ್ಚಿಲ್ ಅವರ ತಂದೆಯವರಂತಹ ಉನ್ನತ ಮಟ್ಟದ ವ್ಯಕ್ತಿಗಳಿಗೇ ಅರ್ಥವಾಗಲು ಕಷ್ಟವಾಗಿದ್ದಾಗ, ಈ ಸದನದ ಸದ್ಯಸರಿಗೆ ಕೂಡ ಈ ಉಪಬಂಧಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವೆಂದರೆ ನನಗೆ ಸ್ವಲ್ಪವೂ ಆಶ್ಚರ್ಯವಿಲ್ಲ. ಆದ್ದರಿಂದ ಕೆಲವು ಪ್ರಾಥಮಿಕ ವಿಚಾರಗಳನ್ನು ಹೇಳಿ ನಾನು ಅವರ ಮನಸ್ಸನ್ನು ಸೂಕ್ತ ಹಂತಕ್ಕೆ ತಂದು ಅವನ್ನು ಅರ್ಥಮಾಡಿಕೊಳ್ಳಲು ನೆರವಾಗುವುದು ಸೂಕ್ತವೆಂದು ಭಾವಿಸುತ್ತೇನೆ.

ಮಾನ್ಯರೆ, ೯೨ನೆಯ ವಿಧಿ, ೯೩ (೨) ನೆಯ ವಿಧಿ ಹಾಗೂ ೯೪ನೆಯ ವಿಧಿ ಇವುಗಳಲ್ಲಿ ಇರುವ ಉಪಬಂಧಗಳ ಪರಿಣಾಮವನ್ನು ಸದನಕ್ಕೆ ತಿಳಿಸಬಯಸುತ್ತೇನೆ. ೯೨ನೆಯ ವಿಧಿಯು ರಾಷ್ಟ್ರಪತಿಯವರ ಮೇಲೆ ಒಂದು ಕರ್ತವ್ಯವನ್ನು ಹೊರಿಸುತ್ತದೆ. ಅದು ಪಾರ್ಲಿಮೆಂಟಿನ ಮುಂದೆ ಆ ವರ್ಷಕ್ಕಾಗಿ ಒಂದು ಹಣಕಾಸು ತಃಖ್ತೆಯನ್ನು ಮಂಡಿಸಬೇಕು ಎನ್ನುವುದು 'ಆ ವರ್ಷಕ್ಕಾಗಿ' ಎಂಬ ಪದಗಳ ಮೇಲೆ ಒತ್ತುಕೊಡಲು ಬಯಸುತ್ತೇನೆ. ತಃಖ್ತೆಯಲ್ಲಿ ಭಾರತದ ವರಮಾನದಿಂದ ನಿರ್ವಹಿಸಬೇಕಾದ ಭಾರತೀಯ ವರಮಾನದಿಂದ ನಿರ್ವಹಿಸಲಾಗದ ಎರಡು ವರ್ಗದ ವೆಚ್ಚಗಳನ್ನು ತೋರಿಸಬೇಕು. ಇದಾದ ಮೇಲೆ ೯೩ (೨) ವಿಧಿಯು ವರ್ತಿಸತೊಡಗುತ್ತದೆ. ಅಂದಾಜುಗಳನ್ನು ಕುರಿತು ಹೇಗೆ ವ್ಯವಹರಿಸಬೇಕು ಎಂದು ಅದು ಹೇಳುತ್ತದೆ. ಅಂದಾಜುಗಳನ್ನು ಸದನದ ಮುಂದೆ ಬೇಡಿಕೆಗಳ ರೂಪದಲ್ಲಿ ಮಂಡಿಸಬೇಕು, ಅದರ ಮೇಲೆ ಲೋಕಸಭೆಯು ಮತ ನೀಡಬೇಕು. ಈ ಕೆಲಸವಾದ ಮೇಲೆ ೯೪ನೆಯ ವಿಧಿ ಕಾರ್ಯರೂಪಕ್ಕೆ ಬರುತ್ತದೆ. ನೂತನ ೯೪ನೇ

---

* ಸಿ.ಎ.ಡಿ. ಸಂಪುಟ ೮, ೧೦ನೇ ಜೂನ್ ೧೯೪೯, ಪುಟ ೭೧೧-೭೧೩

ವಿಧಿಯಂತೆ, ಲೋಕಸಭೆಯು ಒಪ್ಪಿದ ಈ ಮಂಜೂರಾತಿಗಳನ್ನು ಒಂದು ಧನ ವಿನಿಯೋಗ ಶಾಸನದ ರೂಪದಲ್ಲಿ ಕ್ರಮಬದ್ಧಗೊಳಿಸಿ ಜೋಡಿಸಲಾಗುತ್ತದೆ. ಈಗ ೯೨, ೯೩ (೨) ಮತ್ತು ೯೪ನೆಯ ವಿಧಿಗಳ ಪರಿಣಾಮ ಏನು ಎಂಬುದನ್ನು ಪರಿಶೀಲಿಸಬೇಕೆಂದು ಮಾನ್ಯ ಸದಸ್ಯರನ್ನು ನಾನು ಕೇಳಿಕೊಳ್ಳುತ್ತೇನೆ. ನಾವು ಬೇರೆ ಯಾವುದೇ ವಿಧಿಯನ್ನು ಶಾಸನವಾಗಿ ಅಂಗೀಕರಿಸಲಿಲ್ಲ ಎಂದಿಟ್ಟುಕೊಳ್ಳೋಣ. ಆಗೇನಾಗುತ್ತದೆ? ನನ್ನ ತೀರ್ಮಾನದ ಪ್ರಕಾರ ೯೨, ೯೩ (೨) ಮತ್ತು ೯೪ನೆಯ ವಿಧಿಗಳ ಪರಿಣಾಮಗಳಲ್ಲಿನ ಉಪಬಂಧಗಳಂತೆ, ರಾಷ್ಟ್ರಪತಿಯವರು ಆ ವರ್ಷದ ಅವಧಿಯಲ್ಲಿ ಬೇರೆ ಯಾವುದೇ ಅಂದಾಜುಗಳನ್ನು ಸಂವಿಧಾನಿಕವಾಗಿ ಪಾರ್ಲಿಮೆಂಟಿನ ಮುಂದೆ ಮಂಡಿಸುವ ಸ್ಥಿತಿಯಲ್ಲಿರುವುದಿಲ್ಲ. ರಾಷ್ಟ್ರಪತಿಯವರು ಕಾನೂನು ಪ್ರಕಾರ ಮಂಡಿಸಲು ಸಾಧ್ಯವಿರುವ ಅಂದಾಜುಗಳು ಇವು ಮಾತ್ರ. ಅಂದರೆ, ಪೂರಕ ಮಂಜೂರತಿಗಳು, ಪೂರಕ ಬೇಡಿಕೆಗಳು, ಹೆಚ್ಚುವರಿ ಮಂಜೂರಾತಿ, (Votes on Credit) ಎಂದು ಉಲ್ಲೇಖಿಸಿರುವ ಇತರ ಮಂಜೂರಾತಿ ಇಂತಹ ಯಾವುದನ್ನೇ ಆಗಲಿ ಮಂಡಿಸಲು ಸಾಧ್ಯವಿಲ್ಲ. ಪೂರಕ ಮಂಜೂರಾತಿಗಳು ಮತ್ತು ನಾನು ಈಗ ಉಲ್ಲೇಖಿಸಿದ ಹಲವು ತೆರನಾದ ಅಂಶಗಳನ್ನು ಮಂಡಿಸಲು ಅವಕಾಶವನ್ನು ಕಲ್ಪಿಸದೆ ಹೋದ ಪಕ್ಷದಲ್ಲಿ, ಕಾರ್ಯಾಂಗದ ಇಡೀ ವ್ಯವಹಾರವೇ ಸ್ಥಗಿತಗೊಂಡು ಬಿಡುತ್ತದೆ. ಆದ್ದರಿಂದ ರಾಷ್ಟ್ರಪತಿಯವರು ಆಯಾ ನಿರ್ದಿಷ್ಟ ವರ್ಷಕ್ಕೆ ವೆಚ್ಚಗಳ ಅಂದಾಜುಗಳನ್ನು ಪಾರ್ಲಿಮೆಂಟಿನೆದರು ಮಂಡಿಸುವ ಕರ್ತವ್ಯವನ್ನು ಹೊಂದಿದ್ದಾರೆ ಎಂದು ಸಾಮಾನ್ಯ ಉಪಬಂಧವನ್ನು ಅಂಗೀಕರಿಸುವಾಗ, ಅವರಿಗೆ ಕಾನೂನು ಪ್ರಕಾರ, ಅಗತ್ಯ ಬಂದರೆ ಮೇಲೆ ಹೇಳಿದ ರೀತಿಯ ಅಂದಾಜುಗಳನ್ನು ಮಂಡಿಸಲು ಅಧಿಕಾರವಿರುತ್ತದೆ. ಆದ್ದರಿಂದ ಪೂರಕ ಮತ್ತು ಹೆಚ್ಚುವರಿ ಮಂಜೂರಾತಿಗಳನ್ನು ಮಂಡಿಸಲು ಸಂವಿಧಾನದಲ್ಲಿ ಸ್ಪಷ್ಟವಾದ ಅವಕಾಶವನ್ನು ಮಾಡದೆ ಹೋದ ಪಕ್ಷದಲ್ಲಿ ೯೨, ೯೨(೨) ಮತ್ತು ೯೪ನೆಯ ವಿಧಿಗಳು ಅಂತಹ ಯಾವುದೇ ಮಂಡನೆಯನ್ನು ಪ್ರತಿಷೇಧಿಸುತ್ತವೆ. ಈ ಪೂರಕ ಬೇಡಿಕೆಗಳ ಮಂಡನೆಗಾಗಿ ಅವಕಾಶವನ್ನು ಏಕೆ ಮಾಡಲಾಗಿದೆ ಎಂಬುದು ಬಹುಶಃ ಈಗ ಸದನಕ್ಕೆ ಮನವರಿಕೆಯಾಗಿರಬಹುದು.

ಹೆಚ್ಚುವರಿ ಮಂಜೂರಾತಿಯನ್ನು ಕುರಿತು ಪ್ರಶ್ನಿಸಲಾಗಿದೆ. ಕಷ್ಟವೂ ಸಹಜವೇ ಆಗಿದೆ. ಧನ ವಿನಿಯೋಗ ಶಾಸನವು ನಿಗದಿಪಡಿಸಿರುವ ನೀತಿಗಳಿಂದಾಚೆಗೆ ಕಾರ್ಯಾಂಗವು ಯಾವುದೇ ಹಣವನ್ನು ವೆಚ್ಚಮಾಡುವಂತಿಲ್ಲ ಎಂದು ಹೇಳಿರುವಾಗ ಹೆಚ್ಚುವರಿ ಮಂಜೂರಾತಿಯ ವಿಚಾರ ಹೇಗೆ ಹುಟ್ಟಬಲ್ಲದು ಎಂದು ಸದಸ್ಯರು ಹೇಳಿದ್ದಾರೆ. ಅವರ ವಾದ ಇದು ಎಂದು ತೋರುತ್ತದೆ. ಇದಕ್ಕೆ ಉತ್ತರ ಹೀಗಿದೆ: ನನ್ನ ಮಿತ್ರ ಪಂಡಿತ್ ಕುಂಜ್ರು ಅವರು ಮಂಡಿಸಿದ ಒಂದು ತಿದ್ದುಪಡಿಯ ಮಾತುಗಳಲ್ಲಿ ನಾವು ಇಲ್ಲಿ ಉಪಬಂಧಗಳನ್ನು ರೂಪಿಸುತ್ತಿದ್ದೇವೆ. ಅದೇ ನೂತನ ೨೪೮–ಬಿ ವಿಧಿ. ಮೊದಲನೆಯ ಪಟ್ಟಿಯ ೨೭ನೆಯ ಪುಟದಲ್ಲಿದೆ. ಅದರಲ್ಲಿ ಭಾರತದ ಸಂಚಿತ ನಿಧಿಯಿಂದ ಒಂದು ಸಾದಿಲ್ವಾರು ನಿಧಿ (Contingency Fund)ಯನ್ನು ಸ್ಥಾಪಿಸಲು ಅವಕಾಶವಿದೆ. ವೈಯಕ್ತಿಕವಾಗಿ, ಅಂಥದೊಂದು ಅವಕಾಶವು ಅವಶ್ಯಕವೆಂದು ನನಗೆ ತೋರುವುದಿಲ್ಲ. ಏಕೆಂದರೆ, ಈ ಪ್ರಶ್ನೆಯು ಆಸ್ಟ್ರೇಲಿಯದಲ್ಲಿ ತಲೆಯೆತ್ತಿದ್ದಿತು. ನ್ಯೂ ಸೌತ್ ವೇಲ್ಸ್ ರಾಜ್ಯ ವಿರುದ್ಧ ಆಸ್ಟ್ರೇಲಿಯದ ಕಾಮನ್ ವೆಲ್ತ್ ಈ ಮೊಕದ್ದಮೆಯಲ್ಲಿ ಅದು ಮೇಲೆ ಬಂದಿತು. ವರಮಾನವೆಲ್ಲವನ್ನು ಒಂದು ಸಂಚಿತ ನಿಧಿ (Consolidated Fund)ಯನ್ನಾಗಿ ಒಗ್ಗೂಡಿಸಬೇಕು ಎಂದು ಕಾನೂನು ಹೇಳುವಾಗ, ಕಾಮನ್‌ವೆಲ್ತ್‌ಗೆ ಬೇರೊಂದು ಸಾದಿಲ್ವಾರು ನಿಧಿಯನ್ನು ಸ್ಥಾಪಿಸಲು ಹಕ್ಕಿದೆಯೆ? ಆಸ್ಟ್ರೇಲಿಯಾ ಕಾಮನ್‌ವೆಲ್ತ್ ಹೈಕೋರ್ಟು ಕೊಟ್ಟ ಉತ್ತರ, ಒಂದು ಸಂಚಿತ ನಿಧಿಯ ಸ್ಥಾಪನೆಯಿಂದ, ಪಾರ್ಲಿಮೆಂಟಿನ ಕಾರ್ಯಾಂಗವು ಆ ಸಂಚಿತ ನಿಧಿಯಿಂದ ಬೇರೆ ಯಾವುದೇ ಒಂದು ನಿಧಿಯನ್ನು ಸ್ಥಾಪಿಸಲು ತಡೆಯಾಗುವುದಿಲ್ಲ. ಆ ನಿಧಿಯನ್ನು ಆ

ವರ್ಷವೇ ಬಳಸದೆಯೂ ಇರಬಹುದು. ಏಕೆಂದರೆ ಅದು ಬೇರೊಂದು ರೂಪದಲ್ಲಿ ಒಂದು ಧನ ವಿನಿಯೋಗವೇ ಆಗಿದೆ. ಆದರೂ ಈ ವಿಚಾರದಲ್ಲಿ ಏನೂ ಸಂದೇಹ ಉಳಿಯದಂತಾಗಲು, ಸಂಚಿತ ನಿಧಿಯ ಸ್ಥಾಪನೆಯಿಂದ, ಪಾರ್ಲಿಮೆಂಟಿನ ಕಾರ್ಯಾಂಗವು ಅ ಸಂಚಿತ ನಿಧಿಯಿಂದ ಬೇರೆ ಯಾವುದೇ ಒಂದು ನಿಧಿಯನ್ನು ಸ್ಥಾಪಿಸಲು ತಡೆಯಾಗುವುದಿಲ್ಲ. ಆ ನಿಧಿಯನ್ನು ಆ ವರ್ಷವೇ ಬಳಸದೆಯೂ ಇರಬಹುದು. ಏಕೆಂದರೆ ಅದು ಬೇರೊಂದು ರೂಪದಲ್ಲಿ ಒಂದು ಧನ ವಿನಿಯೋಗವೇ ಆಗಿದೆ. ಆದರೂ ಈ ವಿಚಾರದಲ್ಲಿ ಏನೂ ಸಂದೇಹ ಉಳಿಯದಂತಾಗಲು, ಸಂಚಿತ ನಿಧಿಯ ಸ್ಥಾಪನೆಯ ಅವಕಾಶವಿದ್ದರೂ ಒಂದು ಸಾದಿಲ್ವಾರು ನಿಧಿಯನ್ನು ಸೃಷ್ಟಿಸಲು ಪಾರ್ಲಿಮೆಂಟಿಗೆ ಅವಕಾಶ ಕೊಡಲಾಗಿದೆ. ನನ್ನ ಮಿತ್ರರಾದ ಪಂಡಿತ ಕುಂಜ್ರು ಅವರ, ೨೪೮ ಆ ನೂತನ ವಿಧಿಯನ್ನು ಅಳವಡಿಸಬೇಕೆಂಬ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಕಾರ್ಯಾಂಗಕ್ಕೆ ಧನ ವಿನಿಯೋಗ ಶಾಸನದ ಆಧಾರದ ಮೇಲೆ ನೀಡಿದ ನಿಧಿಯ ಜೊತೆಗೆ, ಆಗಾಗ ಕಾನೂನು ಪ್ರಕಾರ ಸೃಷ್ಟಿಸಿಕೊಡುವ ಸಂಚಿತ ನಿಧಿಯೇ ಮೊದಲಾದ ಇತರ ನಿಧಿಗಳೂ ಅದರ ವಶದಲ್ಲಿರುತ್ತವೆ. ಪಾರ್ಲಿಮೆಂಟು ಅನುಮೋದಿಸಿರುವುದಕ್ಕಿಂತ ಅಧಿಕವಾಗಿ ವೆಚ್ಚ ಮಾಡಲು ಧನ ವಿನಿಯೋಗ ಶಾಸನವನ್ನು ಉಲ್ಲಂಘಿಸುವ ಉದ್ದೇಶವಿಲ್ಲದೆಯೇ ಸಂಚಿತ ನಿಧಿ ಅಥವಾ ಬೇರೊಂದು ನಿಧಿಯಿಂದ ಹಣವನ್ನು ಪಡೆಯುವುದು ಸಾಧ್ಯವಾಗುತ್ತದೆ. ಆದ್ದರಿಂದ ಶಾಸನದ ಉಲ್ಲಂಘನೆಯು ಸಂಘಟಿಸಿದೆ. ಹಾಗಾಗಲು ಕಾರಣ, ಕಾರ್ಯಾಂಗವು ತುರ್ತು ಪರಿಸ್ಥಿತಿಯಲ್ಲಿ ಅದನ್ನು ಮಾಡುವುದೇ ಸೂಕ್ತವೆಂದು ಭಾವಿಸುತ್ತದೆ. ಹಾಗೆ ಮಾಡಲು ಅವರಿಗೆ ಹಣವೂ ಇದೆ. ಆದ್ದರಿಂದ ಪ್ರಶ್ನೆ ಇದು; ಹೀಗೊಂದು ಕೆಲಸವು ನಡೆದಾಗ, ಆ ಕೆಲಸವನ್ನು ಸಕ್ರಮಗೊಳಿಸಲು ನೀವು ಏನಾದರೂ ಒಂದು ಅವಕಾಶವನ್ನು ಕಲ್ಪಿಸುವುದಿಲ್ಲವೇ? ವಾಸ್ತವವಾಗಿ ಹೇಳಬೇಕಾದರೆ, ಹೆಚ್ಚುವರಿ ಧನವನ್ನು ಅನುಮೋದಿಸುವುದೆಂದರೆ, ಪಾರ್ಲಿಮೆಂಟು ಸರಕಾರದ ಕೆಲವು ಅಧಿಕಾರಿಗಳು ಸದುದ್ದೇಶದಿಂದ ಕಾನೂನಿಗೆ ವಿರುದ್ಧವಾದುದನ್ನು ತತ್ಕಾಲಕ್ಕೆ ಮಾಡಿರುವಾಗ ಅವರನ್ನು ದೋಷಮುಕ್ತಗೊಳಿಸುವುದಕ್ಕಾಗಿ ಅಂಗೀಕರಿಸುವ ಒಂದು ನಷ್ಟ ಭರ್ತಿ ಶಾಸನ (Indemnity Act)ವನ್ನು ಮಾಡಿದ ಹಾಗೆ ಹೆಚ್ಚುವರಿ ಪೂರೈಕೆಯಲ್ಲಿ ಬೇರೇನೂ ವಿಷಯವಿಲ್ಲ. ಸಾರ್ವಜನಿಕ ವ್ಯವಹಾರಗಳ ನಿರ್ವಹಣೆಯ ಕಾರ್ಯವಿಧಾನ ಕೈಪಿಡಿ (ಹೌಸ್ ಆಫ್ ಕಾಮನ್ಸ್‌ಗೆ ಸೇರಿದ್ದು)ಯ ೨೩೦ನೆಯ ಪ್ಯಾರಾವನ್ನು ಈ ಸದನದ ಸದಸ್ಯರಿಗೆ ಓದಿಹೇಳ ಬಯಸುತ್ತೇನೆ. ೨೩೦ನೆಯ ಪ್ಯಾರಾ ಹೀಗೆ ಹೇಳುತ್ತದೆ.

"ಒಂದು ಇಲಾಖೆಯು ಸಿವಿಲ್ ಕಂಟಿಂಜೆನ್ಸೀಸ್ ಫಂಡ್‌ನಿಂದಲೋ, ಟ್ರೆಜರಿ ಚೆಸ್ಟ್ ಫಂಡ್‌ನಿಂದಲೋ, ಹೆಚ್ಚಿನ ವರಮಾನದಿಂದ ಕಡಿತಗೊಂಡು ಬಂದ ಹಣದಿಂದಲೋ, ಯಾವುದೇ ಹಣಕಾಸು ವರ್ಷದಲ್ಲಿ ಯಾವುದೇ ಸೇವೆಯ ಮೇಲೆ, ಆ ವರ್ಷದಲ್ಲಿ ಆ ಸೇವೆಗೆ ನಿಯಮಿತವಾಗಿದ್ದ ಹಣಕ್ಕಿಂತ ಅಧಿಕವಾಗಿ ವೆಚ್ಚ ಮಾಡಿದ್ದಾಗ ಹೆಚ್ಚುವರಿ ಮಂಜೂರಾತಿಯು ಅಗತ್ಯವಾಗುತ್ತದೆ."

ಆದ್ದರಿಂದ ಇದರಲ್ಲಿ ವಿಚಿತ್ರವೆನಿಸುವಂಥದು ಏನೂ ಇಲ್ಲ. ಒಂದೇ ವಿಷಯವೆಂದರೆ, ಪೂರಕ ಅಂದಾಜು ಬಂದಾಗಲೆಲ್ಲಾ ಹೆಚ್ಚುವರಿ ವೆಚ್ಚವು ನಡೆಯದೆಯೇ ಮಂಜೂರಾತಿಯನ್ನು ಪಡೆದುಕೊಳ್ಳಲಾಗುತ್ತದೆ. ಹೆಚ್ಚುವರಿ ಮಂಜೂರಾತಿಯ ಸಂದರ್ಭದಲ್ಲಾದರೆ, ಆಗಲೆ ಹೆಚ್ಚಿನ ವೆಚ್ಚ ನಡೆದುಹೋಗಿದೆ. ಆಗಲೆ ವೆಚ್ಚ ಮಾಡಿಯಾಗಿರುವುದನ್ನು ಮಂಜೂರು ಮಾಡುವುದಕ್ಕಾಗಿ ಕಾರ್ಯಾಂಗವು ಪಾರ್ಲಿಮೆಂಟಿನ ಮುಂದೆ ಬರುತ್ತದೆ. ಆದ್ದರಿಂದ ಇಲ್ಲಿ ಕಷ್ಟವೇನೂ ಇಲ್ಲ: ಕಷ್ಟವಿಲ್ಲದ್ದು ಮಾತ್ರವಲ್ಲ, ಅದು ಅಗತ್ಯವೂ ಆಗಿದೆ. ಒಬ್ಬ ಕಾರ್ಯಾಂಗ ಅಧಿಕಾರಿಯು ಧನ ವಿನಿಯೋಗ ಶಾಸನವು ಮಂಜೂರು ಮಾಡಿರುವುದಕ್ಕಿಂತ ಹೆಚ್ಚಾಗಿ ವೆಚ್ಚಮಾಡಿದಾಗ, ಅದಕ್ಕೆ ಒಂದು ಅವಕಾಶವನ್ನು ಕಲ್ಪಿಸದೆ ಹೋದರೆ, ಅವನನ್ನು ಅಪರಾಧಿ ಎಂದು

ಪರಿಗಣಿಸಿ, ನ್ಯಾಯ ವಿಚಾರಗೊಳಪಡಿಸಬೇಕಾಗುತ್ತದೆ. ಹಾಗಾಗದಿರಬೇಕಾದರೆ ಈ ಹೆಚ್ಚುವರಿ ಮಂಜೂರಾತಿಯ ವಿಧಾನವನ್ನು ಅನುಸರಿಸಲೇ ಬೇಕಾಗುತ್ತದೆ.

**ಶ್ರೀ ಕೆ ಸಂತಾನಂ :** ೯೫ (೨)ನೆಯ ನೂತನ ವಿಧಿಯಲ್ಲಿ ನಿರೂಪಿಸಿದಂತೆ ಕಾನೂನಿನ ಉಪಬಂಧಗಳ ಅನ್ವಯ, ಹಿಂದಿನ ಮೂರು ವಿಧಿಗಳು ಪರಿಣಾಮಕಾರಿಯಾಗಿರುತ್ತವೆಯೆ ಎಂದು ಕೇಳ ಬಯಸುತ್ತೇನೆ. ಪ್ರತಿಯೊಂದು ಪೂರಕ ಬೇಡಿಕೆ ಬಂದಾಗಲೂ ಒಂದು ಪೂರಕ ಧನ ವಿನಿಯೋಗ ಶಾಸನವು ಅಂಗೀಕಾರವಾಗಬೇಕೆ?

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಹೌದು, ಅದೇ ಉದ್ದೇಶ.

**ಶ್ರೀ ಕೆ.ಸಂತಾನಂ :** ಧನ ವಿನಿಯೋಗವು ಇಡೀ ವರ್ಷಕ್ಕಾಗಿ ಆಗಿರುವುದಿಲ್ಲವೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಪೂರಕ ಧನ ವಿನಿಯೋಗವಿರಬಹುದು. ಯಾವಾಗಲೂ ಹೌಸ್ ಆಫ್ ಕಾಮನ್ಸ ನಲ್ಲಿ ಹಾಗಾಗುತ್ತದೆ.

**ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ :** ನನ್ನ ತಿದ್ದುಪಡಿಯ ವಿಚಾರ ಏನು ಸ್ವಾಮಿ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ದಯವಿಟ್ಟು ಕ್ಷಮಿಸಬೇಕು, ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ ಅವರು ಆರ್ಥಿಕ ವರ್ಷವನ್ನು ಬದಲಾಯಿಸಬೇಕೆಂದು ಹೇಳುತ್ತಾರೆ. ಅವರ ಉದ್ದೇಶಗಳು ಅಷ್ಟು ಪರಿಶುದ್ಧವಾಗಿಲ್ಲ ಎಂದು ನನಗೆ ಸಂದೇಹವಾಗುತ್ತದೆ ಎಂಬುದರ ಹೊರತು ಹೇಳುವಂಥದು ಬೇರೇನೂ ಇಲ್ಲ. ಒಂದು ಚಳಿಗಾಲದ ಅಧಿವೇಶನವನ್ನು ಬಹುಶಃ ಅವರು ಬಯಸುತ್ತಾರೆ. ಎಷ್ಟು ಸಮಯ ಸಾಧ್ಯವೋ ಅಷ್ಟು ಸಮಯ ತಿರುಗುತ್ತಿರಬಹುದು. ದೀರ್ಘ ಅಧಿವೇಶನಗಳು ಬೇಕಾದರೆ, ನಾವು ಈಗ ಮಾಡುತ್ತಿರುವಂತೆ ಬೇಸಿಗೆ ತಿಂಗಳುಗಳಲ್ಲಿ ಇಲ್ಲಿ ಕುಳಿತುಕೊಳ್ಳಬೇಕು.

(ಡಾ. ಅಂಬೇಡ್ಕರ್ ತಿದ್ದುಪಡಿಯು ಅಂಗೀಕೃತವಾಯಿತು. ತಿದ್ದುಪಡಿಗೊಂಡಂತೆ ೯೫ನೆಯ ವಿಧಿಯನ್ನು ಮೊದಲೇ ಹೇಳಿದಂತೆ ಸಂವಿಧಾನಕ್ಕೆ ಸೇರಿಸಲಾಯಿತು.)

*****

## ವಿಧಿ–೯೬

* **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ." ೯೬ನೆಯ ವಿಧಿಗೆ ಬದಲಾಗಿ ಈ ಕೆಳಕಂಡಂತೆ ಇಟ್ಟುಕೊಳ್ಳಬಹುದು.

ಲೇಖಾನುದಾನ ಪೂರ್ವಭಾವಿ ಒದಗದೆ, ಮತ್ತು ಅಪವಾದ ರೂಪದ ಮಂಜೂರಾತಿ ಲೇಖಾನುದಾನ, '೯೬–(೧) ಈ ಅಧ್ಯಾಯದ ಮುಂದಿನ ಉಪಬಂಧಗಳಲ್ಲಿ ಏನೇ ಇದ್ದರೂ, ಲೋಕಸಭೆಗೆ ಈ ಕೆಳಗಿನ ಅಧಿಕಾರಗಳಿವೆ.

(ಅ) ಒಂದು ಆರ್ಥಿಕ ವರ್ಷದ ಒಂದು ಭಾಗಕ್ಕೆ ಅಂದಾಜು ಮಾಡಿರುವ ವೆಚ್ಚಗಳ ಸಂಬಂಧವಾಗಿ, ಸಂವಿಧಾನದ ೯೩ನೆಯ ವಿಧಿಯಲ್ಲಿ ಅಂತಹ ಮಂಜೂರಾತಿಯನ್ನು ಅನುಮೋದಿಸಿ, ಸಂವಿಧಾನದ

* ಸಿ.ಎ.ಡಿ. ಸಂಪುಟ ೮, ೧೦ನೇ ಜೂನ್ ೧೯೪೯, ಪುಟ ೭೧೧–೭೧೩

೯೪ನೆಯ ವಿಧಿಯ ಉಪಬಂಧಗಳ ಪ್ರಕಾರ ಆ ಮೊತ್ತಕ್ಕೆ ಕಾನೂನು ಮಾಡುವ ಪ್ರಕ್ರಿಯೆಯನ್ನು ಪೂರೈಸುವುದನ್ನು ಕಾದು ಮಂಜೂರು ಮಾಡುವುದು.

(ಬ) ಸೇವೆಯ ಅಗಾಧತೆಯಿಂದಾಗಿಯೇ ಅನಿಶ್ಚಿತ ಸ್ವರೂಪದಿಂದಾಗಿಯೋ ಸಾಮಾನ್ಯವಾಗಿ ವಾರ್ಷಿಕ ಹಣಕಾಸು ತಃಖ್ತೆಯಲ್ಲಿ ವಿವರಗಳನ್ನು ಒದಗಿಸಲಾಗದೆ ಹೋದಾಗ, ಭಾರತದ ವರಮಾನಗಳ ಮೇಲೆ ಅನಿರೀಕ್ಷಿತ ಬೇಡಿಕೆ ಬರುವುದರಿಂದ ಅದನ್ನು ನಿರ್ವಹಿಸಲು ಮಂಜೂರು ಮಾಡುವುದು.

(ಕ) ಯಾವುದೇ ಹಣಕಾಸು ವರ್ಷದ ಚಾಲ್ತಿ ಸೇವೆಗಳ ಭಾಗವಾದ ಒಂದು ಅಸಾಧಾರಣ ಮಂಜೂರಾತಿ ನೀಡುವುದು ಮತ್ತು ಈಗ ಹೇಳಿದ ಉದ್ದೇಶಕ್ಕಾಗಿ ಭಾರತದ ಸಂಚಿತ ನಿಧಿಯಿಂದ ಯಾವುದೇ ಮೊತ್ತವನ್ನು ಪಡೆದಿದ್ದರೆ ಅದನ್ನು ಕಾನೂನು ಪ್ರಕಾರ ಸಕ್ರಮಗೊಳಿಸುವುದು.

(ಡ) ಈ ಸಂವಿಧಾನದ ೯೩ ಮತ್ತು ೯೪ನೆಯ ವಿಧಿಗಳು ಈ ವಿಧಿಯ (೧)ನೆಯ ಖಂಡದ ಪ್ರಕಾರ ಯಾವುದೇ ಮಂಜೂರಾತಿ ಮಾಡುವ ಪರಿಮಾಣವನ್ನು ಹೊಂದಿರುತ್ತದೆ. ಮತ್ತು ವಾರ್ಷಿಕ ಹಣಕಾಸು ತಃಖ್ತೆಯಲ್ಲಿ ಹೇಳಿದ ಯಾವುದೇ ವೆಚ್ಚಕ್ಕೆ ಸಂಬಂಧಿಸಿದಂತೆ ಧನ ಮಂಜೂರಾತಿ ಮಾಡಲು ಅವಕಾಶವನ್ನೊದಗಿಸುತ್ತದೆ. ಮತ್ತು ಆ ವೆಚ್ಚದ ನಿರ್ವಹಣೆಗೆ ಭಾರತದ ಸಂಚಿತ ನಿಧಿಯಿಂದ ಧನ ವಿನಿಯೋಗ ಮಾಡಿಕೊಳ್ಳಲು ಅಧಿಕಾರ ನೀಡುವ ಕಾನೂನು ಪ್ರವರ್ತಿಸಲು ಅವಕಾಶ ನೀಡುತ್ತದೆ.

**ಶ್ರೀ ಕೆ.ಸಂತಾನಂ :** ಮಾನ್ಯರೆ, ಈಗಾಗಲೆ ಅಂಗೀಕರಿಸಿರುವ ಸಾಮಾನ್ಯ ತತ್ವವನ್ನು ಮತ್ತೆ ಚರ್ಚೆಗೆಳೆಯಲು ನನಗೆ ಅಪೇಕ್ಷೆಯಿಲ್ಲ. ಆದರೆ, ಈ ವಿಧಿಯನ್ನು ರಚಿಸಿರುವ ರೀತಿಯು ದೋಷಯುಕ್ತವಾಗಿದೆ ಎಂದು ತಿಳಿಸಲು ಬಯಸುತ್ತೇನೆ.

**ಮಾನ್ಯ ಶ್ರೀ ಕೆ. ಸಂತಾನಂ :** ಮಾನ್ಯರೆ, ನನಗೆ ಇದು ಅರ್ಥವಾಗುತ್ತಿಲ್ಲ. ಇಲ್ಲಿ ಈ ಸದನದಲ್ಲಿ, ಸ್ಪಷ್ಟವಾಗಿ ತಪ್ಪೆಂದು ಕಾಣಿಸುತ್ತಿರುವುದನ್ನು ಅಸಾಂವಿಧಾನಿಕವಾದುದನ್ನು ಅಂಗೀಕರಿಸುತ್ತೇವೆ. ಆಮೇಲೆ ಅದನ್ನು ಕರಡು ರಚನಾ ಸಮಿತಿಗೆ ಬಿಡುತ್ತೇವೆ. ನಾವು ಇಲ್ಲಿ ಅಂಗೀಕರಿಸುವ ಉಪಬಂಧಗಳಲ್ಲಿ, ಒಂದು ಕೊರತೆಯೋ, ತಪ್ಪೋ ಇಲ್ಲದೆ ಅದರಲ್ಲಿ ಕೈ ಆಡಿಸಲು ನಾವು ಕರಡು ರಚನಾ ಸಮಿತಿಯನ್ನು ಬಿಡಬಾರದು. ಬೇರೆಯೇ ಆದ ಒಂದು ಸಂವಿಧಾನವನ್ನು ಎದುರಿಸುವುದು ನಮಗೆ ಇಷ್ಟವಿಲ್ಲ. ಮತ್ತೆ ಮತ್ತೆ ಅದನ್ನು ಒಂದೊಂದೇ ವಿಧಿಯಾಗಿ ಪರಿಶೀಲಿಸುವ ಶ್ರಮಪಡುವಂತಾಗಬಾರದು. ಸ್ಪಷ್ಟವಾಗಿಯೇ ತಪ್ಪೆಂದು ಕಾಣಿಸುತ್ತಿರುವ ಒಂದು ಖಂಡವನ್ನು ಈ ಸದನವು ಅಂಗೀಕರಿಸಲು ಬಿಡುವುದು ಸರಿಯಲ್ಲ. ಪಾರ್ಲಿಮೆಂಟಿಗೆ ಅಧಿಕಾರವಿದೆ ಎಂದು ಹೇಳಬೇಕು.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ತಿದ್ದುಪಡಿಯನ್ನು ಈಗಲೇ ಒಪ್ಪಿಕೊಳ್ಳಲು ನಾನು ಸಿದ್ಧನಾಗಿದ್ದೇನೆ. ನೀವೇ ಸೂಚಿಸಬಹುದು "ಪಾರ್ಲಿಮೆಂಟು ಕಾನೂನು ಪ್ರಕಾರ ಅನುಮತಿ ಕೊಡಲು ಅಧಿಕಾರ ಹೊಂದಿದೆ."

**ಮಾನ್ಯ ಶ್ರೀ ಕೆ. ಸಂತಾನಂ :** ಮಾನ್ಯರೆ, ತಿದ್ದುಪಡಿಯು ಹೀಗಿರಬಹುದು. "ಯಾವ ಉದ್ದೇಶಕ್ಕಾಗಿ ಪೂರ್ವೋಕ್ತ ಮಂಜೂರಾತಿಗಳನ್ನು ಮಾಡಲಾಗಿದೆಯೋ ಅದಕ್ಕಾಗಿ ಭಾರತದ ಸಂಚಿತ ನಿಧಿಯಿಂದ ಹಣವನ್ನು ಪಡೆದುಕೊಳ್ಳಲು ಕಾನೂನು ಪ್ರಕಾರ ಅನುಮತಿ ನೀಡುವ ಅಧಿಕಾರ ಪಾರ್ಲಿಮೆಂಟಿಗಿರುತ್ತದೆ."

(೨)ನೆಯ ಖಂಡಕ್ಕೆ ಸಂಬಂಧಿಸಿದಂತೆ, ಅದು ಹೀಗೆ ಹೇಳುತ್ತದೆ. ಈ ಸಂವಿಧಾನದ ೯೩ ಮತ್ತು ೯೪ನೆಯ ವಿಧಿಗಳಲ್ಲಿನ ಉಪಬಂಧಗಳು ಯಾವುದೇ ಮಂಜೂರಾತಿ ಮಾಡುವುದಕ್ಕೆ ಸಂಬಂಧಿಸಿ ಪರಿಣಾಮಕಾರಿಯಾಗಿರುತ್ತದೆ.." ಇದರ ಅರ್ಥ, ಇದಕ್ಕಾಗಿ ಒಂದು ಧನ ವಿನಿಯೋಗ ಶಾಸನವಾಗಬೇಕು. ಅದರಲ್ಲಿ ಕೂಡ ಸಂಚಿತ ನಿಧಿಯಿಂದ ನಿರ್ವಹಿಸುವ, ನಿರ್ವಹಿಸದ, ಮಂಜೂರಾಗಬೇಕಾದ, ಬಾರದ

ಎಲ್ಲಾ ವಿವರಗಳು ನಮೂದಾಗಬೇಕು ಎಂದೆ? ಹಾಗಿದ್ದ ಪಕ್ಷದಲ್ಲಿ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅದು ಹಾಗಾಗಲು ಸಾಧ್ಯವಿಲ್ಲ

**ಮಾನ್ಯ ಶ್ರೀ ಕೆ. ಸಂತಾನಂ :** ೯೩ನೆಯ ವಿಧಿಯು ಹೇಳುತ್ತದೆ...

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಸನ್ಮಾನ್ಯ ಸದಸ್ಯರು ಗಮನಿಸುವುದಾದರೆ, ನಾವು ಹೀಗೆ ಹೇಳಬಹುದು, ಒಂದು ಧನ ವಿನಿಯೋಗ ಶಾಸನಕ್ಕೆ ಮುಂಚಿತವಾಗಿ ಒಂದು ಸಂಚಿತ ನಿಧಿ ಮಸೂದೆ ಸಂಖ್ಯೆ ಇರುತ್ತದೆ. ಅದು ಮುಖ್ಯ ರೂಪರೇಷೆಯನ್ನು ಒಳಗೊಂಡಿರುತ್ತದೆ.

**ಮಾನ್ಯ ಶ್ರೀ ಕೆ. ಸಂತಾನಂ :** ಸಂಚಿತ ನಿಧಿ ಮಸೂದೆ– ನಂ೧ರಲ್ಲಿಯೂ ನಿರ್ವಹಿಸಬೇಕಾದ, ಕೂಡದ; ಮಂಜೂರು ಮಾಡಬೇಕಾದ, ಕೂಡದ ಮೊತ್ತಗಳೆಲ್ಲ ಇರುತ್ತವೆಯೋ ಅಥವಾ ಕೇವಲ ಅನುಮೋದಿಸಬೇಕಾದ ಭಾಗವನ್ನು ಮಾತ್ರ ಅದರಲ್ಲಿ ಕೊಡಲಾಗುತ್ತದೆಯೋ ಎಂದು ತಿಳಿದುಕೊಳ್ಳ ಬಯಸುತ್ತೇನೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಿರ್ವಹಿಸದ ಭಾಗವು ಅಂತಿಮ ಧನ ವಿನಿಯೋಗ ಶಾಸನದಲ್ಲಿ ಮಾತ್ರ ಬರುತ್ತದೆ. ಈ ವಿಧಾನವನ್ನು ಹೌಸ್ ಆಫ್ ಕಾಮನ್ಸ್ ಸಭೆಯ ತಾಂತ್ರಿಕ ಪರಿಭಾಷೆಯಲ್ಲಿ ಪೂರೈಕೆ ಸೇವೆಗಳು ಎಂದು ಕರೆಯಲಾಗಿರುತ್ತದೆ. ಅವು ವರಮಾನದಿಂದ ನಿರ್ವಹಿಸಬೇಕಾದ ಸೇವೆಗಳಿಂದ ಪ್ರತ್ಯೇಕವಾದವು.

**ಮಾನ್ಯ ಶ್ರೀ ಕೆ ಸಂತಾನಂ :** ೯೩ ಮತ್ತು೯೪ನೆಯ ವಿಧಿಗಳ ಉಪಬಂಧಗಳ ಪ್ರಕಾರ ನಡೆದುಕೊಳ್ಳಬೇಕೆಂದು ಈ ವಿಧಿಯು ಹೇಳುತ್ತದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ೯೩ ಮತ್ತು ೯೪ನೆಯ ವಿಧಿಗಳು ಹೇಳುವುದು ಧನ ವಿನಿಯೋಗ ಶಾಸನವನ್ನು ಅನುಮೋದಿಸುವ ವಿಚಾರವನ್ನು.

**ಮಾನ್ಯ ಶ್ರೀ ಕೆ. ಸಂತಾನಂ :** ೯೩ನೆಯ ವಿಧಿಯ ಮೊದಲನೆಯ ಭಾಗವು ನಿರ್ವಹಿಸಿದ ಭಾಗವನ್ನು ತೋರಿಸಲಾಗುತ್ತದೆ ಎಂದು ಹೇಳುತ್ತದೆ; ಮತ್ತು ಎರಡನೆಯ ಭಾಗವಾದರೋ ಅನುಮೋದಿಸಬೇಕಾದ ಭಾಗವನ್ನು ಮತಕ್ಕೆ ಮಂಡಿಸಬೇಕು ಎಂದು ಹೇಳುತ್ತದೆ. ಈ ಎರಡೂ ಭಾಗಗಳು ಮತ ನೀಡಿಕೆಗೆ ಬರುತ್ತವೆಯೆ ಎಂಬುದನ್ನು ನನಗೆ ತಿಳಿದುಕೊಳ್ಳಬೇಕಾಗಿದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ೯೩ನೆಯ ವಿಧಿಯು, ಭಾರತದ ವರಮಾನದ ಮೇಲೆ ನಿರ್ವಹಿಸಿದ ಸೇವೆಗಳಿಗೆ ಸದನವು ಮತ ನೀಡಿ ಅನುಮೋದಿಸಬೇಕಾದ ಅಗತ್ಯವಿಲ್ಲ ಎಂದು ಹೇಳುತ್ತದೆ.

**ಮಾನ್ಯ ಶ್ರೀ ಕೆ. ಸಂತಾನಂ :** ಆದರೆ ಅವನ್ನು ಧನ ವಿನಿಯೋಗ ಶಾಸನವನ್ನು ಕುರಿತಾಗಿಲ್ಲ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅದೇ ಧನ ವಿನಿಯೋಗ ಶಾಸನ ಕೂಡ, ನಾನು ಮೊದಲೇ ಹೇಳಿದಂತೆ ಎರಡಕ್ಕೂ ನಡುವೆ ವ್ಯತ್ಯಾಸವಿಲ್ಲ. ಧನ ವಿನಿಯೋಗ ಶಾಸನವು ವಿವರಗಳನ್ನು ತೋರಿಸುತ್ತದೆ. ಸಂಚಿತ ನಿಧಿ ಶಾಸನವು ತೋರಿಸುವುದಿಲ್ಲ ಅಷ್ಟೆ.

**ಮಾನ್ಯ ಶ್ರೀ ಕೆ ಸಂತಾನಂ :** ಡಾ.ಅಂಬೇಡ್ಕರ್ ಅವರು ವಿವರಣೆಗಳು ಒಂದು ಸಂವಿಧಾನದ ಕರಾರುವಾಕ್ಕಾದ ಅವಕಾಶಗಳನ್ನು ಮೀರಿಸುತ್ತವೆ ಎಂದು ನಾನು ಭಾವಿಸುವುದಿಲ್ಲ. ವಿಧಿಯು ಈಗಿರುವಂತೆ, ೯೩ ಮತ್ತು ೯೪ನೆಯ ವಿಧಿಗಳು ಈ ಸಂಚಿತ ನಿಧಿಗೂ ಹಾಗೆಯೇ ಮತ್ತೊಂದಕ್ಕೂ ಅನ್ವಯಿಸುತ್ತವೆ. ಆದ್ದರಿಂದ ಇಡೀ ಬಜೆಟ್ ಪ್ರಕ್ರಿಯೆಯನ್ನು ಪುನರಾವರ್ತಿಸಬೇಕಾಗುತ್ತದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಸನ್ಮಾನ್ಯ ಸದಸ್ಯರು (೨) ನೆಯ ಉಪ–ಖಂಡವನ್ನು

ಜಾಗರೂಕತೆಯಿಂದ ಓದಿ ನೋಡಿದರೆ, ಅದು ಏನನ್ನು ಕುರಿತು ವ್ಯವಹರಿಸುತ್ತದೆ ಎಂದು ಅವರಿಗೆ ತಿಳಿಯುತ್ತದೆ. "ಈ ಸಂವಿಧಾನದ ೯೩ ಮತ್ತು ೯೪ನೆಯ ವಿಧಿಗಳ ಉಪಬಂಧಗಳು (೧)ನೆಯ ಖಂಡದನ್ವಯ ಯಾವುದೇ ಮಂಜೂರಾತಿಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾಗಿರುತ್ತವೆ."

**ಮಾನ್ಯ ಶ್ರೀ ಕೆ. ಸಂತಾನಂ :** ದಯವಿಟ್ಟು ಓದಿ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಾನು ಹೇಳಿದಂತೆ, ವರಮಾನಗಳಿಂದ ನಿರ್ವಹಿಸುವ ಸೇವೆಗಳಿಗೆ ಸಂಬಂಧಿಸಿದಂತೆ ಮಂಜೂರಾತಿಯ ಪ್ರಶ್ನೆ ಬರುವುದಿಲ್ಲ.

*****

* **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಇದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳಬೇಕಾದ ಅಗತ್ಯವಿರುವಂತೆ ತೋರುವುದಿಲ್ಲ.

ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"(೧)ನೆಯ ಖಂಡದ (ಸಿ) ಉಪ-ಖಂಡವಾದ ಮೇಲೆ 'ಮತ್ತು' ಎಂಬ ಪದವಾದ ಮೇಲೆ 'ಗೆ' ಎಂಬ ಪದಕ್ಕೆ ಮುಂಚೆ ಈ ಕೆಳಗಿನ ಪದಗಳನ್ನು ಕೂಡಿಸಬಹುದು.

'ಪಾರ್ಲಿಮೆಂಟು ಅಧಿಕಾರವನ್ನು ಹೊಂದಿರುತ್ತದೆ.'

(ತಿದ್ದುಪಡಿಯು ಸ್ವೀಕೃತವಾಯಿತು, ಡಾ.ಅಂಬೇಡ್ಕರ್ ಅವರ ಹಿಂದಿನ ಗೊತ್ತುವಳಿಯು ಸ್ವೀಕೃತವಾಯಿತು. ತಿದ್ದುಪಡಿಯಾದಂತೆ, ೯೬ ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

*****

## ವಿಧಿ-೯೭

* **ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್ :** ಯಾವುದೇ ಉತ್ತರವು ಅಗತ್ಯವಾಗಿದೆಯೆಂದು ನನಗೆ ತೋರುವುದಿಲ್ಲ. ಆದರೆ ತಾವು ಅನುಮತಿಸುವುದಾದರೆ, ನಾನೇ ಒಂದು ತಿದ್ದುಪಡಿಯನ್ನು ಮಂಡಿಸಲಿಚ್ಛಿಸುತ್ತೇನೆ. ಹೀಗೆ ಮಂಡಿಸುತ್ತೇನೆ:

"ತಿದ್ದುಪಡಿಗಳ ಪಟ್ಟಿಯ ೧೭೫೩ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ, ೯೭ನೆಯ ವಿಧಿಯ (೩)ನೆಯ ಖಂಡದಲ್ಲಿ 'ಭಾರತದ ವರಮಾನಗಳು' ಎಂಬ ಪದಗಳಿಗೆ 'ಭಾರತದ ಸಂಚಿತ ನಿಧಿ' ಎಂಬ ಪದಗಳನ್ನು ಇಟ್ಟುಕೊಳ್ಳಬೇಕು."

**ಶ್ರೀ ಎಚ್.ವಿ. ಕಾಮತ್ :** ಖಂಡದ ಕೊನೆಯಲ್ಲಿರುವ ಪದಗಳನ್ನು ಅನಾವಶ್ಯಕವಾಗಿ ಪುನರುಕ್ತಿಸಲಾಗಿದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನನಗೆ ಹಾಗೆ ತೋರುವುದಿಲ್ಲ.

**ಮಾನ್ಯ ಅಧ್ಯಕ್ಷರು :** ಈಗ ಡಾ. ಅಂಬೇಡ್ಕರ್ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತಿದ್ದೇನೆ. ಪ್ರಶ್ನೆ ಹೀಗಿದೆ.

"ತಿದ್ದುಪಡಿಗಳ ಪಟ್ಟಿಯ ೧೭೫೩ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ, ೯೭ನೆಯ ವಿಧಿಯ

---

* ಸಿ.ಎ.ಡಿ. ಸಂಪುಟ ೮, ೧೦ನೇ ಜೂನ್ ೧೯೪೯, ಪುಟ ೭೭೪

* ಅದೇ, ಪು-೭೮೦-೮೧

(೩)ನೆಯ ಖಂಡದಲ್ಲಿ 'ಭಾರತದ ವರಮಾನಗಳು' ಎಂಬ ಪದಗಳಿಗೆ 'ಭಾರತದ ಸಂಚಿತ ನಿಧಿ' ಎಂಬ ಪದಗಳನ್ನು ಇಟ್ಟುಕೊಳ್ಳಬಹುದು."

ತಿದ್ದುಪಡಿಯು ಸ್ವೀಕೃತವಾಯಿತು.

ತಿದ್ದುಪಡಿಯಾದಂತೆ ೯೭ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ–೯೮

**ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್ :** ಶ್ರೀ ಜಸಪತರಾಯ್ ಕಪೂರರ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವುದಿಲ್ಲವೆಂದಷ್ಟೆ ನಾನು ಹೇಳಬಹುದಾದದ್ದು. ನಿಯಮಗಳನ್ನು ಅಳವಡಿಸಲು ತಕ್ಕಂತೆ ವಿಷಯವನ್ನು ನಮ್ಯವಾಗಿ ಬಿಡುವುದು ಒಳ್ಳೆಯದು. ಶ್ರೀ ಕಾಮತ್ ಅವರ ತಿದ್ದುಪಡಿಗೆ ಸಂಬಂಧಿಸಿದಂತೆ, ಆ ಕಡೆಗೆ ನನ್ನ ಮನಸ್ಸು ಹರಿದಿದೆ. ಆದರೆ ತಕ್ಷಣಕ್ಕೆ ಏನನ್ನೂ ಹೇಳಿ ಬದ್ಧನಾಗಲು ಸಾಧ್ಯವಿಲ್ಲ. ಆದರೆ ಖಂಡಿತವಾಗಿಯೂ ಕರಡು ರಚನಾ ಸಮಿತಿಯು ಈ ವಿಚಾರವನ್ನು ಪರಿಗಣಿಸುತ್ತದೆ ಎಂದು ಅವರಿಗೆ ಆಶ್ವಾಸನೆ ಕೊಡಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಹಾಗಾದರೆ ಶ್ರೀ ಕಾಮತ್ ಅವರ ತಿದ್ದುಪಡಿಯನ್ನು ನಾನು ಮತಕ್ಕೆ ಹಾಕುವುದಿಲ್ಲ. ಅದನ್ನು ಒಂದು ಕರಡು ತಿದ್ದುಪಡಿಯೆಂದು ಭಾವಿಸುತ್ತೇನೆ. ಅದನ್ನು ಕರಡು ರಚನಾ ಸಮಿತಿಯು ಪರಿಶೀಲಿಸುತ್ತದೆ.

ಜಸಪತರಾಯ್ ಕಪೂರರ ೧೫೫ನೆಯ ತಿದ್ದುಪಡಿಗೆ ಸಂಬಂಧಿಸಿದಂತೆ, ನಾನು ಒಂದು ವಿಚಾರದ ಕಡೆಗೆ ಡಾ.ಅಂಬೇಡ್ಕರ್ ಅವರ ಗಮನವನ್ನು ಸೆಳೆಯಲು ಅಪೇಕ್ಷಿಸುತ್ತೇನೆ. ೯೮ನೆಯ ವಿಧಿಯ (೨)ನೆಯ ಖಂಡದಲ್ಲಿ ಈ ಪದಗಳಿಗೆ

"ಭಾರತದ ಡೊಮಿನಿಯನ್ನಿನ ಶಾಸನ ಸಭೆಗೆ ಸಂಬಂಧಿಸಿದಂತೆ' ಬೇರೊಂದು ಕಡೆ "ಭಾರತದ ಸಂವಿಧಾನ ಸಭೆ" ಎಂಬ ಪದಗಳನ್ನು ಉಪಯೋಗಿಸಿದ್ದೇವೆ. ಅದೇ ಉಕ್ತಿಯನ್ನೇ ಇಲ್ಲಿಯೂ ಇಟ್ಟುಕೊಳ್ಳಲು ಡಾ. ಬಿ.ಆರ್. ಅಂಬೇಡ್ಕರ್ ಅವರು ಇಚ್ಛಿಸುತ್ತಾರೆಂದು ಭಾವಿಸಬಹುದೆ?

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಹೌದು.

**ಮಾನ್ಯ ಅಧ್ಯಕ್ಷರು :** ಈಗ ಇಲ್ಲಿ ಈ (೨) ನೆಯ ಖಂಡದಲ್ಲಿ 'ಭಾರತ ಡೊಮಿನಿಯನ್ನಿನ ಶಾಸನ ಸಭೆ' ಎಂಬ ಪದಗಳು ಇವೆ. ಬಹುಶಃ 'ಭಾರತ ಸಂವಿಧಾನ ಸಭೆ' ಎಂಬ ಉಕ್ತಿ ಉತ್ತಮವಾಗಬಹುದೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಈಗ ಹೇಳಬೇಕೆಂದರೆ ಎರಡು ಅಸೆಂಬ್ಲಿಗಳಿವೆ. ಸಂವಿಧಾನ ಸಭೆಯು ಸಂವಿಧಾನ ಸಭೆಯಾಗಿ ಅಧಿವೇಶನ ಕೂಡುವುದು: ಮತ್ತು ಸಂವಿಧಾನ ಸಭೆಯು ಶಾಸನ ಸಭೆಯಾಗಿ ಅಧಿವೇಶ ಕೂಡುವುದು. ಎರಡಕ್ಕೆ ಸಂಬಂಧಿಸಿದಂತೆಯೂ ನಿಯಮ ನಿಬಂಧನೆಗಳಿವೆ. ಆದ್ದರಿಂದ 'ಭಾರತದ ಡೊಮಿನಿಯನ್' ಎಂಬ ಪದಗಳನ್ನು ಇಟ್ಟುಕೊಳ್ಳುವುದೇ ಅಪೇಕ್ಷಣೀಯ ಎಂದು ನನ್ನ ಭಾವನೆ. ಆಗ ಆಪಕ್ಷದಲ್ಲಿ ಚಾಲ್ತಿಯಲ್ಲಿರುವ ನಿಯಮಗಳನ್ನು ನಾವು ಅನುಸರಿಸಿಕೊಳ್ಳಬಹುದು.

**ಶ್ರೀ ಜಸಪತರಾಯ್ ಕಪೂರ್ :** ನನ್ನ ವಿನಂತಿ ಹೀಗಿದೆ. 'ಭಾರತ ಡೊಮಿನಿಯನ್ನಿನ ಶಾಸನ ಸಭೆ' ಎಂಬ ಪದಗಳಿಗೆ ಬದಲಾಗಿ,'ಭಾರತದ ಸಂವಿಧಾನ ಸಭೆ' ಎಂಬ ಪದಗಳನ್ನಿಟ್ಟುಕೊಂಡು 'ಶಾಸನ' ಎಂಬ ಪದವನ್ನು ಕಂಸಗಳಲ್ಲಿ ಇಡಬಹುದು. ನಮ್ಮ ಸಂವಿಧಾನ ಸಭೆಯು ಶಾಸನ ಸಭೆಯಾಗಿ ಕಾರ್ಯನಿರ್ವಹಿಸುತ್ತಿರುವಾಗ ನಾವು ವರ್ಣಿಸುತ್ತಿರುವುದೇ ಹೀಗೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಾನು ಭಾರತ ಸ್ವಾತಂತ್ರ್ಯ ಶಾಸನದ ()ಭಾಷೆಯನ್ನೇ ಬಳಸಬೇಕು. ಆ ಶಾಸನದ ಪರಿಭಾಷೆಗೆ ನಮ್ಮನ್ನು ಮಿತಿಗೊಳಿಸಿಕೊಳ್ಳಬೇಕು.

**ಮಾನ್ಯ ಅಧ್ಯಕ್ಷರು :** ಅದು ಯಾವ ತೊಂದರೆಯನ್ನೂ ಸೃಷ್ಟಿಸದಿರುವುದಾದರೆ ನನಗೇನೂ ಬಾಧಕವಿಲ್ಲ. ಶ್ರೀ ಜಸಪತರಾಯ್ ಕಪೂರ್ ಅವರು ಮಂಡಿಸಿದ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

**ಶ್ರೀ ಜಸಪತರಾಯ್ ಕಪೂರ್ :** ಅದನ್ನು ಹಿಂತೆಗೆದುಕೊಳ್ಳಲು ಸದನದ ಅನುಮತಿಯನ್ನು ಕೋರುತ್ತೇನೆ. ಸೋತ ತಿದ್ದುಪಡಿಯೆಂಬ ವಿಧಿ ಅದಕ್ಕೆ ಬರುವುದು ನನಗೆ ಅಪೇಕ್ಷೆಯಿಲ್ಲ.

**ಮಾನ್ಯ ಅದ್ಯಕ್ಷರು :** ತಮ್ಮ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಸದನವು ಅವರಿಗೆ ಅನುಮತಿ ಕೊಡುವುದಾದರೆ, ಅದನ್ನು ಹಿಂದಕ್ಕೆ ಪಡೆಯಬಹುದು.

(ಅಸೆಂಬ್ಲಿಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು. ೯೮ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ನೂತನ ವಿಧಿ–೯೮–ಎ

* **ಮಾನ್ಯ ಅಧ್ಯಕ್ಷರು :** ಡಾ. ಅಂಬೇಡ್ಕರ್ ಅವರಿಂದ ಒಂದು ನೂತನ ವಿಧಿಯನ್ನು ಅಳವಡಿಸಲು ತಿದ್ದುಪಡಿ ನೋಟೀಸು ಬಂದಿದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ "೯೮ನೆಯ ವಿಧಿಯಾದ ನಂತರ ಈ ಕೆಳಗಿನ ನೂತನ ವಿಧಿಯನ್ನು ಅಳವಡಿಸಬಹುದು"

ಆರ್ಥಿಕ ವ್ಯವಹಾರಗಳನ್ನು ಕುರಿತು ಪಾರ್ಲಿಮೆಂಟಿನಲ್ಲಿ ಅನುಸರಿಸಬೇಕಾದ ವಿಧಾನವನ್ನು ಕಾನೂನಿನಿಂದ ನಿಯಂತ್ರಿಸುವಿಕೆ : ೧೯೮–ಎ ಪಾರ್ಲಿಮೆಂಟು, ಹಣಕಾಸು ವ್ಯವಹಾರವನ್ನು ಸಕಾಲಕ್ಕೆ ಮಂಡಿಸುವ ಉದ್ದೇಶದಿಂದ, ಪಾರ್ಲಿಮೆಂಟಿನ ಪ್ರತಿ ಸದನದಲ್ಲೂ ನಡೆಯುವ ಕಾರ್ಯಕಲಾಪ ಮತ್ತು ಕಾರ್ಯವಿಧಾನಗಳನ್ನು ಕಾನೂನಿನ ಪ್ರಕಾರ ಕ್ರಮಬದ್ಧಗೊಳಿಸಬಹುದು. ಅಥವಾ ಯಾವುದೇ ಹಣವನ್ನು 'ಭಾರತದ ಸಂಚಿತ ನಿಧಿಯಿಂದ' ಪಡೆಯುವುದಕ್ಕಾದ ಧನ ವಿನಿಯೋಗ ಮಸೂದೆಯ ಬಗೆಗೆ ಕ್ರಮಯುತಗೊಳಿಸಲು ನಿಯಮಗಳನ್ನು ಮಾಡಬಹುದು. ಹಾಗೆ ಮಾಡಿದ ಅವಕಾಶವು, ಪಾರ್ಲಿಮೆಂಟಿನ ಯಾವುದೇ ಒಂದು ಸದನವು ಈ ಹಿಂದಿನ ವಿಧಿಯನ್ವಯ ಮಾಡಿದ ಅಥವಾ ಸ್ಥಿರ ಆದೇಶವುಳ್ಳ ನಿಯಮಕ್ಕೆ ಸಂಗತವಾಗಿರಬೇಕು. ಆ ವಿಧಿಯ (೨)ನೆಯ ಖಂಡದಂತೆ ಅಂತಹ ಅವಕಾಶವು ಚಾಲ್ತಿಯಲ್ಲಿರುತ್ತದೆ."

**ಮಾನ್ಯ ಅಧ್ಯಕ್ಷರು :** ಈ ತಿದ್ದುಪಡಿಯನ್ನು ಕುರಿತು ಯಾವ ಸದಸ್ಯರೂ ಮಾತನಾಡಲು ಅಪೇಕ್ಷಿಸುತ್ತಿಲ್ಲವಾದ್ದರಿಂದ ಗೊತ್ತುವಳಿಯನ್ನು ನಾನೀಗ ಮತಕ್ಕೆ ಹಾಕುತ್ತೇನೆ.

ಗೊತ್ತುವಳಿಯು ಅಂಗೀಕೃತವಾಯಿತು. ೯೮–ಎ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

---

* ಸಿ.ಎ.ಡಿ. ಸಂಪುಟ ೮, ೧೦ನೇ ಜೂನ್ ೧೯೪೯ ಪುಟ ೭೮೧

## ವಿಧಿ–೧೭೩

** **ಮಾನ್ಯ ಅಧ್ಯಕ್ಷರು :** ಡಾ.ಬಿ.ಆರ್.ಅಂಬೇಡ್ಕರ್ ಅವರು ಮುಂದಿನ ೨೪೬೪ನೆಯ ತಿದ್ದುಪಡಿಯನ್ನು ಮಂಡಿಸಬಹುದು.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ ಹೀಗೆ ಮಂಡಿಸುತ್ತೇನೆ.

"೧೭೩ನೆಯ ವಿಧಿಯ (೪)ನೆಯ ಖಂಡದಲ್ಲಿ 'ಅಂಗೀಕೃತವಾದಂತೆ ಭಾವಿಸಲಾದ' ಎಂಬ ಪದಗಳಿಗೆ ಬದಲಾಗಿ 'ಅದನ್ನು ಅಂಗೀಕರಿಸಿದ ರೂಪದಲ್ಲಿ ಉಭಯ ಸದನಗಳೂ' ಎಂಬ ಪದಗಳನ್ನು ಇರಿಸಬೇಕು."

(ಡಾ. ಅಂಬೇಡ್ಕರ್ ಅವರ ತಿದ್ದುಪಡಿಯು ಸ್ವೀಕೃತವಾಯಿತು).ತಿದ್ದುಪಡಿಯಾದಂತೆ ೧೭೩ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ–೧೭೪

* **ಮಾನ್ಯ ಅಧ್ಯಕ್ಷರು :** ಡಾ. ಅಂಬೇಡ್ಕರ್, ನಿಮ್ಮ ಹೆಸರಿನಲ್ಲಿ ಎರಡು ತಿದ್ದುಪಡಿಗಳಿವೆ, ಮೊದಲನೆ ಪಟ್ಟಿಯ ೬೯ ಮತ್ತು ೭೦ನೆಯ ಇವುಗಳ ಉದ್ದೇಶ ವಿಧಿಯನ್ನು ನಾವೀಗಾಗಲೆ ಅಂಗೀಕರಿಸಿರುವ ಉಪಬಂಧಗಳಿಗೆ ಹೊಂದಿಕೆಯಾಗಿರುವಂತೆ ಮಾಡುವುದು.

**ಮಾನ್ಯ ಡಾ.ಬಿ.ಆರ್ ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ.

"೧೭೪ನೆಯ ವಿಧಿಯ (೧)ನೆಯ ಖಂಡದ (ಕ) ಮತ್ತು (ಡ) ಉಪ–ಖಂಡಗಳಿಗೆ ಬದಲಾಗಿ ಈ ಕೆಳಗಿನಂತೆ ಅಳವಡಿಸಬೇಕು.

(ಕ) ಸಂಚಿತ ನಿಧಿ, ಅಥವಾ ಸರಕಾರದ ಸಾದಿಲ್ವಾರು ನಿಧಿಗಳ ಸುಫರ್ದುಗಳ, ಅಂತಹ ಯಾವುದೇ ನಿಧಿಗೆ ಹಣವನ್ನು ಜಮೆ ಮಾಡುವುದು ಅಥವಾ ಅದರಿಂದ ಹಣವನ್ನು ಹಿಂದಕ್ಕೆ ಪಡೆಯುವುದು;

(ಡ) ಸರಕಾರದ ಸಂಚಿತ ನಿಧಿಯಿಂದ ಹಣವನ್ನು ವಿನಿಯೋಗ ಮಾಡಿಕೊಳ್ಳುವುದು."

ಹಾಗೂ

"೧೭೪ನೆಯ ವಿಧಿಯ (೧)ನೆಯ ಖಂಡದ (ಸಿ)ಮತ್ತು (ಎಫ್) ಉಪ–ಖಂಡಗಳಲ್ಲಿ 'ರಾಜ್ಯದ ವರಮಾನ' ಎಂಬ ಪದಗಳಿಗೆ ಬದಲಾಗಿ 'ರಾಜ್ಯದ ಸಂಚಿತ ನಿಧಿ ಎಂಬ ಪದಗಳನ್ನು ಇಟ್ಟುಕೊಳ್ಳಬೇಕು.

**ಮಾನ್ಯ ಅಧ್ಯಕ್ಷರು :** ಈ ವಿಧಿಗೆ ಬೇರೆ ಯಾವ ತಿದ್ದುಪಡಿಗಳೂ ಬಂದಿಲ್ಲ. ಇದನ್ನು ನಾನೀಗ ಮತಕ್ಕೆ ಹಾಕುತ್ತೇನೆ.

**ಶ್ರೀ ಎಚ್.ವಿ. ಕಾಮತ್ :** ಈ ವಿಚಾರದಲ್ಲಿ ಡಾ.ಅಂಬೇಡ್ಕರ್ ಅವರು ಏನನ್ನೂ ಮಾತನಾಡಬಯಸುವುದಿಲ್ಲವೇನು?

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ನಾನು ಈಗ ಹೇಳಬಹುದಾದುದೆಲ್ಲ ಸಂವಿಧಾನದ ಪರಿಷ್ಕರಣ ಕಾರ್ಯವನ್ನು ಕೈಗೆತ್ತಿಕೊಂಡಾಗ ಈ ವಿಚಾರಕ್ಕೆ ಗಮನಕೊಡುತ್ತೇನೆ.

** ಸಿ.ಎ.ಡಿ. ಸಂಪುಟ ೮, ೧೦ನೇ ಜೂನ್ ೧೯೪೯, ಪುಟ ೭೮೨

** ಅದೇ ಪು. ೭೮೨–೮೩

* ಅದೇ ಪು. ೭೮೪.

ಡಾ. ಅಂಬೇಡ್ಕರರ ತಿದ್ದುಪಡಿಗಳು ಅಂಗೀಕೃತವಾದುವು.

* **ಶ್ರೀ ಎಚ್.ವಿ. ಕಾಮತ್:** ವಿಷಯವನ್ನು ಮುಂದೆ ಗಮನಿಸುವುದಾಗಿ ಡಾ.ಅಂಬೇಡ್ಕರ್ ಅವರು ಆಶ್ವಾಸನೆ ಕೊಟ್ಟಿರುವುದರಿಂದ, ಅವರಿಗೇ ಅದನ್ನು ಬಿಟ್ಟುಬಿಡುತ್ತೇನೆ, ಮುಂದೆ ಅವರು ತಮ್ಮ ಹಕ್ಕು ಚಲಾಯಿಸಬಹುದು.

**ಮಾನ್ಯ ಅಧ್ಯಕ್ಷರು :** ಎರಡು ತಿದ್ದುಪಡಿಗಳೂ?

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಇರುವುದು ಒಂದು ತಿದ್ದುಪಡಿ ಮಾತ್ರ.

**ಶ್ರೀ ಎಚ್.ವಿ. ಕಾಮತ್:** ಮುಂದೆ ಪರಿಶೀಲಿಸುವುದಾಗಿ ಅವರು ಆಶ್ವಾಸನೆ ಕೊಟ್ಟಿದ್ದು ಯಾವುದು? ಅವರು ಅದನ್ನು ಸ್ಪಷ್ಟಪಡಿಸಬೇಕು.

**ಮಾನ್ಯ ಡಾ. ಬಿ.ಆರ್ ಅಂಬೇಡ್ಕರ್ :** ೨೪೬೬ನೆಯ ತಿದ್ದುಪಡಿಯನ್ನು

**ಮಾನ್ಯ ಅಧ್ಯಕ್ಷರು :** ಒಳ್ಳೆಯದು. ಹಾಗಾದರೆ, ಅವುಗಳನ್ನು ನಾವು ಮತಕ್ಕೆ ಹಾಕುವುದಿಲ್ಲ.

ತಿದ್ದುಪಡಿಯಾದಂತೆ ೧೭೪ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

***ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ೧೭೫ನೆಯ ವಿಧಿಯನ್ನು ತಡೆಹಿಡಿದಿಡಬೇಕೆಂದು ಸೂಚಿಸುತ್ತೇನೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ೧೭೫ ಮತ್ತು ೧೭೬ ಎರಡೂ ವಿಧಿಗಳನ್ನು ತಡೆಹಿಡಿಯಬೇಕೆಂದು ಸೂಚಿಸುತ್ತೇನೆ. ಅವು ಕೆಲವು ಸಮಸ್ಯೆಗಳನ್ನು ಉಂಟುಮಾಡಿವೆ. ಕರಡು ರಚನಾ ಸಮಿತಿಯು ಅವುಗಳನ್ನು ಇಲ್ಲಿ ಪರಿಶೀಲಿಸುತ್ತಿದೆ. ಈಗ ೧೭೭ನೆಯ ವಿಧಿಯನ್ನು ತೆಗೆದುಕೊಳ್ಳೋಣ.

**ಮಾನ್ಯ ಅಧ್ಯಕ್ಷರು :** ಹಾಗಾದರೆ,೧೭೭ನೆಯ ವಿಧಿಯನ್ನು ತೆಗೆದುಕೊಳ್ಳೋಣ.

## ವಿಧಿ-೧೭೭

+ **ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ. "೧೭೭ನೆಯ ವಿಧಿಯ (೨)ನೆಯ ಖಂಡದ (ಅ) ಮತ್ತು (ಬ) ಉಪ-ಖಂಡಗಳಲ್ಲಿ 'ರಾಜ್ಯದ ವರಮಾನಗಳು' ಎಂಬ ಪದಗಳಿವೆ. ಬದಲಾಗಿ 'ರಾಜ್ಯದ ಸಂಚಿತ ನಿಧಿ' ಎಂಬ ಪದಗಳನ್ನು ಇಟ್ಟುಕೊಳ್ಳಬಹುದು."

ಹೀಗೆ ಮಂಡಿಸುತ್ತೇನೆ.

"೧೭೭ನೆಯ ವಿಧಿಯ (೩)ನೆಯ ಖಂಡದಲ್ಲಿ, 'ಪ್ರತಿಯೊಂದು ರಾಜ್ಯದ ವರಮಾನಗಳು' ಎಂಬ ಪದಗಳಿಗೆ ಬದಲಾಗಿ 'ಪ್ರತಿಯೊಂದು ರಾಜ್ಯದ ಸಂಚಿತ ನಿಧಿ ಎಂಬ ಪದಗಳನ್ನು ಇರಿಸಿಕೊಳ್ಳಬೇಕು."

ಇದನ್ನು ಮಂಡಿಸುತ್ತೇನೆ : '೧೭೭ನೆಯ ವಿಧಿಯ (೩)ನೆಯ ಖಂಡದ (ಬಿ) ಉಪ-ಖಂಡದಲ್ಲಿ 'ವರಮಾನಗಳು' ಎಂಬ ಪದಕ್ಕೆ ಬದಲಾಗಿ 'ವೇತನಗಳು' ಎಂಬ ಪದವನ್ನು ಇಟ್ಟುಕೊಳ್ಳಬೇಕು."

ಎಲ್ಲಾ ತಿದ್ದುಪಡಿಗಳೂ ಸ್ವೀಕೃತವಾದುವು.

---

* ಸಿ.ಎ.ಡಿ. ಸಂಪುಟ ೮, ೧೦ನೇ ಜೂನ್ ೧೯೪೯, ಪುಟ ೭೮೪.

+ ಅದೇ ಪು. ೭೮೪.

## ವಿಧಿ – ೧೭೮

* **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ "೧೭೮ನೆಯ ವಿಧಿಯ (೧)ನೆಯ ಖಂಡದಲ್ಲಿ, 'ರಾಜ್ಯದ ವರಮಾನಗಳು' ಎಂಬ ಪದಗಳ ಬದಲಿಗೆ,'ರಾಜ್ಯದ ಸಂಚಿತ ನಿಧಿ' ಎಂಬ ಪದಗಳನ್ನು ಇಟ್ಟುಕೊಳ್ಳಬೇಕು."

(೨೪೯೦ನೆಯ ತಿದ್ದುಪಡಿಯನ್ನು ಮಂಡಿಸಲಿಲ್ಲ)

**ಮಾನ್ಯ ಅಧ್ಯಕ್ಷರು :** ಪ್ರಶ್ನೆ ಹೀಗಿದೆ.

"೧೭೮ನೆಯ ವಿಧಿಯ (೧)ನೆಯ ಖಂಡದಲ್ಲಿ 'ಒಂದು ರಾಜ್ಯದ ವರಮಾನಗಳು' ಎಂಬ ಪದಗಳ ಬದಲಿಗೆ, 'ರಾಜ್ಯದ ಸಂಚಿತ ನಿಧಿ' ಎಂಬ ಪದಗಳನ್ನು ಇಟ್ಟುಕೊಳ್ಳಬೇಕು."

(೨೪೯೦ನೆಯ ತಿದ್ದುಪಡಿಯನ್ನು ಮಂಡಿಸಲಿಲ್ಲ)

**ಮಾನ್ಯ ಅಧ್ಯಕ್ಷರು :** ಪ್ರಶ್ನೆ ಹೀಗಿದೆ.

"೧೭೮ನೆಯ ವಿಧಿಯ(೧)ನೆಯ ಖಂಡದಲ್ಲಿ 'ಒಂದು ರಾಜ್ಯದ ವರಮಾನಗಳು' ಎಂಬ ಪದಗಳ ಬದಲಾಗಿ 'ಒಂದು ರಾಜ್ಯದ ಸಂಚಿತ ನಿಧಿ' ಎಂಬ ಪದಗಳನ್ನು ಇಟ್ಟುಕೊಳ್ಳಬಹುದು"

ತಿದ್ದುಪಡಿಯು ಸ್ವೀಕೃತವಾಯಿತು.

**ಮಾನ್ಯ ಅಧ್ಯಕ್ಷರು :** ಪ್ರಶ್ನೆ ಹೀಗಿದೆ

"೧೭೮ನೆಯ ವಿಧಿಯು, ತಿದ್ದುಪಡಿಗೊಂಡಂತೆ, ಸಂವಿಧಾನದ ಭಾಗವಾಗುತ್ತದೆ."

ಗೊತ್ತುವಳಿಯು ಸ್ವೀಕೃತವಾಯಿತು.

ತಿದ್ದುಪಡಿಗೊಂಡಂತೆ ೧೭೮ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ–೧೭೯

* **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ

'೧೭೯ನೆಯ ವಿಧಿಗೆ ಬದಲಾಗಿ ಈ ಕೆಳಗಿನಂತೆ ಸೇರಿಸಬೇಕು :

'ಧನ ವಿನಿಯೋಗ ಮಸೂದೆಗಳು : ೧೭೯ (೧) ಹಿಂದಿನ ವಿಧಿಯ ಪ್ರಕಾರ ಅಸೆಂಬ್ಲಿಯು ಮಂಜೂರಾತಿಗಳನ್ನು ಮಾಡಿದೊಡನೆಯೇ ರಾಜ್ಯದ ಸಂಚಿತ ನಿಧಿಯಿಂದ ಈ ಕೆಳಗಿನ ವೆಚ್ಚಗಳನ್ನು ನಿರ್ವಹಿಸಲು ಅಗತ್ಯವಾದ ಹಣವನ್ನು ವಿನಿಯೋಗ ಮಾಡಿಕೊಳ್ಳಲು ಒಂದು ಮಸೂದೆಯನ್ನು ಮಂಡಿಸಬೇಕು.

(ಅ) ಅಸೆಂಬ್ಲಿಯು ಮಾಡಿದ ಮಂಜೂರಾತಿ ಮತ್ತು

(ಬ) ರಾಜ್ಯದ ಸಂಚಿತ ನಿಧಿಯಿಂದ ನಿರ್ವಹಿಸಬೇಕಾದ ವೆಚ್ಚ, ಇದು ಯಾವುದೇ ಸಂದರ್ಭದಲ್ಲೂ ಸದನ/ಸದನಗಳ ಮುಂದೆ ಮಂಡಿಸಿದ ತಃಖ್ತೆಯಲ್ಲಿ ತೋರಿಸಿದ್ದು ಮೊತ್ತವನ್ನು ಮೀರಕೂಡದು.

(೨) ಸದನದಲ್ಲಿ ಅಥವಾ ರಾಜ್ಯದ ಉಭಯ ಸದನಗಳಲ್ಲಿ ಮಂಡಿಸುವ ಯಾವುದೇ ಮಸೂದೆಗೆ,

---

* ಅದೇ ಪು. ೭೮೫–೮೬

** ಅದೇ ಪು. ೭೮೫–೮೬

ಮೊತ್ತವನ್ನು ಬದಲಾಯಿಸುವುದು ಅಥವಾ ಅದರ ಗಮ್ಯವನ್ನು ವ್ಯತ್ಯಾಸಗೊಳಿಸುವ ಅಥವಾ ಸಂಚಿತ ನಿಧಿಯಿಂದ ಮಾಡುವ ವೆಚ್ಚವನ್ನು ಹೆಚ್ಚುಕಡಿಮೆ ಮಾಡುವ ಯಾವುದೇ ತಿದ್ದುಪಡಿಯನ್ನು ಮಂಡಿಸಕೂಡದು. ಈ ಖಂಡದಲ್ಲಿ ಹೇಳಿರುವ ಬಗೆಯ ತಿದ್ದುಪಡಿಗಳ ವಿಷಯದಲ್ಲಿ, ಅಧ್ಯಕ್ಷರಾಗಿರುವ ವ್ಯಕ್ತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

(೩) ಮುಂದಿನೆರಡು ವಿಧಿಗಳ ಉಪಬಂಧಗಳಿಗೆ ಬಳಸಲು ಈ ವಿಧಿಯ ಉಪಬಂಧಗಳಿಗನುಗುಣವಾಗಿ ಅಂಗೀಕರಿಸಿದ ಕಾನೂನಿನಂತೆ ಧನ ವಿನಿಯೋಗ ಮಾಡಿಕೊಂಡ ಹೊರತು, ರಾಜ್ಯದ ಸಂಚಿತ ನಿಧಿಯಿಂದ ಯಾವುದೇ ಹಣವನ್ನು ಹಿಂದಕ್ಕೆ ಪಡೆಯುವಂತಿಲ್ಲ."

**ಮಾನ್ಯ ಅಧ್ಯಕ್ಷರು :** ಈ ವಿಧಿಗೆ ಬೇರೆ ಯಾವ ತಿದ್ದುಪಡಿಯೂ ಇಲ್ಲ.

(ಗೊತ್ತುವಳಿಯು ಅಂಗೀಕೃತವಾಯಿತು. ೧೭೯ನೆಯ ವಿಧಿಯನ್ನು ತಿದ್ದುಪಡಿಗೊಂಡಂತೆ, ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ–೧೮೦

* **ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ.

"೧೮೦ನೆಯ ವಿಧಿಗೆ ಬದಲಾಗಿ ಈ ಕೆಳಗಿನ ವಿಧಿಯನ್ನು ಇರಿಸಿಕೊಳ್ಳತಕ್ಕದ್ದು."

"೧೮೦ (೧) ಗವರ್ನರರು

ಪೂರಕವಾದ ಹೆಚ್ಚಿನ ಅಥವಾ ಹೆಚ್ಚುವರಿ ಮಂಜೂರಾತಿ : (ಅ) ಈ ಸಂವಿಧಾನದ ೧೭೯ನೆಯ ವಿಧಿಯಂತೆ ಅಂಗೀಕರಿಸಿದ ಯಾವುದೇ ನಿಯಮದಂತೆ ಅಧಿಕಾರ ಪಡೆದ ಮೊತ್ತವನ್ನು ನಿರ್ದಿಷ್ಟ ಸೇವೆಗಾಗಿ ಚಾಲ್ತಿ ಆರ್ಥಿಕ ವರ್ಷದಲ್ಲಿ ನಿರ್ವಹಿಸಲಿದ್ದು ಆ ವರ್ಷಕ್ಕೆ ಅದು ಸಾಕಾಗುವುದಿಲ್ಲವೆಂದು ಕಂಡುಬಂದರೆ, ಅಥವಾ ಚಾಲ್ತಿ ಆರ್ಥಿಕ ವರ್ಷದಲ್ಲಿ, ಆ ವರ್ಷದ ಆರ್ಥಿಕ ತಃಖ್ತೆಯಲ್ಲಿ ಕಾಣಿಸಿರದ ಒಂದು ಹೊಸ ಸೇವೆಯನ್ನು ನಿರ್ವಹಿಸಲು ಪೂರಕವಾದ ಅಥವಾ ಹೆಚ್ಚುವರಿಯಾದ ಹಣದ ಅಗತ್ಯವು ಕಾಣಿಸಿಕೊಂಡರೆ : ಅಥವಾ

(ಬ) ಒಂದು ಆರ್ಥಿಕ ವರ್ಷದಲ್ಲಿ ಯಾವುದೇ ಸೇವೆಗಾಗಿ ಯಾವುದೇ ಹಣವನ್ನು ಪ್ರತಿವರ್ಷ ಆ ಸೇವೆಗಾಗಿ ನಿಶ್ಚಿತಪಡಿಸಿದ್ದುದಕ್ಕಿಂತ ಹೆಚ್ಚಾಗಿ ವೆಚ್ಚ ಮಾಡಿದ್ದರೆ, ಸದನದ ಅಥವಾ ಶಾಸನ ಸಭೆಯ ಉಭಯ ಸದನಗಳ ಮುಂದೆ ಕಾರಣವನ್ನು ತಿಳಿಸಿ, ಆ ವೆಚ್ಚದ ಮೊತ್ತವನ್ನು ಅಥವಾ ಕಾರಣವನ್ನು ತೋರಿಸುವ ಇನ್ನೊಂದು ತಃಖ್ತೆಯನ್ನು ರಾಜ್ಯದ ವಿಧಾನ ಸಭೆಯಲ್ಲಿ ಮಂಡಿಸಬೇಕು. ಆ ಹೆಚ್ಚುವರಿಗೆ ಬೇಡಿಕೆಯನ್ನು ಸಲ್ಲಿಸಬೇಕು.

(೨) ಹಿಂದಿನ ಮೂರೂ ವಿಧಿಗಳ ಉಪಬಂಧಗಳು ಅಂತಹ ಯಾವುದೇ ತಃಖ್ತೆ ಮತ್ತು ವೆಚ್ಚ ಅಥವಾ ಬೇಡಿಕೆಯ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ಅಲ್ಲದೆ ಅಂತಹ ವೆಚ್ಚವನ್ನು ನಿರ್ವಹಿಸಲು ರಾಜ್ಯದ ಸಂಚಿತ ನಿಧಿಯಿಂದ ಹಣವನ್ನು ವಿನಿಯೋಗ ಮಾಡಿಕೊಳ್ಳುವ ಅಧಿಕಾರವನ್ನು ನೀಡುವ ಕಾನೂನಿನ ಮೇಲೆ ಪರಿಣಾಮ ಬೀರುತ್ತದೆ. ಅಂತಹ ಬೇಡಿಕೆಗೆ ಸಂಬಂಧಿಸಿದ ಮಂಜೂರಾತಿಯು ವಾರ್ಷಿಕ ಹಣಕಾಸು

---

* ಸಿ.ಎ.ಡಿ. ಸಂಪುಟ ೮, ೧೦ನೇ ಜೂನ್ ೧೯೪೯, ಪುಟ ೭೮೬–೮೭

ತಃಖ್ತೆಯ ಮೇಲೆ ಮತ್ತು ಅಲ್ಲಿ ನಮೂದಿಸಿದ ವೆಚ್ಚದ ಮೇಲೆ, ಅಂತಹ ವೆಚ್ಚವನ್ನು ಅಥವಾ ಮಂಜೂರಾತಿಯನ್ನು ರಾಜ್ಯದ ಸಂಚಿತ ನಿಧಿಯಿಂದ ವಿನಿಯೋಗ ಮಾಡಿಕೊಳ್ಳಲು ಅಧಿಕಾರ ನೀಡುವ ಕಾನೂನಿನ ಮೇಲೆಯೂ ಪರಿಣಾಮ ಬೀರುತ್ತದೆ."

ತಿದ್ದುಪಡಿಯು ಸ್ವೀಕೃತವಾಯಿತು.

ತಿದ್ದುಪಡಿಗೊಂಡಂತೆ ೧೮೦ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ -೧೮೧

* **ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಮಾನ್ಯರೆ ಹೀಗೆ ಮಂಡಿಸುತ್ತೇನೆ.

"೧೮೧ನೆಯ ವಿಧಿಗೆ ಬದಲಾಗಿ ಈ ಕೆಳಗಿನ ವಿಧಿಯನ್ನು ಇರಿಸಿಕೊಳ್ಳತಕ್ಕದ್ದು."

ಲೇಖಾನುದಾನ ಮುಂಗಡ ಮತ್ತು ಅಸಾಧಾರಣ ಮಂಜೂರಾತಿ : ೧೮೧ (೧) ಈ ಅಧ್ಯಾಯದ ಮುಂದಿನ ಉಪಬಂಧಗಳಲ್ಲಿರುವುದನ್ನು ಒಪ್ಪಿಕೊಂಡು ಒಂದು ರಾಜ್ಯದ ವಿಧಾನ ಸಭೆಗೆ ಈ ಮುಂದಿನ ಅಧಿಕಾರಗಳಿರುತ್ತವೆ;

(ಅ) ಈ ಸಂವಿಧಾನದ ೧೭೮ನೆಯ ವಿಧಿಯಲ್ಲಿ ವಿಧಿಸಿರುವ ಪ್ರಕ್ರಿಯೆಯನ್ನು ಮುಗಿಸುವುದನ್ನು ಕಾದು, ಯಾವುದೇ ಆರ್ಥಿಕ ವರ್ಷದ ಒಂದು ಭಾಗಕ್ಕೆ ಅಂದಾಜು ಮಾಡಿದ ವೆಚ್ಚವನ್ನು ಮುಂದಾಗಿ ಮಂಜೂರು ಮಾಡುವುದು. ಆ ವೆಚ್ಚದ ಸಂಬಂಧವಾಗಿ ಈ ಸಂವಿಧಾನದ ೧೭೯ನೆಯ ವಿಧಿಯಲ್ಲಿ ಮಾಡಿರುವ ಉಪಬಂಧಗಳಿಗನುಗುಣವಾಗಿ ಕಾನೂನನ್ನು ಅಂಗೀಕರಿಸಿ ಆ ಮಂಜೂರಾತಿಯನ್ನು ಅನುಮೋದಿಸಬೇಕು.

(ಬ) ರಾಜ್ಯದ ವರಮಾನದ ಮೇಲೆ ಸೇವೆಯ ಅನಿಶ್ಚಿತ ಲಕ್ಷಣದಿಂದಲೋ,ಪಾತ್ರದಿಂದಲೋ ಸಾಮಾನ್ಯವಾಗಿ ವಾರ್ಷಿಕ ಆರ್ಥಿಕ ತಃಖ್ತೆಯಲ್ಲಿ ವಿವರವಾಗಿ ನಮೂದಿಸಲಾಗದೆ ಹೋದಾಗ ಅನಿರೀಕ್ಷಿತವಾಗಿ ಮಾಡಬೇಕಾಗಿ ಬಂದ ಬೇಡಿಕೆಯನ್ನು ನಿರ್ವಹಿಸಲು ಮಂಜೂರಾತಿ ನೀಡುವುದು.

(ಕ) ಯಾವುದೇ ಹಣಕಾಸು ವರ್ಷದ ಚಾಲ್ತಿ ಸೇವೆಯ ಭಾಗವಾಗದ ಒಂದು ಅಸಾಧಾರಣ ಮಂಜೂರಾತಿ ಮಾಡುವುದು. ಹೀಗೆ ಹೇಳಿದ ಮಂಜೂರಾತಿಯಂತೆ ರಾಜ್ಯದ ಸಂಚಿತ ನಿಧಿಯಿಂದ ಹಣವನ್ನು ಪಡೆಯಲು ಕಾನೂನಿನಂತೆ ಅಧಿಕಾರ ನೀಡಲು ರಾಜ್ಯದ ಶಾಸನಸಭೆಗೆ ಅಧಿಕಾರವಿದೆ.

(೨) ಈ ಸಂವಿಧಾನದ ೧೭೮ ಮತ್ತು ೧೭೯ನೆಯ ವಿಧಿಗಳ ಉಪಬಂಧಗಳು ಈ ವಿಧಿಯ (೧) ನೆಯ ಖಂಡದ ಪ್ರಕಾರ ಮಾಡುವ ಯಾವುದೇ ಮಂಜೂರಾತಿಗೆ ಸಂಬಂಧಿಸಿದಂತೆ ಪರಿಣಾಮವನ್ನು ಹೊಂದಿರುತ್ತದೆ. ಈ ಖಂಡದ ಪ್ರಕಾರ ಅಂಗೀಕರಿಸುವ

ಯಾವುದೇ ಕಾನೂನಿನ ಮೇಲೆ, ವಾರ್ಷಿಕ ತಃಖ್ತೆಯಲ್ಲಿ ನಮೂದಾದ ಯಾವುದೇ ವೆಚ್ಚದ ಮೇಲೆ, ಅಂತಹ ವೆಚ್ಚವನ್ನು ನಿರ್ವಹಿಸಲು ರಾಜ್ಯದ ಸಂಚಿತ ನಿಧಿಯಿಂದ ಹಣವನ್ನು ವಿನಿಯೋಗ ಮಾಡಿಕೊಳ್ಳುವ ಅಧಿಕಾರ ಮಾಡಲು ಬೇಕಾದ ಕಾನೂನಿನ ಮೇಲೆ ಪರಿಣಾಮ ಹೊಂದಿರುತ್ತದೆ." ಗೊತ್ತುವಳಿಯು ಸ್ವೀಕೃತವಾಯಿತು. ತಿದ್ದುಪಡಿಗೊಂಡಂತೆ ೧೮೧ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

---

* ಅದೇ ಪು. ೭೮೭-೮೮

## ವಿಧಿ–೧೮೨

* **ಮಾನ್ಯ ಅಧ್ಯಕ್ಷರು :** ಪ್ರಶ್ನೆ ಹೀಗಿದೆ.

"೧೮೨ನೆಯ ವಿಧಿಯು ಸಂವಿಧಾನದ ಭಾಗವಾಗಬೇಕು"

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ತಮ್ಮ ಅನುಮತಿಯಿಂದ ಒಂದು ಸಣ್ಣ ತಿದ್ದುಪಡಿಯನ್ನು ಮಂಡಿಸಬಯಸುತ್ತೇನೆ.

"೧೮೨ನೆಯ ವಿಧಿಯಲ್ಲಿ 'ರಾಜ್ಯದ ವರಮಾನಗಳು' ಎಂಬ ಪದಗಳಿಗೆ ಬದಲಾಗಿ 'ರಾಜ್ಯದ ಸಂಚಿತ ನಿಧಿ' ಎಂಬ ಪದಗಳನ್ನು ಇಟ್ಟುಕೊಳ್ಳಬೇಕು."

**ಮಾನ್ಯ ಅಧ್ಯಕ್ಷರು :** ಬೇರೆ ತಿದ್ದುಪಡಿ ಯಾವುದೂ ಇಲ್ಲ.

(ತಿದ್ದುಪಡಿಯು ಸ್ವೀಕೃತವಾಯಿತು. ತಿದ್ದುಪಡಿಗೊಂಡಂತೆ ೧೮೨ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು)

## ವಿಧಿ–೧೮೩

** **ಮಾನ್ಯ ಅಧ್ಯಕ್ಷರು :** ಬೇರೆ ಯಾರಾದರೂ ಏನಾದರೂ ಹೇಳಬಯಸುವಿರೇನು?

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಈ ತಿದ್ದುಪಡಿಯನ್ನು (ಶ್ರೀ ಸಿಧ್ವಾ ಅವರದು) ನಾನು ಒಪ್ಪಿಕೊಳ್ಳುವುದಿಲ್ಲ.

**ಮಾನ್ಯ ಅಧ್ಯಕ್ಷರು :** ಪ್ರಶ್ನೆ ಹೀಗಿದೆ;

"೧೮೩ನೆಯ ವಿಧಿಯ (೧)ನೆಯ ಖಂಡದಲ್ಲಿ 'ತಕ್ಕದ್ದು' ಎಂಬ ಪದವನ್ನು 'ಬಹುದು' ಎಂಬ ಪದಕ್ಕೆ ಬದಲಾಗಿ ಇಟ್ಟುಕೊಳ್ಳಬೇಕು.

ಕೊನೆಯಲ್ಲಿ ಈ ಮಾತುಗಳನ್ನು ಸೇರಿಸಬೇಕು.

"ಸಭೆಯ ಮೊದಲನೆಯ ಅಧಿವೇಶನದ ತಾರೀಖಿನಿಂದ ೬ ತಿಂಗಳ ಒಳಗಾಗಿ'.

ಆರ್.ಕೆ.ಸಿಧ್ವಾ ಅವರ ತಿದ್ದುಪಡಿಯು ನಿರಾಕೃತವಾಯಿತು. ೧೮೩ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

*****

---

* ಅದೇ ಪು. ೭೮೯.

** ಅದೇ ಪು. ೭೯೦

## ಹೊಸ ವಿಧಿ ೧೮೩–ಎ

* **ಮಾನ್ಯ ಅಧ್ಯಕ್ಷರು :** ಡಾ.ಅಂಬೇಡ್ಕರ್ ಅವರು ಸೂಚಿಸಿರುವ ೧೮೩–ಎ ಹೊಸ ವಿಧಿಯಿದೆ.

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ. "೧೮೩ನೆಯ ವಿಧಿಯ ನಂತರ ಈ ಕೆಳಗಿನ ನೂತನ ಹಣಕಾಸು ವ್ಯವಹಾರಗಳನ್ನು ಕುರಿತಂತೆ ರಾಜ್ಯದ ಶಾಸನಸಭೆಯಲ್ಲಿ ಪ್ರಕ್ರಿಯೆಯನ್ನು ಕಾನೂನು ಪ್ರಕಾರ ನಿಯಂತ್ರಿಸುವುದು; '೧೮೩–ಎ ಒಂದು ರಾಜ್ಯದ ಶಾಸನ ಸಭೆಯಿಂದ ಹಣಕಾಸು ವ್ಯವಹಾರವನ್ನು ಕಾಲಕ್ಕೆ ಸರಿಯಾಗಿ ಮುಗಿಸುವ ಸಲುವಾಗಿ, ಸದನದ ಅಥವಾ ರಾಜ್ಯದ ಉಭಯ ಸದನಗಳ ಕಾರ್ಯಕಲಾಪಗಳ ಪ್ರಕ್ರಿಯೆಯನ್ನು ಕಾನೂನಿನ ಪ್ರಕಾರ ನಿಯಂತ್ರಿಸಬಹುದು. ಯಾವುದೇ ಆರ್ಥಿಕ ವ್ಯವಹಾರಕ್ಕೆ ಸಂಬಂಧಿಸಿದಂತೆ ಅಥವಾ ರಾಜ್ಯದ ಸಂಚಿತ ನಿಧಿಯಿಂದ ಧನವಿನಿಯೋಗ ಮಾಡಿಕೊಳ್ಳುವ ಯಾವುದೇ ಮಸೂದೆಗೆ ಸಂಬಂಧಿಸಿದಂತೆ ಇದು ಅನ್ವಯವಾಗುತ್ತದೆ. ಹಾಗೆ ರಚಿಸಿದ ಕಾನೂನಿನ ಪ್ರತಿಬಂಧವು ಸದನದಲ್ಲಿ ಅಥವಾ ರಾಜ್ಯ ಶಾಸನ ಸಭೆಯ ಉಭಯ ಸದನಗಳಲ್ಲಿ,ಹಿಂದಿನ ವಿಧಿಯ (೨) ನೇ ಖಂಡಕ್ಕನುಗುಣವಾಗಿ ಅಥವಾ ರಾಜ್ಯ ಶಾಸನಸಭೆಯ ಮೇಲೆ ಪರಿಣಾಮ ಮಾಡುವ ಯಾವುದೇ ಕಾನೂನಿಗನುಗುಣವಾಗಿ ಮಾಡಿದ ನಿಯಮದೊಂದಿಗೆ ಸಂಗತವಾಗಿದ್ದರೆ ಆ ಅವಕಾಶವು ನಿಲ್ಲುತ್ತದೆ."

**ಮಾನ್ಯ ಅಧ್ಯಕ್ಷರು :** ಯಾರಾದರೂ ಏನಾದರೂ ಹೇಳಲಿಕ್ಕಿದೆಯೆ? ಪ್ರಶ್ನೆ ಹೀಗಿದೆ "ನೂತನ ೧೮೩–ಎ ವಿಧಿಯನ್ನು ಸಂವಿಧಾನಕ್ಕೆ ಸೇರಿಸಬಹುದು."

ಗೊತ್ತುವಳಿಯು ಸ್ವೀಕೃತವಾಯಿತು.

೧೮೩–ಎ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ ೨೧೭

** **ಮಾನ್ಯ ಅಧ್ಯಕ್ಷರು :** ನಾನು ಯಾವುದೇ ತಿದ್ದುಪಡಿಯನ್ನು ನೋಡಿಲ್ಲ.

**ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ :** ಇಂದು ಬೆಳಿಗ್ಗೆ ನೋಟೀಸು ಕೊಟ್ಟಿದ್ದೇನೆ. ಈಗ ಮಂಡಿಸಲು ಬಯಸುತ್ತೇನೆ.

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಅವರ ತಿದ್ದುಪಡಿಯ ಪ್ರತಿಗಳು ನಮಗೆ ದೊರೆತಿಲ್ಲ.

**ಶ್ರೀ ಎಲ್.ಕೃಷ್ಣಸ್ವಾಮಿ ಭಾರತಿ** (ಮದರಾಸು : ಸಾಮಾನ್ಯ) ; ಅವರು ಏನನ್ನು ಮಂಡಿಸುತ್ತಾರೆ ಎನ್ನುವುದು ಅರ್ಥವಾಗುವುದಿಲ್ಲ.

**ಮಾನ್ಯ ಅಧ್ಯಕ್ಷರು :** ವಾಸ್ತವವಾಗಿ ನಾವು ಇಂದು ಸಭೆ ಕೂಡುವುದಕ್ಕೆ ಕೆಲವೇ ನಿಮಿಷಗಳ ಹಿಂದೆ ಅವರು ನೋಟೀಸು ಕೊಟ್ಟರು. ಅದು ೨೭೪೧ನೇ ತಿದ್ದುಪಡಿಗೆ ಪದಕ್ಕೆ ಪದದಂತೆ ಸಮನಾಗಿದೆ ಎಂದು ಹೇಳಿದ್ದಾರೆ.

*****

---

* ಸಿ.ಎ.ಡಿ. ಸಂಪುಟ ೮, ೧೩ನೇ ಜೂನ್ ೧೯೪೯, ಪುಟ ೭೯೩

** ಅದೇ ಪು. ೭೯೩

* **ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ :** ಮಾನ್ಯರೆ ಇಷ್ಟು ಮಹತ್ವ ಪೂರ್ಣವಾದ ವಿಧಿಗಳು, ತಿದ್ದುಪಡಿಗಳ ನೋಟಿಸು ಕೊಟ್ಟವರು, ಅವನ್ನು ಮಂಡಿಸಲಿಲ್ಲ ಎಂಬ ಕಾರಣದಿಂದ ಸದನದ ಗಮನಕ್ಕೆ ಬರದೆ ಹೋಗಬಾರದು ಎಂದು ನಾನು ಭಾವಿಸುತ್ತೇನೆ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಈ ವಿಚಾರವಾಗಿ ಒಂದೆರಡು ಅಂಶಗಳನ್ನು ಪ್ರಸ್ತಾಪಿಸಲು ಬಯಸುತ್ತೇನೆ. ಇದು ಒಂದು ಮುಖ್ಯವಾದ ವಿಚಾರವೆಂದು ತೋರುತ್ತದೆ.ನಾನು ತಿಳಿದುಕೊಳ್ಳ ಬೇಕಾಗಿರುವ ಮೊದಲನೆ ವಿಚಾರ. ಇದು ತಿದ್ದುಪಡಿಯೋ, ತಿದ್ದುಪಡಿಯ ಮೇಲಿನ ತಿದ್ದುಪಡಿಯೋ ಎಂಬುದು. ಇದು ತಿದ್ದುಪಡಿಯ ಮೇಲಿನ ತಿದ್ದುಪಡಿಯಾಗಿದ್ದರೆ, ಮುಖ್ಯ ತಿದ್ದುಪಡಿಯನ್ನು ಮಂಡಿಸದೆ ಅದನ್ನು ಮಂಡಿಸುವಂತಿಲ್ಲ.

**ಮಾನ್ಯ ಅಧ್ಯಕ್ಷರು :** ಅದು ಮಿ. ನಜೀರುದ್ದೀನ್ ಅಹಮದ್ ಅವರು ಮಂಡಿಸಿರುವ ೨೭೪೩ನೆಯ ತಿದ್ದುಪಡಿಯ ಮೇಲಿನ ತಿದ್ದುಪಡಿ.

ಮಾನ್ಯ ಸದಸ್ಯರು ನೋಟೀಸಿನಲ್ಲಿ, ತಮ್ಮ ತಿದ್ದುಪಡಿಯು ೨೭೪೧,೨೭೪೨, ೨೭೪೩,೨೭೪೪ ಅಥವಾ೨೭೪೫ ನೇ ತಿದ್ದುಪಡಿಗಳಿಗೆ ತಿದ್ದುಪಡಿ ಎಂದು ಹೇಳಿದ್ದಾರೆ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ೨೭೪೩ನೆಯ ತಿದ್ದುಪಡಿಯ ಮೇಲೆ ತಿದ್ದುಪಡಿ ಎಂದು ಇದನ್ನು ಪರಿಭಾವಿಸಿದರೆ, ಅದು ಸ್ಪಷ್ಟವಾಗಿ ೨೭೪೩ರ ವ್ಯಾಪ್ತಿಗಿಂತಲೂ ಆಚೆಗೆ ಹೋಗುವುದರಿಂದ, ತಾವು ಮೂಲ ತಿದ್ದುಪಡಿಯನ್ನು ಮೂಲತಃ ಬದಲಾಯಿಸುತ್ತಿಲ್ಲವೆಂದು ತಮಗೆ ಮನವರಿಕೆ ಮಾಡಿ ಕೊಟ್ಟ ಹೊರತು ಅದನ್ನು ಮಂಡಿಸುತ್ತಿಲ್ಲ. ಈಗಿರುವಂತೆ ಅದು ಶ್ರೀಯುತರಾದ ಸಂತಾನಂ, ಅನಂತಶಯನಂ ಅಯ್ಯಂಗಾರ್ ಮತ್ತು ಇತರರ ಹೆಸರಿನಲ್ಲಿರುವ ತಿದ್ದುಪಡಿಯ ಪುನರುಕ್ತಿಯಾಗಿದೆ.

ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಮಂಡಿಸಿದ ಈ ಕೆಳಗಿನ ತಿದ್ದುಪಡಿಗಳು ಅಂಗೀಕೃತವಾದುವು:

"೨೧೭ನೆಯ ವಿಧಿಯ (೨)ನೆಯ ಖಂಡದಲ್ಲಿ 'ಭಾಗ–() ಎಂಬ ಪದ' ಮತ್ತು ಸಂಖ್ಯೆ ಆದ ಮೇಲೆ 'ಅಥವಾ ಭಾಗ–() ಎಂಬ ಪದ' ಮತ್ತು ಸಂಖ್ಯೆಗಳನ್ನು ಇರಿಸಬೇಕು."

"೨೧೭ನೆಯ ವಿಧಿಯ (೩)ನೆಯ ಖಂಡದಲ್ಲಿ 'ಭಾಗ–() ಎಂಬ ಪದ ಮತ್ತು ಸಂಖ್ಯೆ ಆದ ಮೇಲೆ' ಅಥವ 'ಭಾಗ–() ಎಂಬ ಪದ ಮತ್ತು ಸಂಖ್ಯೆಗಳನ್ನು ಇರಿಸಬೇಕು." ತಿದ್ದುಪಡಿಗಳು ಸ್ವೀಕೃತವಾದುವು.

ತಿದ್ದುಪಡಿಯಾದಂತೆ ೨೧೭ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

******

## ವಿಧಿ ೨೨೪

* **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ೨೨೪ ಮತ್ತು ೨೨೫ನೆಯ ವಿಧಿಗಳನ್ನು ತಡೆಹಿಡಿದಿಡಬೇಕೆಂದು ಅಪೇಕ್ಷಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ೨೨೪ ಮತ್ತು ೨೨೫ನೆಯ ವಿಧಿಗಳನ್ನು ತಡೆಹಿಡಿಯಲಾಗಿದೆ.

---

* ಅದೇ ಪು. ೭೯೪

* ಸಿ.ಎ.ಡಿ. ಸಂಪುಟ ೮, ೧೩ನೇ ಜೂನ್ ೧೯೪೯ ಪುಟ ೭೯೯–೭೮೦

## ವಿಧಿ ೨೨೬

**ಡಾ.ಬಿ.ಆರ್. ಅಂಬೇಡ್ಕರ್ :** ೨೭೭೫ನೆಯ ತಿದ್ದುಪಡಿಯನ್ನು ಕ್ರಮಯುತವಾಗಿ ಮಂಡಿಸುತ್ತಿದ್ದೇನೆ. ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ.

"ತಿದ್ದುಪಡಿಗಳ ಪಟ್ಟಿಯ ೨೭೭೫ನೆಯ ತಿದ್ದುಪಡಿಯನ್ನು ಕ್ರಮಯುತವಾಗಿ ಮಂಡಿಸುತ್ತಿದ್ದೇನೆ. ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ.

"ತಿದ್ದುಪಡಿಗಳ ಪಟ್ಟಿಯ ೨೭೭೫ನೆಯ ತಿದ್ದುಪಡಿಗೆ ಬದಲಾಗಿ ಈ ಕೆಳಗಿನದನ್ನು ಅಳವಡಿಸಬಹುದು;

'೨೨೬ನೆಯ ವಿಧಿಯನ್ನು ೨೨೬ನೆಯ ವಿಧಿಯ (l)ನೇ ಖಂಡವೆಂದು ನಮೂದಿಸಬೇಕು.

(a) ಹಾಗೆ ಹೊಸದಾಗಿ ಸಂಖ್ಯೆ ನಮೂದಿಸಿದ ೨೭೬ನೆಯ ವಿಧಿಯ (l)ನೆಯ ಖಂಡದ ಕೊನೆಗೆ 'ನಿರ್ಣಯವು ಜಾರಿಯಲ್ಲಿರುವಾಗ' ಎಂಬ ಪದಗಳನ್ನು ಸೇರಿಸಬೇಕು; ಮತ್ತು (b) ಹೊಸದಾಗಿ ಸಂಖ್ಯೆ ನಮೂದಿಸಿದ ೨೨೬ನೆಯ ವಿಧಿಯ (೧)ನೆಯ ಖಂಡವಾದ ನಂತರ ಈ ಕೆಳಗಿನ ಉಪವಾಕ್ಯಗಳನ್ನು ಸೇರಿಸಬೇಕು.

(೨) ಈ ವಿಧಿಯ (೧)ನೆಯ ಖಂಡದ ಪ್ರಕಾರ ಅಂಗೀಕರಿಸಿದ ಒಂದು ನಿರ್ಣಯವನ್ನು ಒಂದು ವರ್ಷಕ್ಕೆ ಮೀರದಂತೆ, ಅಲ್ಲಿ ನಿರ್ದಿಷ್ಟ ಪಡಿಸುವಷ್ಟು ಸಮಯ ಜಾರಿಯಲ್ಲಿರುತ್ತದೆ.

ಈ ವಿಧಿಯ (೧) ನೆಯ ಖಂಡದಲ್ಲಿ ಅವಕಾಶ ಕೊಟ್ಟಿರುವಂತೆ ಅಂಗೀಕೃತವಾದ ಯಾವುದೇ ನಿರ್ಣಯವು ಜಾರಿಯಲ್ಲಿರುವುದನ್ನು ಅನುಮೋದಿಸುತ್ತಾರೆ. ಅಂತಹ ನಿರ್ಣಯವು ಜಾರಿಯಲ್ಲಿರುವುದನ್ನು ಅನುಮೋದಿಸುತ್ತಿದ್ದರೆ, ಅಂತಹ ನಿರ್ಣಯವು, ಬೇರೆ ರೀತಿಯಗಿದ್ದರೆ ಚಾಲ್ತಿತಪ್ಪಿ ಹೋಗುತ್ತಿದ್ದ ತಾರೀಖಿನಿಂದ ಒಂದು ವರ್ಷಕಾಲದವರೆಗೆ ಜಾರಿಯಲ್ಲಿರುತ್ತದೆ.

(ಆ) ಆ ವಿಧಿಯ (೧)ನೆಯ ಖಂಡದ ಪ್ರಕಾರ ಒಂದು ನಿರ್ಣಯವನ್ನು ಅಂಗೀಕರಿಸದಿದ್ದರೆ, ವಿಧಿಯನ್ನು ಅಂಗೀಕರಿಸಲು ಸಮರ್ಥವಾಗಿರದಿದ್ದು ಪಾರ್ಲಿಮೆಂಟು ಮಾಡಿದ ಒಂದು ಕಾನೂನು, ಅಸಾಮರ್ಥ್ಯದ ಅಳವಿಗೆ ತಕ್ಕ ಹಾಗೆ, ನಿರ್ಣಯವು ಜಾರಿ ತಪ್ಪಿದಂದಿನಿಂದ ಆರು ತಿಂಗಳು ಮುಗಿದ ಮೇಲೆ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ."

*****

* **ಮಾನ್ಯ ಅಧ್ಯಕ್ಷರು :** ತಿದ್ದುಪಡಿಯನ್ನು ಮತಕ್ಕೆ ಹಾಕುವ ಮೊದಲು ನೀವು ಏನನ್ನಾದರೂ ಹೇಳಬಯಸುವಿರಾ, ಡಾ.ಅಂಬೇಡ್ಕರ್ ?

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಸಾಕಷ್ಟು ಆಗಲೇ ಹೇಳಿಯಾಗಿದೆ. ನೀವು ನನ್ನನ್ನು ಮಾತಾಡಲು ಅಪೇಕ್ಷಿಸಿದ್ದರೆ, ನಾನು ಏನನ್ನೂ ಹೇಳುವುದಿಲ್ಲ.

**ಮಾನ್ಯ ಅಧ್ಯಕ್ಷರು :** ಅದು ನಿಮ್ಮ ಇಷ್ಟ.

(ಡಾ.ಬಿ.ಆರ್. ಅಂಬೇಡ್ಕರರ ತಿದ್ದುಪಡಿಯಂತೆ ತಿದ್ದುಪಡಿ ಮಾಡಿ ವಿಧಿ ೨೨೬ರನ್ನು ಅಂಗೀಕರಿಸಲಾಯಿತು. ಮತ್ತು ಸಂವಿಧಾನಕ್ಕೆ ಸೇರಿಸಲಾಯಿತು.)

---

* ಅದೇ ಪು. ೮೦೯

## ವಿಧಿ ೨೨೯

* **ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ. "ವಿಧಿ ೨೨೯ರ ಖಂಡ (೧)ಕ್ಕೆ ತಿದ್ದುಪಡಿಗಳ ಪಟ್ಟಿಯ ಸಂಖ್ಯೆ ೨೭೮೧ ಮತ್ತು ೨೭೮೩ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಖಂಡವನ್ನು ಬದಲಾಯಿಸುವುದು.

(೧) ಸಂವಿಧಾನದ ೨೨೬ ಮತ್ತು ೨೨೭ ವಿಧಿಗಳಲ್ಲಿ ಒದಗಿಸಿರುವುದರ ವಿನಾ ರಾಜ್ಯಗಳಿಗೆ ಶಾಸನ ಮಾಡುವುದಕ್ಕೆ ಪಾರ್ಲಿಮೆಂಟಿಗೆ ಅಧಿಕಾರವಿಲ್ಲದಿರುವ ಯಾವುದೇ ವಿಷಯಗಳ ಬಗ್ಗೆ ಎರಡು ಅಥವಾ ಹೆಚ್ಚು ರಾಜ್ಯಗಳ ಶಾಸಕಾಂಗಗಳು ಅಪೇಕ್ಷೆ ಪಟ್ಟಲ್ಲಿ ಅವುಗಳನ್ನು ಪಾರ್ಲಿಮೆಂಟಿನಲ್ಲಿ ಅಂತಹ ರಾಜ್ಯಗಳಿಗೆ ಕ್ರಮಗೊಳಿಸಬೇಕು ಮತ್ತು ಅದಕ್ಕೆ ತಕ್ಕಂತೆ ಠರಾವುಗಳನ್ನು ಸದನದಿಂದ ಅಥವಾ ಎರಡು ಸದನಗಳಿರುವೆಡೆಯಲ್ಲಿ ಪ್ರತಿಯೊಂದು ರಾಜ್ಯದ ಶಾಸಕಾಂಗದ ಎರಡೂ ಸದನಗಳಿಂದ ಅಂಗೀಕೃತವಾಗಬೇಕು. ಮತ್ತು ಅದೇ ಪ್ರಕಾರ ಆ ವಿಷಯವನ್ನು ಕ್ರಮಗೊಳಿಸುವುದಕ್ಕೆ ಪಾರ್ಲಿಮೆಂಟು ಒಂದು ಕಾಯ್ದೆಯನ್ನು ಅಂಗೀಕರಿಸುವುದು ಕಾನೂನು ಸಮ್ಮತವಾಗಿರುತ್ತದೆ ಮತ್ತು ಹಾಗೇ ಅಂಗಿಕೃತವಾದ ಯಾವುದೇ ಕಾಯ್ದೆಯು ನಂತರ ಅನುಸರಿಸಬೇಕೆಂಬ ಯಾವುದೇ ಇತರ ರಾಜ್ಯಗಳಿಗೆ ಸದನದಿಂದ ಅಥವಾ ಎರಡು ಸದನಗಳಿದ್ದರೆ ಆ ರಾಜ್ಯದ ಶಾಸಕಾಂಗದ ಪ್ರತಿಯೊಂದು ಸದನದಿಂದ ಮಂಜೂರಾದ ಠರಾವಿನಿಂದ ಅನ್ವಯವಾಗುತ್ತದೆ.

ಇದನ್ನು ಕೆಲವೇ ಸಂಕ್ಷಿಪ್ತ ವಾಕ್ಯಗಳಲ್ಲಿ ವಿವರಿಸಲು ನಾನು ಇಚ್ಚಿಸುತ್ತೇನೆ. ಮೂಲ ವಿಧಿಯು ಅದು ಇದ್ದ ರೀತಿಯಲ್ಲಿ ಹೀಗೆ ಹೇಳುತ್ತದೆ. 'ಒಂದು ಅಥವಾ ಹೆಚ್ಚು ರಾಜ್ಯಗಳ ಶಾಸಕಾಂಗ ಅಥವಾ ಶಾಸಕಾಂಗಗಳಿಗೆ ಅಪೇಕ್ಷಣೀಯ ಎಂದು ಕಂಡು ಬಂದರೆ, ಮುಂತಾದವು'. ಹೊಸ ತಿದ್ದುಪಡಿಯು ಹೀಗೆ ಹೇಳುತ್ತದೆ. 'ಎರಡು ಅಥವಾ ಹೆಚ್ಚು ರಾಜ್ಯಗಳು ಸೇರಿ ಒಂದು ಠರಾವನ್ನು ಕಳುಹಿಸಿದಾಗ ಮಾತ್ರ ಒಂದು ಕಾನೂನನ್ನು ಮಾಡಲು ಪಾರ್ಲಿಮೆಂಟಿನ ಸಹಾಯವನ್ನು ಪಡೆಯಲು ಇದು ಮುಕ್ತವಾಗಿರುತ್ತದೆ. ೨೨೯ನೆಯ ವಿಧಿಯ ಉಪ-ಖಂಡ (೧)ರಲ್ಲಿನ ಇತರ ಬದಲಾವಣೆಗಳು ಮುಖ್ಯ ತಿದ್ದುಪಡಿಗೆ ಕೇವಲ ತತ್ಪರಿಣಾಮವಾದುದಾಗಿರುತ್ತದೆ. ಅಂದರೆ ಎರಡು ಅಥವಾ ಹೆಚ್ಚು ರಾಜ್ಯಗಳು ಅಪೇಕ್ಷೆಪಟ್ಟರೆ ಮಾತ್ರ ಅಧಿಕಾರವನ್ನು ಅಪೇಕ್ಷಿಸಬಹುದೇ ಹೊರತು ಒಂದೇ ರಾಜ್ಯದಿಂದಲ್ಲ.

+**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಮಾನ್ಯರೆ, ಮಾನ್ಯ ಸ್ನೇಹಿತ ಶ್ರೀ ಸಂತಾನಂ ಎತ್ತಿರುವ ಅಂಶವನ್ನು ನಾನು ತುಂಬಾ ಪ್ರಶಂಸಿಸುತ್ತೇನೆ. ಆದರೆ ಅವರು ಉಪಖಂಡ (೨)ನ್ನು ಜಾಗರೂಕವಾಗಿ ಓದಿಲ್ಲ ಎಂದು ನನಗನಿಸುತ್ತದೆ. ಮುಖ್ಯವಾದ ಪದಗಳು ಯಾವುವೆಂದರೆ, 'ಅದೇ ರೀತಿಯಲ್ಲಿ' ಈ ಶಾಸನವನ್ನು ಇದೇರೀತಿಯಲ್ಲಿ ಯಾವ ರಾಜ್ಯ ಶಾಸಕಾಂಗದ ಹಿತಾಸಕ್ತಿಯಿಂದ ಅಂಗೀಕರಿಸಿದ್ದರೆ, ಅಂದರೆ ಠರಾವಿನಿಂದ ಅಂಗೀಕರಿಸಿದ್ದರೆ ಅಂತಹ ಶಾಸನವನ್ನು ತಿದ್ದುಪಡಿ ಮಾಡಬಹುದು ಅಥವಾ ರದ್ದುಪಡಿಸಬಹುದು. ಪಾರ್ಲಿಮೆಂಟು ಹಾಗೆ ಮಾಡಲೇ ಬೇಕಾಗುತ್ತದೆ.

**ಮಾನ್ಯ ಶ್ರೀ ಕೆ. ಸಂತಾನಂ :** ತಿದ್ದುಪಡಿ ಮಾಡಬಹುದು'

---

** ಸಿ.ಎ.ಡಿ. ಸಂಪುಟ ೮, ೧೩ನೇ ಜೂನ್ ೧೯೪೯, ಪುಟ ೮೧೧

\+ ಅದೇ ಪು. ೮೧೨

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** "ಬಹುದು" ಎಂದರೆ "ತಕ್ಕದ್ದು" ಎಂದು ಅರ್ಥವಾಗುತ್ತದೆ. ಅದರಲ್ಲಿ ಯಾವುದೇ ಕಷ್ಟವಿಲ್ಲ.

(ಡಾ.ಅಂಬೇಡ್ಕರರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.)

## ವಿಧಿ ೨೩೦

+ **ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುತ್ತೇನೆ. "೨೩೦ನೆಯ ವಿಧಿಯಲ್ಲಿ "ಯಾವುದೇ ರಾಜ್ಯ ಅಥವಾ ಭಾಗಕ್ಕೆ" ಎಂಬ ಪದಗಳಿಗೆ ಬದಲಾಗಿ "ಭಾರತದ ಇಡೀ ಭೂಭಾಗ ಅಥವಾ ಯಾವುದೇ ಭಾಗಕ್ಕೆ" ಎಂಬ ಪದಗಳನ್ನು ಸೇರಿಸಬೇಕು."

(ಚರ್ಚೆ ಮುಂದುವರಿಯದೆ ತಿದ್ದುಪಡಿಯನ್ನು ಅಂಗೀಕರಿಸಲಾಯಿತು. ತಿದ್ದುಪಡಿಯಾದಂತೆ ವಿಧಿ ೨೩೦ಅನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೨೩೧

***ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುತ್ತೆನೆ; "ತಿದ್ದುಪಡಿಗಳ ಪಟ್ಟಿಯ ತಿದ್ದುಪಡಿ ಸಂಖ್ಯೆ ೨೭೮೮ಕ್ಕೆ ಸಂಬಂಧಿಸಿದಂತೆ, ವಿಧಿ ೨೩೧ರ ಖಂಡ (೨)ರಲ್ಲಿ "ಭಾಗ ೧" ಎಂಬ ಪದ ಮತ್ತು ಅಂಕಿಯ ನಂತರ, "ಅಥವಾ ಭಾಗ ೩" ಎಂಬ ಪದಗಳು ಮತ್ತು ಅಂಕಿಗಳನ್ನು ಸೇರಿಸಬೇಕು."

*****

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಶ್ರೀ ಥಾನು ಪಿಳ್ಳೈಯವರ ವಿಷಯಕ್ಕೆ ವಿವರಣೆ ಬೇಕೆಂದು ನಾನು ಒಪ್ಪಿಕೊಳ್ಳುತ್ತೇನೆ, ಈಗ ಇದಕ್ಕೆ ವಿವರಣೆ ಹೀಗಿದೆ, '೨೩೧ನೆ ವಿಧಿಯಲ್ಲಿ ನಮೂದಿಸಲಾಗಿರುವ ಅಸಂಗತತೆಯ ಬಗ್ಗೆ ನಿಯಮವನ್ನು ಪಾರ್ಲಿಮೆಂಟು ಭವಿಷ್ಯದಲ್ಲಿ ಮಾಡುವ ಕಾನೂನುಗಳಿಗೆ ಸಂಬಂಧಿಸಿದಂತೆ ಮಾತ್ರ ಪಾಲಿಸಬೇಕು ಎಂಬುದನ್ನು ಅವರು ಒಪ್ಪುತ್ತಾರೆಂದು ನನಗೆ ಭರವಸೆಯಿದೆ.' ೨೩೧ನೆಯ ವಿಧಿಯಲ್ಲಿರುವ 'ಮುಂಚೆ' ಅಥವಾ ನಂತರ ಅಂಗೀಕರಿಸಲ್ಪಟ್ಟಿದ್ದರೂ' ಎಂಬ ಪದ ಜೋಡಣೆಯನ್ನು ಅವರು ನೋಡಬೇಕು. ಈ ಸಂವಿಧಾನ ಪ್ರಾರಂಭವಾದ ನಂತರ ಪಾರ್ಲಿಮೆಂಟು ಮಾಡಿದ ಕಾನೂನುಗಳ ಬಗ್ಗೆ ಖಂಡಿತವಾಗಿ, ಅಸಂಗತತೆಯ ನಿಯಮದ ಭಾಗ ೧ರಲ್ಲಿನ ರಾಜ್ಯಗಳು ಮತ್ತು ಭಾಗ ೩ ರಲ್ಲಿ ನಮೂದಿಸಲಾದ ರಾಜ್ಯಗಳೆರಡವುಗಳಿಂದ ಮಾಡಲಾದ ಕಾನೂನುಗಳ ಸಾರ್ವತ್ರಿಕ ಅನ್ವಯಿಕೆಯನ್ನು ಹೊಂದಿರಬೇಕು. ಈ ಸಂವಿಧಾನ ಜಾರಿಗೆ ಬರುವುದಕ್ಕೆ ಮೊದಲು ಮಾಡಲಾದ ಕಾನೂನುಗಳಿಗೆ ಅಸಾಂಗತ್ಯದ ಪ್ರಶ್ನೆಯ ಬಗ್ಗೆ ಸ್ಥಿತಿ ಹೀಗಿದೆ. ಈ ಸದನದಲ್ಲಿ ನಾನು ಅನೇಕ ಸಲ ಹೇಳಿರುವಂತೆ, ನಮ್ಮ ಅಪೇಕ್ಷೆಯೇನೆಂದರೆ ಮತ್ತು ಸದನದ ಅಪೇಕ್ಷೆಯು ಅದೇ ಎಂದು ನಾನು ಖಂಡಿತವಾಗಿರುವಂತೆ ಸಂವಿಧಾನ ಎಲ್ಲಾ ವಿಧಿಗಳನ್ನು ಭಾಗ

---

++ ಅದೇ ಪು. ೮೧೩

* ಅದೇ ಪು ೮೧೩–೮೧೪

೧ ಮತ್ತು ಭಾಗ ೩ರಲ್ಲಿನ ರಾಜ್ಯಗಳ ನಡುವೆ ಯಾವುದೇ ನಿರ್ದಿಷ್ಟ ವ್ಯತ್ಯಾಸವನ್ನು ಮಾಡದೆ ಎಲ್ಲಾ ರಾಜ್ಯಗಳಿಗೂ ಸಾಮಾನ್ಯವಾಗಿ ಅನ್ವಯವಾಗುವಂತೆ ಮಾಡಬೇಕು. ಭಾಗ೩ರಲ್ಲಿನ ರಾಜ್ಯಗಳಿಂದ ಮಾಡಲಾದ ಕಾನೂನುಗಳ ಬಗ್ಗೆ ಕೆಲವು ವಿನಾಯಿತಿಗಳನ್ನು ಮಾಡಲೇ ಬೇಕಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲದಿದ್ದರೂ, ಭಾಗ ೩ರಲ್ಲಿನ ರಾಜ್ಯಗಳ ಪರವಾಗಿ ಕೆಲವು ವಿನಾಯಿತಿಗಳನ್ನು ಮಾಡುವುದಕ್ಕೆ ಒಂದು ವಿಧಿಯನ್ನು ಅಂಗೀಕರಿಸುವಾಗ ಆ ವಿಧಿಗೆ ಒಂದು ಉಪಬಂಧವನ್ನು ಸೇರಿಸಬೇಕಾಗಿತ್ತೆಂಬುದು ಒಳ್ಳೆಯದಲ್ಲ. ನಾನು ಹೇಳಿದಂತೆ, ಇದನ್ನು ಮಾಡಬಹುದಾದುದಕ್ಕೆ ಸಲಹೆಯೇನೆಂದರೆ ಒಂದು ಹೊಸ ಭಾಗ ಅಥವಾ ಹೊಸ ಶೆಡ್ಯೂಲಿನಲ್ಲಿ ಭಾಗ ೩ರಲ್ಲಿನ ರಾಜ್ಯಗಳ ವಿಷಯದಲ್ಲಿ ಮೀಸಲಾತಿಯನ್ನು ಶಾಸನಗೊಳಿಸುವಾಗ, ಸಂವಿಧಾನವು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಮಾಡಲಾದ ಕಾನೂನುಗಳ ವಿಷಯದಲ್ಲಿ ಅವುಗಳನ್ನು ಒಂದು ವಿಶೇಷ ರೀತಿ ಅಥವಾ ವಿಶೇಷ ಶೆಡ್ಯೂಲಿನಲ್ಲಿ ಶಾಸನ ಮಾಡಿದ ಕೆಲವು ಉಪಬಂಧಗಳಿಂದ ರಕ್ಷಿಸಬಹುದು. ಅದಕ್ಕೆ ನಾನು ಇನ್ನು ಒಂದು ಅಂಶವನ್ನು ಸೇರಿಸಲು ಇಚ್ಛಿಸುತ್ತೇನೆ. ಅದೇನೆಂದರೆ ಭಾಗ ೩ರ ರಾಜ್ಯಗಳ ಪರವಾಗಿ ವಿಶೇಷ ಭಾಗದಲ್ಲಿ ಮೀಸಲಾತಿಗಳನ್ನು ಮಾಡಲು ಸಲಹೆ ಮಾಡಿದ್ದರೂ, ಆ ಮೀಸಲಾತಿಗಳು ನಿರುಪಾಧಿಕವಾಗಿರುವುದಿಲ್ಲ. ಏಕೆಂದರೆ ಅವುಗಳಲ್ಲಿ ಮಾಡಲಾಗಿರುವ ಮೀಸಲಾತಿಗಳು ಏನೇ ಆಗಲಿ, ವಿಶೇಷ ಭಾಗದಲ್ಲಿನ ಕೆಲವು ಉಪಬಂಧಗಳು ವಿಧಿ ೩೦೭ರಿಂದ ಆಳಲ್ಪಡುತ್ತಿದ್ದು ರಾಷ್ಟ್ರಾಧ್ಯಕ್ಷರಿಗೆ ಹೊಂದಾಣಿಕೆಗಳನ್ನು ಮಾಡಲು ಅಧಿಕಾರ ನೀಡುತ್ತದೆ. ಈ ಹೊಂದಾಣಿಕೆಗಳು ಭಾಗ ೧ರಲ್ಲಿನ ರಾಜ್ಯಗಳು ಹಾಗೂ ಭಾಗ ೩ರಲ್ಲಿನ ರಾಜ್ಯಗಳಿಗೂ ಅನ್ವಯವಾಗುತ್ತದೆ. ಆದ್ದರಿಂದ ಪ್ರಾರಂಭಕ್ಕೆ ಮುಂಚೆ ಪಾರ್ಲಿಮೆಂಟು ಅಥವಾ ಭಾಗ ೩ರ ರಾಜ್ಯಗಳ ಶಾಸಕಾಂಗಗಳು ಮಾಡಿದ ಕಾನೂನುಗಳ ಬಗ್ಗೆ ಅವುಗಳನ್ನು ೨೩೧ನೇ ವಿಧಿಯ ಕಾರ್ಯಾಚರಣೆಯಿಂದ, ಮೊದಲ ಸ್ಥರದಲ್ಲಿ ರಕ್ಷಿಸಬಹುದು. ಆದರೆ ಹೊಂದಾಣಿಕೆಯನ್ನು ವ್ಯವಹರಿಸುವ ವಿಧಿ ೩೦೭ರ ಉಪಬಂಧಗಳಿಗೆ ಅವು ಒಳಪಟ್ಟಿರುತ್ತವೆ.

(ಮೊದಲು ನಮೂದಿಸಿದಂತೆ ಡಾ.ಅಂಬೇಡ್ಕರರ ತಿದ್ದುಪಡಿಯು ಅಂಗೀಕಾರವಾಯಿತು. ತಿದ್ದುಪಡಿಯಾದಂತೆ ವಿಧಿ ೨೩೧ನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ – ೨೩೨

* **ಮಾನ್ಯ ಅಧ್ಯಕ್ಷರು :** ನಾವೀಗ ೨೩೨ನೆಯ ವಿಧಿಯನ್ನು ತೆಗೆದುಕೊಳ್ಳುತ್ತೇನೆ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ.

"೨೩೨ನೆಯ ವಿಧಿಗೆ ಕೊಟ್ಟಿರುವ ಶಾಸಕಾಂಗ ಅಧಿಕಾರಿಗಳ ಮೇಲೆ ಮಿತಿ' ಎಂಬ ಶೀರ್ಷಿಕೆಯನ್ನು ಕೈಬಿಡಬೇಕು." ಮಾನ್ಯರೆ, ತಮ್ಮ ಅನುಮತಿಯಂತೆ ನನ್ನ ಹೊಸ ತಿದ್ದುಪಡಿಯನ್ನು ಮಂಡಿಸುತ್ತೇನೆ:

"(I) 'ಭಾಗ ' ಎಂಬ ಪದ ಮತ್ತು ಸಂಖ್ಯೆ ಆದ ಮೇಲೆ 'ಅಥವಾ ಭಾಗ ' ಎಂಬ ಪದ ಮತ್ತು ಸಂಖ್ಯೆಗಳನ್ನು ಇರಿಸಬೇಕು.

(I) ೨೩೨ನೆಯ ವಿಧಿಯ (ಎ) ಖಂಡದ ಮೇಲೆ

ಈ ಕೆಳಗಿನ ಖಂಡವನ್ನು ಅಳವಡಿಸಬೇಕು :–

---

* ಅದೇ ಪು. ೮೧೫

(ಎಎ) ಆಳುವವರ ಶಿಫಾರಸು ಅಗತ್ಯವಾಗಿದ್ದ ಸ್ಥಳದಲ್ಲಿ ಆಳುವವರಿಂದ ಅಥವಾ ರಾಷ್ಟ್ರಪತಿಯಿಂದ".

ಮಾನ್ಯರೆ, 'ಆಳುವವರು ಎಂಬ ಪದದ ಬಳಕೆಗೆ ಭಾವನಾತ್ಮಕ ಆಕ್ಷೇಪಣೆಯಿರುವಂತೆ ತಿಳಿದು ಬಂದಿದೆ. ಆ ಭಾವನೆಗೆ ನಾನೂ ಗೌರವ ಕೊಡುತ್ತೇನೆ. ಆದ್ದರಿಂದ ಸದನವು ಈ ತಿದ್ದುಪಡಿಯನ್ನು ಸದ್ಯಕ್ಕೆ ಒಪ್ಪಿಕೊಂಡು 'ಆಳುವವರು' ಎಂಬ ಪದಕ್ಕೆ ಬದಲಾಗಿ ಸೂಕ್ತವಾದ ಬೇರೊಂದು ಪದವನ್ನು ಇರಿಸುವುದನ್ನು ಕರಡು ರಚನಾ ಸಮಿತಿಗೆ ಬಿಟ್ಟುಬಿಡಬೇಕೆಂದು ಸೂಚಿಸುತ್ತೇನೆ. ಇಲ್ಲವಾದರೆ ಆಳುವವರು ಎಂಬ ಪದಕ್ಕೆ ಸರಿಯಾದ ಬದಲಿ ಪದವೊಂದನ್ನು ಈ ಕ್ಷಣಕ್ಕೆ ಕಂಡುಹಿಡಿಯಲಿಲ್ಲ ಎಂಬ ಒಂದೇ ಕಾರಣದಿಂದ ಇಡೀ ವಿಧಿಯನ್ನೇ ಅನಾವಶ್ಯಕವಾಗಿ ತಡೆ ಹಿಡಿಯಬೇಕಾಗುತ್ತದೆ.

(ಡಾ. ಅಂಬೇಡ್ಕರರ ಮೇಲಿನ ಎಲ್ಲಾ ತಿದ್ದುಪಡಿಗಳು ಸ್ವೀಕೃತವಾದುವು. ತಿದ್ದುಪಡಿಗೊಂಡಂತೆ ೨೩೨ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

## ವಿಧಿ ೨೩೪

**ಮಾನ್ಯ ಅಧ್ಯಕ್ಷರು :** ನಾವೀಗ ೨೩೪ನೆಯದನ್ನು ತೆಗೆದುಕೊಳ್ಳೋಣ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಂಡಿಸುತ್ತೇನೆ.

"೨೩೪ನೆಯ ವಿಧಿಗೆ ಈ ಕೆಳಗಿನ ನೂತನ ಖಂಡವನ್ನು ಸೇರಿಸಬೇಕು:-

(೩) ಈ ವಿಧಿಯ ಹಿಂದಿನ ಖಂಡದನ್ವಯ ರಾಜ್ಯಕ್ಕೆ ಆದೇಶ ನೀಡಿ ಯಾವುದಾದರೂ ಸಂಪರ್ಕ ಮಾಧ್ಯಮವೊಂದರ ನಿರ್ಮಾಣ ಅಥವಾ ಪಾಲನೆಗಳಿಗೆ, ಸಾಮಾನ್ಯ ಸಂದರ್ಭಗಳಲ್ಲಿ ತಗಲುತ್ತಿದ್ದುದಕ್ಕಿಂತ ಹೆಚ್ಚುವರಿಯಾಗಿ ವೆಚ್ಚವು ತಗಲಿದ್ದರೆ, ರಾಜ್ಯಕ್ಕೆ ಭಾರತ ಸರಕಾರವು ಒಪ್ಪಿಕೊಂಡ ನಿಗದಿತ ಮೊತ್ತವನ್ನಾಗಲಿ, ಭಾರತದ ಮುಖ್ಯ ನ್ಯಾಯಮೂರ್ತಿ ಅವರು ನೇಮಿಸಿದ ಪಂಚಾಯಿತಿದಾರರೊಬ್ಬರು ನಿರ್ಧರಿಸಿದ ಮೊತ್ತವನ್ನಾಗಲಿ ಪಾವತಿ ಮಾಡತಕ್ಕದ್ದು.

ತಿದ್ದುಪಡಿಯು ಸ್ವೀಕೃತವಾಯಿತು. ತಿದ್ದುಪಡಿಗೊಂಡಂತೆ ೨೩೪ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

* * * * *

## ವಿಧಿ ೨೩೮

* **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ೨೮೦೭ನೆಯದನ್ನು ಈಗ ವಿಧ್ಯುಕ್ತವಾಗಿ ಮಂಡಿಸುತ್ತಿದ್ದೇನೆ :

"೨೩೮ನೆಯ ವಿಧಿಯ ಉಪಬಂಧದಲ್ಲಿ, 'ಆ ಸಂಬಂಧವಾಗಿ ಆ ರಾಜ್ಯವು ಕೇಂದ್ರದೊಂದಿಗೆ ಮಾಡಿಕೊಂಡ ಯಾವುದೇ ಒಪ್ಪಂದದ ಷರತ್ತುಗಳನ್ವಯ' ಎಂಬ ಪದಗಳಿಗೆ ಬದಲಾಗಿ 'ಅ ಸಂಬಂಧವಾಗಿ ಆ ರಾಜ್ಯವು ಭಾರತ ಡೊಮಿನಿಯನ್ನಿನ ಸರಕಾರದೊಂದಿಗೆ ಅಥವಾ ಭಾರತ ಸರಕಾರದೊಂದಿಗೆ ಅಥವಾ

---

* ಸಿ.ಎ.ಡಿ. ಸಂಪುಟ ೮, ೧೩ನೇ ಜೂನ್ ೧೯೪೯, ಪುಟ ೮೧೭

ಈ ಸಂವಿಧಾನದ ೨ನೆಯ ವಿಧಿಯನ್ವಯ ಪಾರ್ಲಿಮೆಂಟು ರಚಿಸಿದ ಯಾವುದೇ ನಿಯಮದಂತೆ ಮಾಡಿಕೊಂಡ ಯಾವುದೇ ಕರಾರು ಅಥವಾ ಒಪ್ಪಂದದ ಷರತ್ತುಗಳ ಪ್ರಕಾರ ಎಂಬ ಪದಗಳನ್ನು ಇರಿಸಬೇಕು.'

ಮುಂದುವರಿದು ಹೀಗೆ ಮಂಡಿಸುತ್ತೇನೆ.

"(೧) ತಿದ್ದುಪಡಿಗಳ ಪಟ್ಟಿಯ ೨೮೦೭ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ, ೨೩೮ನೆಯ ವಿಧಿಯ (೨)ನೆಯ ಖಂಡದಲ್ಲಿ 'ಕಾನೂನಿನಿಂದ' ಎಂಬ ಪದದ ನಂತರ, 'ಪಾರ್ಲಿಮೆಂಟು ಮಾಡಿದ' ಎಂಬ ಪದಗಳನ್ನು ಇರಿಸಬೇಕು."

(೨) ತಿದ್ದುಪಡಿಗಳ ಪಟ್ಟಿಯ ೨೮೦೭ನೆಯ ತಿದ್ದುಪಡಿಯನ್ನು ಉಲ್ಲೇಖಿಸುತ್ತಾ, ೨೩೮ನೆಯ ವಿಧಿಯ ಉಪಬಂಧವನ್ನು ತೆಗೆದುಹಾಕಬೇಕು.

ತಿದ್ದುಪಡಿಯು ಅಂಗೀಕೃತವಾಯಿತು.

ತಿದ್ದುಪಡಿಗೊಂಡಂತೆ ೨೩೮ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ – ೨೩೯

** **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ.

"೨೩೯ನೆಯ ವಿಧಿಯಲ್ಲಿ, ೨೯ನೆಯ ಪಂಕ್ತಿಯಲ್ಲಿ 'ರಾಜ್ಯ' ಎಂಬ ಪದವು ಎರಡನೆಯ ಸಾರಿ ಬರುವಾಗ, ಅದಕ್ಕೆ ಮುಂಚೆ,

"ಬೇರೆ ಎಂಬ ಪದವನ್ನು ಸೇರಿಸಬೇಕು."

ತಿದ್ದುಪಡಿಯು ಸ್ವೀಕೃತವಾಯಿತು.

ತಿದ್ದುಪಡಿಗೊಂಡಂತೆ ೨೩೯ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

## ವಿಧಿ – ೨೪೦

* ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ : ಮಾನ್ಯರೆ, ಹೀಗೆ ಮಂಡಿಸುತ್ತೇನೆ.

"೨೪೦ನೆಯ ವಿಧಿ (೧)ನೆಯ ಖಂಡಕ್ಕೆ ಬದಲಾಗಿ ಈ ಕೆಳಗಿನ ಖಂಡಗಳನ್ನು ಇಟ್ಟುಕೊಳ್ಳಬೇಕು:–

'(೧) ರಾಷ್ಟ್ರಪತಿಯವರಿಗೆ ಮೇಲೆ ಹೇಳಿದಂತಹ ದೂರು ಬಂದಾಗ, ಅವರು, ತಾವು ಕ್ರಮ ಕೈಗೊಳ್ಳುವುದಕ್ಕೆ ತಕ್ಕಮಟ್ಟಿಗೆ ಮುಖ್ಯವಾದ ವಿಷಯಗಳು ಅದರಲ್ಲಿಲ್ಲವೆಂದು ಮನವರಿಕೆಯಾಗದೆ ಹೋದ ಪಕ್ಷದಲ್ಲಿ, ಒಂದು ಆಯೋಗವನ್ನು ನೇಮಿಸುತ್ತಾರೆ. ಅವರು ಕೊಡುವ ಆದೇಶಗಳಿಗನುಗುಣವಾಗಿ ಆಯೋಗವು ವಿಚಾರಣೆ ನಡೆಸಿ ದೂರಿಗೆ ಸಂಬಂಧಪಟ್ಟ ವಿಚಾರಗಳ ಮೇಲೆ ವರದಿಯನ್ನು ಸಲ್ಲಿಸುತ್ತದೆ, ಅಥವಾ

---

** ಅದೇ ಪು. ೮೧೭

* ಸಿ.ಎ.ಡಿ. ಸಂಪುಟ ೮, ೧೩ನೇ ಜೂನ್ ೧೯೪೯, ಪುಟ ೮೧೮

ತಮಗೆ ಯಾವ ವಿಚಾರಗಳನ್ನು ಉಲ್ಲೇಖಿಸಲಾಯಿತೋ ಆ ವಿಚಾರಗಳ ಮೇಲೆ ವರದಿಯನ್ನು ಸಲ್ಲಿಸುತ್ತದೆ.

(೧ಅ) ಆಯೋಗದಲ್ಲಿ ನೀರಾವರಿ, ಎಂಜಿನಿಯರಿಂಗ್ ಆಡಳಿತ, ಹಣಕಾಸು ಅಥವಾ ಕಾನೂನು ಹೀಗೆ, ಅಂತಹ ಪರಿಶೋಧನೆಗೆ ಯಾವುದು ಅಗತ್ಯವೆಂದು ರಾಷ್ಟ್ರಪತಿಯವರು ಭಾವಿಸುತ್ತಾರೋ ಆ ವಿಷಯಗಳ ಬಗೆಗೆ ವಿಶೇಷವಾದ ಜ್ಞಾನ, ಮತ್ತು ಅನುಭವಗಳನ್ನು ಪಡೆದ ಸದಸ್ಯರಿರುತ್ತಾರೆ."

(ತಿದ್ದುಪಡಿಯು ಸ್ವೀಕೃತವಾಯಿತು. ತಿದ್ದುಪಡಿಗೊಂಡಂತೆ ೨೪೦ನೆಯ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.)

* * * * *

## ವಿಧಿ ೧೧೨ – ಬಿ

* **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೀಗೆ ಮಂಡಿಸುತ್ತೇನೆ:

"೨೩ನೆಯ ತಿದ್ದುಪಡಿಗೆ ಬದಲಾಗಿ ಈ ಕೆಳಗಿನ ತಿದ್ದುಪಡಿಯನ್ನು ಇಟ್ಟುಕೊಳ್ಳಬಹುದು:–

"೧೧೨–ಎ ವಿಧಿಯಾದ ಮೇಲೆ ಈ ಕೆಳಗಿನ ವಿಧಿಯನ್ನು ಸೇರಿಸಬೇಕು:–

ಅಪರಾಧ ವಿಚಾರಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟಿನ ಅಪೀಲು ನ್ಯಾಯಾಧಿಕಾರ ಕುರಿತು ಸಮಾವೇಶ.

೧೧೨–ಬಿ ಭಾರತ ಭೂ ಪ್ರದೇಶದ ಯಾವುದೇ ಹೈಕೋರ್ಟಿನ ತೀರ್ಪು, ಅಂತಿಮ ಆದೇಶ, ಅಥವಾ ಶಿಕ್ಷೆಯ ಮೇಲೆ ಅಪೀಲುಗಳನ್ನು ಆಲಿಸಿ ನಿರ್ಧಾರ ಕೈಗೊಳ್ಳಲು ಸುಪ್ರೀಂ ಕೋರ್ಟಿಗೆ ಪಾರ್ಲಿಮೆಂಟು ಕಾನೂನು ಪ್ರಕಾರ ಅಧಿಕಾರ ನೀಡಬಹುದು. ಆ ಕಾನೂನಿನಲ್ಲಿ ನಿರ್ದಿಷ್ಟಪಡಿಸುವ ಷರತ್ತುಗಳು ಮತ್ತು ಮಿತಿಗಳಿಗೆ ಆ ಅಪರಾಧ ವಿಚಾರಣಾ ನ್ಯಾಯವ್ಯಾಪ್ತಿಯು ಒಳಪಟ್ಟಿರಬೇಕು.

* * * * *

## ವಿಧಿ ೧೧೧–ಎ

* **ಮಾನ್ಯ ಅಧ್ಯಕ್ಷರು :** ಈಗ ಡಾ. ಅಂಬೇಡ್ಕರ್ ಅವರು ತಮ್ಮ ತಿದ್ದುಪಡಿಯನ್ನು ಮಂಡಿಸುವರು.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಹೀಗೆ ಮಂಡಿಸುತ್ತೇನೆ. "ನೂತನ ೧೧೧–ಎ ವಿಧಿಗೆ, ಮೊದಲನೆ ಪಟ್ಟಿಯ (೫ನೆಯ ವಾರ) ೨೩ ಮತ್ತು ೨೪ನೆಯ ತಿದ್ದುಪಡಿಗಳನ್ನು ಉಲ್ಲೇಖಿಸುತ್ತ ಈ ಕೆಳಗಿನದನ್ನು ಬದಲಿಯಾಗಿರಿಸಬೇಕೆಂದು ಸೂಚಿಸುತ್ತೇನೆ:–

ಅಪರಾಧ (ಕ್ರಿಮಿನಲ್) ವಿಚಾರಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟಿನ ಮೇಲ್ಮನವಿ ಅಧಿಕಾರ.

೧೧೧ಎ (೧) ಭಾರತ ಭೂ ಪ್ರದೇಶದ ಯಾವುದೇ ಹೈಕೋರ್ಟಿನ ಯಾವುದೇ ತೀರ್ಪು,

---

** ಅದೇ, ೧೩ ಜೂನ್ ೧೯೪೯, ಪು. ೮೨೪

* ಅದೇ, ೧೪ ಜೂನ್ ೧೯೪೯, ಪು. ೮೪೦

ಅಂತಿಮ ಆದೇಶ ಅಥವಾ ಶಿಕ್ಷೆಯ ಮೇಲೆ ಮೇಲ್ಮನವಿಯನ್ನು ಸ್ವೀಕರಿಸಿ ಆಲಿಸಲು ಸುಪ್ರೀಂ ಕೋರ್ಟಿಗೆ ಅಧಿಕಾರವಿದೆ–

(ಅ) ಹೈಕೋರ್ಟು, ಅಪೀಲಿನಲ್ಲಿ ಆಪಾದಿತ ವ್ಯಕ್ತಿಯ ಬಿಡುಗಡೆ ಆದೇಶವನ್ನು ತಿರುಗುಮುರುಗುಮಾಡಿ, ಅವನಿಗೆ ಮರಣದಂಡನೆ ವಿಧಿಸಿದ್ದರೆ; ಅಥವಾ

(ಬ) ಹೈಕೋರ್ಟಿನ ತನ್ನ ಯಾವುದೇ ಅಧೀನ ನ್ಯಾಯಾಲಯದಿಂದ ಯಾವುದೇ ಮೊಕದ್ದಮೆಯನ್ನು ವಿಚಾರಣೆಗಾಗಿ ತನ್ನ ಬಳಿಗೇ ಹಿಂದಕ್ಕೆ ತರಿಸಿಕೊಂಡು, ವಿಚಾರಣೆಮಾಡಿ ಆರೋಪಿಗೆ ಮರಣದಂಡನೆ ವಿಧಿಸಿದ್ದರೆ; ಅಥವಾ

(ಕ) ಮೊಕದ್ದಮೆಯು ಸುಪ್ರೀಂ ಕೋರ್ಟಿನಲ್ಲಿ ಅಪೀಲು ಮಾಡಲು ಅರ್ಹವಾಗಿದೆ ಎಂದು ಪ್ರಮಾಣಿಸಿದರೆ :

ಈ ಖಂಡದ (ಕ) ಉಪ–ಖಂಡದ ಪ್ರಕಾರ, ಆಗಿಂದಾಗ ಸುಪ್ರೀಂ ಕೋರ್ಟು ವಿಧಿಸುವ ನಿಯಮಗಳಿಗೆ ಒಳಪಟ್ಟು ಹೈಕೋರ್ಟಿನ ನಿಗದಿ ಪಡಿಸುವ ಅಥವಾ ಅಗತ್ಯವಾಗಿರುವ ಷರತ್ತುಗಳಿಗೆ ಆ ಅಪೀಲು ಒಳಪಟ್ಟಿರುತ್ತದೆ. (೨) ಪಾರ್ಲಿಮೆಂಟು ವಿದ್ಯುಕ್ತ ಕಾನೂನಿನ ಪ್ರಕಾರ ಸುಪ್ರೀಂ ಕೋರ್ಟಿಗೆ, ಭಾರತ ಭೂ ಪ್ರದೇಶದ ಯಾವುದೇ ಹೈಕೋರ್ಟಿನ ಅಪರಾಧ ವಿಚಾರಣೆಯ ಯಾವುದೇ ತೀರ್ಪು, ಅಂತಿಮ ಆದೇಶ ಅಥವಾ ದಂಡನೆಗಳನ್ನು ಕಾನೂನಿನಲ್ಲಿ ವಿಧಿಸುವ ಷರತ್ತುಗಳು ಮತ್ತು ಮಿತಿಗಳಿಗೆ ಒಳಪಟ್ಟು ಆಲಿಸುವ ಮತ್ತು ವಿಚಾರಣೆ ನಡೆಸಿ ತೀರ್ಪು ಕೊಡುವ ಅಧಿಕಾರವನ್ನು ಕೊಡುತ್ತದೆ.”

ಈ ಹಂತದಲ್ಲಿ ನಾನು ಏನನ್ನು ಹೇಳಬಯಸುವುದಿಲ್ಲ. ನನ್ನ ನೂತನ ತಿದ್ದುಪಡಿಯ ಮೇಲೆ ಚರ್ಚೆಯು ಹೇಗೆ ಬೆಳೆಯುತ್ತದೆ ಎನ್ನುವುದನ್ನು ನೋಡಿ, ನನ್ನ ಅಭಿಪ್ರಾಯಗಳನ್ನು ಕೊನೆಗೆ ಇಟ್ಟು ಕೊಳ್ಳುತ್ತೇನೆ.

* * * * *

* **ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ೧೧೧–ಎ ನೂತನ ವಿಧಿಯನ್ನು ಸೇರಿಸುವುದರಿಂದ ಏನು ಮಾಡಲು ಉದ್ದೇಶಿಸಲಾಗಿದೆ ಎಂಬುದನ್ನು ಕುರಿತ ಸರಿಯಾದ ಒಂದು ಚಿತ್ರವನ್ನು ಸದನಕ್ಕೆ ಕೊಡುವ ಉದ್ದೇಶದಿಂದ ಈ ಕೆಲವು ಮಾತುಗಳನ್ನಾಡಲು ನಾನು ಎದ್ದುನಿಂತಿದ್ದೇನೆ. ಸ್ಪಷ್ಟಪಡಿಸಬೇಕಾಗಿರುವ ಮೊದಲನೆಯ ವಿಚಾರ, ೧೧೧–ಎ ವಿಧಿಯ ಉದ್ದೇಶ, ಸುಪ್ರೀಂ ಕೋರ್ಟಿಗೆ ಸಾಮಾನ್ಯವಾಗಿ ಕ್ರಿಮಿನಲ್ ಅಪೀಲು ನ್ಯಾಯಾಧಿಕಾರವನ್ನು ಕೊಡುವುದಿಲ್ಲ. ಕೊಡಲಿರುವ ನ್ಯಾಯಾಧಿಕಾರವು ತುಂಬಾ ಮಿತವಾದ ಲಕ್ಷಣವುಳ್ಳದ್ದು.

೧೧೧–ಎ ವಿಧಿಯ ಖಂಡಗಳಲ್ಲಿ ಹೇಳಿದಂತೆ ಮೇಲ್ಮನವಿ ಕ್ರಿಮಿನಲ್ ನ್ಯಾಯಾಧಿಕಾರವನ್ನು ಸುಪ್ರೀಂ ಕೋರ್ಟಿಗೆ ಕೊಡುವುದು ಏಕೆ ಅಪೇಕ್ಷಣೀಯವೆಂದು ನನಗೆ ತೋರುತ್ತದೆ ಎಂಬುದರ ಅಗತ್ಯವನ್ನು ಮನವರಿಕೆ ಮಾಡಿಕೊಡಲು (ಎ) ಮತ್ತು (ಬಿ) ಉಪ–ಖಂಡಗಳನ್ನು (ಕ) ಉಪ–ಖಂಡದಿಂದ ಪ್ರತ್ಯೇಕಗೊಳಿಸಲು ಅಪೇಕ್ಷಿಸುತ್ತೇನೆ. ಏಕೆಂದರೆ ಅದು ಬೇರೆಯೇ ಆದ ಒಂದು ನೆಲೆಯಲ್ಲಿವೆ. ಸದನಕ್ಕೆ ತಿಳಿದಿರುವಂತೆ, (ಎ) ಮತ್ತು (ಬಿ)ಗಳು ಸುಪ್ರೀಂ ಕೋರ್ಟಿನ ಅಪೀಲು ನ್ಯಾಯಾಧಿಕಾರವನ್ನು ಮರಣದಂಡನೆ

* ಅದೇ, ೧೪ ಜೂನ್ ೧೯೪೯, ಪು. ೮೫೩–೫೭

ವಿಧಿಸಿರುವ ಕೇಸುಗಳಿಗೆ ಮಾತ್ರ ಸೀಮಿತಗೊಳಿಸುತ್ತವೆ. ಬೇರೆ ಯಾವ ಮೊಕದ್ದಮೆಯಲ್ಲೂ ಸುಪ್ರೀಂ ಕೋರ್ಟಿಗೆ ಅಪರಾಧ ಅಪೀಲು ನ್ಯಾಯಾಧಿಕಾರವಿರುವಂತಿಲ್ಲ. ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾದ ಮೊದಲನೆಯ ಅಂಶ ಇದು.

ಆರೋಪಿಗೆ ಮರಣದಂಡನೆ ವಿಧಿಸಿರುವ ಕೇಸುಗಳಿಗೆ ಮಾತ್ರ ಸೀಮಿತಗೊಳ್ಳುವಂತೆ ಮೇಲ್ಮನವಿ ನ್ಯಾಯಾಧಿಕಾರವನ್ನು ಸುಪ್ರೀಂ ಕೋರ್ಟಿಗೆ ಕೊಡಬೇಕಾದುದರ ಅಗತ್ಯವನ್ನು ಕುರಿತು ಸಂಕ್ಷೇಪವಾಗಿ ಹೇಳುತ್ತೇನೆ. ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿರುವ ನಮ್ಮ ಅಪರಾಧ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದಂತೆ, ಯಾವುದೇ ಪ್ರಶ್ನೆ ಮಾಡದೆ ಒಪ್ಪಿಕೊಂಡಿರುವ ಒಂದು ತತ್ವವಿದೆ. ಒಬ್ಬ ಮನುಷ್ಯನಿಗೆ ಮರಣದಂಡನೆ ವಿಧಿಸಿದ ಪಕ್ಷದಲ್ಲಿ, ಅವನಿಗೆ ಬೇರೇನೂ ಇಲ್ಲದಿದ್ದರೂ ಕೊನೆಯ ಪಕ್ಷ ಅಪೀಲು ಮಾಡಲು ಒಂದು ಹಕ್ಕು ಇರಬೇಕು ಎನ್ನುವುದು ಅದು.

**ಮಾನ್ಯ ಅಧ್ಯಕ್ಷರು :** ಇಲ್ಲಿ ಒಂದು ಅಂಶವನ್ನು ನಾನು ಸೂಚಿಸಬಹುದೆ? ವ್ಯಕ್ತಿಯೊಬ್ಬನ ದಂಡನೆಯನ್ನು ಮರಣದಂಡನೆಗೆ ಹೆಚ್ಚಿಸಿರುವ ಸಂದರ್ಭವನ್ನು ನಿಮ್ಮ ತಿದ್ದುಪಡಿ ಒಳಗೊಳ್ಳುವುದಿಲ್ಲ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅಂಥದೊಂದು ಅಧಿಕಾರವನ್ನು ನಾವು ಕೊಡಬಯಸುವುದೂ ಇಲ್ಲ. ಅದೇ ಮುಖ್ಯವಾದ ಅಂಶ. ಶಿಕ್ಷೆಯ ವಿಸ್ತರಣಕ್ಕೆ ಸಂಬಂಧಿಸಿದಂತೆ ಅಪೀಲು ಮಾದರಿಯ ಅಪರಾಧ ನ್ಯಾಯವಿಚಾರಣಾಧಿಕಾರವನ್ನು ಸುಪ್ರೀಂ ಕೋರ್ಟಿಗೆ ಕೊಡಲು ನಾವು ಬಯಸುವುದಿಲ್ಲ. ಮುಕ್ತ ದೃಷ್ಟಿಯಿಂದ ಹೀಗೆ ಮಾಡುತ್ತಿದ್ದೇವೆ, ಎಲ್ಲರೂ ಇದನ್ನು ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಒಬ್ಬ ಮನುಷ್ಯನಿಗೆ ಮರಣದಂಡನೆ ವಿಧಿಸಿದಾಗ, ಅವನಿಗೆ ಕೊನೆಯ ಪಕ್ಷ ಮೇಲ್ಮನವಿಯ ಒಂದು ಹಕ್ಕು ಇರಬೇಕು ಎಂಬುದನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಬೇಕು. ಈ ಆಧಾರತತ್ವದಿಂದ ಪ್ರಾರಂಭಿಸಿ ಅಪರಾಧ ಪ್ರಕ್ರಿಯಾ ಸಂಹಿತೆಯ (Criminal Procedure Code) ಉಪಬಂಧಗಳನ್ನು ಪರಿಶೀಲಿಸಿದಾಗ ಈ ತತ್ವವನ್ನು ಉಲ್ಲಂಘಿಸಿದ ಅಥವಾ ಜಾರಿಗೆ ತರದಿರುವ ಮೂರು ಸಂದರ್ಭಗಳಿವೆ ಎಂಬುದು ತಿಳಿಯುತ್ತದೆ. ಮೊದಲನೆಯ ಸಂದರ್ಭ ಇದು. ಸೆಷೆನ್ಸ್ ನ್ಯಾಯಾಧೀಶರಾಗಿ ನಿರ್ವಹಿಸುತ್ತಿರುವ ಜಿಲ್ಲಾ ನ್ಯಾಯಾಧೀಶರು ಒಬ್ಬ ಆರೋಪಿಯನ್ನು ದೋಷಮುಕ್ತನೆಂದು ಬಿಡುಗಡೆ ಮಾಡುತ್ತಾರೆ. ಇದರ ಮೇಲೆ ಅಪೀಲು ಮಾಡುವ ಹಕ್ಕಿರುವ ಸರಕಾರವು ಹೈಕೋರ್ಟಿನಲ್ಲಿ ಅಪೀಲು ಸಲ್ಲಿಸುತ್ತದೆ. ಹೈಕೋರ್ಟು ತನ್ನ ಮೇಲ್ಮನವಿ ನ್ಯಾಯಾಧಿಕಾರವನ್ನು ಬಳಸಿ ಆರೋಪಿಗೆ ಮರಣದಂಡನೆ ವಿಧಿಸುತ್ತದೆ. ಇಂತಹ ಸಂದರ್ಭದಲ್ಲಿ ಅಪೀಲಿಗೆ ಅವಕಾಶವನ್ನು ಒದಗಿಸಿಲ್ಲ. ಮೇಲೆ ಹೇಳಿದ ತತ್ವಕ್ಕೆ ಮೊದಲನೆಯ ಅಪವಾದ ಇದು.

ಎರಡನೆಯ ಸಂದರ್ಭ ಹೀಗಿದೆ ಮುಂಬಯಿ, ಕಲ್ಕತ್ತಾ ಮತ್ತು ಮದರಾಸು ನಗರಗಳಲ್ಲಿನ ಹೈಕೋರ್ಟಿನಲ್ಲಿ ಸೆಷನ್ಸ್ ನ್ಯಾಯಾಧೀಶರಾಗಿ ನ್ಯಾಯ ವಿಚಾರಣೆ ಮಾಡುತ್ತಾ ಅವರು ಒಬ್ಬ ಅಪರಾಧಿಯನ್ನು ನಿರ್ದೋಷಿಯೆಂದು ಬಿಡುಗಡೆ ಮಾಡುತ್ತಾರೆ. ಸರಕಾರವು ಹೈಕೋರ್ಟಿಗೆ ಅಪೀಲು ಒಯ್ಯುತ್ತದೆ. ಹೈಕೋರ್ಟಿನ ಮೇಲುಮನವಿ ವಿಭಾಗವು ಅಪೀಲನ್ನು ಆಲಿಸಿ ಆ ವ್ಯಕ್ತಿಯನ್ನು ಮರಣ ದಂಡನೆಗೆ ಒಳಪಡಿಸುತ್ತದೆ. ಇಲ್ಲೂ ಅಷ್ಟೆ ಮತ್ತೆ ಅದರ ಮೇಲೆ ಅಪೀಲು ಮಾಡುವಂತಿಲ್ಲ.

ಮೂರನೆಯ ಸಂದರ್ಭ ಹೀಗಿದೆ: ಕ್ರಿಮಿನಲ್ ಪ್ರೊಸೀಜರ್ ಕೋಡಿನ ೫೨೬ನೆಯ ಪ್ರಕರಣದನ್ವಯ, ಒಂದು ಹೈಕೋರ್ಟು ಆ ಪ್ರಕರಣವು ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸಿ ಮೊಕದ್ದಮೆಯನ್ನು ತನ್ನಲ್ಲಿಗೇ ಹಿಂದಕ್ಕೆ ತರಿಸಿಕೊಂಡು ಮರಣದಂಡನೆ ವಿಧಿಸುತ್ತದೆ. ಮತ್ತೆ ಅದರ ಮೇಲೂ ಅಪೀಲು ಮಾಡುವಂತಿಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ಅಂತಹ ಸಂದರ್ಭಗಳಲ್ಲಿ ಅಪೀಲು ಮಾಡುವ ಹಕ್ಕಿದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಇಲ್ಲ, ಹೈಕೋರ್ಟಿನಿಂದ ಅಪೀಲಿಗೆ ಅವಕಾಶವಿಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ಕ್ರಿಮಿನಲ್ ಪ್ರೊಸೀಜರ್ ಕೋಡಿನ ೪೧೧-ಎ ಪ್ರಕರಣದ ಪ್ರಕಾರ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ೪೧೧-ಎ ಪ್ರಕರಣವು ಕಲ್ಕತ್ತಾ ಮುಂಬಯಿ ಮತ್ತು ಮದರಾಸು ಹೈಕೋರ್ಟ್‌ಗಳಿಗೆ ಮಾತ್ರ ಅನ್ವಯಿಸುತ್ತದೆ. ಅಲ್ಲೂ ಹೈಕೋರ್ಟು ೫೦೬ನೆಯ ಪ್ರಕರಣದನ್ವಯ ಕಾರ್ಯನಿರ್ವಹಿಸಿರುವ ಎಲ್ಲಾ ಸಂದರ್ಭಗಳಿಗೂ ಅದು ಅನ್ವಯಿಸುವುದಿಲ್ಲ. ಹೈಕೋರ್ಟುಗಳು ಮೊದಲ ಪಕ್ಷವಾಗಿ ಅಧಿವೇಶನ ಕುಳಿತು ಆಲಿಸಿ ತೀರ್ಪುನೀಡಿದ ಸಂದರ್ಭಗಳ ಮೇಲಿನ ಅಪೀಲಿಗೆ ಮಾತ್ರ ಸೀಮಿತವಾಗಿದೆ. ಆದ್ದರಿಂದ ಮಾನ್ಯರೆ,.............*

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ೫೨೬ನೆಯ ಪ್ರಕರಣವು ಸಾಮಾನ್ಯವಾಗಿ ಮೊಕದ್ದಮೆಗಳ ವರ್ಗಾವಣೆಯನ್ನು ಹೇಳುತ್ತದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಒಂದು ಮೊಕದ್ದಮೆಯು ವರ್ಗಾಯಿಸಲ್ಪಟ್ಟು, ಹೈಕೋರ್ಟು ಅದರ ವಿಚಾರಣೆ ನಡೆಸಿದಾಗ, ಅಪೀಲಿನ ಹಕ್ಕು ಬರುವುದಿಲ್ಲ. ಅದಕ್ಕೆ ಅಸಾಧಾರಣವಾದ ನ್ಯಾಯಾಧಿಕಾರ ವ್ಯಾಪ್ತಿಯಿರುತ್ತದೆ. ಮರಣದಂಡನೆಗೊಳಗಾದ ಮನುಷ್ಯನಿಗೆ ಕೊನೆಯ ಪಕ್ಷ ಒಂದು ಅಪೀಲಿನ ಅವಕಾಶ ಇರಬೇಕು ಎಂಬ ಸಾಮಾನ್ಯ ತತ್ವವನ್ನು ಪಾಲಿಸದೆ ಹೋಗುವ ಮೂರು ನಿರ್ದಿಷ್ಟ ಸಂದರ್ಭಗಳು ಇವು. ಆಧುನಿಕ ಜಗತ್ತಿನ ಆತ್ಮಸಾಕ್ಷಿ ಹಾಗೂ ಭಾರತೀಯರ ಪ್ರಜೆಗಳ ದೃಷ್ಟಿಯಿಂದ ಅಂಥದೊಂದು ಅವಕಾಶವನ್ನು ಮಾಡಲೇಬೇಕು. ಆದ್ದರಿಂದ (ಅ) ಮತ್ತು (ಬ) ಉಪ-ಖಂಡಗಳ ಉದ್ದೇಶ, ಮೊದಲು ಬಿಡುಗಡೆ ಹೊಂದಿ ಆಮೇಲೆ ಹೈಕೋರ್ಟಿನಲ್ಲಿ ಅಂತಿಮವಾಗಿ ಮರಣದಂಡನೆಗೆ ಒಳಪಟ್ಟು ಒಬ್ಬ ವ್ಯಕ್ತಿಗೆ ಅಪೀಲು ಮಾಡುವ ಹಕ್ಕನ್ನು ಒದಗಿಸುವುದು. ಆತ್ಮಸಾಕ್ಷಿಯ ಅಥವಾ ಮಾನವೀಯತೆಯ ಆಧಾರದಿಂದ (ಅ) ಮತ್ತು (ಬ) ಉಪ-ಖಂಡಗಳಲ್ಲಿರುವ ಅವಕಾಶಗಳ ಮೇಲೆ ಆಕ್ಷೇಪಣೆಯನ್ನು ಎತ್ತುವವರು ಯಾರಾದರೂ ಇದ್ದರೆ ಎಂದು ನನಗೆ ಅನ್ನಿಸುವುದಿಲ್ಲ.

ಈಗ ನಾನು (ಕ) ಉಪ-ಖಂಡಕ್ಕೆ ಬರುತ್ತೇನೆ. ಇದಕ್ಕೆ ಸಂಬಂಧಿಸಿದಂತೆ ಕಲ್ಕತ್ತಾ, ಮದರಾಸು ಮತ್ತು ಮುಂಬಯಿಗಳ ಹೈಕೋರ್ಟುಗಳಿಗೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರೊಸೀಜರ್ ಕೋಡಿನ ೪೧೧ನೆಯ ಪ್ರಕರಣವು ಕಾರ್ಯಪ್ರವೃತ್ತವಾಗಿದೆ ಎಂಬುದನ್ನು ಸದನವು ನೆನಪಿನಲ್ಲಿಟ್ಟುಕೊಳ್ಳಬೇಕು. ಹೈಕೋರ್ಟಿನಿಂದ ಅದೊಂದು ಅರ್ಹವಾದ ಮೊಕದ್ದಮೆ ಎಂದು ಪ್ರಮಾಣ ಪತ್ರವನ್ನು ಪಡೆದು ಅದರ ಆಧಾರದಿಂದ ಪ್ರೀವೀ ಕೌನ್ಸಿಲಿನಲ್ಲಿ ಅಪೀಲು ಮಾಡುವ ಈ ಹಕ್ಕನ್ನು ಲೆಜಿಸ್ಲೇಟಿವ್ ಅಸೆಂಬ್ಲಿಯು ೧೯೪೫ರಲ್ಲಿ ಉದ್ದೇಶ ಪೂರ್ವಕವಾಗಿಯೇ ನೀಡಿತು. ಆದ್ದರಿಂದ ಕ್ರಿಮಿನಲ್ ಪ್ರೊಸೀಜರ್ ಕೋಡಿನ ೪೧೧ನೆಯ ಪ್ರಕರಣದ ಅವಕಾಶಗಳಿಗೆ ಸಂಬಂಧಿಸಿದಂತೆ ನಮ್ಮ ಎದುರಿಗೆ ಎರಡು ಪ್ರಶ್ನೆಗಳಿವೆ. ಈಗ ಈ ಸದನಕ್ಕೆ ಎರಡು ದಾರಿಗಳು ತೆರೆದಿವೆ. ಈ ಅವಕಾಶವನ್ನು ಇಡಿಯಾಗಿ ತೆಗೆದುಬಿಡುವುದು ಇಲ್ಲವೆ ಈ ಉಪಬಂಧವನ್ನು ಎಲ್ಲಾ ಹೈಕೋರ್ಟ್‌ಗಳಿಗೂ ವಿಸ್ತರಿಸುವುದು. ನನಗೆ ತೋರುವುದು ಹೀಗೆ: ಹೈಕೋರ್ಟಿನಿಂದ ಪ್ರಮಾಣಪತ್ರ ಪಡೆದು ಅದರ ಆಧಾರದಿಂದ ಅಪೀಲು ಮಾಡಲು ಅನುಮತಿ ಮಾಡುವ ೪೧೧ನೆಯ ಪ್ರಕರಣದ

---

* ಚುಕ್ಕೆಗಳು ತಡೆಯನ್ನು ಸೂಚಿಸುತ್ತವೆ.

ಉಪಬಂಧಗಳನ್ನು ರದ್ದುಪಡಿಸಿದರೆ, ಕೊನೆಯ ಪಕ್ಷ ಮೂರು ಬೇರೆ ಬೇರೆ ಪ್ರಾಂತಗಳಲ್ಲಿನ ಜನರು ಪಡೆದಿದ್ದ, ಚಲಾಯಿಸುತ್ತಿದ್ದ ಒಂದು ಹಕ್ಕನ್ನು ಉದ್ದೇಶಪೂರ್ವಕವಾಗಿ, ತೆಗೆದುಹಾಕಿದಂತಾಗುತ್ತದೆ. ಈಗಾಗಲೇ ಸ್ಥಿರವಾದ ಹಕ್ಕಾಗಿರುವ ಒಂದು ನ್ಯಾಯಿಕ ಹಕ್ಕನ್ನು ಕಿತ್ತುಹಾಕುವುದು ಅಸಹ್ಯಕರವಾದ ಕಾರ್ಯವೆಂದು ನನಗೆ ತೋರುತ್ತದೆ. ಇದಕ್ಕೆ ಉಳಿದಿರುವ ಬದಲಿಮಾರ್ಗ ಒಂದೇ, ಅವಕಾಶಗಳನ್ನು ವಿಸ್ತರಿಸಿ ಎಲ್ಲಾ ಹೈಕೋರ್ಟುಗಳಿಗೂ ಅವು ಅನ್ವಯವಾಗುವಂತೆ ಮಾಡುವುದು. ನನ್ನ ತಿದ್ದುಪಡಿಯಲ್ಲಿ ಅಳವಡಿಸಿಕೊಂಡಿರುವ ಮಾರ್ಗ ಎರಡನೆಯ ಮಾರ್ಗವೇ, ಅದನ್ನು ಎಲ್ಲಾ ಹೈಕೋರ್ಟುಗಳಿಗೂ ವಿಸ್ತರಿಸುವುದು. ಇದರಿಂದ ಸುಪ್ರೀಂ ಕೋರ್ಟಿಗೆ ಕ್ರಿಮಿನಲ್ ಅಪೀಲು ಮೊಕದ್ದಮೆಗಳು ಕಟ್ಟೆಯೊಡದ ಪ್ರವಾಹವಾಗಿ ಬರುತ್ತವೆ ಎಂದು ಕಳವಳ ಪಡುವ ನನ್ನ ಮಿತ್ರರು, ಎರಡು ಮುಖ್ಯವಾದ ಪರಿಗಣನೆಗಳನ್ನು ಮರೆತಿದ್ದಾರೆಂದು ನನಗನ್ನಿಸುತ್ತದೆ. ಮೊದಲನೆಯದು ಇದು. ನೂತನ ವಿಧಿಯ (೧) ನೆಯ ಖಂಡದ (ಅ) ಮತ್ತು (ಬ) ಉಪ–ಖಂಡಗಳನ್ವಯ ಸುಪ್ರೀಂ ಕೋರ್ಟಿಗೆ ಬರುವ ಅಪೀಲು ವಿಚಾರಣೆಯ ಅಧಿಕಾರವು, ಶಾಸನ ಸಭೆಯು ಮರಣದಂಡನೆಯನ್ನು ರದ್ದುಪಡಿಸಿದ ಕ್ಷಣವೇ ಮಾಯವಾಗುತ್ತದೆ. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಮರಣದಂಡನೆಯನ್ನು ಕುರಿತು ಏನನ್ನು ಹೇಳಲಾಗುತ್ತಿದೆಯೆಂಬುದನ್ನು ಆಲೋಚಿಸಿ ಶಾಸನ ಸಭೆಯು, ಈ ದೇಶದ ಪರಂಪರೆಯನ್ನೂ ಗಮನದಲ್ಲಿಟ್ಟುಕೊಂಡು ಮರಣದಂಡನೆಯನ್ನು ರದ್ದುಪಡಿಸಿದ ಪಕ್ಷದಲ್ಲಿ, ಸುಪ್ರೀಂ ಕೋರ್ಟಿಗೆ ಅಪೀಲು ಮಾಡಬೇಕಾದ ಅಗತ್ಯವೇ ಇರುವುದಿಲ್ಲ. ಆ ಸಂದರ್ಭದಲ್ಲಿ (ಅ) ಮತ್ತು (ಬ) ಉಪ–ಖಂಡಗಳು ಅಂತಿಮವಾಗಿ ಮಾಯವಾಗದಿದ್ದರೂ ಬಳಕೆ ತಪ್ಪುತ್ತದೆ.

ಇನ್ನು (ಕ) ಉಪ–ಖಂಡಕ್ಕೆ ಸಂಬಂಧಿಸಿದಂತೆ, ಅದು ತನ್ನೊಂದಿಗಿರುವ ಅವಕಾಶದ ಕಟ್ಟುನಿಟ್ಟಾದ ಮಿತಿಗಳಿಗೆ ಒಳಪಟ್ಟಿರುವುದನ್ನು ಗಮನಿಸಬಹುದು. "ಈ ಖಂಡದ (ಕ) ಉಪ–ಖಂಡದನ್ವಯ ಮಾಡುವ ಅಪೀಲು, ಸುಪ್ರೀಂ ಕೋರ್ಟು ಆಗಿಂದಾಗ ಮಾಡುವ ನಿಯಮಗಳಿಗೂ, ಹೈಕೋರ್ಟು ಸ್ಥಾಪಿಸುವ ಅಥವಾ ಹೈಕೋರ್ಟಿಗೆ ಅಗತ್ಯವಾಗಿರುವ ನಿಬಂಧನೆಗಳಿಗೂ ಒಳಪಟ್ಟಿರುತ್ತದೆ." ಆದ್ದರಿಂದ ಪ್ರಮಾಣಪತ್ರ ಎನ್ನುವುದು ಕೇಳಿದ ಕೂಡಲೆ ಸಿಕ್ಕಿಬಿಡುವ ಒಂದು ಅನಿರ್ಬಂಧಿತ ಪ್ರಕ್ರಿಯೆಯಲ್ಲ. ಅದು ಎರಡೂ ಕಡೆ, ಹೈಕೋರ್ಟ್ ವಿಧಿಸುವ ನಿಯಮಗಳು ಮತ್ತು ಮಿತಿಗಳಿಗೂ ಸುಪ್ರೀಂ ಕೋರ್ಟಿನ ವಿಧಿಸುವ ನಿಯಮಗಳಿಗೂ ಒಳಪಡುತ್ತದೆ. ಆದ್ದರಿಂದ (ಕ) ಉಪ–ಖಂಡವು ತುಂಬಾ ಕಟ್ಟುನಿಟ್ಟಾದ ಅವಕಾಶವೆಂಬುದನ್ನು ತಿಳಿದುಕೊಳ್ಳಬೇಕು. ಅದು ನಮ್ಯವಾಗಿಲ್ಲ, ಜನರು ತಿಳಿದುಕೊಳ್ಳುವಂತೆ ವ್ಯಾಪಕವಾಗಿಲ್ಲ.

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ನಿಬಂಧನೆಯಿಂದ ಪರಿಷ್ಕೃತವಾಗಿದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಹೌದು, ನಿಬಂಧನೆಯಿಂದ ಪರಿಷ್ಕೃತವಾಗಿರುವ ಹಾಗೆ.

ಈಗ ನನ್ನ ತಿದ್ದುಪಡಿಯ (೨)ನೆಯ ಖಂಡಕ್ಕೆ ಬರುತ್ತೇನೆ. ಅಲ್ಲಿ ನನ್ನ ತಿದ್ದುಪಡಿಯಲ್ಲಿ ನಿರೂಪಿಸಿದ ಮೂರು ಸಂದರ್ಭಗಳಿಂದಾಚೆಗೆ ಸುಪ್ರೀಂ ಕೋರ್ಟಿನ ಕ್ರಿಮಿನಲ್ ನ್ಯಾಯಾಧಿಕಾರವನ್ನು ವಿಸ್ತರಿಸುವ ಸಾಮಾನ್ಯ ಅಧಿಕಾರವನ್ನು ಪಾರ್ಲಿಮೆಂಟಿಗೆ ಕೊಟ್ಟಿದೆ. ತಿದ್ದುಪಡಿಯ (೧)ನೆಯ ಖಂಡದಲ್ಲಿ ಹೇಳಿದ ಮೂರು ಸಂದರ್ಭಗಳೇ ಸಾಕಾಗಿರುವುದರಿಂದ, ಸುಪ್ರೀಂ ಕೋರ್ಟಿನ ಕ್ರಿಮಿನಲ್ ನ್ಯಾಯಾಧಿಕಾರವನ್ನು ಇವೆಲ್ಲಾ ಅಧಿಕಗೊಳಿಸುವುದಕ್ಕಾಗಿ ಬಾಗಿಲು ತೆರೆದಿರಬೇಕಾದ ಅಗತ್ಯವಿಲ್ಲವೆಂದೂ, ಹೈಕೋರ್ಟಿನ ಕ್ರಿಮಿನಲ್ ನ್ಯಾಯಾಧಿಕಾರಕ್ಕೆ (ಅ) (ಬ) ಮತ್ತು (ಕ) ಉಪ–ಖಂಡಗಳು ಅಂತಿಮ ಮಿತಿಯಾಗಿರಬೇಕೆಂದೂ ಒಂದು ಅಭಿಪ್ರಾಯ ಬಂದಿತು. ಇದಕ್ಕೆ ನಾನು ಕೊಡಬಹುದಾದ ಉತ್ತರ ಇಷ್ಟೆ. ಮುಂದೆ ಎಂತಹ ಪರಿಸ್ಥಿತಿಗಳು ಉದ್ಭವಿಸುತ್ತವೆಂದು ಕಲ್ಪಿಸಿಕೊಳ್ಳುವುದು ಕಷ್ಟ. ಸುಪ್ರೀಂ ಕೋರ್ಟಿಗೆ ಯಾವುದಾದರೂ ಒಂದು ಬಗೆಯ

ಕ್ರಿಮಿನಲ್ ಅಪೀಲು ನ್ಯಾಯಾಧಿಕಾರವನ್ನು ಕೊಡಬೇಕಾದ ಪರಿಸ್ಥಿತಿಯು ಪಾರ್ಲಿಮೆಂಟಿಗೆ ಬರುವುದಿಲ್ಲ ಎಂದು ಯಾರಾದರೂ ಹೇಳಿದರೆ ಅದನ್ನು ನಂಬುವುದೇ ಉತ್ತಮ. ಅಂತಹ ಸಂದರ್ಭ ಬಂದಿತೆಂದೇ ಇಟ್ಟುಕೊಳ್ಳೋಣ. ನನ್ನ ನೂತನ ತಿದ್ದುಪಡಿಯ (೨)ನೆಯ ಖಂಡದ ಉಪಬಂಧಗಳು ಇರಲಿಲ್ಲವಾದರೆ ಆಗ ಏನಾಗುತ್ತಿತ್ತು? ಈ ಸಂವಿಧಾನದಲ್ಲಿ ಮುಂದೆ ನಾವು ನಿರೂಪಿಸಬಯಸುವ ವಿಧಾನದಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರಬೇಕಾಗುತ್ತಿತ್ತು. ಆದ್ದರಿಂದ ಇಲ್ಲಿರುವ ಪ್ರಶ್ನೆ ಇದು : ಸಂವಿಧಾನಕ್ಕೇ ತಿದ್ದುಪಡಿತಂದ ಹೊರತು ಪಾರ್ಲಿಮೆಂಟಿಗೂ ಅಧಿಕಾರವಿಲ್ಲದಷ್ಟು ಕಠಿಣವಾಗಿ ಮಾಡಬೇಕೆ, ಅಥವಾ ಪರಿಸ್ಥಿತಿಯನ್ನು ನಮ್ಯವಾಗಿ ಉಳಿಸಿ, ಪಾರ್ಲಿಮೆಂಟು ಕಾನೂನು ಅಂಗೀಕರಿಸಲು ಅವಕಾಶ ಕೊಟ್ಟು ಕಾಲ, ಪರಿಸ್ಥಿತಿ, ಮತ್ತು ಆಯ್ಕೆಗಳನ್ನು ಅಂದಿನ ಪಾರ್ಲಿಮೆಂಟಿಗೆ ಬಿಟ್ಟುಬಿಡುವುದೆ?

**ಮಾನ್ಯ ಶ್ರೀ ಕೆ. ಸಂತಾನಂ :** ೧೧೪ನೆಯ ವಿಧಿಯ ಪ್ರಕಾರ, ಈಗಲೂ ಪಾರ್ಲಿಮೆಂಟು, ಸುಪ್ರೀಂ ಕೋರ್ಟಿಗೆ ನ್ಯಾಯಾಧಿಕಾರವನ್ನು ನೀಡುವ ಅಧಿಕಾರವನ್ನು ಹೊಂದಿಯೇ ಇದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ೧೧೪ನೆಯ ವಿಧಿಯು ಆ ವಿಚಾರವನ್ನು ಕುರಿತಿಲ್ಲ. ನನ್ನ ಬಳಿ ಈಗ ಪ್ರತಿ ಇಲ್ಲ; ಇದ್ದಿದ್ದರೆ ಉತ್ತರ ಕೊಡುತ್ತಿದ್ದೆ. ಅದು ಕೇಂದ್ರಸೂಚಿಯನ್ನು ಕುರಿತಾಗಿದೆ.

**ಮಾನ್ಯ ಶ್ರೀ ಕೆ. ಸಂತಾನಂ :** ಅದು ಕೇಂದ್ರ ಸೂಚಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟಿಗಿರುವ ನ್ಯಾಯಾಧಿಕಾರವನ್ನು ಕುರಿತು ಹೇಳುತ್ತದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಹೌದು. ಅವರು ನ್ಯಾಯಾಧಿಕಾರವನ್ನು ಸಂಯುಕ್ತ ಸೂಚಿಗೆ, ಮೂರನೆಯ ಸೂಚಿಗೆ ವಿಸ್ತರಿಸಲು ಬಯಸಿದರೆ ೧೧೪ನೆಯ ವಿಧಿಯನ್ನು ಉಪಯೋಗಿಸಲು ಸಾಧ್ಯವಿಲ್ಲ.

ಮಾನ್ಯರೆ, ಈಗ ನನ್ನ ಮಿತ್ರರಾದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಹೇಳಿರುವ ಕೆಲವು ಮಾತುಗಳಿಗೆ ಬರುತ್ತೇನೆ. ಅವು ಬಹುವಾಗಿ (೩)ನೆಯ ಉಪ-ಖಂಡಕ್ಕೆ ಸಂಬಂಧಪಟ್ಟಿವೆ. ಅವರ ಮೊದಲನೆಯ ಪ್ರಶ್ನೆ (೩)ನೆಯ ಉಪ-ಖಂಡದ ಉಪಬಂಧಗಳನ್ನು ಅದರ ಜೊತೆಗೆ ಹೋಗುವ ನಿಬಂಧನೆಯಲ್ಲಿರುವ ಅವಕಾಶಗಳಿಂದ ಅಂದರೆ ಸುಪ್ರೀಂ ಕೋರ್ಟು ವಿಧಿಸುವ ನಿಯಮಗಳಿಂದ ಕಟ್ಟಿಹಾಕಿದ್ದ ಪಕ್ಷದಲ್ಲಿ, (೩)ನೆಯ ಉಪ-ಖಂಡವನ್ನು ಇಟ್ಟುಕೊಳ್ಳುವುದರಿಂದ ಪ್ರಯೋಜನವೇನು?

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ಅದು (ಕ) ಉಪ-ಖಂಡ (೩)ನೆಯ ಖಂಡವಲ್ಲ.

**ಡಾ.ಬಿ.ಆರ್. ಅಂಬೇಡ್ಕರ್ :** ಕ್ಷಮಿಸಬೇಕು. ಹೌದು, ನೀವು ಹೇಳುವುದು ಸರಿ. ಅದು (ಕ) ಉಪ-ಖಂಡ. ಮಿತ್ರ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರಿಗೆ ನೆನಪು ಕೊಡಬೇಕಾದ ಮೊದಲನೆಯ ಅಂಶ, (ಕ) ಉಪ-ಖಂಡಕ್ಕೆ ಸೇರಿಸಿರುವ ನಿಬಂಧನೆಯು ಕ್ರಿಮಿನಲ್ ಪ್ರೊಸೀಜರ್ ಕೋಡಿನ ೪೧೧ನೆಯ ಪ್ರಕರಣಕ್ಕೆ ಸೇರಿಸಿರುವ ನಿಬಂಧನೆಯ ಪದಶಃ ಪುನರುಕ್ತಿ ಅಲ್ಲದೆ ವ್ಯವಹಾರ ಪ್ರಕ್ರಿಯಾ ಸಂಹಿತೆ (Civil Procedure Code)ಯ ೧೧೯ನೆಯ ಪ್ರಕರಣದಲ್ಲಿರುವ ನಿಬಂಧನೆಯ ಪದಶಃ ಪುನರುಕ್ತಿ. ಅವರಿಗೆ ನೆನಪಿರಬಹುದು, ಸುಪ್ರೀಂ ಕೋರ್ಟಿನ ಸಿವಿಲ್ ಅಪೀಲು ನ್ಯಾಯಾಧಿಕಾರದಲ್ಲಿ ನಾವು ಒಂದು ಖಂಡವನ್ನು ಸೇರಿಸಿದ್ದೇವೆ. ಅದು ೧೧೧-ಎ ವಿಧಿಯ (೧)ನೇ ಖಂಡದ (ಸಿ) ಉಪ-ಖಂಡದ ಪದಶಃ ಪುನರುಕ್ತಿಯೇ ಆಗಿವೆ. ೧೧೧ನೆಯ ವಿಧಿಯ (೧)ನೆಯ ಖಂಡದ (ಕ) ಉಪ-ಖಂಡದಲ್ಲಿ, ಸುಪ್ರೀಂ ಕೋಟು ಮಾಡುವ ನಿಯಮಗಳಿಗೆ ಕಟ್ಟುಬಿದ್ದಿದ್ದರೂ ಒಂದಿಷ್ಟು ಒಳಿತು ಉಳಿದಿದೆ ಎಂದು ನನಗೆ ಅನ್ನಿಸಿದರೆ, ಸಾಮಾನ್ಯ ವಿವೇಕವುಳ್ಳ ಮನುಷ್ಯನಾಗಿ ಇಲ್ಲಿಯೂ ನಿಬಂಧನೆಯ ಮಿತಿಗಳಿದ್ದರೂ (ಕ) ಉಪ-ಖಂಡದಲ್ಲಿ ಒಳಿತು ಇದ್ದೇ ಇರಬೇಕು. ನನ್ನ ಮಿತ್ರರು ಇದನ್ನು ಹೇಳಿದರು. ೧೧೨ನೆಯ ವಿಧಿಯಲ್ಲಿ ಒಂದು

ಉಪಬಂಧವಿದ್ದು ಅದು ಸುಪ್ರೀಂ ಕೋರ್ಟಿಗೆ ವಿಶೇಷ ಅನುಮತಿಯಿಂದ ಅಪೀಲನ್ನು ಒಪ್ಪಿಕೊಳ್ಳುವ ಹಕ್ಕನ್ನು ನೀಡುತ್ತದೆ. ಅಲ್ಲಿ ವಿಧಿಯು ಸಿವಿಲ್ ಅಪೀಲಿಗೆ ಸೀಮಿತವಾಗದೆ ಯಾವುದೇ ಉದ್ದೇಶ ಅಥವಾ ವಿಷಯವನ್ನು ಕುರಿತು ಹೇಳುವ ಸಾಮಾನ್ಯ ವಿಧಿಯಾಗಿದೆ. ಅದು ಇರುವಾಗ (ಕ) ಉಪ–ಖಂಡ ಏಕೆ ಬೇಕು? ಎನ್ನುವುದು ಅವರ ಪ್ರಶ್ನೆ. ಅವರಿಗೆ ನನ್ನ ಉತ್ತರ ಮತ್ತೆ ಅದೇ. ೧೧೨ನೆಯ ವಿಧಿಯು ಸುಪ್ರೀಂ ಕೋರ್ಟು, ಹೈಕೋರ್ಟುಗಳ ಮೇಲೆ ಹೊಂದಿರುವ ನ್ಯಾಯಾಧಿಕಾರವನ್ನು ವಿವರಿಸಿದ ಪಕ್ಷದಲ್ಲಿ, ಅದು ಸಿವಿಲ್ ವಿಷಯಗಳನ್ನು ಕುರಿತಾಗಿದ್ದರೆ, ೧೧೧–ಎ ವಿಧಿಯಲ್ಲಿನ (೧)ನೇ ಖಂಡದ (ಕ) ಉಪ–ಖಂಡವೇಕೆ ಬೇಕು? ಉತ್ತರ ಇದು : ೧೧೨ ಇದ್ದರೂ ಸಿವಿಲ್ ವಿಚಾರಗಳಲ್ಲಿ (ಕ) ಉಪವಾಕ್ಯವನ್ನು ಇಟ್ಟುಕೊಳ್ಳಬಹುದಾದರೆ, ೧೧೨ ಇದ್ದರೂ (ಕ) ಉಪ–ಖಂಡವನ್ನು ಹೊಂದಿರುವುದಕ್ಕೆ ಏನು ಆಕ್ಷೇಪಣೆಯಿದೆ? ಇಲ್ಲಿ ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದುದೆಂದರೆ, ೧೧೨ಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟಿಗೆ, ಅಪೀಲುಗಳನ್ನು ಒಪ್ಪಿಕೊಳ್ಳುವ ಷರತ್ತುಗಳನ್ನು ವಿಧಿಸಲು ಸಂಪೂರ್ಣ ಸ್ವಾತಂತ್ರ್ಯವನ್ನು ನಾವು ಕೊಟ್ಟಿದ್ದೇವೆ.

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ :** ಸಿವಿಲ್ ಅಪೀಲುಗಳನ್ನು ಕುರಿತಂತೆ ಒಂದು ನಿಯಮವಿದೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅದು ನಿಜ. ಈ ೧೧೨ನೆಯ ವಿಧಿಯನ್ನು ಸುಪ್ರೀಂ ಕೋರ್ಟು ಹೇಗೆ ವ್ಯಾಖ್ಯಾನಿಸುತ್ತದೆ ಎನ್ನುವುದು ನನಗೆ ತಿಳಿಯದು. ಅದರ ವ್ಯಾಖ್ಯಾನದ ಕೆಲಸವನ್ನು ಅವರಿಗೇ ಬಿಟ್ಟುಬಿಟ್ಟಿದ್ದೇವೆ. ಪ್ರೀವೀ ಕೌನ್ಸಿಲ್ ಅದನ್ನು ಹೇಗೆ ವ್ಯಾಖ್ಯಾನಿಸಿದೆಯೋ ಹಾಗೆಯೇ ಇವರೂ ಹೇಳಬಹುದು, ಅಥವಾ ಬೇರೆ ರೀತಿಯಾಗಿ ಹೇಳಬಹುದು. ವ್ಯಾಖ್ಯಾನ ಸೀಮಿತವಾದುದಾಗಿರಬಹುದು ಅಥವಾ ವಿಸ್ತಾರವಾಗಿರಬಹುದು. ಅವರೇನಾದರೂ ಸೀಮಿತವಾದ ವ್ಯಾಖ್ಯಾನ ನೀಡಿದ ಪಕ್ಷದಲ್ಲಿ, (ಕ) ಉಪ–ಖಂಡಕ್ಕೆ ಸ್ವಲ್ಪ ಬೆಲೆಯಿರುತ್ತದೆ. ಆದ್ದರಿಂದ, ನನ್ನ ತಿದ್ದುಪಡಿಯು ಮೊಕದ್ದಮೆಗಳ ಅಗತ್ಯವನ್ನು ಪೂರೈಸುವಂತಿರುತ್ತದೆ. ಅಪೀಲು ಮಾಡುವ ಹಕ್ಕನ್ನು ಕೊಡದೆ ಗಲ್ಲಿಗೆ ಹಾಕಿದರು ಎಂದು ಆಕ್ಷೇಪಿಸುವವರ ಆತ್ಮಸಾಕ್ಷಿಯನ್ನು ಸಮಾಧಾನಪಡಿಸುತ್ತದೆ. ಪದಜೋಡಣೆ ಹೇಗಿದೆಯೆಂದರೆ, ಆಡಳಿತಾತ್ಮಕವಾಗಿ ಅಥವಾ ಬೇರೆ ರೀತಿಯಾಗಿ ಕ್ರಿಮಿನಲ್ ಅಪೀಲುಗಳ ಭಾರವು ಸುಪ್ರೀಂ ಕೋರ್ಟಿನ ಮೇಲೆ ಅತಿಯಾಗಿ ಬೀಳದ ಹಾಗೆ, ನನ್ನ ಮಿತ್ರರು ಈಗ ತಮ್ಮ ತಿದ್ದುಪಡಿಗಳನ್ನು ಹಿಂದಕ್ಕೆ ಪಡೆದುಕೊಂಡು ನನ್ನದನ್ನು ಒಪ್ಪಿಕೊಳ್ಳುತ್ತಾರೆ ಎಂದು ಆಶಿಸುತ್ತೇನೆ.

**ಶ್ರೀ ಸಿ. ಸುಬ್ರಮಣಿಯಂ** (ಮದರಾಸು:ಸಾಮಾನ್ಯ) : ಒಂದು ಸ್ಪಷ್ಟೀಕರಣ ಬೇಕು. ಭಾಷೆಯ ವ್ಯತ್ಯಾಸದ ಪರಿಣಾಮ.....

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಈಗ ಅದು ತುಂಬಾ ತಡವಾಗಿದೆ.

**ಮಾನ್ಯ ಅಧ್ಯಕ್ಷರು :** ಹೈಕೋರ್ಟಿನ, ಶಿಕ್ಷೆಯ ವಿಸ್ತರಣೆಯ ರೀತಿಯಲ್ಲಿ ಮೊದಲ ಬಾರಿಗೆ ಮರಣದಂಡನೆ ವಿಧಿಸಿದ ಮೊಕದ್ದಮೆಗಳಿಗೂ ಬಿಡುಗಡೆ ತೀರ್ಪಿನ ಮೇಲಿನ ಅಪೀಲಿನಲ್ಲಿ ತೀರ್ಪನ್ನು ವ್ಯತಿರಿಕ್ತ ಕೇಸಿನ ಮರಣದಂಡನೆ ವಿಧಿಸಿದ ಕೇಸುಗಳಿಗೂ ನಡುವೆ ಏಕೆ ವ್ಯತ್ಯಾಸ ಕಲ್ಪಿಸಿದ್ದಾರೆ ಎಂಬುದನ್ನು ಮಾನ್ಯ ಡಾಕ್ಟರ್ ಅವರು ತೋರಿಸಿಲ್ಲ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಶಿಕ್ಷೆಯ ವಿಸ್ತೀರ್ಣದ ವಿರುದ್ಧವಾದ ಅಪೀಲು ಮಾಡಿರುವ ಮೊಕದ್ದಮೆಯು, ಬಿಡುಗಡೆಯ ವಿರುದ್ಧವಾದ ಅಪೀಲಿನ ಮೊಕದ್ದಮೆಯಿಂದ ಎರಡು ಅಂಶಗಳಲ್ಲಿ ಭಿನ್ನವಾಗಿರುತ್ತದೆ. ಆರೋಪಿಯೊಬ್ಬನಿಗೆ ವಿಧಿಸಿರುವ ಶಿಕ್ಷೆಯನ್ನು ಹೈಕೋರ್ಟು ಹೆಚ್ಚಿಸಿದಾಗ, ಮೊದಲಬಾರಿಗೆ ಶಿಕ್ಷೆ ಮಾಡುತ್ತಿರುವುದಿಲ್ಲ. ಆರೋಪಿ ಆಗಲೆ ಶಿಕ್ಷೆ ವಿಧಿಸಿಯಾಗಿದೆ. ದೋಷ ಮುಕ್ತಿಯ ವಿರುದ್ಧವಾದ

ಅಪೀಲಿನ ಮೊಕದ್ದಮೆಯಲ್ಲಿ ಹೈಕೋರ್ಟು, ವಿಚಾರಣಾ ನ್ಯಾಯಾಲಯದ ತೀರ್ಮಾನವನ್ನು ಬದಲಾಯಿಸಿ ಆರೋಪಿಗೆ ಶಿಕ್ಷೆ ವಿಧಿಸುತ್ತದೆ. ಎಡರನೆಯ ವ್ಯತ್ಯಾಸ ಹೀಗಿದೆ. ವಿಸ್ತರಣದ ಮೊಕದ್ದಮೆಯಲ್ಲಿ ಕಾರ್ಯಕಲಾಪಗಳನ್ನು ಕ್ರಮವಾದ ಮೇಲ್ಮನವಿಯಾಗಿ ಪರಿವರ್ತಿಸಲಾಗುತ್ತದೆ, ಇದರಿಂದ ಆರೋಪಿಗೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ, ಶಿಕ್ಷೆಯ ವಿಸ್ತರಣ ಸೂಕ್ತವಾದುದಲ್ಲ. ಮಾತ್ರವಲ್ಲದೆ, ಮೊಕದ್ದಮೆಯ ವಾಸ್ತವಾಂಶಗಳ ಪ್ರಕಾರ ಮೊದಲ ವಿಚಾರಣೆಯೇ ಸಮರ್ಥನೀಯವಾಗಿರಲಿಲ್ಲ ಎಂದು ಹೇಳಿ ಅಪೀಲು ಮಾಡುವ ಕಾನೂನು ಬದ್ಧ ಹಕ್ಕನ್ನು ಪಡೆಯುತ್ತಾನೆ. ವಿಸ್ತರಣ ಮೊಕದ್ದಮೆಗಳಲ್ಲಿ ಆಗಲೆ ಒಂದು ಅಪೀಲು ಆಗಿರುತ್ತದೆ. ಆದ್ದರಿಂದ ಮತ್ತೆ ಅಪೀಲು ಅನಗತ್ಯ. ಮೂರನೆಯದಾಗಿ, ತಿದ್ದುಪಡಿಯು ಶಿಕ್ಷೆ ಅಥವಾ ಬಿಡುಗಡೆಯನ್ನು ಸುಪ್ರೀಂ ಕೋರ್ಟಿಗೆ ಅಪೀಲು ಸಲ್ಲಿಸಲು ಹಕ್ಕಿಗೆ ಆಧಾರವನ್ನಾಗಿ ಪುರಸ್ಕರಿಸುತ್ತದೆ. ಶಿಕ್ಷೆಯ ಸ್ವರೂಪವನ್ನೇ ಅಥವಾ ಶಿಕ್ಷೆಯ ಬಗೆಯನ್ನೇ ಮೇಲ್ಮನವಿ ಹಕ್ಕಿನ ಆಧಾರವನ್ನಾಗಿ ಅದು ಪರಿಗಣಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷ :** ಒಂದು ಪ್ರಕರಣದಲ್ಲಿ ಅಧಿವಿಚಾರಣಾ ನ್ಯಾಯಾಲಯವು ಅದು ಒಂದು ಗಂಭೀರ ಸ್ವರೂಪದ ಗಾಯಗೊಳಿಸಿದ ಪ್ರಕರಣವೆಂದು ಅಭಿಪ್ರಾಯ ಹೊಂದಿದೆ ಎಂದು ತಿಳಿದುಕೊಳ್ಳದಿದ್ದರೂ, ಆ ಗಾಯದ ಪರಿಣಾಮವಾಗಿಯೇ ಮರಣಸಂಭವಿಸಿದೆ ಎಂಬ ಕಾರಣಕ್ಕಾಗಿ ಬಂಧನದಲ್ಲಿಡಬೇಕೆಂಬ ತೀರ್ಪನ್ನು ನೀಡಿದರೆ, ಮತ್ತು ಈ ವಿಷಯದ ಮೇಲೆ ಉಚ್ಚನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿದಾಗ ಆ ನ್ಯಾಯಾಲಯವು ಪುನರ್ವಿಮರ್ಶೆಯ ರೂಪದಲ್ಲಿ ಅದು ಕೇವಲ ಗಂಭೀರ ಸ್ವರೂಪದ ಗಾಯವನ್ನು ಅದು ಮಾಡಿರುವ ಪ್ರಸಂಗವಾಗಿರದೆ, ಅದು ಕೊಲೆ ಎಂಬ ತೀರ್ಪನ್ನು ನೀಡುತ್ತದೆ. ಅದಕ್ಕೆ ಮರಣದಂಡನೆ ವಿಧಿಸುತ್ತದೆ. ಇದು ನ್ಯಾಯಾಲಯವು ಮರಣಕ್ಕಾಗಿ ನೀಡಿದ ಪ್ರಥಮ ತೀರ್ಪಾಗಿದ್ದು ಪ್ರಥಮ ಬಾರಿಗೆ ನೀಡಲಾದ ಮರಣದಂಡನೆಯ ತೀರ್ಪಾಗುತ್ತದೆ.

**ಗೌರವಾನ್ವಿತ ಡಾ.ಬಿ.ಆರ್. ಅಂಬೇಡ್ಕರ್ :** ಸದ್ಯ ಸ್ಥಿತಿಯಲ್ಲಿ ನಾನು ನನ್ನ ತಿದ್ದುಪಡಿಯಲ್ಲಿ ಸೂಚಿತವಾದ ವಿಷಯಕ್ಕಿಂತ ಹೆಚ್ಚಿಗೆ ಏನನ್ನು ಹೇಳಲಾರೆ ಆದಾಗ್ಯೂ ಸಂಸತ್ತು ಅಂತಹ ಪ್ರಕರಣದ ಸಂದರ್ಭವನ್ನು ಸೇರಿಸಬಯಸಿದ್ದರೆ ಹಾಗೆ ಮಾಡಲು ಎರಡನೆಯ ಕಲಮಿನ ಪ್ರಕಾರ ಅದಕ್ಕೆ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ.

**ಮಾನ್ಯ ಸಭಾಧ್ಯಕ್ಷ :** ಅದು ಬೇರೆಯ ವಿಷಯ ಆಗಿದ್ದು ಅದು ಸದನ ತೀರ್ಮಾನಿಸಬೇಕಾಗಿರುವ ವಿಷಯವಾಗಿದೆ. ನನ್ನ ಅಭಿಪ್ರಾಯದಲ್ಲಿ ಅವೆರಡರ ನಡುವೆ ಯಾವ ವ್ಯತ್ಯಾಸವು ಕಾಣಬರುವುದಿಲ್ಲ.

**ಶ್ರೀ ಹೆಚ್.ವಿ. ಪಾಟಸ್ಕರ್** (ಮುಂಬಯಿ ಸಾಮಾನ್ಯ) : ನಾನು ಗೌರವಾನ್ವಿತ ಡಾ. ಅಂಬೇಡ್ಕರರು ಮಂಡಿಸಿರುವ ೨೪ನೆಯ ಮೂಲ ತಿದ್ದುಪಡಿಗೆ ನನ್ನ ೨೫ನೆಯ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷ :** ಅದಕ್ಕಾಗಿ ಈಗ ಸಮಯವಿಲ್ಲ. ನೀವು ಬಹಳ ತಡಮಾಡಿದ್ದೀರಿ ಈ ಹಂತದಲ್ಲಿ ಅದಕ್ಕೆ ಅನುಮತಿ ನೀಡಲಾಗುವುದಿಲ್ಲ.

ನಾನು ಈಗ ಎಲ್ಲಾ ತಿದ್ದುಪಡಿಗಳನ್ನೂ ಪ್ರಸ್ತುತಪಡಿಸಿರುತ್ತೇನೆ. ಮತ್ತು ಡಾ. ಅಂಬೇಡ್ಕರರು ಮಂಡಿಸಿರುವ ಹೊಸ ತಿದ್ದುಪಡಿಯಲ್ಲಿ ತಮ್ಮ ತಿದ್ದುಪಡಿಗಳು ಸೇರಿವೆ ಎಂದು ಭಾವಿಸುವ ಎಲ್ಲಾ ಗೌರವಾನ್ವಿತ ಸದಸ್ಯರು ತಮ್ಮ ತಿದ್ದುಪಡಿಯನ್ನು ವಾಪಸ್ಸು ಪಡೆಯುವರೆಂದು ಭಾವಿಸುತ್ತೇನೆ.

(ಡಾ. ಅಂಬೇಡ್ಕರ್‌ರ ತಿದ್ದುಪಡಿ ಅಂಗೀಕೃತವಾಯಿತು. ಮಂಡಿಸಲಾದ ಬಹುತೇಕ ಇತರ ಎಲ್ಲಾ ತಿದ್ದುಪಡಿಗಳನ್ನು ವಾಪಸ್ಸು ಪಡೆದುಕೊಳ್ಳಲಾಯಿತು. ಒಂದು ತಿರಸ್ಕೃತವಾಯಿತು. ಸಂವಿಧಾನಕ್ಕೆ ಸೂಚಿಸಲಾದ ೧೧೧-ಎ ತಿದ್ದುಪಡಿಯೊಂದಿಗೆ ಅದು ಅಂಗೀಕೃತವಾಯಿತು.)

********

# ವಿಷಯಸೂಚಿ


**ಅ**

ಅಂತೋಣಿ ೬೪
ಅಂಥ್ ೨೮೭
ಅಂಧಿ ೨೫೮
ಅಂಧಿಯಾ ೨೮೦
ಅಂಬಾಫರ್ ೨೫೮
ಅಂಬೇಡ್ಕರ್ ೧, ೩, ೪, ೧೦, ೧೧, ೧೨, ೧೩, ೧೭, ೧೮, ೨೦, ೨೧, ೨೨, ೨೫, ೨೮, ೩೦, ೩೧, ೩೨, ೩೩, ೩೪, ೩೬, ೩೮, ೩೯, ೪೩, ೪೪, ೬೪, ೬೫, ೬೬, ೬೭, ೬೮, ೬೯, ೭೦, ೭೧, ೭೨, ೭೪, ೭೫, ೭೬, ೭೭, ೭೯, ೮೦, ೮೧, ೮೨, ೮೫, ೯೯, ೨೬೨, ೨೯೩, ೨೯೪, ೨೯೫, ೨೯೬, ೨೯೭, ೨೯೮, ೨೯೯, ೩೦೦, ೩೦೧, ೩೦೨, ೩೦೩, ೩೦೫, ೩೦೬, ೩೦೭, ೩೦೯, ೩೧೦, ೩೧೧, ೩೧೪, ೩೧೫, ೩೧೬, ೩೧೭, ೩೧೮, ೩೨೦, ೩೨೧, ೩೨೨, ೩೨೪, ೩೨೫, ೩೨೬, ೩೨೭, ೩೨೮, ೩೨೯, ೩೩೦, ೩೩೧, ೩೩೨, ೩೩೩, ೩೩೭, ೩೩೮, ೩೩೯, ೩೪೧, ೩೪೨, ೩೪೩, ೩೪೪, ೩೪೫, ೩೪೬, ೩೪೭, ೩೪೮, ೩೪೯, ೩೫೦, ೩೫೧, ೩೫೨, ೩೫೩, ೩೫೫, ೩೫೬, ೩೫೭, ೩೫೮, ೩೬೦, ೩೬೧, ೩೬೪, ೩೬೫, ೩೬೬, ೩೬೭, ೩೭೧, ೩೭೨, ೩೭೩, ೩೭೪, ೩೭೫, ೩೭೬, ೩೭೭, ೩೭೮, ೩೭೯, ೩೮೦, ೩೮೧, ೩೮೨, ೩೮೫, ೩೮೭, ೩೮೮, ೩೯೦, ೩೯೧, ೩೯೨, ೩೯೩, ೩೯೪, ೩೯೫, ೩೯೬, ೩೯೭, ೩೯೮, ೩೯೯, ೪೦೦, ೪೦೩, ೪೦೪, ೪೦೫, ೪೦೬, ೪೦೭, ೪೦೮, ೪೧೨, ೪೧೩, ೪೧೪, ೪೧೫, ೪೧೬, ೪೧೭, ೪೨೦, ೪೨೧, ೪೨೨, ೪೨೩, ೪೨೪, ೪೨೫, ೪೨೭, ೪೨೮, ೪೩೦, ೪೩೧, ೪೩೪, ೪೩೬, ೪೩೮, ೪೩೯, ೪೪೦, ೪೪೧, ೪೪೨, ೪೪೩, ೪೪೪, ೪೪೫, ೪೪೬, ೪೪೭, ೪೪೮, ೪೫೦, ೪೫೧, ೪೫೨, ೪೫೩, ೪೫೪, ೪೫೫, ೪೫೬, ೪೫೭, ೪೫೮, ೪೫೯, ೪೬೦, ೪೬೫, ೪೬೬, ೪೬೭, ೪೬೮, ೪೬೯, ೪೭೦, ೪೭೧, ೪೭೨, ೪೭೩, ೪೭೪, ೪೭೫, ೪೭೬, ೪೭೭, ೪೭೮, ೪೭೯, ೪೮೨, ೪೮೫, ೪೮೭, ೪೯೧, ೪೯೨, ೪೯೬, ೪೯೭, ೪೯೮, ೪೯೯, ೫೦೦, ೫೦೧, ೫೦೨, ೫೦೩, ೫೦೪, ೫೦೫, ೫೦೬, ೫೦೮, ೫೦೯, ೫೧೦, ೫೧೧, ೫೧೨, ೫೧೩, ೫೧೪, ೫೧೫, ೫೧೬, ೫೧೭, ೫೧೮, ೫೧೯, ೫೨೦, ೫೨೧, ೫೨೨, ೫೨೩, ೫೨೪, ೫೨೬, ೫೨೮, ೫೨೯, ೫೩೦, ೫೩೧, ೫೩೨, ೫೩೩, ೫೩೬, ೫೩೭, ೫೩೮, ೫೩೯, ೫೪೦, ೫೪೧, ೫೪೨, ೫೪೩, ೫೪೪, ೫೪೫, ೫೪೬, ೫೪೭, ೫೪೮, ೫೪೯, ೫೫೦, ೫೫೧, ೫೫೨, ೫೫೩, ೫೫೪, ೫೫೫, ೫೫೭, ೫೫೮, ೫೫೯, ೫೬೦, ೫೬೧, ೫೬೪, ೫೬೫, ೫೬೬, ೫೬೭, ೫೬೮, ೫೬೯, ೫೭೦, ೫೭೧, ೫೭೨, ೫೭೫, ೫೭೮, ೫೭೯, ೫೮೦, ೫೮೧, ೫೮೨, ೫೮೪, ೫೮೫, ೫೮೬, ೫೮೭, ೫೮೮, ೫೮೯, ೫೯೦, ೫೯೧, ೫೯೨, ೫೯೩, ೫೯೪, ೫೯೫, ೫೯೬, ೫೯೭, ೫೯೮, ೫೯೯, ೬೦೧, ೬೦೨, ೬೦೩, ೬೦೪, ೬೦೫, ೬೦೬, ೬೦೭, ೬೦೮, ೬೦೯, ೬೧೦, ೬೧೧, ೬೧೩, ೬೧೪, ೬೧೫, ೬೧೬, ೬೧೭, ೬೧೮, ೬೧೯, ೬೨೦, ೬೨೧, ೬೨೨, ೬೨೩,

೬೨೪, ೬೨೫, ೬೨೬, ೬೨೭, ೬೨೮, ೬೨೯, ೬೩೦, ೬೩೩, ೬೩೪, ೬೩೫, ೬೩೬, ೬೩೭, ೬೩೮, ೬೩೯, ೬೪೦, ೬೪೧, ೬೪೩, ೬೪೪, ೬೪೫, ೬೪೬, ೬೪೭, ೬೪೮, ೬೪೯, ೬೫೦, ೬೫೨, ೬೫೪, ೬೫೫, ೬೫೬, ೬೫೭, ೬೬೨, ೬೬೩, ೬೬೪, ೬೬೫, ೬೬೬, ೬೬೮, ೬೬೯, ೬೭೨, ೬೭೩, ೬೭೪, ೬೭೫, ೬೭೬, ೬೭೭, ೬೭೮, ೬೭೯, ೬೮೦, ೬೮೧, ೬೮೨, ೬೮೩, ೬೮೪, ೬೮೫, ೬೮೬, ೬೮೭, ೬೮೯, ೬೯೦, ೬೯೧, ೬೯೨, ೬೯೩, ೬೯೪, ೬೯೫, ೬೯೬, ೬೯೭, ೬೯೮, ೬೯೯, ೭೦೦

ಅಂಬೇರಗಾಂ ೨೫೭

ಅಕ್ರಾನಿಮಹಲ್ ೨೫೭

ಅಜ್ಮೀರ್ ೭೯, ೯೪, ೯೫, ೨೪೬, ೩೩೬

ಅನಂತಶಯನಂ ಅಯ್ಯಂಗಾರ್ ೩೩, ೩೭, ೩೮, ೮೧, ೩೦೫, ೩೦೬, ೩೧೫, ೩೩೧, ೩೪೮, ೩೪೯, ೩೬೭, ೩೭೯, ೩೮೦, ೩೮೧, ೫೦೬, ೫೪೯, ೬೮೫

ಅನಾರ್ಕಿ ೫೮

ಅಬೋರ ೨೮೮

ಅಮರೋಟಿ ೨೫೮

ಅಮಿನ್‌ದಿವಿ ೨೫೭, ೨೮೨

ಅಯ್ಯಂಗಾರ್ ಎಚ್. ವಿ.ಆರ್. ೨೯೨

ಅಲಹಾಬಾದ್ ೧೮೬

ಅಲ್ಘುರಾಯ ಶಾಸ್ತ್ರಿ ೩೮೦

ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ೧೨, ೨೫, ೮೦, ೮೩, ೯೯, ೨೮೯, ೨೯೨, ೩೬೬, ೩೬೭, ೪೩೦, ೫೮೨, ೬೩೫, ೬೩೭, ೬೫೧, ೬೫೨, ೬೫೩, ೬೯೭, ೬೯೮

ಅಲ್ವಾರ ೨೪೬

ಅಸ್ಸಾಂ ೭೯, ೭೯, ೮೧, ೮೨, ೮೪, ೧೬೬, ೧೮೬, ೨೧೫, ೨೩೧, ೨೪೬, ೨೫೯, ೨೬೧, ೨೬೩, ೨೬೫, ೨೬೬, ೨೬೭, ೨೮೮, ೩೦೯, ೩೭೫, ೩೮೪, ೩೯೩, ೫೧೧, ೫೨೩, ೫೨೫, ೬೩೮, ೬೬೨, ೬೬೩

## ಆ

ಆಂಗ್ಲಭಾಷೆ ೩೦೧, ೩೪೧, ೩೪೨

ಆಂಗ್ಲೋ ೨೩೦, ೨೩೧, ೨೩೨, ೨೩೩, ೨೩೫, ೫೫೨

ಆಂಥೋಣಿ ೧

ಆಚಾರ್ಯ ಕೃಪಲಾನಿ ಜೆ.ಬಿ. ೧

ಆಫ್ರಿಕಾ ೬೨, ೭೩, ೬೫೯, ೬೬೦

ಆಮಿಯೋ ಕುಮಾರ ಘೋಷ್ ೩೩೧

ಆರ್‌ಶಾ ೨೮೬

ಆಲಿಫಡ್ ೨೬೯

ಆಲ್ಮೋಡ್ ೨೫೮

ಆಸ್ಟ್ರೇಲಿಯ ೫೦, ೫೦, ೫೧, ೫೩, ೬೨, ೭೩, ೯೫, ೨೯೦, ೨೯೧, ೩೦೧, ೩೧೭, ೪೮೨, ೪೮೩, ೫೯೧, ೬೦೩, ೬೫೯, ೬೬೦, ೬೭೦

## ಇ

ಇಂಗ್ಲಿಷ್ ೪೫, ೫೬, ೭೩, ೧೮೨, ೩೪೨, ೪೧೭, ೪೧೮, ೪೨೮, ೪೯೧, ೪೯೫, ೫೩೫, ೬೬೬

ಇಂಗ್ಲೆಂಡ್ ೪೭, ೯೪, ೧೩೬, ೪೮೯, ೪೯೦, ೪೯೮, ೫೬೮, ೬೧೯, ೬೪೨, ೬೪೬, ೬೫೮

ಇಂದೋರ್ ೨೪೬, ೩೪೮

ಇಮೆರಸನ್ ೪೭೮

ಇಸ್ಲಾಂ ೪೦೨, ೪೦೪

## ಈ

ಈಚಾಗಢ ೨೮೬

## ಉ

ಉಪನಿಷತ್ತು ೪೦೩, ೪೦೪

ಉಪರೋರಾ ೨೫೮

ಉಮ್ಮಿಯಾ ೨೮೦

### ಐ

ಐಜಾಜ್ ೩೪೩, ೩೪೪
ಐರಿಷ್ ೫೯, ೭೩, ೩೧೭, ೫೨೭, ೫೮೮
ಐರ್ಲೆಂಡ್ ೫೭, ೯೩, ೬೫೯

### ಒ

ಒಜಲುಗಳು ೨೮೨
ಒಝಾ ೨೮೪
ಒಮಾನಾ ಇಟೊ ೨೮೨
ಒರಾಓನ್ ೨೮೪, ೨೮೬, ೨೮೭
ಒರಿಯಾ ೨೮೦, ೨೮೧
ಒರಿಸ್ಸಾ ೬೬, ೭೫, ೮೩, ೯೬, ೧೬೩, ೨೪೬, ೨೫೩, ೨೫೭, ೨೫೮, ೨೮೮, ೩೧೧, ೩೫೫, ೪೨೫, ೪೮೫, ೪೯೮, ೫೧೧, ೫೯೧, ೫೯೪, ೫೯೭, ೬೦೩, ೬೦೬, ೬೦೯, ೬೩೮
ಒಲಾರೊ ೨೮೦
ಓಝಾ ೨೮೭
ಔದ್ ೧೮೬

### ಕ

ಕಕ್ಕನ್ ೮೮
ಕಚಾರ ೨೬೭
ಕಚಾರಿ ೨೮೮
ಕಥೋಡಿ ೨೮೩
ಕಮತ್ ೫೬೫
ಕರ್ಮಾಲಿ ೨೮೫
ಕಲಕತ್ತಾ ೪೦೪, ೪೬೯
ಕಲ್ಕತ್ತಾ ೧೮೬, ೪೦೩, ೬೯೪, ೬೯೫
ಕಾಂಗರಾ ೨೮೫
ಕಾಂಗ್ರೆಸ್ ೧, ೩, ೭, ೮, ೯, ೨೨, ೪೬, ೫೦, ೫೮, ೬೪, ೬೯, ೮೪, ೩೪೪, ೩೮೧, ೪೨೮, ೪೮೦, ೪೯೯
ಕಾಂಪೇನಿಯನ್ ೫೩೬
ಕಾಚಾರ್ ೨೬೧
ಕಾಚಾರಿ ೨೮೮
ಕಾಟ್‌ಕಾರಿ ೨೮೩
ಕಾಠಿಯಾವಾಡ ೨೪೬, ೩೩೭, ೪೫೭
ಕಾನಗ್ರಾ ೨೫೮
ಕಾನ್‌ಸುಲೇಟ್ ೨೬೮
ಕಾಫಿರ್ ೪೦೨
ಕಾಮತ್ ಹೆಚ್. ವಿ. ೨೯೬, ೨೯೭, ೨೯೯, ೩೦೪, ೩೦೫, ೩೦೬, ೩೦೯, ೩೧೬, ೩೧೭, ೩೧೮, ೩೧೯, ೩೨೧, ೩೨೪, ೩೨೫, ೩೪೭, ೩೪೮, ೩೪೯, ೩೫೭, ೩೫೮, ೩೬೬, ೩೬೮, ೩೭೧, ೩೭೨, ೩೭೩, ೩೭೫, ೩೭೬, ೩೮೧, ೩೮೨, ೩೯೨, ೩೯೩, ೩೯೪, ೩೯೫, ೩೯೭, ೪೦೨, ೪೦೩, ೪೦೪, ೪೦೭, ೪೧೩, ೪೧೪, ೪೧೬, ೪೧೭, ೪೧೮, ೪೨೦, ೪೨೩, ೪೨೪, ೪೨೫, ೪೨೭, ೪೨೮, ೪೪೪, ೪೪೫, ೪೪೮, ೪೫೦, ೪೫೨, ೪೫೩, ೪೫೪, ೪೫೫, ೪೫೬, ೪೫೮, ೪೬೮, ೪೭೦, ೪೭೪, ೪೭೫, ೪೭೬, ೪೯೧, ೪೯೨, ೪೯೫, ೪೯೬, ೪೯೭, ೪೯೯, ೫೦೫, ೫೦೬, ೫೧೧, ೫೧೬, ೫೨೦, ೫೨೧, ೫೩೨, ೫೩೩, ೫೩೯, ೫೪೦, ೫೪೧, ೫೪೨, ೫೪೩, ೫೪೬, ೫೪೮, ೫೫೦, ೫೫೩, ೫೫೪, ೫೫೬, ೫೫೭, ೫೫೯, ೫೬೧, ೫೬೮, ೫೬೯, ೫೭೦, ೫೭೧, ೫೮೧, ೫೮೮, ೫೮೯, ೫೯೦, ೫೯೧, ೫೯೩, ೫೯೬, ೫೯೭, ೫೯೯, ೬೦೧, ೬೦೨, ೬೦೩, ೬೦೫, ೬೦೮, ೬೦೯, ೬೧೧, ೬೧೩, ೬೧೯, ೬೨೦, ೬೨೨, ೬೪೩, ೬೪೬, ೬೪೭, ೬೪೮, ೬೫೦, ೬೫೪, ೬೭೫, ೬೭೬, ೬೭೮, ೬೭೯
ಕಾಮನ್‌ವೆಲ್ತ್ ೫೦, ೪೮೩, ೬೧೯, ೬೭೦
ಕಾಮಾರ್ ೨೮೭
ಕಾರ್ಸನ್ ೫೭
ಕಾವಾರ ೨೮೭

ಕಾವಾರಾವ್ ೨೮೧
ಕಾಶಿಪುರ ೨೮೬
ಕಿಯ್ಯರಿ ೨೮೬
ಕುಟ್ಟಿಯಾ ೨೮೧
ಕುನಿರಾಮನ್ ೫೦೨
ಕೃಷ್ಣಚಂದ್ರ ಶರ್ಮ ೬೫
ಕೃಷ್ಣಮಾಚಾರಿ ಟಿ.ಟಿ. ೩೦, ೬೫, ೭೦, ೮೦, ೩೬೪, ೩೬೭, ೩೭೦, ೩೭೨, ೩೭೩, ೩೮೦, ೩೮೭, ೩೮೯, ೩೯೬, ೩೯೭, ೪೧೨, ೪೪೨, ೪೫೫, ೪೫೬, ೪೫೮, ೪೬೦, ೪೬೫, ೪೮೨, ೪೯೯, ೫೨೨, ೫೨೯, ೫೩೧, ೫೩೯, ೫೪೨, ೫೪೯, ೫೫೧, ೫೬೭, ೫೬೯, ೫೭೩, ೫೭೬, ೫೭೭, ೫೮೧, ೫೮೬, ೫೮೭, ೫೮೯, ೫೯೦, ೫೯೪, ೬೦೨, ೬೦೬, ೬೧೮, ೬೨೧, ೬೨೬, ೬೩೪, ೬೩೫, ೬೩೭, ೬೩೮, ೬೪೫, ೬೬೩, ೬೬೬, ೬೭೪, ೬೭೯, ೬೮೫
ಕೃಷ್ಣಮೂರ್ತಿರಾವ್ ಎಸ್.ವಿ. ೮೨, ೩೨೬, ೩೨೭, ೩೨೮
ಕೃಷ್ಣಸ್ವಾಮಿ ಭಾರತಿ ಎಲ್. ೮೨, ೨೯೨, ೩೨೪, ೩೩೦, ೩೩೩, ೪೪೭, ೫೦೦, ೫೦೫, ೫೧೭, ೫೮೫, ೬೨೫, ೬೮೪
ಕೆನಡ ೭೩
ಕೆನಡಾ ೫೩, ೬೨, ೨೫೮, ೪೮೨, ೫೯೧, ೬೦೩, ೬೫೯, ೬೬೦
ಕೆನಡಿಯನ್ ೫೯೧, ೬೦೩
ಕೈದ್ ೪೩
ಕೈಮೂರ್ ೨೫೮
ಕೊಂಕನಾ ೨೮೩
ಕೊಂಡಾರೆಡ್ಡಿ ೨೮೧
ಕೊಂಧ ೨೮೮
ಕೊಚ್ಚಿನ್ ೨೪೬
ಕೊಟಗಲ್ ೨೫೮
ಕೊಟಿಯಾ ೨೮೧
ಕೊಡಗು ೭೯, ೯೫, ೯೬, ೧೯೬, ೨೪೬
ಕೊನ್ಡಾಮಹಲ ೨೫೮
ಕೊಮ್ಮಾರ ೨೮೧
ಕೊಮ್ಮಾರೋ ೨೮೧
ಕೊಯಾ ೨೮೧
ಕೊಯಾರ ೨೮೧
ಕೊರವಾ ೨೮೬
ಕೊರಾ ೨೮೬
ಕೊರಾಪುಟ್ ೨೫೮
ಕೊರ್‌ಚಿಮಾ ೨೮೨
ಕೊರ್ಟಿನ ೫೭೧
ಕೊರ್‌ಬಾ ೨೫೮
ಕೊರ್‌ವಾ ೨೮೭
ಕೊಲಾಮ್ ೨೮೭
ಕೊಲಿ ೨೮೩, ೨೮೬, ೨೮೭
ಕೊಲ್ಲಾಪುರ ೨೪೬, ೩೩೯
ಕೊಲ್ಲಾಯಿ ೨೮೦
ಕೊವಾರೆಂಟೊ ೧೫೩
ಕೊಸಲ್ಯಾ ೨೮೦
ಕೋರಂ ೧೩೪, ೧೪೯, ೧೭೨
ಕೋವಾರೆಂಟೋ ೧೯೦
ಕ್ರಿಶ್ಚಿಯನ್ ೨೩೦, ೨೩೧, ೨೩೫, ೨೩೯, ೨೮೦, ೩೮೩, ೪೦೧, ೪೦೨, ೪೫೬
ಕ್ರೈಸ್ತಧರ್ಮ ೧೫, ೩೮೩


## ಖ


ಖತ್ರಿ ೨೮೧
ಖಾಂಡೇಕರ ೩೯, ೫೦೯
ಖಾಏಲ್‌ಪ್ಪಿ ೨೮೮
ಖಾಜಿ ಸೈಯದ ಕರಿಮುದ್ದೀನ ೬೭, ೩೮೭, ೩೮೮, ೩೯೩, ೩೯೬, ೪೧೧, ೪೧೨, ೪೧೩, ೪೧೫, ೪೧೬, ೪೫೮, ೪೭೩, ೪೯೨, ೪೯೩, ೫೦೬, ೫೦೯

ಖಾರವಾರ್ ೨೮೪, ೨೮೫
ಖಾರಿಯಾ ೨೮೫, ೨೮೭
ಖಾಲಸಾರ ೩೩೬
ಖುಟ್‌ಗಾಂ ೨೫೮
ಖುಟ್ಟೊ ೨೮೨
ಖೆಟಾವುರಿ ೨೮೬
ಖೇರ್ ಜಿ.ಬಿ. ೨೨, ೮೪, ೩೫೩, ೩೬೦, ೫೯೭
ಖೈತಾನ್ ೨೫, ೪೩
ಖೊಂದ್ ೨೮೬

ಗ

ಗಂತಾಲ್ ೨೮೪
ಗಡಬಾ ೨೮೦, ೨೮೫
ಗಮಿಟ ೨೮೩
ಗಮ್‌ತಾ ೨೮೩
ಗಹೋಲಿ ೨೫೭
ಗಾಂಧಿ ೪೩, ೬೯, ೭೪, ೮೩, ೩೬೪
ಗಾಡ್ಗೀಲ್ ಎನ್.ವಿ. ೩
ಗಾರೊ ೨೮೮
ಗಾರೋ ೨೬೭
ಗಿಟ್ಟೋ ೫೮
ಗಿಭಾಗ ೧೮೩
ಗಿಯಾನಿ ಗುರುಮುಖ್ ಸಿಂಗ್ ಮುಸಾಫಿರ್ ೩೩, ೭೯
ಗಿಲ್‌ಗಾಂ ೨೫೮
ಗೀತಾ ೪೦೩, ೪೦೪
ಗುಪ್ತನಾಥ ಸಿಂಗ್ ೩೫೮, ೩೭೩
ಗುಪ್ತೆ ಬಿ.ಎಂ. ೪೪೩, ೪೬೦, ೫೮೧, ೬೧೪
ಗುರುಂಗ್ ೪೩
ಗುರುದ್ವಾರ ೩೪೬
ಗುರುಮುಖ್ ೩೩, ೭೯, ೩೯೩
ಗುಹಾ ೬೯
ಗೆವಾರ್ಧ ೨೫೮
ಗೊಂಡ್ ೨೮೩, ೨೮೫
ಗೊಂದ್ ೨೮೪
ಗೊರಪಾನಿ ೨೫೮
ಗೊರಾಯಿಟ್ ೨೮೫
ಗೋಕುಲ ಭಾಯಿ ದೌಲತರಾಮ ಭಟ್ ೪೩೧
ಗೋದಾವರಿ ೨೫೭
ಗೋಪಾಲನಾರಾಯಣ್ ೬೧೬
ಗೋಪಾಲಸ್ವಾಮಿ ಅಯ್ಯಂಗಾರ್ ಎನ್. ೧೯, ೨೫, ೫೦೩
ಗೋರಖ್ ೨೫೮
ಗೋರಖ್ ಘಾಟ್ ೨೫೮
ಗೋವಿಂದ ಮಾಳವೀಯ ಪಂಡಿತ ೮೦
ಗೌಡುಗಳು ೨೮೦, ೨೮೧
ಗ್ರೀಕ ೫೪
ಗ್ರೀನವಿಚ್ ೪೬೯
ಗ್ರೋಟೆ ೫೪, ೫೫
ಗ್ಲಾಡಸ್ಟೋನ್ ೪೫೭
ಗ್ವಾಲಿಯರ್ ೨೪೬, ೩೪೮

ಘ

ಘಟವಾರ ೨೮೫
ಘನಶ್ಯಾಮ್ ಸಿಂಗ್ ಗುಪ್ತಾ ೨೯೫, ೨೯೬, ೩೧೦, ೪೪೩, ೫೪೧, ೫೪೭, ೫೪೮
ಘರ್ ಚಿರೋಲಿ ೨೫೮
ಘಸಿ ೨೮೬

ಚ

ಚಂದಾಲ ೨೫೮
ಚಕ್ಮಾ ೨೮೪
ಚಮಾರ ೩೩೬
ಚಾಂಡಿಲ್ ೨೮೬
ಚಾರ್ಬಿಡಿಸ್ ೪೩೬
ಚಿಂದವಾಡ ೨೫೮

ಚಿಂದವಾರ ೨೫೮
ಚಿಕ್ಲಿ ೨೫೭
ಚಿಮನಲಾಲ ಸೆಟಿಲವಾಡ ೫೬೬
ಚಿರೋಲಿ ೨೫೮
ಚುಬ್ರಾ ೩೩೬
ಚೆರೊ ೨೮೫
ಚೊಧ್ರಾ ೨೮೩
ಚೊನೆಲ್ ೨೮೦

### ಛಾ

ಛಾಸ್ ೨೮೬
ಛೂರಿ ೨೫೮

### ಜ

ಜಟಾಕೋ ೨೮೦
ಜಟಾಪುಸ್ ೨೮೧
ಜಪತ್ ೬೨೫
ಜಪತ್ ರಾಯ್ತ ಕಪೂರ್ ೬೨೫
ಜಯಕರ್ ಎಂ.ಆರ್. ಡಾ. ೩, ೫, ೬, ೮, ೯

ಜಯಪಾಲ ಸಿಂಗ್ ೩೩೯, ೩೪೦, ೩೮೩, ೩೮೫, ೪೦೭, ೫೯೬, ೬೦೮
ಜಯಪುರ ೨೪೬
ಜರ್ಮನ್ ೬೧, ೭೩
ಜರ್ಮನಿ ೬೧
ಜವಾಹರ್‌ಲಾಲ್ ನೆಹರು ೧, ೪, ೨೨, ೭೨, ೨೯೬, ೩೮೯
ಜಸಪತರಾಯ್ ೫೪೮, ೫೬೪, ೫೬೬, ೫೬೭, ೫೬೮, ೫೭೨, ೫೯೫, ೬೦೭, ೬೪೮, ೬೫೬, ೬೭೬, ೬೭೭
ಜಸಪರ್ ರಾಯ್ ಕಪೂರ್ ೫೬೯
ಜಸಪಾಲ್ ರಾಯ್ ಕಪೂರ್ ೩೬೭, ೪೦೦, ೪೦೫, ೫೬೪, ೫೬೬, ೫೬೭, ೫೬೮, ೫೬೯, ೫೭೨, ೫೯೫, ೬೦೭, ೬೨೫, ೬೪೬, ೬೪೭, ೬೪೮, ೬೫೬, ೬೭೬, ೬೭೭
ಜಹಗೀರ್ ೨೫೮
ಜಹರಾಪಾರ ೨೫೮
ಜುನಸಾರ ೨೫೮
ಜುವಾಂಗ್ ೨೮೫
ಜೈಟಿಯಾ ೨೬೭
ಜೈನಾರಾಯಣ್ ವ್ಯಾಸ್ ೭೧
ಜೈಪಾಲ್‌ಸಿಂಗ್ ೫೯೬, ೫೯೭, ೬೦೮, ೬೦೯
ಜೈಪುರ ೨೮೬
ಜೊಡಿಯಾ ೨೮೦, ೨೮೨
ಜೊರಿಯ ೨೮೦
ಜೋಗೇಂದ್ರನಾಥ ಮಂಡಲ್ ೧
ಜೋಡಿಯಾ ೨೮೦
ಜೋಧಪುರ ೭೧, ೨೪೬
ಜೋಸೆಫ್ ಅಲ್ಬನ್ ಡಿ ಸೋಜಾ ಡಾ॥ ೭೦
ಜ್ಯೂಯಿಶ್ ೪೦೧

### ಝಾ

ಝಾಲ್‌ಡಾ ೨೮೬
ಝೋರಿಯಾ ೨೮೦
ಝೋರೋಸ್ಟ್ರಿಯನ್ ೪೦೧

### ಟ

ಟಕ್ಕೊರಾ ೨೮೦
ಟಾಕುರ್ ೨೮೩
ಟಿಕಿರಿಯಾ ೨೮೧
ಟಿಬೇಟಿಯನ್ ೨೮೫
ಟಿರಾಪ್ ೨೬೭
ಟುರಿ ೨೮೬
ಟ್ರಾಂವೇ ೨೩೭
ಟ್ರೈಬಲ್ ೩೭೮, ೩೮೪

**ಠಾ**

ಠಾಕುರದಾಸ್ ಭಾರ್ಗವ ಪಂ. ೭೩, ೩೪೧, ೩೪೨, ೩೭೪, ೩೭೭, ೩೮೦, ೩೮೮, ೪೦೮, ೫೦೬, ೫೦೮, ೫೨೧, ೫೯೫, ೬೦೭, ೬೨೩

**ಡ**

ಡಡುವಾ ೨೮೦

ಡಿಡಿವಾ ೨೮೨

ಡುಧೋಕೌರಿಯಾ ೨೮೦

ಡೂಂಬ್ಸ ೨೮೦

ಡೆಹರಾಡೂನ್ ೨೫೮

ಡೊಂಬ್ಸ್ ೨೮೦

ಡೊಮೀನಿಯನ್ ೩೨, ೨೪೩, ೫೯೧, ೬೦೩, ೬೨೧, ೬೭೬, ೬೯೦

**ತ**

ತಡ್ವಿ ೨೮೩

ತಹಸೀಲ್ ೨೫೮

ತಹೀರ ೪೮೭, ೪೮೮

ತಾಕೀದಿ ೪೯೮

ತಾಜ ಬಹದ್ದೂರು ಹುಸೇನ್ ೫೩೨

ತಾಜ್‌ಮಲ್ ಹುಸೇನ್ ೩೪೯, ೩೯೮, ೪೦೦, ೪೧೫, ೪೧೬, ೪೫೧, ೪೭೭, ೪೭೮, ೪೭೯, ೬೪೯

ತಾಹಿ ೫೮೦

ತೆಲಗಾ ೨೮೦

ತೇಜಮಲ್ ಹುಸೇನ್ ೪೭೮, ೪೯೧

ತ್ರಿಪ್ಪೆರಾ ೨೮೪

**ಥಾ**

ಥಾನಾ ೨೫೭

ಥಾರು ೨೮೬

**ದ**

ದಂಗಾಯತ್ ೨೮೦

ದಫ್ಲಾ ೨೮೮

ದರುವಾ ೨೮೨

ದಾಕ್ಷಾಯಿಣಿ ೭೮

ದಾಕ್ಷಾಯಿಣಿ ವೇಲಾಯುಧನ್ ೭೮

ದಾಮೋದರ ಸ್ವರೂಪ ಸೇಠ್ ೩೨೪, ೩೯೩

ದಿಲ್ಲಿ ೫೩೪, ೫೬೮, ೫೬೯

ದಿವಾನ್ ಚಮನ್ ಲಾಲ್ ೩೩

ದುಬ್‌ಲಾ ೨೮೩

ದುರ್ಗಾಬಾಯಿ ೩೩, ೩೪, ೩೮, ೪೩, ೫೩೧

ದುಲಿಯಾ ೨೮೧

ದೂದ್‌ಮಾಲಾ ೨೫೮

ದೆವರಿ ೨೮೮

ದೆಹಲಿ ೨೦, ೬೫, ೭೮, ೭೯, ೯೪, ೯೫, ೯೬, ೧೪೯, ೨೪೬, ೩೬೬, ೬೬೩

ದೇವನಾಗರಿ ೬೬೩

ದೇವ್‌ಗರ್ ೨೫೮

ದೇಶಬಂಧು ಗುಪ್ತ, ಲಾಲಾ ೭೮, ೭೯, ೨೯೬, ೫೧೬, ೫೧೭, ೫೨೦, ೬೩೫

ದೇಶಮುಖ್ ಡಾ॥ ಪಿ.ಎಸ್ ೨೮, ೨೯, ೬೮, ೫೯೫, ೬೦೭, ೬೨೨, ೬೨೪

ದೇಶಯಾ ೨೮೧

ದೊಂಗರಾಯ ೨೮೧

ದೊಂಗಾಯಥ ೨೮೧

ದೊಡ್ಡು ಕಮಾರಿಯಾ ೨೮೦

ಧಂಕಾ ೨೮೩

ಧನಬಾದ್ ೨೮೬

ಧನವಾರ ೨೮೭

ಧನೋರಾ ೨೫೮

ಧಾನು ೨೫೭

ಧುಲಿಯಾ ೨೮೧

ಧೊರಾ ೨೮೨

ಧೊರಾರು ೨೮೧

ಧೋಡಿಯಾ ೨೮೩

## ನ


ನಜೀರುದ್ದೀನ್ ಅಹಮದ್ ೩೧, ೩೧, ೩೮, ೩೯, ೨೯೮, ೨೯೯, ೩೦೦, ೩೦೧, ೩೦೨, ೩೦೩, ೩೦೪, ೩೦೫, ೩೦೯, ೩೧೫, ೩೧೬, ೩೧೭, ೩೧೮, ೩೧೯, ೩೨೦, ೩೨೧, ೩೨೪, ೩೨೬, ೩೩೨, ೩೩೩, ೩೩೭, ೩೪೮, ೩೫೧, ೩೫೨, ೩೫೩, ೩೫೪, ೩೬೪, ೩೬೭, ೩೭೨, ೩೭೩, ೩೮೭, ೪೦೪, ೪೧೩, ೪೧೪, ೪೨೧, ೪೩೮, ೪೩೯, ೪೪೦, ೪೪೨, ೪೫೨, ೪೫೫, ೪೬೬, ೪೬೭, ೪೬೮, ೪೬೯, ೪೭೦, ೪೭೧, ೪೭೨, ೪೭೩, ೪೭೪, ೪೭೭, ೪೯೮, ೫೦೯, ೫೧೪, ೫೨೨, ೫೨೮, ೫೩೮, ೫೩೯, ೫೪೦, ೫೪೬, ೫೫೧, ೫೫೩, ೫೫೪, ೫೭೦, ೫೮೦, ೫೯೮, ೬೧೦, ೬೧೯, ೬೨೫, ೬೨೬, ೬೨೭, ೬೨೮, ೬೨೯, ೬೮೫, ೬೯೪, ೬೯೫, ೬೬೨, ೬೬೩

ನನ್ನಿ ೩೩೬

ನಲಪಾರ್ಲಿ ೨೫೭

ನವಗಾಂಗ್ ೨೬೭

ನವದೆಹಲಿ ೧, ೪೩, ೮೯

ನವಪುರ ೨೫೭

ನವಲಾಪುರ ೨೫೭

ನವಾಜ್ ೭೬

ನಾಗಪುರ ೧೮೬, ೨೫೮

ನಾಗಪ್ಪ ಎಸ್. ೬೮, ೩೨೯, ೩೩೦, ೩೩೧, ೩೪೧, ೩೬೦, ೩೬೧, ೪೩೧, ೫೨೧

ನಾಗರ್ಚಿ ೨೮೭

ನಾಗಶಿಯಾ ೨೮೭

ನಾಗಾ ೨೬೭

ನಾಜಿರುದ್ದೀನ್ ಅಹ್ಮದ್ ೫೫೧

ನಿಕೊಬರ್ ೩೬೬

ನಿಕೋಟ್ಸ್ ೬೬೩

ನಿಕೋಬಾರ್ ೯೫, ೨೪೭, ೩೬೬

ನಿಕೋಲ್ಸ್ ರಾಯ್ ಜೆ.ಜೆ.ಎಂ. ೭೯, ೫೬೪, ೫೬೯, ೬೬೨, ೬೬೩

ನಿಖಾಲೆ ೫೩೨

ನಿಜಾಮುದ್ದೀನ್ ಅಹಮದ್ ೩೯೫, ೪೧೫, ೪೭೧

ನಿತುರಿಯಾ ೨೮೬

ನಿಹಾಲ್ ೨೮೮

ನೂತಾ ೨೮೨

ನೆಹರು ೧, ೨, ೪, ೨೨, ೭೨, ೨೯೬, ೩೧೯

ನ್ಯೂಯಾರ್ಕ್ ೫೮


## ಪ


ಪಂಜಾಬ್ ೬೩, ೭೩, ೭೯, ೧೮೬, ೨೨೧, ೨೪೫, ೨೫೬, ೨೫೮, ೨೮೫, ೩೩೬, ೩೪೧, ೪೩೮, ೪೮೧, ೫೧೧, ೫೧೨, ೫೨೩, ೬೩೭, ೬೩೮

ಪಂಟೀಪ್ಲೋಡಾ ೭೯

ಪಗಾರ ೪೪೫, ೪೫೩, ೪೭೦, ೪೭೧, ೪೯೬, ೫೭೨, ೫೭೩, ೫೭೪

ಪಚಮಾರಿ ೨೫೮

ಪಟವಾರಿ ೫೨೦

ಪಠಾಣ ೫೬

ಪರಂಗಾ ೨೮೦

ಪರಂತಕ ೫೭೩

ಪರಂತುಕ ೩೦೭, ೪೭೯, ೪೮೦, ೪೮೨, ೪೮೩

ಪರಮೇಶ್ವರ ೪೫೬

ಪರಾಂಗಾ ೨೮೦

ಪರ್ಧಾನ್ ೨೮೭

ಪಲಮಾನ್ ೨೫೮

ಪಲಾಸಗರಾ ೨೫೮

ಪಲಾಸಿ ೨೮೨

ಪಹಾರಿಯಾ ೨೮೬

ಪಾಂಗಿ ೨೮೦

ಪಾಂಡೊ ೨೮೮

ಪಾಕಿಸ್ತಾನ ೧೭, ೭೮, ೯೧, ೨೨೧

ಪಾಟಸ್ಕರ್ ಹೆಚ್.ವಿ. ೨೧, ೬೨೯

ಪಾಟಿಯಾಲ ೨೪೬
ಪಾಟೇಲಿಯಾ ೨೮೩
ಪಾಟ್ನಾ ೧೮೬
ಪಾನಾಬಾರಾಸ್ ೨೫೮
ಪಾಯಿಕೊ ೨೮೧
ಪಾಯಿಮುರಾಂದಾ ೨೫೮
ಪಾರಂ ೫೪೨
ಪಾರಾಗ್ರಾಫ್ ೪೨೭
ಪಾರ್ಜಾ ೨೮೭
ಪಾರ್ಲಿ ೨೫೭
ಪಿಪ್‌ಲೋಡಾ ೯೫, ೨೪೬
ಪುಟಿಯಾ ೨೮೧
ಪುರಾತತ್ವ ೨೭೦
ಪುರುಲಿಯಾ ೨೮೬
ಪುರುಷೋತ್ತಮ ದಾಸ್ ಟಂಡನ್ ೨, ೨೮, ೨೯, ೬೬, ೭೩, ೭೫, ೭೭, ೩೪೨, ೩೭೪, ೩೮೦, ೫೭೬, ೫೭೭, ೬೬೨
ಪುಲ್ಲೊಸೊರಿಯಾ ೨೮೧
ಪೂರ್ಣಿಮಾ ಬ್ಯಾನರ್ಜಿ ೬೧೫
ಪೂರ್ವ ೧೮೬
ಪೆಂಟಿಯಾ ೨೮೨
ಪೆಂದ್ರಾ ೨೫೮
ಪೆಡಸಾ ೪೯, ೫೧
ಪೇತಾ ೨೫೭
ಪೈಕೊ ೨೮೨
ಪೈಗಂಬರ ೪೦೪
ಪೈಗರಾಪು ೨೮೨
ಪೊಕರ ಸಾಹಿಬ್ ಬಹದೂರ ಬಿ. ೩೩೫, ೫೫೨
ಪೊಟೆಗಾಂ ೨೫೮
ಪೊನ್ನ ೨೮೧
ಪೊಮ್‌ಲಾ ೨೮೩
ಪೊರಜಾ ೨೮೨
ಪ್ರಕಾಶಂ ಟಿ. ೭೦
ಪ್ರತಾಪಘರ್ ೨೫೮
ಪ್ರಭುದಯಾಲ ಹಿಮತ್‌ಸಿಂಗ್ ೫೧೪, ೬೪೪
ಪ್ರೀವೀಕೌನ್ಸಿಲ್ ೬೨೮

## ಫ

ಫಾಗರ ೨೫೮
ಫಾನ್‌ಸೆ ೨೮೩
ಫೂಲಸಿಂಗ್ ೩೭೯
ಫ್ರಾಂಕ್ ಆಂಥೋಣಿ ೧, ೬೪
ಫ್ರಾನ್‌ಜಿ ೨೮೦
ಫ್ರಾನ್ಸ್ ೫೧೨
ಫ್ರೆಂಚ್ ೪, ೫೧೨

## ಬ

ಬಂಗಾರ ೨೪೦
ಬಂಗಾಳ ೧, ೧, ೪, ೧೦, ೧೧, ೨೨, ೬೩, ೬೭, ೬೯, ೭೭, ೨೨೧, ೨೪೫, ೨೫೩, ೨೮೪, ೩೦೩, ೩೧೪, ೩೧೫, ೩೨೬, ೩೩೨, ೩೫೧, ೩೯೫, ೪೦೦, ೪೮೯, ೪೪೫, ೪೮೧, ೫೧೧, ೫೧೨, ೫೧೪, ೫೨೦, ೫೨೩
ಬಂಜಾರಾ ೨೮೫
ಬಂಜಾರಿ ೨೮೮
ಬಗಾಟಾ ೨೮೦, ೨೮೮
ಬಡ್ ೩೩೬
ಬಡೌನ್ ೨೮೬
ಬನಾರಸ್ ೨೬೯
ಬರಂಗೀ ೨೮೦
ಬರಹಾಭುಮ್ ೨೮೬
ಬರಾಯಿಕ್ ೨೮೫
ಬರೋಡಾ ೨೪೬
ಬರ್ಕ್ ೯, ೧೦
ಬರ್ತಿಕಾ ೨೮೧
ಬರ್ದಾ ೨೮೩

ಬರ್ಮಾ ೧೦೪
ಬಲರಾಮಪುರ ೨೮೬
ಬವರಾ ೨೫೮
ಬವಾಚಾ ೨೮೩
ಬವುರಿ ೨೮೬
ಬವೇರಿಯಾ ೩೩೬
ಬಾಂಬೆ ೩೭೪, ೩೮೦, ೩೯೪, ೪೦೭, ೪೨೫, ೪೩೧, ೪೫೯, ೪೭೯, ೪೯೧, ೪೯೯, ೫೦೬, ೫೧೦, ೫೧೨, ೫೧೪, ೫೨೬, ೫೩೮, ೫೫೨
ಬಾಗ್ ೨೮೬
ಬಾಟೋ ೨೮೦
ಬಾಘುಡಿ ೨೮೫
ಬಾಯ್ಥಿನ್ ೨೫೮
ಬಾರ್ದ್ಧಾಫರ್ ೨೫೮
ಬಾಲಕೃಷ್ಣ ಶರ್ಮ ಪಂ. ೭೩, ೬೬೩
ಬಾಲಾಘಾಟ್ ೨೫೮
ಬಾಲಿಪಾರ ೨೬೭
ಬಾಲ್ಮಿಕಿ ೩೩೬
ಬಿಂಝಿಯಾ ೨೮೫
ಬಿಕನೇರ ೨೪೬
ಬಿನ್‌ಝುವಾರ್ ೨೮೭
ಬಿರಾರ್ ೬೪, ೬೭, ೬೮, ೭೧, ೭೨, ೨೪೬, ೨೫೩, ೩೧೦, ೩೨೫, ೫೯೭, ೬೦೯
ಬಿರಾರ ೧೬೩, ೨೫೮, ೩೦೪, ೩೦೯, ೫೧೧
ಬಿರ್‌ಜಿಯಾ ೨೮೫
ಬಿರ್ಥಿಯಾ ೨೮೦
ಬಿರ್‌ಹುಲ್ ೨೮೮
ಬಿರ್‌ಹೊರ್ ೨೮೫, ೨೮೮
ಬಿಲಾಸ್ ೨೫೮
ಬಿಶ್ವನಾಥ್ ದಾಸ್ ೨೮, ೨೯, ೬೬
ಬಿಸ್ಮಾರ್ಕ ೬೧
ಬಿಸ್ಸೊಯ್ ೨೮೦
ಬಿಹಾರ ೬, ೮, ೬೩, ೬೭, ೬೮, ೧೬೩, ೨೪೫, ೨೫೩, ೨೫೮, ೨೮೫, ೩೦೨, ೩೦೬, ೩೨೭, ೩೨೯, ೩೪೬, ೩೭೯, ೪೦೭, ೪೪೬, ೫೧೧, ೫೧೨, ೫೫೯, ೫೯೦, ೫೯೪, ೬೦೨, ೬೦೬
ಬಿಹಾರಿ ೨೫೮
ಬೀರಾರ್ ೧೩, ೫೮೮, ೫೯೪, ೬೦೬
ಬೆಂತೊ ೨೮೧
ಬೆಂತ್ಕರ ೨೮೫
ಬೆಗೂಟ್ ೪೩೦
ಬೆತುಲ್ ೨೫೮
ಬೆನ್ನಂಗಿ ೨೮೦
ಬೆರಾರ್ ೩೪೬, ೪೪೫
ಬೆರಾರ ೩೯೯, ೪೦೭, ೪೪೬
ಬೆರ್ನಿಯಾ ೨೮೧
ಬೇಗಂ ಅಝಿಝು ರಸೂಲ ೪೪೦
ಬೇಗಂ ನವಾಜ್ ರಸೂಲ್ ೩೫೪
ಬೇಗಮ್ ಐಜಾಜ್ ರಸೂಲ್ ೩೪೪
ಬೇಗಾರ್ ೧೨
ಬೇರಾರ್ ೨೯೫
ಬೈಗಾ ೨೮೪, ೨೮೭
ಬೈಸ್ವಾರ್ ೨೮೪
ಬೊಂಡಾ ೨೮೨
ಬೊಂಬಾಯಿ ೨೩೧, ೩೩೪, ೪೦೯
ಬೊಟಿಯಾ ೨೮೪
ಬೊಡಾ ೨೮೦
ಬೊಡೊ ೨೮೨
ಬೊಡೋ ೨೮೧
ಬೊರೊ ೨೮೮
ಬೊಸೊಥೋರಿಯಾ ೨೮೦
ಬೋಡಾ ೨೮೦
ಬೋಡೋ ೨೮೦
ಬೋರ್ಡ ೪೦೧
ಬೋರ್ಸ್ಟಲ್ ೨೭೩
ಬೌದ್ಧರು ೪೦೧

ಬ್ರಜೇಶ್ವರ ಪ್ರಸಾದ್
ೞ೩೨೭, ೩೨೭, ೫೪೯, ೫೮೩, ೫೮೫, ೫೯೦, ೫೯೫, ೬೦೨, ೬೦೭, ೬೧೫, ೬೧೭

ಬ್ರಾಡ್‌ಲಾ ೪೫೭

ಬ್ರಿಟನ್ ೨೨೯, ೪೧೭, ೫೬೨, ೬೪೨, ೬೪೬, ೬೬೦

ಬ್ರಿಟಿಷ ೯, ೯, ೪೨೦, ೪೯೦, ೫೦೩, ೫೫೬

ಬ್ರೈಸ್ ೪೯

ಭಕ್ಷಿ ಟೇಕ್ ಚಂದ್ ೬೩೨, ೬೪೬, ೬೪೮

ಭಟ್ಕಾ ೨೫೮

ಭರತಪುರ ೨೬೭

ಭಾಫಮುಂಡಿ ೨೮೬

ಭಾಟ್ರಾ ೨೮೭

ಭಾರಿಯಾ ೨೮೭

ಭಿಲ್ ೨೮೩, ೨೮೭

ಭುಂಜಿಯಾ ೨೮೭

ಭುನಿಯಾ ೨೮೪

ಭುಮಿಜಿ ೨೮೬

ಭುಯಿಯಾ ೨೮೬

ಭುವಿನ್‌ಹಾರ್ ೨೮೭

ಭೂಪೇಂದ್ರ ಸಿಂಗ್ ಮಾನ್, ಸರದಾರ ೩೯೩, ೩೯೪

ಭೂಮಿಯಾ ೨೮೦, ೨೮೭

ಭೈಯಿನಾ ೨೮೭

ಭೋಗ್ಪಾ ೨೮೬

ಭೋಪಾಲ ೨೪೬

## ಮ

ಮಂಡಲಾ ೨೫೮

ಮಗಾಥಾ ೨೮೧

ಮಘ್ ೨೮೪

ಮಝುವಾರ್ ೨೮೭

ಮದ್ರಾಸ್ ೯೬, ೧೮೬, ೨೩೦, ೨೩೧, ೨೪೫, ೨೫೩, ೨೫೭, ೨೮೦, ೨೯೪, ೩೦೬, ೩೧೫, ೩೧೬, ೩೨೪, ೩೨೯, ೩೩೦, ೩೩೧, ೩೩೩, ೩೪೧, ೩೬೪, ೩೮೭, ೪೦೦, ೪೦೭, ೪೦೯, ೪೧೨, ೪೩೦, ೪೩೧, ೪೪೭, ೪೭೫, ೫೦೦, ೫೧೦, ೫೧೨, ೫೫೨, ೫೮೨

ಮನೋಮೋಹನ್ ದಾಸ್ ಡಾ॥ ೭೭

ಮನ್‌ಬಾಜಾರ್ ೨೮೬

ಮನ್‌ಭುಮ್ ೨೮೬

ಮಯೂರಭಂಜ್ ೨೪೬

ಮರಾಠಾ ೫೬

ಮರಿದಿಲಿ ೨೮೨

ಮರಿಯಾ ೨೮೨

ಮಲಬಾರ ೩೩೪

ಮಲಯಾ ೧೦೪

ಮವುನೆ ೨೮೨

ಮಹಬೂಬ್ ಅಲಿ ಬೇಗ್ ಸಾಹಿಬ್ ೭೫, ೭೯, ೨೯೪, ೨೯೫, ೩೧೬, ೩೩೩, ೩೩೫, ೩೪೯, ೩೫೦, ೩೫೪, ೩೭೪, ೪೧೩, ೪೧೭, ೪೨೧, ೪೮೫, ೪೮೬, ೫೦೨, ೫೧೫

ಮಹಮದ್ ಆಲಿ ಜಿನ್ನಾ ೪೩

ಮಹಮ್ಮದ್ ತಾಹಿಕ್ ೪೪೯

ಮಹಲಿ ೨೮೬

ಮಹಾತ್ಮಗಾಂಧಿ ೩೨೫

ಮಹಾದೇಬ್ ೨೮೩

ಮಹಾವೀರ ತ್ಯಾಗಿ ೨೯೮, ೩೨೫, ೩೩೮, ೩೪೯, ೩೪೦, ೩೪೧, ೪೪೧, ೪೪೪, ೪೫೬, ೪೫೮, ೪೯೫, ೬೨೧

ಮಹೇಶ ೪೫೬

ಮಹೇಶ್ವರಿ ೨೯೬

ಮಾಟಿನ್ ೨೫೮

ಮಾಧವರಾವ್ ೬೬, ೮೩, ೪೨೧

ಮಾರಿಯಾ ೨೮೭

ಮಾರ್ಷಲ್ ೬೨೦

ಮಾಲ್ವಾ ೩೪೮
ಮಾವಳಂಕರ್ ೫೫೪
ಮಾವ್‌ಚಿ ೨೮೩
ಮಿಕಿರ್ ೨೬೧, ೨೬೭, ೨೮೮
ಮಿಟ್ಟರ್ ೨೫
ಮಿದೇಟ್ ೪೬೦
ಮಿನಿಕೊಯಿ ೨೫೭, ೨೮೨
ಮಿರಿ ೨೮೮
ಮಿರ್ಜಾಪುರ ೨೫೮
ಮಿಲಿಯಾ ೨೮೨
ಮಿಷ್‌ಮಿ ೨೮೮
ಮಿಹಿರ್ ಲಾಲ್ ಚೌಧರಿ ೪೪೫
ಮುಂಡಾ ೨೮೪, ೨೮೬
ಮುಂಬೈ ೧, ೧೨, ೨೨, ೮೪, ೫೨೦, ೫೫೪, ೫೫೫, ೫೬೦, ೫೬೬, ೫೯೭, ೬೦೯, ೬೯೫
ಮುಖರ್ಜಿ ಆರ್.ಸಿ. ಡಾ ೩೪೫
ಮುಖರ್ಜಿ ಎಚ್.ಸಿ. ಡಾ ೭, ೮, ೭೦, ೩೦೨, ೩೨೫, ೩೨೯, ೩೭೩, ೩೯೭, ೪೦೭
ಮುಖರ್ಜಿ ಎಸ್.ಎನ್. ೯೯
ಮುಖರ್ಜಿ ಎಸ್.ಸಿ. ಡಾ. ೭೦
ಮುರ್ಘೂಸ್ ೨೬೭
ಮುನಿಸ್ವಾಮಿ ಪಿಳ್ಳೈ ವಿ.ಐ. ೭೮, ೬೭೮
ಮುನ್ಷಿ ಕೆ.ಎಂ. ೧೨, ೧೩, ೧೪, ೧೭, ೧೮, ೨೫, ೩೦, ೩೩೩, ೩೬೭, ೩೬೮, ೩೮೦, ೪೩೦
ಮುರಾಂಗಾಂ ೨೫೮
ಮುರಿಯಾ ೨೮೦, ೨೮೭
ಮುಲಿ ೨೮೨
ಮುಸಲ್ಮಾನ ೨೩೯, ೩೩೫, ೪೮೦, ೪೮೧, ೪೮೨
ಮುಸಾಫಿರ್ ೩೩, ೭೯, ೩೯೩
ಮುಸ್ಲಿಂ ೧, ೩, ೫, ೬, ೭, ೮, ೯, ೧೦, ೬೭, ೭೫, ೭೬, ೮೦, ೮೪, ೨೩೦, ೨೩೧, ೨೬೯, ೨೯೪, ೩೦೩, ೩೧೦, ೩೧೫, ೩೧೬, ೩೨೬, ೩೩೨, ೩೩೩, ೩೩೪, ೩೩೫, ೩೩೭, ೩೪೬, ೩೬೫, ೩೭೫, ೩೮೩, ೩೯೫, ೪೦೧, ೪೦೨, ೪೦೪, ೪೦೭, ೪೧೨, ೪೫೨, ೪೫೬, ೪೮೦, ೪೮೧, ೪೮೨, ೫೫೨
ಮೆಂಡಮಸ್ ೧೧೨
ಮೆಟ್ಕಾಫ ೫೫, ೫೬
ಮೆಟ್ಟಾ ೨೮೨
ಮೆನನ್ ೩೩೪
ಮೆರವಾಡಾ ೩೬೬
ಮೆಹವಾಸಿ ೨೫೭
ಮೇ ೩೦೦
ಮೇಲ್‌ಘಾಟ್ ೨೫೮
ಮೇವಾಡ ೨೪೬
ಮೇವಾರ ೭೯, ೯೪, ೯೫
ಮೈಸೂರು ೯೬
ಮೊಖಡಾ ೨೫೭
ಮೊಗಲ್ ೫೬
ಮೊಡ್ಕಾ ೨೮೦
ಮೊಹನಿ ೪೪೧
ಮೊಹಮದ್ ತಾಹಿರ್ ೩೪೬, ೩೪೭, ೩೫೯, ೩೬೨, ೪೩೧, ೪೪೨, ೪೫೯, ೪೬೨, ೪೬೭, ೪೭೩, ೪೭೬, ೪೮೫, ೪೯೩, ೫೯೭, ೬೦೯
ಮೊಹಮ್ಮದ್ ಇಸ್ಮಾಯಿಲ್ ಸಾಹಿಬ್ ೮೦, ೩೩೩, ೩೩೫, ೪೦೦, ೪೦೧, ೪೦೭, ೪೩೧, ೪೪೨, ೪೬೨, ೪೬೭, ೫೯೭, ೬೦೯
ಮೊಹಾನಿ ೩೧೦
ಮೋಹನಲಾಲ ಗೌತಮ ೩೨೧
ಮೋಹನ್‌ಲಾಲ್ ಸಕ್ಸೇನ ೧೬
ಮೋಹಾನಿ ೪೦೮
ಮ್ಯಾಂಡಮಸ್ ೧೫೩, ೧೯೦, ೪೧೮, ೪೧೯
ಮ್ಯಾಂಡಲಾಯ್ ೭೨


## ಯು


ಯುನೈಟೆಟ್ ೪೦೮
ಯುನೈಟೆಡ್ ೪೬೨

ಯುನೈಟೆಡ್‌ಪ್ರಾವಿನ್ಸ್ ೪೪೭
ಯೂನಿಯನ್ ೧೮, ೧೯, ೪೫, ೪೬, ೬೨, ೬೪೩
ಯೂರೋಪ್ ೩೨೫, ೩೮೩

## ರ

ರಂಗಾ ೩೯೫
ರಘುನಾಥಪುರ ೨೮೬
ರಣಜಿತ ಸಿಂಗ ೪೯೨
ರಫಿ ಅಹಮದ್ ಕಿದ್ವಾಯ್ ೩೩
ರಭಾ ೨೮೮
ರಶಾ ೨೮೧
ರಷ್ಯ ೪೨೦
ರಾಂಚಿ ೨೫೮, ೨೮೬
ರಾಜವಾರ ೨೮೬
ರಾಜೇಂದ್ರ ಪ್ರಸಾದ್ ಡಾ॥ ೧, ೨, ೩, ೨೨, ೪೩
ರಾಜೋ ೨೮೦
ರಾಥ್‌ವಾ ೨೮೩
ರಾಮಚಂದ್ರ ಉಪಾಧ್ಯಾಯ ೩೯೨
ರಾಮದಾಸಿ ೩೩೬
ರಾಮನಾರಾಯಣ ಸಿಂಗ್ ೬೮
ರಾಮಲಿಂಗಮ್ ಚೆಟ್ಟಿಯಾರ್ ಟಿ.ಎ. ೩೨೯, ೩೩೦, ೩೩೧
ರಾವುಟಿಯಾ ೨೮೮
ರಾವ್ ಬಿ.ಎನ್. ೯೯, ೫೨೭
ರಿಪಬ್ಲಿಕ್ ೫
ರೀಕ್ ೭೩
ರೆಡ್ಡಿ ೨೮೨
ರೆಡ್‌ಮಾಂಡನು ೫೭
ರೇವಾ ೨೪೬
ರೋನಾ ೨೮೨
ರೋಮನ್ ೩೦೩
ರೋಹಿಣಿ ಕುಮಾರ ಚೌಧರಿ ೮೧, ೩೦೯, ೩೧೬, ೩೯೩, ೪೦೬, ೫೨೦, ೫೮೪, ೫೯೬, ೬೦೮
ರೌಪು ೨೮೧
ರೌಫರು ೩೫೮

## ಲ

ಲಕಡಿವ್ ೨೮೨
ಲಕ್ಕಾದೀವಿ ೨೫೭
ಲಕ್ಷ್ಮಿನಾರಾಯಣ ಸಾಹು ೩೧೧, ೪೮೫
ಲಕ್ಷ್ಮಿಪುರಗಡಿ ೨೬೭
ಲಕ್ಷ್ಮೀಕಾಂತ ಮೈತ್ರ ಪಂ. ೩೦, ೩೧, ೬೭, ೩೧೪, ೩೧೫, ೩೩೨, ೩೩೩, ೩೫೧, ೩೭೯, ೪೦೦, ೪೦೩, ೪೦೪, ೫೪೮, ೬೨೮, ೬೨೯, ೬೯೫, ೬೯೬, ೬೯೭
ಲಾಲುಂಗ್ ೨೮೮
ಲಾಹವುಲ್ ೨೮೫
ಲಾಹುಲಾ ೨೫೮
ಲೂಷಾಯಿ ೨೬೭
ಲೆಪ್‌ಚಾ ೨೮೪
ಲೆಫ್ರಾಯ ೪೮೨
ಲೆವಿ ೪೦೧
ಲೇವಾದೇವಿ ೨೬೪
ಲೊಹಾರಾ ೨೮೧
ಲೋಕನಾಥ ಮಿಶ್ರಾ ೬೬, ೩೫೫, ೩೫೬, ೩೬೭, ೪೨೫, ೪೩೯, ೪೯೮, ೫೯೧, ೬೦೩
ಲ್ಯಾರಿ ೭೬, ೬೩೬

## ವ

ವರದಾಚಾರಿ ೫೬೪
ವರ್ಲಿ ೨೮೩
ವಲ್ಲಭಭಾಯಿ ಪಟೇಲ್ ಸರ್ದಾರ್ ೧೧, ೧೩, ೧೬, ೨೧, ೨೨, ೬೪
ವಲ್‌ವಾಯಿ ೨೮೩
ವಸಾವಾ ೨೮೩

ವಾಯುದಳ ೨೭೭
ವಾಯುಯಾನ ೨೦೩
ವಾಯುಸೇನೆ ೨೭೩
ವಾರ್ಧಾ ೭
ವಾಲ್ಲಿವ ೨೫೭
ವಿಕ್ಟೋರಿಯಾ ೨೬೯
ವಿಲಿಯಂ ಆ್ಯಂಡರ್ಸನ್ ೪೮
ವಿಶಾಖಪಟ್ಟಣ ೨೫೭
ವಿಶ್ವಂಭರ ದಯಾಳ ತ್ರಿಪಾಠಿ ೮೨
ವೀಸಾ ೨೬೮
ವೇಲೇರಾ ೫೨೭
ವೇಲ್ಸ್ ೬೭೦
ವೇಹಿ ೨೫೮
ವೈದ್ಯಕ ೪೮
ವೋನಾಕಾ ೨೮೦
ವ್ಯಾಸ್ ೭೧

**ಶ**

ಶಂಕರ್ ೮೧
ಶಂಕರಾಚಾರ್ಯ ೪೦೬
ಶರಿಯಾತ್ ೩೩೪
ಶರ್ಮಾ ೪೪೪
ಶಹ ಕೆ.ಟಿ. ಪ್ರೊ. ೬೭, ೨೯೩, ೨೯೪, ೨೯೮, ೩೦೨, ೩೦೩, ೩೦೮, ೩೦೯, ೩೧೪, ೩೨೭, ೩೬೦, ೩೬೪, ೩೮೧, ೩೯೨, ೩೯೩, ೩೯೪, ೪೦೦, ೪೦೫, ೪೦೬, ೪೦೭, ೪೨೬, ೪೨೭, ೪೨೮, ೪೨೯, ೪೩೦, ೪೩೨, ೪೩೩, ೪೪೬, ೪೪೭, ೪೪೮, ೪೪೯, ೪೫೦, ೪೫೧, ೪೫೩, ೪೫೫, ೪೫೮, ೪೬೦, ೪೬೧, ೪೬೨, ೪೬೬, ೪೭೪, ೪೭೫, ೪೭೭, ೪೭೮, ೪೮೫, ೪೮೮, ೪೮೯, ೪೯೦, ೪೯೧, ೪೯೪, ೪೯೫, ೫೦೩, ೫೦೪, ೫೦೬, ೫೧೦, ೫೧೪, ೫೧೫, ೫೨೯, ೫೩೦, ೫೩೨, ೫೩೩, ೫೩೪, ೫೩೫, ೫೩೬, ೫೩೭, ೫೩೮, ೫೪೪, ೫೪೯, ೫೬೦, ೫೬೩, ೫೮೦, ೫೮೬, ೫೮೮, ೫೯೬, ೫೯೮, ೬೦೮, ೬೧೦, ೬೧೬, ೬೧೭, ೬೪೧, ೬೪೨, ೬೪೩, ೬೫೪
ಶಾಮನಂದನ್ ಸಹಾಯ್ ೩೦೬, ೩೨೯, ೩೫೮, ೪೪೬
ಶಿಬ್ಬನ್ ಲಾಲ್ ಸಕ್ಸೇನಾ ಪ್ರೊ. ೭೪, ೩೩೮, ೩೩೯, ೩೪೦, ೩೪೧, ೩೪೩, ೩೪೬, ೩೮೦, ೪೦೪, ೪೦೮, ೪೯೭, ೪೯೯, ೫೧೯, ೫೨೩, ೫೩೨, ೫೮೬, ೬೧೪, ೬೩೦, ೬೩೨, ೬೩೪, ೬೭೨, ೬೮೪
ಶಿಲ್ಲಾಂಗ ೫೨೫
ಶಿವ ೪೫೬
ಶಿವಾಜಿ ೪೯೨
ಶೆರಿಯತ್ ೩೩೪, ೩೩೫
ಶೈವರು ೪೦೧
ಶ್ಯಾಮಪ್ರಸಾದ ಮುಖರ್ಜಿ ೬, ೮

**ಷಾ**

ಷಾಪುರ ೨೫೭
ಷಿಲಾಂಗ್ ೨೩೨, ೨೬೭

**ಸ**

ಸಂಚಿತನಿಧಿ ೬೫೭, ೬೫೮
ಸಂಜ್ಞೇಯ ೪೮೩
ಸಂತಾನಂ ಕೆ. ೧೮, ೩೪, ೩೫, ೩೬, ೩೭, ೭೧, ೩೦೬, ೩೦೯, ೩೨೬, ೩೨೮, ೩೯೪, ೩೯೫, ೪೭೫, ೫೨೦, ೫೪೨, ೫೪೯, ೫೫೦, ೫೫೪, ೫೬೧, ೫೬೫, ೬೩೪, ೬೩೫, ೬೩೭, ೬೬೬, ೬೬೭, ೬೭೨, ೬೭೩, ೬೭೪, ೬೭೫, ೬೮೫, ೬೮೭, ೬೯೭
ಸಂತೋರಿ ೨೮೬
ಸಂವಿಧಾನ ೨೨, ೬೭, ೯೧, ೧೨೫, ೧೬೫,

೨೨೪, ೨೯೬, ೪೧೦, ೬೭೩
ಸಚ್ಚಾಂದಿ ೨೮೨
ಸಚ್ಚಿದಾನಂದ ಸಿನ್ಹಾ ಡಾ. ೧
ಸತ್ಯನಾರಾಯಣ ಸಿನ್ಹಾ ೨೫, ೩೭೯
ಸನ್‌ಟಾಲ ೨೮೬
ಸನ್‌ತಾಲ್ ೨೮೬
ಸನ್‌ರೊನಾ ೨೮೧
ಸಯಾಸನ ೫೧೨
ಸಯೀದ್‌ಜಾಫರ್ ಇಮಾಮ್ ೪೫೯
ಸರೂಪಾಧರ ೨೬೭
ಸರ್ವಟೆ ವಿ.ಎಸ್. ೩೪೮, ೪೧೭, ೪೧೮, ೪೧೯,
೪೨೧, ೪೫೫
ಸರ್ಷಿಯೊರ ೧೫೩
ಸವುರಿಯಾ ೨೮೬
ಸಾತ್ಪುರ ೨೫೭
ಸಾದಿಯಾ ೨೬೭
ಸಾದುಲ್ಲಾ ೨೫, ೮೩, ೮೪, ೮೫, ೪೨೧
ಸಾನ್ ೨೮೦
ಸಾನಾ ೨೮೧
ಸಾನೊ ೨೮೦
ಸಾರ್ಜಂಟ ೪೫೭
ಸಾರ್ಜಂಟ-ಎಟ್-ಆರ್ಮ್ಸ ೪೫೭
ಸಾಲಿಯಾ ೨೮೨
ಸಾವಾರ್ ೨೮೬
ಸಾವಾರಾ ೨೮೨, ೨೮೭
ಸಾವುನ್‌ಟಾ ೨೮೭
ಸಿಂಗಪುರ ೨೫೭
ಸಿಂಗಫೊ ೨೮೮
ಸಿಂಘಭೂಮ್ ೨೫೮, ೨೮೬
ಸಿಂಧುತ್ವ ೫೫೪
ಸಿಖ್ ೫೬, ೭೯, ೩೩೬, ೩೩೭
ಸಿಧೊಪೈಕೊ ೨೮೧
ಸಿಧ್ವಾ ಆರ್.ಕೆ. ೧೩, ೧೯, ೭೧, ೩೦೩, ೩೦೯,
೩೧೦, ೩೪೬, ೩೬೧, ೪೪೬, ೫೦೪, ೫೭೬,
೫೭೯, ೬೮೩
ಸಿಬಸಾಗರ ೨೬೭
ಸಿಬ್ಬನ್ ಲಾಲ ಸಕ್ಸೆನಾ ೪೦೪, ೪೦೮, ೪೯೭,
೪೯೯
ಸಿರಸುಂದಿ ೨೫೮
ಸಿರೋನ್ಹಾ ೨೫೮
ಸಿರ್ವಿಬಾಂದ್ ೩೩೬
ಸಿಲೋನ್ ೧೦೪
ಸೀತಾರಾಮಯ್ಯ ಪಟ್ಟಾಭಿ ಡಾ. ೧೧
ಸೀರಿಥಿ ೨೮೧
ಸುಂದರ ೮೫
ಸುಗ್ರೀವಾಜ್ಞೆ ೧೪೬, ೧೮೩, ೧೮೪, ೨೫೬, ೫೭೮
ಸುಪ್ರೀಂಕೋರ್ಟ್ ೧೨, ೫೩, ೫೮, ೫೯, ೨೪೨,
೨೭೦, ೨೭೩, ೪೧೩, ೪೧೭, ೪೧೯, ೪೨೦,
೪೩೬, ೪೯೮, ೫೬೦, ೫೬೧, ೫೬೨, ೫೬೩,
೫೬೫, ೫೬೬, ೫೬೭, ೫೬೮, ೫೬೯, ೫೭೦,
೫೭೧, ೫೭೨, ೫೭೪, ೫೭೫, ೫೭೬, ೬೨೬,
೬೨೭, ೬೨೮, ೬೨೯, ೬೩೦, ೬೩೧, ೬೩೨,
೬೩೩, ೬೩೪, ೬೩೫, ೬೩೬, ೬೩೭, ೬೪೧,
೬೪೨, ೬೪೩, ೬೪೬, ೬೪೮, ೬೫೧, ೬೫೨,
೬೫೩, ೬೫೬, ೬೯೨, ೬೯೩, ೬೯೪, ೬೯೬,
೬೯೭, ೬೯೮, ೬೯೯
ಸುಬ್ಬರಾಯ ಡಾ. ೩೪೯
ಸುಬ್ರಮಣ್ಯಂ ಸಿ. ೩೫೮, ೩೭೩, ೩೯೦, ೩೯೧,
೬೯೮
ಸೆನೆಟ್ ೪೨೬, ೫೬೨
ಸೆರಿಲಿಯಮ್ ೨೮೦
ಸೆರ್‌ಟಿಯೊರಾರಿ ೧೧೨
ಸೇತ್ ಗೋವಿಂದ ದಾಸ ೩೦೪
ಸೇನ್ ಪಿ.ಕೆ. ಡಾ. ೬೪೫
ಸೈಯದ್ ಅಬ್ದುಲ್ ರವೂಫ್ ೩೭೫

ಸೈಯ್ಯದ್ ಮಹಮದ್ ಸಾದುಲ್ಲಾ ೮೪
ಸೊನ್‌ಪುರ ೨೫೮
ಸೊನ್‌ಸಾರಿ ೨೫೮
ಸೋಜಾ ೭೦
ಸೋಡೋ ೨೮೦
ಸ್ಕೆಲ್ಲಾ ೪೩೬
ಸ್ಟೇಟ್ಸ್ ೪೨೬, ೪೨೯, ೪೩೩, ೪೪೩, ೪೪೯, ೪೬೧, ೪೬೨, ೪೭೪, ೫೬೨

## ಹ

ಹಜಾರಿ ೨೮೬
ಹಜೊನಫಿ ೨೮೮
ಹನುಮಂತಯ್ಯ ೫೧೮
ಹರಾಯಿ ೨೫೮
ಹಲ್‌ಬಾ ೨೮೭
ಹಸನ ೪೭೯
ಹಸರತ್ ೩೧೦, ೪೦೮, ೪೪೧
ಹಾಟೋ ೨೮೦
ಹಿಂದೂ ೩೩೪, ೪೦೧
ಹಿಂದೂಸ್ತಾನಿ ೪೨೮
ಹಿಂದೂಸ್ಥಾನ ೧೭
ಹಿಮ್ಮತ್ ಸಿಂಗ್ ೨೯೬
ಹುಕುಮ್ ಸಿಂಗ್ ಸರ್ದಾರ್ ೩೩೬, ೩೩೮, ೫೫೭, ೬೪೪
ಹುರಾ ೨೮೬
ಹುಸೇನ ಇಮಾಮ್ ೭೬, ೩೨೪, ೩೩೩, ೩೬೭
ಹೃದಯನಾಥ ಕುಂಜ್ರು ೧೦, ೧೧, ೨೯೭, ೩೦೯, ೩೧೧, ೩೧೨, ೩೧೩, ೩೧೪, ೪೧೦, ೪೮೦, ೫೦೨, ೫೦೩, ೫೩೩, ೫೫೫, ೫೫೬, ೫೫೭, ೫೭೮, ೫೭೯, ೫೮೦, ೫೮೯, ೫೯೦, ೫೯೧, ೫೯೨, ೬೦೨, ೬೦೩, ೬೦೪, ೬೫೭, ೬೭೦, ೬೭೧
ಹೇಬಿಯಸ್ ೧೧೨, ೧೫೩, ೧೯೦, ೪೧೭, ೪೧೮, ೪೧೯
ಹೈಕೋರ್ಟು ೫೩, ೬೩೦, ೬೩೧, ೬೩೨, ೬೩೭, ೬೩೮, ೬೩೯, ೬೪೬, ೬೪೮, ೬೫೦, ೬೫೧, ೬೫೨, ೬೫೩, ೬೫೪, ೬೫೫, ೬೯೪, ೬೯೫, ೬೯೬, ೬೯೮
ಹೊಲ್ಲರ್ ೨೮೦